ಕರ್ನಾಟಕ ಸರ್ಕಾರ

RIG-VEDA SAMHITA

# ಋಗ್ವೇದಸಂಹಿತಾ

ಭಾಗ–೧೨

ದ್ವಿತೀಯಾಷ್ಟಕದಲ್ಲಿ ೩ನೇ ಅಧ್ಯಾಯವು


ಅನುವಾದಕ :

ಆಸ್ಥಾನ ಮಹಾವಿದ್ವಾನ್

ಎಚ್. ಪಿ. ವೆಂಕಟರಾವ್



ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಬೆಂಗಳೂರು

ಕರ್ನಾಟಕ ಸರ್ಕಾರ

ಶ್ರೀಜಯಚಾಮರಾಜೇಂದ್ರ ವೇದರತ್ನಮಾಲಾ

# RIG-VEDA SAMHITA

# ಋಗ್ವೇದಸಂಹಿತಾ

ಭಾಗ-೧೨

ದ್ವಿತೀಯಾಷ್ಟಕದಲ್ಲಿ ೩ನೇ ಅಧ್ಯಾಯವು

ಅನುವಾದಕ :
ಆಸ್ಥಾನ ಮಹಾವಿದ್ವಾನ್
ಎಚ್. ಪಿ. ವೆಂಕಟರಾವ್

ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಬೆಂಗಳೂರು

ಕರ್ನಾಟಕ ಸರ್ಕಾರ

# RIG-VEDA

ಸಾಯಣಭಾಷ್ಯ ಸಮೇತಾ

# ಋಗ್ವೇದ ಸಂಹಿತಾ

(ಕರ್ಣಾಟಕ ಭಾಷಾರ್ಥಾನುವಾದವಿವರಣೆಗಳೊಡನೆ)

## ಭಾಗ ೧೨

## ಎರಡನೆಯ ಅಷ್ಟಕದಲ್ಲಿ ಮೂರನೆಯ ಅಧ್ಯಾಯವು

ಪ್ರಥಮ ಮಂಡಲದ ಸೂಕ್ತಗಳು ೧೫೮–೧೬೫

ಅನುವಾದಕರು ಹಾಗೂ ಸಂಪಾದಕರು

ಆಸ್ಥಾನ ಮಹಾವಿದ್ವಾನ್

ಎಚ್.ಪಿ. ವೆಂಕಟರಾವ್

**ಕನ್ನಡ ಮತ್ತು ಸಂಸ್ಕೃತಿ ಇಲಾಖೆ**

ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು – ೫೬೦ ೦೦೨

**RIG-VEDA SAMHITA** : Volume No. 12 : Reprint of **RIG-VEDA SAMHITA**
Translated with Critical Notes By : **Asthan Mahavidwan H.P. Venkata Rao**
Published by **Manu Baligar,** Director, Department of Kannada and Culture, Kannada Bhavan, J.C. Road, Bengalooru - 02

Pages : XXIV + 727

Price : Rs. 205.00

© ಈ ಆವೃತ್ತಿಯ ಹಕ್ಕುಗಳು: ಕರ್ನಾಟಕ ಸರ್ಕಾರ

ಮುದ್ರಣ : ೨೦೦೯

ಪುಟಗಳು : ೨೪ + ೭೨೭

ಬೆಲೆ : ರೂ. ೨೦೫

ಪ್ರತಿಗಳು : ೧೦೦೦

ಮುಖಪುಟ ವಿನ್ಯಾಸ : ಮಯೂರ

ಮುದ್ರಕರು :

**ಮೆ॥ ಮಯೂರ ಪ್ರಿಂಟ್ ಆಡ್ಸ್**

ನಂ. ೬೯, ಸುಭೇದಾರ್‌ಛತ್ರಂ ರೋಡ್

ಬೆಂಗಳೂರು – ೫೬೦೦೨೦ ದೂ : ೨೩೩೪೨೭೨೪

Published by the gracious permission of

His Highness

Sri Jayachamarajendra Wadiyar Bahadur,

G.C.B., G.C.S.I., Maharaja of Mysore.



ಯದುವಂಶಪಯಃಪಾರಾವಾರಸುಧಾಕರರೂ ಸತ್ಸಂಪ್ರದಾಯವೈದಿಕವಿದ್ಯಾವರ್ಧಕರೂ
ಮೈಸೂರು ದೇಶವನ್ನಾಳುವ ಧರ್ಮಪ್ರಭುಗಳೂ ಆದ ಶ್ರೀಮನ್ಮಹಾರಾಜ
**ಶ್ರೀ ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್,**
**ಜಿ.ಸಿ.ಬಿ., ಜಿ.ಸಿ.ಎಸ್.ಐ. ರವರು.**

ವೇದಪ್ರಕಟನಕಾರ್ಯಕ್ಕಾಗಿ ನಿಯಮಿತವಾಗಿರುವ

# ವೇದವಿಮರ್ಶನ ವಿದ್ವನ್ಮಂಡಲಿ

ಅಧ್ಯಕ್ಷರು :

ಶ್ರೀ ಜಗದ್ಗುರು ನಾಗಲಿಂಗಪರಿವ್ರಾಜಕಾಚಾರ್ಯ ಪೀಠಾಧ್ಯಕ್ಷರಾದ

**ಶಿಲ್ಪಿಸಿದ್ಧಾಂತಿ ಶಿವಯೋಗಿ ಶ್ರೀ ಸಿದ್ಧಲಿಂಗಸ್ವಾಮಿಗಳವರು.**

—o—

Translator & Editor :

**ಆಸ್ಥಾನ ಮಹಾವಿದ್ವಾನ್ H. P. ವೆಂಕಟರಾವ್**

Associate :

**ಶ್ರೀ. G. N. ಚಕ್ರವರ್ತಿ M. A.**

Professor of Sanskrit, St. Philomina's College, Mysore.

---

## ಸಹಾಯಕ ವಿದ್ವನ್ಮಂಡಲಿ

1. **ಬ್ರ॥ ಶ್ರೀ॥ ಜಿ. ವಿಷ್ಣುಮೂರ್ತಿಭಟ್ಟರು,** ವ್ಯಾಕರಣವಿದ್ವಾನ್, ಶ್ರೀಮನ್ಮಹಾರಾಜರವರ ಸಂಸ್ಕೃತಮಹಾಪಾಠಶಾಲಾ, ಮೈಸೂರು.
2. **ಆಸ್ಥಾನ ವಿದ್ವಾನ್ ಬ್ರ॥ ಶ್ರೀ॥ H. ಗಂಗಾಧರಶಾಸ್ತ್ರಿಗಳು,** ಜ್ಯೌತಿಷ ವಿದ್ವಾನ್ ಮತ್ತು ಕರ್ಣಾಟಕ ಭಾಷಾಪಂಡಿತರು,
3. **ಬ್ರ॥ ಶ್ರೀ॥ ಶ್ರೀನಿವಾಸಶಾಸ್ತ್ರಿಗಳು,** ಋಗ್ವೇದ ಘನಪಾಠಿಗಳು.
4. **ಬ್ರ॥ ಶ್ರೀ॥ ಹಿಟ್ಟವಳ್ಳಿ ಬಿಳಿಗಿರಿರಂಗಾಜೋಯಿಸರು,** ಶ್ರೌತ ವಿದ್ವಾನ್.
5. **ಬ್ರ॥ ಶ್ರೀ॥ ಹಿಟ್ಟವಳ್ಳಿ ದೇವರಭಟ್ಟರು,** ಮೀಮಾಂಸಾದರ್ಶನ ಪಂಡಿತರು.
6. **ಬ್ರ॥ ಶ್ರೀ॥ ವೆಂಕಟರಮಣಾಚಾರ್, M. A., B. T.,** ಸಾಹಿತ್ಯವಿದ್ವಾನ್.
7. **ಬ್ರ॥ ಶ್ರೀ॥ S. ರಂಗನಾಥನ್,** ಸಾಹಿತ್ಯವಿದ್ವಾನ್, ಅರಮನೆ ಸರಸ್ವತೀ ಭಂಡಾರ.
8. **ಬ್ರ॥ ಶ್ರೀ॥ ಪುತ್ತೂರು ಅನಂತಕೃಷ್ಣಮಾಚಾರ್,** ಸಾಹಿತ್ಯ ವಿದ್ವಾನ್, Govt. Oriental Research Institute. Mysore.
9. **ಬ್ರ॥ ಶ್ರೀ॥ S. ಸೀತಾರಾಮಶಾಸ್ತ್ರಿಗಳು,** ರಿಟೈರ್ಡ್ ಪಂಡಿತರು. Govt. Oriental Research Institute, Mysore.



ಶ್ರೀ ಜಗದ್ಗುರು ನಾಗಲಿಂಗಪರಿವ್ರಾಜಕಾಚಾರ್ಯ ಪೀಠಾಧ್ಯಕ್ಷರಾದ

ಶಿಲ್ಪಸಿದ್ಧಾಂತಿ ಶಿವಯೋಗಿ ಶ್ರೀ ಸಿದ್ಧಲಿಂಗಸ್ವಾಮಿಗಳವರು

ವೇದವಿಮರ್ಶನ ವಿದ್ವನ್ಮಂಡಲಿಯ ಅಧ್ಯಕ್ಷರು

## ಪ್ರಕಾಶಕರ ಮಾತು

ಕನ್ನಡ ಓದುಗರಿಗೆ ಸುಲಭ ಬೆಲೆಯಲ್ಲಿ ಉತ್ತಮ ಕೃತಿಗಳು ದೊರಕಬೇಕೆಂಬ ಉದ್ದೇಶದಿಂದ ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಹಲವಾರು ಪ್ರಕಟಣಾ ಯೋಜನೆಗಳನ್ನು ರೂಪಿಸಿಕೊಂಡು ಕಾರ್ಯರೂಪಕ್ಕೆ ತರುತ್ತಿದೆ. ಅವುಗಳಲ್ಲಿ ಮೇರುಕೃತಿಗಳ ಪ್ರಕಟಣಾ ಯೋಜನೆಯೂ ಒಂದಾಗಿದೆ. ಈ ಯೋಜನೆಯಡಿ ಮೈಸೂರು ಮಹಾರಾಜರ ಕಾಲದಲ್ಲಿ ಮುದ್ರಣಗೊಂಡ ಋಗ್ವೇದ ಸಂಹಿತಾ ಸಂಪುಟಗಳ ಮರುಮುದ್ರಣ ಹಾಗೂ ಕನ್ನಡ ಜ್ಞಾನಪೀಠ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಪಂಪ ಪ್ರಶಸ್ತಿ ಪುರಸ್ಕೃತರ ಒಂದೊಂದು ಕೃತಿಯನ್ನು ಮರುಮುದ್ರಿಸಲು ಉದ್ದೇಶಿಸಲಾಗಿದೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಮೇರುಕೃತಿಗಳ ಪ್ರಕಟಣೆ ಯೋಜನೆಯಡಿ ಮೈಸೂರು ಮಹಾರಾಜರ ಆಶ್ರಯದಲ್ಲಿ ಆಸ್ಥಾನ ವಿದ್ವಾನ್ ಎಚ್.ಪಿ. ವೆಂಕಟರಾವ್ ಅವರಿಂದ ಸಂಪಾದಿತವಾದ ಋಗ್ವೇದ ಸಂಹಿತಾ ಗ್ರಂಥದ ೩೬ ಬೃಹತ್ ಸಂಪುಟಗಳನ್ನು ಹಂತಹಂತವಾಗಿ ಮರುಮುದ್ರಣ ಮಾಡಲಾಗುತ್ತಿದೆ. ವೇದಗಳು ಕೇವಲ ತಾತ್ವಿಕ ಗ್ರಂಥಗಳು ಮಾತ್ರವಲ್ಲ; ಅವು ಅನುಭಾವದ ಸಾರ್ವಕಾಲಿಕ ಭಂಡಾರಗಳು. ಋಗ್ವೇದ ಸಂಹಿತೆಯಲ್ಲಿ ದೇವತಾ ಸ್ತೋತ್ರಗಳು ಮಾತ್ರವಲ್ಲದೆ ಯಜ್ಞಗಳಿಗೆ ಸಂಬಂಧಿಸಿದ ವಿಷಯಗಳು, ತತ್ತ್ವಜಿಜ್ಞಾಸೆ, ಐತಿಹಾಸಿಕ ಮತ್ತು ಸಾಮಾಜಿಕ ವಿಚಾರಗಳಿವೆ. ಇತಿಹಾಸದಲ್ಲಿ ಆಸಕ್ತಿಯುಳ್ಳವರಿಗೆ ಇದು ಒಂದು ಅಮೂಲ್ಯ ಆಕರ. ಭಾರತದ ಧಾರ್ಮಿಕ ಭಾವನೆಗಳು, ಸಮಾಜ ಜೀವನ, ಸಂಸ್ಕೃತಿ ಹೇಗೆ ಬೆಳೆಯಿತೆಂಬುದರ ರಮ್ಯ ಚಿತ್ರಣ ಋಗ್ವೇದದಲ್ಲಿ ಕಂಡುಬರುತ್ತದೆ.

ಮಾನವ ಸಂಸ್ಕೃತಿ ಹಾಗೂ ಸಾಹಿತ್ಯದ ಮೊದಲ ಕಾವ್ಯಕುಸುಮ ಋಗ್ವೇದ ಸಂಹಿತೆ. ಇದು ಅನುಪಮ ಕಾವ್ಯಸಂಪತ್ತಿನಿಂದ ಪಾಶ್ಚಾತ್ಯ ಮತ್ತು ಭಾರತೀಯ ವಿದ್ವಾಂಸರ ಪ್ರೀತಿ ಗೌರವಗಳಿಗೆ ಪಾತ್ರವಾಗಿದೆ. ಒಟ್ಟಾರೆ 'ಋಗ್ವೇದ ಸಂಹಿತೆ'ಯು ಭಾರತೀಯ ಸಂಸ್ಕೃತಿಯು ಪ್ರಸ್ತುತಪಡಿಸಿದ ಉತ್ತಮ ಅನುಭಾವ ಕಾವ್ಯ. ವೈಜ್ಞಾನಿಕ ಯುಗದ ಈ ಕಾಲದಲ್ಲಿಯೂ ಮಾನವ ಮನಸ್ಸನ್ನು ಅರಳಿಸಬಲ್ಲ ವೇದಗ್ರಂಥಗಳ ಅಧ್ಯಯನ ಅಗತ್ಯವಾದ್ದರಿಂದ ಪ್ರಸ್ತುತ ಗ್ರಂಥ ಪುನರ್ ಮುದ್ರಣಗೊಳ್ಳುತ್ತಿದೆ.

ಋಗ್ವೇದ ಸಂಹಿತಾ ಸಂಪುಟಗಳು ಸಾಧ್ಯವಾದಷ್ಟು ದೋಷರಹಿತವಾಗಿ ಹೊರಬರಬೇಕೆಂಬ ಉದ್ದೇಶದಿಂದ ಮೂಲಕೃತಿಯನ್ನು ಸ್ಕ್ಯಾನ್ ಮಾಡಲಾಗಿದೆ. ಈ ಸಂಪುಟಗಳನ್ನು ಸ್ಕ್ಯಾನ್ ಮಾಡಿ ಸುಂದರವಾಗಿ ಮುದ್ರಿಸಿಕೊಟ್ಟಿರುವ ಮಯೂರ ಪ್ರಿಂಟ್ ಆ್ಯಡ್ಸ್‌ನ ಮಾಲೀಕರಾದ ಶ್ರೀ ಬಿ.ಎಲ್. ಶ್ರೀನಿವಾಸ್ ಮತ್ತು ಸಿಬ್ಬಂದಿ ವರ್ಗದವರಿಗೆ ಕೃತಜ್ಞತೆಗಳು. ಈ ಪ್ರಕಟಣೆ ಹೊರತರಲು ಸಹಕರಿಸಿದ ಶ್ರೀ ಎಚ್. ಶಂಕರಪ್ಪ, ಜಂಟಿ ನಿರ್ದೇಶಕರು (ಸುವರ್ಣ ಕರ್ನಾಟಕ), ಶ್ರೀಮತಿ ವೈ.ಎಸ್. ವಿಜಯಲಕ್ಷ್ಮಿ, ಸಹಾಯಕ ನಿರ್ದೇಶಕರು ಮತ್ತು ಪ್ರಕಟಣಾ ಶಾಖೆ ಹಾಗೂ ಸಿಬ್ಬಂದಿ ವರ್ಗದವರಿಗೆ ನನ್ನ ಕೃತಜ್ಞತೆಗಳು.

ಮಾನವನ ಬೌದ್ಧಿಕ ಮತ್ತು ಆತ್ಮದ ಉನ್ನತಿಗೆ ದಾರಿದೀಪವಾಗಿರುವ ಋಗ್ವೇದ ಸಂಹಿತೆಯನ್ನು ನಮ್ಮ ಯುವಜನಾಂಗಕ್ಕೆ ಪರಿಚಯಿಸಬೇಕೆಂಬುದು ಹಾಗೂ ಸುಲಭ ಬೆಲೆಯಲ್ಲಿ ಕನ್ನಡಿಗರಿಗೆ ಒದಗಿಸಬೇಕೆಂಬುದು ಈ ಯೋಜನೆಯ ಆಶಯ. ಈ ಋಗ್ವೇದ ಸಂಹಿತಾ ಸಂಪುಟಗಳನ್ನು ಸಾಹಿತ್ಯಾಸಕ್ತರು, ವಿದ್ವಾಂಸರು ಪ್ರೀತಿಯಿಂದ ಸ್ವಾಗತಿಸುತ್ತಾರೆಂದು ನಂಬಿದ್ದೇನೆ. ಈ ಕೃತಿಗಳ ಉಪಯೋಗವನ್ನು ಕನ್ನಡದ ಜನತೆ ಪಡೆದುಕೊಳ್ಳಲಿ ಎಂಬ ಆಶಯ ನಮ್ಮದು.

ಮನು ಬಳಿಗಾರ್
ನಿರ್ದೇಶಕರು

# ಪೀಠಿಕೆ.

---

ಋಗ್ವೇದಸಂಹಿತೆಯ ಈ ಭಾಗದಲ್ಲಿ ಇತರ ಭಾಗಗಳಲ್ಲಿರುವುದಕ್ಕಿಂತ ಪ್ರತ್ಯೇಕವಾದ ಒಂದುವಿಧ ವೈಶಿಷ್ಟ್ಯವಿದೆ. ೧೬೨ ಮತ್ತು ೧೬೩ ನೇ ಸೂಕ್ತಗಳಲ್ಲಿರುವ ಅಶ್ವಸ್ತುತಿಯೇ ಅಶ್ವಮೇಧಯಜ್ಞದಲ್ಲಿ ಆಚರಿಸಲ್ಪಡುವ ನಾನಾವಿಧಕರ್ಮಗಳಿಗೆ ತಳಹದಿಯಾಗಿದೆ. ಈ ಸೂಕ್ತಗಳನ್ನು ಬಿಟ್ಟರೆ ಅಶ್ವಮೇಧದಲ್ಲಿ ಪಠಿಸಬೇಕಾದ ಪ್ರಾಮುಖ್ಯವಾದ ಬೇರೆ ಮಂತ್ರಗಳೇ ಇಲ್ಲ. ಇದರಿಂದ ಈ ಸೂಕ್ತಗಳ ಪ್ರಾಮುಖ್ಯತೆಯು ಎಷ್ಟಿರುವುದೆಂಬುವನ್ನು ಹೇಳಬೇಕಾದ ಅವಶ್ಯಕತೆ ಇಲ್ಲ. ಅದರಂತೆ ೧೬೪ ನೆಯ ಸೂಕ್ತವೂಸಹ ಅನೇಕ ಉದಾತ್ತವಾದ ಮತ್ತು ಗಹನವಾದ ತತ್ತ್ವಗಳಿಂದ ತುಂಬಿದೆ. ಇದರಲ್ಲಿರುವ ತತ್ತ್ವಗಳೂ, ವಿಷಯಗಳೂ ಈಗ ಪ್ರಚಾರದಲ್ಲಿರುವ ದ್ವೈತಾದ್ವೈತ ವಿಶಿಷ್ಟಾದ್ವೈತ ಮುಂತಾದ ವಿಧವಿಧವಾದ ಮತಗಳಿಗೂ ಮುಖ್ಯವಾದ ಅನೇಕ ಉಪನಿಷತ್ತುಗಳಿಗೂ, ಪ್ರಪಂಚಸೃಷ್ಟಿ, ಏಕದೇವತಾಪ್ರತಿಪಾದನೆ, ಜೀವಾತ್ಮಪರಮಾತ್ಮರ ಸ್ವರೂಪ, ಮೊದಲಾದ ಅನೇಕ ಗಹನವಿಷಯಗಳ ನಿರೂಪಣೆಗೂ ಆಧಾರಭೂತವಾಗಿವೆ. ಆದುದರಿಂದ ಈ ಸೂಕ್ತಗಳನ್ನು ನಾವು ಸ್ವಲ್ಪ ವಿಸ್ತಾರವಾಗಿಯೇ ವಿವರಿಸಿದ್ದೇವೆ. ವಿವರಿಸಬೇಕಾದ ವಿಷಯಗಳು ಇನ್ನೂ ಬೇಕಾದಷ್ಟಿದ್ದರೂ ಗ್ರಂಥವು ಅತಿವಿಸ್ತಾರವಾಗುವುದೆಂಬ ಭಯದಿಂದಲೂ ಇತರ ಅನಿವಾರ್ಯಗಳಿಂದಲೂ ಆ ಕಾರ್ಯವನ್ನು ಅಷ್ಟಕ್ಕೇ ಬಿಡಬೇಕಾಯಿತು.

ಈ ಗ್ರಂಥಮುದ್ರಣದ ವಿಚಾರದಲ್ಲಿ ಇದುವರೆಗೂ ನಡೆದುಬರುತ್ತಿದ್ದ ಪ್ರಭುತ್ವವರ್ಗದವರ ಉದಾರನೀತಿಯಿಂದ ಕೂಡಿದ ಆಡಳಿತವು ಬದಲಾಗಿ ಸರ್ಕಾರದವರು ಈ ಮಹತ್ಕಾರ್ಯವನ್ನು ವಹಿಸಿರುವರು ಇದರ ಪರಿಣಾಮವಾಗಿ ಗ್ರಂಥಮುದ್ರಣಕಾರ್ಯವು ಒಂದುವರ್ಷದಿಂದಲೂ ನಿಂತುಹೋಗಿ ಈಗತಾನೇ ಪುನಃ ಪ್ರಾರಂಭವಾಗಿದೆ. ಆದರೂ ಗ್ರಂಥಮುದ್ರಣಕ್ಕಾಗಿ ಬೇಕಾದ ದ್ರವ್ಯಸಹಾಯವು ಸಾಕಾದಷ್ಟು ಇಲ್ಲವಾದ್ದರಿಂದ ಈ ಕಾರ್ಯವು ನಿಧಾನವಾಗಿ ಸಾಗಬೇಕಾಗಿದೆ. ಆದರೂ ಇದಕ್ಕೆ ಸಂಬಂಧಪಟ್ಟ ಅಧಿಕಾರಿವರ್ಗದವರು ಬೇಕಾದ ಸಹಾಯವನ್ನು ಒದಗಿಸಿಕೊಟ್ಟು ಸಹಕರಿಸಿದಲ್ಲಿ ಗ್ರಂಥವು ಮುಂದುವರೆಯುವುದೆಂಬ ಭರವಸೆಯು ನಮಗಿದೆ ಈ ಗ್ರಂಥಪ್ರಕಟನಕ್ಕೆ ಪ್ರಾರಂಭದಿಂದಲೂ ವಿಶೇಷವಾಗಿ ಆಸಕ್ತಿಯನ್ನು ವಹಿಸಿ ಸಮಸ್ತಸಹಾಯಗಳನ್ನು ಒದಗಿಸಿಕೊಟ್ಟು ತಮ್ಮ ಪ್ರಜಾವರ್ಗದ ಶ್ರೇಯಸ್ಸನ್ನೇ ಮುಖ್ಯಧ್ಯೇಯವನ್ನಾಗಿ ಭಾವಿಸಿರುವ ಶ್ರೀಮನ್ಮಹಾರಾಜರವರ ಘನವಾದ ಕೃಪಾಶ್ರಯದಲ್ಲಿಯೇ ಈ ಕಾರ್ಯವು ನೆರವೇರುತ್ತಿರುವುದರಿಂದ ಈ ಸತ್ಕಾರ್ಯವು ನಿರ್ವಿಘ್ನವಾಗಿ ಪೂರ್ಣವಾಗುವುದೆಂಬ ಭರವಸೆಯೂ ನಮಗಿದೆ.

ಅತಿ ಪ್ರಾಚೀನವೂ, ಅತಿಗಹನವೂ, ಅತಿವಿಸ್ತಾರವೂ, ಸರ್ವಶಾಸ್ತ್ರಗಳಿಗೂ ಮೂಲಭೂತವೂ ಆದ ಇಂತಹ ಋಗ್ವೇದಸಂಹಿತೆಯನ್ನು ಸರಳವಾದ ಕನ್ನಡಭಾಷೆಯಲ್ಲಿ ವಿಮರ್ಶಾನುವಾದಸಹಿತವಾಗಿ ಪ್ರಕಾಶಪಡಿಸುವುದು ಸುಲಭವಾದ ಕೆಲಸವಲ್ಲ ಆದರೂ ಇಂತಹ ಮಹತ್ಕಾರ್ಯದಿಂದ ಪಂಡಿತಪಾಮರಾದಿ ಸಕಲಜನರೂ ಜ್ಞಾನಾಭಿವೃದ್ಧಿಯನ್ನು ಪಡೆದು ಈಶ್ವರಾನುಗ್ರಹಕ್ಕೆ ಪಾತ್ರರಾಗಲೆಂಬ ಘನವಾದ ಉದ್ದೇಶದಿಂದ ಕರ್ನಾಟಕ ಸಿಂಹಾಸನಾಧೀಶ್ವರರೂ, ವೇದವಿದ್ಯಾಭಿಮಾನಿಗಳೂ, ಸ್ವಯಂಪಂಡಿತರೂ, ಪ್ರಜಾನುರಾಗಿಗಳೂ, ದೈವಭಕ್ತಿತತ್ಪರರೂ ಆದ **ಶ್ರೀ ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್, ಜಿ. ಸಿ. ಬಿ., ಜಿ. ಸಿ. ಎಸ್. ಐ.** ಮಹಾಪ್ರಭುವರ್ಯರು ಬಹುದ್ರವ್ಯಸಾಧ್ಯವಾದ ಈ ಗ್ರಂಥಪ್ರಕಟಣೆಯನ್ನು ತಮ್ಮ ಉದಾರಾಶ್ರಯದಿಂದ ಪ್ರೋತ್ಸಾಹಿಸುತ್ತಿರುವುದು ಕರ್ನಾಟಕಜನಕೋಟಿಯ ಸುಕೃತವೆಂದೇ ಹೇಳಬೇಕು. ಇಂತಹ ಉದಾರಮತಿಗಳಾದ ನಮ್ಮ ಪ್ರಭುವರ್ಯರಿಗೂ

ಅವರ ಕುಟುಂಬಕ್ಕೂ (ವೇದಮಂತ್ರಗಳಲ್ಲಿ ಅತಿಮುಖ್ಯವೆಂದು ಪರಿಗಣಿಸಲ್ಪಟ್ಟಿರುವ ಗಾಯತ್ರೀ ಎಂಬ ಮಂತ್ರ ನಾಮಾಂಕಿತರಾದ) ರಾಜಕುಮಾರಿಗೂ, ಸಮಸ್ತಪ್ರಜಾಕೋಟಿಗೂ ಸಹ ವೇದಪುರುಷನಾದ ಸರ್ವೇಶ್ವರನು ಐಹಿಕ ಫಲಗಳಾದ ಆಯುರಾರೋಗ್ಯೈಶ್ವರ್ಯಾದಿಸಂಪತ್ತನ್ನೂ ಪಾರಮಾರ್ಥಿಕವಾದ ಆಧ್ಯಾತ್ಮಜ್ಞಾನವನ್ನೂ ಇತೋಽಪ್ಯತಿಶಯವಾಗಿ ಅನುಗ್ರಹಿಸಲೆಂದು ಪ್ರಾರ್ಥಿಸುತ್ತೇನೆ.

ಮೈಸೂರು
ಖರನಾಮ ಸಂ॥ ಶ್ರಾವಣ ಶುದ್ಧ ಪಂಚಮಿ ಮಂಗಳವಾರ
7—8—1951

ಆಸ್ಥಾನ ಮಹಾವಿದ್ವಾನ್
**ಹೆಚ್. ಪಿ. ವೆಂಕಟರಾವ್,**
Editor

॥ ಶ್ರೀಃ ॥

# ವಿ ಷ ಯಾ ನು ಕ್ರ ಮ ಣಿ ಕೆ.

## ದ್ವಿತೀಯಾಷ್ಟಕದಲ್ಲಿ ತೃತೀಯಾಧ್ಯಾಯವು

### ಪ್ರಥಮಮಂಡಲದ ಸೂಕ್ತಗಳು ೧೫೮—೧೬೫


| | ಪುಟಸಂಖ್ಯೆ |
|---|---|
| ೧೫೮. ವಸೂ ರುದ್ರಾ ಎಂಬ ನೂರ ಐವತ್ತೆಂಟನೆಯ ಸೂಕ್ತವು— | |
| ಸೂಕ್ತದ ವಿನಿಯೋಗ | 1 |
| ಋಷಿದೇವತಾಛಂದಸ್ಸುಗಳು | 2 |
| ಈ ಸೂಕ್ತಕ್ಕೆ ಋಷಿಯಾದ ದೀರ್ಘತಮಸ್ಸೆಂಬುವನ ವಿಷಯಪರಿಚಯ | 4 |
| ಗೋಃ ಪುರಂಧಿ ಇತ್ಯಾದಿ ಶಬ್ದಗಳ ಅರ್ಥಾನುವಿವರಣೆ | 13 |
| ತುಗ್ರಪುತ್ರನ ವಿಚಾರ ಇತ್ಯಾದಿ | 18 |
| ನಮಾ ಗರನ್ ಎಂಬ ಋಕ್ಕಿನ ವಿಶೇಷವಿನಿಯೋಗ | 27 |
| ೧೫೯. ಪ್ರ ದ್ಯಾವಾ ಎಂಬ ನೂರ ಐವತ್ತೊಂಭತ್ತನೆಯ ಸೂಕ್ತವು— | |
| ಸೂಕ್ತದ ವಿನಿಯೋಗ | 34 |
| ಋಷಿದೇವತಾಛಂದಸ್ಸುಗಳು | 35 |
| ದ್ಯಾವಾಪೃಥಿವಿಗಳ ವಿಚಾರ | 37 |
| ಜಾಮಿ ಶಬ್ದವಿವರಣೆ ಇತ್ಯಾದಿ | 52 |
| ಸಮುದ್ರ ಶಬ್ದನಿವರ್ಚನ ಇತ್ಯಾದಿ | 54 |
| ೧೬೦. ತೇ ಹಿ ದ್ಯಾವಾಪೃಥಿವೀ ಎಂಬ ನೂರ ಅರವತ್ತನೆಯ ಸೂಕ್ತವು— | |
| ಸೂಕ್ತದ ವಿನಿಯೋಗ ಮತ್ತು ಋಷಿದೇವತಾಛಂದಸ್ಸುಗಳು | 60 |
| ಧೀ ಶಬ್ದಾರ್ಥ ವಿಚಾರ | 71 |
| ರಜಸೀ, ಸ್ಕಂಭನೇಭಿಃ ಇತ್ಯಾದಿ ಶಬ್ದಗಳ ಅರ್ಥವಿವರಣೆ | 77 |
| ಶ್ರವಃ, ಕ್ಷತ್ರ ಇತ್ಯಾದಿ ಶಬ್ದಗಳ ವಿವರಣೆ | 81 |
| ೧೬೧. ಕಿಮು ಶ್ರೇಷ್ಠಃ ಎಂಬ ನೂರ ಅರವತ್ತೊಂದನೆಯ ಸೂಕ್ತವು— | |
| ಸೂಕ್ತದ ವಿನಿಯೋಗ ಮತ್ತು ಋಷಿದೇವತಾಛಂದಸ್ಸುಗಳು | 86 |

| | | ಪುಟಸಂಖ್ಯೆ |
|---|---|---|
| | ಋಭುಗಳು ಸೋಮಪಾನಾರ್ಹತೆಯನ್ನು ಪಡೆದ ವಿಚಾರ | 89 |
| | ಋಭುಗಳು ಒಂದು ಚಮಸಪಾತ್ರೆಯನ್ನು ನಾಲ್ಕಾಗಿ ಮಾಡಿದ ವಿಷಯ | 93 |
| | ಋಭುಗಳ ರಥನಿರ್ಮಾಣಕೌಶಲ್ಯ ಇತ್ಯಾದಿ | 108 |
| | ಮಾದಯಧ್ಯೈ ಎಂಬ ಶಬ್ದದ ಅರ್ಥನಿವರಣೆ ಇತ್ಯಾದಿ | 116 |
| | ಋಭುಗಳು ಆಪೋ ಭೂಯಿಷ್ಠಾಃ ನೀರೇ ಎಲ್ಲಕ್ಕೂ ಶ್ರೇಷ್ಠವು ಅಥವಾ ಮೂಲವು ಎಂಬ ತತ್ತ್ವವನ್ನು ಪ್ರತಿಪಾದನೆ ಮಾಡಿದ ವಿಷಯ ಇತ್ಯಾದಿ | 120 |
| | ವಾಯುವು ವೃಷ್ಟಿಪತನಕ್ಕೂ ಸಹಾಯಕನಾಗಿರುವ ವಿಚಾರ ಇತ್ಯಾದಿ | 138 |
| ೧೬೨. | ಮಾ ನೋ ಮಿತ್ರಃ ಎಂಬ ನೂರ ಅರವತ್ತೆರಡನೆಯ ಸೂಕ್ತವು— | |
| | ಸೂಕ್ತದ ವಿನಿಯೋಗ | 144 |
| | ಋಷಿದೇವತಾಛಂದಸ್ಸುಗಳು | 145 |
| | ಯಜ್ಞಾಶ್ವದ ವರ್ಣನೆ ಇತ್ಯಾದಿ | 147 |
| | ಪೂಷ್ಣಃ ಎಂಬ ಶಬ್ದಾರ್ಥವಿವರಣೆ | 163 |
| | ಹೋತಾ, ಅಧ್ವರ್ಯುः, ಅಗ್ನಿಮಿಂಧಃ, ಗ್ರಾವಗ್ರಾಭಃ, ಶಂಸ್ತಾ, ಮೊದಲಾದ ಋತ್ವಿಜರ ಕರ್ತವ್ಯಗಳು ಇತ್ಯಾದಿ | 166 |
| | ಯೂಪಚ್ಛೇದನ, ಸಂಸ್ಕರಣ ಇತ್ಯಾದಿ | 172 |
| | ಉಖಾ ಶಬ್ದವಿವರಣೆ | 194 |
| | ಅಂಕಾ, ಸೂನಾಃ ಇತ್ಯಾದಿ ಶಬ್ದಗಳ ಅರ್ಥವಿಚಾರ ಇತ್ಯಾದಿ | 195 |
| | ಅಶ್ವಮೇಧ ಯಜ್ಞದಲ್ಲಿ ಉಪಯೋಗಿಸುವ ಅಶ್ವಸಂಬಂಧವಾದ ಆಪ್ರೀಸೂಕ್ತವು | 199 |
| | ಅಶ್ವಶರೀರಚ್ಛೇದನ ವಿಷಯ ಇತ್ಯಾದಿ | 210 |
| | ಯಜ್ಞಾಶ್ವದ ಮಹತ್ತ್ವ ಇತ್ಯಾದಿ | 215 |
| | ಅಶ್ವಸ್ತುತಿ ಇತ್ಯಾದಿ | 218 |
| ೧೬೩. | ಯದಕ್ರಂದಃ ಎಂಬ ನೂರ ಅರವತ್ತಮೂರನೆಯ ಸೂಕ್ತವು— | |
| | ಸೂಕ್ತದ ವಿನಿಯೋಗ ಮತ್ತು ಋಷಿದೇವತಾಛಂದಸ್ಸುಗಳು | 230 |
| | ವಾರುಣಾಶ್ವವರ್ಣನೆ ಇತ್ಯಾದಿ | 233 |
| | ಮೇಧ್ಯಾಶ್ವಕ್ಕೂ ಅಗ್ನೀಂದ್ರಾದಿ ದೇವತೆಗಳಿಗೂ ಇರುವ ಸಂಬಂಧ ಇತ್ಯಾದಿ | 237 |
| | ಅಶ್ವಬಂಧನ ಸ್ವರೂಪ ಇತ್ಯಾದಿ | 242 |
| | ಈರ್ಮಾಂತಾಸಃ, ಸಿಲಿಕಮಧ್ಯಮಾಸಃ, ಇತ್ಯಾದಿ ಶಬ್ದಗಳ ಅರ್ಥ ವಿವರಣೆ | 270 |
| | ಅಶ್ವಸ್ತುತಿ ವರ್ಣನೆ ಇತ್ಯಾದಿ | 273 |
| | ಉಪ ಪ್ರಗಾತ್ ಎಂಬ ಋಕ್ಕಿನ ವಿಶೇಷ ವಿನಿಯೋಗ | 276 |

ಪುಟಸಂಖ್ಯೆ

೧೬೨ ಮತ್ತು ೧೬೩ ನೇ ಸೂಕ್ತಗಳ ಉಪಸಂಹಾರ ಮತ್ತು ಅಶ್ವಮೇಧಯಾಗದ ಸ್ವರೂಪ ವರ್ಣನೆ 282

೧೬೪. **ಅಸ್ಯ ವಾಮಸ್ಯ ಎಂಬ ನೂರ ಅರವತ್ತನಾಲ್ಕನೆಯ ಸೂಕ್ತವು—**

ಸೂಕ್ತದ ವಿನಿಯೋಗ 289
ಋಷಿದೇವತಾ ಛಂದಸ್ಸುಗಳು 291
ಅಸ್ಯ ವಾಮಸ್ಯ ಎಂಬ ಋಕ್ಕಿನ ಆದಿತ್ಯಪರವಾದ ಅರ್ಥವಿವರಣೆ 294
ಅಸ್ಯ ವಾಮಸ್ಯ ಎಂಬ ಋಕ್ಕಿನ ಅಧ್ಯಾತ್ಮಪಕ್ಷದ ಅರ್ಥವಿವರಣೆ 296
ಚಕ್ರ, ರಥ ಇತ್ಯಾದಿ ಶಬ್ದಗಳ ರೂಪನಿಷ್ಪತ್ತಿ ಇತ್ಯಾದಿ 301
ತ್ರಿನಾಭಿ ಶಬ್ದವಿವರಣೆ 305
ಸಂವತ್ಸರ ಸ್ವರೂಪ ಇತ್ಯಾದಿ 308
ಪ್ರಕೃತಿಗೂ ಈಶ್ವರನಿಗೂ ಇರುವ ಸಂಬಂಧ ಇತ್ಯಾದಿ 314
ಸೃಷ್ಟಿಗೆ ಪೂರ್ವದಲ್ಲಿ ಇದ್ದ ಸ್ಥಿತಿ 315
ಪಾಕ ಶಬ್ದಾರ್ಥವಿಚಾರ ಇತ್ಯಾದಿ 319
ಬಾಲಾಕಿ, ಶ್ವೇತಕೇತು ಇವರ ವಿಷಯ 327
ಆದಿತ್ಯಮಂಡಲದ ಸ್ವರೂಪವರ್ಣನೆ ಇತ್ಯಾದಿ 329
ಆದಿತ್ಯರಶ್ಮಿಗಳ ನಾನಾಕಾರ್ಯಗಳು 332
ಪೃಥಿವಿಗೂ ಆದಿತ್ಯನಿಗೂ ಇರುವ ಸಂಬಂಧ ಇತ್ಯಾದಿ 338
ಆದಿತ್ಯನಿಗೂ ಕಾಲಕ್ಕೂ ಇರುವ ಸಂಬಂಧ ಇತ್ಯಾದಿ 349
ಅಗ್ನಿಯ ಸ್ಥಾನತ್ರಯಗಳ ವರ್ಣನೆ 356
ಆದಿತ್ಯನ ಗತಿಯ ವರ್ಣನೆ, ಇತ್ಯಾದಿ 361
ಪುರೀಷ ಶಬ್ದವಿವರಣೆ ಇತ್ಯಾದಿ 362
ಆದಿತ್ಯನ ಸಪ್ತರಶ್ಮಿಗಳು 365
ಕಾಲಚಕ್ರದ ಸ್ವರೂಪ ವರ್ಣನೆ 369
ಸಂವತ್ಸರ, ಪರಿವತ್ಸರ, ಇದುವತ್ಸರ, ಇತ್ಯಾದಿ ವಿವರಣೆ 370
ಕಾಲಕ್ಕೂ ಮಹಾತತ್ತ್ವಕ್ಕೂ ಇರುವ ಸಂಬಂಧ ಇತ್ಯಾದಿ 373
ಕಾಲಚಕ್ರಕ್ಕೂ ಆದಿತ್ಯ ಮಂಡಲಕ್ಕೂ ಇರುವ ತಾದಾತ್ಮ್ಯ 377
ಪಂಚಜನಾಃ ಎಂಬ ಶಬ್ದದ ವಿವರಣೆ 378
ಸೂರ್ಯನು ಜಗಚ್ಚಕ್ಷುವು 381
ಸೂರ್ಯನ ಉತ್ತರಾಯಣ ದಕ್ಷಿಣಾಯನಗತಿಗಳು 385
ಪ್ರಜಾಪತಿಯು ಪುಂಸ್ತ್ರೀರೂಪಗಳಿಂದ ಜಗತ್ತನ್ನು ವ್ಯಾಪಿಸಿರುವ ವಿಚಾರ ಇತ್ಯಾದಿ 392

| | ಪುಟಸಂಖ್ಯೆ |
|---|---|
| ಆದಿತ್ಯರಶ್ಮಿಗೂ ಯಜ್ಞಾಹುತಿಗೂ ಇರುವ ಸಂಬಂಧ ಇತ್ಯಾದಿ | 398 |
| ಅಗ್ನಿಗೂ ಆದಿತ್ಯನಿಗೂ ಇರುವ ಸಂಬಂಧ ಇತ್ಯಾದಿ | 403 |
| ಪಕ್ಷಿದ್ವಯಸಾದೃಶ್ಯದಿಂದ ಜೀವಾತ್ಮಪರಮಾತ್ಮರ ವರ್ಣನೆ | 413 |
| ಆತ್ಮಸ್ವರೂಪ ಇತ್ಯಾದಿ | 427 |
| ಪರಬ್ರಹ್ಮನ ವ್ಯಕ್ತಾವ್ಯಕ್ತಸ್ವರೂಪ ಇತ್ಯಾದಿ | 431 |
| ಆತ್ಮನ ನಾನಾವಿಧ ಅವಸ್ಥೆಗಳು | 434 |
| ಗಾಯತ್ರಿಯ ಸ್ಥಾನ, ಮಹತ್ತ್ವ ಇತ್ಯಾದಿ | 440 |
| ಅಗ್ನಿ, ಗಾಯತ್ರೀ, ಅರ್ಕ ಇವುಗಳಿಗಿರುವ ಸಂಬಂಧ ಇತ್ಯಾದಿ | 446 |
| ಋಕ್ಕಿಗೂ ಸಾಮಕ್ಕೂ ಇರುವ ಸಂಬಂಧ | 450 |
| ತ್ರಿಷ್ಟುಪ್‌ಛಂದಸ್ಸಿನ ಮಹತ್ತ್ವ ಇತ್ಯಾದಿ | 452 |
| ಜಗತೀಛಂದಸ್ಸಿನ ಮಹತ್ತ್ವ ಇತ್ಯಾದಿ | 459 |
| ಆದಿತ್ಯನಿಗೂ ರಥಂತರಸಾಮಕ್ಕೂ ಇರುವ ಸಂಬಂಧ ಇತ್ಯಾದಿ | 461 |
| ಛಂದಸ್ಸುಗಳಲ್ಲಿ ಗಾಯತ್ರಿಯು ಸ್ವರ್ಗದಿಂದ ಸೋಮವನ್ನು ತಂದ ವಿಚಾರ ಇತ್ಯಾದಿ | 464 |
| ಉಪಹ್ವಯೇ ಎಂಬ ಋಕ್ಕಿನ ವಿಶೇಷ ವಿನಿಯೋಗ | 468 |
| ಅಘ್ನ್ಯಾ ಶಬ್ದದ ಅರ್ಥವಿವರಣೆ ಇತ್ಯಾದಿ | 471 |
| ಅಶ್ವಿನೀ ಶಬ್ದರೂಪನಿಷ್ಪತ್ತಿ ಇತ್ಯಾದಿ | 472 |
| ಗೌರಮೀಮೇತ್ ಎಂಬ ಋಕ್ಕಿನ ವಿಶೇಷ ವಿನಿಯೋಗ | 476 |
| ಧೇನುವಿನ ಸ್ವರೂಪ ಇತ್ಯಾದಿ | 480 |
| ಉಭಯಲಿಂಗದೇವತಾ ವಿಷಯ | 482 |
| ಪ್ರವರ್ಗ್ಯಯಾಗದ ಸ್ವರೂಪ ಮತ್ತು ಮಹತ್ತ್ವ | 485 |
| ಜೀವನಿಗೆ ಶರೀರವು ಪ್ರಾಕೃತವಾದದ್ದೆಂದೂ ಜೀವನು ನಿತ್ಯನಾಗಿರುವನೆಂದೂ ಪ್ರತಿಪಾದನೆ ಮಾಡಿರುವ ವಿಷಯ | 492 |
| ಅಪಶ್ಯಂ ಗೋಪಾ ಎಂಬ ಋಕ್ಕಿನ ವಿಶೇಷ ವಿನಿಯೋಗ | 496 |
| ಸಧ್ರೀಚೀಃ ವಿಷೂಚೀಃ ಎಂಬ ಶಬ್ದಗಳ ವಿವರಣೆ | 498 |
| ಆದಿತ್ಯಮಂಡಲಾಂತರ್ಗತನಾದ ಪುರುಷನೇ ಪರಮಾತ್ಮನು | 505 |
| ಆದಿತ್ಯನ ಸ್ಥಾನ ಮತ್ತು ವಿಶ್ವಕ್ಕೂ ಅವನಿಗೂ ಇರುವ ರಕ್ಷ್ಯರಕ್ಷಕಸಂಬಂಧ ಇತ್ಯಾದಿ | 509 |
| ಪೃಚ್ಛಾಮಿ ತ್ವಾ ಎಂಬ ಋಕ್ಕಿನ ವಿಶೇಷ ವಿನಿಯೋಗ | 515 |
| ಯಜ್ಞಕಾಲದಲ್ಲಿ ಬ್ರಹ್ಮೋದ್ಯವೆಂಬ ತತ್ತ್ವವಿಮರ್ಶೆ ಇತ್ಯಾದಿ | 515 |
| ಇಯಂ ವೇದಿಃ ಎಂಬ ಋಕ್ಕಿನ ವಿಶೇಷ ವಿನಿಯೋಗ | 518 |
| ಬ್ರಹ್ಮೋದ್ಯರೂಪವಾದ ಪ್ರಶ್ನೆಗಳಿಗೆ ಉತ್ತರ | 519 |
| ಯಜ್ಞವೇ ಲೋಕಕ್ಕೆಲ್ಲಾ ಶ್ರೇಯಸ್ಸಾಧನವು, ಯಜ್ಞವೇ ಪ್ರಜಾಪತಿಯು, ಯಜ್ಞವೇ ಪರಬ್ರಹ್ಮವು ಇತ್ಯಾದಿ | 523 |

ಪುಟಸಂಖ್ಯೆ

ಅಗ್ನಿಯಲ್ಲಿ ಹೋಮಮಾಡಿದ ಆಹುತಿಯು ಆದಿತ್ಯನನ್ನು ಸೇರಿ ವೃಷ್ಟ್ಯಾದಿ ಫಲವನ್ನುಂಟು ಮಾಡುವುದು 531
ಪ್ರಜಾಪತಿಯು ವಾಕ್ಕಿಗೆ ಆಧಾರನು ಅಥವಾ ರಕ್ಷಕನು ; ಜನಕ ಯಾಜ್ಞವಲ್ಕ್ಯರ ಸಂವಾದ 532
ಕೇತಃ ಶಬ್ದಾರ್ಥವು 537
ವಿಷ್ಣುವಿನ ಸರ್ವವ್ಯಾಪಕತ್ವ ಇತ್ಯಾದಿ 538
ಸಾಂಖ್ಯತತ್ತ್ವಗಳು 540
ಪರಿದೇವನಾವಾಕ್ಯಸ್ವರೂಪ 547
ಸರ್ವವೂ ಬ್ರಹ್ಮರೂಪವೆಂಬ ವಿಷಯಃ 548
ನಿಣ್ಯ ಶಬ್ದಾರ್ಥ ವಿವರಣೆ ಇತ್ಯಾದಿ 551
ಬ್ರಹ್ಮಜ್ಞಾನರಸಾನುಭವ ವರ್ಣನೆ ಇತ್ಯಾದಿ 553
ಅಮರ್ತ್ಯನಾದ ಆತ್ಮನಿಗೂ ಮರ್ತ್ಯವಾದ ದೇಹಾದಿಗಳಿಗೂ ಇರುವ ಸಂಬಂಧವಿಚಾರ ಇತ್ಯಾದಿ 557
ಮೂರ್ತಾಮೂರ್ತ, ಮರ್ತ್ಯಾಮರ್ತ್ಯ, ಸ್ಥಾವರಜಂಗಮ ಇತ್ಯಾದಿಗಳ ವಿವರಣೆ ಇತ್ಯಾದಿ 559
ದೇವಯಾನ ಮತ್ತು ಪಿತೃಯಾಣವೆಂಬ ಪರಲೋಕಮಾರ್ಗಗಳು 563
ದೇಹವು ನಶ್ಯ; ಆತ್ಮನು ಅವಿನಶ್ಯ ಇತ್ಯಾದಿ ವಿಚಾರ 565
ಆತ್ಮನು ಅಶಬ್ದ, ಅಸ್ಪರ್ಶ, ಅರೂಪ ಇತ್ಯಾದಿ ಶಬ್ದವಾಚ್ಯವಾದುದು 566
ಋಕ್ಶಬ್ದಾರ್ಥ ಇತ್ಯಾದಿ 570
ಶೌನಕ ಅಂಗಿರಸರ ಸಂವಾದ 571
ವಿದ್ಯಾ ಅವಿದ್ಯಾ ಇವುಗಳ ಸ್ವರೂಪ ಇತ್ಯಾದಿ 572
ಅಕ್ಷರಶಬ್ದಾರ್ಥವಿವರಣೆ ಇತ್ಯಾದಿ 573
ಪರಮಾತ್ಮನಲ್ಲಿ ಸರ್ವದೇವತೆಗಳು ಅಧಿಷ್ಠಿತರಾಗಿದ್ದಾರೆ ಎಂಬ ವಿಷಯ ವಿಚಾರ 577
ಅರ್ಥರಹಿತವಾದ ವೇದಾಧ್ಯಯನವು ನಿಷ್ಪ್ರಯೋಜನ ಇತ್ಯಾದಿ 578
ವೇದಾರ್ಥವನ್ನೂ ತಿಳಿದವನಿಗೆ ಇರುವ ಗೌರವ ಇತ್ಯಾದಿ 579
ಪ್ರಣವದ (ಓಂಕಾರದ ಉತ್ಪತ್ತಿ) ವಿಚಾರ 583
ಓಂಕಾರವೇ ಪರಬ್ರಹ್ಮ. ಇದೇ ಸಕಲವೇದಗಳ ಸಾರವು ಎಂಬ ವಿಚಾರ 584
ಬ್ರಹ್ಮೋಪಾಸನೆಯಿಲ್ಲದೆ ಬ್ರಹ್ಮಸಾಕ್ಷಾತ್ಕಾರವಿಲ್ಲ ಎಂಬ ತತ್ತ್ವಪ್ರತಿಪಾದನಾ ವಿಚಾರ 585
ಸೂಯವಸಾತ್ ಎಂಬ ಋಕ್ಕಿನ ವಿಶೇಷ ವಿನಿಯೋಗ 589
ವಾಗ್ದೇವತೆಯ ಸ್ವರೂಪ ಇತ್ಯಾದಿ 593
ವಾಕ್ಕೇ ಸಮಸ್ತವೇದಗಳಿಗೂ ಯಜ್ಞಯಾಗಾದಿಗಳಿಗೂ ಆಶ್ರಯವು 594
ಶಬ್ದಬ್ರಹ್ಮರೂಪವಾದ ವಾಕ್ಕಿಗೆ ಹೃದಯಾಕಾಶವೇ ಸ್ಥಾನವು 595
ಸಮುದ್ರ ಶಬ್ದಾರ್ಥ ನಿರ್ವಚನ ವಿಚಾರ 599

| | ಪುಟಸಂಖ್ಯೆ |
|---|---|
| ಶಕಮಯಂ ಧೂಮಂ ಎಂಬ ಶಬ್ದಗಳ ಅರ್ಥವಿವರಣೆ ಇತ್ಯಾದಿ | 602 |
| ತ್ರಯಃ ಕೇಶಿನಃ ಎಂಬ ಶಬ್ದಗಳ ಅರ್ಥವಿವರಣೆ | 609 |
| ಕೇಶಿಶಬ್ದಾರ್ಥ ವಿಚಾರ | 610 |
| ಆದಿತ್ಯನೇ ಸಕಲಕ್ಕೂ ಆಶ್ರಯನು, ಇವನೇ ಪರಬ್ರಹ್ಮನು ಇತ್ಯಾದಿ | 612 |
| ಚತ್ವಾರಿ ವಾಕ್ ಎಂಬ ಋಕ್ಕಿನ ವಿಶೇಷ ವಿನಿಯೋಗ | 616 |
| ಚತ್ವಾರಿ ವಾಕ್-ನಾಲ್ಕು ವಿಧವಾದ ವಾಕ್ಯಗಳು ಎಂಬ ಶಬ್ದಗಳ ನಾನಾರ್ಥಗಳು | 617 |
| ಚತ್ವಾರಿ ವಾಕ್-ಓಂಕಾರ ಮತ್ತು ಭೂಃ ಭುವಃ ಸುವಃ ಎಂಬ ಮೂರು ವ್ಯಾಹೃತಿಗಳು | 617 |
| ಚತ್ವಾರಿವಾಕ್ ನಾಮ, ಆಖ್ಯಾತ, ಉಪಸರ್ಗ, ನಿಪಾತಗಳೆಂಬ ನಾಲ್ಕು ವಿಧವಾದ ಶಬ್ದ ಸಮೂಹಗಳು | 620 |
| ಚತ್ವಾರಿವಾಕ್—ಮಂತ್ರ, ಕಲ್ಪ, ಬ್ರಾಹ್ಮಣ, ವ್ಯಾವಹಾರಿಕ ಭಾಷೆ | 623 |
| ಚತ್ವಾರಿವಾಕ್—ಋಗ್ವೇದ, ಯಜುರ್ವೇದ, ಸಾಮವೇದ, ವ್ಯವಹಾರಿಕ ಭಾಷೆ | ,, |
| ಚತ್ವಾರಿವಾಕ್—ಸರ್ಪಗಳು, ಪಕ್ಷಿಗಳು, ಕ್ರಿಮಿಗಳು, ಮನುಷ್ಯರು ಇವರುಗಳ ನಾಲ್ಕುವಿಧವಾದ ಭಾಷೆ | ,, |
| ಇಂದ್ರ, ಮಿತ್ರ, ವರುಣ, ಅಗ್ನಿ ಮುಂತಾದ ಸಕಲಶಬ್ದಗಳೂ ಒಬ್ಬನೇ ಆದ ಪರಬ್ರಹ್ಮನ ನಾನಾ ನಾಮಧೇಯಗಳು | 627 |
| ಏಕದೇವತಾಪ್ರತಿಪಾದನೆಯೇ ಋಕ್ಕಿನ ಮುಖ್ಯಾಶಯ | 629 |
| ಕೃಷ್ಣಂ ನಿಯಾನಂ ಎಂಬ ಋಕ್ಕಿನ ವಿಶೇಷ ವಿನಿಯೋಗ | 633 |
| ಆದಿತ್ಯನ ಎರಡು ವಿಧವಾದ ಗತಿಗಳು | 633 |
| ಕಾಲಚಕ್ರವಿವರಣೆ ಇತ್ಯಾದಿ | 638 |
| ಯಸ್ತೇ ಸ್ತನಃ ಎಂಬ ಋಕ್ಕಿನ ವಿಶೇಷ ವಿನಿಯೋಗ | 641 |
| ಸರಸ್ವತೀ ಎಂಬ ನದೀ ಮತ್ತು ದೇವತೆಯ ಸ್ವರೂಪ ಇತ್ಯಾದಿ | 642 |
| ಧೇನುವಿನ ನಾಲ್ಕುಸ್ತನಗಳು—ಸ್ವಾಹಾಕಾರ, ವಷಟ್ಕಾರ, ಹಂತಕಾರ, ಸ್ವಧಾಕಾರ, ಅಥವಾ ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವವೇದ ಇತ್ಯಾದಿ | 645 |
| ಯಜ್ಞೇನ ಯಜ್ಞಂ ಎಂಬ ಋಕ್ಕಿನ ವಿಶೇಷ ವಿನಿಯೋಗ | 649 |
| ನಾಕ ಶಬ್ದದ ರೂಪನಿಷ್ಪತ್ತಿ ಇತ್ಯಾದಿ | 650 |
| ಅಗ್ನಿಯು ಯಜ್ಞಶಬ್ದ ವಾಚ್ಯನು | 652 |
| ಅಗ್ನಿಗೂ ಪಶುವಿಗೂ ಇರುವ ಸಾದೃಶ್ಯ | 654 |
| ಬಾಹ್ಯಯಜ್ಞಕ್ಕಿಂತಲೂ ಜ್ಞಾನಯಜ್ಞವು ಉತ್ತಮವಾದದ್ದು | 656 |
| ಸಾಧ್ಯರು ಯಜ್ಞವನ್ನು ಮಾಡಿದ ವಿಚಾರ ಇತ್ಯಾದಿ | 657 |
| ಪರ್ಜನ್ಯಾಗ್ನಿಗಳ ಸಂಬಂಧವು ಬೀಜಾಂಕುರಗಳ ಸಂಬಂಧದಂತಿದೆ | 663 |
| ಪರ್ಜನ್ಯನು ಭೂಮಿಗೂ ಅಗ್ನಿಯು ಸ್ವರ್ಗಕ್ಕೂ ಚೈತನ್ಯದಾಯಕರು | 665 |

ಪುಟಸಂಖ್ಯೆ

ಆಹವನೀಯವು ದೇವತೆಗಳ ಯೋನಿಯು 667
ದಿವ್ಯಂ ಸುಪರ್ಣಂ ಎಂಬ ಋಕ್ಕಿನ ವಿಶೇಷ ವಿನಿಯೋಗವು 670
ಸರಸ್ವತೀ ಮತ್ತು ಸರಸ್ವಾನ್ ಎಂಬ ದೇವತೆಗಳ ವಿಷಯ 670
ಸುಪರ್ಣಶಬ್ದಾರ್ಥವಿವರಣೆ ಇತ್ಯಾದಿ 672

೧೬೫. ಕಯಾ ಶುಭಾ ಎಂಬ ನೂರ ಅರವತ್ತೈದನೆಯ ಸೂಕ್ತವು—

ಸೂಕ್ತದ ವಿನಿಯೋಗವು 676
ಋಷಿದೇವತಾ ಛಂದಸ್ಸುಗಳು 677
ಇಂದ್ರನಿಗೂ, ಮರುತ್ತುಗಳಿಗೂ ನಡೆದ ಸಂಭಾಷಣೆ ವಿಷಯ ಇತ್ಯಾದಿ 679
ವೃತ್ರಹನನಕಾಲದಲ್ಲಿ ಮರುತ್ತುಗಳು ಇಂದ್ರನಿಗೆ ಸಹಾಯಮಾಡಿದ ವಿಚಾರ 681
ಅದ್ರಿ ಶಬ್ದವಿವರಣೆ ಇತ್ಯಾದಿ 692
ಸ್ವಧಾ ಶಬ್ದವಿವರಣೆ 695
ಅಹಿ ಶಬ್ದಾರ್ಥವಿವರಣೆ ಇತ್ಯಾದಿ 698
ಇಂದ್ರ ಶಬ್ದದ ರೂಪನಿಷ್ಪತ್ತಿ, ಅರ್ಥವಿವರಣೆ ಇತ್ಯಾದಿ 711
ಚಂದ್ರ ಶಬ್ದಾರ್ಥ ವಿವರಣೆ 716
ಮನ್ಮಾನಿ ಎಂಬ ಶಬ್ದವಿವರಣೆ 719
ದುವಸ್ಯತಿ, ಕಾರು ಇತ್ಯಾದಿ ಶಬ್ದಗಳ ಅರ್ಥವಿವರಣೆ 722
ಮಾಂದಾರ್ಯಸ್ಯ, ಮಾನ್ಯಸ್ಯ ಇತ್ಯಾದಿ ಶಬ್ದಗಳ ಅರ್ಥವಿವರಣೆ 725

॥ ವಿಷಯಾನುಕ್ರಮಣಿಕೆ ಸಮಾಪ್ತವು ॥

## ಸಂಕೇತಾಕ್ಷರಗಳ ವಿವರಣೆಯು.

ಅಥ. ಸಂ.—ಅಥರ್ವವೇದಸಂಹಿತಾ
ಆಪ. ಸೂ.—ಆಪಸ್ತಂಬಶ್ರೌತಸೂತ್ರ
ಆಪ. ಧ. ಸೂ —ಆಪಸ್ತಂಬ ಧರ್ಮ ಸೂತ್ರ
ಆಪ. ಪ. ಸೂ—ಆಪಸ್ತಂಬ ಪರಿಭಾಷಾಸೂತ್ರ
ಆ. ಸೂ. ಅಥವಾ ಆ. ಆಶ್ವಲಾಯನ ಶ್ರೌತಸೂತ್ರ
ಉ. ಸೂ.—ಉಣಾದಿ ಸೂತ್ರ
ಋ. ಸಂ.—ಋಗ್ವೇದ ಸಂಹಿತಾ
ಐ. ಆ.—ಐತರೇಯಾರಣ್ಯಕ
ಐ. ಉ.—ಐತರೇಯೋಪನಿಷತ್
ಐ. ಬ್ರಾ.—ಐತರೇಯ ಬ್ರಾಹ್ಮಣ
ಛಾ. ಉ.—ಛಾಂದೋಗ್ಯೋಪನಿಷತ್
ಜೈ. ಪೂ. ಸೂ.—ಜೈಮಿನೀಯ ಪೂರ್ವಮೀಮಾಂಸಾ ಸೂತ್ರ
ಜೈ. ನ್ಯಾ. ವಿ.—ಜೈಮಿನಿಯ ನ್ಯಾಯಮಾಲಾವಿಸ್ತರ
ತಾ. ಬ್ರಾ.—ತಾಂಡ್ಯಮಹಾ ಬ್ರಾಹ್ಮಣ
ತೈ. ಆ.—ತೈತ್ತಿರೀಯ ಆರಣ್ಯಕ
ತೈ. ಬ್ರಾ —ತೈತ್ತಿರೀಯ ಬ್ರಾಹ್ಮಣ
ತೈ. ಸಂ.—ತೈತ್ತಿರೀಯ ಸಂಹಿತಾ
ನಿ —ನಿರುಕ್ತ, ನಿಘಂಟು
ಪಾ. ಸೂ.—ಪಾಣಿನೀಯ ಸೂತ್ರ
ಪಾ. ಶಿ—ಪಾಣಿನೀಯ ಶಿಕ್ಷಾ
ಫಿ. ಅಥವಾ ಫಿ. ಸೂ.—ಫಿಟ್ ಸೂತ್ರ
ಬ್ರ. ಸೂ—ಬ್ರಹ್ಮ ಸೂತ್ರ
ಮ. ಭಾ.—ಮಹಾಭಾರತ
ಮ. ಸ್ಮೃ.—ಮನು ಸ್ಮೃತಿ
ಮೈ. ಸಂ.—ಮೈತ್ರಾಯಣೀಯಸಂಹಿತಾ
ಯಾ. ಸ್ಮೃ.—ಯಾಜ್ಞವಲ್ಕ್ಯ ಸ್ಮೃತಿ
ವಾ. ಸಂ.—ವಾಜಸನೇಯ ಸಂಹಿತಾ
ವಾ. ಪು.—ವಾಯುಪುರಾಣ
ವಿ. ಪು.—ವಿಷ್ಣುಪುರಾಣ
ವೇ. ಸೂ.—ವೇದಾಂತ ಸೂತ್ರ
ಶ. ಬ್ರಾ.—ಶತಪಥಬ್ರಾಹ್ಮಣ
ಸಾ. ಸಂ.—ಸಾಮವೇದ ಸಂಹಿತಾ ಇತ್ಯಾದಿ.

॥ ಶ್ರೀ ॥

॥ ಶ್ರೀ ಮಹಾಗಣಾಧಿಪತಯೇ ನಮಃ ॥

ವಾಗೀಶಾದ್ಯಾಃ ಸುಮನಸಃ ಸರ್ವಾರ್ಥಾನಾಮುಪಕ್ರಮೇ
ಯಂ ನತ್ವಾ ಕೃತಕೃತ್ಯಾಃ ಸ್ಯುಸ್ತಂ ನಮಾಮಿ ಗಜಾನನಂ ॥
ಯಸ್ಯ ನಿಶ್ವಸಿತಂ ವೇದಾ ಯೋ ವೇದೇಭ್ಯೋಽಖಿಲಂ ಜಗತ್ ।
ನಿರ್ಮಮೇ ತಮಹಂ ವಂದೇ ವಿದ್ಯಾತೀರ್ಥಮಹೇಶ್ವರಂ ॥
ವೇದಃ ಶಿವಃ ಶಿವೋ ವೇದೋ ವೇದಾಧ್ಯಾಯೀ ಸದಾಶಿವಃ ।
ತಸ್ಮಾತ್ಸರ್ವಪ್ರಯತ್ನೇನ ವೇದಮೇವ ಸದಾ ಜಪೇತ್ ॥

## ಸಾಯಣಭಾಷ್ಯಸಹಿತಾ

# ಋಗ್ವೇದ ಸಂಹಿತಾ

## ಭಾಗ—೧೨

## ॥ ದ್ವಿತೀಯಾಷ್ಟಕೇ ತೃತೀಯೋಽಧ್ಯಾಯಃ ॥

## ॥ ಎರಡನೆಯ ಅಷ್ಟಕದಲ್ಲಿ ಮೂರನೆಯ ಅಧ್ಯಾಯವು ॥

## ಪ್ರಥಮಮಂಡಲದಲ್ಲಿ ನೂರ ಐವತ್ತೆಂಟನೆಯ ಸೂಕ್ತವು

॥ ಸಾಯಣಭಾಷ್ಯಂ ॥

ವಸೂ ರುದ್ರೇತ್ಯೇತದನುವಾಕಾಪೇಕ್ಷಯಾ ದ್ವಿತೀಯಂ ಸೂಕ್ತಂ ಷಡೃಚಂ ದೈರ್ಘತಮಸಂ । ಪೂರ್ವತ್ರಾಶ್ವಿನಂ ತ್ವಿತ್ಯುಕ್ತತ್ವಾದಿದಮಪ್ಯಾಶ್ವಿನಂ । ಅನಾದೇಶಪರಿಭಾಷಯಾ ತ್ರೈಷ್ಟುಭಂ । ದೀರ್ಘತಮಾ ಮಾಮತೇಯ ಇತ್ಯಂತ್ಯಾನುಷ್ಟುಪ್ । ತಥಾ ಚಾನುಕ್ರಾಂತಂ । ವಸೂ ಅಂತ್ಯಾನುಷ್ಟುಬಿತಿ ॥ ಅಸ್ಯ ವಿಶೇಷವಿನಿಯೋಗೋ ಲೈಂಗಿಕಃ ॥

ಅನುವಾದವು—ಈ ಸೂಕ್ತದಿಂದ ಎರಡನೆಯ ಅಷ್ಟಕದಲ್ಲಿ ಮೂರನೆಯ ಅಧ್ಯಾಯವು ಪ್ರಾರಂಭವಾಗುವುದು. **ವಸೂ** ರುದ್ರಾ ಎಂಬ ಈ ಸೂಕ್ತವು ಇಪ್ಪತ್ತೆರಡನೆಯ ಅನುವಾಕದಲ್ಲಿ ಎರಡನೆಯ ಸೂಕ್ತವು ಇದರಲ್ಲಿ ಆರು ಋಕ್ಕುಗ

ಳಿರುವವು. ಈ ಸೂಕ್ತಕ್ಕೆ ಉಚಥ್ಯಪುತ್ರನಾದ ದೀರ್ಘತಮಸ್ ಎಂಬುವನು ಋಷಿಯು. ಹಿಂದಿನ ಸೂಕ್ತದಂತೆಯೇ ಈ ಸೂಕ್ತವೂ ಅಶ್ವಿನೀದೇವತಾಕವು. ತ್ರಿಷ್ಟುಪ್‌ಛಂದಸ್ಸು, **ದೀರ್ಘತಮಾ ಮಾಮತೇಯ** ಎಂಬ ಕೊನೆಯ ಋಕ್ಕು ಅನುಷ್ಟುಪ್‌ಛಂದಸ್ಕವು. ಅನುಕ್ರಮಣಿಕೆಯಲ್ಲಿ **ವಸೂ ಅಂತ್ಯಾನುಷ್ಟುಪ್** ಎಂದು ಹೇಳಿರುವುದು. ಈ ಸೂಕ್ತದ ವಿಶೇಷ ವಿನಿಯೋಗವು ಲೈಂಗಿಕವು.

॥ ಓಂ ॥

## ಸೂಕ್ತ—೧೫೮

॥ ಮಂಡಲ—೧ ॥ ಅನುವಾಕ—೨೨ ॥ ಸೂಕ್ತ—೧೫೮ ॥
॥ ಅಷ್ಟಕ— ೨ ॥ ಅಧ್ಯಾಯ— ೩ ॥ ವರ್ಗ— ೧ ॥
॥ ಸೂಕ್ತದಲ್ಲಿರುವ ಋಕ್ಸಂಖ್ಯೆ-೬ ॥
॥ ಋಷಿಃ—ದೀರ್ಘತಮಾ ಔಚಥ್ಯಃ ॥
॥ ದೇವತಾಃ—ಅಶ್ವಿನೌ ॥
॥ ಛಂದಃ—೧-೫. ತ್ರಿಷ್ಟುಪ್ । ೬-ಅನುಷ್ಟುಪ್ ॥

ಸಂಹಿತಾಪಾಠಃ

ವಸೂ ರುದ್ರಾ ಪುರುಮಂತೂ ವೃಧಂತಾ ದಶಸ್ಯತಂ ನೋ ವೃಷಣಾವಭಿಷ್ಟೌ ।
ದಸ್ರಾ ಹ ಯದ್ರೇಕ್ಣ ಔಚಥ್ಯೋ ವಾಂ ಪ್ರ ಯತ್ಸಸ್ರಾಥೇ ಅಕವಾಭಿರೂತೀ ॥ ೧ ॥

ಪದಪಾಠಃ

ವಸೂ ಇತಿ । ರುದ್ರಾ । ಪುರುಮಂತೂ ಇತಿ ಪುರುऽಮಂತೂ । ವೃಧಂತಾ । ದಶಸ್ಯತಂ । ನಃ । ವೃಷಣಾ । ಅಭಿಷ್ಟೌ ।
ದಸ್ರಾ । ಹ । ಯತ್ । ರೇಕ್ಣಃ । ಔಚಥ್ಯಃ । ವಾಂ । ಪ್ರ । ಯತ್ । ಸಸ್ರಾಥೇ ಇತಿ । ಅಕವಾಭಿಃ । ಊತೀ ॥ ೧ ॥

### ಸಾಯಣಭಾಷ್ಯಂ

**ಹೇ ವೃಷಣೌ ಕಾಮಾನಾಂ ವರ್ಷಿತಾರೌ ದಸ್ರಾವಸ್ಮದ್ವಿರೋಧ್ಯುಪಕ್ಷಪಯಿತಾರೌ ಹೇ ಅಶ್ವಿನೌ ಯುವಂ ನೋಽಸ್ಮಭ್ಯಂ ದಶಸ್ಯತಂ । ದತ್ತಂ ದಿತ್ಸಿತಂ ಫಲಂ । ಕೀದೃಶೌ ಯುವಾಂ । ವಸೂ ವಾಸಯಿತಾರೌ ಪ್ರಜಾನಾಂ । ವಸುನಾ ಧನೇನ ತದ್ವಂತೌ ವಾ ॥ ಮತ್ವರ್ಥೋ ಲುಪ್ಯತೇ ॥ ರುದ್ರಾ ರುದ್ರೌ । ರುದ್ದುಃಖಂ ತದ್ಧೇತುಭೂತಂ ಪಾಪಂ ವಾ । ತಸ್ಯ ದ್ರಾವಯಿತಾರೌ । ಸಂಗ್ರಾಮೇ ಭಯಂಕರಂ ಶಬ್ದಯಂತೌ ವಾ । ರುದ್ರೋ ರೌತೀತಿ ಸತಃ । ನಿ. ೧೦. ೫. । ಇತಿ ಯಾಸ್ಕಃ । ಪುರುಮಂತೂ ಬಹೂನಾಂ ಜ್ಞಾತಾರೌ ॥ ಮನೇರೌಣಾದಿಕಸ್ತುನ್ಪ್ರತ್ಯಯಃ ॥ ವೃಧಂತಾ ವರ್ಧಮಾನೌ ಸ್ತೋತ್ರಾದಿನಾ ಅಭಿಷ್ಟಾವಾಭಿಮುಖ್ಯೇನ ಪೂಜಿತೌ । ಅಭೀಷ್ಟಸಾಧಕೌ ವಾ । ಹಶಬ್ದ ಉಕ್ತಗುಣಪ್ರಸಿದ್ಧಿದ್ಯೋತನಾರ್ಥಃ । ಕಿಮರ್ಥಂ ದೀಯತ ಇತಿ ಚೇತ್ । ಯದ್ಯಸ್ಮಾದೌಚಥ್ಯ ಉಚಥ್ಯಸ್ಯ ಪುತ್ರೋ ದೀರ್ಘತಮಾ ವಾಂ ಯುವಾಂ ರೇಕ್ಣೋ ಧನಂ ಸ್ತುತಿವ್ಯಾಜೇನ ಪ್ರಾರ್ಥಯತೇ ತದರ್ಥಂ । ಯದ್ವಾ । ಅಯಂ ಯಜಮಾನೋ ಯದ್ಯಸ್ಮಾದ್ರೇಕ್ಣೋ ಹವಿರ್ಲಕ್ಷಣಮನ್ನಂ ವಾಂ ಯುವಾಭ್ಯಾಂ ದಾಸ್ಯತಿ ದದಾತೀತಿ ಶೇಷಃ । ಯಸ್ಮಾಚ್ಚಾಕವಾಭಿರಕುತ್ಸಿತೈರೂತ್ಯೋತಿಭೀ ರಕ್ಷಣೈಃ ॥ ಸುಪಾಂ ಸುಲುಗಿತಿ ತೃತೀಯಾಯಾಃ ಪೂರ್ವಸವರ್ಣದೀರ್ಘಃ ॥ ಪ್ರ ಸಸ್ರಾಥೇ ಪ್ರಸಾರಯಥಃ ಪ್ರಕರ್ಷೇಣ ದತ್ಥಃ ತಸ್ಮಾದ್ದಶಸ್ಯತಂ । ಯಸ್ಮಾದಭಿಮತಪ್ರದೌ ಯಸ್ಮಾಚ್ಚಾಯಂ ಪ್ರಾರ್ಥಯತೇ ದದಾತಿ ವಾ ಹವಿಃ ತಸ್ಮಾದ್ದಶಸ್ಯತಮಿತ್ಯರ್ಥಃ ॥**

### । ಪ್ರತಿಪದಾರ್ಥ ।

**ವೃಷಣೌ**—ಇಷ್ಟಾರ್ಥಗಳನ್ನು ಸುರಿಸುವವರೂ । **ವಸೂ**—(ಪ್ರಜೆಗಳಿಗೆ) ವಾಸಸ್ಥಾನಗಳನ್ನು ಕೊಡುವವರೂ ಅಥವಾ ಧನವಂತರೂ । **ರುದ್ರಾ**—ದುಃಖವನ್ನೂ ಪಾಪವನ್ನೂ ಓಡಿಸು (ನಾಶಮಾಡು) ವವರೂ ಅಥವಾ (ಯುದ್ಧದಲ್ಲಿ) ಭಯಂಕರವಾಗಿ ಶಬ್ದಮಾಡುವವರೂ । **ಪುರುಮಂತೂ**—ಅನೇಕ ವಿಷಯಗಳನ್ನು ತಿಳಿಯುವವರೂ । **ವೃಧಂತಾ**-(ಸ್ತೋತ್ರಾದಿಗಳಿಂದ)ವೃದ್ಧಿಯಾಗುವವರೂ। **ಅಭಿಷ್ಟೌ**-ಇಷ್ಟಾರ್ಥಗಳನ್ನು ಕೊಟ್ಟು ತೃಪ್ತಿಪಡಿಸುವವರೂ ಅಥವಾ ಅಭಿಮುಖವಾಗಿ ಪೂಜಿಸಲ್ಪಡುವವರೂ । **ದಸ್ರಾ**—(ಶತ್ರುಗಳನ್ನು) ನಾಶಮಾಡುವುದೇ ಮೊದಲಾದ ಸಾಹಸ ಕಾರ್ಯಗಳನ್ನು ಮಾಡತಕ್ಕವರೂ ಆದ ಎಲೈ ಅಶ್ವಿನೀದೇವತೆಗಳೇ । **ಯತ್**—ಯಾವ ಕಾರಣದಿಂದ । **ಔಚಥ್ಯಃ**—ಉಚಥ್ಯನ ಪುತ್ರನಾದ ದೀರ್ಘತಮಸ್ಸು । **ವಾಂ**—ನಿಮ್ಮನ್ನು(ನಿಮ್ಮಿಂದ)। **ರೇಕ್ಣಃ**-(ಸ್ತುತಿಪೂರ್ವಕವಾಗಿ) ಧನವನ್ನು ಪ್ರಾರ್ಥಿಸುತ್ತಾನೆಯೋ) ಅಥವಾ [(ಈ ಯಜಮಾನನು) । **ಯತ್**—ಯಾವ ಕಾರಣದಿಂದ । **ರೇಕ್ಣಃ**—ಹವಿಸ್ಸಿನ ರೂಪದ ಅನ್ನವನ್ನು । **ವಾಂ**—ನಿಮಗೆ (ಅರ್ಪಿಸುತ್ತಾನೆಯೋ)] (ಅಲ್ಲದೆ ನೀವು ಯಾವಕಾರಣದಿಂದ) **ಅಕವಾಭಿಃ**-ಕುತ್ಸಿತವಲ್ಲದ ಎಂದರೆ ಶ್ರೇಷ್ಠವಾದ । **ಊತೀ**—ರಕ್ಷಣೆಗಳಿಂದ । **ಪ್ರ ಸಸ್ರಾಥೇ**—ಅತಿಶಯವಾಗಿಯೂ ಉದಾರವಾಗಿಯೂ (ನಿಮ್ಮ ಅನುಗ್ರಹವನ್ನು) ಹರಡುತ್ತೀರೋ (ಆ ಕಾರಣದಿಂದ) । **ನಃ**—ನಮಗೆ । **ದಶಸ್ಯತಂ**—ಇಷ್ಟವಾದ್ದನ್ನೆಲ್ಲಾ ಕೊಡಿರಿ.

### ಭಾವಾರ್ಥ

ನಮ್ಮ ಇಷ್ಟಾರ್ಥಗಳನ್ನು ಸುರಿಸುವವರೂ, ವಾಸಸ್ಥಾನವನ್ನು ಕೊಡುವವರೂ, ದುಃಖವನ್ನೂ ಪಾಪವನ್ನೂ ನಾಶಮಾಡುವವರೂ, ಅನೇಕ ವಿಷಯವನ್ನು ತಿಳಿಯುವವರೂ ಸ್ತೋತ್ರಾದಿಗಳಿಂದ ವೃದ್ಧಿಯಾಗುವವರೂ, ಇಷ್ಟಾರ್ಥ

ಗಳನ್ನು ಕೊಟ್ಟು ತೃಪ್ತಿಪಡಿಸುವವರೂ, ಶತ್ರುಗಳನ್ನು ನಾಶಮಾಡುವುದೇ ಮೊದಲಾದ ಸಾಹಸಕಾರ್ಯಗಳನ್ನು ಮಾಡುವವರೂ ಆದ ಎಲೈ ಅಶ್ವಿನೀದೇವತೆಗಳೇ, ಉಚಥ್ಯನ ಪುತ್ರನೂ, ದೀರ್ಘತಮಸ್ಸೂ ಆದ ನಾನು ನಿಮ್ಮನ್ನು ಸ್ತುತಿಸಿ ನಿಮ್ಮಿಂದ ಧನವನ್ನು ಅಪೇಕ್ಷಿಸುವುದರಿಂದಲೂ, ಮತ್ತು ನೀವೂ ಸಹ ನಿಮ್ಮ ಶ್ರೇಷ್ಠವಾದ ರಕ್ಷಣೆಗಳಿಂದ ಉದಾರವಾಗಿ ಅನುಗ್ರಹವನ್ನು ಬೀರುವುದರಿಂದಲೂ ಸಹ ನಮಗೆ ಅಪೇಕ್ಷಿತವಾದ ವಸ್ತುವನ್ನೆಲ್ಲಾ ಅನುಗ್ರಹಿಸಿ ಕೊಡಿರಿ.

## English Tranlation

Dasras, showerers (of benefits), granters of dwellings, dispellers of sin, cognizant of many (things) increasing (through praise), and fulfillers (of desires), inasmuch as Auchatthya offers you (sacrifical) wealth, and you protect (your worshippers) with unobjectionable aids, bestow upon us (our prayers).

### ವಿಶೇಷವಿಷಯಗಳು

**ತುಷ್ಟಾವ ಚೈವ ಸೂಕ್ತಾಭ್ಯಾಂ ಅಬೋಧೀತ್ಯಶ್ವಿನಾವೃಷಿಃ ।**
**( ಬೃ. ದೇ. ೪-೨೬ )**

ದೇವತೆಗಳಿಂದ ಉಪಕೃತನಾದ ದೀರ್ಘತಮಸ್ಸು **ಅಬೋಧ್ಯಗ್ನಿರ್ಜ್ಮ** ಎಂಬ ಋಕ್ಕಿನಿಂದ ಪ್ರಾರಂಭವಾಗುವ ಸೂಕ್ತವನ್ನೂ (೧-೧೫೭) ಮತ್ತು ಪ್ರಕೃತವಾದ (೧-೧೫೮) ಸೂಕ್ತವನ್ನೂ ರಚಿಸಿ ಅಶ್ವಿನೀದೇವತೆಗಳನ್ನು ಸ್ತುತಿಸಿದನು ಎಂದು ಬೃಹದ್ದೇವತಾವಾಕ್ಯವಿದೆ. ಬೃಹದ್ದೇವತೆಯಲ್ಲಿ ಮೊದಲು ದೀರ್ಘತಮಸ್ಸಿಗೊದಗಿದ ಕಷ್ಟವನ್ನು ವಿವರಿಸಿ ಅದನ್ನು ದೇವತೆಗಳು ಯಾವರೀತಿ ಪರಿಹರಿಸಿದರು ಎಂಬುದನ್ನೂ ತಿಳಿಸಿ ಅನಂತರ ಆ ಋಷಿಯು ಅಗ್ನ್ಯಾದಿದೇವತೆಗಳನ್ನು ಸ್ತುತಿಸಿದುದನ್ನು ತಿಳಿಸಿದೆ. **ಉಚಥ್ಯಭಾರ್ಯೆಯಾದ ಮಮತೆಯಲ್ಲಿ ದೀರ್ಘತಮಸ್ಸಿನ** ಉತ್ಪತ್ತಿಯನ್ನೂ, ಗರ್ಭಕಾಲದಲ್ಲಿ ಮಮತೆಗೆ ಅತ್ಯಾಚಾರವು ಸಂಭವಿಸಿದುದನ್ನೂ, ಅದರಿಂದ ದೀರ್ಘತಮಸ್ಸಿಗೆ ಒದಗಿದ ತೊಂದರೆಯನ್ನೂ ಹಿಂದೆ ಬೇರೆ ಸನ್ನಿವೇಶದಲ್ಲಿ ಆನುಷಂಗಿಕವಾಗಿ ಸೂಕ್ಷ್ಮವಾಗಿ ತಿಳಿಸಿದೆ. ಆದರೂ ಸಹ ಇಲ್ಲಿ ಸಾಕ್ಷಾತ್ತಾಗಿ ಆ ಋಷಿಯ ಕೃತಿಯೂ ಆ ಕೃತಿಯ ವೈಶಿಷ್ಟ್ಯವೂ ವಿವರಿಸಲ್ಪಡುವ ಸನ್ನಿವೇಶದಲ್ಲಿ **ಔಚಥ್ಯಃ** ಎಂದು ತಾನೇ ಹೇಳಿಕೊಳ್ಳುವುದರಿಂದ **ಉಚಥ್ಯನ** ಪುತ್ರನಾಗಿ ಅವನು ಉತ್ಪನ್ನನಾದ ಕಥೆಯನ್ನು ಬೃಹದ್ದೇವತೆಯಲ್ಲಿ ಉಕ್ತವಾಗಿರುವಂತೆ ತಿಳಿಸಲ್ಪಡುತ್ತದೆ.

**ಭ್ರಾತರಾವುಚಥ್ಯಬೃಹಸ್ಪತೀ ಋಷಿಪುತ್ರೌ ಬಭೂವತುಃ ।**
**ಆಸೀದುಚಥ್ಯಭಾರ್ಯಾ ತು ಮಮತಾ ನಾಮ ಭಾರ್ಗವೀ ॥**
**ತಾಂ ಕನೀಯಾನ್ಬೃಹಸ್ಪತಿರ್ಮೈಥುನಾಯೋಪಚಕ್ರಮೇ ।**
**ಶುಕ್ರಸ್ಯೋತ್ಸರ್ಗಕಾಲೇ ತು ಗರ್ಭಸ್ತಂ ಪ್ರತ್ಯಭಾಷತ ॥**
**ಇಹಾಸ್ಮಿ ಪೂರ್ವಸಂಭೂತೋ ನ ಕಾರ್ಯಃ ಶುಕ್ರಸಂಕರಃ ।**
**ತಚ್ಛುಕ್ರಪ್ರತಿಷೇಧಂ ತು ನ ಮಮರ್ಷ ಬೃಹಸ್ಪತಿಃ ॥**
**ಸ ವ್ಯಾಜಹಾರ ತ ಗರ್ಭಂ ತಮಸ್ತೇ ದೀರ್ಘತಮಸ್ತ್ವಿತಿ ।**
**ಸ ಚ ದೀರ್ಘತಮಾ ನಾಮ ಬಭೂವರ್ಷಿರುಚಥ್ಯಜಃ ॥**

**ಸ ಜಾತೋಽಭ್ಯತಪದ್ದೇವಾನಕಸ್ಮಾದಂಧತಾಂ ಗತಃ ।**
**ದದುರ್ದೇವಾಸ್ತು ತನ್ನೇತ್ರೇ ತತೋಽನನ್ಧೋ ಬಭೂವ ಸಃ ॥**

(ಬೃ. ದೇ. ೪–೧೧ರಿಂದ ೧೫)

**ಉಚಥ್ಯ** ಮತ್ತು **ಬೃಹಸ್ಪತಿ** ಎಂಬ ಇಬ್ಬರು ಸಹೋದರರಿದ್ದರು. ಉಚಥ್ಯನಿಗೆ **ಮಮತಾ** ಎಂಬ ಹೆಸರಿನ ಪತ್ನಿಯಿದ್ದಳು. ಅವಳು ಗರ್ಭವತಿಯಾಗಿದ್ದಾಗ ಉಚಥ್ಯನ ತಮ್ಮನಾದ ಬೃಹಸ್ಪತಿಯು ಅವಳೊಡನೆ ಸಂಭೋಗಿಸಿದನು. ಶುಕ್ರದ ಉತ್ಸರ್ಗಕಾಲದಲ್ಲಿ ಒಳಗಿದ್ದ ಗರ್ಭವು ಬೃಹಸ್ಪತಿಯ ಶುಕ್ರದ ಉತ್ಸರ್ಗವನ್ನು ತಡೆಯುವಂತೆ ಪ್ರಾರ್ಥಿಸಿತು. ಆದರಿಂದ ಕೋಪಗೊಂಡ ಬೃಹಸ್ಪತಿಯು ಆಜನ್ಮಾಂಧನಾಗಿ ಹುಟ್ಟಬೇಕೆಂದು ಗರ್ಭಕ್ಕೆ ಶಾಪವನ್ನು ಕೊಟ್ಟನು. ದೀರ್ಘವಾದ ತಮಸ್ಸಿನಿಂದ ಕೂಡಿ ಹುಟ್ಟಿದುದರಿಂದ ಆ ಮಗುವಿಗೆ **ದೀರ್ಘತಮಸ್** ಎಂದು ಹೆಸರಾಯಿತು. ಅಂಧಕಾರಪೂರಿತನಾದ ಋಷಿಪುತ್ರನು ತಪಸ್ಸುಮಾಡಿ ದೇವತೆಗಳನ್ನು ಒಲಿಸಲು ಅವರು ಅನುಗ್ರಹಿಸಿ ಇವನಿಗೆ ಕಣ್ಣುಬರುವಂತೆ ಮಾಡಿದರು. ಕೂಡಲೇ ಇವನು ಕೆಲವು ಸೂಕ್ತಗಳ ದ್ರಷ್ಟೃವಾದನು ಎಂದು ಅಗ್ನ್ಯಾದಿ ದೇವತಾಕವಾದ ಸೂಕ್ತಗಳ ರಚನೆಯನ್ನು ತಿಳಿಸಿ ಪುನಃ ಇವನ ಅಂಧತ್ವದ ಕಾಲದಲ್ಲಿ ನಡೆದ ಕಥೆಯನ್ನು ಮುಂದುವರಿಸಿದೆ.

**ಜೀರ್ಣಂ ತು ದೀರ್ಘತಮಸಂ ಖಿನ್ನಾಸ್ತತ್ಪರಿಚಾರಿಣಃ ।**
**ದಾಸಾ ಬದ್ಧ್ವಾ ನದೀತೋಯೇ ದೃಷ್ಟಿಹೀನಮವಾದಧುಃ ॥**
**ತತ್ರೈಕಸ್ತ್ರೈತನೋ ನಾಮ ಶಸ್ತ್ರೇಣೈನಮುಪಾಹನತ್ ।**
**ಶಿರಶ್ಚಾಂಸಾವುರಶ್ಚೈವ ಸ್ವಯಮೇವ ನ್ಯಕೃಂತತ ॥**
**ಹತ್ವಾ ದೀರ್ಘತಮಾಸ್ತಂತು ಪಾಪೇನ ಮಹತಾ ವೃತಂ ।**
**ಆತ್ಮಾಂಗಾನ್ಯನುದಚ್ಚೈವ ತತ್ರೋದೋನ್ಮೋಹಿತೋ ಭೃಶಂ ॥**
**ಅಂಗದೇಶಸಮೀಪೇ ತು ತಂ ನದ್ಯಃ ಸಮುದಕ್ಷಿಪನ್ ।**
**ಅಂಗರಾಜಗೃಹೇ ಯುಕ್ತಾಮುಶಿಜಂ ಪುತ್ರಕಾಮ್ಯಯಾ ॥**
**ರಾಜ್ಞಾ ಚ ಪ್ರಹಿತಾಂ ದಾಸೀಂ ಭಕ್ತಾಂ ಮತ್ವಾ ಮಹಾತಪಾಃ ।**
**ಜನಯಾಮಾಸ ಚೋತ್ಥಾಯ ಕಕ್ಷೀವತ್ಪ್ರಮುಖಾನೃಷೀನ್ ॥**
**ತುಷ್ಟಾವ ಚೈವ ಸೂಕ್ತಾಭ್ಯಾಂ ಅಬೋಧೀತ್ಯಶ್ವಿನಾವೃಷಿಃ ।**

(ಬೃಹದ್ದೇವತಾ ೪-೨೧ರಿಂದ ೨೫)

**ದೀರ್ಘತಮಸ್ಸು** ಬಹಳ ದೀರ್ಘಕಾಲ ಅಂಧತ್ವದಲ್ಲಿದ್ದುದರಿಂದ ಅವನ ಪರಿಚಾರಕರು ಅವನ ಪರಿಚರ್ಯೆಯಿಂದ ಖೇದಗೊಂಡವರಾಗಿ ಜೀರ್ಣವಾದ ಅವನನ್ನು ಕಟ್ಟಿ ನದೀನೀರಿನೊಳಕ್ಕೆ ಹಾಕಿಬಿಟ್ಟರು. ಅವರಲ್ಲಿ ತ್ರೈತನನೆಂಬೊಬ್ಬನು ತನ್ನ ಕತ್ತಿಯಿಂದ ಅವನನ್ನು ಹೊಡೆಯಲು ಹೋಗಿ ತನ್ನ ತಲೆಯನ್ನೂ ಬಾಹುಗಳನ್ನೂ ತಾನೇ ಸೀಳಿಕೊಂಡನು. ಹೀಗೆ ತನ್ನ ಪಾಪಕ್ಕೆ ತಾನೇ ಪ್ರಾಯಶ್ಚಿತ್ತವನ್ನನುಭವಿಸಿದ ಆ ಸೇವಕನನ್ನು ದೀರ್ಘತಮಸ್ಸು ಪೂರ್ಣವಾಗಿ ಕೊಂದುಹಾಕಿ, ನೀರಿನ ಒತ್ತಡದಿಂದ ಉನ್ಮೋಹಿತನಾಗಿದ್ದರೂ ಸಹ ಕೈಕಾಲುಗಳನ್ನು ಚಾಚಲು ಪ್ರಯತ್ನಿಸಿದನು. ಆಗ ನದೀಪ್ರವಾಹವು ಅವನನ್ನು ಪಕ್ಕದಲ್ಲಿದ್ದ **ಅಂಗದೇಶದ ಪ್ರಾಂತಕ್ಕೆ ತಳ್ಳಿ ದಡಕ್ಕೆ**

ಹಾಕಿಬಿಟ್ಟಿತು. ಅಂಗದೇಶದ ದೊರೆಯು ತನ್ನಲ್ಲಿದ್ದ **ಉಶಿಕ್** ಎಂಬ ಸ್ತ್ರೀಯನ್ನು ಪುತ್ರೇಚ್ಛೆಯಿಂದ ದೀರ್ಘತಮಸ್ಸಿನ ಹತ್ತಿರ ಕಳುಹಿದನು. ನೀರಿನಿಂದ ಹೊರಕ್ಕೆ ಬಂದ ದೀರ್ಘತಮಸ್ಸು ಇವಳ ಸೇವೆಗೂ ಪ್ರೀತಿಗೂ ಮೆಚ್ಚಿ ಇವಳಲ್ಲಿ ಕಕ್ಷೀವಂತನೇ ಮುಂತಾದ ಋಷಿಗಳು ಉತ್ಪನ್ನರಾಗುವಂತೆ ಮಾಡಿದನು ಎಂದು ಆ ಕಥೆಯನ್ನು ಹೇಳಿ ಅನಂತರ ಅವನು ಅಶ್ವಿನೀದೇವತಾಕವಾದ ಸೂಕ್ತಗಳನ್ನು ರಚಿಸಿ ಆ ದೇವತೆಗಳನ್ನು ಪ್ರಕೃತವಾದ ಋಕ್ಕುಗಳಲ್ಲಿ ಪ್ರಾರ್ಥಿಸಿದುದನ್ನು ತಿಳಿಸಿದೆ.

**ವಸೂ, ರುದ್ರಾ, ಪುರುಮಂತೂ, ವೃಧಂತಾ, ವೃಷಣೌ** ಇತ್ಯಾದಿ ವಿಶೇಷಣಗಳಿಂದ **ಅಶ್ವಿನೀದೇವತೆಗಳ** ಸ್ವರೂಪವನ್ನು ಋಷಿಯು ವರ್ಣಿಸಿದ್ದಾನೆ.

**ವಸೂ— ವಾಸಯಿತಾರೌ ಪ್ರಜಾನಾಂ । ವಸುನಾ ಧನೇನ ತದ್ವಂತೌ ವಾ ।** ಭಕ್ತರಾದ ಪ್ರಜೆಗಳಿಗೆ ವಾಸಸ್ಥಾನಗಳನ್ನು ಒದಗಿಸುವವರೆಂದಾಗಲಿ ಅಥವಾ ಧನವಂತರೆಂದಾಗಲಿ ಎರಡುವಿಧವಾಗಿಯೂ ಅರ್ಥಮಾಡಬಹುದೆಂದು ತೋರಿಸಿದೆ.

**ತ್ರಿರ್ನೋ ರಯಿಂ ವಹತಮಶ್ವಿನಾ ಯುವಂ ತ್ರಿರ್ದೇವತಾತಾ ತ್ರಿರುತಾವತಂ ಧಿಯಃ ।**
**ತ್ರಿಃ ಸೌಭಗತ್ವಂ ತ್ರಿರುತ ಶ್ರವಾಂಸಿ ನಸ್ತ್ರಿಷ್ಠಂ ವಾಂ ಸೂರೇ ದುಹಿತಾ ರುಹದ್ರಥಂ ॥**
(ಋ. ಸಂ. ೧-೩೪-೫)

ಇತ್ಯಾದಿ ಋಕ್ಕುಗಳಲ್ಲಿ ಅನ್ನಾದಿಸಕಲಸಂಪತ್ತುಗಳನ್ನೂ ಒದಗಿಸಿಕೊಡಬೇಕೆಂದು ಪ್ರಾರ್ಥಿಸಿದೆ. ಮತ್ತು ಸಕಲ ವಿಧವಾದ ಸಂಪತ್ತಿಗೂ ಆಧಾರಭೂತರು ಎಂದೂ ಸೂಚಿಸಿದೆ. ನಿರಾಶ್ರಿತರೂ ದುಃಖಕ್ಕೆ ಸಿಕ್ಕಿದವರೂ ಆದ **ಭುಜ್ಯುವೇ** ಮುಂತಾದ ಭಕ್ತರಿಗೆ ಆಶ್ರಯದಾತರಾಗಿ ಅವರನ್ನು ಸುರಕ್ಷಿತವಾದ ಗೃಹಾದಿಗಳಿಗೆ ಸೇರಿಸಿದುದೂ ಅನೇಕಕಡೆ (ಋ. ಸಂ. ೧-೧೧೬-೩ ಇತ್ಯಾದಿ) ವರ್ಣಿತವಾಗಿದೆ. ಆದುದರಿಂದ **ಈ** ವಿಶೇಷಣಕ್ಕೆ ಯಾವ ಅರ್ಥವನ್ನು ಹೇಳಿದರೂ ಹೊಂದಿಕೊಳ್ಳುತ್ತದೆ

**ರುದ್ರಾ — ರುತ್ ದುಃಖಂ ತದ್ಧೇತುಭೂತಂ ಪಾಪಂ ವಾ । ತಸ್ಯ ದ್ರಾವಯಿತಾರೌ । ಸಂಗ್ರಾಮೇ ಭಯಂಕರಂ ಶಬ್ದಯಂತೌ ವಾ । ರುತ್** ಎಂದರೆ ದುಃಖವೆಂದಾಗಲಿ ಅಥವಾ ಆದಕ್ಕೆ ಹೇತುಭೂತವಾದ ಪಾಪವೆಂದಾಗಲಿ ಅರ್ಥವಾಗುತ್ತದೆ ಆ ದುಃಖವನ್ನಾಗಲಿ ಪಾಪವನ್ನಾಗಲಿ ನಾಶಮಾಡುವವರೆಂದರ್ಥವೆಂದು ಒಂದು ವಿಧವಾಗಿಯೂ ಅಥವಾ ರಣರಂಗದಲ್ಲಿ ಭಯಂಕರವಾಗಿ ಶಬ್ದಮಾಡುವವರೆಂದು ಇನ್ನೊಂದು ವಿಧವಾಗಿಯೂ ಅರ್ಥ ಮಾಡಬಹುದೆಂದು ತೋರಿಸಿದೆ. ಮತ್ತು **ರುದ್ರೋ ರೌತೀತಿ ಸತಃ ಇತಿ ಯಾಸ್ಕಃ ।** ಎಂದು ಯಾಸ್ಕರ ವಾಕ್ಯವನ್ನುದಹರಿಸಿ ಈ ಪದದ ನಿರ್ವಚನವನ್ನೂ ತಿಳಿಸಿದ್ದಾರೆ. ನಿರುಕ್ತಕಾರರು,

**ಯದರುದತ್ತದ್ರುದ್ರಸ್ಯ ರುದ್ರತ್ವಂ (ಇತಿ ಕಾಠಕಂ) । ಯದರೋದೀತ್ತದ್ರುದ್ರಸ್ಯ ರುದ್ರತ್ವಂ (ಇತಿ ಹಾರಿದ್ರವಿಕಂ) ॥**
(ನಿ. ೧೦-೭)

ಎಂಬ ಕಾಠಕವಾಕ್ಯವನ್ನೂ ಹಾರಿದ್ರವಿಕವಾಕ್ಯವನ್ನೂ ಉದಹರಿಸಿ ಆರ್ಭಟಧ್ವನಿಯಲ್ಲಿ ಶಬ್ದಮಾಡುವುದರಿಂದ **ರುದ್ರ** ಎಂಬ ಹೆಸರು ಪ್ರಸಿದ್ಧವಾಯಿತೆಂದು ತಿಳಿಸಿದ್ದಾರೆ. ದುಃಖನಾಶಕವೂ ಶಬ್ದಕಾರಕವೂ ಆದ ಎರಡುಗುಣಗಳೂ ಅಶ್ವಿನೀದೇವತೆಗಳಲ್ಲಿ ಇವೆಯೆಂದು ಹಿಂದೆ ಉದಾಹರಣೆಗಳೊಂದಿಗೆ ತಿಳಿಸಿದೆ. ಅಥವಾ,

**ಆ ನೋ ರತ್ನಾನಿ ಬಿಭ್ರತಾವಶ್ವಿನಾ ಗಚ್ಛತಂ ಯುವಂ ।**
**ರುದ್ರಾ ಹಿರಣ್ಯವರ್ತನೀ ಜುಷಾಣಾ ವಾಜಿನೀವಸೂ ಮಾಧ್ವೀ ಮಮ ಶ್ರುತಂ ಹವಂ ॥**
(ಋ. ಸಂ. ೫-೭೫-೩)

**ಉತ ನೋ ರುದ್ರಾ ಚಿನ್ಮೃಳತಾಮಶ್ವಿನಾ ವಿಶ್ವೇ ದೇವಾಸೋ ರಥಸ್ಪತಿರ್ಭಗಃ ।**
**ಋಭುರ್ವಾಜ ಋಭುಕ್ಷಣಃ ಪರಿಜ್ಮಾ ವಿಶ್ವವೇದಸಃ ॥**
(ಋ. ಸಂ. ೧೦-೯೩-೭)

ಇತ್ಯಾದಿಋಕ್ಕುಗಳಲ್ಲಿ ಸಾಯಣರು ರುದ್ರಾ ಎಂಬ ಪದಕ್ಕೆ ರುದ್ರಪುತ್ರೌ ಅಶ್ವಿನೌ ಎಂದು ಅರ್ಥಮಾಡಿದ್ದಾರೆ. ಅದರ ಜೊತೆಯಲ್ಲಿಯೇ ಸ್ತುತ್ಯಾ ವಾ ಸ್ತುತಿಗೆ ಅರ್ಹರಾದವರು ಎಂದೂ ಅರ್ಥವಾಗಬಹುದೆಂದು ಹೇಳಿದ್ದಾರೆ. ಮತ್ತು ರುದ್ರಶಬ್ದವು ಸ್ತೋತ್ರನಾಮಗಳಲ್ಲಿ ಪಠಿತವಾಗಿರುವುದರಿಂದ (ನಿ. ೩-೧೯) ಇಲ್ಲಿ ಸ್ತುತಿಗೆ ಅರ್ಹರೆಂಬರ್ಥವನ್ನು ಮಾಡಿರಬಹುದು ಆದುದರಿಂದ ಪ್ರಕೃತವಾದ ಋಕ್ಕಿನಲ್ಲಿ ಈ ಎಲ್ಲಾ ಅರ್ಥಗಳಿಗೂ ಅವಕಾಶವಿದೆ.

**ಪುರುಮಂತೂ—ಬಹೂನಾಂ ಜ್ಞಾತಾರೌ**—ಬಹುವಿಧವಾದ ಜ್ಞಾನವುಳ್ಳವರೆಂದರ್ಥ. ಅಶ್ವಿನೀದೇವತೆಗಳ ಪ್ರಜ್ಞೆಯು ಅತ್ಯಂತ ಪ್ರಶಸ್ತವಾದುದು. ಆದುದರಿಂದಲೇ—

**ಮೇಧಾಂ ಮೇ ಅಶ್ವಿನಾವುಭಾವಾಧತ್ತಾಂ ।**
(ತೈ. ಉ. ೪-೧೬-೫)

ನನಗೆ ಉತ್ತಮವಾದ ಪ್ರಜ್ಞೆಯನ್ನು ದಯಪಾಲಿಸಲಿ ಎಂದು ಪ್ರಾರ್ಥಿಸಿದೆ. ಋಕ್ಸಂಹಿತೆಯಲ್ಲಿಯೂ ಸಹ,

**ಆ ನೂನಂ ಯಾತಮಶ್ವಿನಾ ರಥೇನ ಸೂರ್ಯತ್ವಚಾ ।**
ಭುಜೀ ಹಿರಣ್ಯಪೇಶಸಾ ಕವೀ ಗಂಭೀರಚೇತಸಾ ॥
(ಋ. ಸಂ. ೮ ೮-೨)

ಎಂಬ ಋಕ್ಕಿನಲ್ಲಿ ಗಂಭೀರಚೇತಸಾ ಎಂಬ ವಿಶೇಷಣದಿಂದ ಅಶ್ವಿನೀದೇವತೆಗಳನ್ನು ಸ್ತುತಿಸಿದೆ. ಈ ವಿಶೇಷಣಕ್ಕೆ ಸಾಯಣರು **ಪ್ರಶಸ್ತಜ್ಞಾನೌ** ಶ್ರೇಷ್ಠವಾದ ಜ್ಞಾನವುಳ್ಳವರೆಂದರ್ಥಮಾಡಿದ್ದಾರೆ.

**ರೇಕ್ಣಃ—ರೇಕ್ಣ ಇತಿ ಧನನಾಮ । ರಿಚ್ಯತೇ ಪ್ರಯತಃ ।** ಮೃತನಾದವನಿಂದ ತ್ಯಜಿಸಲ್ಪಟ್ಟು ಉಳಿದವರ ಸುಖಸಾಧನವಾದುದರಿಂದ ಧನಕ್ಕೆ ರೇಕ್ಣಃ ಎಂದು ಹೆಸರೆಂದು ನಿರುಕ್ತಕಾರರು ವಿವರಿಸಿದ್ದಾರೆ. (ನಿ. ೩-೨) ಪ್ರಕೃತವಾದ ಋಕ್ಕಿನಲ್ಲಿ ಸಾಯಣರು ಈ ಪದಕ್ಕೆ ಧನವೆಂದಾಗಲಿ ಅಥವಾ ಹವಿಸ್ಸಿನರೂಪವಾದ ಅನ್ನವೆಂದಾಗಲಿ ಅರ್ಥಮಾಡಬಹುದೆಂದು ಹೇಳಿದ್ದಾರೆ. ಧನವೆಂದರ್ಥಮಾಡಿದರೆ **ಸ್ತುತಿವ್ಯಾಜೇನ ಪ್ರಾರ್ಥಯತೇ** ಸ್ತುತಿಯ ಮೂಲಕವಾಗಿ ಪ್ರಾರ್ಥಿಸುತ್ತಾನೆಂದೂ, ಅಲ್ಲದೆ ಹವಿಸ್ಸಿನರೂಪವಾದ ಅನ್ನವೆಂದರ್ಥಮಾಡಿದರೆ **ಹವಿರ್ಲಕ್ಷಣಮನ್ನಂ ವಾಂ ದಾಸ್ಯತಿ ದದಾತೀತಿ ಶೇಷಃ ।** ಈ ಅನ್ನವನ್ನು ನಿಮಗೆ ಅರ್ಪಿಸುತ್ತಾನೆಂದೂ ತಾತ್ಪರ್ಯವೆಂದು ವಿವರಿಸಿದ್ದಾರೆ.

**ಅಕವಾಭಿಃ—ಅಕುತ್ಸಿತೈಃ ।** ಗರ್ಹ್ಯವಲ್ಲದ ಎಂದರೆ ದೂಷ್ಯವಲ್ಲದ **ಊತಿಭಿಃ** ರಕ್ಷಣೆಗಳಿಂದ, ಎಂದು ವಿವರಿಸಿದೆ. ಪ್ರಶಂಸೆಗೆ ಪಾತ್ರವಾದ ಎಂದರ್ಥ. **ಕುತ್ಸಿತವಾದುದು** ಎಂಬರ್ಥವನ್ನು ಕೊಡತಕ್ಕ **ಕು ಧಾತುವಿ**ನಿಂದ ನಿಷ್ಪನ್ನವಾದ **ಕವ** ಶಬ್ದಕ್ಕೆ ಅಲ್ಪವಾದುದು, ತಿರಸ್ಕೃತವಾದುದು, ದೂಷ್ಯವಾದುದು ಎಂದು ತಾತ್ಪರ್ಯವಾಗು

ತ್ತದೆ. ಈಧಾತುವಿನಿಂದ **ಕವ, ಕವಾರಿ** ಎಂಬ ಎರಡು ರೂಪಗಳೂ ನಿಷ್ಪನ್ನವಾಗುತ್ತವೆ. **ಕವಾರಿ**ಯೆಂಬ ಪದಕ್ಕೆ ಸಾಧಾರಣವಾಗಿ ಅತ್ಯಂತ ಸ್ವಾರ್ಥಿಯೂ, ಲೋಭಿಯೂ, ಯಜ್ಞಮಾಡದೆ ಕುತ್ಸಿತವಾದ ಜೀವನವುಳ್ಳವನೂ ಆದ ಪುರುಷನೆಂದರ್ಥವಾಗುತ್ತದೆ.

**ದೈವೀ ಪೂರ್ತಿರ್ದಕ್ಷಿಣಾ ದೇವಯಜ್ಯಾ ನ ಕವಾರಿಭ್ಯೋ ನಹಿ ತೇ ಪೃಣಂತಿ ।**
**ಅಥಾ ನರಃ ಪ್ರಯತದಕ್ಷಿಣಾಸೋಽವದ್ಯಭಿಯಾ ಬಹವಃ ಪೃಣಂತಿ ॥**

(ಋ. ಸಂ. ೧೦-೧೦೭-೩)

ಎಂಬಲ್ಲಿ **ಕವಾರಿಭ್ಯಃ** ಎಂಬ ಪದಕ್ಕೆ **ಕುತ್ಸಿತಗಂತೃಭ್ಯಃ ಅಯಷ್ಟೃಭ್ಯಃ** ಯಜ್ಞಯಾಗಾದಿಗಳನ್ನು ಮಾಡದೆ ಕುತ್ಸಿತವಾದ ಜೀವನವನ್ನು ನಡಿಸತಕ್ಕ ಸ್ವಾರ್ಥಿಗಳೂ, ಲೋಭಿಗಳೂ ಎಂದರ್ಥವಾಗುತ್ತದೆ. **ಕವಾರಿ**ಶಬ್ದಕ್ಕೆ ಇದು ಒಂದು ವಿಧವಾದ ಪ್ರಯೋಗ.

**ಮರುತ್ವಂತಂ ವೃಷಭಂ ವಾವೃಧಾನಮಕವಾರಿಂ ದಿವ್ಯಂ ಶಾಸಮಿಂದ್ರಂ ।**
**ವಿಶ್ವಾಸಾಹಮವಸೇ ನೂತನಾಯೋಗ್ರಂ ಸಹೋದಾಮಿಹ ತಂ ಹುವೇಮ ॥**

**(ಋ. ಸಂ. ೩-೪೭-೫)**

ಎಂಬ ಋಕ್ಕಿನಲ್ಲಿ **ಕವ** ಶಬ್ದಕ್ಕೆ ಸಣ್ಣವನು, ತಿರಸ್ಕೃತನು ಎಂಬರ್ಥವಾಗಿ **ಕವನಾದ ಅರಿ**; ಅಲ್ಪನಾದ ಶತ್ರುವು ಎಂಬ ಸಮಸ್ತಪದವಾಗಿದೆ. ಅಂತಹ **ಕವಾರಿ**ಯಲ್ಲದವನು **ಅಕವಾರಿಯು** ಎಂದರೆ ಮಹತ್ತಾದ ಶಕ್ತಿಯುಳ್ಳ ಶತ್ರುವು ಎಂದರ್ಥವಾಗಿದೆ. ಇಲ್ಲಿ ಈ ಪದವು ಇಂದ್ರನಿಗೆ ವಿಶೇಷಣವಾಗಿದೆ. ವೃತ್ರಾಸುರನ ಶಕ್ತಿಯು ಇನ್ನೂ ಮಹತ್ತಾದುದು. ಅವನನ್ನು ನಿಗ್ರಹಿಸಬೇಕಾದರೆ **ವೃತ್ರನಿಗೆ** ಶತ್ರುವಾದ **ಇಂದ್ರನ** ಶಕ್ತಿಯು ಇನ್ನೂ ಮಹತ್ತರವಾದುದು ಎಂದು **ಇಂದ್ರನ** ಪರಾಕ್ರಮವನ್ನು ತೋರಿಸತಕ್ಕ ವಿಶೇಷಣವಾಗಿದೆ. ಇದು **ಕವಾರ**ಯೆಂಬ ಪದದ ಇನ್ನೊಂದು ವಿಧವಾದ ಪ್ರಯೋಗ.

ಪ್ರಕೃತವಾದ ಋಕ್ಕಿನಲ್ಲಿಯೂ ಸಹ **ಕವ** ಶಬ್ದಕ್ಕೆ **ಅಲ್ಪ**ವೆಂದರ್ಥವಾಗಿದೆ. ಕವವಲ್ಲದವು ಅಕವಗಳು. ಅಂತಹ ಅಕವಗಳಾದ ರಕ್ಷಣೆಗಳಿಂದ ಎಂದರೆ ಅತ್ಯಂತಮಹತ್ತಾದ ರಕ್ಷಣೆಗಳಿಂದ ಎಂಬರ್ಥವನ್ನು **ಅಕವಾಭಿಃ ಊತೀ** ಎಂಬ ಪದಗಳು ಸೂಚಿಸುತ್ತವೆ.

**ದಸ್ರಾ—ಅಸ್ಮದ್ದ್ವಿರೋಧ್ಯುಪಕ್ಷಪಯಿತಾರೌ ।** ನಮ್ಮ ಶತ್ರುಗಳನ್ನು ಹಿಂಸಿಸಿ ನಾಶಮಾಡುವವರು ಎಂದು ಅಶ್ವಿನೀದೇವತೆಗಳ ಸ್ವರೂಪವನ್ನು ತಿಳಿಸುತ್ತದೆ. ಈ ಪದಕ್ಕೆ ಶತ್ರುನಾಶಕರೆಂದೂ ಅಥವಾ ಸುಂದರವಾದ ರೂಪವುಳ್ಳವರೆಂದೂ ಎರಡು ವಿಧವಾದ ಅರ್ಥವಾಗಬಹುದೆಂದು ಹಿಂದೆ ತಿಳಿಸಿದೆ.

### ವ್ಯಾಕರಣಪ್ರಕ್ರಿಯಾ

**ವಸೂ—**ವಸು ಅನಯೋಃ ಅಸ್ತಿ ಇತಿ ವಸೂ ಮತುಪ್ ಪ್ರತ್ಯಯ ಬಂದಾಗ ಛಾಂದಸವಾಗಿ ಅದಕ್ಕೆ ಲೋಪ ಬರುತ್ತದೆ.

**ರುದ್ರಾ**—ರುದಿರ್ ಅಶ್ರುವಿಮೋಚನೇ ಧಾತು. **ರೋದೇರ್ಣಿಲುಕ್ ಚ** ( ಉ. ಸೂ. ೨-೧೭೯ ) ಎಂಬುದರಿಂದ ರಕ್ ಪ್ರತ್ಯಯ. ಣಿಚಿಗೆ ಲೋಪ. ಪ್ರತ್ಯಯ ಸ್ವರದಿಂದ ಅಂತೋದಾತ್ತವಾಗುತ್ತದೆ. ದ್ವಿವಚನಪರ ವಾದಾಗ **ಸುಪಾಂ ಸುಲುಕ್**—(ಪಾ. ಸೂ. ೭-೧-೩೯) ಎಂಬುವರಿಂದ ಅದಕ್ಕೆ ಆಕಾರಾದೇಶ.

**ಪುರುಮಂತೂ**—ಮನ ಜ್ಞಾನೇ. ಧಾತು. ಔಣಾದಿಕ ತುನ್‌ಪ್ರತ್ಯಯ. ನಿತ್ವಾದುದರಿಂದ ಆದ್ಯುದಾತ್ತಸ್ವರ ಬರುತ್ತದೆ. ಸಮಾಸದಲ್ಲಿ ಕೃದುತ್ತರಪದ ಪ್ರಕೃತಿಸ್ವರ ಬರುತ್ತದೆ.

**ವೃಧಂತಾ**—ವೃಧು ವೃದ್ಧೌ ಧಾತು. **ವ್ಯತ್ಯಯೋ ಬಹುಲಮ್** ಎಂಬುದರಿಂದ ಲಿಟಿಗೆ ಶತ್ರಾದೇಶ. **ಬಹುಲಂ ಛಂದಸಿ** ಎಂಬುದರಿಂದ ಶಪಿಗೆ ಲುಕ್. ದ್ವಿವಚನ ಪರವಾದಾಗ **ಸುಪಾಂ ಸುಲುಕ್**–ಸೂತ್ರದಿಂದ ಆಕಾರಾದೇಶ. ಪ್ರತ್ಯಯದ ಆದ್ಯುದಾತ್ತಸ್ವರ ಬರುತ್ತದೆ.

**ದಶಸ್ಯತಮ್**—ದಶಸ್ ಎಂಬುದು ದಾನಾರ್ಥದಲ್ಲಿ ಪಠಿತವಾಗಿದೆ. **ಕಂಡ್ವಾದಿಭ್ಯೋ ಯಕ್** (ಪಾ. ಸೂ. ೩-೧-೨೭) ಎಂಬುದರಿಂದ ಸ್ವಾರ್ಥದಲ್ಲಿ ಯಕ್. ಇದರ ಮೇಲೆ ಲೋಟ್ ಮಧ್ಯಮಪುರುಷ ದ್ವಿವಚನದಲ್ಲಿ ತಮಾದೇಶ. **ಲಸಾರ್ವಧಾತುಕ ಅನುದಾತ್ತವಾಗುವುದರಿಂದ** ಯಕ್‌ಸ್ವರ ಉಳಿಯುತ್ತದೆ. ಪಾದಾದಿಯಲ್ಲಿರುವುದರಿಂದ ನಿಘಾತಸ್ವರ ಬರುವುದಿಲ್ಲ.

**ದಸ್ರಾ**—ದಸು ಉಪಕ್ಷಯೇ. ಧಾತು. **ಸ್ಫಾಯಿತಂಚಿವಂಚಿ**—(ಉ. ಸೂ. ೨-೧೭೦) ಎಂಬುದರಿಂದ ರಕ್ ಪ್ರತ್ಯಯ. ದ್ವಿವಚನ ಪರವಾದಾಗ ಅದಕ್ಕೆ ಆಕಾರಾದೇಶ. ಪಾದಾದಿಯಲ್ಲಿರುವುದರಿಂದ ಆಮಂತ್ರಿತನಿಘಾತಸ್ವರ ಬರುವುದಿಲ್ಲ. **ಆಮಂತ್ರಿತಸ್ಯ** (ಪಾ. ಸೂ. ೬-೧-೧೯೮) ಎಂಬುದರಿಂದ ಆದ್ಯುದಾತ್ತಸ್ವರ ಬರುತ್ತದೆ.

**ಔಚಥ್ಯಃ**—ಉಚಥ್ಯಸ್ಯ ಅಪತ್ಯಂ ಪುಮಾನ್ ಔಚಥ್ಯಃ **ತಸ್ಯಾಪತ್ಯಮ್** ( ಪಾ. ಸೂ. ೪-೧-೯೨ ) ಎಂಬುದರಿಂದ ಅಣ್‌ಪ್ರತ್ಯಯ **ತದ್ಧಿತೇಷ್ವಚಾಮಾದೇಃ** (ಪಾ. ಸೂ. ೭-೨-೧೧೭) ಎಂಬುದರಿಂದ ಆದಿವೃದ್ಧಿ. ಪ್ರತ್ಯಯಸ್ವರದಿಂದ ಅಂತೋದಾತ್ತವಾಗುತ್ತದೆ.

**ಸಸ್ರಾಥೇ**—ಸೃ ಗತೌ ಧಾತು. ಛಾಂದಸವಾಗಿ ಲಿಟ್. ಮಧ್ಯಮಪುರುಷ ದ್ವಿವಚನಾಂತರೂಪ. ಯದ್ಯೋಗವಿರುವುದರಿಂದ ನಿಘಾತಸ್ವರ ಬರುವುದಿಲ್ಲ. ಪ್ರತ್ಯಯದ ಆದ್ಯುದಾತ್ತಸ್ವರ ಬರುತ್ತದೆ.

**ಊತೀ**– **ಊತಿಯೂತಿಜೂತಿ**—(ಪಾ. ಸೂ. ೩-೩-೯೭) ಎಂಬುದರಿಂದ ಅವಧಾತುವಿಗೆ ಉದಾತ್ತಕ್ತಿನ್ ಬಂದು ನಿಪಾತಿತವಾಗಿದೆ. ಇದಕ್ಕೆ ತೃತೀಯಾ-ಬಹುವಚನ ಪರವಾದಾಗ **ಸುಪಾಂ ಸುಲುಕ್**—(ಪಾ. ಸೂ. ೭-೧-೩೯) ಎಂಬುದರಿಂದ ಪೂರ್ವಸವರ್ಣ ದೀರ್ಘ ಬರುತ್ತದೆ. ॥ ೧ ॥

———— :0: ————

ಸಂಹಿತಾಪಾಠಃ

ಕೋ ವಾಂ ದಾಶತ್ಸುಮತಯೇ ಚಿದಸ್ಯೈ ವಸೂ ಯದ್ಧೇಥೇ ನಮಸಾ ಪದೇ ಗೋಃ ।

ಜಿಗೃತಮಸ್ಮೇ ರೇವತೀಃ ಪುರಂಧೀಃ ಕಾಮಪ್ರೇಣೇವ ಮನಸಾ ಚರಂತಾ ।

॥ ೨ ॥

ಪದಪಾಠ

ಕಃ । ವಾಂ । ದಾಶತ್ । ಸುಽಮತಯೇ । ಚಿತ್ । ಅಸ್ಯೈ । ವಸೂ ಇತಿ । ಯತ್ । ಧೇಥೇ ಇತಿ । ನಮಸಾ । ಪದೇ । ಗೋಃ ।

ಜಿಗೃತಂ । ಅಸ್ಮೇ ಇತಿ । ರೇವತೀಃ । ಪುರಂಽಧೀಃ । ಕಾಮಪ್ರೇಣಽಇವ । ಮನಸಾ । ಚರಂತಾ ॥ ೨ ॥

ಸಾಯಣಭಾಷ್ಯಂ

ಹೇ ವಸೂ ವಾಸಯಿತಾರಾವಶ್ವಿನೌ ವಾಂ ಯುವಯೋಃ ಸಂಬಂಧಿನ್ಯಾ ಅಸ್ಯೈ ವಕ್ಷ್ಯಮಾಣರೂಪಾಯೈ ಸುಮತಯೇ ಚಿತ್ ಶೋಭನಬುದ್ಧ್ಯೈ । ಚಿತ್ ಪೂಜಾಯಾಮಪ್ಯರ್ಥೇ ವಾ । ಸ್ವಲ್ಪೇನೈವ ಹವಿಷಾ ಮಹತ್ಫಲಪ್ರದಾನರೂಪಾಯಾ ಈದೃಶ್ಯಾ ಅಪಿ ಬುದ್ಧ್ಯೈ ಪ್ರೀಣನಾಯ ಕೋ ದಾಶತ್ । ಕೋ ದದ್ಯಾತ್ । ದಾತುಂ ಶಕ್ನುಯಾತ್ । ಯುವಯೋಃ ಪ್ರಭಾವಸ್ಯಾತಿಮಹತ್ತ್ವಾದಿತಿ ಭಾವಃ ॥ ದಾಶತೇರ್ಲೇಟ್ಯಡಾಗಮಃ ॥ ಕಥಂ ಮತೇಃ ಸೌಷ್ಠವಮಿತಿ ತದುಚ್ಯತೇ । ಯದ್ಯಸ್ಮಾತ್ಕಾರಣಾದ್ಗೋಃ ಪದೇ ಭೂಮ್ಯಾಃ ಸರ್ವೈರ್ಗಂತವ್ಯಾಯಾಃ ಸ್ತುತ್ಯಾಯಾ ವಾ ವೇದಿರೂಪಾಯಾಃ ಸ್ಥಾನೇ । ಏತಾವತೀ ವೈ ಪೃಥಿವೀ ಯಾವತೀ ವೇದಿರಿತಿ ಶ್ರುತೇಃ । ಗೌರಿತಿ ಭೂನಾಮ । ತಥಾ ಚ ನಿರುಕ್ತಂ । ಗೌರಿತಿ ಪೃಥಿವ್ಯಾ ನಾಮಧೇಯಂ ಯದ್ದೂರಂ ಗತಾ ಭವತಿ ಯಚ್ಚಾಸ್ಯಾಂ ಭೂತಾನಿ ಗಚ್ಛಂತಿ ಗಾತೇರ್ವೌಕಾರೋ ನಾಮಕರಣಃ । ನಿ. ೨-೫ । ಇತಿ । ತಾದೃಶೇ ಸ್ಥಾನೇಽಸ್ಮಾಭಿಃ ಪ್ರಾರ್ಥಿತೌ ಸಂತೌ ನಮಸಾ ಹವಿರ್ಲಕ್ಷಣೇನ ಯವಮಾತ್ರಪ್ರಕಾರೇಣಾನ್ನೇನ ಧೇಥೇ ಧಾರಯಥೋ ಬಹುಪ್ರದಾನವಿಷಯಾಂ ಬುದ್ಧಿಂ ॥ ದಧಾತೇರ್ಲಟಿ ಬಹುಲಂ ಛಂದಸೀತಿ ವಿಕರಣಸ್ಯ ಲುಕ್ । ಧಾತೋಹ್ರ್ರಸ್ವತ್ವಂ । ಆತೋ ಙಿತಃ । ಪಾ. ೭-೨-೮೧ । ಇತೀಯಾದೇಶಃ ॥ ಯಸ್ಮಾದೇವಂ ತಸ್ಮಾದಸ್ಮೇ ಅಸ್ಮಭ್ಯಂ ರೇವತೀಃ ಕ್ಷೀರಾದಿಧನವತೀಃ ಪುರಂಧೀಃ ಶರೀರಧಾರಿಕಾಃ ಶರೀರಾಭಿವೃದ್ಧಿಹೇತೂರ್ಗಾ ಜಿಗೃತಂ । ಶಬ್ದಯತಂ । ದತ್ತಮಿತ್ಯರ್ಥಃ ॥ ಗೄ ಶಬ್ದೇ । ಛಾಂದಸಃ ಶಪಃ ಶ್ಲುಃ । ಅಭ್ಯಾಸಸ್ಯೇತ್ವಂ ಹ್ರಸ್ವತ್ವಂ ಚ ॥ ಪುನಸ್ತಾವೇವ ವಿಶೇಷ್ಯೇತೇ । ಕಾಮಪ್ರೇಣೇವ । ಇವಶಬ್ದ ಏವಕಾರಾರ್ಥಃ । ಕಾಮಪೂರಕೇಣೈವ ಮನಸಾ ಸಹ ಚರಂತಾ ಚರಂತೌ । ಯಜಮಾನಸ್ಯ ಕಾಮಾಃ ಪೂರಣೀಯಾ ಇತಿ ಕೃತಸಂಕಲ್ಪಾವಿತ್ಯರ್ಥಃ ॥ ಪ್ರಾ ಪೂರಣೇ । ಕಾಮಂ ಪ್ರಾತೀತಿ ಕಾಮಪ್ರಃ । ಆತೋಽನುಪಸರ್ಗೇ ಕಃ ॥

### ಪ್ರತಿಪದಾರ್ಥ

**ವಸೂ**—ವಾಸಸ್ಥಾನವನ್ನು ಕಲ್ಪಿಸಿಕೊಡತಕ್ಕ ಎಲೈ ಅಶ್ವಿನೀದೇವತೆಗಳೇ | **ಯತ್**-(ನಮಗೆ ಒಳ್ಳೆಯದನ್ನು ಮಾಡಬೇಕೆಂಬ) ಯಾವ ಕಾರಣದಿಂದ | **ಗೋಃ ಪದೇ**—ಪೂಜ್ಯವಾದ ವೇದಿಕೆಯ ಸ್ಥಾನದಲ್ಲಿ | **ನಮಸಾ**—(ಅಲ್ಪ ಮಾತ್ರವಾಗಿರತಕ್ಕ) ಹವಿಸ್ಸಿನ ರೂಪದ ಅನ್ನದಿಂದ (ಅದಕ್ಕೆ ಪ್ರತಿಯಾಗಿ) | **ಧೇಥೇ**—(ಪ್ರಭೂತವಾಗಿ ನಮಗೆ ಕೊಡುವ ಬುದ್ಧಿಯನ್ನು) ಹೊಂದಿರುತ್ತೀರೋ, (ಆದ್ದರಿಂದಲೇ) | **ಕಾಮಪ್ರೇಣೇವ**— (ನಮ್ಮ) ಇಷ್ಟಗಳನ್ನು ಪೂರೈಸಿಯೇ ತೀರಬೇಕೆಂಬ | **ಮನಸಾ**—ಮನಸ್ಸಿನೊಡನೆ | **ಚರಂತಾ**—ಸಂಚರಿಸುತ್ತಾ | **ಅಸ್ಮೇ** ನಮಗೆ | **ರೇವತೀಃ**—ಕ್ಷೀರಾದಿ ಸಂಪತ್ತುಗಳುಳ್ಳವೂ | **ಪುರಂಧೀಃ**—ಶರೀರದ ಬೆಳವಣಿಗೆಗೆ ಕಾರಣವಾದವೂ ಆದ ಗೋವು ಗಳನ್ನು | **ಜಿಗೃತಂ**—ಕೊಡುತ್ತೀರೋ (ಅಂತಹ) | **ವಾಂ**—ನಿಮ್ಮ | **ಅಸ್ಯೈ ಸುಮತಯೇ ಚಿತ್**—ಈ ಶ್ರೇಷ್ಠ ವಾದುದೂ ಅನುಗ್ರಹಾತ್ಮಕವಾದುದೂ ಆದ ಬುದ್ಧಿಗೆ ತೃಪ್ತಿಯನ್ನುಂಟುಮಾಡುವಷ್ಟು ಹೇರಳವಾಗಿ) | **ಕಃ**—ಯಾವ ಯಜ್ಞಕರ್ತನು ತಾನೇ | **ದಾಶತ್**—ಅರ್ಪಿಸಬಲ್ಲನು ?

### ಭಾವಾರ್ಥ

ವಾಸಸ್ಥಾನವನ್ನು ಕಲ್ಪಿಸಿಕೊಡತಕ್ಕ ಎಲೈ ಅಶ್ವಿನೀದೇವತೆಗಳೇ, ನೀವು ನಮಗೆ ಒಳ್ಳೆಯದನ್ನೇ ಮಾಡ ಬೇಕೆಂಬ ಉದ್ದೇಶದಿಂದ ಪೂಜ್ಯವಾದ ವೇದಿಕೆಯ ಸ್ಥಾನದಲ್ಲಿದ್ದು ನಾವು ಅರ್ಪಿಸುವ ಅಲ್ಪವಾದ ಹವಿಸ್ಸಿಗೆ ಪ್ರತಿಯಾಗಿ ಪ್ರಭೂತವಾಗಿ ನಮಗೆ ಧನಾದಿಗಳನ್ನು ಕೊಡುವ ಅನುಗ್ರಹ ಬುದ್ಧಿಯನ್ನು ಹೊಂದಿದ್ದೀರಿ. ಆದ್ದರಿಂದ ನಮ್ಮ ಇಷ್ಟಗಳನ್ನೆಲ್ಲಾ ಪೂರೈಸಿಯೇ ತೀರಬೇಕೆಂಬ ಮನಸ್ಸಿನೊಡನೆ ಸಂಚರಿಸುತ್ತಾ ನಮಗೆ ಕ್ಷೀರಾದಿಸಂಪತ್ತುಗಳುಳ್ಳವೂ ಶರೀರದ ಬೆಳವಣಿಗೆಗೆ ಕಾರಣವಾದವೂ ಆದ ಗೋವುಗಳನ್ನು ಕೊಡುತ್ತೀರಿ. ಇಂತಹ ಶ್ರೇಷ್ಠವಾದವೂ, ಅನುಗ್ರಹಾ ತ್ಮಕವಾದವೂ ಆದ ನಿಮ್ಮ ಮನಸ್ಸಿಗೆ ತೃಪ್ತಿಯನ್ನುಂಟುಮಾಡುವಷ್ಟು ಹೇರಳವಾಗಿ ಯಾವ ಯಜ್ಞಕರ್ತನು ತಾನೇ ನಿಮಗೆ ಹವಿಸ್ಸನ್ನು ಅರ್ಪಿಸಬಲ್ಲನು ? ನಮ್ಮ ಅಲ್ಪವಾದ ಅರ್ಪಣೆಯಿಂದಲೇ ನೀವು ತೃಪ್ತಿಯನ್ನು ಹೊಂದಬೇಕು.

### English Translation

Granters of dwellings, who may make you offerings so propitiatory of that your good will, that (invoked) by our adoration, to the site of the altar, you may entertain (favourable intentions towards us), and grant us cows rich in milk, coming with minds made up to grant the desires (of the worshipper).

### ॥ ವಿಶೇಷವಿಷಯಗಳು ॥

**ಗೋಃ ಪದೇ**—**ಭೂಮ್ಯಾಃ ಸರ್ವೈರ್ಗಂತವ್ಯಾಯಾಃ ಸ್ತುತ್ಯಾಯಾ ವಾ ವೇದಿರೂಪಾಯಾಃ ಸ್ಥಾನೇ** | ವೇದಿರೂಪವಾದ ಪೃಥ್ವಿಯ ಮೇಲೆ ಎಂದರ್ಥಮಾಡಿದೆ. **ಗೋಶಬ್ದಕ್ಕೆ ಪೃಥ್ವಿಯೆಂಬ** ಹೆಸರು ಹೇಗೆ ಸಾಧ್ಯವಾಗುತ್ತದೆಂದು ತಿಳಿದು ಅನಂತರ **ಪೃಥ್ವಿಗೂ ವೇದಿಗೂ** ಇರುವ ತಾದಾತ್ಮ್ಯವನ್ನು ತಿಳಿಯಬೇಕು. ನಿರುಕ್ತ ಕಾರರು **ಗೋಶಬ್ದವನ್ನು ಪೃಥಿವೀನಾಮಗಳಲ್ಲಿ** ಸೇರಿಸಿ (ನಿ. ೨-೫) ಅನಂತರ **ಗೋಶಬ್ದಕ್ಕೆ** ನಿರ್ವಚನವನ್ನು ಹೇಳಿದ್ದಾರೆ.

**ಗೌರಿತಿ ಪೃಥಿವ್ಯಾ ನಾಮಧೇಯಂ । ಯದ್ದೂರಂಗತಾ ಭವತಿ । ಯಚ್ಚಾಸ್ಯಾಂ ಭೂತಾನಿ ಗಚ್ಛಂತಿ । ಗಾತೇರ್ವೌಕಾರೋ ನಾಮಕರಣಃ ।**

( ನಿ. ೨-೫ )

ಅತ್ಯಂತ ವಿಸ್ತೃತವಾಗಿ ಹರಡಿರುವುದರಿಂದಲೂ ( ದೂರಂಗತಾ ಭವತಿ ) ; ಅಥವಾ ಭೂತಗಳು ಇದರಮೇಲೆ ಸಂಚರಿಸುವುದರಿಂದಲೂ ( ಭೂತಾನಿ ಗಚ್ಛಂತಿ ) ; **ಗೌಃ** ಎಂಬ ಪದವು **ಪೃಥಿವಿಗೆ** ಪರ್ಯಾಯಪದವಾಗಿದೆ. **ಗಾ** ಧಾತುವಿಗೆ **ಔ** ಎಂಬ ಪ್ರತ್ಯಯವನ್ನು ಸೇರಿಸಿದರೂ ಈ ಪದದ ನಿಷ್ಪತ್ತಿಯು ಸಾಧ್ಯವಾಗುತ್ತದೆ ಎಂಬುದಾಗಿ ನಿರುಕ್ತಕಾರರು ಪೃಥಿವಿಗೆ ಪರ್ಯಾಯ ಪದವಾದ ಈ ಶಬ್ದವನ್ನು ವಿವರಿಸಿ ಅನಂತರ,

ಅಥಾಪಿ ಪಶುನಾಮೇಹ ಭವತ್ಯೇತಸ್ಮಾದೇವ ।

ಈ ಕಾರಣದಿಂದಲೇ ಎಂದರೆ ಮೇಲಿನ ಅರ್ಥವನ್ನು ಕೊಡತಕ್ಕ **ಗಮ್** ಅಥವಾ **ಗಾ** ಧಾತುವಿನಿಂದ ನಿಷ್ಪನ್ನವಾಗಿರುವುದರಿಂದಲೇ **ಪಶುವಿಗೂ** ಈ ಹೆಸರು ಪ್ರಸಿದ್ಧವಾಗಿದೆ ಎಂದು ಹೇಳಿ **ಆದಿತ್ಯೋಽಪಿ ಗೌರುಚ್ಯತೇ, ಸರ್ವೇಽಪಿ ರಶ್ಮಯೋ ಗಾವ ಉಚ್ಯಂತೇ ।** ಆದಿತ್ಯ, ರಶ್ಮಿ ಇತ್ಯಾದ್ಯರ್ಥಗಳಲ್ಲಿಯೂ **ಗೋಶಬ್ದದ** ಪ್ರಯೋಗವಿದೆಯೆಂದು ತಿಳಿಸಿದ್ದಾರೆ. ಆ ಸನ್ನಿವೇಶಗಳಲ್ಲಿ ಮೂಲಧಾತುವಿನ ಅರ್ಥವನ್ನೂ ಮತ್ತು **ಗೋಶಬ್ದದ** ನಿಷ್ಪತ್ತಿಯನ್ನೂ ಆಯಾ ಸಂಧರ್ಭಗಳಲ್ಲಿ ತಿಳಿಸಿದೆ ಅಥವಾ ಮುಂದೆ ತಿಳಿಸಲಾಗುತ್ತದೆ. ಪ್ರಕೃತವಾದ **ಋಕ್ಕಿನಲ್ಲಿ** ಪೃಥಿವಿಯೆಂದರ್ಥ. ಈ ಅರ್ಥವನ್ನು ಇನ್ನೂ ವಿಸ್ತರಿಸಿದರೆ ವೇದಿರೂಪವಾದ ಪೃಥ್ವಿಯೆಂದು ತಾತ್ಪರ್ಯವಾಗುತ್ತದೆ.

**ಚಂದ್ರಮಾ ಏವ ಪ್ರತ್ಯಕ್ಷಾದಾದಿತ್ಯೋ ಯಜಮಾನಸ್ತಸ್ಯೇಯಮೇವ ಪೃಥಿವೀ ವೇದಿಃ ।**

( ಶ. ಬ್ರಾ. ೧೨-೮-೨-೩೬ )

ಇತ್ಯಾದಿವಾಕ್ಯಗಳಲ್ಲಿ **ಪೃಥಿವಿಗೂ ವೇದಿಗೂ** ತಾದಾತ್ಮ್ಯವನ್ನೇ ಹೇಳಿದೆ. ಮತ್ತು **ಹೋತಾ ವೇದಿಷತ್** ಎಂಬ **ಕಠೋಪನಿಷತ್ತಿನ** ವಾಕ್ಯಕ್ಕೆ (೫-೨) ಶಂಕರಾಚಾರ್ಯರು ಭಾಷ್ಯವನ್ನು ಬರೆಯುವಾಗ,

**ಇಯಂ ವೇದಿಃ ಪರೋಽಂತಃ ಪೃಥಿವ್ಯಾಃ । ಯಾ ಯಜ್ಞೇ ಪ್ರಸಿದ್ಧಾ ಇಯಂ ವೇದಿಃ ಪೃಥಿವ್ಯಾಃ ಪರೋಽಂತಃ ಪರಃ ಸ್ವಭಾವ ಇತಿ ವೇದ್ಯಾಃ ಪೃಥಿವೀಸ್ವಭಾವತ್ವಕೀರ್ತನಾತ್ ಪೃಥಿವೀ ವೇದಿ-ಶಬ್ದವಾಚ್ಯಾ ಭವತೀತ್ಯರ್ಥಃ ।**

ಎಂದು ಪೃಥಿವೀ ಮತ್ತು ವೇದಿಗಳಿಗೆ ತಾದಾತ್ಮ್ಯಬೋಧಕವಾದ ಅರ್ಥವನ್ನು ಮಾಡಿದ್ದಾರೆ. ಇದಲ್ಲದೆ—

**ಇಯಂ ವೇದಿಃ ಪರೋ ಅಂತಃ ಪೃಥಿವ್ಯಾ ಅಯಂ ಯಜ್ಞೋ ಭುವನಸ್ಯ ನಾಭಿಃ ।**

(ಋ. ಸಂ. ೧-೧೬೪-೩೫)

ಎಂದು ಶ್ರುತಿವಾಕ್ಯವೇ ಇರುವುದು.

ಪ್ರಕೃತವಾದ ಋಕ್ಕಿನಲ್ಲಿ ಸಾಯಣರು ಸಕಲರಿಂದಲೂ ಸುಗಮ್ಯವಾದುದೂ, ಸ್ತುತ್ಯವಾದುದೂ ಆದ ವೇದಿರೂಪವಾದ ಪೃಥ್ವಿಯಮೇಲೆ ಎಂದು ಅರ್ಥಮಾಡಿದ್ದಾರೆ

**ನಮಸಾ—ಹವಿರ್ಲಕ್ಷಣೇನ ಅನ್ನೇನ ।** ಹವಿಸ್ಸಿನರೂಪವಾದ. ಅನ್ನದಿಂದ **ನಮಃ** ಎಂಬ ಪದವು **ಅನ್ನನಾಮಗಳಲ್ಲಿಯೂ** ( ನಿ. ೩-೯ ) ; **ವಜ್ರನಾಮಗಳಲ್ಲಿಯೂ** ( ನಿ. ೩-೧೧ ) ಪಠಿತವಾಗಿದೆ. ಮತ್ತು ರೂಢವಾಗಿರತಕ್ಕ ನಮಸ್ಕಾರಾರ್ಥದೊಡನೆ ಈ ಎರಡರ್ಥಗಳಲ್ಲಿಯೂ ಸಹ ಋಕ್ಸಂಹಿತೆಯಲ್ಲಿ ಈ ಪದದ ಪ್ರಯೋಗವಿದೆ.

ನಮಃಸಾಧನವಾದ ಸ್ತೋತ್ರವೆಂಬ ಅರ್ಥವೂ ಕೆಲವೆಡೆಗಳಲ್ಲಿದೆ. ಪ್ರಕೃತವಾದ ಋಕ್ಕಿನಲ್ಲಿ ಹವಿಸ್ಸಿನ ರೂಪವಾದ **ಅನ್ನ**ದಿಂದ ಎಂದರ್ಥವಾಗುತ್ತದೆ.

**ಕಾಮಪ್ರೇಣೇವ—ಇವ ಶಬ್ದಃ ಏವಕಾರಾರ್ಥಃ । ಕಾಮಪೂರಕೇಣೈವ ಮನಸಾ । ಯಜಮಾನಸ್ಯ ಕಾಮಾಃ ಪೂರಣೀಯಾ ಇತಿ ಕೃತಸಂಕಲ್ಪಾವಿತ್ಯರ್ಥಃ ।** ಯಜ್ಞಕರ್ತನ ಮನಸ್ಸಿನ ಅಭೀಷ್ಟಗಳನ್ನು ಸಂಪಾದಿಸಿ ಕೊಟ್ಟು ಅವನನ್ನು ತೃಪ್ತಿಪಡಿಸಬೇಕು ಎಂದು ದೃಢವಾದಸಂಕಲ್ಪವನ್ನು ಮಾಡಿದ ಮನಸ್ಸುಳ್ಳವರಾಗಿ ಎಂದರ್ಥ ಮಾಡಿದೆ. ಅಥವಾ ಇಷ್ಟಾರ್ಥವನ್ನು ನೆರವೇರಿಸಿಕೊಡಬೇಕೆಂದು ಪ್ರೀತಿಯಿಂದ ಕೂಡಿದ ಮನಸ್ಸುಳ್ಳವರಾಗಿ ಎಂದೂ ಅರ್ಥವಾಗಬಹುದು. ಏತಕ್ಕೆಂದರೆ,

**ಬೃಹಸ್ಪತೇ ಪ್ರಥಮಂ ವಾಚೋ ಅಗ್ರಂ ಯತ್ಪ್ರೈರತ ನಾಮಧೇಯಂ ದಧಾನಾಃ ।**
**ಯದೇಷಾಂ ಶ್ರೇಷ್ಠಂ ಯದರಿಪ್ರಮಾಸೀತ್ಪ್ರೇಣಾ ತದೇಷಾಂ ನಿಹಿತಂ ಗುಹಾವಿಃ॥**
(ಋ. ಸಂ ೧೦-೭೧-೧)

ಎಂಬ ಋಕ್ಕಿನಲ್ಲಿ **ಪ್ರೇಣಾ** ಎಂಬ ಶಬ್ದಕ್ಕೆ **ಮಕಾರಲೋಪಶ್ಛಾಂದಸಃ । ಪ್ರೇಮ್ಣಾವಿರ್ಭವತಿ ಪ್ರೇಮ್ಣಾ** ಎಂಬ ಶಬ್ದದಲ್ಲಿ ವೈದಿಕವಾದ ಪದವಾದುದರಿಂದ ಮಕಾರವು ಲುಪ್ತವಾಗಿದೆ. **ಪ್ರೇಮದಿಂದ** ಎಂಬರ್ಥವಾಗುತ್ತದೆ ಎಂದು ಸಾಯಣರು ವಿವರಿಸಿರುವಂತೆ ಪ್ರಕೃತವಾದ ಋಕ್ಕಿನಲ್ಲಿಯೂ ಸಹ **ಕಾಮಾಭಿಪೂರಕಪ್ರೇಮ್ಣಾ ಇವ ।** ಯಜ್ಞಕರ್ತನ ಇಷ್ಟಾರ್ಥಗಳನ್ನು ತುಂಬಿಸಿಕೊಡಲೇಬೇಕೆಂಬ ಅಭಿಮಾನದಿಂದ ಎಂದೂ ಸಹ ಅರ್ಥವಾಗಬಹುದು.

**ರೇವತೀಃ – ಕ್ಷೀರಾದಿಧನವತೀಃ ।** ಕ್ಷೀರಾದಿಸಂಪತ್ತುಗಳಿಂದ ಕೂಡಿದ ಎಂದರ್ಥ. ಧನನಾಮಗಳಲ್ಲಿ ಪಠಿತವಾದ (ನಿ ೩-೯) ರೈಶಬ್ದದಿಂದ ನಿಷ್ಪನ್ನವಾಗಿರುತ್ತದೆ. **ರೇವತಿ**ಶಬ್ದಕ್ಕೆ ಕೇವಲಧನವಂತನಾದ ಎಂದಾಗಲಿ ಅಥವಾ ಕ್ಷೀರಾದಿಗಳನ್ನು ಕೊಡತಕ್ಕ **ಪಶು**ಗಳು ಎಂದಾಗಲಿ ಅರ್ಥವಾಗಬಹುದು.

**ಆ ಣೋ ನ ಇಂದೋ ಶತದಾತ್ವಶ್ವ್ಯಂ ಸಹಸ್ರದಾತು ಪಶುಮದ್ಧಿರಣ್ಯವತ್ ॥**
**ಉಪ ಮಾಸ್ವ ಬೃಹತೀ ರೇವತೀರಿಷೋಽಧಿ ಸ್ತೋತ್ರಸ್ಯ ಪವಮಾನ ನೋ ಗಹಿ ॥**
( ಋ. ಸಂ. ೯-೭೨-೯ )

ಎಂಬಲ್ಲಿ **ರೇವತೀಃ ಧನವಂತಿ ಯದ್ವಾ ಪಯಸೋ ದಾತಾರಃ ಪಶವಃ ತದ್ವಂತಿ**–ಧನವಂತವಾದ ಅಥವಾ ಕ್ಷೀರವನ್ನು ಕೊಡತಕ್ಕ ಪಶುಗಳುಳ್ಳ ಎಂದು ಎರಡರ್ಥಗಳನ್ನೂ ಮಾಡಿದ್ದಾರೆ. **ಇಷಃ** (ಅನ್ನಾನಿ) ಎಂಬ ಪದಕ್ಕೆ ವಿಶೇಷಣವಾಗಿದೆ. ಇದರಂತೆಯೇ ಇತರ ಕಡೆಗಳಲ್ಲಿಯೂ ಈ ಪದದ ಪ್ರಯೋಗವಿದೆ.

**ಪುರಂಧೀಃ—ಶರೀರಧಾರಿಕಾಃ ಶರೀರಾಭಿವೃದ್ಧಿಹೇತೂಃ ಗಾಃ ।** ಶರೀರದ ಪೋಷಣೆಗೆ ಸಾಧಕಗಳಾದ ಗೋವುಗಳನ್ನು (ದತ್ತಂ) ಎಂದು ವಿವರಿಸಿದೆ. ಕ್ಷೀರದಿಂದ ತುಂಬಿದ ಎಂದು ಕ್ಷೀರಸಂಪತ್ತಿನ ಪೌಷ್ಕಲ್ಯದಲ್ಲಿ ತಾತ್ಪರ್ಯ. ಈ ಪದವು **ಪ್ರಭೂತ, ಪೌಷ್ಕಲ್ಯ, ಸಮೃದ್ಧ** ಎಂಬರ್ಥವನ್ನೇ ಎಲ್ಲಾ ಕಡೆಯೂ ಸೂಚಿಸಿದರೂ ಸಹ ಇದರ ಪ್ರಯೋಗವು ಅನೇಕ ಸಂದರ್ಭಗಳಲ್ಲಿರುವುದರಿಂದ ಆಯಾ ಸಂದರ್ಭಾನುಸಾರವಾಗಿ ಅರ್ಥವನ್ನು ವಿವರಿಸಬೇಕಾಗುತ್ತದೆಂದು ನಿರುಕ್ತಕಾರರ ವಾಕ್ಯದಿಂದಲೇ ತಿಳಿಯುತ್ತದೆ.

**ತೇ ಹಿ ಯಜ್ಞೇಷು ಯಜ್ಞಿಯಾಸ ಊಮಾಃ ಸಧಸ್ಥಂ ವಿಶ್ವೇ ಅಭಿ ಸಂತಿ ದೇವಾಃ ।**
**ತಾಁ ಅಧ್ವರ ಉಶತೋ ಯಕ್ಷ್ಯಗ್ನೇ ಶ್ರುಷ್ಟೀ ಭಗಂ ನಾಸತ್ಯಾ ಪುರಂಧಿಂ ।**
(ಋ. ಸಂ. ೭-೩೯-೪)

ಎಂಬ ಋಕ್ಕಿನಲ್ಲಿರುವ **ಪುರಂಧಿಂ** ಎಂಬ ಪದದ ಅರ್ಥವನ್ನು ವಿವರಿಸುವಾಗ,

**ಪುರಂಧಿರ್ಬಹುಧೀಸ್ತಸ್ಯ ಪುರಂಧಿರ್ಭಗಃ ಪುರಸ್ತಾತ್ತಸ್ಯಾನ್ವಾದೇಶ ಇತ್ಯೇಕಂ । ಇಂದ್ರ ಇತ್ಯಪರಂ ಸ ಬಹುಕರ್ಮತಮಃ ಪುರಾಂ ಚ ದಾರಯಿತೃತಮಃ । ವರುಣ ಇತ್ಯಪರಂ ತಂ ಪ್ರಜ್ಞಯಾ ಸ್ತೌತಿ ।**
(ನಿ. ೬-೧೩)

ಸಮೃದ್ಧವಾದ ಧೀ(ಬುದ್ಧಿ)ಯುಳ್ಳವನು ಎಂದು ಪುರಂಧಿಶಬ್ದದ ಅರ್ಥ. ಆದರೆ ಅಂತಹವನು ಯಾರು ಎಂಬ ಪ್ರಶ್ನೆ. ಋಕ್ಕಿನಲ್ಲಿ ಭಗಶಬ್ದವು ಇದರ ಪೂರ್ವಭಾವಿಯಾಗಿರುವುದರಿಂದ ಅದರ ವಿಶೇಷಣವೆಂದು ಕೆಲವರ ಮತ. ಧೀಶಬ್ದವು ಕರ್ಮನಾಮಗಳಲ್ಲಿ ಪಠಿತವಾಗಿರುವುದರಿಂದ **ಪುರಂಧಿಯೆಂದರೆ** ನಾನಾವಿಧವಾದ ಕರ್ಮವುಳ್ಳವನು ಎಂದಾಗಲಿ ಅಥವಾ ಶತ್ರುಪಟ್ಟಣಗಳನ್ನು ಸೀಳುವವನು ಎಂದಾಗಲಿ ಅರ್ಥವಾಗುವುದರಿಂದ ಇಂದ್ರನಿಗೆ ವಿಶೇಷಣವೆಂದು ಕೆಲವರ ಮತ. ಅಥವಾ '**ಇಮಾಮೂ ನು ಕವಿತಮಸ್ಯ ಮಾಯಾಂ**' (ಋ. ಸಂ ೫-೮೫-೬ ರಲ್ಲು) ಇತ್ಯಾದಿ ವಾಕ್ಯಗಳಲ್ಲಿ **ವರುಣನ** ಶ್ರೇಷ್ಠವಾದ **ಪ್ರಜ್ಞೆಯನ್ನು** ಸ್ತುತಿಸಿರುವಂತೆ ಪ್ರಕೃತವಾದ ಋಕ್ಕಿನಲ್ಲಿಯೂ (ನಿರುಕ್ತಕಾರರು ಉದಹರಿಸಿರುವ ೭-೩೯-೪ ರಲ್ಲು) ಅವನ ಪ್ರಜ್ಞೆಯನ್ನು ವರ್ಣಿಸುತ್ತಾ **ವರುಣನಿಗೆ** ಪರ್ಯಾಯಪದವಾಗಿರಬಹುದೆಂದು ಇನ್ನು ಕೆಲವರ ಮತ ಎಂದು ಅಭಿಪ್ರಾಯಭೇದಗಳನ್ನು ನಿರುಕ್ತಕಾರರು ತಿಳಿಸಿದ್ದಾರೆ. ಯಜ್ಞಕರ್ತರ ವಿಷಯದಲ್ಲಿ ದೇವತೆಗಳು ತೋರಿಸುವ ಔದಾರ್ಯದ ಆಧಿಕ್ಯವನ್ನು ತೋರಿಸುವಾಗಲೂ, ಯಜಮಾನರು ದೇವತೆಗಳಿಗೆ ಅರ್ಪಿಸತಕ್ಕ ಹವಿರಾದಿಗಳ ಸಮೃದ್ಧಿಯನ್ನು ಸೂಚಿಸುವಾಗಲೂ ಈ ಪದದ ಪ್ರಯೋಗವಿದೆಯೆಂದು ನಿರುಕ್ತಕಾರರು ಇನ್ನೂ ಕೆಲವು ಉದಾಹರಣೆಗಳಿಂದ ತಿಳಿಸುತ್ತಾರೆ.

**ಆದಾಯ ಶ್ಯೇನೋ ಅಭರತ್ಸೋಮಂ ಸಹಸ್ರಂ ಸವಾँ ಅಯುತಂ ಚ ಸಾಕಂ ।**
**ಅತ್ರಾ ಪುರಂಧಿರಜಹಾದರಾತೀರ್ಮದೇ ಸೋಮಸ್ಯ ಮೂರಾ ಅಮೂರಃ ।**
(ಋ. ಸಂ. ೪-೨೬-೭)

ಎಂಬ ಋಕ್ಕಿನಲ್ಲಿರುವ ಪದಕ್ಕೆ **ದುರ್ಗಾಚಾರ್ಯರು** (ನಿ ೧೧-೨) ಪುರಂಧಿಃ **ಬಹು ನಃ ಧನಸ್ಯ ದಾತಾ** ಅಧಿಕವಾಗಿ ಧನದಾತನೆಂದೂ, ಸಾಯಣರು **ಬಹುಕರ್ಮ** ಎಂದೂ ಅರ್ಥಮಾಡಿದ್ದಾರೆ. **ಇಂದ್ರನಿಗೆ** ವಿಶೇಷಣವಾಗಿದೆ. ಉದಾರಿಯೆಂಬುದರಲ್ಲಿ ತಾತ್ಪರ್ಯ.

**ನೃಧೂತೋ ಅದ್ರಿಷುತೋ ಬರ್ಹಿಷಿ ಪ್ರಿಯಃ ಪತಿರ್ಗವಾಂ ಪ್ರದಿವ ಇಂದುರ್ಋತ್ವಿಯಃ ।**
**ಪುರಂಧಿವಾನ್ಮನುಷೋ ಯಜ್ಞಸಾಧನಃ ಶುಚಿರ್ಧಿಯಾ ಪವತೇ ಸೋಮ ಇಂದ್ರ ತೇ ॥**
(ಋ ಸಂ. ೯-೭೨-೪)

ಎಂಬ ಋಕ್ಕಿನಲ್ಲಿ **ಬಹುಕರ್ಮವಾನ್ ಮನುಷಃ** ದೇವತೆಗಳ ತೃಪ್ತ್ಯರ್ಥವಾಗಿ ನಾನಾವಿಧವಾದ ಕರ್ಮಗಳುಳ್ಳ ಮಾನವನ ಎಂದರ್ಥಮಾಡಿದೆ.

**ಪಾವೀರವೀ ತನ್ಯತುರೇಕಪಾದಜೋ ದಿವೋ ಧರ್ತಾ ಸಿಂಧುರಾಪಃ ಸಮುದ್ರಿಯಃ ।**
**ವಿಶ್ವೇ ದೇವಾಸಃ ಶೃಣವನ್ ವಚಾಂಸಿ ಮೇ ಸರಸ್ವತೀ ಸಹ ಧೀಭಿಃ ಪುರಂಧ್ಯಾ ॥**
(ಋ. ಸಂ. ೧೦-೬೫-೧೩)

ಎಂಬ ಋಕ್ಕಿನಲ್ಲಿ ಈ ಪದಕ್ಕೆ ನಿರುಕ್ತಕಾರರು (ನಿ. ೧೨-೩೦) **ಪುರಂಧ್ಯಾ ಸ್ತುತ್ಯಾ ಪ್ರಯುಕ್ತಾನಿ** ಬಹುವಿಧವಾದ ಸ್ತುತಿಗಳಿಂದ ಕೂಡಿಕೊಂಡಿರತಕ್ಕ **ವಚಾಂಸಿ** ವಚನಗಳನ್ನು ಎಂದರ್ಥಮಾಡಿದ್ದಾರೆ. ಸಾಯಣರು **ಬಹುವಿಧಯಾ ಪ್ರಜ್ಞಯಾ ಸಹಿತಾ ಸರಸ್ವತೀ ।** ಬಹುವಿಧವಾದ ಪ್ರಜ್ಞೆಯಿಂದ ಕೂಡಿದ ಎಂದು **ಸರಸ್ವತಿಗೆ** ವಿಶೇಷಣವೆಂದು ತಿಳಿಸಿದ್ದಾರೆ ಆದರೆ ದುರ್ಗಾಚಾರ್ಯರು ಮಾಡಿರುವ (ನಿ. ೧೨-೩೦) **ಬಹುಧಾತ್ರ್ಯಾ ಮಾಧ್ಯಮಿಕಯಾ ವಾಚಾ** ಎಂಬ ವಿವರಣೆಯಿಂದ **ಸರಸ್ವತೀಸದೃಶವಾದ** ಒಂದು ದೇವತಾವಿಶೇಷವೆಂದೂ ತಿಳಿಯುತ್ತದೆ. ಇದರಂತೆಯೇ,

**ಶಂ ನೋ ಭಗಃ ಶಮು ನಃ ಶಂಸೋ ಅಸ್ತು ಶಂ ನಃ ಪುರಂಧಿಃ ಶಮು ಸಂತು ರಾಯಃ ।**
**ಶಂ ನಃ ಸತ್ಯಸ್ಯ ಸುಯಮಸ್ಯ ಶಂಸಃ ಶಂ ನೋ ಅರ್ಯಮಾ ಪುರುಜಾತೋ ಅಸ್ತು ।**

(ಋ. ಸಂ. ೭-೩೫-೨)

ಇತ್ಯಾದಿಋಕ್ಕುಗಳಲ್ಲಿ **ಪುರಂಧಿಯೇ** ಪ್ರತ್ಯೇಕವಾದ ದೇವತೆಯೆಂದು ತಿಳಿಯುತ್ತದೆ ಸಾಯಣರೂ ಸಹ ಈ ಋಕ್ಕಿನಲ್ಲಿರುವ **ಭಗಾದಿಪದಗಳಿಗೆ** ವಿಶೇಷಣವನ್ನಾಗಿ ಮಾಡಿಲ್ಲ. ಮತ್ತು

**ದೇವೋ ಭಗಃ ಸವಿತಾ ರಾಯೋ ಅಂಶ ಇಂದ್ರೋ ವೃತ್ರಸ್ಯ ಸಂಜಿತೋ ಧನಾನಾಂ ।**
**ಋಭುಕ್ಷಾ ವಾಜ ಉತ ವಾ ಪುರಂಧಿರವಂತು ನೋ ಅಮೃತಾಸಸ್ತುರಾಸಃ ॥**

(ಋ. ಸಂ. ೫-೪೨-೫)

ಎಂಬಲ್ಲಿ **ವಿಭ್ವನಿಗೆ** ಪರ್ಯಾಯಪದವಾಗಿದೆ.

**ಪುರಾಣೀ ದೇವಿ ಯುವತಿಃ ಪುರಂಧಿರನು ವ್ರತಂ ಚರಸಿ ವಿಶ್ವವಾರೇ ।**

(ಋ. ಸಂ. ೩-೬೧-೧)

ಇತ್ಯಾದಿ ಕಡೆಗಳಲ್ಲಿ **ಉಷಸ್ಸಿಗೆ** ವಿಶೇಷಣವಾಗಿದೆ. ಬಹುಸ್ತೋತ್ರವತಿಯೆಂದರ್ಥ.

ಅನೇಕಕಡೆಗಳಲ್ಲಿ ಈ ಪದವು ಪತ್ನಿಯಪರವಾಗಿಯೂ ಅಥವಾ ಸ್ತ್ರೀಸಾಮಾನ್ಯದ ಪರವಾಗಿಯೂ ಉಪಯೋಗಿಸಲ್ಪಟ್ಟು ಬಂಜೆಯರಲ್ಲದ, ಸಂತಾನಸಂಪತ್ತನ್ನು ಪಡೆಯಲು ಅರ್ಹರೂ ಪುಷ್ಟರೂ ಆದ ಸ್ತ್ರೀಯರೆಂದರ್ಥವನ್ನು ಕೊಡುತ್ತದೆ.

**ಅಗ್ನಿಃ ಸಪ್ತಿಂ ವಾಜಂಭರಂ ದದಾತ್ಯಗ್ನಿರ್ವೀರಂ ಶ್ರುತ್ಯಂ ಕರ್ಮನಿಷ್ಠಾಂ ।**
**ಅಗ್ನೀ ರೋದಸೀ ವಿ ಚರತ್ಸಮಂಜನ್ನಗ್ನಿರ್ನಾರೀಂ ವೀರಕುಕ್ಷಿಂ ಪುರಂಧಿಂ ॥**

(ಋ. ಸಂ. ೧೦-೮೦-೧)

ಇತ್ಯಾದಿ ಋಕ್ಕುಗಳಲ್ಲಿ (೧-೧೧೬-೧೭, ೧-೧೧೭-೧೯) ಪ್ರಸವಸಮರ್ಥಳಾದ ಪತ್ನಿಯೆಂದೂ,

**ವಾಯುರ್ಯುಂಕ್ತೇ ರೋಹಿತಾ ವಾಯುರರುಣಾ ವಾಯೂ ರಥೇ ಅಜಿರಾ ಧುರಿ ವೋಳ್ಹವೇ**
**ವಹಿಷ್ಠಾ ಧುರಿ ವೋಳ್ಹವೇ ।**
**ಪ್ರ ಬೋಧಯಾ ಪುರಂಧಿಂ ಜಾರ ಆ ಸಸತೀಮಿವ ।**
**ಪ್ರ ಚಕ್ಷಯ ರೋದಸೀ ವಾಸಯೋಷಸಃ ಶ್ರವಸೇ ವಾಸಯೋಷಸಃ ॥**

(ಋ. ಸಂ. ೧-೧೩೪-೩)

ಇತ್ಯಾದಿಋಕ್ಕುಗಳಲ್ಲಿ ಭೋಗಯೋಗ್ಯಳಾದ ಸ್ತ್ರೀಯೆಂದೂ ಅರ್ಥವಾಗುತ್ತವೆ. ಹೀಗೆ ನಾನಾವಿಧವಾದ ಗುಣಗಳನ್ನು ವರ್ಣಿಸುವಾಗ **ಪುರಂಧಿ** ಶಬ್ದವು ಆ ಗುಣಗಳ ಆಧಿಕ್ಯವನ್ನು ಸತ್ವಸಮೃದ್ಧಿಯನ್ನೂ ಸೂಚಿಸುತ್ತದೆ. ಪ್ರಕೃತವಾದ ಋಕ್ಕಿನಲ್ಲಿ ಪ್ರಭೂತವಾಗಿ ಕ್ಷೀರವನ್ನು ಕೊಡತಕ್ಕ ಗೋವುಗಳೆಂದರ್ಥಮಾಡಿದೆ.

ಜಿಗೃತಂ-- ಶಬ್ದಯತಂ | ಅಂಗೀಕಾರರೂಪವಾದ ಶಬ್ದವನ್ನು ಮಾಡಿ ಎಂದರೆ ಗೋವುಗಳನ್ನು ಕೊಡಿ ಎಂಬ ತಾತ್ಪರ್ಯವು. **ಅವಿಷ್ಟಂ ಧಿಯೋ ಜಿಗೃತಂ** (ಋ. ಸಂ. ೪-೫೦-೧೧) ಎಂಬಲ್ಲಿ **ಪ್ರಬುಧ್ಯತಂ** ಎಚ್ಚರಗೊಳಿಸಿ ಎಂದರ್ಥವಾಗಿದೆ. ಅದರಂತೆಯೇ ಇಲ್ಲಿಯೂ ಸಹ ಗೋವುಗಳ ವಿಷಯದಲ್ಲಿ ನಮ್ಮನ್ನು ಪ್ರಬುದ್ಧರನ್ನಾಗಿ ಮಾಡಿ ಎಂದರೆ ಆ ಸಂಪತ್ತು ನಮಗಿದೆ. ಎಂಬ ತಿಳಿವಳಿಕೆಯನ್ನು ಕೊಡಿ ಎಂದೂ ಅರ್ಥಮಾಡಬಹುದು.

### ವ್ಯಾಕರಣಪ್ರಕ್ರಿಯಾ

**ದಾಶತ್**—ದಾಶೃ ದಾನೇ ಧಾತು. ಲೇಟ್ ಪ್ರಥಮಪುರುಷಏಕವಚನದಲ್ಲಿ ತಿಪ್‌ಪ್ರತ್ಯಯ. **ಇತಶ್ಚ ಲೋಪಃ** (ಪಾ. ಸೂ. ೩-೪-೯೭) ಎಂಬುದರಿಂದ ಇಕಾರಲೋಪ. **ಲೇಟೋಽಡಾಟೌ** (ಪಾ. ಸೂ. ೩-೪-೯೪) ಎಂಬುದರಿಂದ ಅಡಾಗಮ. ತಿಙಂತನಿಘಾತಸ್ವರ ಬರುತ್ತದೆ.

**ಸುಮತಯೇ**—ಶೋಭನಾ ಮತಿಃ ಯಸ್ಯ ಸಃ **ತಸ್ಮೈ. ನಞ್‌ಸುಭ್ಯಾಮ್** (ಪಾ ಸೂ. ೬-೨-೧೭೨) ಎಂಬುದರಿಂದ ಅಂತೋದಾತ್ತಸ್ವರ ಬರುತ್ತದೆ. ಚತುರ್ಥೀಏಕವಚನಾಂತರೂಪ.

**ವಸೂ**—ವಸ ನಿವಾಸೇ ಧಾತು. ಅಂತರ್ಭಾವಿತಣ್ಯರ್ಥಕವಾಗಿದೆ. **ಶೃಸ್ವೃಸ್ನಿಹಿತ್ರಪಿ**—(ಉ.ಸೂ. ೧-೧೦) ಎಂಬುದರಿಂದ ಉಪ್ರತ್ಯಯ. ಪಾದಾದಿಯಲ್ಲಿರುವುದರಿಂದ ಆಮಂತ್ರಿತನಿಘಾತಸ್ವರ ಬರುವುದಿಲ್ಲ. **ಆಮಂತ್ರಿತಸ್ಯ** (ಪಾ. ಸೂ. ೬-೧-೧೯೮) ಎಂಬುದರಿಂದ ಆದ್ಯುದಾತ್ತಸ್ವರ ಬರುತ್ತದೆ.

**ಧೇಥೇ**—ಡುಧಾಞ್ ಧಾರಣಪೋಷಣಯೋಃ ಧಾತು. ಲಟ್ ಮಧ್ಯಮಪುರುಷದ್ವಿವಚನದಲ್ಲಿ ಆಥಾಮ್ ಪ್ರತ್ಯಯ. **ಬಹುಲಂ ಛಂದಸಿ** ಎಂಬುದರಿಂದ ವಿಕರಣಕ್ಕೆ (ಶ್ಲು) ಲುಕ್. ಧಾತುವಿಗೆ ಹ್ರಸ್ವ. **ಆತೋಙಿತಃ** (ಪಾ. ಸೂ. ೭.೨-೮೧) ಎಂಬುದರಿಂದ ಪ್ರತ್ಯಯದ ಆಕಾರಕ್ಕೆ ಇಯಾದೇಶ—**ಟಿತ ಆತ್ಮನೇ**—ಎಂಬುದರಿಂದ ಟಿಗೆ ಏತ್ವ. **ಲೋಪೋವ್ಯೋರ್ವಲಿ** ಎಂಬುದರಿಂದ ಅವರ ಯಕಾರಕ್ಕೆ ಲೋಪ. **ಆದ್ಗುಣಃ** ಎಂಬುದರಿಂದ ಗುಣ. ಯದ್ಯೋಗವಿರುವುದರಿಂದ ನಿಘಾತಸ್ವರ ಬರುವುದಿಲ್ಲ. ಪ್ರತ್ಯಯದ ಆದ್ಯುದಾತ್ತಸ್ವರ ಬರುತ್ತದೆ.

**ಪದೇ**—**ಊಡಿದಂ ಪದಾದಿ**—(ಪಾ. ಸೂ. ೬-೧-೧೭೧) ಎಂಬುದರಿಂದ ವಿಭಕ್ತಿಗೆ ಉದಾತ್ತಸ್ವರ ಬರುತ್ತದೆ.

**ಜಿಗೃತಮ್**—ಗೃ ಶಬ್ದೇ ಧಾತು ಲೋಟ್ ಮಧ್ಯಮಪುರುಷದ್ವಿವಚನಕ್ಕೆ ತಮಾದೇಶ. **ಬಹುಲಂ ಛಂದಸಿ** ಎಂಬುದರಿಂದ ವಿಕರಣಕ್ಕೆ ಶ್ಲು ಆದೇಶ. **ಸ್ವಾದೀನಾಂ ಹ್ರಸ್ವಃ** (ಪಾ. ಸೂ. ೭-೩-೮೦) ಎಂಬುದರಿಂದ ಧಾತುವಿಗೆ ಹ್ರಸ್ವ. **ಶ್ಲೌ** ಎಂಬುದರಿಂದ ಧಾತುವಿಗೆ ದ್ವಿತ್ವ ಬಂದಾಗ **ಬಹುಲಂ ಛಂದಸಿ** ಎಂಬುದರಿಂದ ಅಭ್ಯಾಸಕ್ಕೆ ಇತ್ವ. ಪಾದಾದಿಯಲ್ಲಿರುವುದರಿಂದ ನಿಘಾತಸ್ವರ ಬರುವುದಿಲ್ಲ. ಪ್ರತ್ಯಯಸ್ವರದಿಂದ ಅಂತೋದಾತ್ತವಾಗುತ್ತದೆ.

**ಅಸ್ಮೇ**—**ಸುಪಾಂ ಸುಲುಕ್**—(ಪಾ. ಸೂ. ೭-೧-೩೯) ಎಂಬುದರಿಂದ ಚತುರ್ಥಿಗೆ ಶೇ ಆದೇಶ.

**ರೇವತೀಃ**—ರಯಿಃ ಆಸಾಂ ಅಸ್ತಿ ಇತಿ ರೇವತ್ಯಃ **ರಯೇರ್ಮತೌ ಬಹುಲಮ್** ಎಂಬುದರಿಂದ ಮತುಪ್ ಪರವಾದಾಗ ಯಕಾರಕ್ಕೆ ಸಂಪ್ರಸಾರಣ. ಪೂರ್ವರೂಪ. **ಛಂದಸೀರಃ** (ಪಾ ಸೂ. ೮-೨-೧೫) ಎಂಬುದರಿಂದ ಮತುಪಿನ ಮಕಾರಕ್ಕೆ ವತ್ವ. ಗುಣ. ಶಪ್ ಪರವಾದಾಗ ಪೂರ್ವಸವರ್ಣದೀರ್ಘ. **ರೇ ಶಬ್ದಾಚ್ಚ** (ಪಾ. ಸೂ. ೬-೧-೧೭೬-೧)ಎಂಬುದರಿಂದ ಮತುಪಿಗೆ ಉದಾತ್ತಸ್ವರ ಬರುತ್ತದೆ.

**ಕಾಮಪ್ರೇಣ ಇವ**—ಪ್ರಾ ಪೂರಣೇ ಧಾತು. ಕಾಮಂ ಪ್ರಾತಿ ಪೂರಯತಿ ಇತಿ ಕಾಮಪ್ರಃ **ಆತೋಽನುಪ-ಸರ್ಗೇ ಕಃ** (ಪಾ. ಸೂ ೩-೨-೩) ಎಂಬುದರಿಂದ ಕ ಪ್ರತ್ಯಯ. ಕಿತ್ತಾದುದರಿಂದ ಇಮ ಪರವಾದಾಗ **ಆತೋ-ಲೋಪ ಇಟಿಚ** (ಪಾ. ಸೂ. ೬-೪-೬೪) ಎಂಬುದರಿಂದ ಧಾತುವಿನ ಆಕಾರಕ್ಕೆ ಲೋಪ. ಕೃದುತ್ತರಪದಪ್ರಕೃತಿಸ್ವರ ಬರುತ್ತದೆ. ತೃತೀಯಾಂತರೂಪ.

**ಚರಂತಾ**—ಚರ ಗತಿಭಕ್ಷಣಯೋಃ ಧಾತು. ಲಟಿಗೆ ಶತೃ ಪ್ರತ್ಯಯ. ದ್ವಿವಚನ ಪರವಾದಾಗ ಉಗಿತ್ತಾದುದರಿಂದ ನುಮಾಗನು. **ಸುಪಾಂ ಸುಲುಕ್** (ಪಾ. ಸೂ. ೭-೧-೩೯) ಎಂಬುದರಿಂದ ದ್ವಿವಚನಕ್ಕೆ ಆಕಾರಾದೇಶ. ಲಸಾರ್ವಧಾತುಕ ಅನುದಾತ್ತವಾದುದರಿಂದ ಧಾತುಸ್ವರ ಉಳಿಯುತ್ತದೆ. ॥ ೨ ॥

———:೦:———

ಸಂಹಿತಾಪಾಠಃ

ಯುಕ್ತೋ ಹ ಯದ್ವಾಂ ತೌಗ್ರ್ಯಾಯ ಪೇರುರ್ವಿ ಮಧ್ಯೇ ಅರ್ಣಸೋ

ಧಾಯಿ ಪಜ್ರಃ ।

ಉಪ ವಾಮವಃ ಶರಣಂ ಗಮೇಯಂ ಶೂರೋ ನಾಜ್ಮ ಪತಯದ್ಭಿರೇವೈಃ ।

॥ ೩ ॥

। ಪದಪಾಠಃ ।

ಯುಕ್ತಃ । ಹ । ಯತ್ । ವಾಂ । ತೌಗ್ರ್ಯಾಯ । ಪೇರುಃ । ವಿ । ಮಧ್ಯೇ । ಅರ್ಣಸಃ । ಧಾಯಿ । ಪಜ್ರಃ ।

ಉಪ । ವಾಂ । ಅವಃ । ಶರಣಂ । ಗಮೇಯಂ । ಶೂರಃ । ನ । ಅಜ್ಮ । ಪತಯತ್ಽಭಿಃ । ಏವೈಃ ॥ ೩ ॥

ಸಾಯಣಭಾಷ್ಯಂ

ಅತ್ರೇತಿಹಾಸಮಾಹುಃ । ತೌಗ್ರ್ಯನಾಮಕಂ ರಾಜಾನಂ ಯುದ್ಧೇ ಶತ್ರವಃ ಪರಾಭಾವ್ಯ ಪಾಶೈ-ರ್ದೃಢಂ ಬದ್ಧ್ವಾ ಸಮುದ್ರಮಧ್ಯೇ ಪ್ರಚಿಕ್ಷಿಪುಃ । ಸ ಚೋತ್ತರೀತುಮಶಕ್ತಃ ಸನ್ನಶ್ವಿನೌ ತುಷ್ಟಾವ । ತೌ ಚ ತುಷ್ಟೌ ಶೀಘ್ರಮೇವ ರಥಮಶ್ವೈರ್ಯೋಜಯಿತ್ವಾ ಸಮುದ್ರಮಾಗತ್ಯ ತಮುತ್ತಾರ್ಯೋಪಾಲಯೇತಾ-ಮಿತಿ । ಅಯಮರ್ಥೋಽಜೋಹವೀದಶ್ವಿನಾ ತೌಗ್ರ್ಯಃ । ಋ. ೧-೧೧೭-೧೫ । ಇತ್ಯಾದಿಮಂತ್ರಾಂತರೇ ಪ್ರಸಿದ್ಧಃ । ಸೋಽತ್ರೋಚ್ಯತೇ ॥ ಹೇ ಅಶ್ವಿನೌ ವಾಂ ಯುವಯೋಃ ಸಂಬಂಧೀ ಪೇರುಃ ಪಾರಣಕುಶಲೋ ರಥೋ ಯುಕ್ತೋ ಹ । ಅಶ್ವೈರ್ಯುಕ್ತಃ ಖಲು । ಹಶಬ್ದೋ ಮಂತ್ರಾಂತರಪ್ರಸಿದ್ಧಿದ್ಯೋತನಾರ್ಥಃ । ಸ ಚೋದಾಹೃತಃ । ಕಸ್ಮೈ । ತೌಗ್ರ್ಯಾಯೈತನ್ನಾಮ್ನೇ ರಾಜ್ಞೇ ತದ್ಬಂಧಮೋಚನಾರ್ಥಂ । ಕುತ್ರೇತಿ

ತದುಚ್ಯತೇ। ಅರ್ಣಸೋಽಂಭಸೋ ಮಧ್ಯೇ ಸಮುದ್ರಸ್ಯ ಮಧ್ಯೇ। ಸ ಚ ಪಜ್ರಃ ಪಾಜಸಾ ಬಲೇನ ತೀರ್ಣಃ ಸನ್ ವಿಧಾಯಿ । ಧಾರಿತಃ । ಸ್ಥಾಪಿತಃ । ಯಸ್ಮಾದೇವಂ ತಸ್ಮಾದ್ವಾಂ ಯುವಯೋರವೋ ರಕ್ಷಣಂ ಶರಣಮುಪ ಗಮೇಯಂ । ಸಂಪ್ರಾಪ್ನುಯಾಂ । ಐಹಿಕದುಃಖಾದ್ವಿಮುಕ್ತೋ ಯುಷ್ಮತ್ಸ್ಥಾನಂ ಸಂಭಜೇಯಂ । ಗತೌ ದೃಷ್ಟಾಂತಃ । ಪತಯದ್ಭಿರೇವೈರಶ್ವೈಃ ಶೂರೋ ನ ಶೂರ ಇವ । ಸ ಯಥಾಜ್ಮ ಜಿತ್ವಾ ನಿರ್ಭಯಂ ಸ್ವಗೃಹಂ ಪ್ರಾಪ್ನೋತಿ ತದ್ವತ್ ॥

### ಪ್ರತಿಪದಾರ್ಥ

(**ಹೇ ಅಶ್ವಿನೌ**—ಎಲೈ ಅಶ್ವಿನೀದೇವತೆಗಳೇ) । **ಯತ್**—ಯಾವ ಕಾರಣದಿಂದ ಎಂದರೆ ಯಾವ ರೀತಿಯಲ್ಲಿ । **ವಾಂ**—ನಿಮ್ಮ । **ಪೇರುಃ**—ರಕ್ಷಿಸುವುದರಲ್ಲಿ ಸಮರ್ಥವಾದ ರಥವು । **ತೌಗ್ರ್ಯಾಯ**—ತುಗ್ರಪುತ್ರನಿಗಾಗಿ । **ಅರ್ಣಸಃ ಮಧ್ಯೇ**—ಆಳವಾದ ನೀರುಳ್ಳ ಸಮುದ್ರ ಮಧ್ಯದಲ್ಲಿ । **ಯುಕ್ತೋ ಹ**—(ಅಶ್ವಗಳೊಡನೆ) ಕೂಡಿಕೊಂಡು । **ಪಜ್ರಃ**—( ಸಮುದ್ರವನ್ನು ) ದಾಟುವ ಸಾಮರ್ಥ್ಯವುಳ್ಳದ್ದಾಗಿ । **ವಿಧಾಯಿ**—ಸ್ಥಾಪಿಸಲ್ಪಟ್ಟಿದೆಯೋ । ( **ತಸ್ಮಾತ್**—ಆದ್ದರಿಂದಲೇ ) । **ಪತಯದ್ಭಿಃ**—ವೇಗವಾಗಿ ಓಡತಕ್ಕ । **ಏವೈಃ**—ಅಶ್ವಗಳೊಡನೆ । **ಶೂರೋ ನ ಅಜ್ಮ**—ಪರಾಕ್ರಮವುಳ್ಳ ಶೂರನು ಯಾವ ರೀತಿ ಜಯಶಾಲಿಯಾಗಿ ಸುರಕ್ಷಿತವಾದ ಗೃಹವನ್ನು ಸೇರುತ್ತಾನೆಯೋ ಹಾಗೆ । **ವಾಂ**—ನಿಮ್ಮ । **ಅವಃ**—ರಕ್ಷಣೆಯನ್ನೂ । **ಶರಣಂ**—ಆಶ್ರಯವನ್ನೂ । **ಉಪ ಗಮೇಯಂ**—ಹೊಂದುತ್ತೇನೆ.

### ಭಾವಾರ್ಥ

ಎಲೈ ಅಶ್ವಿನೀದೇವತೆಗಳೇ, ಸಮುದ್ರಮಧ್ಯದಲ್ಲಿ ಮುಳುಗುತ್ತಿದ್ದ ತುಗ್ರಪುತ್ರನನ್ನು ರಕ್ಷಿಸುವ ಕಾಲದಲ್ಲಿ ರಕ್ಷಿಸಲು ಸಮರ್ಥವಾದ ನಿಮ್ಮ ರಥವು ಅಶ್ವಗಳೊಡನೆ ಕೂಡಿಕೊಂಡು ಸಮುದ್ರವನ್ನು ದಾಟುವ ಸಾಮರ್ಥ್ಯವನ್ನು ವ್ಯಕ್ತಪಡಿಸಿದೆ. ಆದುದರಿಂದ ನಿಮ್ಮ ಆಶ್ರಯವು ಯಾವಾಗಲೂ ರಕ್ಷಣೆಯನ್ನು ಕೊಡತಕ್ಕದ್ದಾಗಿದೆ. ಪರಾಕ್ರಮಿಯಾದ ಶೂರನು ಅಶ್ವಗಳ ಸಹಾಯದಿಂದ ಜಯಶಾಲಿಯಾಗಿ ಸುರಕ್ಷಿತವಾದ ಗೃಹವನ್ನು ಸೇರುವಂತೆ ನಾನೂ ಸಹ ನಿಮ್ಮ ರಕ್ಷಣೆಯನ್ನೂ ಆಶ್ರಯವನ್ನೂ ಪಡೆಯುತ್ತೇನೆ.

## English Translation

In like manner, Ashwins, as your strong-drawn(car) able to cross (the sea), was placed, harnessed, in the middle of the water, for (the rescue of) the son of Tugra, so may I attain to your preserving protection (with the same alacrity) as a victorious hero (returns home) with bounding steeds.

### ವಿಶೇಷವಿಷಯಗಳು

ತೌಗ್ರ್ಯನೆಂಬ ದೊರೆಯನ್ನು ಒಂದುಸಲ ಶತ್ರುಗಳು ಸೋಲಿಸಿ ಅವನ ಕೈಕಾಲುಗಳನ್ನು ಕಟ್ಟಿ ಸಮುದ್ರಮಧ್ಯದಲ್ಲಿ ಎಸೆದುಬಿಟ್ಟರು. ಅವನು ಸಮುದ್ರವನ್ನು ದಾಟಲಾರದೆ ಸಹಾಯಕ್ಕಾಗಿ ಅಶ್ವಿನೀದೇವತೆಗಳನ್ನು ಪ್ರಾರ್ಥಿ

ಸಿದನು. ಒಡನೆಯೇ ಅವರು ತಮ್ಮ ರಥಕ್ಕೆ ಅಶ್ವಗಳನ್ನು ಕಟ್ಟಿ ಸಮುದ್ರದಲ್ಲಿಳಿಸಿ ಅವನನ್ನು ದಡಕ್ಕೆ ಸೇರಿಸಿದರು ಎಂದು ಸಾಯಣರು ಪೂರ್ವಕಥೆಯನ್ನುದಹರಿಸಿದ್ದಾರೆ. ಈ ತುಗ್ರಪುತ್ರನಿಗೆ **ಭುಜ್ಯುವೆಂಬ** ಹೆಸರು ಪ್ರಸಿದ್ಧವಾಗಿದೆ.

ಸಮುದ್ರದಲ್ಲಿ ಮುಳುಗುತ್ತಿದ್ದ ಇದೇ ತುಗ್ರಪುತ್ರನನ್ನು ಅಶ್ವಿನೀದೇವತೆಗಳು ರಕ್ಷಿಸಿದುದನ್ನು ದೀರ್ಘತಮಸ್ಸಿನ ಪುತ್ರನಾದ ಕಕ್ಷೀವಂತನು ೧-೧೧೬ ಮತ್ತು ೧-೧೧೭ನೇ ಸೂಕ್ತಗಳಲ್ಲಿಯೂ, ಅಗಸ್ತ್ಯ ಮೈತ್ರಾವರುಣಿಯು ೧-೧೮೨ನೇ ಸೂಕ್ತದಲ್ಲಿಯೂ, ಕಣ್ವಗೋತ್ರದ ಬ್ರಹ್ಮಾತಿಥಿಯು ೮-೫ನೇ ಸೂಕ್ತದಲ್ಲಿಯೂ ; ಕಕ್ಷೀವಂತನ ಪುತ್ರಿಯಾದ ಘೋಷೆಯು ೧೦-೩೯ರಲ್ಲೂ ವರ್ಣಿಸಿದ್ದಾರೆ. ೧-೧೮೨ನೇ ಸೂಕ್ತದಲ್ಲಿ ಇವರು ದೋಣಿಗಳನ್ನು ಕಳುಹಿದುದೂ ತುಗ್ರಪುತ್ರನು ಆಶಾಪೂರಿತನಾಗಿ ಆ ದೋಣಿಗಳನ್ನು ಅಪ್ಪಿಕೊಂಡುದೂ ಈರೀತಿ ವರ್ಣಿತವಾಗಿದೆ.

**ಯುವಮೇತಂ ಚಕ್ರಥುಃ ಸಿಂಧುಷು ಪ್ಲವಮಾತ್ಮನ್ವಂತಂ ಪಕ್ಷಿಣಂ ತೌಗ್ರ್ಯಾಯ ಕಂ ।**
**ಯೇನ ದೇವತ್ರಾ ಮನಸಾ ನಿರೂಹಥುಃ ಸುಪಪ್ತನೀ ಪೇತಥುಃ ಕ್ಷೋದಸೋ ಮಹಃ ।**
**ಅವವಿದ್ಧಂ ತೌಗ್ರ್ಯಮಪ್ಸ್ವಂತರನಾರಂಭಣೇ ತಮಸಿ ಪ್ರವಿದ್ಧಂ ।**
**ಚತಸ್ರೋ ನಾವೋ ಜಠಲಸ್ಯ ಜುಷ್ಟಾ ಉದಶ್ವಿಭ್ಯಾಮಿಷಿತಾಃ ಪಾರಯಂತಿ ॥**
**ಕಃ ಸ್ವಿದ್ವೃಕ್ಷೋ ನಿಷ್ಠಿತೋ ಮಧ್ಯೇ ಅರ್ಣಸೋ ಯಂ ತೌಗ್ರ್ಯೋ ನಾಧಿತಃ ಪರ್ಯಷಸ್ವಜತ್ ।**
**ಪರ್ಣಾ ಮೃಗಸ್ಯ ಪತರೋರಿವಾರಭ ಉದಶ್ವಿನಾ ಊಹಥುಃ ಶ್ರೋಮತಾಯ ಕಂ ॥**

(ಋ. ಸಂ. ೧-೧೮೨-೫ ರಿಂದ ೭)

ಎಲೈ ಅಶ್ವಿನೀದೇವತೆಗಳೇ, ತುಗ್ರಪುತ್ರನಾದ ಭುಜ್ಯುವಿಗಾಗಿ ನೀವು ಸಚೇತನವಾದುದೂ ರೆಕ್ಕೆಗಳಿಂದ ಕೂಡಿದುದೂ ಆದ ಈ ದೋಣಿಯನ್ನು ನಿರ್ಮಿಸಿದಿರಿ. ಅಗಾಧವಾದುದೂ, ಅಂಧಕಾರಪೂರಿತವಾದುದೂ ಆದ ಸಮುದ್ರದಲ್ಲಿ ಬಿದ್ದು ಮುಳುಗುತ್ತಿದ್ದ ತುಗ್ರಪುತ್ರನಿಗಾಗಿ ನಾಲ್ಕು ದೋಣಿಗಳನ್ನು ಕಳುಹಿದಿರಿ. ಹಾರುವ ಪಕ್ಷಿಗಳಿಗೆ ಅಂತರಿಕ್ಷದಲ್ಲಿ ಅವಲಂಬನವಾದ ರೆಕ್ಕೆಗಳಂತೆ ಸಮುದ್ರದಲ್ಲಿ ಮುಳುಗುತ್ತಿದ್ದ ಭುಜ್ಯುವಿಗೆ ಅವಲಂಬನವಾದುದೂ ಮತ್ತು ರಕ್ಷಕವಾದುದೂ ಆದ ದೋಣಿಯ ಅವಯವಗಳನ್ನು ಯಾವ ವೃಕ್ಷದಿಂದ ನಿರ್ಮಿಸಿದಿರಿ ಎಂದು ಶ್ಲಾಘಿಸಿದೆ. ಅದೇ ಅಂಶವನ್ನು ಪ್ರಕೃತವಾದ ಋಕ್ಕಿನಲ್ಲಿಯೂ ಸೂಚಿಸಿದೆ. ಮತ್ತು ಈ ಆಶ್ರಯವನ್ನೂ ರಕ್ಷಣೆಯನ್ನೂ ಉಪಮಾನಗಳೊಂದಿಗೂ ವರ್ಣಿಸಿದೆ.

**ಪೇರುಃ**—**ಉಪದ್ರವೇಭ್ಯಃ ಪಾರಯಿತಾ ।** ಆಪತ್ತುಗಳಿಂದ ದಾಟಿಸುವುದು. **ಶಂ ನೋ ಅಪಾಂ ನಪಾತ್ಪೇರುರಸ್ತು** (ಋ.ಸಂ. ೭-೩೫-೧೩) ಇತ್ಯಾದಿಕಡೆಗಳಲ್ಲಿ ಅಗ್ನ್ಯಾದಿಗಳಿಗೆ ವಿಶೇಷಣವಾಗಿರುವಂತೆ ಇಲ್ಲಿ ಅಶ್ವಿನೀದೇವತೆಗಳ **ರಥಕ್ಕೆ** ವಿಶೇಷಣವಾಗಿದೆ.

**ಪಜ್ರಃ**—**ಪಜ್ರಶಬ್ದವು** ಕಕ್ಷೀವಂತನ ವಂಶದ ಹೆಸರಾಗಿಯೇ ಪ್ರಸಿದ್ಧವಾಗಿದೆ. ಇದರ ವಿವರವನ್ನು ಹಿಂದೆ ತಿಳಿಸಿದೆ. **ವೇಗವಾನ್ ಬಲವಾನ್ ವಾ** ಎಂದು ಋ. ಸಂ. ೮-೬೩-೧೨ನೇ ಋಕ್ಕಿನ **ಪಜ್ರಪದಕ್ಕೆ** ಅರ್ಥಮಾಡಿರುವಂತೆ ಪ್ರಕೃತವಾದ ಋಕ್ಕಿನಲ್ಲಿಯೂ ಅದೇ ಅರ್ಥವನ್ನು ಹೇಳಿದೆ. **ಪಾಜಸಾ ಬಲೇನ ತೀರ್ಣಸ್ವನ್ ।** ತನ್ನ ಸ್ವಶಕ್ತಿಯಿಂದ ಸಮುದ್ರವನ್ನು ದಾಟಿ ನಿಂತಿದೆಯೆಂದು **ರಥದ ಶಕ್ತಿಯನ್ನು ತೋರಿಸುತ್ತದೆ.**

**ಏನ್ಯೈಃ**—**ಕಾಮ್ಯೈರಯೆನ್ಯೈರವನ್ಯೈರ್ವಾ** (ನಿ. ೧೨-೨೧) ಸ್ವತಂತ್ರವಾದುದೂ, ತಡೆಯಿಲ್ಲದುದೂ ಆದ ಸಂಚಾರವನ್ನು ತೋರಿಸುತ್ತಾ, ಗಮನದ ಶಕ್ತಿಯನ್ನೂ ಈ ಪದವು ಸೂಚಿಸುತ್ತದೆ. ಈ ಪದವು ಸಾಧಾರಣವಾಗಿ ಯಾವಾಗಲೂ ಸಂಚಾರ ಸ್ವಭಾವವುಳ್ಳವರೂ, ಇಂದ್ರನಿಗೆ ಮಿತ್ರಭೂತರೂ ಆದ **ಮರುತ್ತು**ಗಳಿಗೆ ವಿಶೇಷಣವಾಗಿರುವುದು. ಪ್ರಕೃತವಾದ ಋಕ್ಕಿನಲ್ಲಿ ವೇಗವಾಗಿ ಓಡತಕ್ಕದ್ದೂ ಶಕ್ತಿಯುತವಾದುದೂ ಆದ ಶೂರನ ಕುದುರೆಗಳಿಗೆ ಪರ್ಯಾಯಪದವಾಗಿದೆ.

**ಅಜ್ಮ**—ಈಪದವು **ಸಂಗ್ರಾಮ**ನಾಮಗಳಲ್ಲಿಯೂ (ನಿ. ೩-೯), **ಗೃಹ**ನಾಮಗಳಲ್ಲಿಯೂ (ನಿ. ೩-೧೩) ಪಠಿತವಾಗಿದೆ. ಈ ಎರಡರ್ಥಗಳಲ್ಲಿಯೂ ಇರುವ ಪ್ರಯೋಗಗಳ ಜೊತೆಗೆ,

**ಉಚಥ್ಯೇ ೩ ವಪುಷಿ ಯಃ ಸ್ವರಾಳುತ ವಾಯೋ ಘೃತಸ್ನಾಃ ।**
**ಅಶ್ವೇಷಿತಂ ರಜೇಷಿತಂ ಶುನೇಷಿತಂ ಪ್ರಾಜ್ಮ ತದಿದಂ ನು ತತ್ ॥**

(ಋ. ಸಂ. ೮-೪೬-೨೮)

ಎಂಬಲ್ಲಿ **ಅಜ್ಮ**ಶಬ್ದಕ್ಕೆ ಅನ್ನವೆಂದೂ ಅರ್ಥಮಾಡಿದೆ.

**ಅಚ್ಯುತಾ ಚಿದ್ವೋ ಅಜ್ಮನ್ನಾ ನಾನದತಿ ಪರ್ವತಾಸೋ ವನಸ್ಪತಿಃ। ಭೂಮಿರ್ಯಾಮೇಷು ರೇಜತೇ।**

(ಋ. ಸಂ. ೮-೨೦-೫)

ಎಂಬಲ್ಲಿ **ಅಜ್ಮನಿ ಗಮನೇ ಸತಿ ।** ಸಂಚಾರವಿರಲಾಗಿ ಎಂದು ಗಮನಾರ್ಥಕವಾದ ಪ್ರಯೋಗವೆಂದು ತಿಳಿಸಿದೆ.

**ಯೇ ಪಾತಯಂತೇ ಅಜ್ಮಭಿರ್ಗಿರೀಣಾಂ ಸ್ನುಭಿರೇಷಾಂ ।**
**ಯಜ್ಞಂ ಮಹಿಷ್ವಣೀನಾಂ ಸುಮ್ನಂ ತುವಿಷ್ವಣೀನಾಂ ಪ್ರಾಧ್ವರೇ ॥**

(ಋ. ಸಂ. ೮-೪೬-೧೮)

ಎಂಬ ಕಡೆಯಲ್ಲಿ **ಅಜ್ಮಭಿಃ ಬಲೈಃ ಬಲಕರೈರುದಕೈಃ ಸಹ**–ಬಲಕರವಾದ ಉದಕವೆಂದು ಅರ್ಥಮಾಡಿದ್ದಾರೆ. ಹೀಗೆ ಈ ಪದಕ್ಕೆ ನಾನಾರ್ಥಗಳಲ್ಲಿ ಪ್ರಯೋಗವಿರುವುದು. ಪ್ರಕೃತವಾದ ಋಕ್ಕಿನಲ್ಲಿ ಸುಖದಾಯಕವೂ ರಕ್ಷಕವೂ ಆದ **ಗೃಹ**ವೆಂದರ್ಥ.

**ಶೂರಃ**—**ಶೂರಃ ಶವತೇರ್ಗತಿಕರ್ಮಣಃ ।** ಗತ್ಯರ್ಥಕವಾದ **ಶು** ಧಾತುವಿನಿಂದ ನಿಷ್ಪನ್ನವಾಗಿ ವೀರ್ಯವುಳ್ಳವನು ಎಂಬ ತಾತ್ಪರ್ಯವನ್ನು ಕೊಡುತ್ತದೆ. (ನಿ. ೪-೧೩).

**॥ ವ್ಯಾಕರಣಪ್ರಕ್ರಿಯಾ ॥**

**ಪೇರುಃ**—ಪಿ ಗತೌ ಧಾತು. **ಮಿಪಿಭ್ಯಾಂ ರುಃ** (ಉ. ಸೂ. ೪-೫೪೧) ಎಂಬುದರಿಂದ ರು ಪ್ರತ್ಯಯ. **ಸಾರ್ವಧಾತುಕಾರ್ಧಧಾ**—ಎಂಬುದರಿಂದ ಇಕಿಗೆ ಗುಣ. ಪ್ರತ್ಯಯಸ್ವರದಿಂದ ಅಂತೋದಾತ್ತವಾಗುತ್ತದೆ.

**ಅರ್ಣಸಃ**—ಋ ಗತೌ ಧಾತು. **ಉದಕೇನುಟ್ ಚ** (ಉ. ಸೂ. ೪-೬೭೯) ಎಂಬುದರಿಂದ ಅಸುನ್ ಪ್ರತ್ಯಯ ಧಾತುವಿಗೆ ನುಡಾಗಮ. ಪ್ರತ್ಯಯ ನಿತ್ತಾದುದರಿಂದ ಆದ್ಯುದಾತ್ತಸ್ವರ ಬರುತ್ತದೆ.

**ಧಾಯಿ**—ಡುಧಾಞ್ ಧಾರಣಪೋಷಣಯೋಃ ಧಾತು. ಲುಙ್ ಪ್ರಥಮಪುರುಷಏಕವಚನಾಂತರೂಪ. ಛಾಂದಸವಾಗಿ ಅಡಾಗಮ ಬರುವುದಿಲ್ಲ. ಯದ್ಯೋಗವಿರುವುದರಿಂದ ನಿಘಾತಸ್ವರ ಬರುವುದಿಲ್ಲ. ಧಾತುಸ್ವರ ಉಳಿಯುತ್ತದೆ.

**ಅವಃ**–ಅವ ರಕ್ಷಣೇ ಧಾತು. ಔಣಾದಿಕ ಅಸುನ್ ಪ್ರತ್ಯಯ. ನಿತ್ತ್ವಾದುದರಿಂದ ಆದ್ಯುದಾತ್ತಸ್ವರ ಬರುತ್ತದೆ.

**ಗಮೇಯಮ್**—ಗಮ್ಲೃ ಗತೌ ಧಾತು. ಲಿಙ್ ಉತ್ತಮಪುರುಷ ಏಕವಚನದಲ್ಲಿ ಮಿಪ್. **ತಸ್ಥಸ್ಥ**—ಎಂಬುದರಿಂದ ಅಮಾದೇಶ. ಅದಕ್ಕೆ ಯಾಸುಟಾಗಮ. ಅದಕ್ಕೆ ಇಯಾದೇಶ. ವ್ಯತ್ಯಯದಿಂದ ಛಾದೇಶ ಬರುವುದಿಲ್ಲ. ತಿಙಂತನಿಘಾತಸ್ವರ ಬರುತ್ತದೆ.

**ಅಜ್ಮ**—ಅಜ ಗತಿಕ್ಷೇಪಣಯೋಃ ಧಾತು. ಮನಿನ್ ಪ್ರತ್ಯಯ. ನಿತ್ತ್ವಾದುದರಿಂದ ಆದ್ಯುದಾತ್ತಸ್ವರ ಬರುತ್ತದೆ.

**ಪತಯದ್ಭಿಃ**—ಪತ್ಲೃ ಗತೌ ಧಾತು. ಣಿಜಂತದ ಮೇಲೆ ಶತೃ ಪ್ರತ್ಯಯ. ಲಸಾರ್ವಧಾತುಕವು ಅನುದಾತ್ತವಾಗುವುದರಿಂದ ಣಿಚ್‌ಸ್ವರ ಉಳಿಯುತ್ತದೆ. ತೃತೀಯಾಂತರೂಪ.

**ಏವೈಃ**—ಇಣ್ ಗತೌ ಧಾತು. **ಇಣ್‌ಶೀಙ್‌ಭ್ಯಾಂ ವನ್** (ಉ. ಸೂ. ೧–೧೫೦) ಎಂಬುದರಿಂದ ವನ್ ಪ್ರತ್ಯಯ. ಪ್ರತ್ಯಯನಿಮಿತ್ತವಾಗಿ ಧಾತುವಿಗೆ ಗುಣ. ನಿತ್ತ್ವಾದುದರಿಂದ ಆದ್ಯುದಾತ್ತಸ್ವರ ಬರುತ್ತದೆ. ॥ ೩ ॥

———— :O: ————

ಸಂಹಿತಾಪಾಠಃ

ಉಪಸ್ತುತಿರೌಚಥ್ಯಮುರುಷ್ಯೇನ್ಮಾ ಮಾಮಿಮೇ ಪತತ್ರಿಣೀ ವಿ ದುಗ್ಧಾಂ ।
ಮಾ ಮಾಮೇಧೋ ದಶತಯಶ್ಚಿತೋ ಧಾಕ್ ಪ್ರ ಯದ್ವಾಂ ಬದ್ಧಸ್ತ್ಮನಿ-
ಖಾದತಿ ಕ್ಷಾಂ ॥ ೪ ॥

॥ ಪದಪಾಠಃ ॥

ಉಪಽಸ್ತುತಿಃ । ಔಚಥ್ಯಂ । ಉರುಷ್ಯೇತ್ । ಮಾ । ಮಾಂ । ಇಮೇ ಇತಿ । ಪತತ್ರಿಣೀ ಇತಿ । ವಿ । ದುಗ್ಧಾಂ ।

ಮಾ । ಮಾಂ । ಏಧಃ । ದಶಽತಯಃ । ಚಿತಃ । ಧಾಕ್ । ಪ್ರ । ಯತ್ । ವಾಂ । ಬದ್ಧಃ । ತ್ಮನಿ । ಖಾದತಿ । ಕ್ಷಾಂ ॥ ೪ ॥

### ಸಾಯಣಭಾಷ್ಯಂ

ಅತ್ರಾಖ್ಯಾನಮಾಹುಃ । ಜರಾಝುರ್ಝರಿತಗಾತ್ರಂ ಜಾತ್ಯಂಧಂ ದೀರ್ಘತಮಸಂ ಮಾಮತೇಯಂ ಪರಿಚರಿತುಮಶಕ್ನುವಾನಾಃ ಸ್ವಗರ್ಭದಾಸಾ ಅಗ್ನೌ ಪ್ರದಾಹಾಯ ಪ್ರಚಿಕ್ಷಿಪುಃ । ತತ್ರ ಕ್ಷಿಪ್ತೋಽಶ್ವಿನಾವಸ್ತಾವೀತ್ । ತೌ ಚೈನಮರಕ್ಷತಾಂ । ತತೋಽಪ್ಯಮ್ರಿಯಮಾಣಮುದಕೇಷ್ವಪಾತಯನ್ । ತತ್ರ ನಿಮಗ್ನಃ ಪುನರಶ್ವಿನೌ ತುಷ್ಟಾವ । ತುಷ್ಟೌ ಸಂತೌ ತೌ ಜಲಾದುದಹಾರ್ಷ್ಟಾಂ । ಏವಮುದ್ಧೃತಂ ತಂ ತ್ರೈತನೋ ನಾಮಕಃ ಕಶ್ಚಿದ್ದಾಸೋಽಸ್ಯ ಶಿರೋ ವಕ್ಷಶ್ಚ ವ್ಯತಕ್ಷತ್ । ತತೋಽಪ್ಯಪಾಲಯತಾಮಿತಿ । ತದಿದಮೃಗ್ದ್ವಯಾಭ್ಯಾಮುಚ್ಯತೇ । ಹೇ ಅಶ್ವಿನೌ ಉಪಸ್ತುತಿರ್ಯುವಾಂ ಬುದ್ಧ್ಯೋಪೇತ್ಯ ಕ್ರಿಯಮಾಣಾ ಸ್ತುತಿರೌಚಥ್ಯಮುಚಥಸ್ಯ ಪುತ್ರಂ ದೀರ್ಘತಮಸಂ ಮಾಮುರುಷ್ಯೇತ್ । ರಕ್ಷೇದ್ದಾಹಾದ್ಯುಪದ್ರವಾತ್ । ಉರುಷ್ಯತೀ ರಕ್ಷಾಕರ್ಮೇತಿ ಯಾಸ್ಕಃ । ನಿ. ೫. ೨೩. । ಏವಂ ಸಾಮಾನ್ಯೇನೋಕ್ತ್ವಾ ವಿಶೇಷೇಣ ಪ್ರತ್ಯುಪದ್ರವಪರಿಹಾರಂ ಪ್ರಾರ್ಥಯತೇ । ಇಮೇ ಪ್ರಸಿದ್ಧೇ ಪತತ್ರಿಣೀ ಪತನಶೀಲೇ ಪುನರಾವರ್ತನಶೀಲೇ ಅಹೋರಾತ್ರೇ ಮಾಂ ಮಾ ವಿ ದುಗ್ಧಾಂ । ವಿಶೇಷೇಣ ದೋಹಗತಸಾರಂ ಮಾ ಕಾರ್ಷ್ಟಾಂ । ಪ್ರಾಣನಿರ್ಗಮನಾನುಕೂಲ್ಯಂ ಮಾ ಕುರುತಾಮಿತ್ಯರ್ಥಃ । ಕಿಂಚ ಮಾಂ ದಶತಯೋ ದಶವಾರಶ್ಚಿತಃ ಸಂಚಿತಃ ಸಂಪಾದಿತ ಏಧಃ ಪ್ರಜ್ವಾಲಿತೇಂಧನಸಂಘೋ ಮಾ ಧಾಕ್ । ಮಾ ಧಾಕ್ಷೀತ್ ॥ ದಹತೇರ್ಲುಙಿ ಸಿಚಿ ಹಲಂತಲಕ್ಷಣಾ ವೃದ್ಧಿಃ । ಬಹುಲಂ ಛಂದಸೀತೀಡಭಾವಃ । ಹಲ್ಙ್ಯಾದಿಸಂಯೋಗಾಂತಲೋಪೌ ॥ ದುಃಸಹದುಃಖಪ್ರಾಪ್ತಿಂ ದರ್ಶಯತಿ । ಯದ್ಯಸ್ಮಾದ್ವಾಂ ಯುವಯೋಃ ಸಂಬಂಧ್ಯಯಂ ಜನೋ ಬದ್ಧಃ ಪಾಶೈರ್ಗಾಢಂ ವೇಷ್ಟಿತಃ ಸನ್ ತ್ಮನ್ಯಾತ್ಮನ್ಯಾತ್ಮನಾ ಕ್ಷಾಂ ಭೂಮಿಂ ಖಾದತಿ ಭಕ್ಷಯತಿ । ಗಂತುಮಶಕ್ತಃ ಸನ್ ಭೂಮೌ ಪರಿಲುಠತೀತ್ಯರ್ಥಃ । ತಸ್ಮಾದುಪಸ್ತುತಿರೌಚಥ್ಯಮುರುಷ್ಯೇದಿತಿ ॥

### ಪ್ರತಿಪದಾರ್ಥ

(ಹೇ ಅಶ್ವಿನೌ—ಎಲೈ ಅಶ್ವಿನೀದೇವತೆಗಳೇ) । **ಔಚಥ್ಯಂ**—ಉಚಥ್ಯಪುತ್ರನಾದ ದೀರ್ಘತಮಸ್ಸಿನಿಂದ ನಿರ್ಮಿತವಾದುದೂ । **ಉಪಸ್ತುತಿಃ**—(ನಿಮ್ಮನ್ನು ಉದ್ದೇಶಿಸಿದುದೂ ಆದ) ಈ ಸ್ತೋತ್ರವು । **ಮಾಂ**—ನನ್ನನ್ನು । **ಉರುಷ್ಯೇತ್**—ರಕ್ಷಿಸಲಿ । **ಇಮೇ ಪತತ್ರಿಣೀ**—ಆವೃತ್ತಿಯಿಂದ ಸಂಚರಿಸುವ ಈ ಅಹೋರಾತ್ರಗಳು । **ಮಾ ವಿ ದುಗ್ಧಾಂ**—(ನನಗೆ ಜರೆಯನ್ನುಂಟುಮಾಡಿ) ನನ್ನನ್ನು ಶೋಷಿಸುವಂತೆ ಮಾಡದಿರಲಿ । **ದಶತಯಃ**—ಹತ್ತು ಬಾರಿ । **ಚಿತಃ**—ಪ್ರಜ್ವಲಿತವಾದ (ಮತ್ತು ಜ್ವಾಲಾತ್ಮಕವಾದ) । **ಏಧಃ**—ಅಗ್ನಿಕಣಗಳ ಸಮೂಹವು । **ಮಾಂ**—ನನ್ನನ್ನು । **ಮಾ ಧಾಕ್**—ದಹಿಸದಿರಲಿ । **ಯತ್**—ಯಾವ ಕಾರಣದಿಂದ (ಎಂದರೆ ಯಾವ ರೀತಿಯಲ್ಲಿ) । ವಾಂ—ನಿಮಗೆ ಸೇರಿದ ನಾನು । **ಬದ್ಧಃ**—(ದೇಹವೆಲ್ಲಾ) ಕಟ್ಟಲ್ಪಟ್ಟವನಾಗಿ । **ತ್ಮನಿ**—ನನ್ನಷ್ಟಕ್ಕೆ ನಾನೇ । **ಕ್ಷಾಂ**—ಭೂಮಿಯನ್ನು । **ಖಾದತಿ**—(ತೆವಳುತ್ತಾ) ನೆಕ್ಕುತ್ತಿದ್ದೇನೆಯೋ (ಅದನ್ನರಿತು ನನ್ನನ್ನು ರಕ್ಷಿಸಿರಿ) ॥

### ಭಾವಾರ್ಥ

ಎಲೈ ಅಶ್ವಿನೀದೇವತೆಗಳೇ, ಶತ್ರುಗಳಿಂದ ಹತ್ತುಬಾರಿ ಪ್ರಜ್ವಲಿತವಾದ ಈ ಅಗ್ನಿಯು ನನ್ನನ್ನು ದಹಿಸದಿರಲಿ. ಪುನರಾವೃತ್ತಿಯಿಂದ ಸಂಚರಿಸತಕ್ಕ ಅಹೋರಾತ್ರಗಳು ಇದೇರೀತಿ ನನ್ನನ್ನು ವೃದ್ಧನನ್ನಾಗಿ ಮಾಡಿ ನನ್ನನ್ನು ಜೀರ್ಣನನ್ನಾಗಿ ಮಾಡದಿರಲಿ. ಉಚಥ್ಯಪುತ್ರನಾದ ನನ್ನಿಂದ ನಿರ್ಮಿತವಾದ ಈ ಸ್ತುತಿಯು ನಿಮ್ಮನ್ನು ತೃಪ್ತಿಗೊಳಿಸಲಿ

ಮತ್ತು ನನ್ನನ್ನು ರಕ್ಷಿಸಲಿ. ನಾನು ಶತ್ರುಗಳಿಂದ ಬದ್ಧನಾಗಿ ನನ್ನಷ್ಟಕ್ಕೆ ನಾನೇ ತೆವಳಿಕೊಂಡು ಭೂಮಿಯನ್ನು ನೆಕ್ಕುತ್ತಿರುವ ನನ್ನ ದುಃಸ್ಥಿತಿಯನ್ನು ನೀವು ತಿಳಿದು ನನ್ನನ್ನು ರಕ್ಷಿಸಿರಿ.

## English Translation

May the praise addressed to you, Ashwins, preserve the son of Uchatthya: let not these revolving (days and nights) exhaust me: let not the ten times kindled fire consume me: let it not be, that one who is your (dependant), bound (with bonds), should of himself bite the earth.

### ವಿಶೇಷವಿಷಯಗಳು

ವಾರ್ಧಕ್ಯದಿಂದ ಜೀರ್ಣವಾದ ಶರೀರವುಳ್ಳವನೂ, ಹುಟ್ಟಿದಾಗಿನಿಂದ ಕುರುಡನೂ ಆದ ದೀರ್ಘತಮಸ್ಸನ್ನು ಉಪಚರಿಸಲು ಜುಗುಪ್ಸಿತರಾದ ಅವನ ಸೇವಕರು ಅವನನ್ನು ಕೈಕಾಲುಕಟ್ಟಿ ಅಗ್ನಿಯಲ್ಲಿ ಹಾಕಿದರು ಆಗ ಅಶ್ವಿನೀ ದೇವತೆಗಳನ್ನು ಸ್ತುತಿಸಲು ಅವರು ಅಗ್ನಿಯಿಂದ ರಕ್ಷಿಸಿದರು. ಮೃತನಾಗದ ಅವನನ್ನು ಪುನಃ ನೀರಿನೊಳಕ್ಕೆ ತಳ್ಳಿಬಿಟ್ಟರು. ಆಗಲೂ ಸಹ ಅವನಿಂದ ಸ್ತುತರಾಗಿ ಪ್ರಾರ್ಥಿಸಲ್ಪಟ್ಟ ಅಶ್ವಿನೀದೇವತೆಗಳು ಅವನನ್ನು ರಕ್ಷಿಸಿದರು. ಅದರಿಂದಲೂ ಮೃತನಾಗದ ಅವನನ್ನು ತ್ರೈತನನೆಂಬ ಒಬ್ಬ ದಾಸನು ತನ್ನ ಶಕ್ತಿಯಿಂದ ತಲೆಗೂ ವಕ್ಷಸ್ಸಿಗೂ ಹೊಡದು ಗಾಯಪಡಿಸಿ ಓಡಿಹೋದನು. ಆ ಸನ್ನಿವೇಶವನ್ನು ಈ ಎರಡು ಋಕ್ಕುಗಳಲ್ಲಿಯೂ ಹೇಳಿದೆಯೆಂದು ಸಾಯಣರು ಪೂರ್ವಕಥೆಯನ್ನು ಹೇಳಿದ್ದಾರೆ. (ಋ. ಸಂ. ಭಾಗ ೫. ಪೇಜು 231 ನೋಡಿ.)

**ಉರುಷ್ಯೇತ್**— **ಉರುಷ್ಯತೀ ರಕ್ಷಾಕರ್ಮ** ( ನಿ. ೫.೨೩ ) ರಕ್ಷಣಾರ್ಥದಲ್ಲಿ ಪ್ರಯೋಗಿಸಿದೆ. ನಿರುಕ್ತಕಾರರು—

**ಸ ನೋ ಬೋಧಿ ಶ್ರುಧೀ ಹವಮುರುಷ್ಯಾ ಣೋ ಅಘಾಯತಃ ಸಮಸ್ಮಾತ್ ।**

(ಋ. ಸಂ. ೫–೨೪–೩)

ಎಂಬ ಋಕ್ಕನ್ನುದಹರಿಸಿ ನಮ್ಮ ವಿಷಯದಲ್ಲಿ ಕೇಡನ್ನು ಬಯಸುವ ಸಮಸ್ತರಿಂದಲೂ ನಮ್ಮನ್ನು ರಕ್ಷಿಸು ಎಂದು **ಉರುಷ್ಯ**ಪದಕ್ಕೆ ಅರ್ಥವನ್ನು ಹೇಳಿದ್ದಾರೆ. ಪ್ರಕೃತವಾದ ಋಕ್ಕಿನಲ್ಲಿಯೂ ಅದೇ ಅರ್ಥವೆಂದು ಸಾಯಣರು ತಿಳಿಸಿದ್ದಾರೆ.

**ಪತತ್ರಿಣೀ—ಪತನಶೀಲೇ ಪುನರಾವರ್ತನಶೀಲೇ ।** ಹುಟ್ಟುವುದು, ಅಸ್ತವಾಗುವುದು ಈರೀತಿ ಆವೃತ್ತಿಯಿಂದಲೂ ಅನುಸ್ಯೂತವಾದ ಸಂತತಿಯಿಂದಲೂ ಚಲಿಸುತ್ತಿರುವ ಅಹೋರಾತ್ರಗಳಿಗೆ ಪರ್ಯಾಯಪದವಾಗಿ ಉಪಯೋಗಿಸಿದೆ. ಈ ಪದವೂ ಸಹ **ಚಲಿಸು** ಎಂಬ ಅರ್ಥವನ್ನು ತೋರಿಸಿದರೂ ಸಹ ನಿರುಕ್ತಕಾರರು

**ಯೋ ಹೋತಾಸೀತ್ಪ್ರಥಮೋ ದೇವಜುಷ್ಟೋ ಯಂ ಸಮಾಂಜನ್ನಾಜ್ಯೇನಾ ವೃಣಾನಾಃ ।**
**ಸ ಪತತ್ರೀತ್ವರಂ ಸ್ಥಾ ಜಗದ್ಯಚ್ಛ್ವಾತ್ರಮಗ್ನಿರಕೃಣೋಜ್ಜಾತವೇದಾಃ ।**

(ಋ. ಸಂ. ೧೦–೮೮–೪)

ಎಂಬ ಸೂಕ್ತವನ್ನನುಸರಿಸಿ (ನಿ. ೫-೩) ಪಕ್ಷಿಗಳ ಪತನರೂಪವಾದ ಸಂಚಾರಕ್ಕೂ ಉಳಿದ ಜಂಗಮಾತ್ಮಕವಾದ ಸಕಲ ಪ್ರಾಣಿಗಳ ಸಂಚಾರಕ್ಕೂ ವ್ಯತ್ಯಾಸವನ್ನು ತೋರಿಸಿದ್ದಾರೆ. ಅಹೋರಾತ್ರಗಳ ಚಲನವಲನಗಳನ್ನು ಪಕ್ಷಿಗಳ ಪತನಕ್ಕೆ ಹೋಲಿಸಿರುವುದು ಆಲಂಕಾರಿಕವಾದ ದೃಷ್ಟಿಯಿಂದ ಅತ್ಯಂತ ಉಚಿತವಾಗಿದೆ. ವೇಗದಲ್ಲಿಯೂ ಸೌಂದರ್ಯವನ್ನು ಬೀರಿ ಆಕರ್ಷಕವಾಗಿರುವುದರಲ್ಲಿಯೂ ಈ ರೂಪಕದಲ್ಲಿರುವ ಉಪಮಾನವು ಹೊಂದಿಕೊಳ್ಳುತ್ತದೆ.

**ದಶತಯಃ**— ದಶವಾರಃ । ಹತ್ತುಸಲ.

**ಕ್ಷಾಂ— ಭೂಮಿಂ । ಗೌಃ, ಗ್ಮಾ, ಜ್ಮಾ, ಕ್ಷ್ಮಾ, ಕ್ಷಾ ।** ಇತ್ಯಾದಿ ಪೃಥಿವೀನಾಮಗಳಲ್ಲಿ ಪಠಿತವಾಗಿದೆ (ನಿ. ೨-೫). **ಕ್ಷಾ ಕ್ಷಿಯತೇರ್ನಿವಾಸಕರ್ಮಣಃ** (ನಿ. ೨-೬). **ವಸಿಸು** ಎಂಬರ್ಥವನ್ನು ಕೊಡುವ ಕ್ಷೀ ಧಾತುವಿನಿಂದ ನಿಷ್ಪನ್ನವಾಗಿ ವಾಸಮಾಡುವ ಭೂಮಿಯೆಂದರ್ಥವಾಗುತ್ತದೆ.

## ವ್ಯಾಕರಣಪ್ರಕ್ರಿಯಾ

**ಉಪಸ್ತುತಿಃ**— ಷ್ಟುಞ್ ಸ್ತುತೌ ಧಾತು. ಕ್ತಿನ್ ಪ್ರತ್ಯಯ. **ತಾದೌ ಚ ನಿತಿ** (ಪಾ. ಸೂ. ೬-೨-೫೦) ಎಂಬುದರಿಂದ ಗತಿಗೆ (ಉಪ) ಪ್ರಕೃತಿಸ್ವರ ಬರುತ್ತದೆ.

**ಉರುಷ್ಯೇತ್**— ಉರುಷ್ಯತೀ ರಕ್ಷಾ ಕರ್ಮಾ. (ನಿರು. ೫-೨೩) ಎಂದು ಯಾಸ್ಕರು ಹೇಳಿರುತ್ತಾರೆ. ಲಿಙ್ ಪ್ರಥಮಪುರುಷಏಕವಚನಾಂತರೂಪ. ಅತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

**ಪತತ್ರಿಣೀ**— ಪತ್ಲೃ ಗತೌ ಧಾತು. **ಪತೇರತ್ರಿನ್** (ಉ. ಸೂ. ೪-೫೮೯) ಎಂಬುದರಿಂದ ಅತ್ರಿನ್ ಪ್ರತ್ಯಯ. ದ್ವಿವಚನಾಂತರೂಪ. ಅಥವಾ **ಅಮಿನಕ್ಷಿ**-(ಉ. ಸೂ. ೩-೩೮೫) ಎಂಬುದರಿಂದ ಅತ್ರನ್ ಪ್ರತ್ಯಯ. ಪತತ್ರಮಸ್ಯಾಸ್ತಿ ಇತಿ ಪತತ್ರಿ. **ಅತ ಇನಿ ಠನೌ** ಎಂಬುದರಿಂದ ಮತ್ವರ್ಥದಲ್ಲಿ ಇನಿ ಪ್ರತ್ಯಯ. ಪ್ರತ್ಯಯಸ್ವರದಿಂದ ಅಂತೋದಾತ್ತವಾಗುತ್ತದೆ.

**ದುಗ್ಧ್ವಮ್**— ದುಹ ಪ್ರಪೂರಣೇ ಧಾತು. ಅದಾದಿ. ಲೋಟ್ ಮಧ್ಯಮಪುರುಷಏಕವಚನದಲ್ಲಿ ತ ಪ್ರತ್ಯಯ. **ಆಮೇತಃ** ಎಂಬುದರಿಂದ ಟಿಗೆ ಆಮಾದೇಶ. **ದಾದೇರ್ಧಾತೋರ್ಘಃ** (ಪಾ. ಸೂ. ೮-೨-೩೨) ಎಂಬುದರಿಂದ ಹಕಾರಕ್ಕೆ ಘಕಾರಾದೇಶ. **ಝಷಸ್ತಥೋರ್ಧೋಽಧಃ** ಎಂಬುದರಿಂದ ಪ್ರತ್ಯಯಕ್ಕೆ ಧಕಾರಾದೇಶ. **ಝಲಾಂ ಜಶ್ ಝಶಿ** ಎಂಬುದರಿಂದ ಜಸ್ತ್ವ. ತಿಙಂತನಿಘಾತಸ್ವರ ಬರುತ್ತದೆ.

**ದಶತಯಃ— ಸಂಖ್ಯಾಯಾ ಅವಯವೇ ತಯಪ್** ಎಂಬುದರಿಂದ ತಯಪ್ ಪ್ರತ್ಯಯ. ಇದು ಪಿತ್ತಾದುದರಿಂದ ಅನುದಾತ್ತವಾಗುತ್ತದೆ.

**ಚಿತಃ**— ಚಿಞ್ ಚಯನೇ ಧಾತು. ಕರ್ಮಣಿಯಲ್ಲಿ **ನಿಷ್ಠಾ** ಎಂಬುದರಿಂದ ಕ್ತ ಪ್ರತ್ಯಯ. ಪ್ರತ್ಯಯಸ್ವರದಿಂದ ಅಂತೋದಾತ್ತವಾಗುತ್ತದೆ.

**ಧಾಕ್**—ದಹ ಭಸ್ಮೀಕರಣೇ ಧಾತು. **ಮಾಙಿಲುಙ್** (ಪಾ. ಸೂ. ೩-೩-೧೭೫) ಎಂಬುದರಿಂದ ಲುಙ್. ಪ್ರಥಮಪುರುಷಏಕವಚನದಲ್ಲಿ ತಿಪ್ ಪ್ರತ್ಯಯ. **ಇತಶ್ಚ** ಎಂಬುದರಿಂದ ಇಕಾರ ಲೋಪ. ಚ್ಲಿಗೆ ಸಿಚಾದೇಶ. **ಬಹುಲಂ ಛಂದಸಿ** ಎಂಬುದರಿಂದ ಅದಕ್ಕೆ ಇಡಾಗಮ ಬರುವುದಿಲ್ಲ. **ವದವ್ರಜಹಲಂತಸ್ಯಾಚಃ** (ಪಾ. ಸೂ. ೭-೨-೩) ಎಂಬುದರಿಂದ ಧಾತುವಿನ ಉಪಧೆಗೆ ವೃದ್ಧಿ. **ಹಲ್ಙ್ಯಾಭ್ಯೋ**-ಸೂತ್ರದಿಂದ ಅಪೃಕ್ತವಾದ ತಿಪಿಗೆ ಲೋಪ. **ಸಂಯೋಗಾಂತಸ್ಯ ಲೋಪಃ** ಎಂಬುದರಿಂದ ಸಕಾರಕ್ಕೆ ಲೋಪ. ಧಾತು ಹಕಾರಕ್ಕೆ ಹಿಂದಿನಂತೆ ಘತ್ವ ಬಂದಾಗ ಪದಾಂತದಲ್ಲಿ ಜಸ್ತ್ವ. **ವಾವಸಾನೇ** ಎಂಬುದರಿಂದ ಚರ್ತ್ವ. **ಏಕಾಚೋ ಬಶೋ**—(ಪಾ.ಸೂ. ೮-೧-೩೭) ಸೂತ್ರದಿಂದ ಧಾತುವಿನ ಆದಿಗೆ ಧತ್ವ. ಮಾಙ್ಯೋಗವಿರುವುದರಿಂದ ಅಡಾಗಮ ಬರುವುದಿಲ್ಲ. ತಿಙಂತನಿಘಾತಸ್ವರ ಬರುತ್ತದೆ.

**ಬದ್ಧಃ**—ಬಧ ಬಂಧನೇ ಧಾತು. ಕರ್ಮಣಿಯಲ್ಲಿ ಕ್ತ ಪ್ರತ್ಯಯ. **ಝಷಸ್ತಥೋ**—ಸೂತ್ರದಿಂದ ಪ್ರತ್ಯಯಕ್ಕೆ ಧತ್ವ. **ಝಲಾಂಜಶ್‌ಝಶಿ** ಎಂಬುದರಿಂದ ಜಸ್ತ್ವ. ಪ್ರತ್ಯಯಸ್ವರದಿಂದ ಅಂತೋದಾತ್ತವಾಗುತ್ತದೆ.

**ತ್ಮನಿ**—ಆತ್ಮನಿ ಎಂದು ರೂಪವಾದಾಗ **ಮಂತ್ರೇಷ್ವಾಙ್ಯಾದೇರಾತ್ಮನಃ** (ಪಾ. ಸೂ. ೬-೪-೧೪೧) ಎಂಬುದರಿಂದ ಆದಿಯ ಆಕಾರಕ್ಕೆ ಲೋಪ ಬರುತ್ತದೆ.

**ಖಾದತಿ**—ಖಾದೃ ಭಕ್ಷಣೇ ಧಾತು. **ಲಟ್** ಪ್ರಥಮಪುರುಷಏಕವಚನಾಂತರೂಪ. ಯದ್ಯೋಗವಿರುವುದರಿಂದ ತಿಙಂತನಿಘಾತಸ್ವರ ಬರುವುದಿಲ್ಲ. ಶಪ್, ತಿಪ್, ಅನುದಾತ್ತವಾದುದರಿಂದ ಧಾತುಸ್ವರ ಉಳಿಯುತ್ತದೆ. ॥ ೪ ॥

:o:

ಸಾಯಣಭಾಷ್ಯಂ

ನ ಮಾ ಗರನ್ನದ್ಯೋ ಮಾತೃತಮಾ ದಾಸಾ ಯದೀಂ ಸುಸಮುಬ್ಧಮವಾಧುಃ ।
ಶಿರೋ ಯದಸ್ಯ ತ್ರೈತನೋ ವಿತಕ್ಷತ್ಸ್ವಯಂ ದಾಸ ಉರೋ ಅಂಸಾವಪಿ ಗ್ಧ ॥ ೫ ॥

ಪದಪಾಠಃ

ನ । ಮಾ । ಗರನ್ । ನದ್ಯಃ । ಮಾತೃऽತಮಾಃ । ದಾಸಾಃ । ಯತ್ । ಈಂ । ಸುऽಸಮುಬ್ಧಂ । ಅವऽಅಧುಃ ।
ಶಿರಃ । ಯತ್ । ಅಸ್ಯ । ತ್ರೈತನಃ । ವಿऽತಕ್ಷತ್ । ಸ್ವಯಂ । ದಾಸಃ । ಉರಃ । ಅಂಸೌ । ಅಪಿ । ಗ್ಧೇತಿ ಗ್ಧ ॥ ೫ ॥

ಸಾಯಣಭಾಷ್ಯಂ

ಅಸ್ಯಾಃ ಪಂಚಮ್ಯಾ ವಿನಿಯೋಗಮಾಹ ಶೌನಕಃ । ಆತತಾಯಿನಮಾಯಾಂತಂ ದೃಷ್ಟ್ವಾ ವ್ಯಾಘ್ರಮಥೋ ವೃಕಂ । ನಮಾ ಗರನ್ನಿತಿ ಜಪಂಸ್ತೇಭ್ಯ ಏವ ಪ್ರಮುಚ್ಯತೇ । ತ್ರಿರಾತ್ರೋಪೋಷಿತೋ

ರಾತ್ರೌ ಜಪೇದಾಸೂರ್ಯದರ್ಶನಾತ್ । ಅಪ್ಲುತ್ಯ ಪ್ರಯತಃ ಸೂರ್ಯಮುಪತಿಷ್ಠೇದ್ದಿವಾಕರಂ । ಪಶ್ಯಂತಿ ತಸ್ಕರಾ ನೈನಂ ತಥಾನ್ಯೇ ಪಾಪಬುದ್ಧಯಃ । ಏಕಃ ಶತಾನಿ ತ್ರಾಯೇತ ತಸ್ಕರೇಭ್ಯಶ್ಚರನ್ಪಥಿ ॥ ಋಗ್ವಿ. ೧. ೨೫. । ಇತಿ ॥

ನದ್ಯೋ ನದನಶೀಲಾ ಮಾತೃತಮಾ ಮಾತೃವಜ್ಜಗತಾಂ ಹಿತಕಾರಿಣ್ಯ ಆಪೋ ಮಾ ಮಾಂ ದೀರ್ಘತಮಸಂ ಗರನ್ । ನ ಗಿರೇಯುಃ । ನಿಮಗ್ನಂ ಮಾ ಕುರ್ಯುಃ ॥ ಗೄ ನಿಗರಣೇ । ಲೇಟಿ ವ್ಯತ್ಯಯೇನ ಶಪ್ ॥ ಗಿರಣಪ್ರಾಪ್ತಿಂ ದರ್ಶಯತಿ । ಯದ್ಯಸ್ಮಾದ್ದಾಸಾ ಅಸ್ಮದುಪಕ್ಷಪಯಿತಾರೋ ಮದೀಯಗರ್ಭದಾಸಾ ಈಮೇನಂ ದೀರ್ಘತಮಸಂ ಮಾಂ ಸುಸಮುಬ್ಧಂ ಸುಷ್ಠು ಸಂಕುಚಿತಸರ್ವಾಂಗಂ ॥ ಸ್ವತೀ ಪೂಜಾಯಾಂ । ಪಾ- ೨-೨-೧೮ । ಇತಿ ಪ್ರಾದಿಸಮಾಸೇಽವ್ಯಯಪೂರ್ವಪದಪ್ರಕೃತಿಸ್ವರತ್ವಂ ॥ ಅವಾಧುಃ ಅವಾಙ್ಮುಖಮಪಾತಯನ್ । ಕಿಂಚಾಸ್ಯ ಮಮ ಶಿರಃ ಸ ತ್ರೈತನ ಏತನ್ನಾಮಕೋ ದಾಸೋಽತ್ಯಂತನಿರ್ಘೃಣಃ ಸನ್ ಯದ್ಯಸ್ಮಾದ್ವಿತಕ್ಷತ್ ವಿವಿಧಂ ತಷ್ಟವಾನ್ ತಸ್ಮಾತ್ಸ ದಾಸಃ ಸ್ವಯಂ ಸ್ವಕೀಯಮೇವ ಶಿರಸ್ತಕ್ಷತು । ನ ಕೇವಲಂ ಶಿರ ಏವ ಅಪಿ ತು ಮದೀಯಮುರೋ ವಕ್ಷಸ್ಥಲಮಂಸೌ ಚ ಗ್ಧ । ಹತವಾನ್ । ವಿದಾರಿತವಾನಿತ್ಯರ್ಥಃ ॥ ಹಂತೇರ್ಲುಙಿ ಛಾಂದಸಮೇತದ್ರೂಪಂ ॥ ತತಃ ಸ್ವಕೀಯಮುರೋಽಂಸಾವಪಿ ಸ್ವಶಸ್ತ್ರೇಣೈವ ತಥಾ ಕೃತವಾನ್ । ತದ್ಯುವಯೋರ್ಮಾಹಾತ್ಮ್ಯಮಿತಿ ಭಾವಃ ॥

ಪ್ರತಿಪದಾರ್ಥ

**ಯತ್**--ಯಾವ ಕಾರಣದಿಂದ । **ದಾಸಾಃ**—(ನನ್ನ) ಭೃತ್ಯರು । **ಸುಸಮುಬ್ಧಂ**—ಜರ್ಜರಿತವಾದ ದೇಹವುಳ್ಳ ಅಥವಾ ಕೈಕಾಲುಗಳನ್ನು ಮಡಿಸಿ ಕಟ್ಟಲ್ಪಟ್ಟ । **ಈಂ**—ಈ ನನ್ನನ್ನು । **ಅವಾಧುಃ**—ಅಧೋಮುಖನನ್ನಾಗಿಮಾಡಿ (ನದಿಯಲ್ಲಿ) ಎಸೆದುಬಿಟ್ಟರೋ (ಅರೀತಿ ನಿಸ್ಸಹಾಯಕನಾದುದರಿಂದಲೇ) । **ಮಾತೃತಮಾಃ**—ಮಾತೃವಿನಂತೆ ಜಗತ್ತಿಗೆ ಅತ್ಯಂತ ಹಿತಕಾರಿಗಳಾದ । **ನದ್ಯಃ**—ನದಿಗಳು । **ಮಾ**—ನನ್ನನ್ನು । **ನ ಗರನ್**—ಮುಳುಗಿಹೋಗುವಂತೆ ಮಾಡದಿರಲಿ । **ಯತ್**—ಯಾವ ಕಾರಣದಿಂದ । **ಅಸ್ಯ**—ಈ ನನ್ನ । **ಶಿರಃ**—ಶಿರಸ್ಸನ್ನು । **ತ್ರೈತನಃ**—ತ್ರೈತನನೆಂಬ ನನ್ನ ದಾಸನು । **ವಿತಕ್ಷತ್**—(ಕತ್ತಿಯಿಂದ) ಹೊಡೆದನೋ (ಆ ಕೂಡಲೇ) । **ದಾಸಃ**—ದಾಸನಾದ ಅವನು । **ಸ್ವಯಂ**—ತನ್ನಷ್ಟಕ್ಕೆ ತಾನಾಗಿಯೇ । **ಉರಃ**—(ತನ್ನ) ವಕ್ಷಸ್ಸನ್ನೂ । **ಅಂಸೌ ಅಪಿ**—ತನ್ನ ತೋಳುಗಳನ್ನೂ ಕೂಡ । **ಗ್ಧ**—ಕತ್ತರಿಸಿಕೊಂಡನು (ಅದು ನಿಮ್ಮ ಮಹಿಮೆ) ॥

॥ ಭಾವಾರ್ಥ ॥

ನನ್ನ ಭೃತ್ಯರು ವಾರ್ಧಕ್ಯದಿಂದ ಜರ್ಜರಿತವಾದ ದೇಹವುಳ್ಳ ನನ್ನನ್ನು ಅಧೋಮುಖನನ್ನಾಗಿ ಮಾಡಿ ನದಿಯಲ್ಲಿ ಎಸೆದುಬಿಟ್ಟರು. ನಾನು ನಿಸ್ಸಹಾಯಕನಾದುದನ್ನರಿತು ಮಾತೃವಿನಂತೆ ಜಗತ್ತಿಗೆ ಅತ್ಯಂತ ಹಿತಕಾರಿಗಳಾದ ನದಿಗಳು ನನ್ನನ್ನು ಮುಳುಗಿ ಹೋಗುವಂತೆ ಮಾಡದಿರಲಿ. ನನ್ನ ಭೃತ್ಯರಲ್ಲೊಬ್ಬನಾದ ತ್ರೈತನನೆಂಬ ದಾಸನು ಕತ್ತಿಯಿಂದ ನನ್ನ ತಲೆಗೂ ಭುಜಕ್ಕೂ ಹೊಡೆದು ಗಾಯಪಡಿಸಿದಾಗ ನಿಮ್ಮ (ಅಶ್ವಿನೀದೇವತೆಗಳ) ಅನುಗ್ರಹದಿಂದ ಅವನು ತಾನೇ ತನ್ನ ತಲೆಗೂ ಭುಜಕ್ಕೂ ಹೊಡೆದುಕೊಂಡು ಓಡಿಹೋಗುವಂತಾಯಿತು.

## English Translation

Let not the maternal waters swallow me, since the slaves hurled down this decrepit (old man); in like manner as Traitana wounded his head, so has the slave wounded his own, and has struck his breast and shoulders,

### ವಿಶೇಷವಿಷಯಗಳು

**ನಮಾ ಗರನ್** ಎಂಬ ಈ ಐದನೆಯ ಋಕ್ಕಿನ ವಿನಿಯೋಗವನ್ನು ಶೌನಕಮಹರ್ಷಿಯು ಋಗ್ವಿಧಾನವೆಂಬ ಗ್ರಂಥದಲ್ಲಿ ಈರೀತಿ ಹೇಳಿರುವರು—ಹತ್ಯಾಕಾರಿಯೂ ಹಿಂಸಕನೂ ಆದ ಮನುಷ್ಯನು, ಹುಲಿ, ತೋಳ ಇವುಗಳು ಪ್ರಯಾಣಕಾಲದಲ್ಲಿ ಎದುರಾಗಿ ಬಂದಲ್ಲಿ **ನ ಮಾ ಗರನ್** ಎಂಬ ಈ ಮಂತ್ರವನ್ನು ಜಪಿಸಿದರೆ ಅವರುಗಳಿಂದ ಉಂಟಾಗಬಹುದಾದ ಭಯವು ಪರಿಹಾರವಾಗುವುದು. ಮೂರು ರಾತ್ರಿಗಳು ಎಂದರೆ ಮೂರುದಿನಪರ್ಯಂತ ಉಪವಾಸ ಮಾಡಿ ರಾತ್ರೆಯಲ್ಲಿ ಈ ಮಂತ್ರವನ್ನು ಜಪಮಾಡಲು ಪ್ರಾರಂಭಿಸಿ ಸೂರ್ಯೋದಯವಾಗುವವರಿಗೂ ಜಪಮಾಡುತ್ತಿದ್ದು ಬಳಿಕ ನದಿಯಲ್ಲಿ ಸ್ನಾನಮಾಡಿ ಸೂರ್ಯನ ಅಭಿಮುಖವಾಗಿ ನಿಂತು ಸ್ತೋತ್ರಮಾಡಿದರೆ ಈರೀತಿ ಮಾಡುವ ಪುರುಷನ ಸಮೀಪಕ್ಕೆ ಕಳ್ಳರೂ ಪಾಪಿಷ್ಠರೂ ಸುಳಿಯುವುದಿಲ್ಲ ಮತ್ತು ಅಂತಹ ಪುರುಷನು ಪ್ರಯಾಣಮಾಡುವಾಗ ಮಾರ್ಗದಲ್ಲಿ ತನ್ನ ಜತೆಯಲ್ಲಿರುವ ನೂರುಜನಗಳನ್ನಾದರೂ ಒಬ್ಬನೇ ಕಾಪಾಡಬಲ್ಲನು ಎಂದು ಋಗ್ವಿಧಾನ ೧-೨೫ರಲ್ಲಿ ಹೇಳಿರುವರು. ಇಲ್ಲಿ ಆತತಾಯಿ ಎಂಬ ಶಬ್ದಕ್ಕೆ—

**ಅಗ್ನಿದೋ ಗರದಶ್ಚೈವ ಶಸ್ತ್ರೋನ್ಮತ್ತೋ ಧನಾಪಹಃ ।**
**ಕ್ಷೇತ್ರದಾರಹರಶ್ಚೈತಾನ್ ಷಡ್ವಿದ್ಯಾದಾತತಾಯಿನಃ ॥**
(ಶುಕ್ರನೀತಿ)

ಶುಕ್ರನೀತಿಯಲ್ಲಿ ಈ ವಿಧವಾದ ವಿವರಣೆ ಇರುವುದು—ಮನೆಗೆ ಬೆಂಕಿ ಇಡುವವನೂ, ವಿಷವನ್ನು ಕೊಟ್ಟು ಕೊಲ್ಲುವವನೂ, ಹರಿತವಾದ ಆಯುಧವನ್ನು ಕೈಯಲ್ಲಿ ಹಿಡಿದು ಇತರರಿಗೆ ಭಯವನ್ನುಂಟುಮಾಡುವವನೂ, ಪರರ ಧನವನ್ನಪಹರಿಸುವವನೂ, ಮೋಸದಿಂದ ಗದ್ದೆ, ಹೊಲ, ತೋಟ ಮೊದಲಾದ ಭೂಮಿಯನ್ನು ಅಪಹರಿಸುವವನೂ, ಇನ್ನೊಬ್ಬರ ಹೆಂಡತಿಯನ್ನು ಅಪಹರಿಸುವವನೂ—ಈ ಆರು ಜನರೂ ಆತತಾಯಿಗಳೆಂದು ಹೇಳಲ್ಪಡುವರು. ಇಂತಹ ಪಾಪಿಷ್ಠರನ್ನು ನೋಡಿದಲ್ಲಿ ನ ಮಾ ಗರನ್ ಎಂಬ ಋಕ್ಕನ್ನು ಪಠಿಸಿದಲ್ಲಿ ಆ ಪಾಪವು ಪರಿಹಾರವಾಗುವುದೆಂದು ಶೌನಕರು ಹೇಳಿರುವರು.

**ಸುಸಮುಬ್ಧಂ— ಸುಷ್ಠು ಸಂಕುಚಿತಸರ್ವಾಂಗಂ ।** ಸಂಕುಚಿತವಾಗಿ ಮಾಡಲ್ಪಟ್ಟ ದೇಹವುಳ್ಳ ಎಂದರ್ಥಮಾಡಿದೆ. ವಾರ್ಧಕ್ಯದಿಂದ ಜರ್ಜರಿತವಾಗಿ ಸಂಕುಚಿತವಾದುದೇ ಅಥವಾ ಭೃತ್ಯರು ಇವನ ಕೈಕಾಲುಗಳನ್ನು ಕಟ್ಟಿಹಾಕಿದುದರಿಂದ ಸಂಕುಚಿತವಾದುದೇ ಎಂಬುದನ್ನು ವಿವರಿಸಿಲ್ಲ. ಈ ಪದವು ಯಾವ ಧಾತುವಿನಿಂದ ನಿಷ್ಪನ್ನವಾಗಿದೆಯೆಂದೂ ಹೇಳುವುದು ಕಷ್ಟ. Monier Williams ಪಂಡಿತನು ತನ್ನ Sanskrit—English Dictionaryಯಲ್ಲಿ **ಸಮ್+ಉಭ್** (ಉಭ್ನಾತಿ) to cover up, confined ಎಂದು ವಿವರಿಸಿ **ಉಭ್**ಧಾತುವಿನಿಂದ ನಿಷ್ಪನ್ನವಾಗಿದೆಯೆಂದು ತಿಳಿಸಿದ್ದಾನೆ. ಈ ಸಹಾಯದಿಂದ **ಸಂಕುಚಿತವಾದ** ಎಂಬ ಸಾಯಣರ ಪದಕ್ಕೆ

ಭೃತ್ಯರು ಬಂಧಿಸಿದುದರಿಂದ ಸಂಕುಚಿತವಾಗಿ ಮಾಡಲ್ಪಟ್ಟ ದೇಹವುಳ್ಳ ಎಂದರ್ಥವಾಗುತ್ತದೆ. ಆದರೆ Wilson ಎಂಬ ಪಂಡಿತನು ಈ ಪದಕ್ಕೆ decrepit ಎಂದು ಅರ್ಥಮಾಡಿದ್ದಾನೆ. ಆಗ ವಾರ್ಧಕ್ಯದಿಂದ ದೇಹವು ಗಳಿತವಾಗಿ ಸಂಕುಚಿತವಾಗಿದೆಯೆಂದು ತಿಳಿಯಬೇಕಾಗುತ್ತದೆ. **ಸುಸಮುಬ್ಧಂ** ಪದಕ್ಕೆ well-bound, feltered (ಪಾಶಗಳಿಂದ ಬಂಧಿತವಾದ) ಎಂದೇ ಅರ್ಥವೆಂದು Monier Williamsನು ಸ್ಪಷ್ಟವಾಗಿ ತಿಳಿಸಿದ್ದಾನೆ. ಋಕ್ಸಂಹಿತೆಯಲ್ಲಿ ಈ ಋಕ್ಕಿನಲ್ಲಲ್ಲದೇ ಇನ್ನೆರಡುಕಡೆಗಳಲ್ಲಿ ಈ ಪದದ ಪ್ರಯೋಗವಿದೆ. ಒಂದೆಡೆಯಲ್ಲಿ ಕೇವಲ ಉಬ್ಧಂ ಎಂದೂ ಇನ್ನೊಂದೆಡೆಯಲ್ಲಿ **ಸಮುಬ್ಧಂ** ಎಂದೂ ಪ್ರಯೋಗಿಸಿದೆ.

**ತೇ ಗವ್ಯತಾ ಮನಸಾ ದೃಧ್ರಮುಬ್ಧಂ ಗಾ ಯೇಮಾನಂ ಪರಿ ಷಂತಮದ್ರಿಂ ।**
**ದೃಳ್ಹಂ ನರೋ ವಚಸಾ ದೈವ್ಯೇನ ವ್ರಜಂ ಗೋಮಂತಮುಶಿಜೋ ವಿ ವವ್ರುಃ ॥**

( ಋ. ಸಂ. ೪-೧-೧೫ )

ಎಂಬ ಋಕ್ಕಿನಲ್ಲಿ **ಉಬ್ಧಂ** ಎಂಬ ಪದಕ್ಕೆ **ಸಮುಬ್ಧಂ ಸಂಹಿತಂ** ಶೇಖರಿತವಾದ, ಒಟ್ಟಿಗೆ ಸೇರಿಸಲ್ಪಟ್ಟ ಎಂದು ಒಂದರ್ಥವನ್ನು ತಿಳಿಸಿ (ಇಲ್ಲಿಯೂ ಸಂಕೋಚಾರ್ಥವೇ ಆಗುತ್ತದೆ) ಅನಂತರ **ಯದ್ವಾ ಉಭಿಃ ಪೂರಣಾರ್ಥಃ ಗೋಭಿಃ ಪೂರ್ಣಂ ।** ಪೂರಣಾರ್ಥಕವಾದ **ಉಭ್**ಧಾತುದಿನಿಂದ ನಿಷ್ಪನ್ನವಾಗಿ (ಗೋವುಗಳಿಂದ) ತುಂಬಿದ ಎಂದೂ ಸಹ ಅರ್ಥವಾಗಬಹುದೆಂದು ಹೇಳಿದ್ದಾರೆ. ಮತ್ತು,

**ಕುಮಾರಂ ಮಾತಾ ಯುವತಿಃ ಸಮುಬ್ಧಂ ಗುಹಾ ಬಿಭರ್ತಿ ನ ದದಾತಿ ಪಿತ್ರೇ ।**
**ಅನೀಕಮಸ್ಯ ನ ಮಿನಜ್ಜನಾಸಃ ಪುರಃ ಪಶ್ಯಂತಿ ನಿಹಿತಮರತೌ ॥**

( ಋ. ಸಂ. ೫-೨-೧ )

ಎಂಬಲ್ಲಿಯೂ **ಸಮುಬ್ಧಂ** ಎಂಬ ಪದಕ್ಕೆ ಮೊದಲು **ಚಕ್ರೇಣ ಹತಂ** ಎಂದೂ ಎರಡನೆಯ ಸಲ **ನಿಗೂಢಂ** ಎಂದೂ ಅರ್ಥಮಾಡಿದ್ದಾರೆ. ಆದುದರಿಂದ ಸಾಯಣರೂ ನಿಷ್ಕೃಷ್ಟವಾದ ಅರ್ಥವನ್ನು ಹೇಳಿಲ್ಲ. ಪ್ರಕೃತವಾದ ಋಕ್ಕಿನಲ್ಲಿ ದೇಹದ ಸಂಕೋಚವು ತಾತ್ಪರ್ಯ. ಅದು ವಾರ್ಧಕ್ಯದಿಂದಾದರೂ ಆಗಿರಬಹುದು ಅಥವಾ ಬಂಧನದಿಂದಾದರೂ ಆಗಿರಬಹುದು.

**ನದ್ಯಃ—ನದ್ಯಃ ಕಸ್ಮಾನ್ನದನಾ ಇಮಾ ಭವಂತಿ ಶಬ್ದವತ್ಯಃ ।**

( ನಿ ೨-೨೪ )

ಶಬ್ದಮಾಡು ಎಂಬರ್ಥವನ್ನು ಕೊಡುವ **ನದ್** ಧಾತುವಿನಿಂದ ನಿಷ್ಪನ್ನವಾಗಿದೆ. ಈ ನದಿಗಳಿಗೆ **ಮಾತೃತಮಾಃ** ಎಂಬ ವಿಶೇಷಣವಿದೆ. ಮಾತೃವಿನಂತೆ ಅತ್ಯಂತ ಹಿತಕಾರಿಗಳಾಗಿರುವುವು ಎಂದರ್ಥಮಾಡಿದೆ. ನದಿಗಳು ಸಸ್ಯಾದಿರೂಪವಾದ ಅನ್ನಕ್ಕೆ ಆಸರೆಯಾಗಿ ಜಗತ್ತಿನ ಜೀವನಕ್ಕೆ ಆಧಾರವಾಗಿರುವುದೇ ಅಲ್ಲದೇ ಜಗತ್ತಿಗೆಲ್ಲಾ ಮಾತೃವಿನಂತೆ ತನ್ನ ಅಲೌಕಿಕವಾದ ಪ್ರೇಮವನ್ನೂ ಬೇರೆ ಉಪಕಾರವನ್ನು ಮಾಡುತ್ತದೆ. ಈ ಸಂದರ್ಭದಲ್ಲಿ ನಿರುಕ್ತಕಾರರು ನದಿಯ ಮಾತೃಪ್ರೇಮವನ್ನು ತೋರಿಸಲು ಒಂದು ಕಥೆಯನ್ನುದಹರಿಸಿದ್ದಾರೆ.

**ವಿಶ್ವಾಮಿತ್ರ ಋಷಿಃ ಸುದಾಸಃ ಪೈಜವನಸ್ಯ ಪುರೋಹಿತೋ ಬಭೂವ । ಸ ವಿತ್ತಂ ಗೃಹೀತ್ವಾ ವಿಪಾಟ್ಛುತುದ್ರ್ಯೋಃ ಸಂಭೇದಮಾಯಯೌ । ಅನುಯಯುರಿತರೇ । ಸ ವಿಶ್ವಾಮಿತ್ರೋ**

**ನದೀಸ್ತುಷ್ಟುವ ' ಗಾಥಾ ಭವತಿ ' ಇತಿ ।**

(ನಿ. ೨-೨೪)

**ವಿಶ್ವಾಮಿತ್ರ** ಋಷಿಯು ಪಿಜವನ ಪುತ್ರನಾದ **ಸುದಾಸೆಂಬ** ರಾಜನಿಗೆ ಪುರೋಹಿತನಾಗಿದ್ದನು. ಒಂದು ಸಲ ಯಜ್ಞಾರ್ಥವಾಗಿ ಧನಗಳನ್ನು ಸಂಗ್ರಹಿಸಿ **ವಿಪಾಟ್** ಮತ್ತು **ಶತದ್ರೀ** ನದಿಗಳ ಸಂಗಮಸ್ಥಾನಕ್ಕೆ ಬಂದು ಕೆಳಗೆ ಉದಹರಿಸಿರುವ ಋಕ್ಕಿನಿಂದ ಸ್ತುತಿಸಿ ತಮಗೆ ದಾಟುವ ಸೌಕರ್ಯವನ್ನು ಕಲ್ಪಿಸಿಕೊಡಬೇಕೆಂದು ಪ್ರಾರ್ಥಿಸಿದನು.

**ರಮಧ್ವಂ ಮೇ ವಚಸೇ ಸೋಮ್ಯಾಯ ಋತಾವರೀರುಪ ಮುಹೂರ್ತಮೇವೈಃ ।**
**ಪ್ರ ಸಿಂಧುಮಚ್ಛಾ ಬೃಹತೀ ಮನೀಷಾವಸ್ಯುರಹ್ವೇ ಕುಶಿಕಸ್ಯ ಸೂನುಃ ॥**

( ಋ. ಸಂ. ೩-೩೩-೫ )

ಕುಶಿಕಪುತ್ರನಾದ ನಾನು ಅತ್ಯುತ್ತಮವಾದ ಸ್ತುತಿಯಿಂದ ಪ್ರಾರ್ಥಿಸಿಕೊಳ್ಳುತ್ತೇನೆ. ಕ್ಷಣಮಾತ್ರ ನಿಮ್ಮ ಪ್ರವಾಹ ವನ್ನು ನಿಲ್ಲಿಸಿ ನಮ್ಮ ಸಂಚಾರಕ್ಕೆ ಅನುಕೂಲವನ್ನು ಕಲ್ಪಿಸಿಕೊಡಿ ಎಂದು ಪಾರ್ಥಿಸಿದಾಗ ನದಿಗಳು,

**ಇಂದ್ರೋ ಅಸ್ಮಾँ ಅರದದ್ವಜ್ರಬಾಹುರಪಾಹನ್ವೃತ್ರಂ ಪರಿಧಿಂ ನದೀನಾಂ ।**
**ದೇವೋಽನಯತ್ಸವಿತಾ ಸುಪಾಣಿಸ್ತಸ್ಯ ವಯಂ ಪ್ರಸವೇ ಯಾಮ ಉರ್ವೀಃ ॥**

(ಋ. ಸಂ. ೩-೩೩-೬)

ವಜ್ರಬಾಹುವಾದ ಇಂದ್ರನು ನಮ್ಮ ಪ್ರವಾಹಮಾರ್ಗವನ್ನುಂಟುಮಾಡಿದನು. ಸುಂದರಹಸ್ತನಾದ ಸವಿತೃವು ನಮ್ಮನ್ನು ಇಲ್ಲಿಗೆ ಕರೆತಂದನು. ಅವನ ಪ್ರೇರಣೆಯಿಂದ ನಾವು ಪ್ರವಹಿಸುತ್ತಿದ್ದೇವೆ, ಆದರೂ ಸಹ

**ಆ ತೇ ಕಾರೋ ಶೃಣವಾಮಾ ವಚಾಂಸಿ ಯಯಾಥ ದೂರಾದನಸಾ ರಥೇನ ।**
**ನಿ ತೇ ನಂಸೈ ಪೀಪ್ಯಾನೇವ ಯೋಷಾ ಮರ್ಯಾಯೇವ ಕನ್ಯಾ ಶಶ್ವಚೈ ತೇ ।**

(ಋ. ಸಂ. ೩-೩೩-೧೦)

ನಾವು ನಿಮ್ಮ ಪ್ರಾರ್ಥನೆಯನ್ನಂಗೀಕರಿಸಿದ್ದೇವೆ. ಮಾತೆಯು ಮಗುವು ಸ್ತನ್ಯಪಾನಮಾಡಲೆಂದು ಪ್ರೇಮದಿಂದ ಬಗ್ಗುವಂತೆಯೂ, ಯುವತಿಯು ತನ್ನ ಪ್ರಿಯನ ಆಲಿಂಗನಕ್ಕಾಗಿ ಬಗ್ಗುವಂತೆಯೂ ಸಹ ಬಗ್ಗಿ ನಿಮಗೆ ದಾರಿಯನ್ನು ಮಾಡಿಕೊಡುತ್ತೇವೆಂದು ನದಿಗಳು ತಮ್ಮ ಮಾತೃಪ್ರೇಮವನ್ನು ತೋರಿಸುವ ಕಥೆಯನ್ನು ನಿರುಕ್ತಕಾರರು ಉದಹರಿಸಿದ್ದಾರೆ. ಇದೇ ಅಂಶವನ್ನು,

**ಸೂಕ್ತೇ ಪ್ರೇತಿ ತು ನದ್ಯಕ್ಷ ವಿಶ್ವಾಮಿತ್ರಃ ಸಮೂದಿರೇ ॥**
**ಪುರೋಹಿತಃ ಸನ್ನಿ ಜ್ಯಾರ್ಥಂ ಸುದಾಃಸಾ ಸಹ ಯನ್ನೃಷಿಃ ।**
**ವಿಪಾಟ್ಛುತುದ್ರ್ಯೋಃ ಸಂಭೇದಂ ಶಮಿತ್ಯೇತೇ ಉವಾಚ ಹ ॥**

(ಬೃ. ದೇ. ೪-೧೦೫-೬)

ಎಂಬ ವಾಕ್ಯಗಳಲ್ಲಿ ಬೃಹದ್ದೇವತಾಕಾರರೂ ಸಹ ವಿಶ್ವಾಮಿತ್ರನು ನದಿಗಳನ್ನು ಸ್ತುತಿಸಿ ಅವುಗಳ ಮಾತೃಪ್ರೇಮವನ್ನು ಸಂಪಾದಿಸಿದ ಸನ್ನಿವೇಶವನ್ನು ಸೂಚಿಸಿದೆ. ಇದಲ್ಲದೇ ನದಿಗಳ ಉಪಕಾರವನ್ನು ಮಾತೃಗಳ ಪ್ರೇಮಪೂರಿತವಾದ ಉಪಕಾರಕ್ಕೆ ಹೋಲಿಸಿರುವುದನ್ನು ಋಕ್ಸಂಹಿತೆಯಲ್ಲಿ ನೋಡಬಹುದು.

**ಅಭಿ ತ್ವಾ ಸಿಂಧೋ ಶಿಶುಮಿನ್ನ ಮಾತರೋ ವಾಶ್ರಾ ಅರ್ಷಂತಿ ಪಯಸೇವ ಧೇನವಃ ।**
**ರಾಜೇವ ಯುಧ್ವಾ ನಯಸಿ ತ್ವಮಿತ್ಸಿಚೌ ಯದಾಸಾಮಗ್ರಂ ಪ್ರವತಾಮಿನಕ್ಷಸಿ ॥**

(ಋ- ಸಂ. ೧೦-೭೫-೪)

ಎಂಬಲ್ಲಿ ಮಾತೃವಾದ ಧೇನುವು ಹಾಲನ್ನು ಕೊಡಲು ತನ್ನ ಕರುವಿನಲ್ಲಿಗೆ ಶಬ್ದಮಾಡಿಕೊಂಡು ಓಡಿಹೋಗುವಂತೆ ನದಿಯು ಶಬ್ದಮಾಡಿಕೊಂಡು ಪ್ರಜೆಗಳಿಗೆ ಉಪಕಾರಮಾಡಲು ಪ್ರವಾಹರೂಪದಲ್ಲಿ ಮುನ್ನುಗ್ಗುತ್ತಿದೆಯೆಂದು ವರ್ಣಿಸಿದೆ. ಮತ್ತು,

**ಓಮಾನಮಾಪೋ ಮಾನುಷೀರಮೃಕ್ತಂ ಧಾತ ತೋಕಾಯ ತನಯಾಯ ಶಂ ಯೋಃ ।**
**ಯೂಯಂ ಹಿ ಷ್ಠಾ ಭಿಷಜೋ ಮಾತೃತಮಾ ವಿಶ್ವಸ್ಯ ಸ್ಥಾತುರ್ಜಗತೋ ಜನಿತ್ರೀಃ ॥**

(ಋ. ಸಂ. ೬-೫೦-೭)

ಎಂಬಲ್ಲಿ ಚರಾಚರಾತ್ಮಕವಾದ ಸಮಸ್ತಲೋಕಕ್ಕೂ ಸಹ ಮಾತೃಗಳಿಗಿಂತಲೂ ಅಧಿಕವಾದ ಉಪಕಾರಗಳಾಗಿವೆ ಯೆಂದು ವರ್ಣಿಸಿದೆ.

**ಅಂಬಿತಮೇ ನದೀತಮೇ ದೇವಿತಮೇ ಸರಸ್ವತಿ ।**
**ಅಪ್ರಶಸ್ತಾ ಇವ ಸ್ಮಸಿ ಪ್ರಶಸ್ತಿಮಂಬ ನಸ್ಕೃಧಿ ॥**

(ಋ. ಸಂ. ೨-೪೧-೧೬)

ಎಂಬ ಋಕ್ಕಿನಲ್ಲಿ ನದಿಗಳಲ್ಲೆಲ್ಲಾ ಶ್ರೇಷ್ಠಳಾದ **ಸರಸ್ವತಿಯು** ಮಾತೃಗಳಲ್ಲೆಲ್ಲಾ ಶ್ರೇಷ್ಠಳೆಂದು ಸ್ತುತಿಸಿದೆ.

ಈ ವಿಧವಾಗಿ ನದಿಗಳ ಪ್ರೇಮಪೂರಿತವಾದ ಉಪಕಾರಗಳನ್ನು ಅನೇಕ ಕಡೆಗಳಲ್ಲಿ ವರ್ಣಿತವಾಗಿರುವಂತೆ ಪ್ರಕೃತವಾದ ಋಕ್ಕಿನಲ್ಲಿ ದೀರ್ಘತಮಸ್ಸೂ ಸಹ ಆ ಗುಣವನ್ನು ಪ್ರಶಂಸೆಮಾಡುತ್ತಾ ತನ್ನನ್ನು ಮುಳುಗುವಂತೆ ಮಾಡದೆ ರಕ್ಷಿಸಬೇಕಾಗಿ ಪ್ರಾರ್ಥಿಸುತ್ತಾನೆ.

**ಗರನ್**—ನುಂಗು ಎಂಬರ್ಥವನ್ನು ಕೊಡುವ **ಗೃ** ಧಾತುವಿನಿಂದ ನಿಷ್ಪನ್ನವಾಗಿ ಇಲ್ಲಿ ಮುಳುಗುವಂತೆ ಮಾಡು ಎಂಬರ್ಥವನ್ನು ಕೊಡುತ್ತದೆ. **ನ ಗರನ್** ನನ್ನನ್ನು ಮುಳುಗುವಂತೆ ಮಾಡಬೇಡ ಎಂದು ಪ್ರಾರ್ಥಿಸಿದೆ.

**ಯಥಾ ವಾ ಶೀರ್ಣೇ ಗರಮಭಿನಿದಧ್ಯಾದೇವಂ**

(ಶ. ಬ್ರಾ. ೧೧-೫-೮-೬)

ಇತ್ಯಾದಿ ವಾಕ್ಯಗಳಲ್ಲಿ **ಗರಶಬ್ದಕ್ಕೆ** ಮಾದಕದ್ರವ್ಯವೆಂದರ್ಥಮಾಡಿದೆ.

**ಗ್ಧ**—ಹಿಂಸಾರ್ಥಕವಾದ **ಹನ್** ಧಾತುವಿನಿಂದ ನಿಷ್ಪನ್ನವಾಗಿದೆ. **ಹತವಾನ್** ಹೊಡೆದುಕೊಂಡನು ಎಂದರ್ಥ.

ದೀರ್ಘತಮಸ್ಸನ್ನು ಕತ್ತಿಯಿಂದ ಹೊಡೆಯಲುಪಕ್ರಮಿಸಿದಾಗ ಅಶ್ವಿನೀದೇವತೆಗಳು ದೀರ್ಘತಮಸ್ಸನ್ನು ಅನುಗ್ರಹಿಸಿ ಆ ಏಟುಗಳು ದೀರ್ಘತಮಸ್ಸಿನ ದಾಸನಾದ ತ್ರೈತನನಿಗೇ ಕತ್ತಿನ ಮೇಲೂ ತೋಳುಗಳಮೇಲೂ ಬೀಳುವಂತೆ ಮಾಡಿದರು ಎಂಬುದನ್ನು ಋಷಿಯು ಕೃತಜ್ಞತಾಪೂರ್ವಕವಾಗಿ ಹೇಳಿಕೊಳ್ಳುತ್ತಾನೆ.

## ವ್ಯಾಕರಣಪ್ರಕ್ರಿಯಾ

**ಗರನ್**—ಗೃ ನಿಗರಣೇ ಧಾತು. ಲೇಟ್ ಪ್ರಥಮಪುರುಷಬಹುವಚನದಲ್ಲಿ ಝಿ ಪ್ರತ್ಯಯ. **ವ್ಯತ್ಯಯೋ ಬಹುಲಮ್** ಎಂಬುದರಿಂದ ಶಪ್ ವಿಕರಣ ಬರುತ್ತದೆ. **ಇತಶ್ಚ ಲೋಪಃ** (ಪಾ. ಸೂ ೩-೪-೯೭) ಎಂಬುದರಿಂದ ಪ್ರತ್ಯಯದ ಇಕಾರಕ್ಕೆ ಲೋಪ. **ಝೋಽಂತಃ** ಎಂಬುದರಿಂದ ಅಂತಾದೇಶ ಸಂಯೋಗಾಂತಲೋಪದಿಂದ ತಕಾರ ಲೋಪ. ಶಪ್ ನಿಮಿತ್ತವಾಗಿ ಧಾತುವಿನ ಇಕಿಗೆ ಗುಣ. ರಪರವಾಗಿ ಬರುತ್ತದೆ. ತಿಜಂತನಿಘಾತಸ್ವರ ಬರುತ್ತದೆ.

**ದಾಸಾಃ**— ದಸಿ ಸೇವನೇ ಧಾತು. **ದಂಸೇಷ್ಟಟನೌ ನ ಆ ಚ** (ಉ, ಸೂ. ೬೮೮) ಎಂಬುದರಿಂದ ಟ, ಟನ್ ಪ್ರತ್ಯಯ. ನಕಾರಕ್ಕೆ ಆಕಾರಾದೇಶ. **ಚುಟೂ** ಸೂತ್ರದಿಂದ ಆದಿ ಟಕಾರಕ್ಕೆ ಲೋಪ. ಪ್ರತ್ಯಯಸ್ವರದಿಂದ ಅಂತೋದಾತ್ತವಾಗುತ್ತದೆ,

**ಸುಸಮುಬ್ಧವ್**—ಉಬ್ಜ ಆರ್ಜವೇ. ಕರ್ಮಣಿಯಲ್ಲಿ ಕ್ತ ಪ್ರತ್ಯಯ. **ಸ್ವತೀ ಪೂಜಾಯಾಮ್** (ಪಾ. ಸೂ. ಮ. ೨-೨-೧೮-೪) ಎಂಬ ವಚನದಿಂದ ಸಮಾಸವಾದಾಗ **ತತ್ಪುರುಷೇ ತುಲ್ಯಾರ್ಥ**—(ಪಾ. ಸೂ. ೬-೨ ೨) ಎಂಬುದರಿಂದ ಅವ್ಯಯಪೂರ್ವಪದಪ್ರಕೃತಿಸ್ವರ ಬರುತ್ತದೆ.

**ಅವ ಅಧುಃ**— ಅವ ಉಪಸರ್ಗ. ಡುಧಾಞ್ ಧಾರಣಪೋಷಣಯೋಃ ಧಾತು. ಲುಙ್ ಪ್ರಥಮಪುರುಷ ಬಹುವಚನದಲ್ಲಿ ಝಿ ಪ್ರತ್ಯಯ. ಚ್ಲಿಗೆ ಸಿಚಾದೇಶ ಬಂದಾಗ **ಗಾತಿಸ್ಥಾಘು**—(ಪಾ. ಸೂ. ೨-೪-೭೭) ಎಂಬುದರಿಂದ ಅದಕ್ಕೆ ಲುಕ್. **ಆತಃ** (ಪಾ. ಸೂ. ೩-೪-೧೧೦) ಎಂಬುದರಿಂದ ಝಿಗೆ ಉಸಾದೇಶ. **ಉಸ್ಯಪದಾಂತಾತ್** (ಪಾ. ಸೂ. ೬-೧-೯೬) ಎಂಬುದರಿಂದ ಪರರೂಪ. ಯದ್ಯೋಗವಿರುವುದರಿಂದ ನಿಘಾತಸ್ವರ ಬರುವುದಿಲ್ಲ. ಅಡಾಗಮ ಉದಾತ್ತವಾದುದರಿಂದ ಆದ್ಯುದಾತ್ತವಾಗುತ್ತದೆ. **ತಿಙಿಚೋದಾತ್ತವತಿ** (ಪಾ. ಸೂ. ೮-೧-೭೧) ಎಂಬುದರಿಂದ ಗತಿಗೆ (ಅವ) ನಿಘಾತಸ್ವರ ಬರುತ್ತದೆ.

**ವಿತಕ್ಷತ್**—ವಿ ಉಪಸರ್ಗ. ತಕ್ಷೂ ತನೂಕರಣೇ ಧಾತು. ಲಙ್ ಪ್ರಥಮಪುರುಷಏಕವಚನಾಂತರೂಪ. **ಬಹುಲಂ ಛಂದಸ್ಯಮಾಙ್‌ಯೋಗೇಽಪಿ** (ಪಾ. ಸೂ. ೬-೪-೭೫) ಎಂಬುದರಿಂದ ಅಡಾಗಮ ಬರುವುದಿಲ್ಲ. ಹಿಂದಿನಂತೆ ಯದ್ಯೋಗವಿರುವುದರಿಂದ ನಿಘಾತಸ್ವರ ಬರುವುದಿಲ್ಲ ಶಪ್ ಅನುದಾತ್ತವಾದುದರಿಂದ ಧಾತುಸ್ವರ ಉಳಿಯುತ್ತದೆ. **ತಿಙಿಚೋದಾತ್ತವತಿ** ಸೂತ್ರದಿಂದ ಗತಿಗೆ ಅನುದಾತ್ತಸ್ವರ ಬರುತ್ತದೆ.

**ಅಂಸೌ**—ಅಮ ಗತ್ಯಾದಿಷು. **ಅಮೇಃಸನ್** (ಉ. ಸೂ. ೬೯೯) ಎಂಬುದರಿಂದ ಸನ್ ಪ್ರತ್ಯಯ. ಮಕಾರಕ್ಕೆ ಅನುಸ್ವಾರ. ನಿತ್ತಾದುದರಿಂದ ಆದ್ಯುದಾತ್ತಸ್ವರ ಬರುತ್ತದೆ.

**ಗ್ಧ**—ಹನ ಹಿಂಸಾಗತ್ಯೋಃ ಧಾತು. ಲುಙ್ ಪ್ರಥಮಪುರುಷಏಕವಚನಾಂತರೂಪ. ಛಾಂದಸವಾಗಿ ಕಾರ್ಯ ಬರುತ್ತದೆ. ನಿಘಾತಸ್ವರ ಬರುತ್ತದೆ. ॥ ೫ ॥

ಸಂಹಿತಾಪಾಠಃ

ದೀರ್ಘತಮಾ ಮಾಮತೇಯೋ ಜುಜುರ್ವಾನ್ದಶಮೇ ಯುಗೇ ।
ಅಪಾಮರ್ಥಂ ಯತೀನಾಂ ಬ್ರಹ್ಮಾ ಭವತಿ ಸಾರಥಿಃ ॥ ೬ ॥

ಪದಪಾಠಃ

ದೀರ್ಘऽತಮಾಃ । ಮಾಮತೇಯಃ । ಜುಜುರ್ವಾನ್ । ದಶಮೇ । ಯುಗೇ ।
ಅಪಾಂ । ಅರ್ಥಂ । ಯತೀನಾಂ । ಬ್ರಹ್ಮಾ । ಭವತಿ । ಸಾರಥಿಃ ॥ ೬ ॥

॥ ಸಾಯಣಭಾಷ್ಯಂ ॥

ದೀರ್ಘತಮಾ ಏತನ್ನಾಮಾ ಮಹರ್ಷಿಃ ಸ ಚ ಮಾಮತೇಯೋ ಮಾಮತಾಯಾಃ ಪುತ್ರೋ ದಶಮೇ ಯುಗೇ ದಶಯುಗಪರ್ಯಂತಂ ಮಹಾನುಭಾವಯೋರಶ್ವಿನೋಃ ಪ್ರಭಾವಾತ್ಪೂರ್ವೋಕ್ತಾದ್ದುಃಖಾದ್ವಿಮುಕ್ತೋऽತ್ಯಂತಸುಖೀ ಸ್ವಪುತ್ರಭಾರ್ಯಾದಿಭಿಃ ಸಹಿತೋ ಜೀವಿತವಾನ್ । ದಶಮೇ ಯುಗೇऽತೀತೇ ಸತಿ ಜುಜುರ್ವಾಞ್ಜೀರ್ಣೋ ವಲೀಪಲಿತಗಾತ್ರೋ ಬಭೂವ । ಏವಂಭೂತಃ ಸನ್ನರ್ಥಂ ಪುರುಷೈರರ್ಥ್ಯಮಾನಂ ಕರ್ಮಫಲಂ ಸ್ವರ್ಗಾದಿಕಂ ಯತೀನಾಂ ಪ್ರಾಪ್ನುವತೀನಾಮಪಾಮಪ್ಕಾರ್ಯಾಣಾಂ ಪ್ರಜಾನಾಂ । ಯದ್ವಾ । ಅಪಾಮಪಸಾಂ ಕರ್ಮಣಾಮರ್ಥಂ ಪ್ರಯೋಜನಂ ಯತೀನಾಂ ತಾಸಾಂ ಪ್ರಜಾನಾಂ । ಬ್ರಹ್ಮಾ ಬ್ರಹ್ಮಸದೃಶಃ ಪರಿವೃಢೋ ಭವತಿ । ಕಿಂಚ ಸಾರಥಿಃ ತದ್ವನ್ನಿರ್ವಾಹಕೋ ಭವತಿ । ದೇವೋ ಭವತೀತ್ಯರ್ಥಃ । ಏವಮಸ್ಯ ವೃತ್ತಾಂತಂ ಮಂತ್ರೋऽನುವದತಿ । ಸ್ವಯಂ ವಾ ಸ್ವಾತ್ಮಾನಂ ಪರೋಕ್ಷ್ಯೇಣಾಶ್ವಿನೋರ್ಮಹಾನುಭಾವತ್ವಂ ಪ್ರಕಟಯಿತುಂ ಬ್ರವೀತಿ ॥

ಪ್ರತಿಪದಾರ್ಥ

**ಮಾಮತೇಯಃ**— ಮಮತೆಯ ಪುತ್ರನಾದ । **ದೀರ್ಘತಮಾಃ**— ದೀರ್ಘತಮಸ್ಸೆಂಬ ಋಷಿಯು । **ದಶಮೇ ಯುಗೇ**—(ತನ್ನ ಜೀವನದಲ್ಲಿ) ಹತ್ತನೇ ಯುಗದಲ್ಲಿ । **ಜುಜುರ್ವಾನ್**—ವಾರ್ಧಕ್ಯದಿಂದ ಗಳಿತವಾದ ದೇಹವುಳ್ಳವನಾದನು । **ಅಪಾಂ**—ಯಾಗಾದಿ ಕರ್ಮಗಳಿಗೆ । **ಅರ್ಥಂ**—ಫಲರೂಪವಾದ ತಮ್ಮ ಇಷ್ಟಾರ್ಥಗಳನ್ನು ಸಂಪಾದಿಸಲು । **ಯತೀನಾಂ**—ಕರ್ಮಕರ್ತರಾದ ಪ್ರಜೆಗಳಿಗೆಲ್ಲಾ । **ಬ್ರಹ್ಮಾ**—ಬ್ರಹ್ಮರೂಪಿಯಾದನು (ಯಜ್ಞಕರ್ತರಿಗೆ ನೇತೃವಾದನು) । **ಸಾರಥಿಃ**—(ರಥವನ್ನು ಹೊಡೆಯಲು ಸಾರಥಿಯಿರುವಂತೆ) ಯಾಗಾದಿಗಳನ್ನು ನಿರ್ವಹಿಸಲು ಯೋಗ್ಯವಾದವನಾಗಿ । **ಭವತಿ**—ಆದನು ॥

ಭಾವಾರ್ಥ

ಮಮತೆಯ ಪುತ್ರನಾದ ದೀರ್ಘತಮಸ್ಸು ತನ್ನ ಜೀವನದಲ್ಲಿ ಅಶ್ವಿನೀದೇವತೆಗಳ ಅನುಗ್ರಹದಿಂದ ಹತ್ತು ಯುಗಗಳ ಪರ್ಯಂತ ಸುಖವಾದ ಜೀವನವನ್ನನುಭವಿಸಿ ಹತ್ತನೇ ಯುಗವು ಕಳೆಯಲು ವಾರ್ಧಕ್ಯದಿಂದ ಶಿಥಿಲಿತವಾದ

ದೇಹವುಳ್ಳವನಾದನು ಇವನ ಉತ್ತಮವಾದ ಜೀವನದಿಂದ ಫಲವನ್ನಪೇಕ್ಷಿಸಿ ಯಜ್ಞಯಾಗಾದಿಗಳನ್ನು ನೆರವೇರಿಸುವ ಪ್ರಜೆಗಳಿಗೆಲ್ಲಾ ಅವರ ಇಷ್ಟಾರ್ಥವು ನೆರವೇರುವ ರೀತಿಯಲ್ಲಿ ಕರ್ಮವನ್ನು ಮಾಡಲು ಸಹಾಯಕನಾದ ಬ್ರಹ್ಮಪದವಿಯನ್ನು ಪಡೆದನು. ರಥವನ್ನು ಹೊಡೆಯಲು ಸಾರಥಿಯಿರುವಂತೆ ಯಾಗಾದಿಗಳನ್ನು ನಿರ್ವಹಿಸಲು ಶಕ್ತನಾದವನಾಗಿ ಆದನು.

## English Translation

Dirghatamas, the son of Mamata, has grown old after the tenth yuga (has passed): he is the Brahma of those who seek to obtain the object of their (pious) works: he is their charioteer.

### ವಿಶೇಷವಿಷಯಗಳು

ಸಾಧಾರಣವಾದ ಜೀವನವನ್ನೇ ನಡೆಸಲು ಅಶಕ್ತನಾದ ದೀರ್ಘತಮಸ್ಸು ಅಶ್ವಿನೀದೇವತೆಗಳ ಸಹಾಯದಿಂದ ತನಗೆ ಒದಗಿದ ಸಕಲವಿಧವಾದ ಆಪತ್ತುಗಳನ್ನೂ ಪರಿಹರಿಸಿಕೊಂಡು ಪುತ್ರಪೌತ್ರಾದಿಸಂಪತ್ತುಗಳಿಂದ ಕೂಡಿದುದೂ ಸುಖಮಯವಾದುದೂ ಆದ ಜೀವನವನ್ನು ಬಹುದೀರ್ಘಕಾಲ ಅನುಭವಿಸಿದುದೆ ಅಲ್ಲದೇ, ಪವಿತ್ರವಾದುದೂ ಶ್ರದ್ಧಾಭಕ್ತಿಗಳಿಂದ ಕೂಡಿದ ಕರ್ಮಾನುಷ್ಠಾನವನ್ನು ನೆರವೇರಿಸಿದುದೂ ಆದ ತನ್ನ ಶ್ರೇಷ್ಠವಾದ ಜೀವನದಿಂದ ಯಜ್ಞಕರ್ತರೆಲ್ಲರಿಗೂ ನೇತೃವಾದ **ಬ್ರಹ್ಮನ** ಸ್ಥಾನವನ್ನು ಪಡೆದನು ಎಂದು ಅವನ ಯೋಗ್ಯತೆಯನ್ನು ತಿಳಿಸಿದೆ.

**ಬ್ರಹ್ಮಾ—ಬ್ರಹ್ಮಸದೃಶಃ ಪರಿವೃಢೋ ಭವತಿ ।** ಬ್ರಹ್ಮನಿಗೆ ಸಮಾನವಾದ ಶಕ್ತಿಯುಳ್ಳವನಾದನು. ಈ ಶಕ್ತಿಯು ಯಾವುದೆಂಬುದನ್ನು ನಿರುಕ್ತಕಾರರು,

**ಋಚಾಂ ತ್ವಃ ಪೋಷಮಾಸ್ತೇ ಪುಪುಷ್ವಾನ್ ಗಾಯತ್ರಂ ತ್ವೋ ಗಾಯತಿ ಶಕ್ವರೀಷು ।**
**ಬ್ರಹ್ಮಾ ತ್ವೋ ವದತಿ ಜಾತವಿದ್ಯಾಂ ಯಜ್ಞಸ್ಯ ಮಾತ್ರಾಂ ವಿ ಮಿಮೀತ ಉ ತ್ವಃ ॥**
(ಋ. ಸಂ. ೧೦-೭೧-೧೧)

ಎಂಬ ಋಕ್ಕನ್ನುದಹರಿಸಿ **ಬ್ರಹ್ಮ**ಪದವಿಯ ಸ್ವರೂಪವನ್ನು ವಿವರಿಸಿದ್ದಾರೆ.

ಬ್ರಹ್ಮೈಕೋ ಜಾತೇ ಜಾತೇ ವಿದ್ಯಾಂ ವದತಿ । **ಬ್ರಹ್ಮಾ ಸರ್ವವಿದ್ಯಃ ಸರ್ವಂ ವೇದಿತುಮರ್ಹತಿ ।**
ಬ್ರಹ್ಮಾ ಪರಿವೃಢಃ ಶ್ರುತತೋ ಬ್ರಹ್ಮ ಪರಿವೃಢಂ **ಸರ್ವತಃ ॥**
( ನಿ. ೧-೮ )

**ಬ್ರಹ್ಮನು** (ಜ್ಞಾನಿಯಾದುದರಿಂದ) ಸಕಲ ವಸ್ತುಗಳ ತತ್ತ್ವಗಳನ್ನೂ ಪ್ರತಿಪಾದಿಸುತ್ತಾನೆ. ಸಕಲವನ್ನೂ ತಿಳಿದವನು. ತತ್ತ್ವಜ್ಞನಾದುದರಿಂದಲೇ ಸಕಲರಿಗಿಂತಲೂ ಅತ್ಯುತ್ತಮನಾಗಿದ್ದಾನೆ ಎಂದು ನಿರುಕ್ತಕಾರರು **ಬ್ರಹ್ಮನ** ಶ್ರೇಷ್ಠವಾದ ಯೋಗ್ಯತೆಯನ್ನು ತಿಳಿಸಿದ್ದಾರೆ. ಅಂತಹ ಪದವಿಯನ್ನು ದೀರ್ಘತಮಸ್ಸು ಪಡೆದನು ಎಂದು ಹೇಳಿದೆ.

### ವ್ಯಾಕರಣಪ್ರಕ್ರಿಯಾ

**ಮಾಮತೇಯಃ—** ಮಮತಾಯಾಃ (ಪುತ್ರಃ) ಅಪತ್ಯಂ ಪುಮಾನ್. **ಸ್ತ್ರೀಭ್ಯೋಢಕ್** (ಪಾ. ಸೂ. ೪-೧-೧೨೦) ಎಂಬುದರಿಂದ ಢಕ್ ಪ್ರತ್ಯಯ. **ಆಯನೇಯೀನೀ—**(ಪಾ. ಸೂ ೭-೧-೨) ಎಂಬುದರಿಂದ ಏಯಾದೇಶ.

ಕಿತಿಚ (ಪಾ. ಸೂ. ೭-೨-೧೧೮) ಎಂಬುದರಿಂದ ಆದಿವೃದ್ಧಿ. **ಯಸ್ಯೇತಿ ಚ** (ಪಾ. ಸೂ. ೬-೪-೧೪೮) ಎಂಬುದರಿಂದ ಅಕಾರಲೋಪ.

**ಜುಜುರ್ವಾನ್**—ಜ್ಯಾಷ್ ವಯೋಹಾನೌ. ಧಾತು. ಲಿಟ್ ಬಂದಾಗ ಅದಕ್ಕೆ ಕ್ವಸುಶ್ಚ. (ಪಾ. ಸೂ. ೩-೨-೧೦೭) ಎಂಬುದರಿಂದ ಕ್ವಸುಂರಾದೇಶ. **ಬಹುಲಂ ಛಂದಸಿ** ಎಂಬುದರಿಂದ ಧಾತುವಿಗೆ ಉತ್ವ. ರ ಪರವಾಗಿ ಬರುತ್ತದೆ. ಪ್ರತ್ಯಯನಿಮಿತ್ತವಾಗಿ ಧಾತುವಿಗೆ ದ್ವಿತ್ವ. ಪ್ರಥಮಾಏಕವಚನಾಂತರೂಪ ಪ್ರತ್ಯಯದ ಆದ್ಯುದಾತ್ತ ಸ್ವರ ಬರುತ್ತದೆ.

**ದಶಮೇ**—ಪೂರಣಾರ್ಥತೋರುವಾಗ **ನಾಂತಾದಸಂಖ್ಯಾದೇರ್ಮಟ್** (ಪಾ. ಸೂ. ೫-೨-೪೯) ಎಂಬುದರಿಂದ ಡಟಿಗೆ ಮಟಾಗಮ. ಪ್ರತ್ಯಯಸ್ವರದಿಂದ ಅಂತೋದಾತ್ತವಾಗುತ್ತದೆ.

**ಅಪಾಮ್**—**ಊಡಿದಂ ಪದಾದಿ**—(ಪಾ. ಸೂ. ೬-೧-೧೭೧) ಎಂಬುದರಿಂದ ವಿಭಕ್ತಿಗೆ ಉದಾತ್ತಸ್ವರ ಬರುತ್ತದೆ.

**ಯತೀನಾಮ್**—ಇಣ್ ಗತೌ ಧಾತು. ಲಟಿಗೆ ಶತ್ರಾದೇಶ. ಇಣೋ ಯಣ್ (ಪಾ. ಸೂ. ೬-೧-೮೧ ಎಂಬುದರಿಂದ ಧಾತುವಿಗೆ ಯಣಾದೇಶ. ಸ್ತ್ರೀತ್ವದಲ್ಲಿ **ಉಗಿತಶ್ಚ** (ಪಾ ಸೂ. ೪-೧-೬) ಎಂಬುದರಿಂದ ಙೀಪ್. **ಶತುರನುಮೋ ನದ್ಯಜಾದೀ** (ಪಾ. ಸೂ. ೬-೧-೧೭೩) ಎಂಬುದರಿಂದ ನುಮ್‌ರಹಿತತವಾದ ಶತೃವಿನ ಪರದಲ್ಲಿ ಙೀಪ್ ಬಂದುದರಿಂದ ಅದಕ್ಕೆ ಉದಾತ್ತಸ್ವರ ಬರುತ್ತದೆ. ॥ ೬ ॥

ಇಲ್ಲಿಗೆ ೧೫೮ನೇ ಸೂಕ್ತವು ಮುಗಿದುದು.

———:೦:———

## ನೂರ ಐವತ್ತೊಂಭನೆತ್ತಯ ಸೂಕ್ತವು

**ಪ್ರ ದ್ಯಾವೇತಿ ಪಂಚರ್ಚಂ ತೃತೀಯಂ ಸೂಕ್ತಂ ದೈರ್ಘತಮಸಂ ಜಾಗತಂ ದ್ಯಾವಾಪೃಥಿವ್ಯಂ । ಅನುಕ್ರಾಂತಂ ಚ। ಪ್ರ ದ್ಯಾವಾ ಪಂಚ ದ್ಯಾವಾಪೃಥಿವ್ಯಂ ತು ಜಾಗತಂ ತ್ವಿತಿ ॥ ಅಗ್ನಿಷ್ಟೋಮೇ ಪೃಷ್ಠ್ಯಸ್ಯ ಷಷ್ಠೇಽಹನಿ ಚ ದ್ಯಾವಾಪೃಥಿವ್ಯನಿವಿದ್ಧಾನಮೇತತ್ಸೂಕ್ತಂ । ತಥಾ ಚ ಸೂತ್ರಂ ! ಪ್ರ ದ್ಯಾವೇತಿ ದೈರ್ಘತತಮಸಂ । ಆ. ೫-೧೮ । ಇತಿ ॥ ಆದ್ಯಾ ದ್ಯಾವಾಪೃಥಿವ್ಯೇ ಪಶೌ ಹವಿಷೋ ಯಾಜ್ಯಾ । ತಥಾ ಚ ಸೂತ್ರಿತಂ । ಪ್ರ ದ್ಯಾವಾ ಯಜ್ಞೈಃ ಪೃಥಿವೀ ಋತಾವೃಧಾ ಮೃಳಾ ನೋ ರುದ್ರೋತ ನೋ ಮಯಸ್ಕೃಧೀತಿ ದ್ವೇ । ಆ. ೩-೮ । ಇತಿ ॥**

ಅನುವಾದವು—**ಪ್ರ ದ್ಯಾವಾ** ಎಂಬ ಈ ಸೂಕ್ತವು ಇಪ್ಪತ್ತೆರಡನೆಯ ಅನುವಾಕದಲ್ಲಿ ಮೂರನೆಯ ಸೂಕ್ತವು. ಇದರಲ್ಲಿ ಐದು ಋಕ್ಕುಗಳಿರುವುವು ಈ ಸೂಕ್ತಕ್ಕೆ ಉಚಥ್ಯಪುತ್ರನಾದ ದೀರ್ಘತಮಸ್ ಎಂಬುವನು ಋಷಿಯು. ದ್ಯಾವಾಪೃಥಿವಿಗಳು ದೇವತೆಯು. ಜಗತೀ ಛಂದಸ್ಸು. ಅನುಕ್ರಮಣಿಕೆಯಲ್ಲಿ—**ಪ್ರ ದ್ಯಾವಾ ಪಂಚ ದ್ಯಾವಾ-**

**ಪೃಥಿವ್ಯಂ ತು ಜಾಗತಂ ತು** ಎಂದು ಹೇಳಿರುವುದು. ಪೃಷ್ಠ್ಯವೆಂಬ ಅಗ್ನಿಷ್ಟೋಮಯಾಗವಿಶೇಷದಲ್ಲಿ ಆರನೆಯ ದಿವಸ ದ್ಯಾವಾಪೃಥಿವೀಸಂಬಂಧವಾದ ನಿವಿದ್ಧಾನಮಂತ್ರಪಠನೆಗಾಗಿ ಈ ಸೂಕ್ತದ ವಿನಿಯೋಗವಿರುವುದೆಂದು ಆಶ್ವಲಾಯನಶ್ರೌತಸೂತ್ರದ **ಪ್ರ ದ್ಯಾವೇತಿ ದೈರ್ಘತಮಸಂ** ಎಂಬ ಸೂತ್ರದಿಂದ ವಿವೃತವಾಗಿರುವುದು. (ಆ. ೫-೧೮) ಮತ್ತು ಪಶುಯಾಗದಲ್ಲಿ ದ್ಯಾವಾಪೃಥಿವೀದೇವತೆಗಳನ್ನು ಉದ್ದೇಶಿಸಿ ಮಾಡುವ ಹವಿರ್ಹೋಮದಲ್ಲಿ ಈ ಸೂಕ್ತದ ಮೊದಲನೆಯ ಋಕ್ಕನ್ನು ಯಾಜ್ಯಾಮಂತ್ರವನ್ನಾಗಿ ಉಪಯೋಗಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ— **ಪ್ರ ದ್ಯಾವಾ ಯಜ್ಞೈಃ ಪೃಥಿವೀ ಋತಾವೃಧಾ ಮೃಳಾ ನೋ ರುದ್ರೋತ ನೋ ಮಯಸ್ಕೃಧೀತಿ ದ್ವೇ** ಎಂಬ ಸೂತ್ರದಿಂದ ನಿರ್ದಿಷ್ಟವಾಗಿರುವುದು. (ಆ. ೩-೮).

---

॥ ಓಂ ॥

## ಸೂಕ್ತ—೧೫೯

॥ ಮಂಡಲ—೧ ॥ ಅನುವಾಕ—೨೨ ॥ ಸೂಕ್ತ— ೧೫೯ ॥

॥ ಅಷ್ಟಕ—೨ ॥ ಅಧ್ಯಾಯ—೩ ॥ ವರ್ಗ—೨ ॥

॥ ಸೂಕ್ತದಲ್ಲಿರುವ ಋಕ್ಸಂಖ್ಯೆ—೫ ॥

॥ ಋಷಿಃ—ದೀರ್ಘತಮಾ ಔಚಥ್ಯಃ ॥

॥ ದೇವತಾ—ದ್ಯಾವಾಪೃಥಿವ್ಯೌ ॥

॥ ಛಂದಃ—ಜಗತೀ ॥

---

ಸಂಹಿತಾಪಾಠಃ

ಪ್ರ ದ್ಯಾವಾ ಯಜ್ಞೈಃ ಪೃಥಿವೀ ಋತಾವೃಧಾ ಮಹೀ ಸ್ತುಷೇ ವಿದಥೇಷು ಪ್ರಚೇತಸಾ ।
ದೇವೇಭಿರ್ಯೇ ದೇವಪುತ್ರೇ ಸುದಂಸಸೇತ್ಥಾ ಧಿಯಾ ವಾರ್ಯಾಣಿ ಪ್ರಭೂಷತಃ ॥ ೧ ॥

ಪದಪಾಠಃ

ಪ್ರ । ದ್ಯಾವಾ । ಯಜ್ಞೈಃ । ಪೃಥಿವೀ ಇತಿ । ಋತ್ಽವೃಧಾ । ಮಹೀ ಇತಿ । ಸ್ತುಷೇ । ವಿದಥೇಷು ।

ಪ್ರಽಚೇತಸಾ ।

ದೇವೇಭಿಃ । ಯೇ ಇತಿ । ದೇವಪುತ್ರೇ ಇತಿ ದೇವಽಪುತ್ರೇ । ಸುಽದಂಸಸಾ । ಇತ್ಥಾ । ಧಿಯಾ ।

ವಾರ್ಯಾಣಿ । ಪ್ರಽಭೂಷತಃ ॥ ೧ ॥

ಸಾಯಣಭಾಷ್ಯಂ

ದ್ಯಾವಾ ಪೃಥಿವೀ ದ್ಯಾವಾಪೃಥಿವ್ಯೌ ॥ ದಿವೋ ದ್ಯಾವೇತಿ ದ್ಯಾವಾದೇಶ ಆದ್ಯುದಾತ್ತಃ । ಪೃಥಿವೀಶಬ್ದೋ ಙೀಷಂತೋಽಂತೋದಾತ್ತಃ । ದೇವತಾದ್ವಂದ್ವೇ ಚೇತ್ಯುಭಯಪದಪ್ರಕೃತಿಸ್ವರತ್ವಂ । ಸಮಾಸಮಧ್ಯೇ ಪದಾಂತರಪಾಠಶ್ಛಾಂದಸಃ ॥ ಅಹಂ ಯಜಮಾನೋ ಯಜ್ಞೈರ್ಯಾಗೈಸ್ತತ್ಪ್ರದಾನೈರ್ನಿಮಿತ್ತಭೂತೈರ್ಹವಿಷ್ಪ್ರದಾನಾರ್ಥಂ ಪ್ರ ಸ್ತುಷೇ । ಪ್ರಕರ್ಷೇಣ ಸ್ತೌಮಿ ॥ ಪುರುಷವ್ಯತ್ಯಯಃ । ಕೀದೃಶೌ ತೇ । ಋತಾವೃಧಾ ಯಜ್ಞಸ್ಯ ವರ್ಧಯಿತ್ರ್ಯೌ ಮಹೀ ಮಹತ್ಯೌ ವಿದಥೇಷು ಯಾಗೇಷು ಪ್ರಚೇತಸಾ ಪ್ರಕರ್ಷೇಣಾಸ್ಮಾಂಶ್ಚೇತಯಿತ್ರ್ಯೌ ಅಸ್ಮಾಭಿಶ್ಚೇತಯಿತವ್ಯೇ ವಾ । ಈದೃಶ್ಯೌ ಸ್ತುಷೇ । ಅನಯೋಃ ಕೋಽತಿಶಯ ಇತಿ ಉಚ್ಯತೇ । ಯೇ ದ್ಯಾವಾಪೃಥಿವ್ಯೌ ದೇವೇಭಿರ್ಯಜಮಾನೈರ್ದೇವಪುತ್ರೇ ದೇವಾ ಯಜಮಾನಾಃ ಪುತ್ರಸ್ಥಾನೀಯಾಃ ಶುಶ್ರೂಷಕಾ ಯಯೋಸ್ತೇ ತಾದೃಶ್ಯೌ । ಯದ್ವಾ । ದೇವೇಭಿರ್ವಿಶಿಷ್ಟೇ ಸುದಂಸಸಾ । ದಂಸ ಇತಿ ಕರ್ಮನಾಮ । ಶೋಭನಕರ್ಮೋಪೇತೇ ಇತ್ಥಾ ಸತ್ಯಂ । ಇತ್ಥೇತಿ ಸತ್ಯನಾಮ ಸತ್ರೇತ್ಥೇತಿ ತನ್ನಾಮಸು ಪಾಠಾತ್ । ಸತ್ಯಂ ಧಿಯಾಸ್ಮದನುಗ್ರಹಬುದ್ಧ್ಯಾ ವಾರ್ಯಾಣಿ ವರಣೀಯಾನಿ ಧನಾನ್ಯಸ್ಮಭ್ಯಂ ಪ್ರಭೂಷತಃ ಅಲಂಕುರುತಃ । ದತ್ತ ಇತ್ಯರ್ಥಃ । ಯದ್ವಾ । ವಾರ್ಯಾಣಿ ಹವೀಂಷಿ ಧಿಯಾ ಕರ್ಮಣಾ ನಿಮಿತ್ತೇನ ಕರ್ಮಸಮಾಪ್ತ್ಯರ್ಥಂ ಪ್ರಭೂಷತಃ ಪ್ರಕರ್ಷೇಣ ಸ್ವೀಕುರುತಃ ॥

ಪ್ರತಿಪದಾರ್ಥ

**ಋತಾವೃಧಾ**— ಯಜ್ಞವನ್ನು ವೃದ್ಧಿಯಾಗುವಂತೆ ಮಾಡುವವರೂ । **ಮಹೀ**— ಮಹತ್ತಾದ ರೂಪವುಳ್ಳವರೂ । **ವಿದಥೇಷು**— ಯಜ್ಞಗಳಲ್ಲಿ । **ಪ್ರಚೇತಸಾ**— (ನಮಗೆ) ಚೈತನ್ಯದಾತ್ರಿಯರಾಗಿರುವವರೂ ಅಥವಾ (ನಮ್ಮಿಂದ) ಶ್ರದ್ಧೆಯಿಂದ ಪೂಜಿಸಲ್ಪಡತಕ್ಕವರೂ ಆದ । **ದ್ಯಾವಾಪೃಥಿವೀ**— ದ್ಯಾವಾಪೃಥಿವೀ ದೇವತೆಗಳನ್ನು । **ಯಜ್ಞೈಃ**— ಯಜ್ಞನಿಮಿತ್ತಕಗಳಾದ ಹವಿರಾದಿಗಳಿಂದ ಅಥವಾ ಹವಿರಾದಿಗಳನ್ನು ಅರ್ಪಿಸುವುದಕ್ಕಾಗಿ । **ಸ್ತುಷೇ**— ಸ್ತುತಿಸುತ್ತೇನೆ । **ದೇವಪುತ್ರೇ**— ಯಜಮಾನರೇ ಪುತ್ರರಾಗಿ ಉಳ್ಳ ಅಥವಾ ದೇವತೆಗಳೇ ಪುತ್ರರಾಗಿ ಉಳ್ಳ । **ಯೇ**— ಯಾವ ದ್ಯಾವಾಪೃಥಿವಿಗಳು । **ದೇವೇಭಿಃ**— ಯಜಮಾನರಿಂದ ನೆರವೇರಿಸಲ್ಪಟ್ಟ । **ಸುದಂಸಸಾ**— ಶ್ರೇಷ್ಠವಾದ ಕರ್ಮಗಳಿಂದ ಕೂಡಿದವರಾಗಿ । **ಇತ್ಥಾ**— ಖಂಡಿತವಾಗಿಯೂ । **ಧಿಯಾ**— ಅನುಗ್ರಹಾತ್ಮಕವಾದ ಬುದ್ಧಿಯಿಂದ । **ವಾರ್ಯಾಣಿ**— ಅಪೇಕ್ಷಿತಗಳಾದ ಹವಿಸ್ಸುಗಳನ್ನು । **ಪ್ರಭೂಷತಃ**— ಅಲಂಕರಿಸುತ್ತಾರೆ ಎಂದರೆ ಸ್ವೀಕರಿಸುತ್ತಾರೆ । [ ಅಥವಾ **ವಾರ್ಯಾಣಿ**— ಯಜಮಾನರಿಂದ ಅಪೇಕ್ಷಿತಗಳಾದ ಇಷ್ಟಾರ್ಥಗಳನ್ನು । **ಪ್ರಭೂಷತಃ**— ಒದಗಿಸುತ್ತಾರೆ ॥ ]

### ಭಾವಾರ್ಥ

ಯಜ್ಞವನ್ನು ವೃದ್ಧಿಯಾಗುವಂತೆ ಮಾಡುವವರೂ, ಮಹತ್ತಾದ ರೂಪವುಳ್ಳವರೂ ಯಜ್ಞಗಳಲ್ಲಿ ಸ್ತುತಿಸಲ್ಪಡುವವರೂ ಆದ ದ್ಯಾವಾಪೃಥಿವಿಗಳನ್ನು ಹವಿರಾದ್ಯರ್ಪಣೆಗಳಿಗಾಗಿ ಸ್ತುತಿಸಿ ಪ್ರಾರ್ಥಿಸುತ್ತೇನೆ. ದೇವತೆಗಳೇ ಪುತ್ರರಾಗಿ ಉಳ್ಳ ದ್ಯಾವಾಪೃಥಿವಿಗಳು ಯಜಮಾನರಿಂದ ನೆರವೇರಿಸಲ್ಪಟ್ಟ ಶ್ರೇಷ್ಠವಾದ ಕರ್ಮಗಳಿಂದ ಕೂಡಿದವರಾಗಿ ತಮ್ಮ ಅನುಗ್ರಹಾತ್ಮಕವಾದ ಬುದ್ಧಿಯಿಂದ ಯಜಮಾನರ ಇಷ್ಟಾರ್ಥಗಳನ್ನು ನೆರವೇರಿಸುತ್ತಾರೆ.

### English Tranlation

I glorify with sacred rites the mighty Heaven and Earth, the augmenters of sacrifice, who (are to be contemplated) with devotion at holy ceremonies; those two, who, cherishing their worshippers as children, are venerated by the devout, and therefore with favour bestow (upon us) desirable blessings.

### ವಿಶೇಷವಿಷಯಗಳು

**ದ್ಯಾವಾಪೃಥಿವೀ**—'**ಬಳಿತ್ಥಾ ಪರ್ವತಾನಾಂ**' ಎಂಬ ಋಕ್ಕಿನಿಂದ ಆರಂಭವಾಗುವುದೂ **ಪೃಥ್ವೀ**ದೇವತಾಕವಾದುದೂ ಆದ **ಸೂಕ್ತವೊಂದನ್ನು** (ಋ. ಸಂ. ೫-೮೪) ಬಿಟ್ಟು ಕೇವಲ **ಪೃಥ್ವೀ**ದೇವತಾಕವಾದುದಾಗಲಿ ಅಥವಾ ದ್ಯುದೇವತಾಕವಾದುದಾಗಲಿ ಯಾವ ಸೂಕ್ತವೂ ಇಲ್ಲ. ದ್ಯಾವಾಪೃಥಿವಿಗಳು ಉಳಿದ ಕಡೆಗಳಲ್ಲಿ ಒಟ್ಟಿಗೇ ನಿರ್ದೇಶಿಸಲ್ಪಟ್ಟಿರುವರು. ಹೀಗೆ ಒಟ್ಟಿಗೆ ನಿರ್ದೇಶಿಸಲ್ಪಟ್ಟಿರುವಾಗ ಇಬ್ಬರಲ್ಲಿ ಯಾರಿಗೆ ಹೆಚ್ಚು ಪ್ರಾಶಸ್ತ್ಯವಿರುವುದು ಎಂಬ ವಿಷಯದಲ್ಲಿ ಆ ಶಂಕೆಯನ್ನು ನಿರೀಕ್ಷಿಸಿ ನಿರುಕ್ತಕಾರರು ಋಕ್ಸಂಹಿತೆಯ ಆಧಾರದಮೇಲೆ ಈರೀತಿ ವಿವರಿಸಿದ್ದಾರೆ.

**ದ್ಯಾವಾಪೃಥಿವೀನಾಮಧೇಯಾನ್ಯುತ್ತರಾಣಿ ಚತುರ್ವಿಂಶತಿಃ । ಸ್ವಧೇ, ಪುರಂಧೀ, ಧಿಷಣೇ ರೋದಸೀ** ಇತ್ಯಾದಿ ೨೪ ದ್ಯಾವಾಪೃಥಿವಿಗಳ ನಾಮಗಳು. (ನಿ. ೩-೨೧) **ತಯೋರೇಷಾ ಭವತಿ ।**

**ಕತರಾ ಪೂರ್ವಾ ಕತರಾಪರಾಯೋಃ ಕಥಾ ಜಾತೇ ಕವಯಃ ಕೋ ವಿವೇದ ।**
**ವಿಶ್ವಂ ತ್ಮನಾ ಬಿಭೃತೋ ಯದ್ಧ ನಾಮ ವಿ ವರ್ತೇತೇ ಅಹನೀ ಚಕ್ರಿಯೇವ ॥**

(ಋ. ಸಂ. ೧-೧೮೫-೧)

**ಕತರಾ ಪೂರ್ವಾ ಕತರಾಪರಾ । ಏನಯೋಃ ಕಥಂ ಜಾತೇ ಕವಯಃ ಕ ಏನೇ ವಿಜಾನಾತಿ । ಸರ್ವಮಾತ್ಮನಾ ಬಿಭೃತೋ ಯದ್ಧೈನಯೋಃ ಕರ್ಮ ವಿವರ್ತೇತೇ ಚೈನಯೋರಹನೀ ಅಹೋರಾತ್ರೇ ಚಕ್ರಿಯೇವ ಚಕ್ರಯುಕ್ತೇ ಇವೇತಿ ದ್ಯಾವಾಪೃಥಿವ್ಯೋರ್ಮಹಿಮಾನಮಾಚಷ್ಟ ಆಚಷ್ಟೇ ।**

(ನಿ. ೩-೨೨)

ಈ ಎರಡು ದೇವತೆಗಳಲ್ಲಿ ಪೂರ್ವಭಾವಿಯಾದ ದೇವತೆ ಯಾರು ? ಇವರ ಉತ್ಪತ್ತಿಯ ಕ್ರಮವೇನು ? ಎಲೈ ಋಷಿಗಳೇ, ನಿಮ್ಮಲ್ಲಿ ಯಾರಿಗೆ ಈ ರಹಸ್ಯವು ಗೊತ್ತಿದೆ ? ವಿಶ್ವದ ಸಕಲಭೂತಗಳಿಗೂ ಇವರೇ ಆಧಾರವು ರಥದ

ಎರಡು ಚಕ್ರಗಳಂತೆ ಇವೆರಡೂ ಅನುಸ್ಯೂತವಾಗಿ ಸ್ತುತಿಸಿದೆಯೆಂಬುದಾಗಿ ಋಕ್ಸಂಹಿತೆಯನ್ನುದಹರಿಸಿ ವಿವರಿಸಿದ್ದಾರೆ. ಈ ಋಕ್ಕನ್ನೇ ಐತರೇಯ ಬ್ರಾಹ್ಮಣದಲ್ಲೂ ಉದಹರಿಸಿದೆ. ಈ ದೇವತೆಗಳ ಉತ್ಪತ್ತಿಯ ವಿಷಯದಲ್ಲಿ ಒಂದೊಂದು ಸಲ ಆಶ್ಚರ್ಯವೂ ಕೆಲವು ಸಲ ಅನಿಶ್ಚಿತವಾದ ಊಹೆಯೂ ಸ್ವಾಭಾವಿಕವಾಗಿದೆ.

**ಕಿಂ ಸ್ವಿದ್ವನಂ ಕ ಉ ಸ ವೃಕ್ಷ ಆಸ ಯತೋ ದ್ಯಾವಾಪೃಥಿವೀ ನಿಷ್ಟತಕ್ಷುಃ ।**
**ಸಂತಸ್ಥಾನೇ ಅಜರೇ ಇತಊತೀ ಅಹಾನಿ ಪೂರ್ವೀರುಷಸೋ ಜರಂತೆ ॥**
(ಋ. ಸಂ. ೧೧ ೩೧-೭)

ಅಸಂಖ್ಯಾಕವಾದ ಅಹಸ್ಸುಗಳೂ ಉಷಸ್ಸುಗಳೂ ಸಹ ಉರುಳಿಹೋಗುತ್ತಿರುವಾಗ ನಾಶರಹಿತವಾಗಿಯೂ ಅವಿಚ್ಛಿನ್ನವಾಗಿಯೂ ಸ್ಥಿರವಾಗಿಯೂ ನಿಂತಿರತಕ್ಕ ಈ ದ್ಯಾವಾಪೃಥಿವಿಗಳನ್ನು ಯಾವ ವನದ ಯಾವ ವೃಕ್ಷಗಳಿಂದ ನಿರ್ಮಿಸಿದೆ ಎಂದು ಋಷಿಯು ತನ್ನ ಪ್ರಶಂಸಾಪೂರ್ವಕವಾದ ಆಶ್ಚರ್ಯವನ್ನು ವ್ಯಕ್ತಪಡಿಸಿದ್ದಾನೆ.

'ಕಿಂ ಸ್ವಿದ್ವನಂ' ಎಂಬ ಋಕ್ಕಿನಲ್ಲಿ (ಋ. ಸಂ. ೧೦-೩೧-೭) ವ್ಯಕ್ತಪಡಿಸಿರುವ ಜಿಜ್ಞಾಸೆಯನ್ನು ಇನ್ನೂ ಅನೇಕಕಡೆಗಳಲ್ಲಿ ಸೂಚಿಸಿದೆ. ಕೆಲವೆಡೆಗಳಲ್ಲಿ ತಕ್ಕ ಉತ್ತರವನ್ನೂ ನೋಡಬಹುದು. ಉದಾಹರಣೆಗೆ

**ಕಿಂ ಸ್ವಿದಾಸೀದಧಿಷ್ಠಾನಮಾರಂಭಣಂ ಕತಮತ್ಸ್ವಿತ್ಕಥಾಸೀತ್ ।**
**ಯತೋ ಭೂಮಿಂ ಜನಯನ್ ವಿಶ್ವಕರ್ಮಾ ವಿ ದ್ಯಾಮೌರ್ಣೋನ್ಮಹಿನಾ ವಿಶ್ವಚಕ್ಷಾಃ ॥**
(ಋ. ಸಂ. ೧೦-೮೧-೨)

ಪೃಥ್ವಿಯನ್ನು ಸೃಷ್ಟಿಸಿ ಅಂತರಿಕ್ಷವನ್ನು ಹರಡುವಂತೆ ಮಾಡಿದ ವಿಶ್ವಚಕ್ಷುಸ್ಸಳ್ಳ ವಿಶ್ವಕರ್ಮನಿಗೆ ಇವುಗಳ ನಿರ್ಮಾಣಕ್ಕೆ ಇದ್ದ ಆಧಾರವೇನು ಎಂದು ಪ್ರಶ್ನಿಸಿದೆ. ಇದಕ್ಕೆ ಉತ್ತರರೂಪದಲ್ಲಿ,

**ಕಿಗ್ಂಸ್ವಿದ್ವನಂ ಕ ಉ ಸ ವೃಕ್ಷ ಆಸೀತ್ । ಯತೋ ದ್ಯಾವಾ ಪೃಥಿವೀ ನಿಷ್ಟತಕ್ಷುಃ । ಮನೀಷಿಣೋ ಮನಸಾ ಪೃಚ್ಛತೇದು ತತ್ । ಯದಧ್ಯತಿಷ್ಠದ್ಭುವನಾನಿ ಧಾರಯನ್ । ಬ್ರಹ್ಮ ವನಂ ಬ್ರಹ್ಮ ಸ ವೃಕ್ಷ ಆಸೀತ್ । ಯತೋ ದ್ಯಾವಾಪೃಥಿವೀ ನಿಷ್ಟತಕ್ಷುಃ । ಮನಿಷಿಣೋ ಮನಸಾ ವಿಬ್ರವೀಮಿ ವಃ । ಬ್ರಹ್ಮಾಧ್ಯತಿಷ್ಠದ್ಭುವನಾನಿ ಧಾರಯನ್ ॥**

(ತೈ. ಬ್ರಾ. ೨-೮-೯-೬, ೭)

ಈ ದ್ಯಾವಾಪೃಥಿವಿಗಳ ಸೃಷ್ಟಿಗೆ ಬ್ರಹ್ಮನೇ (ನಾಶವಿಲ್ಲದ ಬ್ರಹ್ಮವೆಂಬ ವಸ್ತುವೇ) ವನವು ಮತ್ತು ಬ್ರಹ್ಮನೇ ವೃಕ್ಷವು. ಅದರಿಂದಲೇ ಇವುಗಳ ನಿರ್ಮಾಣವು ಎಂದು ತೈತ್ತಿರೀಯ ಬ್ರಾಹ್ಮಣದಲ್ಲಿ ಹೇಳಿದೆ.

**ಇಯಂ ಪೃಥ್ವೀ ಭೂತಸ್ಯ ಪ್ರಥಮಜಾ ।**

(ಶ. ಬ್ರಾ. ೧೪-೧-೨-೧೧)

ಈ ಪೃಥ್ವಿಯು ಸಕಲ ಭೂತಗಳಿಗಿಂತಲೂ ಪ್ರಥಮದಲ್ಲಿ ಉತ್ಪನ್ನವಾದುದೆಂದು ಶತಪಥಬ್ರಾಹ್ಮಣದ ವಿವರಣೆಯಾಗಿದೆ. ಪ್ರಕೃತವಾದ ಋಕ್ಕಿನಲ್ಲಿ **ಮಹೀ, ಋತಾವೃಧಾ,** ಇತ್ಯಾದಿವಿಶೇಷಣಗಳಿಂದ ದ್ಯಾವಾಪೃಥಿವಿಗಳ ಮಹತ್ತ್ವವನ್ನು ಸ್ತುತಿಸಿದೆ.

**ಋತಾವೃಧಾ—ಋತಸ್ಯ ಯಜ್ಞಸ್ಯ ಸತ್ಯಸ್ಯ ವಾ ವರ್ಧಯಿತ್ರ್ಯೌ ।** ಋತಶಬ್ದಕ್ಕೆ ಯಜ್ಞ, ಸತ್ಯ ಎಂಬ ಅರ್ಥಗಳಿರುವುದರಿಂದಲೂ ದ್ಯಾವಾಪೃಥಿವಿಗಳ ಸಹಾಯದಿಂದಲೇ ಯಜ್ಞವು ನೆರವೇರುವುದೂ ಸತ್ಯವು ಸ್ಥಾಪಿತ ವಾಗುವುದೂ ಆಗಬೇಕಾಗಿರುವುದರಿಂದಲೂ **ಋತಾವೃಧಾ** ಮತ್ತು **ಋತಾವರೀ** ಎಂಬ ವಿಶೇಷಣಗಳು ದ್ಯಾವಾ ಪೃಥಿವಿಗಳ ಪರವಾಗಿವೆ.

**ಮಹೀ—ಮಹತ್ಯೌ ।** ಮಹತ್ತಾದ ರೂಪವುಳ್ಳವರು **ಪ್ರಥನಾತ್ಪೃಥಿವೀತ್ಯಾಹುಃ ಕ ಏನಾಮಪ್ರಥ-ಯಿಷ್ಯತ್ ಕಿಮಾಧಾರಶ್ಚೇತ್ಯಥ ವೈ ದರ್ಶನೇನ ಪೃಥುರಪ್ರಥಿತಾ ಚೇದಪ್ಯನ್ಯೈಃ** (ನಿ. ೧-೧೪) ವಿಸ್ತೃತವಾಗಿ ಹರಡಿರುವುದರಿಂದ **ಪೃಥಿವಿ**ಯೆಂಬ ಹೆಸರು. ಅದನ್ನು ವಿಸ್ತೃತವಾಗಿ ಹರಡಿದವರು ಯಾರೆಂದರೆ ಅದಕ್ಕೆ ಉತ್ತರ ವನ್ನು ಹೇಳುವುದು ಶ್ರಮ. ಒಂದುವೇಳೆ ಯಾರು ಅದನ್ನು ಹರಡದೇ ಇದ್ದಿದ್ದರೂ ಸಹ ಅದು ತಾನಾಗಿಯೇ ಹರಡಿರುವುದು.

> **ಆಪೋ ವಾ ಇದಮಗ್ರೇ ಸಲಿಲಮಾಸೀತ್ತಸ್ಮಿನ್ಪ್ರಜಾಪತಿರ್ವಾಯುರ್ಭೂತ್ವಾಚರತ್ಸ ಇಮಾಮಪ-ಶ್ಯತ್ತಾಂ ವರಾಹೋ ಭೂತ್ವಾಹರತ್ತಾಂ ವಿಶ್ವಕರ್ಮಾಭೂತ್ವಾ ವ್ಯಮಾರ್ಟ್ಸಾ ಪ್ರಥತ ಸಾ ಪೃಥಿವ್ಯಭವತ್ತತ್ಪೃಥಿವ್ಯೈ ಪೃಥಿವಿತ್ವಂ ।**
> (ತೈ. ಸಂ. ೭-೧-೫-೧)

ಎಂಬಲ್ಲಿಯೂ ಇದೇ ಗುಣವನ್ನು ಹೇಳಿ ಪೃಥಿವಿಯ ಮಹತ್ತ್ವವನ್ನು ತಿಳಿಸಿದೆ.

**ವಿದಥೇಷು—ಯಜ್ಞೇಷು ।** ಯಜ್ಞಗಳಲ್ಲಿ ಎಂದರೆ ಯಜ್ಞಸ್ಥಾನಗಳಲ್ಲಿ ಎಂದರ್ಥ. **ವೇದಯಿತ್ರ್ಯು ಸ್ತೋತ್ರೇಷು ನಿಮಿತ್ತಭೂತೇಷು** ಎಂಬುದರಿಂದ ವಿದಥಶಬ್ದದ ನಿರ್ವಚನವನ್ನು ತೋರಿಸಿದೆ. ಈ ಪದವು **ಯಜ್ಞಃ ವೇನಃ** ಇತ್ಯಾದಿ **ಯಜ್ಞ**ನಾಮಗಳಲ್ಲಿ ಪಠಿತವಾಗಿದೆ. (ನಿ. ೩-೧೭) ಮತ್ತು,

> **ಹೋತಾ ದೇವೋ ಅಮರ್ತ್ಯಃ ಪುರಸ್ತಾದೇತಿ ಮಾಯಯಾ । ವಿದಥಾನಿ ಪ್ರಚೋದಯನ್ ॥**
> (ಋ. ಸಂ. ೩-೨೭-೭)

ಎಂಬ ಋಕ್ಕನ್ನುದಹರಿಸಿ ನಿರುಕ್ತಕಾರರು ಅಲ್ಲಿ **ವಿದಥಶಬ್ದವು ಜ್ಞಾನಾರ್ಥಕವಾದ ವಿದ್** ಧಾತುವಿನಿಂದ ನಿಷ್ಪನ್ನ ವಾಗಿದೆಯೆಂದು ತೋರಿಸಿದ್ದಾರೆ. ಈ ಪದಕ್ಕೆ ನಿಷ್ಕೃಷ್ಟವಾಗಿ ಅರ್ಥವನ್ನು ಹೇಳಲು ಪ್ರಯತ್ನಿಸಿ ತಮ್ಮ ತಮ್ಮ ಅಭಿಪ್ರಾಯಗಳನ್ನು ಹೇಳಿರುವ ಪಂಡಿತರ ಮತಗಳನ್ನು ಹಿಂದಿನ ಭಾಗದಲ್ಲಿ (ಎಂದರೆ ಋಗ್ವೇದ ಸಂಹಿತಾ. ಭಾಗ 11. ಪೇಜು 321ರಿಂದ 325) ತಿಳಿಸಿದೆ. Max Muller ಎಂಬ ಪಂಡಿತನು ಈ ಪದಕ್ಕೆ **ಯಜ್ಞಸಭೆ**ಯೆಂದೂ, Oldenberg ಎಂಬುವನು ಶಾಸ್ತ್ರವಿಹಿತವಾದ **ಯಜ್ಞವೇ ವಿದಥ**ಶಬ್ದಾರ್ಥವೆಂದೂ, Bloomfield ಎಂಬುವನು **ಗೃಹ**ವೆಂದೂ ಅರ್ಥಮಾಡಿರುವುದನ್ನು ಅವರ ವಾಕ್ಯಗಳನ್ನೇ ಉದಹರಿಸಿ ಹಿಂದೆ ತಿಳಿಸಿದೆ. ಈ ಪದಕ್ಕೆ **ಗೃಹ, ಯಜ್ಞ, ಸಭಾ,** ಎಂಬ ಬೇರೆಬೇರೆ ಅರ್ಥಗಳೆಲ್ಲವೂ ಸಾಧ್ಯವಾಗುವುದರಿಂದ ಎಲ್ಲವೂ ಸಂದರ್ಭಾನುಸಾರವಾಗಿ ಹೊಂದಿಕೊಳ್ಳುತ್ತವೆ. ಮತ್ತು ಸಾಯಣಭಾಷ್ಯದಲ್ಲಿಯೇ ಈ ಎಲ್ಲಾ ಅರ್ಥಗಳಿವೆಯೆಂದೂ ಸಹ ಹಿಂದೆ ಉದಾಹರಣೆ ಗಳೊಡನೆ ತಿಳಿಸಿದೆ. ಪ್ರಕೃತವಾದ ಋಕ್ಕಿನಲ್ಲಿ **ವಿದಥೇಷು ಯಾಗೇಷು**—ಯಾಗಗಳಲ್ಲಿ ಎಂದರ್ಥಮಾಡಿದೆ.

**ದೇವಪುತ್ರೇ—ದೇವಾಃ ಸರ್ವೇ ಪುತ್ರಸ್ಥಾನೀಯಾ ಯಯೋಸ್ತೇ ದ್ಯಾವಾಪೃಥಿವ್ಯೌ ।** ಸಕಲ ದೇವತೆಗಳನ್ನೂ ಪುತ್ರರನ್ನಾಗಿ ಪಡೆದಿರತಕ್ಕ ದ್ಯಾವಾಪೃಥಿವಿಗಳು.

**ಇಮೌ ವೈ ಲೋಕೌ ಸಹಾಸ್ತಾಂ ತೌ ವ್ಯೈತಾಂ ನಾವರ್ಷನ್ನ ಸಮತಪತ್ತೇ ಪಂಚಜನಾ ನ ಸಮ-ಜಾನತ ತೌ ದೇವಾಃ ಸಮನಯಂಸ್ತೌ ಸಂಯಂತಾವೇತಂ ದೇವವಿವಾಹಂ ವ್ಯವಹೇತಾಂ ।**
(ಐ. ಬ್ರಾ. ೪-೨೭)

ಎಂಬ ವಾಕ್ಯದಲ್ಲಿ ವಿವರಿಸಿರುವ ದ್ಯಾವಾಪೃಥಿವಿಗಳ ದಾಂಪತ್ಯಸಂಬಂಧವನ್ನೂ, ಸಮಸ್ತ ಲೋಕಗಳ ವ್ಯವಹಾರಕ್ಕೂ ಸಹ ಇವರೇ ಆಧಾರಭೂತರಾಗಿರುವರೆಂದು ತಿಳಿಸಿರುವ ಅಂಶವನ್ನೂ ಸಹ ಹಿಂದೆ ತಿಳಿಸಿದೆ.

**ಯ ಇಮೇ ದ್ಯಾವಾಪೃಥಿವೀ ಜನಿತ್ರೀ ರೂಪೈರಪಿಂಶದ್ಭುವನಾನಿ ವಿಶ್ವಾ ।**
**ತಮದ್ಯ ಹೋತರಿಷಿತೋ ಯಜೀಯಾನ್ ದೇವಂ ತ್ವಷ್ಟಾರಮಿಹ ಯಕ್ಷಿ ವಿದ್ವಾನ್ ॥**
(ಋ. ಸಂ. ೧೦-೧೧೦-೯)

ಎಂಬ ಋಕ್ಕಿನಲ್ಲಿ **ಜನಿತ್ರೀ** ಎಂಬ ಪದಕ್ಕೆ **ವಿಶ್ವಸ್ಯ ಜನಯಿತ್ರ್ಯೌ** । ದೇವಮಾನವಾದಿಸಕಲಭೂತಗಳಿಗೂ ಜನಯಿತ್ರಿಯರೆಂದು ಹೇಳಿದೆ. ಮತ್ತು

**ದೇವೀ ದೇವಸ್ಯ ರೋದಸೀ ಜನಿತ್ರೀ ಬೃಹಸ್ಪತಿಂ ವಾವೃಧತುರ್ಮಹಿತ್ವಾ ।**
**ದಕ್ಷಾಯ್ಯಾಯ ದಕ್ಷತಾ ಸಖಾಯಃ ಕರದ್ಬ್ರಹ್ಮಣೇ ಸುತರಾ ಸುಗಾಧಾ ॥**
(ಋ. ಸಂ. ೭-೯೭-೮ )

ಎಂಬಲ್ಲಿ ತಮ್ಮ ಪುತ್ರನಾದ **ಬೃಹಸ್ಪತಿಯನ್ನು** ಪೋಷಿಸಿದರೆಂದೂ

**ಯಂ ತ್ವಾ ದ್ಯಾವಾಪೃಥಿವೀ ಯಂ ತ್ವಾಪಸ್ತ್ವಷ್ಟಾ ಯಂ ತ್ವಾ ಸುಜನಿಮಾ ಜಜಾನ ।**
**ಪಂಥಾಮನು ಪ್ರವಿದ್ವಾನ್ಪಿತೃಯಾಣಂ ದ್ಯುಮದಗ್ನೇ ಸಮಿಧಾನೋ ವಿ ಭಾಹಿ ॥**
(ಋ. ಸಂ. ೧೦-೨-೭)

ಎಂಬಲ್ಲಿ **ಅಗ್ನಿಯ** ಪಿತೃಗಳೆಂದೂ, (ಋ. ಸಂ. ೧೦-೨-೭) ಕೆಲವು ಕಡೆ ಪ್ರತ್ಯೇಕವಾಗಿ ಅಗ್ನ್ಯಾದಿದೇವತೆಗಳ ಜನಯಿತ್ರಿಯರೆಂದೂ ಇನ್ನು ಕೆಲವೆಡೆಗಳಲ್ಲಿ ಸಕಲ ದೇವತೆಗಳಿಗೂ ಮಾತಾಪಿತೃಗಳೆಂದೂ ಹೇಳಿದೆ. ಆದುದರಿಂದ

**ಉಪಹೂತೇ ದ್ಯಾವಾಪೃಥಿವೀ ಪೂರ್ವಜೇ ಋತಾವರೀ ದೇವೀ ದೇವಪುತ್ರೇ ಇತಿ ।**
(ಶ. ಬ್ರಾ. ೧-೮-೧-೩೯)

ಇತ್ಯಾದಿ ವಾಕ್ಯಗಳಲ್ಲೆಲ್ಲಾ ನಿರ್ದೇಶಿಸಿರುವ ದ್ಯಾವ್ಯಾಪೃಥಿವಿಗಳಿಗೆ **ದೇವಪುತ್ರೇ** ಎಂಬ ವಿಶೇಷಣವು ರೂಢವಾಗಿದೆ.

**ದೇವೇಭಿಃ—ದೇವೋ ದಾನಾದ್ವಾ ದೀಪನಾದ್ವಾ ।** ದಾನಿಯೂ, ಪ್ರಕಾಶಕನೂ ಆದುದರಿಂದ ಈ ವಿಶೇಷಣವು ಎಂದು ಹೇಳಿರುವುದರಿಂದಲೂ (ನಿ. ೭-೧೫) ಯಜಮಾನನು ಹವಿರಾದಿದಾನಗಳಿಂದ ದೇವತೆಗಳನ್ನು ಪ್ರಕಾಶಿಸುವಂತೆ ಮಾಡುವುದರಿಂದಲೂ ಸಹ **ದೇವ** ಶಬ್ದಕ್ಕೆ ಯಜ್ಞಕರ್ತನೆಂದೂ ಕೆಲವು ವೇಳೆ ಅರ್ಥಮಾಡಿರುವಂತೆ ಪ್ರಕೃತವಾದ ಋಕ್ಕಿನಲ್ಲಿಯೂ ಸಹ **ಯಜಮಾನೈಃ** ಎಂದೇ ಅರ್ಥಮಾಡಿದೆ.

**ಸುದಂಸಸಾ—ದಂಸ ಇತಿ ಕರ್ಮನಾಮ । ಶೋಭನಕರ್ಮೋಪೇತೇ ।** ಶ್ರೇಷ್ಠವಾದ ಕರ್ಮಯುಕ್ತರಾದ ಎಂದು ದ್ಯಾವಾಪೃಥಿವಿಗಳಿಗೆ ವಿಶೇಷಣವಾಗಿದೆಯೆಂದು ತೋರಿಸಿದೆ.

**ಇತ್ಥಾ—ಬಟ್ ಶ್ರತ್** ಇತ್ಯಾದಿ **ಸತ್ಯ**ನಾಮಗಳಲ್ಲಿ ಪಠಿತವಾಗಿದೆಯಾದ್ದರಿಂದ (ನಿ. ೩-೧೩) ಈ ಋಕ್ಕಿನಲ್ಲಿಯೂ ಸಹ **ಸತ್ಯ**ವಾಗಿಯೂ ಎಂದರ್ಥಮಾಡಿದೆ.

## ವ್ಯಾಕರಣಪ್ರಕ್ರಿಯಾ

**ದ್ಯಾವಾಪೃಥಿವೀ—ದಿವೋ ದ್ಯಾವಾ** (ಪಾ. ಸೂ. ೬-೩-೨೯) ಎಂಬುದರಿಂದ ದಿವ್ ಶಬ್ದಕ್ಕೆ ದ್ವಂದ್ವದಲ್ಲಿ ದ್ಯಾವಾದೇಶ. ಇದು ಆದ್ಯುದಾತ್ತವಾಗಿದೆ. ಪೃಥಿವೀಶಬ್ದವು ಙೀಷಂತವಾದುದರಿಂದ ಅಂತೋದಾತ್ತವಾಗುತ್ತದೆ. **ದೇವತಾದ್ವಂದ್ವೇ ಚ** (ಪಾ. ಸೂ. ೬-೨-೧೪೧) ಎಂಬುದರಿಂದ ಉಭಯಪದಪ್ರಕೃತಿಸ್ವರ ಬರುತ್ತದೆ. ಛಾಂದಸವಾಗಿ ಸಮಾಸಮಧ್ಯದಲ್ಲಿ ಬೇರೊಂದು ಪದಪಾಠ ಮಾಡಿರುತ್ತದೆ.

**ಋತಾವೃಧಾ**—ವೃಧು ವೃದ್ಧೌ ಧಾತು. ಕ್ವಿಪ್ ಪ್ರತ್ಯಯ. **ಅನ್ಯೇಷಾಮಪಿ ದೃಶ್ಯತೇ** (ಪಾ. ಸೂ. ೬-೩-೧೩೭)ಎಂಬುದರಿಂದ ಪೂರ್ವಪದಕ್ಕೆ ದೀರ್ಘ. ದ್ವಿವಚನ ಪರವಾದಾಗ **ಸುಪಾಂ ಸುಲುಕ್** (ಪಾ. ಸೂ. ೭-೧-೩೯) ಎಂಬುದರಿಂದ ಅದಕ್ಕೆ ಆಕಾರಾದೇಶ. **ಗತಿಕಾರಕೋಪಪದಾತ್ ಕೃತ್** (ಪಾ. ಸೂ. ೬-೨-೪೯) ಎಂಬುದರಿಂದ ಕೃದುತ್ತರಪದಪ್ರಕೃತಿಸ್ವರ ಬರುತ್ತದೆ.

**ಸ್ತುಷೇ**—ಷ್ಟುಞ್ ಸ್ತುತೌ ಧಾತು. ಲಟ್ ಉತ್ತಮಪುರುಷಏಕವಚನದಲ್ಲಿ **ವ್ಯತ್ಯಯೋ ಬಹುಲಮ್** ಎಂಬುದರಿಂದ ಥಾಸ್ ಪ್ರತ್ಯಯ. **ಥಾಸಃ ಸೇ** (ಪಾ. ಸೂ. ೩-೪-೮೦) ಎಂಬುದರಿಂದ ಸೇ ಆದೇಶ. ಅದಕ್ಕೆ **ಆದೇಶಪ್ರತ್ಯಯಯೋಃ** ಎಂಬುದರಿಂದ ಷತ್ವ. ವಿಕರಣಕ್ಕೆ ಲುಕ್. ತಿಙಂತನಿಘಾತಸ್ವರ ಬರುತ್ತದೆ.

**ವಿದಥೇಷು**—ವಿದ ಜ್ಞಾನೇ ಧಾತು. ಇದಕ್ಕೆ ಔಣಾದಿಕ ಅಥ ಪ್ರತ್ಯಯ. ಕಿತ್ವಾತಿದೇಶದಿಂದ ಲಘೂಪಧಗುಣ ಬರುವುದಿಲ್ಲ. ಪ್ರತ್ಯಯದ ಆದ್ಯುದಾತ್ತಸ್ವರ ಬರುತ್ತದೆ.

**ಪ್ರಚೇತಸಾ—**ಪ್ರಕೃಷ್ಟಂ ಚೇತಃ ಯಯೋಸ್ತೇ. ಬಹುವ್ರೀಹಿಸಮಾಸದಲ್ಲಿ ಪೂರ್ವಪದಪ್ರಕೃತಿಸ್ವರ ಬರುತ್ತದೆ. ಹಿಂದಿನಂತೆ ದ್ವಿವಚನಕ್ಕೆ ಆಕಾರಾದೇಶ.

**ದೇವಪುತ್ರೇ**—ದೇವಾಃ ಪುತ್ರಾಃ ಯಯೋಸ್ತೇ ದೇವಪುತ್ರೇ. ಹಿಂದಿನಂತೆ ಬಹುವ್ರೀಹಿಯಲ್ಲಿ ಪೂರ್ವಪದಪ್ರಕೃತಿಸ್ವರ ಬರುತ್ತದೆ.

**ಸುದಂಸಸಾ**—ಶೋಭನಂ ದಂಸಃ ಯಾಸ್ಯಾಃ ಸಾ. **ನಞ್‌ಸುಭ್ಯಾಮ್** (ಪಾ. ಸೂ. ೬-೨-೧೭೨) ಎಂಬುದರಿಂದ ಉತ್ತರಪದಾಂತೋದಾತ್ತಸ್ವರ ಬರುತ್ತದೆ.

**ಪ್ರಭೂಷತಃ**—ಭೂಷ ಅಲಂಕಾರೇ ಧಾತು. ಲಟ್ ಪ್ರಥಮಪುರುಷದ್ವಿವಚನಾಂತರೂಪ. **ಯದ್ವೃತ್ತಾನ್ನಿತ್ಯಮ್** ಎಂಬುದರಿಂದ ನಿಘಾತಪ್ರತಿಷೇಧ ಬರುವುದರಿಂದ ಧಾತುಸ್ವರ ಉಳಿಯುತ್ತದೆ. **ತಿಙಿಚೋದಾತ್ತವತಿ** (ಪಾ. ಸೂ. ೮-೧-೭೧) ಎಂಬುದರಿಂದ ಪ್ರ ಎಂಬುದಕ್ಕೆ ಅನುದಾತ್ತಸ್ವರ ಬರುತ್ತದೆ. ॥ ೧ ॥

### ಸಂಹಿತಾಪಾಠಃ

ಉತ ಮನ್ಯೇ ಪಿತುರದ್ರುಹೋ ಮನೋ ಮಾತುರ್ಮಹಿ ಸ್ವತವಸ್ತದ್ಧವೀ-
ಮಭಿಃ ।
ಸುರೇತಸಾ ಪಿತರಾ ಭೂಮ ಚಕ್ರತುರುರು ಪ್ರಜಾಯಾ ಅಮೃತಂ ವರೀ-
ಮಭಿಃ ॥ ೨ ॥

### ಪದಪಾಠಃ

ಉತ । ಮನ್ಯೇ । ಪಿತುಃ । ಅದ್ರುಹಃ । ಮನಃ । ಮಾತುಃ । ಮಹಿ । ಸ್ವऽತವಃ । ತತ್ । ಹವೀಮಽಭಿಃ ।
ಸುऽರೇತಸಾ । ಪಿತರಾ । ಭೂಮ । ಚಕ್ರತುಃ । ಉರು । ಪ್ರऽಜಾಯಾಃ । ಅಮೃತಂ । ವರೀಮಽಭಿಃ ॥೨॥

### ಸಾಯಣಭಾಷ್ಯಂ

ಉತಾಪಿ ಚ ಪಿತುಃ ಪಿತೃಸ್ಥಾನೀಯಾಯಾಃ ಪಾತ್ರ್ಯಾ ಅದ್ರುಹೋಽದ್ರೋಗ್ಧುಃ । ನ ಹಿ ಕದಾ-ಚಿತ್ಪಿತಾ ಸ್ವಪುತ್ರಾದಯೇ ದ್ರುಹ್ಯತಿ । ತಾದೃಶ್ಯಾಃ ಪೃಥಿವ್ಯಾಃ ಸ್ವತವಃ ಸ್ವಾಯತ್ತಂ ಬಲಂ ಸ್ವಯಮೇವಾ-ಸ್ಮದನುಗ್ರಹಾಯ ತ್ವರಮಾಣಂ ಅತ ಏವ ಮಹಿ ಮಹತ್ .ತತ್ತಾದೃಶಮನುಗ್ರಹಯುಕ್ತಂ ಮನಶ್ಚಿತ್ತಂ ಹವೀಮಭಿರ್ಹವನೈರಾಹ್ವಾನೈರ್ಮನ್ಯೇ । ಜಾನಾಮಿ । ಪ್ರಸಾದಯಾಮೀತ್ಯರ್ಥಃ । ಯದ್ವಾ । ತತ್ತಾದೃಶ-ಮುಕ್ತಲಕ್ಷಣಂ ಮನೋ ಹವೀಮಭಿರ್ಹವನೈರ್ಮಹಿ ಮನ್ಯೇ । ಅತಿಮಹತ್ಪ್ರವೃದ್ಧಂ ಮನ್ಯೇ । ತಥಾ ಮಾತುಃ ಸರ್ವಸ್ಯೋತ್ಪಾದಯಿತುರಂತರಿಕ್ಷಸ್ಯ ದ್ಯುಲೋಕಸ್ಯ । ಮಾತಾಂತರಿಕ್ಷಂ ನಿರ್ಮೀಯಂತೇಽ-ಸ್ಮಿನ್ಭೂತಾನಿ । ನಿ. ೨-೮ । ಇತಿ ನಿರುಕ್ತಂ । ಯದ್ವಾ । ಪಿತುರ್ದ್ಯುಲೋಕಸ್ಯ ಮಾತುರ್ಭೂಮ್ಯಾಃ । ದ್ಯೌರ್ನಃ ಪಿತಾ ಪೃಥಿವೀ ಮಾತಾ । ಋ. ೧. ೯೧.೬ । ಇತಿ ಶ್ರುತೇಃ । ತತ್ತಾದೃಶಮುಕ್ತಲಕ್ಷಣಂ ಮನೋ ಮನ್ಯೇ । ದ್ಯಾವಾಪೃಥಿವ್ಯೋರ್ಮನೋಽಸ್ಮದಾಹ್ವಾನೈಃ ಪ್ರೀಣಯಾಮೀತ್ಯರ್ಥಃ । ಕಿಂಚ ಪಿತರಾ ಮಾತಾ ಚ ಪಿತಾ ಚ ಪಿತರೌ ದ್ಯಾವಾಪೃಥಿವ್ಯೌ ಸುರೇತಸಾ ಶೋಭನಸಾಮರ್ಥ್ಯೇನ ಪ್ರಜಾಯಾ ಯಜಮಾನಾದಿ-ರೂಪಾಯಾ ವರೀಮಭಿರ್ವರಿಷ್ಠೈ ರಕ್ಷಣವಿಶೇಷೈರ್ಭೂಮ ಬಹುತರಮುರು ವಿಸ್ತೀರ್ಣಮಮೃತಮಮರ-ಣಭೂತಮಭಿಲಷಿತಂ ಚಕ್ರತುಃ । ಕುರುತಃ ॥

### ॥ ಪ್ರತಿಪದಾರ್ಥ ॥

**ಉತ**—ಮತ್ತು । **ಅದ್ರುಹಃ**—ಯಾವಾಗಲೂ ಕೆಡಕನ್ನು ಮಾಡದಿರುವ । **ಪಿತುಃ**—ಪಿತೃಸ್ಥಾನದಲ್ಲಿರುವ ಪೃಥ್ವಿಯ । **ಸ್ವತವಃ**—ಸ್ವಾಯತ್ತವಾದ ಬಲವುಳ್ಳ । **ಮಹಿ**—(ಆದ್ದರಿಂದಲೇ) ಮಹತ್ತಾದ । **ತತ್**—ಅನುಗ್ರಹ ದಿಂದ ಕೂಡಿ ಪ್ರಸಿದ್ಧವಾದ । **ಮನಃ**—ಮನಸ್ಸನ್ನು । (ಹಾಗೆಯೇ) **ಮಾತುಃ**—ಮಾತೃರೂಪಿಯಾದ ದ್ಯುಲೋಕಾಧಿ

ದೇವತೆಯ । (ಮನಃ—ಮನಸ್ಸನ್ನು) । ಹವೀಮಭಿಃ—ಪ್ರಾರ್ಥನಾಪೂರ್ವಕವಾದ ಸ್ತೋತ್ರಗಳಿಂದ । ಮನ್ಯೇ—ತಿಳಿಯುತ್ತೇನೆ ಎಂದರೆ ತೃಪ್ತವಾದುದನ್ನಾಗಿ ಮಾಡುತ್ತೇನೆ । [ ಅಥವಾ— ಅದ್ರುಹಃ—ಯಾವಾಗಲೂ ಕೆಡಕನ್ನು ಮಾಡದಿರುವ । ಪಿತುಃ—ಪಿತೃರೂಪಿಯಾದ ದ್ಯುಲೋಕಾಧಿ ದೇವತೆಯ । ಸ್ವತವಃ—ಸ್ವಾಯತ್ತವಾದ ಬಲವುಳ್ಳ । ಮಹಿ—(ಆದ್ದರಿಂದಲೇ) ಮಹತ್ತಾದ । ತತ್—ಅನುಗ್ರಹದಿಂದ ಕೂಡಿ ಪ್ರಸಿದ್ಧವಾದ । ಮನಃ—ಮನಸ್ಸನ್ನು । (ಹಾಗೆಯೇ) ಮಾತುಃ—ಮಾತೃರೂಪಿಯಾದ ಪೃಥ್ವಿಯ । ಮನಃ—(ಮೇಲೆ ಹೇಳಿದ ಗುಣಗಳಿಂದ ಕೂಡಿದ) ಮನಸ್ಸನ್ನು । ಹವೀಮಭಿಃ—ಪ್ರಾರ್ಥನಾಪೂರ್ವಕವಾದ ಸ್ತೋತ್ರಗಳಿಂದ । ಮನ್ಯೇ—ತಿಳಿಯುತ್ತೇನೆ ಎಂದರೆ ತೃಪ್ತಿಗೊಳಿಸುತ್ತೇನೆ ] ಪಿತರಾ—ಜಗತ್ತಿಗೆಲ್ಲಾ ಮಾತಾಪಿತೃಗಳಾದ ದ್ಯಾವಾಪೃಥಿವಿಗಳು । ಸುರೇತಸಾ—ಶ್ರೇಷ್ಠವಾದ ತಮ್ಮ ಸಾಮರ್ಥ್ಯದಿಂದ । ಪ್ರಜಾಯೋಃ—ಯಜಮಾನರೂಪರಾದ ಪ್ರಜೆಗಳ (ಇಷ್ಟಾರ್ಥಗಳನ್ನು) ಭೂಮ—ಅತ್ಯಧಿಕವಾದುವನ್ನಾಗಿಯೂ । ಉರು—ವಿಸ್ತೃತವಾದುವನ್ನಾಗಿಯೂ । ಅಮೃತಂ—ಮರಣರಹಿತವಾದವನ್ನಾಗಿಯೂ ।ವರೀಮಭಿಃ—ತಮ್ಮ ರಕ್ಷಣಾಸಹಾಯಗಳಿಂದ । ಚಕ್ರತುಃ--ಮಾಡಿದರು.

ಭಾವಾರ್ಥ

ಯಾವಾಗಲೂ ಕೆಡಕನ್ನು ಮಾಡದಿರುವ ಮತ್ತು ಪಿತೃರೂಪಿಯಾದ ದ್ಯುಲೋಕಾಧಿದೇವತೆಯ ಸ್ವಾಯತ್ತವಾದ ಬಲವುಳ್ಳದ್ದೂ ಆದ್ದರಿಂದಲೇ ಮಹತ್ತಾದದ್ದೂ ಮತ್ತು ಅನುಗ್ರಹಾತ್ಮಕವಾದದ್ದೂ ಆದ ಮನಸ್ಸನ್ನೂ ಮತ್ತು ಅದೇ ಗುಣಗಳುಳ್ಳ ಮಾತೃರೂಪಿಯಾದ ಪೃಥ್ವಿಯ ಮನಸ್ಸನ್ನೂ ಪ್ರಾರ್ಥನಾಪೂರ್ವಕವಾದ ಸ್ತುತಿಗಳಿಂದ ಪೂಜಿಸಿ ತೃಪ್ತಿಪಡಿಸುತ್ತೇನೆ. ಜಗತ್ತಿಗೆಲ್ಲಾ ಮಾತಾಪಿತೃಗಳಾದ ದ್ಯಾವಾಪೃಥಿವಿಗಳು ಶ್ರೇಷ್ಠವಾದ ತಮ್ಮ ಸಾಮರ್ಥ್ಯದಿಂದ ಯಜಮಾನರೂಪರಾದ ಪ್ರಜೆಗಳ ಇಷ್ಟಾರ್ಥಗಳನ್ನು ಅತ್ಯಧಿಕವಾದುದನ್ನಾಗಿಯೂ, ವಿಸ್ತೃತವಾದುದನ್ನಾಗಿಯೂ, ಶಾಶ್ವತವಾದುದನ್ನಾಗಿಯೂ ಸಹ ತಮ್ಮ ರಕ್ಷಣಾಸಹಾಯಗಳಿಂದ ಮಾಡುತ್ತಾರೆ.

## English Translation

Verily I propitiate, by my invocations, the mind of the benevolent father, and the great and spontaneous (affection) of the mother (of all beings): The parents, with kindness, have secured, by their excellent protections, the vast and manifold immortality of their progeny.

। ವಿಶೇಷವಿಷಯಗಳು ।

ಈ ಋಕ್ಕಿನಲ್ಲಿ ದ್ಯಾವಾಪೃಥಿವಿಗಳನ್ನು ಪಿತರಾ ಎಂಬ ಪದದಿಂದ ನಿರ್ದೇಶಿಸದೆ. ಆದರೆ ಪಿತೃಯಾರು ಮಾತೃಯಾರು ಎಂಬುವು ಈ ಋಕ್ಕಿನಿಂದ ನಿಷ್ಕೃಷ್ಟವಾಗಿ ತಿಳಿಯುವುದಿಲ್ಲ. ಸಾಯಣರು ಎರಡು ವಿಧವಾಗಿಯೂ ಅರ್ಥಮಾಡಿದ್ದಾರೆ ಪಿತುಃ ಪಿತೃಸ್ಥಾನೀಯಯೋಃ ಪೃಥಿವ್ಯಾಃ, ಮಾತುಃ—ಮಾತಾಂತರಿಕ್ಷಂ ನಿರ್ಮೀಯಂತೇ ಅಸ್ಮಿನ್ ಭೂತಾನಿ (ನಿ. ೨–೮) ಎಂದು ವಿವರಿಸಿದ್ದಾರೆ. ಪಾಲನಾರ್ಥಕವಾದ ಪಾ ಧಾತುವಿನಿಂದ ನಿಷ್ಪನ್ನವಾಗಿ ಸಕಲ ಭೂತಗಳನ್ನೂ ಪಾಲಿಸತಕ್ಕ ಪೃಥಿವಿಗೆ ಪಿತೃವೆಂದೂ, ಅಂತರಿಕ್ಷದಲ್ಲೇ ಸಕಲಭೂತಗಳೂ ನಿರ್ಮಿತವಾಗುವುದರಿಂದ ಅಂತರಿಕ್ಷಕ್ಕೆ ಮಾತೃವೆಂದೂ ಹೆಸರು ಪ್ರಸಿದ್ಧವಾಗಿದೆಯೆಂದು ನಿರುಕ್ತಕಾರರ ವಚನವನ್ನುದ

ಪರಿಸಿ ಮೊದಲನೆಯ ಅರ್ಥವನ್ನು ಮಾಡಿದ್ದಾರೆ. ಇದೂ ಒಂದು ವಿಧದಲ್ಲಿ ಶಬ್ದನಿರ್ವಚನದ ದೃಷ್ಟಿಯಿಂದ ಸಾಧುವಾಗಿದೆಯೇ ವಿನಹ, ಸಾಂಪ್ರದಾಯಿಕವಾದ ಅರ್ಥಕ್ಕೆ ಹೊಂದಲಾರದು. ಸಾಧಾರಣವಾಗಿ ಅಂತರಿಕ್ಷಕ್ಕೆ ಪಿತೃವೆಂದೂ ಪೃಥ್ವಿಗೆ ಮಾತೃವೆಂದೂ ನಿರ್ದೇಶಿಸುವ ವಾಕ್ಯಗಳೇ ಪ್ರಸಿದ್ಧವಾಗಿವೆ.

**ತನ್ನೋ ವಾತೋ ಮಯೋಭು ವಾತು ಭೇಷಜಂ ತನ್ಮಾತಾ ಪೃಥಿವೀ ತತ್ ಪಿತಾ ದ್ಯೌಃ ।**
**ತದ್ಗ್ರಾವಾಣಃ ಸೋಮಸುತೋ ಮಯೋಭುವಸ್ತದಶ್ವಿನಾ ಶೃಣುತಂ ಧಿಷ್ಣ್ಯಾ ಯುವಂ ॥**

(ಋ ಸಂ. ೧-೮೯-೪)

ಎಂಬಲ್ಲಿ ಪೃಥಿವಿಯನ್ನು ಮಾತೆಯೆಂದೂ ಅಂತರಿಕ್ಷವನ್ನು ಪಿತೃವೆಂದೂ ನಿರ್ದೇಶಿಸಿದೆ.

**ಪ್ರೈಷಃ ಸ್ತೋಮಃ ಪೃಥಿವೀಮಂತರಿಕ್ಷಂ ವನಸ್ಪತೀರೋಷಧೀ ರಾಯೇ ಅಶ್ಯಾಃ ।**
**ದೇವೋದೇವಃ ಸುಹವೋ ಭೂತು ಮಹ್ಯಂ ಮಾ ನೋ ಮಾತಾ ಪೃಥಿವೀ ದುರ್ಮತೌ ಧಾತ್ ।**

(ಋ ಸಂ ೫-೪೨-೧೬)

**ಉಪ ದ್ಯಾಂ ಸ್ಕಂಭಥುಃ ಸ್ಕಂಭನೇನಾಪ್ರಥತಂ ಪೃಥಿವೀಂ ಮಾತರಂ ವಿ ।**

(ಋ. ಸಂ. ೬-೭೨-೨)

**ದ್ಯೌ ಇ ಷ್ಪಿತಃ ಪೃಥಿವಿ ಮಾತರಧ್ರುಗಗ್ನೇ ಭ್ರಾತರ್ವಸವೋ ಮೃಳತಾ ನಃ ।**
**ವಿಶ್ವ ಆದಿತ್ಯಾ ಅದಿತೇ ಸಜೋಷಾ ಅಸ್ಮಭ್ಯಂ ಶರ್ಮ ಬಹುಲಂ ವಿ ಯಂತ ॥**

(ಋ. ಸಂ. ೬-೫೧-೫)

ಇತ್ಯಾದ್ಯನೇಕ ಋಕ್ಕುಗಳಲ್ಲಿ (ಋ. ಸಂ. ೧-೯೦-೭, ೧-೧೮೫-೧೧, ೬-೭೦-೬ ಇತ್ಯಾದಿ) ಅಂತರಿಕ್ಷವನ್ನು ಪಿತೃವೆಂದೂ ಪೃಥ್ವಿಯನ್ನು ಮಾತೃವೆಂದೂ ಸಂಬೋಧಿಸಿದೆ. ಹೀಗೆ ಸಂಹಿತಾ ವಾಕ್ಯಗಳಲ್ಲೇ ಅಲ್ಲದೆ,

**ದ್ಯೌಃ ಪಿತಾ॥ ಪೃಥಿವೀ ಮಾತಾ** (ತೈ. ಬ್ರಾ. ೩-೭-೫-೪-೫).

**ಅಥ ಯತ್ರಾಹೋಪಹೂತೇ ದ್ಯಾವಾಪೃಥಿವೀ ಇತಿ । ತದಗ್ನೀಧ ಆ ದಧಾತಿ ತದಗ್ನೀತ್ಪ್ರತ್ಯಾತ್ಯುಪಹೂತಾ ಪೃಥಿವೀ ಮಾತೋಪ ಮಾಂ ಪೃಥಿವೀ ಮಾತಾ ಹ್ವಯತಾಮಗ್ನಿರಾಗ್ನಿಧ್ರಾತ್ಸ್ವಾಹೋಪಹೂತಾ ದ್ಯೌಷ್ಪಿತೋಪ ಮಾಂ ದ್ಯೌಷ್ಪಿತಾ ।**

(ಶ. ಬ್ರಾ ೧-೮-೧-೪೧)

ಇತ್ಯಾದಿ ಬ್ರಾಹ್ಮಣ ವಾಕ್ಯಗಳಲ್ಲೂ,

**ಮಧು ದ್ಯೌರಸ್ತು ನಃ ಪಿತಾ ।** (ಬೃ. ಉ. ೬-೩-೬) ಇತ್ಯಾದ್ಯುಪನಿಷದ್ವಾಕ್ಯಗಳಲ್ಲೂ ಸಹ ದ್ಯುಲೋಕಾಧಿದೇವತೆಗೆ ಪಿತೃವೆಂಬ ವಿಶೇಷಣವು ರೂಢವಾಗಿರುವುದರಿಂದ ಪ್ರಕೃತವಾದ ಋಕ್ಕಿನಲ್ಲಿ ಸಾಯಣರು **ಯದ್ವಾ** ಎಂದು ಎರಡನೆಯಸಲ ಹೇಳಿರುವ ಅರ್ಥವೇ ಸಾಧುವಾಗಿರುವುದು.

**ಸುರೇತಸಾ**— ಈ ಪದಕ್ಕೆ **ಶೋಭನಸಾಮರ್ಥ್ಯೇನ** ಎಂದರ್ಥಮಾಡಿದ್ದಾರೆ. ಸಾಧಾರಣವಾಗಿ ಈ ಪದಕ್ಕೆ ಸಂತಾನೋತ್ಪತ್ತಿಯ ಸಾಮರ್ಥ್ಯವೆಂಬ ಅರ್ಥವು ಪ್ರಸಿದ್ಧವಾಗಿದ್ದರೂ ಸಹ ಇತರ ಅರ್ಥಗಳಲ್ಲಿಯೂ ಈ ಪದದ ಪ್ರಯೋಗವಿದೆ.

ನಿರುಕ್ತಕಾರರು ಈ ಪದವನ್ನು **ಅರ್ಣಃ, ಕ್ಷೋದಃ** ಇತ್ಯಾದ್ಯುದಕನಾಮಗಳಲ್ಲಿ ಸೇರಿಸಿದ್ದಾರೆ. (ನಿ. ೨-೨೭)

**ದಿವೋ ನ ಯಸ್ಯ ರೇತಸೋ ದುಘಾನಾಃ ಪಂಥಾಸೋ ಯಂತಿ ಶವಸಾಪರೀತಾಃ ।**
**ತರದ್ದ್ವೇಷಾಃ ಸಾಸಹಿಃ ಪೌಂಸ್ಯೇಭಿರ್ಮರುತ್ವಾನ್ನೋ ಭವತ್ವಿಂದ್ರ ಊತೀ ॥**

(ಋ. ಸಂ. ೧-೧೦೦-೩)

ಇತ್ಯಾದಿ ಋಕ್ಕುಗಳಲ್ಲಿ **ವೃಷ್ಟ್ಯು**ದಕಗಳೆಂದರ್ಥವಾಗುತ್ತದೆ.

**ಕಥಾ ಮಹೇ ಪುಷ್ಟಿಂಭರಾಯ ಪೂಷ್ಣೇ ಕದ್ರುದ್ರಾಯ ಸುಮಖಾಯ ಹವಿರ್ದೇ ।**
**ಕದ್ವಿಷ್ಣವ ಉರುಗಾಯಾಯ ರೇತೋ ಬ್ರವಃ ಕದಗ್ನೇ ಶರವೇ ಬೃಹತ್ಯೈ ॥**

(ಋ. ಸಂ. ೪-೩-೭)

ಎಂಬಲ್ಲಿ **ರೇತಸ್** ಶಬ್ದಕ್ಕೆ ಸಾಯಣರು **ಕ್ಷಯಹೇತುವಾದ ಪಾಪ**ವೆಂದರ್ಥಮಾಡಿದ್ದಾರೆ. ಸಂತಾನಜನಕವಾದ ವೀರ್ಯವೆಂಬರ್ಥದಲ್ಲಿ ಈ ಪದದ ಪ್ರಯೋಗವನ್ನೂ ರೇತಸ್ಸಿಗಿರತಕ್ಕ ಅತಿಶಯವಾದ ಶಕ್ತಿಯ ವಿವರಣೆಯನ್ನೂ ತೈತ್ತಿರೀಯ ಸಂಹಿತೆಯಲ್ಲಿ (೫-೬-೮) ವಿಸ್ತೃತವಾಗಿ ತಿಳಿಸಿದೆ.

### ವ್ಯಾಕರಣಪ್ರಕ್ರಿಯಾ

**ಮನ್ಯೇ**—ಮನ ಜ್ಞಾನೇ ಧಾತು. ಲಟ್ ಉತ್ತಮಪುರುಷಏಕವಚನಾಂತರೂಪ. ತಿಙಂತನಿಘಾತಸ್ವರ ಬರುತ್ತದೆ.

**ಅದ್ರುಹಃ**—ದ್ರುಹ ಜಿಘಾಂಸಾಯಾಮ್ ಧಾತು. **ಸತ್ಸೂದ್ವಿಷ**—(ಪಾ. ಸೂ. ೩-೨-೬೧) ಎಂಬುದರಿಂದ ಕ್ವಿಪ್ ಪ್ರತ್ಯಯ. ಕೃದುತ್ತರಪದಪ್ರಕೃತಿಸ್ವರ ಬರುತ್ತದೆ. ಷಷ್ಠೀಏಕವಚನಾಂತರೂಪ.

**ಮಹಿ**—ಮಹ ಪೂಜಾಯಾಂ ಧಾತು. **ಇನ್‌ಸರ್ವಧಾತುಭ್ಯಃ** ಎಂಬುದರಿಂದ ಇನ್ ಪ್ರತ್ಯಯ. ನಿತ್ತಾದುದರಿಂದ ಆದ್ಯುದಾತ್ತಸ್ವರ ಬರುತ್ತದೆ.

**ಹವೀಮಭಿಃ**—ಹ್ವೇಞ್ ಸ್ಪರ್ಧಾಯಾಂ ಶಬ್ದೇ ಚ ಧಾತು. **ಅನ್ಯೇಭ್ಯೋಪಿದೃಶ್ಯಂತೇ** (ಪಾ. ಸೂ. ೩-೨-೭೫) ಎಂಬುದರಿಂದ ಮನಿನ್ ಪ್ರತ್ಯಯ. ಅದಕ್ಕೆ ಛಾಂದಸವಾಗಿ ಈಡಾಗಮ. **ಬಹುಲಂ ಛಂದಸಿ** (ಪಾ.ಸೂ. ೬-೧-೩೪) ಎಂಬುದರಿಂದ ಧಾತುವಿಗೆ ಸಂಪ್ರಸಾರಣ, ಪೂರ್ವರೂಪ. ಪ್ರತ್ಯಯನಿಮಿತ್ತವಾಗಿ ಉಕಾರಕ್ಕೆ ಗುಣ, ಅವಾದೇಶ. ಪ್ರತ್ಯಯನಿತ್ತಾದುದರಿಂದ ಆದ್ಯುದಾತ್ತಸ್ವರ ಬರುತ್ತದೆ.

**ಸುರೇತಸಾ**—ಶೋಭನಂ ರೇತಃ ಯಸ್ಯ ತೇನ. **ಆದ್ಯುದಾತ್ತಂ ದ್ವ್ಯಚ್ ಛಂದಸಿ** (ಪಾ. ಸೂ. ೬-೨-೧೧೯) ಎಂಬುದರಿಂದ ಸು ಸ್ವರಕ್ಕೆ ಬಾಧಕವಾಗಿ ಉತ್ತರಪದಾದ್ಯುದಾತ್ತಸ್ವರ ಬರುತ್ತದೆ.

**ಪಿತರಾ**—ಮಾತಾ ಚ ಪಿತಾ ಚ ಪಿತರಾ **ಪಿತಾಮಾತ್ರಾ** (ಪಾ. ಸೂ. ೧-೨-೭೦) ಎಂಬುದರಿಂದ ಏಕಶೇಷ ಬರುತ್ತದೆ. **ಸುಪಾಂ ಸುಲುಕ್** (ಪಾ. ಸೂ೭-೧-೩೯) ಎಂಬುದರಿಂದ ದ್ವಿವಚನಕ್ಕೆ ಆಕಾರಾದೇಶ ಬರುತ್ತದೆ.

**ಚಕ್ರತುಃ**—ಡುಕೃಞ್ ಕರಣೇ ಧಾತು. ಲಟ್ ಪ್ರಥಮಪುರುಷದ್ವಿವಚನಾಂತರೂಪ. ತಿಙಂತನಿಘಾತಸ್ವರ ಬರುತ್ತದೆ.

ಪ್ರಜಾಯಾಃ — ಜನೀ ಪ್ರಾದುರ್ಭಾವೇ ಧಾತು. **ಉಪಸರ್ಗೇಸಂಜ್ಞಾಯಾಮ್** (ಪಾ. ಸೂ. ೩-೨-೯೯) ಎಂಬುದರಿಂದ ಪ್ರ ಉಪಪದವಾಗಿರುವಾಗ ಡ ಪ್ರತ್ಯಯ. ಡಿತ್ತಾದುದರಿಂದ ಧಾತುವಿನ ಟಿಗೆ ಲೋಪ. ಕೃದುತ್ತರ ಪದಪ್ರಕೃತಿಸ್ವರ ಬರುತ್ತದೆ.

ಅಮೃತಮ್—ನಞೋಜರಮರ—(ಪಾ. ಸೂ. ೬-೨-೧೧೬) ಎಂಬುದರಿಂದ ಉತ್ತರಪದಾದ್ಯುದಾತ್ತ ಸ್ವರ ಬರುತ್ತದೆ.

ವರೀಮಭಿಃ—ವೃಞ್ ವರಣೇ ಧಾತು. ಇದಕ್ಕೆ ಔಣಾದಿಕ ಮನಿನ್ ಪ್ರತ್ಯಯ. ಪ್ರತ್ಯಯನಿಮಿತ್ತವಾಗಿ ಧಾತುವಿನ ಇಕಿಗೆ ಗುಣ. ರ ಪರವಾಗಿ ಬರುತ್ತದೆ. ನಿತ್ತಾದುದರಿಂದ **ಞ್ನಿತ್ಯಾದಿರ್ನಿತ್ಯಮ್** (ಪಾ. ಸೂ. ೬-೧-೧೯೭) ಎಂಬುದರಿಂದ ಆದ್ಯುದಾತ್ತಸ್ವರ ಬರುತ್ತದೆ. ತೃತೀಯಾಬಹುವಚನಾಂತರೂಪ. ॥ ೨ ॥

ಸಂಹಿತಾಪಾಠಃ

ತೇ ಸೂನವಃ ಸ್ವಪಸಃ ಸುದಂಸಸೋ ಮಹೀ ಜಜ್ಞುರ್ಮಾತರಾ ಪೂರ್ವಚಿತ್ತಯೇ ।
ಸ್ಥಾತುಶ್ಚ ಸತ್ಯಂ ಜಗತಶ್ಚ ಧರ್ಮಣಿ ಪುತ್ರಸ್ಯ ಪಾಥಃ ಪದಮದ್ವಯಾವಿನಃ ॥ ೩ ॥

ಪದಪಾಠ

ತೇ । ಸೂನವಃ । ಸುಽಅಪಸಃ । ಸುಽದಂಸಸಃ । ಮಹೀ ಇತಿ । ಜಜ್ಞುಃ । ಮಾತರಾ । ಪೂರ್ವಽಚಿತ್ತಯೇ ।
ಸ್ಥಾತುಃ । ಚ । ಸತ್ಯಂ । ಜಗತಃ । ಚ । ಧರ್ಮಣಿ । ಪುತ್ರಸ್ಯ । ಪಾಥಃ । ಪದಂ । ಅದ್ವಯಾವಿನಃ ॥ ೩ ॥

ಸಾಯಣಭಾಷ್ಯಂ

ತೇ ಪ್ರಸಿದ್ಧಾಃ ಸೂನವೋ ಯುವಾಭ್ಯಾಮುತ್ಪನ್ನಾಃ ಪುತ್ರಸ್ಥಾನೀಯಾಃ ಪ್ರಜಾಃ ಸ್ವಪಸಃ ಶೋಭನಕರ್ಮಾಣಃ ಸುದಂಸಸಃ ಶೋಭನದರ್ಶನಾ ಯುವಾಂ ಮಹೀ ಮಹತ್ಯೌ ಮಾತರಾ ಮಾತೃವದ್ಧಿತಕಾರಿಣ್ಯೌ ಜಜ್ಞುಃ । ಜಾನಂತಿ । ಮಹಾನುಭಾವತಾಮವಗಚ್ಛಂತಿ । ಕಿಮರ್ಥಂ । ಪೂರ್ವಚಿತ್ತಯೇ ಪ್ರಥಮಬುದ್ಧಯೇಽನುಗ್ರಹರೂಪಾಯೈ । ಕಿಂಚ ತೇ ದ್ಯಾವಾಪೃಥಿವ್ಯೌ ಸ್ಥಾತುಃ ಸ್ಥಾವರಸ್ಯ ಜಗತೋ ಜಂಗಮಸ್ಯ ಪುತ್ರಸ್ಯ ಪುತ್ರಸ್ಥಾನೀಯಸ್ಯೋಭಯವಿಧಸ್ಯ ಜಗತೋಽದ್ವಯಾವಿನೋ ನ ವಿದ್ಯತೇ ದ್ವಯಂ ಯಸ್ಯ ತಾದೃಶಸ್ಯ । ಸ್ವಜೀವನಾಯ ಯುಷ್ಮದ್ವ್ಯತಿರಿಕ್ತಮಜಾನತ ಇತ್ಯರ್ಥಃ । ಈದೃಶಸ್ಯ ಧರ್ಮಣಿ ಧಾರಣೇ ರಕ್ಷಣೇ ನಿಮಿತ್ತಭೂತೇ ಸತಿ ಪದಂ ಸ್ಥಾನಂ ಸತ್ಯಮಬಾಧ್ಯಂ ಪಾಥಃ । ಸಕ್ಷಥಃ ದತ್ಥ ಇತ್ಯರ್ಥಃ । ಯದ್ವಾ ।

**ತೇ ಪ್ರಸಿದ್ಧಾಃ ಸೂನವ ಉತ್ಪಾದ್ಯಮಾನಾಃ ಸ್ವಪಸಃ ಶೋಭನಪ್ರಕಾಶಾದಿಕರ್ಮಾಣಃ ಸುದಂಸಸಃ ಶೋಭನ-ದರ್ಶನಾಃ ಸುಷ್ಠೂಪಕ್ಷಯಂತೋ ವಾತ್ಮಾನಂ ಸ್ವವ್ಯಾಪಾರಾಯ ಈದೃಶಾ ರಶ್ಮಯೋ ಮಹೀ ಮಹತ್ಯೌ ದ್ಯಾವಾಪೃಥಿವ್ಯೌ ಪೂರ್ವಚಿತ್ತಯೇ ಪ್ರಾಣಿನಾಂ ಪೂರ್ವಜ್ಞಾನಾಯ ಜಜ್ಞುಃ । ಜಾತವಂತಃ । ದ್ಯಾವಾ-ಪೃಥಿವ್ಯೋರಂತರಾಲೇ ವ್ಯಾಪ್ತಾ ಇತ್ಯರ್ಥಃ । ಕಿಂಚ ಸ್ಥಾತುರ್ಜಗತಶ್ಚ ಧರ್ಮಣಿ ಧಾರಣೇ ತದರ್ಥಮ-ದ್ವಯಾವಿನೋ ಮಾರ್ಗದ್ವಯರಹಿತಸ್ಯ ॥ ಬಹುಲಂ ಛಂದಸೀತಿ ದ್ವಯಶಬ್ದಾನ್ಮತ್ವರ್ಥೀಯೋ ವಿನಿಃ । ಅನ್ಯೇಷಾಮಪಿ ದೃಶ್ಯತ ಇತಿ ದೀರ್ಘಃ ॥ ಪುತ್ರಸ್ಯ ಯುಷ್ಮತ್ಪುತ್ರಸ್ಥಾನೀಯಸ್ಯಾದಿತ್ಯಸ್ಯ ಪದಂ ಮಾರ್ಗಂ ಸತ್ಯಂ ಪಾಥಃ । ಅವಶ್ಯಂ ರಕ್ಷಥಃ ॥**

### ಪ್ರತಿಪದಾರ್ಥ

**ತೇ**—ಪ್ರಸಿದ್ಧರಾದವರೂ । **ಸ್ವಪಸಃ**—ಶ್ರೇಷ್ಠವಾದ ಕರ್ಮವುಳ್ಳವರೂ । **ಸುದಂಸಸಃ**—ಉತ್ತಮವಾದ ರೂಪವುಳ್ಳವರೂ ಆದ । **ಸೂನವಃ**—ಪುತ್ರಸ್ಥಾನೀಯರಾದ ಯಜ್ಞಕರ್ತರು । **ಮಹೀ**—ಮಹತ್ತಾದ ಸ್ವರೂಪವುಳ್ಳವರೂ । **ಮಾತರಾ**—ಜನನಿಯರಂತೆ ಹಿತಕಾರಿಗಳೂ ಆದ ದ್ಯಾವಾಪೃಥಿವಿಗಳನ್ನು । **ಪೂರ್ವಚಿತ್ತಯೇ**—ಅನುಗ್ರಹರೂಪವಾದ ಪ್ರಥಮಜ್ಞಾನಕ್ಕಾಗಿ (ಅಥವಾ) (ನಿಮ್ಮ ಅನುಗ್ರಹವನ್ನು ಪಡೆದ) ಹಿಂದಿನ ಅನುಭವಗಳಿಂದ । **ಜಜ್ಞುಃ**—ತಿಳಿಯುತ್ತಾರೆ । (ಮತ್ತು ನೀವು) **ಅದ್ವಯಾವಿನಃ**—ಇವರಲ್ಲದೆ ಎರಡನೆಯ ಇನ್ನಾರನ್ನೂ ತುಂಬಿಕೊಳ್ಳದೇ ಇರತಕ್ಕ ಪೂರ್ಣವಾಗಿ ಇವರನ್ನೇ ನಂಬಿರತಕ್ಕ । **ಸ್ಥಾತುಃ**—ಸ್ಥಾವರಾತ್ಮಕವಾದುದೂ । **ಜಗತಶ್ಚ**, **ಪುತ್ರಸ್ಯ**—ಜಂಗಮಾತ್ಮಕವಾದುದೂ ।ಆದ ಲೋಕದ ಪ್ರಜೆಗಳ । **ಧರ್ಮಣಿ**—ರಕ್ಷಣೆಯಲ್ಲಿ । **ಸತ್ಯಂ**—ಸತ್ಯವಾಗಿಯೂ (ನಿರ್ವಿಘ್ನವಾಗಿ) । **ಪದಂ**—(ತಮ್ಮ)ಸ್ಥಾನವನ್ನು । **ಪಾಥಃ**—ರಕ್ಷಿಸುತ್ತೀರಿ (ರಕ್ಷಣಾತ್ಮಕವಾದ ಕಾರ್ಯವನ್ನು ನೆರವೇರಿಸುತ್ತೀರಿ) । [ **(ಅಥವಾ) ತೇ**—ಜಗತ್ಪ್ರಸಿದ್ಧವಾದವೂ । **ಸ್ವಪಸಃ**—ಶ್ರೇಷ್ಠವಾದ ಪ್ರಕಾಶನವೇ ಮುಂತಾದ ಕರ್ಮವುಳ್ಳವೂ । **ಸುದಂಸಸಃ**—ಶ್ರೇಷ್ಠವಾದ ರೂಪವುಳ್ಳವೂ ಆದ । **ಸೂನವಃ**—ಉತ್ಪನ್ನವಾದವೂ ಆದ (ಆದಿತ್ಯನ) ರಶ್ಮಿಗಳು । **ಮಹೀ**—ಮಹತ್ತಾದ ಆಕಾರವುಳ್ಳ ದ್ಯಾವಾಪೃಥಿವಿಗಳನ್ನು । **ಪೂರ್ವಚಿತ್ತಯೇ**—(ಲೋಕದ ಪ್ರಾಣಿಗಳ) ಪ್ರಥಮಜ್ಞಾನಕ್ಕಾಗಿ । **ಜಜ್ಞುಃ**—ತಿಳಿಯುತ್ತವೆ ಎಂದರೆ ದ್ಯಾವಾಪೃಥಿವಿಗಳಲ್ಲೆಲ್ಲಾ ವ್ಯಾಪಿಸುತ್ತವೆ । ಮತ್ತು **ಸ್ಥಾತುಃ**—ಸ್ಥಾವರಾತ್ಮಕವಾದುದೂ । **ಜಗತಶ್ಚ**—ಜಂಗಮಾತ್ಮಕವಾದುದೂ ಆದ ಲೋಕದ । **ಧರ್ಮಣಿ**—ಧಾರಣರೂಪವಾದ ಕರ್ಮದಲ್ಲಿ ಅಥವಾ ಧಾರಣರೂಪವಾದ ಕರ್ತವ್ಯದ ನಿರ್ವಹಣೆಗಾಗಿ । **ಅದ್ವಯಾವಿನಃ**—ಮಾರ್ಗದ್ವಯವಿಲ್ಲದೇ (ಯಾವಾಗಲೂ) ಒಂದೇ ಮಾರ್ಗವನ್ನು ಅನುಸರಿಸುವ । **ಪುತ್ರಸ್ಯ**—ನಿಮ್ಮ ಪುತ್ರರೂಪನಾದ ಆದಿತ್ಯನ । **ಪದಂ**—ಮಾರ್ಗವನ್ನು । **ಸತ್ಯಂ**—ಸತ್ಯವಾಗಿಯೂ । **ಪಾಥಃ**—(ನೀವು) ರಕ್ಷಿಸುತ್ತೀರಿ].

### ಭಾವಾರ್ಥ

ಜಗತ್ಪ್ರಸಿದ್ಧವಾದವೂ, ಶ್ರೇಷ್ಠವಾದ ಪ್ರಕಾಶನವೇ ಮುಂತಾದ ಕರ್ಮವುಳ್ಳವೂ, ಆಕರ್ಷಕವಾದ ರೂಪವುಳ್ಳವೂ, ಆದಿತ್ಯನಿಂದ ಉತ್ಪನ್ನವಾದವೂ ಆದ ಆದಿತ್ಯನ ರಶ್ಮಿಗಳು ಲೋಕವನ್ನು ಎಚ್ಚರಗೊಳಿಸುವುದಕ್ಕಾಗಿ ದ್ಯಾವಾಪೃಥಿವಿಗಳನ್ನೆಲ್ಲಾ ವ್ಯಾಪಿಸುತ್ತವೆ. ಎಲೈ ದ್ಯಾವಾಪೃಥಿವಿಗಳೇ, ಸ್ಥಾವರಾತ್ಮಕವಾದುದೂ, ಜಂಗಮಾತ್ಮಕವಾದುದೂ ಆದ ಲೋಕದ ಧಾರಣರೂಪದ ಕರ್ತವ್ಯದ ನಿರ್ವಹಣೆಗಾಗಿ ಯಾವಾಗಲೂ ಒಂದೇ ಮಾರ್ಗವನ್ನನುಸರಿಸುವ ನಿಮ್ಮ ಪುತ್ರನಾದ ಆದಿತ್ಯನ ಮಾರ್ಗವನ್ನು ನೀವು ಸತ್ಯವಾಗಿಯೂ ರಕ್ಷಿಸುತ್ತೀರಿ.

## English Translation

These, your children, the performers of good works, and of goodly appearance, recognize you as their great parents, through experience of former (kindness): preserve uninterrupted stability in the functions of your progeny, whether stationary or moving, (depending for existence) on none other than you.

॥ ವಿಶೇಷವಿಷಯಗಳು ॥

ಈ ಋಕ್ಕಿಗೆ ಎರಡುವಿಧವಾದ ಅರ್ಥಗಳನ್ನು ಹೇಳಿರುವುದನ್ನು ಪ್ರತಿಪದಾರ್ಥದಲ್ಲಿ ತಿಳಿಸಿದೆ. ಮೊದಲನೆಯದಾಗಿ **ಯಜ್ಞಕರ್ತರು** ದ್ಯಾವಾಪೃಥಿವಿಗಳ ಸ್ವರೂಪವನ್ನು ತಿಳಿಯುತ್ತಾರೆಂದೂ ಅಂತಹ ಪ್ರಜೆಗಳನ್ನೆಲ್ಲಾ ದ್ಯಾವಾಪೃಥಿವಿಗಳು ರಕ್ಷಿಸುವರೆಂದೂ ಅರ್ಥಮಾಡಿದೆ. ಎರಡನೆಯದಾಗಿ **ಆದಿತ್ಯರಶ್ಮಿಗಳು** ದ್ಯಾವಾಪೃಥಿವಿಗಳನ್ನು ವ್ಯಾಪಿಸಿ ಲೋಕದಲ್ಲಿ ಯಜ್ಞಕರ್ತರಿಗೆ ಪೂರ್ವಭಾವಿಯಾಗಿ ಕರ್ತವ್ಯ ಜ್ಞಾನಗಳನ್ನು ಕೊಡುವುದೆಂದೂ ಮತ್ತು ದ್ಯಾವಾಪೃಥಿವಿಗಳು ತಮ್ಮ ಪುತ್ರರೂಪನಾದ **ಆದಿತ್ಯನ** ಸ್ಥಿರವಾದ ಮಾರ್ಗವನ್ನು ರಕ್ಷಿಸಿ ಯಜ್ಞಕರ್ತರ ಕರ್ಮಾಚರಣೆಗೆ ಅನುಕೂಲಪಡಿಸುವರೆಂದೂ ತಿಳಿಸಿದೆ. ಮೊದಲನೆಯ ಅರ್ಥದಲ್ಲಿ **ಸ್ವಪಸಃ, ಸುದಂಸಸಃ, ಸೂನವಃ** ಇವು ಯಜಮಾನರಿಗೆ ವಿಶೇಷಣಗಳಾಗಿವೆ.

**ಸ್ವಪಸಃ— ಅಪಃ, ಅಪ್ನಃ** ಎಂದು **ಕರ್ಮನಾಮಗಳಲ್ಲಿ ಅಪಸ್** ಶಬ್ದವು ಪಠಿತವಾಗಿದೆ (ನಿ. ೩-೧). ಶ್ರೇಷ್ಠವಾದ ಯಾಗಾದಿ ಕರ್ಮವುಳ್ಳವರೆಂದು ಒಂದು ಅರ್ಥವೂ, ಲೋಕಪ್ರಕಾಶನಾದಿ ಕರ್ಮವುಳ್ಳವರು (ಆದಿತ್ಯರಶ್ಮಿಗಳು) ಎಂದು ಇನ್ನೊಂದರ್ಥವೂ ಸಾಧ್ಯವಾಗುತ್ತದೆ.

**ಸುದಂಸಸಃ— ದಂಸ** ಶಬ್ದವೂ ಸಹ ಕರ್ಮನಾಮಗಳಲ್ಲಿಯೇ ಪಠಿತವಾಗಿದೆ. ಆದರೆ **ಅಪಸ್** ಶಬ್ದವು ಇಲ್ಲಿ ಕರ್ಮವಾಚಕವಾಗಿರುವುದರಿಂದ **ದಂಸ**ಶಬ್ದಕ್ಕೆ ರೂಪವೆಂದರ್ಥಮಾಡಿದೆ. **ದಸಿ ದಂಶದರ್ಶನಯೋಃ** ಎಂದಿರುವುದರಿಂದ **ಸುದರ್ಶನ**ವೆಂದರ್ಥಮಾಡಬಹುದು. **ಕರ್ಮ**ವೆಂಬರ್ಥದಲ್ಲಿರುವ ಪ್ರಯೋಗಗಳಿಗಿಂತಲೂ ಅಧಿಕವಾಗಿ **ದರ್ಶನ**ವೆಂಬರ್ಥದಲ್ಲಿಯೇ ಈ ಪದದ ಪ್ರಯೋಗವಿರುವುದರಿಂದ ಇಲ್ಲಿ ಆಕರ್ಷಕವಾದ ರೂಪವುಳ್ಳವು ಎಂದು ಅರ್ಥಮಾಡಬಹುದು.

> **ಉಷಸ್ತಮಶ್ಯಾಂ ಯಶಸಂ ಸುವೀರಂ ದಾಸಪ್ರವರ್ಗಂ ರಯಿಮಶ್ವಬುಧ್ಯಂ ।**
> **ಸುದಂಸಸಾ ಶ್ರವಸಾ ಯಾ ವಿಭಾಸಿ ವಾಜಪ್ರಸೂತಾ ಸುಭಗೇ ಬೃಹಂತಂ ॥**
> (ಋ. ಸಂ. ೧-೯೨-೮)

ಎಂಬ ಋಕ್ಕಿನಲ್ಲಿ **ಸುದಂಸಸಾ** ಎಂಬ ಪದವು **ಉಷಸ್ಸಿನ** ಪರವಾಗಿದೆ. ಉಷಸ್ಸಿನ ಮನೋಹರವಾದ ಕಾಂತಿಯುಳ್ಳ ರೂಪವನ್ನು ತಿಳಿಸುತ್ತದೆ. ಹೀಗೆಯೇ,

> **ತಂ ದೇವಾ ಬುಧ್ನೇ ರಜಸಃ ಸುದಂಸಸಂ ದಿವಸ್ಪೃಥಿವ್ಯೋರರತಿಂ ನ್ಯೇರಿರೇ ।**
> **ರಥಮಿವ ವೇದ್ಯಂ ಶುಕ್ರಶೋಚಿಷಮಗ್ನಿಂ ಮಿತ್ರಂ ನ ಕ್ಷಿತಿಷು ಪ್ರಶಂಸ್ಯಂ ॥**
> (ಋ. ಸಂ. ೩-೨-೩)

ಎಂಬಲ್ಲಿಯೂ ಸಹ **ಸುದಂಸಸಃ** ಎಂಬ ಪದಕ್ಕೆ ಸಾಯಣರು **ಶೋಭನದರ್ಶನಂ** ಎಂದೇ ಅರ್ಥಮಾಡಿದ್ದಾರೆ. ಅಗ್ನಿಯ ರೂಪವನ್ನು ತಿಳಿಸುತ್ತದೆ. ಅದೇ ರೀತಿಯಲ್ಲಿ ಪ್ರಕೃತವಾದ ಋಕ್ಕಿನಲ್ಲಿಯೂ ಸಹ ಆದಿತ್ಯರಶ್ಮಿಗಳ ಮನೋಹರವಾದ ರೂಪವನ್ನು ವರ್ಣಿಸುತ್ತದೆ.

**ಪೂರ್ವಚಿತ್ತಯೇ ಜಗ್ಮುಃ**—ಎಂಬುದಕ್ಕೆ **ಪ್ರಾಣಿನಾಂ ಪೂರ್ವಜ್ಞಾನಾಯ ದ್ಯಾವಾಪೃಥಿವ್ಯೋರಂತರಾಲೇ ವ್ಯಾಪ್ತಾಃ ।** ಪ್ರಾತಃಕಾಲದಲ್ಲೇ ಪ್ರಾಣಿಗಳ ಎಚ್ಚರಕ್ಕಾಗಿಯೂ ಕರ್ತವ್ಯಜ್ಞಾನಗಳನ್ನು ತಿಳಿಸುವುದಕ್ಕಾಗಿಯೂ ಸಹ ದ್ಯಾವಾಪೃಥಿವಿಗಳನ್ನು ಪ್ರವೇಶಿಸಿದವು ಎಂದು ವಿವರಿಸಿದ್ದಾರೆ ಈ ವಿವರಣೆಯು ಆದಿತ್ಯರಶ್ಮಿಗಳ ವ್ಯಾಪ್ತಿಯನ್ನು ತಿಳಿಸುತ್ತದೆ.

**ಆದಿತ್ಯಸ್ಯ ರಶ್ಮಯ ಉಭೌ ಲೋಕೌ ಗಚ್ಛಂತಿ ।**

(ಛಾ. ಉ. ೮-೬-೨)

ಇತ್ಯಾದ್ಯುಪನಿಷದ್ವಾಕ್ಯಗಳಲ್ಲಿ ಆದಿತ್ಯರಶ್ಮಿಗಳು ದ್ಯಾವಾಪೃಥಿವಿಗಳೆರಡನ್ನೂ ವ್ಯಾಪಿಸಿರುವುದನ್ನು ವರ್ಣಿಸಿರುವಂತೆ ಇಲ್ಲಿಯೂ ವರ್ಣಿಸಿದೆ.

**ಪುತ್ರಸ್ಯ—ಯುಷ್ಮತ್ಪುತ್ರಸ್ಥಾನೀಯಸ್ಯ ಆದಿತ್ಯಸ್ಯ ।** ನಿಮ್ಮ ಪುತ್ರರೂಪನಾದ ಆದಿತ್ಯನ ಎಂಬರ್ಥವು ಹೆಚ್ಚು ಹೊಂದಿಕೊಳ್ಳುತ್ತದೆ.

**ನಮೋ ಮಿತ್ರಸ್ಯ ವರುಣಸ್ಯ ಚಕ್ಷಸೇ ಮಹೋ ದೇವಾಯ ತದೃತಂ ಸಪರ್ಯತ ।**
**ದೂರೇದೃಶೇ ದೇವಜಾತಾಯ ಕೇತವೇ ದಿವಸ್ಪುತ್ರಾಯ ಸೂರ್ಯಾಯ ಶಂಸತ ॥**

(ಋ. ಸಂ. ೧೦-೩೭-೧)

ಇತ್ಯಾದಿ ಋಕ್ಕುಗಳಲ್ಲಿ **ಸೂರ್ಯನನ್ನು** ವರ್ಣಿಸಿರುವ ಅಂಶವನ್ನು ಇಲ್ಲಿ ತಿಳಿಸಿದೆ. ಮಾರ್ಗದ್ವಯರಹಿತನಾದ ಈ ಆದಿತ್ಯನ ಲೋಕರಕ್ಷಣಾಕ್ರಮವು ಗುರುತರವಾದುದು.

**ಮಹ ಇತ್ಯಾದಿತ್ಯಃ । ಆದಿತ್ಯೇನ ವಾವ ಸರ್ವೇ ಲೋಕಾ ಮಹೀಯಂತೇ ।**

(ತೈ. ಉ. ೧-೫-೨)

ಇತ್ಯಾದಿಋಕ್ಕುಗಳಲ್ಲಿ ಲೋಕಗಳ ವೃದ್ಧಿಯೂ ಮಹಿಮೆಯೂ ಆದಿತ್ಯನ ಶಕ್ತಿಯಿಂದಲೇ ಸಾಧ್ಯವಾಗುವುದೆಂದು ವರ್ಣಿಸಿರುವ ಅಂಶವನ್ನು ಇಲ್ಲಿಯೂ ತಿಳಿಸಿ ಅಂತಹ ಆದಿತ್ಯನ ಮಾರ್ಗವನ್ನು ರಕ್ಷಿಸುತ್ತೀರಿ ಎಂದು ದ್ಯಾವಾಪೃಥಿವಿಗಳನ್ನು ಸ್ತುತಿಸಿದೆ.

॥ ವ್ಯಾಕರಣಪ್ರಕ್ರಿಯಾ ॥

**ಸ್ವಪಸಃ—**ಶೋಭನಂ ಅಪಃ ಯೇಷಾಂ ತೇ ಸ್ವಪಸಃ **ಆದ್ಯುದಾತ್ತಂದ್ವ್ಯಚ್ ಛಂದಸಿ** (ಪಾ. ಸೂ ೬-೨-೧೧೯) ಎಂಬುದರಿಂದ ಉತ್ತರಪದಾದ್ಯುದಾತ್ತಸ್ವರ ಬರುತ್ತದೆ. ಸುದಂಸಸಃ ಎಂಬಲ್ಲಿಯೂ ಹೀಗೆಯೇ ಸಮಾಸಸ್ವರಗಳು ಬರುತ್ತವೆ.

**ಜಜ್ಞುಃ**—ಜ್ಞಾ ಅವಬೋಧನೇ ಧಾತು. ಛಾಂದಸವಾಗಿ ಲಿಟ್ ಪ್ರಥಮಪುರುಷಬಹುವಚನಾಂತರೂಪ. ಅಥವಾ ಜನೀ ಪ್ರಾದುರ್ಭಾವೇ ಧಾತು. ಅತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

**ಮಾತರಾ**—ದ್ವಿತೀಯಾದ್ವಿವಚನ ಪರವಾದಾಗ **ಸುಪಾಂ ಸುಲುಕ್** (ಪಾ. ಸೂ. ೭-೧-೩೯) ಎಂಬುದರಿಂದ ಅದಕ್ಕೆ ಆಕಾರಾದೇಶ.

**ಸ್ಥಾತುಃ**—ಷ್ಠಾ ಗತಿನಿವೃತ್ತೌ ಧಾತು. ತೃಚ್ ಪ್ರತ್ಯಯ. ಷಷ್ಠೀಏಕವಚನ ಪರವಾದಾಗ **ಋತ ಉತ್** (ಪಾ. ಸೂ. ೬-೧-೧೧೧) ಎಂಬುದರಿಂದ ಉಕಾರ ರಪರವಾಗಿ ಬರುತ್ತದೆ. **ರಾತ್ಸಸ್ಯ** (ಪಾ. ಸೂ. ೮-೨-೨೪) ಎಂಬುದರಿಂದ ಸಕಾರಕ್ಕೆ ಲೋಪ. ರೇಫಕ್ಕೆ ವಿಸರ್ಗ.

**ಧರ್ಮಣಿ**—ಧೃಞ್ ಧಾರಣೇ ಧಾತು. ಮನಿನ್ ಪ್ರತ್ಯಯ. ಅದನ್ನು ನಿಮಿತ್ತೀಕರಿಸಿ ಧಾತುವಿನ ಇಕಿಗೆ ಗುಣ. ರಪರವಾಗಿ ಬರುತ್ತದೆ. ನಿತ್ತಾದುದರಿಂದ ಆದ್ಯುದಾತ್ತಸ್ವರ ಬರುತ್ತದೆ. ಸಪ್ತಮಿಯಲ್ಲಿ **ನಙಿಸಂಬುದ್ಧ್ಯೋಃ** ಎಂಬುದರಿಂದ ಅಲ್ಲೋಪ ಬರುವುದಿಲ್ಲ.

**ಪಾಥಃ**—ಪಾ ರಕ್ಷಣೇ ಧಾತು. ಲಟ್ ಮಧ್ಯಮಪುರುಷದ್ವಿವಚನಾಂತರೂಪ. ತಿಙಂತನಿಘಾತಸ್ವರ ಬರುತ್ತದೆ.

**ಅದ್ವಯಾವಿನಃ**—ದ್ವಯಂ ಅಸ್ಯ ಅಸ್ತಿ ಇತಿ ದ್ವಯಾವೀ **ಬಹುಲಂ ಛಂದಸಿ** ಎಂಬುದರಿಂದ ದ್ವಯ ಶಬ್ದದ ಮೇಲೆ ಮತ್ವರ್ಥದಲ್ಲಿ ವಿನಿ ಪ್ರತ್ಯಯ. **ಅನ್ಯೇಷಾಮಪಿ ದೃಶ್ಯತೇ** (ಪಾ. ಸೂ. ೬-೩-೧೩೭) ಎಂಬುದರಿಂದ ಪೂರ್ವಕ್ಕೆ ದೀರ್ಘ. ನ ದ್ವಯಾವೀ ತಸ್ಯ. **ತತ್ಪುರುಷೇತುಲ್ಯಾರ್ಥ.** (ಪಾ. ಸೂ. ೬-೨-೨) ಎಂಬುದರಿಂದ ನಞ್ ಪೂರ್ವಪದಪ್ರಕೃತಿಸ್ವರ ಬರುತ್ತದೆ. ॥ ೩ ॥

———:o:———

**ಸಂಹಿತಾಪಾಠಃ**

**ತೇ ಮಾಯಿನೋ ಮಮಿರೇ ಸುಪ್ರಚೇತಸೋ ಜಾಮೀ ಸಯೋನೀ**

**ಮಿಥುನಾ ಸಮೋಕಸಾ ।**

**ನವ್ಯಂನವ್ಯಂ ತಂತುಮಾ ತನ್ವತೇ ದಿವಿ ಸಮುದ್ರೇ ಅಂತಃ ಕವಯಃ**

**ಸುದೀತಯಃ ॥ ೪ ॥**

### ಪದಪಾಠಃ

ತೇ । ಮಾಯಿನಃ । ಮಮಿರೇ । ಸುಽಪ್ರಚೇತಸಃ । ಜಾಮೀ ಇತಿ । ಸಯೋನೀ ಇತಿ ಸಽಯೋನೀ । ಮಿಥುನಾ । ಸಂಽಓಕಸಾ ।

ನವ್ಯಂಽನವ್ಯಂ । ತಂತುಂ । ಆ । ತನ್ವತೇ । ದಿವಿ । ಸಮುದ್ರೇ । ಅಂತರಿತಿ । ಕವಯಃ । ಸುಽದೀತಯಃ ।

॥ ೪ ॥

### ಸಾಯಣಭಾಷ್ಯಂ

ತೇ ಪ್ರಸಿದ್ಧೇ ದ್ಯಾವಾಪೃಥಿವ್ಯೌ ಮಾಯಿನಃ । ಮಾಯಾ ಪ್ರಜ್ಞಾ । ಸ್ವವಿಷಯಪ್ರಜ್ಞಾವಂತಃ ಪ್ರಜ್ಞೋಪಲಕ್ಷಿತಕರ್ಮವಂತೋ ವಾ ಸುಪ್ರಚೇತಸಃ ಸುಷ್ಠು ಪ್ರಕರ್ಷೇಣ ಚೇತಿತುಂ ಶಕ್ತಾ ರಶ್ಮಯೋ ಮಮಿರೇ । ಮಿಮತೇ । ಪ್ರಮಾಣೇನ ಪರಿಛಿಂದಂತಿ । ಕೀದೃಶ್ಯೌ ತೇ । ಜಾಮೀ ಪರಸ್ಪರಂ ಭಗಿನೀ । ಏತತ್ಕುತ ಇತಿ ಚೇತ್ ಉಚ್ಯತೇ । ಸಯೋನೀ ಸಮಾನೋತ್ಪತ್ತಿಸ್ಥಾನೇ ಮಿಥುನಾ ಪ್ರಾಣ್ಯುತ್ಪತ್ತಯೇ ಮಿಥುನಭೂತೇ । ಪರಸ್ಪರಮವಿಯುಕ್ತೇ ಇತ್ಯರ್ಥಃ । ಸಮೋಕಸಾ ಸಮಾನಸ್ಥಾನೇ । ದ್ಯುಪೃಥಿವ್ಯೋ-ರೇಕಸ್ಮಿನ್ನೇವಾವಕಾಶರೂಪ ಆಕಾಶೇಽವಸ್ಥಾನಾತ್ । ಸಮೀಚೀನಸ್ಥಾನೇ ವಾ । ಕಿಂಚ ಕವಯೋ ಮೇಧಾವಿನಃ ಸ್ವವ್ಯಾಪಾರವಿಷಯಜ್ಞಾನವಂತ್ಯ ಸುದೀತಯಃ ಸುಷ್ಠುದ್ಯೋತನಾ ರಶ್ಮಯೋ ದಿವಿ ದ್ಯೋತಮಾನೇ ಸಮುದ್ರೇಂತರಿಕ್ಷೇಽಂತರ್ಮಧ್ಯೇ । ಸಮುದ್ರಶಬ್ದೋಽಂತರಿಕ್ಷನಾಮಸು ಪಾಠಾತ್ತದ್ವ-ಚನಃ । ಸ ಚೈವಂ ಯಾಸ್ಕೇನ ನಿರುಕ್ತಃ । ಸಮುದ್ರಃ ಕಸ್ಮಾತ್ಸಮುದ್ದ್ರವಂತ್ಯಸ್ಮಾದಾಪಃ ಸಮಭಿದ್ರವಂ-ತ್ಯೇನಮಾಪಃ ಸಂಮೋದಂತೇಽಸ್ಮಿನ್ಭೂತಾನಿ ಸಮುದಕೋ ಭವತಿ ಸಮುನತ್ತೀತಿ ವಾ । ನಿ. ೨-೧೦ । ಇತಿ । ನವ್ಯಂ ನವ್ಯಂ ತಂತುಂ ತನನೀಯಂ ವಿಸ್ತಾರಣೀಯಂ । ಜಾತ್ಯೇಕವಚನಂ । ರಶ್ಮಿನಾ ತನ್ವತೇ । ಸಮಂತಾದ್ವಿಸ್ತಾರಯಂತಿ ॥

### ಪ್ರತಿಪದಾರ್ಥ

**ಜಾಮೀ**— ಸಹೋದರಿಯರೂ । **ಸಯೋನೀ**— ಒಂದೇ ಉತ್ಪತ್ತಿಸ್ಥಾನವುಳ್ಳವರೂ । **ಮಿಥುನಾ**— ಒಟ್ಟಿಗಿರುವವರೂ । **ಸಮೋಕಸಾ**—ಆಕಾಶರೂಪವಾದ ಒಂದೇ ವಾಸಸ್ಥಾನವುಳ್ಳವರೂ ಆದ । **ತೇ**—ಆ ದ್ಯಾವಾ ಪೃಥಿವಿಗಳು । **ಮಾಯಿನಃ**—(ತಮ್ಮ ವಿಷಯದಲ್ಲಿ ಪೂರ್ಣವಾದ) ಪ್ರಜ್ಞೆಯುಳ್ಳವೂ । **ಸುಪ್ರಚೇತಸಃ**—ಶ್ರೇಷ್ಠ ವಾದ ಚೈತನ್ಯದಾನದ ಶಕ್ತಿಯುಳ್ಳವೂ ಆದ ರಶ್ಮಿಗಳನ್ನು । **ಮಮಿರೇ**—ಪ್ರಮಾಣರೂಪದಲ್ಲಿ ನಿಯಮಿಸುತ್ತವೆ । **ಕವಯಃ**—ಮೇಧಾವಿಗಳೂ ಎಂದರೆ ತಮ್ಮ ಕರ್ತವ್ಯವನ್ನು ಚೆನ್ನಾಗಿ ತಿಳಿದವೂ । **ಸುದೀತಯಃ**—ಶ್ರೇಷ್ಠವಾಗಿ ಪ್ರಕಾಶಿಸುವುವೂ ಆದ ರಶ್ಮಿಗಳು । **ದಿವಿ**—ಪ್ರಕಾಶಮಾನವಾದ । **ಸಮುದ್ರೇ ಅಂತಃ**—ಅಂತರಿಕ್ಷದ ಮಧ್ಯಭಾಗ ದಲ್ಲಿ । **ನವ್ಯಂನವ್ಯಂ**—ಅತ್ಯಂತ ನೂತನವಾದುದೂ । **ತಂತುಂ**—ವಿಸ್ತೃತವಾಗತಕ್ಕದ್ದೂ ಆದ ತಮ್ಮ ಪ್ರಭೆಗಳನ್ನು । **ಆ ತನ್ವತೇ**—ಸುತ್ತಲೂ ಪ್ರಸರಿಸುತ್ತವೆ ॥

ಭಾವಾರ್ಥ

ಸಹೋದರಿಯರೂ, ಒಂದೇ ಉತ್ಪತ್ತಿಸ್ಥಾನವುಳ್ಳವರೂ, ಒಟ್ಟಿಗಿರುವವರೂ, ಆಕಾಶರೂಪವಾದ ಒಂದೇ ವಾಸಸ್ಥಾನವುಳ್ಳವರೂ ಆದ ದ್ಯಾವಾಪೃಥಿವಿಗಳು ತಮ್ಮ ವಿಷಯದಲ್ಲಿ ಪೂರ್ಣವಾದ ಪ್ರಜ್ಞೆಯುಳ್ಳವೂ ಶ್ರೇಷ್ಠವಾದ ಚೈತನ್ಯಪ್ರದಾನದ ಶಕ್ತಿಯುಳ್ಳವೂ ಆದ ರಶ್ಮಿಗಳನ್ನು ಪ್ರಮಾಣರೂಪದಲ್ಲಿ ನಿಯಮಿಸುತ್ತವೆ. ಮೇಧಾವಿಗಳೂ ಎಂದರೆ ತಮ್ಮ ಕರ್ತವ್ಯವನ್ನು ಚೆನ್ನಾಗಿ ತಿಳಿದವೂ, ಶ್ರೇಷ್ಠವಾಗಿ ಪ್ರಕಾಶಿಸುವುವೂ ಆದ ರಶ್ಮಿಗಳು ಪ್ರಕಾಶಮಾನವಾದ ಅಂತರಿಕ್ಷದ ಮಧ್ಯಭಾಗದಲ್ಲಿ ಅತ್ಯಂತ ನೂತನವಾದುದೂ ವಿಸ್ತೃತವಾಗತಕ್ಕದ್ದೂ ಆದ ತಮ್ಮ ಪ್ರಭೆಗಳನ್ನು ಸುತ್ತಲೂ ಪ್ರಸರಿಸುವಂತೆ ಮಾಡುತ್ತವೆ.

## English Translation

Those provident and intlligent sisters, (the rays of light), conceived of the same womb, (ever) united (with each other), and dwelling in the same abode, mete out (all things) : knowing (their functions), and bright-shining, they spread in ever new (directions) throughout the radiant firmament.

ವಿಶೇಷವಿಷಯಗಳು

**ಜಾಮೀ—ಜಾಮಿರನ್ಯೇಽಸ್ಯಾಂ ಜನಯಂತಿ ಜಾಮಪತ್ಯಂ । ಜಮತೇರ್ವಾ ಸ್ಯಾದ್ಗತಿಕರ್ಮಣೋ ನಿರ್ಗಮನಪ್ರಾಯಾ ಭವತಿ ।** (ನಿ. ೩-೯) ಇತರನು ಇವಳಲ್ಲಿ ಮಕ್ಕಳನ್ನು ಉತ್ಪನ್ನನಾಗುವಂತೆ ಮಾಡುತ್ತಾನೆ ಎಂಬ ಅಭಿಪ್ರಾಯವನ್ನು ಹೇಳುವುದೂ, ಹುಟ್ಟು ಎಂಬರ್ಥವನ್ನು ಕೊಡುವ **ಜನ್** ಧಾತುವಿನಿಂದ ನಿಷ್ಪನ್ನವಾದುದೂ ಆದ **ವ್ಯುತ್ಪತ್ತಿ**ಯನ್ನು ಹೇಳುವುದು ಒಂದು ವಿಧ. ಅಥವಾ ಭರ್ತೃವಿನ ಮನೆಗೆ ಹೋಗುವವಳು ಎಂಬಭಿಪ್ರಾಯವನ್ನು ಕೊಡುವುದೂ, ಹೋಗು ಎಂಬರ್ಥವನ್ನು ಕೊಡುವ **ಜಮ್** ಧಾತುವಿನಿಂದ ನಿಷ್ಪನ್ನವಾದುದೂ ಆದ ವ್ಯುತ್ಪತ್ತಿಯನ್ನು ಹೇಳುವುದು ಇನ್ನೊಂದು ವಿಧ. ಈ ಎರಡು ವಿವರಣೆಯ ಪ್ರಕಾರವೂ ಸಹ **ಜಾಮಿ** ಎನ್ನುವ ಪದಕ್ಕೆ **ಸಹೋದರಿ** ಎಂದರ್ಥವೆಂದು ನಿರುಕ್ತಕಾರರ ನಿರ್ವಚನದಿಂದ ತಿಳಿಯುತ್ತದೆ. ಈ ಅರ್ಥವನ್ನು ಸಮರ್ಥಿಸುವಂತೆ

**ನ ಜಾಮಯೇ ತಾನ್ವೋ ರಿಕ್ಥಮಾರೈಕ್ಚಕಾರ ಗರ್ಭಂ ಸನಿತುರ್ನಿಧಾನಂ ।**
**ಯದೀ ಮಾತರೋ ಜನಯಂತ ವಹ್ನಿಮನ್ಯಃ ಕರ್ತಾ ಸುಕೃತೋರನ್ಯ ಋಂಧನ್ ॥**

(ಋ. ಸಂ. ೩-೩೧-೨)

ಎಂಬ ಋಕ್ಕನ್ನುದಹರಿಸಿ **ಜಾಮಿ**ಶಬ್ದಕ್ಕೆ ಸಹೋದರಿಯೆಂದರ್ಥ ಮಾಡಿರುವರು ಇದರಂತೆಯೇ,

**ಭಗಸ್ಯ ಸ್ವಸಾ ವರುಣಸ್ಯ ಜಾಮಿರುಷಃ ಸೂನೃತೇ ಪ್ರಥಮಾ ಜರಸ್ವ ।**
**ಪಶ್ಚಾ ಸ ದಘ್ಯಾ ಯೋ ಅಘಸ್ಯ ಧಾತಾ ಜಯೇಮ ತಂ ದಕ್ಷಿಣಯಾ ರಥೇನ ॥**

(ಋ. ಸಂ. ೧-೧೨೩-೫)

ಎಂಬಲ್ಲಿಯೂ ಸಹ **ಭಗಿನೀಸ್ಥಾನೀಯಾಸಿ** ವರುಣನಿಗೆ ಸಹೋದರಿಯಂತಿದ್ದೀಯೆ ಎಂದರ್ಥ ಮಾಡಿದೆ. ಇದೇ ಅರ್ಥವು ವಿಸ್ತೃತವಾಗಿ ಈ ಪದಕ್ಕೆ **ಬಂಧುಗಳು** ಎಂದೂ ಸಹ ಆಗುವುದೆಂದು ಹಿಂದೆ ಉದಾಹರಣೆಗಳೊಡನೆ

ತಿಳಿಸಿದೆ. ಪ್ರಕೃತವಾದ ಋಕ್ಕಿನಲ್ಲಿ ದ್ಯಾವಾಪೃಥಿವಿಗಳು ಪರಸ್ಪರ ಸಹೋದರಿಯರೆಂದು **ಸಯೋನೀ** ಇತ್ಯಾದಿ ವಿಶೇಷಣಗಳಿಂದ ವಿಶದಪಡಿಸಿದೆ.

**ಸಯೋನೀ—ಸಮಾನೋತ್ಪತ್ತಿಸ್ಥಾನೇ ।** ಒಂದೇ ಉತ್ಪತ್ತಿಸ್ಥಾನವುಳ್ಳವರು ಎಂದಿದೆ. ಆದರೆ ಈ ಉತ್ಪತ್ತಿಸ್ಥಾನವು ಯಾವುದೆಂದು ನಿಷ್ಕೃಷ್ಟವಾಗಿ ತಿಳಿಸಿಲ್ಲ. ಆದರೆ ಇತರ ಕಡೆಗಳಲ್ಲಿ ದ್ಯಾವಾಪೃಥಿವಿಗಳ ಉತ್ಪತ್ತಿಯ ವಿಷಯವನ್ನು ತಿಳಿಸಿದೆ.

**ಜನಿತಾ ದಿವೋ ಜನಿತಾ ಪೃಥಿವ್ಯಾಃ ಪಿಬಾ ಸೋಮಂ ಮದಾಯ ಕಂ ಶತಕ್ರತೋ ।**

**ಯಂ ತೇ ಭಾಗಮಧಾರಯನ್ವಿಶ್ವಾಃ ಸೇಹಾನಃ ಪೃತನಾ ಉರು ಜ್ರಯಃ ಸಮಪ್ಸುಜಿನ್ಮರುತ್ವಾँ**
**ಇಂದ್ರ ಸತ್ಪತೇ ॥**

(ಋ. ಸಂ. ೮-೩೬-೪)

ಇತ್ಯಾದಿ ಋಕ್ಕುಗಳಲ್ಲಿ ಇಂದ್ರನೇ ದ್ಯಾವಾಪೃಥಿವಿಗಳ ಸೃಷ್ಟಿಕರ್ತನೆಂದು ಹೇಳಿದೆ. ಆದರೆ,

**ಮಾ ನೋ ಹಿಂಸೀಜ್ಜನಿತಾ ಯಃ ಪೃಥಿವ್ಯಾ ಯೋ ದಿವಂ ಸತ್ಯಧರ್ಮಾ ಜಜಾನ ।**
**ಯಶ್ಚಾಪಶ್ಚಂದ್ರಾ ಬೃಹತೀರ್ಜಜಾನ ಕಸ್ಮೈ ದೇವಾಯ ಹವಿಷಾ ವಿಧೇಮ ।**

(ಋ. ಸಂ. ೧೦-೧೨೧-೯)

ಎಂಬಲ್ಲಿ **ಹಿರಣ್ಯಗರ್ಭನೂ,**

**ನಾಭ್ಯಾ ಆಸೀದಂತರಿಕ್ಷಂ ಶೀರ್ಷ್ಣೋ ದ್ಯೌಃ ಸಮವರ್ತತ ।**

**ಪದ್ಭ್ಯಾಂ ಭೂಮಿರ್ದಿಶಃ ಶ್ರೋತ್ರಾತ್ತಥಾ ಲೋಕಾँ ಅಕಲ್ಪಯನ್ ।**

(ಋ. ಸಂ. ೧೦-೯೦-೧೪)

ಎಂಬ ಋಕ್ಕಿನಲ್ಲಿ ವಿರಾಡ್ರೂಪಿಯಾದ **ಪುರುಷನೂ** ದ್ಯಾವಾಪೃಥಿವಿಗಳನ್ನು ಸೃಷ್ಟಿಸಿದನೆಂದು ಹೇಳಿದೆ. ಹೀಗೆ ಇವರ ಸೃಷ್ಟಿಯ ವಿಷಯವನ್ನು ವರ್ಣಿಸುವಾಗಲೆಲ್ಲಾ ಇಬ್ಬರ ಉತ್ಪತ್ತಿಗೂ ಒಂದೇ ಮೂಲವೆಂದು ಸ್ಪಷ್ಟವಾಗಿ ತಿಳಿಸಿದೆ. ಅದನ್ನೇ ಈ ಋಕ್ಕಿನಲ್ಲಿ **ಸಯೋನೀ** ಎಂಬ ವಿಶೇಷಣದಿಂದ ತಿಳಿಸಿದೆ.

**ಮಾಯಿನಃ—ಮಾಯಾ ಪ್ರಜ್ಞಾ । ಸ್ವವಿಷಯಪ್ರಜ್ಞಾವಂತಃ ।** ತಮ್ಮ ಕರ್ತವ್ಯದ ವಿಷಯದಲ್ಲಿ ಪ್ರಜ್ಞೆಯುಳ್ಳವರೆಂದರ್ಥಮಾಡಿದೆ.

**ಮಾಯೇತಿ ಪ್ರಜ್ಞಾನಾಮ ।** ನಿರುಕ್ತಕಾರರು **ಮಾಯಾ, ವಯುನಂ,** ಇತ್ಯಾದಿಪ್ರಜ್ಞಾನಾಮಗಳಲ್ಲಿ ಸೇರಿಸಿದ್ದಾರೆ. (ನಿ. ೩-೧೩) ಅಲ್ಲದೇ,

**ಮಾಯಾಮೂ ತು ಯಜ್ಞಿಯಾನಾಮೇತಾಮಪೋ ಯತ್ತೂರ್ಣಿಶ್ಚರತಿ ಪ್ರಜಾನನ್ ।**

(ಋ. ಸಂ. ೧೦-೮೮-೬)

ಎಂಬ ಋಕ್ಕನ್ನುದಹರಿಸಿ **ಸ ಏವ ಪ್ರಜ್ಞಾಂ ತ್ವೇತಾಂ ಮನ್ಯಂತೇ ।** ಎಂದು ವಿವರಿಸಿ **ಮಾಯಾ** ಪದಕ್ಕೆ ಪ್ರಜ್ಞೆ ಯೆಂದರ್ಥವೆಂದು ತಿಳಿಸಿದ್ದಾರೆ. (ನಿ. ೬-೨೭) ಮತ್ತು,

**ವಿಶ್ವಾ ಹಿ ಮಾಯಾ ಅವಸಿ ಸ್ವಧಾವೋ ಭದ್ರಾ ತೇ ಪೂಷನ್ನಿಹ ರಾತಿರಸ್ತು ।**

(ಋ. ಸಂ. ೬-೫೮-೧)

ಎಂಬ ಋಕ್ಕನ್ನು ಸಹ ಉದಹರಿಸಿ (ನಿ. ೧೨-೧೭) ಇಲ್ಲಿಯೂ ಸಹ ಪ್ರಜ್ಞೆಯೆಂದರ್ಥಮಾಡಿದ್ದಾರೆ. ಆದುದರಿಂದ ಪ್ರಕೃತವಾದ ಋಕ್ಕಿನಲ್ಲಿ **ಮಾಯಿನಃ** ಎಂದರೆ ಪ್ರಜ್ಞೆಯುಳ್ಳ ಎಂದು ರಶ್ಮಿಗಳಿಗೆ ವಿಶೇಷಣವಾಗಿವೆ.

**ಸಮುದ್ರೇ ಅಂತಃ— ಸಮುದ್ರಶಬ್ದೋಽಂತರಿಕ್ಷನಾಮಸು ಪಾಠಾತ್ತದ್ವಚನಃ ಸ ಚೈವಂ ಯಾಸ್ಕೇನ ನಿರುಕ್ತಃ ।** ನಿರುಕ್ತಕಾರರು **ಸಮುದ್ರ**ಶಬ್ದವನ್ನು **ಅಂತರಿಕ್ಷ**ನಾಮಗಳಲ್ಲಿ ಸೇರಿಸಿರುವರೆಂದು ತಿಳಿಸಿ ಸಾಯಣರು ನಿರುಕ್ತವಾಕ್ಯವನ್ನುದಹರಿಸಿ **ಸಮುದ್ರ** ಶಬ್ದದ ನಿರ್ವಚನವನ್ನೂ ತಿಳಿಸಿದ್ದಾರೆ.

**ಸಮುದ್ರಃ ಕಸ್ಮಾತ್ಸಮುದ್ದ್ರವಂತ್ಯಸ್ಮಾದಾಪಃ ಸಮಭಿದ್ರವಂತ್ಯೇನಮಾಪಃ ಸಂಮೋದಂತೇಽಸ್ಮಿನ್ ಭೂತಾನಿ ಸಮುದಕೋ ಭವತಿ ಸಮುನತ್ತೀತಿ ವಾ ।**

(ನಿ. ೨-೧೧)

ಚಲಿಸು ಎಂದರ್ಥವನ್ನು ಕೊಡುವ **ದ್ರು** ಧಾತುವಿನೊಡನೆ **ಸಂ, ಉದ್** ಎಂಬ ಎರಡು ಉಪಸರ್ಗಗಳೂ ಸೇರಿಕೊಂಡು ಮೇಲಕ್ಕೆ ಉಕ್ಕಿ ಹರಿಯುತ್ತವೆ ಎಂದು ತಾತ್ಪರ್ಯವನ್ನು ಕೊಡುತ್ತದೆಯಾದ್ದರಿಂದಲೂ, ಅಥವಾ ಎರಡನೆಯದಾಗಿ ಅದೇ **ದ್ರು** ಧಾತುವಿನೊಡನೆ **ಸಮ್, ಅಭಿ** ಎಂಬ ಉಪಸರ್ಗಗಳು ಸೇರಿಕೊಂಡು (ನದಿಯ) ನೀರುಗಳು ಇದರ ಕಡೆಗೆ ಹರಿದುಬರುತ್ತವೆಯೆಂಬ ಅರ್ಥವನ್ನು ಕೊಡುವುದರಿಂದಾಗಲಿ, ಅಥವಾ ಸಂತೋಷಪಡು ಎಂಬರ್ಥವನ್ನು ಕೊಡುವ **ಮುದ್** ಧಾತುವಿನೊಡನೆ **ಸಮ್** ಎಂಬ ಉಪಸರ್ಗವು ಸೇರಿ ಜಲಚರಪ್ರಾಣಿಗಳು ಇದರಲ್ಲಿ ಹರ್ಷವನ್ನನುಭವಿಸುತ್ತವೆ ಎಂಬರ್ಥವನ್ನು ಕೊಡುವುದರಿಂದಾಗಲಿ, ಅಥವಾ ಉದಕಕ್ಕೆ ನಿಧಿಯಾಗಿರುವುದರಿಂದಾಗಲಿ ಅಥವಾ ತೇವಮಾಡು ಎಂಬರ್ಥವನ್ನು ಕೊಡುವ **ಉದ್** ಧಾತುವಿನೊಡನೆ **ಸಮ್** ಉಪಸರ್ಗವು ಸೇರಿ ನೆನೆಯಿಸು ಎಂದು ತಾತ್ಪರ್ಯವನ್ನು ಕೊಡುವುದರಿಂದಾಗಲಿ **ಸಮುದ್ರ**ವೆಂಬ ಪದವು ನಿಷ್ಪನ್ನವಾಗಿದೆಯೆಂದು ನಿರುಕ್ತಕಾರರು ನಿರ್ವಚನವನ್ನು ತೋರಿಸಿದ್ದಾರೆ. (ನಿ. ೨-೧೦).

ಅನಂತರ ಪಾರ್ಥಿವವಾದ **ಸಮುದ್ರಕ್ಕೂ ಅಂತರಿಕ್ಷ**ಪರ್ಯಾಯವಾದ **ಸಮುದ್ರಕ್ಕೂ** ವ್ಯತ್ಯಾಸವನ್ನು ತೋರಿಸುತ್ತಾ ಇವೆರಡಕ್ಕೂ ವ್ಯತ್ಯಾಸವನ್ನು ತಿಳಿಯದೇ ಸಂದೇಹಕ್ಕವಕಾಶವನ್ನು ಕೊಡುವಂತೆ ಅರ್ಥಮಾಡುವವರನ್ನು ಕುರಿತು,

**ತತ್ರ ಸಮುದ್ರ ಇತ್ಯೇತತ್ಪಾರ್ಥಿವೇನ ಸಮುದ್ರೇಣ ಸಂದಿಹ್ಯತೇ ।**

ಅಂತರಿಕ್ಷಪರ್ಯಾಯವಾದ ಸಮುದ್ರವನ್ನು ಅನೇಕರು ಪಾರ್ಥಿವಸಮುದ್ರವೆಂದು ಭ್ರಮಿಸಿ ಅರ್ಥಮಾಡುತ್ತಾರೆ. ಅದು ಸರಿಯಲ್ಲ ಎಂದು ಈ ಸಂದರ್ಭದಲ್ಲಿ ಅಂತರಿಕ್ಷ ಪರ್ಯಾಯವಾದ ಸಮುದ್ರಕ್ಕೂ ಪಾರ್ಥಿವವಾದ ಸಮುದ್ರಕ್ಕೂ ವ್ಯತ್ಯಾಸವನ್ನು ತೋರಿಸುವುದಕ್ಕೆ ಒಂದು ಇತಿಹಾಸವನ್ನೂ ಉದಹರಿಸಿದ್ದಾರೆ

**ತಯೋರ್ವಿಭಾಗಸ್ತತ್ರೇತಿಹಾಸಮಾಚಕ್ಷತೇ । ದೇವಾಪಿಶ್ಚಾರ್ಷ್ಟಿಷೇಣಃ ಶಂತನುಶ್ಚ ಕೌರವ್ಯೌ ಭ್ರಾತರೌ ಬಭೂವತುಃ । ಸ ಶಂತನುಃ ಕನೀಯಾನಭಿಷೇಚಯಾಂಚಕ್ರೇ । ದೇವಾಪಿಸ್ತಪಃ-ಪ್ರತಿಪೇದೇ । ತತಃ ಶಂತನೋಃ ರಾಜ್ಯೇ ದ್ವಾದಶವರ್ಷಾಣಿ ದೇವೋ ನ ವವರ್ಷ । ತಮೂ-**

**ಚುಬ್ರಾಹ್ಮಣಾ ಅಧರ್ಮಸ್ತ್ವಯಾಚರಿತೋ ಜ್ಯೇಷ್ಠಂ ಭ್ರಾತರಮಂತರಿತ್ಯಾಭಿಷೇಚಿತಂ ತಸ್ಮಾತ್ತ್ವೇ ದೇವೋ ನ ವರ್ಷತೀತಿ । ಸ ಶಂತನುರ್ದೇವಾಪಿಂ ಶಿಶಿಕ್ಷ ರಾಜ್ಯೇನ । ತಮುವಾಚ ದೇವಾಪಿಃ ಪುರೋಹಿತಸ್ತೇಽಸಾನಿ ಯಾಜಯಾನಿ ಚ ತ್ವೇತಿ ತಸ್ಯೈದ್ವರ್ಷಕಾಮಸಕ್ತ ತಸ್ಯೈಷಾ ಭವತಿ ।**

ಕುರುವಂಶಸ್ಥರೂ ಋಷ್ಟಿಷೇಣಪುತ್ರರೂ ಆದ **ದೇವಾಪಿ** ಮತ್ತು **ಶಂತನು** ಎಂಬಿಬ್ಬರಲ್ಲಿ ಚಿಕ್ಕವನಾದ ಶಂತನುವು ತಾನೇ ಪಟ್ಟಾಭಿಷಿಕ್ತನಾಗಿ ಆ ರಾಜ್ಯಕ್ಕೆ ದೊರೆಯಾದನು. ದೇವಾಪಿಯು ತಪಶ್ಚರಣೆನಾಗಿ ಕಾಡಿಗೆ ಹೊರಟು ಹೋದನು. ಅಲ್ಲಿಂದ ಮೊದಲು ಹನ್ನೆರಡು ವರ್ಷಗಳ ಕಾಲ ಶಂತನುವಿನ ರಾಜ್ಯದಲ್ಲಿ ಮಳೆಯಾಗಲಿಲ್ಲ. ಆಗ ಬ್ರಾಹ್ಮಣರು ಶಂತನುವನ್ನು ಕುರಿತು ನೀನು ದೊಡ್ಡವನಾದ ನಿಮ್ಮಣ್ಣನನ್ನು ಕಾಡಿಗೆ ಕಳುಹಿಸಿ ನೀನೇ ದೊರೆಯಾಗಿರುವುದರಿಂದ ನೀನು ಪಾಪಕೃತ್ಯವನ್ನು ಮಾಡಿದಂತಾಯಿತು. ಆದುದರಿಂದ ವೃಷ್ಟಿದೇವನು ನಿನ್ನ ರಾಜ್ಯದಲ್ಲಿ ಮಳೆಯನ್ನು ಸುರಿಸಿಲ್ಲ ಎಂದರು. ಆಗ **ಶಂತನುವು** ದೇವಾಪಿಯನ್ನು ರಾಜ್ಯಾಭಿಷಿಕ್ತನನ್ನಾಗಿ ಮಾಡಲು ಪ್ರಯತ್ನಿಸಿದಾಗ ದೇವಾಪಿಯು ನಾನು ನಿನಗೆ ಪುರೋಹಿತನಾಗಿದ್ದುಕೊಂಡು ನಿನಗಾಗಿ ಯಜ್ಞವನ್ನು ನೆರವೇರಿಸುತ್ತೇನೆ ಎಂದು ವೃಷ್ಟ್ಯರ್ಥವಾಗಿ ಯಜ್ಞವನ್ನು ಮಾಡಿಸಿದನು. ಅನಂತರ ಊರ್ಧ್ವಭಾಗದಲ್ಲಿರುವ **ಸಮುದ್ರದಿಂದ** ಅಧೋಭಾಗದಲ್ಲಿರುವ **ಸಮುದ್ರಕ್ಕೆ** ಮಳೆಯು ಸುರಿಯಿತು ಎಂದು ಎರಡು ಸಮುದ್ರಗಳಿಗೂ ವ್ಯತ್ಯಾಸವನ್ನು ತೋರಿಸುವ,

**ಆರ್ಷ್ಟಿಷೇಣೋ ಹೋತ್ರಮೃಷಿರ್ನಿಷೀದನ್ ದೇವಾಪಿರ್ದೇವಸುಮತಿಂ ಚಿಕಿತ್ವಾನ್ ।**
**ಸ ಉತ್ತರಸ್ಮಾದಧರಂ ಸಮುದ್ರಮಪೋ ದಿವ್ಯಾ ಅಸೃಜದ್ವರ್ಷ್ಯಾ ಅಭಿ ॥**

(ಋ. ಸಂ. ೧೦-೯೮-೫)

ಎಂಬ ಋಕ್ಕನ್ನುದಹರಿಸಿ ಇಲ್ಲಿ ವರ್ಣಿತವಾಗಿರುವ **ಉತ್ತರ** ಸಮುದ್ರಕ್ಕೂ **ಅಧರ ಸಮುದ್ರಕ್ಕೂ** ವ್ಯತ್ಯಾಸವನ್ನು ತೋರಿಸಿದ್ದಾರೆ. ಇಲ್ಲಿ **ಉತ್ತರಸಮುದ್ರವೆಂದರೆ ಅಂತರಿಕ್ಷವೆಂದೂ ಅಧರಸಮುದ್ರವೆಂದರೆ ಪಾರ್ಥಿವಸಮುದ್ರ**ವೆಂದೂ ಅರ್ಥ. ಹೀಗೆ ಈ ಪದಕ್ಕೆ ಸಂದರ್ಭಾನುಸಾರವಾಗಿ ಅರ್ಥವನ್ನು ಹೇಳಬೇಕಾಗುತ್ತದೆ. ಆದರೆ,

**ಯಥಾ ವಾತೋ ಯಥಾ ವನಂ ಯಥಾ ಸಮುದ್ರ ಏಜತಿ ।**
**ಏವಾ ತ್ವಂ ದಶಮಾಸ್ಯ ಸಹಾವೇಹಿ ಜರಾಯುಣಾ ॥**

(ಋ ಸಂ. ೫-೭೮-೮)

ಇತ್ಯಾದಿ ಋಕ್ಕುಗಳಲ್ಲಿ ಅಂತರಿಕ್ಷಪರ್ಯಾಯವೇ ಅಥವಾ **ಪಾರ್ಥಿವ** ಸಮುದ್ರವೇ ಎಂದು ಹೇಳಲು ಕಷ್ಟವಾಗುವುದು.

**ಯಾ ಆಪೋ ದಿವ್ಯಾ ಉತ ವಾ ಸ್ರವಂತಿ ಖನಿತ್ರಿಮಾ ಉತ ವಾ ಯಾಃ ಸ್ವಯಂಜಾಃ ।**
**ಸಮುದ್ರಾರ್ಥಾ ಯಾಃ ಶುಚಯಃ ಪಾವಕಾಸ್ತಾ ಆಪೋ ದೇವೀರಿಹ ಮಾಮವಂತು ॥**

(ಋ. ಸಂ. ೭-೪೯-೨)

ಇತ್ಯಾದಿನಾನಾಋಕ್ಕುಗಳಲ್ಲಿ **ಪಾರ್ಥಿವಸಮುದ್ರವೆಂದು** ನಿಷ್ಕರ್ಷವಾಗಿ ಹೇಳಬಹುದು. ಕೆಲವು ಕಡೆಗಳಲ್ಲಿ ಈ ಪದವು ವಿಶೇಷಣವಾಗಿ ಉಪಯೋಗಿಸಲ್ಪಟ್ಟು ಸ್ರವಿಸತಕ್ಕ ಎಂಬರ್ಥವನ್ನು ಕೊಡುತ್ತದೆ.

**ಅದ್ಭಿರ್ಯಾತಿ ವರುಣಃ ಸಮುದ್ರೈರ್ಯುಷ್ಮಾಂ ಇಚ್ಛಂತಃ ಶವಸೋ ನಪಾತಃ ।**

(ಋ. ಸಂ. ೧–೧೬೧–೧೪)

ಎಂಬ ಋಕ್ಕಿನಲ್ಲಿ **ಸಮುದ್ರೈಃ ಸಮುಂದನಸ್ವಭಾವೈಃ ಅದ್ಭಿಃ**—ಸ್ರವಿಸತಕ್ಕ ಸ್ವಭಾವವುಳ್ಳ ಉದಕಗಳೊಡನೆ ಎಂದರ್ಥ. ಪ್ರಕೃತವಾದ ಋಕ್ಕಿನಲ್ಲಿ **ಅಂತರಿಕ್ಷವೆಂದ**ರ್ಥ. ಅಂತರಿಕ್ಷದ ಅಂತಃಪ್ರದೇಶದಲ್ಲೆಲ್ಲಾ ಆದಿತ್ಯರಶ್ಮಿಯ ವ್ಯಾಪ್ತಿಯನ್ನು ತಿಳಿಸಿದೆ.

**ವ್ಯಾಕರಣಪ್ರಕ್ರಿಯಾ**

**ಮಾಯಿನಃ**—ಮಾಯಾ ಅಸ್ಯ ಅಸ್ತಿ ಮಾಯೀ. **ವ್ರೀಹ್ಯಾದಿಭ್ಯಶ್ಚ** (ಪಾ. ಸೂ. ೫–೨-೧೧೬) ಎಂಬುದರಿಂದ ಇನಿ ಪ್ರತ್ಯಯ. ಪ್ರತ್ಯಯಸ್ವರ ಬರುತ್ತದೆ.

**ಮಮಿರೇ**--ಮಾಙ್ ಮಾನೇ ಧಾತು. ಛಾಂದಸವಾಗಿ ವರ್ತಮಾನಾರ್ಥದಲ್ಲಿ ಲಿಟ್. ಪ್ರಥಮಪುರುಷ ಬಹುವಚನಾಂತರೂಪ. ಅತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

**ಸಯೋನೀ**—ಸಮಾನಂ ಯೋನಿಃ ಯಯೋಸ್ತೇ ಸಯೋನೀ **ಸಮಾಸಸ್ಯ ಛಂದಸ್ಯ**—(ಪಾ. ಸೂ. ೬–೩–೮೪) ಎಂಬುದರಿಂದ ಸಮಾನ ಎಂಬ ಪದಕ್ಕೆ ಸಭಾವ. ಬಹುವ್ರೀಹಿಯಲ್ಲಿ ಪೂರ್ವಪದಪ್ರಕೃತಿಸ್ವರ ಬರುತ್ತದೆ.

**ಮಿಥುನಾ**—ಮಿಥ ಎಂಬುದು. ಸೌತ್ರಧಾತು. **ಕ್ಷುಧಿಪಿಶಿಮಿಥಿಭ್ಯಃಕಿತ್** (ಉ. ಸೂ. ೩೩೫) ಎಂಬುದರಿಂದ ಉನನ್ ಪ್ರತ್ಯಯ. ಕಿತ್ವವಿಧಾನ ಮಾಡಿರುವುದರಿಂದ **ಲಘೂಪಧಗುಣ** ಬರುವುದಿಲ್ಲ. ದ್ವಿವಚನ ಪರವಾದಾಗ **ಸುಪಾಂ ಸುಲುಕ್** ಸೂತ್ರದಿಂದ ಅದಕ್ಕೆ ಆಕಾರಾದೇಶ.

**ಸಮೋಕಸಾ**—ಉಚ ಸಮವಾಯೇ ಧಾತು. ಬಹುವಚನದಿಂದ ಅಸುನ್‌ಪ್ರತ್ಯಯ ಬಂದಾಗ ಕುತ್ವ. **ಓಕಉಚಃಕೇ** (ಕಾ. ೭-೩-೬೪) ಎಂಬ ವಚನದಿಂದ ಇದು ಸಿದ್ಧವಾಗುತ್ತದೆ. ಬಹುವ್ರೀಹಿಯಲ್ಲಿ ಹಿಂದಿನಂತೇ ಪೂರ್ವಪದಪ್ರಪೃತಿಸ್ವರ ಬರುತ್ತದೆ.

**ನವ್ಯಂನವ್ಯಮ್**—**ನಿತ್ಯವೀಪ್ಸಯೋಃ** (ಪಾ. ಸೂ. ೮-೧-೪) ಎಂಬುದರಿಂದ ದ್ವಿರ್ವಚನ. **ಅನುದಾತ್ತಂಚ** (ಪಾ ಸೂ. ೮-೧-೦) ಎಂಬುದರಿಂದ ಪರದ ಆಮ್ರೇಡಿತವು ಅನುದಾತ್ತವಾಗುತ್ತದೆ.

**ತನ್ವತೇ**—ತನು ವಿಸ್ತಾರೇ ಧಾತು. **ಲಟ್** ಪ್ರಥಮಪುರುಷಬಹುವಚನಾಂತರೂಪ. ತಿಙಂತನಿಘಾತಸ್ವರ ಬರುತ್ತದೆ.

**ಸುದೀತಯಃ**—ಶೋಭನಾ ದೀತಿಃ ಯೇಷಾಂ ತೇ. **ನಞ್‌ಸುಭ್ಯಾಮ್** (ಪಾ. ಸೂ. ೬–೨–೧೭೨) ಎಂಬುದರಿಂದ ಉತ್ತರಪದಾಂತೋದಾತ್ತಸ್ವರ ಬರುತ್ತದೆ. ॥ ೪ ॥

:C:

ಸಂಹಿತಾಪಾಠಃ

ತದ್ರಾಧೋ ಅದ್ಯ ಸವಿತುರ್ವರೇಣ್ಯಂ ವಯಂ ದೇವಸ್ಯ ಪ್ರಸವೇ ಮನಾಮಹೇ ।
ಅಸ್ಮಭ್ಯಂ ದ್ಯಾವಾಪೃಥಿವೀ ಸುಚೇತುನಾ ರಯಿಂ ಧತ್ತಂ ವಸುಮಂತಂ ಶತಗ್ವಿನಂ ॥ ೫ ॥

ಪದಪಾಠಃ

ತತ್ । ರಾಧಃ । ಅದ್ಯ । ಸವಿತುಃ । ವರೇಣ್ಯಂ । ವಯಂ । ದೇವಸ್ಯ । ಪ್ರಽಸವೇ । ಮನಾಮಹೇ ।
ಅಸ್ಮಭ್ಯಂ । ದ್ಯಾವಾಪೃಥಿವೀ ಇತಿ । ಸುಽಚೇತುನಾ । ರಯಿಂ । ಧತ್ತಂ । ವಸುಮಂತಂ । ಶತಽಗ್ವಿನಂ ॥೫॥

ಸಾಯಣಭಾಷ್ಯಂ

ವಯಂ ಯಜಮಾನಾಃ ಸವಿತುಃ ಸರ್ವಸ್ಯ ಪ್ರಸವಿತುರ್ದೇವಸ್ಯಾದಿತ್ಯಸ್ಯಾಂತರ್ಯಾಮಿರೂಪಿಣಃ ಪ್ರಸವೇಽನುಜ್ಞಾಯಾಂ ಸತ್ಯಾಂ ತತ್ತಾದೃಶಂ ವರೇಣ್ಯಂ ವರಣೀಯಂ ರಾಧಃ ಪುರುಷಾರ್ಥಸಾಧನಸಮರ್ಥಂ ಗವಾದಿ ಧನಂ ಮನಾಮಹೇ । ಯಾಚಾಮಹೇ ॥ ಮನ್ಯತಿರ್ಯಾಚ್ಞಾಕರ್ಮಾ । ಛಾಂದಸಃ ಶಪ್ ॥ ಯದ್ವಾ । ಪುನಃಪುನರಭ್ಯಸ್ಯಾಮಃ । ಲಪ್ಸ್ಯೀಮಹೀತಿ ಯಾವತ್ ॥ ಮ್ನಾ ಅಭ್ಯಾಸೇ । ವ್ಯತ್ಯಯೇನಾತ್ಮನೇಪದಂ । ಶಪಿ ಪಾಘ್ರಾದಿನಾ ಮನಾದೇಶಃ ॥ ಕಿಂಚಾಸ್ಮಭ್ಯಂ ದ್ಯಾವಾಪೃಥಿವೀ ದ್ಯಾವಾಪೃಥಿವ್ಯೌ ಸುಚೇತುನಾ ಶೋಭನಚೇತನೇನಾಸ್ಮದನುಗ್ರಹಬುದ್ಧ್ಯಾ ರಯಿಂ ಧನಂ ಧತ್ತಂ । ದತ್ತಂ । ಕೀದೃಶಂ । ವಸುಮಂತಂ ನಿವಾಸಯೋಗ್ಯಗೃಹಾದಿವಿಶಿಷ್ಟಂ ಶತಗ್ವಿನಂ ಶತಸಂಖ್ಯಾಕಗವಾದಿವಿಶಿಷ್ಟಂ ॥

ಪ್ರತಿಪದಾರ್ಥ

**ವಯಂ**—ಯಜಮಾನರಾದ ನಾವು । **ಸವಿತುಃ**—ಸಕಲವಾದ ಇಷ್ಟಾರ್ಥಗಳನ್ನೂ ಸುರಿಸತಕ್ಕ । **ದೇವಸ್ಯ**—ಪೂಜ್ಯನಾದ ಆದಿತ್ಯನ । **ಪ್ರಸವೇ**—ಅನುಗ್ರಹವಿರಲಾಗಿ । **ವರೇಣ್ಯಂ**—ಅತಿಶಯವಾಗಿ ಅಪೇಕ್ಷಿತವಾದ । ರಾಧಃ—ಗವಾದಿರೂಪವಾದ ಧನವನ್ನು । **ಮನಾಮಹೇ**—ಯಾಚಿಸುತ್ತೇವೆ ಅಥವಾ (ಅವನಿಂದ) ಪದೇ ಪದೇ ಪಡೆಯುತ್ತೇವೆ । (ಮತ್ತು) **ಅಸ್ಮಭ್ಯಂ**-ನಮಗೆ । **ದ್ಯಾವಾಪೃಥಿವೀ**—ದ್ಯಾವಾಪೃಥಿವಿಗಳು । **ಸುಚೇತುನಾ**-ನಮ್ಮಲ್ಲಿ ದಯೆಯುಳ್ಳ ಬುದ್ಧಿಯಿಂದ । **ವಸುಮಂತಂ**—ಗೃಹಾದಿ ವಾಸಸ್ಥಾನಗಳಿಂದ ಕೂಡಿದುದೂ । **ಶತಗ್ವಿನಂ**—ನೂರಾರು ಗೋವುಗಳಿಂದ ಕೂಡಿದುದೂ ಆದ । **ರಯಿಂ**—ಧನವನ್ನು । **ಧತ್ತಂ**—ಕೊಡಲಿ.

॥ ಭಾವಾರ್ಥ ॥

ಸಕಲ ಇಷ್ಟಾರ್ಥಗಳನ್ನೂ ಒದಗಿಸಿಕೊಡತಕ್ಕವನೂ ದೇವತಾತ್ಮನೂ ಆದ ಆದಿತ್ಯನ ಅನುಗ್ರಹವಿರಲಾಗಿ ನಾವು ಅತಿಶಯವಾಗಿ ಅಪೇಕ್ಷಿಸುವ ಗವಾದಿರೂಪವಾದ ಧನವನ್ನು ಯಾಚಿಸುತ್ತೇವೆ. ಅಥವಾ ಅವನಿಂದ ಪದೇ

ಪದೇ ಪಡೆಯುತ್ತೇವೆ. ಮತ್ತು ದ್ಯಾವಾಪೃಥಿವಿಗಳು ನಮ್ಮಲ್ಲಿ ದಯೆಯುಳ್ಳ ಬುದ್ಧಿಯಿಂದ ಗೃಹಾದಿವಾಸಸ್ಥಾನ ಗಳಿಂದ ಕೂಡಿದುದೂ ಮತ್ತು ನೂರಾರು ಗೋವುಗಳಿಂದ ಕೂಡಿದುದೂ ಆದ ಧನವನ್ನು ಕೊಡಲಿ.

## English Translation

We solicit to-day of the divine sun, his favour being propitiated, that wealth which is desirable, Benignant Heaven and Earth, bestow upon us rieches, (consisting of) habitations and hundreds (of cattle and the like).

### ವಿಶೇಷವಿಷಯಗಳು

**ಸವಿತುಃ—ಸವಿತಾ ಸರ್ವಸ್ಯ ಪ್ರಸವಿತಾ ।** ಸಕಲವನ್ನೂ ಪ್ರಚೋದಿಸತಕ್ಕವನು ಎಂದು ಸವಿತೃವಿನ ಸ್ವರೂಪವನ್ನು ತಿಳಿಸಿರುವುದನ್ನು ಹಿಂದೆ ವಿವರಿಸಿದೆ.

**ರಾಧಃ**—ಮಘಂ, ರೇಕ್ಣಃ ಇತ್ಯಾದಿಧನನಾಮಗಳಲ್ಲಿ ಪಠಿತವಾಗಿದೆ. (ನಿ. ೩-೯). **ರಾಧ ಇತಿ ಧನನಾಮ । ರಾಧ್ನುವಂತ್ಯನೇನ ।** ಇದರಿಂದ ಒಲಿಸಿಕೊಳ್ಳುತ್ತಾರೆ ಅಥವಾ ಸಮಾಧಾನಪಡಿಸುತ್ತಾರೆ ಎಂಬುದರಿಂದ ಧನಕ್ಕೆ **ರಾಧಃ** ಎಂಬ ಹೆಸರು ಪ್ರಸಿದ್ಧವಾಗಿದೆಯೆಂದು ಸಾಯಣರು ಈ ಪದದ ನಿರ್ವಚನವನ್ನು ತೋರಿಸಿದ್ದಾರೆ.

**ಮನಾಮಹೇ—ಮನ್ಯತಿಃ ಯಾಚ್ಞಾಕರ್ಮಾ । ಯಾಚಾಮಹೇ** ಯಾಚಿಸುತ್ತೇವೆ ಎಂಬ ಒಂದರ್ಥ ವನ್ನೂ **ಯದ್ವಾ ಪುನಃಪುನರಭ್ಯಾಸ್ಯಾಮಃ । ಲಪ್ಸ್ಯಾಮಹೇ ಇತಿ ಯಾವತ್ ।** ಅಥವಾ ಪದೇ ಪದೇ ಹೊಂದುತ್ತೇವೆ ಎಂಬ ಎರಡನೆಯ ಅರ್ಥವನ್ನೂ ಹೇಳಿದ್ದಾರೆ. ಸವಿತೃವಿನ ಅನುಗ್ರಹವನ್ನು ಪಡೆದು ಅವನಿಂದ ಧನವನ್ನು ಯಾಚಿ ಸುತ್ತೇವೆ ಎಂದಾಗಲಿ ಅಥವಾ ಅವನಿಂದ ಧನವನ್ನು ಪುನಃ ಪುನಃ ಪಡೆಯುತ್ತೇವೆ ಎಂದಾಗಲಿ ತಾತ್ಪರ್ಯ.

**ಶತಗ್ವಿನಂ—ಶತಸಂಖ್ಯಾಕಗವಾದಿವಿಶಿಷ್ಟಂ ।** ನೂರಾರು ಸಂಖ್ಯೆಗಳುಳ್ಳ ಗೋವುಗಳುಳ್ಳ ಎಂದು **ರಯಿ** ಶಬ್ದಕ್ಕೆ ವಿಶೇಷಣವಾಗಿದೆ.

**ಶನ್ಯೈಕ್ಷಿಧ್ಯಂತೋ ಅದ್ರಿವೋಽಶ್ವಾವಂತಃ ಶತಗ್ವಿನಃ । ವಿರಕ್ಷಣಾ ಅನೇಹಸಃ ।**

(ಋ. ಸಂ- ೮-೪೫-೧೧)

ಇತ್ಯಾದಿಋಕ್ಕುಗಳಲ್ಲಿ ಶತಗ್ವಿನಃ ಎಂಬ ಶಬ್ದಕ್ಕೆ **ಬಹುಧನಾಃ** ಎಂದು ಮಾತ್ರ ಅರ್ಥಮಾಡಿದೆ.

### ॥ ವ್ಯಾಕರಣಪ್ರಕ್ರಿಯಾ ॥

**ರಾಧಃ**—ರಾಧ ಸಂಸಿದ್ಧೌ ಧಾತು. ಔಣಾದಿಕ ಅಸುನ್ ಪ್ರತ್ಯಯ. ನಿತ್ತಾದುದರಿಂದ ಆದ್ಯುದಾತ್ತಸ್ವರ ಬರುತ್ತದೆ.

**ಸವಿತುಃ**—ಷು ಪ್ರಸವೈಶ್ವರ್ಯಯೋಃ ಧಾತು. ಕರ್ತರಿಯಲ್ಲಿ ತೃಚ್ ಪ್ರತ್ಯಯ. ಧಾತುವಿಗೆ ಅದನ್ನು ನಿಮಿತ್ತೀಕರಿಸಿ ಗುಣ-ಅವಾದೇಶ. ಚಿತ್ತಾಗುದರಿಂದ ಅಂತೋದಾತ್ತವಾಗುತ್ತದೆ. ಷಷ್ಠೀಏಕವಚನಾಂತರೂಪ.

**ಪ್ರಸವೇ**—ಪೂರ್ವೋಕ್ತವಾದ ಧಾತುವಿಗೆ ಅಚ್ ಪ್ರತ್ಯಯ. ಧಾತುವಿನ ಉಕಾರಕ್ಕೆ ಗುಣ. ಅವಾದೇಶ. ಚಿತ್ತ್ವಾದುದರಿಂದ ಅಂತೋದಾತ್ತವಾಗುತ್ತದೆ. ಪ್ರಾದಿಸಮಾಸವಾದಾಗ ಕೃದುತ್ತರಪದಪ್ರಕೃತಿಸ್ವರ ಬರುತ್ತದೆ.

**ಮನಾಮಹೇ**—ಮನ ಜ್ಞಾನೇ ಧಾತು. ಇಲ್ಲಿ ಬೇಡುವುದು ಎಂಬರ್ಥದಲ್ಲಿ ಪ್ರಯುಕ್ತವಾಗಿದೆ. ಲಟ್ ಉತ್ತಮಪುರುಷಬಹುವಚನ ಪರವಾದಾಗ ವ್ಯತ್ಯಯದಿಂದ ಶಪ್. **ಅತೋ ದೀರ್ಘೋ ಯಞಿ** (ಪಾ- ಸೂ. ೭-೩-೧೦೧) ಎಂಬುದರಿಂದ ಅದಂತಕ್ಕೆ ದೀರ್ಘ- ತಿಙಂತನಿಘಾತಸ್ವರ ಬರುತ್ತದೆ. ಎರಡನೇ ವ್ಯಾಖ್ಯಾನದಲ್ಲಿ ಮ್ನಾ ಅಭ್ಯಾಸೇ ಧಾತು. **ವ್ಯತ್ಯಯೋ ಬಹುಲಂ** ಎಂಬುದರಿಂದ ಆತ್ಮನೇಪದಿಯಾಗುತ್ತದೆ. ಶಪ್ ಪರವಾದಾಗ **ಪಾಘ್ರಾಧ್ಮಾ**—(ಪಾ. ಸೂ.) ಎಂಬುದರಿಂದ ಧಾತುವಿಗೆ ಮನಾದೇಶ. ಸ್ವರಾದಿಗಳು ಹಿಂದಿನಂತೇ ಬರುತ್ತವೆ.

**ಸುಚೇತುನಾ**—ಶೋಭನಂ ಚೇತುಃ ಯಸ್ಯ ಸಃ ತೇನ. **ನಞ್ಸುಭ್ಯಾಮ್** (ಪಾ. ಸೂ. ೬-೨-೭೦) ಎಂಬುದರಿಂದ ಉತ್ತರಪದಾಂತೋದಾತ್ತಸ್ವರ ಬರುತ್ತದೆ

**ಧತ್ತಮ್**—ಡುಧಾಞ್ ಧಾರಣಪೋಷಣಯೋಃ ಧಾತು. ಲೋಟ್ ಮಧ್ಯಮಪುರುಷದ್ವಿವಚನಾಂತರೂಪ. ತಿಙಂತನಿಘಾತಸ್ವರ ಬರುತ್ತದೆ.

**ಶತಗ್ವಿನಮ್**—ಛಾಂದಸವಾಗಿ ಬಹುವ್ರೀಹಿಸಮಾಸವಾದಾಗಲೂ ಮತ್ವರ್ಥದಲ್ಲಿ ಇನಿಪ್ರತ್ಯಯ. ಪ್ರತ್ಯಯದ ಆದ್ಯುದಾತ್ತಸ್ವರ ಬರುತ್ತದೆ. ದ್ವಿತೀಯಾಏಕವಚನಾಂತರೂಪ. ॥ ೫ ॥

ಇಲ್ಲಿಗೆ ೧೫೯ನೇ ಸೂಕ್ತವು ಮುಗಿದುದು.

---

## ನೂರ ಅರವತ್ತನೆಯ ಸೂಕ್ತವು

---

ತೇಹೀತಿ ಪಂಚರ್ಚಂ ಚತುರ್ಥಂ ಸೂಕ್ತಂ ದೈರ್ಘತಮಸಂ ಜಾಗತಂ ದ್ಯಾವಾಪೃಥಿವ್ಯಂ । ತೇ ಹೀತ್ಯನುಕ್ರಾಂತಂ ॥ ಚತುರ್ವಿಂಶೇಽಹನಿ ವೈಶ್ವದೇವಶಸ್ತ್ರೇ ದ್ಯಾವಾಪೃಥಿವ್ಯನಿವಿದ್ಧಾನಮೇತತ್ಸೂಕ್ತಂ ತೇ ಹಿ ದ್ಯಾವಾಪೃಥಿವೀ ಯಜ್ಞಸ್ಯ ವೋ ರಥ್ಯಮಿತಿ ವೈಶ್ವದೇವಂ । ಆ. ೭-೪ । ಇತಿ ಸೂತ್ರಿತತ್ವಾತ್ ॥ ತಥಾ ಪೃಷ್ಠ್ಯಾಭಿಪ್ಲವಷಡಹಯೋರ್ದ್ವಿತೀಯೇಽಹನಿ ವೈಶ್ವದೇವೇ ದ್ಯಾವಾಪೃಥಿವ್ಯಂ ನಿವಿದ್ಧಾನೀಯಂ ಚಾತುರ್ವಿಂಶಿಕಂ ತೃತೀಯಸವನಂ । ಆ. ೭-೬ । ಇತ್ಯಾಭಿಪ್ಲವಿಕೇ ದ್ವಿತೀಯೇಽಹನ್ಯತಿದಿಷ್ಟತ್ವಾತ್ । ಆಭಿಪ್ಲಾವಿಕಾದ್ದ್ವಿತೀಯಾದಹ್ನಃ ಪೃಷ್ಠ್ಯಸ್ಯ ದ್ವಿತೀಯೇಽಹನ್ಯೇತತ್ಸೂಕ್ತಮತಿದೇಶತಃ ಪ್ರಾಪ್ತಂ ಪೃಷ್ಠ್ಯಸ್ಯಾಭಿಪ್ಲವೇನೋಕ್ತೇ ಅಹನೀ ಆದ್ಯೇ ಆದ್ಯಾಭ್ಯಾಂ । ಆ. ೭-೧೦ । ಇತಿ ಸೂತ್ರಿತತ್ವಾತ್ ॥ ಪ್ರಥಮಾಶ್ವಿನಶಸ್ತ್ರೇ ವಿನಿಯುಕ್ತಾ । ಸಂಸ್ಥಿತೇಷ್ವಾಶ್ವಿನಾಯೇತ್ಯತ್ರ ಸೂತ್ರಿತಂ । ತೇ ಹಿ ದ್ಯಾವಾಪೃಥಿವೀ ವಿಶ್ವಶಂಭುವಾ ವಿಶ್ವಸ್ಯ ದೇವೀಮ್ಪುಚಯಸ್ಯ । ಆ. ೬-೫ । ಇತಿ ॥

ಅನುವಾದವು—**ತೇ ಹೀ ದ್ಯಾವಾಪೃಥಿವೀ** ಎಂಬ ಈ ಸೂಕ್ತವು ಇಪ್ಪತ್ತೆರಡನೆಯ ಅನುವಾಕದಲ್ಲಿ ನಾಲ್ಕನೆಯ ಸೂಕ್ತವು. ಇದರಲ್ಲಿ ಐದು ಋಕ್ಕುಗಳಿರುವುವು. ಈ ಸೂಕ್ತಕ್ಕೆ ಉಚಥ್ಯಪುತ್ರನಾದ ದೀರ್ಘತಮಸ್ ಎಂಬುವನು ಋಷಿಯು. ದ್ಯಾವಾಪೃಥಿವಿಗಳು ದೇವತೆಯು. ಜಗತೀಛಂದಸ್ಸು. ಅನುಕ್ರಮಣಿಕೆಯಲ್ಲಿ **ತೇ ಹಿ** ಎಂದು ಮೊದಲಾಗಿ ಹೇಳಿರುವುದು. ಯಾಗದ ಇಪ್ಪತ್ತನಾಲ್ಕನೆಯ ದಿವಸ ವೈಶ್ವದೇವಶಸ್ತ್ರಮಂತ್ರಪಠನಮಾಡುವಾಗ ದ್ಯಾವಾಪೃಥಿವೀಸಂಬಂಧವಾದ ನಿವಿದ್ಧಾನಮಂತ್ರಗಳ ಪಠನಕ್ಕಾಗಿ ಈ ಸೂಕ್ತದ ವಿನಿಯೋಗವಿರುವುದೆಂದು, ಆಶ್ವಲಾಯನಶ್ರೌತಸೂತ್ರದ **ತೇ ಹಿ ದ್ಯಾವಾಪೃಥಿವೀ ಯಜ್ಞಸ್ಯ ವೋ ರಥ್ಯಮಿತಿ ವೈಶ್ವದೇವಂ** ಎಂಬ ಸೂತ್ರದಿಂದ ವಿವೃತವಾಗಿರುವುದು. (ಆ. ೭-೪); ಪೃಷ್ಠ್ಯ ಮತ್ತು ಅಭಿಪ್ಲವಷಡಹವೆಂಬ ಯಾಗಗಳ ಎರಡನೆಯ ದಿವಸದಲ್ಲಿ ವೈಶ್ವದೇವಶಸ್ತ್ರಮಂತ್ರಪಠನಮಾಡುವಾಗ ದ್ಯಾವಾಪೃಥಿವೀಸಂಬಂಧವಾದ ನಿವಿದ್ಧಾನಮಂತ್ರಗಳಿಗಾಗಿ ಈ ಸೂಕ್ತದ ವಿನಿಯೋಗವಿರುವುದೆಂದು ಆಶ್ವಲಾಯನಶ್ರೌತಸೂತ್ರದ **ಚಾತುರ್ವಿಂಶಿಕಂ ತೃತೀಯಸವನಮಿತ್ಯಾಭಿಪ್ಲವಿಕೇ ದ್ವಿತೀಯೇಽಹಸ್ಯತಿದಿಷ್ಟತ್ವಾತ್** ಎಂಬ ಸೂತ್ರದಿಂದಲೂ (ಆ. ೭-೬) **ಅಭಿಪ್ಲವಿಕಾದ್ದ್ವಿತೀಯಾದಹ್ನಃ ಪೃಷ್ಠ್ಯಸ್ಯ ದ್ವಿತೀಯೇಽಹನ್ಯೇತತ್ಸೂಕ್ತಮತಿದೇಶತಃ ಪ್ರಾಪ್ತಂ ಪೃಷ್ಠ್ಯಾಭಿಪ್ಲವೇನೋಕ್ತೇ ಅಹನೀ ಆದ್ಯೇ ಆದ್ಯಾಭ್ಯಾಂ** ಎಂಬ ಸೂತ್ರದಿಂದಲೂ ನಿರ್ದಿಷ್ಟವಾಗಿರುವುದು. (ಆ. ೭-೧೦); ಮತ್ತು ಈ ಸೂಕ್ತದ ಮೊದಲನೆಯ ಋಕ್ಕಿಗೆ ಆಶ್ವಿನಶಸ್ತ್ರಮಂತ್ರದಲ್ಲಿಯೂ ವಿನಿಯೋಗವಿರುವುದೆಂದು **ಸಂಸ್ಥಿತೇಷ್ವಾಶ್ವಿನಾಯ** ಎಂಬ ಸ್ಥಳದಲ್ಲಿ **ತೇ ಹಿ ದ್ಯಾವಾಪೃಥಿವೀ ವಿಶ್ವಶಂಭುವಾ ವಿಶ್ವಸ್ಯ ದೇವೀಮೃಚಯಸ್ಯ** ಎಂಬ ಸೂತ್ರದಿಂದ ವಿವೃತವಾಗಿರುವುದು. (ಆ. ೬-೫).

---

**॥ ಓಂ ॥**

## ಸೂಕ್ತ—೧೬೦

॥ ಮಂಡಲ—೧ ॥ ಅನುವಾಕ—೨೨ ॥ ಸೂಕ್ತ—೧೬೦ ॥

॥ ಅಷ್ಟಕ— ೨ ॥ ಅಧ್ಯಾಯ— ೩ ॥ ವರ್ಗ— ೩ ॥

॥ ಸೂಕ್ತದಲ್ಲಿರುವ ಋಕ್ಸಂಖ್ಯೆ—೫ ॥

॥ ಋಷಿಃ—ದೀರ್ಘತಮಾ ಔಚಥ್ಯಃ ॥

॥ ದೇವತಾ—ದ್ಯಾವಾಪೃಥಿವ್ಯೌ ॥

॥ ಛಂದಃ—ಜಗತೀ ॥

---

### ಸಂಹಿತಾಪಾಠಃ

ತೇ ಹಿ ದ್ಯಾವಾಪೃಥಿವೀ ವಿಶ್ವಶಂಭುವ ಋತಾವರೀ ರಜಸೋ ಧಾರ-
ಯತ್ಕವೀ ।
ಸುಜನ್ಮನೀ ಧಿಷಣೇ ಅಂತರೀಯತೇ ದೇವೋ ದೇವೀ ಧರ್ಮಣಾ
ಸೂರ್ಯಃ ಶುಚಿಃ ॥ ೧ ॥

### ಪದಪಾಠಃ

ತೇ ಇತಿ । ಹಿ । ದ್ಯಾವಾಪೃಥಿವೀ ಇತಿ । ವಿಶ್ವಽಶಂಭುವಾ । ಋತವರೀ ಇತ್ಯೃತಽವರೀ । ರಜಸಃ ।
ಧಾರಯತ್ಕವೀ ಇತಿ ಧಾರಯತ್ಽಕವೀ ।
ಸುಜನ್ಮನೀ ಇತಿ ಸುಽಜನ್ಮನೀ । ಧಿಷಣೇ ಇತಿ । ಅಂತಃ । ಈಯತೇ । ದೇವಃ । ದೇವೀ ಇತಿ । ಧರ್ಮಣಾ ।
ಸೂರ್ಯಃ । ಶುಚಿಃ ॥ ೧ ॥

### ಸಾಯಣಭಾಷ್ಯಂ

ತೇ ಹಿ ತೇ ಖಲು ಪ್ರಸಿದ್ಧೇ ದ್ಯಾವಾಪೃಥಿವೀ ಅಂತಸ್ತಯೋರಂತರಾಲೇ ಶುಚಿಃ ಶುದ್ಧೋ ವಿಶ್ವಸ್ಯ ಶೋಚಯಿತಾ ವಾ ದೇವೋ ದೀಪ್ಯಮಾನಃ ಸೂರ್ಯೋ ಧರ್ಮಣಾ ಪ್ರಕಾಶೋದಕದಾನಾದಿಧಾರಣೇನ ಯುಕ್ತಃ ಸನ್ನೀಯತೇ । ಸರ್ವದಾ ಗಚ್ಛತಿ ॥ ಈಜ್ ಗತೌ ದೈವಾದಿಕಃ ॥ ತಾದೃಶಂ ಕರ್ಮ ಯುವಯೋರನುಗ್ರಹಾದಿತಿ ಸ್ತುತಿಃ । ಕೀದೃಶ್ಯೌ ತೇ । ವಿಶ್ವಶಂಭುವಾ । ವಿಶ್ವಂ ಸುಖಭಾವಯಿತ್ರ್ಯೌ ಯಯೋಸ್ತೇ ವಿಶ್ವಶಂಭುವಾ । ವಿಶ್ವಸ್ಯ ಸುಖಯಿತ್ರ್ಯಾವಿತ್ಯರ್ಥಃ । ಋತಾವರೀ ಋತವತ್ಯೌ ॥ ಋತಶಬ್ದಾಚ್ಛಂದಸೀವನಿಪಾವಿತಿ ವನಿಪ್ । ವನೋ ರ ಚೇತಿ ಙೀಬ್ರೇಫೌ ॥ ರಜಸ ಉದಕಸ್ಯೋದಕೋತ್ಪತ್ತೌ । ಉದಕಂ ರಜ ಉಚ್ಯತ ಇತಿ ನಿರುಕ್ತಂ । ೪-೧೯ । ಧಾರಯತ್ಕವೀ ಆಕೃಚ್ಛ್ರೇಣ ಧಾರಕಂ ಕವಿ ಯಯೋಸ್ತೇ ತಾದೃಶ್ಯೌ । ಉದಕೋತ್ಪಾದನಾಯ ಪ್ರಯತ್ನವತ್ಯಾವಿತ್ಯರ್ಥಃ । ಯದ್ವಾ । ಧಾರಯತ್ಕವಿರ್ಮನೀಷ್ಯಾದಿತ್ಯೋ ಯಯೋಸ್ತೇ ತಾದೃಶ್ಯೌ । ವೃಷ್ಟ್ಯುದಕಧಾರಯತ್ಸೂರ್ಯೋಪೇತೇ ಇತ್ಯರ್ಥಃ । ಸುಜನ್ಮನೀ ಶೋಭನಜನ್ಮವತ್ಯೌ ಧಿಷಣೇ ಧರ್ಷಣೋಪೇತೇ । ಸ್ವವ್ಯಾಪಾರೇಷು ಪ್ರಗಲ್ಭೇ ಇತ್ಯರ್ಥಃ । ದೇವೀ ದ್ಯೋತಮಾನೇ । ಅತ್ರ ಯದ್ಯಪಿ ಧಿಷಣೇ ಇತ್ಯೇತತ್ ಧಿಷಣೇ ರೋದಸೀ ಇತಿ ತನ್ನಾಮಸೂಕ್ತತ್ವಾದ್ದ್ಯಾವಾಪೃಥಿವೀನಾಮ ತಥಾಪಿ ದ್ಯಾವಾಪೃಥಿವೀ ಇತ್ಯಸ್ಯ ವಿದ್ಯಮಾನತ್ವಾದ್ಯೌಗಿಕಂ ದ್ರಷ್ಟವ್ಯಂ ॥

ಪ್ರತಿಪದಾರ್ಥ

**ತೇ ಹಿ ದ್ಯಾವಾಪೃಥಿವೀ**—ಪ್ರಸಿದ್ಧವಾದ ದ್ಯಾವಾಪೃಥಿವಿಗಳು । **ವಿಶ್ವಶಂಭುವಾ**—ಸಕಲಲೋಕಗಳಿಗೂ ಸೌಖ್ಯದಾತರೂ । **ಋತಾವರೀ**—ಋತದ ನಿಯಮವನ್ನು ಪಾಲಿಸುವವರೂ । **ರಜಸಃ**—ಉದಕವನ್ನು । **ಧಾರಯತ್ಕವೀ**—ಧಾರಣೆಮಾಡುವ ಸಾಮರ್ಥ್ಯವುಳ್ಳವರೂ । **ಸುಜನ್ಮನೀ**—ಶ್ರೇಷ್ಠವಾದ ಜನ್ಮವುಳ್ಳವರೂ । **ಧಿಷಣೇ**—ಕರ್ತವ್ಯ ಕುಶಲರೂ । **ದೇವೀ**—ಪ್ರಕಾಶಮಾನರೂ ಅಥವಾ ದೇವತಾತ್ಮರೂ (ಆಗಿದ್ದಾರೆ) । **ಅಂತಃ**—ಈ ದ್ಯಾವಾಪೃಥಿವಿಗಳ ನಡುವೆ । **ಶುಚಿಃ**—ಪವಿತ್ರಾತ್ಮನಾದವನೂ । **ದೇವಃ**—ಪ್ರಕಾಶಮಾನನೂ ಆದ । **ಸೂರ್ಯಃ**—ಸೂರ್ಯನು। **ಧರ್ಮಣಾ**—ಉದಕವನ್ನು ಧರಿಸುವುದು, ಲೋಕವನ್ನು ಬೆಳಗುವುದು ಇತ್ಯಾದಿ ಕರ್ಮಯುಕ್ತನಾಗಿ । **ಈಯತೇ**—ಸಂಚರಿಸುತ್ತಾನೆ.

ಭಾವಾರ್ಥ

ಲೋಕಪ್ರಸಿದ್ಧರಾದ ದ್ಯಾವಾಪೃಥಿವಿಗಳು ಸಕಲಲೋಕಗಳಿಗೂ ಸೌಖ್ಯದಾತರೂ, ಋತದ ನಿಯಮವನ್ನು ಪಾಲಿಸುವವರೂ, ಉದಕವನ್ನು ಧಾರಣೆಮಾಡುವ ಸಾಮರ್ಥ್ಯವುಳ್ಳವರೂ, ಕರ್ತವ್ಯಕುಶಲರೂ ಮತ್ತು ಪ್ರಕಾಶಮಾನರೂ ಆಗಿದ್ದಾರೆ. ಈ ದ್ಯಾವಾಪೃಥಿವಿಗಳ ಅಂತರದಲ್ಲಿ ಪವಿತ್ರಾತ್ಮನಾದವನೂ ಪ್ರಕಾಶಮಾನನೂ ಆದ ಸೂರ್ಯನು ಉದಕವನ್ನು ಧರಿಸುವುದು, ಲೋಕವನ್ನು ಬೆಳಗುವುದು ಇತ್ಯಾದಿ ಕರ್ಮಯುಕ್ತನಾಗಿ ಸಂಚರಿಸುತ್ತಾನೆ.

## English Translation

Those two, the divine Heaven and Earth, are the diffusers of happiness on all, encouragers of truth, able to sustain the water (of the rains), auspicious of birth, and energetic (in action) : in the interval between whom proceeds the pure and divine Sun for (the discharge of his) duties.

ವಿಶೇಷವಿಷಯಗಳು

**ರಜಸಃ ಧಾರಯತ್ಕವೀ**— ಉದಕವನ್ನು ಧಾರಣಮಾಡುವ ಶಕ್ತಿಯುಳ್ಳವರು. ಅದೂ ಅಲ್ಲದೇ **ವಿಶ್ವಶಂಭುವಾ** ಉದಕಾದಿ ದಾನಗಳಿಂದ ಅನ್ನಸಂಪತ್ತನ್ನು ಬೆಳೆಸಿ ಲೋಕಕ್ಕೆಲ್ಲಾ ಸೌಖ್ಯವನ್ನು ಕೊಡತಕ್ಕವರೆಂದೂ ಸಹ ದ್ಯಾವಾಪೃಥಿವಿಗಳ ಶಕ್ತಿಯನ್ನೂ ಔದಾರ್ಯವನ್ನೂ ಒಟ್ಟಿಗೆ ಹೇಳಿದೆ. ವೃಷ್ಟಿರೂಪವಾದ ಉದಕದ ಧಾರಣಕ್ಕೂ ಮತ್ತು ದಾನಕ್ಕೂ ಸಹ ದ್ಯಾವಾಪೃಥಿವಿಗಳ ಸಾಹಚರ್ಯವೂ ಸಂಬಂಧವೂ ಹೇತುವಾಗುವುದೆಂದು ಪ್ರಸಿದ್ಧವಾಗಿದೆ.

> **ಸ ಯದಿ ವೃಷ್ಟಿಕಾಮಃ ಸ್ಯಾತ್। ಏತೇನೈವಾದದೀತ ಸಂಜಾನಾಥಾಂ ದ್ಯಾವಾಪೃಥಿವೀ ಇತಿ ಯದಾ ವೈ ದ್ಯಾವಾಪೃಥಿವೀ ಸಂಜಾನಾಥೇ ಅಥ ವರ್ಷತಿ ತಸ್ಮಾದಾಹ ಸಂಜಾನಾಥಾಂ ದ್ಯಾವಾಪೃಥಿವೀ ಇತಿ ॥**

(ಶ. ಬ್ರಾ. ೧-೮-೩-೧೨)

ದ್ಯಾವಾಪೃಥಿವಿಗಳ ಸಂಗಮದಿಂದ ವೃಷ್ಟಿಯು ಉತ್ಪನ್ನವಾಗುವುದರಿಂದ ಅವರ ಸಾಮರಸ್ಯವನ್ನೂ ಸಾಹಚರ್ಯವನ್ನೂ ಶತಪಥಬ್ರಾಹ್ಮಣದಲ್ಲಿ ಪ್ರಾರ್ಥಿಸಿದೆ.

ಪೃಥಿವೀ ಪೂರ್ವರೂಪಂ ದ್ಯೌರುತ್ತರರೂಪಂ ವೃಷ್ಟಿಃ ಸಂಧಿಃ ಪರ್ಜನ್ಯಃ ಸಂಧಾತಾ । ತದುತಾಪಿ ತರ್ಹ್ಯೈತದ್ಬಲವದನುದ್ಗೃಹ್ಣನ್ ಸಂದಧದಹೋರಾತ್ರೇ ವರ್ಷತಿ ದ್ಯಾವಾಪೃಥಿವ್ಯೌ ಸಮಧಾತಾ-ಮಿತ್ಯೇತಾಪ್ಯಾಹುಃ ॥

(ಐತರೇಯಾರಣ್ಯಕಂ ೩-೧-೨)

ಎಂಬ ಆರಣ್ಯಕ ಮಂತ್ರಗಳಲ್ಲಿಯೂ ಸಹ ಮೇಲೆ ಹೇಳಿದಂತೆಯೇ ದ್ಯಾವಾಪೃಥಿವಿಗಳ ಸಂಧಿಯಿಂದ ವೃಷ್ಟಿರೂಪದ ಉದಕದ ಪತನವೆಂದೂ ಮತ್ತು ಉದಕಸಂಘಾತವಾಗಿ ವೃಷ್ಟಿಪತನವಾದರೆ ಒಡನೆಯೇ ಸಕಲರೂ ಸಹ ದ್ಯಾವಾ ಪೃಥಿವಿಗಳ ಸಂಗಮವಾಯಿತೆಂದು ಹೇಳುವರೆಂದೂ ಹೇಳಿದೆ. ಮತ್ತು,

ಅಸೌ ಹಿ ತ್ರಿಷ್ಟುಪ್ಪ್ರದೇನೇ ಸಯುಜೌ ಕರೋತಿ ತಸ್ಮಾದಿಮೇ ಸಂಭುಂಜಾತೇಽನಯೋರನು ಸಂಭೋಗಮಿಮಾಃ ಸರ್ವಾಃ ಪ್ರಜಾ ಅನು ಸಂಭುಂಜತೇ ॥

(ಶ. ಬ್ರಾ. ೧-೭-೨-೧೬)

ಈ ದ್ಯಾವಾಪೃಥಿವಿಗಳಿಗೆ ಒಟ್ಟಿಗೆ ಸೇರಿಸಿ ಹವಿರಾದ್ಯರ್ಪಣವಾದನಂತರ ಅವರು ವೃಷ್ಟಿಯನ್ನು ಸುರಿಸಿ ಸಕಲಭೂತ ಗಳಿಗೂ ಅನ್ನವು ದೊರಕುವುದು.

[The rain is the food of the earth, and the food, Produced thereby, in its turn furnishes food for the sky in the form of oblations.] ಎಂದು ಸಕಲಲೋಕಕ್ಕೂ ಸೌಖ್ಯದಾಯಕವಾದ ಅನ್ನಸಂಪತ್ತಿಗೆ ಹೇತುವಾಗಿರುತ್ತಾರೆಂಬ ಅಂಶವನ್ನು ವರ್ಣಿಸಿದೆ. ಕೇವಲ ಅನ್ನಸಂಪತ್ತನ್ನೇ ವೃದ್ಧಿಮಾಡುವವರಲ್ಲದೆ ಲೋಕವ್ಯವಹಾರಗಳಲ್ಲಿ ನಿಯಮವನ್ನು ಪಾಲಿಸತಕ್ಕ ಋತಾವರಿಗಳೂ ಆಗಿರುವರು. ಈ ಸಂದರ್ಭದಲ್ಲಿ ಜಗಚ್ಚಕ್ಷುವಾದ ಸೂರ್ಯನ ಮಾರ್ಗಕ್ಕೂ ದ್ಯಾವಾಪೃಥಿವಿಗಳ ಋತದ ನಿಯಮಕ್ಕೂ ಸಂಬಂಧವನ್ನು ತಿಳಿಸುತ್ತಾ ಶುಚಿಃ ಸೂರ್ಯಃ ಅಂತಃ ಈಯತೇ ಪ್ರಕಾಶಮಾನನಾದ ಸೂರ್ಯನು ಈ ದ್ಯಾವಾಪೃಥಿವಿಗಳ ನಡುವೆ ಸಂಚರಿಸುತ್ತಾನೆ ಎಂದು ವರ್ಣಿಸಿದೆ. ನಿಯಮಕ್ಕೆ ಅನುಸಾರವಾದುದೂ, ದ್ಯಾವಾಪೃಥಿವಿಗಳ ಮಧ್ಯವರ್ತಿಯಾ ದುದೂ ಆದ ಸೂರ್ಯನ ಪರಿಭ್ರಮಣವನ್ನು ಅನೇಕ ಕಡೆಗಳಲ್ಲಿ ಇದೇ ರೀತಿ ವರ್ಣಿಸಿದೆ.

ಅಹಮಪೋ ಅಪಿನ್ವಮುಕ್ಷಮಾಣಾ ಧಾರಯಂ ದಿವಂ ಸದನ ಋತಸ್ಯ ।
ಋತೇನ ಪುತ್ರೋ ಅದಿತೇರ್ಋತಾವೋತ ತ್ರಿಧಾತು ಪ್ರಥಯದ್ವಿ ಭೂಮ ॥

(ಋ. ಸಂ. ೪-೪೨-೪)

ಎಂಬಲ್ಲಿ ಋತದ ಸದನದಲ್ಲಿ ಅಂತರಿಕ್ಷವನ್ನು ಸ್ಥಾಪಿಸಿದುದಾಗಿ ವರುಣನು ಪ್ರಕಟಿಸಿದ್ದಾನೆ.

ಕವಿರ್ನೃಚಕ್ಷಾ ಅಭಿ ಷೀಮಚಷ್ಟ ಋತಸ್ಯ ಯೋನಾ ವಿಘೃತೇ ಮದಂತೀ ।
ನಾನಾ ಚಕ್ರಾತೇ ಸದನಂ ಯಥಾ ವೇಃ ಸಮಾನೇನ ಕ್ರತುನಾ ಸಂವಿದಾನೇ ॥

(ಋ. ಸಂ. ೩-೫೪-೬)

ಎಂಬ ಋಕ್ಕಿನಲ್ಲಿ ಋತದ ಗರ್ಭದಲ್ಲಿ ಹರ್ಷಿಸುತ್ತಿರುವ ದ್ಯಾವಾಪೃಥಿವಿಗಳನ್ನು ಅವುಗಳ ಅಂತರದಲ್ಲಿ ಸಂಚರಿಸುವ ಸೂರ್ಯನು ವೀಕ್ಷಿಸುತ್ತಿದ್ದಾನೆಂದೂ,

**ಪರಿಕ್ಷಿತಾ ಪಿತರಾ ಪೂರ್ವಜಾವರೀ ಋತಸ್ಯ ಯೋನಾ ಕ್ಷಯತಃ ಸಮೋಕಸಾ ।**
**ದ್ಯಾವಾಪೃಥಿವೀ ವರುಣಾಯ ಸವ್ರತೇ ಘೃತವತ್ಪಯೋ ಮಹಿಷಾಯ ಪಿನ್ವತಃ ॥**

(ಋ ಸಂ. ೧೦-೬೫-೮)

ಇತ್ಯಾದಿಋಕ್ಕುಗಳಲ್ಲಿ **ಋತದ** ಗರ್ಭವು ದ್ಯಾವಾಪೃಥಿವಿಗಳಿಗೆ ಸಮಾನವಾದ ನಿವಾಸಸ್ಥಾನವೆಂದೂ ತಿಳಿಸಿದೆ. ಈ ಎಲ್ಲಾ ವರ್ಣನೆಗಳ ಅಂಶಗಳನ್ನೂ ಸಹ ಪ್ರಕೃತವಾದ ಋಕ್ಕಿನಲ್ಲಿ ಸೂಚಿಸಿದೆ.

**ಧಿಷಣೇ—ಸ್ವಧೇ, ಪುರಂಧೀ** ಇತ್ಯಾದಿ ದ್ಯಾವಾಪೃಥಿವಿಗಳ ನಾಮಗಳಲ್ಲಿ ಪಠಿತವಾಗಿದೆ (ನಿ. ೩-೩೧). ಈ ಪದಕ್ಕೆ **ಧಿಷಣಾ ವಾಕ್ ಧಿಷೇರ್ದಧಾತ್ಯರ್ಥೇ । ಧೀಸಾದಿನೀತಿ ವಾ ।** (ನಿ. ೮-೩) ಹಿಡಿದಿರುತ್ತದೆ ಎಂದಭಿಪ್ರಾಯವನ್ನು ಕೊಡುವ **ಧಿಷ್** ಧಾತುವಿನಿಂದ ನಿಷ್ಪನ್ನವಾಗಬಹುದೆಂದು ತಿಳಿಸಿದೆ. **ಧೀಸಾನಿನೀತಿ ವಾ** ಬುದ್ಧಿಯನ್ನು ವಿಸ್ತರಿಸುತ್ತದೆ ಎಂದರೆ ಅರ್ಥವನ್ನು ವಿಶದವಾಗಿ ತಿಳಿಸುತ್ತದೆ ಎಂದಾದರೂ ಆಗಬಹುದೆಂದು ನಿರುಕ್ತಕಾರರ ನಿರ್ವಚನವಿದೆ.

**ದ್ಯಾವಾಪೃಥಿವೀ ಗಚ್ಛ ಸ್ವಾಹೇತಿ ।** ಪ್ರಜಾಪತಿರ್ವೈ ಪ್ರಜಾಃ **ಸೃಷ್ಟ್ವಾ ತಾ ದ್ಯಾವಾಪೃಥಿವೀಭ್ಯಾಂ** ಪರ್ಯಗೃಹ್ಣಾತ್ತಾ ಇಮಾ ದ್ಯಾವಾಪೃಥಿವೀಭ್ಯಾಂ ಪರಿಗೃಹೀತಾಃ ।

(ಶ. ಬ್ರಾ. ೩-೮-೪-೧೭)

ಎಂಬಲ್ಲಿ ದ್ಯಾವಾಪೃಥಿವಿಗಳು ಪ್ರಜಾಪತಿಯಿಂದ ಸೃಷ್ಟರಾದ ಸಕಲ ಪ್ರಜೆಗಳನ್ನು ಹಿಡಿದು ತನ್ನ ನಿಯಮದಲ್ಲಿಟ್ಟುಕೊಂಡರೆಂದು ಹೇಳಿದೆಯಾದ್ದರಿಂದ **ಹಿಡಿದಿರು** ಎಂಬರ್ಥವನ್ನು ಕೊಡುವ **ಧಿಷ್**ಧಾತುವಿನಿಂದ ನಿಷ್ಪನ್ನವಾಗಿ ಮೇಲಿನ **ಅರ್ಥ**ವನ್ನು ಸೂಚಿಸುವುದರಿಂದ ಈ ಹೆಸರು ಪ್ರಸಿದ್ಧವಾಗಿರಬಹುದು.

**ರಜಸಃ—ರಜಸ್**ಶಬ್ದಕ್ಕೆ ಇಲ್ಲಿ ಉದಕವೆಂದರ್ಥಮಾಡಿದ್ದಾರೆ. **ರಜಃ । ರಜೋ ರಜತೇರ್ಜ್ಯೋತೀ ರಜ ಉಚ್ಯತೇ ಉದಕಂ ರಜ ಉಚ್ಯತೇ । ಲೋಕಾ ರಜಾಂಸ್ಯುಚ್ಯಂತೇ ।** (ನಿ. ೪-೧೯) ಬೆಳಗು ಎಂಬರ್ಥವನ್ನು ಕೊಡುವ **ರಂಜ್** ಧಾತುವಿನಿಂದ ನಿಷ್ಪನ್ನವಾಗಿ **ರಜಸ್**ಶಬ್ದಕ್ಕೆ ಜ್ಯೋತಿಯೆಂದೂ, ಉದಕವೆಂದೂ, ಲೋಕಗಳೆಂದೂ ಅರ್ಥವಾಗುತ್ತದೆ. ಅಲ್ಲದೇ **ಅಸೃಗಹನೀ ರಜಸೀ ಉಚ್ಯೇತೇ** ರಕ್ತ, ಅಹಸ್ಸು ಇವುಗಳಿಗೂ ಇದು ಪರ್ಯಾಯನಾಮವಾಗಿದೆಯೆಂದು ನಿರುಕ್ತವಚನವಿದೆ. ನಿರುಕ್ತಕಾರರು

**ಅಬ್ಜಾಮುಕ್ಥೈರಹಿಂ ಗೃಣೀಷೇ ಬುಧ್ನೇ ನದೀನಾಂ ರಜಃಸು ಷೀದನ್ ।**

(ಋ. ಸಂ. ೭-೩೪-೧೬)

ಎಂಬ ಋಕ್ಕನ್ನುದಹರಿಸಿ ಅಲ್ಲಿ **ರಜಸ್ಸು ಉದಕೇಷು** ಎಂದರ್ಥಮಾಡಿರುವಂತೆ ಪ್ರಕೃತವಾದ ಋಕ್ಕಿನಲ್ಲಿಯೂ ಉದಕವೆಂದರ್ಥಮಾಡಿದೆ. **ರಜಶ್ಶಬ್ದ**ಕ್ಕೆ ಉಳಿದ ಅರ್ಥಗಳನ್ನು ಆಯಾ ಸಂದರ್ಭಗಳಲ್ಲಿ ತಿಳಿಸಲಾಗುತ್ತದೆ.

### ವ್ಯಾಕರಣಪ್ರಕ್ರಿಯಾ

**ವಿಶ್ವಶಂಭುವಾ**—ಭೂ ಸತ್ತಾಯಾಂ ಧಾತು. ಅಂತರ್ಭಾವಿತಣ್ಯರ್ಥಕವಾಗಿರುವಾಗ **ಕ್ವಿಪ್ ಪ್ರತ್ಯಯ**. ಬಹುವ್ರೀಹೌ ವಿಶ್ವಂ **ಸಂಜ್ಞಾಯಾಮ್** (ಪಾ ಸೂ. ೬-೨-೧೦೪) ಎಂಬುದರಿಂದ **ಪೂರ್ವಪದಾಂತೋದಾತ್ತ**ಸ್ವರ

ಬರುತ್ತದೆ. ದ್ವಿವಚನ ಪರವಾದಾಗ **ಸುಪಾಂ ಸುಲುಕ್** (ಪಾ. ಸೂ. ೭.೧-೩೯) ಎಂಬುದರಿಂದ ಅದಕ್ಕೆ ಆಕಾರಾದೇಶ.

**ಋತಾವರೀ**—ಋತಂ ಅನಯೋಃ ಅಸ್ತಿ ಇತಿ **ತೇ. ಛಂದಸೀವನಿಪೌ** ಎಂಬುದರಿಂದ ಮತ್ವರ್ಥದಲ್ಲಿ ವನಿಪ್ ಪ್ರತ್ಯಯ. **ಅನ್ಯೇಷಾಮಪಿ ದೃಶ್ಯತೇ** (ಪಾ. ಸೂ. ೬-೩-೧೩೭) ಎಂಬುದರಿಂದ ಪೂರ್ವಪದಕ್ಕೆ ದೀರ್ಘ. ಸ್ತ್ರೀತ್ವ ವಿವಕ್ಷಾಮಾಡಿದಾಗ **ವನೋರಚ** (ಪಾ. ಸೂ. ೪-೧-೭) ಎಂಬುದರಿಂದ ಙೀಪ್. ತತ್ಸನ್ನಿಯೋಗದಿಂದ ನಕಾರಕ್ಕೆ ರೇಫ. ಪ್ರತ್ಯಯ ಪಿತ್ತಾದುದರಿಂದ ಅನುದಾತ್ತವಾಗುತ್ತದೆ. ದ್ವಿವಚನ ಪರವಾದಾಗ **ಸುಪಾಂ ಸುಲುಕ್** (ಪಾ. ಸೂ. ೭-೧-೩೯) ಎಂಬುದರಿಂದ ಪೂರ್ವಸವರ್ಣದೀರ್ಘ.

**ಧಾರಯತ್ ಕವೀ**—ಧಾರಯತ್ ಕವಿಃ ಯಯೋಸ್ತೇ. ಬಹುವ್ರೀಹಿಯಲ್ಲಿ ಪೂರ್ವಪದಪ್ರಕೃತಿಸ್ವರ ಬರುತ್ತದೆ. ಹಿಂದಿನಂತೆ ದ್ವಿವಚನ ಪರವಾದಾಗ ಪೂರ್ವಸವರ್ಣದೀರ್ಘ.

**ಸುಜನ್ಮನೀ**—ಶೋಭನಂ ಜನ್ಮ ಯಯೋಸ್ತೇ. **ಆದ್ಯುದಾತ್ತಂದ್ವ್ಯಚ್ ಛಂದಸಿ** (ಪಾ. ಸೂ. ೬-೨-೧೧೯) ಎಂಬುದರಿಂದ ಉತ್ತರಪದ ಆದ್ಯುದಾತ್ತಸ್ವರ ಬರುತ್ತದೆ.

**ಧಿಷಣೇ**—ಞಿಧೃಷಾ ಪ್ರಾಗಲ್ಭ್ಯೇ ಧಾತು. **ಧೃಷೇರ್ಧಿಷ್ ಚ ಸಂಜ್ಞಾಯಾಮ್** (ಉ. ಸೂ.೨೪೦) ಎಂಬುದರಿಂದ ಕ್ಯು ಪ್ರತ್ಯಯ. ಧಾತುವಿಗೆ ಧಿಷ್ ಆದೇಶ. **ಯುವೋರನಾಕೌ** (ಪಾ. ಸೂ. ೭-೧-೩೯)ಎಂಬುದರಿಂದ ಅನಾದೇಶ. ಷಕಾರನಿಮಿತ್ತವಾಗಿ ನಕಾರಕ್ಕೆ ಣತ್ವ. ದ್ವಿವಚನಾಂತರೂಪ.

**ಈಯತೇ**—ಈಙ್ ಗತೌ ಧಾತು. ದಿವಾದಿ, ಶ್ಯನ್ ವಿಕರಣ. ಲಟ್ ಪ್ರಥಮಪುರುಷಏಕವಚನಾಂತರೂಪ. ತಿಙಂತನಿಘಾತಸ್ವರ ಬರುತ್ತದೆ. ॥ ೧ ॥

**ಸಂಹಿತಾಪಾಠಃ**

ಉರುವ್ಯಚಸಾ ಮಹಿನೀ ಅಸಶ್ಚತಾ ಪಿತಾ ಮಾತಾ ಚ ಭುವನಾನಿ ರಕ್ಷತಃ ।
ಸುಧೃಷ್ಟಮೇ ವಪುಷ್ಯೇ೩ ನ ರೋದಸೀ ಪಿತಾ ಯತ್ಸೀಮಭಿ ರೂಪೈರವಾಸಯತ್ ॥ ೨ ॥

**। ಪದಪಾಠಃ ।**

ಉರುವ್ಯಚಸಾ । ಮಹಿನೀ ಇತಿ । ಅಸಶ್ಚತಾ । ಪಿತಾ । ಮಾತಾ । ಚ । ಭುವನಾನಿ । ರಕ್ಷತಃ ।
ಸುಧೃಷ್ಟಮೇ ಇತಿ ಸುಧೃಷ್ಟಮೇ । ವಪುಷ್ಯೇ೩ ಇತಿ । ನ । ರೋದಸೀ ಇತಿ । ಪಿತಾ । ಯತ್ । ಸೀಂ ।
ಅಭಿ । ರೂಪೈಃ । ಅವಾಸಯತ್ ॥ ೨ ॥

### ಸಾಯಣಭಾಷ್ಯಂ

ಉರುವ್ಯಚಸಾ ಪ್ರಭೂತವ್ಯಚನವತ್ಯಾವತಿವಿಸ್ತೀರ್ಣೇ ಮಹಿನೀ ಅತ ಏವ ಮಹತ್ಯೌ ಅಸಶ್ಚತಾಸಜ್ಯಮಾನೇ । ಪರಸ್ಪರವಿಯುಕ್ತೇ ಇತ್ಯರ್ಥಃ । ಪಿತಾ ಪಾಲಯಿತ್ರೀ ದ್ಯೌಃ ಮಾತಾ ನಿರ್ಮಾತ್ರೀ ಪೃಥಿವೀ ಚೇತ್ಯುಭೇ ಭುವನಾನಿ ಭೂತಜಾತಾನಿ ರಕ್ಷತಃ । ಪಾಲಯತಃ । ದ್ಯೌಷ್ಪಿತಃ ಪೃಥಿವೀ ಮಾತಃ । ಋ. ೬-೫೧-೫ । ಇತ್ಯಾದಿಶ್ರುತೇರ್ಮಾತಾಪಿತೃರೂಪತ್ವಂ । ಕಿಂಚ ಸುಧೃಷ್ಟಮೇ ಅತಿಶಯೇನ ಧೃಷ್ಟೇ ॥ ಛಾಂದಸಸ್ತಕಾರಲೋಪಃ ॥ ಪ್ರಗಲ್ಭೇ ರೋದಸೀ ದ್ಯಾವಾಪೃಥಿವ್ಯೌ ವಪುಷ್ಯೇ ನ ವಪುಷೋ ಹಿತೇ ಇವ । ಪ್ರಾಣಿನಾಂ ಪಿತರಾವಿವ ಶರೀರರಕ್ಷಕೇ ಇತ್ಯರ್ಥಃ । ತದೇವೋಪಪಾದಯತಿ । ಯದ್ಯಸ್ಮಾತ್ಸೀಂ ಸರ್ವತಃ ಪಿತಾ ಪಿತೃಸ್ಥಾನೀಯಾ ದ್ಯೌ ರೂಪೈರ್ನಿರೂಪಣಸಾಧನೈಃ ಪ್ರಶಸ್ತೈಃ ಪ್ರಕಾಶೈರ್ನಿರೂಪ್ಯಮಾಣೈರ್ವ್ಯಾಪ್ತ್ಯಾದಿಭಿರ್ವಾಭ್ಯವಾಸಯತ್ ಅಭಿವಾಸಯತಿ ಅಧಿತಿಷ್ಠತಿ ತಿಸ್ಮಾತ್ಪಿತಾ ಮಾತಾ ಚ ಭುವನಾನಿ ರಕ್ಷತಃ ॥

### ಪ್ರತಿಪದಾರ್ಥ

**ಉರುವ್ಯಚಸಾ**—ಅತ್ಯಂತ ವಿಸ್ತಾರವಾಗಿ ಹರಡಿರುವುವೂ । **ಮಹಿನೀ**—ಅದ್ದರಿಂದಲೇ ಮಹತ್ತಾದವೂ । **ಅಸಶ್ಚತಾ**—ಒಂದಕ್ಕೊಂದಕ್ಕೆ ಅಂಟಿಕೊಳ್ಳದಿರುವುವೂ । **ಪಿತಾ**—ಪಾಲಕನಾದ ದ್ಯುಲೋಕಾಧಿದೇವತೆಯೂ । **ಮಾತಾ ಚ**—ನಿರ್ಮಾತ್ರಿಯಾದ ಭೂದೇವಿಯೂ ಕೂಡ । **ಭುವನಾನಿ**—ಸಕಲ ಲೋಕಗಳನ್ನೂ । **ರಕ್ಷತಃ**—ಸುರಕ್ಷಿತವಾಗಿ ಕಾಪಾಡುತ್ತಾರೆ. । **ಸುಧೃಷ್ಟಮೇ**—ದೃಢವಾದ ಸಂಕಲ್ಪವುಳ್ಳ । **ರೋದಸೀ**—ದ್ಯಾವಾಪೃಥಿವಿಗಳು । **ವಪುಷ್ಯೇ ನ**—ದೇಹಗಳುಳ್ಳ ಸಕಲ ಪ್ರಾಣಿಗಳ ಕ್ಷೇಮಕ್ಕಾಗಿಯೇ ಇರುವಂತಿದ್ದಾರೆ. (ಅವರಿಬ್ಬರಲ್ಲಿ)। **ಪಿತಾ**—ಪಿತೃಸ್ಥಾನದಲ್ಲಿರುವ ಅಂತರಿಕ್ಷವು । **ಸೀಂ**—ಸುತ್ತಲೂ । **ರೂಪೈಃ**—(ತನ್ನ ಪ್ರಶಸ್ತವಾದ) ಪ್ರಕಾಶನಗಳಿಂದ । **ಅಭ್ಯವಾಸಯತ್**—ಹೊದ್ದಿಸಿದೆ (ಸುತ್ತಲೂ ವ್ಯಾಪಿಸಿದೆ) ।

### ಭಾವಾರ್ಥ

ಅತ್ಯಂತ ವಿಸ್ತಾರವಾಗಿ ಹರಡಿರುವುವೂ ಅದ್ದರಿಂದಲೇ ಮಹತ್ತಾದವೂ ಒಂದಕ್ಕೊಂದಕ್ಕೆ ಅಂಟಿಕೊಳ್ಳದಿರುವುವೂ ಆದ ಪಾಲಕನಾದ ದ್ಯುಲೋಕಾಧಿ ದೇವತೆಯೂ ನಿರ್ಮಾತ್ರಿಯಾದ ಭೂದೇವಿಯೂ ಸಹ ಸಕಲ ಲೋಕಗಳನ್ನೂ ಸುರಕ್ಷಿತವಾಗಿ ಕಾಪಾಡುತ್ತಾರೆ. ದೃಢವಾದ ಸಂಕಲ್ಪವುಳ್ಳ ದ್ಯಾವಾಪೃಥಿವಿಗಳು ದೇಹಗಳುಳ್ಳ ಸಕಲ ಪ್ರಾಣಿಗಳ ಕ್ಷೇಮಕ್ಕಾಗಿಯೇ ಇರುವಂತಿದ್ದಾರೆ. ಅವರಿಬ್ಬರಲ್ಲಿ ಪಿತೃಸ್ಥಾನದಲ್ಲಿರುವ ಅಂತರಿಕ್ಷವು ತನ್ನ ಪ್ರಶಸ್ತವಾದ ಪ್ರಕಾಶನಗಳಿಂದ ಸುತ್ತಲೂ ಹೊದ್ದಿಸಿದೆ, ಎಂದರೆ ವ್ಯಾಪಿಸಿದೆ.

## English Translation

Wide-spreading, vast, unconnected, the father and mother ( of all beings), they two preserve the worlds. Resolute, as if ( for the good ) of embodied (beings), are Heaven and Earth, and the father has invested every thing with (visible) forms.

। ವಿಶೇಷವಿಷಯಗಳು ।

**ಉರುವ್ಯಚಸಾ**— ಉರು ವಿಸ್ತೀರ್ಣಂ ವ್ಯಚಃ ವ್ಯಾಪನಂ ಯಯೋಃ ಅತ್ಯಂತ ವಿಸ್ತಾರವಾದ ವ್ಯಾಪನವುಳ್ಳವರು ಅಥವಾ ಎಲ್ಲವನ್ನೂ ವ್ಯಾಪಿಸುವಷ್ಟು ವಿಸ್ತೃತಿಯುಳ್ಳವರು. ಈ ಪದವು ಅಧಿಕವಾಗಿ **ದ್ಯಾವಾಪೃಥಿವಿಗಳಿಗೂ ಅದಿತಿಗೂ** ವಿಶೇಷಣವಾಗಿ ಉಪಯೋಗಿಸಲ್ಪಟ್ಟಿರುತ್ತದೆ. **ಅದಿತಿಗೂ ಪೃಥಿವಿಗೂ** ಅನೇಕ ಕಡೆಗಳಲ್ಲಿ ತಾದಾತ್ಮ್ಯವನ್ನು ಹೇಳಿರುವುದರಿಂದ,

**ಭಗೋ ವಿಭಕ್ತಾ ಶವಸಾವಸಾ ಗಮದುರುವ್ಯಚಾ ಅದಿತಿಃ ಶ್ರೋತು ಮೇ ಹವಂ ।**

(ಋ. ಸಂ ೫-೪೬-೬)

ಇತ್ಯಾದಿ ಋಕ್ಕುಗಳಲ್ಲಿ **ಅದಿತಿಯ** ಮಹತ್ತ್ವಪೂರಿತವಾದ ವೈಶಾಲ್ಯವೂ ಪೃಥಿವಿಯ ವರ್ಣನೆಯೇ ಆಗಿದೆ. **ಉರುವ್ಯಚಸಾ** ಎನ್ನುವಂತೆ **ವರೀಮಭಿಃ** ಎಂಬ ವಿಶೇಷಣವೂ ಸಹ ದ್ಯಾವಾಪೃಥಿವಿಗಳ ವಿಸ್ತೃತಿಯನ್ನು ಸೂಚಿಸುತ್ತದೆ. ದ್ಯಾವಾ ಪೃಥಿವಿಗಳಿಗಿಂತ ಮೀರಿ ಹರಡಿರುವುದು ವಿಶ್ವದಲ್ಲಿ ಯಾವುದೂ ಇಲ್ಲ ಎಂಬ ಶತಪಥ ಬ್ರಾಹ್ಮಣದಲ್ಲಿನ ವಾಕ್ಯವು ಈ ಸತ್ಯವನ್ನು ವಿಶದಪಡಿಸುವುದು. **ಕಾಣ್ವಶಾಖೆಯ** ಮೂಲವು ಸದ್ಯಃ ಉಪಲಬ್ಧವಾಗದಿರುವುದರಿಂದ ಅದರ ಆಂಗ್ಲಾನುವಾದವನ್ನು ಇಲ್ಲಿ ಉದಹರಿಸಿದೆ.

"The great Heaven and Earth" for additional superfluous (ಅತಿರಿಕ್ತ) is that (ಗರ್ಭ), beyond these two, Heaven and Earth, nothing whatever remains (or nothing surpasses them, ಅತಿರಿಚ್ಯತೇ).

(S. B. E. Vol. XXVI. P. 336, f. n.)

ಪೃಥಿವ್ಯಂತರಿಕ್ಷಗಳನ್ನು ಮೀರಿದ ವಿಸ್ತೃತಿಯುಳ್ಳ ವಸ್ತುವು ಲೋಕದಲ್ಲಿ ಯಾವುದೂ ಇಲ್ಲವೆಂದು ಹೇಳಿದೆ.

ಇದರಂತೆಯೇ ಸಮಸ್ತ ವಿಶ್ವವೂ ಸಹ ಭರಣಕ್ಕೂ ಧಾರಣೆಗೂ ಸಹ ಪೃಥಿವ್ಯಂತರಿಕ್ಷಗಳನ್ನೇ ನಂಬಿವೆಯೆಂದು ಪಿತ ಮಾತಾ ಚ ಭುವನಾನಿ ರಕ್ಷತಃ ಎಂಬ ವಾಕ್ಯವು ತಿಳಿಸುತ್ತದೆ.

**ಸ್ವಾಹೋರೋರಂತರಿಕ್ಷಾದಾರಭತೇ ಸ್ವಾಹಾ ದ್ಯಾವಾಪೃಥಿವೀಭ್ಯಾಮಿತಿ ತದಾಭ್ಯಾಂ ದ್ಯಾವಾಪೃಥಿವೀಭ್ಯಾಮಾರಭತೇ ಯಯೋರಿದಂ ಸರ್ವಮಧಿ ॥**

(ಶ. ಬ್ರಾ. ೩-೧-೩-೨೬)

**ನಮೋ ದ್ಯಾವಾಪೃಥಿವೀಭ್ಯಾಮಿತಿ ತದಾಭ್ಯಾಂ ದ್ಯಾವಾಪೃಥಿವೀಭ್ಯಾಂ ನಿಹ್ನುವತೇ ಯಯೋರಿದಂ ಸರ್ವಮಧಿ ।**

(ಶ. ಬ್ರಾ. ೩-೪-೩-೨೧)

**ದ್ಯಾವಾಪೃಥಿವೀಭ್ಯಾಂ ತ್ವಾ ಪರಿದದಾಮೀತಿ ತದೇನಮಾಭ್ಯಾಂ ದ್ಯಾವಾಪೃಥಿವೀಭ್ಯಾಂ ಪರಿದದಾತಿ ಯಯೋರಿದಂ ಸರ್ವಮಧಿ ।**

(ಶ. ಬ್ರಾ. ೧೧-೫-೪-೪)

ಇತ್ಯಾದ್ಯನೇಕಕಡೆಗಳಲ್ಲಿ ಸಕಲಲೋಕಗಳ ಸ್ಥಿತಿಯೂ, ಭರಣವೂ ಮತ್ತು ಸಕಲ ರಕ್ಷಣಾವ್ಯಾಪಾರಗಳೂ ದ್ಯಾವಾಪೃಥಿವಿಯನ್ನೇ ಆಶ್ರಯಿಸಿವೆ ಎಂದು ಪುನಃ ಪುನಃ ಹೇಳಿರುವ ಅಂಶವನ್ನು ಇಲ್ಲಿ ವಿಶದಪಡಿಸಿದೆ.

**ಪಿತಾ ಮಾತಾ ಚ**—**ದ್ಯೌಃ ಪಿತಃ ಪೃಥಿವೀ ಮಾತಃ** ಎಂದು ಹೇಳಿರುವ ದ್ಯಾವಾಪೃಥಿವಿಗಳಿಗೂ ಇತರ ಸಕಲ ಭೂತಗಳಿಗೂ ಇರುವ ಮಾತಾಪಿತೃಸಂಬಂಧವನ್ನು ಹಿಂದೆ ವಿಶದವಾಗಿ ತಿಳಿಸಿದೆ.

**ಸುಧೃಷ್ಟಮೇ**—**ಅತಿಶಯೇನ ಧೃಷ್ಟೇ । ಪ್ರಗಲ್ಭೇ ।** ಸ್ಥೈರ್ಯವುಳ್ಳವರು ಮತ್ತು ದೃಢವಾದ ಸಂಕಲ್ಪವುಳ್ಳವರೆಂದರ್ಥ.

**ರೂಪೈರವಾಸಯತ್**—ಆದಿತ್ಯಾದಿ ಗ್ರಹಗಳು ಅಂತರಿಕ್ಷಜನ್ಯವಾದುದರಿಂದ ಅವುಗಳ ಮೂಲಕ ತನ್ನ ಪ್ರಕಾಶವನ್ನು ಬೀರಿದೆ ಎಂದಾಗಲಿ ಅಥವಾ **ವೃಷ್ಟ್ಯಾದಿಭಿರ್ವಾ ಅಚ್ಛಾವಾಸಯತ್** ವೃಷ್ಟ್ಯಾದಿಗಳಿಂದ ತುಂಬಿದೆ ಎಂದಾಗಲಿ ಅರ್ಥವಾಗುತ್ತದೆ.

### ವ್ಯಾಕರಣಪ್ರಕ್ರಿಯಾ

**ಉರುವ್ಯಚಸಾ**—ವ್ಯಚ ವ್ಯಾಜೀಕರಣೇ. ಧಾತು. ಇದಕ್ಕೆ ಔಣಾದಿಕ ಅಸಿ ಪ್ರತ್ಯಯ. **ವ್ಯಚೇಃ ಕುಟಾದಿತ್ವಮನಸಿ** (ಕಾ. ೧-೨-೧-೧) ಎಂಬುದರಿಂದ ಙಿತ್ವವಿಲ್ಲದಿರುವುದರಿಂದ ಸಂಪ್ರಸಾರಣ ಬರುವುದಿಲ್ಲ. **ಪರಾದಿಶ್ಛಂದಸಿ ಬಹುಲಂ** (ಪಾ. ಸೂ. ೬-೨-೧೯೯) ಎಂಬುದರಿಂದ ಉತ್ತರಪದಾದ್ಯುದಾತ್ತಸ್ವರ ಬರುತ್ತದೆ. **ಸುಪಾಂ ಸುಲುಕ್** (ಪಾ. ಸೂ. ೭-೧-೩೯) ಎಂಬುದರಿಂದ ದ್ವಿವಚನಕ್ಕೆ ಆಕಾರಾದೇಶ.

**ಮಹಿನೀ**—ಮಹ ಪೂಜಾಯಾಂ ಧಾತು. ಔಣಾದಿಕ. ಇನನ್ ಪ್ರತ್ಯಯ. ನಾಂತವಾದುದರಿಂದ ಸ್ತ್ರೀತ್ವದಲ್ಲಿ ಙೀಪ್. ಇದು ಪಿತ್ತಾದುದರಿಂದ ಅನುದಾತ್ತವಾಗುವುದರಿಂದ ಪ್ರತ್ಯಯದ ಆದ್ಯುದಾತ್ತಸ್ವರ ಬರುತ್ತದೆ. ದ್ವಿವಚನ ಪರವಾದಾಗ ಪೂರ್ವಸವರ್ಣದೀರ್ಘ.

**ಅಸಶ್ಚತಾ**—ಷಸ್ಜ ಗತೌ ಧಾತು. ಲಟಿಗೆ ಶತ್ರಾದೇಶ. ಜಕಾರಕ್ಕೆ ವ್ಯತ್ಯಯದಿಂದ ಚಕಾರಾದೇಶ. ನ ವಿದ್ಯಂತೇ ಸಶ್ಚಂತೋ ಗಚ್ಛಂತಃ ಯಯೋಸ್ತೇ. **ನಞ್ಸುಭ್ಯಾಮ್** (ಪಾ. ಸೂ. ೬-೨-೧೭೨) ಎಂಬುದರಿಂದ ಉತ್ತರಪದಾಂತೋದಾತ್ತಸ್ವರ ಬರುತ್ತದೆ.

**ರಕ್ಷತಃ**—ರಕ್ಷ ಪಾಲನೇ ಧಾತು. **ಲಟ್** ಪ್ರಥಮಪುರುಷದ್ವಿವಚನಾಂತರೂಪ. **ತಿಙಂತನಿಘಾತಸ್ವರ** ಬರುತ್ತದೆ.

**ಸುಧೃಷ್ಟಮೇ**—ಸುಧೃಷ್ಟತಮೇ ಎಂದು ರೂಪವಾದಾಗ ಛಾಂದಸವಾಗಿ ಮತುಪಿನ ತಕಾರಕ್ಕೆ ಲೋಪ ಬರುತ್ತದೆ. ತಮಪ್ ಪಿತ್ತಾದುದರಿಂದ ಅನುದಾತ್ತವಾಗುತ್ತದೆ.

**ವಪುಷ್ಯೇ**—ವಪುಷಃ ಹಿತೇ. ಹಿತಾರ್ಥದಲ್ಲಿ ಯತ್ ಪ್ರತ್ಯಯ. **ತಿತ್ಸ್ವರಿತಂ** ಎಂಬುದರಿಂದ ಇದು ಸ್ವರಿತವಾಗುತ್ತದೆ.

**ಅವಾಸಯತ್**—ವಸ ನಿವಾಸೇ ಧಾತು. **ಹೇತುಮತಿ ಚ** ಎಂಬುದರಿಂದ **ಣಿಚ್. ಅತ ಉಪಧಾಯಾಃ** ಎಂಬುದರಿಂದ ಆದಿವೃದ್ಧಿ. ಣಿಜಂತದ ಮೇಲೆ ಛಾಂದಸವಾಗಿ ಲಙ್. ಪ್ರಥಮಪುರುಷಏಕವಚನಾಂತರೂಪ.

ಯದ್ಯೋಗವಿರುವುದರಿಂದ ನಿಘಾತಸ್ವರ ಬರುವುದಿಲ್ಲ. ಅಡಾಗಮ ಉದಾತ್ತವಾದುದರಿಂದ ಆದ್ಯುದಾತ್ತ ವಾಗುತ್ತದೆ. ॥ ೨ ॥

॥ ಸಂಹಿತಾಪಾಠಃ ॥

ಸ ವಹ್ನಿಃ ಪುತ್ರಃ ಪಿತ್ರೋಃ ಪವಿತ್ರವಾನ್ಪುನಾತಿ ಧೀರೋ ಭುವನಾನಿ ಮಾಯಯಾ ।
ಧೇನುಂ ಚ ಪೃಶ್ನಿಂ ವೃಷಭಂ ಸುರೇತಸಂ ವಿಶ್ವಾಹಾ ಶುಕ್ರಂ ಪಯೋ ಅಸ್ಯ ದುಕ್ಷತ ॥ ೩ ॥

॥ ಪದಪಾಠಃ ॥

ಸಃ । ವಹ್ನಿಃ । ಪುತ್ರಃ । ಪಿತ್ರೋಃ । ಪವಿತ್ರವಾನ್ । ಪುನಾತಿ । ಧೀರಃ । ಭುವನಾನಿ । ಮಾಯಯಾ ।
ಧೇನುಂ । ಚ । ಪೃಶ್ನಿಂ । ವೃಷಭಂ । ಸುಽರೇತಸಂ । ವಿಶ್ವಾಹಾ । ಶುಕ್ರಂ । ಪಯಃ । ಅಸ್ಯ । ಧುಕ್ಷತ ॥೩॥

ಸಾಯಣಭಾಷ್ಯಂ

ಪಿತ್ರೋರ್ಮಾತಾಪಿತ್ರೋರ್ದ್ಯಾವಾಪೃಥಿವ್ಯೋಃ ॥ ಪಿತಾ ಮಾತ್ರೇತಿ ಪಿತಾ ಶಿಷ್ಯತೇ । ಉದಾತ್ತ-ಯಣ ಇತಿ ಪಿತುರ್ವಿಭಕ್ತಿರುದಾತ್ತಾ ॥ ಪುತ್ರಃ ಪುರುತ್ರಾತಾ ಪುತ್ರಸ್ಥಾನೀಯ ಆದಿತ್ಯಃ ಪವಿತ್ರವಾನ್ ಪಾವನರಶ್ಮಿಯುಕ್ತೋ ಧೀರೋ ಧೀಮಾನ್ ಸ ವಹ್ನಿಃ ಫಲಸ್ಯ ವೋಢಾ ಧಾರಕಃ ಸನ್ಮಾಯಯಾ ಪ್ರಜ್ಞಯಾ ಸ್ವಕೀಯಯಾ ಭುವನಾನಿ ಭೂತಜಾತಾನಿ ಪುನಾತಿ । ಪಾವಯತಿ । ಪ್ರಕಾಶಯತೀತ್ಯರ್ಥಃ । ಕಿಂಚ ಸ ಏವ ಪುತ್ರಃ ಪೃಶ್ನಿಂ ಶುಕ್ಲವರ್ಣಾಂ ಧೇನುಂ ಪ್ರೀಣಯಿತ್ರೀಂ ಭೂಮಿಂ ಸುರೇತಸಂ ಶೋಭನ-ಸಾಮರ್ಥ್ಯಂ ಶೋಭನೋದಕಂ ವಾ ವೃಷಭಂ ಸೇಕ್ತಾರಂ ದ್ಯುಲೋಕಂ ಚ ಮಾಯಯಾ ಪುನಾತಿ । ಪ್ರಕಾಶಯತೀತ್ಯರ್ಥಃ । ಕದಾ । ವಿಶ್ವಾಹಾ ಸರ್ವಾಣ್ಯಪ್ಯಹಾನಿ । ಸರ್ವಕಾಲಮಿತ್ಯರ್ಥಃ ॥ ಕಿಂಚಾಸ್ಯ ದ್ಯುಲೋಕಸ್ಯ । ಯದ್ವಾ ॥ ಕರ್ಮಣಿ ಷಷ್ಠೀ ॥ ಇಮಂ ದ್ಯುಲೋಕಂ । ಶುಕ್ರಂ ಪಯೋ ದೀಪ್ತಂ ಪಯಃಸದೃಶಮುದಕಂ ಧುಕ್ಷತ । ದೋಗ್ಧಿ ॥ ದುಹೇಶ್ಛಾಂದಸೇ ] ಲುಙಿ ಶಲ ಇಗುಪಧಾದನಿಟಃ ಕ್ಸ ಇತಿ ಚ್ಲೇಃ ಕ್ಸಾದೇಶಃ ॥ ಈದೃಶೋ ಮಹಾನುಭಾವ ಆದಿತ್ಯಸ್ತಯೋಃ ಪುತ್ರ ಇತಿ ದ್ಯಾವಾಪೃಥಿವ್ಯೋಃ ಸ್ತುತಿಃ ॥

### ಪ್ರತಿಪದಾರ್ಥ

ಪಿತ್ರೋಃ—(ಸಕಲ ಲೋಕಕ್ಕೂ) ಮಾತಾಪಿತೃಗಳಾದ ದ್ಯಾವಾಪೃಥಿವಿಗಳ । ಪುತ್ರಃ—ಪುತ್ರಸ್ಥಾನೀಯನೂ । ವಹ್ನಿಃ—ಫಲದ ಧಾರಕನೂ । ಪವಿತ್ರವಾನ್—ಪವಿತ್ರಾತ್ಮಕಗಳಾದ ರಶ್ಮಿಗಳನ್ನು ಹೊಂದಿರುವವನೂ । ಧೀರಃ ಸಃ—ಪ್ರಜ್ಞಾವಂತನೂ ಆದ ಆದಿತ್ಯನು । ಮಾಯಯಾ—ತನ್ನ ಪ್ರಜ್ಞೆಯಿಂದ । ಭುವನಾನಿ—ಲೋಕಗಳನ್ನೆಲ್ಲಾ । ಪುನಾತಿ—ಪ್ರಕಾಶಪಡಿಸಿ ಪವಿತ್ರವಾಗುವಂತೆ ಮಾಡುತ್ತಾನೆ । (ಸ ಏವ—ಅವನೇನೆ) । ಪ್ರಶ್ನಿಂ—ಶುಕ್ಲವರ್ಣಳಾದವಳೂ । ಧೇನುಂ—ಹರ್ಷದಾಯಕಳೂ ಆದ ಪೃಥ್ವಿಯನ್ನೂ । ಸುರೇತಸಂ—ಶ್ರೇಷ್ಠವಾದ ಸಾಮರ್ಥ್ಯವುಳ್ಳದ್ದೂ । ವೃಷಭಂ—ವೃಷ್ಟ್ಯಾದಿಗಳನ್ನು ಸುರಿಸತಕ್ಕದ್ದೂ ಆದ ದ್ಯುಲೋಕವನ್ನೂ (ಪವಿತ್ರವಾಗುವಂತೆ ಮಾಡುತ್ತಾನೆ) । ವಿಶ್ವಾಹಾ—ಪ್ರತಿನಿತ್ಯವೂ । ಅಸ್ಯ—ಈ ದ್ಯುಲೋಕವನ್ನು (ದ್ಯುಲೋಕದಿಂದ)। ಶುಕ್ರಂ—ಪ್ರಕಾಶಮಾನವಾದುದೂ । ಪಯಃ—ಪಯಃ ಸದೃಶವಾದುದೂ ಆದ ಉದಕವನ್ನು । ಧುಕ್ಷತ—ಕರೆಯುತ್ತಾನೆ.

### ಭಾವಾರ್ಥ

ಸಕಲಲೋಕಕ್ಕೂ ಮಾತಾಪಿತೃಗಳಾದ ದ್ಯಾವಾಪೃಥಿವಿಗಳ ಪುತ್ರಸ್ಥಾನೀಯನೂ ಫಲದಧಾರಕನೂ, ಪವಿತ್ರಾತ್ಮಕಗಳಾದ ರಶ್ಮಿಗಳನ್ನು ಹೊಂದಿರುವವನೂ ಪ್ರಜ್ಞಾವಂತನೂ, ಆದ ಆದಿತ್ಯನು ತನ್ನ ಪ್ರಜ್ಞೆಯಿಂದ ಲೋಕಗಳನ್ನೆಲ್ಲಾ ಪ್ರಕಾಶಪಡಿಸಿ ಪವಿತ್ರವಾಗುವಂತೆ ಮಾಡುತ್ತಾನೆ. ಅವನೇನೆ ಶುಕ್ಲವರ್ಣಳಾದವಳೂ ಹರ್ಷದಾಯಕಳೂ ಆದ ಪೃಥ್ವಿಯನ್ನೂ ಮತ್ತು ಶ್ರೇಷ್ಠವಾದ ಸಾಮರ್ಥ್ಯವುಳ್ಳದ್ದೂ, ವೃಷ್ಟ್ಯಾದಿಗಳನ್ನು ಸುರಿಸತಕ್ಕದ್ದೂ ಆದ ದ್ಯುಲೋಕವನ್ನೂ ಪವಿತ್ರವಾಗುವಂತೆ ಮಾಡುತ್ತಾನೆ. ಪ್ರತಿನಿತ್ಯವೂ ಈ ದ್ಯುಲೋಕದಿಂದ ಪ್ರಕಾಶಮಾನವಾದುದೂ ಪಯಃಸದೃಶವಾದುದೂ ಆದ ಉದಕವನ್ನು ಕರೆಯುತ್ತಾನೆ.

## English Tranlation

The pure and the resolute son of (these) parents, the bearer (of rewards sanctifies the worlds by his intelligence; as well as the milch-cow (the earth), and the vigorous bull (the heaven), and daily milks the pellucid milk (of the sky).

### ವಿಶೇಷವಿಷಯಗಳು

**ಪಿತ್ರೋಃ ಪುತ್ರಃ**—ಈ ಋಕ್ಕಿನಲ್ಲಿ ಆದಿತ್ಯನ ಮಹಾಗುಣಗಳನ್ನು ವರ್ಣಿಸಿ ಇಂತಹ ಆದಿತ್ಯನಿಗೆ ಪಿತೃಗಳಾದ ದ್ಯಾವಾಪೃಥಿವಿಗಳ ಮಹತ್ತ್ವವು ಇನ್ನೂ ಅಧಿಕವಾಗಿರಬೇಕೆಂದು ಸೂಚಿಸಿದೆ. **ಪಿತಾ ಮಾತ್ರೇತಿ ಪಿತಾ ಶಿಷ್ಯತೇ** ಪಿತೃ ಮತ್ತು ಮಾತೃ ಈ ಎರಡು ಪದಗಳನ್ನು ಸೇರಿಸಿದರೆ **ಪಿತಾ** ಎಂಬ ಒಂದೇ ಸಮಸ್ತಪದ ಉಳಿಯುತ್ತದೆಂದು ತಿಳಿಸಿದೆ. ದ್ಯಾವಾಪೃಥಿವಿಗಳು ಆದಿತ್ಯನ ಪಿತೃಗಳು ಎಂದೂ ಅಥವಾ ಆದಿತ್ಯನು ದಿವಸ್ಪುತ್ರನೆಂದೂ ಅನೇಕ ಕಡೆಗಳಲ್ಲಿ ಹೇಳಿದೆ. **ದಿವಸ್ಪುತ್ರಾಯ ಸೂರ್ಯಾಯ ಶಂಸತ** (ಋ. ಸಂ. ೧೦-೩೭-೧) ಎಂದು ಕೇವಲ **ಸೂರ್ಯ**ನಿಗೆ ಪಿತೃಗಳು ಎಂದೇ ಅಲ್ಲದೆ,

**ಯ ಇಮೇ ದ್ಯಾವಾಪೃಥಿವೀ ಜನಿತ್ರೀ ರೂಪೈರಪಿಂಶದ್ಭುವನಾನಿ ವಿಶ್ವಾ ।**

(ಋ. ಸಂ. ೧೦–೧೧೦–೯)

ಇತ್ಯಾದಿನಾನಾಋಕ್ಕುಗಳಲ್ಲಿ ದ್ಯಾವಾಪೃಥಿವಿಗಳನ್ನು ವಿಶ್ವಕ್ಕೆಲ್ಲಾ ಜನಿತ್ರಿಯರೆಂದು ಹೇಳಿರುವ ಅಂಶವನ್ನು ಇಲ್ಲಿ **ಪಿತ್ರೋಃ** ಎಂಬ ಪದದಿಂದ ಸೂಚಿಸಿದೆ. ಅವರ ಪುತ್ರನಾದ ಆದಿತ್ಯನು,

**ಮಾಯಯಾ—ಭುವನಾನಿ ಪುನಾತಿ**—ಮಾಯೆಯಿಂದ ಭುವನಗಳನ್ನು ಪವಿತ್ರವಾದುದನ್ನಾಗಿ ಮಾಡಿದನು ಎಂದಿದೆ. ಇಲ್ಲಿ **ಮಾಯಾ** ಶಬ್ದಕ್ಕೆ ಪ್ರಜ್ಞೆಯೆಂದರ್ಥಮಾಡಬೇಕು. **ಮಾಯೇತಿ ಪ್ರಜ್ಞಾನಾಮ । ಮಾಯಾ ವಯುನಂ ಇತಿ ತನ್ನಾಮಸು ಪಾಠಾತ್** । (ನಿ ೩–೧೩) ನಿರುಕ್ತಕಾರರು **ಮಾಯಾ ಮೂ ತು ಯಜ್ಞಿಯಾನಾಂ** (ಋ. ಸಂ. ೧೦–೮೮–೬) ಎಂಬ ಋಕ್ಕನ್ನುದಹರಿಸಿ **ಸ ಏವ ಪ್ರಜ್ಞಾಂ ತ್ವೇತಾಂ ಮನ್ಯಂತೇ** ಎಂದು ವಿವರಿಸಿ **ಮಾಯಾ** ಎಂಬ ಶಬ್ದಕ್ಕೆ ಪ್ರಜ್ಞೆಯೆಂಬರ್ಥವನ್ನು ತಿಳಿಸಿದ್ದಾರೆ. (ನಿ. ೭–೨೭) ಅಲ್ಲದೆ **ವಿಶ್ವಾ ಹಿ ಮಾಯಾ ಅವಸಿ ಸ್ವಧಾವಃ** (ಋ. ಸಂ. ೬–೫೮–೧) ಎಂಬ ಋಕ್ಕನ್ನೂ ಉದಹರಿಸಿ ಅಲ್ಲಿಯೂ ಸಹ ಪ್ರಜ್ಞೆಯೆಂದೇ ಅರ್ಥ ಮಾಡಿದ್ದಾರೆ. (ನಿ. ೧೨–೧೭) ಆದರೆ **ನಿ ಮಾಯಿನೋ ದಾನವಸ್ಯ** (ಋ. ಸಂ. ೨–೧೧–೧೦) ಇತ್ಯಾದಿಋಕ್ಕುಗಳಲ್ಲಿ **ಮಾಯಾವಿನಃ ದಾನವಸ್ಯ ವಂಚನಾನಿ** ಎಂದು ವಂಚನೆ, ಮೋಸ ಇತ್ಯಾದ್ಯರ್ಥಗಳೂ ಇರುವುವು. ಪ್ರಕೃತವಾದ ಋಕ್ಕಿನಲ್ಲಿ **ಆದಿತ್ಯನು** ತನ್ನ ಪ್ರಜ್ಞೆಯಿಂದ ಲೋಕಗಳನ್ನು ಪವಿತ್ರವಾಗುವಂತೆ ಮಾಡಿದನೆಂದು ತಾತ್ಪರ್ಯ.

**ಧೀರಃ—ಧೀಮಾನ್ ।** ಪ್ರಜ್ಞಾವಂತನಾದುದರಿಂದಲೇ ಈ ವಿಶೇಷಣವೂ ಇದೆ. ಸಾಧಾರಣವಾಗಿ ಧೀರಶಬ್ದಕ್ಕೆ ಧೈರ್ಯಶಾಲಿಯೆಂದರ್ಥವು ರೂಢವಾಗಿದೆ. ಆದರೆ ವೇದಗಳಲ್ಲಿಯೂ ಉಪನಿಷತ್ತುಗಳಲ್ಲಿಯೂ ಸಹ **ಧೀಮಾನ್** ಎಂಬರ್ಥವನ್ನು ಮಾಡಿದೆ. **ಧೀರೋ ಧೀಮಾನ್** (ನಿ. ೩–೧೨) ಈ ಪದವು **ಮೇಧಾವಿನಾಮ**ಗಳಲ್ಲಿ ಪಠಿತವಾಗಿದೆ. (ನಿ. ೩–೯) ಧೀರಶಬ್ದಕ್ಕೆ ಧೈರ್ಯವೆಂದರ್ಥಮಾಡಿದರೂ ಸಹ **ಧೀರನು** ಪ್ರಾಜ್ಞನಾದುದರಿಂದಲೂ ಭಯವನ್ನು ಜಯಿಸಿ ನಿರ್ಭಯನಾಗಿರುವುದು, ಆಪತ್ಕಾಲದಲ್ಲೂ ಪ್ರಶಾಂತಚಿತ್ತನಾಗಿರುವುದು ಇತ್ಯಾದಿಗುಣಗಳಿರುವುದರಿಂದಲೂ ಧೈರ್ಯವುಳ್ಳವನೆಂದೇ ತಾತ್ಪರ್ಯ.

**ಯುವಾ ಸವಾಸಾಃ ಪರಿವೀತ ಆಗಾತ್ಸ ಉ ಶ್ರೇಯಾನ್ಭವತಿ ಜಾಯಮಾನಃ ।**
**ತಂ ಧೀರಾಸಃ ಕವಯ ಉನ್ನಯಂತಿ ಸ್ವಾಧ್ಯೋ೩ ಮನಸಾ ದೇವಯಂತಃ ॥**

(ಋ. ಸಂ. ೩–೮–೪)

ಇತ್ಯಾದಿಋಕ್ಕುಗಳಲ್ಲೂ,

**ಶ್ರೇಯಶ್ಚ ಪ್ರೇಯಶ್ಚ ಮನುಷ್ಯಮೇತಸ್ತೌ ಸಂಪರೀತ್ಯ ವಿವಿನಕ್ತಿ ಧೀರಃ ।**
**ಶ್ರೇಯೋ ಹಿ ಧೀರೋಽಭಿಪ್ರೇಯಸೋ ವೃಣೀತೇ ಪ್ರೇಯೋ ಮಂದೋ ಯೋಗಕ್ಷೇಮಾ-ದ್ವೃಣೀತೇ ॥**

(ಕಠ. ೨–೨)

**ಮಹಾಂತಂ ವಿಭುಮಾತ್ಮಾನಂ ಮತ್ವಾ ಧೀರೋ ನ ಶೋಚತಿ ।**

(ಕಠ. ೫–೪)

ಇತ್ಯಾದ್ಯುಪನಿಷದ್ವಾಕ್ಯಗಳಲ್ಲಿಯೂ ಸಹ **ಧೀರಃ ಧೀಮಾನ್, ಪ್ರಾಜ್ಞಃ** ಎಂದರ್ಥವಾಗುವಂತೆ ಇಲ್ಲಿಯೂ ಸಹ ಪ್ರಾಜ್ಞನೆಂದರ್ಥವಾಗುತ್ತದೆ.

**ಧೇನುಂ**— ಧೇನುಶಬ್ದವು ಪೃಥ್ವೀಪರ್ಯಾಯ ಪದವಾಗಿದೆ. **ಧೇನುರ್ಧಯತೇರ್ವಾ, ಧಿನೋತೇರ್ವಾ । ಧಯತೇಽಸೌ ವತ್ಸೇನೇತಿ । ತರ್ಪಯತ್ಯಸೌ** ಪಯಸಾ (ನಿ. ೧೧-೪೨) ಕರುವಿನಿಂದ ಹಾಲು ಹೀರಲ್ಪಡುತ್ತದೆ ಎಂಬುದರಿಂದಾಗಲಿ, ಅಥವಾ ಕ್ಷೀರವನ್ನು ಕೊಟ್ಟು ತೃಪ್ತಿಯನ್ನುಂಟುಮಾಡುತ್ತದೆ ಎಂಬುದರಿಂದಾಗಲಿ ಗೋವುಗಳಿಗೆ ಧೇನುಗಳೆಂದು ಹೆಸರು. ಪೃಥ್ವಿಯೂ ಸಹ ಸಸ್ಯಾದಿಸಂಪತ್ತುಗಳಿಂದ ಲೋಕಕ್ಕೆ ತೃಪ್ತಿಯನ್ನುಂಟುಮಾಡುವುದರಿಂದ ಈ ತಾದಾತ್ಮ್ಯವನ್ನು ಹೇಳಿದೆ.

ಪೃಶ್ನಿಂ— ಪೃಶ್ನಿಯೆಂದರೆ ಮರುತ್ತು ಮುಂತಾದ ದೇವತೆಗಳ ಮಾತೆಯೆಂದು ಪ್ರಸಿದ್ಧವಾದ ಅರ್ಥವಾಗಿದೆ. ಅಲ್ಲದೇ ವರ್ಣಸೂಚಕವಾದ ಪದವೂ ಆಗಿದೆ. ಕೆಲವು ಕಡೆಗಳಲ್ಲಿ ಸಮ್ಮಿಶ್ರಿತವಾದ ವರ್ಣಗಳ ಸಮುದಾಯವನ್ನು ಸೂಚಿಸುತ್ತದೆ. ಪ್ರಕೃತವಾದ ಋಕ್ಕಿನಲ್ಲಿ **ಶುಕ್ಲ** ವರ್ಣವೆಂದರ್ಥಮಾಡಿದೆ.

**ಸುರೇತಸಂ ವೃಷಭಂ**—ಎಂಬ ವಿಶೇಷಣಗಳು ದ್ಯುಲೋಕಾಧಿದೇವತೆಯ ಉತ್ಪಾದನಶಕ್ತಿಯನ್ನು ತೋರಿಸುತ್ತವೆ. ಈ ಎರಡು ಪದಗಳೂ ಪುಂಸ್ತ್ವಶಕ್ತಿಯನ್ನು ಸೂಚಿಸುವುವೆಂದು ಹಿಂದೆ ವಿವರಿಸಿದೆ. **ದ್ಯೌಃ ಪಿತಾ** ಎಂದಿರುವ ಪಿತೃವಿನ ಗುಣವು ವರ್ಣಿತವಾಗಿದೆ.

**ಶುಕ್ರಂ— ಶುಕ್ರಂ ಶೋಚತೇರ್ಜ್ವಲತಿಕರ್ಮಣಃ ।** ಪ್ರಕಾಶಿಸುವ ಎಂಬರ್ಥವನ್ನು ಕೊಡುವ **ಶುಚ್** ಧಾತುವಿನಿಂದ ನಿಷ್ಪನ್ನವಾಗಿದೆ. ಅತ್ಯಂತ ಪ್ರಕಾಶಮಾನವಾದದ್ದು ಎಂದರ್ಥ.

ವ್ಯಾಕರಣಪ್ರಕ್ರಿಯಾ

**ಪಿತ್ರೋಃ**—ಮಾತಾ ಚ ಪಿತಾ ಚ ಪಿತರೌ ತಯೋಃ ಪಿತ್ರೋಃ **ಪಿತಾಮಾತ್ರಾ** (ಪಾ. ಸೂ. ೧-೨-೭೦) ಎಂಬುದರಿಂದ ಏಕಶೇಷಸಮಾಸವಾದಾಗ ಪಿತೃಶಬ್ದ ಉಳಿಯುತ್ತದೆ. ಷಷ್ಠೀದ್ವಿವಚನ ಪರವಾದಾಗ ಯಣಾದೇಶ ಉದಾತ್ತಸ್ಥಾನದಲ್ಲಿ ಯಣಾದೇಶ ಬಂದು ಅದರ ಪರದಲ್ಲಿ ಅನುದಾತ್ತವಿಭಕ್ತಿ ಬಂದುದರಿಂದ **ಉದಾತ್ತಯಣೋ ಹಲ್ ಪೂರ್ವಾತ್** ಎಂಬುದರಿಂದ ವಿಭಕ್ತಿಗೆ ಉದಾತ್ತಸ್ವರ ಬರುತ್ತದೆ.

**ಪುನಾತಿ**— ಪೂಞ್ ಪವನೇ ಧಾತು. **ಕ್ರ್ಯಾದಿ**. ಶ್ನಾ ವಿಕರಣ. ಲಟ್ ಪ್ರಥಮಪುರುಷಏಕವಚನಾಂತರೂಪ. ಪಾದಾದಿಯಲ್ಲಿರುವುದರಿಂದ ನಿಘಾತಸ್ವರ ಬರುವುದಿಲ್ಲ. ವಿಕರಣಸ್ವರ ಉಳಿಯುತ್ತದೆ. **ಪ್ವಾದೀನಾಂಹ್ರಸ್ವಃ** ಎಂಬುದರಿಂದ ವಿಕರಣ ಪರವಾದಾಗ ಧಾತುವಿಗೆ ಹ್ರಸ್ವ.

**ಧೀರಃ**—ಡುಧಾಞ್ ಧಾರಣಪೋಷಣಯೋಃ ಧಾತು. **ಸುಸೂಧಾಗೃಧಿಭ್ಯಃ ಕ್ರನ್** (ಉ. ಸೂ. ೨-೧೮೨) ಎಂಬುದರಿಂದ ಕ್ರನ್ ಪ್ರತ್ಯಯ. **ಘುಮಾಸ್ಥಾಗಾ** ಎಂಬುದರಿಂದ ಧಾತುವಿಗೆ ಈತ್ವ. **ಞ್ನಿತ್ಯಾದಿರ್ನಿತ್ಯಮ್** (ಪಾ. ಸೂ. ೬-೧-೧೯೭) ಎಂಬುದರಿಂದ ಆದ್ಯುದಾತ್ತಸ್ವರ ಬರುತ್ತದೆ.

**ಪೃಶ್ನಿಮ್**—ಸ್ಪೃಶ ಸಂಸ್ಪರ್ಶನೇ ಧಾತು. **ಘೃಣಿಪೃಶ್ನಿಪಾರ್ಷ್ಣಿ**—(ಉ. ಸೂ. ೪೯೨) ಎಂಬುದರಿಂದ ನಿಪಾತಿತವಾಗಿದೆ.

**ಸುರೇತಸಮ್**—ಶೋಭನಂ ರೇತಃ ಯಸ್ಯ. ತಮ್. ಆದ್ಯುದಾತ್ತಂ ದ್ವ್ಯಚ್ ಛಂದಸಿ (ಪಾ. ಸೂ. ೬-೨-೧೧೯) ಎಂಬುದರಿಂದ ಉತ್ತರಪದದಆದ್ಯುದಾತ್ತಸ್ವರ ಬರುತ್ತದೆ.

**ವಿಶ್ವಾಹಾ**—**ಶೇಶ್ಛಂದಸಿ ಬಹುಲಂ** (ಪಾ. ಸೂ ೬-೧-೭೦) ಎಂಬುದರಿಂದ ಶಿಗೆ ಲೋಪ.

**ಧುಕ್ಷತ**—ದುಹ ಪ್ರಪೂರಣೇ. ಧಾತು. **ಛಂದಸಿಲುಙ್ಲ**—(ಪಾ. ಸೂ. ೩-೪-೬) ಎಂಬುದರಿಂದ ಲಟರ್ಥದಲ್ಲಿ ಲುಙ್. ಪ್ರಥಮಪುರುಷಏಕವಚನದಲ್ಲಿ ತಾದೇಶ ಶಲ ಇಗುಪಧಾದನಿಟಃಕ್ಸಃ (ಪಾ. ಸೂ. ೩-೧-೪೫) ಎಂಬುದರಿಂದ ಚ್ಲಿಗೆ ಕ್ಸಾದೇಶ. **ದಾದೇರ್ಧಾತೋರ್ಘಃ** (ಪಾ. ಸೂ. ೮-೨-೩೭) ಎಂಬುದರಿಂದ ಹಕಾರಕ್ಕೆ ಘತ್ವ, **ಏಕಾಚೋಬಶೋ**—(ಪಾ. ಸೂ. ೮-೨-೩೭) ಎಂಬುದರಿಂದ ಆದಿಗೆ ಧತ್ವ. ಆದೇಶಪ್ರತ್ಯಯಯೋಃ (ಪಾ. ಸೂ. ೮-೩-೫೯) ಎಂಬುದರಿಂದ ಸಕಾರಕ್ಕೆ ಷತ್ವ. ಘಕಾರಕ್ಕೆ ಚರ್ತ್ವ ಬಂದಾಗ ಕ್ಷಕಾರಾದೇಶ ಬರುತ್ತದೆ. ಛಾಂದವಾಗಿ ಅಡಾಗಮ ಬರುವುದಿಲ್ಲ. ಅತಿಜಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ. ‖ ೩ ‖

———:O:———

ಸಂಹಿತಾಪಾಠಃ

ಅಯಂ ದೇವಾನಾಮಪಸಾಮಪಸ್ತಮೋ ಯೋ ಜಜಾನ ರೋದಸೀ ವಿಶ್ವ-
ಶಂಭುವಾ ।
ವಿ ಯೋ ಮಮೇ ರಜಸೀ ಸುಕ್ರತೂಯಯಾಜರೇಭಿಃ ಸ್ಕಂಭನೇಭಿಃ
ಸಮಾನೃಚೇ ‖ ೪ ‖

ಪದಪಾಠಃ

ಅಯಂ । ದೇವಾನಾಂ । ಅಪಸಾಂ । ಅಪಃऽತಮಃ । ಯಃ । ಜಜಾನ । ರೋದಸೀ ಇತಿ । ವಿಶ್ವऽಶಂಭುವಾ । ವಿ । ಯಃ । ಮಮೇ । ರಜಸೀ ಇತಿ । ಸುಕ್ರತುऽಯಯಾ । ಅಜರೇಭಿಃ । ಸ್ಕಂಭನೇಭಿಃ । ಸಂ । ಆನೃಚೇ ।
‖ ೪ ‖

ಸಾಯಣಭಾಷ್ಯಂ

**ಪೂರ್ವಂ ಪುತ್ರಮಾಹಾತ್ಮ್ಯೇನೈತೇ ಪ್ರಶಸ್ಯೇದಾನೀಂ ಸ್ವೋತ್ಪಾದಕಸ್ತುತ್ಯಾ ಪ್ರಶಂಸತಿ । ಅಯಂ ದೇವಾನಾಂ ಮಧ್ಯೇ ದೇವತಮೋಽಪಸಾಮಪಸ್ತಮಃ । ಅಪ ಇತಿ ಕರ್ಮನಾಮ । ತೇನ ತದ್ವಾನ್ ಲಕ್ಷ್ಯತೇ । ಕರ್ಮವತಾಂ ಮಧ್ಯೇ ಪ್ರಕೃಷ್ಟಕರ್ಮಾ । ಆಯಮಿತ್ಯುಕ್ತಂ ಕ ಇತ್ಯಾಹ । ಯೋ ದೇವೋ ವಿಶ್ವಶಂಭುವಾ ಸರ್ವಪ್ರಕಾರೇಣ ಭೂತಾನಾಂ ಸುಖಸ್ಯ ಭಾವಯಿತ್ರ್ಯೌ ರೋದಸೀ ದ್ಯಾವಾಪೃಥಿವ್ಯೌ ಮಹಾನುಭಾವೇ ಜಜಾನ ಉತ್ಪಾದಿತವಾನ್ । ನ ಕೇವಲಮುತ್ಪಾದನಮಾತ್ರಂ ಅಪಿ ತು ಯೋ ದೇವೋ ರಜಸೀ ರಂಜನಾತ್ಮಿಕೇ ದ್ಯಾವಾಪೃಥಿವ್ಯೌ । ರಜಸೀ ಇತಿ ದ್ಯಾವಾಪೃಥಿವ್ಯೋರ್ನಾಮ ರಜಸೀ ಸದಸೀ ಇತಿ**

ತನ್ನಾಮಸು ಪಾಠಾತ್ । ಉಕ್ತರೂಪೇ ವಿ ಮಮೇ ವಿಶೇಷೇಣ ಪರಿಚ್ಛಿನತ್ತಿ । ಕಿಂ ಸ್ವೋಪಭೋಗಾಯ ನೇತ್ಯಾಹ । ಸುಕ್ರತೂಯಯಾ ಶೋಭನಕರ್ಮೇಚ್ಛಯಾ । ಯೇನ ಕರ್ಮಣಾ ಪ್ರಾಣಿನಾಂ ಸುಖಂ ಸಂಭವತಿ ತಾದೃಕ್ಕರ್ಮೇಚ್ಛಯಾ । ಅಥವೈತದುತ್ತರತ್ರ ಸಂಬಂಧ್ಯತೇ । ಸುಕ್ರತೂಯಯೋಕ್ತೇನ ನಿಮಿತ್ತೇನೇಮೇ ದ್ಯಾವಾಪೃಥಿವ್ಯಾವಜರೇಭಿರಜೀರ್ಣೈರ್ದೃಢತರೈಃ ಸ್ಕಂಭನೇಭಿರ್ಗತಿಪ್ರತಿಬಂಧಸಾಧನೈಃ ಶಂಕುಭಿಃ ಸಮಾನೃಚೇ । ಸಮ್ಯಕ್ ಸರ್ವತಃ ಪೂಜಿತವಾನ್ । ಸ್ಥಾಪಿತವಾನಿತ್ಯರ್ಥಃ ॥ ಋಚ ಸ್ತುತೌ । ಲಿಟಿ ರೇಫಸಾಮಾನ್ಯಾದ್ದ್ವಿಹಲ್ತ್ವಮಸ್ತೀತಿ ತಸ್ಮಾನ್ನುಡ್ದ್ವಿಹಲ ಇತ್ಯಭ್ಯಾಸಸ್ಯ ನುಟ್ ॥ ಯಸ್ಮಾದೇವಂ ತಸ್ಮಾದಯಮೇವ ದೇವೋಽಯಮೇವಾಪಸ್ತಮ ಇತ್ಯೇವಂ ಮಹಾನುಭಾವೇನ ಪರಮೇಶ್ವರೇಣೋತ್ಪನ್ನೇ ಇತಿ ಸ್ತುತಿಃ ॥

॥ ಪ್ರತಿಪದಾರ್ಥ ॥

**ಯಃ**—ಯಾವ ಆದಿತ್ಯನು । **ವಿಶ್ವಶಂಭುವಾ**—ಲೋಕಕ್ಕೆಲ್ಲಾ ಸೌಖ್ಯವನ್ನು ಕೊಡತಕ್ಕ । **ರೋದಸೀ**—ದ್ಯಾವಾಪೃಥಿವಿಗಳನ್ನು । **ಜಜಾನ** — ಉತ್ಪನ್ನವಾಗುವಂತೆ ಮಾಡಿದನೋ । ಮತ್ತು **ಯಃ**— ಯಾವನು । **ರಜಸೀ**—ದ್ಯಾವಾಪೃಥಿವಿಗಳೆರಡನ್ನೂ । **ವಿ ಮಮೇ**—ಅಳೆದನೋ (ಅಲ್ಲದೇ) । **ಸುಕ್ರತೂಯಯಾ**-ಶ್ರೇಷ್ಠವಾದ ಕರ್ಮಾಚರಣೆಗೆ ಸಹಾಯವನ್ನು ಮಾಡಬೇಕೆಂಬ ಇಚ್ಛೆಯಿಂದ । **ಅಜರೇಭಿಃ**—ಕ್ಷಯಿಸದಿರುವ । **ಸ್ಕಂಭನೇಭಿಃ**—ಆಧಾರ ಸ್ತಂಭಗಳಿಂದ । **ಸಮಾನೃಚೇ**—ಊರೆಯನ್ನು ಕೊಟ್ಟು ಸ್ಥಾಪಿಸಿದನೋ ಅಂತಹ । **ಅಯಂ**—ಆ ಆದಿತ್ಯನು । **ದೇವಾನಾಂ**—ದೇವತೆಗಳ ನಡುವೆ (ದೇವತೋತ್ತಮನು) । **ಅಪಸಾಂ**—ಕರ್ಮಯುಕ್ತರ ನಡುವೆ **ಅಪಸ್ತಮಃ**—ಅತ್ಯಂತ ಶ್ರೇಷ್ಠವಾದ ಕರ್ಮಗಳನ್ನು ಮಾಡುವವನು (ಆಗಿದ್ದಾನೆ.)

ಭಾವಾರ್ಥ

ಯಾವ ಆದಿತ್ಯನು ಲೋಕಕ್ಕೆಲ್ಲಾ ಸೌಖ್ಯವನ್ನು ಕೊಡತಕ್ಕ ದ್ಯಾವಾಪೃಥಿವಿಗಳನ್ನು ಸೃಷ್ಟಿಸಿದನೋ, ಯಾವನು ದ್ಯಾವಾಪೃಥಿವಿಗಳನ್ನು ಅಳೆದನೋ ಮತ್ತು ಶ್ರೇಷ್ಠವಾದ ಕರ್ಮಾಚರಣೆಗೆ ಸಹಾಯವನ್ನು ಮಾಡಬೇಕೆಂಬ ಇಚ್ಛೆಯಿಂದ ಕ್ಷಯಿಸದಿರುವ ಆಧಾರಸ್ತಂಭಗಳಿಂದ ಊರೆಯನ್ನು ಕೊಟ್ಟು ದ್ಯಾವಾಪೃಥಿವಿಗಳನ್ನು ಸ್ಥಾಪಿಸಿದನೋ ಅಂತಹ ಆದಿತ್ಯನು ದೇವತೆಗಳ ನಡುವೆ ದೇವತೋತ್ತಮನು ಮತ್ತು ಕರ್ಮಯುಕ್ತರ ನಡುವೆ ಶ್ರೇಷ್ಠವಾದ ಕರ್ಮಗಳನ್ನು ಮಾಡುವವನಾಗಿದ್ದಾನೆ.

## English Translation

He it is, amongst gods (the most divine), amongst (pious) works the most pious, who gave birth to the all-delighting heaven and earth: who measurd them both, and, for the sake of holy rites, propped them up with undecaying pillars.

ವಿಶೇಷವಿಷಯಗಳು

**ರೋದಸೀ ಜಜಾನ**— ದ್ಯಾವಾಪೃಥಿವಿಗಳನ್ನು ಸೃಷ್ಟಿಸಿದನು, ಎಂಬ ವಾಕ್ಯದಲ್ಲಿ ಸ್ಥೂಲವಾಗಿ ನೋಡಿದರೆ ಒಂದು ವಿರೋಧವು ಕಾಣುತ್ತಿದೆ.

**ನಮೋ ಮಿತ್ರಸ್ಯ ವರುಣಸ್ಯ ಚಕ್ಷಸೇ ಮಹೋ ದೇವಾಯ ತದೃತಂ ಸಪರ್ಯತ ।**
**ದೂರೇದೃಶೇ ದೇವಜಾತಾಯ ಕೇತವೇ ದಿವಸ್ಪುತ್ರಾಯ ಸೂರ್ಯಾಯ ಶಂಸತ ॥**
(ಋ. ಸಂ. ೧೦-೩೭-೧)

ಇತ್ಯಾದಿ ವಾಕ್ಯಗಳಲ್ಲಿ ಆದಿತ್ಯನನ್ನು ದಿವಸ್ಪುತ್ರನೆಂದು ಕರೆದಿದೆ. ಇನ್ನೂ ಇತರಕಡೆಗಳಲ್ಲಿ ದ್ಯಾವಾಪೃಥಿವಿಯ ಪುತ್ರನೆಂದೂ ಹೇಳಿದೆ. ಆದರೆ ಪ್ರಕೃತವಾದ ಋಕ್ಕಿನಲ್ಲಿ ಹೇಳಿರುವ ಅಭಿಪ್ರಾಯವನ್ನೂ ಸಮರ್ಥಿಸುವಂತೆ

**ಯತ್ರಾ ಸಮುದ್ರಃ ಸ್ಕಭಿತೋ ವ್ಯೌನದಪಾಂ ನಪಾತ್ಸವಿತಾ ತಸ್ಯ ವೇದ ।**
**ಅತೋ ಭೂರತ ಆ ಉತ್ಥಿತಂ ರಜೋಽತೋ ದ್ಯಾವಾಪೃಥಿವೀ ಅಪ್ರಥೇತಾಂ ॥**
(ಋ. ಸಂ. ೧೦-೧೪೯-೨)

ಇತ್ಯಾದಿಋಕ್ಕುಗಳಲ್ಲಿ **ಅಸ್ಮಾದೇವ ಸವಿತುಃ ಭೂಮಿರಾಸೀತ್ । ರಜಃ ಅಂತರಿಕ್ಷಂ ಚ ಅಜಾಯತ ।** ಈ ಸವಿತೃವಿನಿಂದಲೇ ಭೂಮ್ಯಂತರಿಕ್ಷಗಳು ಜನಿಸಿದವು ಎಂದೂ ಸಹ ಹೇಳಿದೆ. ಇದರಲ್ಲಿ ಪರಸ್ಪರವಾದ ಜನ್ಯಜನಕ ಭಾವವನ್ನು ಹೇಳಿರುವುದರಲ್ಲಿ ಯಾವ ವಿರೋಧವೂ ಇರುವುದಿಲ್ಲ. ಏತಕ್ಕೆಂದರೆ ಸವಿತೃವಿಗೆ ಅಂತರಿಕ್ಷದಲ್ಲೇ ಉದಯವಿದ್ದು ಅಂತರಿಕ್ಷವೇ ಆಧಾರವೂ ಆಶ್ರಯವೂ ಆಗಿರುವುದರಿಂದ **ದಿವಸ್ಪುತ್ರನೆಂದು** ಹೇಳಿದೆ. ಮತ್ತು

**ದಿವೋ ಧರ್ತಾ ಭುವನಸ್ಯ ಪ್ರಜಾಪತಿಃ ಪಿಶಂಗಂ ದ್ರಾಪಿಂ ಪ್ರತಿ ಮುಂಚತೇ ಕವಿಃ ।**
(ಋ. ಸಂ. ೪-೫೩-೨)

**ಆಪ್ರಾ ರಜಾಂಸಿ ದಿವ್ಯಾನಿ ಪಾರ್ಥಿವಾ ಶ್ಲೋಕಂ ದೇವಃ ಕೃಣುತೇ ಧರ್ಮಣೇ**
(ಋ ಸಂ. ೪-೫೩-೩)

**ವಿ ನಾಕಮಖ್ಯತ್ಸವಿತಾ ವರೇಣ್ಯೋಽನು ಪ್ರಯಾಣಮುಷಸೋ ವಿ ರಾಜತಿ ।**
(ಋ. ಸಂ. ೫-೮೧-೨)

ಇತ್ಯಾದಿಋಕ್ಕುಗಳಲ್ಲೆಲ್ಲಾ ತಮಸ್ಸಿನಿಂದ ಮರೆಯಾಗಿದ್ದ ಪೃಥಿವ್ಯಂತರಿಕ್ಷಗಳನ್ನು ಪ್ರಕಾಶಗೊಳಿಸಿ ಎಲ್ಲರಿಗೂ ಗೋಚರವಾಗುವಂತೆ ಮಾಡಿದ್ದರಿಂದಲೂ, ಈ ಲೋಕಗಳ ಧಾರಕನೆಂದು ಪ್ರಸಿದ್ಧನಾಗಿರುವುದರಿಂದಲೂ, ಎರಡು ಲೋಕಗಳನ್ನು ನಿಯಮದಂತೆ ನಡೆಯಲು ಸಹಾಯಕನಾಗಿರುವುದರಿಂದಲೂ ಸಹ ದ್ಯಾವಾಪೃಥಿವಿಗಳಿಗೆ ಇವನು ಉತ್ಪಾದಕನೆಂದು ಹೇಳಿದೆ. ಈ ಎರಡು ಅಂಶಗಳಲ್ಲೂ ಸತ್ಯವಿರುವುದರಿಂದ ಒಂದಕ್ಕೊಂದಕ್ಕೆ ವಿರೋಧ ವಿರುವುದಿಲ್ಲ.

**ವಿಶ್ವಶಂಭುವಾ ರೋದಸೀ—ಸರ್ವಪ್ರಕಾರೇಣ ಭೂತಾನಾಂ ಸುಖಸ್ಯ ಭಾವಯಿತ್ರ್ಯೌ ।** ಸರ್ವವಿಧದಲ್ಲಿಯೂ ಭೂತಗಳಿಗೆ ಸೌಖ್ಯದಾತರೆಂದರ್ಥ. ಸಕಲ ಲೋಕವನ್ನು ಜ್ಯೋತಿರ್ಮಯವನ್ನಾಗಿ ಮಾಡುವುದರಿಂದ ಮತ್ತು ವೃಷ್ಟ್ಯಾದಿಗಳಿಗೆ ಆಧಾರವಾಗಿರುವುದರಿಂದ ಅಂತರಿಕ್ಷವೂ, ಯಜ್ಞಯಾಗಾದಿಗಳಿಂದ ದೇವತೆಗಳಿಗೆ ತೃಪ್ತಿಯನ್ನುಂಟುಮಾಡುವುದಲ್ಲದೆ, ಪುನಃ ವೃಷ್ಟ್ಯಾದಿಗಳಿಗೂ ಕಾರಣವಾಗಿ ಸಕಲಭೂತಗಳಿಗೂ ಸಸ್ಯಾದಿ ಸಂಪತ್ತನ್ನೊದಗಿಸುವುದರಿಂದ ಪೃಥ್ವಿಯೂ ಸಹ ವಿಶ್ವಕ್ಕೆಲ್ಲಾ ಸೌಖ್ಯವನ್ನು ಕೊಡುವವರೆಂದು ಹೇಳಿದೆ. ಈ ವಿಷಯವನ್ನು ಉದಾಹರಣೆಗಳೊಂದಿಗೆ ಹಿಂದೆ ವಿವರಿಸಿದೆ.

**ಸ್ಕಂಭನೇಭಿಃ ಸಮಾನೃಚೇ**—ಆಧಾರಸ್ತಂಭಗಳಿಂದ ಊರೆಕೋಲನ್ನು ಕೊಟ್ಟು ಹಿಡಿದೆತ್ತಿ ನಿಲ್ಲಿಸಿದನು.

**ನ ಪ್ರಮಿಯೇ ಸವಿತುರ್ದೈವ್ಯಸ್ಯ ತದ್ಯಥಾ ವಿಶ್ವಂ ಭುವನಂ ಧಾರಯಿಷ್ಯತಿ ।**

(ಋ. ಸಂ. ೪-೫೪-೪)

**ಸವಿತಾ ಯಂತ್ರೈಃ ಪೃಥಿವೀಮರಮ್ಣಾದಸ್ಕಂಭನೇ ಸವಿತಾ ದ್ಯಾಮದೃಂಹತ್ ।**
**ಅಶ್ವಮಿವಾಧುಕ್ಷದ್ಧುನಿಮಂತರಿಕ್ಷಮತೂರ್ತೇ ಬದ್ಧಂ ಸವಿತಾ ಸಮುದ್ರಂ ॥**

(ಋ. ಸಂ. ೧೦-೧೪೯-೧)

ಸವಿತೃವು ನಿರಾಲಂಬನವಾದ ದ್ಯುಲೋಕಕ್ಕೆ ಆಲಂಬನವನ್ನೂ ಆಸರೆಯನ್ನು ಕೊಟ್ಟು ಸ್ಥಾಪಿಸಿದ್ದಾನೆ. ನಿಯಮನ ಸಾಧನಗಳಾದ ವೃಷ್ಟಿಪ್ರದಾನಾದಿಗಳಿಂದ ಪೃಥ್ವಿಯನ್ನು ಧಾರಣೆಮಾಡಿದ್ದಾನೆ. ವಾಯ್ವಾದಿರೂಪಗಳಾದ ಪಾಶ ಗಳಿಂದ ಅಂತರಿಕ್ಷವನ್ನು ಬದ್ಧವಾದುದನ್ನಾಗಿ ಮಾಡಿದ್ದಾನೆ, ಇತ್ಯಾದಿಯಾಗಿ ಆಲಂಬನ ರಹಿತವಾದವೂ ಆಶ್ರಯ ರಹಿತವಾದವೂ ಆದ ಕ್ಷಿತ್ಯಾದಿ ಲೋಕತ್ರಯವನ್ನೂ ಅದರದರ ಆವಶ್ಯಕತೆಗೆ ತಕ್ಕಂತೆ ಆಸರೆಯನ್ನು ಕೊಟ್ಟಿದ್ದರಿಂದ ಆ ಅಂಶವನ್ನು **ಸ್ಕಂಭನೇಭಿಃ ಸಮಾನೃಚೇ** ಎಂದು ವರ್ಣಿಸಿದೆ. ಪೃಥಿವ್ಯಾದಿಗಳಲ್ಲಿರುವ ಆಶ್ರಯಕ್ಕೂ ಆಧಾರಕ್ಕೂ ಒಂದು ಮಿತಿಯುಂಟು. ಕಾಲಿಕವಾದ ನಿಯಮವುಂಟು. ಆದರೆ ಆದಿತ್ಯನು ಪೃಥಿವ್ಯಂತರಿಕ್ಷಗಳಿಗೆ ಕೊಡತಕ್ಕ ಆಧಾರವೂ ಆಶ್ರಯವೂ ಶಾಶ್ವತಗಳು ಎಂದು ತೋರಿಸಲು **ಅಜರೇಭಿಃ**—ಕ್ಷೀಣವಾಗದಿರುವ ಎಂಬ **ಸ್ಕಂಭನೇಭಿಃ** ಎಂಬುದಕ್ಕೆ ವಿಶೇಷಣವಾಗಿ **ಸ್ಕಂಭನದ** ಸ್ವರೂಪವನ್ನೂ ಶಕ್ತಿಯನ್ನೂ ತೋರಿಸುತ್ತದೆ.

(**ಅಯಂ ದೇವಾನಾಂ ಮಧ್ಯೇ ದೇವತಮಃ**)—ಈ ಆದಿತ್ಯನು ದೇವತೆಗಳ ನಡುವೆ ಅತ್ಯಂತ ಶ್ರೇಷ್ಠನಾದ ದೇವನು. ಆದುದರಿಂದಲೇ ಇವನಿಗೆ ದೇವತೆಗಳ ನಡುವೆ ಬ್ರಹ್ಮ ಪದವಿಯು ಲಭಿಸಿತು. ಪಾರ್ಥಿವವಾದ ಯಜ್ಞ ಯಾಗಾದಿಗಳಲ್ಲಿ ಬ್ರಹ್ಮ ಸ್ಥಾನವನ್ನಾಕ್ರಮಿಸಿದವನು. ಯಾವ ಉತ್ತಮವಾದ ಯೋಗ್ಯತೆಯನ್ನು ಹೊಂದಿರಬೇಕೋ ಅದರಂತೆಯೇ ದೇವತೆಗಳಲ್ಲೆಲ್ಲಾ ಆದಿತ್ಯನಿಗೇ ಈ ಉತ್ತಮವಾದ ಯೋಗ್ಯತೆಯಿರುವುದರಿಂದ ಇವನು ಅವರಿಗೆಲ್ಲಾ **ಬೃಹಸ್ಪತಿಯ** ರೂಪದಲ್ಲಿದ್ದನು ಎಂದು ವಾ. ಸಂಹಿತೆಯಲ್ಲಿ ಉಕ್ತವಾಗಿದೆ. ಪ್ರಕೃತವಾದ ಋಕ್ಕಿನಲ್ಲಿ **ಅಯಂ ದೇವಾನಾಂ** ಎಂದು ಮಾತ್ರ ಆದಿತ್ಯನ ಗುಣವನ್ನು ವರ್ಣಿಸಿದೆ. ದೇವಾನಾಂ **ಮಧ್ಯೇ ದೇವತಮಃ** ಎಂಬುದು ಸಾಯಣಭಾಷ್ಯದ ವಾಕ್ಯ. ಈ ಶ್ರೇಷ್ಠವಾದ ಗುಣವು ಸವಿತೃವಿನಲ್ಲಿ ನಾನಾರೂಪದಲ್ಲಿದೆ. ಉದಾಹರಣೆಗೆ ಸಕಲ ದೇವತೆಗಳಿಗೂ ಅದಿತ್ಯನು ಚೈತನ್ಯದಾಯಿಯಾದುದರಿಂದಲೇ,

**ಸವಿತಾರಂ ಪ್ರಸವಾಯೋಪಾಧಾವತ್ಸವಿತಾ ವೈ ದೇವಾನಾಂ ಪ್ರಸವಿತಾ ।**

(ಶ. ಬ್ರಾ. ೫-೧-೧-೧೫)

**ಸವಿತಾ ಪ್ರಸವಾನಾಮಧಿಪತಿಃ ।**

(ತೈ. ಸಂ. ೩-೩-೫)

ಇತ್ಯಾದಿ ವಾಕ್ಯಗಳಿಂದ ಸಕಲ ದೇವತೆಗಳಿಗೂ ಪ್ರಸವಿತೃವೆಂದು ಸ್ತುತಿಸಿದೆ. ಇಷ್ಟೇ ಅಲ್ಲದೆ—

**ವನಾನಿ ವಿಭ್ಯೋ ನಕಿರಸ್ಯ ತಾನಿ ವ್ರತಾ ದೇವಸ್ಯ ಸವಿತುರ್ಮಿನಂತಿ ।**

..............................................................................

**ನ ಯಸ್ಯೇಂದ್ರೋ ವರುಣೋ ನ ಮಿತ್ರೋ ವ್ರತಮರ್ಯಮಾ ನ ಮಿನಂತಿ ರುದ್ರಃ ॥**

**ನಾರಾತಯಸ್ತಮಿದಂ ಸ್ವಸ್ತಿ ಹುವೇ ದೇವಂ ಸವಿತಾರಂ ನಮೋಭಿಃ ॥**

(ಋ. ಸಂ. ೨-೩೮-೭ ರಿಂದ ೯)

ಇತ್ಯಾದಿ ಋಕ್ಕುಗಳಲ್ಲಿ **ಸವಿತೃವಿನ** ನಿಯಮವನ್ನು ಇಂದ್ರಾದಿದೇವತೆಗಳಾರೂ ಉಲ್ಲಂಘಿಸಲು ಸಾಧ್ಯವಿಲ್ಲವೆಂದೂ ಎಲ್ಲರೂ ಆ ನಿಯಮಕ್ಕೆ ಅನುಸಾರವಾಗಿಯೇ ಇರಬೇಕೆಂದೂ ವಿಶದವಾಗಿ ತಿಳಿಸಿದೆ. ಹೀಗೆ ಅನೇಕ ದೃಷ್ಟಿಗಳಿಂದ **ಸವಿತೃರೂಪನಾದ ಆದಿತ್ಯನ** ಮಹಿಮೆಯು ದೇವತೆಗಳಲ್ಲೆಲ್ಲಾ ಶ್ರೇಷ್ಠವಾಗಿರುವುದರಿಂದಲೂ, ನೇತೃವಿನ ಸ್ವರೂಪವನ್ನು ತೋರಿಸುವುದರಿಂದಲೂ ಸಹ **ದೇವಾನಾಂ** (ಮಧ್ಯೇ ದೇವತಮಃ) ಎಂದು ಆದಿತ್ಯನ ಮಹತ್ತ್ವವನ್ನು ವರ್ಣಿಸಿದೆ.

**ರಜಸೀ—ರಜೋ ರಜತೇರ್ಜ್ಯೋತೀ ರಜ ಉಚ್ಯತೇ । ಉದಕಂ ರಜ ಉಚ್ಯತೇ । ಲೋಕಾ ರಜಾಂಸ್ಯುಚ್ಯಂತೇ** (ನಿ. ೪-೧೯). ಬೆಳಗು ಎಂಬರ್ಥವನ್ನು ಕೊಡುವ **ರಂಜ್** ಧಾತುವಿನಿಂದ ನಿಷ್ಪನ್ನವಾಗಿ **ರಜಸ್** ಶಬ್ದಕ್ಕೆ ಜ್ಯೋತಿಯೆಂದೂ, ಉದಕವೆಂದೂ, ಲೋಕಗಳೆಂದೂ ಅರ್ಥವಾಗುತ್ತದೆ.

**ರಜಾಂಸಿ ಚಿತ್ರಾ ವಿ ಚರಂತಿ ತನ್ಯವೋ ದಿವಃ ಸಮ್ರಾಜಾ ಪಯಸಾ ನ ಉಕ್ಷತಂ ।**

(ಋ. ಸಂ. ೫ ೬೩-೫)

ಎಂಬ ಋಕ್ಕನ್ನುದಹರಿಸಿ ನಿರುಕ್ತಕಾರರು **ರಜಾಂಸಿ** ಎಂಬ ಪದಕ್ಕೆ **ಲೋಕಗಳನ್ನು** ಎಂದರ್ಥವಾಗುವುದೆಂದು ತೋರಿಸಿದ್ದಾರೆ. ನಿರುಕ್ತದ ೧೦ನೇ ಅಧ್ಯಾಯದ ೪೪ನೆಯ ಖಂಡದಲ್ಲಿ,

**ಅಬ್ಜಾಮುಕ್ಥೈರಹಿಂ ಗೃಣೀಷೇ ಬುಧ್ನೇ ನದೀನಾಂ ರಜಸ್ಸು ಷೀದನ್ ।**

(ಋ ಸಂ ೭-೩೪-೧೬)

ಎಂಬ ಋಕ್ಕನ್ನು ವಿವರಿಸುವಾಗ ರಜಸ್ಸು ಎಂಬಪದಕ್ಕೆ **ಉದಕೇಷು—ಉದಕಗಳಲ್ಲಿ** ಎಂದರ್ಥವಾಗುತ್ತದೆಂದೂ ೧೨ನೆಯ ಅಧ್ಯಾಯದ ೭ನೆಯ ಖಂಡದಲ್ಲಿ,

**ಏತಾ ಉ ತ್ಯಾ ಉಷಸಃ ಕೇತುಮಕ್ರತ ಪೂರ್ವೇ ಅರ್ಧೇ ರಜಸೋ ಭಾನುಮಂಜತೇ ।**

(ಋ ಸಂ. ೧-೯೨-೧)

ಎಂಬ ಋಕ್ಕನ್ನು ವಿವರಿಸುವಾಗ **ರಜಸಃ** ಎನ್ನುವುದಕ್ಕೆ **ಅಂತರಿಕ್ಷವೆಂದೂ** ಅರ್ಥಮಾಡಿದ್ದಾರೆ.

**ತ್ರೀಣಿ ಭಾಂತಿ ರಜಾಂಸ್ಯಸ್ಯ ಯತ್ಪದಾನಿ ತು ತೇಜಸಾ ।**

ಎಂದು ಬೃಹದ್ದೇವತಾಕಾರರು ವಿಷ್ಣುವಿನ ಮೂರು **ಲೋಕಗಳ** ಆಕ್ರಮಣವನ್ನೂ ವರ್ಣಿಸುವಾಗ ಮೂರುಲೋಕಗಳ ಪರ್ಯಾಯವಾಗಿ **ರಜಾಂಸಿ** ಎಂಬ ಪದವನ್ನುಪಯೋಗಿಸಿದ್ದಾರೆ. **ರಜಃ, ರಜಾಂಸಿ** ಎಂದರೆ ಸಾಮಾನ್ಯವಾಗಿ **ಲೋಕಪರ್ಯಾಯವಾದ** ಪ್ರಯೋಗವಾಗುತ್ತದೆ. ಆದರೆ,

**ಯನ್ಮಾ ಸೋಮಾಸೋ ಮಮದನ್ಯದುಕ್ಥೋಭೇ ಭಯೇತೇ ರಜಸೀ ಅಪಾರೇ ।**

(ಋ. ಸಂ. ೪–೪೨-೬)

ಇತ್ಯಾದಿ ಋಕ್ಕುಗಳಲ್ಲಿ ಈ ಪದವು ದ್ವಿವಚನದಲ್ಲಿದ್ದು **ದ್ಯಾವಾಪೃಥಿವಿಗಳೆಂದು** ಪಾರಿಭಾಷಿಕವಾದ ಅರ್ಥವೇ ಆಗಿದೆ. ಕೆಲವೆಡೆಗಳಲ್ಲಿ ಮಾತ್ರ ಎಂದರೆ.—

**ಅಹಶ್ಚ ಕೃಷ್ಣಮಹರರ್ಜುನಂ ಚ ವಿ ವರ್ತೇತೇ ರಜಸೀ ವೇದ್ಯಾಭಿಃ ॥**

(ಋ. ಸಂ. ೬–೯-೧)

ಇತ್ಯಾದಿ ಒಂದೆರಡು ಋಕ್ಕುಗಳಲ್ಲಿ **ರಜಸೀ ಜಗದ್ರಂಜಯೆಂತೌ** ಎಂದು ಧಾತುವಿನ ಮೂಲಾರ್ಥವೇ ಮುಖ್ಯವಾಗಿರುತ್ತದೆ. ಪ್ರಕೃತವಾದ ಋಕ್ಕಿನಲ್ಲಿಯೂ ಸಹ **ರಂಜನಾತ್ಮಕೇ ದ್ಯಾವಾಪೃಥಿವ್ಯೌ** ಎಂದು ವಿವರಿಸಿದೆ.

**ಸ್ಕಂಭನೇಭಿಃ—ಗತಿಬಂಧನೈಃ ಶಂಕುಭಿಃ ।** ಗತಿಬಂಧವಾದ ಶಂಕುಗಳೆಂದರ್ಥಮಾಡಿದ್ದಾರೆ. ಎಂದರೆ ಲೋಕಗಳ ಗತಿಗಳನ್ನು ನಿಯಮಿಸುವ ಸಾಧನವೆಂದು ಅರ್ಥವಾಗುತ್ತದೆ. ಇದು ಅಳತೆಯ ಸಾಧನವೂ ಆಗಬಹುದು, ಆಧಾರಸ್ತಂಭವೂ ಆಗಬಹುದು. ಇದರ ಅರ್ಥದ ವಿಸ್ತೃತಿಯು ಬಹಳವಾಗಿದೆ. ಅಥರ್ವಣವೇದದಲ್ಲಿ (೧೦-೭) **ಸ್ಕಂಭ** (ವಿಶ್ವಾಧಾರರೂಪದ ದೇವತೆ) ನೆಂಬ ದೇವತೆಯು ಪ್ರಸಿದ್ಧವಾಗಿದೆ.

**ಕ್ವ ಪ್ರೇಪ್ಸಂತೀ ಯುವತೀ ವಿರೂಪೇ ಅಹೋರಾತ್ರೇ ದ್ರವತಃ ಸಂವಿದಾನೇ । ಯತ್ರ ಪ್ರೇಪ್ಸಂತೀರಭಿಯಂತಿ ಆಪಃ ಸ್ಕಂಭಂ । ಯಸ್ಮಿನ್ ಸ್ತಬ್ಧ್ವಾ ಪ್ರಜಾಪತಿರ್ಲೋಕಾನ್ಸರ್ವಾನಧಾರಯತ್ ಸ್ಕಂಭಂ ॥**

(ಅ. ವೇ. ೧೦–೭-೬ ರಿಂದ ೭)

ಯಾರಲ್ಲಿಗೆ ಅಹೋರಾತ್ರಗಳೆರಡೂ ಸಂಗಮುಕ್ಕಾಗಿ ಹೋಗಿ ಸೇರಲಾತುರವಾಗಿವೆಯೋ, ಯಾರಲ್ಲಿಗೆ ನದೀಪ್ರವಾಹಗಳೆಲ್ಲವೂ ಪ್ರವಹಿಸುತ್ತವೆಯೋ, ಯಾರ ಆಧಾರದಮೇಲೆ ಪ್ರಜಾಪತಿಯು ಈ ಸಕಲಲೋಕಗಳನ್ನೂ ಸೃಷ್ಟಿಸಿ ನಿಯಮಿಸಿರುವುನೋ ಆ **ಸ್ಕಂಭನ** ಸ್ವರೂಪವೇನು ? ಎಂದು ಪ್ರಶ್ನಿಸಿದೆ. ಈ ಅಧ್ಯಾಯದಲ್ಲಿ ವರ್ಣಿತವಾಗಿರುವ **ಸ್ಕಂಭನ** ಸ್ವರೂಪವೆಲ್ಲವೂ ಋಕ್ಸಂಹಿತೆಯ ೧೦-೧೨೧ ನೇ ಸೂಕ್ತದಲ್ಲಿ ವರ್ಣಿತವಾಗಿರುವ **ಹಿರಣ್ಯಗರ್ಭನ** ಸ್ವರೂಪದ ವರ್ಣನೆಯಂತಿದೆ. **ಸ ದಾಧಾರ ಪೃಥಿವೀಮುತ ದ್ಯಾಂ** (೧೦-೧೨೧-೧) ಇತ್ಯಾದಿ ವಾಕ್ಯಗಳಲ್ಲಿ ಹೇಳಿರುವಂತೆಯೇ ಸಕಲವಿಶ್ವಗಳಿಗೂ ಆಧಾರನೆಂದು ಹೇಳಿದೆ. ಆದರೆ ಋಕ್ಸಂಹಿತೆಯಲ್ಲಿಯೂ ಸಹ ಸ್ಕಂಭಶಬ್ದಕ್ಕೆ ಆಧಾರವೆಂಬ ಅರ್ಥವು ಪ್ರಸಿದ್ಧವಾಗಿದೆ.

**ಅಯಂ ವಿದಚ್ಚಿತ್ರದೃಶೀಕಮರ್ಣಃ ಶುಕ್ರಸದ್ಮನಾಮುಷಸಾಮನೀಕೇ ।**
**ಅಯಂ ಮಹಾನ್ಮಹತಾ ಸ್ಕಂಭನೇನೋದ್ದ್ಯಾಮಸ್ತಭ್ನಾದ್ವೃಷಭೋ ಮರುತ್ವಾನ್ ॥**

(ಋ. ಸಂ. ೬-೪೭-೫)

ಎಂಬಲ್ಲಿ **ಸ್ಕಂಭನ** ಎಂಬುದಕ್ಕೆ **ಸ್ಕಂಭಸಾಧನೇನ ಮಧ್ಯವರ್ತಿನಾಂತರಿಕ್ಷೇಣ** ಸ್ತಂಭರೂಪವಾದ ಅಂತರಿಕ್ಷದಿಂದ ಎಂದರ್ಥಮಾಡಿದೆ. ಆದರೂ ಸಹ ಈ ಆಧಾರವು ವಿಶ್ವವ್ಯಾಪಿಯಾದುದಾಗಿಲ್ಲ. ಪ್ರಾದೇಶಿಕವಾದ ಆಧಾರವೆಂಬ

ಅಭಿಪ್ರಾಯವಿರುವುದು. ಪ್ರಕೃತವಾದ ಋಕ್ಕಿನಲ್ಲಿ ಮೇಲೆ ಉದಹರಿಸಿದ ಅಥರ್ವವೇದದ ವಾಕ್ಯದಲ್ಲಿ ವಿಸ್ತೃತವಾದ ಅರ್ಥವಿರುವಂತೆಯೇ ವಿಶ್ವವ್ಯಾಪನವನ್ನು ತೋರಿಸುವ ಅರ್ಥವಿದೆ. ಆದರೆ ಸಾಯಣರು ವಿವರಿಸಿರುವ ಪ್ರಕಾರ ಲೋಕಗಳ ಗತಿಯನ್ನು ನಿಯಮಿಸುವ ಸಾಧನವೆಂಬರ್ಥವು ಸೂಚಿತವಾದರೂ ಸಹ ಮುಂದೆ **ಸಮಾನೃಚೇ** ಎಂಬ ಪದಕ್ಕೆ **ಸ್ಥಾಪಿತವಾನ್** ಎಂದರ್ಥಮಾಡಿರುವುದರಿಂದ ಇಲ್ಲಿಯೂ ಆಧಾರವೆಂಬ ಅರ್ಥವೇ ಇರಬೇಕು.

### ವ್ಯಾಕರಣಪ್ರಕ್ರಿಯಾ

**ಅಪಸಾಮ್ — ಅಪಃ ಕರ್ಮಾಖ್ಯಾಯಾಮ್** — (ಉ. ಸೂ. ೪-೬೪೭) ಎಂಬುದರಿಂದ ಅಸುನ್ ಪ್ರತ್ಯಯ. ಇಲ್ಲಿ ಲಕ್ಷಣಾವೃತ್ತಿಯಿಂದ ಕರ್ಮವುಳ್ಳವರು ಎಂದರ್ಥ. ನಿರ್ಧಾರಣಾರ್ಥದಲ್ಲಿ ಷಷ್ಠೀ ಬಂದಿದೆ. ಅಪಸ್ತಮ ಎಂಬಲ್ಲಿ ಅತಿಶಯಾರ್ಥದಲ್ಲಿ ತಮಪ್ ಪ್ರತ್ಯಯ.

**ಜಜಾನ**— ಜನೀ ಪ್ರಾದುರ್ಭಾವೇ ಧಾತು. ಅಂತರ್ಭಾವಿತಣ್ಯರ್ಥಕವಾಗಿದೆ. ಲಿಟ್ ಪ್ರಥಮಪುರುಷ ಏಕವಚನಾಂತರೂಪ ಯಚ್ಛಬ್ದಸಂಬಂಧವಿರುವುದರಿಂದ ನಿಘಾತಸ್ವರ ಬರುವುದಿಲ್ಲ. ಣಲ್ ಪ್ರತ್ಯಯ ಲಿತ್ತಾದುದರಿಂದ **ಲಿತಿ** (ಪಾ. ಸೂ. ೬-೧-೧೯೩) ಎಂಬುದರಿಂದ ಪ್ರತ್ಯಯದ ಪೂರ್ವಕ್ಕೆ ಉದಾತ್ತಸ್ವರ ಬರುತ್ತದೆ.

**ವಿಶ್ವಶಂಭುವಾ— ಬಹುವ್ರೀಹೌ ವಿಶ್ವಂ ಸಂಜ್ಞಾಯಾಮ್** (ಪಾ. ಸೂ. ೬-೨-೧೦೬) ಎಂಬುದರಿಂದ **ಪೂರ್ವಪದಾಂತೋದಾತ್ತಸ್ವರ ಬರುತ್ತದೆ.** ದ್ವಿತೀಯಾದ್ವಿವಚನಕ್ಕೆ **ಸುಪಾಂ ಸುಲುಕ್** (ಪಾ. ಸೂ. ೭-೧-೩೯) **ಎಂಬುದರಿಂದ ಆಕಾರಾದೇಶ.**

**ಮಮೇ**— ಮಾಙ್ ಮಾನೇ ಧಾತು. ಲಿಟ್ ಪ್ರಥಮಪುರುಷಏಕವಚನಾಂತರೂಪ. **ಯದ್ವೃತ್ತಾನ್ನಿತ್ಯಮ್** ಎಂಬುದರಿಂದ ನಿಘಾತಸ್ವರಪ್ರತಿಷೇಧ ಬರುವುದರಿಂದ ಪ್ರತ್ಯಯಸ್ವರದಿಂದ ಅಂತೋದಾತ್ತವಾಗುತ್ತದೆ.

**ಸುಕ್ರತೂಯಯಾ**— ಸುಕ್ರತುಂ ಆತ್ಮನಃ ಇಚ್ಛತಿ ಸುಕ್ರತೂಯತಿ. **ಸುಪ ಆತ್ಮನಃಕ್ಯಚ್** (ಪಾ. ಸೂ. ೩-೧-೮) ಎಂಬುದರಿಂದ ಕ್ಯಚ್ ಪ್ರತ್ಯಯ. ಛಾಂದಸವಾಗಿ ಪೂರ್ವಕ್ಕೆ ದೀರ್ಘ ಬರುತ್ತದೆ. ಕ್ಯಜಂತದ ಮೇಲೆ **ಅಪ್ರತ್ಯಯಾತ್** (ಪಾ. ಸೂ. ೩-೩-೧೦೨) ಎಂಬುದರಿಂದ ಅಪ್ ಪ್ರತ್ಯಯ. **ಅತೋ ಲೋಪಃ** (ಪಾ ಸೂ. ೬-೪-೪೮) ಎಂಬುದರಿಂದ ಕ್ಯಚಿನ ಅಕಾರಕ್ಕೆ ಲೋಪ. ಉದಾತ್ತನಿವೃತ್ತಿಸ್ವರದಿಂದ ಅದಕ್ಕೆ ಉದಾತ್ತಸ್ವರ ಬರುತ್ತದೆ. ತೃತೀಯಾಏಕವಚನಾಂತರೂಪ.

**ಅಜರೇಭಿಃ**— ನ ವಿದ್ಯತೇ ಜರಾ ಯೇಷಾಮ್. ತೈಃ **ನಞೋಜರಮರ**— (ಪಾ. ಸೂ. ೬-೨-೧೧೬) ಎಂಬುದರಿಂದ ಉತ್ತರಪದ ಆದ್ಯುದಾತ್ತಸ್ವರ ಬರುತ್ತದೆ. ಭಿಸಿಗೆ **ಬಹುಲಂ ಛಂದಸಿ** ಎಂಬುದರಿಂದ ಐಸ್‌ಭಾವ ವಿಕಲ್ಪಿತವಾದುದರಿಂದ ಬರುವುದಿಲ್ಲ. ಏತ್ವ.

**ಆನೃಚೇ**— ಋಚ ಸ್ತುತೌ ಧಾತು. ಲಿಟ್ ಪ್ರಥಮಪುರುಷಏಕವಚನದಲ್ಲಿ ತ ಪ್ರತ್ಯಯ. **ಲಿಟಸ್ತಝ- ಯೋರೇಶಿರೇಚ್** ಎಂಬುದರಿಂದ ಏಕಾದೇಶ. ಧಾತುವಿಗೆ ದ್ವಿತ್ವ. ಋಕಾರದಲ್ಲಿಯೂ ರೇಫದ್ವಯವಿರುವುದರಿಂದ ದ್ವಿಹಲ್‌ಧಾತುವಾಗಿದೆಯೆಂದು **ತಸ್ಮಾನ್ನುಟ್‌ದ್ವಿಹಲಃ** (ಪಾ. ಸೂ. ೭-೪-೭೧) ಎಂಬುದರಿಂದ ನುಟಾಗಮ ಬರುತ್ತದೆ. ಅತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ. || ೪ ||

ಸಂಹಿತಾಪಾಠಃ

ತೇ ನೋ ಗೃಣಾನೇ ಮಹಿನೀ ಮಹಿ ಶ್ರವಃ ಕ್ಷತ್ರಂ ದ್ಯಾವಾಪೃಥಿವೀ ಧಾಸಥೋ ಬೃಹತ್ ।
ಯೇನಾಭಿ ಕೃಷ್ಟೀಸ್ತತನಾಮ ವಿಶ್ವಹಾ ಪನಾಯ್ಯಮೋಜೋ ಅಸ್ಮೇ ಸಮಿನ್ವತಂ ॥ ೫ ॥

ಪದಪಾಠಃ

ತೇ ಇತಿ । ನಃ । ಗೃಣಾನೇ ಇತಿ । ಮಹಿನೀ ಇತಿ । ಮಹಿ । ಶ್ರವಃ । ಕ್ಷತ್ರಂ । ದ್ಯಾವಾಪೃಥಿವೀ ಇತಿ । ಧಾಸಥಃ । ಬೃಹತ್ ।
ಯೇನ । ಅಭಿ । ಕೃಷ್ಟೀಃ । ತತನಾಮ । ವಿಶ್ವಹಾ । ಪನಾಯ್ಯಂ । ಓಜಃ । ಅಸ್ಮೇ ಇತಿ । ಸಂ । ಇನ್ವತಂ ।
॥ ೫ ॥

ಸಾಯಣಭಾಷ್ಯಂ

ತೇ ಪ್ರಸಿದ್ಧೇ ಹೇ ದ್ಯಾವಾಪೃಥಿವೀ ದ್ಯಾವಾಪೃಥಿವ್ಯೌ ಗೃಣಾನೇ ಅಸ್ಮಾಭಿಃ ಸ್ತೂಯಮಾನೇ ಸತ್ಯೌ ॥ ಕರ್ಮಣಿ ಕರ್ತೃಪ್ರತ್ಯಯಃ ॥ ಮಹಿ ಮಹದತಿಪ್ರಭೂತಂ ಶ್ರವಃ ಸರ್ವತ್ರ ಪ್ರಸಿದ್ಧಮನ್ನಂ ಸರ್ವತ್ರ ಶ್ರೂಯಮಾಣಾಂ ಕೀರ್ತಿಂ ವಾ ನೋಽಸ್ಮಭ್ಯಂ ಧಾಸಥಃ । ಧತ್ತಂ ॥ ದಧಾತೇರ್ಲೇಟ್ಯಡಾಗಮಃ । ಸಿಬ್ಬಹುಲಮಿತಿ ಸಿಪ್ ॥ ತಥಾ ಬೃಹದತಿಪ್ರಭೂತಂ ಕ್ಷತ್ರಂ ಬಲಂ ಧಾಸಥಃ । ತದೇವ ವಿಶೇಷ್ಯತೇ । ಯೇನಾನ್ನಬಲೇನ ವಿಶ್ವಹಾ ಸರ್ವೇಷ್ವಪ್ಯಹಸ್ಸು ಕೃಷ್ಟೀಃ ಪುತ್ರಾದಿರೂಪಾಃ ಪ್ರಜಾ ಅಭಿ ತತನಾಮ ಅಭಿತೋ ವಿಸ್ತಾರಯಾಮ ॥ ತನೋತೇರ್ಲೋಟಿ ಛಾಂದಸೋ ವಿಕರಣಸ್ಯ ಶ್ಲುಃ । ಆಡುತ್ತಮಸ್ಯೇತ್ಯಾಡಾಗಮಃ । ತಸ್ಯ ಛಂದಸ್ಯುಭಯಥೇತ್ಯಾರ್ಧಧಾತುಕತ್ವಾದಭ್ಯಸ್ತಾದ್ಯುದಾತ್ತತ್ವಾಭಾವೇ ಧಾತುಸ್ವರಃ ॥ ಕೃಷ್ಟಯ ಇತಿ ಮನುಷ್ಯನಾಮ ಕೃಷ್ಟಯಶ್ಚರ್ಷಣಯ ಇತಿ ತನ್ನಾಮಸು ಪಾಠಾತ್ । ಕಿಂಚ ಪನಾಯ್ಯಂ ಸ್ತುತ್ಯಮೋಜಃ ಶರೀರಬಲಮಸ್ಮೇ ಅಸ್ಮಾಸು ಸಮ್ಯಗಿನ್ವತಂ । ವ್ಯಾಪ್ನುತಂ । ಪ್ರವರ್ಧಯತಮಿತ್ಯರ್ಥಃ । ಇನ್ವತಿರ್ವ್ಯಾಪ್ತಿವಚನಃ ಇನ್ವತಿ ನನಕ್ಷೇತಿ ತನ್ನಾಮಸು ಪಾಠಾತ್ ॥

ಪ್ರತಿಪದಾರ್ಥ

**ತೇ**—ಪ್ರಸಿದ್ಧರಾದವರೂ । **ಮಹಿನೀ**—ಮಹತ್ತಾದವರೂ ಆದ । **ದ್ಯಾವಾಪೃಥಿವೀ**—ಎಲೈ ದ್ಯಾವಾಪೃಥಿವಿಗಳೇ । **ಗೃಣಾನೇ**—(ನಮ್ಮಿಂದ) ಸ್ತುತಿಸಲ್ಪಟ್ಟವರಾಗಿ । **ಯೇನ**—ಯಾವುದರಿಂದ । **ವಿಶ್ವಾಹಾ**—ಪ್ರತಿನಿತ್ಯವೂ । **ಕೃಷ್ಟೀಃ**—ಪುತ್ರಾದಿರೂಪವಾದ ಪ್ರಜೆಗಳನ್ನು । **ಅಭಿ ತತನಾಮ**—ವಿಸ್ತರಿಸುವೆವೋ (ಅಂತಹ) । **ಮಹಿ**—ಮಹತ್ತಾದ । **ಶ್ರವಃ**—ಅನ್ನವನ್ನೂ (ಅಥವಾ ಕೀರ್ತಿಯನ್ನು) । **ಬೃಹತ್**—ಪ್ರಭೂತವಾದ । **ಕ್ಷತ್ರಂ**—ಬಲವನ್ನೂ ।

**ನಃ**— ನಮಗೆ । **ಧಾಸಥಃ**—ಕೊಡಿರಿ । (ಮತ್ತು) **ಅಸ್ಮೇ**—ನಮಗೆ । **ಪನಾಯ್ಯಂ**—ಸ್ತುತ್ಯರ್ಹವಾದ । **ಓಜಃ**—ವೀರ್ಯವನ್ನು । **ಸಮಿನ್ವತಂ**—ವೃದ್ಧಿಪಡಿಸಿ ॥

**ಭಾವಾರ್ಥ**

ಪ್ರಸಿದ್ಧರಾದವರೂ ಮತ್ತು ಮಹತ್ತಾದವರೂ ಆದ ಎಲೈ ದ್ಯಾವಾಪೃಥಿವಿಗಳೇ, ನಮ್ಮಿಂದ ಸ್ತುತರಾದ ನೀವು ನಮಗೆ ಪ್ರಭೂತವಾದ ಅನ್ನವನ್ನೂ, ಬಲವನ್ನು ಕೊಡಿರಿ. ಅದರಿಂದ ನಾವು ಪ್ರತಿದಿನವೂ ನಮ್ಮ ಸಂತತಿಯನ್ನು ಬೆಳೆಸುವಂತೆ ಅನುಗ್ರಹಿಸಿ. ನಮಗೆ ಸ್ತುತ್ಯರ್ಹವಾದ ವೀರ್ಯವನ್ನೂ ವೃದ್ಧಿಪಡಿಸಿರಿ.

## English Translation

Glorified by us, grant to us, Heaven and Earth, abundant food and great strength; whereby we may daily multiply mankind; bestow upon us commendable vigour.

**ವಿಶೇಷವಿಷಯಗಳು**

**ದ್ಯಾವಾಪೃಥಿವಿಗಳನ್ನು** ಆರಾಧಿಸಿ ಈ ಋಕ್ಕಿನಲ್ಲಿ ಅವರಿಂದ ಪ್ರತಿಫಲವನ್ನಪೇಕ್ಷಿಸಿದೆ. **ಶ್ರವ, ಕ್ಷತ್ರ, ಓಜಸ್** ಇವೇ ನಿರೀಕ್ಷಿತವಾದ ಪ್ರತಿಫಲಗಳು. ಇವುಗಳಲ್ಲಿ ಶ್ರವ ಮತ್ತು ಕ್ಷತ್ರಗಳು ಸಂತಾನಾಭಿವೃದ್ಧಿಯ ಸಾಧನಗಳು.

**ಶ್ರವಃ—ಸರ್ವತ್ರ ಪ್ರಸಿದ್ಧಮನ್ನಂ, ಸರ್ವತ್ರ ಶ್ರೂಯಮಾಣಾಂ ಕೀರ್ತಿಂ ವಾ** । ಪ್ರಸಿದ್ಧವಾದ ಅನ್ನವನ್ನಾಗಲಿ, ಪ್ರಸಿದ್ಧವಾದ ಕೀರ್ತಿಯನ್ನಾಗಲಿ ಎಂದರ್ಥಮಾಡಿದೆ. ಈ ಪದಕ್ಕೆ ಈ ಎರಡರ್ಥಗಳೂ ಸಾಧ್ಯವಾಗುತ್ತದೆ ನಿರುಕ್ತಕಾರರು **ಅಭಿ ಶ್ರವ ಋಜ್ಯಂತಃ** (ಋ. ಸಂ. ೬-೩೭-೩) ಎಂಬ ಋಕ್ಕನ್ನು ವಿವರಿಸುವಾಗ **ಶ್ರವ** ಶಬ್ದಕ್ಕೆ **ಶ್ರವ ಇತ್ಯನ್ನನಾಮ, ಶ್ರೂಯತ ಇತಿ ಸತಃ** । ಸರ್ವತ್ರ ಪ್ರಸಿದ್ಧವಾಗುತ್ತದೆಯಾದ್ದರಿಂದ (ಎಲ್ಲರಿಂದಲೂ ಕೇಳಲ್ಪಡುತ್ತದೆ) **ಶ್ರು** ಧಾತುವಿನಿಂದ ನಿಷ್ಪನ್ನವಾದ **ಶ್ರವಶಬ್ದಕ್ಕೆ ಅನ್ನ**ವೆಂದೂ (ನಿ. ೧೦-೩) ;

**ಇಂದ್ರಸ್ಯ ಯಸ್ಯ ಸುಮುಖಂ ಸಹೋ ಮಹಿ ಶ್ರವೋ ನೃಮ್ಣಂ ಚ ರೋದಸೀ ಸಪರ್ಯತಃ ॥**
(ಋ. ಸಂ. ೧೦-೫೦-೧)

ಎಂಬಲ್ಲಿ **ಶ್ರವಣೀಯಂ ಯಶಃ** । ಎಲ್ಲರಿಂದಲೂ ಕೇಳಲ್ಪಡುವ ಎಂದರೆ ಸರ್ವತ್ರಪ್ರಸಿದ್ಧವಾದ **ಯಶಸ್ಸನ್ನೂ,** ಎಂದರ್ಥಮಾಡಿದ್ದಾರೆ. (ನಿ. ೧೧-೯) ಆದ್ದರಿಂದ ಪ್ರಕೃತವಾದ ಋಕ್ಕಿನಲ್ಲಿ **ಅನ್ನ** ಅಥವಾ **ಯಶಸ್ಸು** ಎಂಬ ಪರ್ಯಾಯರೂಪವಾದ ಅರ್ಥವನ್ನು ಹೇಳಿದೆ. ಅಥವಾ **ಅನ್ನವು** ಸಹ ಯಶೋಭಾಗಿಯಾಗುವುದರಿಂದ ಯಶಸ್ಸಿಗೆ ಸಾಧನವಾದ ಅನ್ನವೆಂದೂ ಅರ್ಥವಾಗುತ್ತದೆ.

**ಬೃಹತ್ಯಾ ಶ್ರೀಕಾಮೋ ಯಶಸ್ಕಾಮಃ ಕುರ್ವೀತ । ಶ್ರೀರ್ವೈ ಯಶಶ್ಛಂದಸಾಂ ಬೃಹತೀ । ಶ್ರಿಯಮೇವ ಯಶ ಆತ್ಮನ್ಧತ್ತೇ ।**
(ಐ. ಬ್ರಾ. ೧-೫)

ಎಂಬಲ್ಲಿ ಧನಧಾನ್ಯಾದಿ ಸಂಪತ್ತಿನ ರೂಪವಾದ **ಶ್ರೀ**ಗೂ ಅದರಿಂದ ಲಭಿಸತಕ್ಕ ಯಶಸ್ಸಿಗೂ ತಾದಾತ್ಮ್ಯವನ್ನು ಹೇಳಿದೆ. ಸಂಪತ್ತಿದ್ದರೆ ದಾನಾದಿರೂಪಗಳಿಂದ ಪುರುಷನು ಪ್ರಸಿದ್ಧನಾಗುತ್ತಾನೆ. ಆದ್ದರಿಂದ ಯಶಸ್ಸಿಗೆ ಅನ್ನಾದಿಸಂಪತ್ತೇ ಆಧಾರವು ಮತ್ತು ಅನ್ನಾದಿ ಸಂಪತ್ತುಗಳಿದ್ದರೆ ಯಶಸ್ಸು ತಾನಾಗಿಯೇ ಲಭಿಸುತ್ತದೆಯಾದ್ದರಿಂದ **ಶ್ರವ**ಶಬ್ದಕ್ಕೆ ಎರಡರ್ಥಗಳನ್ನು ಹೇಳಬಹುದು. ಇಂತಹ **ಶ್ರವ**ವನ್ನು ಕೊಡಿ ಎಂದು ಪ್ರಾರ್ಥಿಸಿದೆ.

ಕ್ಷತ್ರ—ಕ್ಷತ್ರಶಬ್ದಕ್ಕೆ **ಬಲ**ವೆಂದರ್ಥ. ಇದು ಸಾಧಾರಣವಾದ ಬಲವಲ್ಲ. ಅನ್ನವನ್ನೂ ಯಶಸ್ಸನ್ನೂ ಮತ್ತು ಪುರುಷನ ಸರ್ವಸ್ವವನ್ನೂ ರಕ್ಷಿಸತಕ್ಕ ಶಕ್ತಿಯಾಗಿದೆ. ಈ **ಕ್ಷತ್ರ** ವಿಲ್ಲದಿದ್ದರೆ ಪುರುಷನಿಗೆ ಯಾವ ವಿಧವಾದ ರಕ್ಷಣೆಯೂ ಇರಲಾರದು. ಇದರ ಆವಶ್ಯಕತೆಯು ಅಷ್ಟಿರುವುದರಿಂದಲೇ **ಅನ್ನ, ಯಶಸ್ಸು** ಇವುಗಳಿಂದ ತೃಪ್ತಿಯನು ಹೊಂದದೆ **ಕ್ಷತ್ರ**ವನ್ನೂ ಪ್ರಾರ್ಥಿಸಿದೆ. ಆದುದರಿಂದಲೇ ಇತರ ಕಡೆಗಳಲ್ಲೂ ಸಹ **ಕ್ಷತ್ರದ** ಮಹಿಮೆಯನ್ನು ಬಹಳ ವಾಗಿ ಸ್ತುತಿಸಿದೆ. ಅನ್ನಾದಿ ಸಂಪತ್ತುಗಳಿಗೆ ಸಾಧನವಾದುದು **ಯಜ್ಞ**, ಇಂತಹ ಯಜ್ಞಕ್ಕೆ ರಕ್ಷಕವಾದದ್ದು **ಕ್ಷತ್ರ**, **ಕ್ಷತ್ರದ** ಆಶ್ರಯವಿಲ್ಲದಿದ್ದರೆ ಯಜ್ಞರಕ್ಷಣೆಯಿಲ್ಲ. ಆದುದರಿಂದ ಅದರ ಮಹಿಮೆ ಮತ್ತು ಆವಶ್ಯಕತೆ.

> **ಅಥಾತೋ ದೇವಯಜನಸ್ಯೈವ ಯಾಚ್ಞಸ್ತದಾಹುರ್ಯದ್ಬ್ರಾಹ್ಮಣೋ ರಾಜನ್ಯೋ ವೈಶ್ಯೋ ದೀಕ್ಷಿಷ್ಯಮಾಣಃ ಕ್ಷತ್ರಿಯಂ ದೇವಯಜನಂ ಯಾಚತಿ ಕಂ ಕ್ಷತ್ರಿಯೋ ಯಾಚೇದಿತಿ । ದೈವಂ ಕ್ಷತ್ರಂ ಯಾಚೇದಿತ್ಯಾಹುರಾದಿತ್ಯೋ ವೈ ದೈವಂ ಕ್ಷತ್ರಮಾದಿತ್ಯ ಏಷಾಂ ಭೂತಾನಾಮಧಿಪತಿಃ । .... .... .... .... .... .... .... .... .... .... .... .... .... .... .... ತಸ್ಯ ಹ ನ ಕಾಚನ ರಿಷ್ಟಿರ್ಭವತಿ ದೇವೇನ ಸವಿತ್ರಾ ಪ್ರಸೂತಸ್ಯೋತ್ತರೋತ್ತರಿಣೀಂ ಹ ಶ್ರಿಯಮಶ್ನುತೇಽಶ್ನುತೇ ಹ ಪ್ರಜಾನಾಮೈಶ್ವರ್ಯಮಾಧಿಪತ್ಯಂ ಯ ಏವಮುಪಸ್ಥಾಯ ಯಾಚಿತ್ವಾ ದೇವಯಜನಮಧ್ಯವಸಾಯ ದೀಕ್ಷತೇ ಕ್ಷತ್ರಿಯಃ ಸನ್ ।**
>
> (ಐ. ಬ್ರಾ. ೭-೨೦)

ಬ್ರಾಹ್ಮಣಾದಿ ವರ್ಣದವರು ಯಜ್ಞಮಾಡಬೇಕಾದರೆ ಕ್ಷತ್ರಿಯನ ಆಶ್ರಯವನ್ನು ಪಡೆಯಬೇಕು. ಕ್ಷತ್ರಿಯನೇ ಯಜ್ಞಮಾಡಬೇಕಾದರೆ ದೇವತಾತ್ಮವಾದ **ಕ್ಷತ್ರದ** ಆಶ್ರಯವನ್ನೇ ಪಡೆಯಬೇಕು. ಸರ್ವಲೋಕಕ್ಕೂ ಪ್ರಭುವಾದ **ಆದಿತ್ಯನೇ** ಈ ಕ್ಷತ್ರದ ಸತ್ತ್ವವು. ಪ್ರತಿಯೊಬ್ಬ ಯಜ್ಞಕರ್ತನೂ ಕ್ಷತ್ರರೂಪದ ಈ ಆದಿತ್ಯನ ರಕ್ಷಣೆಯಿಂದ ಯಜ್ಞವನ್ನು ಪೂರ್ಣವಾಗಿ ನೆರವೇರಿಸಿ ತಾನೂ ಪ್ರಭುತ್ವವನ್ನು ಪಡೆಯುತ್ತಾನೆ. ಸಕಲ ಸಂಪತ್ತನ್ನೂ ಪಡೆಯುತ್ತಾನೆ. ನಿರ್ವಿಘ್ನವಾದ ಜಯವನ್ನು ಪಡೆಯುತ್ತಾನೆ.

ಯಜ್ಞಕಾಲಗಳಲ್ಲಾಗಲಿ ದೇವತಾಸ್ತುತಿಯನ್ನು ಮಾಡುವ ಇತರ ಕಾಲಗಳಲ್ಲಾಗಲಿ, ಕಾರ್ಯವು ನಿರ್ವಿಘ್ನವಾಗಿ ನೆರವೇರಿ ಸಕಲಸಂಪತ್ತುಗಳನ್ನೂ ಪಡೆಯಬೇಕಾದರೆ ಕ್ಷತ್ರರೂಪದ **ಆದಿತ್ಯಾದಿದೇವತೆಗಳ** ರಕ್ಷಣೆಯನ್ನು ಪಡೆಯುವಂತೆಯೇ ಕ್ಷತ್ರರೂಪದ **ತ್ರಿವೃತ್‌ಸ್ತೋಮಾದಿ** ಮಂತ್ರಗಳ ರಕ್ಷಣೆಯನ್ನು ಪಡೆಯಬೇಕೆಂದು ಅವುಗಳ ಶಕ್ತಿಯನ್ನು ವರ್ಣಿಸಿದೆ.

> **ಸೈತಸ್ಮಿನ್ನಧ್ಯೂಳ್ಹಾ ಸ ಯಜಮಾನಸ್ತದ್ದೈವಂ ಕ್ಷತ್ರಂ ಸಹೋ ಬಲಂ । ಅಶ್ನುತೇ ಹ ವೈ ದೈವಂ ಕ್ಷತ್ರಂ ಸಹೋ ಬಲಂ ।**
>
> (ಐತರೇಯ ಬ್ರಾಹ್ಮಣಂ. ೩-೪೧)

ತೇಜಸ್ಸಿಗೂ, ವೀರ್ಯಕ್ಕೂ, ಪ್ರತಿಷ್ಠೆಗೂ, ಜಯಕ್ಕೂ, ಮಹತ್ತ್ವಕ್ಕೂ ಸಾಧನವಾದ **ತ್ರಿವೃತ್‌ಸ್ತೋಮವೇ** ಈ ಕ್ಷತ್ರದ ಸತ್ತ್ವವು. ಈ ಶಕ್ತಿಯು ಯಾವ ವಿಧವಾದ ಪ್ರತಿಬಂಧಕವನ್ನೂ ತಡೆಯಬಲ್ಲದು. ಈ ಮಂತ್ರದ ರಹಸ್ಯವನ್ನು ತಿಳಿದವನು ಸಕಲವಿಧವಾದ ಪ್ರತಿಬಂಧಕಗಳನ್ನೂ ತಡೆಯಬಲ್ಲ ಶಕ್ತಿಯನ್ನು ಪಡೆಯುತ್ತಾನೆ ಎಂದು ತ್ರಿವೃತ್ ಸ್ತೋಮಾದಿ ಮಂತ್ರಗಳ ಶಕ್ತಿಯನ್ನು ವರ್ಣಿಸಿರುವುದಲ್ಲದೆ,

**ತ್ರಿಷ್ಟುಪ್ತ್ರೈಷ್ಟುಭೋ ವೈ ರಾಜನ್ಯ ಓಜೋ ವಾ ಇಂದ್ರಿಯಂ ವೀರ್ಯಂ ತ್ರಿಷ್ಟುಬೋಜಃ ಕ್ಷತ್ರಂ ವೀರ್ಯಂ ರಾಜನ್ಯಸ್ತದೇನಮೋಜಸಾ ಕ್ಷತ್ರೇಣ ವೀರ್ಯೇಣ ಸಮರ್ಧಯತಿ ॥**

(ಐ. ಬ್ರಾ. ೮-೨)

ಇತ್ಯಾದಿ ವಾಕ್ಯಗಳಲ್ಲಿ ಕ್ಷತ್ರರೂಪವಾದ ತ್ರಿಷ್ಟುಬಾದಿಛಂದಸ್ಸುಗಳನ್ನೂ ಅವುಗಳನ್ನು ಆರಾಧಿಸುವುದರಿಂದ ವೀರ್ಯ, ಓಜಸ್ಸು ಇವುಗಳಿಂದ ಕೂಡಿದ ಕ್ಷತ್ರರೂಪವಾದ ಬಲವನ್ನು ಪಡೆದು ಸಂತಾನಸಂಪತ್ತಿಗೆ ಸಾಧನವನ್ನಾಗಿ ಮಾಡಿದಂತಾಗುವುದೆಂದೂ ಸಹ **ಕ್ಷತ್ರದ** ಮಹತ್ತ್ವವನ್ನು ಸ್ತುತಿಸಿದೆ. ಇದು ಅಲೌಕಿಕವಾದ ಶಕ್ತಿಯೆಂದು ತಿಳಿಸಲು **ದೈವಂ ಕ್ಷತ್ರಂ** ಎಂದು ಎಲ್ಲಾ ಕಡೆಯೂ ಹೇಳಿದೆ.

**ಕ್ಷತ್ರಂ ತದಪಿ ವಿಜ್ಞೇಯಂ ಬ್ರಹ್ಮ ಯತ್ಪಾತಿ ಶಾಶ್ವತಂ ।**

(ಬೃ. ದೇ. ೫-೧೨೬)

ಶಾಶ್ವತವಾದ **ಬ್ರಹ್ಮ**ವನ್ನು ರಕ್ಷಿಸುವ ಸಾಮರ್ಥ್ಯವು ಯಾವುದಕ್ಕಿದೆಯೋ ಅದೇ ಕ್ಷತ್ರವೆಂದರಿಯಬೇಕು. ಈ ಶಕ್ತಿಯಿಂದಲೇ ಇತರ ಸಕಲಶಕ್ತಿಗಳೂ ರಕ್ಷಿಸಲ್ಪಡುತ್ತವೆ.

**ತಸ್ಮಾದು ಸರ್ವೇಷು ಲೋಕೇಷು ಕ್ಷತ್ರಸ್ಯೈವ ಪ್ರಶಾಸನಮಭೂತ್ ।**

(ಛಾ. ಉ. ೫-೩-೭)

ಆದುದರಿಂದಲೇ ಸರ್ವಲೋಕಗಳಲ್ಲಿಯೂ ಪ್ರಭುತ್ವವು ಕ್ಷತ್ರಿಯನಿಗೇ ಸೇರಿದೆ.

**ತಸ್ಮಾತ್ ಕ್ಷತ್ರಾತ್ಪರಂ ನಾಸ್ತಿ ತಸ್ಮಾದ್ಬ್ರಾಹ್ಮಣಃ ಕ್ಷತ್ರಿಯಮಧಸ್ತಾದುಪಾಸ್ತೇ ।**

(ಬೃ. ಉ. ೧-೪-೧೧)

ಆದುದರಿಂದಲೇ ರಾಜಸೂಯಾದಿಗಳಲ್ಲಿ ಬ್ರಾಹ್ಮಣನೂ ಸಹ ಕ್ಷತ್ರಿಯನಿಗಿಂತ ಕೆಳಗಿನ ಸ್ಥಾನದಲ್ಲಿಯೇ ಕುಳಿತುಕೊಳ್ಳುತ್ತಾನೆ. ಆದರೆ ಈ ಕ್ಷತ್ರವು ಕೇವಲ ಭೌತಿಕವಾದ ಶಕ್ತಿಯೇ ಅಲ್ಲ.

**ತಚ್ಛ್ರೇಯೋರೂಪಮತ್ಯಸೃಜತ ಧರ್ಮಂ ತದೇತತ್‌ಕ್ಷತ್ರಸ್ಯ ಕ್ಷತ್ರಂ ಯದ್ಧರ್ಮಸ್ತಸ್ಮಾದ್ಧರ್ಮಾತ್ಪರಂ ।**

(ಬೃ. ಉ. ೧-೪-೧೪)

ಈ ಶಕ್ತಿಯು ಸಕಲ ಧರ್ಮಗಳಿಗಿಂತಲೂ ಶ್ರೇಷ್ಠವಾದ ಧರ್ಮವು. ಇದನ್ನು ಬಿಟ್ಟು ಬೇರೆ ಧರ್ಮವಿಲ್ಲ.

ಈ ರೀತಿಯಾದ ಅಲೌಕಿಕವಾದ ಶಕ್ತಿಯಿರುವುದರಿಂದಲೇ ಪ್ರಕೃತವಾದ ಋಕ್ಕಿನಲ್ಲಿ ಅನ್ನರೂಪವಾದುದೂ, ಯಶೋರೂಪವಾದುದೂ ಆದ ಸಂಪತ್ತನ್ನು ಪಡೆಯಲು ಅದರ ಜೊತೆಯಲ್ಲಿ ಅದರ ರಕ್ಷಕವಾದ ಕ್ಷತ್ರರೂಪದ ಶಕ್ತಿ

ಯನ್ನೂ ಪ್ರಾರ್ಥಿಸಿದೆ. **ಯೇನ ಕೃಷ್ಟೀಃ ಅಭಿ ತತನಾಮ** ಪುತ್ರರೂಪವಾದ ಸಂಪತ್ತೂ ಸಹ ಈ ಶಕ್ತಿಯನ್ನು ಆಶ್ರಯಿಸುವುದರಿಂದಲೇ ವೃದ್ಧಿಯಾಗುತ್ತದೆಂದೂ ಸ್ಪಷ್ಟವಾಗಿ ಹೇಳಿದೆ.

**ಕೃಷ್ಟೀಃ**—ಕೃಷ್ಟಿಶಬ್ದಕ್ಕೆ ಮನುಷ್ಯಜಾತರೆಂದು ಸಾಧಾರಣವಾದ ಅರ್ಥವಿದೆ ನಿರುಕ್ತಕಾರರು,

**ಆ ದಧಿಕ್ರಾಃ ಶವಸಾ ಪಂಚ ಕೃಷ್ಟೀಃ ಸೂರ್ಯ ಇವ ಜ್ಯೋತಿಷಾಪಸ್ತತಾನ ।**

(ಋ. ಸಂ ೪-೩೮-೧೦)

ಎಂಬ ಋಕ್ಕಿನಲ್ಲಿರುವ **ಪಂಚ ಕೃಷ್ಟೀಃ** ಎಂಬ ಪದಕ್ಕೆ **ಪಂಚ ಜನಾನ್** (ನಿ. ೧೦-೩೧) ಎಂದು ಸಕಲ ಮನುಷ್ಯಜಾತರನ್ನೂ ಸೇರಿಸಿ ಅರ್ಥಮಾಡಿದ್ದಾರೆ. ಪ್ರಕೃತವಾದ ಋಕ್ಕಿನಲ್ಲಿ **ಪುತ್ರಾದಿರೂಪಾಃ ಪ್ರಜಾಃ** ಪುತ್ರಾದಿರೂಪರಾದ ಪ್ರಜೆಗಳೆಂದರ್ಥಮಾಡಿದೆ. ಸಂತಾನಸಂಪತ್ತೆಂದು ತಾತ್ಪರ್ಯ.

**ಪನಾಯ್ಯಂ—ಸ್ತುತ್ಯಂ ।** ಸ್ತುತ್ಯರ್ಹವಾದ ಎಂದರ್ಥ. ಓಜಃ ಎಂಬ ಪದಕ್ಕೆ ವಿಶೇಷಣವಾಗಿದೆ. ನಿರುಕ್ತಕಾರರು **ಪನಸ್ಯತಿ, ಪನಾಯತೇ** ಎಂಬ ಪದಗಳನ್ನು **ಅರ್ಚತಿಕರ್ಮ**ನಾಮಗಳಲ್ಲಿ ಸೇರಿಸಿ (ನಿ. ೩-೧೪)

**ರಥೇ ತಿಷ್ಠನ್ನಯತಿ ವಾಜಿನಃ ಪುರೋ ಯತ್ರಯತ್ರ ಕಾಮಯತೇ ಸುಷಾರಥಿಃ ।**
**ಅಭೀಶೂನಾಂ ಮಹಿಮಾನಂ ಪನಾಯತ ಮನಃ ಪಶ್ಚಾದನು ಯಚ್ಛಂತಿ ರಶ್ಮಯಃ ॥**

(ಋ ಸಂ ೬-೭೫-೬)

ಎಂಬ ಋಕ್ಕಿನಲ್ಲಿರುವ **ಪನಾಯತ** ಎಂಬ ಪದಕ್ಕೆ **ಪೂಜಯತ** ಎಂದರ್ಥಮಾಡಿದ್ದಾರೆ. ಅದರಂತೆ ಇಲ್ಲಿಯೂ ಸಹ **ಪೂಜ್ಯಾರ್ಥ**ವಿದ್ದು ಸ್ತುತಿಗೆ ಅರ್ಹರಾದ ಎಂದು ತಾತ್ಪರ್ಯವಾಗಿದೆ. ಇದು **ಓಜಸ್ಸಿಗೆ** ವಿಶೇಷಣವಾಗಿರುವುದರಿಂದ ಆ **ಓಜಸ್ಸಿನ** ಸ್ವರೂಪವೇನು ಎಂದು ತಿಳಿಯಬೇಕು.

**ಓಜಃ**—ನಿರುಕ್ತಕಾರರು ಈ ಪದವನ್ನು **ಬಲನಾಮ**ಗಳಲ್ಲಿ ಸೇರಿಸಿ (ನಿ. ೩-೯) ಅನಂತರ **ಓಜತೇರ್ವೋಬ್ಜತೇರ್ವಾ** (ನಿ ೬-೮) ಶಕ್ತ್ಯರ್ಥವಾದ **ಓಜ** ಧಾತುವಿನಿಂದಾಗಲಿ ಅಥವಾ **ನಿಗ್ರಹಿಸು** ಎಂಬರ್ಥವನ್ನು ಕೊಡುವ **ಉಬ್ಜ್** ಧಾತುವಿನಿಂದಾಗಲಿ ನಿಷ್ಪನ್ನವಾಗಿದೆಯೆಂದು ತೋರಿಸಿದ್ದಾರೆ. ಸ್ವಯಂ ಶಕ್ತಿಯನ್ನು ಸಂಪಾದಿಸಿ ಇತರ ಪ್ರತಿಬಂಧಕಗಳನ್ನೂ ನಿಗ್ರಹಿಸುವ ಸಾಮರ್ಥ್ಯವು ಈ ಪದದಿಂದ ಸೂಚಿತವಾಗಿದೆ.

**ಮಂದ್ರ ಓಜಿಷ್ಠ ಇತ್ಯೋಜಸ್ತತ್ ಕ್ಷತ್ರಸ್ಯ ರೂಪಂ ।**

(ಐ. ಬ್ರಾ. ೮-೨)

ಇತ್ಯಾದಿ ವಾಕ್ಯಗಳಲ್ಲಿ ಕ್ಷತ್ತ್ರರೂಪವಾದ ಶಕ್ತಿಗೂ ಓಜೋರೂಪವಾದ ಶಕ್ತಿಗೂ ತಾದಾತ್ಮ್ಯವನ್ನು ಹೇಳಿದೆ. ಇದು ಕೇವಲಬಾಹ್ಯಶಕ್ತಿಯೇ ಅಲ್ಲದೆ ಅರಿಷಡ್ವರ್ಗಗಳನ್ನೂ ಜಯಿಸತಕ್ಕ ಅಂತಶ್ಶಕ್ತಿಯೆಂದೂ ವರ್ಣಿತವಾಗಿದೆ.

**ಇನ್ವತಂ**—ಇನ್ವತಿ, ನಕ್ಷತಿ ಇತ್ಯಾದಿ **ವ್ಯಾಪ್ತಿಕರ್ಮ**ನಾಮಗಳಲ್ಲಿ ಪಠಿತವಾಗಿದೆ. (ನಿ. ೩-೧೦) ಇಲ್ಲಿ ವೃದ್ಧಿಯೆಂದರ್ಥವಾಗುತ್ತದೆ, ನಮ್ಮ ಶಕ್ತಿಯನ್ನು ವೃದ್ಧಿಪಡಿಸಿ ಎಂದು ಪ್ರಾರ್ಥಿಸಿದೆ.

ವ್ಯಾಕರಣಪ್ರಕ್ರಿಯಾ

**ಗೃಣಾನೇ**—ಗೃ ಶಬ್ದೇ ಧಾತು. ಇಲ್ಲಿ ಸ್ತುತ್ಯರ್ಥದಲ್ಲಿ ಪ್ರಯುಕ್ತವಾಗಿದೆ. ಲಟಿಗೆ ವ್ಯತ್ಯಯದಿಂದ ಕರ್ಮಣಿಯಲ್ಲಿ ಕರ್ತೃ ಪ್ರತ್ಯಯ. ಶಾನಚ್ ಬರುತ್ತದೆ. ಶ್ನಾ ವಿಕರಣ. **ಪ್ವಾದೀನಾಂ ಹ್ರಸ್ವಃ** (ಪಾ. ಸೂ. ೭-೩-೮೦) ಎಂಬುದರಿಂದ ಧಾತುವಿಗೆ ಹ್ರಸ್ವ. **ಚಿತಃ** (ಪಾ. ಸೂ. ೬-೧-೧೬೩) ಎಂಬುದರಿಂದ ಅಂತೋದಾತ್ತಸ್ವರ ಬರುತ್ತದೆ. ದ್ವಿವಚನಾಂತರೂಪ.

**ಧಾಸಥಃ**—ಡುಧಾಞ್ ಧಾರಣಪೋಷಣಯೋಃ ಧಾತು. **ಲೇಟ್** ಮಧ್ಯಮಪುರುಷ ದ್ವಿವಚನದಲ್ಲಿ ಥಸ್ ಪ್ರತ್ಯಯ. **ಲೇಟೋಽಡಾಟೌ** (ಪಾ. ಸೂ. ೩-೪-೯೪) ಎಂಬುದರಿಂದ ಅದಕ್ಕೆ ಅಡಾಗಮ. **ಸಿಬ್ಬಹುಲಂಲೇಟಿ** (ಪಾ. ಸೂ. ೩-೧-೩೪) ಎಂಬುದರಿಂದ ಸಿಪ್. ಅತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

**ಕೃಷ್ಟೀಃ**—ಕೃಷ ವಿಲೇಖನೇ ಧಾತು. **ಕ್ತಿಚ್ಕ್ತೌ ಚ ಸಂಜ್ಞಾಯಾಮ್** (ಪಾ. ಸೂ. ೩-೩-೧೭೪) ಎಂಬುದರಿಂದ ಕ್ತಿಚ್ ಪ್ರತ್ಯಯ. **ಚಿತಃ** (ಪಾ. ಸೂ. ೬-೧-೧೬೩) ಎಂಬುದರಿಂದ ಅಂತೋದಾತ್ತಸ್ವರ ಬರುತ್ತದೆ. ದ್ವಿತೀಯಾಬಹುವಚನಾಂತರೂಪ.

**ತತನಾಮ**—ತನು ವಿಸ್ತಾರೇ ಧಾತು. ಲೋಟ್ ಉತ್ತಮಪುರುಷಬಹುವಚನದಲ್ಲಿ ಮಸ್ ಪ್ರತ್ಯಯ. ಲಙ್ವದ್ಭಾವವಿರುವುದರಿಂದ **ನಿತ್ಯಂ ಙಿತಃ** (ಪಾ. ಸೂ. ೩-೪-೯೯) ಎಂಬುದರಿಂದ ಸಕಾರಕ್ಕೆ ಲೋಪ. **ಅಡುತ್ತ-ಮಸ್ಯಪಿಚ್ಚ** (ಪಾ. ಸೂ. ೩-೪-೯೨) ಸೂತ್ರದಿಂದ ಅದಕ್ಕೆ ಅಡಾಗಮ. **ಬಹುಲಂ ಛಂದಸಿ** ಎಂಬುದರಿಂದ ಶ್ಲುವಿಕರಣ. **ಶ್ಲೌ** ಎಂಬುದರಿಂದ ಧಾತುವಿಗೆ ದ್ವಿತ್ವ. **ಯದ್ವೃತ್ತಾನ್ನಿತ್ಯಮ್** (ಪಾ. ಸೂ. ೮-೧-೬೬) ಎಂಬುದರಿಂದ ನಿಘಾತಪ್ರತಿಷೇಧ ಬರುತ್ತದೆ. **ಛಂದಸ್ಯುಭಯಥಾ** (ಪಾ. ಸೂ. ೩-೪-೧೧೭) ಎಂಬುದರಿಂದ ಪ್ರತ್ಯಯಕ್ಕೆ ಆರ್ಧಧಾತುಕಸಂಜ್ಞೆ ಇರುವುದರಿಂದ **ಅಭ್ಯಸ್ತಾನಾಮಾದಿಃ** ಎಂಬುದರಿಂದ ಆದ್ಯುದಾತ್ತಸ್ವರ ಬರುವುದಿಲ್ಲ. ಧಾತುಸ್ವರ ಉಳಿಯುತ್ತದೆ.

ವಿಶ್ವಹಾ—**ಸುಪಾಂ ಸುಲುಕ್** (ಪಾ. ಸೂ. ೭-೧-೩೯) ಎಂಬುದರಿಂದ **ಸಪ್ತಮಿಗೆ ಡಾದೇಶ.**

**ಇನ್ವತಮ್**—ಇವಿ ವ್ಯಾಪ್ತೌ ಧಾತು. ಲೋಟ್ ಮಧ್ಯಮಪುರುಷದ್ವಿವಚನಾಂತರೂಪ. **ತಿಙಂತನಿಘಾತ** ಸ್ವರ ಬರುತ್ತದೆ. ॥ ೫ ॥

ಇಲ್ಲಿಗೆ ೧೬೦ನೇ ಸೂಕ್ತವು ಮುಗಿದುದು.

———:0:———

# ನೂರ ಅರವತ್ತೊಂದನೆಯ ಸೂಕ್ತವು

---

**ಕಿಮು ಶ್ರೇಷ್ಠ ಇತಿ ಚತುರ್ದಶರ್ಚಂ ಪಂಚಮಂ ಸೂಕ್ತಂ ದೈರ್ಘತಮಸಮಾರ್ಭವಂ । ಅಂತ್ಯಾ ತ್ರಿಷ್ಟುಪ್ ಶಿಷ್ಟಾಸ್ತ್ರಿಷ್ಟುಬಂತ ಪರಿಭಾಷಯಾ ಜಗತ್ಯಃ । ಅನುಕ್ರಾಂತಂ ಚ । ಕಿಮು ಶ್ರೇಷ್ಠಃ ಷಳೂನಾರ್ಭವಂ ತ್ರಿಷ್ಟುಬಂತಮಿತಿ ॥ ವ್ಯೂಳ್ಹೇ ದಶರಾತ್ರೇ ಷಷ್ಠೇಽಹನಿ ವೈಶ್ವದೇವಶಸ್ತ್ರ ಆರ್ಭವಂ ನಿವಿದ್ಧಾನಂ ದ್ವಿಪ್ರತೀಕಂ । ತತ್ರ ಕಿಮು ಶ್ರೇಷ್ಠ ಇತ್ಯೇತದಂತ್ಯವರ್ಜಂ ಪ್ರತೀಕಂ । ವ್ಯೂಳ್ಹಶ್ಚೇದಿತಿ ಖಂಡೇ ಸೂತ್ರಿತಂ। ಕಿಮು ಶ್ರೇಷ್ಠ ಉಪ ನೋ ವಾಜಾ ಇತಿ ತ್ರಯೋದಶಾರ್ಭವಂ ಚತಸ್ರಶ್ಚ । ಆ. ೮-೮ । ಇತಿ ॥**

ಅನುವಾದವು—**ಕಿಮು ಶ್ರೇಷ್ಠ** ಎಂಬ ಈ ಸೂಕ್ತವು ಇಪ್ಪತ್ತೆರಡನೆಯ ಅನುವಾಕದಲ್ಲಿ ಐದನೆಯಸೂಕ್ತವು. ಇದರಲ್ಲಿ ಹದಿನಾಲ್ಕು ಋಕ್ಕುಗಳಿರುವುವು- ಈ ಸೂಕ್ತಕ್ಕೆ ಉಚಥ್ಯಪುತ್ರನಾದ ದೀರ್ಘತಮಸ್ಸೆಂಬುವನು ಋಷಿಯು. ಋಭಗಳೇ ದೇವತೆಯು. ಈ ಸೂಕ್ತದ ಕೊನೆಯ ಋಕ್ಕು ಮಾತ್ರ ತ್ರಿಷ್ಟುಪ್‌ಛಂದಸ್ಕವು. ಉಳಿದ ಋಕ್ಕುಗಳು ಜಗತೀಛಂದಸ್ಸಿನವು. ಅನುಕ್ರಮಣಿಕೆಯಲ್ಲಿ **ಕಿಮು ಶ್ರೇಷ್ಠ ಷಳೂನಾರ್ಭವಂ ತ್ರಿಷ್ಟುಬಂತಮಿತಿ** ಎಂದು ಹೇಳಿರುವುದು. ವ್ಯೂಳ್ಹವೆಂಬ ಹತ್ತುದಿವಸ ಮಾಡುವ ಯಜ್ಞದ (ಅಥವಾ ದಶರಾತ್ರವೆಂಬ ಯಜ್ಞದ) ಆರನೆಯ ದಿವಸ ವೈಶ್ವದೇವಶಸ್ತ್ರಮಂತ್ರಪಠನಮಾಡುವಾಗ ಋಭುದೇವತಾಸಂಬಂಧವಾದ ನಿವಿದ್ಧಾನಮಂತ್ರಗಳಿಗಾಗಿ ಇರುವ ಎರಡು ಪ್ರತೀಕಗಳಲ್ಲಿ (ಭಾಗ) ಕೊನೆಯ ಋಕ್ಕನ್ನು ಬಿಟ್ಟು ಉಳಿವ ಋಕ್ಕುಗಳು ಒಂದು ಪ್ರತೀಕದ ಮಂತ್ರಗಳಾಗಿ ಉಪಯೋಗಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ **ವ್ಯೂಳ್ಹಶ್ಚೇತ್** ಎಂಬ ಖಂಡದ **ಕಿಮುಶ್ರೇಷ್ಠ ಉಪನೋ ವಾಜಾ ಇತಿ ತ್ರಯೋದಶಾರ್ಭವಂ ಚತಸ್ರಶ್ಚ** ಎಂಬ ಸೂತ್ರದಿಂದ ವಿವೃತವಾಗಿರುವುದು. (ಆ. ೮-೮)

---

## ॥ ಓಂ ॥

## ಸೂಕ್ತ—೧೬೧

---

॥ ಮಂಡಲ—೧ ॥ ಅನುವಾಕ—೨೨ ॥ ಸೂಕ್ತ—೧೬೧ ॥

॥ ಅಷ್ಟಕ—೨ ॥ ಅಧ್ಯಾಯ—೩ ॥ ವರ್ಗ—೪, ೫, ೬ ॥

॥ ಸೂಕ್ತದಲ್ಲಿರುವ ಋಕ್ಸಂಖ್ಯೆ—೧೪ ॥

॥ ಋಷಿಃ—ದೀರ್ಘತಮಾ ಔಚಥ್ಯಃ ॥

॥ ದೇವತಾ—ಋಭವಃ ॥

॥ ಛಂದಃ—೧-೧೩. ಜಗತೀ । ೧೪. ತ್ರಿಷ್ಟುಪ್ ॥

---

ಸಂಹಿತಾಪಾಠಃ

ಕಿಮು ಶ್ರೇಷ್ಠಃ ಕಿಂ ಯವಿಷ್ಠೋ ನ ಆಜಗನ್ಕಿಮೀಯತೇ ದೂತ್ಯಂ೧
ಕದದ್ಯೂಚಿಮ ।
ನ ನಿಂದಿಮ ಚಮಸಂ ಯೋ ಮಹಾಕುಲೋಽಗ್ನೇ ಭ್ರಾತರ್ದ್ರುಣ
ಇದ್ಭೂತಿಮೂದಿಮ ॥ ೧ ॥

ಪದಪಾಠಃ

ಕಿಂ । ಊಂ ಇತಿ । ಶ್ರೇಷ್ಠಃ । ಕಿಂ । ಯವಿಷ್ಠಃ । ನಃ । ಆ । ಅ ಜ ಗ ನ್ । ಕಿಂ । ಈಯತೇ । ದೂತ್ಯಂ । ಕತ್ । ಯತ್ । ಊಚಿಮ ।
ನ । ನಿಂದಿಮ । ಚಮಸಂ । ಯಃ । ಮಹಾಽಕುಲಃ । ಅಗ್ನೇ । ಭ್ರಾತಃ । ದ್ರುಣಃ । ಇತ್ । ಭೂತಿಂ । ಊದಿಮ ॥ ೧ ॥

ಸಾಯಣಭಾಷ್ಯಂ

ಋಭವೋ ನಾಮ ಸುಧನ್ವನಸ್ತ್ರಯಃ ಪುತ್ರಾ ಋಭುರ್ವಿಭ್ವಾ ವಾಜ ಇತಿ । ತೇ ಚ ಮನುಷ್ಯಾಃ ಸಂತಃ ಸುಕರ್ಮಣಾ ದೇವತ್ವಂ ಪ್ರಾಪ್ಯ ಕದಾಚಿತ್ಕರ್ಮಕಾಲೇ ಸೋಮಪಾನಾಯ ಪ್ರವೃತ್ತಾಃ । ತಾನ್ಪ್ರತಿ ದೇವೈಃ ಪ್ರೇರಿತೋಽಗ್ನಿಃ ಪರಸ್ಪರಸಮಾನರೂಪಾನ್ದೃಷ್ಟ್ವಾ ಸ್ವಯಮಪಿ ತದಾಕಾರಂ ಧೃತ್ವಾ ತೇಷು ಮಧ್ಯೇ ಸ್ವಯಂ ಚತುರ್ಥಃ ಸನ್ ಪಾತುಂ ಪ್ರವೃತ್ತಃ । ತೇ ಚ ಋಭವ ಆಗತಂ ತಂ ಸಮಾನರೂಪಮವಲೋಕ್ಯ ವಿವೇಕ್ತುಮಸಮರ್ಥಾಃ ಪರಸ್ಪರಮೇವಂ ಸಂದಿಹತೇ । ಅಯಂ ಕಿಮು ಶ್ರೇಷ್ಠಃ ಕಿಂ ನು ಖಲ್ವಸ್ಮತ್ತೋಽಯಂ ಪ್ರಶಸ್ಯತಮೋ ವಯಸಾ ಶ್ರೇಷ್ಠಃ ಸೋಽಸ್ಮಾನಾಜಗನ್ । ಆಗಮತ್ । ಪ್ರಾಪ್ತಃ ॥ ಗಮೇರ್ಲಙಿ ಛಾಂದಸಃ ಶಪಃ ಶ್ಲುಃ । ಹಲ್ಙ್ಯಾದಿಲೋಪೇ ಮೋ ನೋ ಧಾತೋರಿತಿ ನತ್ವಂ । ಅಜಗನ್ನಿತಿ ಗತಿಕರ್ಮಾ ಅಗನ್ನಜಗನ್ನಿತಿ ತನ್ನಾಮಸು ಪಾಠಾತ್ ॥ ಕಿಂ ಯವಿಷ್ಠಃ ಕಿಂ ವಾಸ್ಮಾಕಂ ಯುವತಮೋಽಸ್ಮತ್ತಃ ಕನೀಯಾನಾಜಗನ್ । ಪ್ರಾಪ್ತಃ । ಕಿಂ ವಾ ದೂತ್ಯಂ ದೂತಕರ್ಮ ದೇವಸಂಬಂಧೀಯತೇ । ಗಚ್ಛತಿ । ದೇವೈಃ ಪ್ರೇರಿತೋ ದೂತೋಽಸ್ಮಾನಾಗತೋ ವಾ ॥ ದೂತಸ್ಯ ಭಾಗಕರ್ಮಣೀ ಇತಿ ಯತ್ ॥ ಯದೂಚಿಮ ಯದೇತದ್ಬ್ರೂಮಃ ತತ್ಕತ್ । ಕಥಂ ನಿಶ್ಚೇತವ್ಯಮಿತ್ಯರ್ಥಃ । ವಯಂ ತಾವತ್ತ್ರಯ ಏವೇದಾನೀಂ ಚತ್ವಾರಃ ಸಮಾನರೂಪಾ ವರ್ತಾಮಹೇ ತಸ್ಮಾದಯಮಧಿಕಃ ಕಿಮು ಶ್ರೇಷ್ಠ ಇತಿ ವಿಚಿಕಿತ್ಸಾ । ಏವಂ ಸಂದಿಹ್ಯ ಕಥಂಚಿತ್ಸ್ವತೋಽನ್ಯಂ ನಿಶ್ಚಿತ್ಯ ತಂ ಪ್ರತ್ಯಾಪರೋಕ್ಷ್ಯೇಣ ಬ್ರುವತೇ । ಹೇ ಅಗ್ನೇ ಭ್ರಾತರ್ಭ್ರಾತೃವದ್ಭಾಗಾರ್ಹ । ಭ್ರಾತಾ ಯಥಾ ಬಲಾತ್ಸ್ವಕೀಯಭಾಗಂ ಸ್ವೀಕರೋತಿ ತದ್ವತ್ ಸಮಾನ-

ರೂಪಮಾಶ್ರಿತ್ಯ ಬಲಾಚ್ಚಮಸಪಾನಾಯ ಪ್ರವೃತ್ತ ಇತಿ ಭ್ರಾತರಿತ್ಯುಕ್ತಂ । ಹೇ ತಾದೃಶಾಗ್ನೇ ಚಮಸಂ ನ ನಿಂದಿಮ । ಅಧಿಕಃ ಸಮಾಗತ ಇತಿ ಪಾನಮಕೃತ್ವಾ ಚಮಸಂ ನ ದೂಷಯಾಮಃ ॥ ಣುದಿ ಕುತ್ಸಾಯಾಂ । ಛಂದಸಿ ವೇತಿ ವಕ್ತವ್ಯಮಿತಿ ದ್ವಿರ್ವಚನಾಭಾವಃ ॥ ಅದೂಷ್ಯತ್ವೇ ಕಾರಣಮಾಹ । ಯಶ್ಚಮಸೋ ಮಹಾ- ಕುಲಃ ಮಹಾಕುಲೋತ್ಪನ್ನಃ ತ್ವಷ್ಟ್ರಾ ನಿರ್ಮಿತತ್ವಾತ್ । ವಕ್ಷ್ಯತಿ ಚ ತ್ವಷ್ಟಾ ಗ್ನಾಸ್ವಂತರ್ನ್ಯಾನಜ ಇತಿ । ಅತಃ ಕಾರಣಾತ್ ದ್ರುಣಃ । ವಿಕಾರೇ ಪ್ರಕೃತಿಶಬ್ದಃ । ತತಶ್ಚ ತತ್ಸ್ಥೇ ತಚ್ಛಬ್ದಃ । ಇಚ್ಛಬ್ದೋಽವಧಾರಣೇ । ದಾರುವಿಕಾರಚಮಸಸ್ಯ ಭೂತಿಂ ಪ್ರಾಪ್ತಿಮೂದಿಮ । ಬ್ರೂಮಃ ॥ ವಿದೇಶ್ಛಾಂದಸೇ ಲಿಟಿ ವಚಿಸ್ವಪೀತಿ ಸಂಪ್ರಸಾರಣಂ । ಕ್ರಾದಿನಿಯಮಾದಿಟ್ ॥

ಪ್ರತಿಪದಾರ್ಥ

ನಃ—ನಮ್ಮಲ್ಲಿಗೆ । **ಆಜಗನ್**—ಬಂದಿರತಕ್ಕ ಈತನು । **ಕಿಮು ಶ್ರೇಷ್ಠಃ**—(ವಯಸ್ಸಿನಲ್ಲಿಯಾಗಲಿ ಅಥವಾ ಯೋಗ್ಯತೆಯಲ್ಲಾಗಲಿ) ನಮಗಿಂತಲೂ ದೊಡ್ಡವನೇ । **ಕಿಂ ಯವಿಷ್ಠಃ**—ಅಥವಾ ಕಿರಿಯವನೇ (ಅಥವಾ) **ದೂತ್ಯಂ**—(ದೇವತೆಗಳ) ದೂತಕರ್ಮವನ್ನು ವಹಿಸಿದವನಾಗಿ । **ಕಿಂ ಈಯತೇ**—ಬಂದಿದ್ದಾನೆಯೇ । **ಯತ್ ಊಚಿಮ**—ನಾವು ಹೇಳಬೇಕಾದದ್ದು ಏನಾದರೂ ಇದ್ದರೆ । **ಕತ್**—ಅದು ಯಾವುದು । **ಭ್ರಾತಃ ಅಗ್ನೇ**—ಎಲೈ ಸಹೋದರನಾದ ಅಗ್ನಿಯೇ । **ಯಃ ಮಹಾಕುಲಃ**—ಯಾವ (ಈ ಚಮಸಪಾತ್ರೆಯು) ಸತ್ಕುಲಪ್ರಸೂತವಾಗಿ ದೆಯೋ । (**ತಂ**) **ಚಮಸಂ**—ಆ ಚಮಸಪಾತ್ರೆಯನ್ನು । **ನ ನಿಂದಿಮ**—(ಪಾನಮಾಡಲು ಹೊಸಬನು ಬಂದನೆಂದು ಕೋಪದಿಂದ ನಾವೂ ಪಾನಮಾಡದೆ) ಅವಹೇಳನ ಮಾಡುವುದಿಲ್ಲ । **ದ್ರುಣ ಇತ್**—ದಾರುವಿನಿಂದ ನಿರ್ಮಿತವಾದ ಚಮಸಪಾತ್ರೆಯ । **ಭೂತಿಮಿತ್**—ಮಹಾತ್ಮ್ಯವನ್ನು । **ಊದಿಮ**—ಪ್ರಕಾಶಪಡಿಸಿ ಹೇಳುತ್ತೇವೆ.

॥ ಭಾವಾರ್ಥ ॥

ನಮ್ಮಲ್ಲಿಗೆ ಹೊಸದಾಗಿ ಬಂದಿರತಕ್ಕ ಈತನು ಯಾರು ? ವಯಸ್ಸಿನಲ್ಲಾಗಲಿ ಅಥವಾ ಯೋಗ್ಯತೆಯಲ್ಲಾಗಲಿ ಈತನು ನಮಗಿಂತಲೂ ಹಿರಿಯವನೇ ಅಥವಾ ಕಿರಿಯವನೇ ? ಅಥವಾ ದೇವತೆಗಳ ದೂತಕರ್ಮವನ್ನು ವಹಿಸಿದವನಾಗಿ ಬಂದಿದ್ದಾನೆಯೇ ? ಈತನಿಗೆ ನಾವು ಹೇಳಬೇಕಾದದ್ದು ಏನಾದರೂ ಇದ್ದರೆ ಅದಾವದು ? ಎಲೈ ಸಹೋದರನಾದ ಅಗ್ನಿಯೇ, ನಮ್ಮೊಡನೆ ಪಾನಮಾಡಲು ಹೊಸಬನೊಬ್ಬನು ಬಂದನೆಂದು ಕೋಪದಿಂದ ನಾವೂ ಪಾನಮಾಡದೇ ಸತ್ಕುಲಪ್ರಸೂತವಾದ ಈ ಚಮಸಪಾತ್ರೆಯನ್ನು ನಾವು ಅವಹೇಳನಮಾಡುವುದಿಲ್ಲ. ದಾರುವಿನಿಂದ ನಿರ್ಮಿತವಾದ ಈ ಪಾತ್ರೆಯ ಮಾಹಾತ್ಮ್ಯವನ್ನು ನಿನಗೂ ತಿಳಿಯುವಂತೆ ಹೇಳುತ್ತೇವೆ.

## English Translation

Is this our senior or our junior who has come (to us); has he come upon a message (from the gods); what is it we should say? Agni, brother, we revile not the ladle which is of exalted race; verily we assert the dignity of the wooden (Implement).

### ವಿಶೇಷವಿಷಯಗಳು

ಸಾಯಣರು ಈ ಋಕ್ಕಿನ ಭಾಷ್ಯದ ಪೀಠಿಕೆಯಲ್ಲಿ ಇದಕ್ಕೆ ಸಂಬಂಧಪಟ್ಟ ಪೂರ್ವಕಥೆಯನ್ನು ತಿಳಿಸಿದ್ದಾರೆ. ಸುಧನ್ವಪುತ್ರರಾದ **ಋಭು, ವಿಭ್ವ, ವಾಜ** ಎಂಬ ಮೂರು ಪುತ್ರರೂ ಸಹ ಮಾನವರಾದಾಗ್ಯೂ ತಮ್ಮ ಸತ್ಕರ್ಮಗಳಿಂದ ದೇವತ್ವವನ್ನು ಪಡೆದವರಾಗಿ ಒಂದುಸಲ ಯಜ್ಞಕಾಲದಲ್ಲಿ ದೇವತೆಗಳೊಂದಿಗೆ ಸೋಮಪಾನಕ್ಕಾಗಿ ಪ್ರವರ್ತಿಸಿದರು. ದೇವತೆಗಳಿಂದ ಪ್ರೇರಿಸಲ್ಪಟ್ಟ ಅಗ್ನಿಯು ಸಮಾನರೂಪರಾದ ಅವರನ್ನು ನೋಡಿ ತಾನೂ ಸಹ ಅದೇ ರೂಪವನ್ನು ಹೊಂದಿಕೊಂಡು ಅವರೊಡನೆ ತಾನೂ ಪಾನಮಾಡಲುಪಕ್ರಮಿಸಿದನು. ತಮ್ಮೊಂದಿಗೆ ತಮ್ಮ ಆಕಾರವನ್ನೇ ಹೊಂದಿಕೊಂಡು ಬಂದ ನಾಲ್ಕನೆಯವನು ಯಾರೆಂದು ತಿಳಿಯದೆ ತಮ್ಮ ತಮ್ಮಲ್ಲಿಯೇ ಸಂದೇಹಪಡುತ್ತಾರೆ. ಈ ಋಕ್ಕಿನ ಪೂರ್ವಾರ್ಧದಲ್ಲಿ ಆ ಜಿಜ್ಞಾಸೆಯೂ, ಕೊಂಚಕಾಲಾನಂತರ ಅವನು ಯಾರೆಂದು ನಿಷ್ಕರ್ಷಿಸಿ ಅವನೊಂದಿಗೆ ಸಂಭಾಷಣೆಯನ್ನು ಮಾಡುತ್ತಾ ಅವನಿಗೆ **ಚಮಸದ** ಮಾಹಾತ್ಮ್ಯವನ್ನು ಹೇಳುವುದಾಗಿ ತಿಳಿಸಿರುದು ಉತ್ತರಾರ್ಧದಲ್ಲೂ ಉಕ್ತವಾಗಿದೆ.

ಈ ಸಹೋದರರ ಸತ್ಕುಲಪ್ರಸೂತಿಯನ್ನೂ ಇವರ ಸತ್ಕರ್ಮದ ಮಾಹಾತ್ಮ್ಯವನ್ನೂ, ದೇವತೆಗಳ ಜೊತೆಯಲ್ಲಿ ಸೇರಿಕೊಳ್ಳುವಾಗ ದೇವತೆಗಳು ಅಸೂಯೆಯಿಂದ ಇವರಿಗೆ ತೊಂದರೆಯನ್ನು ಕೊಟ್ಟುದನ್ನೂ ಆಗ ಪ್ರಜಾಪತಿಯೂ ಸವಿತೃವೂ ಇವರಿಗೆ ಸಹಾಯಮಾಡಿದುದನ್ನೂ ಸಹ ಕೆಲವೆಡೆಗಳಲ್ಲಿ ತಿಳಿಸಿದೆ. ಉದಾಹರಣೆಗೆ ;—

> **ಋಭವೋ ವೈ ದೇವೇಷು ತಪಸಾ ಸೋಮಪೀಥಮಭ್ಯಜಯಂಸ್ತೇಭ್ಯಃ ಪ್ರಾತಸ್ಸವನೇ ವಾಚಿ ಕಲ್ಪಯಿಷಂಸ್ತಾನಗ್ನಿರ್ವಸುಭಿಃ ಪ್ರಾತಃಸವನಾದನುದತ ತೇಭ್ಯೋ ಮಾಧ್ಯಂದಿನೇ ಸವನೇ ವಾಚಿ ಕಲ್ಪಯಿಷಂಸ್ತಾನಿಂದ್ರೋ ರುದ್ರೈರ್ಮಾಧ್ಯಂದಿನಾತ್ಸವನಾದನುದತ ತೇಭ್ಯಸ್ತೃತೀಯ ಸವನೇ ವಾಚಿ ಕಲ್ಪಯಿಷಂಸ್ತಾನ್ವಿಶ್ವೇ ದೇವಾ ಅನೋನುದ್ಯಂತ ನೇಹ ಪಾಸ್ಯಂತಿ ನೇಹೇತಿ ಸ ಪ್ರಜಾಪತಿರಬ್ರವೀತ್ಸವಿತಾರಂ ತವ ವಾ ಇಮೇಽಂತೇವಾಸಾಸ್ತ್ವಮೇವೈಭಿಃ ಸಂಪಿಬಸ್ವೇತಿ ಸ ತಥೇತ್ಯಬ್ರವೀತ್ಸವಿತಾ ತಾನ್ವೈ ತ್ವಮುಭಯತಃ ಪರಿಪಿಬೇತಿ ತಾನ್ಪ್ರಜಾಪತಿರುಭಯತಃ** ಪರ್ಯಪಿಬತ್ ||
>
> (ಐ. ಬ್ರಾ. ೩–೩–೩೦)

ಋಭುಗಳು ತಮ್ಮ ತಪಸ್ಸಾಧನೆಯಿಂದಲೂ ಉತ್ಕಟವಾದ ಇಚ್ಛೆಯಿಂದಲೂ ದೇವತೆಗಳ ನಡುವೆ ಸೋಮಪಾನವನ್ನು ಸಂಪಾದಿಸಿದರು. ಮೊದಲು ಪ್ರಾತಸ್ಸವನದಲ್ಲಿ ಅದನ್ನು ಹೊಂದಲು ಇಚ್ಛಿಸಿದಾಗ ಅಗ್ನಿಯು ವಸುಗಳೊಂದಿಗೆ ಸೇರಿಕೊಂಡು ಅವರನ್ನು ತಿರಸ್ಕರಿಸಿ ಅಟ್ಟಿಬಿಟ್ಟನು. ಆಗ ಮಾಧ್ಯಂದಿನಸವನದಲ್ಲಿ ಅದನ್ನು ಪಡೆಯಲಿಚ್ಛಿಸಿದಾಗ ಇಂದ್ರನು ರುದ್ರರೊಂದಿಗೆ ಸೇರಿಕೊಂಡು ಅವರನ್ನು ಅಟ್ಟಿಬಿಟ್ಟನು ಪುನಃ ತೃತೀಯಸವನದಲ್ಲಿ ಅದನ್ನು ಪಡೆಯಲಿಚ್ಛಿಸಿದಾಗ ವಿಶ್ವೇದೇವರು ನೀವು ಇಲ್ಲಿ ಖಂಡಿತ ಸೋಮಪಾನಮಾಡಲರ್ಹರಲ್ಲ. ನೀವು ಮಾಡಕೂಡದು ಎಂದು ಕಠಿಣವಾದ ಮಾತಿನಿಂದ ಅಲ್ಲಿಯೂ ತಿರಸ್ಕರಿಸಿದರು. ಆಗ ಪ್ರಜಾಪತಿಯು ಸವಿತೃವನ್ನು ಕುರಿತು ಈ ಋಭುಗಳು ನಿನ್ನ ಶಿಷ್ಯರು. ನೀನು ಇವರೊಂದಿಗೆ ಸೋಮಪಾನವನ್ನು ಮಾಡು ಎಂದನು. ಸವಿತೃವು ಅದಕ್ಕೆ ಒಪ್ಪಿಕೊಂಡನು. ಪ್ರಜಾಪತಿಯೂ ಸಹ ಅವರ ಅಕ್ಕಪಕ್ಕದಲ್ಲೇ ಇದ್ದು ಸೋಮರಸವನ್ನು ಪಾನಮಾಡಿದನು ಎಂಬುದಾಗಿ ಐತರೇಯ ಬ್ರಾಹ್ಮಣದಲ್ಲಿ ಈ ಕಥೆಯನ್ನು ಹೇಳಿದೆ.

ಸೋಮಪಾನವನ್ನು ಮಾಡುವ ಇಂತಹ ಯೋಗ್ಯತೆಯನ್ನು ಪಡೆದು ಚಮಸಪಾತ್ರೆಯಿಂದ ಪಾನಮಾಡುತ್ತಿರುವಾಗ ದೇವತೆಗಳಿಂದ ಪ್ರೇರಿತನಾದ ಅಗ್ನಿಯು ಮಧ್ಯೆ ಪ್ರವೇಶಿಸಿದಾಗ ಅವನ ವಿಚಾರವು ಪ್ರಾರಂಭದಲ್ಲಿ ತಿಳಿಯದೆ ಸಂದೇಹ ಬಂದು ಅನಂತರ ಅವನ ಪರಿಚಯವನ್ನು ಕಂಡುಹಿಡಿದಮೇಲೆ ಋಕ್ಕಿನಲ್ಲಿ ಉಕ್ತವಾಗಿರುವಂತೆ ಹೇಳುತ್ತಾರೆ.

**ಕಿಮು ಶ್ರೇಷ್ಠಃ ಕಿಂ ಯವಿಷ್ಠಃ—ತೇ ಚ ಋಭವಃ ಆಗತಂ ತಂ ಸಮಾನರೂಪಮವಲೋಕ್ಯ ವಿವೇಕ್ತುಮಸಮರ್ಥಾಃ ಪರಸ್ಪರಮೇವಂ ಸಂದಿಹತೇ ।** ಅಗ್ನಿಯು ಅವರ ಆಕಾರವನ್ನೇ ಹೊಂದಿ ಅವರ ನಡುವೆ ಬಂದು ಕುಳಿತಾಗ ಅವರಿಗೂ ಅಗ್ನಿಗೂ ವ್ಯತ್ಯಾಸವೇ ತಿಳಿಯಲಿಲ್ಲ—ಆಗ ಅವರು ಸಂಶಯಪಟ್ಟವರಾಗಿ ಆಗಂತುಕನು ತಮ್ಮಲ್ಲಿ ಹಿರಿಯವನೇ ಅಥವಾ ಕಿರಿಯವನೇ ? ಅವನು ಬಂದಿರುವ ಉದ್ದಿಶ್ಯವಾದರೂ ಏನು ಇತ್ಯಾದಿಯಾಗಿ ಸಂಶಯವನ್ನು ವ್ಯಕ್ತಪಡಿಸುತ್ತಾರೆ.

**ಮಹಾಕುಲಃ—ಮಹಾಕುಲೋತ್ಪನ್ನಸ್ತ್ವಷ್ಟ್ರಾ ನಿರ್ಮಿತತ್ವಾತ್ ।** ತ್ವಷ್ಟೃವಿನಿಂದ ನಿರ್ಮಿತವಾದ್ದರಿಂದ ಮಹಾಕುಲೋತ್ಪನ್ನವೆಂದು ಹೇಳಿದೆ.

**ಉತ ತ್ಯಂ ಚಮಸಂ ನವಂ ತ್ವಷ್ಟುರ್ದೇವಸ್ಯ ನಿಷ್ಕೃತಂ । ಅಕರ್ತ ಚತುರಃ ಪುನಃ ॥**
(ಋ. ಸಂ. ೧–೨೦–೬)

ಇತ್ಯಾದಿಕಡೆಗಳಲ್ಲಿ ತ್ವಷ್ಟೃವು ಚಮಸಪಾತ್ರೆಯನ್ನು ಪ್ರಥಮತಃ ನಿರ್ಮಿಸಿದನು ಎಂದು ಈ ಪಾತ್ರೆಯ ಶ್ರೇಷ್ಠವಾದ ಉತ್ಪತ್ತಿಯ ಸ್ವರೂಪವನ್ನು ವರ್ಣಿಸಿದೆ. ಅದನ್ನು ಇಲ್ಲಿ **ಮಹಾಕುಲಃ** ಎಂಬ **ವಿಶೇಷಣದಿಂದ ತಿಳಿಸಿದೆ-**

**ದ್ರುಣಃ—ದಾರುವಿಕಾರಚಮಸಃ ।** ದಾರುವಿನಿಂದ ನಿರ್ಮಿತವಾದ ಚಮಸ ಪಾತ್ರೆಯು.

**ಭ್ರಾತಃ—ಭ್ರಾತೃವದ್ಭಾಗಾರ್ಹ ।** ಭ್ರಾತೃವು ಯಾವ ರೀತಿ ನಿರ್ಬಂಧವಾಗಿ ತನ್ನ ಭಾಗವನ್ನು ನಿರೀಕ್ಷಿಸುತ್ತಾನೋ ಅದರಂತೆಯೇ ತಮ್ಮ ಮೂವರೊಂದಿಗೆ ಭಾಗವನ್ನು ವಹಿಸಲು ನಾಲ್ಕನೆಯವನಾಗಿ ಬಂದ ಅಗ್ನಿಯನ್ನು ಭ್ರಾತೃವೆಂದು ಸಂಬೋಧಿಸಿದ್ದಾರೆ.

### ವ್ಯಾಕರಣಪ್ರಕ್ರಿಯಾ

**ಶ್ರೇಷ್ಠಃ**—ಅತಿಶಯೇನ ಪ್ರಶಸ್ಯಃ ಶ್ರೇಷ್ಠಃ **ಅತಿಶಾಯನೇ ತಮಬಿಷ್ಠನೌ** (ಪಾ. ಸೂ. ೫-೩-೫೫) ಎಂಬುದರಿಂದ ಇಷ್ಠನ್ ಪ್ರತ್ಯಯ. ಇದು ಪರವಾದಾಗ **ಪ್ರಶಸ್ಯಸ್ಯಶ್ರಃ** (ಪಾ. ಸೂ ೫–೩-೬೦) ಎಂಬುದರಿಂದ ಪ್ರಕೃತಿಗೆ ಶ್ರಾದೇಶ. **ಪ್ರಕೃತ್ಯೈಕಾಚ್** (ಪಾ. ಸೂ. ೬–೪–೧೬೩) ಎಂಬುದರಿಂದ ಪ್ರಕೃತಿಭಾವ ಬರುವುದರಿಂದ ಟಿಲೋಪ ಬರುವುದಿಲ್ಲ. ಗುಣ. ಪ್ರತ್ಯಯ ನಿತ್ತಾದುದರಿಂದ ಆದ್ಯುದಾತ್ತಸ್ವರ ಬರುತ್ತದೆ.

**ಯವಿಷ್ಠಃ**—ಅತಿಶಯೇನ ಯುವಾ ಯವಿಷ್ಠಃ ಹಿಂದಿನಂತೆ ಇಷ್ಠನ್ ಪ್ರತ್ಯಯ ಪರವಾದಾಗ **ಸ್ಥೂಲದೂರಯುವ** (ಪಾ. ಸೂ. ೬–೪–೧೫೬) ಎಂಬುದರಿಂದ ಯಣಾದಿ ಸಮುದಾಯಕ್ಕೆ (ವನ್) ಲೋಪ. ಉಕಾರಕ್ಕೆ ಗುಣ. ಅವಾದೇಶ. ಆದ್ಯುದಾತ್ತಸ್ವರ ಬರುತ್ತದೆ.

**ಅಜಗನ್**—ಗಮ್ಲೃ ಗತೌ ಧಾತು. ಲಙ್ ಪ್ರಥಮಪುರುಷಏಕವಚನದಲ್ಲಿ ತಿ ಪ್ರತ್ಯಯ. ಅದರ ಅಂತ್ಯ ಇಕಾರಕ್ಕೆ ಲೋಪ. **ಬಹುಲಂ ಛಂದಸಿ** ಎಂಬುದರಿಂದ ಶಪಿಗೆ ಶ್ಲು ಆದೇಶ. **ಶ್ಲೌ** ಎಂಬುದರಿಂದ ಧಾತುವಿಗೆ ದ್ವಿತ್ವ. **ಹಲ್‌ಙ್ಯಾಭ್ಯೋ** ಸೂತ್ರದಿಂದ ತಿಪಿಗೆ **ಲೋಪ. ಕುಹೋಶ್ಚುಃ** (ಪಾ. ಸೂ. ೭-೪-೬೨) ಎಂಬುದರಿಂದ) ಜಕಾರಾದೇಶ. **ಮೋನೋಧಾತೋಃ** (ಪಾ. ಸೂ. ೮-೨-೬೪) ಸೂತ್ರದಿಂದ ಮಕಾರಕ್ಕೆ ನಕಾರಾದೇಶ. ಲಂಗಕ್ಕೆ ಅಡಾಗಮ. **ಅತಿ**ಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

**ಈಯತೇ**—**ಈಙ್** ಗತೌ **ಧಾತು. ಲಟ್** ಪ್ರಥಮಪುರುಷಏಕವಚನಾಂತರೂಪ. ತಿಙಂತತನಿಘಾಸ್ವರ ಬರುತ್ತದೆ.

**ದೂತ್ಯಮ್**—ದೂತಸ್ಯ ಕರ್ಮ. ದೂತ್ಯಮ್. **ದೂತಸ್ಯಭಾಗಕರ್ಮಣೀ** (ಪಾ. ಸೂ. ೪-೪-೧೨೦) ಎಂಬುದರಿಂದ ಯತ್ ಪ್ರತ್ಯಯ. **ಯಸ್ಯೇ ತಿಚ** (ಪಾ. ಸೂ. ೬-೪-೧೪೮) ಎಂಬುದರಿಂದ ಅಕಾರಕ್ಕೆ ಲೋಪ. **ತಿತ್‌ಸ್ವರಿತಮ್** (ಪಾ. ಸೂ. ೬-೧-೧೮೫) ಎಂಬುದರಿಂದ ಸ್ವರಿತಸ್ವರ ಬರುತ್ತದೆ.

**ಊಚಿಮ**—**ವಚ** ಪರಿಭಾಷಣೇ ಧಾತು. ಛಾಂದಸವಾಗಿ ವರ್ತಮಾನಾರ್ಥದಲ್ಲಿ ಲಿಟ್. ಉತ್ತಮಪುರುಷ ಬಹುವಚನಕ್ಕೆ **ಮಾದೇಶ. ವಚಿಸ್ವಪಿಯಜಾದೀನಾಂ ಕಿತಿ** (ಪಾ. ಸೂ. ೬-೧-೧೫) ಎಂಬುದರಿಂದ ಸಂಪ್ರಸಾರಣ ಪೂರ್ವರೂಪ. ದ್ವಿತ್ವಾದಿ. ಯದ್ಯೋಗವಿರುವುದರಿಂದ ನಿಘಾತಸ್ವರ ಬರುವುದಿಲ್ಲ. ಪ್ರತ್ಯಯಸ್ವರದಿಂದ ಅಂತೋದಾತ್ತವಾಗುತ್ತದೆ.

**ನಿಂದಿಮ**—ಣಿದಿ ಕುತ್ಸಾಯಾಂ **ಧಾತು. ಣೋನಃ** (ಪಾ. ಸೂ. ೬-೧-೬೫) ಎಂಬುದರಿಂದ **ಆದಿಗೆ ನತ್ವ.** ಛಾಂದಸವಾಗಿ **ಲಿಟ್.** ಉತ್ತಮಪುರುಷಬಹುವಚನ ಪರವಾದಾಗ **ಛಂದಸಿವೇತಿ ವಕ್ತವ್ಯಮ್** ಎಂಬ ವಚನದಿಂದ ಧಾತುವಿಗೆ ದ್ವಿತ್ವಾದಿಗಳು ಬರುವುದಿಲ್ಲ. **ಆರ್ಧಧಾತುಕಸ್ಯೇಡ್ವಲಾದೇಃ** (ಪಾ. ಸೂ. ೭-೨-೩೫) ಎಂಬುದರಿಂದ ಪ್ರತ್ಯಯಕ್ಕೆ ಇಡಾಗಮ. ತಿಙಂತನಿಘಾತಸ್ವರ ಬರುತ್ತದೆ.

**ಚಮಸಮ್**—ಚಮಂತಿ ಅಸ್ಮಿನ್ ಚಮಸಃ ಸೋಮಪಾನಪಾತ್ರಂ. **ಚಮು** ಅದನೇ ಧಾತು. **ಅತ್ಯವಿಚಮಿತ**—(ಉ. ಸೂ. ೩೯೭) ಎಂಬುದರಿಂದ ಅಸಚ್ ಪ್ರತ್ಯಯ. **ಚಿತಃ** (ಪಾ. ಸೂ. ೬-೧-೧೬೩) ಎಂಬುದರಿಂದ ಅಂತೋದಾತ್ತಸ್ವರ ಬರುತ್ತದೆ.

**ಊದಿಮ**—ವದ ವ್ಯಕ್ತಾಯಾಂ ವಾಚಿ ಧಾತು. ಛಾಂದಸವಾಗಿ ವರ್ತಮಾನಾರ್ಥದಲ್ಲಿ **ಲಿಟ್. ಪರಸ್ಮೈಪದಾನಾಂ** (ಪಾ ಸೂ. ೩-೪-೮೨) ಎಂಬುದರಿಂದ ಮಸಿಗೆ ಮಾದೇಶ. ಅದಕ್ಕೆ ಕ್ರಾದಿನಿಯಮದಿಂದ ಇಡಾಗಮ. **ವಚಿಸ್ವಪಿಯಜಾದೀನಾಂ ಕಿತಿ** (ಪಾ. ಸೂ. ೬-೧-೧೫) ಎಂಬುದರಿಂದ ಸಂಪ್ರಸಾರಣ ಪೂರ್ವರೂಪ. ತಿಙಂತ ನಿಘಾತಸ್ವರ ಬರುತ್ತದೆ. ॥ ೧ ॥

———:o:———

### ಸಂಹಿತಾಪಾಠಃ

ಏಕಂ ಚಮಸಂ ಚತುರಃ ಕೃಣೋತನ ತದ್ವೋ ದೇವಾ ಅಬ್ರುವನ್ತದ್ವ ಆಗಮಂ ।
ಸೌಧನ್ವನಾ ಯದ್ಯೇವಾ ಕರಿಷ್ಯಥ ಸಾಕಂ ದೇವೈರ್ಯಜ್ಞಿಯಾಸೋ ಭವಿಷ್ಯಥ ॥ ೨ ॥

### ಪದಪಾಠಃ

ಏಕಂ । ಚಮಸಂ । ಚತುರಃ । ಕೃಣೋತನ । ತತ್ । ವಃ । ದೇವಾಃ । ಅಬ್ರುವನ್ । ತತ್ । ವಃ । ಆ । ಅಗಮಂ ।
ಸೌಧನ್ವನಾಃ । ಯದಿ । ಏವ । ಕರಿಷ್ಯಥ । ಸಾಕಂ । ದೇವೈಃ । ಯಜ್ಞಿಯಾಸಃ । ಭವಿಷ್ಯಥ ॥ ೨ ॥

### ಸಾಯಣಭಾಷ್ಯಂ

ಏವಂ ಪೃಷ್ಟೋಽಗ್ನಿಸ್ತಾನ್ಪ್ರತ್ಯುವಾಚ । ಹೇ ಸೌಧನ್ವನಾಃ ಸುಧನ್ವನಃ ಪುತ್ರಾಃ ಯೂಯಮೇಕಂ ಚಮಸಂ ತ್ವಷ್ಟ್ರಾ ಸಂಪಾದಿತಂ ಪೂರ್ವಮೇಕಮೇವ ಸಂತಂ ಚಮಸಂ ಚತುರಃ ಕೃಣೋತನ । ಚತುಃಸಂಖ್ಯಾಕಾನ್ಕುರುತ ॥ ಚತುರಃ ಶಸೀತ್ಯಂತೋದಾತ್ತತ್ವಂ । ಪೂರ್ವವತ್ತನಪ್ ॥ ಯಥೋಪರಿತನೇ ಜ್ಯೇಷ್ಠ ಆಹ ಚಮಸಾ ದ್ವಾ ಕರೇತೀತ್ಯುಪಕ್ರಮ್ಯ ಕನಿಷ್ಠ ಆಹ ಚತುರಸ್ಕರೇತೀತಿ ಚತುಷ್ಟ್ವಂ ನಿರ್ಧಾರಿತಂ । ಋ. ೪-೩೩-೫ । ನ ಕೇವಲಮಹಮೇವ ಬ್ರವೀಮಿ ಕಿಂತು ವೋ ಯುಷ್ಮಾನ್ಪ್ರತಿ ತದುಕ್ತಂ ಚತುರ್ಧಾಕರಣರೂಪಂ ಕರ್ಮೋತ್ತರತ್ರ ವಕ್ಷ್ಯಮಾಣಮಶ್ವರಥಾದಿಕರಣರೂಪಂ ಚ ಕರ್ಮ ದೇವಾ ಇಂದ್ರಾದಯೋಽಬ್ರುವನ್ । ದೇವತ್ವಪ್ರಾಪ್ತ್ಯುಪಾಯತ್ವೇನ ತತ್ತಾದೃಶಂ ಕರ್ಮ ವೋ ಯುಷ್ಮಾಕಂ ವಕ್ತುಮಹಮಾಗಮಂ । ಪ್ರಾಪ್ತೋಽಸ್ಮಿ । ಯಸ್ಮಾದೇವಂ ತಸ್ಮಾದ್ಯೂಯಂ ಯದ್ಯೇವಾ ಕರಿಷ್ಯಥ ಯದ್ಯೇವಂ ಮದುಕ್ತಪ್ರಕಾರೇಣ ಕರ್ತುಂ ಶಕ್ನುಥ ತಥಾ ಚೇದ್ದೇವೈಃ ಸಾಕಂ ಸಹ ಯಜ್ಞಿಯಾಸೋ ಭವಿಷ್ಯಥ । ಇತಿ ತ್ವೈರುಕ್ತಮಿತ್ಯರ್ಥಃ ॥

### ಪ್ರತಿಪದಾರ್ಥ

**ಸೌಧನ್ವನಾಃ**—ಎಲೈ ಸುಧನ್ವಪುತ್ರರೇ । **ಏಕಂ ಚಮಸಂ**—(ತ್ವಷ್ಟೃವಿನಿಂದ ಮೊದಲು) ಒಂದೇ ಪಾತ್ರೆಯನ್ನಾಗಿ ನಿರ್ಮಿತವಾದ ಈ ಚಮಸವನ್ನು । **ಚತುರಸ್ಕೃಣೋತನ**—ನಾಲ್ಕು ಪಾತ್ರೆಗಳಾಗುವಂತೆ ಮಾಡಿರಿ ಎಂದು । **ತತ್**—ನಿಮ್ಮಿಂದ ಮಾಡಲ್ಪಡಬೇಕಾದ ಆ ಕಾರ್ಯವನ್ನು । **ವಃ**—ನಿಮಗೆ । **ದೇವಾಃ**—ದೇವತೆಗಳು । **ಅಬ್ರುವನ್**—ಹೇಳಿದರು । **ತತ್** ಆದ್ದರಿಂದಲೇ । **ವಃ**—ನಿಮ್ಮಲ್ಲಿಗೆ । **ಆಗಮಂ**—ನಾನು ಬಂದಿದ್ದೇನೆ ।

**ಯದಿ**—ಒಂದು ವೇಳೆ । **ಏವ**—ಈ ಪ್ರಕಾರವಾಗಿ । **ಕರಿಷ್ಯಥ**—ನೀವು ಮಾಡಿದ್ದೇ ಆದರೆ । **ದೇವೈಃ ಸಾಕಂ**—ದೇವತೆಗಳೊಡನೆ । **ಯಜ್ಞಿಯಾಸಃ**—ಯಜ್ಞಭಾಗಾರ್ಹರಾಗಿ । **ಭವಿಷ್ಯಥ**—ಆಗುತ್ತೀರಿ.

ಭಾವಾರ್ಥ

ಎಲೈ ಸುಧನ್ವಪುತ್ರರೇ, ತ್ವಷ್ಟೃವಿನಿಂದ ಮೊದಲು ಒಂದೇ ಆಗಿ ನಿರ್ಮಿತವಾದ ಈ ಚಮಸವನ್ನು ನೀವು ನಾಲ್ಕು ಪಾತ್ರೆಗಳಾಗುವಂತೆ ಮಾಡಿರಿ ಎಂದು ಇದು ನಿಮಗೆ ದೇವತೆಗಳ ಸಂದೇಶವಿದೆ. ಆ ಸಂದೇಶವನ್ನು ನಿಮಗೆ ತಿಳಿಸಲು ನಾನು ಇಲ್ಲಿಗೆ ಬಂದಿದ್ದೇನೆ. ನೀವು ಇದನ್ನು ನಡೆಸಿದರೆ ಆಗ ನಿಮಗೂ ಸಹ ದೇವತೆಗಳ ಜೊತೆಯಲ್ಲಿ ಯಜ್ಞಭಾಗವನ್ನು ಸ್ವೀಕರಿಸಲು ಅರ್ಹತೆಯುಂಟಾಗುತ್ತದೆ.

English Translation

Make fourfold the single ladle; so the gods comand you; and for that purpose am I come, sons of Sudhanwan: if you accomplish this, you will be you will be entitled to sacrifiices along with the gods,

ವಿಶೇಷವಿಷಯಗಳು

**ಏವಂ ಚಮಸಂ ಚತುರಃ ಕೃಣೋತನ**—ಮೊದಲು ಒಂದಾಗಿ ನಿರ್ಮಿತವಾದ ಚಮಸ್ಸನ್ನು ನಾಲ್ಕನ್ನಾಗಿ ಮಾಡಿ ಎಂದು ಅಗ್ನಿಯು ದೇವತೆಗಳ ಸಂದೇಶವನ್ನು ತಿಳಿಸುತ್ತಾನೆ. ಈ ಸಂದೇಶಕ್ಕೆ ಗೌರವವನ್ನು ಕೊಟ್ಟು ಋಭುಗಳು ಒಂದೇ ಆದ ಪಾತ್ರೆಯನ್ನು ತಮ್ಮ ಕಲಾಕೌಶಲ್ಯದಿಂದ ನಾಲ್ಕನ್ನಾಗಿ ಮಾಡಿದ ವಿಷಯವು ಪ್ರಸಿದ್ಧವಾಗಿದೆ. ಈ ಕಾರ್ಯದಲ್ಲೂ ಸಹ ತ್ವಷ್ಟೃವಿನ ಶಿಕ್ಷಣದಿಂದ ಇವರಿಗೆ ಈ ಶಕ್ತಿಯು ಬಂದಿತೆಂದೂ, ಇವರು ತ್ವಷ್ಟೃವಿನ ಪ್ರಿಯಶಿಷ್ಯರಾಗಿದ್ದರೆಂಬುದೂ ಸಹ ಪ್ರಸಿದ್ಧವಾದ ವಿಷಯವಾಗಿದೆ. ಇದರಂತೆಯೇ ಇನ್ನೂ ಕೆಲವು ವಿಧದಲ್ಲಿ ತಮ್ಮ ಅಸಾಧಾರಣವಾದ ಶಕ್ತಿಯನ್ನು ತೋರಿಸಿ ದೇವತೆಗಳೊಂದಿಗೆ ಸೋಮಪಾನಕ್ಕೆ ಅರ್ಹತೆಯನ್ನು ಪಡೆದರೆಂದೂ ಹೇಳಿದೆ.

**ಸುಧನ್ವನ ಆಂಗಿರಸಸ್ಯಾಸನ್ಪುತ್ರಾಸ್ತ್ರಯಃ ಪುರಾ ।**
**ಋಭುರ್ವಿಭ್ವಾ ಚ ವಾಜಶ್ಚ ಶಿಷ್ಯಾಸ್ತ್ವಷ್ಟುಶ್ಚ ತೇಽಭವನ್ ॥**
**ಶಿಕ್ಷಯಾಮಾಸ ತಾಂಸ್ತ್ವಷ್ಟಾ ತ್ವಾಷ್ಟ್ರಂ ಯತ್ಕರ್ಮ ಕಿಂಚನ ।**
**ಪರಿನಿಷ್ಠಿತಕರ್ಮಾಣೋ ವಿಶ್ವೇದೇವಾ ಉಪಾಹ್ವಯನ್ ॥**
**ವಿಶ್ವೇಷಾಂ ತೇ ತತಶ್ಚಕ್ರುರ್ವಾಹನಾನ್ಯಾಯುಧಾನಿ ತು ।**
**ಧೇನುಂ ಸಬರ್ದುಘಾಂ ಚಕ್ರುರಮೃತಂ ಸಬರುಚ್ಯತೇ ॥**
**ಬೃಹಸ್ಪತೇರಥಾಶ್ವಿಭ್ಯಾಂ ರಥಂ ದಿವ್ಯಂ ತ್ರಿವಂಧುರಂ ।**
**ಇಂದ್ರಾಯ ಚ ಹರೀ ದೇವಪ್ರಹಿತೇನಾಗ್ನಿನಾಪಿ ಯತ್ ॥**
**ಏಕಂ ಚಮಸಮಿತ್ಯುಕ್ತೇ ಜ್ಯೇಷ್ಠ ಆಹೇತ್ಯಥೋ ದಿವಿ ।**
**ಉಕ್ತ್ವಾ ತತಶ್ಚತುಶ್ಚಮಸಾನ್ ಯಥೋಕ್ತಂ ಕೇನ ಹರ್ಷಿತಾಃ ॥**

ತ್ವಷ್ಟ್ವಾ ಚ ಸವಿತಾ ಚೈವ ದೇವದೇವಃ ಪ್ರಜಾಪತಿಃ ।
ಸರ್ವಾನ್ದೇವಾನ್ ಸಮಾಮಂತ್ರ್ಯ ಅಮೃತತ್ವಂ ದದುಶ್ಚ ತೇ ॥
ತೇಷಾಮಾದ್ಯಾಂತ್ಯಯೋರ್ನಾಮ್ನಾ ದೃಶ್ಯತೇ ಬಹುವತ್ ಸ್ತವಃ ।
ತೃತೀಯಸವನೇ ತೇಷಾಂ ತೈಸ್ತು ಭಾಗಃ ಪ್ರಕಲ್ಪಿತಃ ॥
ಆಪಿಬಚ್ಸೋಮಮಿಂದ್ರಶ್ಚ ತೈಸ್ತತ್ರ ಸವನೇ ಸಹ ।

(ಬೃ. ದೇ. ೩-೮೩ ರಿಂದ ೮೯)

ಪೂರ್ವದಲ್ಲಿ ಸುಧನ್ವಪುತ್ರರಾದ **ಋಭು, ವಿಭ್ವ, ವಾಜ** ಎಂಬ ಮೂವರೂ ಸಹ ತ್ವಷ್ಟೃವಿನ ಶಿಷ್ಯರಾದರು. ಸಕಲಕಲಾಕುಶಲನಾದ ತ್ವಷ್ಟೃವು ಅವರಿಗೂ ಸಹ ಎಲ್ಲಾ ಕಲೆಗಳನ್ನೂ ಕಲಿಸಿದನು. ಆಗ ಕಲೆಗಳಲ್ಲಿ ಕುಶಲರಾದ ವಿಶ್ವೇದೇವರು ಅವರನ್ನು ಪ್ರತಿಭಟನಾದೃಷ್ಟಿಯಿಂದ ಎದುರಿಸಿದರು. ಆಗ ಇವರು ಸಕಲದೇವತೆಗಳಿಗೂ ಸಹ ಆಯುಧಗಳನ್ನೂ ವಾಹನಗಳನ್ನೂ ನಿರ್ಮಿಸಿದರು. ಅನಂತರ ಅಮೃತದಾಯಿಯಾದ ಧೇನುವನ್ನು ಸೃಷ್ಟಿಸಿದರು. ಬೃಹಸ್ಪತಿ ಮತ್ತು ಅಶ್ವಿನೀದೇವತೆಗಳಿಗೆ ಆಸನತ್ರಯಗಳುಳ್ಳ ರಥಗಳನ್ನೂ ಇಂದ್ರನಿಗೆ ಅಶ್ವಗಳನ್ನೂ ಮತ್ತು ದೇವತೆಗಳಿಂದ ದೂತನಾಗಿ ಕಳುಹಲ್ಪಟ್ಟ ಅಗ್ನಿಗೆ ಯಥೋಕ್ತವಾದುದನ್ನೂ ಎಂದರೆ ಅವನು ಇಷ್ಟಪಟ್ಟಂತೆ ಒಂದಾದ ಚಮಸಪಾತ್ರೆಯನ್ನು ನಾಲ್ಕನ್ನಾಗಿಯೂ ಸಹ ಮಾಡಿಕೊಟ್ಟರು ಎಂದು ವಿವರಿಸಿದೆ.

**ಚಮಸಂ— ಚಮಸಃ ಕಸ್ಮಾತ್ ? ಚಮಂತ್ಯಸ್ಮಿನ್ನಿತಿ । ಚಮಸಃ** ಎಂಬ ಪದವು ಯಾವ ಧಾತುವಿನಿಂದ ನಿಷ್ಪನ್ನವಾಗಿದೆ ಎಂದು ಪ್ರಶ್ನೆಯನ್ನು ಹಾಕಿ ಅನಂತರ ಭಕ್ಷಣಾರ್ಥಕವಾದ **ಚಮು** ಧಾತುವಿನಿಂದ ನಿಷ್ಪನ್ನವಾಗಿದೆಯೆಂದು ನಿರುಕ್ತಕಾರರು ನಿರ್ವಚನವನ್ನು ತೋರಿಸಿದ್ದಾರೆ. (ನಿ. ೧೧-೧೨).

### ವ್ಯಾಕರಣಪ್ರಕ್ರಿಯಾ

**ಚತುರಃ**— ಚತುರ್ ಶಬ್ದ ದ್ವಿತೀಯಾಬಹುವಚನಾಂತರೂಪ. **ಚತುರಃ ಶಸಿ** (ಪಾ. ಸೂ. ೬-೧-೧೬೭) ಎಂಬುದರಿಂದ ಅಂತೋದಾತ್ತಸ್ವರ ಬರುತ್ತದೆ.

**ಕೃಣೋತನ**— ಕೃವಿ ಹಿಂಸಾಕರಣಯೋಶ್ಚ ಧಾತು. ಲೋಟ್ ಮಧ್ಯಮಪುರುಷಬಹುವಚನದಲ್ಲಿ **ತಪ್ತನಪ್ತನಥನಾಶ್ಚ** (ಪಾ. ಸೂ. ೭-೧-೪೫) ಎಂಬುದರಿಂದ ತನಬಾದೇಶ **ಧಿನ್ವಿಕೃಣ್ವ್ಯೋರಚ** (ಪಾ. ಸೂ. ೩-೧-೮೦) ಎಂಬುದರಿಂದ ಉ ವಿಕರಣ. ಧಾತುವಿಗೆ ಅಕಾರಾಂತಾದೇಶ. **ಅತೋ ಲೋಪಃ** ಎಂಬುದರಿಂದ ಅದಕ್ಕೆ ಲೋಪ. **ಇದಿತೋ ನುಮ್ ಧಾತೋಃ** ಎಂಬುದರಿಂದ ನುಮಾಗಮ ಪ್ರತ್ಯಯ ಪಿತ್ತಾದುದರಿಂದ **ಸಾರ್ವಧಾತುಕಾರ್ಧ**-(೭-೩-೮೪) ಎಂಬುದರಿಂದ ಉಕಾರಕ್ಕೆ ಗುಣ. ತಿಙಂತನಿಘಾತಸ್ವರ ಬರುತ್ತದೆ.

**ಅಬ್ರುವನ್**— ಬ್ರೂಞ್ ವ್ಯಕ್ತಾಯಾಂ ವಾಚಿ ಧಾತು. ಲಙ್ ಪ್ರಥಮಪುರುಷಬಹುವಚನಾಂತರೂಪ. ತಿಙಂತನಿಘಾತಸ್ವರ ಬರುತ್ತದೆ.

**ಅಗಮಮ್**— ಗಮ್ಲೃ ಗತೌ ಧಾತು. **ಲುಙ್** ಉತ್ತಮಪುರುಷಏಕವಚನಾಂತರೂಪ. **ತಿಙಂತನಿಘಾತಸ್ವರ** ಬರುತ್ತದೆ.

**ಸೌಧನ್ವನಾಃ**—ಸುಧನ್ವನಃ ಅಪತ್ಯಾನಿ ಪುಮಾಂಸಃ ಸೌಧನ್ವನಾಃ. **ತಸ್ಯಾಪತ್ಯಮ್** ಎಂಬುದರಿಂದ ಅಣ್ ಪ್ರತ್ಯಯ. **ತದ್ಧಿತೇಷ್ವಚಾ**—ಎಂಬುದರಿಂದ ಆದಿವೃದ್ಧಿ. ಸಂಬೋಧನಾಬಹುವಚನಾಂತರೂಪ. ಪಾದಾದಿಯಲ್ಲಿರುವುದರಿಂದ ಆಮಂತ್ರಿತನಿಘಾತಸ್ವರ ಬರುವುದಿಲ್ಲ. **ಆಮಂತ್ರಿತಸ್ಯ** (ಪಾ. ಸೂ. ೬-೧-೧೯೮) ಎಂಬುದರಿಂದ ಆದ್ಯುದಾತ್ತಸ್ವರ ಬರುತ್ತದೆ.

**ಕರಿಷ್ಯಥ**—ಡುಕೃಞ್ ಕರಣೇ ಧಾತು. ಲೃಟ್ ಮಧ್ಯಮಪುರುಷ ಬಹುವಚನದಲ್ಲಿ ಥ ಪ್ರತ್ಯಯ. **ಸ್ಯತಾಸೀ ಲೃಲುಟೋಃ** (ಪಾ. ಸೂ. ೩-೧-೩೩) ಎಂಬುದರಿಂದ ಸ್ಯವಿಕರಣ. ಅದಕ್ಕೆ ಇಡಾಗಮ. ಧಾತುವಿಗೆ ಗುಣ. ರಪರವಾಗಿ ಬರುತ್ತದೆ. **ನಿಪಾತೈರ್ಯದ್ಯದಿ** (ಪಾ. ಸೂ. ೮-೧-೩೦) ಎಂಬುದರಿಂದ ನಿಘಾತಸ್ವರಪ್ರತಿಷೇಧ ಬರುತ್ತದೆ. **ತಾಸ್ಯನುದಾತ್ತೇತ್** (ಪಾ. ಸೂ. ೬-೧-೧೮೬) ಎಂಬುದರಿಂದ ಥ ಎಂಬುದು ಅನುದಾತ್ತವಾಗುವುದರಿಂದ ವಿಕರಣಸ್ವರ ಬರುತ್ತದೆ.

**ಯಜ್ಞಿಯಾಸಃ**—ಯಜ್ಞಮರ್ಹಂತಿ ಇತಿ ಯಜ್ಞಿಯಾಸಃ **ಯಜ್ಞರ್ತ್ವಿಗ್ಭ್ಯಾಂಘಖಞೌ** (ಪಾ. ಸೂ. ೫-೧-೭೧) ಎಂಬುದರಿಂದ ಘ ಪ್ರತ್ಯಯ. **ಆಯನೇಯೀನೀಯಿಯಃ**—(ಪಾ. ಸೂ. ೭-೧) ಎಂಬುದರಿಂದ ಅದಕ್ಕೆ ಇಯಾದೇಶ. **ಯಸ್ಯೇತಿಚ** (ಪಾ. ಸೂ. ೬-೪-೧೪೮) ಎಂಬುದರಿಂದ ಅಕಾರಲೋಪ. ಜಸ್ ಪರವಾದಾಗ **ಆಜ್ಜಸೇರಸುಕ್** (ಪಾ. ಸೂ. ೭-೧-೫೦) ಎಂಬುದರಿಂದ ಅದಕ್ಕೆ ಅಸುಕಾಗಮ. ಪ್ರತ್ಯಯದ ಆದ್ಯುದಾತ್ತಸ್ವರ ಬರುತ್ತದೆ.

**ಭವಿಷ್ಯಥ**—ಭೂ ಸತ್ತಾಯಾಂ ಧಾತು. ಲೃಟ್ ಮಧ್ಯಮಪುರುಷಬಹುವಚನಾಂತರೂಪ. ತಿಙಂತನಿಘಾತಸ್ವರ ಬರುತ್ತದೆ. ॥ ೨ ॥

—:o:—

**ಸಂಹಿತಾಪಾಠಃ**

ಅಗ್ನಿಂ ದೂತಂ ಪ್ರತಿ ಯದಬ್ರವೀತನಾಶ್ವಃ ಕರ್ತ್ವೋ ರಥ ಉತೇಹ ಕರ್ತ್ವಃ ।
ಧೇನುಃ ಕರ್ತ್ವಾ ಯುವಶಾ ಕರ್ತ್ವಾ ದ್ವಾ ತಾನಿ ಭ್ರಾತರನು ವಃ ಕೃತ್ವ್ಯೇಮಸಿ ॥ ೩ ॥

**ಪದಪಾಠಃ**

ಅಗ್ನಿಂ । ದೂತಂ । ಪ್ರತಿ । ಯತ್ । ಅಬ್ರವೀತನ । ಅಶ್ವಃ । ಕರ್ತ್ವಃ । ರಥಃ । ಉತ । ಇಹ । ಕರ್ತ್ವಃ ।
ಧೇನುಃ । ಕರ್ತ್ವಾ । ಯುವಶಾ । ಕರ್ತ್ವಾ । ದ್ವಾ । ತಾನಿ । ಭ್ರಾತಃ । ಅನು । ವಃ । ಕೃತ್ವೀ । ಆ । ಇಮಸಿ ।
॥ ೩ ॥

ಸಾಯಣಭಾಷ್ಯಂ

ಹೇ ಆಗತ ದೇವ ಅಗ್ನಿಮಂಗನಾದಿಗುಣವಿಶಿಷ್ಟಂ ದೂತಂ ದೂತಕರ್ಮ ಪ್ರಾಪ್ತವಂತಂ ತ್ವಾಂ ಪ್ರತಿ ಯತ್ ಯತ್ಕಾರ್ಯಮಬ್ರವೀತನ । ಅಬ್ರುವನ್ ॥ ವ್ಯತ್ಯಯೇನ ಮಧ್ಯಮಃ । ಪೂರ್ವವತ್ತನಪ್ ॥ ಕಿಮಿತಿ ಅಶ್ವಃ ಕರ್ತ್ವಃ । ಏಕಸ್ಮಾದಶ್ವಾದಶ್ವಾಂತರಂ ಕರ್ತವ್ಯಮಿತ್ಯರ್ಥಃ । ಅಶ್ವಾದಶ್ವಮತಕ್ಷತೇತಿ ವಕ್ಷ್ಯ-ಮಾಣತ್ವಾತ್ ॥ ಕೃತ್ಯಾರ್ಥೇ ತವೈಕೇನಿತಿ ತ್ವನ್ಪ್ರತ್ಯಯಃ ॥ ಉತಾಪಿ ಚ ರಥಃ ಕರ್ತ್ವಃ ಕರ್ತವ್ಯಃ। ಧೇನುಃ ಕರ್ತ್ವಾ । ಚರ್ಮರಹಿತಾ ಮೃತಾ ಗೌರ್ನಿತ್ಯದೋಗ್ಧ್ರೀ ಪುನರ್ನೂತನಾ ಕಾರ್ಯಾ । ತದುತ್ತರತ್ರ ನಿಶ್ಚ-ರ್ಮಣೋ ಗಾಮರಿಣೀತ ಧೀತಿಭಿರಿತಿ ವಕ್ಷ್ಯಮಾಣತ್ವಾತ್ । ತಥಾ ದ್ವಾ ದ್ವೌ ಪಿತರೌ ಜೀರ್ಣೌ ಸಂತೌ ಪುನರ್ಯುವಶಾ ಯುವಾನೌ ಶಯಾನೌ ಪ್ರಕೃಷ್ಟಯೌವನೋಪೇತೌ ಕರ್ತ್ವಾ ಕರ್ತವ್ಯೌ । ಹೇ ಭ್ರಾತರಗ್ನೇ ಯುಷ್ಮಾಕಂ ದೇವಾನಾಂ ತ್ವೈರುಕ್ತಾನಿ ಕರ್ಮಾಣಿ ಕೃತ್ವಾನು ಪಶ್ಚಾತ್ಕೃತ್ವೀ ಕೃತ್ವಾ ಕರ್ಮಣ್ಯೈಮಸಿ । ಏಮಃ । ಆಭಿಮುಖ್ಯೇನ ಪ್ರಾಪ್ನುಮಃ ॥ ಇಣ್ ಗತೌ । ಇದಂತೋ ಮಸಿಃ ॥ ಯದ್ವಾ । ಋಷೇರಿದಂ ವಾಕ್ಯಂ । ಹೇ ಋಭವಃ ಯೂಯಮಾಗತಮಗ್ನಿಂ ದೂತಂ ಪ್ರತಿ ಯದಬ್ರವೀತನ ಯತ್ಕಾರ್ಯಂ ವಕ್ಷ್ಯಮಾಣರೂಪಂ ಕರ್ತವ್ಯತ್ವೇನ ವದಥ ಅಂಗೀಕುರುಥ ತಾನಿ ಸರ್ವಾಣಿ ಸಂಪಾದ್ಯ ಹೇ ಭ್ರಾತರಗ್ನೇ ಕೃತ್ವಾ ಕರ್ಮಣ್ಯೈಮಸೀತಿ ಬ್ರೂಥೇತ್ಯೃಷಿರಾಹ ॥

ಪ್ರತಿಪದಾರ್ಥ

**ಭ್ರಾತಃ**—ಸಹೋದರರೂಪನಾದ ಎಲೈ ಅಗ್ನಿಯೇ । **ದೂತಂ**—ದೂತನ ಕರ್ಮವನ್ನು ವಹಿಸಿರುವವನೂ । **ಅಗ್ನಿಂ**—ಅಂಗನಾದಿಗುಣವಿಶಿಷ್ಟನೂ ಆದ ನಿನ್ನನ್ನು ಕುರಿತು । **ಯತ್**—ಯಾವ ಕಾರ್ಯದ ವಿಷಯದಲ್ಲಿ । **ಅಬ್ರವೀತನ**— ಹೇಳಿದರು (ಕೆಳಗೆ ಹೇಳತಕ್ಕವುಗಳಲ್ಲಿ ಯಾವುದನ್ನು ಮಾಡಬೇಕೆಂದು ಹೇಳಿದ್ದಾರೆ?) । **ಅಶ್ವಃ**-ಕುದುರೆಯು। **ಕರ್ತ್ವಃ**—ಮಾಡಲ್ಪಡಬೇಕೇ ? **ಉತ**—ಅಥವಾ । **ಇಹ**—ಪ್ರಕೃತದಲ್ಲಿ । **ರಥಃ**—ರಥವು । **ಕರ್ತ್ವಃ**—ಮಾಡಲ್ಪಡಬೇಕೇ ? **ಧೇನುಃ**—ಧೇನುವು । **ಕರ್ತ್ವಾ**—ಮಾಡಲ್ಪಡಬೇಕೇ ? **ದ್ವಾ**—ಮಾತಾಪಿತೃಗಳಿಬ್ಬರೂ ಸಹ । **ಯುವಶಾ**—ಯುವಕರಾಗಿ । **ಕರ್ತ್ವಾ**—ಮಾಡಲ್ಪಡಬೇಕೇ ? **ತಾನಿ**— ಈ ಎಲ್ಲಾ ಕಾರ್ಯಗಳನ್ನೂ ಮಾಡಿ । **ಅನು**-ಅನಂತರ । **ವಃ**— ನಿಮಗೆ ದೇವತೆಗಳು ಹೇಳಿರುವಂತೆ । **ಕೃತ್ವೀ**—(ನಿಮ್ಮ) ಕಾರ್ಯದಲ್ಲಿ । **ಏಮಸಿ**—ಉದ್ಯುಕ್ತರಾಗುವೆವು.

ಭಾವಾರ್ಥ

ಸಹೋದರ ರೂಪನಾದವನೂ, ದೂತನ ಕರ್ಮವನ್ನು ವಹಿಸಿರುವವನೂ, ಅಂಗನಾದಿಗುಣವಿಶಿಷ್ಟನೂ ಆದ ಎಲೈ ಅಗ್ನಿಯೇ, ಕೆಳಗೆ ಹೇಳಿರುವ ಕೆಲಸಗಳಲ್ಲಿ ಯಾವುದನ್ನು ಮಾಡಬೇಕೆಂದು ದೇವತೆಗಳು ನಿನ್ನಲ್ಲಿ ಹೇಳಿಕಳುಹಿದ್ದಾರೆ ? ಕುದುರೆಯು ಮಾಡಲ್ಪಡಬೇಕೆ ? ಅಥವಾ ಪ್ರಕೃತದಲ್ಲಿ ರಥವನ್ನು ನಿರ್ಮಿಸಬೇಕೇ ? ಮೃತವಾದ ಹಸುವಿಗೆ ಜೀವವನ್ನು ತುಂಬಿ ಅದನ್ನು ಶಾಶ್ವತವಾಗಿ ಕರೆಯುವ ಹಸುವನ್ನಾಗಿ ಮಾಡಬೇಕೇ ? ಅಥವಾ ವೃದ್ಧರಾದ ಮಾತಾಪಿತೃಗಳನ್ನು ಯುವಕರನ್ನಾಗಿ ಮಾಡಬೇಕೇ ? ಈ ಎಲ್ಲಾ ಕಾರ್ಯಗಳನ್ನೂ ಮಾಡಿದನಂತರ ನೀವು ಹೇಳಿದಂತೆ ಚಮಸಪಾತ್ರೆಯು ವೃದ್ಧಿಯಾಗುವಂತೆ ಎಂದರೆ ಒಂದಾಗಿರತಕ್ಕದ್ದನ್ನು ನಾಲ್ಕಾಗುವಂತೆ ಮಾಡುವೆವು.

## English Translation

Then said they, in answer to Agni, the messenger (of the gods)—Whatever is to be done, whether a horse is to be made, or a car is to be made, or a cow is to be made, or the two (old parents) are to be made young,—having done all these (acts), Brother Agni, we are then ready to do (what you desire) to be done.

### ವಿಶೇಷವಿಷಯಗಳು

ಈ ಋಕ್ಕಿಗೆ ನಿಷ್ಕೃಷ್ಟವಾಗಿ ಅರ್ಥವನ್ನು ಹೇಳಲು ಸಾಯಣರಿಂದಲೇ ಆಗಿಲ್ಲ. ಅವರೂ ಸಹ ಎರಡು ವಿಧವಾಗಿ ಅರ್ಥಮಾಡಿದ್ದಾರೆ. ಮೊದಲನೆಯದಾಗಿ ಋಭುಗಳು ಅಗ್ನಿಯನ್ನು ಕುರಿತು ಹೇಳಿದಂತೆಯೂ, ಎರಡನೆಯದಾಗಿ ಸೂಕ್ತದ್ರಷ್ಟೃವಾದ ಋಷಿಯು ಋಭುಗಳನ್ನೇ ಕುರಿತು ಹೇಳಿದಂತೆಯೂ ಅನ್ವಯವನ್ನು ಮಾಡಿ ಅರ್ಥವನ್ನು ವಿವರಿಸಿದೆ. ಮೊದಲನೆಯ ಅನ್ವಯದ ಪ್ರಕಾರ ಅರ್ಥವನ್ನು ಪ್ರತಿಪದಾರ್ಥದಲ್ಲಿ ಹೇಳಿದೆ. ಎರಡನೆಯ ಅನ್ವಯದ ಪ್ರಕಾರ, **ಹೇ ಋಭವಃ ಯೂಯುಮಾಗತಮಗ್ನಿಂ ದೂತಂ ಪ್ರತಿ ಯದಬ್ರವೀತನ ಯತ್ಕಾರ್ಯಂ ವಕ್ಷ್ಯಮಾಣ-ರೂಪಂ ಕರ್ತವ್ಯತ್ವೇನ ವದಥ ತಾನಿ ಸರ್ವಾಣಿ ಸಂಪಾದ್ಯ ಹೇ ಭ್ರಾತರಗ್ನೇ ಕೃತ್ವಾ ಕರ್ಮಣ್ಯೈಮಸೀತಿ ಬ್ರೂಥೇತ್ಯೃಷಿರಾಹ ।** ಎಲೈ ಋಭುಗಳೇ, ನಿಮ್ಮಲ್ಲಿಗೆ ದೇವದೂತನಾಗಿ ಬಂದಿರುವ ಅಗ್ನಿಯನ್ನು ನೀವು ಹೇಳುವ ಯಾವ ಕಾರ್ಯವನ್ನು ಮಾಡಬೇಕೆಂದು ಕೇಳಿರಿ. ಅವುಗಳನ್ನೂ ಮಾಡಿ ಅನಂತರ ಎಲೈ ಭ್ರಾತೃರೂಪನಾದ ಅಗ್ನಿಯೇ, ನೀನು ಹೇಳಿರುವ ಕರ್ತವ್ಯದಲ್ಲಿ ಸಿದ್ಧರಾಗಿದ್ದೇವೆಂದು **ತಿಳಿಸಿರಿ** ಎಂದು ಋಷಿಯು ಋಭುಗಳನ್ನು ಕುರಿತು ಹೇಳಿದ ವಾಕ್ಯವಿದೆಂದು ವಿವರಿಸಿದೆ.

ಇಲ್ಲಿ ಋಭುಗಳ ಕಲಾಕೌಶಲ್ಯವನ್ನೂ ಅವರ ಪಿತೃಭಕ್ತಿಯನ್ನೂ ವರ್ಣಿಸಿದೆ. ಈ ಗುಣಗಳಿಂದ ಋಭುಗಳು ಅತ್ಯಂತ ಪ್ರಸಿದ್ಧರಾದುದರಿಂದ **ವಿಶ್ವಾಮಿತ್ರ, ವಾಮದೇವ** ಇತ್ಯಾದಿ ಋಷಿಗಳಿಂದ ದೃಷ್ಟವಾದ ಸೂಕ್ತಗಳಲ್ಲೆಲ್ಲಾ ಈ ವಿಧವಾದ ವರ್ಣನೆಯಿರುವುದು.

**ಯೇ ಅಶ್ವಿನಾ ಯೇ ಪಿತರಾ ಯ ಊತೀ ಧೇನುಂ ತತಕ್ಷುರೃಭವೋ ಯೇ ಅಶ್ವಾ ।**
**ಯೇ ಅಂಸತ್ರಾ ಯ ಋಧಗ್ರೋದಸೀ ಯೇ ವಿಭ್ವೋ ನರಃ ಸ್ವಪತ್ಯಾನಿ ಚಕ್ರುಃ ॥**
**(ಋ. ಸಂ. ೪-೩೪-೯)**

ಅಶ್ವಿನೀದೇವತೆಗಳು ನಿಮ್ಮ ರಥನಿರ್ಮಾಣ ಕ್ರಿಯೆಯಿಂದ ಸಂತುಷ್ಟರಾದರು. ನಿಮ್ಮ ಪಿತೃಗಳು ಅವರ ವಾರ್ಧಕ್ಯವನ್ನು ನಾಶಮಾಡಿ ಅವರನ್ನು ಯುವಕರನ್ನಾಗಿ ಮಾಡಿದುದರಿಂದ ಸಂತುಷ್ಟರಾದರು. ಮೃತಿಯನ್ನು ಹೊಂದಿದ ಗೋವನ್ನು ಕ್ಷೀರದಾಯಿಯಾಗಿ ಮಾಡಿದಿರಿ— ಇತ್ಯಾದಿಯಾಗಿ ಋಭುಗಳ ಶಕ್ತಿಯನ್ನು ಸ್ತುತಿಸಿದೆ. ಅಲ್ಲದೆ,

**ಅನವಸ್ತೇ ರಥಮಶ್ವಾಯ ತಕ್ಷನ್ ತ್ವಷ್ಟಾ ವಜ್ರಂ ಪುರುಹೂತ ದ್ಯುಮಂತಂ ॥**
**(ಋ. ಸಂ. ೫-೩೧-೪)**

ಎಲೈ ಇಂದ್ರನೇ, ನಿನ್ನ ಶ್ರೇಷ್ಠವಾದ ರಥವನ್ನು **ಋಭುಗಳು** ನಿರ್ಮಿಸಿದರು ಇತ್ಯಾದಿಯಾಗಿ ಅವರ ರಥನಿರ್ಮಾಣ ಕೌಶಲ್ಯವನ್ನು ಸ್ತುತಿಸಿದೆ.

**ಅಶ್ವಃ ಕರ್ತ್ವಃ**—ಎನ್ನುವಾಗ ಒಂದು ವಿಶೇಷವಿದೆ. ಮುಂದೆ **ಅಶ್ವಾದಶ್ವಮತಕ್ಷತ** ಒಂದು ಕುದುರೆ ಯಿಂದ ಇನ್ನೂ ಬೇರೆ ಅಶ್ವವನ್ನು ಸೃಷ್ಟಿಸಿದರು ಎಂದು ವಿವರಿಸಿದೆ ಇದು ಅಲೌಕಿಕವಾದ ಶಕ್ತಿ.

**ಧೇನುಃ ಕರ್ತ್ವಾ**—ಚರ್ಮರಹಿತವಾದುದೂ ಮೃತಿಯನ್ನು ಹೊಂದಿದುದೂ ಆದ ಗೋವನ್ನು ಕ್ಷೀರದಾಯಿ ಯಾದ ಧೇನುವಾಗುವಂತೆ ಮಾಡಿದಿರಿ ಎಂದು **ನಿಶ್ಚರ್ಮಣೋ ಗಾಮರಿಣೀತ** (೧-೧೬೧-೭) ಎಂಬ ಮುಂದಿನ ಮಂತ್ರಗಳ್ಲಿ ವಿವರಿಸಿರುವುದನ್ನು ಇಲ್ಲಿ ಸೂಚಿಸಿದೆ.

### ವ್ಯಾಕರಣಪ್ರಕ್ರಿಯಾ

**ಅಗ್ನಿಮ್**—ಅಗಿ ಗತೌ ಧಾತು. **ಅಂಗೇರ್ನಲೋಪಶ್ಚ** (ಪಾ. ಸೂ. ೪೯೦) ಎಂಬುದರಿಂದ ನಿ ಪ್ರತ್ಯಯ. ನುಮಿನ ನಕಾರಕ್ಕೆ ಲೋಪ. ಪ್ರತ್ಯಯಸ್ವರದಿಂದ ಅಂತೋದಾತ್ತವಾಗುತ್ತದೆ.

**ಅಬ್ರವೀತನ**—ಬ್ರೂಞ್ ವ್ಯಕ್ತಾಯಾಂ ವಾಚಿ ಧಾತು. ಲಙ್ ಪ್ರಥಮಪುರುಷಬಹುವಚನದಲ್ಲಿ **ವ್ಯತ್ಯಯೋಬಹುಲಮ್** (ಪಾ. ಸೂ. ೩-೧-೮೫) ಎಂಬುದರಿಂದ ಮಧ್ಯಮಪುರುಷಬಹುವಚನಪ್ರತ್ಯಯ ಬರುತ್ತದೆ. **ತಪ್ತನಪ್ತನ**—(ಪಾ. ಸೂ. ೭-೧-೪೫) ಎಂಬುದರಿಂದ ಅದಕ್ಕೆ ತನಾದೇಶ. **ಬ್ರುವಈಟ್** (ಪಾ. ಸೂ. ೭-೩-೯೩) ಎಂಬುದರಿಂದ ಅದಕ್ಕೆ ಈಡಾಗಮ. ಪ್ರತ್ಯಯ ಪಿತ್ತಾದುದರಿಂದ ಧಾತುವಿನ ಉಕಾರಕ್ಕೆ ಗುಣ. ಅವಾದೇಶ. ಅಂಗಕ್ಕೆ ಅಡಾಗಮ. ಯದ್ಯೋಗವಿರುವುದರಿಂದ ನಿಘಾತಸ್ವರ ಬರುವುದಿಲ್ಲ. ಅಡಾಗಮ ಉದಾತ್ತವಾದುದರಿಂದ ಆದ್ಯುದಾತ್ತವಾಗುತ್ತದೆ.

**ಕರ್ತ್ವಃ**—ಡುಕೃಞ್ ಕರಣೇ ಧಾತು. **ಕೃತ್ಯಾರ್ಥೇತವೈಕೇನ್**—(ಪಾ. ಸೂ. ೩-೪-೧೪) ಎಂಬುದರಿಂದ ತ್ವನ್ ಪ್ರತ್ಯಯ. **ಸಾರ್ವಧಾತುಕಾರ್ಧ**—ಎಂಬುದರಿಂದ ಗುಣ. **ಞ್ನಿತ್ಯಾದಿರ್ನಿತ್ಯಮ್** (ಪಾ. ಸೂ. ೬-೧-೧೯೭) ಎಂಬುದರಿಂದ ಆದ್ಯುದಾತ್ತಸ್ವರ ಬರುತ್ತದೆ. ಕರ್ತ್ವಾ ಎಂಬಲ್ಲಿ ಸ್ತ್ರೀತ್ವಶೋರುವಾಗ ಅದಂತವಾದುದರಿಂದ ಟಾಪ್.

**ಯುವಶಾ**—ಶೀಙ್ ಸ್ವಪ್ನೇ ಧಾತು. ಡ ಪ್ರತ್ಯಯ. ಡಿತ್ತಾದುದರಿಂದ ಟಿಗೆ (ಇಕಾರ) ಲೋಪ. ಸಮಾಸಾಂತೋದಾತ್ತಸ್ವರ ಬರುತ್ತದೆ. **ಸುಪಾಂ ಸುಲುಕ್** (ಪಾ. ಸೂ. ೭-೧-೩೯) ಎಂಬುದರಿಂದ ವಿಭಕ್ತಿಗೆ (ಜೌ) ಆಕಾರಾದೇಶ. ದ್ವಾ ಎಂಬಲ್ಲಿಯೂ ಹೀಗೆ ಆಕಾರಾದೇಶ.

**ಕೃತ್ವೀ**—**ಸುಪಾಂ ಸುಲುಕ್**—ಎಂಬುದರಿಂದ ತೃತೀಯಾವಚನ ಪರವಾದಾಗ ಪೂರ್ವಸವರ್ಣದೀರ್ಘ.

**ಇಮಸಿ**—**ಇಣ್ ಗತೌ ಧಾತು.** **ಲಟ್** ಉತ್ತಮಪುರುಷಬಹುವಚನದಲ್ಲಿ ಮಸ್ ಪ್ರತ್ಯಯ. ವಿಕರಣಕ್ಕೆ ಲುಕ್. **ಇದಂತೋಮಸಿ** (ಪಾ. ಸೂ. ೭-೧-೪೬) ಎಂಬುದರಿಂದ ಇಕಾಗಮ. ಪ್ರತ್ಯಯಕ್ಕೆ ಙಿತ್ವಾತಿದೇಶವಿರು ವುದರಿಂದ ಧಾತುವಿಗೆ ಗುಣ ಬರುವುದಿಲ್ಲ. ಅತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ. || ೩ ||

———:O:———

ಸಂಹಿತಾಪಾಠಃ

ಚಕೃವಾಂಸ ಋಭವಸ್ತದಪೃಚ್ಛತ ಕ್ವೇದಭೂದ್ಯಃ ಸ್ಯ ದೂತೋ ನ ಆಜಗನ್ ।

ಯದಾವಾಖ್ಯಚ್ಚಮಸಾಞ್ಚತುರಃ ಕೃತಾನಾದಿತ್ತ್ವಷ್ಟಾ ಗ್ನಾಸ್ವಂತರ್ನ್ಯಾನಜೇ ॥ ೪ ॥

ಪದಪಾಠಃ

ಚಕೃವಾಂಸಃ । ಋಭವಃ । ತತ್ । ಅಪೃಚ್ಛತ । ಕ್ವ । ಇತ್ । ಅಭೂತ್ । ಯಃ । ಸ್ಯಃ । ದೂತಃ । ನಃ । ಆ । ಅಜಗನ್ ।

ಯದಾ । ಅವಽಅಖ್ಯತ್ । ಚಮಸಾನ್ । ಚತುರಃ । ಕೃತಾನ್ । ಆತ್ । ಇತ್ । ತ್ವಷ್ಟಾ । ಗ್ನಾಸು । ಅಂತಃ । ನಿ । ಆನಜೇ ॥ ೪ ॥

ಸಾಯಣಭಾಷ್ಯಂ

ಹೇ ಋಭವಃ ತತ್ಕಾರ್ಯಂ ಯಥಾ ಚಕೃವಾಂಸಃ ಕೃತವಂತೋ ಯೂಯಮಪೃಚ್ಛತ । ಪ್ರಶ್ನಂ ಕುರುತ ॥ ಕರೋತೇರ್ಲಿಟಃ ಕ್ವಸುಃ ॥ ಅತ್ರ ಯದ್ಯಪ್ಯೃಭುರಿತಿ ತ್ರಯಾಣಾಂ ಮಧ್ಯ ಏಕಸ್ಯ ನಾಮ ತಥಾಪಿ ತಸ್ಯ ಪ್ರಾಥಮ್ಯಾಚ್ಛತ್ರಿಣೋ ಗಚ್ಛಂತೀತಿವತ್ಸರ್ವೇಽಪ್ಯೃಭವ ಉಚ್ಯಂತೇ । ಕಿಮಿತಿ । ಸ್ಯಃ ಸ ದೂತಃ ಕ್ವೇದಭೂತ್ । ಕುತ್ರ ಗತಃ । ಸ ಇತ್ಯುಕ್ತಂ ಕ ಇತ್ಯಾಹ । ಯಃ ಯೋ ದೂತೋ ನೋಽಸ್ಮಾನಾಜಗನ್ ಆಗಮತ್ ಪ್ರಾಪ್ತಃ । ಏವಂಭೂತೇ ಸತಿ ಯದಾಯಂ ತ್ವಷ್ಟಾ ಚತುರಃ ಕೃತಾಂಶ್ಚಮಸಾನವಾಖ್ಯತ್ ಅಭಿಪಶ್ಯತಿ ॥ ಖ್ಯಾತೇರ್ಲುಙ್ಯಸ್ಯತಿವಕ್ತಿಖ್ಯಾತೀತಿ ಚ್ಲೇರಙಾದೇಶಃ ॥ ಆದಿದನಂತರಮೇವ ತ್ವಷ್ಟಾ ತಸ್ಯ ಚಮಸಸ್ಯೋತ್ಪಾದಕ ಏತನ್ನಾಮಕೋ ದೇವೋ ಗ್ನಾಸು ಸ್ತ್ರೀಷು । ಮೇನಾ ಗ್ನಾ ಇತಿ ಸ್ತ್ರೀಣಾಮಿತಿ ನಿರುಕ್ತಂ । ೩-೨೧ । ಅಂತರ್ಮಧ್ಯೇ ನ್ಯಾನಜೇ । ನ್ಯಕ್ತೋಽಭೂತ್ । ಸ್ತ್ರಿಯಮಾತ್ಮನಮಮನ್ಯತೇತ್ಯರ್ಥಃ॥ ಅಂಜೇರ್ಲಿಟಿ ತಸ್ಮಾನ್ನುಡ್ದ್ವಿಹಲ ಇತಿ ನುಟ್ । ಛಾಂದಸೋಽನುನಾಸಿಕಲೋಪಃ ॥

ಪ್ರತಿಪದಾರ್ಥ

ಋಭವಃ—ಎಲೈ ಋಭುಗಳೇ । ತತ್—ನಿರ್ದಿಷ್ಟವಾದ ಕಾರ್ಯವನ್ನು । ಚಕೃವಾಂಸಃ— ಮಾಡಿದವರಾಗಿ (ಮಾಡಿದನಂತರ) ಯಃ—ಯಾವ ದೂತನು। ನಃ—ನಮ್ಮಲ್ಲಿಗೆ । ಆ ಅಜಗನ್—ಬಂದಿದ್ದನೋ। ಸ್ಯಃ ದೂತಃ—ನಮ್ಮ ಮುಂದೆ ಪ್ರತ್ಯಕ್ಷನಾಗಿದ್ದ ಆ ದೂತನು । ಕ್ವೇದಭೂತ್—ಎಲ್ಲಿ ಹೋದನು ? (ಎಂಬುದಾಗಿ) । ಅಪೃಚ್ಛತ— ಕೇಳಿದಿರಿ । ಯದಾ—ಯಾವಾಗ । ಚತುರಃ ಕೃತಾನ್—ನಾಲ್ಕರಷ್ಟು ಮಾಡಲ್ಪಟ್ಟ । ಚಮಸಾನ್—ಚಮಸ

ಪಾತ್ರೆಗಳನ್ನು । **ಅಖ್ಯತ್**—ನೋಡಿದನೋ । **ಆದಿತ್**—ಆ ಒಡನೆಯೇ । **ತ್ವಷ್ಟಾ**—(ನಿಮ್ಮ ಶಿಕ್ಷಕನಾದ) ತ್ವಷ್ಟೃವು । **ಗ್ನಾಸು ಅಂತಃ**—ಸ್ತ್ರೀಯರ ನಡುವೆ । **ನ್ಯಾನಜೇ**—ಅಂತರ್ಹಿತನಾದನು.

**ಭಾವಾರ್ಥ**

ಎಲೈ ಋಭುಗಳೇ, ನಿಮ್ಮ ನಿರ್ದಿಷ್ಟವಾದ ಕಾರ್ಯವನ್ನು ಮಾಡಿದನಂತರ ನಿಮ್ಮಲ್ಲಿಗೆ ದೂತನಾಗಿ ಬಂದಿದ್ದ ಅಗ್ನಿಯು ಎಲ್ಲಿ ಹೋದನು ಎಂದು ಪ್ರಶ್ನಿಸಿದಿರಿ. ನೀವು ಒಂದಾಗಿದ್ದ ಚಮಸಪಾತ್ರೆಯನ್ನು ನಾಲ್ಕನ್ನಾಗಿ ಮಾಡಿದೊಡನೆಯೇ ನಿಮ್ಮ ಶಿಕ್ಷಕನಾದ ತ್ವಷ್ಟೃವು ಸ್ತ್ರೀಯರ ನಡುವೆ ಅಂತರ್ಹಿತನಾದನು.

## English Translation

So doing, Ribhus, you inquired—Where, indeed, is he who came to us as a messenger ? when Twashtri observed the one ladle become four, he was immediately lost amongst the women.

**ವಿಶೇಷವಿಷಯಗಳು**

**ಗ್ನಾಸ್ವಂತರ್ನ್ಯಾನಜೇ** – **ಗ್ನಾಸು ಅಂತಃ ನ್ಯಾನಜೇ** । ಸ್ತ್ರೀಯರ ನಡುವೆ ಅಂತರ್ಹಿತನಾದನು ಎಂದರೆ **ಸ್ತ್ರೀಯಮಾತ್ಮಾನಮನ್ವಯತ** ತನ್ನನ್ನೂ ಸಹ ಸ್ತ್ರೀಯರಲ್ಲಿ ಒಬ್ಬಳನ್ನಾಗಿ ತಿಳಿದನು ಎಂದು ಸಾಯಣರು ವಿವರಿಸಿದ್ದಾರೆ. ಆದರೆ **ತ್ವಷ್ಟೃವು** ಸ್ತ್ರೀರೂಪವನ್ನು ಹೊಂದಿದುದಾಗಲಿ ಅಥವಾ ಸ್ತ್ರೀಯ ಗುಣವನ್ನು ಹೊಂದಿದುದಾಗಲಿ ಎಲ್ಲಿಯೂ ವರ್ಣಿತವಾಗಿಲ್ಲ. ಸ್ತ್ರೀಯರ ಜೊತೆಯಲ್ಲಿ ವಿಹರಿಸುತ್ತಿದ್ದುದು ಮಾತ್ರ ವರ್ಣಿತವಾಗಿದೆ.

**ಉತ ಸ್ಯ ದೇವೋ ಭುವನಸ್ಯ ಸಕ್ಷಣಿಸ್ತ್ವಷ್ಟಾ ಗ್ನಾಭಿಃ ಸಜೋಷಾ ಜೂಜುವದ್ರಥಂ ।**

(ಋ. ಸಂ. ೨-೩೧-೪)

**ರುದ್ರೋ ರುದ್ರೇಭಿರ್ದೇವೋ ಮೃಳಯಾತಿ ನಸ್ತ್ವಷ್ಟಾ ನೋ ಗ್ನಾಭಿಃ ಸುವಿತಾಯ ಜಿನ್ವತು ।**

(ಋ. ಸಂ. ೧೦-೬೬-೩)

**ಇತ್ಯಾದಿ ಋಕ್ಕುಗಳಲ್ಲೆಲ್ಲಾ ತ್ವಷ್ಟೃವು** ದೇವಪತ್ನಿಯರ ಸಾಹಚರ್ಯವನ್ನು ಯಾವಾಗಲೂ ಇಟ್ಟುಕೊಂಡಿದ್ದನೆಂದು ತಿಳಿಯುತ್ತದೆ. ಹೀಗೆಯೇ ಋ ಸಂ ೧-೨೨-೯, ೨-೩೬-೩, ೬-೫೦-೧೩. ೭-೩೫-೬, ೧೦-೬೪-೧೦ ಇತ್ಯಾದಿ ಋಕ್ಕುಗಳಲ್ಲೂ ಸಹ ಈ ಅಂಶವು ಸ್ಪಷ್ಟವಾಗಿದೆ. ಈ ವರ್ಣನೆಯಿಂದ ತ್ವಷ್ಟೃವಿನ ನಿರ್ಮಾಣಕಾರ್ಯವೆಲ್ಲಾ ಸ್ತ್ರೀಯರ ಗರ್ಭದ ಮೂಲಕವೇ ನೆರವೇರುತ್ತಿತ್ತೆಂದು Roth ಎಂಬ ಪಂಡಿತನು ಊಹಿಸುತ್ತಾನೆ.

" This, according to professor Roth, S.V., results from the fact that it is in the wombs of females that his creative action is principally manifested."

[O S. T. Vol. V. P. 229].

ಈ ಊಹೆಗೂ ಸಹ ಕೆಲವು ವಾಕ್ಯಗಳಿಂದ ಸಮರ್ಥನೆಯು ಸಿಕ್ಕುತ್ತದೆ.

**ವಿಷ್ಣುರ್ಯೋನಿಂ ಕಲ್ಪಯತು ತ್ವಷ್ಟಾ ರೂಪಾಣಿ ಪಿಂಶತು ।**
**ಆ ಸಿಂಚತು ಪ್ರಜಾಪತಿರ್ಧಾತಾ ಗರ್ಭಂ ದಧಾತು ತೇ ॥**

(ಋ. ಸಂ. ೧೦-೧೮೪-೧)

ಇತ್ಯಾದಿ ಋಕ್ಸಂಹಿತಾವಾಕ್ಯಗಳಲ್ಲೂ,

**ಅಥ ತ್ವಷ್ಟಾರಂ ಯಜತಿ । ತ್ವಷ್ಟಾ ವೈ ಸಿಕ್ತ೦ ರೇತೋ ವಿಕರೋತಿ ।**

(ಶ. ಬ್ರಾ. ೧-೯-೨-೧೦)

ಇತ್ಯಾದಿ ಬ್ರಾಹ್ಮಣವಾಕ್ಯಗಳಲ್ಲೂ ಸಹ ಯೋನಿಯಲ್ಲಿ ಸಿಕ್ತವಾದ ರೇತಸ್ಸಿನ ಮೂಲಕ ತ್ವಷ್ಟೃವು ತನ್ನ ಸಕಲವಿಧವಾದ ಸೃಷ್ಟಿಯನ್ನೂ ಮಾಡುತ್ತಾನೆಂದು ಇವನ ಕಾರ್ಯಕ್ಕೆ ಯಾವಾಗಲೂ ಸ್ತ್ರೀಸಹಾಯದ ಆವಶ್ಯಕತೆಯನ್ನು ತಿಳಿಸಿದೆ. ಅಲ್ಲದೆ ಇವನ ಸಕಲವಿಧವಾದ ಸೃಷ್ಟಿಯಲ್ಲಿಯೂ ಸಹ ಸ್ತ್ರೀಸೌಂದರ್ಯವು ವ್ಯಕ್ತವಾಗುವುದರಿಂದಲೂ ಸಹ **ಗ್ನಾಸ್ಸಂತೆನ್ಯಾರ್ಜನಜೇ** ಎಂದು ಆ ಅಂಶವನ್ನು ವರ್ಣಿಸಿದೆ.

**ಗ್ನಾಸು**— ಈ ಪದವು **ಮೇನಾ ಗ್ನಾ** ಎಂದು ಸ್ತ್ರೀ ನಾಮಗಳಲ್ಲಿ ಪಠಿತವಾಗಿದೆ. **ಗ್ನಾ ಗಚ್ಛಂತ್ಯೇನಾಃ ।** ಪುರುಷರು ಇವರಲ್ಲಿಗೆ ಹೋಗುತ್ತಾರೆ. ಆದುದರಿಂದ ಸ್ತ್ರೀಯರಿಗೆ **ಗ್ನಾ** ಎಂಬ ಹೆಸರು ಎಂದು ನಿರುಕ್ತಕಾರರು ಈ ಪದಕ್ಕೆ ನಿರ್ವಚನವನ್ನು ತೋರಿಸಿದ್ದಾರೆ. (ನಿ. ೩-೨೧)

**ಶ್ಲೋಕಃ, ಧಾರಾ** ಇತ್ಯಾದಿ **ವಾಙ್ನಾಮ**ಗಳಲ್ಲೂ ಸಹ ಈ ಪದವು ಪಠಿತವಾಗಿದೆ. (೨-೨೩). ಆದುದರಿಂದ **ಗ್ನಾಸ್ಸಂತೆನ್ಯಾರ್ಜನಜೇ** ಎಂಬ ವಾಕ್ಯವನ್ನು ಇನ್ನೊಂದು ವಿಧದಲ್ಲೂ ಅರ್ಥಮಾಡಬಹುದು.

**ತ್ವಷ್ಟಾರಂ ಯಜತಿ ವಾಗ್ವೈ ತ್ವಷ್ಟಾ ವಾಗ್ಘೀದಂ ಸರ್ವಂ ತಾಷ್ಟೀವ ವಾಚಮೇವ ತತ್ಪ್ರೀಣಾತಿ ವಾಚಂ ಯಜಮಾನೇ ದಧಾತಿ ॥**

(ಐ. ಬ್ರಾ. ೨-೪)

ಇತ್ಯಾದಿ ವಾಕ್ಯಗಳಲ್ಲಿ ವಾಕ್ಕಿಗೂ **ತ್ವಷ್ಟೃವಿಗೂ** ತಾದಾತ್ಮ್ಯವನ್ನು ಹೇಳಿರುವುದರಿಂದಲೂ ಅಲ್ಪವಾದದ್ದನ್ನೂ ವಿಸ್ತೃತವಾಗಿರುವಂತೆಯೂ ವಿಸ್ತೃತವಾದುದನ್ನೂ ಅಲ್ಪವಾಗಿರುವಂತೆಯೂ (**ಮಹಾಂತೋಽಪಿ ಪರ್ವತಾದಯಃ ಅಲ್ಪೇನೈವ ಶಬ್ದೇನ ಗೃಹ್ಯಂತೇ ತದೇತಜ್ಜಗತ್ತಷ್ಟಮಿವ ಭವತಿ, ಸಾ. ಭಾ.**) ವರ್ಣಿಸಲು **ಶಕ್ತ**ವಾಗಿ ಇಷ್ಟಬಂದಂತೆ ಸೃಷ್ಟಿಮಾಡುವ ಸಾಮರ್ಥ್ಯವುಳ್ಳವನಾಗಿರುವುದರಿಂದಲೂ ಈ ಹೆಸರು ಪ್ರಸಿದ್ಧವಾಗಿದೆಯೆಂದು ತಿಳಿಸಿದೆ. ಆ ಅರ್ಥವನ್ನಿಟ್ಟುಕೊಂಡರೆ ಸೃಷ್ಟಿಸಾಮರ್ಥ್ಯವುಳ್ಳ ವಾಕ್ಕಿನೊಳಗೆ ಅಂತರ್ಹಿತನಾದನೆಂದು ಹೇಳಿದರೂ ಹೇಳಬಹುದು.

**ತ್ವಷ್ಟಾ—ತಸ್ಯ ಚಮಸಸ್ಯೋತ್ಪಾದಕ ಏತನ್ನಾಮಕೋ ದೇವಃ ।** ಚಮಸಪಾತ್ರೆಯ ನಿರ್ಮಾತೃವಾದ ಈ ಹೆಸರಿನ ದೇವತೆ. ಈ ದೇವತೆಯ ಸ್ವರೂಪ, ಮಹಿಮೆ ಇವುಗಳನ್ನು ಮುಂದಿನ ಸೂಕ್ತದ ಎಂದರೆ ೧-೧೬೨-೩ ನೇ ಋಕ್ಕಿನ ವಿಶೇಷ ವಿಷಯಗಳಲ್ಲಿ ವಿವರಿಸಿದೆ.

**ಋಭವಃ— ಅತ್ರ ಯದ್ಯಪ್ಯೃಭುರಿತಿ ತ್ರಯಾಣಾಂ ಮಧ್ಯೇ ಏಕಸ್ಯ ನಾಮ ತಥಾಪಿ ತಸ್ಯ ಪ್ರಾಥಮ್ಯಾತ್ಸರ್ವೇಽಪಿ ಋಭವ ಉಚ್ಯಂತೇ ।** **ಋಭು, ವಿಭ್ವ, ವಾಜ** ಎಂಬ ಮೂವರಲ್ಲಿ **ಋಭುವು** ಒಬ್ಬನಾದರೂ ಸಹ ಈ ಪದದಿಂದಲೇ ಮೂವರ ಹೆಸರೂ ಸೂಚಿತವಾಗಿದೆಯೆಂದು ತಿಳಿಸಿದೆ.

**ಋಭವಃ ಉರು ಭಾಂತೀತಿ ವಾ, ಋತೇನ ಭಾಂತೀತಿ ವಾ, ಋತೇನ ಭವಂತೀತಿ ವಾ**

(ನಿ. ೧೧-೧೫)

ಅತಿ ವಿಸ್ತೃತವಾಗಿ ಪ್ರಕಾಶಿಸುತ್ತಾರೆ ಎಂಬುದರಿಂದಾಗಲಿ, ಶ್ರೇಷ್ಠವಾದ ಯಾಗಾದಿಕರ್ಮಗಳೊಡನೆ ಪ್ರಕಾಶಿಸುತ್ತಾರೆ ಎಂಬುದರಿಂದಾಗಲಿ, ಇಂತಹ ಶ್ರೇಷ್ಠವಾದ ಕರ್ಮಗಳೊಡನೆ ಇರುತ್ತಾರೆ ಎಂಬುದರಿಂದಾಗಲಿ ಈ ಹೆಸರು ಪ್ರಸಿದ್ಧವಾಗಿದೆಯೆಂದು ನಿರುಕ್ತಕಾರರು,

**ವಿಷ್ಟ್ವೀ ಶಮೀ ತರಣಿತ್ವೇನ ವಾಘತೋ ಮರ್ತಾಸಃ ಸಂತೋ ಅಮೃತತ್ವಮಾನಶುಃ ।**
**ಸೌಧನ್ವನಾ ಋಭವಃ ಸೂರಚಕ್ಷಸಃ ಸಂವತ್ಸರೇ ಸಮಪೃಚ್ಯಂತ ಧೀತಿಭಿಃ ॥**

**(ಋ. ಸಂ, ೧-೧೧೦.೪)**

ಎಂಬ ಋಕ್ಕನ್ನುದಹರಿಸಿ, ಋತ್ವಿಕ್ಕುಗಳೊಡಗೂಡಿಕೊಂಡು ಋಭುಗಳು ಯಾಗಾದಿ ಕರ್ಮಗಳನ್ನು ಅತಿ ಶೀಘ್ರವಾಗಿ ನೆರವೇರಿಸಿ ಮಾನವರಾಗಿದ್ದರೂ ಸಹ ಮರಣರಹಿತವಾದ ದೇವತ್ವವನ್ನು ತಮ್ಮ ಕರ್ಮಗಳಿಂದ ಪಡೆದರು. ಅನಂತರ ಸುಧನ್ವಪುತ್ರರೂ, ಸೂರ್ಯನಿಗೆ ಸಮಾನವಾದ ಪ್ರಕಾಶವುಳ್ಳವರೂ ಆದ ಋಭುಗಳು ಸಂವತ್ಸರದ ಅವಯವಗಳಾದ ವಸಂತಾದಿ ಋತುಕಾಲಗಳಲ್ಲಿ ಅನುಷ್ಠಿಸಬೇಕಾದ ಅಗ್ನಿಷ್ಟೋಮಾದಿ ಕರ್ಮಗಳೊಡನೆ ಒಂದಾಗಿ ಸೇರಿಕೊಂಡು ಹವಿಸ್ಸನ್ನು ಸ್ವೀಕಾರಮಾಡಲು ಅರ್ಹರಾದರು ಎಂದು ಅವರ ಮಹಿಮೆಯನ್ನು ವರ್ಣಿಸಿ **ಋಭುರ್ವಿಭ್ವಾವಾಜ ಇತಿ ಸುಧನ್ವನ ಆಂಗಿರಸಸ್ಯ ತ್ರಯಃ ಪುತ್ರಾ ಬಭೂವುಃ ।** ಎಂದು ಅವರ ಚರಿತ್ರೆಯನ್ನು ವಿವರಿಸಿದ್ದಾರೆ. ಈ ವಿವರಣೆಯನ್ನು ಹಿಂದೆ ಹೇಳಿದೆ.

**॥ ವ್ಯಾಕರಣಪ್ರಕ್ರಿಯಾ ॥**

**ಚಕೃವಾಂಸಃ**—ಡುಕೃಞ್ ಕರಣೇ ಧಾತು. **ಕ್ವಸುಶ್ಚ**।(ಪಾ. ಸೂ. ೩-೨-೧೦೭) ಎಂಬುದರಿಂದ ಲಿಟಿಗೆ ಕ್ವಸುರಾದೇಶ. ಧಾತುವಿಗೆ ದ್ವಿತ್ವಾದಿ. ಪ್ರತ್ಯಯದ ಆದ್ಯುದಾತ್ತಸ್ವರ ಬರುತ್ತದೆ. ಪ್ರಥಮಾಬಹುವಚನಾಂತರೂಪ.

**ಅಪೃಚ್ಛತ**—ಪ್ರಚ್ಛ ಜ್ಞೀಪ್ಸಾಯಾಂ ವಾಚಿ ಧಾತು. ಲಙ್ ಮಧ್ಯಮಪುರುಷಬಹುವಚನಾಂತರೂಪ. ತಿಙಂತನಿಘಾತಸ್ವರ ಬರುತ್ತದೆ,

**ಸ್ಯಃ**—ತ್ಯದ್ ಶಬ್ದ. ಸು ಪರವಾದಾಗ **ತ್ಯದಾದೀನಾಮಃ** ಎಂಬುದರಿಂದ ಅತ್ವ. **ಅತೋಗುಣೇ** ಎಂಬುದರಿಂದ ಪರರೂಪ. **ತದೋಃಸಃಸಾ**—ಎಂಬುದರಿಂದ ತಕಾರಕ್ಕೆ ಸಕಾರಾದೇಶ ಪ್ರತ್ಯಯಕ್ಕೆ ರುತ್ವ ವಿಸರ್ಗ.

**ಆಜಗನ್**—ಗಮ್ಲೃ ಗತೌ ಧಾತು. ಲಙ್ ಪ್ರಥಮಪುರುಷಏಕವಚನಾಂತರೂಪ. **ಯದ್ವೃತ್ತಾನ್ನಿತ್ಯಮ್** ಎಂಬುದರಿಂದ ನಿಘಾತಸ್ವರಪ್ರತಿಷೇಧ ಬರುವುದರಿಂದ ಆದ್ಯುದಾತ್ತಸ್ವರ ಬರುತ್ತದೆ.

**ಅವಾಖ್ಯತ್**—ಅವ ಉಪಸರ್ಗ ಖ್ಯಾ ಪ್ರಕಥನೇ ಧಾತು ಲುಙ್ ಪ್ರಥಮಪುರುಷಏಕವಚನದಲ್ಲಿ ತಿಪ್. ಇಕಾರ ಲೋಪ. **ಅಸ್ಯತಿವಕ್ತಿಖ್ಯಾತಿಭ್ಯೋಽಙ್** (ಪಾ. ಸೂ. ೩-೧-೫೨) ಎಂಬುದರಿಂದ ಚ್ಲಿಗೆ

ಅಡಾದೇಶ. **ಆತೋ ಲೋಪ ಇಟಿ ಚ** (ಪಾ ಸೂ. ೬–೪-೬೪) ಎಂಬುದರಿಂದ ಆಕಾರ ಲೋಪ. ಅಂಗಕ್ಕೆ ಅಡಾಗಮ. ಯದ್ಯೋಗವಿರುವುದರಿಂದ ನಿಘಾತಸ್ವರ ಬರುವುದಿಲ್ಲ. ಆದ್ಯುದಾತ್ತವಾಗುತ್ತದೆ- **ತಿಙಿಚೋದಾತ್ತವತಿ** (ಪಾ. ಸೂ. ೮-೧-೭೧) ಎಂಬುದರಿಂದ ಗತಿಗೆ (ಅವ) ನಿಘಾತಸ್ವರ ಬರುತ್ತದೆ.

**ತ್ವಷ್ಟಾ**—ತ್ವಕ್ಷೂ ಛೇದನೇ ಧಾತು. ಕರ್ತರಿಯಲ್ಲಿ ತೃನ್ ಪ್ರತ್ಯಯ. **ಸ್ಕೋಃಸಂಯೋಗಾದ್ಯೋರಂತೇಚ** ಎಂಬುದರಿಂದ ಕಕಾರಲೋಪ. ಪ್ರತ್ಯಯಕ್ಕೆ ಷ್ಟುತ್ವ. ನಿತ್ತ್ವಾದುದರಿಂದ ಆದ್ಯುದಾತ್ತಸ್ವರ ಬರುತ್ತದೆ.

**ಆನಜೇ**—ಅಂಜೂ ವ್ಯಕ್ತಿಮ್ರಕ್ಷಣಕಾಂತಿಗತಿಷು ಧಾತು. ಲಿಟ್ ಪ್ರಥಮಪುರುಷಏಕವಚನಕ್ಕೆ ಏಶಾದೇಶ-ಛಾಂದಸವಾಗಿ ಅನುನಾಸಿಕಕ್ಕೆ ಲೋಪ. ಧಾತುವಿಗೆ ದ್ವಿತ್ವ ಬಂದಾಗ **ಅತಆದೇಃ** (ಪಾ. ಸೂ. ೭–೪–೭೦) ಎಂಬುದರಿಂದ ಆದಿಗೆ ದೀರ್ಘ. **ತಸ್ಮಾನ್ನುಟ್ದ್ವಿಹಲಃ** (ಪಾ. ಸೂ. ೭-೪-೭೧) ಎಂಬುದರಿಂದ ನುಟಾಗಮ. ತಿಙಂತ ನಿಘಾತಸ್ವರ ಬರುತ್ತದೆ. ॥ ೪ ॥

। ಸಂಹಿತಾಪಾಠಃ ।

ಹನಾಮೈನಾ ಇತಿ ತ್ವಷ್ಟಾ ಯದಬ್ರವೀಚ್ಚಮಸಂ ಯೇ ದೇವಪಾನ-
ಮನಿಂದಿಷುಃ ।
ಅನ್ಯಾ ನಾಮಾನಿ ಕೃಣ್ವತೇ ಸುತೇ ಸಚಾ ಅನ್ಯೈರೇನಾನ್ಕನ್ಯಾ ನಾಮಭಿಃ
ಸ್ಪರತ್ ॥ ೫ ॥

। ಪದಪಾಠಃ ।

ಹನಾಮ । ಏನಾನ್ । ಇತಿ । ತ್ವಷ್ಟಾ । ಯತ್ । ಅಬ್ರವೀತ್ । ಚಮಸಂ । ಯೇ । ದೇವಽಪಾನಂ ।
ಅನಿಂದಿಷುಃ ।
ಅನ್ಯಾ । ನಾಮಾನಿ । ಕೃಣ್ವತೇ । ಸುತೇ । ಸಚಾ । ಅನ್ಯೈಃ । ಏನಾನ್ । ಕನ್ಯಾ । ನಾಮಽಭಿಃ । ಸ್ಪರತ್ । ॥ ೫ ॥

ಸಾಯಣಭಾಷ್ಯಂ

ಏನಾನ್ವಕ್ಷ್ಯಮಾಣಾನ್ ಹನಾಮೇತಿ ಯದ್ಯದಾಬ್ರವೀತ್ತ್ವಷ್ಟಾ । ಪೂಜಾರ್ಥಂ ಬಹುವಚನಂ । ಏತಚ್ಛಬ್ದಸ್ಯ ಪ್ರಕೃತಪರಾಮರ್ಶಕತ್ವಾದೃಭೂಣಾಂ ಪ್ರಕೃತತ್ವಾತ್ ತೇಷಾಂ ಹನನಪ್ರಸಕ್ತಿಂ ದರ್ಶಯತಿ ಯೇ ದೇವಪಾನಂ ದೇವೈಃ ಪಾತವ್ಯಂ ಚಮಸಂ ಯ ಋಭವೋಽನಿಂದಿಷುಃ ನಿಂದಾಮಕುರ್ವನ್ । ದೇವ-ಯೋಗ್ಯಂ ತ್ವಾಷ್ಟ್ರಚಮಸಂ ಮನುಷ್ಯಾ ಋಭವಃ ಸ್ವೀಕೃತ್ಯ ಚತುರ್ಧಾ ವ್ಯಭಜನ್ ತಾನ್ ಹನಾಮೇತಿ

ಯದಾಬ್ರವೀದಿತ್ಯರ್ಥಃ । ತದಾಪ್ರಭೃತಿ ಮನುಷ್ಯಾಃ ಸುತೇಽಭಿಷುತೇ ಸೋಮೇ ಸಾನಾಯ ಪ್ರಸ್ತುತೇ ಸತಿ ಸಚಾ ಸಹ ಪರಸ್ಪರಮನ್ಯಾ ನಾಮಾನ್ಯನ್ಯಾನಿ ಹೋತ್ರಧ್ವರ್ಯೋರ್ದ್ಗಾತ್ರಾದೀನಿ ಕೃಣ್ವತೇ । ಕುರ್ವಂತಿ । ಪೂರ್ವನಾಮ ಪ್ರಚ್ಛಾದ್ಯೋಪಹವಕಾಲೇಧ್ವರ್ಯೋ ಉಪಹೂಯಸ್ವ ಹೋತರುಪಹೂಯಸ್ವೇತ್ಯೇವಮನ್ಯೈರೇವ ನಾಮಭಿರಾತ್ಮಾನಂ ತ್ವಷ್ಟೃವಧಭೀತ್ಯಾ ಪ್ರಖ್ಯಾಪಯಂತೀತ್ಯರ್ಥಃ । ಪೂರ್ವಮನ್ಯಾನಿ ಕಥಂ ಪ್ರಸಕ್ತಾನೀತ್ಯತ ಆಹ । ಏನಾನ್ನರಾನ್ ಕನ್ಯಾ ಸ್ತ್ರೋತ್ಪಾದಯಿತ್ರೀ ಮಾತಾನ್ಯೈರೇವ ನಾಮಭಿಃ ಸ್ಪರತ್ । ಪ್ರೀಣಯತಿ ॥ ಸ್ಪೃ ಪ್ರೀತಿಬಲಯೋಃ । ಲೇಟ್ಯಡಾಗಮಃ ॥

॥ ಪ್ರತಿಪದಾರ್ಥ ॥

**ಯೇ**—ಯಾರು । **ದೇವಪಾನಂ**—ದೇವತೆಗಳ ಪಾನಕ್ಕೆ ಯೋಗ್ಯವಾದ । **ಚಮಸಂ**—ಈ ಚಮಸ ಪಾತ್ರೆಯನ್ನು । **ಅನಿಂದಿಷುಃ**—(ಮಾನವರಾದರೂ ದೇವಪಾತ್ರೆಯನ್ನು ಮುಟ್ಟಿ ನಾಲ್ಕನ್ನಾಗಿ ಮಾಡಿ) ದೂಷ್ಯವಾದುದನ್ನಾಗಿ ಮಾಡಿದರೋ ಅಂತಹ । **ಏನಾನ್**—ಈ ಋಭುಗಳನ್ನು । **ಹನಾಮ**—ಕೊಲ್ಲೋಣ । **ಇತಿ**—ಹೀಗೆಂಬುದಾಗಿ । **ತ್ವಷ್ಟಾ**—ಚಮಸಪಾತ್ರೆಯನ್ನು ನಿರ್ಮಿಸಿದ ತ್ವಷ್ಟೃವು । **ಅಬ್ರವೀತ್**—ಹೇಳಿದನೋ, (ಆಗ ಈ ಋಭುಗಳು) । **ಸಚಾ**—ಪರಸ್ಪರವಾಗಿ । **ಸುತೇ**—ಸೋಮರಸವನ್ನು ಹಿಂಡುವ ಯಾಗಕಾಲದಲ್ಲಿ । **ಅನ್ಯಾ ನಾಮಾನಿ**—ಬೇರೆ ಬೇರೆ ಹೆಸರುಗಳನ್ನು (ಹೋತೃ, ಅಧ್ವರ್ಯು ಇತ್ಯಾದಿ ಹೆಸರುಗಳನ್ನು) । **ಕೃಣ್ವತೇ**—ಇಟ್ಟುಕೊಳ್ಳುತ್ತಾರೆ । **ಕನ್ಯಾ**—ಉತ್ಪಾದಕಳಾದ ಮಾತೆಯು । **ಅನ್ಯೈಃ ನಾಮಭಿಃ**—(ಹೋತ್ರಾದಿ) ಬೇರೆ ಹೆಸರುಗಳಿಂದ । **ಏನಾನ್**—ಈ ಋಭುಗಳನ್ನು । **ಸ್ಪರತ್**—ತೃಪ್ತಿಪಡಿಸುತ್ತಾಳೆ.

ಭಾವಾರ್ಥ

ಮಾನವರಾದ ಋಭುಗಳು ದೇವತೆಗಳ ಪಾನಕ್ಕೆ ಯೋಗ್ಯವಾದ ಚಮಸಪಾತ್ರೆಯನ್ನು ಮುಟ್ಟಿ ಅದನ್ನು ಕಲುಷಿತವಾದದ್ದನ್ನಾಗಿ ಮಾಡಿದಾಗ ಈ ಚಮಸಪಾತ್ರೆಯನ್ನು ನಿರ್ಮಿಸಿದ ತ್ವಷ್ಟೃವು ಅವರನ್ನು ಕೊಲ್ಲಬೇಕೆಂದು ಪ್ರಯತ್ನಿಸಿದನು. ಆಗ ಋಭುಗಳು ತಮ್ಮ ಹೆಸರನ್ನು ಬದಲಾಯಿಸಿಕೊಂಡು ಹೋತ್ರಾದಿನಾಮಗಳಿಂದ ಯಾಗಗಳಲ್ಲಿ ಭಾಗವನ್ನು ವಹಿಸಿದರು. ಆಗ ಮಾತೆಯು ಬೇರೆ ಹೆಸರುಗಳಿಂದ ಕಾಣಿಸಿಕೊಂಡ ಇವರನ್ನು ತೃಪ್ತಿಪಡಿಸಿದಳು.

English Translation

When Twashtri said—Let us slay those who have profaned the ladle, (designed) for drinking of the gods; then they made use of other names for one another, as the libatation was poured out; and the maiden (mother) propitiated them by different appellations.

ವಿಶೇಷವಿಷಯಗಳು

**ಹನಾಮೈನಾँ ಇತಿ ತ್ವಷ್ಟಾ ಯದಬ್ರವೀತ್**—ಮಾನವರಾದರೂ ದೇವಪಾತ್ರೆಯನ್ನು ಮುಟ್ಟಿ ಒಂದಾಗಿದ್ದುದನ್ನು ನಾಲ್ಕನ್ನಾಗಿಮಾಡಿ ಕಲುಷಿತವನ್ನಾಗಿ ಮಾಡಿದುದಕ್ಕೆ ತ್ವಷ್ಟೃವು ಕ್ರುದ್ಧನಾಗಿ ಅವರನ್ನು ಕೊಲ್ಲಲಿಚ್ಛಿಸಿದನು ಎಂದಿದೆ. ಈ ವಾಕ್ಯಕ್ಕೆ ಎರಡು ಕಡೆಗಳಲ್ಲಿ ವಿರೋಧವಾಕ್ಯಗಳಿವೆ. ಮೊದಲನೆಯದಾಗಿ,

**ನ ನಿಂದಿಮ ಚಮಸಂ ಯೋ ಮಹಾಕುಲೋಽಗ್ನೇ ಭ್ರಾತರ್ದ್ರುಣ ಇದ್ಭೂತಿಮೂದಿಮ ॥**
(ಋ. ಸಂ. ೧-೧೬೧-೧)

ಎಂಬ ಇದೇ ಸೂಕ್ತದ ಮೊದಲನೇ ಋಕ್ಕಿನಲ್ಲಿಯೇ ಋಭುಗಳು ತಾವು ದೇವಪಾತ್ರೆಯನ್ನು ನಿಂದಿತವನ್ನಾಗಿ ಮಾಡುವುದಿಲ್ಲವೆಂದು ಪ್ರಕಟಿಸಿದ್ದಾರೆ. ಇದೂ ಅಲ್ಲದೇ,

**ಜ್ಯೇಷ್ಠ ಆಹ ಚಮಸಾ ದ್ವಾ ಕರೇತಿ ಕನೀಯಾನ್ ತ್ರೀನ್ಕೃಣವಾಮೇತ್ಯಾಹ ।**
**ಕನಿಷ್ಠ ಆಹ ಚತುರಸ್ಕರೇತಿ ತ್ವಷ್ಟ ಋಭವಸ್ತತ್ಪನಯದ್ವಚೋ ವಃ ॥**
(ಋ. ಸಂ. ೪-೩೩-೫)

ಎಂಬ ಋಕ್ಕಿನಲ್ಲಿ ಈ ಚಮಸಪಾತ್ರೆಯನ್ನು ನಾಲ್ಕು ಭಾಗಗಳನ್ನಾಗಿ ಮಾಡುವುದಾಗಿ ಅವರಲ್ಲಿ ಕನಿಷ್ಠನಾದ **ವಾಜನು** ಹೇಳಿದಾಗ ಅವರ ಗುರುವಾದ **ತ್ವಷ್ಟವು** ಆದಕ್ಕೊಪ್ಪಿದನು ಎಂದೂ ಮತ್ತು,

**ಸತ್ಯಮೂಚುರ್ನರ ಏವಾ ಹಿ ಚಕ್ರುರನು ಸ್ವಧಾಮೃಭವೋ ಜಗ್ಮುರೇತಾಂ ।**
**ವಿಭ್ರಾಜಮಾನಾಂಶ್ಚಮಸಾँ ಅಹೇವಾವೇನತ್ತ್ವಷ್ಟಾ ಚತುರೋ ದದೃಶ್ವಾನ್ ॥**
(ಋ. ಸಂ. ೪-೩೩-೬)

ಎಂಬಲ್ಲಿ ನಾಲ್ಕು ಭಾಗಗಳನ್ನಾಗಿ ಮಾಡಿದ ಚಮಸಪಾತ್ರೆಯ ಪ್ರಕಾಶವನ್ನು ನೋಡಿ ತ್ವಷ್ಟೃವು ಅತಿಯಾಗಿ ಹರ್ಷಿತನಾದನು ಮತ್ತು ಆ ಕ್ರಮವನ್ನು ಅಂಗೀಕರಿಸಿದನು ಎಂದೂ ಸ್ಪಷ್ಟವಾಗಿದೆ ಆದರೆ ಋಭುಗಳನ್ನು ಕೊಲ್ಲಲಿಚ್ಛಿಸಿದನೆಂದಿದೆ.

**ನಾಮಾನ್ಯನ್ಯಾನಿ ಕೃಣ್ವತೇ—ಹೋತ್ರಧ್ವರ್ಯ್ವುದ್ಗಾತ್ರಾದೀನಿ ಕೃಣ್ವತೇ ।** ಮೂವರಲ್ಲಿ ಒಬ್ಬನು ಹೋತೃವಾಗಿಯೂ, ಇನ್ನೊಬ್ಬನು ಅಧ್ವರ್ಯುವಾಗಿಯೂ ಮತ್ತೊಬ್ಬನು ಉದ್ಗಾತೃವಾಗಿಯೂ ಹೆಸರುಗಳನ್ನಿಟ್ಟುಕೊಂಡು ತಮ್ಮ ಹಳೆಯ ಹೆಸರನ್ನು ಮರೆಸಿಕೊಂಡು ಯಾಗಕಾಲಗಳಲ್ಲಿ ಭಾಗವಹಿಸಿದರೆಂದಿದೆ.

**ಕನ್ಯಾ—**ಈ ಪದಕ್ಕೆ **ಸ್ತೋತ್ರೋತ್ಪಾದಯಿತ್ರೀ ಮಾತಾ ।** ಸ್ವಯಂ ಉತ್ಪಾದಕಳಾದ ಮಾತೆಯೆಂದು ವಿವರಿಸಿದೆ. ಇಲ್ಲಿ ಯಾರನ್ನು ನಿರ್ದೇಶಿಸಿದೆಯೆಂಬುದು ಸ್ಪಷ್ಟವಾಗಿಲ್ಲ.

### ವ್ಯಾಕರಣಪ್ರಕ್ರಿಯಾ

**ಹನಾಮ—**ಹನ ಹಿಂಸಾಗತ್ಯೋಃ ಧಾತು. ಲೋಟ್ ಉತ್ತಮಪುರುಷಬಹುವಚನಾಂತರೂಪ. ಪಾದಾದಿಯಲ್ಲಿರುವುದರಿಂದ ನಿಘಾತಸ್ವರ ಬರುವುದಿಲ್ಲ. ಆಡಾಗಮ ಪಿತ್ತಾದುದರಿಂದ ಧಾತುಸ್ವರ ಉಳಿಯುತ್ತದೆ.

**ಅಬ್ರವೀತ್—**ಬ್ರೂಞ್ ವ್ಯಕ್ತಾಯಾಂ ವಾಚಿ ಲಙಂತರೂಪ. ಯದ್ಯೋಗವಿರುವುದರಿಂದ ನಿಘಾತಸ್ವರ ಬರುವುದಿಲ್ಲ. ಅಡಾಗಮ ಉದಾತ್ತವಾದುದರಿಂದ ಆದ್ಯುದಾತ್ತವಾಗಿದೆ.

**ದೇವಪಾನಮ್—**ಪಾ ಪಾನೇ ಧಾತು. ಭಾವಾರ್ಥದಲ್ಲಿ ಲ್ಯುಟ್ ಪ್ರತ್ಯಯ. **ಯುವೋರನಾಕೌ** ಎಂಬುದರಿಂದ ಅನಾದೇಶ ಬರುತ್ತದೆ. **ಲಿತಿ** (ಪಾ. ಸೂ. ೬-೧-೧೯೩) ಎಂಬುದರಿಂದ ಪ್ರತ್ಯಯದ ಪೂರ್ವಕ್ಕೆ **ಉದಾತ್ತ**ಸ್ವರ ಬರುತ್ತದೆ. ಸಮಾಸವಾದಾಗ ಕೃದುತ್ತರಪದಪ್ರಕೃತಿಸ್ವರ ಬರುತ್ತದೆ.

**ಅನಿಂದಿಷುಃ**—ಣಿದಿ ಕುತ್ಸಾಯಾಂ ಧಾತು. ಲುಙ್ ಪ್ರಥಮಪುರುಷಬಹುವಚನದಲ್ಲಿ ಝಿ ಪ್ರತ್ಯಯ. ಚ್ಲಿಗೆ ಸಿಚಾದೇಶ. ಅದಕ್ಕೆ ಇಡಾಗಮ. **ಸಿಜಭ್ಯಸ್ತವಿದಿಭ್ಯಶ್ಚ** (ಪಾ. ಸೂ. ೩-೪-೧೦೯) ಎಂಬುದರಿಂದ ಝಿಗೆ ಜುಸಾದೇಶ. ಇದಿತ್ತ್ವಾದುದರಿಂದ ನುಮಾಗಮ. ಅಂಗಕ್ಕೆ ಅಡಾಗಮ. ಯಚ್ಛಬ್ದಸಂಬಂಧವಿರುವುದರಿಂದ ನಿಘಾತ ಸ್ವರ ಬರುವುದಿಲ್ಲ. ಆದ್ಯುದಾತ್ತಸ್ವರ ಬರುತ್ತದೆ.

**ಕೃಣ್ವತೇ**— ಕೃವಿ ಹಿಂಸಾಕರಣಯೋಶ್ಚ ಧಾತು. ಲಟ್ ಪ್ರಥಮಪುರುಷಬಹುವಚನಾಂತರೂಪ ಅತಿ ಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

**ಸ್ಪರತ್**—ಸ್ಪೃ ಪ್ರೀತಿಬಲಯೋಃ ಧಾತು. ಲೇಟ್ ಪ್ರಥಮಪುರುಷಏಕವಚನದಲ್ಲಿ ತಿಪ್ ಪ್ರತ್ಯಯ. **ಇತಶ್ಚಲೋಪಃ** (ಪಾ. ಸೂ. ೩-೪-೯೭) ಎಂಬುದರಿಂದ ಇಕಾರ ಲೋಪ. **ಲೇಟೋಽಡಾಟೌ** (ಪಾ. ಸೂ. ೩-೪-೯೪) ಎಂಬುದರಿಂದ ಅದಕ್ಕೆ ಅಡಾಗಮ. ಧಾತುವಿನ ಇಕಿಗೆ ಗುಣ. ರಪರವಾಗಿ ಬರುತ್ತದೆ. ತಿಙಂತನಿಘಾತಸ್ವರ ಬರುತ್ತದೆ. ॥ ೫ ॥

ಸಂಹಿತಾಪಾಠಃ

**ಇಂದ್ರೋ ಹರೀ ಯುಯುಜೇ ಅಶ್ವಿನಾ ರಥಂ ಬೃಹಸ್ಪತಿರ್ವಿಶ್ವರೂಪಾ-**
**ಮುಪಾಜತ ।**
**ಋಭುರ್ವಿಭ್ವಾ ವಾಜೋ ದೇವಾँ ಅಗಚ್ಛತ ಸ್ವಪಸೋ ಯಜ್ಞಿಯಂ**
**ಭಾಗಮೈತನ ॥ ೬ ॥**

ಪದಪಾಠಃ

ಇಂದ್ರಃ । ಹರೀ ಇತಿ । ಯುಯುಜೇ । ಅಶ್ವಿನಾ । ರಥಂ । ಬೃಹಸ್ಪತಿಃ । ವಿಶ್ವಽರೂಪಾಂ । ಉಪ । ಆಜತ ।
ಋಭುಃ । ವಿಽಭ್ವಾ । ವಾಜಃ । ದೇವಾನ್ । ಅಗಚ್ಛತ । ಸುಽಅಪಸಃ । ಯಜ್ಞಿಯಂ । ಭಾಗಂ । ಐತನ ॥ ೬ ॥

॥ ಸಾಯಣಭಾಷ್ಯಂ ॥

**ಪೂರ್ವಂ ಸೃಷ್ಟಾನಾಂ ಕ್ರಮೇಣ ವಿನಿಯೋಗಮಾಹ । ಇಂದ್ರೋ ಹರೀ ಯುಯುಜೇ । ಏತನ್ನಾಮಾನಾವಶ್ವೌ ರಥೇ ಯೋಜಿತವಾನ್ । ತಥಾಶ್ವಿನಾಶ್ವಿನೌ ರಥಂ ಯೋಜಿತವಂತೌ । ತಥಾ ಬೃಹಸ್ಪತಿರ್ಬೃಹತೋ ಮಂತ್ರಸ್ಯ ಪಾಲಯಿತೈತನ್ನಾಮಕೋ ದೇವೋ ವಿಶ್ವರೂಪಾಂ ನಾನಾರೂಪೋಪೇತಾಂ**

ಗಾಮುಪಾಜತೆ । ಉಪಾಗಮತ್ । ಸ್ವೀಕೃತವಾನಿತ್ಯರ್ಥಃ । ಯದ್ಯಪ್ಯತ್ರ ಗೌರಿತಿ ವಿಶೇಷೋ ನ ಶ್ರುತಃ ತಥಾಪಿ ಪೂರ್ವಂ ಧೇನುಃ ಕರ್ತ್ವೇತ್ಯುಕ್ತತ್ವಾತ್ ಪುರಸ್ತಾಚ್ಚ ಯೇ ಧೇನುಂ ವಿಶ್ವಜುವಂ ವಿಶ್ವರೂಪಾಂ। ಋ. ೪-೩೩-೮ । ಇತಿವಕ್ಷ್ಯಮಾಣತ್ವಾಚ್ಚ ವಿಶ್ವರೂಪಾ ಗೌರೀತ್ಯೇವಾಧ್ಯವಸೀಯತೇ । ಅತ ಏವ ವಿಶ್ವರೂಪಾಮಿತ್ಯಸ್ಯಾಶ್ಚ ಪಂಕ್ತಿರಿತಿ ಕೇಚನ ವ್ಯಾಚಕ್ಷತೇ ತದಸತ್ । ಯುಷ್ಮತ್ಸಂಪಾದಿತಾನಿ ರಥಾ- ದೀನೀಂದ್ರಾದಯಃ ಸ್ವಭಾಗತ್ವೇನಾಕಲ್ಪಯನ್ । ತಸ್ಮಾದೃಭುರ್ವಿಭ್ವಾ ವಾಜಶ್ಚ ಯೂಯಂ ದೇವಾ- ನಿಂದ್ರಾದೀನಗಚ್ಛತ । ಗತ್ವಾಚ ಹೇ ಸ್ವಪಸಃ ಶೋಭನಾಶ್ವರಥಾದಿಕರ್ಮವಂತೋ ಯೂಯಂ ಯಜ್ಞಿಯಂ ಯಜ್ಞಾರ್ಹಂ ಯಜ್ಞಸಂಬಂಧಿನಂ ಭಾಗಂ ಸೋಮರೂಪಂ ದೇವತ್ವಂ ಪ್ರಾಪ್ತ್ಯೈ ಸೇವನೀಯಮೈತನ । ಪ್ರಾಪ್ನುತ । ಕರ್ಮಸಾಮರ್ಥ್ಯೇನ ಹವಿರ್ಭುಜೋ ಭವತೇತ್ಯರ್ಥಃ । ಇತ್ಯೇವಮೃಷಿರಾಹ ॥

### ಪ್ರತಿಪದಾರ್ಥ

(ಋಭುಗಳ ಕಲಾಕೌಶಲ್ಯದಿಂದ) **ಇಂದ್ರಃ**—ಇಂದ್ರನು । **ಹರೀ**—ಹರಿಯೆಂಬ ತನ್ನ ಕುದುರೆಗಳನ್ನು । **ಯುಯುಜೇ**—ರಥಕ್ಕೆ ಯೋಜಿಸಿದನು । **ಅಶ್ವಿನಾ**—ಅಶ್ವಿನೀದೇವತೆಗಳು । **ರಥಂ**—(ತಮ್ಮ) ರಥವನ್ನು (ಸಿದ್ಧ ಪಡಿಸಿದರು) । **ಬೃಹಸ್ಪತಿಃ**—ಬೃಹಸ್ಪತಿಯು । **ವಿಶ್ವರೂಪಾಂ**—ನಾನಾರೂಪಗಳಿಂದ ಕೂಡಿದ ಗೋವನ್ನು । **ಉಪಾಜತೆ**—ಸ್ವೀಕರಿಸಿದನು (ಆದ್ದರಿಂದ) । **ಋಭುಃ ವಿಭ್ವಾ ವಾಜಶ್ಚ**—ಈ ಮೂರು ಹೆಸರುಗಳಿಂದ ಪ್ರಸಿದ್ಧರಾದ ಎಲೈ ಋಭುದೇವತೆಗಳೇ । **ದೇವಾನ್**—ದೇವತಗಳಲ್ಲಿಗೆ । **ಅಗಚ್ಛತ**—ಹೋಗಿರಿ । **ಸ್ವಪಸಃ**—ಶ್ರೇಷ್ಠವಾದ (ಅಶ್ವ ಗಳನ್ನೂ ರಥಗಳನ್ನೂ ನಿರ್ಮಿಸುವ) ಕರ್ಮಗಳುಳ್ಳ ನೀವು । **ಯಜ್ಞಿಯಂ**—ಯಜ್ಞಸಂಬಂಧವಾದ । **ಭಾಗಂ**— ಸೋಮರಸದ ಭಾಗವನ್ನು । **ಐತನ**—ಹೊಂದಿರಿ

### ಭಾವಾರ್ಥ

ಋಭುಗಳ ಕರ್ಮಕೌಶಲ್ಯದಿಂದ ಇಂದ್ರನು ಹರಿಗಳೆಂಬ ತನ್ನ ಕುದುರೆಗಳನ್ನು ತನ್ನ ರಥಕ್ಕೆ ಯೋಜಿಸಿದನು. ಅಶ್ವಿನೀದೇವತೆಗಳು ತಮ್ಮ ರಥವನ್ನು ಸಿದ್ಧಪಡಿಸಿದರು. ಬೃಹಸ್ಪತಿಯು ನಾನಾರೂಪಗಳಿಂದ ಕೂಡಿದ ಗೋವನ್ನು ಸ್ವೀಕರಿಸಿದನು. ಆದ್ದರಿಂದ ಈ ಮೂರುಹೆಸರುಗಳಿಂದ ಪ್ರಸಿದ್ಧರಾದ ಎಲೈ ಋಭುದೇವತೆಗಳೇ, ನೀವು ದೇವತೆ ಗಳಲ್ಲಿಗೆ ಹೋಗಿರಿ. ಶ್ರೇಷ್ಠವಾದ ಅಶ್ವಗಳನ್ನೂ ರಥಗಳನ್ನೂ ನಿರ್ಮಿಸುವ ಕಲಾಕೌಶಲ್ಯವುಳ್ಳ ನೀವು ಯಜ್ಞಸಂಬಂಧ ವಾದ ಸೋಮರಸದ ಭಾಗವನ್ನು ಹೊಂದಿರಿ.

### English Translation

Indra has caparisoned his horses: the Ashwins have harnessed their cars: Brihaspathi has accepted the omniform (cow): therefore, Ribhu, Vibhwa, and Vaja, go to the gods, doers of good deeds, enjoy your sacrificial portion.

॥ ವಿಶೇಷವಿಷಯಗಳು ॥

ಋಭುಗಳು ದೇವತೆಗಳೊಂದಿಗೆ ಸಮಾನವಾದ ಸ್ಥಾನವನ್ನು ಹೊಂದಿ ಅವರೊಡನೆ ಯಜ್ಞಭಾಗವನ್ನು ಸಹಿಸಲು ಸಾಧನವಾದ ಅವರ ಅಲೌಕಿಕವಾದ ಕಲಾಕೌಶಲ್ಯವೂ ಶ್ರೇಷ್ಠವಾದ ಕರ್ಮಗಳೂ ವರ್ಣಿತವಾಗಿವೆ. ಅವರ ಸಹಾಯದಿಂದ ಇಂದ್ರನು ಶ್ರೇಷ್ಠವಾದ ರಥವನ್ನೂ ಅದಕ್ಕೆ ತಕ್ಕ ಅಶ್ವಗಳನ್ನೂ ಪಡೆದುದನ್ನು ತಿಳಿಸಿದೆ.

**ಇಂದ್ರೋ ಹರೀ**—ಇಂದ್ರನು ತನ್ನ ರಥಕ್ಕೆ **ಹರೀ** ಎಂಬ ತನ್ನ ಅಶ್ವಗಳನ್ನು ಕಟ್ಟಿದನು. **ಹರೀ ಇಂದ್ರಸ್ಯ** (ನಿ. ೨-೨೮) ಎಂದು ಇಂದ್ರನ ಅಶ್ವಗಳ ಹೆಸರು ಪ್ರಸಿದ್ಧವಾಗಿದೆ.

**ತಕ್ಷನ್ರಥಂ ಸುವೃತಂ ವಿದ್ಮನಾಪಸಸ್ತಕ್ಷನ್ಹರೀ ಇಂದ್ರವಾಹಾ ವೃಷಣ್ವಸೂ ।**
(ಋ. ಸಂ. ೧-೧೧೧-೧)

**ಅನವಸ್ತೇ ರಥಮಶ್ವಾಯ ತಕ್ಷನ್ ತ್ವಷ್ಟಾ ವಜ್ರಂ ಪುರುಹೂತ ದ್ಯುಮಂತಂ ।**
(ಋ. ಸಂ. ೫-೩೧-೪)

**ಇಂದ್ರಾಯ ಚ ಹರೀ ।** (ಬೃ. ದೇ. ೩-೮೫).

ಎಂದು ಋಭುಗಳು ತಮ್ಮ ಉತ್ಕೃಷ್ಟವಾದ ನೈಪುಣ್ಯದಿಂದ ದೇಹದಾರ್ಢ್ಯದಿಂದ ಕೂಡಿದವೂ ಇಂದ್ರನ ವಾಹನಗಳೂ ಆದ ಹರೀಯೆಂಬ ಅಶ್ವಗಳನ್ನು ನಿರ್ಮಿಸಿದರು ಎಂದು ಪ್ರಸಿದ್ಧವಾಗಿದೆ. ಇದರಂತೆಯೇ,

**ಬೃಹಸ್ಪತೇರರಥಾಶ್ವಿಭ್ಯಾಂ ರಥಂ ದಿವ್ಯಂ ತ್ರಿವಂಧುರಂ** (ಬೃ. ದೇ. ೩-೮೫) ಎಂದು ಬೃಹಸ್ಪತಿಗೂ ಅಶ್ವಿನೀದೇವತೆಗಳಿಗೂ ರಥವನ್ನು ನಿರ್ಮಿಸಿಕೊಟ್ಟ ವಿಷಯವು ಹೇಳಿದೆ. ಇಲ್ಲಿ, **ಬೃಹಸ್ಪತಿರ್ವಿಶ್ವರೂಪಾಂ ಉಪಾಜತ** ಎಂದು ಹೇಳಿದೆ. **ವಿಶ್ವರೂಪಾಂ** ಎಂಬುದಕ್ಕೆ **ನಾನಾರೂಪೋಪೇತಾಂ ಗಾಂ ।** ನಾನಾವರ್ಣಾತ್ಮಕವಾದ ಗೋವೆಂದು ಸಾಯಣರು ವಿವರಿಸಿದ್ದಾರೆ

**ಯದ್ಯಪ್ಯತ್ರ ಗೌರಿತಿ ವಿಶೇಷೋ ನ ಶ್ರುತಃ ತಥಾಪಿ ಪೂರ್ವಂ ಧೇನುಃ ಕರ್ತ್ವಾ ಇತ್ಯುಕ್ತತ್ವಾತ್ ಪರಸ್ತಾಚ್ಚ ಯೋ ಧೇನುಂ ವಿಶ್ವಜುವಂ ವಿಶ್ವರೂಪಾಂ ಇತಿ ವಕ್ಷ್ಯಮಾಣತ್ವಾಚ್ಚ ವಿಶ್ವರೂಪಾ ಗೌಃ ಇತ್ಯೇವಾಧ್ಯವಸೀಯತೇ ॥** ಇಲ್ಲಿ ಗೌಃ ಎಂಬ ವಿಶೇಷ್ಯವಿಲ್ಲ, ಆದರೂ ಸಹ ಹಿಂದೆ **ಧೇನು** ನಿರ್ಮಾಣದ ವಿಷಯವನ್ನು ಹೇಳಿರುವುದರಿಂದಲೂ (೧-೧೬೧-೩) ಮುಂದೆಯೂ **ವಿಶ್ವರೂಪಾಂ** ಎಂದು ಗೋವಿನ ಸೃಷ್ಟಿಯನ್ನು ಹೇಳುವುದರಿಂದಲೂ ಇಲ್ಲಿಯೂ ಸಹ ಗೋವೆಂದೇ ಅರ್ಥಮಾಡಬೇಕೆಂದು ಸಾಯಣರು ಶಂಕಾಪರಿಹಾರವನ್ನು ಮಾಡಿದ್ದಾರೆ.

**ವೃಷಭಂ ಚರ್ಷಣೀನಾಂ ವಿಶ್ವರೂಪಮದಾಭ್ಯಂ । ಬೃಹಸ್ಪತಿಂ ವರೇಣ್ಯಂ ।**
(ಋ. ಸಂ. ೩-೬೨-೬)

ಇತ್ಯಾದಿ ಋಕ್ಕುಗಳಲ್ಲಿ **ವಿಶ್ವರೂಪ**ವೆಂಬ ಪದವು ಬೃಹಸ್ಪತಿಗೇ ವಿಶೇಷಣವಾಗಿದೆ. **ವಿಶ್ವರೂಪಾ ಬೃಹಸ್ಪತೇಃ** (ನಿ. ೨-೨೮) ಎಂಬ ನಿರುಕ್ತವಾಕ್ಯದ ಪ್ರಕಾರ ಬೃಹಸ್ಪತಿಯ ಅಶ್ವಕ್ಕೆ **ವಿಶ್ವರೂಪ**ವೆಂಬ ಹೆಸರೆಂದು ತಿಳಿಯುತ್ತದೆ.

**ರಥಂ ಯೇ ಚಕ್ರುಃ ಸುವೃತಂ ನರೇಷ್ಠಾಂ ಯೇ ಧೇನುಂ ವಿಶ್ವಜುವಂ ವಿಶ್ವರೂಪಾಂ ।**
**ತ ಆ ತಕ್ಷನ್ತ್ವೃಭವೋ ರಯಿಂ ನಃ ಸ್ವವಸಃ ಸ್ವಪಸಃ ಸುಹಸ್ತಾಃ ॥**
(ಋ. ಸಂ. ೪-೩೩-೮)

ಎಂಬಲ್ಲಿ ಋಭುಗಳು (ಬೃಹಸ್ಪತಿಗೆ) **ವಿಶ್ವರೂಪಾ** ಎಂಬ ಧೇನುವನ್ನೂ ಸೃಷ್ಟಿಸಿದ ವಿಷಯವು ಸ್ಪಷ್ಟವಾಗಿದೆ. ಆ ಅಂಶವನ್ನು ಇಲ್ಲಿಯೂ ತಿಳಿಸಿದೆ.

ಅಶ್ವಿನೀದೇವತೆಗಳ ರಥದ ವೈಶಿಷ್ಟ್ಯದ ವರ್ಣನೆಯಿಂದ ಅದನ್ನು ನಿರ್ಮಿಸಿದ ಋಭುಗಳ ನಿರ್ಮಾಣ ಕೌಶಲ್ಯವು ತಿಳಿಯುತ್ತದೆ. **ತ್ರಿಚಕ್ರಃ, ಮಧುವಾಹನಃ, ತ್ರಿವಂಧುರಃ** ಇತ್ಯಾದಿ ವಿಶೇಷಣಗಳು ಅವರ ರಥದ ವೈಶಿಷ್ಟ್ಯವನ್ನು ತಿಳಿಸುತ್ತವೆ. ಋಭುಗಳ ರಚನಾಚಾತುರ್ಯವನ್ನು ತೋರಿಸುವ ಅಶ್ವಿನೀದೇವತೆಗಳ ರಥದ ವರ್ಣನೆಯನ್ನು ಋಕ್ಸಂಹಿತೆಯಲ್ಲಿ ಬಹಳವಾಗಿ ವರ್ಣಿಸಲ್ಪಟ್ಟಿರುವುದು.

**ನಿಮಿಷಶ್ಚಿಜ್ಜವೀಯಸಾ ರಥೇನಾ ಯಾತಮಶ್ವಿನಾ । ಅಂತಿ ಷದ್ಭೂತು ವಾಮವಃ ॥**

(ಋ. ಸಂ. ೮-೭೩-೨)

ಎಂಬಲ್ಲಿ ಅಶ್ವಿನೀದೇವತೆಗಳ ರಥವು ಕಣ್ಣುಮಿಟುಕಿಸುವ ವೇಗಕ್ಕಿಂತಲೂ ವೇಗವಾಗಿ ಓಡಬಲ್ಲುದೆಂದೂ,

**ಪ್ರ ವಾಂ ರಥೋ ಮನೋಜವಾ ಇಯರ್ತಿ ತಿರೋ ರಜಾಂಸ್ಯಶ್ವಿನಾ ಶತೋತಿಃ ।**
**ಅಸ್ಮಭ್ಯಂ ಸೂರ್ಯಾವಸೂ ಇಯಾನಃ ।**

(ಋ. ಸಂ. ೭-೬೮-೩)

ಇತ್ಯಾದಿ ಕಡೆಗಳಲ್ಲಿ ಸಕಲಲೋಕಗಳಲ್ಲಿಯೂ ಸಂಚರಿಸಬಲ್ಲುದೆಂದೂ, ಸಕಲಲೋಕಕ್ಕೂ ರಕ್ಷಣಾತ್ಮಕವೆಂದೂ ಅದರ ಮಹಿಮೆಯು ಸ್ತುತಿಸಲ್ಪಟ್ಟು,

**ಆ ತೇನ ಯಾತಂ ಮನಸೋ ಜವೀಯಸಾ ರಥಂ ಯಂ ವಾಮೃಭವಶ್ಚಕ್ರುರಶ್ವಿನಾ ।**
**ಯಸ್ಯ ಯೋಗೇ ದುಹಿತಾ ಜಾಯತೇ ದಿವ ಉಭೇ ಅಹನೀ ಸುದಿನೇ ವಿವಸ್ವತಃ ॥**

(ಋ. ಸಂ. ೧೦-೩೯-೧೨)

ಎಂಬಲ್ಲಿ ಋಭುಗಳಿಂದ ನಿರ್ಮಿತವಾದ ಅಶ್ವಿನೀದೇವತೆಗಳ ರಥವು ಮನೋವೇಗಕ್ಕಿಂತಲೂ ಹೆಚ್ಚು ವೇಗವುಳ್ಳದ್ದು. ಅದನ್ನು ಅಶ್ವಗಳೊಡನೆ ಯೋಜಿಸಿದೊಡನೆಯೇ ದಿವೋದುಹಿತೆಯಾದ ಉಷಸ್ಸಿನ ಆವಿರ್ಭಾವವಾಗುತ್ತದೆ ಮತ್ತು ಲೋಕಕಲ್ಯಾಣವಾಗುತ್ತದೆಂದು ಕೇವಲ ರಥದ ಸೌಂದರ್ಯಕ್ಕೆ ಮಾತ್ರವಲ್ಲದೆ ಲೋಕಕಲ್ಯಾಣಕ್ಕೂ ಸಾಧನವಾಗಿದೆ ಯೆಂಬ ವಿಷಯವೂ ಸಹ ವರ್ಣಿತವಾಗಿದೆ.

ಇವೆಲ್ಲವೂ ಋಭುಗಳ ನಿರ್ಮಾಣಕೌಶಲ್ಯದ ಮಹಿಮೆ. ಇಂತಹ ದಿವ್ಯಶಕ್ತಿಯುಳ್ಳ ಮತ್ತು ದೇವತೆಗಳಿಗೂ ಆಶ್ಚರ್ಯವೆನಿಸುವ ರೀತಿಯಲ್ಲಿ ಪೃಥಿವ್ಯಂತರಿಕ್ಷಗಳಲ್ಲೆಲ್ಲಾ ತಮ್ಮ ಶ್ರೇಷ್ಠವಾದ ಕರ್ಮಗಳಿಂದ ತಮ್ಮ ಪ್ರಭಾವವನ್ನು ಬೀರುತ್ತಿರುವ ಋಭುಗಳನ್ನು ಯಜ್ಞದಲ್ಲಿ ಭಾಗವಹಿಸಲು ದೇವತೆಗಳೊಡನೆ ಸೇರಿಕೊಳ್ಳಿರಿ ಎಂದು ಪ್ರಾರ್ಥಿಸಿದೆ.

### ವ್ಯಾಕರಣಪ್ರಕ್ರಿಯಾ

**ಯುಯುಜೇ**—ಯುಜಿರ್ ಯೋಗೇ ಧಾತು. ಅಂತರ್ಭಾವಿತಣ್ಯರ್ಥಕವಾಗಿದೆ. ಲಿಟ್ ಉತ್ತಮಪುರುಷ ಏಕವಚನಾಂತರೂಪ. **ಚಾದಿಲೋಪೇ ವಿಭಾಷಾ** (ಪಾ. ಸೂ. ೮-೧-೬೩) ಎಂಬುದರಿಂದ ನಿಘಾತಸ್ವರಪ್ರತಿಷೇಧ ಬರುತ್ತದೆ. ಪ್ರತ್ಯಯಸ್ವರದಿಂದ ಅಂತೋದಾತ್ತವಾಗುತ್ತದೆ.

**ಅಶ್ವಿನಾ—ಸುಪಾಂ ಸುಲುಕ್** (ಪಾ. ಸೂ. ೭-೧-೩೯) ಎಂಬುದರಿಂದ ದ್ವಿವಚನಕ್ಕೆ (ಔ)ಆಕಾರಾದೇಶ.

ಬೃಹಸ್ಪತಿಃ—**ತದ್ ಬೃಹತೋಃಕರಪತ್ಯೋಃ**-ಎಂಬ ವಚನದಿಂದ ಸುಟಾಗಮ **ಉಭೇ ವನಸ್ಪತ್ಯಾದಿಷು** (ಪಾ. ಸೂ. ೬-೨-೧೪೦) ಎಂಬುದರಿಂದ ಉಭಯಪದಪ್ರಕೃತಿಸ್ವರ ಬರುತ್ತದೆ.

**ವಿಶ್ವರೂಪಾಂ—ಬಹುವ್ರೀಹೌ ವಿಶ್ವಂ ಸಂಜ್ಞಾಯಾಮ್** (ಪಾ. ಸೂ. ೬-೨-೧೦೬) ಎಂಬುದರಿಂದ ಪೂರ್ವಪದಾಂತೋದಾತ್ತಸ್ವರ ಬರುತ್ತದೆ.

**ಆಜತ**—ಅಜ ಗತಿಕ್ಷೇಪಣಯೋಃ ಧಾತು. ವ್ಯತ್ಯಯದಿಂದ ಆತ್ಮನೇಪದಿಯಾಗುತ್ತದೆ. ಲಙ್ ಉತ್ತಮ ಪುರುಷಏಕವಚನಾಂತರೂಪ. ತಿಙಂತನಿಘಾತಸ್ವರ ಬರುತ್ತದೆ.

**ಆಗಚ್ಛತ**—ಗಮ್ಲೃ ಗತೌ ಧಾತು. ಲಙ್ ಮಧ್ಯಮಪುರುಷಬಹುವಚನಾಂತರೂಪ. ತಿಙಂತನಿಘಾತಸ್ವರ ಬರುತ್ತದೆ.

**ಸ್ವಪಸಃ**—ಶೋಭನಂ ಅಪಃ ಯೇಷಾಂ ತೇ ಸ್ವಪಸಃ **ಆದ್ಯುದಾತ್ತಂ ದ್ವ್ಯಚ್ ಛಂದಸಿ** (ಪಾ. ಸೂ. ೬-೧-೧೧೯) ಎಂಬುದರಿಂದ ಉತ್ತರಪದ ಆದ್ಯುದಾತ್ತಸ್ವರ ಬರುತ್ತದೆ.

ಐತನ—ಇಣ್ ಗತೌ ಧಾತು. **ಲಙ್** ಮಧ್ಯಮಪುರುಷಬಹುವಚನಕ್ಕೆ ಥಾದೇಶ. **ತಪ್ತನಪ್ತನಥನಾಶ್ಚ** (ಪಾ. ಸೂ. ೭-೧-೪೫) ಎಂಬುದರಿಂದ ಅದಕ್ಕೆ ತನಪ್ಆದೇಶ. **ಆಡಜಾದೀನಾಂ** (ಪಾ ಸೂ. ೬-೪-೭೨) ಎಂಬುದರಿಂದ ಅಂಗಕ್ಕೆ ಆಡಾಗಮ. **ಆಟಶ್ಚ** ಸೂತ್ರದಿಂದ ವೃದ್ಧಿ. ಅತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ. || ೬ ||

ಸಂಹಿತಾಪಾಠಃ

ನಿಶ್ಚರ್ಮಣೋ ಗಾಮರಿಣೀತ ಧೀತಿಭಿರ್ಯಾ ಜರಂತಾ ಯುವಶಾ ತಾಕೃಣೋತನ ।
ಸೌಧನ್ವನಾ ಅಶ್ವಾದಶ್ವಮತಕ್ಷತ ಯುಕ್ತ್ವಾ ರಥಮುಪ ದೇವಾಁ ಅಯಾತನ || ೭ ||

ಪದಪಾಠ

ನಿಃ । ಚರ್ಮಣಃ । ಗಾಂ । ಅರಿಣೀತ । ಧೀತಿಽಭಿಃ । ಯಾ । ಜರಂತಾ । ಯುವಶಾ । ತಾ । ಅಕೃಣೋತನ ।
ಸೌಧನ್ವನಾಃ । ಅಶ್ವಾತ್ । ಅಶ್ವಂ । ಅತಕ್ಷತ । ಯುಕ್ತ್ವಾ । ರಥಂ । ಉಪ । ದೇವಾನ್ । ಅಯಾತನ । || ೭ ||

### ಸಾಯಣಭಾಷ್ಯಂ

ಹೇ ಸೌಧನ್ವನಾಃ ಯೂಯಂ ನಿಶ್ಚರ್ಮಣೋ ಮೃತಾಯಾ ಗೋಃ ಸಕಾಶಾದುತ್ಕೃತ್ತಾಚ್ಚರ್ಮಣೋ ಗಾಂ ನೂತನಾಂ ನಿರರಿಣೀತ । ನಿರಗಮಯತ । ಉತ್ಪಾದಿತವಂತ ಇತ್ಯರ್ಥಃ । ತೇನೈವ ಚರ್ಮಣಾ ಸಂವೀತಾಂ ತತ್ಸದೃಶೀಮನ್ಯಾಂ ಧೇನುಂ ಕೃತವಂತ ಇತ್ಯರ್ಥಃ । ಯದ್ಯಪಿ ಪೂರ್ವಮೇವಾಶ್ವಾದೀನಾಂ ವಿನಿಯೋಗ ಉಕ್ತಃ ತಥಾಪಿ ತೇಷಾಮತ್ಯಂತದುಃಖಸಂಪಾದತ್ವಜ್ಞಾಪನಾಯ ಪುನರಾಹ । ನ ಕೇವಲಂ ಗೋಃಕರಣಮೇವ ಅಪಿ ಚ ಯಾ ಜರಂತಾ ಯೌ ಜೀರ್ಣೌ ಪಿತರೌ ತಾ ತೌ ಯುವಶಾ ಯುವಾನಾವಕೃಣೋತನ । ಅಕುರುತ । ಕಿಂಚಾಶ್ವಾದಶ್ವಮೇಕೇನ ವಿದ್ಯಮಾನೇನಾಶ್ವೇನಾಶ್ವಾಂತರಮತಕ್ಷತ । ಪ್ರಯತ್ನೇನ ಸಂಪಾದಿತವಂತಃ । ಯಸ್ಮಾದೇವಂ ಕೃತವಂತಸ್ತಸ್ಮಾದ್ರಥಂ ಯುಷ್ಮದೀಯಂ ಯುಕ್ತ್ವಾಶ್ವೈರ್ಯೋಜಯಿತ್ವಾ ದೇವಾನಿಂದ್ರಾದೀನುಪಾಯಾತನ । ದೇವಸಮೀಪಂ ಪ್ರಾಪ್ನುತ ॥

### ಪ್ರತಿಪದಾರ್ಥ

**ಸೌಧನ್ವನಾಃ**—ಎಲೈ ಸುಧನ್ವಪುತ್ರರೇ । **ನಿಶ್ಚರ್ಮಣಃ**—ಮೃತವಾದ ಗೋವಿನ ಚರ್ಮದಿಂದ । **ಗಾಂ**—(ನೂತನವಾದ) ಗೋವನ್ನು । **ಅರಿಣೀತ**—ನಿರ್ಮಿಸಿದಿರಿ । **ಧೀತಿಭಿಃ**—ನಿಮ್ಮ ಪ್ರಭಾವಪೂರಿತವಾದ ಕರ್ಮಗಳಿಂದ **ಯಾ**—ಯಾವ ಮಾತಾಪಿತೃಗಳು । **ಜರಂತಾ**—ಜೀರ್ಣರಾಗಿದ್ದರೋ । **ತಾ**—ಅವರನ್ನು । **ಯುವಶಾ**—ಯುವಕರನ್ನಾಗಿ । **ಅಕೃಣೋತನ** — ಮಾಡಿದಿರಿ । **ಅಶ್ವಾತ್**—(ಪೂರ್ವದಲ್ಲಿದ್ದ) ಒಂದೇ ಅಶ್ವದಿಂದ । **ಅಶ್ವಂ**—ಬೇರೊಂದು ಅಶ್ವವನ್ನು । **ಅತಕ್ಷತ**—ನಿರ್ಮಿಸಿದಿರಿ । **ರಥಂ**—ನಿಮ್ಮ ರಥವನ್ನು । **ಯುಕ್ತ್ವಾ**— ಅಶ್ವಗಳೊಂದಿಗೆ ಸಿದ್ಧಪಡಿಸಿಕೊಂಡು । **ದೇವಾನ್**—ಇಂದ್ರಾದಿ ದೇವತೆಗಳ ಸಮೀಪಕ್ಕೆ । **ಆಯಾತನ**—ಹೋಗಿ ಸೇರಿ.

### ಭಾವಾರ್ಥ

ಎಲೈ ಸುಧನ್ವಪುತ್ರರಾದ ಋಭುಗಳೇ, ಮೃತವಾದ ಗೋವಿನ ಚರ್ಮದಿಂದ ನೀವು ನೂತನವಾದ ಗೋವನ್ನು ಸೃಷ್ಟಿಸಿದಿರಿ. ನಿಮ್ಮ ಪ್ರಭಾವಪೂರಿತವಾದ ಕರ್ಮಗಳಿಂದ ಜೀರ್ಣರಾಗಿದ್ದ ನಿಮ್ಮ ಮಾತಾಪಿತೃಗಳನ್ನು ಯುವಕರನ್ನಾಗಿ ಮಾಡಿದಿರಿ. ಪೂರ್ವದಲ್ಲಿದ್ದ ಒಂದೇ ಒಂದು ಅಶ್ವದಿಂದ ಬೇರೊಂದು ಅಶ್ವವನ್ನು ನಿರ್ಮಿಸಿದಿರಿ. ನಿಮ್ಮ ರಥವನ್ನು ಅಶ್ವಗಳೊಂದಿಗೆ ಸಿದ್ಧಪಡಿಸಿಕೊಂಡು ಇಂದ್ರಾದಿದೇವತೆಗಳ ಸಮೀಪಕ್ಕೆ ಹೋಗಿ ಸೇರಿ.

### English Translation

Sons of Sudhanwan, from a hideless (cow) you have formed a living one: by your marvellous acts you have made your aged parents young: from one horse you have fabricated another: harness now your chariot, and repair unto the gods.

### ॥ ವಿಶೇಷವಿಷಯಗಳು ॥

ಈ ಋಕ್ಕಿನಲ್ಲಿ ವರ್ಣಿತವಾಗಿರುವ ವಿಷಯಗಳನ್ನು ಹಿಂದೆ ಆಗಲೇ ಹೇಳಿರುವುದರಿಂದ ಇಲ್ಲಿಯೂ ವಿವರಿಸುವುದು ಪುನರುಕ್ತವಾದಂತಾಗುತ್ತದೆ ಎಂಬ ಆಶಂಕೆಯನ್ನು ಊಹಿಸಿ **ಯದ್ಯಪಿ ಪೂರ್ವಮೇವಾಶ್ವಾದೀನಾಂ**

ವಿನಿಯೋಗ **ಉಕ್ತಸ್ತಥಾಪಿ ತೇಷಾಮತ್ಯಂತದುಃಖಸಂಪಾದಿತ್ವಜ್ಞಾಪನಾಯ ಪುನರಾಹ** । ಹಿಂದೆಯೇ ಇವನ್ನು ಸೂಚಿಸಿದ್ದರೂ ಸಹ ಇಂತಹ ಕಾರ್ಯಗಳು ಸಾಧಾರಣವಾದ ಶಕ್ತಿಯಿಂದ ಸಾಧಿಸುವುದು ಸಾಧ್ಯವಿಲ್ಲವೆಂದೂ ಇಂತಹ ಕ್ಲೇಶಕರವಾದ ಸಾಧನೆಯನ್ನು ಮಾಡಲು ಅಸಾಧಾರಣವಾದ ಶಕ್ತಿಯು ಬೇಕೆಂದೂ ಸೂಚಿಸಲು ಇಲ್ಲಿ ಪುನಃ ವಿವರಿಸಿದೆಯೆಂದು ಸಮಾಧಾನವನ್ನು ಹೇಳಿದ್ದಾರೆ.

ಇಲ್ಲಿ ಇನ್ನೊಂದಂಶವನ್ನು-ಗಮನಿಸಬೇಕು. ಋಭುಗಳ ಗುರುವಾದ ತ್ವಷ್ಟೃವಿನ ನಿರ್ಮಾಣಕಾರ್ಯವನ್ನು ಸೂಚಿಸುವುದಕ್ಕೆ ಯಾವ **ತಕ್ಷ್** ಧಾತುವನ್ನು ಸಾಧಾರಣವಾಗಿ ಉಪಯೋಗಿಸಿರುವುದೋ ಇಲ್ಲಿಯೂ ಸಹ **ಅಶ್ವಾದಶ್ವಮತಕ್ಷತ** ಎಂದು **ತಕ್ಷ್** ಧಾತುವನ್ನೇ ಉಪಯೋಗಿಸಿದೆ. ಇದಲ್ಲದೇ ಇದೇ ರೀತಿಯಲ್ಲಿ—**ತಕ್ಷನ್ರಥಂ ಸುವೃತಂ** (೧-೧೧೧-೧), **ತ ಆ ತಕ್ಷನ್ತ್ವೃಭವೋ ರಯಿಂ** (೪-೩೩-೮), ಇತ್ಯಾದಿ ಋಕ್ಕುಗಳಲ್ಲಿಯೂ ಸಹ ಋಭುಗಳ ಸೃಷ್ಟಿಕಾರ್ಯವನ್ನು ಈ ಧಾತುವಿನಿಂದಲೇ ಹೇಳಿರುವುದು ಇನ್ನೊಂದು ವಿಶೇಷವಾಗಿದೆ.

**ಧೀತಿಭಿಃ**—ಧೀತಿಶಬ್ದವು ಕರ್ಮನಾಮಗಳಲ್ಲಿಯೂ ಪ್ರಜ್ಞಾನಾಮಗಳಲ್ಲಿಯೂ ಸೇರಿರುವುದರಿಂದಲೂ, ಋಭುಗಳ ವೈಶಿಷ್ಟ್ಯವು ಈ ಎರಡು ಗುಣಗಳಿಂದಲೂ ಪ್ರಕಾಶಿತವಾಗಿರುವುದರಿಂದಲೂ ಇಲ್ಲಿ ಯಾವ ಅರ್ಥವನ್ನಾದರೂ ಹೇಳಬಹುದು.

### ವ್ಯಾಕರಣಪ್ರಕ್ರಿಯಾ

**ಚರ್ಮಣಃ**—ಚರ ಗತೌ ಧಾತು. **ಸರ್ವಧಾತುಭ್ಯೋಮನಿನ್** (ಉ. ಸೂ. ೫೮೪) ಎಂಬುದರಿಂದ ಮನಿನ್ ಪ್ರತ್ಯಯ. **ಞ್ನಿತ್ಯಾದಿರ್ನಿತ್ಯಮ್** (ಪಾ. ಸೂ. ೬-೧-೧೯೭) ಎಂಬುದರಿಂದ ಆದ್ಯುದಾತ್ತಸ್ವರ ಬರುತ್ತದೆ.

**ಅರಿಣೀತ**—ರೀ ಗತಿರೇಷಣಯೋಃ ಧಾತು. ಕ್ರ್ಯಾದಿ. ಲಙ್ ಮಧ್ಯಮಪುರುಷಬಹುವಚನದಲ್ಲಿ ತಾದೇಶ. **ಕ್ರ್ಯಾದಿಭ್ಯಃಶ್ನಾ** ಎಂಬುದರಿಂದ ಶ್ನಾ ವಿಕರಣ. **ಪ್ವಾದೀನಾಂ ಹ್ರಸ್ವಃ** (ಪಾ. ಸೂ. ೭-೩-೮೦) ಎಂಬುದರಿಂದ ಧಾತುವಿಗೆ ಹ್ರಸ್ವ. **ಈಹಲ್ಯಘೋಃ** (ಪಾ. ಸೂ. ೬-೪-೧೧೩) ಎಂಬುದರಿಂದ ವಿಕರಣಾಕಾರಕ್ಕೆ ಈತ್ವ. **ಅಟ್‌ಕುಪ್ವಾಙ್**—ಎಂಬುದರಿಂದ ಣತ್ವ ಅಂಗಕ್ಕೆ ಅಡಾಗಮ. ತಿಙಂತನಿಘಾತಸ್ವರ ಬರುತ್ತದೆ.

**ಜರಂತಾ**—ಜ್ಯೂಷ್ ವಯೋಹಾನೌ ಧಾತು. ಲಟಿಗೆ ಶತ್ರಾದೇಶ. ವ್ಯತ್ಯಯದಿಂದ ಶಪ್ ವಿಕರಣ. ಧಾತುವಿಗೆ ಗುಣ ರ ಪರವಾಗಿ ಬರುತ್ತದೆ ದ್ವಿವಚನ ಪರವಾದಾಗ **ಸುಪಾಂ ಸುಲುಕ್**—(ಪಾ. ಸೂ. ೭-೧-೩೯) ಎಂಬುದರಿಂದ ಅದಕ್ಕೆ ಆಕಾರಾದೇಶ. ಯಾ, ತಾ ಎಂಬಲ್ಲಿಯೂ ಹೀಗೆಯೇ ದ್ವಿವಚನಕ್ಕೆ ಆಕಾರಾದೇಶ.

**ಅಕೃಣೋತನ**—ಕೃವಿ ಹಿಂಸಾಕರಣಯೋಶ್ಚ ಧಾತು ಲಙ್ ಮಧ್ಯಮಪುರುಷಬಹುವಚನಕ್ಕೆ ತನಬಾದೇಶ. ಅತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

**ಅತಕ್ಷತ**—ತಕ್ಷೂ ತನೂಕರಣೇ ಧಾತು. ಲಙ್ ಮಧ್ಯಮಪುರುಷ ಬಹುವಚನಾಂತರೂಪ. ತಿಙಂತನಿಘಾತಸ್ವರ ಬರುತ್ತದೆ.

**ಯುಕ್ತ್ವಾ**— ಯುಜಿರ್ ಯೋಗೇ ಧಾತು. ಅಂತರ್ಭಾವಿತಣ್ಯರ್ಥಕವಾಗಿದೆ. **ಸಮಾನಕರ್ತೃಕ**—(ಪಾ. ಸೂ ೩-೪-೨೧) ಎಂಬುದರಿಂದ ಕ್ತ್ವಾ. ಪ್ರತ್ಯಯ. **ಚೋಃಕುಃ** ಎಂಬುದರಿಂದ ಕುತ್ವ ಪ್ರತ್ಯಯಸ್ವರದಿಂದ ಅಂತೋದಾತ್ತವಾಗುತ್ತದೆ.

**ಅಯಾತನ**—ಯಾ ಪ್ರಾಪಣೇ ಧಾತು. ಲಙ್ ಮಧ್ಯಮಪುರುಷಬಹುವಚನಕ್ಕೆ ಹಿಂದಿನಂತೆ ತನಬಾದೇಶ. ಅಂಗಕ್ಕೆ ಅಡಾಗಮ. ತಿಙಂತನಿಘಾತಸ್ವರ ಬರುತ್ತದೆ. ॥ ೭ ॥

———:o:———

ಸಂಹಿತಾಪಾಠಃ

ಇದಮುದಕಂ ಪಿಬತೇತ್ಯಬ್ರವೀತನೇದಂ ವಾ ಘಾ ಪಿಬತಾ ಮುಂಜನೇಜನಂ ।
ಸೌಧನ್ವನಾ ಯದಿ ತನ್ನೇವ ಹರ್ಯಥ ತೃತೀಯೇ ಘಾ ಸವನೇ ಮಾದಯಾಧ್ವೈ ॥ ೮ ॥

ಪದಪಾಠಃ

ಇದಂ । ಉದಕಂ । ಪಿಬತ । ಇತಿ । ಅಬ್ರವೀತನ । ಇದಂ । ವಾ । ಘ । ಪಿಬತ । ಮುಂಜಽನೇಜನಂ ।
ಸೌಧನ್ವನಾಃ । ಯದಿ । ತತ್ । ನಽಇವ । ಹರ್ಯಥ । ತೃತೀಯೇ । ಘ । ಸವನೇ । ಮಾದಯಾಧ್ವೈ ॥ ೮ ॥

ಸಾಯಣಭಾಷ್ಯಂ

ಇದಾನೀಮೃಷಿರ್ದೇವೈರುಕ್ತಮರ್ಥಂ ತಾನ್ಸಂಬೋಧ್ಯ ಯೂಯಮೃಭೂನೇವಮುಕ್ತವಂತಃ ಸ್ಥೇತ್ಯನುವಾಚಯತಿ । ಹೇ ಸೌಧನ್ವನಾಃ ಸುಧನ್ವನಃ ಪುತ್ರಾಃ ಯೂಯಮಿದಮುದಕಂ ಸೋಮಲಕ್ಷಣಂ ಪಿಬತೇತ್ಯಬ್ರವೀತನ । ಇತ್ಯುಕ್ತವಂತಃ ॥ ಬ್ರವೀತೇರ್ಲಙಃ ಮಧ್ಯಮಬಹುವಚನಸ್ಯ ತಸ್ಯ ತನಬಾದೇಶೇ ಪಿತ್ತ್ವಾದ್ಬ್ರುವ ಈಟ್ । ಪಾ. ೭-೩-೯೩ ॥ ಏತತ್ಪ್ರಾತಃಸವನಿಕಾಭಿಪ್ರಾಯಂ । ವಾಥವಾ । ಘೇತ್ಯನರ್ಥಕಃ ಪ್ರಸಿದ್ಧ್ಯರ್ಥೋ ವಾ । ಇದಂ ಮುಂಜನೇಜನಂ । ಮುಂಜವಾನ್ನಾಮ ಪರ್ವತಃ ಸೋಮೋತ್ಪತ್ತಿಸ್ಥಾನಂ । ತತ ಆಹೃತತ್ವಾತ್ತೇನ ಮುಂಜತೃಣೇನ ಶೋಧಿತಂ । ಅಪಗತತೃಣಮಿತ್ಯರ್ಥಃ । ಇದಂ ಸೋಮರಸರೂಪಮುದಕಂ ಪಿಬತೇತ್ಯಬ್ರವೀತನ । ಏತನ್ಮಾಧ್ಯಂದಿನಸವನಾಭಿಪ್ರಾಯಂ । ಹೇ ಋಭವಃ ಯೂಯಂ ತದುಭಯಸವನಸಂಬಂಧಿ ಸೋಮಪಾನಕಾರ್ಯಂ ನೇವ ಹರ್ಯಥ । ನೈವ ಕಾಮಯಥ । ಹರ್ಯತಿಃ ಕಾಂತಿಕರ್ಮಾ । ಹರ್ಯತ್ಯುಶಿಗಿತಿ ತತ್ಕರ್ಮಸು ಪಾಠಾತ್ । ತೃತೀಯೇ ಸವನೇ ತು ಮಾದಯಾಧ್ವೈ । ಅತ್ಯರ್ಥಂ ತೃಪ್ತಾ ಭವಥ । ಋಭವೋ ದೇವಾಃ ಸೋಮಸ್ಯ ಮತ್ಸನ್ನಿತಿ ತೃತೀಯಸವನೇ ತೇಷಾಂ ಸೋಮಪಾನಸದ್ಭಾವಾತ್ । ಏವಂ ಯೂಯಮೃಭೂನುಕ್ತವಂತಃ । ಅಥವಾ ಋಭೂನ್ಪ್ರತಿ ತಸ್ಯೈ-

ವೇದಂ ವಾಕ್ಯಂ । ಹೇ ಸೌಧನ್ವನಾಃ ಯೂಯಂ ದೇವತ್ವಂ ಪ್ರಾಪ್ಯ ದೇವಯಜನಂ ಪ್ರತಿ ಸೋಮಪಾನಾಯ ರಥೇನಾಗತ್ಯ ಶ್ರಾಂತಾನಶ್ವಾನ್ ಪ್ರಾತಸ್ಸವನ ಇದಮುದಕಂ ಸೋಮಲಕ್ಷಣಂ ಪಿಬತೇತ್ಯಬ್ರವೀತನ । ತತ್ರ ಯದಿ ನೇಚ್ಛಥ ಇದಂ ವಾ ಮುಂಜನೇಜನಂ ಮುಂಜೇನ ದೂಷಿತಂ ವಾಜಿನಂ ಪಿಬತೇತ್ಯಬ್ರವೀತನ ಪಶ್ಚಾತ್ತದ್ವ್ಯಯಂ ಯದಿ ನೇವ ಹರ್ಯಥ ಹೇ ಅಶ್ವಾಃ ಯೂಯಂ ತೃತೀಯೇ ಸವನೇ ಮಾದಯಾಧ್ವೈ । ತತ್ರಾಪಿ ವಾಜಿನಪ್ರಚಾರಾತ್ ॥

ಪ್ರತಿಪದಾರ್ಥ

**ಸೌಧನ್ವನಾಃ**—ಎಲೈ ಸುಧನ್ವಪುತ್ರರಾದ ಋಭುಗಳೇ । **ಇದಂ ಉದಕಂ**—ಸೋಮರೂಪವಾದ (ಪ್ರಾತಃ ಸವನದ) ಈ ಉದಕವನ್ನು । **ಪಿಬತ**—ಕುಡಿಯಿರಿ । **ಇತಿ**—ಹೀಗೆಂಬುದಾಗಿ । **ಅಬ್ರವೀತನ**—ಹೇಳಿದರು । **ವಾ (ಘ)**—ಅಥವಾ । **ಮುಂಜನೇಜನಂ**—ಮುಂಜಪರ್ವತದಲ್ಲಿ ಸೋಮದೊಂದಿಗೆ ಬೆಳೆದ ತೃಣದಿಂದ ಬೇರೆಯಾಗಿ ಶುದ್ಧವಾದ । **ಇದಂ (ಘ)**—ಈ ರಸರೂಪವಾದ ಉದಕವನ್ನಾದರೂ । **ಪಿಬತ**—ಕುಡಿಯಿರಿ । **ಯದಿ**—ಒಂದು ವೇಳೆ । **ತತ್**—ಅದನ್ನೂ । **ನೇವ ಹರ್ಯಥ**—ಇಚ್ಛಿಸದಿದ್ದರೆ । **ತೃತೀಯೇ ಘ ಸವನೇ**—ತೃತೀಯಸವನದಲ್ಲಾದರೂ । **ಮಾದಯಾಧ್ವೈ**—ಪಾನವನ್ನುಮಾಡಿ ತೃಪ್ತಿಪಡಿರಿ.

ಭಾವಾರ್ಥ

ಎಲೈ ಸುಧನ್ವಪುತ್ರರಾದ ಋಭುಗಳೇ, ಪ್ರಾತಸ್ಸವನದಲ್ಲಿ ಸೋಮರೂಪವಾದ ಈ ಉದಕವನ್ನು ಕುಡಿಯಿರಿ. ಅಥವಾ ಮುಂಜತೃಣದಿಂದ ಬೇರೆಯಾದುದೂ ಶುದ್ಧವಾದುದೂ ಆದ ಮಾಧ್ಯಂದಿನಸವನದ ರಸವನ್ನು ಪಾನಮಾಡಿ ಅಥವಾ ಒಂದುವೇಳೆ ನಿಮಗೆ ಅದೂ ಹಿಡಿಸದಿದ್ದರೆ ತೃತೀಯಸವನದಲ್ಲಾದರೂ ಪಾನಮಾಡಿ ತೃಪ್ತಿಯನ್ನು ಹೊಂದಿರಿ.

## English Translation

They, (the gods), have said, Sons of Sudhanwan, drink of this water, (the Soma juice); or drink that which has been filtered through the Munja grass; or if you be pleased with neither of these, be exhilarated (by that which is drunk) at the third (daily) sacrifice.

ವಿಶೇಷವಿಷಯಗಳು

ಈ ಋಕ್ಕಿಗೆ ಎರಡು ವಿಧವಾದ ಅನ್ವಯವನ್ನು ಮಾಡಿದೆ. ಮೊದಲನೆಯದಾಗಿ, ಸೂಕ್ತದ್ರಷ್ಟೃವಾದ ಋಷಿಯು ದೇವತೆಗಳನ್ನುದ್ದೇಶಿಸಿ ಅವರು ಋಭುಗಳಿಗೆ ಸೋಮಪಾನಕ್ಕಾಗಿ ಆಹ್ವಾನವಿತ್ತುದನ್ನು ಅವರಿಗೆ ' ನೀವು ಋಭುಗಳಿಗೆ ಹೀಗೆ ಹೇಳಿದಿರಿ ' ಎಂಬುದಾಗಿಯೂ, ಎರಡನೆಯದಾಗಿ, ಋಭುಗಳನ್ನೇ ಉದ್ದೇಶಿಸಿ, ಸೋಮಪಾನಕ್ಕಾಗಿ ದೇವಯಜ್ಞಕ್ಕಾಗಿ ತಮ್ಮ ರಥದಲ್ಲಿ ಬಂದ ನಂತರ ತಮ್ಮ ಅಶ್ವಗಳಿಗೆ ಅವರು ಪಾನಕ್ಕಾಗಿ ಪ್ರೇರಿಸಿದುವನ್ನು ' ನೀವು ನಿಮ್ಮ ಅಶ್ವಗಳಿಗೆ ಹೀಗೆ ಹೇಳಿದಿರಿ ' ಎಂಬುದಾಗಿಯೂ ವಿವರಿಸಿದೆ.

**ಇದಮುದಕಂ ಪಿಬತ ; ಇದಂ ವಾ ಪಿಬತ ; ತೃತೀಯೇ ಸವನೇ ಮಾದಯಧ್ವೈ ।** ಎಂದು ಮೂರು ಸಲ ಹೇಳಿರುವುದನ್ನು **ಏತತ್ಪ್ರಾತಸ್ಸವನಿಕಾಭಿಪ್ರಾಯಂ ; ಏತನ್ಮಾಧ್ಯಂದಿನ ಸವನಾಭಿಪ್ರಾಯಂ** ಎಂದು

ಮೊದಲನೆಯ ಎರಡು ವಾಕ್ಯಕ್ಕೆ ಸಂದರ್ಭವನ್ನು ತೋರಿಸಿದೆ. ತೃತೀಯಸವನದಲ್ಲಿ ಅವರಿಗೆ ಸ್ಥಾನವು ದೊರೆತದ್ದರಿಂದ **ಮಾದಯಧ್ವೈ** ಎಂಬ ಪದವನ್ನು ಪ್ರಯೋಗಿಸಿದೆಯೆಂದು ತಿಳಿಸಿದೆ. ಮೊದಲು ಎರಡು ಸಲ ಅವರಿಗೆ ಅವಕಾಶವು ದೊರೆಯದೇ ಇದ್ದ ಸನ್ನಿವೇಶವು ಈ ರೀತಿ ವರ್ಣಿತವಾಗಿದೆ

**ಋಭವೋ ವೈ ದೇವೇಷು ತಪಸಾ ಸೋಮಪೀಥಮಭ್ಯಜಯಂಸ್ತೇಭ್ಯಃ ಪ್ರಾತಸ್ಸವನೇ ವಾಚಿ ಕಲ್ಪಯಿಷಂಸ್ತಾನಗ್ನಿರ್ವಸುಭಿಃಪ್ರಾತಸ್ಸವನಾದನುದತ ।**

(ಐ. ಬ್ರಾ ೩-೩೦)

ಋಭುಗಳು ತಮ್ಮ ಅಲೌಕಿಕವಾದ ಕರ್ಮಶಕ್ತಿಯಿಂದ ದೇವತೆಗಳ ಸ್ಥಾನವನ್ನು ಹೊಂದಿದರು. ಆಗ ದೇವತೆಗಳು ಅವರನ್ನೂ ತಮ್ಮೊಡನೆ ಸೋಮಪಾನಕ್ಕೆ ಸೇರಿಸಿಕೊಳ್ಳಬೇಕೆಂದು ಸಿದ್ಧಪಡಿಸಿದಾಗ **ಅಗ್ನಿಯು ವಸುಗಳೊಂದಿಗೆ** ಸೇರಿಕೊಂಡು ಅವರನ್ನು ಸೇರಿಸದೆ ಅಟ್ಟಿಬಿಟ್ಟನು.

**ತೇಭ್ಯೋ ಮಾಧ್ಯಂದಿನೇ ಸವನೇ ವಾಚಿ ಕಲ್ಪಯಿಷಂಸ್ತಾನಿಂದ್ರೋ ರುದ್ರೈರ್ಮಾಧ್ಯಂದಿನಾತ್ಸವನಾದನುದತ ।**

(ಐ. ಬ್ರಾ. ೩-೩೦)

ಅನಂತರ ಮಾಧ್ಯಂದಿನಸವನದಲ್ಲಿ ಅವಕಾಶವನ್ನು ಕಲ್ಪಿಸಬೇಕೆಂದು ದೇವತೆಗಳು ಸಿದ್ಧಪಡಿಸಿದಾಗ **ರುದ್ರರೊಂದಿಗೆ** ಸೇರಿಕೊಂಡು **ಇಂದ್ರನು** ಅವರನ್ನು ಅಟ್ಟಿಬಿಟ್ಟನು.

**ತೇಭ್ಯಸ್ತೃತೀಯಸವನೇ ವಾಚಿ ಕಲ್ಪಯಿಷಂಸ್ತಾನ್ವಿಶ್ವೇದೇವಾಃ ಅನೋನುದ್ಯಂತ ನೇಹ ಪಾಸ್ಯಂತಿ ನೇಹೇತಿ ಸ ಪ್ರಜಾಪತಿರಬ್ರವೀತ್ಸವಿತಾರಂ ತವ ವಾ ಇಮೇಽನ್ತೇವಾಸಾಸ್ತ್ವಮೇವೈಭಿಃ ಸಂಪಿಬಸ್ವೇತಿ ಸ ತಥೇತ್ಯಬ್ರವೀತ್ಸವಿತಾ ತಾನ್ವೈ ತ್ವಮುಭಯತಃ ಪರಿಪಿಬೇತಿ ತಾನ್ಪ್ರಜಾಪತಿರುಭಯತಃ ಪರ್ಯಪಿಬತ್ ।**

(ಐ. ಬ್ರಾ. ೩-೩೦)

ಆಗಲೂ ಸಹ ವಿಶ್ವೇದೇವತೆಗಳು ಇವರನ್ನು ಸೇರಿಸದಿರಲು ಪ್ರಜಾಪತಿಯು ಸವಿತೃವನ್ನು ಕುರಿತು " ಇವರು ನಿನ್ನ ಶಿಷ್ಯರು, ಇವರೊಡನೆ ನೀನು ಪಾನಮಾಡು ಎಂದಾಗ ಸವಿತೃವೂ ಅವನೊಂದಿಗೆ ಪ್ರಜಾಪತಿಯೂ ಋಭುಗಳ ಜೊತೆಯಲ್ಲಿ ಪಾನಮಾಡಿದರು. ಆ ವಿಷಯವನ್ನು ಇಲ್ಲಿ ತಿಳಿಸಿದೆ.

**ಘ—ಘೇತ್ಯನರ್ಥಕಃ, ಪ್ರಸಿದ್ಧ್ಯರ್ಥೋ ವಾ ।** ಘ ಎನ್ನುವ ಪದವು ಅರ್ಥವಿಲ್ಲದೆ ಪಾದಪೂರಣಕ್ಕಾಗಿ ಸಾಧಾರಣವಾಗಿ ಉಪಯೋಗದಲ್ಲಿದೆ. ಕೆಲವೆಡೆಗಳಲ್ಲಿ ಪ್ರಸಿದ್ಧಾರ್ಥವನ್ನು ತಿಳಿಸುತ್ತದೆ.

**ಪ್ರ ಘಾ ನ್ವಸ್ಯ ಮಹತೋ ಮಹಾನಿ ಸತ್ಯಾ ಸತ್ಯಸ್ಯ ಕರಣಾನಿ ವೋಚಂ ।**

(ಋ. ಸಂ. ೨-೧೫-೧)

ಎಂಬಲ್ಲಿ **ಘ ಇತಿ ಪ್ರಸಿದ್ಧೌ** ಎಂದು ಇಂದ್ರನ ಪ್ರಸಿದ್ಧವಾದ ಮಹತ್ಕಾರ್ಯಗಳೆಂದು ಅರ್ಥಮಾಡಿದೆ.

**ಆ ಘಾ ಗಮದ್ಯದಿ ಶ್ರವತ್ಸಹಸ್ರಿಣೀಭಿರೂತಿಭಿಃ । ವಾಜೇಭಿರುಪ ನೋ ಹವಂ ॥**

(ಋ. ಸಂ. ೧-೩೦-೮)

ಎಂಬಲ್ಲಿ ಇಂದ್ರನು ನಮ್ಮ ಪ್ರಾರ್ಥನೆಯನ್ನು ಕೇಳಿದರೆ **ಖಂಡಿತವಾಗಿಯೂ** ಬಂದೇ ಬರುವನು ಎಂದು ಘಶಬ್ದಕ್ಕೆ ನಿಷ್ಕೃಷ್ಟಾರ್ಥವನ್ನು ಹೇಳಿದೆ. ಪ್ರಕೃತವಾದ ಋಕ್ಕಿನಲ್ಲಿ ಕನಿಷ್ಠಪಕ್ಷ ಇದನ್ನಾದರೂ ಪಾನಮಾಡಿ ಎಂಬ ಮಿತಿಯನ್ನು ಸೂಚಿಸುವುದಾಗಿ ಅರ್ಥಮಾಡಬಹುದು

**ಮುಂಜನೇಜನಂ— ಮುಂಜನ್ನಾಮ ಪರ್ವತಃ । ಸೋಮೋತ್ಪತ್ತಿಸ್ಥಾನಂ । ತತ ಆಹೃತತ್ವಾತ್ತೇನ ಮುಂಜತೃಣೇನ ಶೋಧಿತಂ । ಅಪಗತತೃಣಮಿತ್ಯರ್ಥಃ । ಮುಂಜವಾನ್** ಎಂಬ ಪರ್ವತದಿಂದ ತರಲ್ಪಟ್ಟು ಅಲ್ಲಿ ತೃಣಾದಿಗಳಿಂದ ಮಿಶ್ರವಾಗಿರುವುದರಿಂದ ಅಲ್ಲಿಂದ ತಂದನಂತರ ಆ ಕಲ್ಮಷಗಳನ್ನು ತೆಗೆದುಹಾಕಿ ಶುದ್ಧಿಮಾಡಿದುದು ಎಂದರ್ಥ ನಿರುಕ್ತಕಾರರು,

**ಪ್ರಾವೇಪಾ ಮಾ ಬೃಹತೋ ಮಾದಯಂತಿ ಪ್ರವಾತೇಜಾ ಇರಿಣೇ ವರ್ವೃತಾನಾಃ ।**
**ಸೋಮಸ್ಯೇವ ಮೌಜವತಸ್ಯ ಭಕ್ಷೋ ವಿಭೀದಕೋ ಜಾಗೃವಿರ್ಮಹ್ಯಮಚ್ಛಾನ್ ॥**
(ಋ. ಸಂ. ೧೦-೩೪-೧)

ಎಂಬ ಋಕ್ಕನ್ನುದಹರಿಸಿ (ನಿ. ೯-೮) ಅಲ್ಲಿ ವಿಭೀದಕವೃಕ್ಷದ ಫಲದ ರುಚಿಯನ್ನು ಮೌಜಪರ್ವತದಲ್ಲಿ ಉತ್ಪನ್ನವಾದ ಸೋಮಲತೆಯರಸದ ಸ್ವಾದುತೆಗೆ ಹೋಲಿಸುವಾಗ ಈ ಪರ್ವತವನ್ನೂ ಈ ಪರ್ವತದಲ್ಲಿ ಉತ್ಪನ್ನವಾದ ಸೋಮದ ಸ್ವರೂಪವನ್ನೂ ವಿವರಿಸಿದ್ದಾರೆ.

**ಮೌಜವತೋ ಮೂಜವತಿ ಜಾತಃ । ಮೂಜವಾನ್ ಪರ್ವತೋ ಮುಂಜವಾನ್ । ಮುಂಜೋ ವಿಮುಚ್ಯತ ಇಷೀಕಯಾ** (ನಿ. ೯-೮) **। ಮೌಜವತಃ** (ಸೋಮಸ್ಯ) ಎಂದರೆ ಮುಂಜವತ್ಪರ್ವತದಲ್ಲಿ ಉತ್ಪನ್ನವಾದುದೆಂದರ್ಥ. **ಮುಂಜ**ವೆಂಬ ತೃಣದಿಂದ ಪೂರಿತವಾದುದರಿಂದ ಆ ಪರ್ವತಕ್ಕೆ ಮೂಜವತ್ತೆಂಬ ಹೆಸರು ಪ್ರಸಿದ್ಧವಾಗಿದೆ. ಆ ಪರ್ವತದಲ್ಲಿ ಸೋಮಲತೆಯು ಉತ್ಪನ್ನವಾಗಿ ಅತ್ಯಂತ ಸ್ವಾದುವಾದ ರಸವನ್ನು ಹೊಂದಿರುತ್ತದೆಂದು ವಿವರಿಸಿದ್ದಾರೆ. ಆ ತೃಣದಿಂದ ಶೋಧಿಸಲ್ಪಟ್ಟು ಶುದ್ಧವಾದುದೆಂದು ಪ್ರಕೃತವಾದ ಋಕ್ಕಿನಲ್ಲಿ ಹೇಳಿದೆ.

**ಮಾದಯಾಧ್ವೈ**—ಪ್ರಾತಸ್ಸವನ ಮತ್ತು ಮಾಧ್ಯಂದಿನಸವನ ಈ ಎರಡು ಕಾಲಗಳ ಪಾನಕ್ಕೂ **ಪಿಬತ** ಎಂಬ ಪ್ರಯೋಗವಿದ್ದು ತೃತೀಯ ಸವನದ ಪಾನದಿಂದ **ಮಾದಯಾಧ್ವೈ** ಎಂದಿರುವುದು ತೃತೀಯಸವನದ ವೈಶಿಷ್ಟ್ಯವನ್ನು ತೋರಿಸುತ್ತದೆ. ಈ ಮಾದಕರೂಪವಾದ ತೃಪ್ತಿಯು ತೃತೀಯಸವನದ ಪಾನದಿಂದಲೇ ಸಾಧ್ಯ. ಹಿಂದೆ ಒಂದು ಸಲ ಮಾಧ್ಯಂದಿನಸವನದ ಪಾನಕ್ಕೂ ಸಹ ಈ ಪದವನ್ನು ಪ್ರಯೋಗಿಸಿದುದರಿಂದ ಒಂದು ಆಕ್ಷೇಪಣೆಗೂ ಕಾರಣವಾಗಿ ಅದಕ್ಕೆ ಸಮಾಧಾನವನ್ನು ಹೇಳಿದೆ.

**ಅಸಾವಿ ದೇವಂ ಗೋಋಜೀಕಮಂಧ ಇತಿ ಮಧ್ಯಂದಿನ ಉನ್ನೀಯಮಾನೇಭ್ಯೋಽನ್ವಾಹ ವೃಷಣ್ವತೀಃ ಪೀತವತೀಃ ಸುತವತೀರ್ಮದ್ವತೀ ರೂಪಸಮೃದ್ಧಾಃ । ಐಂದ್ರೀರನ್ವಾಹೈಂದ್ರೋ ವೈ ಯಜ್ಞಸ್ತ್ರಿಷ್ಟುಭೋಽನ್ವಾಹ ತ್ರೈಷ್ಟುಭಂ ವೈ ಮಾಧ್ಯಂದಿನಂ ಸವನಂ । ತದಾಹುರ್ಯತ್ತೃತೀಯ ಸವನಸ್ಯೈವ ರೂಪಂ ಮದ್ವದಥ ಕಸ್ಮಾನ್ಮಾಧ್ಯಂದಿನೇ ಮದ್ವತೀರನು ಚಾಹ ಯಜಂತಿ ಚಾಭಿರಿತಿ । ಮಾದ್ಯಂತೀವ ವೈ ಮಧ್ಯಂದಿನೇ ದೇವತಾಃ ಸಮೇವ ತೃತೀಯಸವನೇ ಮಾದಯಂತೇ ತಸ್ಮಾನ್ಮಧ್ಯಂದಿನೇ ಮದ್ವತೀರನು ಚಾಹ ಯಜಂತಿ ಚಾಭಿಃ ॥**
(ಐ. ಬ್ರಾ. ೬-೧೧)

ಮಾಧ್ಯಂದಿನಸವನದಲ್ಲಿ ಅಧ್ವರ್ಯುವು,

**ಅಸಾವಿ ದೇವಂ ಗೋಋಜೀಕಮಂಧೋ ನ್ಯಸ್ಮಿನ್ನಿಂದ್ರೋ ಜನುಷೇಮುವೋಚ ।**
**ಬೋಧಾಮಸಿ ತ್ವಾ ಹರ್ಯಶ್ವ ಯಜ್ಞೈರ್ಬೋಧಾ ನಃ ಸ್ತೋಮಮಂಧಸೋ ಮದೇಷು ॥**
(ಋ. ಸಂ ೭-೨೧-೧)

ಎಂಬ ಋಕ್ಕಿನಿಂದ ಪ್ರಾರಂಭವಾಗುವ ಸೂಕ್ತವನ್ನು ಪಠಿಸಬೇಕು. ಈ ಮೊದಲನೇ ಮಂತ್ರದಲ್ಲಿ **ಅಂಧಸಃ ಮದೇಷು** ಎಂದು ಮಾದಕದ ಸ್ವರೂಪವು ಹೇಳಲ್ಪಟ್ಟಿದೆ. ಆದರೆ ಸಕಲದೇವತೆಗಳಿಗೂ ತೃತೀಯಸವನದ ಸೋಮಪಾನದ ಕಾಲದಲ್ಲಿಯೇ ಹರ್ಷಪ್ರಾಪ್ತಿಯಾಗುವುದರಿಂದ ಮಾಧ್ಯಂದಿನದ ಅವಸರದಲ್ಲಿ ಈ ಪದಪ್ರಯೋಗವಿರುವ ಋಕ್ಕನ್ನು ಪಠಿಸುವ ಕಾರಣವೇನು ಎಂಬ ಪ್ರಶ್ನೆಯು ಸಂಭವಿಸುತ್ತದೆ. ಆದರೆ ಮಾಧ್ಯಂದಿನ ಸವನದಲ್ಲಿಯೂ ದೇವತೆಗಳಿಗೆ ಸೋಮಪಾನವಿರುವುದರಿಂದ ಅವರಿಗೆ ಮದವು ಪ್ರಾಪ್ತವಾಗಿಯೇ ಆಗುತ್ತದೆ. ಆದರೆ ತೃತೀಯಸವನದಲ್ಲಿ **ಸೋಮಪಾನಸಂಪತ್ತ್ಯಾ ಸಂಮಾದಯಂತೇ** ಸೋಮಪಾನದಿಂದ ಅತ್ಯಂತ ಅತಿಶಯವಾಗಿ ಹರ್ಷಿತರಾಗುತ್ತಾರೆ. **ಅಷ್ಟೇ ವ್ಯತ್ಯಾಸ.** ಆದುದರಿಂದ ಬಾಧಕವಿಲ್ಲ ಎಂದು ಐತರೇಯಬ್ರಾಹ್ಮಣದಲ್ಲಿ ವಿವರಿಸಿದೆ. ಪ್ರಕೃತವಾದ ಋಕ್ಕಿನಲ್ಲಿ ತೃತೀಯಸವನದ ಹರ್ಷಾಧಿಕ್ಯವನ್ನು ಸೂಚಿಸಲು **ಮಾದಯಾಧ್ಯೈ** ಎಂಬ ಪದದ ಪ್ರಯೋಗವಿದೆ. ಈ ಹರ್ಷದ ಸ್ವರೂಪವೇನು ಎಂದರೆ,—

**ಅಪಾದಿಂದ್ರೋ ಅಪಾದಗ್ನಿರ್ವಿಶ್ವೇ ದೇವಾ ಅಮತ್ಸತ ।**
**ವರುಣ ಇದಿಹ ಕ್ಷಯತ್ತಮಾಪೋ ಅಭ್ಯನೂಷತ ವತ್ಸಂ ಸಂಶಿಶ್ವರೀರಿವ ॥**
(ಋ. ಸಂ. ೮-೬೯-೧೧)

ಎಂಬಲ್ಲಿ ಇಂದ್ರನ, ಅಗ್ನಿಯ ಮತ್ತು ವರುಣಾದಿದೇವತೆಗಳ ಸೋಮಪಾನದಿಂದ ಉತ್ಪನ್ನವಾದ ಉನ್ಮತ್ತತೆಯಿಂದ ಕೂಡಿದುದೂ ಶಬ್ದಾತ್ಮಕವಾದುದೂ ಆದ ಸಂತೋಷಾಭಿವ್ಯಕ್ತಿಯನ್ನು ವತ್ಸವನ್ನು ನೋಡಿ ಅದರ ಹತ್ತಿರಕ್ಕೆ ಶಬ್ದ ಮಾಡಿಕೊಂಡು ಓಡಿಹೋಗುತ್ತಿರುವ ಹಸುವಿನ ಸಂತೋಷಾಭಿವ್ಯಕ್ತಿಗೆ ಹೋಲಿಸಿದೆ. ಅಂತಹ ಉನ್ಮಾದಕವಾದ ಹರ್ಷಕ್ಕೆ ಭಾಗಿಗಳಾಗಬೇಕೆಂದು ಋಭುಗಳು ಪ್ರಾರ್ಥಿತರಾಗಿದ್ದಾರೆ.

(ನೇವ) ಹರ್ಯಥ— **ಹರ್ಯತಿಃ ಕಾಂತಿಕರ್ಮಾ** (ನಿ. ೩-೬) **ಹರ್ಯತಿಃ ಪ್ರೇಪ್ಸಾಕರ್ಮಾ ವಿಹರ್ಯತೀತಿ** (ನಿ ೭-೧೭). ಅತ್ಯಾಕರ್ಷಕವಾದುದರಿಂದ ಆ ವಸ್ತುವನ್ನಪೇಕ್ಷಿಸು ಎಂಬರ್ಥವನ್ನು ಕೊಡುತ್ತದೆ. **ಹಿರಣ್ಯ** ಶಬ್ದದ ನಿರ್ವಚನವನ್ನು ತೋರಿಸುವಾಗ ನಿರುಕ್ತಕಾರರು **ಹರ್ಯತೇರ್ವಾ ಸ್ಯಾತ್ಪ್ರೇಪ್ಸಾಕರ್ಮಣಃ** (ನಿ ೨-೧೦) ಎಂದು ಮೇಲಿನ ಅರ್ಥವಿರುವುದರಿಂದಲೇ ಹಿರಣ್ಯವೆಂಬ ಹೆಸರು ಪ್ರಸಿದ್ಧವಾಗಿದೆಯೆಂದೂ ತಿಳಿಸಿದ್ದಾರೆ. ಪ್ರಕೃತವಾದ ಋಕ್ಕಿನಲ್ಲಿ ಅದರ ನಿಷೇಧಾರ್ಥಕವಾದ ಪ್ರಯೋಗವಿದೆ. ನೀವು ಪ್ರಾತಸ್ಸವನದ ಮತ್ತು ಮಾಧ್ಯಂದಿನಸವನದ ಸೋಮಪಾನವನ್ನು ಅಪೇಕ್ಷಿಸದೇ ಇದ್ದ ಪಕ್ಷದಲ್ಲಿ ಅವಕ್ಕಿಂತಲೂ ಅಧಿಕವಾಗಿ ಹರ್ಷಕಾರಕವಾದ ತೃತೀಯಸವನದ ಪಾನವನ್ನು ಹೊಂದಿ ಅದರಲ್ಲಿ ತೃಪ್ತಿಯನ್ನು ಪಡೆಯಿರಿ ಎಂದು ಪ್ರಾರ್ಥಿಸಿದೆ.

### ವ್ಯಾಕರಣಪ್ರಕ್ರಿಯಾ

**ಪಿಬತ**—ಪಾ ಪಾನೇ ಧಾತು. ಲೋಟ್ ಮಧ್ಯಮಪುರುಷಬಹುವಚನದಲ್ಲಿ **ಲಬ್ಧವಾದ್ದಾವವಿರುವುದರಿಂದ**

ತಾದೇಶ. **ಪಾಘ್ರಾಧ್ಮಾ**—(ಪಾ. ಸೂ. ೭-೩-೭೮) ಎಂಬುದರಿಂದ ಧಾತುವಿಗೆ ಪಿಬಾದೇಶ. ತಿಙಂತನಿಘಾತಸ್ವರ ಬರುತ್ತದೆ.

ಅಬ್ರವೀತನ—ಬ್ರೂಞ್ ವ್ಯಕ್ತಾಯಾಂ ವಾಚಿ ಧಾತು. ಲಙ್ ಮಧ್ಯಮಪುರುಷಬಹುವಚನದಲ್ಲಿ **ತಪ್ತ-ನಪ್ತ**—ಎಂಬುದರಿಂದ ತನಬಾದೇಶ. **ಬ್ರುವಈಟ್** (ಪಾ. ಸೂ. ೭-೩-೯೩) ಸೂತ್ರದಿಂದ ಈಟಾಗಮ. ಪ್ರತ್ಯಯ ಪಿತ್ತಾದುದರಿಂದ ಗುಣ ಅವಾದೇಶ. ತಿಙಂತನಿಘಾತಸ್ವರ ಬರುತ್ತದೆ.

**ಘಾ—ಋಚಿತಿನುಘ**—(ಪಾ. ಸೂ. ೬-೩-೧೩೩) ಎಂಬುದರಿಂದ ಸಂಹಿತಾದಲ್ಲಿ ದೀರ್ಘ ಬರುತ್ತದೆ.

**ಹರ್ಯಥ**--ಲಟ್ ಮಧ್ಯಮಪುರುಷಬಹುವಚನಾಂತರೂಪ. ಹರ್ಯ ಗತಿಕಾಂತ್ಯೋಃ ಧಾತು. ಕಾಂತ್ಯರ್ಥದಲ್ಲಿ ಇಲ್ಲಿ ಪ್ರಯುಕ್ತವಾಗಿದೆ. ಹರ್ಯತಿ ಉಶಿಕ್ (ನಿರು. ೨-೬-೧೦) ಎಂದು ಯಾಸ್ಕರು ಹೇಳಿರುತ್ತಾರೆ.

**ಮಾದಯಾಧ್ವೈ**—ಮದ ತೃಪ್ತಿಯೋಗೇ ಧಾತು. ಚುರಾದಿ. **ಆಕುಸ್ಮಾದಾತ್ಮನೇಪದಿನಃ** ಎಂಬುದರಿಂದ ನಿತ್ಯವಾಗಿ ಆತ್ಮನೇಪದಿಯಾಗುತ್ತದೆ. ಲೇಟ್ ಮಧ್ಯಮಪುರುಷಬಹುವಚನದಲ್ಲಿ ಧ್ವಮ್ ಪ್ರತ್ಯಯ. **ಟಿತಆತ್ಮನೇಪದಾ**—(ಪಾ. ಸೂ. ೩-೪-೭೯) ಎಂಬುದರಿಂದ ಟಿಗೆ ಏತ್ವ. **ಲೇಟೋಽಡಾಟೌ** (ಪಾ. ಸೂ. ೩-೪-೯೪) ಎಂಬುದರಿಂದ ಅದಕ್ಕೆ ಆಡಾಗಮ. **ವೈತೋಽನ್ಯತ್ರ** (ಪಾ. ಸೂ. ೩-೪-೯೬) ಎಂಬುದರಿಂದ ಏಕಾರಕ್ಕೆ ಐಕಾರಾದೇಶ. **ಸತ್ಯಾಪಪಾಶ**—(ಪಾ. ಸೂ. ೩-೧-೨೫) ಸೂತ್ರದಿಂದ ಸ್ವಾರ್ಥದಲ್ಲಿ ಬಂದ ಣಿಚ್ ನಿಮಿತ್ತವಾಗಿ ಧಾತುವಿನ ಉಪಧೆಗೆ ವೃದ್ಧಿ. ಅತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ. ॥ ೮ ॥

——— :o: ———

**ಸಂಹಿತಾಪಾಠಃ**

ಆಪೋ ಭೂಯಿಷ್ಠಾ ಇತ್ಯೇಕೋ ಅಬ್ರವೀದಗ್ನಿರ್ಭೂಯಿಷ್ಠ ಇತ್ಯನ್ಯೋ ಅಬ್ರವೀತ್ ।

ವಧರ್ಯಂತೀಂ ಬಹುಭ್ಯಃ ಪ್ರೈಕೋ ಅಬ್ರವೀದೃತಾ ವದಂತಶ್ಚಮಸಾ ಅಪಿಂಶತ ॥ ೯ ॥

**ಪದಪಾಠಃ**

ಆಪಃ । ಭೂಯಿಷ್ಠಾಃ । ಇತಿ । ಏಕಃ । ಅಬ್ರವೀತ್ । ಅಗ್ನಿಃ । ಭೂಯಿಷ್ಠಃ । ಇತಿ । ಅನ್ಯಃ । ಅಬ್ರವೀತ್ ।

ವಧಃಽಯಂತೀಂ । ಬಹುಽಭ್ಯಃ । ಪ್ರ । ಏಕಃ । ಅಬ್ರವೀತ್ । ಋತಾ । ವದಂತಃ । ಚಮಸಾನ್ । ಅಪಿಂಶತ ॥ ೯ ॥

ಸಾಯಣಭಾಷ್ಯಂ

ಚಮಸಚತುರ್ಧಾಕರಣಕಾಲೇ ಕಿಮಿತಿ ಸತ್ಯಂ ವದಂತೋ ವ್ಯಭಜನ್ನಿತಿ ತದಾಹ । ಏಕಸ್ತ್ರಯಾಣಾಮನ್ಯತಮ ಆಪೋ ಭೂಯಿಷ್ಠಾ ಇತ್ಯಬ್ರವೀತ್ । ನ ಹ್ಯುದಕಾತ್ಪ್ರಶಸ್ತಂ ಲೋಕೋಪಕಾರಕಂ ತತ್ತ್ವಾಂತರಮಸ್ತಿ । ಆಪೋ ಭೂಯಿಷ್ಠಾ ಇತ್ಯೃತಮುವಾದೀತ್ । ಅಪಾಮೇವ ಶ್ರೇಷ್ಠತ್ವಮುಪ ಏವ ಸಸರ್ಜಾದೌ । ಮನು. ೧-೮ । ಇತ್ಯಾದಿಶಾಸ್ತ್ರಾತ್ । ತಥಾನ್ಯೋಽಗ್ನಿರ್ಭೂಯಿಷ್ಠ ಇತ್ಯಬ್ರವೀತ್ । ಆಂತರಂ ಬಾಹ್ಯಂ ಚ ದಾಹಪಾಕಭುಕ್ತಜರಣಾದಿವ್ಯಾಪಾರೇಣಾಗ್ನೇರೇವ ಜಗನ್ನಿರ್ವಾಹಕತ್ವಾದಗ್ನೇರೇವ ಭೂಯಿಷ್ಠತ್ವಮಿತ್ಯೇವ ಮನ್ಯತೇ। ತಥಾ ವರ್ಧಯಂತೀಂ। ವಧರಿತಿ ರೇಫಾಂತೋಽಪಿ ವಜ್ರನಾಮ ವಧೋಽರ್ಕ ಇತಿ ತನ್ನಾಮಸು ಪಾಠಾತ್ । ತದಿಚ್ಛತಿ ವೃಷ್ಟ್ಯುದಕಾಯೇತಿ ವರ್ಧಯಂತೀ ಮೇಘಪಂಕ್ತಿರುಚ್ಯತೇ। ಯದ್ಯಪೀಯಂ ಸ್ವವಧಾರ್ಥಂ ವಜ್ರಂ ಸ್ವಯಮೇವ ನಾಪೇಕ್ಷತೇ ತಥಾಪಿ ವೃಷ್ಟ್ಯರ್ಥಮಿಂದ್ರವಜ್ರೇಣ ಹನ್ಯಮಾನತ್ವಾತ್ ತದಿಚ್ಛಂತೀತ್ಯುಪಚರ್ಯತೇ । ಯದ್ವಾ । ಬಹುಭ್ಯಸ್ತ್ರೇಷಾಮರ್ಥಾಯ ವರ್ಧಯಂತೀ ವಧಮಾತ್ಮನ ಇಚ್ಛಂತೀಂ ಭೂಮಿಂ ॥ ಛಾಂದಸೋ ರೇಫೋಪಜನಃ ॥ ತಾಮೇವೈಕೋ ಬಹುಭ್ಯಃ ಸಂವಾದಿಭ್ಯಃ ಶ್ರೇಷ್ಠತಮಾಮಬ್ರವೀತ್ । ಉದಕಸ್ಯಾಪಿ ಮೇಘಕಾರಣತ್ವಾತ್ । ಏವಮೃತಾ ಋತಾನ್ಯುಕ್ತರೂಪಾಣಿ ಯಥಾರ್ಥಾನಿ ವಾಕ್ಯಾನಿ ವದಂತಃ ಪರಸ್ಪರಂ ಬ್ರುವಂತಶ್ಚಮಸಾನಪಿಂಶತ । ಅವಯವಿನೋಽಕುರುತ । ಚತುರ್ಧಾ ವ್ಯಭಜತೇತ್ಯರ್ಥಃ ॥ ಪಿಶ ಅವಯವೇ । ಶೇ ಮುಚಾದೀನಾಮಿತಿ ನುಮ್ ॥ ಇದಮೇವರ್ತವದನಮುಪೇಕ್ಷ್ಯರ್ಭುಶಬ್ದಂ ವ್ಯಾಚಕ್ಷಾಣೋ ಯಾಸ್ಕಃ । ಋಭವ ಉರು ಭಾಂತೀತಿ ವರ್ತೇನ ಭಾಂತೀತಿ ವರ್ತೇನ ಭವಂತೀತಿ ವಾ । ನಿ. ೧೧-೧೫ । ಇತ್ಯುಕ್ತತ್ವಾತ್ ॥

ಪ್ರತಿಪದಾರ್ಥ

**ಆಪಃ**—ಉದಕವು । **ಭೂಯಿಷ್ಠಾ**—ಅತ್ಯಂತಪ್ರಶಸ್ಯವಾದುದು (ಎಲ್ಲಕ್ಕಿಂತಲೂ ಹೆಚ್ಚು ಶ್ರೇಷ್ಠವಾದುದು) । **ಇತಿ**—ಹೀಗೆಂಬುದಾಗಿ । **ಏಕಃ**—ಋಭುಗಳಲ್ಲಿ ಒಬ್ಬನು । **ಅಬ್ರವೀತ್**—ಹೇಳಿದನು । **ಅಗ್ನಿಃ**—ಅಗ್ನಿಯು । **ಭೂಯಿಷ್ಠಃ**—ಅತ್ಯಂತ ಶ್ರೇಷ್ಠವಾದುದು । **ಇತಿ**—ಎಂಬುದಾಗಿ । **ಅನ್ಯಃ**—ಇನ್ನೊಬ್ಬನು । **ಅಬ್ರವೀತ್**—ಹೇಳಿದನು । **ಏಕಃ**—ಮೂರನೆಯವನು । **ವರ್ಧಯಂತೀಂ**—ಮೇಘವನ್ನು ಅಥವಾ ಪೃಥ್ವಿಯನ್ನು । **ಪ್ರ**—ಉತ್ಕೃಷ್ಟತರವೆಂದು । **ಬಹುಭ್ಯಃ**—ಸಂವಾದವನ್ನು ಮಾಡುತ್ತಿದ್ದವರಿಗೆಲ್ಲಾ । **ಅಬ್ರವೀತ್**—ಹೇಳಿದನು । (**ಏವಂ**—ಈ ರೀತಿಯಲ್ಲಿ) । **ಋತಾ**—ಸತ್ಯಾತ್ಮಕಗಳಾದ ವಿಷಯಗಳನ್ನು । **ವದಂತಃ**—ಪ್ರಕಾಶಪಡಿಸಿ ವಿವರಿಸುತ್ತಾ । **ಚಮಸಾನ್**—(ಒಂದೇ ಆದ ಚಮಸಪಾತ್ರೆಯನ್ನು) । **ಅಪಿಂಶತ**—ನಾಲ್ಕು ಅವಯವಗಳಾಗುವಂತೆ (ನಾಲ್ಕಾಗುವಂತೆ) ವಿಭಾಗಿಸಿದರು.

ಭಾವಾರ್ಥ

ಉದಕವು ಅತ್ಯಂತ ಶ್ರೇಷ್ಠವಾದ ತತ್ತ್ವವೆಂದು ಋಭುಗಳಲ್ಲಿ ಒಬ್ಬನು ಹೇಳಿದನು. ಅಗ್ನಿಯು ಸರ್ವಶ್ರೇಷ್ಠವೆಂದು ಇನ್ನೊಬ್ಬನು ಹೇಳಿದನು. ಪೃಥ್ವಿಯೇ ಸರ್ವೋತ್ಕೃಷ್ಟಳೆಂದು ಮೂರನೆಯವನು ಅಲ್ಲಿ ಸಂವಾದವನ್ನು ಮಾಡುತ್ತಿದ್ದ ಇತರರಿಗೆಲ್ಲಾ ಹೇಳಿದನು. ಹೀಗೆ ಅವರೆಲ್ಲರೂ ಪರಸ್ಪರವಾಗಿ ಸತ್ಯಾತ್ಮಕಗಳಾದ ವಿಷಯಗಳನ್ನು ವಿವರಿಸುತ್ತಾ ಒಂದೇ ಆದ ಚಮಸಪಾತ್ರೆಯನ್ನು ನಾಲ್ಕು ಅವಯವಗಳಾಗುವಂತೆ ವಿಭಾಗಿಸಿದರು.

## English Translation

Waters are the most excellent, said one (of them): Agni is the most excellent, said another : the third declared to many the Earth (to be the most excellent), and thus speaking true things the Ribhus divided the ladle.

### ವಿಶೇಷವಿಷಯಗಳು

ಶ್ರೇಷ್ಠವಾದ ಕರ್ಮಗಳಿಂದ ಪ್ರಸಿದ್ಧರಾದ ಋಭುಗಳು (ಸ್ವಪಸಃ) ಈ ಋಕ್ಕಿನಲ್ಲಿ ತಮ್ಮ ಉತ್ತಮವಾದ ತತ್ತ್ವಜ್ಞಾನವನ್ನೂ ಪ್ರಕಾಶಪಡಿಸಿದ್ದಾರೆ. **ನೀರೇ** ಶ್ರೇಷ್ಠವಾದ ತತ್ತ್ವವೆಂದು ಒಬ್ಬನೂ. **ಅಗ್ನಿ**ಯೆಂದಿನ್ನೊಬ್ಬನೂ, **ಪೃಥ್ವಿ**ಯೆಂದು ಮೂರನೆಯುವನೂ ತಮ್ಮ ತಮ್ಮ ಮತವನ್ನು ತಿಳಿಸಿದ್ದಾರೆ. ವಿಶ್ವಕ್ಕೆಲ್ಲಾ ಮೂಲತತ್ತ್ವವಾವುದು ಎಂಬುದಕ್ಕಿಂತ ವಿಶ್ವದಲ್ಲೆಲ್ಲಾ ಶ್ರೇಷ್ಠವಾದ ತತ್ತ್ವವಾವುದೆಂಬುದೇ ಈ ಸಂವಾದದ ವಿಷಯವಾಗಿದೆ. ಆದರೆ ಸಾಯಣರು **ಅಪಾಮೇವ ಶ್ರೇಷ್ಠತ್ವಮಪ ಏವ ಸಸರ್ಜಾದಾವಿತ್ಯಾದಿಶಾಸ್ತ್ರಾತ್ ।** ಎಂದು ಅಪ್ಪೇ ಸೃಷ್ಟಿಯಲ್ಲೆಲ್ಲಾ ಪ್ರಥಮವಾದುದರಿಂದ ಅದೇ ಶ್ರೇಷ್ಠವೆಂದೂ ತಿಳಿಸಿದ್ದಾರೆ. ಶ್ರೇಷ್ಠತ್ವಕ್ಕೆ ಇದೊಂದುಕಾರಣ. ಅಥವಾ **ನಹ್ಯುದಕಾತ್ಪ್ರಶಸ್ಯಂ ಲೋಕೋಪಕಾರಕಂ ತತ್ತ್ವಾಂತರಮಸ್ತಿ**—ಉದಕಕ್ಕಿಂತಲೂ ಲೋಕೋಪಕಾರಕವಾದ ಬೇರೆ ತತ್ತ್ವವಿನ್ನೊಂದಿಲ್ಲ ಎಂದು ಶ್ರೇಷ್ಠತ್ವಕ್ಕೆ ಎರಡನೆಯ ಕಾರಣವನ್ನೂ ತೋರಿಸಿದ್ದಾರೆ. ಪ್ರಕೃತದಲ್ಲಿ (ಅಪ್) **ಅಪ್ಪು, ಅಗ್ನಿ, ಪೃಥಿವೀ** ಈ ಮೂರರಲ್ಲಿ ಎಲ್ಲವೂ ಶ್ರೇಷ್ಠವಾದ ತತ್ತ್ವಗಳೆಂದೇ ಪ್ರಸಿದ್ಧವಾಗಿದೆ. ಸೃಷ್ಟಿಗಳಲ್ಲೆಲ್ಲಾ ಆದಿಯೆಂಬ ಅಂಶವನ್ನು ತೆಗೆದುಕೊಂಡರೂ ಅಥವಾ ಲೋಕೋಪಕಾರಕವೆಂಬ ಅಂಶವನ್ನು ತೆಗೆದುಕೊಂಡರೂ ಎಲ್ಲವೂ ತಮ್ಮ ವೈಶಿಷ್ಟ್ಯದಿಂದ ಪ್ರಶಸ್ಯವಾದ ಸ್ಥಾನವನ್ನು ಪಡೆಯುತ್ತವೆ. ಆದುದರಿಂದ ಈ ಮೂರು ಮತಗಳೂ ಸತ್ಯವನ್ನೇ ಪ್ರತಿಬಿಂಬಿಸುತ್ತವೆ. ಒಂದಕ್ಕೊಂದು ವಿರೋಧಿಯೆಂದು ಇದರಿಂದ ತಿಳಿಯಬಾರದು. ಕೆಲವುವೇಳೆ ಅಪ್ಪಿನಿಂದಲೇ ಅಗ್ನಿಸೃಷ್ಟಿಯೆಂದೂ, ಕೆಲವುವೇಳೆ ತೇಜೋರೂಪವಾದ ಅಗ್ನಿಯಿಂದಲೇ ಅಪ್ಪಿನ ಸೃಷ್ಟಿಯೆಂದೂ, ಅಗ್ನಿಯೇ ಅಪ್ಪಿಗೆ ಅನ್ನವೆಂದೂ ವಿಶ್ವದ ಮೂಲತತ್ತ್ವವನ್ನು ವಿಮರ್ಶಿಸುವಾಗ ಹೇಳಿರುವುದರಿಂದ ಈ ಮೂವರ ಮತದಲ್ಲೂ ಸತ್ಯವಿದೆ.

**ಆಪೋ ಭೂಯಿಷ್ಠಾಃ**—ಎಲ್ಲಕ್ಕೂ ಉದಕವೇ ಮೂಲವು. ಉದಕದಿಂದಲೇ ಅನ್ನ, ಉದಕದಿಂದಲೇ ಶುದ್ಧಿ, ಉದಕದಿಂದಲೇ ಇತರ ತತ್ತ್ವಗಳ ಉತ್ಪತ್ತಿ. ಆದುದರಿಂದ ಉದಕವು ಶ್ರೇಷ್ಠ ಎಂಬ ಮತಕ್ಕೆ ಸಮರ್ಥನೆಯನ್ನು ಕೊಡುತ್ತಾ ಅನೇಕ ವಾಕ್ಯಗಳಲ್ಲಿ ಉದಕದ ಪ್ರಶಂಸೆಯಿದೆ.

**ಓಮಾನಮಾಪೋ ಮಾನುಷೀರಮೃಕ್ತಂ ಧಾತ ತೋಕಾಯ ತನಯಾಯ ಶಂಯೋಃ ।**
**ಯೂಯಂ ಹಿ ಷ್ಠಾ ಭಿಷಜೋ ಮಾತೃತಮಾ ವಿಶ್ವಸ್ಯ ಸ್ಥಾತುರ್ಜಗತೋ ಜನಿತ್ರೀಃ ॥**
(ಋ. ಸಂ. ೬–೫೦-೭)

ಅಪ್ಪುಗಳೇ ಸಕಲ ಸ್ಥಾವರಜಂಗಮಾತ್ಮಕವಾದ ಜಗತ್ತಿಗೂ ಉತ್ಪಾದಕಗಳು. ಅವುಗಳೇ ಸಕಲ ರಕ್ಷಣೆಯನ್ನೂ ಕೊಡತಕ್ಕವು. ಸಕಲವಿಶ್ವಕ್ಕೂ ಜನನಿಯಂತೆ ಪೋಷಕಗಳು. ಅಲ್ಲದೇ,

**ಆಪೋ ಹ ಯದ್ಬೃಹತೀರ್ವಿಶ್ವಮಾಯನ್ ಗರ್ಭಂ ದಧಾನಾ ಜನಯಂತೀರಗ್ನಿಂ ।**
**ತತೋ ದೇವಾನಾಂ ಸಮವರ್ತತಾಸುರೇಕಃ ಕಸ್ಮೈ ದೇವಾಯ ಹವಿಷಾ ವಿಧೇಮ ।**
(ಋ. ಸಂ. ೧೦–೧೨೧-೭)

ವಿಶ್ವಕ್ಕೆಲ್ಲಾ ಮೂಲವಾದ **ಅಪ್ಪು** ಅಗ್ನ್ಯುಪಲಕ್ಷಿತವಾದ ಸಕಲಭೂತಜಾತಗಳ ಸೃಷ್ಟಿಗಾಗಿ ಹಿರಣ್ಯಗರ್ಭನನ್ನು ತಮ್ಮಲ್ಲೀ ಧರಿಸಿಕೊಂಡು ಸಕಲಜಗತ್ತನ್ನೂ ವ್ಯಾಪಿಸಿಕೊಂಡವು. ಸೃಷ್ಟಿಕರ್ತನಾದ ಪ್ರಜಾಪತಿಯೂ ಸಹ ಅಲ್ಲಿಂದ ಉತ್ಪನ್ನನಾದನು.

**ಆಪೋ ಹ ವಾ ಇದಮಗ್ರೇ ಸಲಿಲಮೇವಾಸ । ತಾ ಅಕಾಮಯಂತ ಕಥಂ ನು ಪ್ರಜಾಯೇಮಹೀತಿ ತಾ ಅಶ್ರಾಮ್ಯಂಸ್ತಾಸ್ತಪೋಽತಪ್ಯಂತ ತಾಸು ತಪಸ್ತಪ್ಯಮಾನಾಸು ಹಿರಣ್ಮಯಮಾಂಡಗ್ಂ ಸಂಬಭೂವ ।**

(ಶ. ಬ್ರಾ. ೧೧-೧-೬-೧)

ಸೃಷ್ಟಿಗಿಂತ ಪೂರ್ವಭಾವಿಯಾಗಿ ಲೋಕವನ್ನೆಲ್ಲಾ ಅಪ್ಪೇ ಆವರಿಸಿತ್ತು. ಸಂತತಿಯರೂಪದಿಂದ ವೃದ್ಧಿಯನ್ನು ಹೊಂದ ಲಿಚ್ಛಿಸಿ ಅವು ತಪಸ್ಸನ್ನಾಚರಿಸಲು ಅವುಗಳಿಂದ ಹಿರಣ್ಮಯವಾದ ಅಂಡವು ಉದ್ಭವಿಸಿತು, ಎಂದೂ ಶತಪಥಬ್ರಾಹ್ಮಣ ದಲ್ಲಿ ಋಕ್ಸಂಹಿತೆಯ ೧೦-೧೨೧-೭ನೇ ಋಕ್ಕಿನ ಭಾವವನ್ನು ಹೇಳಿದೆ. ಇದೇ ತತ್ತ್ವವನ್ನು-

**ಆಪೋ ಅಗ್ರೇ ವಿಶ್ವಮಾವನ್ ಗರ್ಭಂ ದಧಾನಾ ಅಮೃತಾ ಋತಜ್ಞಾಃ ।**
**ಯಾಸು ದೇವೀಷ್ವಧಿ ದೇವ ಆಸೀತ್** .... .... .... .... .... ।

(ಅ. ವೇ. ೪-೨-೬)

**ಆಪೋ ವತ್ಸಂ ಜನಯಂತೀರ್ಗರ್ಭಮಗ್ರೇ ಸಮೈರಯನ್ ।**
**ತಸ್ಯೋತ ಜಾಯಮಾನಸ್ಯ ಉಲ್ಬ ಆಸೀದ್ಧಿರಣ್ಯಯಃ ।**

(ಅ. ವೇ. ೪-೨-೮)

ಇತ್ಯಾದಿಯಾಗಿ ಅಥರ್ವವೇದದಲ್ಲೂ ಪ್ರತಿಪಾದಿಸಿದೆ. ಇದರಂತೆಯೇ,

**ಇಮಾ ಆಪಃ ಸರ್ವೇಷಾಂ ಭೂತಾನಾಂ ಮಧ್ವಾಸಾಮಪಾಂ ಸರ್ವಾಣಿ ಭೂತಾನಿ ಮಧು ಯಶ್ಚಾಯಮಾಸ್ವಪ್ಸು ತೇಜೋಮಯೋಽಮೃತಮಯಃ ಪುರುಷೋಽಯಮೇವ ಸ ಯೋಽಯಮಾತ್ಮೇದಮಮೃತಮಿದಂ ಬ್ರಹ್ಮೇದಂ ಸರ್ವಂ**

(ಬೃ. ಉ. ೨-೫-೨)

ಎಂದು ಬೃಹದಾರಣ್ಯಕೋಪನಿಷತ್ತಿನ ಮಧುವಿದ್ಯಾಕಾಂಡದಲ್ಲಿ ಅಪ್ಪುಗಳಿಗೂ ಬ್ರಹ್ಮನಿಗೂ ತಾದಾತ್ಮ್ಯವನ್ನು ಹೇಳಿ ಅಪ್ಪಿನ ಮಹತ್ತ್ವವನ್ನು ಸ್ತುತಿಸಿದೆ. ಛಾಂದೋಗ್ಯೋಪನಿಷತ್ತಿನಲ್ಲಿ,

**ಆಪೋ ವಾವಾನ್ನಾದ್ಭೂಯಸ್ತಸ್ಮಾದ್ಯದಾ ಸುವೃಷ್ಟಿರ್ನ ಭವತಿ ವ್ಯಾಧೀಯಂತೇ ಪ್ರಾಣಾ ಅನ್ನಂ ಕನೀಯೋ ಭವಿಷ್ಯತೀತ್ಯಥ ಯದಾ ಸುವೃಷ್ಟಿರ್ಭವತ್ಯಾನಂದಿನಃ ಪ್ರಾಣಾ ಭವತ್ಯನ್ನಂ ಬಹು ಭವಿಷ್ಯತೀತ್ಯಾಪ ಏವೇಮಾ ಮೂರ್ತಾಯೇಯಂ ಪೃಥಿವೀ ಯದಂತರಿಕ್ಷಂ ಯದ್ದ್ಯೌರ್ಯತ್ಪರ್ವತಾ ಯದ್ದೇವಮನುಷ್ಯಾ ಯತ್ಪಶವಶ್ಚ ವಯಾಂಸಿ ಚ ತೃಣವನಸ್ಪತಯಃ ಶ್ವಾಪದಾನ್ಯಾಕೀಟಪತಂಗಪಿಪೀಲಕಮಾಪ ಏವೇಮಾ ಮೂರ್ತಾ ಅಪ ಉಪಾಸ್ಸ್ವೇತಿ ॥**

(ಛಾ. ಉ. ೭-೧೦-೧)

ಉದಕವು ಅನ್ನಕ್ಕಿಂತಲೂ ಅಧಿಕವಾದುದು. ಸುವೃಷ್ಟಿಯಿಲ್ಲದಿದ್ದರೆ ಅನ್ನಕ್ಕೆ ಅಭಾವವಾಗುವುದೆಂದು ಪ್ರಾಣಿ ಗಳೆಲ್ಲವೂ ಚಿಂತಿಸುವುವು. ಸುವೃಷ್ಟಿಯಾದರೆ ಪುಷ್ಟವೂ ಪುಷ್ಕಲವೂ ಆದ ಅನ್ನವು ಲಭಿಸುವುದೆಂದು ಪ್ರಾಣಿಗಳ

ಲ್ಲವೂ ಸಂತೋಷದಿಂದಿರುವುವು. ಘನೀಭೂತವಾದ ಉದಕವೇ ಪೃಥ್ವಿಯ ರೂಪದಲ್ಲೂ, ಅಂತರಿಕ್ಷರೂಪದಲ್ಲಿಯೂ ಆಕಾಶರೂಪದಲ್ಲಿಯೂ, ದೇವಮಾನವಾದಿರೂಪದಲ್ಲಿಯೂ, ಮೃಗ, ಪಕ್ಷಿ, ತೃಣ, ವೃಕ್ಷ ಮತ್ತು ಕ್ರಿಮಿಕೀಟಪಿಪೀಲಿಕಾದಿ ರೂಪಗಳಲ್ಲಿಯೂ ವ್ಯಾಪಿಸಿದೆ. ಸಮಸ್ತವೂ ಉದಕಮಯವೇ ಆಗಿದೆ. ಆದುದರಿಂದ ಉದಕವನ್ನು ಆರಾಧಿಸು.

**ಸ ಯೋಽಪೋ ಬ್ರಹ್ಮೇತ್ಯುಪಾಸ್ತ ಆಪ್ನೋತಿ ಸರ್ವಾನ್ ಕಾಮಾಂಸ್ತೃಪ್ತಿಮಾನ್ ಭವತಿ ಯಾವದಪಾಂ ಗತಂ ತತ್ರಾಸ್ಯ ಯಥಾ ಕಾಮಚಾರೋ ಭವತಿ ಯೋಽಪೋ ಬ್ರಹ್ಮೇತ್ಯುಪಾಸ್ತೇ ॥**

(ಛಾ. ಉ. ೭-೧೦-೨)

ಅಪ್ಪನ್ನೇ ಬ್ರಹ್ಮವೆಂದು ಆರಾಧಿಸುವವನು ತನ್ನ ಇಷ್ಟಾರ್ಥಗಳನ್ನೆಲ್ಲಾ ಪಡೆದು ತೃಪ್ತಿಯನ್ನು ಹೊಂದುತ್ತಾನೆ. ನಿರವಧಿಯಾದ ಸ್ವಾತಂತ್ರ್ಯವನ್ನೂ ಪಡೆಯುತ್ತಾನೆ ಇತ್ಯಾದಿಯಾಗಿ ಅಪ್ಪಿನ ಮಹತ್ತ್ವವನ್ನು ಹೇಳಿರುವುದರಿಂದ ಋಭುಗಳಲ್ಲಿ ಒಬ್ಬನು **ಆಪೋ ಭೂಯಿಷ್ಠಾಃ** ಎಂದು ಹೇಳಿರುವುದು ನಿಜವಾದ ತತ್ತ್ವಪ್ರತಿಪಾದನೆಯಾಗಿದೆ.

**ಅಗ್ನಿರ್ಭೂಯಿಷ್ಠಃ—ಆಂತರಂ ಬಾಹ್ಯಂ ಚ ದಾಹಪಾಕಭುಕ್ತಜರಣಾದಿವ್ಯಾಪಾರೇಣಾಗ್ನೇರೇವ ಜಗನ್ನಿರ್ವಾಹಕತ್ವಾದಗ್ನೇರೇವ ಭೂಯಿಷ್ಠತ್ವಮಿತ್ಯೇವ ಮನ್ಯತೇ ।** ಒಳಗೂ ಹೊರಗೂ ದಾಹಪಾಕಾದಿ ಜಗತ್ತಿನ ಸಕಲವ್ಯವಹಾರಗಳಿಗೂ ಅಗ್ನಿಯೇ ಕಾರಣನಾದುದರಿಂದ ಅಗ್ನಿಗಿಂತ ಮಹತ್ತುಳ್ಳವರು ಯಾರೂ ಇಲ್ಲ ಎಂದು ವಿವರಿಸಿದೆ.

ಛಾಂದೋಗ್ಯೋಪನಿಷತ್ತಿನಲ್ಲಿ **ಅಪ್ಪಿಗೂ ಬ್ರಹ್ಮಕ್ಕೂ** ತಾದಾತ್ಮ್ಯವನ್ನು ಹೇಳಿ ಅಬ್ರೂಪದಲ್ಲಿರುವ ಬ್ರಹ್ಮನನ್ನು ಆರಾಧಿಸಬೇಕೆಂದು ಹೇಳಿದಾಗ,

**ಅಸ್ತಿ ಭಗವೋಽದ್ಭ್ಯೋ ಭೂಯ ಇತ್ಯದ್ಭ್ಯೋ ವಾವ ಭೂಯೋಽಸ್ತೀತಿ ತನ್ಮೇ ಭಗವಾನ್ಬ್ರವೀತ್ವಿತಿ ॥**

(ಛಾ. ಉ. ೭-೧೦-೨)

ಅಪ್ಪಿಗಿಂತಲೂ ಭೂಯಿಷ್ಠವಾದುದು ಯಾವುದಿದೆ ಎಂದು ನಾರದನು ಸನತ್ಕುಮಾರನನ್ನು ಪ್ರಶ್ನಿಸಿದಾಗ,

**ತೇಜೋ ವಾವಾದ್ಭ್ಯೋ ಭೂಯಸ್ತದಾ ಏತದ್ವಾಯುಮಾಗೃಹ್ಯಾಕಾಶಮಭಿತಪತಿ ತದಾಹುರ್ನಿಶೋಚತಿ ನಿತಪತಿ ವರ್ಷಿಷ್ಯತಿ ವಾ ಇತಿ ತೇಜ ಏವ ತತ್ಪೂರ್ವಂ ದರ್ಶಯಿತ್ವಾಥಾಪಃ ಸೃಜತೇ ತದೇತದೂರ್ಧ್ವಾಭಿಶ್ಚ ತಿರಶ್ಚೀಭಿಶ್ಚ ವಿದ್ಯುದ್ಭಿರಾಹ್ರಾದಾಶ್ಚರಂತಿ ತಸ್ಮಾದಾಹುರ್ವಿದ್ಯೋತತೇ ಸ್ತನಯತಿ ವರ್ಷಿಷ್ಯತಿ ವಾ ಇತಿ ತೇಜ ಏವ ತತ್ಪೂರ್ವಂ ದರ್ಶಯಿತ್ವಾಥಾಪಃ ಸೃಜತೇ ತೇಜ ಉಪಾಸ್ಸ್ವೇತಿ। ಸ ಯಸ್ತೇಜೋ ಬ್ರಹ್ಮೇತ್ಯುಪಾಸ್ತೇ....ಯಥಾ ಕಾಮಚಾರೋ ಭವತಿ ॥**

(ಛಾ. ಉ. ೭-೧೧-೧)

ವಿದ್ಯುದ್ರೂಪದಲ್ಲಿರುವ ತೇಜಸ್ಸೇ (ಅಗ್ನಿ) ಅಪ್ಪಿಗಿಂತಲೂ ಅಧಿಕವಾದುದು. ಅದು ವಾಯುವನ್ನು ಆಕಾಶವನ್ನು ತಪ್ತವಾಗುವಂತೆ ಮಾಡುತ್ತದೆ. ಆಗ ಪ್ರಾಣಿಗಳು "ಈಗ ದಹಿಸುತ್ತಿರುವ ತಾಪವಿದೆ. ಮಳೆ ...ತ್ತದೆ" ಎಂದು ತಿಳಿಯುತ್ತಾರೆ. ತೇಜಸ್ಸು ಮೊದಲು ಈ ದಾಹವನ್ನುಂಟುಮಾಡಿ ಅನಂತರ ಮಳೆಯನ್ನು

ಸುರಿಸುತ್ತದೆ. ವಿದ್ಯುತ್ತೂ ಸಿಡಿಲೂ ಉತ್ಪನ್ನವಾದಾಗ ವೃಷ್ಟಿಯಾಗುವುದೆಂದಾಶಿಸುತ್ತಾರೆ. ಈ ತೇಜಸ್ಸೇ ಬ್ರಹ್ಮ ಎಂದು ವಿದ್ಯುದ್ರೂಪದ ಅಗ್ನಿಯನ್ನು ಸ್ತುತಿಸಿದೆ. ಈ ಅಗ್ನಿಯ ಆವಿರ್ಭಾವವೂ, ಶಕ್ತಿಯೂ ನಾನಾವಿಧವಾಗಿರುವುದರಿಂದ ಅನೇಕ ಕಡೆಗಳಲ್ಲಿ ಅನೇಕ ವಿಧವಾಗಿ ಈ ಅಗ್ನಿಯ ಸ್ತುತಿಯಿದೆ. ಬೃಹದಾರಣ್ಯಕದ ಮಧುವಿದ್ಯಾಕಾಂಡದಲ್ಲಿ, ಅಪ್ಪಿಗೂ, ಬ್ರಹ್ಮನಿಗೂ ತಾದಾತ್ಮ್ಯವನ್ನು ಹೇಳಿ ಒಡನೆಯೇ,

> **ಅಯಮಗ್ನಿಃ ಸರ್ವೇಷಾಂ ಭೂತಾನಾಂ ಮಧ್ವಸ್ಯಾಗ್ನೇಃ ಸರ್ವಾಣಿ ಭೂತಾನಿ ಮಧು ಯಶ್ಚಾಯಮಸ್ಮಿನ್ನಗ್ನೌ ತೇಜೋಮಯೋಽಮೃತಮಯಃ ಪುರುಷೋಽಯಮೇವ ಸ ಯೋಽಯಮಾತ್ಮೇದಮಮೃತಮಿದಂ ಬ್ರಹ್ಮೇದಂ ಸರ್ವಂ ।**
>
> (ಬೃ. ಉ. ೨-೫ ೩)

ಸಕಲಭೂತಗಳಿಗೂ ಈ ಅಗ್ನಿಯೇ ಮಧುರೂಪದಲ್ಲಿದೆ. ಈ ಅಗ್ನಿಯಲ್ಲಿ ಅಂತರ್ಗತನಾಗಿರತಕ್ಕ ಈ ಪ್ರಕಾಶಮಾನನೂ, ಅಮೃತನೂ ಆದ ಪುರುಷನೇ ಆತ್ಮನೂ ಬ್ರಹ್ಮನೂ ಸಕಲವೂ ಆಗಿದ್ದಾನೆ, ಎಂದು ಅಗ್ನಿಗೂ ವಿಶ್ವಾತ್ಮನಿಗೂ ತಾದಾತ್ಮ್ಯವನ್ನು ಹೇಳಿದೆ. ಮತ್ತು, ಪ್ರವಾಹಣ ಜೈವಲಿಗೂ ಗೌತಮನಿಗೂ ನಡೆದ ಸಂಭಾಷಣೆಯಲ್ಲಿ ಅಗ್ನಿಯ ಮಾಹಾತ್ಮ್ಯವನ್ನು ವಿಶದವಾಗಿ ವಿವರಿಸಿದೆ.

> **ಅಸೌ ವೈ ಲೋಕೋಽಗ್ನಿರ್ಗೌತಮ ತಸ್ಯಾದಿತ್ಯ ಏವ ಸಮಿದ್ರಶ್ಮಯೋ ಧೂಮೋಽಹರರ್ಚಿರ್ದಿಶೋಽಙ್ಗಾರಾ ಅವಾಂತರದಿಶೋ ವಿಸ್ಫುಲಿಂಗಾಸ್ತಸ್ಮಿನ್ನೇತಸ್ಮಿನ್ನಗ್ನೌ ದೇವಾಃ ಶ್ರದ್ಧಾಂ ಜುಹ್ವತಿ ತಸ್ಯಾ ಆಹುತ್ಯೈ ಸೋಮೋ ರಾಜಾ ಸಂಭವತಿ ।**
>
> (ಬೃ. ಉ. ೬-೨-೯)

ಈ ದ್ಯುಲೋಕಸ್ಥನಾದ ಅಗ್ನಿಗೆ ಸೂರ್ಯನೇ ಸಮಿತ್ತು ; ಮೇಘಗಳೇ ಧೂಮಗಳು, ದಿಗಂತಗಳೇ ಅಂಗಾರಗಳು, ಉಪದಿಕ್ಕುಗಳೇ ಕಿಡಿಗಳು. ವಿಶ್ವಾತ್ಮನಾದ ಈ ಅಗ್ನಿಯಲ್ಲಿ ದೇವತೆಗಳು ಶ್ರದ್ಧೆಯನ್ನರ್ಪಿಸುತ್ತಾರೆ. ಈ ಶ್ರಧ್ಧಾಹುತಿಯಿಂದ ಸೋಮರಾಜನುದ್ಭವಿಸುತ್ತಾನೆ.

> **ಪರ್ಜನ್ಯೋ ವಾ ಅಗ್ನಿರ್ಗೌತಮ ತಸ್ಯ ಸಂವತ್ಸರ ಏವ ಸಮಿತ್ ಅಭ್ರಾಣಿ ಧೂಮೋ .... .... .... ಅಸ್ಮಿನ್ನಗ್ನೌ ದೇವಾಃ ಸೋಮಂ ರಾಜಾನಂ ಜುಹ್ವತಿ ತಸ್ಯಾ ಆಹುತ್ಯೈ ವೃಷ್ಟಿಃ ಸಂಭವತಿ ।**
>
> (೬-೨-೧೦)

ವೃಷ್ಟ್ಯುತ್ಪಾದಕವಾದ ಮೇಘವೇ ಈ ಯಜ್ಞಾಗ್ನಿಯು. ಈ ಅಗ್ನಿಯಲ್ಲಿ ಸೋಮವನ್ನರ್ಪಿಸುವುದರಿಂದ ವೃಷ್ಟಿಯು ಉತ್ಪನ್ನವಾಗುತ್ತದೆ.

> **ಅಯಂ ವೈ ಲೋಕೋಽಗ್ನಿರ್ಗೌತಮ ತಸ್ಯ ಪೃಥಿವ್ಯೇವ ಸಮಿದಗ್ನಿರ್ಧೂಮೋ ರಾತ್ರಿರರ್ಚಿಶ್ಚಂದ್ರಮಾ ಅಂಗಾರಾ ನಕ್ಷತ್ರಾಣಿ ವಿಸ್ಫುಲಿಂಗಾಸ್ತಸ್ಮಿನ್ನೇತಸ್ಮಿನ್ನಗ್ನೌ ದೇವಾ ವೃಷ್ಟಿಂ ಜುಹ್ವತಿ ತಸ್ಯಾ ಆಹುತ್ಯಾ ಅನ್ನಂ ಸಂಭವತಿ ।**
>
> (೬-೨-೧೧)

ಈ ಜಗತ್ತೆಲ್ಲವೂ ಯಜ್ಞಾಗ್ನಿಯು. ಪೃಥ್ವಿಯೇ ಸಮಿತ್ತು. ಅಗ್ನಿಯೇ ಧೂಮವು ರಾತ್ರಿಯೇ ಜ್ವಾಲೆಯು, ಇಂದುವೇ ಅಂಗಾರವು. ನಕ್ಷತ್ರಗಳೇ ಕಿಡಿಗಳು, ಈ ವಿಶ್ವಾಗ್ನಿಯಲ್ಲಿ ದೇವತೆಗಳು ವೃಷ್ಟಿಯನ್ನು ಸುರಿಸುತ್ತಾರೆ. ಇದರಿಂದ ಅನ್ನವು ಉತ್ಪನ್ನವಾಗುತ್ತದೆ.

**ಪುರುಷೋ ವಾ ಅಗ್ನಿರ್ಗೌತಮ .... .... .... .... ಯೋಷಾ ವಾ ಅಗ್ನಿಃ ;**

(೬-೨-೧೨-೧೩)

ಪುರುಷನೂ, ಸ್ತ್ರೀಯೂ ಸಕಲವೂ ಈ ಅಗ್ನಿಯ ರೂಪಾಂತರಗಳು.

**ತೇ ಯ ಏವಮೇತದ್ವಿದುರ್ಯೇ ಚಾಮೀ ಅರಣ್ಯೇ ಶ್ರದ್ಧಾಂ ಸತ್ಯಮುಪಾಸತೇ ತೇಽರ್ಚಿರಭಿಸಂಭವಂತಿ .... .... .... ........ .... .... .... .... .... ತೇ ತೇಷು ಬ್ರಹ್ಮಲೋಕೇಷು ಪರಾಃ ಪರಾವತೋ ವಸಂತಿ ತೇಷಾಂ ನ ಪುನರಾವೃತ್ತಿಃ ।**

(೬-೨-೧೫)

ವಿಶ್ವಾಗ್ನಿಯ ವಿಶ್ವರೂಪವನ್ನೂ, ವಿಶ್ವಶಕ್ತಿಯನ್ನೂ ವಿಶ್ವಾತ್ಮವನ್ನೂ ತಿಳಿದ ಜ್ಞಾನಿಗಳು ಬ್ರಹ್ಮಲೋಕವನ್ನು ಸೇರಿ ಮುಕ್ತಿಯನ್ನು ಹೊಂದುತ್ತಾರೆಂದೂ ಅವರಿಗೆ ಪುನಃ ಸಂಸಾರದ ಪ್ರವೇಶವಿಲ್ಲವೆಂದೂ ಗೌತಮನಿಗೆ ವಿವರಿಸಿದೆ. ಈ ಉಪದೇಶದಲ್ಲಿ ಅಗ್ನಿಯು ವಿಶ್ವಕ್ಕೆಲ್ಲಾ ಆಧಾರವೂ, ಸಂಪತ್ಪ್ರದವೂ, ಪೋಷಕವೂ, ರಕ್ಷಕವೂ, ಮುಕ್ತಿದಾಯಕವೂ ಆಗಿ ಪಾರ್ಥಿವ, ಅಂತರಿಕ್ಷ ಮತ್ತು ದ್ಯುಲೋಕಗಳ ಸಕಲ ವಿಧವಾದ ವ್ಯವಹಾರಗಳಿಗೂ ಹೇತುವೂ ಮತ್ತು ಧ್ಯೇಯವೂ ಆಗಿದೆಯೆಂದು ವರ್ಣಿಸಿದೆ. ಋಕ್ಸಂಹಿತೆಯಲ್ಲಿಯೂ ಸಹ

**ವಿ ಯೋ ರಜಾಂಸ್ಯಮಿಮೀತ ಸುಕ್ರತುರ್ವೈಶ್ವಾನರೋ ವಿ ದಿವೋ ರೋಚನಾ ಕವಿಃ ।**
**ಪರಿ ಯೋ ವಿಶ್ವಾ ಭುವನಾನಿ ಪಪ್ರಥೇಽದಬ್ಧೋ ಗೋಪಾ ಅಮೃತಸ್ಯ ರಕ್ಷಿತಾ ॥**

(ಋ. ಸಂ. ೬-೭-೭)

ಈ ಅಗ್ನಿಯು ಸಕಲ ಲೋಕಗಳನ್ನೂ ನಿರ್ಮಿಸಿದನು ಮತ್ತು ಸಕಲ ತೇಜೋಮಂಡಲಗಳನ್ನೂ ಸೃಷ್ಟಿಸಿದನು.

**ತ್ರೀಣಿ ಶತಾ ತ್ರೀ ಸಹಸ್ರಾಣ್ಯಗ್ನಿಂ ತ್ರಿಂಶಚ್ಚ ದೇವಾ ನವ ಚಾಸಪರ್ಯನ್ ।**

(ಋ. ಸಂ. ೩-೯-೯)

ಇದೇ ಮಹಾತ್ಮನಾದ ಅಗ್ನಿಯನ್ನು ಮೂರುಸಾವಿರದ ಮುನ್ನೂರ ಮುವತ್ತೊಂಭತ್ತು ದೇವತೆಗಳೂ ಸಹ ಪೂಜಿಸಿದರು. ಇತ್ಯಾದಿಯಾಗಿ ಅಗ್ನಿಯ ಮಾಹಾತ್ಮ್ಯವನ್ನು ಸ್ತುತಿಸಿದೆ. ವಿಶ್ವಾಧಾರನಾದವನೂ, ವಿಶ್ವಕ್ಕೆಲ್ಲಾ ಚೈತನ್ಯದಾಯಕನೂ ಆದ ಈ ಅಗ್ನಿಯನ್ನು

**ಅಗ್ನಿರ್ವೈ ಭುವೋಽಗ್ನೇರ್ಹೀದಗ್ಂ ಸರ್ವಂ ಭವತಿ ।**

(ಶ. ಬ್ರಾ. ೮-೧-೧-೪)

ಇತ್ಯಾದಿವಾಕ್ಯಗಳಲ್ಲಿ ಅಗ್ನಿಯೇ ಸರ್ವಸ್ವವೆಂದು ಶತಪಥಾದಿಗಳಲ್ಲಿ ಅಗ್ನಿಯನ್ನು ಸ್ತುತಿಸಿದೆ. ಈ ಆಧಾರಗಳಮೇಲೆ ಅಗ್ನಿರ್ಭೂರಯಿಷ್ಠಃ ಎಂದು ಋಭುಗಳಲ್ಲಿ ಎರಡನೆಯವನು ಹೇಳಿದುಪರಲ್ಲಿಯೂ ಸತ್ಯಾಂಶವಿದೆ. ಮೂರನೆಯವನು,

**ವಧರ್ಯಂತೀಂ—ಪ್ರೈಕೋಽಬ್ರವೀತ್**—ಪೃಥ್ವಿಯೇ ಎಲ್ಲಕ್ಕಿಂತಲೂ ಮಹತ್ತಾದುದು ಎಂದು ವರ್ಣಿಸುತ್ತಾನೆ. ವಧರ್ಯಂತೀ ಎಂಬ ಪದಕ್ಕೆ ಸಾಯಣರು ಎರಡು ವಿಧವಾಗಿ ಅರ್ಥಮಾಡಿದ್ದಾರೆ. ಮೊದಲನೆಯದಾಗಿ, **ವಧರಿತಿ ರೇಫಾಂತೋಽಪಿ ವಜ್ರನಾಮ । ವಧೋಽರ್ಕ ಇತಿ ತನ್ನಾಮಸು ಪಾಠಾತ್ । ತದಿಚ್ಛತಿ ವೃಷ್ಟ್ಯುದಕಾಯ ಇತಿ ವಧರ್ಯಂತೀ ಮೇಘಪಂಕ್ತಿರುಚ್ಯತೇ । ವಧಃ, ವಜ್ರಃ, ಅರ್ಕಃ** ಎಂದು ವಜ್ರನಾಮಗಳಲ್ಲಿ ಪಠಿತವಾಗಿರುವುದರಿಂದ (ನಿ. ೩-೧೧) **ವಧ** ಶಬ್ದಕ್ಕೆ ವಜ್ರಾಯುಧವೆಂದು ಹೆಸರು. ವೃಷ್ಟಿಯನ್ನು ಸುರಿಸುವುದಕ್ಕಾಗಿ ಮೇಘವು ವಜ್ರಾಯುಧದಿಂದ ಹತಿಯನ್ನಪೇಕ್ಷಿಸುವುದರಿಂದ **ವಧರ್ಯಂತಿ**ಯೆಂದರೆ ವೃಷ್ಟ್ಯುತ್ಪಾದಕವಾದ ಮೇಘವೆಂದರ್ಥ. ಹೀಗೆ ಅರ್ಥಮಾಡಿದರೆ ಉದಕಕ್ಕೂ ಸಹ ಮೇಘವೇ ಕಾರಣವಾಗುವುದರಿಂದ ಮೇಘವೇ ಶ್ರೇಷ್ಠವಾದುದು ಎಂದು ಸಾಯಣರು ವಿವರಿಸಿದ್ದಾರೆ.

**ಅಭ್ರಂ ಭೂತ್ವಾ ಮೇಘೋ ಭವತಿ ಮೇಘೋ ಭೂತ್ವಾ ಪ್ರವರ್ಷತಿ ।**
(ಛಾ. ಉ. ೫-೧೦-೬.)

ಎಂದು ಮೇಘವು ಉದಕಕ್ಕೂ ಹೇತುವಾಗಿ ಅನ್ನಸಂಪತ್ತಿಗೆಲ್ಲಾ ಅದೇ ಆಧಾರವಾಗಿರುತ್ತದೆ. ಮತ್ತು,

**ತಾಭಿಃ ಪರ್ಜನ್ಯೋ ವರ್ಷತಿ ಪರ್ಜನ್ಯೇನೌಷಧಿವನಸ್ಪತಯಃ ಪ್ರಜಾಯಂತೇ ॥**
(ತೈ. ಉ. ೪-೨೩-೧)

ಈ ವರ್ಷಣದಿಂದಲೇ ಭೂತಗಳಿಗೆ ಅನ್ನವನ್ನೊದಗಿಸುವ ಓಷಧಿವನಸ್ಪತಿಗಳು ಉತ್ಪನ್ನವಾಗುವುದರಿಂದ ಈ ವೃಷ್ಟಿಗೆ ಕಾರಣವಾದ ಮೇಘಕ್ಕಿಂತಲೂ ಉಪಯುಕ್ತವಾದುದು ಯಾವುದೂ ಇಲ್ಲ ಎಂಬ ತಾತ್ಪರ್ಯವಾಗುತ್ತದೆ.

ಎರಡನೆಯದಾಗಿ, **ಬಹುಭ್ಯಃ ವಧರ್ಯಂತೀಂ** ಎಂಬ ಅನ್ವಯವನ್ನು ಮಾಡಿ **ಬಹೂನಾಮರ್ಥಾಯ ಆತ್ಮನಃ ವಧಂ ಇಚ್ಛಂತೀಂ ಭೂಮಿಂ ।** ಅನೇಕ ಪ್ರಾಣಿಗಳ ಜೀವನಕ್ಕಾಗಿ ಉಳುವುದೇ ಮೊದಲಾದ ಕರ್ಮಗಳಿಂದ ತನ್ನ ವಧವನ್ನು ಇಚ್ಛಿಸುವ ಪೃಥ್ವಿಯೆಂದರ್ಥವಾಗಬಹುದು. ಈ ಅರ್ಥವನ್ನು ಮಾಡಿದರೆ ಆಗ **ಪೃಥ್ವೀ** ಶಬ್ದಕ್ಕೆ ಕೇವಲ ರೂಢವಾಗಿರುವ ಭೂಮಿಯೆಂದಾಗದೆ ಆಗಲೂ ಸಕಲ ಜಗತ್ತು ಎಂದರ್ಥವಾಗುತ್ತದೆ. ಪೃಥ್ವೀ ನಾಮಗಳಲ್ಲಿಯೂ (ನಿ. ೨-೫) ಅಂತರಿಕ್ಷ ನಾಮಗಳಲ್ಲಿಯೂ (ನಿ. ೨-೧೦) ಈ ಪದವು ಸೇರಿರುವುದರಿಂದ ವಿಶಾಲವಾದ ಜಗತ್ತೆಂದರ್ಥವಾಗಬಹುದು. ಮೇಘಪರ್ಯಾಯವಾಗಿ **ಅರ್ಥಮಾಡುವುದೇ** ಸಹ ಸಾಧುವಾಗಿ ಕಾಣುವುದು. ಆ ಅರ್ಥವು ಸರಿಯಾದ ಪಕ್ಷದಲ್ಲಿಯೂ ಮೊದಲನೆಯ ಇಬ್ಬರು **ಹೇಳಿದ** ತತ್ತ್ವಪ್ರತಿಪಾದನೆಯಷ್ಟು ಗಭೀರತೆಯು ಈ ಮೂರನೆಯ ಮತದಲ್ಲಿ ಕಾಣುವುದಿಲ್ಲ.

**ಋತಾ ವದಂತಃ**—**ಋತ** ಶಬ್ದಕ್ಕೆ ಇಲ್ಲಿ ಸತ್ಯವಾಕ್ಯೆಂದರ್ಥಮಾಡಿದೆ. ಋಭುಗಳು ತತ್ತ್ವಾರ್ಥವನ್ನು ಪ್ರತಿಪಾದಿಸುವಾಗ ಅದು ಸತ್ಯಾತ್ಮಕವಾಗಿದೆಯೆಂದು ತಿಳಿಸುತ್ತಾ ಈ ವಿಧವಾಗಿ ಸತ್ಯವಾಕ್ಯುಳ್ಳವರಾದ್ದರಿಂದಲೇ ಅವರಿಗೆ ಋಭುಗಳೆಂದು ಹೆಸರು ಪ್ರಸಿದ್ಧವಾಗಿದೆಯೆಂದು ತೋರಿಸಲು,

**ಉರು ಭಾಂತೀತಿ ವಾ ಋತೇನ ಭಾಂತೀತಿ ವಾ, ಋತೇನ ಭವಂತೀತಿ ವಾ** (ನಿ. ೧೧-೧೫) ಎಂಬ ನಿರುಕ್ತದ ನಿರ್ವಚನವನ್ನುದಹರಿಸಿ ಸಾಯಣರು ವಿವರಿಸಿದ್ದಾರೆ. ಸತ್ಯದಿಂದ ಪ್ರಕಾಶಿಸುವವರು ಅಥವಾ ಸತ್ಯಾತ್ಮಕರಾಗಿಯೇ ಇರುವವರು ಆದುದರಿಂದ **ಋಭುಗಳು** ಎಂಬ ಹೆಸರಿನಿಂದ ಪ್ರಸಿದ್ಧರಾಗಿರುವವರೆಂದು ನಿರುಕ್ತಕಾರರ ಮತ.

ವ್ಯಾಕರಣಪ್ರಕ್ರಿಯಾ

**ಭೂಯಿಷ್ಠಾಃ**—ಬಹುಶಬ್ದಕ್ಕೆ ಅತಿಶಯಾರ್ಥ ತೋರುವಾಗ **ಅತಿಶಾಯನೇ ತಮಬಿಷ್ಠನೌ** (ಪಾ. ಸೂ. ೫-೩-೫೫) ಎಂಬುದರಿಂದ ಇಷ್ಠನ್ ಪ್ರತ್ಯಯ. **ಇಷ್ಠಸ್ಯ ಯಿಟ್ ಚ** (ಪಾ. ಸೂ ೬-೪-೧೫೯) ಎಂಬುದರಿಂದ ಬಹುವಿನ ಪರದಲ್ಲಿರುವ ಇಷ್ಠನಿನ ಆದಿ ಇಕಾರಕ್ಕೆ ಲೋಪ. ಬಹು ಎಂಬುದಕ್ಕೆ ಭೂ ಆದೇಶ ಯಿಡಾಗಮ. ಟಿತ್ತಾದುದರಿಂದ ಆದ್ಯವಯವವಾಗಿ ಬರುತ್ತದೆ. ಪ್ರತ್ಯಯ ನಿತ್ತಾದುದರಿಂದ ಆದ್ಯುದಾತ್ತಸ್ವರ ಬರುತ್ತದೆ.

**ಅಬ್ರವೀತ್**—ಬ್ರೂ ಞ್ ವ್ಯಕ್ತಾಯಾಂ ವಾಚಿ. ಧಾತು. ಲಙ್ ಪ್ರಥಮಪುರುಷ ಏಕವಚನಾಂತರೂಪ. ತಿಙಂತನಿಘಾತಸ್ವರ ಬರುತ್ತದೆ.

**ವಧರ್ಯಂತೀಮ್**—ವಧಃ ಆತ್ಮನಃ ಇಚ್ಛತಿ ವಧರ್ಯತಿ. ವಧರ್ ಎಂಬುದ ರೇಫಾಂತಶಬ್ದ. ಅಥವಾ ವಧ ಶಬ್ದ. **ಸುಪಆತ್ಮನಃ ಕ್ಯಚ್** (ಪಾ. ಸೂ. ೩-೧-೮) ಎಂಬುದರಿಂದ ಕ್ಯಚ್ ಬಂದಾಗ ಛಾಂದಸವಾಗಿ ರೇಫ ಹೆಚ್ಚಾಗಿ ಬರುತ್ತದೆ. ಕ್ಯಜಂತದ ಮೇಲೆ ಶತೃಪ್ರತ್ಯಯ. ಸ್ತ್ರೀತ್ವದಲ್ಲಿ **ಉಗಿತಶ್ಚ** ಎಂಬುದರಿಂದ ಙೀಪ್. ಕ್ಯಚ್ ಸ್ವರ ಉಳಿಯುತ್ತದೆ.

**ಋತಾ**—**ಶೇಶ್ಛಂದಸಿ ಬಹುಲಮ್** (ಪಾ. ಸೂ. ೬-೧-೭೦) ಎಂಬುದರಿಂದ ಶಿಗೆ ಲೋಪ.

**ವದಂತಃ**—ವದ ವ್ಯಕ್ತಾಯಾಂ ವಾಚಿ. ಧಾತು. ಲಟಿಗೆ ಶತ್ರಾದೇಶ. **ತಾಸ್ಯನುದಾತ್ತೇತ್**—(ಪಾ. ಸೂ. ೬-೧-೧೮೬) ಸೂತ್ರದಿಂದ ಲಸಾರ್ವಧಾತುಕವು ಅನುದಾತ್ತವಾಗುವುದರಿಂದ ಧಾತುಸ್ವರ ಉಳಿಯುತ್ತದೆ.

**ಅಪಿಂಶತ**—ಪಿಶ ಅವಯವೇ. ಧಾತು.. ತುದಾದಿ ಲಙ್ ಪ್ರಥಮಪುರುಷ ಬಹುವಚನದಲ್ಲಿ ತ ಪ್ರತ್ಯಯ. **ತುದಾದಿಭ್ಯಃ ಶಃ** ಎಂಬುದರಿಂದ ಶವಿಕರಣ. **ಶೇಮುಚಾದೀನಾಮ್** (ಪಾ. ಸೂ ೭-೧-೫೯) ಎಂಬುದರಿಂದ ಧಾತುವಿಗೆ ನುಮಾಗಮ. ಅಂಗಕ್ಕೆ ಅಡಾಗಮ. ಅತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ. ॥ ೯ ॥

—— :O: ——

ಸಂಹಿತಾಪಾಠಃ

**ಶ್ರೋಣಾಮೇಕ ಉದಕಂ ಗಾಮವಾಜತಿ ಮಾಂಸಮೇಕಃ ಪಿಂಶತಿ ಸೂನ-**
**ಯಾಭೃತಂ ।**
**ಆ ನಿಮ್ರುಚಃ ಶಕೃದೇಕೋ ಅಪಾಭರತ್ಕಿಂ ಸ್ವಿತ್ಪುತ್ರೇಭ್ಯಃ ಪಿತರಾ ಉಪಾ-**
**ವತುಃ ॥ ೧೦ ॥**

ಪದಪಾಠಃ

ಶ್ರೋಣಾಂ । ಏಕಃ । ಉದಕಂ । ಗಾಂ । ಅವ । ಅಜತಿ । ಮಾಂಸಂ । ಏಕಃ । ಪಿಂಶತಿ । ಸೂನಯಾ । ಆಽಭೃತಂ ।

ಆ । ನಿಽಮ್ರುಚಃ । ಶಕೃತ್ । ಏಕಃ । ಅಪ । ಅಭರತ್ । ಕಿಂ । ಸ್ವಿತ್ । ಪುತ್ರೇಭ್ಯಃ । ಪಿತರೌ । ಉಪ । ಆವತುಃ ॥ ೧೦ ॥

ಸಾಯಣಭಾಷ್ಯಂ

ಅತ್ರೇರ್ಭವ ಏವರ್ತ್ವಿಗ್ರೂಪೇಣ ಸ್ಥಿತ್ವಾ ಸರ್ವತ್ರ ಯಜ್ಞಂ ನಿರ್ವಹಂತೀತ್ಯಾಹ । ಶ್ರೋಣಾಂ ಶೋಣಂ ॥ ವಾ ಛಂದಸೀತಿ ಪರರೂಪಾಭಾವಃ ॥ ಶೋಣವರ್ಣಮುದಕಂ ರುಧಿರಮೇಕ ಋಭುಷು ಮಧ್ಯ ಋತ್ವಿಗ್ಗಾಮವಾಜತಿ । ವಾಹ್ಯಭೂಮಿಂ ಪ್ರತಿ ಗಮಯತಿ । ರಕ್ಷೋಭಾಗತ್ವೇನ ಸ್ಥಾಪಯತಿ । ತಥೈಕೋ ಮಾಂಸಂ ಸೂನಯಾ ಛೇದನಸಾಧನೇನ ಸ್ವಧಿತಿನಾಭೃತಂ ಸಂಪಾದಿತಂ ಪಿಂಶತಿ । ಹೃದಯ-ಜಿಹ್ವಾವಕ್ಷಆದ್ಯಾಕಾರೇಣಾಹೃತಂ ಸಂಪಾದಿತಂ ಮಾಂಸಂ ಪಿಂಶತಿ । ಅವಯವೀಕರೋತಿ । ಸ್ವಧಿತಿನಾ ತತ್ತದವಯವಾನ್ವಿಭಜತೀತ್ಯರ್ಥಃ । ಅಥೈಕೋ ನಿಮ್ರುಚೋ ನಿಃಶೇಷೇಣ ಚ್ಛಿನ್ನಾನ್ಮಾಂಸಾತ್ ಶಕೃತ್ ಕುಕ್ಷಿಸ್ಥಂ ಜರತ್ತೃಣಮೂವಧ್ಯನಾಮಕಮಪಾಭರತ್ । ಅಪಾಹರನ್ನಿರಸನಾಯ । ಏವಮೃತ್ವಿಗ್ರೂಪೇಣ ಸ್ಥಿತೇಭ್ಯಃ ಪುತ್ರೇಭ್ಯಃ ಪುರುತ್ರಾತೃಭ್ಯಃ ಪುತ್ರಸ್ಥಾನೀಯೇಭ್ಯ ಋಭುಭ್ಯಃ ಸರ್ವೇಷ್ವನುಷ್ಠಿತೇಷು ಪಿತರಾ ಯಜ್ಞಸ್ಯ ಪಾಲಯಿತಾರೌ ಜಾಯಾಪತೀ ಕಿಂ ಸ್ವಿದುಪಾವತುಃ । ಕಿಂ ನು ಖಲು ಪ್ರಾಪ್ನುತಃ ॥ ಅವತೇಃ ಪ್ರಾಪ್ತ್ಯರ್ಥಾಚ್ಛಾಂದಸೋ ಲಿಟ್ ॥ ಸರ್ವಂ ತೈರೇವಾನುಷ್ಠಿತಮಿತಿ ತಯೋರ್ನ ಕಿಂಚಿತ್ಕೃತ್ಯಮಸ್ತೀ-ತ್ಯರ್ಥಃ । ಅಥವಾಯಮರ್ಥಃ । ಏಕಸ್ತೇಷಾಮನ್ಯತಮಃ ಶ್ರೋಣಾಂ ಪಂಗುಕಾಂ ಗಾಮುದಕಂ ಪ್ರತ್ಯವ-ಗಮಯತಿ । ಅಪರಃ ಸೂನಯಾ ಮಾಂಸವಿಕ್ರಯಿಣ್ಯಾಭೃತಂ ಸಂಪಾದಿತಂ ಮಾಂಸಂ ಪಿಂಶತಿ । ಅಪರ ಆ ನಿಮ್ರುಚೋಽಸ್ತಮಯಾದರ್ವಾಗೇವ ಶಕೃದ್ಗೋಪುರೀಷಂ ಹರತಿ । ಏವಮೃಭುಭಿರನುಷ್ಠಿತೇ ಸತಿ ಕಿಂ ಸ್ವಿದೇತಸ್ಮಾತ್ಪರಿಚರಣಾದನ್ಯತ್ಪುತ್ರೇಭ್ಯಃ ಸಕಾಶಾದುಪಾವತುಃ । ಉಪಗಚ್ಛೇತಾಮಿತಿ ॥

ಪ್ರತಿಪದಾರ್ಥ

ಏಕಃ—ಋಭುಗಳಲ್ಲಿ ಒಬ್ಬನು । **ಶ್ರೋಣಾಂ ಉದಕಂ**—ರಕ್ತವರ್ಣದ ಉದಕವನ್ನು ಎಂದರೆ ರಕ್ತವನ್ನು । **ಗಾಂ**—ಯಜ್ಞಭೂಮಿಗೆ । ಅವಾಜತಿ—ತರುತ್ತಾನೆ । ಏಕಃ—ಇನ್ನೊಬ್ಬನು । **ಸೂನಯಾ**—ಮಚ್ಚುಕತ್ತಿಯಿಂದ । **ಆಭೃತಂ**—ಕತ್ತರಿಸಲ್ಪಟ್ಟ । **ಮಾಂಸಂ**—ಮಾಂಸವನ್ನು । **ಪಿಂಶತಿ**—ಬಿಡಿಸುತ್ತಾನೆ । **ನಿಮ್ರುಚಃ**—ಪೂರ್ಣವಾಗಿ ಕತ್ತರಿಸಲ್ಪಟ್ಟ ಮಾಂಸದಿಂದ । **ಶಕೃತ್**—ಪುರೀಷಾದಿಗಳನ್ನು । **ಏಕಃ**—ಇನ್ನೊಬ್ಬನು । **ಅಪಾಭರತ್**—(ಹೊರಕ್ಕೆ ಎಸೆಯಲು) ತೆಗೆದುಕೊಂಡು ಹೋದನು । **ಪುತ್ರೇಭ್ಯಃ**—ಪುತ್ರರೂಪದ ಋಭುಗಳಿಗೆ ಅಥವಾ ರಕ್ಷಕರಾದ ಋತ್ವಿಗ್ರೂಪದ ಋಭುಗಳಿಗೆ । **ಪಿತರೌ**—ಯಜ್ಞಪಾಲಕರಾದ ಯಜಮಾನನೂ ಮತ್ತು ಆವನ ಪತ್ನಿಯೂ । **ಕಿಂಸ್ವಿತ್**—ಮತ್ತೇನನ್ನು ತಾನೇ । **ಉಪಾವತುಃ**—(ಸಹಾಯರೂಪವಾಗಿ) ಹೊಂದಿಸಿ ಕೊಡಬಲ್ಲರು ?

### ಭಾವಾರ್ಥ

ಋಭುಗಳಲ್ಲಿ ಒಬ್ಬನು ರಕ್ತವನ್ನು ಯಜ್ಞಭೂಮಿಯಲ್ಲಿಡುತ್ತಾನೆ. ಇನ್ನೊಬ್ಬನು ಮಚ್ಚುಕತ್ತಿಯಿಂದ ಕತ್ತರಿಸಿದ ಮಾಂಸವನ್ನು ಬಿಡಿಸುತ್ತಾನೆ. ಪೂರ್ಣವಾಗಿ ಕತ್ತರಿಸಲ್ಪಟ್ಟ ಮಾಂಸದಿಂದ ಪುರೀಷಾದಿಗಳನ್ನು ಬೇರೆ ಮಾಡಿ ಎಸೆಯಲು ಇನ್ನೊಬ್ಬನು ತೆಗೆದುಕೊಂಡುಹೋಗುತ್ತಾನೆ. ಮಾತಾಪಿತೃರೂಪದ ಯಜಮಾನ ಮತ್ತು ಅವನ ಪತ್ನಿಯು ಋಭುರೂಪದ ಋತ್ವಿಕ್ಕುಗಳಿಗೆ ಇನ್ನಾವ ಸಹಾಯವನ್ನು ತಾನೇ ಮಾಡಬಲ್ಲರು ?

### English Translation

One pours the red water, (the blood), upon the ground ; one cuts the flesh, divided into fragments by the chopper ; and a third separates the excrement from the other parts : in what manner may the parents (of the sacrifice) render assistance to their sons ?

### ವಿಶೇಷವಿಷಯಗಳು

ಈ ಋಕ್ಕಿಗೆ ಎರಡುವಿಧವಾದ ಅರ್ಥಗಳನ್ನು ಮಾಡಿದೆ. ಮೊದಲನೆಯ ಅರ್ಥವನ್ನು ಪ್ರತಿಪದಾರ್ಥದಲ್ಲಿ ತಿಳಿಸಿದೆ. ಎರಡನೆಯ ವಿವರಣೆಯ ಪ್ರಕಾರ, **ಶ್ರೋಣಾ**ಶಬ್ದಕ್ಕೆ ಪಂಗುವೆಂದೂ, (Lame) **ಸೂನಾ**ಶಬ್ದಕ್ಕೆ ಮಾಂಸವನ್ನು ಮಾರುವ ಅಂಗಡಿಯೆಂದೂ, **ನಿಮ್ರುಚಃ** ಎಂಬುದಕ್ಕೆ ಅಸ್ತಮಯಕ್ಕಿಂತ ಮುಂಚಿತವಾಗಿ ಎಂದೂ ಅರ್ಥಮಾಡಿದೆ. ಇದರ ಪ್ರಕಾರ **ಏಕಃ ಶ್ರೋಣಾಂ ಗಾಂ ಉದಕಂ ಆವಾಜತಿ** ಎಂದರೆ ಋಭುಗಳಲ್ಲಿ ಒಬ್ಬನು ಕುಂಟಾದ ಗೋವನ್ನು ಉದಕದ ಹತ್ತಿರ ಕರೆದುಕೊಂಡು ಹೋಗುತ್ತಾನೆಂದೂ, **ಏಕಃ ಸೂನಯಾ ಆಭೃತಂ ಮಾಂಸಂ ಪಿಂಶತಿ** ಎಂದರೆ ಇನ್ನೊಬ್ಬನು ಮಾಂಸದ ಅಂಗಡಿಯಿಂದ ತಂದ ಮಾಂಸವನ್ನು ವಿಭಾಗಿಸುತ್ತಾನೆಂದೂ, **ಏಕಃ ನಿಮ್ರುಚಃ ಶಕೃತ್ ಆವಾಭರತ್** ಎಂದರೆ ಇನ್ನೊಬ್ಬನು ಅಸ್ತಮಯಕ್ಕಿಂತ ಮುಂಚೆಯೇ ಗೋಪುರೀಷಾದಿಗಳನ್ನು (ಶುದ್ಧಿಗಾಗಿ) ತರುತ್ತಾನೆಂದೂ ತಾತ್ಪರ್ಯವಾಗುತ್ತದೆ. ಯಾಗಕ್ಕೆ ಬೇಕಾದ ಸಲಕರಣೆಗಳನ್ನೆಲ್ಲಾ ಋಭುರೂಪರಾದ ಋತ್ವಿಕ್ಕುಗಳೇ ಯಜ್ಞಕ್ಕೆ ಪುತ್ರರ ಸ್ಥಾನದಲ್ಲಿದ್ದು ನಿರ್ವಹಿಸಿದುದರಿಂದ ಮಾತಾಪಿತೃಸ್ಥಾನದ ಯಜಮಾನ ಮತ್ತು ಅವನ ಪತ್ನಿಗೆ ಯಾವ ಶ್ರಮವೂ ಇಲ್ಲವೆಂದರ್ಥ.

ಇಲ್ಲಿ ಋಭುಗಳನ್ನು ಯಜ್ಞಕ್ಕೆ ಪುತ್ರರೂಪರಾದ ಋತ್ವಿಕ್ಕುಗಳೆಂದೂ, ಯಜ್ಞಪಾಲಕರಾದ ಯಜಮಾನ ಮತ್ತು ಅವನ ಪತ್ನಿಯನ್ನು ಪಿತರಾ ಎಂದೂ ನಿರ್ದೇಶಿಸಿದೆ.

**ಹನಾಮೈನಾँ ಇತಿ ತ್ವಷ್ಟಾ ಯದಬ್ರವೀಚ್ಚಮಸಂ ಯೇ ದೇವಪಾನಮನಿಂದಿಷುಃ ।**
**ಅನ್ಯಾ ನಾಮಾನಿ ಕೃಣ್ವತೇ ಸುತೇ ಸಚಾँ ಅನ್ಯೈರೇನಾನ್ ಕನ್ಯಾಃನಾಮಭಿಃ ಸ್ಪರತ್ ॥**
(ಋ. ಸಂ. ೧-೧೬೧-೫)

ಎಂಬ ಇದೇ ಸೂಕ್ತದ ಹಿಂದಿನ ಋಕ್ಕಿನಲ್ಲಿ ಋಭುಗಳು ಚಮಸಪಾತ್ರೆಯನ್ನು ಕಲುಷಿತವನ್ನಾಗಿ ಮಾಡಿದಾಗ ತ್ವಷ್ಟೃವು ಕೋಪದಿಂದ ಇವರನ್ನು ಹನನಮಾಡಲು ಪ್ರಯತ್ನಿಸಿದಾಗ ಇವರು ನಾಮಾಂತರಗಳನ್ನು ಹೊಂದಿ ಋತ್ವಿಗ್ರೂಪದಿಂದ

ಮರೆಸಿಕೊಂಡಾಗ ಮಾತೆಯು ಋತ್ವಿಗ್ರೂಪದ ಇವರನ್ನು ಸತ್ಕರಿಸಿದಳು ಎಂದು ಹಿಂದಿನ ಕಥೆಯನ್ನು ಉದಹರಿಸಿದ ಋಕ್ಕನ್ನು ವಿವರಿಸುವಾಗ ತಿಳಿಸಿದೆ. ಇಲ್ಲಿ ಅದೇ ಸಂದರ್ಭವನ್ನು ಸೂಚಿಸಿ ಋಭುಗಳ ತಮ್ಮ ಋತ್ವಿಗ್ರೂಪದ ಕರ್ತವ್ಯ ಗಳನ್ನು ಪೂರ್ಣವಾಗಿ ನೆರವೇರಿಸಿದರು ಎಂದಿದೆ.

**ಪುತ್ರೇಭ್ಯಃ—ಪುರು ತ್ರಾತೃಭ್ಯಃ ಪುತ್ರಸ್ಥಾನೀಯೇಭ್ಯೋ ಋಭುಭ್ಯಃ ।** ಸಂಪೂರ್ಣವಾಗಿ ಯಜ್ಞವನ್ನು ರಕ್ಷಿಸುವುದರಿಂದ ಋತ್ವಿಕ್ಕುಗಳನ್ನು ಪುತ್ರರೆಂದು ಕರೆದಿದೆ. ಇಲ್ಲಿ ಋಭುಗಳು ಋತ್ವಿಕ್ಕುಗಳಾದುದರಿಂದ ಅವರಿಗೆ ಪುತ್ರಶಬ್ದದಿಂದ ನಿರ್ದೇಶವಿದೆ.

**ಪಿತರಾ—ಯಜ್ಞಸ್ಯ ಪಾಲಯಿತಾರೌ ಜಾಯಾಪತೀ** ಯಜ್ಞಪಾಲಕರಾದ ಜಾಯಾಪತಿಗಳು, ಯಜಮಾನ ಮತ್ತು ಅವನ ಪತ್ನಿಯರು.

### ವ್ಯಾಕರಣಪ್ರಕ್ರಿಯಾ

**ಶ್ರೋಣಾಮ್**—ಶ್ರು ಶ್ರವಣೇ ಧಾತು. **ಧಾಪ್ಯಾ ವಸ್ಯ**—(ಉ. ಸೂ. ೩-೩೮೬) ಎಂಬುದರಿಂದ ವಿಧಿಸಿದ ನ ಪ್ರತ್ಯಯವು ಬಹುಲಗ್ರಹಣದಿಂದ ಇದಕ್ಕೂ ಬರುತ್ತದೆ. ಪ್ರತ್ಯಯ ನಿಮಿತ್ತವಾಗಿ ಧಾತುವಿನ ಇಕಿಗೆ ಗುಣ. **ಅಟ್‌ಕುಪ್ವಾಙ್**—ಸೂತ್ರದಿಂದ ಪ್ರತ್ಯಯಕ್ಕೆ ಣತ್ವ. ಪ್ರತ್ಯಯಸ್ವರದಿಂದ ಅಂತೋದಾತ್ತವಾಗುತ್ತದೆ. ಅಮ್ ಪರವಾದಾಗ **ವಾಛಂದಸಿ** ಎಂಬುದರಿಂದ ಪರರೂಪ ಬರುವುದಿಲ್ಲ. ಸವರ್ಣದೀರ್ಘ.

**ಉದಕಮ್**—ಉಂದೀ ಕ್ಲೇದನೇ. ಧಾತು. **ಉದಕಂಚ**—(ಉ. ಸೂ. ೨-೧೯೭) ಎಂಬುದರಿಂದ ಕ್ವನ್ ಪ್ರತ್ಯಯ. **ಅನಿದಿತಾಂಹ**—ಸೂತ್ರದಿಂದ ಉಪಧಾ ನಕಾರ ಲೋಪ. **ಯುವೋರನಾಕೌ** (ಪಾ. ಸೂ. ೭-೧-೧) ಎಂಬುದರಿಂದ ಪ್ರತ್ಯಯಕ್ಕೆ ಅಕಾದೇಶ. ಘೃತಾದಿಯಲ್ಲಿ ಸೇರಿರುವುದರಿಂದ ಅಂತೋದಾತ್ತವಾಗುತ್ತದೆ.

**ಅಜತಿ**—ಅಜ ಗತಿಕ್ಷೇಪಣಯೋಃ ಧಾತು. ಲಟ್ ಪ್ರಥಮಪುರುಷ ಏಕವಚನಾಂತರೂಪ. ತಿಙಂತ ನಿಘಾತಸ್ವರ ಬರುತ್ತದೆ.

**ಪಿಂಶತಿ**—ಪಿಶ ಅವಯವೇ ಧಾತು. ತುದಾದಿ. **ಶೇಮುಚಾದೀನಾಮ್** ಎಂಬುದರಿಂದ ನುಮಾಗಮ. ಲಟ್ ರೂಪ. ತಿಙಂತ ನಿಘಾತಸ್ವರ ಬರುತ್ತದೆ.

**ಸೂನಯಾ**—ಷುಞ್ ಅಭಿಷವೇ ಧಾತು. **ಸುಞಾಂತೋದೀರ್ಘಶ್ಚ** (ಉ. ಸೂ. ೨-೨೯೩) ಎಂಬುದರಿಂದ ನ ಪ್ರತ್ಯಯ. ಧಾತುವಿಗೆ ದೀರ್ಘ. ಸ್ತ್ರೀತ್ವದಲ್ಲಿ ಅದಂತನಿಬಂಧನವಾಗಿ ಟಾಪ್. **ಉದಾತ್ತನಿವೃತ್ತಿಸ್ವರದಿಂದ** ಅದು ಉದಾತ್ತವಾಗುತ್ತದೆ. ತೃತೀಯಾ ಏಕವಚನಾಂತರೂಪ.

**ಅಭೃತಮ್**—ಹೃಞ್ ಹರಣೇ. ಧಾತು. ಕರ್ಮಣಿಯಲ್ಲಿ ಕ್ತ ಪ್ರತ್ಯಯ. **ಹೃಗ್ರಹೋರ್ಭಶ್ಛಂದಸಿ** ಎಂಬುದರಿಂದ ಹಕಾರಕ್ಕೆ ಭತ್ವ. **ಗತಿರನಂತರಃ** (ಪಾ. ಸೂ. ೬-೨-೪೯) ಎಂಬುದರಿಂದ ಗತಿಗೆ (ಅ) ಉದಾತ್ತ ಸ್ವರ ಬರುತ್ತದೆ.

**ಅಭರತ್**—ಪೂರ್ವೋಕ್ತವಾದ ಧಾತುವಿಗೆ **ಲಙ್** ಪ್ರಥಮಪುರುಷ ಏಕವಚನ ಪ್ರತ್ಯಯ ಬಂದಾಗ ಉಕ್ತರೂಪವಾಗುತ್ತದೆ. ಅತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

ಆವತುಃ— ಅವ ಗತ್ಯಾದಿಷು. ಧಾತು. ಇಲ್ಲಿ ಪ್ರಾಪ್ತ್ಯರ್ಥದಲ್ಲಿ ಪ್ರಯುಕ್ತವಾಗಿದೆ. ಛಂದಸಿ ಲುಙ್ಲಙ್ಲಿಟಃ (ಪಾ. ಸೂ. ೩-೪-೬) ಎಂಬುದರಿಂದ ವರ್ತಮಾನಾರ್ಥದಲ್ಲಿ ಲಿಟ್. ಪ್ರಥಮಪುರುಷ ದ್ವಿವಚನಕ್ಕೆ ಪರಸ್ಮೈಪದಾನಾಂ ಣಲ—(ಪಾ. ಸೂ. ೩-೪-೮೨) ಎಂಬುದರಿಂದ ಅತುಸಾದೇಶ. ಧಾತುವಿಗೆ ದ್ವಿತ್ವಾದಿ. ತಿಙಂತನಿಘಾತ ಸ್ವರ ಬರುತ್ತದೆ. ॥ ೧೦ ॥

—— :C: ——

ಸಂಹಿತಾಪಾಠಃ

ಉದ್ವತ್ಸ್ವಸ್ಮಾ ಅಕೃಣೋತನಾ ತೃಣಂ ನಿವತ್ಸ್ವಪಃ ಸ್ವಪಸ್ಯಯಾ ನರಃ ।
ಅಗೋಹ್ಯಸ್ಯ ಯದಸಸ್ತನಾ ಗೃಹೇ ತದದ್ಯೇದಮೃಭವೋ ನಾನು ಗಚ್ಛಥ ।
॥ ೧೧ ॥

ಪದಪಾಠಃ

ಉದ್ವತ್ಽಸು । ಅಸ್ಮೈ । ಅ ಕೃ ಣೋ ತ ನ । ತೃಣಂ । ನಿವತ್ಽಸು । ಅಪಃ । ಸುಽಅಪಸ್ಯಯಾ । ನರಃ ।
ಅಗೋಹ್ಯಸ್ಯ । ಯತ್ । ಅಸಸ್ತನ । ಗೃಹೇ । ತತ್ । ಅದ್ಯ । ಇದಂ । ಋಭವಃ । ನ । ಅನು । ಗ ಚ್ಛ ಥ ।
॥ ೧೧ ॥

ಸಾಯಣಭಾಷ್ಯಂ

ಪುರಾಣಪ್ರಸಿದ್ಧಾನ್ಸುಧನ್ವನಃ ಪುತ್ರಾನ್ ಕರ್ಮಣಾ ದೇವತ್ವಂ ಪ್ರಾಪ್ತವತ ಋಭೂನ್ ಸ್ತುತ್ವಾ ವೇದಪ್ರಸಿದ್ಧ್ಯೈ ಸೂರ್ಯರಶ್ಮಿರೂಪಾನೃಭೂನಿದಾನೀಂ ಸ್ತೌತಿ । ತಥಾ ಚ ಯಾಸ್ಕೋ ನಿರುಕ್ತೇ ಪುರಾಣಪ್ರಕ್ರಿಯಾಸಿದ್ಧಾನೃಭೂನ್ಬಹುಧಾ ನಿರುಚ್ಯ ತದುದಾಹರಣತ್ವೇನ ವಿಷ್ಟ್ವೀ ಶಮೀತ್ಯೇತಾಮುದಾಹೃತ್ಯಾದಿತ್ಯರಶ್ಮಯೋಽಪ್ಯೃಭವ ಉಚ್ಯಂತೇ ಇತ್ಯುಕ್ತ್ವಾ ತಸ್ಮಿನ್ನರ್ಥೇ ಏತಾಮೃಚಮುದಾಜಹಾರ । ನಿ. ೧೧-೧೬. । ಹೇ ಋಭವ ಉರು ಪ್ರಭೂತಂ ಭಾಸಮಾನಾಃ ಋತೇನಾದಿತ್ಯೇನ ಭಾಸಮಾನಾ ವಾ ಋತೇನೋದಕೇನೋದಕಾರ್ಥಮುತ್ಪನ್ನಾ ವಾ । ರಶ್ಮೀನಾಮುರುಭಾಸಮಾನತ್ವಂ ಪ್ರಸಿದ್ಧಂ । ತಥಾದಿತ್ಯಾದುತ್ಪತ್ತಿರಪಿ । ಉದಕಾರ್ಥಂ ಭವನಮಪಿ ರಶ್ಮೀನಾಂ ಘರ್ಮಕಾಲೇ ಭೂಮಿಗತಂ ಸಾರಮಾದಾಯ ಪುನರ್ವರ್ಷಕಾಲೇ ಪ್ರವರ್ಷಂತೀತಿ ಪ್ರಸಿದ್ಧಂ । ಆದಿತ್ಯಾಜ್ಜಾಯತೇ ವೃಷ್ಟಿರಿತಿ ಶಾಸ್ತ್ರಾತ್ । ತಥಾವಿಧಾ ನರಃ ಪ್ರಕಾಶಾವೃಷ್ಟ್ಯುದಕಾದೇರ್ನೇತಾರಃ ಯೂಯಮುದ್ವತ್ಸೂನ್ನತೇಷು ಪ್ರದೇಶೇಷು ಮೇರ್ವಾದಿಷು ತೃಣಂ ವ್ರೀಹಿಯವಾದಿರೂಪಮಸ್ಮೈ ಪ್ರಾಣಿಜಾತಾಯ ತದುಪಕಾರಾರ್ಥಮಕೃಣೋತನ । ಕೃತವಂತಃ ಸ್ಥ ॥ ಉಪಸರ್ಗಾಚ್ಛಂದಸಿ ಧಾತ್ವರ್ಥ ಇತಿ ವತಿಃ ॥ ತಥಾ ನಿವತ್ಸು ಪ್ರವಣದೇಶೇಷ್ವಸ್ಮಾ ಏವಾಪ ಉದಕಾನ್ಯಕೃಣೋತನ । ಅಕುರುತ । ಕಿಂ ಸ್ವಭೋಗಾರ್ಥಂ ನೇತ್ಯಾಹ । ಸ್ವಪಸ್ಯಯಾ

**ಶೋಭನಕರ್ಮೇಚ್ಛಯಾ । ಶೋಭನಂ ಕರ್ಮಭಿಃ ಕೃತಮಿತಿ ಯಥಾ ಯಜಮಾನಾಃ ಸ್ತುವಂತಿ ತದಿಚ್ಛಯೇತ್ಯರ್ಥಃ । ಕಿಂಚ ಯೂಯಮಗೋಹ್ಯಸ್ಯಾಗ್ರಾಹ್ಯಸ್ಯಾದಿತ್ಯಸ್ಯ ಗೃಹೇ ಮಂಡಲೇ ಯದ್ಯಾವತ್ಕಾಲಮಸಸ್ತನ ಸುಪ್ತವಂತಃ ಸ್ಥ ರಾತ್ರೌ ನಿರ್ವ್ಯಾಪಾರಾಸ್ತಿಷ್ಠಥ ॥ ಷಸ ಸ್ವಪ್ನೇ । ಅಸ್ಮಾಲ್ಲುಙಃ ಪೂರ್ವವತ್ತಸ್ಯ ತನಬಾದೇಶಃ । ಅದಾದಿತ್ವಾಚ್ಛಪೋ ಲುಕ್ ॥ ತತ್ತಾವಂತಂ ಕಾಲಮದ್ಯಾಹನೀದಮಿದಾನೀಂ ನಾನು ಗಚ್ಛಥ । ಅನುಸೃತ್ಯ ನ ಗಚ್ಛಥ । ಯಾವಂತಂ ಕಾಲಂ ರಾತ್ರೌ ಸೂರ್ಯೇ ನಿಗೂಢಾ ವರ್ತಧ್ವೇ ತಾವಂತಮೇವ ಕಾಲಮಹನ್ಯಪಿ ನಾನುಗಚ್ಛಥೇತ್ಯರ್ಥಃ । ಯದ್ವಾ । ಅಗೋಹ್ಯಸ್ಯ ತಸ್ಯ ಗೃಹೇಽಂತರಿಕ್ಷೇ ಯದ್ಯಾವಂತಂ ಕಾಲಮಸಸ್ತನ ವೃಷ್ಟಿಮುದತ್ವಾ ।ಸ್ವಾಪಮಕುರುತ ತತ್ತಾವಂತಂ ಕಾಲಮದ್ಯೇದಾನೀಂ ವರ್ಷಸಮಯ ಇದಂ ಸಸ್ಯಾಭಿವರ್ಧನವೃಷ್ಟಿಪ್ರವಾಹರೂಪಂ ಕರ್ಮ ನಾನು ಗಚ್ಛಥ । ಅನುಸೃತ್ಯ ನ ಪ್ರಾಪ್ನುಥ । ಯಾವತಂ ಕಾಲಂ ವಿವರ್ಷಥ ತಾವಂತಮೇವ ಕಾಲಂ ಪ್ರವರ್ಷಥೇತ್ಯರ್ಥಃ ॥**

ಪ್ರತಿಪದಾರ್ಥ

**ನರಃ**—(ವೃಷ್ಟ್ಯಾದಿಗಳಿಗೆಲ್ಲಾ) ನೇತೃಗಳಾದವರೂ । **ಋಭವಃ**—ಅತ್ಯಂತ ಪ್ರಕಾಶಮಾನರಾದವರೂ ಮತ್ತು ಸೂರ್ಯರಶ್ಮಿಗಳ ರೂಪದಲ್ಲಿರುವವರೂ ಆದ ಎಲೈ ಋಭುಗಳೇ ನೀವು । **ಉದ್ವತ್ಸು**-ಉನ್ನತವಾದ ಪ್ರದೇಶಗಳಲ್ಲಿ। **ಅಸ್ಮೈ**—ಈ ಲೋಕದ ಪ್ರಾಣಿಗಳ ಪ್ರಯೋಜನಕ್ಕಾಗಿ । **ತೃಣಂ**—ವ್ರೀಹಿ, ಯವ ಮುಂತಾದ ಸಸ್ಯಾದಿಗಳನ್ನು । **ಅಕೃಣೋತನ**—ಸೃಷ್ಟಿಸಿದಿರಿ । **ಸ್ವಪಸ್ಯಯಾ**—ಶ್ರೇಷ್ಠವಾದ ಕರ್ಮಾಚರಣೆಯ ಸಹಾಯಾರ್ಥವಾಗಿ । **ನಿವತ್ಸು**-ತಗ್ಗುಪ್ರದೇಶಗಳಲ್ಲಿ । **ಅಪಃ**—ಉದಕಗಳನ್ನು (ಹರಿಯುವಂತೆ ಮಾಡಿದಿರಿ) । **ಅಗೋಹ್ಯಸ್ಯ**—ಮರೆಸಲು ಸಾಧ್ಯವಿಲ್ಲದಿರುವ ಆದಿತ್ಯನ । **ಗೃಹೇ**—ವಾಸಸ್ಥಾನದಲ್ಲಿ । **ಯತ್**—ಎಷ್ಟುಕಾಲ (ರಾತ್ರಿಯವೇಳೆ)।। **ಅಸಸ್ತನ**—ವಿಶ್ರಮಿಸಿಕೊಂಡಿದ್ದಿರೋ । **ತತ್**—ಅಷ್ಟೇಕಾಲ । **ಇದಂ**—ಈ ಹಗಲಿನಲ್ಲಿಯೂ ಸಹ । **ನಾನುಗಚ್ಛಥ**—(ನಿಮ್ಮ ಕರ್ತವ್ಯವನ್ನು ಬಿಟ್ಟು) ಅಲ್ಲಿಯೇ ಇದ್ದುಬಿಡಬೇಡಿ.

ಭಾವಾರ್ಥ

ವೃಷ್ಟ್ಯಾದಿಗಳಿಗೆಲ್ಲಾ ನೇತೃಗಳಾದವರೂ, ಅತ್ಯಂತ ಪ್ರಕಾಶಮಾನರಾದವರೂ ಮತ್ತು ಸೂರ್ಯರಶ್ಮಿಗಳ ರೂಪದಲ್ಲಿರುವವರೂ ಆದ ಎಲೈ ಋಭುಗಳೇ, ನೀವು ಈ ಲೋಕದ ಪ್ರಾಣಿಗಳ ಪ್ರಯೋಜನಕ್ಕಾಗಿ ವ್ರೀಹಿ, ಯವ ಮುಂತಾದ ಸಸ್ಯಾದಿಗಳನ್ನು ಸೃಷ್ಟಿಸಿದಿರಿ. ಶ್ರೇಷ್ಠವಾದ ಕರ್ಮಾಚರಣೆಯ ಸಹಾಯಾರ್ಥವಾಗಿ ತಗ್ಗು ಪ್ರದೇಶಗಳಲ್ಲಿ ಉದಕಗಳನ್ನು ಹರಿಯುವಂತೆ ಮಾಡಿದಿರಿ. ಮರೆಸಲು ಸಾಧ್ಯವಿಲ್ಲದಿರುವ ಆದಿತ್ಯನ ವಾಸಸ್ಥಾನದಲ್ಲಿ ಎಷ್ಟು ಕಾಲ ರಾತ್ರಿಯವೇಳೆ ವಿಶ್ರಮಿಸಿಕೊಂಡಿದ್ದಿರೋ, ಅಷ್ಟೇಕಾಲ ಈ ಹಗಲಿನಲ್ಲಿಯೂ ಸಹ ನಿಮ್ಮ ಕರ್ತವ್ಯವನ್ನು ಬಿಟ್ಟು ಅಲ್ಲೇ ಇದ್ದುಬಿಡಬೇಡಿ.

## English Translation

Ribhus, leaders (of the rains), you have caused the grass to grow upon the high places; you have caused the waters to flow over the low places; for (the promotion of) good works: as you have reposed for a while

in the dwelling of the unapprehensible (Sun), so desist not to-day from (the discharge of) this (your function).

### ವಿಶೇಷವಿಷಯಗಳು

ಋಭುಗಳ ಮಹಿಮೆಯನ್ನು ಎರಡು ದೃಷ್ಟಿಯಿಂದ ನೋಡತಕ್ಕದ್ದು. ಮೊದಲನೆಯದಾಗಿ ಸುಧನ್ವಪುತ್ರರಾದ ಋಭುಗಳು ತಮ್ಮ ಸುಕರ್ಮಗಳಿಂದ ದೇವತ್ವವನ್ನು ಪಡೆದುದಾಗಿ ವರ್ಣಿಸಿ ಈಗ ವೇದಪ್ರಸಿದ್ಧವಾದ ಸೂರ್ಯರಶ್ಮಿರೂಪರಾದ ಋಭುಗಳನ್ನು ಸ್ತುತಿಸಿದೆಯೆಂದು ವರ್ಣಿಸಿದೆ. ಪುರಾಣದಲ್ಲಿ ಋಭುವನ್ನು ಬ್ರಹ್ಮಮಾನಸಪುತ್ರನೆಂದು ಹೇಳಿದೆ ಮತ್ತು ಸನಕ, ಸನಂದ, ಸನತ್ಕುಮಾರ, ಸನತ್ಸುಜಾತ ಮತ್ತು ಋಭು ಈ ಐವರಲ್ಲಿ ಒಬ್ಬನೆಂದು ಭಾಗವತದಲ್ಲಿ ಹೇಳಿದೆ. (೪-೮). ಸಾಯಣರು ಪುರಾಣಪ್ರಸಿದ್ಧವೆಂದು ಹೇಳಿರುವುದರಿಂದ ಅದು ವಿಮರ್ಶಾರ್ಹವಾದ ವಿಷಯವಾಗಿದೆ.

ಪ್ರಕೃತದಲ್ಲಿ **ಆದಿತ್ಯರಶ್ಮಯೋಽಪ್ಯೃಭವ ಉಚ್ಯಂತೇ** (ನಿ. ೧೧-೧೬) ಎಂಬ ನಿರುಕ್ತವಚನದಲ್ಲಿ ಹೇಳಿರುವಂತೆ ಇಲ್ಲಿ ಆದಿತ್ಯರಶ್ಮಿಗೂ ಋಭುಗಳಿಗೂ ತಾದಾತ್ಮ್ಯವನ್ನು ಹೇಳಿ ಸಾಯಣರು ಋಕ್ಕನ್ನು ವಿವರಿಸಿದ್ದಾರೆ.

**ಅಗೋಹ್ಯಸ್ಯ—ಅಗೋಹ್ಯ ಆದಿತ್ಯೋಽಗೂಹನೀಯಃ** । ಮುಚ್ಚಲು ಸಾಧ್ಯವಿಲ್ಲದಿರುವ ಆದಿತ್ಯನಿಗೆ ಈ ವಿಶೇಷಣವು ಪರವಾಗಿ ಅವನ ಸ್ವರೂಪವನ್ನು ತಿಳಿಸುತ್ತದೆ. [೮-೯೮-೪ ನೇ ಋಕ್ಕಿನಲ್ಲಿ ಈ ವಿಶೇಷಣವು ಇದೇ ಅರ್ಥದಲ್ಲಿ ಪರ್ವತಕ್ಕೂ ವಿಶೇಷಣವಾಗಿದೆ].

**ಋಭವಃ**—ನಿರುಕ್ತನಿರ್ವಚನದೊಂದಿಗೆ ಈ ಪದಕ್ಕೆ ಅರ್ಥವನ್ನು ವಿವರಿಸಿ ಈ ಹೆಸರಿನ ವೈಶಿಷ್ಟ್ಯವೇನೆಂದು ಹಿಂದೆ ತಿಳಿಸಿದೆ.

**ಉದ್ವತ್ಸು ನಿವತ್ಸು—ಉನ್ನತೇಷು ಪ್ರದೇಶೇಷು, ಶ್ರವಣದೇಶೇಷು** ಎತ್ತರವಾದ ಮತ್ತು ತಗ್ಗಾದ ಪ್ರದೇಶಗಳಲ್ಲಿ ಎಂದರ್ಥ. ನಿರುಕ್ತಕಾರರು **ಪ್ರವತ ಉದ್ವತೋ ನಿವತ** ಇತಿ ಎಂಬ ಪದಗಳನ್ನು ದೇವ, ಮಾನವ ಮತ್ತು ತಿರ್ಯಕ್ಕುಗಳ ಪರ್ಯಾಯಪದವಾಗಿ ಉಪಯೋಗಿಸಿದ್ದಾರೆ. (೧೦.೨೦) ಅದಕ್ಕೆ ದುರ್ಗಾಚಾರ್ಯರು **ಉದ್ವತಃ-ದೇವಾಃ, ಪ್ರವತಃ-ಮನುಷ್ಯಾಃ, ನಿವತಃ-ತಿರ್ಯಂಚಃ** ಎಂದು ವಿವರಿಸಿದ್ದಾರೆ. **ಅವತಿರ್ಗತಿಕರ್ಮಾ** ಗತಿಕರ್ಮವನ್ನು ಸೂಚಿಸುವ ಅವ ಧಾತುವಿನಿಂದ ನಿಷ್ಪನ್ನವಾಗಿ ದೇವಲೋಕಸಂಚಾರಿಗಳಿಗೆ ಉದ್ವತಃ ಎಂದೂ, ಪೃಥ್ವಿಯ ಮೇಲೆ ಸಂಚರಿಸುವ ಮಾನವಾದಿಗಳಿಗೆ ಪ್ರವತಃ ಎಂದೂ ಮತ್ತು ಬಹಳ ಕೆಳಭಾಗದಲ್ಲಿರುವ ಕ್ರಿಮಿಕೀಟಾದಿಗಳಿಗೆ **ನಿವತಃ** ಎಂದೂ ಹೆಸರೆಂದು ವಿವರಿಸಿದ್ದಾರೆ.

### ವ್ಯಾಕರಣಪ್ರಕ್ರಿಯಾ

**ಉದ್ವತ್ಸು—ಉಪಸರ್ಗಾಚ್ಛಂದಸಿ ಧಾತ್ವರ್ಥೇ** (ಪಾ. ಸೂ. ೫-೧-೧೧೮) ಎಂಬುದರಿಂದ ಉತ್ ಎಂಬ ಉಪಸರ್ಗಕ್ಕೆ ವತಿ ಪ್ರತ್ಯಯ. ಪ್ರತ್ಯಯದ ಆದ್ಯುದಾತ್ತಸ್ವರ ಬರುತ್ತದೆ.

**ಅಕೃಣೋತನ**—ಕೃವಿ ಹಿಂಸಾಕರಣಯೋಶ್ಚ ಧಾತು. ಲಙ್ ಮಧ್ಯಮಪುರುಷ ಬಹುವಚನಕ್ಕೆ **ತಪ್ತನಪ್ತ**-ಎಂಬುದರಿಂದ ತನಬಾದೇಶ ಪಿತ್ತಾದುದರಿಂದ ವಿಕರಣಕ್ಕೆ ಗುಣ ಬರುತ್ತದೆ. ತಿಙಂತನಿಘಾತಸ್ವರ ಬರುತ್ತದೆ.

**ನಿವತ್ಸು**—ಹಿಂದಿನಂತೆ ಉಪಸರ್ಗಕ್ಕೆ ವತಿ ಪ್ರತ್ಯಯ.

**ಸ್ವಪಸ್ಯಯಾ**—ಸ್ವಪಃ ಆತ್ಮನಃ ಇಚ್ಛತಿ ಸ್ವಪಸ್ಯತಿ. **ಸುಪಆತ್ಮನಃ ಕ್ಯಚ್** (ಪಾ. ಸೂ. ೩-೧-೮) ಎಂಬುದರಿಂದ ಕ್ಯಚ್ ಪ್ರತ್ಯಯ. **ಅಪ್ರತ್ಯಯಾತ್** (ಪಾ. ಸೂ. ೩-೩-೧೦೨) ಎಂಬುದರಿಂದ ಕ್ಯಜಂತದ ಮೇಲೆ ಅ ಪ್ರತ್ಯಯ. ಸ್ತ್ರೀತ್ವದಲ್ಲಿ ಟಾಪ್. ಉದಾತ್ತನಿವೃತ್ತಿಸ್ವರದಿಂದ ಉದಾತ್ತವಾಗುತ್ತದೆ. ತೃತೀಯಾಏಕವಚನಾಂತರೂಪ

**ಅಗೋಹ್ಯಸ್ಯ**—ನಞ್‌ತತ್ಪುರುಷಸಮಾಸವಾದಾಗ **ತತ್ಪುರುಷೇ**—(ಪಾ. ಸೂ. ೬-೨-೨) ಎಂಬುದರಿಂದ ನಞ್‌ಪ್ರಕೃತಿಸ್ವರ ಬರುತ್ತದೆ.

**ಅಸಸ್ತನ**—ಷಸ ಸ್ವಪ್ನೇ ಧಾತು. ಅದಾದಿ. ಲಙ್ ಮಧ್ಯಮಪುರುಷಬಹುವಚನದಲ್ಲಿ **ತಪ್ತನಪ್ತನಥನಾಶ್ಚ** (ಪಾ. ಸೂ. ೭-೧-೪೫) ಎಂಬುದರಿಂದ ತನಾದೇಶ. **ಅದಿಪ್ರಭೃತಿಭ್ಯಃಶಪಃ** (ಪಾ. ಸೂ. ೨-೪-೭೨) ಎಂಬುದರಿಂದ ವಿಕರಣಕ್ಕೆ ಲುಕ್. ಅಂಗಕ್ಕೆ ಅಡಾಗಮ. ಯದ್ಯೋಗವಿರುವುದರಿಂದ ನಿಘಾತಸ್ವರ ಬರುವುದಿಲ್ಲ. ಅಡಾಗಮ ಉದಾತ್ತವಾದುದರಿಂದ ಆದ್ಯುದಾತ್ತಪದವಾಗುತ್ತದೆ.

**ಗಚ್ಛಥ**—ಗಮ್ಲೃ ಗತೌ ಧಾತು. ಲಟ್ ಮಧ್ಯಮಪುರುಷಬಹುವಚನಾಂತರೂಪ. ತಿಙಂತನಿಘಾತಸ್ವರ ಬರುತ್ತದೆ. ॥ ೧೧ ॥

———:o:———

**ಸಂಹಿತಾಪಾಠಃ**

ಸಂಮೀಲ್ಯ ಯದ್ಭುವನಾ ಪರ್ಯಸರ್ಪತ ಕ್ವ ಸ್ವಿತ್ತಾತ್ಯಾ ಪಿತರಾ ವ ಆಸತುಃ ।
ಅಶಪತ ಯಃ ಕರಸ್ನಂ ವ ಆದದೇ ಯಃ ಪ್ರಾಬ್ರವೀತ್ಪ್ರೋ ತಸ್ಮಾ ಅಬ್ರವೀತನ ॥ ೧೨ ॥

**ಪದಪಾಠಃ**

ಸಂऽಮೀಲ್ಯ । ಯತ್ । ಭುವನಾ । ಪರಿऽಅಸರ್ಪತ । ಕ್ವ । ಸ್ವಿತ್ । ತಾತ್ಯಾ । ಪಿತರಾ । ವಃ । ಆಸತುಃ ।
ಅಶಪತ । ಯಃ । ಕರಸ್ನಂ । ವಃ । ಆऽದದೇ । ಯಃ । ಪ್ರ । ಅಬ್ರವೀತ್ । ಪ್ರೋ ಇತಿ । ತಸ್ಮೈ । ಅಬ್ರವೀತನ ॥ ೧೨ ॥

**ಸಾಯಣಭಾಷ್ಯಂ**

**ಹೇ ಋಭವೋ ರಶ್ಮಯಃ ಯೂಯಂ ಯದ್ಯದಾ ಭುವನಾ ಭೂತಜಾತಾನಿ ಸಂಮೀಲ್ಯ ಸಂಮೀಲನಂ ಕೃತ್ವಾ ಜಲಧರಪಟಲೈರಾಚ್ಛಾದ್ಯ ಪರ್ಯಸರ್ಪತ ಪರಿತಃ ಸರ್ಪಣಂ ಕುರುಥ । ವರ್ಷಥೇತ್ಯರ್ಥಃ ।**

ತಾತ್ಯಾ ತಾತೌ ತಾಯಮಾನೇ ವೃಷ್ಟ್ಯುದಕೇ । ಯದ್ವಾ । ತಾತ್ಯಾ ತಾಸು ವರ್ಷಾಸು ॥ ಛಾಂದಸಸ್ತ್ಯ-ಪ್ರತ್ಯಯೋ ದಕಾರಸ್ಯಾತ್ವಂ ಚ ॥ ಅಥವಾ ಪಿತೃವಿಶೇಷಣಂ । ತಾತ್ಯಾ ತತ್ಕಾಲೀನೌ ಪಿತರಾ ಜಗತಃ ಪಾಲಕೌ ಸೂರ್ಯಾಚಂದ್ರಮಸೌ ಕ್ವ ಸ್ವಿದಾಸತುಃ । ಕುತ್ರ ಖಲು ತಿಷ್ಠತಃ ॥ ಅಸ್ತೇರ್ಲಿಟಿ ವ್ಯತ್ಯಯೇನ ಭೂಭಾವಾಭಾವಃ । ಯದ್ವಾ । ಅಸತೇರ್ಗತ್ಯರ್ಥಸ್ಯ ಲಿಟ್ಯೇತದ್ರೂಪಂ ॥ ಅಹೋರಾತ್ರವಿಭಾಗೇನ ಪ್ರವರ್ಷಯಥೇತ್ಯರ್ಥಃ । ಕಿಂಚೇಪ್ಸೃಶಾನ್ಸೋ ಯುಷ್ಮಾನ್ ಯಃ ಕೋಽಪಿ ವೃಷ್ಟಿಪ್ರತಿಬಂಧಕಾರೀ ರಾಕ್ಷಸಾದಿಃ ಕರಸ್ನಂ । ಬಾಹುನಾಮೈತತ್ ಕರಸ್ನಾ ಬಾಹೂ ಇತ್ಯುಕ್ತತ್ವಾತ್ ಅತ್ರ ತ್ವಕಾರಾಂತಂ । ಯುಷ್ಮದೀಯಂ ಹಸ್ತಮಾದದೇ ಗೃಹ್ಣಾತಿ ಪ್ರತಿರೋಧಂ ಕರೋತಿ ತಮಶಪತ । ನಾಶಯಥ । ಯಶ್ಚ ಪ್ರಾಬ್ರವೀತ್ ಪ್ರಕರ್ಷೇಣ ವಾಚಾ ನಿರುಂಧೇ । ತಸ್ಮೈ ಪ್ರೋ ಪ್ರೈವಾಬ್ರವೀತನ । ಪ್ರಕರ್ಷೇಣ ಭರ್ತ್ಸನಾದಿಶಬ್ದಂ ಕುರುಥ । ಯದ್ವಾ । ಯೋ ನೂನಂ ಸ್ತೌತಿ ತಂ ಪ್ರಕರ್ಷೇಣ ಸ್ತುತೇತ್ಯರ್ಥಃ ॥

### ಪ್ರತಿಪದಾರ್ಥ

(**ಋಭವಃ**—ರಶ್ಮಿರೂಪರಾದ ಎಲೈ ಋಭುಗಳೇ) । **ಯತ್**—ಯಾವಾಗ । **ಭುವನಾ**—ಭೂತಜಾತಗಳನ್ನು । **ಸಂಮೀಲ್ಯ**—(ಮೇಘಗಳಿಂದ) ಆಚ್ಛಾದನೆಯನ್ನು ಮಾಡಿ । **ಪರ್ಯಸರ್ಪತ**—ಸರಿಯುತ್ತೀರೋ ಅಥವಾ ಮಳೆಯನ್ನು ಸುರಿಸುತ್ತೀರೋ, (ಆಗ) । **ತಾತ್ಯಾ**—ಮಳೆಯು ಸುರಿಯುತ್ತಿರುವ ಕಾಲದಲ್ಲಿ । **ವಃ**—ನಿಮ್ಮ ಮತ್ತು ಜಗತ್ತಿನ) । **ಪಿತರಾ** — ಮಾತಾಪಿತೃಗಳಾದ ಸೂರ್ಯಚಂದ್ರರು । **ಕ್ವಸ್ವಿತ್** —ಎಲ್ಲಿ ತಾನೇ । **ಆಸತುಃ**—ಇರುತ್ತಾರೆ । **ಯಃ**—ಯಾವ ಶತ್ರುವೇ ಆಗಲಿ । **ವಃ**—ನಿಮ್ಮ । **ಕರಸ್ನಂ**—ಬಾಹುರೂಪವಾದ ಕಿರಣಗಳನ್ನು । **ಆದದೇ**—ಹಿಡಿದು ತಡೆಯುತ್ತಾನೆಯೋ (ಅವನನ್ನು) **ಅಶಪತ**—ಶಪಿಸಿ ನಾಶಮಾಡಿರಿ । **ಯಃ**—ಯಾವನು **ಪ್ರ ಅಬ್ರವೀತ್**—ದೂಷಿಸಿ ಅವಹೇಳನವನ್ನು ಮಾಡುತ್ತಾನೆಯೋ । **ತಸ್ಮೈ**—ಅವನಿಗೆ । **ಪ್ರೋ ಅಬ್ರವೀತನ**—ಬೆದರಿಕೆಯನ್ನುಂಟುಮಾಡುವ ಶಬ್ದವನ್ನು ಉಂಟುಮಾಡಿರಿ. [ಅಥವಾ **ಯಃ**—ಯಾವನು । **ಪ್ರ ಅಬ್ರವೀತ್**—ನಿಮ್ಮನ್ನು ಸ್ತುತಿಸುತ್ತಾನೆಯೋ । **ತಸ್ಮೈ**—ಅವನಿಗೆ । **ಪ್ರೋ ಅಬ್ರವೀತನ**—ಉತ್ತೇಜಕವಾದ ಶಬ್ದವನ್ನು ಮಾಡಿರಿ.]

### ಭಾವಾರ್ಥ

ರಶ್ಮಿರೂಪರಾದ ಎಲೈ ಋಭುಗಳೇ, ನೀವು ಯಾವಾಗ ಮೇಘಗಳಿಂದ ಭೂತಜಾತಗಳನ್ನು ಆಚ್ಛಾದನೆಮಾಡಿ ವೃಷ್ಟಿಯನ್ನು ಸುರಿಸುತ್ತೀರೋ, ಆ ಕಾಲದಲ್ಲಿ ನಿಮ್ಮ ಪಾಲಕರೂ ಜಗತ್ತಿಗೆ ಮಾತಾಪಿತೃಗಳೂ ಆದ ಸೂರ್ಯಚಂದ್ರರು ಎಲ್ಲ ತಾನೇ ಇರುತ್ತಾರೆ. ನಿಮ್ಮ ಬಾಹುರೂಪವಾದ ರಶ್ಮಿಗಳನ್ನು ಹಿಡಿದು ತಡೆಯುವ ಯಾವ ಶತ್ರುವನ್ನೂ ಸಹ ನೀವು ಶಪಿಸಿ ನಾಶಮಾಡಿರಿ. ನಿಮ್ಮನ್ನು ಅಪಶಬ್ದಪ್ರಯೋಗಗಳಿಂದ ಅವಹೇಳನಮಾಡುವವನನ್ನು ನೀವು ಬೆದರಿಸುವಂತೆ ಶಬ್ದವನ್ನುಂಟುಮಾಡಿರಿ.

## English Translation

As you glide along enveloping the regions (in clouds); where, then, are the parents (of the world)? curse him who arrests your arm: reply sternly to him who speaks disrespectfully (to you).

॥ ವಿಶೇಷವಿಷಯಗಳು ॥

**ತಾತ್ಯಾ**—**ತಾಯಮಾನೇ ವೃಷ್ಟ್ಯುದಕೇ; ಯದ್ವಾ ತಾಸು ವರ್ಷಾಸು ।** ವೃಷ್ಟ್ಯುದಕವು ಅನುಸ್ಯೂತವಾಗಿಯೂ ಧಾರಾಕಾರವಾಗಿಯೂ ಸುರಿಯುತ್ತಿರುವಾಗ ಎಂದರ್ಥಮಾಡಿದೆ. Monier Williams ಎಂಬುವನು ತನ್ನ Sanskrit—English Dictionary ಯಲ್ಲಿ ಈ ಪದವನ್ನು **ತಾತನಿಗೆ** ಸಂಬಂಧಪಟ್ಟದು **ತಾತ್ಯ** ಎಂದು ವಿವರಿಸಿ Fatherly ಎಂಬರ್ಥಮಾಡಿ ಪ್ರಕೃತವಾದ ಋಕ್ಕನ್ನೂ; ಮತ್ತು ಋ. ಸಂ. ೭-೩೭-೬ನೇ ಋಕ್ಕನ್ನೂ ಉದಾಹರಣೆಗಾಗಿ ತೋರಿಸುತ್ತಾನೆ. ಆದರೆ ಈ ಋಕ್ಕಿನಲ್ಲಿ ಪುನಃ **ಪಿತರಾ** ಎಂಬ ಪದವಿರುವುದರಿಂದ **ತಾತ್ಯಾ** ಎಂಬುದಕ್ಕೆ ತಾತನಸಂಬಂಧಿಯೆಂದರ್ಥಮಾಡುವುದು ಉಚಿತವಲ್ಲ. ಸಾಯಣರ ಅರ್ಥವೇ ಸರಿಯಾಗಿದೆ. ಸಾಯಣರು,

**ವಾಸಯಸೀವ ವೇಧಸಸ್ತ್ವಂ ನಃ ಕದಾ ನ ಇಂದ್ರ ವಚಸೋ ಬುಬೋಧಃ ।**
**ಅಸ್ತಂ ತಾತ್ಯಾ ಧಿಯಾ ರಯಿಂ ಸುವೀರಂ ಪೃಕ್ಷೋ ನೋ ಅರ್ವಾ ನ್ಯುಹೀತ ವಾಜೀ ॥**
(ಋ ಸಂ, ೭-೩೭-೬)

ಎಂಬ ಋಕ್ಕಿನಲ್ಲಿ **ತಾತ್ಯಾ** ಎಂಬ ಪದಕ್ಕೆ **ತನೋತೇರಿದಂ ರೂಪಂ ಸಂತತಯಾ** (ಧಿಯಾ) । ವಿಸ್ತೃತವಾಗಿರುವುದು ಎಂದರ್ಥವನ್ನು ಕೊಡುವ ತನು (ವಿಸ್ತಾರೇ) ಎಂಬ ಧಾತುವಿನ ಕರ್ಮಣಿಪ್ರಯೋಗವೆಂದು ವಿವರಿಸಿ ಅನುಸ್ಯೂತವಾದ ಸ್ತುತಿಯೆಂದರ್ಥಮಾಡುವಂತೆ ಪ್ರಕೃತವಾದ ಋಕ್ಕಿನಲ್ಲಿಯೂ ಸಹ ಅವಿಚ್ಛಿನ್ನವಾಗಿ ಸುರಿಯತಕ್ಕ ವೃಷ್ಟಿಯಿಂದ ಎಂದರೆ ವೃಷ್ಟಿಕಾಲದಲ್ಲಿ ಎಂದರ್ಥವಾಗುತ್ತದೆ. **ಅಥವಾ ಪಿತೃವಿಶೇಷಣಂ । ತಾತ್ಯಾ ತತ್ಕಾಲೀನೌ ಪಿತರಾ ।** ತತ್ಕಾಲಕ್ಕೆ ಸಂಬಂಧಿಸಿದ ಎಂದರ್ಥವಾಗಿ **ಪಿತರಾ** ಎಂಬ ಪದಕ್ಕೆ ವಿಶೇಷಣವಾಗುತ್ತದೆ ಎಂದೂ ಸಹ ಸಾಯಣರು ಎರಡನೆಯ ಪರ್ಯಾಯವಾದ ಅರ್ಥವನ್ನು ಮಾಡಿದ್ದಾರೆ.

**ಕರಸ್ನಂ**—ಕರಸ್ನ ಶಬ್ದವನ್ನು ಬಾಹುನಾಮಗಳಲ್ಲಿ ಸೇರಿಸಿದೆ. (ನಿ. ೩-೮) ನಿರುಕ್ತಕಾರರು,

**ಬೃಬದುಕ್ಥಂ ಹವಾಮಹೇ ಸೃಪ್ರಕರಸ್ನಮೂತಯೇ । ಸಾಧು ಕೃಣ್ವಂತಮವಸೇ ॥**
(ಋ. ಸಂ. ೮-೩೨-೧೦)

ಎಂಬ ಋಕ್ಕನ್ನುದಹರಿಸಿ ಕರಸ್ನ ಶಬ್ದಕ್ಕೆ **ಕರ್ಮಣಾಂ ಪ್ರಸ್ನಾತಾರೌ ।** ಕರ್ಮಗಳಿಗೆ ಪ್ರವರ್ತಕಗಳಾಗಿರುವುದರಿಂದ ಬಾಹುಗಳಿಗೆ ಈ ಹೆಸರು ಪ್ರಸಿದ್ಧವಾಗಿದೆಯೆಂದು ತಿಳಿಸಿದ್ದಾರೆ. (೬-೧೭).

**ಪ್ರ ಅಬ್ರವೀತ್**—ಈ ಪದಕ್ಕೆ ದೂಷಿಸಿದರಾಗಲಿ ಅಥವಾ ಸ್ತುತಿಸಿದರಾಗಲಿ ಎಂದು ಎರಡರ್ಥಗಳನ್ನೂ ಮಾಡಿದೆ. **ಬ್ರೂಞ್** ಧಾತುವಿಗೆ **ಪ್ರ** ಎಂಬ ಉಪಸರ್ಗವನ್ನು ಸೇರಿಸಿದರೆ ಗಟ್ಟಿಯಾಗಿ ಉಚ್ಚರಿಸು; ಪ್ರಕಟಿಸು, ಘೋಷಣೆಯನ್ನು ಮಾಡು ಎಂಬರ್ಥಗಳಾಗುತ್ತದೆ. ಈ ಅಂಶವನ್ನೇ Wilson ಎಂಬ ಪಂಡಿತನು ಈ ಋಕ್ಕಿನ ವಿಶೇಷವಿಷಯಗಳನ್ನು ಹೇಳುವಾಗ, **ಪ್ರ** prefixed to **ಬ್ರೂ**, may mean, either to speak harshly or kindly; to censure or to praise ಎಂದು ವಿವರಿಸಿದ್ದಾನೆ. ಆ ಎರಡರ್ಥಗಳೂ ಸಾಧ್ಯವಾಗಿರುವುದರಿಂದಲೇ ಸಾಯಣರೂ ಸಹ **ತಸ್ಮೈ ಪ್ರೋ ಅಬ್ರವೀತನ** ಎನ್ನುವಾಗಲೂ ಸಹ, ನಿಮ್ಮನ್ನು ದೂಷಿಸುವವನನ್ನು ಭಯಪಡುವಂತೆ ಶಬ್ದಮಾಡಿ ಅಥವಾ ನಿಮ್ಮನ್ನು ಸ್ತುತಿಸುವವನನ್ನು ಉತ್ತೇಜನಪಡಿಸುವಂತೆ ಅನುಗ್ರಹವಾಕ್ಯಗಳನ್ನು ಹೇಳಿ ಎಂದರ್ಥವಾಗುತ್ತದೆಂದು ವಿವರಿಸಿದ್ದಾರೆ.

**ಪಿತರಾ**—**ಜಗತಃ ಪಾಲಕೌ ।** ಜಗತ್ತಿಗೆ ಪಾಲಕರಾದ ಸೂರ್ಯ ಮತ್ತು ಚಂದ್ರ ಇವರು.

## ವ್ಯಾಕರಣಪ್ರಕ್ರಿಯಾ

**ಸಂಮೀಲ್ಯ**—ಮೀಲ ಸಂಕೋಚನೇ ಧಾತು. (ನಿಮೇಷಣೇ) **ಸಮಾಸೇನಞ್ಪೂರ್ವೇಕ್ತ್ವೋಲ್ಯಪ್** (ಪಾ. ಸೂ. ೭-೧-೩೭) ಎಂಬುದರಿಂದ ಕ್ತ್ವಾ ಪ್ರತ್ಯಯಕ್ಕೆ ಲ್ಯಬಾದೇಶ. ಪಿತ್ತ್ವಾದುದರಿಂದ ಅನುದಾತ್ತವಾಗು ತ್ತದೆ. ಕೃದುತ್ತರಪದಪ್ರಕೃತಿಸ್ವರ ಬರುತ್ತದೆ.

**ಭುವನಾ**—ಭುವನಾನಿ ಎಂದು ರೂಪವಾದಾಗ **ಶೇಶ್ಛಂದಸಿ ಬಹುಲಮ್** (ಪಾ. ಸೂ. ೬-೧-೭೦) ಎಂಬುದರಿಂದ ಶಿಗೆ ಲೋಪ.

**ಪರ್ಯಸರ್ಪತ**—ಪರಿ ಉಪಸರ್ಗ. ಸೃಪ್ಲೃ ಗತೌ ಧಾತು. ಛಾಂದಸವಾಗಿ ಲಙ್. ಮಧ್ಯಮಪುರುಷ ಬಹುವಚನಾಂತರೂಪ ಯದ್ಯೋಗವಿರುವುದರಿಂದ ನಿಘಾತಸ್ವರ ಬರುವುದಿಲ್ಲ. ಆದ್ಯುದಾತ್ತವಾಗುತ್ತದೆ. **ತಿಙಿ-ಚೋದಾತ್ತವತಿ** (ಪಾ. ಸೂ. ೮-೧-೭೧) ಎಂಬುದರಿಂದ ಗತಿಗೆ (ಪರಿ) ನಿಘಾತಸ್ವರ ಬರುತ್ತದೆ.

**ತಾತ್ಯಾ**—ತದ್ ಶಬ್ದ. ಛಾಂದಸವಾಗಿ ತ್ಯಪ್ ಪ್ರತ್ಯಯ. ಅದರೊಡನೆ ದಕಾರಕ್ಕೆ ಆಕಾರಾದೇಶ. **ಸುಪಾಂ ಸುಲುಕ್**-ಎಂಬುದರಿಂದ ವಿಭಕ್ತಿಗೆ ಆಕಾರಾದೇಶ. ಪಿತರಾ ಎಂಬಲ್ಲಿಯೂ ದ್ವಿವಚನಕ್ಕೆ ಆಕಾರಾದೇಶ.

**ಆಸತುಃ**—ಅಸ ಭುವಿ ಧಾತು. ಲಿಟ್ ಪ್ರಥಮಪುರುಷದ್ವಿವಚನ ಪರವಾದಾಗ ವ್ಯತ್ಯಯದಿಂದ ಭೂಭಾವ ಬರುವುದಿಲ್ಲ. ಅಥವಾ ಅಸ ಗತೌ ಧಾತು ಇದಕ್ಕೆ ಲಿಟಿನಲ್ಲಿ ಆಷತುಃ ಎಂದು ರೂಪವಾಗುತ್ತದೆ. ತಿಙಂತನಿಘಾತ ಸ್ವರ ಬರುತ್ತದೆ.

**ಅಶಪತ**—ಶಪ ಆಕ್ರೋಶೇ ಧಾತು. ಲಙ್ ಮಧ್ಯಮಪುರುಷಬಹುವಚನಾಂತರೂಪ. ಪಾದಾದಿಯಲ್ಲಿರು ವುದರಿಂದ ತಿಙಂತನಿಘಾತಸ್ವರ ಬರುವುದಿಲ್ಲ. ಆದ್ಯುದಾತ್ತವಾಗುತ್ತದೆ.

**ಆದದೇ**—ಡುದಾಞ್ ದಾನೇ ಧಾತು. ಲಿಟ್ ಪ್ರಥಮಪುರುಷ ಏಕವಚನಾಂತರೂಪ. **ಯದ್ವೃತ್ತಾ-ನ್ನಿತ್ಯಮ್** ಎಂಬುದರಿಂದ ನಿಘಾತಸ್ವರಪ್ರತಿಷೇಧ ಬರುವುದರಿಂದ ಪ್ರತ್ಯಯಸ್ವರದಿಂದ ಅಂತೋದಾತ್ತವಾಗುತ್ತದೆ **ತಿಙಿಚೋದಾತ್ತವತಿ** ಎಂಬುದರಿಂದ ಗತಿಗೆ (ಆಙ್) ಅನುದಾತ್ತಸ್ವರ ಬರುತ್ತದೆ.

**ಅಬ್ರವೀತ್**—ಹಿಂದಿನಂತೆ ಯದ್ಯೋಗವಿರುವುದರಿಂದ ನಿಘಾತಸ್ವರ ಬರುವುದಿಲ್ಲ. ಆದ್ಯುದಾತ್ತಸ್ವರ ಬರು ತ್ತದೆ. ಅಬ್ರವೀತನ ಎಂಬಲ್ಲಿ ಹಿಂದಿನಂತೆ ಮಧ್ಯಮಬಹುವಚನಕ್ಕೆ **ತಪ್ತನಪ್ತನಥನಾಶ್ಚ** ಎಂಬುದರಿಂದ ತನಬಾ ದೇಶ ಅತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ. ॥ ೧೨ ॥

ಸಂಹಿತಾಪಾಠಃ

ಸುಷುಪ್ವಾಂಸ ಋಭವಸ್ತದಪೃಚ್ಛತಾಗೋಹ್ಯ ಕ ಇದಂ ನೋ ಅಬೂಬುಧತ್ ।
ಶ್ವಾನಂ ಬಸ್ತೋ ಬೋಧಯಿತಾರಮಬ್ರವೀತ್ಸಂವತ್ಸರ ಇದಮದ್ಯಾ ವ್ಯಖ್ಯತ ॥ ೧೩ ॥

। ಪದಪಾಠಃ ।

ಸುಸುಪ್ವಾಂಸಃ । ಋಭವಃ । ತತ್ । ಅ ಪೃ ಚ್ಛ ತ । ಅಗೋಹ್ಯ । ಕಃ । ಇದಂ । ನಃ । ಅಬೂಬುಧತ್ ।
ಶ್ವಾನಂ । ಬಸ್ತಃ । ಬೋಧಯಿತಾರಂ । ಅಬ್ರವೀತ್ । ಸಂವತ್ಸರೇ । ಇದಂ । ಅದ್ಯ । ವಿ । ಅ ಖ್ಯ ತ ॥೧೩॥

ಸಾಯಣಭಾಷ್ಯಂ

ಹೇ ಋಭವೋ ರಶ್ಮ್ಯಾತ್ಮಕಾಃ ಯೂಯಂ ಸುಷುಪ್ವಾಂಸ ಆದಿತ್ಯಮಂಡಲೇ ಸ್ವಪಂತೋ ವರ್ಷಣಾಯ ॥ ಸ್ವಪೇರ್ಲಿಟಃ ಕ್ವಸುಃ ॥ ತಮಾದಿತ್ಯಂ ತದ್ವಾಕ್ಯಮಪೃಚ್ಛತ । ಪ್ರಶ್ನಂ ಕುರುಥ । ಕಿಂ ತದಿತಿ ಚೇತ್ ಉಚ್ಯತೇ । ಹೇ ಅಗೋಹ್ಯ ಕೇನಚಿದಗೋಪನೀಯಾದಿತ್ಯ ಸ್ವಾಮಿನ್ ನೋಽಸ್ಮದೀಯಮಿದಂ ಕರ್ಮ ವರ್ಷಣರೂಪಂ ಕೋಽಬೂಬುಧತ್ । ಬೋಧಯತಿ । ಪ್ರೇರಯತಿ । ಸಾಹಾಯ್ಯಂ ಕರೋತಿ ॥ ಬುಧೇರ್ಣ್ಯಂತಾಲ್ಲುಙಿ ಚಙಿ ರೂಪಂ ॥ ಬಸ್ತಃ ಸರ್ವಸ್ಯ ವಾಸಯಿತಾದಿತ್ಯಃ ॥ ವಸೇರೌಣಾದಿಕಸ್ತಪ್ರತ್ಯಯಃ । ಬವಯೋರಭೇದಾದ್ಬತ್ವಂ ॥ ಬೋಧಯಿತಾರಂ ಪ್ರೇರಯಿತಾರಂ ಶ್ವಾನಮಬ್ರವೀತ್ । ಅಂತರಿಕ್ಷೇ ಶ್ವಸಂತಂ ವಾಯುಂ ಪ್ರಾವಾದೀತ್ । ಅಸೌ ಯುಷ್ಮಾನ್ಪ್ರೇರಯತೀತಿ । ಅಥ ವಾಯುಸಹಾಯೇನ ವರ್ಷಂತೋ ಯೂಯಂ ಸಂವತ್ಸರೇ ಪೂರ್ಣೇಽದ್ಯೇದಾನೀಮಿದಂ ಜಗದ್ವ್ಯಖ್ಯತ । ವಿವಿಧಂ ಪ್ರಕಾಶಿತವಂತಃ । ಪೂರ್ವಂ ಸೂರ್ಯಾಚಂದ್ರಮಸೌ ಯಥಾ ನ ದೃಶ್ಯೇತೇ ತಥಾ ವರ್ಷಿತ್ವೇದಾನೀಂ ವರ್ಷಕಾಲೇಽತೀತೇ ವಿಶ್ವಂ ಜಗದ್ವ್ಯಕ್ತಂ ಕುರುಥೇತ್ಯರ್ಥಃ ॥ ಖ್ಯಾತೇರ್ಲುಙ್ಯಸ್ಯತಿವಕ್ತಿಖ್ಯಾತೀತ್ಯಙ್ ॥

। ಪ್ರತಿಪದಾರ್ಥ ।

**ಋಭವಃ**—ರಶ್ಮಿರೂಪದ ಎಲೈ ಋಭುಗಳೇ । **ಸುಷುಪ್ವಾಂಸಃ**—ಆದಿತ್ಯಮಂಡಲದ ಅವಲಂಬನವನ್ನಾಶ್ರಯಿಸಿ) ವಿಶ್ರಾಂತರಾಗಿರುತ್ತಾ । **ತತ್**—ಈ ಪ್ರಶ್ನೆಯನ್ನು । **ಅಪೃಚ್ಛತ**—ಕೇಳಿರಿ (ಅದೇನೆಂದರೆ) । **ಅಗೋಹ್ಯ**-(ಯಾರಿಂದಲೂ) ಮರೆಸಲಾಗದ ಎಲೈ ಆದಿತ್ಯನೇ । **ಇದಂ**—ಈ ವರ್ಷಣ ಕರ್ಮಕ್ಕೆ । **ನಃ**—ನಮ್ಮನ್ನು । **ಕಃ**—ಯಾವನು । **ಅಬೂಬುಧತ್**—ಪ್ರೇರಿಸಿದನು । **ಬಸ್ತಃ**—(ಸಕಲರನ್ನೂ) ಆಚ್ಛಾದಿಸುವ ಆದಿತ್ಯನು । **ಶ್ವಾನಂ**—ವಾಯುವನ್ನು । **ಬೋಧಯಿತಾರಂ**—ಪ್ರೇರಕನೆಂದು । **ಅಬ್ರವೀತ್**—ಹೇಳಿದನು । **ಸಂವತ್ಸರೇ**—ಸಂವತ್ಸರವು

ಪೂರ್ಣವಾದನಂತರ | **ಅದ್ಯ**—ಈಗ | **ಇದಂ**—ಈ ಜಗತ್ತನ್ನು ! **ವ್ಯಖ್ಯತ**—ವಿಧವಿಧವಾಗಿ ಪ್ರಕಾಶಿಸುವಂತೆ ಮಾಡಿದಿರಿ (ಎಂದೂ ಹೇಳಿದನು).

**ಭಾವಾರ್ಥ**

ರಶ್ಮಿರೂಪದ ಎಲೈ ಋಭುಗಳೇ, ಆದಿತ್ಯಮಂಡಲದ ಅವಲಂಬನವನ್ನಾಶ್ರಯಿಸಿ ವಿಶ್ರಾಂತರಾಗಿರುತ್ತಾ-ಯಾರಿಂದಲೂ ಮರೆಸಲಾಗದ ಎಲೈ ಆದಿತ್ಯನೇ ಈ ವರ್ಷಣಕರ್ಮಕ್ಕೆ ನಮ್ಮನ್ನು ಪ್ರೇರಿಸಿದವನು ಯಾರು ಎಂದು ಪ್ರಶ್ನೆಯನ್ನು ಕೇಳಿರಿ. (ಆಗ) ಸಕಲರನ್ನೂ ಆಚ್ಛಾದನೆಮಾಡುವ ಆದಿತ್ಯನು-ವಾಯುವೇ ಈ ಪ್ರೇರಕನೆಂದು ಹೇಳಿದನು. ಅನಂತರ ಸಂವತ್ಸರವು ಪೂರ್ಣವಾದಮೇಲೆ ಈ ಜಗತ್ತನ್ನು ವಿಧವಿಧವಾಗಿ ಪ್ರಕಾಶಿಸುವಂತೆ ಮಾಡಿದಿರಿ ಎಂದೂ ಸಹ ಹೇಳಿದನು.

## English Translation

Ribhus, reposing in the solar orb, you inquire, who awakens us, unapprehensible (Sun), to this office (of sending rain). The sun replies–The awakener is the wind ; and the year (being ended), you again to-day light up this (world).

**ವಿಶೇಷವಿಷಯಗಳು**

ಸೂರ್ಯರಶ್ಮಿಗಳು ಉದಕವನ್ನಾಕರ್ಷಿಸಿ ಮೇಘರೂಪದಿಂದ ವರ್ಷಣಕರ್ಮವನ್ನು ನೆರವೇರಿಸುತ್ತವೆಯೆಂಬುದು ಪ್ರಸಿದ್ಧವಾದ ವಿಷಯವಾಗಿದೆ. ಸೂಕ್ಷ್ಮವಾಗಿ ಪರಿಶೀಲಿಸಿದರೆ ಕೇವಲ ಸೂರ್ಯರಶ್ಮಿಗಳಿಂದಲೇ ಆ ಕೆಲಸವು ಪೂರ್ಣವಾಗಿ ನಿರ್ವಹಿಸಲಾಗುವುದಿಲ್ಲ. ಬೇರೆ ಸಹಾಯವೂ ಅವಶ್ಯವಾಗಿರುತ್ತದೆ ಎಂಬುದನ್ನು ಸ್ಪಷ್ಟವಾಗಿ ತಿಳಿಸಲು ಇಲ್ಲಿ ಪ್ರಶ್ನೋತ್ತರರೂಪದಿಂದ ವಿವರಿಸಿದೆ. ಅಂತರಿಕ್ಷಪ್ರದೇಶದಲ್ಲೆಲ್ಲಾ ವ್ಯಾಪಿಸಿ ಮಧ್ಯಲೋಕದ ಆಧಿಪತ್ಯವನ್ನು ವಹಿಸಿರುವ ವಾಯುವೇ ಈ ವರ್ಷಣಕರ್ಮಕ್ಕೆ ಮುಖ್ಯಸಹಾಯಕನು ಎಂದು ರಶ್ಮಿಗಳ ಪ್ರಶ್ನೆಗೆ ಉತ್ತರವಾಗಿ ಆದಿತ್ಯನು ಹೇಳುತ್ತಾನೆಂದು ಇಲ್ಲಿ ಆಲಂಕಾರಿಕವಾಗಿ ವರ್ಣಿಸಿದೆ.

ಅಗ್ನಿ, ವಾಯು ಮತ್ತು ಆದಿತ್ಯರಲ್ಲಿ ವಾಯುವು ಮಧ್ಯಲೋಕದ ಅಧಿದೇವತೆಯೆಂಬುದು ಸ್ಪಷ್ಟವಾದ ವಿಷಯ. ಅಂತರಿಕ್ಷದ ಮೂಲಕ ಸಂಚರಿಸತಕ್ಕ ಸೂರ್ಯರಶ್ಮಿಗಳಿಗೆ ವೃಷ್ಟಿವರ್ಷಕ್ಕೆ ಈ ಅಂತರಿಕ್ಷಾಧಿದೇವತೆಯ ಪ್ರೇರಣೆಯು ಅತ್ಯವಶ್ಯವಾಗಿರುತ್ತದೆ. ಈ ಲೋಕದಲ್ಲಿ ನಡೆಯತಕ್ಕ ಸಮಸ್ತವ್ಯವಹಾರಗಳಿಗೂ ವಾಯುವೇ ಪ್ರಭುವಾಗಿದ್ದಾನೆ.

**ಅಥ ವಿಶ್ವಜ್ಯೋತಿಷಮುಪದಧಾತಿ | ವಾಯುರ್ವೈ ಮಧ್ಯಮಾ ವಿಶ್ವಜ್ಯೋತಿರ್ವಾಯುರ್ಹ್ಯೇ-ವಾಂತರಿಕ್ಷಲೋಕೇ ವಿಶ್ವಂ ಜ್ಯೋತಿರ್ವಾಯುಮೇವೈತದುಪದಧಾತಿ ||**

(ಶ. ಬ್ರಾ. ೮-೩-೨-೧)

ಅಗ್ನಿ, ವಾಯು, ಆದಿತ್ಯ ಎಂಬ ಮೂರು ವಿಶ್ವಜ್ಯೋತಿಗಳಲ್ಲಿ ವಾಯುವು ಮಧ್ಯಮಲೋಕದ ವಿಶ್ವಜ್ಯೋತಿಯು. ಮತ್ತು ಅಂತರಿಕ್ಷವನ್ನೆಲ್ಲಾ ಬೆಳಗಿಸಿ ಪ್ರಭುವಾಗಿರುವವನು.

**ನೇತ್ಥ ಚತ್ವಾರಿ ಮಹಾಂತಿ ನೇತ್ಥ ಚತ್ವಾರಿ ಮಹತಾಂ ಮಹಾಂತೀತ್ಯಗ್ನಿರ್ಮಹಾಂಸ್ತಸ್ಯ ಮಹತೋ ಮಹದೋಷಧಯಶ್ಚ ವನಸ್ಪತಯಶ್ಚ ತದ್ಧ್ಯಸ್ಯಾನ್ನಂ ವಾಯುರ್ಮಹಾಂಸ್ತಸ್ಯ ಮಹತೋ ಮಹದಾಪಸ್ತದ್ಧ್ಯಸ್ಯಾನ್ನಮಾದಿತ್ಯೋ ಮಹಾನ್ .... .... .... ||**

(ಶ. ಬ್ರಾ. ೧೦-೩-೪-೪)

ವಿಶ್ವದ ಮಹತ್ತಾದ ವಸ್ತುಗಳು ನಾಲ್ಕು. ಅಗ್ನಿ, ವಾಯು, ಆದಿತ್ಯ ಮತ್ತು ಪುರುಷ. ಈ ನಾಲ್ಕು ಮಹಾವಸ್ತುಗಳಲ್ಲಿ ಅಂತರಿಕ್ಷಸ್ಥನಾದ ವಾಯುವಿಗೆ ಮಹತ್ತಾದ ಉದಕವೇ ಅನ್ನವು.

**ಅಯಂ ವೈ ವರ್ಷಸ್ಯೇಷ್ಟೇ ಯೋಽಯಂ ಪವತೇ ಸೋಽಯಮೇಕ ಇವೈವ ಪವತೇ ಸೋಽಯಂ ಪುರುಷೇಽಂತಃ ಪ್ರವಿಷ್ಟಃ ಪ್ರಾಙ್ಚ ಪ್ರತ್ಯಙ್ಚ ತಾವಿಮೌ ಪ್ರಾಣೋದಾನೌ ಪ್ರಾಣೋದಾನೌ ವೈ ಮಿತ್ರಾವರುಣೌ ತದ್ಯ ಏವ ವರ್ಷಸ್ಯೇಷ್ಟೇ ಸ ತ್ವಾ ವೃಷ್ಟ್ಯಾ ಯವತ್ವಿತ್ಯೇವೈತದಾಹ ತಮೇತೇ-ನೈವಾದದೀತ ಯದಾ ಹ್ಯೇವ ಕದಾ ಚ ವೃಷ್ಟಿಃ ಸಮಿವ ಸಮನಕ್ತ್ಯಾಹುತಿಮೇವೈತತ್ಕರೋ-ತ್ಯಾಹುತಿರ್ಭೂತ್ವಾ ದೇವಲೋಕಂ ಗಚ್ಛಾದಿತಿ ||**

(ಶ. ಬ್ರಾ. ೧-೮-೩-೧೨)

ಪುರುಷನ ಅಂತಃಪ್ರವಿಷ್ಟನಾಗಿ ಪ್ರಾಣೋದಾನರೂಪದಿಂದ ಎರಡು ಭಾಗವಾಗಿ ಚಲಿಸುವ ವಾಯುವು ಏಕಮಾತ್ರನಾಗಿ ಅಂತರಿಕ್ಷದಲ್ಲಿ ವ್ಯಾಪಿಸಿ ವೃಷ್ಟಿಗೆಲ್ಲಾ ಏಕಮಾತ್ರ ಪ್ರಭುವಾಗಿರುವನು. ಅವನಿಗೆ ಉಪಯುಕ್ತವಾದ ಆಹುತ್ಯರ್ಪಣದಿಂದ ಅವನು ವೃಷ್ಟಿಯನ್ನು ಸುರಿಸಲು ಸಹಾಯವಾಗುತ್ತದೆ. ಆ ವೃಷ್ಟಿಯಿಂದ ಅವನು ಎಲ್ಲರನ್ನೂ ರಕ್ಷಿಸುತ್ತಾನೆ.

**ತದ್ವಾಯವ್ಯಂ ಭವತಿ | ಅಯಂ ವೈ ವಾಯುರ್ಯೋಽಯಂ ಪವತ ಏಷ ವಾ ಇದಗ್ಂ ಸರ್ವಂ ಪ್ರಪ್ಯಾಯಯತಿ ಯದಿದಂ ಕಿಂಚ ವರ್ಷತಿ ವೃಷ್ಟ್ಯಾದೋಷಧಯೋ ಜಾಯಂತೇ.... .... .... ತಸ್ಮಾದ್ವಾಯವ್ಯಂ ಭವತಿ ||**

(ಶ. ಬ್ರಾ. ೨-೬-೩-೭)

ವಾಯುವಿನ ಪ್ರೇರಣೆಯಿಂದಲೇ ವೃಷ್ಟಿಪತನವು. ವೃಷ್ಟಿಕಾರಣನೂ, ವೃಷ್ಟಿವರ್ಧಕನೂ ಆದ ವಾಯುವಿನ ಸಹಾಯದಿಂದಲೇ ಸಸ್ಯಾದಿಗಳ ಬೆಳೆವಣಿಗೆಯು. (ಆದುದರಿಂದ ಶಾಕಮೇಧಾಹುತಿಯು ವಾಯುವಿಗೆ ಅರ್ಪಿತವಾಗತಕ್ಕದ್ದು).

ಇತ್ಯಾದಿಯಾಗಿ ಸಕಲಶ್ರುತಿವಾಕ್ಯಗಳೂ ಸಹ ಅಂತರಿಕ್ಷಸ್ಥನಾದ ವಾಯುವೇ ವೃಷ್ಟಿಪತನಕ್ಕೆ ಪ್ರೇರಕನೆಂದು ಹೇಳಿರುವುದನ್ನು ಇಲ್ಲಿಯೂ ಸಹ ವಿಶದಪಡಿಸಿ ಸೂರ್ಯರಶ್ಮಿಗಳು ನಿಮಿತ್ತಕಾರಣಗಳೆಂದು ತೋರಿಸಿದೆ.

**ಶ್ವಾನಂ—ಅಂತರಿಕ್ಷೇ ಶ್ವಸಂತಂ ವಾಯುಂ |** ಅಂತರಿಕ್ಷದಲ್ಲಿ ಮುಖ್ಯ ಪ್ರಾಣವನ್ನು ಹೊಂದಿರುವುದರಿಂದ ವಾಯುವಿಗೆ ಈ ಹೆಸರು. (ನಿ. ೭-೨೯).

**ಸಂವತ್ಸರೇ ಅದ್ಯ ಇದಂ ವ್ಯಖ್ಯತ**—ವರ್ಷಾಕಾಲವು ಕಳೆದನಂತರ ಪುನಃ ಗ್ರೀಷ್ಮಕಾಲದಲ್ಲಿ ಸೂರ್ಯರಶ್ಮಿಗಳು ಮೇಘರಹಿತವಾದ ಜಗತ್ತನ್ನು ಪ್ರಕಾಶಗೊಳಿಸುವುವು ಎಂದರ್ಥ.

ವ್ಯಾಕರಣಪ್ರಕ್ರಿಯಾ

**ಸುಷುಪ್ವಾಂಸಃ**—ಞಿಷ್ವಪ್ ಶಯೇ ಧಾತು. ಇದಕ್ಕೆ ಲಿಟ್ ಬಂದಾಗ **ಕ್ವಸುಶ್ಚ** (ಪಾ. ಸೂ. ೩-೨-೧೦೭) ಎಂಬುದರಿಂದ ಕ್ವಸು ಪ್ರತ್ಯಯ. ಧಾತುವಿಗೆ ದ್ವಿತ್ವಾದಿ. ವಸುವಿನ ಆದ್ಯುದಾತ್ತಸ್ವರ ಬರುತ್ತದೆ. ಪ್ರಥಮಾ ಬಹುವಚನ ಪರವಾದಾಗ ಉಗಿತ್ತಾದುದರಿಂದ ನುಮಾಗಮ.

**ಅಪೃಚ್ಛತ**—ಪೃಚ್ಛ ಜ್ಞೀಪ್ಸಾಯಾಂ ವಾಚಿ ಧಾತು. **ಛಂದಸಿ ಲುಙ್‌ಲಙ್‌ಲಿಟಃ** (ಪಾ. ಸೂ. ೩-೪-೬) ಎಂಬುದರಿಂದ ಲಙ್. ಮಧ್ಯಮಪುರುಷಬಹುವಚನಾಂತರೂಪ. ಅತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

**ಅಗೋಹ್ಯ**—ಸಂಬುದ್ಧ್ಯಂತರೂಪ. ಪಾದಾದಿಯಲ್ಲಿರುವುದರಿಂದ ನಿಘಾತಸ್ವರ ಬರುವುದಿಲ್ಲ. **ಆಮಂತ್ರಿತಸ್ಯ** (ಪಾ. ಸೂ. ೬-೧-೧೯೮) ಎಂಬುದರಿಂದ ಆದ್ಯುದಾತ್ತಸ್ವರ ಬರುತ್ತದೆ.

**ಅಬೂಬುಧತ್**—ಬುಧ ಅವಗಮನೇ ಧಾತು. **ಹೇತುಮತಿಚ** (ಪಾ ಸೂ. ೩-೧-೨೬) ಎಂಬುದರಿಂದ ಣಿಚ್. ಣ್ಯಂತದ ಮೇಲೆ ಛಾಂದಸವಾಗಿ ವರ್ತಮಾನಾರ್ಥದಲ್ಲಿ ಲುಙ್. ಪ್ರಥಮಪುರುಷಏಕವಚನದಲ್ಲಿ ತಿಪ್. **ಇತಶ್ಚ** ಎಂಬುದರಿಂದ ಇಕಾರಲೋಪ. **ಣಿಶ್ರಿದ್ರುಸ್ರುಭ್ಯಃ**—(ಪಾ. ಸೂ. ೩-೧-೪೮) ಎಂಬುದರಿಂದ ಚ್ಲಿಗೆ ಚಙಾದೇಶ. **ಚಙಿ** (ಪಾ. ಸೂ. ೬-೧-೧೧) ಎಂಬುದರಿಂದ ಧಾತುವಿಗೆ ದ್ವಿತ್ವ. **ಸನ್ವಲ್ಲಘುನಿಚಙ್**—(ಪಾ. ಸೂ. ೭-೪-೯೩) ಎಂಬುದರಿಂದ ಸನ್ವದ್ಭಾವವಿರುವುದರಿಂದ **ದೀರ್ಘೋಲಘೋಃ** (ಪಾ. ಸೂ. ೭-೪-೯೪) ಎಂಬುದರಿಂದ ಅಭ್ಯಾಸಕ್ಕೆ ದೀರ್ಘ. **ಣೇರನಿಟಿ** (ಪಾ. ಸೂ. ೬-೪-೫೧) ಎಂಬುದರಿಂದ ಣಿಚಿಗೆ ಲೋಪ. ಅಂಗಕ್ಕೆ ಅಡಾಗಮ. ತಿಙಂತನಿಘಾತಸ್ವರ ಬರುತ್ತದೆ.

**ಬಸ್ತಃ**—ವಸ ನಿವಾಸೇ. ಧಾತು. ಇದಕ್ಕೆ ಔಣಾದಿಕ ತ ಪ್ರತ್ಯಯ. **ವಬಯೋರಭೇದಃ** ಎಂಬ ನ್ಯಾಯದಿಂದ ವಕಾರಕ್ಕೆ ಬಕಾರ ಬಂದಿದೆ. ಪ್ರತ್ಯಯಸ್ವರದಿಂದ ಅಂತೋದಾತ್ತವಾಗುತ್ತದೆ.

**ಬೋಧಯಿತಾರಮ್**—ಬುಧ ಅವಗಮನೇ. ಧಾತು. ಣ್ಯಂತದಮೇಲೆ ಕರ್ತರಿಯಲ್ಲಿ ತೃಚ್ ಪ್ರತ್ಯಯ. ಣಿಚ್ ನಿಮಿತ್ತವಾಗಿ ಧಾತುವಿನ ಲಘೂಪಧೆಗೆ ಗುಣ. ಪ್ರತ್ಯಯ ನಿಮಿತ್ತವಾಗಿ ಣಿಚಿಗೆ ಗುಣ ಅಯಾದೇಶ. **ಚಿತಃ** (ಪಾ. ಸೂ. ೬-೧-೧೬೩) ಎಂಬುದರಿಂದ ಅಂತೋದಾತ್ತಸ್ವರ ಬರುತ್ತದೆ. ದ್ವಿತೀಯಾ ಏಕವಚನಾಂತರೂಪ.

**ಅಬ್ರವೀತ್**—ಬ್ರೂಞ್ ವ್ಯಕ್ತಾಯಾಂ ವಾಚಿ ಧಾತು. ಲಙ್ ಪ್ರಥಮಪುರುಷ ಏಕವಚನಾಂತರೂಪ. ತಿಙಂತನಿಘಾತಸ್ವರ ಬರುತ್ತದೆ.

**ಅದ್ಯ**—**ನಿಪಾತಸ್ಯಚ** (ಪಾ. ಸೂ. ೬-೩-೧೩೬) ಎಂಬುದರಿಂದ ಸಂಹಿತಾರ್ಥದಲ್ಲಿ ದೀರ್ಘ ಬರುತ್ತದೆ.

**ಅಖ್ಯತ**—ಖ್ಯಾ ಪ್ರಕಥನೇ. ಧಾತು. ಲುಙ್‌ಮಧ್ಯಮಪುರುಷ ಬಹುವಚನದಲ್ಲಿ ಥ ಪ್ರತ್ಯಯ. ಅದಕ್ಕೆ ತಾದೇಶ. ಚ್ಲಿ ವಿಕರಣ ಬಂದಾಗ **ಅಸ್ಯತಿವಕ್ತಿಖ್ಯಾತಿಭ್ಯೋಙ್** (ಪಾ. ಸೂ. ೩-೧-೫೨) ಎಂಬುದರಿಂದ ಅದಕ್ಕೆ ಅಙಾದೇಶ. **ಆತೋ ಲೋಪ ಇಟಿ ಚ** (ಪಾ. ಸೂ. ೬-೪-೬೪) ಎಂಬುದರಿಂದ ಧಾತುವಿನ ಆಕಾರಕ್ಕೆ ಅಡಾಗಮ. ತಿಙಂತ ನಿಘಾತಸ್ವರ ಬರುತ್ತದೆ. ॥ ೧೩ ॥

———— :o: — ————

ಸಂಹಿತಾಪಾಠಃ

ದಿವಾ ಯಾಂತಿ ಮರುತೋ ಭೂಮ್ಯಾಗ್ನಿರಯಂ ವಾತೋ ಅಂತರಿಕ್ಷೇಣ ಯಾತಿ ।
ಅದ್ಭಿರ್ಯಾತಿ ವರುಣಃ ಸಮುದ್ರೈರ್ಯುಷ್ಮಾ ಇಚ್ಛಂತಃ ಶವಸೋ ನಪಾತಃ ॥ ೧೪ ॥

ಪದಪಾಠ

ದಿವಾ । ಯಾಂತಿ । ಮರುತಃ । ಭೂಮ್ಯಾ । ಅಗ್ನಿಃ । ಅಯಂ । ವಾತಃ । ಅಂತರಿಕ್ಷೇಣ । ಯಾತಿ ।
ಅತ್‌ಽಭಿಃ । ಯಾತಿ । ವರುಣಃ । ಸಮುದ್ರೈಃ । ಯುಷ್ಮಾನ್ । ಇಚ್ಛಂತಃ । ಶವಸಃ । ನಪಾತಃ ॥ ೧೪ ॥

॥ ಸಾಯಣಭಾಷ್ಯಂ ॥

ಹೇ ಶವಸೋ ವೃಷ್ಟಿಕಾರ್ಯಸ್ಯ ಬಲಸ್ಯ ನಪಾತೋ ನಪಾತಯಿತಾರ ಋಭವಃ ಯುಷ್ಮಾನಿಚ್ಛಂತೋ ವೃಷ್ಟ್ಯನುಕೂಲಚಿಕೀರ್ಷಯಾ ಯುಷ್ಮಾನೇವೇಚ್ಛಂತಃ ಸರ್ವೇ ದೇವಾ ಆಯಾಂತಿ । ಕಸ್ಮಾದಿತಿ ತದುಚ್ಯತೇ । ಮರುತೋ ವೃಷ್ಟ್ಯನುಕೂಲಾ ದೇವಾ ದಿವಾ ದ್ಯುಲೋಕಾದ್ಯಾಂತಿ । ಆಗಚ್ಛಂತಿ ॥ ಸಾವೇಕಾಚ ಇತಿ ತೃತೀಯಾವಿಭಕ್ತೇರುದಾತ್ತತ್ವಂ ॥ ಭೂಮ್ಯಾ ಭೂಮೇಃ ಸಕಾಶಾದಗ್ನಿರ್ಯಾತಿ । ಆಗಚ್ಛತಿ । ಅಯಂ ವಾತಃ ಸರ್ವದಾ ಸಂಚಾರೀ ವಾಯುರಂತರಿಕ್ಷೇಣ ಯಾತಿ । ಅಂತರಿಕ್ಷಾದಾಯಾತಿ । ತಥಾ ವರುಣ ಆವರಕೋ ಜಲಾಭಿಮಾನೀ ದೇವಃ ಸಮುದ್ರೈಃ ಸಮುಂದನಸ್ವಭಾವೈರದ್ಭಿಃ ತಾಭ್ಯ ಆಯಾತಿ । ಯದ್ವಾ । ಪೂರ್ವಂ ವೃಷ್ಟಿಸಾಹಾಯ್ಯಾಯಾಗತಾ ಏತೇ ದೇವಾಃ ಕೃತಕಾರ್ಯಾಃ ಸಂತಃ ಪುನರ್ಯುಷ್ಮಾನ್ಕಾಮಯಮಾನಾಃ ಸ್ವಸ್ವದೇಶಂ ಪ್ರತಿ ಯಾಂತೀತ್ಯರ್ಥಃ ॥ ॥ ೬ ॥

ಪ್ರತಿಪದಾರ್ಥ

ಶವಸಃ ನಪಾತಃ–ವೃಷ್ಟಿರೂಪವಾದ ಶಕ್ತಿಯನ್ನು ಪ್ರಚೋದಿಸತಕ್ಕ ಎಲೈ ಋಭುಗಳೇ (ಅಥವಾ)ಶಕ್ತಿಪುತ್ರರಾದ ಋಭುಗಳೇ । ಯುಷ್ಮಾನ್ ಇಚ್ಛಂತಃ—ನಿಮ್ಮನ್ನು ಅಪೇಕ್ಷಿಸಿದವರಾಗಿ । **ಮರುತಃ**—ಮರುತ್ತುಗಳು । **ದಿವಾ**—ದ್ಯುಲೋಕದಿಂದ । **ಯಾಂತಿ**—ಬರುತ್ತಾರೆ । **ಅಗ್ನಿಃ**—ಅಗ್ನಿಯು । **ಭೂಮ್ಯಾ**—ಪೃಥ್ವಿಯಿಂದ (ಬರುತ್ತಾನೆ) । **ಅಯಂ ವಾತಃ**— ಈ ವಾಯುವು । **ಅಂತರಿಕ್ಷೇಣ**— ಅಂತರಿಕ್ಷದಿಂದ । **ಯಾತಿ**—ಬರುತ್ತಾನೆ । **ವರುಣಃ**—ವರುಣದೇವನು । **ಸಮುದ್ರೈಃ**—ಪ್ರವಹಿಸುವ ಸ್ವಭಾವವುಳ್ಳ (ಅಂತರಿಕ್ಷವಾದ) । **ಅದ್ಭಿಃ**—ಉದಕಗಳಿಂದ । **ಯಾತಿ**—ಬರುತ್ತಾನೆ.

### ಭಾವಾರ್ಥ

ಶಕ್ತಿಪುತ್ರರಾದ ಎಲೈ ಋಭುಗಳೇ, ನಿಮ್ಮನ್ನು ಅಪೇಕ್ಷಿಸಿ ಮರುತ್ತುಗಳು ದ್ಯುಲೋಕದಿಂದಲೂ, ಅಗ್ನಿಯು ಪೃಥ್ವಿಯಿಂದಲೂ, ವಾಯುವು ಅಂತರಿಕ್ಷದಿಂದಲೂ, ಅಂತರಿಕ್ಷಸ್ಥವಾದ ಉದಕಗಳಿಂದ ವರುಣನೂ ಆಗಮಿಸುತ್ತಾರೆ.

## English Translation

Sons of Strength, the Maruts, desirous of your coming, advance from the sky : Agni comes (to meet you) from the earth : the wind traverses the firmanent ; and Varuna comes with undulating waters·

### ವಿಶೇಷವಿಷಯಗಳು

**ಯಾತಿ, ಯಾಂತಿ** ಎಂಬ ಪದಗಳಿಗೆ **ಆ** ಎಂಬ ಉಪಸರ್ಗವನ್ನು ಸೇರಿಸಿ ಒಂದರ್ಥವನ್ನೂ, ಇಲ್ಲದೇ ಇನ್ನೊಂದರ್ಥವನ್ನೂ ಸಾಯಣರು ಮಾಡಿದ್ದಾರೆ. ಮೊದಲನೆಯ ಅರ್ಥದ ಪ್ರಕಾರ ವೃಷ್ಟಿಯ ವರ್ಷಣದ ಸಹಾಯಕ್ಕಾಗಿ ಋಕ್ಕಿನಲ್ಲಿ ನಿರ್ದಿಷ್ಟರಾದ ದೇವತೆಗಳು ನಾನಾಕಡೆಗಳಿಂದ ರಶ್ಮಿಯ ಸಾಹಚರ್ಯಕ್ಕಾಗಿ ಆಸೆಪಟ್ಟು ಬರುತ್ತಾರೆಂದೂ, ಅಥವಾ ಹಿಂದಿನ ಋಕ್ಕಿನಲ್ಲಿ **ಸಂವತ್ಸರ ಇದಮದ್ಯಾ ವ್ಯಖ್ಯತ** ಎಂಬ ವಾಕ್ಯದಿಂದ ವರ್ಷಾಕಾಲವು ಮುಗಿದುದರಿಂದ ರಶ್ಮಿಯ ಪ್ರಕಾಶಕ್ಕೆ ಸಹಾಯವಾಗುವಂತೆ ಎಲ್ಲಾ ದೇವತೆಗಳೂ ತಮ್ಮ ನಿರ್ದಿಷ್ಟವಾದ ಸ್ಥಾನಕ್ಕೆ ಹೊರಟು ಹೋಗುವರೆಂದೂ ಎರಡನೆಯ ವಿವರಣೆಯಿಂದ ತಿಳಿಸಿದ್ದಾರೆ.

**ಶ್ವಾನಂ ಬಸ್ತೋ ಬೋಧಯಿತಾರಮಬ್ರವೀತ್** । ಎಂದು ಹಿಂದಿನ ಋಕ್ಕಿನಲ್ಲಿ **ಮಾತರಿಶ್ವನ** ಮುಖ್ಯ ಸಹಾಯವನ್ನು ತಿಳಿಸಿದೆ. ಅದೇ ವರ್ಷಣಕರ್ಮಕ್ಕೆ ಪ್ರಕೃತವಾದ ಋಕ್ಕಿನಲ್ಲಿ ಮರುತ್ತುಗಳು, ಅಗ್ನಿ, ವಾತ, ವರುಣ ಈ ದೇವತೆಗಳ ಸಾಮೂಹಿಕವಾದ ಸಹಾಯವನ್ನು ಸೂಚಿಸಿದೆ. ವೃಷ್ಟಿಪತನಕ್ಕೂ ಈ ದೇವತೆಗಳಿಗೂ ಇರತಕ್ಕ ಸಂಬಂಧವನ್ನರಿಯಬೇಕಾದರೆ ಈ ದೇವತೆಗಳ ವೈಯಕ್ತಿಕವಾದ ಸ್ವರೂಪವನ್ನೂ ಅವರಿವರಿಗೆ ಇರತಕ್ಕ ಪರಸ್ಪರ ಸಂಬಂಧವನ್ನೂ ಅರಿಯಬೇಕು.

ಮಾತರಿಶ್ವನ್, ವಾಯು ಮತ್ತು ಮರುತ್ತುಗಳು, ಈ ಹೆಸರುಗಳು ರೂಢವಾದ ಈಗಿನ ಅರ್ಥದಲ್ಲಿ ಕೇವಲ ವಾಯುವಿನ ಪರ್ಯಾಯನಾಮಗಳೆಂದು ಪ್ರಸಿದ್ಧವಾಗಿವೆ. ಆದರೆ ಋಕ್ಸಂಹಿತೆಯಲ್ಲಿ ಈ ಹೆಸರುಗಳಿಗೆ ಬೇರೆಬೇರೆ ಸಂಕೇತಗಳಿವೆ. ಆ ಸಂಕೇತಗಳನ್ನು ಪ್ರಕೃತವಾದ ಋಕ್ಕಿನಲ್ಲಿ ವರ್ಣಿಸಿರುವ ವೃಷ್ಟಿಪತನದ ದೃಷ್ಟಿಯಿಂದ ಮಾತ್ರ ಪರಿಶೀಲಿಸಲಾಗುತ್ತದೆ.

ಋಭುಗಳು (ಸೂರ್ಯರಶ್ಮಿಗಳು) ವೃಷ್ಟಿಪತನಕ್ಕೆ ಸಾಧನಗಳು. ಮಾತರಿಶ್ವನು ಅವುಗಳಿಗೆ ಸಹಾಯಕನು. ಈ ಎರಡು ದೇವತಾಕಾರ್ಯಗಳೂ ವಿದ್ಯುದ್ರೂಪದ ಅಗ್ನಿಯ ರೂಪಾಂತರಗಳು. ಋಭುಗಳಿಗೆ ಸೂರ್ಯರಶ್ಮಿಗಳೆಂದು ವಿಶದವಾಗಿಯೇ ಹೇಳಿರುವುದರಿಂದ ಅಲ್ಲಿ ಸಂಶಯಕ್ಕೆ ಕಾರಣವಿಲ್ಲ. ಆದರೆ ವಾಯುವಿನ ರೂಪಾಂತರವಾದ **ಮಾತರಿಶ್ವನಿಗೂ ಅಗ್ನಿಗೂ** ಏನು ಸಂಬಂಧವೆಂದರೆ, ಕೆಲವು ಋಕ್ಕುಗಳಲ್ಲಿ ಎರಡು ದೇವತೆಗಳಿಗೂ ತಾದಾತ್ಮ್ಯವನ್ನೇ ಹೇಳಿದೆ.

**ತನೂನಪಾದುಚ್ಯತೇ ಗರ್ಭ ಆಸುರೋ ನರಾಶಂಸೋ ಭವತಿ ಯದ್ವಿಜಾಯತೇ ।**
**ಮಾತರಿಶ್ವಾ ಯದಮಿಮೀತ ಮಾತರಿ ವಾತಸ್ಯ ಸರ್ಗೋ ಅಭವತ್ಸರೀಮಣಿ ॥**

(ಋ. ಸಂ. ೩-೨೯-೧೧)

ಅಗ್ನಿಯು ಗರ್ಭರೂಪದಲ್ಲಿದ್ದಾಗ **ತನೂನಪಾತ್** ಎಂದು ಹೆಸರು. ಅಂತರಿಕ್ಷದಲ್ಲಿ ತನ್ನ ತೇಜಸ್ಸನ್ನು ನಿರ್ಮಿಸಿ ವ್ಯಕ್ತಪಡಿಸಿದಾಗ **ಮಾತರಿಶ್ವನೆಂದು** ಹೆಸರು. ಎಂದು ಮಾತರಿಶ್ವನು ಅಂತರಿಕ್ಷಸ್ಥವಾದ ಅಗ್ನಿಯ ರೂಪಾಂತರವೆಂದು ಹೇಳಿದೆ.

**ಸ ಮಾತರಿಶ್ವಾ ಪುರುವಾರಪುಷ್ಟಿರ್ವಿದದ್ಗಾತುಂ ತನಯಾಯ ಸ್ವರ್ವಿತ್ ।**
**ವಿಶಾಂ ಗೋಪಾ ಜನಿತಾ ರೋದಸ್ಯೋರ್ದೇವಾ ಅಗ್ನಿಂ ಧಾರಯನ್ದ್ರವಿಣೋದಾಂ ॥**

(ಋ. ಸಂ. ೧-೯೬-೪)

ಎಂಬಲ್ಲಿ **ಮಾತರಿ ಸರ್ವಸ್ಯ ಜಗತಃ ನಿರ್ಮಾತರಿ ಅಂತರಿಕ್ಷೇ ಶ್ವಸನ್ ವರ್ತಮಾನಃ** । ಸಕಲ ಜಗತ್ತಿಗೂ ನಿರ್ಮಾಪಕವಾದ ಅಂತರಿಕ್ಷದಲ್ಲಿರುವ ಅಗ್ನಿಯೆಂದು ಸಾಯಣರೂ, **ಮಾತರಿಶ್ವಸಂಬಂಧಾದಗ್ನಿರೇವ ಮಾತರಿಶ್ವೇತ್ಯುಚ್ಯತೇ** ಮಾತರಿಶ್ವನಿಗೆ (ವಾಯು) ಸಂಬಂಧಿಸಿದುದರಿಂದ ಎಂದರೆ ಅಗ್ನಿಯ ಆವಿರ್ಭಾವಕ್ಕೆ ಮಾತರಿಶ್ವನೇ ಕಾರಣನಾದುದರಿಂದ ಅಗ್ನಿಗೂ ಮಾತರಿಶ್ವನೆಂದೇ ಹೆಸರು ಎಂದು ಸ್ಕಂದಸ್ವಾಮಿಗಳೂ ವಿವರಿಸಿದ್ದಾರೆ.

ಅಂತರಿಕ್ಷಸ್ಥವಾದುದೂ, ಹಿಂದಿನ ಋಕ್ಕಿನ ವಿಶೇಷವಿಷಯಗಳಲ್ಲಿ ವಿವರಿಸಿರುವಂತೆ ಅಂತರಿಕ್ಷಕ್ಕೆ ಅಧಿದೇವತೆಯೂ ಆದ ವಾಯುದೇವತೆಯೂ ಸಹ ಅಗ್ನಿಯ ರೂಪಾಂತರವೇ ಎಂದು ಹಿಂದೆ ವಿವರಿಸಿದೆ. ವೃಷ್ಟಿಗೆ ಕಾರಣವಾದ ವಿದ್ಯುದ್ರೂಪವಾದ ಅಗ್ನಿಯ ಅವಸ್ಥಾಂತರವೇ ಮಾತರಿಶ್ವಾ, ವಾಯು ಇತ್ಯಾದಿ ಹೆಸರುಗಳಿಂದ ಕರೆಯಲ್ಪಡುತ್ತದೆ.

**ವರುಣಃ ಸಮುದ್ರೈರದ್ಭಿರ್ಯಾತಿ**—ಅಂತರಿಕ್ಷಸ್ಥವಾದ ಉದಕಗಳಿಂದ ವರುಣನು ಬರುತ್ತಾನೆ ಎನ್ನುವುದರಲ್ಲಿ ಉದಕಕ್ಕೂ ವರುಣನಿಗೂ ಪರಸ್ಪರವಾದ ಸಂಬಂಧವನ್ನೂ ತಿಳಿಸಿದೆ. ಸಮುದ್ರವೆಂದರೆ ಇಲ್ಲಿ ಅಂತರಿಕ್ಷವೆಂದರ್ಥ. (ಇದರ ವಿವರಣೆಯನ್ನು ಹಿಂದೆ ಬಹಳ ವಿಶದವಾಗಿ ತಿಳಿಸಿದೆ.) ವರುಣನಿಗೂ ವೃಷ್ಟಿಗೂ ಇರುವ ಸಂಬಂಧವನ್ನು ಮುಂದೆ ತಿಳಿಸಲಾಗುತ್ತದೆ.

ಪ್ರಕೃತವಾದ ಋಕ್ಕಿನಲ್ಲಿ ಸೂರ್ಯರಶ್ಮಿರೂಪವಾದ ಅಗ್ನಿಯೊಡನೆ, ಮಾತರಿಶ್ವಾದಿ ದೇವತೆಗಳು ಕಲೆತು ವೃಷ್ಟಿಕಾಲದಲ್ಲಿ ವೃಷ್ಟಿಯನ್ನೂ, ಅದು ಮುಗಿದು ಸಂವತ್ಸರವು ಪೂರ್ಣವಾದನಂತರ **ಲೋಕಕ್ಕೆ** ಪ್ರಕಾಶಮಾನವಾದ ಸೂರ್ಯರಶ್ಮಿಯನ್ನೂ ಒದಗಿಸುವ ವಿವರಣೆಯನ್ನು ಕೊಟ್ಟಿದೆ.

### ವ್ಯಾಕರಣಪ್ರಕ್ರಿಯಾ

**ದಿವಾ**—ತೃತೀಯಾ ಏಕವಚನಾಂತರೂಪ. **ಸಾವೇಕಾಚಸ್ತೃತೀಯಾದಿಃ** (ಪಾ. ಸೂ. ೬-೧-೧೬೮) ಎಂಬುದರಿಂದ ವಿಭಕ್ತಿಗೆ ಉದಾತ್ತಸ್ವರ ಬರುತ್ತದೆ.

**ಯಾಂತಿ** – ಯಾ ಪ್ರಾಪಣೇ ಧಾತು. ಲಟ್ ಪ್ರಥಮಪುರುಷಬಹುವಚನಾಂತರೂಪ. **ತಿಙಂತನಿಘಾತಸ್ವರ** ಬರುತ್ತದೆ.

**ಭೂಮ್ಯಾ**—ಭೂ ಸತ್ತಾಯಾಂ ಧಾತು. **ಭುವಃ ಕಿತ್** (ಉ. ಸೂ ೪೮೫) ಎಂಬುದರಿಂದ ಮಿ ಪ್ರತ್ಯಯ. ಕಿತ್ವವಿಧಾನಮಾಡಿರುವುದರಿಂದ ಗುಣ ಬರುವುದಿಲ್ಲ.

**ಅದ್ಭಿಃ**—**ಊಡಿದಂಪದಾದಿ**- (ಪಾ. ಸೂ. ೬-೧-೧೭೧) ಎಂಬುದರಿಂದ ವಿಭಕ್ತಿಗೆ ಉದಾತ್ತಸ್ವರ ಬರುತ್ತದೆ. **ಅಪೋಭಿಃ** ಎಂಬುದರಿಂದ ಪಕಾರಕ್ಕೆ ದಕಾರಾದೇಶ.

**ಇಚ್ಛಂತಃ**—ಇಷ ಇಚ್ಛಾಯಾಂ ಧಾತು. ಲಟಿಗೆ ಶತ್ರಾದೇಶ. **ತುದಾದಿಭ್ಯಃ ಶ**. ಎಂಬುದರಿಂದ ಶ ವಿಕರಣ. ವಿಕರಣಸ್ವರದಿಂದ ಮಧ್ಯೋದಾತ್ತವಾಗುತ್ತದೆ. ಯುಷ್ಮಾನ್ ಎಂದು ಹಿಂದೆ ಇರುವಾಗ **ದೀರ್ಘಾದಟಿಸಮಾನಪಾದೇ** (ಪಾ. ಸೂ. ೮-೩-೯) ಎಂಬುದರಿಂದ ನಕಾರಕ್ಕೆ ರುತ್ವ. **ಆತೋಟಿನಿತ್ಯಮ್** ಸೂತ್ರದಿಂದ ಆಕಾರಕ್ಕೆ ಅನುನಾಸಿಕತ್ವ.

**ನಪಾತಃ**—**ನಭ್ರಾಣ್‌ನಪಾತ್**-(ಪಾ. ಸೂ. ೬-೩-೭೫) ಎಂದು ನಿಪಾತಮಾಡಿರುವುದರಿಂದ ನಞಿನ ನಕಾರಕ್ಕೆ ಲೋಪ ಬರುವುದಿಲ್ಲ. ಸಂಬೋಧನಾಬಹುವಚನಾಂತರೂಪ. **ಆಮಂತ್ರಿತಸ್ಯಚ** (ಪಾ. ಸೂ. ೮-೧-೧೯) ಎಂಬುದರಿಂದ ನಿಘಾತಸ್ವರ ಬರುತ್ತದೆ. ॥ ೧೪ ॥

ಇಲ್ಲಿಗೆ ೧೬೧ನೇ ಸೂಕ್ತವು ಮುಗಿದುದು.

## ನೂರ ಅರವತ್ತೆರಡನೆಯ ಸೂಕ್ತವು

---

**ಮಾ ನೋ ಮಿತ್ರ ಇತಿ ದ್ವಾವಿಂಶತ್ಯೃಚಂ ಷಷ್ಠಂ ಸೂಕ್ತಂ ದೈರ್ಘತಮಸಂ । ತೃತೀಯಾಷಷ್ಠ್ಯೌ ಜಗತ್ಯೌ । ಶಿಷ್ಟಾಸ್ತ್ರಿಷ್ಟುಭಃ । ಅಶ್ವಸ್ಯ ಸ್ತೂಯಮಾನತ್ವಾದ್ಯಾ ತೇನೋಚ್ಯತೇ ಸಾ ದೇವತೇತಿ ನ್ಯಾಯೇನಾಶ್ವೋ ದೇವತಾ । ಅತ್ರಾನುಕ್ರಮಣಿಕಾ । ಮಾ ನೋ ದ್ವ್ಯಧಿಕಾಶ್ವಸ್ತುತಿಸ್ತು ತೃತೀಯಾಷಷ್ಠ್ಯೌ ಜಗತ್ಯಾವಿತಿ ॥ ಅಶ್ವಮೇಧಸ್ಯ ಮಧ್ಯಮೇಽಹನ್ಯಧ್ರಿಗುಪ್ರೈಷೇಽಧ್ರಿಗೋ ಶಮೀಧ್ವಮಿತಿ ಶಿಷ್ಟ್ವಾ ಷಡ್ವಿಂಶತಿರಸ್ಯ ವಂಕ್ರಯ ಇತ್ಯಸ್ಮಾತ್ಪುರಸ್ತಾದ್ವೈತತ್ಸೂಕ್ತಮಾವಪೇತ್ । ತ್ರೀಣಿ ಸುತ್ಯಾನಿ ಭವಂತೀತಿ ಖಂಡೇ ಸೂತ್ರಿತಂ । ಅಧ್ರಿಗೋ ಶಮಿಧ್ವಮಿತಿ ಶಿಷ್ಟ್ವಾ ಷಡ್ವಿಂಶತಿರಸ್ಯ ವಂಕ್ರಯ ಇತಿ ವಾ ಮಾ ನೋ ಮಿತ್ರ ಇತ್ಯಾವಪೇತ । ಆ ೧೦-೮ । ಇತಿ ॥**

ಅನುವಾದವು—**ಮಾ ನೋ ಮಿತ್ರಃ** ಎಂಬ ಈ ಸೂಕ್ತವು ಇಪ್ಪತ್ತೆರಡನೆಯ ಅನುವಾಕದಲ್ಲಿ ಆರನೆಯ ಸೂಕ್ತವು. ಇದರಲ್ಲಿ ಇಪ್ಪತ್ತೆರಡು ಋಕ್ಕುಗಳಿರುವವು. ಈ ಸೂಕ್ತಕ್ಕೆ ಉಚಥ್ಯಪುತ್ರನಾದ ದೀರ್ಘತಮಸ್ಸೆಂಬುವನು ಋಷಿಯು. ಈ ಸೂಕ್ತದ ಮೂರು ಮತ್ತು ಆರನೆಯ ಋಕ್ಕುಗಳು ಜಗತೀಛಂದಸ್ಸಿನವು ಉಳಿದ ಋಕ್ಕುಗಳು ತ್ರಿಷ್ಟುಪ್‌ಛಂದಸ್ಸಿನವು. ಈ ಸೂಕ್ತದಲ್ಲಿ ಅಶ್ವವನ್ನು ಸ್ತುತಿಮಾಡಿರುವುದರಿಂದ ಅಶ್ವಸ್ತುತಿಯೇ ಈ ಸೂಕ್ತಕ್ಕೆ ದೇವತೆಯು. ಏಕೆಂದರೆ ಸೂಕ್ತದಲ್ಲಿ ಯಾವ ವಿಷಯವು ಪ್ರತಿಪಾದಿತವಾಗಿದೆಯೋ ಅದೇ ಆ ಸೂಕ್ತಕ್ಕೆ ದೇವತೆ

ಯೆಂದು ಹೇಳಲ್ಪಡುವದು. ಅನುಕ್ರಮಣಿಕೆಯಲ್ಲಿ—ಮಾ ನೋ ದ್ವ್ಯಧಿಕಾಶ್ವಸ್ತುತಿಸ್ತು ತೃತೀಯಾಷಷ್ಠ್ಯೌ ಜಗತ್ಯಾವಿತಿ ಎಂದು ಹೇಳಿರುವುದು. ಅಶ್ವಮೇಧಯಜ್ಞದ ಮಧ್ಯದ ದಿವಸದಲ್ಲಿ ಅಧ್ರಿಗುಪ್ರೈಷಕಾಲದಲ್ಲಿ ಈ ಸೂಕ್ತವನ್ನು ಸ್ತೋಮಾವಾಪಕ್ಕಾಗಿ ಉಪಯೋಗಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ ತ್ರೀಣಿ ಸುತ್ಯಾನಿ ಭವಂತಿ ಎಂಬ ಖಂಡದ ಅಧ್ರಿಗೋ ಶಮೀಧ್ವಮಿತಿ ಶಿಷ್ಟ್ವಾ ಷಡ್ವಿಂಶತಿರಸ್ಯ ವಂಕ್ರಯ ಇತಿ ವಾ ಮಾ ನೋ ಮಿತ್ರ ಇತ್ಯಾವಪೇತ ಎಂಬ ಸೂತ್ರದಿಂದ ವಿವೃತವಾಗಿರುವುದು. (ಆ. ೧೦-೮).

॥ ಓಂ ॥

## ಸೂಕ್ತ—೧೬೨

॥ ಮಂಡಲ—೧ ॥ ಅನುವಾಕ—೨೨ ॥ ಸೂಕ್ತ—೧೬೨ ॥

॥ ಅಷ್ಟಕ— ೨ ॥ ಅಧ್ಯಾಯ— ೩ ॥ ವರ್ಗ— ೭, ೮, ೯, ೧೦ ॥

। ಸೂಕ್ತದಲ್ಲಿರುವ ಋಕ್ಸಂಖ್ಯೆ-೨೨ ।

। ಋಷಿಃ—ದೀರ್ಘತಮಾ ಔಚಥ್ಯಃ ।

। ದೇವತಾ—ಅಶ್ವಸ್ತುತಿಃ ॥

। ಛಂದಃ—೧, ೨, ೪, ೫, ೭- ೨೨, ತ್ರಿಷ್ಟುಪ್ । ೩, ೬, ಜಗತೀ ।

ಸಂಹಿತಾಪಾಠಃ

ಮಾ ನೋ ಮಿತ್ರೋ ವರುಣೋ ಅರ್ಯಮಾಯುರಿಂದ್ರ ಋಭುಕ್ಷಾ ಮರುತಃ ಪರಿ ಖ್ಯನ್ ।

ಯದ್ವಾಜಿನೋ ದೇವಜಾತಸ್ಯ ಸಪ್ತೇಃ ಪ್ರವಕ್ಷ್ಯಾಮೋ ವಿದಥೇ ವೀರ್ಯಾಣಿ ॥ ೧ ॥

ಪದಪಾಠಃ

ಮಾ । ನಃ । ಮಿತ್ರಃ । ವರುಣಃ । ಅರ್ಯಮಾ । ಆಯುಃ । ಇಂದ್ರಃ । ಋಭುಕ್ಷಾಃ । ಮರುತಃ । ಪರಿ । ಖ್ಯನ್ ।

ಯತ್ । ವಾಜಿನಃ । ದೇವऽಜಾತಸ್ಯ । ಸಪ್ತೇಃ । ಪ್ರऽವಕ್ಷ್ಯಾಮಃ । ವಿದಥೇ । ವೀರ್ಯಾಣಿ ॥ ॥ ೧ ॥

ಸಾಯಣಭಾಷ್ಯಂ

ನೋऽಸ್ಮಾನಶ್ವಂ ಸ್ತೋತುಂ ಪ್ರವೃತ್ತಾನ್ಮಿತ್ರಾದಯೋ ದೇವಾ ಮಾ ಪರಿ ಖ್ಯನ್ । ಪರಿಖ್ಯಾನಂ ಮಾ ಕುರ್ವಂತು । ಪರಿಖ್ಯಾನಂ ನಾಮ ನಿಂದಾ । ಮಹಾನುಭಾವಂ ದೇವಜಾತಮಶ್ವಂ ತುಚ್ಛಾ ನರಾಃ ಸ್ತುವಂತೀತಿ ಮಾ ಕುರ್ವಂತು ॥ ಖ್ಯಾತೇರ್ಮಾಙಿ ಲುಙ್ಯಸ್ಯತಿವಕ್ತೀತ್ಯಾದಿನಾ ಚ್ಲೇರಙ್ ॥ ಅಹರಭಿಮಾನೀ ದೇವೋ ಮಿತ್ರೋ ರಾತ್ರ್ಯಭಿಮಾನೀ ವರುಣಃ । ಅರ್ಯಮಾ ತಯೋರಂತರಾಲಾಭಿಮಾನ್ಯಾದಿತ್ಯಃ । ಆಯುಃ ಸತತಗಂತಾ ವಾಯುಃ ॥ ವಕಾರಲೋಪೋ ವಾ ॥ ಇಂದ್ರಃ ಪ್ರಸಿದ್ಧಃ । ಋಭುಕ್ಷಾ ದೇವಾನಾಂ ನಿವಾಸಭೂತಃ ಪ್ರಜಾಪತಿಃ । ಯದ್ವಾ । ಏತನ್ಮಹನ್ನಾಮೇಂದ್ರವಿಶೇಷಣಂ ಋಭುಕ್ಷಾ ಉಕ್ಷೇತಿ ತನ್ನಾಮಸು ಪಾಠಾತ್ । ನಿಂದಾಯಾಃ ಪ್ರಸಕ್ತಿಂ ದರ್ಶಯತಿ । ಯದ್ಯಸ್ಮಾದ್ವಾಜಿನೋ ವೇಜನನತೋ ಬಹ್ವನ್ನವತೋ ವಾ ದೇವಜಾತಸ್ಯ ಬಹುದೇವತಾಸ್ವರೂಪೇಣೋತ್ಪನ್ನಸ್ಯ । ಉಷಆದೀನಾಮಸ್ಯ ಶಿರಆದ್ಯವಯವತ್ವಾದಿತಿಭಾವಃ । ಉಷಾ ವಾ ಅಶ್ವಸ್ಯ ಮೇಧ್ಯಸ್ಯ ಶಿರ ಇತ್ಯಾದಿಶ್ರುತೇಃ । ಯದ್ವಾ । ದೇವೇಭ್ಯೋ ಜಾತಸ್ಯ ಗಂಧರ್ವಕುಲ ಉತ್ಪನ್ನತ್ವಾತ್ । ಸಪ್ತೇಃ ಸರ್ಪಣಶೀಲಸ್ಯ । ಅಶ್ವನಾಮೈತತ್ । ಏವಂವಿಧಸ್ಯಾಶ್ವಸ್ಯ ಮಹಾನುಭಾವಸ್ಯ ವೀರ್ಯಾಣಿ ವೀರಕರ್ಮಾಣಿ ಸಾಮರ್ಥ್ಯಾನಿ ವಿದಥೇ ವೇದನಸಾಧನೇ ಯಜ್ಞೇ ಪ್ರವಕ್ಷ್ಯಾಮಃ ಪ್ರಕರ್ಷೇಣ ಬ್ರೂಮಃ । ಅತೋ ಮಾ ಪರಿ ಖ್ಯನ್ ಪ್ರತ್ಯುತಾನುಗೃಹ್ಣಂತ್ವಿತ್ಯರ್ಥಃ ॥

ಪ್ರತಿಪದಾರ್ಥ

**ಯತ್**—ಯಾವಾಗ । **ವಿದಥೇ**—ಯಾಗದಲ್ಲಿ । **ವಾಜಿನಃ**—ಶೀಘ್ರಗಾಮಿಯಾದುದೂ । **ದೇವಜಾತಸ್ಯ**—ದೇವತೆಗಳಿಂದ ಉತ್ಪನ್ನವಾದುದೂ (ಅಥವಾ) ನಾನಾದೇವತೆಗಳ ರೂಪದಲ್ಲಿ ಉತ್ಪನ್ನವಾದುದೂ ಆದ । **ಸಪ್ತೇಃ**—ಅಶ್ವದ । **ವೀರ್ಯಾಣಿ**—ವೀರ್ಯಕರ್ಮಗಳನ್ನು । **ಪ್ರವಕ್ಷ್ಯಾಮಃ** --ಪ್ರಕಟಿಸಿ ಪ್ರಶಂಸಿಸುತ್ತೇವೆಯೋ (ಆದ್ದರಿಂದ) **ಮಿತ್ರಃ**—ಮಿತ್ರನೂ । **ವರುಣಃ**—ವರುಣನೂ । **ಅರ್ಯಮಾ**—ಅರ್ಯಮನೂ । **ಆಯುಃ**—ಸತತವಾಗಿ ಸಂಚರಿಸುವ ವಾಯುವೂ । **ಇಂದ್ರಃ**—ಇಂದ್ರನೂ, । **ಋಭುಕ್ಷಾ**—ಋಭುಕ್ಷನೂ । **ಮರುತಃ**—ಮರುತ್ತುಗಳೂ । **ನಃ**—ನಮ್ಮನ್ನು । **ಮಾ ಪರಿಖ್ಯನ್**—ಅಲಕ್ಷಿಸದಿರಲಿ. (ನಿಂದಿಸದಿರಲಿ).

ಭಾವಾರ್ಥ

ಶೀಘ್ರಗಾಮಿಯಾದುದೂ, ದೇವತೆಗಳಿಂದ ಉತ್ಪನ್ನವಾದುದೂ ಅಥವಾ ನಾನಾದೇವತೆಗಳ ರೂಪದಲ್ಲಿರುವುದೂ ಆದ ಈ ಯಜ್ಞಾಶ್ವದ ವೀರ್ಯಕರ್ಮಗಳನ್ನು ಪ್ರಕಟಿಸಿ ನಾವು ಈ ಯಜ್ಞದಲ್ಲಿ ಪ್ರಶಂಸಿಸುತ್ತೇವೆಯಾದ್ದರಿಂದ ಮಿತ್ರನೂ, ವರುಣನೂ, ಅರ್ಯಮನೂ, ಸತತವಾಗಿ ಸಂಚರಿಸುವ ವಾಯುವೂ, ಇಂದ್ರನೂ, ಋಭುಕ್ಷನೂ, ಮರುತ್ತುಗಳೂ ನಮ್ಮನ್ನು ಅಲಕ್ಷ್ಯಮಾಡದಿರಲಿ (ನಿಂದಿಸದಿರಲಿ).

## English Translation

Let neither Mitra nor Varuna, Aryaman, Ayu, Indra, Ribhukshin, nor the Maruts, censure us ; when we proclaim in the sacrifice the virtues of the swift horse sprung from the gods.

### ವಿಶೇಷವಿಷಯಗಳು

**(ಕಿಮಾರ್ಭವಂ) ಪರೇ ಮಾ ನೋ ಮೇಧ್ಯಸ್ಯಾಶ್ವಸ್ಯ ಸಂಸ್ತವಃ ।**
**ಈರ್ಮಾಂತಾಸ ಇತಿ ತ್ವಸ್ಯಾಂ ನೀಯಮಾನಂ ಪ್ರಶಂಸತಿ ॥**

(ಬೃಹದ್ದೇವತಾ. ೪-೨೭)

**ಮಾ ನೋ ಮಿತ್ರೋ ವರುಣೋ** (೧-೧೬೨-೧) ಎಂಬ ಋಕ್ಕಿನಿಂದ ಪ್ರಾರಂಭವಾಗುವ ಸೂಕ್ತವೂ, **ಯದಕ್ರಂದಃ ಪ್ರಥಮಂ ಜಾಯಮಾನಃ** (೧-೧೬೩-೧) ಎಂಬ ಋಕ್ಕಿನಿಂದ ಪ್ರಾರಂಭವಾಗುವ ಸೂಕ್ತವೂ **ಮೇಧ್ಯಾಶ್ವದ** ಪ್ರಶಂಸಾರೂಪವಾದ ಕೃತಿಗಳಾಗಿವೆ. **ಈರ್ಮಾಂತಾಸಃ ಸಿಲಿಕಮಧ್ಯಮಾಸಃ** (೧-೧೬೩-೧೦) ಇತ್ಯಾದಿ ಋಕ್ಕುಗಳಲ್ಲಿ **ಪುಷ್ಟವಾಗಿ** ಬೆಳೆದ ಮೇಧ್ಯಾಶ್ವದ ವರ್ಣನೆಯಿದೆ.

**ಸ್ವಯೂಥ್ಯಾಸ್ತಸ್ಯ ಚೈವಾತ್ರ ಬಹವಃ ಸಂಸ್ತುತಾ ಹಯಾಃ ।**
**ನಿಯುಕ್ತಾಶ್ಚಾನಿಯುಕ್ತಾಶ್ಚ ಪ್ರಸಂಗಾದನುಕೀರ್ತಿತಾಃ ॥**

(ಬೃ. ದೇ. ೪-೨೮)

ಈ ಮೇಧ್ಯಾಶ್ವದ ಜೊತೆಯಲ್ಲಿ ಸಹಾಯಾರ್ಥವಾಗಿಯಾಗಲಿ ಅಥವಾ ಅಲಂಕಾರಾರ್ಥವಾಗಿಯಾಗಲಿ, ನಿಯುಕ್ತವಾಗಿರಲಿ ಅಥವಾ ಅನಿಯುಕ್ತವಾಗಿರಲಿ, ಇರತಕ್ಕ ಇನ್ನೂ ಇತರ ಅಶ್ವಗಳನ್ನೂ ಸಹ ಅನುಷಂಗಿತವಾಗಿ ಸ್ತುತಿಸಿದೆ.

**ಸಂಜ್ಞಪ್ತವದಸಂಜ್ಞಪ್ತಂ ಭವಿಷ್ಯಂ ಚಾಹ ಭೂತವತ್ ।**
**ತಸ್ಯ ಮಾಂಸಸ್ಯ ಸೂನಸ್ಯ ಚರೂಣಾಂ ಹವಿಷಸ್ತಥಾ ॥**
**ವಾಸೋಽಧಿವಾಸಸೋಶ್ಚಾತ್ರ ಯದ್ವಿಶಸ್ಯಂ ಚ ಕೀರ್ತಿತಂ ।**
**ಗಾತ್ರಸ್ಯ ಶೂಲಸ್ಥೂಣಾನಾಂ ಸ್ವಧಿತೇಶ್ಚ ಪ್ರಕೀರ್ತನಂ ॥**
**ಭಾಗಸ್ಯ ಕೀರ್ತನಂ ಚಾತ್ರ ಇಂದ್ರಾಪೂಷ್ಣೋಃ ಸಹ ಸ್ತುತಿಃ ।**

(ಬೃ. ದೇ. ೪-೨೯-೩೧)

ಮುಂದೆ ಯಷ್ಟವ್ಯವಾಗಿರುವ ಅಶ್ವವನ್ನು ಆಗಲೇ ಯಜ್ಞಾಹುತಿಯನ್ನಾಗಿ ಅರ್ಪಿಸಿದಂತೆಯೇ ಭಾವಿಸಿ ಈ ಅಶ್ವವನ್ನು ವರ್ಣಿಸಿದೆ. ಇವರ **ಮಾಂಸವೂ, ಸೂನವೂ, ಚರುವೂ, ವಾಸಾಧಿವಾಸಗಳೂ, ಗಾತ್ರವೂ, ಶೂಲವೂ, ಸ್ಥೂಣವೂ, ಸ್ವಧಿತಿಯೂ** ಇನ್ನೂ ಇತರ ವಿಶೇಷಗಳೂ ಪ್ರಶಂಸಿತವಾಗಿವೆ. ಈ ಯಜ್ಞಕ್ಕೆ ಸಂಬಂಧಿಸಿದ **ಭಾಗವೂ** (ಮೇಕೆಯೂ) ನಿರ್ದೇಶಿಸಲ್ಪಟ್ಟಿದೆ. ಇಂದ್ರನ ಸ್ತುತಿಯೂ **ಪೂಷನ** ಸ್ತುತಿಯೂ ಅಡಕವಾಗಿದೆ ಎಂಬುದಾಗಿ ಬೃಹದ್ದೇವತಾಕಾರರ ೧-೧೬೨ ಮತ್ತು ೧-೧೬೩ ನೇ ಸೂಕ್ತಗಳ ವಿವರಣೆಯನ್ನು ಕೊಟ್ಟಿದ್ದಾರೆ. ಪ್ರಕೃತವಾದ ಮೊದಲನೆಯ ಋಕ್ಕಿನಲ್ಲಿಯೂ ಸಹ,

**ಯದ್ವಾಜಿನೋ ದೇವಜಾತಸ್ಯ ಸಪ್ತೇಃ ಪ್ರವಕ್ಷ್ಯಾಮೋ ವಿದಥೇ ವೀರ್ಯಾಣಿ ।**

ಈ ಯಜ್ಞದಲ್ಲಿ ದೇವಜಾತವಾದ ಅಶ್ವದ ವೀರ್ಯಕರ್ಮಗಳನ್ನು ಪ್ರಶಂಸಿಸುವೆವು ಎಂದು ಸಂಕಲ್ಪಿಸಿದೆ. ಈ ಯಜ್ಞದ ಸ್ವರೂಪವೇನು, ಅದಕ್ಕಾಗಿ ನಿಯುಕ್ತವಾದ ಅಶ್ವದ ಮಹಿಮೆಯೇನು ? ಉಳಿದ ಯಾಗಗಳಿಗಿಂತಲೂ ಅಧಿಕವಾಗಿ ಈ ಯಜ್ಞದಲ್ಲಿರುವ ವೈಶಿಷ್ಟ್ಯವೇನು ಎಂಬುದನ್ನು ಮೊದಲು ತಿಳಿಯಬೇಕು.

**ರಾಷ್ಟ್ರಂ ವಾ ಅಶ್ವಮೇಧಃ । ರಾಷ್ಟ್ರೇ ಖಲು ವಾ ಏತೇ ವ್ಯಾಯಚ್ಛಂತೇ ।**

(ತೈ. ಬ್ರಾ. ೩-೮-೯-೪)

ಅಶ್ವಮೇಧವು ಅತ್ಯಂತ ಪ್ರಾಚೀನವೂ ಪ್ರಸಿದ್ಧವೂ ಆದ ಯಜ್ಞವು. ರಾಜ್ಯವಿಸ್ತರಣೆಗಾಗಿ ಸಾರ್ವಭೌಮ ಪದವಿಗೆ ಮಾತ್ರ ಅರ್ಹನಾಗಿರತಕ್ಕ ರಾಜನು ನೆರವೇರಿಸತಕ್ಕ ಈ ಯಜ್ಞವು ಒಂದು ರಾಷ್ಟ್ರೀಯವಾದ ಪ್ರಾಮುಖ್ಯತೆಯನ್ನು ಹೊಂದಿದೆ. ಪಟ್ಟಾಭಿಷೇಕದ ಕಾಲದಲ್ಲಿ ನೆರವೇರಿಸತಕ್ಕ ಕರ್ಮಗಳಂತೆಯೂ ಅಥವಾ ರಾಜಸೂಯಯಾಗದಂತೆಯೂ ಕೇವಲ ವೈಯಕ್ತಿಕವಾದ ಆಡಂಬರವಲ್ಲದೆ, ಸಣ್ಣ ಸಣ್ಣ ರಾಜರುಗಳಿಂದ ನಿರ್ವಹಿಸಲು ಅಸಾಧ್ಯವಾದುದೂ, ಅನೇಕ ರಾಜಾಧಿರಾಜರುಗಳಿಗೆ ಸಾರ್ವಭೌಮನಾಗಿ ತನ್ನ ರಾಜಕೀಯವಾದ ಅಧಿಕಾರವನ್ನು ವ್ಯಕ್ತಪಡಿಸುವವನೂ, ಯಾವ ರಾಜನಿಂದಲೂ ಪರಿಭವವನ್ನು ಹೊಂದದಿರುವವನೂ ಆದ ಚಕ್ರವರ್ತಿಯಿಂದ ಮಾತ್ರ ನಿರ್ವಹಿಸಲ್ಪಡುವ ಈ ಮಹಾಯಜ್ಞವು ಬಹಳ ಶ್ರಮಸಾಧ್ಯವಾದ ಕರ್ಮವಾಗಿದೆ.

**ಪರಾ ವಾ ಏಷ ಸಿಚ್ಯತೇ । ಯೋಽಬಲೋಽಶ್ವಮೇಧೇನ ಯಜತೇ ।**

(ತೈ. ಬ್ರಾ. ೩-೮-೯-೫)

ದುರ್ಬಲನಾದ ಯಾವ ರಾಜನಾಗಲಿ ಅಶ್ವಮೇಧವನ್ನು ತಾನೂ ಮಾಡುತ್ತೇನೆಂದು ಪ್ರಯತ್ನಿಸಿದರೆ ಅವನಿಗೆ ತನ್ನ ಸ್ಥಾನದಿಂದ ಉಚ್ಚಾಟನೆಯಾಗುವುದು ಖಂಡಿತವು.

**ಯದಮಿತ್ರಾ ಅಶ್ವಂ ವಿಂದೇರನ್ । ಹನ್ಯೇತಾಸ್ಯ ಯಜ್ಞಃ ।**

(ತೈ. ಬ್ರಾ. ೩-೮-೯-೫)

ಶತ್ರುಗಳು ಇವನ ಅಶ್ವವನ್ನಪಹರಿಸಿ ಇವನ ಯಜ್ಞಕ್ಕೆ ವಿಘ್ನವನ್ನು ತರುತ್ತಾರೆ ಇತ್ಯಾದಿಯಾಗಿ ಈ ಯಜ್ಞವನ್ನು ನಿರ್ವಹಿಸುವವನ ಯೋಗ್ಯತೆಯನ್ನು ನಿಷ್ಕರ್ಷಿಸಿ ಇದರ ರಾಜಕೀಯದ ಸಂಕೇತವನ್ನೂ ರಾಷ್ಟ್ರೀಯಮಹತ್ವವನ್ನೂ ತಿಳಿಸಿದೆ. ಇಂತಹ ಮಹತ್ಕಾರ್ಯಕ್ಕೆ ಸಾಧ್ಯವಾದ ಅಶ್ವವೂ ಮಹತ್ತಾದ ಗುಣವುಳ್ಳದ್ದೇ ಆಗಿರಬೇಕು.

ಈ ಅಶ್ವವು ವೇಗಗಾಮಿಯಾಗಿರಬೇಕು. ಮುಂಭಾಗದಲ್ಲಿ ಕೃಷ್ಣವರ್ಣವೂ, ಹಿಂಭಾಗದಲ್ಲಿ ಶ್ವೇತವರ್ಣವೂ, ಒಂದು ಕರಿಯ ಚುಕ್ಕಿಯೂ ಇದರ ವಿಶೇಷಗುಣಗಳು. ಫಾಲ್ಗುಣಮಾಸದ ಎಂಟನೆಯ ಅಥವಾ ಒಂಭತ್ತನೆಯ ದಿನ ಈ ಕಲಾಪಗಳು ಆರಂಭವಾಗುವುವು. ರಾಜನು ಆ ರಾತ್ರಿಯನ್ನು ಗಾರ್ಹಪತ್ಯಾಗ್ನಿಯ ಗೃಹದಲ್ಲಿ ಕಳೆಯುವನು. ಮಾರನೆಯ ದಿನ ಅಶ್ವವು ಸಿದ್ಧವಾಗುವುದು. ಅದಕ್ಕೆ ಸ್ನಾನಾದಿಗಳನ್ನು ಮಾಡಿಸುವರು. ಅನಂತರ ನಾಲ್ಕು ಕಣ್ಣುಗಳ ಒಂದು ನಾಯಿಯನ್ನು ಕತ್ತರಿಸಿ ಅಶ್ವದ ಅಡಿಯಲ್ಲಿ ಹೊರಳಾಡುವಂತೆ ಬಿಡುವರು. ಆಗ ಯಜ್ಞಕರ್ತನು " ಈ ಅಶ್ವವನ್ನು ಎದುರಿಸುವವನು ವರುಣನನ್ನು ಪ್ರತಿಭಟಿಸಿದಂತೆಯೇ " ಎಂದು ಬರೆದು ಅದರ ಮೇಲೆ ಅಂಟಿಸುವನು. ಅನಂತರ ಅಶ್ವವು ಅಗ್ನಿಯ ವೇದಿಕೆಯ ಹತ್ತಿರ ಬರುತ್ತದೆ. ಸವಿತೃವನ್ನು ಉದ್ದೇಶಿಸಿ ಮೂರುದಿನಗಳು

ಆಹುತ್ಯರ್ಪಣಗಳಾದ ನಂತರ ಅದು ಸ್ವತಂತ್ರವಾಗಿ ಬಿಡಲ್ಪಡುವುದು. ಅದರ ರಕ್ಷಣೆಗಾಗಿ ನೂರು ಇತರ ಅಶ್ವಗಳೂ ನೂರಾರು ಯುವಕರೂ ಅನೇಕ ಯೋಧರೂ ಅದನ್ನು ಹಿಂಬಾಲಿಸುವರು ಸಾರ್ವಭೌಮನಾಗಿರತಕ್ಕವನ ಅಧೀನ ರಾಜರು ಅದರ ರಕ್ಷಣೆಯಲ್ಲಿ ಜಯಶಾಲಿಗಳಾದರೆ ಅವರಿಗೆ ತಮ್ಮ ತಮ್ಮ ಪ್ರಭುತ್ವವೂ ಸುರಕ್ಷಿತವಾಗಿರುವುದು. ಆ ಅಶ್ವವು ಸಂಚಾರಮಾಡುವಕಾಲದಲ್ಲಿ ಯಜ್ಞಕರ್ತನೂ ಅವನ ಪುರೋಹಿತನೂ ಸುವರ್ಣಾಸನದಲ್ಲಿ ಕುಳಿತಿರುವರು. ಹೋತೃವು ಆಖ್ಯಾನಾದಿಗಳನ್ನು ಪಠಿಸುವನು. ಅಧ್ವರ್ಯುವು ಅಶ್ವದ ಜಯಲಾಭಕ್ಕಾಗಿ ಕೆಲವು ಕರ್ಮಗಳನ್ನು ನೆರವೇರಿಸುವನು–ಅದು ಹಿಂತಿರುಗಿದನಂತರ ಯಜ್ಞವು ನೆರವೇರುವುದು.

ಶತಪಥಾದಿಗಳಲ್ಲಿ ಈ ಅಶ್ವಮೇಧದ ಮಹತ್ತ್ವವನ್ನು ಬಹಳವಾಗಿ ಸ್ತುತಿಸಿದೆ. **ಋಷಭ ಏಷ ಯಜ್ಞಾನಾಂ** ( ಶ. ಬ್ರಾ. ೧೩-೧-೨-೨) ಯಜ್ಞಗಳಲ್ಲೆಲ್ಲಾ ಇದೇ ಬಲಾಶಾಲಿಯಾದ ಋಷಭದಂತೆ ಶ್ರೇಷ್ಠವಾದುದೆಂದೂ, **ರಾಜಾ ವಾ ಏಷ ಯಜ್ಞಾನಾಂ ಯದಶ್ವಮೇಧಃ** (ಶ. ಬ್ರಾ. ೧೩–೨–೨–೧) ಯಜ್ಞಗಳಿಗೆಲ್ಲಾ ಇದೇ ರಾಜನೆಂದೂ,

> **ಏಷ ವೈ ಪ್ರಭೂರ್ನಾಮ ಯಜ್ಞಃ** .... .... .... **ಏಷ ವೈ ವಿಭೂರ್ನಾಮ ಯಜ್ಞಃ** .... .... .... **ಏಷ ವೈ ವಿಧೃತಿರ್ನಾಮ ಯಜ್ಞಃ ।** .... .... .... **ಏಷ ವೈ ಪ್ರತಿಷ್ಠಾ ನಾಮ ಯಜ್ಞಃ**
>
> (ಶ. ಬ್ರಾ. ೧೩-೩-೭)

ಇತ್ಯಾದಿಯಾಗಿ ನಾನಾವಿಧವಾಗಿ ಈ ಯಜ್ಞದ ವೈಶಿಷ್ಟ್ಯವನ್ನು ಪ್ರಶಂಸಿಸಿದೆ. ಪ್ರಕೃತದಲ್ಲಿ ಈ ಮಹತ್ತಾದ ಯಜ್ಞಕ್ಕೆ ಸಾಧನವಾದ ಅಶ್ವದ ಸ್ತುತಿಯಿದೆ. ಈ ಅಶ್ವವನ್ನು ಸ್ತುತಿಸುವಾಗ ಏನಾದರೂ ನ್ಯೂನತೆಯಿದ್ದರೆ **ಮಿತ್ರಾದಿದೇವತೆ**ಗಳು ಅದನ್ನು ಲಕ್ಷ್ಯವಾಗಿಟ್ಟುಕೊಂಡು ನಮ್ಮನ್ನು ದೂಷಿಸದಿರಲಿ ಎಂದು ಪ್ರಾರ್ಥಿಸಿದೆ.

**ಸಪ್ತೇಃ**—ಸಪ್ತಿಶಬ್ದವು ಅಶ್ವನಾಮಗಳಲ್ಲಿ ಪಠಿತವಾಗಿದೆ. (ನಿ. ೨-೨೭) ನಿರುಕ್ತಕಾರರು ಪ್ರಕೃತವಾದ ಋಕ್ಕನ್ನೇ ಉದಹರಿಸುತ್ತಾ (ನಿ. ೯-೩) **ಸಪ್ತೇಃ** ಎಂಬ ಪದಕ್ಕೆ **ಸರಣಸ್ಯ** ಎಂದು ವಿವರಿಸಿದ್ದಾರೆ. ಈ ಪದಕ್ಕೆ ಕೇವಲ ಚಲಿಸುವುದು ಎಂದರ್ಥವಾದರೂ ಸಹ ಚಲನದಲ್ಲಿ ವೇಗವನ್ನೂ ಶಕ್ತಿಯನ್ನೂ ಸೂಚಿಸುತ್ತದೆ.

**ವಾಜಿನಃ**—ಈ ಪದಕ್ಕೂ ಸಹ ಮೇಲಿನ ಅರ್ಥವೇ ರೂಢಿಯಲ್ಲಿದೆ. ಆದರೆ ಇಲ್ಲಿ ಎರಡು ಪದಗಳೂ ಇರುವುದರಿಂದ ಇದಕ್ಕೆ ಬೇರೆ ಅರ್ಥವಿರಬೇಕು ಅನ್ನನಾಮಗಳಲ್ಲಿ ಪಠಿತವಾಗಿರುವುದರಿಂದ **ವಾಜ** ಶಬ್ದಕ್ಕೆ ಅನ್ನವೆಂದರ್ಥಮಾಡಿ **ಬಹ್ವನ್ನವತಃ** ಪ್ರಭೂತವಾದ ಅನ್ನವುಳ್ಳ ಅಶ್ವವೆಂದರ್ಥಮಾಡಿದ್ದಾರೆ. ಆದರೆ **ಓವಿಜೀ ಭಯಚಲನಯೋಃ** ಎಂದು ಈ ಧಾತುವಿಗೆ ಭಯ, ಚಲನ ಎಂಬ ಎರಡರ್ಥಗಳೂ ಇರುವುದರಿಂದ ಇಲ್ಲಿ ಭಯಪಡಿಸತಕ್ಕದ್ದು ಎಂದು ಹೇಳಿದರೂ ಹೇಳಬಹುದು. ನಿರುಕ್ತಕಾರರು **ಉತ ಸ್ಯ ವಾಜೀ ಕ್ಷಿಪಣಿಂ ತುರಣ್ಯತಿ** (ಋ. ಸಂ. ೪–೪೦–೪) ಎಂಬ ಋಕ್ಕನ್ನುದಹರಿಸಿ **ವಾಜೀ–ವೇಜನವಾನ್** ಎಂದು ವಿವರಿಸಿರುವುದಕ್ಕೆ ದುರ್ಗಾಚಾರ್ಯರು **ಭಯವಾನ್ ಪರೇಭ್ಯೋ ಭಯದಾತಾ ಪರೇಷಾಂ ಹಿ ತಂ ದೃಷ್ಟ್ವಾ ಭಯಮುತ್ಪದ್ಯತೇ**–ಈ ಅಶ್ವದ ವೇಗದ ಶಕ್ತಿಯನ್ನು ನೋಡಿ ಇತರರಿಗೆ ಭಯವುಂಟಾಗುತ್ತದೆ. ಭಯಜನಕವಾದ ಅಶ್ವವು ಎಂದು ತಾತ್ಪರ್ಯವೆಂದು **ಹೇಳಿ**ದ್ದಾರೆ. **ಸಪ್ತಿ, ವಾಜೀ** ಎಂಬ ಎರಡು ಪದಗಳೂ ಸಹ ತೈತ್ತಿರೀಯ ಸಂಹಿತೆಯಲ್ಲಿ ಒಟ್ಟಿಗೆ ಪ್ರಯೋಗಿಸಲ್ಪಟ್ಟಿ;

**ಅರ್ವಾಸಿ ಸಪ್ತಿರಸಿ ವಾಜ್ಯಸಿ** (ತೈ. ಸಂ. ೧-೭-೮) ಎಂದು ಅಶ್ವದ ಸ್ವರೂಪವನ್ನು ವರ್ಣಿಸುವಾಗ **ಸಪ್ತಿ** ಶಬ್ದಕ್ಕೆ **ಸಂಗ್ರಾಮೇಷು ಸಹಸಾ ಸಮುನ್ಯೈತಿ** (ಷಪ ಸಮವಾಯೇ) ನಿಮಿಷ ಮಾತ್ರದಲ್ಲಿ (ಸಂಗ್ರಾಮ ಭೂಮಿಗೆ)

ಸೇರತಕ್ಕ ಶಕ್ತಿಯುಳ್ಳದ್ದೆಂದೂ, **ವಾಜೀ** ಎಂಬುದಕ್ಕೆ **ವೇಗವಾನ್, ಅನ್ನವಾನ್ ವಾ** ಎಂದು ಸಹ ವಿವರಿಸು ವಂತೆಯೇ ಪ್ರಕೃತವಾದ ಋಕ್ಕಿನಲ್ಲಿಯೂ ಅರ್ಥಮಾಡಬಹುದು.

**ದೇವಜಾತಸ್ಯ**—ಈ ಪದಕ್ಕೆ ಎರಡು ವಿಧವಾಗಿ ಅರ್ಥಮಾಡಿದೆ. ಮೊದಲನೆಯದಾಗಿ, **ಬಹುದೇವತಾ ಸ್ವರೂಪೇಣೋತ್ಪನ್ನಸ್ಯ । ಉಷಾದೀನಾಮಸ್ಯ ಶಿರ ಆದ್ಯವಯವತ್ವಾದಿತಿ ಭಾವಃ । ಉಷಸ್ಸು ಸೂರ್ಯ** ಇತ್ಯಾದಿ ದೇವತೆಗಳು ಈ ಅಶ್ವದ ಅವಯವಗಳೆಂದು ಹೇಳಿರುವುದರಿಂದ ಈ ಅರ್ಥವೂ ಅಥವಾ ಎರಡನೆಯದಾಗಿ **ದೇವೇಭ್ಯೋ ಜಾತಸ್ಯ ಗಂಧರ್ವಕುಲೇ ಉತ್ಪನ್ನತ್ವಾತ್ ।** ದೇವತೆಗಳಿಂದ ಗಂಧರ್ವಕುಲದಲ್ಲಿ ಉತ್ಪನ್ನವಾದು ದರಿಂದ ಈ ವಿಶೇಷಣವೆಂದೂ ವಿವರಿಸಿದೆ. ಈ ಎರಡು ವಿಧವಾದ ವಿವರಣೆಗೂ ಪೂರ್ಣವಾದ ಅವಕಾಶವಿದೆ.

> **ಉಷಾ ವಾ ಅಸ್ಯ ಮೇಧ್ಯಸ್ಯ ಶಿರಃ । ಸೂರ್ಯಶ್ಚಕ್ಷುರ್ವಾತಃ ಪ್ರಾಣೋ ವ್ಯಾತ್ತಮಗ್ನಿರ್ವೈಶ್ವಾನರಃ ಸಂವತ್ಸರ ಆತ್ಮಾಶ್ವಸ್ಯ ಮೇಧ್ಯಸ್ಯ । ದ್ಯೌಃ ಪೃಷ್ಠಮಂತರಿಕ್ಷಮುದರಂ ಪೃಥಿವೀ ಪಾಜಸ್ಯಂ ದಿಶಃ ಪಾರ್ಶ್ವೇ ಅವಾಂತರದಿಶಃ ಪರ್ಶವ ಋತವೋಽಂಗಾನಿ ಮಾಸಾಶ್ಚಾರ್ಧಮಾಸಾಶ್ಚ ಪರ್ವಾಣ್ಯಹೋರಾತ್ರಾಣಿ ಪ್ರತಿಷ್ಠಾ ನಕ್ಷತ್ರಾಣ್ಯಸ್ಥೀನಿ ನಭೋ ಮಾಂಸಾನಿ ॥**

(ಶ. ಬ್ರಾ. ೧೦-೬-೪)
(ಬೃ. ಉ. ೧-೧-೧)

ಉಷಸ್ಸೇ ಈ ಯಜ್ಞಾಶ್ವದ ಶಿರಸ್ಸು, ಸೂರ್ಯನೇ ಕಣ್ಣು, ವಾಯುವೇ ಪ್ರಾಣವು, ವೈಶ್ವಾನರಾಗ್ನಿಯೇ ತೆರೆದ ಮುಖವು, ಸಂವತ್ಸರವೇ ದೇಹವು (ಆತ್ಮಾ) ದ್ಯುಲೋಕವೇ ಪೃಷ್ಠವು, ಅಂತರಿಕ್ಷವೇ ಉದರವು, ಪೃಥಿವಿಯೇ ಅಧೋಭಾಗವು, ದಿಕ್ಕುಗಳೇ ಪಾರ್ಶ್ವಗಳು ಇತ್ಯಾದಿಯಾಗಿ ಈ ಯಜ್ಞಾಶ್ವದ ಸ್ವರೂಪವನ್ನು ವರ್ಣಿಸಿದೆ.

**ದೇವೇಭ್ಯೋ ಜಾತಸ್ಯ ಗಂಧರ್ವಕುಲ ಉತ್ಪನ್ನತ್ವಾತ್ ।** ಎಂಬ ಇನ್ನೊಂದು ಅರ್ಥವಿದೆ. ಈ ಅರ್ಥ ದಲ್ಲಿ ಅಶ್ವಕ್ಕೂ ದೇವತೆಗಳಿಗೂ ಪರಂಪರಾಸಂಬಂಧವಿದೆ. ದೇವತೆಗಳೊಡನೆ ಸಾಕ್ಷಾತ್ಸಂಬಂಧವಿರುವ ಅಂಶವನ್ನೂ ಸಹ ಅನೇಕಕಡೆ ಹೇಳಿರುವುದರಿಂದ ದೇವಜಾತಸ್ಯ ಎನ್ನುವುದಕ್ಕೆ ಸಾಕ್ಷಾತ್ತಾಗಿ ದೇವತೆಯಿಂದಲೇ ಉತ್ಪನ್ನವಾದ ಎಂದೂ ಹೇಳಬಹುದು.

> **ಯತ್ಪ್ರಜಾಪತಿರಾಲಬ್ಧೋಽಶ್ವೋಽಭವತ್ । ತಸ್ಮಾದಶ್ವಃ । ಯತ್ಸದ್ಯೋ ಮೇಧೋಽಭವತ್ । ತಸ್ಮಾದಶ್ವಮೇಧಃ ।**

(ತೈ. ಬ್ರಾ. ೩-೯-೨೨-೧)

ಪಶುರೂಪದಿಂದ ಲಬ್ಧನಾದ ಪ್ರಜಾಪತಿಯು ಒಡನೆಯೇ ಸರ್ವವ್ಯಾಪಿಯಾದ ಅಶ್ವನಾದನು. ಅದೇ ಅಹಸ್ಸಿನಲ್ಲಿಯೇ ಆ ಅಶ್ವವು ಮೇಧರೂಪವಾದ ಯಜ್ಞವಾಯಿತು. । ಆದುದರಿಂದ ಅಶ್ವಮೇಧವೆಂಬ ಹೆಸರು ಪ್ರಸಿದ್ಧವಾಗಿದೆ. ಅಲ್ಲದೆ,

> **ಹಯೋ ಭೂತ್ವಾ ದೇವಾನವಹದ್ವಾಜೀ ಗಂಧರ್ವಾನರ್ವಾಸುರಾನಶ್ವೋ ಮನುಷ್ಯಾನ್ ಸಮುದ್ರ ಏವಾಸ್ಯ ಬಂಧುಃ ಸಮುದ್ರೋ ಯೋನಿಃ ॥**

(ಬೃ. ಉ. ೧-೧-೨)

ವಿಶ್ವವ್ಯಾಪಕವಾದ ಈ ಮೇಧ್ಯಾಶ್ವವು **ಹಯದ** ರೂಪದಲ್ಲಿ ದೇವತೆಗಳನ್ನೂ, **ವಾಜಿಯ** ರೂಪದಲ್ಲಿ ಗಂಧರ್ವರನ್ನೂ, **ಅರ್ವ**ರೂಪದಲ್ಲಿ ಅಸುರರನ್ನೂ ಮತ್ತು ಅಶ್ವರೂಪದಲ್ಲಿ ಮಾನವರನ್ನೂ ವಹಿಸುತ್ತದೆ. ಗಂಧರ್ವರಿಗೆ ವಾಸಸ್ಥಾನವಾದ ಅಂತರಿಕ್ಷವೇ ಈ ಅಶ್ವಕ್ಕೆ ಬಂಧುವು ಮತ್ತು ಜನ್ಮಸ್ಥಾನವು. ಇತ್ಯಾದಿಯಾದ ವರ್ಣನೆಗಳ ಆಧಾರದಿಂದ ದೇವಜಾತಸ್ಯ ಎಂಬ ವಿಶೇಷಣಕ್ಕೆ ಮೇಲೆ ಹೇಳಿರುವ ಎರಡನೆಯ ಅರ್ಥವೂ ಸಾಧ್ಯವಾಗುತ್ತದೆ.

**ಋಭುಕ್ಷಾಃ**—ಈ ಪದಕ್ಕೆ ನಿರುಕ್ತಕಾರರೇ ಎರಡರ್ಥವನ್ನು ಹೇಳಿದ್ದಾರೆ. **ಉರುಕ್ಷಯಣಃ ಇಂದ್ರಃ** ಎಂದು ಒಂದರ್ಥವನ್ನೂ, ಋಭೂನಾಂ ರಾಜಾ ಎಂಬ ಇನ್ನೊಂದರ್ಥವನ್ನೂ ಮಾಡಿದ್ದಾರೆ. ವಿಸ್ತೃತವಾದ ಅಂತರಿಕ್ಷದಲ್ಲಿ ವಾಸಮಾಡುವವನು ಎಂದು ಇಂದ್ರನಿಗೆ ವಿಶೇಷಣವಾಗಿಯಾಗಲಿ, ಅಥವಾ ಋಭುಗಳಿಗೆ ಎಂದರೆ ಪ್ರಕಾಶಮಾನರಾದ ದೇವತೆಗಳಿಗೆ ರಾಜನೆಂದಾಗಲಿ ಅರ್ಥವಾಗುತ್ತದೆ. ಅಥವಾ ಸಾಯಣರು ವಿವರಿಸಿರುವಂತೆ **ಮಹನ್ನಾಮ**ಗಳಲ್ಲಿ ಪಠಿತವಾಗಿರುವುದರಿಂದ (ನಿ. ೩-೧೩) ಮಹಾತ್ಮನಾದ ಇಂದ್ರನೆಂದಾದರೂ ಆಗಬಹುದು.

**ಮಾ ಪರಿಖ್ಯನ್**—ಅವಹೇಳನವನ್ನು ಮಾಡದಿರಲಿ ಎಂದು ಪ್ರಾರ್ಥಿಸಿದೆ. ದೇವತಾತ್ಮಕವಾದ ಈ ಅಶ್ವವನ್ನು ತುಚ್ಛರಾದ ಮಾನವರು ಸ್ತುತಿಸುವುದರಲ್ಲಿ ಔಚಿತ್ಯವಿಲ್ಲವೆಂದು **ಮಿತ್ರಾದಿದೇವತೆಗಳು** ತಿರಸ್ಕರಿಸದೆ ಇರಲಿ ಎಂದರ್ಥ.

**ವಿದಥೇ—ವೇದನಸಾಧನೇ ಯಜ್ಞೇ ।** ತಿಳಿವಳಿಕೆಗೆ ಸಾಧನವಾದ ಯಜ್ಞದಲ್ಲಿ ಎಂದು ಸಾಯಣರು ವಿವರಿಸಿದ್ದಾರೆ. ಆದುದರಿಂದ ಈ ಯಜ್ಞವು ಆಧ್ಯಾತ್ಮಿಕವಾದ ಜ್ಞಾನಸಂಪಾದನೆಗೂ ಸಾಧನವೆಂದು ತಿಳಿಯುತ್ತದೆ. ಈ ಯಜ್ಞಕಾಲದಲ್ಲಿ ಅಧ್ವರ್ಯುವಿಗೂ ಹೋತೃವಿಗೂ ಮತ್ತಿತರ ಋತ್ವಿಕ್ಕುಗಳಿಗೂ ಸಂಬಂಧಿಸಿದಂತೆ **ಬ್ರಹ್ಮೋದ್ಯ** ಸಭೆಯು ನಡೆದು ಅದರಲ್ಲಿ ವಿಶ್ವತತ್ತ್ವಗಳ ವಿಚಾರದಲ್ಲಿ ಚರ್ಚೆಯು ನಡೆಯುವುದು.

> **ಅಪ ವಾ ಏತಸ್ಮಾತ್ । ತೇಜೋ ಬ್ರಹ್ಮವರ್ಚಸಂ ಕ್ರಾಮತಿ ಯೋಽಶ್ವಮೇಧೇನ ಯಜತೇ ಹೋತಾ ಚ ಬ್ರಹ್ಮಾ ಚ ಬ್ರಹ್ಮೋದ್ಯಂ ವದತ ಆಗ್ನೇಯೋ ವೈ ಹೋತಾ ಬಾರ್ಹಸ್ಪತ್ಯೋ ಬ್ರಹ್ಮಾ ಬ್ರಹ್ಮಾ ಬೃಹಸ್ಪತಿಸ್ತೇಜಶ್ಚೈವಾಸ್ಮಿನ್ಬ್ರಹ್ಮವರ್ಚಸಂ ಚ ಸಮೀಚೀ ಧತ್ತೋ ಯೂಪಮಭಿತೋ ವದತೋ ಯಜಮಾನೋ ವೈ ಯೂಪೋ ಯಜಮಾನಮೇವೈತತ್ತೇಜಸಾ ಚ ಬ್ರಹ್ಮವರ್ಚಸೇನ ಚೋಭಯತಃ ಪರಿಧತ್ತಃ ।**
>
> (ಶ. ಬ್ರಾ. ೧೩-೨-೬-೯)
>
> **ತೇಜಸಾ ವಾ ಏಷ .... .... .... ಬ್ರಹ್ಮವರ್ಚಸಮೇವಾವರುಂಧೇ ।**
>
> (ತೈ. ಬ್ರಾ. ೩-೯-೫)

ಇತ್ಯಾದಿ ವಾಕ್ಯಗಳಲ್ಲಿ ಋತ್ವಿಕ್ಕುಗಳಿಗೆ ತಾತ್ತ್ವಿಕವಿಚಾರವಾದ ಚರ್ಚೆಯು ನಡೆದು ಅದು ಜ್ಞಾನಸಾಧನವಾಗುವುದರಿಂದ ಈ ಅಶ್ವಮೇಧವು ನೆರವೇರುವ ಸ್ಥಾನಕ್ಕೆ ವಿದಥವೆಂದು ಹೆಸರು ಎಂದು ಸಾಯಣರ ವಿವರಣೆಯಿದೆ. ಈ ವಿಷಯವನ್ನು ಈ ಸೂಕ್ತದ ಮತ್ತು ಮುಂದಿನ ಸೂಕ್ತದ ಉಪಸಂಹಾರದಲ್ಲಿ ಅಶ್ವಮೇಧದ ಸ್ವರೂಪವನ್ನು ಕರ್ಮದ ದೃಷ್ಟಿಯಿಂದಲೂ ಜ್ಞಾನದ ದೃಷ್ಟಿಯಿಂದಲೂ ವಿವರಿಸುವಾಗ ತಿಳಿಸಲಾಗುತ್ತದೆ. ಆದರೆ ಇಲ್ಲಿ ವಿದಥಶಬ್ದಕ್ಕೆ ಜ್ಞಾನಸಾಧನವಾದ ಯಜ್ಞವೆಂದರ್ಥಮಾಡಿರುವುದರಿಂದ ಆ ಜ್ಞಾನವಿಷಯಕವಾದ ಚರ್ಚೆಯ ಸೂಕ್ಷ್ಮವಾದ ಪರಿಚಯವನ್ನು ಮಾಡಿಕೊಳ್ಳಬಹುದು. ಹೋತೃವಿಗೂ ಬ್ರಹ್ಮನಿಗೂ ನಡೆಯತಕ್ಕ ಬ್ರಹ್ಮೋದ್ಯದ ಚರ್ಚೆಯು ಈ ರೀತಿಯಿದೆ.

> **ಕಃ ಸ್ವಿದೇಕಾಕೀ ಚರತೀತಿ । ಅಸೌ ವಾ ಆದಿತ್ಯ ಏಕಾಕೀ ಚರತ್ಯೇಷ ಬ್ರಹ್ಮವರ್ಚಸಂ ಬ್ರಹ್ಮವರ್ಚಸಮೇವಾಸ್ಮಿನ್ಧತ್ತಃ ।**
>
> (ಶ ಬ್ರಾ. ೧೩-೨-೬-೧೦)

ಏಕಾಕಿಯಾಗಿ ಸಂಚರಿಸುವ ವ್ಯಕ್ತಿಯಾರು ? ಎಂಬ ಪ್ರಶ್ನೆಗೆ ಉತ್ತರವಾಗಿ ದೂರದಲ್ಲಿರುವ ಆದಿತ್ಯನೇ ಏಕಾಕಿಯಾಗಿ ಸಂಚರಿಸುವವನು. ಅವನೇ ಬ್ರಹ್ಮವರ್ಚಸ್ಸು.

**ಕಿಗ್ಂಸ್ವಿದಾಸೀದ್ಬೃಹದ್ವಯ ಇತಿ । ಅಶ್ವೋ ವೈ ಬೃಹದ್ವಯ ಆಯುರೇವಾವರುಂಧೇ ।**

(ಶ. ಬ್ರಾ. ೧೩–೨–೬–೧೫)

ಆ ಬೃಹತ್ಪಕ್ಷಿ ಯಾವುದು ಎಂಬ ಪ್ರಶ್ನೆಗೆ ಉತ್ತರವಾಗಿ ಮೇಧ್ಯಾಶ್ವನೇ ಆ ಬೃಹದ್ವಯವು. ಅದು ಆಯುಶ್ಶಕ್ತಿಯನ್ನು ಪಡೆಯುತ್ತದೆ. ಇತ್ಯಾದಿಯಾಗಿ ತಾತ್ತ್ವಿಕವಾದ ಚರ್ಚೆಯು **ಬ್ರಹ್ಮೋದ್ಯದ** ಸ್ವರೂಪವನ್ನು ತಿಳಿಸುತ್ತದೆ. ಈ ರೀತಿಯಾದ ಚರ್ಚೆಯಿಂದ ಅಶ್ವಮೇಧವು ಜ್ಞಾನಸಾಧನವಾದುದರಿಂದ **ವಿದಥ**ವೆಂಬ ಹೆಸರು. ಇದೇ ವಿಷಯವನ್ನು ಬೃಹದಾರಣ್ಯಕದಲ್ಲಿ,

**ಏಷ ಹ ವಾ ಅಶ್ವಮೇಧೋ ಯ ಏಷ ತಪತಿ ತಸ್ಯ ಸಂವತ್ಸರ ಆತ್ಮಾಯಮಗ್ನಿರರ್ಕಸ್ತಸ್ಯೇಮೇ-ಲೋಕಾ ಆತ್ಮಾನಸ್ತಾವೇತಾವರ್ಕಾಶ್ವಮೇಧೌ ॥**

(ಬೃ ಉ ೧–-೨-೭)

ಎಂದು ಅಶ್ವಮೇಧದ ವಿಶ್ವಾತ್ಮಸ್ವರೂಪವನ್ನು ತಿಳಿಸಿದೆ. ಬ್ರಹ್ಮೋದ್ಯದಲ್ಲಿ ಈ ವಿಶ್ವಾತ್ಮದ ಸ್ವರೂಪವನ್ನು ವಿವರಿಸುವ ಚರ್ಚೆಯಿದೆ. ಆದುದರಿಂದ ಬ್ರಹ್ಮೋದ್ಯದ ಚರ್ಚೆಯಿರುವ ಅಶ್ವಮೇಧಕ್ಕೆ ಜ್ಞಾನಸಾಧನವಾದ ವಿದಥವೆಂದು ಹೆಸರು.

### ವ್ಯಾಕರಣಪ್ರಕ್ರಿಯಾ

**ಆಯುಃ**—ವಾ ಗತಿಗಂಧನಯೋಃ ಧಾತು. **ಕೃವಾಪಾ**—(ಉ. ಸೂ. ೧-೧) ಎಂಬುದರಿಂದ ಉಣ್ ಪ್ರತ್ಯಯ. **ಆತೋ ಯುಕ್‌ಚಿಣ್‌ಕೃತೋಃ** (ಪಾ. ಸೂ. ೭-೩-೩೩) ಎಂಬುದರಿಂದ ಧಾತುವಿಗೆ ಯುಕಾಗಮ. ಛಾಂದಸವಾಗಿ ವಕಾರಲೋಪ ಬರುತ್ತದೆ ಪ್ರತ್ಯಯಸ್ವರದಿಂದ ಅಂತೋದಾತ್ತವಾಗುತ್ತದೆ.

**ಖ್ಯನ್**—ಖ್ಯಾ ಪ್ರಕಥನೇ ಧಾತು. **ಮಾಙಿಲುಙ್** (ಪಾ. ಸೂ. ೩-೩-೧೭೫) ಎಂಬುದರಿಂದ ಲುಙ್. ಝಿಗೆ ಅಂತಾದೇಶ ಬಂದಾಗ ಇಕಾರಲೋಪ. **ಅಸ್ಯತಿವಕ್ತಿಖ್ಯಾತಿಭ್ಯೋಙ್** (ಪಾ. ಸೂ. ೩-೧-೫೨) ಎಂಬುದರಿಂದ ಚ್ಲಿಗೆ ಅಙಾದೇಶ. **ಆತೋ ಲೋಪ ಇಟಿ ಚ** (ಪಾ. ಸೂ. ೬-೪-೬೪) ಎಂಬುದರಿಂದ ಧಾತುವಿನ ಆಕಾರಕ್ಕೆ ಲೋಪ. **ನ ಮಾಙ್‌ಯೋಗೇ** (ಪಾ. ಸೂ. ೬-೪-೭೪) ಎಂಬುದರಿಂದ ಅಡಾಗಮ ಬರುವುದಿಲ್ಲ. ತಿಙಂತನಿಘಾತಸ್ವರ ಬರುತ್ತದೆ.

**ದೇವಜಾತಸ್ಯ—ತೃತೀಯಾಕರ್ಮಣಿ** ಎಂಬುದರಿಂದ ಪೂರ್ವಪದಪ್ರಕೃತಿಸ್ವರ ಬರುತ್ತದೆ.

**ಪ್ರವಕ್ಷ್ಯಾಮಃ**—ವಚ ಪರಿಭಾಷಣೇ ಧಾತು. **ಲಟ್** ಉತ್ತಮಪುರುಷಬಹುವಚನಾಂತರೂಪ ಯದ್ಯೋಗವಿರುವುದರಿಂದ ನಿಘಾತಸ್ವರ ಬರುವುದಿಲ್ಲ, ಸ್ಯ ವಿಕರಣಸ್ವರ ಉಳಿಯುತ್ತದೆ. **ತಿಙಿಚೋದಾತ್ತವತಿ** (ಪಾ. ಸೂ. ೮-೧-೭೧) ಎಂಬುದರಿಂದ ಗತಿಗೆ (ಪ್ರ) ಅನುದಾತ್ತಸ್ವರ ಬರುತ್ತದೆ.

**ವಿದಥೇ**— ವಿದ ಜ್ಞಾನೇ ಧಾತು. ಇದಕ್ಕೆ ಔಣಾದಿಕ ಅಥ ಪ್ರತ್ಯಯ. ಕಿತ್ವಾತಿದೇಶದಿಂದ ಲಘೂಪಧ ಗುಣ ಬರುವುದಿಲ್ಲ. ಪ್ರತ್ಯಯದ ಆದ್ಯುದಾತ್ತಸ್ವರ ಬರುತ್ತದೆ. ॥ ೧ ॥

———— – :o: ————

ಸಂಹಿತಾಪಾಠಃ

ಯನ್ನಿರ್ಣಿಜಾ ರೇಕ್ಣಸಾ ಪ್ರಾವೃತಸ್ಯ ರಾತಿಂ ಗೃಭೀತಾಂ ಮುಖತೋ ನಯಂತಿ ।
ಸುಪ್ರಾಙಜೋ ಮೇಮ್ಯದ್ವಿಶ್ವರೂಪ ಇಂದ್ರಾಪೂಷ್ಣೋಃ ಪ್ರಿಯಮಪ್ಯೇತಿ ಪಾಥಃ ॥ ೨ ॥

ಪದಪಾಠಃ

ಯತ್ । ನಿಃऽನಿಜಾ । ರೇಕ್ಣಸಾ । ಪ್ರಾವೃತಸ್ಯ । ರಾತಿಂ । ಗೃಭೀತಾಂ । ಮುಖತಃ । ನಯಂತಿ ।
ಸುऽಪ್ರಾಙ್ । ಅಜಃ । ಮೇಮ್ಯತ್ । ವಿಶ್ವऽರೂಪಃ । ಇಂದ್ರಾಪೂಷ್ಣೋಃ । ಪ್ರಿಯಂ । ಅಪಿ । ಏತಿ । ಪಾಥಃ ॥೨॥

ಸಾಯಣಭಾಷ್ಯಂ

ಯದ್ಯಸ್ಮಾನ್ನಿರ್ಣಿಜಾ । ನಿರ್ಣಿಗಿತಿ ರೂಪನಾಮ । ರೇಕ್ಣಸಾ । ರೇಕ್ಣ ಇತಿ ಧನನಾಮ । ನಿರ್ಣಿಗ್ವಪ್ರಿರಿತಿ ರೇಕ್ಣೋ ರಿಕ್ಥಮಿತಿ ಚ ತನ್ನಾಮಸೂಕ್ತತ್ವಾತ್ ॥ ಉಭಯತ್ರ ಮತ್ವರ್ಥೋ ಲುಪ್ಯತೇ ॥ ರೂಪವತಾ ಹಿರಣ್ಯವತಾಭರಣೇನ ಪ್ರಾವೃತಸ್ಯ ಸರ್ವತೋ ವೇಷ್ಟಿತಸ್ಯಾಶ್ವಸ್ಯ ಮುಖತಃ ಪುರಸ್ತಾದ್ಗೃಭೀತಾಂ ಗೃಹೀತಾಂ ರಾತಿಂ ದಾತವ್ಯಾಂ ದಾತವ್ಯತ್ವೇನ ಗೃಹೀತಾಮಜಾಂ ನಯಂತ್ಯೃತ್ವಿಜಃ । ಸ ಚಾಧ್ಯಶೋऽಜಃ ಸುಪ್ರಾಙ್ ಸುಷ್ಠು ಪ್ರಶಸ್ಯಾಗಮನೋ ಮೇಮ್ಯದ್ಧ್ವನ್ಯಮಾನಃ ॥ ಮಿಾಞ್ ಹಿಂಸಾಯಾಂ । ಅಸ್ಮಾದ್ಯಙ್ಲುಗಂತಾತ್ಕರ್ಮಣಿ ವ್ಯತ್ಯಯೇನ ಶತೃ ॥ ಯದ್ವಾ । ತಸ್ಯ ಶಬ್ದಾನುಕರಣಂ ಮೇಮೇಶಬ್ದಂ ಕುರ್ವನ್ । ವಿಶ್ವರೂಪೋ ಬಹುವರ್ಣೋಪೇತಃ ಕೃಷ್ಣಗ್ರೀವಃ ಕೃಷ್ಣಲಲಾಮೋ ವಾ । ನೈಕವರ್ಣ ಇತ್ಯರ್ಥಃ । ಏವಂರೂಪೋऽಯಮಿಂದ್ರಾಪೂಷ್ಣೋಃ । ಇಂದ್ರಃ ಪ್ರಸಿದ್ಧಃ । ಪೂಷಾ ಪೋಷಕೋ ದೇವೋऽಗ್ನಿಃ । ತಯೋಃ ಪ್ರಿಯಂ । ಆಗ್ನೇಯಃ ಕೃಷ್ಣಗ್ರೀವ ಇತ್ಯುಕ್ತತ್ವಾದಗ್ನೇಃ ಪ್ರಿಯತ್ವಂ । ಸರ್ವೇऽಪೀಂದ್ರಸ್ಯೇತೀಂದ್ರಪ್ರಿಯತ್ವಂ । ಏವಂರೂಪಂ ಪಾಥೋऽನ್ನಮಪ್ಯೇತಿ । ಪ್ರಾಪ್ನೋತು ॥

। ಪ್ರತಿಪದಾರ್ಥ ।

**ಯತ್**—ಯಾವಾಗ । **ನಿರ್ಣಿಜಾ**—ಸುಂದರವಾದ ರೂಪಗಳಿಂದ ಕೂಡಿದವೂ । **ರೇಕ್ಣಸಾ**—ಸುವರ್ಣಾದಿಗಳಿಂದ ನಿರ್ಮಿಸಿದವೂ ಆದ ಆಭರಣಗಳಿಂದ । **ಪ್ರಾವೃತಸ್ಯ**—ಸುತ್ತಲೂ ಅಲಂಕರಿಸಲ್ಪಟ್ಟ ಅಶ್ವದ । **ಮುಖತಃ**—

ಮುಂಭಾಗದಲ್ಲಿ | **ಗೃಭೀತಾಂ**—ಹಿಡಿಯಲ್ಪಟ್ಟುದೂ | **ರಾತಿಃ** — ಅರ್ಪಿತವಾಗತಕ್ಕದ್ದೂ ಆದ ಅಜವನ್ನು | **ನಯಂತಿ** — (ಋತ್ವಿಕ್ಕುಗಳು) ತರುತ್ತಾರೋ (ಆಗ) | **ವಿಶ್ವರೂಪಃ** — ನಾನಾವಿಧವಾದ ಬಣ್ಣವುಳ್ಳದ್ದೂ | **ಸುಪ್ರಾಙ್**—ಶ್ರೇಷ್ಠವಾದ ಗಮನವುಳ್ಳದ್ದೂ ಆದ | **ಅಜಃ**—ಆಡು | **ಮೇಮ್ಯತ್**—ಮೇ ಎಂದು ಶಬ್ದಮಾಡುತ್ತಾ ಕೆಹಾಕುತ್ತಾ | **ಇಂದ್ರಾ ಪೂಷ್ಣೋಃ**—ಇಂದ್ರನಿಗೂ ಮತ್ತು ಪೂಷನಿಗೂ (ಅಥವಾ ಪೂಷರೂಪನಾದ ಅಗ್ನಿಗೂ) | **ಪ್ರಿಯಂ ಪಾಥಃ**—ಪ್ರಿಯವಾದ ಅನ್ನವಾಗಿ | **ಅಪ್ಯೇತಿ**—ಸಿದ್ಧವಾಗುತ್ತದೆ.

**ಭಾವಾರ್ಥ**

ಸುಂದರವಾದ ರೂಪಗಳಿಂದ ಕೂಡಿದವೂ, ಸುವರ್ಣಾದಿಗಳಿಂದ ನಿರ್ಮಿಸಿದವೂ ಆದ ಆಭರಣಗಳಿಂದ ಅಲಂಕರಿಸಲ್ಪಟ್ಟ ಅಶ್ವದ ಮುಂಭಾಗದಲ್ಲಿ ಹಿಡಿಯಲ್ಪಟ್ಟುದೂ, ಆಹುತಿಯಾಗಿ ಅರ್ಪಿತವಾಗತಕ್ಕದ್ದೂ ಆದ ಅಜವನ್ನು ಋತ್ವಿಕ್ಕುಗಳು ತರುವಾಗ ನಾನಾವಿಧವಾದ ಬಣ್ಣವುಳ್ಳದ್ದೂ, ಶ್ರೇಷ್ಠವಾದ ಗಮನವುಳದ್ದೂ ಆದ ಆ ಅಜವು ಮೇ ಎಂದು ಶಬ್ದಮಾಡುತ್ತಾ ಇಂದ್ರನಿಗೂ ಅಗ್ನಿರೂಪನಾದ ಪೂಷನಿಗೂ ಪ್ರಿಯವಾದ ಅನ್ನವಾಗಿ ಸಿದ್ಧವಾಗುತ್ತದೆ.

## English Translation

When they, (the priescs), bring the prepared offering to the presence (of the horse), who has been bathed and decorated with rich (trappings), the various-coloured goat going before him, bleating, becomes an acceptable offering to Indra and Pushan.

**ವಿಶೇಷವಿಷಯಗಳು**

ಈ ಋಕ್ಕಿನಲ್ಲಿ ಮೇಧ್ಯಾಶ್ವದ ಅಲಂಕಾರವನ್ನೂ, ಆಹುತ್ಯರ್ಪಣಕ್ಕೆ ಸಿದ್ಧವಾದುದೂ, ಇಂದ್ರಾಪೂಷರಿಗೆ ಪ್ರಿಯವಾದ ಅನ್ನವಾದುದೂ ಆದ ಅಜವನ್ನು ಆ ಅಶ್ವದ ಮುಂಭಾಗದಲ್ಲಿ ಋತ್ವಿಕ್ಕುಗಳು ಇರಿಸುವುದೂ ವರ್ಣಿತವಾಗಿದೆ.

**ನಿರ್ಣಿಜಾ—ನಿರ್ಣಿಕ್. ವವ್ರಿಃ** ಇತ್ಯಾದಿ ರೂಪನಾಮಗಳಲ್ಲಿ ಈ ಶಬ್ದವು ಪಠಿತನಾಗಿದೆ. (ನಿ. ೩-೭) ಸಾಧಾರಣವಾಗಿ ಎರಡರ್ಥಗಳಲ್ಲಿಯೂ ಈ ಪದದ ಪ್ರಯೋಗವಿದೆ. ಮೊದಲನೆಯದಾಗಿ, ಶುದ್ಧಿಮಾಡಿದ ಎಂಬರ್ಥದಲ್ಲೂ ಎರಡನೆಯದಾಗಿ ಸ್ವಸ್ವರೂಪವನ್ನು ಪ್ರಕಾಶಗೊಳಿಸತಕ್ಕ ಎಂಬರ್ಥದಲ್ಲೂ ರೂಢವಾಗಿರುವುದರ ಜೊತೆಗೆ ಪುಷ್ಟವಾದ ಎಂಬರ್ಥದಲ್ಲಿಯೂ ಉಪಯೋಗಿಸಲ್ಪಟ್ಟಿದೆ.

**ಅವ್ಯಕ್ತೇನ ರುಶತಾ ವಾಸಸಾ ಹರಿರಮರ್ತ್ಯೋ ನಿರ್ಣಿಜಾನಃ ಪರಿ ವ್ಯತ |**
**ದಿವಸ್ಪೃಷ್ಠಂ ಬರ್ಹಣಾ ನಿರ್ಣಿಜೇ ಕೃತೋಪಸ್ತರಣಂ ಚಮ್ವೋರ್ನಭಸ್ಮಯಂ ||**

(ಋ. ಸಂ. ೯-೬೯-೫)

ಇತ್ಯಾದಿ ಋಕ್ಕುಗಳಲ್ಲಿಯೂ

**ಸರ್ವಂ ಪಿಬತಿ ನಿರ್ಣಿಜ್ಯ ಕಂಸಂ ಚಮಸಂ ವಾ |**

(ಛಾ. ಉ. ೫-೨-೭)

ಎಂಬ ಉಪನಿಷದ್ವಾಕ್ಯಗಳಲ್ಲಿಯೂ ಸಹ **ಶೋಧ್ಯಮಾನಃ, ಪ್ರಕ್ಷಾಲ್ಯ** ಎಂಬ ಅರ್ಥಗಳಾಗುತ್ತವೆ. ತೊಳೆಯಲ್ಪಟ್ಟುದು, ಶುದ್ಧಿಮಾಡಿದುದು ಎಂದು ತಾತ್ಪರ್ಯ.

**ಯದೀ ಘೃತೇಭಿರಾಹುತೋ ವಾಶೀಮಗ್ನಿರ್ಭರತ ಉಚ್ಚಾವ ಚ । ಅಸುರ ಇವ ನಿರ್ಣಿಜಂ ॥**
(ಋ. ಸಂ ೮-೧೯-೨೩)

ಎಂಬಲ್ಲಿ ಅಗ್ನಿಯು ತನ್ನ ಸ್ವಸ್ವರೂಪವನ್ನು ಪ್ರಕಾಶಪಡಿಸುತ್ತಾನೆಂದು ಹೇಳುವಾಗ **ನಿರ್ಣಿಜಂ** ಎಂದರೆ **ಸ್ವರೂಪ**ವನ್ನು ಎಂದರ್ಥವಾಗುತ್ತದೆ.

**ಬಿಭ್ರದ್ದ್ರಾಪಿಂ ಹಿರಣ್ಯಯಂ ವರುಣೋ ವಸ್ತ ನಿರ್ಣಿಜಂ । ಪರಿ ಸ್ಪಶೋ ನಿ ಷೇದಿರೇ ॥**
(ಋ. ಸಂ. ೧-೨೫-೧೩)

ಎಂಬಲ್ಲಿ ವರುಣದೇವನ ಶರೀರವನ್ನು ವರ್ಣಿಸಿದೆ. **ನಿರ್ಣಿಜಂ** ಎಂದರೆ ಇಲ್ಲಿ ಪುಷ್ಟವಾಗಿ ಬೆಳೆದ ಶರೀರವೆಂದು ತಾತ್ಪರ್ಯ. ಹೀಗೆ ನಾನಾರ್ಥಗಳಲ್ಲಿ ಈ ಪದದ ಪ್ರಯೋಗವಿರುವುದರಿಂದ ಪ್ರಕೃತವಾದ ಋಕ್ಕಿನಲ್ಲಿ **ರೂಪವತಾ ಆಭರಣೇನ** ಎಂದರೆ ಸುಂದರವಾದ ರೂಪವುಳ್ಳ ಆಭರಣದಿಂದ ಎಂದರ್ಥಮಾಡಿದೆ.

**ರೇಕ್ಣಸಾ**—ಈ ಪದವು ಧನನಾಮಗಳಲ್ಲಿ ಪಠಿತವಾಗಿದೆ. (ನಿ ೩-೯) ನಿರುಕ್ತಕಾರರು,

**ಪರಿಷದ್ಯಂ ಹ್ಯರಣಸ್ಯ ರೇಕ್ಣೋ ನಿತ್ಯಸ್ಯ ರಾಯಃ ಪತಯಃ ಸ್ಯಾಮ ।**
(ಋ. ಸಂ. ೭-೪-೭)

ಎಂಬ ಋಕ್ಕನ್ನುದಹರಿಸಿ **ರೇಕ್ಣಃ ಇತಿ ಧನನಾಮ; ರಿಚ್ಯತೇ ಪ್ರಯತಃ ।** (ನಿ. ೩-೨) ವ್ಯುತ್ಪತಿಯನ್ನು ಹೊಂದಿದವರಿಂದ ಬಿಡಲ್ಪಡುವ ಪದಾರ್ಥವಾದುದರಿಂದ ಧನಕ್ಕೆ ಈ ಹೆಸರು ಪ್ರಸಿದ್ಧವಾಗಿದೆಯೆಂದು ತೋರಿಸಿದ್ದಾರೆ. ಅದರಂತೆ ಪ್ರಕೃತವಾದ ಋಕ್ಕಿನಲ್ಲಿಯೂ ಧನವೆಂದರ್ಥಮಾಡಿದರೆ, ಇಲ್ಲಿ ರೇಕ್ಣಸಾ ಎಂಬುದಕ್ಕೆ **ಹಿರಣ್ಯವತಾಭರಣೇನ** ಸುವರ್ಣರೂಪವಾದ ಧನವುಳ್ಳ ಆಭರಣದಿಂದ ಅಲಂಕೃತವಾದ ಅಶ್ವವೆಂದರ್ಥ.

**ಅಜಃ ಪ್ರಿಯಂ ಪಾಥಃ ಅಸ್ಯೇತಿ**—ಇಂದ್ರಾಪೂಷರಿಗೆ ಅಜವು ಪ್ರಿಯವಾದ ಅನ್ನವಾಗುತ್ತದೆಂದು ಹೇಳಿದೆ. ಮೇಧ್ಯಾಶ್ವವು ಅಲಂಕೃತವಾಗಿ ಕರೆತರಲ್ಪಟ್ಟಾಗ ನಾಲ್ಕು ಕಣ್ಣುಳ್ಳ ನಾಯಿಯನ್ನು ಆಹುತಿಯಾಗಿ ಕೊಡುವ ಸಂಪ್ರದಾಯವು ಕೆಲವು ಕಡೆಗಳಲ್ಲಿ ಹೇಳಿದೆ.

**ಪಾಪ್ಮಾ ವಾ ಏತಂ ಭ್ರಾತೃವ್ಯ ಈಪ್ಸತಿ ಯೋಽಶ್ವಮೇಧೇನ ಯಜೇತ ವಜ್ರೋಽಶ್ವಃ ಪರೋಮರ್ತಃ ಪರಃ ಶ್ವೇತಿ ಶ್ವಾನಂ ಚತುರಕ್ಷಗ್ಂ ಹತ್ವಾಧಸ್ಪದಮಶ್ವಸ್ಯೋಪಪ್ಲಾವಯತಿ ವಜ್ರೇಣೈವೈನಮವಕ್ರಾಮತಿ ನೈನಂ ಪಾಪ್ಮಾ ಭ್ರಾತೃವ್ಯ ಆಪ್ನೋತಿ ॥**
(ಶ. ಬ್ರಾ ೧೩-೧-೨-೯)

ಅಶ್ವಮೇಧವನ್ನು ನಿರ್ವಹಿಸುತ್ತಿರುವ ಯಜಮಾನನಿಗೆ ಅಸೂಯೆಯಿಂದ ಶತ್ರುವಾದವನು ತೊಂದರೆಯನ್ನು ಕೊಟ್ಟರೆ ಆಗ ನಾಲ್ಕು ಕಣ್ಣುಗಳುಳ್ಳ ನಾಯಿಯನ್ನು ಕೊಂದು ಶತ್ರುವನ್ನು ಶಪಿಸಿ ಅಶ್ವದ ಕೆಳಗೆ ಆಹುತಿಯಾಗಿ ಅರ್ಪಿಸಿ

ದರೆ ಶತ್ರುವೂ ಸಹ ಅಶ್ವರೂಪವಾದ ವಜ್ರಾಯುಧದ ಏಟಿನಿಂದ ನಾಶವಾಗುತ್ತಾನೆಂದು ತಾತ್ಪರ್ಯವುಳ್ಳ ಈ ವಾಕ್ಯಗಳಿಂದ ಈ ಸಂಪ್ರದಾಯವು ಬೇರೆಯೆಂದು ವಿಶದವಾಗಿದೆ. ಪ್ರಕೃತವಾದ ಋಕ್ಕಿನಲ್ಲಿ **ಅಜವೆಂದಿರುತ್ತದೆ.** ಈ ಅಜದ ಸ್ವರೂಪವೇನೆಂದರೆ,

**ವಿಶ್ವರೂಪಃ—ಬಹುವರ್ಣೋಪೇತಂ । ಕೃಷ್ಣಗ್ರೀವಃ । ಕೃಷ್ಣಲಲಾಮೋ ವಾ ।** ಕಪ್ಪುಕತ್ತುಳ್ಳದ್ದೂ ಅಥವಾ ಕರಿಯ ಮುಖವುಳ್ಳದ್ದು. ಏತಕ್ಕೆಂದರೆ,

**ಆಗ್ನೇಯಃ ಕೃಷ್ಣಗ್ರೀವಃ ಸಾರಸ್ವತೀ ಮೇಷೀ ।**
(ತೈ. ಸಂ. ೫ ೫-೨೨)

ಎಂದು ಅಗ್ನಿಪ್ರಿಯವಾದ ವರ್ಣವು ಕೃಷ್ಣವಾದುದೆಂದೂ ಅದರಲ್ಲೂ ಕತ್ತಿನ ಹತ್ತಿರ ಕೃಷ್ಣವರ್ಣವಿರಬೇಕೆಂದು ಹೇಳಿರುವುದರಿಂದ ಇಲ್ಲಿ ಈ ಅರ್ಥವನ್ನು ಮಾಡಿದೆ.

ಇಲ್ಲಿ **ಪೂಷನ್**— ಎಂಬ ಪದಕ್ಕೆ **ಪೋಷಕಃ ದೇವಃ ಅಗ್ನಿಃ** ಪೋಷಕನೂ ದೇವತಾತ್ಮನೂ ಆದ ಅಗ್ನಿಯೆಂದರ್ಥಮಾಡಿದೆ. ಅಲ್ಲದೇ **ಅಶ್ವಮೇಧದ** ಕಾಲದಲ್ಲಿ,

**ಇಂದ್ರಾಗ್ನೀ ವೈ ಸರ್ವೇ ದೇವಾಸ್ತದೇವೈನಾನ್ಯಥಾದೇವತಂ ಪ್ರಿಣಾತೀತಿ ।**
(ಶ. ಬ್ರಾ. ೧೩-೫-೩-೧೨)

ಎಂದು ಇಂದ್ರಾಗ್ನಿಗಳನ್ನು ವಿಶ್ವೇದೇವತೆಗಳೊಂದಿಗೆ **ಸೇರಿಸಿ, ತಾದಾತ್ಮ್ಯವನ್ನು ಹೇಳಿದೆ.**

### ವ್ಯಾಕರಣಪ್ರಕ್ರಿಯಾ

**ನಿರ್ಣಿಜಾ**—ಇಲ್ಲಿ ಮುಂದೆ ರೇಕ್ಣಸಾ ಎಂಬಲ್ಲಿಯೂ ಅದು ಉಳ್ಳದ್ದು ಎಂಬರ್ಥ ತೋರುವುದರಿಂದ ಛಾಂದಸವಾಗಿ ಮತುಪಿಗೆ ಲೋಪ ಬಂದಿದೆ.

**ಪ್ರಾವೃತಸ್ಯ**—ವೃಞ್ ವರಣೇ. ಧಾತು. ಕರ್ಮಣಿಯಲ್ಲಿ ಕ್ತ ಪ್ರತ್ಯಯ. **ಗತಿರನಂತರಃ** (ಪಾ. ಸೂ. ೬-೨-೪೯) ಎಂಬುದರಿಂದ ಗತಿಗೆ (ಪ್ರ+ಆಙ್) ಉದಾತ್ತಸ್ವರ ಬರುತ್ತದೆ.

**ರಾತಿಮ್ — ಮಂತ್ರೇವೃಷೇಷಪಚ** — (ಪಾ. ಸೂ ೩-೩-೯೬) ಎಂಬುದರಿಂದ **ಕ್ತಿನ್** ಉದಾತ್ತವಾಗುತ್ತದೆ.

**ಗೃಭೀತಾಮ್**—ಗ್ರಹ ಉಪಾದಾನೇ ಧಾತು. ಕರ್ಮಣಿಯಲ್ಲಿ ಕ್ತ ಪ್ರತ್ಯಯ. **ಆರ್ಧಧಾತುಕಸ್ಯೇಡ್ವಲಾದೇಃ** (ಪಾ. ಸೂ. ೭-೨-೩೫) ಎಂಬುದರಿಂದ ಇಡಾಗಮ. **ಗ್ರಹೋಽಲಿಟಿದೀರ್ಘಃ** (ಪಾ. ಸೂ. ೭-೨-೩೭) ಎಂಬುದರಿಂದ ಅದಕ್ಕೆ ದೀರ್ಘ. **ಹೃಗ್ರಹೋರ್ಭಶ್ಛಂದಸಿ** ಎಂಬ ವಚನದಿಂದ ಹಕಾರಕ್ಕೆ ಭತ್ವ. ಸ್ತ್ರೀತ್ವದಲ್ಲಿ **ಟಾಪ್.** ಉದಾತ್ತನಿವೃತ್ತಿಸ್ವರದಿಂದ ಇದು ಉದಾತ್ತವಾಗುತ್ತದೆ.

**ಮುಖತಃ**— ಪಂಚಮ್ಯರ್ಥದಲ್ಲಿ ತಸಿ ಪ್ರತ್ಯಯ. ಪ್ರತ್ಯಯಸ್ವರದಿಂದ ಅಂತೋದಾತ್ತವಾಗುತ್ತದೆ

**ನಯಂತಿ**—ಣೀಞ್ ಪ್ರಾಪಣೇ ಧಾತು. **ಲಟ್** ಪ್ರಥಮಪುರುಷಬಹುವಚನಾಂತರೂಪ. **ತಾಸ್ಯನುದಾತ್ತೇತ್** (ಪಾ. ಸೂ. ೬-೧-೧೮೬) ಎಂಬುದರಿಂದ ಲಸಾರ್ವಧಾತುಕವು ಅನುದಾತ್ತವಾಗುವುದರಿಂದ ಧಾತುಸ್ವರ ಉಳಿಯುತ್ತದೆ ಯದ್ಯೋಗವಿರುವುದರಿಂದ ನಿಘಾತಸ್ವರ ಬರುವುದಿಲ್ಲ.

**ಮೇಮ್ಯತ್**—ಮೀಞ್ ಹಿಂಸಾಯಾಂ ಧಾತು. ಅತಿಶಯಾರ್ಥದಲ್ಲಿ ಯಙ್ ಬಂದಾಗ **ಯಙೋಽಚಿಚ** (ಪಾ. ಸೂ. ೨-೪-೭೪) ಎಂಬುದರಿಂದ ಅದಕ್ಕೆ ಲುಕ್ ಯಙ್ ಲುಗಂತದ ಮೇಲೆ ಕರ್ಮಣಿಯಲ್ಲಿ ವ್ಯತ್ಯಯದಿಂದ ಶತೃ ಪ್ರತ್ಯಯ. **ಅಭ್ಯಸ್ತಾನಾಮಾದಿಃ** (ಪಾ. ಸೂ. ೬-೧-೧೮೯) ಎಂಬುದರಿಂದ ಆದ್ಯುದಾತ್ತಸ್ವರ ಬರುತ್ತದೆ. **ನಾಭ್ಯಸ್ತಾಚ್ಛತುಃ** (ಪಾ. ಸೂ. ೭-೧-೭೮) ಎಂಬುದರಿಂದ ನುಮಾಗಮ ಬರುವುದಿಲ್ಲ

**ವಿಶ್ವರೂಪಃ** - **ಬಹುವ್ರೀಹೌ ವಿಶ್ವಂ ಸಂಜ್ಞಾಯಾಮ್** (ಪಾ. ಸೂ. ೬-೨-೧೦೬) ಎಂಬುದರಿಂದ ಪೂರ್ವಪದಾಂತೋದಾತ್ತಸ್ವರ ಬರುತ್ತದೆ.

**ಇಂದ್ರಾಪೂಷ್ಣೋಃ**—ಇಂದ್ರಶ್ಚ ಪೂಷಾ ಚ ಇಂದ್ರಾಪೂಷಣೌ ತಯೋಃ **ದೇವತಾದ್ವಂದ್ವೇ ಚ** (ಪಾ. ಸೂ. ೬-೩-೨೬) ಎಂಬುದರಿಂದ ಪೂರ್ವಪದಕ್ಕೆ ಆನಙ್. **ದೇವತಾದ್ವಂದ್ವೇ ಚ** (ಪಾ. ಸೂ. ೬-೨-೧೪೧) ಎಂಬುದರಿಂದ ಉಭಯಪದಪ್ರಕೃತಿಸ್ವರವು ಪ್ರಾಪ್ತವಾದರೆ ಅದಕ್ಕೆ **ನೋತ್ತರಪದೇ**-(ಪಾ. ಸೂ. ೬-೨-೧೪೨) ಎಂಬುದರಿಂದ ನಿಷೇಧ ಬರುತ್ತದೆ. ಸಮಾಸಸ್ವರದಿಂದ ಅಂತೋದಾತ್ತವಾಗುತ್ತದೆ.

**ಏತಿ**—ಇಣ್ ಗತೌ ಧಾತು. ಲಟ್ ಪ್ರಥಮಪುರುಷಏಕವಚನಾಂತರೂಪ. ತಿಙಂತನಿಘಾತಸ್ವರ ಬರುತ್ತದೆ.

**ಪಾಥಃ**—ಪಾ ರಕ್ಷಣೇ ಧಾತು. **ಅನ್ಯೇಭ್ಯೋಽಪಿ ದೃಶ್ಯಂತೇ**? — **ಅನ್ಯೇಚ** (ಉ. ಸೂ. ೬೪೪) ಎಂಬುದರಿಂದ ಅಸುನ್ ಪ್ರತ್ಯಯ. ಥುಟಾಗಮ. ಪ್ರತ್ಯಯ ನಿತ್ತಾದುದರಿಂದ ಆದ್ಯುದಾತ್ತಸ್ವರ ಬರುತ್ತದೆ. ॥ ೨ ॥

———:o:———

॥ ಸಂಹಿತಾಪಾಠಃ ॥

ಏಷ ಛಾಗಃ ಪುರೋ ಅಶ್ವೇನ ವಾಜಿನಾ ಪೂಷ್ಣೋ ಭಾಗೋ ನೀಯತೇ
ವಿಶ್ವದೇವ್ಯಃ ।
ಅಭಿಪ್ರಿಯಂ ಯತ್ಪುರೋಳಾಶಮರ್ವತಾ ತ್ವಷ್ಟೇದೇನಂ ಸೌಶ್ರವಸಾಯ
ಜಿನ್ವತಿ ॥ ೩ ॥

ಪದಪಾಠಃ

ಏಷಃ । ಛಾಗಃ । ಪುರಃ । ಅಶ್ವೇನ । ವಾಜಿನಾ । ಪೂಷ್ಣಃ । ಭಾಗಃ । ನೀಯತೇ । ವಿಶ್ವಽದೇವ್ಯಃ ।
ಅಭಿಽಪ್ರಿಯಂ । ಯತ್ । ಪುರೋಳಾಶಂ । ಅರ್ವತಾ । ತ್ವಷ್ಟಾ । ಇತ್ । ಏನಂ । ಸೌ ಶ್ರ ವಸಾಯ ।
ಜಿನ್ವತಿ ॥ ೩ ॥

### ಸಾಯಣಭಾಷ್ಯಂ

ಏಷ ಛಾಗಃ ಶೃಂಗರಹಿತೋಽಜೋಽಶ್ವೇನ ವಾಜಿನಾ ಶೀಘ್ರವ್ಯಾಪಕೇನಾಶ್ವೇನ ಸಹ ಪೂಷ್ಣಃ ಪೋಷಕಸ್ಯಾಗ್ನೇರ್ಭಾಗೋ ಭಜನೀಯೋ ವಿಶ್ವದೇವ್ಯಃ ಸರ್ವದೇವಾರ್ಹಃ । ಅಗ್ನೇಃ ಸರ್ವದೇವಾತ್ಮಕತ್ವಾತ್ ತದರ್ಹತ್ವೇನ ಸರ್ವದೇವಪ್ರಿಯತ್ವಂ। ಏವಂವಿಧೋಽಜಃ ಪುರಃ ಪುರಸ್ತಾನ್ನೀಯತೇ । ಪ್ರಾಪ್ಯತೇ। ಯದ್ಯಸ್ಮಾದೇವಂ ಕ್ರಿಯತೇ ತಸ್ಮಾತ್ಪ್ರಿಯಂ ಪ್ರೀಣಯಿತಾರಂ ಪುರೋಡಾಶಂ ಪುರಸ್ತಾದ್ದಾತವ್ಯಮೇನಮಜಂ ತ್ವಷ್ಟಾ ಸರ್ವಸ್ಯೋತ್ಪಾದಕೋ ದೇವಃ। ತ್ವಷ್ಟಾ ರೂಪಾಣಿ ವಿಕರೋತೀತಿ ಶ್ರುತೇಃ। ತೂರ್ಣವ್ಯಾಪಕೋಽಗ್ನಿರ್ವಾ । ಉಭೇ ತ್ವಷ್ಟುರ್ಬಿಭ್ಯತುರಿತ್ಯುಕ್ತತ್ವಾತ್ ಅಹೋರಾತ್ರೇ ಇತಿ ವಾರಣೀ ಇತಿ ವೇತಿ ಯಾಸ್ಕೇನಾರಣೀ ಬಿಭ್ಯತುರಿತ್ಯುಕ್ತತ್ವಾತ್ । ನಿ ೮-೧೫ । ಅರಣಿಸಂಬಂಧೋಽಗ್ನೇರೇವೇತಿ ಗಮ್ಯತೇ ಅರ್ವತಾರಣವತಾಶ್ವೇನ ಸಹ ಸೌಶ್ರವಸಾಯ ದೇವಾನಾಂ ಶೋಭನಾನ್ನನಿಮಿತ್ತಮಭಿ ಜಿನ್ವತಿ। ಪ್ರೀತಿಹೇತುಕಂ ಕರೋತಿ ॥

### ಪ್ರತಿಪದಾರ್ಥ

**ವಿಶ್ವದೇವ್ಯಃ**—ಎಲ್ಲಾ ದೇವತೆಗಳಿಗೂ ಅರ್ಪಿಸಲು ಯೋಗ್ಯವಾದುದೂ । **ಪೂಷ್ಣಃ ಭಾಗಃ**—ಪೋಷಕನಾದ ಅಗ್ನಿಗೆ ನಿರ್ದಿಷ್ಟವಾದುದೂ (ಸೇರತಕ್ಕದ್ದೂ) ಆದ । **ಏಷಃ ಛಾಗಃ**—ಈ ಅಜವು । **ವಾಜಿನಾ**—ವೇಗಗಾಮಿಯಾದ । **ಅಶ್ವೇನ**—ಅಶ್ವದೊಂದಿಗೆ । **ಪುರಃ**—ಮುಂಭಾಗದಲ್ಲಿ । **ನೀಯತೇ**—ಒಯ್ಯಲ್ಪಡುತ್ತದೆ । **ಯತ್**—ಆದ್ದರಿಂದಲೇ । **ಪ್ರಿಯಂ**— ಪ್ರಿಯವನ್ನುಂಟುಮಾಡುವುದೂ । **ಪುರೋಳಾಶಂ** — ಪ್ರಥಮದಲ್ಲಿ ಅರ್ಪಿತವಾಗತಕ್ಕದ್ದೂ ಆದ । **ಏನಂ**—ಈ ಅಜವನ್ನು । **ತ್ವಷ್ಟಾ**—ತ್ವಷ್ಟೃವು ಅಥವಾ ಅಗ್ನಿಯು । **ಅರ್ವತಾ**—ಅಶ್ವದೊಂದಿಗೆ । **ಸೌಶ್ರವಸಾಯ**—ಶ್ರೇಷ್ಠವಾದ ಅನ್ನವಾಗುವಂತೆಯೂ । **ಅಭಿ ಜಿನ್ವತಿ ಇತ್**—ಪ್ರೀತಿದಾಯಕವಾಗಿಯೂ ಇರುವಂತೆ ಮಾಡುತ್ತಾನೆ.

### ಭಾವಾರ್ಥ

ಎಲ್ಲಾ ದೇವತೆಗಳಿಗೂ ಅರ್ಪಿಸಲು ಯೋಗ್ಯವಾದುದೂ, ಪೋಷಕನಾದ ಅಗ್ನಿಯ ಭಾಗಕ್ಕೆ ಸೇರತಕ್ಕದ್ದೂ ಆದ ಈ ಅಜವು ವೇಗಗಾಮಿಯಾದ ಅಶ್ವದೊಂದಿಗೆ ಮುಂಭಾಗದಲ್ಲಿ ಒಯ್ಯಲ್ಪಡುತ್ತದೆ. ಆದುದರಿಂದಲೇ, ಪ್ರಿಯವನ್ನುಂಟುಮಾಡುವುದೂ, ಪ್ರಥಮದಲ್ಲಿ ಅರ್ಪಿತವಾಗತಕ್ಕದ್ದೂ ಆದ ಈ ಅಜವನ್ನು ತ್ವಷ್ಟೃವು ಅಶ್ವದೊಂದಿಗೆ ಸೇರಿ ಶ್ರೇಷ್ಠವಾದ ಅನ್ನವಾಗುವಂತೆಯೂ ಪ್ರೀತಿದಾಯಕವಾಗಿಯೂ ಇರುವಂತೆ ಮಾಡುತ್ತಾನೆ.

## English Translation

This goat, the portion of Pushan, fit for all the gods, is brought first with the fleet courser, so that Twashtri may prepare him along with the horse, as an acceptable preliminary offering for the (sacrifical) food.

### ವಿಶೇಷವಿಷಯಗಳು

ಅಶ್ವಮೇಧದಲ್ಲಿ ಪುರೋಡಾಶರೂಪದಲ್ಲಿರುವ ಅಜವನ್ನು ದೇವತೆಗಳಿಗೆ ಪ್ರಿಯವಾಗಿರುವಂತೆ ಮಾಡುವ ವಿಧಿಯನ್ನು ಹೇಳುವಾಗ ಈ ಅಜರೂಪವಾದ ಅನ್ನಕ್ಕೆ ವಿಶ್ವದೇವ್ಯಃ ಎಂಬ ಒಂದು ವಿಶೇಷಣವಿದೆ. ಈ ಸಂದರ್ಭದಲ್ಲಿ ಒಂದು ಆಕ್ಷೇಪವು ತಲೆದೋರಿ ಅದಕ್ಕೆ ಸಮಾಧಾನವೂ ಈ ರೀತಿಯಿದೆ.

**ಯತ್ಪ್ರಾಜಾಪತ್ಯೋಽಶ್ವೋಽಥ ಕಥಾಪ್ಯನ್ಯಾಭ್ಯೋ ದೇವತಾಭ್ಯಃ ಪ್ರೋಕ್ಷತೀತಿ ಸರ್ವಾ ವೈ ದೇವತಾ ಅಶ್ವಮೇಧೇಽನ್ವಾಯತ್ತಾ ಯದಾಹ ಸರ್ವೇಭ್ಯಸ್ತ್ವಾ ದೇವೇಭ್ಯಃ ಪ್ರೋಕ್ಷಾಮೀತಿ ಸರ್ವಾ ಏವಾಸ್ಮಿನ್ದೇವತಾ ಅನ್ವಾಯಾತಯತಿ ತಸ್ಮಾದಶ್ವಮೇಧೇ ಸರ್ವಾ ದೇವತಾ ಅನ್ವಾಯತ್ತಾಃ ॥**

(ಶ. ಬ್ರಾ. ೧೩-೧-೨-೯)

ಮೇಧ್ಯಾಶ್ವವು ಮುಖ್ಯವಾಗಿ **ಪ್ರಜಾಪತಿಗೆ** ಮಾತ್ರ ಸಂಬಂಧಿಸಿದುದರಿಂದ ಈ ಯಜ್ಞಭಾಗವೆಲ್ಲವೂ ಆ ದೇವತೆಗೆ ಮಾತ್ರ ಸೇರತಕ್ಕದ್ದು. ಹೀಗಿರುವಲ್ಲಿ ಇತರ ದೇವತೆಗಳನ್ನೂ ಉದ್ದೇಶಿಸಿ ಈ ಅಶ್ವಕ್ಕೆ ಪ್ರೋಕ್ಷಣವೇತಕ್ಕೆ ಎಂಬ ಪ್ರಶ್ನೆಗೆ ಉತ್ತರವಾಗಿ ಅಶ್ವಮೇಧದಲ್ಲಿ ಎಲ್ಲಾ ದೇವತೆಗಳಿಗೂ ಸಂಬಂಧವಿರುವುದರಿಂದ ಎಲ್ಲರನ್ನೂ ಉದ್ದೇಶಿಸಲಾಗುತ್ತದೆ ಎಂದು ಉತ್ತರವನ್ನು ಹೇಳಿದೆ. ಆ ನಿಯಮದಂತೆ ಪ್ರಕೃತದಲ್ಲಿ ವರ್ಣಿತವಾಗಿರುವುದೂ ಪುರೋಡಾಶರೂಪದಲ್ಲಿರುವುದೂ ಆದ ಅಜರೂಪವಾದ ಅನ್ನವೂ ಸಹ ವಿಶ್ವದೇವ್ಯವಾಗಿದೆ.

**ಪುರೋಳಾ (ಡಾ)ಶಂ—ಪುರಸ್ತಾದ್ದಾತವ್ಯಂ** । ಪೂರ್ವಭಾವಿಯಾಗಿ ಅರ್ಪಿಸತಕ್ಕದ್ದು.

**ಸ ವಾ ಏಭ್ಯಸ್ತತ್ಪುರೋಽದಾಶಯತ್ । ಯ ಏಭ್ಯೋ ಯಜ್ಞಂ ಪ್ರಾರೋಚಯತ್ತಸ್ಮಾತ್ಪುರೋದಾಶಃ ಪುರೋದಾಶೋ ಹ ವೈ ನಾಮೈತದ್ಯತ್ಪುರೋಡಾಶ ಇತಿ ॥**

(ಶ. ಬ್ರಾ. ೧-೬-೨-೫)

ಯಜ್ಞವನ್ನು ಆಕರ್ಷಕವಾಗಿಯೂ ಯಜ್ಞಭಾಗವನ್ನು ರುಚಿಕರವಾಗಿಯೂ ಮಾಡತಕ್ಕ ಪೂರ್ವಭಾವಿಯಾದ ಅರ್ಪಣೆಗೆ ಪುರೋಡಾಶವೆಂಬ ಹೆಸರು. ಇಲ್ಲಿ ಅಶ್ವಾಹುತಿಗೆ ಪೂರ್ವಭಾವಿಯಾದುದು ಅಜಾಹುತಿ. ಅದು ಪುರೋಡಾಶವಾಗಿದೆ

**ವಾಜಿನಾ, ಅರ್ವತಾ—ವಾಜೀ, ಅರ್ವಾ** ಎಂಬ ಎರಡು ಶಬ್ದಗಳೂ ಸಹ ಅಶ್ವನಾಮಗಳಲ್ಲಿ ಪಠಿತವಾಗಿವೆ (ನಿ ೨-೨೭). ನಿರುಕ್ತಕಾರರು ದಧಿಕ್ರಾಃ ಎಂಬ ಅಶ್ವದ ವರ್ಣನೆಯನ್ನು ವಿವರಿಸುವಾಗ,

**ಆ ದಧಿಕ್ರಾಃ ಶವಸಾ ಪಂಚ ಕೃಷ್ಟೀಃ ಸೂರ್ಯ ಇವ ಜ್ಯೋತಿಷಾಪಸ್ತತಾನ ।**
**ಸಹಸ್ರಸಾಃ ಶತಸಾ ವಾಜ್ಯರ್ವಾ ಪೃಣಕ್ತು ಮಧ್ವಾ ಸಮಿಮಾ ವಚಾಂಸಿ ॥**

(ಋ. ಸಂ. ೪-೩೮-೧೦)

ಎಂಬ ಋಕ್ಕನ್ನುದಹರಿಸಿ **ವಾಜೀ ವೇಜನವಾನ್, ಅರ್ವೇರಣವಾನ್, ವೇಗ, ಚಲನ** ಎರಡೂ ಉಳ್ಳದ್ದೆಂದು ವಿವರಿಸಿದ್ದಾರೆ. ಅದರ **ವೀ** ಧಾತುವು (ಓವಿಜೀ ಭಯಚಲನಯೋಃ) ಭಯಾರ್ಥದಲ್ಲಿಯೂ ಚಲನಾರ್ಥದಲ್ಲಿಯೂ

ಇರುವುದರಿಂದ ಅಶ್ವವು ತನ್ನ ವೇಗವಾದ ಗತಿಯಿಂದ (ಶತ್ರುಗಳನ್ನು) ಭಯಪಡಿಸುವುದು ಎಂದು ಬೇಕಾದರೂ ಹೇಳಬಹುದು.

**ತ್ವಷ್ಟಾ ಅಭಿಜಿನ್ವತಿ** —ತ್ವಷ್ಟೃವು ಪ್ರೀತಿಕರವಾಗುವಂತೆ ಎಂದರೆ ಅಪ್ಯಾಯಮಾನವಾಗಿರುವಂತೆ ಮಾಡು ತ್ತಾನೆ, ಎಂದಿರುವಾಗ **ತ್ವಷ್ಟಾ ಸರ್ವಸ್ಯ ಉತ್ಪಾದಕೋ ದೇವಃ** ಎಂದು ವಿವರಿಸಿ ತ್ವಷ್ಟೃದೇವತೆಯೆಂದು ಮೊದಲು ಅರ್ಥಮಾಡಿ ಅನಂತರ **ತೂರ್ಣವ್ಯಾಪಕೋಽಗ್ನಿರ್ವಾ ತ್ವಷ್ಟೃ** ಶಬ್ದಕ್ಕೆ ವೇಗವಾಗಿ ಹರಡಿ ವ್ಯಾಪಿಸುವ ಎಂಬರ್ಥ ವನ್ನುಮಾಡಿ ಅಗ್ನಿಗೆ ವಿಶೇಷಣವನ್ನಾಗಿ ಮಾಡಿರುವುದರಿಂದ **ತ್ವಷ್ಟೃ** ಶಬ್ದಕ್ಕೆ ಅಗ್ನಿಯೆಂದಾದರೂ ಅರ್ಥವಾಗಬಹು ದೆಂದು ಹೇಳಿದ್ದಾರೆ. ಈ ಅರ್ಥವನ್ನು ಸಮರ್ಥಿಸುವುದಕ್ಕೆ,—

**ಆವಿಷ್ಟ್ಯೋ ವರ್ಧತೇ ಚಾರುರಾಸು ಜಿಹ್ಮಾನಾಮೂರ್ಧ್ವಃ ಸ್ವಯಶಾ ಉಪಸ್ಥೇ।**
**ಉಭೇ ತ್ವಷ್ಟುರ್ಬಿಭ್ಯತುರ್ಜಾಯಮಾನಾತ್ ಪ್ರತೀಚೀ ಸಿಂಹಂ ಪ್ರತಿ ಜೋಷಯೇತೇ ॥**

(ಋ. ಸಂ. ೧-೯೫-೫)

ಎಂಬ ಋಕ್ಕನ್ನುದಹರಿಸಿ ಅಲ್ಲಿ **ತ್ವಷ್ಟುರ್ಬಿಭ್ಯತುಃ** ಎಂಬ ವಾಕ್ಯದಲ್ಲಿ **ತ್ವಷ್ಟೃ** ಶಬ್ದವನ್ನು ಅಗ್ನಿಪರ್ಯಾಯವಾಗಿ ಉಪಯೋಗಿಸಿದೆಯೆಂದು ಸಾಯಣರು ವಿವರಿಸಿದ್ದಾರೆ. **ಅರಣೀ ಇತಿ ವಾ** (ನಿ. ೮. ೧೫) **ಇತಿ ಯಾಸ್ಕೇನ ಬಿಭ್ಯತುರಿತ್ಯುಕ್ತತ್ವಾತ್ ಅರಣಿಸಂಬಂಧಃ ಅಗ್ನೇರೇವೇತಿ ಗಮ್ಯತೇ ।** ತ್ವಷ್ಟೃಶಬ್ದದ ನಿರ್ವಚನವನ್ನು ಮಾಡುವಾಗ ಯಾಸ್ಕರು ಅಗ್ನಿಪರ್ಯಾಯವಾಗಿಯೂ ನಿರ್ವಚನವನ್ನು ತೋರಿಸಿದ್ದಾರೆಂದು ಸಾಯಣರು ವಿವರಿಸಿದ್ದಾರೆ.

**ಜಿನ್ವತಿ—ಜಿನ್ವತಿಃ ಪ್ರೀತಿಕರ್ಮಾ ।** ತೃಪ್ತಿಯನ್ನುಂಟುಮಾಡು ಎಂಬರ್ಥದಲ್ಲಿ ಈ ಪದದ ಪ್ರಯೋಗವಿದೆ.

**ಭೂಮಿಂ ಪರ್ಜನ್ಯಾ ಜಿನ್ವಂತಿ ದಿವಂ ಜಿನ್ವಂತ್ಯಗ್ನಯಃ ।**

(ಋ. ಸಂ. ೧-೧೬೪-೫೧)

ಪರ್ಜನ್ಯನು ಅನ್ನಸಂಪತ್ತನ್ನೊದಗಿಸಿ ಭೂಮಿಯನ್ನು ತೃಪ್ತಿಯನ್ನುಂಟುಮಾಡುವಂತೆಯೂ ಅಗ್ನಿಗಳು ಹವಿಸ್ಸಿನರೂಪದ ಅನ್ನವನ್ನೊದಗಿಸಿ ದೇವತೆಗಳನ್ನು ತೃಪ್ತಿಪಡಿಸುವಂತೆಯೂ ಎಂದಿರುವಂತೆ ಅದೇ ವಿಧವಾದ ತೃಪ್ತಿಯನ್ನು ಸೂಚಿಸುವ ಸಂದರ್ಭದಲ್ಲಿ ಈ ಪದದ ಪ್ರಯೋಗವಿದೆ.

॥ ವ್ಯಾಕರಣಪ್ರಕ್ರಿಯಾ ॥

**ಭಾಗಃ**—ಭೋ ಭೇದನೇ ಧಾತು. **ಭಾಪೂಖಡಿಭ್ಯಃಕಿತ್** (ಉ ಸೂ. ೧-೧೨೧) ಎಂಬುದರಿಂದ ಗನ್ ಪ್ರತ್ಯಯ. **ಆದೇಶಉಪದೇಶೇಽಶಿತಿ** (ಪಾ. ಸೂ. ೬-೧-೪೫) ಎಂಬುದರಿಂದ ಧಾತುವಿಗೆ ಆತ್ವ. **ಞ್ನಿತ್ಯಾದಿ-ರ್ನಿತ್ಯಮ್** (ಪಾ. ಸೂ. ೬-೧-೧೯೭) ಎಂಬುದರಿಂದ ಆದ್ಯುದಾತ್ತಸ್ವರ ಬರುತ್ತದೆ.

**ಭಾಗಃ**—ಭಜ ಸೇವಾಯಾಮ್. ಘಞ್ ಪ್ರತ್ಯಯ. **ಅತಉಪಧಾಯಾಃ** (ಪಾ. ಸೂ. ೭-೨-೧೧೬) ಎಂಬುದರಿಂದ ಆದಿವೃದ್ಧಿ. **ಚಜೋಃ ಕುಘಿಣ್ಣ್ಯತೋಃ** (ಪಾ. ಸೂ, ೭-೩-೫೨) ಎಂಬುದರಿಂದ ಕುತ್ವ. **ಕರ್ಷಾ-ತ್ವತಃ**—(ಪಾ. ಸೂ ೬-೧-೧೫೯) ಎಂಬುದರಿಂದ ಅಂತೋದಾತ್ತಸ್ವರ ಬರುತ್ತದೆ.

**ನೀಯತೇ—ಣೀಞ್ ಪ್ರಾಪಣೇ** ಧಾತು. ಕರ್ಮಣಿಯಲ್ಲಿ ಲಟ್. ಪ್ರಥಮಪುರುಷಏಕವಚನಾಂತರೂಪ. ತಿಙಂತನಿಘಾತಸ್ವರ ಬರುತ್ತದೆ

**ವಿಶ್ವದೇವ್ಯಃ**—ದೇವಾದ್ಯೋರ್ಭಾಗೋ ದೇವ್ಯಃ ಛಂದಸಿ ಚ (ಪಾ. ಸೂ. ೫-೧-೬೭) ಎಂಬುದರಿಂದ ಯ ಪ್ರತ್ಯಯ. ವಿಶ್ವೇ ಸರ್ವೇ ದೇವಾಃ ಯಸ್ಮಿನ್. ಸಃ. ಸಂಜ್ಞಾ ತೋರದಿದ್ದರೂ ವ್ಯತ್ಯಯದಿಂದ **ಬಹುವ್ರೀಹೌ ವಿಶ್ವಂ ಸಂಜ್ಞಾಯಾಮ್** (ಪಾ. ಸೂ. ೬-೨-೧೦೬) ಎಂಬುದರಿಂದ ಪೂರ್ವಪದಾಂತೋದಾತ್ತಸ್ವರ ಬರುತ್ತದೆ.

**ಸೌಶ್ರವಸಾಯ**—ಸು ಶ್ರವಸಃ ಇದಮ್. ಸೌಶ್ರವಸಮ್. **ತಸ್ಯೇದಮ್** ಎಂಬುದರಿಂದ ಅಣ್ ಪ್ರತ್ಯಯ. **ತದ್ಧಿತೇಷ್ವಚಾಮಾದೇಃ** ಎಂಬುದರಿಂದ ಆದಿವೃದ್ಧಿ. ಪ್ರತ್ಯಯಸ್ವರದಿಂದ ಅಂತೋದಾತ್ತವಾಗುತ್ತದೆ.

**ಜಿನ್ವತಿ**—ಜಿವಿ ಪ್ರೀಣನೇ ಧಾತು. **ಇದಿತೋ ನುಮ್ ಧಾತೋಃ** (ಪಾ. ಸೂ. ೭-೧-೫೮) ಎಂಬುದರಿಂದ ನುಮಾಗಮ ಲಟ್ ಪ್ರಥಮಪುರುಷಏಕವಚನಾಂತರೂಪ. ತಿಙಂತನಿಘಾತಸ್ವರ ಬರುತ್ತದೆ. ॥ ೩ ॥

———— :0: ————

ಸಂಹಿತಾಪಾಠಃ

ಯದ್ಧವಿಷ್ಯಮೃತುಶೋ ದೇವಯಾನಂ ತ್ರಿರ್ಮಾನುಷಾಃ ಪರ್ಯಶ್ವಂ ನಯಂತಿ ।
ಅತ್ರಾ ಪೂಷ್ಣಃ ಪ್ರಥಮೋ ಭಾಗ ಏತಿ ಯಜ್ಞಂ ದೇವೇಭ್ಯಃ ಪ್ರತಿವೇದಯನ್ನಜಃ ॥ ೪ ॥

ಪದಪಾಠಃ

ಯತ್ । ಹವಿಷ್ಯಂ । ಋತುಽಶಃ । ದೇವಽಯಾನಂ । ತ್ರಿಃ । ಮಾನುಷಾಃ । ಪರಿ । ಅಶ್ವಂ । ನಯಂತಿ ।
ಅತ್ರ । ಪೂಷ್ಣಃ । ಪ್ರಥಮಃ । ಭಾಗಃ । ಏತಿ । ಯಜ್ಞಂ । ದೇವೇಭ್ಯಃ । ಪ್ರತಿಽವೇದಯನ್ । ಅಜಃ ॥ ೪ ॥

ಸಾಯಣಭಾಷ್ಯಂ

ಹವಿಷ್ಯಂ ಹವಿರ್ಯೋಗ್ಯಂ ದೇವಯಾನಂ ದೇವಾನಾಂ ಪ್ರಾಪಣೀಯಮಶ್ವಂ ಯದ್ಯದಾ ಮಾನುಷಾ ಋತ್ವಿಜ ಋತುಶ ಋತಾವೃತೌ ಕಾಲೇ ಕಾಲೇ ತ್ರಿಃ ಪರಿಣಯಂತಿ । ಪರ್ಯಗ್ನಿಕುರ್ವಂತೀತ್ಯರ್ಥಃ । ಅತ್ರಾಸ್ಮಿನ್ಸಮಯೇ ॥ ಋಚಿ ತುನುಘೇತಿ ದೀರ್ಘಃ ॥ ಪೂಷ್ಣಃ ಪೋಷಕಸ್ಯಾಗ್ನೇರ್ಭಾಗೋಽಜಃ ಪ್ರಥಮ ಏತಿ । ಪುರೋಗಾಮೀ ಸನ್ ಗಚ್ಛತಿ । ಕಿಂ ಕುರ್ವನ್ । ಯಜ್ಞಂ ದೇವೇಭ್ಯಃ ಪ್ರತಿವೇದಯನ್ ಪ್ರಖ್ಯಾಪಯನ್ ॥

ಪ್ರತಿಪದಾರ್ಥ

**ಯತ್**—ಯಾವಾಗ । **ಮಾನುಷಾಃ**—ಋತ್ವಿಕ್ಕುಗಳು । **ಹವಿಷ್ಯಂ**—ಹವಿಸ್ಸಿಗೆ (ಅರ್ಪಣೆಗೆ) ಯೋಗ್ಯ ವಾದುದೂ । **ದೇವಯಾನಂ**—ದೇವತೆಗಳಿಗೆ ಸೇರತಕ್ಕದ್ದೂ ಆದ । **ಅಶ್ವಂ**—ಅಶ್ವವನ್ನು । **ಋತುಶಃ**—ಯಜ್ಞಕಾಲ ಗಳಲ್ಲಿ । **ತ್ರಿಃ**—ಮೂರು ಸಲ । **ಪರಿ**—(ಅಗ್ನಿಯ) ಸುತ್ತಲೂ । **ನಯಂತಿ**—ಕರೆದುಕೊಂಡು ಹೋಗುತ್ತಾರೆಯೋ (ಪ್ರದಕ್ಷಿಣವನ್ನು ಮಾಡಿಸುತ್ತಾರೆಯೋ) । **ಅತ್ರ**—ಈ ಕಾಲದಲ್ಲಿ । **ಪೂಷ್ಣಃ**—ಪೋಷಕನಾದ ಅಗ್ನಿಯ । **ಪ್ರಥಮಃ ಭಾಗಃ**—ಮೊದಲನೆಯ ಅಂಶವಾದ । **ಅಜಃ**—ಅಜವು । **ದೇವೇಭ್ಯಃ**—ದೇವತೆಗಳಿಗೆ । **ಯಜ್ಞಂ**—ಯಜ್ಞವನ್ನು । **ಪ್ರತಿವೇದಯನ್**—ಪ್ರಕಟಿಸುತ್ತಾ । **ಏತಿ**—ಪುರೋಗಾಮಿಯಾಗಿ ಬರುತ್ತದೆ ।

॥ ಭಾವಾರ್ಥ ॥

ಹವಿಸ್ಸಿಗೆ ಯೋಗ್ಯವಾದುದೂ, ದೇವತೆಗಳಿಗೆ ಸೇರತಕ್ಕದ್ದೂ ಆದ ಅಶ್ವವನ್ನು ಯಜ್ಞಕಾಲಗಳಲ್ಲಿ ಋತ್ವಿಕ್ಕು ಗಳು ಮೂರು ಸಲ ಅಗ್ನಿಯ ಸುತ್ತಲೂ ಸುತ್ತಿಸುತ್ತಾರೆ. ಆ ಕಾಲದಲ್ಲಿ ಅಗ್ನಿಗೆ ಮೊದಲು ಸೇರಬೇಕಾದ ಅಜವು ದೇವತೆಗಳಿಗೆ ಯಜ್ಞವನ್ನು ಪ್ರಕಟಿಸುತ್ತಾ ಪುರೋಗಾಮಿಯಾಗಿ ಮುಂದೆ ಬರುತ್ತದೆ.

## English Translation

When the priests at the season (of the ceremony) lead forth the horse, the offering devoted to the gods, thrice round (the sacrifical fire) ; then the goat, the portion of Pushan, goes first, announcing the sacrifice to the gods.

ವಿಶೇಷವಿಷಯಗಳು

**ಋತುಶಃ**—**ಋತು** ಶಬ್ದವು ಇಲ್ಲಿ ಕಾಲವಾಚಕವಾಗಿದೆ. **ಮಾನುಷಾಃ**-ಎಂಬುದು ಋತ್ವಿಕ್ಕುಗಳಿಗೆ ಪರ್ಯಾಯಪದವಾಗಿದೆ. **ಋತುಶಃ** ಎಂಬ ಪದದ ಪ್ರಯೋಗವಿರುವೆಡೆಗಳಲ್ಲೆಲ್ಲಾ ನಿಯಮಿತವಾದ ಕಾಲಕ್ಕೆ ಸರಿ ಯಾಗಿ ಎಂದೇ ಅರ್ಥವಾಗುತ್ತದೆ. ಕೆಲವೆಡೆಗಳಲ್ಲಿ ಸಾಯಣರು ನಿರುಕ್ತಕ್ಕೆ ವಿರೋಧವಾಗಿ ಅರ್ಥಮಾಡಿರುತ್ತಾರೆ. ಉದಾಹರಣೆಗೆ—

**ಅಯೂಯಾ ಧೃಷ್ಣೋ ಅಭಿಗೂರ್ಯಾ ತ್ವಂ ನೇಷ್ಟ್ರಾತ್ಸೋಮಂ ದ್ರವಿಣೋದಃ ಪಿಬ ಋತುಭಿಃ ।**

(ಋ. ಸಂ. ೨-೩೭-೩)

ಎಂಬ ಋಕ್ಕಿನಲ್ಲಿ **ಋತುಭಿಃ** ಎಂಬುದಕ್ಕೆ ಸಕಾಲಕ್ಕೆ ಸರಿಯಾಗಿ ಎಂದು ನಿರುಕ್ತಕಾರರು ವಿವರಿಸಿದ್ದರೆ (ನಿ. ೮-೩) ಸಾಯಣರು ಈ ಪದಕ್ಕೆ **ಸಂಜ್ಞಕೈಃ ಸಹ** ಎಂದರ್ಥಮಾಡಿದ್ದಾರೆ.

**ಯತ್ಪಾಕತ್ರಾ ಮನಸಾ ದೀನದಕ್ಷಾ ನ ಯಜ್ಞಸ್ಯ ಮನ್ವತೇ ಮರ್ತ್ಯಾಸಃ ।**

**ಅಗ್ನಿಷ್ಟದ್ಧೋತಾ ಕ್ರತುವಿದ್ವಿಜಾನನ್ಯಜಿಷ್ಠೋ ದೇವಾಁ ಋತುಶೋ ಯಜಾತಿ ।**

(ಋ. ಸಂ ೧೦-೨-೪)

ಎಂಬ ಋಕ್ಕಿನಲ್ಲಿ **ಮರ್ತ್ಯಾಸಃ, ಋತುಶಃ** ಎಂಬ ಎರಡು ಪದಗಳೂ ಒಟ್ಟಿಗೆ ಉಪಯೋಗಿಸಲ್ಪಟ್ಟಿವೆ. ಇಲ್ಲಿ **ಮರ್ತ್ಯಾಸಃ** ಎಂದರೆ **ಮನುಷ್ಯಾ ಋತ್ವಿಜಃ** ಎಂದೂ **ಋತುಶಃ** ಎಂದರೆ **ಸ್ವೇ ಸ್ವೇ ಯಾಗಯೋಗ್ಯೇ ಕಾಲೇ** ಎಂದೂ ಅರ್ಥವಾಗುತ್ತದೆ. ಅದರಂತೆಯೇ ಎಲ್ಲಾ ಕಡೆಯೂ ಅರ್ಥಮಾಡಬೇಕು. ಪ್ರಕೃತವಾದ ಋಕ್ಕಿನಲ್ಲಿ ಅಶ್ವಮೇಧಯಾಗದ ನಿರ್ದಿಷ್ಟವಾದ ಕಾಲಗಳಲ್ಲಿ ಎಂದರ್ಥ. ಎಂದರೆ ದೇವತೆಗಳಿಗೆ ಹವಿಸ್ಸನ್ನು ಅರ್ಪಿಸುವುದಕ್ಕೆ ಮೊದಲು ಹವೀರೂಪವಾದ ಪಶುವನ್ನು ಅಗ್ನಿಯ ಸುತ್ತಲೂ ಮೂರುಸಲ ಸುತ್ತಿಸುವುದು ಪರ್ಯಗ್ನಿಕರಣವೆಂಬ ವಿಧಿಯು. ಇದನ್ನು ಮಾಡುವ ಕಾಲದಲ್ಲಿ ಎಂದು ಇಲ್ಲಿ ಅರ್ಥಮಾಡಬೇಕು. ಇದೇ ವರ್ಣನೆಯು,

**ಕೃಷ್ಣಗ್ರೀವಮಾಗ್ನೇಯಗ್‌ಂ ರರಾಟೇ ಪುರಸ್ತಾತ್ । ಪೂರ್ವಾಗ್ನಿಮೇವ ತಂ ಕುರುತೇ ॥**

(ಶ. ಬ್ರಾ. ೧೩-೨-೨-೩)

ಕೃಷ್ಣಗ್ರೀವವಾದುದೂ, ಅಗ್ನ್ಯಾಹುತಿಗೆ ಸಿದ್ಧವಾದುದೂ ಆದ ಅಜವು ಅಶ್ವದ ಮುಂಭಾಗದಲ್ಲಿ ಅಗ್ನಿಯ ಸುತ್ತಲೂ ಹೋಗುತ್ತದೆ ಎಂದುಅಶ್ವದ ಮುಂಭಾಗದಲ್ಲಿ ಅಜವೂ ಸಹ ಅಗ್ನಿಪ್ರದಕ್ಷಿಣವನ್ನು ಮಾಡುತ್ತಾ ಯಜ್ಞವು ನೆರವೇರುತ್ತದೆಂದು ದೇವತೆಗಳಿಗೆ ತಿಳಿಸುತ್ತದೆ ಎಂಬುದನ್ನು ಸೂಚಿಸುತ್ತದೆ.

**ಪೂಷ್ಣಃ** – ಪೂಷನ್ ಎಂಬುದು ಇಲ್ಲಿ ಅಗ್ನಿಪರ್ಯಾಯವಾದ ಹೆಸರಾಗಿದೆ. ದ್ವಾದಶಾದಿತ್ಯರಲ್ಲಿ ಒಬ್ಬನೆಂದು ಪ್ರಸಿದ್ಧವಾದ ಹೆಸರಾಗಿದೆ. ಎರಡರ್ಥದಲ್ಲೂ ಸಹ ಒಂದೇ ನಿರ್ವಚನವಿರುತ್ತದೆ. ಈ ನಿರ್ವಚನದಿಂದಲೇ ಅಗ್ನಿಯೆಂದಾದರೂ ಅರ್ಥಮಾಡಬಹುದು ಅಥವಾ ಆದಿತ್ಯನೆಂದು ಬೇಕಾದರೂ ಅರ್ಥಮಾಡಬಹುದು. ಇಲ್ಲಿ ಅಗ್ನಿಯು.

**ಪೂಷಾ ಯದ್ರಶ್ಮಿಪೋಷಂ ಪುಷ್ಯತಿ ತತ್ ಪೂಷಾ ಭವತಿ ।**

(ನಿ. ೧೨-೧೬)

ರಶ್ಮಿಗಳಿಂದ ಪೋಷಿಸುವವನಾದ್ದರಿಂದ **ಪೂಷಾ** ಎಂಬ ಹೆಸರು ಎಂದು ನಿರುಕ್ತಕಾರರ ನಿರ್ವಚನವಿದೆ. ಶತಪಥ ಬ್ರಾಹ್ಮಣದಲ್ಲಿಯೂ ಸಹ,

**ಇಯಂ ವೈ ಪೂಷಾ ಪೂಷೇಯಂ ಹೀದಂ ಸರ್ವಂ ಪುಷ್ಯತಿ ಯದಿದಂ ಕಿಂಚ ॥**

(ಶ. ಬ್ರಾ. ೧೪-೪-೨-೨೫)

ಈ ದೇವತೆಯು ಎಲ್ಲವನ್ನೂ ಪೋಷಿಸುವವನಾದ್ದರಿಂದ **ಪೂಷನೆಂದು** ಕರೆಯಲ್ಪಡುವನು ಎಂದು **ಹೇಳಿದೆ. ಈ ವಿಧ**ವಾದ ಅರ್ಥವು ಆದಿತ್ಯಪರವಾಗಿಯೂ ಆಗಬಹುದು, ಅಥವಾ ಹವ್ಯವಾಹನನಾಗಿ, ದೇವಮಾನವಾದಿಸಕಲರ ಪೋಷಣೆಗೂ ಕಾರಣನಾದುದರಿಂದ ಅಗ್ನಿಪರವಾಗಿಯೂ ಆಗಬಹುದು. ಅಥವಾ ಆದಿತ್ಯನೇ ಅಗ್ನಿಯ ರೂಪಾಂತರಗಳಲ್ಲಿ ಒಂದು ಎಂದರ್ಥಮಾಡಿದರೆ ಆಗ ಕ್ಲೇಶವೇ ಇರುವುದಿಲ್ಲ. ಇದೇ ಅರ್ಥವನ್ನು,

**ಪುಷ್ಯನ್ ಕ್ಷಿತಿಂ ಪೋಷಯತಿ ಪ್ರಣುದನ್ ರಶ್ಮಿಭಿಸ್ತಮಃ ।**
**ತೇನೈನಮಸ್ತೌತ್ಪೂಷೇತಿ ಭರದ್ವಾಜಸ್ತು ಪಂಚಭಿಃ ॥**

(ಬೃ. ದೇ. ೨-೬-೩)

ಕತ್ತಲನ್ನು ನಾಶಮಾಡುತ್ತಾ ಪೃಥ್ವಿಯು ವೃದ್ಧಿಯನ್ನು ಹೊಂದುವಂತೆ ಅದನ್ನು ಪೋಷಿಸುವುದರಿಂದ **ಪೂಷಾ** ಎಂಬ ಹೆಸರು ಎಂಬ ಬೃಹದ್ದೇವತಾವಾಕ್ಯವೂ ಸೂಚಿಸುತ್ತದೆ. ಅಲ್ಲದೇ,

**ತ್ವಂ ವಾತೈರರುಣೈರ್ಯಾಸಿ ಶಂಗಯಸ್ತ್ವಂ ಪೂಷಾ ವಿಧತಃ ಪಾಸಿ ನು ತ್ಮನಾ ।**
(ಋ. ಸಂ. ೨-೧-೬)

**ತ್ವಮಗ್ನೇ ದ್ರವಿಣೋದಾ ಅರಂಕೃತೇ ತ್ವಂ ದೇವಃ ಸವಿತಾ ರತ್ನಧಾ ಅಸಿ ॥**
**ತ್ವಂ ಭಗೋ ನೃಪತೇ ವಸ್ವ ಈಶಿಷೇ ತ್ವಂ ಪಾಯುರ್ದಮೇ ಯಸ್ತೇಽವಿಧತ್ ॥**
(ಋ. ಸಂ. ೨-೧-೭)

ಇತ್ಯಾದಿ ಋಕ್ಕುಗಳಲ್ಲಿ **ಪೂಷ**, **ಭಗ**, **ಸವಿತೃ** ಇವರುಗಳೊಂದಿಗೆಲ್ಲಾ ತಾದಾತ್ಮ್ಯವನ್ನು ಹೇಳಿರುವುದರಿಂದ ದ್ವಾದಶಾದಿತ್ಯರು ಅಗ್ನಿಯ ರೂಪಾಂತರಗಳು. ಆದುದರಿಂದ ಇಲ್ಲಿ ನಿರುಕ್ತನಿರ್ವಚನದಂತೆಯೂ ಅಗ್ನಿಯೆಂಬರ್ಥವೇ ಆಗುತ್ತದೆ. ಅಥವಾ,

**ಅಜಾ ಅನ್ಯಸ್ಯ ವಹ್ನಯೋ ಹರೀ ಅನ್ಯಸ್ಯ ಸಂಭೃತಾ । ತಾಭ್ಯಾಂ ವೃತ್ರಾಣಿ ಜಿಘ್ನತೇ ॥**
(ಋ. ಸಂ. ೬-೫೭-೩)

**ಪೂಷನಿಗೆ** ಅಜವು ಪ್ರಿಯವಾದ ಹವಿಸ್ಸಾದುದರಿಂದ ಇಲ್ಲಿ ಅರ್ಪಿಸತಕ್ಕ ಅಜವು ರೂಢವಾಗಿರತಕ್ಕ **ಪೂಷ** ದೇವನನ್ನೇ ಉದ್ದೇಶಿಸಿರಬಹುದೆಂದೂ ಒಂದು ಮತ.

### ವ್ಯಾಕರಣಪ್ರಕ್ರಿಯಾ

**ಹವಿಷ್ಯಮ್** -- ಹವಿರ್ಯೋಗ್ಯಮ್ ಹವಿಷ್ಯಮ್. ಯತ್ ಪ್ರತ್ಯಯ- **ತಿತ್ಸ್ವರಿತಮ್** (ಪಾ. ಸೂ. ೬-೧-೧೮೫) ಎಂಬುದರಿಂದ ಸ್ವರಿತಸ್ವರ ಬರುತ್ತದೆ.

**ಋತುಶಃ— ಸಂಖ್ಯೈಕವಚನಾಚ್ಚ ವೀಪ್ಸಾಯಾಮ್**(ಪಾ ಸೂ. ೫-೪-೪೩) ಎಂಬುದರಿಂದ ಶಸ್ ಪ್ರತ್ಯಯ. 'ಶಸ್ಪ್ರಭೃತಯಃ ಪ್ರಾಕ್ ಸಮಾಸಾಂತೇಭ್ಯಃ' ಎಂದು ಪರಿಗಣನಮಾಡಿರುವುದರಿಂದ ಅವ್ಯಯಸಂಜ್ಞಾ ಬರುತ್ತದೆ.

**ದೇವಯಾನಮ್**— ಯಾ ಪ್ರಾಪಣೇ ಧಾತು. ಲ್ಯುಟ್ ಪ್ರತ್ಯಯ. ದೇವಾನಾಂ ಯಾನಮ್. ಕೃದುತ್ತರಪದಪ್ರಕೃತಿಸ್ವರ ಬರುತ್ತದೆ.

**ತ್ರಿಃ— ದ್ವಿತ್ರಿಚತುರ್ಭ್ಯಃಸುಚ್** (ಪಾ. ಸೂ. ೫-೪-೧೮) ಎಂಬುದರಿಂದ ಆವೃತ್ತಿಯಲ್ಲಿ ಸುಚ್ ಪ್ರತ್ಯಯ. ಸಕಾರಕ್ಕೆ ರುತ್ವ ವಿಸರ್ಗ.

**ನಯಂತಿ**— ಣೀಞ್ ಪ್ರಾಪಣೇ ಧಾತು. **ಲಡಂತರೂಪ**. ಯದ್ಯೋಗವಿರುವುದರಿಂದ ನಿಘಾತಸ್ವರ ಬರುವುದಿಲ್ಲ. ಧಾತುಸ್ವರ ಉಳಿಯುತ್ತದೆ.

**ಅತ್ರಾ— ಋಚಿತುನುಘ**— (ಪಾ. ಸೂ. ೬-೩-೧೩೩) ಎಂಬುದರಿಂದ ಸಂಹಿತಾದಲ್ಲಿ ದೀರ್ಘ ಬರುತ್ತದೆ

**ಪ್ರತಿವೇದಯನ್**— ವಿದ ಜ್ಞಾನೇ ಧಾತು. **ಹೇತುಮತಿ ಚ** ಎಂಬುದರಿಂದ ಣಿಚ್. **ಪುಗಂತಲಘೂಪಧಸ್ಯಚ** (ಪಾ ಸೂ. ೭-೩-೮೬) ಎಂಬುದರಿಂದ ಲಘೂಪಧಗುಣ. ಣಿಜಂತದ ಮೇಲೆ ಶತೃ ಪ್ರತ್ಯಯ. ಶಪ್ ವಿಕರಣ ಅದನ್ನು ನಿಮಿತ್ತೀಕರಿಸಿ ಣಿಚಿಗೆ ಗುಣ, ಅಯಾದೇಶ. ಣಿಚ್ ಸ್ವರ ಬರುತ್ತದೆ. ಪ್ರಾದಿಸಮಾಸವಾದಾಗ ಕೃದುತ್ತರಪದಪ್ರಕೃತಿಸ್ವರ ಬರುತ್ತದೆ. ॥ ೪ ॥

———:o:———

ಸಂಹಿತಾಪಾಠಃ

ಹೋತಾಧ್ವರ್ಯುರಾವಯಾ ಅಗ್ನಿಮಿಂಧೋ ಗ್ರಾವಗ್ರಾಭ ಉತ ಶಂಸ್ತಾ ಸುವಿಪ್ರಃ ।

ತೇನ ಯಜ್ಞೇನ ಸ್ವರಂಕೃತೇನ ಸ್ವಿಷ್ಟೇನ ವಕ್ಷಣಾ ಆ ಪೃಣಧ್ವಂ ॥ ೫ ॥

। ಪದಪಾಠಃ ।

ಹೋತಾ । ಅಧ್ವರ್ಯುಃ । ಆಽವಯಾಃ । ಅಗ್ನಿಂಽಇಂಧಃ । ಗ್ರಾವಽಗ್ರಾಭಃ । ಉತ । ಶಂಸ್ತಾ । ಸುಽವಿಪ್ರಃ ।

ತೇನ । ಯಜ್ಞೇನ । ಸುಽಅರಂಕೃತೇನ । ಸುಽಇಷ್ಟೇನ । ವಕ್ಷಣಾಃ । ಆ । ಪೃಣಧ್ವಂ ॥ ೫ ॥

॥ ಸಾಯಣಭಾಷ್ಯಂ ॥

ಹೋತಾ ದೇವಾನಾಮಾಹ್ವಾತೈತನ್ನಾಮಕ ಋತ್ವಿಕ್ ಅಧ್ವರ್ಯುರಧ್ವರಯುರಧ್ವರಸ್ಯ ನೇತಾ ಸೋಽಸ್ಯಾವಯಾ ಆಭಿಮುಖ್ಯೇನ ಹವಿಷಾಂ ಗಮಯಿತಾ । ಅಧ್ವರ್ಯೋರ್ವಿಶೇಷಣಮೇತತ್ ॥ ಆಙ್-ಪೂರ್ವಾದ್ವೇತೇರಸುನ್ । ಪೂರ್ವಪದಪ್ರಕೃತಿಸ್ವರತ್ವಂ ಚ ॥ ಯದ್ವಾ । ಆಭಿಮುಖ್ಯೇನಾವಯಷ್ಟಾ ಪ್ರತಿಪ್ರಸ್ಥಾತೋಚ್ಯತೇ ॥ ಅವೇ ಯಜಃ । ಪಾ ೩-೨-೭೨ । ಇತಿ ಣ್ವಿನ್। ಅವಾಪ್ಯೋರುಪಸರ್ಗಯೋರಿತ್ಯ-ಲ್ಲೋಪಃ ॥ ಅಗ್ನಿಮಿಂಧೋಽಗ್ನೀತ್ ॥ ಭ್ರಾಷ್ಟ್ರಾಗ್ನ್ಯೋರಿಂಧೇ । ಪಾ. ೬-೩-೭೦-೬ । ಇತಿ ಮುಮ್ ॥ ಗ್ರಾವಗ್ರಾಭಃ । ಗ್ರಾವ್ಣಃ ಸ್ತುತ್ಯಾ ಗೃಹ್ಣಾತೀತಿ ಗ್ರಾವಸ್ತುತ್ ॥ ಕರ್ಮಣ್ಯಣ್ ॥ ಉತಾಪಿ ಚ ಶಂಸ್ತಾ ಪ್ರಶಾಸ್ತಾ । ಸುವಿಪ್ರ ಇತಿ ಮೇಧಾವಿನಾಮ । ಶೋಭನಮೇಧೋಪೇತೋ ಬ್ರಹ್ಮೋಚ್ಯತೇ । ಬ್ರಹ್ಮಾ ತ್ವೋ ವದತಿ ಜಾತವಿದ್ಯಾಮಿತ್ಯತ್ರ ಬ್ರಹ್ಮೈಕೋ ಜಾತೇ ಜಾತೇ ವಿದ್ಯಾಂ ವದತಿ ಬ್ರಹ್ಮಾ ಸರ್ವವಿದ್ಯಃ ಸರ್ವಂ ವೇದಿತುಮರ್ಹತಿ । ನಿ. ೧-೮ । ಇತ್ಯುಕ್ತತ್ವಾದ್ಬ್ರಹ್ಮೈವ ಸುವಿಪ್ರಶಬ್ದೇನಾಭಿಧೇಯಃ । ಸ ಚಾನುಕ್ತರ್ತ್ವಿಗುಪಲಕ್ಷಕಃ । ಏತೇ ಸರ್ವೇ ತೇನ ಪ್ರಸಿದ್ಧೇನ ಸ್ವರಂಕೃತೇನ ಸುಷ್ಠ್ವರಣೀಯಂ ಕೃತೇನ ಸ್ವಲಂಕೃತೇನ ವೋಚ್ಚಾರಸೌಷ್ಠವಾದಿನಾ ಸುಷ್ಠು ಸಂಪಾದಿತೇನ ಸ್ವಿಷ್ಟೇನ ಸುಷ್ಠ್ವಿಷ್ಟೇನ ಯಜ್ಞೇನ ವಕ್ಷಣಾ ಅಭಿತೋ ಘೃತಕುಲ್ಯಾದೀನ್ ಪ್ರವಹಣಸ್ವಭಾವಾಃ ಪ್ರಸಿದ್ಧಾ ನದೀರ್ವಾ ಪೃಣಧ್ವಂ । ಸರ್ವತಃ ಪೂರಯತ । ಯಜ್ಞಂ ಸಮ್ಯಙ್ನಿರ್ವರ್ತ್ಯ ಫಲಂ ಸಾಧಯತೇತ್ಯರ್ಥಃ ॥

**ಪ್ರತಿಪದಾರ್ಥ**

**ಹೋತಾ**—ದೇವತೆಗಳನ್ನು ಆಹ್ವಾನಿಸುವ ಹೋತೃವೂ । **ಗ್ರಾವಗ್ರಾಭಃ**—ಸೋಮಲತೆಯನ್ನು ಜಜ್ಜುವ ಗ್ರಾವಾಣವೆಂಬ ಕಲ್ಲುಗಳನ್ನು ಸ್ತುತಿಸುವ ಋತ್ವಿಕ್ಕೂ । **ಆವಯಾಃ**—ಅಭಿಮುಖವಾಗಿ ಅಗ್ನಿಗೆ ಹವಿಸ್ಸುಗಳನ್ನು ಅರ್ಪಿಸುವವನೂ । **ಅಗ್ನಿಮಿಂಧಃ**—ಅಗ್ನಿಯನ್ನು ಪ್ರಜ್ವಲಿಸುವಂತೆ ಮಾಡುವ ಅಗ್ನೀಧ್ರನೆಂಬ ಋತ್ವಿಕ್ಕೂ । **ಅಧ್ವರ್ಯುಃ**—ಅಧ್ವರ್ಯುವೆಂಬ ಋತ್ವಿಕ್ಕೂ । **ಉತ**—ಮತ್ತು । **ಶಂಸ್ತಾ**—ಪ್ರಶಾಸ್ತೃವೂ । **ಸುವಿಪ್ರಃ**—ಮೇಧಾವಿಯಾದ ಬ್ರಹ್ಮನೂ । **ತೇನ**—ಪ್ರಸಿದ್ಧವಾದುದೂ । **ಸ್ವರಂಕೃತೇನ**—ಶ್ರೇಷ್ಠವಾಗಿ ಅಲಂಕೃತವಾದದ್ದೂ । **ಸ್ವಿಷ್ಟೇನ**-ಶ್ರೇಷ್ಠವಾಗಿ ಆಹುತ್ಯರ್ಪಣೆಯನ್ನು ಮಾಡಲ್ಪಟ್ಟುದೂ ಆದ । **ಯಜ್ಞೇನ**—ಯಜ್ಞದಿಂದ । **ವಕ್ಷಣಾ**—ಪ್ರವಹಿಸತಕ್ಕ ಘೃತಕುಲ್ಯಾದಿಗಳನ್ನು । **ಆ ಪೃಣಧ್ವಂ**—ಸುತ್ತಲೂ ತುಂಬಿಹರಿಯುವಂತೆ ಮಾಡಲಿ ।

**ಭಾವಾರ್ಥ**

ದೇವತೆಗಳನ್ನು ಆಹ್ವಾನಿಸುವ ಹೋತೃವೂ, ಸೋಮಲತೆಯನ್ನು ಜಜ್ಜುವ ಗ್ರಾವಾಣಗಳನ್ನು ಸ್ತುತಿಸುವ ಋತ್ವಿಕ್ಕೂ ಅಗ್ನಿಗೆ ಅಭಿಮುಖವಾಗಿ ಹವಿಸ್ಸುಗಳನ್ನು ಅರ್ಪಿಸುವವನೂ, ಅಗ್ನಿಯನ್ನು ಪ್ರಜ್ವಲಿಸುವಂತೆ ಮಾಡುವವನೂ ಆದ ಅಧ್ವರ್ಯುವೆಂಬ ಋತ್ವಿಕ್ಕೂ ಮತ್ತು ಪ್ರಶಾಸ್ತೃವೂ, ಮೇಧಾವಿಯಾದ ಬ್ರಹ್ಮನೂ, ಸಹ ಪ್ರಸಿದ್ಧವಾದುದೂ, ಶ್ರೇಷ್ಠವಾಗಿ ಅಲಂಕೃತವಾದುದ್ದೂ, ಶ್ರೇಷ್ಠವಾದ ಆಹುತ್ಯರ್ಪಣೆಯನ್ನು ಮಾಡಲ್ಪಟ್ಟುದೂ ಆದ ಯಜ್ಞದಿಂದ ಪ್ರವಹಿಸತಕ್ಕ ಘೃತಕುಲ್ಯಾದಿಗಳನ್ನು ಸುತ್ತಲೂ ತುಂಬಿ ಹರಿಯುವಂತೆ ಮಾಡಲಿ.

## English Translation

The innoker of the gods, the minister of the rite, the offerer of the oblation, the kindler of the fire, the bruiser of the Soma plant, the director of the ceremony, the sage (superintendent of the whole); do you replenish the rivers by this well-ordered, well conducted, sacrifice.

**॥ ವಿಶೇಷವಿಷಯಗಳು ॥**

ಇದು ಯಜ್ಞಫಲದ ಸ್ವರೂಪವನ್ನು ವರ್ಣಿಸುತ್ತದೆ. ಆದರೆ ಇಲ್ಲಿ ವರ್ಣಿತವಾದ ಫಲಕ್ಕೆ ಸಾಧನವಾದ ಕರ್ತವ್ಯಜ್ಞಾನವನ್ನೂ ತಿಳಿಸುತ್ತದೆ. ಹೋತ್ರಾದಿಗಳು ಅವರವರ ಕರ್ತವ್ಯವನ್ನು ಲೋಪವಿಲ್ಲದೇ ನೆರವೇರಿಸಿದರೆ ಫಲವು ಸಿದ್ಧವೆಂದು ಹೇಳಿದೆ.

**ಹೋತಾ**—ಮುಖ್ಯವಾದ ನಾಲ್ಕು ಋತ್ವಿಕ್ಕುಗಳಲ್ಲಿ ಇವನು ಋಙ್ಮಂತ್ರಗಳನ್ನು ಪಠಿಸಿ ದೇವತೆಗಳಿಗೆ ಆಹ್ವಾನವನ್ನು ಕೊಡತಕ್ಕವನು. ಇವನ ಕರ್ತವ್ಯವನ್ನು ಐತರೇಯಬ್ರಾಹ್ಮಣದಲ್ಲಿ ಈ ರೀತಿಯಲ್ಲಿ ವಿವರಿಸಿದೆ—

> **ತದಾಹುರ್ಯದನ್ಯೋ ಜುಹೋತ್ಯಥ ಯೋಽನು ಚಾಹ ಯಜತಿ ಚ ಕಸ್ಮಾತ್ತಂ ಹೋತೇತ್ಯಾಚಕ್ಷತ ಇತಿ । ಯದ್ವಾವ ಸ ತತ್ರ ಯಥಾಭಾಜನಂ ದೇವತಾ ಅಮುಮಾವಹಾಮುಮಾವಹೇತ್ಯಾವಾಹಯತಿ ತದೇವ ಹೋತುರ್ಹೋತೃತ್ವಂ ಹೋತಾ ಭವತಿ ॥ ಹೋತೇತ್ಯೇನಮಾಚಕ್ಷತೇ ಯ ಏವಂ ವೇದ ।**
>
> (ಐ. ಬ್ರಾ. ೧-೨)

ಅನುವಾಕ್ಯ ಮತ್ತು ಯಾಜ್ಯಮಂತ್ರವನ್ನು ಪಠಿಸುವವನಿಗೆ ಹೋತೃವೆಂದು ಏತಕ್ಕೆ ಕರೆಯುತ್ತಾರೆಂದು ಕೇಳಿದರೆ ದೇವತೆಗಳಿಗೆ ಅವನು ಮಂತ್ರರೂಪವಾದ ಆಹ್ವಾನವನ್ನಿತ್ತು ಅವರವರ ಸ್ಥಾನಗಳಲ್ಲಿ ಬಂದು ಕುಳಿತುಕೊಳ್ಳುವಂತೆ ನಿರ್ದೇಶಿಸುತ್ತಾನೆ. **ಆವಹಾ** (ಎಂದರೆ ಹತ್ತಿರಕ್ಕೆ ಕರೆದುಕೊಂಡುಬರುವುದು) ಎಂಬುದರಿಂದ **ಹೋತೃ**ವೆಂದಾಗಿದೆ. ದೇವತಾಸ್ವರೂಪವನ್ನರಿತು ಆಯಾ ದೇವತೆಗೆ ತಕ್ಕ ಆಹ್ವಾನವನ್ನು ಕೊಡತಕ್ಕ ಮಂತ್ರಜ್ಞಾನವಿರುವವನು ಹೋತೃವೆಂದು ಕರೆಯಲ್ಪಡುತ್ತಾನೆ.

**ಗ್ರಾವಗ್ರಾಭಃ—ಗ್ರಾವ್ಣಃ ಸ್ತುತ್ಯಾ ಗೃಹ್ಣಾತೀತಿ ಗ್ರಾವಸ್ತುತ್ ।**
ಮೈತ್ರಾವರುಣ, ಅಚ್ಛಾವಾಕ, ಗ್ರಾವಸ್ತುತ್ ಎಂದು ಹೋತೃವಿಗೆ ಸಹಾಯಕರಾದ ಮೂರು ಋತ್ವಿಕ್ಕುಗಳಲ್ಲಿ ಇವನೊಬ್ಬನು.

**ಪ್ರೈತೇ ವದಂತು ಪ್ರ ವಯಂ ವದಾಮ ಗ್ರಾವಭ್ಯೋ ವಾಚಂ ವದತಾ ವದದ್ಭ್ಯಃ ।**
**ಯದದ್ರಯಃ ಪರ್ವತಾಃ ಸಾಕಮಾಶವಃ ಶ್ಲೋಕಂ ಘೋಷಂ ಭರಥೇಂದ್ರಾಯ ಸೋಮಿನಃ ॥**

(ಋ. ಸಂ. ೧೦-೯೪-೧)

ಎಂಬ ಋಕ್ಕಿನಿಂದ ಪ್ರಾರಂಭವಾಗುವ ಸೂಕ್ತವನ್ನೂ

**ಆ ವ ಋಂಜಸ ಊರ್ಜಾಂ ವ್ಯುಷ್ಟಿಷ್ವಿಂದ್ರಂ ಮರುತೋ ರೋದಸೀ ಅನಕ್ತನ ॥**
**ಉಭೇ ಯಥಾ ನೋ ಅಹನೀ ಸಚಾಭುವಾ ಸದಃ ಸದೋ ವರಿವಸ್ಯಾತ ಉದ್ಭಿದಾ ॥**

(ಋ. ಸಂ. ೧-೭೬-೧)

ಎಂಬ ಋಕ್ಕಿನಿಂದ ಪ್ರಾರಂಭವಾಗುವ ಸೂಕ್ತವನ್ನೂ

**ಪ್ರ ವೋ ಗ್ರಾವಾಣಃ ಸವಿತಾ ದೇವಃ ಸುವತು ಧರ್ಮಣಾ । ಧೂರ್ಷು ಯುಜ್ಯಧ್ವಂ ಸುನುತ ॥**

(ಋ. ಸಂ. ೧೦-೧೭೫-೧)

ಎಂಬ ಋಕ್ಕಿನಿಂದ ಪ್ರಾರಂಭವಾಗುವ ಸೂಕ್ತವನ್ನೂ ಸಹ ಮಾಧ್ಯಂದಿನಸವನದ ಕಾಲದಲ್ಲಿ ಪಠಿಸಿ ಸೋಮರಸವನ್ನು ಹಿಂಡಲು ಸಹಾಯವನ್ನು ಮಾಡತಕ್ಕ ಋತ್ವಿಕ್ಕು ಎಂದು ಇವನ ಕರ್ತವ್ಯವನ್ನು ತಿಳಿಸಿದೆ.

ಈ ಗ್ರಾವಸ್ತುತ್ತಿನ ಅವಶ್ಯಕತೆಯನ್ನೂ ಇವನ ಕರ್ತವ್ಯವನ್ನೂ ವಿವರಿಸತಕ್ಕ ಒಂದು ಸನ್ನಿವೇಶವು ಕಥಾರೂಪದಲ್ಲಿ ಐತರೇಯಬ್ರಾಹ್ಮಣದಲ್ಲಿ ಹೇಳಿದೆ.

**ದೇವಾ ಹ ವೈ ಸರ್ವಚರೌ ಸತ್ರಂ ನಿಷೇದುಸ್ತೇ ಹ ಪಾಪ್ಮಾನಂ ನಾಪಜಘ್ನಿರೇ ತಾನ್ಹೋವಾಚಾರ್ಬುದಃ ಕಾದ್ರವೇಯಃ ಸರ್ಪ ಋಷಿರ್ಮಂತ್ರಕೃದೇಕಾ ವೈ ವೋ ಹೋತ್ರಾಽಕೃತಾ ತಾಂ ವೋಽಹಂ ಕರವಾಣ್ಯಥ ಪಾಪ್ಮಾನಮಪಹನಿಷ್ಯಧ್ವ ಇತಿ ತೇ ಹ ತಥೇತ್ಯೂಚುಸ್ತೇಷಾಂ ಹ ಸ್ಮ ಸ ಮಧ್ಯಂದಿನೇ ಮಧ್ಯಂದಿನ ಏವೋಪೋದಾಸರ್ಪದ್ಗ್ರಾವ್ಣೋಽಭಿಷ್ಟೌತಿ । ತಸ್ಮಾನ್ಮಧ್ಯಂದಿನೇ ಮಧ್ಯಂದಿನ ಏವ ಗ್ರಾವ್ಣೋಽಭಿಷ್ಟುವಂತಿ ತದನುಕೃತಿ ಸ ಹ ಸ್ಮ ಯೇನೋಪೋದಾಸರ್ಪತ್ತದ್ಧಾಪ್ಯೇತರ್ಹ್ಯರ್ಬುದೋದಾಸರ್ಪಣೀ ನಾಮ ಪ್ರಪದಸ್ತಿ ।**

(ಐ. ಬ್ರಾ. ೬-೧)

ದೇವತೆಗಳು ಒಂದುಸಲ **ಸರ್ಪಚರು**ವೆಂಬ ಸತ್ರವನ್ನಾರಂಭಿಸಿದರು. ಆಗ ಅವರು ತಮ್ಮ ದೋಷವನ್ನು ನಾಶಮಾಡಿಕೊಳ್ಳಲಾಗಲಿಲ್ಲ. ಆಗ ಕದ್ರುಪುತ್ರನೂ, ಮಂತ್ರದ್ರಷ್ಟೃವೂ ಸರ್ಪಋಷಿಯೂ ಆದ ಅರ್ಬುದನು ಬಂದು ಹೋತೃವಿನಿಂದ ನೆರವೇರಿಸಲ್ಪಡಬೇಕಾದ ಮುಖ್ಯವಾದ ಒಂದು ಕರ್ಮವನ್ನು ನೀವು ಮರೆತಿದ್ದೀರಿ ನಿಮಗಾಗಿ ನಾನು ಅದನ್ನು ನೆರವೇರಿಸಿಕೊಡುತ್ತೇನೆ. ಆಗ ನೀವು ನಿಮ್ಮ ದೋಷವನ್ನು ನಾಶಮಾಡಲು ಸಮರ್ಥರಾಗುತ್ತೀರಿ ಎಂದಾಗ ದೇವತೆಗಳು ಅದಕ್ಕೊಪ್ಪಿದರು. ಅರ್ಬುದನು ಪ್ರತಿಸಲವೂ ಮಾಧ್ಯಂದಿನ ಸವನದವೇಳೆಗೆ ಸರಿಯಾಗಿ ಬಂದು ಸೋಮಪೇಷಣದಕಾಲದಲ್ಲಿ ಅಭಿಷವಮಂತ್ರವನ್ನು ಪಠಿಸುತ್ತಿದ್ದನು. (ಸರ್ಪರಾಜನು ಬರುತ್ತಿದ್ದ ಮಾರ್ಗಕ್ಕೆ **ಅರ್ಬುದ ಸರ್ಪಣೀ** ಎಂಬ ಹೆಸರಾಯಿತು).

> ತಾನ್ಹ ರಾಜಾ ಮದಯಾಂಚಕಾರ ತೇ **ಹೋಚುರಾಶೀವಿಷೋ ವೈ ನೋ ರಾಜಾನಮವೇಕ್ಷತೇ ಹಂತಾಸ್ಯೋಷ್ಣೀಷೇಣಾಕ್ಷ್ಯಾವಪಿನಹ್ಯಾಮೇತಿ ತಥೇತಿ ತಸ್ಯ ಹೋಷ್ಣೀಷೇಣಾಕ್ಷ್ಯಾವಪಿನ- ಹ್ಯುಸ್ತಸ್ಮಾದುಷ್ಣೀಷಮೇವ ಪರ್ಯಸ್ಯ ಗ್ರಾವ್ಣೋಽಭಿಷ್ಟುವಂತಿ ತದನುಕೃತಿ।ತಾನ್ಹ** ರಾಜಾ ಮದಯಾಮೇವ ಚಕಾರ ತೇ ಹೋಚುಃ **ಸ್ವೇನ ವೈ ನೋ ಮಂತ್ರೇಣ ಗ್ರಾವ್ಣೋಽಭಿಷ್ಟೌತಿ ಹಂತಾಸ್ಯಾನ್ಯಾಭಿರ್ಋಗ್ಭಿರ್ಮಂತ್ರಮಾಪೃಣಚಾಮೇತಿ ತಥೇತಿ ತಸ್ಯ ಹಾನ್ಯಾಭಿರ್ಋಗ್ಭಿರ್ಮಂತ್ರಮಾಪಪೃಚುಸ್ತತೋ ಹೈನಾನ್ನ ಮದಯಾಂಚಕಾರ ತದ್ಯದಸ್ಯಾಭಿರ್ಋಗ್ಭಿರ್ಮಂತ್ರಮಾಪೃಂಚಂತಿ ಶಾಂತ್ಯಾ** ಏವ । **ತೇ ಹ ಪಾಪ್ಮಾನಮಪಜಘ್ನಿರೇ ತೇಷಾಮನ್ವಪಹತಿಂ ಸರ್ಪಾಃ ಪಾಪ್ಮಾ- ನಮಪಜಘ್ನಿರೇ ತ** ಏತೇ**ಽಪಹತಪಾಪ್ಮಾನೋ ಹಿತ್ವಾ ಪೂರ್ವಾಂ ಜೀರ್ಣಾಂ ತ್ವಚಂ ನವಯೈವ ಪ್ರ**ಯಂತಿ ॥
>
> (ಐ. ಬ್ರಾ. ೬ ೧)

ಆಗ ಸೋಮರಾಜನು ದೇವತೆಗಳನ್ನು ಪಾನಮಾಡುವಂತೆ ಮಾಡಿದನು. ಆಗ ಅವರು "ವಿಷಸರ್ಪವು ನಮ್ಮ ರಾಜನನ್ನು ನೋಡುತ್ತಿರುವುದರಿಂದ ಅವರ ಕಣ್ಣನ್ನು ಕಟ್ಟಿಬಿಡೋಣ" ಎಂದು ಹಾಗೆಯೇ ಮಾಡಿದರು. [ಆದುದರಿಂದಲೇ ಸಾಮಾನ್ಯವಾಗಿ ಈ ಸ್ತುತಿಯನ್ನು ಪಠಿಸುವ ಕಾಲಗಳಲ್ಲೆಲ್ಲಾ ಸರ್ಪಕ್ಕೆ ದೇವತೆಗಳನ್ನು ಮಾಡಿದುದನ್ನು ಅನುಕರಿಸುವುದಕ್ಕಾಗಿ ಕಣ್ಣುಗಳನ್ನು ಕಟ್ಟಿಕೊಳ್ಳುತ್ತಾರೆ.] ಆಗ ಸೋಮರಾಜನು ಅವರನ್ನು ಪಾನಮಾಡುವಂತೆ ಮಾಡಿದನು. ಆಗ ಸರ್ಪವು ಪಠಿಸುವ ಮಂತ್ರಗಳೊಂದಿಗೆ ಇತರ ಮಂತ್ರಗಳನ್ನೂ ಪಠಿಸುವಂತೆ ಯೋಜಿಸಿದರು. ಆಗ ಮಿಶ್ರಮಾಡಿ ಎರಡು ಮಂತ್ರಗಳನ್ನೂ ಒಟ್ಟಿಗೆ ಪಠಿಸಿದಾಗ ಅವರ ಪಾಪವು ಪರಿಹಾರವಾಯಿತು. ಇದು **ಗ್ರಾವಸ್ತುತಿಯ** ಮೂಲವು. ಇದನ್ನು ಮಾಧ್ಯಂದಿನ ಸವನದಕಾಲಗಳಲ್ಲಿ ಪಠಿಸುವವನಿಗೆ **ಗ್ರಾವಸ್ತುತ್ತೆಂದು** ಹೆಸರು. ಇವನು **ಹೋತೃ**ವಿನ ಸಹಾಯಕನು.

**ಅಧ್ವರ್ಯುಃ— ಅಧ್ವರ್ಯುರಧ್ವರಯುರಧ್ವರಂ ಯುನಕ್ತ್ಯಧ್ವರಸ್ಯ ನೇತಾಧ್ವರಂ ಕಾಮಯತ ಇತಿ ವಾ ।** ಯಜ್ಞವನ್ನು ನಿರ್ವಹಿಸುತ್ತಾನೆಂದಾಗಲಿ, ಯಜ್ಞಕ್ಕೆ ನೇತೃವಾಗಿರುವುದರಿಂದಾಗಲಿ, ಯಜ್ಞವನ್ನು ಭಕ್ತಿಯಿಂದ ಸೇವಿಸುವುದರಿಂದಾಗಲಿ **ಅಧ್ವರ್ಯು**ವೆಂಬ ಹೆಸರು ಪ್ರಸಿದ್ಧವಾಗಿದೆ. (ನಿ. ೧. ೮) ಯಜ್ಞಭೂಮಿಯನ್ನಳೆಯುವುದೂ, ವೇದಿಯನ್ನು ನಿರ್ಮಿಸುವುದೂ, ಯಜ್ಞಪಾತ್ರೆಗಳನ್ನು ಸಿದ್ಧಪಡಿಸುವುದೂ, ಅಗ್ನಿಯನ್ನು ಪ್ರಜ್ವಲಿಸುವಂತೆ ಮಾಡುವುದೂ ಇವಕ್ಕೆ ಅನುಕೂಲವಾದ ಇತರ ಕೆಲಸಗಳು ಅಧ್ವರ್ಯುವು ಮಾಡತಕ್ಕವು. ಈ ಕಾರ್ಯಗಳನ್ನು ಮಾಡುವಾಗಲೆಲ್ಲಾ ಇವನು ಆಯಾ ಮಂತ್ರವನ್ನು ಪಠಿಸಬೇಕು.

**ಅವಯಾಃ – ಆಭಿಮುಖ್ಯೇನ ಹವಿಷಾಂ ಗಮಯಿತಾ ಅಧ್ವರ್ಯೋರ್ವಿಶೇಷಣಮೇತತ್** । ಅಗ್ನಿಗಭಿಮುಖವಾಗಿದ್ದು ಹವಿಸ್ಸನ್ನರ್ಪಿಸುವವನು. ಇದು ಅಧ್ವರ್ಯುವಿಗೆ ವಿಶೇಷಣವಾಗಿದೆಯೆಂದು ಒಂದುವಿಧವಾಗಿಯೂ; ಅಥವಾ **ಆಭಿಮುಖ್ಯೇನ ಅವಯಷ್ಟಾ । ಪ್ರತಿಪ್ರಸ್ಥಾತಾ ಉಚ್ಯತೇ ।** ಪ್ರತಿಪ್ರಸ್ಥಾತೃ, ನೇಷ್ಟೃ, ಉನ್ನೇತೃ ಎಂಬ ಅಧ್ವರ್ಯುವಿನ ಸಹಾಯಕರಲ್ಲಿ ಮೊದಲನೆಯವನು ಪ್ರತಿಪ್ರಸ್ಥಾತೃವೆಂದೂ ಆಗಬಹುದೆಂದು ಇನ್ನೊಂದು ವಿಧವಾಗಿಯೂ ಅರ್ಥಮಾಡಿದೆ. ಈ ಮಂತ್ರವು ತೈತ್ತಿರೀಯಸಂಹಿತೆಯಲ್ಲಿಯೂ ಇರುವುದು. (೪. ೬. ೮) ಇದಕೆ ಪರಿವರ್ತನವನ್ನು ಹೇಳುವಾಗ Keith ಎಂಬುವನು ಈ ಪದಕ್ಕೆ ಈ ರೀತಿ ವಿವರಣೆಯನ್ನು ಹೇಳುತ್ತಾನೆ.

The origin of ಅವಯಾಃ is uncertain. The tradition here of the ಪದ derives it from ಅ-ವಯಾಃ but ಯಜ್ or ಯಾ have also been in the last part, what priest of the later ritual is meant is uncertain.

(Taittiriya Sampita I Vol. H. O. S. P. 378

ಸಾಯಣರು ಎರಡನೆಯ ಪರ್ಯಾಯವಾಗಿ ವಿವರಿಸಿರುವಂತೆ **ಪ್ರತಿ-ಪ್ರಸ್ಥಾತೃವೇ** ಇರಬೇಕು.

**ಅಗ್ನಿಮಿಂಧಃ**—ಅಗ್ನಿಯನ್ನು ಪ್ರಜ್ವಲಿಸುವಂತೆ ಮಾಡುವವನು ಅಧ್ವರ್ಯುವಾದುದರಿಂದ ಇದೂ ಅಧ್ವರ್ಯುವಿಗೇ ವಿಶೇಷಣವಾಗಿರಬೇಕು.

**ಶಂಸ್ತಾ**—**ಶಂಸ್ತಾ** ಎಂದರೆ ಪ್ರಶಾಸ್ತೃವೆಂಬ ಋತ್ವಿಜನು.

**ಸುವಿಪ್ರಃ— ವಿಪ್ರ ಇತಿ ಮೇಧಾವಿನಾಮ । ಶೋಭನಮೇಧೋಪೇತೋ ಬ್ರಹ್ಮೋಚ್ಯತೇ ।** ಶ್ರೇಷ್ಠವಾದ ಬುದ್ಧಿಯುಳ್ಳ ಬ್ರಹ್ಮನೆಂಬ ಋತ್ವಿಕ್ಕಿನ ಪರ್ಯಾಯಪದವಾಗಿದೆಯೆಂದು ಸಾಯಣರು ವಿವರಿಸಿ,

**ಋಚಾಂ ತ್ವಃ ಪೋಷಮಾಸ್ತೇ ಪುಪುಷ್ವಾನ್ ಗಾಯತ್ರಂ ತ್ವೋ ಗಾಯತಿ ಶಕ್ವರೀಷು ।**
ಬ್ರಹ್ಮಾ **ತ್ವೋ ವದತಿ ಜಾತವಿದ್ಯಾಂ ಯಜ್ಞಸ್ಯ ಮಾತ್ರಾಂ ವಿ ಮಿಮೀತ ಉ ತ್ವಃ ॥**

(ಋ. ಸಂ. ೧೦. ೭೧-೧೧)

ಎಂಬ ಋಕ್ಕನ್ನುದಹರಿಸಿ ಆದಕ್ಕೆ " **ಬ್ರಹ್ಮೈಕೋ ಜಾತೇ ಜಾತೇ ವಿದ್ಯಾಂ ವದತಿ ಬ್ರಹ್ಮಾ ಸರ್ವವಿದ್ಯಃ ಸರ್ವಂ ವೇದಿತುಮರ್ಹತಿ ।** ಬ್ರಹ್ಮನು ಸಕಲಶಾಸ್ತ್ರಗಳನ್ನೂ ಪ್ರತಿಪಾದಿಸುತ್ತಾನೆ ; ಅವನು ಸರ್ವಜ್ಞನು, ಜ್ಞಾನದಿಂದ ಸರ್ವಾಧಿಕನು, ಇತ್ಯಾದಿಯಾಗಿ ವಿವರಿಸಿರುವ ನಿರುಕ್ತವಾಕ್ಯದ ಆಧಾರದ ಮೇಲೆ (ನಿ. ೧. ೮) **ಸುವಿಪ್ರಃ** ಎನ್ನುವುದಕ್ಕೆ ಬ್ರಹ್ಮನೆಂದು ಅರ್ಥಮಾಡಿದ್ದಾರೆ.

**ವಕ್ಷಣಾ**—ಈ ಪದವು ನದೀನಾಮಗಳಲ್ಲಿ ಪಠಿತವಾಗಿದೆ. (ನಿ ೨. ೨೪), ಇಲ್ಲಿ ನದಿಯಂತೆ ಪ್ರವಹಿಸುವ ಘೃತಾದಿಗಳ ಪ್ರವಾಹವನ್ನು ಎಂದರ್ಥ. ಎಂದರೆ ಯಜ್ಞವನ್ನು ಸಾಂಗವಾಗಿ ನೆರವೇರಿಸಿ ಅದರ ಪೂರ್ಣಫಲವನ್ನು ಪಡೆಯಿರಿ ಎಂದರ್ಥ.

### ವ್ಯಾಕರಣಪ್ರಕ್ರಿಯಾ

**ಅಧ್ವರ್ಯುಃ**—ಅಧ್ವರಂ ಆತ್ಮನಃ ಇಚ್ಛತೀತಿ ಅಧ್ವರ್ಯುಃ **ಸುಪ ಆತ್ಮನಃ ಕ್ಯಚ್** (ಪಾ. ಸೂ. ૩-೧-೮) ಎಂಬುದರಿಂದ ಕ್ಯಚ್ **ಕವ್ಯಧ್ವರ**—(ಪಾ. ಸೂ. ೭-೪-೩೯) ಎಂಬುದರಿಂದ ಕ್ಯಚ್ ಪರವಾದಾಗ ಅಕಾ

ರಕ್ಕೆ ಲೋಪ. **ಕ್ಯಾಚ್ಛಂದಸಿ** (ಪಾ. ಸೂ. ೩-೨-೧೭೦) ಎಂಬುದರಿಂದ ಉ ಪ್ರತ್ಯಯ **ಆತೋ ಲೋಪಃ** ಎಂಬುದರಿಂದ ಕ್ಯಚಿನ ಅಕಾರಕ್ಕೆ ಲೋಪ ಪ್ರತ್ಯಯಸ್ವರದಿಂದ ಅಂತೋದಾತ್ತವಾಗುತ್ತದೆ.

**ಅವಯಾಃ**—ಅಜ್ ಉಪಸರ್ಗ. ವೀ ಗತ್ಯಾದಿಷು. ಧಾತು. **ಗತಿಕಾರಕೋಪ**-(ಉ. ಸೂ. ೪-೬೬೬) ಎಂಬುದರಿಂದ ಅಸುನ್ ಪ್ರತ್ಯಯ. ಪೂರ್ವಪದಪ್ರಕೃತಿಸ್ವರ ಬರುತ್ತದೆ ಅಸುನ್ ನಿಮಿತ್ತವಾಗಿ ಧಾತುವಿನ ಇಕಿಗೆ ಗುಣ. ಅಯಾದೇಶ. ಅಥವಾ ಯಜ ಧಾತು. ಅದಕ್ಕೆ **ಅವೇ ಯಜಃ** (ಪಾ. ಸೂ. ೩-೨-೭೨) ಎಂಬುದರಿಂದ ಣ್ವಿನ್ ಪ್ರತ್ಯಯ. **ಶ್ವೇತವಹಾದೀನಾಂ ಡಸ್ ಪದಸ್ಯೇತಿವಕ್ತವ್ಯಮ್** ಎಂಬ ವಚನದಿಂದ ಅದಕ್ಕೆ ಡಸ್. ಡಿತ್ತಾದುದರಿಂದ ಟಿ (ಅಜ್)ಗೆ ಲೋಪ. **ಅವಾಪ್ಯೋರುಪಸರ್ಗಯೋಃ** ಎಂಬ ಭಾಗುರಿ ವಚನದಿಂದ ಅವ ಉಪಸರ್ಗದ ಅಕಾರಕ್ಕೆ ಲೋಪ. ವಯಸ್ ಶಬ್ದವಾಗುತ್ತದೆ. ಪ್ರಥಮಾಏಕವಚನಾಂತರೂಪ.

**ಅಗ್ನಿಮಿಂಧಃ**—ಞಿಇಂಧೀ ದೀಪ್ತೌ. ಧಾತು. ಅಚ್ ಪ್ರತ್ಯಯ. **ಭ್ರಾಷ್ಟ್ರಾಗ್ನ್ಯೋರಿಂಧೇ** (ಪಾ. ಸೂ. ೬-೩-೭೦-೬) ಎಂಬುದರಿಂದ ಪೂರ್ವಕ್ಕೆ ಮುಮಾಗಮ. ಕೃದುತ್ತರಪದಪ್ರಕೃತಿಸ್ವರ ಬರುತ್ತದೆ.

**ಗ್ರಾವಗ್ರಾಭಃ**—ಗ್ರಾವ್ಣಃ ಗ್ರಾಭಃ ಗ್ರಾವಗ್ರಾಭಃ. ಗ್ರಹ ಉಪಾದಾನೇ ಧಾತು. **ಕರ್ಮಣ್ಯಣ್** (ಪಾ.ಸೂ. ೩-೨-೧) ಎಂಬುದರಿಂದ ಅಣ್ ಪ್ರತ್ಯಯ. **ಅತಉಪಧಾಯಾಃ** (ಪಾ. ಸೂ. ೭-೨-೧೧೬) ಸೂತ್ರದಿಂದ ಉಪಧಾ ವೃದ್ಧಿ. **ಹೃಗ್ರಹೋರ್ಭಶ್ಛಂದಸಿ** ಎಂಬ ವಚನದಿಂದ ಧಾತು ಹಕಾರಕ್ಕೆ ಭತ್ವ. ಪ್ರತ್ಯಯಸ್ವರದಿಂದ ಅಂತೋದಾತ್ತವಾಗುತ್ತದೆ. ಸಮಾಸವಾದಾಗ ಕೃದುತ್ತರಪದಪ್ರಕೃತಿಸ್ವರ ಬರುತ್ತದೆ.

**ಶಂಸ್ತಾ**—ಶಂಸು ಸ್ತುತೌ ಧಾತು. ಕರ್ತರಿಯಲ್ಲಿ ತೃನ್ ಪ್ರತ್ಯಯ. ನಿತ್ತಾದುದರಿಂದ ಆದ್ಯುದಾತ್ತಸ್ವರ ಬರುತ್ತದೆ.

**ಸ್ವರಂಕೃತೇನ**—ಸು+ಅಲಂಕೃತೇನ ಎಂದಿರುವಾಗ **ವಾಲಮೂಲ**—(ಪಾ. ಸೂ. ೧-೨೯) ಎಂಬುದರಿಂದ ವಿಕಲ್ಪವಾಗಿ ಲತ್ವವಿಧಾನ ಮಾಡಿರುವುದರಿಂದ ರೇಫ ಶ್ರವಣವಾಗಿದೆ. **ಗತಿರನಂತರಃ** (ಪಾ. ಸೂ. ೬-೨-೪೯) ಎಂಬುದರಿಂದ ಗತಿಗೆ (ಸು) ಉದಾತ್ತಸ್ವರ ಬರುತ್ತದೆ. ಸ್ವಿಷ್ಟೇನ ಎಂಬಲ್ಲಿಯೂ ಕ್ತಾಂತಪದ ಪರದಲ್ಲಿರುವುದರಿಂದ ಗತಿಗೆ ಪ್ರಕೃತಿಸ್ವರ ಬರುತ್ತದೆ

**ವಕ್ಷಣಾಃ**—ವಕ್ಷ ರೋಷೇ ಧಾತು. **ಕ್ರುಧಮಂಡಾರ್ಥೇಭ್ಯಶ್ಚ** (ಪಾ. ಸೂ. ೩-೨-೧೫೧) ಎಂಬುದರಿಂದ ಯುಚ್ ಪ್ರತ್ಯಯ. **ಯುವೋರನಾಕೌ** (ಪಾ. ಸೂ. ೭-೧-೧) ಎಂಬುದರಿಂದ ಅದಕ್ಕೆ ಅನಾದೇಶ. ವ್ಯತ್ಯಯದಿಂದ ಚಿತ್ ಸ್ವರವು ಬಾಧಿತವಾಗಿ ಪ್ರತ್ಯಯದ ಆದ್ಯುದಾತ್ತಸ್ವರ ಬರುತ್ತದೆ.

**ಪೃಣಧ್ವಮ್**—ಪೃ ಪಾಲನಪೂರಣಯೋಃ ಧಾತು. ಕ್ರ್ಯಾದಿ. ಲೋಟ್ ಮಧ್ಯಮಪುರುಷಬಹುವಚನದಲ್ಲಿ **ಸವಾಭ್ಯಾಂವಾಮೌ** ಎಂಬುದರಿಂದ ಟಿಗೆ ಅಮಾದೇಶ. ಶ್ನಾ ವಿಕರಣ. **ಪ್ವಾದೀನಾಂ ಹ್ರಸ್ವಃ** ಎಂಬುದರಿಂದ ಧಾತುವಿಗೆ ಹ್ರಸ್ವ. ತಿಙಂತನಿಘಾತಸ್ವರ ಬರುತ್ತದೆ. ॥ ೫ ॥

ಸಂಹಿತಾಪಾಠಃ

ಯೂಪವ್ರಸ್ಕಾ ಉತ ಯೇ ಯೂಪವಾಹಾಶ್ಚಷಾಲಂ ಯೇ ಅಶ್ವಯೂ-
ಪಾಯ ತಕ್ಷತಿ ।
ಯೇ ಚಾರ್ವತೇ ಪಚನಂ ಸಂಭರಂತ್ಯುತೋ ತೇಷಾಮಭಿಗೂರ್ತಿರ್ನ
ಇನ್ವತು ॥ ೬ ॥

ಪದಪಾಠಃ

ಯೂಪಽವ್ರಸ್ಕಾಃ । ಉತ । ಯೇ । ಯೂಪಽವಾಹಾಃ । ಚಷಾಲಂ । ಯೇ । ಅಶ್ವಽಯೂಪಾಯ ।
ತಕ್ಷತಿ ।
ಯೇ । ಚ । ಅರ್ವತೇ । ಪಚನಂ । ಸಂಽಭರಂತಿ । ಉತೋ ಇತಿ । ತೇಷಾಂ । ಅಭಿಽಗೂರ್ತಿಃ ।
ನಃ । ಇನ್ವತು ॥ ೬ ॥

ಸಾಯಣಭಾಷ್ಯಂ

ಯೂಪವ್ರಸ್ಕಾ ಯೂಪಾರ್ಹವೃಕ್ಷಸ್ಯ ವೃಶ್ಚನಕರ್ತಾರಶ್ಛೇತ್ತಾರಃ । ಉತ ಯೇ ಚ ಯೂಪವಾಹಾಶ್ಛಿನ್ನಸ್ಯ ವೋಢಾರಃ । ಯೇ ಚ ಚಷಾಲಂ । ಯೂಪಸ್ಯೋಪರಿಸ್ಥಾಪ್ಯಂ ಯೂಪಾಗ್ರಭಾಗಂ ಚಷಾಲಮಾಹುಃ । ತದ್ಯೇಽಶ್ವ ಯೂಪಾಯ ಬಂಧನಯೂಪಾಯ ತಕ್ಷತಿ ॥ ತಕ್ಷತೀತಿ ವಚನವ್ಯತ್ಯಯಃ ॥ ಸಾಧು ಸಂಪಾದಯಂತಿ । ಯೇ ಚಾರ್ವತೇಽರಣವತೇಽಶ್ವಾಯ ಪಚನಂ ಪಾಕಸಾಧನಂ ಕಾಷ್ಠಭಾಂಡಾದಿಕಂ ಸಂಭರಂತಿ । ಉತೋ ಅಪಿ ಚ ನೋಽಸ್ಮತ್ಸಂಬಂಧಿನಾಂ ತೇಷಾಮೃತ್ವಿಜಾಮಭಿಗೂರ್ತಿಃ ಸಂಕಲ್ಪಃ ಸರ್ವಥಾ ಕರಣೀಯಮಿತಿ ಬುದ್ಧಿರಿನ್ವತು । ವ್ಯಾಪ್ನೋತು ॥ ಇನ್ವತಿರ್ವ್ಯಾಪ್ತಿವಚನಃ ಇನ್ವತಿ ನನಕ್ಷೇತಿ ತದ್ವಚನೇಷು ಪಾಠಾತ್ ॥ ಯದ್ವಾ । ತೇಷಾಮಭಿಗೂರ್ತಿರ್ನೋಽಸ್ಮಾನಿನ್ವತು । ಯಾಗಂ ಸಾಧುಪಾರಂ ಪ್ರಾಪಯ್ಯ ಫಲೇನ ಯೋಜಯತ್ವಿತ್ಯರ್ಥಃ ॥

ಪ್ರತಿಪದಾರ್ಥ

**ಯೇ**—ಯಾರು । **ಯೂಪವ್ರಸ್ಕಾಃ**—ಯೂಪಕ್ಕೆ ಯೋಗ್ಯವಾದ ವೃಕ್ಷವನ್ನು ಭೇದಿಸುವರೋ । **ಉತ**—ಮತ್ತು । (**ಯೇ**—ಯಾರು) । **ಯೂಪವಾಹಾಃ**—(ಕತ್ತರಿಸಿದ) ಯೂಪವೃಕ್ಷವನ್ನು ಹೊತ್ತುಕೊಂಡು ಬರುವರೋ । **ಯೇ**—ಯಾರು । **ಅಶ್ವಯೂಪಾಯ**—ಅಶ್ವವನ್ನು ಕಟ್ಟತಕ್ಕ ಯೂಪಕ್ಕೆ । **ಚಷಾಲಂ**—ಯೂಪದ ಮೇಲು ಭಾಗಕ್ಕೆ ಸೇರಿಸತಕ್ಕ ಕೊಂಡಿಯನ್ನು । **ತಕ್ಷತಿ**—ಸಂಪಾದಿಸುತ್ತಾರೆಯೋ । **ಯೇ**—ಯಾರು । **ಅರ್ವತೇ**—ಯಜ್ಞಾಶ್ವ

ರ್ಕ್ಯಾಗಿ | **ಪಚನಂ**— ಪಾಕಸಾಧನವಾದ ಭಾಂಡಾದಿಗಳನ್ನು | **ಸಂಭರಂತಿ**—ಸಂಪಾದಿಸುತ್ತಾರೆಯೋ ಅವರ | **ಅಭಿಗೂರ್ತಿಃ**—ಶ್ರದ್ಧಾಯುತವಾದ ಬುದ್ಧಿಯು | **ನಃ**—ನಮ್ಮ (ಮತ್ತು) | **ತೇಷಾಂ**—ತಮಗೆ ಸಂಬಂಧಿಸಿದ ಋತ್ವಿಕ್ಕುಗಳ (ಇಷ್ಟಾರ್ಥಗಳನ್ನು) | **ಇನ್ವತು**—ಕೈ ಕೂಡುವಂತೆ ಮಾಡಲಿ

**ಭಾವಾರ್ಥ**

ಯಾರು ಯೂಪಕ್ಕೆ ಯೋಗ್ಯವಾದ ವೃಕ್ಷವನ್ನು ಛೇದಿಸುವರೋ, ಮತ್ತು ಯಾರು ಆ ವೃಕ್ಷವನ್ನು ಹೊತ್ತು ಕೊಂಡು ಬರುವರೋ, ಅನಂತರ ಅಶ್ವಬಂಧನಕ್ಕಾಗಿ ಯಾರು ಆ ಯೂಪದ ಮೇಲೆ ನೆಡತಕ್ಕಕೊಂಡಿಯನ್ನು ಸಂಪಾದಿಸುವರೋ, ಯಾರು ಯಜ್ಞಾಶ್ವಕ್ಕಾಗಿ ಪಾಕಸಾಧನವಾದ ಭಾಂಡಾದಿಗಳನ್ನು ಸಿದ್ಧಪಡಿಸುವರೋ, ಅವರೆಲ್ಲರ ಶ್ರದ್ಧಾಯುತವಾದ ಬುದ್ಧಿಯು ನಮ್ಮ ಮತ್ತು ನಮಗೆ ಸಂಬಂಧಿಸಿದ ಋತ್ವಿಕ್ಕುಗಳ ಇಷ್ಟಾರ್ಥಗಳನ್ನು ಕೈಗೂಡವಂತೆ ಮಾಡಲಿ.

## English Translation

Whether they be those who cut the (sacrificial) post, or those who bear the post, or those who fasten the rings on the top of the post, to which horse (is bound), or those who prepare the vessels in which the food of the horse is dressed, let the exertions of them all fulfil our expectations.

**ವಿಶೇಷವಿಷಯಗಳು**

**ತಕ್ಷತಿ**--**ತಕ್ಷತಿಃ ಕರೋತಿಕರ್ಮಾ** | (ನಿ. ೪-೧೯) **ಚಷಾಲ** ವನ್ನು ಎಂದರೆ ಅಶ್ವವನ್ನು ಯೂಪಕ್ಕೆ ಕಟ್ಟಲು ಅದರ ಮೇಲಿನ ಕೊಂಡಿಯನ್ನು ಯಾರು ಪರಿಷ್ಕೃತವನ್ನಾಗಿ ಮಾಡಿ ಸಿದ್ಧಪಡಿಸುತ್ತಾರೋ ಅವರು ಎಂದರ್ಥ.

**ಅಭಿಗೂರ್ತಿಃ**— ಈ ಪದಕ್ಕೆ ಸಂಕಲ್ಪವೆಂದರ್ಥಮಾಡಿದ್ದಾರೆ. ವಿಧ್ಯುಕ್ತವಾದ ಕರ್ಮಗಳನ್ನು ಮಾಡಲೇಬೇಕೆಂಬ ಸದ್ಬುದ್ಧಿಯೂ ಕರ್ಮನಿಷ್ಠೆಯೂ ಸೂಚಿತವಾಗಿದೆ.

ಇನ್ವತಿ— ಇನ್ವತಿಃ ವ್ಯಾಪ್ತಿಕರ್ಮಾ (ನಿ. ೨-೧೮) **ಯಾಗಂ ಸಾಧುಪಾರಂ ಪ್ರಾಪಯ್ಯ ಫಲೇನ ಯೋಜಯತ್ವಿತ್ಯರ್ಥಃ** | ಅವರೆಲ್ಲರ ಶ್ರೇಷ್ಠವಾದ ಸಂಕಲ್ಪವು ನಮ್ಮ ಇಷ್ಟಾರ್ಥಗಳನ್ನು ನೆರವೇರುವಂತೆ ಮಾಡಲಿ ಎಂದು ತಾತ್ಪರ್ಯವು.

**ಯೇ ಯೂಪವ್ರಸ್ಕಾಃ ಉತ ಯೇ ಯೂಪವಾಹಾಃ (ಉತ) ಯೇ ಅಶ್ವಯೂಪಾಯ ಚಷಾಲಂ ತಕ್ಷತಿ**— ಈ ಋಕ್ಕಿನಲ್ಲಿ ಯೂಪಸ್ತಂಭವನ್ನು ನೆಡುವುದಕ್ಕೆ ಪೂರ್ವಭಾವಿಯಾಗಿ ಆಚರಿಸಬೇಕಾದ ಕೆಲವು ಕಾರ್ಯಗಳನ್ನು ವಿವರಿಸಿರುವುದು. ಯೂಪವೆಂದರೆ ಯಜ್ಞದಲ್ಲಿ ಪಶುವನ್ನು ಕಟ್ಟುವುದಕ್ಕೆ ನೆಟ್ಟಿರುವ ಮರದ ಕಂಭ ಋಗ್ವೇದದಲ್ಲಿ ಯೂಪಶಬ್ದದ ಪ್ರಯೋಗವು ಹೆಚ್ಚಾಗಿಲ್ಲದಿದ್ದರೂ (ಋ ಸಂ. ೧-೫೧-೧೪, ೧-೧೬೨-೬, ೪-೩೩-೩, ೫-೨-೭ ಎಂಬ ಋಕ್ಕುಗಳಿಲ್ಲಿ ಮಾತ್ರವಿರುವುದು) ಇದೇ ಅರ್ಥವನ್ನು ಸೂಚಿಸುವ ವನಸ್ಪತಿಶಬ್ದವು ವಿಶೇಷವಾಗಿ ಬಳಕೆಯಲ್ಲಿದೆ. ಆದುದರಿಂದ ಈ ಕಂಭವು ಯಾವಾಗಲೂ ಮರ ಅಥವಾ ವೃಕ್ಷಸಂಬಂಧವಾದದ್ದೇ ಆಗಿರುವುದು. ಲೋಹಸಂಬಂಧ

ವಾದದ್ದಲ್ಲದೆಂದು ಹೇಳಬಹುದು. ಯಜ್ಞಮಾಡುವಾಗ ಯಜಮಾನರ ಕಡೆಯ ಜನರು ವನಕ್ಕೆ ಹೋಗಿ ಯೂಪ ಸ್ತಂಭಕ್ಕೆ ಯೋಗ್ಯವಾದ (ಅನುರೂಪವಾದ) ಮರವನ್ನು ಸರಿಯಾದ ಆಕಾರಕ್ಕೆ ಇರುವಂತೆ ಕತ್ತರಿಸುವರು. ಮತ್ತೆ ಕೆಲವರು ಅವುಗಳನ್ನು ಹೊತ್ತುಕೊಂಡು ಬಂದು ಯಜ್ಞಭೂಮಿಗೆ ತರುವರು. ಮತ್ತೆ ಕೆಲವರು ಅವುಗಳನ್ನು ಚೆನ್ನಾಗಿ ಕೆತ್ತಿ ಅದರ ತುದಿಯಲ್ಲಿ ಕುದುರೆಯನ್ನು (ಕಟ್ಟುವುದಕ್ಕಾಗಿ) ಬಳೆ ಅಥವಾ ಕೊಂಡಿಯನ್ನು ಸೇರಿಸುವರು. ಈ ವಿಷಯ ವನ್ನೇ ಈ ಋಕ್ಕಿನ ಪೂರ್ವಾರ್ಧದಲ್ಲಿ ಹೇಳಿದೆ. **ಯೂಪವ್ರಸ್ಕಾಃ**—ಎಂದರೆ ಯೂಪಸ್ತಂಭಕ್ಕಾಗಿ ಕಾಡಿಗೆ ಹೋಗಿ ಮರವನ್ನು ಕಡಿಯುವವರು ಎಂದೂ **ಯೂಪವಾಹಾಃ**-ಎಂದರೆ ಕಡಿದಿರುವ ಮರವನ್ನು ಕಾಡಿನಿಂದ ಯಜ್ಞಭೂಮಿಗೆ ಹೊತ್ತುಕೊಂಡು ಬರುವವರೆಂದೂ ಅರ್ಥವು. **ಯೇ ಅಶ್ವಯೂಪಾಯ ಚಷಾಲಂ ತಕ್ಷತಿ**—ಎಂದರೆ ಅಶ್ವವನ್ನು ಕಟ್ಟುವ ಯೂಪದ ತುದಿಯಲ್ಲಿ (ಚಷಾಲ) ಬಳೆಯನ್ನು (ಅಥವಾ ಕೊಂಡಿಯನ್ನು) ಸೇರಿಸುವವರೆಂದಭಿಪ್ರಾಯವು. ಇವರು ಸಾಧಾರಣವಾಗಿ ಮರಗೆಲಸವನ್ನು ತಿಳಿದವರಾಗಿರಬೇಕು. ಮರವನ್ನು ಚೆನ್ನಾಗಿ (ನಯವಾಗುವಂತೆ) ಕೆತ್ತಿ ಸರಿಯಾದ ಅಳತೆಗೆ ಕತ್ತರಿಸಿ ತುದಿಗೆ ಬಳೆಯನ್ನು ಜೋಡಿಸಿ ಸಿದ್ಧಪಡಿಸಬೇಕಾದರೆ ಇವರು ಆ ಕೆಲಸಗಳಲ್ಲಿ ಕುಶಲ ರಾಗಿರಬೇಕು. ಈರೀತಿ ಸಿದ್ಧಪಡಿಸಿದ ಮರವನ್ನು ಯಜ್ಞಭೂಮಿಯಲ್ಲಿ ನೆಟ್ಟಗೆ ಊರ್ಧ್ವಮುಖವಾಗಿ ನೆಡುವರು. ಈ ವಿಷಯದಲ್ಲಿ—

> **ಊರ್ಧ್ವ ಊ ಷು ಣ ಊತಯೇ ತಿಷ್ಠಾ ದೇವೋ ನ ಸವಿತಾ ।**
> **ಊರ್ಧ್ವೋ ವಾಜಸ್ಯ ಸನಿತಾ ಯದಂಜಿಭಿರ್ವಾಘದ್ಭಿರ್ವಿಹ್ವಯಾಮಹೇ ॥**
> **ಊರ್ಧ್ವೋ ನಃ ಪಾಹ್ಯಂಹಸೋ ನಿ ಕೇತುನಾ ವಿಶ್ವಂ ಸಮತ್ರಿಣಂ ದಹ ।**
> **ಕೃಧೀ ನ ಊರ್ಧ್ವಾಞ್ಚರಥಾಯ ಜೀವಸೇ ವಿದಾ ದೇವೇಷು ನೋ ದುವಃ ॥**
>
> (ಋ. ಸಂ. ೧-೩೬-೧೩-೧೪)

ಎಂಬ ಋಕ್ಕುಗಳಲ್ಲಿ ಯೂಪವನ್ನು ನೆಡುವಾಗ ಅದನ್ನು ಪ್ರಾರ್ಥಿಸುವ ವಿಷಯವು ಉಕ್ತವಾಗಿರುವುದು. ಯೂಪವನ್ನು ನೆಟ್ಟನಂತರ ಅದನ್ನು ಘೃತಾದಿಗಳಿಂದ ಅಂಜನಮಾಡಿ (ತುಪ್ಪದಿಂದ ಸವರಿ) ಅದನ್ನು ಅಲಂಕರಿಸಿ, ಅನೇಕ ಸಂಸ್ಕಾರ ಗಳನ್ನು ಮಂತ್ರಪೂರ್ವಕವಾಗಿಮಾಡಿ ಅದನ್ನು ಪ್ರಾರ್ಥಿಸುವರು. ಈ ವಿಷಯವು **ಅಂಜಂತಿ ತ್ವಾಮಧ್ವರೇ ದೇವ ಯಂತಃ** (ಋ. ಸಂ. ೩-೮) ಎಂಬ ಸೂಕ್ತದಲ್ಲಿ ವಿಶದವಾಗಿ ಹೇಳಲ್ಪಟ್ಟಿರುವುದು. ಈ ಸೂಕ್ತವೆಲ್ಲಾ ಯೂಪದ ಸ್ತುತಿಯೇ ಆಗಿರುವುದು.

ಅಶ್ವಮೇಧಯಜ್ಞದಲ್ಲಿ ಯೂಪವು ಒಂದೇ ಆದರೂ ಕೆಲವು ಯಜ್ಞಗಳಲ್ಲಿ ಪಶುಗಳ ಸಂಖ್ಯೆಗೆ ಅನುಸಾರವಾಗಿ ಅನೇಕ ಯೂಪಗಳನ್ನು ನೆಡುವುದು ರೂಢಿಯಲ್ಲಿದ್ದಂತೆ ಕಾಣುವುದು. ಈ ವಿಷಯದಲ್ಲಿ ಕೆಲವು ಪಾಶ್ಚಾತ್ಯಪಂಡಿತರ ಅಭಿಪ್ರಾಯವು—

Twenty-one posts, of different kinds of wood, each twenty-one cubits long, are to be set up to which the different animals are to be fastened, amounting to three-hundred and forty-nine, besides two hundred and sixty wild animals, making altogether six hundred and nine according to Katyayana ; a similar enumeration occurs in the Ramayana b. i. ch. 12, 13 ; but the text is no warrant for such a multiplication and it would seem as if a single post

was intended ; when the word occurs uncompounded it is in the singular **ಚಷಾಲಂ ಯೇ ಅಶ್ವಯೂಪಾಯ ತಕ್ಷತಿ. ಚಷಾಲ** is given in the **ಅಮರಕೋಶ** and is explained by most of the commentators a wooden ring. or bracalet on the top of the sacrifical post ; some notice also authority for its being an iron ring at the foot of the post·

ಎಂದಿರುವುದು. ಯೂಪದ ವಿಚಾರವನ್ನು **ಅಜಂತಿತ್ವಾ** ಎಂಬ ಸೂಕ್ತವನ್ನು ವ್ಯಾಖ್ಯಾನಮಾಡುವಾಗ ವಿಸ್ತಾರವಾಗಿ ವಿವರಿಸಲಾಗುವುದು

**ಯೇ ಚ ಅರ್ವತೇ ಪಚನಂ ಸಂಭರಂತಿ**—ಈ ವಾಕ್ಯಕ್ಕೆ ಕುದುರೆಗೆ ಆಹಾರವನ್ನು ಬೇಯಿಸುವುದಕ್ಕಾಗಿ ಬೇಕಾದ ಸಲಕರಣೆಗಳನ್ನು ಎಂದರೆ ಪಾತ್ರೆ ಮೊದಲಾದುವುಗಳನ್ನು ಸಿದ್ಧಪಡಿಸುವ ಜನರು ಎಂದು ಭಾಷ್ಯಕಾರರೂ ಇತರರೂ ಅರ್ಥಮಾಡಿರುವರು. ವಾಕ್ಯದಲ್ಲಿರುವ ಶಬ್ದಗಳಿಗೆ ಇದೇ ಅಭಿಪ್ರಾಯವು ಭಾಸವಾಗುವುದಾದರೂ ಈ ಅರ್ಥವಲ್ಲದೆ ಬೇರೆ ಅರ್ಥವಿರಬಹುದೆಂದು ಊಹಿಸಲು ಸಾಧ್ಯವಿದೆ. ಯಜ್ಞದಲ್ಲಿ ಕುದುರೆಗೆ ಆಹಾರವನ್ನು ಬೇಯಿಸುವ ಪಾತ್ರೆಗಳನ್ನು ಮಾಡಲು ಕಾರಣವು ಅಷ್ಟಾಗಿರುವುದಿಲ್ಲ. ಪ್ರಾಯಶಃ ಕುದುರೆಯ ಅಂಗಗಳನ್ನೂ ಮಾಂಸಾದಿಗಳನ್ನೂ ದೇವತೆಗಳನ್ನುದ್ದೇಶಿಸಿ ಹೋಮಮಾಡುವಾಗ ಅವುಗಳನ್ನು ಬೇಯಿಸುವುದಕ್ಕೆ ಬೇಕಾಗುವ ಪಾತ್ರೆಗಳೇ ಇಲ್ಲಿ ಸೂಚಿತವಾಗಿರಬಹುದು ಎಂದು ಕೆಲವರ ಅಭಿಪ್ರಾಯವಿರುವುದು. ಮರದ ಪಾತ್ರೆಯಲ್ಲಿ ಆಹಾರವನ್ನು ಬೇಯಿಸುವುದು ಸಾಧ್ಯವಿಲ್ಲದ್ದರಿಂದ ಬೇಯಿಸಿದ ಆಹಾರವನ್ನು ಅಥವಾ ಹೋಮಮಾಡುವುದಕ್ಕೆ ಮುಂಚೆ ಮಾಂಸ ಮೊದಲಾದ ಕುದುರೆಯ ಅವಯವಗಳನ್ನು ಇರಿಸಲು ಬೇಕಾದ ಮರದ ಪಾತ್ರೆಗಳನ್ನು ಮಾಡುವ ವಿಷಯವು ನಿರ್ದಿಷ್ಟವಾಗಿದ್ದರೂ ಇರಬಹುದು. ಏಕಂದರೆ ಈ ಸೂಕ್ತದ-ಅಥವಾ **ಪಚನಂ ಸಂಭರಂತಿ** ಎಂಬ ಶಬ್ದಗಳಿಗೆ

**ಯೇ ವಾಜಿನಂ ಪರಿಪಶ್ಯಂತಿ ಪಕ್ವಂ ಯ ಈಮಾಹುಃ ಸುರಭಿರ್ನಿರ್ಹರೇತಿ |**
**ಯೇ ಚಾರ್ವತೋ ಮಾಂಸಭಿಕ್ಷಾಮುಪಾಸತ ಉತೋ ತೇಷಾಮಭಿಗೂರ್ತಿರ್ನ ಇನ್ವತು ||**
(ಋ. ಸಂ. ೧-೧೬೨-೧೨)

ಎಂಬ ಈ ಋಕ್ಕಿನಲ್ಲಿ ಕುದುರೆಯ (ಯಜ್ಞಪಶುವಿನ) ಮಾಂಸವನ್ನು ಬೇಯಿಸುವ ವಿಷಯವು ಉಕ್ತವಾಗಿರುವುದರಿಂದ ಈ ವಿಧವಾದ ಅರ್ಥಕ್ಕೆ ಸಮರ್ಥನೆ ದೊರೆತಿರುವುದು. ಪಚನಮಾಡುವುದಕ್ಕೆ ಸಾಧನಭೂತವಾದ ಕಾಷ್ಠಾದಿಗಳನ್ನು (ಸೌದೆ) ಸಂಗ್ರಹಮಾಡಿ ತರುವುದು ಎಂದಾದರೂ ಅರ್ಥವಾಗಬಹುದು.

**ತೇಷಾಂ ಅಭಿಗೂರ್ತಿಃನಃ ಇನ್ವತು**—ಈ ವಾಕ್ಯಕ್ಕೆ ಸಾಯಣರು **ನೋಽಸ್ಮತ್ಸಂಬಂಧಿನಾ ತೇಷಾಮೃತ್ವಿಜಾಮಭಿಗೂರ್ತಿಃ ಸಂಕಲ್ಪಃ ಸರ್ವಥಾ ಕರಣೀಯಮಿತಿ ಬುದ್ಧಿರಿನ್ವತು ವ್ಯಾಪ್ನೋತು | ಯಾಗಂ ಸಾಧುಪಾರಂ ಪ್ರಾಪಯ್ಯ ಫಲೇನ ಯೋಜಯತ್ವಿತ್ಯರ್ಥಃ**—ಎಂದರೆ ಮೇಲೆ ಹೇಳಿದ ವಿಷಯಗಳಲ್ಲಿ ಎಂದರೆ, ಯೂಪಕ್ಕಾಗಿ ವೃಕ್ಷವನ್ನು ಛೇದನಮಾಡುವುದು, ಅದನ್ನು ಹೊತ್ತುತರುವುದು, ಅದನ್ನು ಕೆತ್ತಿಸರಿಪಡಿಸಿ ಅಗ್ರಭಾಗಕ್ಕೆ ಬಳೆಯನ್ನು ಸೇರಿಸುವುದು, ಅಶ್ವದ ಆಹಾರವನ್ನು ಸಿದ್ಧಪಡಿಸುವ ಪಾತ್ರೆಗಳನ್ನುಮಾಡುವುದು, ಮೊದಲಾದ ಕರ್ಮಗಳಲ್ಲಿ ನಮ್ಮ ಋತ್ವಿಜರು ಯಾವರೀತಿ ಅನುಕೂಲವಾಗಬೇಕೆಂದು ಇಷ್ಟಪಡುವರೋ ಆರೀತಿ ಆಗಿ ಅವರ ಉದ್ದೇಶವು ನೆರವೇರಿ ನಮಗೆ ಯಾಗ ಮಾಡಿದ ಫಲವು ಸೇರಲಿ ಎಂಬ ಅಭಿಪ್ರಾಯ ಬರುವಂತೆ ಅರ್ಥವಿವರಣೆ ಮಾಡಿರುವರು. ಎಂದರೆ Wilson ಪಂಡಿತನು ಹೇಳಿರುವಂತೆ Let the exertions of them all fulfil our expectations ಈ ವಿಷಯಗಳಲ್ಲಿ ಅವರು ವಹಿಸಿದ ಶ್ರಮವು ಸಾರ್ಥಕವಾಗಿ ನಮಗೆ ತೃಪ್ತಿಯನ್ನುಂಟುಮಾಡಲಿ ಎಂದಭಿಪ್ರಾಯವು.

**ಅಭಿಗೂರ್ತಿಃ**—ಈ ಶಬ್ದಕ್ಕೆ ಈ ಋಕ್ಕಿನಲ್ಲಿ ಭಾಷ್ಯಕಾರರು ಅಭಿಗೂರ್ತಿಃ ಸಂಕಲ್ಪಃ ಸರ್ವಥಾಕರಣೀಯ-ಮಿತಿ ಬುದ್ಧಿಃ—ಅವಶ್ಯಕವಾಗಿ ಹೀಗೆಯೇ ಮಾಡಬೇಕೆಂಬ ಬುದ್ಧಿಯು ಎಂದೂ, ಇದೇ ಸೂಕ್ತದ ೧೨ನೇಯ ಋಕ್ಕಿನಲ್ಲಿರುವ ಇದೇ ಶಬ್ದಕ್ಕೆ **ಅಭಿಗೂರ್ತಿರಭಿತ ಉದ್ಯಮನಂ** ಸುತ್ತಲೂ ವ್ಯಾಪಿಸಿರುವ ಎಂದರೆ ನೆರವೇರುತ್ತಿರುವ ಕೆಲಸವು ಎಂದೂ, ಹದಿನೈದನೆಯ ಋಕ್ಕಿನಲ್ಲಿರುವ **ಅಭಿಗೂರ್ತಂ** ಎಂಬ ಶಬ್ದಕ್ಕೆ-**ಅಭಿಮುಖ್ಯೇನ ಪ್ರದಾನಾ-ಯೋದ್ಯತಂ** ಮುಖ್ಯವಾಗಿ ಅರ್ಪಿಸುವುದಕ್ಕೆ ಸಿದ್ಧಪಡಿಸಿರುವ ಎಂದೂ, ಅನೇಕವಿಧವಾಗಿ ಅರ್ಥಮಾಡಿರುವರು,

### ವ್ಯಾಕರಣಪ್ರಕ್ರಿಯಾ

**ಯೂಪವ್ರಸ್ಕಾಃ**—ಓ ವ್ರಶ್ಚೂ ಛೇದನೇ ಧಾತು. ಪಚಾದಿಯಲ್ಲಿ ಸೇರಿರುವುದರಿಂದ ಅಚ್ ಪ್ರತ್ಯಯ. ಛಾಂದಸವಾಗಿ ವರ್ಣವ್ಯತ್ಯಯ ಬಂದಿದೆ. ಸಮಾಸದಲ್ಲಿ ಕೃದುತ್ತರಪದಪ್ರಕೃತಿಸ್ವರ ಬರುತ್ತದೆ.

**ಯೂಪವಾಹಾಃ**—ವಹ ಪ್ರಾಪಣೇ ಧಾತು ಘಿಞ್ ಪ್ರತ್ಯಯ. **ಅತಉಪಧಾಯಾಃ** (ಪಾ. ಸೂ. ೭-೨-೧೧೬) ಎಂಬುದರಿಂದ ಆದಿವೃದ್ಧಿ. **ಕರ್ಷಾತ್ವತಃ** (ಪಾ. ಸೂ. ೬-೧-೧೫೯) ಎಂಬುದರಿಂದ ಅಂತೋದಾತ್ತ ಸ್ವರ ಬರುತ್ತದೆ.

**ಚಷಾಲಮ್**—ಚಷ ಭಕ್ಷಣೇ ಧಾತು. **ಸಾನಸಿವರ್ಣಸಿ-**(ಉ. ಸೂ. ೫೪೭) ಎಂಬುದರಿಂದ ಆಲಪ್ರತ್ಯಯ ದಿಂದ ನಿಪಾತಿತವಾಗಿದೆ. ಪ್ರತ್ಯಯದ ಆದ್ಯುದಾತ್ತಸ್ವರ ಬರುತ್ತದೆ.

**ಅಶ್ವಯೂಪಾಯ**—ಯುವಂತಿ ಬಧ್ನಂತಿ ಅಸ್ಮಿನ್ ಇತಿ ಯೂಪಃ ಯಜ್ಞಸ್ತಂಭಃ **ಕುಯುಭ್ಯಾಂ ಚ** (ಉ. ಸೂ. ೩೦೭) ಎಂಬುದರಿಂದ ಮಿಶ್ರಣಾರ್ಥಕಯು ಧಾತುವಿಗೆ ಪ ಪ್ರತ್ಯಯ. **ಧಾತುವಿಗೆ ದೀರ್ಘ. ಸಮಾಸ** ಸ್ವರದಿಂದ ಅಂತೋದಾತ್ತವಾಗುತ್ತದೆ.

**ತಕ್ಷತಿ**—ತಕ್ಷೂ ತನೂಕರಣೇ ಧಾತು. ಲಡಂತರೂಪ ಯಚ್ಛಬ್ದ ಸಂಬಂಧವಿರುವುದರಿಂದ ನಿಘಾತಸ್ವರ ಬರುವುದಿಲ್ಲ. ಧಾತುಸ್ವರ ಉಳಿಯುತ್ತದೆ.

**ಪಚನಮ್**—ಡುಪಚಿಷ್ ಪಾಕೇ ಧಾತು. ಕರಣಾರ್ಥದಲ್ಲಿ ಲ್ಯುಟ್ ಪ್ರತ್ಯಯ. ಅದಕ್ಕೆ ಅನಾದೇಶ. **ಲಿತಿ** (ಪಾ. ಸೂ. ೬-೧-೧೯೩) ಎಂಬುದರಿಂದ ಪ್ರತ್ಯಯದ ಪೂರ್ವಕ್ಕೆ ಉದಾತ್ತಸ್ವರ ಬರುತ್ತದೆ.

**ಸಂಭರಂತಿ**—ಭೃಞ್ ಭರಣೇ ಧಾತು. ಲಟ್ ಪ್ರಥಮಪುರುಷಬಹುವಚನಾಂತರೂಪ. **ಯದ್ಯೋಗವಿರು** ವುದರಿಂದ ನಿಘಾತಸ್ವರ ಬರುವುದಿಲ್ಲ. ಲಸಾರ್ವಧಾತುಕ ಅನುದಾತ್ತವಾಗುವುದರಿಂದ ಧಾತುಸ್ವರ ಉಳಿಯುತ್ತದೆ. **ತಿಙಿಚೋದಾತ್ತವತಿ** (ಪಾ. ಸೂ. ೮-೧-೭೧) ಎಂಬುದರಿಂದ ಗತಿಗೆ (ಸಮ್) ಅನುದಾತ್ತಸ್ವರ ಬರುತ್ತದೆ.

**ಅಭಿಗೂರ್ತಿಃ**—ಗೂರೀ ಹಿಂಸಾಗತ್ಯೋಃ ಧಾತು. **ಸ್ತ್ರಿಯಾಂಕ್ತಿನ್** (ಪಾ. ಸೂ. ೩-೩-೯೪) ಎಂಬುದ ರಿಂದ ಕ್ತಿನ್ ಪ್ರತ್ಯಯ. **ತಾದೌ ಚ ನಿತಿ** (ಪಾ. ಸೂ. ೬-೨-೫೦) ಎಂಬುದರಿಂದ ಗತಿಗೆ (ಅಭಿ) ನಿಘಾತಸ್ವರ ಬರುತ್ತದೆ.

**ಇನ್ವತು**—ಇವಿ ವ್ಯಾಪ್ತೌ ಧಾತು. **ಲೋಟ್** ಪ್ರಥಮಪುರುಷಏಕವಚನಾಂತರೂಪ. **ತಿಙಂತನಿಘಾತಸ್ವರ** ಬರುತ್ತದೆ. ॥ ೬ ॥

———

ಸಂಹಿತಾಪಾಠಃ

ಉಪ ಪ್ರಾಗಾತ್ಸುಮನ್ಮೇಽಧಾಯಿ ಮನ್ಮ ದೇವಾನಾಮಾಶಾ ಉಪ ವೀತಪೃಷ್ಠಃ ।
ಅನ್ವೇನಂ ವಿಪ್ರಾ ಋಷಯೋ ಮದಂತಿ ದೇವಾನಾಂ ಪುಷ್ಟೇ ಚಕೃಮಾ ಸುಬಂಧುಂ ॥ ೭ ॥

ಪದಪಾಠ

ಉಪ । ಪ್ರ । ಅಗಾತ್ । ಸುಽಮತ್ । ಮೇ । ಅಧಾಯಿ । ಮನ್ಮ । ದೇವಾನಾಂ । ಆಶಾಃ । ಉಪ । ವೀತಽಪೃಷ್ಠಃ ।
ಅನು । ಏನಂ । ವಿಪ್ರಾಃ । ಋಷಯಃ । ಮದಂತಿ । ದೇವಾನಾಂ । ಪುಷ್ಟೇ । ಚಕೃಮ । ಸುಽಬಂಧುಂ ॥ ೭ ॥

ಸಾಯಣಭಾಷ್ಯಂ

ಮನ್ಮ ಮನನೀಯಂ ಫಲಂ ಸುಮದುಪ ಪ್ರಾಗಾತ್ । ಉಪಪ್ರೈತು । ಸುಮತ್ಸ್ವಯಮಿತ್ಯರ್ಥಃ। ನಿ- ೬- ೨೨ । ಇತಿ ಯಾಸ್ಕಃ । ಯದ್ವಾ । ಸ್ವಯಮೇವ ಮಾದಯಿತೃತಮೇ ಮಯ್ಯಧಾಯಿ । ಧೀಯತೇ । ಫಲಭೂತೋಽಶ್ವ ಆಗತಃ ಸ ಚ ಮಯಾ ಧೃತ ಇತ್ಯರ್ಥಃ । ಕಿಮರ್ಥಂ । ವೀತಪೃಷ್ಠಃ ಸಾಧುಪೋಷಣೇನ ಪ್ರಾಪ್ತಪಶ್ಚಾದ್ಭಾಗಃ ಕಾಂತಪೃಷ್ಠೋ ವಾ । ಅತ್ಯಂತಂ ದೃಪ್ತ ಇತ್ಯರ್ಥಃ। ತಾದೃಶೋಽಯಂ ದೇವಾನಾಮಾಶಾಃ ಪೂರಯಿತುಮುಪ ಗಚ್ಛತು । ಯಾಗಾರ್ಥಮಾಗತಮೇನಂ ಸುಬಂಧುಂ ಶೋಭನಬಂಧನಮಶ್ವಂ ದೇವಾನಾಮಾಶಾಸ್ಯಮಾನಾನಾಂ ಪುಷ್ಟೇ ಪೋಷಣಾಯ ಚಕೃಮ । ಕುರ್ಮಃ । ತಂ ಚ ವಿಪ್ರಾ ಮೇಧಾವಿನ ಋತ್ವಿಜ ಋಷಯೋಽತೀಂದ್ರಿಯದ್ರಷ್ಟಾರೋಽನ್ಯೇ ವಾ ವಿಪ್ರಾ ಋಷಯಶ್ಚಾನು ಮದಂತಿ । ಅನುಮೋದಂತಾಂ । ಸಮ್ಯಕ್ ಕೃತಮಿತಿ ಪರಿತುಷ್ಯಂತು ॥

ಪ್ರತಿಪದಾರ್ಥ

**ಮನ್ಮ**—ಮನನೀಯವಾದ ಎಂದರೆ ಪೂಜ್ಯವಾದುದೂ ಯಜ್ಞಫಲಭೂತವಾದುದೂ ಆದ ಅಶ್ವವು । **ಸುಮತ್**—ತಾನಾಗಿಯೇ । **ಉಪ ಪ್ರಾಗಾತ್**—ಸಮೀಪಿಸಲಿ । **ಅಧಾಯಿ**—ಅನಂತರ (ನನ್ನಿಂದ) ಧೃತವಾಗಲಿ. । **ವೀತಪೃಷ್ಠಃ**—(ಆದುದರಿಂದ)ಪುಷ್ಟವಾದ ಪೃಷ್ಠಭಾಗವುಳ್ಳ ಈ ಅಶ್ವವು । **ದೇವಾನಾಂ**—ದೇವತೆಗಳ ।

**ಆಶಾಃ**—ಇಷ್ಟಾರ್ಥಗಳನ್ನು | **ಉಪ**—(ಪೂರೈಸಲು) ಸಮೀಪಿಸಲಿ | **ಏನಂ**—ಯಜ್ಞಾರ್ಥವಾಗಿ ಬಂದುದೂ, | **ಸುಬಂಧುಂ**—ಶ್ರೇಷ್ಠವಾದ ಬಂಧನವುಳ್ಳದ್ದೂ, ಆದ ಅಶ್ವವನ್ನು | **ದೇವಾನಾಂ**—(ಇದನ್ನು ಅಪೇಕ್ಷಿಸುತ್ತಿದ್ದ ದೇವತೆಗಳ | **ಪುಷ್ಟೇ**—ಪೋಷಣಕ್ಕಾಗಿ, | **ಚಕೃಮ**—ಸಿದ್ಧಮಾಡುವೆವು | **ವಿಪ್ರಾಃ**—ಮೇಧಾವಿಗಳಾದ ಋತ್ವಿಕ್ಕುಗಳೂ | **ಋಷಯಃ**—ಅತೀಂದ್ರಿಯಜ್ಞಾನವುಳ್ಳ ಋಷಿಗಳೂ | **ಅನುಮದಂತಿ**—(ನಮ್ಮ ಕರ್ಮವು ಶ್ರೇಷ್ಠವಾಗಿದೆಯೆಂದು) ಅನುಮೋದಿಸಿ ತೃಪ್ತಿಯನ್ನು ಸೂಚಿಸಲಿ |

ಭಾವಾರ್ಥ

ಯಜ್ಞಫಲಭೂತವಾದ ಈ ಅಶ್ವವು ತಾನಾಗಿಯೇ ಸಮೀಪಿಸಿ ನನ್ನಿಂದ ಧೃತವಾಗಿದೆ. ಆದ್ದರಿಂದ ಇದು ದೇವತೆಗಳ ಇಷ್ಟಾರ್ಥಗಳನ್ನು ನೆರವೇರಿಸಲು ಸಮೀಪಿಸಲಿ. ಯಜ್ಞಾರ್ಥವಾಗಿ ಬಂದುದೂ ಪುಷ್ಟವಾದ ಪೃಷ್ಠವುಳ್ಳದ್ದೂ, ಶ್ರೇಷ್ಠವಾದ ಬಂಧನವುಳ್ಳದ್ದೂ ಆದ ಅಶ್ವವನ್ನು ಇದನ್ನು ಅಪೇಕ್ಷಿಸುತ್ತಿದ್ದ ದೇವತೆಗಳ ಪೋಷಣಕ್ಕಾಗಿ ನಾವು ಸಿದ್ಧಮಾಡುವೆವು. ಮೇಧಾವಿಗಳಾದ ಋತ್ವಿಕ್ಕುಗಳೂ ಅತೀಂದ್ರಿಯಜ್ಞಾನವುಳ್ಳ ಋಷಿಗಳೂ ಸಹ ನಮ್ಮ ಕರ್ಮವು ಶ್ರೇಷ್ಠವಾಗಿದೆಯೆಂದು ಅನುಮೋದಿಸಿ ತೃಪ್ತಿಯನ್ನು ಸೂಚಿಸಲಿ.

English Translation

May my desire be of itself accomplished, such as it has been entertained, that the smooth-backed steed should come to (gratify) the expectations of the gods: we have made him well-secured for the nutriment of the gods; let the wise saints now rejoice.

ವಿಶೇಷವಿಷಯಗಳು

**ಸುಮತ್**—**ಸುಮತ್ಸ್ವಯಮಿತ್ಯರ್ಥಃ** (ನಿ- ೬- ೨೨) ಎಂಬ ನಿರುಕ್ತಕಾರರ ವಾಕ್ಯವನ್ನುದಹರಿಸಿ ಸಾಯಣರು ಈ ಪದಕ್ಕೆ ತಾನಾಗಿಯೇ ಎಂಬರ್ಥವನ್ನು ಮಾಡಿದ್ದಾರೆ. ಫಲವು ತಾನಾಗಿಯೇ ಒದಗಿ ಬರಲಿ ಎಂಬುದರಲ್ಲಿ ತಾತ್ಪರ್ಯ. **ಸುಮತ್** ಶಬ್ದಕ್ಕೆ **ಸ್ವಯಂ** ಎಂದರೆ ತನ್ನಷ್ಟಕ್ಕೆ ತಾನಾಗಿಯೇ ಎಂಬ ಅರ್ಥಮಾತ್ರವಲ್ಲದೆ **ಕಲ್ಯಾಣ; ಶೋಭನ** ಅಥವಾ ಭದ್ರ ಎಂಬರ್ಥಗಳೂ ಇವೆ. ಇದನ್ನು ಉದಾಹರಣೆಗಳೊಡನೆ ಹಿಂದೆ ವಿವರಿಸಿದೆ

**ಮನ್ಮ**—**ಮನನೀಯ** ಎಂದರೆ ಧ್ಯಾನಾರ್ಹವಾದುದು ಎಂದರ್ಥ. **ಮನ್ಮಶಬ್ದಕ್ಕೆ** ಮನಸ್ಸಿನ ಇಚ್ಛೆಯೆಂದು ಅವಯವಾರ್ಥವಾದರೂ ಋಕ್ಸಂಹಿತಾವಾಕ್ಯಗಳಲ್ಲಿ ಈ ಪದಪ್ರಯೋಗವು ಶ್ರೇಷ್ಠವಾದ ಅಭಿಲಾಷೆಯನ್ನು ತೋರಿಸುವ ವಸ್ತುವನ್ನು ನಿರ್ದೇಶಿಸುವುದಾಗಿದೆ. ನಿರುಕ್ತಕಾರರು ಇದೇ ಋಕ್ಕನ್ನುದಹರಿಸಿ ಈ ಪದದ ಅರ್ಥವನ್ನು ಮೇಲ್ಕಂಡಂತೆ ವಿವರಿಸಿದ್ದಾರೆ. (ನಿ. ೬. ೨೨) ಈ ಸಂದರ್ಭದಲ್ಲಿ ದುರ್ಗಾಚಾರ್ಯರು ಈ ಪದವನ್ನು ವಿವರಿಸುತ್ತಾ **ಮನ್ಮ-ಮನನೀಯಮರ್ಥಜಾತಂ** | ಅದ್ಭುತವಾದ ವಸ್ತುವೆಂದು ಅರ್ಥಮಾಡಿದ್ದಾರೆ. ಅದ್ಭುತವಾದ ವಸ್ತುವು ಯಜ್ಞಫಲವಾಗಬಹುದು; ಸ್ತುತಿಯಾಗಬಹುದು, ಹವಿಸ್ಸಾಗಬಹುದು. ಪ್ರಕೃತವಾದ ಋಕ್ಕಿನಲ್ಲಿ ಪೂಜ್ಯವಾದುದೂ ಧ್ಯಾನಾರ್ಹವಾದುದೂ ಆದ ಫಲವೆಂದರ್ಥವಾಗುತ್ತದೆ. **ಅಗ್ನಿಃ ಪ್ರತ್ನೇನ ಮನ್ಮನಾ** (ಐ. ಬ್ರಾ. ೧. ೪) ಇತ್ಯಾದಿ ವಾಕ್ಯಗಳಲ್ಲೂ ಸಹ ಈ ಪದದ ಅತಿಶಯವಾದ ಅರ್ಥವನ್ನು ಗಮನಿಸಬಹುದು.

**ವಿಪ್ರಾಃ ಋಷಯಃ**—ಎಂಬುದಕ್ಕೆ ಎರಡುವಿಧವಾದ ಅನ್ವಯವನ್ನು ಮಾಡಿದೆ. ಮೊದಲು **ವಿಪ್ರಾಃ** ಎನ್ನುವುದಕ್ಕೆ ಮೇಧಾವಿಗಳಾದ ಋತ್ವಿಕ್ಕುಗಳೆಂಬ ಪ್ರತ್ಯೇಕವಾದ ಅರ್ಥವನ್ನು ಹೇಳಿ ಅನಂತರ, **ಋಷಯಃ** ಎನ್ನುವುದಕ್ಕೆ ವಿಶೇಷಣವವನ್ನಾಗಿ ಮಾಡಿ ಇನ್ನೊಂದರ್ಥವನ್ನು ಮಾಡಿದೆ. ಅಲೌಕಿಕವಾದ ಜ್ಞಾನಚಕ್ಷುಸ್ಸುಳ್ಳ ಮೇಧಾವಿಗಳೆಂದರ್ಥ.

### ವ್ಯಾಕರಣಪ್ರಕಿಯಾ

**ಅಗಾತ್**—ಇಣ್ ಗತೌ ಧಾತು. **ಛಂದಸಿ ಲುಙ್‌ಲಙ್‌ಲಿಟಃ** ಎಂಬುದರಿಂದ ಲೋಡರ್ಥದಲ್ಲಿ ಲುಙ್. **ಇಣೋऽಗಾಲುಙಿ** (ಪಾ. ಸೂ. ೨-೪-೪೫) ಧಾತುವಿಗೆ ಗಾದೇಶ. **ಗಾತಿಸ್ಥಾಘು**—(ಪಾ. ಸೂ. ೨-೪-೭೭) ಎಂಬುವುದರಿಂದ ಸಿಚಿಗೆ ಲುಕ್. ತಿಙಂತನಿಘಾತಸ್ವರ ಬರುತ್ತದೆ.

**ಅಧಾಯಿ**—ಡುಧಾಞ್ ಧಾರಣಪೋಷಣಯೋಃ ಧಾತು. ಹಿಂದಿನಂತೆ ಛಾಂದಸವಾಗಿ ಕರ್ಮಣಿಯಲ್ಲಿ ಲುಙ್. ಪ್ರಥಮಪುರುಷಏಕವಚನಾಂತರೂಪ. ತಿಙಂತನಿಘಾತಸ್ವರ ಬರುತ್ತದೆ.

**ವೀತಪೃಷ್ಠಃ**— ಬಹುವ್ರೀಹೌ ಪ್ರಕೃತ್ಯಾ **ಪೂರ್ವಪದಮ್** (ಪಾ. ಸೂ. ೬-೨-೧) ಎಂಬುದರಿಂದ ಪೂರ್ವಪದಪ್ರಕೃತಿಸ್ವರ ಬರುತ್ತದೆ.

**ಮದಂತಿ**—ಮದೀ ಹರ್ಷೇ ಧಾತು. ಲೇಟ್ ಪ್ರಥಮಪುರುಷಬಹುವಚನಾಂತರೂಪ. ತಿಙಂತನಿಘಾತಸ್ವರ ಬರುತ್ತದೆ.

**ಸುಬಂಧುಮ್**—**ಆದ್ಯುದಾತ್ತಂ ದ್ವ್ಯಚ್ ಛಂದಸಿ** (ಪಾ. ಸೂ. ೬-೨-೧೧೯) ಎಂಬುದರಿಂದ ಉತ್ತರಪದ ಆದ್ಯುದಾತ್ತಸ್ವರ ಬರುತ್ತದೆ. ॥ ೭ ॥

### ಸಂಹಿತಾಪಾಠಃ

ಯದ್ವಾಜಿನೋ ದಾಮ ಸಂದಾನಮರ್ವತೋ ಯಾ ಶೀರ್ಷಣ್ಯಾ ರಶನಾ ರಜ್ಜುರಸ್ಯ ।
ಯದ್ವಾ ಘಾಸ್ಯ ಪ್ರಭೃತಮಾಸ್ಯೇ೩ ತೃಣಂ ಸರ್ವಾ ತಾ ತೇ ಅಪಿ ದೇವೇಷ್ವಸ್ತು ॥ ೮ ॥

ಪದಪಾಠಃ

ಯತ್ । ವಾಜಿನಃ । ದಾಮ । ಸಂಽದಾನಂ । ಅರ್ವತಃ । ಯಾ । ಶೀರ್ಷಣ್ಯಾ । ರಶನಾ । ರಜ್ಜುಃ । ಅಸ್ಯ ।

ಯತ್ । ವಾ । ಘ । ಅಸ್ಯ । ಪ್ರಽಭೃತಂ । ಆಸ್ಯೇ । ತೃಣಂ । ಸರ್ವಾ । ತಾ । ತೇ । ಅಪಿ । ದೇವೇಷು । ಅಸ್ತು ॥ ೮ ॥

ಸಾಯಣಭಾಷ್ಯಂ

ವಾಜಿನೋ ಗಮನವತೋಽರ್ವತೋಽಶ್ವಸ್ಯ ಯದ್ದಾಮ ಗ್ರೀವಾಬದ್ಧಾ ರಜ್ಜುಃ । ಯಚ್ಚ ಸಂದಾನಂ ಸಮ್ಯಗವಚ್ಛೇದಕಂ ಬಂಧಕಂ ಪಾದಬಂಧನಂ ದಾಮಾಸ್ತಿ । ಯಾ ಚಾಸ್ಯ ಶೀರ್ಷಣ್ಯಾ ಶಿರಸಿ ಬದ್ಧಾ ಖಲೀನರಜ್ಜುರಸ್ತಿ ॥ ಶಿರಃ ಶಬ್ದಾದ್ಭವೇ ಛಂದಸೀತಿ ಯತ್ । ಯೇ ಚ ತದ್ಧಿತೇ । ಪಾ. ೬-೧-೬೧ । ಇತಿ ಶೀರ್ಷನ್ನಾವಃ। ತಿತ್ಸ್ವರಿತಃ ॥ ಯದ್ವಾ । ಘಾಸ್ಯಾಶ್ವಸ್ಯಾಸ್ಯೇ ಮುಖೇ ಪ್ರಭೃತಂ ಪ್ರಹೃತಂ ಪ್ರಕ್ಷಿಪ್ತಂ ತೃಣಮಸ್ತಿ । ಘ ಶಬ್ದೋ ಹಾರ್ಥೇ ಸ ಚ ಪ್ರಸಿದ್ಧ್ಯರ್ಥಃ । ಸರ್ವಾ ಸರ್ವಾಣಿ ತಾ ತಾನಿ ಸರ್ವಾಣ್ಯಪಿ ಹೇ ಅಶ್ವ ತೇ ತವ ಸಂಬಂಧೀನಿ ದೇವೇಷ್ವಸ್ತು । ಸಂತು । ದೇವೇಷು ಮಧ್ಯೇ ಭವಂತು । ದೇವತ್ವಂ ಪ್ರಾಪ್ನುವಂತು ವಾ ॥ ವಚನವ್ಯತ್ಯಯಃ ॥ ಅತ್ರೋಪಯುಕ್ತಾನಾಂ ಸರ್ವೇಷಾಂ ದೇವತ್ವಂ ಕಿಲ ಅಶ್ವಸ್ಯ ತತ್ಪ್ರಾಪ್ತಿರ್ನಾಶಾಸನೀಯಾ ॥

ಪ್ರತಿಪದಾರ್ಥ

ವಾಜಿನಃ — ಸಂಚಾರಸ್ವಭಾವವುಳ್ಳ । ಅಸ್ಯ ಅರ್ವತಃ — ಈ ಅಶ್ವದ । ಯತ್ — ಯಾವ । ದಾಮ—ಕತ್ತಿಗೆ ಕಟ್ಟತಕ್ಕದ್ದೂ, । ಸಂದಾನಂ—ಕಾಲಿಗೆ ಕಟ್ಟತಕ್ಕದ್ದೂ, । ಯಾ—ಯಾವ । ಶೀರ್ಷಣ್ಯಾ—ಕುತ್ತಿಗೆಗೆ ಕಟ್ಟತಕ್ಕದ್ದೂ । ರಶನಾ— ನಡುಕಟ್ಟಿನರೂಪದ್ದೂ ಆದ । ರಜ್ಜುಃ — ಹಗ್ಗವೇ ಮೊದಲಾದ ಬಂಧಕ ಸಾಧನವು । (ಅಸ್ತಿ— ಇದೆಯೋ) । ಯದ್ವಾ ಘ—ಅಥವಾ ಒಂದುವೇಳೆ, । ಅಸ್ಯ—ಈ ಅಶ್ವದ । ಆಸ್ಯೇ—ಮುಖದಲ್ಲಿ (ಬಾಯಿಯಲ್ಲಿ) । ಪ್ರಭೃತಂ—ಇಡಲ್ಪಟ್ಟ । ಯತ್ ತೃಣಂ—ಯಾವ ಹುಲ್ಲಿದೆಯೋ ತಾ. ಸರ್ವಾ—ಅವೆಲ್ಲವೂ ಸಹ ।ತೇ—ನಿನ್ನೊಡನೆ । ದೇವೇಷ್ವಪಿ—ನೀನು ದೇವತೆಗಳ ನಡುವೆ ಇರುವಾಗಲೂ ಸಹ । ಅಸ್ತು—ಇರಲಿ ।

ಭಾವಾರ್ಥ

ಸಂಚಾರಸ್ವಭಾವವುಳ್ಳ ಈ ಅಶ್ವದ ಕತ್ತಿಗೆ ಕಟ್ಟತಕ್ಕದ್ದೂ, ಕಾಲಿಗೆ ಕಟ್ಟತಕ್ಕದ್ದೂ, ಕುತ್ತಿಗೆಗೆ ಕಟ್ಟತಕ್ಕದ್ದೂ, ನಡುಕಟ್ಟಿನ ರೂಪದ್ದೂ ಆದ ಹಗ್ಗಗಳೇ ಮೊದಲಾದ ಯಾವ ಬಂಧಕಸಾಧನಗಳಿವೆಯೋ ಅವೂ ಮತ್ತು ಈ ಅಶ್ವದ ಬಾಯಿಯಲ್ಲಿ ಇಡಲ್ಪಟ್ಟ ಯಾವ ಹುಲ್ಲು ಇದೆಯೋ ಅದೂ ಸಹ ಎಲ್ಲವೂ ಒಟ್ಟಿಗೆ ಈ ಅಶ್ವದೊಡನೆ ದೇವತೆಗಳ ನಡುವೆ ಇರಲಿ.—

## English Translation

May the halter and the heel-ropes of the fleet courser, and the head-ropes, the girths, and any other (part of the harness); and the grass that has been put into the mouth; may all these be with you, (horse), amongst the gods.

ವಿಶೇಷವಿಷಯಗಳು

ಅಶ್ವವನ್ನು ಆಹುತಿಯನ್ನಾಗಿ ಅರ್ಪಿಸಿ ಯಾಗಮಾಡಿ ಸಂಪತ್ತನ್ನೂ, ವೀರ್ಯವನ್ನೂ ಸದ್ಗತಿಯನ್ನೂ ಪಡೆಯಲಾಶಿಸಿದ ಯಜಮಾನನು ತನ್ನ ಸುಖಕ್ಕೆ ಸಾಧನವಾದ ಅಶ್ವಕ್ಕೂ ಸಹ ಸದ್ಗತಿಯೂ ಸೌಖ್ಯವೂ ದೊರೆಯಲೆಂದು ಆಶಿಸುತ್ತಾನೆ.

**ವಾಜಿನಃ ಅರ್ವತಃ** ಎಂಬ ವಿಶೇಷಣಗಳಿಂದ ಅಶ್ವದ ಸ್ವತಂತ್ರವಾದ ಗಮನವೂ, ಗಮನದ ವೇಗವೂ ಸೂಚಿತವಾಗಿದೆ ಆದರೆ **ದಾಮ ; ಶೀರ್ಷಣೀ, ರಶನಾ** ಇತ್ಯಾದಿಗಳು ಬಂಧಕವಾದ ಅವಸ್ಥೆಯನ್ನು ಸೂಚಿಸುತ್ತವೆ. ಆದರೆ ಅಶ್ವಮೇಧಕ್ಕೆ ಸಿದ್ಧವಾಗಿ ದೇವತೆಗಳಿಗೆ ಅರ್ಪಿತವಾದ ಕುದುರೆಗೆ ಈ ಲೌಕಿಕವಾದ ಬಂಧಕಗಳಿದ್ದರೂ ಸಹ ಅವು ಅಲಂಕಾರಪ್ರಾಯವಾಗಿಯೇ ಇದ್ದು ಅಶ್ವವನ್ನು ದೇವತೆಗಳ ನಡುವೆ ಕರೆದೊಯ್ಯುತ್ತವೆ ಎಂದು ತಾತ್ಪರ್ಯವು. ಇಲ್ಲಿ ತೃಣವನ್ನು ಮೇಯುವುದರಿಂದ ಯಾವ ಸೌಖ್ಯವುಂಟೋ ಅದೇ ಸೌಖ್ಯವು ಅನುಸ್ಯೂತವಾಗಿರಲಿ ಎಂದೂ ಸಹ ಪ್ರಾರ್ಥಿಸಿದೆ.

ವ್ಯಾಕರಣಪ್ರಕ್ರಿಯಾ

**ಸಂದಾನಮ್**—ಡುದಾಞ್ ದಾನೇ ಧಾತು. ಲ್ಯುಟ್ ಪ್ರತ್ಯಯ. ಅದಕ್ಕೆ ಅನಾದೇಶ. ಆದ್ಯುದಾತ್ತಸ್ವರ ಬಂದಾಗ ಪ್ರಾದಿಸಮಾಸದಲ್ಲಿ ಕೃದುತ್ತರಪದಪ್ರಕೃತಿಸ್ವರ ಬರುತ್ತದೆ.

**ಶೀರ್ಷಣ್ಯಾ**—ಶಿರಸಿ ಭವಾ ಶೀರ್ಷಣ್ಯಾ. **ಭವೇಛಂದಸಿ** (ಪಾ. ಸೂ. ೪-೪-೧೧೦) ಎಂಬುದರಿಂದ ಶಿರಃ ಶಬ್ದಕ್ಕೆ ಯತ್ ಪ್ರತ್ಯಯ **ಯೇ ಚ ತದ್ಧಿತೇ** (ಪಾ. ಸೂ. ೬-೧-೬೧) ಎಂಬುದರಿಂದ **ಶೀರ್ಷನ್** ಭಾವ. **ತಿತ್ ಸ್ವರಿತಮ್** (ಪಾ. ಸೂ. ೬-೧-೧೮೫) ಎಂಬುದರಿಂದ ಸ್ವರಿತಸ್ವರ ಬರುತ್ತದೆ.

**ರಶನಾ**—ಅಶೂ ವ್ಯಾಪ್ತೌ ಧಾತು. **ಅಶೇ ರಶ ಚ**(ಉ- ಸೂ. ೨೩೩) ಎಂಬುದರಿಂದ ಯುಚ್ ಪ್ರತ್ಯಯ. ಪ್ರಕೃತಿಗೆ ರಶಾದೇಶ. **ಯುವೋರನಾಕೌ** (ಪಾ. ಸೂ. ೭-೧-೧) ಎಂಬುದರಿಂದ ಪ್ರತ್ಯಯಕ್ಕೆ ಅನಾದೇಶ. **ಚಿತಃ** (ಪಾ. ಸೂ. ೬-೧-೧೬೩) ಎಂಬುದರಿಂದ ಅಂತೋದಾತ್ತಸ್ವರ ಬರುತ್ತದೆ.

**ಪ್ರಭೃತಮ್**—ಹೃಞ್ ಹರಣೇ ಧಾತು. ಕರ್ಮಣಿಯಲ್ಲಿ ಕ್ತ ಪ್ರತ್ಯಯ **ಹೃಗ್ರಹೋರ್ಭಶ್ಛಂದಸಿ** ಎಂಬುದರಿಂದ ಹಕಾರಕ್ಕೆ ಭಕಾರಾದೇಶ. **ಗತಿರನಂತರಃ** (ಪಾ. ಸೂ. ೬-೨-೪೯) ಎಂಬುದರಿಂದ ಗತಿಗೆ (ಪ್ರ) ಉದಾತ್ತಸ್ವರ ಬರುತ್ತದೆ.

**ಅಸ್ತು**—ಅಸ ಭುವಿ ಧಾತು. **ವ್ಯತ್ಯಯೋ ಬಹುಲಮ್** ಎಂಬುದರಿಂದ ಬಹುವಚನಕ್ಕೆ ಏಕವಚನ ಪ್ರತ್ಯಯ ಲೋಟನಲ್ಲಿ ಬಂದಿದೆ. ಅತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ. ॥ ೮ ॥

——— :0: ———

। ಸಂಹಿತಾಪಾಠಃ ।

ಯದಶ್ವಸ್ಯ ಕ್ರವಿಷೋ ಮಕ್ಷಿಕಾಶ ಯದ್ವಾ ಸ್ವರೌ ಸ್ವಧಿತೌ ರಿಪ್ತಮಸ್ತಿ ।
ಯದ್ಧಸ್ತಯೋಃ ಶಮಿತುರ್ಯನ್ನಖೇಷು ಸರ್ವಾ ತಾ ತೇ ಅಪಿ ದೇವೇಷ್ವಸ್ತು ॥ ೯ ॥

ಪದಪಾಠಃ

ಯತ್ । ಅಶ್ವಸ್ಯ । ಕ್ರವಿಷಃ । ಮಕ್ಷಿಕಾ । ಆಶ । ಯತ್ । ವಾ । ಸ್ವರೌ । ಸ್ವಽಧಿತೌ । ರಿಪ್ತಂ । ಅಸ್ತಿ ।
ಯತ್ । ಹಸ್ತಯೋಃ । ಶಮಿತುಃ । ಯತ್ । ನಖೇಷು । ಸರ್ವಾ । ತಾ । ತೇ । ಅಪಿ । ದೇವೇಷು । ಅಸ್ತು

ಸಾಯಣಭಾಷ್ಯಂ

ಅಶ್ವಸ್ಯ ತದವಯವಭೂತಸ್ಯ ಕ್ರವಿಷ ಆಮಮಾಂಸಸ್ಯ ಯತ್ ಯದಂಗಂ ಮಕ್ಷಿಕಾಶ ಆಭಕ್ಷಯತ್ ॥ ಅಶ ಭೋಜನೇ ॥ ಯದ್ವಾ ॥ ಕರ್ಮಣಿ ಷಷ್ಠೀ ॥ ಅಶ್ವಸ್ಯ ಯನ್ಮಾಂಸಂ ಭಕ್ಷಯತಿ । ವಾಥವಾ ಸ್ವರೌ ಪಶ್ವಂಜನಕಾಲೇ ಯದ್ರಿಪ್ತಂ ಲಿಪ್ತಮಸ್ತಿ । ಸ್ವರುಣಾ ಪಶುಮನಕ್ತೀತಿ ಶ್ರುತೇಃ । ಅಥವಾ ಸ್ವಧಿತೌ ಛೇದನಕಾಲೇ ಚಾವದಾನಕಾಲೇ ಯದ್ರಿಪ್ತಮಸ್ತಿ ಶಮಿತುರ್ಹಸ್ತಯೋರ್ಲಿಪ್ತಮಸ್ತಿ । ವಿಶಸನ-ಕಾಲೇ ಯಚ್ಚ ನಖೇಷು ಲಿಪ್ತಂ । ತಾ ಸರ್ವಾ ತಾನಿ ಸರ್ವಾಣಿ ಹೇ ಅಶ್ವ ತೇ ತವ ಸಂಬಂಧೀನಿ ದೇವೇ-ಷ್ವಸ್ತು । ದೇವೇಷು ಸಂತೋಷಾರ್ಥಾಯ ಭವಂತು ॥

ಪ್ರತಿಪದಾರ್ಥ

ಅಶ್ವಸ್ಯ—ಈ ಯಜ್ಞಾಶ್ವದ । ಕ್ರವಿಷಃ—ಮಾಂಸಪೂರಿತವಾದ । ಯತ್—ಯಾವ ಅಂಗವನ್ನು । ಮಕ್ಷಿಕಾ—ನೊಣವು । ಆಶ—ತಿನ್ನುತ್ತಿತ್ತೋ, । ವಾ—ಅಥವಾ । ಸ್ವರೌ—ವಧಸ್ತಂಭದಲ್ಲಾಗಲಿ । ಸ್ವಧಿತೌ—ಛೇದನಸಾಧನವಾದ ಕತ್ತಿಯಲ್ಲಾಗಲಿ । (ಯತ್) ರಿಪ್ತಂ ಅಸ್ತಿ—ಯಾವ ಭಾಗವು ಅಂಟಿಕೊಂಡಿರುವುದೋ ಶಮಿತುಃ—ಛೇದಕಾರನ । ಹಸ್ತಯೋಃ—ಕೈಗಳಲ್ಲೂ । ನಖೇಷು—ಉಗುರುಗಳಲ್ಲಿಯೂ ಸಹ । ಯತ್—ಯಾವಲೇಪನವಿದೆಯೋ, । (ಅಶ್ವ—ಎಲೈ, ಅಶ್ವವೇ) । ತೇ—ನಿನಗೆ ಸಂಬಂಧಿಸಿದ । ತಾ ಸರ್ವಾ—ಅವೆಲ್ಲವೂ ದೇವೇಷು ಅಸ್ತು—ದೇವತೆಗಳಿಗೆ ಸೇರುವಂತಾಗಲಿ.

ಭಾವಾರ್ಥ

ಎಲೈ ಅಶ್ವವೇ, ಯಜ್ಞಾಶ್ವವಾದ ನಿನ್ನ ಮಾಂಸಪೂರಿತವಾದ ಯಾವ ಅಂಗವನ್ನು ನೊಣವು ಇಲ್ಲಿ ತಿನ್ನುತ್ತಿತ್ತೋ, ವಧಸ್ತಂಬದಲ್ಲಾಗಲಿ ಅಥವಾ ವಧಸಾಧನವಾದ ಕತ್ತಿಯಲ್ಲಾಗಲಿ ಯಾವ ಅಂಶವು ಅಂಟಿಕೊಂಡಿದ್ದಿತೋ

ಮತ್ತು ಛೇದಕನ ಕೈಗಳಲ್ಲೂ ಉಗುರುಗಳಲ್ಲೂ ಯಾವ ಅಂಶವು ಸೇರಿರುವುದೋ ಅವೆಲ್ಲವೂ ದೇವತೆಗಳಿಗೆ ಅರ್ಪಿತವಾಗಲಿ.

## English Translation

Whatever the flies may eat of the raw flesh of the horse; whatever (grease) is smeared upon the brush or upon the axe; (what is smeared) upon the hands or the nails of the immolator, may all this be with thee, (horse), among the gods.

### ವಿಶೇಷವಿಷಯಗಳು

ಯಜ್ಞಾಶ್ವವನ್ನು ಕಟ್ಟತಕ್ಕ ಯೂಪಸ್ತಂಭ ಮತ್ತು ಛೇದಿಸತಕ್ಕ ಕತ್ತಿ ಇವುಗಳಿಗೆ ಅಂಜನವನ್ನು ಲೇಪಮಾಡುವುದು ಪದ್ಧತಿ. ಅಂತಹ ಅಂಜನದ ಲೇಪವೂ ಸಹ ಅಶ್ವದ ಅಲಂಕಾರಕ್ಕಾಗಿ ದೇವತೆಳಿಗೆ ಸೇರಲಿ ಎಂದು ಪ್ರಾರ್ಥಿಸಿದೆ.

**ಸ್ವರೌ**—ಸಾಧಾರಣವಾಗಿ ಸ್ವರುವೆಂದರೆ ಯೂಪಸ್ತಂಭವೆಂದರ್ಥ. ಕಣ್ಣಿಗೆ ಅಂಜನವನ್ನು ಬಳಿಯುವಂತೆ ಯೂಪಸ್ತಂಭಕ್ಕೂ ಅಂಜನವನ್ನು ಲೇಪಮಾಡುವುದು ವಿಧ್ಯುಕ್ತವಾದ ಕರ್ಮವಾಗಿದೆ. ಸ್ವರುವನ್ನು ಯೂಪಶಕಲವೆಂದೂ ಹೇಳುವ ಪದ್ಧತಿಯಿದೆ. ಉದಾಹರಣೆಗೆ,

**ಅಥ ಯೇ ತೇಭ್ಯೋಽವರ ಆಸಂಸ್ತ ಏತಂ ಸ್ವರುಮಪಶ್ಯನ್ಯೂಪಶಕಲಂ ।**
(ಐ. ಬ್ರಾ. ೨-೩)

ಎಂಬಲ್ಲೂ, ಮತ್ತು ತೈತ್ತಿರೀಯ ಸಂಹಿತೆಯಲ್ಲಿ **ಅಗ್ರೇಗಾ ನೇತ್ರ್ಯಾಣಾಂ ವನಸ್ಪತಿಃ** (೧-೩-೬) ಎಂಬಲ್ಲೂ ಸಹ **ಯೂಪಸ್ಯ ಪ್ರಥಮಶಕಲಃ** ಎಂದರ್ಥ ಮಾಡಿದೆ. ಆದರೆ ಸಾಯಣರು ತೈತ್ತಿರೀಯಸಂಹಿತಾವಾಕ್ಯಕ್ಕೆ ಅರ್ಥವನ್ನು ವಿವರಿಸುತ್ತಾ **ಪ್ರಥಮಶಕಲಃ; ಸ್ವರುಃ; ಚಷಾಲಂ** ಎಂಬ ಯೂಪಸ್ತಂಭದ ಮೂರು ಬೇರೆ ಬೇರೆ ಅವಯವಗಳೆಂದು ವಿವರಿಸಿದ್ದಾರೆ. ಭಟ್ಟಭಾಸ್ಕರ ಭಾಷ್ಯದಲ್ಲೂ ಇದೇ ವಿಭಾಗಗಳಿವೆ. ಆದರೆ ಸಾಯಣರು,

**ಅಪಶ್ಯಂಥ್ಸ್ವರುಂ ಯೂಪಸ್ಯ ಸಂಸ್ಥಿತೇ ಸೋಮೇ ।**
(ತೈ. ಸಂ. ೬-೩-೪)

ಎಂಬ ತೈತ್ತಿರೀಯ ಸಂಹಿತಾವಾಕ್ಯದಲ್ಲಿ ಮಾತ್ರ **ಸ್ವರು** ವೆಂದರೆ **ಪ್ರಥಮ** ಶಕಲವೆಂದೇ ಅರ್ಥಮಾಡಿದ್ದಾರೆ. ಅವರ ಹಿಂದಿನ ವಿವರಣೆಗೂ, ಈ ವಾಕ್ಯದ ವಿವರಣೆಗೂ ಪರಸ್ಪರವಾದ ವಿರೋಧವಿದೆ. ಪ್ರಕೃತವಾದ ಋಕ್ಕಿನಲ್ಲಿ ಸಾಯಣರು **ಸ್ವರೌ** ಎಂಬ ಪದಕ್ಕೆ **ಪಶ್ವಂಜನಕಾಲೇ** ಎಂದು ಅರ್ಥಮಾಡಿದ್ದಾರೆ.

**ಸ್ವಧಿತೌ**—**ಸ್ವಧಿತಿ** ಶಬ್ದವು ವಜ್ರ ನಾಮಗಳಲ್ಲಿ ಪಠಿತವಾಗಿದೆ. (ನಿ. ೩-೧೧) ಪಶುಹನನಸಾಧನವಾದ ಮಚ್ಚು ಎಂದರ್ಥವಾಗುತ್ತದೆ.

**ಬ್ರಹ್ಮಾ ದೇವಾನಾಂ ಪದವೀಃ ಕವೀನಾಮೃಷಿರ್ವಿಪ್ರಾಣಾಂ ಮಹಿಷೋ ಮೃಗಾಣಾಂ ।**
**ಶ್ಯೇನೋ ಗೃಧ್ರಾಣಾಂ ಸ್ವಧಿತಿರ್ವನಾನಾಂ ಸೋಮಃ ಪವಿತ್ರಮತ್ಯೇತಿ ರೇಭನ್ ॥**
(ಋ. ಸಂ. ೯-೯೬-೬)

ಎಂಬಲ್ಲಿ ವನಾನಾಂ ಎಂಬ ಪದಕ್ಕೆ **ಹಿಂಸಕಾನಾಂ ಛೇದಕಾನಾಂ ಮಧ್ಯೇ ಸ್ವಧಿತಿಃ ಏತನ್ನಾಮಕಶ್ಛೇದಕೋಽಸಿ** ಎಂದು ವಿವರಿಸಿ ಈ ಪದಕ್ಕೆ ಛೇದಕಸಾಧನವೆಂದರ್ಥ ಮಾಡಿರುವಂತೆ ಇಲ್ಲಿಯೂ ಸಹ ಅದೇ ಅರ್ಥವಾಗುತ್ತದೆ. ಆದರೆ ಸಾಯಣರು ಪ್ರಕೃತವಾದ ಋಕ್ಕಿನಲ್ಲಿ ಈ ಪದಕ್ಕೆ **ಛೇದನಕಾಲೇ** ಛೇದಿಸತಕ್ಕಕಾಲದಲ್ಲಿ ಎಂದರ್ಥ ಮಾಡಿದ್ದಾರೆ.

**ಶಮಿತುಃ**—ಈ ಪದಕ್ಕೆ ಸಾಯಣರು ಅರ್ಥವನ್ನು ಹೇಳಿಲ್ಲ. ಯಜ್ಞಪಶುವನ್ನು ವಧೆಮಾಡುವವನಿಗೆ ಶಮಿತೃವೆಂದು ಹೆಸರು. ಈ ವಿಷಯವನ್ನು ಮುಂದಿನ ಋಕ್ಕಿನ ವಿವರಣೆಯಲ್ಲಿ ಚರ್ಚಿಸಲಾಗುತ್ತದೆ.

### ವ್ಯಾಕರಣಪ್ರಕ್ರಿಯಾ

**ಮಕ್ಷಿಕಾ**—ಮಶ ಶಬ್ದೇ ಧಾತು. **ಹನಿಮಶಿಭ್ಯಾಂಸಿಕನ್** (ಉ. ಸೂ. ೪-೫೩) ಎಂಬುದರಿಂದ ಸಿಕನ್ ಪ್ರತ್ಯಯ. **ವ್ರಶ್ಚಭ್ರಸ್ಜ**—ಸೂತ್ರದಿಂದ ಶಕಾರಕ್ಕೆ ಷತ್ವ ಬಂದಾಗ **ಷಢೋಃಕಸಿ** ಎಂಬುದರಿಂದ ಅದಕ್ಕೆ ಕತ್ವ. ಸಕಾರಕ್ಕೆ ಅದನ್ನು ನಿಮಿತ್ತೀಕರಿಸಿ ಷತ್ವ. ಸ್ತ್ರೀತ್ವದಲ್ಲಿ ಟಾಪ್. ಪ್ರತ್ಯಯನಿತ್ತಾದುದರಿಂದ ಆದ್ಯುದಾತ್ತಸ್ವರ ಬರುತ್ತದೆ.

**ಆಶ**—ಅಶ ಭೋಜನೇ ಧಾತು. ಲಿಟ್ ಪ್ರಥಮಪುರುಷಏಕವಚನಾಂತರೂಪ. ಯದ್ಯೋಗವಿರುವುದರಿಂದ ನಿಘಾತಸ್ವರ ಬರುವುದಿಲ್ಲ. ಣಲ್ ಪ್ರತ್ಯಯ ಲಿತ್ತಾದುದರಿಂದ **ಲಿತಿ** (ಪಾ. ಸೂ. ೬-೧-೧೯೩) ಎಂಬುದರಿಂದ ಆದ್ಯುದಾತ್ತಸ್ವರ ಬರುತ್ತದೆ. ಕ್ರವಿಷಃ ಎಂಬಲ್ಲಿ ಕರ್ಮಾರ್ಥದಲ್ಲಿ ಷಷ್ಠೀ ಬಂದಿದೆ.

**ಸ್ವರೌ**—ಸ್ವೃ ಶಬ್ದೋಪತಾಪಯೋಃ ಧಾತು. **ಕೃಸ್ವೃಷ್ಣಿಹಿ**-(ಉ. ಸೂ. ೧-೧೦) ಎಂಬುದರಿಂದ ಉನ್ ಪ್ರತ್ಯಯ. ಅದನ್ನು ನಿಮಿತ್ತೀಕರಿಸಿ ಧಾತುವಿನ ಇಕಿಗೆ ಗುಣ. ರ ಪರವಾಗಿ ಬರುತ್ತದೆ. ಪ್ರತ್ಯಯ ನಿತ್ತಾದುದರಿಂದ ಆದ್ಯುದಾತ್ತಸ್ವರ ಬರುತ್ತದೆ. ಸಪ್ತಮೀಏಕವಚನಾಂತರೂಪ.

**ರಿಪ್ತಮ್**—ಲಿಪ ಉಪದೇಹೇ ಧಾತು. ಕರ್ಮಣಿಯಲ್ಲಿ ಕ್ತ ಪ್ರತ್ಯಯ. ವರ್ಣವ್ಯತ್ಯಯದಿಂದ ಆದಿಗೆ ರೇಫ. ಪ್ರತ್ಯಯಸ್ವರದಿಂದ ಅಂತೋದಾತ್ತವಾಗುತ್ತದೆ.

**ಅಸ್ತಿ**—ಯದ್ಯೋಗವಿರುವುದರಿಂದ ನಿಘಾತಸ್ವರ ಬರುವುದಿಲ್ಲ. ತಿಪ್ ಪಿತ್ತಾದುದರಿಂದ ಧಾತುಸ್ವರ ಉಳಿಯುತ್ತದೆ.

**ಶಮಿತುಃ**—ಶಮು ಉಪಶಮೇ ಧಾತು. ಕರ್ತರಿಯಲ್ಲಿ ತೃಚ್ ಪ್ರತ್ಯಯ. ಅದಕ್ಕೆ ಇಡಾಗಮ. ಚಿತ್ತಾದುದರಿಂದ ಅಂತೋದಾತ್ತಸ್ವರ ಬರುತ್ತದೆ. ॥ ೯ ॥

———:o:———

### ಸಂಹಿತಾಪಾಠಃ

## ಯದೂವಧ್ಯಮುದರಸ್ಯಾಪವಾತಿ ಯ ಆಮಸ್ಯ ಕ್ರವಿಷೋ ಗಂಧೋ ಅಸ್ತಿ ।

ಸುಕೃತಾ ತಚ್ಛಮಿತಾರಃ ಕೃಣ್ವಂತೂತ ಮೇಧಂ ಶೃತಪಾಕಂ ಪಚಂತು॥೧೦॥

**ಪದಪಾಠಃ**

ಯತ್ । ಊವಧ್ಯಂ । ಉದರಸ್ಯ । ಅಪऽವಾತಿ । ಯಃ । ಆಮಸ್ಯ । ಕ್ರವಿಷಃ । ಗಂಧಃ । ಅಸ್ತಿ ।

ಸುऽಕೃತಾ । ತತ್ । ಶಮಿತಾರಃ । ಕೃಣ್ವಂತು । ಉತ । ಮೇಧಂ । ಶೃತऽಪಾಕಂ । ಪಚಂತು ॥ ೧೦ ॥

**ಸಾಯಣಭಾಷ್ಯಂ**

ಉದರಸ್ಯ ಸಂಬಂಧಿ ಯದೂವಧ್ಯಮೀಷಜ್ಜೀರ್ಣಂ ತೃಣಂ ಪುರೀಷಮಪವಾತಿ ಅಪಗಚ್ಛತಿ। ಯಶ್ಚಾಮಸ್ಯಾಪಕ್ವಸ್ಯ ಕ್ರವಿಷೋ ಮಾಂಸಸ್ಯ ಗಂಧೋಽಸ್ತಿ ಲೇಶೋಽಸ್ತಿ। ಪಾಕಸ್ಯ ಸಮಯೇ ಯತ್ಕಿಂಚಿದೂವಧ್ಯಮಪಕ್ವಸ್ಯ ಚ ಲೇಶೋಽಸ್ತಿ ಆಮಗಂಧೋಽಸ್ತಿ । ತತ್ಸರ್ವಂ ಶಮಿತಾರೋ ವಿಶಸನಕರ್ತಾರಃ ಸುಕೃತಾ ಕೃಣ್ವಂತು । ಸುಕೃತಮುಕ್ತದೋಷರಹಿತಂ ಕುರ್ವಂತು । ಉತಾಪಿ ಚ ಮೇಧಂ ಮೇಧ್ಯಂ ಯಜ್ಞಾರ್ಹಂ ಪಶ್ವವಯವಂ ಶೃತಪಾಕಂ ದೇವಯೋಗ್ಯಪಾಕೋಪೇತಂ ಯಥಾ ಭವತಿ ತಥಾ ಪಚಂತು । ಪಿತೃಮನುಷ್ಯಾದಿಯೋಗ್ಯಮತಿಪಕ್ವಮೀಷತ್ಪಕ್ವಂ ಚ ಮಾ ಕುರ್ವಂತ್ವಿತ್ಯರ್ಥಃ ॥

**। ಪ್ರತಿಪದಾರ್ಥ ।**

**ಉದರಸ್ಯ**—(ಈ ಅಶ್ವದ) ಉದರದಲ್ಲಿರತಕ್ಕ । **ಯತ್**—ಯಾವ । **ಊವಧ್ಯಂ**—ಪೂರ್ಣವಾಗಿ ಜೀರ್ಣವಾಗದಿರತಕ್ಕ ಆಹಾರವು । **ಅಪವಾತಿ**—(ಹನನಕಾಲದಲ್ಲಿ) ಹೊರಕ್ಕೆ ಬರುತ್ತದೆಯೋ, । **ಯಃ**—ಯಾವ। **ಆಮಸ್ಯ**—ಹಸಿಯಾಗಿರತಕ್ಕ । **ಕ್ರವಿಷಃ**—ಮಾಂಸದ । **ಗಂಧಃ**—ವಾಸನೆಯು । **ಅಸ್ತಿ**—ಇದೆಯೋ । **ತತ್**—ಅದೆಲ್ಲವನ್ನೂ । **ಶಮಿತಾರಃ**—ವಧಕಾರರು । **ಸುಕೃತಾಃ**—ದೋಷರಹಿತವೂ ಶುದ್ಧವೂ ಆದುದನ್ನಾಗಿ । **ಕೃಣ್ವಂತು**-ಮಾಡಲಿ । **ಉತ**—ಮತ್ತು । **ಮೇಧಂ**—ಯಜ್ಞಾರ್ಹವಾದ ಇದರ ಅವಯವವನ್ನು । **ಶೃತಪಾಕಂ**—ದೇವತೆಗಳಿಗೆ ಯೋಗ್ಯವಾದ ಪಾಕವುಳ್ಳದ್ದನ್ನಾಗಿ । **ಪಚಂತು**—ಪಕ್ವಮಾಡಲಿ ।

**ಭಾವಾರ್ಥ**

ಈ ಯಜ್ಞಾಶ್ವದ ಉದರದಿಂದ ಪೂರ್ಣವಾಗಿ ಜೀರ್ಣವಾಗದಿರತಕ್ಕ ಯಾವ ಆಹಾರವು ಹನನಕಾಲದಲ್ಲಿ ಹೊರಕ್ಕೆ ಬರುತ್ತದೆಯೋ, ಮತ್ತು ಯಾವ ಹಸಿಯಾಗಿರತಕ್ಕ ಮಾಂಸದ ದುರ್ಗಂಧವಿದೆಯೋ ಅದೆಲ್ಲವನ್ನೂ ವಧಕಾರರು ದೋಷರಹಿತವೂ ಶುದ್ಧವೂ ಆದುದನ್ನಾಗಿ ಮಾಡಲಿ. ಮತ್ತು ಯಜ್ಞಾರ್ಹವಾದ ಇದರ ಅವಯವವನ್ನು ದೇವತೆಗಳಿಗೆ ಯೋಗ್ಯವಾಗುವಂತೆ ಪಕ್ವಮಾಡಲಿ.

## English Translation

Whatever undigested grass fall from his belly; whatever particle of raw flesh may remain; let the immolators make the whole free from defect, and so cook the pure (offering) that it may be perfectly dressed.

### ವಿಶೇಷವಿಷಯಗಳು

**ಊವಧ್ಯಂ**— ಪೂರ್ಣವಾಗಿ ಜೀರ್ಣವಾಗದಿರುವ ಅನ್ನಕ್ಕೆ **ಊವಧ್ಯ** ವೆಂದು ಹೆಸರು.

**ಊವಧ್ಯಗೋಹಂ ಪಾರ್ಥಿವಂ ಖನತ ।**

(ಐ. ಬ್ರಾ. ೨-೬)

ಎಂಬಲ್ಲಿ **ಪುರೀಷ** ವೆಂದು ಅರ್ಥಮಾಡಿದೆ. ಜೀರ್ಣೋಚ್ಛಿಷ್ಟವಾದ ಆಹಾರವೆಂದಾಗುತ್ತದೆ. ಬೃಹದಾರಣ್ಯಕೋಪನಿಷತ್ತಿನಲ್ಲಿ ಇದೇ ಮೇಧ್ಯಾಶ್ವದ ವರ್ಣನೆಯಕಾಲದಲ್ಲಿ.

**ಊವಧ್ಯಂ ಸಿಕತಾಃ ಸಿಂಧವೋ ಗುದಾ ।**

(ಬೃ. ಉ. ೧-೧-೧)

ಸಿಕತವು ಈ ಮೇಧಾಶ್ವದ **ಊವಧ್ಯ** ಎಂದರೆ **ಉದರಸ್ಥಮರ್ಧಜೀರ್ಣಮಶನಂ** ಉದರಸ್ಥವಾದ ಅರ್ಧಜೀರ್ಣವಾದ ಆಹಾರವೆಂದು ಶಂಕರಾಚಾರ್ಯರು ವಿವರಿಸಿದ್ದಾರೆ.

**ಶಮಿತಾರಃ**— **ಶಮಿತೃವು** ಯಜ್ಞಪಶುವನ್ನು ವಧಮಾಡುವವನು. ಇವನು ಋತ್ವಿಕ್ಕುಗಳಲ್ಲಿ ಒಬ್ಬನೇ ಅಥವಾ ಬೇರೆಯವನೇ ಎಂಬುದರಲ್ಲಿ ಕೆಲವು ವಿಪ್ರತಿಪತ್ತಿಗಳಿವೆ. ಇದು ಅಧ್ವರ್ಯುವಿನ ಕರ್ತವ್ಯವೆಂದು ಕಂಡುಬಂದರೂ ಸಹ ಅಧ್ವರ್ಯುವು ಇದಕ್ಕೆ ಸಹಾಯಕ್ಕಾಗಿ ಬೇರೆಯವರನ್ನು ಇಟ್ಟಿರುತ್ತಿದ್ದನು. ಅವನು ಋತ್ವಿಕ್ಕುಗಳಲ್ಲೊಬ್ಬನಲ್ಲ ಅಥವಾ ಬ್ರಾಹ್ಮಣನಾಗಿಯೂ ಆಗಿರಬೇಕಾಗಿಲ್ಲ ಎಂದು ಕೆಲವರ ಮತ.

**ಅಧ್ರಿಗೋ ಶಮೀಧ್ವಂ ಸುಶಮಿ ಶಮೀಧ್ವಂ ಶಮೀಧ್ವಮಧ್ರಿಗಾ ೩ ಉ ಇತಿ ತ್ರಿರ್ಬ್ರೂಯಾದಪಾಪೇತಿ ಚಾಧ್ರಿಗುರ್ವೈ ದೇವಾನಾಂ ಶಮಿತಾಪಾಪೋ ನಿಗ್ರಭೀತಾ ಶಮಿತೃಭ್ಯಶ್ಚೈವೈನಂ ತನ್ನಿಗ್ರಭೀತೃಭ್ಯಶ್ಚ ಸಂಪ್ರಯಚ್ಛತಿ ॥**

(ಐ. ಬ್ರಾ. ೨-೭)

" ಎಲೈ ಅಧ್ರಿಗುವೇ, ಈ ಪಶುವನ್ನು ಹನನಮಾಡು ; ಪೂರ್ಣವಾಗಿ ಕೊಲ್ಲು. ದೇವತೆಗಳಿಗೆಲ್ಲಾ ಅಧ್ರಿಗುವೇ ಶಮಿತೃವಾದುದರಿಂದ ಅವನ ಹೆಸರನ್ನುಚ್ಚರಿಸಿದರೆ ಪಾಪರಹಿತರಾಗುವರು " ಎಂಬುದಾಗಿ ಹೋತೃವು ಹೇಳಿ ಪಶುವನ್ನು ಶಮಿತೃವಿನ ಕೈಯಲ್ಲಿ ಕೊಡುತ್ತಾನೆ.

**ನೈಷ ಯಜಮಾನೇನಾನ್ವಾರಭ್ಯೋ ಮೃತ್ಯವೇ ಹ್ಯೇತಂ ನಯಂತಿ .... .... .... ವಪಾಶ್ರಪಣೀಭ್ಯಾಂ ಪ್ರತಿಪ್ರಸ್ಥಾತಾ ಪ್ರತಿಪ್ರಸ್ಥಾತಾರಮಧ್ವರ್ಯುರಧ್ವರ್ಯುಂ ಯಜಮಾನ ಏತದು ಪರೋಕ್ಷಮನ್ವಾರಬ್ಧಂ ಭವತಿ ।**

(ಶ. ಬ್ರಾ ೩-೮-೧-೧೦)

ಇತ್ಯಾದಿ ವಾಕ್ಯಗಳಿಂದ **ಹಂತೃವು** ಬೇರೆಯೆಂದೂ ಅಧ್ವರ್ಯ್ವಾದಿಗಳು ಹನನಕಾಲದಲ್ಲಿ ಒಂದು ವಿಚಿತ್ರವಾದ ರೀತಿಯಲ್ಲಿ ಪಶುವನ್ನು ಹಿಡಿದುಕೊಳ್ಳುತ್ತಾರೆಂದೂ ವರ್ಣಿಸಿದೆ. ಆ ಕಾಲದಲ್ಲಿ ಪಶುವನ್ನು ಛೇದಿಸತಕ್ಕ ಶಮಿತೃವನ್ನು ಕುರಿತು ದೇವತೆಗಳಿಗೆ ಯೋಗ್ಯವಾದ ರೀತಿಯಲ್ಲಿ ಪಕ್ವವಾಗುವಂತೆ ಸಿದ್ಧಮಾಡಬೇಕೆಂದು ತಿಳಿಸಿದೆ

**ವ್ಯಾಕರಣಪ್ರಕ್ರಿಯಾ**

**ಉದರಸ್ಯ**—ದೄ ವಿದಾರಣೇ ಧಾತು. ಉದ್ ಉಪಸರ್ಗ. ಉಪಪದವಾಗಿರುವಾಗ **ಉದಿ ದೃಣಾತೇರ-ಜಲೌ**–(ಉ. ಸೂ. ೬–೬೭) ಎಂಬುದರಿಂದ ಅಲ್ ಪ್ರತ್ಯಯ. ಅದನ್ನು ನಿಮಿತ್ತೀಕರಿಸಿ ಧಾತುವಿಗೆ ಗುಣ. ಲಿತ್ತಾದುದರಿಂದ ಪ್ರತ್ಯಯದ ಪೂರ್ವಕ್ಕೆ ಉದಾತ್ತಸ್ವರ ಬರುತ್ತದೆ.

**ಅಪವಾತಿ**—ವಾ ಗತಿ ಗಂಧನಯೋಃ ಧಾತು. ಲಟ್ ಪ್ರಥಮಪುರುಷಏಕವಚನಾಂತರೂಪ. ಯದ್ಯೋಗವಿರುವುದರಿಂದ ನಿಘಾತಸ್ವರ ಬರುವುದಿಲ್ಲ. ಧಾತುಸ್ವರ ಉಳಿಯುತ್ತದೆ. **ತಿಙಿ ಚೋದಾತ್ತವತಿ** (ಪಾ. ಸೂ. ೮–೧-೭೧) ಎಂಬುದರಿಂದ ಗತಿಗೆ (ಅಪ) ಅನುದಾತ್ತಸ್ವರ ಬರುತ್ತದೆ.

**ಸುಕೃತಾ**—ಡುಕೃಞ್ ಕರಣೇ ಧಾತು. ಕ್ತ ಪ್ರತ್ಯಯ. ಕೃದುತ್ತರಪದಪ್ರಕೃತಿಸ್ವರ ಬರುತ್ತದೆ. **ಸುಪಾಂ ಸುಲುಕ್**—(ಪಾ. ಸೂ. ೭-೧-೩೯) ಎಂಬುದರಿಂದ ವಿಭಕ್ತಿಗೆ ಆಕಾರಾದೇಶ ಬರುತ್ತದೆ.

**ಕೃಣ್ವಂತು**—ಕೃವಿ ಹಿಂಸಾಕರಣಯೋಶ್ಚ ಧಾತು. **ಲೋಟ್** ಪ್ರಥಮಪುರುಷಬಹುವಚನಾಂತರೂಪ. ತಿಙಂತನಿಘಾತಸ್ವರ ಬರುತ್ತದೆ.

**ಶೃತಪಾಕಮ್**—**ಪರಾದಿಶ್ಛಂದಸಿ ಬಹುಲಮ್** (ಪಾ. ಸೂ. ೬-೧-೧೯೯) ಎಂಬುದರಿಂದ ಉತ್ತರಪದಾದ್ಯುದಾತ್ತಸ್ವರ ಬರುತ್ತದೆ.

**ಪಚಂತು**—ಡುಪಚಿಷ್ ಪಾಕೇ ಧಾತು. **ಲೋಟ್** ಪ್ರಥಮಪುರುಷಬಹುವಚನಾಂತರೂಪ. ತಿಙಂತ ನಿಘಾತಸ್ವರ ಬರುತ್ತದೆ. ॥ ೧೦ ॥

**ಸಂಹಿತಾಪಾಠಃ**

ಯತ್ತೇ ಗಾತ್ರಾದಗ್ನಿನಾ ಪಚ್ಯಮಾನಾದಭಿ ಶೂಲಂ ನಿಹತಸ್ಯಾವಧಾವತಿ ।
ಮಾ ತದ್ಭೂಮ್ಯಾಮಾ ಶ್ರಿಷನ್ಮಾ ತೃಣೇಷು ದೇವೇಭ್ಯಸ್ತದುಶದ್ಭ್ಯೋ ರಾತಮಸ್ತು ॥ ೧೧ ॥

ಪದಪಾಠಃ

ಯತ್ । ತೇ । ಗಾತ್ರಾತ್ । ಅಗ್ನಿನಾ । ಪಚ್ಯಮಾನಾತ್ । ಅಭಿ । ಶೂಲಂ।ನಿऽಹತಸ್ಯ । ಅವऽಧಾವತಿ ।

ಮಾ । ತತ್ । ಭೂಮ್ಯಾಂ।ಆ । ಶ್ರಿಷತ್ । ಮಾ । ತೃಣೇಷು । ದೇವೇಭ್ಯಃ । ತತ್ । ಉಶತ್ऽಭ್ಯಃ ।

ರಾತಂ । ಅಸ್ತು ॥ ೧೧ ॥

ಸಾಯಣಭಾಷ್ಯಂ

ಹೇ ಅಶ್ವ ತೇ ತವಾಗ್ನಿನಾ ಪಚ್ಯಮಾನಾದ್ಗಾತ್ರಾದ್ಯದೂಷ್ಮರೂಪಂ ರಸೋ ವಾ ಯತ್ಕಿಂಚಿದವಧಾವತಿ । ತಥಾ ನಿಹತಸ್ಯ ನಿಃಶೇಷೇಣ ಹತಸ್ಯ ತವ ಯದಂಗಂ ರಸರೂಪಂ ಶೂಲಮಭಿಲಕ್ಷ್ಯಾವಧಾವತಿ ನಿರ್ಗಚ್ಛತಿ । ತತ್ ತದಂಗಂ ಭೂಮ್ಯಾಂ ಮಾ ಶ್ರಿಷತ್ । ಆಶ್ಲಿಷ್ಟಂ ಮಾ ಭೂತ್ ॥ ಶ್ರಿಷೇಃ ಪುಷಾದಿತ್ವಾದಙ್ ॥ ಪಾಕಸಮಯೇ ತಥಾ ಮಾ ತೃಣೇಷು ವಿಶಸನಸಮಯೇ ದರ್ಭೇಷು ಮಾಪಗಚ್ಛತು । ತರ್ಹಿ ತತ್ಪತಿತಂ ಕುತ್ರ ಗಚ್ಛತ್ವಿತಿ ಚೇತ್ ಉಚ್ಯತೇ । ತತ್ಸರ್ವಮುಶದ್ಭ್ಯಃ ಕೃತ್ಸ್ನಂ ಹವಿಃ ಕಾಮಯಮಾನೇಭ್ಯೋ ದೇವೇಭ್ಯೋ ರಾತಂ ದತ್ತಮಸ್ತು ॥

ಪ್ರತಿಪದಾರ್ಥ

ಹೇ ಅಶ್ವ—(ಎಲೈ ಅಶ್ವವೇ)। ಅಗ್ನಿನಾ—ಬೆಂಕಿಯಿಂದ । ಪಚ್ಯಮಾನಾತ್-ಬೇಯಿಸಲ್ಪಡುವ । ತೇ—ನಿನ್ನ । ಗಾತ್ರಾತ್-ಶರೀರದಿಂದ । ಯತ್-ಯಾವಭಾಗವು ಅಥವಾ ದ್ರವರೂಪದಲ್ಲಿರುವ ರಸವು। ಅವಧಾವತಿ-ಕೆಳಗೆ ಚೆಲ್ಲಿ ಹರಿದುಹೋಗುವುದೋ (ಮತ್ತು) । ನಿಹತಸ್ಯ-ನಿನ್ನ ಮೃತಶರೀರದ ಯಾವ ಭಾಗವು । ಶೂಲಮಭಿ-(ಮಾಂಸವನ್ನು ಚುಚ್ಚಿ ಬೇಯಿಸುವ) ಸಲಾಕೆಯಿಂದ ಕೆಳಗೆ ಜಾರಿಬಿದ್ದುಹೋಗುವುದೋ । ಭೂಮ್ಯಾಂ ತತ್—ನೆಲದಮೇಲೆ ಬಿದ್ದ ಆಭಾಗವು । ಮಾ ಆಶ್ರಿಶತ್— ಭೂಮಿಗೆ ಅಂಟಿಕೊಳ್ಳದಿರಲಿ (ಹಾಗೆಯೇ ಹಾಸಿರುವ ದರ್ಭೆಗಳ ಮೇಲೆ ಬಿದ್ದ ಭಾಗವೂ) । ಮಾ (ಶ್ರಿಷತ್)—ಅಂಟಿಕೊಳ್ಳದಿರಲಿ (ಆದರೆ) । ತತ್—ಈ ರೀತಿ ಚೆಲ್ಲಿಹೋದ ಭಾಗವು । ಉಶದ್ಭ್ಯಃ— ಹವಿಸ್ಸೆಲ್ಲವನ್ನೂ ಅಪೇಕ್ಷಿಸುವ । ದೇವೇಭ್ಯಃ—ದೇವತೆಗಳಿಗೆ । ರಾತಂ ಅಸ್ತು—ಅರ್ಪಿಸಿದಂತೆ ಆಗಲಿ ।

ಭಾವಾರ್ಥ

ಎಲೈ ಅಶ್ವವೇ, ನಿನ್ನ ಮೃತಶರೀರವು ಅಗ್ನಿಯಲ್ಲಿ ಬೇಯಿಸಲ್ಪಡುತ್ತಿರುವಾಗ ಬೇಯಿಸುವ ಪಾತ್ರೆಯಿಂದ ಕೆಳಕ್ಕೆ ಬಿದ್ದು ಚೆಲ್ಲಿಹೋಗುವ ರಸಾದಿಭಾಗವೂ ಸಲಾಕಿಯಿಂದ ಚುಚ್ಚಿ ಮಾಂಸವನ್ನು ಸುಡುತ್ತಿರುವಾಗ ಆ ಸಲಾಕೆಯಿಂದ ಜಾರಿಬಿದ್ದುಹೋಗುವ ಭಾಗವೂ (ತುಂಡು ಅಥವಾ ಚೂರು) (ಅವು) ನೆಲದ ಮೇಲೆ ಬಿದ್ದರೂ ಅಥವಾ ಹರಡಿರುವ ದರ್ಭೆಯ ಮೇಲೆ ಬಿದ್ದರೂ ಅವು ವ್ಯರ್ಥವಾಗದೆ ಹವಿಃಪ್ರಿಯರಾದ ದೇವತೆಗಳಿಗೇ ಅರ್ಪಿತವಾಗಲಿ.

## English Translation

whatever (portion) of your slaughtered (body) fall from your carcase when it is being roasted by the fire, (escaping) from the spit: let it not be left on the ground, nor on the (sacred) grass, but let it (all) be given to the longing gods.

॥ ವಿಶೇಷ ವಿಷಯಗಳು ॥

ಮುಖ್ಯಾಭಿಪ್ರಾಯವು—ಯಜ್ಞಪಶುವಾದ ಅಶ್ವದ ಮಾಂಸವನ್ನು ಹೋಮಮಾಡುವುದಕ್ಕಾಗಿ ದೊಡ್ಡ ಹಂಡೆಯಂತಿರುವ ಉಖಾ ಎಂಬ ಪಾತ್ರೆಯಲ್ಲಿ ಹಾಕಿ ಬೇಯಿಸುತ್ತಿರುವಾಗ ಕುದಿಹತ್ತಿ ಪಾತ್ರೆಯಿಂದ ಸ್ವಲ್ಪಭಾಗವು ಚೆಲ್ಲಿಹೋಗಬಹುದು. ಅಥವಾ ಸೌಟು ಮೊದಲಾದ ಉಪಕರಣಗಳಿಂದ ಕೆದುಕುತ್ತಿರುವಾಗ ನೆಲದ ಮೇಲೆ ಕೆಲವು ಭಾಗವು ಬೀಳಬಹುದು. ಮತ್ತು ಮಾಂಸವನ್ನು ಬೇಯಿಸುವ ವಿಧಾನವಲ್ಲದೆ ಮಾಂಸದ ತುಂಡಿಗೆ ಒಂದು ಉದ್ದವಾದ ಸಲಾಕಿಯನ್ನು (ಶೂಲ spit) ಚುಚ್ಚಿ ಬೆಂಕಿಯ ಮೇಲೆ ಹಿಡಿದು ಸುಡುವುದೂ ಉಂಟು. ಈ ರೀತಿ ಸುಡುವಾಗ ಆ ಸಲಾಕಿಯಿಂದ ಒಂದೆರಡು ಸಣ್ಣ ಚೂರುಗಳು ಜಾರಿಬೀಳುವುದೂ ಉಂಟು. ಕೆಳಗೆ ಬಿದ್ದ ಇಂತಹ ಮಾಂಸದ ಚೂರುಗಳು ಭೂಮಿಗೆ ಅಂಟಿಕೊಂಡು ವ್ಯರ್ಥವಾಗದೆ ದೇವತೆಗಳಿಗೆ ಅರ್ಪಿತವಾಗಲಿ ಎಂದು ಋಷಿಯು ಪ್ರಾರ್ಥಿಸಿರುವನು.

**ಯತ್ತೇ ಗಾತ್ರಾತ್**—ಋಕ್ಕಿನಲ್ಲಿ ತೇ-ನಿನ್ನ ಎಂದು ಅಶ್ವವನ್ನು ಸಂಬೋಧಿಸಿರುವ ಶಬ್ದಗಳ ಪ್ರಯೋಗವು ಮೃತವಾದ ಅಶ್ವಕ್ಕೆ ಸಂಬಂಧಿಸಿ ಇರುವುದರಿಂದ ಈ ರೀತಿ ಪ್ರಯೋಗವು ವಿರುದ್ಧವಲ್ಲವೇ ಎಂದರೆ, ಹಾಗಲ್ಲ. ಅಶ್ವವನ್ನು ವಧಿಸಿ ಅದರ ಮಾಂಸವನ್ನು ಬೇಯಿಸುತ್ತಿರುವಾಗ ಈ ಮಂತ್ರವನ್ನು ಋಷಿಯು ಪಠಿಸಿರುವನೆಂದು ಹೇಳಬೇಕಾಗಿಲ್ಲ. ಅಶ್ವವನ್ನು ವಧಿಸುವುದಕ್ಕೆ ಮುಂಚೆಯೇ ಮುಂದೆ ನಡೆಯಬಹುದಾದ ಕರ್ಮವನ್ನು ಸೂಚಿಸಿ ಅಶ್ವವನ್ನು ಸಂಬೋಧಿಸುತ್ತಿರುವನೆಂದು ತಿಳಿಯಬೇಕು.

**ಶೂಲಂ**—ಉದ್ದವಾದ ಸಲಾಕಿ, (spit) ಮಾಂಸವನ್ನು ಸುಡುವಾಗ ಅದಕ್ಕೆ ಸಲಾಕಿಯಿಂದ ಚುಚ್ಚಿ ಬೆಂಕಿಯ ಮೇಲೆ ಹಿಡಿದು ಸುಡುವುದು ಈಗಲೂ ರೂಢಿಯಾಗಿರುವುದು. ಅಥವಾ ದೊಡ್ಡ ಪಾತ್ರೆಯಲ್ಲಿ ಮಾಂಸವನ್ನು ಬೇಯಿಸುತ್ತಿರುವಾಗ ಅದನ್ನು ಆಗಾಗ ಕೆದಕುವುದಕ್ಕಾಗಿ ಉದ್ದವಾದ ಸಲಾಕಿಯನ್ನು (ಅಥವಾ ಸೌಟು) ಉಪಯೋಗಿಸುವರು. ಈ ಎರಡು ಸಂದರ್ಭಗಳಲ್ಲಿಯೂ ಮಾಂಸದ ಕೆಲವು ಭಾಗವು ಭೂಮಿಯ ಮೇಲೆ ಬೀಳುವ ಸಂಭವವಿರುವುದು. ಹಾಗೆ ಬಿದ್ದ ಭಾಗವು ವ್ಯರ್ಥವಾಗದೆ ದೇವತೆಗಳಿಗೇ ಅರ್ಪಿತವಾಗಲಿ ಎಂದು ಋಷಿಯ ಆಶಯವು. ಶೂಲಂ ಎಂಬ ಶಬ್ದವು ಋಗ್ವೇದದಲ್ಲಿ ಈ ಋಕ್ಕಿನಲ್ಲಿ ಮಾತ್ರವಿರುವುದು. ಮತ್ತೆಲ್ಲಿಯೂ ಇರುವುದಿಲ್ಲ.

**ತೃಣೇಷು—ವಿಶಸನಸಮಯೇ ದರ್ಭೇಷು ಮಾಪಗಚ್ಛತು ।** ಅಶ್ವಶರೀರವನ್ನು ಕತ್ತರಿಸುವಾಗ ದರ್ಭೆಗಳಮೇಲೆ ಬೀಳುವ ಭಾಗವು ವ್ಯರ್ಥವಾಗದಿರಲಿ. ಯಜ್ಞಾದಿಗಳನ್ನು ಮಾಡುವಾಗ ದೇವತೆಗಳನ್ನು ಆಹ್ವಾನಮಾಡಿ ಅವರು ಬಂದು ಕುಳಿತುಕೊಳ್ಳುವುದಕ್ಕಾಗಿ ಬರ್ಹಿಃ ಎಂಬ ದರ್ಭೆಗಳನ್ನು ಭೂಮಿಯಮೇಲೆ ಹರಡಿ ಆಸನವನ್ನು ಸಿದ್ಧಪಡಿಸುವುದು ರೂಢಿಯು. ಇದರಂತೆ ಯಜ್ಞಸಾಮಗ್ರಿಗಳಾದ ಯಜ್ಞಪಾತ್ರೆ (ಆಜ್ಯಪಾತ್ರೆ ಇತ್ಯಾದಿ), ಹವಿಸ್ಸು,

ಅನ್ನ, ಪುರೋಡಾಶ ಮೊದಲಾದ ವಸ್ತುಗಳನ್ನೂ ಸಹ ನೆಲದಮೇಲೆ ದರ್ಭೆಗಳನ್ನು ಹರಡಿ ಅದರಮೇಲೆ ಇಡುವುದು ವಾಡಿಕೆ. ಆದುದರಿಂದ ಅಶ್ವದ ಮೃತಶರೀರವನ್ನು ಕತ್ತರಿಸುವಾಗ ಆ ಶರೀರವು ಆ ಕಾಲದಲ್ಲಿ ದರ್ಭೆಯಮೇಲೆ ಇರುವುದರಿಂದ ಕೆಳಗೆ ಬೀಳುವ ರಕ್ತಮಾಂಸಾದಿಗಳು ದರ್ಭೆಯಮೇಲೆಯೇ ಬೀಳುವುವು. ಅಥವಾ ಇಲ್ಲಿ ಬರ್ಹಿಃ ಮೊದಲಾದ ದರ್ಭೆಯನ್ನು ಸೂಚಿಸುವ ಶಬ್ದಪ್ರಯೋಗವಿಲ್ಲದೆ **ತೃಣೇಷು**—ಹುಲ್ಲಿನಮೇಲೆ ಎಂದು ಇರುವುದರಿಂದಲೂ ಭೂಮಿಯಮೇಲೆ ಸಾಧಾರಣವಾಗಿ ಹುಲ್ಲು ಬೆಳೆದಿರುವುದರಿಂದಲೂ, ಹುಲ್ಲಿನಮೇಲೆ ಬೀಳಬಹುದಾದ ರಕ್ತಮಾಂಸಗಳು ಎಂದಾದರೂ ಅರ್ಥವಾಗಬಹುದು.

**ರಾತಂ**—ರಾ ದಾನೇ ಕೊಡು, ದಾನಮಾಡು ಎಂಬ ಅರ್ಥವುಳ್ಳ ಧಾತುವಿನಿಂದ ನಿಷ್ಪನ್ನವಾದ ರಾತಂ ಎಂಬ ಶಬ್ದಕ್ಕೆ ಕೊಡುವುದು, ದಾನಮಾಡುವುದು ಅಥವಾ ಅರ್ಪಿಸುವುದು ಎಂದಭಿಪ್ರಾಯವು.

॥ ವ್ಯಾಕರಣಪ್ರಕ್ರಿಯಾ ॥

**ಗಾತ್ರಾತ್**—ಗಮ್ಲೃ ಗತೌ ಧಾತು. ಗಮೇರಾಚ (ಉ. ಸೂ. ೪-೬೦೮) ಎಂಬುದರಿಂದ ತ್ರನ್ ಪ್ರತ್ಯಯ. ಧಾತುವಿಗೆ ಆತ್ವ. ನಿತ್ತಾದುದರಿಂದ ಆದ್ಯುದಾತ್ತಸ್ವರ ಬರುತ್ತದೆ. ಪಂಚಮ್ಯಂತರೂಪ.

**ಪಚ್ಯಮಾನಾತ್**—ಡುಪಚಿಷ್ ಪಾಕೇ ಧಾತು. ಕರ್ಮಣಿಯಲ್ಲಿ ಲಟಿಗೆ ಶಾನಚಾದೇಶ. **ಸಾರ್ವಧಾತುಕೇಯಕ್** (ಪಾ. ಸೂ. ೩-೧-೬೭) ಎಂಬುದರಿಂದ ಯಕ್. **ಆನೇಮುಕ್** (ಪಾ. ಸೂ. ೭-೨-೮೨) ಎಂಬುದರಿಂದ ಮುಕಾಗಮ. **ತಾಸ್ಯನುದಾತ್ತೇತ್**—(ಪಾ ಸೂ. ೬-೧-೧೮೬) ಎಂಬುದರಿಂದ ಲಸಾರ್ವಧಾತುಕ ಅನುದಾತ್ತವಾಗುವುದರಿಂದ ಯಕ್‌ಸ್ವರ ಉಳಿಯುತ್ತದೆ.

**ನಿಹತಸ್ಯ**—ಹನ ಹಿಂಸಾಗತ್ಯೋಃ ಧಾತು. ಕರ್ಮಣಿಯಲ್ಲಿ ಕ್ತ ಪ್ರತ್ಯಯ. **ಅನುದಾತ್ತೋಪದೇಶ**—(ಪಾ. ಸೂ. ೬-೪-೩೭) ಎಂಬುದರಿಂದ ಧಾತು ನಕಾರ ಲೋಪ. **ಗತಿರನಂತರಃ** (ಪಾ ಸೂ. ೬-೨-೪೯) ಎಂಬುದರಿಂದ ಗತಿಗೆ (ನಿ) ಉದಾತ್ತಸ್ವರ ಬರುತ್ತದೆ.

**ಅವಧಾವತಿ**—ಧಾವು ಗತಿಶುದ್ಧ್ಯೋಃ ಧಾತು. ಲಡಂತರೂಪ ಯದ್ಯೋಗವಿರುವುದರಿಂದ ನಿಘಾತಸ್ವರ ಬರುವುದಿಲ್ಲ. ಧಾತುಸ್ವರ ಉಳಿಯುತ್ತದೆ. **ತಿಙಿಚೋದಾತ್ತವತಿ** (ಪಾ ಸೂ. ೮-೧-೭೧) ಎಂಬುದರಿಂದ ಗತಿಗೆ (ಅವ) ನಿಘಾತಸ್ವರ ಬರುತ್ತದೆ.

**ಶ್ರಿಷತ್**—ಶ್ರಿಷ ಆಲಿಂಗನೇ ಧಾತು. ದಾಹಾರ್ಥದಲ್ಲಿ ಭ್ವಾದಿಯಲ್ಲಿ ಪಠಿತವಾಗಿದೆ. **ಮಾಙಿಲುಙ್** (ಪಾ. ಸೂ. ೩-೩-೧೭೫) ಎಂಬುದರಿಂದ ಲುಙ್. ಪ್ರಥಮಪುರುಷಏಕವಚನದಲ್ಲಿ ತಿಪ್ ಪ್ರತ್ಯಯ. ಇಕಾರ ಲೋಪ ಪುಷಾದಿಯಲ್ಲಿ ಸೇರಿರುವುದರಿಂದ **ಪುಷಾದಿದ್ಯುತಾದಿ**-(ಪಾ. ಸೂ. ೩-೧-೫೫) ಎಂಬುದರಿಂದ ಚ್ಲಿಗೆ **ಅಙಾದೇಶ**. ಙಿತ್ತಾದುದರಿಂದ ಲಘೂಪಧಗುಣ ಬರುವುದಿಲ್ಲ. **ನ ಮಾಙ್‌ಯೋಗೇ** (ಪಾ. ಸೂ. ೬-೪-೭೪) ಎಂಬುದರಿಂದ ಅಡಾಗಮ ಬರುವುದಿಲ್ಲ. ತಿಙಂತನಿಘಾತಸ್ವರ ಬರುತ್ತದೆ.

**ಉಶದ್ಭ್ಯಃ**—ವಶ ಕಾಂತೌ ಧಾತು ಲಟಿಗೆ ಶತ್ರಾದೇಶ. ಶಪಿಗೆ ಲುಕ್. **ಗ್ರಹಿಜ್ಯಾವಯಿ** (ಪಾ. ಸೂ. ೬-೧-೧೬) ಎಂಬುದರಿಂದ ಧಾತುವಿನ ವಕಾರಕ್ಕೆ ಸಂಪ್ರಸಾರಣ. ಪ್ರತ್ಯಯದ ಆದ್ಯುದಾತ್ತಸ್ವರ ಬರುತ್ತದೆ.

**ರಾತಮ್**—ರಾ ಆದಾನೇ ಧಾತು. ಕರ್ಮಣಿಯಲ್ಲಿ ಕ್ತ ಪ್ರತ್ಯಯ. ಪ್ರತ್ಯಯಸ್ವರದಿಂದ ಅಂತೋದಾತ್ತವಾಗುತ್ತದೆ. ॥೧೧॥

———:O:———

ಸಂಹಿತಾಪಾಠಃ

ಯೇ ವಾಜಿನಂ ಪರಿಪಶ್ಯಂತಿ ಪಕ್ವಂ ಯ ಈಮಾಹುಃ ಸುರಭಿರ್ನಿರ್ಹರೇತಿ।
ಯೇ ಚಾರ್ವತೋ ಮಾಂಸಭಿಕ್ಷಾಮುಪಾಸತ ಉತೋ ತೇಷಾಮಭಿ-
ಗೂರ್ತಿರ್ನ ಇನ್ವತು ॥ ೧೨ ॥

। ಪದಪಾಠಃ ।

ಯೇ । ವಾಜಿನಂ । ಪರಿऽಪಶ್ಯಂತಿ । ಪಕ್ವಂ । ಯೇ । ಈಂ । ಆಹುಃ । ಸುರಭಿಃ । ನಿಃ । ಹರ । ಇತಿ ।
ಯೇ । ಚ । ಅರ್ವತಃ । ಮಾಂಸऽಭಿಕ್ಷಾಂ । ಉಪऽಆಸತೇ । ಉತೋ ಇತಿ । ತೇಷಾಂ । ಅಭಿऽಗೂರ್ತಿಃ ।
ನಃ । ಇನ್ವತು ॥ ೧೨ ॥

॥ ಸಾಯಣಭಾಷ್ಯಂ ॥

ಯೇ ಪಕ್ವಂ ವಾಜಿನಮಶ್ವಮಶ್ವಾವಯವಂ ಪರಿಪಶ್ಯಂತಿ ಪರಿತಃ ಪಾವನಬುದ್ಧ್ಯೇಕ್ಷಂತೇ । ಯ ಈಂ ಯೇ ಚೈನಂ ಸುರಭಿಃ ಶೋಭನಗಂಧೋಽತೋ ನಿರ್ಹರ ಕಿಂಚಿದಸ್ಮಭ್ಯಂ ದೇಹೀತ್ಯಾಹುಃ । ಯದ್ವಾ । ನಿಃಶೇಷೇಣ ದೇವೇಭ್ಯೋ ಹರೇತ್ಯಾಹುಃ । ಯತಃ ಸುರಭಿಃ ಅತೋ ದೇವಯೋಗ್ಯಮಿತಿ । ಕಿಂಚ ಯೇ ಚಾರ್ವತೋ ಮಾಂಸಭಿಕ್ಷಾಮುಪಾಸತೇ ಯೇ ನರಾ ಅಸ್ಯಾರ್ವತೋಽಶ್ವಸ್ಯ ಹುತಶಿಷ್ಟ-ಮಾಂಸಯಾಚನಾಮುಪಾಸತೇ ಕಾಂಕ್ಷಂತೇ । ಉತೋ ಅಪಿ ಚ ತೇಷಾಮುಕ್ತವಿಧಾನಾಮಭಿಗೂ-ರ್ತಿರಭಿತ ಉದ್ಯಮನಂ ನೋಽಸ್ಮಾನಿನ್ವತು । ವ್ಯಾಪ್ನೋತು । ಯಥಾಸ್ಮಾಭಿರಶ್ವ ಉಪಾಲಬ್ಧ ಏವಂ ಸ್ಪೃಹಯಂತಿ ತಥಾ ಯಜ್ಞೋ ನಿರ್ವಾಹಯತ್ವಿತ್ಯರ್ಥಃ ॥ ಯದ್ವಾ । ಮಂತ್ರೋ ದೇವಪರೋ ವ್ಯಾಖ್ಯೇಯಃ । ಯೇ ದೇವಾ ವಾಜಿನಂ ಪಕ್ವಂ ಪರಿಪಶ್ಯಂತಿ ಕದಾ ಹೋಷ್ಯತೀತಿ ವಿಲಂಬಂ ದೃಷ್ಟ್ವಾ ಯೇ ಚ ಸುರಭಿರೀ ಮೇನಂ ನಿರ್ಹರ ನಿಃಶೇಷೇಣಾಸ್ಮಭ್ಯಂ ದೇಹೀತ್ಯಾಹುಃ ಯೇ ಚಾರ್ವತೋಽಶ್ವಸ್ಯ ಮಾಂಸಭಿಕ್ಷಾಮುಪಾಸತೇ ತೇಷಾಮಭಿಗೂರ್ತಿರ್ನ ಇನ್ವತು । ತೇಷಾಮುದ್ಯಮಃ ಸಫಲೋ ಭವತ್ವಿತ್ಯರ್ಥಃ॥

### ಪ್ರತಿಪದಾರ್ಥ

**ಯೇ**—ಯಾರು । **ಪಕ್ವಂ**—ಬೇಯುತ್ತಿರುವ । **ವಾಜಿನಂ**—ಅಶ್ವಾವಯವಗಳನ್ನು (ಮಾಂಸವನ್ನು) । **ಪರಿಪಶ್ಯಂತಿ**—ಆಸಕ್ತಿಯಿಂದ ನೋಡುತ್ತಿರುವರೋ । **ಯೇ**—ಯಾರು । **ಈಂ**—ಈ ಬೇಯಿಸುತ್ತಿರುವ ಅಶ್ವ ಮಾಂಸವನ್ನು । **ಸುರಭಿಃ**—ಸುವಾಸನೆಯಿಂದ ಘಮಘಮಿಸುತ್ತಿರುವುದೆಂದೂ (ಆದ್ದರಿಂದ) । **ನಿಃ ಹರ ಇತಿ**—(ನಮಗೂ) ಕೊಡಬೇಕೆಂದು ಅಥವಾ ಚೆನ್ನಾಗಿ ಬೆಂದು ಘಮಘಮಿಸುತ್ತಿರುವುದರಿಂದ ದೇವತೆಗಳಿಗೆ ಅರ್ಪಿಸಬೇಕೆಂದು **ಆಹುಃ**—ಹೇಳುವರೋ । **ಯೇ ಚ**—ಮತ್ತು ಯಾರು । **ಅರ್ವತಃ**—ಪಕ್ವವಾಗುತ್ತಿರುವ ಅಶ್ವದ । **ಮಾಂಸಭಿಕ್ಷಾಂ**—(ಹುತಶಿಷ್ಟವಾದ) ಮಾಂಸದ ಸ್ವಲ್ಪಭಾಗವನ್ನು । **ಉಪಾಸತೇ**—ಅಪೇಕ್ಷಿಸುವರೋ । **ಉತೋ**—ಮತ್ತು । **ತೇಷಾಂ**—ಈ ಜನರ (ಅಥವಾ ಋತ್ವಿಕ್ಕುಗಳ) । **ಅಭಿಗೂರ್ತಿಃ**—ಶ್ರದ್ಧಾಯುತವಾದ ಬುದ್ಧಿಯು ಅಥವಾ ಕೋರಿಕೆಯು । **ನಃ**—ನಮ್ಮ (ಇಷ್ಟಾರ್ಥಗಳನ್ನು) । **ಇನ್ವತು**—ಕೈಗೂಡುವಂತೆ ಮಾಡಲಿ.

### ಭಾವಾರ್ಥ

ಅಶ್ವದ ಅವಯವಗಳೂ ಮಾಂಸವೂ ಬೇಯುತ್ತಿರುವುದನ್ನು ಬಹಳ ಆಸಕ್ತಿಯಿಂದ ಯಾರು ನೋಡುತ್ತಿರುವರೋ, ಮಾಂಸವು ಚೆನ್ನಾಗಿ ಬೆಂದು ಸುವಾಸನೆಯನ್ನು ಬೀರುತ್ತಿದೆಯಾದ್ದರಿಂದ ಅದನ್ನು ಬೆಂಕಿಯಿಂದ ಕೆಳಗಿಳಿಸಿ ದೇವತೆಗಳಿಗೆ ಅರ್ಪಿಸಿ ತಮಗೂ ಕೊಡಬೇಕೆಂದು ಯಾರು ಅಪೇಕ್ಷಿಸುವರೋ ಅವರ ಕೋರಿಕೆಗಳೆಲ್ಲಾ ನೆರವೇರಲಿ.

### English Translation

Let their exertions be for our good who watch the cooking of the horse : who say, It is fragrant : therefore give us some : who solicit the flesh of the horse as alms.

### ವಿಶೇಷವಿಷಯಗಳು

**ಯೇ ವಾಜಿನಂ ಪರಿಪಶ್ಯಂತಿ ಪಕ್ವಂ—ಅಶ್ವಾವಯವಂ ಪರಿಪಶ್ಯಂತಿ ಪರಿತಃ ಪಾವನಬುದ್ಧ್ಯೇಕ್ಷಂತೇ** । ಭಾಂಡದಲ್ಲಿ ಅಶ್ವಮಾಂಸವು ಬೇಯುತ್ತಿರುವುದನ್ನು ದೇವತೆಗಳಿಗೆ ಅರ್ಪಿತವಾಗಲಿ ಎಂಬ ಒಳ್ಳೆಯ ಬುದ್ಧಿಯಿಂದ ನೋಡುತ್ತಿರುವವರು. ಇಲ್ಲಿ ವಾಜಿನಂ ಎಂದರೆ ಭಾಂಡದಲ್ಲಿ ಬೇಯುತ್ತಿರುವ ಅಶ್ವಾವಯವಗಳು ಅಥವಾ ಅಶ್ವದ ಮಾಂಸವು. ಏಕೆಂದರೆ ಅಶ್ವವನ್ನೇ ಪೂರ್ತಿಯಾಗಿ ಬೇಯಿಸದೆ ಅದನ್ನು ಕತ್ತರಿಸಿ ಭಾಂಡದಲ್ಲಿಹಾಕಿ ಬೇಯಿಸುವರು. ಈ ವಿಷಯದ ವರ್ಣನೆಯು ಮುಂದಿನ ಋಕ್ಕುಗಳಲ್ಲಿ ಉಕ್ತವಾಗಿರುವುದು. **ಪರಿಪಶ್ಯಂತಿ**—ಎಂದರೆ ಬೆಂಕಿಯ ಸುತ್ತಲೂ ನೆರೆದುನಿಂತು ಎಷ್ಟುಹೊತ್ತಿಗೆ ಬೇಯುವುದೆಂದು ಬಹಳ ಕುತೂಹಲದಿಂದ ನೋಡುತ್ತಿರುವರೆಂದಭಿಪ್ರಾಯವು.

**ಸುರಭಿಃ**—ಅಶ್ವಮಾಂಸವು ಚೆನ್ನಾಗಿ ಬೆಂದಮೇಲೆ ಬೆಂದಿರುವುದೆಂದು ಸೂಚಿಸುವ ಒಳ್ಳೆಯ ವಾಸನೆಯು ಬರುತ್ತಿದೆಯೆಂದೂ ಆದುದರಿಂದ ಇನ್ನು ಬೇಯಿಸುವುದು ಸಾಕೆಂದೂ ಬೆಂಕಿಯಿಂದ ಕೆಳಗಿಳಿಸಬೇಕೆಂದೂ ಅರ್ಥವು.

**ನಿಃ ಹರ ಇತಿ**—ಈ ಶಬ್ದಗಳಿಗೆ ಭಾಷ್ಯಕಾರರು—**ನಿರ್ಹರ ಕಿಂಚಿದಸ್ಮಭ್ಯಂ ದೇಹೀತ್ಯಾಹುಃ । ಯದ್ವಾ ಯತಃ ಸುರಭಿಃ ಅತೋ ದೇವಯೋಗ್ಯಮಿತಿ ನಿಶ್ಶೇಷೇಣ ದೇವೇಭ್ಯೋ ಹರೇತ್ಯಾಹುಃ** । ಎಂದು ಎರಡು

ವಿಧವಾದ ಅರ್ಥವನ್ನು ಹೇಳಿರುವರು. ಬೆಂದಿರುವ ಮಾಂಸವನ್ನು ತಮಗೂ ಸ್ವಲ್ಪಕೊಡಬೇಕೆಂದು ಕೆಲವರು ಹೇಳುವರು ಎಂದು ಒಂದುವಿಧವಾದ ಅರ್ಥವನ್ನೂ, ಚೆನ್ನಾಗಿ ಬೆಂದು ಸುವಾಸನೆ ಬರುತ್ತಿರುವುದರಿಂದ ಅದನ್ನು ಪೂರ್ತಿಯಾಗಿ ದೇವತೆಗಳಿಗೆ ಅರ್ಪಿಸಬೇಕೆಂದು ಮತ್ತೊಂದು ವಿಧವಾದ ಅರ್ಥವನ್ನೂ ಹೇಳಿರುವರು. ಈ ಎರಡುವಿಧವಾದ ಅರ್ಥಗಳಲ್ಲಿ ತಮಗೂ ಸ್ವಲ್ಪಕೊಡಬೇಕೆಂದು ಹೇಳುವರು ಎಂಬ ಅರ್ಥವು ಅಷ್ಟುಸಮಂಜಸವಾಗಿ ಕಾಣುವುದಿಲ್ಲ. ಏಕೆಂದರೆ ಈ ಋಕ್ಕಿನ ಉತ್ತರಾರ್ಧದಲ್ಲಿಯೇ ಈ ಅಭಿಪ್ರಾಯವನ್ನೇ ಸೂಚಿಸುವ **ಯೇ ಚಾರ್ವತೋ ಮಾಂಸಭಿಕ್ಷಾಮುಪಾಸತೇ**—ಮತ್ತೆ ಕೆಲವರು ಬೇಯಿಸಿದ ಅಶ್ವಮಾಂಸವನ್ನು ತಮಗೂ ಬೇಕೆಂದು ಅಪೇಕ್ಷಿಸುವರು ಎಂದಿರುವುದರಿಂದ ಎರಡನೆಯ ಅರ್ಥವಾದ ದೇವತೆಗಳಿಗೆ ಸಮರ್ಪಿಸು ಎಂಬ ಅರ್ಥವೇ ಸರಿಯಾಗಿ ಹೊಂದುವುದು ಅಥವಾ **ಸುರಭಿಃ ನಿರ್ಹರ** ಎಂದಿರುವುದು—ಸಾಕು. ಇನ್ನು ಹೆಚ್ಚಾಗಿ ಬೇಯಿಸಬೇಕಾಗಿಲ್ಲ. ಆದುದರಿಂದ ಭಾಂಡವನ್ನು ಬೆಂಕಿಯಿಂದ ಕೆಳಕ್ಕೆ ಇಳಿಸು ಎಂಬ ಮತ್ತೊಂದು ವಿಧವಾದ ಅರ್ಥವನ್ನಾದರೂ ಹೇಳಬಹುದು. ಈ ಕೊನೆಯ ಅಭಿಪ್ರಾಯವನ್ನು ಮಹೀಧರ ಎಂಬ ಯಜುರ್ವೇದ ಭಾಷ್ಯಕಾರರು ಈ ಮಂತ್ರಾರ್ಥವನ್ನು ವಿವರಿಸುವಾಗ ಹೇಳಿರುವರು (ಯಜುರ್ವೇದ ಸಂಹಿತೆಯಲ್ಲಿಯೂ ತೈ. ಸಂ. ಕಾಂ. ೪ ಈ ಸೂಕ್ತದ ಮಂತ್ರಗಳಿರುವುವು).

**ಮಾಂಸಭಿಕ್ಷಾಂ ಉಪಾಸತೇ**—ಬೆಂದಮಾಂಸವನ್ನು ದೇವತೆಗಳಿಗೆ ಅಗ್ನಿಯಲ್ಲಿ ಹೋಮಮಾಡಿ ಅರ್ಪಿಸಿದ ಬಳಿಕ ಉಳಿದ ಮಾಂಸದ ಸ್ವಲ್ಪಭಾಗವನ್ನು ತಮಗೂ ಕೊಡಬೇಕೆಂದು ಅಪೇಕ್ಷಿಸುವರು. ಹೀಗೆ ಅಪೇಕ್ಷಿಸುವವರು ಯಜ್ಞದಲ್ಲಿ ಭಾಗವಹಿಸುವ ಋತ್ವಿಕ್ಕುಗಳಾಗಲಿ ಇತರರಾಗಲಿ ಆಗಿರಬಹುದು.

**ತೇಷಾಮಭಿಗೂರ್ತಿರ್ನ ಇನ್ವತು**—ಈ ವಾಕ್ಯವನ್ನು ಈ ಸೂಕ್ತದ ಆರನೆಯ ಋಕ್ಕಿನಲ್ಲಿ ವಿವರಿಸಿದೆ.

### ವ್ಯಾಕರಣಪ್ರಕ್ರಿಯಾ

**ಪರಿಪಶ್ಯಂತಿ**—ದೃಶಿರ್ ಪ್ರೇಕ್ಷಣೇ ಧಾತು. ಲಟ್ ಪ್ರಥಮಪುರುಷ ಬಹುವಚನಾಂತರೂಪ. **ಯದ್ವೃತ್ತಾನ್ನಿತ್ಯಮ್** (ಪಾ. ಸೂ. ೮-೧-೬೬) ಎಂಬುದರಿಂದ ನಿಘಾತಸ್ವರ ಬರುವುದಿಲ್ಲ. ಧಾತುಸ್ವರ ಉಳಿಯುತ್ತದೆ. **ತಿಙಿಚೋದಾತ್ತವತಿ** (ಪಾ. ಸೂ. ೮-೧-೭೧) ಎಂಬುದರಿಂದ ಗತಿಗೆ (ಪರಿ) ನಿಘಾತಸ್ವರಬರುತ್ತದೆ.

**ಪಕ್ವಮ್**—ಡುಪಚಷ್ ಪಾಕೇ. ಧಾತು. ಕರ್ಮಣಿಯಲ್ಲಿ **ನಿಷ್ಠಾ** (ಪಾ. ಸೂ. ೩-೨-೧೦೨) ಎಂಬುದರಿಂದ ಕ್ತ ಪ್ರತ್ಯಯ ಬಂದಾಗ **ಪಚೋವಃ** (ಪಾ. ಸೂ. ೮-೨ರ೫೨) ಎಂಬುದರಿಂದ ಅದಕ್ಕೆ ವತ್ವ. ಚಕಾರಕ್ಕೆ ಕುತ್ವ ಪ್ರತ್ಯಯಸ್ವರದಿಂದ ಅಂತೋದಾತ್ತವಾಗುತ್ತದೆ.

**ಆಹುಃ**—ಬ್ರೂಞ್ ವ್ಯಕ್ತಾಯಾಂ ವಾಚಿ. ಧಾತು. ಲಿಟ್ ಪ್ರಥಮಪುರುಷ ಬಹುವಚನದಲ್ಲಿ ಝಿಗೆ ಉಸಾದೇಶ. **ಬ್ರುವಃಪಂಚಾನಾಮಾದಿ**—(ಪಾ. ಸೂ. ೩-೪-೮೪) ಎಂಬುದರಿಂದ ಧಾತುವಿಗೆ ಆಹಾದೇಶ. ಯದ್ಯೋಗವಿರುವುದರಿಂದ ನಿಘಾತಸ್ವರ ಬರುವುದಿಲ್ಲ- ಪ್ರತ್ಯಯಸ್ವರದಿಂದ ಅಂತೋದಾತ್ತವಾಗುತ್ತದೆ.

**ಹರ**—ಹೃಞ್ ಹರಣೇ ಧಾತು. ಲೋಟ್ ಮಧ್ಯಮಪುರುಷ ಏಕವಚನಾಂತರೂಪ. ತಿಙಂತನಿಘಾತಸ್ವರ ಬರುತ್ತದೆ.

**ಮಾಂಸಭಿಕ್ಷಾಮ್**—ಮಾಂಸಸ್ಯ ಭಿಕ್ಷಾ-ತಾಮ್. ಸಮಾಸಸ್ವರದಿಂದ ಅಂತೋದಾತ್ತವಾಗುತ್ತದೆ.

**ಉಪಾಸತೇ**—ಆಸ ಉಪವೇಶನೇ ಧಾತು. ಲಟ್ ಪ್ರಥಮಪುರುಷ ಬಹುವಚನಾಂತರೂಪ, ಯದ್ಯೋಗ ವಿರುವುದರಿಂದ ನಿಘಾತಸ್ವರ ಬರುವುದಿಲ್ಲ. ಧಾತುವು ಅನುದಾತ್ತೇತ್ತಾದುದರಿಂದ **ತಾಸ್ಯನುದಾತ್ತೇತ್**—(ಪಾ. ಸೂ. ೬-೧-೧೮೬) ಎಂಬುದರಿಂದ ಲಸಾರ್ವಧಾತುಕವು ಅನುದಾತ್ತವಾಗುವುದರಿಂದ ಧಾತುಸ್ವರ ಉಳಿಯುತ್ತದೆ. **ತಿಙಿಚೋದಾತ್ತವತಿ** (ಪಾ. ಸೂ. ೮-೧-೭೧) ಎಂಬುದರಿಂದ ಗತಿಗೆ (ಉಪ) ಅನುದಾತ್ತಸ್ವರ ಬರುತ್ತದೆ.

ಸಂಹಿತಾಪಾಠಃ

ಯನ್ನೀಕ್ಷಣಂ ಮಾಂಸ್ಪಚನ್ಯಾ ಉಖಾಯಾ ಯಾ ಪಾತ್ರಾಣಿ ಯೂಷ್ಣ
ಆಸೇಚನಾನಿ ।
ಊಷ್ಮಣ್ಯಾಪಿಧಾನಾ ಚರೂಣಾಮಂಕಾಃ ಸೂನಾಃ ಪರಿ ಭೂಷಂತ್ಯಶ್ವಂ ॥

॥ ಪದಪಾಠಃ ॥

ಯತ್ । ನಿಽಈಕ್ಷಣಂ । ಮಾಂಸ್ಪಚನ್ಯಾಃ । ಉಖಾಯಾಃ । ಯಾ । ಪಾತ್ರಾಣಿ । ಯೂಷ್ಣಃ । ಆಽಸೇ-
ಚನಾನಿ ।
ಊಷ್ಮಣ್ಯಾ । ಅಪಿಽಧಾನಾ । ಚರೂಣಾಂ । ಅಂಕಾಃ । ಸೂನಾಃ । ಪರಿ । ಭೂಷಂತಿ । ಅಶ್ವಂ ॥ ೧೩ ॥

ಸಾಯಣಭಾಷ್ಯಂ

ಮಾಂಸ್ಪಚನ್ಯಾ ಮಾಂಸಪಚನ್ಯಾಃ ॥ ಪಚತೇರಧಿಕರಣೇ ಲ್ಯುಟ್ । ಮಾಂಸಸ್ಯ ಪಚಿ ಯುಡ್ಘಞೋಃ । ಕಾ. ೬-೧-೧೪೪ । ಇತ್ಯಂತಲೋಪಃ ॥ ಉಖಾಯಾಃ ಸ್ಥಾಲ್ಯಾನೀಕ್ಷಣಂ ಪಾಕಪರೀಕ್ಷಾ ಸಾಧನಂ ಕಾಷ್ಠಂ ತಥಾ ಯಾ ಯಾನಿ ಪಾತ್ರಾಣಿ ಯೂಷ್ಣೋ ರಸಸ್ಯ ಕ್ವಥಿತಸ್ಯಾಸೇಚನಾನ್ಯಾಸೇಚನಸಾಧನಾನಿ ತಥೋಷ್ಮಣ್ಯೋಷ್ಮನಿವಾರಣಾರ್ಹಾಣಿ ಪಾತ್ರಾಣಿ ತಥಾ ಚರೂಣಾಂ ಪಾತ್ರಾಣಾಂ ಮಾಂಸಪೂರ್ಣಾನಾಮಪಿ-ಧಾನಾಪಿಧಾನಾನಿ ತತ್ಸಾಧನಾನಿ ತಥಾಂಕಾ ಹೃದಯಾದ್ಯವಯವಾಂಕನಸಾಧನಾ ವೇತಸಶಾಖಾಃ ಸೂನಾ ಅವದಾನಸಾಧನಾಃ ಸ್ವಧಿತ್ಯಾದಯ ಏತಮಶ್ವಮಶ್ವಾವಯವಂ ಪರಿಭೂಷಂತಿ । ಪರಿತೋ ಭೂಷಯಂತಿ । ಸ್ವಸ್ವವ್ಯಾಪಾರೇಣ ಸಾಧಯಂತೀತ್ಯರ್ಥಃ ॥ ಭೂಷ ಅಲಂಕಾರೇ । ಭೌವಾದಿಕಃ ॥

### ಪ್ರತಿಪದಾರ್ಥ

**ಮಾಂಸ್ಪಚನ್ಯಾ**—ಮಾಂಸವನ್ನು ಹಾಕಿ ಬೇಯಿಸುತ್ತಿರುವ । **ಉಖಾಯಾ**—ಪಾತ್ರೆಯ । **ಯತ್ ನೀಕ್ಷಣಂ**—ಪಾಕಪರೀಕ್ಷಾಸಾಧನವಾದ ಮರದಸೌಟು ಅಥವಾ ಕೋಲು (ಮತ್ತು) । **ಯೂಷ್ಣಃ ಆಸೇಚನಾನಿ**—ಬೆಂದ ಮಾಂಸರಸವನ್ನು ಹಾಕಿಡುವ । **ಯಾ ಪಾತ್ರಾಣಿ**—ಯಾವ ಪಾತ್ರೆಗಳುಂಟೋ ಅವೂ । (**ತಥಾ**—ಹಾಗೆಯೇ) । **ಊಷ್ಮಣ್ಯಾ**—(ಪಕ್ವಮಾಂಸದ) ಬಿಸಿಯು ಆರಿಹೋಗದಂತೆ ಮುಚ್ಚುವ ತಟ್ಟೆಗಳು । (**ತಥಾ**—ಹಾಗೆಯೇ) । **ಚರೂಣಾಂ ಅಪಿಧಾನಾ**— ಬೆಂದಮಾಂಸವನ್ನು ಹಾಕಿಡುವ ಪಾತ್ರೆಗಳೂ (**ತಥಾ**—ಹಾಗೆಯೇ) । **ಅಂಕಾಃ**—ಹೃದಯಾದಿ ಅಶ್ವಾವಯವಗಳನ್ನು ಗುರುತಿಸುವುದಕ್ಕಾಗಿ ಬೇಯಿಸುವುದಕ್ಕೆಮೊದಲೆ ಅವುಗಳಿಗೆ ಚುಚ್ಚಿರುವ ವೇತಸವೃಕ್ಷದ ಕಡ್ಡಿಗಳೂ । **ಸೂನಾ**—ಮಾಂಸವನ್ನು ಕತ್ತರಿಸುವ ಚಾಕು, ಕತ್ತಿ ಮೊದಲಾದ ಸಾಧನಗಳೂ । **ಅಶ್ವಂ ಪರಿ**—ಅಶ್ವದ ಸುತ್ತಲೂ ಹರಡಿ । **ಭೂಷಂತಿ**—ಅಲಂಕರಿಸಿರುವಂತೆ ಕಾಣುವುದು.

### ಭಾವಾರ್ಥ

ಅಶ್ವದ ಮಾಂಸವನ್ನು ದೊಡ್ಡ ಪಾತ್ರೆಯಲ್ಲಿ ಹಾಕಿ ಬೇಯಿಸುವಾಗ ಅದು ಚೆನ್ನಾಗಿ ಬೆಂದಿರುವುದೇ ಎಂದು ನೋಡುವುದಕ್ಕಾಗಿ ಉಪಯೋಗಿಸುವ ಮರದ ಕೋಲು ; ಬೆಂದ ಮಾಂಸರಸವನ್ನು ಹಾಕಿಡುವ ಪಾತ್ರೆಗಳು ; ಬೆಂದ ಮಾಂಸವು ಆರಿಹೋಗದಂತೆ ಪಾತ್ರೆಗಳ ಮೇಲೆ ಮುಚ್ಚುವ ತಟ್ಟೆಗಳು ; ಮಾಂಸವನ್ನು ಹಾಕಿಡುವ ಪಾತ್ರೆಗಳು ; ಅಶ್ವದ ಹೃದಯಾದಿ ವಿವಿಧ ಅವಯುವಗಳನ್ನು ಬೆಂದಮೇಲೆ ಗುರ್ತಿಸುವುದಕ್ಕಾಗಿ ಮಾಂಸದ ತುಂಡುಗಳಿಗೆ ಚುಚ್ಚುವ ವೇತಸವೃಕ್ಷದ ಕಡ್ಡಿಗಳು ; ಮಾಂಸವನ್ನು ಕತ್ತರಿಸುವ ಚಾಕು, ಕತ್ತಿ ಇತ್ಯಾದ್ಯಾಯುಧಗಳು ಇವೆಲ್ಲವೂ ಯಜ್ಞಭೂಮಿಯಲ್ಲಿ ಅಶ್ವದ ಸುತ್ತಲೂ ಇಟ್ಟಿರುವುದು, ಅಶ್ವವನ್ನು ಅಲಂಕರಿಸಿದಂತೆ ಕಾಣುತ್ತಿರುವುದು.

## English Translation

The stick that is dipped into the caldron in which the flesh is boiled ; the vessels that distribute the broth ; the covers of the dishes, the skewers, the knives, all do honour (to the horse).

### ವಿಶೇಷವಿಷಯಗಳು

**ಯನ್ನೀಕ್ಷಣಂ—ಪಾಕಪರೀಕ್ಷಣಸಾಧನಂ ಕಾಷ್ಠಂ** । ಪಾತ್ರೆಯಲ್ಲಿ ಬೇಯುತ್ತಿರುವ ಮಾಂಸವು ಬೆನ್ನಾಗಿ ಬೆಂದಿದೆಯೇ ಇಲ್ಲವೇ ಎಂಬುದನ್ನು ಪರೀಕ್ಷಿಸುವುದಕ್ಕಾಗಿ ಉಪಯೋಗಿಸುವ ಉದ್ದವಾಗಿರುವ ಮರದ ಕೋಲು. ಇದು ಸೌಟಿನ ಆಕಾರದಲ್ಲಿಯಾಗಲಿ ಅಥವಾ ಕೋಲಿನಂತೆಯಾಗಲಿ ಇರಬಹುದು. ಇದರಿಂದ ಪಾತ್ರೆಯಲ್ಲಿ ಬೇಯುತ್ತಿರುವ ಬಿಸಿಯಾದ ಮಾಂಸವನ್ನು ಎತ್ತಿನೋಡಿ ಅದು ಸಾಕಾದಷ್ಟು ಬೆಂದಿರುವುದೇ ಅಥವಾ ಇನ್ನು ಬೇಯಬೇಕಾಗಿರುವುದೇ ಎಂಬುದನ್ನು ಆಗಾಗ ಪರೀಕ್ಷಿಸಿ ನೋಡುವರು. ಇದಕ್ಕಾಗಿ ಉಪಯೋಗಿಸುವ ಮರದ ಕಾಷ್ಠವೆಂದು ಭಾಷ್ಯಕಾರರು ವಿವರಿಸಿರುವರು.

**ಮಾಂಸ್ಪಚನ್ಯಾ ಉಖಾಯಾಃ**—ಮಾಂಸವನ್ನು ಬೇಯಿಸುವ ದೊಡ್ಡ ಪಾತ್ರೆಯು. ಈ ಪಾತ್ರೆಗೆ ಉಖಾ ಎಂದು ಹೆಸರು. ಈ ಪಾತ್ರೆಯು ಮಣ್ಣಿನಿಂದ ಮಾಡಿದ ದೊಡ್ಡ ಮಡಕೆಯು. (Coldron) ಇದನ್ನು ಸ್ಥಾಲೀ

ಎಂದೂ ಕರೆಯುವ ರೂಢಿ ಇರುವುದು. ಈ ಶಬ್ದಪ್ರಯೋಗವು ಋ. ಸಂ. ೧-೧೬೨-೧೩ ; ೧-೧೬೨-೧೫ ; ೩-೫೩-೨೨ ; ಅ. ವೇ. ೭-೩-೨೩ ; ತೈ. ಸಂ. ೫-೧-೬-೩ ; ವಾ. ಸಂ. ೧೧-೫೯ ; ತೈ. ಸಂ. ೪-೧-೫-೪ ಇತ್ಯಾದಿ ಸ್ಥಳಗಳಲ್ಲಿರುವುದು. ಈ ಉಖಾ ಎಂಬ ಪಾತ್ರೆಯ ನಿರ್ಮಾಣಕ್ರಮವು ತೈ. ಸಂ. ೫-೧-೭ ರಲ್ಲಿಯೂ ಇದರ ಸಂಸ್ಕಾರಾವಪನಾದಿಗಳು ತೈ. ಸಂ. ೫-೧-೭ ರಲ್ಲಿಯೂ, ಉಖಾಹೋಮವು ತೈ. ಸಂ. ೫-೫-೩ರಲ್ಲಿಯೂ ಹೇಳಲ್ಪಟ್ಟಿರುವುದು.

**ಆಸೇಚನಾನಿ ಪಾತ್ರಾಣಿ ಯೂಷ್ಣಃ**— ಸೇಚನವೆಂದರೆ ನೀರನ್ನು ಚುಮುಕಿಸುವುದು ಇಲ್ಲಿ ರಸರೂಪದಲ್ಲಿರುವ ಮಾಂಸಸಾರವನ್ನು ಹಾಕಿಡುವ ಅಥವಾ ಎಲ್ಲರಿಗೂ ಹಂಚುವ (ಬಡಿಸುವ) ಪಾತ್ರೆಗಳೆಂದು ಹೆಸರು.

**ಊಷ್ಮಣ್ಯಾ ಅಪಿಧಾನಾ**— ಪಾತ್ರೆಗಳಲ್ಲಿರುವ ಬಿಸಿಯಾದ ಮಾಂಸವು ಆರಿಹೋಗದಂತೆ ಮುಚ್ಚುವ ತಟ್ಟೆಗಳು.

**ಅಂಕಾಃ— ಹೃದಯಾವಯವಾಂಕನಸಾಧನಾ ವೇತಸಶಾಖಾಃ** । ಅಶ್ವಮಾಂಸದ ಹೃದಯಾದ್ಯವಯವ ಭಾಗಗಳನ್ನು ಗುರುತಿಸುವುದಕ್ಕಾಗಿ ವೇತಸ ವೃಕ್ಷದ ಕಡ್ಡಿಗಳನ್ನು ಉಪಯೋಗಿಸುವರು. ಈ ಕಡ್ಡಿಗಳನ್ನು ಆಯಾ ಮಾಂಸದ ತುಂಡುಗಳಿಗೆ ಚುಚ್ಚಿರುವುದರಿಂದ ಅಶ್ವಮಾಂಸವು ಯಾವ ಅವಯವಕ್ಕೆ ಸೇರಿದ್ದೆಂಬುದನ್ನು ಸುಲಭವಾಗಿ ತಿಳಿಯಬಹುದು. ಕಾಲಾನುಕ್ರಮದಲ್ಲಿ ವೇತಸ ಕಾಷ್ಠಗಳಿಗೆ ಬದಲಾಗಿ ಚಿನ್ನ, ಬೆಳ್ಳಿ, ಸೀಸ ಇವುಗಳಿಂದ ಮಾಡಿದ ಸೂಜಿಗಳನ್ನು ಉಪಯೋಗಿಸುವುದು ರೂಢಿಗೆ ಬಂದಂತೆ ಕಾಣುವುದು. ಅಶ್ವಾವಯವಗಳ ಮಾಂಸವನ್ನು ಗುರುತಿಸುವುದಕ್ಕೆ ಈ ಸೂಜಿಗಳನ್ನು ಚುಚ್ಚುವ ಕೆಲಸವು ಸಾಧಾರಣವಾಗಿ ಸ್ತ್ರೀಯರಿಂದ, ಅದರಲ್ಲೂ ಯಜಮಾನನ ಪತ್ನಿಯೇ ಮೊದಲಾದವರಿಂದ ಮಾಡಲ್ಪಡುವುದು. ಈ ಕಾರ್ಯವನ್ನು ಮಾಡುವಾಗ ಪಠಿಸುವ ಮಂತ್ರಗಳಲ್ಲಿಯೇ ಈ ವಿಷಯವು ಉಕ್ತವಾಗಿದೆ—

**ಗಾಯತ್ರೀ ತ್ರಿಷ್ಟುಬ್ಜಗತ್ಯನುಷ್ಟುಪ್ಪಂಕ್ತ್ಯಾ ಸಹ ।**
**ಬೃಹತ್ಯುಷ್ಣಿಹಾ ಕಕುತ್ಸೂಚೀಭಿಃ ಶಿಮ್ಯಂತು ತ್ವಾ ॥**
**ದ್ವಿಪದಾ ಯಾ ಚತುಷ್ಪದಾ ತ್ರಿಪದಾ ಯಾ ಚ ಷಟ್ಪದಾ ।**
**ಸಛಂದಾ ಯಾ ಚ ವಿಚ್ಛಂದಾಸ್ಸೂಚೀಭಿಃ ಶಿಮ್ಯಂತು ತ್ವಾ ॥**
**ಮಹಾನಾಮ್ನೀ ರೇವತಯೋ ವಿಶ್ವಾ ಆಶಾಃ ಪ್ರಸೂವರೀಃ ।**
**ಮೇಘ್ಯಾ ವಿದ್ಯುತೋ ವಾಚಃ ಸೂಚೀಭಿಃ ಶಿಮ್ಯಂತು ತ್ವಾ ॥**
**ರಜತಾ ಹರಿಣೀಸ್ಸೀಸಾ ಯುಜೋ ಯುಜ್ಯಂತೇ ಕರ್ಮಭಿಃ ।**
**ಅಶ್ವಸ್ಯ ವಾಜಿನಸ್ತ್ವಚಿ ಸೂಚೀಭಿಃ ಶಿಮ್ಯಂತು ತ್ವಾ ॥**
**ನಾರೀಸ್ತೇ ಪತ್ನಯೋ ಲೋಮ ವಿಚಿನ್ವಂತು ಮನೀಷಯಾ ।**
**ದೇವಾನಾಂ ಪತ್ನೀರ್ದಿಶಃಸೂಚೀಭಿಃ ಶಿಮ್ಯಂತು ತ್ವಾ ॥**
**ಕುವಿದಂಗ ಯವಮಂತೋ ಯವಂ ಚಿದ್ಯಥಾ ದಾಂತ್ಯನುಪೂರ್ವಂ ವಿಯೂಯ ।**
**ಇಹೇಹೈಷಾಂ ಕೃಣುತ ಭೋಜನಾನಿ ಯೇ ಬರ್ಹಿಷೋ ನಮೋವೃಕ್ತಿಂ ನ ಜಗ್ಮುಃ ॥**

(ತೈ. ಸಂ. ೫-೨-೧೧)

**ಕುವಿದಂಗ**— ಎಂಬ ಕೊನೆಯಮಂತ್ರವು. ಋ. ಸಂ. ೧೦-೧೩೧-೨ ; ಅಥರ್ವವೇದ. ೨೦-೧೨೫-೨ ; ವಾಜಸನೇಯಸಂಹಿತೆ ೧೦-೩೨ ; ೧೯-೧೬ ; ೨೩-೩೮ ; ತೈತ್ತಿರೀಯಸಂಹಿತೆ. ೧-೮-೨೧-೧ ; ೫-೨-೧೧-೨ ;

ತೈತ್ತಿರೀಯ ಬ್ರಾಹ್ಮಣ. ೨-೬-೧-೩ ಎಂಬ ಸ್ಥಳಗಳಲ್ಲಿಯೂ ಪಠಿತವಾಗಿರುವುದು. ಅಶ್ವಮಾಂಸವನ್ನು ಉಖಾ ಎಂಬ ದೊಡ್ಡ ಮಣ್ಣಿನ ಗಡಿಗೆಗಳಲ್ಲಿ ಹಾಕಿ ಬೇಯಿಸಿ ಅನಂತರ ಅಶ್ವದ ನಾನಾ ಅವಯವಗಳನ್ನುಆಯಾ ಮಂತ್ರಪುರಸ್ಸರ ವಾಗಿ ಅಗ್ನಿಯಲ್ಲಿ ಹೋಮಮಾಡುವರು. ಮಾಂಸವನ್ನು ಬೇಯಿಸಿದನಂತರ ಯಾವ ಮಾಂಸವು ಯಾವ ಅಂಗದ್ದು ಎಂದು ಹೇಳುವುದು ಕಷ್ಟವಾದ್ದರಿಂದ ಮಾಂಸವನ್ನು ಬೇಯಿಸುವುದಕ್ಕೆ ಪೂರ್ವದಲ್ಲಿಯೇ ಎಂದರೆ ಮಾಂಸವನ್ನು (ಅಶ್ವ ಶರೀರವನ್ನು) ಕತ್ತರಿಸುವಾಗ ಆಯಾ ಅವಯವಗಳನ್ನು ಚೆನ್ನಾಗಿ ಗುರ್ತಿಸಲು ಅನುಕೂಲವಾಗುವಂತೆ ಸುವರ್ಣಾದಿ ಲೋಹಗಳಿಂದ ನಿರ್ಮಿತವಾದ ಸೂಜಿಗಳನ್ನು ಅಥವಾ ವೇತಸವೃಕ್ಷದ ಚೂಪಾದ ಕಡ್ಡಿಗಳನ್ನು ಮಾಂಸದ ತುಂಡು ಗಳಿಗೆ ಚುಚ್ಚಿ ಬೇಯಿಸುವುದರಿಂದ, ಬೆಂದ ಮಾಂಸವು ಯಾವ ಅಂಗಕ್ಕೆ ಸೇರಿದ್ದು ಎಂಬುದನ್ನು ಸುಲಭವಾಗಿ ಗುರ್ತಿಸ ಬಹುದು. ಈ ಕಾರಣಕ್ಕಾಗಿಯೇ ಯಜಮಾನಪತ್ನಿಯೇ ಮೊದಲಾದ ಸ್ತ್ರೀಯರು ಈ ಕಾರ್ಯವನ್ನು ಮಾಡುವರು.

**ಸೂನಾಃ—ಅವದಾನಸಾಧನಾಃ ಸ್ವಧಿತ್ಯಾದಯಃ ।** ಮಾಂಸವನ್ನು ಕತ್ತರಿಸುವ ಮಚ್ಚುಕತ್ತಿ ಅಥವಾ ಇತರ ಆಯುಧಗಳು. ಭಾಷ್ಯಕಾರರು ಋ ಸಂ. ೧-೧೬೧-೧೦ನೇ ಋಕ್ಕಿನಲ್ಲಿ ಇರುವ ಸೂನಯಾ ಎಂಬ ಶಬ್ದಕ್ಕೆ, ಛೇದನಸಾಧನೇನ-ಮಾಂಸವನ್ನು ಕತ್ತರಿಸುವ ಸಾಧನವಾದ ಮಚ್ಚುಕತ್ತಿಯಂತಿರುವ ಆಯುಧದಿಂದ ಎಂದೇ ಅರ್ಥ ಮಾಡಿರುವರು. Implements of dissection, the Swadhiti and others· ಕೆಲವು ಪಾಶ್ಚಾತ್ಯ ಪಂಡಿತರು (Macdonell and Keith) ಈ ಶಬ್ದಕ್ಕೆ Woven wickerwork basket for holding flesh ಮಾಂಸವನ್ನು ಇಡುವ ಹೆಣೆದ ಬುಟ್ಟಿ ಎಂದರ್ಥವೆಂದು ಅಭಿಪ್ರಾಯಪಡುವರು. ಆದರೆ ಇದಕ್ಕೆ ಸರಿಯಾದ ಆಧಾರವಿಲ್ಲ. ಈ ಶಬ್ದವು ಋ. ಸಂ. ೧-೧೬೧-೧೦ ; ೧-೧೬೨-೧೩ ; ೧೦-೮೬-೧೮ ; ಅ. ವೇ. ೫-೧೭-೧೪ ಎಂಬ ಮಂತ್ರಗಳಲ್ಲಿ ಪಠಿತವಾಗಿರುವುದು.

**ಪರಿ ಭೂಷಂತಿ ಅಶ್ವಂ**—ಯಜ್ಞಯಾಗಾದಿಕರ್ಮಗಳಲ್ಲಿ ಉಪಯೋಗಿಸುವ ಪಾತ್ರಾದಿಗಳನ್ನು, ದೇವತೆ ಗಳಿಗೆ ಅರ್ಪಿಸಬೇಕಾದ ಹವಿಸ್ಸು, ಅನ್ನ, ಪಶು ಮೊದಲಾದವನ್ನು ಯಜ್ಞಕರ್ಮ ನಡೆಯುತ್ತಿರುವಾಗ ಅವುಗಳನ್ನು ಮಂತ್ರಗಳಿಂದ ಸಂಸ್ಕಾರಮಾಡುವುದಕ್ಕಾಗಿ ಯಜ್ಞವೇದಿಕೆಯಲ್ಲಿ ಅಥವಾ ಅಗ್ನಿಯ ಸಮೀಪದಲ್ಲಿ ಇಟ್ಟು ನಾನಾವಿಧ ವಾದ ಸಂಸ್ಕಾರಗಳಿಂದ ಮಂತ್ರಪುರಸ್ಸರವಾಗಿ ಶುದ್ಧಿಮಾಡಿ ಅನಂತರ ಅವುಗಳನ್ನು ಆಯಾಕಾರ್ಯಗಳಲ್ಲಿ ಉಪಯೋ ಗಿಸುವರು. ಗೃಹ್ಯಕರ್ಮಗಳಲ್ಲಿಯೂ ಅಗ್ನಿಮುಖವೆಂಬ ಅಗ್ನಿಯನ್ನು ಮಂತ್ರಪುರಸ್ಸರವಾಗಿ ಪ್ರತಿಷ್ಠಿಸುವ ಕರ್ಮ ದಲ್ಲಿ ಈ ವಿಧವಾದ ಪಾತ್ರಾಸಾದನಾದಿಗಳನ್ನು ನೆರವೇರಿಸುವುದು ಈಗಲೂ ರೂಢಿಯಲ್ಲಿದೆ. ಈ ಕ್ರಮವು ಯಜ್ಞ ಯಾಗಾದಿಗಳ ಕ್ರಮವನ್ನನುಸರಿಸಿಯೇ ನಡೆದುಬಂದಿರುವುದು. ಆದುದರಿಂದ ಅಶ್ವಮೇಧಯಜ್ಞದಲ್ಲಿ ಅಶ್ವವನ್ನು ವಧಿಸಿದನಂತರ ಉಪಯೋಗಿಸಬೇಕಾದ ಆಯುಧಗಳು, ಮಾಂಸಬೇಯಿಸುವ ಉಖಾಪಾತ್ರೆ, ಸಲಾಕಿ, ಮಾಂಸ ತುಂಬಿಡುವ ಬುಟ್ಟಿ ಮತ್ತು ಆಕಾಲದಲ್ಲಿ ಉಪಯೋಗಿಸಬಹುದಾದ ವಿವಿಧ ವಸ್ತುಗಳನ್ನು ಮಂತ್ರಪುರಸ್ಸರ ಸಂಸ್ಕಾರ ಮಾಡುವುದಕ್ಕಾಗಿ ಯಜ್ಞವೇದಿಯಲ್ಲಿ ಅಶ್ವದ ಸುತ್ತಲೂ ಇಟ್ಟಿರುವುದು ಅಲಂಕಾರವಾಗಿ ಕಾಣುತ್ತದೆಯೆಂದೂ, ಅಶ್ವವನ್ನು ಅಲಂಕರಿಸಿದಂತೆ ಇದೆಯೆಂದೂ ಋಷಿಯು ವರ್ಣಿಸಿರುವನು.

### ವ್ಯಾಕರಣಪ್ರಕ್ರಿಯಾ

**ನೀಕ್ಷಣಂ**—ನಿ ಉಪಸರ್ಗ. ಈಕ್ಷ ದರ್ಶನಾಂಕನಯೋಃ. ಧಾತು. ಕರಣಾರ್ಥದಲ್ಲಿ ಲ್ಯುಟ್‌ಪ್ರತ್ಯಯ **ಯುವೋರನಾಕೌ** (ಪಾ. ಸೂ. ೭-೧-೧) ಎಂಬುದರಿಂದ ಅನಾದೇಶ **ಲಿತಿ** (ಪಾ. ಸೂ. ೬-೧-೧೯೩) ಎಂಬುದ ರಿಂದ ಪ್ರತ್ಯಯದ ಪೂರ್ವಕ್ಕೆ ಉದಾತ್ತಸ್ವರ ಬರುತ್ತದೆ.

**ಮಾಂಸ್ಪಚನ್ಯಾಃ** — ಡುಪಚಷ್ ಪಾಕೇ. ಧಾತು. **ಕರಣಾಧಿಕರಣಯೋಶ್ಚ** (ಪಾ. ಸೂ. ೩-೩-೧೧೭) ಎಂಬುದರಿಂದ ಅಧಿಕರಣಾರ್ಥದಲ್ಲಿ ಲ್ಯುಟ್ ಪ್ರತ್ಯಯ. ಹಿಂದಿನಂತೆ ಅನಾದೇಶ. ಲ್ಯುಡಂತಪಚ್ ಧಾತುವು ಪರವಾದುದರಿಂದ ಮಾಂಸಶಬ್ದದ ಅಂತ್ಯಕ್ಕೆ **ಮಾಂಸಸ್ಯ ಪಚಿಯುಟ್‌ಘಞೋಃ** (ಕಾ. ೬-೧-೧೪೪) ಎಂಬುದರಿಂದ ಲೋಪ. ಸಮಾಸದಲ್ಲಿ ಕೃದುತ್ತರಪದ ಪ್ರಕೃತಿಸ್ವರ ಬರುತ್ತದೆ.

**ಆಸೇಚನಾನಿ**—ಷಿಚಿರ್ ಕ್ಷರಣೇ. ಧಾತು. ಕರಣಾಣರ್ಥದಲ್ಲಿ ಲ್ಯುಟ್‌ಪ್ರತ್ಯಯ. ಪ್ರಾದಿಸಮಾಸದಲ್ಲಿ ಕೃದುತ್ತರಪದಪ್ರಕೃತಿಸ್ವರಬರುತ್ತದೆ.

**ಊಷ್ಮಣ್ಯಾ**—ಅರ್ಹಾರ್ಥದಲ್ಲಿ ಯತ್ ಪ್ರತ್ಯಯ. **ತಿತ್‌ಸ್ವರಿತಮ್** (ಪಾ. ಸೂ. ೬-೧-೧೮೫) ಎಂಬುದರಿಂದ ಸ್ವರಿತಸ್ವರ ಬರುತ್ತದೆ. ನಪುಂಸಕದಲ್ಲಿ **ಶೇಶ್ಛಂದಸಿ ಬಹುಲಮ್** (ಪಾ. ಸೂ. ೬-೧-೭೦) ಎಂಬುದರಿಂದ ಶಿಗೆ ಲೋಪ. ಅಪಿಧಾನಾ ಎಂಬಲ್ಲಿಯೂ ಹೀಗೆಯೇ ಶಿ ಲೋಪ ಬರುತ್ತದೆ.

**ಭೂಷಂತಿ**—ಭೂಷ ಅಲಂಕಾರೇ. ಧಾತು. ಭ್ವಾದಿ. ಲಟ್. ಪ್ರಥಮಪುರುಷ ಬಹುವಚನಾಂತರೂಪ. ಅತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ. ‖ ೧೩ ‖

ಸಂಹಿತಾಪಾಠಃ

ನಿಕ್ರಮಣಂ ನಿಷದನಂ ವಿವರ್ತನಂ ಯಚ್ಚ ಪಡ್ಬೀಶಮರ್ವತಃ ।
ಯಚ್ಚ ಪಪೌ ಯಚ್ಚ ಘಾಸಿಂ ಜಘಾಸ ಸರ್ವಾ ತಾ ತೇ ಅಪಿ ದೇವೇಷ್ವಸ್ತು ‖ ೧೪ ‖

ಪದಪಾಠಃ

ನಿऽಕ್ರಮಣಂ । ನಿऽಸದನಂ । ವಿऽವರ್ತನಂ । ಯತ್ । ಚ । ಪಡ್ಬೀಶಂ । ಅರ್ವತಃ ।
ಯತ್ । ಚ । ಪಪೌ । ಯತ್ । ಚ । ಘಾಸಿಂ । ಜಘಾಸ । ಸರ್ವಾ । ತಾ । ತೇ । ಅಪಿ । ದೇವೇಷು । ಅಸ್ತು ‖

ಸಾಯಣಭಾಷ್ಯಂ

ಯನ್ನಿಕ್ರಮಣಂ ನಿತರಾಂ ಕ್ರಮತೇ ಯತ್ರ ತನ್ನಿಕ್ರಮಣಂ ಸ್ಥಾನಂ । ನಿತರಾಂ ಸೀದತ್ಯತ್ರೇತಿ । ನಿಷದನಂ । ವಿವರ್ತನಂ ವಿವಿಧವರ್ತನಮಿತಸ್ತತೋ ಲುಂಠನಂ ಯತ್ರ ತತ್ ‖ ಯಚ್ಚಾರ್ವತೋऽಶ್ವಸ್ಯ

ಪಡ್ಬೀಶಂ ಪಾದಬಂಧನಂ । ಯದ್ವಾ । ಬಂಧನಂ ಪಟ್ ತದ್ವಾನ್ಪ್ರದೇಶಃ । ಅತ್ರ ಸರ್ವತ್ರ ದೇವಾರ್ಥಸ್ಯಾಶ್ವಸ್ಯ ರೋಮಾದೀನಾಮಪಿ ನಿರರ್ಥಕತ್ವಾಭಾವಾಯ ತತ್ಸ್ಥಾನಮಪಿ ಸ್ವೀಕ್ರಿಯತೇ । ಯದ್ವಾ । ಕ್ರಿಯೋಪರಾವಗಂತವ್ಯಾ । ಆಲಂಭಸಮಯೇ ನಿಗ್ರಹೇಣ ಯಾ ನಿಕ್ರಮಣಾದಯಶ್ಚೇಷ್ಟಾಃ ಸಂತಿ ತಾ ಇತ್ಯರ್ಥಃ । ಯಚ್ಚ ಪಪೌ ಯದುದಕಮಪಿಬತ್ । ಯಚ್ಚ ಘಾಸಿಮದನೀಯಂ ತೃಣಾದಿಕಂ ಜಘಾಸ ಅಭಕ್ಷಯತ್ । ಹೇ ಅಶ್ವ ತೇ ತವ ತಾ ತಾನಿ ಸರ್ವಾಣಿ ನಿಕ್ರಮಣಾದೀನಿ ದೇವೇಷ್ವಸ್ತು । ಸಂತು । ದೇವೇಷು ವ್ಯಾಪ್ನೋತು । ತಾನ್ಯಪಿ ನಿರರ್ಥಕಾನಿ ಮಾ ಭೂವನ್ನಿತ್ಯರ್ಥಃ ॥

### ಪ್ರತಿಪದಾರ್ಥ

(**ಹೇ ಅಶ್ವ**—ಎಲೈ ಯಜ್ಞಾಶ್ವವೇ) । **ಅರ್ವತಃ**—ಈ ಯಜ್ಞಾಶ್ವದ (ನಿನ್ನ) । **ನಿಕ್ರಮಣಂ**—ಸಂಚಾರ ಪ್ರದೇಶವೂ । **ನಿಷದನಂ**—ನಿಲ್ಲುವ ಪ್ರದೇಶವೂ । **ವಿವರ್ತನಂ**—ನೆಲದಮೇಲೆ ಹೊರಳಾಡುವ ಪ್ರದೇಶವೂ । **ಯಚ್ಚ ಪಡ್ಬೀಶಂ**—ಮತ್ತು ಕುದುರೆಯ ಕಾಲುಗಳನ್ನು ಕಟ್ಟುವ ಹಗ್ಗವೂ । **ಯಚ್ಚ ಪಪೌ**—ಅಶ್ವವು ಕುಡಿದ ನೀರೂ । **ಯಚ್ಚ ಘಾಸಿಂ ಜಘಾಸ**—ಅಶ್ವವು ಭಕ್ಷಿಸಿದ (ಮೇದ) ತೃಣಾದಿ ಆಹಾರವೂ ಸಹ । **ತೇ**—ನಿನ್ನ । **ತಾ ಅಪಿ**—ಈ ವಿಧವಾದ ಕಾರ್ಯಗಳೆಲ್ಲವೂ ಸಹ । **ದೇವೇಷು**—ದೇವತೆಗಳಲ್ಲಿ (ದೇವತೆಗಳಿಗೆ) । **ಅಸ್ತು**—ಅರ್ಪಿತವಾಗಲಿ (ಸೇರಲಿ) ॥

### ಭಾವಾರ್ಥ

ಎಲೈ ಯಜ್ಞಾಶ್ವವೇ, ನೀನು ಹುಲ್ಲನ್ನು ಮೇಯುವಾಗ ಸಂಚರಿಸುತ್ತಿದ್ದ, ಅಲ್ಲಲ್ಲಿ ನಿಲ್ಲುತ್ತಿದ್ದ, ನೆಲದಮೇಲೆ ವಿಶ್ರಾಂತಿಗಾಗಿ ಹೊರಳಾಡುತ್ತಿದ್ದ, ಪ್ರದೇಶಗಳೂ, ನಿನ್ನ ಕಾಲುಗಳನ್ನು ಕಟ್ಟುವುದಕ್ಕೆ ಉಪಯೋಗಿಸುತ್ತಿದ್ದ ಹಗ್ಗವೂ, ನೀನು ಕುಡಿದ ನೀರು, ತಿಂದ ಹುಲ್ಲು ಇವೆಲ್ಲವೂ ವ್ಯರ್ಥವಾಗದೆ ದೇವತೆಗಳಿಗೇ ಅರ್ಪಿತವಾಗಲಿ.

### English Translation

May the place of going forth, of tarrying, of rolling on the ground ; the foot-fastening of the horse, (the water) that he has drunk, the grass that he has eaten ; may all these be yours among the gods.

### ವಿಶೇಷವಿಷಯಗಳು

ಈ ಋಕ್ಕಿನಲ್ಲಿ ಋಷಿಯು ಅಶ್ವವನ್ನು ಪ್ರಾರ್ಥಿಸುವಾಗ ಅದರ ರೋಮಾದಿಗಳೂ ಅದು ಭಕ್ಷಿಸಿದ ಹುಲ್ಲು, ಕುಡಿದ ನೀರು ವ್ಯರ್ಥವಾಗದೆ ದೇವತೆಗಳಿಗೇ ಸೇರಲಿ ಎಂದು ತನ್ನ ಆಶಯವನ್ನು ಸೂಚಿಸಿರುವನು. ಅಶ್ವದ ಅವಯವಗಳೂ, ಮಾಂಸವೂ ಪಚನಾದಿಗಳಿಂದ ಸಂಸ್ಕರಿಸಲ್ಪಟ್ಟು ದೇವತೆಗಳ ಪ್ರೀತ್ಯರ್ಥವಾಗಿ ಅಗ್ನಿಯಲ್ಲಿ ಹೋಮಮಾಡುವುದರಿಂದ ಅವೆಲ್ಲವೂ ದೇವತೆಗಳಿಗೆ ಸೇರಿ ಸಾರ್ಥಕವಾಗುವುದೆಂದೂ, ಅಗ್ನಿಯಲ್ಲಿ ಹೋಮಮಾಡಲು ಸಾಧ್ಯವಿಲ್ಲದಿರುವ ಅಶ್ವದ ಉದರಸ್ಥವಾದ, ನೀರು, ಜೀರ್ಣವಾಗದಿರುವ ಹುಲ್ಲು ಮೊದಲಾದವುಗಳೂ ಸಹ ವ್ಯರ್ಥವಾಗದೆ ದೇವತೆಗಳಿಗೇ ಸೇರಲಿ ಎಂಬ ಪ್ರಾರ್ಥನೆಯು ಈ ಋಕ್ಕಿನಲ್ಲಿ ವರ್ಣಿತವಾಗಿದೆ.

**ನಿಕ್ರಮಣಂ, ನಿಷದನಂ, ವಿವರ್ತನಂ**—ಅಶ್ವದ ಜೀವಿತಕಾಲದಲ್ಲಿ ಅದು ಸಂಚರಿಸುತ್ತಿದ್ದ, ಮಲಗುತ್ತಿದ್ದ ವಿಶ್ರಾಂತಿ ಪಡೆಯುತ್ತಿದ್ದ ಇವೇ ಮೊದಲಾದ ಪ್ರದೇಶಗಳೂ ದೇವತೆಗಳಿಗೇ ಸೇರಿ ಪ್ರೀತಿಯನ್ನುಂಟುಮಾಡಲಿ ಎಂಬ ವರ್ಣನೆಯಿಂದ ಅಶ್ವದ ನಿತ್ಯಜೀವನದ ಕ್ರಮವು ವರ್ಣಿಸಲ್ಪಟ್ಟು ಅದು ದೇವತೆಗಳ ಸಂತೋಷಕ್ಕೆ ಕಾರಣವಾಗಲಿ ಎಂದು ಪ್ರಾರ್ಥಿಸಿದೆ.

**ಪಡ್ಬೀಶಂ**—ಈ ಶಬ್ದಕ್ಕೆ ಭಾಷ್ಯಕಾರರು ಎರಡುವಿಧವಾಗಿ ಅರ್ಥಮಾಡಿರುವರು **ಪಡ್ಬೀಶಂ ಪಾದಬಂಧನಂ ಯದ್ವಾ ತದ್ವಾನ್ ಪ್ರದೇಶಃ** ಅಶ್ವದ ಪಾದಗಳನ್ನು ಕಟ್ಟುವ ಹಗ್ಗ ಅಥವಾ ಅಶ್ವವನ್ನು ಕಟ್ಟುವ ಸ್ಥಳ ಎಂಬ ಎರಡರ್ಥವನ್ನು ಹೇಳಿರುವರು. ಈ ಋಕ್ಕಿನಲ್ಲಿ ಹೇಳಿರುವ ಅರ್ಥದ ಕೆಲವಂಶಗಳನ್ನೇ ಪ್ರಕಾರಾಂತರವಾಗಿ ಈ ಸೂಕ್ತದ **ಯದ್ವಾಜಿನೋ ದಾಮ** ಎಂಬ ಋಕ್ಕಿನಲ್ಲಿಯೂ ಉಕ್ತವಾಗಿರುವುದು.

**ಯಚ್ಚ ಪಪೌ ಯಚ್ಚ ಘಾಸಿಂ ಜಘಾಸ**—ಕುದುರೆಯು ಕುಡಿವನೀರೂ ತಿಂದಹುಲ್ಲೂ ದೇವತೆಗಳಿಗೆ ಸೇರ ಬೇಕೆಂದು ಋಷಿಯು ಪ್ರಾರ್ಥಿಸಿರುವನು. ಏಕೆಂದರೆ ಈ ಸೂಕ್ತದ **ಯದೂವಧ್ಯಮುದರಸ್ಯಾಪವಾತಿ** (ಋ. ಸಂ. ೧-೧೬೨-೧೦) ಹೇಳಿರುವಂತೆ ಅಶ್ವದ ಉದರದಲ್ಲಿ ಜೀರ್ಣವಾಗದೆ ಇರುವ ತೃಣರೂಪವಾದ ಆಹಾರವನ್ನು ತೆಗೆದು ಶುದ್ಧ ವಾದ ಮಾಂಸವನ್ನು ಮಾತ್ರ ಪಾಕಮಾಡಬೇಕೆಂಬ ವಿಷಯವು ಉಕ್ತವಾಗಿರುವುದು. ಆದುದರಿಂದ ಕುದುರೆಯು ತಿಂದ ಹುಲ್ಲು ಕುಡಿದ ನೀರೂ ಸಹ ( ಹೋಮದಲ್ಲಿ ದೇವತೆಗಳಿಗೆ ಅರ್ಪಿಸಲು ಸಾಧ್ಯವಿಲ್ಲದ್ದರಿಂದ ) ನನ್ನ ಪ್ರಾರ್ಥನೆಯಂತೆ ದೇವತೆಗಳಿಗೇ ಸೇರಲಿ ಎಂದು ಋಷಿಯ ಆಶಯವು ವರ್ಣಿತವಾಗಿರುವುದು.

ಅಶ್ವಾಂಗಹೋಮವಿಧಿಯು ಎಂದರೆ ಅಶ್ವದ ಬೇರೆಬೇರೆ ಅವಯವಗಳನ್ನು ಮಂತ್ರಪೂರ್ವಕವಾಗಿ ಹೋಮ ಮಾಡುವ ವಿಧಿಯು ತೈತ್ತಿರೀಯ ಸಂಹಿತೆಯ ಐದನೆಯ ಕಾಂಡದ **ಸ್ತೇಗಾನ್ದಂಷ್ಟ್ರಾಭ್ಯಾಂ** ಎಂದು ಮೊದಲಾಗುವ ೧೧–೨೩ರವರೆಗಿನ ೧೪ ಅನುವಾಕಗಳಲ್ಲಿ ವಿಶದವಾಗಿ ಹೇಳಿರುವುದು. ಗ್ರಂಥವಿಸ್ತರಭಯದಿಂದ ಅವುಗಳನ್ನು ಇಲ್ಲಿ ವಿವರಿಸಿಲ್ಲ.

ಇತರ ಪಶುಯಾಗಗಳಲ್ಲಿ ಪಶುಹೋಮಕ್ಕಾಗಿ ಆಪ್ರೀ ಸೂಕ್ತಗಳಿರುವಂತೆ ಅಶ್ವಮೇಧಯಜ್ಞದಲ್ಲಿ ಉಪಯೋಗಿ ಸುವ ಅಶ್ವಸಂಬಂಧವಾದ ಆಪ್ರೀಸೂಕ್ತವು ತೈತ್ತಿರೀಯ ಸಂಹಿತೆಯಲ್ಲಿರುವುದು. ಇದರಲ್ಲಿ ಹನ್ನೊಂದು ಮಂತ್ರ ಗಳಿರುವವು ಈ ಸೂಕ್ತವು ಋಗ್ವೇದದಲ್ಲಿಲ್ಲವಾದ್ದರಿಂದ ಅದನ್ನು ಇಲ್ಲಿ ಕೊಟ್ಟಿದೆ—

(೧) **ಸಮಿದ್ಧೋ ಅಂಜನ್ಕೃದರಂ ಮತೀನಾಂ ಘೃತಮಗ್ನೇ ಮಧುಮತ್ಪಿನ್ವಮಾನಃ ।**
**ವಾಜೀ ವಹನ್ವಾಜಿನಂ ಜಾತವೇದೋ ದೇವಾನಾಂ ವಕ್ಷಿ ಪ್ರಿಯಮಾ ಸಧಸ್ಥಂ ॥**

(೨) **ಘೃತೇನಾಂಜನ್ತ್ಸಂ ಪಥೋ ದೇವಯಾನಾನ್ಪ್ರಜಾನನ್ವಾಜ್ಯಪ್ಯೇತು ದೇವಾನ್ ।**
**ಅನು ತ್ವಾ ಸಪ್ತೇ ಪ್ರದಿಶಸ್ಸಚಂತಾಗ್ ಸ್ವಧಾಮಸ್ಮೈ ಯಜಮಾನಾಯ ಧೇಹಿ ॥**

(೩) **ಈಡ್ಯಶ್ಚಾಸಿ ವಂದ್ಯಶ್ಚ ವಾಜಿನ್ನಾಶುಶ್ಚಾಸಿ ಮೇಧ್ಯಶ್ಚ ಸಪ್ತೇ ।**
**ಅಗ್ನಿಷ್ಟ್ವಾ ದೇವೈರ್ವಸುಭಿಸ್ಸಜೋಷಾಃ ಪ್ರೀತಂ ವಹ್ನಿಂ ವಹತು ಜಾತವೇದಾಃ ॥**

(೪) **ಸ್ತೀರ್ಣಂ ಬರ್ಹಿಸ್ಸುಷ್ಟರೀಮಾ ಜುಷಾಣೋರು ಪೃಥು ಪ್ರಥಮಾನಂ ಪೃಥಿವ್ಯಾಂ ।**
**ದೇವೇಭಿರ್ಯುಕ್ತಮದಿತಿಸ್ಸಜೋಷಾಃ ಸ್ಯೋನಂ ಕೃಣ್ವಾನಾ ಸುವಿತೇ ದಧಾತು ॥**

(೫) ಏತಾ ಉ ವಸ್ಸುಭಗಾ ವಿಶ್ವರೂಪಾ ವಿ ಪಕ್ಷೋಭಿಃ ಶ್ರಯಮಾಣಾ ಉದಾತೈಃ ।
ಋಷ್ವಾಸ್ಸತೀಃ ಕವಷಶ್ಶುಂಭಮಾನಾ ದ್ವಾರೋ ದೇವೀಃ ಸುಪ್ರಾಯಣಾ ಭವಂತು ॥

(೬) ಅಂತರಾ ಮಿತ್ರಾವರುಣಾ ಚರಂತೀ ಮುಖಂ ಯಜ್ಞಾನಾಮಭಿ ಸಂವಿದಾನೇ ।
ಉಷಾಸಾ ವಾಂ ಸುಹಿರಣ್ಯೇ ಸುಶಿಲ್ಪೇ ಋತಸ್ಯ ಯೋನಾವಿಹ ಸಾದಯಾಮಿ ॥

(೭) ಪ್ರಥಮಾ ವಾಗ್ಂ ಸರಥಿನಾ ಸುವರ್ಣಾ ದೇವೌ ಪಶ್ಯಂತೌ ಭುವನಾನಿ ವಿಶ್ವಾ ।
ಅಪಿಪ್ರಯಂ ಚೋದನಾ ವಾಂ ಮಿಮಾನಾ ಹೋತಾರಾ ಜ್ಯೋತಿಃ ಪ್ರದಿಶಾ ದಿಶಂತಾ ॥

(೮) ಆದಿತ್ಯೈರ್ನೋ ಭಾರತೀ ವಷ್ಟು ಯಜ್ಞಗ್ಂ ಸರಸ್ವತೀ ಸಹ ರುದ್ರೈರ್ನ ಆವೀತ್ ।
ಇಡೋಪಹೂತಾ ವಸುಭಿಃ ಸಜೋಷಾ ಯಜ್ಞಂ ನೋ ದೇವೀರಮೃತೇಷು ಧತ್ತ ॥

(೯) ತ್ವಷ್ಟಾ ವೀರಂ ದೇವಕಾಮಂ ಜಜಾನ ತ್ವಷ್ಟುರರ್ವಾ ಜಾಯತ ಆಶುರಶ್ವಃ ।
ತ್ವಷ್ಟೇದಂ ವಿಶ್ವಂ ಭುವನಂ ಜಜಾನ ಬಹೋಃ ಕರ್ತಾರಮಿಹ ಯಕ್ಷಿ ಹೋತಃ ॥

(೧೦) ಅಶ್ವೋ ಘೃತೇನ ತ್ಮನ್ಯಾ ಸಮಕ್ತ ಉಪ ದೇವಾಗ್ಂ ಋತುಶಃ ಪಾಥ ಏತು ।
ವನಸ್ಪತಿರ್ದೇವಲೋಕಂ ಪ್ರಜಾನನ್ನಗ್ನಿನಾ ಹವ್ಯಾ ಸ್ವದಿತಾನಿ ವಕ್ಷತ್ ॥

(೧೧) ಪ್ರಜಾಪತೇಸ್ತಪಸಾ ವಾವೃಧಾನಸ್ಸದ್ಯೋ ಜಾತೋ ದಧಿಷೇ ಯಜ್ಞಮಗ್ನೇ ।
ಸ್ವಾಹಾಕೃತೇನ ಹವಿಷಾ ಪುರೋಗಾ ಯಾಹಿ ಸಾಧ್ಯಾ ಹವಿರದಂತು ದೇವಾಃ ॥

(ತೈ. ಸಂ. ೫-೧-೧೧)

ಈ ಹನ್ನೊಂದು ಮಂತ್ರಗಳನ್ನು ಅಶ್ವಮೇಧಯಜ್ಞದಲ್ಲಿ ಯಾಜ್ಯಾಮಂತ್ರಗಳನ್ನಾಗಿ ಉಪಯೋಗಿಸುವರು. ಈ ಹನ್ನೊಂದು ಮಂತ್ರಗಳೂ ತ್ರಿಷ್ಟುಪ್ ಛಂದಸ್ಸಿನವು.

### ವ್ಯಾಕರಣಪ್ರಕ್ರಿಯಾ

**ನಿಕ್ರಮಣಮ್**—ನಿತರಾಂ ಕ್ರಮತೇ ಯತ್ರ. ಕ್ರಮು ಪಾದವಿಕ್ಷೇಪೇ, ಧಾತು. ಅಧಿಕರಣಾರ್ಥದಲ್ಲಿ ಲ್ಯುಟ್ ಪ್ರತ್ಯಯ. ಅದಕ್ಕೆ ಅನಾದೇಶ. ಲಿತ್ತ್ವಾದುದರಿಂದ ಪ್ರತ್ಯಯದ ಪೂರ್ವಕ್ಕೆ ಉದಾತ್ತಸ್ವರ ಬರುತ್ತದೆ. ಪ್ರಾದಿಸಮಾಸದಲ್ಲಿ ಕೃದುತ್ತರಪದ ಪ್ರಕೃತಿಸ್ವರ ಬರುತ್ತದೆ.

**ನಿಷದನಮ್**— ಷದಲ್ಯ ವಿಶರಣಗತ್ಯವಸಾದನೇಷು. ಧಾತು. ಹಿಂದಿನಂತೆ ಪ್ರತ್ಯಯಸ್ವರಗಳು ಬರುತ್ತವೆ. ಉಪಸರ್ಗನಿಮಿತ್ತವಾಗಿ ಧಾತುಸಕಾರಕ್ಕೆ ಷತ್ವ.

**ನಿವರ್ತನಮ್**—ವೃತು ವರ್ತನೇ. ಧಾತು. ಹಿಂದಿನಂತೆ ಪ್ರಕ್ರಿಯೆ ಬರುತ್ತದೆ.

**ಪಪೌ**—ಪಾ. ಪಾನೇ. ಧಾತು. ಲಿಟ್ ಪ್ರಥಮಪುರುಷ ಏಕವಚನದಲ್ಲಿ ಣಲ್ ಆದೇಶ **ಆತ ಔಣಲಃ** (ಪಾ. ಸೂ. ೭-೧-೩೪) ಎಂಬುದರಿಂದ ಅದಕ್ಕೆ ಔಕಾರಾದೇಶ. ಧಾತುವಿಗೆ ದ್ವಿತ್ವಾದಿ. ಯದ್ಯೋಗವಿರುವುದರಿಂದ ನಿಘಾತಸ್ವರ ಬರುವುದಿಲ್ಲ. ಪ್ರತ್ಯಯ ಸ್ವರದಿಂದ ಅಂತೋದಾತ್ತವಾಗುತ್ತದೆ.

**ಘಾಸಿಮ್**—ಘಸ್ಲೃ ಭಕ್ಷಣೇ. ಧಾತು. **ಜನಿಘಸಿಭ್ಯಾಮಿಞ್** (ಉ. ಸೂ. ೪-೫೬೯) ಎಂಬುದರಿಂದ ಇಞ್ ಪ್ರತ್ಯಯ. **ಅತಉಪಧಾಯಾಃ** (ಪಾ. ಸೂ. ೭-೨-೧೧೬) ಎಂಬುದರಿಂದ ಉಪಧಾವೃದ್ಧಿ. ಪ್ರತ್ಯಯಸ್ವರದಿಂದ ಅಂತೋದಾತ್ತವಾಗುತ್ತದೆ.

**ಜಘಾಸ**—ಘಸ್‌ಲೃ ಭಕ್ಷಣೇ. ಧಾತು. ಲಿಟ್ ಪ್ರಥಮಪುರುಷ ಏಕವಚನಾಂತರೂಪ. ಯದ್ಯೋಗ ವಿರುವುದರಿಂದ ನಿಘಾತಸ್ವರ ಬರುವುದಿಲ್ಲ. ಣಲ್ ಲಿತ್ತಾದುದರಿಂದ **ಲಿತಿ** (ಪಾ. ಸೂ ೬-೧-೧೯೩) ಎಂಬುದರಿಂದ ಪ್ರತ್ಯಯದ ಪೂರ್ವಕ್ಕೆ ಉದಾತ್ತಸ್ವರ ಬರುತ್ತದೆ.॥ ೧೪ ॥

---

ಸಂಹಿತಾಪಾಠಃ

ಮಾ ತ್ವಾಗ್ನಿರ್ಧ್ವನಯೀದ್ಧೂಮಗಂಧಿರ್ಮೋಖಾ ಭ್ರಾಜಂತ್ಯಭಿ ವಿಕ್ತ-
ಜಘ್ರಿಃ ।
ಇಷ್ಟಂ ವೀತಮಭಿಗೂರ್ತಂ ವಷಟ್ಕೃತಂ ತಂ ದೇವಾಸಃ ಪ್ರತಿ ಗೃಭ್ಣಂ-
ತ್ಯಶ್ವಂ ॥ ೧೫ ॥

ಪದಪಾಠಃ

ಮಾ । ತ್ವಾ । ಅಗ್ನಿಃ । ಧ್ವನಯೀತ್ । ಧೂಮsಗಂಧಿಃ । ಮಾ । ಉಖಾ । ಭ್ರಾಜಂತೀ । ಅಭಿ । ವಿಕ್ತ
ಜಘ್ರಿಃ ।
ಇಷ್ಟಂ । ವೀತಂ । ಅಭಿsಗೂರ್ತಂ । ವಷಟ್sಕೃತಂ । ತಂ । ದೇವಾಸಃ । ಪ್ರತಿ । ಗೃಭ್ಣಂತಿ । ಅಶ್ವಂ॥೧೫॥

ಸಾಯಣಭಾಷ್ಯಂ

ಹೇ ಅಶ್ವ ತ್ವಾ ತ್ವಾಂ ಧೂಮಗಂಧಿರ್ಧೂಮೇನ ವ್ಯಾಪ್ತೋಽಗ್ನಿರ್ಮಾ ಧ್ವನಯೀತ್ । ಮಾ ಧ್ವನಯತ್ । ಧೂಮಂ ದೃಷ್ಟ್ವಾ ಶಬ್ದಂ ಮಾ ಕುರ್ವಿತ್ಯರ್ಥಃ । ಅಶ್ವಸ್ಯ ಶಬ್ದನೇ ಪ್ರಾಯಶ್ಚಿತ್ತವಿಧಾನಾತ್। ಯದ್ವಾ । ಹೇ ಪಚ್ಯಮಾನಾಶ್ವಾವಯವ ತ್ವಾ ತ್ವಾಂ ಧೂಮಗಂಧಿರಗ್ನಿರ್ಮಾ ಧ್ವನಯೀತ್ । ಧ್ವನೌ ಸತಿ ಭಾಂಡಭಂಗಃ ಸ್ಯಾತ್॥ ನೋನಯತಿಧ್ವನಯತೀತ್ಯಾದಿನಾ ಚಙ್‌ಪ್ರತಿಷೇಧಃ । ಪಾ. ೩-೧-೫೧ । ಹ್ಮ್ಯಂತಕ್ಷಣೇತಿ

ವೃದ್ಧ್ಯಭಾವಃ ॥ ಕಿಂಚ ಭ್ರಾಜಂತ್ಯತ್ಯಂತಾಗ್ನಿಸಂಯೋಗೇನ ದೀಪ್ಯಮಾನಾ ಉಖಾ ಸ್ಥಾಲೀ ಮಾಭಿ ವಿಕ್ತ । ಅಭಿತೋ ಮಾ ಚೀಚಲತ್ । ತಾಪಾತಿಶಯೇನ ಮಾ ನೀನಶದಿತ್ಯರ್ಥಃ ॥ ಓವಿಜೀ ಭಯಚಲನಯೋಃ । ಛಾಂದಸೋ ವಿಕರಣಸ್ಯ ಲುಕ್ । ಲುಙಿ ವಾ ಝಲೋ ಝಲೀತಿ ಸಲೋಪಃ ॥ ಸ್ಥಾಲೀ ವಿಶೇಷ್ಯತೇ । ಜಘ್ರಿರ್ಜಿಘ್ರತೀ ತಾಪೇನ ॥ ಘ್ರಾ ಗಂಧೋಪಾದಾನೇ । ಆದೃಗಮಹನೇತಿ ಕಿನ್ಪ್ರತ್ಯಯಃ ॥ ತಂ ತಾದೃಶಮಶ್ವಮಿಷ್ಟಂ ಹೋತುಮಿಷಿತಂ ವೀತಂ ಹೋಮಾಯಾನೀತಮಭಿಗೂರ್ತಮಾಭಿಮುಖ್ಯೇನ ಪ್ರದಾನಾಯೋದ್ಯತಂ । ಯದ್ವಾ । ಇಷ್ಟಂ ಪ್ರಯಾಜೈರಾಪ್ರೀತಂ ವೀತಂ ಪರ್ಯಗ್ನಿಕೃತಮಭಿಗೂರ್ತಂ ಯೇ ಯಜಾಮಹ ಇತ್ಯಾಗೂರ್ಯುಕ್ತಂ । ವಷಟ್ಕೃತಂ ವಷಟ್ಕಾರೇಣ ದೇವಸಂಸ್ಕೃತಂ ಏವಂಭೂತಂ ತಂ ದೇವಾಸೋ ದೇವಾಃ ಪ್ರತಿ ಗೃಭ್ಣಂತಿ । ಪ್ರತಿಗೃಹ್ಣಂತಿ ॥

ಪ್ರತಿಪದಾರ್ಥ

(ಹೇ **ಅಶ್ವ**—ಎಲೈ ಅಶ್ವವೇ) । **ತ್ವಾ**—ನಿನ್ನನ್ನು । **ಧೂಮಗಂಧಿಃ**—ಹೊಗೆಯಿಂದ ಕೂಡಿದ ಅಗ್ನಿಯು । **ಮಾ ಧ್ವನಯೀತ್**—ಕೆನೆಯುವಂತೆ ಮಾಡದಿರಲಿ । [ (ಅಥವಾ) **ತ್ವಾ**—ಭಾಂಡದಲ್ಲಿ ಮಾಂಸರೂಪದಿಂದ ಬೇಯುತ್ತಿರುವ ನಿನ್ನನ್ನು (ಭಾಂಡವನ್ನು) । **ಧೂಮಗಂಧಿಃ—ಹೊಗೆಯಿಂದ ಕೂಡಿದ ಅಗ್ನಿಯು** । **ಮಾ ಧ್ವನಯೀತ್**—ಘಟ್ಟಿಯಾಗಿ ಶಬ್ದಮಾಡದಂತಾಗಲಿ (ಮಾಂಸ ಸಹಿತವಾದ ಭಾಂಡವು ಒಡೆಯದಿರಲಿ) ।] **ಭ್ರಾಜಂತೀ ಜಘ್ರಿಃ**—ಬೆಂಕಿಯ ಉರಿಯಿಂದ ಕಾದು ವಾಸನೆಬರುತ್ತಿರುವ । **ಉಖಾ**—(ಮಾಂಸಪೂರ್ಣವಾದ) ಪಾತ್ರೆಯು । **ಮಾ ಅಭಿ ವಿಕ್ತ**—ಜಾರಿಬೀಳದಿರಲಿ । **ಇಷ್ಟಂ**—ದೇವತೆಗಳಿಗೆ ಹೋಮಮಾಡುವುದಕ್ಕಾಗಿ ಆರಿಸಲ್ಪಟ್ಟುದೂ । **ವೀತಂ**—ಹೋಮಾರ್ಥವಾಗಿ ಅಗ್ನಿಯ ಸಮೀಪಕ್ಕೆ ಕರೆತಂದುದೂ । **ಅಭಿಗೂರ್ತಂ**—ಆಹುತಿಗಾಗಿಯೇ ಮುಖ್ಯವಾಗಿ ಸಿದ್ಧಮಾಡಲ್ಪಟ್ಟಿರುವುದೂ । [ (ಅಥವಾ) **ಇಷ್ಟಂ**—ಪ್ರಯಾಜಹೋಮಗಳಿಂದ ಹೋಮ ಮಾಡಲ್ಪಡುವುದೂ । **ವೀತಂ**—ಪರ್ಯಗ್ನಿಕರಣವಿಧಾನದಿಂದ ಅಗ್ನಿಯ ಸುತ್ತಲೂ ಮೂರಾವರ್ತಿ ಪ್ರದಕ್ಷಿಣಾಕಾರವಾಗಿ ಕರೆತಂದುದೂ । **ಅಭಿಗೂರ್ತಂ**—ಆಹುತಿಪ್ರದಾನಕ್ಕಾಗಿ ಸಿದ್ಧವಾಗಿರುವುದೂ । ]**ವಷಟ್ಕೃತಂ**—ವಷಟ್ಕಾರದಿಂದ (ವಷಟ್ ಎಂಬ ಮಂತ್ರವನ್ನು ಉಚ್ಚರಿಸುವುದರಿಂದ) ದೇವತೆಗಳಿಗೆ ಯೋಗ್ಯವಾಗುವಂತೆ ಸಂಸ್ಕೃತವಾದುದೂ ಆದ । **ತಂ ಅಶ್ವಂ**—ಆ ಅಶ್ವವನ್ನು । **ದೇವಾಸಃ**—ದೇವತೆಗಳು । **ಪ್ರತಿ ಗೃಭ್ಣಂತಿ**—ಸ್ವೀಕರಿಸುತ್ತಾರೆ. ಸ್ವೀಕರಿಸುತ್ತಾರೆ. ।

ಭಾವಾರ್ಥ

ಹೊಗೆ ವಾಸನೆ ಬರುತ್ತಿರುವ ಎಂದರೆ ಹೊಗೆಯಾಡುತ್ತಿರುವ ಅಗ್ನಿಯನ್ನು ನೋಡಿ ಯಜ್ಞಾಶ್ವವು ಕೆನೆಯದಿರಲಿ. (ಶಬ್ದಮಾಡದಿರಲಿ)- ಬಹಳವಾದ ಉರಿಯಿಂದ ಕಾದು ವಾಸನೆಬರುತ್ತಿರುವ ಮಾಂಸಭಾಂಡವು ಉರಳಿ ಬೀಳದಿರಲಿ. ಈ ಅಶ್ವವು ಪರ್ಯಗ್ನಿಕರಣವಿಧಾನದಿಂದ ಅಗ್ನಿಯನ್ನು ಪ್ರದಕ್ಷಿಣೆ ಮಾಡಿ ವಷಟ್ಕಾರಪೂರ್ವಕವಾದ ದೇವತೆಗಳ ಆಹುತಿಗಾಗಿ ಸಿದ್ಧಪಡಿಸಲ್ಪಟ್ಟಿರುವುದು. ಇಂತಹ ಸಂಸ್ಕಾರಪೂರ್ವಕವಾದ ಅಶ್ವವನ್ನು ದೇವತೆಗಳು ಸ್ವೀಕರಿಸುತ್ತಾರೆ.

## English Translation

Let not smoke-smelling Agni cause you, (horse), to utter sound ; let not the glowing caldron, odoriferous (with its contents), be overturned : the

gods accept a horse that has been selected (for sacrifice): that has been led (round the fire): that has been devoutly offered, and has been consecrated by (the exclamation), Vashat.

### ವಿಶೇಷವಿಷಯಗಳು

**ಮಾ ತ್ವಾ ಅಗ್ನಿಃ ಧ್ವನಯೀತ್ ಧೂಮಗಂಧಿಃ**—ಧೂಮಗಂಧಿಃ ಎಂದರೆ ಹೊಗೆಯವಾಸನೆಯುಳ್ಳ ಎಂದರೆ ತುಂಬಾ ಹೊಗೆಯಿಂದ ಕೂಡಿರುವ ಎಂದರ್ಥವು. ಇಂತಹ ಹೊಗೆಯಾಡುತ್ತಿರುವ ಅಗ್ನಿಯ ಸಮೀಪಕ್ಕೆ ಅಶ್ವವನ್ನು ಪರ್ಯಗ್ನಿಕರಣಕ್ಕಾಗಿ ಕರೆತಂದಾಗ ಅದು ಶಬ್ದಮಾಡದಿರಲಿ ಎಂದು ಪ್ರಾರ್ಥನೆಯು. ಒಂದು ವೇಳೆ ಅಶ್ವವು ಬೆದರಿ ಶಬ್ದ ಮಾಡಿದರೆ ಆಗ ಪ್ರಾಯಶ್ಚಿತ್ತವಿಧಿಯನ್ನು ಆಚರಿಸಬೇಕಾಗುವುದು. ಆ ರೀತಿ ಪ್ರಾಯಶ್ಚಿತ್ತಕ್ಕೆ ಅವಕಾಶವಿಲ್ಲದಂತೆ ಅಶ್ವವು ಹೊಗೆಯ ತೊಂದರೆಯಿಂದ ಶಬ್ದಮಾಡದಿರಲಿ ಎಂದು ಋಷಿಯ ಆಶಯವು.

**ಮಾ ಉಖಾ ಭ್ರಾಜಂತೀ ಅಭಿ ವಿಕ್ತ ಜಘ್ರಿಃ**—ಬೆಂಕಿಯ ಮೇಲಿರುವ ಮಾಂಸ ಪಾತ್ರೆಯು ಹೆಚ್ಚಾದ ಉರಿಯಿಂದ ಕೆಂಪಗೆ ಕಾದು ಬೇಯುತ್ತಿರುವ ಮಾಂಸದ ವಾಸನೆಯಿಂದ ಕೂಡಿರುವುದು. ಇಂತಹ ಭಾಂಡವು ಕಾರಣಾಂತರದಿಂದ ಕೆಳಗೆ ಬೀಳದಿರಲಿ ಅಥವಾ ಒಡೆಯದಿರಲಿ ಎಂದಭಿಪ್ರಾಯವು.

**ಇಷ್ಟಂ—ಹೋತುಮಿಷಿತಂ । ಯದ್ವಾ ಪ್ರಯಾಜೈರಾಪ್ರೀತಂ ।** ಹೋಮ ಮಾಡುವುದಕ್ಕಾಗಿ ಆರಿಸಲ್ಪಟ್ಟಿರುವ ಅಶ್ವವು ಅಥವಾ ಪ್ರಯಾಜಮಂತ್ರಗಳಿಂದ ಹೋಮಮಾಡಲ್ಪಡುವ ಅಶ್ವವನ್ನು ಎಂದರ್ಥವು.

**ವೀತಂ**—ಅಗ್ನಿಯ ಸಮೀಪಕ್ಕೆ ಕರೆತರಲ್ಪಟ್ಟ ಅಥವಾ ಪರ್ಯಗ್ನಿಕರಣವಿಧಾನದಿಂದ ಅಗ್ನಿಯ ಸುತ್ತಲೂ ಬಳಸಿ ಬಂದಿರುವ

**ಅಭಿಗೂರ್ತಂ—ಅಭಿಮುಖ್ಯೇನ ಪ್ರದಾನಾಯೋದ್ಯತಂ ।** ಮುಖ್ಯ ಆಹುತಿಯಾಗಿ ಸಮರ್ಪಿಸುವುದಕ್ಕೆ ಸಿದ್ಧಮಾಡಲ್ಪಟ್ಟ ಅಥವಾ ಯೇ ಯಜಾಮಹೇ ಎಂದು ಪ್ರಾರಂಭಿಸಿ ಘಟ್ಟಿಯಾಗಿ ಮಂತ್ರೋಚ್ಚಾರಣಪೂರ್ವಕವಾಗಿ ಹೋಮ ಮಾಡಲು ಸಿದ್ಧವಾಗಿರುವ ಎಂದಭಿಪ್ರಾಯವು.

**ವಷಟ್ಕೃತಂ**—ಅಗ್ನಿಯಲ್ಲಿ ಹೋಮ ಮಾಡುವಾಗ ಪ್ರಯಾಜಮಂತ್ರಗಳ ಕೊನೆಯಲ್ಲಿ ವೌಷಟ್ ಎಂಬ ಶಬ್ದವನ್ನುಚ್ಚರಿಸುತ್ತಾ ಹೋಮ ಮಾಡುವರು. ಈ ರೀತಿ ವೌಷಡಂಗವಾಗಿ ಹೋಮಮಾಡುವುದಕ್ಕೆ ವಷಟ್ಕಾರವೆಂದು ಹೆಸರು. ಇಂತಹ ಮಂತ್ರಪೂತವಾದ ಅಶ್ವ ಅಥವಾ ಅಶ್ವಮಾಂಸವನ್ನು ದೇವತೆಗಳು ಸ್ವೀಕರಿಸುತ್ತಾರೆಂದು ಅಭಿಪ್ರಾಯವು.

### ವ್ಯಾಕರಣಪ್ರಕ್ರಿಯಾ

**ಧ್ವನಯೀತ್**—ಧ್ವನ ಶಬ್ದೇ. ಧಾತು. **ಹೇತುಮತಿ ಚ** (ಪಾ. ಸೂ. ೩-೧-೨೬) ಎಂಬುದರಿಂದ **ಣಿಚ್.** ಘಟಾದಿಯಲ್ಲಿ ಸೇರಿರುವುದರಿಂದ ಮಿತ್ ಸಂಜ್ಞಾ ಬರುತ್ತದೆ. ಉಪಧಾವೃದ್ಧಿ ಬಂದಾಗ **ಮಿತಾಂ ಹ್ರಸ್ವಃ** (ಪಾ. ಸೂ. ೬-೪-೯೨) ಎಂಬುದರಿಂದ ಧಾತುವಿನ ಉಪಧೆಗೆ ಹ್ರಸ್ವ. ಮಾಙ್ ಉಪಪದವಾಗಿರುವಾಗ **ಮಾಙಿ ಲುಙ್** (ಪಾ. ಸೂ. ೩-೩-೧೭೫) ಎಂಬುದರಿಂದ ಲುಙ್. ಪ್ರಥಮಪುರುಷಏಕವಚನದಲ್ಲಿ ತಿಪ್ ಪ್ರತ್ಯಯ. **ಇತಶ್ಚ** ಎಂಬುದರಿಂದ ಇಕಾರಲೋಪ. **ನೋನಯತಿ ಧ್ವನ—**(ಪಾ. ಸೂ. ೩-೧-೫೧) ಎಂಬುದರಿಂದ ಚ್ಲಿಗೆ ಚಙ್ ಪ್ರತಿಷೇಧ

ಬರುತ್ತದೆ. ಸಿಚಾದೇಶ. ಅದಕ್ಕೆ ಇಡಾಗಮ. **ಅಸ್ತಿಸಿಚೋಽಪೃಕ್ತೇ** (ಪಾ. ಸೂ. ೭-೩-೯೬) ಎಂಬುದರಿಂದ ಈಡಾಗಮ. **ಇಟಈಟಿ** (ಪಾ. ಸೂ. ೮-೨-೨೮) ಎಂಬುದರಿಂದ ಸಿಚಿಗೆ ಲೋಪ. **ಹ್ಮ್ಯಂತಕ್ಷಣಶ್ವಸ**—(ಪಾ. ಸೂ. ೭-೨-೫) ಎಂಬುದರಿಂದ ವೃದ್ಧಿನಿಷೇಧ ಬರುತ್ತದೆ. ಣಿಚಿಗೆ ಗುಣ. ಅಯಾದೇಶ. **ನಮಾಙ್ಯೋಗೇ** (ಪಾ. ಸೂ. ೬-೪-೭೪) ಎಂಬುದರಿಂದ ಅಡಾಗಮ ಬರುವುದಿಲ್ಲ. ಅತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

**ಧೂಮಗಂಧಿಃ**—ಧೂಮಸ್ಯ ಗಂಧಃ ಯಸ್ಮಿನ್ ಸಃ ಧೂಮಗಂಧಿಃ **ಅಲ್ಪಾಖ್ಯಾಯಾಂ** (ಪಾ. ಸೂ. ೫-೪-೧೩೬) ಎಂಬುದರಿಂದ ಇಕಾರ ಸಮಾಸಂತವಾಗಿ ಬರುತ್ತದೆ. **ಬಹುವ್ರೀಹೌ ಪ್ರಕೃತ್ಯಾ ಪೂರ್ವಪದಮ್** ಎಂಬುದರಿಂದ ಪೂರ್ವಪದಪ್ರಕೃತಿಸ್ವರ ಬರುತ್ತದೆ.

**ಭ್ರಾಜಂತೀ**—ಭ್ರಾಜೃ ದೀಪ್ತೌ ಧಾತು. ವ್ಯತ್ಯಯದಿಂದ ಲಟಿಗೆ ಶತ್ರಾದೇಶ. ಸ್ತ್ರೀತ್ವದಲ್ಲಿ ಙೀಪ್. ಧಾತುಸ್ವರ ಉಳಿಯುತ್ತದೆ.

ವಿಕ್ತ—ಓವಿಜೀ ಭಯಚಲನಯೋಃ ಧಾತು. ಲಙ್ ಪ್ರಥಮಪುರುಷಏಕವಚನದಲ್ಲಿ ತ ಪ್ರತ್ಯಯ. **ಬಹುಲಂ ಛಂದಸಿ** ಎಂಬುದರಿಂದ ವಿಕರಣಕ್ಕೆ ಲುಕ್. ಅಥವಾ ಮಾಙ್ಯೋಗವಿರುವುದರಿಂದ ಲುಙ್. ಚ್ಲಿಗೆ ಸಿಚಾದೇಶ. **ಝಲೋ ಝಲಿ** (ಪಾ. ಸೂ. ೮-೨-೨೬) ಎಂಬುದರಿಂದ ಸಿಚಿಗೆ ಲೋಪ. **ಚೋಃಕುಃ** ಎಂಬುದರಿಂದ ಜಕಾರಕ್ಕೆ ಕುತ್ವ, ಚರ್ತ್ವ. ಪ್ರತ್ಯಯಕ್ಕೆ ಙಿತ್ವಾದೇಶವಿರುವುದರಿಂದ ಲಘೂಪಧಗುಣ ಬರುವುದಿಲ್ಲ. ತಿಙಂತ ನಿಘಾತಸ್ವರ ಬರುತ್ತದೆ

ಜಿಘ್ರಃ—ಘ್ರಾ ಗಂಧೋಪಾದಾನೇ ಧಾತು. ಆದಂತವಾದುದರಿಂದ **ಆದೃಗಮಹನ**-(ಪಾ. ಸೂ. ೩-೨-೧೭೧) ಎಂಬುದರಿಂದ ಕಿನ್ ಪ್ರತ್ಯಯ. ಲಿಡ್ವದ್ಭಾವ ಅತಿದೇಶಮಾಡಿರುವುದರಿಂದ ಧಾತುವಿಗೆ ದ್ವಿತ್ವ. **ಆತೋಲೋಪ ಇಟಿ ಚ** (ಪಾ. ಸೂ. ೬-೪-೬೩) ಎಂಬುದರಿಂದ ಧಾತುವಿನ ಅಕಾರಕ್ಕೆ ಲೋಪ. **ಞ್ನಿತ್ಯಾದಿರ್ನಿತ್ಯಮ್** (ಪಾ.ಸೂ. ೬-೧-೧೯೭) ಎಂಬುದರಿಂದ ಆದ್ಯುದಾತ್ತಸ್ವರ ಬರುತ್ತದೆ.

**ಅಭಿಗೂರ್ತಮ್**—ಗೂರೀ ಉದ್ಯಮನೇ. ಧಾತು. ಕ್ತಪ್ರತ್ಯಯ. **ಗತಿರನಂತರಃ** (ಪಾ. ಸೂ. ೬-೨-೪೯) ಎಂಬುದರಿಂದ ಗತಿಗೆ (ಅಭಿ) ಪ್ರಕೃತಿಸ್ವರಬರುತ್ತದೆ.

**ಗೃಭ್ಣಂತಿ**—ಗ್ರಹ ಉಪಾದಾನೇ- ಧಾತು. ಕ್ರ್ಯಾದಿ. ಲಟ್. ಪ್ರಥಮಪುರುಷ ಬಹುವಚನಾಂತ ರೂಪ. **ಶ್ನಾಭ್ಯಸ್ತಯೋರಾತಃ** (ಪಾ. ಸೂ. ೬-೪-೧೧೨) ಎಂಬುದರಿಂದ ವಿಕರಣದ ಆಕಾರಕ್ಕೆ ಲೋಪ. **ಹೃಗ್ರಹೋರ್ಭಶ್ಛಂದಸಿ** ಎಂಬ ವಚನದಿಂದ ಧಾತುಹಕಾರಕ್ಕೆ ಭತ್ವ. ತಿಙಂತನಿಘಾತಸ್ವರ ಬರುತ್ತದೆ. ॥ ೧೫ ॥

———:O:———

**ಸಂಹಿತಾಪಾಠಃ**

**ಯದಶ್ವಾಯ ವಾಸ ಉಪಸ್ತೃಣಂತ್ಯಧೀವಾಸಂ ಯಾ ಹಿರಣ್ಯಾನ್ಯಸ್ಮೈ ।**

**ಸಂದಾನಮರ್ವಂತಂ ಪಡ್ಬೀಶಂ ಪ್ರಿಯಾ ದೇವೇಷ್ವಾ ಯಾಮಯಂತಿ॥೧೬॥**

ಪದಪಾಠ

ಯತ್ । ಅಶ್ವಾಯ । ವಾಸಃ । ಉಪsಸ್ತೃಣಂತಿ । ಅಧೀsವಾಸಂ । ಯಾ । ಹಿರಣ್ಯಾನಿ । ಅಸ್ಮೈ ।

ಸಂsದಾನಂ । ಅರ್ವಂತಂ । ಪಡ್ಬೀಶಂ। ಪ್ರಿಯಾ । ದೇವೇಷು । ಆ । ಯಮಯಂತಿ ॥ ೧೬ ॥

ಸಾಯಣಭಾಷ್ಯಂ

ಅಶ್ವಾಯ ಸಂಜ್ಞಪ್ಯಮಾನಾಯಾಧೀವಾಸಮುಪರ್ಯಾಚ್ಛಾದನಯೋಗ್ಯಂ ಯದ್ವಾಸ ಉಪಸ್ತೃಣಂತಿ ಸರ್ವತ ಆಚ್ಛಾದಯಂತಿ ॥ ಸ್ತೃಞ್ ಆಚ್ಛಾದನೇ ಕ್ರ್ಯಾದಿಕಃ ॥ ತಥಾಸ್ಮಾ ಅಶ್ವಾಯ ಯಾ ಯಾನಿ ಹಿರಣ್ಯಾನಿ ಸೌವರ್ಣರಾಜತಕಾಂಸ್ಯಾನಿ ಕಲ್ಪಯಂತಿ । ತಥಾರ್ವಂತಂ ॥ ಷಷ್ಠ್ಯರ್ಥೇ ದ್ವಿತೀಯಾ ॥ ಅರ್ವತೋಽಶ್ವಸ್ಯ ಸಂದಾನಂ ಶಿರೋಬಂಧನಂ ಪಡ್ಬೀಶಂ ಪಾದೇಷು ಪ್ರವಿಷ್ಟಂ ಪಾದಬಂಧನಂ । ಏತಾನಿ ಪ್ರಿಯಾ ದೇವಾನಾಂ ಪ್ರಿಯತರಾಣಿ ಚಾತ್ವಾಲೇ ಬದ್ಧ್ವಾ ಸ್ಥಾಪಿತಾನಿ ದೇವೇಷ್ವಾ ಯಾಮಯಂತಿ । ಪ್ರಾಪಯಂತಿ ॥

॥ ಪ್ರತಿಪದಾರ್ಥ ॥

**ಅಶ್ವಾಯ**—ಯಜ್ಞಾಶ್ವಕ್ಕೆ । **ಅಧೀವಾಸಂ**—ಆಚ್ಛಾದನರೂಪವಾಗಿರುವ । **ಯತ್ ವಾಸಃ**—ಯಾವ ವಸ್ತ್ರವನ್ನು । **ಉಪಸ್ತೃಣಂತಿ**—ಚೆನ್ನಾಗಿ ಮುಚ್ಚುವಂತೆ ಹೊದಿಸುವರೋ (ಮತ್ತು) । **ಅಸ್ಮೈ**—ಈ ಕುದುರೆಯ । **ಯಾ**—ಯಾವ । **ಹಿರಣ್ಯಾನಿ**—ಅಲಂಕಾರಮಾಡಿರುವ ಸುವರ್ಣಾದ್ಯಾಭರಣಗಳುಂಟೋ ಅವುಗಳೂ (ಹಾಗೆಯೇ) । **ಅರ್ವಂತಂ**—ಅಶ್ವದ । **ಸಂದಾನಂ**—ಕತ್ತನ್ನು ಕಟ್ಟತಕ್ಕ ಹಗ್ಗವೂ । **ಪಡ್ಬೀಶಂ**—ಕಾಲುಗಳನ್ನು ಕಟ್ಟತಕ್ಕ ಹಗ್ಗವೂ (ಇವುಗಳೆಲ್ಲವೂ) । **ಪ್ರಿಯಾ**—ದೇವತೆಗಳಿಗೆ ಪ್ರೀತಿಯನ್ನುಂಟುಮಾಡುವವುಗಳಾಗಿ । **ದೇವೇಷು**—ದೇವತೆಗಳಲ್ಲಿ । (ದೇವತೆಗಳನ್ನು) । **ಆ ಯಾಮಯಂತಿ**—ಹೋಗಿ ಸೇರುತ್ತವೆ ।

॥ ಭಾವಾರ್ಥ ॥

ಯಜ್ಞಾಶ್ವದ ಮೇಲೆ ಹೊದಿಕೆಯಂತೆ ಹೊದ್ದಿಸಿರುವ ವಿಸ್ತಾರವಾದ ವಸ್ತ್ರವೂ, ಕುದುರೆಯನ್ನು ಅಲಂಕರಿಸಿರುವ ಚಿನ್ನ ಬೆಳ್ಳಿಯ ಆಭರಣಗಳೂ, ಕುದುರೆಯ ಕತ್ತಿನಲ್ಲಿಯೂ, ಕಾಲುಗಳನ್ನು ಕಟ್ಟುವುದಕ್ಕೆ ಉಪಯೋಗಿಸುವ ಹಗ್ಗಗಳೂ ದೇವತೆಗಳಿಗೆ ತುಂಬಾ ಪ್ರೀತಿಕರಗಳಾಗಿ ದೇವತೆಗಳಿಗೇ ಸೇರಲಿ.

## English Translation

The cloth which they spread as a covering for the horse; the golden (trappings with which they decorate him), the head-ropes,-all these they offer as acceptable to the gods.

### ವಿಶೇಷವಿಷಯಗಳು

**ವಾಸಂ ಅಧೀವಾಸಂ**—ಈ ಶಬ್ದಗಳಿಗೆ ಸಾಯಣರು **ಉಪರ್ಯಾಚ್ಛಾದನಯೋಗ್ಯಂ ವಾಸ ಉಪಸ್ತೃಣಂತಿ**--ಕುದುರೆಯ ಮೇಲೆ ಹೊದಿಸುವುದಕ್ಕೆ ಯೋಗ್ಯವಾದ ವಸ್ತ್ರವನ್ನು ಹೊದಿಕೆಯಾಗಿ ಆಚ್ಛಾದನಮಾಡುತ್ತಾರೆ ಎಂದು ಅರ್ಥವಿವರಣೆಮಾಡಿರುವರು. ಇಲ್ಲಿ ಅಧೀವಾಸಂ ಎಂಬ ಶಬ್ದವನ್ನು ವಾಸಃ ಎಂಬ ಶಬ್ದಕ್ಕೆ ವಿಶೇಷಣವನ್ನಾಗಿ ಹೇಳಿರುವರು. ಅಥವಾ ಕಾತ್ಯಾಯನರು ಹೇಳಿರುವಂತೆ ಅಧೀವಾಸವೆಂದರೆ ತೆರೆಗಾಗಿ (curtain)ಉಪಯೋಗಿಸುವ ವಸ್ತ್ರವೆಂದಾದರೂ ಆಗಬಹುದು. ಯಜ್ಞಾಶ್ವವನ್ನು ವಧಿಸುವುದಕ್ಕೆ ಹಿಂದಿನ ದಿನ ಯಜಮಾನನ ಪತ್ನಿಯು 'ರಾಣಿಯು' ಅಶ್ವದ ಜೊತೆಯಲ್ಲಿಯೇ ರಾತ್ರಿಯನ್ನು ಕಳೆಯಬೇಕಾಗಿರುವುದರಿಂದ ಅಶ್ವವಿರುವ ಪ್ರದೇಶವನ್ನು ಪ್ರತ್ಯೇಕಿಸುವುದಕ್ಕಾಗಿ ಒಂದು ತೆರೆಯನ್ನು ಹಾಕುವರು. ಈ ತೆರೆಗೆ ಅಧಿವಾಸವೆಂದು ಹೆಸರು. ಈ ಅರ್ಥವೂ ಇಲ್ಲಿ ಹೊಂದಿಕೊಳ್ಳುವುದು.

**ಹಿರಣ್ಯಾನಿ**—ಕುದುರೆಯನ್ನು ಅಲಂಕರಿಸುವುದಕ್ಕಾಗಿ ಉಪಯೋಗಿಸುವ ಚಿನ್ನದ ಹಾರ, ಬೆಳ್ಳಿಯ ಕಾಲುಗೊರಸು ಮೊದಲಾದ ವಿಧವಿಧವಾದ ಆಭರಣಗಳು. Trappings used to decorate the horse.

**ಅರ್ವಂತಂ**—ಇಲ್ಲಿ **ಅರ್ವತಃ** ಎಂದು ಷಷ್ಠೀವಿಭಕ್ತಿಗೆ ಬದಲಾಗಿ ದ್ವಿತೀಯಾವಿಭಕ್ತಿಯ ಪ್ರಯೋಗವಿರುವುದೆಂದು ಭಾಷ್ಯಕಾರರು ವಿವರಿಸಿದ್ದಾರೆ.

**ಪಡ್ಬೀಶಂ**—ಈ ಸೂಕ್ತದ ೧೪ನೇ ಋಕ್ಕಿನಲ್ಲಿ ಈ ಶಬ್ದಾರ್ಥವನ್ನು ವಿವರಿಸಿದೆ.

ಕುದುರೆಯನ್ನು ಅಲಂಕರಿಸುವ ವಸ್ತ್ರಾದ್ಯಾಭರಣಗಳೂ, ಕುದುರೆಯನ್ನು ಕಟ್ಟಲು ಉಪಯೋಗಿಸುತ್ತಿದ್ದ ಹಗ್ಗಗಳೂ (ಅಶ್ವವಧಾನಂತರ) ದೇವತೆಗಳಿಗೆ ಅರ್ಪಿತವಾಗಿ ಸಂತೋಷವನ್ನುಂಟುಮಾಡಲಿ ಎಂದು ಋಷಿಯು ಪ್ರಾರ್ಥಿಸಿರುವನು.

### ವ್ಯಾಕರಣಪ್ರಕ್ರಿಯಾ

**ಉಪಸ್ತೃಣಂತಿ**—**ಸ್ತೃಞ್** ಆಚ್ಛಾದನೇ. ಧಾತು. ಕ್ರ್ಯಾದಿ. **ಲಟ್** ಪ್ರಥಮ ಪುರುಷ ಬಹುವಚನಕ್ಕೆ ಅಂತಾದೇಶ. **ಕ್ರ್ಯಾದಿಭ್ಯಃ ಶ್ನಾ** ಎಂಬುದರಿಂದ ಶ್ನಾವಿಕರಣ. **ಪ್ವಾದೀನಾಂ ಹ್ರಸ್ವಃ** (ಪಾ. ಸೂ. ೭-೩-೮೦)ಎಂಬುದಸಿಂದ ಧಾತುವಿಗೆ ಹ್ರಸ್ವ. ಪ್ರತ್ಯಯಕ್ಕೆ ಙಿತ್ತ್ವಾತಿದೇಶ ವಿರುವುದರಿಂದ **ಶ್ನಾಭ್ಯಸ್ತಯೋರಾತಃ** (ಪಾ. ಸೂ. ೬-೪-೧೧೨) ಎಂಬುದರಿಂದ ವಿಕರಣದ ಆಕಾರಕ್ಕೆ ಲೋಪ. ಯದ್ಯೋಗವಿರುವುದರಿಂದ ನಿಘಾತಸ್ವರ ಬರುವುದಿಲ್ಲ. ಪ್ರತ್ಯಯದ ಆದ್ಯುದಾತ್ತಸ್ವರ ಬರುತ್ತದೆ. **ತಿಙಿಚೋದಾತ್ತವತಿ** (ಪಾ ಸೂ. ೮-೧-೭೧) ಎಂಬುದರಿಂದ ಗತಿಗೆ (ಉಪ) ಸರ್ವಾನುದಾತ್ತಸ್ವರ ಬರುತ್ತದೆ.

**ಅಧೀವಾಸಮ್**—ವಸ ಆಚ್ಛಾದನೇ ಧಾತು. ಘಞ್ ಪ್ರತ್ಯಯ. **ಅತ ಉಪಧಾಯಾಃ** ಎಂಬುದರಿಂದ ಆದಿವೃದ್ಧಿ. **ಕರ್ಷಾತ್ವತಃ**-(ಪಾ. ಸೂ. ೬-೧-೧೫೯) ಎಂಬುದರಿಂದ ಅಂತೋದಾತ್ತಸ್ವರ ಬರುತ್ತದೆ. **ಅನ್ಯೇಷಾಮಪಿ ದೃಶ್ಯತೇ** (ಪಾ. ಸೂ. ೬-೩-೧೩೭) ಎಂಬುದರಿಂದ ಪೂರ್ವಪದಕ್ಕೆ (ಅಧಿ) ದೀರ್ಘ ಬರುತ್ತದೆ.

**ಪ್ರಿಯಾ**—ಪ್ರಿಯಾಣಿ ಎಂದು ರೂಪವಾದಾಗ ನಪುಂಸಕದಲ್ಲಿ **ಶೇಶ್ಛಂದಸಿ ಬಹುಲಮ್** (ಪಾ. ಸೂ. ೬-೧-೭೦) ಎಂಬುದರಿಂದ ಶಿಗೆ ಲೋಪ ಬರುತ್ತದೆ.

**ಯೊಮಯಂತಿ**—ಯಮ ಉಪರಮೇ ಧಾತು. **ಹೇತುಮತಿ ಚ** (ಪಾ ಸೂ. ೩-೧-೨೬) ಎಂಬುದರಿಂದ **ಣಿಚ್**. **ಣಿಜಂತದ ಮೇಲೆ ಲಟ್**. ಪ್ರಥಮಪುರುಷಬಹುವಚನದಲ್ಲಿ ಝಿಗೆ ಅಂತಾದೇಶ. ಶಪ್ವಿಕರಣ ನಿಮಿತ್ತವಾಗಿ ಣಿಚಿಗೆ ಗುಣ. ಅಯಾದೇಶ. **ಸಂಜ್ಞಾಪೂರ್ವಕೋವಿಧಿರನಿತ್ಯಃ** ಎಂಬ ವಚನದಿಂದ ಸಂಹಿತಾದಲ್ಲಿ ಮಿತ್ ಸಂಜ್ಞಾನಿಮಿತ್ತವಾಗಿ ಹ್ರಸ್ವ ಬರುವುದಿಲ್ಲ. ಅತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ. ॥ ೧೬ ॥

———:೦:———

**ಸಂಹಿತಾಪಾಠಃ**

## ಯತ್ತೇ ಸಾದೇ ಮಹಸಾ ಶೂಕೃತಸ್ಯ ಪಾರ್ಷ್ಣ್ಯಾ ವಾ ಕಶಯಾ ವಾ ತುತೋದ ।
## ಸ್ರುಚೇವ ತಾ ಹವಿಷೋ ಅಧ್ವರೇಷು ಸರ್ವಾ ತಾ ತೇ ಬ್ರಹ್ಮಣಾ ಸೂದಯಾಮಿ ॥ ೧೭ ॥

**ಪದಪಾಠಃ**

ಯತ್ । ತೇ । ಸಾದೇ । ಮಹಸಾ । ಶೂಕೃತಸ್ಯ । ಪಾರ್ಷ್ಣ್ಯಾ । ವಾ । ಕಶಯಾ । ವಾ । ತುತೋದ ।
ಸ್ರುಚಾಽಇವ । ತಾ । ಹವಿಷಃ । ಅಧ್ವರೇಷು । ಸರ್ವಾ । ತಾ । ತೇ । ಬ್ರಹ್ಮಣಾ । ಸೂದಯಾಮಿ ॥ ೧೭ ॥

**ಸಾಯಣಭಾಷ್ಯಂ**

ಮಹಸಾ ಬಲೇನ ಶೂ ಕೃತಸ್ಯ । ಶಬ್ದಾನುಕರಣಮೇತತ್ । ಶೂತ್ಕಾರಂ ಕುರ್ವತಸ್ತೇ ತವ ಸಾದೇ ಸದನೇಽಗಮನೇ ನಿಮಿತ್ತಭೂತೇ ಸತಿ ॥ ಸದೇರ್ಭಾವೇ ಘಞ್ । ಕರ್ಷಾತ್ವತ ಇತ್ಯಂತೋದಾತ್ತತ್ವಂ ॥ ಅರ್ಥತೋ ಗಮನಂ ಕುರ್ವಞ್ಛೂತ್ಕಾರಂ ಕುರ್ವತಸ್ತೇ ತ್ವಾಂ ಪಾರ್ಷ್ಣ್ಯಾ ವಾ ಕಶಯಾ ವಾ ತುತೋದ ವ್ಯಥಯತಿ ಯದ್ಯಸ್ಮಾತ್ ತಸ್ಮಾತ್ತೇ ತವ ತಾ ತಾನಿ ಸರ್ವಾ ಸರ್ವಾಣ್ಯಧ್ವರೇಷು ಯಾಗೇಷು ಬ್ರಹ್ಮಣಾ ಮಂತ್ರೇಣ ಸೂದಯಾಮಿ । ಕ್ಷರಾಮಿ । ಆಹುತಿತ್ವೇನ ಕಲ್ಪಯಾಮೀತ್ಯರ್ಥಃ । ತತ್ರ ದೃಷ್ಟಾಂತಃ । ಅಧ್ವರೇಷು ಯಾಗೇಷು ಹವಿಷೋ ಹವಿರಾಜ್ಯಾದಿಕಂ ಸ್ರುಚೇವ ಸ್ರುಚಾ ಯಥಾ ಸೂದಯಂತಿ ತದ್ವತ್ ॥

**ಪ್ರತಿಪದಾರ್ಥ**

(**ಹೇ ಅಶ್ವ**—ಎಲೈ ಯಜ್ಞಾಶ್ವವೇ) । **ಮಹಸಾ**—ಬಲಯುತವಾಗಿ (ಎಂದರೆ ಘಟ್ಟಿಯಾಗಿ) । **ಶೂಕೃತಸ್ಯ**—(ಆಯಾಸದಿಂದ) ಶೂತ್ಕಾರವನ್ನು ಮಾಡುತ್ತಿರುವ । **ತೇ**—ನಿನ್ನ । **ಸಾದೇ**—ಗಮನವು ಮುಂದುವರಿಯದಿರಲು (ಶೂತ್ಕಾರವನ್ನು ಮಾಡುತ್ತಾ ನಡೆಯುತ್ತಾ ಆಗಾಗ ನಿಂತಾಗ) । (**ತ್ವಾಂ**—ನಿನ್ನನ್ನು) । **ಪಾರ್ಷ್ಣ್ಯಾ**-

ವಾ—ಪಾದಾಘಾತದಿಂದಲಾಗಲಿ । **ಕಶಯಾ ವಾ**—ಚಾವಟಿಯಿಂದಲಾಗಲಿ । **ಯತ್**—ಯಾವ ಪ್ರಕಾರವಾಗಿ । **ತುತೋದ**—ಹಿಂಸೆಪಡಿಸಲಾಯಿತೋ । **ತೇ**—ನಿನ್ನ (ನಿನಗುಂಟಾದ) । **ತಾ ಸರ್ವಾ**—ಅಂತಹ ಸಮಸ್ತವಾದ ಹಿಂಸಾರೂಪವಾದ ಕರ್ಮಗಳನ್ನು । **ಅಧ್ವರೇಷು**—ಯಜ್ಞಗಳಲ್ಲಿ । **ಹವಿಷಃ**—ಹವಿರಾಜ್ಯಾದಿಗಳನ್ನು । **ಸ್ರುಚಾ-ಇವ**—ಸ್ರುಕ್ ಎಂಬ ಹೋಮಸಾಧನವಾದ ಸೌಟನಿಂದ ಅಗ್ನಿಯಲ್ಲಿ ಹೋಮಮಾಡಿ ದೇವತೆಗಳನ್ನು ಸಂತೋಷ ಪಡಿಸುವಂತೆ । **ತಾಃ**—ಆ ನಿನ್ನ ದುಃಖಾದಿಗಳನ್ನು । **ಬ್ರಹ್ಮಣಾ**—ಮಂತ್ರಾದಿಗಳಿಂದ । **ಸೂದಯಾಮಿ**—ಶಮನಮಾಡುತ್ತೇನೆ.

**ಭಾವಾರ್ಥ**

ಎಲೈ ಯಜ್ಞಾಶ್ವವೇ, ನೀನು ಸಂಚಾರಮಾಡುತ್ತಿದ್ದ ಕಾಲದಲ್ಲಿ ಆಯಾಸದಿಂದ ಬಲವಾಗಿ ಶೂತ್ಕಾರ ಮಾಡುತ್ತಾ ಆಗಾಗ ನಿಂತಾಗ ನಿನ್ನನ್ನು (ವೇಗವಾಗಿ ಓಡುವಂತೆ ಮಾಡಲು) ಪಾದಾಘಾತಗಳಿಂದಲಾಗಲಿ, ಚಾವಟಿಗಳಿಂದಲಾಗಲಿ ಹಿಂಸೆಪಡಿಸುತ್ತಿದ್ದರೋ, ಆ ಹಿಂಸಾರೂಪಕರ್ಮಗಳನ್ನೆಲ್ಲಾ ಯಜ್ಞಗಳಲ್ಲಿ ಸ್ರುಕ್ ಎಂಬ ಮರದ ಸೌಟನಿಂದ ಘೃತವನ್ನು ಹೋಮಮಾಡಿ ದೇವತೆಗಳನ್ನು ಸಂತೋಷಪಡಿಸುವ ಹಾಗೆ ಮಂತ್ರಾದಿಗಳ ಪಠನದಿಂದ ಆ ನಿನ್ನ ದುಃಖಗಳನ್ನು ಶಮನಮಾಡುತ್ತೇನೆ.

## English Translation

Whoever has goaded you in your paces, either with heel or with whip whilst snorting in your strength,—all these (vexations) I pour out with holy prayer, as oblations with the ladle.

**ವಿಶೇಷವಿಷಯಗಳು**

**ಸಾದೇ—ಸದನೇಽಗಮನೇ ನಿಮಿತ್ತಭೂತೇ ಸತಿ ।** ತುಂಬಾ ಬಳಲಿದಾಗ ಹೋಗಲು ಶಕ್ತಿಯಿಲ್ಲದೆ ಆಗಾಗ ನಿಲ್ಲುವಾಗ ಎಂದಭಿಪ್ರಾಯವು.

**ಮಹಸಾ ಶೂಕೃತಸ್ಯ**—ಬಲವಾಗಿ ಎಂದರೆ ಘಟ್ಟಿಯಾಗಿ ಶೂಶೂ ಎಂಬ ಶಬ್ದವನ್ನು ಮಾಡುತ್ತಾ ಎಂದರ್ಥವು. ಕುದುರೆಯು ಆಯಾಸದಿಂದ ಬಳಲಿ ಮುಂದೆ ಬೇಗಬೇಗನೆ ಹೋಗಲು ಶಕ್ತಿಯಿಲ್ಲದೆ ಶೂಶೂ ಎಂದು ಧ್ವನಿ ಮಾಡುತ್ತಿರುವಾಗ ಎಂದಭಿಪ್ರಾಯವು. (Snorting with great effort).

**ಪಾರ್ಷ್ಣ್ಯಾ ವಾ ಕಶಯಾ ವಾ**—ಕುದುರೆಯು ನಡೆಯದೆ ಹಿಮ್ಮೆಟ್ಟುತ್ತಿರುವಾಗ ಸವಾರಿಮಾಡುವವರು ತಮ್ಮ ಹಿಮ್ಮಡಿಯಿಂದ ಅದುಮುತ್ತಲೂ, ಚಾವಟಿಯಿಂದ ಹೊಡೆಯುತ್ತಲೂ, ಕುದುರೆಯನ್ನು ವೇಗವಾಗಿ ಹೋಗುವಂತೆ ಪ್ರೇರಿಸುವುದು ರೂಢಿಯು—Goading with the stirrups (heels) or with the whip

**ಸ್ರುಚೇವ ತಾ ಹವಿಷೋ ಅಧ್ವರೇಷು, ಸರ್ವಾ ತಾ ತೇ ಬ್ರಹ್ಮಣಾ ಸೂದಯಾಮಿ**—ಇಲ್ಲಿ ಋಷಿಯು ಒಂದು ದೃಷ್ಟಾಂತವನ್ನು ಹೇಳಿರುವನು. ಯಜ್ಞಗಳಲ್ಲಿ ದೇವತೆಗಳನ್ನು ತೃಪ್ತಿಪಡಿಸುವುದಕ್ಕಾಗಿ ಸ್ರುಕ್ಕೆಂಬ ಹೋಮಮಾಡುವ ಮರದ ಸೌಟನಿಂದ ಆಜ್ಯಾದಿಗಳನ್ನು ಅಗ್ನಿಯಲ್ಲಿ ಹೋಮಮಾಡುವಂತೆ ನಿನ್ನ ದುಃಖಗಳನ್ನು ಎಂದರೆ ನೀನು ಹಿಂದೆ ವಿವರಿಸಿದಂತೆ ಪಟ್ಟಕಷ್ಟಗಳನ್ನೆಲ್ಲಾ ಮಂತ್ರಪಠನದಿಂದ ಶಮನಮಾಡುತ್ತೇನೆ ಎಂದು ಹೇಳಿರುವನು.

### ವ್ಯಾಕರಣಪ್ರಕ್ರಿಯಾ

**ಸಾದೇ**—ಷದಲೃ ವಿಶಕರಣಗತ್ಯವಸಾದನೇಷು ಧಾತು. ಭಾವಾರ್ಥದಲ್ಲಿ ಘಞ್ ಪ್ರತ್ಯಯ. **ಅತಉಪಧಾಯಾಃ** (ಪಾ. ಸೂ. ೭-೧-೧೧೬) ಎಂಬುದರಿಂದ ಉಪಧಾವೃದ್ಧಿ. **ಕರ್ಷಾತ್ವತಃ**—(ಪಾ ಸೂ. ೬-೧-೧೫೯) ಅಂತೋದಾತ್ತಸ್ವರ ಬರುತ್ತದೆ. ಸಪ್ತಮ್ಯಂತರೂಪ.

**ಪಾಷ್ಣ್ಯಾ**—ಪೃಷು ಸೇಚನೇ ಧಾತು. **ಘೃಣಿಪೃಶ್ನಿಪಾರ್ಷ್ಣಿ**-(ಉ. ಸೂ. ೪-೪೯-೨) ಎಂಬುದರಿಂದ ಎಂಬುದರಿಂದ **ಪಾರ್ಷ್ಣಿ** ಎಂದು ನಿಪಾತಿತವಾಗಿದೆ. ತೃತೀಯಾಂತರೂಪ.

**ತುತೋದ**—ತುದ ವ್ಯಥನೇ ಧಾತು. **ಛಂದಸಿ ಲುಙ್‌ಲಙ್‌ಲಿಟಃ** (ಪಾ. ಸೂ. ೩-೪-೬) ಎಂಬುವದರಿಂದ ವರ್ತಮಾನಾರ್ಥದಲ್ಲಿ ಲಿಟ್. ಪ್ರಥಮಪುರುಷಏಕವಚನಾಂತರೂಪ ಯದ್ಯೋಗವಿರುವುದರಿಂದ ನಿಘಾತಸ್ವರ ಬರುವುದಿಲ್ಲ. ಣಲ್ ಲಿತ್ತಾದುದರಿಂದ **ಲಿತಿ**(ಪಾ. ಸೂ. ೬-೧-೧೯೩) ಎಂಬುದರಿಂದ ಪ್ರತ್ಯಯದ ಪೂರ್ವಕ್ಕೆ ಉದಾತ್ತಸ್ವರ ಬರುತ್ತದೆ.

**ಸರ್ವಾ**—**ಶೇಶ್ಛಂದಸಿ ಬಹುಲಮ್** (ಪಾ. ಸೂ. ೬-೧-೭೦) ಎಂಬುದರಿಂದ ಶಿಗೆ ಲೋಪ.

**ಸೂದಯಾಮಿ**—ಷೂದ ಕ್ಷರಣೇ ಧಾತು. **ಧಾತ್ವಾದೇಃಷಃಸಃ** (ಪಾ.ಸೂ. ೬-೧೬೪) ಎಂಬುದರಿಂದ ಆದಿಗೆ ಸತ್ವ. **ಸತ್ಯಾಪಪಾಶ**-(ಪಾ. ಸೂ. ೩-೧-೨೫) ಎಂಬುದರಿಂದ ಣಿಚ್. ಲಟ್ ಉತ್ತಮಪುರುಷಏಕವಚನದಲ್ಲಿ ಮಿಪ್ ಪ್ರತ್ಯಯ. ಶಪ್‌ವಿಕರಣ ನಿಮಿತ್ತವಾಗಿ ಣಿಚಿಗೆ ಗುಣ. ಅಯಾದೇಶ. ಅತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ. ॥ ೧೭ ॥

### ಸಂಹಿತಾಪಾಠಃ

ಚತುಸ್ತ್ರಿಂಶದ್ವಾಜಿನೋ ದೇವಬಂಧೋರ್ವಂಕ್ರೀರಶ್ವಸ್ಯ ಸ್ವಧಿತಿಃ ಸಮೇತಿ ।
ಅಚ್ಛಿದ್ರಾ ಗಾತ್ರಾ ವಯುನಾ ಕೃಣೋತ ಪರುಷ್ಪರುರನುಘುಷ್ಯಾ ವಿಶಸ್ತ ॥
॥೧೮॥

### ಪದಪಾಠಃ

ಚತುಃಽತ್ರಿಂಶತ್ । ವಾಜಿನಃ । ದೇವಽಬಂಧೋಃ । ವಂಕ್ರೀಃ । ಅಶ್ವಸ್ಯ । ಸ್ವಽಧಿತಿಃ । ಸಂ । ಏತಿ ।
ಅಚ್ಛಿದ್ರಾ । ಗಾತ್ರಾ । ವಯುನಾ । ಕೃಣೋತ । ಪರುಃಽಪರುಃ । ಅನುಽಘುಷ್ಯ । ವಿ । ಶಸ್ತ ॥ ೧೮ ॥

### ಸಾಯಣಭಾಷ್ಯಂ

ವಾಜಿನೋಽಶ್ವಸ್ಯ ದೇವಬಂಧೋರ್ದೇವಾನಾಂ ಪ್ರಿಯಸ್ಯ ಚತುಸ್ತ್ರಿಂಶದ್ವಂಕ್ರೀರೇತತ್ಸಂಖ್ಯಾಸ್ಯುಭಯಪಾರ್ಶ್ವಾಸ್ಥೀನಿ ಸ್ವಧಿತಿಶ್ಛೇದನಸಾಧನೋಽಸಿಃ ಸಮೇತಿ । ಸಮ್ಯಗ್ಗಚ್ಛತಿ ಛೇದನಾಯ । ಇತರೇಷಾ-

ಮಜಾದೀನಾಂ ಷಡ್ವಿಂಶತಿರೇವ ಷಡ್ವಿಂಶತಿರಸ್ಯ ವಂಕ್ರಯಃ । ಐ. ಬ್ರಾ. ೨-೬ । ಇತಿ ಪ್ರೈಷಾತ್ । ಹೇ ವಿಶಸನಸ್ಯ ಕರ್ತಾರಃ ಅಸ್ಯಾಶ್ವಸ್ಯ ಗಾತ್ರಾಣಿ ಶರೀರಾವಯವಾನಚ್ಛಿದ್ರಾಚ್ಛಿದ್ರಾಣಿ ಯಥಾ ಭವಂತಿ ತಥಾ ವಯುನಾ ವಯುನಾನಿ ಪ್ರಜ್ಞಾನಾನಿ । ವಯುನಮಿತಿ ಪ್ರಜ್ಞಾನಾಮ ವಯುನಮಭಿಖ್ಯೇತಿ ತನ್ನಾಮ-ಸೂಕ್ತತ್ವಾತ್ ಕೃಣೋತ । ಕುರುತ ॥ ತಪ್ತನಪ್ತನಥನಾಶ್ಚೇತಿ ತಬಾದೇಶಃ ॥ ಹೃದಯಜಿಹ್ವಾವಕ್ಷಃ-ಪ್ರಭೃತೀನಿ ಪ್ರಜ್ಞಾಯ ಮಧ್ಯೇ ಛಿನ್ನಾನಿ ಮಾ ಕುರುತೇತ್ಯರ್ಥಃ । ತದರ್ಥಂ ಪರುಃಪರುಃ ಪ್ರತಿಪರ್ವ ಪ್ರತಿಹೃದಯಾದ್ಯವಯವಮನುಘುಷ್ಯೇದಮವದ್ಯಮಿತಿ ಸಂಶಬ್ದ್ಯೈವ ವಿ ಶಸ್ತ । ವಿಶಿಸನಂ ಕುರುತ ॥ ಶಸ್ ಹಿಂಸಾಯಾಂ । ಛಾಂದಸಃ ಶಪೋ ಲುಕ್ ॥ ಗಾತ್ರಂಗಾತ್ರಮಸ್ಯಾನೂನಂ ಕೃಣುತಾತ್ । ಐ. ಬ್ರಾ. ೨-೬ । ಇತಿ ಪ್ರೈಷಾತ್ ॥

### ಪ್ರತಿಪದಾರ್ಥ

**ದೇವಬಂಧೋಃ**—ದೇವತೆಗಳ ಸಂಬಂಧಿಯಾದುದೂ । **ವಾಜಿನಃ**—ವೇಗಗಾಮಿಯಾದುದೂ ಆದ । **ಅಶ್ವಸ್ಯ**—ಈ ಮೇಧ್ಯಾಶ್ವದ । **ಚತುಸ್ತ್ರಿಂಶತ್**—ಮುವತ್ತುನಾಲ್ಕು ಸಂಖ್ಯಾಕವಾದ । **ವಂಕ್ರೀಃ**—ಪಕ್ಕದ ಎಲುಬುಗಳನ್ನು । **ಸ್ವಧಿತಿಃ**—ಛೇದನಸಾಧನವಾದ ಈ ಕತ್ತಿಯು । **ಸಮೇತಿ**—ಸಮೀಪಿಸುತ್ತದೆ । **ವಯುನಾ**—(ಈ ಅಶ್ವದ) ದೇಹದ ಸ್ವರೂಪವನ್ನು ಸೂಕ್ಷ್ಮವಾಗಿ ತಿಳಿಯುವ ಪ್ರಜ್ಞೆಯಿಂದ ಕೂಡಿ । **ಗಾತ್ರಾ**—ಇದರ ಅವಯವ ಗಳನ್ನು । **ಅಚ್ಛಿದ್ರಾ**—ಚೂರುಚೂರುಗಳಾಗದಿರುವಂತೆ । **ಕೃಣೋತ**—ಮಾಡಿರಿ । **ಪರುಷ್ಪರುಃ**—ಪ್ರತಿಯೊಂದು ಸಂಧಿಸ್ಥಳಗಳಲ್ಲಿಯೂ । **ಅನು ಘುಷ್ಯ**—(ನಿಮ್ಮ ಛೇದನಕರ್ಮದ ವಿಷಯದಲ್ಲಿ) ನಿರ್ದುಷ್ಟವಾದುದೆಂದು ಪದೇ ಪದೇ ಪ್ರಕಟಿಸುತ್ತಾ । **ವಿಶಸ್ತ**—ಛೇದನಮಾಡಿರಿ ॥

### ಭಾವಾರ್ಥ

ದೇವಸಂಬಂಧಿಯಾದುದೂ, ವೇಗಗಾಮಿಯಾದುದೂ ಆದ ಈ ಮೇಧ್ಯಾಶ್ವದ ಮೂವತ್ತುನಾಲ್ಕುಸಂಖ್ಯಾಕ ವಾದ ಪಕ್ಕದ ಎಲುಬುಗಳನ್ನು ಛೇದನಸಾಧನವಾದ ಈ ಕತ್ತಿಯು ಪ್ರವೇಶಿಸುತ್ತದೆ. ಎಲೈ ಶಮಿತೃಗಳೇ, ಈ ಅಶ್ವದ ದೇಹದ ಸ್ವರೂಪವನ್ನು ಸೂಕ್ಷ್ಮವಾಗಿ ತಿಳಿಯುವ ಪ್ರಜ್ಞೆಯಿಂದ ಕೂಡಿದವರಾಗಿ ಇದರ ಅವಯವಗಳನ್ನು ಚೂರು ಚೂರುಗಳಾಗದಿರುವಂತೆ ಮಾಡಿರಿ. ಪ್ರತಿಯೊಂದು ಸಂಧಿಸ್ಥಳಗಳಲ್ಲಿಯೂ ನಿಮ್ಮ ಛೇದನಕರ್ಮದ ವಿಷಯದಲ್ಲಿ ನಿರ್ದುಷ್ಟವಾದುದೆಂದು ಪ್ರಕಟಿಸುತ್ತಾ ಛೇದನಮಾಡಿರಿ.

## English Translation

The axe penetrates the thirty-four ribs of the swift horse: the beloved of the gods, (the immolators), cut up (the horse) with skill, so that the limbs may be unperforated, and recapitulating joint by joint.

### ವಿಶೇಷವಿಷಯಗಳು

**ಚತುಸ್ತ್ರಿಂಶದ್ವಂಕ್ರೀಃ**—ವಂಕ್ರಿಯೆಂದರೆ ಪಕ್ಕದ ಎಲುಬುಗಳೆಂದರ್ಥ. ಮೇಧ್ಯಾಶ್ವಕ್ಕೆ ಇಂತಹ ಎಲುಬುಗಳು ಮೂವತ್ತುನಾಲ್ಕು ಇವೆಯೆಂದು ಇದರಿಂದ ತಿಳಿಯುತ್ತದೆ. ಆದರೆ ಇತರ ಅಜಾದಿ ಪ್ರಾಣಿಗಳಿಗೆ

ಇಪ್ಪತ್ತಾರಿವೆಯೆಂದು ಐತರೇಯ ಬ್ರಾಹ್ಮಣದಿಂದ ತಿಳಿಯುತ್ತದೆ. ಆದರೆ ಛೇದನಕಾಲದಲ್ಲಿ ಅಲ್ಲಿಯೂ ಸಹ ಹೋತೃವು ಈ ಋಕ್ಕಿನಲ್ಲಿ ಎಚ್ಚರವನ್ನು ಕೊಡುವಂತೆಯೇ ದೇವತೃಪ್ತಿಗಾಗಿ ವಧಮಾಡುತ್ತಿರುವ ಆ ಯಜ್ಞಪಶುವಿನ ವಿಷಯದಲ್ಲಿ ಬಹಳ ಜಾಗರೂಕನಾಗಿರಬೇಕೆಂದು ಶಮಿತೃವಿಗೆ ಹೇಳುತ್ತಾನೆ.

**ಶ್ಯೇನಮಸ್ಯ ವಕ್ಷಃ ಕೃಣುತಾತ್ಪ್ರಶಸಾ ಬಾಹೂ ಶಲಾ ದೋಷಣೀ ಕಶ್ಯಪೇವಾಂಸಾಚ್ಛಿದ್ರೇ ಶ್ರೋಣೀ ಕವಷೋರೂ ಸ್ರೇಕಪರ್ಣಾಷ್ಠೀವಂತಾ ಷಡ್ವಿಂಶತಿರಸ್ಯ ವಂಕ್ರಯಸ್ತಾ ಅನುಷ್ಠ್ಯೋಚ್ಚ್ಯಾವಯತಾದ್ಗಾತ್ರಂ ಗಾತ್ರಮಸ್ಯಾನೂನಂ ಕೃಣುತಾದಿತ್ಯಂಗಾನ್ಯೇವಾಸ್ಯ ತದ್ಗಾತ್ರಾಣಿ ಪ್ರೀಣಾತಿ ॥**

(ಐ. ಬ್ರಾ. ೨-೬)

ಯಜ್ಞಪಶುವಿನ ವಕ್ಷಸ್ಸನ್ನು ಶ್ಯೇನಾಕಾರವನ್ನಾಗಿ ಮಾಡಬೇಕೆಂದೂ ಎರಡು ತೋಳುಗಳನ್ನೂ ಚೂಪಾಗಿಯೂ, ಪ್ರಕೋಷ್ಠಗಳನ್ನು ಈಟಿಯಂತೆ ಸೂಕ್ಷ್ಮವಾಗಿಯೂ, ಅಂಸಗಳನ್ನು ಕಶ್ಯಪಾಕಾರವಾಗಿಯೂ ಟೊಂಕವನ್ನು ಛೇದವಾಗದಿರುವಂತೆಯೂ ಮತ್ತು ಇಪ್ಪತ್ತಾರು ಪಕ್ಕೆಲಬುಗಳನ್ನೂ ಅವುಗಳ ವಿನ್ಯಾಸಗಳಿಗೆ ವಿರೋಧವಿಲ್ಲದಂತೆಯೂ, ಪ್ರತಿಯೊಂದು ಅವಯವವನ್ನೂ ನ್ಯೂನವಿಲ್ಲದಿರುವಂತೆಯೂ ಮಾಡುತ್ತಾ ಛೇದನಮಾಡಿರೆಂದು ಹೋತೃವು ಅವರಿಗೆ ತಿಳಿವಳಿಕೆಯನ್ನು ಕೊಡುತ್ತಾ,

**ದೈವ್ಯಾಃ ಶಮಿತಾರ ಆರಭಧ್ವಮುತ ಮನುಷ್ಯಾ ಇತ್ಯಾಹ ।**

(ಐ. ಬ್ರಾ. ೨-೬)

ಎಲೈ ಶಮಿತೃಗಳೇ, ನಿಮ್ಮ ಕಾರ್ಯವನ್ನು ಆರಂಭಿಸಿ ಎಂದು ಪ್ರಾರ್ಥಿಸಿರುವಂತೆ ಪ್ರಕೃತವಾದ ಋಕ್ಕಿನಲ್ಲಿಯೂ ಸಹ ಶಮಿತೃವಿಗೆ ನಿರ್ದೇಶವನ್ನು ಕೊಟ್ಟಿದೆ. ಈ ಅಶ್ವದ ಗಾತ್ರವನ್ನು ಅಚ್ಛಿದ್ರವಾದುದನ್ನಾಗಿ ಮಾಡಿ ಎಂದರೆ ಛೇದನಾರ್ಹವಲ್ಲದ ಅವಯವಗಳನ್ನು ಹಿಂಸಿಸದೇ, ಛೇದನಾರ್ಹವಾದ ಅವಯವಗಳನ್ನೂ ಸಹ ಅವುಗಳ ವಿನ್ಯಾಸದ ಕ್ರಮವನ್ನರಿತು ನಿಮ್ಮ ಪ್ರಜ್ಞೆಯಿಂದ ನಿಮ್ಮ ಕರ್ಮವನ್ನು ಶುದ್ಧವಾದುದನ್ನಾಗಿ ಮಾಡಿರಿ ಎಂದು ತಿಳಿಸಿದೆ.

**ವಯುನಾ**—**ಕೇತಃ, ಕೇತುಃ** (ನಿ. ೩-೧೩) ಇತ್ಯಾದಿಪ್ರಜ್ಞಾನಾಮಗಳಲ್ಲಿ ಪಠಿತವಾಗಿದೆ. ಪ್ರಕಾಶವನ್ನುಂಟುಮಾಡುವುದರಿಂದ ಈ ಅರ್ಥವೆಂದು ವಿವರಿಸಿದೆ. **ವಯುನಂ ವೇತೇಃ ಕಾಂತಿರ್ವಾ ಪ್ರಜ್ಞಾ ವಾ** (ನಿ. ೫-೧೫) ಹೆಣೆದುಹಾಕು ಎಂಬರ್ಥವನ್ನು ಕೊಡತಕ್ಕ ವೀ ಧಾತುವಿನಿಂದ ನಿಷ್ಪನ್ನವಾಗಿ ಅಪೇಕ್ಷೆ ಅಥವಾ ಪ್ರಜ್ಞೆಯೆಂಬರ್ಥವನ್ನು ಕೊಡುತ್ತದೆ ಎಂದು ನಿರುಕ್ತಕಾರರು ತೋರಿಸಿ,

**ಸ ಇತ್ತಮೋಽವಯುನಂ ತತನ್ವತ್ಸೂರ್ಯೇಣ ವಯುನವಚ್ಚಕಾರ ।**
**ಕದಾ ತೇ ಮರ್ತಾ ಅಮೃತಸ್ಯ ಧಾಮೇ ಯಕ್ಷಂತೋ ನ ಮಿನಂತಿ ಸ್ವಧಾವಃ ॥**

(ಋ. ಸಂ. ೬-೨೧-೩)

ಎಂಬ ಋಕ್ಕನ್ನುದಹರಿಸಿ **ಸ ತಮೋಽಪ್ರಜ್ಞಾನಂ ತತನ್ವತ್ಸೂತಂ ಸೂರ್ಯೇಣ ಪ್ರಜ್ಞಾನವಚ್ಚಕಾರ** (ನಿ. ೫-೧೫) ಕತ್ತಲಿನ ರೂಪದಲ್ಲಿದ್ದು ಗೋಚರಾತೀತವಾದುದನ್ನು ಪ್ರಜ್ಞಾವಿಷಯವನ್ನಾಗಿ ಮಾಡಿದನು ಎಂಬರ್ಥವನ್ನು ಕೊಡುವುದೆಂದು ತಿಳಿಸಿದ್ದಾರೆ. ಪ್ರಕೃತವಾದ ಋಕ್ಕಿನಲ್ಲಿ ವಧ್ಯಪಶುವಿನ ಅವಯವಗಳ ಸೂಕ್ಷ್ಮಜ್ಞಾನವೂ, ಛೇದನಕರ್ಮದಲ್ಲಿ ಸೂಕ್ಷ್ಮವಾದ ತಿಳಿವಳಿಕೆಯೂ ಎಂದರ್ಥವಾಗುತ್ತದೆ.

**ದೇವಬಂಧೋಃ ಅಶ್ವಸ್ಯ**—ದೇವತೆಗಳ ಸಂಬಂಧಿಯಾದ ಅಶ್ವದ ಎಂದು ಹೇಳಿರುವುದರಲ್ಲಿ ಎರಡರ್ಥಗಳಿವೆ. ಮೊದಲನೆಯದಾಗಿ **ಪ್ರಜಾಪತಿ, ವರುಣ** ಈ ದೇವತೆಗಳಿಗೆ ಯಜ್ಞಾಶ್ವದ ಸೃಷ್ಟಿಸಂಬಂಧವಿದೆಯೆಂದೂ, ಅಥವಾ ಎರಡನೆಯದಾಗಿ, ಹೋಮದಲ್ಲಿ ಅರ್ಪಿತವಾದನಂತರ ದೇವತೆಗಳಿಗೆ ಈ ಅಶ್ವವು ಹೋಗಿ ಸೇರುವುದರಿಂದ ಅವರಿಗೆ ಸಂಬಂಧವಿದೆಯೆಂದೂ ಸಹ ತಾತ್ಪರ್ಯವಾಗುತ್ತದೆ. ಮುಂದಿನ ಋಕ್ಕಿನಲ್ಲಿ ಈ ಅಂಶವು ಪುನಃ ಉಕ್ತವಾಗಿರುವುದರಿಂದ ಇದನ್ನು ಮುಂದಿನ ಋಕ್ಕಿನ ವಿವರಣೆಯಲ್ಲಿ ವಿಶದವಾಗಿ ತಿಳಿಸಲಾಗುತ್ತದೆ.

ವ್ಯಾಕರಣಪ್ರಕ್ರಿಯಾ

**ವಂಕ್ರೀಃ**—ವಕಿ ಕೌಟಿಲ್ಯೇ. ಧಾತು. **ವಂಕ್ರ್ಯಾದಯಶ್ಚ.** (ಉ.ಸೂ. ೪-೫೦೬) ಎಂಬುದರಿಂದ ಕ್ರಿನ್ನಂತ ವಾಗಿ ನಿಪಾತಿತವಾಗಿದೆ ಇದಿತ್ತಾದುದರಿಂದ ನುಮಾಗಮ. **ಞ್ನಿತ್ಯಾದಿರ್ನಿತ್ಯಮ್** (ಪಾ. ಸೂ. ೬-೧-೧೯೭) ಎಂಬುದರಿಂದ ಆದ್ಯುದಾತ್ತಸ್ವರ ಬರುತ್ತದೆ. ದ್ವಿತೀಯಾ ಬಹುವಚನಾಂತರೂಪ.

**ಅಚ್ಛಿದ್ರಾ**—ನ ಛಿದ್ರಾಣಿ ಅಚ್ಛಿದ್ರಾಣಿ. **ಶೇಶ್ಛಂದಸಿ ಬಹುಲಮ್** (ಪಾ.ಸೂ. ೬-೧-೭೦) ಎಂಬುದರಿಂದ ಶಿಗೆ ಲೋಪ. **ತತ್ಪುರುಷೇ ತು**—(ಪಾ.ಸೂ. ೬-೨-೨) ಎಂಬುದರಿಂದ ಪೂರ್ವಪದ ಪ್ರಕೃತಿಸ್ವರ ಬರುತ್ತದೆ. ಗಾತ್ರಾ ಎಂಬಲ್ಲಿಯೂ ಶಿಗೆ ಲೋಪ ಬಂದಿದೆ.

**ಕೃಣೋತ**—ಕೃವಿ ಹಿಂಸಾಕರಣಯೋಶ್ಚ ಧಾತು. **ಲೋಟ್** ಮಧ್ಯಮಪುರುಷ ಬಹುವಚನದಲ್ಲಿ **ತಪ್ತನಪ್ತ-ನಥನಾಶ್ಚ.** (ಪಾ. ಸೂ. ೭-೧-೪೫) ಎಂಬುದರಿಂದ ತನಬಾದೇಶ. **ಧಿನ್ವಿಕೃಣ್ವ್ಯೋರಚ** (ಪಾ. ಸೂ. ೩-೧-೮೦) ಎಂಬುದರಿಂದ ಉ ವಿಕರಣ. ಧಾತುವಿಗೆ ಅಕಾರಾಂತಾದೇಶ. **ಅತೋಲೋಪಃ** ಎಂಬುದರಿಂದ ಅಕಾರಕ್ಕೆ ಲೋಪ. ಇದಿತ್ತಾದುದರಿಂದ ಧಾತುವಿಗೆ ನುಮಾಗಮ. ಪ್ರತ್ಯಯ ಪಿತ್ತಾದುದರಿಂದ ವಿಕರಣವಾದ ಉ ಪ್ರತ್ಯಯಕ್ಕೆ ಗುಣ. ಋಕಾರನಿಮಿತ್ತವಾಗಿ ನಕಾರಕ್ಕೆ ಣತ್ವ. ಅತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

**ಪರುಃ ಪರುಃ**—ಪೃ ಪಾಲನಪೂರಣಯೋಃ ಧಾತು. **ಅರ್ತಿಪೃವಪಿಯಜಿ**—(ಉ. ಸೂ. ೩೭೪) ಎಂಬುದರಿಂದ ಉಸಿ ಪ್ರತ್ಯಯ. ಅದು ನಿತ್ತಾಗುತ್ತದೆ. ಪ್ರತ್ಯಯ ನಿಮಿತ್ತವಾಗಿ ಧಾತುವಿನ ಋಕಿಗೆ ಗುಣ. ರಪರವಾಗಿ ಬರುತ್ತದೆ. ನಿತ್ವ ವಿಧಾನಮಾಡಿರುವುದರಿಂದ ಆದ್ಯುದಾತ್ತಸ್ವರ ಬರುತ್ತದೆ. ವೀಪ್ಸಾ ತೋರುವಾಗ **ನಿತ್ಯವೀಪ್ಸಯೋಃ** (ಪಾ. ಸೂ. ೮-೧-೪) ಎಂಬುದರಿಂದ ದ್ವಿರ್ವಚನಬರುತ್ತದೆ. **ಅನುದಾತ್ತಂ ಚ** (ಪಾ ಸೂ. ೮-೧-೩) ಎಂಬುದರಿಂದ ಪರದ ಆಮ್ರೇಡಿತವು ಸರ್ವಾನುದಾತ್ತವಾಗುತ್ತದೆ.

**ಅನುಘುಷ್ಯ**—ಘುಷಿರ್ ವಿಶಬ್ದನೇ. ಧಾತು. **ಸಮಾಸೇ ನಞ್‌ಪೂರ್ವೇಕ್ತ್ವೋಲ್ಯಪ್** (ಪಾ. ಸೂ. ೭-೧-೩೭) ಎಂಬುದರಿಂದ ಕ್ತ್ವಾಪ್ರತ್ಯಯಕ್ಕೆ ಲ್ಯಬಾದೇಶ. ಇದು ಪಿತ್ತಾದುದರಿಂದ ಅನುದಾತ್ತವಾಗುತ್ತದೆ. ಸಮಾಸದಲ್ಲಿ ಕೃದುತ್ತರಪದ ಪ್ರಕೃತಿಸ್ವರ ಬರುತ್ತದೆ.

**ಶಸ್ತ**—ಶಸ್ ಹಿಂಸಾಯಾಮ್. ಧಾತು. **ಲೋಟ್** ಮಧ್ಯಮಪುರುಷ ಬಹುವಚನದಲ್ಲಿ ಲಙ್ವದ್ಭಾವವಿರುವುದರಿಂದ ತಾದೇಶ. **ಬಹುಲಂ ಛಂದಸಿ** ಎಂಬುದರಿಂದ ವಿಕರಣಕ್ಕೆ ಲುಕ್. ಅತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ. ॥ ೧೮ ॥

———:o:———

### ಸಂಹಿತಾಪಾಠಃ

ಏಕಸ್ತ್ವಷ್ಟುರಶ್ವಸ್ಯಾ ವಿಶಸ್ತಾ ದ್ವಾ ಯಂತಾರಾ ಭವತಸ್ತಥ ಋತುಃ ।
ಯಾ ತೇ ಗಾತ್ರಾಣಾಮೃತುಥಾ ಕೃಣೋಮಿ ತಾತಾ ಪಿಂಡಾನಾಂ ಪ್ರ-
ಜುಹೋಮ್ಯಗ್ನೌ ॥ ೧೯ ॥

### ಪದಪಾಠಃ

ಏಕಃ । ತ್ವಷ್ಟುಃ । ಅಶ್ವಸ್ಯ । ವಿಽಶಸ್ತಾ । ದ್ವಾ । ಯಂತಾರಾ । ಭವತಃ । ತಥಾ । ಋತುಃ ।
ಯಾ । ತೇ । ಗಾತ್ರಾಣಾಂ । ಋತುಽಥಾ । ಕೃಣೋಮಿ । ತಾಽತಾ । ಪಿಂಡಾನಾಂ । ಪ್ರ । ಜುಹೋಮಿ ।
ಅಗ್ನೌ ॥ ೧೯ ॥

### ಸಾಯಣಭಾಷ್ಯಂ

ತ್ವಷ್ಟುರಸ್ಯ ದೀಪ್ತಸ್ಯಾಶ್ವಸ್ಯ ವಿಶಸ್ತಾ ವಿಶಸನಸ್ಯ ಕರ್ತೈಕಃ । ಏಕ ಏವ । ಸ ಕಃ । ಋತುರೇತ-ದುಪಲಕ್ಷಿತಃ ಕಾಲಾತ್ಮಾ ತಸ್ಯೈವ ಸರ್ವೇಷಾಮಪಿ ಪರ್ಯವಸಿತೃತ್ವಾತ್ । ಯದ್ವಾ । ಋತುರ್ನಿಃ-ಶಂಕವಿಶಸನಾಯ ಗಂತಾ ಶಮಿತಾ । ತಥಾ ದ್ವಾ ಯಂತಾರಾ ನಿಯಮಯಿತಾರಾವಹೋರಾತ್ರೇ ದೇವೌ ದ್ಯಾವಾಪೃಥಿವ್ಯೌ ವಾ ಋತ್ವಿಕ್ಷು ಭವತಃ ॥ ತಥ ಋತುರಿತ್ಯತ್ರ ಋತ್ಯಕ ಇತಿ ಪ್ರಕೃತಿಭಾವೋ ಹ್ರಸ್ವತ್ವಂ ಚ ॥ ಹೇ ಅಶ್ವ ತೇ ತವ ಗಾತ್ರಾಣಾಂ ಮಧ್ಯೇ ಯಾ ಯಾನಿ ಹೃದಯಾದ್ಯವಯವಾನ್ಯೃತುಥಾ ಕಾಲೇ ಕೃಣೋಮಿ ಭಿನದ್ಮಿ ಸಂಪಾದಯಾಮಿ ಪಿಂಡಾನಾಂ ಮಧ್ಯೇ ತಾತಾ ತಾನಿ ತಾನಿ ಪ್ರಜ್ಞಾನಾನುರೋಧೇ-ನಾಗ್ನೌ ಪ್ರ ಜುಹೋಮಿ । ಪ್ರಕರ್ಷೇಣ ಹುತಂ ಕರೋಮಿ ॥

### ಪ್ರತಿಪದಾರ್ಥ

ತ್ವಷ್ಟುಃ — ಪ್ರಕಾಶಮಾನವಾದ । ಅಸ್ಯ ಅಶ್ವಸ್ಯ — ಈ ಅಶ್ವದ । ವಿಶಸ್ತಾ — ಛೇದನಕಾರನು । ಏಕಃ—ಒಬ್ಬನು. (ಅದಾರೆಂದರೆ) । ಋತುಃ—(ಸರ್ವವನ್ನೂ ಕೊನೆಗಾಣಿಸತಕ್ಕ) ಋತ್ವಾತ್ಮಕವಾದ ಕಾಲವು । ಯಂತಾರಾ—ಇದನ್ನು ನಿಯಮಿಸತಕ್ಕವರು । ದ್ವಾ—ಅಹೋರಾತ್ರರೂಪರಾದ ಅಥವಾ ದ್ಯಾವಾಪೃಥಿವೀರೂಪ ರಾದ ಇಬ್ಬರು । ಭವತಃ—ಇರುತ್ತಾರೆ । (ಹೇ ಅಶ್ವ—ಎಲೈ ಅಶ್ವವೇ) । ತೇ—ನಿನ್ನ । ಗಾತ್ರಾಣಾಂ—ಅವಯವಗಳಲ್ಲಿ । ಯಾ—ಯಾವುದನ್ನು । ಋತುಥಾ—ಯಜ್ಞಕಾಲಾನುರೋಧವಾಗಿ । ಕೃಣೋಮಿ—ಸಿದ್ಧ ಮಾಡುತ್ತೇನೆಯೋ । ತಾತಾ—ಅವುಗಳೆಲ್ಲವನ್ನೂ । ಪಿಂಡಾನಾಂ—ಪಿಂಡಗಳ ರೂಪದಲ್ಲಿ । ಅಗ್ನೌ—ಅಗ್ನಿ ಯಲ್ಲಿ । ಪ್ರ ಜುಹೋಮಿ—ಶ್ರೇಷ್ಠವಾದ ಆಹುತಿರೂಪದಿಂದ ಅರ್ಪಿಸುತ್ತೇನೆ ।

**ಭಾವಾರ್ಥ**

ಪ್ರಕಾಶಮಾನವಾದ ಈ ಅಶ್ವದ ಛೇದನಕಾರನು ಒಬ್ಬನು. ಅದಾರೆಂದರೆ ಸರ್ವವನ್ನೂ ಕೊನೆಗಾಣಿಸತಕ್ಕ ಋತ್ವಾತ್ಮಕನಾದ ಕಾಲವು. ಇದನ್ನು ನಿಯಮಿಸತಕ್ಕವರು ಅಹೋರಾತ್ರರೂಪರಾದ ಅಥವಾ ದ್ಯಾವಾಪೃಥಿವೀರೂಪ ರಾದ ಇಬ್ಬರು ಇರುತ್ತಾರೆ. ಎಲೈ ಅಶ್ವವೇ, ನಿನ್ನ ಅವಯವಗಳಲ್ಲಿ ಯಾವುದನ್ನು ಯಜ್ಞಕಾಲಾನುರೋಧವಾಗಿ ಸಿದ್ಧಮಾಡುತ್ತೇನೆಯೋ ಅವುಗಳೆಲ್ಲವನ್ನೂ ಸಹ ಪಿಂಡಗಳ ರೂಪದಲ್ಲಿ ಅಗ್ನಿಯಲ್ಲಿ ಶ್ರೇಷ್ಠವಾದ ಆಹುತಿಯ ರೂಪದಿಂದ ಅರ್ಪಿಸುತ್ತೇನೆ.

## English Translation

There is one immolator of the radiant horse, which is Time: there are two that hold him fast: such of your limbs as I cut up in due season, I offer them, made into balls (of meat), upon the fire.

**ವಿಶೇಷವಿಷಯಗಳು**

ಈ ಋಕ್ಕಿನ ವರ್ಣನೆಯು ಸುಲಭವಾಗಿ ಅರ್ಥವಾಗತಕ್ಕದ್ದಲ್ಲ. ಇದರಲ್ಲಿ ಆಧ್ಯಾತ್ಮಿಕವಾದ ತತ್ತ್ವವು ಅಡಗಿದೆ. ಈ ವರ್ಣನೆಯು ಮೇಧ್ಯಾಶ್ವದ ಸ್ವರೂಪವನ್ನೂ ಸಂಬಂಧವನ್ನೂ ಎರಡುವಿಧವಾಗಿ ತಿಳಿಸಿದೆ. ರೂಢ ವಾದ ಛೇದನಕರ್ಮದಲ್ಲಿ ನಿರತನಾದ ಶಮಿತೃವಿನ ಕಾರ್ಯವೆಂದು ಒಂದು ವಿಧವಾಗಿಯೂ, ವಿಶ್ವವನ್ನೆಲ್ಲಾ ತನ್ನ ನಿಯ ಮನದಲ್ಲಿಟ್ಟುಕೊಂಡು ಸರ್ವಕ್ಕೂ ಅಂತಕವಾಗಿರತಕ್ಕ **ಕಾಲದ** ಕಾರ್ಯವೆಂದು ಇನ್ನೊಂದು ವಿಧವಾಗಿಯೂ ಅರ್ಥ ಮಾಡಿದೆ. **ಋತುಃ ಏತದುಪಲಕ್ಷಿತಃ ಕಾಲಾತ್ಮಾ ತಸ್ಯೈವ ಸರ್ವೇಷಾಮಪಿ ಪರ್ಯವಸಿತೃತ್ವಾತ್ । ಯದ್ವಾ ಋತುಃ, ನಿಃಶಂಕವಿಶಸನಾಯ ಗಂತಾ ಶಮಿತಾ ।** ಎಂದು ಮೇಲೆ ವಿವರಿಸಿದಂತೆ ಎರಡು ವಿಧವಾಗಿಯೂ ಸಾಯಣರು ನಿರ್ವಚನವನ್ನು ತೋರಿಸಿದ್ದಾರೆ.

**ತ್ವಷ್ಟುಃ**—ಈ ಪದಕ್ಕೆ ಸಾಯಣರು **ದೀಪ್ತಸ್ಯ**—ಪ್ರಕಾಶಮಾನವಾದ ಎಂದರ್ಥಮಾಡಿದ್ದಾರೆ. ಆದರೆ ಮೇಲಿನ ಋಕ್ಕಿನಲ್ಲಿ **ದೇವಬಂಧೋಃ** ಎಂದಿರುವುದರಿಂದಲೂ, ಅನೇಕಕಡೆಗಳಲ್ಲಿ ಮೇಧ್ಯಾಶ್ವಕ್ಕೂ ತ್ವಷ್ಟೃವಿಗೂ ಜನ್ಯಜನಕಸಂಬಂಧವನ್ನು ಹೇಳಿರುವುದರಿಂದಲೂ ಸಹ ಇಲ್ಲಿ ತ್ವಷ್ಟೃವಿಗೆ ಸಂಬಂಧಿಸಿದ ಎಂಬ ಅರ್ಥವನ್ನು ಹೇಳಿದರೆ ತಪ್ಪಾಗಲಾರದು.

**ತ್ವಷ್ಟಾ ವೀರಂ ದೇವಕಾಮಂ ಜಜಾನ ತ್ವಷ್ಟುರರ್ವಾ ಜಾಯತ ಆಶುರಶ್ವಃ ॥**

(ತೈ. ಸಂ. ೫-೧-೧೧)

ಎಂಬ ಅಶ್ವಮೇಧದ ಆಪ್ರೀ ಸೂಕ್ತದಲ್ಲಿ ತ್ವಷ್ಟೃವಿನಿಂದ ಮೇಧ್ಯಾಶ್ವವು ಉತ್ಪನ್ನವಾಯಿತೆಂದು ಸ್ಪಷ್ಟವಾಗಿ ಹೇಳಿದೆ. ಅಲ್ಲದೆ,

**ಪ್ರಜಾಪತೇರಕ್ಷ್ಯಶ್ವಯತ್ । ತತ್ಪರಾಪತತ್ತತೋಽಶ್ವಃ ಸಮಭವದ್ಯದಶ್ವಯತ್ತದಶ್ವಸ್ಯಾಶ್ವತ್ವಂ ತದ್ದೇವಾ ಅಶ್ವಮೇಧೇನೈವ ಪ್ರತ್ಯದಧುರೇಷ ಹ ವೈ ಪ್ರಜಾಪತಿಗ್ಂ ಸರ್ವಂ ಕರೋತಿ ಯೋಽಶ್ವಮೇಧೇನ ಯಜತೇ ॥**

(ಶ. ಬ್ರಾ. ೧೩-೩-೧-೧)

ಒಂದು ಸಲ ಪ್ರಜಾಪತಿಯ ನೇತ್ರವು ಬಾತುಕೊಂಡು ಬಿದ್ದುಹೋಯಿತು. ಅದರಿಂದ ಅಶ್ವವು ಉತ್ಪನ್ನವಾಯಿತು. ಆದುದರಿಂದಲೇ ಅಶ್ವಕ್ಕೆ ಈ ಹೆಸರು ಪ್ರಸಿದ್ಧವಾಯಿತು. ಅನಂತರ ದೇವತೆಗಳು ಅಶ್ವಮೇಧವನ್ನು ನೆರವೇರಿಸಿ ಅದನ್ನು ಪುನಃ ಅದರ ಸ್ವಸ್ಥಾನಕ್ಕೇ ಸೇರಿಸಿದರು. ಅಶ್ವಮೇಧವನ್ನು ನೆರವೇರಿಸುವವನು ಪ್ರಜಾಪತಿಯನ್ನು ಪೂರ್ಣನಾಗುವಂತೆ ಮಾಡುತ್ತಾನೆ ತಾನೂ ಸಹ ಪೂರ್ಣನಾಗುತ್ತಾನೆ ಎಂದಿರುವುದರಿಂದ ಇಲ್ಲಿ ತ್ವಷ್ಟೃಶಬ್ದಕ್ಕೆ ಪ್ರಜಾಪತಿಗೆ ಸಂಬಂಧಿಸಿದ ಎಂದು ಹೇಳಿದರೆ ತಪ್ಪಾಗಲಾರದು. ಇಂತಹ ದೇವಸಂಬಂಧಿಯಾದ ಅಶ್ವಕ್ಕೆ, **ವಿಶಸ್ತಾ ಏಕಃ । ವಿಶಸನಕರ್ತಾ ಏಕಃ ।** ಛೇದಿಸತಕ್ಕವನೊಬ್ಬನೇ ಎಂದಿದೆ. ಇದಾವುದೆಂದರೆ **ಋತುಃ** ಎಂದು ನಿರ್ದೇಶಿದೆ. ಇದೇ ವಿಷಯವನ್ನು ತೈತ್ತಿರೀಯಸಂಹಿತೆಯಲ್ಲಿ,

> **ಕಸ್ತ್ವಾ ಛ್ಯತಿ ಕಸ್ತ್ವಾ ವಿ ಶಾಸ್ತಿ ಕಸ್ತೇ ಗಾತ್ರಾಣಿ ಶಿಮ್ಯತಿ । ಕ ಉ ತೇ ಶಮಿತಾ ಕವಿಃ । ಋತವಸ್ತ ಋತುಧಾ ಪರುಶ್ಶಮಿತಾರೋ ವಿ ಶಾಸತು । ಸಂವತ್ಸರಸ್ಯ ಧಾಯಸಾ ಶಿಮೀಭಿಶ್ಶಿ-ಮ್ಯಂತು ತ್ವಾ । ದೈವ್ಯಾ ಅಧ್ವರ್ಯವಸ್ತ್ವಾ ಛ್ಯಂತು ವಿ ಚ ಶಾಸತು । ಗಾತ್ರಾಣಿ ಪರ್ವಶಸ್ತೇ ಶಿಮಾಃ ಕೃಣ್ವಂತು ಶಿಮ್ಯಂತಃ ॥**
>
> (ತೈ. ಸಂ. ೫-೨-೧೨)

ಎಲೈ ಮೇಧ್ಯಾಶ್ವವೇ, ನಿನ್ನನ್ನು ಛೇದಿಸುವವರು ಯಾರು ? ನಿನ್ನ ಅಂಗಾಂಗಗಳಲ್ಲಿ ಛೇದನ ಸಾಧನವನ್ನು ಹಾಕಿ ಅವುಗಳನ್ನು ಬೇರೆಬೇರೆಯಾಗಿ ಬಿಡಿಸುವವರು ಯಾರು ? ಎಂದು ಪ್ರಶ್ನರೂಪದಲ್ಲಿ ಕೇಳಿ, ಅನಂತರ, ವಸಂತಾದಿ ಋತುಗಳು ಆಯಾ ನಿಯಮಿತಕಾಲಗಳಲ್ಲಿ ನಿನ್ನ ಛೇದನವನ್ನು ಮಾಡಿ ನಿನ್ನ ಅಂಗಾಂಗಗಳನ್ನು ಬಿಡಿಸಲಿ. ಸಂವತ್ಸರದ ಪ್ರಭಾವದೊಡನೆ ಅವು ನಿನ್ನನ್ನು ಛೇದಿಸಲಿ. ಎಂಬ ವಾಕ್ಯವು ಸಾಯಣರ ಮೊದಲನೆಯ ವಿವರಣೆಗೆ ಆಧಾರವಾಗಿದೆ. ಎರಡನೆಯದಾಗಿ, ದೇವಲೋಕದ ಅಧ್ವರ್ಯುವು ನಿನ್ನನ್ನು ಛೇದಿಸಿ ನಿನ್ನ ಅವಯವಗಳನ್ನು ಬಿಡಿಸಲಿ ಎಂದು ಹೇಳಿರುವುದು ಸಾಯಣರ ಎರಡನೆಯ ವಿವರಣೆಗೆ ಅನುಕೂಲವಾಗಿದೆ. **ಯದ್ವಾ । ಋತುಃ ನಿಶ್ಶಂಕವಿಶಸನಾಯ ಗಂತಾ ಶಮಿತಾ ।** ದೃಢಮನಸ್ಕನಾಗಿ ಛೇದಿಸಲು ಹೋಗುವ ಶಮಿತೃವೆಂದು ವಿವರಿಸಿದ್ದಾರೆ.

**ದ್ವಾ ಯಂತಾರಾ—ನಿಯಮಿತಾರೌ ಅಹೋರಾತ್ರೇ ದೇವೌ ದ್ಯಾವಾಪೃಥಿವ್ಯೌ ವಾ ।** ಅಹೋರಾತ್ರಗಳಾಗಲಿ ಅಥವಾ ದ್ಯಾವಾಪೃಥಿವಿಗಳಾಗಲಿ ಎಂದು ವಿವರಿಸಿದೆ.

> **ಅಹರ್ವಾ ಅಶ್ವಂ ಪುರಸ್ತಾನ್ಮಹಿಮಾನ್ವಜಾಯತ ತಸ್ಯ ಪೂರ್ವೇ ಸಮುದ್ರೇ ಯೋನೌ ರಾತ್ರಿರೇನಂ ಪಶ್ಚಾನ್ಮಹಿಮಾನ್ವಜಾಯತ ತಸ್ಯಾಪರೇ ಸಮುದ್ರೇ ಯೋನಿರೇತೌ ವಾ ಅಶ್ವಂ ಮಹಿಮಾನಾ-ವಭಿತಃ ಸಂಬಭೂವತುಃ ।**
>
> (ಬೃ. ಉ. ೧-೧)

ಅಹಸ್ಸು ಈ ಅಶ್ವದ ಮುಂಭಾಗದಲ್ಲಿದ್ದು ಇದರ ಮಹತ್ತ್ವವನ್ನು ಪ್ರಕಟಿಸುತ್ತದೆ. ರಾತ್ರಿಯು ಹಿಂಭಾಗದಲ್ಲಿದ್ದು ಇದರ ಮಹತ್ತ್ವವನ್ನು ಪ್ರಕಟಿಸುತ್ತದೆ. ಎಂಬ ಈ ವಾಕ್ಯವು ವೈಯಕ್ತಿಕವಾದ ಅಶ್ವಮೇಧವನ್ನೂ, ಮತ್ತು ಅಶ್ವಮೇಧವೆಂದು ಪ್ರಸಿದ್ಧವಾದ ಪ್ರಜಾಪತಿಯ ವಿಶ್ವಯಜ್ಞವನ್ನೂ ವರ್ಣಿಸುತ್ತದೆ. ವೈಯಕ್ತಿಕವಾದ ಯಜ್ಞವನ್ನು ಪರಿಶೀಲಿಸಿದರೆ, ಯಜ್ಞಪಶುವಿನ ಮುಂಭಾಗದಲ್ಲಿ ಸುವರ್ಣದಿಂದ ಮಾಡಿದ ಗ್ರಹವನ್ನೂ ಹಿಂಭಾಗದಲ್ಲಿ ರಜತದಿಂದ ಮಾಡಿದ ಗ್ರಹವನ್ನೂ ಇಟ್ಟಿರುತ್ತಾರೆ. ಇವೆರಡೂ ಅಹೋರಾತ್ರಗಳನ್ನು ತಮ್ಮ ವರ್ಣಗಳಿಂದ ಪ್ರತಿಬಿಂಬಿಸುತ್ತವೆ ಯೆಂದರ್ಥ. ಆಧ್ಯಾತ್ಮಿಕವಾದ ದೃಷ್ಟಿಯಿಂದ ಈ ವಾಕ್ಯಕ್ಕೆ ಶಂಕರಾಚಾರ್ಯರು ಅರ್ಥವನ್ನು ವಿವರಿಸುತ್ತಾ,

**ಅಹರಶ್ವಂ ಪುರಸ್ತಾನ್ಮಹಿಮಾನ್ವಜಾಯತೇತಿ ಕಥಂ ? ಅಶ್ವಸ್ಯ ಪ್ರಜಾಪತಿತ್ವಾತ್ ಪ್ರಜಾಪತಿರ್ಹ್ಯಾದಿತ್ಯಾದಿ ಲಕ್ಷಣೋಽಹ್ನಾ ಲಕ್ಷ್ಯತೇ ।**

(ಶ. ಭಾ. ೧-೧)

ಅಶ್ವವು ಪ್ರಜಾಪತಿಗೆ ಸಂಬಂಧಿಸಿದುದು. ಪ್ರಜಾಪತಿಯು ಆದಿತ್ಯಾದಿಲಕ್ಷಣಗಳುಳ್ಳವನಾಗಿ ಅಹಸ್ಸಿನಿಂದ ನಿರ್ದೇಶಿಸಲ್ಪಡುತ್ತಾನೆ ಇತ್ಯಾದಿಯಾಗಿ ವಿವರಿಸಿ ಅಹೋರಾತ್ರಗಳೆರಡೂ ಅಶ್ವದ ಮಹತ್ತ್ವವನ್ನು ಪ್ರಕಟಿಸುತ್ತವೆ ಎಂದರ್ಥವೆಂದು ತಿಳಿಸಿದ್ದಾರೆ. ಸಾಯಣರ ವಿವರಣೆಯಲ್ಲಿಯೂ ಇದೇ ಅರ್ಥವು ಬರುತ್ತದೆ.

**ಋತುಥಾ ಕೃಣೋಮಿ**—**ಋತುಥಾ** ಎಂಬ ಶಬ್ದಕ್ಕೆ ಕೇವಲ **ಕಾಲೇ** ಎಂಬರ್ಥವನ್ನು ಮಾಡಿದ್ದಾರೆ. ಇದರ ಅಭಿಪ್ರಾಯವು ತೈತ್ತಿರೀಯಸಂಹಿತಾವಾಕ್ಯದಲ್ಲಿ ವಿಶದವಾಗಿದೆ.

**ಅರ್ಧಮಾಸಾಃ ಪರೂಗ್‌ಂಷಿ ತೇ ಮಾಸಾಶ್ಛ್ಯಂತು ಶಿಮ್ಯಂತಃ ।**
**ಅಹೋರಾತ್ರಾಣಿ ಮರುತೋ ವಿಲಿಷ್ಟಂ ಸೂದಯಂತು ತೇ ॥**

(ತೈ. ಸಂ ೫-೨-೧೨)

ಎಂದು ನಿರ್ದೇಶಿಸಿದೆ. ಆದರೆ ಪ್ರಕೃತವಾದ ಋಕ್ಕಿನಲ್ಲಿ ಕೃಣೋಮಿ ಎಂದು ಯಜಮಾನನು ತನ್ನನ್ನೇ ಛೇದನಕಾರಣನನ್ನಾಗಿ ಮಾಡಿ ಹೇಳಿಕೊಂಡಿದ್ದಾನೆ.

**॥ ವ್ಯಾಕರಣಪ್ರಕ್ರಿಯಾ ॥**

**ವಿಶಸ್ತಾ**—ಶಸ್ ಹಿಂಸಾಯಾಮ್. ಧಾತು. ಕರ್ತರಿಯಲ್ಲಿ ತೃಚ್ ಪ್ರತ್ಯಯ. ಚಿತ್ತ್ವಾದುದರಿಂದ ಅಂತೋದಾತ್ತವಾಗುತ್ತದೆ.

**ಯಂತಾರಾ**—ಯಮ ಉಪರಮೇ ಧಾತು. ಹಿಂದಿನಂತೇ ತೃಚ್‌ಪ್ರತ್ಯಯ. ಚಿತ್ತ್ವಾದುದರಿಂದ ಅಂತೋದಾತ್ತಸ್ವರ ಬರುತ್ತದೆ. ಧಾತುಮಕಾರಕ್ಕೆ ಅನುಸ್ವಾರ ಪರಸವರ್ಣ. **ಸುಪಾಂ ಸುಲುಕ್**—(ಪಾ. ಸೂ. ೭-೧-೩೯) ಎಂಬುದರಿಂದ ದ್ವಿವಚನಕ್ಕೆ ಆಕಾರಾದೇಶ. ದ್ವಾ ಎಂಬಲ್ಲಿಯೂ ಹೀಗೆಯೇ ಆಕಾರಾದೇಶ.

**ತಥ ಋತುಃ**—ತಥಾ+ಋತುಃ ಎಂದಿರುವಾಗ **ಋತ್ಯಕಃ** (ಪಾ. ಸೂ. ೬-೧-೧೨೮) ಎಂಬುದರಿಂದ ಪ್ರಕೃತಿಭಾವವೂ ಹ್ರಸ್ವವೂ ಬರುತ್ತವೆ.

**ಯಾ**—**ಶೇಶ್ಛಂದಸಿ ಬಹುಲಮ್**—(ಪಾ. ಸೂ. ೬-೧-೭೦) ಎಂಬುದರಿಂದ ಶಿಗೆ ಲೋಪ.

**ಋತುಥಾ**—**ಥಾ ಹೇತೌ ಚ ಛಂದಸಿ** ( ಪಾ. ಸೂ. ೫-೩-೨೬ ) ಎಂಬುದರಿಂದ ವಿಧಿಸಲ್ಪಡುವ ಥಾ ಪ್ರತ್ಯಯವು ವ್ಯತ್ಯಯದಿಂದ ಋತುಶಬ್ದಕ್ಕೂ ಬರುತ್ತದೆ.

**ಕೃಣೋಮಿ**—ಯದ್ಯೋಗವಿರುವುದರಿಂದ ನಿಘಾತಸ್ವರ ಬರುವುದಿಲ್ಲ. ವಿಕರಣಸ್ವರದಿಂದ ಮಧ್ಯೋದಾತ್ತವಾಗುತ್ತದೆ.

**ತಾತಾ**—ತಾನಿತಾನಿ ಎಂದಿರುವಾಗ **ಶೇಶ್ಛಂದಸಿ ಬಹುಲಮ್** ಎಂಬುದರಿಂದ ಶಿಗೆ ಲೋಪ. ವೀಪ್ಸಾರ್ಥದಲ್ಲಿ ದ್ವಿರ್ವಚನ ಬರುತ್ತದೆ. ಪರದ ಆಮ್ರೇಡಿತಕ್ಕೆ ಅನುದಾತ್ತಸ್ವರ ಬರುತ್ತದೆ.

**ಜುಹೋಮಿ**—ಹು ದಾನಾದನಯೋಃ ಧಾತು. ಶ್ಲುವಿಕರಣ ಧಾತುವಿಗೆ ದ್ವಿತ್ವಾದಿ. ಅತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ. ॥ ೧೯ ॥

ಸಂಹಿತಾಪಾಠಃ

ಮಾ ತ್ವಾ ತಪತ್ಪ್ರಿಯ ಆತ್ಮಾಪಿಯಂತಂ ಮಾ ಸ್ವಧಿತಿಸ್ತನ್ವ೧ ಆ ತಿಷ್ಠಿಪತ್ತೇ ।
ಮಾ ತೇ ಗೃಧ್ನುರವಿಶಸ್ತಾತಿಹಾಯ ಛಿದ್ರಾ ಗಾತ್ರಾಣ್ಯಸಿನಾ ಮಿಥೂ ಕಃ ॥೨೦॥

ಪದಪಾಠಃ

ಮಾ । ತ್ವಾ । ತಪತ್ । ಪ್ರಿಯಃ । ಆತ್ಮಾ । ಅಪಿಽಯಂತಂ । ಮಾ । ಸ್ವಽಧಿತಿಃ । ತನ್ವಃ । ಆ । ತಿಸ್ಥಿಪತ್ । ತೇ ।
ಮಾ । ತೇ । ಗೃಧ್ನುಃ । ಅವಿಽಶಸ್ತಾ । ಅತಿಽಹಾಯ । ಛಿದ್ರಾ । ಗಾತ್ರಾಣಿ । ಅಸಿನಾ । ಮಿಥು । ಕರಿತಿಕಃ ॥ ೨೦ ॥

ಸಾಯಣಭಾಷ್ಯಂ

ಹೇ ಅಶ್ವ ತ್ವಾ ತ್ವಾಮಪಿಯಂತಂ ದೇವಾನ್ಪ್ರತಿ ಗಚ್ಛಂತಂ ಪ್ರಿಯ ಆತ್ಮಾ ಭೋಗಾಯತನತ್ವಾತ್ತ್ವವ ಪ್ರಿಯತರೋ ದೇಹೋ ಮಾ ತಪತ್ । ತಪ್ತಂ ಮಾ ಕಾರ್ಷೀತ್ । ವಿಯೋಗಜನಿತಾ ವ್ಯಥಾ ಮಾ ಭೂದಿತ್ಯರ್ಥಃ । ಸ್ವಧಿತಿಃ ಶಸ್ತ್ರಂ ತೇ ತವ ತನ್ವಸ್ತನೂರಂಗಾನಿ ಮಾ ತಿಷ್ಠಿಪತ್ । ತ್ವಯಿ ಚಿರಮಾಸ್ಥಿತಾನಿ ಮಾ ಕಾರ್ಷೀತ್ ॥ ಸ್ಥಾಪಯತೇರ್ಲುಙಿ ತಿಷ್ಠತೇ ರಿತ್ । ಪಾ. ೭-೪-೫. । ಇತೀತ್ವಂ ॥ ತಥಾ ತೇ ತವ ಗಾತ್ರಾಣಿ ಗೃಧ್ನುಃ ಕೇವಲಮಾಂಸಗ್ರಹಣೇಪ್ಸುರವಿಶಸ್ತಾ ವಿಶಸನೇಽಕುಶಲಃ ಶಮಿತಾತಿಹಾಯ ನ್ಯೂನಾತಿರೇಕಭಾವೇನ ತತ್ತದಂಗಮತಿಕ್ರಮ್ಯ ಮಧ್ಯೇ ಮಿಥು ಮಿಥ್ಯಾ ವ್ಯರ್ಥಮಸಿನಾ ಛಿದ್ರಾ ಛಿದ್ರಾಣಿ ತಿರ್ಯಕ್ಛಿನ್ನಾನಿ ಮಾ ಕಃ । ಮಾ ಕಾರ್ಷೀತ್ ॥ ಕರೋತೇರ್ಲುಙಿ ಮಂತ್ರೇ ಘಸೇತಿ ಚ್ಲೇರ್ಲುಕ್ । ಗುಣಃ । ಹಲ್ಙ್ಯಾಬ್ಭ್ಯ ಇತಿ ತಲೋಪಃ ॥

ಪ್ರತಿಪದಾರ್ಥ

(ಹೇ ಅಶ್ವ—ಎಲೈ ಅಶ್ವವೇ) । ಅಪಿಯಂತಂ—ದೇವತೆಗಳನ್ನು ಉದ್ದೇಶಿಸಿ ಅವರಲ್ಲಿಗೆ ಹೋಗುತ್ತಿರುವ। ತ್ವಾ—ನಿನ್ನನ್ನು । ಪ್ರಿಯಃ—ನಿನ್ನ ಪ್ರೀತಿಪಾತ್ರವಾದ । ಆತ್ಮಾ—ದೇಹವು । ಮಾ ತಪತ್—ತಪಿಸುವಂತೆ ಮಾಡದಿರಲಿ । ಸ್ವಧಿತಿಃ—ಛೇದನಸಾಧನವಾದ ಕತ್ತಿಯು । ತೇ—ನಿನ್ನ । ತನ್ವಃ—ಅಂಗಗಳನ್ನು (ಅಂಗಗಳಲ್ಲಿ) । ಮಾ ಆ ಅತಿಷ್ಠಿಪತ್—ದೀರ್ಘಕಾಲ ನಿಲ್ಲದಿರಲಿ । ಗೃಧ್ನುಃ—ಕೇವಲ ಮಾಂಸದಲ್ಲಿಯೇ ಆಸೆಯುಳ್ಳವನೂ । ಅವಿಶಸ್ತಾ—ಛೇದನದಲ್ಲಿ ಸೂಕ್ಷ್ಮವಾದ ಅನುಭವವಿಲ್ಲದಿರುವವನೂ ಆದ ಶಮಿತೃವು ! ಅತಿಹಾಯ—ಸರಿಯಾದ ಸ್ಥಾನಗಳನ್ನು ಬಿಟ್ಟು ಒರಟೊರಟಾಗಿ । ತೇ—ನಿನ್ನ । ಗಾತ್ರಾಣಿ—ಅವಯವಗಳನ್ನು । ಅಸಿನಾ—ತನ್ನ ಕತ್ತಿಯಿಂದ । ಮಿಥು—ವ್ಯರ್ಥವಾದ । ಛಿದ್ರಾ—ತುಂಡುಗಳುಳ್ಳದ್ದನ್ನಾಗಿ । ಮಾಕಃ—ಮಾಡದಿರಲಿ.

**ಭಾವಾರ್ಥ**

ಎಲೈ ಅಶ್ವವೇ, ದೇವತೆಗಳನ್ನುದ್ದೇಶಿಸಿ ಅವರಲ್ಲಿಗೆ ಹೋಗುತ್ತಿರುವ ನಿನ್ನನ್ನು ನಿನ್ನ ಪ್ರೀತಿಪಾತ್ರವಾದ ದೇಹವು ತಪಿಸುವಂತೆ ಮಾಡದಿರಲಿ ಛೇದನಸಾಧನವಾದ ಕತ್ತಿಯು ನಿನ್ನ ಅಂಗಗಳಲ್ಲಿ ದೀರ್ಘಕಾಲ ನಿಲ್ಲದಿರಲಿ. ಕೇವಲ ಮಾಂಸದಲ್ಲಿಯೇ ಆಸೆಯುಳ್ಳವನೂ, ಛೇದನದಲ್ಲಿ ಸೂಕ್ಷ್ಮವಾದ ಅನುಭವವಿಲ್ಲದಿರುವವನೂ ಆದ ಶಮಿತೃವು ನಿನ್ನ ದೇಹದಲ್ಲಿ ಸರಿಯಾದ ಸ್ಥಾನಗಳನ್ನು ಬಿಟ್ಟು ಒರಟೊರಟಾಗಿ ನಿನ್ನ ಅವಯವಗಳನ್ನು ತನ್ನ ಕತ್ತಿಯಿಂದ ವ್ಯರ್ಥವಾದ ತುಂಡುಗಳುಳ್ಳದ್ದನ್ನಾಗಿ ಮಾಡದಿರಲಿ.

## English Translation

Let not your precious body grieve you, who are going verily (to the gods): let not the axe linger in your body: let not the greedy and unskilful (immolator), missing the members, mangle your limbs needlessly with his knife.

**॥ ವಿಶೇಷವಿಷಯಗಳು ॥**

ದೇವತೆಗಳಲ್ಲಿಗೆ ಹೋಗಿ ಸೇರತಕ್ಕದ್ದಾದ್ದರಿಂದಲೂ ಪೃಥ್ವಿಗಿಂತಲೂ ಉತ್ತಮವಾದ ಸ್ಥಾನವು ಲಭಿಸುವುದರಿಂದಲೂ ಸಹ ಅಶ್ವವು ಪ್ರಕೃತವಾದ ದೇಹವನ್ನು ಬಿಟ್ಟುಹೋಗುವುದಕ್ಕಾಗಿ ದುಃಖಪಡಬೇಕಾದುದಿಲ್ಲವೆಂದು ಅದಕ್ಕೆ ಸೂಚನೆಯನ್ನು ಕೊಡುತ್ತಾರೆ. ಅಲ್ಲದೇ ಅಸಿಯಿಂದ ಛೇದನವಾಗತಕ್ಕ ಕಾಲದಲ್ಲಿ ದೇಹಕ್ಕೆ ಯಾತನೆಯು ಸಂಭವಿಸಬಹುದಾದುದರಿಂದ ಶಮಿತೃವಿನ ಅಜಾಗರೂಕತೆಯಿಂದಾಗಲಿ, ಅವನ ಮಾಂಸೇಚ್ಛೆಯಿಂದಾಗಲಿ, ಅಥವಾ ತಿಳಿವಳಿಕೆ ಇಲ್ಲದೆ ಒರಟೊರಟಾಗಿ ಅಸಿಪ್ರಯೋಗವನ್ನು ಮಾಡುವುದರಿಂದಾಗಲೀ ಯಾವ ವಿಧವಾದ ಹಿಂಸೆಯೂ ಸಂಭವಿಸದಿರಲೆಂದೂ ಸಹ ಪ್ರಾರ್ಥಿಸಿದೆ ಇದನ್ನೇ ಶತಪಥಬ್ರಾಹ್ಮಣದಲ್ಲಿಯೂ ಸಹ ;

> ನ ವಾ ಉ ಏತನ್ಮ್ರಿಯತೇ ನ ರಿಷ್ಯಸೀತಿ । **ಪ್ರಶ್ವಾಸಯತ್ಯೇವೈನಂ ತದ್ದೇವಾಗ್ಂ ಇದೇಷಿ ಪಥಿಭಿಃ ಸುಗೇಭಿರಿತಿ ದೇವಯಾನಾನೇವೈನಂ ಪಥೋ ದರ್ಶಯತಿ ಯತ್ರಾಸತೇ ಸುಕೃತೋ ಯತ್ರ ತೇ ಯಯುರಿತಿ ಸುಕೃದ್ಭಿರೇವೈನಗ್ಂ ಸಲೋಕಂ ಕರೋತಿ ತತ್ರ ತ್ವಾ ದೇವಃ ಸವಿತಾ ದಧಾತ್ವಿತಿ ಸವಿತೈವೈನಗ್ಂ ಸ್ವರ್ಗೇ ಲೋಕೇ ದಧಾತಿ ಪ್ರಜಾಪತಯೇ ತ್ವಾ ಜುಷ್ಟಂ ಪ್ರೋಕ್ಷಾಮೀತ್ಯುಪಾಗ್ಂ ಶ್ವಥೋಽಪಗೃಹ್ಣಾತಿ ॥**
>
> (ಶ. ಬ್ರಾ. ೧೩-೨-೭-೧೨)

" ಎಲೈ ಅಶ್ವವೇ, ನಿನಗೆ (ನಿನ್ನ ಆತ್ಮಕ್ಕೆ) ಮೃತಿಯಿಲ್ಲ. ನಿನಗೆ ಹಿಂಸೆಯಾಗದಿರಲಿ " ಎಂಬುದಾಗಿ (೧-೧೬೨-೨೧)ನೇ ಋಕ್ಸಂಹಿತಾವಾಕ್ಯವನ್ನುದಹರಿಸಿ ಅಶ್ವಕ್ಕೆ ಉತ್ತೇಜನವನ್ನು ಕೊಡುತ್ತಲೂ " ಸುಗುಮವಾದ ಮಾರ್ಗದಲ್ಲಿ ನೀನು ದೇವಲೋಕಕ್ಕೆ ಹೋಗುತ್ತೀಯೆ " ಎಂದು ದೇವಲೋಕದ ಸುಲಭವಾದ ಮಾರ್ಗವನ್ನು ತೋರಿಸುತ್ತಲೂ " ಸುಕೃತಿಗಳು ಎಲ್ಲಿ ವಾಸವಾಗಿದ್ದಾರೋ, ಎಲ್ಲಿ ಸುಕೃತಿಗಳೆಲ್ಲರೂ ಹೋಗುತ್ತಾರೋ " ಎಂದು ಸುಕೃತಿಗಳ ಲೋಕವು ಅಶ್ವಕ್ಕೂ ಲಭಿಸುವುದೆಂದು ಹೇಳುತ್ತಲೂ, " ಸವಿತೃವು ನಿನ್ನನ್ನು ಒಯ್ಯುವ ಲೋಕಕ್ಕೆ ಹೋಗುವೆ " ಎಂದು ಉಚ್ಚರಿಸುತ್ತಲೂ ಪ್ರೋಕ್ಷಿಸುತ್ತಾನೆ ಎಂದು ಮೇಲೆ ಹೇಳಿರುವ ಕ್ರಮವನ್ನು ತಿಳಿಸಿದೆ. ಅಗ್ನಿಯೂ,

ವಾಯುವೂ ಸೂರ್ಯನೂ ಯಜ್ಞಪಶುಗಳಾಗಿದ್ದು ಅವರೆಲ್ಲರೂ ಉತ್ತಮಲೋಕವನ್ನು ಪಡೆದರೆಂದು ಶತಪಥಬ್ರಾಹ್ಮಣದಲ್ಲಿ ಉದಾಹರಣೆಯನ್ನು ಸಹ ತೋರಿಸಿದ್ದಾರೆ.

> **ಅಗ್ನಿಃ ಪಶುರಾಸೀತ್ । ತೇನಾಯಜಂತ । ಸ ಏತಂ ಲೋಕಮಜಯದ್ಯಸ್ಮಿನ್ನಗ್ನಿಃ ಸ ತೇ ಲೋಕೋ ಭವಿಷ್ಯತಿ ತಂ ಜೇಷ್ಯಸಿ ಪಿಬೈತಾ ಅಪ ಇತಿ ಯಾವಾನಗ್ನೇರ್ವಿಜಯೋ ಯಾವಾಂಲ್ಲೋಕೋ ಯಾವದೈಶ್ವರ್ಯಂ ತಾವಾಂಸ್ತೇ ವಿಜಯಸ್ತಾವಾಂ ಲೋಕಸ್ತಾವದೈಶ್ವರ್ಯಂ ಭವಿಷ್ಯತೀತ್ಯೇವೈನಂ ತದಾಹ ॥**
>
> (ಶ. ಬ್ರಾ. ೧೩-೭-೨-೧೩)

ಅಗ್ನಿಯು ಯಜ್ಞಪಶುವಾಗಿದ್ದು ಅವನನ್ನು ಆಹುತಿಯಾಗಿ ಕೊಟ್ಟಮೇಲೆ, ಈಗ ಅಗ್ನಿಯು ಪ್ರಭುತ್ವವನ್ನು ಮಾಡುತ್ತಿರುವ ಲೋಕಗಳನ್ನೆಲ್ಲಾ ಪಡೆದನು. ಎಲೈ ಅಶ್ವವೇ, ನಿನಗೂ ಅದೇ ಲೋಕವು ಲಭಿಸುವುದು. ಅಗ್ನಿಯ ಜಯವು ಎಷ್ಟು ಮಹತ್ವವುಳ್ಳದ್ದೋ, ಅವನ ಪ್ರಭುತ್ವವು ಎಷ್ಟು ಅಧಿಕವಾದುದೋ, ನಿನ್ನ ಜಯವೂ, ಪ್ರಭುತ್ವವೂ ಅಷ್ಟೇ ಅಧಿಕವಾಗಿರುವುದು " ಎಂದೂ,

> **ವಾಯುಃ ಪಶುರಾಸೀತ್ । ತೇನಾಯಜಂತ ಸ ಏತಂ ಲೋಕಮಜಯದ್ಯಸ್ಮಿನ್ವಾಯುಃ ಸ ತೇ ಲೋಕೋ ಭವಿಷ್ಯತಿ ತಂ ಜೇಷ್ಯಸಿ ಪಿಬೈತಾ ಅಪ ಇತಿ ಯಾವಾನ್ವಾಯೋರ್ವಿಜಯೋ.... .... .... .... .... .... ॥**
>
> (ಶ. ಬ್ರಾ. ೧೩-೨-೭-೧೪)

ವಾಯುವೂ ಯಜ್ಞಪಶುವಾಗಿದ್ದನು. ಆ ಪಶುವನ್ನು ಯಜ್ಞದಲ್ಲಿ ಆಹುತಿ ರೂಪದಲ್ಲಿ ಅರ್ಪಿಸಿದನಂತರ ಈಗ ವಾಯುವು ಪ್ರಭುತ್ವಮಾಡುತ್ತಿರುವ ಲೋಕವನ್ನು ಪಡೆದನು. ಅಶ್ವವೇ ನಿನಗೂ ಅದೇ ಜಯವೂ, ಅದೇ ಪ್ರಭುತ್ವವೂ ಲಭಿಸುವುದು

> **ಸೂರ್ಯಃ ಪಶುರಾಸೀತ್ । ತೇನಾಯಜಂತ ........................ ।**
>
> (ಶ. ಬ್ರಾ. ೧೩-೨-೭-೧೫)

ಇದೇ ರೀತಿಯಲ್ಲಿ ಸೂರ್ಯನೂ ಪಶುವಾಗಿದ್ದನು. ಅವನಿಗೂ ಸಹ ಈಗ ಸರ್ವಲೋಕಕ್ಕೂ ಅಧಿಪತಿಯಾಗಿರುವ ಸ್ಥಾನವು ಲಭಿಸಿದೆ. ಆದುದರಿಂದ ನೀನೂ ಯಜ್ಞದಲ್ಲಿ ಆಹುತಿಯಾಗಿ ಅರ್ಪಿಸಲ್ಪಟ್ಟು ಅದೇ ಲೋಕವನ್ನೂ ಮಹತ್ವವನ್ನೂ ಪಡೆ ಎಂದು ಅಶ್ವಕ್ಕೆ ಉತ್ತೇಜನವನ್ನು ಕೊಡುವ ವಾಕ್ಯವನ್ನು ಋಕ್ಸಂಹಿತೆಯ ಇದೇ ಭಾಗದ (೧-೧೬೨-೨೧) ಮಂತ್ರವನ್ನು ಪಠಿಸಿ ಪಶುವಿಗೆ ಹಿಂಸೆಯಾಗದಿರಲೆಂದೂ, ಸದ್ಗತಿಯು ಲಭಿಸಲೆಂದೂ ಪ್ರಾರ್ಥಿಸಿದೆ.

**ಆತ್ಮಾ**—ಈ ಪದವನ್ನು ಇಲ್ಲಿ ದೇಹಕ್ಕೆ ಪರ್ಯಾಯ ಪದವಾಗಿ ಉಪಯೋಗಿಸಿದೆ. ಆತ್ಮದಂತೆ ಪ್ರಿಯವಾದ ದೇಹವೆಂದರ್ಥ.

**ಗೃಧ್ನುಃ**—ಶಮಿತೃವಿಗೆ ವಿಶೇಷಣವಾಗಿದೆ. ಯಜ್ಞದ ಮಹತ್ತ್ವವನ್ನರಿಯದೆ ಕೇವಲ ಅಶ್ವದ ಮಾಂಸಕ್ಕಾಗಿ ಆಸೆಪಟ್ಟು ಛೇದನಮಾಡತಕ್ಕ ವಧಕಾರನಿಗೆ ಎಚ್ಚರವನ್ನು ಕೊಟ್ಟು ಅವನು ನಿನ್ನನ್ನು ಒರಟೊರಟಾಗಿ ಛೇದನಮಾಡದಿರಲಿ ಎಂದು ಪ್ರಾರ್ಥಿಸಿದೆ.

॥ ವ್ಯಾಕರಣಪ್ರಕ್ರಿಯಾ ॥

**ತೆಪತ್**—ತಪ ಸಂತಾಪೇ. ಧಾತು. **ಸ್ಮೋತ್ತರೇಲಙ್ ಚ** (ಪಾ. ಸೂ. ೩-೩-೧೭೬) ಎಂಬುದರಿಂದ ವಿಧಿಸಲ್ಪಡುವ ಲಙ್ ಸ್ಮಯೋಗವಿಲ್ಲದಿದ್ದರೂ ಬರುತ್ತದೆ. ಪ್ರಥಮಪುರುಷ ಏಕವಚನಾಂತರೂಪ. ಮಾಙ್‌ಯೋಗ ವಿರುವುದರಿಂದ ಅಡಾಗಮ ಬರುವುದಿಲ್ಲ. ತಿಙಂತ ನಿಘಾತಸ್ವರ ಬರುತ್ತದೆ.

**ಅಪಿಯಂತಮ್**—ಇಣ್ ಗತೌ. ಧಾತು. ಲಟಿಗೆ ಶತ್ರಾದೇಶ. **ಇಣೋ ಯಣ್** (ಪಾ. ಸೂ. ೬-೪-೮೧) ಎಂಬುದರಿಂದ ಧಾತುವಿಗೆ ಯಣಾದೇಶ. ಪ್ರತ್ಯಯದ ಆದ್ಯುದಾತ್ತಸ್ವರ ಬರುತ್ತದೆ. ಪ್ರಾದಿಸಮಾಸವಾದಾಗ ಕೃದುತ್ತರಪದ ಪ್ರಕೃತಿಸ್ವರ ಬರುತ್ತದೆ. ದ್ವಿತೀಯಾ ಏಕವಚನಾಂತರೂಪ.

**ತನ್ವಃ**—ತನು ಶಬ್ದ. ದ್ವಿತೀಯಾ ಬಹುವಚನ ಶಸ್ ಪರವಾದಾಗ **ತನ್ವಾದೀನಾಂ ಛಂದಸ್ಯುಪಸಂಖ್ಯಾನಮ್** ಎಂಬುದರಿಂದ ಯಣಾದೇಶ. **ಉದಾತ್ತಸ್ವರಿತಯೋರ್ಯಣಃ**—(ಪಾ. ಸೂ. ೮-೨-೪) ಎಂಬುದರಿಂದ ಸ್ವರಿತಸ್ವರ ಬರುತ್ತದೆ.

**ತಿಷ್ಠಿಪತ್**—ಷ್ಠಾ ಗತಿನಿವೃತ್ತೌ. ಧಾತು. ಇದಕ್ಕೆ ಣಿಜಂತದಮೇಲೆ ಲುಙ್. ಪ್ರಥಮಪುರುಷ ಏಕವಚನ ದಲ್ಲಿ ತಿಪ್. ಇಕಾರಲೋಪ **ಅರ್ತಿಹ್ರೀವ್ಲೀ**—(ಪಾ. ಸೂ. ೭-೩-೩೬) ಎಂಬುದರಿಂದ ಪುಕಾಗಮ. **ತಿಷ್ಠತೇರಿತ್** (ಪಾ. ಸೂ. ೭-೪-೫) ಎಂಬುದರಿಂದ ಉಪಧಾಕ್ಕೆ ಇತ್ವ. ಚ್ಲಿಗೆ ಚಙಾದೇಶ. **ಚಙಿ** ಎಂಬುದರಿಂದ ದ್ವಿತ್ವ. **ಶರ್ಪೂರ್ವಾಃಖಯಃ** (ಪಾ. ಸೂ. ೭-೪-೬೧) ಎಂಬುದರಿಂದ ಅಭ್ಯಾಸದಲ್ಲಿ ತಕಾರ ಉಳಿಯುತ್ತದೆ. ಮಾಙ್‌ಯೋಗ ವಿರುವುದರಿಂದ ಅಡಾಗಮ ಬರುವುದಿಲ್ಲ. ತಿಙಂತನಿಘಾತಸ್ವರ ಬರುತ್ತದೆ.

**ಗೃಧ್ನುಃ**—ಗೃಧು ಅಭಿಕಾಂಕ್ಷಾಯಾಮ್. ಧಾತು. **ತ್ರಸಿಗೃಧಿಧೃಷಿಕ್ಷಿಪೇಃ ಕ್ನುಃ** (ಪಾ.ಸೂ. ೩-೨-೧೪೦) ಎಂಬುದರಿಂದ ಕ್ನು ಪ್ರತ್ಯಯ. ಕಿತ್ತಾದುದರಿಂದ ಲಘೂಪಧಗುಣ ಬರುವುದಿಲ್ಲ. ಪ್ರತ್ಯಯಸ್ವರದಿಂದ ಅಂತೋದಾತ್ತವಾಗುತ್ತದೆ.

**ಅತಿಹಾಯ**—ಓ ಹಾಕ್ ತ್ಯಾಗೇ. ಧಾತು **ಸಮಾಸೇನಞ್**—(ಪಾ ಸೂ. ೭-೧-೩೭) ಎಂಬುದರಿಂದ ಕ್ತ್ವಾ ಪ್ರತ್ಯಯಕ್ಕೆ ಲ್ಯಬಾದೇಶ. ಇದು ಪಿತ್ತಾದುದರಿಂದ ಧಾತುಸ್ವರ ಉಳಿಯುತ್ತದೆ. ಸಮಾಸದಲ್ಲಿ ಕೃದುತ್ತರ ಪದ ಪ್ರಕೃತಿಸ್ವರ ಬರುತ್ತದೆ.

ಛಿದ್ರಾ—ಛಿದಿರ್ ದ್ವೈಧೀಕರಣೇ. ಧಾತು. ಔಣಾದಿಕ ರಕ್ ಪ್ರತ್ಯಯ. ನಪುಂಸಕ ಬಹುವಚನದಲ್ಲಿ **ಶೇಶ್ಛಂದಸಿ ಬಹುಲಮ್** (ಪಾ. ಸೂ. ೬-೧-೭೦) ಎಂಬುದರಿಂದ ಶಿಗೆಲೋಪ.

**ಕಃ**—ಡುಕೃಞ್ ಕರಣೇ. ಧಾತು. ಲುಙ್ ಪ್ರಥಮಪುರುಷ ಏಕವಚನದಲ್ಲಿ ತಿಪ್ ಪ್ರತ್ಯಯ. **ಇತಶ್ಚ** ಎಂಬುದರಿಂದ ಇಕಾರಲೋಪ. **ಮಂತ್ರೇಘಸಹ್ವರಣ**—(ಪಾ. ಸೂ. ೨-೪-೮೦) ಎಂಬುದರಿಂದ ಚ್ಲಿಗೆ ಲುಕ್. ತಿಪ್ ನಿಮಿತ್ತವಾಗಿ ಧಾತುವಿನ ಇಕಿಗೆ ಗುಣ. ರಪರವಾಗಿ ಬರುತ್ತದೆ. **ಹಲ್‌ಙ್ಯಾಭ್ಯೋ**—ಎಂಬುದರಿಂದ ಅಪೃಕ್ತವಾದ ತಿಪಿಗೆ ಲೋಪ. ರೇಫಕ್ಕೆ ವಿಸರ್ಗ. **ನಮಾಙ್‌ಯೋಗೇ**—(ಪಾ. ಸೂ. ೬-೪-೭೪) ಎಂಬುದರಿಂದ ಅಡಾಗಮ ಬರುವುದಿಲ್ಲ. ತಿಙಂತ ನಿಘಾತಸ್ವರ ಬರುತ್ತದೆ. ॥ ೨೦ ॥

॥ ಸಂಹಿತಾಪಾಠಃ ॥

ನ ವಾ ಉ ಏತನ್ಮ್ರಿಯಸೇ ನ ರಿಷ್ಯಸಿ ದೇವಾಁ ಇದೇಷಿ ಪಥಿಭಿಃ ಸುಗೇಭಿಃ।
ಹರೀ ತೇ ಯುಂಜಾ ಪೃಷತೀ ಅಭೂತಾಮುಪಾಸ್ಥಾದ್ವಾಜೀ ಧುರಿ ರಾಸ-
ಭಸ್ಯ ॥ ೨೦ ॥

। ಪದಪಾಠಃ ।

ನ । ವೈ । ಊಂ ಇತಿ । ಏತತ್ । ಮ್ರಿಯಸೇ । ನ । ರಿಷ್ಯಸಿ । ದೇವಾನ್ । ಇತ್ । ಏಷಿ । ಪಥಿऽಭಿಃ ।
ಸುऽಗೇಭಿಃ ।
ಹರೀ ಇತಿ । ತೇ । ಯುಂಜಾ । ಪೃಷತೀ ಇತಿ । ಅಭೂತಾಂ । ಉಪ । ಅಸ್ಥಾತ್ । ವಾಜೀ । ಧುರಿ ।
ರಾಸಭಸ್ಯ ॥ ೨೦ ॥

॥ ಸಾಯಣಭಾಷ್ಯಂ ॥

ನ ವಾ ಉ ನೈವ ಖಲ್ವೇತನ್ಮ್ರಿಯಸೇ । ವೈಶಬ್ದ ಏವಕಾರಾರ್ಥಃ । ಉ ಇತ್ಯವಧಾರಣೇ । ನೈವೇದಾನೀಮಿತರಾಶ್ವವನ್ಮೃತೋ ಭವಸಿ ದೇವತ್ವಪ್ರಾಪ್ತೇರ್ವಕ್ಷ್ಯಮಾಣತ್ವಾತ್ । ಅತ ಏವ ನ ರಿಷ್ಯಸಿ । ನ ಹಿಂಸ್ಯಸೇ । ವ್ಯರ್ಥಹಿಂಸಾಯಾ ಅಭಾವಾತ್ । ನನು ಪ್ರತ್ಯಕ್ಷತೋ ಮೃತಿರವಯವನಾಶಶ್ಚ ದೃಶ್ಯತೇ ಕಥಮೇವಮುಚ್ಯತ ಇತಿ ಉಚ್ಯತೇ । ಸುಗೇಭಿಃ ಪಥಿಭಿಃ ಶೋಭನಗಮನಸಾಧನೈರ್ಮಾರ್ಗೈರ್ದೇವಯಾನಲಕ್ಷಣೈರ್ದೇವಾನಿದೇಷಿ । ದೇವಾನೇವ ಪ್ರಾಪ್ನೋಷಿ । ಅತೋ ಯುಕ್ತೈಷೋಕ್ತಿಃ । ಕೈಃ ಸಾಧನೈರಿತಿ ತತ್ರಾಹ । ತೇ ತ್ವಾಂ ವೋಢುಂ ಹರೀ ಏತನ್ನಾಮಾನಾವಿಂದ್ರಸ್ಯಾಶ್ವೌ ತೇ ತವ ಯುಂಜಾ ರಥೇ ಯುಕ್ತಾವಭೂತಾಂ । ಭವಿಷ್ಯತಃ । ಆಶಂಸಾರೂಪತ್ವಾದ್ಭೂತಾರ್ಥನಿರ್ದೇಶಃ । ಹರೀ ಇಂದ್ರಸ್ಯೇತಿ ನಿರುಕ್ತಂ । ತಥಾ ಪೃಷತೀ ಪೃಷತ್ಯೌ ಮರುತಾಂ ವಾಹನಭೂತೌ ಯುಂಜಾಭೂತಾಂ । ಯುಕ್ತೌ ಭವಿಷ್ಯತಃ । ಪೃಷತ್ಯೋ ಮರುತಾಮಿತಿ ಚ ನಿರುಕ್ತಂ ॥ ಯುಜೇರ್ಋತ್ವಿಗಿತ್ಯಾದಿನಾ ಕ್ವಿನ್ । ಯುಜೇರಸಮಾಸೇ । ಪಾ. ೭-೧-೭೧ । ಇತಿ ನುಮ್ । ಸುಪಾಂ ಸುಲುಗಿತ್ಯಾಕಾರಃ । ತಥಾ ರಾಸಭಸ್ಯಾಶ್ವಿವಾಹನಸ್ಯೈತನ್ನಾಮಕಸ್ಯಾಶ್ವಸ್ಯ ಧುರಿ ಸ್ಥಾನೇ ವರ್ತಮಾನಃ ಕಶ್ಚಿದ್ವಾಜ್ಯುಪಾಸ್ಥಾತ್ । ಉಪಸ್ಥಾಸ್ಯತಿ । ವಹತೀತ್ಯರ್ಥಃ । ಯದ್ವಾ । ರಾಸಭಸ್ಯ ಧಾನೋರ್ಧುರಿ ವರ್ತ್ಮನಿ ಯುಕ್ತೋ ವಾಜ್ಯಶ್ವ ಉಪಸ್ಥಾಸ್ಯತಿ । ದೇವತ್ವಂ ಗಚ್ಛತಸ್ತವ ಗಮನಾಯೇಂದ್ರಾದಯಃ ಸ್ವಸ್ವವಾಹನಾನಿ ಪ್ರೇಷಯಂತೀತ್ಯರ್ಥಃ । ಯದ್ವಾ । ತತ್ತದ್ದೇವಭಾವಮಾಪನ್ನಂ ತ್ವಾಂ ತಾನಿ ತಾನಿ ವಾಹನಾನಿ ವಹಂತಿ ॥

### ಪ್ರತಿಪದಾರ್ಥ

**ಏತತ್**— ಈ ಯಜ್ಞಕಾಲದಲ್ಲಿ | **ನ ವಾ ಉ ಮ್ರಿಯಸೇ**—(ಇತರ ಅಶ್ವಗಳು ಮೃತಿಯನ್ನು ಹೊಂದುವಂತೆ) ನೀನು ಖಂಡಿತವಾಗಿಯೂ ಮೃತಿಯನ್ನು ಹೊಂದುವುದೇ ಇಲ್ಲ | **ನ ರಿಷ್ಯಸಿ**—ಹಿಂಸಿಸಲ್ಪಡುವುದೂ ಇಲ್ಲ | **ಸುಗೇಭಿಃ**—ಸುಲಭವಾಗಿ ಸಂಚರಿಸಲು ಯೋಗ್ಯವಾದ | **ಪಥಿಭಿಃ**—ಮಾರ್ಗಗಳಿಂದ ಎಂದರೆ ದೇವಯಾನ ಲಕ್ಷಣಗಳುಳ್ಳ ಮಾರ್ಗಗಳಿಂದ | **ದೇವಾँ ಇತ್**—ದೇವತೆಗಳನ್ನೇ | **ಏಷಿ**—ಸೇರುತ್ತೀಯೆ | **ತೇ**– ನಿನ್ನನ್ನು (ಕರೆದುಕೊಂಡುಹೋಗಲು) | **ಹರೀ**— ಹರೀ ಎಂಬ ಹೆಸರುಗಳುಳ್ಳ ಇಂದ್ರನ ಕುದುರೆಗಳು | **ಯುಂಜಾ**—ರಥಕ್ಕೆ ಸೇರಿಸಿ ಕಟ್ಟಲ್ಪಟ್ಟವುಗಳಾಗಿ | **ಅಭೂತಾಂ**–ಆಗುತ್ತವೆ | **ಪೃಷತೀ**—ಮರುತ್ತುಗಳ ವಾಹನಗಳೂ (ರಥಕ್ಕೆ ಕಟ್ಟಲ್ಪಡುತ್ತವೆ) | **ರಾಸಭಸ್ಯ**—ಅಶ್ವಿನೀದೇವತೆಗಳಿಗೆ ವಾಹನವಾದ ಈ ಹೆಸರಿನ ಕುದುರೆಯನ್ನು ಕಟ್ಟುವ | **ಧುರಿ**—ನೊಗದ ಪ್ರದೇಶದಲ್ಲಿ | **ವಾಜೀ**—ಬೇರೊಂದು ಅಶ್ವವು | **ಉಪಾಸ್ಥಾತ್**—ಕಟ್ಟಲ್ಪಟ್ಟು (ನಿನ್ನನ್ನು ವಹಿಸುತ್ತದೆ) ||

### ಭಾವಾರ್ಥ

ಎಲೈ ಅಶ್ವವೇ, ಈ ಯಜ್ಞಕಾಲದಲ್ಲಿ ಇತರ ಅಶ್ವಗಳು ಮೃತಿಯನ್ನು ಹೊಂದುವ ರೀತಿಯಲ್ಲಿ ನೀಚವಾದ ಮೃತಿಯನ್ನು ನೀನು ಹೊಂದುವುದೇ ಇಲ್ಲವು. ಮತ್ತು ಛೇದನದಿಂದ ನಿನಗೆ ಯಾವ ಹಿಂಸೆಯೂ ಆಗುವುದೇ ಇಲ್ಲವು. ಸುಖವಾಗಿ ಸಂಚರಿಸಲು ಯೋಗ್ಯವಾದ ದೇವಯಾನಮಾರ್ಗದಿಂದ ನೀನು ದೇವತೆಗಳನ್ನೇ ಸೇರುತ್ತೀಯೆ. ನಿನ್ನನ್ನು ಕರೆದುಕೊಂಡುಹೋಗಲು ಹರೀ ಎಂಬ ಹೆಸರುಗಳುಳ್ಳ ಇಂದ್ರನ ಕುದುರೆಗಳು ರಥಕ್ಕೆ ಸೇರಿಸಿ ಕಟ್ಟಲ್ಪಡುತ್ತವೆ. ಮರುತ್ತುಗಳ ವಾಹನವೂ ರಥಕ್ಕೆ ಸೇರಿಸಿ ಸಿದ್ಧವಾಗುತ್ತದೆ. ಅಶ್ವಿನೀದೇವತೆಗಳ ವಾಹನವಾದ ರಾಸಭವನ್ನು ಕಟ್ಟುವ ನೊಗದ ಪ್ರದೇಶದಲ್ಲಿ ಬೇರೊಂದು ಅಶ್ವವು ಕಟ್ಟಲ್ಪಟ್ಟು ನಿನ್ನನ್ನು ವಹಿಸಲು ಸಿದ್ಧವಾಗಿರುತ್ತದೆ.

### English Translation

Verily at this moment you do not die; nor are you harmed; for you go by auspicious paths to the gods. The horses of Indra, the steeds of the Maruts shall be yoked (to their cars), and a courser shall be placed in the shaft of the ass of the Aswins (to bear you to heaven).

### ವಿಶೇಷವಿಷಯಗಳು

ಈ ಋಕ್ಕಿನಲ್ಲಿ ಮುಖ್ಯವಾದ ಎರಡು ಅಂಶಗಳನ್ನು ಸೂಚಿಸಿದೆ. ಮೊದಲನೆಯದಾಗಿ ಮೇಧ್ಯಾಶ್ವವು ಆಹುತಿರೂಪದಲ್ಲಿ ಅರ್ಪಿತವಾದನಂತರ ಅದಕ್ಕೆ ಇತರ ಲೌಕಿಕಪಶುಗಳಿಗೆ ಸಂಭವಿಸತಕ್ಕ ಮೃತಿಯು ಸಂಭವಿಸದೇ, ಪ್ರತ್ಯೇಕವಾದುದೂ, ಅದನ್ನು ದೇವತೆಗಳೊಡನೆ ಅಮರವನ್ನಾಗಿ ಮಾಡತಕ್ಕದ್ದೂ ಆದ ಸ್ಥಿತಿಯು ಲಭಿಸುತ್ತದೆ. ಆಪುತ್ಯರ್ಪಣವಾದೊಡನೆಯೇ ಅದಕ್ಕೆ ದೇವತೆಗಳೊಡನೆ ಹೋಗಿ ಸೇರತಕ್ಕ ಮಾರ್ಗದಲ್ಲಿ ಅದರ ಸಂಚಾರವು ಲಭ್ಯವಾಗುತ್ತದೆ.

ಇಲ್ಲಿ **ಸುಗೇಭಿಃ ಪಥಿಭಿಃ** ಎನ್ನುವುದಕ್ಕೆ **ಶೋಭನಗಮನಸಾಧನೈರ್ಮಾರ್ಗೈಃ ದೇವಯಾನಲಕ್ಷಣೈಃ |** ಎಂದು ದೇವತೆಗಳ ಸಂಚಾರಕ್ಕೆ ಯೋಗ್ಯವಾದ ಮಾರ್ಗಗಳಿಂದ ಎಂದು ವಿವರಿಸಿದ್ದಾರೆ. ಈ ದೇವಯಾನದ ಮಾರ್ಗವು

ಎಲ್ಲಾ ಚೇತನಗಳಿಗೂ ಲಭ್ಯವಾಗತಕ್ಕದಲ್ಲ ಕೇವಲ ಸುಕೃತಿಗಳಿಗೆ ಮಾತ್ರ ಲಭ್ಯವಾಗತಕ್ಕದ್ದಾಗಿದೆ. ಆದುದ ರಿಂದಲೇ ಇಂದ್ರನ ಹರಿಗಳೂ, ಮರುತ್ತುಗಳ ಪೃಷತ್ತುಗಳೂ, ಅಶ್ವಿನಿಗಳ ರಾಸಭವೂ ಅಥವಾ ಅವರ ಪ್ರತಿನಿಧಿಯೂ ಈ ಅಶ್ವವನ್ನು ಕರೆದುಕೊಂಡು ಹೋಗುತ್ತವೆಯೆಂದೂ, ಅದು ಅತ್ಯುತ್ತಮವಾದ ಪದವಿಯನ್ನು ಹೊಂದಿಸಿಕೊಡು ತ್ತದೆಯೆಂದೂ ವಿವರಿಸಿದೆ. ಸಾಯಣರು **ರಾಸಭಸ್ಯ ಧುರಿ** ಎನ್ನುವುದಕ್ಕೆ **ಭಾನೋಃ ಧುರಿ ವರ್ತ್ಮನಿ ಯುಕ್ತಃ ವಾಜೀ ಅಶ್ವಃ** ಭಾನುವಿನ ಸಂಚಾರಮಾರ್ಗದಲ್ಲಿ ಯುಕ್ತವಾದ ವಾಜಿಯೆಂದು ಅರ್ಥಮಾಡಿದ್ದಾರೆ. ಭಾನುವಿನ ಸಂಚಾರಮಾರ್ಗವಾವುದು ಎಂದು ಪರಿಶೀಲಿಸಿದರೆ—

**ಆ ಕೃಷ್ಣೇನ ರಜಸಾ ವರ್ತಮಾನೋ ನಿವೇಶಯನ್ನಮೃತಂ ಮರ್ತ್ಯಂ ಚ ।**
**ಹಿರಣ್ಯಯೇನ ಸವಿತಾ ರಥೇನಾದೇವೋ ಯಾತಿ ಭುವನಾನಿ ಪಶ್ಯನ್ ॥**

(ಋ. ಸಂ ೧-೩೫-೨)

**ಯಾತಿ ದೇವಃ ಪ್ರವತಾ ಯಾತ್ಯುದ್ವತಾ ಯಾತಿ ಶುಭ್ರಾಭ್ಯಾಂ ಯಜತೋ ಹರಿಭ್ಯಾಂ ।**
**ಆ ದೇವೋ ಯಾತಿ ಸವಿತಾ ಪರಾವತೋಽಪ ವಿಶ್ವಾ ದುರಿತಾ ಬಾಧಮಾನಃ ॥**

(ಋ. ಸಂ. ೧-೩೫-೩)

ಇತ್ಯಾದಿಋಕ್ಕುಗಳಲ್ಲಿ ವರ್ಣಿತವಾಗಿರುವ ಸೂರ್ಯನ ಶುಭ್ರವಾದುದೂ, ಶಾಶ್ವತವಾದುದೂ ಆದ ಸಂಚಾರದ ಸ್ವರೂಪ ವನ್ನು ಇಲ್ಲಿಯೂ ತಿಳಿಸಿದೆ. ಈ ಆದಿತ್ಯನ ಸಂಚಾರದ ಮಾರ್ಗವೇ ಸುಕೃತಿಗಳನ್ನು ಬ್ರಹ್ಮಲೋಕಕ್ಕೆ ಒಯ್ಯುವ ಮಾರ್ಗವು. ಇದನ್ನು ಉಪನಿಷದಾದಿಗಳಲ್ಲಿ ದೇವಯಾನವೆಂದು ಕರೆದಿದ್ದಾರೆ ಆದರೆ ಋಕ್ಸಂಹಿತೆಯಲ್ಲಿ **ದೇವಯಾನ** ವೆಂಬ ಪದಕ್ಕೆ ದೇವತೆಗಳು ಸಂಚರಿಸತಕ್ಕ ಮಾರ್ಗವೆಂದು ಸಾಧಾರಣವಾದ ಅರ್ಥವಿರುತ್ತದೆ. ಕೆಲವೆಡೆಗಳಲ್ಲಿ ಮಾತ್ರ ಉಪನಿಷತ್ತುಗಳಲ್ಲಿ ವರ್ಣಿತವಾಗಿರುವ ಭಾವವೂ ಇದೆ.

**ಪರಂ ಮೃತ್ಯೋ ಅನು ಪರೇಹಿ ಪಂಥಾಂ ಯಸ್ತೇ ಸ್ವ ಇತರೋ ದೇವಯಾನಾತ್ ।**
**ಚಕ್ಷುಷ್ಮತೇ ಶೃಣ್ವತೇ ತೇ ಬ್ರವೀಮಿ ಮಾ ನಃ ಪ್ರಜಾಂ ರೀರಿಷೋ ಮೋತ ವೀರಾನ್ ॥**

(ಋ. ಸಂ. ೧೦-೧೮-೧)

ಇತ್ಯಾದಿಋಕ್ಕುಗಳಲ್ಲಿ ದೇವಯಾನವು ಮೃತ್ಯುರಹಿತವಾದ ಮಾರ್ಗವೆಂದು ಹೇಳಿದೆ. ಈ ಮಾರ್ಗದಲ್ಲಿ ಸವಿತೃವು ಸುಕೃತಿಗಳನ್ನು ಮರಣರಹಿತವಾದ ಪುಣ್ಯಲೋಕಕ್ಕೆ ಕರೆದುಕೊಂಡು ಹೋಗುವನು ಎಂದು ಋಕ್ಸಂಹಿತೆಯಲ್ಲಿಯೇ ಉಕ್ತವಾಗಿರುವುದರಿಂದ ಈ ಅರ್ಥವೂ ಅನುರೂಪವಾಗಿದೆ.

**ಯೇ ತೇ ಪಂಥಾಃ ಸವಿತಃ ಪೂರ್ವ್ಯಾಸೋಽರೇಣವಃ ಸುಕೃತಾ ಅಂತರಿಕ್ಷೇ ।**
**ತೇಭಿರ್ನೋ ಅದ್ಯ ಪಥಿಭಿಃ ಸುಗೇಭೀ ರಕ್ಷಾ ಚ ನೋ ಅಧಿ ಚ ಬ್ರೂಹಿ ದೇವ ॥**

(ಋ. ಸಂ. ೧-೩೫-೧೧)

**ಯತ್ರಾಸತೇ ಸುಕೃತೋ ಯತ್ರ ತೇ ಯಯುಸ್ತತ್ರ ತ್ವಾ ದೇವಃ ಸವಿತಾ ದಧಾತು ।**

(ಋ. ಸಂ. ೧೦-೧೭-೪)

ಇತ್ಯಾದಿಋಕ್ಕುಗಳಲ್ಲಿ ಸವಿತೃವು ಸತ್ಪಥದಲ್ಲಿ ಸುಕೃತಿಗಳನ್ನು ಕರೆದುಕೊಂಡುಹೋಗುವ ದೇವನಾದುದರಿಂದ ಯಜ್ಞ ಕರ್ತರಾದ ಯಜಮಾನರನ್ನೂ, ಯಜ್ಞಕಾರ್ಯದಲ್ಲಿ ಭಾಗವನ್ನು ವಹಿಸತಕ್ಕ ಪಶುಗಳನ್ನೂ, ಅದೇ ಶುದ್ಧವಾದುದೂ, ರಜೋರಹಿತವಾದುದೂ, ಮೃತ್ಯುರಹಿತವಾದುದೂ ಆದ ಮಾರ್ಗದಲ್ಲಿ ಕರೆದುಕೊಂಡುಹೋಗಬೇಕೆಂದು ಪ್ರಾರ್ಥಿಸಿದೆ. ಈ ಮಾರ್ಗವನ್ನೇ ಉಪನಿಷತ್ತುಗಳಲ್ಲಿ ಅರ್ಚಿರಾದಿಮಾರ್ಗವೆಂದು ಹೇಳಿದೆ. ಮರಣಾನಂತರ ಈ ಮಾರ್ಗದಲ್ಲಿ ಬ್ರಹ್ಮ ಲೋಕವನ್ನು ಸೇರತಕ್ಕ ದಿವ್ಯಾತ್ಮರುಗಳಿಗೆ ಪುನರಾವರ್ತಿಯಿಲ್ಲವೆಂದು ಈ ಮಾರ್ಗವನ್ನು ವರ್ಣಿಸಿದೆ.

**ತತ್ಪುರುಷೋಽಮಾನವಃ ಸ ಏನಾನ್ಬ್ರಹ್ಮ ಗಮಯತ್ಯೇಷ ದೇವಪಥೋ ಬ್ರಹ್ಮಪಥ ಏತೇನ ಪ್ರತಿ ಪದ್ಯಮಾನಾ ಇಮಂ ಮಾನವಮಾವರ್ತಂ ನಾವರ್ತಂತೇ ನಾವರ್ತಂತೇ ॥**

**(ಛಾ. ಉ. ೪-೧೫-೫)**

ಇಂತಹ ಅಮಾನುಷವಾದ ಚೈತನ್ಯವನ್ನು ಪಡೆದ ದೇವಲೋಕಗಾಮಿಗಳಿಗೆ ಪುನರಾವರ್ತಿಯಿಲ್ಲವೆಂದು ಉದ್ಘೋಷಿಸಿರುವಂತೆಯೇ ಇದೇ ಅಭಿಪ್ರಾಯವನ್ನು ಮುಂಡೂಕೋಪನಿಷತ್ತಿನಲ್ಲಿಯೂ ಸಹ

**ಸೂರ್ಯದ್ವಾರೇಣ ತೇ ವಿರಜಾಃ ಪ್ರಯಾಂತಿ ಯತ್ರಾಮೃತಃ ಸ ಪುರುಷೋ ಹ್ಯವ್ಯಯಾತ್ಮಾ ॥**

**(ಮುಂ. ಉ. ೨-೧೧)**

**ಇತ್ಯಾದಿವಾಕ್ಯಗಳಲ್ಲಿಯೂ** ಸಹ ಈ ಪಥದ ಮಹತ್ತ್ವವನ್ನು ಹೇಳಿದೆ. ಇಂತಹ ಉತ್ತಮವಾದ ಪಥದಲ್ಲಿ ಕರೆದ ಕೊಂಡುಹೋಗಿ ಅಶ್ವಕ್ಕೆ ಸದ್ಗತಿಯನ್ನುಂಟುಮಾಡುವುವು ಎಂದು ಹೇಳಿದೆ. ಅದನ್ನು ಇಲ್ಲಿ **ಸುಗೇಭಿಃ ಪಥಿಭಿಃ** ಎಂದು ತಿಳಿಸಿದೆ.

**ರಾಸಭಸ್ಯ—ಭಾನೋಃ ।** ರಾಸಭಶಬ್ದಕ್ಕೆ ಭಾನುವೆಂಬರ್ಥವು ಯಾವ ಆಧಾರದಮೇಲೆ ಹೇಳಲ್ಪಟ್ಟಿದೆಯೆಂದು ಅದರ ನಿರ್ವಚನವನ್ನು ತೋರಿಸುವುದು ಶ್ರಮಸಾಧ್ಯವಾದುದು. ಸರಿಯಾದ ಆಧಾರವು ದೊರೆತರೆ ಈ ಶಬ್ದವನ್ನು ಮುಂದೆ ವಿವರಿಸಲಾಗುತ್ತದೆ.

ಆಹುತಿರೂಪದಲ್ಲಿ ಅರ್ಪಿತವಾಗಿ ದೇವಮಾರ್ಗದಲ್ಲಿ ಈ ಅಶ್ವದ ಸಂಚಾರದ ವೇಳೆಯಲ್ಲಿ ಇಂದ್ರನ ವಾಹನವೂ ಮರುತ್ತುಗಳ ವಾಹನವೂ ಅಶ್ವಿನೀದೇವತೆಗಳ ವಾಹನವೂ ಇದನ್ನು ಕರೆದುಕೊಂಡುಹೋಗಲು ಬರುವ ಕಾರಣವೇನೆಂದು ಆಕಾಂಕ್ಷೆಯು ಪ್ರಾಪ್ತವಾದರೆ ಅದಕ್ಕೆ ಸಮಾಧಾನವಾಗಿ ಸಾಯಣರು **ಯದ್ವಾ । ತತ್ತದ್ದೇವಭಾವಮಾಪನ್ನಂ ತ್ವಾಂ ತಾನಿ ತಾನಿ ವಾಹನಾನಿ ವಹಂತಿ ।** ಆಯಾ ದೇವತೆಗಳ ಸ್ವರೂಪವನ್ನೇ ಹೊಂದತಕ್ಕ ನಿನ್ನನ್ನು ಆಯಾ ದೇವತೆಗಳ ವಾಹನವು ವಹಿಸುವುವು ಎಂದು ಹೇಳಿದಾರೆ.

**ಹರೀ ಇಂದ್ರಸ್ಯ ; ರಾಸಭಾವಶ್ವಿನೋಃ ; ಪೃಷತ್ಯೋ ಮರುತಾಂ ।** (ನಿ.೨-೨೮) ಎಂದು ಇಂದ್ರಾದಿಗಳ ವಾಹನಗಳು ಪ್ರಸಿದ್ಧವಾಗಿವೆ.

### ವ್ಯಾಕರಣಪ್ರಕ್ರಿಯಾ

**ಮ್ರಿಯಸೇ—ಮೃಙ್ ಪ್ರಾಣತ್ಯಾಗೇ ಧಾತು.** ತುದಾದಿ ಲಟ್ ಮಧ್ಯಮಪುರುಷ ಏಕವಚನದಲ್ಲಿ ಬರುವ ಥಾಸ್ ಬಂದಾಗ ಅದಕ್ಕೆ ಸೇ ಆದೇಶ. **ತುದಾದಿಭ್ಯಃ** (ಪಾ. ಸೂ. ೩-೧-೭೭) ಎಂಬುದರಿಂದ ಶ ವಿಕರಣ. ಇದು

ಪರವಾದಾಗ **ರಿಙ್‌ಶಯಗ್ಲಿಙ್ಕ್ಷು** (ಪಾ. ಸೂ. ೭-೪-೨೮) ಎಂಬುದರಿಂದ ಧಾತುವಿಗೆ ರಿಙಾದೇಶ. ಅಂತಾದೇಶವಾಗಿ ಬಂದಾಗ **ಅಚಿಶ್ನುಧಾತುಭ್ರುವಾಂ**—ಎಂಬುದರಿಂದ ಇಯಙಾದೇಶ. ತಿಙಂತನಿಘಾತಸ್ವರ ಬರುತ್ತದೆ.

**ರಿಷ್ಯಸಿ**—ರಿಷ ಹಿಂಸಾಯಾಂ ಧಾತು. ದಿವಾದಿ. ವ್ಯತ್ಯಯದಿಂದ ಕರ್ಮಣಿಯಲ್ಲಿ ಕರ್ತೃಪ್ರತ್ಯಯ. **ಲಟ್** ಮಧ್ಯಮಪುರುಷ ಏಕವಚನಾಂತರೂಪ. ತಿಙಂತನಿಘಾತಸ್ವರ ಬರುತ್ತದೆ.

**ಏಷಿ**—ಇಣ್ ಗತೌ. ಧಾತು. ಲಟಿಗೆ ಸಿಪ್. **ಅದಿಪ್ರಭೃತಿಭ್ಯಃ ಶಪಃ** ಎಂಬುದರಿಂದ ವಿಕರಣಕ್ಕೆ **ಲುಕ್**. ಸಿಪ್ ನಿಮಿತ್ತವಾಗಿ ಧಾತುವಿಗೆ ಗುಣ. **ಆದೇಶಪ್ರತ್ಯಯಯೋಃ** ಎಂಬುದರಿಂದ ಷತ್ವ. ನಿಘಾತಸ್ವರ ಬರುತ್ತದೆ.

**ಸುಗೇಭಿಃ**—ಗಮ್ಲೃ ಗತೌ. ಧಾತು. **ಸುದುರೋರಧಿಕರಣೇ** (ಪಾ ಸೂ ೩-೨-೪೮-೩) ಎಂಬುದರಿಂದ ಡ ಪ್ರತ್ಯಯ. ಡಿತ್ವಸಾಮರ್ಥ್ಯದಿಂದ ಧಾತುವಿನ ಟಿಗೆ ಲೋಪ. ಕೃದುತ್ತರಪದಪ್ರಕೃತಿಸ್ವರ ಬರುತ್ತದೆ. ಭಿಸ್ ಪರವಾದಾಗ **ಬಹುಲಂ ಛಂದಸಿ** ಎಂಬುದರಿಂದ ಐಸ್‌ಭಾವ ವಿಕಲ್ಪವಾದುದರಿಂದ ಬರುವುದಿಲ್ಲ. ಏತ್ವ.

**ಯುಞ್ಜಾ**—ಯುಜಿರ್ ಯೋಗೇ. ಧಾತು ಕೇವಲವಾಗಿರುವುದರಿಂದ **ಋತ್ವಿಕ್ ದಧೃಕ್**—(ಪಾ. ಸೂ. ೩-೨-೫೯) ಎಂಬುದರಿಂದ ಕ್ವಿನ್ ಪ್ರತ್ಯಯ. ಇದಕ್ಕೆ ಪರವಾದಾಗ **ಯುಜೇರಸಮಾಸೇ** (ಪಾ. ಸೂ. ೭-೧-೭೧) ಎಂಬುದರಿಂದ ನುಮಾಗಮ. ಮಿತ್ತಾದುದರಿಂದ ಅಂತ್ಯಾಚಿನ ಪರವಾಗಿ ಬರುತ್ತದೆ ಅದಕ್ಕೆ ಅನುಸ್ವಾರ ಪರಸವರ್ಣ. **ಸುಪಾಂ ಸುಲುಕ್**—(ಪಾ. ಸೂ. ೭-೧-೩೯) ಎಂಬುದರಿಂದ **ವಿಭಕ್ತಿ**ಗೆ ಆಕಾರಾದೇಶ.

**ಅಸ್ಥಾತ್**—ಷ್ಠಾ ಗತಿನಿವೃತ್ತೌ. ಧಾತು. ಛಾಂದಸವಾಗಿ ಲುಙ್. ಪ್ರಥಮಪುರುಷ ಏಕವಚನದಲ್ಲಿ ತಿಪ್ ಇಕಾರಲೋಪ. ಚ್ಲಿಗೆ ಸಿಚ್ ಬಂದಾಗ **ಗಾತಿಸ್ಥಾಘುಪಾ**—(ಪಾ. ಸೂ. ೨-೪-೭೭) ಎಂಬುದರಿಂದ ಅದಕ್ಕೆ ಲುಕ್. ಅಂಗಕ್ಕೆ ಅಡಾಗಮ. ತಿಙಂತನಿಘಾತಸ್ವರ ಬರುತ್ತದೆ.

**ರಾಸಭಸ್ಯ**—ರಾಸೃ ಶಬ್ದೇ. ಧಾತು. **ರಾಸಿವಲ್ಲಿಭ್ಯಾಂ ಚ** (ಉ ಸೂ. ೪-೪೦೫) ಎಂಬುದರಿಂದ ಅಭಚ್ ಪ್ರತ್ಯಯ. **ಚಿತಃ** (ಪಾ. ಸೂ. ೬-೧-೧೬೩) ಎಂಬುದರಿಂದ ಅಂತೋದಾತ್ತಸ್ವರ ಬರುತ್ತದೆ ॥ ೨೧ ॥

:c:

। ಸಂಹಿತಾಪಾಠಃ ।

## ಸುಗವ್ಯಂ ನೋ ವಾಜೀ ಸ್ವಶ್ವ್ಯಂ ಪುಂಸಃ ಪುತ್ರಾಁ ಉತ ವಿಶ್ವಾಪುಷಂ ರಯಿಂ ।
## ಅನಾಗಾಸ್ತ್ವಂ ನೋ ಅದಿತಿಃ ಕೃಣೋತು ಕ್ಷತ್ರಂ ನೋ ಅಶ್ವೋ ವನತಾಂ ಹವಿಷ್ಮಾನ್ ॥ ೨೨ ॥

**ಪದಪಾಠಃ**

ಸುಽಗವ್ಯಂ । ನಃ । ವಾಜೀ । ಸುಽಅಶ್ವ್ಯಂ । ಪುಂಸಃ । ಪುತ್ರಾನ್ । ಉತ । ವಿಶ್ವಽಪುಷಂ । ರಯಿಂ ।
ಅನಾಗಾಃಽತ್ವಂ । ನಃ । ಅದಿತಿಃ । ಕೃಣೋತು। ಕ್ಷತ್ರಂ । ನಃ । ಅಶ್ವಃ । ವನತಾಂ । ಹವಿಷ್ಮಾನ್ ॥ ೨೨ ॥

**ಸಾಯಣಭಾಷ್ಯಂ**

ಉಪಾಕರಣಕಾಲೇಽವಘ್ರಾಣಾವರ್ತನೇ ಯದ್ಯಶ್ವೋ ನ ಕುರ್ಯಾತ್ ತದೈಷಾ ನೈಮಿತ್ತಿಕೀ ಯಜಮಾನವಾಚನಾರ್ಥಾ ಭವತಿ । ತಥಾ ಚ ಸೂತ್ರಿತಂ । ಸುಗವ್ಯಂ ನೋ ವಾಜೀ ಸ್ವಶ್ವ್ಯಮಿತಿ ಯಜಮಾನಂ ವಾಚಯೇತ್ । ಆ. ೧೦-೮ । ಇತಿ ॥

ವಾಜ್ಯಶ್ವ ಆಲಭ್ಯಮಾನೋ ನೋಽಸ್ಮಾಕಂ ಸುಗವ್ಯಂ ಶೋಭನೇನ ಗೋಸಮೂಹೇನ ಯುಕ್ತಂ ವಿಶ್ವಾಪುಷಂ ರಯಿಂ ವಿಶ್ವಸ್ಯ ಪೋಷಕಂ ಧನಂ ಕೃಣೋತು । ಕರೋತು ॥ ಖಲಗೋರಥಾತ್ । ಪಾ ೪-೨-೫೦ । ಇತಿ ಸಮೂಹಾರ್ಥೇ ಯತ್ । ಛಾಂದಸಮುತ್ತರಪದಾದ್ಯುದಾತ್ತತ್ವಂ । ಯದ್ವಾ । ಸಾಮೂಹಿಕಸ್ಯಾಣಃ ಪ್ರಸಂಗೇ ಸರ್ವತ್ರ ಗೋರಜಾದಿಪ್ರತ್ಯಯಪ್ರಸಂಗ ಇತಿ ಯತ್ । ಕಾ. ೪-೩-೧೬೦ । ತದಂತಸ್ಯಾದ್ಯುದಾತ್ತಂ ದ್ವ್ಯಚ್ಛಂದಸೀತ್ಯುತ್ತರಪದಾದ್ಯುದಾತ್ತತ್ವಂ ॥ ತಥಾ ಸ್ವಶ್ವ್ಯಂ ಶೋಭನಾಶ್ವಸಮೂಹಯುಕ್ತಂ । ತಥಾ ಪುಂಸಃ ಪುತ್ರಾನ್ । ಪುತ್ರಶಬ್ದಃ ಸ್ತ್ರೀಪುಮಪತ್ಯಸಾಧಾರಣಃ । ಅತಃ ಪುಮಪತ್ಯಾನೀತ್ಯರ್ಥಃ । ಯದ್ವಾ । ಪುಂಸೋ ವಧ್ವಾದೀನ್ ಪುತ್ರಾನ್ ಪುರುರಕ್ಷಕಾನಾತ್ಮಜಾನ್ । ಸ್ತ್ರ್ಯಪತ್ಯಾನಿ ಪುಮಪತ್ಯಾನಿ ಚೇತ್ಯರ್ಥಃ । ಉತಾಪಿ ಚ ವಿಶ್ವಾಪುಷಂ ರಯಿಂ ವಿಶ್ವಪೋಷಣಸಮರ್ಥಂ ಧನಂ । ಕಿಂಚ ನೋಽಸ್ಮಾನದಿತಿರದೀನೋಽಶ್ವೋಽನಾಗಾಸ್ತ್ವಂ ಕೃಣೋತು । ಸರ್ವತೋ ನಿಷ್ಪಾಪತ್ವಂ ಕರೋತು - ಉಕ್ತಾನಾಂ ಫಲಾನಾಂ ನ್ಯೂನಾತಿರೇಕಜನಿತಪಾಪಕ್ಷಯಾಭಾವೇಽಸಂಭವಾದಪಾಪತ್ವಂ ಪ್ರಾರ್ಥ್ಯತೇ । ಕಿಂಚ ಹವಿಷ್ಮಾನ್ ಹವಿರ್ಭೂತಾವಯವೋಪೇತೋಽಶ್ವೋ ನೋಽಸ್ಮಾಕಂ ಕ್ಷತ್ರಂ ಬಲಂ ಕ್ಷಾತ್ರಂ ತೇಜೋ ವನತಾಂ। ಸಂಭಜತಾಂ । ಕುರುತಾಂ ॥

**ಪ್ರತಿಪದಾರ್ಥ**

**ವಾಜೀ**—ಈ ಮೇಧ್ಯಾಶ್ವವು । **ನಃ**—ನಮಗೆ । **ಸುಗವ್ಯಂ**—ಶ್ರೇಷ್ಠವಾದ ಗೋವುಗಳೊಡನೆ ಕೂಡಿದುದೂ, । **ಸ್ವಶ್ವ್ಯಂ**—ಶ್ರೇಷ್ಠವಾದ ಅಶ್ವಗಳೊಡನೆ ಕೂಡಿದುದೂ, । **ಪುಂಸಃ**—ಪುಂರೂಪವಾದುದೂ ಆದ । **ಪುತ್ರಾನ್**—ಪುತ್ರರನ್ನೂ । **ಉತ**—ಮತ್ತು । **ವಿಶ್ವಾಪುಷಂ**—ವಿಶ್ವಪೋಷಕವಾದ । **ರಯಿಂ**—ಧನವನ್ನೂ । **ಕೃಣೋತು**—ಸಂಪಾದಿಸಿ ಕೊಡಲಿ । **ಅದಿತಿಃ**—ಘನತೆಯನ್ನು ಹೊಂದಿದ । **ಅಶ್ವಃ**—ಅಶ್ವವು । **ನಃ**—ನಮಗೆ । **ಅನಾಗಾಸ್ತ್ವಂ**—ಪಾಪರಹಿತವಾದ ಸ್ಥಿತಿಯನ್ನು । (**ಕೃಣೋತು**—ಉಂಟುಮಾಡಲಿ) । **ಹವಿಷ್ಮಾನ್**—ಹವಿಸ್ಸಿನ ರೂಪದಲ್ಲಿ ಅರ್ಪಿತವಾಗುವ ಈ ಅಶ್ವವು । **ನಃ**—ನಮಗೆ । **ಕ್ಷತ್ರಂ**—ಬಲವನ್ನೂ । **ವನತಾಂ**—ಒದಗಿಸಿಕೊಡಲಿ ।

ಭಾವಾರ್ಥ

ಈ ಮೇಧ್ಯಾಶ್ವವು ನಮಗೆ ಶ್ರೇಷ್ಠವಾದ ಗೋವುಗಳೊಡನೆ ಕೂಡಿದುದೂ, ಶ್ರೇಷ್ಠವಾದ ಅಶ್ವಗಳೊಡನೆ ಕೂಡಿದುದೂ, ಪುಂರೂಪವಾದುದೂ ಆದ ಪುತ್ರರನ್ನೂ ಮತ್ತು ವಿಶ್ವಪೋಷಕವಾದ ಧನವನ್ನೂ ಸಂಪಾದಿಸಿಕೊಡಲಿ. ಘನತೆಯನ್ನು ಹೊಂದಿದ ಈ ಅಶ್ವವು ನಮಗೆ ಪಾಪರಹಿತವಾದ ಸ್ಥಿತಿಯನ್ನುಂಟುಮಾಡಲಿ. ಹವಿಸ್ಸಿನ ರೂಪದಲ್ಲಿ ಅರ್ಪಿತವಾಗುವ ಈ ಅಶ್ವವು ನಮಗೆ ಬಲವನ್ನೂ ಒದಗಿಸಿಕೊಡಲಿ.

## English Translation

May this horse bring to us all-sustaining wealth, with abundance of cows, of excellent horses, and of male offspring : may the spirited steed bring us exemption from wickedness : may this horse, offered in oblation, procure for us bodily vigor.

ವಿಶೇಷವಿಷಯಗಳು

ಉಪಾಕರಣಕಾಲದಲ್ಲಿ ಯಜ್ಞಾಶ್ವವು ಅವಘ್ರಾಣವನ್ನು ಮಾಡದಿದ್ದಲ್ಲಿ ಆಗ **ಸುಗವ್ಯಂ ನೋ ವಾಜೀ-ಸ್ವಶ್ವ್ಯಂ** ಎಂಬ ಈ ಋಕ್ಕನ್ನು ಯಜಮಾನನಿಂದ ಹೇಳಿಸಬೇಕೆಂದು ಅಶ್ವಲಾಯನಶ್ರೌತಸೂತ್ರದಲ್ಲಿ **ಸುಗವ್ಯಂ ನೋ ವಾಜೀ| ಸ್ವಶ್ವ್ಯಮಿತಿ ಯಜಮಾನಂ ವಾಚಯೇತ್** ಎಂಬ ಸೂತ್ರದಿಂದ ವಿವೃತವಾಗಿರುವುದು. (ಅ. ೧೦-೮).

ಈ ಋಕ್ಕಿನಲ್ಲಿ ಎರಡು ಅಂಶಗಳು ಗಮನಾರ್ಹವಾದವು. ಮೊದಲನೆಯದು ಅಶ್ವಮೇಧದ ಫಲವು. ಎರಡನೆಯದು ಆ ಫಲವು ಸತ್ಕರ್ಮದೊಡನೆ ಕೂಡಿರಬೇಕು. ಕರ್ಮದಲ್ಲಿ ವ್ಯತ್ಯಾಸವಾದರೆ ಆಗ ಫಲವು ಕೈಗೂಡುವುದಿಲ್ಲ ಆದುದರಿಂದ ಮೊದಲು ಗವಾದಿಗಳಿಂದ ಕೂಡಿದ ಧನವನ್ನೂ ಪ್ರೀತಿಸಂಪತ್ತನ್ನೂ ಕ್ಷಾತ್ರಶಕ್ತಿಯನ್ನೂ ಪ್ರಾರ್ಥಿಸಿ ಅದರ ಜೊತೆಯಲ್ಲಿಯೇ, **ಅನಾಗಾಸ್ತ್ವಂ ಕೃಣೋತು** ಪಾಪರಹಿತರನ್ನಾಗಿ ಮಾಡಲಿ ಎಂದೂ ಸಹ ಪ್ರಾರ್ಥಿಸಿದೆ ಅಶ್ವಮೇಧವನ್ನು ನೆರವೇರಿಸುವುದರಿಂದ ಲಭಿಸತಕ್ಕ ಫಲವನ್ನು ಈ ರೀತಿ ವರ್ಣಿಸಿದೆ.

> **ಆಸ್ಯ ಯಜಮಾನಸ್ಯ ವೀರೋ ಜಾಯತಾಮಿತಿ । ಯಜಮಾನಸ್ಯೈವ ಪ್ರಜಾಯಾಂ ವೀರ್ಯಂ ದಧಾತಿ ತಸ್ಮಾತ್ಪುರೇಜಾನಸ್ಯ ವೀರೋ ಜಜ್ಞೇ । ನಿಕಾಮೇ ನಿಕಾಮೇ ನಃ ಪರ್ಜನ್ಯೋ ವರ್ಷತ್ವಿತಿ । ನಿಕಾಮೇ ನಿಕಾಮೇ ವೈ ತತ್ರ ಪರ್ಜನ್ಯೋ ವರ್ಷತಿ ಯತ್ರೈತೇನ ಯಜ್ಞೇನ ಯಜಂತೇ ಫಲವತ್ಯೋ ನ ಓಷಧಯಃ ಪಚ್ಯಂತಾಮಿತಿ ಫಲವತ್ಯೋ ವೈ ತತ್ರೌಷಧಯಃ ಪಚ್ಯಂತೇ ಯತ್ರೈತೇನ ಯಜ್ಞೇನ ಯಜಂತೇ ಯೋಗಕ್ಷೇಮೋ ನಃ ಕಲ್ಪತಾಮಿತಿ ಯೋಗಕ್ಷೇಮೋ ವೈ ತತ್ರ ಕಲ್ಪತೇ ಯತ್ರೈತೇನ ಯಜ್ಞೇನ ಯಜಂತೇ ತಸ್ಮಾದ್ಯತ್ರೈತೇನ ಯಜ್ಞೇನ ಯಜಂತೇ ಕ್ಲೃಪ್ತಃ ಪ್ರಜಾನಾಂ ಯೋಗಕ್ಷೇಮೋ ಭವತಿ ॥**
>
> (ಶ. ಬ್ರಾ. ೧೩-೧-೯-೯ ರಿಂದ ೧೦)

ಇದೇ ಅಭಿಪ್ರಾಯವು ತೈ. ಬ್ರಾ. ೩-೮-೧೩-೩ ರಲ್ಲಿಯೂ ಉಕ್ತವಾಗಿರುವುದು ಅಶ್ವಮೇಧವನ್ನು ನೆರವೇರಿಸಿದವನಿಗೆ ವೀರ್ಯವಂತನಾದ ಪುತ್ರನು ಉತ್ಪನ್ನನಾಗುವುದು ಸಿದ್ಧವಾದುದರಿಂದ ಈ ಯಜಮಾನನಿಗೂ ಸಹ ವೀರ್ಯವಂತನಾದ

ಪುತ್ರನು ಉತ್ಪನ್ನನಾಗಲಿ. ಮತ್ತು ಇಂತಹ ಯಜಮಾನನಿಗೆ ಪರ್ಜನ್ಯನು ಮಳೆಯನ್ನು ಸುರಿಸಿ ವೃಕ್ಷಾದಿಗಳನ್ನು ಫಲಭರಿತವಾಗುವಂತೆ ಮಾಡುತ್ತಾನೆ. ಮತ್ತು ಯಜಮಾನನ ಐಶ್ವರ್ಯಕ್ಕೆ ಯಾವ ಚ್ಯುತಿಯೂ ಇಲ್ಲದೆ ಸಮಸ್ತ ಸಂಪತ್ತೂ ಸುರಕ್ಷಿತವಾಗಿರುತ್ತದೆ. ಆದುದರಿಂದ ಈ ಅಶ್ವಮೇಧವನ್ನು ನೆರವೇರಿಸಿ ದವರಿಗೆ ಪುತ್ರಸಂಪತ್ತೂ ಫಲ ಸಂಪತ್ತೂ ಲಭಿಸಿ ಸಕಲವಿಧವಾದ ಐಶ್ವರ್ಯಗಳೂ ಸುರಕ್ಷಿತವಾಗಿರುವುವು, ಎಂಬುದು ಸಿದ್ಧವಾದುದರಿಂದ ಅವೆಲ್ಲ ವನ್ನೂ ಇಲ್ಲಿಯೂ ಪ್ರಾರ್ಥಿಸಿದೆ.

**ಕ್ಷತ್ರಂ—ಕ್ಷತ್ರಂ ಬಲಂ ಕ್ಷಾತ್ರಂ ತೇಜಃ** । ಎಂದು ಈ ಪದಕ್ಕೆ ಮೊದಲು ಸಾಮಾನ್ಯವಾಗಿ **ಬಲ** ವೆಂದರ್ಥ ಮಾಡಿ ಅನಂತರ **ಕ್ಷಾತ್ರತೇಜಸ್ಸೆಂದು** ಆ **ಬಲ**ದ ವೈಶಿಷ್ಟ್ಯವನ್ನು ತಿಳಿಸಿದೆ. ಅಶ್ವಮೇಧವನ್ನು ನೆರವೇರಿಸುವುದಕ್ಕೂ ಸಹ ಪೂರ್ಣವಾದ ಕ್ಷಾತ್ರತೇಜಸ್ಸಿರಬೇಕು ಮತ್ತು ಅಶ್ವಮೇಧದ ಫಲವೂ ಕ್ಷಾತ್ರತೇಜಸ್ಸೇ ಆಗುತ್ತದೆ. ಕ್ಷಾತ್ರ ತೇಜಸ್ಸಿಲ್ಲದವನಿಗೆ ಅಶ್ವಮೇಧದ ಅರ್ಹತೆಯೇ ಇರುವುದಿಲ್ಲ. ಅವನಿಗೆ ಮೊದಲಿದ್ದ ಸ್ಥಾನವೂ ಲುಪ್ತವಾಗುತ್ತದೆ.

> **ರಾಷ್ಟ್ರಂ ವಾ ಅಶ್ವಮೇಧಃ । ರಾಷ್ಟ್ರೇ ಖಲು ವಾ ಏತೇ ವ್ಯಾಯಚ್ಛಂತೇ । ಯೇಽಶ್ವಂ ಮೇಧ್ಯಗ್ಂ ರಕ್ಷಂತಿ । ತೇಷಾಂ ಯ ಉದೃಚಂ ಗಚ್ಛಂತಿ । ರಾಷ್ಟ್ರಾದೇವ ತೇ ರಾಷ್ಟ್ರಂ ಗಚ್ಛಂತಿ । ಅಥ ಯ ಉದೃಚಂ ನ ಗಚ್ಛಂತಿ । ರಾಷ್ಟ್ರಾದೇವ ತೇ ವ್ಯವಚ್ಛಿದ್ಯಂತೇ । ಪರಾ ವಾ ಏಷ ಸಿಚ್ಯತೇ । ಯೋಽಬಲೋಽಶ್ವಮೇಧೇನ ಯಜತೇ ಯದಮಿತ್ರಾ ಅಶ್ವಂ ವಿಂದೇರನ್ । ಹನ್ಯೇತಾಸ್ಯ ಯಜ್ಞಃ ॥**
>
> (ತೈ. ಬ್ರಾ. ೩-೮-೯-೪, ೫)

ಅಶ್ವಮೇಧವು ವೈಯಕ್ತಿಕವಾದ ಯಜ್ಞವಲ್ಲ. ಇದು ರಾಷ್ಟ್ರಶಕ್ತಿಯ ಚಿಹ್ನವು. ರಾಷ್ಟ್ರಶಕ್ತಿಯನ್ನು ಪ್ರಕಟಿಸ ತಕ್ಕದ್ದು. ರಾಷ್ಟ್ರವನ್ನು ರಕ್ಷಿಸಲು ಯಾವ ರಾಜನಿಗೆ ಶಕ್ತಿಯಿದೆಯೋ ಅವನು ಈ ಯಜ್ಞವನ್ನು ನೆರವೇರಿಸತಕ್ಕದ್ದು. ಯಜ್ಞಕಾಲದವರೆಗೂ ಈ ಅಶ್ವದ ರಕ್ಷಣೆಗೆ ಸಮರ್ಥರಾಗಿರತಕ್ಕ ಬಲವುಳ್ಳವನಾಗಿರಬೇಕು. ಒಂದು ವೇಳೆ ಕ್ಷತ್ರಿಯ ನಿಗೆ ಅಂತಹ ಬಲವಿಲ್ಲದೆ ಪರರಾಜರು ಅಶ್ವವನ್ನು ಹಿಡಿದ ಪಕ್ಷದಲ್ಲಿ ಅಂತಹ ಕ್ಷತ್ರಿಯನ ಯಜ್ಞವು ವಿಫಲವಾಗಿ ಅವನಿಗೆ ಪದಚ್ಯುತಿಯಾಗುವುದು ಖಂಡಿತ ಎಂದು ಕ್ಷತ್ರದ ಆವಶ್ಯಕತೆಯನ್ನು ಹೇಳಿದೆ. ಇದು ಪೂರ್ಣವಾಗಿ ಕ್ಷತ್ರಿಯನ ಬಲದೊಡನೆ ತಾದಾತ್ಮ್ಯವನ್ನೇ ಹೊಂದಿರುವುದರಿಂದ ಇದರ ಫಲವೂ ಸಹ ಕ್ಷಾತ್ರತೇಜಸ್ಸಿನಿಂದಲೇ ಕೂಡಿರುವುದು.

(ಶ. ಬ್ರಾ. ೧೩-೧-೬-೩)

> **ಅಧಿಪತಿರಸ್ಯಧಿಪತಿಂ ಮಾ ಕುರ್ವಧಿಪತಿರಹಂ ಪ್ರಜಾನಾಂ ಭೂಯಾಸಮಿತ್ಯಾಹ । ಅಧಿಪತಿ- ಮೇವೈನಗ್ಂ ಸಮಾನಾನಾಂ ಕರೋತಿ ॥**
>
> (ತೈ. ಬ್ರಾ. ೩-೯-೧೬-೨)

ಎಲೈ ಮೇಧ್ಯಾಶ್ವವೇ, ನೀನು ಯಜ್ಞಕರ್ತರಿಗೆಲ್ಲಾ ಅಧಿಪತಿಯಾಗಿದ್ದೀಯೆ. ನಿನ್ನ ಅನುಗ್ರಹದಿಂದ ನಾನೂ ಸಹ ನನ್ನ ಪ್ರಜೆಗಳಿಗೆಲ್ಲಾ ಅಧಿಪತಿಯಾಗುವಂತಾಗಲಿ ಎಂದು ಪ್ರಾರ್ಥಿಸಿರುವಂತೆ ಇಲ್ಲಿಯೂ ಸಹ **ಕ್ಷತ್ರಂ ನೋ ವನತಾಂ** ಎಂದು ಪ್ರಾರ್ಥಿಸಿದೆ.

**ಅನಾಗಾಸ್ತ್ವಂ ಕರೋತು—ಪಾಪರಹಿತವಾಗಿರುವಂತೆ ಮಾಡಲಿ.** ಅಶ್ವಮೇಧವು ಬಹಳದುಸ್ತರವಾದ ಕರ್ಮವಾದುದರಿಂದ ಆ ಕರ್ಮದಲ್ಲಿ ಲೋಪವು ಸುಲಭವಾಗಿ ಸಂಭವಿಸಬಹುದು.

**ಪ್ರ ವಾ ಏಷ ಏಭ್ಯೋ ಲೋಕೇಭ್ಯಶ್ಚ್ಯವತೇ । ಯೋಽಶ್ವಮೇಧೇನ ಯಜತೇ ।**

ಈ ಯಾಗದ ನಿರ್ವಹಣೆಯಲ್ಲಿ ಅನೇಕ ಅಪರಾಧಗಳು ಸಂಭವಿಸಬಹುದಾದುದರಿಂದ ಅದನ್ನು ತಪ್ಪಿಸುವುದಕ್ಕಾಗಿ ಅಗ್ನೀಯಾದಿ ಪಶುತ್ರಯಾಲಂಭನದಿಂದ ಪರಿಹಾರವನ್ನು ಪಡೆಯಬೇಕೆಂದಿದೆ. ಅದೂ ಅಲ್ಲದೇ ಮೃಗಾರೇಷ್ಟಿಯೆಂದು ಪ್ರಸಿದ್ಧವಾದ ಆಹುತಿಗಳಿಗೆ ಯಾಜ್ಯಾರೂಪವೂ ಪುರೋನುವಾಕ್ಯಾರೂಪವೂ ಆದ ಮಂತ್ರಗಳಲ್ಲಿ ಪಾಪಪ್ರಾಯಶ್ಚಿತ್ತವನ್ನೂ ಪ್ರಾರ್ಥಿಸಿದೆ.

**ಅಗ್ನೇರ್ಮನ್ವೇ ಪ್ರಥಮಸ್ಯ ಪ್ರಚೇತಸೋ .... .... .... .... ಸ ನೋ ಮುಂಚತ್ವಂಹಸಃ ॥**

ಇತ್ಯಾದಿಯಾಗಿ ಯಜಮಾನರನ್ನು ಪಾಪರಹಿತರನ್ನಾಗಿಮಾಡಬೇಕೆಂದು ಅಗ್ನ್ಯಾದಿಗಳನ್ನು ಪ್ರಾರ್ಥಿಸಿದೆ.

(ತೈ. ಸಂ. ೪-೭-೧೫)

ವ್ಯಾಕರಣಪ್ರಕ್ರಿಯಾ

**ಸುಗವ್ಯಮ್**—ಶೋಭನಾನಾಂ ಗವಾಂ ಸಮೂಹಃ ಸುಗವ್ಯಮ್. **ಖಲ ಗೋರಥಾತ್** (ಪಾ. ಸೂ ೪-೨-೫೦) ಎಂಬುದರಿಂದ ಸಮೂಹಾರ್ಥದಲ್ಲಿ ಯತ್ ಪ್ರತ್ಯಯ. **ವಾಂತೋಯಿಪ್ರತ್ಯಯೇ** ( ಪಾ. ಸೂ. ೬-೧-೭೯) ಎಂಬುದರಿಂದ ಅವಾದೇಶ. **ಯತೋನಾವಃ** (ಪಾ. ಸೂ ೬-೧-೨೧೩) ಎಂಬುದರಿಂದ ಆದ್ಯುದಾತ್ತಸ್ವರ ಬರುತ್ತದೆ. ಪ್ರಾದಿ ಸಮಾಸದಲ್ಲಿ ಉತ್ತರಪದ ಪ್ರಕೃತಿಸ್ವರ ಛಾಂದಸವಾಗಿ ಬರುತ್ತದೆ. ಅಥವಾ ಸಮೂಹಾರ್ಥದಲ್ಲಿ ಅಣ್ ಪ್ರಾಪ್ತವಾದರೆ **ಸರ್ವತ್ರ ಗೋರಜಾದಿಪ್ರತ್ಯಯಪ್ರಸಂಗೇ** (ಕಾ. ೪-೩-೧೬೦) ಎಂಬುದರಿಂದ ಯತ್ ಪ್ರತ್ಯಯ. ಯದಂತ ಉತ್ತರಪದವಿರುವಾಗ **ಆದ್ಯುದಾತ್ತಂದ್ವ್ಯಚ್ ಛಂದಸಿ** (ಪಾ. ಸೂ. ೬-೨-೧೧೯) ಎಂಬುದರಿಂದ ಉತ್ತರಪದಾದ್ಯುದಾತ್ತಸ್ವರ ಬರುತ್ತದೆ.

**ಸ್ವಶ್ವ್ಯಮ್**— ಹಿಂದಿನಂತೇ ಬಹುವ್ರೀಹಿಸಮಾಸವಾದಾಗ ಉತ್ತರಪದ ಆದ್ಯುದಾತ್ತಸ್ವರ ಬರುತ್ತದೆ.

**ಪುಂಸಃ**—ಷಷ್ಠೀಏಕವಚನಾಂತರೂಪ. **ಸಾವೇಕಾಚಸ್ತೃತೀಯಾದಿಃ** ( ಪಾ. ಸೂ. ೬-೧-೧೬೮ ) ಎಂಬುದರಿಂದ ವಿಭಕ್ತಿಗೆ ಉದಾತ್ತಸ್ವರ ಬರುತ್ತದೆ.

**ವಿಶ್ವಾಪುಷಮ್**—ಪುಷ ಪುಷ್ಟೌ ಧಾತು. ಕ್ವಿಪ್‌ಪ್ರತ್ಯಯ **ಅನ್ಯೇಷಾಮಪಿದೃಶ್ಯತೇ** ( ಪಾ. ಸೂ. ೬-೩-೧೩೭) ಎಂಬುದರಿಂದ ಸಂಹಿತಾಕಾಲದಲ್ಲಿ ಪೂರ್ವಪದಕ್ಕೆ ದೀರ್ಘ ಬರುತ್ತದೆ. **ಗತಿಕಾರಕೋಪಪದಾತ್ ಕೃತ್** (ಪಾ. ಸೂ. ೬-೨-೧೩೯) ಎಂಬುದರಿಂದ ಕೃದುತ್ತರಪದ ಪ್ರಕೃತಿಸ್ವರ ಬರುತ್ತದೆ.

**ಅನಾಗಾಸ್ತ್ವಮ್**—ನ ವಿದ್ಯತೇ ಆಗಃ ಯಸ್ಯ ಅನಾಗಃ ತಸ್ಯಭಾವಃ ಅನಾಗಾಸ್ತ್ವಮ್. **ತಸ್ಯಭಾವಸ್ತ್ವತಲೌ** (ಪಾ. ಸೂ. ೫-೧-೧೧೯) ಎಂಬುದರಿಂದ ತ್ವಪ್ರತ್ಯಯ. ಪ್ರತ್ಯಯಸ್ವರದಿಂದ ಅಂತೋದಾತ್ತಸ್ವರ ಬರುತ್ತದೆ.

**ವನತಾಮ್**—ವನ ಸಂಭಕ್ತೌ ಧಾತು. **ಲೋಟ್.** ಪ್ರಥಮಪುರುಷಏಕವಚನಾಂತರೂಪ. ಅತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

# ನೂರ ಅರವತ್ತಮೂರನೆಯ ಸೂಕ್ತವು

**ಯದಕ್ರಂದ ಇತಿ ತ್ರಯೋದಶರ್ಚಂ ಸಪ್ತಮಂ ಸೂಕ್ತಂ ದೈರ್ಘತಮಸಂ ತ್ರೈಷ್ಟುಭಂ । ಅಶ್ವಸ್ಯ ಸ್ತೂಯಮಾನತ್ವಾತ್ತದ್ದೇವತ್ಯಂ । ಯದಕ್ರಂದಃ ಸಪ್ತೋನೇತ್ಯನುಕ್ರಮಣಿಕಾ ॥ ಅಶ್ವಮೇಧಿಕೇ ಮಧ್ಯಮೇಽಹನ್ಯುಪಾಕರಣಾಯಾವಸ್ಥಿತಮಶ್ವಮಾದ್ಯಾಭಿರೇಕಾದಶಭಿಃ ಸ್ತೌತಿ । ತಥಾ ಚ ತ್ರೀಣಿ ಸುತ್ಯಾನೀತಿ ಖಂಡೇ ಸೂತ್ರಿತಂ । ತಮುವಸ್ಥಿತಮುಪಾಕರಣಾಯ ಯದಕ್ರಂದ ಇತ್ಯೇಕಾದಶಭಿಃ ಸ್ತೌತ್ಯಪ್ರಣುವನ್ । ಆ. ೧೦-೮ । ಇತಿ ॥**

ಅನುವಾದವು—**ಯದಕ್ರಂದಃ** ಎಂಬ ಈ ಸೂಕ್ತವು ಇಪ್ಪತ್ತೆರಡನೆಯ ಅನುವಾಕದಲ್ಲಿ ಏಳನೆಯ ಸೂಕ್ತವು. ಇದರಲ್ಲಿ ಹದಿಮೂರು ಋಕ್ಕುಗಳಿರುವುವು. ಈ ಸೂಕ್ತಕ್ಕೆ ಉಚಥ್ಯಪುತ್ರನಾದ ದೀರ್ಘತಮಸ್ಸೆಂಬುವನು ಋಷಿಯು. ತ್ರಿಷ್ಟುಪ್‌ಛಂದಸ್ಸು ಈ ಸೂಕ್ತದಲ್ಲಿ ಅಶ್ವವನ್ನು ಸ್ತುತಿಸಿರುವುದರಿಂದ ಅಶ್ವಸ್ತುತಿಯೇ ಈ ಸೂಕ್ತಕ್ಕೆ ದೇವತೆಯು. ಅನುಕ್ರಮಣಿಕೆಯಲ್ಲಿ **ಯದಕ್ರಂದಃ ಸಪ್ತೋನೇತಿ** ಎಂದು ಹೇಳಿರುವುದು. ಅಶ್ವಮೇಧ ಯಜ್ಞದಲ್ಲಿ ಮಧ್ಯದ ದಿವಸ ಮಾಡಬೇಕಾಗಿರುವ ಉಪಾಕರಣಕರ್ಮದಲ್ಲಿ ಅಲ್ಲಿಗೆ ತಂದು ನಿಲ್ಲಿಸಿರುವ ಅಶ್ವವನ್ನು ಈ ಸೂಕ್ತದ ಮೊದಲಿನ ಹನ್ನೊಂದು ಋಕ್ಕುಗಳಿಂದ ಸ್ತೋತ್ರಮಾಡಬೇಕೆಂದು ಆಶ್ವಲಾಯನಶ್ರೌತಸೂತ್ರದ—**ತಥಾ ಚ ತ್ರೀಣಿ ಸುತ್ಯಾನಿ** ಎಂಬ ಖಂಡದ **ತಮುವಸ್ಥಿತಮುಪಾಕರಣಾಯ ಯದಕ್ರಂದ ಇತ್ಯೇಕಾದಶಭಿಃ ಸ್ತೌತ್ಯಪ್ರಣುವನ್** ಎಂಬ ಸೂತ್ರದಿಂದ ವಿವೃತವಾಗಿರುವುದು. (ಆ. ೧೦-೮).

॥ ಓಂ ॥

## ಸೂಕ್ತ—೧೬೩

॥ ಮಂಡಲ—೧ ॥ ಅನುವಾಕ—೨೨ ॥ ಸೂಕ್ತ—೧೬೩ ॥

॥ ಅಷ್ಟಕ—೨ ॥ ಅಧ್ಯಾಯ—೩ ॥ ವರ್ಗ—೧೧, ೧೨, ೧೩ ॥

॥ ಸೂಕ್ತದಲ್ಲಿರುವ ಋಕ್ಸಂಖ್ಯೆ—೧೩ ॥

॥ ಋಷಿಃ—ದೀರ್ಘತಮಾ ಔಚಥ್ಯಃ ॥

॥ ದೇವತಾ—ಅಶ್ವಸ್ತುತಿಃ ॥

॥ ಛಂದಃ—ತ್ರಿಷ್ಟುಪ್ ॥

ಸಾಯಣಭಾಷ್ಯಂ

ಯದಕ್ರಂದಃ ಪ್ರಥಮಂ ಜಾಯಮಾನ ಉದ್ಯನ್ತ್ಸಮುದ್ರಾದುತ ವಾ ಪುರೀಷಾತ್ ।
ಶ್ಯೇನಸ್ಯ ಪಕ್ಷಾ ಹರಿಣಸ್ಯ ಬಾಹೂ ಉಪಸ್ತುತ್ಯಂ ಮಹಿ ಜಾತಂ ತೇ ಅರ್ವನ್ ॥ ೧ ॥

ಪದಪಾಠ

ಯತ್ । ಅಕ್ರಂದಃ । ಪ್ರಥಮಂ । ಜಾಯಮಾನಃ । ಉತ್ऽಯನ್ । ಸಮುದ್ರಾತ್ । ಉತ । ವಾ । ಪುರೀಷಾತ್ ।
ಶ್ಯೇನಸ್ಯ । ಪಕ್ಷಾ । ಹರಿಣಸ್ಯ । ಬಾಹೂ ಇತಿ । ಉಪऽಸ್ತುತ್ಯಂ । ಮಹಿ । ಜಾತಂ । ತೇ । ಅರ್ವನ್ ॥೧॥

ಸಾಯಣಭಾಷ್ಯಂ

ಹೇ ಅರ್ವನ್ನರಣಕುಶಲಾಶ್ವ ತೇ ತವ ಜಾತಂ ಜನ್ಮ ಜನನಮುಪಸ್ತುತ್ಯಂ । ಉಪೇತ್ಯ ಸರ್ವೈಃ ಸ್ತೋತವ್ಯಂ ॥ ಸ್ತೌತೇರೇತಿಸ್ತುಶಾಸ್ವಿತಿ ಕ್ಯಪ್ । ತತಸ್ತುಕ್ ॥ ಕಥಂ ಸ್ತುತ್ಯತ್ವಮಿತಿ ಉಚ್ಯತೇ । ಯದ್ಯಸ್ಮಾತ್ಸಮುದ್ರಾತ್ । ಅಂತರಿಕ್ಷನಾಮೈತತ್ । ಉದಕಸಮುಂದನಾಪಾದಾನಾದ್ಯಕ್ಷಗಂಧರ್ವಾದಿಸಂಮೋದನಾಧಿಕರಣಾದ್ವಾಂತರಿಕ್ಷಾತ್ಪ್ರಥಮಂ ಪೂರ್ವಂ ಜಾಯಮಾನ ಉತ್ಪನ್ನಃ । ಯದ್ವಾ । ಸಮುದ್ರ ಆದಿತ್ಯಃ ಸಮುಂದನಾದ್ರಶ್ಮೀನಾಂ । ತಸ್ಮಾದ್ವಾ ಜಾಯಮಾನಃ । ಸೂರಾದಶ್ವಂ ವಸವೋ ನಿರತಷ್ಟೇತಿ ವಕ್ಷ್ಯಮಾಣತ್ವಾತ್ । ಉತ ವಾಥವಾ ಪುರೀಷಾತ್ ಸರ್ವಕಾಮಾನಾಂ ಪೂರಕಾದುದಕಾತ್ಪ್ರಥಮಮುದ್ಯಞ್ಜಾಯಮಾನಃ । ಸ ತಾದೃಶಸ್ತ್ವಂ ಯದ್ಯಸ್ಮಾದಕ್ರಂದಃ । ಮಹಾಶಬ್ದಮಕರೋರ್ಯಜಮಾನಮನುಗ್ರಹೀತುಂ । ಕಿಂಚ ತೇ ಪಕ್ಷಾ ಪತನಸಾಧನೌ ಪಕ್ಷೌ ಶ್ಯೇನಸ್ಯ ಪಕ್ಷಾವಿವ । ತೌ ಯಥಾ ಶೀಘ್ರಪತನಸಾಧನೌ ತಾದೃಶಾವಿತ್ಯರ್ಥಃ । ತವ ಬಾಹೂ ಹರಿಣಸ್ಯ ಬಾಹೂ ಇವ । ತೌ ಯಥಾ ವೇಗವಂತೌ ತಾದೃಶಾವಿತ್ಯರ್ಥಃ । ಯಸ್ಮಾದೇವಂ ತಸ್ಮಾತ್ತೇ ಜನ್ಮ ಸ್ತುತ್ಯಮಿತ್ಯರ್ಥಃ ॥

ಪ್ರತಿಪದಾರ್ಥ

ಅರ್ವನ್—ಎಲೈ ಮೇಧ್ಯಾಶ್ವವೇ । ಯತ್—ಯಾವ ಕಾರಣದಿಂದ । (ತ್ವಂ—ನೀನು) । ಪ್ರಥಮಂ—ಪೂರ್ವದಲ್ಲಿ । ಸಮುದ್ರಾತ್—ಅಂತರಿಕ್ಷದಿಂದಾಗಲಿ ಅಥವಾ ಆದಿತ್ಯನಿಂದಾಗಲಿ । ಜಾಯಮಾನಃ—ಉತ್ಪನ್ನನಾಗಿ । ಉ ವಾ—ಅಥವಾ । ಪುರೀಷಾತ್—ಉದಕದಿಂದಾಗಲಿ । ಉದ್ಯನ್—ಉತ್ಪನ್ನನಾಗಿ । ಅಕ್ರಂದಃ—ಹೇಷಾರವವನ್ನುಂಟುಮಾಡಿದೆಯೋ ಅದರಿಂದಲೂ, ಮತ್ತು । (ಯತ್—ಯಾವ ಕಾರಣದಿಂದ) । ಪಕ್ಷಾ—ನಿನ್ನ ರೆಕ್ಕೆಗಳು ।

**ಶ್ಯೇನಸ್ಯ**—ಗಿಡುಗದ ರೆಕ್ಕೆಗಳಂತೆಯೂ । **ಬಾಹೂ** — ಅಂಗಗಳು (ಕಾಲುಗಳು) । **ಹರಿಣಸ್ಯ**—ಜಿಂಕೆಯ ಕಾಲುಗಳಂತೆಯೂ ಇವೆಯೋ (ಅದ್ದರಿಂದ) । **ತೇ**—ನಿನ್ನ । **ಮಹಿ**—ಮಹತ್ತಾದ । **ಜಾತಂ**—ಜನ್ಮವು । **ಉಪಸ್ತುತ್ಯಂ**—ಸ್ತೋತ್ರಾರ್ಹವಾದುದು ॥

**ಭಾವಾರ್ಥ**

ಎಲೈ ಮೇಧ್ಯಾಶ್ವವೇ, ನೀನು ಪ್ರಥಮದಲ್ಲಿ ಅಂತರಿಕ್ಷಸ್ಥನಾದ ಆದಿತ್ಯನಿಂದಾಗಲಿ ಅಥವಾ ಉದಕದಿಂದಾಗಲಿ ಉತ್ಪನ್ನನಾಗಿ ನಿನ್ನ ಆಕರ್ಷಕವಾದ ಹೇಷಾರವವನ್ನುಂಟುಮಾಡಿದೆಯೋ ಅದರಿಂದದಲೂ ಮತ್ತು ನಿನ್ನ ರೆಕ್ಕೆಗಳು ಗಿಡುಗದ ರೆಕ್ಕೆಯಂತೆಯೂ ಕಾಲುಗಳು ಜಿಂಕೆಯ ಕಾಲುಗಳಂತೆಯೂ (ವೇಗವುಳ್ಳದ್ದಾಗಿ) ಇರುವುದರಿಂದಲೂ ಸಹ ನಿನ್ನ ಮಹತ್ತಾದ ಜನ್ಮವು ಸ್ತುತ್ಯರ್ಹವಾದುದು.

English Translation

The great birth, O Horse, is to be glorified ; whether first springing from the firmament or from the water, inasmuch as you have neighed (auspiciously), for you have the wings of the falcon and the limbs of the deer.

**ಪ್ರತಿಪದಾರ್ಥ**

ಈ ಋಕ್ಕಿನಲ್ಲಿ ಯಜ್ಞಾಶ್ವದ ಉತ್ಪತ್ತಿಯನ್ನೂ ಸ್ವರೂಪವನ್ನೂ ವರ್ಣಿಸಿ ಅದರ ಜನ್ಮದ ಮಹತ್ತ್ವವನ್ನು ಪ್ರಶಂಸಿಸಿದೆ. **ಸಮುದ್ರಾತ್ ಉತ ವಾ ಪುರೀಷಾತ್** ಎಂದು ಅಶ್ವದ ಪ್ರಭವವನ್ನು ಅಂತರಿಕ್ಷದಿಂದಾಗಲಿ ಅಥವಾ ಉದಕದಿಂದಾಗಲಿ ಎಂದು ಹೇಳಿರುವುದರಿಂದ ಶ್ರುತಿಯಲ್ಲಿ ಈ ಎರಡು ವಿಧವಾದ ಉತ್ಪತ್ತಿಯೂ ವರ್ಣಿತವಾಗಿರಬೇಕೆಂದು ಗೊತ್ತಾಗುತ್ತದೆ. ಶ್ರುತಿವಾಕ್ಯಗಳನ್ನು ಪರಿಶೀಲಿಸಿದರೆ ಈ ಎರಡು ವಿಧವಾದ ಅಭಿಪ್ರಾಯಗಳಿಗೂ ಆಧಾರವು ದೊರೆಯುತ್ತದೆ.

> **ಅಥ ಯೋ ಗರ್ಭೋಽಂತರಾಸೀತ್ । ಸೋಽಗ್ನಿರಸೃಜ್ಯತ ಸ ಯದಸ್ಯ ಸರ್ವಸ್ಯಾಗ್ರಮಸೃಜ್ಯತಸ್ಮಾದಗ್ರಿರಗ್ರಿರ್ಹ ವೈ ತಮಗ್ನಿರಿತ್ಯಾಚಕ್ಷತೇ ಪರೋಽಕ್ಷಂ ಪರೋಕ್ಷಕಾಮಾ ಹಿ ದೇವಾ ಅಥ ಯದಶ್ರು ಸಂಕ್ಷರಿತಮಾಸೀತ್ಸೋಽಶ್ರುರಭವದಶ್ರುರ್ಹ ವೈ ತಮಶ್ವ ಇತ್ಯಾಚಕ್ಷತೇ ಪರೋಽಕ್ಷಂ ಪರೋಕ್ಷಕಾಮಾ ಹಿ ದೇವಾ ಅಥ ಯದರಸದಿವ ಸ ರಾಸಭೋಽಭವದಥ ಯಃ ಕಪಾಲೇ ರಸೋ ಲಿಪ್ತ ಆಸೀತ್ಸೋಽಜೋಽಭವದಥ ಯತ್ಕಪಾಲಮಾಸೀತ್ಸಾ ಪೃಥಿವ್ಯಭವತ್ ॥**
>
> (ಶ. ಬ್ರಾ. ೬-೧-೧-೧೧)

ಪ್ರಜಾಪತಿಯು ಜಗತ್ಸೃಷ್ಟಿರೂಪದಿಂದ ವೃದ್ಧನಾಗಬೇಕೆಂದಿಚ್ಛಿಸಿದಾಗ ಅಪ್ಪಿನಿಂದ ಅಂಡವೂ ಅದರಿಂದ ಬ್ರಹ್ಮವೂ ಉತ್ಪನ್ನವಾಗಿ ಜಗದಾದಿಗೆ ಈ ಬ್ರಹ್ಮವೇ ಮೂಲವಾಯಿತು. (೬-೧-೧-೧೦). ಅಪ್ಪಿನಿಂದ ಉದ್ಭವವಾದ ಅಂಡವು ಸೃಷ್ಟಿಗಳಲ್ಲೆಲ್ಲಾ ಪ್ರಥಮವಾದುದರಿಂದ ಅದು **ಅಗ್ರಿ**ಯೆಂದು ಪ್ರಸಿದ್ಧವಾಯಿತು.

ಈ ಅಗ್ನಿಯನ್ನೇ ಪರೋಕ್ಷಕಾಮರಾದ ದೇವತೆಗಳು ಅಗ್ನಿಯೆಂದು ಸಂಬೋಧಿಸಿದರು. ಅಂಡದ ಸುತ್ತಲೂ ವ್ಯಾಪಿಸಿದ್ದ ಅಶ್ರುವನ್ನೇ ಪರೋಕ್ಷಕಾಮರಾದ ದೇವತೆಗಳು ಅಶ್ವವೆಂದು ಕರೆದರು. ಅಂಡವು ಭಿನ್ನವಾಗುವ ಕಾಲದಲ್ಲಿ ಆದ ಶಬ್ದವು ರಾಸಭವೆಂದು ಪ್ರಸಿದ್ಧವಾಯಿತು. ಅಂಡದ ಕಪಾಲದಲ್ಲಿ ಲಿಪ್ತವಾಗಿದ್ದ ರಸವು ಅಜವಾಯಿತು. (ಜನ್ಮವಿಲ್ಲದ್ದು) ಆ ಕಪಾಲವು ಪೃಥ್ವೀರೂಪದಲ್ಲಿ ಪರಿಣಮಿಸಿತು. ಎಂಬ ಈ ವರ್ಣನೆಯಲ್ಲಿ ವಿಶ್ವವ್ಯಾಪಕವಾದ ಅಪ್ಪಿನಿಂದ ಪ್ರಜಾಪತಿಯು ಈ ಅಶ್ವವನ್ನು ಸೃಷ್ಟಿಸಿದ ವಿವರವಿದೆ. ಇನ್ನೊಂದು ವರ್ಣನೆಯ ಪ್ರಕಾರ,

> **ಪ್ರಜಾಪತಿರ್ವಾ ಇದಮಗ್ರ ಆಸೀತ್ ........................ ನಿರಮಿಮೀತ ಮನಸಃ ಪುರುಷಂ ಚಕ್ಷುಷೋಽಶ್ವಂ ।**
>
> (ಶ. ಬ್ರಾ. ೭-೫-೨-೬)

ಈ ಅಶ್ವವು ಪ್ರಜಾಪತಿಯ ಚಕ್ಷುಸ್ಸಿನಿಂದ ಸೃಷ್ಟವಾಯಿತೆಂದಿದೆ.

ಪ್ರಜಾಪತಿಗೂ ಅಶ್ವಕ್ಕೂ ಸಂಬಂಧವನ್ನು ಹೇಳಿರುವಂತೆ ವರುಣನಿಗೂ ಅಶ್ವಕ್ಕೂ ಸಹ ಅತ್ಯಂತ ನಿಕಟವಾದ ಸಂಬಂಧವನ್ನು ಅನೇಕಕಡೆಗಳಲ್ಲಿ ವರ್ಣಿಸಿದೆ.

> **ವಾರುಣೋ ವಾ ಅಶ್ವಃ । ತಂ ದೇವತಯಾ ವ್ಯರ್ಧಯತಿ । ಯತ್ಪ್ರಾಜಾಪತ್ಯಂ ಕರೋತಿ । ನಮೋ ರಾಜ್ಞೇ ನಮೋ ವರುಣಾಯೇತ್ಯಾಹ । ವಾರುಣೋ ವಾ ಅಶ್ವಃ ।**
>
> (ತೈ. ಬ್ರಾ. ೩-೯-೧೬-೧)

ಎಂಬ ವಾಕ್ಯಕ್ಕೆ ಸಾಯಣರು **ಅಶ್ವಸ್ಯಾಬ್ಯೋನಿತ್ವಾದ್ವರುಣಸ್ಯ ಚಾಪಾಂ ಪತಿತ್ವಾದಯಮಶ್ವೋ ವಾರುಣಃ ।** ಅಶ್ವವು ವಿಶ್ವವ್ಯಾಪಕವಾದ ಅಪ್ಪಿನಿಂದ ಜನಿಸಿದುದರಿಂದಲೂ, ವರುಣನು ಅಪ್ಪಿಗೆ ಒಡೆಯನಾದುದರಿಂದಲೂ ಯಜ್ಞಾಶ್ವವು ವರುಣದೇವತೆಗೆ ಸಂಬಂಧಿಸಿದುದು ಎಂದು ವಿವರಣೆಯನ್ನು ಹೇಳಿದ್ದಾರೆ. ಈ ವಾರುಣಾಶ್ವದ ರಹಸ್ಯಾರ್ಥವೇನು ಎಂಬ ವಿಷಯನ್ನು ವಿಮರ್ಶಿಸುತ್ತಾ ಶತಪಥಬ್ರಾಹ್ಮಣವನ್ನು ಆಂಗ್ಲಭಾಷೆಗೆ ಪರಿವರ್ತಿಸಿರುವ Eggeling ಎಂಬ ಪಂಡಿತನು ಈರೀತಿ ಹೇಳಿದ್ದಾನೆ.

> Varuna's horse is none other than the fiery races who Pursues his diurnal course across the all-encompassing arch of heaven, the sphere of Varuna, the all-ruler. It is in the form of the horse that the Sun is thus landed in the hymn. Rigveda 1—163, receited by the Hotri on the second Soma day of the Aswamedha."
>
> (Sacred Books of the East. Vol. XL1V—P. XIX-XX )

ದ್ಯಾವಾಪೃಥಿವಿಗಳಿಗೆಲ್ಲಾ ಪ್ರಭುವಾದ ವರುಣನ ಈ ಅಶ್ವವು ಯಾವುದೆಂದರೆ, ತನ್ನ ದೈನಂದಿನದ ಪರಿಭ್ರಮಣವನ್ನು ಹೊಂದುತ್ತಿರುವ ಸೂರ್ಯನಲ್ಲದೇ ಬೇರೆಯಲ್ಲ. ಈ ಅಂಶವನ್ನೇ ಹೋತೃವಾದವನು ಅಶ್ವಮೇಧದ ಎರಡನೆಯ ದಿನ ಋ. ಸಂ. ೧-೧೬೩ನೇ ಸೂಕ್ತವನ್ನು ಪಠಿಸುತ್ತಾ (ಪ್ರಕೃತವಾದ ಸೂಕ್ತವು) ಅಶ್ವರೂಪದ ಆದಿತ್ಯನನ್ನು ಸ್ತುತಿಸುತ್ತಾನೆ. (cf. ಶ. ಬ್ರಾ. ೧೩-೫-೧-೧೭ರಿಂದ ೧೮). ಸಾಯಣರೂ ಸಹ ಪ್ರಕೃತವಾದ ಋಕ್ಕಿನ ಮುಂದಿನ ಋಕ್ಕಿದ

**ಗಂಧರ್ವೋ ಅಸ್ಯ ರಶನಾಮಗೃಭ್ಣಾತ್ಸೂರಾದಶ್ವಂ ವಸವೋ ನಿರತಷ್ಟ ॥**

(ಋ. ಸಂ. ೧-೧೬೩-೨)

ಎಂಬ ವಾಕ್ಯವನ್ನುಹರಿಸಿ ಈ ಅಶ್ವದ ಮೂಲವು ಆದಿತ್ಯನೆಂದು ತೋರಿಸಿದ್ದಾರೆ.

ವರುಣನಿಗೂ ಪ್ರಜಾಪತಿಗೂ ಈ ಅಶ್ವದೊಡನೆ ಒಟ್ಟಿಗೆ ಇರತಕ್ಕ ಸಂಬಂಧವು ತೈತ್ತಿರೀಯ ಸಂಹಿತೆಯಲ್ಲಿ ಈರೀತಿ ವರ್ಣಿತವಾಗಿದೆ.

**ಪ್ರಜಾಪತಿರ್ವರುಣಾಯಾಶ್ವಮನಯಥ್ಸ ಸ್ವಾಂ ದೇವತಾಮಾರ್ಛತ್ಸ ಪರ್ಯದೀರ್ಯತ ಸ ಏತಂ ವಾರುಣಂ ಚತುಷ್ಕಪಾಲಮಪಶ್ಯತ್ತಂ ನಿರವಪತ್ತತೋ ವೈ ಸ ವರುಣಪಾಶಾದಮುಚ್ಯತ ವರುಣೋ ವಾ ಏತಂ ಗೃಹ್ಣಾತಿ ಯೋಽಶ್ವಂ ಪ್ರತಿಗೃಹ್ಣಾತಿ** ................................ ॥

(ತೈ. ಸಂ. ೨-೩-೧೨-೧)

ಪ್ರಜಾಪತಿಯು ಈ ಅಶ್ವವನ್ನು ವರುಣನಲ್ಲಿಗೆ ಕರೆದುಕೊಂಡುಹೋದನು. ಆದರೆ ಆ ಅಶ್ವವು ತನ್ನ ಸ್ವಂತ ದೇವತೆಯಲ್ಲಿಗೇ (ಪ್ರಜಾಪತಿಯಲ್ಲಿಗೇ) ಹೋಯಿತು. ಆಗ ವರುಣನಿಗೆ ಖೇದವುಂಟಾದುದರಿಂದ ಪ್ರಜಾಪತಿಯು ವರುಣನನ್ನು ಉದ್ದೇಶಿಸಿ ಚತುಷ್ಕಪಾಲವನ್ನರ್ಪಿಸಿದನು. ಆಗ ಪ್ರಜಾಪತಿಯು ವರುಣನ ಪಾಶದಿಂದ ಮುಕ್ತನಾದನು. ಎಂಬುದಾಗಿ ವಿವರಿಸಿದೆ.

ಯದಕ್ರಂದಃ—**ಮಹಾಶಬ್ದಮಕರೋಃ** ದೊಡ್ಡ ಶಬ್ದವನ್ನು ಮಾಡಿದೆ. “**ಅಥ ಯದರಸದಿವ ಸ ರಾಸಭೋಽಭವತ್**” (ಶ. ಬ್ರಾ. ೬-೧-೧-೧೧) ಇತ್ಯಾದಿಯಾಗಿ ವರ್ಣಿತವಾಗಿರುವ ಅಂಶವನ್ನು ಹೇಳಿದೆ. ಇದನ್ನು ಮೇಲೆ ವಿವರಿಸಿದೆ.

**ಪುರೀಷಾತ್—ಸರ್ವಕಾಮಾನಾಂ ಪೂರಕಾತ್ ಉದಕಾತ್।** ಎಲ್ಲಾ ಇಷ್ಟಾರ್ಥಗಳನ್ನೂ ಪೂರೈಸತಕ್ಕ ಉದಕದಿಂದ ಎಂದರ್ಥ. ನಿರುಕ್ತಕಾರರು

**ದೇವಾನಾಂ ಮಾನೇ ಪ್ರಥಮಾ ಅತಿಷ್ಠನ್ ಕೃಂತತ್ರಾದೇಷಾಮುಪರಾ ಉದಾಯನ್ ।**
**ತ್ರಯಸ್ತಪಂತಿ ಪೃಥಿವೀಮನೂಪಾ ದ್ವಾ ಬೃಬೂಕಂ ವಹತಃ ಪುರೀಷಂ ॥**

(ಋ. ಸಂ ೧೦-೨೭-೨೩)

ಎಂಬ ಋಕ್ಕನ್ನುದಹರಿಸಿ ಅಲ್ಲಿ **ಪುರೀಷ** ಶಬ್ದಕ್ಕೆ **ಪುರೀಷಂ ಪೃಣಾತೇಃ ಪೂರಯತೇರ್ವಾ** ತುಂಬು ಅಥವಾ ತೃಪ್ತಿಪಡಿಸು ಎಂಬರ್ಥವನ್ನು ಕೊಡತಕ್ಕ ಪೃ ಧಾತುವಿನಿಂದ ನಿಷ್ಪನ್ನವಾಗಿದೆಯೆಂದು ತೋರಿಸಿದ್ದಾರೆ. (ನಿ. ೨-೨೨)

**ಸಮುದ್ರಾತ್**—ಅಂತರಿಕ್ಷದಿಂದ ಅಥವಾ ಆದಿತ್ಯನಿಂದ ಎಂದು ಈ ಶಬ್ದಕ್ಕೆ ಎರಡು ವಿಧವಾದ ಅರ್ಥವನ್ನು ಮಾಡಿದೆ. ಸಮುದ್ರಶಬ್ದಕ್ಕೆ ಅಂತರಿಕ್ಷವೆಂಬರ್ಥವು ಹೇಗೆ ಸಾಧ್ಯವೆಂಬುದನ್ನು ನಿರುಕ್ತಕಾರರ ವಾಕ್ಯಗಳನ್ನುದಹರಿಸಿ ಇದೇ ಭಾಗದ ಋ ಸಂ. ೧-೧೪೯-೪ನೇ ಋಕ್ಕಿನ ವಿಶೇಷ ವಿಷಯಗಳಲ್ಲಿ ವಿವರಿಸಿದೆ.

**ಅಥವಾ, ಸಮುದ್ರಃ ಆದಿತ್ಯಃ ಸಮುಂದನಾತ್ ವೃಷ್ಟ್ಯಾ** ವೃಷ್ಟಿಯಿಂದ ಎಲ್ಲವನ್ನೂ ತೋಯುವಂತೆ ಮಾಡುವುದರಿಂದ ಆದಿತ್ಯನಿಗೂ ಸಮುದ್ರವೆಂದು ಹೆಸರೆಂದು ಸಾಯಣರು ವಿವರಿಸಿದ್ದಾರೆ.

### ವ್ಯಾಕರಣಪ್ರಕ್ರಿಯಾ

**ಅಕ್ರಂದಃ**—ಕ್ರದಿ ಆಹ್ವಾನೇ ರೋದನೇ ಚ. ಧಾತು. ಲಙ್ ಮಧ್ಯಮಪುರುಷ ಏಕವಚನದಲ್ಲಿ ಸಿಪ್. **ಇತಶ್ಚ**. ಎಂಬುದರಿಂದ ಇಕಾರಲೋಪ. ಶಪ್‌ವಿಕರಣ. **ಇದಿತೋ ನುಮ್ ಧಾತೋಃ** (ಪಾ. ಸೂ. ೭-೧-೫೮) ಎಂಬುದರಿಂದ ಧಾತುವಿಗೆ ನುಮಾಗಮ. ಯದ್ಯೋಗವಿರುವುದರಿಂದ ನಿಘಾತಸ್ವರ ಬರುವುದಿಲ್ಲ. ಅಡಾಗಮ ಉದಾತ್ತವಾದುದರಿಂದ ಆದ್ಯುದಾತ್ತವಾಗುತ್ತದೆ.

**ಜಾಯಮಾನಃ**—ಜನೀ ಪ್ರಾದುರ್ಭಾವೇ ಧಾತು. ಲಟಿಗೆ ಶಾನಚಾದೇಶ. ಶ್ಯನ್ ವಿಶರಣ. **ಜ್ಞಾಜನೋರ್ಜಾ** (ಪಾ. ಸೂ. ೭-೩-೭೯) ಎಂಬುದರಿಂದ ಧಾತುವಿಗೆ ಜಾದೇಶ. **ಆನೇಮುಕ್** (ಪಾ. ಸೂ. ೭-೨-೮೨) ಎಂಬುದರಿಂದ ಅದಂತಕ್ಕೆ ಮುಕಾಗಮ. ಲಸಾರ್ವಧಾತುಕ ಅನುದಾತ್ತವಾಗುವುದರಿಂದ ಶ್ಯನ್‌ನಿತ್ತಾದುದರಿಂದ ಆದ್ಯುದಾತ್ತಸ್ವರ ಬರುತ್ತದೆ.

**ಉದ್ಯನ್**—ಉತ್ ಉಪಸರ್ಗ. **ಇಣ್** ಗತೌ ಧಾತು. ಲಟಿಗೆಶತ್ರಾದೇಶ. **ಇಣೋಯಣ್** (ಪಾ. ಸೂ. ೬-೪-೮೧) ಎಂಬುದರಿಂದ ಧಾತುವಿಗೆ ಯಣಾದೇಶ. ಕೃದುತ್ತರಪದ ಪ್ರಕೃತಿಸ್ವರ ಬರುತ್ತದೆ.

**ಪುರೀಷಾತ್**—ಪೄ ಪಾಲನಪೂರಣಯೋಃ ಧಾತು. **ಶೄಪೄಭ್ಯಾಮೀಷನ್** (ಉ. ಸಾ ೪-೪೬೬) ಎಂಬುದರಿಂದ ಈಷನ್‌ಪ್ರತ್ಯಯ **ಞ್ನಿತ್ಯಾದಿರ್ನಿತ್ಯಮ್** (ಪಾ. ಸೂ. ೬-೧-೧೬೪) ಎಂಬುದರಿಂಡ ಆದ್ಯುದಾತ್ತಸ್ವರ ಬರುತ್ತದೆ.

**ಪಕ್ಷಾ**—ಪಣ ವ್ಯವಹಾರೇ ಸ್ತುತೌ ಚ ಧಾತು. **ಗೃಧಿಪಣ್ಯೋರ್ದಕೌ ಚ** (ಉ. ಸೂ. ೩-೩೪೯) ಎಂಬುದರಿಂದ ಸ ಪ್ರತ್ಯಯ. ಧಾತುಣಕಾರಕ್ಕೆ ಕಕಾರಾದೇಶ. ಪ್ರತ್ಯಯಸ್ವರದಿಂದ ಅಂತೋದಾತ್ತವಾಗುತ್ತದೆ. **ಸುಪಾಂ ಸುಲುಕ್** ಎಂಬುದರಿಂದ ದ್ವಿವಚನಕ್ಕೆ ಆಕಾರಾದೇಶ.

**ಉಪಸ್ತುತ್ಯಮ್**—ಷ್ಟುಞ್ ಸ್ತುತೌ. ಧಾತು. **ಏತಿಸ್ತುಶಾಸ್** (ಪಾ- ಸೂ. ೩-೧-೧೦೯) ಎಂಬುದರಿಂದ ಕ್ಯಪ್ ಪ್ರತ್ಯಯ. ಪಿತ್ತಾದುದರಿಂದ **ಹ್ರಸ್ವಸ್ಯ ಪಿತಿ ಕೃತಿ ತುಕ್** (ಪಾ. ಸೂ. ೬-೧-೭೧) ಎಂಬುದರಿಂದ ತುಕಾಗಮ. ಪ್ರತ್ಯಯ ಪಿತ್ತಾದುದರಿಂದ ಧಾತುಸ್ವರ ಉಳಿಯುತ್ತದೆ. ಪ್ರಾದಿಸಮಾಸವಾದಾಗ ಕೃದುತ್ತರ ಪದ ಪ್ರಕೃತಿಸ್ವರ ಬರುತ್ತದೆ.

**ಜಾತಮ್**—ಜನೀ ಪ್ರಾದುರ್ಭಾವೇ. ಧಾತು. ಭಾವಾರ್ಥದಲ್ಲಿ ಕ್ತ ಪ್ರತ್ಯಯ. **ಜನಸನಖನಾಂ ಸನ್ ಝಲೋಃ** (ಪಾ. ಸೂ. ೬-೪-೪೨) ಎಂಬುದರಿಂದ ಧಾತುವಿಗೆ ಆತ್ವ. ಪ್ರತ್ಯಯಸ್ವರದಿಂದ ಅಂತೋದಾತ್ತವಾಗುತ್ತದೆ.

॥ ೧ ॥

ಸಂಹಿತಾಪಾಠಃ

ಯಮೇನ ದತ್ತಂ ತ್ರಿತ ಏನಮಾಯುನಗಿಂದ್ರ ಏಣಂ ಪ್ರಥಮೋ ಅಧ್ಯ-
ತಿಷ್ಠತ್ ।
ಗಂಧರ್ವೋ ಅಸ್ಯ ರಶನಾಮಗೃಭ್ಣಾತ್ಸೂರಾದಶ್ವಂ ವಸವೋ ನಿರತಷ್ಟ ॥೨॥

ಪದಪಾಠಃ

ಯಮೇನ । ದತ್ತಂ । ತ್ರಿತಃ । ಏನಂ । ಅಯುನಕ್ । ಇಂದ್ರಃ । ಏನಂ । ಪ್ರಥಮಃ । ಅಧಿ । ಅತಿಷ್ಠತ್ ।
ಗಂಧರ್ವಃ । ಅಸ್ಯ । ರಶನಾಂ । ಅಗೃಭ್ಣಾತ್ । ಸೂರಾತ್ । ಅಶ್ವಂ । ವಸವಃ । ನಿಃ । ಅತಷ್ಟ ॥ ೨ ॥

ಸಾಯಣಭಾಷ್ಯಂ

ಯಮೇನ ನಿಯಾಮಕೇನಾಗ್ನಿನಾ ದತ್ತಮೇನಮಶ್ವಂ ತ್ರಿತಃ ಪೃಥಿವ್ಯಾದಿಷು ತ್ರಿಷು ಸ್ಥಾನೇಷು ವರ್ತಮಾನ ಸ್ತ್ರೀರ್ಣತಮೋ ವಾ ವಾಯುರಯುನಕ್ । ರಥೇ ಯೋಜಿತವಾನ್ । ಕಿಂಚೈನಮಶ್ವಮಿಂದ್ರಃ ಪ್ರಥಮಃ ಪ್ರತಮಃ ಪ್ರಕೃಷ್ಟತಮಃ । ಪ್ರಥಮ ಇತಿ ಮುಖ್ಯನಾಮ । ಅಧ್ಯತಿಷ್ಠತ್ । ಅಧಿಷ್ಠಿತವಾನ್ । ಅಸ್ಯ ಗಂಧರ್ವಃ ಸೋಮಃ । ಸೋಮೇನ ಸಮಯಾ ವಿಪೃಕ್ತ ಇತಿ ವಕ್ಷ್ಯಮಾಣತ್ವಾತ್ । ಸ ಚಾಸ್ಯಾಶ್ವಸ್ಯ ರಶನಾಂ ನಿಯಮನರಜ್ಜುಮಗೃಭ್ಣಾತ್ । ಅಗ್ರಹೀತ್ । ಈದೃಶೋಽಶ್ವಃ ಕುತಃ ಸಮುತ್ಪನ್ನ ಇತಿ ಚೇತ್ ಉಚ್ಯತೇ । ಹೇ ವಸವೋ ರಶ್ಮಯಃ ಯೂಯಂ ಸೂರಾದಾದಿತ್ಯಾದಶ್ವಮೇವಂಮಹಾನುಭಾವಂ ನಿರತಷ್ಟ । ನಿಶ್ಶೇಷೇಣ ಸಾಧು ಸಂಪಾದಿತವಂತಃ । ಯದ್ವಾ । ವಸುಶಬ್ದೇನೋಕ್ತಾ ಏವ ಯಮಾದಯಃ ಪರಾಮೃ-ಶ್ಯಂತೇ । ಹೇ ವಸವಃ ಸ್ವಸ್ವವ್ಯಾಪಾರೇಣ ಸರ್ವಸ್ಯಾಚ್ಛಾದಯಿತಾರಃ ಯೂಯಂ ಸೂರಾದಾದಿತ್ಯಾದಶ್ವ-ಮೇನಂ ನಿರತಷ್ಟ । ಅತಕ್ಷತ । ನಿರಿತ್ಯೇಷ ಸಮಿತ್ಯೇತಸ್ಯ ಸ್ಥಾನೇ । ತಕ್ಷತಿಃ ಕರೋತಿಕರ್ಮಾ । ಸ ಚ ಕ್ರಿಯಾಸಾಮಾನ್ಯವಚನಃ । ಅತ್ರೌಚಿತ್ಯಾದ್ಧಾರಣೇ ವರ್ತತೇ । ಸಮ್ಯಗ್ಧಾರಿತವಂತ ಇತ್ಯರ್ಥಃ ॥ ತಕ್ಷೇ-ರ್ಲಙಿ ಛಾಂದಸಃ ಶಪೋ ಲುಕ್ । ಸ್ಕೋಃ ಸಂಯೋಗಾದ್ಯೋರಿತಿ ಕಲೋಪಃ ॥

। ಪ್ರತಿಪದಾರ್ಥ ।

**ಯಮೇನ**—ಯಮನಿಂದ । **ದತ್ತಂ**—ಕೊಡಲ್ಪಟ್ಟ । **ಏನಂ**—ಈ ಅಶ್ವವನ್ನು । **ತ್ರಿತಃ**—ಪೃಥಿವ್ಯಾದಿ ಮೂರು ಸ್ಥಾನಗಳಲ್ಲಿ ಸಂಚರಿಸತಕ್ಕ ವಾಯುವು । **ಅಯುನಕ್**—ರಥಕ್ಕೆ ಸೇರಿಸಿದನು । **ಏನಂ**—ಈ ಅಶ್ವವನ್ನು । **ಪ್ರಥಮಃ**—ಶ್ರೇಷ್ಠನಾದ । **ಇಂದ್ರಃ**—ಇಂದ್ರನು । **ಅಧ್ಯತಿಷ್ಠತ್**—ಹತ್ತಿ ಕುಳಿತನು । **ಗಂಧರ್ವಃ**—ಸೋಮ ರಾಜನು । **ಅಸ್ಯ**— ಈ ಅಶ್ವದ । **ರಶನಾಂ**—ಲಗಾಮನ್ನು । **ಅಗೃಭ್ಣಾತ್**—ಹಿಡಿದನು । **ವಸವಃ**—ಸೂರ್ಯ ರಶ್ಮಿಗಳು ಅಥವಾ ಯಮಾದಿಗಳು । **ಅಶ್ವಂ**—ಈ ಅಶ್ವವನ್ನು । **ಸೂರಾತ್**—ಆದಿತ್ಯನಿಂದ । **ನಿರತಷ್ಟ**—ಸಂಪಾದಿಸಿದರು.

ಭಾವಾರ್ಥ

ಯಮನಿಂದ ದತ್ತವಾದ ಈ ಅಶ್ವವನ್ನು ಪೃಥಿವ್ಯಾದಿಮೂರು ಸ್ಥಾನಗಳಲ್ಲಿ ಸಂಚರಿಸತಕ್ಕ ವಾಯುವು ರಥಕ್ಕೆ ಸೇರಿಸಿದನು. ಈ ಅಶ್ವವನ್ನು ಶ್ರೇಷ್ಠವಾದ ಇಂದ್ರನು ಹತ್ತಿ ಕುಳಿತನು. ಸೋಮರಾಜನು ಈ ಅಶ್ವದ ಲಗಾಮನ್ನು ಹಿಡಿದನು. ಸೂರ್ಯರಶ್ಮಿಗಳು ಅಥವಾ ಯಮಾದಿಗಳು ಈ ಅಶ್ವವನ್ನು ಆದಿತ್ಯನಿಂದ ಸಂಪಾದಿಸಿದರು.

English Translation

Trita harnessed the horse which was given by Yama: Indra first mounted him, and Gandharva seized his reins. Vasus, you fabricated the horse from the sun.

ವಿಶೇಷವಿಷಯಗಳು

ಈ ಋಕ್ಕಿನಲ್ಲಿ ಮೇಧ್ಯಾಶ್ವಕ್ಕೂ ಅಗ್ನಿಗೂ, ಹಾಗೆಯೇ ಇಂದ್ರಾದಿಗಳಿಗೂ ಇರತಕ್ಕ ಸಂಬಂಧವನ್ನು ತಿಳಿಸಿದೆ.

**ಯಮೇನ ದತ್ತಂ**— **ಯಮೇನ ನಿಯಾಮಕೇನ ಅಗ್ನಿನಾ** ಎಂದು **ಯಮ** ಶಬ್ದಕ್ಕೆ **ಅಗ್ನಿ**ಯೆಂದರ್ಥ ಮಾಡಿದೆ.

**ಯಮೋ ಯಚ್ಛತೀತಿ ಸತಃ । ಅಗ್ನಿರಪಿ ಯಮ ಉಚ್ಯತೇ ।**

(ನಿ. ೧೦-೧೯)

ನಿಯಮಿಸುವ ಸಾಮರ್ಥ್ಯವಿರುವುದರಿಂದ **ಅಗ್ನಿಗೂ** ಯಮನೆಂದು ಹೆಸರು ಎಂದು ನಿರುಕ್ತಕಾರರು ಹೇಳಿರುವರು.

**ಯಮೋ ಹ ಜಾತೋ ಯಮೋ ಜನಿತ್ವಂ ಜಾರಃ ಕನೀನಾಂ ಪತಿರ್ಜನೀನಾಂ ।**

(ಋ. ಸಂ. ೧-೬೬-೮)

ಎಂಬ ಋಕ್ಕನ್ನುದಹರಿಸಿ ಅಲ್ಲಿ **ಯಮ** ಶಬ್ದವು **ಅಗ್ನಿಪರ್ಯಾಯ**ವೆಂದು ತೋರಿಸಿದ್ದಾರೆ. ಸಾಯಣರು ಉದಾಹೃತವಾದ ಋಕ್ಕನಲ್ಲಿ ಈ ಪದಕ್ಕೆ ಎರಡು ವಿಧವಾದ ಅರ್ಥವನ್ನು ಮಾಡಿದ್ದಾರೆ. **ಯಚ್ಛತಿ ದದಾತಿ ಸ್ತೋತೃಭ್ಯಃ ಕಾಮಾನಿತಿ ಯಮೋಽಗ್ನಿರುಚ್ಯತೇ** । ಭಕ್ತರಿಗೆ ಇಷ್ಟಾರ್ಥಗಳನ್ನು ಕೊಡಿಸಿಕೊಡುವುದರಿಂದ ಅಗ್ನಿಗೆ ಯಮನೆಂದ ಹೆಸರೆಂದು ಒಂದು ವಿಧವಾಗಿಯೂ, ಅಥವಾ **ಇಂದ್ರಾಗ್ನ್ಯೋರ್ಯುಗಪದುತ್ಪನ್ನತ್ವಾದಗ್ನೇರ್ಯಮತ್ವಂ।** ಇಂದ್ರನೂ ಅಗ್ನಿಯೂ ಒಟ್ಟಿಗೆ ಉತ್ಪನ್ನರಾದುದರಿಂದ ಅಗ್ನಿಗೆ ಯಮನೆಂದು ಹೆಸರೆಂದು ಇನ್ನೊಂದು ವಿಧವಾಗಿಯೂ ಅರ್ಥಮಾಡಿದ್ದಾರೆ. **ಯಮೋ ಹ ಜಾತ ಇಂದ್ರೇಣ ಸಹ ಸಂಗತಃ** ಎಂಬ ನಿರುಕ್ತಕಾರರ ವಾಕ್ಯವು ಈ ಎರಡನೆಯ ಅರ್ಥವನ್ನು ಸಮರ್ಥಿಸುತ್ತದೆ. ಅದೇ ಅಲ್ಲದೇ,

**ಬಳಿತ್ಥಾ ಮಹಿಮಾ ವಾಮಿಂದ್ರಾಗ್ನೀ ಪನಿಷ್ಠ ಆ ।**
**ಸಮಾನೋ ವಾಂ ಜನಿತಾ ಭ್ರಾತರಾ ಯುವಂ ಯಮಾವಿಹೇಹಮಾತರಾ ॥**

(ಋ. ಸಂ. ೬-೫೯-೨)

ಎಂಬಲ್ಲಿ **ಯುವಂ ಯಮೌ** ನೀವಿಬ್ಬರೂ ಒಟ್ಟಿಗೆ ಹುಟ್ಟಿದವರು ಎಂದು ಇಂದ್ರಾಗ್ನಿಗಳ ಸಹಕಾಲೀನವಾದ ಉತ್ಪತ್ತಿಯನ್ನು ಹೇಳಿರುವುದರಿಂದಲೂ ಸಹ ಎರಡನೆಯ ಅರ್ಥವನ್ನು ಹೇಳಬಹುದು.

ಇಲ್ಲಿ ಯಮನಿಂದ ದತ್ತವಾದುದು, ಇಂದ್ರನಿಂದ ಅಧಿಷ್ಠಿತವಾದುದು ಇತ್ಯಾದಿವರ್ಣನೆಗಳಿಗೆ ಸಂದರ್ಭವಾವುದೆಂಬುದನ್ನು ನಿಷ್ಕೃಷ್ಟವಾಗಿ ಹೇಳುವುದಕ್ಕೆ ಸರಿಯಾದ ಆಧಾರವು ಸಿಕ್ಕುವುದು ಕಷ್ಟ. ಸಾಯಣರೂ ಸಹ ಈ ಋಕ್ಕಿಗೆ ಅರ್ಥಮಾಡಲು ಶ್ರಮಪಟ್ಟಿದ್ದಾರೆ. ಮೊದಲು ಮೇಲೆ ಪ್ರತಿಪದಾರ್ಥದಲ್ಲಿ ಹೇಳಿರುವ ಅರ್ಥವನ್ನು ಹೇಳಿ ಅನಂತರ **ಯದ್ವಾ ವಸುಶಬ್ದೇನೋಕ್ತಾ ಏವ ಯಮಾದಯಃ ಪ್ರತಿಪದ್ಯಂತೇ । ಹೇ ವಸವಃ ಸ್ವಸ್ವವ್ಯಾಪಾರೇಣ ಸರ್ವಸ್ಯಾಚ್ಛಾದಯಿತಾರಃ ಯೂಯಂ ಸೂರಾದಾದಿತ್ಯಾತ್ ಅಶ್ವಂ ಅತಕ್ಷತ ।** ಎಲೈ ವಸುಗಳೇ, (ಎಂದರೆ ಋಕ್ಕಿನಲ್ಲಿ ಉಕ್ತವಾದ ಯಮಾದಿಗಳೇ) ನೀವು ನಿಮ್ಮ ನಿಮ್ಮ ವ್ಯಾಪಾರಗಳಿಂದ ಎಲ್ಲವನ್ನೂ ವ್ಯಾಪಿಸುವವರಾಗಿ ಆದಿತ್ಯನಿಂದ ಅಶ್ವವನ್ನು ನಿರ್ಮಿಸಿದಿರಿ ಮತ್ತು ಯಜ್ಞಕ್ಕಾಗಿ ಪ್ರೇರಿಸಿದಿರಿ ಎಂಬರ್ಥವುಂಟೆಂದೂ ತಿಳಿಸಿದ್ದಾರೆ. ಈ ಸಂದರ್ಭವನ್ನು ಸೂಕ್ಷ್ಮವಾಗಿ ಶತಪಥದಲ್ಲಿ ಈರೀತಿ ವರ್ಣಿಸಿದೆ.

**ಯುಂಜಂತಿ ಬ್ರಧ್ನಮರುಷಂ ಚರಂತಮಿತಿ । ಅಸೌ ವಾ ಆದಿತ್ಯೋ ಬ್ರಧ್ನೋಽರುಷೋಽಮುಮೇವಾಸ್ಮಾ ಆದಿತ್ಯಂ ಯುನಕ್ತಿ ಸ್ವರ್ಗಸ್ಯ ಲೋಕಸ್ಯ ಸಮಷ್ಟ್ಯೈ ॥**

(ಶ. ಬ್ರಾ. ೧೩-೨-೬-೧)

ಸ್ವರ್ಗಲೋಕದ ಪ್ರಾಪ್ತಿಗಾಗಿ ಅರುಷವರ್ಣದ (ಕೆಂಪುಬಣ್ಣದ) ಅಶ್ವವನ್ನು ಯೋಜಿಸುತ್ತಾರೆ. ಆದಿತ್ಯನೇ ಈ ಅಶ್ವವು.

**ತದಾಹುಃ । ಪರಾಙ್ ವಾ ಏತಸ್ಮಾದ್ಯಜ್ಞ ಏತಿ ಯಸ್ಯ ಪಶುರುಪಾಕೃತೋಽನ್ಯತ್ರ ವೇದೇರೇತೀತ್ಯೇತಗ್ಂ ಸ್ತೋತರನೇನ ಪಥಾ ಪುನರಶ್ವಮಾವರ್ತಯಾಸಿ ನ ಇತಿ ವಾಯುರ್ವೈ ಸ್ತೋತಾ ತಮೇವಾಸ್ಮಾ ಏತತ್ಪರಸ್ತಾದ್ದಧಾತಿ ತಥಾ ನಾತ್ಯೇತಿ ॥**

(ಶ. ಬ್ರಾ. ೧೩-೨-೬-೨)

ಅಶ್ವವು ವೇದಿಯಿಂದ ಹೊರಕ್ಕೆ ಇದ್ದರೆ ಯಜ್ಞವೂ ಸಹ ವೇದಿಯೊಳಗೆ (ಅಶ್ವವು) ಇರುವುದಿಲ್ಲವಾದುದರಿಂದ ಎಲೈ ಸ್ತೋತೃವೇ, ಅಶ್ವವನ್ನು ಅದರ ನಿರ್ದಿಷ್ಟವಾದ ಸ್ಥಾನದಲ್ಲಿರುವಂತೆ ಮಾಡು ಎಂದು ಪ್ರಾರ್ಥಿಸಿದೆ. ವಾಯುವೇ ಈ ಸ್ತೋತೃವು. ಪ್ರಾರ್ಥಿತನಾದೊಡನೆಯೇ ವಾಯುವು ಅಶ್ವವನ್ನು ನಿರ್ದಿಷ್ಟವಾದ ಸ್ಥಾನದಲ್ಲಿರುವಂತೆ ಮಾಡುತ್ತಾನೆ. ಎಂದರೆ ಅದರ ಸಂಚಾರವನ್ನು ಬಂಧಿಸುತ್ತಾನೆ.

**ವಸವಸ್ತ್ವಾಂಜಂತು ಗಾಯತ್ರೇಣ ಛಂದಸಾ ॥** ಇತ್ಯಾದಿಯಾಗಿ ಮಹಿಷಿಯು ಅಶ್ವವನ್ನು ಪ್ರಶಂಸಿಸುತ್ತಾಳೆ. ಈ ವರ್ಣನೆಯಲ್ಲಿ ಪ್ರಕೃತವಾದ ಋಕ್ಕಿನಲ್ಲಿ ವರ್ಣಿತವಾಗಿರುವ ಸನ್ನಿವೇಶವು ಕಥಾದೃಷ್ಟಿಯಿಂದ ಸೂಚಿತವಾಗಿಲ್ಲದಿದ್ದರೂ ಸಹ ವಾಯ್ವಾದಿಗಳು ಮೇಧ್ಯಾಶ್ವವನ್ನು ಯಜ್ಞಾರ್ಹವನ್ನಾಗಿ ಮಾಡತಕ್ಕ ವಿವರಣೆಯಿದೆ. ಇದನ್ನೇ ತೈತ್ತಿರೀಯಸಂಹಿತೆಯಲ್ಲಿ,

**ಕ್ರವ್ಯೈರತ್ಯಕ್ರಮೀದ್ವಾಜೀ ವಿಶ್ವೈರ್ದೇವೈರ್ಯಜ್ಞಿಯೈಸ್ಸಂವಿದಾನಃ ।**

(ತೈ. ಸಂ. ೫-೭-೨೪)

ಎಂದು ವಿವರಿಸಿದೆ. ಈ ವಾಕ್ಯಕ್ಕೆ ವಿಶ್ವೈರ್ದೇವೈಃ ಯಜ್ಞಿಯೈಃ ಯಜ್ಞಾರ್ಹೈಃ ಸಂವಿದಾನಃ ಐಕಮತ್ಯಂ ಗತಃ । ವಿಶ್ವೇದೇವತೆಗಳೊಂದಿಗೆ ಒಂದಾದುದಾಗಿ ತಿಳಿಸಿದೆ. ಎಂದರೆ ಅವರ ಅಂಶವೆಲ್ಲವೂ ಅಶ್ವದಲ್ಲಿ ಅಡಗಿದ್ದಿತು ಎಂದರ್ಥವು- ಇದನ್ನೇ,

> **ದ್ಯೌಸ್ತೇ ಪೃಷ್ಠಂ ಪೃಥಿವೀ ಸಧಸ್ಥಮಾತ್ಮಾಂತರಿಕ್ಷಗ್ಂ ಸಮುದ್ರೋ ಯೋನಿಸ್ಸೂರ್ಯಸ್ತೇ ಚಕ್ಷು-ರ್ವಾತಃ ಪ್ರಾಣಶ್ಚಂದ್ರಮಾಶ್ಶ್ರೋತ್ರಂ ॥**
>
> (ತೈ. ಸಂ. ೫-೮.೨೫)

ಇತ್ಯಾದಿಯಾಗಿ ವರ್ಣಿಸಿದೆ.

**ತ್ರಿತಃ—ಪೃಥಿವ್ಯಾದಿತ್ರಿಷು ಸ್ಥಾನೇಷು ವರ್ತಮಾನಃ ತೀರ್ಣತಮೋ ವಾ ವಾಯುಃ ।** ಪೃಥಿವ್ಯಾದಿ ಮೂರು ಸ್ಥಾನಗಳಲ್ಲಿರುವುದರಿಂದಾಗಲಿ ಅಥವಾ ಅತ್ಯಂತವೇಗಶಾಲಿಯೆಂಬುದರಿಂದಾಗಲಿ ಈ ಹೆಸರು ಪ್ರಸಿದ್ಧವೆಂದು ವಿವರಿಸಿದೆ. ಈ ವಿಶೇಷಣವು ಇಂದ್ರನ ಸ್ವರೂಪವನ್ನೂ ತಿಳಿಸುತ್ತದೆ ನಿರುಕ್ತಕಾರರು,

> **ಪಿತುಂ ನು ಸ್ತೋಷಂ ಮಹೋ ಧರ್ಮಾಣಂ ತವಿಷೀಂ ।**
> **ಯಸ್ಯ ತ್ರಿತೋ ವ್ಯೋಜಸಾ ವೃತ್ರಂ ವಿಪರ್ವಮರ್ದಯತ್ ॥**
>
> (ಋ. ಸಂ. ೧.೧೮೭-೧)

ಎಂಬ ಋಕ್ಕಿನಲ್ಲಿರುವ ತ್ರಿತಶಬ್ದವನ್ನು ವಿವರಿಸುವಾಗ **ಓಜಸಾ ಬಲೇನ ತ್ರಿತಃ ತ್ರಿಸ್ಥಾನ ಇಂದ್ರಃ** ಎಂದು ಅರ್ಥ ಮಾಡಿದ್ದಾರೆ. ಇಂದ್ರನಿಗೂ ವಾಯುವಿಗೂ ತಾದಾತ್ಮ್ಯವನ್ನು ಹೇಳುವ ಸನ್ನಿವೇಶಗಳೂ ಇವೆ. ಆದರೆ ಪ್ರಕೃತವಾದ ಋಕ್ಕಿನಲ್ಲಿ ಇಂದ್ರನ ಹೆಸರು ಸ್ಪಷ್ಟವಾಗಿ ಪುನಃ ಉಕ್ತವಾಗಿರುವುದರಿಂದ ಇಲ್ಲಿ ವಾಯುವೆಂದೇ ಅರ್ಥಮಾಡಬೇಕು.

**ವಸವಃ—**ಈ ಪದಕ್ಕೆ ಯಮಾದಿ (ಅಗ್ನ್ಯಾದಿ) ದೇವತೆಗಳೆಂದು ಒಂದರ್ಥವನ್ನೂ, ಸೂರ್ಯರಶ್ಮಿಗಳೆಂದು ಇನ್ನೊಂದು ಅರ್ಥವನ್ನೂ ಹೇಳಿದ್ದಾರೆ. ಈ ಪದಕ್ಕೆ ನಿರುಕ್ತಕಾರರು ಈರೀತಿ ನಿರ್ವಚನವನ್ನು ಹೇಳಿದ್ದಾರೆ.

> **ವಸವಃ—ವಸವೋ ಯದ್ವಿವಸತೇ ಸರ್ವಮಗ್ನಿರ್ವಸುಭಿರ್ವಾಸವ ಇತಿ ಸಮಾಖ್ಯಾ, ತಸ್ಮಾತ್ಪೃಥಿ-ವೀಸ್ಥಾನಾಃ । ಇಂದ್ರೋ ವಸುಭಿರ್ವಾಸವ ಇತಿ ಸಮಾಖ್ಯಾ, ತಸ್ಮಾನ್ಮಧ್ಯಸ್ಥಾನಾಃ । ವಸವ ಆದಿತ್ಯರಶ್ಮಯೋ ವಿವಾಸನಾತ್ತಸ್ಮಾದ್ದ್ಯುಸ್ಥಾನಾಃ ॥**
>
> (ನಿ ೧೨-೪೧)

ಎಲ್ಲವನ್ನೂ ಹೊದಿಕೆಯ ರೂಪದಲ್ಲಿ ವ್ಯಾಪಿಸುವುದರಿಂದ ಅಗ್ನಿಗೆ ವಾಸವನೆಂದು ಹೆಸರು. ಆದುದರಿಂದ ಪೃಥ್ವೀಸ್ಥಾನದ ದೇವತೆಯಾಗಬಹುದು. ಇದೇ ಗುಣವನ್ನು ಹೊಂದಿರುವುದರಿಂದ ಇಂದ್ರನಿಗೂ ವಾಸವನೆಂದು ಹೆಸರು. ಆದುದರಿಂದ ಮಧ್ಯಸ್ಥಾನ ದೇವತೆಯ ಹೆಸರಾಗಬಹುದು. ಅತ್ಯಂತ ಪ್ರಕಾಶಮಾನವಾಗಿರುವುದರಿಂದ ಆದಿತ್ಯರಶ್ಮಿಗಳಿಗೂ ವಸುಗಳೆಂದು ಹೆಸರು. ಆದರಿಂದ ದ್ಯುಲೋಕದ ದೇವತೆಯ ಹೆಸರಾಗಬಹುದು. ಎಂದು ಈ ಪದದ ವಿಸ್ತೃತವಾದ ಅರ್ಥವನ್ನು ತಿಳಿಸಿ ಇದರ ಸಮರ್ಥನೆಗೆ--

> **ಸ್ವಗಾ ವೋ ದೇವಾಸ್ಸದನಮಕರ್ಮ ಯ ಆಜಗ್ಮ ಸವನೇದಂ ಜುಷಾಣಾಃ ।**
> **ಜಕ್ಷಿವಾಗ್ಂಸಃ ಪಪಿವಾಗ್ಂಸಶ್ಚ ವಿಶ್ವೇಸ್ಮೇ ಧತ್ತ ವಸವೋ ವಸೂನಿ ॥**
>
> (ತೈ. ಸಂ. ೧-೪-೪೪-೨)

ಎಂಬ ವಾಕ್ಯವನ್ನುದಹರಿಸಿ ಅಲ್ಲಿ **ವಸುವೆಂಬ** ಪದಕ್ಕಿರತಕ್ಕ ವಿಸ್ತೃತವಾದ ಅರ್ಥವನ್ನು ತೋರಿಸಿದ್ದಾರೆ. ಪ್ರಕೃತವಾದ ಋಕ್ಕಿನಲ್ಲಿಯೂ ಸಹ ಸಾಯಣರು ಇದೇ ರೀತಿಯ ತಾತ್ಪರ್ಯವನ್ನು ಹೇಳಿದ್ದಾರೆ. ಆದುದರಿಂದ ಯಜ್ಞಾಶ್ವವು ಮೂರು ಲೋಕಗಳಲ್ಲಿಯೂ ತನ್ನ ಪ್ರಭಾವವನ್ನು ಬೀರಿ ಮೂರು ಲೋಕಗಳ ವ್ಯವಹಾರಗಳಿಗೂ ಸಹ ಸಹಾಯವನ್ನು ಮಾಡಿತೆಂದೂ ಹೇಳಬಹುದು. ಇದೇ ಅಭಿಪ್ರಾಯವನ್ನು ತೈತ್ತಿರೀಯ ಸಂಹಿತೆಯಲ್ಲಿಯೂ ಸಹ ಬೇರೆ ವಾಕ್ಯಗಳಿಂದ ಸೂಚಿಸಿದೆ.

> **ಆಕ್ರಾನ್ವಾಜೀ ಪೃಥಿವೀಮಗ್ನಿಂ ಯುಜಮಕೃತ ವಾಜ್ಯರ್ವಾಕ್ರಾನ್ ವಾಜ್ಯಂತರಿಕ್ಷಂ ವಾಯುಂ ಯುಜಮಕೃತ ವಾಜ್ಯರ್ವಾ ದ್ಯಾಂ ವಾಜ್ಯಾಕ್ರಗ್‌ಂಸ್ತ ಸೂರ್ಯಂ ಯುಜಮಕೃತ ವಾಜ್ಯರ್ವಾ-ಗ್ನಿಸ್ತೇ ವಾಜಿನ್ ಯುಙ್ಙನು ತ್ವಾರಭೇ ಸ್ವಸ್ತಿ ಮಾ ಸಂ ಪಾರಯ ವಾಯುಸ್ತೇ ವಾಜಿನ್ ಯುಙ್ಙನು ತ್ವಾರಭೇ ಸ್ವಸ್ತಿಮಾ ಸಂ ಪಾರಯ ॥**
>
> (ತೈ. ಸಂ. ೭-೫-೧೯)

ಈ ಭಾವವು ಮುಂದಿನ ಋಕ್ಕಿನಲ್ಲಿಯೂ ಸೂಚಿತವಾಗಿರುವುದರಿಂದ ಈ ಸಂಹಿತಾವಾಕ್ಯಗಳ ಅರ್ಥವನ್ನು ಮುಂದಿನ ಋಕ್ಕಿನಲ್ಲಿ ವಿವರಿಸಲಾಗುತ್ತದೆ.

### ವ್ಯಾಕರಣಪ್ರಕ್ರಿಯಾ

**ದತ್ತಮ್**—ಡುದಾಞ್ ದಾನೇ ಧಾತು. **ನಿಷ್ಠಾ** ಎಂಬುದರಿಂದ ಕ್ತ ಪ್ರತ್ಯಯ. **ದೋದದ್‌ಘೋಃ**-(ಪಾ. ಸೂ. ೭-೪-೪೬) ಎಂಬುದರಿಂದ ಧಾತುವಿಗೆ ದಥ್ ಆದೇಶ. **ಖರಿ ಚ** ಎಂಬುದರಿಂದ ಚರ್ತ್ವ. ಪ್ರತ್ಯಯ ಸ್ವರದಿಂದ ಅಂತೋದಾತ್ತವಾಗುತ್ತದೆ.

**ಅಯುನಕ್**—ಯುಜಿರ್ ಯೋಗೇ ಧಾತು. ಲಙ್ ಪ್ರಥಮಪುರುಷಏಕವಚನದಲ್ಲಿ ತಿಪ್ ಪ್ರತ್ಯಯ. **ಇತಶ್ಚ** ಎಂಬುದರಿಂದ ಅದರ ಇಕಾರಕ್ಕೆ ಲೋಪ **ರುಧಾದಿಭ್ಯಃ ಶ್ನಮ್** (ಪಾ. ಸೂ. ೩-೧-೭೮) ಎಂಬುದರಿಂದ ಶ್ನಮ್ ವಿಕರಣ. ಮಿತ್ತಾದುದರಿಂದ ಅಂತ್ಯಾಚಿನ ಪರವಾಗಿ ಬರುತ್ತದೆ. **ಹಲ್‌ಙ್ಯಾಭ್ಯೋದೀ**—ಸೂತ್ರದಿಂದ ಪ್ರತ್ಯಯಕ್ಕೆ ಲೋಪ. **ಚೋಃಕುಃ**—ಎಂಬುದರಿಂದ ಚಕಾರಕ್ಕೆ ಕುತ್ವ. **ವಾವಸಾನೇ** ಸೂತ್ರದಿಂದ ಚರ್ತ್ವ. ಅಂಗಕ್ಕೆ ಅಡಾಗಮ. ಅತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

**ಅತಿಷ್ಠತ್**—ಷ್ಠಾ ಗತಿನಿವೃತ್ತೌ ಧಾತು. ಲಙ್ ಪ್ರಥಮಪುರುಷಏಕವಚನಾಂತರೂಪ. ತಿಙಂತನಿಘಾತಸ್ವರ ಬರುತ್ತದೆ.

**ರಶನಾಮ್**—ಅಶೂ ವ್ಯಾಪ್ತೌ ಧಾತು. **ಅಶೇರಚ** (ಉ. ಸೂ. ೨-೨೩೩) ಎಂಬುದರಿಂದ ಯುಚ್ ಪ್ರತ್ಯಯ. ಪ್ರಕೃತಿಗೆ ಅಶಾದೇಶ. **ಯುವೋರನಾಕೌ** (ಪಾ. ಸೂ. ೭-೧-೧) ಎಂಬುದರಿಂದ ಅನಾದೇಶ. ಚಿತ್ತಾದುದರಿಂದ ಅಂತೋದಾತ್ತಸ್ವರ ಬರುತ್ತದೆ.

**ಅಗೃಭ್ಣಾತ್**—ಗ್ರಹ ಉಪಾದಾನೇ ಧಾತು. **ಕ್ರ್ಯಾದಿ.** ಪ್ರಥಮಪುರುಷಏಕವಚನರೂಪ. **ಹೃಗ್ರಹೋರ್ಭಶ್ಛಂದಸಿ** ಎಂಬುದರಿಂದ ಹಕಾರಕ್ಕೆ ಭತ್ವ. ತಿಙಂತನಿಘಾತಸ್ವರ ಬರುತ್ತದೆ.

**ಸೂರಾತ್**—ಷೂಙ್ ಪ್ರಾಣಿಗರ್ಭವಿಮೋಚನೇ ಧಾತು. **ಸುಸೂಧಾಗೃಧಿಭ್ಯಃ ಕ್ರನ್** (ಉ. ಸೂ. ೨-೧೮೨) ಎಂಬುದರಿಂದ ಕ್ರನ್ ಪ್ರತ್ಯಯ. ಕಿತ್ತ್ವಾದುದರಿಂದ ಗುಣ ಬರುವುದಿಲ್ಲ. ನಿತ್ತ್ವಾದುದರಿಂದ ಆದ್ಯುದಾತ್ತಸ್ವರ ಬರುತ್ತದೆ.

**ಅತಕ್ಷ್ಟ**—ತಕ್ಷೂ ಛೇದನೇ ಧಾತು. ಲಙ್ ಮಧ್ಯಮಪುರುಷಬಹುವಚನಕ್ಕೆ **ತಸ್ಥಸ್ಥ**—(ಪಾ. ಸೂ. ೩-೪-೧೦೧) ಎಂಬುದರಿಂದ ತಾದೇಶ. **ಬಹುಲಂ ಛಂದಸಿ** ಎಂಬುದರಿಂದ ಶಪಿಗೆ ಲುಕ್. **ಸ್ಕೋಃಸ್ಸಂಯೋಗಾದ್ಯೋಃ**-(ಪಾ. ಸೂ. ೮-೨-೨೯) ಎಂಬುದರಿಂದ ಕಕಾರಕ್ಕೆ ಲೋಪ. ಪ್ರತ್ಯಯಕ್ಕೆ ಷ್ಟುತ್ವ. ಅಂಗಕ್ಕೆ ಅಡಾಗಮ. ತಿಙಂತನಿಘಾತಸ್ವರ ಬರುತ್ತದೆ. ॥ ೨ ॥

---

ಸಂಹಿತಾಪಾಠಃ

ಅಸಿ ಯಮೋ ಅಸ್ಯಾದಿತ್ಯೋ ಅರ್ವನ್ನಸಿ ತ್ರಿತೋ ಗುಹ್ಯೇನ ವ್ರತೇನ ।
ಅಸಿ ಸೋಮೇನ ಸಮಯಾ ವಿಪೃಕ್ತ ಆಹುಸ್ತೇ ತ್ರೀಣಿ ದಿವಿ ಬಂಧನಾನಿ ।
॥ ೩ ॥

ಪದಪಾಠಃ

ಅಸಿ । ಯಮಃ । ಅಸಿ । ಆದಿತ್ಯಃ । ಅರ್ವನ್ । ಅಸಿ । ತ್ರಿತಃ । ಗುಹ್ಯೇನ । ವ್ರತೇನ ।
ಅಸಿ । ಸೋಮೇನ । ಸಮಯಾ । ವಿऽಪೃಕ್ತಃ । ಆಹುಃ । ತೇ । ತ್ರೀಣಿ । ದಿವಿ । ಬಂಧನಾನಿ ॥ ೩ ॥

ಸಾಯಣಭಾಷ್ಯಂ

ಹೇ ಅರ್ವನ್ ತ್ವಂ ಯಮೋಽಸಿ । ನಿಯಮಿತಾಗ್ನಿರಸಿ । ತೇನ ದತ್ತತ್ವಾತ್ತಚ್ಛಬ್ದವ್ಯಪದೇಶಃ । ತಥಾದಿತ್ಯೋಽಸಿ । ಸೂರಾನ್ನಿರತಷ್ಟೇತ್ಯುಕ್ತತ್ವಾತ್ । ತಥಾ ಗುಹ್ಯೇನ ವ್ರತೇನ ಗೋಪನಿಯೇನ ದುರ್ನಿರೂಪೇಣ ವಾ ಕರ್ಮಣಾ । ಸರ್ವತ್ರವ್ಯಾಪ್ತಿರೂಪೇಣೇತ್ಯರ್ಥಃ । ತೇನ ತ್ರಿತಸ್ತ್ರಿಷು ಸ್ಥಾನೇಷು ತಾಯಮಾನೋ ವಾಯುರಸಿ । ತ್ರಿತ ಏನಮಾಯುನಗಿತ್ಯುಕ್ತತ್ವಾತ್ತದ್ರೂಪತ್ವಂ । ಅಥವಾ ಗುಹ್ಯೇನ ವ್ರತೇನ ಗೋಪನೀಯೇನ ಕರ್ಮಣಾ ಯೋಗಾದಿಸಾಧನರೂಪೇಣ ತ್ರಿತ ಏತನ್ನಾಮಕ ಋಷಿರಸಿ । ಕಿಂಚ ಹೇ ಅಶ್ವ ತ್ವಂ ಸೋಮೇನ ಸಮಯಾ ಸಹ ವಿಪೃಕ್ತಃ । ವಿಶ್ಲೇಷ ಸಮಿತ್ಯೇತಸ್ಮಿನ್ನರ್ಥೇ । ಸಂಪೃಕ್ತೋಽಸಿ ತೇನ ಗೃಹೀತತ್ವಾತ್ । ಹೇ ಅಶ್ವೈವಂರೂಪ ತೇ ತವ ದಿವಿ ದ್ಯುಲೋಕ ಆದಿತ್ಯೇ ವಾ ವರ್ತಮಾನಸ್ಯ ತ್ರೀಣಿ ಬಂಧನಾನ್ಯುತ್ಪತ್ತಿಕಾರಣಾನ್ಯಾಹುಃ ಪುರಾವಿದಃ । ವಸವ ಆದಿತ್ಯೋ ದ್ಯುಸ್ಥಾನಂ ಚೇತಿ ತ್ರೀಣಿ ॥

### ಪ್ರತಿಪದಾರ್ಥ

(ಹೇ) **ಅರ್ವನ್**—ಎಲೈ ಅಶ್ವವೇ । (**ತ್ವಂ**—ನೀನು) । **ಯಮಃ**—ಅಗ್ನಿಯಾಗಿ । **ಅಸಿ**—ಆಗಿದ್ದೀಯೆ. **ಆದಿತ್ಯಃ**—ಆದಿತ್ಯರೂಪನಾಗಿ । **ಅಸಿ**—ಆಗಿದ್ದೀಯೆ । **ಗುಹ್ಯೇನ**—ರಹಸ್ಯಾತ್ಮಕವಾದ । **ವ್ರತೇನ**—ಕರ್ಮದಿಂದ । **ತ್ರಿತಃ**—ವಾಯುರೂಪನಾಗಿ । **ಅಸಿ**—ಆಗಿದ್ದೀಯೆ । **ಸೋಮೇನ ಸಮಯಾ**—ಸೋಮನೊಂದಿಗೆ । **ವಿಪೃಕ್ತಃ**—ಸಂಬಂಧಿಸಿದವನಾಗಿ । **ಅಸಿ**—ಆಗಿದ್ದೀಯೆ । **ತೇ**—ನಿನಗೆ । **ದಿವಿ**—ದ್ಯುಲೋಕದಲ್ಲಿ । **ತ್ರೀಣಿ-ಬಂಧನಾನಿ**—ಮೂರು ವಿಧವಾದ ಬಂಧನಗಳು ಇರುವುವೆಂದು । **ತೇ**—ತತ್ತ್ವಜ್ಞರು । **ಆಹುಃ**—ಹೇಳುತ್ತಾರೆ.

### ಭಾವಾರ್ಥ

ಎಲೈ ಅಶ್ವವೇ, ನೀನು ಅಗ್ನಿರೂಪನಾಗಿಯೂ, ವಾಯ್ವಾತ್ಮಕನಾಗಿಯೂ, ನಿನ್ನ ರಹಸ್ಯವಾದ ಕರ್ಮದಿಂದ ಸೋಮನೊಂದಿಗೆ ಸಂಬಂಧಿಸಿದವನಾಗಿಯೂ, ಮತ್ತು ಆದಿತ್ಯರೂಪದವನಾಗಿಯೂ ಆಗಿದ್ದೀಯೆ. ನಿನಗೆ ದ್ಯುಲೋಕದಲ್ಲಿ ಮೂರು ವಿಧವಾದ ಬಂಧನಗಳಿರುವುವೆಂದು ತಿಳಿದವರು ಹೇಳುತ್ತಾರೆ.

## English Translation

You, horse, are Yama : you are Aditya : you are Trita by a mysterious act : you are associated with Soma. The sages have said there are three bindings of you in heaven.

### । ವಿಶೇಷವಿಷಯಗಳು ।

ಅಗ್ನಿಯಿಂದ ದತ್ತವಾದುದರಿಂದ ಯಜ್ಞಾಶ್ವವು ಅಗ್ನ್ಯಾತ್ಮಕವಾಗಿಯೇ ಇದೆ. ಆದಿತ್ಯನಿಂದ ಗೃಹೀತವಾದುದರಿಂದ ಆದಿತ್ಯಾತ್ಮಕವಾಗಿಯೇ ಇದೆ. ಇತ್ಯಾದಿಯಾಗಿ ಅಗ್ನ್ಯಾದಿಗಳೊಡನೆ ತಾದಾತ್ಮ್ಯವನ್ನು ಹೇಳಿದೆ ಆದರೆ ಈ ತಾದಾತ್ಮ್ಯವನ್ನು ಹೇಳಿರುವುದರ ಜೊತೆಗೆ **ತ್ರೀಣಿ ದಿವಿ ಬಂಧನಾನಿ** ಮೂರು ವಿಧವಾದ ಬಂಧನಗಳಿವೆ ಎಂದೂ ಹೇಳಿದೆ. ಇದೇ ಮಂತ್ರವು ತೈತ್ತಿರೀಯಸಂಹಿತೆಯಲ್ಲಿಯೂ ಇದ್ದು ಅದನ್ನು ವಿವರಿಸುವಾಗ ಸಾಯಣರು ಈ ರೀತಿ ಅರ್ಥಮಾಡಿದ್ದಾರೆ.

> **ಈದೃಶಸ್ಯ ತೇ ತವ ದ್ಯುಲೋಕೇ ಬಂಧನಾನಿ ಬಂಧನಸಾದನಾನಿ ದಾಮಾನಿ ತ್ರೀಣೀತ್ಯೇವಮಭಿಜ್ಞಾ ಆಹುಃ । ವಣಿಜೋ ಹಿ ಶಕ್ತ್ಯಾಧಿಕ್ಯೇನಾತ್ಯುಗ್ರಮಶ್ವಂ ವಿಕ್ರೇತುಂ ಗ್ರಾಮಾಂತರೇ ನಯಂತಸ್ತ್ರಿಭಿರ್ದಾಮಭಿರ್ಬಧ್ನಂತಿ । ದಕ್ಷಿಣವಾಮಪಾರ್ಶ್ವಯೋರ್ದಾಮದ್ವಯಮುಭೌ ಪುರುಷೌ ಗೃಹ್ಣೀತಃ । ಯದಾ ದಕ್ಷಿಣಭಾಗವರ್ತಿನಂ ದ್ರಷ್ಟುಮುದ್ಯುಂಕ್ತೇ ತದಾ ವಾಮಭಾಗವರ್ತೀ ತಮಾಕರ್ಷತಿ । ತಂ ಚೇದ್ದ್ರಷ್ಟುಮುದ್ಯುಂಕ್ತೇ ತದಾನೀಮಿತರ ಆಕರ್ಷತಿ । ಯದಾ ಸಹಸಾ ಪುರತಃ ಪಲಾಯನಂ ಕರೋತಿ ತದಾ ತಂ ವಾರಯಿತುಂ ಗಲೇ ಬದ್ಧಮೇಕಂ ದಾಮ ಗೃಹೀತ್ವಾ ಪೃಷ್ಠತಃ ಕಶ್ಚಿದಾಕರ್ಷತಿ । ಯದಿದಂ ಬಂಧನತ್ರಯಂ । ಯದ್ವಾ ಶಾಸ್ತ್ರಸಿದ್ಧಂ ಕಿಂಚಿತ್ಕಾರಣತ್ರಯಂ ದ್ರಷ್ಟವ್ಯಂ । ತದನೇನ ಬಂಧನತ್ರಯೇಣಾಧಿಕಶಕ್ತಿರಶ್ವ ಇತಿ ಸ್ತುತೋ ಭವತಿ ॥**

(ತೈ. ಸಂ. ಭಾ. ೪-೬-೭)

ಮೇಲೆ ಹೇಳಿರುವ ಬಂಧನವನ್ನು ಲೌಕಿಕವಾದ ಅಶ್ವದ ಬಂಧನಕ್ಕೆ ಹೋಲಿಸಬಹುದು. ಗ್ರಾಮಾಂತರಕ್ಕೆ ವಿಕ್ರಯ ಕ್ಕಾಗಿ ತೆಗೆದುಕೊಂಡುಹೋಗುತ್ತಿರುವ ಅಶ್ವವು ಬಹಳ ಶಕ್ತಿಯುತವಾಗಿದ್ದರೆ ಅದಕ್ಕೆ ಮೂರುಕಡೆಗಳಲ್ಲಿಯೂ ಬಂಧಕರಿರುತ್ತಾರೆ. ಒಂದು ವೇಳೆ ಅದು ಬಲದಪಾರ್ಶ್ವಕ್ಕೆ ತಿರುಗಿದರೆ ಆಗ ಎಡಗಡೆಯವನು ಎಳೆಯುತ್ತಾನೆ. ಹೀಗೆಯೇ ಎಡಗಡೆಗೆ ತಿರುಗಿದಾಗ ಬಲಗಡೆಯವನು ಎಳೆಯುತ್ತಾನೆ. ಅಕಸ್ಮಾತ್ತಾಗಿ ಮುಂಭಾಗದಲ್ಲಿ ಧಾವಿಸಿ ಓಡಿಹೋಗಲು ಪ್ರಯತ್ನಪಟ್ಟರೆ ಆಗ ಹಿಂಭಾಗದಲ್ಲಿರುವವನು ಎಳೆಯುತ್ತಾನೆ. ಹೀಗೆ ಈ ಅಶ್ವಕ್ಕೂ ಸಹ ಬಂಧನ ತ್ರಯವಿರುತ್ತದೆಂದು ಮೊದಲು ಲೌಕಿಕವಾದ ಉಪಮಾನವನ್ನು ಹೇಳಿ ದೇವಾಂಶಸಂಭೂತವಾದ ಈ ಅಶ್ವದ ಬಂಧನವನ್ನು ಲೌಕಿಕವಾದ ಅಶ್ವದ ಬಂಧನಕ್ಕೆ ಹೋಲಿಸುವುದು ಉಚಿತವಲ್ಲವೆಂದು ತಿಳಿದು ಕಾರಣಾಂತರವನ್ನು ಹೇಳಿರುತ್ತಾರೆ.

ಆದರೆ ಈ ಬಂಧನದ ಸ್ವರೂಪವೇನೆಂಬುದನ್ನು ತಿಳಿಯುವುದಕ್ಕೆ ಸರಿಯಾದ ಆಧಾರವಿಲ್ಲದುದರಿಂದ ಅವರಿಗೂ ಈ ವಿಷಯದಲ್ಲಿ ನಿಷ್ಕೃಷ್ಟವಾದ ಅಭಿಪ್ರಾಯವನ್ನು ಕೊಡಲು ಸಾಧ್ಯವಿಲ್ಲವಾಗಿ **ಯದ್ವಾ ಶಾಸ್ತ್ರಸಿದ್ಧಂ ಕಿಂಚಿತ್ಕಾರಣತ್ರಯಂ ದ್ರಷ್ಟವ್ಯಂ** । ಶಾಸ್ತ್ರವಿಹಿತವಾದ ಬೇರೆ ಕಾರಣವನ್ನು ತಿಳಿಯಬೇಕು ಎಂದಿದ್ದಾರೆ. ಈ ಬಂಧನದ ಸ್ವರೂಪವನ್ನು ತೈತ್ತಿರೀಯಸಂಹಿತೆಯಲ್ಲಿಯೇ **ಆಕ್ರಾನ್ವಾಜೀ ಪೃಥಿವೀಮಗ್ನಿಂ** .... .... .... ........ **ಆಕ್ರಾನ್ವಾಜ್ಯಂತರಿಕ್ಷಂ ವಾಯುಂ ಯುಜಮಕೃತ** .... .... .... ॥ ( ತೈ. ಸಂ. ೭-೫-೧೯ ) ಇತ್ಯಾದಿಯಾಗಿ ಹಿಂದಿನ ಋಕ್ಕಿನ ವಿಶೇಷವಿಷಯಗಳಲ್ಲಿ ಉದಹರಿಸಿರುವ ಮಂತ್ರಗಳಲ್ಲಿ ವರ್ಣಿಸಿದೆ. ಅದರ ಅರ್ಥವೇನೆಂದರೆ,

ಈ ಮೇಧ್ಯಾಶ್ವವು ಪೃಥ್ವಿಯನ್ನಾಕ್ರಮಿಸಿ ಪಾರ್ಥಿವವಾದ ಕರ್ಮಾಚರಣೆಗಾಗಿ ಅಗ್ನಿಯನ್ನು ತನ್ನ ನೊಗದ ರೂಪದ ಬಂಧಕವನ್ನಾಗಿ ಮಾಡಿಕೊಂಡಿತು. ಎಂದರೆ ಅಗ್ನಿಯದ್ವಾರಾ ತನ್ನ ಸೇವೆಯನ್ನು ಸಲ್ಲಿಸಿತು. ಹಾಗೆಯೇ ಈ ಅಶ್ವವು ಅಂತರಿಕ್ಷವನ್ನು ವ್ಯಾಪಿಸಿ ವಾಯುವನ್ನು ತನ್ನ ಯೋಕ್ತೃವನ್ನಾಗಿ ಮಾಡಿಕೊಂಡು (ತನ್ನ ಸೇವೆಯನ್ನು ಸಲ್ಲಿಸಿತು). ಇದೇ ಅಶ್ವವು ದ್ಯುಲೋಕಕ್ಕೆ ಹೋಗಿ ಅಲ್ಲಿ ಆದಿತ್ಯನನ್ನು ತನ್ನ ಯೋಕ್ತೃವನ್ನಾಗಿ ಮಾಡಿಕೊಂಡು ಅಲ್ಲಿನ ವ್ಯವಹಾರಗಳಿಗೆ ಅನುಕೂಲವನ್ನು ಮಾಡಿಕೊಟ್ಟಿತು. ಆದುದರಿಂದ ಪಾರ್ಥಿವಾಗ್ನಿಯ ಸಹಾಯದಿಂದಲೂ ಅಂತರಿಕ್ಷಸ್ಥವಾದ ವಾಯುವಿನ ಮೂಲಕವೂ ದ್ಯುಲೋಕಸ್ಥನಾದ ಆದಿತ್ಯನ ಪ್ರಭಾವದಿಂದಲೂ ನಮಗೆ ಶ್ರೇಯಸ್ಸನ್ನ ನುಗ್ರಹಿಸು ಎಂದು ಪ್ರಾರ್ಥಿಸಿದೆ. ಈ ವರ್ಣನೆಯಲ್ಲಿ ಇನ್ನೊಂದಂಶವನ್ನೂ ಗಮನಿಸಬೇಕು. ಹಿಂದಿನ ಋಕ್ಕಿನಲ್ಲಿ **ವಸವಃ** ಎಂಬ ಪದಕ್ಕೆ ನಿರುಕ್ತಕಾರರ ವಾಕ್ಯಗಳ ಆಧಾರದ ಮೇಲೆ ಮೂರುಲೋಕಗಳಲ್ಲೂ ವ್ಯಾಪಿಸಿರುವ ಅಗ್ನಿ, ವಾಯು ಅಥವಾ ಇಂದ್ರ, ಮತ್ತು ಆದಿತ್ಯ ಈ ದೇವತೆಗಳು ಎಂದರ್ಥವನ್ನು ಮಾಡಿ ಆ ದೇವತೆಗಳು ಈ ಯಜ್ಞಾಶ್ವ ವನ್ನು ಚೋದಿಸಿದರು ಎಂದು ಹೇಳಿದೆ. ಉದಾಹೃತವಾದ ಈ ಸಂಹಿತಾವಾಕ್ಯಗಳಲ್ಲಿಯೂ ಸಹ ಇದೇ ಅಭಿಪ್ರಾಯ ವನ್ನು ಸೂಚಿಸಿದೆ. ಇದರಿಂದ ಈ ಅಶ್ವದ ದಿವ್ಯಶಕ್ತಿಯನ್ನೂ ಲೋಕೋಪಕಾರಕವಾದ ವ್ಯಾಪಾರಗಳನ್ನೂ ತಿಳಿಯ ಬಹುದು.

**ಗುಹ್ಯೇನ ಕರ್ಮಣಾ—ಗೋಪನೀಯೇನ ದುರ್ನಿರೂಪೇಣ ವಾ ಕರ್ಮಣಾ । ಸರ್ವತ್ರವ್ಯಾಪ್ತಿ- ರೂಪೇಣೇತ್ಯರ್ಥಃ** । ರಹಸ್ಯವಾದ ಅಥವಾ ನಿರೂಪಣಾತೀತವಾದ ಕರ್ಮದಿಂದ ಎಂದರ್ಥ. ವಾಯುವು ಸರ್ವ ವ್ಯಾಪಿಯಾದುದರಿಂದಲೂ, ಮಿತದೃಷ್ಟಿಯುಳ್ಳ ಮಾನವರಿಗೆ ವಾಯುವಿನ ವಿಶ್ವವ್ಯಾಪಕವಾದ ವ್ಯವಹಾರಗಳನ್ನು ನಿರೂಪಿಸಲು ಸಾಧ್ಯವಿಲ್ಲದುದರಿಂದಲೂ ಈ ವರ್ಣನೆ ಇದೆಯೆಂದು ಹೇಳಬಹುದು.

## ವ್ಯಾಕರಣಪ್ರಕ್ರಿಯಾ

**ಅಸಿ**–ಅಸ ಭುವಿ ಧಾತು. ಲಟ್. ಮಧ್ಯಮಪುರುಷಏಕವಚನ ಸಿಪ್ ಪರವಾದಾಗ **ತಾಸಸ್ತ್ಯೋರ್ಲೋಪಃ** (ಪಾ. ಸೂ. ೭-೪-೫೦) ಎಂಬುದರಿಂದ ಧಾತು ಸಕಾರಕ್ಕೆ ಲೋಪ. ಪಾದಾದಿಯಲ್ಲಿರುವುದರಿಂದ ನಿಘಾತಸ್ವರ ಬರುವುದಿಲ್ಲ. ಸಿಪ್ ಅನುದಾತ್ತವಾದುದರಿಂದ ಧಾತುಸ್ವರ ಉಳಿಯುತ್ತದೆ.

**ಯಮಃ**—ಯಮಯತೀತಿ ಯಮಃ ಯಮ ಉಪರಮೇ ಧಾತು. ಅಂತರ್ಭಾವಿತಣ್ಯರ್ಥಕ ಧಾತು. ಪಚಾದಿಯಲ್ಲಿ ಸೇರಿರುವುದರಿಂದ ಅಚ್ ಪ್ರತ್ಯಯ. ಚಿತ್ತಾದುದರಿಂದ ಅಂತೋದಾತ್ತವಾಗುತ್ತದೆ.

**ಗುಹ್ಯೇನ**—ಗುಹಾಯಾಂ ಭವಮ್ ಗುಹ್ಯಮ್. ತೇನ. **ಭವೇ ಛಂದಸಿ** (ಪಾ. ಸೂ. ೪-೪-೧೧೦) ಎಂಬುದರಿಂದ ಯತ್ ಪ್ರತ್ಯಯ. **ಯಸ್ಯೇತಿ ಚ** ಎಂಬುದರಿಂದ ಆಕಾರಲೋಪ. **ಯತೋಽನಾವಃ** (ಪಾ. ಸೂ. ೬-೧-೨೧೩) ಎಂಬುದರಿಂದ ಆದ್ಯುದಾತ್ತಸ್ವರ ಬರುತ್ತದೆ.

**ಸಮಯಾ**—ಸಮ್ ಉಪಸರ್ಗ. ಇಣ್ ಗತೌ ಧಾತು. **ಆಃಸಮಿಣ್ನಿಕಷಿಭ್ಯಾಮ್** (ಉ. ಸೂ. ೬-೪೧೪) ಎಂಬುದರಿಂದ ಸಮ್ ಉಪಪದವಾಗಿರುವಾಗ ಆ ಪ್ರತ್ಯಯ. ಅದನ್ನು ನಿಮಿತ್ತೀಕರಿಸಿ ಧಾತುವಿನ ಇಕಾರಕ್ಕೆ ಗುಣ. ಅಯಾದೇಶ.

**ವಿಪೃಕ್ತಃ**—ಪೃಚೀ ಸಂಪರ್ಕೇ ಧಾತು. ಕರ್ಮಣಿಯಲ್ಲಿ ನಿಷ್ಠಾ ಎಂಬುದರಿಂದ ಕ್ತಪ್ರತ್ಯಯ. **ಚೋಃಕುಃ** ಎಂಬುದರಿಂದ ಧಾತುಚಕಾರಕ್ಕೆ ಕುತ್ವ. **ಗತಿರನಂತರಃ** (ಪಾ. ಸೂ. ೬-೨-೪೯) ಎಂಬುದರಿಂದ ಗತಿಗೆ (ವಿ) ಉದಾತ್ತಸ್ವರ ಬರುತ್ತದೆ.

**ಆಹುಃ**—ಬ್ರೂಞ್ ವ್ಯಕ್ತಾಯಾಂ ವಾಚಿ. ಧಾತು. **ಲಟ್** ಪ್ರಥಮಪುರುಷ ಬಹುವಚನ ಝಿ ಪರವಾದಾಗ **ಬ್ರುವಃ ಪಂಚಾನಾಮಾದಿತ ಆಹೋಬ್ರುವಃ** (ಪಾ. ಸೂ. ೩-೪-೮೪) ಎಂಬುದರಿಂದ ಅದಕ್ಕೆ ಉಸಾದೇಶ. ಧಾತುವಿಗೆ ಆಹಾದೇಶ. **ಉಸ್ಯಪದಾಂತಾತ್** (ಪಾ ಸೂ. ೬-೧-೯೬) ಎಂಬುದರಿಂದ ಪರರೂಪ. ಪಾದಾದಿಯಲ್ಲಿರುವುದರಿಂದ ನಿಘಾತಸ್ವರ ಬರುವುದಿಲ್ಲ. ಪ್ರತ್ಯಯಸ್ವರದಿಂದ ಅಂತೋದಾತ್ತವಾಗುತ್ತದೆ.

**ದಿವಿ**—ಸಪ್ತಮ್ಯಂತರೂಪ. **ಊಡಿದಂ ಪದಾದಿ**—(ಪಾ. ಸೂ. ೬-೧-೧೭೧) ಎಂಬುದರಿಂದ ವಿಭಕ್ತಿಗೆ ಉದಾತ್ತಸ್ವರ ಬರುತ್ತದೆ.

**ಬಂಧನಾನಿ**—ಬಂಧ ಬಂಧನೇ. ಧಾತು. ಭಾವಾರ್ಥದಲ್ಲಿ ಲ್ಯುಟ್ ಪ್ರತ್ಯಯ. **ಯುವೋರನಾಕೌ** (ಪಾ. ಸೂ. ೭ ೧-೧) ಎಂಬುದರಿಂದ ಅದಕ್ಕೆ ಅನಾದೇಶ. **ಲಿತಿ** (ಪಾ. ಸೂ. ೬-೧-೧೯೩) ಎಂಬುದರಿಂದ ಪ್ರತ್ಯಯದ ಪೂರ್ವಕ್ಕೆ ಉದಾತ್ತಸ್ವರ ಬರುತ್ತದೆ. || ೩ ||

———:0:———

ಸಂಹಿತಾಪಾಠಃ

ತ್ರೀಣಿ ತ ಆಹುರ್ದಿವಿ ಬಂಧನಾನಿ ತ್ರೀಣ್ಯಪ್ಸು ತ್ರೀಣ್ಯಂತಃ ಸಮುದ್ರೇ ।
ಉತೇವ ಮೇ ವರುಣಶ್ಛಂತ್ಸ್ಯರ್ವನ್ಯತ್ರಾ ತ ಆಹುಃ ಪರಮಂ ಜನಿತ್ರಂ ।
॥ ೪ ॥

ಪದಪಾಠಃ

ತ್ರೀಣಿ । ತೇ । ಆಹುಃ । ದಿವಿ । ಬಂಧನಾನಿ । ತ್ರೀಣಿ । ಅಪ್ಽಸು । ತ್ರೀಣಿ । ಅಂತರಿತಿ । ಸಮುದ್ರೇ ।
ಉತ್ಽಇವ । ಮೇ । ವರುಣಃ । ಛಂತ್ಸಿ । ಅರ್ವನ್ । ಯತ್ರ । ತೇ । ಆಹುಃ । ಪರಮಂ । ಜನಿತ್ರಂ ॥ ೪ ॥

ಸಾಯಣಭಾಷ್ಯಂ

ಪೂರ್ವಂ ದಿವಿ ತ್ರೀಣಿ ಬಂಧನಾನೀತ್ಯುಕ್ತಂ । ಇದಾನೀಂ ಸ್ಥಾನತ್ರಯೇಷ್ವಪಿ ತ್ರೀಣಿ ಬಂಧನಾನೀತ್ಯಾಹ । ಹೇ ಅರ್ವನ್ ತೇ ತವ ದಿವಿ ಸಂಬಂಧನಾನಿ ತ್ರೀಣ್ಯಾಹುಃ । ತಾನಿ ಪೂರ್ವಮುಕ್ತಾನಿ । ಅಪ್ಸು । ಅಬುಪಜೀವಿತತ್ವಾದ್ಭೂಲೋಕೋಽಪ್ಯಪ್ಶಬ್ದೇನಾಭಿಧೀಯತೇ । ಪೃಥಿವ್ಯಾಂ ತ್ರೀಣಿ ಬಂಧನಾನ್ಯಾಹುಃ । ಅನ್ನಂ ಸ್ಥಾನಂ ಬೀಜಮಿತಿ ತ್ರೀಣಿ । ತಥಾ ಸಮುದ್ರೇಂತಃ ಸಮುದ್ರಮಧ್ಯೇ । ಸಮುದ್ದ್ರವಣಾದಪಾದಾನಾತ್ಸಮುದ್ರಮಂತರಿಕ್ಷಂ। ತಸ್ಮಿಂಸ್ತ್ರೀಣಿ ವೃಷ್ಟ್ಯುತ್ಪತ್ತಿನಿಮಿತ್ತಾನಿ ಮೇಘೋ ವಿದ್ಯುತ್ ಸ್ತನಿತಮಿತಿ। ಉತೇವ। ಇವಶಬ್ದಶ್ಚಾರ್ಥೇ । ಅಪಿ ಚ ಹೇ ಅರ್ವನ್ನಶ್ವ ವರುಣಃ ಪಾಪಸ್ಯ ವಾರಕಃ ಫಲಸ್ಯಾವರ್ಜಯಿತಾ ವಾ ತ್ವಂ ಮೇ ಮಹ್ಯಂ ಛಂತ್ಸಿ । ಕಥಯಸಿ । ಕಿಂ ಕಥಯಸೀತಿ ಚೇತ್ ಉಚ್ಯತೇ । ತೇ ತವ ಪರಮಂ ಜನಿತ್ರಂ ನಿರತಿಶಯಂ ಜನ್ಮ । ಜನೇರೌಣಾದಿಕ ಇತ್ರಪ್ರತ್ಯಯಃ ॥ ಯತ್ರ ಯೇಷು ತ್ರಿಷೂಕ್ತೇಷು ಸ್ಥಾನೇಷ್ವಾಹುಃ ಕಥಯಂತಿ । ಯದ್ವಾ । ಯತ್ರ ಯಸ್ಮಿನ್ನಾದಿತ್ಯೇ ಪರಮಂ ಜನಿತ್ರಮಾಹುಃ ಸೂರಾದಶ್ವಂ ವಸವೋ ನಿರತಷ್ಟೇತ್ಯುಕ್ತತ್ವಾತ್ । ತಾದೃಶಂ ಪ್ರಶಸ್ಯಂ ಜನ್ಮ ಯಜ್ಞಸಾಧನಭಾವೇನ ಕಥಯಸೀತ್ಯರ್ಥಃ ॥

ಪ್ರತಿಪದಾರ್ಥ

(ಅರ್ವನ್—ಎಲೈ ಅಶ್ವವೇ) । ತೇ—ನಿನಗೆ। ದಿವಿ—ದ್ಯುಲೋಕದಲ್ಲಿ । ತ್ರೀಣಿ ಬಂಧನಾನಿ—ಮೂರು ಬಂಧನಗಳೂ । ಅಪ್ಸು—ಪೃಥ್ವಿಯಲ್ಲಿ । ತ್ರೀಣಿ—ಮೂರು (ಬಂಧನಗಳೂ) । ಸಮುದ್ರೇ ಅಂತಃ—ಅಂತರಿಕ್ಷದ ಮಧ್ಯಭಾಗದಲ್ಲಿ । ತ್ರೀಣಿ—ಮೂರು (ಬಂಧನಗಳೂ) ಉಂಟೆಂದು । ಆಹುಃ—(ತತ್ತ್ವಜ್ಞರು) ಹೇಳುತ್ತಾರೆ । ಉತೇವ—ಅವರು ಹೇಳುವುದು ಮಾತ್ರವಲ್ಲದೇ । ಅರ್ವನ್—ಎಲೈ ಅಶ್ವವೇ, । ಯತ್ರ—ಯಾವ ಮೂರು ಸ್ಥಾನಗಳಲ್ಲಿಯೂ ಅಥವಾ ಯಾವ ಆದಿತ್ಯನಿಂದ (ಸಂಭವಿಸಿದ) । ತೇ—ನಿನ್ನ । ಜನಿತ್ರಂ—ಉತ್ಪತ್ತಿಯನ್ನೂ । ಪರಮಂ—ಅತ್ಯತಿಶಯವಾದುದೆಂಬುದಾಗಿ । ಆಹುಃ—ವರ್ಣಿಸುತ್ತಾರೋ (ಅಂತಹ ನಿನ್ನ

ಜನ್ಮದ ಸ್ವರೂಪವನ್ನು) | **ವರುಣಃ**—ಪಾಪನಿವಾರಕನಾದ ಅಥವಾ ಫಲದಾಯಕನಾದ ನೀನು | **ಮೇ**—ನನಗೆ | **ಛನ್ತ್ಸಿ**—ಹೇಳುತ್ತೀಯೆ, (ನಿನ್ನ ವ್ಯವಹಾರಗಳಿಂದ ಪ್ರಕಾಶಪಡಿಸುತ್ತೀಯೆ).

**ಭಾವಾರ್ಥ**

ಎಲೈ ಅಶ್ವವೇ, ನಿನಗೆ ದ್ಯುಲೋಕದಲ್ಲಿ ಮೂರು ಬಂಧನಗಳೂ, ಪೃಥ್ವಿಯಲ್ಲಿ ಮೂರು ಬಂಧನಗಳೂ, ಅಂತರಿಕ್ಷದ ಮಧ್ಯಭಾಗದಲ್ಲಿ ಮೂರು ಬಂಧನಗಳೂ ಉಂಟೆಂದು ತತ್ತ್ವಜ್ಞರು ಹೇಳುತ್ತಾರೆ. ಅವರು ಹೇಳುವುದು ಮಾತ್ರವಲ್ಲದೇ ಎಲೈ ಅಶ್ವವೇ, ಯಾವ ಆದಿತ್ಯನಿಂದ ಸಂಭವಿಸಿದ ನಿನ್ನ ಉತ್ಪತ್ತಿಯನ್ನು ತತ್ತ್ವಜ್ಞರು ಅತ್ಯತಿಶಯವಾದುದೆಂದು ವರ್ಣಿಸುತ್ತಾರೆಯೋ ಅಂತಹ ನಿನ್ನ ಜನ್ಮದ ಸ್ವರೂಪವನ್ನು ಪಾಪನಿವಾರಕನಾದ ನೀನು ನನಗೆ ನಿನ್ನ ವ್ಯವಹಾರಗಳಿಂದ ಪ್ರಕಾಶಪಡಿಸುತ್ತೀಯೆ.

## English Translation

They have said that three are your binds in heaven ; three upon earth ; and three in the firmament· You declare to me, Horse, who are (one with) Varuna, that which they have called your most excellent birth·

**ವಿಶೇಷವಿಷಯಗಳು**

ಹಿಂದಿನ ಋಕ್ಕಿನಲ್ಲಿ " ತ್ರೀಣಿ ಬಂಧನಾನಿ " ಎಂದು ಆದಿತ್ಯಾದಿಗಳ ಮೂಲಕವಾಗಿ ನಿಯತವಾಗಿ ಮಾಡುತ್ತಿರುವ ಅಶ್ವದ ಲೋಕೋಪಕಾರಕವಾದ ವ್ಯವಹಾರಗಳನ್ನು ವರ್ಣಿಸಿದೆ. ಇಲ್ಲಿ ಒಂದೊಂದು ಲೋಕದಲ್ಲಿಯೂ ಮೂರು ಬಂಧನಗಳಿವೆಯೆಂದು ಹೇಳಿದೆ. ಅದರಲ್ಲಿ ಕೊಂಚಭಾಗವನ್ನು ಹಿಂದಿನ ಋಕ್ಕಿನ ವಿಶೇಷವಿಷಯಗಳಲ್ಲಿ ವಿವರಿಸಿದೆ.

**ಅಪ್ಸು ತ್ರೀಣಿ — ಅಬುಪಜೀವಿತತ್ವಾತ್ ಭೂಲೋಕೋಽಪಿ ಅಪ್‌ಶಬ್ದೇನಾಭಿಧೀಯತೇ | ಪೃಥಿವ್ಯಾಂ |** **ಅಪ್ಪಿನ** (ಉದಕದ) ಅವಲಂಬನದಿಂದ ಜೀವಿಸುವುದಾದುದರಿಂದ ಭೂಲೋಕಕ್ಕೂ **ಅಪ್** ಎಂಬುದು ಪರ್ಯಾಯನಾಮವಾಗಿದೆ. ಆದುದರಿಂದ ಅಪ್ಸು ಎಂದರೆ ಪೃಥಿವಿಯಲ್ಲಿ ಎಂದು ಇಲ್ಲಿ ಅರ್ಥವಾಗುತ್ತದೆ ಎಂದು ಸಾಯಣರು ವಿವರಿಸಿದ್ದಾರೆ. ಇಲ್ಲಿನ ಸಂದರ್ಭಕ್ಕೆ ಈ ಅರ್ಥವು ಹೊಂದಿಕೊಳ್ಳುತ್ತದೆ. **ದಿವಿ, ಸಮುದ್ರೇ,** ಎಂದು ದ್ಯುಲೋಕ, ಅಂತರಿಕ್ಷಲೋಕಗಳ ಜೊತೆಯಲ್ಲಿ ಪೃಥ್ವಿಯನ್ನೂ ಸೇರಿಸಿಕೊಳ್ಳಬೇಕಾದರೆ ಅಪ್ಸು ಎಂಬ ಪದಕ್ಕೆ ಪೃಥ್ವಿಯಲ್ಲಿ ಎಂಬರ್ಥವನ್ನು ಮಾಡಲೇಬೇಕು ಆದರೆ ಸಾಯಣರು ತೈತ್ತಿರೀಯಸಂಹಿತೆಯಲ್ಲಿ ಇದೇ ಮಂತ್ರವನ್ನು ವ್ಯಾಖ್ಯಾನಮಾಡಿರುವಾಗ ಅಲ್ಲಿ ಅಪ್ಸು ಎಂಬುದಕ್ಕೆ ಉದಕದಲ್ಲಿ ಎಂದರ್ಥಮಾಡಿದ್ದಾರೆ. ಆ ವ್ಯಾಖ್ಯಾನವು ಈ ರೀತಿಯಿದೆ.

> **ಯಥಾ ದ್ಯುಲೋಕೇ ತವೋಚ್ಚೈಃಶ್ರವೋರೂಪಸ್ಯ ಬಂಧನತ್ರಯಮಭಿಜ್ಞಾ ಆಹುಸ್ತಥೈವಾಪ್ಸು ಸಮುದ್ರೇ ಚ | ಯಥಾ ವಾ ವಾಜಪೇಯೇಽಪ್ಸ್ವಂತರಮೃತಮಿತಿ ಮಂತ್ರೇಣಾಶ್ವಾನಪ್ಸು ಸ್ನಾಪಯಂತಿ ತಥಾಪಿ ಪೂರ್ವೋಕ್ತರೀತ್ಯಾ ಬಂಧನತ್ರಯಮಪೇಕ್ಷಿತಂ ತಥಾ ಸಮುದ್ರಮಧ್ಯೇ ಸ್ಥಿತಾಯಾ ವಡವಾಯಾ ಬಂಧನತ್ರಯಂ ಇತ್ಯೇವಮಭಿಜ್ಞಾ ಆಹುಃ.**
>
> (ತೈ. ಸಂ. ಭಾ. ೪.೬ ೭)

ಇಲ್ಲಿ " **ಅಪ್ಸು । ಅಂತರಮೃತಮಪ್ಸು ಭೇಷಜಮಪಾಂ** " ಎಂಬ **ವಾಜಪೇಯದ** ಕಾಲದಲ್ಲಿ ಉಪಯೋಗಿಸುವ ಮಂತ್ರವನ್ನು ಉದಹರಿಸಿ ಅಲ್ಲಿ ಉದಕವೆಂದರ್ಥವಾಗುವಂತೆ ತೈತ್ತಿರೀಯ ಸಂಹಿತಾವಾಕ್ಯಕ್ಕೂ ಉದಕವೆಂಬರ್ಥವೆಂದು ತೋರಿಸಿದ್ದಾರೆ. ಸಮುದ್ರಕ್ಕೆ ರೂಢವಾಗಿರತಕ್ಕ ಸಮುದ್ರವೆಂದು ಹೇಳಿದ್ದಾರೆ. ಈ ಭಾಷ್ಯವನ್ನೇ ಆಧಾರವನ್ನಾಗಿಟ್ಟುಕೊಂಡು Keith ಎಂಬುವನೂ ಸಹ ಆ ವಾಕ್ಯಕ್ಕೆ ಈ ರೀತಿ ಪರಿವರ್ತನವನ್ನು ಮಾಡಿದ್ದಾನೆ.

Three, they say, are thy bonds in the sky, Three in the waters, three within the occan ; And like Varuna to me thou appearest, where, they say, is thy highest, O steed, birth place.

[Harvard oriental Series Vol. 19. P. 376]

ಹೀಗೆ ಋಕ್ಸಂಹಿತಾವಾಕ್ಯಕ್ಕೆ ಒಂದು ವಿಧವಾಗಿಯೂ, ತೈತ್ತಿರೀಯಸಂಹಿತೆಯಲ್ಲಿ ಉದಹರಿಸಿರುವ ಅದೇ ಮಂತ್ರಕ್ಕೆ ಇನ್ನೊಂದು ವಿಧವಾಗಿಯೂ ಅರ್ಥಮಾಡಿರುವುದರಿಂದ ಇಂತಹ ಸಂದರ್ಭಗಳಲ್ಲಿ ನಿಷ್ಕೃಷ್ಟವಾದ ತಾತ್ಪರ್ಯವು ತಿಳಿಯುವುದು ಕಷ್ಟವಾಗುತ್ತದೆ. ಆದರೆ ಪ್ರಕೃತವಾದ ಸಂದರ್ಭದಲ್ಲಿ ಋಕ್ಸಂಹಿತಾಮಂತ್ರದಲ್ಲಿ ಹೇಳಿರುವ ವಿವರಣೆಯೇ ಸಂದರ್ಭಕ್ಕನುಗುಣವಾಗಿದೆ ಅದರಲ್ಲಿ ಪೃಥ್ವಿಯಲ್ಲಿರುವ ಬಂಧನತ್ರಯವು ಯಾವುದು ಮತ್ತು ಅಂತರಿಕ್ಷದ ಬಂಧನತ್ರಯದ ಸ್ವರೂಪವೇನು ಎಂಬುದನ್ನು ವಿವರಿಸುತ್ತಾ, **ಅಪ್ಸು ಅನ್ನಂ, ಸ್ಥಾನಂ, ಬೀಜಮಿತಿ ತ್ರೀಣಿ । ಅಂತರಿಕ್ಷೇ ವೃಷ್ಟ್ಯುತ್ಪತ್ತಿನಿಮಿತ್ತಾನಿ ಮೇಘೋ, ವಿದ್ಯುತ್, ಸ್ತನಿತಮಿತಿ ।** ಪೃಥ್ವಿಯಲ್ಲಿ ಅನ್ನ ಸ್ಥಾನ, ಬೀಜವೆಂಬ ಮೂರುವಿಧವಾದ ಬಂಧನವೂ, ಅಂತರಿಕ್ಷದಲ್ಲಿ ವೃಷ್ಟ್ಯುತ್ಪತ್ತಿಗೆ ಕಾರಣವಾದ ಮೇಘ, ಮಿಂಚು ಮತ್ತು ಗುಡುಗು ಎಂಬ ಮೂರುವಿಧವಾದ ಬಂಧನವೆಂದೂ ವಿವರಿಸಿದ್ದಾರೆ. ಈ ವಾಕ್ಯಕ್ಕೆ ಇನ್ನೂ ಗೂಢವಾದ ತಾತ್ಪರ್ಯವಿರಬೇಕೆಂದು ತೋರುತ್ತದೆ.

ವರುಣಃ—ಎಂಬ ಪದವು ಇಲ್ಲಿ ಅಶ್ವಪರ್ಯಾಯವಾಗಿಯೇ ಇದೆ. **ಪಾಪಸ್ಯ ವಾರಕಃ ಫಲಸ್ಯಾವರ್ಜಯಿತಾ ।** ಪಾಪವನ್ನು ನಿವಾರಿಸುವವನು ಅಥವಾ ಫಲವನ್ನು ಒದಗಿಸುವವನು ಎಂಬರ್ಥವಾಗುತ್ತದೆಂದು ವಿವರಿಸಿದ್ದಾರೆ. ಅಥವಾ ಹಿಂದೆ **ಯಮೇನ ದತ್ತಂ** (೧-೧೬೩-೨) ಎಂಬ ವಾಕ್ಯದಲ್ಲಿ ಅಗ್ನಿಯಿಂದ ದತ್ತವಾದ ಎಂಬ ಸಂಬಂಧವನ್ನು ಹೇಳಿರುವುದರಿಂದಲೇ **ಅಸಿ ಯಮಃ ಅಸ್ಯಾದಿತ್ಯಃ** (೧-೧೬೩-೩) ಎಂದು ತಾದಾತ್ಮ್ಯವನ್ನು ಹೇಳಿರುವಂತೆ ಇದೇ ಅಶ್ವವು ವರುಣನೊಂದಿಗೂ ಅತ್ಯಂತ ನಿಕಟವಾದ ಸಂಬಂಧವನ್ನು ಹೊಂದಿರುವುದರಿಂದ ಇಲ್ಲಿ ವರುಣನೊಂದಿಗೆ ತಾದಾತ್ಮ್ಯವನ್ನು ಹೇಳಿರಬಹುದು. ವರುಣನೊಂದಿಗೆ ಈ ಮೇಧ್ಯಾಶ್ವಕ್ಕಿರುವ ಸಂಬಂಧವನ್ನು ಈ ರೀತಿ ತಿಳಿಸಿದೆ.

**ವಾರುಣೋ ವಾ ಅಶ್ವಃ । ತಂ ದೇವತಯಾ ವ್ಯರ್ಧಯತಿ ।**

(ತೈ. ಬ್ರಾ. ೩-೯-೧೬-೧)

ಎಂಬ ಬ್ರಾಹ್ಮಣವಾಕ್ಯವನ್ನುದಹರಿಸಿ ಹಿಂದೆ ಈ ವಿಷಯವನ್ನು ವಿವರಿಸಿದೆ. ಇದೇ ಅಲ್ಲದೇ,

**ಅಥ ಶ್ವೋ ಭೂತೇ । ಸೂತಸ್ಯ ಗೃಹಾನ್ಪರೇತ್ಯ ವಾರುಣಂ ಯವಮಯಂ ಚರುಂ ನಿರ್ವಪತಿ ಸ ವೋ ವೈ ಸೂತಃ ಸ ವೋ ವೈ ದೇವಾನಾಂ ವರುಣಸ್ತಸ್ಮಾದ್ವಾರುಣೋ ಭವತ್ಯೇತದ್ವಾ**

**ಅಸ್ಯೈಕಂ ರತ್ನಂ ಯತ್ರೋತಸ್ತಸ್ಮಾ ಏವೈತೇನ ಸೂಯತೇ ತಗ್ಂ ಸ್ವಮನಕಕ್ರಮಿಣಂ ಕುರುತೇ ತಸ್ಯಾಶ್ವೋ ದಕ್ಷಿಣಾ ಸ ಹಿ ವಾರುಣೋ ಯದಶ್ವಃ ||**

(ಶ. ಬ್ರಾ. ೪-೩-೧-೫)

ಎಂಬಲ್ಲಿ ವರುಣನಿಗೂ ಅಶ್ವಕ್ಕೂ ತಾದಾತ್ಮ್ಯವನ್ನೇ ಹೇಳಿ ರಾಜಸೂಯದಲ್ಲಿ ಅಶ್ವಕ್ಕೆ ಪ್ರಿಯವಾದ ಯವವನ್ನು ವರುಣನಿಗೂ ಅರ್ಪಿಸಬೇಕೆಂಬ ವಿಧಿಯಿದೆ. ಹೀಗೆ ಇನ್ನೂ ಅನೇಕ ಸಂದರ್ಭಗಳಲ್ಲಿ ಈ ವಿಧವಾದ ತಾದಾತ್ಮ್ಯವನ್ನು ಹೇಳಿರುವುದರಿಂದ ಪ್ರಕೃತವಾದ ಋಕ್ಕಿನಲ್ಲಿಯೂ ಅದೇ ಅಭಿಪ್ರಾಯವು ಸೂಚಿತವಾಗುತ್ತದೆ ಎಂದರೆ ತಪ್ಪಾಗಲಾರದು.

|| ವ್ಯಾಕರಣಪ್ರಕ್ರಿಯಾ ||

**ಅಪ್ಸು**—ಸಪ್ತಮೀಬಹುವಚನಾಂತರೂಪ **ಊಡಿದಂಪದಾದಿ**—(ಪಾ. ಸೂ. ೬-೧-೧೭೧) ಎಂಬುದರಿಂದ ವಿಭಕ್ತಿಗೆ ಉದಾತ್ತಸ್ವರ ಬರುತ್ತದೆ.

**ಛನ್ತ್ಸಿ**—ಛದಿ ಸಂವರಣೇ. ಧಾತು. ಚುರಾದಿ. ಇದಿತ್ತಾದುದರಿಂದ ಣಿಚ್ ವಿಕಲ್ಪವಾದುದರಿಂದ ಬರುವುದಿಲ್ಲ. **ಇದಿತೋ ನುಮ್‌ಧಾತೋಃ** (ಪಾ. ಸೂ. ೭-೧-೫೮) ಎಂಬುದರಿಂದ ನುಮಾಗಮ. ಲಟ್ ಮಧ್ಯಮ ಪುರುಷ ಏಕವಚನದಲ್ಲಿ ಸಿಪ್. **ಖರಿ ಚ** ಎಂಬುದರಿಂದ ಧಾತು ದಕಾರಕ್ಕೆ ಚರ್ತ್ವ. ಅತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

**ಯತ್ರಾ**—**ಋಚಿತುನುಘ**—(ಪಾ. ಸೂ. ೬-೩-೧೩೩) ಎಂಬುದರಿಂದ ಸಂಹಿತಾದಲ್ಲಿ ದೀರ್ಘ ಬರುತ್ತದೆ.

**ಜನಿತ್ರಮ್**—ಜನೀ ಪ್ರಾದುರ್ಭಾವೇ, ಧಾತು. ಅಶಿತ್ರಾದಿಯಲ್ಲಿ ಸೇರಿರುವುದರಿಂದ **ಅಶಿತ್ರಾದಿಭ್ಯ ಇತ್ರೋತ್ರೌ** (ಉ. ಸೂ. ೪-೬೧೨) ಎಂಬುದರಿಂದ ಇತ್ರ ಪ್ರತ್ಯಯ. ಪ್ರತ್ಯಯದ ಆದ್ಯುದಾತ್ತಸ್ವರದಿಂದ ಮಧ್ಯೋದಾತ್ತವಾದ ಪದವಾಗುತ್ತದೆ. || ೪ ||

---

**ಸಂಹಿತಾಪಾಠಃ**

## ಇಮಾ ತೇ ವಾಜಿನ್ನವಮಾರ್ಜನಾನೀಮಾ ಶಫಾನಾಂ ಸನಿತುರ್ನಿಧಾನಾ ।
## ಅತ್ರಾ ತೇ ಭದ್ರಾ ರಶನಾ ಅಪಶ್ಯಮೃತಸ್ಯ ಯಾ ಅಭಿರಕ್ಷಂತಿ ಗೋಪಾಃ ।

|| ೫ ||

**। ಪದಪಾಠಃ ।**

ಇಮಾ । ತೇ । ವಾಜಿನ್ । ಅವಮಾರ್ಜನಾನಿ । ಇಮಾ । ಶಫಾನಾಂ । ಸನಿತುಃ । ನಿಧಾನಾ ।

ಅತ್ರ । ತೇ । ಭದ್ರಾಃ । ರಶನಾಃ । ಅಪಶ್ಯಂ । ಋತಸ್ಯ । ಯಾಃ । ಅಭಿರಕ್ಷಂತಿ । ಗೋಪಾಃ ॥ ೫ ॥

### ಸಾಯಣಭಾಷ್ಯಂ

ಹೇ ವಾಜಿನ್ನಶ್ವ ತೇ ಸಂಬಂಧೀನ್ಯವಮಾರ್ಜನಾನ್ಯಂಗಸಂಶೋಧಕಾನಿ ಸ್ಥಾನಾನೀಮೇಮಾನ್ಯುಕ್ತಾನಿ ದ್ಯುಲೋಕಾದೀನಿ ಕಿಂಚ ಸನಿತುರ್ಯಾಗಸಂಭಕ್ತುಸ್ತವೇಮೇಮಾನಿ ಶಫಾನಾಂ ನಿಧಾನಾನಿ ಸ್ಥಾನಾನಿ। ಸಂಚಾರಪ್ರದೇಶಾ ಇತ್ಯರ್ಥಃ । ಕಿಂಚಾತ್ರೈವ ತೇ ತವ ಭದ್ರಾ ಭಂಧನೀಯಾಃ ಕಲ್ಯಾಣಾ ರಶನಾ ಗ್ರೀವಾದಿಷು ಸಂಯುಕ್ತಾ ರಜ್ಜೂರತ್ರಾಪಶ್ಯಂ । ಏಷೂಕ್ತೇಷು ಸ್ಥಾನೇಷ್ವಪಶ್ಯಂ । ರಶನಾ ವಿಶೇಷ್ಯಂತೇ । ಯಾ ಗೋಪಾ ಗೋಪಯಿತ್ರ್ಯೋ ರಶನಾ ಋತಸ್ಯ ಸತ್ಯಭೂತಸ್ಯ ಯಜ್ಞಸಾಧನಸ್ಯ ವಾಶ್ವಸ್ಯ॥ ಕರ್ಮಣಿ ಷಷ್ಠೀ॥ ಋತಮಭಿರಕ್ಷಂತಿ ಅಭಿತಃ ಪಾಲಯಂತಿ ತಾ ಅಪಶ್ಯಂ । ದೃಷ್ಟವಾನಸ್ಮಿ । ಯದ್ವಾ । ಇಮಾ ತೇ ತವಾವಮಾರ್ಜನಾನ್ಯಂಗಪ್ರಕ್ಷಾಲನಸಾಧನಾನ್ಯುದಕಾನಿ । ಇಮಾನಿ ಸನಿತುಸ್ತವ ಶಫಾನಾಂ ನಿಧಾನಾನಿ ದೇವಯಜನಭೂಮಯಃ ಸಂಚಾರಪ್ರದೇಶಾ ವಾ । ಅತ್ರಾಸ್ಮಿನ್ದೇವಯಜನಸ್ಥಾನೇ ಯಾ ರಶನಾ ಗೋಪಾಸ್ತವ ಪಾಲಯಿತಾರೋ ರಾಜಪುರುಷಾ ಋತ್ವಿಜೋ ವಾ ಋತಸ್ಯ ಸಂಬಂಧಿನ್ಯೋಽಭಿರಕ್ಷಂತಿ ತಾ ಅಪಶ್ಯಂ ॥

### ಪ್ರತಿಪದಾರ್ಥ

**ವಾಜಿನ್**—ಎಲೈ ಅಶ್ವವೇ । **ತೇ**—ನಿನ್ನ । **ಅವಮಾರ್ಜನಾನಿ**—ಅಂಗಗಳನ್ನು ಶುದ್ಧಿಮಾಡತಕ್ಕ ಸ್ಥಾನಗಳಾದ । **ಇಮಾ**—ಈ ದ್ಯುಲೋಕಾದಿಗಳನ್ನೂ । **ಸನಿತುಃ**—ಯಜ್ಞದಲ್ಲಿ ಭಾಗವಹಿಸತಕ್ಕ ನಿನ್ನ । **ಶಫಾನಾಂ**—ಗೊರಸುಗಳನ್ನು । **ನಿಧಾನಾ**—ಇಡತಕ್ಕ । **ಇಮಾ**—ಈ ಪ್ರದೇಶಗಳನ್ನೂ (ಮತ್ತು) । **ಯಾಃ**—ಯಾವುವು । **ಗೋಪಾಃ**—ರಕ್ಷಕವಾದವೂ । **ಋತಸ್ಯ**—ಯಜ್ಞಸಾಧನವಾದ ಅಥವಾ ಸತ್ಯಾತ್ಮಕವಾದ ಅಶ್ವವನ್ನು । **ಅಭಿರಕ್ಷಂತಿ**—ಕಾಪಾಡುತ್ತವೆಯೋ ಅಂತಹವೂ ಮತ್ತು । **ಭದ್ರಾಃ**—ಮಂಗಳಾತ್ಮಕವಾದವೂ ಆದ । **ತೇ**—ನಿನ್ನ । **ರಶನಾಃ**—ಕಡಿವಾಣಗಳನ್ನು । **ಅತ್ರ**—ಇಲ್ಲಿ । **ಅಪಶ್ಯಂ**—ನೋಡಿದ್ದೇನೆ.

### ಭಾವಾರ್ಥ

ಎಲೈ ಅಶ್ವವೇ, ನಿನ್ನ ಅಂಗಗಳನ್ನು ಶುದ್ಧಿಮಾಡತಕ್ಕ ಸ್ಥಾನಗಳಾದ ಈ ದ್ಯುಲೋಕಾದಿಗಳನ್ನೂ, ಯಜ್ಞದಲ್ಲಿ ಭಾಗವನ್ನು ವಹಿಸತಕ್ಕ ನಿನ್ನ ಗೊರಸುಗಳನ್ನು ಇಡತಕ್ಕ ಈ ಪ್ರದೇಶಗಳನ್ನೂ ಮತ್ತು ಯಜ್ಞಸಾಧನವಾದ ಅಶ್ವವನ್ನು ಕಾಪಾಡತಕ್ಕವೂ ಮತ್ತು ಮಂಗಳಾತ್ಮಕವೂ ಆದ ನಿನ್ನ ಕಡಿವಾಣಗಳನ್ನು ಇಲ್ಲಿ ನೋಡಿದ್ದೇನೆ.

### English Translation

I have beheld, Horse, these your purifying (regions); these impressions of the feet of you, who share in the sacrifice; and here your auspicious reins, which are the protectors of the rite that preserve it.

### ವಿಶೇಷವಿಷಯಗಳು

ಈ ಋಕ್ಕಿಗೆ ಎರಡು ವಿಧವಾದ ಅನ್ವಯವನ್ನು ಮಾಡಿದ್ದಾರೆ. ಮೊದಲನೆಯದಾಗಿ, ದ್ಯುಲೋಕಾದಿಗಳ ಪರವಾಗಿಯೂ ಎರಡನೆಯದಾಗಿ ಉದಕಾದಿಗಳ ಪರವಾಗಿಯೂ ವಿವರಿಸಿದೆ. ಮೊದಲನೆಯ ಅನ್ವಯವನ್ನು ಪ್ರತಿಪದಾ

ರ್ಥದಲ್ಲಿ ಕೊಟ್ಟಿದೆ. ಎರಡನೆಯದಾಗಿ, **ಅವಮಾರ್ಜನಾನಿ** ಎಂಬ ಪದಕ್ಕೆ **ಅಂಗಪ್ರಕ್ಷಾಲನಸಾಧನಾನ್ಯುದಕಾನಿ** ಎಂದರೆ ಅಂಗಗಳನ್ನು ತೊಳೆದು ಶುದ್ಧಿಮಾಡತಕ್ಕ ಉದಕಗಳೆಂದೂ, **ಶಫಾನಾಂ ನಿಧಾನಾ ಇಮಾ** ಎನ್ನುವುದಕ್ಕೆ ಗೊರಸುಗಳನ್ನು ಇಡತಕ್ಕ ಯಜ್ಞಭೂಮಿಯೆಂದೂ **ಗೋಪಾಃ ರಶನಾಃ** ಎಂಬುದಕ್ಕೆ ಯಜ್ಞರಕ್ಷಕರಾದ ಋತ್ವಿಕ್ಕು ಗಳೆಂದೂ ಅಥವಾ ಅಶ್ವರಕ್ಷಕರಾದ ರಾಜಪುರುಷರೆಂದೂ ಅರ್ಥಮಾಡಿದೆ.

ತೈತ್ತಿರೀಯಸಂಹಿತೆಯಲ್ಲಿರುವ ಇದೇ ಮಂತ್ರಕ್ಕೆ ಸಾಯಣರು ಇನ್ನೂ ಕೊಂಚ ವ್ಯತ್ಯಸ್ತವಾಗಿ ಅರ್ಥಮಾಡಿ ದ್ದಾರೆ. ಅಲ್ಲಿ (ತೈ. ಸಂ. ೪-೬-೭) ಅವಮಾರ್ಜನಾನಿ ಎಂಬುದಕ್ಕೆ **ಶರೀರಶೋಧನಸಾಧನಾನಿ ಲೋಹ ಮಯಾನಿ ।** ಶರೀರವನ್ನು ಉಜ್ಜತಕ್ಕ ಲೋಹಮಯವಾದ ಸಾಧನವೆಂದೂ ; **ಶಫಾನಾಂ ನಿಧಾನಾ** ಎನ್ನುವುದಕ್ಕೆ **ಲೋಹಮಯಾನ್ಯಾಭರಣವಿಶೇಷರೂಪಾಣಿ** ಎಂದರೆ ರಾಜಾಶ್ವಗಳು ನಡೆಯುವಾಗ ಅವುಗಳ ಗೊರಸುಗಳಿಗೆ ಯಾವ ವಿಧವಾದ ತೊಂದರೆಗಳೂ ಆಗದಿರಲೆಂದು ಲೋಹಮಯವಾದ ಮುಚ್ಚಳವನ್ನು ಹಾಕುವುದು ವಾಡಿಕೆ ಯಾದುದರಿಂದ ಇಲ್ಲಿಯೂ ಅಂತಹ ಆವರಣಸಾಧನವನ್ನು ಸೂಚಿಸುವ ಪದವೆಂದೂ, ಅರ್ಥಮಾಡಿದ್ದಾರೆ.

**ಭದ್ರಾಃ**—**ಭದ್ರಂ ಭಗೇನ ವ್ಯಾಖ್ಯಾತಂ । ಭಜನೀಯಂ, ಭೂತಾನಾಮಭಿದ್ರವಣೀಯಂ ಭವದ್ರ-ಮಯತೀತಿ ವಾ ಭಾಜನವದ್ವಾ ।** (ನಿ. ೪-೯) । ಶ್ರೇಯಸ್ಕರ ಅಥವಾ ಮಂಗಳಕರ ಎಂಬರ್ಥದಲ್ಲಿ ಭದ್ರಶಬ್ದವು ಉಪಯೋಗಿಸಲ್ಪಡುತ್ತದೆ. ಇನ್ನೂ ವಿವರಿಸಿದರೆ ಭೋಗಕ್ಕೆ ಅರ್ಹವಾದುದು, ಪ್ರಾಣಿಗಳಿಗೆ ಅತ್ಯಂತ ಅಪೇಕ್ಷಿತವಾ ದುದು, ಅಥವಾ ಸುಖಭೋಗವನ್ನುಂಟುಮಾಡತಕ್ಕದ್ದು ಅಥವಾ ಅರ್ಹತೆಯುಳ್ಳವನಿಗೆ ಮಾತ್ರ ಸೇರತಕ್ಕದ್ದು ಎಂಬ ಅರ್ಥಗಳಲ್ಲಿ ಭದ್ರಶಬ್ದದ ಪ್ರಯೋಗವಿದೆ. ನಿರುಕ್ತಕಾರರು ಈ ಪದವನ್ನು ವಿವರಿಸುವಾಗ ಶ್ರುತಿವಾಕ್ಯದ ಉದಾಹರ ಣೆಯಿಂದ ಸನ್ನಿವೇಶಕ್ಕನುಗುಣವಾದ ಒಂದರ್ಥವನ್ನು ವಿವರಿಸಿದ್ದಾರೆ.

**ಅತ್ರಾ ಸಖಾಯಃ ಸಖ್ಯಾನಿ ಜಾನತೇ ಭದ್ರೈಷಾಂ ಲಕ್ಷ್ಮೀರ್ನಿಹಿತಾಧಿ ವಾಚಿ ॥**

(ಋ. ಸಂ. ೧೦-೭೧-೨)

ಎಂಬ ವಾಕ್ಯದಲ್ಲಿ **ಭದ್ರ**ಶಬ್ದವನ್ನು ವಿವರಿಸುತ್ತಾ ಮಂಗಳಾತ್ಮಕವಾದುದು ಎಂಬರ್ಥವನ್ನು ಹೇಳಿದ್ದಾರೆ, ಅದರಂತೆ ಇಲ್ಲಿಯೂ ಸಹ ಮಂಗಳಾತ್ಮಕ ಎಂದು ಅರ್ಥ

### ವ್ಯಾಕರಣಪ್ರಕ್ರಿಯಾ

**ಇಮಾ**—ನಪುಂಸಕ ಬಹುವಚನದಲ್ಲಿ **ಶೇಶ್ಛಂದಸಿ ಬಹುಲಮ್** (ಪಾ. ಸೂ. ೬-೧-೭೦) ಎಂಬುದರಿಂದ ಶಿಗೆ ಲೋಪ.

**ಅವಮಾರ್ಜನಾನಿ**—ಮೃಜೂ ಶುದ್ಧೌ. ಧಾತು. ಲ್ಯುಟ್ ಪ್ರತ್ಯಯ ಯುವೋರನಾಕೌ ಎಂಬುದರಿಂದ ಅನಾದೇಶ. ಪ್ರತ್ಯಯ ನಿಮಿತ್ತವಾಗಿ **ಮೃಜೇರ್ವೃದ್ಧಿಃ** (ಪಾ ಸೂ. ೭-೨-೧೧೪) ಎಂಬುದರಿಂದ ಧಾತುವಿನ ಲಘೂಪಧೆಗೆ ವೃದ್ಧಿ. ರಪರವಾಗಿ ಬರುತ್ತದೆ. **ಲಿತಿ** (ಪಾ. ಸೂ. ೯-೧-೧೯೩) ಎಂಬುದರಿಂದ ಪ್ರತ್ಯಯದ ಪೂರ್ವಕ್ಕೆ ಉದಾತ್ತಸ್ವರ ಬರುತ್ತದೆ. ಪ್ರಾದಿಸಮಾಸವಾದಾಗ ಕೃದುತ್ತರಪದ ಪ್ರಕೃತಿಸ್ವರ ಬರುತ್ತದೆ.

**ಸನಿತುಃ**—ಷಣ ಸಂಭಕ್ತೌ. ಧಾತು. **ಧಾತ್ವಾದೇಃ ಷಃ ಸಃ** ಎಂಬುದರಿಂದ ಆದಿಗೆ ಸತ್ವ. ಕರ್ತರಿಯಲ್ಲಿ ತೃಚ್ ಪ್ರತ್ಯಯ. **ಆರ್ಧಧಾತುಕ**—(ಪಾ. ಸೂ. ೭-೨-೩೫) ಎಂಬುದರಿಂದ ಅದಕ್ಕೆ ಇಡಾಗಮ. ಷಷ್ಠೀ ಏಕವಚ ನಾಂತರೂಪ. ಪ್ರತ್ಯಯಸ್ವರದಿಂದ ಅಂತೋದಾತ್ತವಾಗುತ್ತದೆ.

**ನಿಧಾನಾ**—ಡುಧಾಞ್ ಧಾರಣಪೋಷಣಯೋಃ ಧಾತು. **ಕರಣಾಧಿಕರಣಯೋಶ್ಚ** ( ಪಾ. ಸೂ. ೩-೩-೧೧೭) ಎಂಬುದರಿಂದ ಅಧಿಕರಣಾರ್ಥದಲ್ಲಿ ಲ್ಯುಟ್ ಪ್ರತ್ಯಯ. ಅದಕ್ಕೆ ಅನಾದೇಶ. **ಗತಿಕಾರಕೋಪಪದಾತ್-ಕೃತ್** (ಪಾ. ಸೂ. ೬-೨-೧೩೯) ಎಂಬುದರಿಂದ ಕೃದುತ್ತರಪದ ಪ್ರಕೃತಿಸ್ವರ ಬರುತ್ತದೆ. ನಪುಂಸಕ ಬಹುವಚನದಲ್ಲಿ **ಶೇಶ್ಛಂದಸಿ ಬಹುಲಮ್** (ಪಾ. ಸೂ. ೯-೧-೭೦) ಎಂಬುದರಿಂದ ಶಿಗೆ ಲೋಪ.

**ಅತ್ರ**—**ಋಚಿತುನುಘ**—(ಪಾ. ಸೂ. ೬-೩-೧೩೩) ಎಂಬುದರಿಂದ ಸಂಹಿತಾದಲ್ಲಿ ದೀರ್ಘ ಬರುತ್ತದೆ.

**ಭದ್ರಾಃ**—ಭದಿ ಕಲ್ಯಾಣೇ ಸುಖೇ ಚ. **ಋಜ್ರೇಂದ್ರಾಗ್ರ**—(ಉ.ಸೂ. ೧-೧೮೬) ಎಂಬುದರಿಂದ ರಗಂತವಾಗಿ ನಿಪಾತಿತವಾಗಿದೆ.

**ಅಪಶ್ಯಮ್**—ದೃಶಿರ್ ಪ್ರೇಕ್ಷಣೇ. ಧಾತು. ಲಙ್ ಉತ್ತಮಪುರುಷಏಕವಚನಾಂತರೂಪ. ತಿಙಂತ ನಿಘಾತಸ್ವರ ಬರುತ್ತದೆ.

**ಋತಸ್ಯ**—ಕರ್ಮಾರ್ಥದಲ್ಲಿ ಷಷ್ಠೀ ಬಂದಿದೆ.

**ಅಭಿರಕ್ಷಂತಿ**—ರಕ್ಷ ಪಾಲನೇ. ಲಟ್ ಪ್ರಥಮಪುರುಷ ಬಹುವಚನಾಂತರೂಪ. **ಯದ್ವೃತ್ತಾನ್ನಿತ್ಯಂ** (ಪಾ. ಸೂ. ೮-೧-೬೬) ಎಂಬುದರಿಂದ ನಿಘಾತಸ್ವರ ಪ್ರತಿಷೇಧ ಬರುತ್ತದೆ. **ತಾಸ್ಯನುದಾತ್ತೇತ್**—(ಪಾ. ಸೂ. ೬-೧-೧೮೬) ಎಂಬುದರಿಂದ ಲಸಾರ್ವಧಾತುಕ ಅನುದಾತ್ತವಾಗುವುದರಿಂದ ಧಾತುಸ್ವರ ಉಳಿಯುತ್ತದೆ **ತಿಙಿಚೋ-ದಾತ್ತವತಿ** (ಪಾ. ಸೂ. ೮-೧-೭೧) ಎಂಬುದರಿಂದ ಗತಿಗೆ (ಅಭಿ) ನಿಘಾತಸ್ವರ ಬರುತ್ತದೆ.

**ಗೋಪಾಃ**—ಗುಪೂ ರಕ್ಷಣೇ. ಧಾತು. **ನಂದಿಗ್ರಹಪಚಾದಿಭ್ಯಃ**—(ಪಾ. ಸೂ. ೩-೧-೧೩೪) ಎಂಬುದರಿಂದ ಕರ್ತರಿಯಲ್ಲಿ ಅಚ್‌ಪ್ರತ್ಯಯ. **ಪುಗಂತಲಘೂಪಧಸ್ಯ ಚ** (ಪಾ. ಸೂ. ೭-೩-೮೯) ಎಂಬುದರಿಂದ ಪ್ರತ್ಯಯನಿಮಿತ್ತವಾಗಿ ಧಾತುಲಘೂಪಧೆಗೆ ಗುಣ. **ಚಿತಃ** (ಪಾ. ಸೂ. ೬-೧-೧೬೩) ಎಂಬುದರಿಂದ ಅಂತೋದಾತ್ತಸ್ವರ ಬರುತ್ತದೆ. ॥ ೫ ॥

———:O:———

**ಸಂಹಿತಾಪಾಠಃ**

## ಆತ್ಮಾನಂ ತೇ ಮನಸಾರಾದಜಾನಾಮವೋ ದಿವಾ ಪತಯಂತಂ ಪತಂಗಂ।
## ಶಿರೋ ಅಪಶ್ಯಂ ಪಥಿಭಿಃ ಸುಗೇಭಿರರೇಣುಭಿರ್ಜೇಹಮಾನಂ ಪತತ್ರಿ ॥ ೬ ॥

**ಪದಪಾಠಃ**

**ಆತ್ಮಾನಂ । ತೇ । ಮನಸಾ । ಆರಾತ್ । ಅಜಾನಾಂ । ಅವಃ । ದಿವಾ । ಪತಯಂತಂ । ಪತಂಗಂ ।**

**ಶಿರಃ । ಅಪಶ್ಯಂ । ಪಥಿಽಭಿಃ । । ಸುಽಗೇಭಿಃ । ಅರೇಣುಽಭಿಃ । ಜೇಹಮಾನಂ । ಪತತ್ರಿ ॥ ೬ ॥**

ಸಾಯಣಭಾಷ್ಯಂ

ಹೇ ಅಶ್ವ ತೇ ತವಾತ್ಮಾನಂ ಶರೀರಂ ಮನಸಾಸ್ಮದೀಯೇನ ಪ್ರಕೃಷ್ಟಗಮನವತಾ ಚೇತಸಾರಾ-ದತಿದೂರೇ ಸ್ಥಿತಮಜಾನಾಂ । ಜಾನಾಮಿ । ಅತಿವ್ಯಾಪ್ತಂ ಭಾವಯಾಮೀತ್ಯರ್ಥಃ । ಕಥಂ । ಅವೋಽ-ವಸ್ತಾತ್ । ಸಾಮರ್ಥ್ಯಾದ್ಭೂಮೇಃ । ಭೂಮಿಮಾರಭ್ಯ ದಿವಾಂತರಿಕ್ಷೇಣ ಮಾರ್ಗೇಣ ಪತಂಗಮಾದಿತ್ಯಂ ಪತಯಂತಂ ಗಚ್ಛಂತಂ ಪ್ರಾಪ್ನುವಂತಂ । ಯದ್ವಾ । ಯತೋ ದಿವಾಂತರಿಕ್ಷೇಣ ಮಾರ್ಗೇಣ ದಿವಿ ವಾ ಪತಯಂತಂ ಗಚ್ಛಂತಂ ಪತಂಗಮಾದಿತ್ಯಮವಃ ಅವಃ ವ್ಯಾಪ್ನೋಷಿ ಅತೋ ವ್ಯಾಪ್ತಂ ಜಾನಾಮಿ । ಕಿಂಚ ಶಿರೋಽಪಶ್ಯಂ । ತವ ಶಿರ ಏವಂ ಪಶ್ಯಾಮಿ । ಕಥಂ । ಸುಗೇಭಿಃ ಶೋಭನಗಮನಸಾಧನೈರರೇಣುಭಿರ-ಪಾಂಸುಲೈಃ ಪಥಿಭಿರ್ಮಾರ್ಗೈಃ । ಆದಿತ್ಯಮಂಡಲಾದಪ್ಯುಪರಿಭೂತೈಃ ಸತ್ಯಲೋಕಮಾರ್ಗೈರಿತ್ಯರ್ಥಃ । ತತ್ರ ಪ್ರತಿಬಂಧಾಭಾವಾನ್ಮಾರ್ಗಾಣಾಮುಕ್ತರೂಪತ್ವಂ । ತಥಾವಿಧೈಸ್ತೈರ್ಜೇಹಮಾನಮುಪರ್ಯುಪರಿ ವ್ಯಾಪ್ನು-ವತ್ ಪತತ್ರಿ ಪತನವಚ್ಛಿರೋಽಪಶ್ಯಂ । ಭಾವಯಾಮಿ । ಏವಂ ಲೋಕತ್ರಯವ್ಯಾಪ್ತಂ ಭಾವಯಾ-ಮೀತ್ಯರ್ಥಃ । ಯದ್ವಾ । ತ ಆತ್ಮಾನಮೇವಂ ಭಾವಯಾಮಿ ಮನಸಾ ದಿವಾ ದ್ಯೋತನಾತ್ಮಕೇನಾಂತ-ರಿಕ್ಷಮಾರ್ಗೇಣ ದಿವಃ ಸಕಾಶಾದ್ವಾವೋಽವಸ್ತಾದವಾಙ್ಮುಖಂ ಪತಯಂತಂ ಯಾಗದೇಶಂ ಪ್ರತಿ ವ್ಯಾಪ್ನು-ವತ್ ಅತ ಏವ ಪತಂಗಂ ಪತನಶೀಲಮಧಃಪತದಾದಿತ್ಯಸದೃಶಂ ವಾ । ಏವಂ ತವ ಶಿರೋ ಭಾವಯಾ-ಮೀತ್ಯರ್ಥಃ । ಶಿರಶ್ಚೈವಮಪಶ್ಯಂ । ಉಕ್ತರೂಪೈರ್ದೇವಯಜನಮಾರ್ಗೈರ್ಜೇಹಮಾನಂ ಯಜ್ಞದೇಶಂ ವ್ಯಾಪ್ನುವತ್ ಪತತ್ರಿ ಶೀಘ್ರಗಾಮಿ ಶಿರಃ ಪಶ್ಯಾಮಿ । ಯದ್ಯಪ್ಯಾತ್ಮಶಬ್ದೇನ ಸಶಿರಸ್ಕಂ ಶರೀರಮುಕ್ತಂ ತಥಾಪಿ ದೇಹಾತ್ಪೂರ್ವಂ ಶಿರಸೋ ದೃಶ್ಯಮಾನತ್ವಾತ್ ಪೃಥಗಭಿಧೀಯತೇ ॥

ಪ್ರತಿಪದಾರ್ಥ

(ಅಶ್ವ—ಎಲೈ ಅಶ್ವವೇ) । **ಅವಃ**—ಭೂಮಿಯಿಂದ (ಹೊರಟು) । **ದಿವಾ**—ಅಂತರಿಕ್ಷಮಾರ್ಗವಾಗಿ । **ಪತಂಗಂ**—ಸೂರ್ಯನನ್ನು ಲಕ್ಷಿಸಿ । **ಪತಯಂತಂ**—ಹಾರಿ ಹೋಗುತ್ತಿರುವ । **ತೇ**—ನಿನ್ನ । **ಆತ್ಮಾನಂ**—ರೂಪವನ್ನು । **ಆರಾತ್**—ಬಹುದೂರದಿಂದಲೇ । **ಮನಸಾ**—ನನ್ನ ಶ್ರದ್ಧಾಯುತವಾದ ಮನಸ್ಸಿನಿಂದ । **ಅಜಾನಾಂ**—ತಿಳಿದೆನು । (ಮತ್ತು) **ಅರೇಣುಭಿಃ**-ಧೂಳಿಲ್ಲದುದೂ (ಶುದ್ಧವಾದುದೂ) । **ಸುಗೇಭಿಃ**—ಶ್ರೇಷ್ಠವಾದ ಸಂಚಾರಾರ್ಹವಾದುದೂ ಆದ । **ಪಥಿಭಿಃ**—ಮಾರ್ಗದಿಂದ । **ಜೇಹಮಾನಂ**—ಮೇಲಿಂದ ಮೇಲಕ್ಕೆ ವ್ಯಾಪಿಸುತ್ತಾ । **ಪತತ್ರಿ**—ಹಾರುತ್ತಿರುವ । **ಶಿರಃ**—ನಿನ್ನ ಶಿರಸ್ಸನ್ನೂ ಸಹ । **ಅಪಶ್ಯಂ**—ನೋಡುತ್ತೇನೆ.

ಭಾವಾರ್ಥ

ಎಲೈ ಅಶ್ವವೇ, ಪೃಥ್ವಿಯಿಂದ ಹೊರಟು ಸೂರ್ಯನನ್ನು ಲಕ್ಷಿಸಿ ಅಂತರಿಕ್ಷಮಾರ್ಗವಾಗಿ ಹಾರಿಹೋಗುತ್ತಿರುವ ನಿನ್ನ ರೂಪವನ್ನು ಬಹುದೂರದಿಂದಲೇ ನನ್ನ ಶ್ರದ್ಧಾಯುತವಾದ ಮನಸ್ಸಿನಿಂದ ತಿಳಿದೆನು. ಮತ್ತು ಕಶ್ಮಲವಿಲ್ಲದೇ ಶುದ್ಧವಾದುದೂ, ಶ್ರೇಷ್ಠವಾದ ಸಂಚಾರಾರ್ಹವಾದುದೂ ಆದ ಮಾರ್ಗದಿಂದ ಮೇಲಿಂದ ಮೇಲಕ್ಕೆ ವ್ಯಾಪಿಸುತ್ತಾ ಹಾರುತ್ತಿರುವ ನಿನ್ನ ಶಿರಸ್ಸನ್ನೂ ಸಹ ನೋಡುತ್ತಿದ್ದೇನೆ.

## English Translation

I recognise in my mind your form afar off, going from (the earth)below, by way of heaven, to the sun. I behold your head soaring aloft, and mounting quickly by unobstructed paths, unsullied by dust.

### ವಿಶೇಷವಿಷಯಗಳು

ಈ ಋಕ್ಕಿಗೆ ಎರಡುವಿಧವಾದ ಅನ್ವಯವನ್ನು ಮಾಡಿದ್ದಾರೆ. ಮೊದಲನೆಯದಾಗಿ **ಅವಃ** ಎಂಬ ಪದಕ್ಕೆ **ಅವಸ್ತಾತ್** ಕೆಳಭಾಗದಿಂದ ಎಂದರೆ ಭೂಮಿಯಿಂದ ಎಂದೂ, ಎರಡನೆಯದಾಗಿ **ಅವಃ ಅವಸ್ತಾತ್** ಕೆಳಭಾಗವನ್ನು ಎಂದರೆ ಭೂಮಿಯನ್ನು ಅಭಿಲಕ್ಷಿಸಿ ಎಂದೂ ಅರ್ಥಮಾಡಿದೆ. ಮೊದಲನೆಯ ಅರ್ಥವನ್ನು ಪ್ರತಿಪದಾರ್ಥದಲ್ಲಿ ತಿಳಿಸಿದೆ. ಎರಡನೆಯ ಅನ್ವಯದ ಪ್ರಕಾರ **ದಿವಃ ಸಕಾಶಾತ್** ಅಂತರಿಕ್ಷದಿಂದ ಹೊರಟು, **ಅವಃ** ಭೂಮಿಗೆ ಎದುರಾಗಿ **ಪತಯಂತಂ** ಹಾರಿ ಕೆಳಕ್ಕೆ ಬರುತ್ತಿರುವ **ಪತಂಗಂ** ಆದಿತ್ಯಸದೃಶವಾದ **ಆತ್ಮಾನಂ** ಅಶ್ವದ ಸ್ವರೂಪವನ್ನು ಎಂದೂ ಉತ್ತರಾರ್ಧದಲ್ಲಿ, **ಸುಗೇಭಿಃ ಪಥಿಭಿಃ** ಶ್ರೇಷ್ಠವಾದ ದೇವಯಜನಮಾರ್ಗದಲ್ಲಿ **ಜೇಹಮಾನಂ** ವ್ಯಾಪಿಸುತ್ತಲೂ **ಪತತ್ರಿ** ಶೀಘ್ರಗಾಮಿಯಾಗಿ ಇರತಕ್ಕ **ಶಿರಃ ಪಶ್ಯಾಮಿ** ಎಂದರ್ಥಮಾಡಿದೆ. ಇಲ್ಲಿ **ಆತ್ಮಾನಂ** ಎಂಬ ಪದದಿಂದಲೇ ಶಿರಸ್ಸಿನಿಂದಲೂ ಕೂಡಿದ ದೇಹವೆಂದರ್ಥವಾಗುವಾಗ ಪುನಃ ಶಿರಃ ಎಂಬ ಪದವನ್ನುಪಯೋಗಿಸಿ ಅದರ ವರ್ಣನೆ ಏತಕ್ಕೆ ಎಂಬ ಆಕ್ಷೇಪವು ಬಂದರೆ ಅದಕ್ಕೆ ಸಮಾಧಾನರೂಪವಾಗಿ **ಯದ್ಯಪ್ಯಾತ್ಮಶಬ್ದೇನ ಸಶಿರಸ್ಕಂ ಶರೀರ-ಮುಕ್ತಂ ತಥಾಪಿ ದೇಹಾತ್ಪೂರ್ವಂ ಶಿರಸೋ ದೃಶ್ಯಮಾನತ್ವಾತ್ ಪೃಥಗಭಿಧೀಯತೇ ।** ಆತ್ಮಶಬ್ದದಿಂದಲೇ ಶಿರಸ್ಸನ್ನೊಳಗೊಂಡ ದೇಹವೆಂದಾದರೂ ಸಹ ಸಂಚಾರ ಕಾಲದಲ್ಲಿ ಮೊದಲು ಶಿರಸ್ಸು ಕಾಣುವುದರಿಂದ ಈ ಪದವನ್ನು ಪ್ರತ್ಯೇಕವಾಗಿ ಹೇಳಿದೆಯೆಂದು ವಿವರಿಸಿದೆ. ಆಗಲೂ ಒಂದು ಆಕ್ಷೇಪವು ಸಾಧ್ಯವಾಗಬಹುದು. ಇಂತಹ ಸಂದರ್ಭದಲ್ಲಿ ಮೊದಲು ಶಿರಸ್ಸನ್ನು ನೋಡಿದೆನು ಎಂದು ಹೇಳಿ ಅನಂತರ ದೇಹವನ್ನು ನೋಡಿದೆನು ಎಂದು ಕ್ರಮವನ್ನನುಸರಿಸಬೇಕಾಗಿದ್ದಿತು ಎಂಬ ಆಕ್ಷೇಪವು ಸಹಜವಾಗಿದೆ. ಆದರೆ ಋಷಿವಾಕ್ಯದಲ್ಲಿ ಇಂತಹ ದೋಷಗಳಿಗವಕಾಶವಿಲ್ಲ.

ಸಾಯಣರು ಪ್ರತಿಪದಾರ್ಥದಲ್ಲಿ ಹೇಳಿರುವ ಅರ್ಥವನ್ನೇ ಮೊದಲು ಹೇಳಿರುವುದರಿಂದ ಅದನ್ನೇ ಮುಖ್ಯವಾಗಿಟ್ಟುಕೊಂಡಿರುವಂತೆ ತಿಳಿಯುತ್ತದೆ. ಅದನ್ನೇ ಅನುಸರಿಸಿದರೆ ಆಗ **ಸುಗೇಭಿಃ ಆರೇಣುಭಿಃ ಪಥಿಭಿಃ** ಎಂಬುದಕ್ಕೆ **ಆದಿತ್ಯಮಂಡಲಾದಪಿ ಉಪರಿಭೂತೈಃ ಸತ್ಯಲೋಕಮಾರ್ಗೈಃ ।** ಆದಿತ್ಯಮಂಡಲಕ್ಕಿಂತಲೂ ಮೇಲ್ಭಾಗದಲ್ಲಿರತಕ್ಕ ಸತ್ಯಲೋಕಮಾರ್ಗದಿಂದ ಎಂದಿದ್ದಾರೆ. ಈ ಸತ್ಯಲೋಕದ ವರ್ಣನೆಯನ್ನು ಉಪನಿಷತ್ತುಗಳಲ್ಲಿ ಈರೀತಿ ಹೇಳಿದೆ.

**ಸತ್ಯಮೇವ ಜಯತಿ ನಾನೃತಂ ಸತ್ಯೇನ ಪಂಥಾ ವಿತತೋ ದೇವಯಾನಃ ।**
**ಯೇನಾಕ್ರಮಂತ್ಯೃಷಯೋ ಹ್ಯಾಪ್ತಕಾಮಾ ಯತ್ರ ತತ್ಸತ್ಯಸ್ಯ ಪರಮಂ ನಿಧಾನಂ ॥**

(ಮುಂಡಕ. ೩-೧-೬)

ಆಪ್ತಕಾಮರೂ ಪರಮಾರ್ಥತತ್ತ್ವವನ್ನು ತಿಳಿದವರೂ ಆದ ಋಷಿಗಳು ಅತ್ಯಂತ ಪ್ರಕೃಷ್ಟವಾದ ಈ ಸತ್ಯಲೋಕವನ್ನು ಪಡೆಯುತ್ತಾರೆಂದೂ, ಇದೇ ಅತ್ಯುತ್ತಮವಾದ ಸ್ಥಾನವೆಂದೂ ವರ್ಣಿಸಿದೆ. ಇದನ್ನೇ,

**ಯಸ್ತು ವಿಜ್ಞಾನವಾನ್ಭವತಿ ಸಮನಸ್ಕಃ ಸದಾ ಶುಚಿಃ ।**
**ಸ ತು ತತ್ಪದಮಾಪ್ನೋತಿ ಯಸ್ಮಾದ್ಭೂಯೋ ನ ಜಾಯತೇ ।**

(ಕಠ. ೩-೮-೯)

ಅಧ್ಯಾತ್ಮಿಕವಾದ ಜ್ಞಾನವನ್ನು ಸಂಪಾದಿಸಿ ಶಮದಮಾದಿ ಸಂಪತ್ತುಗಳಿಂದ ಕೂಡಿದ ಆತ್ಮಸಂಯಮಿಯು ಈ ಸತ್ಯ ಲೋಕವನ್ನು ಪಡೆದು ಪುನಃ ಸಂಸಾರಿಯಾಗುವುದಿಲ್ಲ ಎಂದು ಆದಿತ್ಯಲೋಕವನ್ನೂ ಮೀರಿದ ಸತ್ಯಲೋಕದ ವರ್ಣನೆಯಿದೆ.

**ಜೇಹಮಾನಂ**—**ಜೇಹತೇ** ಎಂಬ ಪದವು ೧೨೨ ಗತಿಕರ್ಮನಾಮಗಳಲ್ಲಿ ಪಠಿತವಾಗಿದೆ. (ನಿ. ೩-೯). ಪ್ರಯತ್ನಪಡು, ಉದ್ಭವಿಸು ಎಂಬರ್ಥವನ್ನು ಕೊಡುವ ಜೇಹೃ ಧಾತುವಿನಿಂದ ನಿಷ್ಪನ್ನವಾಗಿದೆ. ಮತ್ತು ಈ ಪದಕ್ಕೆ ಸಂದರ್ಭಾನುಸಾರವಾಗಿ ಅರ್ಥವನ್ನು ಹೇಳಬೇಕು.

**ಅಸ್ಯ ಶುಷ್ಮಾಸೋ ದದೃಶಾನಪವೇರ್ಜೇಹಮಾನಸ್ಯ ಸ್ವನಯನ್ನಿಯುದ್ಭಿಃ ।**
**ಪ್ರತ್ನೇಭಿರ್ಯೋ ರುಶದ್ಭಿರ್ದೇವತಮೋ ವಿ ರೇಭದ್ಭಿರರತಿರ್ಭಾತಿ ವಿಭ್ವಾ ॥**

(ಋ. ಸಂ. ೧೦-೩-೬)

ಎಂಬಲ್ಲಿ ಕೇವಲಗಮನಾರ್ಥದಲ್ಲೂ, ಎಂದರೆ **ದೇವಾನ್ ಪ್ರತಿ ಗಚ್ಛತಃ** ಎಂದೂ,

**ಯೇ ತಾತೃಷುರ್ದೇವತ್ರಾ ಜೇಹಮಾನಾ ಹೋತ್ರಾವಿದಃ ಸ್ತೋಮತಷ್ಟಾಸೋ ಅರ್ಕೈಃ ।**
**ಅಗ್ನೇ ಯಾಹಿ ಸುವಿದತ್ರೇಭಿರರ್ವಾಙ್ ಸತ್ಯೈಃ ಕವ್ಯೈಃ ಪಿತೃಭಿರ್ಘರ್ಮಸದ್ಭಿಃ ॥**

(ಋ. ಸಂ. ೧೦-೧೫-೯)

ಎಂಬಲ್ಲಿ **ಪ್ರಾಪ್ತಾಃ** ಎಂಬರ್ಥವೂ ಆಗುತ್ತದೆ. ಕೆಲವು ಸಂದರ್ಭಗಳಲ್ಲಿ ಉತ್ಕೃತ್ಕಟವಾದ ಇಚ್ಛೆಯನ್ನು ತೋರಿಸುತ್ತದೆ. ಪ್ರಕೃತವಾದ ಋಕ್ಕಿನಲ್ಲಿ **ವ್ಯಾಪಿಸು** ಎಂಬರ್ಥವಿದೆ.

### ವ್ಯಾಕರಣಪ್ರಕ್ರಿಯಾ

**ಅಜಾನಾಮ್**— ಜ್ಞಾ ಅವಬೋಧನೇ ಧಾತು. ಲಙ್ ಉತ್ತಮಪುರುಷ ಏಕವಚನದಲ್ಲಿ ಮಿಪ್. **ತಸ್ಥಸ್ಥಮಿಪಾಂ**—(ಪಾ. ಸೂ. ೩-೪-೧೦೧) ಎಂಬುದರಿಂದ ಅದಕ್ಕೆ ಅಮಾದೇಶ. **ಕ್ರ್ಯಾದಿಭ್ಯಃ ಶ್ನಾ** (ಪಾ. ಸೂ. ೩-೧-೮೧) ಎಂಬುದರಿಂದ ಶ್ನಾವಿಕರಣ. **ಜ್ಞಾಜನೋರ್ಜಾ** (ಪಾ. ಸೂ. ೭-೩-೭೯) ಎಂಬುದರಿಂದ ಧಾತುವಿಗೆ ಜಾದೇಶ. ಅಂಗಕ್ಕೆ ಅಡಾಗಮ. ಅತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

**ಅವಃ**—**ಪೂರ್ವಾಧರಾವರಾಣಾಮಸಿಪುರಧವಶ್ಚೈಷಾಮ್** ( ಪಾ. ಸೂ. ೫-೩-೩೯ ) ಎಂಬುದರಿಂದ ಅಸ್ತಾತ್ಯರ್ಥದಲ್ಲಿ ಅಸಿ ಪ್ರತ್ಯಯ. ಪ್ರಕೃತಿಗೆ ಅವ್ ಆದೇಶ. ಪ್ರತ್ಯಯಸ್ವರದಿಂದ ಅಂತೋದಾತ್ತವಾಗುತ್ತದೆ.

**ಪತಯಂತಮ್**—ಪತ ಗತೌ. ಧಾತು. ಚುರಾದಿ. **ಸತ್ಯಾಪಪಾಶ**—(ಪಾ. ಸೂ. ೩-೧-೨೫) ಎಂಬುದರಿಂದ ಸ್ವಾರ್ಥದಲ್ಲಿ ಣಿಚ್. ಅದಂತವಾದುದರಿಂದ ಣಿಚ್ ನಿಮಿತ್ತವಾಗಿ ಲೋಪ. ಣಿಜಂತದಮೇಲೆ ಲಟಿಗೆ

ಶತ್ರಾದೇಶ. ಶಪ್ ವಿಕರಣ. ಶಪ್ ನಿಮಿತ್ತವಾಗಿ ಣಿಚಿಗೆ ಗುಣ. ಅಯಾದೇಶ. ದ್ವಿತೀಯಾಏಕವಚನ ಪರವಾದಾಗ ಉಗಿತ್ತಾದುದರಿಂದ ನುಮಾಗಮ. ಲಸಾರ್ವಧಾತುಕ ಅನುದಾತ್ತವಾಗುವುದರಿಂದ ಧಾತುಸ್ವರ ಉಳಿಯುತ್ತದೆ.

**ಪತಂಗಮ್**—ಪತ್ಲೃ ಗತೌ. ಧಾತು. **ಪತೇರಂಗಚ್** (ಉ. ಸೂ. ೧–೧೧೬) ಎಂಬುದರಿಂದ ಅಂಗಚ್ ಪ್ರತ್ಯಯ. **ಚಿತಃ**—(ಪಾ. ಸೂ. ೬–೧–೧೬೩) ಎಂಬುದರಿಂದ ಅಂತೋದಾತ್ತಸ್ವರ ಬರುತ್ತದೆ. ದ್ವಿತೀಯಾ ಏಕವಚನಾಂತರೂಪ.

**ಅಪಶ್ಯಮ್**—ದೃಶಿರ್ ಪ್ರೇಕ್ಷಣೇ. ಧಾತು. ಛಾಂದಸವಾಗಿ ವರ್ತಮಾನಾರ್ಥದಲ್ಲಿ ಲಙ್. ಉತ್ತಮ ಪುರುಷ ಏಕವಚನಾಂತರೂಪ. ತಿಙಂತನಿಘಾತಸ್ವರ ಬರುತ್ತದೆ.

**ಸುಗೇಭಿಃ**—ಗಮ್ಲೃ ಗತೌ. ಧಾತು. **ಸುದುರೋರಧಿಕರಣೇ** ಎಂಬುದರಿಂದ ಡಪ್ರತ್ಯಯ. ಡಿತ್ವ ಸಾಮರ್ಥ್ಯದಿಂದ ಧಾತುವಿನ ಟಿಗೆ (ಅಮ್) ಲೋಪ. ಪ್ರತ್ಯಯಸ್ವರ ಬರುತ್ತದೆ. **ಬಹುಲಂ ಛಂದಸಿ** ಎಂಬುದರಿಂದ ಭಿಸಿಗೆ ಐಸ್ ವಿಕಲ್ಪವಾದುದರಿಂದ ಏತ್ವ.

**ಅರೇಣುಭಿಃ**—ನ ವಿದ್ಯಂತೇ ರೇಣವಃ ಯೇಷು ತೇ. ಅರೇಣವಃ ತೈಃ. **ನಞ್ಸುಭ್ಯಾಮ್** ಎಂಬುದರಿಂದ ಉತ್ತರಪದಾಂತೋದಾತ್ತಸ್ವರ ಬರುತ್ತದೆ.

**ಜೇಹಮಾನಮ್**—ಜೇಹೃ ಪ್ರಯತ್ನೇ. ಧಾತು. ಭ್ವಾದಿ. ಅನುದಾತ್ತೇತ್ತಾದುದರಿಂದ **ಅನುದಾತ್ತಙಿತ ಆತ್ಮನೇಪದಮ್** (ಪಾ. ಸೂ. ೧-೩-೧೨) ಎಂಬುದರಿಂದ ಆತ್ಮನೇ ಪದಿಯಾಗುತ್ತವೆ. ಲಟಿಗೆ ಶಾನಚಾದೇಶ. ಶಪ್ ವಿಕರಣ. **ಆನೇಮುಕ್** (ಪಾ. ಸೂ. ೭-೨-೮೨) ಎಂಬುದರಿಂದ ಮುಕಾಗಮ. **ತಾಸ್ಯನುದಾತ್ತೇತ್**—(ಪಾ. ಸೂ ೬-೧-೧೮೬) ಎಂಬುದರಿಂದ ಲಸಾರ್ವಧಾತುಕ ಅನುದಾತ್ತವಾಗುವುದರಿಂದ ಧಾತುಸ್ವರ ಉಳಿಯುತ್ತದೆ ॥ ೬ ॥

ಸಂಹಿತಾಪಾಠಃ

ಅತ್ರಾ ತೇ ರೂಪಮುತ್ತಮಮಪಶ್ಯಂ ಜಿಗೀಷಮಾಣಮಿಷ ಆ ಪದೇ ಗೋಃ ।
ಯದಾ ತೇ ಮರ್ತೋ ಅನು ಭೋಗಮಾನಳಾದಿದ್ಗ್ರಸಿಷ್ಠ ಓಷಧೀರಜೀಗಃ ॥ ೭ ॥

### ಪದಪಾಠಃ

ಅತ್ರ । ತೇ । ರೂಪಂ । ಉತ್ऽತಮಂ । ಅಪಶ್ಯಂ । ಜಿಗೀಷಮಾಣಂ । ಇಷಃ । ಆ । ಪದೇ । ಗೋಃ ।

ಯದಾ । ತೇ । ಮರ್ತಃ । ಅನು । ಭೋಗಂ । ಆನಟ್ । ಆತ್ । ಇತ್ । ಗ್ರಸಿಷ್ಠಃ । ಓಷಧೀಃ ।

ಅಜೀಗರಿತಿ ॥ ೭ ॥

### ಸಾಯಣಭಾಷ್ಯಂ

ಏವಂ ಗಮನಾನಂತರಂ ಹೇ ಅಶ್ವ ತೇ ತವೋತ್ತಮಮುತ್ಕೃಷ್ಟತಮಂ ರೂಪ- ಮತ್ರಾಸ್ಮಿನ್ಯಾಗದೇಶೇऽಪಶ್ಯಂ । ಪಶ್ಯಾಮಿ । ಕೀದೃಶಂ । ಗೋರ್ಭೂಮ್ಯಾಃ ಪದೇ ಸ್ಥಾನೇ ದೇವಸ್ಥಾನೇ ದೇವಯಜನಪ್ರದೇಶ ಆಜಿಧಾವನಸ್ಥಾನೇ ವೇಷಃ ॥ ಕರ್ಮಣಿ ಷಷ್ಠೀ ॥ ಇಷಮಿಷ್ಯಮಾಣಮನ್ನಮನ್ನಾನಿ ವಾ ಆ ಸರ್ವತೋ ಜಿಗೀಷಮಾಣಂ ಗಂತುಮಿಚ್ಛಂತಂ । ಹೇ ಅಶ್ವ ತೇ ತವ ಯದಾ ಮರ್ತೋ ಮನುಷ್ಯೋ ಭೋಗಂ ಭೋಕ್ತವ್ಯಮನ್ನಮನ್ವಾನಟ್ ॥ ನಶತಿರ್ಗತಿಕರ್ಮಾ ॥ ಅನುಕ್ರಮೇಣ ಸಮೀಪಂ ಗಮಯತಿ । ಆದಿದನಂತರಂ ತದಾನೀಮೇವ ತದನುಗ್ರಹಾದ್ವಿಲಂಬಮಕೃತ್ವಾ ಗ್ರಸಿಷ್ಠೋ ಮಹಾತೃಷ್ಣಯೇವ ಗ್ರಸಿತೃತಮೋ ಭಕ್ಷಯಿತೃತಮಃ ಸನ್ನೋಷಧೀರನ್ನಾನ್ಯಜೀಗಃ । ಗಿರಸಿ । ಭಕ್ಷಯಸಿ । ಮಹಾನುಭಾವೋऽಪಿ ತ್ವಂ ಲೌಕಿಕಾಶ್ವವತ್ತೃಚ್ಛೇನ ಪುರುಷೇಣ ದೀಯಮಾನಂ ಸ್ವಲ್ಪಂ ಭಕ್ಷ್ಯಮನು- ಗ್ರಹಾತ್ಸ್ವೀಕರೋಷೀತ್ಯರ್ಥಃ ॥

### ಪ್ರತಿಪದಾರ್ಥ

(ಅಶ್ವ—ಎಲೈ ಅಶ್ವವೇ) **ಗೋಃ**—ಪೃಥ್ವಿಯ । **ಪದೇ**—ಯಜ್ಞಭೂಮಿಯಲ್ಲಿ । **ಇಷಃ**—ಅನ್ನವನ್ನು । **ಆ**— ಸುತ್ತಲೂ । **ಜಿಗೀಷಮಾಣಂ**— ಪಡೆಯಲಿಚ್ಛಿಯುಳ್ಳ । **ತೇ**— ನಿನ್ನ । **ಉತ್ತಮಂ**— ಶ್ರೇಷ್ಠವಾದ । **ರೂಪಂ**—ರೂಪವನ್ನು । **ಅತ್ರ**—ಈ ಯಾಗಪ್ರದೇಶದಲ್ಲಿ । **ಅಪಶ್ಯಂ**—ನೋಡುತ್ತೇನೆ (ಮತ್ತು) । **ತೇ**—ನಿನ್ನ । **ಮರ್ತಃ**—(ಸೇವಕನಾದ) ಮಾನವನು । **ಯದಾ**—ಯಾವಾಗ । **ಭೋಗಂ**—ಭೋಗ್ಯವಾದ ಅನ್ನವನ್ನು । **ಅನು ಆನಟ್**—ಕ್ರಮವಾಗಿ ತಂದು ಅರ್ಪಿಸುತ್ತಾನೆಯೋ । **ಆದಿತ್**—ಆ ಒಡನೆಯೇ । **ಗ್ರಸಿಷ್ಠಃ** (ಅದನ್ನು) ತಿನ್ನಬೇಕೆಂಬ ಆತುರದಿಂದ । **ಓಷಧೀಃ**—ಅನ್ನಗಳನ್ನು । **ಅಜೀಗಃ**—ಭಕ್ಷಿಸುತ್ತೀಯೆ ॥

### ಭಾವಾರ್ಥ

ಎಲೈ ಅಶ್ವವೇ, ಪೃಥ್ವಿಯ ಯಜ್ಞಭೂಮಿಯ ಸುತ್ತಲೂ ಅನ್ನವನ್ನು ಪಡೆಯಲಿಚ್ಛಿಯುಳ್ಳ ನಿನ್ನ ಶ್ರೇಷ್ಠವಾದ ರೂಪವನ್ನು ನಾನು ಈ ಯಾಗಪ್ರದೇಶದಲ್ಲಿ ನೋಡುತ್ತೇನೆ ಮತ್ತು ಯಾವಾಗ ನಿನ್ನ ಅನುಚರನಾದ ಮಾನವನು ನಿನಗೆ ಭೋಗ್ಯವಾದ ಅನ್ನವನ್ನು ಕ್ರಮವಾಗಿ ತಂದು ನಿನಗೆ ಅರ್ಪಿಸುತ್ತಾನೆಯೋ ಆ ಒಡನೆಯೇ ನೀನು ಅದನ್ನು ತಿನ್ನಬೇಕೆಂಬ ಆತುರದಿಂದ ಆ ಅನ್ನಗಳನ್ನು ಭಕ್ಷಿಸುತ್ತೀಯೆ.

## English Translation

I behold your most excellent form coming eagerly to (receive) your food in your (holy) place of earth: when your attendant brings you nigh to the enjoyment (of the provender), therefore greedy, you devour the fodder.

### ವಿಶೇಷವಿಷಯಗಳು

**ಉತ್ತಮಂ ರೂಪಂ ಅಪಶ್ಯಂ**—ಪ್ರಕ್ರಮಾಹುತಿಯ ಕಾಲದಲ್ಲಿ ಪಠಿಸತಕ್ಕ ಮಂತ್ರವು. ಪ್ರಕ್ರಮಾಹುತಿಯಲ್ಲಿ ಅಶ್ವದ ರೂಪವೂ, ಅದಕ್ಕೆ ಅನುಗುಣವಾದ ಆಹುತಿಯೂ ಅರ್ಪಿತವಾಗತಕ್ಕದ್ದು. ಆದುದರಿಂದ ನಿನ್ನ ಉತ್ತಮವಾದ ರೂಪವನ್ನು ನೋಡುತ್ತಿದ್ದೇನೆಂದು ಪ್ರಕಟಿಸುತ್ತಾನೆ ಅಶ್ವದ ಈ ರೂಪಾನುಗುಣವಾದ ಆಹುತ್ಯರ್ಪಣವಾಗದೇ ಯಜ್ಞವು ಪೂರ್ಣವಾಗುವುದಿಲ್ಲವೆಂದು ಸಿದ್ಧವಾದುದರಿಂದ ಈ ಪ್ರಕ್ರಮಾಹುತಿಯು ವಿಧ್ಯುಕ್ತವಾದ ಕರ್ಮವಾಗಿದೆ ಮೊದಲು ಈ ಆಹುತಿಯ ಸ್ವರೂಪವನ್ನು ವಿವರಿಸಿ ಅನಂತರ ಈ ಆಹುತಿಯನ್ನು ಸ್ವೀಕಾರಮಾಡಲು ಯೋಗ್ಯವಾದ ಅಶ್ವದ ರೂಪವೇನೆಂಬುದನ್ನು ಪರಿಶೀಲಿಸಲಾಗುತ್ತದೆ.

> **ಯಥಾ ವೈ ಹವಿಷೋಽಹುತಸ್ಯ ಸ್ಕಂದೇತ್ । ಏವಮೇತತ್ಪಶೋಃ ಸ್ಕಂದತಿ ಯಂ ಪ್ರೋಕ್ಷಿತಮ-**
> **ನಾಲಬ್ಧಮುತ್ಸೃಜಂತಿ ಯದ್ರೂಪಾಣಿ ಜುಹೋತಿ ಸರ್ವಹುತಮೇವೈನಂ ಜುಹೋತ್ಯಸ್ಕಂದಾ-**
> **ಯಸ್ಕನ್ನಗ್ಂ .... .... .... .... .... ಏತಾನಿ ವಾ ಅಶ್ವಸ್ಯ ರೂಪಾಣಿ ತಾನ್ಯೇವಾವರುಂಧೇ ॥**
>
> (ಶ. ಬ್ರಾ. ೧೩-೧-೩-೫)

ಆಹುತ್ಯರ್ಪಣದ ಕಾಲದಲ್ಲಿ ಕೊಂಚಭಾಗವೇನಾದರೂ ವೇದಿಕೆಯಿಂದ ಹೊರಗೆಬಿದ್ದ ಸಂದರ್ಭದಲ್ಲಿ ಆಗ ಆಹುತಿಯು ಪೂರ್ಣವಾದಂತಾಗುವುದಿಲ್ಲ. ಆಗ ಈ ರೂಪಾಹುತಿಯನ್ನು ಅರ್ಪಿಸಿದರೆ ಅದರಿಂದ ಆ ನ್ಯೂನತೆಯು ಸರಿಯಾಗುವುದು. " **ಹಿಂಕಾರಾಯ ಸ್ವಾಹಾ ; ಹಿಂಕೃತಾಯ ಸ್ವಾಹಾ** " ಇತ್ಯಾದಿಯಾಗಿ ಆಹುತಿಯನ್ನರ್ಪಿಸಬೇಕು. ಇವುಗಳೇ ಅಶ್ವದ ರೂಪಗಳು. ಈ ವಿಷಯದಲ್ಲಿ ಒಂದು ಚರ್ಚೆಯೂ ಇದೆ—

> **ತದಾಹುಃ । ಅನಾಹುತಿರ್ವೈ ರೂಪಾಣಿ ನೈನಾ ಹೋತವ್ಯಾ ಇತ್ಯಥೋ ಖಲ್ವಾಹುರತ್ರ ವಾ**
> **ಅಶ್ವಮೇಧಃ ಸಂತಿಷ್ಠತೇ ಯದ್ರೂಪಾಣಿ ಜುಹೋತಿ ॥**
>
> (ಶ. ಬ್ರಾ. ೧೩-೧-೩-೬)

ಈ ರೂಪಾಹುತಿಯ ಅವಶ್ಯಕತೆಯೇ ಇರುವುದಿಲ್ಲ ಎನ್ನತಕ್ಕವರೇ ಇದರ ಮಹತ್ತ್ವವನ್ನರಿತನಂತರ ಇದರ ಆಚರಣೆಯಿಂದ ಮಾತ್ರ ಅಶ್ವಮೇಧವು ಪೂರ್ಣವಾಗುತ್ತದೆಂದು ಒಪ್ಪಿಕೊಳ್ಳುತ್ತಾರೆ. ಆದರೆ ಅಶ್ವದ ಈ ರೂಪವಾವುದು ಎಂದರೆ ಅದರ ವರ್ಣನೆಯು ಈರೀತಿಯಲ್ಲಿದೆ. ವಿಶ್ವಾತ್ಮಕವಾದ ಅಶ್ವದ ಈ ರೂಪವನ್ನು ಹಿಂದೆ,

> **ಅಸಿ ಯಮೋ ಅಸ್ಯಾದಿತ್ಯೋ ಅರ್ವನ್ನಸಿ ತ್ರಿತೋ ಗುಹ್ಯೇನ ವ್ರತೇನ ।**
> **ಅಸಿ ಸೋಮೇನ ಸಮಯಾ ವಿಪೃಕ್ತ ಆಹುಸ್ತೇ ತ್ರೀಣಿ ದಿವಿ ಬಂಧನಾನಿ ॥**
>
> (ಋ. ಸಂ. ೧-೧೬೩-೩)

ಇತ್ಯಾದಿಯಾಗಿ ವರ್ಣಿಸಿ ಅಗ್ನ್ಯಾದಿರೂಪದಲ್ಲಿ ಮೂರು ಲೋಕಗಳನ್ನೂ ವ್ಯಾಪಿಸುವ ರೂಪವನ್ನು ಹೊಂದಿದೆಯೆಂದು ತಿಳಿಸಿದೆ. ಅಲ್ಲದೆ, ಮುಂದೆಯೂ ಸಹ

**ತವ ಶರೀರಂ ಪತಯಿಷ್ಣ್ವರ್ವನ್ತವ ಚಿತ್ತಂ ವಾತ ಇವ ಧ್ರಜೀಮಾನ್ ।**
**ತವ ಶೃಂಗಾಣಿ ವಿಷ್ಠಿತಾ ಪುರುತ್ರಾರಣ್ಯೇಷು ಜರ್ಭುರಾಣಾ ಚರಂತಿ ॥**

(ಋ. ಸಂ. ೧-೧೬೩-೧೧)

ಎಂಬಲ್ಲಿ ಅಶ್ವದ ಶರೀರವನ್ನೂ ಚಿತ್ತವನ್ನೂ ಶೃಂಗಸ್ಥಾನೀಯರೋಮಗಳನ್ನೂ ವರ್ಣಿಸಿ ಅದರ ರೂಪವನ್ನು ಪ್ರಶಂಸಿಸಿದೆ. ಈ ವರ್ಣನೆಯ ಸ್ವರೂಪವನ್ನು ಮುಂದೆ ವಿವರಿಸಲಾಗುತ್ತದೆ.

**ಯದಾ ತೇ ಮರ್ತಃ ಅನು ಭೋಗಮಾನಟ್**—ಮಾನವನಾದ ಅನುಚರನು ನಿನಗೆ ಭೋಗ್ಯವಾದ ಆಹಾರವನ್ನು ಇರಿಸಿದಾಗ ಎಂಬುದರ ಕ್ರಮವನ್ನು,

**ಪ್ರಾಜಾಪತ್ಯೋಶ್ವಃ ಸ್ವಯೈವೈನಂ ದೇವತಯಾ ಸಮರ್ಧಯಂತಿ ಲಾಜೀಞ್ಛಾಚೀನ್ ಯಶೋ ಮಮಾ೩ಂ ಇತಿ ಲಾಜೀಞ್ಛಾಚೀ೩ನ್ಯನ್ಯೇ ಗವ್ಯ ಇತ್ಯತಿರಿಕ್ತಮನ್ನಮಶ್ವಾಯೋಪಾವಹರತಿ ।**

(ಶ. ಬ್ರಾ. ೧೩-೨-೬-೮)

ಇತ್ಯಾದಿವಾಕ್ಯಗಳಲ್ಲಿ ಅಶ್ವಕ್ಕೆ ಅರ್ಪಿತವಾಗತಕ್ಕ ಅನ್ನಗಳ ವರ್ಣನೆಯಿದೆ.

**ಜಿಗೀಷಮಾಣಂ**— ಈ ಪದಕ್ಕೆ ಜೇತುಮಿಚ್ಛಾ ಜಯಿಸಲು ಇಚ್ಛೆಯುಳ್ಳ ಎಂದು ರೂಢವಾದ ಅರ್ಥವಿದೆ. ಆದರೆ ಇಲ್ಲಿ ಆ ಅರ್ಥವಿಲ್ಲ. ಈ ಪದವು ಋಕ್ಸಂಹಿತೆಯಲ್ಲಿ ಬರುವಾಗಲೆಲ್ಲಾ ಪಡೆಯಲಿಚ್ಛೆಯುಳ್ಳ ಅಥವಾ ಯೋಗ್ಯವಾದ ಎಂಬರ್ಥವೇ ಆಗಿರುತ್ತದೆ. ಉದಾಹರಣೆಗೆ—

**ಸ್ತುತಾಸೋ ನೋ ಮರುತೋ ಮೃಳಯಂತೂತ ಸ್ತುತೋ ಮಘವಾ ಶಂಭವಿಷ್ಠಃ ।**
**ಊರ್ಧ್ವಾ ನಃ ಸಂತು ಕೋಮ್ಯಾ ವನಾನ್ಯಹಾನಿ ವಿಶ್ವಾ ಮರುತೋ ಜಿಗೀಷಾ ।**

(ಋ. ಸಂ ೧-೧೭೧-೩)

ಎಂಬಲ್ಲಿ ಮರುತ್ತುಗಳ ಅನುಗ್ರಹವನ್ನಪೇಕ್ಷಿಸಿದೆ. ಇಲ್ಲಿ **ಜಿಗೀಷಾ** ಎಂಬ ಪದಕ್ಕೆ **ಜಿಗೀಷಿತವ್ಯಾನಿ ಪ್ರಾಪ್ತವ್ಯಾನಿ ಉತ್ತರತ್ರಾನುಭೂಯಮಾನಾನಿ** । ನಾವು ಪಡೆಯತಕ್ಕದ್ದೂ, ನಾವು ಅನುಭವಿಸತಕ್ಕದ್ದೂ ಆದ ಸಕಲ ಇಷ್ಟಾರ್ಥಗಳನ್ನು ಕೊಡು ಎಂದು ಪ್ರಾರ್ಥಿಸಿದೆ. ಇದರಂತೆ ಪ್ರಕೃತವಾದ ಋಕ್ಕಿನಲ್ಲಿಯೂ ಸಹ **ಜಿಗೀಷಮಾಣಂ ಗಂತುಮಿಚ್ಛಂತಂ ।** ಪಡೆಯಲಿಚ್ಛೆಯುಳ್ಳ ಎಂದು ತಾತ್ಪರ್ಯವಾಗುತ್ತದೆ.

### ವ್ಯಾಕರಣಪ್ರಕ್ರಿಯಾ

**ಅತ್ರ— ಋಚಿತುನುಘ**—(ಪಾ. ಸೂ. ೬-೩-೧೩೩) ಎಂಬುದರಿಂದ ಸಂಹಿತಾವಲ್ಲಿ ದೀರ್ಘ ಬರುತ್ತದೆ.

**ಜಿಗೀಷಮಾಣಮ್**— ಜಿ ಜಯೇ ಧಾತು. ಧಾತೋಃ **ಕರ್ಮಣಃ**—(ಪಾ. ಸೂ. ೩-೧-೭) ಎಂಬುದರಿಂದ ಇಚ್ಛಾರ್ಥದಲ್ಲಿ ಸನ್. **ಅಜ್ಝನಗ**—(ಪಾ. ಸೂ. ೬-೪-೧೬) ಎಂಬುದರಿಂದ ಸನ್ ಪರವಾದಾಗ ಧಾತುವಿಗೆ ದೀರ್ಘ. **ಸನ್ಯಙೋಃ** (ಪಾ. ಸೂ ೬-೧-೯) ಸೂತ್ರದಿಂದ ಧಾತುವಿಗೆ ದ್ವಿತ್ವ. ಅಭ್ಯಾಸಕ್ಕೆ ಹ್ರಸ್ವ. **ಸನ್ಲಿಟೋರ್ಜೇಃ** (ಪಾ. ಸೂ. ೭-೩-೫೭) ಎಂಬುದರಿಂದ ಧಾತುಜಕಾರಕ್ಕೆ ಕುತ್ವ. ವ್ಯತ್ಯಯದಿಂದ ಸನ್ನಂತದ ಮೇಲೆ ಲಟ್ ಬಂದಾಗ ಶಾನಚಾದೇಶ. **ಆನೇಮುಕ್** ಎಂಬುದರಿಂದ ಮುಕಾಗಮ. ಷತ್ವ, ಣತ್ವಾದಿ. **ಅಭ್ಯಸ್ತಾನಾಮಾದಿಃ** (ಪಾ. ಸೂ. ೬-೧-೧೮೯) ಎಂಬುದರಿಂದ ಆದ್ಯುದಾತ್ತಸ್ವರ ಬರುತ್ತದೆ. ದ್ವಿತೀಯಾ ಏಕವಚನಾಂತರೂಪ.

**ಇಷಃ**—ಷಷ್ಠೀ ಏಕವಚನಾಂತರೂಪ. **ಸಾವೇಕಾಚ**—(ಪಾ ಸೂ. ೬-೧-೧೬೮) ಎಂಬುದರಿಂದ ವಿಭಕ್ತಿಗೆ ಉದಾತ್ತಸ್ವರ ಬರುತ್ತದೆ. ಕರ್ಮಾರ್ಥದಲ್ಲಿ ಷಷ್ಠೀ ಬಂದಿದೆ.

**ಆನಟ್**—ಣಶ ಅದರ್ಶನೇ. ಧಾತು. ಇಲ್ಲಿ ಗತ್ಯರ್ಥದಲ್ಲಿ ಪ್ರಯುಕ್ತವಾಗಿದೆ. **ಛಂದಸಿ ಲುಙ್‌ಲಙ್‌ಲಿಟಃ** (ಪಾ. ಸೂ. ೩-೪-೬) ಎಂಬುದರಿಂದ ವರ್ತಮಾನಾರ್ಥದಲ್ಲಿ ಲಙ್. ಪ್ರಥಮಪುರುಷ ಏಕವಚನದಲ್ಲಿ ತಿಪ್. ಇಕಾರಲೋಪ **ಬಹುಲಂ ಛಂದಸಿ** ಎಂಬುದರಿಂದ ವಿಕರಣಕ್ಕೆ ಲುಕ್. ವ್ರಶ್ಚಭ್ರಸ್ಜ—ಸೂತ್ರದಿಂದ ಧಾತು ಶಕಾರಕ್ಕೆ ಷತ್ವ. **ಹಲ್‌ಙ್ಯಾಭ್ಯೋ**—ಸೂತ್ರದಿಂದ ಪ್ರತ್ಯಯಕ್ಕೆ ಲೋಪ. ಛಾಂದಸವಾಗಿ ಅಂಗಕ್ಕೆ ಆಡಾಗಮ. ಪದಾಂತ ಷಕಾರಕ್ಕೆ ಜಶ್ತ್ವ, ಚರ್ತ್ವ. ಯದ್ಯೋಗವಿರುವುದರಿಂದ ನಿಘಾತಸ್ವರ ಬರುವುದಿಲ್ಲ ಆಡಾಗಮ ಉದಾತ್ತವಾದುದರಿಂದ ಆದ್ಯುದಾತ್ತವಾಗುತ್ತದೆ

**ಗ್ರಸಿಷ್ಠಃ**—ಗ್ರಸು ಅದನೇ. ಧಾತು. ಕರ್ತರಿಯಲ್ಲಿ ತೃಚ್ ಬಂದಾಗ ಗ್ರಸಿತೃ ಎಂದು ರೂಪವಾಗುತ್ತದೆ. ಅತಿಶಯೇನ ಗ್ರಸಿತಾ ಗ್ರಸಿಷ್ಠಃ **ತುಶ್ಛಂದಸಿ** (ಪಾ. ಸೂ. ೫-೩-೫೯) ಎಂಬುದರಿಂದ ತೃಜಂತದಮೇಲೆ ಅತಿಶಯಾರ್ಥದಲ್ಲಿ ಇಷ್ಠನ್ ಪ್ರತ್ಯಯ. **ತುರಿಷ್ಠೇ ಮೇಯಸ್ಸು** (ಪಾ. ಸೂ. ೬-೪-೧೫೪) ಎಂಬುದರಿಂದ ಇಷ್ಠನ್ ಪರವಾದಾಗ ತೃಚಿಗೆ ಲೋಪ. **ಞ್ನಿತ್ಯಾದಿರ್ನಿತ್ಯಮ್** (ಪಾ. ಸೂ. ೬-೧-೧೯೭) ಎಂಬುದರಿಂದ ಆದ್ಯುದಾತ್ತಸ್ವರ ಬರುತ್ತದೆ.

**ಓಷಧೀಃ**—ಓಷಃ ಪಾಕಃ ಆಸು ಧೀಯತೇ ಇತಿ ಓಷಧಯಃ **ಕರ್ಮಣ್ಯಧಿಕರಣೇ ಚ** (ಪಾ. ಸೂ. ೩-೩-೯೩) ಎಂಬುದರಿಂದ ಧಾಞ್ ಧಾತುವಿಗೆ ಕಿ ಪ್ರತ್ಯಯ. **ಆತೋ ಲೋಪ ಇಟಿ ಚ** (ಪಾ. ಸೂ. ೬-೪-೬೪) ಎಂಬುದರಿಂದ ಧಾತುವಿನ ಆಕಾರಕ್ಕೆ ಲೋಪ. ಇದಕ್ಕೆ ಸ್ತ್ರೀತ್ವ ವಿವಕ್ಷಾಮಾಡಿದಾಗ **ಕೃದಿಕಾರಾದಕ್ತಿನಃ** ಎಂಬುದರಿಂದ ಙೀಷ್. ಇದಕ್ಕೆ ಶಸ್ ಪರವಾದಾಗ ಪೂರ್ವಸವರ್ಣದೀರ್ಘ. ದಾಸೀಭಾರಾದಿಯಲ್ಲಿ ಪಠಿತವಾದುದರಿಂದ ಪೂರ್ವಪದಪ್ರಕೃತಿಸ್ವರ ಬರುತ್ತದೆ. ಅದು ಘಿಞಂತವಾದುದರಿಂದ ಆದ್ಯುದಾತ್ತವಾಗುತ್ತದೆ.

**ಆಜೀಗಃ**—ಗ್ೃ ನಿಗರಣೇ ಧಾತು. ಛಾಂದಸವಾಗಿ ಲಙ್. **ಬಹುಲಂ ಛಂದಸಿ** ಎಂಬುದರಿಂದ ಶಪಿಗೆ ಶ್ಲು ಆದೇಶ. ಶ್ಲು ನಿಮಿತ್ತವಾಗಿ ಧಾತುವಿಗೆ ದ್ವಿತ್ವ. **ಬಹುಲಂ ಛಂದಸಿ** ಎಂಬುದರಿಂದ ಅಭ್ಯಾಸಕ್ಕೆ ಇತ್ವ. ಸಿಪ್ ನಿಮಿತ್ತವಾಗಿ ಧಾತುವಿನ ಇಕಿಗೆ ಗುಣ. ರಪರವಾಗಿ ಬರುತ್ತದೆ. **ಹಲ್‌ಙ್ಯಾಭ್ಯೋ**-ಸೂತ್ರದಿಂದ ಸಿಪಿಗೆ ಲೋಪ. ರೇಫಕ್ಕೆ ವಿಸರ್ಗ. **ತುಜಾದೀನಾಂ ದೀರ್ಘೋಽಭ್ಯಾಸಸ್ಯ**—(ಪಾ ಸೂ. ೬-೧-೭) ಎಂಬುದರಿಂದ ಅಭ್ಯಾಸಕ್ಕೆ ದೀರ್ಘ. ಅಂಗಕ್ಕೆ ಅತಿಙಂತದ ಪರವಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ. ॥ ೭ ॥

ಸಂಹಿತಾಪಾಠಃ

## ಅನು ತ್ವಾ ರಥೋ ಅನು ಮರ್ಯೋ ಅರ್ವನ್ನನು ಗಾವೋಽನು ಭಗಃ ಕನೀನಾಂ ।

## ಅನು ವ್ರಾತಾಸಸ್ತವ ಸಖ್ಯಮೀಯುರನು ದೇವಾ ಮಮಿರೇ ವೀರ್ಯಂ ತೇ॥ ॥ ೮ ॥

ಪದಪಾಠ

ಅನು । ತ್ವಾ । ರಥಃ । ಅನು । ಮರ್ಯಃ । ಅರ್ವನ್ । ಅನು । ಗಾವಃ । ಅನು । ಭಗಃ । ಕನೀನಾಂ ।

ಅನು । ವ್ರಾತಾಸಃ । ತವ । ಸಖ್ಯಂ । ಈಯುಃ । ಅನು । ದೇವಾಃ । ಮಮಿರೇ । ವೀರ್ಯಂ । ತೇ ॥ ೮ ॥

ಸಾಯಣಭಾಷ್ಯಂ

ಇದಾನೀಂ ಕೃತ್ಸ್ನಸ್ಯ ಲೋಕಸ್ಯಾಪಿ ಮುಖ್ಯ ಇತಿ ಪ್ರತಿಪಾದಯತಿ । ಹೇ ಅರ್ವನ್ ಗಮನ-ಶೀಲಾಶ್ವ ತ್ವಾ ತ್ವಾಮನ್ವನುಸೃತ್ಯ ರಥೋ ಗಚ್ಛತಿ । ತತಃ ಪುರತೋಽಶ್ವಸ್ಯ ಗಮನಾತ್ । ತಥಾ ಮರ್ತ್ಯೋ ಮರ್ತ್ಯಸ್ತ್ವಾ ತ್ವಾಮನು ॥ ಜಾತ್ಯೇಕವಚನಂ ॥ ಅನು ಗಾವಃ । ಗಾವೋಽಪಿ ತ್ವಾಮನುಗಚ್ಛಂತಿ । ತಥಾ ಕನೀನಾಂ ಕನ್ಯಕಾನಾಂ ಸ್ತ್ರೀಣಾಂ ಭಗೋ ಭಾಗ್ಯಂ ಸೌಂದರ್ಯಂ ತ್ವದ್ಭಗಮನು । ತಥಾ ವ್ರಾತಾಸೋ ವ್ರಾತಾಃ ಸಂಘಾತ್ಮಕಾ ಅನ್ಯೇಽಶ್ವಸಮೂಹಾ ವಸ್ವಾದಿದೇವಗಣಾ ವಾ ತ್ವಾಮನ್ವನುಸೃತ್ಯ ತವ ಸಖ್ಯ-ಮೀಯುಃ । ಸಖಿಭಾವಂ ಗಚ್ಛಂತಿ । ದೇವಾ ಋತ್ವಿಜೋ ದ್ಯೋತಮಾನಾ ದೇವಾ ವಾ ತ್ವಾಮನುಸೃತ್ಯ ತೇ ವೀರ್ಯಂ ವೀರಕರ್ಮ ಮಮಿರೇ । ಸ್ತುತ್ಯಾ ಮಾಂತಿ । ಅತಃ ಸರ್ವೋಽಪಿ ತ್ವಾಮನುಸರಃ ತ್ವಂ ತು ಸರ್ವಸ್ಯ ಶ್ರೇಷ್ಠ ಇತ್ಯರ್ಥಃ ॥

ಪ್ರತಿಪದಾರ್ಥ

**ಅರ್ವನ್**—ಎಲೈ ಅಶ್ವವೇ । **ತ್ವಾ**—ನಿನ್ನನ್ನು । **ರಥಃ**—ಉತ್ತಮವಾದ ರಥವು । **ಅನು**—ಅನುಸರಿಸುತ್ತದೆ । **ಮರ್ಯಃ**—ಮಾನವನು । **ಅನು**—ಅನುಸರಿಸಿ ಬರುತ್ತಾನೆ । **ಗಾವಃ**—ಗೋವುಗಳು । **ಅನು**—ಹಿಂಬಾಲಿಸುತ್ತವೆ । **ಕನೀನಾಂ**—ಕನ್ನಿಕೆಯರ । **ಭಗಃ**—ಸೌಂದರ್ಯವು । **ಅನು**—ಅನುಸರಿಸುತ್ತದೆ । **ವ್ರಾತಾಸಃ**—ಸಂಘಾತ್ಮಕರಾದ ಇತರ ಅಶ್ವಸಮೂಹಗಳು ಅಥವಾ ವಸ್ವಾದಿ ದೇವಗಣಗಳು । **ಅನು**—ನಿನ್ನನ್ನು ಹಿಂಬಾಲಿಸಿ । **ತವ**—ನಿನ್ನ **ಸಖ್ಯಂ**—ಸ್ನೇಹವನ್ನು । **ಈಯುಃ**—ಪಡೆಯುತ್ತಾರೆ । **ದೇವಾಃ**—ಪ್ರಕಾಶಮಾನರಾದ ಋತ್ವಿಕ್ಕುಗಳು ಅಥವಾ ದೇವತೆಗಳು । **ಅನು**—(ನಿನ್ನನ್ನು) ಅನುಸರಿಸಿ । **ತೇ**—ನಿನ್ನ । **ವೀರ್ಯಂ**—ವೀರಕರ್ಮವನ್ನು । **ಮಮಿರೇ**—ಸ್ತೋತ್ರಗಳಿಂದ ಪ್ರಶಂಸಿಸುತ್ತಾರೆ.

ಭಾವಾರ್ಥ

ಎಲೈ ಅಶ್ವವೇ, ಉತ್ತಮವಾದ ರಥವೂ ನಿನ್ನನ್ನು ಅನುಸರಿಸುತ್ತವೆ. ಅದರಂತೆಯೇ ಮಾನವನೂ, ಗೋವುಗಳೂ, ಸುಂದರ ಸ್ತ್ರೀಯರೂ, ಸಂಘಾತ್ಮಕವಾದ ದೇವತೆಗಳ ಸಮೂಹವೂ, ನಿನ್ನನ್ನು ಹಿಂಬಾಲಿಸಿ ನಿನ್ನ ಸ್ನೇಹವನ್ನು ಪಡೆಯುತ್ತಾರೆ. ಪ್ರಕಾಶಮಾನರಾದ ಋತ್ವಿಕ್ಕುಗಳು ನಿನ್ನನ್ನು ಅನುಸರಿಸಿ ನಿನ್ನ ವೀರಕರ್ಮವನ್ನು ಸ್ತೋತ್ರಗಳಿಂದ ಪ್ರಶಂಸಿಸುತ್ತಾರೆ.

English Translation

The car follows you, O Horse: men attend you; cattle follow you; the loveliness of maidens (waits) upon you; troops of demigods following you have sought your friendship; the gods themselves have been admirers of your vigour.

**ವಿಶೇಷವಿಷಯಗಳು**

**ತ್ವಂ ತು ಸರ್ವಸ್ಯ ಶ್ರೇಷ್ಠ ಇತ್ಯರ್ಥಃ**—ನೀನು ದೇವಮಾನವಾದಿ ಸಕಲರಿಗಿಂತಲೂ ಶ್ರೇಷ್ಠನು ಎಂದರ್ಥವೆಂದು ಸಾಯಣರು ಈ ಋಕ್ಕಿನ ತಾತ್ಪರ್ಯವನ್ನು ತಿಳಿಸಿದ್ದಾರೆ.

**ದೇವಾ ಮಮಿರೇ ವೀರ್ಯಂ ತೇ**—ಇಲ್ಲಿ **ದೇವಾಃ** ಎಂಬ ಪದಕ್ಕೆ ಋತ್ವಿಕ್ಕುಗಳು ಅಥವಾ ದೇವತೆಗಳೆಂದರ್ಥಮಾಡಿದೆ. ಅವರು ಅಶ್ವದ ವೀರ್ಯಕರ್ಮಗಳನ್ನು ಸ್ತುತಿಗಳಿಂದ ಪ್ರಶಂಸಿಸುತ್ತಾರೆ. ಆ ಸ್ತೋತ್ರಗಳಿಂದ ಪ್ರಶಂಸೆಮಾಡುವ ಅಶ್ವದ ಮಹಿಮೆಯು ಈರೀತಿಯಲ್ಲಿ ವರ್ಣಿತವಾಗಿದೆ.

**ದೇವಸ್ಯ ತ್ವಾ ಸವಿತುಃ ಪ್ರಸವೇಽಶ್ವಿನೋರ್ಬಾಹುಭ್ಯಾಂ ಪೂಷ್ಣೋ ಹಸ್ತಾಭ್ಯಾಮಾ ದದ ಇಮಾಮಗೃಭ್ಣಾನ್ರಶನಾಮೃತಸ್ಯ ಪೂರ್ವ ಆಯುಷಿ ವಿದಥೇಷು ಕವ್ಯಾ । ತಯಾ ದೇವಾಸ್ಸುತಮಾ ಬಭೂವುರ್ಋತಸ್ಯ ಸಾಮನ್ತ್ಸರಮಾರಪಂತೀ ॥**

(ತೈ. ಸಂ. ೭-೧-೧೧-೧)

ಎಲೈ ಅಶ್ವವೇ, ಸವಿತೃದೇವನ ಪ್ರೇರಣೆಯಿಂದ ನಾನು ನಿನ್ನನ್ನು ಅಶ್ವಿನೀದೇವತೆಗಳ ಬಾಹುಗಳಿಂದಲೂ, ಪೂಷದೇವನ ಕೈಗಳಿಂದಲೂ ಸಹ ಹಿಡಿದು ಕರೆದುಕೊಂಡು ಹೋಗುತ್ತೇನೆ. ಈ ಯಜ್ಞಬಂಧನವನ್ನು ಪೂರ್ವದಲ್ಲಿ ಕವಿಗಳು ಯಜ್ಞಕಾಲಗಳಲ್ಲಿ ಗ್ರಹಣಮಾಡಿದರು. ಆದುದರಿಂದಲೇ ದೇವತೆಗಳು ಸುತವಾದ ಸೋಮರಸವನ್ನು ಪಡೆಯನುಕೂಲವಾಯಿತು. ದೇವಾದಿಗಳ ತೃಪ್ತಿಯು ನಿನ್ನ ಅನುಗ್ರಹದಿಂದಲೇ ಲಭಿಸತಕ್ಕದ್ದು.

**ಅಭಿಧಾ ಅಸಿ ಭುವನಮಸಿ ಯಂತಾಸಿ ಧರ್ತಾಸಿ ಸೋಽಗ್ನಿಂ ವೈಶ್ವಾನರಗ್ಂ ಸಪ್ರಥಸಂ ಗಚ್ಛ ಸ್ವಾಹಾಕೃತಃ ಪೃಥಿವ್ಯಾಂ ಯಂತಾ ರಾಡ್ಯಂತಾಸಿ ಯಮನೋ ಧರ್ತಾಸಿ ಧರುಣಃ ಕೃಷ್ಯೈ ತ್ವಾ ಕ್ಷೇಮಾಯ ತ್ವಾ ರಯ್ಯೈ ತ್ವಾ ಪೋಷಾಯ ತ್ವಾ ಪೃಥಿವ್ಯೈ ತ್ವಾಂತರಿಕ್ಷಾಯ ತ್ವಾ ದಿವೇ ತ್ವಾ ಸತೇ ತ್ವಾಽಸತೇ ತ್ವಾದ್ಭ್ಯಸ್ತ್ವೌಷಧೀಭ್ಯಸ್ತ್ವಾ ವಿಶ್ವೇಭ್ಯಸ್ತ್ವಾ ಭೂತೇಭ್ಯಃ ॥**

(ತೈ. ಸಂ. ೭-೧-೧೧-೧)

ಎಲೈ ಅಶ್ವವೇ, ನೀನೇ ಸಕಲವಾದ ಆವರಣವಾಗಿದ್ದೀಯೆ. ಸಕಲ ಭುವನವೂ, ನಿಯಾಮಕನೂ, ಅವಲಂಬನವೂ ಸಹ ಆಗಿದ್ದೀಯೆ. ನೀನು ವೈಶ್ವಾನರನಲ್ಲಿಗೆ ವಿಜಯಿಯಾಗಿ ಹೋಗು. ಪೃಥ್ವಿಯ ನಿಯಾಮಕನೇ ನೀನು ಮತ್ತು ಪೃಥ್ವಿಗೆ ಅವಲಂಬನವೂ ಆಧಾರವೂ ನೀನಾಗಿದ್ದೀಯೆ. ಅದರಂತೆಯೇ ಅಂತರಿಕ್ಷಕ್ಕೂ ದ್ಯುಲೋಕಕ್ಕೂ, ಓಷಧಿಗಳಿಗೂ, ಅಪ್ಪಿಗೂ ಸಕಲವಿಧವಾದ ಭೂತಗಳಿಗೂ ನೀನೇ ಆಧಾರವೂ ಅವಲಂಬನವೂ ಆಗಿದ್ದೀಯೆ. ಸಕಲ ಸತ್ತುಗಳಿಗೂ ಹಾಗೆಯೇ ಅಸತ್ತುಗಳಿಗೆ ಎಂದರೆ ಭಾವಾಭಾವಾತ್ಮಕವಾದ ಸಕಲಪ್ರಪಂಚಕ್ಕೂ ನೀನೇ ಆಧಾರವು.

**ವಿಭೂರ್ಮಾತ್ರಾ ಪ್ರಭೂಃ ಪಿತ್ರಾಶ್ವೋಽಸಿ ಹಯೋಽಸ್ಯತ್ಯೋಽಸಿ ನರೋಽಸ್ಯರ್ವಾಸಿ ಸಪ್ತಿರಸಿ ವಾಜ್ಯಸಿ ವೃಷಾಸಿ ನೃಮಣಾ ಅಸಿ ಯಯುರ್ನಾಮಾಸ್ಯಾದಿತ್ಯಾನಾಂ ಪತ್ವಾನ್ವಿಹಿ ।**

(ತೈ. ಸಂ. ೭-೧-೧೨-೧)

ನೀನು ಸಕಲವನ್ನೂ ವ್ಯಾಪಿಸತಕ್ಕ ಅಶ್ವವಾಗಿದ್ದೀಯೆ, ಪಶುಜಾತಿಗಳನ್ನೆಲ್ಲಾ ಜಯಿಸತಕ್ಕ ಹಯವೂ, ಅತ್ಯವೂ ಆಗಿದ್ದೀಯೆ, ನಿನ್ನನ್ನು ವಾಹಕನನ್ನಾಗಿ ಇಟ್ಟುಕೊಂಡಿರತಕ್ಕವರಿಗೆ ನೇತೃವಾದ ನರನಾಗಿದ್ದಿಯೇ, ಗಮನಕುಶಲನಾದ ಅರ್ವನೂ, ಸಂಗ್ರಾಮಗಳಲ್ಲಿ ಕೌಶಲ್ಯವನ್ನು ತೋರಿಸುವ ಸಪ್ತಿಯೂ, ವೇಗಗಾಮಿಯಾದ ವಾಜಿಯೂ ಮತ್ತು ಅಶ್ವನಾಮಗಳಲ್ಲೆಲ್ಲಾ ಅತ್ಯಂತ ಪ್ರಿಯವಾದ **ಯಯು**ವೆಂಬ ನಾಮಧೇಯವುಳ್ಳವನೂ ಆಗಿದ್ದೀಯೆ. ಮತ್ತು ನಿನ್ನ ಮಹಿಮೆಯಿಂದ ಆದಿತ್ಯನನ್ನೇ ಸೇರುತ್ತೀಯೆ.

**ಉಪಯಾಮಗೃಹೀತೋಽಸಿ ಪ್ರಜಾಪತಯೇ ತ್ವಾ ಜುಷ್ಟಂ ಗೃಹ್ಣಾಮಿ ತಸ್ಯ ತೇ ದ್ಯೌರ್ಮ-
ಹಿಮಾ ನಕ್ಷತ್ರಾಣಿ ರೂಪಮಾದಿತ್ಯಸ್ತೇ ತೇಜಃ ।**
(ತೈ. ಸಂ. ೭-೫-೧೭-೧)

**ತಸ್ಯ ತೇ ಪೃಥಿವೀ ಮಹಿಮೌಷಧಯೋ ವನಸ್ಪತಯೋ ರೂಪಮಗ್ನಿಸ್ತೇತೇಜಃ ।**
(ತೈ. ಸಂ. ೭-೫-೧೬-೧)

ನೀನು ದ್ಯುಲೋಕದಲ್ಲಿರುವಾಗ ಆಕಾಶವೇ ನಿನ್ನ ಮಹಿಮೆಯು, ನಕ್ಷತ್ರಗಳೇ ನಿನ್ನ ರೂಪವು ಮತ್ತು ಆದಿತ್ಯನೇ ನಿನ್ನ ತೇಜಸ್ಸು. ನೀನು ಪೃಥ್ವಿಯಲ್ಲಿರುವಾಗ, ಪೃಥ್ವಿಯೇ ನಿನ್ನ ಮಹಿಮೆಯು:, ಓಷಧಿವನಸ್ಪತಿಗಳೇ ನಿನ್ನ ರೂಪವು ಮತ್ತು ಅಗ್ನಿಯೇ ನಿನ್ನ ತೇಜಸ್ಸು. ಇತ್ಯಾದಿಯಾಗಿ ಮೇಧ್ಯಾಶ್ವದ ಸ್ವರೂಪವನ್ನು ಋತ್ವಿಕ್ಕುಗಳು ಪ್ರಶಂಸಿಸುವುದರಿಂದ **ದೇವಾ ಮಮಿರೇ ವೀರ್ಯಂ ತೇ** ಎಂದು ಸ್ತುತಿಸಿದೆ.

**ವ್ರಾತಾಸಃ**—ವ್ರಾತವೆಂದರೆ ಗುಂಪೆಂದರ್ಥ. ನಿರುಕ್ತಕಾರರು ಈ ಪದವನ್ನು ಮನುಷ್ಯನಾಮಗಳಲ್ಲಿ ಸೇರಿಸಿದ್ದಾರೆ. (ನಿ. ೩-೭) ಈ ಪದಕ್ಕೆ ಸಾಯಣರು ಪ್ರಕೃತವಾದ ಋಕ್ಕಿನಲ್ಲಿ **ಸಂಘಾತ್ಮಕಾಃ ಅನ್ಯೇ ಅಶ್ವಸಮೂಹಾಃ ವಸ್ವಾದಿದೇವಗಣಾ ವಾ** ಎಂದರ್ಥಮಾಡಿದ್ದಾರೆ. ಇತರ ಅಶ್ವಗಳು ಇದನ್ನನುಸರಿಸುವುದು ನ್ಯಾಯವಾಗಿದೆ. ಆದರೆ ಇತರ ದೇವತೆಗಳು ಎತಕ್ಕೆ ಅನುಸರಿಸಬೇಕೆಂಬ ಪ್ರಶ್ನೆಯು ಬರುವುದಾದರೆ, ದೇವತೆಗಳಿಗೆ ಲಭ್ಯವಾಗದ ಅನೇಕ ವಸ್ತುಗಳನ್ನು ಈ ಅಶ್ವವು ಅವರಿಗೆ ಲಬ್ಧವಾಗಲು ಅನುಕೂಲಮಾಡಿಕೊಟ್ಟಿದೆ. ಒಂದು ಉದಾಹರಣೆಯನ್ನು ತೆಗೆದುಕೊಂಡರೆ—

**ದೇವಾ ವಾ ಉದಂಚಃ । ಸ್ವರ್ಗಂ ಲೋಕಂ ನ ಪ್ರಾಜಾನಂಸ್ತಮಶ್ವಃ ಪ್ರಾಜಾನದ್ಯದಶ್ವೇನೋ-
ದಂಚೋ ಯಂತಿ ಸ್ವರ್ಗಸ್ಯ ಲೋಕಸ್ಯ ಪ್ರಜ್ಞಾತ್ಯೈ ॥**
(ಶ. ಬ್ರಾ ೧೩-೨-೮-೧)

ದೇವತೆಗಳು ಊರ್ಧ್ವಮುಖರಾಗಿ ಹೋಗುತ್ತಿದ್ದಾಗ ಸ್ವರ್ಗಲೋಕದ ಮಾರ್ಗವನ್ನೇ ತಿಳಿಯದಾದರು- ಆಗ ಅಶ್ವವನ್ನು ಹಿಂಬಾಲಿಸಿ ಆ ಮಾರ್ಗವನ್ನು ತಿಳಿದಿದ್ದ ಅಶ್ವದ ಸಹಾಯದಿಂದ ತಾವು ತಿಳಿದುಕೊಂಡರು ಇತ್ಯಾದಿಯಾಗಿ ಅನೇಕ ಸಂದರ್ಭಗಳು ವರ್ಣಿತವಾಗಿದೆ. ಆದುದರಿಂದ **ವ್ರಾತಾಸಃ ಅನು ತವ ಸಖ್ಯಮೀಯುಃ** ಎಂದು ಹೇಳಿದೆ. ಅದಲ್ಲದೇ **ತಯಾ ದೇವಾಸ್ಸುತಮಾ ಬಭೂವುರ್ಯತಸ್ಯ ಸಾಮನ್ತ್ಸರಮಾರಂಪತೀ** (ತೈ. ಸಂ. ೭-೧-೧೧) ಯಜ್ಞಾಶ್ವದ ಸಹಾಯದಿಂದ ದೇವತೆಗಳು ಸುತವಾದ ಸೋಮರಸವನ್ನು ಪಡೆದರು ಎಂಬುದಾಗಿಯೂ ಇರುವುದರಿಂದ ಅವರಿಗೆ ಆಧಾರವಾದ ಸೋಮಾದ್ಯನ್ನಗಳಿಗಾಗಿ ಅಶ್ವದ ಸಖ್ಯವನ್ನು ಮಾಡಲೇಬೇಕು ಎಂಬ ಅಂಶವನ್ನೂ ತಿಳಿಸಿದೆ.

**ಮರ್ತ್ಯಃ—ಮರ್ತ್ಯೋ ಮನುಷ್ಯೋ ಮರಣಧರ್ಮಾ ।** ಮರಣಧರ್ಮವಿರುವುದರಿಂದ ಮಾನವನಿಗೆ ಮರ್ತ್ಯನೆಂದು ಹೆಸರು. (ನಿ. ೩-೧೫). ಮೇಧ್ಯಾಶ್ವದ ಸಹಾಯದಿಂದ ಮಾನವನು ಎಲ್ಲಾ ಶ್ರೇಯಸ್ಸನ್ನೂ ಪಡೆಯಬಲ್ಲನಾದುದರಿಂದ ಅವನು ಈ ಅಶ್ವವನ್ನನುಸರಿಸುತ್ತಾನೆ ಇತ್ಯಾದಿಯಾಗಿ ಒಂದರ್ಥವಾಗುತ್ತದೆ. ಎರಡನೆಯದಾಗಿ, ಯಜ್ಞಕ್ಕೆ ಪೂರ್ವಭಾವಿಯಾಗಿ ವಿಜಯಯಾತ್ರೆಗೆ ಈ ಅಶ್ವವನ್ನು ಬಿಟ್ಟಾಗ ಇದರ ರಕ್ಷಣೆಗಾಗಿ ಸಕಲ ಸಿದ್ಧತೆಗಳೂ ನಡೆದಿರುವುದೆಂದು ತಿಳಿಸುವಾಗ ಸಕಲ ವಿಶ್ವಕ್ಕೂ ಕ್ಷೇಮವನ್ನೊದಗಿಸಬಲ್ಲ ಈ ಯಜ್ಞಾಶ್ವವನ್ನು ರಕ್ಷಿಸುವುದರಿಂದ ದೇವಮಾನವಾದಿ ಸಕಲರಿಗೂ ಶ್ರೇಯಸ್ಸಿರುವುದರಿಂದ ಇದರ ರಕ್ಷಣೆಗಾಗಿ ಎಲ್ಲರೂ ಇದನ್ನು ಹಿಂಬಾಲಿಸುತ್ತಾರೆಂದು ವರ್ಣಿಸಿದೆಯೆಂದು ವಿವರಿಸಿದೆ.

**ಕನೀನಾಂ ಭಗಃ ಅನು**—ಅಶ್ವಕ್ಕೆ ನಾನಾಲಂಕಾರಗಳನ್ನುಮಾಡುವಾಗ ಮಹಿಷಿಯೂ ಅವಳ ಸಖಿಯರೂ ಮಾಡತಕ್ಕ ಪದ್ಧತಿಯಿದೆ. ಅಶ್ವದಲ್ಲಿ ಸಹಜವಾದ ಸ್ತ್ರೀಸೌಂದರ್ಯವಿದೆಯೆಂದು ಒಂದು ಅಭಿಪ್ರಾಯ. ಮತ್ತು ಸುಂದರ ಸ್ತ್ರೀಯರಿಂದ ಅಲಂಕೃತವಾದರೆ ಆಗ ಆ ಸೌಂದರ್ಯವನ್ನು ಅಶ್ವವೂ ಪಡೆಯುತ್ತದೆಂದು ಇನ್ನೊಂದಭಿಪ್ರಾಯವಿರುತ್ತದೆ.

**ಗಾಯತ್ರೇಣ ಛಂದಸೇತಿ ಮಹಿಷ್ಯಭ್ಯನಕ್ತಿ । .... .... .... ಪತ್ನ್ಯೋಽಭ್ಯಂಜಂತಿ ಶ್ರಿಯೈ ವಾ ಏತ ದ್ರೂಪಂ ಯತ್ಪತ್ನ್ಯಃ ಶ್ರಿಯಮೇವಾಸ್ಮಿನ್ನದಧಾತಿ ।**

(ಶ. ಬ್ರಾ. ೧೩-೨-೬-೪)

ಇತ್ಯಾದಿಯಾಗಿ ವರ್ಣಿತವಾಗಿರುವುದರಿಂದ ಮಹಿಷ್ಯಾದಿಗಳಿಂದ ಅಲಂಕೃತವಾದರೆ ಅಶ್ವಕ್ಕೆ ಸ್ತ್ರೀಸೌಂದರ್ಯವು ವೃದ್ಧಿಯಾಗುತ್ತದೆಂದಭಿಪ್ರಾಯವು. ಅಥವಾ ಇದರಲ್ಲಿ ಇನ್ನೂ ಗೂಢವಾದ ರಹಸ್ಯಾರ್ಥವಿರಬಹುದು.

### ವ್ಯಾಕರಣಪ್ರಕ್ರಿಯಾ

**ಮರ್ಯಃ**—ಮೃಙ್ ಪ್ರಾಣತ್ಯಾಗೇ ಧಾತು. ಇದಕ್ಕೆ ಣ್ಯತ್‌ಪ್ರತ್ಯಯ ಪ್ರಾಪ್ತವಾದರೆ **ಛಂದಸಿ ನಿಷ್ಟರ್ಕ್ಯದೇವಹೂಯ**—(ಪಾ. ಸೂ. ೩-೧-೧೨೩) ಎಂಬುದರಿಂದ ಯತ್ ಪ್ರತ್ಯಯ. **ಸಾರ್ವಧಾತುಕಾರ್ಧಧಾತುಕಯೋಃ** ಎಂಬುದರಿಂದ ಗುಣ ರಪರವಾಗಿ ಬರುತ್ತದೆ **ಯತೋಽನಾವಃ** (ಪಾ. ಸೂ. ೬-೧-೨೧೩) ಎಂಬುದರಿಂದ ಆದ್ಯುದಾತ್ತಸ್ವರ ಬರುತ್ತದೆ. ಜಾತಿವಾಚಕಪದವಾಗಿರುವುದರಿಂದ ಏಕವಚನದಲ್ಲಿ ಪ್ರಯುಕ್ತವಾಗಿದೆ.

**ವ್ರಾತಾಸಃ**—ಇದಕ್ಕೆ ಜಸ್ ಪರವಾದಾಗ **ಆಜ್ಜಸೇರಸುಕ್** (ಪಾ. ಸೂ. ೭-೧-೫೦) ಎಂಬುದರಿಂದ ಅಸುಕಾಗಮ.

**ಸಖ್ಯಮ್**—ಸಖ್ಯುರ್ಭಾವಃ ಸಖ್ಯಮ್. **ಸಖ್ಯುರ್ಯಃ** (ಪಾ. ಸೂ. ೫-೧-೧೨೬) ಎಂಬುದರಿಂದ ಯ ಪ್ರತ್ಯಯ. **ಯಸ್ಯೇತಿ ಚ** (ಪಾ. ಸೂ. ೬-೪-೧೪೮) ಸೂತ್ರದಿಂದ ಇಕಾರಲೋಪ ಪ್ರತ್ಯಯಸ್ವರದಿಂದ ಅಂತೋದಾತ್ತವಾಗುತ್ತದೆ.

**ಈಯುಃ**—ಇಣ್ ಗತೌ ಧಾತು. **ಛಂದಸಿ ಲುಙ್‌ಲಙ್‌ಲಿಟಃ** (ಪಾ. ಸೂ. ೩-೪-೬) ಎಂಬುದರಿಂದ ವರ್ತಮಾನಾರ್ಥದಲ್ಲಿ ಲಿಟ್. ಪ್ರಥಮಪುರುಷಬಹುವಚನಾಂತರೂಪ. ಅತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

**ಮಮಿರೇ**—ಮಾಙ್ ಮಾನೇ ಧಾತು. **ಪೂರ್ವದಂತೆ ಛಾಂದಸವಾಗಿ ಲಿಟ್.** ಪ್ರಥಮಪುರುಷಬಹುವಚನಾಂತರೂಪ. ತಿಙಂತನಿಘಾತಸ್ವರ ಬರುತ್ತದೆ.

**ವೀರ್ಯಮ್**—ವೀರಸ್ಯ ಕರ್ಮ. ವೀರ್ಯಮ್. ಸಂಬಂಧಾರ್ಥದಲ್ಲಿ ಯತ್ ಪ್ರತ್ಯಯ. ವೀರಶಬ್ದ ವಿಷಯದಲ್ಲಿ **ಯತೋಽನಾವಃ** ಸೂತ್ರದಿಂದ ಆದ್ಯುದಾತ್ತಸ್ವರ ಬರುವುದಿಲ್ಲದಂದು ಹಿಂದೆ ವಿವರಿಸಿದೆ. **ತಿತ್‌ಸ್ವರಿತಮ್**(ಪಾ ಸೂ. ೬-೧-೧೮೫) ಎಂಬುದರಿಂದ ಸ್ವರಿತಸ್ವರ ಬರುತ್ತದೆ. ॥೪॥

॥ ಸಂಹಿತಾಪಾಠಃ ॥

ಹಿರಣ್ಯಶೃಂಗೋಽಯೋ ಅಸ್ಯ ಪಾದಾ ಮನೋಜವಾ ಅವರ ಇಂದ್ರ ಆಸೀತ್ ।
ದೇವಾ ಇದಸ್ಯ ಹವಿರದ್ಯಮಾಯನ್ಯೋ ಅರ್ವಂತಂ ಪ್ರಥಮೋ ಅಧ್ಯ-ತಿಷ್ಠತ್ ॥ ೯ ॥

ಪದಪಾಠಃ

ಹಿರಣ್ಯಽಶೃಂಗಃ । ಅಯಃ । ಅಸ್ಯ । ಪಾದಾಃ । ಮನಃಽಜವಾಃ । ಅವರಃ । ಇಂದ್ರಃ । ಆಸೀತ್ ।
ದೇವಾಃ । ಇತ್ । ಅಸ್ಯ । ಹವಿಃಽಅದ್ಯಂ । ಆಯನ್ । ಯಃ । ಅರ್ವಂತಂ । ಪ್ರಥಮಃ । ಅಧಿಽಅತಿಷ್ಠತ್ । ॥ ೯ ॥

ಸಾಯಣಭಾಷ್ಯಂ

ಅಯಮಶ್ವೋ ಹಿರಣ್ಯಶೃಂಗೋ ಹಿತರಮಣೀಯಶೃಂಗೋ ವಾ ಉನ್ನತಶಿರಸ್ಕೋ ಹೃದಯರಮಣಶೃಂಗಸ್ಥಾನೀಯಶಿರೋರುಹೋ ವಾ । ಅಸ್ಯ ಪಾದಾ ಅಯೋಽಯೋಮಯಾಃ । ಅಯಃಪಿಂಡಸದೃಶಾ ಇತ್ಯರ್ಥಃ । ತಥಾ ಮನೋಜವಾ ಮನೋವೇಗಾಃ । ಅಥವೈತದಿಂದ್ರವಿಶೇಷಣಂ । ಈದೃಶಸ್ಯಾಶ್ವಸ್ಯ ಸಾಮರ್ಥ್ಯಂ ಪ್ರತಿ ಮನೋವೇಗ ಇಂದ್ರೋಽಪ್ಯವರೋ ನಿಕೃಷ್ಟ ಆಸೀತ್ । ಕಿಂಚಾಸ್ಯಾಶ್ವಸ್ಯ ಹವಿರದ್ಯಂ ಹವಿಷೋಽದನಂ ಭಕ್ಷಣಂ ॥ ಸ್ವಾರ್ಥಿಕೋ ಯತ್ ॥ ಅದನಯೋಗ್ಯಂ ಹವಿರ್ವಾಪೇಕ್ಷ್ಯ ದೇವಾ ಇತ್ ಸರ್ವೇಽಪಿ ದೇವಾ ಆಯನ್ । ಪ್ರಾಪ್ತಾಃ । ಯ ಇಂದ್ರೋಽರ್ವಂತಂ ಪ್ರಥಮಃ ಪ್ರಥಮಭಾವೀ ಸನ್ನಧ್ಯತಿಷ್ಠತ್ ಅಧಿಷ್ಠಿತವಾನ್ । ಸಹವಿಷ್ಟ್ವೇನ ಸ್ವಕೀಯತ್ವೇನ ವಾಶ್ರಿತವಾನಿತ್ಯರ್ಥಃ । ಇಂದ್ರ ಏಣಂ ಪ್ರಥಮೋ ಅಧ್ಯತಿಷ್ಠದಿತಿ ಹ್ಯುಕ್ತಂ ॥

ಪ್ರತಿಪದಾರ್ಥ

(ಅಯಂ ಅಶ್ವಃ—ಈ ಅಶ್ವವು) । **ಹಿರಣ್ಯಶೃಂಗಃ**—ಸುವರ್ಣದಂತಿರುವುದೂ, ಕೊಂಬಿನ ಸ್ಥಾನದಲ್ಲಿರುವುದೂ ಆದ ಕೇಸರಗಳುಳ್ಳದ್ದಾಗಿದೆ । **ಅಸ್ಯ**—ಈ ಅಶ್ವದ । **ಪಾದಾಃ**—ಪಾದಗಳು । **ಅಯಃ**—ಉಕ್ಕಿನಂತೆ ದೃಢವಾದವುಗಳು । **ಮನೋಜವಾಃ**—ಮನೋವೇಗದಂತೆ ವೇಗವುಳ್ಳ । **ಇಂದ್ರಃ**—ಇಂದ್ರನು । **ಅವರಃ**—ಈ ಅಶ್ವಕ್ಕಿಂತಲೂ ನಿಕೃಷ್ಟನಾಗಿ । **ಆಸೀತ್**—ಆಗಿದ್ದಾನೆ । **ಅಸ್ಯ**—ಈ ಅಶ್ವದ । **ಅದ್ಯಂ**—ಭಕ್ಷಣಯೋಗ್ಯವಾದ । **ಹವಿಃ**—ಹವಿಸ್ಸನ್ನಪೇಕ್ಷಿಸಿ । **ದೇವಾ ಇತ್**—ಸಕಲ ದೇವತೆಗಳೂ ಕೂಡ । **ಆಯನ್**—ಬಂದಿದ್ದಾರೆ । **ಯಃ**—ಯಾವ ಅದೇ ಇಂದ್ರನು । **ಅರ್ವಂತಂ**—ಈ ಅಶ್ವನನ್ನು । **ಪ್ರಥಮಃ**—ಎಲ್ಲರಿಗಿಂತಲೂ ಮೊದಲು । **ಅಧ್ಯತಿಷ್ಠತ್**—ಹತ್ತಿಕುಳಿತನು ॥

### ಭಾವಾರ್ಥ

ಈ ಅಶ್ವಕ್ಕೆ ಕೊಂಬಿನಂತಿರುವ ಕೇಸರಗಳು ಹೊಂಬಣ್ಣವುಳ್ಳವಾಗಿಯೂ ಆಕರ್ಷಕವಾಗಿಯೂ ಇವೆ. ಇದರ ಪಾದಗಳು ಉಕ್ಕಿನಂತೆ ದೃಢವಾಗಿವೆ. ಮನೋವೇಗದಂತೆ ವೇಗವುಳ್ಳ ಇಂದ್ರನು ವೇಗದಲ್ಲಿ ಈ ಅಶ್ವಕ್ಕಿಂತಲೂ ನಿಕೃಷ್ಟನಾಗಿದ್ದಾನೆ. ಭಕ್ಷಣಯೋಗ್ಯವಾದ ಈ ಅಶ್ವದ ಹವಿಸ್ಸನ್ನಪೇಕ್ಷಿಸಿ ಸಕಲ ದೇವತೆಗಳೂ ಸಹ ಬಂದಿದ್ದಾರೆ. ಎಲ್ಲರಿಗಿಂತಲೂ ಮೊದಲು ಇಂದ್ರನು ಈ ಅಶ್ವವನ್ನು ಹತ್ತಿ ಕುಳಿತನು.

### English Translation

His name is of gold; his feet are of iron; and fleet as thought, Indra is his inferior (in speed). The gods have come to partake of his (being offered as) oblations: the first who mounted the horse was Indra.

### ವಿಶೇಷವಿಷಯಗಳು

**ಮನೋಜವಾಃ**—ಈ ಪದಕ್ಕೆ ಎರಡು ವಿಧವಾದ ಅನ್ವಯವನ್ನು ಮಾಡಿದ್ದಾರೆ. ಮೊದಲನೆಯದಾಗಿ, **ಮನೋವೇಗಾಃ** ಎಂದು ಅಶ್ವಪರವಾಗಿ ಅರ್ಥಮಾಡಿ ಈ ಅಶ್ವದ ವೇಗವು ಮನೋವೇಗದಂತೆ ವೇಗವುಳ್ಳದ್ದು. ಇಂದ್ರನ ವೇಗವು ಇದರ ವೇಗಕ್ಕಿಂದ ಕಡಿಮೆಯಾದದ್ದು ಎಂದೂ, ಎರಡನೆಯದಾಗಿ, ಈ ಪದವನ್ನು ಇಂದ್ರನಿಗೆ ವಿಶೇಷಣವನ್ನಾಗಿ ಮಾಡಿ **ಅಥವಾ ಏತದಿಂದ್ರವಿಶೇಷಣಂ । ಈದೃಶಸ್ಯಾಶ್ವಸ್ಯ ಸಾಮರ್ಥ್ಯಂ ಪ್ರತಿ ಮನೋವೇಗಃ ಇಂದ್ರಃ ಅಪಿ ನಿಕೃಷ್ಟಃ ಆಸೀತ್** । ಮನೋವೇಗದಂತೆ ವೇಗವುಳ್ಳ ಇಂದ್ರನೂ ಸಹ ನಿಕೃಷ್ಟನಾಗಿ ಕಂಡು ಬಂದನು ಎಂದು ವಿವರಿಸಿದೆ.

**ಯಸ್ತೇ ರಥೋ ಮನಸೋ ಜವೀಯಾನೇಂದ್ರ ತೇನ ಸೋಮಪೇಯಾಯ ಯಾಹಿ ।**
**ತೂಯಮಾ ತೇ ಹರಯಃ ಪ್ರ ದ್ರವಂತು ಯೇಭಿರ್ಯಾಸಿ ವೃಷಭಿರ್ಮಂದಮಾನಃ ॥**
(ಋ. ಸಂ. ೧೦-೧೧೨-೨)

ಇತ್ಯಾದಿಋಕ್ಕುಗಳಲ್ಲಿ ಇಂದ್ರನ ರಥವು ಮನೋವೇಗಕ್ಕಿಂತಲೂ ಅಧಿಕವಾದ ವೇಗವುಳ್ಳದ್ದೆಂದು ವರ್ಣಿಸಿರುವುದರಿಂದ ಇಲ್ಲಿ ಎರಡನೆಯ ಅರ್ಥವೂ ಸರಿಹೋಗುತ್ತದೆ.

**ಹಿರಣ್ಯಶೃಂಗಃ — ಹಿತರಮಣೀಯಶೃಂಗೋ ವಾ ಹೃದಯರಮಣಶೃಂಗಸ್ಥಾನೀಯಶಿರೋರುಹೋ ವಾ ।** ಸುವರ್ಣನಿರ್ಮಿತವಾದ ಶೃಂಗವೆಂದಾಗಲಿ ಅಥವಾ ಆಕರ್ಷಕವಾದುದೂ, ಶೃಂಗಸ್ಥಾನದಲ್ಲಿರುವುದೂ ಆದ ಕೇಸರವೆಂದಾಗಲಿ ಅರ್ಥವಾಗುತ್ತದೆಂದು ಹಿರಣ್ಯಶಬ್ದಕ್ಕೆ ಹಿತವಾದುದೂ ರಮಣೀಯವಾದುದೂ ಎಂದು ಅರ್ಥ ಮಾಡಿದ್ದಾರೆ. ನಿರುಕ್ತಕಾರರೂ ಸಹ ಈ ಪದಕ್ಕೆ

> **ಹಿರಣ್ಯಂ ಕಸ್ಮಾದ್ಧ್ರಿಯತ ಆಯಮ್ಯಮಾನಮಿತಿ ವಾ । ಹ್ರಿಯತೇ ಜನಾಜ್ಜನಮಿತಿ ವಾ । ಹಿತರಮಣಂ ಭವತೀತಿ ವಾ । ಹೃದಯರಮಣಂ ಭವತೀತಿ ವಾ । ಹರ್ಯತೇರ್ವಾ ಸ್ಯಾತ್ಪ್ರೇಪ್ಸಾಕರ್ಮಣಃ ।**

(ನಿ. ೨-೧೦)

ಆಭರಣಾದಿರೂಪದಲ್ಲಿ ವಿಸ್ತೃತವಾಗಿ ಹರಡುವುದು ಎಂದಾಗಲಿ, ಅಥವಾ ಒಬ್ಬನಿಂದ ಇನ್ನೊಬ್ಬನಿಗೆ ಸಂಚಲಿಸುವುದು ಎಂಬುದರಿಂದಾಗಲಿ, ಉಪಯೋಗಕರವಾದುದು ಮತ್ತು ಹರ್ಷದಾಯಕವಾದುದು ಎಂಬುದರಿಂದಾಗಲಿ ಅಥವಾ ಅತ್ಯಂತ ಉತ್ಕಟವಾದ ಇಚ್ಛೆಯಿಂದ ಅಪೇಕ್ಷಿತವಾದುದು ಎಂಬುದರಿಂದಾಗಲಿ **ಸುವರ್ಣಕ್ಕೆ** ಈ ಹೆಸರು ಪ್ರಸಿದ್ಧವೆಂದು ನಿರ್ವಚನವನ್ನು ತೋರಿಸಿದ್ದಾರೆ. ಅದರಂತೆ ಇಲ್ಲಿಯೂ ಸಹ ನೋಟಕ್ಕೆ ಆಕರ್ಷಕವಾದುದೂ, ಶೃಂಗಸ್ಥಾನದಲ್ಲಿರುವುದೂ ಆದ ಕೇಸರವೆಂದಾದರೂ ಆಗಬಹುದು ಅಥವಾ ಸುವರ್ಣನಿರ್ಮಿತವಾದ ಶೃಂಗವೆಂದಾದರೂ ಆಗಬಹುದು. ಈ ಅಶ್ವದಿಂದಲೇ ಸುವರ್ಣವು ಸೃಷ್ಟವಾಯಿತು ಎಂಬ ವಿಷಯವೂ ಅನೇಕ ಕಡೆಗಳಲ್ಲಿ ಉಕ್ತವಾಗಿರುವುದು.

**ಅಶ್ವಸ್ಯ ವಾ ಆಲಬ್ಧಸ್ಯ । ರೇತ ಉದಕ್ರಾಮತ್ತತ್ಸುವರ್ಣಗ್ಂ ಹಿರಣ್ಯಮಭವದ್ಯತ್ಸುವರ್ಣಗ್ಂ ಹಿರಣ್ಯಂ ದದಾತ್ಯಶ್ವಮೇವ ರೇತಸಾ ಸಮರ್ಧಯತಿ ।**

(ಶ. ಬ್ರಾ. ೧೩-೧-೧-೩)

ಇತ್ಯಾದಿವಾಕ್ಯಗಳಲ್ಲಿ ಅಶ್ವದ ರೇತಸ್ಸಿನಿಂದ ಸುವರ್ಣವು ಸೃಷ್ಟವಾಯಿತೆಂದಿದೆ ಆದುದರಿಂದ ಅಶ್ವದ ಅವಯವಗಳು ಸುವರ್ಣರೂಪದಿಂದಿದ್ದು ಇಲ್ಲಿ ಹಿರಣ್ಯಶೃಂಗವೆಂದರೆ ಸುವರ್ಣನಿರ್ಮಿತವಾದ ಶೃಂಗವೆಂದರ್ಥವಾಗಬಹುದು

**ಅದ್ಯಂ ಹವಿಃ ದೇವಾ ಇತ್ ಆಯನ್**—ಭಕ್ಷಿಸಲು ಯೋಗ್ಯವಾದ ಈ ಅಶ್ವಮೇಧದ ಹವಿಸ್ಸನ್ನಪೇಕ್ಷಿಸಿ ದೇವತೆಗಳೂ ಬಂದರು ಎಂಬ ವರ್ಣನೆಗೆ ಒಂದು ಕಥಾಸನ್ನಿವೇಶವಿದೆ.

**ಪ್ರಜಾಪತಿರ್ದೇವೇಭ್ಯೋ ಯಜ್ಞಾನ್ವ್ಯಾದಿಶತ್ । ಸ ಆತ್ಮನ್ನಶ್ವಮೇಧಮಧತ್ತ ತೇ ದೇವಾಃ ಪ್ರಜಾಪತಿಮಬ್ರುವನ್ನೇಷ ವೈ ಯಜ್ಞೋ ಯದಶ್ವಮೇಧೋಽಪಿ ನೋಽತ್ರಾಸ್ತು ಭಾಗ ಇತಿ ತೇಭ್ಯ ತೇಭ್ಯ ಏತಾನನ್ನಹೋಮಾನಕಲ್ಪಯದ್ಯದನ್ನಹೋಮಾಞ್ಜುಹೋತಿ ದೇವಾನೇವ ತತ್ಪ್ರೀಣಾತಿ ।**

(ಶ. ಬ್ರಾ. ೧೩-೨-೧-೧)

ಪ್ರಜಾಪತಿಯು ದೇವತೆಗಳಿಗೆ ಯಜ್ಞವನ್ನು ನಿಯಮಿಸಿದನು ಆದರೆ ತಾನು ಮಾತ್ರ ಅಶ್ವಮೇಧವನ್ನುಳಿಸಿಕೊಂಡನು ಆಗ ದೇವತೆಗಳು " ಈ ಅಶ್ವಮೇಧವೂ ಒಂದು ಮುಖ್ಯವಾದ ಯಜ್ಞವಾದುದರಿಂದ ಇದರಲ್ಲಿ ನಮಗೂ ಭಾಗವಿರುವಂತೆ ಮಾಡು " ಎಂದಾಗ ಪ್ರಜಾಪತಿಯು ಅನ್ನಹೋಮವನ್ನು ರಚಿಸಿದನು. ಆದುದರಿಂದ ಅಶ್ವಮೇಧದ ಕಾಲದಲ್ಲಿ ಅನ್ನಹೋಮವನ್ನು ಮಾಡುವುದರಿಂದ ದೇವತೆಗಳಿಗೆ ತೃಪ್ತಿಯಾಗುವುದು ಎಂಬ ವಿಷಯವನ್ನು " **ದೇವಾ ಇದಸ್ಯ ಹವಿರದ್ಯಮಾಯನ್** " ಎಂಬ ವಾಕ್ಯದಿಂದ ತಿಳಿಸಿದೆ.

**ಅರ್ವಂತಂ ಪ್ರಥಮೋಽಧ್ಯತಿಷ್ಠತ್**—ಇಂದ್ರನು ಮೊದಲು ಆಕ್ರಮಿಸಿದನು ಎನ್ನುವಾಗ " **ಇಂದ್ರ ಏಣಂ ಪ್ರಥಮೋಽಧ್ಯತಿಷ್ಠತ್** " ಎಂಬ ವಾಕ್ಯದಂತೆ ಇಂದ್ರನು ಮೊದಲು ಈ ಅಶ್ವವನ್ನು ಹತ್ತಿದನು ಎಂದಾಗಬಹುದು ಅಥವಾ,

**ದಿಶಸ್ಸ್ವಪುವಾ ಹೇನಾಭಿಜಿತ್ಯಾ ಇತ್ಯಾಹುರ್ಯದೇತಾನಿ ಹವೀಗ್ಂಷಿ ನಿರ್ವಪತಿ ದಿಶಾಮಭಿಜಿತ್ಯಾ ಏತಯಾ ವಾ ಇಂದ್ರಂ ದೇವಾ ಅಯಾಜಯನ್ತಸ್ಮಾದಿಂದ್ರಸವ ಏತಯಾ ಮನುಂ ಮನುಷ್ಯಾಸ್ತಸ್ಮಾನ್ಮನುಸವೋ ಯಥೇಂದ್ರೋ ದೇವಾನಾಂ ಯಥಾ ಮನುರ್ಮನುಷ್ಯಾಣಾಮೇವಂ ಭವತಿ ॥**

(ತೈ ಸಂ. ೭-೫-೧೫-೨, ೩)

ಎಂಬಲ್ಲಿ ದಿಗ್ವಿಜಯದ ಸಾಧನವಾದ ಹೋಮದಲ್ಲಿ ದೇವತೆಗಳು ಇಂದ್ರನಿಗೆ ಪ್ರಥಮಸ್ಥಾನವನ್ನು ಕೊಟ್ಟುದರಿಂದಲೂ ಅಶ್ವಮೇಧದಲ್ಲಿ ಅದು ಮುಖ್ಯವಾದ ಅಂಗವಾಗಿ ಇಂದ್ರನಿಗೆ ಅದರಲ್ಲಿ ಅಗ್ರಸ್ಥಾನವು ಲಭಿಸಿದುದರಿಂದಲೂ ಸಹ **ಪ್ರಥಮೋಧ್ಯತಿಷ್ಠತ್** ಎಂದು ವರ್ಣಿಸಿರಬಹುದು. ಸಾಯಣರೂ ಸಹ **ಸ್ವಹವಿಷ್ಟ್ವೇನ ಸ್ವಕೀಯತ್ವೇನ ವಾ ಆಶ್ರಿತವಾನ್ ಇತ್ಯರ್ಥಃ** ಎಂದು ವಿವರಿಸಿದ್ದಾರೆ.

## ವ್ಯಾಕರಣಪ್ರಕ್ರಿಯಾ

**ಹಿರಣ್ಯಶೃಂಗಃ**—ಹಿರಣ್ಯೇ ಶೃಂಗೇ ಯಸ್ಯ ಸಃ-**ಬಹುವ್ರೀಹೌ ಪ್ರಕೃತ್ಯಾ ಪೂರ್ವಪದಮ್** (ಪಾ. ಸೂ. ೬-೧-೧) ಎಂಬುದರಿಂದ ಪೂರ್ವಪದಪ್ರಕೃತಿಸ್ವರ ಬರುತ್ತದೆ. ಹೀಗೆಯೇ ಮನೋಜವಾಃ ಎಂಬಲ್ಲಿಯೂ ಬಹುವ್ರೀಹಿ ಸಮಾಸವಾದುದರಿಂದ ಪೂರ್ವಪದಪ್ರಕೃತಿಸ್ವರ ಬರುತ್ತದೆ.

**ಆಸೀತ್**—ಅಸ ಭುವಿ ಧಾತು. ಲಙ್ ಪ್ರಥಮಪುರುಷಏಕವಚನಾಂತರೂಪ. ಅತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

**ಹವಿರದ್ಯಮ್**-ಹವಿಷಃ ಅದ್ಯಮ್ ಹವಿರದ್ಯಮ್. ಅದ ಭಕ್ಷಣೇ ಧಾತು. ಸ್ವಾರ್ಥದಲ್ಲಿ ಅಥವಾ ಯೋಗ್ಯಾರ್ಥದಲ್ಲಿ ಯತ್ ಪ್ರತ್ಯಯ. **ಯತೋಽನಾವಃ** (ಪಾ. ಸೂ. ೬-೧-೨೧೩) ಎಂಬುದರಿಂದ ಆದ್ಯುದಾತ್ತಸ್ವರ ಬರುತ್ತದೆ ಸಮಾಸವಾದಾಗ **ಗತಿಕಾರಕೋಪಪದಾತ್ಕೃತ್** (ಪಾ. ಸೂ. ೬-೧-೧೩೯) ಎಂಬುದರಿಂದ ಕೃದುತ್ತರಪದಪ್ರಕೃತಿಸ್ವರ ಬರುತ್ತದೆ.

**ಆಯನ್**—ಇಣ್ ಗತೌ ಧಾತು. ಲಙ್ ಪ್ರಥಮಪುರುಷಬಹುವಚನದಲ್ಲಿ ಝಿ ಪ್ರತ್ಯಯ. **ಝೋಽಂತಃ** ಎಂಬುದರಿಂದ ಅಂತಾದೇಶ. **ಇತಶ್ಚ** ಸೂತ್ರದಿಂದ ಅಂತ್ಯಇಕಾರಕ್ಕೆ **ಲೋಪ**. **ಆಡಜಾದೀನಾಂ** ಸೂತ್ರದಿಂದ ಅಂಗಕ್ಕೆ ಅಡಾಗಮ. **ಇಣೋಯಣ್** (ಪಾ. ಸೂ. ೬-೪-೮೧) ಧಾತು ಇಕಾರಕ್ಕೆ ಯಣ್. ಅತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

**ಅಧ್ಯತಿಷ್ಠತ್**—ಅಧಿ ಉಪಸರ್ಗ. ಷ್ಠಾ ಗತಿನಿವೃತ್ತೌ ಧಾತು. ಲಙ್ ಪ್ರಥಮಪುರುಷಏಕವಚನಾಂತ ರೂಪ. ಯಚ್ಛಬ್ದಸಂಬಂಧವಿರುವುದರಿಂದ **ಯದ್ವೃತ್ತಾನ್ನಿತ್ಯಮ್** (ಪಾ. ಸೂ. ೮-೧-೬೬) ಎಂಬುದರಿಂದ ನಿಘಾತಸ್ವರ ಪ್ರತಿಷೇಧ ಬರುತ್ತದೆ. ಅಡಾಗಮ ಉದಾತ್ತವಾದುದರಿಂದ ಆದ್ಯುದಾತ್ತವಾಗುತ್ತದೆ. **ತಿಙಿಚೋದಾತ್ತವತಿ** (ಪಾ. ಸೂ. ೮-೧-೭೧) ಎಂಬುದರಿಂದ ಗತಿಗೆ (ಅಧಿ) ನಿಘಾತಸ್ವರ ಬರುತ್ತದೆ. ॥ ೯ ॥

———— :C: ————

ಸಂಹಿತಾಪಾಠಃ

ಈರ್ಮಾಂತಾಸಃ ಸಿಲಿಕಮಧ್ಯಮಾಸಃ ಸಂ ಶೂರಣಾಸೋ ದಿವ್ಯಾಸೋ ಅತ್ಯಾಃ ।
ಹಂಸಾ ಇವ ಶ್ರೇಣಿಶೋ ಯತಂತೇ ಯದಾಕ್ಷಿಷುರ್ದಿವ್ಯಮಜ್ಮಮಶ್ವಾಃ ॥ ೧೦ ॥

ಪದಪಾಠಃ

ಈರ್ಮಽಅಂತಾಸಃ । ಸಿಲಿಕಽಮಧ್ಯಮಾಸಃ । ಸಂ । ಶೂರಣಾಸಃ । ದಿವ್ಯಾಸಃ । ಅತ್ಯಾಃ ।
ಹಂಸಾಃಽಇವ । ಶ್ರೇಣಿಽಶಃ । ಯತಂತೇ । ಯತ್ । ಆಕ್ಷಿಷುಃ । ದಿವ್ಯಂ । ಅಜ್ಮಂ । ಅಶ್ವಾಃ ॥ ೧೦ ॥

॥ ಸಾಯಣಭಾಷ್ಯಂ ॥

ಅತ್ರಾಶ್ವಸಮೂಹಸ್ತುತಿದ್ವಾರೇಣಾಯಂ ಸ್ತೂಯತೇ । ಈರ್ಮಾಂತಾಸ ಈರಿತಾಃ ಪ್ರೇರಿತಾ ಅಂತಾ ಯೇಷಾಂ ತೇ ತಥೋಕ್ತಾಃ । ವಿರಲಾಂತಾ ಇತ್ಯರ್ಥಃ । ಸಿಲಿಕಮಧ್ಯಮಾಸಃ ಸಂಸೃತಾಃ ಸಂಗತಾ ಮಧ್ಯಪ್ರದೇಶಾ ಯೇಷಾಂ ತೇ ತಥೋಕ್ತಾಃ । ಮಧ್ಯೇ ನಿಬಿಡಾ ಇತ್ಯರ್ಥಃ । ಅಥವಾ ಶರೀರಸ್ಯೈತೇ ವಿಶೇಷಣೇ ಈರ್ಮ ಈರಿತಃ । ಪುರತೋ ನುನ್ನ ಇತ್ಯರ್ಥಃ । ತಾದೃಶಃ ಪೃಥುರಂತೋ ಜಘನಪ್ರದೇಶೋ ಯೇಷಾಂ ತೇ ತಾದೃಶಾಃ । ತಥಾ ಸಿಲಿಕಮಧ್ಯಮಾಸಃ। ಸಂಸೃತಃ ಸಂಗತಃ ಸಂಲಗ್ನೋ ಮಧ್ಯಭಾಗೋ ಯೇಷಾಂ ತೇ ತಾದೃಶಾಃ। ಪುಷ್ಟತ್ವಾತ್ಪಾರ್ಶ್ವಪೃಷ್ಠಾಃ ಸಂಲಗ್ನಮಧ್ಯಾಶ್ಚೇತ್ಯರ್ಥಃ । ಜಘನಪುರೋಭಾಗಾವಪೇಕ್ಷ್ಯ ಸಿಲಿಕಮಧ್ಯಮಾ ಇತ್ಯುಕ್ತಂ । ಸಮಿತ್ಯಯಮುಪಸರ್ಗೋ ಯತಂತ ಇತ್ಯಾಖ್ಯಾತೇನ ಸಂಬಂಧಯಿತವ್ಯಃ । ಶೂರಣಾಸೋ ವಿಕ್ರಮಶೀಲಾ ದಿವ್ಯಾಸೋ ದಿವಿ ಭವಾ ಅತ್ಯಾ ಅತನಶೀಲಾಃ । ಯದ್ಯಪ್ಯಯಮಶ್ವನಾಮ ತಥಾಪ್ಯಶ್ವಶಬ್ದಸ್ಯ ವಕ್ಷ್ಯಮಾಣತ್ವಾದಯಂ ಯೌಗಿಕೋಽವಗಂತವ್ಯಃ । ಈದೃಶಾಃ ಅಶ್ವಾಃ ಶ್ರೇಣಿಶಃ । ಏಕವ್ಯಾಪಾರಾಣಾಂ ಬಹೂನಾಂ ಸಮೂಹಃ ಶ್ರೇಣಿರಿತ್ಯುಚ್ಯತೇ । ಶೀಘ್ರಧಾವನಾಯ ಶ್ರೇಣಿಶಃ ಪಂಕ್ತೀಭೂಯ ಸಂ ಯತಂತೇ । ಸಮ್ಯಗ್ಯತ್ನಂ ಕುರ್ವಂತಿ । ತತ್ರ ದೃಷ್ಟಾಂತಃ । ಹಂಸಾ ಇವ । ತೇ ಯಥಾ ಶ್ರೇಣಿಭೂತಾ ಈರ್ಮಾಂತಾಸ ಇತ್ಯಾದ್ಯುಕ್ತರೂಪಾಃ ಸಂತೋಽಂತರಿಕ್ಷೇ ಗಮನಾಯ ಯತಂತೇ ತದ್ವತ್ । ಕದಾ । ಉಚ್ಯತೇ । ಯದ್ಯದಾಶ್ವಾ ದಿವ್ಯಮಜ್ಮಂ ಗಮನಂ ಗಂತವ್ಯಂ ವಾ ಮಾರ್ಗಮಾಕ್ಷಿಷುಃ ವ್ಯಾಪ್ನುವಂತಿ ತದಾ ॥ ಅಯಂ ಮಂತ್ರೋ ಯಾಸ್ಕೇನೈವಂ ವ್ಯಾಖ್ಯಾತಃ । ಈರ್ಮಾಂತಾಃ ಸಮೀರಿತಾಂತಾಃ ಪೃಥ್ವಂತಾ ವಾ ಸಿಲಿಕಮಧ್ಯಮಾಃ ಸಂಸೃತಮಧ್ಯಮಾಃ ಶೀರ್ಷಮಧ್ಯಮಾ ವಾ । ಅಪಿ ವಾ ಶಿರ ಆದಿತ್ಯೋ ಭವತಿ ಯದನುಶೇತೇ ಸರ್ವಾಣಿ ಭೂತಾನಿ ಮಧ್ಯೇ ಚೈಷಾಂ ತಿಷ್ಠತಿ । ಇದಮಪೀತರಚ್ಛಿರ ಏತಸ್ಮಾದೇವ ಸಮಾಶ್ರಿತಾನ್ಯೇತದಿಂದ್ರಿಯಾಣಿ ಭವಂತಿ । ಸಂ ಶೂರಣಾಸೋ ದಿವ್ಯಾಸೋ ಅತ್ಯಾಃ। ಶೂರಃ ಶವತೇ-

ಗರ್ತಿಕರ್ಮಣೋ ದಿವ್ಯಾ ದಿವಿಜಾ ಅತ್ಯಾ ಅತನಾಃ । ಹಂಸಾ ಇವ ಶ್ರೇಣಿಶೋ ಯತಂತೇ । ಹಂಸಾ ಹಂತೇರ್ಘ್ನಂತ್ಯಧ್ವಾನಂ । ಶ್ರೇಣಿಶ ಇತಿ ಶ್ರೇಣಿಃ ಶ್ರಯತೇಃ ಸಮಾಶ್ರಿತಾ ಭವಂತಿ । ಯದಾಕ್ಷಿಷುರ್ಯದಾಪುರ್ದಿವ್ಯಮಜ್ಮಮಜನಿಮಾಜಿಮಶ್ವಾಃ । ನಿ- ೪-೧೩ । ಇತಿ ॥

**। ಪ್ರತಿಪದಾರ್ಥ ।**

**ಯತ್**—ಯಾವಾಗ । **ಅಶ್ವಾಃ**—(ಸೂರ್ಯನ) ಕುದುರೆಗಳು । **ದಿವ್ಯಂ ಅಜ್ಮಂ**—ದೇವಲೋಕದ ಮಾರ್ಗವನ್ನು । **ಆಕ್ಷಿಷುಃ**—ವ್ಯಾಪಿಸುತ್ತವೆಯೋ (ಆಗ) । **ಈರ್ಮಾಂತಾಸಃ**—ಪುಷ್ಟವಾದ ತೊಡೆಕಟ್ಟುಳ್ಳವೂ । **ಸಿಲಿಕಮಧ್ಯಮಾಸಃ**—ಸಮವರ್ತಿಯಾದ ಸೊಂಟದ ಪಾರ್ಶ್ವವುಳ್ಳವೂ । **ಶೂರಣಾಸಃ**—ವೀರ್ಯವುಳ್ಳವೂ । **ದಿವ್ಯಾಸಃ**—ದೇವಲೋಕೋತ್ಪನ್ನವೂ ಆದ । **ಅತ್ಯಾಃ**—ಸಂಚಾರಶೀಲವಾದ ಅಶ್ವಗಳು । **ಶ್ರೇಣಿಶಃ**—ಸಾಲುಕಟ್ಟಿಕೊಂಡು । **ಹಂಸಾ ಇವ**—ಹಂಸಪಕ್ಷಿಗಳಂತೆ । **ಸಂಯತಂತೇ**—(ಹಾರಲು) ಪ್ರಯತ್ನಿಸುತ್ತವೆ.

**ಭಾವಾರ್ಥ**

ಸೂರ್ಯನ ಕುದುರೆಗಳು ಯಾವಾಗ ದೇವಲೋಕದ ಮಾರ್ಗವನ್ನು ವ್ಯಾಪಿಸುತ್ತವೆಯೋ ಆಗ ಪುಷ್ಟವಾದ ತೊಡೆಕಟ್ಟುಳ್ಳವೂ, ಸಮವರ್ತಿಯಾದ ಸೊಂಟದ ಪಾರ್ಶ್ವವುಳ್ಳವೂ ವೀರ್ಯವುಳ್ಳವೂ, ದೇವಲೋಕೋತ್ಪನ್ನವೂ ಆದ ಅಶ್ವಗಳು ಸಾಲುಕಟ್ಟಿಕೊಂಡು ಹಾರುತ್ತಿರುವ ಹಂಸಪಕ್ಷಿಗಳಂತೆ ಹಾರಲು ಪ್ರಯತ್ನಿಸುತ್ತವೆ.

## English Translation

The full-haunched, slender-waisted, high-spirited, and celestial coursers (of the sun), gallop along like swans in rows, when the horses spread along the heavenly path.

**ವಿಶೇಷವಿಷಯಗಳು**

ಇಲ್ಲಿ ಆದಿತ್ಯಾಶ್ವಗಳ ದಿವ್ಯಲೋಕಸಂಚಾರವನ್ನು ಗುಂಪುಕಟ್ಟಿಕೊಂಡು ಹಾರುತ್ತಿರುವ ಹಂಸಪಕ್ಷಿಗಳ ಮಾಲೆಗೆ ಹೋಲಿಸಿ ಈ ಉಪಮಾನದಲ್ಲಿ ಅಶ್ವಗಮನದ ಸೌಂದರ್ಯವನ್ನು ವರ್ಣಿಸುವುದರ ಜೊತೆಗೆ ಅವುಗಳ ಅಲೌಕಿಕವಾದ ಸ್ವರೂಪ ಮತ್ತು ಶಕ್ತಿಗಳನ್ನೂ ವರ್ಣಿಸಿದೆ. ಈ ಋಕ್ಕಿಗೆ ನಿರುಕ್ತಕಾರರು ವ್ಯಾಖ್ಯಾನವನ್ನು ಮಾಡಿರುತ್ತಾರೆ ಅದನ್ನು ಸಾಯಣಭಾಷ್ಯದಲ್ಲಿ ಉದಹರಿಸಿದೆ. (ನಿ. ೪-೧೩).

**ಈರ್ಮಾಂತಾಸಃ—ಈರ್ಮಾಂತಾಃ ಸಮೀರಿತಾಂತಾಃ ಪೃಥ್ವಂತಾ ವಾ** । ಸುಪುಷ್ಟವಾಗಿ ನಿರ್ಮಿತವಾದ ಅಥವಾ ಪುಷ್ಟವಾಗಿ ಚಾಚಿರತಕ್ಕ ನಡುಕಟ್ಟೆಂದರ್ಥ.

**ಸಿಲಿಕಮಧ್ಯಮಾಸಃ— ಸಂಸೃತಮಧ್ಯಮಾಃ ಶೀರ್ಷಮಧ್ಯಮಾ ವಾ ಅಪಿ ವಾ ಶಿರ ಆದಿತ್ಯೋ ಭವತಿ ಯದನುಶೇತೇ ಸರ್ವಾಣಿ ಭೂತಾನಿ ಮಧ್ಯೇ ಚೈಷಾಂ ತಿಷ್ಠತಿ ॥**

ಸಮುವರ್ತಿಯಾಗಿ ಒತ್ತಿಕೊಂಡಿರತಕ್ಕ ಸೊಂಟದ ಪಾರ್ಶ್ವಗಳಿಂದಾಗಲಿ ಅಥವಾ ಮಧ್ಯದಲ್ಲಿರತಕ್ಕ ಶಿರಸ್ಸುಳ್ಳವುಗಳಿಂದಾಗಲಿ ಅರ್ಥವಾಗುತ್ತದೆ. ಇಲ್ಲಿ **ಶೀರ್ಷ** (ಶಿರಸ್) ಎಂಬ ಪದವು **ಸೂರ್ಯ**ನಿಗೆ ಅನ್ವಯಿಸುತ್ತದೆ. ಸಕಲ ಭೂತಗಳನ್ನೂ ವ್ಯಾಪಿಸಿ ಅವುಗಳ ನಡುವೆ ಸ್ಥಿತನಾಗಿರುವುದರಿಂದ ಈ ವಿಶೇಷಣವೆಂದು ನಿರುಕ್ತಕಾರರು ವಿವರಿಸಿದ್ದಾರೆ. ಇದಕ್ಕೆ ದುರ್ಗಾಚಾರ್ಯರು ವ್ಯಾಖ್ಯಾನವನ್ನು ಮಾಡುತ್ತಾ **ಯಸ್ಮಾಚ್ಚಾಸೌ ಅನುಪ್ರವಿಶ್ಯ ಪ್ರಾಣಭಾವೇನ ಸರ್ವಭೂತಾನಿ ಶೇತೇ । ಅಸ್ತೇ ತಸ್ಮಾತ್ಸರ್ವಭೂತಾಶ್ರಯಣಾತ್ ಶಿರ ಆದಿತ್ಯಃ ।** ಭೂತಗಳನ್ನೆಲ್ಲಾ ಪ್ರಾಣರೂಪದಿಂದ ಪ್ರವೇಶಿಸಿ ಎಲ್ಲವನ್ನೂ ವ್ಯಾಪಿಸಿರುವುದರಿಂದ **ಶಿರಃ** ಎಂಬ ವಿಶೇಷಣದಿಂದ ನಿರ್ದೇಶಿಸಿದೆ ಎಂದು ವಿವರಿಸಿದ್ದಾರೆ.

**ಚಿತ್ರಂ ದೇವಾನಾಮುದಗಾದನೀಕಂ ಚಕ್ಷುರ್ಮಿತ್ರಸ್ಯ ವರುಣಸ್ಯಾಗ್ನೇಃ ।**
**ಆಪ್ರಾ ದ್ಯಾವಾಪೃಥಿವೀ ಅಂತರಿಕ್ಷಂ ಸೂರ್ಯ ಆತ್ಮಾ ಜಗತಸ್ತಸ್ಥುಷಶ್ಚ ॥**
(ಋ ಸಂ. ೧-೧೧೫-೧)

ಇತ್ಯಾದಿಋಕ್ಕುಗಳಲ್ಲಿ ಜಗತ್ತಿಗೇ ಆತ್ಮನೆಂದು ವರ್ಣಿತವಾಗಿರುವ ಸೂರ್ಯನಿಗೆ ಇಲ್ಲಿ ಶಿರಃ ಎಂಬ ಪರ್ಯಾಯನಾಮವಿದೆ. ಎಂದು ದುರ್ಗಾಚಾರ್ಯರ ವ್ಯಾಖ್ಯಾನದ ಅಭಿಪ್ರಾಯವಾಗಿದೆ. **ಸ ಚೈತೇಷಾಮಶ್ವಾನಾಂ ಮಧ್ಯೇ ತಿಷ್ಠತಿ ।** ಶೀರ್ಷರೂಪದಲ್ಲಿರುವ ಈ ಆದಿತ್ಯನು ಅಶ್ವಗಳ ನಡುವೆ ಇರುವುದರಿಂದ **ಸಿಲಿಕಮಧ್ಯಮಾಃ** ಎಂದು ಅಶ್ವಗಳಿಗೆ ವಿಶೇಷಣವಾಗಿದೆಯೆಂದು ತಿಳಿಯಬೇಕು.

**ಸಂಶೂರಣಾಸಃ— ಶೂರಃ ಶವತೇರ್ಗತಿಕರ್ಮಣಃ ।** ಗತ್ಯರ್ಥಕವಾದ ಶು ಧಾತುವಿನಿಂದ ನಿಷ್ಪನ್ನವಾಗಿದೆ.

**ದಿವಿಜಾಃ— ದಿವ್ಯಾಃ ದಿವಿಜಾಃ ।** ದ್ಯುಲೋಕದಲ್ಲಿ ಉತ್ಪನ್ನವಾದವು.

**ಅತ್ಯಾಃ— ಅಪೇಕ್ಷಿತಪ್ರದೇಶಂ ಪ್ರತಿ ಅತನಶೀಲಾಃ ।** ತಾನು ಇಷ್ಟಬಂದ ಪ್ರದೇಶಕ್ಕೆ ಸಂಚರಿಸುವ ಸ್ವಭಾವ ಮತ್ತು ಶಕ್ತಿಯುಳ್ಳವನು ಎಂದರ್ಥವಾಗುತ್ತದೆ. ಈ ಪದವು **ಅಗ್ನಿ, ಅಶ್ವ, ಆದಿತ್ಯ** ಇವರುಗಳಿಗೆ ವಿಶೇಷಣವಾಗಿರುತ್ತದೆ

**ಏಷ ಪ್ರ ಪೂರ್ವೀರವ ತಸ್ಯ ಚಮ್ರಿಷೋಽತ್ಯೋ ನ ಯೋಷಾಮುದಯಂಸ್ತ ಭುರ್ವಣಿಃ ।**
**ದಕ್ಷಂ ಮಹೇ ಪಾಯಯತೇ ಹಿರಣ್ಯಯಂ ರಥಮಾವೃತ್ಯಾ ಹರಿಯೋಗಮೃಭ್ವಸಂ ॥**
(ಋ. ಸಂ. ೧-೫೬-೧)

ಎಂಬ ಋಕ್ಕಿನಲ್ಲಿ **ಅತ್ಯಃ** ಎಂಬುದು ಅಶ್ವಪರ್ಯಾಯವಾಗಿಯೂ.

**ಅಸ್ಯ ಶ್ಲೋಕೋ ದಿವೀಯತೇ ಪೃಥಿವ್ಯಾಮತ್ಯೋ ನ ಯಂಸದ್ಯಕ್ಷಭೃದ್ವಿಚೇತಾಃ ।**
**ಮೃಗಾಣಾಂ ನ ಹೇತಯೋ ಯಂತಿ ಚೇಮಾ ಬೃಹಸ್ಪತೇರಹಿಮಾಯಾँ ಅಭಿ ದ್ಯೂನ್ ।**
(ಋ. ಸಂ. ೧-೧೯೦-೪)

**ಇತ್ಯಾದಿ** ಋಕ್ಕುಗಳಲ್ಲಿ **ಅತನಶೀಲಃ ಆದಿತ್ಯಃ** ಎಂದೂ ಅರ್ಥವಾಗುತ್ತದೆ. ಪ್ರಕೃತವಾದ ಋಕ್ಕಿನಲ್ಲಿ ಅಶ್ವಗಳಿಗೆ ವಿಶೇಷಣವಾಗಿದೆ.

**ಅಜ್ಮಂ**—ಈ ಪದಕ್ಕೆ ನಾನಾರ್ಥಗಳಲ್ಲಿ ಪ್ರಯೋಗವಿರುತ್ತದೆ. ಇದು **ಸಂಗ್ರಾಮನಾಮಗಳಲ್ಲಿಯೂ** (ನಿ. ೩-೯) **ಗೃಹನಾಮಗಳಲ್ಲಿಯೂ** (ನಿ. ೩-೧೩) ಪಠಿತವಾಗಿದೆ. ಈ ಎರಡರ್ಥಗಳಲ್ಲಿಯೂ ಇರುವ ಪ್ರಯೋಗಗಳ ಜೊತೆಗೆ—

**ಉಚಥ್ಯೇಽ ವಪುಷಿ ಯಃ ಸ್ವರಾಳುತ ವಾಯೋ ಘೃತಸ್ನಾಃ ।**
**ಅಶ್ವೇಷಿತಂ ರಜೇಷಿತಂ ಶುನೇಷಿತಂ ಪ್ರಾಜ್ಮ ತದಿದಂ ನು ತತ್ ।**

(ಋ. ಸಂ. ೮-೪೬-೨೮)

ಎಂಬಲ್ಲಿ ಅಜ್ಮ ಶಬ್ದಕ್ಕೆ ಅನ್ನವೆಂದೂ ಅರ್ಥಮಾಡಿದೆ.

**ಅಚ್ಯುತಾ ಚಿದ್ವೋ ಅಜ್ಮನ್ನಾ ನಾನದತಿ ಪರ್ವತಾಸೋ ವನಸ್ಪತಿಃ। ಭೂಮಿರ್ಯಾಮೇಷು ರೇಜತೇ।**

(ಋ. ಸಂ. ೮-೨೦-೫)

ಎಂಬಲ್ಲಿ **ಅಜ್ಮನಿ ಗಮನೇ ಸತಿ ।** ಸಂಚಾರವಿರಲಾಗಿ ಎಂದು ಗಮನಾರ್ಥಕವಾದ ಪ್ರಯೋಗವೆಂದು ತಿಳಿಸಿದೆ.

**ಯೇ ಪಾತಯಂತೇ ಅಜ್ಮಭಿರ್ಗಿರೀಣಾಂ ಸ್ನುಭಿರೇಷಾಂ ।**
**ಯಜ್ಞಂ ಮಹಿಷ್ವಣೀನಾಂ ಸುಮ್ನಂತುವಿಷ್ವಣೀನಾಂ ಪ್ರಾಧ್ವರೇ ॥**

(ಋ. ಸಂ. ೮-೪೬-೧೮)

ಎಂಬಲ್ಲಿ **ಅಜ್ಮಭಿಃ ಬಲೈಃ ಬಲಕರೈರುದಕೈಃ ಸಹ ।** ಬಲಕರವಾದ ಉದಕವೆಂದರ್ಥಮಾಡಿದ್ದಾರೆ. ಪ್ರಕೃತವಾದ ಋಕ್ಕಿನಲ್ಲಿ **ಅಜ್ಮಂ ಅಜನಿಂ । ಅಜ್ಯತೇಽಸ್ಯಾಂ ಗಮ್ಯತ ಇತಿ ಅಜನಿಃ ವಾಹಿಕಾಂ ಸ್ವರ್ಗಪಥ ಇತ್ಯರ್ಥಃ ।** ಸ್ವರ್ಗದ ಮಾರ್ಗವೆಂದು ನಿರುಕ್ತಕಾರರು ಹೇಳಿರುವ ಅಭಿಪ್ರಾಯವನ್ನು ದುರ್ಗಾಚಾರ್ಯರು ವಿವರಿಸಿದ್ದಾರೆ.

**ಹಂಸಾಃ— ಹಂತೇರ್ಘ್ನಂತ್ಯಧ್ವಾನಂ ।** ಗುಂಪುಗಟ್ಟಿಕೊಂಡು ರಸ್ತೆಗಳನ್ನು ಸಾಗಿಸುತ್ತವೆ. **ಹನ್** ಧಾತುವಿನಿಂದ ನಿಷ್ಪನ್ನವಾಗಿದೆ.

**ಶ್ರೇಣಯಃ**—ಒಟ್ಟಿಗೆ ಸೇರಿಸು ಎಂಬರ್ಥವನ್ನು ಕೊಡತಕ್ಕ **ಶ್ರೀ** ಧಾತುವಿನಿಂದ ನಿಷ್ಪನ್ನವಾಗಿ ಸಂಘಾತ್ಮಕವಾಗಿರುವುದೆಂದರ್ಥ.

॥ ವ್ಯಾಕರಣಪ್ರಕ್ರಿಯಾ ॥

**ಈರ್ಮಾಂತಾಸಃ**—ಈರ್ಮಾಃ ಈರಿತಾಃ ಅಂತಾಃ ಯೇಷಾಂ ತೇ ಈರ್ಮಾಂತಾಸಃ ಈರ ಗತೌ ಪ್ರೇರಣೇ ಚ ಧಾತು. ಬಹುಲಗ್ರಹಣದಿಂದ **ಇಷಿಯುಧೀಂಧಿ**—(ಉ. ಸೂ. ೧-೧೪೨) ಎಂಬುದರಿಂದ ವಿಧಿಸಲ್ಪಡುವ ಮಕ್ ಪ್ರತ್ಯಯ ಇವಕ್ಕೂ ಬರುತ್ತದೆ. ಪ್ರತ್ಯಯಸ್ವರದಿಂದ ಈರ್ಮ ಎಂಬುದು ಅಂತೋದಾತ್ತವಾಗುತ್ತದೆ. ಬಹುವ್ರೀಹಿ ಸಮಾಸವಾದಾಗ ಪೂರ್ವಪದಪ್ರಕೃತಿಸ್ವರ ಬರುತ್ತದೆ ಇದೇ ಮೊದಲ್ಗೊಂಡು ನಾಲ್ಕು ಶಬ್ದಗಳಲ್ಲಿಯೂ ಜಸ್ ಪರವಾದಾಗ **ಆಜ್ಜಸೇರಸುಕ್** (ಪಾ. ಸೂ. ೭-೧-೫೦) ಎಂಬುದರಿಂದ ಅವಕ್ಕೆ ಅಸುಕಾಗಮ. ಸಿಲಿಕಮಧ್ಯಮಾಸಃ ಎಂಬಲ್ಲಿಯೂ ಬಹುವ್ರೀಹಿಸಮಾಸವಾದುದರಿಂದ ಪೂರ್ವಪದಪ್ರಕೃತಿಸ್ವರ ಬರುತ್ತದೆ.

**ದಿವ್ಯಾಸಃ**—ದಿವಿ ಭವಾಃ ದಿವ್ಯಾಸಃ ದಂಡಾದಿಯಲ್ಲಿ ಸೇರಿರುವುದರಿಂದ **ದಂಡಾದಿಭ್ಯೋ ಯಃ** (ಪಾ.ಸೂ. ೫-೧-೬೬) ಎಂಬುದರಿಂದ ಯ ಪ್ರತ್ಯಯ. ಪ್ರತ್ಯಯಸ್ವರದಿಂದ ಅಂತೋದಾತ್ತವಾಗುತ್ತದೆ. ಹಿಂದಿನಂತೆ ಜಸ್ ಪರವಾದಾಗ ಅದಕ್ಕೆ ಅಸುಕಾಗಮ.

**ಶ್ರೇಣಿಶಃ**— **ಸಂಖ್ಯೈಕವಚನಾಚ್ಚ ವೀಪ್ಸಾಯಾಮ್** (ಪಾ. ಸೂ ೫-೪-೪೩) ಎಂಬುದರಿಂದ ಶಸ್ ಪ್ರತ್ಯಯ. ಪ್ರತ್ಯಯಸ್ವರದಿಂದ ಅಂತೋದಾತ್ತವಾಗುತ್ತದೆ.

**ಯತಂತೇ** ಯತೀ ಪ್ರಯತ್ನೇ ಧಾತು. ಲಟ್ ಪ್ರಥಮಪುರುಷಬಹುವಚನಾಂತರೂಪ. ತಿಙಂತನಿಘಾತ ಸ್ವರ ಬರುತ್ತದೆ

**ಆಕ್ಷಿಷುಃ**—ಅಕ್ಷೂ ವ್ಯಾಪ್ತೌ ಧಾತು. ಭ್ವಾದಿ. **ಛಂದಸಿಲುಙ್‌ಲಙ್‌ಲಿಟಃ** (ಪಾ. ಸೂ. ೩-೪-೬) ಎಂಬುದರಿಂದ ವರ್ತಮಾನಾರ್ಥದಲ್ಲಿ ಲುಙ್. ಪ್ರಥಮಪುರುಷ ಬಹುವಚನಾಂತರೂಪ. ಯದ್ಯೋಗವಿರುವುದರಿಂದ ನಿಘಾತಸ್ವರ ಬರುವುದಿಲ್ಲ. ಆಡಾಗಮ ಉದಾತ್ತವಾದುದರಿಂದ ಆದ್ಯುದಾತ್ತವಾಗುತ್ತದೆ.

**ಅಜ್ಮಮ್**—ಅಜ ಗತಿಕ್ಷೇಪಣಯೋಃ ಧಾತು. ಉಣಾದಿಯಲ್ಲಿ ಬಹುಲಗ್ರಹಣವಿರುವುದರಿಂದ ಇದಕ್ಕೆ ಮನ್ ಪ್ರತ್ಯಯ. **ವಲಾದಾವಾರ್ಧಧಾತುಕೇ ವೇಷ್ಯತೇ** (ಕಾ. ೨-೪-೫೬-೨) ಎಂಬ ವಚನದಿಂದ **ಅಜೇರ್ವ್ಯಘಙಪೋಃ** (ಪಾ. ಸೂ ೨-೪-೫೬) ಎಂಬುದರಿಂದ ಬರಬೇಕಾದ ವೀಭಾವವು ಬರುವುದಿಲ್ಲ. **ಞ್ನಿತ್ಯಾದಿರ್ನಿತ್ಯಮ್** (ಪಾ. ಸೂ ೬-೧-೧೯೭) ಎಂಬುದರಿಂದ ಪ್ರತ್ಯಯನಿತ್ತಾದುದರಿಂದ ಆದ್ಯುದಾತ್ತಸ್ವರ ಬರುತ್ತದೆ. ॥ ೧೦ ॥

———:o:———

**ಸಂಹಿತಾಪಾಠಃ**

ತವ ಶರೀರಂ ಪತಯಿಷ್ಣ್ವರ್ವನ್ತವ ಚಿತ್ತಂ ವಾತ ಇವ ಧ್ರಜೀಮಾನ್ ।
ತವ ಶೃಂಗಾಣಿ ವಿಷ್ಠಿತಾ ಪುರುತ್ರಾರಣ್ಯೇಷು ಜರ್ಭುರಾಣಾ ಚರಂತಿ ॥೧೧॥

**ಪದಪಾಠಃ**

ತವ । ಶರೀರಂ । ಪತಯಿಷ್ಣು । ಅರ್ವನ್ । ತವ । ಚಿತ್ತಂ । ವಾತಃಽಇವ । ಧ್ರಜೀಮಾನ್ ।
ತವ । ಶೃಂಗಾಣಿ । ವಿಽಸ್ಥಿತಾ । ಪುರುಽತ್ರಾ । ಅರಣ್ಯೇಷು । ಜರ್ಭುರಾಣಾ । ಚರಂತಿ ॥ ೧೧ ॥

### ಸಾಯಣಭಾಷ್ಯಂ

ಹೇ ಅರ್ವನ್ ತವ ಶರೀರಂ ಪತಯಿಷ್ಣು ಪತನಶೀಲಂ । ವ್ಯಾಪ್ತಮಿತ್ಯರ್ಥಃ । ತಥಾ ತವ ಚಿತ್ತಂ ಮನೋ ವಾತ ಇವ ಧ್ರಜೀಮಾನ್ ಶೀಘ್ರಗಮನವಾಯುರಿವ । ತದ್ವಚ್ಛೀಘ್ರಗಮನಾನುಕೂಲಮಿತ್ಯರ್ಥಃ । ಕಿಂಚ ತವ ಶೃಂಗಾಣಿ ಶಿರಸೋ ನಿರ್ಗತಾಃ ಶೃಂಗಸ್ಥಾನೀಯಾಃ ಕೇಶಾಃ ಪುರುತ್ರಾ ಪುರುಷು ಬಹುಷು ಪ್ರದೇಶೇಷು ವಿಷ್ಠಿತಾ ವಿಷ್ಠಿತಾನಿ ವಿವಿಧಂ ಸ್ಥಿತಾಃ । ಕಿಂಚ ತ ಏವಾರಣ್ಯೇಷು ಜರ್ಭುರಾಣಾ ಮನೋಹರಾಣಿ ಪೂರ್ಯಮಾಣಾನಿ ವಾ ಏವಂಭೂತಾಃ ಕೇಶಾಶ್ಚರಂತಿ । ಯದ್ವಾ । ಅತ್ರಾಶ್ವಸ್ಯ ಶೃಂಗಾಭಾವಾತ್ ತದ್ವದುನ್ನತಾನಿ ತೇಜಾಂಸಿ ಪರಿಗೃಹ್ಯಂತೇ ॥

### ಪ್ರತಿಪದಾರ್ಥ

**ಅರ್ವನ್**—ಎಲೈ ಅಶ್ವವೇ । **ತವ**—ನಿನ್ನ । **ಶರೀರಂ**—ಶರೀರವು । **ಪತಯಿಷ್ಣು**—(ಎಲ್ಲವನ್ನೂ ವ್ಯಾಪಿಸುವಂತೆ) ಚಲನಾತ್ಮಕವಾದುದು । **ತವ**—ನಿನ್ನ । **ಚಿತ್ತಂ**—ಮನಸ್ಸು । **ವಾತ ಇವ**—ವಾಯುುವಿನೋಪಾದಿಯಲ್ಲಿ । **ಧ್ರಜೀಮಾನ್**—ಶೀಘ್ರಗಾಮಿಯಾದುದು । **ತವ**—ನಿನ್ನ । **ಶೃಂಗಾಣಿ**—ಕತ್ತಿನಮೇಲಿರುವುವೂ ಶೃಂಗಗಳಂತಿರುವುವೂ ಆದ ಕೇಸರಗಳು । **ಪುರುತ್ರಾ**—ಅನೇಕಪ್ರದೇಶಗಳಲ್ಲಿ । **ವಿಷ್ಠಿತಾ**—ವಿಸ್ತೃತವಾಗಿ ಹರಡಿವೆ (ಮತ್ತು) । **ಅರಣ್ಯೇಷು**—ಅರಣ್ಯಗಳಲ್ಲಿ । **ಜರ್ಭುರಾಣಾ**—ಆಕರ್ಷಕವಾದ ರೀತಿಯಲ್ಲಿ ವ್ಯಾಪಿಸಿ । **ಚರಂತಿ**—ಸಂಚರಿಸುತ್ತವೆ ॥

### ಭಾವಾರ್ಥ

ಎಲೈ ಅಶ್ವವೇ, ನಿನ್ನ ಶರೀರವು ಎಲ್ಲವನ್ನೂ ವ್ಯಾಪಿಸುವಂತೆ ಚಲನಾತ್ಮಕವಾದುದು. ನಿನ್ನ ಮನಸ್ಸು ವಾಯುುವಿನೋಪಾದಿಯಲ್ಲಿ ಶಿಘ್ರಗಾಮಿಯಾದುದು. ನಿನ್ನ ಕತ್ತಿನಮೇಲಿರುವುವೂ, ಶೃಂಗಗಳಂತಿರುವುವೂ ಆದ ಕೇಸರಗಳು ಅನೇಕ ಪ್ರದೇಶಗಳಲ್ಲಿ ವಿಸ್ತೃತವಾಗಿ ಹರಡಿವೆ. ಮತ್ತು ಅರಣ್ಯಗಳಲ್ಲಿ ಆಕರ್ಷಕವಾದ ರೀತಿಯಲ್ಲಿ ವ್ಯಾಪಿಸಿ ಸಂಚರಿಸುತ್ತವೆ.

## English Translation

Your body, horse, is made for motion : your mind is rapid (in intention) as the wind : the hairs (of your mane) are tossed in manifold directions ; and spread beautiful in the forests.

### ವಿಶೇಷವಿಷಯಗಳು

**ಜರ್ಭುರಾಣಾಃ**—ಗತ್ಯರ್ಥಕವಾದ **ಭುರ್** ಧಾತುವಿನಿಂದ ನಿಷ್ಪನ್ನವಾಗಿ ವ್ಯಾಪಿಸುವಂತೆ ಸಂಚರಿಸುವುದು ಎಂದರ್ಥವಾಗುತ್ತದೆ. ಈ ಧಾತುವಿನಿಂದ ನಿಷ್ಪನ್ನವಾದ ಪದಗಳನ್ನು ನಿರುಕ್ತಕಾರರು **ಗತಿಕರ್ಮನಾಮಗಳಲ್ಲಿ** ಸೇರಿಸಿದ್ದಾರೆ. (ನಿ. ೩-೯). ಆ ಗತಿಯಲ್ಲಿಯೂ ಕ್ಷಿಪ್ರವಾದ ಚಲನವನ್ನು ಸೂಚಿಸುವುದಾದುದರಿಂದ ಪಕ್ಷ್ಯಾದಿಗಳಿಗೂ ಅಗ್ನಿಗೂ ವಿಶೇಷಣವಾಗಿ ಉಪಯೋಗಿಸಲ್ಪಡುತ್ತದೆ.

**ಭುರಣ್ಯುರಿತಿ ಕ್ಷಿಪ್ರನಾಮ । ಶಕುನಿರ್ಭೂರಿಮಧ್ವಾನಂ ನಯತಿ ಸ್ವರ್ಗಸ್ಯ ಲೋಕಸ್ಯಾಪಿ ವೋಳ್ಹಾ ತತ್ಸಂಪಾತೀ ಭುರಣ್ಯುರನೇನ ಪಾವಕಖ್ಯಾತೇನ ।**

( ನಿ. ೧೨-೨೨ )

ಬಹುದೂರಕ್ಕೆ ಹಾರಿಹೋಗುವುದರಿಂದ ಪಕ್ಷಿಗೆ ಭುರಣ್ಯುವೆಂದು ಹೆಸರು. ಸ್ವರ್ಗಕ್ಕಾದರೂ ಸಹ ಯಾರನ್ನಾದರೂ ಒಯ್ಯಬಲ್ಲುದು. **ಭುರ್** ಧಾತುವು. ಧಾರಣಾರ್ಥಕವೂ ಪೋಷಣಾರ್ಥಕವೂ ಆಗಿರುವುದರಿಂದ ಈ ಅರ್ಥಗಳಲ್ಲಿಯೂ ಈ ಧಾತುವಿನಿಂದ ನಿಷ್ಪನ್ನವಾದ ಪದಗಳ ಪ್ರಯೋಗವಿದೆ—

**ಯನ್ನಾಸತ್ಯಾ ಭುರಣ್ಯಥೋ ಯದ್ವಾ ದೇವ ಭಿಷಜ್ಯಥಃ ।**
**ಅಯಂ ವಾಂ ವತ್ಸೋ ಮತಿಭಿರ್ನ ವಿಂಧತೇ ಹವಿಷ್ಮಂತಂ ಹಿ ಗಚ್ಛಥಃ ।**

(ಋ. ಸಂ. ೮-೯-೬)

ಎಂಬಲ್ಲಿ **ಸರ್ವಂ ಜಗತ್ಪೋಷಯಥಃ** ನೀವು ಸಕಲ ಜಗತ್ತನ್ನೂ ಪೋಷಿಸುತ್ತೀರಿ ಎಂದು ಅಶ್ವಿನೀದೇವತೆಗಳನ್ನು ನಿರ್ದೇಶಿಸಿದೆ. ಆದರೆ ಗತ್ಯರ್ಥಕವಾಗಿ ಉಪಯೋಗಿಸಿರುವುದೇ ಅಧಿಕವಾಗಿದೆ.

**ಶೃಂಗೇವ ನಃ ಪ್ರಥಮಾ ಗಂತಮರ್ವಾಕ್ ಛಫಾವಿವ ಜರ್ಭುರಾಣಾ ತರೋಭಿಃ ।**
**ಚಕ್ರವಾಕೇವ ಪ್ರತಿ ವಸ್ತೋರುಸ್ರಾರ್ವಾಂಚಾ ಯಾತಂ ರಥ್ಯೇವ ಶಕ್ರಾ ॥**

(ಋ. ಸಂ. ೨-೩೯-೩)

ಎಂಬಲ್ಲಿಯೂ ಸಹ **ಜರ್ಭುರಾಣಾ** ಎಂಬ ಪದವು ಅಶ್ವಿನೀದೇವತೆಗಳ ಪರವಾಗಿಯೇ ಇದೆ. ಆದರೆ ಇಲ್ಲಿ ವೇಗವಾದ ಗಮನವೆಂದರ್ಥ.

**ಆ ವಿಶ್ವತಃ ಪ್ರತ್ಯಂಚಂ ಜಿಘರ್ಮ್ಯರಕ್ಷಸಾ ಮನಸಾ ತಜ್ಜುಷೇತ ।**
**ಮರ್ಯಶ್ರೀಃ ಸ್ಪೃಹಯದ್ವರ್ಣೋ ಅಗ್ನಿರ್ನಾಭಿಮೃಶೇ ತನ್ವಾ ೩ ಜರ್ಭುರಾಣಃ ॥**

(ಋ. ಸಂ ೨-೧೦-೫)

ಎಂಬಲ್ಲಿ ಅಗ್ನಿಯು ಎಲ್ಲವನ್ನೂ ವ್ಯಾಪಿಸುವ ಶೀಘ್ರಗಾಮಿಯಾಗಿರುವನೆಂದು ವರ್ಣಿಸಿರುವಂತೆ ಪ್ರಕೃತವಾದ ಋಕ್ಕಿನಲ್ಲಿಯೂ ಸಹ ಅಶ್ವದ ತೇಜಸ್ಸು ಆಕರ್ಷಕವಾದ ರೀತಿಯಲ್ಲಿ ಅರಣ್ಯದಲ್ಲೆಲ್ಲಾ ವ್ಯಾಪಿಸಿ ಸಂಚರಿಸುತ್ತದೆಯೆಂದರ್ಥ

**ಧ್ರಜೀಮಾನ್**—**ಧ್ರಜತಿ** ಎಂಬ ಪದವೂ **ಗತಿಕರ್ಮ**ನಾಮಗಳಲ್ಲಿ ಪಠಿತವಾಗಿದೆ. (ನಿ. ೩-೯).

**ಹಿರಣ್ಯಕೇಶೋ ರಜಸೋ ವಿಸಾರೇಽಹಿರ್ಧುನಿರ್ವಾತ ಇವ ಧ್ರಜೀಮಾನ್ ।**
**ಶುಚಿಭ್ರಾಜಾ ಉಷಸೋ ನವೇದಾ ಯಶಸ್ವತೀರಪಸ್ಯುವೋ ನ ಸತ್ಯಾಃ ॥**

(ಋ. ಸಂ. ೧-೭೯-೧)

ಎಂಬಲ್ಲಿಯೂ **ವಾತ ಇವ ಧ್ರಜೀಮಾನ್** ಎಂದು ಅಗ್ನಿಯ ಗಮನದ ವೇಗವನ್ನು ವಾತದ ವೇಗಕ್ಕೆ ಹೋಲಿಸಿರುವಂತೆ ಪ್ರಕೃತವಾದ ಋಕ್ಕಿನಲ್ಲಿಯೂ ಸಹ ಅಶ್ವದ ಗಮನವೇಗವನ್ನು ವಾತದ ವೇಗಕ್ಕೆ ಹೋಲಿಸಿದೆ

**ಪುರುತ್ರಾ**—ಈ ಪದಕ್ಕೆ ಬಹುಪ್ರದೇಶಗಳಲ್ಲಿರತಕ್ಕದ್ದು ಎಂದಾಗಲಿ ಅಥವಾ ಬಹುವಿಧವಾಗಿರತಕ್ಕದ್ದು ಎಂದಾಗಲಿ ಅರ್ಥವಾಗುತ್ತದೆ.

**ಶೃಂಗಾಣಿ—ಶಿರಸೋ ನಿರ್ಗತಾಃ ಶೃಂಗಸ್ಥಾನೀಯಾಃ ಕೇಶಾಃ** ಶಿರಸ್ಸಿನಿಂದ ಹೊರಹೊರಟಿರುವುದೂ ಶೃಂಗದ ಸ್ಥಾನದಲ್ಲಿರುವುದೂ ಆದ ಕೇಶವೆಂದರ್ಥಮಾಡಿದೆ. **ಅಥವಾ ಅಶ್ವಸ್ಯ ಶೃಂಗಾಭಾವಾತ್ ತದ್ವದುನ್ನತಾನಿ ತೇಜಾಂಸಿ ಪರಿಗೃಹ್ಯಂತೇ ।** ಅಶ್ವಕ್ಕೆ ಶೃಂಗಗಳಿಲ್ಲದಿರುವುದರಿಂದ ಅದರಂತಿರುವ ಅಶ್ವದ ತೇಜಸ್ಸುಗಳೆಂದು ತಾತ್ಪರ್ಯವಾಗಬಹುದು.

### ವ್ಯಾಕರಣಪ್ರಕ್ರಿಯಾ

**ಶರೀರಮ್**—ಶೄ ಹಿಂಸಾಯಾಮ್ ಧಾತು. **ಕೄ ಶೄ ಪೄ ಕಟಿ** (ಉ. ಸೂ. ೪-೪೭೦) ಎಂಬುದರಿಂದ ಈರನ್ ಪ್ರತ್ಯಯ. ಅದನ್ನು ನಿಮಿತ್ತೀಕರಿಸಿ ಧಾತುವಿನ ಇಕಿಗೆ ಗುಣ. ರಪರವಾಗಿ ಬರುತ್ತದೆ. ಪ್ರತ್ಯಯ ನಿತ್ತಾದುದರಿಂದ ಆದ್ಯುದಾತ್ತಸ್ವರ ಬರುತ್ತದೆ.

**ಪತಯಿಷ್ಣು**—ಪತ್ಲೃ ಗತೌ ಧಾತು. ಇದಕ್ಕೆ ಣಿಚ್ ಬಂದಾಗ **ಣೇಶ್ಛಂದಸಿ** (ಪಾ. ಸೂ. ೩-೨-೧೩೭) ಎಂಬುದರಿಂದ ಇಷ್ಣುಚ್ ಪ್ರತ್ಯಯ ಬರುತ್ತದೆ. ಪ್ರತ್ಯಯನಿಮಿತ್ತವಾಗಿ ಣಿಚಿಗೆ ಗುಣ. ಅಯಾದೇಶ. ಪ್ರತ್ಯಯ ಚಿತ್ತಾದುದರಿಂದ **ಚಿತಃ** (ಪಾ ಸೂ ೬-೧-೧೬೩) ಎಂಬುದರಿಂದ ಅಂತೋದಾತ್ತಸ್ವರ ಬರುತ್ತದೆ.

**ಧ್ರಜೀಮಾನ್**—ಧ್ರಜ ಗತೌ ಧಾತು. **ಇನ್ ಸರ್ವಧಾತುಭ್ಯಃ** ಎಂಬುದರಿಂದ ಇನ್ ಪ್ರತ್ಯಯ. ಇದರ ಮೇಲೆ ಮತುಪ್ ಪ್ರತ್ಯಯ. ಇದು ಪಿತ್ತಾದುದರಿಂದ ಅನುದಾತ್ತವಾಗುತ್ತದೆ. ಇನ್ ನಿತ್ತಾದುದರಿಂದ ಆದ್ಯುದಾತ್ತ ಸ್ವರ ಬರುತ್ತದೆ.

**ಶೃಂಗಾಣಿ**—ಶೄ ಹಿಂಸಾಯಾಂ ಧಾತು. **ಶೃಣಾತೇರ್ಹ್ರಸ್ವಶ್ಚ** (ಉ ಸೂ. ೧-೧೨೩) ಎಂಬುದರಿಂದ ಗನ್ ಪ್ರತ್ಯಯ, ಧಾತುವಿಗೆ ಹ್ರಸ್ವ. ಪ್ರತ್ಯಯಕ್ಕೆ ನುಡಾಗಮ. ಕಿತ್ವಾದೇಶವೂ ಬರುತ್ತದೆ.

**ವಿಷ್ಠಿತಾ**—ವಿ ಉಪಸರ್ಗ. ಷ್ಠಾ ಗತಿನಿವೃತ್ತೌ ಧಾತು. ಕ್ತ ಪ್ರತ್ಯಯ. **ದ್ಯತಿಸ್ಯತಿಮಾ**—(ಪಾ. ಸೂ. ೩-೪-೪೦) ಎಂಬುದರಿಂದ ಧಾತುವಿಗೆ ಇತ್ವ. ನಪುಂಸಕದಲ್ಲಿ **ಶೇಶ್ಛಂದಸಿ ಬಹುಲಂ** (ಪಾ. ಸೂ. ೬-೧-೭೦) ಎಂಬುದರಿಂದ ಶಿಗೆ ಲೋಪ.

**ಪುರುತ್ರಾ—ದೇವಮನುಷ್ಯ**-(ಪಾ ಸೂ. ೫-೪-೫೬.)ಎಂಬುದರಿಂದ ಸಪ್ತಮ್ಯರ್ಥದಲ್ಲಿ ತ್ರಾ ಪ್ರತ್ಯಯ. ಪ್ರತ್ಯಯಸ್ವರದಿಂದ ಅಂತೋದಾತ್ತವಾಗುತ್ತದೆ

**ಜರ್ಭುರಾಣಾ**—ನಪುಂಸಕಪ್ರಥಮಾಬಹುವಚನದಲ್ಲಿ ರೂಪವಾದಾಗ **ಶೇಶ್ಛಂದಸಿ ಬಹುಲಂ** (ಪಾ. ಸೂ. ೬-೧-೭೦) ಎಂಬುದರಿಂದ ಶಿಗೆ ಲೋಪ.

**ಚರಂತಿ**—ಚರ ಗತಿಭಕ್ಷಣಯೋಃ ಧಾತು. ಲಟ್ ಪ್ರಥಮಪುರುಷಬಹುವಚನಾಂತರೂಪ. **ಅತಿಙಂತದ** ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ. ॥ ೧೧ ॥

ಸಂಹಿತಾಪಾಠಃ

ಉಪ ಪ್ರಾಗಾಚ್ಛಸನಂ ವಾಜ್ಯರ್ವಾ ದೇವದ್ರೀಚಾ ಮನಸಾ ದೀಧ್ಯಾನಃ ।
ಅಜಃ ಪುರೋ ನೀಯತೇ ನಾಭಿರಸ್ಯಾನು ಪಶ್ಚಾತ್ಕವಯೋ ಯಂತಿ ರೇಭಾಃ ॥ ೧೨ ॥

। ಪದಪಾಠಃ ।

ಉಪ । ಪ್ರ । ಅಗಾತ್ । ಶಸನಂ । ವಾಜೀ । ಅರ್ವಾ । ದೇವದ್ರೀಚಾ । ಮನಸಾ । ದೀಧ್ಯಾನಃ ।
ಅಜಃ । ಪುರಃ । ನೀಯತೇ । ನಾಭಿಃ । ಅಸ್ಯ । ಅನು । ಪಶ್ಚಾತ್ । ಕವಯಃ । ಯಂತಿ । ರೇಭಾಃ ॥೧೨॥

ಸಾಯಣಭಾಷ್ಯಂ

ಆಶ್ವಮೇಧಿಕೇ ಮಧ್ಯಮೇಽಹನ್ಯಧ್ರಿಗುಪ್ರೈಷೇ ಮಾ ನೋ ಮಿತ್ರ ಇತಿ ಸೂಕ್ತಾನಂತರಮುಪ ಪ್ರಾಗಾಚ್ಛಸನಮಿತಿ ದ್ವೇ ಋಚೌ ಶಂಸನೀಯೇ । ಸೂತ್ರಿತಂ ಚ । ಉಪಪ್ರಾಗಾಚ್ಛಸನಮಿತಿ ದ್ವೇ । ಆ. ೧೦-೮ । ಇತಿ ॥

ಅಯಮರ್ವಾ ರಣಕುಶಲೋ ವಾಜ್ಯಶ್ವಃ ಶಸನಂ ವಿಶಸನಸ್ಥಾನಮುಪ ಪ್ರಾಗಾತ್ । ಉಪಪ್ರೈತಿ । ಕಿಂ ಕುರ್ವನ್ । ದೇವದ್ರೀಚಾ ಮನಸಾ ದೇವಾನ್ಗಚ್ಛತಾ ಮನಸಾ ದೀಧ್ಯಾನೋ ಧ್ಯಾಯನ್ । ಕದಾ ದೇವಾನಸ್ಮದವಯವೇನಾರ್ಚಾಮಿ ದೇವತ್ವಂ ಪ್ರಾಪ್ನೋಮೀತಿ ವಾ ಮನಸಿ ಧ್ಯಾಯನ್ । ಕಿಂಚಾಸ್ಯ ಪುರಃ ಪುರಸ್ತಾನ್ನಾಭಿರ್ನಹನಂ । ಬಂಧುಭೂತ ಇತ್ಯರ್ಥಃ । ಯದ್ವಾ । ಅಸ್ಯ ಬಂಧನಸ್ಥಾನೀಯೋಽವಿಮುಕ್ತತ್ವಾತ್ । ಏವಂಭೂತೋಽಜಃ ಪುರೋ ನೀಯತೇ । ಪುರತಃ ಪ್ರಾಪ್ಯತೇ । ಅನ್ವನುಸೃತ್ಯ ಪಶ್ಚಾದನಂತರಂ । ಅತ್ರ ಯದ್ಯಪ್ಯುಭಯೋಃ ಪರ್ಯವಸಿತೋಽರ್ಥ ಏಕ ಏವ ತಥಾಪ್ಯಜಾಶ್ವೋಭಯಾನಂತರ್ಯತ್ವಪ್ರಕಟನಾಯ ಪದದ್ವಯಂ । ಯದ್ವಾ । ಅನ್ವಿತಿ ಕ್ರಿಯಯಾ ಸಂಬಧ್ಯತೇ । ಕವಯೋಽನೂಚಾನಾ ರೇಭಾಃ ಸ್ತೋತಾರ ಋತ್ವಿಜೋ ಯಂತಿ । ಗಚ್ಛಂತಿ । ಯೇ ವಾ ಅನೂಚಾನಾಸ್ತೇ ಕವಯ ಇತಿ ಶ್ರುತೇಃ । ಯದ್ವಾ । ಕವಯ ಇತಿ ಮೇಧಾವಿನಾಮ ಕವಿರ್ಮನೀಷೀತಿ ತನ್ನಾಮಸು ಪಠಿತತ್ವಾತ್ । ರೇಭ ಇತಿ ಸ್ತೋತೃನಾಮ ರೇಭೋ ಜರಿತೇತಿ ತತ್ರ ಪಾಠಾತ್ ॥

ಪ್ರತಿಪದಾರ್ಥ

ಅರ್ವಾ—(ರಮ್ಯವಾದ) ನಡಿಗೆಯುಳ್ಳ । ವಾಜೀ—ಅಶ್ವವು। ದೇವದ್ರೀಚಾ—ದೇವತೆಗಳನ್ನು ಸಮೀಪಿಸತಕ್ಕ । ಮನಸಾ—ಮನಸ್ಸಿನಿಂದ । ದೀಧ್ಯಾನಃ—ಧ್ಯಾನಮಾಡುತ್ತಾ । ಶಸನಂ—ವಧ್ಯಸ್ಥಾನವನ್ನು । ಉಪ ಪ್ರಾಗಾತ್—ಸಮೀಪಿಸುತ್ತದೆ । ಅಸ್ಯ—ಇದರ । ನಾಭಿಃ—ಬಂಧುಭೂತವಾದ । ಅಜಃ—ಅಜವು । ಪುರಃ—

ಇದರ ಮುಂಭಾಗದಲ್ಲಿ | **ನೀಯತೇ**—ಕರೆದೊಯ್ಯಲ್ಪಡುತ್ತದೆ | **ಅನು**—ಇವೆರಡನ್ನೂ ಅನುಸರಿಸಿ | **ಪಶ್ಚಾತ್**—ಅನಂತರ | **ಕವಯಃ**—ಪ್ರಾಜ್ಞರಾದ | **ರೇಭಾಃ**—ಸ್ತೋತೃಗಳು (ಋತ್ವಿಕ್ಕುಗಳು) | **ಯಂತಿ**—ಹೋಗುತ್ತಾರೆ.

**ಭಾವಾರ್ಥ**

ರಮ್ಯವಾದ ನಡಿಗೆಯುಳ್ಳ ಅಶ್ವವು ದೇವತೆಗಳನ್ನು ಸಮೀಪಿಸತಕ್ಕ ಮನಸ್ಸಿನಿಂದ ಧ್ಯಾನಮಾಡುತ್ತಾ ವಧ್ಯ ಸ್ಥಾನವನ್ನು ಸಮೀಪಿಸುತ್ತದೆ. ಇದರ ಬಂಧುಭೂತವಾದ ಅಜವು ಇದರ ಮುಂಭಾಗದಲ್ಲಿ ಕರೆದೊಯಲ್ಪಡುತ್ತದೆ. ಇವೆರಡನ್ನೂ ಅನುಸರಿಸಿ ಇವುಗಳ ಹಿಂದೆ ಪ್ರಾಜ್ಞರಾದ ಋತ್ವಿಕ್ಕುಗಳು ಹೋಗುತ್ತಾರೆ.

## English Translation

The swift horse approaches the place of immolation, meditating with mind intent upon the gods: the goat bound to him is led before him; after him follow the priests and the singers.

**ವಿಶೇಷವಿಷಯಗಳು**

ಅಶ್ವಮೇಧಯಜ್ಞದ ಮಧ್ಯದದಿವಸದಲ್ಲಿ ಅಧ್ರಿಗುಪ್ರೈಷಮಂತ್ರವನ್ನು ಪಠಿಸುವಾಗ **ಮಾ ನೋ ಮಿತ್ರ** ಎಂಬ ಸೂಕ್ತವನ್ನು ಪಠಿಸಿದನಂತರ **ಉಪ ಪ್ರಾಗಾಚ್ಛಸನಂ** ಎಂದು ಮೊದಲಾಗುವ ಎರಡು ಋಕ್ಕುಗಳನ್ನು (ಈ ಸೂಕ್ತದ ೧೨ ಮತ್ತು ೧೩ನೆಯ ಋಕ್ಕುಗಳನ್ನು) ಪಠಿಸಬೇಕೆಂದು ಅಶ್ವಲಾಯನಶ್ರೌತಸೂತ್ರದ **ಉಪ ಪ್ರಾಗಾಚ್ಛಸನಮಿತಿ ದ್ವೇ** ಎಂಬ ಸೂತ್ರದಿಂದ ವಿವೃತವಾಗಿರುವುದು. (೮ ೧೦-೮).

ಅಶ್ವವು ವಧಸ್ಥಾನಕ್ಕೆ ಹೋಗತಕ್ಕ ರೀತಿಯನ್ನು ಈ ಋಕ್ಕಿನಲ್ಲಿ ವರ್ಣಿಸಿದೆ. ಅದು ದೇವತೆಗಳ ಸಾನ್ನಿಧ್ಯಕ್ಕೆ ಹೋಗತಕ್ಕದಾದ್ದರಿಂದ ಅದು ಧ್ಯಾನಾಸಕ್ತವಾಗಿದೆಯೆಂದು ಅದರ ಗಭೀರವಾದುದೂ, ಪವಿತ್ರಾತ್ಮಕವಾದುದೂ ಆದ ನಡಿಗೆಯನ್ನೂ, ಅದರ ಮುಂಭಾಗದಲ್ಲಿರುವ **ಅಜದ** ಸ್ವರೂಪವನ್ನೂ ಮತ್ತು ಇವೆರಡನ್ನೂ ಹಿಂಬಾಲಿಸಿ ಹೋಗುತ್ತಿರುವ ಋತ್ವಿಕ್ಕುಗಳನ್ನೂ ವರ್ಣಿಸಿದೆ. ಇಲ್ಲಿ, **ನಾಭಿಃ** ಎಂಬ ಪದಕ್ಕೆ ಅರ್ಥವನ್ನು ಹೇಳುವಾಗ ಅಶ್ವಕ್ಕೂ ಅಜಕ್ಕೂ ಇರತಕ್ಕ ನಿಕಟವಾದ ಸಂಬಂಧವು ತಿಳಿಯುತ್ತದೆ. ಈ ಪದಕ್ಕೆ ಎರಡುವಿಧವಾದ ಅರ್ಥವನ್ನು ಮಾಡಿದೆ. **ನಾಭಿಃ ನಹನಂ ಬಂಧುಭೂತಃ । ಯದ್ವಾ ಅಸ್ಯ ಬಂಧನಸ್ಥಾನೀಯಃ ಅವಿಮುಕ್ತತ್ವಾತ್ ।** ಬಂಧಕವಾದುದು ಎಂದರ್ಥವಾದರೆ ಬಂಧುಭೂತವಾದುದರಿಂದ ಬಾಂಧವ್ಯರೂಪವಾದ ಬಂಧಕವೆಂದು ಒಂದರ್ಥವೂ ಅಥವಾ ಆಹುತ್ಯರ್ಪಣದ ಕಾಲದಲ್ಲಿ ಅಶ್ವಕ್ಕೆ ಮೊದಲು ಅಜದ ಆಹುತಿಯಾಗಬೇಕಾದುದರಿಂದ ಅದರ ಬಂಧನವೆಂದು ಇನ್ನೊಂದರ್ಥವೂ ಸಾಧ್ಯವಾಗುತ್ತದೆ.

> **ಅಥ ಯಃ ಕಪಾಲೇ ರಸೋ ಲಿಪ್ತ ಆಸೀತ್ಸೋಽಜೋಽಭವದಥ ಯತ್ಕಪಾಲಮಾಸೀತ್ಸಾ ಪೃಥಿವ್ಯಭವತ್ ।**
>
> (ಶ. ಬ್ರಾ. ೬-೧-೧-೧೧)

ಪ್ರಜಾಪತಿಯು ಜಗತ್ಸೃಷ್ಟಿರೂಪದಿಂದ ವೃದ್ಧನಾಗಬೇಕೆಂದಿಚ್ಛಿಸಿದಾಗ ಅಪ್ಪಿನಿಂದ ಅಂಡವೂ ಅದರಿಂದ ಬ್ರಹ್ಮವೂ ಉತ್ಪನ್ನವಾಗಿ ಜಗದಾದಿಗೆ ಈ ಬ್ರಹ್ಮವೇ ಮೂಲವಾದುದೂ, ಅಂಡದ ಸುತ್ತಲೂ ವ್ಯಾಪಿಸಿದ್ದ ಅಶ್ರುವನ್ನೇ ದೇವತೆ

ಗಳು ಅಶ್ವವೆಂದು ಕರೆದುದೂ, ಅಂಡದ ಕಪಾಲದಲ್ಲಿ ಲಿಪ್ತವಾಗಿದ್ದ ರಸವು ಅಜವಾದುದೂ (ಜನ್ಮವಿಲ್ಲದ್ದು) ಹಿಂದೆ ಉದಾಹರಣೆಗಳೊಡನೆ ವಿವರಿಸಲ್ಪಟ್ಟಿದೆ. ಅಲ್ಲದೆ,

**ಅಥಾ ಜರ್ಷಭಸ್ಯಾಜಿನಮಾಸ್ತೃಣಾತಿ । ಪ್ರಜಾಪತಿರ್ವಾ ಏಷ ಯದಜಃ ।**
(ಶ. ಬ್ರಾ ೫-೨-೧-೬೪)

ಇತ್ಯಾದಿವಾಕ್ಯಗಳಲ್ಲಿ ಪ್ರಜಾಪತಿಗೂ ಅಜಕ್ಕೂ ತಾದಾತ್ಮ್ಯವನ್ನೇ ಹೇಳಿದೆ. ಹೀಗೆ ಅಶ್ವಕ್ಕೆ ಪ್ರಭವಸ್ಥಾನವಾದ ಪ್ರಜಾಪತಿಗೂ ಮತ್ತು ಅಜಕ್ಕೂ ಸಂಬಂಧವಿರುವುದರಿಂದಲೂ, ಅಶ್ವಕ್ಕೇ ಸಾಕ್ಷಾತ್ತಾಗಿ ಅಜದೊಡನೆ ಸಂಬಂಧವಿರುವುದರಿಂದಲೂ ನಾಭಿಪದಕ್ಕೆ ಮೊದಲನೆಯ ಅರ್ಥವು ಸರಿಹೋಗುತ್ತದೆ. ಹೀಗೆಯೇ,

**ಅತ್ರಾ ಪೂಷ್ಣಃ ಪ್ರಥಮೋ ಭಾಗ ಏತಿ ಯಜ್ಞಂ ದೇವೇಭ್ಯಃ ಪ್ರತಿವೇದಯನ್ನಜಃ ।**
(ಋ ಸಂ. ೧-೧೬೨-೪)

**ಅಜಾ ಅನ್ಯಸ್ಯ ವಹ್ನಯೋ ಹರೀ ಅನ್ಯಸ್ಯ ಸಂಭೃತಾ । ತಾಭ್ಯಾಂ ವೃತ್ರಾಣಿ ಜಿಘ್ನತೇ ।**
( ಋ. ಸಂ. ೬-೫೭-೩ )

ಇತ್ಯಾದಿಋಕ್ಕುಗಳಲ್ಲಿ ಅಶ್ವದ ಆಹುತಿಗೆ ಮೊದಲು ಪೂಷದೇವತೆಗೆ ಅಜವನ್ನು ಆಹುತಿಯನ್ನಾಗಿ ಕೊಡಲೇಬೇಕೆಂಬ ನಿಯಮದಿಂದ ಬಂಧಿಸತಕ್ಕದ್ದೆಂದು ವಿಧಿಯಿರುವುದರಿಂದಲೂ ಸಹ ಎರಡನೆಯ ಅರ್ಥವು ಸಾಧ್ಯವಾಗುತ್ತದೆ.

**ಶಸನಂ—ವಿಶಸನಸ್ಥಾನಂ ।** ಯಜ್ಞದಲ್ಲಿ ಪಶುವನ್ನು ವಧಮಾಡತಕ್ಕ ಸ್ಥಳವು.

**ದೇವದ್ರೀಜಾ—ದೇವಾನ್ ಅಂಚತಾ ದೇವತಾಪರಾಯಣೇನ ಶ್ರದ್ಧಾಯುಕ್ತೇನ ।** ಅನನ್ಯಮನಸ್ಕನಾಗಿ ದೇವತೆಗಳಲ್ಲಿಯೇ ಶ್ರದ್ಧಾಭಕ್ತಿಗಳನ್ನಿಟ್ಟು ಅವರ ಸೇವೆಯಲ್ಲಿಯೇ ತತ್ಪರವಾಗಿ ಅವರನ್ನೇ ಸೇರುವ ಮನಸ್ಸಿನಿಂದ ಎಂದರ್ಥವು. **ದೇವಯಂತಃ, ದೇವದ್ರೀಚೀ** ಇತ್ಯಾದಿಪದಗಳು ಒಂದೇ ಅರ್ಥವನ್ನು ಕೊಡುತ್ತವೆ.

**ಕವಯಃ**—ಈ ಪದಕ್ಕೆ ಇಲ್ಲಿ ಎರಡುವಿಧವಾದ ಅರ್ಥವನ್ನು ಮಾಡಿದ್ದಾರೆ, ಮೊದಲು, **ಯೇ ವಾ ಅನೂಚಾನಾಸ್ತೇ ಕವಯಃ ।**

ಎಂಬ ಶ್ರುತಿವಾಕ್ಯವನ್ನುದಹರಿಸಿ ವೇದಾಂಗಸಹಿತವಾದ ವೇದಾಭ್ಯಾಸವನ್ನು ಮಾಡಿದ ಶಾಸ್ತ್ರಜ್ಞರೆಂದು ಒಂದು ವಿಧವಾಗಿಯೂ, ಎರಡನೆಯದಾಗಿ **ಕವಿಃ, ಮನೀಷೀ** (ನಿ. ೩-೧೫) ಎಂಬ ನಿರುಕ್ತದ ವಾಕ್ಯವನ್ನುದಹರಿಸಿ ಮೇಧಾವಿಯೆಂದು ಇನ್ನೊಂದು ವಿಧವಾಗಿಯೂ ಅರ್ಥಮಾಡಿದ್ದಾರೆ. **ಮೇಧಾವೀ ಕವಿಃ ಕ್ರಾಂತದರ್ಶನೋ ಭವತಿ ಕವತೇರ್ವಾ** (ನಿ. ೧೨-೧೩) ಸ್ಫೂರ್ತಿಯನ್ನುಂಟುಮಾಡತಕ್ಕ ದರ್ಶನವಿರುವುದರಿಂದಾಗಲಿ ಅಥವಾ ಸ್ತುತಿಕಾರನಾದುದರಿಂದಾಗಲಿ ಈ ಹೆಸರು ಪ್ರಸಿದ್ಧವಾಗಿದೆಯೆಂದು ನಿರುಕ್ತಕಾರರು ಈ ಪದವನ್ನು ವಿವರಿಸಿದ್ದಾರೆ.

**ರೇಭಃ—ರೇಭಃ, ಜರಿತಾ** (ನಿ. ೩-೧೬) ಈ ಪದಗಳು ಸ್ತೋತೃನಾಮಗಳಲ್ಲಿ ಪಠಿತವಾಗಿವೆ.

### ವ್ಯಾಕರಣಪ್ರಕ್ರಿಯಾ

**ಅಗಾತ್**—ಇಣ್ ಗತೌ ಧಾತು. ಛಾಂದಸವಾಗಿ ವರ್ತಮಾನಾರ್ಥದಲ್ಲಿ ಲುಙ್. ಇಣೋ ಗಾ ಲುಙಿ (ಪಾ. ಸೂ. ೨-೪-೪೫) ಎಂಬುದರಿಂದ ಧಾತುವಿಗೆ ಗಾದೇಶ. ತಿಙಂತನಿಘಾತಸ್ವರ ಬರುತ್ತದೆ.

**ಶಸನಮ್**—**ಕರಣಾಧಿಕರಣಯೋಶ್ಚ** (ಪಾ. ಸೂ. ೩-೩-೧೧೭) ಎಂಬುದರಿಂದ ಅಧಿಕರಣಾರ್ಥದಲ್ಲಿ ಲ್ಯುಟ್ ಪ್ರತ್ಯಯ. **ಯುವೋರನಾಕೌ** (ಪಾ. ಸೂ. ೭-೧-೧) ಎಂಬುದರಿಂದ ಅದಕ್ಕೆ ಅನಾದೇಶ. **ಲಿತಿ** (ಪಾ ಸೂ ೬-೧-೧೯೩) ಎಂಬುದರಿಂದ ಪ್ರತ್ಯಯದ ಪೂರ್ವಕ್ಕೆ ಉದಾತ್ತಸ್ವರ ಬರುತ್ತದೆ.

**ದೇವದ್ರೀಚಾ**—ದೇವಾನ್ ಅಂಚತಿ ಇತಿ ದೇವದ್ರ್ಯಙ್. ದೇವಶಬ್ದಕ್ಕೆ ಅ ಪ್ರತ್ಯಯಾಂತವಾದ ಅಂಚು ಧಾತುವು ಪರದಲ್ಲಿರುವಾಗ **ವಿಷ್ವಗ್ದೇವಯೋಶ್ಚ**—(ಪಾ. ಸೂ. ೬-೩-೯೨) ಎಂಬುದರಿಂದ ದೇವಶಬ್ದದ ಟಿಗೆ ಅದ್ರಿ ಎಂಬ ಆದೇಶ ಬರುತ್ತದೆ. ತೃತೀಯಾಏಕವಚನ ಪರವಾದಾಗ **ಅಚಃ** ಎಂಬ ಸೂತ್ರದಿಂದ ಅಂಚುಧಾತುವಿನ ಅಕಾರಕ್ಕೆ ಲೋಪ **ಚೌ** ಎಂಬ ಸೂತ್ರದಿಂದ ಪೂರ್ವಕ್ಕೆ ದೀರ್ಘ. ಕೃದುತ್ತರಪದಪ್ರಕೃತಿಸ್ವರಕ್ಕೆ ಅಪವಾದವಾಗಿ ಅದಿ- **ಸಧ್ರ್ಯೋರಂತೋದಾತ್ತನಿಪಾತನಂ ಕೃತ್‌ಸ್ವರನಿವೃತ್ತ್ಯರ್ಥಮ್** (ಪಾ. ಸೂ. ೬-೩-೯೫-೧)) ಎಂಬ ವಚನದಿಂದ ಅದ್ರ್ಯಾದೇಶವು ಅಂತೋದಾತ್ತವಾಗುವುದರಿಂದ ಈಕಾರವು ಉದಾತ್ತವಾಗುತ್ತದೆ.

**ದೀಧ್ಯಾನಃ**—ದಿಧೀಙ್ ದೀಪ್ತಿದೇವನಯೋಃ ಧಾತು. ಅದಾದಿ. ಲಡರ್ಥದಲ್ಲಿ ಶಾನಚ್ ಪ್ರತ್ಯಯ. **ತಾಸ್ಯನುದಾತ್ತೇತ್**-(ಪಾ. ಸೂ. ೬-೧-೧೮೬) ಸೂತ್ರದಿಂದ ಲಸಾರ್ವಧಾತುಕವು ಅನುದಾತ್ತವಾಗುವುದರಿಂದ ಧಾತುಸ್ವರ ಉಳಿಯುತ್ತದೆ

**ನೀಯತೇ**—ಣೀಞ್ ಪ್ರಾಪಣೇ ಧಾತು. ಕರ್ಮಣಿಯಲ್ಲಿ ಲಟ್. ಪ್ರಥಮಪುರುಷಏಕವಚನಾಂತರೂಪ. ತಿಙಂತನಿಘಾತಸ್ವರ ಬರುತ್ತದೆ.

**ಯಂತಿ**—ಇಣ್ ಗತೌ ಧಾತು. ಲಟ್ ಪ್ರಥಮಪುರುಷಬಹುವಚನಾಂತರೂಪ. ತಿಙಂತನಿಘಾತಸ್ವರ ಬರುತ್ತದೆ.

**ರೇಭಾ**—ರೇಭೃ ಶಬ್ದೇ ಧಾತು. **ನಂದಿಗ್ರಹಿಪಚಾದಿಭ್ಯಃ**—(ಪಾ. ಸೂ. ೩-೧-೧೩೪) ಎಂಬುದರಿಂದ ಕರ್ತರಿಯಲ್ಲಿ ಅಚ್ ಪ್ರತ್ಯಯ. **ಚಿತಃ** (ಪಾ. ಸೂ. ೬-೧-೧೬೩) ಎಂಬುದರಿಂದ ಅಂತೋದಾತ್ತಸ್ವರ ಬರುತ್ತದೆ.

**ಸಂಹಿತಾಪಾಠಃ**

**ಉಪ ಪ್ರಾಗಾತ್ಪರಮಂ ಯತ್ಸಧಸ್ಥಮರ್ವಾ ಅಚ್ಛಾ ಪಿತರಂ ಮಾತರಂ ಚ।**
**ಅದ್ಯಾ ದೇವಾಞ್ಜುಷ್ಟತಮೋ ಹಿ ಗಮ್ಯಾ ಅಥಾ ಶಾಸ್ತೇ ದಾಶುಷೇ**
**ವಾರ್ಯಾಣಿ ॥ ೧೩ ॥**

### ಪದಪಾಠಃ

ಉಪ । ಪ್ರ । ಅಗಾತ್ । ಪರಮಂ । ಯತ್ । ಸಧಽಸ್ಥಂ । ಅರ್ವಾನ್ । ಅಚ್ಛ । ಪಿತರಂ । ಮಾತರಂ । ಚ ।
ಅದ್ಯ । ದೇವಾನ್ । ಜುಷ್ಟಽತಮಃ । ಹಿ । ಗಮ್ಯಾಃ । ಅಥ । ಆ । ಶಾಸ್ತೇ । ದಾಶುಷೇ । ವಾರ್ಯಾಣಿ ।
॥ ೧೩ ॥

### ಸಾಯಣಭಾಷ್ಯಂ

ಅರ್ವಾಗಮನಕುಶಲೋಽಯಮಶ್ವ ಉಪ ಪ್ರಾಗಾತ್ । ಉಪಗಚ್ಛತಿ । ಕಿಂ । ಯತ್ಪರಮಮುತ್ಕೃಷ್ಟಂ ಸಧಸ್ಥಂ ಸಹಸ್ಥಾನಂ ಸುಕೃತಿಭಿರೇಕತ್ರನಿವಾಸಯೋಗ್ಯಂ ಸ್ವರ್ಗಾಖ್ಯಂ ಯದಸ್ತಿ ತತ್ । ಕಿಮರ್ಥಂ । ಪಿತರಂ ಮಾತರಂ ಚಾಚ್ಛಾಭಿಮುಖ್ಯೇನ ಪ್ರಾಪ್ತುಂ । ಹೇ ಅಶ್ವ ಅದ್ಯಾಸ್ಮಿನ್ಕಾಲೇ ಜುಷ್ಟತಮಃ ಪ್ರೀತತಮಃ । ಸ್ವರ್ಗಂ ಪ್ರಾಪ್ಸ್ಯೋಮೀತಿ ಹರ್ಷಯುಕ್ತ ಇತ್ಯರ್ಥಃ । ಏವಂಭೂತೋ ದೇವಾನ್ ಗಮ್ಯಾಃ । ಗಚ್ಛೇರ್ದೇವಾನ್ । ಹಿಶಬ್ದೋ ಯಜ್ಞ ಉಪಯುಕ್ತಸ್ಯ ಪಶೋಃ ಸ್ವರ್ಗಪ್ರಾಪ್ತೇಃ ಸಗರ್ಭ್ಯೇನು ಸಖಾ ಸಯೂಥ್ಯಃ । ತೈ. ಸಂ ೧-೨-೪-೨ । ಇತ್ಯಾದಿಮಂತ್ರಾಂತರಪ್ರಸಿದ್ಧಿದ್ಯೋತನಾರ್ಥಃ । ಅಥಾನಂತರಂ ಯಜಮಾನ ಆ ಶಾಸ್ತೇ । ಕಸ್ಮೈ । ದಾಶುಷೇ ಹವಿರ್ದತ್ತವತೇ ಸ್ವಸ್ಮೈ । ಕಾನಿ । ವಾರ್ಯಾಣಿ ವರಣೀಯಾನಿ ಧನಾನಿ । ಯದ್ವಾ ॥ ಪುರುಷಸ್ಯ ವ್ಯತ್ಯಯಃ ॥ ಆ ಶಾಸ್ತೇ ಪ್ರಾರ್ಥಯೇ ಯಜಮಾನಾರ್ಥಂ ॥

### ಪ್ರತಿಪದಾರ್ಥ

**ಅರ್ವಾನ್**—ಈ ಅಶ್ವವು । **ಪಿತರಂ**—ಪಿತೃವಾದ ದ್ಯುಲೋಕವನ್ನೂ । **ಮಾತರಂ**—ಮಾತೃವಾದ ಪೃಥ್ವಿಯನ್ನೂ । **ಅಚ್ಛ**—ಅಭಿಮುಖವಾಗಿ ಹೋಗಿ ಸೇರಲು । **ಯತ್**—ಯಾವುದು । **ಪರಮಂ**—ಉತ್ಕೃಷ್ಟವಾದುದೂ । **ಸಧಸ್ಥಂ**—ಸುಕೃತಿಗಳೆಲ್ಲರೂ ಒಟ್ಟಿಗೆ ಸೇರುವುದೂ ಆಗಿರುವುದೋ ಅಂತಹ ಸ್ವರ್ಗಸ್ಥಾನವನ್ನು । **ಉಪ ಪ್ರಾಗಾತ್**—ಸಮೀಪಿಸುತ್ತದೆ । (**ಅಶ್ವ**—ಎಲೈ ಅಶ್ವವೇ) । **ಅದ್ಯ**—ಈಗ । **ಜುಷ್ಟತಮಃ**—(ಸ್ವರ್ಗವನ್ನು ಸೇರುತ್ತೇನೆಂದು) ಅತ್ಯಂತ ಹರ್ಷಯುಕ್ತನಾಗಿ । **ದೇವಾನ್**—ದೇವತೆಗಳನ್ನುದ್ದೇಶಿಸಿ । **ಗಮ್ಯಾ (ಹಿ)**—ಹೋಗತಕ್ಕದ್ದು । **ಅಥ**—ಅನಂತರ । **ದಾಶುಷೇ**—ಯಜಮಾನನಿಗೆ । **ವಾರ್ಯಾಣಿ**—ಅಪೇಕ್ಷಿತಗಳಾದ ವಸ್ತುಗಳನ್ನು । **ಆ ಶಾಸ್ತೇ**—ಪ್ರಾರ್ಥಿಸುತ್ತೇನೆ.

### ಭಾವಾರ್ಥ

ಈ ಮೇಧ್ಯಾಶ್ವವು ಪಿತೃವಾದ ದ್ಯುಲೋಕವನ್ನೂ ಮಾತೃವಾದ ಪೃಥ್ವಿಯನ್ನೂ ಅಭಿಮುಖವಾಗಿ ಹೋಗಿ ಸೇರಲು ಉತ್ಕೃಷ್ಟವಾದುದೂ, ಸುಕೃತಿಗಳೆಲ್ಲರೂ ಒಟ್ಟಿಗೆಹೋಗಿ ಸೇರತಕ್ಕದ್ದೂ ಆದ ಸ್ವರ್ಗಸ್ಥಾನವನ್ನು ಸಮೀಪಿಸುತ್ತದೆ. ಎಲೈ ಅಶ್ವವೇ, ನೀನು ಈಗ ಸ್ವರ್ಗವನ್ನು ಸೇರುತ್ತೇನೆಂದು ಅತ್ಯಂತ ಹರ್ಷಯುಕ್ತನಾಗಿ ದೇವತೆಗಳನ್ನುದ್ದೇಶಿಸಿ ಹೋಗತಕ್ಕದ್ದು. ಅನಂತರ ಯಜಮಾನನಿಗೆ ಅಪೇಕ್ಷಿತಗಳಾದ ವಸ್ತುಗಳನ್ನು ಪ್ರಾರ್ಥಿಸುತ್ತೇನೆ.

## English Translation

The horse proceeds to that assembly which is most excellent: to the presence of his father and his mother, (heaven and earth). Go, (Horse), to-day rejoicing to the gods, that (the sacrifice) may yield blessings to the donor.

### ವಿಶೇಷವಿಷಯಗಳು

**ಸಧಸ್ಥಂ—ಸಹಸ್ಥಾನಂ ಸುಕೃತಿಭಿರೇಕತ್ರ ನಿವಾಸಯೋಗ್ಯಂ ಸ್ವರ್ಗಾಖ್ಯಂ ಯದಸ್ತಿ ತತ್ ।** ಯಜ್ಞಯಾಗಾದಿ ಸತ್ಕರ್ಮಗಳನ್ನು ಮಾಡಿರತಕ್ಕವರೆಲ್ಲರೂ ಒಟ್ಟಿಗೆ ಸೇರತಕ್ಕ ಸ್ವರ್ಗವೆಂಬ ಸ್ಥಾನವೆಂದು ಸಾಯಣರು ವಿವರಿಸಿದ್ದಾರೆ. ಕೆಲವು ಸಂದರ್ಭಗಳಲ್ಲಿ ಈ ಪದವು ಅಂತರಿಕ್ಷಪರ್ಯಾಯವಾಗಿಯೂ ಇರುತ್ತದೆ. ಋತ್ವಿಕ್ಕುಗಳೆಲ್ಲರೂ ಒಟ್ಟುಗೂಡಿ ಸೇರುವ ವೇದಾದಿರೂಪವಾದ ಸ್ಥಾನಕ್ಕೆ ಸಧಸ್ಥವೆಂದು ಹೇಳುವ ರೂಢಿಯಿದೆ ನಿರುಕ್ತಕಾರರು. (ನಿ. ೩-೧೩)

**ಕುಹ ಸ್ವಿದ್ದೋಷಾ ಕುಹ ವಸ್ತೋರಶ್ವಿನಾ ಕುಹಾಭಿಪಿತ್ವಂ ಕರತಃ ಕುಹೋಷತುಃ ।**
**ಕೋ ವಾಂ ಶಯುತ್ರಾ ವಿಧವೇವ ದೇವರಂ ಮರ್ಯಂ ನ ಯೋಷಾ ಕೃಣುತೇ ಸಧಸ್ಥ ಆ ॥**
**(ಋ. ಸಂ. ೧೦-೪೦-೨)**

ಎಂಬ ಋಕ್ಕನ್ನುದಹರಿಸಿ ಅಲ್ಲಿ ಸಧಸ್ಥಶಬ್ದಕ್ಕೆ ಸಹಸ್ಥಾನವೆಂದರ್ಥ ಮಾಡಿದ್ದಾರೆ. ಉದಹರಿಸಿರುವ ಋಕ್ಕಿನಲ್ಲಿರುವ ಪದಕ್ಕೆ ವೇದಿರೂಪವಾದ ಸಧಸ್ಥವೆಂದು ಸಾಯಣರೂ ಸಾಧಾರಣವಾಗಿ ಎಲ್ಲರೂ ಒಟ್ಟಿಗೆ ವಾಸಿಸುವ ಗೃಹರೂಪವಾದ ವಾಸಸ್ಥಾನವೆಂದು ನಿರುಕ್ತಕಾರರೂ ಅಭಿಪ್ರಾಯಪಟ್ಟಿದ್ದಾರೆ. ಪ್ರಕೃತವಾದ ಋಕ್ಕಿನಲ್ಲಿ ಸಾಯಣರ ವಿವರಣೆಯು ಸಂದರ್ಭಕ್ಕೆ ಉಚಿತವಾಗಿರುತ್ತದೆ. ಮೇಧ್ಯಾಶ್ವವೂ ಸಹ ಸತ್ಕರ್ಮದಲ್ಲಿ ಭಾಗವನ್ನು ವಹಿಸುವುದರಿಂದ ಸುಕೃತಿಗಳು ಹೋಗತಕ್ಕ ಸ್ವರ್ಗವನ್ನು ಸೇರುತ್ತದೆಂಬುದು ಸರಿಯಾಗಿರುತ್ತದೆ.

**ಪಿತರಂ ಮಾತರಂ ಚ—** ಈ ಅಶ್ವಕ್ಕೆ ಪಿತೃವಾರು, ಮಾತೃವಾರು ಎಂಬುದನ್ನು ಸಾಯಣರು ಭಾಷ್ಯದಲ್ಲಿ ತಿಳಿಸಿಲ್ಲ. ಆದರೆ ಶತಪಥ ಬ್ರಾಹ್ಮಣದಲ್ಲಿ ಇದನ್ನು ವಿಶದವಾಗಿ ತಿಳಿಸಿದೆ.

**ವಿಭೂರ್ಮಾತ್ರಾ ಪ್ರಭೂಃ ಪಿತ್ರೇತಿ । ಇಯಂ ವೈ ಮಾತಾಸೌ ಪಿತಾಭ್ಯಾಮೇವೈನಂ ಪರಿದದಾತ್ಯಶ್ವೋಽಸಿ ಹಯೋಽಸೀತಿ ಶಾಸ್ತ್ಯೇವೈನಂ ತತ್ತಸ್ಮಾಚ್ಛಿಷ್ಟಾಃ ಪ್ರಜಾ ಜಾಯಂತೇಽತ್ಯೋಽಸಿ ।**
**(ಶ. ಬ್ರಾ. ೧೩-೧-೬ ೧)**

ಮಾತೃವಿನಿಂದ ವಿಭುರೂಪವನ್ನೂ, ಪಿತೃವಿನಿಂದ ಪ್ರಭುಶಕ್ತಿಯನ್ನೂ ಪಡೆದಿರುವ ಈ ಅಶ್ವಕ್ಕೆ ಪೃಥ್ವಿಯು ಮಾತೆಯೆಂದೂ ಮತ್ತು ದ್ಯುಲೋಕವು ಪಿತೃವೆಂದೂ ಹೇಳಿದೆ ಆ ಆಧಾರದಮೇಲೆ ಇಲ್ಲಿಯೂ ಸಹ **ಪಿತರಂ, ಮಾತರಂ** ಎಂಬುದಕ್ಕೆ ದ್ಯಾವಾಪೃಥಿಗಳೆಂದು ಅರ್ಥವನ್ನು ಮಾಡಬಹುದು.

**ದೇವಾನ್ ಗಮ್ಯಾ ಹಿ** ಎನ್ನುವಾಗ ಹಿ ಶಬ್ದದ ಆವಶ್ಯಕತೆಯನ್ನು ವಿವರಿಸುತ್ತಾ **ಹಿ ಶಬ್ದೋ ಯಜ್ಞೇ ಉಪಯುಕ್ತಸ್ಯ ಪಶೋಃ ಸ್ವರ್ಗಪ್ರಾಪ್ತೇಃ “ ಸಗಭ್ಯೋಽನು ಸಖಾ ಸಯೂಥ್ಯಃ (ತೈ. ಸಂ. ೮-೨-೪-೨) ”**

ಇತ್ಯಾದಿ ಮಂತ್ರಾಂತರಪ್ರಸಿದ್ಧಿದ್ಯೋತನಾರ್ಥಃ । ಎಂಬ ತೈತ್ತಿರೀಯಸಂಹಿತಾವಾಕ್ಯವನ್ನುದಹರಿಸಿ ದೇವತೆಗಳನ್ನು ಸಮೀಪಿಸಿ ಅವರ ಸಾನ್ನಿಧ್ಯವನ್ನು ಪಡೆಯುವದರಲ್ಲಿ ಸಂಶಯವಿಲ್ಲವೆಂದು ತೋರಿಸಿದೆಯೆಂದು ತಿಳಿಸಿದ್ದಾರೆ

### ವ್ಯಾಕರಣಪ್ರಕ್ರಿಯಾ

**ಸಧಸ್ಥಮ್**—ಸಹ ಸ್ಥಾನಂ ಸಧಸ್ಥಮ್. ಷ್ಠಾ ಗತಿನಿವೃತ್ತೌ ಧಾತು. **ಸುಪಿಸ್ಥಃ** ಎಂಬುದರಿಂದ ಕ ಪ್ರತ್ಯಯ. **ಆತೋ ಲೋಪ ಇಟಿ ಚ** (ಪಾ. ಸೂ. ೬-೪-೬೪) ಎಂಬುದರಿಂದ ಧಾತುವಿನ ಆಕಾರಕ್ಕೆ ಲೋಪ. **ಸಧಮಾದಸ್ಥಯೋಶ್ಛಂದಸಿ** (ಪಾ. ಸೂ. ೬-೩-೯೬) ಎಂಬುದರಿಂದ ಸಹ ಎಂಬುದಕ್ಕೆ ಸಧಾದೇಶ.

**ಅದ್ಯ, ಅಚ್ಛ, ಅಥ**—**ನಿಪಾತಸ್ಯ ಚ** ಎಂಬುದರಿಂದ ಇವುಗಳಿಗೆ ಸಂಹಿತಾವಲ್ಲಿ ದೀರ್ಘ ಬರುತ್ತದೆ.

**ಜುಷ್ಟತಮಃ**—ಜುಷೀ ಪ್ರೀತಿಸೇವನಯೋಃ ಧಾತು. ಕ್ತ ಪ್ರತ್ಯಯ. **ಅತಿಶಾಯನೇ ತಮಬಿಷ್ಠನೌ** ಎಂಬುದರಿಂದ ಇದರಮೇಲೆ ತಮಪ್ ಪ್ರತ್ಯಯ. ಇದು ಪಿತ್ತಾದುದರಿಂದ ಅನುದಾತ್ತವಾಗುತ್ತದೆ.

**ಗಮ್ಯಾಃ**—ಗಮ್ಲೃ ಗತೌ ಧಾತು. ಲಿಙ್ ಮಧ್ಯಮಪುರುಷಏಕವಚನದಲ್ಲಿ ಸಿಪ್. **ಇತಶ್ಚ** ಸೂತ್ರದಿಂದ ಇಕಾರ ಲೋಪ. **ಯಾಸುಟ್ ಪರಸ್ಮೈ**-(ಪಾ. ಸೂ. ೩-೪-೧೦೩) ಎಂಬುದರಿಂದ ಲಿಙಿಗೆ ಯಾಸುಟಾಗಮ. **ಬಹುಲಂ ಛಂದಸಿ** ಎಂಬುದರಿಂದ ವಿಕರಣಕ್ಕೆ ಲೋಪ. **ಹಿಚ** (ಪಾ. ಸೂ. ೮-೧-೩೪) ಎಂಬುದರಿಂದ ನಿಘಾತ ಸ್ವರಪ್ರತಿಷೇಧ ಬರುವುದರಿಂದ ಯಾಸುಟಾಗಮ ಉದಾತ್ತವೆಂದುದರಿಂದ ಆಕಾರ ಉದಾತ್ತವಾಗುತ್ತದೆ.

**ಶಾಸ್ತೇ**—ಶಾಸು ಅನುಶಿಷ್ಟೌ ಧಾತು. ಅದಾದಿ. **ಲಟ್** ಪ್ರಥಮಪುರುಷಏಕವಚನಾಂತರೂಪ. ಎರಡನೇ ವ್ಯಾಖ್ಯಾನದಲ್ಲಿ ವ್ಯತ್ಯಯದಿಂದ ಉತ್ತಮಪುರುಷಏಕವಚನಪ್ರತ್ಯಯ ಬಂದಿದೆ. ಅತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

**ದಾಶುಷೇ**—ದಾಶೃ ದಾನೇ ಧಾತು. **ದಾಶ್ವಾನ್ ಸಾಹ್ವಾನ್**-(ಪಾ. ಸೂ. ೬-೧-೧೨) ಎಂಬುದರಿಂದ ಕ್ವಸುಪ್ರತ್ಯಯಾಂತವಾಗಿ ನಿಪಾತಿತವಾಗಿದೆ. ಚತುರ್ಥೀಏಕವಚನಪರ್ವವಾದಾಗ **ವಸೋಃ ಸಂಪ್ರಸಾರಣಮ್** ಎಂಬುದರಿಂದ ಸಂಪ್ರಸಾರಣ. ಪೂರ್ವರೂಪ. **ಶಾಸಿವಸಿಘಸೀನಾಂ ಚ** (ಪಾ. ಸೂ. ೮-೩-೬೦) ಎಂಬುದರಿಂದ ಷತ್ವ. ಪ್ರತ್ಯಯಸ್ವರ ಬರುತ್ತದೆ.

ಇಲ್ಲಿಗೆ ೧೬೩ನೇ ಸೂಕ್ತವು ಮುಗಿದುದು.

—:O:—

## ೧೬೨ ಮತ್ತು ೧೬೩ ನೇ ಸೂಕ್ತಗಳ ಉಪಸಂಹಾರ

### ಅಶ್ವಮೇಧಯಾಗದ ಸ್ವರೂಪವಿವರಣೆ

ಅಶ್ವಮೇಧವು ರಾಷ್ಟ್ರೀಯವಾದ ಯಜ್ಞವೆಂದೂ, ಕೇವಲ ಸಾರ್ವಭೌಮನಾಗಿರತಕ್ಕವನು ಮಾತ್ರ ಅದನ್ನು ನಿರ್ವಹಿಸಲು ಸಾಧ್ಯವೆಂದೂ ಇತರ ಸಾಧಾರಣವಾದ ರಾಜರಿಂದ ಅದು ಅಸಾಧ್ಯವಾದುದೆಂದೂ ಬ್ರಾಹ್ಮಣಾದಿಗಳಲ್ಲಿ

ಉಕ್ತವಾಗಿರುವ ವಿಷಯವನ್ನು ಹಿಂದೆ ತಿಳಿಸಿದೆ. ಆದರ ಮಹಿಮೆಯ ವಿಷಯದಲ್ಲಿ ಎಲ್ಲಾ ಶ್ರುತಿವಾಕ್ಯಗಳೂ ಒಂದೇ ಅಭಿಪ್ರಾಯವನ್ನು ಕೊಟ್ಟರೂ ಸಹ ಅದರ ನಿರ್ವಹಣಕ್ರಮದಲ್ಲಿ ಒಂದೊಂದು ಶಾಖೆಯಲ್ಲಿ ಒಂದೊಂದು ವಿಧವಾಗಿ ತಿಳಿಸಿದೆ.

ತೈತ್ತಿರೀಯಸಂಹಿತಾ ಮತ್ತು ಬ್ರಾಹ್ಮಣ, ವಾಜಸನೇಯ ಸಂಹಿತಾ ಮತ್ತು ಶತಪಥಬ್ರಾಹ್ಮಣ ಇವುಗಳಲ್ಲಿ ಅಶ್ವಮೇಧದ ವಿಷಯವನ್ನು ವಿಸ್ತೃತವಾಗಿ ತಿಳಿಸಿದೆ. ಐತರೇಯಬ್ರಾಹ್ಮಣದಲ್ಲೂ ಕೌಷೀತಕೀ ಬ್ರಾಹ್ಮಣದಲ್ಲೂ ಸಹ ಅಧಿಕವಾದ ಪ್ರಾಶಸ್ತ್ಯವನ್ನು ಹೇಳಿಲ್ಲ. ಪಂಚವಿಂಶಬ್ರಾಹ್ಮಣದಲ್ಲೂ ಇದರ ಮಹತ್ತ್ವವನ್ನು ಸ್ತುತಿಸಿದೆ. ಈ ಕರ್ಮವನ್ನು ನೆರವೇರಿಸುವ ಕ್ರಮವನ್ನು ಆಯಾಯ ಶಾಖಾನುವರ್ತಿಗಳಾದ ಶ್ರೌತಸೂತ್ರಗಳಲ್ಲಿ ವಿಶದವಾಗಿ ವಿವರಿಸಿದೆ. ಇಲ್ಲಿ ಮುಖ್ಯವಾಗಿ ಆಪಸ್ತಂಬ, ಕಾತ್ಯಾಯನ ಮತ್ತು ಶಾಂಖಾಯನ ಇವರುಗಳ ಶ್ರೌತಸೂತ್ರಗಳಲ್ಲಿ ವಿವರಿಸಿರುವ ವಿಧಿಗಳನ್ನೂ ಕೆಲವು ಮುಖ್ಯವಾದ ಸನ್ನಿವೇಶಗಳಲ್ಲಿ ಪರಸ್ಪರ ಇರತಕ್ಕ ವ್ಯತ್ಯಾಸಗಳನ್ನೂ ತಿಳಿಸಿ ಅನಂತರ ಪ್ರಕೃತವಾದ ಋಗ್ವೇದಸೂಕ್ತಗಳಲ್ಲಿರುವ ಅಶ್ವಮೇಧದ ವರ್ಣನೆಗೂ ಶತಪಥಾದಿಗಳಲ್ಲಿರುವ ವರ್ಣನೆಗೂ ಇರುವ ಸಾದೃಶ್ಯವನ್ನೂ ವ್ಯತ್ಯಾಸವನ್ನೂ ವಿವರಿಸಲಾಗುತ್ತದೆ.

ಅಶ್ವಮೇಧ ವಿಧಿಯು ಆಪಸ್ತಂಬಶ್ರೌತಸೂತ್ರದ ೨೦ನೇ ಪ್ರಶ್ನದಲ್ಲಿ ವಿವರಿಸಲ್ಪಟ್ಟಿದೆ. ಸೂತ್ರಕಾರರು ತೈತ್ತಿರೀಯಬ್ರಾಹ್ಮಣದ ವಾಕ್ಯವನ್ನುದಹರಿಸಿ ಮೊದಲು ಈ ಯಜ್ಞವನ್ನು ಸಾರ್ವಭೌಮನು ಮಾತ್ರ ನೆರವೇರಿಸಬೇಕೆಂದು ತಿಳಿಸಿ ಅನಂತರ ಸಾಧಾರಣವಾದ ರಾಜನೂ ಸಹ ಇದನ್ನು ಆಚರಿಸಬಹುದೆಂದು ಹೇಳಿದ್ದಾರೆ. (**ರಾಜಾ ಸಾರ್ವಭೌಮೋ ಅಶ್ವಮೇಧೇನ ಯಜೇತ। ಅಸಾರ್ವಭೌಮೋ ವಾ।** (ಆಪ.ಶ್ರೌ.ಸೂ. ೨೦-೫-೨). ಈ ಯಾಗವು ವೈಶಾಖಮಾಸದ ಪೂರ್ಣಿಮೆಯ ದಿನ ಆರಂಭಿಸಲ್ಪಡಬೇಕು. ಅದರ ಮುಂದಿನ ಅಮಾವಾಸ್ಯೆಯ ದಿನ **ಪ್ರಾಜಾಪತ್ಯ-ಋಷಭ** ಅಥವಾ ಯಜ್ಞದಿಂದ ಇದರ ಪ್ರಾರಂಭವಿಧಿಯನ್ನಾಚರಿಸಬೇಕು. ಋತ್ವಿಗಾದಿಗಳ ಯೋಗ್ಯತೆಯೂ, ಯಜ್ಞಕ್ಕಾಗಿ ಆರಿಸಲ್ಪಡಬೇಕಾದ ಅಶ್ವದ ವರ್ಣ ಮತ್ತು ಇತರ ಸ್ವರೂಪಗಳೂ ವರ್ಣಿತವಾಗಿವೆ. ವಿಜಯಯಾತ್ರೆಗೆ ಅಶ್ವವು ಸಿದ್ಧವಾದ ಕಾಲದಲ್ಲಿ ಅದರ ಕಿವಿಯ ಹತ್ತಿರ ಒಂದು ನಾಯಿಯನ್ನು ಆಹುತಿಯಾಗಿ ಬಲಿಕೊಡಬೇಕು. ಅನಂತರ ಅಧ್ವರ್ಯುವಿನೊಂದಿಗೆ ನೂರು ರಾಜ ಪುತ್ರರೂ, ಬ್ರಹ್ಮನೊಂದಿಗೆ ರಾಜರಲ್ಲದೇ ಇರತಕ್ಕ ನೂರುಮಂದಿ ಉಗ್ರರೂ (ರಾಜಭಿರುಗ್ರೈಃ), ಹೋತೃವಿನೊಂದಿಗೆ ನೂರುಮಂದಿ ಸೂತಗ್ರಾಮಣಿಗಳೂ, ಉದ್ಗಾತೃವಿನೊಂದಿಗೆ ನೂರು ಮಂದಿ ಕ್ಷತ್ತ್ರಿಸಂಗೃಹೀತೃಗಳೂ ಅಶ್ವದ ನಾಲ್ಕು ಭಾಗಗಳಲ್ಲೂ ರಕ್ಷಣೆಗಾಗಿ ಸಿದ್ಧರಾಗಿರಬೇಕು. ವಿಜಯಯಾತ್ರೆಗಾಗಿ ಹೊರಟ ಅಶ್ವವು ರಥಕಾರನ ಗೃಹದಲ್ಲಿಳಿಯಬೇಕು. ಈ ಯಾತ್ರಾಕಾಲವಾದ ಒಂದು ವರ್ಷದೊಳಗೆ ಯಜ್ಞಗೃಹದಲ್ಲಿ ವೀಣಾಗಾನದೊಡನೆಯೂ, ಹೋತೃವಿನಿಂದ ಪಠಿತವಾಗಬೇಕಾದ ಪಾರಿಪ್ಲವಮಂತ್ರಗಳೊಡನೆಯೂ, ಇತರ ದೀಕ್ಷಾ ಕಾರ್ಯಗಳು ನೆರವೇರಲ್ಪಡುತ್ತವೆ. ಅಶ್ವಕ್ಕೇನಾದರೂ ಮಾರ್ಗದಲ್ಲಿ ಅಪಾಯವಾದರೆ ಬೇರೆ ಅಶ್ವವನ್ನು ಸಂಪಾದಿಸಬೇಕು. ಶತ್ರುರಾಜರು ಇದನ್ನು ತಡೆದು ಅಟ್ಟಿಕೊಂಡು ಹೋದರೆ ಅಶ್ವಮೇಧವು ಹತವಾದಂತೆ. (**ಅಮಿತ್ರಾ ಅಶ್ವಂ ವಿಂದೇರನ್ ಹನ್ಯೇತಾಸ್ಯ ಯಜ್ಞಃ** (೨೦-೮-೧). ಅದು ಹಿಂತಿರುಗಿದನಂತರ ವರ್ಷದ ಅಂತ್ಯದ ಅಮಾವಾಸ್ಯೆಯ ದಿನ ಅನೇಕ ಪ್ರಾಣಿಗಳ ಬಲಿಗಳನ್ನೊಳಗೊಂಡ **ಉಖಾ**ನಾಮಕವಾದ ಕರ್ಮವು ನೆರವೇರಿಸಲ್ಪಡುತ್ತದೆ. ಪೀಠಿಕಾರೂಪವಾದ ಕರ್ಮಗಳೆಲ್ಲಾ ನೆರವೇರಿದನಂತರ ರಾಜಮಹಿಷಿಯರಿಂದ ಅಲಂಕೃತವಾದ ಅಶ್ವವು ತರಲ್ಪಡುತ್ತದೆ. **ಮಹಿಷೀ, ವಾವಾತಾ, ಪರಿವೃಕ್ತಾ** ಎಂಬುದು ಈ ಮಹಿಷಿಯರ ಹೆಸರುಗಳು. ಅಲಂಕಾರದ ಕಾಲದಲ್ಲಿ ಇವರು ನೂರು ರಾಜ

ಪುತ್ರಿಯರಿಂದಲೂ, ನೂರುಮಂದಿ ಉಗ್ರಪತ್ನಿಯರಿಂದಲೂ, ನೂರುಮಂದಿ ಸೂತಗ್ರಾಮಣಿಗಳ ಪತ್ನಿಯರಿಂದಲೂ ರಕ್ಷಿತರಾಗಿರುತ್ತಾರೆ. **ಮಹಿಷಿಯು** ಸುವರ್ಣದ ಆಭರಣಗಳಿಂದಲೂ, **ವಾವಾತೆಯು** ರಜತದ ಆಭರಣಗಳಿಂದಲೂ, **ಪರಿವೃಕ್ತೆಯು** ಪ್ರವಾಳಾದಿಗಳಿಂದಲೂ ಸಹ ಅಶ್ವವನ್ನು ಅಲಂಕರಿಸುತ್ತಾರೆ ಅನಂತರ ರಾಜನು ತನ್ನ ಬಿಲ್ಲುಬಾಣಗಳ ಸಹಿತವಾಗಿ ಅಶ್ವವನ್ನು ಜಲಪಾನಾರ್ಥವಾಗಿ ಸರಸ್ಸಿಗೆ ಕರೆದುಕೊಂಡು ಹೋಗುತ್ತಾನೆ. ನಿರ್ದಿಷ್ಟವಾದ ಮಂತ್ರಗಳನ್ನು ಪಠಿಸತಕ್ಕ ಕಾಲದಲ್ಲಿ ಅಶ್ವವು ಜಲಪಾನವನ್ನು ಮಾಡುತ್ತದೆ. ಅನಂತರ ಅಶ್ವವು ಯಜ್ಞಸ್ಥಾನಕ್ಕೆ ಕರೆತರಲ್ಪಟ್ಟು ತೂಪರ ಮತ್ತು ಗೋಮೃಗಗಳೊಂದಿಗೆ ವಧನಾಡಲ್ಪಡುತ್ತದೆ. ಅದರ ಕ್ರಮವು ಹೀಗಿದೆ.

**ವೇತಸಶಾಖಾಯಾಂ ತಾರ್ಪ್ಯಂ ಕೃತ್ತ್ಯಧೀವಾಸಂ ಹಿರಣ್ಯಕಶಿಪುಂ ಚಾಸ್ತೀರ್ಯ ಸೌವರ್ಣಂ ರುಕ್ಮಮುಪರಿಷ್ಟಾತ್ಕೃತ್ವಾ ತಸ್ಮಿನ್ನಶ್ವತೂಪರಗೋಮೃಗಾನ್ನಿಘ್ನಂತಿ । ಪ್ಲಕ್ಷಶಾಖಾಯಾಸ್ತ್ವಿತರಾನ್ಪಶೂನ್. (೨೦-೧೭-೮) ಶ್ಯಾಮುಲೇನ ಕ್ಷೌಮೇಣ ವಾಶ್ವಂ ಸಂಜ್ಞಪಯಂತಿ ॥ (೨೦-೧೭-೯).** ಇತ್ಯಾದಿಯಾಗಿ ಅಶ್ವ, ಗೋಮೃಗ, ತೂಪರ ಮತ್ತು ಇತರ ವಧ್ಯಮೃಗಗಳಿಗಾಗಿ ಸಿದ್ಧಪಡಿಸಬೇಕಾದ ಆಸನಗಳ ವರ್ಣನೆಯಿದೆ. ಈ ಸಂದರ್ಭದಲ್ಲಿ ಸೂತ್ರಕಾರರು ವಾಲ್ಮೀಕಿರಾಮಾಯಣದಲ್ಲಿ ವರ್ಣಿತವಾದ ದಶರಥನ ಅಶ್ವಮೇಧಯಾಗದ ವಿಧಿಯಂತೆ ಎಂದು ಕೌಸಲ್ಯೆಯು ಅಶ್ವವನ್ನು ವಧಿಸಿದ ಸಂದರ್ಭವನ್ನು ತಿಳಿಸುತ್ತಾರೆ.

**ಕೌಸಲ್ಯಾ ತಂ ಹಯಂ ತತ್ರ ಪರಿಚರ್ಯ ಸಮಂತತಃ ।**
**ಕೃಪಾಣೈರ್ವಿಶಶಾಸೈನಂ ತ್ರಿಭಿಃ ಪರಮಯಾ ಮುದಾ ॥**

**(ವಾಲ್ಮೀಕಿ ರಾಮಾಯಣ ೧-೨೪-೩೩)**

ಈ ಕಲಾಪಗಳೆಲ್ಲವೂ ಆದನಂತರ ಇನ್ನೂ ಅನೇಕ ಪ್ರಾಣಿಗಳ ಬಲಿಯೊಡನೆ ಅವಭೃಥವು ನೆರವೇರಲ್ಪಟ್ಟು ಯಜ್ಞವು ಸಮಾಪಿತವಾಗುತ್ತದೆ.

ಕಾತ್ಯಾಯನರ ಸೂತ್ರದಲ್ಲಿ ಶತಪಥಬ್ರಾಹ್ಮಣೋಕ್ತವಾದ ರೀತಿಯಲ್ಲಿ ಅಶ್ವಮೇಧದ ಕ್ರಮವು ಈ ರೀತಿಯಲ್ಲಿ ವಿವರಿಸಲ್ಪಟ್ಟಿದೆ. ಆಪಸ್ತಂಬದ ವಿವರಣೆಗೂ ಇದಕ್ಕೂ ಇರತಕ್ಕ ವ್ಯತ್ಯಾಸವನ್ನು ಮಾತ್ರ ಇಲ್ಲಿ ತಿಳಿಸಲಾಗುತ್ತದೆ. ಇದರ ಪ್ರಕಾರ ಅಶ್ವಮೇಧವು ಫಾಲ್ಗುಣಶುದ್ಧ ಅಷ್ಟಮೀ ಅಥವಾ ನವಮಿಯ ದಿನ ಆರಂಭವಾಗಬೇಕು. (ಎಂದರೆ ಪೂರ್ಣಿಮೆಗೆ ಸಪ್ತಹದ ಮೊದಲಿರಬೇಕು.) ಆಪಸ್ತಂಬದಲ್ಲಿ ಹೇಳಿರುವ **ಮಹಿಷೀ, ವಾವಾತಾ, ಪರಿವೃಕ್ತಾ** ಎಂಬ ರಾಜಪತ್ನಿಯರೊಂದಿಗೆ **ಪಾಲಾಗಲೀ** ಎಂಬ ನಾಲ್ಕನೆಯ ಹೆಸರೂ ಸೂಚಿತವಾಗಿದೆ. ವ್ಯಾಖ್ಯಾಕಾರರು ಇವಳನ್ನು ದೂತಪುತ್ರಿಯೆಂದು ಕರೆದಿದ್ದಾರೆ. (ಶ ಬ್ರಾ. ೧೩-೪-೧-೮) ಉಳಿದ ನಾಯಿಯ ಒಲಿಯೂ, ಅಶ್ವದ ರಕ್ಷಣೆಯೂ ಅಶ್ವದ ಯಾತ್ರಾವರ್ಣನವೂ, ಅಶ್ವದ ವರ್ಣದ ವಿವರಣೆಯೂ ಆಪಸ್ತಂಬರ ವಿವರಣೆಯಂತೆಯೇ ಇದೆ. ಅಶ್ವದ ಯಾತ್ರೆಯು ಮುಗಿದ ನಂತರ ಫಾಲ್ಗುಣಪೌರ್ಣಮಿಯ ದಿನ ಮುಖ್ಯಕರ್ಮವು ನೆರವೇರಿಸಲ್ಪಡುತ್ತದೆ. **ಹಿರಣ್ಯ-ವಾಸೋಽಧಿವಾಸೇಷ್ವಶ್ವಸಂಜ್ಞಪನಂ** ಎಂಬ ವರ್ಣನದಿಂದ ಬಲಿಯಾಗಿ ಅರ್ಪಿತವಾದ ಇತರ ಪ್ರಾಣಿಗಳಂತೆಯೇ ಅಶ್ವಕ್ಕೂ ಸಹ ಉಸಿರನ್ನು ಕಟ್ಟಿ ಸಾಯಿಸುತ್ತಾರೆಂದು ತಿಳಿಯುತ್ತದೆ. ಈ ಸಂದರ್ಭದಲ್ಲಿ ಋತ್ವಿಕ್ಕುಗಳಲ್ಲಿ ಬ್ರಹ್ಮೋದ್ಯವೆಂಬ ಸಂಭಾಷಣೆಯು ನಡೆಯುತ್ತದೆ. ಇಲ್ಲಿರುವ ಮುಖ್ಯ ವ್ಯತ್ಯಾಸವೇನೆಂದರೆ ಮುಖ್ಯ ಮಹಿಷಿಯರು ಅಶ್ವದ ಹನನಕ್ಕೆ ಸಹಾಯ ಮಾಡುವರೇ ಹೊರತು ತಾವೇ ವಧಮಾಡುವುದಿಲ್ಲ. ಅವರು ಗುರುತುಗಳನ್ನು ತೋರಿಸಿ ಕೊಟ್ಟನಂತರ ಅವರ **ಅನುಚರಿಯರು** ಅಶ್ವದ ಛೇದನವನ್ನು ಮಾಡುತ್ತಾರೆ

ಶಾಂಖಾಯನಶ್ರೌತಸೂತ್ರದಲ್ಲಿ (ಅಧ್ಯಾಯ ೧೬) ಇನ್ನೂ ಕೊಂಚ ವ್ಯತ್ಯಸ್ತವಾದ ವಿವರಣೆಯಿದೆ. ಅದರಂತೆ ಪ್ರಜಾಪತಿಯು ಅಶ್ವಮೇಧದ ಸ್ವರೂಪವನ್ನು ತನ್ನ ದಿವ್ಯದೃಷ್ಟಿಯಿಂದ ತಿಳಿದು ತನ್ನ ಇಷ್ಟಾರ್ಥಗಳನ್ನು ನೆರವೇರಿಸಿಕೊಳ್ಳುವುದಕ್ಕಾಗಿ ಅಶ್ವಮೇಧವನ್ನು ನೆರವೇರಿಸಿದನು. ಅದು ತ್ರಿರಾತ್ರಾತ್ಮಕವಾದುದು. ಅಲ್ಲದೆ ಅಶ್ವಮೇಧವನ್ನು ನೆರವೇರಿಸಿದ ಇತರ ಕೆಲವು ರಾಜರ ಹೆಸರೂ ನಿರ್ದಿಷ್ಟವಾಗಿದೆ. ಜನಮೇಜಯಪಾರೀಕ್ಷಿತನಿಗಾಗಿ ಇಂದ್ರೋತ ಶೌನಕನು ಈ ಯಾಗವನ್ನು ಮಾಡಿದನೆಂದೂ ಉಗ್ರಸೇನ, ಭೀಮಸೇನ ಮತ್ತು ಶತ್ರುಸೇನ ಈ ಮೂವರು ಸಹೋದರರೂ ಈ ಕಾಲದಲ್ಲಿ ಸಹಾಯಮಾಡಿದರೆಂದೂ ಹೇಳಿದೆ. ಈ ವರ್ಣನೆಗಳು ಕೆಲವು ವಿಷಯಗಳಲ್ಲಿ ಶತಪಥಬ್ರಾಹ್ಮಣವನ್ನು ಅನುಸರಿಸುತ್ತವೆಯೇ ವಿನಹ ಉಳಿದೆಡೆಗಳಲ್ಲಿ ಪ್ರಾಚೀನವಾದ ಸಂಪ್ರದಾಯಕ್ಕೆ ವಿರುದ್ಧವಾಗಿವೆ. ಮೇಧ್ಯಾಶ್ವದ ಜೊತೆಯಲ್ಲಿ ಬಲಿಗೆ ಸಿದ್ಧವಾಗಬೇಕಾದ ಪ್ರಾಣಿಗಳ ಪಟ್ಟಿಯು ತೈತ್ತಿರೀಯ ಸಂಹಿತಾದಿಗಳಲ್ಲಿ ಬಹಳವಾಗಿ ಹೇಳಲ್ಪಟ್ಟಿದೆ.

**ಇಂದ್ರಾಯ ರಾಜ್ಞೇ ಸೂಕರೋ, ವರುಣಾಯ ರಾಜ್ಞೇ ಕೃಷ್ಣೋ, ಯಮಾಯ ರಾಜ್ಞ ಋಶ್ಯ ಋಷಭಾಯ ರಾಜ್ಞೇ ಗವಯಃ .... .... .... ||**

(ತೈ. ಸಂ. ೫-೫-೧೧)

**ರೋಹಿತೋ ಧೂಮ್ರರೋಹಿತಃ ಕರ್ಕಂಧುರೋಹಿತೆಸ್ತೇ ಪ್ರಾಜಾಪತ್ಯಾ ಬಭ್ರುರರುಣಬಭ್ರುಶ್ಶುಕಬಭ್ರುಸ್ತೇ ರೌದ್ರಾಃ .... .... .... ||**

(ತೈ. ಸಂ. ೫-೬-೧೧)

ಇಂದ್ರನಿಗೆ ವರಾಹವು, ವರುಣನಿಗೆ ಕೃಷ್ಣಮೃಗವು ಇತ್ಯಾದಿಯಾಗಿ ಆಯಾ ದೇವತೆಗಳ ಸ್ವರೂಪಗಳನ್ನುದ್ದೇಶಿಸಿ ಅದಕ್ಕನುಗುಣವಾದ ಪ್ರಾಣಿಯು ಅರ್ಪಿತವಾಗಬೇಕೆಂಬ ದೊಡ್ಡ ಪಟ್ಟಿಯನ್ನು ಹೇಳಿದೆ. ಆದರೆ ಋಕ್ಸಂಹಿತೆಯಲ್ಲಿ—

**ಏಷ ಚ್ಛಾಗಃ ಪುರೋ ಅಶ್ವೇನ ವಾಜಿನಾ ಪೂಷ್ಣೋ ಭಾಗೋ ನೀಯತೇ ವಿಶ್ವದೇವ್ಯಃ |**

(ಋ. ಸಂ. ೧-೧೬೨-೩)

ಎಂದು ಕೇವಲ ಛಾಗವು ಮಾತ್ರ ಅಶ್ವದೊಂದಿಗೆ ಸಂಬಂಧಿಸಿದೆ. ಇದು ಪೂಷನನ್ನುದ್ದೇಶಿಸಿದ ಪಶುವೆಂದು ಹೇಳಿದೆ. ಮತ್ತು ಈ ಅಜವು ದೇವತೆಗಳಿಗೆ ಅಶ್ವಮೇಧವನ್ನು ಪ್ರಕಟಿಸುವುದಕ್ಕಾಗಿ ಅಶ್ವಕ್ಕಿಂತಲೂ ಮೊದಲು ಹೋಗುತ್ತದೆಂದು ವರ್ಣಿಸಿದೆ.

**ಆಗ್ನೇಯಂ ಕೃಷ್ಣಗ್ರೀವಂ ಪುರಸ್ತಾಲ್ಲಲಾಟೇ | ಪೂರ್ವಾಗ್ನಿಮೇವ ತಂ ಕುರುತೇ ||**

(ತೈ. ಬ್ರಾ. ೩-೮-೨೩-೧)

ಇತ್ಯಾದಿಯಾಗಿ ತೈತ್ತಿರೀಯಬ್ರಾಹ್ಮಣದಲ್ಲಿ ಇದು ಅಗ್ನಿದೇವತಾಕವಾದುದೆಂದೂ ಹೀಗೆಯೇ ಇತರ ಕಡೆಗಳಲ್ಲಿ ಇಂದ್ರಾಪೂಷರಿಗೆ ಸೇರಿದುದೆಂದೂ ತಿಳಿಸಿದೆ.

ಅಶ್ವಮೇಧದಿಂದ ಲಭಿಸತಕ್ಕ ಫಲವನ್ನು ಅನೇಕವಿಧಗಳಲ್ಲಿ ವರ್ಣಿಸಿದೆ. ಕ್ಷತ್ರಿಯನ ಮಹತ್ತ್ವವನ್ನು ಸಂಪಾದಿಸುವುದು ಮತ್ತು ಅದನ್ನು ಪ್ರಕಾಶಪಡಿಸುವುದು ಇದರ ಮುಖ್ಯವಾದ ಉದ್ದಿಶ್ಯವಾಗಿದೆ. ಯಜ್ಞಕಾಲದಲ್ಲಿ ಬ್ರಾಹ್ಮಣನ ವೀಣಾಗಾನವೂ ಇತರ ಸ್ತುತಿಗಳೂ ಸಹ ಕ್ಷತ್ರಿಯನ ಶೌರ್ಯವನ್ನು ಸ್ತುತಿಸುವುದೇ ಆಗಿದೆ.

ಜೀಮೂತಸ್ಯೇವ ಭವತಿ ಪ್ರತೀಕಂ ಯದ್ವರ್ಮೀ ಯಾತಿ ಸಮದಾಮುಪಸ್ಥೇ ।
ಅನಾವಿದ್ಧಯಾ ತನ್ವಾ ಜಯ ತ್ವಂ ಸ ತ್ವಾ ವರ್ಮಣೋ ಮಹಿಮಾ ಪಿಪರ್ತು ।

(ತೈ. ಸಂ. ೪-೬-೬)

ಇತ್ಯಾದಿಯಾಗಿ ಪ್ರಶಂಸಿಸಿ ಅಶ್ವವನ್ನು ಅಲಂಕರಿಸುವಾಗಲೂ ಸಹ ಕ್ಷಾತ್ರವೀರ್ಯದ ಮಹಿಮೆಯನ್ನೂ ಸ್ತುತಿಸಿ ಅಶ್ವವು ತನಗೂ, ತನ್ನ ಯಜಮಾನನಿಗೂ ಪೂರ್ಣವಾದ ಜಯವನ್ನು ಸಂಪಾದಿಸಬೇಕೆಂದು ಪ್ರಾರ್ಥಿಸಿದೆ ಈ ಯಜ್ಞವನ್ನು ಮಾಡುವುದರಿಂದ ಯಜಮಾನನು ಪಾಪರಹಿತನಾಗಿ ತನ್ನ ಪೂರ್ಣವಾದ ಸತ್ತ್ವವನ್ನು ಸಂಪಾದಿಸುವನೆಂದು ತಿಳಿಸಲು ಇದರ ಮೂಲರೂಪವನ್ನೇ ವರ್ಣಿಸಿದೆ.

ತದ್ದೇವಾ ಅಶ್ವಮೇಧೇನೈವ ಪ್ರತ್ಯದಧುರೇಷ ವೈ ಪ್ರಜಾಪತಿಗ್‌ಂ ಸರ್ವಂ ಕರೋತಿ ಯೋಽಶ್ವಮೇಧೇನ ಯಜತೇ ಸರ್ವ ಏವ ಭವತಿ ಸರ್ವಸ್ಯ ವಾ ಏಷಾ ಪ್ರಾಯಶ್ಚಿತ್ತಿಸ್ಸರ್ವಸ್ಯ ಭೇಷಜಗ್‌ಂ ಸರ್ವಂ ವಾ ಏತೇನ ಪಾಪ್ಮಾನಂ ದೇವಾ ಅತರನ್ನಪಿ ವಾ ಏತೇನ ಬ್ರಹ್ಮಹತ್ಯಾಮತರನ್ತ್ಸರ್ವಂ ಪಾಪ್ಮಾನಂ ತರತಿ ತರತಿ ಬ್ರಹ್ಮಹತ್ಯಾಂ ಯೋಽಶ್ವಮೇಧೇನ ಯಜತೇ ಯ ಉ ಚೈನಮೇವಂ ವೇದ ॥

(ತೈ. ಸಂ. ೫-೩-೧೨)

ಅಶ್ವಮೇಧವನ್ನು ಯಾವನು ನೆರವೇರಿಸುತ್ತಾನೋ ಅವನು ಪ್ರಜಾಪತಿಯನ್ನು ಪೂರ್ಣವಾಗಿ ಉದ್ದೇಶಿಸಿ ಯಜ್ಞ ಮಾಡುತ್ತಾನೆ. (ಇಲ್ಲಿ ಯಜ್ಞಾಶ್ವಕ್ಕೂ, ಯಜ್ಞಕ್ಕೂ ಮತ್ತು ಪ್ರಜಾಪತಿಗೂ ಒಟ್ಟಿಗೆ ತಾದಾತ್ಮ್ಯವನ್ನು ಹೇಳಿದೆ). ತಾನೂ ಪೂರ್ಣನಾಗುತ್ತಾನೆ. ಇದು ಸರ್ವವಿಧವಾದ ದೋಷಗಳಿಗೂ ಪ್ರಾಯಶ್ಚಿತ್ತರೂಪವಾಗಿರುತ್ತದೆ. ದೇವತೆಗಳು ಈ ಯಾಗವನ್ನು ನೆರವೇರಿಸಿ ಎಲ್ಲವನ್ನೂ ಜಯಿಸಿದರು. ಅವರು ಇದರಿಂದ ಬ್ರಹ್ಮಹತ್ಯೆಯ ದೋಷವನ್ನೂ ನಾಶ ಮಾಡಿಕೊಂಡರು- ಯಾವನು ಈ ತತ್ತ್ವವನ್ನು ತಿಳಿಯುತ್ತಾನೆಯೋ, ಮತ್ತು ಯಾವನು ಈ ಜ್ಞಾನದಿಂದ ಈ ಯಾಗವನ್ನು ನೆರವೇರಿಸುತ್ತಾನೆಯೋ ಅವನು ಬ್ರಹ್ಮಹತ್ಯಾದಿದೋಷಗಳಿಂದ ಮುಕ್ತನಾಗುತ್ತಾನೆಂದು **ತರತಿ ಬ್ರಹ್ಮಹತ್ಯಾಂ** ಎಂದು ಘೋಷಿಸಿ ಹೇಳಿದೆ. (ಇದೇ ವಿಷಯವನ್ನು ಶತಪಥಬ್ರಾಹ್ಮಣದಲ್ಲಿಯೂ ಸಹ ೧೩-೩-೧-೧ ರಲ್ಲಿ ಇದೇ ಆನುಪೂರ್ವಿಯಿಂದ ಹೇಳಿದೆ) ಆದುದರಿಂದಲೇ ಅಶ್ವಮೇಧಸಂಬಂಧಿನ್ಯೋ ಯಾಜ್ಯಾನುವಾಕ್ಯಾ ಉಚ್ಯಂತೇ ಎಂದು,

ಅಗ್ನೇರ್ಮನ್ವೇ ಪ್ರಥಮಸ್ಯ ಪ್ರಚೇತಸೋ ಯಂ ಪಾಂಚಜನ್ಯಂ ಬಹವಃ ಸಮಿಂಧತೇ ।
ವಿಶ್ವಸ್ಯಾಂ ವಿಶಿ ಪ್ರವಿವಿಶಿವಾಗ್‌ಂ ಸಮೀಮಹೇ ಸ ನೋ ಮುಂಚತ್ವಗ್‌ಂಹಸಃ ॥
ಇಂದ್ರಸ್ಯ ಮನ್ವೇ — .... .... .... .... ಸ ನೋ ಮುಂಚತ್ವಗ್‌ಂಹಸಃ ।

(ತೈ. ಸಂ. ೪-೧೫-೭)

ಇತ್ಯಾದಿಯಾಗಿ ಇದಕ್ಕೆ ಸಂಬಂಧಿಸಿದ ಪ್ರತಿಯೊಂದು ದೇವತೆಯನ್ನೂ ಉದ್ದೇಶಿಸಿ ತನ್ನನ್ನು ಪಾಪದಿಂದ ಮುಕ್ತನನ್ನಾಗಿ ಮಾಡಲಿ ಎಂದು ಪ್ರಾರ್ಥಿಸಿದೆ.

ಅಶ್ವಮೇಧದ ಮಹತ್ತ್ವವನ್ನು ಶತಪಥದಲ್ಲಿ ಈರೀತಿ ವರ್ಣಿಸಿದೆ.

ಏಷ ವೈ ಪ್ರಭೂರ್ನಾಮ ಯಜ್ಞಃ। ಯತ್ರೈತೇನ ಯಜ್ಞೇನ ಯಜಂತೇ ಸರ್ವಮೇವ ಪ್ರಭೂತಂ ಭವತಿ॥ ಏಷ ವೈ ವಿಭೂರ್ನಾಮ ಯಜ್ಞಃ। ಯತ್ರೈತೇನ ಯಜ್ಞೇನ ಯಜಂತೇ ಸರ್ವಮೇವ ವಿಭೂತಂ ಭವತಿ॥ ಏಷ ವೈ ವ್ಯಷ್ಟಿರ್ನಾಮ ಯಜ್ಞಃ। ಯತ್ರೈತೇನ ಯಜ್ಞೇನ ಯಜಂತೇ ಸರ್ವಮೇವ ವ್ಯಷ್ಟಂ ಭವತಿ॥ ಏಷ ವೈ ವಿಧೃತಿರ್ನಾಮ ಯಜ್ಞಃ ಯತ್ರೈತೇನ ಯಜ್ಞೇನ ಯಜಂತೇ। ಸರ್ವಮೇವ ವಿಧೃತಂ ಭವತಿ। ಏಷ ವಾ ಊರ್ಜಸ್ವಾನ್ನಾಮ ಯಜ್ಞಃ। ಯತ್ರೈತೇನ ಯಜ್ಞೇನ ಯಜಂತೇ। ಸರ್ವಮೇವೋರ್ಜಸ್ವದ್ಭವತಿ॥ ............... ಏಷ ವೈ ಬ್ರಹ್ಮವರ್ಚಸೀ ನಾಮ ಯಜ್ಞಃ। ಯತ್ರೈತೇನ ಯಜ್ಞೇನ ಯಜಂತ ಆ ಬ್ರಾಹ್ಮಣೋ ಬ್ರಹ್ಮವರ್ಚಸೀ ಜಾಯತೇ॥ ಏಷ ವೈ ಪ್ರತಿಷ್ಠಾ ನಾಮ ಯಜ್ಞಃ। ಯತ್ರೈತೇನ ಯಜ್ಞೇನ ಯಜಂತೇ। ಸರ್ವಮೇವ ಪ್ರತಿಷ್ಠಿತಂ ಭವತಿ॥

( ಶ. ಬ್ರಾ. ೧೩-೩-೭ )

ಈ ಯಜ್ಞವು ಶಕ್ತ್ಯಾತ್ಮಕವೂ, ವಿಭ್ವಾತ್ಮಕವೂ ಆದುದು. ಆದುದರಿಂದ ಇದನ್ನು ನೆರವೇರಿಸುವವನು ಪ್ರಭುವೂ, ಪ್ರಭೂತವಾದ ಸಂಪತ್ತುಳ್ಳವನೂ ಆಗುತ್ತಾನೆ. ಇದರಂತೆಯೇ ಈ ಯಜ್ಞವು ಊರ್ಜಸ್ವಿಯೂ, ಬ್ರಹ್ಮವರ್ಚಸ್ವಿಯೂ, ಪ್ರತಿಷ್ಠೆಯೂ ಆಗಿರುವುದರಿಂದ ಇದನ್ನು ನೆರವೇರಿಸತಕ್ಕವರು ಊರ್ಜಸ್ವಿಗಳೂ, ಬ್ರಹ್ಮವರ್ಚಸ್ಸನ್ನು ಪಡೆಯುವವರೂ ಮತ್ತು ಪ್ರತಿಷ್ಠೆಯನ್ನು ಪಡೆಯತಕ್ಕವರು ಆಗುತ್ತಾರೆ ಎಂದು ಅಶ್ವಮೇಧದ ಫಲದ ವಿಷಯದಲ್ಲಿ ಬಹಳವಾಗಿ ಹೇಳಿದೆ.

ಅಶ್ವಮೇಧವನ್ನು ಕೇವಲ ಕರ್ಮದೃಷ್ಟಿಯಿಂದ ನೋಡುವುದು ಒಂದು ವಿಧವಾದರೆ ಇದನ್ನು ಆಧ್ಯಾತ್ಮಿಕವಾದ ದೃಷ್ಟಿಯಿಂದಲೂ ಪರಿಶೀಲಿಸಿದೆ. ಆಗ **ಅಶ್ವ**, ಅಶ್ವದ ಒಡನಾಡಿಯಾದ **ಅಜ**, ಯಜ್ಞದ ಫಲ ಇವುಗಳಿಗೆಲ್ಲಾ ಅರ್ಥವು ಬಹಳ ವಿಸ್ತೃತವಾಗುತ್ತದೆ, ಇವರಲ್ಲಿ ಅಶ್ವವು ವಿಶ್ವಾತ್ಮಕವಾಗಿದೆ. ವಿಶ್ವದ ಚಂದ್ರಸೂರ್ಯಾದಿಭಾಗಗಳೆಲ್ಲಾ ಈ ಅಶ್ವದ ಅವಯವಗಳು. ಧ್ಯಾನಾತ್ಮಕವಾದ ಸಾಧನದಿಂದಲೂ, ತತ್ತ್ವಜ್ಞಾನದಿಂದಲೂ ಈ ಅಶ್ವಮೇಧವನ್ನು ನೆರವೇರಿಸಿ ಆಧ್ಯಾತ್ಮಿಕವಾದ ಫಲವನ್ನು ಪಡೆಯಬಹುದೆಂದು ಹೇಳಿದೆ. ಇದನ್ನು ಬೃಹದಾರಣ್ಯಕದಲ್ಲಿ ಹೀಗೆ ಹೇಳಿದೆ. [**ಉಷಾ ವಾ ಅಶ್ವಸ್ಯ ಮೇಧ್ಯಸ್ಯ ಶಿರಃ** ಎಂದು ಮುಂತಾಗಿ ಬೃಹದಾರಣ್ಯಕದಲ್ಲಿರುವ ಅಶ್ವದ ವಿಶ್ವಾತ್ಮಕವಾದ ವರ್ಣನೆಯನ್ನು ಹಿಂದೆ ತಿಳಿಸಿದೆ].

ಸೋಽಕಾಮಯತ ಮೇಧ್ಯಂ ಮ ಇದಂ ಸ್ಯಾದಾತ್ಮನ್ವ್ಯನೇನ ಸ್ಯಾಮಿತಿ। ತತೋಽಶ್ವಃ ಸಮಭವದ್ಯದಶ್ವತ್ತನ್ಮೇಧ್ಯಮಭೂದಿತಿ ತದೇವಾಶ್ವಮೇಧಸ್ಯಾಶ್ವಮೇಧತ್ವಂ। ಏಷ ಹ ವಾ ಅಶ್ವಮೇಧಂ ವೇದ ಯ ಏನಮೇವಂ ವೇದ। ತಮನವರುಧ್ಯೈವಾಮನ್ಯತ। ತಂ ಸಂವತ್ಸರಸ್ಯ ಪರಸ್ತಾದಾತ್ಮನ ಆಲಭತ। ಪಶೂನ್ದೇವತಾಭ್ಯಃ ಪ್ರತ್ಯೌಹತ್। ತಸ್ಮಾತ್ಸರ್ವದೇವತ್ಯಂ ಪ್ರೋಕ್ಷಿತಂ ಪ್ರಾಜಾಪತ್ಯಮಾಲಭಂತೇ। ಏಷ ಹ ವಾ ಅಶ್ವಮೇಧೋ ಯ ಏಷ ತಪತಿ ತಸ್ಯ ಸಂವತ್ಸರ ಆತ್ಮಾಯಮಗ್ನಿರರ್ಕಸ್ತಸ್ಯೇಮೇ ಲೋಕಾ ಆತ್ಮಾನಸ್ತಾವೇತಾವರ್ಕಾಶ್ವಮೇಧೌ॥

(ಬೃ. ಉ. ೧-೨-೬ ರಿಂದ ೭)

ಪ್ರಜಾಪತಿಯು ತಾನು ವಿಸ್ತೃತವಾಗಿ ಬೆಳೆದು ಯಜ್ಞವನ್ನು ನೆರವೇರಿಸಬೇಕೆಂದಪೇಕ್ಷಿಸಿದನು. ತನ್ನ ತಪಸ್ಸಿನಿಂದ ಅಭಿವೃದ್ಧಿಯನ್ನು ಪಡೆದು ( ಅಶ್ವಃ ) ಅಶ್ವವೆಂದು ಪ್ರಸಿದ್ಧನಾದನು. ಆಗ ತಾನು ಯಜ್ಞಕ್ಕೆ

ಯೋಗ್ಯನೆಂದು ಭಾವಿಸಿದುದರಿಂದ ಆ ಯಜ್ಞಕ್ಕೆ ಅಶ್ವಮೇಧವೆಂಬ ಹೆಸರು ಬಂದಿತು. ಈ ತತ್ತ್ವವನ್ನು ತಿಳಿದವನು ಅಶ್ವಮೇಧದ ತತ್ತ್ವವನ್ನು ತಿಳಿದಂತೆ. ತಾನು ಅಶ್ವರೂಪಿಯಾದ ಆಕಾರವನ್ನು ಒಂದು ಸಂವತ್ಸರದ ವರೆಗೆ ಯಾವ ತಡೆಯೂ ಇಲ್ಲದೆ ಹಾಗೆಯೇ ಸ್ವತಂತ್ರವಾದ ರೀತಿಯಲ್ಲಿ ಧ್ಯಾನಿಸುತ್ತಿದ್ದನು. ಒಂದು ಸಂವತ್ಸರಾನಂತರ ಯಜ್ಞವನ್ನು ನೆರವೇರಿಸಿದನು. ಮತ್ತು ಅದನ್ನು ತನಗೇ ಅರ್ಪಿಸಿಕೊಂಡನು. ಇತರ ಪಶುಗಳನ್ನು ಇತರ ದೇವತೆಗಳಿಗೆ ಹಂಚಿದನು. ಆದುದರಿಂದಲೇ ಅಶ್ವಮೇಧವು ವಿಶ್ವಾತ್ಮನಾದ ಪ್ರಜಾಪತಿಯನ್ನುದ್ದೇಶಿಸಿದೆ ಎಂಬುದಾಗಿ ಆಧ್ಯಾತ್ಮಿಕವಾದ ದೃಷ್ಟಿಯಿಂದ ಅಶ್ವಮೇಧದ ವರ್ಣನೆಯಿದೆ.

---

## ನೂರ ಅರವತ್ತನಾಲ್ಕನೆಯ ಸೂಕ್ತವು

---

ಅಸ್ಯ ವಾಮಸ್ಯೇತಿ ದ್ವಿಪಂಚಾಶದೃಚಮಷ್ಟಮಂ ಸೂಕ್ತಂ ದೈರ್ಘತಮಸಂ । ಅತ್ರೇಯಮನುಕ್ರಮಣಿಕಾ । ಅಸ್ಯ ದ್ವಿಪಂಚಾಶದಲ್ಪಸ್ತವಂ ತ್ವೇತತ್ಸಂಶಯೋತ್ಥಾಪನಪ್ರಶ್ನಪ್ರತಿವಾಕ್ಯಾನ್ಯತ್ರ ಪ್ರಾಯೇಣ ಜ್ಞಾನಮೋಕ್ಷಾಕ್ಷರಪ್ರಶಂಸಾ ಚ ಪಂಚಪಾದಂ ಸಾಕಂಜಾನಾಂ ಯದ್ಗಾಯತ್ರೇಽಯಂ ಸ ಶಿಂಕ್ತೇ ಸಪ್ತಾರ್ಧಗರ್ಭಾ ಗೌರೀರಿತಿ ಜಗತ್ಯಃ । ಏತದಂತಂ ತು ವೈಶ್ವದೇವಂ ತಸ್ಯಾಃ ಸಮುದ್ರಾ ಇತಿ ವಾಚಃ ಸಮುದ್ರಾ ಆಪೋಽಕ್ಷರಂ ಸಾ ಪ್ರಸ್ತಾರಪಂಕ್ತಿಃ ಶಕಮಯಮಿತಿ ಶಕಧೂಮ ಉಕ್ಷಾಣಂ ಪೃಶ್ನಿಮಿತಿ ಸೋಮಸ್ತ್ರಯಃ ಕೇಶಿನ ಇತ್ಯಗ್ನಿಃ ಸೂರ್ಯೋ ವಾಯುಶ್ಚ ಕೇಶಿನಶ್ಚತ್ವಾರಿ ವಾಗ್ವಾಚ ಇಂದ್ರಂ ಮಿತ್ರಂ ಸೌರ್ಯೋ ದ್ವಾದಶೇತಿ ಸಂವತ್ಸರಸಂಸ್ಥಂ ಕಾಲಚಕ್ರವರ್ಣನಂ ಯಸ್ತೇ ಸರಸ್ವತ್ಯೈ ಯಜ್ಞೇನ ಸಾಧ್ಯೇಭ್ಯಃ ಪರಾನುಷ್ಟುಪ್ಸೌರೀ ಪರ್ಜನ್ಯಾಗ್ನಿದೇವತಾ ವಾಂತ್ಯಾ ಸರಸ್ವತೇ ಸೂರ್ಯಾಯ ವೇತಿ । ಅತ್ರ ಶ್ರುತ್ಯಾ ಬಹುತ್ವೇನ ಸ್ತುತಿಭಾಗಸ್ಯಾಲ್ಪೀಯಸ್ತ್ವಾದಿದಂ ಸೂಕ್ತಮಲ್ಪಸ್ತವನಂ । ನ ಸೂಕ್ತಾಂತರವದ್ಬಹುಸ್ತವಂ । ಇದಮೇವ ವೈಲಕ್ಷಣ್ಯಂ ತುಶಬ್ದೇನ ದ್ಯೋತ್ಯತೇ । ಅಸ್ಮಿನ್ಸೂಕ್ತೇ ಪ್ರಾಯೇಣ ಸಂಶಯೋತ್ಥಾಪನಾದಯೋ ಬಹವೋಽರ್ಥಾಃ ಪ್ರತಿಪಾದ್ಯಂತೇ । ಅಚಿಕಿತ್ವಾಞ್ಚಿಕಿತುಷ ಇತ್ಯನಯಾ ಸಂಶಯ ಉತ್ಥಾಪ್ಯತೇ । ಪೃಚ್ಛಾಮಿ ತ್ವೇತ್ಯತ್ರ ಪ್ರಶ್ನಃ ಪ್ರತೀಯತೇ । ಇಯಂ ವೇದಿರಿತ್ಯತ್ರ ಪ್ರತಿವಚನಂ । ಯ ಈಂ ಚಕಾರೇತ್ಯಾದಿನಾ ಜ್ಞಾನಪ್ರಶಂಸಾ ಪ್ರತಿಪಾದ್ಯತೇ । ಅಪಶ್ಯಂ ಗೋಪಾಮಿತ್ಯಾದಿನಾ ಬ್ರಹ್ಮಸಾಕ್ಷಾತ್ಕಾರರೂಪಸ್ಯ ಪ್ರಶಂಸಾ । ನ ಕ್ಷರತೀತ್ಯಕ್ಷರಂ ಬ್ರಹ್ಮ । ದ್ವಾ ಸುಪರ್ಣೇತ್ಯಾದಿನಾ ತಸ್ಯ ಪ್ರಶಂಸಾ । ಪಂಚಪಾದಂ ಪಿತರಂ ಸಾಕಂಜಾನಾಂ ಸಪ್ತಥಂ ಯದ್ಗಾಯತ್ರೇ ಅಧಿ ಅಯಂ ಸ ಶಿಂಕ್ತೇ ಸಪ್ತಾರ್ಧಗರ್ಭಾ ಗೌರೀರ್ಮಿಮಾಯೇತಿ ಷಡ್ಜಗತ್ಯಃ । ಸಮಾನಮೇತದಿತ್ಯನುಷ್ಟುಪ್ । ತಸ್ಯಾಃ ಸಮುದ್ರಾ ಇತಿ ಪ್ರಸ್ತಾರಪಂಕ್ತಿಃ । ತಲ್ಲಕ್ಷಣಂ ಛಂದೋಗ್ರಂಥೇ ಸೂತ್ರಿತಂ । ಪ್ರಸ್ತಾರಪಂಕ್ತಿಃ ಪುರತಃ । ಪಿ. ೩-೪೦ । ಇತಿ । ಪುರತಃ ಪೂರ್ವಾರ್ಧೇ ದ್ವಾದಶಾಕ್ಷರೌ ಜಾಗತೌ ಪಾದೌ ತತೋ ದ್ವಾವಷ್ಟಾಕ್ಷರೌ ಗಾಯತ್ರೌ ಸಾ ಪ್ರಸ್ತಾರಪಂಕ್ತಿರಿತಿ ಸೂತ್ರಾರ್ಥಃ। ಅನುಕ್ರಮಣ್ಯಾಮಪ್ಯುಕ್ತಂ । ಆದ್ಯೌ ಚೇತ್ಪ್ರಸ್ತಾರಪಂಕ್ತಿಃ । ಅನು. ೮.೬ । ಇತಿ । ಶಿಷ್ಟಾ ಅನಾದೇಶಪರಿಭಾಷಯಾ ತ್ರಿಷ್ಟುಭಃ । ಗೌರೀರ್ಮಿಮಾಯೇತ್ಯೇತದಂತಾನಾಂ ವಿಶ್ವೇ ದೇವಾ ದೇವತಾ । ತಸ್ಯಾಃ ಸಮುದ್ರಾ ಇತ್ಯಸ್ಯಾಃ ಪೂರ್ವಾರ್ಧಸ್ಯ ವಾಗ್ದೇವತಾ । ಉತ್ತರಾರ್ಧಸ್ಯಾಪಃ ಶಕಮಯಮಿತ್ಯಸ್ಯಾಃ

**ಪೂರ್ವಾರ್ಧಸ್ಯ ಶಕಧೂಮಃ । ಉಕ್ಷಾಣಂ ಪೃಶ್ನಿಮಿತ್ಯುತ್ತರಾರ್ಧಸ್ಯ ಸೋಮೋ ದೇವತಾ । ತ್ರಯಃ ಕೇಶಿನ ಇತ್ಯಸ್ಯಾ ಅಗ್ನಿಸೂರ್ಯವಾಯವಃ । ಚತ್ವಾರಿ ವಾಗಿತ್ಯೇಷಾ ವಾಗ್ದೇವತಾಕಾ । ಇಂದ್ರಂ ಮಿತ್ರಂ ವರುಣಂ ಕೃಷ್ಣಂ ನಿಯಾನಮಿತ್ಯೇತೇ ಸೂರ್ಯದೇವತ್ಯೇ । ದ್ವಾದಶ ಪ್ರಧಯ ಇತ್ಯಸ್ಯಾಃ ಸಂವತ್ಸರಾತ್ಮಾ ಕಾಲೋ ದೇವತಾ । ಯಸ್ತೇ ಸ್ತನ ಇತ್ಯಸ್ಯಾಃ ಸರಸ್ವತೀ । ಯಜ್ಞೇನೇತ್ಯಸ್ಯಾಃ ಸಾಧ್ಯಾ ದೇವತಾ । ಸಮಾನಮೇತದಿತ್ಯಸ್ಯಾಃ ಸೂರ್ಯಃ ಪರ್ಜನ್ಯೋ ವಾಗ್ನಯೋ ವಾ ದೇವತಾ। ದಿವ್ಯಂ ಸುಪರ್ಣಮಿತ್ಯಸ್ಯಾಃ ಸರಸ್ವಾನ್ ಸೂರ್ಯೋ ವಾ ದೇವತಾ ॥ ಕೃತ್ಸ್ನಸೂಕ್ತಸ್ಯ ವಿನಿಯೋಗಂ ಶೌನಕ ಆಹ । ಸ್ತೇಯಂ ಕೃತ್ವಾ ದ್ವಿಜೋ ಮೋಹಾತ್ತ್ರಿರಾತ್ರೋಪೋಷಿತಃ ಶುಚಿಃ । ಸೂಕ್ತಂ ಜಪ್ತ್ವಾಸ್ಯ ವಾಮೀಯಂ ಕ್ಷಿಪ್ರಂ ಮುಚ್ಯೇತ ಕಿಲ್ಬಿಷಾದಿತಿ । ಋಗ್ವಿ. ೧-೨೬ ॥ ಮಹಾವ್ರತೇ ವೈಶ್ವದೇವಶಸ್ತ್ರೇ ವೈಶ್ವದೇವಂ ನಿವಿದ್ಧಾನಂ ದ್ವಿಪ್ರತೀಕಂ । ತತ್ರಾಸ್ಯ ವಾಮಸ್ಯೇತ್ಯಾದಿಕಮೇಕಚತ್ವಾರಿಂಶದೃಚಂ ಪ್ರಥಮಂ ಪ್ರತೀಕಂ । ಪಂಚಮಾರಣ್ಯಕೇ ಸೂತ್ರಿತಂ । ಅಸ್ಯ ವಾಮಸ್ಯ ಪಲಿತಸ್ಯ ಹೋತುರಿತಿ ಸಲಿಲಸ್ಯ ದೈರ್ಘತಮಸ ಏಕಚತ್ವಾರಿಂಶತಂ । ಐ. ಆ ೫-೩-೨ । ಇತಿ ॥**

ಅನುವಾದವು— **ಅಸ್ಯ ವಾಮಸ್ಯ** ಎಂಬ ಈ ಸೂಕ್ತವು ಇಪ್ಪತ್ತೆರಡನೆಯ ಅನುವಾಕದಲ್ಲಿ ಎಂಟನೆಯ ಸೂಕ್ತವು ಇದರಲ್ಲಿ ಐವತ್ತೆರಡು ಋಕ್ಕುಗಳಿರುವವು. ಈ ಸೂಕ್ತಕ್ಕೆ ಉಚಥ್ಯಪುತ್ರನಾದ ದೀರ್ಘತಮಸ್ಸೆಂಬುವನು ಋಷಿಯು. ಅನುಕ್ರಮಣಿಕೆಯಲ್ಲಿ -- **ಅಸ್ಯ ದ್ವಿಪಂಚಾಶದಲ್ಪಸ್ತವಂ ತ್ವೇತತ್ಸಂಶಯೋತ್ಥಾಪನಪ್ರಶ್ನಪ್ರತಿವಾಕ್ಯಾನ್ಯತ್ರ ಪ್ರಾಯೇಣ ಜ್ಞಾನಮೋಕ್ಷಾಕ್ಷರಪ್ರಶಂಸಾ ಚ ಪಂಚಪಾದಂ ಸಾಕಂಜಾನಾಂ ಯದ್ಗಾಯತ್ರೇಯಂ ಸ ಶಿಂಕ್ತೇ ಸಪ್ತಾರ್ಧಗರ್ಭಾ ಗೌರೀರಿತಿ ಜಗತ್ಯಃ। ಏತದಂತಂ ತು ವೈಶ್ವದೇವಂ ತಸ್ಯಾಃ ಸಮುದ್ರಾ ಇತಿ ವಾಚಃ ಸಮುದ್ರಾ ಆಪೋಽಕ್ಷರಂ ಸಾ ಪ್ರಸ್ತಾರಪಂಕ್ತಿಃ ಶಕಮಯಮಿತಿ ಶಕಧೂಮ ಉಕ್ಷಾಣಂ ಪೃಶ್ನಿಮಿತಿ ಸೋಮಸ್ತ್ರಯಃ ಕೇಶಿನ ಇತ್ಯಗ್ನಿಃ ಸೂರ್ಯೋ ವಾಯುಶ್ಚ ಕೇಶಿನಶ್ಚತ್ವಾರಿ ವಾಗ್ವಾಚ ಇಂದ್ರಂ ಮಿತ್ರಂ ಸೌರ್ಯೌ ದ್ವಾದಶೇತಿ ಸಂವತ್ಸರಸಂಸ್ಥಂ ಕಾಲಚಕ್ರವರ್ಣನಂ ಯಸ್ತೇ ಸರಸ್ವತ್ಯೈ ಯಜ್ಞೇನ ಸಾಧ್ಯೇಭ್ಯಃ ಪರಾನುಷ್ಟುಪ್ಸಾ ಪರ್ಜನ್ಯಾಗ್ನಿದೇವತಾ ವಾಂತ್ಯಾ ಸರಸ್ವತೇ ಸೂರ್ಯಾಯ ವೇತಿ ।** ಈ ಸೂಕ್ತದಲ್ಲಿ ಸ್ತೋತ್ರಭಾಗವು ಬಹಳ ಕಡಮೆಯಾಗಿರುವುದರಿಂದ ಈ ಸೂಕ್ತವು ಅಲ್ಪಸ್ತವನವೆಂದು ಪ್ರಸಿದ್ಧಿಯಾಗಿರುವುದು. ಇತರ ಸೂಕ್ತಗಳಲ್ಲಿರುವಂತೆ ಈ ಸೂಕ್ತದಲ್ಲಿ ದೇವತಾಸಂಬಂಧವಾದ ಸ್ತುತಿಯು ವಿಶೇಷವಾಗಿಲ್ಲ. ಈ ವಿಷಯವನ್ನೇ ಅನುಕ್ರಮಣಿಕೆಯಲ್ಲಿರುವ ತುಶಬ್ದಪ್ರಯೋಗವು ನಿರ್ದೇಶಿಸುವುದು. ಇವಲ್ಲದೆ ಈ ಸೂಕ್ತದಲ್ಲಿ ಪ್ರತಿಪಾದಿತವಾಗಿರುವ ವಿಷಯಗಳು ಅನೇಕಾರ್ಥಗಳುಳ್ಳದ್ದಾಗಿ ಸಂಶಯಕ್ಕೆ ಆಸ್ಪದವಾಗಿರುವುದು. ಎಂದರೆ, ಋಕ್ಕಿನ ಅರ್ಥವು ಅಥವಾ ಅಭಿಪ್ರಾಯವು ಹೀಗೆಯೇ ಸರಿ ಎಂದು ನಿಷ್ಕೃಷ್ಟವಾಗಿ ಹೇಳಲಾಗುವುದಿಲ್ಲ ಅನೇಕಾರ್ಥಗಳಿಗೆ ಅವಕಾಶವಿರುವುದರಿಂದ ಋಷಿಯ ಆಶಯವು ಯಾವುದು ಎಂಬುದನ್ನು ಹೇಳುವುದು ಸುಲಭಸಾಧ್ಯವಲ್ಲ. **ಅಚಿಕಿತ್ವಾಞ್ಚಿಕಿತುಷಃ** ಎಂಬ ಆರನೆಯ ಋಕ್ಕಿನ ಅರ್ಥವು ಸಂಶಯಾಸ್ಪದವಾಗಿದೆ. **ಪೃಚ್ಛಾಮಿ ತ್ವಾ** ಎಂಬ ಮೂವತ್ತನಾಲ್ಕನೆಯ ಋಕ್ಕು ಪ್ರಶ್ನರೂಪವಾಗಿದೆ. **ಇಯಂ ವೇದಿಃ** ಎಂಬ ಮೂವತ್ತೈದನೆಯ ಋಕ್ಕು ಇದಕ್ಕೆ ಪ್ರತ್ಯುತ್ತರರೂಪವಾಗಿದೆ. **ಯ ಈಂ ಚಕಾರ** ಎಂಬ ಮೂವತ್ತೆರಡನೆಯ ಋಕ್ಕಿನಲ್ಲಿ ಜ್ಞಾನಪ್ರಶಂಸೆಯು ಪ್ರತಿಪಾದಿತವಾಗಿದೆ. **ಅಪಶ್ಯಂ ಗೋಪಾಂ** ಎಂಬ ಮೂವತ್ತೊಂದನೆಯ ಋಕ್ಕು ಬ್ರಹ್ಮಸಾಕ್ಷಾತ್ಕಾರರೂಪವನ್ನು ಪ್ರಶಂಸೆ

ಮಾಡುವುದಾಗಿದೆ. **ನ ಕ್ಷರತೀತ್ಯಕ್ಷರಂ ಬ್ರಹ್ಮ**-ನಾಶವಾಗುವುದಿಲ್ಲವಾದ್ದರಿಂದ ಬ್ರಹ್ಮವಸ್ತುವು ಅಕ್ಷರಶಬ್ದವಾಚ್ಯವೆಂಬ ತತ್ತ್ವಾರ್ಥವು **ದ್ವಾಸುಪರ್ಣಾ** ಎಂಬ ಇಪ್ಪತ್ತನೆಯ ಋಕ್ಕು ಮೊದಲಾದುವುಗಳಲ್ಲಿ ಪ್ರತಿಪಾದಿತವಾಗಿರುವುದು. ಈ ಸೂಕ್ತದ ಛಂದಸ್ಸಿನ ವಿಷಯದಲ್ಲಿ—**ಪಂಚಪಾದಂ ಪಿತರಂ** (೧೨ ನೆಯ ಋಕ್ಕು), **ಸಾಕಂಜಾನಾಂ ಸಪ್ತಥಂ** (೧೫ ನೆಯ ಋಕ್ಕು), **ಯದ್ಗಾಯತ್ರೇ ಅಧಿ** (೨೩ ನೆಯ ಋಕ್ಕು), **ಅಯಂ ಸ ಶಿಂಕ್ತೇ** (೨೯ನೆಯ ಋಕ್ಕು), **ಸಪ್ತಾರ್ಧಗರ್ಭಾ** (೩೬ ನೆಯ ಋಕ್ಕು), **ಗೌರೀರ್ಮಿಮಾಯ** (೪೧ ನೆಯ ಋಕ್ಕು) ಎಂಬ ಆರು ಋಕ್ಕುಗಳೂ ಜಗತೀಛಂದಸ್ಕವು, **ಸಮಾನಮೇತತ್** (೫೧ನೇ ಋಕ್ಕು) ಎಂಬ ಋಕ್ಕು ಅನುಷ್ಟುಪ್‌ಛಂದಸ್ಕವು. **ತಸ್ಯಾಃ ಸಮುದ್ರಾಃ** (೪೨ನೆಯ ಋಕ್ಕು) ಎಂಬ ಋಕ್ಕು ಪ್ರಸ್ತಾರಪಂಕ್ತಿ ಎಂಬ ಛಂದಸ್ಸಿನದು, ಈ ಪ್ರಸ್ತಾರಪಂಕ್ತಿ ಎಂಬ ಛಂದಸ್ಸಿನ ಲಕ್ಷಣವು ಛಂದೋಗ್ರಂಥದಲ್ಲಿ **ಪ್ರಸ್ತಾರಪಂಕ್ತಿಃ ಪುರತಃ** (ಪಿ. ೩-೪೦) ಎಂದು ಹೇಳಲ್ಪಟ್ಟಿರುವುದು. ಎಂದರೆ ಪೂರ್ವಾರ್ಧದಲ್ಲಿ ಜಗತೀಛಂದಸ್ಸಿನಂತೆ ಹನ್ನೆರಡು ಅಕ್ಷರಗಳುಳ್ಳ ಎರಡುಪಾದಗಳೂ ಉತ್ತರಾರ್ಧದಲ್ಲಿ ಗಾಯತ್ರೀ ಛಂದಸ್ಸಿನಂತೆ ಎಂಟು ಅಕ್ಷರಗಳುಳ್ಳ ಎರಡುಪಾದಗಳೂ ಇರತಕ್ಕ ಋಕ್ಕಿಗೆ ಪ್ರಸ್ತಾರಪಂಕ್ತಿಯೆಂದು ಹೆಸರು. ಅನುಕ್ರಮಣಿಕೆಯಲ್ಲಿಯೂ— **ಆದ್ಯಾ ಚೇತ್ಪ್ರಸ್ತಾರಪಂಕ್ತಿಃ** (ಅನು ೮-೬) ಎಂದು ಹೇಳಿರುವುದು. ಉಳಿದ ಋಕ್ಕುಗಳೆಲ್ಲಾ ತ್ರಿಷ್ಟುಪ್‌ಛಂದಸ್ಸಿನವು. ಈ ಸೂಕ್ತದ ದೇವತೆಗಳ ವಿಷಯದಲ್ಲಿ—ಸೂಕ್ತದ ಪ್ರಾರಂಭದಿಂದ **ಗೌರೀರ್ಮಿಮಾಯ** (೪೧ನೆಯ ಋಕ್ಕು) ಎಂಬ ಋಕ್ಕಿನವರೆಗೆ ವಿಶ್ವೇದೇವತೆಗಳು ದೇವತೆಯು. **ತಸ್ಯಾಃ ಸಮುದ್ರಾಃ** (೪೨ನೆಯ ಋಕ್ಕು) ಎಂಬ ಋಕ್ಕಿನ ಪೂರ್ವಾರ್ಧಕ್ಕೆ ವಾಕ್ ದೇವತೆಯು. ಉತ್ತರಾರ್ಧಕ್ಕೆ ಆಪಃ ದೇವತೆಯು. **ಶಕಮಯಂ** (೪೩ನೆಯ ಋಕ್ಕು) ಎಂಬ ಋಕ್ಕಿನ ಪೂರ್ವಾರ್ಧಕ್ಕೆ ಶಕಧೂಮವು ದೇವತೆಯು **ಉಕ್ಷಾಣಂ ಪೃಶ್ನಿಂ** ಎಂಬ ಆ ಋಕ್ಕಿನ ಉತ್ತರಾರ್ಧಕ್ಕೆ ಸೋಮವು ದೇವತೆಯು. **ತ್ರಯಃ ಕೇಶಿನಃ** (೪೪ನೆಯ ಋಕ್ಕು) ಎಂಬ ಋಕ್ಕಿಗೆ ಅಗ್ನಿ, ಸೂರ್ಯ, ವಾಯುಗಳು ದೇವತೆಯು. **ಚತ್ವಾರಿ ವಾಕ್** ಎಂಬ (೪೫ನೆಯ) ಋಕ್ಕು ವಾಗ್ದೇವತಾಕವು. **ಇಂದ್ರಂ ಮಿತ್ರಂ ವರುಣಂ** (೪೬ನೆಯ ಋಕ್ಕು) ಮತ್ತು **ಕೃಷ್ಣಂ ನಿಯಾನಂ** (೪೭ನೆಯ ಋಕ್ಕು) ಎಂಬ ಈ ಎರಡು ಋಕ್ಕುಗಳೂ ಸೂರ್ಯದೇವತಾಕವು. **ದ್ವಾದಶ ಪ್ರಧಯಃ** (೪೮ನೆಯ ಋಕ್ಕು) ಎಂಬ ಋಕ್ಕಿಗೆ ಸಂವತ್ಸರಾತ್ಮಕವಾದ ಕಾಲವೇ ದೇವತೆಯು **ಯಸ್ತೇ ಸ್ತನ** (೪೯ನೆಯ ಋಕ್ಕು) ಎಂಬ ಋಕ್ಕಿಗೆ ಸರಸ್ವತಿಯೇ ದೇವತೆಯು. **ಯಜ್ಞೇನ ಯಜ್ಞಂ** (೫೦ನೆಯ ಋಕ್ಕು) ಎಂಬ ಋಕ್ಕಿಗೆ ಸಾಧ್ಯರು ದೇವತೆಯು- **ಸಮಾನಮೇತತ್** (೫೧ನೆಯ ಋಕ್ಕು) ಎಂಬ ಋಕ್ಕಿಗೆ ಸೂರ್ಯ, ಅಥವಾ ಪರ್ಜನ್ಯ ಅಥವಾ ಅಗ್ನಿಯು ದೇವತೆಯು. **ದಿವ್ಯಂ ಸುಪರ್ಣಂ** (೫೨ನೆಯ ಋಕ್ಕು) ಎಂಬ ಋಕ್ಕಿಗೆ ಸರಸ್ವಾನ್ ಅಥವಾ ಸೂರ್ಯನು ದೇವತೆಯು- ಈ ಒಟ್ಟು ಸೂಕ್ತದ ವಿನಿಯೋಗವನ್ನು ಶೌನಕ ಮಹರ್ಷಿಗಳು ತಮ್ಮ ಋಗ್ವಿಧಾನವೆಂಬ ಗ್ರಂಥದಲ್ಲಿ—

**ಸ್ತೇಯಂ ಕೃತ್ವಾ ದ್ವಿಜೋ ಮೋಹಾತ್ತ್ರಿರಾತ್ರೋಪೋಷಿತಃ ಶುಚಿಃ ।**
**ಸೂಕ್ತಂ ಜಪ್ತ್ವಾಸ್ಯವಾಮೀಯಂ ಕ್ಷಿಪ್ರಂ ಮುಚ್ಯೇತ ಕಿಲ್ಬಿಷಾತ್ ॥ ಇತಿ ॥**

(ಋಗ್ವಿಧಾನ. ೧-೨೬).

ಎಂದು ಹೇಳಿರುವರು ಎಂದರೆ ದ್ವಿಜನಾದವನು ಅಜ್ಞಾನದಿಂದಾಗಲಿ, ಲೋಭದಿಂದಾಗಲಿ ಕಳ್ಳತನವನ್ನು ಮಾಡಿದರೆ ಆಗ ಅವನು ಮೂರುರಾತ್ರಿಗಳವರೆಗೆ (ಮೂರು ದಿವಸಗಳು) ಉಪವಾಸಮಾಡಿ ಶುಚಿಭೂತನಾಗಿ **ಅಸ್ಯ ವಾಮಸ್ಯ** ಎಂಬ ಈ ಸೂಕ್ತವನ್ನು ಜಪಮಾಡಿದರೆ ಪಾಪಪರಿಹಾರವಾಗುವುದು, ಎಂದು ಹೇಳಿದಾರೆ. ಮತ್ತು

ಮಹಾವ್ರತದಲ್ಲಿ ವೈಶ್ವದೇವಶಸ್ತ್ರಮಂತ್ರಪಠನಮಾಡುವಾಗ ವಿಶ್ವೇದೇವತೆಗಳ ಸಂಬಂಧವಾದ ನಿವಿದ್ಧಾನಮಂತ್ರಗಳನ್ನು ಎರಡು ಪ್ರತೀಕವನ್ನಾಗಿ (ಭಾಗ) ಪಠಿಸಬೇಕು. ಆಗ **ಅಸ್ಯ ವಾಮಸ್ಯ** ಎಂಬ ಈ ಸೂಕ್ತದ ಮೊದಲಿನ ನಲವತ್ತೊಂದು ಋಕ್ಕುಗಳನ್ನು ಪ್ರಥಮಪ್ರತೀಕದಲ್ಲಿ ಪಠಿಪಬೇಕೆಂದು ಐತರೇಯಾರಣ್ಯಕದ ಐದನೆಯ ಅರಣ್ಯಕದಲ್ಲಿ- **ಅಸ್ಯ ವಾಮಸ್ಯ ಪಲಿತಸ್ಯ ಹೋತುರಿತಿ ಸಲಿಲಸ್ಯ ವೈರ್ಘತಮಸ ಏಕಚತ್ವಾರಿಂಶತಂ** ಎಂಬ ಸೂತ್ರವಾಕ್ಯದಿಂದ ನಿರ್ದಿಷ್ಟವಾಗಿರುವುದು. (ಐ. ಆ. ೫-೩-೨).

---

॥ ಓಂ ॥

## ಸೂಕ್ತ—೧೬೪

॥ ಮಂಡಲ—೧ ॥ ಅನುವಾಕ—೨೨ ॥ ಸೂಕ್ತ—೧೬೪ ॥

॥ ಅಷ್ಟಕ—೨ ॥ ಅಧ್ಯಾಯ—೩ ॥ ವರ್ಗ—೧೪, ೧೫, ೧೬, ೧೭, ೧೮, ೧೯, ೨೦, ೨೦, ೨೨, ೨೩ ॥

॥ ಸೂಕ್ತದಲ್ಲಿರುವ ಋಕ್ಸಂಖ್ಯೆ—೫೨ ॥

॥ ಋಷಿಃ—ದೀರ್ಘತಮಾ ಔಚಥ್ಯಃ ॥

॥ ದೇವತಾ—೧-೪೧. ವಿಶ್ವೇದೇವಾಃ । ೪೨. ಪೂರ್ವಾರ್ಧಾ ವಾಕ್ । ೪೨. ಉತ್ತರಾರ್ಧಾ ಆಪಃ । ೪೩ ಪೂರ್ವಾರ್ಧಾ. ಶಕಧೂಮಃ । ೪೩ ಉತ್ತರಾರ್ಧಾ. ಸೋಮಃ । ೪೪. ಅಗ್ನಿಃ ಸೂರ್ಯೋ ವಾಯುಶ್ಚ । ೪೫. ವಾಕ್ । ೪೬, ೪೭. ಸೂರ್ಯಃ । ೪೮. ಸಂವತ್ಸರಸಂಸ್ಥಂ ಕಾಲಚಕ್ರವರ್ಣನಂ । ೪೯. ಸರಸ್ವತೀ । ೫೦. ಸಾಧ್ಯಾಃ । ೫೧. ಸೂರ್ಯಃ ಪರ್ಜನ್ಯಾಅಗ್ನಯೋ ವಾ । ೫೨. ಸರಸ್ವಾನ್ ಸೂರ್ಯೋ ವಾ ॥

॥ ಛಂದಃ—೧-೧೧, ೧೩, ೧೪, ೧೬-೨೨, ೨೪-೨೮, ೩೦-೩೫, ೩೭-೪೦, ೪೩-೫೦, ೫೨. ತ್ರಿಷ್ಟುಪ್ । ೧೨, ೧೫, ೨೩, ೨೯, ೩೬, ೪೧, ಜಗತೀ । ೪೨. ಪ್ರಸ್ತಾರಪಂಕ್ತಿಃ । ೫೧. ಅನುಷ್ಟುಪ್ ॥

। ಸಂಹಿತಾಪಾಠಃ ।

**ಅಸ್ಯ ವಾಮಸ್ಯ ಪಲಿತಸ್ಯ ಹೋತುಸ್ತಸ್ಯ ಭ್ರಾತಾ ಮಧ್ಯಮೋ ಅಸ್ತ್ಯಶ್ನಃ ।**
**ತೃತೀಯೋ ಭ್ರಾತಾ ಘೃತಪೃಷ್ಠೋ ಅಸ್ಯಾತ್ರಾಪಶ್ಯಂ ವಿಶ್ಪತಿಂ ಸಪ್ತಪುತ್ರಂ ।**
**॥ ೧ ॥**

ಪದಪಾಠಃ

ಅಸ್ಯ । ವಾಮಸ್ಯ । ಪಲಿತಸ್ಯ । ಹೋತುಃ । ತಸ್ಯ । ಭ್ರಾತಾ । ಮಧ್ಯಮಃ । ಅಸ್ತಿ । ಅಶ್ನಃ ।
ತೃತೀಯಃ । ಭ್ರಾತಾ । ಘೃತಽಪೃಷ್ಠಃ । ಅಸ್ಯ । ಅತ್ರ । ಅಪಶ್ಯಂ । ವಿಶ್ಪತಿಂ । ಸಪ್ತಽಪುತ್ರಂ ॥ ೧ ॥

॥ ಸಾಯಣಭಾಷ್ಯಂ ॥

ಅತ್ರ ದ್ವಿತೀಯಪಾದೇ ತಚ್ಛಬ್ದಶ್ರುತೇಃ ಪ್ರಥಮಪಾದೇ ಪ್ರತಿವಿಶೇಷಣಂ ಯೋಗ್ಯಕ್ರಿಯಾರ್ಥ-ಸಂಬದ್ಧೋ ಯಚ್ಛಬ್ದೋಽಧ್ಯಾಹಾರ್ಯಃ । ಯೋಽಯಂ ದಿವಿ ದ್ಯೋತತೇ ತಸ್ಯಾಸ್ಯ ವಾಮಸ್ಯ ವನನೀಯಸ್ಯ ಸಂಭಜನೀಯಸ್ಯಾರೋಗ್ಯಾರ್ಥಿಭಿಃ ಸರ್ವೈಃ ಸೇವನೀಯಸ್ಯ ಪಲಿತಸ್ಯ ಪಾಲಯಿತುಃ ಪ್ರಕಾಶವೃಷ್ಟ್ಯಾದಿಪ್ರದಾನೇನ ಪಾಲಕಸ್ಯ ತಥಾ ಯೋಽಯಂ ದಿವಿ ದ್ಯೋತತೇ ತಸ್ಯಾಸ್ಯ ಹೋತುರ್ಹ್ವಾತವ್ಯಸ್ಯಾಹ್ವಾನಾರ್ಹಸ್ಯಾದಿತ್ಯಸ್ಯ ಮಧ್ಯಮೋ ಮಧ್ಯಮಸ್ಥಾನಃ । ಮಧ್ಯೇ ಭವೋ ವಾಯುರುಚ್ಯತೇ । ಆದಿತ್ಯಾಗ್ನೀ ಅಪೇಕ್ಷ್ಯಾಸ್ಯ ಮಧ್ಯಮತ್ವಂ । ಸ ಚಾಶ್ನಃ ಸರ್ವತ್ರ ವ್ಯಾಪ್ತಃ । ನ ಹಿ ವಾಯುರಹಿತಃ ಕಶ್ಚಿತ್ಪ್ರದೇಶೋಽಸ್ತಿ । ತಾದೃಶೋ ಭ್ರಾತಾಸ್ತಿ । ಭ್ರಾತೃಸ್ಥಾನೀಯೋ ಭವತಿ । ಯಥಾ ಲೋಕೇ ಭ್ರಾತಾ ಪಿತೃಧನಸ್ಯ ಭಾಗಂ ಹರತಿ ತದ್ವತ್ । ಮಧ್ಯಸ್ಥಾನಮಂತರಿಕ್ಷಲೋಕಂ ಹರತೀತಿ ವಾ । ವೃಷ್ಟ್ಯರ್ಥಂ ರಶ್ಮಿಭಿರಾಹೃತಾನಾಂ ಭೌಮಾನಾಂ ರಸಾನಾಂ ಹರಣಾದ್ವಾ ಭ್ರಾತೇತ್ಯುಚ್ಯತೇ । ಪಿತ್ರ್ಯೇಣ ಧನೇನ ಸ್ವಾರ್ಜಿತೇನ ವಾ ಭರ್ತವ್ಯೋ ಭವತೀತಿ ಭ್ರಾತಾ ! ಮಧ್ಯಮೋ ವಾಯುರಪಿ ವೃಷ್ಟ್ಯರ್ಥಂ ರಸೈರ್ಭರ್ತ-ವ್ಯೋ ಭವತಿ । ಕಿಂಚ ಘೃತಪೃಷ್ಠಃ ಘೃತಮಾಹುತಿಲಕ್ಷಣಂ ಪೃಷ್ಠೇ ಯಸ್ಯ ತಾದೃಶೋ ಭ್ರಾತಾ ತಸ್ಯ ತೃತೀಯೋಽಸ್ತಿ । ಭವತಿ । ತ್ರಯಾಣಾಂ ಪೂರಣಸ್ತೃತೀಯಃ । ಉಕ್ತೋಭಯಾಪೇಕ್ಷಯಾ ತೃತೀಯತ್ವಂ। ಭ್ರಾತೃತ್ವಂ ಪ್ರತಿಪಾದಿತಪ್ರಕಾರೇಣಾತ್ರಾಪಿ ದ್ರಷ್ಟವ್ಯಂ । ರಾತ್ರೌ ಸವಿತುಸ್ತೇಜೋಭಾಗಸ್ಯ ಹರಣಾತ್ । ದಿವಾ ಸ್ವಕೀಯತೇಜಸೋ ಭಾಗಸ್ಯ ತದರ್ಥಮೇವ ಭರ್ತವ್ಯತ್ವಾದ್ವಾ ಭ್ರಾತೃತ್ವಂ । ಅತ್ರೈಷು ಭ್ರಾತೃಷು ಮಧ್ಯೇ ಪುರೋದೇಶೇ ವಾ ವಿಶ್ಪತಿಂ ವಿಶಾಂ ಪ್ರಜಾನಾಂ ಪಾಲಯಿತಾರಂ ಸಪ್ತಪುತ್ರಂ ಸರ್ಪಣರಶ್ಮಿ-ಪುತ್ರೋಪೇತಂ । ಐತಿಹಾಸಿಕಪಕ್ಷೇಽದಿತಿಃ ಪುತ್ರಕಾಮೇತಿ ಪ್ರಸ್ತುತೇ ಮಿತ್ರವರುಣಾದಿಷ್ವದಿತಿಪುತ್ರೇಷ್ವ-ಸ್ಯಾದಿತ್ಯಸ್ಯ ಸಪ್ತಮಪುತ್ರತ್ವಂ । ಈದೃಶಂ ಮಹಾನುಭಾವಮಾದಿತ್ಯಮಪಶ್ಯಂ । ಅದ್ರಾಕ್ಷಂ । ಭಾವನಯಾ-ತ್ಮತ್ವೇನ ಸಾಕ್ಷಾತ್ಕರೋಮೀತ್ಯರ್ಥಃ । ತದ್ಯೋಽಹಂ ಸೋಽಸೌ ಯೋಽಸೌ ಸೋಽಹಮಿತಿ ಶ್ರುತಿಃ ॥ ಏವಂ ವಾ । ಅಸ್ಯ ವಾಮಸ್ಯ ವಿಶ್ವಸ್ಯೋದ್ಗರಿತುಃ । ಸ್ರಷ್ಟುರಿತ್ಯರ್ಥಃ । ಪಲಿತಸ್ಯ ಪಾಲಯಿತುಃ ಸ್ವಸೃಷ್ಟಜಗತ್ಪಾಲನಶೀಲಸ್ಯ ಹೋತುರಾದಾತುಃ । ಸ್ವಸ್ಮಿನ್ಸಂಹರ್ತುರಿತ್ಯರ್ಥಃ । ಪರಮೇಶ್ವರಸ್ಯ ಸೃಷ್ಟ್ಯಾ-ದಿಕರ್ತೃತ್ವಂ ಶ್ರುತಿಸ್ಮೃತಿಪುರಾಣಾದಿಷು ಪ್ರಸಿದ್ಧಂ । ತಸ್ಯ ತಾದೃಶಸ್ಯ ಪರಮೇಶ್ವರಸ್ಯ ಭ್ರಾತಾ ತದ್ಭಾಗ-ಹಾರೀ ತದಂಶಭೂತಃ ಸೂತ್ರಾತ್ಮಾ ಮಧ್ಯಮಃ ಸರ್ವತ್ರ ಮಧ್ಯೇ ವರ್ತಮಾನೋಽಸ್ತಿ । ಜಗದ್ಧಾರಕತ್ವೇನ ವರ್ತತೇ । ಸ ಚಾಶ್ನೋ ವ್ಯಾಪನಶೀಲಃ । ವಾಯುರ್ವೈ ಗೌತಮ ಸೂತ್ರೇಣಾಯಂ ಚ ಲೋಕಃ ಪರಶ್ಚ ಲೋಕಃ ಸರ್ವಾಣಿ ಚ ಭೂತಾನಿ ಸಂದೃಬ್ಧಾನಿ । ಬೃ. ಉ. ೩-೭-೨ । ಇತಿ ಶ್ರುತೇಃ । ವಕ್ಷ್ಯಮಾಣವಿರಾಡ-ಪೇಕ್ಷಯಾ ವಾ ಮಧ್ಯಮತ್ವಂ । ಕಿಂಚಾಸ್ಯ ಪರಮೇಶ್ವರಸ್ಯ ತೃತೀಯೋ ಘೃತಪೃಷ್ಠಃ ಘೃತಮಿತ್ಯುದಕ-

ನಾಮ । ತೇನ ತತ್ಕಾರ್ಯಂ ಶರೀರಮುಚ್ಯತೇ । ತದೇವ ಪೃಷ್ಠಂ ಸ್ಪರ್ಶಕಂ ವಾ ಯಸ್ಯ ಸ ತಾದೃಶಃ । ಪೃಷ್ಠಂ ಸ್ಪೃಶತೇರಿತಿ ನಿರುಕ್ತಂ । ೪-೩ । ಯದ್ವಾ । ಪ್ರದೀಪ್ತಪೃಷ್ಠಃ । ಪೃಷ್ಠಶಬ್ದಃ ಕೃತ್ಸ್ನಶರೀರೋಪಲಕ್ಷಕಃ । ಪ್ರಕಾಶಿತಶರೀರಾಭಿಮಾನೀತ್ಯರ್ಥಃ । ನ ತ್ವಯಂ ಸೂಕ್ಷ್ಮಶರೀರಾಭಿಮಾನಿಸೂತ್ರಾತ್ಮವತ್ಸ್ಪರ್ಶನಾವಿಷಯೋ ಭವತಿ । ಅತ್ರೈಷು ಮಧ್ಯೇ ವಿಶ್ಪತಿಂ ವಿಶಾಂ ಪ್ರಜಾನಾಂ ಪತಿಂ । ಉಪಲಕ್ಷಣಮೇತತ್ । ಸರ್ವಸ್ಯ ಪತಿಮಿತ್ಯರ್ಥಃ । ಸರ್ವಸ್ಯ ಪತಿಃ ಸರ್ವಸ್ಯೇಶಾನ ಇತಿ ಶ್ರುತೇಃ । ಸಪ್ತಪುತ್ರಂ ಸಪ್ತ ಲೋಕಾಃ ಪುತ್ರಾ ಯಸ್ಯ ತಾದೃಶಂ । ಸ್ವಮಾಯಯಾ ಸೃಷ್ಟಸರ್ವಲೋಕಮಿತ್ಯರ್ಥಃ । ಅಪಶ್ಯಂ । ಪಶ್ಯೇಯಂ । ಸಾಕ್ಷಾತ್ಕರೋಮೀತ್ಯರ್ಥಃ ॥ ಅಯಮರ್ಥಃ । ಸ್ವಾಧೀನಮಾಯಯಾ ಜಗತ್ಕಾರಣಭೂತಃ ಪರಮೇಶ್ವರಃ ಏಕಃ । ತತ ಉತ್ಪನ್ನೌ ಸ್ಥೂಲಸೂಕ್ಷ್ಮಶರೀರಾಭಿಮಾನಿನೌ ದ್ವೌ ವಿರಾಟ್ಸೂತ್ರಾತ್ಮಾನೌ । ತೇಷು ಮಧ್ಯೇ ದ್ವಯೋಃ ಸಾಕ್ಷಾತ್ಕಾರೇಣ ಮೋಕ್ಷಾಭಾವಾತ್ ಸೃಷ್ಟ್ಯಾದಿಕಾರಣಂ ಪರಮೇಶ್ವರಂ ಜ್ಞೇಯತ್ವೇನ ಪ್ರಸಿದ್ಧಂ ಶ್ರವಣಮನನಾದಿಸಾಧನೇನ ಸಾಕ್ಷಾತ್ಕರೋಮೀತ್ಯರ್ಥಃ ॥ ಏವಮುತ್ತರತ್ರಾಪ್ಯಧ್ಯಾತ್ಮಪರತಯಾ ಯೋಜಯಿತುಂ ಶಕ್ಯಂ । ತಥಾಪಿ ಸ್ವರಸತ್ವಾಭಾವಾದ್ಗ್ರಂಥವಿಸ್ತರಭಯಾಚ್ಚ ನ ಲಿಖ್ಯತೇ ॥ ಯತ್ರ ದ್ವಾ ಸುಪರ್ಣೇತ್ಯಾದೌ ಸ್ಫುಟಮಾಧ್ಯಾತ್ಮಿಕೋ ಹ್ಯರ್ಥಃ ಪ್ರತೀಯತೇ ತತ್ರ ತತ್ರ ಪ್ರತಿಪಾದಯಾಮಃ । ಅಯಂ ಮಂತ್ರೋ ಯಾಸ್ಕೇನ ವ್ಯಾಖ್ಯಾತಃ । ಅಸ್ಯ ವಾಮಸ್ಯ ವನನೀಯಸ್ಯ ಪಲಿತಸ್ಯ ಪಾಲಯಿತುರಿತ್ಯಾದಿನಾ । ನಿ. ೪-೨೬ । ತಚ್ಚ ವ್ಯಾಖ್ಯಾನಮತ್ರಾನುಸಂಧೇಯಂ ॥

### । ಪ್ರತಿಪದಾರ್ಥ ।

**ವಾಮಸ್ಯ**—(ಎಲ್ಲರಿಂದಲೂ) ಸೇವಿಸಲ್ಪಡುವವನೂ । **ಪಲಿತಸ್ಯ**—(ವಿಶ್ವದ) ಪಾಲಕನೂ । **ಹೋತುಃ**—ಆಹ್ವಾನಾರ್ಹನಾದವನೂ ಆದ । **ಅಸ್ಯ**—ಯಾವ ಈ ಆದಿತ್ಯನುಂಟೋ । **ತಸ್ಯ**—ಅವನಿಗೆ । **ಮಧ್ಯಮಃ**—ಮಧ್ಯಮಸ್ಥಾನೀಯನಾದವನೂ । **ಅಶ್ನಃ**—ಎಲ್ಲವನ್ನೂ ವ್ಯಾಪಿಸಿರುವವನೂ ಆದ ವಾಯುವು । **ಭ್ರಾತಾ**—ಭ್ರಾತೃಸ್ಥಾನದಲ್ಲಿ । **ಅಸ್ತಿ**—ಇದ್ದಾನೆ (ಮತ್ತು) । **ಘೃತಪೃಷ್ಠಃ**— ಆಹುತಿರೂಪವಾದ ಘೃತದಿಂದ ವ್ಯಾಪ್ತವಾದ ದೇಹವುಳ್ಳ । **ತೃತೀಯಃ ಭ್ರಾತಾ**—ಮೂರನೆಯ ಭ್ರಾತೃವೂ ಇದ್ದಾನೆ । **ಅತ್ರ**—ಇವರುಗಳ ನಡುವೆ । **ವಿಶ್ಪತಿಂ**—ಮಾನವರಿಗೆ ಒಡೆಯನಾದವನೂ । **ಸಪ್ತಪುತ್ರಂ**—ರಶ್ಮಿರೂಪವಾದ ಸಪ್ತಪುತ್ರರಿಂದೊಡಗೂಡಿದವನೂ ಆದ **ಅಸ್ಯ**—ಈ ಆದಿತ್ಯನನ್ನು । **ಅಪಶ್ಯಂ**— ನೋಡುತ್ತಿದ್ದೇನೆ.

### ಭಾವಾರ್ಥ

ಸಕಲರಿಂದಲೂ ಸೇವಿಸಲ್ಪಡುವವನೂ, ವಿಶ್ವದ ಪಾಲಕನೂ, ಆಹ್ವಾನಾರ್ಹನಾದವನೂ ಆದ ಯಾವ ಈ ಆದಿತ್ಯನುಂಟೋ ಅವನಿಗೆ ಮಧ್ಯಮಸ್ಥಾನೀಯನಾದವನೂ, ಸಕಲವನ್ನೂ ವ್ಯಾಪಿಸಿರುವವನೂ ಆದ ವಾಯುವು ಭ್ರಾತೃಸ್ಥಾನದಲ್ಲಿದ್ದಾನೆ ಮತ್ತು ಆಹುತಿರೂಪವಾದ ಘೃತದಿಂದ ವ್ಯಾಪ್ತವಾದ ದೇಹವುಳ್ಳ ಮೂರನೆಯ ಭ್ರಾತೃವೂ ಇದ್ದಾನೆ, ಇವರುಗಳ ನಡುವೆ ಮಾನವರಿಗೆ ಒಡೆಯನಾದವನೂ ರಶ್ಮಿರೂಪವಾದ ಸಪ್ತಪುತ್ರರಿಂದೊಡಗೂಡಿದವನೂ ಆದ ಈ ಆದಿತ್ಯನು ನನ್ನ ಎದುರಿಗೆ ಗೋಚರವಾಗಿದ್ದಾನೆ.

## English Translation

I have beheld the Lord of Men with seven sons; of which delightful and benevolent (deity), who is the object of our invocation, there is an all-pervading middle brother, and a third brother, well fed with (oblations of) ghee.

**ವಿಶೇಷವಿಷಯಗಳು**

**ಸೂಕ್ತಂ ಯದಸ್ಯ ವಾಮೀಯಂ ವೈಶ್ವದೇವಂ ತದುಚ್ಯತೇ ।**
**ಪ್ರವಾದಾ ವಿವಿಧಾಸ್ತತ್ರ ದೇವಾನಾಂ ಚಾತ್ರ ಕೀರ್ತನಂ ॥**
**ಸೂಕ್ತೇಽಸ್ಯರ್ಚಿ ಪರೋಕ್ಷೋಕ್ತಾ ವಕ್ಷ್ಯಾಮಿ ಭ್ರಾತರಸ್ತ್ರಯಃ ।**
**ಅಗ್ನಿಸ್ತು ವಾಮಃ ಪಲಿತೋ ವಾಯುರ್ಭ್ರಾತಾ ತು ಮಧ್ಯಮಃ ।**
**ಘೃತಪೃಷ್ಠಸ್ತೃತೀಯೋಽತ್ರ ಸಪ್ತ ವೈ ರಶ್ಮಯಸ್ಸುತಾಃ ॥**

(ಬೃಹದ್ದೇವತಾ. ೪-೩೧ ರಿಂದ ೩೩)

**ಅಸ್ಯ ವಾಮಸ್ಯ** ಎಂಬ ಋಕ್ಕಿನಿಂದ ಪ್ರಾರಂಭವಾಗುವ ಸೂಕ್ತವು ವಿಶ್ವೇದೇವರನ್ನುದ್ದೇಶಿಸಿದೆ. ಇದರಲ್ಲಿ ನಾನಾ ವಿಧವಾದ ತತ್ತ್ವಾರ್ಥಗಳೂ ಅಡಗಿವೆ. ದೇವತೆಗಳನ್ನು ಆಯಾ ಸಂದರ್ಭಕ್ಕನುಸಾರವಾಗಿ ಉದ್ದೇಶಿಸಿದೆ. ಪ್ರಕೃತವಾದ ಈ ಋಕ್ಕಿನಲ್ಲಿ (೧-೧೬೪-೧) ಮೂರುಭಾತೃಗಳು ಪ್ರಥಮಪುರುಷದಲ್ಲಿ ನಿರ್ದೇಶಿಸಲ್ಪಟ್ಟಿದ್ದಾರೆ. ಅವರಾರೆಂದರೆ, ಲೋಕೋಪಕಾರಕನಾದ ಅಗ್ನಿಯೂ, ವಾಯುವೂ, ಆದಿತ್ಯನೂ ಆಗಿದ್ದಾರೆ. ಮತ್ತು ಆದಿತ್ಯನ ಸಪ್ತರಶ್ಮಿಗಳೂ ಸ್ತುತಿಸಲ್ಪಟ್ಟಿವೆ.

ಈ ಋಕ್ಕಿಗೆ ಆದಿತ್ಯಪರವಾದ ಒಂದರ್ಥವನ್ನೂ ಪರಬ್ರಹ್ಮಪರವಾದ ಇನ್ನೊಂದರ್ಥವನ್ನೂ ಮಾಡಿದೆ. ಇದಕ್ಕೆ ನಿರುಕ್ತಕಾರರ ನಿರ್ವಚನವು ಈರೀತಿಯಲ್ಲಿದೆ. ಅದು ಆದಿತ್ಯಪರವಾಗಿದೆ. (ನಿ. ೪-೨೬)

**ತಸ್ಯ ಭ್ರಾತಾ ಮಧ್ಯಮೋ ಅಸ್ತ್ಯಶನಃ**—ಸರ್ವವ್ಯಾಪಿಯಾದ ವಾಯುವು ಈ ಆದಿತ್ಯನಿಗೆ ಮಧ್ಯಸ್ಥಾನದ ಭ್ರಾತೃವು.

**ಅಥಾತೋ ಮಧ್ಯಸ್ಥಾನಾ ದೇವತಾಃ । ತಾಸಾಂ ವಾಯುಃ ಪ್ರಥಮಾಗಾಮೀ ಭವತಿ ॥**

(ನಿ. ೧೦-೧)

ಎಂದು ಮಧ್ಯಸ್ಥಾನದಲ್ಲಿರುವ ವಾಯುವು ಆದಿತ್ಯನಿಗೆ ಭ್ರಾತೃವೆಂದು ಹೇಳಿದೆ. ವಾಯುವಿಗೆ ಇಲ್ಲಿ **ಅಶ್ನಃ- ಅಶನಃ** ಎಂಬ ವಿಶೇಷಣವಿದೆ. ಎಲ್ಲಾ ಕಡೆಗಳಲ್ಲಿಯೂ ವ್ಯಾಪಿಸುವನೆಂದರ್ಥ. ಆದಿತ್ಯನಿಗೆ **ವಾಮಸ್ಯ, ಪಲಿತಸ್ಯ** ಎಂಬ ಎರಡು ವಿಶೇಷಣಗಳಿವೆ

**ವಾಮಸ್ಯ—ವನನೀಯಸ್ಯ**—ಸರ್ವರಿಂದಲೂ ಅಪೇಕ್ಷಿತನಾಗಿ ಸೇವಿಸಲ್ಪಡುವನೆಂದೂ ; **ಪಲಿತಸ್ಯ** ಎಂಬುದಕ್ಕೆ **ಪಾಲಯಿತುಃ । ವೃಷ್ಟ್ಯಾದಿಪ್ರದಾನೇನ ಪಾಲಕಸ್ಯ ।** ವೃಷ್ಟ್ಯಾದಿಗಳನ್ನು ಸುರಿಸುವುದರಿಂದ ಲೋಕ

ಪಾಲಕನು ಎಂದೂ ಅರ್ಥವಾಗುತ್ತದೆ. ಇಂತಹ ಆದಿತ್ಯನೊಂದಿಗೆ ವಾಯುವಿಗೆ ಭ್ರಾತೃತ್ವವು ಹೇಗೆ ಪ್ರಾಪ್ತವಾಯಿತೆಂದರೆ ;

**ಭ್ರಾತಾ—ಭರತೇರ್ಹರತಿಕರ್ಮಣೋ ಹರತೇ ಭಾಗಂ ಭರ್ತವ್ಯೋ ಭವತೀತಿ ವಾ ।** ಪ್ರಿತ್ರ್ಯಾರ್ಜಿತವಾದ ಆಸ್ತಿಯಲ್ಲಿ ಭಾಗವನ್ನು ವಹಿಸುತ್ತಾನೆಂಬುದರಿಂದಾಗಲಿ ಅಥವಾ ಆದರಿಂದ ಪೋಷಿಸಲ್ಪಡುತ್ತಾನೆ ಎಂಬುದರಿಂದಾಗಲಿ ಈ ಹೆಸರೆಂದು ವಿವರಿಸಿದೆ. ಆದರೆ ಇಲ್ಲಿ ವಾಯುವು ಆದಿತ್ಯನಿಗೆ ಸಂಬಂಧಿಸಿದ ಸ್ವತ್ತಿನಲ್ಲಿ ಯಾವ ರೀತಿಯಲ್ಲಿ ಭಾಗವನ್ನು ವಹಿಸುತ್ತಾನೆಂಬುದನ್ನು ಸಾಯಣರು ಈರೀತಿ ವಿವರಿಸಿದ್ದಾರೆ.

> **ವೃಷ್ಟ್ಯರ್ಥಂ ರಶ್ಮಿಭಿರಾಹೃತಾನಾಂ ಭೌಮಾನಾಂ ರಸಾನಾಂ ಹರಣಾದ್ವಾ ಭ್ರಾತೇತ್ಯುಚ್ಯತೇ । ಪ್ರಿತ್ರ್ಯೇಣ ಧನೇನ ಸ್ವಾರ್ಜಿತೇನ ವಾ ಭರ್ತವ್ಯಃ ಭವತೀತಿ ಭ್ರಾತಾ । ಮಧ್ಯಮೋ ವಾಯುಃ ಅಪಿ ವೃಷ್ಟ್ಯರ್ಥಂ ರಸೈಃ ಭರ್ತ್ತವ್ಯಃ ಭವತಿ ।**

ವೃಷ್ಟ್ಯರ್ಥವಾಗಿ ರಶ್ಮಿಗಳಿಂದ ಹೀರಲ್ಪಟ್ಟ ರಸದ ಭಾಗವನ್ನು ತಾನೂ ಹರಿಸಿ ಅದರಲ್ಲಿ ಭಾಗವಹಿಸುವುದರಿಂದ ಸೂರ್ಯನ ಭ್ರಾತೃವಾಗಬಹುದು. ಅಥವಾ ವೃಷ್ಟ್ಯರ್ಥವಾಗಿ ರಸದಿಂದ ಮಧ್ಯಮಸ್ಥಾನದ ವಾಯುವು ಪೋಷಿಸಲ್ಪಡಬೇಕಾದುದರಿಂದಲೂ ಆ ಕೆಲಸವನ್ನು ಆದಿತ್ಯನೇ ಮಾಡಬೇಕಾಗಿರುವುದರಿಂದಲೂ ಸಹ ಆದಿತ್ಯನಿಗೆ ವಾಯುವು ಭ್ರಾತೃವಾಗುತ್ತಾನೆ.

**ತೃತೀಯೋ ಭ್ರಾತಾ ಅಸ್ಯಾಯಮಗ್ನಿಃ** — ಆದಿತ್ಯನಿಗೆ ಅಗ್ನಿಯು ತೃತೀಯಭ್ರಾತೃವು ಹೇಗೆ ಆಗುತ್ತಾನೆಂದರೆ,

> **ರಾತ್ರೌ ಸವಿತುಸ್ತೇಜೋಭಾಗಸ್ಯ ಹರಣಾತ್ । ದಿವಾ ಸ್ವಕೀಯತೇಜೋಭಾಗಸ್ಯ ತದರ್ಥಮೇವ ಭರ್ತ್ತವ್ಯತ್ವಾತ್ ವಾ ಭ್ರಾತೃತ್ವಂ ।**

ರಾತ್ರಿಯಲ್ಲಿ ಅಗ್ನಿಯು ಆದಿತ್ಯನ ತೇಜಸ್ಸಿನ ಭಾಗವನ್ನು ವಹಿಸುವುದರಿಂದಲೂ, ಹಗಲಿನಲ್ಲಿ ತನ್ನ ತೇಜಸ್ಸನ್ನು ಸೂರ್ಯನಿಗೆ ಹಂಚಿಕೊಡುವುದರಿಂದಲೂ ಇಬ್ಬರೂ ಭ್ರಾತೃಗಳಾದರು.

**ಘೃತಪೃಷ್ಠಃ—ಘೃತಂ ಆಹುತಿಲಕ್ಷಣಂ ಪೃಷ್ಠೇ ಯಸ್ಯ ತಾದೃಶಃ ।** ಆಹುತಿರೂಪವಾದ ಘೃತವನ್ನು ಬೆನ್ನಿನಲ್ಲಿ ಹೊತ್ತುಕೊಂಡಿರುವ ಎಂದರ್ಥ. ಅಗ್ನಿಗೆ ಈ ವಿಶೇಷಣವು ಬಹಳ ಸಾಮಾನ್ಯವಾಗಿ, ಅನೇಕ ಕಡೆಗಳಲ್ಲಿ ಹೇಳಿದೆ. **ಆಜ್ಯಸ್ಪೃಷ್ಟಃ**—ಆಜ್ಯದಿಂದ ಸ್ಪೃಷ್ಟನಾದವನು ಎಂದೂ ಅರ್ಥವಾಗಬಹುದು.

**ಸಪ್ತಪುತ್ರಂ—ಸಪ್ತಮಪುತ್ರಂ ಸರ್ಪಣಪುತ್ರಮಿತಿ ವಾ ಸಪ್ತ ಸೃಪ್ತಾ ಸಂಖ್ಯಾ ಸಪ್ತಾದಿತ್ಯರಶ್ಮಯ ಇತಿ ವದಂತಿ ।** ಏಳನೆಯ ಪುತ್ರನೆಂದಾಗಲಿ, ಅಥವಾ ಸುತ್ತಲೂ ಪರಿಭ್ರಮಣವನ್ನು ಹೊಂದತಕ್ಕ ಪುತ್ರನೆಂದಾಗಲಿ ಅಥವಾ ಸಪ್ತಸಂಖ್ಯಾಕವಾದ ಆದಿತ್ಯರಶ್ಮಿಗಳೆಂದಾಗಲಿ ಅರ್ಥವಾಗುತ್ತದೆ. ಇಲ್ಲಿ ಸಪ್ತಮಪುತ್ರನೆಂಬುದಕ್ಕೆ ಸಾಯಣರು ಒಂದು ಐತಿಹಾಸಿಕವಾದ ಕಥೆಯನ್ನು ಉದಹರಿಸಿದ್ದಾರೆ.

> **ಅದಿತಿಃ ಪುತ್ರಕಾಮಾ । ಸಾಧ್ಯೇಭ್ಯೋ ದೇವೇಭ್ಯೋ ಬ್ರಹ್ಮೌದನಮಪಚತ್ । ತಸ್ಯಾ ಉಚ್ಛೇಷಣಮದದುಃ । ತತ್ಪ್ರಾಶ್ನಾತ್ । ಸಾ ರೇತೋಽಧತ್ತ । ತಸ್ಯೈ ಧಾತಾ ಚಾರ್ಯಮಾಚಾ-**

**ಜಾಯೇತಾಂ । ಸಾ ದ್ವಿತೀಯಮುಪಚತ್ ॥ ತಸ್ಯಾ ಉಚ್ಛೇಷಣಮದದುಃ । ತೇತ್ಪ್ರಾಶ್ನಾತ್ । ಸಾ ರೇತೋಽಧತ್ತ । ತಸ್ಯೈ ಮಿತ್ರಶ್ಚ ವರುಣಶ್ಚಾಜಾಯೇತಾಂ । ಸಾ ತೃತೀಯಮುಪಚತ್ ತಸ್ಯಾ ಉಚ್ಛೇಷಣಮದದುಃ । ತೇತ್ಪ್ರಾಶ್ನಾತ್ .... .... .... .... ಸಾ ರೇತೋಽಧತ್ತ । ತಸ್ಯಾ ಇಂದ್ರಶ್ಚ ವಿವಸ್ವಾಗ್ನಿಂಶ್ಚಾ ಜಾಯೇತಾಂ ।**

(ತೈ. ಬ್ರಾ. ೧-೧-೯-೧, ೨)

ಅದಿತಿಯು ಪುತ್ರನನ್ನು ಪಡೆಯಬೇಕೆಂಬ ಇಚ್ಛೆಯಿಂದ ಸಾಧ್ಯರನ್ನುದ್ದೇಶಿಸಿ ಬ್ರಹ್ಮೌದನವನ್ನು ಪಕ್ವಮಾಡಿದಳು. ಅವರು ತಿಂದು ಉಳಿದುದನ್ನು ಇವಳು ಉಪಭೋಗಿಸಿದನಂತರ ಇವಳು ಗರ್ಭವತಿಯಾಗಿ ಇವಳಿಂದ **ಅರ್ಯಮನು** ಉತ್ಪನ್ನನಾದನು. ಎರಡನೆಯ ಸಲವೂ ಹೀಗೆ ಮಾಡಲು **ಮಿತ್ರಾವರುಣರು** ಹುಟ್ಟಿದರು. ಮೂರನೆಯ ಸಲಕ್ಕೆ **ಅಂಶ** ಮತ್ತು ಭಗ ಇವರೂ, ಇನ್ನೊಂದು ಸಲಕ್ಕೆ **ಇಂದ್ರನೂ ಆದಿತ್ಯನೂ** ಉತ್ಪನ್ನರಾದರು. ಇವರಲ್ಲಿ **ಆದಿತ್ಯನು** ಸಪ್ತಮನು. ಆದುದರಿಂದ ನಿರುಕ್ತಕಾರರು ಹೇಳಿರುವ ಅರ್ಥಗಳಲ್ಲಿ ಇದೂ ಒಂದಾಗಿದೆ. ಅಥವಾ ಪ್ರವಾಹದಂತೆ ಸರಿಯತಕ್ಕ ರಶ್ಮಿಗಳೆಂದರ್ಥವಾಗಬಹುದು.

**ಅಧ್ಯಾತ್ಮಪಕ್ಷೇ ;—**

**ವಾಮಸ್ಯ—ವಿಶ್ವಸ್ಯ ಉದ್ಗರಿತುಃ ಸ್ರಷ್ಟುಃ ಇತ್ಯರ್ಥಃ ।** ಬ್ರಹ್ಮಾಂಡರೂಪದಲ್ಲಿ ವಿಶ್ವವನ್ನೆಲ್ಲಾ ಪ್ರಕಾಶಪಡಿಸಿ ಸೃಷ್ಟಿಸಿದ ಎಂದರ್ಥ.

**ಪಲಿತಸ್ಯ ಪಾಲಯಿತುಃ—ಸ್ವಸೃಷ್ಟಜಗತ್ಪಾಲನಶೀಲಸ್ಯ ।** ತಾನು ಸೃಷ್ಟಿಸಿದ ಜಗತ್ತನ್ನು ತಾನೇ ಪಾಲಿಸಲು ಸಮರ್ಥನಾದ ಮತ್ತು,

**ಹೋತುಃ—ಆದಾತುಃ । ಸ್ವಸ್ಮಿನ್ ಸಂಹರ್ತುಃ । ವಾಮಸ್ಯ, ಪಲಿತಸ್ಯ, ಹೋತುಃ** ಎಂಬ ಪದಗಳಿಗೆ ಸೃಷ್ಟಿ, ಸ್ಥಿತಿ (ಪಾಲನ) ಮತ್ತು ಪುನಃ ಪ್ರಳಯ ಎಂಬ ಮೂರು ಅರ್ಥಗಳನ್ನೂ ಮಾಡುತ್ತಾ **ಹೋತುಃ** ಎಂಬ ಪದಕ್ಕೆ **ಸ್ವಸ್ಮಿನ್ ಸಂಹರ್ತುಃ** ತನ್ನಲ್ಲೇ ಎಲ್ಲವನ್ನೂ ಲಯಮಾಡಿಕೊಳ್ಳತಕ್ಕ ಎಂದರ್ಥಮಾಡಿದ್ದಾರೆ. ಇದಕ್ಕೂ ಶ್ರುತಿಯ ಆಧಾರವಿದೆ.

**ಸ ಯದ್ಯದೇವಾಸೃಜತ ತತ್ತದತ್ತುಮಧ್ರಿಯತ ಸರ್ವಂ ವಾ ಅತ್ತೀತಿ ತದದಿತೇರದಿತಿತ್ವಂ ಸರ್ವಸ್ಯೈತಸ್ಯಾತ್ತಾ ಭವತಿ ಸರ್ವಮಸ್ಯಾನ್ನಂ ಭವತಿ ಯ ಏವಮೇತದದಿತೇರದಿತಿತ್ವಂ ವೇದ ॥**

(ಬೃ. ಉ. ೧-೨-೫)

ಪ್ರಜಾಪತಿಯು ತಾನು ಸೃಷ್ಟಿಸಿದುದನ್ನೆಲ್ಲಾ ಪುನಃ ಅನ್ನರೂಪದಲ್ಲಿ ಭಕ್ಷಿಸತೊಡಗಿದನು. ಅದೇ ಅವನ **ಅದಿತಿ** (ಅನಂತ) ಸ್ವರೂಪವು. ವಿಶ್ವವೆಲ್ಲವೂ ಅವನ ಅನ್ನವಾಗಿದೆ. ಇತ್ಯಾದಿ ವಾಕ್ಯಗಳಲ್ಲಿ ವರ್ಣಿತವಾಗಿರುವಂತೆ ಲಯಕರ್ತನಾದ ಈಶ್ವರನೇ ವಿಶ್ವವನ್ನೆಲ್ಲಾ ಪುನಃ ತನ್ನಲ್ಲೇ ಲಯಮಾಡಿಕೊಳ್ಳುವುದರಿಂದ ಈ **ಹೋತುಃ** ಎಂಬ ವಿಶೇಷಣವಿದೆ.

**ಮಧ್ಯಮೋ ಭ್ರಾತಾ ತದಂಶಭೂತಃ ಸೂತ್ರಾತ್ಮಾ ಮಧ್ಯಮಃ ಸರ್ವತ್ರ ಮಧ್ಯೇ ವರ್ತಮಾನೋಽಸ್ತಿ ಜಗದ್ಧಾರಕತ್ವೇನ ವರ್ತತೇ |** ಜಗತ್ತಿನ ಸಕಲ ವಸ್ತುಗಳ ಮಧ್ಯೆಯೂ ಸೂತ್ರಪ್ರಾಯನೂ ಬ್ರಹ್ಮಾಂಶ ಭೂತನೂ ಆದ ವಾಯುವು ಎಂದರ್ಥ. ಇದೇ ವಾಯುವು **ಅಶ್ನಃ ವ್ಯಾಪನಶೀಲಃ |** ಸರ್ವವ್ಯಾಪಿಯಾಗಿದ್ದಾನೆ.

> **ವಾಯುನಾ ವೈ ಗೌತಮ ಸೂತ್ರೇಣಾಯಂ ಚ ಲೋಕಃ ಪರಶ್ಚ ಲೋಕಃ ಸರ್ವಾಣಿ ಚ ಭೂತಾನಿ ಸಂರಬ್ಧಾನಿ ||**
>
> (ಬೃ. ಉ. ೩-೭-೨)

ಈ ಲೋಕವೂ, ಪರಲೋಕವೂ ಸಮಸ್ತಭೂತಗಳೂ ಸಹ ವಾಯುವೆಂಬ ಸೂತ್ರದಿಂದಲೇ ಪರಸ್ಪರವಾದ ಸಂಬಂಧ ವನ್ನು ಹೊಂದಿದೆ, ಮತ್ತು ಒಂದೇ ತತ್ತ್ವದಲ್ಲಡಗಿವೆ.

**ಘೃತಪೃಷ್ಠಃ—ಘೃತಮಿತ್ಯುದಕನಾಮ | ತೇನ ತತ್ಕಾರ್ಯಂ ಶರೀರಮುಚ್ಯತೇ | ತದೇವ ಸ್ಪೃಷ್ಟಂ ಸ್ಪರ್ಶಕಂ |** ಸ್ವಸ್ಪೃಷ್ಟವಾದುದರಿಂದ ಉದಕವೇ ತನ್ನ ಶರೀರರೂಪವಾಯಿತು. ಈ ಉದಕರೂಪದ ಶರೀರವು ತನ್ನ ಆವಿರ್ಭಾವದಲ್ಲಿ ಮೂರನೆಯ ರೂಪವನ್ನು ಹೊಂದಿ ತನ್ನ ಅಂಶವನ್ನೇ ಹೊಂದಿರುವುದರಿಂದ ಇದಕ್ಕೆ **ತೃತೀಯೋ ಭ್ರಾತಾ** ಎಂದು ಹೇಳಬಹುದು. ಅಥವಾ **ಘೃತ** ಶಬ್ದಕ್ಕೆ ಪ್ರದೀಪ್ತವೆಂಬ ಅರ್ಥವನ್ನು ಮಾಡಿದರೆ ಆಗ **ಪ್ರಕಾಶಿತ ಶರೀರಾಭಿಮಾನೀ** ಸೂತ್ರಾತ್ಮನಾದ ವಾಯುವಿನಂತೆ ಸೂಕ್ಷ್ಮಶರೀರಿಯಲ್ಲದೆ ಸ್ವರ್ಗಕ್ಕೆ ವಿಷಯನಾಗುತ್ತಾನೆಂದಭಿಪ್ರಾಯವು.

**ವಿಶ್ಪತಿಂ—ವಿಶಾಂ ಪ್ರಜಾನಾಂ ಪತಿಂ | ಉಪಲಕ್ಷಣಮೇತತ್ | ಸರ್ವಸ್ಯ ಪತಿಮಿತ್ಯರ್ಥಃ |** ಕೇವಲ ಮಾನವರೂಪವಾದ ಪ್ರಜೆಗಳಿಗೆ ಮಾತ್ರ ಪತಿಯೆಂದಲ್ಲ. ಆದರೆ ಸಕಲವಿಶ್ವಕ್ಕೂ ಪತಿಯೆಂದರ್ಥವೆಂದು ಈ ಪದಕ್ಕೆ ಅರ್ಥವಿಸ್ತೃತಿಯನ್ನು ತೋರಿಸಿದೆ.

**ಸರ್ವಸ್ಯ ಪತಿಃ ಸರ್ವಸ್ಯ ಈಶಾನಃ** (ಸಾಯಣ) ಎಂದು ವಿಶ್ವಾತ್ಮನ ಪತಿತ್ವವನ್ನು ಸ್ತುತಿಸಿರುವುದರಿಂದ ಇಲ್ಲಿಯೂ ವಿಶ್ವಕ್ಕೇ ಪ್ರಭುವೆಂದರ್ಥ. ಈ ಅಂಶವನ್ನೇ ಎಲ್ಲಾ ಶ್ರುತಿವಾಕ್ಯಗಳೂ ಪ್ರತಿಪಾದಿಸುತ್ತವೆ.

> **ಯದೈತಮನುಪಶ್ಯತ್ಯಾತ್ಮಾನಂ ದೇವಮಂಜಸಾ |**
> **ಈಶಾನಂ ಭೂತಭವ್ಯಸ್ಯ ನ ತತೋ ವಿಜುಗುಪ್ಸತೇ |**
>
> (ಬೃ. ಉ. ೪-೪-೧೫)

ವಿಶ್ವಕ್ಕೆಲ್ಲಾ ಪ್ರಭುವೆಂದೂ, ವಿಶ್ವಾತ್ಮನೆಂದೂ, ದೇವನೆಂದೂ ಇವನ ಸಾಕ್ಷಾತ್ಕಾರವನ್ನು ಪಡೆದರೆ ಆಗ ಅವನ ಸಾನ್ನಿಧ್ಯವು ಶಾಶ್ವತವಾಗಿ ಲಭಿಸುತ್ತದೆಯೆಂದು ಸಿದ್ಧವು.

> **ಸ ವಾ ಏಷ ಮಹಾನಜ ಆತ್ಮಾ ಯೋಽಯಂ ವಿಜ್ಞಾನಮಯಃ ಪ್ರಾಣೇಷು ಯ ಏಷೋಽಂತರ್ಹೃದಯ ಆಕಾಶಸ್ತಸ್ಮಿಞ್ಛೇತೇ ಸರ್ವಸ್ಯ ವಶೀ ಸರ್ವಸ್ಯೇಶಾನಃ ಸರ್ವಸ್ಯಾಧಿಪತಿಃ............ ಸರ್ವೇಶ್ವರ ಏಷ ಭೂತಾಧಿಪತಿರೇಷ ಭೂತಪಾಲಃ .... .... .... |**
>
> (ಬೃ. ಉ. ೪-೪-೨೨)

ಮಹತ್ತಾದ ಸ್ವರೂಪವುಳ್ಳವನೂ; ಅಜನೂ, ವಿಜ್ಞಾನಮಯನೂ ಆದ ಈ ಪರಮಾತ್ಮನು ಸರ್ವಕ್ಕೂ ಪ್ರಭುವಾಗಿಯೂ ನಿಯಂತೃವಾಗಿಯೂ ಸಕಲರ ಹೃದಯಾಕಾಶದಲ್ಲೂ ವ್ಯಾಪ್ತನಾಗಿದ್ದಾನೆ. ಇತ್ಯಾದಿಯಾಗಿ ಅನೇಕಕಡೆಗಳಲ್ಲಿ ಈಶ್ವರನ ವಿಶ್ವತತ್ತ್ವವನ್ನು ಸ್ತುತಿಸಿದೆ. ಕಠೋಪನಿಷತ್ತಿನಲ್ಲಿಯೂ ಸಹ ಈ ಅಂಶವನ್ನು ವರ್ಣಿಸುತ್ತಾ,

**ಯ ಇಮಂ ಮಧ್ವದಂ ವೇದ ಅತ್ಮಾನಂ ಜೀವಮಂತಿಕಾತ್ ।**
**ಈಶಾನಂ ಭೂತಭವ್ಯಸ್ಯ ನ ತತೋ ವಿಜುಗುಪ್ಸತೇ ॥**

(ಕಠ. ೪-೫)

ಎಂಬುದಾಗಿ ಭೂತಭವ್ಯಗಳಿಗೆ ಈಶಾನನೆಂದು ವರ್ಣಿಸಿರುವುದನ್ನು ಪ್ರಕೃತವಾದ ಋಕ್ಕಿನಲ್ಲಿ **ವಿಶ್ಪತಿ**ಯೆಂಬ ವಿಶೇಷಣ ದಿಂದ ಹೇಳಿದೆಯೆಂದು ಸಾಯಣರು ವಿವರಿಸಿದ್ದಾರೆ.

**ಸಪ್ತಪುತ್ರಂ—ಸಪ್ತಪುತ್ರಂ ಸಪ್ತಲೋಕಾಃ ಪುತ್ರಾ ಯಸ್ಯ ತಾದೃಶಂ ।** ಭೂರಾದಿಸಪ್ತಲೋಕ ಗಳನ್ನೂ ತಾನೇ ಸೃಷ್ಟಿಸಿದುದರಿಂದ ಸಪ್ತಪುತ್ರರನ್ನು ಪಡೆದಿರತಕ್ಕ **ವಿಶ್ವಪಿತಾ** ಎಂಬರ್ಥವನ್ನು ಕೊಡುತ್ತದೆ. ಅದನ್ನೇ **ಸ್ವಮಾಯಯಾ ಸೃಷ್ಟಸರ್ವಲೋಕಮಿತ್ಯರ್ಥಃ** ಎಂದು ಸಾಯಣರು ವ್ಯಾಖ್ಯಾನದಲ್ಲಿ ವಿವರಿಸಿದ್ದಾರೆ. **ಸಪ್ತ**ಪದಕ್ಕೆ ಅರ್ಥಾಂತರಗಳಿದ್ದು ಈಶ್ವರತತ್ತ್ವವನ್ನು ಈ ವಿಶೇಷಣವು ಬೇರೆ ಬೇರೆ ಗುಣಗಳನ್ನು ತೋರಿಸಿ ವರ್ಣಿಸುತ್ತದೆ.

**ಸಪ್ತಪ್ರಾಣಾಃ ಪ್ರಭವಂತಿ ತಸ್ಮಾತ್ ಸಪ್ತಾರ್ಚಿಷಃ ಸಮಿಧಃ ಸಪ್ತ ಜಿಹ್ವಾಃ ।**
**ಸಪ್ತ ಇಮೇ ಲೋಕಾ ಯೇಷು ಚರಂತಿ ಪ್ರಾಣಾ ಗುಹಾಶಯಾಂ ನಿಹಿತಾಃ ಸಪ್ತ ಸಪ್ತ ॥**

(ತೈ. ಉ. ೪-೧೨-೧)

ಈ ಪರಮಪುರುಷನಿಂದಲೇ ಸಪ್ತಪ್ರಾಣಿಗಳೂ ಪ್ರವೃತ್ತವೆ. ಸಪಾರ್ಚಿಗಳೂ, ಸಪ್ತಾಹುತಿಗಳೂ, ಗುಹಾಶಯಗಳಾದ ಪ್ರಾಣಗಳು ಸಂಚರಿಸತಕ್ಕ ಸಪ್ತಲೋಕಗಳೂ ಎಲ್ಲವೂ ಇವನಿಂದ ಉತ್ಪನ್ನವಾದುವುಗಳಾಗಿವೆ. ಇತ್ಯಾದಿವಾಕ್ಯ ಗಳಿಂದ ಸಪ್ತರೂಪವಾದ ಸೃಷ್ಟಿಗೆ ಕಾರಣನಾದುದರಿಂದ ಪರಮಪುರುಷನಿಗೆ **ಸಪ್ತಪುತ್ರ**ನೆಂದು ಕೀರ್ತಿಯಿದೆ. **ಸ್ವಮಾಯಯಾ ಸೃಷ್ಟಸರ್ವಲೋಕಂ** ತನ್ನ ದಿವ್ಯಶಕ್ತಿಯಿಂದ ಸರ್ವಲೋಕವನ್ನೂ ಸೃಷ್ಟಿಸಿದ ಪರಮಾತ್ಮನನ್ನು,

**ಅಪಶ್ಯಂ—ಪಶ್ಯೇಯಂ ಸಾಕ್ಷಾತ್ಕರೋಮೀತ್ಯರ್ಥಃ ।** ಕೇವಲಭೌತಿಕವಾದ ದೃಷ್ಟಿಯಿಂದ ನೋಡು ವುದಲ್ಲದೇ ಅಂತಶ್ಚಕ್ಷುಸ್ಸಿನಿಂದಲೂ ಧ್ಯಾನಪೂರ್ವಕವಾಗಿ ಸಾಕ್ಷಾತ್ಕಾರಮಾಡಿಕೊಳ್ಳುತ್ತೇನೆಂದರ್ಥವು. ಇದನ್ನೇ ಇನ್ನೂ ವಿಸ್ತಾರವಾಗಿ ವಿವರಿಸುತ್ತಾ,

> **ಅಯಮರ್ಥಃ । ಸ್ವಾಧೀನಮಾಯೋ ಜಗತ್ಕಾರಣಭೂತಃ ಪರಮೇಶ್ವರ ಏಕ ಏವ । ತತ ಉತ್ಪನ್ನೌ ಸ್ಥೂಲಸೂಕ್ಷ್ಮಶರೀರಾಭಿಮಾನಿನೌ ದ್ವೌ ವಿರಾಟ್ಸೂತ್ರಾತ್ಮಾನೌ । ತೇಷು ಮಧ್ಯೇ ದ್ವಯೋಃ ಸಾಕ್ಷಾತ್ಕಾರೇಣ ಮೋಕ್ಷಾಭಾವಾತ್ ಸೃಷ್ಟ್ಯಾದಿಕಾರಣಂ ಪರಮೇಶ್ವರಂ ಜ್ಞೇಯ-ತ್ವೇನ ಪ್ರಸಿದ್ಧಂ ಶ್ರವಣಮನನಾದಿಸಾಧನೇನ ಸಾಕ್ಷಾತ್ಕರೋದ್ವಮಿತ್ಯರ್ಥಃ ॥**

ಇಷ್ಟು ವಿವರಣೆಗೂ ಮುಖ್ಯತಾತ್ಪರ್ಯವಿಷ್ಟೇ. ಸೃಷ್ಟಿಸ್ಥಿತಿಲಯಗಳಿಗೆ ಕಾರಣನೂ, ಅನಿರ್ವಚನೀಯವಾದ ಶಕ್ತಿ ಯನ್ನೂ ಪಡೆದಿರತಕ್ಕವನೂ ಆದ ಈಶ್ವರನೊಬ್ಬನೇ. ಆವನಿಂದ **ವಿರಾಟ್ಸೂತ್ರಾತ್ಮ**ರೂ ಸ್ಥೂಲಸೂಕ್ಷ್ಮರೂಪವುಳ್ಳ

ವರೂ, ಮೇಲೆ ವಿವರಿಸಲ್ಪಟ್ಟ ಆಕಾರವುಳ್ಳವರೂ ಆದ ಎರಡು ಮೂಲತತ್ತ್ವಗಳು ಉತ್ಪನ್ನರಾದರು. ಆದರೆ ಆ ಮೂಲತತ್ತ್ವಗಳೂ ಕಾರ್ಯಪ್ರಪಂಚಕ್ಕೆ ಸೇರಿದುದರಿಂದ ಅವರ ಸಾಕ್ಷಾತ್ಕಾರದಿಂದ ನಿಜವಾದ ಮುಕ್ತಿಯು ಸಾಧ್ಯವಿಲ್ಲದುದಾಗಿ ಎಲ್ಲಕ್ಕೂ ಆದಿಕಾರಣನಾದ ಪರಮೇಶ್ವರನನ್ನು ಶ್ರವಣ, ಮನನ ಮತ್ತು ನಿದಿಧ್ಯಾಸನಗಳಿಂದ ಸಾಕ್ಷಾತ್ಕಾರ ಮಾಡಿಕೊಳ್ಳಬೇಕೆಂಬಭಿಪ್ರಾಯವು ಎಂದು ವಿವರಿಸಿದೆ.

ಹೀಗೆಯೇ ಈ ಸೂಕ್ತದ ಎಲ್ಲಾ ಋಕ್ಕುಗಳಿಗೂ ಸಹ ಆಯಾ ಋಕ್ಕಿನಲ್ಲಿ ಸ್ತುತ್ಯನಾದ ವೈಯಕ್ತಿಕವಾದ ದೇವತಾಪರವಾಗಿ ಒಂದರ್ಥವನ್ನೂ, ಆದಿಕಾರಣನಾದ ಈಶ್ವರನ ಪರವಾಗಿ ಇನ್ನೊಂದರ್ಥವನ್ನೂ ಮಾಡಲು ಸಾಧ್ಯವಿದ್ದರೂ ಸಹ, **ಸ್ವರಸತ್ತ್ವಾಭಾವಾತ್ ಗ್ರಂಥವಿಸ್ತರಭಯೋಚ್ಚ ನ ಲಿಖ್ಯತೇ**-ಅನೇಕಕಡೆಗಳಲ್ಲಿ ಆಧ್ಯಾತ್ಮಿಕವಾದ ಅರ್ಥವು ಸಹಜವಾಗಿ ಹೊಂದಿಕೊಳ್ಳುವುದಿಲ್ಲವಾದುದರಿಂದಲೂ, ಹೊಂದಿಕೊಳ್ಳುವ ಕಡೆಗಳಲ್ಲಿ ವಿವರಿಸಲು ಗ್ರಂಥವು ಬಹಳವಾಗಿ ವಿಸ್ತರಿಸುವುದೆಂಬ ಭೀತಿಯಿಂದಲೂ ಆ ಕಾರ್ಯವನ್ನು ಪ್ರಯತ್ನಿಸಿಲ್ಲ. ಆದರೆ, **ಯತ್ರ ದ್ವಾ ಸುಪರ್ಣಾವಿತ್ಯಾದೌ ಸ್ಫುಟಂ ಆಧ್ಯಾತ್ಮಿಕೋ ಹ್ಯರ್ಥಃ ಪ್ರತೀಯತೇ ತತ್ರ ತತ್ರ ಪ್ರತಿಪಾದಯಾಮಃ** । ಎಲ್ಲೆಲ್ಲಿ "ದ್ವಾ ಸುಪರ್ಣಾ" ಇತ್ಯಾದಿಯಾಗಿ ಉಪನಿಷದ್ವಾಕ್ಯಗಳಲ್ಲಿ ತೋರುವ ಅರ್ಥಗಳು ಸ್ಪಷ್ಟವಾಗಿ ಆಧ್ಯಾತ್ಮಿಕವಾಗಿ ಇರುವುವೋ ಅಲ್ಲೆಲ್ಲಾ ಎರಡು ಅರ್ಥಗಳನ್ನೂ ವಿವರಿಸಲಾಗುತ್ತದೆ. ಉಳಿದೆಡೆಗಳಲ್ಲಿ ವೈಯಕ್ತಿಕವಾದ ದೇವತಾಪರವಾದ ಅರ್ಥವನ್ನು ಮಾತ್ರ ತಿಳಿಸಲಾಗುತ್ತದೆ.

### ವ್ಯಾಕರಣಪ್ರಕ್ರಿಯಾ

**ಅಶ್ನಃ**—ಅಶೂ ವ್ಯಾಪ್ತೌ ಧಾತು. ಬಹುಲಗ್ರಹಣ ಸಾಮರ್ಥ್ಯದಿಂದ ಇದಕ್ಕೂ ನನ್‌ಪ್ರತ್ಯಯ ಬರುತ್ತದೆ. ನಿತ್ತಾದುದರಿಂದ ಆದ್ಯುದಾತ್ತಸ್ವರ ಬರುತ್ತದೆ.

**ತೃತೀಯಃ**—ತ್ರಯಾಣಾಂ ಪೂರಣಃ ತೃತೀಯಃ ಪೂರಣಾರ್ಥದಲ್ಲಿ ಡಟ್ ಪ್ರತ್ಯಯ ಬಂದಾಗ **ತ್ರೇಃ ಸಂಪ್ರಸಾರಣಂ ಚ** (ಪಾ. ಸೂ. ೫-೨-೫೫) ಎಂಬುದರಿಂದ ಅದಕ್ಕೆ ತೀಯಾದೇಶ. ತ್ರಿ ಎಂಬಲ್ಲಿಯ ರೇಫಕ್ಕೆ ಸಂಪ್ರಸಾರಣ. ಪ್ರತ್ಯಯದ ಆದ್ಯುದಾತ್ತಸ್ವರ ಬರುತ್ತದೆ.

**ಘೃತಪೃಷ್ಠಃ**—ಘೃತಂ ಪೃಷ್ಠೇ ಯಸ್ಯ ಸಃ **ಬಹುವ್ರೀಹೌ ಪ್ರಕೃತ್ಯಾ ಪೂರ್ವಪದಮ್** (ಪಾ. ಸೂ. ೬-೨-೧) ಎಂಬುದರಿಂದ ಪೂರ್ವಪದ ಪ್ರಕೃತಿಸ್ವರ ಬರುತ್ತದೆ.

**ಅಪಶ್ಯಮ್**—ದೃಶಿರ್ ಪ್ರೇಕ್ಷಣೇ. ಧಾತು. ಲಙ್ ಉತ್ತಮಪುರುಷ ಏಕವಚನಾಂತರೂಪ. **ಅತಿ**ಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

**ವಿಶ್ಪತಿಮ್**—ವಿಶಾಂ ಪತಿಃ ವಿಶ್ಪತಿಃ ತಮ್ **ಪತ್ಯಾವೈಶ್ವರ್ಯೇ** (ಪಾ. ಸೂ. ೬-೨-೧೮) ಎಂಬುದರಿಂದ ಪೂರ್ವಪದಪ್ರಕೃತಿಸ್ವರ ಪ್ರಾಪ್ತವಾದರೆ ಅದಕ್ಕೆ ಬಾಧಕವಾಗಿ **ಪರಾದಿಶ್ಛಂದಸಿ ಬಹುಲಮ್** (ಪಾ, ಸೂ. ೬-೨-೧೯೯) ಎಂಬುದರಿಂದ ಉತ್ತರಪದಾದ್ಯುದಾತ್ತಸ್ವರ ಬರುತ್ತದೆ ॥ ೧ ॥

:o:

ಸಂಹಿತಾಪಾಠಃ

ಸಪ್ತ ಯುಂಜಂತಿ ರಥಮೇಕಚಕ್ರಮೇಕೋ ಅಶ್ವೋ ವಹತಿ ಸಪ್ತನಾಮಾ ।
ತ್ರಿನಾಭಿ ಚಕ್ರಮಜರಮನರ್ವಂ ಯತ್ರೇಮಾ ವಿಶ್ವಾ ಭುವನಾಧಿ ತಸ್ಥುಃ ॥
॥ ೨ ॥

ಪದಪಾಠಃ

ಸಪ್ತ । ಯುಂಜಂತಿ । ರಥಂ । ಏಕಽಚಕ್ರಂ । ಏಕಃ । ಅಶ್ವಃ । ವಹತಿ । ಸಪ್ತಽನಾಮಾ ।
ತ್ರಿಽನಾಭಿ । ಚಕ್ರಂ । ಅಜರಂ । ಅನರ್ವಂ । ಯತ್ರ । ಇಮಾ । ವಿಶ್ವಾ । ಭುವನಾ । ಅಧಿ । ತಸ್ಥುಃ ॥ ೨ ॥

ಸಾಯಣಭಾಷ್ಯಂ

ಏಕಚಕ್ರಮೇಕರಥಾಂಗೋಪೇತಂ । ಯದ್ಯಪಿ ತ್ರೀಣಿ ಚಕ್ರಾಣಿ ತಥಾಪಿ ತೇಷಾಮೇಕರೂಪತ್ವಾದೇಕಚಕ್ರಮಿತ್ಯುಚ್ಯತೇ । ರಥಂ ರಂಹಣಸ್ವಭಾವಂ ಸೂರ್ಯಸ್ಯ ಸಂಬಂಧಿನಂ ಸಪ್ತೈತತ್ಸಂಖ್ಯಾಕಾ ಅಶ್ವಾ ಯುಂಜಂತಿ । ಅನುಬಧ್ನಂತಿ । ವಹಂತ್ಯಹೋರಾತ್ರನಿರ್ವಾಹಾಯ । ಕಿಂ ವಸ್ತುತಃ ಸಪ್ತ ನೇತ್ಯಾಹ। ಏಕೋಽಶ್ವಃ ಸಪ್ತನಾಮೈಕ ಏವ ಸಪ್ತಾಭಿಧಾನಃ ಸಪ್ತಧಾ ನಮನಪ್ರಕಾರೋ ವಾ । ಏಕ ಏವ ವಾಯುಃ ಸಪ್ತರೂಪಂ ಧೃತ್ವಾ ವಹತೀತ್ಯರ್ಥಃ । ವಾಯ್ವಧೀನತ್ವಾದಂತರಿಕ್ಷಸಂಚಾರಸ್ಯ । ಏಕಚಕ್ರಮಿತ್ಯುಕ್ತಂ ಕೀದೃಶಂ ತದಿತ್ಯತ ಆಹ । ತ್ರಿನಾಭಿ ವಲಯತ್ರಯಮಧ್ಯಸ್ಥಿತನಾಭಿಸ್ಥಾನೀಯಛಿದ್ರತ್ರಯೋಪೇತಂ ಅಜರಮಮರಣಧರ್ಮಕಂ ಅನರ್ವಮಶಿಥಿಲಂ । ಪುನಸ್ತದೇವ ವಿಶೇಷ್ಯತೇ । ಯತ್ರ ಯಸ್ಮಿಂಶ್ಚಕ್ರ ಇಮಾ ವಿಶ್ವಾ ಭುವನೇಮಾನಿ ಪ್ರಸಿದ್ಧಾನಿ ಸರ್ವಾಣಿ ಭೂತಜಾತಾನ್ಯಧ್ಯಾಶ್ರಿತ್ಯ ತಸ್ಥುಃ । ತಿಷ್ಠಂತಿ । ಯದ್ವಾ । ಏಕಚಕ್ರಮೇಕಚಾರಿಣಮಸಾಹಾಯ್ಯೇನ ಸಂಚರಂತಂ ರಥಮಾದಿತ್ಯಮಂಡಲಂ ಸಪ್ತ ಯುಂಜಂತಿ । ಸರ್ಪಣಸ್ವಭಾವಾಃ ಸಪ್ತಸಂಖ್ಯಾ ವಾ ರಶ್ಮಯಃ ಸಪ್ತಪ್ರಕಾರಕಾರ್ಯಾ ಅಸಾಧಾರಣಾಃ ಪರಸ್ಪರವಿಲಕ್ಷಣಾಃ ಷಡೃತವಃ । ಏಕ ಸಾಧಾರಣ ಇತ್ಯೇವಂ । ಅಥವಾ ಮಾಸದ್ವಯಾತ್ಮಕಾಃ ಷಟ್ ಅಪರೋಽಧಿಕಮಾಸಾತ್ಮಕ ಇತ್ಯೇವಂ ಸಪ್ತರ್ತವೋ ಯುಂಜಂತಿ । ಏತಸ್ಯ ಕಾರ್ಯಂ ನಿರ್ವಹಂತೀತ್ಯರ್ಥಃ । ಸ ಚೈಕೋಽಸಹಾಯೋಽಶ್ವೋ ವ್ಯಾಪನಶೀಲ ಆದಿತ್ಯಃ ಸಪ್ತನಾಮಾ ಸಪ್ತ ರಸಾನಾಂ ಸಂನಮಯಿತಾರೋ ಗಶ್ಮಯೋ ಯಸ್ಯ ತಾದೃಶಃ ಸಪ್ತರ್ಷಿಭಿಃ ಸ್ತೂಯಮಾನೋ ವಾದಿತ್ಯೋ ವಹತಿ । ಧಾರಯತಿ । ಭ್ರಾಮಯತೀತ್ಯರ್ಥಃ । ಕಿಂ । ತ್ರಿನಾಭಿ ಚಕ್ರಂ । ತಿಸ್ರೋ ನಾಭಿಸ್ಥಾನೀಯಾಃ ಸಂಧ್ಯಾಃ ಸಂಬದ್ಧಾ ವಾ ತ್ರಯ ಋತವೋ ಯಸ್ಯ ತತ್ತಾದೃಶಂ । ಕೇ ತೇ । ಗ್ರೀಷ್ಮವರ್ಷಾಹೇಮಂತಾಖ್ಯಾಃ । ಯದ್ವಾ । ಭೂತಭವಿಷ್ಯದ್ವರ್ತಮಾನಾಖ್ಯಾಸ್ತ್ರಯಃ ಕಾಲಾಸ್ತ್ರಿನಾಭಯಃ । ತದ್ವಿಶಿಷ್ಟಂ ಚಕ್ರಂ ಚಕ್ರವತ್ಪುನಃ ಪುನಃ ಪರಿಭ್ರಮಮಾಣಂ ಸಂವತ್ಸರಾಖ್ಯಂ ಚಕ್ರಮಜರಂ ಮರಣರಹಿತಂ । ನ ಹಿ ಕದಾಚಿದಪಿ ಕಾಲೋ ಮ್ರಿಯತೇ । ಅನಾದಿನಿಧನಃ ಕಾಲ ಇತಿ ಸ್ಮೃತೇಃ । ಅನರ್ವಮಪ್ರತಿಹತಂ । ಈದೃಶಂ ಸಂವತ್ಸರಾಖ್ಯಂ ಚಕ್ರಂ

ನಾನಾಕಾಲಾವಯವೋಪೇತಮಯಮಾದಿತ್ಯಃ ಪುನರಾವರ್ತಯತಿ । ಸಂವತ್ಸರಾದರ್ವಾಚೀನಾನಾಂ ತತ್ರ್ಯಂ ವಾಂತರ್ಭಾವಾತ್ ತತೋ ಯುಗಾದೀನಾಂ ತದಾವೃತ್ತಿಸಾಧ್ಯತ್ವಾತ್ಸಂವತ್ಸರಸ್ಯ ಚಕ್ರತ್ವೇನ ನಿರೂಪಣಂ। ಪುನಃ ಕೀದೃಶಂ ತತ್ । ಯತ್ರ ಯಸ್ಮಿಂಶ್ಚಕ್ರೇ ಇಮಾ ವಿಶ್ವಾ ಭುವನೇಮಾನಿ ಸರ್ವಾಣಿ ಭೂತಾನ್ಯಧಿ ತಸ್ಥುಃ ಆಶ್ರಿತ್ಯ ತಿಷ್ಠಂತಿ ಕಾಲಾಧೀನತ್ವಾತ್ಸರ್ವಸ್ಯ ಸ್ಥಿತೇಃ । ಈದೃಶಸ್ಯ ಕಾಲಸ್ಯ ಕಾರಣಭೂತಪರಮೇಶ್ವರ-ಪರಿಜ್ಞಾನೇನ ಮೋಕ್ಷಸದ್ಭಾವಾತ್ ಜ್ಞಾನಮೋಕ್ಷಾಕ್ಷರಪ್ರಶಂಸಾ ಚೇತ್ಯನುಕ್ರಮಣ್ಯಾಮುಕ್ತಂ । ಅಯ-ಮಪಿ ಮಂತ್ರೋ ಯಾಸ್ಕೇನ ಸಪ್ತ ಯುಂಜಂತಿ ರಥಮೇಕಚಕ್ರಮೇಕಚಾರಿಣಮಿತ್ಯಾದಿನಾ ವ್ಯಾಖ್ಯಾತಃ। ನಿ. ೪-೨೭ । ತದತ್ರಾಪ್ಯನುಸಂಧೇಯಂ ॥

### ಪ್ರತಿಪದಾರ್ಥ

**ಏಕಚಕ್ರಂ**— ಒಂದೇ ಚಕ್ರವುಳ್ಳ । **ರಥಂ**—ರಥಕ್ಕೆ । **ಸಪ್ತ**—ಏಳು (ಅಶ್ವಗಳನ್ನು) । **ಯುಂಜಂತಿ**—ಸೇರಿಸುತ್ತಾರೆ । **ಸಪ್ತನಾಮಾ**—ಏಳುವಿಧಗಳಾಗಿ ಕರೆಯಲ್ಪಡುವ । **ಏಕಃ ಅಶ್ವಃ**— ಒಂದೇ ಒಂದು ಅಶ್ವವು । **ವಹತಿ** (ಈ ರಥವನ್ನು) ವಹಿಸುತ್ತದೆ । **ಯತ್ರ**—ಯಾವ ಚಕ್ರದಲ್ಲಿ । **ವಿಶ್ವಾ** — ಸಮಸ್ತವಾದ । **ಇಮಾ ಭುವನಾ**—ಈ ಲೋಕಗಳೆಲ್ಲವೂ । **ಅಧಿ ತಸ್ಥುಃ**—ಆಶ್ರಯಿಸಿ ನಿಂತಿವೆಯೋ ಅಂತಹ । **ತ್ರಿನಾಭಿ**—ನಾಭಿತ್ರಯವುಳ್ಳ । **ಚಕ್ರಂ**—ಈ ಚಕ್ರವು । **ಅಜರಂ**—ಮರಣರಹಿತವಾದುದೂ । **ಅನರ್ವಂ**-ಅಶಿಥಿಲವಾದುದಾಗಿಯೂ ಇದೆ.

### ಭಾವಾರ್ಥ

ಒಂದೇ ಚಕ್ರವುಳ್ಳ ರಥಕ್ಕೆ ಏಳು ಅಶ್ವಗಳನ್ನು ಸೇರಿಸುತ್ತಾರೆ ಏಳು ವಿಧಗಳಾಗಿ ಕರೆಯಲ್ಪಡುವ ಒಂದೇ ಒಂದು ಅಶ್ವವು ಈ ರಥವನ್ನು ವಹಿಸುತ್ತದೆ. ಯಾವ ಚಕ್ರದಲ್ಲಿ ಸಮಸ್ತವಾದ ಈ ಲೋಕಗಳೆಲ್ಲವೂ ಆಶ್ರಯಿಸಿ ನಿಂತಿವೆಯೋ ಅಂತಹ ನಾಭಿತ್ರಯವುಳ್ಳ ಈ ಚಕ್ರವು ಮರಣರಹಿತವಾದುದೂ ಅಶಿಥಿಲವಾದುದೂ ಆಗಿದೆ.

### English Translation

They yoke the seven (horses) to the one-wheeled car: one horse, named seven, bears it along: the three-axled wheel is undecaying, never loosened, and in it all these regions of the universe abide.

### ವಿಶೇಷವಿಷಯಗಳು

ಈ ಋಕ್ಕಿನ ಅರ್ಥವು ಬಹಳ ಗಭೀರವಾದುದು. ಸಾಯಣರು ಸಾಧ್ಯವಾದಷ್ಟು ವಿವರಿಸಿದ್ದರೂ ಸಹ ಕೆಲವೆಡೆಗಳಲ್ಲಿ ನಿಷ್ಕೃಷ್ಟವಾದ ಅರ್ಥವನ್ನು ಹೇಳುವುದು ಕಷ್ಟ. ಇದಕ್ಕೆ ನಿರುಕ್ತಕಾರರ ವ್ಯಾಖ್ಯಾನವು ಈರೀತಿಯಿದೆ. ಮೊದಲು, ಏಕಚಕ್ರಂ ಎಂಬುದನ್ನು ವಿವರಿಸುತ್ತಾ, (ನಿ. ೪-೨೭) **ಸಪ್ತ ಯುಂಜಂತಿ ರಥಮೇಕಚಕ್ರಂ**—ಏಕಚಾರಿಣಂ ಚಕ್ರಂ ಚಕತೇರ್ವಾ ಚರತೇರ್ವಾ ಕ್ರಾಮತೇರ್ವಾ. ಪ್ರತಿಘಾತಾರ್ಥಕವಾದ **ಚರ್** ಅಥವಾ **ಕ್ರಮು** ಧಾತುವಿನಿಂದ **ಚಕ್ರ** ಶಬ್ದವು ನಿಷ್ಪನ್ನವಾಗಿದೆ. **ಏಕಚಕ್ರಂ-ಏಕಚಾರಿಣಂ.** ಒಂದೇ ಚಕ್ರದ ಆಧಾರದಮೇಲೆ ಸಂಚರಿಸತಕ್ಕ ರಥವು. ಈ ರಥವನ್ನು ಸಪ್ತರಶ್ಮಿಗಳು ವಹಿಸುತ್ತವೆಯೆಂದು ಹೇಳಿ ಇದು

ಸೂರ್ಯರೂಪವಾದ ರಥವೆಂದು ತಿಳಿಸಿದ್ದಾರೆ. ಇಲ್ಲಿ ಸಪ್ತಶಬ್ದಕ್ಕೆ **ಸಪ್ತಾಸ್ಮೈ ರಶ್ಮಯೋ ರಸಾನಭಿಸನ್ನಾಮಯಂತಿ** ಇವನಿಗಾಗಿ ಸಪ್ತರಶ್ಮಿಗಳೂ ರಸಗಳನ್ನು ಹೀರುತ್ತವೆ ಎಂದಾಗಲಿ ಅಥವಾ **ಸಪ್ತೈನಮೃಷಯಃ ಸ್ತುವಂತೀತಿ ವಾ**-ಸಪ್ತರ್ಷಿಗಳು ಇವನನ್ನು ಸ್ತುತಿಸುತ್ತಾರೆಂದಾಗಲಿ ಅರ್ಥವಾಗುತ್ತದೆ. ನಿರುಕ್ತಕಾರರ ಅರ್ಥವು ಸೂರ್ಯಪರವಾಗಿದೆ. ಇದನ್ನು ದುರ್ಗಾಚಾರ್ಯರು ವಿವರಿಸುತ್ತಾ, **ರಥಂ-ರಂಹಣಮಾದಿತ್ಯಂ, ಉದ್ಯನ್ನೇವ ಹ್ಯಸಾವಾದಿತ್ಯೋ ರಶ್ಮಿಭಿಃ ಯುಜ್ಯತೇ, ರಂಹಣಶ್ಚಾಸೌ ಮುಹೂರ್ತಮಪ್ಯನವಸ್ಥಾಯಿತ್ವಾತ್ । ಏಕಚಕ್ರಂ-ಏಕ ಏವ ಹ್ಯಸಾವಂತರಿಕ್ಷೇ ಚರತಿ, ಏಕೋಽಶ್ವಃ-ಅಶನೋ ವ್ಯಾಪನಃ ಸರ್ವಭೂತಾನಾಂ।** ಸರ್ವದಾ ಪರಿಭ್ರಮಣವನ್ನು ಮಾಡುತ್ತಿರುವ ಆದಿತ್ಯನು ಉದಯಿಸಿದೊಡನೆಯೇ ಸಪ್ತರಶ್ಮಿಗಳಿಂದ ಕೂಡಿಕೊಳ್ಳುತ್ತಾನೆ. ಒಂದು ಮುಹೂರ್ತವೂ ವಿಶ್ರಾಂತಿಯಿಲ್ಲದೇ ಸಂಚರಿಸುವವನಾದುದರಿಂದ ಆದಿತ್ಯನಿಗೆ **ರಥ**ವೆಂಬ ಹೆಸರು ಇಲ್ಲಿ ಅವನ ಸ್ವರೂಪವನ್ನು ತಿಳಿಸುತ್ತದೆ. ಇಂತಹ ವಿಶ್ವಸಂಚಾರಿಯಾದ ಆದಿತ್ಯನು ವಿಶ್ವವನ್ನೆಲ್ಲಾ ತಾನೊಬ್ಬನೇ ವ್ಯಾಪಿಸುತ್ತಾ ಸಪ್ತರಶ್ಮಿಗಳೊಂದಿಗೆ ಸೇರಿಕೊಳ್ಳುತ್ತಾನೆ ಎಂದು ವಿವರಿಸಿದೆ

ಸಾಯಣರು ಈ ಪೂರ್ವಾರ್ಧಕ್ಕೆ ಸೂರ್ಯನ ರಥಪರವಾದ ಅರ್ಥವನ್ನು ಮಾಡಿದ್ದಾರೆ.

**ಏಕಚಕ್ರಂ—ಏಕರಥಾಂಗೋಪೇತಂ । ಯದ್ಯಪಿ ತ್ರೀಣಿ ಚಕ್ರಾಣಿ ತಥಾಪಿ ತೇಷಾಮೇಕರೂಪತ್ವಾತ್ ಏಕಚಕ್ರಮಿತ್ಯುಚ್ಯತೇ ರಥಂ ರಂಹಣಸ್ವಭಾವಂ ಸೂರ್ಯಸ್ಯ ಸಂಬಂಧಿನಂ ।** ಸೂರ್ಯನ ರಥಕ್ಕೆ ಮೂರು ಚಕ್ರಗಳಿರುವುದು ಪ್ರಸಿದ್ಧವಾದರೂ ಸಹ ಅವುಗಳ ರೂಪವು ಒಂದೇ ಆದುದರಿಂದ ಇಲ್ಲಿ **ಏಕಚಕ್ರ**ವೆಂದು ಹೇಳಿದೆ.

ನಿರುಕ್ತಕಾರರು ರಥಶಬ್ದಕ್ಕೆ ಹೇಳಿರುವ ನಿರ್ವಚನದ ಪ್ರಕಾರ ಇಲ್ಲಿ ಆದಿತ್ಯಪರ್ಯಾಯವಾಗಿಯಾಗಲಿ ಅಥವಾ ಆದಿತ್ಯನ ರಥದ ಪರ್ಯಾಯವಾಗಿಯಾಗಲಿ ಈ ಪದವ ಅರ್ಥವನ್ನು ಹೇಳಬಹುದು.

**ರಥಃ ರಂಹತೇರ್ಗತಿಕರ್ಮಣಃ । ಸ್ಥಿರತೇರ್ವಾ ಸ್ಯಾದ್ವಿಪರೀತಸ್ಯ । ರಮಮಾಣೋಽಸ್ಮಿಂಸ್ತಿಷ್ಠತೀತಿ ವಾ । ರಪತೇರ್ವಾ ರಸತೇರ್ವಾ ।**

(ನಿ. ೯-೧೧)

ಗತಿ ಅಥವಾ ವೇಗವೆಂದು ಅರ್ಥವನ್ನು ಕೊಡುವ **ರಂಹ್** ಧಾತುವಿನಿಂದಾಗಲಿ, ಅಥವಾ ವರ್ಣವ್ಯತ್ಯಯವಾಗಿ **ಸ್ಥಿರ** ಎಂಬುದರಿಂದಾಗಲಿ, ಇದರಲ್ಲಿ ಕುಳಿತು ಹರ್ಷಪಡು ಎಂಬರ್ಥವನ್ನು ಕೊಡುವ **ರಮ್** ಧಾತುವಿನಿಂದಾಗಲಿ ಅಥವಾ ಶಬ್ದಮಾಡು ಎಂಬರ್ಥವುಳ್ಳ **ರಪ್** ಅಥವಾ **ರಸ್** ಧಾತುವಿನಿಂದಾಗಲಿ ನಿಷ್ಪನ್ನವಾಗಿದೆಯೆಂದು ನಿರುಕ್ತಕಾರರು,

**ವನಸ್ಪತೇ ವೀಡ್ವಂಗೋ ಹಿ ಭೂಯಾ ಅಸ್ಮತ್ಸಖಾ ಪ್ರತರಣಃ ಸುವೀರಃ ।**
**ಗೋಭಿಃ ಸನ್ನದ್ಧೋ ಅಸಿ ವೀಳಯಸ್ವಾಸ್ಥಾತಾ ತೇ ಜಯತು ಜೇತ್ವಾನಿ ॥**

**(ಋ. ಸಂ. ೬-೪೭-೨೬)**

ಎಂಬ ಋಕ್ಕನ್ನುದಹರಿಸಿ ರಥದ ನಿರ್ವಚನವನ್ನು ಹೇಳಿದ್ದಾರೆ. [ಕೆಲವೆಡೆಗಳಲ್ಲಿ ರಥಗಳಲ್ಲಿ ಓಡಾಡತಕ್ಕ ಪುತ್ರಾದಿಗಳಿಗೂ ಈ ಪದದಿಂದಲೇ ನಿರ್ದೇಶಮಾಡಿದೆ]. ಪ್ರಕೃತವಾದ ಋಕ್ಕಿನಲ್ಲಿ **ಏಕಚಾರಿಣಂ ರಥಂ** ಒಬ್ಬನೇ ಪರಿಭ್ರಮಣವನ್ನು ಮಾಡುತ್ತಿರುವ ಸೂರ್ಯನೆಂದರ್ಥವು. ದುರ್ಗಾಚಾರ್ಯರು ಈ ವಾಕ್ಯವನ್ನು ವಿವರಿಸುತ್ತಾ ರಥಂ ರಂಹಣ-

ಮಾದಿತ್ಯಂ ರಂಹಣಶ್ಚಾಸೌ ಮುಹೂರ್ತಮಪ್ಯನವಸ್ಥಾಯಿತ್ವಾತ್ । ಒಂದು ಕ್ಷಣವೂ ವಿಶ್ರಾಂತಿಯಿಲ್ಲದೆ ಸಂಚರಿಸುತ್ತಿರುವುದರಿಂದ ಆದಿತ್ಯನಿಗೆ ಈ ಹೆಸರೆಂದು ತಿಳಿಸಿದ್ದಾರೆ.

ಹೀಗೆ ರಥಶಬ್ದಕ್ಕೆ ಸೂರ್ಯನೆಂದರ್ಥಮಾಡಿದರೆ ಆಗ ಸಪ್ತಶಬ್ದಕ್ಕೆ ರಶ್ಮಿಗಳೆಂದೂ, ರೂಢವಾದ ಸೂರ್ಯನ ರಥವೆಂದರ್ಥಮಾಡಿದರೆ ಆಗ ಸಪ್ತಾಶ್ವಗಳೆಂದೂ ತಿಳಿಯಬೇಕಾಗುತ್ತದೆ. **ಸಪ್ತಸಂಖ್ಯಾಕಾಃ ಅಶ್ವಾಃ** ಎಂದು ಸಾಯಣರು ತಿಳಿಸುತ್ತಾರೆ.

**ಏಕೋ ಅಶ್ವೋ ವಹತಿ ಸಪ್ತನಾಮಾ—ಕಿಂ ವಸ್ತುತಃ ಸಪ್ತ ನೇತ್ಯಾಹ । ಏಕ ಏವ ಸಪ್ತಾಭಿಧಾನಃ । ಸಪ್ತಧಾ ನಮನಪ್ರಕಾರೋ ವಾ ।** ವಾಯುರೂಪವಾದ ಒಂದೇ ತತ್ತ್ವವು ಏಳುರೂಪಗಳನ್ನೂ ಧರಿಸಿ ಅಂತರಿಕ್ಷದ ಸಂಚಾರಕ್ಕೆ ಅನುಕೂಲಮಾಡಿಕೊಡುವುದರಿಂದ ಇಲ್ಲಿ ವಾಯುವಿಗೆ ಸಪ್ತನಾಮಾ ಎಂಬ ಪರ್ಯಾಯನಾಮ ವಿದೆ ಎಂದು ವಿವರಿಸಿದೆ. **ವಾಯ್ವಧೀನತ್ವಾತ್ ಅಂತರಿಕ್ಷಸಂಚಾರಾಯ** " ಎಂಬ ಸಾಯಣರ ವ್ಯಾಖ್ಯಾನಕ್ಕೆ ಆಧಾರವಾಗಿ,

**ನಮೋ ವಾಯವೇಽಂತರಿಕ್ಷಕ್ಷಿತೇ ಲೋಕಕ್ಷಿತೇ ।**

(ಛಾ. ಉ. ೨-೨೪-೯)

**ಪ್ರಜಾಪತಿರ್ಲೋಕಾನಭ್ಯತಪತ್ತೇಷಾಂ ತಪ್ಯಮಾನಾನಾಂ ರಸಾನ್ಪ್ರಾವೃಹದಗ್ನಿಂ ಪೃಥಿವ್ಯಾ ವಾಯುಮಂತರಿಕ್ಷಾದಾದಿತ್ಯಂ ದಿವಃ ।**

(ಛಾ. ಉ. ೪-೧೭-೧)

ಇತ್ಯಾದ್ಯುಪನಿಷದ್ವಾಕ್ಯಗಳಲ್ಲಿ ವಾಯುವು ಅಂತರಿಕ್ಷವ್ಯಾಪಿಯಾಗಿ ಅಲ್ಲಿ ನಡೆಯತಕ್ಕ ವ್ಯವಹಾರಗಳಿಗೆಲ್ಲಾ ಆಧಾರವಾಗಿರುವುದರಿಂದ **ವಾಯುಃ ಏಕ ಏವ** ಎಂಬ ಅರ್ಥವು ಸಮಂಜಸವಾಗಿದೆ. ಜ್ಯೋತೀರೂಪವಾದ ರಶ್ಮಿಗೆ **ಸಪ್ತನಾಮಾ** ಎಂಬ ವಿಶೇಷಣವು ಉಚಿತವಾಗಿರುವಂತೆ ವಾಯುವಿಗೆ ಸಪ್ತನಾಮಾ ಎಂಬ ವಿಶೇಷಣವು ಹೇಗೆ ಒಪ್ಪುತ್ತದೆ ಎಂದರೆ,

**ಅಥ ವಿಶ್ವಜ್ಯೋತಿಷಮುಪದಧಾತಿ । ವಾಯುರ್ವೈ ಮಧ್ಯಮಾ ವಿಶ್ವಜ್ಯೋತಿರ್ವಾಯುರ್ಹ್ಯೇವಾಂತರಿಕ್ಷಲೋಕೇ ವಿಶ್ವಂ ಜ್ಯೋತಿರ್ವಾಯುಮೇವೈತದುಪದಧಾತಿ ತಾಮನಂತರ್ಹಿತಾಂ ದಿಶ್ಯಾಭ್ಯ ಉಪದಧಾತಿ ದಿಕ್ಷು ತದ್ವಾಯುಂ ದಧಾತಿ ತಸ್ಮಾತ್ಸರ್ವಾಸು ದಿಕ್ಷು ವಾಯುಃ ॥**

(ಶ. ಬ್ರಾ ೮-೩-೨-೧)

ಇತ್ಯಾದಿವಾಕ್ಯಗಳಲ್ಲಿ ವಾಯುವಿಗೂ ವಿಶ್ವಜ್ಯೋತಿಗೂ ತಾದಾತ್ಮ್ಯವನ್ನು ಹೇಳಿ ಸಕಲದಿಕ್ಕುಗಳಲ್ಲಿಯೂ ವಾಯು ರೂಪವಾದ ತೇಜಸ್ಸೇ ವ್ಯಾಪ್ತವಾಗಿರುವುದೆಂದು ಹೇಳಿರುವುದರಿಂದಲೂ ಈ ವಾಯುರೂಪವಾದ ತೇಜಸ್ಸೇ ಸಪ್ತರೂಪ ವಾಗಿರುವುದೆಂದು ಹೇಳಿರುವುದರಿಂದಲೂ ಸಹ ಈ ಅರ್ಥವು ಸರಿಹೋಗುತ್ತದೆ. ನಿರುಕ್ತಕಾರರು—

**ಸಪ್ತನಾಮಾದಿತ್ಯಃ ಅಸ್ಮೈ ರಶ್ಮಯೋ ರಸಾನಭಿಸನ್ನಾಮಯಂತಿ ಸಪ್ತೈನಮೃಷಯಃ ಸ್ತುವಂತೀತಿ ವಾ ।**

(ನಿ. ४-೨೭)

ಸಪ್ತರಶ್ಮಿಗಳು ಆದಿತ್ಯನಿಗಾಗಿ ರಸವನ್ನು ಹೀರುತ್ತವೆಯೆಂದಾಗಲಿ ಅಥವಾ ಸಪ್ತರ್ಷಿಗಳು ಸ್ತುತಿಸುತ್ತಾರೆಂದಾಗಲಿ ಅರ್ಥಮಾಡಿದ್ದಾರೆ. ಸಂಕ್ಷೇಪವಾಗಿ ಹೇಳುವುದಾದರೆ, ಒಟ್ಟಿನಲ್ಲಿ ಪೂರ್ವಾರ್ಧಕ್ಕೆ ಸಾಯಣರ ವಿವರಣೆಯಂತೆ ಆದಿತ್ಯನ ರಥವು ಏಕಚಕ್ರವುಳ್ಳದ್ದು. ಅದನ್ನು ಸಪ್ತಾಶ್ವಗಳು ವಹಿಸುತ್ತವೆ. ಆದರೆ ಈ ಅಶ್ವಗಳು ಏಳು ಭಿನ್ನರೂಪವಾದವುಗಳಲ್ಲ. ವಾಯುರೂಪವಾದ ಒಂದೇ ಅಶ್ವಕ್ಕೆ ಏಳುಪರ್ಯಾಯನಾಮಗಳು ಎಂದೂ; ನಿರುಕ್ತಕಾರರ ವಿವರಣೆಯಂತೆ ಏಕಾಂಗಿಯಾಗಿ ಭ್ರಮಣವನ್ನು ಮಾಡುತ್ತಿರುವ ಈ ಆದಿತ್ಯನು ಉದಯಿಸಿದೊಡನೆಯೇ ಅವನನ್ನು ಸಪ್ತರಶ್ಮಿಗಳೂ ಸೇರಿಕೊಳ್ಳುತ್ತವೆ. ಏಳುವಿಧವಾದ ರಶ್ಮಿಗಳೂ ಆದಿತ್ಯನಿಗಾಗಿ ರಸವನ್ನು ಹೀರುತ್ತಾ ಅವನನ್ನು ಸೇವಿಸುತ್ತವೆಯೆಂದೂ ಮತ್ತು ಆದಿತ್ಯನು ಏಕಮಾತ್ರಪ್ರಭುವಾಗಿ ಅಂತರಿಕ್ಷದಲ್ಲಿ ಸಂಚರಿಸುತ್ತಾನೆಂದೂ ತಾತ್ಪರ್ಯವು.

ನಿರುಕ್ತಕಾರರು ಉತ್ತರಾರ್ಧವನ್ನು ವಿವರಿಸುತ್ತಾ,

**ಸಂವತ್ಸರಪ್ರಧಾನ ಉತ್ತರೋಽರ್ಧರ್ಚಸ್ತ್ರಿನಾಭಿ ಚಕ್ರಂ ತ್ರ್ಯೃತುಃಸಂವತ್ಸರೋ ಗ್ರೀಷ್ಮೋ ವರ್ಷಾ ಹೇಮಂತ ಇತಿ।**

(ನಿ. ೪-೨೭)

ಪ್ರಕೃತವಾದ ಋಕ್ಕಿನ ಉತ್ತರಾರ್ಧವು ಮುಖ್ಯವಾಗಿ ಸಂವತ್ಸರವನ್ನು ವರ್ಣಿಸುತ್ತದೆ. ಈ ಸಂವತ್ಸರವು ನಾಭಿತ್ರಯಾತ್ಮಕವಾದುದು ಗ್ರೀಷ್ಮರ್ತು, ವರ್ಷರ್ತು ಮತ್ತು ಹೇಮಂತಋತು ಇವುಗಳೇ ನಾಭಿಗಳು. ಋತುತ್ರಯಾತ್ಮಕವಾದ ಈ ಸಂವತ್ಸರವನ್ನು **ತ್ರಿನಾಭಿಚಕ್ರಂ** ಎಂದು ವರ್ಣಿಸಿದೆ. ಮತ್ತು ಸಕಲಭುವನಗಳೂ ಈ ಚಕ್ರದಲ್ಲಿ ಅಂತರ್ಗತವಾಗಿವೆ; ಸಂವತ್ಸರರೂಪವಾದ ಈ ಚಕ್ರವು ಅನಾದಿಯಾದುದು, ಕ್ಷಯರಹಿತವಾದುದು ಮತ್ತು ಅಶಿಥಿಲವಾದುದು, ಎಂದು ವಿವರಿಸಿದ್ದಾರೆ.

ಸಾಯಣರು ಪೂರ್ವಾರ್ಧದ ಅರ್ಥವನ್ನೇ ಉತ್ತರಕ್ಕೂ ಅನ್ವಯಿಸುತ್ತಾ ಉತ್ತರಾರ್ಧದ **ಚಕ್ರ** ಶಬ್ದಕ್ಕೆ ವಾಯುಪರವಾಗಿಯೇ ಅರ್ಥಮಾಡಿ ವಾಯುರೂಪವಾದ ಆ ಚಕ್ರವು ಅಜರವೂ ಅನರ್ವವೂ ಆಗಿ ಅದನ್ನು ಆಶ್ರಯಿಸಿ, ಸಕಲಲೋಕಗಳೂ ನೆಲೆಸಿವೆಯೆಂದು ವಿವರಿಸಿದ್ದಾರೆ.

ಪುನಃ ಎರಡನೆಯ ಅರ್ಥವನ್ನು ಹೇಳುತ್ತಾ, **ಯದ್ವಾ ಏಕಚಕ್ರಂ ಏಕಚಾರಿಣಂ ಅಸಾಹಾಯ್ಯೇನ ಸಂಚರಂತಂ ರಥಂ ಆದಿತ್ಯಮಂಡಲಂ ಸಪ್ತ ಯುಂಜಂತಿ** ಇತ್ಯಾದಿಯಾಗಿ ನಿರುಕ್ತಕಾರರ ಅರ್ಥವನ್ನೇ ಹೇಳಿದ್ದಾರೆ. ಆದರೆ ತ್ರಿನಾಭಿ**ಚಕ್ರಂ** ಎಂಬ ವಿಶೇಷಣವಿಶೇಷ್ಯಗಳಿಗೆ ಅರ್ಥಹೇಳುವುದರಲ್ಲಿ ಕೊಂಚ ಕ್ಲೇಶವನ್ನೂ ತೋರಿಸಿದ್ದಾರೆ. ಮತ್ತು ಸಪ್ತನಾಮಾ ಇತ್ಯಾದಿಪದಗಳೊಂದಿಗೆ ಅನ್ವಯವನ್ನು ಮಾಡುವುದೂ ಕಠಿಣವಾಗಿದೆ. **ಸಪ್ತ** ಮತ್ತು **ಸಪ್ತನಾಮಾ** ಎಂಬ ಎರಡು ಪದಗಳನ್ನೂ ವಿವರಿಸುತ್ತಾ, **ಸಪ್ತ** ಶಬ್ದಕ್ಕೆ **ಸರ್ಪಣಸ್ವಭಾವಾಃ ಸಪ್ತಸಂಖ್ಯಾಕಾ ರಶ್ಮಯಃ ಸಪ್ತಶಕಾರಕಾರ್ಯಾಃ ಅಸಾಧಾರಣಾಃ ಪರಸ್ಪರವಿಲಕ್ಷಣಾಃ ಷಡೃತವಃ। ಮಾಸದ್ವಯಾತ್ಮಕಾಃ ಷಟ್ ಅಪರಃ ಅಧಿಕಮಾಸಾತ್ಮಕಃ ಇತ್ಯೇವಂ ಸಪ್ತರ್ತವೋ ಯುಂಜಂತಿ। ಏತಸ್ಯ ಕಾರ್ಯಂನಿರ್ವಹಂತಿ ॥** ಮಾಸದ್ವಯಾತ್ಮಕಗಳಾದ ಆರು ಋತುಗಳೂ ಇನ್ನೊಂದು ಅಧಿಕಮಾಸರೂಪವಾದ ಋತುವೂ ಸೇರಿ ಏಳು ಋತುಗಳಾದುವು. ಇವು ಸಂವತ್ಸರದ ಕಾರ್ಯವನ್ನು ಸಾಂಗವಾಗಿ ನಿರ್ವಹಿಸುತ್ತವೆ.

**ತ್ರಿನಾಭಿಯೆಂದರೆ,** ನಾಭಿಸ್ಥಾನೀಯಗಳಾದ ಸಂಧ್ಯಾತ್ರಯಗಳಾಗಬಹುದು, ಅಥವಾ ನಿರುಕ್ತಕಾರರ ಮತದಂತೆ ಗ್ರೀಷ್ಮ, ವರ್ಷ ಮತ್ತು ಹೇಮಂತ ಋತುಗಳಾಗಬಹುದು ಅಥವಾ ಭೂತಭವಿಷ್ಯದ್ವರ್ತಮಾನಕಾಲಗಳಾಗಬಹುದು. ಈ ಅವಯವಗಳಿಂದ ಕೂಡಿದುದೂ, ಚಕ್ರದಂತೆ ಪುನಃಪುನಃ ಪರಿಭ್ರಮಣವನ್ನು ಹೊಂದತಕ್ಕದ್ದೂ ಅಜರವೂ ಅನರ್ವವೂ ಆದದ್ದೂ ಆದ ಸಂವತ್ಸರ ಚಕ್ರವನ್ನು ಆದಿತ್ಯನು ಆವೃತ್ತಿರೂಪದಿಂದ ತಿರುಗಿಸುತ್ತಾನೆ ಎಂದರ್ಥವೆಂದು ತಿಳಿಸಿದ್ದಾರೆ ಮತ್ತು ಸಕಲವಿಶ್ವಗಳೂ ವಿಶ್ವವ್ಯವಹಾರಗಳೂ ಸಹ ಸಂವತ್ಸರರೂಪವಾದ ಈ ಕಾಲಚಕ್ರದ ಅಧೀನದಲ್ಲಿವೆಯಾದ್ದರಿಂದ " **ಯತ್ರೇಮಾ ವಿಶ್ವಾ ಭುವನಾನಿ ತಸ್ಥುಃ** " ಎಂದೂ ತಿಳಿಸಿದೆಯೆಂದು ಸಾಯಣರ ಮತವಾಗಿದೆ. ಮತ್ತು ಸಂವತ್ಸರರೂಪವಾದ ಈ ಕಾಲಚಕ್ರವು **ಅಜರವೂ ಅನರ್ವವೂ** ಆಗಿದೆ. " **ಅನಾದಿನಿಧನಃ ಕಾಲಃ** " ಕಾಲವು ಆದ್ಯಂತರಹಿತವಾದುದು ಎಂಬ ಸ್ಮೃತಿವಾಕ್ಯದನ್ನುದಹರಿಸಿ ಮೇಲಿನ ವಿಶೇಷಣಗಳ ಔಚಿತ್ಯವನ್ನು ತಿಳಿಸಿದ್ದಾರೆ. ಈ ಎರಡು ಅಭಿಪ್ರಾಯಗಳನ್ನೂ ಒಟ್ಟಿಗೆ ಸೇರಿಸಿ,

> **" ಸ ಏಷ ಸಂವತ್ಸರಃ ಪ್ರಜಾಪತಿಃ ಷೋಡಶಕಲಸ್ತಸ್ಯ ರಾತ್ರಯ ಏವ ................ ಸರ್ವಮಿದಂ ಪ್ರಾಣಭೃದನುಪ್ರವಿಶ್ಯ ತತಃ ಪ್ರಾತರ್ಜಾಯತೇ "**
>
> (ಬೃ. ಉ. ೧-೫-೧೪)

ಇತ್ಯಾದಿವಾಕ್ಯಗಳಲ್ಲಿ ಸಂವತ್ಸರಕ್ಕೂ ಪ್ರಜಾಪತಿಗೂ ತಾದಾತ್ಮ್ಯವನ್ನು ಹೇಳಿ ಸಕಲವಿಶ್ವದ ವ್ಯವಹಾರಗಳೂ ಅವಿಚ್ಛಿನ್ನವಾಗಿ ನಡೆಯುವುದಕ್ಕೂ ಸಕಲವೂ ಆಶ್ರಯವನ್ನು ಹೊಂದಿರುವುದಕ್ಕೂ ಸಹ ಪ್ರಜಾಪತಿರೂಪವಾದ ಸಂವತ್ಸರವೇ ಹೇತುವೆಂದು ಹೇಳಿದೆ.

**ಸಂವತ್ಸರಃ ಸಂವಸಂತೇಽಸ್ಮಿನ್ ಭೂತಾನಿ |** ಸಕಲ ಭೂತಗಳೂ ಒಟ್ಟಿಗೆ ಸೇರಿ ಬದುಕುತ್ತವೆಯಾದ್ದರಿಂದ ಸಂವತ್ಸರವೆಂಬ ಹೆಸರು ಎಂದು ನಿರುಕ್ತಕಾರರ ನಿರ್ವಚನವಿದೆ. ಸಕಲವೂ **ಕಾಲಾತ್ಮವೂ ಕಾಲಾಧೀನವೂ** ಆಗಿದೆಯೆಂದು ಈ ಮಂತ್ರವು ತೋರಿಸುತ್ತದೆಯೆಂದೂ, ಆದಿತ್ಯನು ಈ ಕಾಲದ ನಿಯಂತೃವೆಂದೂ, ಈ ಮಂತ್ರವು ತೋರಿಸುತ್ತದೆಂದಭಿಪ್ರಾಯವು. " **ಈದೃಶಸ್ಯ ಕಾಲಸ್ಯ ಕಾರಣಭೂತಪರಮೇಶ್ವರಪರಿಜ್ಞಾನೇನ ಮೋಕ್ಷಸದ್ಭಾವಾತ್** " ಇಂತಹ ಜಗನ್ನಿಯಾಮಕವಾದ ಕಾಲಕ್ಕೂ ಸಹ ಕಾರಣಭೂತನಾದ ಪರಮೇಶ್ವರನ ಸಾಕ್ಷಾತ್ಕಾರದಿಂದ ಮುಕ್ತಿಯೆಂದು ಸಾಯಣರು ವಿವರಿಸಿದ್ದಾರೆ.

### ವ್ಯಾಕರಣಪ್ರಕ್ರಿಯಾ

**ಯುಂಜಂತಿ**—ಯುಜಿರ್ ಯೋಗೇ. ಧಾತು. ರುಧಾದಿ. ಲಟ್ ಪ್ರಥಮಪುರುಷಬಹುವಚನಾಂತರೂಪ. ಅತಿಜಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

**ಏಕಚಕ್ರಮ್** — ಬಹುವ್ರೀಹಿಸಮಾಸವಾದುದರಿಂದ ಪೂರ್ವಪದಪ್ರಕೃತಿಸ್ವರ ಬರುತ್ತದೆ. ದ್ವಿತೀಯಾ ಏಕವಚನಾಂತರೂಪ.

**ವಹತಿ** — ವಹ ಪ್ರಾಪಣೇ. ಧಾತು. ಲಟ್ ಪ್ರಥಮಪುರುಷಏಕವಚನಾಂತರೂಪ. ತಿಙಂತನಿಘಾತಸ್ವರ ಬರುತ್ತದೆ.

**ತ್ರಿನಾಭಿ**—ತ್ರಯಃ ನಾಭಯಃ ಯಸ್ಯ ತತ್ **ಪರಾದಿಶ್ಛಂದಸಿ ಬಹುಲಮ್** (ಪಾ. ಸೂ. ೬-೨-೧೯೯) ಎಂಬುದರಿಂದ ಉತ್ತರಪದಾದ್ಯುದಾತ್ತಸ್ವರ ಬರುತ್ತದೆ.

**ಅಜರಮ್**—ನ ವಿದ್ಯತೇ ಜರಾ ಯಸ್ಯ ತತ್. **ನಞೋಜರಮರ**—(ಪಾ. ಸೂ. ೬-೨-೧೧೬) ಎಂಬುದರಿಂದ ಉತ್ತರಪದಾದ್ಯುದಾತ್ತಸ್ವರ ಬರುತ್ತದೆ.

**ಅನರ್ವಮ್**—ನ ವಿದ್ಯತೇ ಅರ್ವ ಯಸ್ಯ ತತ್. **ನಞ್ಸುಭ್ಯಾಮ್** (ಪಾ. ಸೂ. ೬-೨-೧೭೨) ಎಂಬುದರಿಂದ ಉತ್ತರಪದಾಂತೋದಾತ್ತಸ್ವರ ಬರುತ್ತದೆ.

**ಇಮಾ**—ಇದು ಮೊದಲ್ಗೊಂಡು ಮೂರು ಶಬ್ದಗಳಲ್ಲಿಯೂ **ಶೇಶ್ಛಂದಸಿ ಬಹುಲಮ್** (ಪಾ. ಸೂ. ೬-೧-೭೦) ಎಂಬುದರಿಂದ ಶಿಗೆ ಲೋಪ.

**ತಸ್ಥುಃ**—ಷ್ಠಾ ಗತಿನಿವೃತ್ತೌ. ಧಾತು. ಲಿಟ್ ಪ್ರಥಮಪುರುಷಬಹುವಚನಾಂತರೂಪ. ಯದ್ಯೋಗವಿರುವುದರಿಂದ ನಿಘಾತಸ್ವರ ಪ್ರತಿಷೇಧ ಬರುವುದರಿಂದ ಪ್ರತ್ಯಯಸ್ವರದಿಂದ ಅಂತೋದಾತ್ತವಾಗುತ್ತದೆ ॥ ೨ ॥

—— :0: ——

ಸಂಹಿತಾಪಾಠಃ

ಇಮಂ ರಥಮಧಿ ಯೇ ಸಪ್ತ ತಸ್ಥುಃ ಸಪ್ತಚಕ್ರಂ ಸಪ್ತ ವಹಂತ್ಯಶ್ವಾಃ ।
ಸಪ್ತ ಸ್ವಸಾರೋ ಅಭಿ ಸಂ ನವಂತೇ ಯತ್ರ ಗವಾಂ ನಿಹಿತಾ ಸಪ್ತ ನಾಮ ॥
॥ ೩ ॥

। ಪದಪಾಠಃ ।

ಇಮಂ । ರಥಂ । ಅಧಿ । ಯೇ । ಸಪ್ತ । ತಸ್ಥುಃ । ಸಪ್ತಽಚಕ್ರಂ । ಸಪ್ತ । ವಹಂತಿ । ಅಶ್ವಾಃ ।
ಸಪ್ತ । ಸ್ವಸಾರಃ । ಅಭಿ । ಸಂ । ನವಂತೇ । ಯತ್ರ । ಗವಾಂ । ನಿಽಹಿತಾ । ಸಪ್ತ । ನಾಮ ॥ ೩ ॥

ಸಾಯಣಭಾಷ್ಯಂ

ಇಮಮುಕ್ತಸ್ವರೂಪಮಾದಿತ್ಯಮಂಡಲಾಖ್ಯಂ ಸಂವತ್ಸರಾಖ್ಯಂ ವಾ ರಥಂ ಯೇ ಸಪ್ತ ರಶ್ಮಯೋಽಧಿ ತಸ್ಥುಃ ಅಧಿಷ್ಠಿತಾಃ । ಸಂವತ್ಸರಪಕ್ಷೇಽಯನರ್ತುಮಾಸಪಕ್ಷದಿವಸರಾತ್ರಿಮುಹೂರ್ತಾಖ್ಯಾಃ ಸಪ್ತಾವಯವಾ ಅಧಿತಿಷ್ಠಂತಿ । ಕೀದೃಶಂ ರಥಂ । ಸಪ್ತಚಕ್ರಂ । ಚಕನಾಚ್ಚರಣಾತ್ ಕ್ರಮಣಾದ್ವಾ ಚಕ್ರಾಣಿ ರಶ್ಮಯಃ । ತೇ ಸಪ್ತ ಯಸ್ಯ ರಥಸ್ಯ ತಾದೃಶಮುಭಯವಿಧಂ ರಥಂ ಪೂರ್ವೋಕ್ತಾ ಅಧಿಷ್ಠಿತಾ ಅಶ್ವಾವ್ಯಾಪನಶೀಲಾಃ ಸಪ್ತ ವಹಂತಿ । ನಿರ್ವಹಂತಿ ಚ । ತಾದೃಶಂ ರಥಂ ಸಪ್ತ ಸ್ವಸಾರಃ ಸ್ವಯಂಸರಣಾಃ । ಸ್ವರಾದಿತ್ಯಃ । ತೇನ ಸಾರಿತಾಃ ಪರಸ್ಪರಂ ಸ್ವಸೃಭೂತಾ ವಾ ಸಪ್ತಸಂಖ್ಯಾಕಾ ರಶ್ಮಯ ಋತವಶ್ಚಾಭಿ ಸಂ

**ನವಂತೇ । ಆಭಿಮುಖ್ಯೇನ ಸಂಗಚ್ಛಂತೇ । ಅಸಾಧಾರಣಾಃ ಪರಸ್ಪರವಿಲಕ್ಷಣಕಾರ್ಯಾಃ ಷಡೃತವಃ ಸರ್ವಸಾಧಾರಣ ಏಕ ಇತಿ ಸಪ್ತತ್ವಂ । ಯದ್ವಾ । ಉಕ್ತರೂಪಾ ಮಾಸದ್ವಯಾತ್ಮಕಾಃ ಷಟ್ ತ್ರಯೋದಶಮಾಸಾತ್ಮಕಃ ಸಪ್ತಮ ಇತಿ ಸಪ್ತತ್ವಂ । ಕೀದೃಶೋ ರಥ ಇತಿ ತದುಚ್ಯತೇ । ಯತ್ರ ಯಸ್ಮಿನ್ರಥ ಉಭಯುವಿಧೇ ಗವಾಂ ವಾಚಾಂ ಸ್ತುತಿರೂಪಾಣಾಂ ಸಪ್ತ ಸಪ್ತವಿಧಾನಿ ನಾಮ ನಮನಾನಿ ಸಪ್ತಸ್ವರೂಪಾಣಿ ನಿಹಿತಾನಿ। ಸಪ್ತಸ್ವರೋಪೇತೈಃ ಸಾಮಭಿಃ ಸ್ತುತ್ಯಂ ರಥಮಿತ್ಯರ್ಥಃ । ಯದ್ವಾ । ಗವಾಮುದಕಾನಾಂ ಸಪ್ತ ಸರ್ಪಣಸ್ವಭಾವಾನಿ ನಾಮ ನಮನಾನಿ ಯತ್ರ ಯಾಸು ಸ್ವಸೃಷು ನಿಹಿತಾ ಸ್ವಸಾರಃ ಪರಸ್ಪರಸ್ವಸೃಭೂತಾ ದೇವನದ್ಯೋಽಭಿ ಸಂ ನವಂತೇ ॥**

ಪ್ರತಿಪದಾರ್ಥ

**ಯೇ ಸಪ್ತ**—ಯಾವ ಏಳು ರಶ್ಮಿಗಳು ಅಥವಾ (ಸಂವತ್ಸರದ) ಏಳು ಅಯನಾದ್ಯವಯುವಗಳು । **ಇಮಂ ರಥಂ**—ಭ್ರಮಣಾತ್ಮಕವಾದ ಈ ಆದಿತ್ಯನನ್ನು ಅಥವಾ ಸಂವತ್ಸರವನ್ನು । **ಅಧಿ ತಸ್ಥುಃ**—ಬೆರೆತಿವೆಯೋ । **(ತೇ) ಸಪ್ತ ಅಶ್ವಾಃ**—ವ್ಯಾಪನಶೀಲಗಳಾದ ಅದೇ ಏಳು ರಶ್ಮಿಗಳು ಅಥವಾ ಅಯನಾದಿಗಳು । **ಸಪ್ತ ಚಕ್ರಂ**—ಸಪ್ತಚಕ್ರಾತ್ಮಕವಾದ ಆದಿತ್ಯನನ್ನು ಅಥವಾ ಸಂವತ್ಸರವನ್ನು । **ವಹಂತಿ**—ವಹಿಸುತ್ತವೆ (ಅವುಗಳ ಕಾರ್ಯನಿರ್ವಹಣವನ್ನು ಮಾಡುತ್ತವೆ) । **ಯತ್ರ**—ಉಭಯರೂಪವಾದ ಯಾವ ಈ ರಥದಲ್ಲಿ । **ಗವಾಂ** ಸ್ತುತಿರೂಪವಾದ ವಾಕ್ಕುಗಳ । **ಸಪ್ತನಾಮ**—ಸಪ್ತಸ್ವರಗಳು । **ನಿಹಿತಾನಿ**—ಸ್ಥಾಪಿಸಲ್ಪಟ್ಟಿವೆಯೋ ಅಂತಹ (ಆದಿತ್ಯರೂಪವಾದ ಅಥವಾ ಸಂವತ್ಸರರೂಪವಾದ ರಥದೊಡನೆ) । **ಅಭಿ**—ಸುತ್ತಲೂ । **ಸಪ್ತ ಸ್ವಸಾರಃ**—ಏಳು ರಶ್ಮಿಗಳು ಅಥವಾ ಋತ್ವದಿಗಳು । **ಸಂ ನವಂತೇ**—ತಾದಾತ್ಮ್ಯಭಾವದಿಂದ ಸೇರಿಕೊಳ್ಳುತ್ತವೆ

ಭಾವಾರ್ಥ

(೧) ಯಾವ ಏಳು ರಶ್ಮಿಗಳು ಭ್ರಮಣಾತ್ಮಕವಾದ ಆದಿತ್ಯನನ್ನು ಬೆರೆತಿವೆಯೋ, ವ್ಯಾಪನಶೀಲಗಳಾದ ಅದೇ ಏಳುರಶ್ಮಿಗಳು ಸಪ್ತಚಕ್ರಾತ್ಮಕವಾದುದೂ ಆದಿತ್ಯರೂಪವಾದುದೂ ಆದ ರಥವನ್ನು ವಹಿಸುತ್ತವೆ. ಯಾವ ಈ ರಥದಲ್ಲಿ ಸ್ತುತಿರೂಪವಾದ ವಾಕ್ಕುಗಳ ಸಪ್ತಸ್ವರಗಳು ಸ್ಥಾಪಿಸಲ್ಪಟ್ಟಿವೆಯೋ ಅಂತಹ ಆದಿತ್ಯರೂಪವಾದ ರಥದೊಡನೆ ಏಳುರಶ್ಮಿಗಳು ಸುತ್ತಲೂ ತಾದಾತ್ಮ್ಯಭಾವದಿಂದ ಸೇರಿಕೊಳ್ಳುತ್ತವೆ.

(೨) ಯಾವ ಅಯನಾದ್ಯವಯುಗಳು ಭ್ರಮಣಾತ್ಮಕವಾದ ಈ ಸಂವತ್ಸರವನ್ನು ಬೆರೆತಿವೆಯೋ, ಅದೇ ಏಳು ಅವಯುವಗಳು ಸಂವತ್ಸರರೂಪವಾದ ಈ ರಥವನ್ನು ವಹಿಸುತ್ತವೆ. ಯಾವ ಈ ರಥದಲ್ಲಿ ಸ್ತುತಿರೂಪವಾದ ವಾಕ್ಕುಗಳ ಸಪ್ತಸ್ವರಗಳು ಸ್ಥಾಪಿಸಲ್ಪಟ್ಟಿವೆಯೋ ಅಂತಹ ಸಂವತ್ಸರರೂಪವಾದ ಈ ರಥದ ಸುತ್ತಲೂ ಋತ್ವಾದಿಗಳು ತಾದಾತ್ಮ್ಯಭಾವದಿಂದ ಸೇರಿಕೊಳ್ಳುತ್ತವೆ. (ಪರಿಭ್ರಮಣಮಾಡುತ್ತವೆ)

## English Translation

The seven who preside over this seven-wheeled chariot (are) the seven horses who draw it; seven sisters ride in it together, and in it are deposited the seven forms of utterance.

**ವಿಶೇಷವಿಷಯಗಳು**

ಈ ಋಕ್ಕಿನ ತಾತ್ಪರ್ಯವನ್ನು ಆದಿತ್ಯನ ಪರವಾಗಿ ಒಂದು ರೀತಿಯಾಗಿಯೂ, ಸಂವತ್ಸರದ ಪರವಾಗಿ ಇನ್ನೊಂದು ರೀತಿಯಾಗಿಯೂ ಹೇಳಬಹುದು.

**ಇಮಂ ರಥಂ ಅಧಿ ಯೇ ಸಪ್ತ ತಸ್ಥುಃ—** ಇಲ್ಲಿ ಸಪ್ತ ಎಂಬುವುದಕ್ಕೆ ಆದಿತ್ಯಪರವಾದರೆ ಏಳುರಶ್ಮಿಗಳೆಂದೂ ; **ಸಂವಸ್ಸರಪಕ್ಷೇ ಅಯನರ್ತುಮಾಸಪಕ್ಷದಿವಸರಾತ್ರಿಮುಹೂರ್ತಾಖ್ಯಾಃ ಸಪ್ತಅವಯವಾಃ ।** ಸಂವತ್ಸರಪರವಾದರೆ, ಅಯನ, ಋತು, ಮಾಸ, ಪಕ್ಷ, ದಿವಸ, ರಾತ್ರಿ ಮತ್ತು ಮುಹೂರ್ತರೂಪಗಳಾದ ಏಳು ಅವಯವಗಳೆಂದೂ ಅರ್ಥವಾಗುತ್ತದೆ. ಇಲ್ಲಿ **ಸಪ್ತ**ಶಬ್ದವನ್ನು ಐದುಕಡೆಗಳಲ್ಲಿ ಉಪಯೋಗಿಸಿದೆ ಅದರಲ್ಲಿ ಪೂರ್ವಾರ್ಧದ ಮೂರುಕಡೆಗಳಲ್ಲಿಯೂ ಸಹ ಆದಿತ್ಯಪರವಾದರೆ ರಶ್ಮಿಗಳೆಂದೂ, ಸಂವತ್ಸರಪರವಾದರೆ ಅಯನಾದ್ಯವಯವಗಳೆಂದೂ ಅರ್ಥ. ಉತ್ತರಾರ್ಧದಲ್ಲಿ **ಸ್ವಸಾರಃ** ಎಂಬುದಕ್ಕೆ ವಿಶೇಷಣವಾಗಿ ಒಂದು ಕಡೆಯೂ, **ಗವಾಂ ಸಪ್ತನಾಮ** ಎಂದು ವಾಕ್ಯಗಳ ಸ್ವರೂಪಸಂಖ್ಯೆಯನ್ನು ಹೇಳುವುದಕ್ಕೆ ಇನ್ನೊಂದುಕಡೆಯೂ ಉಪಯೋಗಿಸಲ್ಪಟ್ಟಿದೆ.

ಸಪ್ತಚಕ್ರವೆಂಬುದು ಆದಿತ್ಯನಿಗೂ ಸಂವತ್ಸರಕ್ಕೂ ಸಮಾನವಾದ ಲಕ್ಷಣವನ್ನು ತೋರಿಸತಕ್ಕ ರೂಪಕವಾಗಿದೆ ಈ ರೀತಿಯಾದ ರೂಪಕಕ್ಕೆ ಆದಿತ್ಯ ಮತ್ತು ಸಂವತ್ಸರಗಳಿಗಿರತಕ್ಕ ತಾತ್ತ್ವಿಕಸಂಬಂಧವೂ ಲೋಕವ್ಯವಹಾರಗಳಿಗೆ ಸಮಾನವಾದ ಹೇತುತ್ವವೂ ಕಾರಣವಾಗಿದೆ. ಆದಿತ್ಯನೇ ಸಂವತ್ಸರನೆಂದೂ, ಸಂವತ್ಸರದ ಅವಯವಗಳೇ ಆದಿತ್ಯನ ಅವಯವಗಳೆಂದೂ ಹೇಳತಕ್ಕ ವಾಕ್ಯಗಳೇ ಈ ರೂಪಕದ ಸ್ವಾರಸ್ಯವನ್ನು ತಿಳಿಸುತ್ತವೆ

**ಸಂವತ್ಸರೋವೈ ಪ್ರಜಾಪತಿಃ । .... .... .... .... ಸ ಯಃ ಸ ಸಂವತ್ಸರೋಽಸೌ ಸ ಆದಿತ್ಯಃ ।**

**(ಶ. ಬ್ರಾ. ೧೦-೨ ೪ ೩)**

ಸಂವತ್ಸರವೇ ಪ್ರಜಾಪತಿಯು ; ಸಂವತ್ಸರವೇ ಆದಿತ್ಯನು.

**ತ್ರಯೋದಶ ಸಂಪಾದಯತಿ । ತ್ರಯೋದಶ ವೈ ಮಾಸಾಃ ಸಂವತ್ಸರಸ್ಯ ಸಂವತ್ಸರ ಏಷ ಯ ಏಷ ತಪತ್ಯೇಷ ಉ ಪ್ರವರ್ಗ್ಯಃ ।**

**(ಶ. ಬ್ರಾ, ೧೪-೧-೩-೨೮)**

ತ್ರಯೋದಶಮಾಸಾತ್ಮಕವಾದ ಸಂವತ್ಸರವು ಅಂತರಿಕ್ಷದಲ್ಲಿ ಪ್ರಕಾಶಿಸುತ್ತಿರುವ ಆದಿತ್ಯನಲ್ಲದೇ ಬೇರೆಯಲ್ಲ. ಇತ್ಯಾದಿಯಾಗಿ ಅನೇಕ ವಾಕ್ಯಗಳು ಆದಿತ್ಯನಿಗೂ ಸಂವತ್ಸರಕ್ಕೂ ತಾದಾತ್ಮ್ಯವನ್ನು ಹೇಳುತ್ತವೆ. ಸಂವತ್ಸರಕ್ಕೆ ಸಪ್ತ ಋತುಗಳು ಅವಯವಗಳಾಗಿರುವಾಗ ಆದಿತ್ಯನಿಗೂ ಆ ಸಪ್ತಋತುಗಳೇ ಅವಯವಗಳೇ ಎಂಬ ಪ್ರಶ್ನೆಯು ಸಂಭವಿಸಿದರೆ ಅದಕ್ಕೂ ಉತ್ತರವಾಗಿ,

**ಆದಿತ್ಯಸ್ತ್ವೇವ ಸರ್ವ ಋತವಃ । ಯದೈವೋದೇತ್ಯಥ ವಸಂತೋ ಯದಾ ಸಂಗವೋಽಥ ಗ್ರೀಷ್ಮೋ ಯದಾ ಮಧ್ಯಂದಿನೋಽಥ ವರ್ಷಾ ಯದಪರಾಹ್ಣೋಽಥ ಶರದ್ಯದೈವಾ ಸ್ತಮೇತ್ಯಥ ಹೇಮಂತಸ್ತಸ್ಮಾದು ಮಧ್ಯಂದಿನ ಏವಾದಧೀತ .... .... .... .... ॥**

**(ಶ ಬ್ರಾ ೨-೨-೩-೯)**

ಆದಿತ್ಯನೇ ಎಲ್ಲಾ ಋತ್ವಾತ್ಮಕನು ಅಥವಾ ಋತುಗಳಿಗೆ ಕಾರಣನು. ಅವನು ಉದಯಿಸಿದಾಗ ವಸಂತವು. ಪಶುಗಳನ್ನು ಕರೆಯತಕ್ಕ ಕಾಲವು ಪ್ರಾಪ್ತವಾದರೆ ಗ್ರೀಷ್ಮವು. ಮಧ್ಯಾಹ್ನಕಾಲವೇ ವರ್ಷರ್ತುವು. ಅಪರಾಹ್ನವು ಪ್ರಾಪ್ತವಾದರೆ ಶರತ್ಕಾಲವು. ಅಸ್ತಮಯಕಾಲವು ಪ್ರಾಪ್ತವಾದಾಗ ಹೇಮಂತವು. ಇತ್ಯಾದಿಯಾಗಿ ಋತುಗಳಿಗೆ ಕಾರಣನಾದ ಆದಿತ್ಯನಿಗೂ ಋತುಗಳಿಗೂ ತಾದಾತ್ಮ್ಯವನ್ನು ಹೇಳಿದೆ. ಅಲ್ಲದೆ—

**ಅತ್ರ ಹ ವಾ ಆಸಾವಗ್ರ ಆದಿತ್ಯ ಆಸ ತಮೃತವಃ ಪರಿಗೃಹ್ಯೈವಾತ ಊರ್ಧ್ವಾಃ ಸ್ವರ್ಗಂ ಲೋಕಮುಪೋದಕ್ರಾಮನ್ತ್ಸ ಏಷ ಋತುಷು ಪ್ರತಿಷ್ಠಿತಸ್ತಪತಿ ।**

(ಶ. ಬ್ರಾ. ೪-೨-೫-೯)

ಪೂರ್ವದಲ್ಲಿ ಆದಿತ್ಯನು ಈ ಪೃಥ್ವಿಯನ್ನಾಕ್ರಮಿಸಿದ್ದನು. ಋತುಗಳು ಅವನನ್ನು ಪರಿಗ್ರಹಿಸಿದಾಗ ಅವುಗಳೊಂದಿಗೆ ಆದಿತ್ಯನು ಅಂತರಿಕ್ಷಕ್ಕೆ ಹಾರಿದನು ಅನಂತರ ಋತುಗಳಲ್ಲಿ ದೃಢವಾಗಿ ಪ್ರತಿಷ್ಠಿತನಾಗಿ ಈಗ ಅಂತರಿಕ್ಷದಲ್ಲಿ ಪ್ರಕಾಶಿಸುತ್ತಿದ್ದಾನೆ. ಈ ಋತುಗಳೇ ಸಂವತ್ಸರದ ಅವಯವಗಳು. ಮತ್ತು ಸಂವತ್ಸರದ ಸ್ವರೂಪವನ್ನು ಅರ್ಥಮಾಡಿಕೊಳ್ಳತಕ್ಕ ಮುಖ್ಯಸಾಧನಗಳು. ಈ ಸಾಧನಗಳ ಜ್ಞಾನವಿಲ್ಲದಿದ್ದರೆ ಸಂವತ್ಸರದ ಸ್ವರೂಪವು ತಿಳಿಯುವುದಿಲ್ಲ.

**ಸಂವತ್ಸರಗ್‌ಂಹ ವೈ ಪ್ರಯಾಜೈರ್ಜಯಿಜ್ಞಾಯತಿ । ಸ ಹ ಸ್ವೇವೈನಂ ಜಯತಿ ಯೋಽಸ್ಯ ದ್ವಾರಾಣಿ ವೇದ ತೇಗ್‌ಂ ಹಿ ಸ ತೈರ್ಗೃಹ್ಯೈಃ ಕುರ್ಯಾದ್ಯಾನಂತರತೋ ನ ವ್ಯವವಿದ್ಯಾದ್ಯಥಾಸ್ಯ ತೇ ಭವಂತಿ ತಸ್ಯ ವಸಂತ ಏವ ದ್ವಾರಗ್‌ಂ ಹೇಮಂತೋ ದ್ವಾರಂ ತಂ ವಾ ಏತಗ್‌ಂ ಸಂವತ್ಸರಗ್‌ಂ ಸ್ವರ್ಗಂ ಲೋಕಂ ಪ್ರಪದ್ಯತೇ ಸರ್ವಂ ವೈ ಸಂವತ್ಸರಃ ಸರ್ವಂ ವಾ ಅಕ್ಷಯ್ಯಮೇತೇನ ಹಾಸ್ಯಾಕ್ಷಯ್ಯಗ್‌ಂ ಸುಕೃತಂ ಭವತ್ಯಕ್ಷಯ್ಯೋ ಲೋಕಃ ॥**

(ಶ. ಬ್ರಾ. ೧-೬-೧-೧೯)

ಪ್ರಯಾಜಗಳಿಂದ ಉತ್ತಮಸ್ಥಿತಿಯನ್ನು ಪಡೆದ ಯಜಮಾನನು ಸಂವತ್ಸರದ ಸ್ವರೂಪವನ್ನು ತಿಳಿಯುತ್ತಾನೆ. ಆದರೆ ಸಂವತ್ಸರದ ದ್ವಾರಗಳ ಪರಿಚಯವನ್ನು ಹೊಂದಿದವನಿಗೆ ಮಾತ್ರ ಸಂವತ್ಸರದ ಜ್ಞಾನವು ಲಭಿಸುತ್ತದೆ. ಗೃಹದ ಒಳಗೆ ಪ್ರವೇಶಿಸಲು ಅನುಕೂಲವಾದ ದ್ವಾರವನ್ನು ತಿಳಿಯದೇ ಮನುಷ್ಯನಿಗೆ ಗೃಹದ ಪರಿಚಯವು ಪ್ರಯೋಜನವಿಲ್ಲದಿರುವಂತೆ ಸಂವತ್ಸರದ ದ್ವಾರಗಳಾದ ಋತುಗಳ ಪರಿಚಯವಿಲ್ಲದೆ ಸಂವತ್ಸರದ ಜ್ಞಾನವು ಲಭಿಸಲಾರದು. ಈ ಸಂವತ್ಸರಕ್ಕೆ ವಸಂತವೂ ಹೇಮಂತವೂ ದ್ವಾರಗಳು. ಸಂವತ್ಸರವೇ ಅಂತರಿಕ್ಷವು. ಮತ್ತು ಸಂವತ್ಸರವೇ ಸಮಸ್ತವೂ ಆಗಿದೆ. ಆದುದರಿಂದ ಸಂವತ್ಸರದ ಜ್ಞಾನವನ್ನು ಪಡೆದವನಿಗೆ ಶಾಶ್ವತವಾದ ಸ್ಥಿತಿಯು ಲಭಿಸುತ್ತದೆ.

**ದ್ವೇ ವಾವ ಬ್ರಹ್ಮಣೋ ರೂಪೇ ಕಾಲಶ್ಚಾಕಾಲಶ್ಚ । ಯ ಆದಿತ್ಯಾದ್ಯಃ ಸ ಕಾಲಃ । ತಸ್ಮಾತ್ಸಂವತ್ಸರೋ ವೈ ಕಾಲಃ ॥**

(ಮೈತ್ರಾಯಣ ಬ್ರಾಹ್ಮಣೋಪನಿಷತ್. ೬-೧೫)

ಕಾಲ ಮತ್ತು ಅಕಾಲವೆಂಬುದು ಬ್ರಹ್ಮನ ರೂಪದ್ವಯವು. ಆದಿತ್ಯನಿಂದ ಉತ್ಪನ್ನವಾದ ಕಾಲವೇ ಸಂವತ್ಸರವು. ಇತ್ಯಾದಿಯಾಗಿ ಕೆಲವೆಡೆಗಳಲ್ಲಿ ಆದಿತ್ಯನಿಗೂ ಸಂವತ್ಸರಕ್ಕೂ ತಾದಾತ್ಮ್ಯವನ್ನು ಹೇಳುವಾಗ ಸಂವತ್ಸರದ ಅವಯವಗಳಾದ ಋತುಗಳು ಆದಿತ್ಯನ ಅವಯವಗಳೆಂದೂ, ಇನ್ನೂ ಕೆಲವೆಡೆಗಳಲ್ಲಿ ಸೂರ್ಯನಿಂದ ಸಂವತ್ಸರವು ಉತ್ಪನ್ನವಾಯಿತೆಂದು ಹೇಳುವಾಗ ಋತುಗಳೂ ಅವನಿಂದಲೇ ಉತ್ಪನ್ನವಾದವೆಂದೂ ಸಹ ತಿಳಿಸಿದೆ.

**ಯೇ ಸಪ್ತ ಅಧಿ ತಸ್ಥುಃ**—ಇಲ್ಲಿ ಸಪ್ತಶಬ್ದಕ್ಕೆ ಸಂವತ್ಸರದ ಪರವಾದರೆ ಅಯನ, ಋತು, ಮಾಸ, ಪಕ್ಷ, ದಿವಸ, ರಾತ್ರಿ, ಮುಹೂರ್ತ ಎಂಬ ಅವಯವಗಳಿಂದೂ, ಆದಿತ್ಯನ ಪರವಾದರೆ ಸಪ್ತರಶ್ಮಿಗಳಿಂದೂ ಅರ್ಥವು.

**ಸಪ್ತಚಕ್ರಂ—ಚಕ್ರಂ ಚಕತೇರ್ವಾ ಚರತೇರ್ವಾ ಕ್ರಾಮತೇರ್ವಾ ।** ಪ್ರತಿಘಾತಾತ್ಮಕವಾಗಿಯೂ, ಸಂಚರಿಸತಕ್ಕದ್ದಾಗಿಯೂ, ಅವಿಚ್ಛಿನ್ನವಾಗಿ ಪ್ರಸರಿಸತಕ್ಕದ್ದಾಗಿಯೂ ಇರುವುದರಿಂದ ರಶ್ಮಿಗೂ ಚಕ್ರವೆಂದು ಹೆಸರು. ಮತ್ತು ಇದೇ ಗುಣಗಳಿರುವುದರಿಂದ ಋತ್ವಾದ್ಯವಯವಗಳಿಗೂ ಈ ಹೆಸರು. (ನಿ. ೪ ೨೬) ಚಕ್ರದಂತೆ ಪುನಃ ಪುನಃ ಆವೃತ್ತಿರೂಪವಾದ ಪರಿಭ್ರಮಣವನ್ನು ಹೊಂದತಕ್ಕದ್ದೆಂದರ್ಥ.

**ಸಪ್ತ ಅಶ್ವಾಃ ವಹಂತಿ**—ಆದಿತ್ಯನ ಪರವಾದರೆ ಏಳು ಅಶ್ವಗಳೆಂದರ್ಥ.

**ಅಯುಕ್ತ ಸಪ್ತ ಹರಿತಃ ಸಧಸ್ಥಾದ್ಯಾ ಈಂ ವಹಂತಿ ಸೂರ್ಯಂ ಘೃತಾಚೀಃ ।**
**ಧಾಮಾನಿ ಮಿತ್ರಾವರುಣಾ ಯುವಾಕುಃ ಸಂ ಯೋ ಯೂಥೇವ ಜನಿಮಾನಿ ಚಷ್ಟೇ ॥**

(ಋ. ಸಂ. ೭-೬೦-೩)

ಇತ್ಯಾದಿಋಕ್ಕುಗಳಲ್ಲಿ ಸಪ್ತಾಶ್ವಗಳನ್ನು ರಥಕ್ಕೆ ಯೋಜಿಸಿ ಸೂರ್ಯನನ್ನು ವಹಿಸುತ್ತವೆಯೆಂದು ಪ್ರಸಿದ್ಧವಾಗಿದೆ. ಮತ್ತು **ಸಪ್ತ ಅಶ್ವಾಃ** ಎಂಬುದು ಸಂವತ್ಸರದ ಪರವಾದರೆ, ವ್ಯಾಪನಶೀಲಗಳಾದ ಷಡೃತುಗಳೂ ಮತ್ತು ಅಧಿಕ ಮಾಸವೂ ಸೇರಿ ಸಂವತ್ಸರದ ಭಾಗಗಳು ಇವುಗಳಿಗೆ ಅಶ್ವವೆಂಬ ಪದವು ಜಗತ್ತನ್ನೆಲ್ಲಾ ವ್ಯಾಪಿಸುವುದರ ಲಕ್ಷಣ ವನ್ನು ತೋರಿಸುತ್ತದೆ. ಅಶ್ವವೆಂಬ ಪದವು ರೂಢವಾದ ವಾಹನಸಾಧನವಾದ ಪ್ರಾಣಿಯೆಂಬರ್ಥವನ್ನು ಕೊಡುವಾಗಲೂ ಸಹ ಅಶ್ವದ ಈ ಗುಣವನ್ನೇ ತೋರಿಸುತ್ತದೆ.

**ಅಶ್ವಃ ಕಸ್ಮಾದಶ್ನುತೇಽಧ್ವಾನಂ । ಮಹಾಶನೋ ಭವತೀತಿ ವಾ ।**

(ನಿ. ೨-೨೭)

ಮಾರ್ಗವನ್ನು ಅತ್ಯಂತ ವೇಗವಾಗಿ ವ್ಯಾಪಿಸುವುದರಿಂದಾಗಲಿ ಅಥವಾ ಪ್ರಭೂತವಾಗಿ ಅನ್ನವನ್ನು ಭಕ್ಷಿಸುವುದ ರಿಂದಾಗಲಿ ಈ ಹೆಸರೆಂದು ನಿರುಕ್ತಕಾರರ ನಿರ್ವಚನವು ಈ ಪದದ ನಿಷ್ಪತ್ತಿಯನ್ನು ತೋರಿಸುತ್ತದೆ. ಅದೇ ಅರ್ಥವು ಇಲ್ಲಿಯೂ ಸಾಧ್ಯವಾಗುತ್ತದೆ. ಸಂವತ್ಸರದ ಪರವಾಗಿ ಅಧಿಕಮಾಸದೊಡನೆ ಆರು ಋತುಗಳು ಸೇರಿ ಸಪ್ತಾಶ್ವಗಳೆಂದು ಮೇಲೆ ಹೇಳಿದೆ. ಅವನ್ನೇ ಶತಪಥದಲ್ಲಿ,

**ಸಪ್ತರ್ತವಃ ಸಂವತ್ಸರಸ್ಯ .... .... .... ತ್ರಯೋದಶ ವೈ ಮಾಸಾಃ ಸಂವತ್ಸರಸ್ಯ ।**

(ಶ ಬ್ರಾ. ೧೨-೩-೨-೧)

ಇತ್ಯಾದಿವಾಕ್ಯಗಳಲ್ಲಿ ಹೇಳಿದೆ. ಇಂತಹ ಸಪ್ತಾಶ್ವಗಳನ್ನೊಳಗೊಂಡ ಸಪ್ತಚಕ್ರದಿಂದಲೇ ಸಮಸ್ತಲೋಕವ್ಯವಹಾರ ವೆಲ್ಲವೂ ನಡೆಯುವುದರಿಂದ **ಸಪ್ತಚಕ್ರಂ ಸಪ್ತಾಶ್ವಾಃ ವಹಂತಿ** ಎಂದು ವರ್ಣಿಸಿದೆ.

**ಕಾಲಾತ್ಸ್ರವಂತಿ ಭೂತಾನಿ ಕಾಲಾದ್ವೃದ್ಧಿಂ ಪ್ರಯಾಂತಿ ಚ ।**
**ಕಾಲೇ ಚಾಸ್ತಂ ನಿಯಚ್ಛಂತಿ ಕಾಲೋ ಮೂರ್ತಿರಮೂರ್ತಿಮಾನ್ ॥**

(ಮೈ. ಉ. ೬-೧೪)

ಆದಿತ್ಯರೂಪವಾದ ಅಥವಾ ಸಂವತ್ಸರರೂಪವಾದ ಕಾಲದಿಂದಲೇ ಸಕಲಭೂತಗಳೂ ಸಂಚರಿಸುತ್ತವೆ. ವೃದ್ಧಿಯನ್ನು ಹೊಂದುತ್ತವೆ. ಮತ್ತು ಅಸ್ತವನ್ನು ಪಡೆಯುತ್ತವೆ ಎಂಬ ಅಂಶವನ್ನು ಇಲ್ಲಿಯೂ ತಿಳಿಸಿದೆ.

**ಸಪ್ತ ಸ್ವಸಾರಃ—ಸ್ವಃ ಆದಿತ್ಯಃ । ತೇನ ಸಾರಿತಾಃ ಪರಸ್ಪರಂ ಸ್ವಸೃಭೂತಾ ವಾ ಸಪ್ತಸಂಖ್ಯಾಕಾ ರಶ್ಮಯಃ ಋತವಶ್ಚ** । ಆದಿತ್ಯನಿಂದ ಚಲಿಸುವಂತೆ ಮಾಡಲ್ಪಡುವುವೂ, ಸಹೋದರಿಯ ರೂಪದಲ್ಲಿರುವುವೂ ಆದ ರಶ್ಮಿಗಳಿಂದಾಗಲಿ ಅಥವಾ ಸಪ್ತಋತುಗಳಿಂದಾಗಲಿ ಅರ್ಥವಾಗಬಹುದು. **ಅಥವಾ ಪರಸ್ಪರಸ್ವಸೃಭೂತಾಃ ದೇವನದ್ಯಃ ಅಪಿ ಸಂನವಂತೇ** । ಸಪ್ತಸಂಖ್ಯಾಕವಾದ ದೇವನದಿಗಳಿಂದೂ ಅರ್ಥಮಾಡಿದೆ.

**ಅವರ್ಧಯನ್ತ್ಸುಭಗಂ ಸಪ್ತ ಯಹ್ವೀಃ ಶ್ವೇತಂ ಜಜ್ಞಾನಮರುಷಂ ಮಹಿತ್ವಾ ।**
**ಶಿಶುಂ ನ ಜಾತಮಭ್ಯಾರುರಶ್ವಾ ದೇವಾಸೋ ಅಗ್ನಿಂ ಜನಿಮನ್ವಪುಷ್ಯನ್ ॥**

(ಋ. ಸಂ. ೩-೧-೪)

ಇತ್ಯಾದಿ ಋಕ್ಕುಗಳಲ್ಲಿ ವರ್ಣಿತವಾಗಿರುವಂತೆಯೂ, ಮತ್ತು,

**ಯಾಃ ಸಪ್ತ ಪ್ರಾಚ್ಯಃ ಸ್ರವಂತಿ ತಾಃ ಸ ಸ ಸಪ್ತಕಪಾಲೋ ಭವತಿ ಸಪ್ತ ಹಿ ತಾ ಯಾಃ ಪ್ರಾಚ್ಯಃ ಸ್ರವಂತಿ ॥**

(ಶ. ಬ್ರಾ. ೯-೩-೧-೧೮)

ಇತ್ಯಾದಿವಾಕ್ಯಗಳಲ್ಲಿ ವರ್ಣಿತವಾಗಿರುವಂತೆಯೂ ಸಹ ಏಳು ದೇವನದಿಗಳಿಂದರ್ಥವಾಗಬಹುದೆಂದು ಸಾಯಣರು ವಿವರಿಸಿದ್ದಾರೆ.

**ಗವಾಂ ಸಪ್ತನಾಮ**—ಗೋಶಬ್ದಕ್ಕೆ ಇಲ್ಲಿ ಸ್ತುತಿರೂಪವಾದ ವಾಕ್ಕೆಂದರ್ಥ. **ಸಪ್ತಸ್ವರೋಪೇತೈಃ ಸಾಮಭಿಃ** ಸಪ್ತಸ್ವರಗಳಿಂದ ಕೂಡಿದ ಸಾಮವೆಂದರ್ಥ.

**ಪರಿ ಕೋಶಂ ಮಧುಶ್ಚುತಮವ್ಯಯೇ ವಾರೇ ಅರ್ಷತಿ । ಅಭಿ ವಾಣೀರ್ಋಷೀಣಾಂ ಸಪ್ತ ನೂಷತ ॥**

(ಋ. ಸಂ. ೯-೧೦೩-೩)

ಇತ್ಯಾದಿಕಡೆಗಳಲ್ಲಿ **ಋಷೀಣಾಂ ಸಪ್ತ ವಾಣೀಃ ಸಪ್ತಚ್ಛಂದಾಂಸಿ** ಎಂದು ಸಪ್ತಛಂದಸ್ಸುಗಳಿಂದ ಎಂದಾದರೂ ಆಗಬಹುದು ಅಥವಾ ಸಪ್ತಸ್ವರಾತ್ಮಕವಾದ ಸಾಮಗಾನಗಳಿಂದ ಎಂದರ್ಥವಾಗಬಹುದು. **ಲೋಕವ್ಯವಹಾರಕ್ಕೆ** ಕಾರಣವಾದ ಆದಿತ್ಯನನ್ನು ಸ್ತುತಿಮಾಡತಕ್ಕ ಸಾಮಗಾನವೆಂದರ್ಥ.

## ವ್ಯಾಕರಣಪ್ರಕ್ರಿಯಾ

**ಸ್ವಸಾರಃ**—ಅಸು ಕ್ಷೇಪಣೇ ಧಾತು. ಇದಕ್ಕೆ ಸು ಉಪಪದವಾಗಿರುವಾಗ **ಸುಞ್ಯಸೇರ್ಋನ್** (ಉ.ಸೂ ೨-೨೫೩) ಎಂಬುದರಿಂದ ಋನ್‌ಪ್ರತ್ಯಯ. ಯಣಾದೇಶ. ಸ್ವಸೃ ಶಬ್ದವಾಗುತ್ತದೆ. ಪ್ರತ್ಯಯ ನಿತ್ತಾದುದರಿಂದ ಆದ್ಯುದಾತ್ತಸ್ವರ ಬರುತ್ತದೆ.

**ನವಂತೇ**—ನವಂ ಕುರ್ವಂತಿ ಇತಿ ನವಂತೇ. ಇದು ನಾಮಧಾತು. **ತತ್ಕರೋತಿ ತದಾಚಷ್ಟೇ** ಎಂಬ ವಚನದಿಂದ ಣಿಚ್ ಇಷ್ಠವದ್ಭಾವದಿಂದ ಟಿಲೋಪ. **ಛಂದಸ್ಯುಭಯಥಾ** ಎಂಬುದರಿಂದ ಶಪಿಗೆ ಆರ್ಧಧಾತುಕ

ಸಂಜ್ಞೆ ಇರುವುದರಿಂದ ಅದನ್ನು ನಿಮಿತ್ತೀಕರಿಸಿ ಣಿಚಿಗೆ ಲೋಪ. ಲಟ್ ಪ್ರಥಮಪುರುಷ ಏಕವಚನಾಂತರೂಪ. ತಿಙಂತನಿಘಾತಸ್ವರ ಬರುತ್ತವೆ.

**ನಿಹಿತಾ**—ಡು ಧಾಞ್ ಧಾರಣಪೋಷಣಯೋಃ ಧಾತು. ಕರ್ಮಣಿಯಲ್ಲಿ ಕ್ತ ಪ್ರತ್ಯಯ. **ದಧಾತೇರ್ಹಿಃ** (ಪಾ. ಸೂ ೭-೪-೪೨) ಎಂಬುದರಿಂದ ಧಾತುವಿಗೆ ಹಿ ಆದೇಶ. **ಗತಿರನಂತರಃ** (ಪಾ. ಸೂ. ೬-೨-೪೯) ಎಂಬುದರಿಂದ ಗತಿಗೆ (ನಿ) ಉದಾತ್ತಸ್ವರ ಬರುತ್ತದೆ. ನಪುಂಸಕ ಬಹುವಚನದಲ್ಲಿ **ಶೇಶ್ಛಂದಸಿ ಬಹುಲಮ್** (ಪಾ. ಸೂ. ೬-೧-೭೦) ಎಂಬುದರಿಂದ ಶಿಗೆ ಲೋಪ ॥ ೩ ॥

ಸಂಹಿತಾಪಾಠಃ

ಕೋ ದದರ್ಶ ಪ್ರಥಮಂ ಜಾಯಮಾನಮಸ್ಥನ್ವಂತಂ ಯದನಸ್ಥಾ ಬಿಭರ್ತಿ ।
ಭೂಮ್ಯಾ ಅಸುರಸೃಗಾತ್ಮಾ ಕ್ವ ಸ್ವಿತ್ಕೋ ವಿದ್ವಾಂಸಮುಪ ಗಾತ್ಪ್ರಷ್ಟುಮೇತತ್ ॥ ೪ ॥

ಪದಪಾಠಃ

ಕಃ । ದದರ್ಶ । ಪ್ರಥಮಂ । ಜಾಯಮಾನಂ । ಅಸ್ಥನ್ऽವಂತಂ । ಯತ್ । ಅನಸ್ಥಾ । ಬಿಭರ್ತಿ ।
ಭೂಮ್ಯಾಃ । ಅಸುಃ । ಅಸೃಕ್ । ಆತ್ಮಾ । ಕ್ವ । ಸ್ವಿತ್ । ಕಃ । ವಿದ್ವಾಂಸಂ । ಉಪ । ಗಾತ್ । ಪ್ರಷ್ಟುಂ । ಏತತ್ ॥ ೪ ॥

ಸಾಯಣಭಾಷ್ಯಂ

ಏವಂ ಪ್ರಪಂಚಸ್ಯ ಕಾಲಾಯತ್ತತಾಂ ಪ್ರತಿಪಾದ್ಯ ತಸ್ಯ ಕಾರಣಭೂತಸ್ಯ ಪರಮೇಶ್ವರಸ್ಯಾವಿಷಯತ್ವಮಾಹ । ಕೋ ದದರ್ಶ । ಕೋಃ ಪ್ರಷ್ಟುಂ ಶಕ್ನುಯಾತ್ । ಕದಾ । ಪ್ರಥಮಂ । ಸೃಷ್ಟೇಃ ಪೂರ್ವಂ । ಅವ್ಯಾಕೃತಾವಸ್ಥಾಯಾಮಿತ್ಯರ್ಥಃ । ಕಿಂ । ಜಾಯಮಾನಂ । ಪ್ರಥಮಭಾವವಿಕಾರಮಾಪನ್ನಂ । ಉತ್ಪದ್ಯಮಾನಂ ಪ್ರಪಂಚಮಿತ್ಯರ್ಥಃ । ದುರ್ಜ್ಞೇಯತ್ವೇ ಹೇತುಮಾಹ । ಯದ್ಯಸ್ಮಾದಸ್ಥನ್ವಂತಮಸ್ಥಿಮಂತಂ ಸಶರೀರಂ । ಉಪಲಕ್ಷಣಮೇತತ್ । ಕಾರ್ಯಭಾವಮಾಪನ್ನಮಿತ್ಯರ್ಥಃ । ಅನಸ್ಥಾಸ್ಥಿರಹಿತಾಶರೀರಾ ಸಾಂಖ್ಯಪ್ರಸಿದ್ಧಾ ಪ್ರಕೃತಿರ್ವೇದಾಂತಪ್ರಸಿದ್ಧೇಶ್ವರಾಯತ್ತಾ ಮಾಯಾ ಬಿಭರ್ತಿ ಗರ್ಭವದಂತರ್ಧಾರಯತಿ । ಅವ್ಯಾಕೃತಾವಸ್ಥಾಯಾಮನಸ್ಥೋಽಶರೀರಃ ಪರಮೇಶ್ವರೋ ಬಿಭರ್ತಿ । ಯದಾ ಕೇವಲಃ ಪರಮೇಶ್ವರೋ

ಮಾಯಾಶಬಲಿತಃ ಸನ್ನಿದಂ ಜಗನ್ನಿರ್ಮಿತವಾನುತ್ಪತ್ತಿಸಮಯೇ ದೇಹಾದಿಸಹಿತಸ್ಯ ಕಸ್ಯಚಿದಭಾವಾ-ತ್ಕೋ ದದರ್ಶ । ತದಾನೀಂ ಮನೋ ನಿತ್ಯಮಾತ್ಮಾ ಚ ನಿತ್ಯಃ ತತ್ಸಂಯೋಗಾತ್ಕಶ್ಚಿದಾತ್ಮಾ ಜಾನಾತೀತಿ ಚೇತ್ ಸೋಽಪಿ ನ ಸಂಭವತೀತ್ಯತ ಆಹ । ಭೂಮ್ಯಾಃ ಸಂಬಂಧಿ ಪಾರ್ಥಿವಂ ಸ್ಥೂಲಶರೀರಂ ಅಸುಃ ಪ್ರಾಣಃ ತದುಪಲಕ್ಷಿತಂ ಸೂಕ್ಷ್ಮಶರೀರಂ ಅಸೃಕ್ ಶೋಣಿತಂ । ಏತತ್ಸಪ್ತಧಾತೂಪಲಕ್ಷಕಂ । ಯದ್ಯಪಿ ಶರೀರಂ ಪಂಚಭೂತಾತ್ಮಕಂ ತಥಾಪಿ ಭೂತದ್ವಯಪ್ರತ್ಯಕ್ಷತ್ವಾತ್ತದಪೇಕ್ಷಯೋಕ್ತಂ । ಆತ್ಮಾ ತೈಃ ಸಂಬದ್ಧಶ್ಚೇತನಃ ಕ್ವ ಸ್ವಿತ್ । ಕುತ್ರಾಸ್ತೇ । ನ ಕಶ್ಚಿದಸ್ತೀತ್ಯರ್ಥಃ । ನಾನ್ಯತ್ಕಿಂಚನ ಮಿಷತ್ । ಐ. ಆ. ೨-೪-೧ । ಇತಿ ಶ್ರುತೇಃ । ವಿದ್ವಾಂಸಂ ಜಗತ್ಕಾರಣವಿಷಯಜ್ಞಾನವಂತಮನ್ಯಂ ಗುರ್ವಾದಿಕಮೇತತ್ಕಾ-ರಣಂ ಪ್ರಷ್ಟುಂ ಕಃ ಶಿಷ್ಯೋಽಲ್ಪಮತಿರುಪ ಗಾತ್ । ಉಪಗಚ್ಛತಿ । ತಾದೃಶೋ ದೇಹೇಂದ್ರಿಯ-ಸಂಘಾತರೂಪ ಆತ್ಮಾ ತಸ್ಮಿನ್ಸಮಯೇ ಕುತ್ರಾಸ್ತಿ । ಪ್ರಷ್ಟಾ ಪ್ರತಿವಕ್ತಾ ಚೋಭಾವಪಿ ನಾಸ್ತೀತ್ಯರ್ಥಃ । ನ ತು ತದ್ದ್ವಿತೀಯಮಸ್ತಿ ತತೋಽನ್ಯದ್ವಿಭಕ್ತಂ ಯತ್ಪಶ್ಯೇದಿತಿ ಶ್ರುತೇಃ । ಯದ್ವಾ । ಪ್ರಥಮಂ ಪ್ರಥಮ-ಭಾವಿನಂ ಜಗತಃ ಕಾರಣಭೂತಂ ಕೋ ದದರ್ಶ । ಕಃ ಸಾಕ್ಷಾತ್ಕರೋತಿ । ಜಾಯಮಾನಮಸ್ಥನ್ವಂತಂ ಮನುಷ್ಯಮನಸ್ಥಿಕಃ ಪರಮೇಶ್ವರಃ ಸಶರೀರಮಶರೀರೋ ಯದ್ಯಸ್ಮಾದ್ಬಿಭರ್ತಿ । ದ್ರಷ್ಟುರಪಿ ತತ್ಕಾರ್ಯ-ತ್ವಾದಿತಿ ಭಾವಃ । ಶಿಷ್ಟಂ ಸಮಾನಂ ॥

ಪ್ರತಿಪದಾರ್ಥ

**ಯತ್**—ಯಾವ ಪ್ರಾಪಂಚಿಕವ್ಯವಹಾರಕಾರಣದಿಂದ । **ಅಸ್ಥನ್ವಂತಂ**—ಪ್ರಪಂಚವನ್ನೇ ಶರೀರವನ್ನಾಗಿ ಮಾಡಿಕೊಂಡಿರುವ ಈಶ್ವರನನ್ನು । **ಅನಸ್ಥಾ**—ಶರೀರರಹಿತಳಾದ ಪ್ರಕೃತಿಯು ಅಥವಾ ಮಾಯೆಯು । **ಬಿಭರ್ತಿ**—ಧರಿಸುತ್ತಾಳೆಯೋ (ಅಂತಹ) । **ಪ್ರಥಮಂ ಜಾಯಮಾನಂ**—ವಿಶ್ವಸೃಷ್ಟಿಗಿಂತಲೂ ಪೂರ್ವದಲ್ಲಿ (ಸ್ವಯಂ) ಉತ್ಪನ್ನನಾದ ಈಶ್ವರನನ್ನು । **ಕಃ**—ಯಾರುತಾನೇ । **ದದರ್ಶ**—ನೋಡಿದ್ದಾರೆ [ಅಥವಾ । **ಪ್ರಥಮಂ**—ಸೃಷ್ಟಿಗಿಂತಲೂ ಪೂರ್ವದಲ್ಲಿ ಅವ್ಯಾಕೃತನಾಗಿದ್ದ ಈಶ್ವರನನ್ನು । **ಕಃ ದದರ್ಶ**—ಯಾರು ತಾನೇ ನೋಡಿದ್ದಾರೆ । ] **ಅಸುಃ** ಪ್ರಾಣದಿಂದ ಉಪಲಕ್ಷಿತವಾದ ಸೂಕ್ಷ್ಮಶರೀರವೂ । **ಅಸೃಕ್**—ರಕ್ತಮಾಂಸಾದಿಗಳಿಂದ ಉಪಲಕ್ಷಿತವಾದ ಸ್ಥೂಲ ಶರೀರವೂ । **ಭೂಮ್ಯಾಃ**—ಪೃಥ್ವಿಗೆ ಸಂಬಂಧಿಸಿದವು (ಪಾರ್ಥಿವವಾದವು) । **ಆತ್ಮಾ**—ಅವುಗಳೊಡನೆ ಮಿಶ್ರಿತವಾಗಿರುವ ಚೇತನವು । **ಕ್ವ ಸ್ವಿತ್**—ಎಲ್ಲಿರುತ್ತದೆ ? । **ಏತತ್**—ಈ ಚೇತನದ ಸ್ವರೂಪವನ್ನು । **ಪ್ರಷ್ಟುಂ**—ಕೇಳಿ ತಿಳಿದುಕೊಳ್ಳುವುದಕ್ಕೆ । **ಕಃ**—ಅಲ್ಪಮತಿಯಾದ ಯಾವನು । **ವಿದ್ವಾಂಸಂ**—ಜಗತ್ಕಾರಣವನ್ನೂ ಸ್ವರೂಪವನ್ನೂ ತಿಳಿದಿರುವ ಯಾವ ಗುರುವನ್ನು ತಾನೇ । **ಉಪ ಗಾತ್**—ಸಮೀಪಿಸುತ್ತಾನೆ.

ಭಾವಾರ್ಥ

ಯಾವ ಪ್ರಾಪಂಚಿಕವ್ಯವಹಾರ ಕಾರಣದಿಂದ ಜಗತ್ತನ್ನೇ ತನ್ನ ಶರೀರವನ್ನಾಗಿ ಮಾಡಿಕೊಂಡಿರುವ ಈಶ್ವರನನ್ನು ಶರೀರರಹಿತಳಾದ ಮಾಯೆಯು ಅಥವಾ ಪ್ರಕೃತಿಯು ಧರಿಸಿದ್ದಾಳೆಯೋ, ಅಂತಹ ಅವ್ಯಾಕೃತನಾದ ಈಶ್ವರನನ್ನು ವಿಶ್ವಸೃಷ್ಟಿಗಿಂತಲೂ ಮೊದಲು ಯಾರುತಾನೇ ತಿಳಿದಿದ್ದಾರೆ ? ಪ್ರಾಣದಿಂದ ಉಪಲಕ್ಷಿತವಾದ ಸೂಕ್ಷ್ಮ ಶರೀರವೂ, ರಕ್ತಮಾಂಸಾದಿಗಳಿಂದ ಉಪಲಕ್ಷಿತವಾದ ಸ್ಥೂಲಶರೀರವೂ ಪಾರ್ಥಿವವಾದವು. ಅವುಗಳೊಡನೆ ಸೇರಿಕೊಂಡಿರುವ ಚೇತನವು ಎಲ್ಲಿರುತ್ತದೆ ? ಮತ್ತು ಅದರ ಸ್ವರೂಪವನ್ನು ತಿಳಿಯಲು ಯಾವ ಶಿಷ್ಯನು ತಾನೇ ಗುರುವನ್ನು ಸಮೀಪಿಸುತ್ತಾನೆ ?

English Translation

Who has seen the primeval (being) at the time of his being born; what is that endowed with substance which the unsubstantial sustains; from earth are the breath and blood, but where is the soul: who may repair to the sage to ask this?

**ವಿಶೇಷವಿಷಯಗಳು**

ಈ ಋಕ್ಕಿನಲ್ಲಿ ಪ್ರಕೃತಿಗೂ ಈಶ್ವರನಿಗೂ ಇತರತಕ್ಕ ಸಂಬಂಧವನ್ನೂ ವ್ಯತ್ಯಾಸವನ್ನೂ ಹೇಳಿದೆ. ಈಶ್ವರನ ಅವ್ಯಾಕೃತವಾದ ಶರೀರವು ಅಗ್ರಾಹ್ಯವೂ ಅನಿರ್ವಚನೀಯವಾದುದೂ ಆಗಿರುವುದೆಂದೂ, ವ್ಯಾಕೃತವಾದ ಪ್ರಪಂಚವನ್ನು ತಿಳಿಯುವುದರ ಮೂಲಕ ಅವನ ಸ್ವರೂಪವನ್ನು ಕೊಂಚಮಟ್ಟಿಗೆ ಮಾತ್ರ ತಿಳಿಯಬಹುದೆಂದೂ ವಿವರಿಸಿದೆ. ಮತ್ತು ಚೇತನರೂಪಿಯಾದ ಆತ್ಮಕ್ಕೂ ಅಚೇತನರೂಪಿಯಾದ ದೇಹಕ್ಕೂ ಇರತಕ್ಕ ಸಂಬಂಧವೂ ಸಹ ಆಶ್ಚರ್ಯಕರವಾದುದು. ದೇಹರಹಿತವಾದ ಚೇತನವಾವುದು ಅದರ ಸ್ವರೂಪವೇನು ಎಂದು ತಿಳಿಸುವವರಾರು ಅಥವಾ ಅದನ್ನು ತಿಳಿಯತಕ್ಕ ಕುತೂಹಲವಾರಿಗಿದೆ ಎಂದು ಪ್ರಶ್ನಿಸಿದೆ. ದಾರ್ಶನಿಕವಾದ ಮತಭೇದಗಳನ್ನನುಸರಿಸಿ ಆಯಾ, ಮತಗಳಿಗನುಸಾರವಾಗಿ ಈ ಸೂಕ್ತದಲ್ಲಿ ಅನೇಕಋಕ್ಕುಗಳಿಗೆ ಅರ್ಥಭೇದಗಳನ್ನು ತೋರಿಸಬಹುದಾದರೂ ಸಹ ಇಲ್ಲಿ ಕೇವಲ ಸಾಯಣರ ವಿವರಣೆಯಲ್ಲಿ ಹೇಳಿರುವ ಮತವನ್ನು ಮಾತ್ರ ಅನುಸರಿಸಿ ವಿವರಿಸಲು ಪ್ರಯತ್ನಿಸಿದೆ.

**ಅನಸ್ಥಾ — ಅಸ್ಥಿರಹಿತಾ ಅಶರೀರಾ ಸಾಂಖ್ಯಪ್ರಸಿದ್ಧಾ ಪ್ರಕೃತಿಃ ವೇದಾಂತಪ್ರಸಿದ್ಧಾ ಈಶ್ವರಾಯತ್ತಾ ಮಾಯಾ ।**— ಸಾಂಖ್ಯಮತದಲ್ಲಿ ಪ್ರತಿಪಾದಿಸತಕ್ಕ ಮೂಲಪ್ರಕೃತಿಯೆಂದಾಗಲಿ ಅಥವಾ ವೇದಾಂತಿಗಳು ಪ್ರತಿಪಾದಿಸತಕ್ಕ ಮಾಯಾ ಎಂದಾಗಲಿ ಅರ್ಥವಾಗುತ್ತದೆ. ಪ್ರಕೃತಿಯಲ್ಲಿಯೂ ಅವ್ಯಾಕೃತವಾದ ಪ್ರಕೃತಿ ಮತ್ತು ವ್ಯಾಕೃತವಾದ ಪ್ರಕೃತಿಯೆಂದು ಎರಡು ವಿಧವಿದೆ. ಕೇವಲ ಸತ್ತ್ವರಜಸ್ತಮೋಗುಣಾತ್ಮಕವಾದುದೂ ಶರೀರರಹಿತವಾದುದೂ ಆದ ಪ್ರಕೃತಿಯಾಗಲಿ, ಅಶರೀರಿಯಾದ ಮಾಯೆಯಾಗಲಿ ಕಾರ್ಯಾವಸ್ಥೆಯಲ್ಲಿರತಕ್ಕ ಈಶ್ವರನಿಗೆ ಕಾರ್ಯರೂಪದ ಜಗದ್ವ್ಯವಹಾರಗಳಿಗೆ ಸಹಾಯಮಾಡುತ್ತದೆಯೆಂದರ್ಥ. [ಅಸ್ಥಿರಹಿತವಾದುದು ಅನಸ್ಥವು. ಋ. ಸಂ ೮-೧-೩೪].

**ಅಸ್ಥನ್ವಂತಂ— ಅಸ್ಥಿಮಂತಂ ಸಶರೀರಂ ।** ಅಸ್ಥಿಯಿಂದ ಕೂಡಿದ ಶರೀರವುಳ್ಳ ಈಶ್ವರನನ್ನು ಎಂದರ್ಥ. ಅಸ್ಥಿಯಿಂದ ಕೂಡಿದ ಶರೀರವು ಈಶ್ವರನಿಗೆಲ್ಲಿಂದ ಬಂದಿತು ಎಂದು ಇಲ್ಲಿ ವಿರೋಧಾಭಾಸವನ್ನು ತೋರಿಸಿದರೆ ಅದಕ್ಕೆ ಉತ್ತರವಾಗಿ ಸಾಯಣರು **ಉಪಲಕ್ಷಣಮೇತತ್** ಇದು ಕೇವಲ ರೂಪಕವೂ ಔಪಚಾರಿಕವೂ ಆದ ವರ್ಣನೆಯಾಗಿದೆ. **ಕಾರ್ಯಭಾವಮಾಪನ್ನಮಿತ್ಯರ್ಥಃ**– ಕಾರ್ಯರೂಪವಾದ ಪ್ರಪಂಚ ರೂಪವನ್ನು ಧರಿಸಿದ ಎಂದರ್ಥವೆಂದು ವಿವರಿಸಿದ್ದಾರೆ ಸೃಷ್ಟಿಗೆ ಪೂರ್ವದಲ್ಲಿ ಪ್ರಪಂಚವೂ ಈಶ್ವರನಲ್ಲೇ ಲೀನವಾಗಿ ಚಿತ್ತು, ಅಚಿತ್ತು ಎಂಬ ಭೇದಗಳಾವುದೂ ಇಲ್ಲದೇ ಅವ್ಯಾಕೃತನಾದ ಈಶ್ವರನೊಬ್ಬನು ಮಾತ್ರವಿದ್ದುದರಿಂದ ಅಂತಹ ಅನಿರ್ವಚನೀಯನಾದ ಈಶ್ವರನ ತತ್ತ್ವವನ್ನು ತಿಳಿದವನಾರು ಎಂದು ಪ್ರಶ್ನಿಸುತ್ತಾ,

**ಕೋ ದದರ್ಶ ಪ್ರಥಮಂ ಜಾಯಮಾನಂ**— ಪ್ರಥಮದಲ್ಲಿ ಉತ್ಪನ್ನನಾದ ಈಶ್ವರನ ಸ್ವರೂಪವನ್ನು ನೋಡಿದವನಾರು ಎಂದು ಮಾನವನ ಅಲ್ಪಮತಿಯನ್ನೂ ಈಶ್ವರನ ಅಗ್ರಾಹ್ಯವಾದ ಸ್ವರೂಪವನ್ನೂ ತಿಳಿಸಿದೆ. ಸೃಷ್ಟಿಗೆ ಪೂರ್ವದಲ್ಲೂ, ಸೃಷ್ಟಿಕಾಲದಲ್ಲೂ ವಿಶ್ವತತ್ತ್ವವು ಹೇಗಿದ್ದಿತೆಂಬುದನ್ನು ಋಕ್ಸಂಹಿತೆಯಲ್ಲಿ ಈರೀತಿ ವರ್ಣಿಸಿದೆ. ಇಲ್ಲಿರುವಂತೆಯೇ ಆ ವರ್ಣನೆಯೂ ಜಿಜ್ಞಾಸಾರೂಪವಾದುದೂ, ಪ್ರಶ್ನಾತ್ಮಕವಾದುದೂ ಆಗಿದೆ.

**ನಾಸದಾಸೀನ್ನೋಸದಾಸೀತ್ತದಾನೀಂ ನಾಸೀದ್ರಜೋ ನೋ ವ್ಯೋಮಾ ಪರೋ ಯತ್ ।**
**ಕಿಮಾವರೀವಃ ಕುಹ ಕಸ್ಯ ಶರ್ಮನ್ನಂಭಃ ಕಿಮಾಸೀದ್ಗಹನಂ ಗಭೀರಂ ॥**
(ಋ. ಸಂ. ೧೦-೧೨೯-೧)

ಸೃಷ್ಟಿಗಿಂತಲೂ ಪೂರ್ವದಲ್ಲಿ ಸತ್ತಾಗಲಿ ಅಸತ್ತಾಗಲಿ ಇರಲಿಲ್ಲ. (ವ್ಯಕ್ತ, ಅವ್ಯಕ್ತ) ಪ್ರಕಾಶಮಾನವಾದ ಅಂತರಿಕ್ಷವಿರಲಿಲ್ಲ. ವಿಶ್ವವನ್ನೆಲ್ಲಾ ಯಾವುದು ವ್ಯಾಪಿಸಿತ್ತು, ಆ ಗಭೀರವಾದ ತತ್ತ್ವವಾವುದು ಎಂಬುದು ಯಾರಿಗೆ ಗೊತ್ತು ? ಆ ತತ್ತ್ವವು ಗಭೀರವಾದ ಅಪ್ಪಾಗಿರಬಹುದೇ ? (ನೀರಾಗಿರಬಹುದೇ ?)

**ನ ಮೃತ್ಯುರಾಸೀದಮೃತಂ ನ ತರ್ಹಿ ನ ರಾತ್ರ್ಯಾ ಅಹ್ನ ಆಸೀತ್ಪ್ರಕೇತಃ ।**
**ಆನೀದವಾತಂ ಸ್ವಧಯಾ ತದೇಕಂ ತಸ್ಮಾದ್ಧಾನ್ಯನ್ನ ಪರಃ ಕಿಂ ಚನಾಸ ॥**
(ಋ. ಸಂ. ೧೦-೧೨೯-೨)

ಆ ಕಾಲದಲ್ಲಿ ಮೃತ್ಯುವಾಗಲಿ, ಅಮೃತವಾದುದಾಗಲಿ, (ಮರಣ ಅಥವಾ ಮರಣವಿಲ್ಲದಿರುವ ವಸ್ತುಗಳು) ಅಹೋರಾತ್ರಗಳ ಪರಿಜ್ಞಾನವನ್ನುಂಟುಮಾಡುವ ಸಾಧನವಾಗಲಿ ಇರಲಿಲ್ಲ. ಕೇವಲವೂ ಅದ್ವಿತೀಯವೂ ಆದ ತತ್ತ್ವವೊಂದು ಮಾತ್ರವಿದ್ದು ಅದಕ್ಕಿಂದ ಬೇರೆ ಇನ್ನಾವುದೂ ಇರಲಿಲ್ಲ.

**ತಮ ಆಸೀತ್ತಮಸಾ ಗೂಳ್ಹಮಗ್ರೇಽಪ್ರಕೇತಂ ಸಲಿಲಂ ಸರ್ವಮಾ ಇದಂ ।**
**ತುಚ್ಛ್ಯೇನಾಭ್ವಪಿಹಿತಂ ಯದಾಸೀತ್ತಪಸಸ್ತನ್ಮಹಿನಾಜಾಯತೈಕಂ ॥**
(ಋ. ಸಂ. ೧೦-೧೨೯-೩)

ಪ್ರಥಮದಲ್ಲಿ ಪ್ರಕಾಶವಿಲ್ಲದುದೂ ಸಾಗರದಂತೆ ಗಭೀರವಾದುದೂ ಆದ ಕೇವಲ ತಮೋರಾಶಿಮಾತ್ರವಿದ್ದಿತು. ಮತ್ತು ಆ ತಮಸ್ಸಿನಿಂದ ಆವೃತವಾದ ತತ್ತ್ವವು ಸದಸದ್ವಿಲಕ್ಷಣವಾದುದೂ, ಲೌಕಿಕ ಜ್ಞಾನಾತೀತವಾದುದೂ ಆಗಿದ್ದಿತು. ಮತ್ತು ಅದರ ತಪಸ್ಸಿನ ಫಲದಿಂದಲೂ ಮಾಹಾತ್ಮ್ಯದಿಂದಲೂ ಸಹ ಅದ್ವಿತೀಯವಾದ ತತ್ತ್ವದ ಆವಿರ್ಭಾವವಾಯಿತು

ಇತ್ಯಾದಿಯಾಗಿ ಸೃಷ್ಟಿಗೆ ಪೂರ್ವಸ್ಥಿತಿಯ ವರ್ಣನೆಗಳಿರುವುದರಿಂದಲೂ ಅದನ್ನು ತಿಳಿಯಲು ಯಾರಿಂದಲೂ ಸಾಧ್ಯವಿಲ್ಲದುದರಿಂದಲೂ ಸಹ **ಕೋ ದದರ್ಶ ಪ್ರಥಮಂ ಜಾಯಮಾನಂ** ಎಂದು ಪ್ರಶ್ನಿಸಿದೆ. ಸಾಯಣರು ಇದನ್ನು ವಿವರಿಸುತ್ತಾ **ಯದಾ ಕೇವಲಃ ಪರಮೇಶ್ವರೋ ಮಾಯಾಶಬಲಿತಃ ಸನ್ನಿದಂ ಜಗನ್ನಿರ್ಮಿತವಾನ್ ಉತ್ಪತ್ತಿಸಮಯೇ ದೇಹಾದಿಸಹಿತಸ್ಯ ಕಸ್ಯಚಿದಭಾವಾತ್ ।** ಮಾಯಾಶಕ್ತಿಯಿಂದ ವೈವಿಧ್ಯವನ್ನು ಹೊಂದಿರುವಂತೆ ಆವಿರ್ಭವಿಸುವುದಕ್ಕೆ ಪೂರ್ವದಲ್ಲಿ ಅವನನ್ನುಳಿದು ಇನ್ನಾರೂ ಇರಲಿಲ್ಲವಾದುದರಿಂದ ಹೀಗೆ ಹೇಳಿದೆಯೆಂದು ತಿಳಿಸಿಸಿದ್ದಾರೆ ಹೀಗೆ ಕೇವಲ ಪರಬ್ರಹ್ಮನು ಮಾತ್ರ ಇದ್ದು ವ್ಯವಹಾರಪ್ರಪಂಚದ ಅಭಾವದ ಕಾಲದಲ್ಲಿ ಈಶ್ವರನ ಸ್ಥಿತಿಯನ್ನು ಉಪನಿಷದಾದಿಗಳಲ್ಲಿ ಈರೀತಿ ವರ್ಣಿಸಿದೆ—

**ಸದೇವ ಸೋಮ್ಯೇದಮಗ್ರ ಆಸೀದೇಕಮೇವಾದ್ವಿತೀಯಂ । ತದ್ಧೈಕ ಆಹುರಸದೇವೇದಮಗ್ರ ಆಸೀದೇಕಮೇವಾದ್ವಿತೀಯಂ ತಸ್ಮಾದಸತಃ ಸಜ್ಜಾಯತ ।**
(ಛಾ. ಉ. ೬-೨-೧)

**ಬ್ರಹ್ಮ ವಾ ಇದಮಗ್ರ ಆಸೀದೇಕಮೇವ ತದೇಕಂ ಸನ್ನ ವ್ಯಭವತ್ ।**
(ಬೃ. ಉ. ೧-೪-೧೧)

ಸದ್ರೂಪವಾದ (ವ್ಯಕ್ತವಾದ) ಪ್ರಪಂಚದ ಸೃಷ್ಟಿಗೆ ಪೂರ್ವದಲ್ಲಿ ಅಸದ್ರೂಪವಾದ (ಅವ್ಯಕ್ತವಾದ) ಒಂದೇ ಒಂದು ತತ್ತ್ವವಿದ್ದಿತು. ಅದನ್ನು ಬಿಟ್ಟು ಉಳಿದುದಾವುದೂ ಇರಲಿಲ್ಲವೆಂದು ಛಾಂದೋಗ್ಯದಲ್ಲಿಯೂ, ಈ ಏಕತತ್ತ್ವವೇ

ಬ್ರಹ್ಮನೆಂಬುದಾಗಿ ಬೃಹದಾರಣ್ಯಕದಲ್ಲಿಯೂ ವರ್ಣಿಸಿ ಈ ಬ್ರಹ್ಮತತ್ತ್ವದ ಸ್ವರೂಪವು ಏನೆಂಬುದನ್ನು ಪ್ರಾಕೃತ ಪ್ರಪಂಚದಲ್ಲಿರತಕ್ಕ ಯಾರೂ ತಿಳಿಯಲಾರರೆಂದು ತಿಳಿಸಿದೆ.

**ಭೂಮ್ಯಾಃ ಅಸುರಸೃಕ್** ಎಂಬುದರಿಂದ ಪಾರ್ಥಿವವಾದ ಸ್ಥೂಲಶರೀರವನ್ನು ವರ್ಣಿಸಿದೆ. ಇಲ್ಲಿ **ಅಸುಃ** ಎಂದರೆ ಪ್ರಾಣವೆಂದರ್ಥ. ಪ್ರಾಣವು ಚೈತನ್ಯರೂಪವಾದರೂ ಸಹ ಪಾರ್ಥಿವವೆಂದೇ ತಿಳಿಯಬೇಕು ಭೌತಿಕ ಶರೀರದಲ್ಲಿ ಸ್ಥೂಲ, ಸೂಕ್ಷ್ಮ ಎಂಬ ಎರಡು ಭೇದಗಳನ್ನು ಮಾಡಿ ಪ್ರಾಣವು ಸೂಕ್ಷ್ಮಶರೀರವೆಂದೂ ಅಸೃಗಾದಿಗಳು ಸ್ಥೂಲಶರೀರವೆಂದೂ ವಿಭಾಗಿಸಲ್ಪಟ್ಟಿದೆ. ಮತ್ತು ಪ್ರಾಣರೂಪವಾದ ಚೇತನಕ್ಕೂ ಆತ್ಮರೂಪವಾದ ಚೇತನಕ್ಕೂ ಸಾಯಣರು ವ್ಯತ್ಯಾಸವನ್ನು ತೋರಿಸುತ್ತಾ

**ಆತ್ಮಾ ವಾ ಇದಮೇಕ ಏವಾಗ್ರ ಆಸೀನ್ನಾನ್ಯತ್ಕಿಂಚನ ಮಿಷತ್ ।**
(ಐ. ಆ. ೨-೪-೧)

ಎಂಬ ಐತರೇಯಾರಣ್ಯಕದ (ಇದು ಐತರೆಯೋಪನಿಷತ್ತಿನ ಮೊದಲನೆಯ ವಾಕ್ಯವು) ವಾಕ್ಯವನ್ನು ಹೆದರಿಸಿ ಇಲ್ಲಿ ಭೌತಿಕ ಪ್ರಾಣಕ್ಕೂ ಶುದ್ಧಚೇತನಕ್ಕೂ ಹೇಳತಕ್ಕ ವ್ಯತ್ಯಾಸವನ್ನು ತೋರಿಸಿದ್ದಾರೆ. ಆದರೆ ಐತರೇಯಾರಣ್ಯಕದಲ್ಲಿ ಎರಡನೇ ಆರಣ್ಯಕದಲ್ಲಿ ಪ್ರಾರಂಭದಿಂದ ನಾಲ್ಕನೇ ಅಧ್ಯಾಯದವರೆಗೂ **ಪ್ರಾಣದ** ಮಹಿಮೆಯನ್ನು ತಿಳಿಸುತ್ತಾ **ಪ್ರಾಣವೇ** ಪರಬ್ರಹ್ಮವೆಂದು ತಿಳಿಸಿ ಒಡನೆಯೇ ನಾಲ್ಕನೆಯ ಅಧ್ಯಾಯದಲ್ಲಿ ಪ್ರಾಣಕ್ಕೂ ಆತ್ಮನಿಗೂ ಇರುವ ವ್ಯತ್ಯಾಸವನ್ನು ಹೇಳಿದೆ. ಸಾಂಖ್ಯತತ್ತ್ವದ ಪ್ರಕಾರ **ಪ್ರಾಣ, ಪುರುಷ** ಇವುಗಳ ಅರ್ಥವನ್ನು ತಿಳಿದರೆ ಶಾಸ್ತ್ರೀಯವಾದ ಜ್ಞಾನಕ್ಕೆ ಸಾಧನವಾದುದರಿಂದಲೂ ಮುಂದೆ ಸಾಂಖ್ಯತತ್ತ್ವದ ವಿಮರ್ಶೆಯು ಬರುವುದರಿಂದಲೂ ಆಗ ಈ ಚೇತನದ್ವಯಗಳಿಗಿರುವ ವ್ಯತ್ಯಾಸವನ್ನು ತಿಳಿಸಲಾಗುತ್ತದೆ.

**ಕಃ ವಿದ್ವಾಂಸಮುಪಗಾತ್ಪ್ರಷ್ಟುಮೇತತ್**—ಸೃಷ್ಟಿಗಿಂತಲೂ ಪೂರ್ವದಲ್ಲಿ ಏಕಮಾತ್ರವಿದ್ದುದರಿಂದ **ವಕ್ತಾ ಶ್ರೋತಾ** ಎಂಬ ವ್ಯತ್ಯಾಸವನ್ನು ತೋರಿಸುವ ನಾನಾತ್ವವಿಲ್ಲದುದರಿಂದ ಕೇಳುವವನು, ಹೇಳುವವನು ಎಂಬ ಭೇದವಿರುವುದಕ್ಕೇ ಕಾರಣವಿಲ್ಲವೆಂದರ್ಥವು.

ವ್ಯಾಕರಣಪ್ರಕ್ರಿಯಾ

**ದದರ್ಶ**—ದೃಶಿರ್ ಪ್ರೇಕ್ಷಣೇ. ಧಾತು. **ಛಂದಸಿ ಲುಙ್ಲಙ್ಲಿಟಃ** (ಪಾ. ಸೂ. ೩-೪-೬) ಎಂಬುದರಿಂದ ಲಿಙರ್ಥದಲ್ಲಿ ಲಿಟ್ ಪ್ರಥಮಪುರುಷಏಕವಚನಾಂತರೂಪ. ತಿಙಂತನಿಘಾತಸ್ವರ ಬರುತ್ತದೆ.

**ಅಸ್ಥನ್ವಂತಮ್**—ಅಸ್ಥಿ ಅಸ್ಯ ಅಸ್ತಿ ಇತಿ ಅಸ್ಥನ್ವಾನ್. ಅಜಾದಿಪ್ರತ್ಯಯ ಪರದಲ್ಲಿ ಇಲ್ಲದಿದ್ದರೂ **ಛಂದಸ್ಯಪಿ ದೃಶ್ಯತೇ** (ಪಾ. ಸೂ. ೭-೧-೭೬) ಎಂಬುದರಿಂದ ಅನಜಾದೇಶ. ಮತುಪ್ ಪರವಾದಾಗ ನಲೋಪ. **ಅನೋನುಟ್** (ಪಾ. ಸೂ. ೮-೨-೧೬) ಎಂಬುದರಿಂದ ನುಡಾಗಮ. **ಹ್ರಸ್ವನುಡ್ಭ್ಯಾಂ ಮತುಪ್** (ಪಾ. ಸೂ. ೬-೧-೧೭೬) ಎಂಬುದರಿಂದ ಮತುಪಿಗೆ ಉದಾತ್ತಸ್ವರ ಬರುತ್ತದೆ. ದ್ವಿತೀಯಾ ಏಕವಚನದಲ್ಲಿ ಉಗಿತ್ತಾದುದರಿಂದ ನುಮಾಗಮ

**ಅನಸ್ಥಾ**—ನ ವಿದ್ಯತೇ ಅಸ್ಥಿ ಯಸ್ಯ ಹಿಂದಿನಂತೆ ಛಾಂದಸವಾಗಿ ಅನಙ್. **ನಞ್ಸುಭ್ಯಾಮ್** (ಪಾ. ಸೂ. ೬-೨-೧೭೨) ಎಂಬುದರಿಂದ ಅಂತೋದಾತ್ತಸ್ವರ ಬರುತ್ತದೆ.

**ಬಿಭರ್ತಿ**—ಡುಭೃಞ್ ಭರಣೇ ಧಾತು. **ಜುಹೋತ್ಯಾದಿ.** ಲಟ್ ಪ್ರಥಮಪುರುಷಏಕವಚನಾಂತರೂಪ. **ಯದ್ವೃತ್ತಾನ್ನಿತ್ಯಮ್**-ಎಂಬುದರಿಂದ ನಿಘಾತಸ್ವರಪ್ರತಿಷೇಧ ಬರುತ್ತದೆ. **ಅಭ್ಯಸ್ತಾನಾಮಾದಿಃ** (ಪಾ. ಸೂ. ೬-೧-೧೮೯) ಎಂಬುದರಿಂದ ಆದ್ಯುದಾತ್ತಸ್ವರ ಬರುತ್ತದೆ.

**ಅಸುಃ**—ಅಸು ಕ್ಷೇಪಣೇ ಧಾತು. **ಶೄಸ್ವೃಸ್ನಿಹಿತ್ರ್ಯ**—(ಉ. ಸೂ. ೧-೧೦) ಎಂಬುದರಿಂದ ಉನ್ ಪ್ರತ್ಯಯ ಆದ್ಯುದಾತ್ತಸ್ವರ ಬರುತ್ತದೆ.

**ವಿದ್ವಾಂಸಮ್**—ವಿದ ಜ್ಞಾನೇ ಧಾತು ಇದಕ್ಕೆ ಲಡರ್ಥದಲ್ಲಿ ಶತೃ ಬಂದಾಗ **ವಿದೇಃ ಶತುರ್ವಸುಃ** (ಪಾ. ಸೂ. ೭-೧-೩೬) ಎಂಬುದರಿಂದ ಅದಕ್ಕೆ ವಸು ಆದೇಶ. ದ್ವಿತೀಯಾಏಕವಚನದಲ್ಲಿ ಉಗಿತ್ತಾದುದರಿಂದ ನುಮಾಗಮ, ವಸುಪ್ರತ್ಯಯದ ಆದ್ಯುದಾತ್ತಸ್ವರ ಬರುತ್ತದೆ.

**ಗಾತ್**—ಇಣ್ ಗತೌಧಾತು. ಛಾಂದಸವಾಗಿ ಲುಙ್. **ಇಣೋಗಾಲುಙಿ** (ಪಾ. ಸೂ. ೨-೪-೪೫) ಎಂಬುದರಿಂದ ಧಾತುವಿಗೆ ಗಾದೇಶ. **ಗಾತಿಸ್ಥಾಘುಪಾ**— (ಪಾ ಸೂ. ೨-೪-೭೭) ಎಂಬುದರಿಂದ ಚ್ಲಿಗೆ ಸಿಚಾದೇಶ ಬಂದಾಗ ಅದಕ್ಕೆ ಲುಕ್. **ಬಹುಲಂ ಛಂದಸ್ಯಮಾಙ್ಯೋಗೇಪಿ** (ಪಾ. ಸೂ. ೬-೪-೭೫) ಎಂಬುದರಿಂದ ಅಡಾಗಮ ಬರುವುದಿಲ್ಲ. ತಿಙಂತನಿಘಾತಸ್ವರ ಬರುತ್ತದೆ.

**ಪ್ರಷ್ಟುಮ್**—ಪ್ರಚ್ಛ ಜ್ಞೀಪ್ಸಾಯಾಂ ವಾಚಿ ಧಾತು. **ತುಮುನ್ಣ್ವು**—(ಪಾ. ಸೂ. ೩-೩-೧೦) ಎಂಬುದರಿಂದ ತುಮುನ್ ಪ್ರತ್ಯಯ. **ವ್ರಶ್ಚ ಭ್ರಸ್ಜ**—ಸೂತ್ರದಿಂದ ಷತ್ವ. ಅದನ್ನು ನಿಮಿತ್ತೀಕರಿಸಿ ಪ್ರತ್ಯಯಕ್ಕೆ ಷ್ಟುತ್ವ. ಪ್ರತ್ಯಯನಿತ್ತಾದುದರಿಂದ **ಞ್ನಿತ್ಯಾದಿರ್ನಿತ್ಯಮ್** (ಪಾ. ಸೂ. ೬-೧-೧೯೭) ಎಂಬುದರಿಂದ ಆದ್ಯುದಾತ್ತಸ್ವರ ಬರುತ್ತದೆ. ಮಾಂತಕೃದಂತವಾದುದರಿಂದ ಅವ್ಯಯ ಸಂಜ್ಞೆಯನ್ನು ಹೊಂದುತ್ತದೆ. ‖ ೪ ‖

———:O:———

ಸಂಹಿತಾಪಾಠಃ

## ಪಾಕಃ ಪೃಚ್ಛಾಮಿ ಮನಸಾ ವಿಜಾನನ್ದೇವಾನಾಮೇನಾ ನಿಹಿತಾ ಪದಾನಿ ।
## ವತ್ಸೇ ಬಷ್ಕಯೇಽಧಿ ಸಪ್ತ ತಂತೂನ್ವಿ ತತ್ನಿರೇ ಕವಯ ಓತವಾ ಉ ‖ ೫ ‖

ಪದಪಾಠ

ಪಾಕಃ । ಪೃಚ್ಛಾಮಿ । ಮನಸಾ । ಅವಿಽಜಾನನ್ । ದೇವಾನಾಂ । ಏನಾ । ನಿಽಹಿತಾ । ಪದಾನಿ ।
ವತ್ಸೇ । ಬಷ್ಕಯೇ । ಅಧಿ । ಸಪ್ತ । ತಂತೂನ್ । ವಿ । ತತ್ನಿರೇ । ಕವಯಃ । ಓತವೈ । ಊಂ ಇತಿ ‖ ೫ ‖

### ಸಾಯಣಭಾಷ್ಯಂ

ಪಾಕಃ ಪಕ್ತವ್ಯೋಽಪಕ್ವಮತಿರಹಂ ಮನಸಾ ಸಂಸ್ಕೃತೇನಾಽವಿಜಾನನ್ನತಿಗಹನಂ ತತ್ತ್ವಂ ವಿಶೇಷೇಣ ಜ್ಞಾತುಮಶಕ್ನುವನ್ ಪೃಚ್ಛಾಮಿ। ಪ್ರಶ್ನಂ ಕರೋಮಿ। ಅಜ್ಞಾನೇ ಕಾರಣಮಾಹ। ಏನ್ಯೆನಾನಿ ಪದಾನಿ ಸಂದೇಹಾಸ್ಪದಾನಿ ತತ್ತ್ವಾನಿ ದೇವಾನಾಂ ನಿಹಿತಾನಿ। ದೇವಾನಾಮಪಿ ಗೂಢಾನೀತ್ಯರ್ಥಃ। ಯದ್ವಾ। ದೇವಾನಾಂ ಪದಾನಿ ತತ್ತ್ವಾನಿ ನಿಧಿವದ್ಗೋಪಯಿತ್ವಾ ಸ್ಥಾಪಿತಾನಿ। ಅತಃ ಪೃಚ್ಛಾಮಿ ತತ್ತ್ವಜ್ಞಾನೋಪ-ಯೋಗಾಯೇತಿ ಶೇಷಃ। ತಾನಿ ಕಾನೀತಿ ಉಚ್ಯತೇ। ವತ್ಸೇ ಸರ್ವಸ್ಯ ನಿವಾಸಭೂತೇ ಬಷ್ಕಯೇ। ಬಡಿತಿ ಸತ್ಯನಾಮ। ತತ್ಕಷತೀತಿ ಬಷ್ಕಯ ಆದಿತ್ಯಃ। ಯದ್ವಾ। ಬಷ್ಕಯೋ ನಾಮೈಕಹಾಯನೋ ವತ್ಸಃ। ಪುನರಪಿ ವತ್ಸಶಬ್ದಸ್ಯ ಪೃಥಙ್ನಿರ್ದೇಶಾದ್ಬಷ್ಕಯ ಶಬ್ದೇನ ತತ್ಕಾಲಮಾತ್ರಂ ಲಕ್ಷ್ಯತೇ। ತಸ್ಮಿನ್ನಾದಿತ್ಯೇಽ-ದ್ಯಧಿಕಂ ಸಪ್ತ ತಂತೂಂಸ್ತಾಯಮಾನಾನ್ ಸಪ್ತ ಸೋಮಸಂಸ್ಥಾನ್ಕವಯೋ ಮೇಧಾವಿನೋ ಯಜಮಾನಾ ಓತವೈ ಜಗದ್ರೂಪತಿರ್ಯಕ್ತಂತೂನ್ನೇತುಂ ವಿ ತತ್ನಿರೇ। ವಿತನ್ವಂತಿ। ಯದ್ವಾ। ಸಪ್ತ ತಂತವಃ ಸಪ್ತ ಛಂದಾಂಸಿ। ತಾನಿ ವಿತನ್ವಂತಿ। ಕಿಮರ್ಥಂ। ಓತವೈ ಸಪ್ತಸೋಮಸಂಸ್ಥಾರೂಪತಿರ್ಯಕ್ತಂತುಸಂತಾ-ನಾಯ। ಯಜ್ಞನಿರ್ಮಾಣಾಯೇತ್ಯರ್ಥಃ। ಯಜ್ಞಾನಾಂ ಸ್ಥಿತೇಃ ಸೂರ್ಯಾಧೀನತ್ವಾದಿತಿ ಭಾವಃ। ಈದೃಶಂ ತತ್ತ್ವಂ ಪೃಚ್ಛಾಮೀತ್ಯರ್ಥಃ ॥

### ಪ್ರತಿಪದಾರ್ಥ

**ದೇವಾನಾಂ**—ದೇವತೆಗಳ (ತಿಳಿವಳಿಕೆಗೂ ಮೀರಿ) । **ನಿಹಿತಾ**—ಇಡಲ್ಪಟ್ಟಿರುವ । **ಏನಾ ಪದಾನಿ**—ಈ ತತ್ತ್ವಾರ್ಥಗಳನ್ನು । **ಮನಸಾ**—ಅಶಿಕ್ಷಿತವಾದ ಬುದ್ಧಿಯಿಂದ । **ಅವಿಜಾನನ್**—ತಿಳಿಯಲಶಕ್ತನಾಗಿಯೂ । **ಪಾಕಃ**—ಪರಿಪಕ್ವವಿಲ್ಲದ ಮನಸುಳ್ಳವನಾಗಿಯೂ । **ಪೃಚ್ಛಾಮಿ**—ಕೇಳುತ್ತೇನೆ । **ವತ್ಸೇ**—(ಸಕಲಕ್ಕೂ) ಆಶ್ರಯ ಭೂತವಾದ । **ಬಷ್ಕಯೇ**—ಆದಿತ್ಯನಲ್ಲಿ । **ಕವಯಃ**—ಮೇಧಾವಿಗಳು । **ಓತವೈ**—ಜಗದ್ರೂಪದ ಹಾಸುಹೊಕ್ಕನ್ನು ರಚಿಸುವುದಕ್ಕಾಗಿ । **ಅಧಿ**—ಅಧಿಕವಾಗಿ । **ಸಪ್ತತಂತೂನ್**—ಸಪ್ತಸಂಖ್ಯಾತವಾದ (ಸೋಮಸಂಸ್ಥೆ) ತಂತುಗಳನ್ನು **ವಿತತ್ನಿರೇ**—ಹರಡಿದ್ದಾರೆ (ಆ ಏಳು ತಂತುಗಳು ಯಾವುವು).

### ಭಾವಾರ್ಥ

ಪರಮಾರ್ಥತತ್ತ್ವವು ದೇವತೆಗಳ ಗೋಚರಕ್ಕೂ ಮೀರಿದೆ. ಆದುದರಿಂದ ಅಲ್ಪಮತಿಯುಳ್ಳವನೂ ಪರಿಪಕ್ವವಾಗಿಲ್ಲದ ಮನಸ್ಸುಳ್ಳವನೂ, ಆ ತತ್ತ್ವಾರ್ಥವನ್ನು ತಿಳಿಯಲಶಕ್ತನಾದವನೂ ಆದ ನಾನು ಅದನ್ನು ತಿಳಿಯಬೇಕೆಂದು ಪ್ರಶ್ನಿಸುತ್ತೇನೆ. ಸಕಲಜಗತ್ತಿಗೂ ಆಶ್ರಯಭೂತವಾದ ಆದಿತ್ಯನಲ್ಲಿ ಮೇಧಾವಿಗಳು ಜಗದ್ರೂಪವಾದ ಹಾಸು ಹೊಕ್ಕನ್ನು ರಚಿಸುವುದಕ್ಕಾಗಿ ಸಪ್ತಸಂಖ್ಯಾಕವಾದ ತಂತುಗಳನ್ನು ಹರಡಿದ್ದಾರೆ ಅವು ಯಾವುವು ?

### English Translation

Immature (in understanding), undiscerning in mind, I inquire of those things which are hidden (even) from the gods : (what are) the seven threads which the sages have spread to envelop the sun, in whom all abide?

### ವಿಶೇಷವಿಷಯಗಳು

**ಪಾಕಃ—ಪಕ್ತವ್ಯೋ ಭವತಿ, ವಿಪಕ್ವಪ್ರಜ್ಞಃ |** ಪರಿಪಕ್ವವಿಲ್ಲದ ಬುದ್ಧಿಯುಳ್ಳವನು ಎಂದರೆ ತತ್ತ್ವವನ್ನು ತಿಳಿಯುವುದರಲ್ಲಿ ಕೊಂಚವೂ ಪರಿಶ್ರಮವಿಲ್ಲದೆ ಆ ವಿಷಯದಲ್ಲಿ ಗುರುಗಳಿಂದ ಶಿಕ್ಷೆಯನ್ನು ಪಡೆಯಲು ಅರ್ಹವಾದ ಬುದ್ಧಿಯುಳ್ಳವನು ಎಂದರ್ಥ. (ನಿ. ೩-೧೨) ನಿರುಕ್ತಕಾರರು, ಇದೇ ಸೂಕ್ತದ,

**ಯತ್ರಾ ಸುಪರ್ಣಾ ಅಮೃತಸ್ಯ ಭಾಗಮನಿಮೇಷಂ ವಿದಥಾಭಿಸ್ವರಂತಿ |**
**ಇನೋ ವಿಶ್ವಸ್ಯ ಭುವನಸ್ಯ ಗೋಪಾಃ ಸ ಮಾ ಧೀರಃ ಪಾಕಮತ್ರಾ ವಿವೇಶ ||**
(ಋ. ಸಂ. ೧-೧೬೪-೨೧)

ಎಂಬ ಋಕ್ಕನ್ನುದಹರಿಸಿ ಅಲ್ಲಿ **ಧೀರನಿಗೂ ಪಾಕನಿಗೂ** ವ್ಯತ್ಯಾಸವನ್ನು ತೋರಿಸುತ್ತಾ ಧೀರಃ ಎಂದರೆ ಧೀಮಾನ್ ಎಂದೂ ಪಾಕಃ ಎಂದರೆ ವಿಪಕ್ವಪ್ರಜ್ಞಃ ಎಂದೂ ವಿವರಿಸಿದ್ದಾರೆ.

ಇಲ್ಲಿ ಪರಿಪಕ್ವವಾಗಿಲ್ಲದ ಬುದ್ಧಿಯುಳ್ಳವನೂ ಆದರೆ ಜ್ಞಾನೇಚ್ಛುವೂ ಆದ ಶಿಷ್ಯನು ಈಶ್ವರತತ್ತ್ವವನ್ನು ತಿಳಿಯುವ ಉತ್ಕಟವಾದ ಆಸೆಯಿಂದ ಪ್ರಶ್ನಿಸುತ್ತಾನೆ. ಆದರೆ ಆ ತತ್ತ್ವವು ಸಾಧಾರಣವಾದ ಜ್ಞಾನಕ್ಕೆ ನಿಲುಕುವಂತುಹುದಲ್ಲ.

ಇಲ್ಲಿ **ಪಾಕಶಬ್ದಕ್ಕೆ** ಅರ್ಥವನ್ನು ಹೇಳುವಾಗ ಒಂದಂಶವನ್ನು ಗಮನಿಸಬೇಕು. ಇಲ್ಲಿ ಪ್ರಶ್ನಿಸುವವನು **ಜಿಜ್ಞಾಸುವು** ಎಂದರೆ ಜ್ಞಾನಿಯಾಗಲು ಉತ್ಕಟವಾದ ಇಚ್ಛೆಯುಳ್ಳವನು. ಇವನು ಕೇವಲ ಅಲ್ಪಮತಿಯಾದರೆ ಇವನಿಗೆ ಬ್ರಹ್ಮತತ್ತ್ವವನ್ನು ತಿಳಿಯುವ ಅಧಿಕಾರವಿರುವುದಿಲ್ಲ. ಆದುದರಿಂದ ಜ್ಞಾನವನ್ನು ತಿಳಿಯುವ ಅಧಿಕಾರಿಯೆಂದು ತಿಳಿಯಬೇಕು. ತತ್ತ್ವವನ್ನು ಗ್ರಹಿಸುವುದಕ್ಕೆ ಬೇಕಾದ ಶ್ರದ್ಧೆಯೂ ಸಂಶಯವೂ ಇರಬೇಕಾದುದು ಅಗತ್ಯವಾಗಿರುತ್ತದೆ.

ಇದರಂತೆಯೇ ಬಾಲಶಬ್ದವನ್ನೂ ಉಪಯೋಗಿಸಿ ಅನ್ನಂಭಟ್ಟರು ತರ್ಕಸಂಗ್ರಹದಲ್ಲಿ **ಬಾಲಾನಾಂ ಸುಖಬೋಧಾಯ ಕ್ರಿಯತೇ ತರ್ಕಸಂಗ್ರಹಃ** ಎನ್ನುವಾಗ **ಬಾಲಶಬ್ದಕ್ಕೆ ಗ್ರಹಣಧಾರಣಪಟುಃ ನ ತು ಸ್ತನಂಧಯಃ |** ಬಾಲಶಬ್ದಕ್ಕೆ ಸ್ತನ್ಯಪಾನವನ್ನು ಮಾಡತಕ್ಕ ಮಗುವಲ್ಲ. ಆದರೆ ತತ್ತ್ವಾರ್ಥವನ್ನು ವಿವರಿಸಿದರೆ ಗ್ರಹಣ ಮಾಡಲು ಶಕ್ತಿಯುಳ್ಳವನೆಂದು ಅರ್ಥಮಾಡಿದ್ದಾರೆ.

ಪಾಕಶಬ್ದಕ್ಕೆ ಸರಿಯಾದ ಅರ್ಥವಾಗಬೇಕಾದರೆ ಉಪನಿಷತ್ತುಗಳಲ್ಲಿ ಕೆಲವು ಉದಾಹರಣೆಗಳನ್ನು ತೆಗೆದುಕೊಂಡು ವಿವರಿಸಬಹುದು. ಅನೇಕ ವಿಧವಾದ ಜ್ಞಾನವನ್ನು ಸಂಪಾದಿಸಿ ಪರಮಾರ್ಥತತ್ತ್ವವನ್ನರಿಯದ ಮತಿಯನ್ನು ಪಾಕಮತಿಯೆಂದು ಕರೆಯಬಹುದೆಂದು ಛಾಂದೋಗ್ಯದಲ್ಲಿ ನಾರದರ ಉದಾಹರಣೆಯಿಂದ ತಿಳಿಯಬಹುದು.

**ಅಧೀಹಿ ಭಗವ ಇತಿ ಹೋಪಸಸಾದ ಸನತ್ಕುಮಾರಂ ನಾರದಸ್ತಂ ಹೋವಾಚ ಯದ್ವೇತ್ಥ ತೇನ ಮೋಪಸೀದ ತತಸ್ತ ಊರ್ಧ್ವಂ ವಕ್ಷ್ಯಾಮೀತಿ ಸ ಹೋವಾಚ ||**

**ಋಗ್ವೇದಂ ಭಗವೋಽಧ್ಯೇಮಿ ಯಜುರ್ವೇದಂ ಸಾಮವೇದಮಾಥರ್ವಣಂ ಚತುರ್ಥಮಿತಿಹಾಸಪುರಾಣಂ ಪಂಚಮಂ ವೇದಾನಾಂ ವೇದಂ ಪಿತ್ರ್ಯಂ ರಾಶಿಂ ದೈವಂ ನಿಧಿಂ ವಾಕೋ-**

ವಾಕ್ಯಮೇಕಾಯನಂ ದೇವವಿದ್ಯಾಂ ಬ್ರಹ್ಮವಿದ್ಯಾಂ ಭೂತವಿದ್ಯಾಂ ಕ್ಷತ್ರವಿದ್ಯಾಂ ನಕ್ಷತ್ರ-ವಿದ್ಯಾಂ ಸರ್ಪದೇವಜನವಿದ್ಯಾಮೇತದ್ಭಗವೋಽಧ್ಯೇಮಿ ॥

**ಸೋಽಹಂ ಭಗವೋ ಮಂತ್ರವಿದೇವಾಸ್ಮಿ ನಾತ್ಮವಿಚ್ಛ್ರುತಂ ಹ್ಯೇವ ಮೇ ಭಗವದ್ದೃಶೇಭ್ಯಃ ತರತಿ ಶೋಕಮಾತ್ಮವಿತ್ ಸೋಽಹಂ ಭಗವಃ ಶೋಚಾಮಿ ತಂ ಮಾ ಭಗವಾಞ್ಛೋಕಸ್ಯ ಪಾರಂ ತಾರಯತ್ವಿತಿ ॥**

(ಛಾ॰ ಉ. ೭-೧-೧ ರಿಂದ ೩)

ನಾರದನು ಸನತ್ಕುಮಾರನನ್ನು ಸಮೀಪಿಸಿ ತನಗೆ ತತ್ತ್ವೋಪದೇಶವನ್ನು ಮಾಡಬೇಕೆಂದು ಪ್ರಾರ್ಥಿಸಿದಾಗ ಸನತ್ಕುಮಾರನು "ನಿನಗೆ ಏನೇನು ಗೊತ್ತಿದೆ ಹೇಳು. ಅನಂತರ ಆ ಜ್ಞಾನಕ್ಕಿಂತಲೂ ಮೀರಿದ ಜ್ಞಾನವೇನೆಂದು ನಿನಗೆ ಹೇಳುತ್ತೇನೆ" ಎಂದು ಹೇಳಿದಾಗ ನಾರದನು "ನಾನು ಋಗ್ವೇದವನ್ನೂ, ಯಜುರ್ವೇದವನ್ನೂ, ಸಾಮವೇದವನ್ನೂ, ಅಥರ್ವವೇದವನ್ನೂ, ಇತಿಹಾಸಪುರಾಣಾದಿಗಳನ್ನೂ, ವ್ಯಾಕರಣಾದಿಗಳನ್ನೂ ಹಾಗೆಯೇ ನ್ಯಾಯಶಾಸ್ತ್ರ, ನೀತಿಶಾಸ್ತ್ರ, ಜ್ಯೌತಿಷ, ಕಲ್ಪ, ಭೂತವಿದ್ಯಾ, ಕ್ಷತ್ರವಿದ್ಯಾ, ನಕ್ಷತ್ರವಿದ್ಯಾ, ಸರ್ಪವಿದ್ಯಾ, ನರ್ತನವಿದ್ಯಾ ಇತ್ಯಾದಿ ನಾನಾವಿದ್ಯೆಗಳನ್ನು ಅಭ್ಯಾಸಮಾಡಿದ್ದೇನೆ. ಆದರೆ ನಾನು ಆಯಾ ಶಾಸ್ತ್ರಗಳ ಮಂತ್ರೋಚ್ಚಾರಣೆಯನ್ನು ಮಾತ್ರ ತಿಳಿದಿದ್ದೇನೆ. ನನಗೆ ಆತ್ಮತತ್ತ್ವದ ಜ್ಞಾನವೇ ಇಲ್ಲ. ಆತ್ಮತತ್ತ್ವದ ಜ್ಞಾನವಿಲ್ಲದೆ ಸಂಸಾರದುಃಖದಿಂದ ಮುಕ್ತಿಯಿಲ್ಲವೆಂದು ನಿನ್ನಂತಹ ಜ್ಞಾನಿಗಳಿಂದ ತಿಳಿದಿದ್ದೇನೆ. ನೀನು ನನಗೆ ಆತ್ಮತತ್ತ್ವವನ್ನುಪದೇಶಿಸಿ ನನ್ನನ್ನು ದುಃಖದಿಂದ ಮುಕ್ತನನ್ನಾಗಿ ಮಾಡು" ಎಂದು ಪ್ರಾರ್ಥಿಸಿದನು. ನಾರದನು ಸಕಲಶಾಸ್ತ್ರಗಳನ್ನರಿತಿದ್ದರೂ ಸಹ ಆತ್ಮವಿದ್ಯೆಯನ್ನರಿಯದಿದ್ದುದರಿಂದಲೂ ಆದರೂ ಸಹ ಅವನಲ್ಲಿ ಉತ್ಕಟವಾದ ಜಿಜ್ಞಾಸೆಯೂ ಎಂದರೆ ತಿಳಿಯುವ ಆಸೆಯೂ ಇದ್ದುದರಿಂದ ಅವನನ್ನು **ಪಾಕ**ನೆಂದು ಹೇಳಿದರೆ ತಪ್ಪಾಗಲಾರದು. ಪ್ರಕೃತವಾದ ಋಕ್ಕಿನಲ್ಲಿಯೂ ಸಹ **ಪಾಕ**ಶಬ್ದಕ್ಕೆ ಅದೇ ಅರ್ಥವನ್ನು ಮಾಡಬೇಕು.

ಋಗ್ವೇದಾದಿಸಕಲಶಾಸ್ತ್ರಗಳನ್ನೂ ತಿಳಿದಿದ್ದರೂ ಸಹ ಅವುಗಳಲ್ಲೇ ಪ್ರತಿಪಾದಿತವಾಗಿರುವ ಆತ್ಮತತ್ತ್ವವು ಅರ್ಥವಾಗದಿರಲು ಕಾರಣವೇನೆಂದರೆ ಮಂತ್ರೋಚ್ಚಾರಣೆಯ ಕ್ರಮವು ಬೇರೆ, ತತ್ತ್ವಜ್ಞಾನವನ್ನು ತಿಳಿಯುವ ಆತ್ಮಪ್ರಶಾಂತಿಯು ಬೇರೆ ಎಂಬುವನ್ನು ಮೇಲಿನ ಉದಾಹರಣೆಯು ವಿವರಿಸುತ್ತದೆ. ಈ ಆಧ್ಯಾತ್ಮಿಕತತ್ತ್ವವು ದೇವತೆಗಳ ಗೋಚರಕ್ಕಿಂತಲೂ ಮೀರಿದೆಯೆಂದು, **ದೇವಾನಾಮೇನಾ ನಿಹಿತಾ ಪದಾನಿ** ಎಂಬ ವಾಕ್ಯದಿಂದ ಪ್ರಕೃತವಾದ ಋಕ್ಕಿನಲ್ಲಿ ವರ್ಣಿಸಿದೆ. ಇದನ್ನೇ ಕಠೋಪನಿಷತ್ತಿನಲ್ಲಿ,

**ನ ತತ್ರ ಸೂರ್ಯೋ ಭಾತಿ ನ ಚಂದ್ರತಾರಕಂ ನೇಮಾ ವಿದ್ಯುತೋ ಭಾಂತಿ ಕುತೋಽಯಮಗ್ನಿಃ ।**
**ತಮೇವ ಭಾಂತಮನುಭಾತಿ ಸರ್ವಂ ತಸ್ಯ ಭಾಸಾ ಸರ್ವಮಿದಂ ವಿಭಾತಿ ॥**

(ಕಠ. ೫-೧೫)

ಈ ಪರತತ್ತ್ವದ ಮುಂದೆ ಸೂರ್ಯನಾಗಲಿ, ಚಂದ್ರನಾಗಲಿ, ನಕ್ಷತ್ರಗಳಾಗಲಿ, ವಿದ್ಯುತ್ತಾಗಲಿ, ತಮ್ಮ ಪ್ರಕಾಶವನ್ನು ಬೀರಲಾಗುವುದಿಲ್ಲ. ಪಾರ್ಥಿವವಾದ ಅಗ್ನಿಯ ಪ್ರಕಾಶವಂತೂ ಎಲ್ಲಕ್ಕಿಂತಲೂ ಅಲ್ಪವಾಗುತ್ತದೆ. ಆ ತತ್ತ್ವದ ಪ್ರಕಾಶದಿಂದಲೇ ಸಕಲವೂ ಬೆಳಗುತ್ತದೆ. ಈ ಸಕಲವಿಶ್ವವೂ ಅವನ ತೇಜಸ್ಸಿನಿಂದಲೇ ಪ್ರಕಾಶವಾಗಿರುತ್ತದೆ. ಆದರೆ,

**ನ ಸಂದೃಶೇ ತಿಷ್ಠತಿ ರೂಪಮಸ್ಯ ನ ಚಕ್ಷುಷಾ ಪಶ್ಯತಿ ಕಶ್ಚನೈನಂ ।**
(ಕಠ. ೬-೯)

ಅದರ ರೂಪವನ್ನು ಭೌತಿಕವಾದ ಚಕ್ಷುಸ್ಸು ಗ್ರಹಿಸಲಾರದು. ಕೇವಲಭೌತಿಕವಾದ ಚಕ್ಷುಸ್ಸು ಮಾತ್ರವಿದ್ದರೆ ಯಾರೂ ಅದನ್ನು ತಿಳಿಯಲಾರರು. ಈ ಪರತತ್ತ್ವವು ದೇವತೆಗಳ ಶಕ್ತಿಗಿಂತಲೂ ಮೀರಿದುದು ಎಂಬುದಕ್ಕೆ ಕೇನೋಪನಿಷತ್ತಿನಲ್ಲಿ ಒಂದು ಕಥೆಯಿದೆ.

**ಬ್ರಹ್ಮ ಹ ದೇವೇಭ್ಯೋ ವಿಜಿಗ್ಯೇ ತಸ್ಯ ಹ ಬ್ರಹ್ಮಣೋ ವಿಜಯೇ ದೇವಾ ಅಮಹೀಯಂತ ।**
**ತ ಐಕ್ಷಂತಾಸ್ಮಾಕಮೇವಾಯಂ ವಿಜಯೋಽಸ್ಮಾಕಮೇವಾಯಂ ಮಹಿಮೇತಿ ॥**
(ಕೇನ. ೩-೧)

ಈ ಪರಬ್ರಹ್ಮವು ದೇವತೆಗಳಿಗಾಗಿ ವಿಜಯವನ್ನು ಗಳಿಸಿತು. ಪರಬ್ರಹ್ಮಮೂಲವಾದ ಈ ಜಯಕ್ಕಾಗಿ ದೇವತೆಗಳು ತಾವೇ ಜಯವನ್ನು ಪಡೆದರೆಂದೂ, ತಮ್ಮದೇ ಪೂರ್ಣವಾದ ಮಹಿಮೆಯೆಂದೂ ಸಹ ಅಭಿಮಾನವನ್ನು ಪಟ್ಟರು. ಈ ಬ್ರಹ್ಮತತ್ತ್ವವು ದೇವತೆಗಳ ಆಧಾರವಿಲ್ಲದ ಆ ಅಭಿಮಾನಕ್ಕಾಗಿ ಅವರಿಗೆ ವಿವೇಕವನ್ನು ಕಲಿಸಬೇಕೆಂದು,

**ತದ್ಧೈಷಾಂ ವಿಜಜ್ಞೌ ತೇಭ್ಯೋ ಹ ಪ್ರಾದುರ್ಬಭೂವ ತನ್ನ ವ್ಯಜಾನತ ಕಿಮಿದಂ ಯಕ್ಷಮಿತಿ ।**
(ಕೇನ. ೩-೨)

ಅವರ ಮುಂದೆ ಪ್ರತ್ಯಕ್ಷವಾದರೂ ಸಹ ಈ ತತ್ತ್ವದ ಸ್ವರೂಪವೇನೆಂಬುದನ್ನು ಅರಿಯದೆ ಅವರು ಚಕಿತರಾದರು.

**ತೇಽಗ್ನಿಮಬ್ರುವಞ್ಜಾತವೇದ ಏತದ್ವಿಜಾನೀಹಿ ಕಿಮೇತ್ಯದ್ಯಕ್ಷಮಿತಿ ತಥೇತಿ ॥ ತದಭ್ಯದ್ರವತ್ತ-**
**ಮಭ್ಯವದತ್ಕೋಽಸೀತ್ಯಗ್ನಿರ್ವಾ ಅಹಮಸ್ಮೀತ್ಯಬ್ರವೀಜ್ಜಾತವೇದಾ ವಾ ಅಹಮಸ್ಮೀತಿ ।**
**ತಸ್ಮಿಗ್ಗ್ಂಸ್ತ್ವಯಿ ಕಿಂ ವೀರ್ಯಮಿತ್ಯಪೀದಗ್ಂ ಸರ್ವಂ ದಹೇಯಂ ಯದಿದಂ ಪೃಥಿವ್ಯಾಮಿತಿ ।**
**ತಸ್ಮೈ ತೃಣಂ ನಿದಧಾವೇತದ್ದಹೇತಿ ತದುಪಪ್ರೇಯಾಯ ಸರ್ವಜವೇನ ತನ್ನ ಶಶಾಕ ದಗ್ಧುಂ**
**ಸ ತತ ಏವ ನಿವವೃತೇ ನೈತದಶಕಂ ವಿಜ್ಞಾತುಂ ತದೇತದ್ಯಕ್ಷಮಿತಿ ।**
(ಕೇನ. ೩-೩ ರಿಂದ ೬)

ಆಗ ದೇವತೆಗಳು ಅಗ್ನಿಯನ್ನು ಕುರಿತು ಎಲೈ ಜಾತವೇದಸ್ಸೇ (ಸಕಲವನ್ನೂ ತಿಳಿದವನೇ) ಈ ಅಪಾಕೃತವಾದ ತತ್ತ್ವವಾವುದೆಂಬುವನ್ನು ತಿಳಿದುಕೋ ಎಂದಾಗ ಅಗ್ನಿಯು ಒಪ್ಪಿಕೊಂಡು ಆ ಯಕ್ಷವಿದ್ದಕಡೆಗೆ ಓಡಿದನು. ಆಗ ಆ ಯಕ್ಷವು ಅಗ್ನಿಯನ್ನು ನೀನಾರೆಂದು ಕೇಳಿತು. ಅದಕ್ಕೆ ಅಗ್ನಿಯು ನಾನು ಅಗ್ನಿಯು, ನಾನು ಜಾತವೇದಸ್ಸು ಎಂದು ಉತ್ತರವನ್ನು ಕೊಟ್ಟನು. ನಿನ್ನ ಶಕ್ತಿಯೇನು ಎಂಬ ಪ್ರಶ್ನೆಗೆ " ನಾನು ಈ ಲೋಕದಲ್ಲಿರುವ ಸಮಸ್ತವನ್ನೂ ದಹಿಸಬಲ್ಲೆನು " ಎಂದನು. ಆಗ ಆ ಯಕ್ಷವು ಅಗ್ನಿಯ ಮುಂದೆ ಒಂದು ಹುಲ್ಲಿನ ಕಡ್ಡಿಯನ್ನಿಟ್ಟು ಇದನ್ನು ಸುಡು ಎಂದಿತು. ಅಗ್ನಿಯು ತನ್ನ ಸರ್ವಶಕ್ತಿಯನ್ನುಪಯೋಗಿಸಿದರೂ ಸಹ ಅದನ್ನು ಸುಡಲಾಗಲಿಲ್ಲ. ಆಗ ಅಗ್ನಿಯು ಹಿಂತಿರುಗಿ " ಈ ಯಕ್ಷದ ಸ್ವರೂಪವೇನೆಂಬುದನ್ನು ತಿಳಿಯಲು ನನ್ನಿಂದಾಗಲಿಲ್ಲ " ಎಂದು ಒಪ್ಪಿಕೊಂಡನು.

**ಅಥ ವಾಯುಮಬ್ರುವನ್ವಾಯವೇತದ್ವಿಜಾನೀಹಿ ಕಿಮೇತದ್ಯಕ್ಷಮಿತಿ ತಥೇತಿ । ತದಭ್ಯದ್ರವತ್ತ-**
**ಮಭ್ಯವದತ್ಕೋಽಸೀತಿ ವಾಯುರ್ವಾ ಅಹ ಮಸ್ಮೀತ್ಯಬ್ರವೀನ್ಮಾತರಿಶ್ವಾ ವಾ ಅಹಮಸ್ಮೀತಿ ॥**

**ತಸ್ಮಿಗ್‌ಸ್ತ್ವಯಿ ಕಿಂ ವೀರ್ಯಮಿತ್ಯಪೀದಗ್‌ಂ ಸರ್ವಮಾದದೀಯ ಯದಿದಂ ಪೃಥಿವ್ಯಾಮಿತಿ ॥ ತಸ್ಮೈ ತೃಣಂ ನಿದಧಾವೇತದಾದತ್ಸ್ವೇತಿ ತದುಪಪ್ರೇಯಾಯ ಸರ್ವಜವೇನ ತನ್ನ ಶಶಾಕಾ-ದಾತುಂ ಸ ತತ ಏವ ನಿವವೃತೇ ನೈತದಶಕಂ ವಿಜ್ಞಾತುಂ ಯದೇತದ್ಯಕ್ಷಮಿತಿ ॥**

(ಕೇನ. ೩-೭ ರಿಂದ ೧೦)

ಅನಂತರ ದೇವತೆಗಳು ವಾಯುವನ್ನು ಕುರಿತು “ ಎಲೈ ವಾಯುವೇ, ಆ ಯಕ್ಷದ ಸ್ವರೂಪವನ್ನು ತಿಳಿದುಕೊಂಡು ಬಾ ” ಎಂದಾಗ ವಾಯುವು ಒಪ್ಪಿಕೊಂಡು ಅದರ ಬಳಿಗೆ ಓಡಿದನು. ಅದು “ ನೀನಾರು ”ಎಂದಾಗ “ನಾನು ವಾಯುವು” ನಾನೇ ಮಾತರಿಶ್ವ ”ನೆಂದನು. “ ನಿನ್ನಲ್ಲಿರುವ ವೀರ್ಯವೇನು ?” ಎಂದು ಪ್ರಶ್ನಿಸಿದಾಗ ಈ “ಪೃಥ್ವಿಯಲ್ಲಿರತಕ್ಕ ಸಕಲವನ್ನೂ ವಹಿಸಬಲ್ಲೆನು ” ಎಂದು ಉತ್ತರವನ್ನು ಕೊಟ್ಟನು. ಆಗ ಯಕ್ಷವು “ ಇದನ್ನು ಎತ್ತು ” ಎಂದು ಅವನ ಮುಂದೆ ಒಂದು ಹುಲ್ಲುಕಡ್ಡಿಯನ್ನಿಟ್ಟಾಗ ವಾಯುವು ತನ್ನ ಎಲ್ಲಾ ವೇಗವನ್ನೂ ಉಪಯೋಗಿಸಿ ಪ್ರಯತ್ನಪಟ್ಟನು. ಆದರೆ ಅದನ್ನು ಎತ್ತಿಕೊಳ್ಳಲಾಗಲಿಲ್ಲ. ಅವನೂ ಸಹ ಆ ಯಕ್ಷದ ಸ್ವರೂಪವನ್ನರಿಯಲಾಗದೇ ಅಲ್ಲಿಂದ ಹಿಂತಿರುಗಿದನು.

**ಅಥೇಂದ್ರಮಬ್ರುವನ್ ಮಘವನ್ನೇತದ್ವಿಜಾನೀಹಿ ಕಿಮೇತದ್ಯಕ್ಷಮಿತಿ ತಥೇತಿ ತದಭ್ಯದ್ರವತ್ತಸ್ಮಾತ್ತಿರೋದಧೇ ॥ ಸ ತಸ್ಮಿನ್ನೇವಾಕಾಶೇ ಸ್ತ್ರಿಯಮಾಜಗಾಮ ಬಹುಶೋಭಮಾನಾ-ಮುಮಾಗ್‌ಂ ಹೈಮವತೀಂ ತಾಗ್‌ಂ ಹೋವಾಚ ಕಿಮೇದ್ಯಕ್ಷಮಿತಿ ॥**

(ಕೇನ. ೩-೧ , ೧೨)

ಅನಂತರ ದೇವತೆಗಳು ಈ ಯಕ್ಷದ ಸ್ವರೂಪವನ್ನು ತಿಳಿಯುವುದಕ್ಕಾಗಿ ಇಂದ್ರನನ್ನು ಕಳುಹಲು ಅವನು ಒಪ್ಪಿಕೊಂಡು ಅದರ ಬಳಿ ಓಡಿದನು. ಆಗ ಅದು ಅವನಿಂದ ಮರೆಯಾಯಿತು. ಅನಂತರ ಅದೇ ಆಕಾಶದಲ್ಲಿ ಅತ್ಯಂತ ಆಕರ್ಷಕವಾಗಿ ಪ್ರಕಾಶಿಸುತ್ತಿದ್ದ ಒಬ್ಬ ಸ್ತ್ರೀವ್ಯಕ್ತಿಯನ್ನು ಸಮೀಪಿಸಿ ಆಕೆಯನ್ನು “ ಈ ಯಕ್ಷವು ಯಾವುದು ?” ಎಂದಾಗ ಆಕೆಯು,

**ಸಾ ಬ್ರಹ್ಮೇತಿ ಹೋವಾಚ ಬ್ರಹ್ಮಣೋ ವಾ ಏತದ್ವಿಜಯೇ ಮಹೀಯಧ್ವಮಿತಿ ತತೋ ಹೈವ ವಿದಾಂಚಕಾರ ಬ್ರಹ್ಮೇತಿ ॥**

(ಕೇನ ೪-೧)

ಇದೇ ಪರಬ್ರಹ್ಮವು. ಇದರ ಜಯದಿಂದಲೇ ದೇವತೆಗಳ ಜಯವು. ಇದರ ಶಕ್ತಿಯಿಂದಲೇ ನಿಮ್ಮ ಮಹಿಮೆಯು ಎಂದು ತಿಳಿಸಿದನಂತರ ಅವನು ಅದನ್ನೇ ಬ್ರಹ್ಮವೆಂದರಿತುಕೊಂಡನೆಂದು ಕಥೆಯು, ಋಕ್ಸಂಹಿತೆಯ ಪ್ರಕೃತವಾದ ಋಕ್ಕಿನಲ್ಲಿ **ದೇವಾನಾಮೇನಾ ನಿಹಿತಾ ಪದಾನಿ** ಎಂಬ ವಾಕ್ಯಕ್ಕೂ, ಸಾಯಣರು ಇದೇ ವಾಕ್ಯಕ್ಕೆ **ದೇವಾನಾಪಿ ಗೂಢಾನಿ** ಎಂದು ವಿವರಿಸಿರುವುದಕ್ಕೂ ತಕ್ಕ ಉದಾಹರಣೆಯಾಗಿದೆ.

**ಸಪ್ತತಂತೂನ್** — ಸಪ್ತತಂತುವೆಂದರೆ ಯಜ್ಞವಾಗಬಹುದು ಅಥವಾ ಸಪ್ತಚ್ಛಂದಸ್ಸುಗಳು ಅಥವಾ ಸ್ತೋತ್ರವಾಗಬಹುದು ಸಾಯಣರು,

**ಇಮಂ ನೋ ಅಗ್ನ ಉಪ ಯಜ್ಞಮೇಹಿ ಪಂಚಯಾಮಂ ತ್ರಿವೃತಂ ಸಪ್ತತಂತುಂ ।**
**ಅಸೋ ಹವ್ಯವಾಳುತ ನಃ ಪುರೋಗಾ ಜ್ಯೋಗೇವ ದೀರ್ಘಂ ತಮ ಆಶಯಿಷ್ಠಾಃ ॥**

(ಋ. ಸಂ. ೧೦-೧೨೪-೧)

ಎಂಬ ಋಕ್ಕಿನಲ್ಲಿ **ಸಪ್ತತಂತು**ವೆಂಬ ಪದದ ಅರ್ಥವನ್ನು ವಿವರಿಸುತ್ತಾ, **ಸಪ್ತತಂತವಸ್ತನಿತಾರಃ ಕರ್ಮಣಾಂ ವಿಸ್ತಾರಯಿತಾರೋ ಹೋತ್ರಾದ್ಯಾಃ ಸಪ್ತವಷಟ್ಕರ್ತಾರೋ ಯಸ್ಯ**–ಹೋತೃವೇ ಮುಂತಾದ ಏಳು ವಷಟ್ಕರ್ತೃಗಳು ಭಾಗವಹಿಸಿ ನಿರ್ವಹಿಸತಕ್ಕ ಯಜ್ಞವೆಂದಾಗಲಿ ಅಥವಾ **ಅಗ್ನಿಷ್ಟೋಮ, ಅತ್ಯಗ್ನಿಷ್ಟೋಮ, ಉಕ್ಥ್ಯ, ಷೋಡಶೀ, ವಾಜಪೇಯ, ಅತಿರಾತ್ರ,** ಮತ್ತು **ಅಪ್ತೋರ್ಯಾಮ** ಎಂಬ ಏಳು (ಕರ್ಮಗಳುಳ್ಳ) ಯಜ್ಞವೆಂದಾಗಲಿ ವಿವರಿಸಿದ್ದಾರೆ. ಮತ್ತು,

**ಮಾಂ ದೇವಾ ದಧಿರೇ ಹವ್ಯವಾಹಮಪಮ್ಲುಕ್ತಂ ಬಹು ಕೃಚ್ಛ್ರಾ ಚರಂತಂ ।**
**ಅಗ್ನಿರ್ವಿದ್ವಾನ್ಯಜ್ಞಂ ನಃ ಕಲ್ಪಯಾತಿ ಪಂಚಯಾಮಂ ತ್ರಿವೃತಂ ಸಪ್ತತಂತುಂ ॥**

(ಋ. ಸಂ. ೧೦-೫೨-೪)

ಎಂಬ ಋಕ್ಕಿನಲ್ಲಿ **ಸಪ್ತಭಿಶ್ಛಂದೋಮಯೈಃ ಸ್ತುತಿಭಿಃ ವಿಸ್ತೃತಂ ಯಜ್ಞಂ** ಎಂದು ವಿವರಿಸಿದ್ದಾರೆ. ಎರಡು ಕಡೆಗಳಲ್ಲಿಯೂ **ಸಪ್ತತಂತು**ವೆಂದರೆ ಯಜ್ಞವೆಂದರ್ಥವಾಗುವಂತೆ ಪ್ರಕೃತವಾದ ಋಕ್ಕಿನಲ್ಲಿಯೂ ಸಹ ಯಜ್ಞವೆಂದರ್ಥವಾಗುತ್ತದೆ.

**ಬಷ್ಕಯೇ—ಬಡಿತಿ ಸತ್ಯನಾಮ । ತತ್ಕಪತಿ ಇತಿ ಬಷ್ಕಯಃ । ಆದಿತ್ಯಃ ಯದ್ವಾ ಬಷ್ಕಯೋ ನಾಮ ಏಕಹಾಯನೋ ವತ್ಸಃ ।** ಈ ಪದಕ್ಕೆ ಆದಿತ್ಯನೆಂದಾಗಲಿ ಅಥವಾ ಒಂದು ವರ್ಷದ ಕರುವೆಂದಾಗಲಿ ಅರ್ಥವಾಗುತ್ತದೆ. ಆದರೆ, ಇಲ್ಲಿ ಪುನರಪಿ **ವತ್ಸಶಬ್ದಸ್ಯ ಪೃಥಙ್ನಿರ್ದೇಶಾತ್ ಬಷ್ಕಯಶಬ್ದೇನ ತತ್ಕಾಲಮಾತ್ರಂ ಲಕ್ಷ್ಯತೇ । ತಸ್ಮಿನ್ನಾದಿತ್ಯೇ ।** ವತ್ಸಶಬ್ದವು ಪುನಃ ಪಠಿತವಾಗಿರುವುದರಿಂದ **ಬಷ್ಕಯ** ಶಬ್ದದಿಂದ ಕಾಲದ ಅವಧಿಯು ಮಾತ್ರ ಸೂಚಿತವಾಗುತ್ತದೆ. ಅಂತಹ ಆದಿತ್ಯನಲ್ಲಿ ಎಂದೇ ಅರ್ಥವು. **ತಸ್ಮಿನ್ನಾದಿತ್ಯೇ ಸಪ್ತತಂತೂನ್ವಿತತ್ನಿರೇ** ಎಂದು ಅನ್ವಯವನ್ನು ಮಾಡಿದೆ. ಅದರ ಉದ್ದಿಶ್ಯವನ್ನು ವಿವರಿಸುತ್ತಾ, **ಓತವೈ—ಸಪ್ತಸ್ತೋಮಸಂಸ್ಥಾರೂಪತಿರ್ಯಕ್ತಂತುಸಂತಾನಾಯ ಯಜ್ಞನಿರ್ಮಾಣಾಯ ಇತ್ಯರ್ಥಃ । ಯಜ್ಞಾನಾಂ ಸ್ಥಿತೇಃ ಸೂರ್ಯಾಧೀನತ್ವಾದಿತಿ ಭಾವಃ ।** ಯಜ್ಞಯಾಗಾದಿಗಳೆಲ್ಲವೂ ಸೂರ್ಯನ ಅಧೀನವಾಗಿರುವುದರಿಂದ ಅಂತಹ ಸೂರ್ಯನನ್ನುದ್ದೇಶಿಸಿ ಯಜ್ಞಕರ್ಮಗಳನ್ನು ನೆರವೇರಿಸುತ್ತಾರೆಂದರ್ಥವು

ಅನಂತರ ಪೂರ್ವಾರ್ಧದಲ್ಲಿ ಹೇಳಿರುವ ಜಿಜ್ಞಾಸೆಗೂ, ಉತ್ತರಾರ್ಧದಲ್ಲಿ ಹೇಳಿರುವ ಕರ್ಮಕ್ಕೂ ಸಂಬಂಧವನ್ನು ತೋರಿಸುತ್ತಾ **ಈದೃಶಂ ತತ್ತ್ವಂ ಪೃಚ್ಛಾಮೀತ್ಯರ್ಥಃ** ಇಂತಹ ತತ್ತ್ವವನ್ನು ತಿಳಿಯಬೇಕೆಂದು ಅಪೇಕ್ಷಿಸುತ್ತೇನೆ ಎಂಬುದರಲ್ಲಿ ತಾತ್ಪರ್ಯವೆಂದು ವಿವರಿಸಿದ್ದಾರೆ. ಇದೇ ಸಂಬಂಧವನ್ನು ಛಾಂದೋಗ್ಯದಲ್ಲಿಯೂ ತೋರಿಸುತ್ತಾ,

**ಅಥ ಹೈನಂ ಗಾರ್ಹಪತ್ಯೋಽನುಶಶಾಸ ಪೃಥಿವ್ಯಗ್ನಿರನ್ನಮಾದಿತ್ಯ ಇತಿ ಯ ಏಷ ಆದಿತ್ಯೇ ಪುರುಷೋ ದೃಶ್ಯತೇ ಸೋಽಹಮಸ್ಮಿ ಸ ಏವಾಹಮಸ್ಮೀತಿ ।**

(ಛಾಂ. ಉ. ೪-೧೧-೧)

ಗಾರ್ಹಪತ್ಯಾಗ್ನಿಯೇ ಆದಿತ್ಯನೆಂದೂ, ಆದಿತ್ಯನಲ್ಲಿ ಕಾಣಿಸಿಕೊಳ್ಳುವ ಪುರುಷನು ಗಾರ್ಹಪತ್ಯಾಗ್ನಿಯ ರೂಪವೆಂದೂ ಯಜ್ಞಾಗ್ನಿಗೂ ಆದಿತ್ಯನಿಗೂ ತಾದಾತ್ಮ್ಯವನ್ನು ಹೇಳಿದೆ

**ಸ ಯ ಏತಮೇವಂ ವಿದ್ವಾನಾದಿತ್ಯಂ ಬ್ರಹ್ಮೇತ್ಯುಪಾಸ್ತೇಽಭ್ಯಾಶೋ ಹ ಯದೇನಂ ಸಾಧವೋ ಘೋಷಾ ಆ ಚ ಗಚ್ಛೇಯುರುಪ ಚ ನಿಮ್ರೇಡೇರನ್ನಿಮ್ರೇಡೇರನ್ ॥**

(ಛಾ ಉ. ೩-೧೯-೪)

ಈ ಜಗತ್ತಿನ ಸಕಲವ್ಯಾಪಾರಗಳಿಗೂ ಕಾರಣನಾಗಿರುವ **ಆದಿತ್ಯನನ್ನೇ ಅಸಾವಾದಿತ್ಯೋಬ್ರಹ್ಮೇತಿ** (ತೈ. ಆ ೨-೧) ಬ್ರಹ್ಮನೆಂದು ಉಪಾಸನೆ ಮಾಡಿದರೆ ಆಗ ಅಪ್ಯಾಯಮಾನವಾದ ಘೋಷಗಳು ಪುರುಷನನ್ನು ಹರ್ಷಗೊಳಿಸುತ್ತವೆ. ತೃಪ್ತಿಗೊಳಿಸುತ್ತವೆಯೆಂದು ಶ್ರುತಿಯಿರುವುದರಿಂದ ಇಂತಹ ಆದಿತ್ಯರೂಪದ ಬ್ರಹ್ಮನನ್ನು ಯಾಗಾದಿಗಳಿಂದ ಮೇಧಾವಿಗಳು ಆರಾಧಿಸಿದರು. ನಾನೂ ಸಹ ಅವನ ಸ್ವರೂಪವನ್ನು ತಿಳಿಯಲಪೇಕ್ಷಿಸುತ್ತೇನೆ ಎಂದು ಜ್ಞಾನೇಚ್ಛೆಯನ್ನು ತಿಳಿಸಿದೆ.

### ವ್ಯಾಕರಣಪ್ರಕ್ರಿಯಾ

**ಪಾಕಃ**—ಡುಪಚಿಷ್ ಪಾಕೇ. ಧಾತು. ಬಹುಲಗ್ರಹಣದಿಂದ ಕರ್ಮಣಿಯಲ್ಲಿ ಘಞ್ ಪ್ರತ್ಯಯ. **ಅತ ಉಪಧಾಯಾಃ** (ಪಾ. ಸೂ. ೭-೨-೧೧೬) ಎಂಬುದರಿಂದ ಆದಿವೃದ್ಧಿ. **ಚಜೋಃ ಕುಘಿಣ್ಣ್ಯತೋಃ** (ಪಾ. ಸೂ. ೭-೩-೫೨) ಎಂಬುದರಿಂದ ಚಕಾರಕ್ಕೆ ಕುತ್ವ. ಪ್ರತ್ಯಯ ಞಿತ್ತಾದುದರಿಂದ ಆದ್ಯುದಾತ್ತಸ್ವರ ಬರುತ್ತದೆ.

**ಪೃಚ್ಛಾಮಿ**—ಪ್ರಚ್ಛ ಜ್ಞೀಪ್ಸಾಯಾಂ ವಾಚಿ. ತುದಾದಿ. **ಲಟ್** ಉತ್ತಮಪುರುಷ ಏಕವಚನಾಂತರೂಪ. ತಿಙಂತನಿಘಾತಸ್ವರ ಬರುತ್ತದೆ.

**ಅವಿಜಾನನ್**—ನ ವಿಜಾನನ್ ಅವಿಜಾನನ್. ಜ್ಞಾ ಅವಬೋಧನೇ ಧಾತು ಲಟಿಗೆ ಶತ್ರಾದೇಶ. **ತತ್ಪುರುಷೇ ತುಲ್ಯಾರ್ಥ**—(ಪಾ. ಸೂ. ೬-೨-೨) ಎಂಬುದರಿಂದ ನಞ್‌ಪೂರ್ವಪದ ಪ್ರಕೃತಿಸ್ವರ ಬರುತ್ತದೆ.

**ಏನಾ**—ನಪುಂಸಕ ಬಹುವಚನದಲ್ಲಿ **ಶೇಶ್ಛಂದಸಿ ಬಹುಲಮ್** (ಪಾ. ಸೂ ೬-೧-೭೦) ಎಂಬುದರಿಂದ ಶಿಗೆ ಲೋಪ.

**ತತ್ನಿರೇ**—ತನು ವಿಸ್ತಾರೇ. ಧಾತು. ಛಾಂದಸವಾಗಿ ವರ್ತಮಾನಾರ್ಥದಲ್ಲಿ ಲಿಟ್. ಪ್ರಥಮಪುರುಷ ಬಹುವಚನಕ್ಕೆ **ಲಿಟಸ್ತಝಯೋ**—ಎಂಬುದರಿಂದ ಇರೇಚಾದೇಶ. ವ್ಯತ್ಯಯದಿಂದ ಏತ್ವಾಭ್ಯಾಸಲೋಪ ಬರುವುದಿಲ್ಲ. ಛಾಂದಸವಾಗಿ ಧಾತುವಿನ ಉಪಧೆಗೆ ಲೋಪ. ಅತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

**ಓತವೈ**—ವೇಞ್ ತಂತುಸಂತಾನೇ. ಧಾತು. ತುಮನರ್ಥ ತೋರುವಾಗ **ತುಮರ್ಥೇ ಸೇಸೇನಸೇ**—(ಪಾ. ಸೂ. ೩-೪-೯) ಎಂಬುದರಿಂದ ತವೈಪ್ರತ್ಯಯ. ಛಾಂದಸವಾಗಿ ಧಾತುವಿಗೆ ಸಂಪ್ರಸಾರಣ. ಪೂರ್ವರೂಪ. ಪ್ರತ್ಯಯನಿಮಿತ್ತವಾಗಿ **ಸಾರ್ವಧಾತುಕಾರ್ಧಧಾತುಕಯೋಃ** ಎಂಬುದರಿಂದ ಅದಕ್ಕೆ ಗುಣ. ಏಜಂತವಾದುದರಿಂದ **ಕೃನ್ಮೇಜಂತಃ** ಎಂಬುದರಿಂದ ಅವ್ಯಯಸಂಜ್ಞಾ ಬರುತ್ತದೆ. ॥ ೫ ॥

ಸಂಹಿತಾಪಾಠಃ

ಅಚಿಕಿತ್ವಾಞ್ಚಿಕಿತುಷಶ್ಚಿದತ್ರ ಕವೀನ್ಪೃಚ್ಛಾಮಿ ವಿದ್ಮನೇ ನ ವಿದ್ವಾನ್ ।
ವಿ ಯಸ್ತಸ್ತಂಭ ಷಳಿಮಾ ರಜಾಂಸ್ಯಜಸ್ಯ ರೂಪೇ ಕಿಮಪಿ ಸ್ವಿದೇಕಂ ॥ ೬ ॥

ಪದಪಾಠಃ

ಅಚಿಕಿತ್ವಾನ್ । ಚಿಕಿತುಷಃ । ಚಿತ್ । ಅತ್ರ । ಕವೀನ್ । ಪೃಚ್ಛಾಮಿ । ವಿದ್ಮನೇ । ನ । ವಿದ್ವಾನ್ ।
ವಿ । ಯಃ । ತಸ್ತಂಭ । ಷಟ್ । ಇಮಾ । ರಜಾಂಸಿ । ಅಜಸ್ಯ । ರೂಪೇ । ಕಿಂ । ಅಪಿ । ಸ್ವಿತ್ । ಏಕಂ ॥ ೬ ॥

ಸಾಯಣಭಾಷ್ಯಂ

ಅಚಿಕಿತ್ವಾನ್ ದೇವತಾತತ್ತ್ವಮಜಾನನ್ನಹಂ ಚಿಕಿತುಷೋ ವಿಶೇಷೇಣ ತತ್ತ್ವಂ ಜಾನತಃ ಕವೀನ್ ಕ್ರಾಂತದರ್ಶಿನೋಽಧಿಗತಪರಮಾರ್ಥಾನತ್ರಾಸ್ಮಿಂಸ್ತತ್ತ್ವವಿಷಯೇ ಪೃಚ್ಛಾಮಿ । ಕಿಮರ್ಥಂ । ವಿದ್ಮನೇ ವೇದನಾಯ ಪರಮಾರ್ಥಜ್ಞಾನಾಯ । ಕಿಂ ಜಾನನ್ನೇವ ಪರಾಭವಾದ್ಯರ್ಥಂ ನೇತ್ಯಾಹ । ವಿದ್ವಾನ್ನ ಪೃಚ್ಛಾಮಿ ಅಪಿ ತ್ವಜ್ಞಾನಾದೇವ । ಯಃ ಪರಮೇಶ್ವರಸ್ತಸ್ತಂಭ ಸ್ತಂಭಿತವಾನ್ ನಿಯಮಿತವಾನ್ । ಅಥ ಯ ಆತ್ಮಾ ಸ ಸೇತುರ್ವಿಧೃತಿರೇಷಾಂ ಲೋಕಾನಾಮಸಂಭೇದಾಯ । ಛಾಂ. ಉ. ೮-೪-೧ । ಇತಿ ಶ್ರುತೇಃ । ಕಿಂ । ಇಮೇಮಾನಿ ಷಡ್ರಜಾಂಸಿ ಲೋಕಾನ್ರಂಜನಾತ್ಮಕಾನ್ । ಲೋಕಾ ರಜಾಂಸ್ಯುಚ್ಯಂತೇ ಇತಿ ನಿರುಕ್ತಂ । ಯದ್ಯಪಿ ಲೋಕಾಃ ಸಪ್ತ ತಥಾಪಿ ಸತ್ಯಲೋಕಸ್ಯ ಕರ್ಮಿಣಾಂ ಸರ್ವೇಷಾಂ ಸಾಧಾರಣತ್ವಾಭಾವಾತ್ ಷಡಿತ್ಯುಕ್ತಂ । ನನು ಷಡೇವೋಕ್ತಾಃ ಸಪ್ತಮಃ ಕಿಮಿತಿ ನ ನಿರ್ದಿಷ್ಟ ಇತಿ ಉಚ್ಯತೇ । ಅಜಸ್ಯ ಜನನಾದಿರಹಿತಸ್ಯ ಚತುರ್ಮುಖಸ್ಯ ಬ್ರಹ್ಮಣೋ ರೂಪೇ ಸ್ವರೂಪ ಏಕಂ ಸತ್ಯಲೋಕಾಖ್ಯಂ ಪುನರಾವೃತ್ತಿರಹಿತಂ ಸ್ಥಾನಂ ಕಿಮಪಿ ಸ್ವಿತ್ । ಕಿಂಸ್ವಿದೇವ । ತನ್ನ ಕೇನಾಪ್ಯಧಿಗಂತುಂ ಶಕ್ಯಮಿತ್ಯರ್ಥಃ । ಕೈಶ್ಚಿದೇವೋಪಾಸಕೈರರ್ಚಿರಾದಿಮಾರ್ಗೇಣ ಗಂತವ್ಯತ್ವಾದಿತಿ ಭಾವಃ । ಯದ್ವಾ । ಷಡ್ರಜಾಂಸಿ ವಿಲಕ್ಷಣಾಃ ಷಡೃತವಃ । ತಾನ್ಯಸ್ತಂಭಯತ್ತತ್ತ್ವಂ । ಅಜಸ್ಯ ಗಮನಶೀಲಸ್ಯ ಜನ್ಮರಹಿತಸ್ಯ ವಾದಿತ್ಯಸ್ಯ ರೂಪೇ ರೂಪ್ಯಮಾಣೇ ದೃಶ್ಯಮಾನೇ ಮಂಡಲ ಏಕಮದ್ವಿತೀಯಂ ಕಿಮಪಿ ಸ್ವಿತ್ । ಯತ್ಕಿಂಚಿದವಾಙ್ಮನಸಗಮ್ಯಂ ತತ್ತ್ವಮಸ್ತಿ ತತ್ಪೃಚ್ಛಾಮಿ । ಅಥ ಯ ಏಷೋಽಂತರಾದಿತ್ಯೇ ಹಿರಣ್ಮಯಃ ಪುರುಷೋ ದೃಶ್ಯತೇ । ಛಾಂ. ಉ. ೬-೧ । ಇತ್ಯಾದಿಶ್ರುತಿಪ್ರತಿಪಾದಿತಂ ತತ್ತ್ವಮಿತ್ಯರ್ಥಃ । ಅಥವಾ ಷಡಿಮಾನಿ ರಜಾಂಸಿ ತ್ರಿವಿಧಾನ್ಭೂಲೋಕಾಂಶ್ಚ ಯಸ್ತಸ್ತಂಭ । ತಿಸ್ರೋ ಭೂಮೀರ್ಧಾರಯನ್ತ್ರೀರುತ ದ್ಯೂನ್ । ಋ. ೨-೨೭-೮ । ಇತಿ ನಿಗಮಃ । ತಸ್ಯಾಜಸ್ಯ ಪರಬ್ರಹ್ಮಣೋ ರೂಪೇ ನಾನಾವಿಕಾರಭಾಜಿ ಜಗತಿ ಕಿಮಪಿ ಸ್ವಿದೇಕಮೇಕಾತ್ಮಕಮಸ್ತೀತಿ ಪ್ರಶ್ನಃ । ಅವಿಶೇಷಮಸ್ತಿನಾಮಮಾತ್ರಮೇಕರೂಪಮಸ್ತೀತ್ಯುತ್ತರವಿವಕ್ಷಯಾ ಪ್ರಶ್ನಃ । ಅಸ್ತೀತ್ಯೇವೋಪಲಬ್ಧವ್ಯಮಿತಿ ಶ್ರುತೇಃ ॥

ಪ್ರತಿಪದಾರ್ಥ

**ಅಚಿಕಿತ್ವಾನ್**—ದೇವತಾತತ್ತ್ವವನ್ನರಿಯದೇ, | **ಚಿಕಿತುಷಃ**—ತತ್ತ್ವಜ್ಞಾನವನ್ನು ತಿಳಿದಿರುವ | **ಕವೀನ್**—ಪ್ರಾಜ್ಞರನ್ನು | **ಅತ್ರ**—ಈ ತತ್ತ್ವಾರ್ಥದ ವಿಷಯದಲ್ಲಿ | **ವಿದ್ಮನೇ**—ಜ್ಞಾನವನ್ನು ಪಡೆಯುವುದಕ್ಕಾಗಿ | **ಪೃಚ್ಛಾಮಿ**—ಕೇಳುತ್ತೇನೆ. | **ವಿದ್ವಾನ್**—ನಾನು ಚೆನ್ನಾಗಿ ತಿಳಿದು (ಇತರರನ್ನು ಪರೀಕ್ಷಿಸುವುದಕ್ಕಾಗಿ) | **ನ**—ಕೇಳುತ್ತಿಲ್ಲ. | **ಯಃ**—ಯಾವ ಪರಮಪುರುಷನು | **ಇಮಾ ಷಡ್ರಜಾಂಸಿ**—ಈ ಆರು ಲೋಕಗಳನ್ನೂ | **ವಿ ತಸ್ತಂಭ**—ವಿಶೇಷರೀತಿಯಿಂದ ಧರಿಸಿಯೂ ನಿಯಮಿಸಿಯೂ ಇದ್ದಾನೆಯೋ ಅಂತಹ | **ಅಜಸ್ಯ**—ಜನ್ಮರಹಿತನಾದ ಪರಮಪುರುಷನ | **ರೂಪೇ**—ಸ್ವರೂಪದಲ್ಲಿ | **ಏಕಂ**—ಅದ್ವೈತವಾಗಿರತಕ್ಕದ್ದು | **ಕಿಮಪಿ ಸ್ವಿತ್**—ಯಾವುದು ತಾನೇ ಇದೆ ? ಅದರ ಸ್ವರೂಪವೇನು ?

ಭಾವಾರ್ಥ

ದೇವತಾತತ್ತ್ವವನ್ನರಿಯದೆ ಈ ತತ್ತ್ವಾರ್ಥದ ವಿಷಯದಲ್ಲಿ ಜ್ಞಾನವನ್ನು ಪಡೆಯುವುದಕ್ಕಾಗಿ ಇದನ್ನು ತಿಳಿದಿರುವ ಪ್ರಾಜ್ಞರನ್ನು ಪ್ರಶ್ನಿಸುತ್ತೇನೆಯೇ ವಿನಹ, ನಾನು ತಿಳಿದವನಾಗಿ ಅವರನ್ನು ಪರೀಕ್ಷಿಸುವ ಉದ್ದೇಶದಿಂದ ಕೇಳುತ್ತಿಲ್ಲ. ಯಾವ ಪರಮಪುರುಷನು ಈ ಆರು ಲೋಕಗಳನ್ನೂ ವಿಶೇಷರೀತಿಯಿಂದ ಧರಿಸಿಯೂ ನಿಯಮಿಸಿಯೂ ಇದ್ದಾನೆಯೋ, ಅಂತಹ ಜನ್ಮರಹಿತನಾದ ಪರಮಪುರುಷನ ಸ್ವರೂಪದಲ್ಲಿ ಅದ್ವೈತವಾಗಿರತಕ್ಕ ತತ್ತ್ವವಾವುದು ? ಅದರ ಸ್ವರೂಪವೇನು ?

## English Translation

Ignorant, I inquire of the sages who know (the truth); not as one knowing (do I inquire), for the sake of (gaining) knowledge: what is that One alone, who has upheld these six spheres in the form of the unborn ?

ವಿಶೇಷವಿಷಯಗಳು

ಈ ಋಕ್ಕಿನ ಪೂರ್ವಾರ್ಧದಲ್ಲಿ ಪ್ರಷ್ಟೃವು ತನ್ನ ವಿನಯವನ್ನು ವ್ಯಕ್ತಪಡಿಸುತ್ತಾನೆ. ವಿನಯವಿಲ್ಲದೆ ಜ್ಞಾನಾಧಿಗಮವು ಸಾಧ್ಯವಿಲ್ಲವೆಂಬುದು ಸಿದ್ಧವು. ವಿಶ್ವತತ್ತ್ವದಲ್ಲಿ ಸಮ್ಯಗ್‌ಜ್ಞಾನವಿಲ್ಲದೇ ಕೇವಲ ಕೆಲವು ಭಿನ್ನ ರೂಪವಾದ ಅಂಶಗಳನ್ನು ಮಾತ್ರವರಿತು ತಾನೇ ತತ್ತ್ವಜ್ಞನೆಂದು ಅಭಿಮಾನವನ್ನು ಹೊಂದಿದ್ದವರೆಲ್ಲರೂ ಕೊನೆಗೆ ನಮ್ರತೆಯನ್ನೇ ಆಶ್ರಯಿಸಿ ಗುರುವಿನಿಂದ ಕ್ರಮವಾದ ಉಪದೇಶವನ್ನು ಪಡೆಯಬೇಕಾಯಿತು. ಬೃಹದಾರಣ್ಯಕದಲ್ಲಿ ದೃಪ್ತಬಾಲಾಕಿಯ ಕಥೆಯೂ, ಛಾಂದೋಗ್ಯದಲ್ಲಿ ಶ್ವೇತಕೇತು ಆರುಣಿಯ ಕಥೆಯೂ ಇದಕ್ಕೆ ಉದಾಹರಣೆಗಳು.

> **ದೃಪ್ತಬಾಲಾಕಿರ್ಹಾನೂಚಾನೋ ಗಾರ್ಗ್ಯ ಆಸ ಸ ಹೋವಾಚಾಜಾತಶತ್ರುಂ ಕಾಶ್ಯಂ ಬ್ರಹ್ಮ ತೇ ಬ್ರವಾಣೀತಿ** ||
>
> (ಬೃ. ಉ. ೨-೧-೧)

ಬ್ರಹ್ಮವಿಷಯದಲ್ಲಿ ಸಮ್ಯಗ್‌ಜ್ಞಾನವಿಲ್ಲದೇ ಕೇವಲ ದುರಭಿಮಾನದಿಂದ ಕೂಡಿದ ಬಾಲಾಕಿಯು ಕಾಶಿರಾಜನಾದ ಅಜಾತಶತ್ರುವನ್ನು ಸಮೀಪಿಸಿ ತಾನು ತತ್ತ್ವಜ್ಞನೆಂದೂ ಅವನಿಗೆ ಬ್ರಹ್ಮನ ವಿಷಯದಲ್ಲಿ ಉಪದೇಶವನ್ನು ಕೊಡು

ವುದಾಗಿಯೂ ಹೇಳಿದನಂತರ ಅಜಾತಶತ್ರುವು ಇವನಿಗೆ ಮರ್ಯ್ಯಾದೆಯನ್ನು ಮಾಡುವುದಾಗಿ ಹೇಳಿ ಬ್ರಹ್ಮನ ವಿಷಯ ದಲ್ಲಿ ಅನೇಕ ಪ್ರಶ್ನೆಗಳನ್ನು ಕೇಳಿದನು. ಅವೆಲ್ಲಕ್ಕೂ ಬಾಲಾಕಿಯು ಬ್ರಹ್ಮನ ಕೆಲವಂಶಗಳನ್ನು ಮಾತ್ರ ವರ್ಣಿಸತಕ್ಕ ಉತ್ತರಗಳನ್ನು ಹೇಳಿದನೇ ಹೊರತು ಪರಿಪೂರ್ಣನಾದ ಬ್ರಹ್ಮನ ಸ್ವರೂಪವನ್ನು ಹೇಳಲಾಗಲಿಲ್ಲ. ಅನಂತರ ಅಜಾತಶತ್ರುವು ಅವನಿಗೆ ಪರಿಪೂರ್ಣವಾದ ಜ್ಞಾನವಿಲ್ಲವೆಂದು ತೋರಿಸಿಕೊಟ್ಟಾಗ ಬಾಲಾಕಿಯು ನಮ್ರತೆಯಿಂದ—

**ಸ ಹೋವಾಚ ಗಾರ್ಗ್ಯ ಉಪ ತ್ವಾ ಯಾನೀತಿ ।**

(ಬೃ. ಉ. ೨-೧-೧೪)

ನಾನು ನಿನ್ನಲ್ಲಿ ಶಿಷ್ಯವೃತ್ತಿಯನ್ನು ಮಾಡಿ ನಿನ್ನಿಂದ ಉಪದೇಶವನ್ನು ತೆಗೆದುಕೊಳ್ಳುತ್ತೇನೆಂದನು. ಇಲ್ಲಿ ಪೂರ್ವ ಜ್ಞಾನಿಯು ಯಾರಾದರೂ ಆಗಿರಬಹುದು. ತತ್ತ್ವವನ್ನು ತಿಳಿಯಬೇಕಾದವನು ಅವನಲ್ಲಿ ಶಿಷ್ಯವೃತ್ತಿಯನ್ನು ಮಾಡಲೇ ಬೇಕೆಂದು ನಿಯಮವು. ಅದನ್ನೇ ಪ್ರಕೃತವಾದ ಋಕ್ಕಿನಲ್ಲಿ **ಅಚಿಕಿತ್ವಾನ್ ಚಿಕಿತುಷಃ ಕವೀನ್ ।** ಅಜ್ಞಾನಿ ಯಾದ ನಾನು ಜ್ಞಾನಿಗಳಾದ ಕವಿಗಳನ್ನು ಸಮೀಪಿಸುತ್ತೇನೆ ಎಂದಿದೆ. ಬಾಲಾಕಿಯು ಬ್ರಾಹ್ಮಣನು. ಅಜಾತ ಶತ್ರುವು ಕ್ಷತ್ರಿಯನು.

**ಸ ಹೋವಾಚಾಜಾತಶತ್ರುಃ ಪ್ರತಿಲೋಮಂ ಚೈತದ್ಯದ್ಬ್ರಾಹ್ಮಣಃ ಕ್ಷತ್ರಿಯಮುಪೇಯಾತ್ ।**

(ಬೃ. ಉ. ೨-೧-೧೫)

ಬ್ರಾಹ್ಮಣನು ಕ್ಷತ್ರಿಯನಲ್ಲಿ ವಿದ್ಯೆಯನ್ನು ಕಲಿಯುವುದು ಸಂಪ್ರದಾಯವಲ್ಲ ಎಂದು ಅಜಾತಶತ್ರುವು ಹೇಳಿದರೂ ಸಹ ಅವನು ಜ್ಞಾನಿಯಾದುದರಿಂದ ಅವನ ವರ್ಣವನ್ನು ಪರಿಶೀಲಿಸಬೇಕಾಗಿಲ್ಲ ಎಂದು ಬಾಲಾಕಿಯು ತೀರ್ಮಾನಿಸಿದನು.

ವಿದ್ಮನೇ ನ ವಿದ್ವಾನ್—ಎಂಬುದಾಗಿ ತನ್ನ ವಿನಯವನ್ನೂ ಪ್ರಷ್ಟೃವು ತೋರಿಸಿದ್ದಾನೆ. ಇದಕ್ಕೆ ಬಾಲಾಕಿಯ ಉದಾಹರಣೆಯಿಂದ ಜಿಜ್ಞಾಸುವಿಗೆ ಯಾವ ವಿಧವಾದ ನಮ್ರತೆಯು ಅವಶ್ಯವಾಗಿರುವುದೆಂದು ತಿಳಿಯು ತ್ತದೆ. ಇದಕ್ಕೆ ಶ್ವೇತಕೇತುವಿನ ಕಥೆಯೂ ಒಂದು ಉದಾಹರಣೆಯಾಗಿರುತ್ತದೆ.

**ಶ್ವೇತಕೇತುರ್ಹಾರುಣೇಯ ಆಸ ತಂ ಹ ಪಿತೋವಾಚ ಶ್ವೇತಕೇತೋ ವಸ ಬ್ರಹ್ಮಚರ್ಯಂ ನ ವೈ ಸೋಮ್ಯಾಸ್ಮತ್ಕುಲೀನೋಽನನೂಚ್ಯ ಬ್ರಹ್ಮಬಂಧುರಿವ ಭವತೀತಿ ॥ ಸ ಹ ದ್ವಾದಶವರ್ಷ- ಮುಪೇತ್ಯ ಚತುರ್ವಿಂಶತಿವರ್ಷಃ ಸರ್ವಾನ್ ವೇದಾನಧೀತ್ಯ ಮಹಾಮನಾ ಅನೂಚಾನಮಾನೀ ಸ್ತಬ್ಧ ಏಯಾಯ ತಂ ಹ ಪಿತೋವಾಚ ॥ ಶ್ವೇತಕೇತೋ ಯನ್ನು ಸೋಮ್ಯೇದಂ ಮಹಾ- ಮನಾ ಅನೂಚಾನಮಾನೀ ಸ್ತಬ್ಧೋಽಸ್ಯುತ ತಮಾದೇಶಮಪ್ರಾಕ್ಷ್ಯಃ ಯೇನಾಶ್ರುತಂ ಶ್ರುತಂ ಭವತ್ಯಮತಂ ಮತಮವಿಜ್ಞಾತಂ ವಿಜ್ಞಾತಮಿತಿ .... .... .... .... ॥**

(ಛಾ. ಉ. ೬-೧-೧ ರಿಂದ ೩)

ಅರುಣನ ಪೌತ್ರನಾದ ಶ್ವೇತಕೇತುವನ್ನು ಅವನ ತಂದೆಯು ಬ್ರಹ್ಮಚರ್ಯದ ಪಾಲನೆಯಿಂದ ವಿದ್ಯಾಭ್ಯಾಸವನ್ನು ಮಾಡಬೇಕೆಂದು ಹೇಳಿದನು. ಹನ್ನೆರಡು ವರ್ಷದ ಬಾಲಕನಾಗಿದ್ದಾಗಲೇ ಶ್ವೇತಕೇತುವು ವಿದ್ಯಾಭ್ಯಾಸವನ್ನು ಪ್ರಾರಂಭಿಸಿ ಇಪ್ಪತ್ತನಾಲ್ಕುವರ್ಷಗಳ ಕಾಲ ವಿದ್ಯಾಭ್ಯಾಸವನ್ನು ನಡೆಸಿ ಅನಂತರ ತಂದೆಯಲ್ಲಿಗೆ ಬಂದು ತಾನೇ

ಸರ್ವಜ್ಞನೆಂಬ ಗರ್ವದಿಂದಲೂ, ವಿನಯರಹಿತವಾದ ವ್ಯವಹಾರಗಳಿಂದಲೂ ವರ್ತಿಸಿದಾಗ, ತಂದೆಯು "ಶ್ವೇತಕೇತುವೇ, ನೀನು ಇಷ್ಟು ಪ್ರಾಜ್ಞನಾಗಿಯೂ ದುರಭಿಮಾನದಿಂದ ಕೂಡಿದವನಾಗಿಯೂ ಇರುವುದರಿಂದ ನಿನಗೆ ಸಮ್ಯಗ್‌ಜ್ಞಾನವಿಲ್ಲವೆಂದು ತೋರುತ್ತದೆ. ಆ ಜ್ಞಾನವನ್ನು ಪಡೆಯುವ ಪ್ರಯತ್ನವನ್ನು ಮಾಡಿದೆಯಾ, ಚಕ್ಷುರಾದಿಇಂದ್ರಿಯಗಳಿಗೂ ಬುದ್ಧಿಗೂ ಗೋಚರವಾಗದ ಏಕತತ್ತ್ವವನ್ನು ತಿಳಿದಿರುವೆಯಾ" ಎಂದಾಗ ಶ್ವೇತಕೇತುವು ನಮ್ರತೆಯನ್ನನುಸರಿಸಿ ತನಗೆ ಆ ತತ್ತ್ವವನ್ನುಪದೇಶಿಸಬೇಕೆಂದು ತಂದೆಯನ್ನು ಕೇಳಿಕೊಂಡನು. ಈರೀತಿ ನಮ್ರತೆಯ ಆವಶ್ಯಕತೆಯನ್ನು ಪ್ರಕೃತವಾದ ಋಕ್ಕಿನ ವಾಕ್ಯವು ತಿಳಿಸುತ್ತದೆ.

**ಚಿಕಿತುಷಃ ಕವೀನ್**—ಎಂಬುದರಿಂದ ಪೂರ್ಣಜ್ಞಾನವನ್ನು ಪಡೆದಿರುವ ಯಾವ ಕವಿ (ಋಷಿ)ಯಾದರೂ ಆಗಬಹುದೆಂದೂ, **ವಿದ್ಮನೇ ನ ವಿದ್ವಾನ್** ಎಂಬುದರಿಂದ ವಿನಯದಿಂದ ಅಂತಹ ಗುರುವನ್ನು ಉಪದೇಶಕ್ಕಾಗಿ ಸಮೀಪಿಸಬೇಕೆಂದೂ ತಿಳಿಸುತ್ತದೆ. ಈಶ್ವರನ ಸ್ವರೂಪವನ್ನು ಕಾರ್ಯರೂಪದ ಪ್ರಪಂಚದಿಂದ ಕೊಂಚಮಟ್ಟಿಗೆ ಊಹಿಸಿಕೊಳ್ಳಬಹುದೇ ಹೊರತು ಅವನ ಗೂಢವಾದುದೂ, ಅಮರವಾದುದೂ ಆದ ತತ್ತ್ವವು ಉಪದೇಶದ ವಿನಹ ಸಾಧ್ಯವಿಲ್ಲವೆಂದೂ ತಿಳಿಸುತ್ತಾ **ಯಃ ಷಡಿಮಾ ರಜಾಂಸಿ ತಸ್ತಂಭ** ಯಾವ ಈಶ್ವರನು ಈ ಕಾರ್ಯರೂಪದ್ದೂ ಪುನರಾವೃತ್ತಿಯನ್ನು ಪಡೆಯತಕ್ಕದ್ದೂ ಆದ ಆರು ಲೋಕಗಳನ್ನೂ ಧರಿಸಿದ್ದಾನೆಯೋ ಎಂದು ಬಾಹ್ಯೇಂದ್ರಿಯಕ್ಕೆ ಗೋಚರವಾಗತಕ್ಕ ತತ್ತ್ವವನ್ನು ಮಾತ್ರ ಮೊದಲು ತಿಳಿಸಿದೆ. ಸಾಯಣರು "**ಲೋಕಾ ರಜಾಂಸ್ಯುಚ್ಯಂತೇ**" (ನಿ. ೪-೧೯) ಎಂಬ ನಿರುಕ್ತಕಾರರ ವಾಕ್ಯವನ್ನುದಹರಿಸಿ **ರಜಸ್**ಶಬ್ದಕ್ಕೆ ಲೋಕಗಳೆಂದರ್ಥಮಾಡಿದ್ದಾರೆ.

**ರಜೋ ರಜತೇ ಜ್ಯೋತೀ ರಜ ಉಚ್ಯತೇ; ಉದಕಂ ರಜ ಉಚ್ಯತೇ, ಲೋಕಾ ರಜಾಂಸ್ಯುಚ್ಯಂತೇ** (ನಿ, ೪-೧೯) ಬೆಳಗು ಎಂಬರ್ಥವನ್ನು ಕೊಡುವ **ರಂಜ್** ಧಾತುವಿನಿಂದ ನಿಷ್ಪನ್ನವಾಗಿ **ರಜಸ್** ಶಬ್ದಕ್ಕೆ ಜ್ಯೋತಿಯೆಂದೂ, ಉದಕವೆಂದೂ, ಲೋಕಗಳೆಂದೂ ಅರ್ಥವಾಗುತ್ತದೆ. [ಅಲ್ಲದೇ **ಅಸೃಗಹನೀ ರಜಸೀ ಉಚ್ಯೇತೇ ।** ರಕ್ತ, ಅಪಸ್ಸು ಇವುಗಳಿಗೂ ಇದು ಪರ್ಯಾಯನಾಮವಾಗಿದೆ.] ನಿರುಕ್ತಕಾರರು (ಈ ಪದಕ್ಕೆ ಅನೇಕಾರ್ಥಗಳನ್ನು ತೋರಿಸುವುದಕ್ಕಾಗಿ ಋಕ್ಸಂಹಿತೆಯ ಉದಾಹರಣೆಗಳನ್ನು ಕೊಟ್ಟು ವಿವರಿಸಿರುವುದನ್ನು ಹಿಂದೆ ತಿಳಿಸಿದೆ (ಋಗ್ವೇದ ಸಂಹಿತಾ. ಭಾಗ ೧೧. ಪೇಜು 58).

ಪ್ರಕೃತವಾದ ಋಕ್ಕಿನಲ್ಲಿ **ಷಟ್ ರಜಾಂಸಿ** ಎಂಬ ವರ್ಣನೆಯಲ್ಲಿ ಕೊಂಚ ಸಂದೇಹವು ತೋರಿ ಅದಕ್ಕೆ ಸಾಯಣರು ಸಮಾಧಾನವನ್ನೂ ಹೇಳಿದ್ದಾರೆ. **ಯದ್ಯಪಿ ಲೋಕಾಃ ಸಪ್ತ ತಥಾಪಿ ಸತ್ಯಲೋಕಸ್ಯ ಕರ್ಮಿಣಾಂ ಸರ್ವೇಷಾಂ ಸಾಧಾರಣತ್ವಾಭಾವಾತ್ ಷಡಿತ್ಯುಕ್ತಂ ।** ಲೋಕಗಳು ಸಪ್ತಸಂಖ್ಯಾಕವಾದರೂ ಸಹ ಜ್ಞಾನರಹಿತರಾಗಿ ಎಷ್ಟು ಕರ್ಮಗಳನ್ನು ನೆರವೇರಿಸಿದರೂ ಸಹ, ಎಲ್ಲಾ ಕರ್ಮಿಗಳಿಗೂ ಈ ಲೋಕದ ಪ್ರವೇಶವು ಸಾಧ್ಯವಿಲ್ಲವಾದುದರಿಂದಲೂ, ಕರ್ಮನಿಷ್ಠರಿಗೆ ಈ ಆರು ಲೋಕಗಳ ಪ್ರವೇಶವೂ ಸಾಧ್ಯವಾದುದರಿಂದಲೂ ಇಲ್ಲಿ ಲೋಕಗಳ ಸಂಖ್ಯೆಯನ್ನು ಆರೆಂದು ಮಾತ್ರ ಹೇಳಿದೆ. ಆದರೆ ಇವೆಲ್ಲಕ್ಕಿಂತಲೂ ಮೀರಿದ ಲೋಕವು ಸತ್ಯಲೋಕವು. ಪರಮಾತ್ಮನು ಈ ಆರು ಲೋಕಗಳನ್ನೂ ತನ್ನ ಶಕ್ತಿಯಿಂದ ನಿಯಮಿಸಿದ್ದಾನೆ.

**ಅಥ ಯ ಆತ್ಮಾ ಸ ಸೇತುರ್ವಿಧೃತಿರೇಷಾಂ ಲೋಕಾನಾಮಸಂಭೇದಾಯ ।**

(ಛಾ. ಉ ೮-೪-೧)

ಕರ್ಮಫಲಗಳಿಗನುಗುಣವಾಗಿ ನಿರ್ಮಿತವಾದ ಭೂರಾದಿಲೋಕಗಳನ್ನು ಅವುಗಳ ವೈಯಕ್ತಿಕವಾದ ಶಕ್ತಿಯಿಂದ ಕೂಡಿ ಪ್ರತ್ಯೇಕವಾಗಿಡಲು ಆತ್ಮರೂಪದ ಸೇತುವು ಕಟ್ಟಲ್ಪಟ್ಟಿದೆ ಎಂಬ ವಾಕ್ಯವನ್ನು ಸಾಯಣರು ಉದಹರಿಸಿ **ಯಃ ತಸ್ತಂಭ** ಎಂಬ ವಾಕ್ಯವನ್ನು ವಿವರಿಸಿದ್ದಾರೆ-

**ಅಜಸ್ಯ ರೂಪೇ ಕಿಮಪಿ ಸ್ವಿದೇಕಂ** ಎಂಬುದು ಸತ್ಯಲೋಕದ ವರ್ಣನೆಯು. ಕೇವಲ ಉಪಾಸಕರು ಮಾತ್ರ ಅರ್ಚಿರಾದಿಮಾರ್ಗದಿಂದ ಈ ಲೋಕವನ್ನು ಪ್ರವೇಶಿಸಿ ಅಲ್ಲಿ ಶಾಶ್ವತವಾದ ಸ್ಥಾನವನ್ನು ಪಡೆಯಬಹುದೆಂದು ತಿಳಿಸಿದೆ. ಹೀಗೆ **ರಜಸ್** ಶಬ್ದಕ್ಕೆ ಲೋಕಪರ್ಯಾಯವಾದ ಅರ್ಥವನ್ನು ಮಾಡಿ ಅನಂತರ ಇನ್ನೊಂದು ವಿಧವಾಗಿ ಸಾಯಣರು ಅರ್ಥಮಾಡಿದ್ದಾರೆ.

**ಯದ್ವಾ, ಷಡ್ರಜಾಂಸಿ ವಿಲಕ್ಷಣಾಃ ಷಡೃತವಃ ತಾನ್ಯಸ್ತಂಭಯತ್** ಎಂದು **ಯಃ** ಎನ್ನುವುದಕ್ಕೆ ಆದಿತ್ಯಪರವಾಗಿ ಅರ್ಥಮಾಡಿ ಈ ಆದಿತ್ಯನು ಆರು ಋತುಗಳನ್ನೂ ಆಯಾಯ ಕಾಲಾನುಗುಣವಾಗಿ ನಿಯಮಿಸಿದ್ದಾನೆಂದೂ, ಅದೇ ಆದಿತ್ಯನ ಮಂಡಲದಲ್ಲಿ ಏಳನೆಯದೂ ಶಾಶ್ವತವಾದದ್ದೂ ಆದ ಸ್ಥಿತಿಯಿದೆಯೆಂದೂ ವಿವರಿಸಿದ್ದಾರೆ. ಆರು ಋತುಗಳೂ ಸಹ ಪುನರಾವೃತ್ತಿಯುಳ್ಳವಾದುದರಿಂದ ಅಶಾಶ್ವತವಾದವು. ಈ ಕಾಲನಿಯಮಗಳಿಗೆ ಮೀರಿ ಶಾಶ್ವತವಾದ ಸ್ಥಿತಿಯಲ್ಲಿರತಕ್ಕ ಆದಿತ್ಯಮಂಡಲದಲ್ಲಿರುವ ಪುರುಷನನ್ನು ಈರೀತಿ ವರ್ಣಿಸಿದೆ.

**ಅಥ ಯ ಏಷೋಽಂತರಾದಿತ್ಯೇ ಹಿರಣ್ಮಯಃ ಪುರುಷೋ ದೃಶ್ಯತೇ ॥**
(ಛಾ ಉ. ೧-೬-೬)

ಎಂಬ ಈ ವಾಕ್ಯವನ್ನುದಹರಿಸಿ ಸಾಯಣರು **ಕಿಮಪಿ ಸ್ವಿದೇಕಂ** ಎಂಬ ಏಕಶಬ್ದದಿಂದ ಪ್ರತಿಪಾದಿತವಾಗಿರುವ ತತ್ತ್ವದ ಸ್ವರೂಪವನ್ನು ವಿವರಿಸಿದ್ದಾರೆ.

**ತಿಸ್ರೋ ಭೂಮೀರ್ಧಾರಯನ್ ತ್ರೀರುತ ದ್ಯೂನ್ ತ್ರೀಣಿ ವ್ರತಾ ವಿದಥೇ ಅಂತರೇಷಾಂ ।**
**ಋತೇನಾದಿತ್ಯಾ ಮಹಿ ವೋ ಮಹಿತ್ವಂ ತದರ್ಯಮನ್ವರುಣ ಮಿತ್ರ ಚಾರು ।**
(ಋ. ಸಂ. ೧-೨೭-೮)

ಎಂಬ ಋಕ್ಕಿನಲ್ಲಿ ಹೇಳಿರುವಂತೆ ತ್ರಿವಿಧಾತ್ಮಕವಾದ ಭೂರಾದಿಲೋಕಗಳನ್ನು ನಿಯಮಿಸಿದನು ಎಂದು ಒಂದರ್ಥವಾಗಬಹುದೆಂದು ಸಾಯಣರ ಮತವಾಗಿದೆ. ಹೀಗೆ ನಾನಾ ವಿಕಾರವ್ಯತ್ಯಾಸಗಳಿಗೆ ಒಳಗಾಗತಕ್ಕ ಈ ಷಡ್ರಜಸ್ಸುಗಳನ್ನೂ ಮೀರಿ ಪರಮಪುರುಷನಲ್ಲಿ ಅದ್ವಿತೀಯವಾದುದೂ ಜರಾಮರಣಾದಿರಹಿತವಾದುದೂ ಆದ ಸತ್ಯವಿದೆಯೆಂಬುದರಲ್ಲಿಯೂ ಆ ಸತ್ಯಜ್ಞಾನವು ಅತ್ಯವಶ್ಯವಾದುದೆಂದೂ ತಾತ್ಪರ್ಯವು.

**ಅಯಂ ಲೋಕೋ ನಾಸ್ತಿ ಪರ ಇತಿ ಮಾನೀ ಪುನಃ ಪುನರ್ವಶಮಾಪದ್ಯತೇ ಮೇ ।**
(ಕಠ. ೧-೨-೬)

ನಮ್ಮ ಕಣ್ಣಿಗೆ ಕಾಣತಕ್ಕ ಈ ಲೋಕವೇ ಸತ್ಯವು. ಬೇರೆಯಿಲ್ಲ ಎಂದು ತಿಳಿದಿರುವವನು ಜನ್ಮಮೃತ್ಯುಗಳಿಗೆ ಈಡಾಗಿ ಪದೇಪದೇ ಕ್ಲೇಶಕ್ಕೆ ಭಾಗಿಯಾಗುವವನಾದುದರಿಂದ,

**ಅಸ್ತೀತ್ಯೇವೋಪಲಬ್ಧವ್ಯಸ್ತತ್ತ್ವಭಾವೇನ ಚೋಭಯೋಃ ।**
**ಅಸ್ತೀತ್ಯೇವೋಪಲಬ್ಧಸ್ಯ ತತ್ತ್ವಭಾವಃ ಪ್ರಸೀದತಿ ॥**
(ಕಠ. ೨-೩-೧೩)

ಎಂಬ ವಾಕ್ಯದಲ್ಲಿ ಪ್ರತಿಪಾದಿಸಿರುವಂತೆ ಆ ಪರತತ್ತ್ವದ ಅಸ್ತಿತ್ವವನ್ನರಿತು ಅದರ ಸಾಕ್ಷಾತ್ಕಾರಕ್ಕೆ ಪ್ರಯತ್ನಿಸಲೇ ಬೇಕೆಂಬ ಆವಶ್ಯಕತೆಯನ್ನು ಪ್ರಕೃತವಾದ ಋಕ್ಕು ತಿಳಿಸುತ್ತದೆಯೆಂದು ಸಾಯಣರು ಉದಾಹೃತವಾದ (ಕಠ. ೨-೬-೧೩) ಶ್ರುತಿವಾಕ್ಯವನ್ನು ತಮ್ಮ ಭಾಷ್ಯದಲ್ಲುದಹರಿಸಿ ವ್ಯಾಖ್ಯಾನಮಾಡಿದ್ದಾರೆ.

॥ ವ್ಯಾಕರಣಪ್ರಕ್ರಿಯಾ ॥

**ಅಚಿಕಿತ್ವಾನ್**—ಕಿತ ಜ್ಞಾನೇ. ಧಾತು. ಇದಕ್ಕೆ ಲಿಟ್ ಬಂದಾಗ **ಕ್ವಸುಶ್ಚ** (ಪಾ. ಸೂ. ೩-೨-೧೦೭) ಎಂಬುದರಿಂದ ಅದಕ್ಕೆ ಕ್ವಸು ಆದೇಶ. ಅದನ್ನು ನಿಮಿತ್ತೀಕರಿಸಿ ಧಾತುವಿಗೆ ದ್ವಿತ್ವಾದಿ. ನಞ್ತತ್ಪುರುಷ ಸಮಾಸ. **ತತ್ಪುರುಷೇ ತುಲ್ಯಾರ್ಥ**—(ಪಾ. ಸೂ. ೬-೨-೨) ಎಂಬುದರಿಂದ ಅವ್ಯಯಪೂರ್ವಪದ ಪ್ರಕೃತಿಸ್ವರ ಬರುತ್ತದೆ.

**ಚಿಕಿತುಷಃ**—ಹಿಂದಿನಂತೇ ಕ್ವಸುಪ್ರತ್ಯಯಾಂತರೂಪ. ಶಸ್ ಪರವಾದಾಗ **ವಸೋಃ ಸಂಪ್ರಸಾರಣಮ್** ಎಂಬುದರಿಂದ ವಕಾರಕ್ಕೆ ಸಂಪ್ರಸಾರಣ. ಪೂರ್ವರೂಪ. **ಶಾಸಿವಸಿಘಸೀನಾಂ ಚ** ಎಂಬುದರಿಂದ ಸಕಾರಕ್ಕೆ ಷತ್ವ. ವಸುವಿನ ಸ್ವರ ಬರುತ್ತದೆ.

**ವಿದ್ಮನೇ**—ವಿದ ಜ್ಞಾನೇ ಧಾತು. ಸರ್ವಧಾತುನಿಬಂಧನವಾದ ಮನಿಪ್ರತ್ಯಯ. ಚತುರ್ಥೀಏಕವಚನ ಪರವಾದಾಗ **ನ ಸಂಯೋಗಾದ್ವಮಂತಾತ್** (ಪಾ. ಸೂ. ೬-೪-೧೩೭) ಎಂಬುದರಿಂದ ಅಲ್ಲೋಪ ಬರುವುದಿಲ್ಲ. ಪ್ರತ್ಯಯದ ಆದ್ಯುದಾತ್ತಸ್ವರ ಬರುತ್ತದೆ.

ತಸ್ತಂಭ—ಸ್ತಂಭು ಸ್ತಂಭೇ ಧಾತು ಲಟ್ ಪ್ರಥಮಪುರುಷಏಕವಚನಕ್ಕೆ ಣಲಾದೇಶ. ಲಿಣ್ಣಿಮಿತ್ತ ವಾಗಿ ಧಾತುವಿಗೆ ದ್ವಿತ್ವ. **ಶರ್ಪೂರ್ವಾಃ ಖಯಃ** (ಪಾ. ಸೂ. ೭-೪-೬೧) ಎಂಬುದರಿಂದ ಅಭ್ಯಾಸದಲ್ಲಿ ತಕಾರ ಉಳಿಯುತ್ತದೆ. ಯಚ್ಛಬ್ದಸಂಬಂಧವಿರುವುದರಿಂದ **ನಿಘಾತಸ್ವರ** ಬರುವುದಿಲ್ಲ. **ಲಿತಿ** (ಪಾ. ಸೂ. ೬-೧-೧೯೩) ಎಂಬುದರಿಂದ ಪ್ರತ್ಯಯದ ಪೂರ್ವಕ್ಕೆ ಉದಾತ್ತಸ್ವರ ಬರುತ್ತದೆ

**ಇಮಾ**—ನಪುಂಸಕಬಹುವಚನದಲ್ಲಿ **ಶೇಶ್ಛಂದಸಿ ಬಹುಲಮ್** (ಪಾ. ಸೂ. ೬-೧-೭೦) ಎಂಬುದರಿಂದ ಶಿಗೆ ಲೋಪ. ॥ ೬ ॥

:o:

**ಸಂಹಿತಾಪಾಠಃ**

ಇಹ ಬ್ರವೀತು ಯ ಈಮಂಗ ವೇದಾಸ್ಯ ವಾಮಸ್ಯ ನಿಹಿತಂ ಪದಂ ವೇಃ ।
ಶೀರ್ಷ್ಣಃ ಕ್ಷೀರಂ ದುಹ್ರತೇ ಗಾವೋ ಅಸ್ಯ ವವ್ರಿಂ ವಸಾನಾ ಉದಕಂ
ಪದಾಪುಃ ॥ ೭ ॥

ಪದಪಾಠಃ

ಇಹ । ಬ್ರವೀತು । ಯಃ । ಈಂ । ಅಂಗ । ವೇದ । ಅಸ್ಯ । ವಾಮಸ್ಯ । ನಿऽಹಿತಂ । ಪದಂ । ವೇರಿತಿ ವೇಃ ।

ಶೀರ್ಷ್ಣಃ । ಕ್ಷೀರಂ । ದುಹ್ರತೇ । ಗಾವಃ । ಅಸ್ಯ । ವವ್ರಿಂ । ವಸಾನಾಃ । ಉದಕಂ । ಪದಾ । ಅಪುಃ ॥೭॥

ಸಾಯಣಭಾಷ್ಯಂ

ಇಹೇದಾನೀಮಿಮಾಮೇತದ್ವಕ್ಷ್ಯಮಾಣಂ ತತ್ತ್ವಮಂಗ ಕ್ಷಿಪ್ರಮವಿಚಾರೇಣ ಬ್ರವೀತು । ಈಃ । ಯೋ ವೇದ ಸಃ । ಕೀದೃಶಂ ತತ್ । ಅಸ್ಯ ಪುರತೋ ದೃಶ್ಯಮಾನಸ್ಯ ವಾಮಸ್ಯ ವನನೀಯಸ್ಯ ವೇರ್ಗಂತು-ರಾದಿತ್ಯಸ್ಯ ಪದಂ ಸರ್ವೈರ್ಗಂತವ್ಯಂ ಸ್ವರೂಪಂ ನಿಹಿತಂ ಗೂಢಂ ವರ್ತತೇ । ಕಿಂಚಾಸ್ಯಾದಿತ್ಯಸ್ಯ ಶೀರ್ಷ್ಣಃ ಶಿರೋವದುನ್ನತಸ್ಯ ಸರ್ವೇಷಾಮುತ್ಕೃಷ್ಟಸ್ಯ ವಾ ಗಾವಃ ಕೇಚನ ವರ್ಷಕಾಲೀನಾ ರಶ್ಮಯಃ ಕ್ಷೀರ-ಮುದಕಂ ದುಹ್ರತೇ । ಕ್ಷರಂತಿ । ವವ್ರಿಂ । ರೂಪನಾಮೈತತ್ । ರೂಪಂ ವಸಾನಾ ಆಚ್ಛಾದಯಂತೋऽತಿ-ವಿಸ್ತರೇಣ ತೇಜಸಾ ತಪಂತಃ ಕೇಚನಾಸ್ಯ ಗಾವೋ ರಶ್ಮಯ ಉದಕಂ ಸ್ವಸೃಷ್ಟಂ ಪದಾ ಸೃಷ್ಟೇನೈವ ಮಾರ್ಗೇಣಾಪುಃ । ಪಿಬಂತಿ । ಭೂಮಿಂ ನಿರುದಕಾಂ ಕುರ್ವಂತೀತ್ಯರ್ಥಃ । ತಸ್ಯ ಸ್ವರೂಪಂ ಬ್ರವೀತ್ವಿ-ತ್ಯನ್ವಯಃ ॥

ಪ್ರತಿಪದಾರ್ಥ

ಇಹ— ಪ್ರಕೃತದಲ್ಲಿ । **ಈಂ**—ಈ ಮುಖ್ಯತತ್ತ್ವವನ್ನು । **ಯಃ**—ಯಾವ ಪ್ರಾಜ್ಞನು । **ವೇದ** — ತಿಳಿದಿದ್ದಾನೆಯೋ (ಅವನು) । **ಅಂಗ**— ಕ್ಷಿಪ್ರವಾಗಿ । **ಬ್ರವೀತು** — ಹೇಳಲಿ । **ವಾಮಸ್ಯ** — ರಮ್ಯಾಕೃತಿಯುಳ್ಳವನೂ । **ವೇಃ**—ಸಂಚಾರಶೀಲನೂ ಆದ । **ಅಸ್ಯ**—ಈ ಆದಿತ್ಯನ । **ಪದಂ**-ಸತ್ಯರೂಪವಾದ ಸ್ಥಾನವು । **ನಿಹಿತಂ**-ಗೂಢವಾಗಿರುತ್ತದೆ । **ಶೀರ್ಷ್ಣಃ** — ಅವನ ಅತ್ಯುತ್ಕೃಷ್ಟವಾದ ಸ್ಥಾನದಿಂದ । **ಗಾವಃ** — ಕಿರಣಗಳು । **ವವ್ರಿಂ** — ಇವನ ರೂಪವನ್ನು । **ವಸಾನಾಃ**—ತೇಜಸ್ಸಿನಿಂದ ಆಚ್ಛಾದನಮಾಡುತ್ತಾ । **ಕ್ಷೀರಂ**—ಉದಕವನ್ನು । **ದುಹ್ರತೇ**—ಸುರಿಸುತ್ತವೆ । **ಅಸ್ಯ**—ಇದೇ ಆದಿತ್ಯನ (ಅದೇ ರಶ್ಮಿಗಳು) । **ಉದಕಂ**—ತಮ್ಮಿಂದಲೇ ಸುರಿಸಲ್ಪಟ್ಟ ಉದಕವನ್ನು । **ಪದಾ**—ತಾವು ಸುರಿಸಿದ ಮಾರ್ಗದಿಂದಲೇ । **ಆಪುಃ**—ಹೀರುತ್ತವೆ.

ಭಾವಾರ್ಥ

ಪ್ರಕೃತದಲ್ಲಿ ಈ ಮುಖ್ಯತತ್ತ್ವವನ್ನು ಯಾವ ಪ್ರಾಜ್ಞನು ತಿಳಿದಿದ್ದಾನೆಯೋ ಅವನು ಇದನ್ನು ಬೇಗನೆ ವಿವರಿಸಲಿ. ರಮ್ಯಾಕೃತಿಯುಳ್ಳವನೂ, ಸಂಚಾರಶೀಲನೂ ಆದ ಈ ಆದಿತ್ಯನ ಸತ್ಯರೂಪವಾದ ಸ್ಥಾನವು ಗೂಢವಾಗಿರುತ್ತದೆ. ಅವನ ಅತ್ಯುತ್ಕೃಷ್ಟವಾದ ಸ್ಥಾನದಿಂದ ಕಿರಣಗಳು ಇವನ ರೂಪವನ್ನು ತೇಜಸ್ಸಿನಿಂದ ಆಚ್ಛಾದನಮಾಡುತ್ತಾ ಉದಕವನ್ನು ಸುರಿಸುತ್ತವೆ. ಇದೇ ಆದಿತ್ಯನ ರಶ್ಮಿಗಳು ತಮ್ಮಿಂದಲೇ ಸುರಿಸಲ್ಪಟ್ಟ ಉದಕವನ್ನು ತಾವು ಸುರಿಸಿದ ಮಾರ್ಗದಿಂದಲೇ ಹೀರುತ್ತವೆ.

## English Translation

Let him who knows this (truth) quickly declare it; the mysterious condition of the beautiful ever-moving (sun): the rays shed (their) milk from his (exalted) head, investing his form with radiance: they have drunk up the water by the paths (by which they were poured forth).

### ವಿಶೇಷವಿಷಯಗಳು

**"ವತ್ಸೇ ಬಷ್ಕಯೇಽಧಿ ಸಪ್ತ ತಂತೂನ್ವಿತತ್ನಿರೇ ಕವಯ ಓತವಾ ಉ"** ಎಂಬ ಇದೇ ಸೂಕ್ತದ ಐದನೆಯ ಋಕ್ಕಿನಲ್ಲಿ ಯಜ್ಞಾದಿಕರ್ಮಗಳಿಗೂ ಆದಿತ್ಯನಿಗೂ ಇರತಕ್ಕ ಅತ್ಯಂತಿಕವಾದ ಸಂಬಂಧವನ್ನು ತಿಳಿಸಿದೆ. ಜಗದ್ರೂಪದ ಓತಪ್ರೋತಗಳ ನಿರ್ವಹಣೆಗಾಗಿಯೂ ಅದಕ್ಕೆ ಸಾಧನವಾದ ಕರ್ಮಗಳ ಅನುಕೂಲಕ್ಕಾಗಿಯೂ ಸಹ ಆದಿತ್ಯನ ರಕ್ಷಣೆಯು ಅತ್ಯವಶ್ಯವಾಗಿರುವುದರಿಂದ ಅಂತಹ ಆದಿತ್ಯನನ್ನು ಸಪ್ತತಂತುಗಳಿಂದ ಕವಿಗಳು ಆರಾಧಿಸುತ್ತಾರೆ ಎಂದು ಆದಿತ್ಯನ ಪ್ರಶಂಸೆಯಿದೆ. ಆದರ ಮುಂದಿನ ಋಕ್ಕಿನಲ್ಲಿ ಆದಿತ್ಯನು ಆರು ಲೋಕಗಳನ್ನೂ ಧರಿಸುತ್ತಲೂ ನಿಯಮಿಸುತ್ತಲೂ ಇರುವ ವಿಷಯವನ್ನು ತಿಳಿಸಿ ಪ್ರಕೃತವಾದ ಋಕ್ಕಿನಲ್ಲಿ,

**ಶೀರ್ಷ್ಣಃ ಗಾವಃ ಕ್ಷೀರಂ ದುಹ್ರತೇ ; ಉದಕಂ ಪದಾಪುಃ ।** ಆದಿತ್ಯನ ಉತ್ತಮವಾದ ಸ್ಥಾನದಿಂದ ಹೊರಡುವ ಆದಿತ್ಯನ ರಶ್ಮಿಗಳು ಲೋಕವನ್ನೆಲ್ಲಾ ನಾನಾಕಡೆಗಳಿಂದಲೂ ಉದಕವನ್ನು ಹರಡಿ ಪುನಃ ಆ ಉದಕ ವನ್ನು ಅದೇ ಮಾರ್ಗಗಳಿಂದಲೇ ಹೀರುವ ಕ್ರಮವನ್ನೂ ವರ್ಣಿಸಿದೆ. ಹೀಗೆ ಕ್ರಮವಾಗಿ ಎಲ್ಲಾ ಮಂತ್ರಗಳಲ್ಲೂ ಸಹ ವ್ಯವಹಾರಾತ್ಮಕವ ದ ಪ್ರಪಂಚದ ನಿರ್ವಹಣೆಗಾಗಿ ಆದಿತ್ಯನೂ ಆದಿತ್ಯನ ರಶ್ಮಿಗಳೂ ಸಾಧನವಾಗಿರುವುದನ್ನು ತಿಳಿಸಿ ಇಂತಹ ಜಗತ್ತಿಗಿಂತಲೂ ಅತೀತವಾದುದೂ, ಚಕ್ಷುರಾದೀಂದ್ರಿಯಗಳಿಗೆ ಅತೀತವಾದುದೂ ಆದಿತ್ಯ ಮಂಡಲದಲ್ಲಿ ನಿತ್ಯವಾಗಿ ಪ್ರಕಾಶಿಸುತ್ತಿರುವುದೂ ಆದ ವಿಶ್ವತತ್ತ್ವವನ್ನು **"ದೇವಾನಾಮೇನಾ ನಿಹಿತಾ ಪದಾನಿ"** (೫) **"ಅಜಸ್ಯ ರೂಪೇ ಕಿಮಪಿ ಸ್ವಿದೇಕಂ" "ಅಸ್ಯ ವಾಮಸ್ಯ ನಿಹಿತಂ ಪದಂ ವೇಃ"** (೭) ಇತ್ಯಾದಿ ವಾಕ್ಯಗಳಿಂದ ವರ್ಣಿಸಿದೆ. ಪ್ರತಿಯೊಂದು ಋಕ್ಕಿನಲ್ಲಿಯೂ ಸಹ ಲೌಕಿಕಪ್ರತ್ಯಕ್ಷಕ್ಕೆ ಗೋಚರನಾದ ಆದಿತ್ಯನ ಮಹಿಮೆಯನ್ನು ಒಂದುಕಡೆಯೂ, ಇದಕ್ಕೆ ಅತೀತವಾದ ತತ್ತ್ವದ ಮಹಿಮೆಯನ್ನು ಇನ್ನೊಂದುಕಡೆಯೂ, ಒಟ್ಟಿಗೆ ವರ್ಣಿಸಿದೆ. ಪ್ರಕೃತವಾದ ಋಕ್ಕಿನಲ್ಲಿ ಮೊದಲು **"ನಿಹಿತಂ ಪದಂ"** ಎಂದು ಗೂಢವಾದ ತತ್ತ್ವವನ್ನು ಸೂಚಿಸಿ ಅನಂತರ,

**ಶೀರ್ಷ್ಣಃ ಕ್ಷೀರಂ ದುಹ್ರತೇ ಗಾವೋ ಅಸ್ಯ ವವ್ರಿಂ ವಸಾನಾ ಉದಕಂ ಪದಾಪುಃ ।** ಆದಿತ್ಯನ ಉತ್ತಮವಾದ ಸ್ಥಾನದಿಂದ ಹೊರಡುವ ಆದಿತ್ಯರಶ್ಮಿಗಳು ಲೋಕಕ್ಕೆಲ್ಲಾ ಉದಕವನ್ನು ನಾನಾಕಡೆಗಳಲ್ಲಿಯೂ ಹರಡಿ ಪುನಃ ಅದೇ ದಿಕ್ಕುಗಳಿಂದ ಅವುಗಳನ್ನು ಗ್ರಹಣಮಾಡುತ್ತವೆಯೆಂದು ವ್ಯವಹಾರಪ್ರಪಂಚದ ನಿರ್ವಹಣೆಗಾಗಿ ಆದಿತ್ಯನು ಆಧಾರವಾಗಿರುವುದನ್ನೂ ಸಾಧನವಾಗಿರುವುದನ್ನೂ ತಿಳಿಸಿದೆ ಹೀಗೆ ತನ್ನ ರಶ್ಮಿಗಳಿಂದ ದ್ಯಾವಾಪೃಥಿವಿ ಗಳನ್ನೆಲ್ಲಾ ವ್ಯಾಪಿಸಿ ಸ್ಥಿತಿಗಳಿಗೆ ಕಾರಣವಾದ ಯಜ್ಞಕ್ಕೂ ತದಂಗವಾದ ಕಲಾಪಗಳಿಗೂ ವ್ಯತ್ಯಸ್ತವಾಗತಕ್ಕ ಕಾರ್ಯರೂಪದಿಂದಲೂ ನಿತ್ಯವಾಗಿರತಕ್ಕ ಕಾರಣರೂಪದಿಂದಲೂ ಹೇತುವಾಗಿರುವುದನ್ನು ಛಾಂದೋಗ್ಯಾದಿಗಳಲ್ಲಿ ಈ ಮೂರು ಋಕ್ಕುಗಳ ಅಭಿಪ್ರಾಯಗಳನ್ನೂ ಒಟ್ಟಿಗೆ ಸೇರಿಸಿ ಈ ರೀತಿ ವರ್ಣಿಸಿದೆ,

ಅಸಾ ವಾದಿತ್ಯೋ ದೇವಮಧು ತಸ್ಯ ದ್ಯೌರೇವ ತಿರಶ್ಚೀನವಂಶೋಽಂತರಿಕ್ಷಮಪೂಪೋ ಮರೀಚಯಃ ಪುತ್ರಾಃ ।

ತಸ್ಯ ಯೇ ಪ್ರಾಂಚೋ ರಶ್ಮಯಸ್ತಾ ಏವಾಸ್ಯ ಪ್ರಾಚ್ಯೋ ಮಧುನಾಡ್ಯಃ। ಋಚ ಏವ ಮಧುಕೃತ ಋಗ್ವೇದ ಏವ ಪುಷ್ಪಂ ತಾ ಅಮೃತಾ ಆಪಸ್ತಾವಾ ಏತಾ ಋಚಃ । ಏತಮೃಗ್ವೇದಮಭ್ಯ-ತಪಗ್‌ಂಸ್ತಸ್ಯಾಭಿತಪ್ತಸ್ಯ ಯಶಸ್ತೇಜ ಇಂದ್ರಿಯ ವೀರ್ಯಮನ್ನಾದ್ಯಂ ರಸೋಽಜಾಯತ ॥ ತದ್ವ್ಯಕ್ಷರತ್ತದಾದಿತ್ಯಮಭಿತೋಽಶ್ರಯತ್ತದ್ವಾ ಏತದ್ಯದೇತದಾದಿತ್ಯಸ್ಯ ರೋಹಿತಂ ರೂಪಂ ।

(ಛಾ. ಉ. ೩-೧).

ಈ ಆದಿತ್ಯನೇ ದೇವಮಧುವು ದ್ಯುಲೋಕವೇ ಇದಕ್ಕೆ ಆಸರೆಯಾದ ವಂಶವೃಕ್ಷವಾಗಿಯೂ, ಅಂತರಿಕ್ಷವೇ ಗೂಡಾಗಿಯೂ ರಶ್ಮಿಗಳೇ ಪುತ್ರರೂಪಗಳಾಗಿಯೂ ಇವೆ. ಪೂರ್ವದಿಕ್ಕಿಗೆ ಪ್ರಸರಿಸುವ ರಶ್ಮಿಗಳು ಪೂರ್ವದಿಕ್ಕಿನ ಮಧುನಾಡಿಗಳು. ಋಕ್ಕುಗಳೇ ಭ್ರಮರಗಳು. ಋಗ್ವೇದವೇ ಪುಷ್ಪವು, ಯಜ್ಞದಲ್ಲಿ ಅರ್ಪಿತವಾದ ಆಜ್ಯಪಯೋರೂಪಗಳಾದ ಆಹುತಿಗಳೇ ಅಮೃತಬಿಂದುಗಳು. ಋಙ್ಮಂತ್ರಗಳು ಪಕ್ವವಾದನಂತರ ಯಶಸ್ಸೂ, ತೇಜಸ್ಸೂ, ಇಂದ್ರಿಯವೂ ವೀರ್ಯವೂ, ಶಕ್ತಿಯೂ, ರಸವೂ ಯಾಗಾದಿ ಕರ್ಮಗಳಿಂದ ಉತ್ಪನ್ನವಾದವು. ಅನಂತರ ಈ ಫಲರೂಪವಾದ ರಸಾದಿಗಳೆಲ್ಲವೂ ಆದಿತ್ಯನ ಅಭಿಮುಖವಾಗಿ ಪ್ರಸರಿಸಿ ಅವನನ್ನೇ ಸೇರಿದವು. ಇವೇ ಉದಯಿಸುತ್ತಿರುವ ಆದಿತ್ಯನ ರಕ್ತಬಿಂಬದ ರಮ್ಯವಾದ ರೂಪಕ್ಕೆ ಹೇತುಗಳು.

ಅಥ ಯೇಽಸ್ಯ ದಕ್ಷಿಣಾ ರಶ್ಮಯಸ್ತಾ ಏವಾಸ್ಯ ದಕ್ಷಿಣಾ ಮಧುನಾಡ್ಯೋ ಯಜೂಗ್‌ಂಷ್ಯೇವ ಮಧು-ಕೃತೋ ಯಜುರ್ವೇದ ಏವ ಪುಷ್ಪಂ ತಾ ಅಮೃತಾ ಆಪಃ । ತಾನಿ ವಾ ಏತಾನಿ ಯಜೂಗ್‌ಂಷ್ಯೇತಂ ಯಜುರ್ವೇದಮಭ್ಯತಪಗ್‌ಂಸ್ತಸ್ಯಾಭಿತಪ್ತಸ್ಯ ಯಶಸ್ತೇಜ ಇಂದ್ರಿಯಂ ವೀರ್ಯಮ-ನ್ನಾದ್ಯಂ ರಸೋಽಜಾಯತ ॥ ತದ್ವ್ಯಕ್ಷರತ್ತದಾದಿತ್ಯಮಭಿತೋಽಶ್ರಯತ್ತದ್ವಾ ಏತದ್ಯದೇತ-ದಾದಿತ್ಯಸ್ಯ ಶುಕ್ಲಂ ರೂಪಂ ॥

(ಛಾ. ಉ. ೩-೨-)

ದಕ್ಷಿಣದಿಕ್ಕಿಗೆ ಪ್ರಸರಿಸುವ ರಶ್ಮಿಗಳು ದಕ್ಷಿಣದ ಮಧುನಾಡಿಗಳು. ಯಜುರ್ಮಂತ್ರಗಳೇ ಭ್ರಮರಗಳು. ಯಜರ್ವೇದವೇ ಪುಷ್ಪವು, ಯಜ್ಞಾಹುತಿಗಳಾದ ಆಜ್ಯಪಯಸ್ಸುಗಳೇ ಅಮೃತ ಬಿಂದುಗಳು. ಇವರಿಂದ ರಸಾದಿಗಳು ಉತ್ಪನ್ನವಾಗಿ ಪುನಃ ಆದಿತ್ಯನ ಅಭಿಮುಖವಾಗಿ ಪ್ರಸರಿಸಿ ಆದಿತ್ಯನನ್ನೇ ಸೇರುತ್ತವೆ. ಇವೇ ಆದಿತ್ಯನ ಶುಕ್ಲರೂಪದ ಹೇತುಗಳು.

ಅಥ ಯೇಽಸ್ಯ ಪ್ರತ್ಯಂಚೋ ರಶ್ಮಯಃ .... .... .... ಸಾಮಾನ್ಯೇವ ಮಧುಕೃತಸ್ಸಾಮವೇದ ಏವ ಪುಷ್ಪಂ .... .... .... ಏತದಾದಿತ್ಯಸ್ಯ ಕೃಷ್ಣಂ ರೂಪಂ ॥

(ಛಾ. ಉ. ೩-೩)

ಅಥ ಯೇಽಸ್ಯೋದಂಚೋ ರಶ್ಮಯಃ .... .... .... ಅಥರ್ವಾಂಗಿರಸ ಏವ ಮಧುಕೃತ ಇತಿಹಾಸ-ಪುರಾಣಂ ಪುಷ್ಪಂ।.... .... .... ಏತದಾದಿತ್ಯಸ್ಯ ಪರಂ ಕೃಷ್ಣಂ ರೂಪಂ ॥

(ಛಾ. ಉ. ೩-೪)

ಸಾಮವೇದರೂಪವಾದ ಪುಷ್ಪದಲ್ಲಿ ಸಾಮರೂಪವಾದ ಭ್ರಮರಗಳು ಆಹುತಿರೂಪವಾದ ಅಮೃತಬಿಂದುಗಳನ್ನು ಸೃಷ್ಟಿಸಿ ಸೂರ್ಯನನ್ನು ಸೇರಿಸಿದವು. ಅದೇ ಆದಿತ್ಯನ ಕೃಷ್ಣರೂಪಕ್ಕೆ ಹೇತುವು

ಅನಂತರ ಇತಿಹಾಸಪುರಾಣರೂಪವಾದ ಪುಷ್ಪದಿಂದ ಅಥರ್ವರೂಪವಾದ ಭ್ರಮರವು ರಸಾದಿರೂಪವಾದ ಅಮೃತಬಿಂದುವನ್ನು ಸೃಷ್ಟಿಸಿದವು. ಇವು ಆದಿತ್ಯನನ್ನು ಸೇರಿದವು. ಇದೇ ಆದಿತ್ಯನ ಗಾಢವಾದ ಕೃಷ್ಣರೂಪದ ಹೇತುಗಳು.

**ತೇ ವಾ ಏತೇ ರಸಾನಾಂ ರಸಾ ವೇದಾ ಹಿ ರಸಾಸ್ತೇಷಾಮೇತೇ ರಸಾಸ್ತಾನಿ ವಾ ಏತಾನ್ಯಮೃತಾ-ನಾಮಮೃತಾನಿ ವೇದಾ ಹ್ಯಮೃತಾಸ್ತೇಷಾಮೇತಾನ್ಯಮೃತಾನಿ ॥**

(ಛಾ. ಉ. ೩-೫)

ಆದಿತ್ಯನ ಈ ವಿಧವಿಧವಾದ ವರ್ಣಗಳೇ ರಸಗಳ ಸಾರಗಳು. ಯಾವ ರಸಗಳ ಸಾರಗಳು ಎಂದರೆ—ಪೃಥ್ವಿಯಲ್ಲಿರತಕ್ಕ ಉತ್ತಮವಾದ ವಸ್ತುಗಳ ಸಾರವೇ ವೇದಗಳು ಅವುಗಳು ಯಜ್ಞರೂಪಕ್ಕೆ ಪರಿಣಾಮವನ್ನು ಹೊಂದಿದನಂತರ ಅದರ ರಸದ ಫಲವಾಗಿ ಉತ್ಪನ್ನವಾದ ಸೂರ್ಯನ ವರ್ಣಗಳು ಯಜ್ಞಾದಿಗಳ ಸಾರವು. ಅಮೃತಾತ್ಮಕವಾದ ವೇದಾದಿಗಳಿಂದ ದೀಪ್ತವಾದ ಆದಿತ್ಯನ ಈ ನಾನಾವರ್ಣಾತ್ಮಕವಾದ ತೇಜಸ್ಸು ಎಲ್ಲಾ ಅಮೃತಕ್ಕೂ ಅಮೃತಪ್ರಾಯವಾಗಿದೆ.

**ಯದ್ವೈತತ್ಪ್ರಥಮಮಮೃತಂ ತದ್ವಸವ ಉಪಜೀವಂತ್ಯಗ್ನಿನಾ ಮುಖೇನ ನ್ವೈ ದೇವಾ ಅಶ್ನಂತಿ ನ ಪಿಬಂತ್ಯೇತದೇವಾಮೃತಂ ದೃಷ್ಟ್ವಾ ತೃಪ್ಯಂತಿ ॥**

.... .... .... .... **ಅಥ ಯದ್ದ್ವಿತೀಯಮಮೃತಂ ತದ್ರುದ್ರಾ ಉಪಜೀವಂತಿ** .... .... .... ....

.... .... .... .... **ಅಥ ಯತ್ತೃತೀಯಮಮೃತಂ ತದಾದಿತ್ಯಾ ಉಪಜೀವಂತಿ** .... .... .... ....

.... .... .... .... **ಅಥ ಯಚ್ಚತುರ್ಥಮಮೃತಂ ತನ್ಮರುತ ಉಪಜೀವಂತಿ** .... .... .... .... ....

.... .... .... .... **ಅಥ ಯತ್ಪಂಚಮಮಮೃತಂ ತತ್ಸಾಧ್ಯಾ ಉಪಜೀವಂತಿ** .... .... .... ....

(ಛಾ. ಉ.।೩-೬ ರಿಂದ ೧೦)

ಈ ಐದುವಿಧವಾದುದೂ ಅಮೃತಮಯವಾದುದೂ ಆದ ಆದಿತ್ಯನ ರಸಾತ್ಮಕವಾದ ರೂಪಗಳಲ್ಲಿ ವಸುಗಳೂ, ರುದ್ರರೂ, ಆದಿತ್ಯರೂ, ಮರುತ್ತುಗಳೂ, ಸಾಧ್ಯರೂ ವಾಸಿಸುತ್ತಾರೆ ಅವರೇ ಈ ರೋಹಿತಾದಿವರ್ಣಗಳನ್ನೂ ಪ್ರವೇಶಿಸುತ್ತಾರೆ. ಈ ಅಮೃತಗಳ ಸಾರಗಳನ್ನು ತಿಳಿದವನು ವಸುರುದ್ರಾದಿಗಳಲ್ಲಿ ಸ್ಥಾನವನ್ನು ಪಡೆಯುತ್ತಾನೆ. ತಾನೂ ಆ ಆದಿತ್ಯನ ವರ್ಣಗಳಲ್ಲಿ ಬೆರೆತು ಪುನಃ ಆ ವರ್ಣಗಳಿಂದಲೇ ಉತ್ಪನ್ನನಾಗುತ್ತಾನೆ. (**ತ ಏತದೇವ ರೂಪಮಭಿಸಂವಿಶಂತ್ಯೇತಸ್ಮಾದ್ರೂಪಾದುದ್ಯಂತಿ**) ಆದಿತ್ಯನೂ ಸಹ ಈ ವಸುರುದ್ರಾದಿತ್ಯಾದಿಗಳ ಲೋಕಗಳಲ್ಲಿ ಸಂಚರಿಸುತ್ತಲೂ ಅವರ ಸ್ವಾರಾಜ್ಯಮಹಿಮೆಯನ್ನು ವೀಕ್ಷಿಸುತ್ತಲೂ ಸಂಚರಿಸುತ್ತಾನೆ.

**ಅಥ ತತ ಊರ್ಧ್ವಂ ಉದೇತ್ಯ ನೈವೋದೇತಾ ನಾಸ್ತಮೇತೈಕಲ ಏವ ಮಧ್ಯೇ ಸ್ಥಾತಾ ತದೇಷ ಶ್ಲೋಕಃ ॥**

**ನ ವೈ ತತ್ರ ನ ನಿಮ್ಲೋಚ ನೋದಿಯಾಯ ಕದಾಚನ ।**
**ದೇವಾಸ್ತೇನಾಹಂ ಸತ್ಯೇನ ಮಾ ವಿರಾಧಿಷಿ ಬ್ರಹ್ಮಣೇತಿ ॥**

**ನ ಹ ವಾ ಅಸ್ಮಾ ಉದೇತಿ ನ ನಿಮ್ಲೋಚತಿ ಸಕೃದ್ದಿವಾ ಹೈವಾಸ್ಮೈ ಭವತಿ ಯ ಏತಾಮೇವಂ ಬ್ರಹ್ಮೋಪನಿಷದಂ ವೇದ ॥**

(ಛಾ. ಉ. ೩-೧೧ ; ೧-೩)

ಇಲ್ಲಿ **ಅಥ** ಶಬ್ದಕ್ಕೆ ಶಂಕರಾಚಾರ್ಯರು **ಕೃತ್ವೇವಮುದಯಾಸ್ತಮನೇನ ಪ್ರಾಣಿನಾಂ ಸ್ವಕರ್ಮಫಲ-ಭೋಗನಿಮಿತ್ತಮನುಗ್ರಹಂ ।** ಸಕಲಪ್ರಾಣಿಗಳಿಗೂ ಅವುಗಳ ಕರ್ಮಾನುಗುಣವಾಗಿ ಫಲಗಳನ್ನು ಕೊಡುವುದಕ್ಕಾಗಿ ಉದಯಾಸ್ತಮಯರೂಪವಾದ ಸಂಚಾರಗಳನ್ನು ವಸುರುದ್ರಾದಿ ಲೋಕಗಳಲ್ಲಿಟ್ಟುಕೊಂಡು, ಅನಂತರ ಎಂದು ಇಷ್ಟು ಅರ್ಥವನ್ನೂ ಹೇಳಿದ್ದಾರೆ. ಪ್ರಕೃತವಾದ ಸೂಕ್ತದಲ್ಲಿಯೂ ಆದಿತ್ಯನ ಉದಯಾಸ್ತಮಯವಾದ ಸಂಚಾರಗಳಿಂದ ಲೋಕನಿರ್ವಹಣವನ್ನು ಮಾಡುವುದೂ, ನಿತ್ಯವಾದ ಸ್ಥಿತಿಯಲ್ಲಿ ಪರಮಾತ್ಮರೂಪದಲ್ಲಿರುವುದೂ ವರ್ಣಿತವಾಗಿರುವುದರಿಂದ ಇಲ್ಲಿಯ ವರಿಗಿನ ಉಪನಿಷದ್ವಾಕ್ಯಗಳು ಆದಿತ್ಯನ ಜಗನ್ನಿಯಾಮಕವಾದ ವ್ಯವಹಾರವನ್ನು ಮಾತ್ರ ವರ್ಣಿಸಿದೆ. ಇನ್ನು ಮುಂದೆ ಆದಿತ್ಯನ ಪರಮಾತ್ಮ ಸ್ವರೂಪವನ್ನು ವರ್ಣಿಸುತ್ತವೆ.

ಆದಿತ್ಯನು ವಸುರುದ್ರಾದಿತ್ಯಾದಿಗಳ ಲೋಕಗಳಲ್ಲೆಲ್ಲಾ ಬೆಳಗಿ ಅನಂತರ ಅವಕ್ಕಿಂತಲೂ ಊರ್ಧ್ವಭಾಗದಲ್ಲಿರುವ ಲೋಕವನ್ನು ಸೇರಿ ಅಲ್ಲಿ ನಿತ್ಯವಾದ ಸ್ಥಿತಿಯಲ್ಲಿರುತ್ತಾನೆ. ಆ ಲೋಕದಲ್ಲಿ ಆದಿತ್ಯನಿಗೆ ಉದಯವೂ ಇಲ್ಲ. ಅಸ್ತಮಯವೂ ಇಲ್ಲ. ಮಧ್ಯಭಾಗದಲ್ಲಿ ವಿರಾಜಿಸುತ್ತಲೂ ಅದ್ವಿತೀಯನಾಗಿಯೂ ಇರುತ್ತಾನೆ. **ನ ವೈ ತತ್ರ ನ ನಿಮ್ಲೋಚ** ಎಂಬ ಶ್ಲೋಕದಲ್ಲಿ ಆದಿತ್ಯನ ಈ ಪರಮಪದದ ಸ್ಥಿತಿಯನ್ನು ವರ್ಣಿಸಿದೆ. ಉಪನಿಷದ್ವಾಕ್ಯದಲ್ಲಿ ವರ್ಣಿತವಾದ ಈ ತತ್ತ್ವವನ್ನು ತಿಳಿದವನು ಆ ಲೋಕವನ್ನು ಸೇರುತ್ತಾನೆ ಅವನಿಗೂ ಸಹ ಸೂರ್ಯನ ಉದಯಾಸ್ತಮಯಗಳಿರುವುದಿಲ್ಲ. ಅವನಿಗೆ ಯಾವಾಗಲೂ ಶಾಶ್ವತವಾದ ಹಗಲೇ ಇರುತ್ತದೆ. ಇದನ್ನೇ,

**ತಸ್ಮಾದ್ವಾ ಏತಂ ಸೇತುಂ ತೀರ್ತ್ವಾಪಿ ನಕ್ತಮಹರೇವಾಭಿನಿಷ್ಪದ್ಯತೇ ಸಕೃದ್ವಿಭಾತೋ ಹ್ಯೇವೈಷ ಬ್ರಹ್ಮಲೋಕಃ ॥**

(ಛಾ. ಉ. ೮-೪-೨)

ಅನಿತ್ಯಾತ್ಮಕಗಳಾದ ಜಗತ್ತುಗಳಿಂದ ಬ್ರಹ್ಮಲೋಕಕ್ಕೆ ಹೋಗಿ ಸೇರತಕ್ಕ ಸೇತುವೆಯನ್ನು ದಾಟಿದನಂತರ ಬ್ರಹ್ಮಲೋಕವನ್ನು ಸೇರಿ ಯಾವ ವಿಧವಾದ ತಮಸ್ಸನ್ನೂ ಕಾಣದೆ ಶಾಶ್ವತವಾದ ಪ್ರಕಾಶವನ್ನನುಭವಿಸುವನು **ಎಂದು ವರ್ಣಿಸಿದೆ.**

ಇದೇ ವಿಧವಾಗಿ ಪ್ರಕೃತವಾದ ಸೂಕ್ತದಲ್ಲಿ ೫, ೬ ಮತ್ತು ೭ ನೇ ಋಕ್ಕುಗಳಲ್ಲಿ ವರ್ಣಿತವಾದ ಆದಿತ್ಯನ ಸ್ವರೂಪವು ಆದಿತ್ಯನ ಈ ಎರಡು ವಿಧವಾದ ಸ್ವರೂಪವನ್ನೂ ತಿಳಿಸುತ್ತದೆ. ೭ನೇ ಋಕ್ಕಿನಲ್ಲಿ ಉತ್ತರಾರ್ಧವು ಆದಿತ್ಯನ ಲೋಕನಿರ್ವಹಣದ ಕಾರ್ಯವನ್ನೂ ಪೂರ್ವಾರ್ಧವು ಅವನ ಶಾಶ್ವತವಾದುದೂ ಲೌಕಿಕಪ್ರತ್ಯಕ್ಷಕ್ಕೆ ಅತೀತವಾದುದೂ ಆದ ಗೂಢವಾದ ಸ್ವರೂಪವನ್ನೂ ವರ್ಣಿಸುತ್ತವೆ.

**ಈಂ**—ಸಾಧಾರಣವಾಗಿ ಈ ಶಬ್ದಕ್ಕೆ ಅರ್ಥವಿರುವುದಿಲ್ಲ. **ಅಥ ಯೇ ಪ್ರವೃತ್ತೇಽರ್ಥೇಽಮಿತಾಕ್ಷರೇಷು ಗ್ರಂಥೇಷು ವಾಕ್ಯಪೂರಣಾ ಆಗಚ್ಛಂತಿ ಪದಪೂರಣಾಸ್ತೇ ಮಿತಾಕ್ಷರೇಷ್ವನರ್ಥಕಾಃ ಕಮೀಮಿದ್ವಿತಿ ।** (ನಿ. ೧-೯), ಎಂದರೆ **ಈಂ** ಎಂಬ ಪದವು ಪ್ರತ್ಯೇಕವಾದ ಅರ್ಥವುಳ್ಳದ್ದಾಗಿರುವುದಿಲ್ಲ. ಈ ಪದವು ಅನೇಕ ಕಡೆಗಳಲ್ಲಿ

ಕೇವಲ ವಾಕ್ಯಪೂರಣಕ್ಕಾಗಿ ಉಪಯೋಗಿಸಲ್ಪಡುತ್ತದೆ. ಎಂದು ನಿರುಕ್ತದ ವಿವರಣೆಯಿದ್ದರೂ ಸಹ ಪ್ರಕೃತವಾದ ಋಕ್ಕಿನಲ್ಲಿ **ಏತದ್ವಕ್ಷ್ಯಮಾಣಂ ತತ್ತ್ವಂ** ಎಂದು ಒಂದು ನಿರ್ದಿಷ್ಟವಾದ ಸಂಕೇತವನ್ನು ತೋರಿಸುವುದಕ್ಕಾಗಿ ಉಪಯೋಗಿಸಲ್ಪಟ್ಟಿದೆ.

**ವಾಮಸ್ಯ—ವನನೀಯಸ್ಯ** ಎಂಬ ಪದದಿಂದ ಆದಿತ್ಯನ ಆಕರ್ಷಕವಾದ ರೂಪವು ವರ್ಣಿತವಾಗಿದೆ. ಇದು ಆದಿತ್ಯನ ಬಾಹ್ಯರೂಪವು. ಇಂತಹ ಬಾಹ್ಯವಾದ ಮಂಡಲದ ಒಳಗೆ ಯಾರಿಗೂ ಗೋಚರವಲ್ಲದ ಪರಮಾತ್ಮನ ಪರಮಪದವಿದೆ

## ವ್ಯಾಕರಣಪ್ರಕ್ರಿಯಾ

**ಬ್ರವೀತು—**ಬ್ರೂಞ್ ವ್ಯಕ್ತಾಯಾಂ ವಾಚಿ ಧಾತು. ಲೋಟ್ ಪ್ರಥಮಪುರುಷಏಕವಚನಾಂತರೂಪ. ಅತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

**ವೇದ—**ವಿದ ಜ್ಞಾನೇ ಧಾತು. ಲಟ್ ಪ್ರಥಮಪುರುಷಏಕವಚನದಲ್ಲಿ ತಿಪ್ ಬಂದಾಗ **ವಿದೋ ಲಟೋವಾ** (ಪಾ. ಸೂ. ೩-೪-೮೩) ಎಂಬುದರಿಂದ ಅದಕ್ಕೆ ಣಲಾದೇಶ. **ಪುಗಂತಲಘೂಪಧಸ್ಯಚ** ಎಂಬುದರಿಂದ ಧಾತು ಲಘೂಪಧೆಗೆ ಗುಣ. ಯದ್ಯೋಗವಿರುವುದರಿಂದ ನಿಘಾತಸ್ವರ ಬರುವುದಿಲ್ಲ. ಪ್ರತ್ಯಯ **ಲಿತ್ತಾ**ದುದರಿಂದ **ಲಿತಿ** ಎಂಬುದರಿಂದ ಪ್ರತ್ಯಯದ ಪೂರ್ವಕ್ಕೆ ಉದಾತ್ತಸ್ವರ ಬರುತ್ತದೆ

**ವೇಃ—**ವೀ ಗತ್ಯಾದಿಷು ಧಾತು. ಇದಕ್ಕೆ ಔಣಾದಿಕ ಇ ಪ್ರತ್ಯಯ. ಧಾತುವಿನ ಟಿಗೆ (ಈ) ಲೋಪ ಪ್ರತ್ಯಯಸ್ವರದಿಂದ ಉದಾತ್ತವಾಗುತ್ತದೆ ಷಷ್ಠೀಏಕವಚನಾಂತರೂಪ.

**ಶೀರ್ಷ್ಣಃ—ಶೀರ್ಷನ್ ಛಂದಸಿ** (ಪಾ. ಸೂ. ೬-೧-೬೦) ಎಂಬುದರಿಂದ ಶಿರಃ ಶಬ್ದಪರ್ಯಾಯವಾಗಿ ಶೀರ್ಷನ್ ಶಬ್ದವು ಅಂತೋದಾತ್ತವಾಗಿ ನಿಪಾತಿತವಾಗಿದೆ. ಷಷ್ಠೀಏಕವಚನ ಪರವಾದಾಗ **ಅಲ್ಲೋಪೋಽನಃ** ಎಂಬುದರಿಂದ ಅನಿನ ಅಕಾರಕ್ಕೆ ಲೋಪ. ಉದಾತ್ತನಿವೃತ್ತಿಸ್ವರದಿಂದ ವಿಭಕ್ತಿಯು ಉದಾತ್ತವಾಗುತ್ತದೆ.

**ದುಹ್ರತೇ—**ದುಹ ಪ್ರಪೂರಣೇ ಧಾತು. ಲಟ್ ಪ್ರಥಮಪುರುಷಬಹುವಚನದಲ್ಲಿ ಝ ಪ್ರತ್ಯಯ. ಶಪಿಗೆ ಲುಕ್. **ಆತ್ಮನೇಪದೇಷ್ವನತಃ** (ಪಾ. ಸೂ. ೭-೧-೫) ಎಂಬುದರಿಂದ ಪ್ರತ್ಯಯಕ್ಕೆ ಅತಾದೇಶ ಟಿಗೆ ಏತ್ವ. **ಬಹುಲಂ ಛಂದಸಿ** ಎಂಬುದರಿಂದ ಅದಕ್ಕೆ ರುಟಾಗಮ. ಟಿತ್ತಾದುದರಿಂದ ಆದ್ಯವಯವವಾಗಿ ಬರುತ್ತದೆ. ಅತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

**ವಸಾನಾಃ—**ವಸ ಆಚ್ಛಾದನೇ ಧಾತು. **ಲಟಿಗೆ ಶಾನಚಾದೇಶ.** ಧಾತುವು ಅನುದಾತ್ತೇತ್ತಾದುದರಿಂದ **ತಾಸ್ಯನುದಾತ್ತೇತ್** (ಪಾ. ಸೂ. ೬-೧-೧೮೬) ಎಂಬುದರಿಂದ ಪ್ರತ್ಯಯವು ಅನುದಾತ್ತವಾಗುವುದರಿಂದ ಧಾತುಸ್ವರ ಉಳಿಯುತ್ತದೆ.

ಪದಾ— **ಊಡಿದಂಪದಾದಿ-** (ಪಾ. ಸೂ. ೬-೧-೧೭೧) ಎಂಬುದರಿಂದ ವಿಭಕ್ತಿಗೆ ಉದಾತ್ತಸ್ವರ ಬರುತ್ತದೆ.

**ಅಪುಃ** ಪಾ ಪಾನೇ ಧಾತು. ಲುಙ್ ಪ್ರಥಮಪುರುಷಬಹುವಚನದಲ್ಲಿ ಝಿ ಪ್ರತ್ಯಯ. ಚ್ಲಿಗೆ ಸಿಚಾದೇಶ ಬಂದಾಗ **ಗಾತಿಸ್ಥಾ ಸಿಚ—**(ಪಾ. ಸೂ. ೨-೪-೭೭) ಎಂಬುದರಿಂದ ಅದಕ್ಕೆ ಲುಕ್. **ಆತಃ** (ಪಾ. ಸೂ. ೩-೪-೧೧೦)

ಎಂಬುದರಿಂದ ಝಿಗೆ ಉಸಾದೇಶ. **ಉಸ್ಯಪದಾಂತಾತ್** (ಪಾ. ಸೂ. ೬-೧-೯೬) ಸೂತ್ರದಿಂದ ಪರರೂಪ. ಅಂಗಕ್ಕೆ ಆಡಾಗಮ. ತಿಙಂತನಿಘಾತಸ್ವರ ಬರುತ್ತದೆ. ॥ ೭ ॥

**ಸಂಹಿತಾಪಾಠಃ**

## ಮಾತಾ ಪಿತರಮೃತ ಆ ಬಭಾಜ ಧೀತ್ಯಗ್ರೇ ಮನಸಾ ಸಂ ಹಿ ಜಗ್ಮೇ ।
## ಸಾ ಬೀಭತ್ಸುರ್ಗರ್ಭರಸಾ ನಿವಿದ್ಧಾ ನಮಸ್ವಂತ ಇದುಪವಾಕಮೀಯುಃ ॥

॥ ೮ ॥

**ಪದಪಾಠಃ**

**ಮಾತಾ । ಪಿತರಂ । ಋತೇ । ಆ । ಬಭಾಜ । ಧೀತೀ । ಅಗ್ರೇ । ಮನಸಾ । ಸಂ । ಹಿ । ಜಗ್ಮೇ ।**

**ಸಾ । ಬೀಭತ್ಸುಃ । ಗರ್ಭಽರಸಾ । ನಿಽವಿದ್ಧಾ । ನಮಸ್ವಂತಃ । ಇತ್ । ಉಪಽವಾಕಂ । ಈಯುಃ ॥ ೮ ॥**

॥ ಸಾಯಣಭಾಷ್ಯಂ ॥

ಮಾತಾ ಸರ್ವಸ್ಯ ನಿರ್ಮಾತ್ರೀ ಪೃಥಿವೀ ಪಿತರಂ ಪಾಲಕಂ ದ್ಯುಲೋಕಂ ತತ್ಸ್ಥಂ । ದ್ಯುಲೋಕಸ್ಥಮಾದಿತ್ಯಮಿತ್ಯರ್ಥಃ । ತಮಾ ಬಭಾಜ । ಆಭಜತೇ । ಕಿಮರ್ಥಂ । ಋತೇ ಉದಕೇ ಯಜ್ಞೇ ವಾ ನಿಮಿತ್ತಭೂತೇ ಸತಿ । ಕೇನ ದ್ವಾರೇಣ । ಧೀತೀ ಧೀತ್ಯಾ ಕರ್ಮಣಾ ಯಾಗಾದಿರೂಪೇಣ । ಸ್ವಕೀಯೇನಾಜ್ಯಸೋಮಾದಿಹವಿಷಾ ತರ್ಪಯತೀತ್ಯರ್ಥಃ । ಅಗ್ರೇ ತತಃ ಪೂರ್ವಂ ಪಿತಾ ಚ ಮನಸಾಸ್ಯಾಮಭಿಪ್ರಾಯವತಾ ಚೇತಸಾ ಸಂ ಜಗ್ಮೇ ಹಿ । ಸಂಶ್ಲಿಷ್ಟೋ ವರ್ತತೇ ಖಲು । ವೃಷ್ಟಿಮಕರೋದಿತ್ಯರ್ಥಃ । ಅನಂತರಂ ಸಾ ಮಾತಾ ಬೀಭತ್ಸುರ್ಗರ್ಭಬಂಧನೇಚ್ಛಾವತೀ ಗರ್ಭರಸಾ ಗರ್ಭರಸೇನ ಗರ್ಭೋತ್ಪತ್ತಿನಿಮಿತ್ತೇನ ರಸೇನ ನಿವಿದ್ಧಾ ನಿತರಾಂ ವಿದ್ಧಾಸೀತ್ । ಯದ್ವಾ । ಗರ್ಭೇ ರಸ ಓಷಧ್ಯಾದ್ಯುತ್ಪಾದನಸಮರ್ಥಮುದಕಂ ಯಸ್ಯಾಃ ಸಾ ತಾದೃಶ್ಯುದಕೇನಾತ್ಯಂತಂ ಕ್ಲಿನ್ನಾ ನಿವಿದ್ಧಾ ಕೃಷೀವಲೈರ್ಹಲಮುಖೇನ ನಿತರಾಂ ವಿದಾರಿತಾ ಭವತಿ ಬೀಜಾವಾಪಾರ್ಥಂ । ಅತ್ರಾಯಂ ಸಮಾಧಿಃ । ಯಾ ಕಾಚನ ಯೋಷಿದಪತ್ಯಾರ್ಥಂ ಸ್ವಪತಿಂ ಯುವಾನಂ ಯೌತಿ ಸ ಚ ತಸ್ಯಾಮನುರಾಗಯುಕ್ತಃ ಸಂಗತೋ ಭವತಿ ಸಾ ಚಾಂತರ್ವತೀ ಸತೀ ಪುತ್ರಾನ್ಜನಯತೀತಿ ತದ್ವದತ್ರಾಪಿ । ಅನಂತರಂ ನಮಸ್ವಂತ ಇದ್ಧಾವಿಪ್ರೀಹಿಪ್ರಿಯಂಗ್ವಾದ್ಯನ್ನವಂತ ಏವೋಪವಾಕಮುಪೇತ್ಯ ವಚನಂ ಪರಸ್ಪರಂ ಸಮ್ಯಗಭಿವೃದ್ಧಾನಿ ಸಸ್ಯಾನೀತಿ ವಚನಮೀಯುಃ । ಪ್ರಾಪ್ನುವಂತಿ । ಯದ್ವಾ । ಹವಿರ್ಲಕ್ಷಣಾನ್ನವಂತ ಉಪೇತ್ಯ ವಚನಂ ಪ್ರೈಷಾದಿರೂಪಮೀಯುಃ । ವೃಷ್ಟೌ ಸತ್ಯಾಂ ಸಸ್ಯಾದಿದ್ವಾರಾ ಯಾಗಮನುತಿಷ್ಠೇಯುರಿತ್ಯರ್ಥಃ ॥

ಪ್ರತಿಪದಾರ್ಥ

**ಮಾತಾ**—ನಿರ್ಮಾತ್ರಿಯಾದ ಪೃಥ್ವಿಯು | **ಋತೇ**—ಉದಕಕ್ಕಾಗಿ | **ಧೀತ್ಯಾ**—ಯಾಗಾದಿರೂಪವಾದ ಕರ್ಮದಿಂದ | **ಪಿತರಂ**—ಪಾಲಕನಾದ ದ್ಯುಲೋಕದಲ್ಲಿರುವ ಆದಿತ್ಯನನ್ನು | **ಆ ಬಭಾಜ**—ಸೇವಿಸಿದಳು | (**ಪಿತಾ**—ಆದಿತ್ಯನು) | **ಅಗ್ರೇ**—ಇದಕ್ಕೆ ಪೂರ್ವಭಾವಿಯಾಗಿಯೇ | **ಮನಸಾ**—(ಪೃಥ್ವಿಯ ಅಭೀಷ್ಟವನ್ನು ತಿಳಿದ) ಮನಸ್ಸಿನಿಂದ | **ಸಂ ಜಗ್ಮೇ ಹಿ**—ವೃಷ್ಟ್ಯುತ್ಪಾದನೆಯ ಸಂಕಲ್ಪವನ್ನು ಮಾಡಿಯೇ ಇದ್ದನು ಅಥವಾ ಪೂರ್ವಭಾವಿಯಾಗಿಯೇ ವೃಷ್ಟಿಯನ್ನು ಸುರಿಸಿದನು | **ಸಾ**—ಪೃಥ್ವಿಯು | **ಬೀಭತ್ಸುಃ**--ಗರ್ಭಧಾರಣೆಯ ಇಚ್ಛೆಯಿಂದಲೂ | **ಗರ್ಭರಸಾ**—ಗರ್ಭೋತ್ಪತ್ತಿಗೆ ಸಾಧನವಾದ ರಸದಿಂದಲೂ | **ನಿವಿದ್ಧಾ**—ಸಂಯುಕ್ತಳಾದಳು | **ಇತ್**—ಆ ಒಡನೆಯೇ | **ನಮಸ್ವಂತಃ**—(ಮುಂದೆ ಖಂಡಿತವಾಗಿಯೂ ಬೆಳೆಯತಕ್ಕ) ವ್ರೀಹ್ಯಾದ್ಯನ್ನವನ್ನು ನಿರೀಕ್ಷಿಸಿದ (ಯಜಮಾನರೆಲ್ಲರೂ) | **ಉಪವಾಕಂ**—ಅಭಿನಂದನಪೂರ್ವಕವಾದ ಸ್ತುತಿವಾಕ್ಯಗಳನ್ನು | **ಈಯುಃ**—ವಿನಿಮಯಮಾಡುತ್ತಾರೆ.

ಭಾವಾರ್ಥ

ಜಗನ್ನಿರ್ಮಾತ್ರಿಯಾದ ಪೃಥ್ವಿಯು ಉದಕಕ್ಕಾಗಿ ಯಾಗಾದಿರೂಪವಾದ ಕರ್ಮದಿಂದ ದ್ಯುಲೋಕಸ್ಥನಾದ ಆದಿತ್ಯನನ್ನು ಸೇವಿಸಿದಳು. ಆದಿತ್ಯನು ಅದಕ್ಕಿಂತಲೂ ಪೂರ್ವಭಾವಿಯಾಗಿಯೇ ಪೃಥ್ವಿಯ ಅಭೀಷ್ಟವನ್ನು ತಿಳಿದ ಮನಸ್ಸಿನಿಂದ ವೃಷ್ಟಿಯನ್ನು ಸುರಿಸಿದನು. ಪೃಥ್ವಿಯು ಗರ್ಭಧಾರಣೆಯ ಇಚ್ಛೆಯಿಂದಲೂ, ಗರ್ಭೋತ್ಪತ್ತಿಗೆ ಸಾಧನವಾದ ರಸದಿಂದಲೂ ಸಂಯುಕ್ತಳಾದಳು. ಒಡನೆಯೇ ಮುಂದೆ ಖಂಡಿತವಾಗಿಯೂ ಬೆಳೆಯತಕ್ಕ ವ್ರೀಹ್ಯಾದ್ಯನ್ನವನ್ನು ನಿರೀಕ್ಷಿಸಿದ ಯಜಮಾನರೆಲ್ಲರೂ ಪರಸ್ಪರ ಅಭಿನಂದನ ವಾಕ್ಯಗಳನ್ನು ವಿನಿಮಯಮಾಡಿಕೊಂಡರು.

## English Translation

The mother, (earth), worships the father, (sun), with holy rites, for the sake of water; but he has anticipated (her wants) in his mind; whereupon, desirous of progeny, she is penetrated by the dews of impregnation, and, (all) expectant of abundance, exchange words (of congratulation).

ವಿಶೇಷವಿಷಯಗಳು

ಈ ಋಕ್ಕಿನಲ್ಲಿ ಪೃಥಿವಿಗೂ ಆದಿತ್ಯನಿಗೂ ದಾಂಪತ್ಯಸಂಬಂಧವನ್ನು ಹೇಳಿ ಆ ದಾಂಪತ್ಯದ ಪ್ರೇಮದ ರೀತಿಯನ್ನೂ, ಆ ಪ್ರೇಮಫಲದ ಸ್ವರೂಪವನ್ನೂ ತಿಳಿಸಿದೆ. ಅದನ್ನೇ ಸಾಯಣರು ಭಾಷ್ಯದಲ್ಲಿ " **ಯಾ ಕಾಚನ ಯೋಷಿದಪತ್ಯಾರ್ಥಂ ಸ್ವಪತಿಂ ಯುವಾನಂ ಯೌತಿ ಸ ಚ ತಸ್ಯಾಮನುರಾಗಯುಕ್ತಃ ಸಂಗತೋ ಭವತಿ ಸಾ ಚಾಂತರ್ವತ್ನೀ ಸತೀ ಪುತ್ರಾನ್ ಜನಯತೀತಿ ತದ್ವದತ್ರಾಪಿ** " ಪತಿ ಪ್ರೇಮವನ್ನು ಬಯಸಿದ ಸ್ತ್ರೀಯು ಪುತ್ರಾರ್ಥವಾಗಿ ಪತಿಯ ಸಂಗಮವನ್ನು ಬಯಸಿದಾಗ ಪತಿಯೂ ಸಹ ಅವಳಲ್ಲಿ ಅತ್ಯಂತ ಅನುರಾಗವುಳ್ಳವನಾಗಿ ಅವಳ ಬಯಕೆಯನ್ನೀಡೇರಿಸಿದರೆ ಆಗ ಅವಳು ಗರ್ಭವತಿಯಾಗಿ ಪುತ್ರನನ್ನು ಪಡೆಯುವಂತೆ ಪೃಥ್ವೀರೂಪಳಾದ ಸ್ತ್ರೀಯು ಆದಿತ್ಯರೂಪನಾದ ಪತಿಯಲ್ಲಿ ಪ್ರೇಮವನ್ನು ಕೋರಿ ಅದಕ್ಕೆ ಪ್ರತಿಯಾದ ಅವನ ಪ್ರೇಮವನ್ನೂ ಪಡೆದುದರ ಫಲವಾಗಿ ಅನ್ನರೂಪವಾದ ಫಲವನ್ನು ಪಡೆದಳೆಂದು ವಿವರಿಸಿದೆ.

**ಮಾತಾ—ಸರ್ವಸ್ಯ ನಿರ್ಮಾತ್ರೀ ಪೃಥಿವೀ ।** ಸಕಲವನ್ನೂ ನಿರ್ಮಿಸತಕ್ಕ ಪೃಥಿವಿಯೆಂದರ್ಥ.

**ತದ್ಯದುಪಯಾಮೇನ ಗೃಹಾ ಗೃಹ್ಯಂತೇ ಅನಯೈವ ತದ್ಗೃಹ್ಯಂತೇಽಥ ಯದ್ಯೋನೌ ಸಾದಯ-ತೀಯಂ ವಾ ಅಸ್ಯ ಸರ್ವಸ್ಯ ಯೋನಿರಸ್ಯೈ ವಾ ಇಮಾಃ ಪ್ರಜಾಃ ಪ್ರಜಾತಾಃ ॥ ತಂ ವಾ ಏತಗ್ಂ ರೇತೋ ಭೂತಗ್ಂ ಸೋಮಮೃತ್ವಿಜೋ ಬಿಭ್ರತಿ ಯದ್ವಾ ಅಯೋನೌ ರೇತಃ ಸಿಚ್ಯತೇ ಪ್ರ ವೈ ತನ್ಮೀಯತೇಽಥ ಯದ್ಯೋನೌ ಸಾದಯತ್ಯಸ್ಯಾಮೇವ ತತ್ಸಾದಯತಿ ॥**

(ಶ ಬ್ರಾ. ೪-೧-೨-೯ ರಿಂದ ೧೦)

ಉಪಯಾಮಗ್ರಹವು ಈ ಪೃಥ್ವಿಯ ಸಹಾಯದಿಂದ ಗ್ರಹಿಸಲ್ಪಡುತ್ತದೆ. ಮತ್ತು ಈ ಪೃಥ್ವಿಯೇ ಸಕಲ ಪ್ರಜೆಗಳ ಉತ್ಪತ್ತಿಗೂ ಯೋನಿಯಾಗಿದ್ದು ಮಾತೃವಾಗಿರುವುದರಿಂದ **ಉಪಯಾಮಗ್ರಹವನ್ನೂ** ಯೋನಿಯಲ್ಲೇ ಸ್ಥಾಪಿಸುತ್ತಾನೆ. ಯೋನಿಯಲ್ಲಿ ಸ್ಥಾಪಿತವಾದುದೆಲ್ಲಾ ಪೃಥ್ವಿಯಲ್ಲಿ ಸ್ಥಾಪಿತವಾದಂತೆಯೇ ಸರಿ ಎಂದು ಸಕಲ ಭೂತಗಳಿಗೂ ಪೃಥ್ವಿಯೂ ಮಾತೆಯೆಂಬಂಶವನ್ನು ವರ್ಣಿಸಿದೆ. ಪೃಥ್ವಿಯು ಮಾತೆಯಾದರೆ ದ್ಯುಲೋಕವು ಪಿತೃವೆಂದು ದ್ಯಾವಾಪೃಥಿವಿಗಳ ದಾಂಪತ್ಯಸಂಬಂಧವನ್ನು ತಿಳಿಸಿದೆ. ಆದರೆ ಪ್ರಕೃತವಾದ ಋಕ್ಕಿನಲ್ಲಿ ಆದಿತ್ಯನಿಗೂ ಪೃಥ್ವಿಗೂ ಇರತಕ್ಕ ಸಂಬಂಧವನ್ನು ಹೇಳಿರುವುದರಿಂದ ದ್ಯುಲೋಕಕ್ಕೂ ಪೃಥ್ವಿಗೂ ಇರತಕ್ಕ ಸಂಬಂಧಕ್ಕೂ ಆದಿತ್ಯನಿಗೂ ಪೃಥ್ವಿಗೂ ಇರತಕ್ಕ ಸಂಬಂಧಕ್ಕೂ ವ್ಯತ್ಯಾಸವಿದೆಯೆಂದು ತಿಳಿಯಬೇಕಾಗಿಲ್ಲ.

**ಉದ್ವಯಂ ತಮಸಸ್ಪರೀತಿ ಪಾಪ್ಮಾ ವೈ ತಮಃ ಪಾಪ್ಮಾನಮೇವ ತಮೋಽಪಹತೇ ಸ್ವಃ ಪಶ್ಯಂತ ಉತ್ತರಮಿತ್ಯಯಂ ವೈ ಲೋಕೋಽದ್ಭ್ಯ ಉತ್ತರೋಽಸ್ಮಿನ್ನೇವ ಲೋಕೇ ಪ್ರತಿತಿಷ್ಠತಿ ದೇವಂ ದೇವತ್ರಾ ಸೂರ್ಯಮಗನ್ಮಜ್ಯೋತಿರುತ್ತಮಮಿತಿ ಸ್ವರ್ಗೋ ವೈ ಲೋಕಃ ಸೂರ್ಯೋ ಜ್ಯೋತಿರುತ್ತಮಗ್ಂ ಸ್ವರ್ಗ ಏವ ಲೋಕೇಽಂತತಃ ಪ್ರತಿತಿಷ್ಠತಿ ॥**

(ಶ. ಬ್ರಾ. ೧೪-೩-೧-೨೮)

ಪ್ರಕಾಶಮಾನರಾದ ಸಕಲದೇವತೆಗಳಿಗಿಂತಲೂ ಅತ್ಯಂತ ಪ್ರಕಾಶಮಾನನಾದ **ಸೂರ್ಯನೇ ಅಂತರಿಕ್ಷಲೋಕವಾಗಿ**ದ್ದಾನೆ. ಅಂತರಿಕ್ಷದಲ್ಲಿಯೇ ಅವನು ಶಾಶ್ವತವಾಗಿ ಪ್ರತಿಷ್ಠಾಪಿತನಾದುದರಿಂದ ಅವನಿಗೂ ಆ ಲೋಕಕ್ಕೂ ಪೂರ್ಣವಾದ ಐಕ್ಯವೇ ಇರುತ್ತದೆ- ಇತ್ಯಾದಿಯಾಗಿ ತಾದಾತ್ಮ್ಯವನ್ನು ಹೇಳಿರುವುದರಿಂದ ಆದಿತ್ಯನಿಗೂ ಪೃಥ್ವಿಗೂ ದಾಂಪತ್ಯಸಂಬಂಧವನ್ನು ಹೇಳಿದರೆ ಯಾವ ಅರ್ಥವಿದೆಯೋ ಪೃಥ್ವಿಗೂ ಅಂತರಿಕ್ಷಕ್ಕೂ ದಾಂಪತ್ಯಸಂಬಂಧವನ್ನು ಹೇಳುವುದರಲ್ಲಿಯೂ ಅದೇ ಅರ್ಥವಿದೆ. ಆದುದರಿಂದಲೇ,

**ಅಥ ಯತ್ರಾಹೋಪಹೂತೇ ದ್ಯಾವಾಪೃಥಿವೀ ಇತಿ । ತದಗ್ನೀಧ ಆದಧಾತಿ ತದಗ್ನೀತ್ಪ್ರತ್ಯಾ-ತ್ಯುಪಹೂತಾ ಪೃಥಿವೀ ಮಾತೋಪ ಮಾಂ ಪೃಥಿವೀ ಮಾತಾ ಹ್ವಯತಾಮಗ್ನಿರಾಗ್ನೀಧ್ರಾಹೋ-ಪಹೂತೋ ದ್ಯೌಷ್ಪಿತೋಪ ಮಾಂ ದ್ಯೌಷ್ಪಿತಾ ಹ್ವಯತಾಮಗ್ನಿರಾಗ್ನೀಧ್ರಾತ್ಸ್ವಾಹೇತಿ ದ್ಯಾವಾ ಪೃಥಿವ್ಯೋ ವಾಽಏಷ ಯದಾಗ್ನೀಧ್ರಃ ॥**

(ಶ. ಬ್ರಾ. ೧-೮-೧-೪೧)

" ದ್ಯಾವಾಪೃಥಿವಿಗಳು ಇಲ್ಲಿಗೆ ಆಹೂತರಾಗಿದ್ದಾರೆ " ಎಂದು ಹೋತೃವು ಪಠಿಸಿ ಅಗ್ನೀಧ್ರನಿಗೆ ಒಪ್ಪಿಸಿದಾಗ ಆಗ್ನೀಧ್ರನು " ಮಾತೆಯಾದ ಪೃಥ್ವಿಯು ಇಲ್ಲಿಗೆ ಆಹೂತಳಾಗಿದ್ದಾಳೆ, ಅದರಂತೆಯೇ ಅವಳು ನನ್ನನ್ನೂ ಆಹ್ವಾನಿಸಲಿ ನಾನು ಆಗ್ನೀಧ್ರಸ್ಥಾನವನ್ನು ಆಕ್ರಮಿಸಿರುವುದರಿಂದ ಅಗ್ನಿಯೇ ಆಗಿದ್ದೇನೆ. ಅದರಂತೆಯೇ ಪಿತೃವಾದ ದ್ಯುಲೋಕಾದಿ ದೇವತೆಯು ಆಹ್ವಾನಿಸಲ್ಪಟ್ಟಿದ್ದಾನೆ" ಇತ್ಯಾದಿಯಾಗಿ ದ್ಯಾವಾಪೃಥಿವಿಗಳನ್ನು ತಂದೆತಾಯಿಗಳೆಂದು ಅನೇಕ ಕಡೆಗಳಲ್ಲಿ ನಿರ್ದೇಶಿಸಿದೆ. ಇಂತಹ ಸಂದರ್ಭಗಳಲ್ಲಿ ಪಿತೃವೆಂದರೆ ದ್ಯುಲೋಕವಾಗಬಹುದು ಅಥವಾ ದ್ಯುಲೋಕಸ್ಥನಾದ ಆದಿತ್ಯನಾಗಬಹುದು. ಉದಾಹರಣೆಗೆ—

**ಪಿತಾ ನೋಽಸಿ ಪಿತಾ ನೋ ಬೋಧೀತಿ । ಏಷ ವೈ ಪಿತಾ ಯ ಏಷ ತಪತ್ಯೇಷ ಉ ಪ್ರವರ್ಗ್ಯಃ ।**
(ಶ. ಬ್ರಾ. ೧೪-೧-೪-೧೫)

ನೀನೇ ನಮ್ಮ ಪಿತೃವು. ನಮ್ಮ ಪಿತೃವಾಗಿಯೇ ವರ್ತಿಸು. ಅದೋ, ಅಂತರಿಕ್ಷದಲ್ಲಿ ಬೆಳಗುತ್ತಿರುವ ಆದಿತ್ಯನೇ ನಮ್ಮ ಪಿತೃವು ಮತ್ತು ಪ್ರವರ್ಗ್ಯವೇ ಆದಿತ್ಯನು ಇತ್ಯಾದಿಯಾಗಿ ಅಂತರಿಕ್ಷಸ್ಥನಾದ ಆದಿತ್ಯನನ್ನು ಪಿತೃವೆಂದು ನಿರ್ದೇಶಿಸಿದೆ. ಈರೀತಿಯಾಗಿ ಜಗತ್ತಿನ ಪ್ರಜೆಗಳಿಗೆ ಮಾತಾಪಿತೃಗಳಾಗಿರುವ ಪೂರ್ವಭಾವಿಯಾದ ದಾಂಪತ್ಯಪ್ರೇಮವನ್ನು ಪ್ರಕೃತವಾದ ಋಕ್ಕಿನಲ್ಲಿ ವರ್ಣಿಸಿದೆ. ಅನೇಕ ಸಂದರ್ಭಗಳಲ್ಲಿ ಲೌಕಿಕವಾದ ದಂಪತಿಗಳೂ ಸಹ ತಮ್ಮನ್ನು ದ್ಯಾವಾಪೃಥಿವಿಗಳೆಂದೇ ಹೋಲಿಸಿಕೊಂಡು ತಮ್ಮ ಆತ್ಯಂತಿಕವಾದ ಸಂಬಂಧವನ್ನು ವರ್ಣಿಸುವುದೂ ವಾಡಿಕೆಯಾಗಿದೆ. ಉದಾಹರಣೆಗೆ—

**ದ್ಯೌರಹಂ ಪೃಥಿವೀ ತ್ವಂ ತಾವೇಹಿ ಸಂರಂಭಾವಹೈ ।**
(ಬೃ. ಉ. ೬-೪-೨೦)

**ದ್ಯೌರಹಂ ಪೃಥಿವೀ ತ್ವಗ್ಂ ರೇತೋಽಹಗ್ಂ ರೇತೋಭೃತ್ತ್ವಂ .... .... .... ।**
• (ತೈ. ಏಕಾಗ್ನಿ ಕಾಂಡ. ೧-೩)

ನಾವಿಬ್ಬರೂ ದ್ಯಾವಾಪೃಥಿವಿಗಳು. ನಾವಿಬ್ಬರೂ ಸಂತಾನೋತ್ಪತ್ತಿಗಾಗಿ ಒಟ್ಟಿಗೆ ಸೇರಿ ಪ್ರಯತ್ನಪಡೋಣ ಎಂದು ಪತಿಯು ಪತ್ನಿಯನ್ನುದ್ದೇಶಿಸಿ ಹೇಳುತ್ತಾನೆ. ಈರೀತಿಯಾಗಿ ಅನೇಕಕಡೆಗಳಲ್ಲಿ ಆದಿತ್ಯಲೋಕಕ್ಕೂ ಪೃಥ್ವಿಗೂ ದಾಂಪತ್ಯ ಸಂಬಂಧವು ವರ್ಣಿತವಾಗಿದೆ. ಆದಿದಂಪತಿಗಳಾದ ಇವರು ಲೋಕಕ್ಕೆ ತಂದೆತಾಯಿಗಳಾಗಿದ್ದಾರೆ. ಅದರಲ್ಲಿ ಮಾತೆಯು **ಧೀತಿಯಿಂದ ಪಿತೃವನ್ನು** ಸೇವಿಸಿದಳೆಂದಿದೆ.

**ಧೀತ್ಯಾ— ಯಾಗಾದಿರೂಪೇಣ ಕರ್ಮಣಾ ।** ಯಾಗಾದಿರೂಪವಾದ ಕರ್ಮಗಳಿಂದ ಎಂದರ್ಥ. **ಧೀತಿ** ಶಬ್ದಕ್ಕೆ **ಕರ್ಮ, ಪ್ರಜ್ಞಾ** ಎಂಬ ಎರಡು ಅರ್ಥವೂ ಉಂಟು. [ನಿರುಕ್ತದಲ್ಲಿ (ನಿ. ೩-೮) ಅಂಗುಳಿನಾಮಗಳಲ್ಲೂ ಈ ಪದವು ಪಠಿತವಾಗಿದೆ] ನಿರುಕ್ತಕಾರರು **ಕರ್ಮ, ಪ್ರಜ್ಞೆ** ಎಂಬ ಎರಡು ಅರ್ಥಗಳೂ ಇರತಕ್ಕ ಎರಡು ಋಕ್ಕುಗಳನ್ನು ಉದಹರಿಸಿದ್ದಾರೆ.

**ಸಾರಾವತಕ್ಷ್ಣೀಮವಸೇ ಸುವೃಕ್ತಿಭಿಃ ಸರಸ್ವತೀಮಾ ವಿವಸೇಮ ಧೀತಿಭಿಃ ।**
(ಋ. ಸಂ. ೬-೬೧-೨)

ಎಂಬ ಋಕ್ಕಿನಲ್ಲಿ **ಧೀತಿಭಿಃ** ಎಂದರೆ **ಕರ್ಮಭಿಃ** ಎಂದೂ,

**ಋತಸ್ಯ ಹಿ ಶುರುಧಃ ಸಂತಿ ಪೂರ್ವೀರ್ಋತಸ್ಯ ಧೀತಿರ್ವೃಜಿನಾನಿ ಹಂತಿ ॥**
(ಋ ಸಂ. ೪-೨೩-೮)

ಎಂಬಲ್ಲಿ **ಪ್ರಜ್ಞಾ** ಎಂದೂ ಅರ್ಥ ಮಾಡಿದ್ದಾರೆ. ಸ್ತುತಿಯೆಂಬ ಅರ್ಥದಲ್ಲೂ ಕೆಲವೆಡೆಗಳಲ್ಲಿ ಈ ಪದದ ಪ್ರಯೋಗ ವಿದೆ. ಪ್ರಕೃತವಾದ ಋಕ್ಕಿನಲ್ಲಿ ಯಾಗರೂಪವಾದ ಕರ್ಮವೆಂದರ್ಥ.

**ಗರ್ಭರಸಾ—ಗರ್ಭೋತ್ಪತ್ತಿನಿಮಿತ್ತೇನ ರಸೇನ ನಿವಿಧ್ಧಾ ನಿತರಾಂ ವಿದ್ಧಾ ಅಸೀತ್ ।** ಗರ್ಭೋತ್ಪತ್ತಿಗೆ ಸಾಧನವಾದ ರಸದಿಂದ ಪೂರ್ಣವಾಗಿ ಸಂಯುಕ್ತಳಾದಳು ಎಂಬುದನ್ನು ಸಾಯಣರು ವಿವರಿಸುತ್ತಾ, **ಗರ್ಭೇ ರಸಃ ಓಷಧ್ಯಾದ್ಯುತ್ಪಾದನಸಮರ್ಥಮುದಕಂ ಯಸ್ಯಾಃ ಸಾ ತಾದೃಶೀ ಉದಕೇನ ಅತ್ಯಂತಂ ಕ್ಲಿನ್ನಾ ನಿವಿದ್ಧಾ ಕೃಷೀವಲೈರ್ಹಲಮುಖೇನ ನಿತರಾಂ ವಿದಾರಿತಾ ಭವತಿ ।** ಸಸ್ಯಮೂಲಿಕಾದಿಗಳ ಉತ್ಪತ್ತಿಗೆ ಸಾಧನವಾದ ಉದಕವನ್ನು ಗರ್ಭದಲ್ಲಿ ಧರಿಸಿ ಎಂದರೆ ಪೃಥ್ವಿಯೆಲ್ಲಾ ಆ ಉದಕದಿಂದ ತೋಯಲ್ಪಟ್ಟ ನಂತರ ವ್ಯವಸಾಯಗಾರರಿಂದ ಉಳಲ್ಪಟ್ಟು ಸಸ್ಯಸಂಪದ್ರೂಪವಾದ ಸಂತಾನೋತ್ಪತ್ತಿಗೆ ಅಣಿಮಾಡಲ್ಪಡುವುದೆಂದು ತಿಳಿಸಿದ್ದಾರೆ

**ಉಪವಾಕಂ**—ಈ ಪದಕ್ಕೆ ಎರಡು ವಿಧವಾಗಿ ಅರ್ಥಮಾಡಿದ್ದಾರೆ. ಮೊದಲನೆಯದಾಗಿ, **ಉಪೇತ್ಯ ವಚನಂ ಪರಸ್ಪರಂ ಸಮ್ಯಗಭಿವೃದ್ಧಾನಿ ಸಸ್ಯಾನೀತಿ ವಚನಂ ।** ಬಂಧುಗಳಲ್ಲಿ ಅಥವಾ ಸುಹೃತ್ತುಗಳಲ್ಲಿ ಒಬ್ಬರಿಗೊಬ್ಬರು ಕಲೆತಾಗ ಸಕಲಪ್ರಜೆಗಳೂ ಸಹ ಸಸ್ಯಾಭಿವೃದ್ಧಿಯ ವಿಷಯದಲ್ಲೂ ಫಲಸಂಪತ್ತಿನ ವೃದ್ಧಿಯ ವಿಷಯದಲ್ಲಿಯೂ ತಮ್ಮ ತಮ್ಮ ಸಂತೋಷವನ್ನು ವ್ಯಕ್ತಪಡಿಸುವುದಲ್ಲದೇ ಅಭಿನಂದನವಾಕ್ಯಗಳನ್ನು ಆಡುವರು. ಇದು ಸಾಧಾರಣವಾಗಿ ಲೌಕಿಕವಾದ ಉಪವಚನರೂಪದ ಸಂತೋಷಾಭಿವ್ಯಕ್ತಿಯಾಗುತ್ತದೆ.

**ಉದೂ ಅಯಾಁ ಉಪವಕ್ತೇವ ಬಾಹೂ ಹಿರಣ್ಯಯಾ ಸವಿತಾ ಸುಪ್ರತೀಕಾ ।**
**ದಿವೋ ರೋಹಾಂಸ್ಯರುಹತ್ಪೃಥಿವ್ಯಾ ಅರೀರಮತ್ಪತಯತ್ಕಚ್ಚಿದಭ್ವಂ ॥**
(ಋ. ಸಂ. ೬-೭೧-೫)

ಎಂಬಲ್ಲಿ ಸವಿತೃವಿನ ಆಕರ್ಷಕವಾದ ರಶ್ಮಿಪ್ರಸರಣದ ಪ್ರಕಾರವನ್ನು ಲೌಕಿಕವಾದ ಸಂತೋಷಾಭಿವ್ಯಕ್ತಿಗೆ ಹೋಲಿಸಿ ಸುಹೃತ್ತಾದವನು ಮಿತ್ರನ ಅಭ್ಯುದಯದಲ್ಲಿ ತನ್ನ ತೃಪ್ತಿಯನ್ನು ಸೂಚಿಸಲು ಕೈಗಳನ್ನೆತ್ತಿ ಅಭಿನಂದನಮಾಡುವಂತೆ ತಾನೂ ರಶ್ಮಿಪ್ರಸರಣದೊಡನೆ ಉದಯಿಸಲಿ ಎಂದು ವರ್ಣಿಸಿದೆ. ಇದು ಲೌಕಿಕವಾದ **ಉಪವಾಕದ** ಸ್ವರೂಪವನ್ನು ಹೇಳಿದಂತಾಯಿತು.

ಇದಲ್ಲದೇ, **ಉಪವಚನ**ವೆಂಬ ಕರ್ಮಾಂಗವಾದ ಮಂತ್ರಪಠಣವೂ ಇರುತ್ತದೆ. ಈ ಅರ್ಥವೂ ಇಲ್ಲಿ ಸಾಧ್ಯವಾಗುತ್ತದೆಂದು ಸಾಯಣರು **ಹವಿರ್ಲಕ್ಷಣಾನ್ನವಂತಃ ಉಪೇತ್ಯ ವಚನಂ ಪ್ರೈಷಾದಿರೂಪಮೀಯುಃ । ವೃಷ್ಟೌ ಸತ್ಯಾಂ ಸಸ್ಯಾದಿದ್ವಾರಾ ಯಾಗಮನುತಿಷ್ಠೇಯುರಿತ್ಯರ್ಥಃ ॥** ವೃಷ್ಟಿಪತನವಾದನಂತರ ಸಸ್ಯಾದಿಗಳು ಬೆಳೆದು ಅವುಗಳು ಫಲಕಾಲವನ್ನು ಸಮೀಪಿಸಿದಾಗ ಹವಿಸ್ಸಿನರೂಪದ ಅನ್ನವನ್ನು ಹೊಂದಿ ಯಾಗವನ್ನು ನೆರವೇರಿಸುವಾಗ **ಪ್ರೈಷವೇ** ಮುಂತಾದ ಮಂತ್ರಗಳನ್ನು ಪಠಿಸಿದರು ಎಂದು ವಿವರಿಸಿದ್ದಾರೆ. ಈ ಪ್ರೈಷಮಂತ್ರವನ್ನು ಋತ್ವಿಕ್ಕುಗಳಲ್ಲಿ ಒಬ್ಬರು ಪಠಿಸಬೇಕು. ಅವರಲ್ಲಿ ಯಾರೆಂಬುದು ನಿಷ್ಕೃಷ್ಟವಾಗಿ ಹೇಳುವಂತಿಲ್ಲ. ಏತಕ್ಕೆಂದರೆ,

**ವೇಷಿ ಹ್ಯಧ್ವರೀಯತಾಮುಪವಕ್ತಾ ಜನಾನಾಂ । ಹವ್ಯಾ ಚ ಮಾನುಷಾಣಾಂ ।**
(ಋ. ಸಂ ೪-೯-೫)

ಎಂಬ ಋಕ್ಕಿನಲ್ಲಿ **ಉಪವಕ್ತಾ** ಎಂಬ ಪದವನ್ನು ವಿವರಿಸುವಾಗ ಸಾಯಣರು **ಉಪವಕ್ತಾ, ಅಧ್ವರ್ಯುಪ್ರಭೃತೀನಾಂ ಸರ್ವೇಷಾಂ ಕರ್ಮಣಾಮನುಜ್ಞಾರ್ಥಂ "ಮಾಂ ಪ್ರಣಯ" ಇತ್ಯಾದಿ ರೂಪಸ್ಯ ವಾಕ್ಯಸ್ಯ ವಕ್ತಾ ಸನ್ ಬ್ರಹ್ಮಾ ಚಾಸಿ ॥ "ಮಾಂ ಪ್ರಣಯ"** ಇತ್ಯಾದಿವಾಕ್ಯಗಳನ್ನುಚ್ಚರಿಸುತ್ತಾ ಅಧ್ವರ್ಯುವೇ ಮೊದಲಾದ ಎಲ್ಲಾ ಋತ್ವಿಕ್ಕುಗಳ ಕರ್ಮಗಳಿಗೂ ಅನುಜ್ಞೆಯನ್ನು ಕೊಡತಕ್ಕ ಬ್ರಹ್ಮನೆಂದರ್ಥ. ಆದುದರಿಂದ ಉಪವಚನವನ್ನು ಹೇಳತಕ್ಕವನು ಬ್ರಹ್ಮನೆಂದು ಇದರಿಂದ ತಿಳಿಯುತ್ತದೆ. ಅಥವಾ,

> **ಉಪವಕ್ತಾ ಸರ್ವೇಷಾಂ ಕರ್ಮಣಾಮವೈಕಲ್ಯಾರ್ಥಮುಪದ್ರಷ್ಟಾ ವಾ ಸದಸ್ಯೋಽಸಿ । "ಸ ಹಿ ಸಪ್ತದಶಃ ಕರ್ಮಣಾಮುಪದ್ರಷ್ಟಾ ಭವತಿ" ॥ ಇತ್ಯಾಪಸ್ತಂಬೇನೋಕ್ತತ್ವಾತ್ ॥**

ಸಕಲಕರ್ಮಗಳನ್ನೂ ನ್ಯೂನತೆಯಿಲ್ಲದೇ ನಿರ್ವಿಘ್ನವಾಗಿ ನೆರವೇರುವಂತೆ ನೋಡಿಕೊಳ್ಳತಕ್ಕ ಹದಿನೇಳನೆಯ ಸದಸ್ಯನು ಉಪದ್ರಷ್ಟೃವಾಗಿರುವನು. ಆಪಸ್ತಂಬರು "**ಸಪ್ತದಶಃ ಕರ್ಮಣಾಮುಪದ್ರಷ್ಟಾ ಭವತಿ**" ಎಂದು ಇವನ ಲಕ್ಷಣವನ್ನು ತಿಳಿಸಿದ್ದಾರೆ. ಈ ಉಪದ್ರಷ್ಟೃವಿನ ಸ್ವರೂಪವನ್ನು ತಿಳಿಸುತ್ತಾ ತೈತ್ತಿರೀಯಬ್ರಾಹ್ಮಣದಲ್ಲಿ ಈರೀತಿ ಹೇಳಿದೆ.

> **ಬ್ರಾಹ್ಮಣೋ ದಕ್ಷಿಣತ ಉಪಾಸ್ತೇ । ಬ್ರಾಹ್ಮಣೋ ವೈ ಪ್ರಜಾನಾಮುಪದ್ರಷ್ಟಾ । ಉಪದ್ರಷ್ಟು-ಮತ್ಯೇವ ಪ್ರಜಾಯತೇ ॥**
>
> (ತೈ. ಬ್ರಾ. ೨-೨-೧-೩)

ಎಂಬ ವಾಕ್ಯದಲ್ಲಿ **ಉಪದ್ರಷ್ಟೃ** ಶಬ್ದವನ್ನು ವಿವರಿಸುತ್ತಾ ಸಾಯಣರು, **ಉಪದ್ರಷ್ಟಾ ಹಿತಾಹಿತಸ್ಯ ಪ್ರಜಾನಾ-ಮುಪದೇಷ್ಟಾ ।** ಕರ್ಮಗಳಲ್ಲಿ ನ್ಯೂನತೆಯಿಲ್ಲದಂತೆ ನೋಡಿಕೊಂಡು ಎಲ್ಲರಿಗೂ ಹಿತವಾವುದು, ಅಹಿತವಾವುದು ಎಂಬುದನ್ನು ತಿಳಿಸತಕ್ಕ ಸದಸ್ಯನೆಂದು ತಿಳಿಸಿದ್ದಾರೆ. ಇಲ್ಲಿ ಉದಾಹೃತವಾದ (ಋ. ಸಂ. ೪-೯-೫) ಋಕ್ಕಿನ ವಿವರಣೆಯಲ್ಲಿ **ಉಪವಕ್ತೃವಿಗೂ ಉಪದ್ರಷ್ಟೃವಿಗೂ** ತಾದಾತ್ಮ್ಯವನ್ನು ಹೇಳಿದೆ. ಪುನಃ, ತೈತ್ತಿರೀಯಬ್ರಾಹ್ಮಣದಲ್ಲಿ ಉಕ್ತವಾಗಿರುವ,

> **ಪ್ರಜಾಪತಿರಕಾಮಯತ ಪ್ರಜಾಃ ಸೃಜೇಯೇತಿ । ಸ ಏತಂ ದಶಹೋತಾರಮಪಶ್ಯತ್ ॥**
>
> (ತೈ. ಬ್ರಾ. ೨-೨-೧-೧)

ಎಂಬಲ್ಲಿ ಸಾಯಣರು ದಶಹೋತೃಗಳನ್ನು ತಿಳಿಸುವಾಗ,

> **ಚಿತ್ತಿಃ ಸ್ರುಕ್, ಚಿತ್ತಮಾಜ್ಯಂ, ವಾಗ್ವೇದಿಃ, ಆಧೀತಂ ಬರ್ಹಿಃ, ಕೇತೋ ಅಗ್ನಿಃ, ವಿಜ್ಞಾತಮಗ್ನಿಃ ವಾಕ್ಪತಿರ್ಹೋತಾ, ಮನ ಉಪವಕ್ತಾ .... .... .... .... ॥**

ಎಂಬ ತೈತ್ತಿರೀಯಾರಣ್ಯಕದ ಮಂತ್ರವನ್ನುದಹರಿಸಿ **ಉಪವಕ್ತೃಶಬ್ದೇನಾನುವಚನಕರ್ತುರ್ಹೋತುಃ ಪುರಃ ಪ್ರೈಷವಕ್ತಾ ಮೈತ್ರಾವರುಣೋ ವಿವಕ್ಷಿತಃ ।** ಹೋತೃವಿನ ಮುಂಭಾಗದಲ್ಲಿ ಅವನ ಸಹಾಯಕನಾದ ಮೈತ್ರಾವರುಣನು ಉಪವಚನವನ್ನು ಪಠಿಸುತ್ತಾನೆಂದು ವಿವರಿಸಿದ್ದಾರೆ. ಈರೀತಿ ಪ್ರಕೃತವಾದ ಋಕ್ಕಿನಲ್ಲಿ ಕರ್ಮಾಂಗವಾದ ಮಂತ್ರ ಪಠನವಾದರೆ **ಬ್ರಹ್ಮನೋ, ಉಪದ್ರಷ್ಟೃವೋ** ಅಥವಾ **ಮೈತ್ರಾವರುಣನೋ,** ಪಠಿಸತಕ್ಕ ಉಪವಚನ ರೂಪವಾದ ಮಂತ್ರವೆಂದಾಗುತ್ತದೆ. ಅಥವಾ ಅಭಿನಂದನವಾಕ್ಯವೆಂದಾಗುತ್ತದೆ.

## ವ್ಯಾಕರಣಪ್ರಕ್ರಿಯಾ

**ಬಭಾಜ**—ಭಜ ಸೇವಾಯಾಂ ಧಾತು. **ಛಂದಸಿ ಲುಙ್‌ಲಙ್‌ಲಿಟಃ** ಎಂಬುದರಿಂದ ವರ್ತಮಾನಾರ್ಥದಲ್ಲಿ ಲಿಟ್. ಪ್ರಥಮಪುರುಷಏಕವಚನಾಂತರೂಪ. ತಿಙಂತನಿಘಾತಸ್ವರ ಬರುತ್ತದೆ.

**ಧೀತೀ**—ತೃತೀಯಾಏಕವಚನ ಪರವಾದಾಗ **ಸುಪಾಂ ಸುಲುಕ್** (ಪಾ. ಸೂ. ೭-೧೩೯) ಎಂಬುದರಿಂದ ಪೂರ್ವಸವರ್ಣದೀರ್ಘ. ಬರುತ್ತದೆ.

**ಸಂಜಗ್ಮೇ**—ಗಮ್ಲೃ ಗತೌ. ಧಾತು. **ಸಮೋ ಗಮ್ಯೃಚ್ಛಿಭ್ಯಾಮ್** (ಪಾ. ಸೂ. ೧-೩-೨೯) ಎಂಬುದರಿಂದ ಆತ್ಮನೇಪದಿಯಾಗುತ್ತದೆ. ಛಾಂದಸವಾಗಿ ಲಿಟ್‌ಪ್ರಥಮಪುರುಷ ಏಕವಚನಾಂತರೂಪ. **ಹಿಚ** (ಪಾ. ಸೂ. ೮-೧-೩೪) ಎಂಬುದರಿಂದ ನಿಘಾತಸ್ವರ ಪ್ರತಿಷೇಧ ಬರುವುದರಿಂದ ಪ್ರತ್ಯಯಸ್ವರದಿಂದ ಅಂತೋದಾತ್ತವಾಗುತ್ತದೆ.

**ಬೀಭತ್ಸುಃ**—ಇಚ್ಛಾರ್ಥದಲ್ಲಿ ಸನ್ ಬಂದಾಗ ಸನ್ನಂತದಮೇಲೆ **ಸನಾಶಂಸಭಿಕ್ಷ ಉಃ** (ಪಾ. ಸೂ. ೩-೨-೧೬೮) ಎಂಬುದರಿಂದ ಉಪ್ರತ್ಯಯ. **ಅತೋ ಲೋಪಃ** (ಪಾ. ಸೂ. ೬-೪-೪೮) ಎಂಬುದರಿಂದ ಸನಿನ ಅಕಾರಕ್ಕೆ ಲೋಪ. ಪ್ರತ್ಯಯಸ್ವರದಿಂದ ಅಂತೋದಾತ್ತವಾಗುತ್ತದೆ.

**ಗರ್ಭರಸಾ**—ಗರ್ಭಸ್ಯ ರಸಃ ತೇನ. **ಸುಪಾಂ ಸುಲುಕ್**—(ಪಾ. ಸೂ. ೭-೧-೩೯) ಎಂಬುದರಿಂದ ತೃತೀಯಾವಿಭಕ್ತಿ ಪರವಾದಾಗ ಅದಕ್ಕೆ ಆಕಾರಾದೇಶ. ಅಥವಾ ಗರ್ಭೇ ರಸಃ ಯಸ್ಯಾಃ ಸಾ. ಗರ್ಭರಸಾ. **ಬಹುವ್ರೀಹೌಪ್ರಕೃತ್ಯಾಪೂರ್ವಪದಮ್** ಎಂಬುದರಿಂದ ಪೂರ್ವಪದ ಪ್ರಕೃತಿಸ್ವರ ಬರುತ್ತದೆ.

**ನಿವಿದ್ಧಾ**—ವ್ಯಧ ತಾಡನೇ. ಧಾತು. ಕರ್ಮಣಿಯಲ್ಲಿ ನಿಷ್ಠಾ ಎಂಬುದರಿಂದ ಕ್ತಪ್ರತ್ಯಯ. **ಗ್ರಹಿಜ್ಯಾವಯಿವ್ಯಧಿ**—(ಪಾ. ಸೂ. ೬-೧-೧೬) ಎಂಬುದರಿಂದ ಸಂಪ್ರಸಾರಣ. **ನ ಸಂಪ್ರಸಾರಣೇ ಸಂಪ್ರಸಾರಣಮ್** ಸೂತ್ರದಿಂದ ಯಕಾರಕ್ಕೆ ಇಕಾರ ಬರುತ್ತದೆ. **ಗತಿರನಂತರಃ** (ಪಾ. ಸೂ. ೬-೨-೪೯) ಎಂಬುದರಿಂದ ಗತಿಗೆ (ನಿ) ಉದಾತ್ತಸ್ವರ ಬರುತ್ತದೆ.

**ನಮಸ್ವಂತಃ**—ನಮಃ ಅನ್ನಾದಿ ಯೇಷಾಮಸ್ತಿ ಇತಿ. **ತದಸ್ಯಾಸ್ತಿ**—ಸೂತ್ರದಿಂದ ಮತುಪ್ ಪ್ರತ್ಯಯ. **ಮಾದುಪಧಾಯಾಶ್ಚ**—ಎಂಬುದರಿಂದ ಮಕಾರಕ್ಕೆ ವತ್ವ. ಪ್ರತ್ಯಯ ಪಿತ್ತಾದುದರಿಂದ ಅನುದಾತ್ತವಾಗುತ್ತದೆ.

**ಉಪವಾಕಮ್**—ವಚ ಪರಿಭಾಷಣೇ. ಧಾತು ಘಞ್‌ಪ್ರತ್ಯಯ. **ಅತಉಪಧಾಯಾಃ** ಎಂಬುದರಿಂದ ಉಪಧಾವೃದ್ಧಿ. **ಚಜೋಃ ಕುಘಿಣ್ಯತೋಃ** (ಪಾ. ಸೂ. ೭-೩-೫೨) ಎಂಬುದರಿಂದ ಕುತ್ವ. **ಕರ್ಷಾತ್ವತಃ**—(ಪಾ. ಸೂ. ೬-೧-೧೫೯) ಎಂಬುದರಿಂದ ಅಂತೋದಾತ್ತಸ್ವರ ಬರುತ್ತದೆ. ಪ್ರಾದಿಸಮಾಸವಾದಾಗ ಕೃದುತ್ತರಪದ ಪ್ರಕೃತಿ ಸ್ವರ ಬರುತ್ತದೆ.

**ಈಯುಃ**—ಇಣ್ ಗತೌ. ಧಾತು. ಛಾಂದಸವಾಗಿ ವರ್ತಮಾನಾರ್ಥದಲ್ಲಿ ಲಿಟ್. ಪ್ರಥಮಪುರುಷ ಬಹುವಚನಾಂತರೂಪ. ಅತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ. ॥ ೮ ॥

———— :o: ————

॥ ಸಂಹಿತಾಪಾಠಃ ॥

ಯುಕ್ತಾ ಮಾತಾಸೀದ್ಧುರಿ ದಕ್ಷಿಣಾಯಾ ಅತಿಷ್ಠದ್ಗರ್ಭೋ ವೃಜನೀಷ್ವಂತಃ।
ಅಮೀಮೇದ್ವತ್ಸೋ ಅನು ಗಾಮಪಶ್ಯದ್ವಿಶ್ವರೂಪ್ಯಂ ತ್ರಿಷು ಯೋಜನೇಷು॥
॥ ೯ ॥

॥ ಪದಪಾಠಃ ॥

ಯುಕ್ತಾ । ಮಾತಾ । ಆಸೀತ್ । ಧುರಿ । ದಕ್ಷಿಣಾಯಾಃ । ಅತಿಷ್ಠತ್ । ಗರ್ಭಃ । ವೃಜನೀಷು । ಅಂತರಿತಿ । ಅಮೀಮೇತ್ । ವತ್ಸಃ । ಅನು । ಗಾಂ । ಅಪಶ್ಯತ್ । ವಿಶ್ವऽರೂಪ್ಯಂ । ತ್ರಿಷು । ಯೋಜನೇಷು ॥ ೯ ॥

॥ ಸಾಯಣಭಾಷ್ಯಂ ॥

ಮಾತಾ । ನಿರ್ಮೀಯಂತೇಽಸ್ಮಿನ್ಭೂತಾನೀತಿ ಮಾತಾ ದ್ಯೌಃ । ದಕ್ಷಿಣಾಯಾ ಅಭಿಮತಪೂರಣಸಮರ್ಥಾಯಾಃ ಪೃಥಿವ್ಯಾ ಧುರಿ ನಿರ್ವಹಣೇ ಯುಕ್ತಾಸೀತ್ । ವರ್ಷಣಾಯ ಸಮರ್ಥಾಭೂದಿತ್ಯರ್ಥಃ । ಕಥಮಿತಿ ತದುಚ್ಯತೇ । ಗರ್ಭೋ ಗರ್ಭಸ್ಥಾನೀಯ ಉದಕಸಂಘೋ ವೃಜನೀಷೂದಕವತ್ಸು ಮೇಘಪಂಕ್ತಿಷ್ವಂತರ್ಮಧ್ಯೇಽತಿಷ್ಠತ್ । ತಿಷ್ಠತಿ । ಅನಂತರಂ ವತ್ಸಃ ಪುತ್ರಸ್ಥಾನೀಯ ಉದಕಸಂಘಸ್ತ್ರಿಷು ಯೋಜನೇಷು ಮೇಘರಶ್ಮಿವಾಯುಷು ಸಂಯುಕ್ತೇಷು ಸತ್ಸ್ವಮೀಮೇತ್ । ವರ್ಷಣಸಮಯೇ ಶಬ್ದಯತಿ । ಅನಂತರಂ ವಿಶ್ವರೂಪ್ಯಂ ವಿಶ್ವರೂಪವತೀಂ ಗಾಮನ್ವಪಶ್ಯತ್ । ಅನುಕ್ರಮೇಣ ಪಶ್ಯತಿ । ವರ್ಷತೀತ್ಯರ್ಥಃ । ಯದ್ವಾ । ತ್ರಿಷು ಯೋಜನೇಷು ಸತ್ಸು ವತ್ಸೋ ಮೇಘೋ ವರ್ಷಣಾಯ ಗಾಂ ಭೂಮಿಂ ಪ್ರತ್ಯಮೀಮೇತ್ । ಅನಂತರಂ ಸರ್ವೋ ಜನೋಽನುಕ್ರಮೇಣ ವಿಶ್ವರೂಪ್ಯಂ ಸಸ್ಯಾದಿಭಿರ್ನಾನಾರೂಪವತೀಂ ಭೂಮಿಮಪಶ್ಯತ್ । ಪಶ್ಯತಿ ॥

॥ ಪ್ರತಿಪದಾರ್ಥ ॥

**ಮಾತಾ**—ಸಕಲಕ್ಕೂ ನಿರ್ಮಾತ್ರಿಯಾದ ದ್ಯುಲೋಕವು । **ದಕ್ಷಿಣಾಯಾಃ**—(ಇಷ್ಟಾರ್ಥಗಳನ್ನು ನೆರವೇರಿಸಲು) ಸಮರ್ಥಳಾದ ಪೃಥಿವಿಯ । **ಧುರಿ**—ರಕ್ಷಣಾರೂಪವಾದ ಕರ್ತವ್ಯನಿರ್ವಹಣೆಯಲ್ಲಿ । **ಯುಕ್ತಾ ಆಸೀತ್**—ನಿಯುಕ್ತಳಾದಳು । **ಗರ್ಭಃ**—ಗರ್ಭಸ್ಥಾನದಲ್ಲಿರುವ ಉದಕಸಂಘವು । **ವೃಜನೀಷು**—ಉದಕಗಳಿಂದ ತುಂಬಿದ ಮೇಘಪಂಕ್ತಿಗಳಲ್ಲಿ । **ಅಂತಃ**—ಮಧ್ಯಭಾಗದಲ್ಲಿ । **ಅತಿಷ್ಠತ್**—ನೆಲೆಸಿದೆ । **ವತ್ಸಃ**—ಪುತ್ರಸ್ಥಾನದಲ್ಲಿರುವ ಉದಕಸಂಘವು । **ತ್ರಿಷು ಯೋಜನೇಷು**—ಮೇಘವೂ, ವಾಯುವೂ ಮತ್ತು ರಶ್ಮಿಯೂ ಸಂಯುಕ್ತವಾಗಿದ್ದಾಗ । **ಅಮೀಮೇತ್**— ಗುಡುಗು ಶಬ್ದವನ್ನುಂಟುಮಾಡುತ್ತದೆ ( ಅನಂತರ ) । **ವಿಶ್ವರೂಪ್ಯಂ**— ಅನೇಕವಿಧವಾದ ರೂಪವುಳ್ಳ । **ಗಾಂ**—ಪೃಥ್ವಿಗೆ । **ಅನು ಅಪಶ್ಯತ್**– ಕ್ರಮವಾಗಿ ಮಳೆಯನ್ನು ಸುರಿಸುತ್ತದೆ ।

### ಭಾವಾರ್ಥ

ಸಕಲಕ್ಕೂ ಮಾತೆಯಾದ ದ್ಯುಲೋಕವು ಇಷ್ಟಾರ್ಥಗಳನ್ನೂ ನೆರವೇರಿಸಲು ಸಮರ್ಥಳಾದ ಪೃಥಿವಿಯ ರಕ್ಷಣಾರೂಪವಾದ ಕರ್ತವ್ಯನಿರ್ವಹಣೆಯಲ್ಲಿ ನಿಯುಕ್ತಳಾಗಿದ್ದಾಳೆ. ಗರ್ಭಸ್ಥಾನದಲ್ಲಿರುವ ಉದಕಸಂಘವು ಉದಕಗಳಿಂದ ತುಂಬಿದ ಮೇಘಪಂಕ್ತಿಗಳ ಮಧ್ಯಭಾಗದಲ್ಲಿ ನೆಲೆಸಿದೆ. ಪುತ್ರಸ್ಥಾನದಲ್ಲಿರುವ ಉದಕಸಂಘವೂ ಮೇಘವೂ ವಾಯುವೂ, ಮತ್ತು ರಶ್ಮಿಯೂ ಸಂಯುಕ್ತವಾಗಿದ್ದಾಗ ಗುಡುಗು ಶಬ್ದವನ್ನುಂಟುಮಾಡುತ್ತದೆ. ಅನಂತರ ನಾನಾ ರೂಪವುಳ್ಳ ಪೃಥ್ವಿಗೆ ಮಳೆಯನ್ನು ಸುರಿಸುತ್ತದೆ.

### English Translation

The mother, (sky), was associated in (sustaining) the burthen of the fulfiller of desires, (the earth): the embryo (water) rested within the (womb of the) clouds: thereupon the calf bellowed, and beheld the omniform cow in the three combinations.

### ವಿಶೇಷವಿಷಯಗಳು

ಹಿಂದಿನ ಋಕ್ಕಿನಲ್ಲಿ ಪೃಥಿವಿಯನ್ನು ಮಾತೆಯೆಂದೂ ಅಂತರಿಕ್ಷಸ್ಥನಾದ ಆದಿತ್ಯನನ್ನು ಪಿತೃವೆಂದೂ ನಿರ್ದೇಶಿಸಿದೆ. ಇಲ್ಲಿ ಅಂತರಿಕ್ಷವನ್ನು ಮಾತೆಯೆಂದು ಕರೆದಿದೆ. ಭೂತಗಳ ನಿರ್ಮಾಣದ ಕಾರ್ಯದಲ್ಲಿ ಪೃಥಿವ್ಯಂತರಿಕ್ಷಗಳೆರಡಕ್ಕೂ ಸಹ ವಿಶೇಷರೀತಿಯ ಶಕ್ತಿಯಿದೆಯೆಂದು ಇದರಿಂದ ತಿಳಿಸಿದೆ. ನಿರ್ಮಾಣಕಾರ್ಯವೊಂದರಲ್ಲೇ ಅಲ್ಲದೆ ಧಾರಣ ಮತ್ತು ರಕ್ಷಣಾಕಾರ್ಯಗಳನ್ನೂ ಪೃಥಿವಿಯು ವಹಿಸುವುದು ಎಂದು ತಿಳಿಸಲು **ದಕ್ಷಿಣಾಯಾಃ** ಎಂದು ಪೃಥಿವೀಪರ್ಯಾಯವಾದ ಪದವನ್ನು ಪ್ರಯೋಗಿಸಿದೆ. ಈ ಪದಕ್ಕೆ ಸಾಯಣರು **ಅಭಿಮತಪೂರಣಸಮರ್ಥಾಯಾಃ ಪೃಥಿವ್ಯಾಃ**—ಇಷ್ಟಾರ್ಥಗಳನ್ನು ಪೂರೈಸುವ ಸಾಮರ್ಥ್ಯವುಳ್ಳ ಪೃಥಿವಿಯ ಎಂದರ್ಥಮಾಡಿದ್ದಾರೆ. ಪೃಥ್ವಿಯು ಸಕಲ ಸಂಪತ್ತುಗಳನ್ನೂ ಪಡೆದಿರುವುದರ ಜೊತೆಗೆ ಧಾರಣಶಕ್ತಿಯನ್ನೂ ಪಡೆದಿದೆ. ಅಭಿಮತಗಳನ್ನು ಒದಗಿಸಿಕೊಡಲು ಈ ಎರಡು ಶಕ್ತಿಗಳೂ ಅತ್ಯಾವಶ್ಯವಾಗಿರುತ್ತವೆ.

**ಖಂ ವಾಯುರ್ಜ್ಯೋತಿರಾಪಃ ಪೃಥಿವೀ ವಿಶ್ವಸ್ಯ ಧಾರಿಣೀ ।**

(ಮು. ಉ. ೨-೧-೩)

ಇತ್ಯಾದಿ ವಾಕ್ಯಗಳಲ್ಲಿ ಪೃಥಿವಿಯನ್ನು ವಿಶ್ವಧಾರಿಣಿಯೆಂದೇ ವರ್ಣಿಸಿದೆ. ಅಲ್ಲದೇ,

**ಏಷಾಂ ಭೂತಾನಾಂ ಪೃಥಿವೀ ರಸಃ ;** (ಛಾ. ಉ. ೧-೧-೨)

**ಪೃಥಿವೀ ವಾ ಅನ್ನಂ ।** (ತೈ. ಉ. ೩-೯-೧)

ಇತ್ಯಾದಿವಾಕ್ಯಗಳಲ್ಲಿ ಭೂತಗಳ ಸ್ಥಿತಿಗೂ, ಪೋಷಣೆಗೂ ಅತ್ಯವಶ್ಯವಾಗಿರುವ ಶಕ್ತಿಯೆಲ್ಲವೂ ಪೃಥಿವಿಯಿಂದಲೇ ಲಭಿಸತಕ್ಕದ್ದೆಂದೂ ಹೇಳಿರುವಂತೆ ಎಲ್ಲಾ ವಿಧವಾದ ಶಕ್ತಿಯನ್ನೂ ಪಡೆದಿರುವುದರಿಂದ ಪೃಥಿವಿಗೆ ಧಾರಿಣಿಯೆಂದು ವಿಶೇಷಣವಿದೆ. ನಿರುಕ್ತಕಾರರೂ ಸಹ **ದಕ್ಷಿಣಾ** ಎಂಬ ಶಬ್ದದ ನಿರ್ವಚನವನ್ನು ಹೇಳುವಾಗ **ಈ ಅರ್ಥವನ್ನೇ** ತೋರಿಸುತ್ತಾ,

**ದಕ್ಷಿಣಾ ದಕ್ಷತೇಃ ಸಮರ್ಧಯತಿ ಕರ್ಮಣೋ ವ್ಯೃದ್ಧಂ ಸಮರ್ಧಯತೀತಿ |**

(ನಿ. ೧-೭)

ಪೂರ್ಣವಾದ ಅಭಿವೃದ್ಧಿಯನ್ನುಂಟುಮಾಡುವುದು ಎಂಬರ್ಥವನ್ನು ಕೊಡುವ **ದಕ್ಷ್** ಧಾತುವಿನಿಂದ ನಿಷ್ಪನ್ನವಾಗಿದೆ. ನ್ಯೂನವಾದುದನ್ನು ಪೂರ್ಣವಾಗಿ ಮಾಡುತ್ತದೆ ಎಂಬರ್ಥವೂ ಸಾಧ್ಯವಾಗುತ್ತದೆಂದು ವಿವರಿಸಿದ್ದಾರೆ. ಪೃಥ್ವಿಗೆ ಈ ಎಲ್ಲಾ ಶಕ್ತಿಗಳೂ ಇರುವುದರಿಂದ ಈ ವಿಶೇಷಣವು ಅದರ ಶಕ್ತಿಯನ್ನು ತೋರಿಸುತ್ತದೆ.

**ವೃಜನೀಷು—ಉದಕವತ್ಸು ಮೇಘಪಂಕ್ತಿಷು |** ಪ್ರಭೂತವಾಗಿ ಉದಕವನ್ನು ಹೊಂದಿರತಕ್ಕ ಮೇಘ ಪಂಕ್ತಿಗಳಲ್ಲಿ ಎಂದು ಸಾಯಣರು ಅರ್ಥಮಾಡಿದ್ದಾರೆ. ಈಕಾರಾಂತವಾದ **ವೃಜನೀ** ಎಂಬ ಪದಕ್ಕೆ Monier Williams ಎಂಬ ಪಂಡಿತನು ತನ್ನ Sanskrit—English Dictionaryಯಲ್ಲಿ an enclosure ; fold (ಆವರಣ) ಎಂಬರ್ಥವನ್ನು ಮೊದಲು ಹೇಳಿ ಅನಂತರ ಸಾಯಣರ ಮತದಲ್ಲಿ **ಮೇಘವೆಂಬರ್ಥವೂ** ಆಗುತ್ತದೆಂದು ತೋರಿಸಿದ್ದಾನೆ. ಇದಲ್ಲದೇ ಅಥರ್ವವೇದದ ೭-೩೦-೭ನೇ ವಾಕ್ಯದಲ್ಲಿ ಈ ಪದವು **ಮೋಸ,** ಒಳಸಂಚು ಎಂಬರ್ಥವನ್ನು ಕೊಡುವುದೆಂದು ತಿಳಿಸಿದ್ದಾನೆ.

**ತ್ರಿಷು ಯೋಜನೇಷು—ಮೇಘರಶ್ಮಿವಾಯುಷು ಸಂಯುಕ್ತೇಷು ಸತ್ಸು |**

ಮೇಘವೂ ಸೂರ್ಯರಶ್ಮಿಯೂ ವಾಯುವೂ ಒಟ್ಟಿಗೆ ಯೋಜಿತವಾಗಲು ಗುಡುಗಿನ ಶಬ್ದವಾಯಿತೆಂದು ತಿಳಿಸಲು **ಅಮೀಮೇತ್ ವರ್ಷಣಸಮಯೇ ಶಬ್ದಯತಿ**—ವೃಷ್ಟಿಪತನದ ವೇಳೆಯಲ್ಲಿ ಶಬ್ದಮಾಡಿತು ಎಂದು ವರ್ಣಿಸಿದೆ.

ವಿಶ್ವರೂಪ್ಯಂ ಅಪಶ್ಯತ್—ಎನ್ನುವುದಕ್ಕೆ ಎರಡುವಿಧವಾದ ಅರ್ಥವನ್ನು ಮಾಡಿದೆ. ಮೊದಲನೆಯದಾಗಿ **ವಿಶ್ವರೂಪವತೀಂ ಗಾಂ ಅನುಕ್ರಮೇಣ ಪಶ್ಯತಿ |** ವತ್ಸರೂಪವಾದ ಉದಕವು ನಾನಾರೂಪವುಳ್ಳ ಪೃಥ್ವಿಯನ್ನು ಅನುಕ್ರಮವಾಗಿ ನೋಡುತ್ತದೆ ಎಂದರೆ ವೃಷ್ಟಿಯು ಅನುಕ್ರಮವಾಗಿ ಸುರಿದು ಪೃಥ್ವಿಯನ್ನು ಸೇರುತ್ತದೆಂದೂ, ಎರಡನೆಯದಾಗಿ **ತ್ರಿಷು ಯೋಜನೇಷು ಸತ್ಸು ವತ್ಸೋ ಮೇಘೋ ವರ್ಷಣಾಯ** ಗಾಂ **ಭೂಮಿಂ ಪ್ರತಿ ಅಮೀಮೇತ್ | ಜನಃ ಕ್ರಮೇಣ ವಿಶ್ವರೂಪ್ಯಂ ಸಸ್ಯಾದಿಭಿರ್ನಾನಾರೂಪವತೀಂ ಭೂಮಿಮಪಶ್ಯತ್ ಪಶ್ಯತಿ |** ಮೇಘವೂ, ವಾಯುವೂ ಸೂರ್ಯರಶ್ಮಿಯೂ ಒಟ್ಟಿಗೆ ಸಂಯೋಜಿತವಾದನಂತರ ವತ್ಸರೂಪವಾದ ಮೇಘವು ವೃಷ್ಟಿಪತನಕ್ಕೆ ಪೂರ್ವಭಾವಿಯಾದ ಗುಡುಗಿನ ಶಬ್ದವನ್ನು ಮಾಡಿತು. ಒಡನೆಯೇ ವೃಷ್ಟಿಪತನವಾಗಿ ಜನರೆಲ್ಲರೂ ನಾನಾಬಗೆಯ ಸಸ್ಯಾದಿಗಳಿಂದಲೂ ವಿಧವಿಧವಾದ ಆ ಸಸ್ಯಾದಿಗಳ ವರ್ಣಗಳಿಂದಲೂ ಕಂಗೊಳಿಸುವ ಭೂಮಿಯನ್ನೂ ನೋಡಿ ಹರ್ಷಪಡುತ್ತಾರೆಂದು ಇನ್ನೊಂದು ವಿಧವಾಗಿಯೂ ವರ್ಣಿಸಿದೆ.

ಒಟ್ಟಿನಲ್ಲಿ ದ್ಯಾವಾಪೃಥಿವಿಗಳು ಸಕಲ ಭೂತಗಳಿಗೂ ಮಾತಾಪಿತೃಗಳೆಂದು ಅವರ ಮೂಲರೂಪವಾದ ಸ್ವರೂಪವನ್ನು ಹಿಂದೆ ತಿಳಿಸಿ, ಉತ್ಪನ್ನವಾದ ಜಗತ್ತಿಗೆ ಅನ್ನರೂಪವಾದ ಸಂಪತ್ತನ್ನೊದಗಿಸಿ ಪೋಷಿಸುತ್ತಾರೆಂಬ ಅಂಶವನ್ನು ಈ ಋಕ್ಕಿನಲ್ಲಿ ವಿವರಿಸಿದೆ. ವಿಶ್ವದ ಉತ್ಪತ್ತಿಗೂ, ಧಾರಣೆಗೂ, ಪೋಷಣೆಗೂ ಸಕಲಕ್ಕೂ ಸಹ ದ್ಯಾವಾಪೃಥಿವಿಗಳ ಸಂಯೋಗವು ಒಂದಲ್ಲ ಒಂದು ವಿಧದಲ್ಲಿರುತ್ತದೆಂಬ ವಿಷಯವು ವಿಶದವಾಗಿ ಹೇಳಲ್ಪಟ್ಟಿದೆ.

ವ್ಯಾಕರಣಪ್ರಕಿಯಾ

**ಯುಕ್ತಾ**—ಯುಜಿರ್ ಯೋಗೇ. ಧಾತು. ಕ್ತಪ್ರತ್ಯಯ. **ಚೋಃಕುಃ** ಎಂಬುದರಿಂದ ಧಾತು ಜಕಾರಕ್ಕೆ ಕುತ್ವ. ಪ್ರತ್ಯಯಸ್ವರದಿಂದ ಅಂತೋದಾತ್ತವಾಗುತ್ತದೆ. ಸ್ತ್ರೀತ್ವದಲ್ಲಿ ಅದಂತವಾದುದರಿಂದ ಟಾಪ್.

**ದಕ್ಷಿಣಾಯೋಃ**—ದಕ್ಷ ವೃದ್ಧೌ. ಧಾತು. **ದ್ರುದಕ್ಷಿಭ್ಯಾಮಿನನ್** (ಉ. ಸೂ. ೨-೨೦೮) ಎಂಬುದರಿಂದ ಇನನ್‌ಪ್ರತ್ಯಯ. **ಅಟ್‌ಕುಪ್ವಾಙ್**—ಸೂತ್ರದಿಂದ ಪ್ರತ್ಯಯ ನಕಾರಕ್ಕೆ ಣತ್ವ. **ಞ್ನಿತ್ಯಾದಿರ್ನಿತ್ಯಮ್** (ಪಾ.ಸೂ. ೬-೧-೧೯೭) ಎಂಬುದರಿಂದ ಆದ್ಯುದಾತ್ತಸ್ವರ ಬರುತ್ತದೆ.

**ಅತಿಷ್ಠತ್**—ಷ್ಠಾ ಗತಿನಿವೃತ್ತೌ. ಧಾತು. ಛಾಂದಸವಾಗಿ ವರ್ತಮಾನಾರ್ಥದಲ್ಲಿ ಲಙ್ ಪ್ರಥಮ ಪುರುಷಏಕವಚನಾಂತರೂಪ. ಪಾದಾದಿಯಲ್ಲಿರುವುದರಿಂದ ನಿಘಾತಸ್ವರ ಬರುವುದಿಲ್ಲ. ಅಡಾಗಮ ಉದಾತ್ತ ವಾದುದರಿಂದ ಆದ್ಯುದಾತ್ತವಾಗುತ್ತದೆ.

**ವೃಜನೀಷು**—ವೃಜೀ ವರ್ಜನೇ ಧಾತು. **ಕ್ಯಪ್ಯ್ವಾವೃಜಿ** (ಉ. ಸೂ. ೨-೨೫೯) ಎಂಬುದರಿಂದ **ಕ್ಯು** ಪ್ರತ್ಯಯ. **ಯುವೋರನಾಕೌ** ಎಂಬುದರಿಂದ ಅದಕ್ಕೆ ಅನಾದೇಶ. **ಕಿತ್ತಾದುದರಿಂದ** **ಲಘೂಪಧಗುಣ** ಬರುವುದಿಲ್ಲ. ಸ್ತ್ರೀತ್ವದಲ್ಲಿ ಙೀಪ್. ಸಪ್ತಮ್ಯಂತರೂಪ.

**ಅಮೀಮೇತ್**—ಮೀ ಗತೌ. ಧಾತು. ಚುರಾದಿ. ಣಿಚ್ ವಿಕಲ್ಪವಾಗಿ ಬರುತ್ತದೆ. ಛಾಂದಸವಾಗಿ ಲಙ್. **ಬಹುಲಂ ಛಂದಸಿ** ಎಂಬುದರಿಂದ ಶಪಿಗೆ ಶ್ಲುಆದೇಶ. ಶ್ಲುನಿಮಿತ್ತವಾಗಿ ಧಾತುವಿಗೆ ದ್ವಿತ್ವಾದಿ. ಅಂಗಕ್ಕೆ ಅಡಾಗಮ. ಪಾದಾದಿಯಲ್ಲಿರುವುದರಿಂದ ನಿಘಾತಸ್ವರ ಬರುವುದಿಲ್ಲ. ಆದ್ಯುದಾತ್ತವಾಗುತ್ತದೆ.

**ವಿಶ್ವರೂಪಮ್**—ದ್ವಿತೀಯಾಏಕವಚನ ಪರವಾದಾಗ ಛಾಂದಸವಾಗಿ ಯಣಾದೇಶ. **ಉದಾತ್ತಸ್ವರಿತಯೋರ್ಯಣಃ**—(ಪಾ. ಸೂ. ೮-೨-೪) ಎಂಬುದರಿಂದ ಅನುದಾತ್ತವಾದ ವಿಭಕ್ತಿಗೆ ಸ್ವರಿತಸ್ವರ ಬರುತ್ತದೆ. ॥ ೯ ॥

:O:

**ಸಂಹಿತಾಪಾಠಃ**

ತಿಸ್ರೋ ಮಾತೄಸ್ತ್ರೀನ್ಪಿತೄನ್ಬಿಭ್ರದೇಕ ಊರ್ಧ್ವಸ್ತಸ್ಥೌ ನೇಮವ ಗ್ಲಾಪಯಂತಿ ।
ಮಂತ್ರಯಂತೇ ದಿವೋ ಅಮುಷ್ಯ ಪೃಷ್ಠೇ ವಿಶ್ವವಿದಂ ವಾಚಮವಿಶ್ವಮಿನ್ವಾಂ ॥ ೧೦ ॥

ಪದಪಾಠ

ತಿಸ್ರಃ । ಮಾತೄಃ । ತ್ರೀನ್ । ಪಿತೄನ್ । ಬಿಭ್ರತ್ । ಏಕಃ । ಊರ್ಧ್ವಃ । ತಸ್ಥೌ । ನ । ಈಂ । ಅವ । ಗ್ಲಪಯಂತಿ ।
ಮಂತ್ರಯಂತೇ । ದಿವಃ । ಅಮುಷ್ಯ । ಪೃಷ್ಠೇ । ವಿಶ್ವಽವಿದಂ । ವಾಚಂ । ಅವಿಶ್ವಽಮಿನ್ವಾಂ ॥ ೧೦ ॥

ಸಾಯಣಭಾಷ್ಯಂ

ಏಕಃ ಪ್ರಧಾನಭೂತೋಽಸಹಾಯೋ ವಾ ಪುತ್ರಸ್ಥಾನೀಯ ಆದಿತ್ಯಃ ಸಂವತ್ಸರಾಖ್ಯಃ ಕಾಲೋ ವಾ ತಿಸ್ರೋ ಮಾತೄಃ ಸಸ್ಯವೃಷ್ಟ್ಯಾದ್ಯುತ್ಪಾದಯಿತ್ರೀಃ । ಕ್ಷಿತ್ಯಾದಿಲೋಕತ್ರಯಮಿತ್ಯರ್ಥಃ । ತಥಾ ತ್ರೀನ್ಪಿತೄಞ್ಜಗತಾಂ ಪಾಲಯಿತೄಁಲ್ಲೋಕತ್ರಯಾಭಿಮಾನಿನೋಽಗ್ನಿವಾಯುಸೂರ್ಯಾಖ್ಯಾನ್ಬಿಭ್ರತ್ ಸನ್ನೂರ್ಧ್ವಸ್ತಸ್ಥೌ । ಉನ್ನತೋಽತ್ಯಂತದೀರ್ಘಸ್ತಿಷ್ಠತಿ ಭೂತಭವಿಷ್ಯದಾದ್ಯಾತ್ಮನಾ । ಸೂರ್ಯಪಕ್ಷೇ ಸರ್ವೇಭ್ಯಃ ಉನ್ನತಃ । ಈಮೇನಂ ನಾವ ಗ್ಲಪಯಂತಿ । ಗ್ಲಾನಿಂ ನೈವ ಕುರ್ವಂತಿ । ನ ಹಿ ಕಾಲ ಆದಿತ್ಯೋ ನಾನ್ಯೇನ ಪರಾಭೂಯತೇ । ದಿವಃ ಪೃಷ್ಠೇ ದ್ಯುಲೋಕಸ್ಯೋಪರ್ಯಂತರಿಕ್ಷೇ ಮಂತ್ರಯಂತೇ । ಗುಪ್ತಂ ಪರಸ್ಪರಂ ಭಾಷಂತೇ ದೇವಾಃ । ಕಿಂ । ವಿಶ್ವವಿದಂ ವಿಶ್ವವೇದನಸಮರ್ಥಾಂ ವಿಶ್ವೈರ್ವೇದನೀಯಾಂ ವಾವಿಶ್ವಮಿನ್ವಾಮಸರ್ವವ್ಯಾಪಿನೀಂ ವಾಚಂ ಗರ್ಜಿತಲಕ್ಷಣಾಂ । ಅಮುಷ್ಯಾದಿತ್ಯಸ್ಯ ಸಂಬಂಧಿನೀಂ ಮಂತ್ರಯಂತ ಇತ್ಯರ್ಥಃ ॥

ಪ್ರತಿಪದಾರ್ಥ.

**ಏಕಃ**—(ಸಕಲಕ್ಕೂ) ಪ್ರಧಾನಭೂತನಾದ ಆದಿತ್ಯನು ಅಥವಾ (ಸಂವಂತ್ಸರಾಖ್ಯವಾದ ಕಾಲವೂ) । **ತಿಸ್ರಃ ಮಾತೄಃ**—ಸಸ್ಯವೃಷ್ಟ್ಯಾದಿಗಳಿಗೆಲ್ಲಾ ಉತ್ಪಾದಕವಾಗಿರತಕ್ಕ ಕ್ಷಿತ್ಯಾದಿಲೋಕತ್ರಯವನ್ನೂ । **ತ್ರೀನ್ ಪಿತೄನ್**—ಜಗತ್ಪಾಲಕರೂ ಮತ್ತು ಲೋಕತ್ರಯಾಭಿಮಾನಿದೇವತೆಗಳೂ ಆದ ಅಗ್ನಿ, ವಾಯು ಮತ್ತು ಸೂರ್ಯರನ್ನೂ ಸಹ । **ಬಿಭ್ರತ್**—ಧರಿಸಿ । **ಊರ್ಧ್ವಃ**—(ಎಲ್ಲಕ್ಕಿಂತಲೂ) ಉನ್ನತವಾಗಿ ಅಥವಾ ದೀರ್ಘವಾಗಿ । **ತಸ್ಥೌ**—ಇದ್ದಾನೆ. (ಅಥವಾ ಇರುತ್ತದೆ) । **ಈಂ**—ಈ ಆದಿತ್ಯನನ್ನು (ಅಥವಾ ಕಾಲವನ್ನು) । **ನ ಅವ ಗ್ಲಪಯಂತಿ**—ಯಾರೂ ಕ್ಷಯಿಸುವಂತೆ ಮಾಡಲಾರರು । **ದಿವಃ ಪೃಷ್ಠೇ**—ದ್ಯುಲೋಕದ ಮೇಲ್ಭಾಗದಲ್ಲಿ । **ಅಮುಷ್ಯ**—ಈ ಆದಿತ್ಯನನ್ನುದ್ದೇಶಿಸಿದ (ಅಥವಾ ಕಾಲವನ್ನುದ್ದೇಶಿಸಿದ) । **ವಿಶ್ವಮಿದಂ**—ಎಲ್ಲರಿಗೂ ತಿಳಿಯುವಂತಹುದೂ । **ಅವಿಶ್ವಮಿನ್ವಾಂ**—(ಆದರೆ) ಎಲ್ಲರಿಗೂ ಅನ್ವಯಿಸದೇ ಇರತಕ್ಕದ್ದೂ ಆದ । **ವಾಚಂ**—ಸ್ತುತಿರೂಪವಾದ ಘೋಷಣೆಯನ್ನು । (**ದೇವಾಃ**—ದೇವತೆಗಳು) । **ಮಂತ್ರಯಂತೇ**—ಪಠಿಸುತ್ತಾರೆ ।

ಭಾವಾರ್ಥ

ಸಕಲಕ್ಕೂ ಪ್ರಧಾನಭೂತನಾದ ಆದಿತ್ಯನು ಸಸ್ಯವೃಷ್ಟ್ಯಾದಿಗಳಿಗೆಲ್ಲಾ ಉತ್ಪಾದಕರಾಗಿರತಕ್ಕ ಕ್ಷಿತ್ಯಾದಿ ಲೋಕತ್ರಯವನ್ನೂ, ಜಗತ್ಪಾಲಕರೂ ಮತ್ತು ಲೋಕತ್ರಯಾಭಿಮಾನ ದೇವತೆಗಳೂ ಆದ ಅಗ್ನಿ, ವಾಯು ಮತ್ತು ಸೂರ್ಯರನ್ನೂ ಸಹ ಧರಿಸಿ ಎಲ್ಲಕ್ಕಿಂತಲೂ ಉನ್ನತವಾದ ಪ್ರದೇಶದಲ್ಲಿದ್ದಾನೆ. ಈ ಆದಿತ್ಯನನ್ನು ಯಾರೂ ಕ್ಷಯಿಸುವಂತೆ ಮಾಡಲಾರರು

ದ್ಯುಲೋಕದ ಮೇಲ್ಭಾಗದಲ್ಲಿ ಈ ಆದಿತ್ಯನನ್ನುದ್ದೇಶಿಸಿದುದೂ, ಎಲ್ಲರಿಗೂ ತಿಳಿಯುವಂತಹದೂ ಆದರೆ ಎಲ್ಲರಿಗೂ ಅನ್ವಯಿಸದುದೇ ಇರತಕ್ಕದ್ದೂ ಆದ ಸ್ತುತಿರೂಪವಾದ ಘೋಷಣೆಯನ್ನು ದೇವತೆಗಳು ಪಠಿಸುತ್ತಾರೆ. [ಹಿಗೆಯೇ ಕಾಲಪರವಾದ ತಾತ್ಪರ್ಯವನ್ನೂ ಹೇಳಬೇಕು].

## English Translation

The one sole (sun), having three mothers and three fathers, stood on high : none ever over-weary him : The (gods) on the summit of the sky take counsel respecting him in language all-comprehending, (but) not extending to all

### ವಿಶೇಷವಿಷಯಗಳು

ಈ ಋಕ್ಕಿಗೆ ಆದಿತ್ಯಪರವಾಗಿಯಾಗಲಿ ಅಥವಾ ಸಂವತ್ಸರರೂಪವಾದ ಕಾಲಪರವಾಗಿಯಾಗಲಿ ಅರ್ಥಮಾಡಬಹುದು ಅಥವಾ ಇಂತಹ ಸಂದರ್ಭಗಳಲ್ಲಿ ಆದಿತ್ಯನಿಗೂ ವತ್ಸರರೂಪವಾದ ಕಾಲಕ್ಕೂ ಸಹ ತಾದಾತ್ಮ್ಯವನ್ನು ತೋರಿಸಿ ಅವೆರಡರ ಸ್ಥಾನವೂ, ಸ್ವರೂಪವೂ ಮತ್ತು ಶಕ್ತಿಯೂ ಒಂದೇ ಎಂದೂ ಸಹ ತೋರಿಸಬಹುದು. ಅನೇಕ ಸಂದರ್ಭಗಳಲ್ಲಿ ಆದಿತ್ಯನಿಗೂ ಸಂವತ್ಸರರೂಪವಾದ ಕಾಲಕ್ಕೂ ಐಕ್ಯವನ್ನು ತೋರಿಸಿದೆ. ಕೆಲವೆಡೆಗಳಲ್ಲಿ ಆದಿತ್ಯನೇ ಕಾಲಕ್ಕೆ ಕಾರಣನೆಂದೂ ಇನ್ನು ಕೆಲವೆಡೆಗಳಲ್ಲಿ ಕಾಲಿಕವಾದ ನಿಯಮದಿಂದಲೇ ಆದಿತ್ಯಸಂಚಾರವಿರುವುದರಿಂದ ಕಾಲವೇ ಆದಿತ್ಯನಿಗೆ ಕಾರಣವೆಂದೂ ಸಹ ಹೇಳಿದೆ. ಮೈತ್ರಾಯಣಬ್ರಾಹ್ಮಣೋಪನಿಷತ್ತಿನಲ್ಲಿ ಆದಿತ್ಯನಿಗೂ ವತ್ಸರಾಖ್ಯವಾದ ಕಾಲಕ್ಕೂ ಇರತಕ್ಕ ಸಂಬಂಧವನ್ನು ಈ ರೀತಿಯಲ್ಲಿ ತಿಳಿಸಿದೆ.

> **ಅನ್ನಂ ಸರ್ವಸ್ಯ ಯೋನಿಃ ಕಾಲಶ್ಚಾನ್ನಸ್ಯ ಸೂರ್ಯೋ ಯೋನಿಃ ಕಾಲಸ್ಯ .... .... .... .... ಕಾಲಾತ್ಸ್ರವಂತಿ ಭೂತಾನಿ ಕಾಲಾದ್ವೃದ್ಧಿಂ ಪ್ರಯಾಂತಿ ಚ । ದ್ವೇವಾವ ಬ್ರಹ್ಮಣೋ ರೂಪೇ ಕಾಲಶ್ಚಾಕಾಲಶ್ಚ । ಯ ಆದಿತ್ಯಾದ್ಯಃ ಸ ಕಾಲಃ .... .... .... .... ತಸ್ಮಾತ್ಸಂವತ್ಸರೋ ವೈ ಕಾಲಃ । ಪಚತಿ ಭೂತಾನಿ .... .... .... ಮಹಾತ್ಮನಿ ॥**
>
> (ಮೈತ್ರಾಯಣಿ. ಉ. ೬-೧೪ ರಿಂದ ೧೬)

ಸಕಲಭೂತಗಳ ಸ್ಥಿತಿಗತಿಗಳಿಗೂ ಅನ್ನವೇ ಕಾರಣವು. ಅನ್ನಕ್ಕೆ ಕಾಲವೂ, ಕಾಲಕ್ಕೆ ಸೂರ್ಯನೂ ಕಾರಣವು. ಗೋಚರಕ್ಕೆ ವಿಷಯವಾಗಿರತಕ್ಕ ವತ್ಸರವು ಕಾಲದ ರೂಪವಾಗಿದೆ. ಕಾಲದ ಅವಯವಗಳ ಮೂಲಕ ಸೂರ್ಯನ ಸಂಚಾರವಿರುತ್ತದೆ

ಈ ಕಾಲದಿಂದಲೇ ಸಕಲಭೂತಗಳೂ ಪ್ರಾದುರ್ಭವಿಸಿ ಅದರಿಂದಲೇ ಎಲ್ಲವೂ ವೃದ್ಧಿಯಾಗುತ್ತವೆ. ಕಣ್ಣಿಗೆ ಕಾಣತಕ್ಕ ಆದಿತ್ಯನೂ, ಕಾಣದಿರುವ ಮುಹೂರ್ತಾದಿಗಳೂ, ಕಾಲದ ಸ್ವರೂಪಗಳಾಗಿವೆ. ಬ್ರಹ್ಮನಿಗೆ ಕಾಲ ಮತ್ತು ಅಕಾಲಗಳೆಂಬ ಎರಡು ಅವಯವಗಳು, ಆದಿತ್ಯನಿಗಿಂತಲೂ ಪೂರ್ವಭಾವಿಯಾದ ಕಾಲವು ಅಪರಿಚ್ಛಿನ್ನವಾದುದು ಮತ್ತು ನಿರವಯವಗಳುಳ್ಳದ್ದು. ವತ್ಸರವೇ ಈ ಅವಯವದ ರೂಪವು. ಸಂವತ್ಸರದಿಂದಲೇ ಸಕಲಭೂತಗಳೂ ಉತ್ಪನ್ನವಾಗುತ್ತವೆ, ವೃದ್ಧಿಯಾಗುತ್ತವೆ, ಮತ್ತು ಲಯವಾಗುತ್ತವೆ. ಆದುದರಿಂದ ಸಂವತ್ಸರವೇ ಪ್ರಜಾಪತಿಯು, ಸಂವತ್ಸರವೇ ಅನ್ನವು, ಬ್ರಹ್ಮವು ಮತ್ತು ಪರಮಾತ್ಮನು.

ಇಂತಹ ಕಾಲಾತ್ಮನಾದ ಆದಿತ್ಯನು ಸಕಲಲೋಕಗಳಿಗೂ ಪ್ರಭುವಾಗಿ ವಿರಾಜಿಸುತ್ತಿದ್ದಾನೆ ಎಂಬುದನ್ನು ತಿಳಿಸಲು **ಏಕಃ ತಸ್ಥೌ** ಎಂದು ವರ್ಣಿಸಿದೆ. ಇದನ್ನೇ ಛಾಂದೋಗ್ಯಾದಿಗಳಲ್ಲಿ ವರ್ಣಿಸುತ್ತಾ,

ಆದಿತ್ಯೋ ಬ್ರಹ್ಮೇತ್ಯಾದೇಶಃ (ಛಾ. ಉ. ೩-೧೯-೧) **ಅಸಾವಾದಿತ್ಯೋ ಬ್ರಹ್ಮೇತಿ** ( ತೈ. ಆ. ೨-೧ ) ಆದಿತ್ಯನೇ ಪರಬ್ರಹ್ಮನೆಂದು ತಿಳಿಸಿದೆ. ಈ ಆದಿತ್ಯನಿಗೂ ಸಂವತ್ಸರಕ್ಕೂ ಐಕ್ಯವನ್ನು ತೋರಿಸಿ ಪೃಥಿವ್ಯಾದಿ ಲೋಕತ್ರಯವನ್ನೂ ವ್ಯಾಪಿಸಿರುವ ಆದಿತ್ಯನ ಪ್ರಭಾವವನ್ನು ವರ್ಣಿಸುತ್ತಾ ಐತರೇಯಾರಣ್ಯಕದಲ್ಲಿ ಈರೀತಿ ತಿಳಿಸಿದೆ. ಅದರ ವರ್ಣನೆಯ ಪ್ರಕಾರ ಆದಿತ್ಯನು ಏಕಕಾಲದಲ್ಲಿ ಜಗದ್ವ್ಯಾಪಿಯೂ ಅತ್ಯುತ್ತಮವಾದ ದ್ಯುಲೋಕವನ್ನು ಆಕ್ರಮಿಸಿರುವವನೂ ಆಗಿದ್ದಾನೆ.

> **ಮಹಾಪುರುಷ ಇತಿ ಯಮವೋಚಾಮ ಸಂವತ್ಸರ ಏವ ಪ್ರಧ್ವಂಸಯನ್ನನ್ಯಾನಿ ಭೂತಾನ್ಯೇಕ್ಯಾಭಾವಯನ್ನನ್ಯಾನಿ ತಸ್ಯೈತಸ್ಯಾಸಾವಾದಿತ್ಯೋ ರಸಃ ॥**
>
> **ಸ ಯಶ್ಚಾಯಮಶರೀರಃ ಪ್ರಜ್ಞಾತ್ಮಾ ಯಶ್ಚಾಸಾವಾದಿತ್ಯ ಏಕಮೇತದಿತಿ ವಿದ್ಯಾತ್ । ತಸ್ಮಾತ್ಪುರುಷಂ ಪುರುಷಂ ಪ್ರತ್ಯಾದಿತ್ಯೋ ಭವತಿ । ತದಪ್ಯೇತದೃಷಿಣೋಕ್ತಂ । ಚಿತ್ರಂ ದೇವಾನಾಮುದಗಾದನೀಕಂ ಚಕ್ಷುರ್ಮಿತ್ರಸ್ಯ ವರುಣಸ್ಯಾಗ್ನೇಃ । ಆ ಪ್ರಾ ದ್ಯಾವಾಪೃಥಿವೀ ಅಂತರಿಕ್ಷಂ ಸೂರ್ಯ ಆತ್ಮಾ ಜಗತಸ್ತಸ್ಥುಷಶ್ಚೇತಿ ॥**
>
> (ಐ ಆರಣ್ಯಕಂ. ೩-೨-೩)

ಮಹಾಪುರುಷನೆಂದು ಯಾವ ತತ್ತ್ವವನ್ನು ನಿರ್ದೇಶಿಸಿದೆವೋ ಆ ಮಹಾಪುರುಷನೇ ಸಂವತ್ಸರವು. ಆ ಸಂವತ್ಸರದ ರಸವೇ ಆದಿತ್ಯನು. ಅಶರೀರಿಯಾದ ಪ್ರಜ್ಞಾತ್ಮನೂ ಆದಿತ್ಯನೂ ಒಂದೇ ತತ್ತ್ವವು ಎಂದು ತಿಳಿಯಬೇಕು. ಇದನ್ನೇ ಕುತ್ಸಋಷಿಯು ಋಕ್ಸಂಹಿತೆಯಲ್ಲಿ (ಋ. ಸಂ. ೧-೧೧೫-೧) " ಮಿತ್ರ, ವರುಣ ಮತ್ತು ಅಗ್ನಿಗಳ ಚಕ್ಷುಸ್ಸೂ, ದೇವತೆಗಳ ಮುಖರೂಪವೂ ಆದ ತೇಜಸ್ಸು ಉದಯಿಸಿ ಪೃಥಿವ್ಯಂತರಿಕ್ಷಗಳನ್ನೂ ದ್ಯುಲೋಕವನ್ನೂ ವ್ಯಾಪಿಸಿದೆ. ಸ್ಥಾವರ ಜಂಗಮಾತ್ಮಕವಾದ ಸಕಲಲೋಕಗಳಿಗೂ ಇದೇ ಆತ್ಮವು " ಎಂದು ವರ್ಣಿಸಿದ್ದಾನೆ. ಇದೇ ಆದಿತ್ಯನು **ತಿಸ್ರೋ ಮಾತೃಃ ಬಿಭ್ರತ್** ಎಂಬ ಅಂಶವನ್ನು ಋಕ್ಸಂಹಿತೆಯಲ್ಲಿ ಈರೀತಿಯಲ್ಲಿ ವರ್ಣಿಸಿದೆ.

> **ದಿವೋ ಧರ್ತಾ ಭುವನಸ್ಯ ಪ್ರಜಾಪತಿಃ ಪಿಶಂಗಂ ದ್ರಾಪಿಂ ಪ್ರತಿ ಮುಂಚತೇ ಕವಿಃ ।**
> **ವಿಚಕ್ಷಣಃ ಪ್ರಥಯನ್ನಾಪೃಣನ್ನುರ್ವಜೀಜನತ್ಸವಿತಾ ಸುಮ್ನಮುಕ್ಥ್ಯಮ್ ॥**
>
> (ಋ. ಸಂ. ೪-೫೩-೨)
>
> **ನ ಪ್ರಮಿಯೇ ಸವಿತುರ್ದೈವ್ಯಸ್ಯ ತದ್ಯಥಾ ವಿಶ್ವಂ ಭುವನಂ ಧಾರಯಿಷ್ಯತಿ ।**
> **ಯತ್ಪೃಥಿವ್ಯಾ ವರಿಮನ್ನಾ ಸ್ವಂಗುರಿರ್ವರ್ಷ್ಮನ್ದಿವಃ ಸುವತಿ ಸತ್ಯಮಸ್ಯ ತತ್ ॥**
>
> (ಋ. ಸಂ. ೪-೫೪-೪)

ಸವಿತೃರೂಪನಾದ ಆದಿತ್ಯನು ದ್ಯುಲೋಕಕ್ಕೂ ಭೂಲೋಕಕ್ಕೂ ಧಾರಕನಾಗಿದ್ದಾನೆ. ಪೃಥಿವ್ಯಂತರಿಕ್ಷಗಳಿಗೆಲ್ಲಾ ವೃಷ್ಟಿಯನ್ನು ಸುರಿಸಿ ಎಲ್ಲಾ ವಿಧವಾದ ಸುಖಗಳನ್ನೂ ಕೊಡುತ್ತಾನೆ. " ವಿಶ್ವಭುವನಕ್ಕೂ" ಧಾರಕನಾದ ಈ ಆದಿತ್ಯನ ಕರ್ಮವನ್ನು ಯಾರೂ ಹಿಂಸಿಸಲಾರರು, ಇತ್ಯಾದಿಯಾಗಿ ಅವನ ಮಹತ್ತ್ವವನ್ನು ಸ್ತುತಿಸಿದೆ. ಇದರಂತೆಯೇ **ತ್ರೀನ್ ಪಿತೄನ್** ( ಅಪಿ) **ಬಿಭ್ರತ್ ।** ಎಂದಿರುವಲ್ಲಿ ಪಿತೄನ್ ಎಂಬ ಪದಕ್ಕೆ **ಜಗತಾಂ ಪಾಲಯಿತೄನ್ ಲೋಕತ್ರಯಾ**

**ಭಿಮಾನಿನಃ ಅಗ್ನಿವಾಯುಸೂರ್ಯಾಖ್ಯಾನ್**—ಪೃಥಿವಿಯ ಅಭಿಮಾನದೇವತೆಯಾದ ಅಗ್ನಿಯನ್ನೂ, ಅಂತರಿಕ್ಷಕ್ಕೆ ಅಭಿಮಾನದೇವತೆಯಾದ ವಾಯುವನ್ನೂ ಮತ್ತು ದ್ಯುಲೋಕಾಧಿದೇವತೆಯಾದ ಸೂರ್ಯನ್ನೂ (ಧರಿಸಿದ್ದಾನೆ) ಎಂದರ್ಥ.

**ತಿಸ್ರ ಏವ ದೇವತಾ ಇತಿ ನೈರುಕ್ತಾಃ । ಅಗ್ನಿಃ ಪೃಥಿವೀಸ್ಥಾನೋ ವಾಯುರ್ವೇಂದ್ರೋ ವಾಂತ-ರಿಕ್ಷಸ್ಥಾನಃ ಸೂರ್ಯೋ ದ್ಯುಸ್ಥಾನಃ ॥**

(ನಿ. ೭-೫)

**ಬ್ರಹ್ಮ ವಾ ಇದಮಗ್ರ ಆಸೀತ್ । ತದ್ದೇವಾನಸೃಜತ । ತದ್ದೇವಾನ್ ಸೃಷ್ಟ್ವೈಷು ಲೋಕೇಷು ವ್ಯಾರೋಹಯದಸ್ಮಿನ್ನೇವ ಲೋಕೇಽಗ್ನಿಂ ವಾಯುಮಂತರಿಕ್ಷೇ ದಿವ್ಯೇವ ಸೂರ್ಯಂ ॥**

(ಶ. ಬ್ರಾ. ೧೧-೨-೩-೧)

ಪೂರ್ವದಲ್ಲಿ ಬ್ರಹ್ಮನು ಏಕಮಾತ್ರನಾಗಿದ್ದು ಅನಂತರ ದೇವತೆಗಳನ್ನು ಸೃಷ್ಟಿಸಿ ಅಗ್ನಿಯನ್ನು ಪೃಥ್ವಿಯಲ್ಲೂ, ವಾಯುವನ್ನು ಅಂತರಿಕ್ಷದಲ್ಲೂ, ಸೂರ್ಯನನ್ನು ದ್ಯುಲೋಕದಲ್ಲೂ ಸ್ಥಾಪಿಸಿದನು ಎಂದು ಶತಪಥಬ್ರಾಹ್ಮಣದಲ್ಲಿ ಉಕ್ತವಾಗಿರುವಂತೆಯೂ ನಿರುಕ್ತದ ಉಕ್ತಿಯಂತೆಯೂ **ತ್ರೀನ್ ಪಿತ್ರ್ಯಾನ್** ಎಂಬುದಕ್ಕೆ ಅರ್ಥಮಾಡಬೇಕು.

ತ್ರಿಲೋಕಕ್ಕೂ ಪಾಲಕರಾದ ಅಗ್ನಿ, ವಾಯು ಮತ್ತು ಸೂರ್ಯ ಇವರುಗಳನ್ನೆಲ್ಲಾ ಧರಿಸಿ ತಾನು ಏಕಮಾತ್ರ ಪ್ರಭುವಾಗಿ ಪ್ರಕಾಶಿಸುತ್ತಿದ್ದಾನೆಂದರ್ಥ.

**ನೇಮವ ಗ್ಲಾಪಯಂತಿ—ನ ಹಿ ಕಾಲಃ ಆದಿತ್ಯೋ ವಾ ಅನ್ಯೇನ ಪರಾಭೂಯತೇ**—ಕಾಲವಾಗಲಿ ಆದಿತ್ಯನಾಗಲಿ ಇತರರ ಅಧಿಕಾರಕ್ಕೆ ಒಳಪಡುವುದಿಲ್ಲ. ಈ ಅಂಶವನ್ನು,

**ನ ಯಸ್ಯೇಂದ್ರೋ ವರುಣೋ ನ ಮಿತ್ರೋ ವ್ರತಮರ್ಯಮಾ ನ ಮಿನಂತಿ ರುದ್ರಃ ।**
**ನಾರಾತಯಸ್ತಮಿದಂ ಸ್ವಸ್ತಿ ಹುವೇ ದೇವಂ ಸವಿತಾರಂ ನಮೋಭಿಃ ॥**

(ಋ. ಸಂ. ೨-೩೮-೯)

ಸವಿತೃರೂಪದ ಈ ಆದಿತ್ಯನ ವಿಶ್ವನಿಯಮನರೂಪವಾದ ಕರ್ಮವನ್ನು ಇಂದ್ರನಾಗಲಿ, ವರುಣನಾಗಲಿ, ಮಿತ್ರನಾಗಲಿ, ಅರ್ಯಮನಾಗಲಿ ಪ್ರತಿಭಟಿಸಲಾರರು. ಮತ್ತು

**ಅಸ್ಯ ಹಿ ಸ್ವಯಶಸ್ತರಂ ಸವಿತುಃ ಕಚ್ಚನ ಪ್ರಿಯಂ । ನ ಮಿನಂತಿ ಸ್ವರಾಜ್ಯಂ ॥**

(ಋ. ಸಂ. ೫-೮೨-೨)

ಈ ಆದಿತ್ಯನ ಯಶಸ್ಸು ಅತ್ಯಸಾಧಾರಣವಾಗಿದೆ. ಸಕಲರಿಗೂ ಪ್ರಿಯವಾಗಿರತಕ್ಕ ಈ ಆದಿತ್ಯನ ಸಾರ್ವಭೌಮತ್ವವನ್ನು ಅಸುರರಾಗಲಿ ದೇವತೆಗಳಾಗಲಿ ಹಿಂಸಿಸಲಾರರು ಇತ್ಯಾದಿಯಾಗಿ ಅನೇಕ ಕಡೆಗಳಲ್ಲಿ ವರ್ಣಿತವಾಗಿರುವ ಈ ವಿಶ್ವನಿಯಂತೃವಾದ ಆದಿತ್ಯನ ಮಹತ್ತ್ವವನ್ನು ಸ್ತುತಿಸಿದೆ. ಅಥವಾ ಇದನ್ನೇ ಕಾಲಕ್ಕೂ ಅನ್ವಯಿಸಿ ಅದರ ಪರವಾಗಿಯೂ ಅರ್ಥಮಾಡಬಹುದು.

**ಅಮುಷ್ಯ ಮಂತ್ರಯಂತೇ**—ಆದಿತ್ಯಸಂಬಂಧಿನೀಂ ಗರ್ಜಿತಲಕ್ಷಣಾಂ ವಾಚಂ ಮಂತ್ರಯಂತೇ ಇತ್ಯರ್ಥಃ । ಆದಿತ್ಯನನ್ನು ಪ್ರಶಂಸಿಸತಕ್ಕದ್ದೂ ಘೋಷರೂಪವಾದದ್ದೂ ಆದ ಸ್ತುತಿಪಠನವನ್ನು ಮಾಡುತ್ತಾರೆ ಎಂದರ್ಥ. ಈ ಘೋಷರೂಪವಾದ ಮಂತ್ರರೂಪವಾದ ಮಂತ್ರಪಠನವನ್ನು ಛಾಂದೋಗ್ಯದಲ್ಲಿ ಈ ರೀತಿ ವರ್ಣಿಸಿದೆ.

> **ಅಥ ಯತ್ತದಜಾಯತ ಸೋಽಸಾವಾದಿತ್ಯಸ್ತಂ ಜಾಯಮಾನಂ ಘೋಷಾ ಉಲೂಲವೋಽನೂದತಿಷ್ಠನ್ತ್ಸರ್ವಾಣಿ ಚ ಭೂತಾನಿ ಸರ್ವೇ ಚ ಕಾಮಾಸ್ತಸ್ಮಾತ್ತಸ್ಯೋದಯಂ ಪ್ರತಿ ಪ್ರತ್ಯಾಯನಂ ಪ್ರತಿ ಘೋಷಾ ಉಲೂಲವೋಽನೂತ್ತಿಷ್ಠಂತಿ ಸರ್ವಾಣಿ ಚ ಭೂತಾನಿ ಸರ್ವೇ ಚ ಕಾಮಾಃ ।**

> **ಸ ಯ ಏತಮೇವಂ ವಿದ್ವಾನಾದಿತ್ಯಂ ಬ್ರಹ್ಮೇತ್ಯುಪಾಸ್ತೇಽಭ್ಯಾಶೋ ಹ ಯದೇನಂ ಸಾಧವೋ ಘೋಷಾ ಆ ಚ ಗಚ್ಛೇಯುರುಪ ಚ ನಿಮ್ರೇಡೇರನ್ನಿಮ್ರೇಡೇರನ್ । ಇತಿ ॥**
>
> (ಛಾ. ಉ. ೩-೧೯-೩, ೪)

ಈ ಆದಿತ್ಯನ ಆವಿರ್ಭಾವವಾದನಂತರವೇ ಸಕಲಭೂತಗಳೂ ತಮ್ಮ ಆನಂದವನ್ನು ಘೋಷಿಸಿದವು ಮತ್ತು ಸಕಲ ಪ್ರಾಣಿಗಳೂ ಎಚ್ಚರಗೊಂಡು ತಮ್ಮ ಇಷ್ಟಾರ್ಥಗಳನ್ನು ಪಡೆದುಕೊಂಡವು. ಆದುದರಿಂದಲೇ ಸೂರ್ಯೋದಯಕಾಲಗಳಲ್ಲೆಲ್ಲಾ ಈ ವಿಧವಾದ ಘೋಷವು ಆದಿತ್ಯನನ್ನು ಆಹ್ವಾನಿಸುತ್ತದೆ. ಈ ತತ್ತ್ವವನ್ನು ತಿಳಿದು ಆದಿತ್ಯನನ್ನೇ ಪರಬ್ರಹ್ಮನೆಂದು ಉಪಾಸನೆಮಾಡಿದರೆ ಅವನಿಗೂ ಸಹ ಈ ಘೋಷವೂ ಇದರ ಆನಂದವೂ ಅವಿಚ್ಛಿನ್ನವಾಗಿ ಆನಂದವನ್ನುಂಟುಮಾಡತಕ್ಕದ್ದಾಗಿರುತ್ತದೆ.

> **ಆದಿತ್ಯ ಇತಿ ಹೋವಾಚ ಸರ್ವಾಣಿ ಹ ವಾ ಇಮಾನಿ ಭೂತಾನ್ಯಾದಿತ್ಯಮುಚ್ಚೈಃ ಸಂತಂ ಗಾಯಂತಿ ಸೈಷಾ ದೇವತೋದ್ಗೀಥಮನ್ವಾಯತ್ತಾ ॥**
>
> (ಛಾ. ಉ. ೩.-೧೧ -೭)

ಆದಿತ್ಯನು ಅತ್ಯುನ್ನತವಾದ ಪ್ರದೇಶದಲ್ಲಿ ವಿರಾಜಿಸುತ್ತಿರುವಾಗ ಸಕಲಭೂತಗಳೂ ಸೇರಿಕೊಂಡು ಉಚ್ಚಸ್ವರದಿಂದ ಆದಿತ್ಯನನ್ನು ಸ್ತುತಿಸುತ್ತವೆ. ಆದಿತ್ಯನು ಉದ್ಗೀಥಸಂಬಂಧಿಯಾದ ದೇವತೆಯು ಇತ್ಯಾದಿಯಾ॥ ಆದಿತ್ಯನಿಂದ ಲೋಪಕಾರವಾಗುವುದರಿಂದ ಅವನನ್ನು ಕಂಡೊಡನೇ ಸಕಲ ಭೂತಗಳೂ ತಮ್ಮ ಸಂತೋಷವನ್ನೂ ಕೃತಜ್ಞತೆಯನ್ನೂ ಸೂಚಿಸತಕ್ಕ ಪ್ರಶಂಸಾವಾಕ್ಯಗಳನ್ನು ಪಠಿಸುತ್ತವೆ ಎಂಬ ವಿಷಯವನ್ನು **ಅಮುಷ್ಯ ಮಂತ್ರಯಂತೇ** ಎಂಬುದರಿಂದ ಪ್ರಕೃತವಾದ ಋಕ್ಕಿನಲ್ಲಿ ತಿಳಿಸಿದೆ

**ವಿಶ್ವವಿದಂ**— ಇದು **ವಾಚಂ** ಎಂಬುದಕ್ಕೆ ವಿಶೇಷಣವಾಗಿದೆ. ಸಕಲರಿಗೂ ತಿಳಿಯುವಂತಹದು ಅಥವಾ ಸಕಲರಿಂದಲೂ ತಿಳಿಯಲ್ಪಡತಕ್ಕದ್ದು ಎಂದು ಎರಡುವಿಧವಾಗಿಯೂ ಆಗಬಹುದು.

**ಅವಿಶ್ವಮಿನ್ವಾಂ**—**ಇನ್ವತಿ**ಯೆಂಬ ಪದವು **ವ್ಯಾಪ್ತಿ**ಕರ್ಮನಾಮಗಳಲ್ಲಿ ಪಠಿತವಾಗಿದೆ. (ನಿ. ೩.-೧೦) **ವಿಶ್ವಮಿನ್ವಾಂ** ಎಂದರೆ ಸರ್ವತ್ರ ವ್ಯಾಪಿಸತಕ್ಕದ್ದೆಂದಾಗುತ್ತದೆ. ಆದರೆ ಈ ಘೋಷರೂಪವಾದ ಸ್ತುತಿಪಠನವು ಆದಿತ್ಯನಿಗೆ ಮಾತ್ರ ಅನ್ವಯಿಸತಕ್ಕದ್ದು. ಉಳಿದ ಯಾವ ದೇವತೆಗಳಿಗಾಗಲಿ ಇತರರಿಗಾಗಲಿ ಈ ಸ್ತುತಿಯು ಅನ್ವಯಿಸಲಾರದು ಎಂದು ಸೂಚಿಸಲು **ಅವಿಶ್ವಮಿನ್ವಾಂ** ಎಂಬ ವಿಶೇಷಣವು ಉಪಯೋಗಿಸಲ್ಪಟ್ಟಿದೆಯೆಂದು ವಿವರಿಸಿದರೆ

ತಪ್ಪಾಗಲಾರದು. ಸಾಯಣರೂ ಸಹ **ಅಸರ್ವವ್ಯಾಪಿನೀಂ** ಎಂದು ಅರ್ಥಮಾಡಿ **ವಾಚಂ** ಎಂಬುದಕ್ಕೆ ವಿಶೇಷಣ ವೆಂದು ತೋರಿಸಿದ್ದಾರೆ.

**ವಾಚಂ** ಎಂಬ ಪದಕ್ಕೆ ಸಾಯಣರು **ಗರ್ಜಿತಲಕ್ಷಣಾಂ** ಎಂದು ವ್ಯಾಖ್ಯಾನವನ್ನು ಮಾಡಿರುವುದರಿಂದ ಇಲ್ಲಿ ಗುಡುಗಿನ ಶಬ್ದವೆಂದಾದರೂ ಅರ್ಥವಾಗಬಹುದು. ಆಗ **ವಿಶ್ವವಿದಂ** ಎಂದರೆ ಜಗತ್ತಿಗೆಲ್ಲಾ ಈ ಶಬ್ದವು ಕೇಳಿಸುವುದರಿಂದ ಎಲ್ಲರಿಂದಲೂ ತಿಳಿಯಲ್ಪಡತಕ್ಕ ಎಂದೂ, ಆದರೆ ಕೇವಲ ಕೊಂಚಭಾಗ ಮಾತ್ರ ಈ ಶಬ್ದವು ವ್ಯಾಪಿಸುವುದರಿಂದ **ಅವಿಶ್ವಮಿನ್ವಾಂ** ಸರ್ವತ್ರ ವ್ಯಾಪಿಸದಿರತಕ್ಕ ಎಂದೂ ಈ ಗರ್ಜಿತದ ಸ್ವರೂಪವನ್ನು ವರ್ಣಿಸಿದೆ ಯೆಂದು ಹೇಳಬಹುದು.

### ವ್ಯಾಕರಣಪ್ರಕ್ರಿಯಾ

**ತಿಸ್ರಃ**—ತ್ರಿ ಶಬ್ದ. ಇದಕ್ಕೆ ಶಸ್ ಪರವಾದಾಗ ಅಂತೋದಾತ್ತವಾದ ತಿಸ್ರಾದೇಶ. **ಅಚಿರ ಋತಃ** (ಪಾ. ಸೂ. ೭-೨-೧೦೦) ಎಂಬುದರಿಂದ ಯಣಾದೇಶ. **ಉದಾತ್ತಸ್ವರಿತಯೋಃ**—(ಪಾ. ಸೂ. ೮-೨-೪) ಎಂಬುದರಿಂದ ವಿಭಕ್ತಿಗೆ ಉದಾತ್ತಸ್ವರ ಬರುತ್ತದೆ.

**ಬಿಭ್ರತ್**—ಡುಭೃಞ್ ಭರಣೇ. ಧಾತು. ಲಟಿಗೆ ಶತ್ರಾದೇಶ. ಶ್ಲು ವಿಕರಣ. ಅದನ್ನು ನಿಮಿತ್ತೀ ಕರಿಸಿ ದ್ವಿತ್ವ **ಭೃಞಾಮಿತ್** (ಪಾ. ಸೂ. ೭-೪-೭೬) ಎಂಬುದರಿಂದ ಅಭ್ಯಾಸಕ್ಕೆ ಇತ್ವ. **ಅಭ್ಯಸ್ತಾನಾಮಾದಿಃ** (ಪಾ. ಸೂ. ೬-೧-೧೮೯) ಎಂಬುದರಿಂದ ಆದ್ಯುದಾತ್ತಸ್ವರ ಬರುತ್ತದೆ.

**ತಸ್ಥೌ**—ಷ್ಠಾ ಗತಿನಿವೃತ್ತೌ. ಧಾತು. ಲಿಟ್ ಪ್ರಥಮಪುರುಷ ಏಕವಚನಾಂತರೂಪ. ಅತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

**ಗ್ಲಪಯಂತಿ**—ಗ್ಲೈ ಹರ್ಷಕ್ಷಯೇ. ಧಾತು. **ಹೇತುಮತಿ ಚ** (ಪಾ. ಸೂ. ೩-೧-೨೬) ಎಂಬುದರಿಂದ ಣಿಚ್. **ಆದೇಚ ಉಪದೇಶೇಶಿತಿ** (ಪಾ. ಸೂ. ೬-೧-೪೫) ಎಂಬುದರಿಂದ ಧಾತುವಿಗೆ ಆತ್ವ. **ಅರ್ತಿಹ್ರೀವ್ಲೀ**—(ಪಾ. ಸೂ. ೭-೩-೩೬) ಎಂಬುದರಿಂದ ಪುಕಾಗಮ. ಲಟ್ ಪ್ರಥಮಪುರುಷಬಹುವಚನದಲ್ಲಿ ಝಿಗೆ ಅಂತಾದೇಶ. ಶಪ್ ನಿಮಿತ್ತವಾಗಿ ಣಿಚಿಗೆ ಗುಣ ಅಯಾದೇಶ. ತಿಙಂತನಿಘಾತಸ್ವರ ಬರುತ್ತದೆ.

**ಮಂತ್ರಯಂತೇ**—ಮತ್ರಿ ಗುಪ್ತಪರಿಭಾಷಣೇ ಧಾತು. **ಇದಿತೋ ನುಮ್ ಧಾತೋಃ** (ಪಾ. ಸೂ. ೭-೧ ೫೮) ಎಂಬುದರಿಂದ ನುಮಾಗಮ. **ಸತ್ಯಾಪಪಾಶ**-(ಪಾ ಸೂ. ೩-೧-೨೫) ಸೂತ್ರದಿಂದ ಸ್ವಾರ್ಥದಲ್ಲಿ ಣಿಚ್. ಲಟ್ ಪ್ರಥಮಪುರುಷಬಹುವಚನಾಂತರೂಪ. ಪಾದಾದಿಯಲ್ಲಿರುವುದರಿಂದ ನಿಘಾತಸ್ವರ ಬರುವುದಿಲ್ಲ. ಣಿಚ್‌ಸ್ವರ ಉಳಿಯುತ್ತದೆ.

**ವಿಶ್ವವಿದಮ್**—ವಿದ ಜ್ಞಾನೇ ಧಾತು. ವಿಶ್ವಂ ವೇತ್ತಿ ಇತಿ ವಿಶ್ವವಿತ್. ತಾಮ್. **ಸತ್ಸೂದ್ವಿಷದ್ರುಹ**—(ಪಾ ಸೂ ೩-೨-೬೧) ಎಂಬುದರಿಂದ ಕ್ವಿಪ್ ಪ್ರತ್ಯಯ. **ಗತಿಕಾರಕೋಪಪದಾತ್ ಕೃತ್** (ಪಾ. ಸೂ. ೬-೨-೧೩೯) ಎಂಬುದರಿಂದ ಕೃದುತ್ತರಪದಪ್ರಕೃತಿಸ್ವರ ಬರುತ್ತದೆ. ದ್ವಿತೀಯಾಏಕವಚನಾಂತರೂಪ.

**ಅವಿಶ್ವಮಿನ್ವಾಮ್**—ವಿಶ್ವಮಿನ್ವತಿ ವ್ಯಾಪ್ನೋತಿ ಇತಿ ವಿಶ್ವಮಿನ್ವಾ. ಇವಿ ವ್ಯಾಪ್ತೌ ಧಾತು. **ನಂದಿಗ್ರಹ-ಪಚಾದಿಭ್ಯಃ**-(ಪಾ. ಸೂ- ೩-೧-೧೩೪) ಎಂಬುದರಿಂದ ಅಚ್ ಪ್ರತ್ಯಯ. **ಇದಿತೋ ನುಮ್ ಧಾತೋಃ** ಎಂಬು

ದರಿಂದ ಧಾತುವಿಗೆ ನುಮಾಗವು ಸಮಾಸದಲ್ಲಿ ಛಾಂದಸವಾಗಿ ವಿಭಕ್ತಿಗೆ ಲುಕ್ ಬರುವುದಿಲ್ಲ ಅಥವಾ ಬಹುವಚನ ದಿಂದ ಖಚ್ ಪ್ರತ್ಯಯ ಈ ಧಾತುವಿಗೂ ಬರುತ್ತದೆ. ಆಗ ಪೂರ್ವಕ್ಕೆ ಮುವಾಗವು. ನಞ್ ತತ್ಪುರುಷಸಮಾಸ. ತತ್ಪುರುಷೇತುಲ್ಯಾರ್ಥ-(ಪಾ. ಸೂ. ೬-೨-೨) ಎಂಬುದರಿಂದ ಅವ್ಯಯಪೂರ್ವಪದಪ್ರಕೃತಿಸ್ವರ ಬರುತ್ತದೆ. ದ್ವಿತೀಯಾಏಕವಚನಾಂತರೂಪ. ॥ ೧೦ ॥

ಸಂಹಿತಾಪಾಠಃ

ದ್ವಾದಶಾರಂ ನಹಿ ತಜ್ಜರಾಯ ವರ್ವರ್ತಿ ಚಕ್ರಂ ಪರಿ ದ್ಯಾಮೃತಸ್ಯ ।
ಆ ಪುತ್ರಾ ಅಗ್ನೇ ಮಿಥುನಾಸೋ ಅತ್ರ ಸಪ್ತ ಶತಾನಿ ವಿಂಶತಿಶ್ಚ ತಸ್ಥುಃ ॥
॥ ೧೧ ॥

ಪದಪಾಠಃ

ದ್ವಾದಶಽಅರಂ । ನಹಿ । ತತ್ । ಜರಾಯ । ವರ್ವರ್ತಿ । ಚಕ್ರಂ । ಪರಿ । ದ್ಯಾಂ । ಋತಸ್ಯ ।
ಆ । ಪುತ್ರಾಃ । ಅಗ್ನೇ । ಮಿಥುನಾಸಃ । ಅತ್ರ । ಸಪ್ತ । ಶತಾನಿ । ವಿಂಶತಿಃ । ಚ । ತಸ್ಥುಃ ॥ ೧೧ ॥

ಸಾಯಣಭಾಷ್ಯಂ

ಋತಸ್ಯೋದಕಸ್ಯ ಸತ್ಯಾತ್ಮಕಸ್ಯ ವಾದಿತ್ಯಸ್ಯ ಚಕ್ರಂ ಪುನಃ ಪುನಃ ಕ್ರಮಣಶೀಲಂ ಮಂಡಲಾಖ್ಯಂ ರಥಚಕ್ರಂ ವಾ ವರ್ವರ್ತಿ । ಪುನಃಪುನರ್ವರ್ತತೇ । ಸಂಚರತಿ । ಕುತ್ರ । ದ್ಯಾಂ ಪರಿ ದ್ಯುಲೋಕಸ್ಯಾಂತರಿಕ್ಷಸ್ಯ ಪರಿತಃ । ಕೀದೃಶಂ ತತ್ । ದ್ವಾದಶಾರಂ ದ್ವಾದಶಸಂಖ್ಯಾಕಮೇಷಾದಿರಾಶ್ಯಾತ್ಮಕೈರ್ಮಾಸಾತ್ಮಕೈರ್ವಾರೈ ರಥಾಂಗಾವಯವೈರ್ಯುಕ್ತಂ । ಕಿಂಚ ತಚ್ಚಕ್ರಂ ನಹಿ ಜರಾಯ ನೈವ ಖಲು ಜರಾಯೈ ಭವತಿ । ಹೇ ಅಗ್ನೇ ಸರ್ವದಾಗಮನಯುಕ್ತಾದಿತ್ಯ । ಯದ್ವಾ । ಅಗ್ನೇರೇವ ಸ್ಥಾನತ್ರಯೇ ತತ್ತದಾತ್ಮನಾ ವರ್ತಮಾನತ್ವಾದಸಾವಪ್ಯಗ್ನಿರಿತ್ಯುಚ್ಯತೇ। ಅತ್ರಾಸ್ಮಿಂಸ್ತ್ವದೀಯೇ ಚಕ್ರೇ ಮಿಥುನಾಸಃ ಸ್ತ್ರೀಪುಂಸರೂಪೇಣ ಪರಸ್ಪರಂ ಮಿಥುನಭೂತಾಃ ಸಪ್ತ ಶತಾನಿ ವಿಂಶತಿಶ್ಚ ವಿಂಶತ್ಯುತ್ತರಸಪ್ತಶತಸಂಖ್ಯಾಕಾಃ ಪುತ್ರಾಃ ಪುತ್ರವದುತ್ಪದ್ಯಮಾನಾಃ ಪ್ರಾಣಿನಾಂ ದುಃಖಾತ್ತ್ರಾತಾರೋ ವಾಹೋರಾತ್ರರೂಪಾಸ್ತಸ್ಥುಃ । ತಿಷ್ಠಂತಿ । ನಿಷ್ಪದ್ಯಂತೇ । ಷಷ್ಟ್ಯಧಿಕಶತತ್ರಯಸಂಖ್ಯಾಕಾನ್ಯಹಾನಿ ತಾವತ್ಯ ಏವ ರಾತ್ರಯ ಇತ್ಯೇವಂ ತದ್ವಿಭಾಗಃ । ಸಪ್ತ ಚ ವೈ ಶತಾನಿ ವಿಂಶತಿಶ್ಚ ಸಂವತ್ಸರಸ್ಯಾಹೋರಾತ್ರಾಃ ಸ ಏಷೋಽಹಃಸಂಮಾನಃ । ಐ. ಆ. ೩.೨-೧ । ಇತ್ಯಾರಣ್ಯಕಂ ॥

ಪ್ರತಿಪದಾರ್ಥ

ಋತಸ್ಯ—ಸತ್ಯಾತ್ಮಕನಾದ ಆದಿತ್ಯನ । ದ್ವಾದಶಾರಂ—ಹನ್ನೆರಡು ರಾಶಿರೂಪಗಳಾದ ಅಥವಾ ಹನ್ನೆರಡು ಮಾಸರೂಪಗಳಾದ ಅರಗಳಿಂದ ಕೂಡಿದುದೂ । ಚಕ್ರಂ—ಮಂಡಲಾತ್ಮಕವಾದುದೂ ಆದ ಚಕ್ರವು। ದ್ಯಾಂ ಪರಿ —

ಅಂತರಿಕ್ಷದ ಸುತ್ತಲೂ । **ವರ್ವರ್ತಿ**—ಪುನಃಪುನಃ ಸುತ್ತುತ್ತಿದೆ । **ತತ್**—ಆ **ಚಕ್ರವು** । **ಜರಾಯ ನ**—ಕ್ಷಯಿಸ ತಕ್ಕದ್ದೇ ಅಲ್ಲ । **ಅಗ್ನೇ**—ಅಗ್ನ್ಯಾತ್ಮಕನಾದ ಎಲೈ ಆದಿತ್ಯನೇ । **ಅತ್ರ**—ಈ ಚಕ್ರದಲ್ಲಿ **ಮಿಥುನಾಸಃ**—ಪರಸ್ಪರ ಒಟ್ಟಿಗೆ ಸೇರಿಕೊಂಡಿರುವುವೂ । **ಸಪ್ತಶತಾನಿ ವಿಂಶತಿಶ್ಚ**—ಏಳನೂರ ಇಪ್ಪತ್ತು ಸಂಖ್ಯಾಕಗಳಾಗಿ ಇರುವುವೂ । **ಪುತ್ರಾಃ**—ಪುತ್ರಾತ್ಮಕಗಳೂ ಆದ ಅಹೋರಾತ್ರಗಳು । **ಆ ತಸ್ಥುಃ**—ಬಳಸಿಕೊಂಡಿರುತ್ತವೆ.

### ಭಾವಾರ್ಥ

ಹನ್ನೆರಡುರಾಶಿರೂಪಗಳಾದ ಅಥವಾ ಹನ್ನೆರಡುಮಾಸರೂಪಗಳಾದ ಅರಗಳಿಂದ ಕೂಡಿದುದೂ, ಮಂಡಲಾತ್ಮಕವೂ ಆದ ಆದಿತ್ಯನ ಚಕ್ರವು ಅಂತರಿಕ್ಷದ ಸುತ್ತಲೂ ಪುನಃಪುನಃ ಸುತ್ತುತ್ತಿದೆ. ಆ ಚಕ್ರವು ಕ್ಷಯಿಸತಕ್ಕದ್ದೇ ಅಲ್ಲ. ಅಗ್ನ್ಯಾತ್ಮಕನಾದ ಎಲೈ ಆದಿತ್ಯನೇ, ಈ ಚಕ್ರದಲ್ಲಿ ಪರಸ್ಪರ ಒಟ್ಟಿಗೆ ಸೇರಿಕೊಂಡಿರುವುವೂ, ಏಳನೂರ ಇಪ್ಪತ್ತು ಸಂಖ್ಯಾಕಗಳಾಗಿರುವುವೂ ಪುತ್ರಾತ್ಮಕಗಳಾಗಿರುವುವೂ ಆದ ಅಹೋರಾತ್ರಗಳು ಬಳಸಿಕೊಂಡಿವೆ

### English Translation

The twelve-spoked wheel of the true (sun) revolves round the heavens, and never (tends) to decay: seven hundred and twenty children in pairs, Agni, abide in it.

### ವಿಶೇಷವಿಷಯಗಳು

ಅಂತರಿಕ್ಷದಲ್ಲಿ ಆವೃತ್ತಿರೂಪವಾದ ಪರಿಭ್ರಮಣವನ್ನು ಶಾಶ್ವತವಾಗಿ ಹೊಂದಿದ್ದರೂ ಸಹ ಕ್ಷಯಿಸದೆ ನಿತ್ಯತಾರುಣ್ಯವನ್ನು ಹೊಂದಿರತಕ್ಕ ಆದಿತ್ಯನ ವರ್ಣನೆಯು ಈ ಋಕ್ಕಿನಲ್ಲಿಯೂ ಇದರ ಮುಂದಿನ ಎರಡು ಋಕ್ಕುಗಳಲ್ಲಿಯೂ ಹೇಳಲ್ಪಟ್ಟಿದೆ. ಮಿಥುನರೂಪವಲ್ಲಿರುವುದೂ, ಏಳನೂರಇಪ್ಪತ್ತುಸಂಖ್ಯೆಗಳುಳ್ಳದ್ದೂ, ಆದಿತ್ಯನಿಗೆ ಪುತ್ರರೂಪದ್ದೂ ಆದ ಅಹೋರಾತ್ರಗಳ ದ್ವಯವು ಈ ಕಾಲಚಕ್ರದಲ್ಲಿ ಅಂತರ್ಗತವಾಗಿದೆ. ಅಯನಾದ್ಯವಯವಗಳಿಂದ ಕೂಡಿದ ಈ ಕಾಲಚಕ್ರವು ಸತತವಾಗಿ ತನ್ನ ಭ್ರಮಣವನ್ನು ಮುಂದುವರಿಸುತ್ತದೆ. ಇದೇ ವಿಶ್ವತತ್ತ್ವವು. ಈ ತತ್ತ್ವವು ಸೃಷ್ಟಿಕರ್ತನಾದ ಪ್ರಜಾಪತಿಯಲ್ಲಿ ಅಂತರ್ಗತವಾಗಿದೆಯೆಂದು ಕೆಲವು ಕಡೆಗಳಲ್ಲಿಯೂ, ಅಗ್ನಿಯಲ್ಲಿ ಅಂತರ್ಗತವಾಗಿ ಅವನ ಬಾಹ್ಯತತ್ತ್ವಗಳನ್ನು ಪ್ರತಿಬಿಂಬಿಸುತ್ತವೆಯೆಂದು ಇನ್ನು ಕೆಲವು ಕಡೆಗಳಲ್ಲಿಯೂ ವಿವರಿಸಿದೆ. ಪ್ರಕೃತವಾದ ಋಕ್ಕಿನಲ್ಲಿ ವಿಶ್ವಾತ್ಮನಾದ ಆದಿತ್ಯನನ್ನು ಅಗ್ನಿಯೆಂದು ಸಂಬೋಧಿಸಿದೆ. ಈ ಕಾಲತತ್ತ್ವಕ್ಕೂ ಯಜ್ಞತತ್ತ್ವಕ್ಕೂ ತಾದಾತ್ಮ್ಯವನ್ನು ತೋರಿಸಿ ಈ ಎರಡು ತತ್ತ್ವಗಳಿಗೂ ಸಹ ಆದಿತ್ಯರೂಪನೂ ಅಥವಾ ಅಗ್ನಿರೂಪನೂ ಆದ ಪ್ರಜಾಪತಿಯು ಆಧಾರನೆಂದು ತೈತ್ತಿರೀಯಸಂಹಿತೆಯಲ್ಲಿ ವರ್ಣಿಸಲ್ಪಟ್ಟಿದೆ. ಈ ವರ್ಣನೆಯಲ್ಲಿ ಈ ಋಕ್ಕಿನ ಮತ್ತು ಮುಂದಿನ ಎರಡು ಋಕ್ಕುಗಳಲ್ಲಿ ಹೇಳಿರತಕ್ಕ ಅಂಶಗಳೂ ಅಡಕವಾಗಿವೆಯಾದ್ದರಿಂದ ಅದನ್ನು ಮುಂದಿನ ಋಕ್ಕಿನ ವಿಶೇಷವಿಷಯಗಳಲ್ಲಿ ವಿವರಿಸಲಾಗುತ್ತದೆ.

**ದ್ವಾದಶಾರಂ—ದ್ವಾದಶಸಂಖ್ಯಾಕಮೇಷಾದಿರಾಶ್ಯಾತ್ಮಕೈಃ ಮಾಸಾತ್ಮಕೈರ್ವಾ ಅರೈಃ ರಥಾಂಗಾವಯವೈರ್ಯುಕ್ತಂ** । ದ್ವಾದಶಾರಂ ಎಂಬ ಪದವು ಚಕ್ರಶಬ್ದಕ್ಕೆ ವಿಶೇಷಣವಾಗಿದೆ. ಇಲ್ಲಿ ಆದಿತ್ಯಮಂಡಲವನ್ನು ರಥದ ಚಕ್ರಕ್ಕೂ ದ್ವಾದಶಮಾಸಗಳನ್ನು ಚಕ್ರದ ಅರಗಳಿಗೂ ಹೋಲಿಸಿದೆ. ಮೇಷ, ವೃಷಭ ಇತ್ಯಾದಿ ಹನ್ನೆರಡು

ರಾಶಿಗಳುಳ್ಳ ಸೂರ್ಯಮಂಡಲವೆಂದಾಗಲಿ ಅಥವಾ ಹನ್ನೆರಡು ತಿಂಗಳುಗಳುಳ್ಳ ಸೂರ್ಯಮಂಡಲದ ಭ್ರಮಣವೆಂದಾಗಲಿ ಅರ್ಥವಾಗುತ್ತದೆ. ಅಹೋರಾತ್ರಗಳ ಪರಿಗಣನೆಯಿರುವುದರಿಂದ ಇಲ್ಲಿ ಮಾಸಪರ್ಯಾಯವಾಗಿ ಅರ್ಥಮಾಡಿದರೆ ಹೆಚ್ಚು ಹೊಂದಿಕೊಳ್ಳುತ್ತದೆ. ದ್ವಾದಶಪದವನ್ನು ದ್ವಾದಶಮಾಸಗಳನ್ನು ಹೊಂದಿರುವ ಸಂವತ್ಸರಪರ್ಯಾಯವಾಗಿಯೇ ಉಪಯೋಗಿಸುವುದೂ ಉಂಟು ಉದಾಹರಣೆಗೆ—

**ದೇವಹಿತಿಂ ಜುಗುಪುರ್ದ್ವಾದಶಸ್ಯ ಋತುಂ ನರೋ ನ ಪ್ರ ಮಿನಂತ್ಯೇತೇ ।**
**ಸಂವತ್ಸರೇ ಪ್ರಾವೃಷ್ಯಾಗತಾಯಾಂ ತಪ್ತಾ ಘರ್ಮಾ ಅಶ್ನುವತೇ ವಿಸರ್ಗಂ ॥**
(ಋ. ಸಂ. ೭-೧೦೩-೯)

ಇತ್ಯಾದಿಋಕ್ಕುಗಳಲ್ಲಿ **ದ್ವಾದಶಮಾಸಾತ್ಮಕಸ್ಯ ಸಂವತ್ಸರಸ್ಯ** ಎಂದೇ ಅರ್ಥವಾಗುತ್ತದೆ. ಪ್ರಕೃತವಾದ ಋಕ್ಕಿನಲ್ಲಿಯೂ ಅದೇ ರೀತಿ ಅರ್ಥಮಾಡಬೇಕು. ನಿರುಕ್ತಕಾರರೂ ಸಹ ಈ ಋಕ್ಕಿನ **ದ್ವಾದಶಾರಂ ನಹಿ ತಜ್ಜರಾಯ** ಎಂಬ ಪಾದವನ್ನೂ, ಮತ್ತು **ದ್ವಾದಶ ಪ್ರಧಯಶ್ಚಕ್ರಮೇಕಂ ।** (ಋ ಸಂ. ೧-೧೬೪-೪೮) ಎಂಬ ಪಾದವನ್ನೂ ಉದಹರಿಸಿ **" ಇತಿ ಮಾಸಾನಾಂ "** ಈ ದ್ವಾದಶಪದಗಳು **ಮಾಸಪರ್ಯಾಯವಾದವು** ಎಂದು ವಿವರಿಸಿದ್ದಾರೆ. (ನಿ. ೪-೨೭) ಇಂತಹ ಮಾಸಾತ್ಮಕಗಳಾದ ದ್ವಾದಶಾರವುಳ್ಳ **ಚಕ್ರವು ; ದ್ಯಾಂ ಪರಿ**—ಅಂತರಿಕ್ಷದ ಸುತ್ತಲೂ, **ವರ್ವರ್ತಿ**—ಪುನಃ ಪುನಃ ಆವೃತ್ತಿರೂಪದಿಂದ ಪರಿಭ್ರಮಣವನ್ನು ಹೊಂದುತ್ತದೆ ಎಂದು ವರ್ಣಿಸಿ ಇಂತಹ ಚಕ್ರಾತ್ಮನಾದ ಆದಿತ್ಯನನ್ನು **ಅಗ್ನೇ** ಎಂಬ ವಿಶೇಷಣದಿಂದ ಸಂಬೋಧಿಸಿದೆ.

ಅಗ್ನೇ—ಸಾಯಣರು ಈ ಪದಕ್ಕೆ ಎರಡುವಿಧವಾದ ಅರ್ಥವನ್ನು ಮಾಡಿದ್ದಾರೆ. ಮೊದಲನೆಯದಾಗಿ **ಸರ್ವದಾ ಗಮನಯುಕ್ತ ಆದಿತ್ಯ** ಯಾವಾಗಲೂ ಸಂಚರಿಸುವ ಸ್ವಭಾವವುಳ್ಳ ಆದಿತ್ಯನೇ ಎಂದು ಒಂದು ವಿಧವಾಗಿಯೂ, ಎರಡನೆಯದಾಗಿ **ಯದ್ವಾ, । ಅಗ್ನೇರೇವ ಸ್ಥಾನತ್ರಯೇ ತತ್ತದಾತ್ಮನಾ ವರ್ತಮಾನತ್ವಾತ್ ಅಸಾವಪ್ಯಗ್ನಿರಿತ್ಯುಚ್ಯತೇ** ಆದಿತ್ಯನಾಗಲಿ ಅಥವಾ ವಾಯ್ವಾದಿ ದೇವತೆಗಳಾಗಲಿ ಪೃಥಿವ್ಯಾದಿ ಸ್ಥಾನತ್ರಯದಲ್ಲಿಯೂ ಸಹ **ಅಗ್ನಿಯೇ** ಆಯಾ ರೂಪಗಳಲ್ಲಿರತಕ್ಕದ್ದರಿಂದ ಪ್ರಕೃತದಲ್ಲಿ ಆದಿತ್ಯನನ್ನು **ಅಗ್ನಿಯೆಂದು** ಸಂಬೋಧಿಸಿದೆಯೆಂದು ಇನ್ನೊಂದು ವಿಧವಾಗಿಯೂ ವಿವರಿಸಿದ್ದಾರೆ. ಎರಡನೆಯ ಅರ್ಥದಲ್ಲಿಯೇ ಮೊದಲನೆಯದೂ ಅಡಕವಾಗಿದೆಯೆಂದೂ ಹೇಳಬಹುದು. ಏಕೆಂದರೆ, ಸ್ಥಾನತ್ರಯದಲ್ಲೂ ವ್ಯಾಪಿಸಿರುವ ಅಗ್ನಿಯೇ ಆದಿತ್ಯನೆಂದು ಸಾಯಣರು ಇಲ್ಲಿ ವಿವರಿಸಿರುವುದನ್ನು ಅಗ್ನಿಯ ಸ್ಥಾನತ್ರಯವ್ಯಾಪಕವಾದ ಸ್ವರೂಪವನ್ನೂ ಬೃಹದ್ದೇವತಾದಿಗಳಲ್ಲೂ ಸಹ ವರ್ಣಿಸಿದೆ. ಅಗ್ನಿಯ ಈ ಮೂರು ವಿಧವಾದ ಅಸ್ತಿತ್ವವೂ ಅದಕ್ಕೆ ಅನುಗುಣವಾದ ಮೂರು ವಿಧವಾದ ಆವಿರ್ಭಾವವೂ ಜಗತ್ತಿನ ಮೂಲತತ್ತ್ವವನ್ನೇ ಪ್ರತಿಬಿಂಬಿಸುತ್ತವೆ ಎಂಬುದು ಬೃಹದ್ದೇವತೆಯ ವರ್ಣನೆಯಿಂದ ತಿಳಿಯುತ್ತದೆ.

**ಭವದ್ಭೂತಸ್ಯ ಭವ್ಯಸ್ಯ ಜಂಗಮಸ್ಥಾವರಸ್ಯ ಚ ।**
**ಅಸ್ಯೈಕೇ ಸೂರ್ಯಮೇವೈಕಂ ಪ್ರಭವಂ ಪ್ರಲಯಂ ವಿದುಃ ॥**
**ಏತದ್ಭೂತೇಷು ಲೋಕೇಷು ಅಗ್ನಿಭೂತಂ ಸ್ಥಿತಂ ತ್ರಿಧಾ ।**
**ಋಷಯೋ ಗೀರ್ಭಿರರ್ಚಂತಿ ವ್ಯಂಜಿತಂ ನಾಮಭಿಸ್ತ್ರಿಭಿಃ ॥**
(ಬೃ. ದೇ. ೧-೬೧ ; ೧-೬೪)

ಸಕಲಭೂತಗಳಿಗೂ ಯೋನಿಯಾದ ಪ್ರಜಾಪತಿಯು ಭೂತಭವಿಷ್ಯದ್ವರ್ತಮಾನಗಳಲ್ಲಿರುವ ಸಕಲಚರಾಚರವಾದ ಭೂತಗಳಿಗೂ ಸೃಷ್ಟಿಪ್ರಳಯಗಳ ಮೂಲವಾಗಿ ಅಗ್ನಿರೂಪದಿಂದ ಮೂರುವಿಧವಾಗಿ ಮೂರುಸ್ಥಾನಗಳಲ್ಲಿ ತನ್ನ ಅಸ್ತಿತ್ವವನ್ನು ಪಡೆದಿರುತ್ತಾನೆ ಈ ಮೂರುವಿಧವಾದ ಅಗ್ನಿಯ ಆವಿರ್ಭಾವವನ್ನೂ ಸಹ ಋಷಿಗಳು ಮೂರು ಹೆಸರುಗಳಿಂದ ಕೆಳಗೆ ಕಂಡಂತೆ ಹೇಳುತ್ತಾರೆ ಎಂದು ಬೃಹದ್ದೇವತಾಕಾರರು ಅಗ್ನಿಯ ಮಹತ್ತ್ವವನ್ನು ವರ್ಣಿಸುವ ಸಂದರ್ಭದಲ್ಲಿ ಅಗ್ನಿಯನ್ನು ಪ್ರಶಂಸಿಸುತ್ತಾ, ಈರೀತಿ ವರ್ಣಿಸಿದ್ದಾರೆ.

**ತ್ರಿಸ್ಥಾನಂ ಚೈನಮರ್ಚಂತಿ ಹೋತ್ರಾಯೋಂ ವೃಕ್ತಬರ್ಹಿಷಃ |**
**ಇಹೈವ ಪವಮಾನೋಽಗ್ನಿರ್ಮಧ್ಯಮೋಽಗ್ನಿರ್ವನಸ್ಪತಿಃ ||**
**ಅಮುಷ್ಮಿನ್ನೇವ ವಿಪ್ರೈಸ್ತು ಲೋಕೇಽಗ್ನಿಃಶುಚಿರುಚ್ಯತೇ |**
**ಇಹಾಗ್ನಿಭೂತಸ್ತ್ವೃಷಿಭಿರ್ಲೋಕೇ ಸ್ತುತಿಭಿರೀಳಿತಃ ||**
**ಜಾತವೇದಾಃಸ್ತುತೋ ಮಧ್ಯೇ ಸ್ತುತೋ ವೈಶ್ವಾನರೋ ದಿವಿ ||**

(ಬೃ. ದೇ. ೧-೬೫ರಿಂದ ೬೭)

ಈ ಮೂರು ವಿಧಗಳಲ್ಲಿ ಪೃಥ್ವಿಯಲ್ಲಿ ಆವಿರ್ಭವಿಸುವ ಅಗ್ನಿಗೆ **ಪವಮಾನಾಗ್ನಿ**ಯೆಂತಲೂ, ಮಧ್ಯಮಲೋಕವರ್ತಿಯಾದ ಅಗ್ನಿಗೆ **ವನಸ್ಪತಿ**ಯೆಂದೂ, ದ್ಯುಲೋಕಸ್ಥನಾದ ಅಗ್ನಿಗೆ **ಶುಚಿ**ಯೆಂದೂ ಪ್ರಸಿದ್ಧಿಯಿದೆ. ಈ ಮೂರು ಪ್ರಭೇದಗಳೂ ತೈತ್ತಿರೀಯಸಂಹಿತೆಯಲ್ಲಿ (೨-೨-೪) **ಪವಮಾನ ಶುಚಿ, ಪಾವಕ** ಎಂಬ ಹೆಸರಿನಿಂದ ಪಠಿತವಾಗಿದೆ. ನಿರುಕ್ತಕಾರರು ಋಕ್ಸಂಹಿತೆಯ—

**ಸ್ತೋಮೇನ ಹಿ ದಿವಿ ದೇವಾಸೋ ಅಗ್ನಿಮಜೀಜನಞ್ಛಕ್ತಿಭೀ ರೋದಸಿಪ್ರಾಂ |**
ತಮೂ ಅಕೃಣ್ವನ್ ತ್ರೇಧಾ ಭುವೇ ಕಂ ಸ ಓಷಧೀಃ ಪಚತಿ ವಿಶ್ವರೂಪಾಃ ||

(ಋ. ಸಂ. ೧೦-೮೮-೧೦)

ಎಂಬ ಋಕ್ಕನ್ನುದಹರಿಸಿ **ತಮಕುರ್ವಂಸ್ತ್ರೇಧಾಭಾವಾಯ ಪೃಥಿವ್ಯಾಮಂತರಿಕ್ಷೇ ದಿವೀತಿ ಶಾಕಪೂಣಿಃ |** ಶಾಕಪೂಣಿಯ ವಿವರಣೆಯನ್ನನುಸರಿಸಿ ಪೃಥಿವೀ, ಅಂತರಿಕ್ಷ ಮತ್ತು ದ್ಯುಲೋಕಗಳೆಂಬ ಪ್ರಭೇದಗಳುಳ್ಳ ಈ ಮೂರು ಸ್ಥಾನಗಳಲ್ಲೂ **ಅಗ್ನಿಃ, ಜಾತವೇದಾಃ, ವೈಶ್ವಾನರ** ಎಂಬ ಮೂರು ರೂಪಗಳಲ್ಲಿ ಅಗ್ನಿಯು ಆವಿರ್ಭವಿಸಿದ್ದಾನೆ ಎಂದು ಈ ಮೂರು ಸ್ವರೂಪಗಳನ್ನು ಸಂಹಿತಾವಾಕ್ಯಗಳ ಉದಾಹರಣೆಯಿಂದ ವಿವರಿಸಿದ್ದಾರೆ. (ನಿ. ೭-೧೪ರಿಂದ ೭-೩೫).

ಇದರಂತೆಯೇ ಇನ್ನೂ ಕೆಲವು ಋಕ್ಕುಗಳಲ್ಲಿಯೂ ಸಹ ಅಗ್ನಿಯ ಆವಿರ್ಭಾವವನ್ನು **ಸಮುದ್ರೇ, ದಿವಿ, ಅಪ್ಸು** ಎಂಬ ಹೆಸರುಗಳಿಂದಲೂ ವಿವರಿಸಿ ಸಮುದ್ರದಲ್ಲಿ ಬಡಬಾನಲರೂಪದಲ್ಲಿಯೂ, ದ್ಯುಲೋಕದಲ್ಲಿ ಆದಿತ್ಯ ರೂಪದಲ್ಲಿಯೂ, **ಅಪ್ಸು** ಎಂದರೆ ಅಂತರಿಕ್ಷದಲ್ಲಿ ಮಿಂಚಿನ ರೂಪದಲ್ಲಿಯೂ, ಗೋಚರಿಸುತ್ತಾನೆ ಎಂದು ವಿವರಿಸಿದೆ. ಅಗ್ನಿಯ ಈ ಮೂರು ವಿಧವಾದ ಆವಿರ್ಭಾವವನ್ನೂ, ಆದಿತ್ಯರೂಪದಲ್ಲಿ ದ್ಯುಲೋಕದಲ್ಲಿ ಬೆಳಗುವುದನ್ನೂ ಬೃಹದಾರಣ್ಯಕಾದಿಗಳಲ್ಲಿ ಈರೀತಿ ವರ್ಣಿಸಿದೆ.

**ಆಪೋ ವಾ ಅರ್ಕಸ್ತದ್ಯದಪಾಂ ಶರ ಆಸೀತ್ತತ್ಸಮಹನ್ಯತ | ಸಾ ಪೃಥಿವ್ಯಭವತ್ತಸ್ಯಾಮಶ್ರಾಮ್ಯ-ತ್ತಸ್ಯ ಶ್ರಾಂತಸ್ಯ ತಪ್ತಸ್ಯ ತೇಜೋರಸೋ ನಿರವರ್ತತಾಗ್ನಿಃ |**

**ಸ ತ್ರೇಧಾತ್ಮಾನಂ ವ್ಯಕುರತಾದಿತ್ಯಂ ತೃತೀಯಂ ವಾಯುಂ ತೃತೀಯಂ ಸ ಏಷ ಪ್ರಾಣಸ್ತ್ರೇಧಾ ವಿಹಿತಃ ।**

(ಬೃ. ಉ. ೧-೨-೨-೩)

ಅರ್ಕರೂಪವಾದ ಅಪ್ಪಿನಿಂದ ಪೃಥಿವಿಯು ಉತ್ಪನ್ನವಾಗಿ, ಘನೀಭೂತವಾದ ಪೃಥಿವಿಯಿಂದ ಮಹತ್ತೇಜಸ್ಸಿನಿಂದ ಕೂಡಿದ ಅಗ್ನಿಯು ನಿಷ್ಪನ್ನನಾದನು. ಆ ಅಗ್ನಿಯು, ಪಾರ್ಥಿವಾಗ್ನಿ, ವಾಯು ಮತ್ತು ಆದಿತ್ಯರೂಪದಲ್ಲಿ ವಿಭಾಗ ಮಾಡಿಕೊಂಡು ಮೂರುಸ್ಥಾನಗಳನ್ನು ಆಕ್ರಮಿಸಿದನು. ಮತ್ತು,

**ಸೋಽಕಾಮಯತ ದ್ವಿತೀಯೋ ಮ ಆತ್ಮಾ ಜಾಯೇತೇತಿ ಸ ಮನಸಾ ವಾಚಂ ಮಿಥುನಂ ಸಮಭವದಶನಾಯಾ ಮೃತ್ಯುಸ್ತದ್ಯದ್ರೇತ ಆಸೀತ್ಸ ಸಂವತ್ಸರೋಽಭವತ್ । ನ ಹ ಪುರಾ ತತಃ ಸಂವತ್ಸರ ಆಸ ತಮೇತಾವಂತಂ ಕಾಲಮಬಿಭಃ ।**

(ಬೃ. ಉ. ೧-೨-೪)

ಅನಂತರ ಈ ಅಗ್ನಿರೂಪನಾದ ಪ್ರಜಾಪತಿಯು ಸದ್ವಿತೀಯನಾಗಬೇಕೆಂದಿಚ್ಛಿಸಿ ಮನಸ್ಸಿನಲ್ಲಿ ವಾಕ್ಕಿನೊಡನೆ ಸಂಯುಕ್ತನಾದನು. ಆಗ ಆ ರೇತಸ್ಸು ಸಂವತ್ಸರವಾಗಿ ಪರಿಣಮಿಸಿತು. ಅದಕ್ಕಿಂತಲೂ ಪೂರ್ವಭಾವಿಯಾಗಿ ಸಂವತ್ಸರವೇ ಇರಲಿಲ್ಲ, ಇತ್ಯಾದಿಯಾಗಿ ಅಗ್ನಿರೂಪನಾದ ಪ್ರಜಾಪತಿಗೂ, ಪ್ರಕೃತವಾದ ಋಕ್ಕಿನಲ್ಲಿ ವರ್ಣಿಸಿರುವ ಸಂವತ್ಸರಕ್ಕೂ ಇರತಕ್ಕ ಸಂಬಂಧವನ್ನು ತಿಳಿಸಿದೆ. ಈ ಸಂವತ್ಸರದ ಅವಯವಗಳನ್ನು ಐತರೇಯಾರಣ್ಯಕದಲ್ಲಿ ಈ ಋಕ್ಕಿನಲ್ಲಿ ವಿವರಿಸಿರುವಂತೆಯೇ,

**ತಾನಿ ಸಪ್ತ ವಿಂಶತಿಶತಾನಿ ಭವಂತಿ ಸಪ್ತ ಚ ವೈ ಶತಾನಿ ವಿಂಶತಿಶ್ಚ ಸಂವತ್ಸರಸ್ಯಾಹೋರಾತ್ರಾಃ । ಸ ಏಷೋಽಹಸ್ಸವಾನಃ ॥**

(ಐ ಆ. ೩-೨-೧)

ಇವುಗಳ ಒಟ್ಟಿನ ಸಂಖ್ಯೆಯು ಏಳನೂರಇಪ್ಪತ್ತಾಗುತ್ತದೆ. ಏಳನೂರುಇಪ್ಪತ್ತು ಎಂಬ ಗಣನೆಯು ಸಂವತ್ಸರದಲ್ಲಿರುವ ಒಟ್ಟು ಅಹೋರಾತ್ರಗಳ ಸಂಖ್ಯೆಯು ಎಂದು ತಿಳಿಸಿದೆ. ಈ ಅಹೋರಾತ್ರಗಳನ್ನು ಪ್ರಕೃತವಾದ ಋಕ್ಕಿನಲ್ಲಿ **ಪುತ್ರ**ರೆಂದು ನಿರ್ದೇಶಿಸಿದೆ. ಇಲ್ಲಿ **ಪುತ್ರ**ಪದಕ್ಕೆ ಸಾಯಣರು **ಪುತ್ರವದುತ್ಪದ್ಯಮಾನಾಃ ಪ್ರಾಣಿನಾಂ ದುಃಖಾತ್ತ್ರಾತಾರೋ ವಾ ಅಹೋರಾತ್ರರೂಪಾಃ** । ಪುತ್ರರಂತೆ ಜನಿಸತಕ್ಕವರೆಂದಾಗಲಿ ಅಥವಾ ಪ್ರಾಣಿಗಳನ್ನು ದುಃಖದಿಂದ ರಕ್ಷಿಸತಕ್ಕ ಸಾಮರ್ಥ್ಯವುಳ್ಳ ಅಹೋರಾತ್ರಗಳೆಂದಾಗಲಿ ಅರ್ಥವಾಗುತ್ತದೆಂದು ತಿಳಿಸಿದ್ದಾರೆ.

### ವ್ಯಾಕರಣಪ್ರಕ್ರಿಯಾ

**ದ್ವಾದಶಾರಮ್**—ದ್ವಾದಶ ಅರಾಃ ಯಸ್ಯ ತತ್. ದ್ವಾದಶಾರಮ್. **ಬಹುವ್ರೀಹೌ ಪ್ರಕೃತ್ಯಾ ಪೂರ್ವಪದಮ್** (ಪಾ. ಸೂ. ೬-೨-೧) ಎಂಬುದರಿಂದ ಪೂರ್ವಪದಪ್ರಕೃತಿಸ್ವರ ಬರುತ್ತದೆ.

**ವರ್ವರ್ತಿ**—ವೃತು ವರ್ತನೇ ಧಾತು. **ಧಾತೋರೇಕಾಚಃ**-(ಪಾ. ಸೂ. ೩-೧-೨೨) ಸೂತ್ರದಿಂದ ಯಙ್. **ಯಙೋಽಚಿ ಚ** (ಪಾ. ಸೂ. ೨-೪-೭೪) ಎಂಬುದರಿಂದ ಅದಕ್ಕೆ ಅನೈಮಿತ್ತಿಕವಾಗಿ ಲುಕ್ **ಸನ್ಯಙೋಃ** ಎಂಬುದರಿಂದ ಧಾತುವಿಗೆ ದ್ವಿತ್ವ. **ರುಗ್ರಿಕೌ ಚ ಲುಕಿ** (ಪಾ. ಸೂ. ೭-೪-೯೧) ಎಂಬುದರಿಂದ ಅಭ್ಯಾಸಕ್ಕೆ ರುಕಾಗಮ.

ತಿಪ್ ನಿಮಿತ್ತವಾಗಿ ಧಾತುವಿನ ಉಪಧೆಗೆ ಗುಣ. **ಅಭ್ಯಸ್ತಾನಾಮಾದಿಃ** (ಪಾ. ಸೂ. ೬-೧-೧೮೯) ಎಂಬುದರಿಂದ ಆದ್ಯುದಾತ್ತಸ್ವರ ಬರುತ್ತದೆ.

**ಮಿಥುನಾಸಃ**— ಮಿಥ ಎಂಬುದು ಸೌತ್ರಧಾತು. **ಕ್ಷುಧಿಪಿಶಿಮಿಥಿಭ್ಯಃ ಕಿತ್** (ಉ. ಸೂ. ೩-೩೩೫) ಎಂಬುದರಿಂದ ಉನನ್ ಪ್ರತ್ಯಯ. ವ್ಯತ್ಯಯದಿಂದ ಅಂತೋದಾತ್ತವಾಗುತ್ತದೆ. ಜಸ್ ಪರವಾದಾಗ **ಆಜ್ಜಸೇರಸುಕ್** (ಪಾ. ಸೂ. ೭-೧-೫೦) ಎಂಬುದರಿಂದ ಅದಕ್ಕೆ ಅಸುಕಾಗಮ.

**ತಸ್ಥುಃ**— ಷ್ಠಾ ಗತಿನಿವೃತ್ತೌ ಧಾತು. **ಛಂದಸಿಲುಙ್‌ಲಙ್‌ಲಿಟಃ** ಎಂಬುದರಿಂದ ವರ್ತಮಾನಾರ್ಥದಲ್ಲಿ **ಲಿಟ್**. ಪ್ರಥಮಪುರುಷಬಹುವಚನಾಂತರೂಪ. ತಿಙಂತನಿಘಾತಸ್ವರ ಬರುತ್ತದೆ. ‖ ೧೧ ‖

———— :o: ————

ಸಂಹಿತಾಪಾಠಃ

ಪಂಚಪಾದಂ ಪಿತರಂ ದ್ವಾದಶಾಕೃತಿಂ ದಿವ ಆಹುಃ ಪರೇ ಅರ್ಧೇ ಪುರೀಷಿಣಂ ।

ಅಥೇಮೇ ಅನ್ಯ ಉಪರೇ ವಿಚಕ್ಷಣಂ ಸಪ್ತಚಕ್ರೇ ಷಳರ ಆಹುರರ್ಪಿತಂ ‖

‖ ೧೨ ‖

ಪದಪಾಠಃ

ಪಂಚಽಪಾದಂ । ಪಿತರಂ । ದ್ವಾದಶಽಆಕೃತಿಂ । ದಿವಃ । ಆಹುಃ । ಪರೇ । ಅರ್ಧೇ । ಪುರೀಷಿಣಂ ।

ಅಥ । ಇಮೇ । ಅನ್ಯೇ । ಉಪರೇ । ವಿಽಚಕ್ಷಣಂ । ಸಪ್ತಽಚಕ್ರೇ । ಷಟ್ಽಅರೇ । ಆಹುಃ । ಅರ್ಪಿತಂ ‖

‖ ೧೨ ‖

ಸಾಯಣಭಾಷ್ಯಂ

ಪಂಚಪಾದಂ ಪಂಚಸಂಖ್ಯಾಕರ್ತ್ವಾತ್ಮಕಪಾದೋಪೇತಂ । ಏತದ್ಧೇಮಂತಶಿಶಿರಯೋರೇಕತ್ವಾಭಿಪ್ರಾಯಂ । ಪಿತರಂ ಸರ್ವಸ್ಯ ಪ್ರೀಣಯಿತಾರಂ ದ್ವಾದಶಾಕೃತಿಂ ದ್ವಾದಶಮಾಸಾ ಏವಾಕೃತಯೋ ಯಸ್ಯ ತಾದೃಶಂ ಪುರೀಷಿಣಂ ವೃಷ್ಟ್ಯುದಕೇನ ತದ್ವಂತಂ ಪ್ರೀಣಯಿತಾರಂ ವಾ । ಪುರೀಷಮಿತ್ಯುದಕನಾಮ । ಉಕ್ತಲಕ್ಷಣಂ ಸಂವತ್ಸರಚಕ್ರಂ ದಿವೋ ದ್ಯುಲೋಕಸ್ಯ ಪರೇಽರ್ಧೇ । ತಾತ್ಸ್ಥ್ಯಾತ್ತಾಚ್ಛಬ್ದ್ಯಂ । ಪರಸ್ಮಿನ್ನರ್ಧೇಽಂತರಿಕ್ಷಲಕ್ಷಣೇಽವಸ್ಥಿತ ಆದಿತ್ಯ ಇತ್ಯರ್ಥಃ । ತಸ್ಮಿನ್ನರ್ಪಿತಮಾಹುಃ । ಏತದುತ್ತರತ್ರ ಸ್ಥಿತಮತ್ರಾಪ್ಯನುಷಜ್ಯತೇ । ಯದ್ವಾತ್ರಾರ್ಪಿತಂ ತತ್ತದಧೀನಂ ಅತಃ ಸಂವತ್ಸರಂ ಸೂರ್ಯಾಯತ್ತಮಾಹುರಿತ್ಯರ್ಥಃ । ಅಥೇಮೇಽಪಿ ಚಾನ್ಯೇ ಕೇಚನ ವೇದವಾದಿನ ಏವಮಾಹುಃ । ಕಿಮಿತಿ । ಉಪರೇ । ಉಪರಮಂತೇಽಸ್ಮಿನ್ ಉಪರತಾ ಪ್ರಾಣಿನೋಽತ್ರೇತಿ ವೋಪರಃ ಸಂವತ್ಸರಃ । ತಸ್ಮಿನ್ನೀದೃಶೇ । ಸಪ್ತ-

ಚಕ್ರೇ । ಸಪ್ತಾದಿತ್ಯರಶ್ಮಯಸ್ತದ್ದ್ವಾರೇಣ ಚಕ್ರಸ್ಥಾನೀಯಾ ಯಸ್ಯ ಸ ತಥೋಕ್ತಃ। ಯದ್ವಾ । ಅಯನರ್ತುಮಾಸಪಕ್ಷಾಹೋರಾತ್ರಿಮುಹೂರ್ತಾನಿ ಸಪ್ತ ಸಪ್ತ ಚಕ್ರಾಣಿ ಪುನಃ ಪುನಃ ಕ್ರಮಮಾಣಾನಿ ಯಸ್ಯ ತಾದೃಶೇ । ಷಳರೇ ಷಡೃತವ ಏವಾರಾ ನಾಭೌ ಪ್ರತ್ಯೃತಾಃ ಸಂಬದ್ಧಾ ಯಸ್ಯ ತಥೋಕ್ತಲಕ್ಷಣೇ ಸಂವತ್ಸರೇ ರಥೇ ವಿಚಕ್ಷಣಂ ವಿವಿಧದರ್ಶನಕರಮಾದಿತ್ಯಮರ್ಪಿತಮಾಹುಃ। ಏತದುಕ್ತಂ ಭವತಿ । ಅಮುಮಾದಿತ್ಯಂ ದಕ್ಷಿಣೋತ್ತರರೂಪಭಿನ್ನಗತೇಸ್ತೀವ್ರಮಂದಾದಿಭಾವಸ್ಯ ಚ ಕಾಲಾಧೀನತ್ವಾತ್ತದಧೀನಮಾಹುಃ । ಅನ್ಯೇ ತು ಸಂವತ್ಸರಾದ್ಯಾತ್ಮಕಸ್ಯ ಕಾಲಸ್ಯ ಸೂರ್ಯಗಮನಾಗಮನಸಾಧ್ಯತ್ವಾತ್ತದಾಯತ್ತತ್ವಮಾಹುರಿತಿ ॥

### ಪ್ರತಿಪದಾರ್ಥ

**ಪಂಚಪಾದಂ**—ಋತುರೂಪಗಳಾದ ಐದುಪಾದಗಳುಳ್ಳವನೂ । **ಪಿತರಂ**—ಪ್ರೀತಿದಾಯಕನೂ ಅಥವಾ ಪಿತೃರೂಪನಾದವನೂ । **ದ್ವಾದಶಾಕೃತಿಂ**—ದ್ವಾದಶಮಾಸಗಳೆಂಬ ಅವಯವಗಳುಳ್ಳವನೂ । **ಪುರೀಷಿಣಂ**—ವೃಷ್ಟ್ಯುದಕದಿಂದ ತುಂಬಿದವನೂ ಆದ ಆದಿತ್ಯನನ್ನು । **ದಿವಃ**—ದ್ಯುಲೋಕದ । **ಪರೇ ಅರ್ಧೇ**—ಅತ್ಯನ್ನತವಾದ ಸ್ಥಾನದಲ್ಲಿ (ಅರ್ಪಿತನನ್ನಾಗಿ) । ಆಹುಃ—(ಕೆಲವು ತತ್ತ್ವಜ್ಞರು) ಹೇಳುತ್ತಾರೆ । **ಅಥ ಇಮೇ ಅನ್ಯೇ**—ವೇದವಾದಿಗಳಾದ ಇನ್ನು ಕೆಲವರು । **ಸಪ್ತಚಕ್ರೇ**—ಅಯನಾದಿ ಸಪ್ತಅವಯವಾತ್ಮಕವಾದುದೂ । **ಷಳರೇ**—ಋತ್ವಾತ್ಮಕವಾದ ಆರು ಅರಗಳುಳ್ಳದ್ದೂ ಆದ । **ಉಪರೇ**—ಸಂವತ್ಸರರೂಪವಾದ ಕಾಲದಲ್ಲಿ । **ವಿಚಕ್ಷಣಂ**—ವಿವಿಧವಾದ ದೃಶ್ಯಕ್ಕೆ ಹೇತುವಾದ ಆದಿತ್ಯನನ್ನು । **ಅರ್ಪಿತಂ**—ಅರ್ಪಿಸಲ್ಪಟ್ಟಿರುವವನನ್ನಾಗಿ । **ಆಹುಃ**—ಹೇಳುತ್ತಾರೆ ।

### ಭಾವಾರ್ಥ

ಋತುರೂಪಗಳಾದ ಐದುಪಾದಗಳುಳ್ಳವನೂ, ಪಿತೃರೂಪನಾದವನೂ, ದ್ವಾದಶಮಾಸಗಳ ಆಕೃತಿಗಳುಳ್ಳವನೂ ವೃಷ್ಟ್ಯುದಕದಿಂದ ತುಂಬಿದವನೂ ಆದ ಆದಿತ್ಯನನ್ನು ದ್ಯುಲೋಕದ ಅತ್ಯುನ್ನತವಾದ ಸ್ಥಾನದಲ್ಲಿ ಇರುವವನನ್ನಾಗಿ ಕೆಲವು ತತ್ತ್ವಜ್ಞರು ಹೇಳುತ್ತಾರೆ. ವೇದವಾದಿಗಳಾದ ಇನ್ನು ಕೆಲವರು ಅಯನಾದಿಸಪ್ತಅವಯವಾತ್ಮಕವಾದುದೂ, ಋತ್ವಾತ್ಮಕವಾದ ಆರು ಅರಗಳುಳ್ಳದ್ದೂ ಆದ ಸಂವತ್ಸರರೂಪ ಕಾಲದಲ್ಲಿ ವಿವಿಧವಾದ ದೃಶ್ಯಕ್ಕೆ ಹೇತುವಾದ ಆದಿತ್ಯನನ್ನು ಅರ್ಪಿಸಲ್ಪಟ್ಟಿರುವವನನ್ನಾಗಿ (ಸ್ಥಾಪಿಸಲ್ಪಟ್ಟಿರುವವನನ್ನಾಗಿ) ಹೇಳುತ್ತಾರೆ.

## English Translation

They have termed the five-footed, twelve-formed parent, Purishin, when in the further hemisphere of the sky: and others have termed him Arpita, when in the hither (portion of the sky); shining in his seven-wheeled (car), each (wheel) having six spokes.

### ವಿಶೇಷವಿಷಯಗಳು

ಈ ಋಕ್ಕಿನ ಒಟ್ಟು ತಾತ್ಪರ್ಯವನ್ನು ಸಾಯಣರು ಈ ರೀತಿಯಲ್ಲಿ ತಿಳಿಸಿದ್ದಾರೆ– **ಏತದುಕ್ತಂ ಭವತಿ ಅಮುಮಾದಿತ್ಯಂ ದಕ್ಷಿಣೋತ್ತರರೂಪಭಿನ್ನಗತೇಃ ತೀವ್ರಮಂದಾದಿಭಾವಸ್ಯ ಚ ಕಾಲಾಧೀನತ್ವಾತ್ತದಧೀನ-**

**ಮಾಹುಃ । ಅನ್ಯೇ ತು ಸಂವತ್ಸರಾದ್ಯಾತ್ಮಕಸ್ಯ ಕಾಲಸ್ಯ ಸೂರ್ಯಗಮನಾಗಮನಸಾಧ್ಯತ್ವಾತ್ ತದಾಯತ್ತ-ತ್ವಮಾಹುಃ ಇತಿ ॥** ಆದಿತ್ಯನ ದಕ್ಷಿಣಾಯನ ಮತ್ತು ಉತ್ತರಾಯಣರೂಪವಾದ ಗತಿಗಳೂ, ಅವನ ತೀವ್ರತ್ವ ಅಥವಾ ಮಂದತ್ವವೂ ಸಹ ಸಂವತ್ಸರರೂಪವಾದ ಕಾಲಾಧೀನವಾಗಿರುವುವೆಂದೂ ಆದುದರಿಂದ ಆದಿತ್ಯನು ಕಾಲಾಧೀನವೆಂದೂ ಒಂದು ಮತವು. ಅಥವಾ ಸಂವತ್ಸರರೂಪವಾದ ಕಾಲವು ಸೂರ್ಯನ ಗಮನಾಗಮನದ ಅಧೀನವಾಗಿರುವುದರಿಂದ ಸಂವತ್ಸರರೂಪವಾದ ಕಾಲವು ಸೂರ್ಯಾಯತ್ತವೆಂದು ಇನ್ನೊಂದು ಮತವೂ ಆಗಿದೆ. ಪ್ರಕೃತವಾದ ಋಕ್ಕಿನಲ್ಲಿ ಸಂವತ್ಸರ ರೂಪಿಯಾದ ಆದಿತ್ಯನ ವರ್ಣನವಿದೆ

**ಪಂಚಪಾದಂ—ಪಂಚಸಂಖ್ಯಾಕಋತ್ವಾತ್ಮಕಪಾದೋಪೇತಂ ಏತತ್ ಹೇಮಂತ ಶಿಶಿರಯೋಃ ಏಕತ್ವಾಭಿಪ್ರಾಯಂ ।** ಹೇಮಂತ ಋತು ಮತ್ತು ಶಿಶಿರಋತು ಎರಡರಲ್ಲೂ ಒಂದೇ ಗುಣವಿರುವುದರಿಂದ ಅವೆರಡನ್ನೂ ಒಂದೇ ಋತುವೆಂದು ಭಾವಿಸಿದರೆ ಆಗ ಸಂವತ್ಸರಕ್ಕೆ ಐದುಋತುಗಳು ಮಾತ್ರ ಅವಯವಗಳಾಗುತ್ತವೆ. ಇಲ್ಲಿ **ಪಂಚಪಾದಂ** ಎಂದು ಸಂವತ್ಸರಕ್ಕೆ ವಿಶೇಷಣವಾಗಿದೆ. ಈ ಮಂತ್ರವು ಪ್ರಶ್ನೋಪನಿಷತ್ತಿನಲ್ಲಿಯೂ ಪಠಿತವಾಗಿದೆ. ಅಲ್ಲಿ ಶಂಕರಾಚಾರ್ಯರೂ ಈ ಪದಕ್ಕೆ **ಪಂಚರ್ತವಃ ಪಾದಾ ಇವಾಸ್ಯ ಸಂವತ್ಸರಾತ್ಮನ ಆದಿತ್ಯಸ್ಯ । ತೈರಸೌ ಪಾದೈರಿವರ್ತುಭಿರಾವರ್ತತೇ । ಹೇಮಂತಶಿಶಿರಾವೇಕೀಕೃತ್ಯೇಯಂ ಕಲ್ಪನಾ ।** ಸಂವತ್ಸರಾತ್ಮನಾದ ಆದಿತ್ಯನ ಪಾದಗಳಂತಿರುವ ಪಂಚಋತುಗಳೆಂದು ಅರ್ಥಮಾಡಿದ್ದಾರೆ. (ಪ್ರ. ಉ. ೧-೧೧).

**ದ್ವಾದಶಾಕೃತಿಂ—ದ್ವಾದಶ ಮಾಸಾ ಏವ ಆಕೃತಯೋ ಯಸ್ಯ ತಾದೃಶಂ ।** ದ್ವಾದಶಮಾಸಗಳೆಂಬ ಅವಯವಗಳುಳ್ಳ ಸಂವತ್ಸರಾತ್ಮನಾದ ಆದಿತ್ಯನನ್ನು ಎಂದರ್ಥ. ಒಟ್ಟು ಈ ಹದಿನೇಳು ಅವಯವಗಳಿಂದಲೂ ಕೂಡಿದ ಆದಿತ್ಯನ ಸ್ವರೂಪವನ್ನು ಶತಪಥಬ್ರಾಹ್ಮಣದಲ್ಲಿ,

> **ತಸ್ಯ ಸಪ್ತದಶ ಸಾಮಿಧೇನ್ಯಃ । ಸಪ್ತದಶೋ ವೈ ಸಂವತ್ಸರೋ ದ್ವಾದಶಮಾಸಾಃ ಪಂಚರ್ತವಃ ಸಂವತ್ಸರಃ ಪ್ರಜಾಪತಿಃ ॥**
>
> (ಶ. ಬ್ರಾ. ೬-೨-೨-೮)

ಪ್ರಜಾಪತಿಯು ಹನ್ನೆರಡು ತಿಂಗಳಿಂದಲೂ ಐದು ಋತುಗಳಿಂದಲೂ ಕೂಡಿ ಹದಿನೇಳು ಅವಯವಗಳುಳ್ಳ ಸಂವತ್ಸರಾತ್ಮನಾಗಿದ್ದಾನೆ ಎಂದು ಯಜ್ಞಾಂಗವಾದ ಸಾಮಿಧೇನೀಮಂತ್ರಗಳಿಗೂ ಪ್ರಜಾಪತಿಗೂ ಇರುವ ಸಂಬಂಧವನ್ನು ತೋರಿಸಿದೆ. ಸಂವತ್ಸರದ ಅವಯವಗಳು ಹದಿನೇಳಾದುದರಿಂದ ಈ ಮಂತ್ರಗಳೂ ಸಪ್ತದಶಸಂಖ್ಯಾಕಗಳಾಗಿರಬೇಕೆಂದು ತಾತ್ಪರ್ಯ.

**ಪಿತರಂ—ಸರ್ವಸ್ಯ ಪ್ರೀಣಯಿತಾರಂ ।** ಸಕಲಕ್ಕೂ ಪ್ರೀತಿಯನ್ನುಂಟುಮಾಡತಕ್ಕ ಎಂದು ಸಂವತ್ಸರ ಚಕ್ರಕ್ಕೆ ವಿಶೇಷಣವಾಗಿದೆ ಎಂದರೆ ಇಲ್ಲಿ ಸಂವತ್ಸರಚಕ್ರಕ್ಕೂ ಆದಿತ್ಯನಿಗೂ ತಾದಾತ್ಮ್ಯವನ್ನು ಹೇಳಿರುವುದರಿಂದ ಪಿತರಂ ಎಂಬ ಪದವು ಆದಿತ್ಯನಿಗೂ ವಿಶೇಷಣವಾಗಿದೆಯೆಂದು ತಿಳಿಯಬೇಕು. ಆದಿತ್ಯನಿಗೆ ವಿಶೇಷಣವಾದರೆ ರೂಢವಾದ ಪಿತೃವೆಂಬ ಅರ್ಥವನ್ನೇ ಹೇಳಿದರೂ ತಪ್ಪಾಗಲಾರದು. ಏತಕ್ಕೆಂದರೆ,

> **ಪಿತಾ ನೋಽಸಿ ಪಿತಾ ನೋ ಬೋಧೀತಿ । ಏಷ ವೈ ಪಿತಾ ಯ ಏಷ ತಪತ್ಯೇಷ ಉ ಪ್ರವರ್ಗ್ಯಸ್ತ-ದೇತಮೇವೈತತ್ಪ್ರೀಣಾತಿ ತಸ್ಮಾದಾಹ ಪಿತಾ ನೋಽಸಿ ಪಿತಾ ನೋ ಬೋಧೀತಿ ನಮಸ್ತೇಽಸ್ತು ।**
>
> (ಶ. ಬ್ರಾ ೧೪-೧-೪-೧೫)

ಅಂತರಿಕ್ಷದಲ್ಲಿ ಪ್ರಕಾಶಿಸುತ್ತಿರುವ ಆದಿತ್ಯನೇ ನಮ್ಮೆಲ್ಲರ ಪಿತೃವು, ಅವನೇ ನಮಗೆಲ್ಲರಿಗೂ ಪ್ರೀತಿದಾಯಕನು ಮತ್ತು ತೃಪ್ತಿಯನ್ನುಂಟುಮಾಡತಕ್ಕವನು, ಅವನೇ ಪ್ರವರ್ಗ್ಯರೂಪನು ಇತ್ಯಾದಿಯಾಗಿ ಸಂಬೋಧಿಸಿರುವುದರಿಂದ ಇಲ್ಲಿಯೂ ಪಿತೃವೆಂದು ಹೇಳಬಹುದು. ಈ ಎರಡರ್ಥಗಳೂ ಈ ಪದದಲ್ಲಿ ಅಂತರ್ಗತವಾಗಿವೆ. ಸಂವತ್ಸರಪರವಾಗಿಯೂ ಸಹ ಈ ಅರ್ಥವನ್ನು ಹೇಳಬಹುದು. ಏತಕ್ಕೆಂದರೆ,

> **ಅಥೋ ಪ್ರಜನನಮೇತತ್ಸಂವತ್ಸರೋ ವಾ ಋತವ್ಯಾಃ ಸಂವತ್ಸರಃ ಪ್ರಜನನಂ ಪ್ರಜನನಮೇವೈತದುಪದಧಾತಿ ॥**
>
> (ಶ ಬ್ರಾ. ೮-೭-೧-೧)

ಇತ್ಯಾದಿವಾಕ್ಯಗಳಲ್ಲಿ ಉತ್ಪಾದನಶಕ್ತಿಯೇ ಸಂವತ್ಸರರೂಪವಾಗಿರುವುದೆಂದೂ ಸಕಲಭೂತಗಳೂ ಸಂವತ್ಸರದಿಂದ ಉತ್ಪನ್ನವಾದವೆಂದೂ ಹೇಳಿರುವುದರಿಂದ ಪಿತೃವೆಂಬ ರೂಢವಾದ ಅರ್ಥವನ್ನು ಹೇಳಬಹುದು. ಸಾಯಣರು ಕೇವಲ **ಪ್ರೀಣಯಿತಾರಂ**-ತೃಪ್ತಿದಾಯಕವಾದ ಎಂಬರ್ಥವನ್ನು ಮಾತ್ರ ಹೇಳಿದ್ದಾರೆ. ಪ್ರಶ್ನೋಪನಿಷತ್ತಿನಲ್ಲಿ ವ್ಯಾಖ್ಯಾನ ಮಾಡುವಾಗ ಶಂಕರಾಚಾರ್ಯರು ಈ ಪದಕ್ಕೆ **ಪಿತರಂ— ಸರ್ವಸ್ಯ ಜನಯಿತೃತ್ವಾತ್ಪಿತೃತ್ವಂ ತಸ್ಯ (ಸಂವತ್ಸರಾತ್ಮನ ಆದಿತ್ಯಸ್ಯ)** ಸಂವತ್ಸರಾತ್ಮನಾದ ಆದಿತ್ಯನು ಎಲ್ಲಕ್ಕೂ ಜನಕನಾದುದರಿಂದ ಪಿತೃತ್ವವೆಂದು ಅರ್ಥಮಾಡಿದ್ದಾರೆ. (ಪ್ರ. ಉ. ೧-೧೧).

**ಪುರೀಷಿಣಂ— ಪುರೀಷಮಿತ್ಯುದಕನಾಮ ।** ಈ ಪದವು ಉದಕನಾಮಗಳಲ್ಲಿ ಪಠಿತವಾಗಿದೆ. **ಸರ್ವಕಾಮಾನಾಂ ಪೂರಕಂ ಉದಕಂ ।** ಎಲ್ಲಾ ಇಷ್ಟಾರ್ಥಗಳನ್ನೂ ಪೂರೈಸತಕ್ಕ ಉದಕದಿಂದ ಎಂದರ್ಥವಾಗುತ್ತದೆ. ಈ ಪದಕ್ಕೆ ನಿಷ್ಕೃಷ್ಟವಾದ ನಿರ್ವಚನವನ್ನು ಹೇಳತಕ್ಕ ಕಾಲದಲ್ಲಿ ನಿರುಕ್ತಕಾರರು,

> **ದೇವಾನಾಂ ಮಾನೇ ಪ್ರಥಮಾ ಅತಿಷ್ಠನ್ ಕೃಂತತ್ರಾದೇಷಾಮುಪರಾ ಉದಾಯನ್ ।**
>
> **ತ್ರಯಸ್ತಪಂತಿ ಪೃಥಿವೀಮನೂಪಾ ದ್ವಾ ಬೃಬೂಕಂ ವಹತಃ ಪುರೀಷಂ ॥**
>
> (ಋ. ಸಂ. ೧೦-೨೭-೨೩)

ಎಂಬ ಋಕ್ಕನ್ನುದಹರಿಸಿ ಅಲ್ಲಿ **ಪುರೀಷಂ ಪ್ರೀಣಾತೇಃ ಪೂರಯತೇರ್ವಾ ।** ತುಂಬು ಅಥವಾ ತೃಪ್ತಿಪಡಿಸು ಎಂಬರ್ಥವನ್ನು ಕೊಡತಕ್ಕ ಪ್ರಾ ಧಾತುವಿನಿಂದ ಈ ಪದವು ನಿಷ್ಪನ್ನವಾಗಿದೆಯೆಂದು ತೋರಿಸಿದ್ದಾರೆ. (ನಿ- ೨-೨೨) ಜಗತ್ತನ್ನು ತುಂಬತಕ್ಕ ಅಥವಾ ಜಗತ್ತಿಗೆ ತೃಪ್ತಿಯನ್ನುಂಟುಮಾಡತಕ್ಕ ಉದಕವನ್ನು ಹೊಂದಿರುವುದರಿಂದ ಅಥವಾ ಉದಕದಿಂದ ವ್ಯಾಪ್ತನಾಗಿರುವುದರಿಂದ **ಆದಿತ್ಯನಿಗೆ ಪುರೀಷೀ** ಎಂಬ ವಿಶೇಷಣವು ಪ್ರಸಿದ್ಧವಾಗಿದೆ. ಉದಕವು ಆದಿತ್ಯನಲ್ಲಿ ಅಂತರ್ಗತವಾಗಿಲ್ಲದೇ ಇದ್ದರೂ ಸಹ ಆದಿತ್ಯನು ಉದಕದ ಮಧ್ಯದಲ್ಲಿ ಪರಿಭ್ರಮಣವನ್ನು ಮಾಡುತ್ತಿರುವುದರಿಂದಲೂ ಅಥವಾ ಉದಕದ ಉತ್ಪಾದಕನಾಗಿರುವುದರಿಂದಲೂ ಈ ವಿಶೇಷಣವಿದೆಯೆಂದು ಶತಪಥಬ್ರಾಹ್ಮಣದ ಅನೇಕ ವಾಕ್ಯಗಳಿಂದ ತಿಳಿಯುತ್ತದೆ.

> **ಅಪಾಂ ಗಂಭನ್ತ್ಸೀದೇತಿ । ಏತದ್ವಾಪಾಂ ಗಂಭಿಷ್ಠಂ ಯತ್ರೈಷ ಏತತ್ತಪತಿ ।**
>
> (ಶ ಬ್ರಾ. ೭-೫-೧-೮)

ಅಂತರಿಕ್ಷದಲ್ಲಿ ಗಭೀರವಾದ ಉದಕದ ಮಧ್ಯದಲ್ಲಿ ಆದಿತ್ಯನು ಪ್ರಕಾಶಿಸುತ್ತಿದ್ದಾನೆ.

**ಅಗ್ನೇ ದಿವೋಽರ್ಣಮಚ್ಛಾ ಜಿಗಾಸೀತಿ । ಆಪೋ ವಾ ಅಸ್ಯ ದಿವೋಽರ್ಣಸ್ತಾ .... .... .... .... ಯಾ ರೋಚನೇ ಪರಸ್ತಾತ್ಸೂರ್ಯಸ್ಯ ಯಾಶ್ಚಾವಸ್ತಾದುಪತಿಷ್ಠಂತ ಆಪ ಇತಿ ರೋಚನೋ ಹ ನಾಮೈಷ ಲೋಕೋ ಯತ್ರೈಷ ಏತತ್ತಪತಿ ತದ್ಯಾಶ್ಚೈತಂ ಪರೇಣಾಪೋ ಯಾಶ್ಚಾವರೇಣ ತಾ ಏತದಾಹ ॥**

(ಶ. ಬ್ರಾ ೭-೧-೧-೨೪)

ಎಲೈ ಅಗ್ನಿಯೇ ದ್ಯುಲೋಕದಲ್ಲಿ ನಿನ್ನ ತೇಜಸ್ಸೆಲ್ಲವೂ ಆದಿತ್ಯರೂಪದಲ್ಲಿ ಪ್ರಕಾಶಿಸುತ್ತಿದೆ. ಅಂತರಿಕ್ಷಸ್ಥವಾದ ಪ್ರವಾಹದಲ್ಲಿ ನೀನು ಬೆಳಗುತ್ತಿದ್ದೀಯೆ. ಆ ಪ್ರವಾಹವು ಅಂತರಿಕ್ಷಸ್ಥವಾದ ಉದಕದಿಂದ ವ್ಯಾಪ್ತವಾಗಿದೆ. ಆ ಉದಕದ ಪ್ರವಾಹವು ಆದಿತ್ಯನ ತೇಜೋಮಂಡಲವನ್ನೂ ಮೀರಿಹೋಗಿದೆ. ಕೆಳಗೂ ಮೇಲೂ ಸುತ್ತಲೂ ವ್ಯಾಪಿಸಿರುವ ಪ್ರವಾಹದ ನಡುವೆ ಆದಿತ್ಯರೂಪದ ಅಗ್ನಿಯು ರಾರಾಜಿಸುತ್ತಿದ್ದಾನೆ, ಎಂದು ವರ್ಣಿತವಾಗಿದೆ. ಇದಲ್ಲದೆ,

**ಸರ್ವಾಣಿ ಹ ತ್ವೇವ ಭೂತಾನಿ । ಸರ್ವೇ ದೇವಾ ಏಷೋಽಗ್ನಿಶ್ಚಿತ ಆಪೋ ವೈ ಸರ್ವೇ ದೇವಾ ಸರ್ವಾಣಿ ಭೂತಾನಿ ತಾ ಹ್ಯೇತಾ ಆಪ ಏವೈಷೋಽಗ್ನಿಶ್ಚಿತಸ್ತಸ್ಯ ನಾವ್ಯಾ ಏವ ಪರಿಶ್ರಿತಸ್ತಾಃ ಷಷ್ಟಿಶ್ಚ ತ್ರೀಣಿ ಚ ಶತಾನಿ ಭವಂತಿ ಷಷ್ಟಿಶ್ಚ ಹ ವೈ ತ್ರೀಣಿ ಚ ಶತಾನ್ಯಾದಿತ್ಯಂ ನಾವ್ಯಾ ಅಭಿರಕ್ಷಂತ್ಯಥ ಯದಂತರಾ ನಾವ್ಯೇ ತತ್ಸೂದದೋಹಾ ॥**

(ಶ. ಬ್ರಾ. ೧೦-೫-೪-೧೪)

ಎಂಬಲ್ಲಿ ಅಗ್ನಿವೇದಿಗೂ ಆದಿತ್ಯಮಂಡಲಕ್ಕೂ ಸಾಮ್ಯವನ್ನು ಹೇಳುತ್ತಾ ಯಜ್ಞಾಗ್ನಿಯೇ ಸಕಲ ಭೂತಗಳೂ ಸಕಲ ದೇವತೆಗಳೂ ಆಗಿದೆಯೆಂದೂ, ಸಕಲಭೂತಗಳೂ ವಿಶ್ವವ್ಯಾಪಿಯಾದ ಅಪ್ಪಾಗಿವೆಯೆಂದೂ ತಿಳಿಸಿ, ಆದಿತ್ಯಮಂಡಲವನ್ನು ಸುತ್ತುಗಟ್ಟಿರುವ ಮುನ್ನೂರ ಅರವತ್ತು ಪ್ರವಾಹಗಳಿಗೆ ಅಗ್ನಿವೇದಿಯ ಪರಿಧಿಯಲ್ಲಿರುವ ಮುನ್ನೂರರವತ್ತು ಇಷ್ಟಿಕೆಗಳು ಸಮವೆಂದು ವರ್ಣಿಸಿದೆ. ಸೂರ್ಯನನ್ನು ಆವರಿಸಿ ಅವನ ಅಭಿಮುಖವಾಗಿ ಈ ಪ್ರವಾಹಗಳು ಹರಿಯುವುವೆಂದು ವಿವರಿಸಿದೆ. ಸೂರ್ಯರಶ್ಮಿಗಳು ಉದಕಪ್ರವಾಹಗಳಿಗೆ ಹೇತುಗಳಾದುದರಿಂದ ರಶ್ಮಿಗಳನ್ನೇ ಪ್ರವಾಹಗಳೆಂದು ರೂಪಕಮಾಡಿ ಹೇಳಿದೆಯೆಂದು ಸಾಯಣರು ವಿವರಿಸುತ್ತಾ **ಅರ್ಚಿಷೋ ಹ್ಯಾಪಸ್ಸೂರ್ಯಕಿರಣಾನಾಮೇವ ವೃಷ್ಟಿಕರ್ತೃಕತ್ವಾತ್ ಕಾರ್ಯಕಾರಣಯೋರಭೇದೇನ ಆರ್ಚಿರ್ವಾ ಅಪ ಇತ್ಯುಕ್ತಂ** ಎಂದಿದ್ದಾರೆ.

ಈರೀತಿಯಾಗಿ ಉದಕದಿಂದ ಆವೃತನಾಗಿಯೂ, ತನ್ನ ರಶ್ಮಿಗಳದ್ವಾರಾ ಉದಕದ ಪ್ರವಾಹಕ್ಕೆ ಹೇತುವಾಗಿಯೂ ಇರುವುದರಿಂದ ಆದಿತ್ಯನಿಗೆ **ಪುರೀಷ** ಎಂಬ ವಿಶೇಷಣವು ಆದಿತ್ಯನ ತತ್ತ್ವವನ್ನು ವಿವರಿಸುವುದಾಗಿದೆ. ಸಾಯಣರು **ಉದಕವಂತಂ** ಎಂದು ಮೊದಲು ಅರ್ಥಮಾಡಿ ಅನಂತರ **ಪ್ರೀಣಯಿತಾರಂ ವಾ** ಭೂತಗಳಿಗೆ ಹರ್ಷದಾಯಕವಾಗಿರುವ ಎಂದೂ ಸಹ ಎರಡನೆಯ ಅರ್ಥವನ್ನು ಹೇಳಿದ್ದಾರೆ. ಮೇಲೆ ಉದಹರಿಸಿರುವ ನಿರುಕ್ತಕಾರರ ನಿರ್ವಚನದಂತೆ ಈ ಎರಡರ್ಥವೂ ಸಾಧ್ಯವಾಗುವುದರಿಂದಲೂ, ಆದಿತ್ಯನಿಂದಲೇ ಜಗಜ್ಜೀವನವೆಲ್ಲವೂ ಹರ್ಷಮಯವಾಗಿರುವುದರಿಂದಲೂ ಸಹ ಇಲ್ಲಿ ಯಾವ ಅರ್ಥವನ್ನಾದರೂ ಹೇಳಬಹುದು.

**ಉಪರೇ—ಉಪರಮಂತೇ ಅಸ್ಮಿನ್ ಉಪರತಾಃ ಪ್ರಾಣಿನಃ ಅತ್ರ ಇತಿ ವಾ ಉಪರಃ ಸಂವತ್ಸರಃ ।** ಪ್ರಾಣಿಗಳು ಇಲ್ಲಿ ಶಾಂತವಾಗಿ ನಿಲ್ಲುತ್ತವೆ ಎಂದರೆ ಚಲನವಿಲ್ಲದ ಮೃತಿಯನ್ನು ಹೊಂದುತ್ತವೆ ಎಂಬರ್ಥವನ್ನು ಕೊಡ

ತಕ್ಕದ್ದಾದುದರಿಂದ **ಉಪರವೆಂದರೆ** ಸಂವತ್ಸರವೆಂದರ್ಥವೆಂದು ಸಾಯಣರು ವಿವರಿಸಿದ್ದಾರೆ. **ಅತ್ರ ಉಪರಮಂತೇ** ಎಂಬುದಕ್ಕೆ ಉಪಗಮ್ಯ ರಮಂತೇ ಎಂದು ಅರ್ಥಮಾಡುವುದಕ್ಕೂ ಅವಕಾಶವಿದೆ. ಹೇಗೆಂದರೆ, ನಿರುಕ್ತಕಾರರು, **ಉಪರ**ಶಬ್ದದ ನಿರ್ವಚನವನ್ನು ತೋರಿಸುವಾಗ (ನಿ ೨-೨೧) (ಇಲ್ಲಿ ಮೇಘಪರ್ಯಾಯವಾಗಿದೆ) ಉಪ **ರಮಂತೇಽಸ್ಮಿನ್ನಭ್ರಾಣಿ ॥ ಉಪ ರತಾ ಆಪ ಇತಿ ವಾ ।** ಎಂದು ಎರಡುವಿಧವಾದ ವಿವರಣೆಯನ್ನು ಕೊಟ್ಟಿದ್ದಾರೆ. ಅದಕ್ಕೆ ದುರ್ಗಾಚಾರ್ಯರು ವ್ಯಾಖ್ಯಾನವನ್ನು ಮಾಡುತ್ತಾ **ಉಪಗಮ್ಯ ರಮಂತೇ ಅಸ್ಮಿನ್ನಭ್ರಾಣಿ ।** ಇಲ್ಲಿ ಮೇಘಗಳು ಸೇರಿಕೊಂಡು ಹರ್ಷವನ್ನು ಪ್ರಕಟಿಸುತ್ತವೆ ಎಂದು ಹೇಳಿರುವಂತೆ ಪ್ರಕೃತವಾದ ಋಕ್ಕಿನಲ್ಲಿಯೂ ಸಹ ಸಾಯಣರು **ಉಪರಮಂತೇ** ಎಂಬುದಕ್ಕೆ ಅನ್ನಸಮೃದ್ಧಿಯಿಂದ ಲಭಿಸಿದ ಸಂತೋಷವನ್ನನುಭವಿಸುತ್ತವೆ ಎಂದೂ, **ಉಪರತಾಃ** ಎಂಬುದಕ್ಕೆ ಶಾಂತವಾಗಿರುತ್ತವೆ ಎಂದರೆ ಚಲನರಹಿತವಾದ ಸ್ಥಿತಿಯನ್ನು ಹೊಂದುತ್ತವೆ (ಮೃತಿಯನ್ನು ಪಡೆಯುತ್ತವೆ) ಎಂದೂ ಅರ್ಥಮಾಡಬಹುದು. ಸಂವತ್ಸರವು ಅನ್ನಸಮೃದ್ಧಿಯನ್ನುಂಟುಮಾಡಿ ಸಂತೃಪ್ತಿಗೆ ಕಾರಣವಾಗಿರುತ್ತದೆ. ಅದರಂತೆಯೇ ಅಹೋರಾತ್ರಪೂರಿತವಾದ ವರ್ಷಗಳು ಕಳೆಯುವುದರಿಂದ ಪ್ರಾಣಿಗಳ ಮೃತಿಗೂ ಕಾರಣವಾಗಿರುತ್ತದೆ. ಈ ಎರಡು ಅಭಿಪ್ರಾಯಗಳನ್ನೂ ತೋರಿಸತಕ್ಕ ಶ್ರುತಿವಾಕ್ಯಗಳಿವೆ.

> **ತ್ರೀಣಿ ವಾ ಇಮಾನಿ ಪಂಚವಿಧಾನಿ । ಸಂವತ್ಸರೋಽಗ್ನಿಃ ಪುರುಷಸ್ತೇಷಾಂ ಪಂಚವಿಧಾ ಅನ್ನಂ ಪಾನಗ್ಂ ಶ್ರೀರ್ಜ್ಯೋತಿರಮೃತಂ ಯದೇವ ಸಂವತ್ಸರೇಽನ್ನಂ ತದನ್ನಂ ಯಾ ಆಪಸ್ತತ್ಪಾನಗ್ಂ ರಾತ್ರಿರೇವ ಶ್ರೀಃ ಶ್ರಿಯಾಗ್ಂ ಹ್ಯೇತದ್ರಾತ್ರ್ಯಾಗ್ಂ ಸರ್ವಾಣಿ ಭೂತಾನಿ ಸಂವಸಂತ್ಯಹರ್ಜ್ಯೋತಿರಾದಿತ್ಯೋಽಮೃತಮಿತ್ಯಧಿದೇವತಂ ॥**
>
> (ಶ. ಬ್ರಾ. ೧೦-೨-೬-೧೬)

ಐದುವಿಧವಾದ ಸಂಪತ್ತನ್ನು ಪಡೆದಿರತಕ್ಕ ಪದಾರ್ಥಗಳು ಮೂರಿವೆ ಸಂವತ್ಸರ, ಅಗ್ನಿ ಮತ್ತು ಪುರುಷ. ಅನ್ನ, ಪಾನ, ಸಂಪತ್ತು (ಸೌಖ್ಯ), ತೇಜಸ್ಸು ಮತ್ತು ಅಮೃತತ್ವ ಈ ಐದೂ ಇವುಗಳ ರೂಪಾಂತರಗಳು. ಸಂವತ್ಸರದಲ್ಲಿ ಎಷ್ಟು ಅನ್ನವಿದೆಯೋ ಅಷ್ಟೇ ಅದರ ಆಹಾರ; ಉದಕವಿದ್ದಷ್ಟೇ ಪಾನವು, ಸಕಲ ಭೂತಗಳೂ ರಾತ್ರಿಯಲ್ಲಿಯೇ ಸೌಖ್ಯವನ್ನನುಭವಿಸುವುದರಿಂದ ರಾತ್ರಿಯೇ ಸುಖವು ಅಹಸ್ಸೇ ತೇಜಸ್ಸು ಮತ್ತು ಆದಿತ್ಯನೇ ಅಮೃತವು ಇತ್ಯಾದಿಯಾಗಿ ಸಂವತ್ಸರದ ಸಂಪತ್ಸಮೃದ್ಧಿಯನ್ನು ಪ್ರಶಂಸಿಸಿ,

> **ಸೋಽಯಂ ಸಂವತ್ಸರಃ ಪ್ರಜಾಪತಿಃ .... .... .... .... ತಸ್ಮಾದಾಹುಸ್ಸಂವತ್ಸರಃ ಸರ್ವೇ ಕಾಮಾ ಇತಿ ನ ಹ ಸಂವತ್ಸರಾತ್ಕಶ್ಚನ ಬಹಿರ್ಧಾ ಕಾಮೋಽಸ್ತಿ ।**
>
> (ಶ. ಬ್ರಾ. ೧೦-೨-೪-೧)

ಪ್ರಜಾಪತಿಯೇ ಸಂವತ್ಸರವು ಮತ್ತು ಅಗ್ನಿಯೇ ಸಕಲ ವಿಧವಾದ ಇಷ್ಟಾರ್ಥದ ಪ್ರತಿಬಿಂಬವು. ಪ್ರಜಾಪತಿರೂಪಿಯಾದ ಸಂವತ್ಸರವು ತನ್ನ ಇಷ್ಟಾರ್ಥಗಳನ್ನು ಪೂರೈಸಿಕೊಳ್ಳಬೇಕೆಂಬ ಆಸೆಯಿಂದ ಪ್ರಯತ್ನಿಸಿ ತಾನೇ ಸಕಲವಿಧವಾದ ಇಷ್ಟಾರ್ಥಗಳನ್ನೂ ತುಂಬಿಕೊಂಡನು. ಆದುದರಿಂದ ಪ್ರಜಾಪತಿಯ ಪ್ರತಿಬಿಂಬವಾದ ಸಂವತ್ಸರವೂ ಇಷ್ಟಾರ್ಥಗಳಿಂದ ತುಂಬಿಕೊಂಡಿತು. ಸಂವತ್ಸರದಿಂದ ಬಹಿರ್ಭೂತವಾದ ಇಷ್ಟಾರ್ಥಗಳು ಯಾವುದೂ ಇಲ್ಲ ಎಂಬುದಾಗಿ ಸಂವತ್ಸರದ ಸ್ವರೂಪವನ್ನು ಪ್ರಶಂಸಿಸಿ ಸಂವತ್ಸರವು ಸಕಲ ವಿಧವಾದ ಇಷ್ಟಾರ್ಥಗಳಿಗೂ ಆಶ್ರಯವಾಗಿಯೂ ಇರುವುದರಿಂದ **ಸಂವತ್ಸರೇ ಉಪರಮಂತೇ ಪ್ರಾಣಿನಃ** ಎಂಬರ್ಥವನ್ನು ಮಾಡಬಹುದು. ಎರಡನೆಯದಾಗಿ :

**ಏಷ ವೈ ಮೃತ್ಯುರ್ಯತ್ಸಂವತ್ಸರಃ। ಏಷ ಹಿ ಮರ್ತ್ಯಾನಾಮಹೋರಾತ್ರಾಭ್ಯಾಮಾಯುಃ ಕ್ಷಿಣೋ-ತ್ಯಥ ಮ್ರಿಯಂತೇ ತಸ್ಮಾದೇಷ ಏವ ಮೃತ್ಯುಃ ಸ ಯೋ ಹೈತಂ ಮೃತ್ಯುಗ್ಂ ಸಂವತ್ಸರಂ ವೇದ ನ ಹಾಸ್ಯೈಷ ಪುರಾ ಜರಸೋಽಹೋರಾತ್ರಾಭ್ಯಾಮಾಯುಃ ಕ್ಷಿಣೋತಿ ಸರ್ವಗ್ಂ ಹೈವಾಯು-ರೇತಿ ॥**

(ಶ. ಬ್ರಾ. ೧೦-೪-೩-೧)

ಸಂವತ್ಸರವು ಮೃತ್ಯುಪ್ರಾಯವು. ಕಾಲರೂಪನಾದ ಪ್ರಜಾಪತಿಯು ಅಹೋರಾತ್ರಗಳ ದ್ವಾರಾ ಮರ್ತ್ಯಲೋಕವನ್ನು ನಾಶಮಾಡುತ್ತಾನೆ. ಆದುದರಿಂದಲೇ ಸಂವತ್ಸರವು ಅಂತಕಪ್ರಾಯವಾಗಿದೆ. ಈ ತತ್ತ್ವವನ್ನು ತಿಳಿದವನು ತನ್ನ ಆಯುಃಪರಿಮಿತಿಯ ಪೂರ್ಣವಾದ ಜೀವನವನ್ನು ನಡೆಸುತ್ತಾನೆ. ಇಲ್ಲದಿದ್ದರೆ ಅಕಾಲಮೃತ್ಯುವು ಪ್ರಾಪ್ತವಾಗುತ್ತದೆ. **ಅಂತಹವರಿಗೆ—**

**ಏಷ ಉ ಏವಾಂತಕಃ। ಏಷ ಹಿ ಮರ್ತ್ಯಾನಾಮಾಯುಷೋಽನ್ತಂ ಗಚ್ಛತಿ।**

(ಶ. ಬ್ರಾ. ೧೦-೪-೩-೨)

ಸಂವತ್ಸರವೇ ಅಂತಕನು. ಕಾಲರೂಪನಾದ ಪ್ರಜಾಪತಿಯು ಅಹೋರಾತ್ರಗಳ ದ್ವಾರಾ ಎಲ್ಲಾ ಭೂತಗಳ ಆಯುಸ್ಸಿಗೂ ಅಂತಕನಾಗಿದ್ದಾನೆ ; ಇತ್ಯಾದಿಯಾಗಿ ಉಕ್ತವಾಗಿರುವುದರಿಂದ **ಉಪರತಾಃ ಪ್ರಾಣಿನ ಅತ್ರ ಇತಿ ವಾ ಉಪರಃ ಸಂವತ್ಸರಃ ।** ಎಂದು ಸಾಯಣರು ಮಾಡಿರುವ ಎರಡನೆಯ ಅರ್ಥವು ಹೊಂದಿಕೊಳ್ಳುತ್ತದೆ

**ಸಪ್ತಚಕ್ರೇ— ಸಪ್ತ ಆದಿತ್ಯರಶ್ಮಯಸ್ತದ್ದ್ವಾರೇಣ ಚಕ್ರಸ್ಥಾನೀಯಾ ಯಸ್ಯ ಸ ತಥೋಕ್ತಃ।** ಸಪ್ತ ಸಂಖ್ಯಾಕವಾದ ಆದಿತ್ಯರಶ್ಮಿಗಳ ರೂಪದಲ್ಲಿ ಚಕ್ರಸ್ಥಾನೀಯನೆಂದು ಆದಿತ್ಯನ ಪರವಾಗಿಯೂ, **ಯದ್ವಾ । ಅಯ-ನರ್ತುಮಾಸಪಕ್ಷಾಹೋರಾತ್ರಮುಹೂರ್ತಾನಿ ಸಪ್ತ ಸಪ್ತ ಚಕ್ರಾಣಿ ಪುನಃಪುನಃ ಕ್ರಮಮಾಣಾನಿ ಯಸ್ಯ ತಾದೃಶೇ ಸಂವತ್ಸರರೂಪೇ ರಥೇ ॥** ಅಥವಾ, ಅಯನ, ಋತು, ಮಾಸ, ಪಕ್ಷ, ಅಹಸ್ಸು, ರಾತ್ರಿ ಮತ್ತು ಮುಹೂರ್ತ ಇವುಗಳು ಸಪ್ತಾವಯವಗಳು. ಇಂತಹ ಅವಯವಗಳಿಂದ ಕೂಡಿ ಪುನಃಪುನಃ ಚಕ್ರದಂತೆ ಪರಿಭ್ರಮಣ ವನ್ನು ಹೊಂದತಕ್ಕ ಸಂವತ್ಸರ ರೂಪವಾದ ರಥದಲ್ಲಿ ಎಂದು ಸಂವತ್ಸರಪರವಾಗಿಯೂ ಅರ್ಥಮಾಡಿದೆ.

ಈ ಋಕ್ಕಿನಲ್ಲಿ ಮೇಲಿನ ವರ್ಣನೆಗಳಿಂದ ಕಾಲಾತೀತನಾಗಿ ಅತ್ಯುನ್ನತವಾದ ದ್ಯುಲೋಕಕ್ಕಿಂತಲೂ ಮೇಲ್ಭಾಗದಲ್ಲಿರುವ ಆದಿತ್ಯನ ಸ್ವರೂಪವನ್ನು ಒಂದು ದೃಷ್ಟಿಯಿಂದಲೂ, ಎರಡನೆಯದಾಗಿ ಕಾಲಾಧೀನನಾಗಿರತಕ್ಕ ಆದಿತ್ಯನ ಚಲನವಲನಗಳನ್ನು ಇನ್ನೊಂದು ದೃಷ್ಟಿಯಿಂದಲೂ ವಿವರಿಸಿದೆಯೆನ್ನಬಹುದು. ಇದಲ್ಲದೆ ಹಿಂದಿನ ಕೆಲವು ಋಕ್ಕುಗಳಲ್ಲಿ ವರ್ಣಿಸಿರುವಂತೆ ಇನ್ನೊಂದು ದೃಷ್ಟಿಯಿಂದ ಅರ್ಥಮಾಡಿ ಪ್ರಕೃತವಾದ **ಋಕ್ಕಿನಲ್ಲಿ** ಪರಮಾತ್ಮನ ಸ್ವರೂಪನಾದ ಆದಿತ್ಯನನ್ನೂ ಸ್ತುತಿಸಿದೆಯೆಂದೂ ಹೇಳುವುದಾದರೆ ಆಗ **ಸಪ್ತಚಕ್ರೇ** ಎಂಬ ಪದಕ್ಕೆ ಇನ್ನೂ ವಿಸ್ತೃತ ವಾದ ಅರ್ಥವನ್ನು ಹೇಳಬೇಕಾಗುತ್ತದೆ.

**ಅಥ ವಾ ಏಕಶತವಿಧಃ। ಸಪ್ತವಿಧಮಭಿಸಂಪದ್ಯತ ಏಕಶತಧಾ ವಾಸಾವಾದಿತ್ಯೋ ವಿಹಿತಃ ಸಪ್ತಸು ದೇವಲೋಕೇಷು ಪ್ರತಿಷ್ಠಿತಃ ಸಪ್ತ ವೈ ದೇವಲೋಕಾಸ್ತತಸ್ರೋ ದಿಶಸ್ತ್ರಯ ಇಮೇ ಲೋಕಾ ಏತೇ ವೈ ಸಪ್ತ ದೇವಲೋಕಾಸ್ತೇಷ್ವೇವ ಪ್ರತಿಷ್ಠಿತಃ ॥**

(ಶ. ಬ್ರಾ. ೧೦-೨-೪-೪)

ಅಗ್ನಿರೂಪನಾದ ಆದಿತ್ಯನು ಏಕಶತವಿಧನಾಗಿದ್ದಾನೆ. (೧೦೧), ಅವನ ರಶ್ಮಿಗಳು ಶತವಿಧವಾಗಿವೆ. ಅವನ ಸ್ವರೂಪವನ್ನೂ ಸೇರಿಸಿದರೆ ಏಕಶತವಿಧವಾಗುತ್ತದೆ ಆದರೆ ಈ ಏಕಶತವಿಧವನ್ನೂ ಸಪ್ತವಿಧವೆಂದು ಸಂಗ್ರಹಿಸಿ ಹೇಳಬಹುದು. ಏಳು ಮಡಿಯಾದ ಈ ವಿಶ್ವದಲ್ಲಿ ಆದಿತ್ಯನು ಸ್ಥಾಪಿತನಾಗಿದ್ದಾನೆ. ನಾಲ್ಕು ದಿಕ್ಕುಗಳೂ ಪೃಥಿವ್ಯಾದಿ ಮೂರು ಲೋಕಗಳೂ ಸೇರಿ ಏಳು ವಿಧವಾದ ದೇವಲೋಕಗಳಾಗುತ್ತವೆ. ಈ ಸಪ್ತವಿಧವಾದ ಲೋಕಗಳಲ್ಲಿ ಆದಿತ್ಯನು ಪ್ರತಿಷ್ಠಿತನಾಗಿದ್ದಾನೆ.

**ಯದ್ವೇವೈಕಶತವಿಧಃ । ಸಪ್ತವಿಧಮಭಿಸಂಪದ್ಯತ ಏಕಶತಧಾ ವಾ ಅಸಾವಾದಿತ್ಯೋ ವಿಹಿತಃ ಸಪ್ತಸ್ವೃತುಷು ಸಪ್ತಷು ಸ್ತೋಮೇಷು ಸಪ್ತಸು ಪೃಷ್ಠೇಷು ಸಪ್ತಸು ಚ್ಛಂದಸ್ಸು ಸಪ್ತಸು ಪ್ರಾಣೇಷು ಸಪ್ತಸು ದಿಕ್ಷು ಪ್ರತಿಷ್ಠಿತಃ ॥**

(ಶ. ಬ್ರಾ. ೧೦–೨–೪-೫)

ಏಕಶತವಿಧರೂಪನಾದ ಈ ಆದಿತ್ಯನು ವಿಶ್ವದಲ್ಲಿ ಸಪ್ತವಿಧನಾಗಿ ಪ್ರತಿಷ್ಠಿತನಾಗಿದ್ದಾನೆ ಇವು ಏಳು ಋತುಗಳು, [ಏಳು ಋತುಗಳು ಯಾವುವೆಂದು ಹಿಂದೆ ತಿಳಿಸಿದೆ] ಸಪ್ತಸ್ತೋಮಗಳು, ಸಪ್ತಪೃಷ್ಠಗಳು (ಸಾಮ), ಸಪ್ತಚ್ಛಂದಸ್ಸುಗಳು, ಸಪ್ತಪ್ರಾಣಗಳು ಮತ್ತು ಸಪ್ತದಿಕ್ಕುಗಳು.

**ಯದ್ವೇವೈಕಶತವಿಧಃ । ಸಪ್ತವಿಧಮಭಿಸಂಪದ್ಯತ ಏಕಶತಧಾ ವಾ ಅಸಾವಾದಿತ್ಯೋ ವಿಹಿತಃ ಸಪ್ತಾಕ್ಷರೇ ಬ್ರಹ್ಮನ್ ಪ್ರತಿಷ್ಠಿತಃ ಸಪ್ತಾಕ್ಷರಂ ವೈ ಬಹ್ಮರ್ಗಿತ್ಯೇಕಮಕ್ಷರಂ ಯಜುರಿತಿ ದ್ವೇ ಸಾಮೇತಿ ದ್ವೇಽಥ ಯದತೋಽನ್ಯದ್ಬ್ರಹ್ಮೈವ ತದ್ದ್ವ್ಯಕ್ಷರಂ ವೈ ಬ್ರಹ್ಮ ತದೇತತ್ಸರ್ವ ಸಪ್ತಾಕ್ಷರಂ ಬ್ರಹ್ಮ ತಸ್ಮಿನ್ನೇಷ ಪ್ರತಿಷ್ಠಿತಃ ॥**

(ಶ. ಬ್ರಾ. ೧೦-೨-೪–೬)

ಏಕಶತವಿಧನಾದ ಆದಿತ್ಯನು ಸಪ್ತಾಕ್ಷರಗಳುಳ್ಳ ಬ್ರಹ್ಮನಲ್ಲಿ ಪ್ರತಿಷ್ಠಿತನಾಗಿದ್ದಾನೆ. ಬ್ರಹ್ಮನು ಸಪ್ತಾಕ್ಷರರೂಪನೇ ಆಗಿರುವನು. ಋಗ್ರೂಪವಾದುದು ಒಂದು, ಯಜೂರೂಪವಾದುದು ಎರಡು, ಸಾಮವೆರಡು, ಮತ್ತು **ಬ್ರಹ್ಮಾತ್ಮಕ**ವಾದುದೇ ಎರಡು, ಒಟ್ಟು ಸಪ್ತಾಕ್ಷರಸ್ವರೂಪನಾದ ಬ್ರಹ್ಮನೇ ವಿಶ್ವವು. ಈ ವಿಶ್ವವ್ಯಾಪಿಯಾದ ಬ್ರಹ್ಮನಲ್ಲಿ ಆದಿತ್ಯನು ಪ್ರತಿಷ್ಠಿತನಾಗಿದ್ದಾನೆ ಎಂದು ಸಪ್ತವಿಧವಾದ ಆದಿತ್ಯನ ನಾನಾ ಸ್ವರೂಪಗಳನ್ನೂ ವರ್ಣಿಸಿದೆ. ಇಲ್ಲಿ ಉದಾಹೃತವಾದ ಶತಪಥಬ್ರಾಹ್ಮಣದ ಈ ಅಧ್ಯಾಯದ ನಾಲ್ಕನೇ ಬ್ರಾಹ್ಮಣದ ಸಾರಾಂಶವನ್ನು ಸಂಗ್ರಹಿಸಿದರೆ;

**ಸಂವತ್ಸರೋ ವೈ ಪ್ರಜಾಪತಿಃ । ಅಗ್ನಿರು ಸರ್ವೇ ಕಾಮಾಃ ಸೋಽಯಂ ಸಂವತ್ಸರಃ । .... .... .... ಸ ಯಃ ಸ ಸಂವತ್ಸರೋಽಸೌ ಸ ಆದಿತ್ಯಃ .... .... .... .... (ಸ) ಸಪ್ತವಿಧಮಭಿಸಂಪದ್ಯತೇ । .... .... .... .... ಸಪ್ತವಿಧೋ ವಾ ಅಗ್ರೇ ಪ್ರಜಾಪತಿರಸೃಜ್ಯತ ॥**

(ಶ. ಬ್ರಾ. ೧೦–೨–೪)

ಸಂವತ್ಸರವೇ ಪ್ರಜಾಪತಿಯು ; ಅಗ್ನಿಯೇ ಸಂವತ್ಸರವು ; ಸಂವತ್ಸರವೇ ಆದಿತ್ಯನು. ಪ್ರಜಾಪತಿಯು ಆದಿಯಲ್ಲಿ ಸಪ್ತವಿಧವಾಗಿ ಸೃಷ್ಟನಾದುದರಿಂದ ಸಂವತ್ಸರರೂಪನಾದ ಆದಿತ್ಯನೂ ಸಹ ಸಪ್ತಸಂಖ್ಯಾಕವಾದ ಋತ್ವಾದಿಗಳಲ್ಲಿ ಸ್ಥಾಪಿತನಾಗಿ ವಿಶ್ವವ್ಯಾಪಿಯಾಗಿದ್ದಾನೆಂಬ ಅಂಶವನ್ನು **ಸಪ್ತಚಕ್ರೇ ಅರ್ಪಿತಂ ಆಹುಃ** ಎಂದು ತಿಳಿಸಿದೆ ಯೆಂದು ಹೇಳಬಹುದು.

**ವಿಚಕ್ಷಣಂ—ವಿವಿಧದರ್ಶನಕರಮಾದಿತ್ಯಂ ॥** ಬೇರೆ ಬೇರೆ ರೀತಿಯಲ್ಲಿ ತನ್ನ ರೂಪಾಂತರಗಳಿಂದ ಜಗತ್ತನ್ನು ವೀಕ್ಷಿಸುವನೆಂದು ಅರ್ಥಮಾಡಿದೆ. **ವಿಚಕ್ಷತೇಽಭಿವಿಪಶ್ಯಂತಿ** ಎಂದು ನಿರುಕ್ತಕಾರರು ಅರ್ಥ ಮಾಡಿದ್ದಾರೆ (ನಿ. ೧೨-೨೭). ನಿರುಕ್ತಕಾರರು,

**ತ್ರಯಃ ಕೇಶಿನ ಋತುಥಾ ವಿ ಚಕ್ಷತೇ ಸಂವತ್ಸರೇ ವಪತ ಏಕ ಏಷಾಂ ।**
**ವಿಶ್ವಮೇಕೋ ಅಭಿ ಚಷ್ಟೇ ಶಚೀಭಿರ್ಧ್ರಾಜಿರೇಕಸ್ಯ ದದೃಶೇ ನ ರೂಪಂ ॥**
(ಋ. ಸಂ. ೧-೧೬೪-೪೪)

ಎಂಬ ಋಕ್ಕನ್ನುದಹರಿಸಿ ಪಾರ್ಥಿವಾಗ್ನಿರೂಪದಲ್ಲಿಯೂ, ದ್ಯುಲೋಕಸ್ಥವಾದ ಆದಿತ್ಯರೂಪದಲ್ಲಿಯೂ, ಅಂತರಿಕ್ಷಸ್ಥನಾದ ವಾಯುವಿನ ರೂಪದಲ್ಲಿಯೂ, ಸಹ ಸಂವತ್ಸರದ ಆಯಾ ಕಾಲಗಳಲ್ಲಿ ಪ್ರಕಾಶಿಸುತ್ತಾ ಲೋಕವನ್ನು ಅನುಗ್ರಹಾತ್ಮಕವಾದ ಬುದ್ಧಿಯಿಂದ ವೀಕ್ಷಿಸುತ್ತಾರೆಂದು ಅರ್ಥಮಾಡಿದ್ದಾರೆ. ಅದೇ ಅರ್ಥದಲ್ಲಿ ಪ್ರಕೃತವಾದ ಋಕ್ಕಿನಲ್ಲಿಯೂ ಸಹ **ವಿಚಕ್ಷಣಂ** ಎಂಬ ಪದವನ್ನು ಪ್ರಯೋಗಿಸಿದೆ, ಈ ಪದಕ್ಕೆ **ಪಂಡಿತ** ಎಂಬ ಅರ್ಥವೂ ಇದ್ದು ಪ್ರಾಜ್ಞ, ಸರ್ವಜ್ಞ ಎಂದು ಆದಿತ್ಯನ ಸ್ವರೂಪವನ್ನು ತಿಳಿಸಬಹುದು.

**ವೈಶ್ವಾನರ ತವ ಧಾಮಾನ್ಯಾ ಚಕೇ ಯೇಭಿಃ ಸ್ವರ್ವಿದಭವೋ ವಿಚಕ್ಷಣ ।**
(ಋ. ಸಂ. ೩-೩-೧೦)

**ಪ್ರ ತೇ ಬಭ್ರೂ ವಿಚಕ್ಷಣ ಶಂಸಾಮಿ ಗೋಷಣೋ ನಪಾತ್ ।**
(ಋ. ಸಂ ೪-೩೨-೨೨)

ಇತ್ಯಾದಿಋಕ್ಕುಗಳಲ್ಲಿ **ಪ್ರಾಜ್ಞ**ನೆಂಬರ್ಥವಾಗುವಂತೆ ಪ್ರಕೃತವಾದ ಋಕ್ಕಿನಲ್ಲಿಯೂ ಸರ್ವಜ್ಞನಾದ ಆದಿತ್ಯನನ್ನು ಎಂದರ್ಥವಾಗಬಹುದು. ಒಟ್ಟಿನಲ್ಲಿ ಜಗನ್ನಿಯಾಮಕವಾದ ಕಾಲವನ್ನೇ ತನ್ನ ಸ್ವಾಧೀನದಲ್ಲಿಟ್ಟುಕೊಂಡು ಲೋಕತ್ರಯಕ್ಕೂ ಪ್ರಭುವಾಗಿರುವ ಆದಿತ್ಯನ ದಿವ್ಯಸ್ವರೂಪವೂ, ಕಾಲಯುಕ್ತವಾದ ತನ್ನ ಚಲನವಲನಗಳನ್ನು ಪ್ರಕಟಿಸಿ ಕಾಲಾಧೀನವಾಗಿರುವುದೂ ಲೌಕಿಕವಾಗಿರುವುದೂ ಆದ ಇನ್ನೊಂದು ಸ್ವರೂಪವೂ ಒಟ್ಟಿಗೆ ಈ ಋಕ್ಕಿನಲ್ಲಿ ವರ್ಣಿತವಾಗಿದೆ.

॥ ವ್ಯಾಕರಣಪ್ರಕ್ರಿಯಾ ॥

**ಪಂಚ ಪಾದಮ್**—ಪಂಚ ಪಾದಾಃ ಯಸ್ಯ ತಮ್ ಬಹುವ್ರೀಹಿಯಲ್ಲಿ ಪೂರ್ವಪದಪ್ರಕೃತಿಸ್ವರ ಬರುತ್ತದೆ.

**ಆಹುಃ**—ಬ್ರೂಞ್ ವ್ಯಕ್ತಾಯಾಂ ವಾಚಿ ಧಾತು. **ಲಟ್** ಪ್ರಥಮಪುರುಷಬಹುವಚನ ಪರವಾದಾಗ **ಬ್ರುವಃ ಪಂಚಾನಾಮಾದಿತ ಆಹೋ ಬ್ರುವಃ** (ಪಾ. ಸೂ. ೩-೪-೮೪) ಎಂಬುದರಿಂದ ಧಾತುವಿಗೆ ಆಹಾದೇಶ. ಪ್ರತ್ಯಯಕ್ಕೆ ಉಸಾದೇಶ. ಅತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

**ಪುರೀಷಿಣಮ್**—ಪುರೀಷಮಸ್ಯ ಅಸ್ತಿ ಇತಿ ಪುರೀಷಿಣಮ್. **ಅತ ಇನಿ ಠನೌ** (ಪಾ. ಸೂ. ೫-೨-೧೧೫) ಎಂಬುದರಿಂದ ಮತ್ವರ್ಥದಲ್ಲಿ ಇನಿಪ್ರತ್ಯಯ. ಪ್ರತ್ಯಯಸ್ವರದಿಂದ ಅಂತೋದಾತ್ತವಾಗುತ್ತದೆ. ದ್ವಿತೀಯೈಕವಚನಾಂತರೂಪ.

**ವಿಚಕ್ಷಣಮ್**—ಚಕ್ಷಿಙ್ ವ್ಯಕ್ತಾಯಾಂ ವಾಚಿ ಧಾತು. ಇಕಾರ ಅನುದಾತ್ತವಾಗಿ ಇತ್ ಸಂಜ್ಞೆಯನ್ನು ಹೊಂದುತ್ತದೆ. ಅನುದಾತ್ತೇತ್ತಾದುದರಿಂದ **ಅನುದಾತ್ತೇತಶ್ಚ ಹಲಾದೇಃ** (ಪಾ. ಸೂ. ೩-೨-೧೪೯) ಎಂಬುದರಿಂದ ಯುಚ್ ಪ್ರತ್ಯಯ. **ಯುವೋರನಾಕೌ** (ಪಾ. ಸೂ. ೭-೧-೧) ಎಂಬುದರಿಂದ ಅದಕ್ಕೆ ಅನಾದೇಶ. **ಚಿತಃ**– (ಪಾ. ಸೂ. ೬-೧-೧೬೩) ಎಂಬುದರಿಂದ ಅಂತೋದಾತ್ತಸ್ವರ ಬರುತ್ತದೆ. ಪ್ರಾದಿಸಮಾಸವಾದಾಗ ಕೃದುತ್ತರಪದ ಪ್ರಕೃತಿಸ್ವರ ಬರುತ್ತದೆ.

ಸಪ್ತಚಕ್ರೇ । ಷಡರೇ—ಬಹುವ್ರೀಹಿಸಮಾಸ. ಪೂರ್ವಪದಪ್ರಕೃತಿಸ್ವರ ಬರುತ್ತದೆ. ॥ ೧೨ ॥

———— :o: ————

### ಸಂಹಿತಾಪಾಠಃ

ಪಂಚಾರೇ ಚಕ್ರೇ ಪರಿವರ್ತಮಾನೇ ತಸ್ಮಿನ್ನಾ ತಸ್ಥುರ್ಭುವನಾನಿ ವಿಶ್ವಾ ।
ತಸ್ಯ ನಾಕ್ಷಸ್ತಪ್ಯತೇ ಭೂರಿಭಾರಃ ಸನಾದೇವ ನ ಶೀರ್ಯತೇ ಸನಾಭಿಃ ॥೧೩॥

### ಪದಪಾಠಃ

ಪಂಚಽಅರೇ । ಚಕ್ರೇ । ಪರಿಽವರ್ತಮಾನೇ । ತಸ್ಮಿನ್ । ಆ । ತಸ್ಥುಃ । ಭುವನಾನಿ । ವಿಶ್ವಾ ।
ತಸ್ಯ । ನ । ಅಕ್ಷಃ । ತಪ್ಯತೇ । ಭೂರಿಽಭಾರಃ । ಸನಾತ್ । ಏವ । ನ । ಶೀರ್ಯತೇ । ಸಽನಾಭಿಃ ॥ ೧೩ ॥

### ಸಾಯಣಭಾಷ್ಯಂ

ಪಂಚಾರೇ ಪಂಚರ್ತುರೂಪೈರರೈರ್ಯುಕ್ತೇ ಚಕ್ರೇ ಸಂವತ್ಸರಾತ್ಮಕೇ ಪರಿವರ್ತಮಾನೇ ಸಂವತ್ಸರ-ಪರಿವತ್ಸರಾದಿರೂಪೇಣ ಪುನಃಪುನರಾವರ್ತಮಾನೇ ಸತಿ ತಸ್ಮಿನ್ಕಾಲಚಕ್ರೇ ವಿಶ್ವಾ ಭುವನಾನಿ ಸರ್ವಾಣಿ ಭೂತಜಾತಾನಿ ವರ್ತಂತ ಇತ್ಯರ್ಥಃ । ಕಿಂಚ ತಸ್ಯ ಚಕ್ರಸ್ಯ ಮಧ್ಯೇ ವರ್ತಮಾನೋಽಕ್ಷೋ ಭೂರಿಭಾರಃ ಸಕಲಭುವನವಹನೇನ ಪ್ರಭೂತಭಾರೋಽಪಿ ನ ತಪ್ಯತೇ । ನ ಪೀಡ್ಯತೇ । ಕಿಂಚ ಸನಾದೇವ ಸನಾತನ ಏವ ಸನಾಭಿಃ ಸಮಾನನಾಭಿಕಃ ಸರ್ವದೈಕರೂಪನಾಭಿರಸೌ ನ ಶೀರ್ಯತೇ । ನ ಭಿದ್ಯತೇ । ಯಥಾ ಲೌಕಿಕರಥಾಕ್ಷೋ ಭಾರೇಣ ಭಗ್ನೋ ಭವತಿ ಅಕ್ಷಘಾತೇನ ಚ ನಾಭಿರ್ನಿವೃತಾ ಭವತಿ ತದ್ವದತ್ರಾಪಿ ನಾಸ್ತೀತ್ಯರ್ಥಃ ॥

### ಪ್ರತಿಪದಾರ್ಥ

**ಪಂಚಾರೇ**—ಋತುರೂಪವಾದ ಐದು ಅರಗಳಿಂದ ಕೂಡಿದ । **ಚಕ್ರೇ**—ಸಂವತ್ಸರ ರೂಪವಾದ ಚಕ್ರದಲ್ಲಿ । **ಪರಿವರ್ತಮಾನೇ**—ಸಂವತ್ಸರ, ಪರಿವತ್ಸರ ಇತ್ಯಾದಿ ರೂಪಗಳಿಂದ ಪುನಃ ಪುನಃ ಪರಿಭ್ರಮಣವನ್ನು ಹೊಂದುತ್ತಿರುವ । **ತಸ್ಮಿನ್**—ಕಾಲಚಕ್ರದಲ್ಲಿ । **ವಿಶ್ವಾ**—ಸಮಸ್ತವಾದ । **ಭುವನಾನಿ**—ಲೋಕಗಳೂ । **ಆ ತಸ್ಥುಃ**—ನೆಲೆಸಿವೆ । **ತಸ್ಯ**—ಈ ಚಕ್ರದ ನಡುವೆ ಇರುವುದೂ । **ಭೂರಿಭಾರಃ**—ಪ್ರಭೂತವಾದ ಭಾರವನ್ನು ವಹಿಸಿರುವುದೂ ಆದ । **ಅಕ್ಷಃ**—ರಥದ ಇರಚಿಯು । **ನ ತಪ್ಯತೇ**— ಕುಂಠಿತವಾಗುವುದಿಲ್ಲ । **ಸನಾದೇವ** – ಅತ್ಯಂತ ಪ್ರಾಚೀನವಾದರೂ ಸಹ । **ಸನಾಭಿಃ**—ಅದರ ಏಕಮಾತ್ರವಾದ ನಾಭಿಯು (ಕೇಂದ್ರವು) । **ನ ಶೀರ್ಯತೇ** — ಸವೆಯುವುದೇ ಇಲ್ಲ

### ಭಾವಾರ್ಥ

ಋತುರೂಪವಾದ ಐದು ಅರಗಳಿಂದ ಯುಕ್ತವಾದ ಸಂವತ್ಸರರೂಪವಾದ ಚಕ್ರದಲ್ಲಿ, ಸಂವತ್ಸರ, ಪರಿವತ್ಸರ ಇತ್ಯಾದಿ ರೂಪಗಳಿಂದ ಪುನಃ ಪುನಃ ಪರಿಭ್ರಮಣವನ್ನು ಹೊಂದುತ್ತಿರುವ ಈ ಕಾಲಚಕ್ರದಲ್ಲಿ ಸಮಸ್ತಲೋಕಗಳೂ ನೆಲೆಸಿವೆ. ಈ ಕಾಲಚಕ್ರದ ನಡುವೆ ಇರುವುದೂ, ಪ್ರಭೂತವಾದ ಭಾರವನ್ನು ವಹಿಸಿರುವುದೂ ಆದ ರಥದ ಇರಚಿಯು ಕುಂಠಿತವಾಗುವುದೇ ಇಲ್ಲ ಅತ್ಯಂತ ಪ್ರಾಚೀನವಾದರೂ ಸಹ ಇದರ ಏಕಮಾತ್ರವಾದ ನಾಭಿಯೂ ಸವೆಯು ವುದಿಲ್ಲ.

### English Translation

All beings abide in this five-spoked revolving wheel; the heavily-loaded axle is never heated; its eternal compact nave is never worn away.

### ವಿಶೇಷವಿಷಯಗಳು

ಅನಾದಿಯೂ ವಿಶ್ವಧಾರಕವೂ ಅಜರವೂ ಆದ ಕಾಲಚಕ್ರದ ಸ್ವರೂಪವನ್ನು ಈ ಋಕ್ಕಿನಲ್ಲಿ ವರ್ಣಿಸಿದೆ. **ಪಂಚಾರೇ ಚಕ್ರೇ ಪರಿವರ್ತಮಾನೇ ತಸ್ಮಿನ್** ಎಂಬ ಪಾದದಲ್ಲಿರುವ **ಪಂಚಾರೇ** ಎಂಬ ಪದಕ್ಕೆ **ಪಂಚಋತುರೂಪೈಃ ಅರೈಃ ಯುಕ್ತೇ** ಪಂಚಋತುಗಳ ರೂಪವಾದ ಅರಗಳಿಂದ ಕೂಡಿದ ಸಂವತ್ಸರಾತ್ಮಕವಾದ ಎಂದು ಕಾಲಚಕ್ರಕ್ಕೆ ವಿಶೇಷಣವಾಗಿದೆ. **ಹೇಮಂತ ಮತ್ತು** ಶಿಶಿರ ಋತುಗಳನ್ನು ಅವುಗಳ ಗುಣಸಾಮ್ಯದಿಂದ ಒಂದನ್ನಾಗಿ ಪರಿಗಣಿಸಿದರೆ ಋತುಗಳ ಸಂಖ್ಯೆಯು ಐದಾಗುವುದು ಎಂದು ಹಿಂದಿನ ಋಕ್ಕಿನಲ್ಲಿ ಸಾಯಣರು " **ಏತೇತ್ ಹೇಮಂತ ಶಿಶಿರಯೋಃ ಏಕತ್ವಾಭಿಪ್ರಾಯಂ** । " ಎಂಬ ವಾಕ್ಯದಿಂದ ವಿವರಿಸಿದ್ದಾರೆ. ಮತ್ತು ಈ ಅಭಿಪ್ರಾಯವನ್ನು ಶಂಕರಾದಿಗಳೂ ಹೇಳಿರುವುದನ್ನು ಪ್ರಶ್ನೋಪನಿಷದ್ವಾಕ್ಯವನ್ನುದಹರಿಸಿ ಹಿಂದೆ ತಿಳಿಸಿದೆ.

ಇದಲ್ಲದೆ **ಪಂಚಾರೇ ಚಕ್ರೇ** ಎಂಬುದನ್ನು ಆಧ್ಯಾತ್ಮಿಕವಾದ ದೃಷ್ಟಿಯಿಂದಲೂ ಅರ್ಥಮಾಡಬಹುದು. ವಿಶ್ವವೆಲ್ಲವೂ ಪಾಂಕ್ತವಾಗಿರುವುದರಿಂದಲೂ, ಪಾಂಕ್ತವಾಗಿರುವ ವಿಶ್ವವು ಅನಾದಿಯಾದ ಕಾಲಚಕ್ರದಲ್ಲಿ ನೆಲೆಸಿರುವುದರಿಂದಲೂ ಈ ವರ್ಣನೆಯು ಆ ಅಂಶವನ್ನೂ ವಿವರಿಸಬಹುದು ತೈತ್ತಿರೀಯೋಪನಿಷತ್ತಿನಲ್ಲಿ ಇದರ ವಿವರಣೆಯನ್ನು ಈ ರೀತಿಯಲ್ಲಿ ಹೇಳಿದೆ.

| | | | | |
|---|---|---|---|---|
| **ಪೃಥಿವೀ** | **ಅಂತರಿಕ್ಷಂ** | **ದ್ಯೌಃ** | **ದಿಶಃ** | **ಅವಾಂತರದಿಶಾಃ** |
| **ಅಗ್ನಿಃ** | **ವಾಯುಃ** | **ಆದಿತ್ಯಃ** | **ಚಂದ್ರಮಾ** | **ನಕ್ಷತ್ರಾಣಿ** |
| **ಆಪ** | **ಓಷಧಯೋ** | **ವನಸ್ಪತಯ** | **ಆಕಾಶ** | **ಆತ್ಮಾ** |

**ಇತ್ಯಧಿಭೂತಂ** ಇವೆಲ್ಲವೂ ಆಧಿಭೌತಿಕವಾದ ಪಾಂಕ್ತವು. **ಅಥಾಧ್ಯಾತ್ಮಂ**—ಇನ್ನು ಆಧ್ಯಾತ್ಮಿಕವಾದ ಪಾಂಕ್ತವನ್ನು ವಿವರಿಸಲಾಗುತ್ತದೆ—

| | | | | |
|---|---|---|---|---|
| **ಪ್ರಾಣೋ** | **ವ್ಯಾನೋ** | **ಅಪಾನ** | **ಉದಾನಃ** | **ಸಮಾನಃ** |
| **ಚಕ್ಷುಃ** | **ಶ್ರೋತ್ರಂ** | **ಮನೋ** | **ವಾಕ್** | **ತ್ವಕ್** |
| **ಚರ್ಮ** | **ಮಾಂಸಂ** | **ಸ್ನಾವಾ** | **ಅಸ್ಥಿ** | **ಮಜ್ಜಾ** |

ಇವೆಲ್ಲವೂ, ಪ್ರಾಣಾದಿ ವಾಯುವೂ, ಚಕ್ಷುರಾದೀಂದ್ರಿಯಪಾಂಕ್ತವೂ, ಚರ್ಮಾದಿ ಧಾತುಪಾಂಕ್ತವೂ ಆಗಿರುವುವು.

**ಏತದಧಿವಿಧಾಯ ಋಷಿರವೋಚತ್ । ಪಾಂಕ್ತಂ ವಾ ಇದಗ್ಂ ಸರ್ವಂ ।**
**ಪಾಂಕ್ತೇನೈವ ಪಾಂಕ್ತಗ್ಂ ಸ್ಪೃಣೋತೀತಿ ।**

(ತ್ತ್ಯ. ಉ. ೧-೭)

ವಿಶ್ವದ ಆಧಿಭೌತಿಕ ಮತ್ತು ಆಧ್ಯಾತ್ಮಿಕವಾದ ಅಂಶಗಳೆಲ್ಲವೂ ಈರೀತಿ ಪಂಚವಿಧಗಳಾಗಿರುವುವೆಂದು ಋಷಿಯು ಮೇಲಿನ ವಾಕ್ಯದಲ್ಲಿ ಹೇಳಿದ್ದಾನೆ. ಈ ಎರಡು ಪಾಂಕ್ತಗಳ ಸಂಯೋಗದಿಂದಲೇ ವಿಶ್ವವ್ಯವಹಾರವು ಎಂದು ವಿವರಿಸಿರುವುದರಿಂದ ಚಕ್ರಾತ್ಮಕವಾದ ಈ ಪಾಂಕ್ತವೂ ಕಾಲಚಕ್ರದಲ್ಲಿಯೇ ಅಂತರ್ಗತವಾಗಿದೆ. **ಪಂಚಾರೇ ಚಕ್ರೇ ತಸ್ಮಿನ್** ಎಂಬುದಕ್ಕೆ ಈ ದೃಷ್ಟಿಯಿಂದಲೂ ಅರ್ಥಮಾಡಬಹುದು.

**ಪರಿವರ್ತಮಾನೇ — ಸಂವತ್ಸರಪರಿವತ್ಸರಾದಿರೂಪೇಣ ಪುನಃ ಪುನಃ ಆವರ್ತಮಾನೇ ಸತಿ ।** ಸಂವತ್ಸರ, ಪರಿವತ್ಸರ ಇತ್ಯಾದಿರೂಪಗಳಿಂದ ಪುನಃ ಪುನಃ ಭ್ರಮಣವನ್ನು ಹೊಂದುತ್ತಿರುವ ಎಂದು **ಕಾಲಚಕ್ರಕ್ಕೆ** ವಿಶೇಷಣವಾಗಿದೆ. ಕಾಲಚಕ್ರವನ್ನು **ಸಂವತ್ಸರ, ಪರಿವತ್ಸರ, ಇದಾವತ್ಸರ, ಇದ್ವತ್ಸರ** ಮತ್ತು **ವತ್ಸರ** ಎಂದು ಐದು ಹೆಸರುಗಳಿಂದ ಕರೆಯುವ ಪದ್ಧತಿಯಿದ್ದಿತು. ಈ ಹೆಸರುಗಳಲ್ಲಿಯೂ ಮತ್ತು ಇವುಗಳ ಪರಿಗಣನೆಯಲ್ಲಿಯೂ ಅಲ್ಲಲ್ಲೇ ಅಲ್ಪಸ್ವಲ್ಪ ವ್ಯತ್ಯಾಸಗಳೂ ಕಂಡುಬರುತ್ತವೆ ಉದಾಹರಣೆಗೆ ತೈತ್ತಿರೀಯಸಂಹಿತೆಯಲ್ಲಿ,

**ಯತ್ತೇ ರುದ್ರ ಪುರೋ ಧನುಸ್ತದ್ವಾತೋ ಅನು ವಾತು ತೇ ತಸ್ಮೈ ತೇ ರುದ್ರ ಸಂವತ್ಸರೇಣ ನಮಸ್ಕರೋಮಿ**

| | | | | | |
|---|---|---|---|---|---|
| **ಯತ್ತೇ ರುದ್ರ ದಕ್ಷಿಣಾಧನುಃ** | ,, | ,, | ,, | **ಪರಿವತ್ಸರೇಣ** | ,, |
| **ಯತ್ತೇ ರುದ್ರ ಪಶ್ಚಾದ್ಧನುಃ** | ,, | ,, | ,, | **ಇದಾವತ್ಸರೇಣ** | ,, |
| **ಯತ್ತೇ ರುದ್ರೋತ್ತರಾದ್ಧನುಃ** | ,, | ,, | ,, | **ಇದುವತ್ಸರೇಣ** | ,, |
| **ಯತ್ತೇ ರುದ್ರೋಪರಿ ಧನುಃ** | ,, | ,, | ,, | **ವತ್ಸರೇಣ** | ,, |

**(ತೈ. ಸಂ. ೫-೫-೭-೨, ೩, ೪)**

ಎಂಬ ವಾಕ್ಯಗಳಲ್ಲಿ, ಸಂವತ್ಸರ, ಪರಿವತ್ಸರ, ಇದಾವತ್ಸರ, ಇದುವತ್ಸರ ಮತ್ತು ವತ್ಸರ ಎಂಬ ಪ್ರಭೇದಗಳಿವೆ. ವಾಜಸನೇಯ ಸಂಹಿತೆಯಲ್ಲಿಯೂ ಇದೇ ವಿಭಾಗವಿರುತ್ತದೆ. (ವಾ. ಸಂ. ೨೭-೪೫). ಆದರೆ ಅಲ್ಲಿ ಇದ್ವತ್ಸರ ಎಂದಿರುವುದಕ್ಕೆ ಬದಲಾಗಿ ತೈತ್ತಿರೀಯಸಂಹಿತೆಯಲ್ಲಿ ಇದುವತ್ಸರವೆಂದಿದೆ. ಉಳಿದುವು ಸಮಾನವಾಗಿರುತ್ತವೆ. ತೈತ್ತಿರೀಯ ಬ್ರಾಹ್ಮಣದಲ್ಲಿ,

**ಸಂವತ್ಸರೋಽಸಿ ಪರಿವತ್ಸರೋಽಸಿ । ಇದಾವತ್ಸರೋಽಸೀದುವತ್ಸರೋಽಸಿ । ಇದ್ವತ್ಸರೋಽಸಿ ವತ್ಸರೋಽಸಿ । ತಸ್ಯ ತೇ ವಸಂತಶ್ಶಿರಃ । ಗ್ರೀಷ್ಮೋ ದಕ್ಷಿಣಃ ಪಕ್ಷಃ .... .... .... ॥**

**(ತೈ. ಬ್ರಾ. ೩-೧೦-೪-೧)**

ಸಂವತ್ಸರ, ಪರಿವತ್ಸರ, ಇದಾವತ್ಸರ, ಇದುವತ್ಸರ, ಇದ್ವತ್ಸರ ಮತ್ತು ವತ್ಸರ ಎಂಬ ಆರು ಪ್ರಭೇದಗಳಿವೆ. ಆದರೆ ಇದೇ ತೈತ್ತಿರೀಯ ಬ್ರಾಹ್ಮಣದಲ್ಲಿ,

**ಅಗ್ನಿರ್ವಾವ ಸಂವತ್ಸರಃ । ಆದಿತ್ಯಃ ಪರಿವತ್ಸರಃ । ಚಂದ್ರಮಾ ಇದಾವತ್ಸರಃ । ವಾಯುರನು ವತ್ಸರಃ ।**

(ತೈ. ಬ್ರಾ ೧-೪-೧೦-೧)

ಎಂಬಲ್ಲಿ- ಸಂವತ್ಸರ, ಪರಿವತ್ಸರ, ಇದಾವತ್ಸರ ಮತ್ತು ಅನುವತ್ಸರ ಎಂಬ ನಾಲ್ಕು ಪ್ರಭೇದಗಳು ಮಾತ್ರ ಹೇಳಲ್ಪಟ್ಟಿವೆ. ಇದಲ್ಲದೇ ತೈತ್ತಿರೀಯಸಂಹಿತೆಯ ಬೇರೊಂದು ಭಾಗದಲ್ಲಿ,

**ಇದುವತ್ಸರಾಯ ಪರಿವತ್ಸರಾಯ ಸಂವತ್ಸರಾಯ ಕೃಣುತಾ ಬೃಹನ್ನಮಃ ॥**

(ತೈ. ಸಂ. ೫-೭-೨-೪)

ಇದುವತ್ಸರ, ಪರಿವತ್ಸರ ಮತ್ತು ಸಂವತ್ಸರ ಎಂಬ ಮೂರು ಪ್ರಭೇದಗಳನ್ನು ಮಾತ್ರ ಹೇಳಿದೆ. ಈ ಎಲ್ಲಾ ವಾಕ್ಯಗಳಲ್ಲಿಯೂ ಸಂವತ್ಸರ ಮತ್ತು ಪರಿವತ್ಸರ ಈ ಎರಡು ಹೆಸರುಗಳು ಸಾಧಾರಣವಾಗಿವೆ. ಕಾಲಚಕ್ರವು ರೂಪಗಳಲ್ಲಿ ಅನಾದಿಯಿಂದಲೂ ಚಕ್ರದಂತೆ ಸುತ್ತುತ್ತಿದೆಯೆಂದು ವರ್ಣಿತವಾಗಿದೆ.

**ತಸ್ಮಿನ್ನಾತಸ್ಥುರ್ಭುವನಾನಿ ವಿಶ್ವಾ** — ಸಕಲಲೋಕಗಳೂ ಈ ಕಾಲಚಕ್ರದಲ್ಲಿ ನೆಲೆಸಿವೆಯೆಂದರ್ಥ. ಸಂವತ್ಸರ, ಪರಿವತ್ಸರ ಇತ್ಯಾದಿಹೆಸರುಗಳು ಈ ಮಹಾಕಾಲದ ಅವಯವಗಳು. ಈ ಮಹಾಕಾಲವೇ ಜಗತ್ತಿನ ಮತ್ತು ಜಗದ್ವ್ಯವಹಾರಗಳಿಗೆಲ್ಲಾ ಆಧಾರವಾಗಿದೆ. ಇದನ್ನೇ **ಸ್ವಭಾವ, ನಿಯಮ, ಬ್ರಹ್ಮ** ಇತ್ಯಾದಿ ನಾನಾ ಹೆಸರುಗಳಿಂದ ಕರೆಯುತ್ತಾರೆ.

**ಕಿಂ ಕಾರಣಂ, ಬ್ರಹ್ಮ ? ಕುತಃ ಸ್ಮ ಜಾತಾ ಜೀವಾಮ ಕೇನ ಕ್ವ ಚ ಸಂಪ್ರತಿಷ್ಠಾಃ ।**
**ಅಧಿಷ್ಠಿತಾಃ ಕೇನ ಸುಖೇತರೇಷು ವರ್ತಾಮಹೇ ಬ್ರಹ್ಮವಿದೋ ವ್ಯವಸ್ಥಾಂ ॥**

(ಶ್ವೇ. ಉ. ೧-೧)

ಜಗತ್ತಿನ ಮೂಲಕಾರಣವಾವುದು ? ಅದು ಬ್ರಹ್ಮವೇ ? ಅಥವಾ ಬ್ರಹ್ಮವೆಂಬುದು ಯಾವುದು ? ಅದರ ಸ್ವರೂಪವೇನು ? ನಮ್ಮ ಉತ್ಪತ್ತಿಯು ಎಲ್ಲಿಂದ ? ಯಾವುದರ ಅವಲಂಬನದಿಂದ ನಾವು ಜೀವಿಸುತ್ತೇವೆ ? ನಮ್ಮ ಸ್ಥಿತಿಗೆ ಆಧಾರವಾವುದು ? ನಮ್ಮ ಸುಖದುಃಖಗಳು ಎಲ್ಲಿಂದ ಸಂಭವಿಸುತ್ತವೆ ? ಎಂಬ ಪ್ರಶ್ನೆಗೆ ಈರೀತಿಯಾದ ಉತ್ತರವಿದೆ.

**ಕಾಲಃ ಸ್ವಭಾವೋ ನಿಯತಿರ್ಯದೃಚ್ಛಾ ಭೂತಾನಿ ಯೋನಿಃ ಪುರುಷ ಇತಿ ಚಿಂತ್ಯಾ ।**

(ಶ್ವೇ. ಉ. ೧-೨)

ಜಗತ್ತಿನ ಈ ಮಹಾಮೂಲವನ್ನು **ಕಾಲವೆಂದು** ಕೆಲವರೂ, **ನಿಯತಿಯೆಂದು** ಕೆಲವರೂ, **ಸ್ವಭಾವವೆಂದು** ಕೆಲವರೂ, ಹೀಗೆಯೇ ಇನ್ನೂ ಕೆಲವು ಹೆಸರುಗಳಿಂದ ಬೇರೆ ಬೇರೆ ತತ್ತ್ವಜ್ಞರೂ ಕರೆಯುತ್ತಾರೆ. ಆದರೆ,

**ಸ್ವಭಾವಮೇಕೇ ಕವಯೋ ವದಂತಿ ಕಾಲಂ ತಥಾನ್ಯೇ ಪರಿಮುಹ್ಯಮಾನಾಃ ।**
**ದೇವಸ್ಯೈಷ ಮಹಿಮಾ ತು ಲೋಕೇ ಯೇನೇದಂ ಭ್ರಾಮ್ಯತೇ ಬ್ರಹ್ಮಚಕ್ರಂ ॥**

(ಶ್ವೇ. ಉ. ೬-೧)

ಈ ಮಹಾಮೂಲವನ್ನು ಕೆಲವು ಕವಿಗಳು **ಸ್ವಭಾವವೆಂದೂ**, ಇನ್ನು ಕೆಲವರು **ಕಾಲವೆಂದೂ** ಕರೆಯುವರು. ಇದರ ಸ್ವರೂಪವನ್ನು ಪೂರ್ಣವಾಗಿ ವರ್ಣಿಸಿವಂತಾಗುವುದಿಲ್ಲ. ಸಕಲಲೋಕವನ್ನೂ ತನ್ನ ಶಕ್ತಿಯಿಂದ ಸ್ಥಾಪಿಸಿ

ಬ್ರಹ್ಮಚಕ್ರವನ್ನೂ ಸಹ ಸುತ್ತುವಂತೆ ಮಾಡುತ್ತಿರುವವನು ಪರಮಪುರುಷನಾದ ಈಶ್ವರನು. ಅವನಿಂದಲೇ ಜಗದ್ಧೇತುವಾದ ಬ್ರಹ್ಮಚಕ್ರವೂ ಭ್ರಮಣವನ್ನು ಹೊಂದುತ್ತಿದೆಯೆಂದು ವರ್ಣಿಸಿದೆ. ಪ್ರಕೃತವಾದ ವರ್ಣನೆಯಲ್ಲಿ **ಕಾಲಚಕ್ರ**ವೆಂದು ವರ್ಣಿಸಿರುವುದನ್ನು ಬೇರೆಬೇರೆ ಹೆಸರುಗಳಿಂದ ವರ್ಣಿತವಾಗಿರುವ ಆದಿತತ್ತ್ವವೆಂದು ತಿಳಿಯಬೇಕು. ಯಾವ ಋಷಿಯಾಗಲಿ, ಯಾವ ಹೆಸರಿನಿಂದ ಈ ಆದಿತತ್ತ್ವವನ್ನು ಕರೆದರೂ ಸಹ ಈ ಆದಿಕಾರಣವನ್ನು ರಥಚಕ್ರಕ್ಕೆ ಹೋಲಿಸದೆ ಇದಕ್ಕೆ ಬೇರೆ ಅನುರೂಪವಾದ ಸಾಮ್ಯವನ್ನು ಹೇಳಲಾಗುವುದಿಲ್ಲ. ಆತ್ಮನೆಂದು ಕರಯಲಿ, ಬ್ರಹ್ಮನೆಂದು ಕರೆಯಲಿ, ನಿಯತಿಯೆಂದು ಕರೆಯಲಿ, ಇದಕ್ಕೂ ವ್ಯವಹಾರಜಗತ್ತಿಗೂ ಇರತಕ್ಕ ಸಂಬಂಧವನ್ನು ರಥಚಕ್ರಕ್ಕೂ ಅದರ ಅರಗಳಿಗೂ ಇರುವ ಸಂಬಂಧಕ್ಕೆ ಹೋಲಿಸಲೇಬೇಕಾಗಿದೆ. ಆ ಉಪಮಾನವನ್ನು ತೋರಿಸಿ ಆದಿತತ್ತ್ವವನ್ನು ವರ್ಣಿಸುವ ಕ್ರಮವನ್ನು ಸಾಧಾರಣವಾಗಿ ಎಲ್ಲಾ ಉಪನಿಷತ್ತುಗಳಲ್ಲಿಯೂ ನೋಡಬಹುದು. ಉದಾಹರಣೆಗೆ, ಬೃಹದಾರಣ್ಯಕೋಪನಿಷತ್ತಿನಲ್ಲಿ,

> **ಸ ವಾ ಅಯಮಾತ್ಮಾ ಸರ್ವೇಷಾಂ ಭೂತಾನಾಮಧಿಪತಿಃ ಸರ್ವೇಷಾಂ ಭೂತಾನಾಂ ರಾಜಾ ತದ್ಯಥಾ ರಥನಾಭೌ ಚ ರಥನೇಮೌ ಚಾರಾಃ ಸರ್ವೇ ಸಮರ್ಪಿತಾ ಏವಮೇವಾಸ್ಮಿನ್ನಾತ್ಮನಿ ಸರ್ವಾಣಿ ಭೂತಾನಿ ಸರ್ವೇ ದೇವಾಃ ಸರ್ವೇ ಲೋಕಾಃ ಸರ್ವೇ ಪ್ರಾಣಾಃ ಸರ್ವ ಏವಾತ್ಮನಃ ಸಮರ್ಪಿತಾಃ ॥**
>
> (ಬೃ. ಉ. ೨-೫-೧೫)

ಈ ಆತ್ಮನು ಸಕಲ ಭೂತಗಳಿಗೂ ಪ್ರಭುವು. ರಥಚಕ್ರದ ನಾಭಿಯಲ್ಲಿಯೂ ನೇಮಿಯಲ್ಲಿಯೂ ಅರಗಳೆಲ್ಲವೂ ಯಾವ ರೀತಿ ಅಂತರ್ಗತವಾಗಿಯೂ, ನಿಯತವಾದ ಸ್ಥಿತಿಗಳುಳ್ಳವಾಗಿಯೂ ಇರುತ್ತವೆಯೋ ಅದರಂತೆ ಸಕಲ ಭೂತಗಳೂ ಈ ಆತ್ಮನಲ್ಲಿ ಅಂತರ್ಗತವಾಗಿಯೂ, ಈ ಆತ್ಮನ ನಿಯಮನಕ್ಕೆ ಅಧೀನವಾದವಾಗಿಯೂ ಇವೆ. ಸಕಲ ಭೂತಗಳೂ, ಸಕಲ ದೇವತೆಗಳೂ, ಸಕಲ ಲೋಕಗಳೂ, ಸಕಲ ಪ್ರಾಣಗಳೂ ಸಮಸ್ತವೂ ಈ ಆತ್ಮನ ನಿಯಮನಕ್ಕೆ ಅರ್ಪಿತವಾಗಿ ತದಾಯತ್ತವಾಗಿವೆಯೆಂದು ಈ ಜಗದಾತ್ಮನಿಗೂ ರಥಚಕ್ರಕ್ಕೂ ಸಾಮ್ಯವನ್ನು ಹೇಳಿದೆ. ಇದರಂತೆಯೇ ಮುಂಡಕೋಪನಿಷತ್ತಿನಲ್ಲಿಯೂ ಮತ್ತು ಪ್ರಶ್ನೋಪನಿಷತ್ತಿನಲ್ಲಿಯೂ ಸಹ,

> **ಅರಾ ಇವ ರಥನಾಭೌ ಸಂಹತಾ ಯತ್ರ ನಾಡ್ಯಃ ಸ ಏಷೋಽಂತಶ್ಚರತೇ ಬಹುಧಾ ಜಾಯಮಾನಃ ।**
>
> (ಮು. ೨-೨-೬)
>
> **ಅರಾ ಇವ ರಥನಾಭೌ ಪ್ರಾಣೇ ಸರ್ವಂ ಪ್ರತಿಷ್ಠಿತಂ ।**
> **ಋಚೋ ಯಜೂಗ್ಂಷಿ ಸಾಮಾನಿ ಯಜ್ಞಃ ಕ್ಷತ್ರಂ ಬ್ರಹ್ಮ ಚ ॥**
>
> (ಪ್ರಶ್ನ. ೨-೬)
>
> **ಅರಾ ಇವ ರಥನಾಭೌ ಕಲಾ ಯಸ್ಮಿನ್ಪ್ರತಿಷ್ಠಿತಾಃ ।**
> **ತಂ ವೇದ್ಯಂ ಪುರುಷಂ ವೇದ ಯಥಾ ಮಾ ವೋ ಮೃತ್ಯುಃ ಪರಿವ್ಯಥಾ ಇತಿ ॥**
>
> ( ಪ್ರಶ್ನ. ೬-೬ )

ಇತ್ಯಾದಿಯಾಗಿ ಜೀವಾತ್ಮನಿಗೂ ಜೀವದ ಸಕಲವಾದ ಅವಯುವಗಳಿಗೂ ಇರುವ ಸಂಬಂಧವನ್ನೂ, ಪ್ರಾಣಕ್ಕೂ ಋಗಾದಿಗಳಿಗೂ ಇರುವ ಸಂಬಂಧವನ್ನೂ, ಆದಿಪುರುಷನಿಗೂ ಸಕಲಕಲೆಗಳಿಗೂ ಇರುವ ಸಂಬಂಧವನ್ನೂ, ರಥನಾಭಿಗೂ ಅರಗಳಿಗೂ ಇರುವ ಸಂಬಂಧಕ್ಕೆ ಹೋಲಿಸಿದೆ. ಆದುದರಿಂದ ಪ್ರಕೃತವಾದ ಋಕ್ಕಿನಲ್ಲಿ ಈ ಮಹಾ ತತ್ತ್ವವನ್ನು ಕಾಲಚಕ್ರವೆಂದು ವರ್ಣಿಸಿದ್ದರೂ ಇತರ ಕಡೆಗಳಲ್ಲಿ ಬ್ರಹ್ಮ, ಆತ್ಮ ಇತ್ಯಾದಿ ಹೆಸರುಗಳಿಂದ ವರ್ಣಿತ ವಾಗಿರುವ ಆದಿತತ್ತ್ವವೇ ಎಂದು ತಿಳಿಯಬೇಕು.—ಆದುದರಿಂದಲೇ ಈ ಋಕ್ಕಿನ ಉತ್ತರಾರ್ಧದ ವರ್ಣನೆಯು ಇದರ ಅನಾದ್ಯನಂತತ್ವಗಳನ್ನೂ ಸಹ ವರ್ಣಿಸಿದೆ. ಇದರಂತೆಯೇ ಶ್ವೇತಾಶ್ವತರೋಪನಿಷತ್ತಿನಲ್ಲಿ ಈ ಏಕತತ್ತ್ವವನ್ನು ಚಕ್ರಕ್ಕೂ ಇದರ ಅವಯುವಭೂತಗಳಾದ ವಿಶ್ವದ ನಾನಾಭಾಗಗಳನ್ನು ಚಕ್ರದ ಅವಯುವಗಳಿಗೂ ಹೋಲಿಸಿದೆ.

**ತಮೇಕನೇಮಿಂ ತ್ರಿವೃತಂ ಷೋಡಶಾಂತಂ ಶತಾರ್ಧಾರಂ ವಿಂಶತಿಪ್ರತ್ಯರಾಭಿಃ ।**
**ಅಷ್ಟಕೈಃ ಷಡ್ಭಿರ್ವಿಶ್ವರೂಪೈಕಪಾಶಂ ತ್ರಿಮಾರ್ಗಭೇದಂ ದ್ವಿನಿಮಿತ್ತೈಕಮೋಹಂ ॥**
(ಶ್ವೇ. ಉ. ೧-೪)

ವಿಶ್ವಾತ್ಮನಾದ ಈ ಏಕತತ್ತ್ವಕ್ಕೆ ಒಂದೇ ನೇಮಿಯೂ, ತ್ರಿವೃತವೂ, ಷೋಡಶಾಂತವೂ, ಐವತ್ತು ಅರಗಳೂ, ಇಪ್ಪತ್ತು ಪ್ರತ್ಯರಗಳೂ, ಅಷ್ಟಾತ್ಮಕಗಳಾದ ಆರು ಗುಂಪುಗಳೂ, ವಿಶ್ವವನ್ನೆಲ್ಲಾ ಬಂಧಿಸತಕ್ಕ ಒಂದೇ ಪಾಶವೂ, ಮೂರು ಮಾರ್ಗಗಳೂ, ಮತ್ತು ನಿಮಿತ್ತದ್ವಯುವುಳ್ಳ ಒಂದು ಮೋಹವೂ ಇದೆಯೆಂದು ವರ್ಣಿಸಿದೆ. ಇಲ್ಲಿ ವರ್ಣಿತವಾಗಿರುವ ತ್ರಿವೃತವು ಸತ್ತ್ವರಜಸ್ತಮುಸ್ಸುಗಳೆಂಬ ಗುಣಗಳೂ, ಐದು ಬುದ್ಧೀಂದ್ರಿಯಗಳೂ, ಐದು ಕರ್ಮೇಂದ್ರಿಯಗಳೂ, ಮನಸ್ಸೂ ಸಹ ಪಂಚಭೂತಗಳೊಡನೆ ಸೇರಿ ಷೋಡಶಾಂತವಾಗುತ್ತವೆ. (೧೬)

ಏಷ ಪ್ರತ್ಯಯಸರ್ಗೋ ವಿಪರ್ಯಯಾಶಕ್ತಿತುಷ್ಟಿಸಿದ್ಧ್ಯಾಖ್ಯಃ ।

**ಗುಣವೈಷಮ್ಯವಿಮರ್ದಾತ್ ತಸ್ಯ ಚ ಭೇದಾಸ್ತು ಪಂಚಾಶತ್ ॥**
( ಸಾಂಖ್ಯಕಾರಿಕಾ ೪೬ )

ಎಂಬ ಶ್ಲೋಕದಲ್ಲಿ ವಿವರಿಸಿರುವಂತೆ **ಪ್ರತ್ಯಯಸರ್ಗ** ಎಂದರೆ ಅಜ್ಞಾನ ; **ಅಶಕ್ತಿ, ತುಷ್ಟಿ** ಮತ್ತು **ಸಿದ್ಧಿ** ಇವು ತಮ್ಮ ರೂಪಾಂತರಗಳೊಡನೆ ಐವತ್ತು ವಿಧಗಳಾಗಿರುವುವು. ಇವನ್ನು **ಶತಾರ್ಧಾರಂ** $\left(\frac{೧೦೦}{೨}\right)$ ಐವತ್ತು ಅರಗಳಿಗೆ ಹೋಲಿಸಿದೆ. ಇವುಗಳಿಗೆ ಹಾಸುಹೊಕ್ಕಿನಂತಿರುವ ಪ್ರತ್ಯರಗಳ ಸಾಮ್ಯವನ್ನು ಕೊಡುತ್ತಾ ಹೀಗೆಯೇ ಪಂಚ ಜ್ಞಾನೇಂದ್ರಿಯಗಳನ್ನೂ ಪಂಚಕರ್ಮೇಂದ್ರಿಯಗಳನ್ನೂ ಅವುಗಳಿಗೆ ಅನುರೂಪವಾದ ಹತ್ತುವಿಷಯಗಳನ್ನೂ ಸೇರಿಸಿ ಇಪ್ಪತ್ತು ಪ್ರತ್ಯರಗಳಿಗೆ ಹೋಲಿಸಿದೆ. **ಅಷ್ಟಕೈಷ್ಷಡ್ಭಿಃ** ಎಂದರೆ ಅಷ್ಟಾತ್ಮಕಗಳಾದ ಆರು ಗುಂಪುಗಳು ಯಾವುವೆಂದರೆ,

೧) ಪಂಚಭೂತಗಳೂ, ಮನಸ್ಸೂ, ಬುದ್ಧಿಯೂ ಮತ್ತು ಅಹಂಕಾರವೂ ಈ ಎಂಟೂ ಸೇರಿ ಮೊದಲನೆಯ ಗುಂಪಾಗುತ್ತದೆ. ಇದರಂತೆಯೇ,

೨) ದೇಹದ ಅಷ್ಟಧಾತುಗಳು ;

೩) ಅಷ್ಟಾತ್ಮಕಗಳಾದ ಅಪೌರುಷೇಯವಾದ ಶಕ್ತಿಗಳು
೪) ಅಷ್ಟ ಭಾವಗಳು
೫) ಅಷ್ಟ ದೇವತೆಗಳು
೬) ಅಷ್ಟ ಗುಣಗಳು

ಇವುಗಳ ಸಮೂಹವನ್ನು ಅಷ್ಟಕೈಷ್ಷಡ್ಭಿಃ ಎಂದು ವರ್ಣಿಸಿದೆ. ಮತ್ತು **ಕಾಮವನ್ನು** ಈ ರಥದ ಹಗ್ಗವೆಂದೂ ಧರ್ಮ, ಅಧರ್ಮ ಮತ್ತು ಜ್ಞಾನಗಳನ್ನು ರಥಚಕ್ರದ ಮೂರು ಮಾರ್ಗಗಳೆಂದೂ ಕರೆದಿದೆ. ಇದೆ ರೀತಿಯಲ್ಲಿ ವಿಶ್ವತತ್ತ್ವವನ್ನು ರಥದ ಚಕ್ರಕ್ಕೂ ವಿಶ್ವದ ನಾನಾ ಭಾಗಗಳನ್ನು ಚಕ್ರದ ಬೇರೆ ಬೇರೆ ಅವಯವಗಳಿಗೂ ಹೋಲಿಸುವುದು ಶ್ರುತಿವಾಕ್ಯಗಳಲ್ಲಿ ಒಂದು ಸಾಧಾರಣವಾದ ಅಂಶವಾಗಿದೆ. ಅದರಂತೆಯೇ ಪ್ರಕೃತವಾದ ಋಕ್ಕಿನಲ್ಲಿಯೂ ಸಹ **" ಪಂಚಾರೇ ಚಕ್ರೇ ಪರಿವರ್ತಮಾನೇ ತಸ್ಮಿನ್ನಾತಸ್ಥುರ್ಭುವನಾನಿ ವಿಶ್ವಾ "** ಎಂದು ವರ್ಣಿಸಿದೆ. ಕಾಲರೂಪವಾದ ಈ ವಿಶ್ವಚಕ್ರದಲ್ಲಿ ವತ್ಸರ, ಪರಿವತ್ಸರ ಇತ್ಯಾದ್ಯವಯವಗಳು ಪುನಃ ಪುನಃ ಪರಿವರ್ತಿತ ವಾಗಿ ಜರಾಮರಣಗಳುಳ್ಳವಾದರೂ ಸಹ ಈ ಮೂಲತತ್ತ್ವವು ಮಾತ್ರ ಶಾಶ್ವತವಾದುದಾಗಿರುತ್ತದೆ. ಆದುದರಿಂದಲೇ **ನಾಕ್ಷಸ್ತಪ್ಯತೇ ; ಸನಾದೇವ ಶೀರ್ಯತೇ ಸನಾಭಿಃ** ಎಂದು ಇದರ ಅಕ್ಷಯ್ಯವಾದ ಸ್ಥಿತಿಯನ್ನು ವರ್ಣಿಸಿದೆ. ವಿಶ್ವದ ಭಾರವನ್ನೆಲ್ಲಾ ವಹಿಸಿರುವುದರಿಂದ ಇದರ ಅಕ್ಷವು ಭೂರಿಭಾರವುಳ್ಳದ್ದಾಗಿರುತ್ತದೆ. ಆದರೂ ಸಹ ಅದು ಕುಂಠಿತವಾಗುವುದಿಲ್ಲ. ಈ ಕಾಲರೂಪವಾದ ವಿಶ್ವಚಕ್ರವನ್ನು ಕಠೋಪನಿಷತ್ತಿನಲ್ಲಿ ವರ್ಣಿಸಿರುವ ಅಗ್ನಿಗೂ, ವಾಯು ವಿಗೂ ಸೂರ್ಯನಿಗೂ ಹೋಲಿಸಬಹುದು.

**ಅಗ್ನಿರ್ಯಥೈಕೋ ಭುವನಂ ಪ್ರವಿಷ್ಟೋ ರೂಪಂ ರೂಪಂ ಪ್ರತಿರೂಪೋ ಬಭೂವ ।**
**ಏಕಸ್ತಥಾ ಸರ್ವ ಭೂತಾಂತರಾತ್ಮಾ ರೂಪಂ ರೂಪಂ ಪ್ರತಿರೂಪೋ ಬಹಿಶ್ಚ ॥**

**ಸೂರ್ಯೋ ಯಥಾ ಸರ್ವಲೋಕಸ್ಯ ಚಕ್ಷುರ್ನ ಲಿಪ್ಯತೇ ಚಾಕ್ಷುಷೈರ್ಬಾಹ್ಯದೋಷೈಃ ।**
**ಏಕಸ್ತಥಾ ಸರ್ವಭೂತಾಂತರಾತ್ಮಾ ನ ಲಿಪ್ಯತೇ ಲೋಕದುಃಖೇನ ಬಾಹ್ಯಃ ॥**

(ಕಠ. ಉಪನಿಷತ್. ೫-೯-೧೧)

ಯಾವರೀತಿಯಲ್ಲಿ ಒಂದೇ ಆದ ತತ್ತ್ವವು ವಿಶ್ವದಲ್ಲಿ ಹರಡಿ ಪ್ರತಿಯೊಂದು ಪದಾರ್ಥದ ರೂಪವನ್ನೂ ಪಡೆಯುತ್ತದೆಯೋ ಅದರಂತೆಯೇ ಈ ಕಾಲತತ್ತ್ವವೂ ಸಹ ವಿಶ್ವವನ್ನು ವ್ಯಾಪಿಸಿ ಆಯಾ ವೈಯಕ್ತಿಕವಾದ ಪರಿಮಾಣವನ್ನು ಪಡೆಯು ತ್ತದೆ. ಆದರೆ ಯಾವ ರೀತಿಯಲ್ಲಿ ಸರ್ವಜಗತ್ತಿಗೂ ಚಕ್ಷುಸ್ಸಾದ ಸೂರ್ಯನು ತನ್ನನ್ನು ವೀಕ್ಷಿಸುವ ಕಣ್ಣಿನ ಬಾಹ್ಯ ದೋಷಗಳಿಂದ ಲಿಪ್ತನಾಗುವುದಿಲ್ಲವೋ, ಅದೇ ರೀತಿಯಲ್ಲಿ ಈ ಕಾಲತತ್ತ್ವವು ವೈಯಕ್ತಿಕವಾದ ಜಗತ್ತಿನ ದೋಷ ಗಳಿಂದ ತಾನು ಲಿಪ್ತವಾಗುವುದಿಲ್ಲ. ಅದು ನಶ್ವರವೂ ಅಲ್ಲ ಸನಾತನವೂ ಸ್ಥಿರವೂ ಆದುದಾಗಿದೆ.

**ಯಥಾ ಲೌಕಿಕರಥಾಕ್ಷಃ ಭಾರೇಣ ಭಗ್ನೋ ಭವತಿ ಅಕ್ಷಘಾತೇನ ಚ ನಾಭಿರ್ವಿವೃತಾ ಭವತಿ ತದ್ವ-ದತ್ರಾಪಿ ನಾಸ್ತೀತ್ಯರ್ಥಃ ॥**

ಯಾವ ರೀತಿಯಲ್ಲಿ ಪ್ರಾಪಂಚಿಕವಾದ ರಥದ ಅಕ್ಷವು ತನ್ನ ಶಕ್ತಿಗೆ ಮೀರಿದ ಭಾರವನ್ನು ವಹಿಸುವುದರಿಂದ ಮುರಿಯುತ್ತದೆಯೋ ಅದರಿಂದ ಅದರ ನಾಭಿಯು ವಿಕೃತವಾಗಿ ಆಗುತ್ತದೆಯೋ ಅದರಂತೆ ವಿಶ್ವಭಾರವನ್ನು ವಹಿಸು

ವುದಾದರೂ ಸಹ ಈ ರಥಚಕ್ರದ ಅಕ್ಷವೂ ಮುರಿಯುವುದಿಲ್ಲ. ಇದರ ನಾಭಿಯೂ ವಿಕೃತವಾಗುವುದಿಲ್ಲವೆಂದು ಸಾಯಣರು ಉತ್ತರಾರ್ಧದ ತಾತ್ಪರ್ಯವನ್ನು ವಿವರಿಸಿದ್ದಾರೆ.

ವ್ಯಾಕರಣಪ್ರಕ್ರಿಯಾ

**ಪರಿವರ್ತಮಾನೇ**—ವೃತು ವರ್ತನೇ ಧಾತು. ಲಟಿಗೆ ಶಾನಚಾದೇಶ. ಶಪ್ ವಿಕರಣ. **ಪುಗಂತಲಘೂಪಧಸ್ಯಚ** (ಪಾ. ಸೂ. ೭-೩-೮೬) ಎಂಬುದರಿಂದ ಧಾತುವಿನ ಲಘೂಪಧೆಗೆ ಗುಣ. **ತಾಸ್ಯನುದಾತ್ತೇತ್**-(ಪಾ.ಸೂ. (೬-೧-೧೮೬) ಎಂಬುದರಿಂದ ಲಸಾರ್ವಧಾತುಕವು ಅನುದಾತ್ತವಾಗುವುದರಿಂದ ಧಾತುಸ್ವರ ಉಳಿಯುತ್ತದೆ. ಪ್ರಾದಿ ಸಮಾಸದಲ್ಲಿ ಕೃದುತ್ತರಪದಪ್ರಕೃತಿಸ್ವರ ಬರುತ್ತದೆ.

**ವಿಶ್ವಾ**—ನಪುಂಸಕಬಹುವಚನದಲ್ಲಿ **ಶೇಶ್ಛಂದಸಿ ಬಹುಲಂ** (ಪಾ ಸೂ. ೬-೧-೭೦) ಎಂಬುದರಿಂದ ಶಿಗೆ **ಲೋಪ.**

**ತಪ್ಯತೇ**—ತಪ ಸಂತಾಪೇ ಧಾತು. ಕರ್ಮಣಿಯಲ್ಲಿ ಲಟ್ ಪ್ರಥಮಪುರುಷಏಕವಚನಾಂತರೂಪ. ತಿಙಂತ ನಿಘಾತಸ್ವರ ಬರುತ್ತದೆ.

**ಭೂರಿಭಾರಃ**—ಭೂರಿ ಭಾರಃ ಯಸ್ಯ ಸಃ ಬಹುವ್ರೀಹಿಯಲ್ಲಿ ಪೂರ್ವಪದಪ್ರಕೃತಿಸ್ವರ ಬರುತ್ತದೆ.

**ಶೀರ್ಯತೇ**—ಶೄ ಹಿಂಸಾಯಾಂ ಧಾತು. ಕರ್ಮಣಿಯಲ್ಲಿ **ಲಟ್. ಸಾರ್ವಧಾತುಕೇ ಯಕ್** (ಪಾ. ಸೂ. ೩-೧-೬೭) ಎಂಬುದರಿಂದ ಯಕ್ ಬಂದಾಗ **ಋತ ಇದ್ಧಾತೋಃ** ಎಂಬುದರಿಂದ ಧಾತುವಿಗೆ ಇತ್ವ. ರ ಪರವಾಗಿ ಬಂದಾಗ ದೀರ್ಘ. ತಿಙಂತನಿಘಾತಸ್ವರ ಬರುತ್ತದೆ.

**ಸನಾಭಿಃ**—ಸಮಾನಃ ನಾಭಿಃ ಯಸ್ಯ ಸಃ ಸನಾಭಿಃ-**ಸಮಾನಸ್ಯ ಛಂದಸ್ಯಮೂರ್ಧ**-(ಪಾ. ಸೂ. ೬-೩-೮೪) ಎಂಬುದರಿಂದ ಸಮಾನಶಬ್ದಕ್ಕೆ ಸಭಾವ-ಬಹುವ್ರೀಹಿಯಲ್ಲಿ ಪೂರ್ವಪದಪ್ರಕೃತಿಸ್ವರ ಬರುತ್ತದೆ. ॥ ೧೩ ॥

———:o:———

ಸಂಹಿತಾಪಾಠಃ

## ಸನೇಮಿ ಚಕ್ರಮಜರಂ ವಿ ವಾವೃತ ಉತ್ತಾನಾಯಾಂ ದಶ ಯುಕ್ತಾ ವಹಂತಿ ।
## ಸೂರ್ಯಸ್ಯ ಚಕ್ಷೂ ರಜಸೈತ್ಯಾವೃತಂ ತಸ್ಮಿನ್ನಾರ್ಪಿತಾ ಭುವನಾನಿ ವಿಶ್ವಾ ॥ ॥ ೧೪ ॥

। ಪದಪಾಠಃ ।

ಸಽನೇಮಿ । ಚಕ್ರಂ । ಅಜರಂ । ವಿ । ವವೃತೇ । ಉತ್ತಾನಾಯಾಂ । ದಶ । ಯುಕ್ತಾಃ । ವಹಂತಿ ।

ಸೂರ್ಯಸ್ಯ । ಚಕ್ಷುಃ । ರಜಸಾ । ಏತಿ । ಆಽವೃತಂ । ತಸ್ಮಿನ್ । ಅರ್ಪಿತಾ । ಭುವನಾನಿ । ವಿಶ್ವಾ ॥ ೧೪ ॥

### ಸಾಯಣಭಾಷ್ಯಂ

ಸನೇಮಿ ಸಮಾನನೇಮ್ಯೇಕಪ್ರಕಾರಬಹಿರ್ವಲಯಮಕ್ಷೀಣನೇಮಿ ಚಕ್ರಂ ಸಂವತ್ಸರಾಖ್ಯಮಜರಂ ಸದಾತನಮಪಿ ಜರಾರಹಿತಂ ವಿ ವವೃತೇ । ಪುನಃಪುನರ್ವಿಶೇಷೇಣ ವರ್ತತೇ । ಉತ್ತಾನಾಯಾಮೂರ್ಧ್ವತನಾಯಾಮೀಷಾಯಾಮುಪರಿವಿಸ್ತೃತಭೂಮ್ಯಾಂ ವಾ ದಶೇಂದ್ರಾದಯಃ ಪಂಚ ಲೋಕಪಾಲಾ ನಿಷಾದಪಂಚ-ಮಾಶ್ಚತ್ವಾರೋ ಬ್ರಾಹ್ಮಣಾದಯೋ ವರ್ಣಾ ಮಿಲಿತ್ವಾ ದಶಸಂಖ್ಯಾಕಾ ಯುಕ್ತಾಃ ಸ್ವಸ್ವವ್ಯಾಪಾರಯುಕ್ತಾ ವಹಂತಿ । ನಿರ್ವಹಂತಿ । ಕೃತ್ಸ್ನಂ ಜಗನ್ನಿರ್ವಹಂತೀತ್ಯರ್ಥಃ । ತನ್ನಿರ್ವಾಹಾರ್ಥತ್ವಾತ್ಕಾಲಸ್ಯ । ಕಿಂಚ ಸೂರ್ಯಸ್ಯಾದಿತ್ಯಸ್ಯ ಚಕ್ಷುಃ ಖ್ಯಾನಸ್ವಭಾವಂ ಸರ್ವಸ್ಯ ಚಕ್ಷುಃಸ್ಥಾನೀಯಂ ವಾ ಮಂಡಲಂ । ಚಕ್ಷುಃ ಖ್ಯಾತೇರ್ವಾ ಚಷ್ಟೇರ್ವೇತಿ ನಿರುಕ್ತಂ । ೪-೩ । ರಜಸಾ ವೃಷ್ಟ್ಯುದಕೇನಾವೃತಂ ವ್ಯಾಪ್ತಮೇತಿ । ಗಚ್ಛತಿ । ಉದಕಂ ರಜ ಉಚ್ಯತ ಇತಿ ಯಾಸ್ಕಃ । ನಿ ೪-೧೯ । ತಾದೃಶೇ ಮಂಡಲೇ ವಿಶ್ವಾ ಭುವನಾನಿ ಸರ್ವಾಣಿ ಭೂತಜಾತಾನ್ಯಾರ್ಪಿತಾ । ಅರ್ಪಿತಾನಿ । ತದಧೀನತ್ವಾತ್ತೇಷಾಂ ॥

### ಪ್ರತಿಪದಾರ್ಥ

**ಸನೇಮಿ** – (ಯಾವಾಗಲೂ ಜೀರ್ಣಸದೇ) ಒಂದೇ ಪ್ರಕಾರವಾದ ಬಹಿರ್ವಲಯವುಳ್ಳದ್ದೂ । **ಅಜರಂ**— ಅಕ್ಷಯ್ಯವಾದದ್ದೂ ಆದ । **ಚಕ್ರಂ**— ಈ ವಿಶ್ವಚಕ್ರವು । **ವಿ ವವೃತೇ** — ಪುನಃ ಪುನಃ ಸುತ್ತುತ್ತಿದೆ । **ಉತ್ತಾನಾಯಾಂ**— ಇದರ ಊರ್ಧ್ವಭಾಗದಲ್ಲಿ । **ದಶ**— ಇಂದ್ರಾದಿ ಪಂಚಲೋಕಪಾಲಕರೂ ಮತ್ತು ನಿಷಾದಪಂಚಮರಾದ ಬ್ರಾಹ್ಮಣಾದಿ ವರ್ಣದವರೂ । **ಯುಕ್ತಾ**—ತಮ್ಮ ತಮ್ಮ ನಿರ್ದಿಷ್ಟವಾದ ಕರ್ತವ್ಯಗಳಲ್ಲಿ ಯುಕ್ತರಾಗಿ । **ವಹಂತಿ**—ಜಗತ್ತಿನ ಕಾರ್ಯವನ್ನು ನಿರ್ವಹಿಸುತ್ತಾರೆ । **ಸೂರ್ಯಸ್ಯ**— ಸೂರ್ಯನ । **ಚಕ್ಷುಃ**—ಜಗಚ್ಚಕ್ಷುರೂಪವಾದ ಮಂಡಲವು । **ರಜಸಾ**—ಉದಕದಿಂದ । **ಆವೃತಂ**—ವ್ಯಾಪ್ತವಾಗಿ । **ಏತಿ**—ಸಂಚರಿಸುತ್ತದೆ । **ತಸ್ಮಿನ್**—(ವಿಶ್ವವ್ಯಾಪಿಯಾದ) ಆ ಮಂಡಲದಲ್ಲಿ । **ವಿಶ್ವಾ ಭುವನಾನಿ**— ಸಮಸ್ತಲೋಕವೂ । **ಅರ್ಪಿತಾ**—ಅರ್ಪಿಸಲ್ಪಟ್ಟವೆ.

### ॥ ಭಾವಾರ್ಥ ॥

ಒಂದೇ ಸಮನಾದ ಬಹಿರ್ವಲಯವುಳ್ಳದ್ದೂ, ಅಕ್ಷಯ್ಯವೂ ಆದ ಈ ವಿಶ್ವಚಕ್ರವು ಪುನಃ ಪುನಃ ಸುತ್ತುತ್ತಿದೆ. ಇದರ ಊರ್ಧ್ವಭಾಗದಲ್ಲಿ ಇಂದ್ರಾದಿಪಂಚಲೋಕಪಾಲಕರೂ ಮತ್ತು ಪಂಚವರ್ಣದ ಮಾನವರೂ ತಮ್ಮ ತಮ್ಮ ನಿರ್ದಿಷ್ಟವಾದ ಕರ್ತವ್ಯದಲ್ಲಿ ಯುಕ್ತರಾಗಿ ಜಗತ್ತಿನ ಕಾರ್ಯವನ್ನು ನಿರ್ವಹಿಸುತ್ತಾರೆ. ಜಗಚ್ಚಕ್ಷುರೂಪವಾದ ಸೂರ್ಯನ ಮಂಡಲವು ಉದಕದಿಂದ ವ್ಯಾಪ್ತವಾಗಿ ಸಂಚರಿಸುತ್ತದೆ ವಿಶ್ವವ್ಯಾಪಿಯಾದ ಆ ಮಂಡಲದಲ್ಲಿ ಸಮಸ್ತಲೋಕವೂ ಅರ್ಪಿಸಲ್ಪಟ್ಟಿದೆ. (ಸ್ಥಾಪಿಸಲ್ಪಟ್ಟಿದೆ).

## English Translation

The even-fellied, undecaying wheel, repeatedly revolves : ten, united on the upper surface, bear (the world) : the orb of the sun proceeds, invested with water, and in it are all beings deposited.

ವಿಶೇಷವಿಷಯಗಳು

ಹಿಂದಿನ ಋಕ್ಕಿನ ಭಾವವನ್ನೇ ಈ ಋಕ್ಕಿನಲ್ಲೂ ಹೇಳಿದ್ದರೂ ಸಹ ಈ ವಿಶ್ವಚಕ್ರದ ನಿಯಮನಕ್ಕೆ ಅಧೀನವಾಗಿ ಜಗದ್ವ್ಯವಹಾರವು ಅನುಸ್ಯೂತವಾಗಿ ನಡೆಯುತ್ತಿದೆಯೆಂದು ವರ್ಣಿಸಿರುವುದು ಇದರ ವಿಶೇಷವಿಷಯವಾಗಿದೆ. ಈ ಸಂದರ್ಭದಲ್ಲಿ ಕಾಲಚಕ್ರಕ್ಕೂ ಆದಿತ್ಯಮಂಡಲಕ್ಕೂ ತಾದಾತ್ಮ್ಯವನ್ನು ತೋರಿಸಿದೆ. ಒಂದು ದೃಷ್ಟಿಯಿಂದ ಆದಿತ್ಯನ ಪರಿಭ್ರಮಣವು ಕಾಲಾಯತ್ತವೆಂದೂ, ಇನ್ನೊಂದು ದೃಷ್ಟಿಯಿಂದ ಕಾಲದ ಗಮನಾಗಮನಗಳು ಆದಿತ್ಯಾಯತ್ತವೆಂದೂ ಹಿಂದೆ ತಿಳಿಸಿದೆ. ಇಲ್ಲಿಯೂ ಹಿಂದಿನ ಋಕ್ಕಿನಲ್ಲಿಯೂ ಎರಡಕ್ಕೂ ಅಭೇದವನ್ನು ಸೂಚಿಸಿ ಇಂದ್ರಾದಿಲೋಕಪಾಲಕರ ವ್ಯವಹಾರವೂ ಕೂಡ ತದಧೀನವೆಂದು ಹೇಳಿದೆ. ಇದೇ ಭಾವವನ್ನು ಬೃಹದಾರಣ್ಯಕದಲ್ಲಿ ಈರೀತಿ ಹೇಳಿದೆ.

**ಯಸ್ಮಾದರ್ವಾಕ್ಸಂವತ್ಸರೋಽಹೋಭಿಃ ಪರಿವರ್ತತೇ ।**
**ತದ್ದೇವಾ ಜ್ಯೋತಿಷಾಂ ಜ್ಯೋತಿರಾಯುರ್ಹೋಪಾಸತೇಽಮೃತಂ ॥**
(ಬೃ. ಉ. ೪-೪-೧೬)

ಎಂಬ ವಾಕ್ಯದಲ್ಲಿ " **ಸನೇಮಿ ಚಕ್ರಮಜರಂ ವಿ ವವೃತೇ** ", " **ಸೂರ್ಯಸ್ಯ ಚಕ್ಷುರೇತಿ** " ಎಂದು ಪ್ರಕೃತವಾದ ಋಕ್ಕಿನಲ್ಲಿ ವರ್ಣಿತವಾಗಿರುವ ಅಂಶಗಳನ್ನು ಹೇಳಿದೆ. ಈ ವಾಕ್ಯಕ್ಕೆ ಶಂಕರಾಚಾರ್ಯರು ಈರೀತಿ ವ್ಯಾಖ್ಯಾನ ಮಾಡಿದ್ದಾರೆ.

**ಸಂವತ್ಸರಃ ಕಾಲಾತ್ಮಾ ಸರ್ವಸ್ಯ ಜನಿಮತಃ ಪರಿಚ್ಛೇತ್ತಾ ಯಮಪರಿಚ್ಛಿಂದನ್ನರ್ವಾಗೇವ ವರ್ತತೇಽಹೋಭಿಃ ಸ್ವಾವಯವೈರಹೋರಾತ್ರೈರಿತ್ಯರ್ಥಃ । ತಜ್ಜ್ಯೋತಿಷಾಂ ಜ್ಯೋತಿಃ ॥**

ಈ ಮೂಲತತ್ತ್ವದ ಆಧಾರದಮೇಲೆ ಸಂವತ್ಸರಾದಿಗಳು ತಮ್ಮ ಆವೃತ್ತಿರೂಪವಾದ ಭ್ರಮಣವನ್ನಿಟ್ಟು ಕೊಂಡು ಲೋಕವ್ಯವಹಾರವನ್ನು ನಡೆಸುತ್ತಿವೆ. ಇದು ಸಕಲತೇಜಸ್ಸುಗಳಿಗಿಂತಲೂ ಅಧಿಕವಾದ ತೇಜಸ್ಸುಳ್ಳದ್ದು ಎಂದು ವಿಶ್ವವ್ಯವಹಾರಕ್ಕೆ ಆಧಾರವಾದ ಮೂಲತತ್ತ್ವವನ್ನು ವಿವರಿಸಿ ಅನಂತರ,

**ಯಸ್ಮಿನ್ಪಂಚ ಪಂಚಜನಾ ಆಕಾಶಶ್ಚ ಪ್ರತಿಷ್ಠಿತಃ ।**
**ತಮೇವ ಮನ್ಯ ಆತ್ಮಾನಂ ವಿದ್ವಾನ್ಬ್ರಹ್ಮಾಮೃತೋಽಮೃತಂ ॥**
(ಬೃ. ಉ. ೪-೪-೧೭)

ಎಂಬ ಶ್ಲೋಕವಲ್ಲಿ " **ಉತ್ತಾನಾಯಾಂ ದಶ ಯುಕ್ತಾ ವಹಂತಿ** " ಎಂದು ಪ್ರಕೃತವಾದ ಋಕ್ಕಿನಲ್ಲಿ ಹೇಳಿರುವ ವಿಷಯವನ್ನು ತಿಳಿಸಿದೆ. ಇದಕ್ಕೆ ಶಂಕರಾಚಾರ್ಯರು ವ್ಯಾಖ್ಯಾನವನ್ನು ಮಾಡುತ್ತಾ,

**ಕಿಂಚ ಯಸ್ಮಿನ್ಬ್ರಹ್ಮಣಿ** (ಈ ಮೂಲತತ್ತ್ವವನ್ನು ಕಾಲ, ಸ್ವಭಾವ, ನಿಯತಿ, ಬ್ರಹ್ಮ ಇತ್ಯಾದ್ಯನೇಕ ಹೆಸರುಗಳಿಂದ ಕರೆಯುವುದನ್ನು ಹಿಂದೆ ತಿಳಿಸಿದೆ). **ಪಂಚ ಪಂಚಜನಾ ಗಂಧರ್ವಾದಯಃ ಪಂಚೈವ ಸಂಖ್ಯಾಕಾ ಗಂಧರ್ವಾಃ ಪಿತರೋ ದೇವಾ ಅಸುರಾ ರಕ್ಷಾಂಸಿ ನಿಷಾದಪಂಚಮಾ ವಾ ವರ್ಣಾ ಆಕಾಶಶ್ಚಾವ್ಯಾಕೃತಾಖ್ಯೋ ಯಸ್ಮಿನ್ಸೂತ್ರಮೋತಂ ಚ ಪ್ರೋತಂ ಚ ಯಸ್ಮಿನ್ಪ್ರತಿಷ್ಠಿತಃ ॥**

ಈ ಮೂಲತತ್ತ್ವದ ಆಧಾರದಮೇಲೆ ಗಂಧರ್ವಾದಿ ಪಂಚಸಂಖ್ಯಾಕವಾದ ದೇವತೆಗಳಸಮೂಹವೂ, ಪಂಚವರ್ಣಾತ್ಮಕವಾದ ಮಾನವಸಮೂಹವೂ ತಮ್ಮ ತಮ್ಮ ವ್ಯವಹಾರಗಳನ್ನು ನಡೆಸುತ್ತಿರುವರು. ಇದರಲ್ಲಿ ಸಕಲವಿಶ್ವವೂ ಓತಪ್ರೋತಗಳಂತೆ ಹೆಣೆದುಕೊಂಡಿರುವುವು. ಇದನ್ನೇ **ಯಾಜ್ಞವಲ್ಕ್ಯರು ಗಾರ್ಗಿಗೆ ವಿವರಿಸುತ್ತಾ,**

ಏತಸ್ಯ ವಾ ಅಕ್ಷರಸ್ಯ ಪ್ರಶಾಸನೇ ಗಾರ್ಗಿ ಸೂರ್ಯಾಚಂದ್ರಮಸೌ ವಿಧೃತೌ ತಿಷ್ಠತ ಏತಸ್ಯ ವಾ ಅಕ್ಷರಸ್ಯ ಪ್ರಶಾಸನೇ ಗಾರ್ಗಿ ದ್ಯಾವಾಪೃಥಿವ್ಯೌ ವಿಧೃತೇ ತಿಷ್ಠತ ಏತಸ್ಯ ವಾ ಅಕ್ಷರಸ್ಯ ಪ್ರಶಾಸನೇ ಗಾರ್ಗಿ ನಿಮೇಷಾ ಮುಹೂರ್ತಾ ಅಹೋರಾತ್ರಾಣ್ಯರ್ಧಮಾಸಾ ಮಾಸಾ ಋತವಃ ಸಂವತ್ಸರಾ ಇತಿ ವಿಧೃತಾಸ್ತಿಷ್ಠಂತ್ಯೇತಸ್ಯ ವಾ ಅಕ್ಷರಸ್ಯ ಪ್ರಶಾಸನೇ ಗಾರ್ಗಿ ಪ್ರಾಚ್ಯೋಽನ್ಯಾ ನದ್ಯಃ ಸ್ಯಂದಂತೇ ಶ್ವೇತೇಭ್ಯಃ ಪರ್ವತೇಭ್ಯಃ ಪ್ರತೀಚ್ಯೋಽನ್ಯಾ ಯಾಂ ಯಾಂ ಚ ದಿಶಮನ್ವೇತಸ್ಯ ವಾ ಅಕ್ಷರಸ್ಯ ಪ್ರಶಾಸನೇ ಗಾರ್ಗಿ ದದತೋ ಮನುಷ್ಯಾಃ ಪ್ರಶಂಸಂತಿ ಯಜಮಾನಂ ದೇವಾ ದರ್ವೀಂ ಪಿತರೋಽನ್ವಾಯತ್ತಾಃ ||

(ಬೃ. ಉ. ೩-೮-೯)

ಎಲೈಗಾರ್ಗಿಯೇ, ಈ **ಅಕ್ಷರದ** (ಅಜರವೆಂದು ಪ್ರಕೃತವಾದ ಋಕ್ಕಿನಲ್ಲಿ ವರ್ಣಿಸಿದೆ) ಪ್ರಶಾಸನದಿಂದಲೇ ಸೂರ್ಯನೂ ಚಂದ್ರನೂ ಅವರವರ ನಿಯತವಾದ ಸ್ಥಾನದಲ್ಲಿದ್ದಾರೆ. ದ್ಯಾವಾಪೃಥಿವಿಗಳೂ ಅವುಗಳ ಎಲ್ಲೆಯನ್ನು ಮೀರುವುದಿಲ್ಲ. ನಿಮೇಷಗಳೂ, ಮುಹೂರ್ತಗಳೂ, ಅಹೋರಾತ್ರಗಳೂ, ಅರ್ಧಮಾಸಗಳೂ, ಮಾಸಗಳೂ, ಋತುಗಳೂ, ಸಂವತ್ಸರಗಳೂ ತಮ್ಮ ಪರಿಮಿತಿಯಲ್ಲಿ ಆವಿರ್ಭವಿಸುತ್ತಲೂ ಅದೃಶ್ಯರಾಗುತ್ತಲೂ ಇವೆ. ಈ ಅಕ್ಷರದ ಪ್ರಶಾಸನದಿಂದಲೇ ನದ್ಯಾದಿಗಳ ಪ್ರವಾಹಗಳೂ ಹರಿಯುತ್ತಿವೆ.

ಏತಸ್ಮಿನ್ನು ಖಲ್ವಕ್ಷರೇ ಗಾರ್ಗ್ಯಾಕಾಶ ಓತಶ್ಚ ಪ್ರೋತಶ್ಚೇತಿ ||

(ಬೃ. ಉ. ೩-೮-೧೧)

ಅಕ್ಷರದಲ್ಲೇ ಆಕಾಶಾದಿಜಗತ್ತೆಲ್ಲವೂ ಓತಪ್ರೋತಗಳಂತೇ ಸೇರಿಕೊಂಡಿವೆ. ಇದಲ್ಲದೆ,

ಭೀಷಾಸ್ಮಾದ್ವಾತಃ ಪವತೇ । ಭೀಷೋದೇತಿ ಸೂರ್ಯಃ । ಭೀಷಾಸ್ಮಾದಗ್ನಿಶ್ಚೇಂದ್ರಶ್ಚ ।

(ತೈ. ಉ. ೨-೮-೧)

ಈ ಮಹಾತತ್ತ್ವದ ಅನುಶಾಸನಕ್ಕೆ ವಿಧೇಯವಾಗಿಯೇ ವಾಯುವೂ, ಸೂರ್ಯನೂ, ಅಗ್ನಿಯೂ, ಇಂದ್ರನೂ ತಮ್ಮ ತಮ್ಮ ನಿಯತವಾದ ಕರ್ತವ್ಯಗಳನ್ನು ನಿರ್ವಹಿಸುತ್ತಾರೆ, ಇತ್ಯಾದಿಯಾಗಿ ಈ ಅಕ್ಷರದ ಪ್ರಭಾವವನ್ನು ನಾನಾಶ್ರುತಿಗಳಲ್ಲಿ ಪ್ರಶಂಸಿಸಿ ಜಗದ್ವ್ಯವಹಾರವೆಲ್ಲವೂ ತದಾಯತ್ತವೆಂದು ತಿಳಿಸಿದೆ.

**ದಶ ಯುಕ್ತಾ ವಹಂತಿ**—ಈ ವಾಕ್ಯದ ಒಟ್ಟಿನ ಅರ್ಥವನ್ನು ಮೇಲೆ ವಿವರಿಸಿದೆ. ಆದರೆ, ದಶಶಬ್ದಕ್ಕೆ ಅರ್ಥಾಂತರಗಳೂ ಸಾಧ್ಯವಾಗುವುದರಿಂದ ಪ್ರಕೃತವಾದ ಸಂದರ್ಭದಲ್ಲಿ ಶ್ರುತಿವಾಕ್ಯಗಳ ಆಧಾರದಮೇಲೆ ಈ ಪದಕ್ಕೆ ಯಾವ ಯಾವ ಅರ್ಥಗಳನ್ನು ಮಾಡಬಹುದೆಂದು ವಿಮರ್ಶಿಸಬೇಕು. ಸಾಯಣರು ಇದನ್ನು ವಿವರಿಸುತ್ತಾ,

ಇಂದ್ರಾದಯಃ ಪಂಚ ಲೋಕಪಾಲಾಃ ನಿಷಾದಪಂಚಮಾಶ್ಚತ್ವಾರೋ ಬ್ರಾಹ್ಮಣಾದಯೋ ವರ್ಣಾಃ ಮಿಳಿತ್ವಾ ದಶಸಂಖ್ಯಾಕಾಃ ||

ಇಂದ್ರಾದಿಪಂಚ ಲೋಕಪಾಲಕರೂ ಪಂಚವರ್ಣಾತ್ಮಕರಾದ ಮಾನವರೂ ಎಂದರ್ಥಮಾಡಿದಾರೆ. ಇಂದ್ರ ಯಮ, ವರುಣ, ಸೋಮ, ಬ್ರಹ್ಮ ಇವರೈವರೂ ಪಂಚಲೋಕಪಾಲಕರೆಂದು ಪ್ರಸಿದ್ಧರಾಗಿದ್ದಾರೆ. **ಪಂಚಜನಾಃ** ಎಂಬ ಪದವನ್ನು ವಿವರಿಸುತ್ತಾ ನಿರುಕ್ತಕಾರರು.

**ಪಂಚಜನಾ (ಮಮ ಹೋತ್ರಂ ಜುಷಧ್ವಂ) ಗಂಧರ್ವಾಃ ಪಿತರೋ ದೇವಾ ಅಸುರಾ ರಕ್ಷಾಂಸೀ-ತ್ಯೇಕೇ । ಚತ್ವಾರೋ ವರ್ಣಾ ನಿಷಾದಃ ಪಂಚಮ ಇತ್ಯೌಪಮನ್ಯವಃ ॥**

ಗಂಧರ್ವರು, ಪಿತೃಗಳು, ದೇವತೆಗಳು, ಅಸುರರು, ರಾಕ್ಷಸರು ಎಂದು ಐದುವಿಧವಾದ ಜನರೆಂದು ಕೆಲವರೂ, ಬ್ರಾಹ್ಮಣಾದಿ ನಾಲ್ಕುವರ್ಣದವರೊಂದಿಗೆ ನಿಷಾದರೆಂಬ ಐದನೆಯ ಗುಂಪೂ ಸೇರಿ **ಪಂಚಜನರೆಂದು** ಉಪಮನ್ಯುವೇ ಮುಂತಾದವರೂ ಅಭಿಪ್ರಾಯಪಡುವರೆಂದು ತಿಳಿಸಿದ್ದಾರೆ. ಹಿಂದೆ ದೇವತೆಗಳೆಲ್ಲರೂ ಅಗ್ನಿಯನ್ನು ಕುರಿತು ತಮಗಾಗಿ ಯಜ್ಞದಲ್ಲಿ ಅರ್ಪಿತವಾದ ಹವಿಸ್ಸನ್ನು ಸ್ವೀಕರಿಸಿ ಎಲ್ಲರಿಗೂ ಹಂಚಬೇಕೆಂದು ಪ್ರಾರ್ಥಿಸುವಾಗ ಅಗ್ನಿಯು ಅದಕ್ಕೆ ಒಪ್ಪಿಕೊಂಡು,

**ತದದ್ಯ ವಾಚಃ ಪ್ರಥಮಂ ಮಸೀಯ ಯೇನಾಸುರಾँ ಅಭಿ ದೇವಾ ಅಸಾಮ ।**
**ಊರ್ಜಾದ ಉತ ಯಜ್ಞಿಯಾಸಃ ಪಂಚ ಜನಾ ಮಮ ಹೋತ್ರಂ ಜುಷಧ್ವಂ ॥**

(ಋ. ಸಂ. ೧೦-೫೩-೪)

ಪಂಚಜನರೂ ಈ ಹವಿಸ್ಸನ್ನು ಭೋಗಿಸಲಿ ಎಂದು ಉತ್ತರವನ್ನು ಕೊಟ್ಟಿರುವ ಈ ವಾಕ್ಯವನ್ನು ಬೃಹದ್ದೇವತಾಕಾರರು ಉದಹರಿಸಿ ಪಂಚಜನರು ಯಾರು ಎಂಬ ಅಭಿಪ್ರಾಯಭೇದಗಳನ್ನು ತೋರಿಸಿ ಚರ್ಚಿಸಿದ್ದಾರೆ.

**ಪ್ರತ್ಯುವಾಚಾಥ ತಾನಗ್ನಿರ್ವಿಶ್ವೇದೇವಾ ಯದೂಚ ಮಾಂ ।**
**ತತ್ಕರಿಷ್ಯೇ ಜುಷಂತಾಂ ತು ಹೋತ್ರಂ ಪಂಚಜನಾ ಮಮ ॥**

(ಬೃ. ದೇ. ೬-೯೬)

ಎಂಬ ಶ್ಲೋಕದಲ್ಲಿ ಅಗ್ನಿಯು ದೇವತೆಗಳಿಗೆ ಕೊಟ್ಟ ಉತ್ತರವನ್ನು ತಿಳಿಸಿ ಅನಂತರ ಪಂಚಜನಶಬ್ದವನ್ನು ವಿವರಿಸಿದ್ದಾರೆ.

**ಶಾಲಾಮುಖ್ಯಃ ಪ್ರಣೀತಶ್ಚ ಪುತ್ರೋ ಗೃಹಪತೇಶ್ಚ ಯಃ ।**
**ಉತ್ತರೋ ದಕ್ಷಿಣಶ್ಚಾಗ್ನಿರೇತೇ ಪಂಚಜನಾಃ ಸ್ಮೃತಾಃ ॥**

(ಬೃ. ದೇ. ೭-೬೭)

ಎಂದರೆ, ಶಾಲೆಯ ಪ್ರವೇಶಭಾಗದಲ್ಲಿರುವ ಅಗ್ನಿಯೂ, ಪ್ರಣೀತವಾದ ಆವಹನೀಯಾಗ್ನಿಯೂ, ಯಜಮಾನನ ಪುತ್ರಭೂತವಾದ ಗಾರ್ಹಪತ್ಯಾಗ್ನಿಯೂ, ದಕ್ಷಿಣೋತ್ತರಾದಿಗಳೂ ಸೇರಿ ಈ ಐದುವಿಧವಾದ ಅಗ್ನಿಗಳೂ ಐದು ಬಗೆಯ ವರ್ಗಗಳೆಂದು ಸಾಂಪ್ರದಾಯಿಕವಾದ ವ್ಯವಹಾರ. ಈ ಮತವಲ್ಲದೆ, ಪುನಃ ಇದನ್ನೇ ವಿವರಿಸುತ್ತಾ,

**ಮನುಷ್ಯಾಃ ಪಿತರೋ ದೇವಾಃ ಗಂಧರ್ವೋರಗರಾಕ್ಷಸಾಃ ।**
**ಗಂಧರ್ವಾಃ ಪಿತರೋ ದೇವಾ ಅಸುರಾ ಯಕ್ಷರಾಕ್ಷಸಾಃ ॥**

(ಬೃ. ದೇ. ೭-೬೮)

ಮೊದಲನೆಯ ಅಭಿಪ್ರಾಯದಂತೆ **ಉರಗರಾಕ್ಷಸರು** ಒಂದು ಗುಂಪು; ಎರಡನೆಯ ಅಭಿಪ್ರಾಯದಂತೆ **ಯಕ್ಷರಾಕ್ಷಸರು** ಇನ್ನೊಂದು ಗುಂಪು. ಮತ್ತು,

**ಯೊಾಸ್ಕೋಪಮನ್ಯವಾವೇಶಾನಾಹತುಃ ಪಂಚ ವೈ ಜನಾನ್ ।**
**ನಿಷಾದಪಂಚಮಾನ್ವರ್ಣಾನ್ ಮನ್ಯತೇ ಶಾಕಟಾಯನಃ ॥**

(ಬೃ. ದೇ. ೭-೬೯)

ಯಾಸ್ಕರ ಮತವು ಮೊದಲನೆಯದೆಂದು ಬೃಹದ್ದೇವತಾಕಾರರು ಈ ವಾಕ್ಯದಲ್ಲಿ ಹೇಳಿರುವರು ಆದರೆ ನಿರುಕ್ತಕಾರರು ಉಪಮನ್ಯುವೇ ಮುಂತಾದವರ ಮತವನ್ನು ತಿಳಿಸಿದ್ದಾರೆಯೇ ವಿನಾ ತಮ್ಮ ಮತವನ್ನ ನಿಷ್ಕೃಷ್ಟವಾಗಿ ತಿಳಿಸಿಲ್ಲ. ಪ್ರಾಯಃ ಆ ಮತವನ್ನೇ ಅವರೂ ಅಂಗೀಕರಿಸಿರಬಹುದು.

**ಋತ್ವಿಜೋ ಯಜಮಾನಂ ಚ ಶಾಕಪೂಣಿಸ್ತು ಮನ್ಯತೇ ।**

(ಬೃ ದೇ. ೭-೧೦)

ಹೋತ್ರಾದಿ ನಾಲ್ಕು ಋತ್ವಿಕ್ಕುಗಳೂ, ಯಜಮಾನನೂ ಸೇರಿ ಐದು ಗುಂಪೆಂದು ಶಾಕಪೂಣಿಯರ ಮತವಾಗಿದೆ ಯೆಂದೂ ಇನ್ನೊಂದು ಅಭಿಪ್ರಾಯವನ್ನ ಹೇಳಿದೆ. ಇದಲ್ಲದೇ,

**ಚಕ್ಷುಃ ಶ್ರೋತ್ರಂ ಮನೋ ವಾಕ್ ಚ ಪ್ರಾಣಶ್ಚೇತ್ಯಾತ್ಮವಾದಿನಃ ।**
**ಗಂಧರ್ವಾಪ್ಸರಸೋ ದೇವಾ ಮನುಷ್ಯಾಃ ಪಿತರಸ್ತಥಾ ॥**
**ಸರ್ಪಾಶ್ಚ ಬ್ರಾಹ್ಮಣೇ ಚೈವ ಶ್ರೂಯಂತೇ ಹ್ಯೈತರೇಯಕೇ ॥**

(ಬೃ. ದೇ. ೭-೭೧)

ಚಕ್ಷುಸ್ಸು, ಶ್ರೋತ್ರ, ಮನಸ್ಸು, ವಾಕ್ಕು ಮತ್ತು ಪ್ರಾಣ ಈ ಐದೂ **ಪಂಚಜನ**ರೆಂದು ಅಧ್ಯಾತ್ಮವಾದಿಗಳ ಮತವು. ಗಂಧರ್ವಾದಿಗಳೆಂದು ಐತರೇಯಬ್ರಾಹ್ಮಣದಲ್ಲಿ ಉಕ್ತವಾಗಿದೆ. (ಐ. ಬ್ರಾ. ೩-೩೧). ಇಂತಹ ಪಂಚಜನರೂ ಹವಿಸ್ಸನ್ನು ಭೋಗಿಸಲಿ ಎಂದು ಅಗ್ನಿಯು ದೇವತೆಗಳಿಗೆ ಉತ್ತರವನ್ನು ಕೊಟ್ಟಿದ್ದಾನೆ ಎಂದು ಬೃಹದ್ದೇವತೆಯ ವಿವರಣೆಯಲ್ಲಿಯೂ ಅಭಿಪ್ರಾಯಭೇದಗಳು ಉದಹರಿಸಲ್ಪಟ್ಟಿವೆ. ಇಷ್ಟೇ ಅಲ್ಲದೆ ಛಾಂದೋಗ್ಯೋಪನಿಷದಾದಿ ಗಳಲ್ಲಿಯೂ ಪ್ರಕೃತವಾದ **ಋಕ್ಕಿ**ನಲ್ಲಿ ಉಕ್ತವಾಗಿರುವಂತೆ ದಶವಿಧವಾದ **ಲೋಕಪಾಲಾದಿಗಳು** ಜಗದ್ವ್ಯವಹಾರಕ್ಕೆ ಕಾರಣವಾಗಿಯೂ, ಈ ಮೂಲತತ್ತ್ವಕ್ಕೆ ಅಧೀನರಾಗಿಯೂ ಇದರ ಅನುಶಾಸನವನ್ನು ಪಾಲಿಸುತ್ತಲೂ ಇರುತ್ತಾ ರೆಂದು ವರ್ಣಿಸಿದೆ.

**ತಸ್ಮಾ ಉ ಹ ದದುಸ್ತೇ ವಾ ಏತೇ ಪಂಚಾನ್ಯೇ ಪಂಚಾನ್ಯೇ ದಶ ಸಂತಃ ।**

(ಛಾ. ಉ. ೪-೩-೮)

ಎಂಬಲ್ಲಿ, ಮೊದಲನೇ ಪಂಚಶಬ್ದಕ್ಕೆ ವಾಯು, ಅಗ್ನಿ, ಸೂರ್ಯ, ಚಂದ್ರ ಮತ್ತು ಉದಕವೆಂದೂ, ಎರಡನೇ ಪಂಚ ಶಬ್ದಕ್ಕೆ ಪ್ರಾಣ, ವಾಕ್, ಚಕ್ಷುಸ್ಸು, ಶ್ರೋತ್ರ ಮತ್ತು ಮನಸ್ಸೆಂದೂ ಅರ್ಥವಾಗುತ್ತದೆ. ಅಲ್ಲದೆ, ಸಾಯಣರು **ಪಂಚಲೋಕಪಾಲಾಃ** ಎಂದು ಪ್ರಕೃತವಾದ ಋಕ್ಕಿನಲ್ಲಿ ವಿವರಿಸಿರುವಂತೆಯೇ, ಛಾಂದೋಗ್ಯೋಪನಿಷತ್ತಿನಲ್ಲಿಯೂ ಸಹ

**ತೇ ವಾ ಏತೇ ಪಂಚ ಬ್ರಹ್ಮಪುರುಷಾಃ ಸ್ವರ್ಗಸ್ಯ ಲೋಕಸ್ಯ ದ್ವಾರಪಾಃ ।**

(ಛಾ. ಉ. ೩-೧೩-೬)

ಸ್ವರ್ಗದ ದ್ವಾರಪಾಲಕರಾದ **ಪಂಚಬ್ರಹ್ಮ ಪುರುಷರೆಂದು** ಹೇಳಿದೆ. ಹೀಗೆ ಅನೇಕ ಕಡೆಗಳಲ್ಲಿ "**ದಶ ಯುಕ್ತಾ ವಹಂತಿ**" ಎಂಬ ವರ್ಣನೆಯ ಅಂಶವು ಸೂಚಿತವಾಗಿದ್ದರೂ ಸಹ ಈ ಸಂದರ್ಭಗಳಲ್ಲೆಲ್ಲಾ **ದಶ, ಪಂಚ** ಈ ಪದಗಳಿಗೆ ಆಯಾ ಸನ್ನಿವೇಶಗಳಿಗನುಕೂಲವಾದಂತೆ ಅರ್ಥಮಾಡಿರುವುದರಿಂದ ಒಂದು ನಿಷ್ಕೃಷ್ಟವಾದ ಅರ್ಥವನ್ನು ಹೇಳಲಾಗುವುದಿಲ್ಲವೆಂದು ನಿರುಕ್ತಕಾರಾದಿಗಳೇ ಅಭಿಪ್ರಾಯಪಟ್ಟಿದ್ದಾರೆ. ಪ್ರಕೃತದಲ್ಲಿ ಸಾಯಣರು ವಿವರಿಸಿರುವಂತೆ **ಪಂಚ ಲೋಕಪಾಲಾಃ ಇಂದ್ರಾದಯಃ, ವರ್ಣಾತ್ಮಕಾಃ ಪಂಚಜನಾಃ** ಎಂಬ ಅರ್ಥವು ಹೊಂದಿಕೊಳ್ಳುವುದರಿಂದ ಬೇರೆ ರೀತಿಯಲ್ಲಿ ಅದಕ್ಕೆ ಅರ್ಥಮಾಡುವುದು ಅನುಚಿತವಾಗುವುದು. ಎಂದರೆ ದೇವಮಾನವಾದಿ ಸಕಲಭೂತಗಳೂ ಸಹ ಈ ವಿಶ್ವತತ್ತ್ವದ ಆಜ್ಞಾನುವರ್ತಿಗಳಾಗಿ ಲೋಕವ್ಯವಹಾರಗಳನ್ನು ನಿರ್ವಹಿಸುತ್ತಾರೆಂದರ್ಥ. ಅಮರವಾದ ಈ ಚಕ್ರದಲ್ಲಿ ಉನ್ನತ್ಯವನತಿಗಳು ಸಹಜವಾಗಿಯೇ ಇರುವುವು. ಮೂಲತತ್ತ್ವವು ಅಜರವಾದರೂ, ತದಧೀನವಾದ ಸಕಲಕ್ಕೂ ಆವಿರ್ಭಾವವೂ ತಿರೋಧಾನವೂ ಆವೃತ್ತಿಯ ರೂಪದಲ್ಲಿದ್ದೇ ಇರುವುದು. ಇದನ್ನೇ **ಬಾಧ್ವ**ನೆಂಬ ಋಷಿಯು ಐತರೇಯಾರಣ್ಯಕದಲ್ಲಿ,

> **ಮಹಾಪುರುಷ ಇತಿ ಯಮವೋಚಾಮ ಸಂವತ್ಸರ ಏವ ಪ್ರಧ್ವಂಸಯನ್ನನ್ಯಾನಿ ಭೂತಾನ್ಯೈಕ್ಯಾಭಾವಯನ್ನನ್ಯಾನಿ ತಸ್ಯೈತಸ್ಯಾಸಾವಾದಿತ್ಯೋ ರಸಃ । ಸ ಯಶ್ಚಾಯಮಶರೀರಃ ಪ್ರಜ್ಞಾತ್ಮಾ ಯಶ್ಚಾಸಾವಾದಿತ್ಯ ಏಕಮೇತದಿತಿ ವಿದ್ಯಾತ್ । ತಸ್ಮಾತ್ಪುರುಷಂ ಪುರುಷಂ ಪ್ರತ್ಯಾದಿತ್ಯೋ ಭವತಿ ॥**
>
> (ಐ. ಆ. ೩-೨-೩-೭ ರಿಂದ ೯)

ಯಾವನನ್ನು ನಾವು ಮಹಾಪುರುಷನೆನ್ನುತ್ತೇವೆಯೋ ಅವನೇ **ಸಂವತ್ಸರರೂಪನು.** ಆ ಸಂವತ್ಸರದ ಪರಿಭ್ರಮಣ ಕಾಲದಲ್ಲಿ ಸಕಲಭೂತಗಳಿಗೂ ಉನ್ನತ್ಯವನತಿಗಳು ಸಂಭವಿಸಲೇ ಬೇಕಾಗುತ್ತವೆ. ಈ ಸಂವತ್ಸರದ ಸಾರವೇ ಆದಿತ್ಯನು. ಅಶರೀರಿಯೂ, ಪ್ರಜ್ಞಾತ್ಮನೂ ಆದ ಪುರುಷನೂ ಈ ಆದಿತ್ಯನೂ ಒಂದೇ ವಿನಹ ಬೇರೆಬೇರೆಯಲ್ಲ. ಆದುದರಿಂದ ಪ್ರತಿ ಜೀವಾತ್ಮರಲ್ಲೂ ಈ ಆದಿತ್ಯನ ಅಂಶವೇ ವ್ಯಾಪಿಸಿ ಎಲ್ಲರಲ್ಲಿಯೂ ಒಂದೇ ತತ್ತ್ವದ ಪ್ರತಿಬಿಂಬವನ್ನು ಹರಡಿರುತ್ತದೆ. ಬಾಧ್ವಋಷಿಯು ಇಲ್ಲಿ ಮಹಾಪುರುಷನಿಗೂ, ಸಂವತ್ಸರಕ್ಕೂ ಆದಿತ್ಯನಿಗೂ ತಾದಾತ್ಮ್ಯವನ್ನು ಹೇಳುವಾಗ ತನ್ನ ಮತಕ್ಕೆ ಸಮರ್ಥನೆಯನ್ನು ತೋರಿಸುವುದಕ್ಕಾಗಿ,

> **ಚಿತ್ರಂ ದೇವಾನಾಮುದಗಾದನೀಕಂ ಚಕ್ಷುರ್ಮಿತ್ರಸ್ಯ ವರುಣಸ್ಯಾಗ್ನೇಃ ।**
> **ಆಪ್ರಾ ದ್ಯಾವಾಪೃಥಿವೀ ಅಂತರಿಕ್ಷಂ ಸೂರ್ಯ ಆತ್ಮಾ ಜಗತಸ್ತಸ್ಥುಷಶ್ಚ ॥**
>
> (ಋ. ಸಂ. ೧-೧೧೫-೧)

ಮಿತ್ರ, ವರುಣ ಮತ್ತು ಅಗ್ನಿಗಳಿಗೆ ಚಕ್ಷುಸ್ಸ್ವರೂಪನಾದ ಆದಿತ್ಯನು ಉದಯಿಸಿದ್ದಾನೆ. ಅವನು ಪೃಥ್ವಿಯನ್ನೂ ಅಂತರಿಕ್ಷವನ್ನೂ ಮತ್ತು ದ್ಯುಲೋಕವನ್ನೂ ಪೂರ್ಣವಾಗಿ ವ್ಯಾಪಿಸಿದ್ದಾನೆ. ಜಂಗಮಾತ್ಮಕವಾದ ಜಗತ್ತಿಗೂ, ಸ್ಥಾವರಾತ್ಮಕವಾದ ಜಗತ್ತಿಗೂ ಆದಿತ್ಯನೇ ಅಂತರಾತ್ಮನಾಗಿದ್ದಾನೆ. ಮತ್ತು ಜಗದ್ವ್ಯಾಪಿಯಾಗಿದ್ದಾನೆ ಎಂದು ಹೇಳಿರುವನು

**ಸೂರ್ಯಸ್ಯ ಚಕ್ಷುಃ ರಜಸಾ ಆವೃತಂ ಏತಿ**—ಇಲ್ಲಿ **ರಜಸ್** ಎಂಬ ಪದಕ್ಕೆ ಉದಕವೆಂದರ್ಥಮಾಡಿದೆ. ಈ ಪದಕ್ಕಿರತಕ್ಕ ಇನ್ನೂ ಇತರ ಅರ್ಥಗಳನ್ನೂ ತೋರಿಸಿ, ನಿರುಕ್ತಕಾರರು,

**ರಜೋ ರಜತೇರ್ಜ್ಯೋತೀ ರಜ ಉಚ್ಯತೇ । ಉದಕಂ ರಜ ಉಚ್ಯತೇ ।**
**ಲೋಕಾ ರಜಾಂಸ್ಯುಚ್ಯಂತೇ । ಅಸೃಗಹನೀ ಉಚ್ಯೇತೇ ॥**

(ನಿ. ೪-೧೯)

ಬೆಳಗು ಎಂಬರ್ಥವನ್ನು ಕೊಡುವ **ರಂಜ್** ಧಾತುವಿನಿಂದ ನಿಷ್ಪನ್ನವಾಗಿ **ರಜಸ್**ಶಬ್ದಕ್ಕೆ ಜ್ಯೋತಿಯೆಂದೂ, ಉದಕವೆಂದೂ, ಲೋಕಗಳೆಂದೂ ಅರ್ಥವಾಗುತ್ತದೆ. ರಕ್ತ ಮತ್ತು ಅಹಸ್ಸುಗಳಿಗೂ ಪರ್ಯಾಯನಾಮವಾಗಿದೆಯೆಂದು ವಿವರಿಸಿ ಈ ಅರ್ಥಗಳನ್ನು ಸಮರ್ಥಿಸಲು ನಿರುಕ್ತಕಾರರು ಋಕ್ಸಂಹಿತೆಯ ಉದಾಹರಣೆಗಳನ್ನು ಕೊಟ್ಟಿರುವುದನ್ನು ಇದರ ಹಿಂದಿನ ಭಾಗದ ಎಂದರೆ ಋಗ್ವೇದ ಸಂಹಿತೆಯ ೧೧ನೇ ಭಾಗದ 58ನೇ ಪೇಜಿನಲ್ಲಿ ವಿವರಿಸಿದೆ

**ಅಬ್ಜಾಮುಕ್ಥೈರಹಿಂ ಗೃಣೀಷೇ ಬುಧ್ನೇ ನದೀನಾಂ ರಜಃಸು ಷೀದನ್ ।**

(ಋ. ಸಂ. ೭-೩೪-೧೬)

ಎಂಬ ಋಕ್ಕನ್ನುದಹರಿಸಿ ಅಲ್ಲಿ **ರಜ**ಶ್ಶಬ್ದಕ್ಕೆ ಉದಕವೆಂದರ್ಥವಾಗುವುದೆಂದು ನಿರುಕ್ತಕಾರರು ಹೇಳಿರುವಂತೆ ಪ್ರಕೃತವಾದ ಋಕ್ಕಿನಲ್ಲಿಯೂ ಈ ಪದಕ್ಕೆ ಉದಕವೆಂದರ್ಥವು. **ರಜಸಾ ಆವೃತಂ** ಏತಿ ಎಂದರೆ ಉದಕದಿಂದ ಆವೃತವಾದ ಸೂರ್ಯಮಂಡಲವು ಅಂತರಿಕ್ಷದ ಸುತ್ತಲೂ ಸಂಚರಿಸುತ್ತದೆಯೆಂದರ್ಥಮಾಡಿದೆ.

**ಅಪಾಗ್ಂ ರಸಮುದ್ವಯಸಗ್ಂ ಸೂರ್ಯೇ ಸಂತಗ್ಂ ಸಮಾಹಿತಮಪಾಗ್ಂ ರಸಸ್ಯ ಯೋ ರಸಸ್ತಂ ವೋ ಗೃಹ್ಣಾಮ್ಯುತ್ತಮಂ।**

(ಶ. ಬ್ರಾ. ೫-೧-೨-೭)

ಚೈತನ್ಯದಾಯಿಯಾದ ಅಪ್ಪಿನ ಸಾರವು ಸೂರ್ಯನಲ್ಲಿ ಅಂತರ್ಗತವಾಗಿದೆ.

**ಏತಾ ವಾ ಆಪಃ ಸ್ವರಾಜೋ ಯನ್ಮರೀಚಯಸ್ತಾ ಯತ್ಸ್ಯಂದಂತೇ ।**

(ಶ. ಬ್ರಾ. ೫-೩-೪-೨೧)

ಪ್ರವಾಹಾತ್ಮಕಗಳಾದ ಈ ಸೂರ್ಯರಶ್ಮಿಗಳೇ ಉದಕಗಳು ಮತ್ತು ಅಪ್ರತಿಹತವಾದ ಪ್ರಸರಗಳುಳ್ಳವು ಇತ್ಯಾದಿಯಾಗಿ ಉದಕದಿಂದ ವ್ಯಾಪ್ತವಾದ ಸೂರ್ಯಮಂಡಲವನ್ನು ವರ್ಣಿಸಿರುವ ಅಂಶವನ್ನು ಇಲ್ಲಿ ವರ್ಣಿಸಿದೆ. [ಈ ವಿಷಯವನ್ನು ಇದೇ ಸೂಕ್ತದ ೧೨ನೇ ಋಕ್ಕಿನ ವಿಶೇಷವಿಷಯಗಳಲ್ಲಿ **ಪುರೀಷಿಣಂ** ಎಂಬ ಪದವನ್ನು ವಿವರಿಸುವಾಗ ವಿಶದವಾಗಿ ತಿಳಿಸಿದೆ].

**ಚಕ್ಷುಃ—ಚಕ್ಷುಃ ಖ್ಯಾತೇರ್ವಾ ಚಷ್ಟೇರ್ವಾ ।** ಜ್ಞಾನಾರ್ಥಕವಾದ **ಖ್ಯಾ** ಧಾತುವಿನಿಂದಾಗಲೀ ಅಥವಾ ದರ್ಶನಾರ್ಥಕವಾದ **ಚಕ್ಷ್** ಧಾತುವಿನಿಂದಾಗಲಿ ಈ ಪದವು ನಿಷ್ಪನ್ನವಾಗಿದೆಯೆಂದು ನಿರುಕ್ತಕಾರರು ಈ ಪದದ ನಿರ್ವಚನವನ್ನು ಹೇಳಿದ್ದಾರೆ. (ನಿ. ೪-೩) ಅದರ ಆಧಾರವನ್ನು ತೋರಿಸುತ್ತಾ ಸಾಯಣರು **ಖ್ಯಾನಸ್ವಭಾವಂ, ಸರ್ವಸ್ಯ ಚಕ್ಷುಃಸ್ಥಾನೀಯಂ ವಾ ।** ಜ್ಞಾನಸ್ವರೂಪವಾದ ಸೂರ್ಯಮಂಡಲವೆಂದಾಗಲಿ ಅಥವಾ ಜಗಚ್ಚಕ್ಷುರೂಪವಾದ ಆದಿತ್ಯಮಂಡಲವೆಂದಾಗಲಿ ಅರ್ಥವಾಗುತ್ತದೆಂದು ಈ ಪದಕ್ಕೆ ಅರ್ಥವನ್ನು ಹೇಳಿದ್ದಾರೆ.

**ಸೂರ್ಯೋ ಯಥಾ ಸರ್ವಲೋಕಸ್ಯ ಚಕ್ಷುಃ ।**

(ಕಠ. ೫-೧೧)

ಇತ್ಯಾದಿವಾಕ್ಯಗಳಲ್ಲಿ ವರ್ಣಿಸಿರುವಂತೆ ಪ್ರಕೃತವಾದ ಋಕ್ಕಿನಲ್ಲಿಯೂ ಸಹ ವರ್ಣಿಸಿದೆ. ಈ ಆದಿತ್ಯಮಂಡಲದಲ್ಲಿ **ವಿಶ್ವಾ ಭುವನಾನಿ ಅರ್ಪಿತಾ** ಎಂಬುದು ಭಾವವು.

ವ್ಯಾಕರಣಪ್ರಕ್ರಿಯಾ

**ಸನೇಮಿ**—ಸಮಾನಾ ನೇಮಿಃ ಯಸ್ಯ ತತ್ ಸನೇಮಿ. **ಸಮಾನಸ್ಯ ಛಂದಸಿ**—(ಪಾ. ಸೂ. ೬-೩-೮೪) ಎಂಬುದರಿಂದ ಸಮಾನವೆಂಬುವಕ್ಕೆ ಸಭಾವ. ಪೂರ್ವಪದಪ್ರಕೃತಿಸ್ವರ ಬರುತ್ತದೆ.

**ಅಜರಮ್**—ನ ವಿದ್ಯತೇ ಜರಾ ಯಸ್ಯ ತತ್ **ನಞಸುಭ್ಯಾಮ್**—(ಪಾ. ಸೂ. ೬-೨-೧೧೬) ಎಂಬುದರಿಂದ ಉತ್ತರಪದ ಆದ್ಯುದಾತ್ತಸ್ವರ ಬರುತ್ತದೆ.

**ವವೃತೇ**—ವೃತು ವರ್ತನೇ ಧಾತು. ಛಾಂದಸವಾಗಿ ಲಿಟ್. ಪ್ರಥಮಪುರುಷಏಕವಚನಾಂತರೂಪ. **ತಿಙಂತ** ನಿಘಾತಸ್ವರ ಬರುತ್ತದೆ.

**ಯುಕ್ತಾಃ**—ಯುಜಿರ್ ಯೋಗೇ ಧಾತು. ನಿಷ್ಠಾ ಎಂಬುದರಿಂದ ಕ್ತ ಪ್ರತ್ಯಯ. **ಚೋಃಕುಃ** ಎಂಬ ದರಿಂದ ಕುತ್ವ. **ಖರಿಚ** ಸೂತ್ರದಿಂದ ಚರ್ತ್ವ. ಪ್ರತ್ಯಯಸ್ವರದಿಂದ ಅಂತೋದಾತ್ತವಾಗುತ್ತದೆ.

**ಚಕ್ಷುಃ**—ಚಕ್ಷಿಙ್ ವ್ಯಕ್ತಾಯಾಂ ವಾಚಿ ಧಾತು. **ಚಕ್ಷೇಃ ಶಿಚ್ಚ** (ಉ. ಸೂ. ೨-೨೭೬) ಎಂಬುದರಿಂದ ಉಸಿ ಪ್ರತ್ಯಯ. ಅದು ಶಿತ್ತಾಗುತ್ತದೆ. ಶಿತ್ವವಿಧಾನಮಾಡಿರುವುದರಿಂದ ಖ್ಯಾಞಾದೇಶ ಬರುವುದಿಲ್ಲ. ನಿತ್ ಎಂದು ಅನುವೃತ್ತವಾಗುವುದರಿಂದ ಆದ್ಯುದಾತ್ತಸ್ವರ ಬರುತ್ತದೆ. ಚಕ್ಷತೇ ರೂಪಾದಿಕಮಿತಿ ಚಕ್ಷುಃ.

**ಅವೃತಮ್**—ವೃಞ್ ವರಣೇ ಧಾತು. ಕರ್ಮಣಿಯಲ್ಲಿ ಕ್ತ ಪ್ರತ್ಯಯ. **ಗತಿರನಂತರಃ** (ಪಾ. ಸೂ. ೬-೨-೪೯) ಎಂಬುದರಿಂದ ಗತಿಗೆ (ಆಙ್) ಪ್ರಕೃತಿಸ್ವರ ಬರುತ್ತದೆ. ॥ ೧೪ ॥

ಸಂಹಿತಾಪಾಠಃ

ಸಾಕಂಜಾನಾಂ ಸಪ್ತಥಮಾಹುರೇಕಜಂ ಷಳಿದ್ಯಮಾ ಋಷಯೋ ದೇವಜಾ
ಇತಿ ।
ತೇಷಾಮಿಷ್ಟಾನಿ ವಿಹಿತಾನಿ ಧಾಮಶಃ ಸ್ಥಾತ್ರೇ ರೇಜಂತೇ ವಿಕೃತಾನಿ
ರೂಪಶಃ ॥ ೧೫ ॥

ಪದಪಾಠ

ಸಾಕಂऽಜಾನಾಂ । ಸಪ್ತಥಂ । ಆಹುಃ । ಏಕಽಜಂ । ಷಟ್ । ಇತ್ । ಯಮಾಃ । ಋಷಯಃ । ದೇವಽಜಾಃ । ಇತಿ ।

ತೇಷಾಂ । ಇಷ್ಟಾನಿ । ವಿಽಹಿತಾನಿ । ಧಾಮಽಶಃ । ಸ್ಥಾತ್ರೇ । ರೇಜಂತೇ । ವಿಽಕೃತಾನಿ । ರೂಪಽಶಃ ॥೧೫॥

ಸಾಯಣಭಾಷ್ಯಂ

**ಸಾಕಂಜಾನಾಮೇಕಸ್ಮಾದಾದಿತ್ಯಾತ್ಸಹೋತ್ಪನ್ನಾನಾಂ ಸಪ್ತಾನಾಮೃತೂನಾಂ ಮಧ್ಯೇ ಸಪ್ತಥಂ ಸಪ್ತಮಮೃತುಂ ॥ ಥಟ್ ಚ ಛಂದಸಿ । ಪಾ- ೫-೨-೫೦ । ಇತಿ ಥಟ್ ॥ ಏಕಜಮೇಕೇನೋತ್ಪನ್ನಮಾಹುಃ ಕಾಲತತ್ತ್ವವಿದಃ । ಚೈತ್ರಾದೀನಾಂ ದ್ವಾದಶಾನಾಂ ಮಾಸಾನಾಂ ದ್ವಯಮೇಲನೇನ ವಸಂತಾದ್ಯಾಃ ಷಡೃತವೋ ಭವಂತಿ । ಅಧಿಕಮಾಸೇನೈಕ ಉತ್ಪದ್ಯತೇ ಸಪ್ತಮರ್ತುಃ । ನ ಚ ತಾದೃಶೋ ಮಾಸ ಏವ ನಾಸ್ತೀತಿ ಮಂತವ್ಯಂ । ಅಸ್ತಿ ತ್ರಯೋದಶೋ ಮಾಸ ಇತ್ಯಾಹುಃ । ತೈ. ಸಂ. ೬-೫-೩-೪ । ಇತಿ ಶ್ರುತೇಃ । ತದೇವೋಚ್ಯತೇ । ಷಡಿದ್ಯಮಾಃ । ಇಚ್ಛಬ್ದ ಏವಕಾರಾರ್ಥಃ । ಷಡೇವರ್ತವೋ ಮಾಸದ್ವಯರೂಪಾ ಋಷಯೋ ಗಂತಾರಃ । ತೇ ಚ ದೇವಜಾ ದೇವಾದಾದಿತ್ಯಾಜ್ಜಾತಾ ಇತ್ಯೇವಮಾಹುಃ । ಸಪ್ತಮಾಧಾರಸ್ಯ ತ್ರಯೋದಶಸ್ಯ ಮಾಸಸ್ಯ ದೇವಾಭಾವಃ । ನಿಃಸೂರ್ಯೋಽಧಿಕಮಾಸೋ ಮಂಡಲಂ ತಪತೇ ರವೇರಿತ್ಯಾದಿಸ್ಮೃತೇಃ ತಸ್ಮಾತ್ ಷಡೇವ ದೇವಜಾಃ ಅದೇವಜ ಏಕಃ । ತೇಷಾಮೃತೂನಾಂ ಸ್ವರೂಪಾಣೀಷ್ಟಾನಿ ಸರ್ವಲೋಕಾಭಿಮತಾನಿ ಧಾಮಶಸ್ತತ್ತತ್ಸ್ಥಾನೇ ವಿಹಿತಾನಿ ಪೃಥಕ್ ಪೃಥಕ್ ಸ್ಥಾಪಿತಾನಿ ರೂಪಶೋ ರೂಪಭೇದೇನ ವಿಕೃತಾನಿ ವಿವಿಧಾಕೃತಿಯುಕ್ತಾನಿ । ಸ ಚ ರೂಪಭೇದಸ್ತೈತ್ತಿರೀಯೈರಾಮ್ನಾತಃ । ಸ ರಸಮಹ ವಸಂತಾಯ ಪ್ರಾಯಚ್ಛದ್ಯವಂ ಗ್ರೀಷ್ಮಾಯೇತ್ಯಾದಿ । ತೈ. ಸಂ. ೭-೨-೧೦-೧ । ಸ್ಥಾತ್ರೇಽಧಿಷ್ಠಾತ್ರೇ ತದರ್ಥಾಯ ರೇಜಂತೇ । ಚಲಂತಿ । ಜಗದ್ವ್ಯವಹಾರಾಯ ಪುನಃಪುನರಾವರ್ತಂತ ಇತ್ಯರ್ಥಃ ॥**

ಪ್ರತಿಪದಾರ್ಥ

**ಸಾಕಂಜಾನಾಂ**—(ಆದಿತ್ಯನಿಂದ) ಒಟ್ಟಿಗೆ ಉತ್ಪನ್ನಗಳಾದ ಏಳು ಋತುಗಳ ನಡುವೆ, । **ಸಪ್ತಥಂ** ಏಳನೆಯದನ್ನು । **ಏಕಜಂ**—ಒಂಟಿಯಾಗಿ ಹುಟ್ಟಿದುದನ್ನಾಗಿ । **ಆಹುಃ**—(ತತ್ತ್ವಜ್ಞರು) ಹೇಳಿದ್ದಾರೆ । **ಷಡಿತ್**—ಆರು ಋತುಗಳನ್ನು ಮಾತ್ರವೇ । **ಯಮಾಃ**—ಮಾಸದ್ವಯಾತ್ಮಕಗಳಾಗಿ । **ಗಂತಾರಃ**—ಸಂಚರಿಸತಕ್ಕವನಾಗಿಯೂ । **ದೇವಜಾ ಇತಿ**—ಪ್ರಕಾಶಮಾನನಾದ ಆದಿತ್ಯನಿಂದ ಉತ್ಪನ್ನವಾದವನ್ನಾಗಿಯೂ ಕರೆದಿದ್ದಾರೆ। **ತೇಷಾಂ**—ಆ ಋತುಗಳ । **ಇಷ್ಟಾನಿ**—(ಸಕಲಲೋಕಗಳಿಗೂ) ಅಭಿಮತವಾದವೂ, । **ಧಾಮಶಃ**—ಆಯಾ ನಿಯತವಾದ ಸ್ಥಾನಗಳಲ್ಲಿ । **ವಿಹಿತಾನಿ**—ಪ್ರತ್ಯೇಕವಾಗಿ ಸ್ಥಾಪಿತವಾದವೂ । **ರೂಪಶಃ**—ರೂಪಾಂತರಗಳಿಂದ ಯುಕ್ತವಾದವೂ ಆದ । **ವಿಕೃತಾನಿ**—ಬೇರೆ ಬೇರೆ ಆವಿರ್ಭಾವಗಳು । **ಸ್ಥಾತ್ರೇ**—ತಮ್ಮ ಸ್ವಾಮಿಯ ಕರ್ತವ್ಯಪಾಲನೆಗಾಗಿ। **ರೇಜಂತೇ**—ಭ್ರಮಣವನ್ನು ಹೊಂದುತ್ತಿವೆ. ।

ಭಾವಾರ್ಥ

ಆದಿತ್ಯನಿಂದ ಒಟ್ಟಿಗೆ ಉತ್ಪನ್ನಗಳಾದ ಏಳುಋತುಗಳ ನಡುವೆ ಏಳನೆಯದನ್ನು ಒಂಟಿಯಾಗಿ ಹುಟ್ಟಿದುದನ್ನಾಗಿ ತತ್ತ್ವಜ್ಞರು ಹೇಳಿದ್ದಾರೆ. ಆರು ಋತುಗಳನ್ನು ಮಾತ್ರವೇ ಮಾಸದ್ವಯಾತ್ಮಕಗಳಾಗಿ ಸಂಚರಿಸತಕ್ಕವನ್ನಾಗಿಯೂ, ದೇವೋತ್ಪನ್ನವೆಂಬುದಾಗಿಯೂ ಕರೆದಿದ್ದಾರೆ. ಸಕಲಲೋಕಗಳಿಗೂ ಅಭಿಮತವಾದವೂ, ಆಯಾ ನಿಯತವಾದ ಸ್ಥಾನದಲ್ಲಿ ಪ್ರತ್ಯೇಕವಾಗಿ ಸ್ಥಾಪಿತವಾದವೂ, ರೂಪಾಂತರಗಳಿಂದ ಯುಕ್ತವಾದವೂ ಆದ ಆ ಋತುಗಳ ಬೇರೆ ಬೇರೆ ಆವಿರ್ಭಾವಗಳು ಸ್ಥಿರವಾದ ಜಗತ್ತಿನ ಶ್ರೇಯಸ್ಸಿಗಾಗಿ ಭ್ರಮಣವನ್ನು ಹೊಂದುತ್ತಿವೆ.

## English Translation

Of those that are born together, sages have called the seventh the single-born ; for six are twins, and are moveable, and born of the gods : their desirable (properties), placed severallay in Itheir proper abode, are various (also) in form, and revolve for (the benefit of) that which is stationery.

### ವಿಶೇಷವಿಷಯಗಳು

ಆದಿತ್ಯೋತ್ಪನ್ನವಾದವೂ, ಆದಿತ್ಯಾಧೀನವಾದವೂ ಆದ ಸಪ್ತರ್ತುಗಳ ಸ್ವರೂಪವನ್ನು ವರ್ಣಿಸಿ ಜಗದ್ವ್ಯವಹಾರಕ್ಕಾಗಿ ನಡೆಯತಕ್ಕ ಅವುಗಳ ಆವೃತ್ತಿರೂಪವಾದ ಆವಿರ್ಭಾವ ಮತ್ತು ತಿರೋಧಾನಗಳನ್ನು ಈ ಋಕ್ಕಿನಲ್ಲಿ ವಿವರಿಸಿದೆ. ಮತ್ತು ಏಕಜವಾದ ಋತುವಿಗೂ ಯಮಾತ್ಮಕಗಳಾದ ಋತುಗಳಿಗೂ ಇರುವ ವ್ಯತ್ಯಾಸವನ್ನೂ ತಿಳಿಸಿದೆ. ಸಾಯಣರು ಇದೇ ಮಂತ್ರಕ್ಕೆ ತೈತ್ತಿರೀಯಾರಣ್ಯಕದಲ್ಲಿ ಕೊಂಚ ವ್ಯತ್ಯಸ್ತವಾದ ಅರ್ಥವನ್ನು ಮಾಡಿದ್ದಾರೆ. ಮೊದಲು ಇಲ್ಲಿಯ ವಿವರಣೆಯನ್ನು ತಿಳಿದು ಅನಂತರ ಆರಣ್ಯಕದ ವ್ಯತ್ಯಾಸವನ್ನು ಪರಿಶೀಲಿಸಬಹುದಾದುದರಿಂದ ಸಾಯಣರ ವ್ಯಾಖ್ಯಾನದಂತೆ ಈ ಋಕ್ಕಿನ ತಾತ್ಪರ್ಯವನ್ನು ವಿವರಿಸಲಾಗುತ್ತದೆ.

**ಸಾಕಂಜಾನಾಂ ಸಪ್ತಥಂ ಏಕಜಂ ಆಹುಃ—ಏಕಸ್ಮಾದಾದಿತ್ಯಾತ್ ಸಹೋತ್ಪನ್ನಾನಾಂ ಸಪ್ತಾನಾಮೃತೂನಾಂ ಮಧ್ಯೇ ಸಪ್ತಮಂ ಋತುಂ ಏಕೇನ ಉತ್ಪನ್ನಂ ಆಹುಃ ।** ಆದಿತ್ಯನಿಂದ ಒಟ್ಟು ಏಳು ಋತುಗಳು ಉತ್ಪನ್ನವಾಗಿ ಅವುಗಳಲ್ಲಿ ಆರು ಋತುಗಳೂ ಸಹ ಯಮಾತ್ಮಕಗಳಾಗಿ (ಮಾಸದ್ವಯಗಳಿಂದ ಕೂಡಿದವಾಗಿ)ಯೂ, ದೇವಜಗಳಾಗಿಯೂ ಇದ್ದು ಏಳನೆಯ ಋತುವು ಮಾತ್ರ ಏಕಜವಾಗಿರುತ್ತದೆ. ಅದು ಹೇಗೆಂದರೆ, **ಚೈತ್ರಾದೀನಾಂ ದ್ವಾದಶಾನಾಂ ಮಾಸಾನಾಂ ದ್ವಯಮೇಲನೇನ ವಸಂತಾದ್ಯಾಃ ಷಡೃತವಃ ಭವಂತಿ । ಅಧಿಕಮಾಸೇನ ಏಕಃ ಉತ್ಪದ್ಯತೇ ಸಪ್ತಮರ್ತುಃ ।** ಚೈತ್ರಾದಿದ್ವಾದಶಮಾಸಗಳಲ್ಲಿ ಎರಡೆರಡು ಸೇರಿ ವಸಂತಾದಿ ಆರು ಋತುಗಳಾಗುತ್ತವೆ. ಅಧಿಕಮಾಸವು ಒಂದೇ ಆಗಿ ಇದು ಏಕಮಾಸಾತ್ಮಕವಾದ ಋತುವಾಗಿರುತ್ತದೆ. ಎಂದು ವಿವರಿಸಿ ಅನಂತರ, **ನ ಚ ತಾದೃಶೋ ಮಾಸ ಏವ ನಾಸ್ತೀತಿ ಮಂತವ್ಯಂ ।** ಅಂತಹ ಋತುಜನಕವಾದ ಮಾಸವೇ ಇಲ್ಲ ಎಂಬ ಆಕ್ಷೇಪಣೆಯೇನಾದರೂ ಇದ್ದರೆ ಅದು ಸರಿಯಾದುದಲ್ಲ, ಏತಕ್ಕೆಂದರೆ,

> **ತಸ್ಮಾದಾದಿತ್ಯಃ ಷಣ್ಮಾಸೋ ದಕ್ಷಿಣೇನೈತಿ ಷಡುತ್ತರೇಣೋಪಯಾಮಗೃಹೀತೋಽಸಿ ಸಂಸರ್ಪೋಽಸ್ಯಂಹಸ್ಪತ್ಯಾಯತ್ವೇತ್ಯಾಹಾಸ್ತಿ ತ್ರಯೋದಶೋ ಮಾಸ ಇತ್ಯಾಹುಸ್ತಮೇವ ತತ್ಪ್ರೀಣಾತಿ ॥**
>
> (ತೈ. ಸಂ. ೬-೫-೩-೪)

ಆದಿತ್ಯನು ಆರುತಿಂಗಳು ದಕ್ಷಿಣದಿಕ್ಕಿಗೂ, ಇನ್ನಾರು ತಿಂಗಳು ಉತ್ತರದಿಕ್ಕಿಗೂ ಚಲಿಸುತ್ತಾನೆ. "ನೀನು **ಸಂಸರ್ಪನು** (ಅಧಿಮಾಸಕ್ಕೆ ಈ ಹೆಸರು). ನೀನು ಸಾವಲಂಬನಾಗಿದ್ದೀಯೆ. ತ್ರಯೋದಶಮಾಸವಿರುತ್ತದೆಂದು ಕಾಲವಿತ್ತುಗಳು ಹೇಳುತ್ತಾರೆ." ಆದುದರಿಂದ ಇದರಲ್ಲಿ ಅವನು ತನ್ನ ತೃಪ್ತಿಯನ್ನು ಸೂಚಿಸುತ್ತಾನೆ ; ಇತ್ಯಾದಿಯಾಗಿ ಶ್ರುತಿವಾಕ್ಯ

ಗಳಿರುವುದರಿಂದ ಇಂತಹ ಆಕ್ಷೇಪಣೆಗಳಿಗೆ ಅವಕಾಶವಿಲ್ಲವೆಂದು ಶಂಕಾಪರಿಹಾರವನ್ನು ಮಾಡಿದ್ದಾರೆ. ಆದರೆ, ಉಳಿದ ಆರು ಋತುಗಳಿಗೆ **ದೇವಜಾಃ** ಎಂಬ ವಿಶೇಷಣವಿರುವುದರ ಸಂಕೇತವೇನು ಎಂಬುದನ್ನು ವಿವರಿಸುತ್ತಾ, **ಸಪ್ತಮಾ-ಧಾರಸ್ಯ ತ್ರಯೋದಶಸ್ಯ ಮಾಸಸ್ಯ ದೇವಾಭಾವಃ । " ನಿಸ್ಸೂರ್ಯೋಽಧಿಕಮಾಸೋ ಮಂಡಲಂ ತಪತೇ ರವೇಃ "** ಅಧಿಕಮಾಸವು **ನಿಸ್ಸೂರ್ಯ**ವಾಗಿರುವುದೆಂದು ತಿಳಿಸಿರುವುದರಿಂದ ಅದು ದೇವಜವಲ್ಲವೆಂಬಭಿಪ್ರಾಯವು ಎಂದು ಹೇಳಿದ್ದಾರೆ. **ಋಷಯಃ** ಎಂಬುದಕ್ಕೆ **ಗಂತಾರಃ ।** ಗಮನಾತ್ಮಕವಾದುವು, ಯಾವಾಗಲೂ ಸಂಚರಿಸುವ ಸ್ವಭಾವವುಳ್ಳವು ಎಂದರ್ಥ. ಇದೇ ಮಂತ್ರಕ್ಕೆ ಸಾಯಣರು ತೈತ್ತಿರೀಯಾರಣ್ಯಕದಲ್ಲಿ ವ್ಯಾಖ್ಯಾನವನ್ನು ಮಾಡುತ್ತಾ,

> **ಸಾಕಂಜಾನಾನಾಂ ಸಹೋತ್ಪನ್ನಾನಾಮಾದಿತ್ಯರಶ್ಮೀನಾಂ ಮಧ್ಯೇ ಸಪ್ತಥಂ ಯಃ ಸ ಸಪ್ತಮೋ ರಶ್ಮಿಃ " ಸೂರ್ಯೋ ಮರೀಚಿಮಾದತ್ತೇ " ಇತಿ ಪೂರ್ವತ್ರೋಕ್ತಸ್ತಂ ಸಪ್ತಮಂ ರಶ್ಮಿಂ ಏಕಜ-ಮಾಹುರಿತರರಶ್ಮಿಭ್ಯಃ ಪೂರ್ವಮೇಕ ಏವೋತ್ಪನ್ನ ಇತ್ಯಭಿಜ್ಞಾಃ ಕಥಯಂತಿ ।**
>
> (ತೈ. ಆ. ಸಾ. ಭಾ. ೧-೩)

ಆದಿತ್ಯನಿಂದ ಒಟ್ಟಿಗೆ ಉತ್ಪನ್ನಗಳಾದ ರಶ್ಮಿಗಳ ನಡುವೆ ಏಳನೆಯದು ಎಲ್ಲಕ್ಕಿಂತಲೂ ಮೊದಲೇ ಉತ್ಪನ್ನವಾದುದೆಂದು ಅಭಿಜ್ಞರು ಹೇಳುತ್ತಾರೆ. ಇದೇ ಅಭಿಪ್ರಾಯವನ್ನು ಈ ಮಂತ್ರಕ್ಕೆ ವ್ಯಾಖ್ಯಾನವನ್ನು ಮಾಡುವಾಗ ಭಟ್ಟಭಾಸ್ಕರರೂ ತಿಳಿಸಿದ್ದಾರೆ **ಏಕಜಂ** ಎಂಬ ಪದಕ್ಕೆ ಅರ್ಥವನ್ನು ಹೇಳುತ್ತಾ **ಏಕತ್ವೇನ ಪ್ರಧಾನತ್ವೇನ ಜಾತಂ ಸರ್ವಸಾರ-ಭೂತಂ ಆಹುಃ ಮಂತ್ರದೃಶಃ ।** ಉಳಿದ ಎಲ್ಲಾ ರಶ್ಮಿಗಳಿಗೂ ಸಾರಭೂತವಾದ ಈ ರಶ್ಮಿಯು ಎಲ್ಲಕ್ಕಿಂತಲೂ ಪ್ರಥಮದಲ್ಲಿಯೇ ಉತ್ಪನ್ನವಾದುದು ಎಂದು ವಿವರಿಸಿದ್ದಾರೆ. ಇಬ್ಬರು ವ್ಯಾಖ್ಯಾಕರ್ತರೂ ಸಹ ತಮ್ಮ ಈ ಅಭಿಪ್ರಾಯಗಳಿಗೆ ಸರಿಯಾದ ಆಧಾರವನ್ನು ತೋರಿಸುವುದಕ್ಕಾಗಿ ಈ ಮಂತ್ರದ ಹಿಂದಿನ ಅನುವಾಕದಲ್ಲಿರುವ,

> **ಏತ್ತೈರಾದಿತ್ಯಮಂಡಲಂ । ಸರ್ವೈರೇವ ವಿಧಾಸ್ಯತೇ । ಸೂರ್ಯೋ ಮರೀಚಿಮಾದತ್ತೇ । ಸರ್ವಸ್ಮಾ-ದ್ಭುವನಾದಧಿ । ತಸ್ಯಾಃ ಪಾಕವಿಶೇಷೇಣ । ಸ್ಮೃತಂ ಕಾಲವಿಶೇಷಣಂ । ನದೀವ ಪ್ರಭವಾತ್ಕಾಚಿತ್ । ಅಕ್ಷಯ್ಯಾತ್ಸ್ಯಂದತೇ ಯಥಾ ।**
>
> (ತೈ. ಆ. ೧-೨-೧)

ಸರ್ವಸಾರಭೂತವಾದ ಈ ಮರೀಚಿಯನ್ನು ಆದಿತ್ಯನು ಗ್ರಹಿಸಿ ಸಕಲಭೂತಜಾತಗಳಿಗೂ ಇದರಿಂದ ವೀರ್ಯಾದಿಗಳನ್ನನು ಗ್ರಹಿಸುತ್ತಾನೆ, ಎಂಬ ವಾಕ್ಯವನ್ನುದಹರಿಸಿ ಪ್ರಕೃತವಾದ (ಆರಣ್ಯಕದ) ಮಂತ್ರದಲ್ಲಿ **ಏಕಜಂ** ' **ಮರೀಚಿಯನ್ನು** ' ನಿರ್ದೇಶಿಸುತ್ತದೆಯೆಂದು ಹೇಳಿದ್ದಾರೆ. ಅನಂತರ **ಷಡುದ್ಯಮಾ ಋಷಯೋ ದೇವಜಾ ಇತಿ ।** (ಋಕ್ಸಂಹಿತೆಯಲ್ಲಿ **ಷಡಿದ್ಯಮಾ** ಎಂಬ ಪಾಠವಿದೆ) ಎಂಬ ವಾಕ್ಯಕ್ಕೆ **ಷಡ್ರಶ್ಮಯಃ ಸಪ್ತಮರಶ್ಮೇರುಪಸರ್ಜನಭೂತಾಃ** ಉಳಿದ ಆರು ರಶ್ಮಿಗಳೂ ಪ್ರಧಾನಭೂತವಾದ ಈ ಸಪ್ತಮವಾದ ರಶ್ಮಿಗೆ ಸಹಾಯಕಗಳಾಗಿ ಅದರ ಕಾರ್ಯಕ್ಕೆ ನೆರವಾಗಿವೆಯೆಂದು ತಾತ್ಪರ್ಯವೆಂದು ತಿಳಿಸಿದೆ, ಮತ್ತು **ತೇ ತು ಷಣ್ಣಾಂ ಋತೂನಾಂ ಪ್ರವರ್ತಕಾಃ ।** ಈ ಆರು ರಶ್ಮಿಗಳೇ ಆರು ಋತುಗಳಿಗೂ ಹೇತುಗಳು ಎಂದಿದೆ. ಪ್ರಕೃತವಾದ ಋಕ್ಕಿನಲ್ಲಿ **ಷಡಿದ್ಯಮಾ ದೇವಜಾಃ** ಎಂಬುದಕ್ಕೆ ಸಾಯಣರು ಅರ್ಥ ಮಾಡುತ್ತಾ **ಇಚ್ಛಬ್ದಃ ಏವಕಾರಾರ್ಥಃ । ಷಡೇವ ಋತವಃ ಮಾಸದ್ವಯರೂಪಾಃ । ದೇವಾದಾದಿತ್ಯಾ-ಜ್ಜಾತಾಃ ।** ಆದಿತ್ಯನಿಂದ ಉತ್ಪನ್ನಗಳಾದ ಈ ಆರು ಋತುಗಳು ಮಾತ್ರವೇ ಮಾಸದ್ವಯಾತ್ಮಕಗಳು, ಸಪ್ತಮವಾದ

ಋತುವು ಅಲ್ಲ ಎಂದು ತಾತ್ಪರ್ಯವೆಂದು ತಿಳಿಸಿದ್ದಾರೆ. ಉತ್ತರಾರ್ಧಕ್ಕೆ ಎರಡುಕಡೆಗಳಲ್ಲಿಯೂ ಒಂದೇ ವಿಧವಾದ ಅರ್ಥವನ್ನು ಹೇಳಿದೆ. ಈ ಸಪ್ತರಶ್ಮಿಗಳಿಂದ ಜನ್ಯವಾದ ಷಡೃತುಗಳು ತಮ್ಮ ನಿಯಮಿತವಾದ ಸ್ಥಾನಗಳಲ್ಲೂ ಆವಿರ್ಭವಿಸಿ ತಮ್ಮ ಅಧಿಷ್ಠಾತೃವಾದ ಆದಿತ್ಯನ ಅನುಶಾಸನದಂತೆ ಜಗದ್ವ್ಯವಹಾರಗಳಿಗೆ ಸಹಾಯಕಗಳಾಗುತ್ತವೆ ಯೆಂದು ತಾತ್ಪರ್ಯ.

**ರೂಪಶಃ ವಿಕೃತಾನಿ—ರೂಪಭೇದೇನ ವಿವಿಧಾಕೃತಿಯುಕ್ತಾನಿ ।** ಬೇರೆಬೇರೆ ರೂಪಗಳುಳ್ಳದ್ದೆಂದರ್ಥ. ಈ ರೂಪಭೇದಗಳಿರುವುದರಿಂದಲೇ ಆಯಾ ಋತುಗಳಿಗನುಗುಣವಾದ ದಾನಾದಿಗಳನ್ನು ಮಾಡಬೇಕೆಂದು ತೈತ್ತಿರೀಯ ಸಂಹಿತೆಯಲ್ಲಿ ಈರೀತಿಯಲ್ಲಿ ಉಕ್ತವಾಗಿದೆಯೆಂದು ಸಾಯಣರು ಆ ವಾಕ್ಯವನ್ನುದಹರಿಸಿದ್ದಾರೆ.

**ಸರಸಮುಹವಸಂತಾಯ ಪ್ರಾಯಚ್ಛದ್ಯವಂ ಗ್ರೀಷ್ಮಾಯ ।**

(ತೈ. ಸಂ. ೭-೨-೧೦-೧, ೨)

ಎಂಬಲ್ಲಿ ಆಯಾ ಋತುಗಳಿಗೆ ಅನುರೂಪವಾದ ಧಾನ್ಯಾದಿಗಳ ದಾನವನ್ನು ನಿರ್ದೇಶಿಸಿ ಋತುಗಳ ವೈರೂಪ್ಯಗಳನ್ನು ತಿಳಿಸಿದೆ. ಇಂತಹ ನಾನಾರೂಪಾತ್ಮಕಗಳಾದ ಷಡೃತುಗಳೂ ಸಹ ತಮ್ಮ ಅಧಿಷ್ಠಾತೃವಿನ ನೆರವಿಗೆ ನಿಂತು ಜಗನ್ನಿ ಯಾಮಕನಾದ ಅವನ ಕರ್ತವ್ಯಗಳಲ್ಲಿ ತಮ್ಮ ತಮ್ಮ ಸ್ವರೂಪಕ್ಕೆ ಅನುಗುಣವಾದ ನೆರವನ್ನು ನೀಡುತ್ತವೆಯೆಂದು **ಸ್ಥಾತ್ರೇ ರೇಜಂತೇ** ಎಂಬ ವರ್ಣನೆಯಿಂದ ತಿಳಿಸಿದೆ.

**ರೇಜಂತೇ—ಚಲಂತಿ । ಜಗದ್ವ್ಯವಹಾರಾಯ ಪುನಃಪುನರಾವರ್ತಂತೇ ಇತ್ಯರ್ಥಃ.**

### ವ್ಯಾಕರಣಪ್ರಕ್ರಿಯಾ

**ಸಾಕಂಜಾನಾಮ್**—ಜನೀ ಪ್ರಾದುರ್ಭಾವೇ ಧಾತು. **ಅನ್ಯೇಷ್ವಪಿ ದೃಶ್ಯತೇ** (ಪಾ. ಸೂ. ೩-೨-೧೦೧) ಎಂಬುದರಿಂದ ಡ ಪ್ರತ್ಯಯ. ಡಿತ್ವಸಾಮರ್ಥ್ಯದಿಂದ ಟಿಗೆ ಲೋಪ ಕೃದುತ್ತರಪದಪ್ರಕೃತಿಸ್ವರ ಬರುತ್ತದೆ. ನಿರ್ಧಾರ ಣಾರ್ಥದಲ್ಲಿ ಷಷ್ಠೀಬಹುವಚನಾಂತರೂಪ

ಏಕಜಂ । **ದೇವಜಾಃ**—ಪೂರ್ವೋಕ್ತವಾದ ಧಾತುವಿಗೆ **ಪಂಚಮ್ಯಾಮಜಾತೌ** (ಪಾ. ಸೂ. ೩-೨-೯೮) ಎಂಬುದರಿಂದ ಡ ಪ್ರತ್ಯಯ ಹಿಂದಿನಂತೆ ಟಿಲೋಪ. ಕೃದುತ್ತರಪದಪ್ರಕೃತಿಸ್ವರ ಬರುತ್ತದೆ.

**ಸಪ್ತಥಮ್**—ಸಪ್ತಾನಾಂ ಪೂರಣಃ **ಥಟ್ ಚ ಛಂದಸಿ** (ಪಾ. ಸೂ. ೫-೨-೫೦) ಎಂಬುದರಿಂದ ಪೂರ ಣಾರ್ಥದಲ್ಲಿ ಥಟ್ ಪ್ರತ್ಯಯ ಪೂರ್ವಕ್ಕೆ ಪದಸಂಜ್ಞಾ ಇರುವುದರಿಂದ ನಕಾರಕ್ಕೆ ಲೋಪ ಬರುತ್ತದೆ.

**ಋಷಯಃ**—ಋಷೀ ಗತೌ ಧಾತು. **ಇಗುಪಧಾತ್ ಕಿತ್** (ಉ. ಸೂ. ೪-೫೫೯) ಇನ್ ಪ್ರತ್ಯಯ. ಕಿತ್ ವಿಧಾನದಿಂದ ಲಘೂಪಧಗುಣ ಬರುವುದಿಲ್ಲ. **ಞ್ನಿತ್ಯಾದಿರ್ನಿತ್ಯಮ್** (ಪಾ. ಸೂ. ೬-೧-೧೯೭) ಎಂಬುದ ರಿಂದ ಆದ್ಯುದಾತ್ತಸ್ವರ ಬರುತ್ತದೆ. ಪ್ರಥಮಾಬಹುವಚನಾಂತರೂಪ.

**ಸ್ಥಾತ್ರೇ**—ಷ್ಠಾ ಗತಿನಿವೃತ್ತೌ ಧಾತು. ಕರ್ತರಿಯಲ್ಲಿ ತೃಚ್ ಪ್ರತ್ಯಯ ಚಿತ್ತ್ವಾದುದರಿಂದ ಅಂತೋದಾತ್ತ ವಾಗುತ್ತದೆ. ಚತುರ್ಥ್ಯೇಕವಚನಾಂತರೂಪ.

**ರೇಜಂತೇ**—ರೇಜೃ ಕಂಪನೇ ಧಾತು. ಲಟ್ ಪ್ರಥಮಪುರುಷಬಹುವಚನಾಂತರೂಪ. ಅತಿಜಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

**ವಿಹಿತಾನಿ**—ಡುಧಾಞ್ ಧಾರಣಪೋಷಣಯೋಃ ಧಾತು. ನಿಷ್ಠಾ ಪ್ರತ್ಯಯ ಪರವಾದಾಗ **ದಧಾತೇರ್ಹಿಃ** (ಪಾ. ಸೂ. ೭-೪-೪೨) ಎಂಬುದರಿಂದ ಹಿ ಆದೇಶ. **ಗತಿರನಂತರಃ** (ಪಾ. ಸೂ. ೬-೨-೪೯) ಎಂಬುದರಿಂದ ಗತಿಗೆ (ವಿ) ಉದಾತ್ತಸ್ವರ ಬರುತ್ತದೆ.

**ರೂಪಶಃ**—**ಸಂಖ್ಯೈಕವಚನಾಚ್ಚ ವೀಪ್ಸಾಯಾಂ** (ಪಾ. ಸೂ, ೫-೪-೪೩) ಎಂಬುದರಿಂದ ವೀಪ್ಸಾರ್ಥದಲ್ಲಿ ಶಸ್ ಪ್ರತ್ಯಯ. **ತದ್ಧಿತಶ್ಚಾಸರ್ವವಿಭಕ್ತಿಃ** (ಪಾ. ಸೂ. ೧-೧-೩೮) ಎಂಬುದರಿಂದ ಅವ್ಯಯಸಂಜ್ಞೆಯನ್ನು ಹೊಂದುತ್ತದೆ. ॥ ೧೫ ॥

---

ಸಂಹಿತಾಪಾಠಃ

ಸ್ತ್ರಿಯಃ ಸತೀಸ್ತಾಁ ಉ ಮೇ ಪುಂಸ ಆಹುಃ ಪಶ್ಯದಕ್ಷಣ್ವಾನ್ನ ವಿ ಚೇತ-
ದಂಧಃ ।
ಕವಿರ್ಯಃ ಪುತ್ರಃ ಸ ಈಮಾ ಚಿಕೇತ ಯಸ್ತಾ ವಿಜಾನಾತ್ಸ ಪಿತುಷ್ಪಿತಾ-
ಸತ್ ॥ ೧೬ ॥

ಪದಪಾಠಃ

ಸ್ತ್ರಿಯಃ । ಸತೀಃ । ತಾನ್ । ಊಂ ಇತಿ । ಮೇ । ಪುಂಸಃ । ಆಹುಃ । ಪಶ್ಯತ್ । ಅಕ್ಷಣ್ಽವಾನ್ । ನ । ವಿ । ಚೇತತ್ । ಅಂಧಃ ।
ಕವಿಃ । ಯಃ । ಪುತ್ರಃ । ಸಃ । ಈಂ । ಆ । ಚಿಕೇತ । ಯಃ । ತಾ । ವಿಽಜಾನಾತ್ । ಸಃ । ಪಿತುಃ । ಪಿತಾ ಅಸತ್ ॥ ೧೬ ॥

ಸಾಯಣಭಾಷ್ಯಂ

ಮೇ ಮದೀಯಾ ಯಾ ದೀಧಿತಯಃ ಸ್ತ್ರಿಯಃ ಸಂಸ್ತ್ಯಾನವತ್ಯೋ ಯೋಷಿತಃ ಸತೀಃ ಸತ್ಯಃ । ಯೋಷಿದ್ವದುದಕರೂಪಗರ್ಭಧಾರಣಾತ್ಸ್ತ್ರೀತ್ವಂ । ಏಷಾಂ ರಶ್ಮೀನಾಮಾವಿಷ್ಟಲಿಂಗತ್ವಾತ್ಸ್ತ್ರೀಲಿಂಗತಾ । ತಾನು ತಾನ್ರಶ್ಮೀನೇವ ಪುಂಸ ಆಹುಃ । ಪ್ರಭೂತವೃಷ್ಟ್ಯುದಕಸೇಕ್ತೃತ್ವಾನ್ಪುರುಷಾನಾಹುಃ । ಪ್ರತಿನಿರ್ದೇಶಾಪೇಕ್ಷಯಾ ಪುಲ್ಲಿಂಗತಾ । ಅಮುಮರ್ಥಮತ್ಯಂತನಿಗೂಢಮಕ್ಷಣ್ವಾನ್ ಜ್ಞಾನದೃಷ್ಟ್ಯುಪೇತಃ ಕಶ್ಚಿನ್ಮಹಾನ್ಪಶ್ಯತ್ । ಜಾನಾತಿ । ಅಂಧೋಽತಥಾರೂಪಃ ಸ್ಥೂಲದೃಷ್ಟಿರ್ನ ವಿ ಚೇತತ್ । ನ ವಿಚೇತಯತಿ ।

ನ ಜಾನಾತಿ । ಕಿಂ ಚ ಯಃ ಕವಿಃ ಕ್ರಾಂತದರ್ಶೀ ಪುತ್ರಃ ಸ್ತ್ರೀಪುರುಷರೂಪಾಣಾಂ ರಶ್ಮೀನಾಂ ಪುತ್ರಸ್ಥಾನೀಯಃ ಪುರು ಜಗತಾಂ ತ್ರಾತಾ ವೃಷ್ಟ್ಯುದಕಲಕ್ಷಣೋಽಸ್ತಿ ಸ ಈಂ ಸ ಏವ ಪುತ್ರಃ । ಯದ್ವಾ । ಈಮೇನಮರ್ಥಂ । ಸ್ತ್ರೀಣಾಂ ಸತೀನಾಂ ಪಶ್ಚಾತ್ಪುರುಷಭಾವಮಾ ಚಿಕೇತ ಸರ್ವತೋ ಜಾನಾತಿ । ಪಿತ್ರೋಃ ಸ್ಥಿತಿಂ ಪುತ್ರ ಏವ ಜಾನಾತಿ ನಾನ್ಯಃ । ಯಃ ಕಶ್ಚಿತ್ತಾ ತಾನಿ ವಿಜಾನಾತ್ ಸ್ತ್ರೀಪುರುಷಪುತ್ರರೂಪಾಣಿ ಜಾನೀಯಾತ್ ಸ ಪಿತುಃ ಪಿತಾಸತ್ । ಪಿತಾ ವೃಷ್ಟ್ಯಾ ಜಗತ್ಪಾಲಕೋ ರಶ್ಮಿಸಮೂಹಃ । ತಸ್ಯಾಪಿ ಪಿತಾದಿತ್ಯಃ ಸ ಭವತಿ । ಆದಿತ್ಯ ಏವ ಭವತೀತ್ಯರ್ಥಃ । ಯದ್ವಾ । ಲೌಕಿಕೋಕ್ತಿರಿಯಂ । ಯಸ್ತಾನಿ ಜಾನಾತಿ ಸ ಏವಂ ಭವತಿ । ಸ್ವಯಂ ಪಿತುಃ ಪುತ್ರಃ ಸನ್ನಪಿ ಸ್ವಪುತ್ರಾಪೇಕ್ಷಯಾ ಪಿತಾ ಚ ಭವತಿ । ಪುತ್ರಪೌತ್ರಾದಿಸಹಿತಶ್ಚಿರಕಾಲಂ ಜೀವೀ ಭವತಿ । ಇತ್ಯಧಿದೈವತಂ ॥ ಅಥಾಧ್ಯಾತ್ಮಂ । ಯಾ ಇದಾನೀಂ ಸ್ತ್ರಿಯಃ ಸತೀಃ ಸ್ತ್ರೀತ್ವಂ ಪ್ರಾಪ್ತಾ ಆಹುರ್ಲೌಕಿಕಾಃ ತಾನು ತಾನೇವ ಮೇ ಮಹ್ಯಂ ಪುಂಸಃ ಪುರುಷಾನಾಹುಃ । ಪ್ರತಿಪಾದಯಂತಿ ತತ್ತ್ವಜ್ಞಾಃ । ಕಥಮನ್ಯಸ್ಯಾನ್ಯಭಾವಃ ಉಚ್ಯತೇ । ಏಕಸ್ಯೈವ ನಿರಸ್ತಸಮಸ್ತೋಪಾಧಿಕಸ್ಯಾತ್ಮನಸ್ತದ್ದೇಹಾವಸ್ಥಾನಮಾತ್ರೇಣ ತತ್ತದ್ವ್ಯಪದೇಶೋಪಪತ್ತೇಃ । ಶ್ರೂಯತೇ ಹಿ । ತ್ವಂ ಸ್ತ್ರೀ ತ್ವಂ ಪುಮಾನಸಿ ತ್ವಂ ಕುಮಾರ ಉತ ವಾ ಕುಮಾರೀ । ಶ್ವೇ. ಉ. ೪-೩ । ಇತ್ಯಾದಿ । ಸ್ತ್ರೀತ್ವಂ ಪುಂಸ್ತ್ವಂ ಚೋಭಯಮಪಿ ವಸ್ತುತೋ ನಾಸ್ತೀತ್ಯುಕ್ತಂ ಭವತಿ । ಶ್ರುತಿರಪಿ ತದಭಾವಂ ಬೋಧಯತಿ । ನೈವ ಸ್ತ್ರೀ ನ ಪುಮಾನೇಷ ನೈವ ಚಾಯಂ ನಪುಂಸಕಃ । ಯದ್ಯಚ್ಛರೀರಮಾದತ್ತೇ ತೇನ ತೇನ ಸ ಚೋದ್ಯತೇ । ಶ್ವೇ. ಉ. ೫-೧೦ । ಇತಿ । ದ್ವಿತೀಯಃ ಪಾದಃ ಪೂರ್ವವತ್ । ಕಿಂಚ ಪುತ್ರೋ ವಯಸಾಲ್ಪೋಽಪಿ ಯಃ ಕವಿಃ ಕ್ರಾಂತಪ್ರಜ್ಞೋ ಜ್ಞಾನೀ ಸ್ಯಾತ್ ಈಮಿಮಮರ್ಥಂ ಸ ವಿಚಿಕೇತ । ಜಾನಾತಿ । ಏವಮುಕ್ತಲಕ್ಷಣಸ್ಯ ಪರಮಾತ್ಮನಸ್ತಾ ತಾನಿ ಸ್ತ್ರೀತ್ವಪುಂಸ್ತ್ವಾದೀನಿ ಯೋ ವಿಜಾನಾತ್ ಔಪಾಧಿಕಾನಿ ಜಾನೀಯಾತ್ ಸ ಪಿತುಃ ಸ್ವೋತ್ಪಾದಕಸ್ಯಾಪಿ ಜ್ಞಾನರಹಿತಸ್ಯ ಪಿತಾಸತ್ । ಪಿತೃವತ್ಪೂಜ್ಯೋ ಭವತಿ । ಉಕ್ತಮರ್ಥಮಭಿಪ್ರೇತ್ಯ ತಾಂಡಕಬ್ರಾಹ್ಮಣಂ । ಶಿಶುರ್ವಾ ಆಂಗಿರಸೋ ಮಂತ್ರಕೃತಾಂ ಮಂತ್ರಕೃದಾಸೀತ್ ಸ ಪಿತ್ನ್ ಪುತ್ರಕಾ ಇತ್ಯಾಮಂತ್ರಯತೇತ್ಯುಪಕ್ರಮ್ಯ ತೇ ದೇವಾನಪೃಚ್ಛಂತ ತೇ ದೇವಾ ಅಬ್ರುವನ್ನೇಷ ವಾವ ಪಿತಾ ಯೋ ಮಂತ್ರಕೃದಿತಿ । ತಾಂ. ೧೩-೩-೨೪ । ಮಂತ್ರದ್ರಷ್ಟೃದೇವ ಕಿಲ ಪಿತೃತ್ವಂ ತತ್ತ್ವವಿತ್ ಪಿತುಃ ಪಿತಾಸದಿತಿ ಕಿಮಾಶ್ಚರ್ಯಮಿತ್ಯಭಿಪ್ರಾಯಃ ॥

### ಪ್ರತಿಪದಾರ್ಥ

**ಮೇ**—ನನಗೆ ಸಂಬಂಧಿಸಿದ ಈ ರಶ್ಮಿಗಳು । **ಸ್ತ್ರಿಯಃ ಸತೀಃ**—ಉದಕರೂಪವಾದ ಗರ್ಭಧಾರಣದಿಂದ ಸ್ತ್ರೀರೂಪವಲ್ಲಿದ್ದರೂ ಸಹ । **ತಾನ್ ಉ**—ಅವುಗಳನ್ನೇ । **ಪುಂಸಃ**—(ವೃಷ್ಟಿರೂಪವಾದ ಉದಕವನ್ನು ಸೇಚನ ಮಾಡುವುದರಿಂದ) ಪುರುಷರೆಂಬ ನಿರ್ದೇಶದಿಂದಲೇ । **ಆಹುಃ**—ಕರೆಯುತ್ತಾರೆ (ಈ ಗೂಢವಾದ ರಹಸ್ಯವನ್ನು) । **ಅಕ್ಷಣ್ವಾನ್**—ಜ್ಞಾನದೃಷ್ಟಿಯಿಂದ ಕೂಡಿದ ಮಹಾತ್ಮನು । **ಪಶ್ಯತಿ**—ತಿಳಿಯುತ್ತಾನೆ । **ಅಂಧಃ**—ಆ ಜ್ಞಾನ ದೃಷ್ಟಿಯಿಲ್ಲದೇ ಅಂಧನಂತಿರುವವನು । **ನ ವಿ ಚೇತತ್**—ತಿಳಿಯಲಾರನು । **ಯಃ**—ಯಾವನು । **ಕವಿಃ ಪುತ್ರಃ**—ಮೇಧಾವಿಯಾದ ಪುತ್ರನಾಗಿದ್ದಾನೆಯೋ । **ಸಃ**—ಅವನೇ । **ಈಂ**—ಈ ರಹಸ್ಯವನ್ನು । **ಆ ಚಿಕೇತ**—ತಿಳಿಯುತ್ತಾನೆ । **ಯಃ**—ಯಾವನು । **ತಾ**—ಅವೆಲ್ಲವನ್ನೂ । **ವಿಜಾನಾತ್**—(ಪ್ರತಿಯೊಂದು ವಸ್ತುವಿನ)

ವಿಶೇಷಜ್ಞಾನದೊಡನೆ ತಿಳಿಯುತ್ತಾನೆಯೋ । **ಸಃ**—ಅವನು । **ಪಿತುಃ**—ಜಗತ್ಪಾಲಕವಾದ ರಶ್ಮಿಗಳಿಗೂ । **ಪಿತಾ**—ಪಿತೃವಾದ ಆದಿತ್ಯನೇ । **ಅಸತ್**—ಆಗಿರುತ್ತಾನೆ.

**ಭಾವಾರ್ಥ**

ನನಗೆ ಸಂಬಂಧಿಸಿದ ಈ ರಶ್ಮಿಗಳು ಉದಕರೂಪವಾದ ಗರ್ಭಧಾರಣದಿಂದ ಸ್ತ್ರೀರೂಪವಲ್ಲಿದ್ದರೂ ಸಹ, ವೃಷ್ಟಿರೂಪವಾದ ಉದಕವನ್ನು ಸೇಚನಮಾಡುವುದರಿಂದ ಅವುಗಳನ್ನೇ ಪುರುಷರೆಂಬ ನಿರ್ದೇಶದಿಂದ ಕರೆಯುತ್ತಾರೆ. ಈ ಗೂಢವಾದ ರಹಸ್ಯವನ್ನು ಜ್ಞಾನದೃಷ್ಟಿಯಿಂದ ಕೂಡಿದ ಮಹಾತ್ಮನು ಮಾತ್ರ ತಿಳಿಯುತ್ತಾನೆ. ಆ ಜ್ಞಾನ ದೃಷ್ಟಿಯಿಲ್ಲದೆ ಅಂಧನಂತಿರುವವನು ತಿಳಿಯಲಾರನು. ಯಾವನು ಮೇಧಾವಿಯಾದ ಪುತ್ರನಾಗಿದ್ದಾನೆಯೋ ಅವನೇ ಈ ರಹಸ್ಯವನ್ನು ತಿಳಿಯುತ್ತಾನೆ. ಯಾವನು ಅವೆಲ್ಲವನ್ನೂ ಪ್ರತಿಯೊಂದು ವಸ್ತುವಿನ ವಿಶೇಷಜ್ಞಾನ ದೊಡನೆ ತಿಳಿಯುತ್ತಾನೆಯೋ ಅವನು ಜಗತ್ಪಾಲಕನಾದ ರಶ್ಮಿಗಳಿಗೂ ಪಿತೃವಾದ ಆದಿತ್ಯನೇ ಆಗಿರುತ್ತಾನೆ.

## English Translation

They have called these, my virtuous females, males : he who has eyes beholds ; the blind man sees not : he who is a sage son understands this, and he who discriminates is the father of the father.

**ವಿಶೇಷವಿಷಯಗಳು**

ಅಧಿದೈವತವೂ, ಅಧ್ಯಾತ್ಮಪರವಾದುದೂ ಆದ ಎರಡು ವಿಧವಾದ ಅರ್ಥಗಳೂ ಈ ಮಂತ್ರದಲ್ಲಿ ಅಂತರ್ಗತ ವಾಗಿರುವುದೆಂದು ಸಾಯಣರು ಇದಕ್ಕೆ ಎರಡು ವಿಧವಾದ ಅರ್ಥವನ್ನೂ ಮಾಡಿದ್ದಾರೆ. ಮೊದಲನೆಯದಾಗಿ ಲೌಕಿಕ ವಾದ ಅರ್ಥವನ್ನು ವಿವರಿಸುತ್ತಾ ರಶ್ಮಿಗಳ ಭೌತಿಕವಾದ ಸ್ವರೂಪವನ್ನು ವಿವರಿಸಿದ್ದಾರೆ.

**ಶೀರ್ಷ್ಣಃ ಕ್ಷೀರಂ ದುಹ್ರತೇ ಗಾವೋ ಅಸ್ಯ ವವ್ರಿಂ ವಸಾನಾ ಉದಕಂ ಪದಾಪುಃ ।**

(ಋ. ಸಂ. ೧-೧೬೪-೭)

ಇತ್ಯಾದಿಯಾಗಿ ಹಿಂದೆ ಆದಿತ್ಯರಶ್ಮಿಗಳು ಉದಕವನ್ನು ವರ್ಷಿಸುವುದನ್ನೂ ಅದೇ ಆದಿತ್ಯರಶ್ಮಿಗಳು ಪೃಥ್ವಿಯಿಂದ ಉದಕವನ್ನು ಹೀರಿ ಪುನಃ ತಮ್ಮಲ್ಲಿ ಧಾರಣಮಾಡುವುದೂ ವರ್ಣಿತವಾಗಿದೆ. ಆದುದರಿಂದ ಈ ರಶ್ಮಿಗಳಲ್ಲಿ ಸ್ತ್ರೀಪ್ರಕೃತಿಯೂ ಪುರುಷಪ್ರಕೃತಿಯೂ ಮಿಶ್ರಿತವಾಗಿವೆ. ಉದಕರೂಪವಾದ ಗರ್ಭವನ್ನು ಧರಿಸಿದಾಗ ಸ್ತ್ರೀರೂಪವೂ, ಅದೇ ವೃಷ್ಟಿಸೇಚನೆಯನ್ನು ಮಾಡುವಾಗ ಪುಂರೂಪವೂ ಪ್ರಕಟಿತವಾಗುತ್ತದೆ. ಇದು ಸ್ತ್ರೀರೂಪವನ್ನು ಪ್ರಕಟಿಸುವಾಗ ಅತ್ಯಂತ ಆಕರ್ಷಕವಾಗಿಯೂ, ಪುಂರೂಪವನ್ನು ಪ್ರಕಟಿಸುವಾಗ ಅತ್ಯಂತ ಶಕ್ತಿಯುತವಾಗಿಯೂ ಇರುತ್ತದೆ. ಇದರ ಸ್ವರೂಪವನ್ನು ಕೇವಲ ಭೌತಿಕವಾದ ಚಕ್ಷುಸ್ಸಿನಿಂದ ಗ್ರಹಿಸಲು ಸಾಧ್ಯವಿಲ್ಲ. ಇದಕ್ಕೆ ಅಲೌಕಿಕವಾದ ದೃಷ್ಟಿಯನ್ನು ಪಡೆಯುವ ಶಕ್ತಿಯು ಅತ್ಯವಶ್ಯವಾಗಿರುತ್ತದೆ. ಆದುದರಿಂದಲೇ **ಅಕ್ಷಣ್ವಾನ್ ಪಶ್ಯತ್** ಎಂದು ದರ್ಶನದ ಶಕ್ತಿಯನ್ನು ಹೇಳಿದೆ. ಈ ರಶ್ಮಿಗಳ ಸ್ವರೂಪವನ್ನು ವಿವರಿಸುವುದಾದರೆ, ಸಕಲವಿಧವಾದ ಸೃಷ್ಟಿಗೂ, ಸ್ಥಿತಿಗೂ ಕಾರಣವಾಗಿ ಸಕಲವನ್ನೂ ತಮ್ಮ ಸ್ವರೂಪದಿಂದಲೇ ವ್ಯಾಪಿಸುತ್ತವೆ.

**ಅಥಾದಿತ್ಯ ಉದಯನ್ಯತ್ಪ್ರಾಚೀಂ ದಿಶಂ ಪ್ರವಿಶತಿ ತೇನ ಪ್ರಾಚ್ಯಾನ್ಪ್ರಾಣಾನ್ರಶ್ಮಿಷು ಸಂನಿಧತ್ತೇ । ಯದ್ದಕ್ಷಿಣಾಂ ಯತ್ಪ್ರತೀಚೀಂ ಯದುದೀಚೀಂ ಯದಧೋ ಯದೂರ್ಧ್ವಂ ಯದಂತರಾ ದಿಶೋ ಯತ್ಸರ್ವಂ ಪ್ರಕಾಶಯತಿ ತೇನ ಸರ್ವಾನ್ ಪ್ರಾಣಾನ್ರಶ್ಮಿಷು ಸಂನಿಧತ್ತೇ ।**

(ಪ್ರಶ್ನ. ಉ. ೧-೬)

ಈ ಆದಿತ್ಯರಶ್ಮಿಗಳು ವಿಶ್ವದ ನಾನಾ ದಿಕ್ಕುಗಳಿಗೂ, ಅವಾಂತರ ದಿಕ್ಕುಗಳಿಗೂ ಪ್ರಸರಿಸಿ ಎಲ್ಲವನ್ನೂ ಬೆಳಗಿಸಿ ವಿಶ್ವದ ಎಲ್ಲಾ ವಸ್ತುಗಳನ್ನೂ ತಮ್ಮಲ್ಲೇ ಅಡಕಮಾಡಿಕೊಳ್ಳುತ್ತವೆ ಸಮಸ್ತವನ್ನೂ ತನ್ನ ಗರ್ಭದಲ್ಲೇ ಅಡಗಿಸಿ ಆದಿತ್ಯನು ತಾನೇ ಎಲ್ಲಾ ರೂಪವುಳ್ಳವನೂ ಆಗಿರುವನು.

**ವಿಶ್ವರೂಪಂ ಹರಿಣಂ ಜಾತವೇದಸಂ ಪರಾಯಣಂ ಜ್ಯೋತಿರೇಕಂ ತಪಂತಂ ।**
**ಸಹಸ್ರರಶ್ಮಿಃ ಶತಧಾ ವರ್ತಮಾನಃ ಪ್ರಾಣಃ ಪ್ರಜಾನಾಮುದಯತ್ಯೇಷ ಸೂರ್ಯಃ ॥**

(ಪ್ರಶ್ನ. ೧-೮)

ವಿಶ್ವರೂಪನೂ, ಸರ್ವಜ್ಞನೂ, ಪರಾಯಣನೂ, ಜಗತ್ತಿಗೆಲ್ಲಾ ಏಕಮಾತ್ರಜ್ಯೋತಿಯೂ, ಸಹಸ್ರಾರುರಶ್ಮಿಯನ್ನು ಹೊಂದಿರುವವನೂ, ಆದ ಆದಿತ್ಯನು ಪ್ರಜೆಗಳಿಗೆಲ್ಲರಿಗೂ ಏಕಮಾತ್ರಪ್ರಾಣರೂಪನಾಗಿ ಉದಯಿಸುತ್ತಾನೆಂಬಿವೇ ಮುಂತಾದ ವರ್ಣನೆಗಳಲ್ಲಿ ಜಗತ್ತಿಗೆ ಅವನೇ ಪಿತೃವೂ ಮಾತೃವೂ ಆಗಿ ಜಗತ್ತನ್ನು ಗರ್ಭರೂಪವಲ್ಲಿ ಧರಿಸುವವನೂ, ಗರ್ಭದಲ್ಲಿರುವ ಜಗತ್ತನ್ನು ಸೃಷ್ಟಿಸುವವನೂ ಆಗಿದ್ದಾನೆ. ಇದನ್ನೇ ಆಧ್ಯಾತ್ಮಿಕದೃಷ್ಟಿಯಿಂದ ವಿವರಿಸುತ್ತಾ ಸಾಯಣರು,

**ಯಾಃ ಇದಾನೀಂ ಸ್ತ್ರಿಯಃ ಸತೀಃ ಸ್ತ್ರೀತ್ವಂ ಪ್ರಾಪ್ತಾ ಆಹುರ್ಲೌಕಿಕಾಃ ತಾನ್ ಉ ತಾನೇವ ಮೇ ಮಹ್ಯಂ ಪುಂಸಃ ಪುರುಷಾ ನಾಹುಃ ಪ್ರತಿಪಾದಯಂತಿ ತತ್ತ್ವಜ್ಞಾಃ ॥**

ಯಾವ ಈ ರಶ್ಮಿತತ್ತ್ವವನ್ನು ಸ್ತ್ರೀರೂಪಿಯೆಂದು ಲೌಕಿಕರು ಹೇಳುತ್ತಾರೆಯೋ ಅದನ್ನೇ ತತ್ತ್ವಜ್ಞರು ಪುರುಷ ರೂಪಿಯೆಂದು ಹೇಳುತ್ತಾರೆ, ಎಂಬರ್ಥವೆಂದು ವಿವರಿಸಿದ್ದಾರೆ.

**ಕಥಮನ್ಯಸ್ಯ ಅನ್ಯಭಾವಃ ಉಚ್ಯತೇ । ಏಕಸ್ಯೈವ ನಿರಸ್ತಸಮಸ್ತೋಪಾಧಿಕಸ್ಯ ಆತ್ಮನಸ್ತದ್ದೇಹಾವಸ್ಥಾನಮಾತ್ರೇಣ ತತ್ತದ್ವ್ಯಪದೇಶೋಪಪತ್ತೇಃ ।** ಹಾಗಾದರೆ, ಸ್ತ್ರೀರೂಪಿಯಾದ ತತ್ತ್ವಕ್ಕೆ ಪುಂ ರೂಪಿಯೆಂದು ಹೇಳುವುದು ಹೇಗೆ ಎಂಬ ಆಕ್ಷೇಪವು ಸಾಧ್ಯವಾಗುವುದಾದರೆ, ಸಮಸ್ತವಾದ ಉಪಾಧಿಗಳಿಂದಲೂ ರಹಿತವಾಗಿ ಸಮಸ್ತರೂಪನನ್ನೂ ತನ್ನ ಸಂಕಲ್ಪಮಾತ್ರದಿಂದಲೇ ವಹಿಸುವ ಶಕ್ತಿಯುಳ್ಳ ಈ ಆದಿತತ್ತ್ವದ ಮಹಿಮೆಯ ವಿಷಯದಲ್ಲಿ ಇಂತಹ ಆಕ್ಷೇಪಗಳಿಗೆ ಅವಕಾಶವೇ ಇಲ್ಲವೆಂದು ಸಮಾಧಾನವನ್ನು ಹೇಳಿದ್ದಾರೆ. ಅದ್ವಿತೀಯನಾಗಿದ್ದು ಅನಂತರ ಸೃಷ್ಟಿಕಾಮನಾದಮೇಲೆ ತನ್ನ ಇಚ್ಛಾಮಾತ್ರದಿಂದಲೇ ಸ್ತ್ರೀರೂಪವನ್ನು ಧರಿಸಿ ತಾನೇ ಸ್ತ್ರೀಪುಂರೂಪಗಳೆರಡನ್ನೂ ವಹಿಸಿ ಜಗತ್ಸೃಷ್ಟಿಯನ್ನುಂಟುಮಾಡಿದ ವರ್ಣನೆಯು ಬೃಹದಾರಣ್ಯಕೋಪನಿಷತ್ತಿನಲ್ಲಿ ಈ ರೀತಿಯಲ್ಲಿ ವರ್ಣಿತವಾಗಿದೆ—

**ಆತ್ಮೈವೇದಮಗ್ರ ಆಸೀತ್ಪುರುಷವಿಧಃ ಸೋಽನುವೀಕ್ಷ್ಯ ನಾನ್ಯದಾತ್ಮನಃ। ಸ ವೈ ನೈವ ರೇಮೇ ತಸ್ಮಾದೇಕಾಕೀ ನ ರಮತೇ ಸ ದ್ವಿತೀಯಮೈಚ್ಛತ್ । ಸ ಹೈತಾವಾನಾಸ ಯಥಾ ಸ್ತ್ರೀಪು-**

**ಮಾಂಸೌ ಸಂಪರಿಷ್ವಕ್ತೌ ಸ ಇಮಮೇವಾತ್ಮಾನಂ ದ್ವೇಧಾಪಾತಯತ್ತತಃ ಪತಿಶ್ಚ ಪತ್ನೀ ಚಾ-ಭವತಾಂ ತಸ್ಮಾದಿದಮರ್ಧಬೃಗಲಮಿವ ಸ್ವ ಇತಿ ಹ ಸ್ಮಾಹ ಯಾಜ್ಞವಲ್ಕ್ಯಸ್ತಸ್ಮಾದಯ-ಮಾಕಾಶಃ ಸ್ತ್ರಿಯಾ ಪೂರ್ಯತ ಏವ ತಾಂ ಸಮಭವತ್ತತೋ ಮನುಷ್ಯಾ ಅಜಾಯಂತ ॥**

(ಬೃ ಉ. ೧-೪-೧ ರಿಂದ ೩)

ಆದಿಯಲ್ಲಿ ಈ ವಿಶ್ವಾತ್ಮನು ಅದ್ವಿತೀಯನಾಗಿದ್ದು ತನ್ನನ್ನುಳಿದು ಇನ್ನಾವ ಎರಡನೆಯ ವಸ್ತುವನ್ನೂ ಕಾಣಲಿಲ್ಲ. ಅದರಿಂದ ತನಗೆ ಹರ್ಷವಿಲ್ಲದೇ ತನಗೆ ಪರ್ಷವನ್ನುಂಟುಮಾಡತಕ್ಕ ಎರಡನೆಯ ವಸ್ತುವೊಂದನ್ನು ಸೃಷ್ಟಿಸಬೇಕೆಂದಿಚ್ಛಿಸಿದನು. ಅನಂತರ ಸ್ತ್ರೀಪುರುಷರಿಬ್ಬರೂ ಒಟ್ಟಿಗೆ ಸೇರಿದರೆ ಎಷ್ಟು ವಿಸ್ತೃತವಾಗುವುದೋ ಅಷ್ಟು ವಿಸ್ತೃತವಾಗಿ ಬೆಳೆದನು ಒಡನೆಯೇ ರೂಪದ್ವಯವನ್ನು ಹೊಂದಿ ಪತಿಪತ್ನೀರೂಪದಲ್ಲಿ ಪರಿಣಮಿಸಿದನು. “ಆದುದರಿಂದಲೇ ಈ ಆಕಾಶವೆಲ್ಲವೂ ಸ್ತ್ರೀರೂಪದಿಂದ ವ್ಯಾಪ್ತವಾಗಿದೆ- ವಿಶ್ವಾತ್ಮನು ಈ ಸ್ತ್ರೀರೂಪದೊಡನೆ ಸಂಗಮಿಸಲು ಮಾನವಾದಿಗಳ ಸೃಷ್ಟಿಯಾಯಿತು” ಎಂದು ಯಾಜ್ಞವಲ್ಕ್ಯರು ವರ್ಣಿಸಿದ್ದಾರೆ. ಹೀಗೆಯೇ ಇತರ ಜೀವಿಗಳ ಸೃಷ್ಟಿಯನ್ನೂ ವರ್ಣಿಸುತ್ತಾ, ಗೋವೃಷಭಾದಿರೂಪಗಳನ್ನೂ ಪಡೆದು ಗವಾದಿಗಳನ್ನು ಸೃಷ್ಟಿಸಿದ ವಿವರವನ್ನೂ ಹೇಳಿದ್ದಾರೆ. ಇದೇ ರೀತಿಯಲ್ಲಿ ಪ್ರಶ್ನೋಪನಿಷತ್ತಿನಲ್ಲಿಯೂ ಸಹ ವಿಶ್ವಾತ್ಮನು ಸ್ತ್ರೀಪುಂರೂಪಗಳೆರಡನ್ನೂ ಧರಿಸಿ ಜಗತ್ಸೃಷ್ಟಿಯನ್ನು ಮುಂದುವರಿಸಿದ ವಿವರವನ್ನು ಈ ರೀತಿ ಹೇಳಿದೆ

**ಪ್ರಜಾಕಾಮೋ ವೈ ಪ್ರಜಾಪತಿಃ ಸ ತಪೋಽತಪ್ಯತ ಸ ತಪಸ್ತಪ್ತ್ವಾ ಸ ಮಿಥುನಮುತ್ಪಾದಯತೇ ರಯಿಂ ಚ ಪ್ರಾಣಂ ಚೇತ್ಯೇತೌ ಮೇ ಬಹುಧಾ ಪ್ರಜಾಃ ಕರಿಷ್ಯತ ಇತಿ ।**

(ಪ್ರಶ್ನ. ೧-೪)

ಪ್ರಜಾಪತಿಯು ಪ್ರಜಾಕಾಮನಾಗಿ ತಪಸ್ಸಿನ ಮಹಿಮೆಯಿಂದ ಸ್ತ್ರೀರೂಪಿಯಾದ ಪ್ರಕೃತಿಯನ್ನೂ (ರಯಿಂ), ಪುಂರೂಪಿಯಾದ ಪ್ರಾಣವನ್ನೂ (ಪ್ರಾಣಂ) ಸೃಷ್ಟಿಸಿ, ಆ ಮಿಥುನದಿಂದ ಪ್ರಜಾವೃದ್ಧಿಯನ್ನುಂಟುಮಾಡಿದನು. ಎಂದು ಪ್ರಾರಂಭಿಸಿ ಅನಂತರ ಆ ಮೂಲತತ್ತ್ವಗಳ ವಿಸ್ತೃತಿಯಿಂದ ವಿಶ್ವವೆಲ್ಲವೂ ಅದೇ ರಯಿ ಮತ್ತು ಪ್ರಾಣರೂಪಗಳಲ್ಲಿ ಪರಿಣಮಿತವಾದವು ಎಂದು ವಿವರಿಸಿದೆ ಆ ಸ್ವರೂಪವನ್ನೇ ವಿವರಿಸುತ್ತಾ ಪ್ರಶ್ನೋಪನಿಷತ್ತಿನಲ್ಲಿ,

**ಮಾಸೋ ವೈ ಪ್ರಜಾಪತಿಃ .... .... .... .... ಅನ್ನಂ ವೈ ಪ್ರಜಾಪತಿಸ್ತತೋ ಹ ವೈ ತದ್ರೇತಸ್ತಸ್ಮಾದಿಮಾಃ ಪ್ರಜಾಃ ಪ್ರಜಾಯಂತ ಇತಿ । ತದ್ಯೇ ಹ ವೈ ತತ್ಪ್ರಜಾಪತಿವ್ರತಂ ಚರಂತಿ ತೇ ಮಿಥುನಮುತ್ಪಾದಯಂತೇ । ತೇಷಾಮೇವೈಷ ಬ್ರಹ್ಮಲೋಕೋ ಯೇಷಾಂ ತಪೋ ಬ್ರಹ್ಮ-ಚರ್ಯಂ ಯೇಷು ಸತ್ಯಂ ಪ್ರತಿಷ್ಠಿತಂ ।**

(ಪ್ರಶ್ನ. ೧-೧೨ ರಿಂದ ೧೫)

ಇತ್ಯಾದಿವಾಕ್ಯಗಳಿಂದ ಆದಿತತ್ತ್ವವು ಪ್ರಕೃತವಾದ ಋಕ್ಕಿನಲ್ಲಿ ವರ್ಣಿತವಾಗಿರುವಂತೆ ಸ್ತ್ರೀರೂಪಿಯಾಗಿಯೂ ಪುಂರೂಪಿಯಾಗಿಯೂ ಆವಿರ್ಭವಿಸಿ ಲೋಕದ ಸೃಷ್ಟ್ಯಾದಿವ್ಯವಹಾರಗಳಿಗೆ ಹೇತುವಾಯಿತೆಂದು ವರ್ಣಿಸಿದೆ. ಪ್ರಜಾಪತಿ, ಆದಿತ್ಯ, ಸಂವತ್ಸರ, ಇವುಗಳೆಲ್ಲವೂ ಒಂದೇ ತತ್ತ್ವದ ಬೇರೆ ಬೇರೆ ಹೆಸರುಗಳೆಂದು ತಿಳಿಯಬೇಕು ಆದುದರಿಂದಲೇ **ಸಂವತ್ಸರೋ ವೈ ಪ್ರಜಾಪತಿಃ ; ಮಾಸೋ ವೈ ಪ್ರಜಾಪತಿಃ । ; ಅಹೋರಾತ್ರೋ ವೈ ಪ್ರಜಾಪತಿ ;**

**ಅನ್ನಂ ವೈ ಪ್ರಜಾಪತಿಃ (ಪ್ರಶ್ನ. ೧)** ಇತ್ಯಾದಿಯಾಗಿ ಜಗದ್ವ್ಯಾಪಿಯಾದ ಪ್ರಜಾಪತಿಯನ್ನು ವರ್ಣಿಸಿದೆ. ಈ ತತ್ತ್ವವನ್ನು ಶ್ವೇತಾಶ್ವತರೋಪನಿಷತ್ತಿನಲ್ಲಿ ವರ್ಣಿಸುತ್ತಾ,

**ತ್ವಂ ಸ್ತ್ರೀ ತ್ವಂ ಪುಮಾನಸಿ ತ್ವಂ ಕುಮಾರ ಉತ ವಾ ಕುಮಾರೀ ।**
**ತ್ವಂ ಜೀರ್ಣೋ ದಂಡೇನ ವಂಚಸಿ ತ್ವಂ ಜಾತೋ ಭವಸಿ ವಿಶ್ವತೋಮುಖಃ ॥**

(ಶ್ವೇ. ಉ. ೪–೩)

ವಿಶ್ವತೋಮುಖನಾದ ನೀನು ಸ್ತ್ರೀರೂಪನಾಗಿಯೂ ಪುಂರೂಪಿಯಾಗಿಯೂ ಇದೇ ರೀತಿಯಲ್ಲಿ ಕುಮಾರಕುಮಾರಿಯರ ರೂಪವುಳ್ಳವನಾಗಿಯೂ ಇದ್ದೀಯೆ ಎಂದು ಪ್ರಶಂಸಿಸಿದೆ.

**ಅಪ್ರಜ್ಞಾನ್ ಪಶ್ಯತ್—ಜ್ಞಾನದೃಷ್ಟ್ಯಪೇತಃ ಕಶ್ಚಿನ್ಮಹಾನ್ ಪಶ್ಯತಿ ।** ಜ್ಞಾನದೃಷ್ಟಿಯಿಂದ ಕೂಡಿದ ಮಹಾತ್ಮನು ಮಾತ್ರ ನೋಡಬಲ್ಲನು ಇತರರಿಂದ ಸಾಧ್ಯವಿಲ್ಲ ಎಂಬುದಕ್ಕೆ ಒಂದು ಉದಾಹರಣೆಯನ್ನು ತೋರಿಸಿ ಸ್ತ್ರೀರೂಪಿಯೂ ಪುಂರೂಪಿಯೂ ಆದ ಈ ತತ್ತ್ವವನ್ನು ಅರಿತ ಇಂದ್ರಾದಿಗಳನ್ನು ಪ್ರಶಂಸಿಸುವ ಸನ್ನಿವೇಶವು ಕೇನೋಪನಿಷತ್ತಿನಲ್ಲಿ ಈರೀತಿಯಲ್ಲಿ ಉಕ್ತವಾಗಿ ಸೌಂದರ್ಯಯುಕ್ತವಾದ ಈ ರಹಸ್ಯವನ್ನು ತಿಳಿಸಿದೆ

**ಅಥೇಂದ್ರಮಬ್ರುವನ್ಮಘವನ್ನೇತದ್ವಿಜಾನೀಹಿ ಕಿಮೇತದ್ಯಕ್ಷಮಿತಿ ತಥೇತಿ ತದಭ್ಯದ್ರವತ್ತಸ್ಮಾತ್ತಿರೋದಧೇ । ಸತಸ್ಮಿನ್ನೇವಾಕಾಶೇಸ್ತ್ರಿಯಮಾಜಗಾಮ ಬಹುಶೋಭಮಾನಾಮುಮಾಗ್ಂ ಹೈಮವತೀಂ ತಾಗ್ಂ ಹೋವಾಚ ಕಿಮೇತದ್ಯಕ್ಷಮಿತಿ ।**

(ಕೇನ. ೩–೧೧, ೧೨)

ದೇವತೆಗಳೆಲ್ಲರೂ ಇಂದ್ರನಿಗೆ ಈ ಯಕ್ಷದ ಸ್ವರೂಪವನ್ನು ತಿಳಿಯಬೇಕೆಂದು ಹೇಳಲು ಇಂದ್ರನು ಅದರ ಸಮೀಪಕ್ಕೆ ಹೋದನು. [ಅಗ್ನ್ಯಾದಿಗಳು ಇದರ ಸ್ವರೂಪವನ್ನು ಪೂರ್ಣವಾಗಿ ಅರಿಯದೇ ಹೋದ ವಿಷಯವನ್ನೂ ಇದರ ರಹಸ್ಯವನ್ನು ತಿಳಿಯಸಲು ದೇವತೆಗಳಿಗೂ ಆಗದ ವಿಷಯವನ್ನೂ ತಿಳಿಸಲು ಈ ಸನ್ನಿವೇಶವನ್ನು ಹಿಂದೆ ಪ್ರಕೃತವಾದ ಸೂಕ್ತದ ೫ ನೇ ಋಕ್ಕಿನ ವಿಶೇಷವಿಷಯಗಳಲ್ಲಿ ತಿಳಿಸಿದೆ] ಆಗ ಇಂದ್ರನು ಅಂತರಿಕ್ಷದಲ್ಲಿ ಅತ್ಯಂತ ಆಕರ್ಷಕವಾದುದೂ ಮತ್ತು ಪ್ರಕಾಶಮಾನವಾದುದೂ ಆದ ಒಂದು ಸ್ತ್ರೀವ್ಯಕ್ತಿಯನ್ನು ನೋಡಿದನು. ಇದು ಯಾವುದೆಂದು ಪ್ರಶ್ನಿಸಲು,

**ಸಾ ಬ್ರಹ್ಮೇತಿ ಹೋವಾಚ ಬ್ರಹ್ಮಣೋ ವಾ ಏತದ್ವಿಜಯೇ ಮಹೀಯಧ್ವಮಿತಿ ।**

(ಕೇನ. ೪-೧)

ಆ ಸ್ತ್ರೀವ್ಯಕ್ತಿಯೇ ಬ್ರಹ್ಮನು. ಅದರ ಮಹಿಮೆಯಿಂದಲೇ ದೇವಾದಿಗಳ ಜಯವು ಎಂದು ತಿಳಿಸಿ ಅನಂತರ ಸುಂದರಾತ್ಮಕವಾದ ಆ ಬ್ರಹ್ಮತತ್ತ್ವವನ್ನು ತಿಳಿದ ಇಂದ್ರಾದಿಗಳ ಮಹತ್ತ್ವವನ್ನು ಪ್ರಶಂಸಿಸುತ್ತಲೂ ಇತರ ಸಾಧಾರಣವಾದ ವ್ಯಕ್ತಿಗಳಿಗೆ ಅದು ಸಾಧ್ಯವಿಲ್ಲವೆಂತಲೂ ತಿಳಿಸುತ್ತಲೂ ಸಹ,

**ತಸ್ಮಾದ್ವಾ ಏತೇ ದೇವಾ ಅತಿತರಾಮಿವಾನ್ಯಾನ್ದೇವಾನ್ಯದಗ್ನಿರ್ವಾಯುರಿಂದ್ರಸ್ತೇ ಹ್ಯೇನನ್ನೇದಿಷ್ಠಂ ಪಸ್ಪೃಶುಸ್ತೇ ಹ್ಯೇನತ್ಪ್ರಥಮೋ ವಿದಾಂಚಕಾರ ಬ್ರಹ್ಮೇತಿ ॥**

(ಪ್ರಶ್ನ. ೪–೨)

ಈ ಆದಿತತ್ತ್ವದ ಸ್ವರೂಪವನ್ನು ತಿಳಿಯಲು ಅದನ್ನು ಸಮೀಪಿಸಿ ಅದರ ಮಹಿಮೆಯನ್ನು ಉಳಿದವರಿಗಿಂತಲೂ ಮೊದಲು ತಿಳಿದುದರಿಂದ ಅಗ್ನಿ, ಇಂದ್ರ, ವಾಯು ಈ ದೇವತೆಗಳು ಉಳಿದ ಇತರ ದೇವತೆಗಳಿಗಿಂತಲೂ ಶ್ರೇಷ್ಠರು. ಅಗ್ನಿ, ವಾಯು ಮತ್ತು ಇಂದ್ರರಲ್ಲೂ ಸಹ ಇಂದ್ರನು ಈ ಬ್ರಹ್ಮತತ್ತ್ವವನ್ನು ತಿಳಿದಿದ್ದುದರಿಂದ ಇಂದ್ರನೇ ಅಧಿಕನು ಎಂಬುದಾಗಿ ಇದರ ರಹಸ್ಯವನ್ನು ತಿಳಿಯುವ ಶಕ್ತಿಯನ್ನು ಬಹಳವಾಗಿ ಪ್ರಶಂಸಿಸಿ ಅಲೌಕಿಕವಾದ ಜ್ಞಾನದೃಷ್ಟಿಯುಳ್ಳವರಿಗೆ ಮಾತ್ರ ಇದು ಸಾಧ್ಯವೆಂದು ತಿಳಿಸಿದೆ. ಈ ಆತ್ಮಜ್ಞಾನವಿಲ್ಲದವನು ಕೇವಲ ಅಂಧನಾಗಿರುವನು.

**ಅಂಧಂ ತಮಃ ಪ್ರವಿಶಂತಿ ಯೇऽವಿದ್ಯಾಮುಪಾಸತೇ ।**
**ತತೋ ಭೂಯ ಇವ ತೇ ತಮೋ ಯ ಉ ವಿದ್ಯಾಯಾಂ ರತಾಃ ॥**

(ಬೃ. ಉ. ೪-೪-೧೦)

ಈ ಪರಮಾತ್ಮನ ಸ್ವರೂಪವನ್ನು ತಿಳಿಯಲಾಗದೇ ಕೇವಲ ಅವಿದ್ಯೆಯನ್ನೇ ಅವಲಂಬಿಸುವವರು ಅಂಧಕಾರದ ಗುಹೆಯನ್ನು ಪ್ರವೇಶಿಸುತ್ತಾರೆ,

**ಅನಂದಾ ನಾಮ ತೇ ಲೋಕಾ ಅಂಧೇನ ತಮಸಾ ವೃತಾಃ ।**
**ತಾಂಸ್ತೇ ಪ್ರೇತ್ಯಾಭಿಗಚ್ಛಂತ್ಯವಿದ್ವಾಂಸೋऽಬುಧೋ ಜನಾಃ ॥**

(ಬೃ. ಉ. ೪-೪-೧೧)

ಈ ಅಂಧಕಾರರೂಪವಾದ ಗುಹೆಯನ್ನು ಪ್ರವೇಶಿಸಿದವರಿಗೆ ಯಾವ ವಿಧವಾದ ಆನಂದವೂ ಇರುವುದಿಲ್ಲ. ಮೃತಿಯನ್ನು ಹೊಂದಿದನಂತರವೂ ಸಹ ಇವರಿಗೆ ಇದೇ ಗತಿಯು ಲಭಿಸುವುದು. ಇತ್ಯಾದಿಯಾಗಿ ಈ ವಿಶ್ವತತ್ತ್ವದ ರಹಸ್ಯವನ್ನು ತಿಳಿಯದ ಅಜ್ಞಾನಿಗಳಿಗೆ ಲಭಿಸತಕ್ಕ ಸ್ಥಾನವನ್ನು ವರ್ಣಿಸಿದೆ. ಅಂತಹವರನ್ನೇ **ಅಂಧ**ರೆಂದು ಪ್ರಕೃತವಾದ ಋಕ್ಕಿನಲ್ಲಿಯೂ ವರ್ಣಿಸಿದೆ. ಸ್ತ್ರೀಪುಂರೂಪಿಯಾದ ಈ ತತ್ತ್ವವನ್ನು ತಿಳಿಯಲು ಜ್ಞಾನಚಕ್ಷುಸ್ಸಿನ ಆವಶ್ಯಕತೆಯನ್ನು ತಿಳಿಸುವುದಕ್ಕಾಗಿ ಈ ವರ್ಣನೆಯಿದೆ.

ಇಂತಹ ಮಹಾತತ್ತ್ವವನ್ನು ತಿಳಿದವನು ಎಲ್ಲರಿಗಿಂತಲೂ ಅಧಿಕನಾಗುತ್ತಾನೆ ಎಂದು ತಿಳಿಸಲು, **ಯಸ್ತಾ ವಿಜಾನಾತ್ಸ ಪಿತುಷ್ಪಿತಾಸತ್ ।** ಅಂತಹ ಜ್ಞಾನಿಯು ಪಿತೃವಿಗಿಂತಲೂ ಅಧಿಕವಾದ ಪೂಜ್ಯತೆಯುಳ್ಳವನಾಗುತ್ತಾನೆಂದು ತಿಳಿಸಿದೆ. ಇದೇ ಅಂಶವನ್ನು ಪ್ರಶ್ನೋಪನಿಷತ್ತಿನಲ್ಲಿ ಸ್ತುತಿಸುತ್ತಾ,

**ತೇ ತಮರ್ಚಯಂತಸ್ತ್ವಂ ಹಿ ನಃ ಪಿತಾ ಯೋऽಸ್ಮಾಕಮವಿದ್ಯಾಯಾಃ ಪರಂ ಪಾರಂ ತಾರಯಸೀತಿ । ನಮಃ ಪರಮ ಋಷಿಭ್ಯೋ ನಮಃ ಪರಮಋಷಿಭ್ಯಃ ।**

(ಪ್ರಶ್ನ. ಉ. ೬-೮)

ಅನಂತರ **ಪಿಪ್ಪಲಾದ**ನಿಂದ ಉಪದೇಶವನ್ನು ಪಡೆದವರೆಲ್ಲರೂ ಸಹ ಅವನನ್ನು ಪೂಜಿಸುತ್ತಾ " ನೀನು ನಮ್ಮ ಪಿತೃವು. ನಮಗೆ ಜ್ಞಾನವನ್ನುಪದೇಶಿಸಿ ನಮ್ಮನ್ನು ಅಜ್ಞಾನದ ಸಾಗರದಿಂದ ದಾಟಿಸಿ ಜ್ಞಾನದ ಎಲ್ಲೆಗೆ ಸೇರಿಸಿದ್ದೀಯೆ ಆದುದರಿಂದ ಪಿತೃವಿನಂತೆ ಪೂಜ್ಯನು " ಎಂಬುದಾಗಿ ತಮ್ಮ ಭಕ್ತಿಯನ್ನು ಸಲ್ಲಿಸುತ್ತಾರೆಂದು ತಿಳಿಸಿ ಜ್ಞಾನಿಗಳಾದ ಪರಮಋಷಿಗಳಿಗೆ ಪೂಜ್ಯತೆಯನ್ನು ಸಲ್ಲಿಸಿದೆ. ಋಷಿಯಾದವನು ಮಾತ್ರ ಜ್ಞಾನಿಯು ; ಜ್ಞಾನಿಗಳೆಲ್ಲರೂ ಋಷಿಗಳು ಎಂದಭಿಪ್ರಾಯವು. ಇದನ್ನೇ ಪ್ರಕೃತವಾದ ಋಕ್ಕಿನಲ್ಲಿಯೂ ಸಹ **ಕವಿರ್ಯಃ ಪುತ್ರಃ ಸ ಇಮಾ ಚಿಕೇತ** ಎಂಬ ವಾಕ್ಯದಿಂದ ತಿಳಿಸಿದೆ.

ಇಂತಹ ಜ್ಞಾನಿಯು ಪಿತೃಗಳಿಗೂ ಪಿತೃವಾಗಿರುವನು ಎಂದರೆ ಪೂಜ್ಯನಾಗಿರುವನು ಎಂದು ತಿಳಿಸಲು ಸಾಯಣರು ತಾಂಡಕಬ್ರಾಹ್ಮಣದಿಂದ ಒಂದು ಉದಾಹರಣೆಯನ್ನು ಕೊಟ್ಟಿರುತ್ತಾರೆ.

**ಶಿಶುರ್ವಾ ಆಂಗಿರಸೋ ಮಂತ್ರಕೃತಾಂ ಮಂತ್ರಕೃದಾಸೀತ್ ಸ ಪಿತ್ಣೄನ್ ಪುತ್ರಕಾ ಇತ್ಯಾಮಂತ್ರಯತ ।**

(ತಾಂ. ಬ್ರಾ ೧೩-೩-೨೪)

ಅತ್ಯಂತಕಿರಿಯವನಾಗಿದ್ದಆಂಗಿರಸ್ಸು ಮಂತ್ರಕೃತ್ತುಗಳಿಗಿಂತಲೂ ಅಧಿಕವಾದ ಮಂತ್ರಕೃತ್ತಾಗಿದ್ದನು. ಅವನು ಪಿತೃಗಳನ್ನೂ ಸಹ ಪುತ್ರರೆಂದೇ ಸಂಬೋಧಿಸುತ್ತಿದ್ದನು. ಆಗ,

**ತೇ ದೇವಾನಪೃಚ್ಛಂತ ತೇ ದೇವಾ ಅಬ್ರುವನ್ನೇಷ ವಾವ ಪಿತಾ ಯೋ ಮಂತ್ರಕೃತ್ ॥**

ಆ ಪಿತೃಗಳು ದೇವತೆಗಳನ್ನು ಸಮೀಪಿಸಿ ಇದು ಸರಿಯೇ ಎಂದು ಕೇಳಲು, ಆಗ ದೇವತೆಗಳು ಇವನು ನಿಜವಾದ ಮಂತ್ರಕೃತ್ತಾದುದರಿಂದ ಇವನೇ ಪಿತೃವಿನಂತೆ ಪೂಜ್ಯನು ಎಂದುತ್ತರ ಕೊಟ್ಟರೆಂಬ ಸನ್ನಿವೇಶವನ್ನು ಉದಾಹರಿಸಿದೆ.

ಇದೇಮಂತ್ರಕ್ಕೆ ನಿರುಕ್ತದ ಪರಿಶಿಷ್ಟದಲ್ಲಿ ವ್ಯಾಖ್ಯಾನಮಾಡುತ್ತಾ,

**ಸ್ತ್ರಿಯ ಏವೈತಾಃ ಶಬ್ದಸ್ಪರ್ಶರೂಪರಸಗಂಧಹಾರಿಣ್ಯಸ್ತಾ ಅಮುಂ ಪುಂಶಬ್ದೇನ ನಿರಾಹಾರಃ ಪ್ರಾಣ ಇತಿ ಪಶ್ಯನ್ ಕಷ್ವಾನ್ನವಿಜಾನಾತ್ಯಂಧಃ ಕವಿರ್ಯಃ ಪುತ್ರಃ ಸ ಇಮಾ ಜಾನಾತಿ , ಯಃ ಸ ಇಮಾ ಜಾನಾತಿ ಸ ಪಿತುಷ್ಪಿತಾಸದಿತ್ಯಾತ್ಮಗತಿಮಾಚಷ್ಟೇ ।**

(ನಿ. ೧೪-೨೦)

ಎಂದು ವಿವರಿಸಿದೆ. ಇದರ ಅರ್ಥವೂ ಮೇಲೆ ಹೇಳಿದಂತೆಯೇ ಇರುತ್ತದೆ.

॥ ವ್ಯಾಕರಣಪ್ರಕ್ರಿಯಾ ॥

**ಸತೀಃ**—**ಸುಪಾಂ ಸುಲುಕ್**-(ಪಾ. ಸೂ. ೭-೧-೩೯) ಎಂಬುದರಿಂದ ಜಸ್ ಪರವಾದಾಗ ಪೂರ್ವ ಸವರ್ಣದೀರ್ಘ ಬರುತ್ತದೆ.

**ಪಶ್ಯತ್**—ದೃಶಿರ್ ಪ್ರೇಕ್ಷಣೇ ಧಾತು. ಲೇಟ್ ಪ್ರಥಮಪುರುಷಏಕವಚನದಲ್ಲಿ ತಿಪ್ ಪ್ರತ್ಯಯ. **ಇತಶ್ಚ-ಲೋಪಃ**—(ಪಾ ಸೂ. ೩-೪-೯೭) ಎಂಬುದರಿಂದ ಇಕಾರ ಲೋಪ. **ಪಾಘ್ರಾಧ್ಮಾ**-(ಪಾ. ಸೂ. ೭-೩-೭೮) ಎಂಬುದರಿಂದ ಪಶ್ಯಾದೇಶ. ಪಾದಾದಿಯಲ್ಲಿರುವುದರಿಂದ ನಿಘಾತಸ್ವರ ಬರುವುದಿಲ್ಲ. **ಧಾತುಸ್ವರ ಉಳಿಯುತ್ತದೆ.**

**ಅಕ್ಷಣ್ವಾನ್**—ಅಕ್ಷಿ ಅಸ್ಯ ಅಸ್ತಿ ಇತಿ **ಛಂದಸ್ಯಪಿ ದೃಶ್ಯತೇ** (ಪಾ. ಸೂ. ೭-೧-೭೬) ಎಂಬುದರಿಂದ ಅದಾದಿ ಪ್ರತ್ಯಯ ಪರದಲ್ಲಿಲ್ಲದಿದ್ದರೂ ಅವಙಾದೇಶ. ಇದಕ್ಕೆ ಮತುಪ್ ಪರವಾದಾಗ ಪದಸಂಜ್ಞಾ ಇರುವುದರಿಂದ ನಲೋಪ. **ಅನೋನುಟ್**-(ಪಾ. ಸೂ. ೮-೨-೧೬) ಎಂಬುದರಿಂದ ಮತುಪಿಗೆ ನುಟಾಗಮ. **ಅಟ್‌ಕುಪ್ವಾಙ್** ಸೂತ್ರದಿಂದ ಅದಕ್ಕೆ ಣತ್ವ. **ಹಸ್ವನುಡ್ಭ್ಯಾಂ ಮತುಪ್** (ಪಾ. ಸೂ. ೬-೧-೧೭೬) ಎಂಬುದರಿಂದ ಮತುಪ್ ಉದಾತ್ತವಾಗುತ್ತದೆ.

**ಚೇತತ್**—ಚಿತೀ ಸಂಜ್ಞಾನೇ ಧಾತು ಲೇಟ್ ಪ್ರಥಮಪುರುಷಏಕವಚನದಲ್ಲಿ ತಿಪ್ ಬಂದಾಗ **ಇತಶ್ಚ ಲೋಪಃ**-(ಪಾ. ಸೂ. ೩-೪-೯೭) ಎಂಬುವರಿಂದ ಅದರ ಇಕಾರಕ್ಕೆ ಲೋಪ. **ಲೇಟೋಽಡಾಟೌ** (ಪಾ. ಸೂ. ೩-೪-೯೪) ಸೂತ್ರದಿಂದ ಅಡಾಗಮ. **ಬಹುಲಂ ಛಂದಸಿ** ಎಂಬುವರಿಂದ ವಿಕರಣಕ್ಕೆ ಲೋಪ. ಪ್ರತ್ಯಯನಿಮಿತ್ತವಾಗಿ ಧಾತುವಿನ ಲಘೂಪಧೆಗೆ ಗುಣ. ತಿಙಂತನಿಘಾತಸ್ವರ ಬರುತ್ತದೆ.

**ಅಂಧಃ**—ಅದ ಭಕ್ಷಣೇ ಧಾತು. **ಅದೇರ್ನುಮ್ ಧೌ ಚ** (ಉ. ಸೂ. ೪-೬೪೫) ಎಂಬುದರಿಂದ ಅಸುನ್, ನುಮಾಗಮ. ಧಕಾರಾದೇಶ. ಅಂಧಃ ಎಂದು ರೂಪವಾಗುತ್ತದೆ

**ಚಿಕೇತ** - ಕಿತ ಜ್ಞಾನೇ ಧಾತು. ಛಾಂದಸವಾಗಿ ವರ್ತಮಾನಾರ್ಥದಲ್ಲಿ ಲಿಟ್. ಪ್ರಥಮಪುರುಷಏಕವಚನಾಂತರೂಪ. ಅತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

**ವಿಜಾನಾತ್**—ಜ್ಞಾ ಅವಬೋಧನೇ ಧಾತು. ಲೇಟ್ ಪ್ರಥಮಪುರುಷಏಕವಚನದಲ್ಲಿ ತಿಪ್ ಇಕಾರ ಲೋಪ. ಇದಕ್ಕೆ ಅಡಾಗಮ. ಶ್ನಾವಿಕರಣ. **ಜ್ಞಾಜನೋರ್ಜಾ** (ಪಾ. ಸೂ ೭-೩-೭೯) ಎಂಬುದರಿಂದ ಧಾತುವಿಗೆ ಜಾದೇಶ. **ಯದ್ವೃತ್ತಾನ್ನಿತ್ಯಮ್** ಎಂಬುದರಿಂದ ನಿಘಾತಸ್ವರಪ್ರತಿಷೇಧ ಬರುವುದರಿಂದ ವಿಕರಣಸ್ವರ ಉಳಿಯುತ್ತದೆ. **ತಿಙಿಚೋದಾತ್ತವತಿ** (ಪಾ. ಸೂ. ೮-೧-೭೧) ಎಂಬುವರಿಂದ ಗತಿಗೆ (ವಿ) ಅನುದಾತ್ತಸ್ವರ ಬರುತ್ತದೆ.

**ಅಸತ್**—ಅಸ ಭುವಿ ಧಾತು. ಹಿಂದಿನಂತೇ ಲೇಟ್ ಪ್ರಥಮಪುರುಷಏಕವಚನಾಂತರೂಪ. ॥ ೧೬ ॥

### ಸಂಹಿತಾಪಾಠಃ

ಅವಃ ಪರೇಣ ಪರ ಏನಾವರೇಣ ಪದಾ ವತ್ಸಂ ಬಿಭ್ರತೀ ಗೌರುದಸ್ಥಾತ್ ।
ಸಾ ಕದ್ರೀಚೀ ಕಂ ಸ್ವಿದರ್ಧಂ ಪರಾಗಾತ್ಕ್ವ ಸ್ವಿತ್ಸೂತೇ ನಹಿ ಯೂಥೇ ಅಂತಃ ॥ ೧೭ ॥

### ಪದಪಾಠಃ

ಅವಃ । ಪರೇಣ । ಪರಃ । ಏನಾ । ಅವರೇಣ । ಪದಾ । ವತ್ಸಂ । ಬಿಭ್ರತೀ । ಗೌಃ । ಉತ್ । ಅಸ್ಥಾತ್ ।
ಸಾ । ಕದ್ರೀಚೀ । ಕಂ । ಸ್ವಿತ್ । ಅರ್ಧಂ । ಪರಾ । ಅಗಾತ್ । ಕ್ವ । ಸ್ವಿತ್ । ಸೂತೇ । ನಹಿ । ಯೂಥೇ ।
ಅಂತರಿತಿ ॥ ೧೭ ॥

### ಸಾಯಣಭಾಷ್ಯಂ

**ಅತ್ರಾಗ್ನೌ ಹೂಯಮಾನಾಹುತಿರ್ಗೋರೂಪೇಣ ಸ್ತೂಯತೇ । ಗೌರ್ಗೋರೂಪಾ ಗಮನಶೀಲೈಷಾಹುತಿಸಂಘೋನ ಪೋಷ್ಯಂ ವತ್ಸಂ ವತ್ಸಸ್ಥಾನೀಯಮಗ್ನಿಮವೋಽವಸ್ತಾದಧೋದೇಶೇ ಪರೇಣ ಪದಾ ಪಾದದ್ವಯೇನ ಸ್ವಾವಯವೇನಾಕೃಷ್ಯ ಬಿಭ್ರತೀ ಧಾರಯಂತೀ ತಥಾ ಪರಃ ಪರಸ್ತಾದುಪರಿದೇಶ ಏನಾನೇನಾವರೇಣ ಚ ಪದಾ ಪಾದದ್ವಯೇನಾಕೃಷ್ಯ ತಮೇವ ವತ್ಸಂ ಭಿಭ್ರತ್ಯುದಸ್ಥಾತ್ । ಸೂರ್ಯಂ ಪ್ರತ್ಯುತ್ತಿಷ್ಠತಿ । ಅಗ್ನೌ ಪ್ರಾಸ್ತಾಹುತಿಃ ಸಮ್ಯಗಾದಿತ್ಯಮುಪತಿಷ್ಠತೇ । ಮನು. ೩-೭೬ । ಇತಿ ಸ್ಮೃತೇಃ । ಅಥೈವಂ ಕೃತವತೀ ಸಾಹುತಿಃ ಕದ್ರೀಚೀ ಕ್ವ ಗತೇತ್ಯನಿಶ್ಚಯಗಮನಾ । ಆದಿತ್ಯಂ ಪ್ರಾಪ್ತವತೀತ್ಯರ್ಥಃ । ಕಿಂ ಸ್ವಿತ್ ಕಂ ಫಲಭಾಜಂ ಪುರುಷಂ ಪ್ರತ್ಯರ್ಧಮರ್ಧಮಾರ್ಗಮಾಗತ್ಯ । ಯದ್ವಾ । ಅರ್ಧವೃದ್ಧಂ । ಪರಾಗಾತ್ । ಪರಾಗಚ್ಛತಿ । ಆಗತ್ಯ ಚ ಕ್ವ ಸ್ವಿತ್ಸೂತೇ । ಕುತ್ರ ಪ್ರದೇಶೇ ಫಲಮುತ್ಪಾದಯತಿ । ನಹೀತರಗೋವದಿಯಂ ಯೂಥೇಽಂತಃ ಸಜಾತೀಯಗೋಮಧ್ಯೇ ಸೂತೇ । ಸಾಧಾರಣ್ಯೇನ ಯತ್ರಕ್ವಚಿನ್ನ ಸೂತೇ ಅಪಿ ತು ಕಸ್ಮಿಂಶ್ಚಿದನುಷ್ಠಾತರಿ । ಅತಃ ಸ ಮಹಾನ್ ಕೋ ನು ಖಲ್ವಿತಿ । ಯದ್ವಾ । ಆದಿತ್ಯರಶ್ಮಿಸಮೂಹ ಏವ ಗೋರೂಪೇಣ ಸ್ತೂಯತೇ । ಗೌರುಕ್ತಲಕ್ಷಣಾ ರಶ್ಮಿರೂಪಾ ಗೌರ್ವತ್ಸಂ ವತ್ಸವತ್ಪ್ರಕ್ಷಣೀಯಂ ಯಜಮಾನಮುಕ್ತಕ್ರಮೇಣ ಬಿಭ್ರತ್ಯುದಸ್ಥಾತ್ । ಅಥ ತಥಾ ಕೃತ್ವಾ ಸಾ ಕದ್ರೀಚ್ಯದೃಶ್ಯಗಮನಾ ಸತೀ ಕಂ ಸ್ವಿದರ್ಧವೃದ್ಧಮರ್ಧಸ್ಥಾನಭಾಜಂ ವಾ ಕಂ ಸ್ವಿತ್ಪುರುಷಮಾದಿತ್ಯಂ ಪರಾಗಾತ್ । ಅಪ್ರತಿನಿವೃತ್ತಾ ಗತಾ । ತಂ ನಯಂತ್ಯೇತಾಃ ಸೂರ್ಯಸ್ಯ ರಶ್ಮಯೋ ಯತ್ರ ದೇವಾನಾಂ ಪತಿರೇಕೋಽಧಿವಾಸಃ । ಮುಂ ಉ. ೧-೨-೫ । ಇತಿ ಶ್ರುತೇಃ । ತಥಾ ಕೃತ್ವಾ ಚ ಕ್ವ ಸ್ವಿತ್ಸೂತೇ। ಕಸ್ಮಿನ್ನಿಂದ್ರಾದಿಲೋಕೇ ಜನಯತಿ । ನ ಸರ್ವತ್ರ । ಶಿಷ್ಟಂ ಸಮಾನಂ ॥**

### ಪ್ರತಿಪದಾರ್ಥ

ಗೌಃ—ಗಮನಶೀಲವಾದ ಈ ಆಹುತಿಯು । **ವತ್ಸಂ**—ವತ್ಸರೂಪನಾದ ಅಗ್ನಿಯನ್ನು । **ಅವಃ**—ತನ್ನ ಅಧಃ ಪ್ರದೇಶದಲ್ಲಿ । **ಪರೇಣ ಪದಾ** — ತನ್ನ ಮುಂಭಾಗದ ಕಾಲುಗಳಿಂದ । **ಬಿಭ್ರತೀ** — ಹಿಡಿದುಕೊಂಡು (ಹಾಗೆಯೇ) । **ಪರಃ**—ಮೇಲ್ಭಾಗದಲ್ಲಿ । ಏನಾ **ಅವರೇಣ**—ಈ ಹಿಂಭಾಗದ ಕಾಲುಗಳಿಂದ (ಅದೇ ವತ್ಸರೂಪನಾದ ಅಗ್ನಿಯನ್ನು ಹಿಡಿದುಕೊಂಡು) । **ಉದಸ್ಥಾತ್**— ಸೂರ್ಯಾಭಿಮುಖವಾಗಿ ಹತ್ತುತ್ತದೆ । **ಸಾ**— ಆಹುತಿರೂಪದ ಆ ಗೋವು । **ಕದ್ರೀಚೀ**—ಎಲ್ಲಿ ಹೋಯಿತು ? । **ಕಂ ಸ್ವಿತ್**—ಯಾವ ಪುರುಷನನ್ನುದ್ದೇಶಿಸಿ । **ಅರ್ಧಂ**—ಅರ್ಧ ಮಾರ್ಗದಲ್ಲಿಯೇ ಅಥವಾ ಅವನಿಗೆ ಋದ್ಧಿಯನ್ನುಂಟುಮಾಡುವುದಕ್ಕಾಗಿ (ಸಂಪತ್ತು) । **ಪರಾಗಾತ್**—ಹಿಂತಿರುಗಿತು ? । **ಕ್ವ ಸ್ವಿತ್** ಯಾವ ಪ್ರದೇಶದಲ್ಲಿ । **ಸೂತೇ**—ಫಲವನ್ನು ಪ್ರಸವಿಸುತ್ತದೆ ? (ಸುರಿಸುತ್ತದೆ) । **ಯೂಥೇ ಅಂತಃ**--ತನ್ನ ಗುಂಪಿನ ಪಶುಗಳ ನಡುವೆ । **ನ ಹಿ**—ಖಂಡಿತವಾಗಿಯೂ ಸುರಿಸುವುದಿಲ್ಲ.

### ॥ ಭಾವಾರ್ಥ ॥

ಗೋರೂಪಿಯಾದ ಈ ಆಹುತಿಯು ವತ್ಸರೂಪನಾದ ಅಗ್ನಿಯನ್ನು ತನ್ನ ಅಧಃ ಪ್ರದೇಶದಲ್ಲಿ ತನ್ನ ಮುಂಭಾಗದ ಕಾಲುಗಳಿಂದಲೂ ಮತ್ತು ಮೇಲ್ಭಾಗದಲ್ಲಿ ತನ್ನ ಹಿಂಭಾಗದ ಕಾಲುಗಳಿಂದಲೂ ಹಿಡಿದುಕೊಂಡು ಸೂರ್ಯಾಭಿಮುಖವಾಗಿ ಹತ್ತುತ್ತದೆ. ಆಹುತಿರೂಪವಾದ ಆ ಗೋವು ಎಲ್ಲಿ ಹೋಯಿತು ? ಯಾವ ಪುರುಷನನ್ನುದ್ದೇಶಿಸಿ ಅವನಿಗೆ

ಸಂಪತ್ಪ್ರಸೂತಿಯನ್ನುಂಟುಮಾಡುವುದಕ್ಕಾಗಿ ಅರ್ಧಮಾರ್ಗದಿಂದಲೇ ಹಿಂತಿರುಗಿತು ? ಯಾವ ಪ್ರದೇಶದಲ್ಲಿ ಫಲವನ್ನು ಪ್ರಸವಿಸುತ್ತದೆ ? ಎಂಬುದನ್ನು ನಿಶ್ಚೃಷ್ಟವಾಗಿ ಹೇಳಲಾಗುವುದಿಲ್ಲ. ಆದರೆ ತನ್ನ ಗುಂಪಿನ ಪಶುಗಳ ನಡುವೆ ಖಂಡಿತವಾಗಿಯೂ ಸುರಿಸುವುದಿಲ್ಲ.

English Translation

The cow, holding her calf underneath with her fore-feet, and then above with her hind-feet, has risen up: whither is she gone? to whom has she turned back when half-way? where does she bear young? it is not amidst the herd.

ವಿಶೇಷವಿಷಯಗಳು

ಅಗ್ನಿಯಲ್ಲಿ ಅರ್ಪಿಸಿದ ಆಹುತಿಯನ್ನು ಇಲ್ಲಿ ಗೋರೂಪದಿಂದ ಸ್ತುತಿಸಿದೆ. ಅಥವಾ **ಆದಿತ್ಯರಶ್ಮಿಸಮೂಹ ಏವ ಗೋರೂಪೇಣ ಸ್ತೂಯತೇ ।** ಆದಿತ್ಯನ ರಶ್ಮಿಸಮೂಹವೇ ಗೋರೂಪದಿಂದ ಸ್ತುತವಾಗಿದೆ ಎಂದು ಎರಡು ವಿಧವಾದ ತಾತ್ಪರ್ಯವನ್ನು ಸಾಯಣರು ಹೇಳಿದ್ದಾರೆ.

**ಗೌಃ**—ಈ ಪದಕ್ಕೆ **ಪೃಥಿವೀ, ಪಶು** ಇತ್ಯಾದ್ಯರ್ಥಗಳಾಗುವುದೆಂದೂ ಆ ಅರ್ಥಗಳಲ್ಲಿ ಈ ಶಬ್ದದ ನಿರ್ವಚನವನ್ನೂ ಹಿಂದೆ ತಿಳಿಸಿದೆ. ಪ್ರಕೃತದಲ್ಲಿ ಈ ಪದಕ್ಕೆ ಯಜ್ಞಾಹುತಿ ಅಥವಾ ಸೂರ್ಯರಶ್ಮಿ ಎಂಬರ್ಥವಾಗುವುದು ಸಹಜವಾಗಿದೆ. " **ಅಗ್ನೌ ಪ್ರಾಸ್ತಾಹುತಿಸ್ಸಮ್ಯಗಾದಿತ್ಯಮುಪತಿಷ್ಠತೇ** " ಎಂಬ ಸ್ಮೃತಿವಚನವನ್ನು ಭಾಷ್ಯಕಾರರು ಉದಹರಿಸಿ ಅಗ್ನಿಯಲ್ಲಿ ಅರ್ಪಿಸಿದ ಆಹುತಿಯೂ ಆದಿತ್ಯನನ್ನೇ ಸೇರುವುದೆಂದು ಹೇಳಿರುವುದರಿಂದ ರಶ್ಮಿರೂಪದಲ್ಲಿಯೇ ಪರಿಣಮಿಸುತ್ತದೆಂದು ತಾತ್ಪರ್ಯವು.

**ಆದಿತ್ಯೋಽಪಿ ಗೌರುಚ್ಯತೇ । ಸರ್ವೇಽಪಿ ರಶ್ಮಯೋ ಗಾವ ಉಚ್ಯಂತೇ ॥**

(ನಿ. ೨-೬)

ಎಂದು ನಿರುಕ್ತಕಾರರು ಈ ಪದದ ಅರ್ಥವನ್ನು ವಿವರಿಸುವುದಕ್ಕಾಗಿ,

**ತಾ ವಾಂ ವಾಸ್ತೂನ್ಯುಶ್ಮಸಿ ಗಮಧ್ಯೈ ಯತ್ರ ಗಾವೋ ಭೂರಿಶೃಂಗಾ ಅಯಾಸಃ ।**
**ಅತ್ರಾಹ ತದುರುಗಾಯಸ್ಯ ವೃಷ್ಣಃ ಪರಮಂ ಪದಮವ ಭಾತಿ ಭೂರಿ ॥**

(ಋ. ಸಂ. ೧-೧೫೪-೬)

ಎಂಬ ಋಕ್ಕನ್ನುದಹರಿಸಿ ಬಹುಶೃಂಗಗಳುಳ್ಳವೂ, ಅಯಾಸವೂ ಆದ ರಶ್ಮಿಗಳನ್ನು ವರ್ಣಿಸಿರುವುದನ್ನು ತೋರಿಸಿ ಆದಿತ್ಯರಶ್ಮಿಗಳ ಪರ್ಯಾಯಪದವೆಂದು ತಿಳಿಸಿದ್ದಾರೆ

ಇಂತಹ ಆದಿತ್ಯರಶ್ಮಿಗೂ ಅಥವಾ ಆದಿತ್ಯರಶ್ಮಿಯೊಂದಿಗೆ ತಾದಾತ್ಮ್ಯವನ್ನು ಹೊಂದುವ ಯಜ್ಞಾಹುತಿಗೂ ಯಜ್ಞಕರ್ತನಾದ ಯಜಮಾನನಿಗೂ ಇರುವ ಸಂಬಂಧವನ್ನು ಇಲ್ಲಿ ತಿಳಿಸಿದೆ. ಆದಿತ್ಯರಶ್ಮಿಯನ್ನು ಗೋವಿಗೂ, ಯಜಮಾನನನ್ನು ವತ್ಸಕ್ಕೂ ಹೋಲಿಸಿದೆ. ಒಟ್ಟಿನಲ್ಲಿ ಆದಿತ್ಯನಿಗೂ ಯಜ್ಞಕರ್ತನಿಗೂ ಇರುವ ಸಂಬಂಧವನ್ನೂ ತಿಳಿಸಿದಂತಾಗುತ್ತದೆ.

ಇಲ್ಲಿ **ಗೋಶಬ್ದಕ್ಕೆ** ಯಜ್ಞಾಹುತಿಯಪರವಾಗಿ ಅರ್ಥಮಾಡಿದರೆ ಆಗ **ಕ್ವೆ ಸ್ಥಿತ್ ಸೂತೇ** ಇತ್ಯಾದಿವರ್ಣನೆಗಳಿಂದ ಯಜ್ಞಕರ್ತನಿಗೆ ಲಭಿಸಬಹುದಾದ ಅನ್ನಾದಿಸಂಪತ್ತುಗಳೇ ಲಕ್ಷ್ಯಗಳಾಗುತ್ತವೆ. ಅಥವಾ **ಆದಿತ್ಯರಶ್ಮಿಯ** ಪರವಾಗಿ ಅರ್ಥಮಾಡಿದರೆ ಆಗ ಯಜಮಾನನಿಗೆ ಲಭಿಸತಕ್ಕ ಉತ್ತಮವಾದ ದಿವ್ಯಲೋಕಪದವಿಯು ಲಕ್ಷ್ಯವಾಗುತ್ತದೆ. ಈ ಎರಡು ಅರ್ಥಗಳೂ ಶತಪಥಬ್ರಾಹ್ಮಣದಿಂದ ಉದಾಹೃತವಾಗಿರುವ ಕೆಳಗಿನ ವಾಕ್ಯದಲ್ಲಿ ನಿರ್ದಿಷ್ಟವಾಗಿವೆಯೆಂದು ಹೇಳಬಹುದು.

> **ಸ ಉದೀಕ್ಷತೇ । ಸ್ವಯಂಭೂರಸಿ ಶ್ರೇಷ್ಠೋ ರಶ್ಮಿರಿತ್ಯೇಷ ವೈ ಶ್ರೇಷ್ಠೋ ರಶ್ಮಿರ್ಯತ್ಸೂರ್ಯಸ್ತಸ್ಮಾದಾಹ ಸ್ವಯಂಭೂರಸಿ ಶ್ರೇಷ್ಠೋ ರಶ್ಮಿರಿತಿ ವರ್ಚೋದಾ ಅಸಿ ವರ್ಚೋ ಮೇ ದೇಹೀತಿ ತ್ವೇವಾಹಂ ಬ್ರವೀಮೀತಿ ಹ ಸ್ಮಾಹ ಯಾಜ್ಞವಲ್ಕ್ಯಸ್ತದ್ಧ್ಯೇವ ಬ್ರಾಹ್ಮಣೇನೇಷ್ಟವ್ಯಂ ಯದ್ಬ್ರಹ್ಮವರ್ಚಸೀ ಸ್ಯಾದಿತ್ಯೌತೋ ಹ ಸ್ಮಾಹೌಪೋದಿತೇಯ ಏಷ ವಾವ ಮಹ್ಯಂ ಗಾ ದಾಸ್ಯತಿ ಗೋದಾ ಗಾ ಮೇ ದೇಹೀತ್ಯೇವಂ ಯಂ ಕಾಮಂ ಕಾಮಯತೇ ಸೋಽಸ್ಮೈ ಕಾಮಃ ಸಮೃಧ್ಯತೇ ।**
>
> ( ಶ. ಬ್ರಾ. ೧-೯-೩-೧೬ )

ಆದಿತ್ಯನು ಅತ್ಯಂತ ಶ್ರೇಷ್ಠವಾದ ರಶ್ಮಿಯೂ ಸ್ವಯಂಭುವೂ, ವರ್ಚೋದನೂ ಆಗಿದ್ದಾನೆ. ಆದುದರಿಂದ " ನನಗೂ ವರ್ಚಸ್ಸನ್ನು ಕೊಡು " ಎಂದು ಪ್ರಾರ್ಥಿತನಾಗಿದ್ದಾನೆ. ಇಲ್ಲಿ ಎರಡುವಿಧವಾದ ಪ್ರಾರ್ಥನೆಯಿದೆ. ಯಾಜ್ಞವಲ್ಕ್ಯನು **" ವರ್ಚೋದಾ ಅಸಿ ವರ್ಚೋ ಮೇ ದೇಹಿ "** " ನೀನು ವರ್ಚಸ್ವಿಯಾಗಿದ್ದೀಯೆ ; ನನಗೂ ವರ್ಚಸ್ಸನ್ನು ಕೊಡು " ಎಂದು ಪ್ರಾರ್ಥಿಸಿದ್ದಾನೆ. ಔಪೋದಿತೇಯನು **" ಏಷ ವಾವ ಮಹ್ಯಂ ಗಾ ದಾಸ್ಯತಿ ಗೋದಾ ಗಾಮೇ ದೇಹೀತ್ಯೇವಂ "** ಈ ಆದಿತ್ಯನು **ಗೋವನ್ನು** ದಾನಮಾಡುವವನಾಗಿದ್ದಾನೆ. ಆದುದರಿಂದ ಎಲೈ ಆದಿತ್ಯನೇ, ನನಗೆ ಗೋವನ್ನು ಕೊಡು " ಎಂದು ಪ್ರಾರ್ಥಿಸಿದ್ದಾನೆ. ಆದುದರಿಂದ ಯಾರು ಯಾವ ಪ್ರಾರ್ಥನೆಯನ್ನು ಮಾಡಿಕೊಂಡರೂ ಆಯಾ ಪ್ರಾರ್ಥನೆಯನ್ನು ಆದಿತ್ಯನು ನೆರವೇರಿಸುತ್ತಾನೆ ಎಂದು ತಿಳಿಸಲು **" ಯಂ ಯಂ ಕಾಮಂ ಕಾಮಯತೇ ಸೋಽಸ್ಮೈ ಕಾಮಃ ಸಮೃಧ್ಯತೇ "** ಎಂದು ತಿಳಿಸಿದೆ. ಇಲ್ಲಿ ಹೇಳಿರುವ ಎರಡನೆಯ ಅರ್ಥವನ್ನು ವಿವರಿಸುವ ವಾಕ್ಯವು ತೈತ್ತಿರೀಯ ಸಂಹಿತೆಯಿಂದ ಶತಪಥದಲ್ಲಿ ಉದಾಹೃತವಾಗಿದೆಯೆಂದು ತೋರುತ್ತದೆ.

> **ಸಗ್ಂಶ್ರವಾ ಹ ಸೌವರ್ಚನಸಸ್ತುಮಿಂಜಮೌಪೋದಿತಿಮುವಾಚ ಯತ್ಸತ್ರಿಣಾಗ್ಂ ಹೋತಾ ಭೂಃ ಕಾಮಿಡಾಮುಪಾಹ್ವಥಾ ಇತಿ ತಾಮುಪಾಹ್ವ ಇತಿ ಹೋವಾಚ ಯಾ ಪ್ರಾಣೇನ ದೇವಾನ್ದಾಧಾರ ವ್ಯಾನೇನ ಮನುಷ್ಯಾನಪಾನೇನ ಪಿತೄನಿತಿ ಛಿನತ್ತಿ ಸಾ ನ ಛಿನತ್ತೀ೩ ಇತಿ ಛಿನತ್ತೀತಿ ಹೋವಾಚ ಶರೀರಂ ವಾ ಅಸ್ಯೈ ತದುಪಾಹ್ವಥಾ ಇತಿ ಹೋವಾಚ ಗೌರ್ವೈ ॥**
>
> (ತೈ. ಸಂ. ೧-೭-೨-೧)

ಎಂಬ ಸಂಹಿತಾವಾಕ್ಯದಲ್ಲಿ ಸಂಶ್ರವಸ್ಸಿಗೂ, ಔಪೋದಿತಿಗೂ ನಡೆದ ಸಂಭಾಷಣೆಯಿದೆ. ಇದರಲ್ಲಿ ಔಪೋದಿತಿಯು ಮೇಲೆ ವಿವರಿಸಿದಂತೆ ಪಾರ್ಥಿವವಾದ ಕಾಮವನ್ನೇ ಪ್ರಕಾಶಪಡಿಸುತ್ತಾನೆಂದು ಶತಪಥದಲ್ಲಿ ತಿಳಿಸಿದೆ. ಪ್ರಕೃತವಲ್ಲಿ ಬೇಕಾದುದು ಆದಿತ್ಯರಶ್ಮಿರೂಪವಾದ ಗೋವಿನಿಂದ ಲೌಕಿಕವಾದ ಸಂಪತ್ತನ್ನೂ ಪಡೆಯಬಹುದು. ಅಥವಾ

ಯಾಜ್ಞವಲ್ಕ್ಯನು ಇಚ್ಛಿಸಿದಂತೆ ಆಧ್ಯಾತ್ಮಿಕವಾದ ಸಂಪತ್ತನ್ನೂ ಪಡೆಯಬಹುದೆಂಬುದು ವಿಶದವಾಗಿದೆ. ಇದನ್ನೇ ಮುಂಡಕೋಪನಿಷತ್ತಿನಲ್ಲಿ ವಿವರಿಸುತ್ತಾ,

**ಏತೇಷು ಯಶ್ಚರತೇ ಭ್ರಾಜಮಾನೇಷು ಯಥಾಕಾಲಂ ಚಾಹುತಯೋ ಹ್ಯಾದದಾಯನ್ ।**
**ತಂ ನಯಂತ್ಯೇತಾಃ ಸೂರ್ಯಸ್ಯ ರಶ್ಮಯೋ ಯತ್ರ ದೇವಾನಾಂ ಪತಿರೇಕೋಽಧಿವಾಸಃ ॥**

(ಮು. ಉ. ೧-೨-೫)

ಈ ರಶ್ಮಿಗಳು ಪ್ರಕಾಶಮಾನವಾಗಿರುವಾಗ ಆಯಾ ಕಾಲಾನುಗುಣವಾದ ಆಹುತಿಯನ್ನು ಅರ್ಪಿಸಿದರೆ ಆ ಯಜಮಾನನನ್ನು ದೇವತೆಗಳಿಗೆಲ್ಲಾ ಅಧಿಪತಿಯಾದ ಪರಮಪುರುಷನು ಇರತಕ್ಕ ಪ್ರದೇಶಕ್ಕೆ ಈ ಆದಿತ್ಯರಶ್ಮಿಗಳು ಒಯ್ಯುತ್ತವೆ. ಅಷ್ಟೇ ಅಲ್ಲದೇ,

**ಏಹ್ಯೇಹೀತಿ ತಮಾಹುತಯಃ ಸುವರ್ಚಸಃ ಸೂರ್ಯಸ್ಯ ರಶ್ಮಿಭಿರ್ಯಜಮಾನಂ ವಹಂತಿ ।**
**ಪ್ರಿಯಾಂ ವಾಚಮಭಿವದಂತ್ಯೋಽರ್ಚಯಂತ್ಯ ಏಷ ವಃ ಪುಣ್ಯಃ ಸುಕೃತೋ ಬ್ರಹ್ಮಲೋಕಃ ॥**

(ಮುಂ. ಉಂ. ೧-೨-೬)

ಶ್ರೇಷ್ಠವಾದ ಈ ಆಹುತಿಗಳು ಯಜಮಾನನನ್ನು ಪ್ರೀತಿಯಿಂದ "ಬಾ, ಬಾ" ಎಂದು ಕರೆಯುತ್ತಲೂ ಮತ್ತು ಸೂರ್ಯರಶ್ಮಿಗಳೊಂದಿಗೆ ಅವನನ್ನು ಬ್ರಹ್ಮಲೋಕಕ್ಕೆ ಒಯ್ಯುತ್ತಲೂ "ಇದು ನಿನ್ನ ಸತ್ಕರ್ಮಗಳಿಂದ ಗಳಿಸಿದ ಬ್ರಹ್ಮಲೋಕವು" ಎಂಬ ಪ್ರಿಯವಾಕ್ಯನ್ನು ಹೇಳುತ್ತಲೂ ಅವನನ್ನು ಪ್ರಶಂಸಿಸುತ್ತಲೂ, ಕರೆದುಕೊಂಡುಹೋಗುತ್ತವೆ. ಎಂಬುದಾಗಿ ಆದಿತ್ಯರಶ್ಮಿಯು ಉತ್ತಮವಾದ ಯಜ್ಞಕರ್ತನಿಗೆ ಮಾಡತಕ್ಕ ಉಪಕಾರವನ್ನು ವರ್ಣಿಸಿದೆ. ಸಾಯಣರು ಮುಂಡಕೋಪನಿಷತ್ತಿನ ಈ ವಾಕ್ಯವನ್ನುದಹರಿಸಿ ಪ್ರಕೃತವಾದ ಋಕ್ಕಿನಲ್ಲಿಯೂ ಅದೇ ಭಾವವು ಹೇಳಲ್ಪಟ್ಟಿದೆಯೆಂದು ತಿಳಿಸಿದ್ದಾರೆ.

**ವತ್ಸಂ ಬಿಭ್ರತೀ—ವತ್ಸಸ್ಥಾನೀಯಮಗ್ನಿಂ ಧಾರಯಂತೀ ।** ವತ್ಸರೂಪದಲ್ಲಿರುವ ಅಗ್ನಿಯನ್ನು ಧರಿಸುತ್ತಾ ಎಂದರ್ಥ.

**ಅಜ್ಞಾ ಗೋಜಾ ಇತ್ಯಜ್ಞಾಶ್ಚ ಹ್ಯೇಷ ಗೋಜಾಶ್ಚ ।**

(ಶ. ಬ್ರಾ. ೬-೭-೩-೧೧)

ಇತ್ಯಾದಿಯಾಗಿ ವರ್ಣಿಸಿ ಅಗ್ನಿಯು **ಗೋಜ** ಎಂದರೆ ಗೋವಿನಿಂದ ಉತ್ಪನ್ನನಾದವನು ಎಂದು ತಿಳಿಸಿದೆ. ಮಾತೃವಾದ **ಗೋವು** ವತ್ಸನಾದ ಅಗ್ನಿಯನ್ನು ಧರಿಸುತ್ತಾ **ಊರ್ಧ್ವಾಭಿಮುಖವಾಗಿ** ಹೆತ್ತುತ್ತದೆಂದು ಇಲ್ಲಿ ವರ್ಣಿಸಿದೆ. **ವತ್ಸ** ನೆಂಬ ವಿಶೇಷಣವೂ ಸಂಬೋಧನವೂ ಅಗ್ನಿಯ ಸಹಜವಾದ ಗುಣವನ್ನು ತೋರಿಸುತ್ತಾ ಅನೇಕಕಡೆಗಳಲ್ಲಿ ಉಪಯೋಗಿಸಲ್ಪಟ್ಟಿದೆ.

**ಗರ್ಭೋ ಯೋ ಅಪಾಂ ಗರ್ಭೋ ವನಾನಾಂ ಗರ್ಭಶ್ಚ ಸ್ಥಾತಾಂ ಗರ್ಭಶ್ಚರಥಾಂ ।**

(ಋ. ಸಂ. ೧-೭೦-೨)

**ಕ ಇಮಂ ವೋ ನಿಣ್ಯಮಾ ಚಿಕೇತ ವತ್ಸೋ ಮಾತ್ಯ್ಯಾರ್ಜನಯತ ಸ್ವಧಾಭಿಃ ।**
**ಬಹ್ವೀನಾಂ ಗರ್ಭೋ ಅಪಸಾಮುಪಸ್ಥಾನ್ಮಹಾನ್ಕವಿರ್ನಿಶ್ಚರತಿ ಸ್ವಧಾವಾನ್ ॥**

(ಋ. ಸಂ. ೧-೯೫-೪)

ಇತ್ಯಾದಿವರ್ಣನೆಗಳಲ್ಲಿ ವಿದ್ಯುದ್ರೂಪದ ಅಗ್ನಿಯು ಆದಿತ್ಯಕಿರಣರೂಪಗಳಾದ ಅಪ್ಪಿನಲ್ಲಿ ಗರ್ಭಪ್ರಾಯನಾಗಿದ್ದು ಔಷ ಸಾಗ್ನಿರೂಪದಿಂದ ಆದಿತ್ಯನಾಗಿ ಪರಿವರ್ತಿಸಿ ಅಂತರಿಕ್ಷದಿಂದ ಹೊರಕ್ಕೆ ಬರುತ್ತಾನೆಂದೂ ಇದೇ ವತ್ಸರೂಪನಾದ ಅಗ್ನಿಯು **ಸ್ವಧಾವಾನ್** ಆಗಿದ್ದಾನೆಂದೂ ತಿಳಿಸಿದೆ.

**ಅಸ್ಮೇ ವತ್ಸಂ ಪರಿ ಷಂತಂ ನ ವಿಂದನ್ನಿಚ್ಛಂತೋ ವಿಶ್ವೇ ಅಮೃತಾ ಅಮೂರಾಃ ॥**

(ಋ. ಸಂ. ೧-೭೨-೨)

ಇತ್ಯಾದಿಋಕ್ಕುಗಳಲ್ಲೂ ವತ್ಸರೂಪನಾದ ಅಗ್ನಿಗೂ ದೇವಮಾನವಾದಿಗಳೆಲ್ಲರಿಗೂ ಇರುವ ಸಂಬಂಧವನ್ನು ತಿಳಿಸಿದೆ. ಇಂತಹ **ವತ್ಸ**ರೂಪನಾದ ಅಗ್ನಿಯನ್ನು ಮಾತೆಯಾದ **ಗೋವು** ಧರಿಸಿದಳೆಂದು ತಾತ್ಪರ್ಯ. ಹೀಗೆ ಅಗ್ನಿಪರವಾದ ಅರ್ಥವು ಒಂದು ವಿಧ, ಎರಡನೆಯದಾಗಿ,

**ಗೌಃ ಉಕ್ತಲಕ್ಷಣಾ ರಶ್ಮಿರೂಪಾ ಗೌಃ ವತ್ಸಂ ವತ್ಸವದ್ರಕ್ಷಣೀಯಂ ಯಜಮಾನಂ ಉಕ್ತಕ್ರಮೇಣ ಬಿಭ್ರತೀ ಉದಸ್ಥಾತ್ ।**

ರಶ್ಮಿರೂಪಳಾದ ಗೋವು ತನ್ನ ವತ್ಸಪ್ರಾಯನಾದ ಯಜಮಾನನನ್ನು ಎತ್ತಿಕೊಂಡು ಹಾರುತ್ತಾ ಅದೃಶ್ಯಳಾಗಿ ಆದಿತ್ಯನಲ್ಲಿಗೆ ಹೋದಳು ಎಂದು ಅರ್ಥಮಾಡಬಹುದೆಂದು ತಿಳಿಸಿದ್ದಾರೆ. ಈ ಅಭಿಪ್ರಾಯವನ್ನು " ತಂ ನಯಂತ್ಯೇತಾಃ .... .... .... .... " ಇತ್ಯಾದಿವಾಕ್ಯಗಳಲ್ಲಿ ವಿವರಿಸಿರುವುದನ್ನು ಮೇಲೆ ತಿಳಿಸಿದೆ.

### ವ್ಯಾಕರಣಪ್ರಕ್ರಿಯಾ

**ಅವಃ**—ಅವರ ಶಬ್ದ. ಇದಕ್ಕೆ ಅಸ್ತಾತಿಪ್ರತ್ಯಯ ಬರುವಾಗ **ಪೂರ್ವಾಧರಾವರಾಣಾಮ**— (ಪಾ. ಸೂ. ೫-೩-೩೯) ಎಂಬುದರಿಂದ ಅವ್ ಆದೇಶ. ಪ್ರತ್ಯಯಕ್ಕೆ ಅಸ್ ಆದೇಶ. ಪ್ರತ್ಯಯಸ್ವರದಿಂದ ಅಂತೋದಾತ್ತವಾಗುತ್ತದೆ.

ಏನಾ— ತೃತೀಯಾವಿಭಕ್ತಿಪರವಾದಾಗ **ಸುಪಾಂ ಸುಲುಕ್** (ಪಾ. ಸೂ. ೭-೧-೩೯)ಎಂಬುದರಿಂದ ಪೂರ್ವ ಸವರ್ಣದೀರ್ಘ ಬರುತ್ತದೆ.

**ಪದಾ**— ಊಡಿದಂ ಪದಾದಿ—(ಪಾ. ಸೂ. ೬-೧-೧೭೧) ಎಂಬುದರಿಂದ ತೃತೀಯಾವಿಭಕ್ತಿಗೆ ಉದಾತ್ತ ಸ್ವರಬರುತ್ತದೆ.

**ಅಸ್ಥಾತ್**—ಷ್ಠಾ ಗತಿನಿವೃತ್ತೌ ಧಾತು. ಛಾಂದಸವಾಗಿ ಲುಙ್. ಪ್ರಥಮಪುರುಷಏಕವಚನಾಂತರೂಪ. ಅತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

**ಅಗಾತ್**— ಇಣ್ ಗತೌ ಧಾತು ಹಿಂದಿನಂತೆ **ಲುಙ್** ಪ್ರಥಮಪುರುಷಏಕವಚನಾಂತರೂಪ. **ಇಣೋ-ಗಾಲುಙಿ** (ಪಾ. ಸೂ. ೨-೪-೪೫) ಎಂಬುದರಿಂದ ಧಾತುವಿಗೆ ಗಾದೇಶ. ತಿಙಂತನಿಘಾತಸ್ವರ ಬರುತ್ತದೆ.

**ಸೂತೇ**—ಷೂಙ್ ಪ್ರಾಣಿಗರ್ಭವಿಮೋಚನೇ ಧಾತು. ಅದಾದಿ **ಧಾತ್ವಾದೇಃ ಷಃಸಃ** (ಪಾ. ಸೂ. ೬-೧-೬೪) ಎಂಬುದರಿಂದ ಆದಿಗೆ ಸತ್ವ. ಲಟ್ ಪ್ರಥಮಪುರುಷಏಕವಚನಾಂತರೂಪ. ತಿಙಂತನಿಘಾತಸ್ವರ ಬರುತ್ತದೆ.

**ಯೂಥೇ**—ಯು ಮಿಶ್ರಣಾಮಿಶ್ರಣಯೋಃ ಧಾತು. **ತಿಥಪೃಷ್ಠಗೂಥಯೂಥಪ್ರೋಥಾಃ** (ಉ. ಸೂ. ೨-೧೬೭) ಎಂಬುದರಿಂದ ಥಕ್ ಪ್ರತ್ಯಯಾಂತವಾಗಿ ನಿಪಾತಿತವಾಗಿದೆ. ಪ್ರತ್ಯಯಸ್ವರದಿಂದ ಅಂತೋದಾತ್ತವಾಗುತ್ತದೆ. ಸಪ್ತಮೀಏಕವಚನಾಂತರೂಪ. ॥ ೧೭ ॥

ಸಂಹಿತಾಪಾಠಃ

ಅವಃ ಪರೇಣ ಪಿತರಂ ಯೋ ಅಸ್ಯಾನುವೇದ ಪರ ಏನಾವರೇಣ ।
ಕವೀಯಮಾನಃ ಕ ಇಹ ಪ್ರ ವೋಚದ್ದೇವಂ ಮನಃ ಕುತೋ ಅಧಿ ಪ್ರಜಾತಂ ॥ ೧೮ ॥

ಪದಪಾಠಃ

ಅವಃ । ಪರೇಣ । ಪಿತರಂ । ಯಃ । ಅಸ್ಯ । ಅನುऽವೇದ । ಪರಃ । ಏನಾ । ಅವರೇಣ ।
ಕವಿऽಯಮಾನಃ । ಕಃ । ಇಹ । ಪ್ರ । ವೋಚತ್ । ದೇವಂ । ಮನಃ । ಕುತಃ । ಅಧಿ । ಪ್ರऽಜಾತಂ ॥೧೮॥

ಸಾಯಣಭಾಷ್ಯಂ

ಅವೋಽವಸ್ತಾತ್ಸ್ಥಿತಮಸ್ಯ ಪಿತರಮೇತಲ್ಲೋಕಪಾಲಕಮಗ್ನಿಂ ಪರೇಣಾದಿತ್ಯೇನ ಸಹ ಯೋಽನುವೇದ ಅನುಕ್ರಮೇಣ ಜಾನಾತಿ ತಥಾ ಪರಃ ಪರಸ್ತಾತ್ಸ್ಥಿತಮಾದಿತ್ಯಮಸ್ಯ ಪಿತರಂ ಪಾಲಕಂ । ಸೋಽಪೀಮಮೇವ ಲೋಕಂ ವೃಷ್ಟ್ಯಾದಿನಾ ಪಾಲಯತಿ । ತಾದೃಶಮಾದಿತ್ಯಮೇನಾನೇನಾವರೇಣಾಗ್ನಿನಾ ಸಹ ಯೋಽನುವೇದ ಅಗ್ನ್ಯಾದಿತ್ಯೌ ವ್ಯತಿಹಾರೇಣೋಪಾಸ್ತೇ । ಯದ್ವಾ । ಅಭಿಭೂತರಜಸ್ತಮಸ್ಕಾವುದ್ಭೂತಸತ್ತ್ವ ಅತ ಏವ ಸ್ವಾಧೀನ ಮಾಯಾವೇಶಾವೇಕತ್ವೇನ ವಾಧಿಗಚ್ಛತಿ । ಸ ತಾದೃಶಃ ಪುರುಷಃ ಕವೀಯಮಾನಃ ಕವಿವದಾಚರನ್ ಕ್ರಾಂತದರ್ಶಿತ್ವಮಾತ್ಮನಃ ಖ್ಯಾಪಯನ್ ಕ ಇಹಾಸ್ಮಿಲ್ಲೋಕೇ ಪ್ರ ವೋಚತ್ । ಪ್ರಬ್ರವೀತಿ । ಕಿಂಚ ದೇವಂ ದ್ಯೋತಮಾನಂ ದೇವವಿಷಯಮಲೌಕಿಕಂ ವಾ ಮನಃ ಕುತಃ ಕಸ್ಮಾದದೃಷ್ಟವಿಶೇಷಾದಧ್ಯಾಧಿಕ್ಯೇನ ಪ್ರಜಾತಂ । ಉತ್ಪನ್ನಂ । ಉಭಯಮಪಿ ದುರ್ಲಭಮಿತ್ಯರ್ಥಃ ॥

ಪ್ರತಿಪದಾರ್ಥ

**ಅವಃ**—ಅಧೋಭಾಗದಲ್ಲಿರುವವನೂ । **ಅಸ್ಯ ಪಿತರಂ**—ಈ ಪೃಥ್ವಿಯ ಪಾಲಕನೂ ಆದ ಅಗ್ನಿಯನ್ನು । **ಪರೇಣ**—ಊರ್ಧ್ವಭಾಗದಲ್ಲಿರುವ ಆದಿತ್ಯನೊಡಗೂಡಿದವನಾಗಿಯೂ, । (ಮತ್ತು) **ಪರಃ**—ಮೇಲು ಭಾಗದಲ್ಲಿ

ರುವ ಆದಿತ್ಯನನ್ನು । **ಅವರೇಣ ಏನ**—ಕೆಳಭಾಗದಲ್ಲಿರುವ ಈ ಅಗ್ನಿಯೊಡನೆ ಬೆರೆತವನನ್ನಾಗಿಯೂ । **ಯಃ**—ಯಾವನು । **ಅನುವೇದ**—ತಿಳಿಯುತ್ತಾನೆಯೋ, (ಅಂತಹ) । **ಕವೀಯಮಾನಃ**—ಕ್ರಾಂತದರ್ಶಿಯಾದ । **ಕಃ**—ಯಾವನು ತಾನೇ । **ಇಹ**—ಈ ಪೃಥ್ವಿಯಲ್ಲಿ । **ಪ್ರ ವೋಚತ್**—ವಿಶೇಷವಾದ ರೀತಿಯಲ್ಲಿ ಹೇಳುತ್ತಾನೆ ? । **ದೇವಂ**—ಅಲೌಕಿಕವಾದ ಪ್ರಜ್ಞೆಯುಳ್ಳ । **ಮನಃ**—ಮನಸ್ಸು । **ಕುತಃ**—ಯಾವ ಅದೃಷ್ಟವಿಶೇಷದಿಂದ । **ಅಧಿ**—ಅತಿಶಯವಾಗಿ । **ಪ್ರಜಾತಂ**—ಉತ್ಪನ್ನವಾಗಿದೆ ?

### ಭಾವಾರ್ಥ

ಅಧೋಭಾಗದಲ್ಲಿರುವವನೂ, ಈ ಪೃಥ್ವಿಯ ಪಾಲಕನೂ ಆದ ಅಗ್ನಿಯನ್ನು ಊರ್ಧ್ವಭಾಗದಲ್ಲಿರುವ ಆದಿತ್ಯನೊಡಗೂಡಿದವನಾಗಿಯೂ, ಮತ್ತು ಮೇಲುಭಾಗದಲ್ಲಿರುವ ಆದಿತ್ಯನನ್ನು ಕೆಳಗಡೆ ಇರುವ ಈ ಅಗ್ನಿಯೊಡನೆ ಬೆರೆತವನನ್ನಾಗಿಯೂ ಸಹ ಯಾವನು ತಿಳಿಯುತ್ತಾನೆಯೋ ಅಂತಹ ಕ್ರಾಂತದರ್ಶಿಯಂತಿರುವ ಯಾವನು ತಾನೇ ಈ ಪೃಥ್ವಿಯಲ್ಲಿ ಆ ಆದಿತ್ಯಾದಿಗಳ ಸಂಬಂಧವನ್ನು ವಿಶದಪಡಿಸಿ ತಿಳಿಸಬಲ್ಲನು. ? ಅಲೌಕಿಕವಾದುದೂ, ದೇವವಿಷಯವಾದುದೂ ಆದ ಪ್ರಜ್ಞೆಯುಳ್ಳ ಮನಸ್ಸು ಅತಿಶಯವಾದ ರೀತಿಯಲ್ಲಿ ಯಾವ ಅದೃಷ್ಟವಿಶೇಷದಿಂದ ಉತ್ಪನ್ನವಾಗಿದೆ ?

### English Translation

He who knows the protector of this (world) as the the inferior associated with the superior, and the superior associated with the inferior, he is, as it were, a sage ; but who in this world can expound (it) ? whence is the divine mind in its supremacy engendered ?

### ವಿಶೇಷವಿಷಯಗಳು

ಅಗ್ನಿಗೂ ಆದಿತ್ಯನಿಗೂ ಇರತಕ್ಕ ಸಂಬಂಧವನ್ನು ಈ ಋಕ್ಕಿನಲ್ಲಿ ವಿವರಿಸಿದೆ. ಈ ಸಂಬಂಧವನ್ನು ಎರಡು ವಿಧವಾಗಿ ತೋರಿಸಬಹುದು. ಮೊದಲನೆಯದಾಗಿ, ಆದಿತ್ಯಾಗ್ನಿಗಳ ಪರಸ್ಪರ ವಿನಿಮಯರೂಪವಾದ ಲೋಕರಕ್ಷಣಾಕ್ರಮದಲ್ಲಿ ಇವರಿಬ್ಬರಿಗೂ ಒಂದೇ ತತ್ತ್ವದ ಎರಡಂಶಗಳೆಂದೂ, ಎರಡನೆಯದಾಗಿ ಬಾಹ್ಯವಾದ ಆವಿರ್ಭಾವದಿಂದ ಇಬ್ಬರೂ ಬೇರೆಬೇರೆ ರೂಪದಿಂದ ಕಾಣಿಸಿಕೊಂಡರೂ ಸಹ ಇಬ್ಬರಿಗೂ ಐಕ್ಯವೇ ಇರುತ್ತದೆಂದೂ ಅರ್ಥವಾಗುತ್ತದೆ. ಇವರ ಸ್ಥಾನಗಳನ್ನು ಅವ, ಪರ ಎಂಬ ಪದಗಳಿಂದ ತಿಳಿಸಿದೆ. **ಅವ** ಎಂದರೆ ಅಧೋಭಾಗವೆಂದೂ, **ಪರ**ವೆಂದರೆ ಊರ್ಧ್ವಭಾಗದಲ್ಲಿರುವ ಅಂತರಿಕ್ಷವೆಂದೂ ಇಲ್ಲಿ ಅರ್ಥಮಾಡಬಹುದು. ಉತ್ಕರ್ಷಾಪಕರ್ಷಗಳೆಂಬ ಅರ್ಥವನ್ನು ಮಾಡುವುದು ಅಷ್ಟು ಉಚಿತವಾಗಿರುವುದಿಲ್ಲ. Wilson ಎಂಬ ಪಂಡಿತನು,

> He who knows the protector of this world as the inferior associated with the Superior, and the superior associated with the inferior ... ... ... ... ... ".

ಎಂದು **ಅವ**ಶಬ್ದಕ್ಕೆ ಅಪಕೃಷ್ಟವಾದುದೆಂದೂ, **ಪರ**ಶಬ್ದಕ್ಕೆ ಉತ್ಕೃಷ್ಟವಾದುದೆಂದೂ ಅರ್ಥಮಾಡಿದ್ದಾನೆ. ಆದಿತ್ಯಾಗ್ನಿಗಳಿಬ್ಬರೂ ಒಂದೇ ತತ್ತ್ವದ ಎರಡಂಶಗಳಾದುದರಿಂದ ಈ ಅರ್ಥವನ್ನು ಹೇಳುವುದು ಅನುಚಿತವಾಗಬಹುದು. ನಿರುಕ್ತದಲ್ಲಿ ಅಗ್ನಿಯ ಮಹತ್ತ್ವವನ್ನು ವರ್ಣಿಸುವಾಗ ಈ ಅರ್ಥಕ್ಕೆ ಸಮರ್ಥನೆಯು ದೊರೆಯುವುದಿಲ್ಲ.

**ಮೂರ್ಧಾ ಭುವೋ ಭವತಿ ನಕ್ತಮಗ್ನಿಸ್ತತಃ ಸೂರ್ಯೋ ಜಾಯತೇ ಪ್ರಾತರುದ್ಯನ್ ।**
**ಮಾಯಾಮೂ ತು ಯಜ್ಞಿಯಾನಾಮೇತಾಮಪೋ ಯತ್ತೂರ್ಣಿಶ್ಚರತಿ ಪ್ರಜಾನನ್ ॥**

(ಋ. ಸಂ ೧೦-೮೮-೬)

ಈ ವೈಶ್ವಾನರಾಗ್ನಿಯು ತನ್ನ ಅಲೌಕಿಕವಾದ ಶಕ್ತಿಯಿಂದ ಸಕಲಭೂತಗಳಿಗೂ ಪ್ರಧಾನಭೂತನಾಗಿ ರಾತ್ರಿಕಾಲದಲ್ಲಿ ಅಗ್ನಿರೂಪದಿಂದಲೂ, ಪ್ರಾತಃಕಾಲದಲ್ಲಿ ಸೂರ್ಯನ ರೂಪದಿಂದಲೂ ಪ್ರಕಾಶಿಸುತ್ತಾ ತನ್ನ ಲೋಕರಕ್ಷಣಾಕಾರ್ಯವನ್ನು ನಿರ್ವಹಿಸುತ್ತಾನೆ ಎಂಬ ಇದೇ ಅಂಶವನ್ನು ವಿವರಿಸುತ್ತಾ, ಪುನಃ, ನಿರುಕ್ತದಲ್ಲಿ,

**ಸ್ತೋಮೇನ ಹಿ ದಿವಿ ದೇವಾಸೋ ಅಗ್ನಿಮಜೀಜನಞ್ಛಕ್ತಿಭೀ ರೋದಸಿಪ್ರಾಂ ।**
**ತಮೂ ಅಕೃಣ್ವನ್ತ್ರೇಧಾ ಭುವೇ ಕಂ ಸ ಓಷಧೀಃ ಪಚತಿ ವಿಶ್ವರೂಪಾಃ ॥**

(ಋ. ಸಂ. ೧೦-೮೮-೧೦)

" .... .... .... .... ದ್ಯಾವಾಪೃಥಿವ್ಯೋಃ **ಪೂರಣಂ ತಮಕುರ್ವಂಸ್ತ್ರೇಧಾಭಾವಾಯ ಪೃಥಿವ್ಯಾಮಂತರಿಕ್ಷೇ ದಿವೀತಿ ಶಾಕಪೂಣಿಃ** " ಪೃಥ್ವಿಯಲ್ಲಿಯೂ, ಅಂತರಿಕ್ಷದಲ್ಲಿಯೂ ದ್ಯುಲೋಕದಲ್ಲಿಯೂ ವ್ಯಾಪಿಸಿ ತನ್ನ ಪಾಲನ ಕರ್ತವ್ಯಗಳನ್ನು ನಿರ್ವಹಿಸುವುದಕ್ಕಾಗಿ ದೇವತೆಗಳು ಅಗ್ನಿಯನ್ನು ಪ್ರಜ್ವಲಿಸುವಂತೆ ಮಾಡಿದರು. ಆವನು ರೂಪಾಂತರ ಗಳಿಂದ ಮೂರು ಲೋಕಗಳಲ್ಲೂ ವ್ಯಾಪಿಸಿದ್ದಾನೆ. ಹೀಗೆ ಆದಿತ್ಯಾದಿ ರೂಪಗಳಿಂದ ಬೆಳಗುವ ವಿಶ್ವತತ್ತ್ವವು ಒಂದೇ ಹೊರತು ಬೇರೆಬೇರೆಯಲ್ಲ ಎಂಬಭಿಪ್ರಾಯವನ್ನು ನಿರುಕ್ತಕಾರರು ಶ್ರುತಿವಾಕ್ಯಗಳನ್ನುದಹರಿಸಿ ವಿವರಿಸಿದ್ದಾರೆ. (ನಿ ೭-೨೭) ಆದೇ ಭಾವವು ಪ್ರಕೃತವಾದ ಋಕ್ಕಿನಲ್ಲಿಯೂ ಉಕ್ತವಾಗಿದೆ. ಆದರೆ ಆದಿತ್ಯಾಗ್ನಿಗಳಿಗೆ ಈ ವಿಧವಾದ ಐಕ್ಯವಿರುವುದು ಭೌತಿಕವಾದ ಚಕ್ಷುಸ್ಸಿಗೆ ಗೋಚರವಾಗತಕ್ಕ ವಿಷಯವಲ್ಲ. ಇದನ್ನು ಅರಿಯಬೇಕಾದರೆ ಕ್ರಾಂತದರ್ಶಿತ್ವವು ಅತ್ಯವಶ್ಯವಾಗಿರುತ್ತದೆ. ಆದುದರಿಂದ **ಕವೀಯಮಾನಃ ಕ ಇಹ ಪ್ರ ವೋಚತ್ ।** ಎಂದು ಪ್ರಶ್ನಿಸಿದೆ. ಈ ಕ್ರಾಂತದರ್ಶಿಯಾದವನು ಆದಿತ್ಯಾಗ್ನಿಗಳ ಎರಡುವಿಧವಾದ ಸಂಬಂಧವನ್ನು ಅರಿಯುತ್ತಾನೆ. ಮೊದಲನೆಯದಾಗಿ ಮೇಲೆ ಹೇಳಿದಂತೆ ಅಹೋರಾತ್ರಗಳಲ್ಲಿಯೂ ವಿನಿಮಯರೂಪದಿಂದ ಬೇರೆಬೇರೆ ಕರ್ತವ್ಯಗಳನ್ನು ಮಾಡುವವರಾಗಿದ್ದಾರೆ. ಇದನ್ನು ಸಾಯಣರು " **ಅಗ್ನ್ಯಾದಿತ್ಯೌ ವ್ಯತಿಹಾರೇಣ ಉಪಾಸ್ತೇ** " ಎಂದು ತಿಳಿಸಿದ್ದಾರೆ. ಎರಡನೆಯದಾಗಿ, **ಯದ್ವಾ । ಅಭಿಭೂತರಜಸ್ತಮಸ್ಕೌ ಉದ್ಬುದ್ಧಸತ್ತ್ವೌ ಅತ ಏವ ಸ್ವಾಧೀನಮಾಯೌ ಏತೌ ಏಕತ್ವೇನ ವಾ ಅಧಿಗಚ್ಛತಿ ।** ರಜೋಗುಣವನ್ನೂ, ತಮೋಗುಣವನ್ನೂ ನಾಶಮಾಡಿ ಶುದ್ಧವಾದ ಸತ್ತ್ವಗುಣವನ್ನು ಪ್ರಕಾಶಪಡಿಸಿ ಆದಿತ್ಯಾಗ್ನಿಗಳು ತಮ್ಮ ಪ್ರಭುತ್ವವನ್ನು ನಡೆಸುತ್ತಾರೆ. ಇವರ ವ್ಯವಹಾರಗಳಿಂದ ಬೇರೆಬೇರೆಯೇ ಹೊರತು ಇಬ್ಬರ ಮೂಲತತ್ತ್ವವೂ ಒಂದೇ ಎಂದು ಕವಿಯಾದವನು ತಿಳಿಯುತ್ತಾನೆಂದಿದೆ. ಇದನ್ನೇ ಬೃಹದಾರಣ್ಯಕದಲ್ಲಿ ವಿವರಿಸುತ್ತಾ,

**ಸ ತ್ರೇಧಾತ್ಮಾನಂ ವ್ಯಕುರುತಾದಿತ್ಯಂ ತೃತೀಯಂ ವಾಯುಂ ತೃತೀಯಂ ಸ ಏಷ ಪ್ರಾಣಸ್ತ್ರೇಧಾ ವಿಹಿತಃ ।**

(ಬೃ. ಉ. ೧-೨-೩)

ಮೂಲಭೂತವಾದ ಪ್ರಜಾಪತಿಯು ಮೂರು ಭಾಗವಾಗಿ ವಿಸ್ತರಿಸಿ ಕಾರ್ಯಕಾರಣರೂಪದಿಂದ ಪ್ರಕಾಶಪಡಿಸಿಕೊಂಡನು ಇತ್ಯಾದಿಯಾಗಿಯೂ, ಛಾಂದೋಗ್ಯದಲ್ಲಿ,

ವಾಗೇವ ಬ್ರಹ್ಮಣಶ್ಚತುರ್ಥಃ ಪಾದಃ ಸೋಽಗ್ನಿನಾ ಜ್ಯೋತಿಷಾ ಭಾತಿ ಚ ತಪತಿ ಚ ಭಾತಿ ಚ ತಪತಿ ಚ ಕೀರ್ತ್ಯಾ ಯಶಸಾ ಬ್ರಹ್ಮವರ್ಚಸೇನ ಯ ಏವಂ ವೇದ ।

ಪ್ರಾಣ ಏವ ಬ್ರಹ್ಮಣಶ್ಚತುರ್ಥಃ ಪಾದಃ ಸ ವಾಯುನಾ ಜ್ಯೋತಿಷಾ ಭಾತಿ ಚ ತಪತಿ ಚ............ ಬ್ರಹ್ಮವರ್ಚಸೇನ ಯ ಏವಂ ವೇದ ॥

ಚಕ್ಷುರೇವ ಬ್ರಹ್ಮಣಶ್ಚತುರ್ಥಃ ಪಾದಃ ಸ ಆದಿತ್ಯೇನ ಜ್ಯೋತಿಷಾ ಭಾತಿ ಚ ತಪತಿ ಚ ॥

(ಛಾ. ಉ. ೩-೧೮-೩ ರಿಂದ ೬)

ಇತ್ಯಾದಿಯಾಗಿ ಅಗ್ನಿ, ವಾಯು, ಆದಿತ್ಯ ಎಂಬ ತ್ರಿಲೋಕಾಧಿದೇವತೆಗಳೂ ಬ್ರಹ್ಮನ ಆವಿರ್ಭಾವಗಳೆಂದೂ ಪುರುಷನ ವಾಗಾದಿಗಳು ಈ ಬ್ರಹ್ಮನ ಅಂಶಭೂತಗಳಾದ ಅಗ್ನ್ಯಾದಿದೇವತೆಗಳ ಸಹಾಯದಿಂದ ಪ್ರಕಾಶಿಸುತ್ತಿವೆ ಯೆಂದೂ ವರ್ಣಿಸಿದೆ. ಮತ್ತು ಶತಪಥ ಬ್ರಾಹ್ಮಣದಲ್ಲಿ,

ಸಂವಸಥಾಗ್ ಸ್ವರ್ವಿದಾ । ಸಮೀಚೀ ಉರಸಾ ತ್ಮನೇತಿ ಸಂವಸಥಾವೇನಗ್ ಸ್ವರ್ವಿದಾ ಸಮೀಚೀ ಉರಸಾ ಚಾತ್ಮನಾ ಚೇತ್ಯೇತದಗ್ನಿಮಂತರ್ಭರಿಷ್ಯಂತೀ ಜ್ಯೋತಿಷ್ಮಂತ ಮಜಸ್ರ-ಮಿದಿತ್ಯಸೌ ವಾ ಆದಿತ್ಯ ಏಷೋಽಗ್ನಿಃ ಸ ಏಷ ಜ್ಯೋತಿಷ್ಮಾನಜಸ್ರಸ್ತಮೇತೇಅಂತರಾಬಿ-ಭೃತಸ್ತಸ್ಮಾದಾಹ ಜ್ಯೋತಿಷ್ಮಂತಮಜಸ್ರಮಿದಿತಿ ॥

(ಶ. ಬ್ರಾ. ೬-೪-೧-೧೧)

ಎಲೈ ಜ್ಯೋತಿಷ್ಮತ್ತುಗಳೇ, ಈ ಪ್ರಕಾಶಮಾನನೂ, ಅಮರನೂ ಆದ ಅಗ್ನಿಯೇ ದ್ಯುಲೋಕದಲ್ಲಿ ಪ್ರಕಾಶಿಸುತ್ತಿರುವ ಆದಿತ್ಯನು. ಆದುದರಿಂದ ಉರಸ್ಸಿನಿಂದಲೂ ಹೃದಯದಿಂದಲೂ ಐಕ್ಯಮಾಡಿ ಈ ತೇಜಸ್ಸನ್ನು ಆರಾಧಿಸಿ ಎಂದೂ, ಹೀಗೆಯೇ,

ಅಗ್ನೇ ಯತ್ತೇ ದಿವಿ ವರ್ಚ ಇತಿ । ಆದಿತ್ಯೋ ವಾ ಅಸ್ಯ ದಿವಿ ವರ್ಚಃ ಪೃಥಿವ್ಯಾಮಿತ್ಯಯಮಗ್ನಿಃ ಪೃಥಿವ್ಯಾಂ ಯದೋಷಧೀಷ್ವಪ್ಸ್ವಾ ಯಜತ್ರೇತಿ ಯ ಏವೌಷಧೀಷು ಚಾಪ್ಸು ಚಾಗ್ನಿಸ್ತಮೇ-ತದಾಹ ಯೇನಾಂತರಿಕ್ಷಮುರ್ವಾ ತತಂಥೇತಿ ವಾಯುಃ ಸ ತ್ವೇಷಃ ಸ ಭಾನುರರ್ಣವೋ ನೃಚಕ್ಷಾ ಇತಿ ಮಹಾನ್ಸ ಭಾನುರರ್ಣವೋ ನೃಚಕ್ಷಾ ಇತ್ಯೇತತ್॥

(ಶ. ಬ್ರಾ. ೭-೧-೧-೨೩)

ಎಲೈ ಅಗ್ನಿಯೇ, ದ್ಯುಲೋಕದಲ್ಲಿರುವ ನಿನ್ನ ವರ್ಚಸ್ಸು ಮಹತ್ತಾದುದು ಇದೇ ವರ್ಚಸ್ಸೇ ಆದಿತ್ಯರೂಪದಲ್ಲಿ ಪ್ರಕಾಶಿಸುತ್ತದೆ. ಪೃಥ್ವಿಯಲ್ಲಿ ಪಾರ್ಥಿವಾಗ್ನಿಯ ರೂಪದಲ್ಲಿದೆ. ಮತ್ತು ಓಷಧ್ಯಾದಿಗಳಲ್ಲಿಯೂ ರೂಪಾಂತರಗಳಲ್ಲಿ ಪ್ರಕಾಶಿಸುತ್ತಿದೆ. ಇದೇ ವರ್ಚಸ್ಸು ವಾಯ್ವಾದಿಗಳಲ್ಲಿಯೂ ವ್ಯಾಪಿಸಿ ಮಾನವಾದಿ ಸಕಲವನ್ನೂ ವೀಕ್ಷಿಸುತ್ತಾ ಮಹತ್ತಾದ ತೇಜೋರೂಪದಲ್ಲಿದೆ ಇತ್ಯಾದಿಯಾಗಿ ವರ್ಣಸಿದೆ. ಇದರಂತೆಯೇ ಕಠೋಪನಿಷತ್ತಿನಲ್ಲಿ ಈ ವಿಶ್ವಾತ್ಮನಾದ ಅಗ್ನಿಯ ಸ್ವರೂಪವನ್ನು ವರ್ಣಿಸುತ್ತಾ,

**ಪ್ರ ತೇ ಬ್ರವೀಮಿ ತದು ಮೇ ನಿಬೋಧ ಸ್ವರ್ಗ್ಯಮಗ್ನಿಂ ನಚಿಕೇತಃ ಪ್ರಜಾನನ್ ।**
**ಅನಂತಲೋಕಾಪ್ತಿಮಥೋ ಪ್ರತಿಷ್ಠಾಂ ವಿದ್ಧಿ ತ್ವಮೇತಂ ನಿಹಿತಂ ಗುಹಾಯಾಂ ॥**

(ಕಠ. ೧-೧-೧೪)

ಎಲೈ ನಚಿಕೇತನೇ, ಈ ಸ್ವರ್ಗ್ಯವಾದ ಅಗ್ನಿಯು ಅನಂತವಾದ ಲೋಕವನ್ನು ಒದಗಿಸಿಕೊಡುವುದಾಗಿಯೂ ಮತ್ತು ಪ್ರತಿಷ್ಠಾರೂಪದಲ್ಲಿಯೂ ಎಂದರೆ ವಿರಾಟ್‌ಸ್ವರೂಪದಿಂದ ಜಗತ್ತಿಗೆ ಆಶ್ರಯವಾಗಿಯೂ ಉಪಾಸಕರ ಹೃದಯದಲ್ಲಿ ವ್ಯಾಪ್ತವಾಗಿದೆ ಎಂದೂ, ಇದೇ ವಿರಾಟ್‌ಪುರುಷನ ಸ್ವರೂಪವನ್ನು ವರ್ಣಿಸುತ್ತಾ, ಮುಂಡಕೋಪನಿಷತ್ತಿನಲ್ಲಿ,

**ಅಗ್ನಿರ್ಮೂರ್ಧಾ ಚಕ್ಷುಷೀ ಚಂದ್ರಸೂರ್ಯೌ ದಿಶಃ ಶ್ರೋತ್ರೇ ವಾಗ್ವಿವೃತಾಶ್ಚ ವೇದಾಃ ।**
**ವಾಯುಃ ಪ್ರಾಣೋ ಹೃದಯಂ ವಿಶ್ವಮಸ್ಯ ಪದ್ಭ್ಯಾಂ ಪೃಥಿವೀ ಹ್ಯೇಷ ಸರ್ವಭೂತಾಂತರಾತ್ಮಾ ॥**

(ಮು. ಉ. ೨-೧-೪)

ಯಾವನಿಗೆ ಅಗ್ನಿಯು ಮೂರ್ಧವೂ. ಚಂದ್ರಸೂರ್ಯರು ಕಣ್ಣುಗಳೂ, ದಿಕ್ಕುಗಳು ಕಿವಿಗಳೂ, ವಾಯುವು ಪ್ರಾಣವೂ, ವಿಶ್ವವು ಹೃದಯವೂ, ಆಗಿರುವುದೋ, ಅಂತಹ ವಿರಾಟ್‌ಪುರುಷನು ವಿಶ್ವಖ್ಯಾತಿಯಾಗಿದ್ದಾನೆ.

**ತಸ್ಮಾದಗ್ನಿಃ ಸಮಿಧೋ ಯಸ್ಯ ಸೂರ್ಯಃ ಸೋಮಾತ್ಪರ್ಜನ್ಯ ಓಷಧಯಃ ಪೃಥಿವ್ಯಾಂ ।**
**ಪುಮಾನ್ ರೇತಃ ಸಿಂಚತಿ ಯೋಷಿತಾಯಾಂ ಬಹ್ವೀಃ ಪ್ರಜಾಃ ಪುರುಷಾತ್ ಸಂಪ್ರಸೂತಾಃ ॥**

(ಮು. ಉ. ೨-೧-೫)

ಯಾವ ಆ ಪರಮಪುರುಷನಿಗೆ ಸೂರ್ಯನೇ ಸಮಿತ್ತೋ, ಆತನಿಂದಲೇ ಆ ಅಗ್ನಿಯು ಹುಟ್ಟುತ್ತಾನೆ. ಮತ್ತು ಅದೇ ಸೂರ್ಯನಿಂದ ದ್ಯುಲೋಕವು ಬೆಳಗುತ್ತಿದೆ. ಆ ದ್ಯುಲೋಕವೆಂಬ ಅಗ್ನಿಯಿಂದ ಉಂಟಾದ ಸೋಮನಿಂದ ಪರ್ಜನ್ಯನೆಂಬ ಎರಡನೆಯ ಅಗ್ನಿಯು ಉಂಟಾಗುತ್ತದೆ. ಇತ್ಯಾದಿಯಾಗಿ ವರ್ಣಿತವಾಗಿದೆ. ಇದನ್ನೇ ಪ್ರಶ್ನೋಪನಿಷತ್ತಿನಲ್ಲಿ,

**ಏಷೋಽಗ್ನಿಸ್ತಪತ್ಯೇಷ ಸೂರ್ಯ ಏಷ ಪರ್ಜನ್ಯೋ ಮಘವಾನೇಷ ವಾಯುರೇಷ ಪೃಥಿವೀ ರಯಿರ್ದೇವಃ ಸದಸಚ್ಚಾಮೃತಂ ಚ ಯತ್ ॥**

(ಪ್ರಶ್ನ. ೨-೫)

ಪ್ರಾಣರೂಪನಾದ ಈ ಪರಮಾತ್ಮನೇ ಅಗ್ನಿಯಾಗಿ ಸುಡುತ್ತಾನೆ. ಹಾಗೆಯೇ ಸೂರ್ಯನಾಗಿ ಬೆಳಗುತ್ತಾನೆ. ಮತ್ತು ಪರ್ಜನ್ಯನಾಗಿ ಮಳೆಯನ್ನು ಸುರಿಸುತ್ತಾನೆ. ಇಂದ್ರನಾಗಿ ಪ್ರಜೆಗಳನ್ನು ಕಾಪಾಡುತ್ತಾನೆ. ಮೂರ್ತವೂ, ಅಮೂರ್ತವೂ, ದೇವಾದಿಗಳ ಉತ್ಪತ್ತಿಗೆ ಕಾರಣನಾದವನೂ ಈತನೇ ಆಗಿದ್ದಾನೆ. ಇತ್ಯಾದಿಯಾಗಿ ನಾನಾ ಶ್ರುತಿವಾಕ್ಯಗಳಲ್ಲಿ ಆದಿತ್ಯಾಗ್ನಿಗಳಿಗೆ ಹೇಳಿರುವ ತಾದಾತ್ಮ್ಯವನ್ನು ಪ್ರಕೃತವಾದ ಋಕ್ಕಿನಲ್ಲಿಯೂ **ಅವಃ ಪರೇಣ ಪಿತರಂ ಯೋ ಅಸ್ಯಾನುವೇದ ಪರ ಏನಾವರೇಣ** ಇತ್ಯಾದಿಯಾಗಿ ವರ್ಣಿತವಾಗಿದೆ. ಇಂತಹ ಪರಮಾತ್ಮನ ಸ್ವರೂಪವನ್ನರಿಯಲು ಕ್ರಾಂತದರ್ಶಿಯೇ ಆಗಿರಬೇಕು. ಮತ್ತು ಅವನ ಮನಸ್ಸೂ ಸಹ ಪಾರ್ಥಿವವಾದುದೂ ನಶ್ವರವಾದುದೂ ಆದ ವಿಷಯಗಳಿಂದ ದೂರವಾಗಿ ಶುದ್ಧ ಚಿತ್ತವುಳ್ಳದ್ದಾಗಿರಬೇಕು. ಆದುದರಿಂದಲೇ **ದೇವಂ ಮನಃ** ಎಂದು ಅದರ ಲಕ್ಷಣವನ್ನು ತಿಳಿಸಿದೆ. ಇಂತಹ ಶುದ್ಧಿಯಿಲ್ಲದಿದ್ದರೆ ಈ ಪರಮಾತ್ಮನ ರೂಪವನ್ನು ತಿಳಿಯಲಾಗುವುದಿಲ್ಲ. ಏತಕ್ಕೆಂದರೆ,

**ನ ಚಕ್ಷುಷಾ ಗೃಹ್ಯತೇ ನಾಪಿ ವಾಚಾ ನಾನ್ಯೈರ್ದೇವೈಸ್ತಪಸಾ ಕರ್ಮಣಾ ವಾ ।**
**ಜ್ಞಾನಪ್ರಸಾದೇನ ವಿಶುದ್ಧಸತ್ತ್ವಸ್ತತಸ್ತು ತಂ ಪಶ್ಯತೇ ನಿಷ್ಕಲಂ ಧ್ಯಾಯಮಾನಃ ॥**

(ಮು. ಉ. ೩-೧-೮)

ಮೂಲಕಾರಣವಾದ ಈ ತತ್ತ್ವಕ್ಕೆ ರೂಪವಿಲ್ಲ. ಆದುದರಿಂದ ಇದನ್ನು ಕಣ್ಣಿನಿಂದ ಗ್ರಹಿಸಲಾಗುವುದಿಲ್ಲ. ಇದು ವಾಚ್ಯವಲ್ಲ. ಆದುದರಿಂದ ಮಾತಿನಿಂದಲೂ ಗ್ರಹಿಸಲಾಗುವುದಿಲ್ಲ, ಉಳಿದ ಇಂದ್ರಿಯಗಳಿಂದಲೂ ಆಗುವುದಿಲ್ಲ. ಇಂದ್ರಿಯಗಳ ಮತ್ತು ವಿಷಯಸಂಬಂಧದಿಂದುಂಟಾಗುವ ರಾಗವೇ ಮುಂತಾದ ಮಲಗಳ ಸಂಪರ್ಕದಿಂದ ದೂರವಾಗಿ ಸ್ವಚ್ಛವಾಗಿಯೂ ಶಾಂತವಾಗಿಯೂ ಇರತಕ್ಕ ಚೇತಸ್ಸಿನಿಂದ ಮಾತ್ರ ಸಾಧ್ಯವಾಗುತ್ತದೆ. ಇಂತಹ ಶುದ್ಧಚೇತಸ್ಸಿನಿಂದ ಕೂಡಿದ ಕವಿಯ ಲಕ್ಷಣವು ಹೇಗಿರಬೇಕೆಂದರೆ,

**ಸಂಪ್ರಾಪ್ಯೈನಮೃಷಯೋ ಜ್ಞಾನತೃಪ್ತಾಃ ಕೃತಾತ್ಮಾನೋ ವೀತರಾಗಾಃ ಪ್ರಶಾಂತಾಃ ।**
**ತೇ ಸರ್ವಗಂ ಸರ್ವತಃ ಪ್ರಾಪ್ಯ ಧೀರಾ ಯುಕ್ತಾತ್ಮಾನಃ ಸರ್ವಮೇವಾವಿಶಂತಿ ॥**

(ಮುಂ. ಉ. ೩-೨-೫)

ಇಂತಹ ಕವಿಚೇತಸ್ಸನ್ನು ಪಡೆದಿರುವ ಈ ಋಷಿಗಳು ಜ್ಞಾನತೃಪ್ತರಾಗಿಯೂ, ಕೃತಾತ್ಮರಾಗಿಯೂ, ವೀತರಾಗರಾಗಿಯೂ, ಪ್ರಶಾಂತರಾಗಿಯೂ ಇರುತ್ತಾರೆ. ಅಂತಹ ಧೀರರು ಸರ್ವಗತನಾದ ಆತ್ಮನನ್ನು ಎಲ್ಲೆಲ್ಲಿಯೂ ಪಡೆದುಕೊಂಡವರಾಗಿಯೂ ಯುಕ್ತಾತ್ಮರಾಗಿಯೂ ಸರ್ವವ್ಯಾಪಿಗಳಾಗುವರು, ಆದರೆ ಇಂತಹ ಯುಕ್ತಾತ್ಮರು ಬಹಳ ವಿರಳವಾದುದರಿಂದ **ದೇವಂ ಮನಃ ಕುತಃ ಅಧಿಜಾತಂ** ಇಂತಹ ದೇವವಿಷಯವಾದ ಚೇತಸ್ಸು ಕೇವಲ ಅದೃಷ್ಟವಿಶೇಷದಿಂದ ಮಾತ್ರ ಸಾಧ್ಯವೆಂದು ತಿಳಿಸಿದ್ದಾರೆ.

### ವ್ಯಾಕರಣಪ್ರಕ್ರಿಯಾ

**ಅನುವೇದ**— ವಿದ ಜ್ಞಾನೇ ಧಾತು. ಲಟ್ ಪ್ರಥಮಪುರುಷ ಏಕವಚನದಲ್ಲಿ ತಿಪಿಗೆ **ವಿದೋಲಟೋವಾ** (ಪಾ. ಸೂ. ೩-೪-೮೩) ಎಂಬುದರಿಂದ ಣಲಾದೇಶ. ವಿಕರಣಕ್ಕೆ **ಲುಕ್** ಧಾತುವಿನ **ಲಘೂಪಧೆಗೆ ಗುಣ.** ಯದ್ಯೋಗವಿರುವುದರಿಂದ ನಿಘಾತಸ್ವರ ಬರುವುದಿಲ್ಲ. ಣಲ್ ಲಿತ್ತಾದುದರಿಂದ **ಲಿತಿ** ಎಂಬುದರಿಂದ **ಪ್ರತ್ಯಯದ** ಪೂರ್ವಕ್ಕೆ ಉದಾತ್ತಸ್ವರ ಬರುತ್ತದೆ. **ತಿಙಿಚೋದಾತ್ತವತಿ** (ಪಾ. ಸೂ. ೮-೧-೭೧) ಎಂಬುದರಿಂದ ಗತಿಗೆ (ಅನು) ಸರ್ವಾನುದಾತ್ತಸ್ವರ ಬರುತ್ತದೆ.

ಏನಾ— **ಸುಪಾಂ ಸುಲುಕ್**-(ಪಾ. ಸೂ. ೭-೧-೩೯) ಎಂಬುದರಿಂದ **ತೃತೀಯಾ** ಪರವಾದಾಗ ಪೂರ್ವಸವರ್ಣದೀರ್ಘ.

**ಕವೀಯಮಾನಃ**— ಕವಿರಿವ ಆಚರನ್ ಕವೀಯಮಾನಃ **ಕರ್ತುಃ ಕ್ಯಙ್ ಸಲೋಪಶ್ಚ** (ಪಾ. ಸೂ. ೩-೧-೧೧) ಎಂಬುದರಿಂದ ಕ್ಯಙ್ ಪ್ರತ್ಯಯ. **ಅನ್ಯೇಷಾಮಪಿ ದೃಶ್ಯತೇ** (ಪಾ. ಸೂ. ೬-೩-೧೩೭) ಎಂಬುದರಿಂದ ಪೂರ್ವಕ್ಕೆ ದೀರ್ಘ. ಕ್ಯಙಂತದ ಮೇಲೆ ಲಟಗೆ ಶಾನಚಾದೇಶ. **ಆನೇ ಮುಕ್** (ಪಾ. ಸೂ. ೭-೨-೮೨) ಎಂಬುದರಿಂದ ಅದಂತಾಂಗಕ್ಕೆ ಮುಕಾಗಮ. **ತಾಸ್ಯನುದಾತ್ತೇತ್** (ಪಾ. ಸೂ. ೬-೧-೧೮೬) ಎಂಬುದರಿಂದ ಲಸಾರ್ವಧಾತುಕವು ಅನುದಾತ್ತವಾಗುವುದರಿಂದ ಕ್ಯಙ್‌ಸ್ವರ ಉಳಿಯುತ್ತದೆ.

ವೋಚತ್—ವಚ ಪರಿಭಾಷಣೇ ಧಾತು. ಛಾಂದಸವಾಗಿ ವರ್ತಮಾನಾರ್ಥದಲ್ಲಿ ಲುಙ್. ತಿಪ್ ಪರವಾದಾಗ **ಅಸ್ಯತಿವಕ್ತಿ**-(ಪಾ. ಸೂ. ೩-೧-೫೨) ಎಂಬುದರಿಂದ ಚ್ಲಿಗೆ ಅಙಾದೇಶ. **ವಚೆಉಮ್** (ಪಾ. ಸೂ. ೭-೪-೨೦) ಎಂಬುದರಿಂದ ಧಾತುವಿಗೆ ಉಮಾಗಮ. ಗುಣ. **ಬಹುಲಂ ಛಂದಸ್ಯಮಾಙ್**-(ಪಾ ಸೂ. ೬-೪-೭೫) ಎಂಬುದರಿಂದ ಅಡಾಗಮ ಬರುವುದಿಲ್ಲ. ತಿಙಂತನಿಘಾತಸ್ವರ ಬರುತ್ತದೆ.

ಪ್ರಜಾತಮ್—ಜನೀ ಪ್ರಾದುರ್ಭಾವೇ ಧಾತು. ಕ್ತ ಪ್ರತ್ಯಯ. **ಗತಿರನಂತರಃ** (ಪಾ ಸೂ ೬-೨-೪೯) ಎಂಬುದರಿಂದ ಗತಿಗೆ (ಪ) ಪ್ರಕೃತಿಸ್ವರ ಬರುತ್ತದೆ. ॥ ೧೮ ॥

ಸಂಹಿತಾಪಾಠಃ

ಯೇ ಅರ್ವಾಂಚಸ್ತಾಁ ಉ ಪರಾಚ ಆಹುರ್ಯೇ ಪರಾಂಚಸ್ತಾಁ ಉ ಅರ್ವಾಚ ಆಹುಃ ।

ಇಂದ್ರಶ್ಚ ಯಾ ಚಕ್ರಥುಃ ಸೋಮ ತಾನಿ ಧುರಾ ನ ಯುಕ್ತಾ ರಜಸೋ ವಹಂತಿ ॥ ೧೯ ॥

। ಪದಪಾಠಃ ।

ಯೇ । ಅರ್ವಾಂಚಃ । ತಾನ್ । ಊಂ ಇತಿ । ಪರಾಚಃ । ಆಹುಃ । ಯೇ । ಪರಾಂಚಃ । ತಾನ್ । ಊಂ ಇತಿ । ಅರ್ವಾಚಃ । ಆಹುಃ ।

ಇಂದ್ರಃ । ಚ । ಯಾ । ಚಕ್ರಥುಃ । ಸೋಮ । ತಾನಿ । ಧುರಾ । ನ । ಯುಕ್ತಾಃ । ರಜಸಃ । ವಹಂತಿ ॥೧೯॥

ಸಾಯಣಭಾಷ್ಯಂ

ಯೇ ಸೂರ್ಯಸೋಮಯೋಶ್ಚಕ್ರೇ ವರ್ತಮಾನಾ ರಶ್ಮಯೋ ಗ್ರಹಾದಯಶ್ಚ ತತ್ಪರಿಭ್ರಮಣವಶೇನಾರ್ವಾಂಚೋಽರ್ವಾಗಂಚನಾ ಅಧೋಮುಖಾಃ ಸಂತಿ ತಾಁ ಉ ತಾನೇವ ಪರಾಚ ಆಹುಃ । ಪರಾಙ್ಮುಖಾಂಚನಾನೂರ್ಧ್ವಾನಾಹುಃ ಕಾಲವಿದಃ । ತಥಾ ಪ್ರಥಮಂ ಯೇ ಪರಾಂಚಃ ಪರಾಗಂಚನಾಃ ತಾಁ ಉ ತಾನೇವಾರ್ವಾಚ ಆಹುಃ । ಹೇ ಸೋಮ ತ್ವಮಿಂದ್ರಃ ಪರಮೇಶ್ವರ ಇರಾಂ ಭೂಮಿಂ ವೃಷ್ಟ್ಯಾ ಧಾರಕ ಆದಿತ್ಯಃ । ಯದ್ವಾ । ದ್ವಾದಶಾದಿತ್ಯಾನಾಂ ಮಧ್ಯ ಇಂದ್ರೋಽಪ್ಯೇಕಃ । ಐಶ್ವರ್ಯದಿಂದ್ರಯುಕ್ತಾ ಇತ್ಯುಕ್ತತ್ವಾದಯಮಪೀಂದ್ರಃ । ಸ ಚ ಯುವಾಂ ಯಾ ಯಾನಿ ಮಂಡಲಪರಿಭ್ರಮಣಾನಿ ಚಕ್ರಥುಃ ಕೃತವಂತೌ

ತಾನಿ ರಜಸೋ ರಂಜನಾತ್ಮಕಸ್ಯ ಲೋಕಸ್ಯ ॥ ಕರ್ಮಣಿ ಷಷ್ಠೀ ॥ ಲೋಕಂ ವಹಂತಿ । ನಿರ್ವಹಂತಿ । ತತ್ರ ದೃಷ್ಟಾಂತಃ । ಧುರಾ ಶಕಟಾದೌ ಧುರಿ ಯುಕ್ತಾಃ ಸಂಬದ್ಧಾ ಅಶ್ವಾದಯೋ ಯಥಾ ಧುರಂ ವಹಂತಿ ತದ್ವತ್ । ಯದ್ವಾ । ಏತತ್ಪೂರ್ವಾರ್ಧೇ ದೃಷ್ಟಾಂತಿತಂ । ಧುರಾ ಯುಕ್ತಾಃ । ಧುರಿ ಸ್ಥಿತಂ ಚಕ್ರಮಪಿ ಧುರ್‌ಶಬ್ದೇನೋಚ್ಯತೇ । ತತ್ರ ಯುಕ್ತಾಃ ಸಮರ್ಪಿತಾಃ ಪುರುಷಾಸ್ತತ್ಪರಿಭ್ರಮಣವಶೇನಾ-ರ್ವಾಂಚೋಽಪಿ ಪರಾಂಚಃ ಪರಾಂಚೋಽಪ್ಯರ್ವಾಂಚೋ ಭವತಿ ತದ್ವತ್ ॥

ಪ್ರತಿಪದಾರ್ಥ

**ಅರ್ವಾಂಚಃ**—ಅಧೋಮುಖವಾದ ಸಂಚಾರವುಳ್ಳ । **ಯೇ**—ಆದಿತ್ಯಚಕ್ರದ ಯಾವ ರಶ್ಮಿಗಳಿವೆಯೋ । **ತಾನ್ ಉ**—ಅವನ್ನೇ । **ಪರಾಚಃ**—ಊರ್ಧ್ವಮುಖವಾದ ಸ್ಥಿತಿಗಳುಳ್ಳವನ್ನಾಗಿ । **ಆಹುಃ**—(ಕಾಲವಿತ್ತುಗಳು) ಹೇಳುತ್ತಾರೆ । **ಯೇ**—ಯಾವ ರಶ್ಮಿಗಳು । **ಪರಾಂಚಃ** ಊರ್ಧ್ವಮುಖವಾದ ಪ್ರಸರಗಳುಳ್ಳವೋ । **ತಾನ್ ಉ**—ಅವನ್ನೇ । **ಅರ್ವಾಚಃ**—ಅಧೋಗಾಮಿಯಾದವು ಎಂಬುದಾಗಿಯೂ । **ಆಹುಃ**—ಹೇಳುತ್ತಾರೆ । **ಸೋಮ**—ಎಲೈ ಸೋಮನೇ । (**ತ್ವಂ**—ನೀನೂ) । **ಇಂದ್ರಶ್ಚ**—ಇಂದ್ರನೂ ಕೂಡಿಕೊಂಡು । **ಯಾ**—ಪರಿಭ್ರಮಣಾತ್ಮಕಗಳಾದ ಯಾವ ಗ್ರಹಾದಿಗಳನ್ನೂ । **ಚಕ್ರಥುಃ**—ಸೃಷ್ಟಿಸಿದಿರೋ । **ತಾ**—ಅವೆಲ್ಲವೂ । **ಧುರಾ**—ಶಕಟಾದಿಗಳ ನೊಗಗಳಲ್ಲಿ । **ಯುಕ್ತಾಃ ನ**—ಕಟ್ಟಲ್ಪಟ್ಟ ಅಶ್ವಾದಿಗಳಂತೆ । **ರಜಸಃ**—ರಂಜನಾತ್ಮಕವಾದ ಲೋಕಗಳನ್ನೂ । **ವಹಂತಿ**—ವಹಿಸುತ್ತವೆ ।

ಭಾವಾರ್ಥ

ಅಧೋಮುಖವಾದ ಸಂಚಾರವುಳ್ಳ ಆದಿತ್ಯಚಕ್ರದ ಯಾವ ರಶ್ಮಿಗಳಿವೆಯೋ ಅವನ್ನೇ ಊರ್ಧ್ವಮುಖವಾದ ಸ್ಥಿತಿಗಳುಳ್ಳವುವನ್ನಾಗಿ ಕಾಲವಿತ್ತುಗಳು ಹೇಳುತ್ತಾರೆ. ಯಾವ ರಶ್ಮಿಗಳು ಊರ್ಧ್ವಮುಖವಾದ ಪ್ರಸರಗಳುಳ್ಳವೋ ಅವನ್ನೇ ಅಧೋಗಾಮಿಯಾದವು ಎಂಬುದಾಗಿಯೂ ಹೇಳುತ್ತಾರೆ. ಎಲೈ ಸೋಮನೇ, ನೀನೂ, ಇಂದ್ರನೂ ಸೇರಿಕೊಂಡು ಪರಿಭ್ರಮಣಾತ್ಮಕಗಳಾದ ಯಾವ ಯಾವ ಗ್ರಹಾದಿಗಳನ್ನೂ ಸೃಷ್ಟಿಸಿದ್ದಿರೋ ಅವೆಲ್ಲವೂ ಸಹ ಶಕಟಾದಿಗಳ ನೊಗಗಳಲ್ಲಿ ಕಟ್ಟಲ್ಪಟ್ಟ ಅಶ್ವಾದಿಗಳಂತೆ ರಂಜನಾತ್ಮಕಗಳಾದ ಲೋಕಗಳನ್ನೂ ವಹಿಸುತ್ತವೆ.

## English Translation

Those which (the sages) have termed descending, they have also termed ascending ; and those they have termed ascending, they have also called descending : and those (orbits) which you, Soma and Indra, have made, bear along the worlds like (oxen) yoked to a wan.

ವಿಶೇಷವಿಷಯಗಳು

ಪ್ರಕೃತವಾದ ಋಕ್ಕಿನಲ್ಲಿಯೂ ಹಿಂದಿನ ಮಂತ್ರದಲ್ಲಿ ವರ್ಣಿಸಿದ ವಿಷಯವನ್ನೇ ಬೇರೆ ವಾಕ್ಯಗಳಿಂದ ಹೇಳಿದೆ. ಈ ಮೂಲತತ್ತ್ವವು ತನ್ನ ಬಾಹ್ಯಾವಿರ್ಭಾವದಿಂದ ಚಕ್ರಾಕಾರವಾಗಿ ಪರಿಭ್ರಮಣವನ್ನು ಹೊಂದುತ್ತಿರುವಾಗ ಊರ್ಧ್ವಭಾಗದಲ್ಲಿರತಕ್ಕ ರಶ್ಮಿಗಳೂ ಗ್ರಹಾದಿಗಳೂ ಆವೃತ್ತಿರೂಪದಿಂದ ಅಧೋಭಾಗಕ್ಕೂ, ಅಧೋಭಾಗದಲ್ಲಿರತಕ್ಕವು ಊರ್ಧ್ವ

ಭಾಗಕ್ಕೂ ವಿನಿಮಯರೂಪದಿಂದ ಸುತ್ತುತ್ತಿವೆ. ಆದುದರಿಂದಲೇ ಒಂದೇ ಪದಾರ್ಥವು ಅಧೋಮುಖವುಳ್ಳದ್ದೆಂದೂ, ಊರ್ಧ್ವಮುಖವುಳ್ಳದ್ದೆಂದೂ ಎರಡು ವಿಧವಾಗಿಯೂ ಕರೆಯಲ್ಪಡುತ್ತದೆ.

**ಇಂದ್ರಶ್ಚ ಯಾ ಚಕ್ರಥುಃ ಸೋಮ**—ಈ ಆದಿತ್ಯಾದಿತೇಜೋಮಂಡಲಗಳು ಇಂದ್ರನಿಂದಲೂ ಸೋಮನಿಂದಲೂ ಸೃಷ್ಟಿಸಲ್ಪಟ್ಟವೆಂದು ಪ್ರಸಿದ್ಧವಾದ ವಿಷಯವಾಗಿದೆ.

**ಇಂದ್ರಾಸೋಮಾ ವಾಸಯಥ ಉಷಾಸಮುತ್ಸೂರ್ಯಂ ನಯಥೋ ಜ್ಯೋತಿಷಾ ಸಹ ।**
**ಉಪ ದ್ಯಾಂ ಸ್ಕಂಭಥುಃ ಸ್ಕಂಭನೇನಾಪ್ರಥತಂ ಪೃಥಿವೀಂ ಮಾತರಂ ವಿ ।**

(ಋ. ಸಂ. ೬-೭೨-೨)

ಎಲೈ ಇಂದ್ರಾಸೋಮರೇ, ನೀವು ಉಷಸ್ಸನ್ನು ಕಾಂತಿಯಿಂದಲೂ, ಸೂರ್ಯನನ್ನು ತೇಜಸ್ಸಿನಿಂದಲೂ ಯೋಜಿಸಿ ಸೃಷ್ಟಿಸಿದ್ದೀರಿ. ದ್ಯಾವಾಪೃಥಿವಿಗಳನ್ನು ಸಾಧಾರದೊಡನೆ ಸ್ಥಾಪಿಸಿದ್ದೀರಿ ಇತ್ಯಾದಿಯಾಗಿ ಪ್ರಶಂಸಿಸಿದೆ. ಅಲ್ಲದೆ, ಇಂದ್ರನ ಮಹತ್ತ್ವವನ್ನು ಸ್ತುತಿಸುತ್ತಾ,

**ಯದಾ ಸೂರ್ಯಮಮುಂ ದಿವಿ ಶುಕ್ರಂ ಜ್ಯೋತಿರಧಾರಯಃ ।**
**ಆದಿತ್ತೇ ವಿಶ್ವಾ ಭುವನಾನಿ ಯೇಮಿರೇ ॥**

(ಋ. ಸಂ. ೮-೧೨-೩೦)

**ಇಂದ್ರೇಣ ರೋಚನಾ ದಿವೋ ದೃಳ್ಹಾನಿ ದೃಂಹಿತಾನಿ ಚ ।**
**ಸ್ಥಿರಾಣಿ ನ ಪರಾಣುದೇ ॥**

(ಋ. ಸಂ. ೮-೧೪-೯)

ಇಂದ್ರನು ಅಂತರಿಕ್ಷದಲ್ಲಿ ತೇಜೋಮಂಡಲವನ್ನು ಸ್ಥಾಪಿಸಿದಾಗ ಲೋಕಗಳೆಲ್ಲವೂ ಕೃತಜ್ಞತೆಯಿಂದ ಇಂದ್ರನಿಗೆ ಮಣಿದವು. ಅವನಿಂದ ಪ್ರತಿಷ್ಠಿತವಾದ ಅಂತರಿಕ್ಷದ ತೇಜಃಪುಂಜಗಳಲ್ಲಿ ಯಾವುದೂ ಸ್ಥಾನಭ್ರಷ್ಟತ್ವವನ್ನುಹೊಂದದೇ ತಮ್ಮ ಕರ್ತವ್ಯಗಳನ್ನು ಅನುಸ್ಯೂತವಾಗಿ ನೆರವೇರಿಸುತ್ತವೆ. ಇತ್ಯಾದಿಯಾಗಿ ವರ್ಣಿತವಾದ ಅಂಶವನ್ನು ಇಲ್ಲಿ ತಿಳಿಸಿದೆ.

### ವ್ಯಾಕರಣಪ್ರಕ್ರಿಯಾ

**ಚಕ್ರಥುಃ**—ಡುಕೃಞ್ ಕರಣೇ. ಧಾತು. ಲಿಟ್ ಮಧ್ಯಮಪುರುಷ ದ್ವಿವಚನಾಂತರೂಪ. **ಯದ್ವೃತ್ತಾನ್ನಿತ್ಯಮ್** (ಪಾ. ಸೂ. ೮-೧-೬೬) ಎಂಬುದರಿಂದ ನಿಘಾತಸ್ವರಪ್ರತಿಷೇಧ ಬರುವುದರಿಂದ ಪ್ರತ್ಯಯದ ಆದ್ಯುದಾತ್ತಸ್ವರ ಬರುತ್ತದೆ.

**ಧುರಾ—ಸುಪಾಂ ಸುಲುಕ್** (ಪಾ. ಸೂ. ೭-೧-೩೯) ಎಂಬುದರಿಂದ ಸಪ್ತಮೀಏಕವಚನಕ್ಕೆ ಆಕಾರಾದೇಶ.

**ರಜಸಃ**—ರಂಜ ರಾಗೇ ಧಾತು. **ಭೂರಂಜಿಭ್ಯಾಂ ಕಿತ್** (ಉ. ಸೂ. ೪-೬೫೬) ಎಂಬುದರಿಂದ ಅಸುನ್ ಪ್ರತ್ಯಯ. ಅದು ಕಿತ್ತಾದುದರಿಂದ **ಅನಿದಿತಾಂ ಹಲ ಉ**-ಎಂಬುದರಿಂದ ಉಪಧಾನಕಾರಲೋಪ. ಕರ್ಮಾರ್ಥದಲ್ಲಿ ಷಷ್ಠೀ ಬಂದಿದೆ.

**ವಹಂತಿ**—ವಹ ಪ್ರಾಪಣೇ ಧಾತು ಲಟ್ ಪ್ರಥಮಪುರುಷಬಹುವಚನಾಂತರೂಪ. ತಿಙಂತನಿಘಾತಸ್ವರ ಬರುತ್ತದೆ. ॥ ೧೯ ॥

———:೦:———

। ಸಂಹಿತಾಪಾಠಃ ।

## ದ್ವಾ ಸುಪರ್ಣಾ ಸಯುಜಾ ಸಖಾಯಾ ಸಮಾನಂ ವೃಕ್ಷಂ ಪರಿಷಸ್ವಜಾತೇ ।
## ತಯೋರನ್ಯಃ ಪಿಪ್ಪಲಂ ಸ್ವಾದ್ವತ್ತ್ಯನಶ್ನನ್ನನ್ಯೋ ಅಭಿ ಚಾಕಶೀತಿ ॥ ೨೦ ॥

ಪದಪಾಠಃ

ದ್ವಾ । ಸುಽಪರ್ಣಾ । ಸಽಯುಜಾ । ಸಖಾಯಾ । ಸಮಾನಂ । ವೃಕ್ಷಂ । ಪರಿ । ಸಸ್ವಜಾತೇ ಇತಿ

ತಯೋಃ । ಅನ್ಯಃ । ಪಿಪ್ಪಲಂ । ಸ್ವಾದು । ಅತ್ತಿ । ಅನಶ್ನನ್ । ಅನ್ಯಃ । ಅಭಿ । ಚಾಕಶೀತಿ ॥ ೨೦ ॥

ಸಾಯಣಭಾಷ್ಯಂ

ಅತ್ರ ಲೌಕಿಕಪಕ್ಷಿದ್ವಯದೃಷ್ಟಾಂತೇನ ಜೀವಪರಮಾತ್ಮಾನೌ ಸ್ತೂಯೇತೇ । ಯಥಾ ಲೋಕೇ ದ್ವೌ ಸುಪರ್ಣೌ ಸುಪತನೌ ಶೋಭನಗಮನೌ ಸಯುಜಾ ಸಮಾನಯೋಗೌ ಸಖಾಯಾ ಸಮಾನಖ್ಯಾನೌ ಸಮಾನಂ ವೃಕ್ಷಂ ಪರಿ ಷಸ್ವಜಾತೇ ಏಕಮೇವ ವೃಕ್ಷಂ ಪರಿಷಸ್ವಜಾತೇ ಆಶ್ರಯತಃ ತಯೋರನ್ಯ ಏಕಃ ಪಿಪ್ಪಲಂ ಪಕ್ವಂ ಸ್ವಾದುತರಮತ್ತಿ ಅಪರೋಽನಶ್ನನ್ನಭಿ ಚಾಕಶೀತಿ ಅಭಿಪಶ್ಯತಿ ತದ್ವತ್ ದ್ವೌ ಸುಪರ್ಣಸ್ಥಾನೀಯೌ ಕ್ಷೇತ್ರಜ್ಞಪರಮಾತ್ಮಾನೌ ಸಯುಜಾ ಸಮಾನಯೋಗೌ । ಯೋಗೋ ನಾಮ ಸಂಬಂಧಃ ಸ ಚ ತಾದಾತ್ಮ್ಯಲಕ್ಷಣಃ ಸ ಏವಾತ್ಮಾ ಜೀವಾತ್ಮನಃ ಸ್ವರೂಪಂ ಯಸ್ಯ ಪರಮಾತ್ಮನ ಸ ತದಾತ್ಮಾ । ಏವಮನ್ಯಸ್ಯಾಪಿ ಸ ಏವಾತ್ಮಾ ಪರಮಾತ್ಮನಃ ಸ್ವರೂಪಂ ಯಸ್ಯ ಜೀವಾತ್ಮನಃ । ಏವಮೇಕಸ್ವರೂಪಾವಿತ್ಯರ್ಥಃ । ಅನೇನ ಭಾಸ್ಕರ ಮತಾನುಸಾರಿಣೋಽತಿರೇಕಿನಾವನ್ಯೋ ಜೀವಾತ್ಮಾ ಪರಮಾತ್ಮನೋ ನಾನ್ಯಃ ಸಚ ಪರಮಾತ್ಮಾ ಜೀವಾದನ್ಯೋ ನಾನಾಜೀವಾಶ್ರಯಣಾದಿತಿ ಮತಂ ನಿರಸ್ತಂ ಭವತಿ । ನನು ಸಂಬಂಧೋ ದ್ವಿಷ್ಠಃ ಸ ಚ ಪಕ್ಷಿಣೋರೇವ ಭೇದಮಪೇಕ್ಷತೇ ಅತಃ ಕಥಮೈಕಾತ್ಮ್ಯಮಿತಿ ನ। ಔಪಾಧಿಕಭೇದಂ ವಾಸ್ತವಾಭೇದಂ ಚಾಪೇಕ್ಷ್ಯ ಪ್ರವೃತ್ತಃ। ಅತ ಏವ ಸಖಾಯೌ ಸಮಾನಖ್ಯಾನೌ ನಾನ್ಯಖ್ಯಾನೌ। ನನ್ವೇಕಸ್ಯ ಯಾದೃಶಂ ಖ್ಯಾನಂ ತಾದೃಶಮೇವಾನ್ಯಸ್ಯೇತಿ ವ್ಯಕ್ತಿಪ್ರಾಪ್ತ್ಯ ಭೇದಃ ಸ್ಫುಟಂ ಪ್ರತಿಭಾತಿ ಕಥಂ ತಾದಾತ್ಮ್ಯಮುಚ್ಯತ ಇತಿ ನ ವಕ್ತವ್ಯಂ । ನಾತ್ರ ಪರಸ್ಪರಂ ದೃಷ್ಟಾಂತದಾರ್ಷ್ಟಾಂತಿಕಭಾವಃ । ಅಪಿ ತು ಯಸ್ಯ ಯಾದೃಶಂ ಖ್ಯಾನಂ ಸ್ಫುರಣಂ ಪರಮಾತ್ಮನಃ ತದೇವ ಖ್ಯಾನಮಿತರಸ್ಯಾಪಿ ಜೀವಾತ್ಮನ ಇತಿ ಸಖಾಯಾವಿತ್ಯುಚ್ಯತೇ । ಏಕರೂಪಪ್ರಕಾಶಾವಿತ್ಯರ್ಥಃ । ಅತ ಉಪಪನ್ನಮೈಕಾತ್ಮ್ಯಂ । ಅನೇನ ವಾಸ್ತವಭೇದೋಽಪಿ ನಿರಸ್ತಃ । ಸಮಾನಂ ವೃಕ್ಷಂ ಪರಿ ಷಸ್ವಜಾತೇ ಇತ್ಯತ್ರ ಯಥಾಶ್ರಯಾಂತರಾಭಾವಾದುಭಯೋರೇಕಾಶ್ರಯತ್ವ-

ಮಭ್ಯುಪಗಂತವ್ಯಂ ತದ್ವತ್ಸಯುಜಾ ಸಖಾಯೇತ್ಯುಭಯತ್ರಾಪ್ಯೇಕಯೋಗಖ್ಯಾನೇ ಆಶ್ರಯಣೀಯೇ । ವೃಶ್ಚ್ಯತ ಇತಿ ವೃಕ್ಷೋ ದೇಹಃ । ಸ ಚೋಭಯೋಃ ಸಮಾನ ಏಕ ಏವ । ಜೀವಸ್ಯ ಭೋಗಾರ್ಥತ್ವಾತ್ ಪರಮಾತ್ಮನಾ ಸೃಷ್ಟೈರ್ಮಹಾಭೂತೈರಾರಬ್ಧತ್ವಾತ್ತಸ್ಯೋಪಲಬ್ಧಿಸ್ಥಾನತ್ವಾಚ್ಚೋಭಯೋರಪಿ ಸಮಾನಃ । ತಾದೃಶಂ ಸಮಾನಂ ವೃಕ್ಷಂ ಪರಿ ಷಸ್ವಜಾತೇ । ಪರಿ ಷ್ವಜತಃ । ಆಶ್ರಯತಃ । ನ ಚ ಜೀವಸ್ಯ ವಸ್ತುತ ಈಶ್ವರತ್ವೇ ಕಥಂ ಜೀವಬುದ್ಧ್ಯಾ ಸಂಸಾರಶೋಕಾವಿತಿ ವಾಚ್ಯಂ ತಯೋರ್ಮೋಹಕೃತತ್ವಾತ್ । ತಥಾ ಚಾಥರ್ವಣಿಕಾ ಅನುಮಂತ್ರಮಾಮ್ನಾಯಾಸ್ಯ ಸಂದೇಹನಿವರ್ತಕಮುತ್ತರಂ ಮಂತ್ರಮೇವಮಾಮನಂತಿ । ಸಮಾನೇ ವೃಕ್ಷೇ ಪುರುಷೋ ನಿಮಗ್ನೋಽನೀಶಯಾ ಶೋಚತಿ ಮುಹ್ಯಮಾನಃ । ಜುಷ್ಟಂ ಯದಾ ಪಶ್ಯತ್ಯನ್ಯಮೀಶಮಸ್ಯ ಮಹಿಮಾನಮಿತಿ ವೀತಶೋಕಃ । ಮುಂ. ಉ. ೩-೧-೨ । ಇತಿ । ಅಸ್ಯಾಯಮರ್ಥಃ । ಏಕ ಏವ ಶರೀರೇ ಪೂರ್ಣಃ ಪುರುಷಃ ಪರಮಾತ್ಮಾ ನಿಮಗ್ನೋ ನಿಗೂಢಃ ಸನ್ ಸ್ವಯಮಪೀಶ್ವರೋಽಪ್ಯನೀಶತ್ವಬುದ್ಧ್ಯಾ ಮುಹ್ಯಮಾನೋ ಮೂಢಃ ಸಞ್ಶೋಚತಿ । ಸಂಸಾರೇಽಹಂ ಕರ್ತಾ ಸುಖೀ ದುಃಖೀತಿ ಜನನಮರಣೇ ಅನುಭವತಿ । ಯದಾ ತು ಜುಷ್ಟಂ ನಿತ್ಯತೃಪ್ತಮನ್ಯಂ ಸಂಸಾರಶೋಕಾತೀತಮೀಶಂ ಪರಮೇಶ್ವರಂ ಪಶ್ಯತಿ ಸ್ವಾನನ್ಯತಯಾ ಸಾಕ್ಷಾತ್ಕರೋತಿ। ತದಾ ವೀತಶೋಕೋ ದೇಹಾದ್ವ್ಯತಿರಿಕ್ತಃ ಸ್ವಸ್ವರೂಪಸಾಕ್ಷಾತ್ಕಾರೇಣ ಗತತಾಪತ್ರಯಃ ಸನ್ನಸ್ಯ ಮಹಿಮಾನಮಿತಿ । ನಿರಸ್ತಸಮಸ್ತೋಪಾಧಿಕಸ್ಯ ಪರಮೇಶ್ವರಸ್ಯ ಮಹಿಮಾನಂ ಸಾರ್ವಾತ್ಮ್ಯಸರ್ವಜ್ಞತ್ವಾದಿಮಹಿಮಾನಮಿತಿ । ಏತಿ । ಪ್ರಾಪ್ನೋತಿ । ನ ಚ ತದ್ಭಾವನಾಽಪ್ತೌ ತನ್ಮಹಿಮಾ ಪ್ರಾಪ್ಯತೇ । ಅತಸ್ತದ್ರೂಪೋ ಭವತೀತ್ಯರ್ಥಃ । ತಸ್ಮಾದ್ವಸ್ತುತ ಏಕ ಏವ । ಭೇದಸ್ತು ಮೋಹಕೃತ ಇತಿ ಪ್ರಸಿದ್ಧಂ । ಅನುಭವದಶಾಯಾಂ ಲೌಕಿಕಬುದ್ಧ್ಯಾ ಭೇದಮಭ್ಯುಪೇತ್ಯೋಚ್ಯತೇ । ತಯೋರನ್ಯೋ ಜೀವಾತ್ಮಾ ಪಿಪ್ಪಲಂ ಕರ್ಮಫಲಂ ಸ್ವಾದುಭೂತಮತ್ತಿ । ಭುಂಕ್ತೇ । ಯಸ್ಯ ಯದುಪಾರ್ಜಿತಂ ತತ್ತಸ್ಯ ಸ್ವಾದು ಭವತಿ । ಅನ್ಯಃ ಪರಮಾತ್ಮಾನಶ್ನನ್ನಾಪ್ತಕಾಮತ್ವೇನಾಭುಂಜಾನಃ ಸ್ಪೃಹಾಯಾ ಅಭಾವಾತ್ । ಆಪ್ತಕಾಮಸ್ಯ ಕಾ ಸ್ಪೃಹೇತಿ ಸ್ಮೃತೇಃ । ತಸ್ಮಾದವಾಸ್ತವಭೇದಮುಪಜೀವ್ಯ ತಯೋರನ್ಯ ಇತ್ಯುಕ್ತಂ । ವಸ್ತುತಸ್ತ್ವನೀಶಯಾ ಶೋಚತಿ ಮುಹ್ಯಮಾನ ಇತ್ಯುಕ್ತತ್ವಾದಭೇದ ಏವ । ತಾದೃಶಃ ಪರಮಾತ್ಮಾ ಸ್ವಾತ್ಮನ್ಯಧ್ಯಸ್ತಂ ಜಗತ್ಸಾಕ್ಷಿತ್ವೇನೇಕ್ಷತೇ । ಅತ್ರ ದ್ವಾ ದ್ವಾ ಪ್ರತಿಷ್ಠಿತೌ ಸುಕೃತಾ ಧರ್ಮಕರ್ತಾರಾವಿತ್ಯಾದಿ ನಿರುಕ್ತೇ ಗತಮಸ್ಯ ಮಂತ್ರಸ್ಯ ವ್ಯಾಖ್ಯಾನಮನುಸಂಧೇಯಂ । ನಿ ೧೪-೩೦ ॥

। ಪ್ರತಿಪದಾರ್ಥ ।

**ಸಯುಜಾ**—ಒಟ್ಟಿಗೆ ಸೇರಿಕೊಂಡಿರುವುವೂ । **ಸಖಾಯಾ**—ಒಂದೇ ಆಕಾರವಾಗಿ ತೋರುವುವೂ । **ದ್ವಾ ಸುಪರ್ಣಾ**—ಶ್ರೇಷ್ಠವಾದ ಪತನವುಳ್ಳವೂ ಆದ ಎರಡು ಪಕ್ಷಿಗಳು । **ಸಮಾನಂ ವೃಕ್ಷಂ**—ಒಂದೇ ವೃಕ್ಷವನ್ನು । **ಪರಿ ಷಸ್ವಜಾತೇ**—ಆಲಂಗಿಸಿಕೊಂಡಿವೆ (ಆಶ್ರಯಿಸಿವೆ) । **ತಯೋಃ**—ಅವೆರಡರಲ್ಲಿ । **ಅನ್ಯಃ**—ಒಂದು । **ಸ್ವಾದು**—ಸಿಹಿಯಾದ । **ಪಿಪ್ಪಲಂ**—ಪಿಪ್ಪಲವೆಂಬ ಫಲವನ್ನು । **ಅತ್ತಿ**—ತಿನ್ನುತ್ತದೆ । **ಅನ್ಯಃ**—ಇನ್ನೊಂದು । **ಅನಶ್ನನ್**—ತಿನ್ನದೇ । **ಅಭಿ ಚಾಕಶೀತಿ**—ನೋಡುತ್ತಿದೆ ।

ಭಾವಾರ್ಥ

ಒಟ್ಟಿಗೆ ಸೇರಿಕೊಂಡಿರುವುವೂ, ಒಂದೇ ಆಕಾರವಾಗಿ ತೋರುವುವೂ, ಶ್ರೇಷ್ಠವಾದ ಪತನವುಳ್ಳವೂ ಆದ ಎರಡು ಪಕ್ಷಿಗಳು ಒಂದೇ ವೃಕ್ಷವನ್ನು ಆಶ್ರಯಿಸಿಕೊಂಡಿವೆ. ಅವೆರಡರಲ್ಲಿ ಒಂದು ಸಿಹಿಯಾದ ಫಲವನ್ನು ತಿನ್ನುತ್ತದೆ. ಇನ್ನೊಂದು ತಿನ್ನದೆ, ನೋಡುತ್ತಿದೆ.

English Translation

Two birds associated together, and mutual friends, take refuge in the same tree : one of them eats the sweet fig ; the other, abstaining from food, merely looks on

ವಿಶೇಷವಿಷಯಗಳು

ಇಲ್ಲಿ ಲೌಕಿಕವಾದ ಪಕ್ಷಿದ್ವಯದ ಸಾದೃಶ್ಯದಿಂದ ಜೀವಾತ್ಮನನ್ನೂ ಪರಮಾತ್ಮನನ್ನೂ ಸ್ತುತಿಸಿದೆ. ಲೋಕದಲ್ಲಿ ಶ್ರೇಷ್ಠವಾದ ಪತನವುಳ್ಳವೂ, ಒಂದೇ ರೂಪದಲ್ಲಿ ಕಾಣಿಸಿಕೊಳ್ಳುವುವೂ ಆದ ಎರಡು ಪಕ್ಷಿಗಳು ಒಂದೇ ವೃಕ್ಷವನ್ನಾಶ್ರಯಿಸಿರುವಂತೆ ಜೀವಾತ್ಮಪರಮಾತ್ಮರು ಒಂದೇ ದೇಹವನ್ನಾಶ್ರಯಿಸಿರುವರು ಎಂದು ತಾತ್ಪರ್ಯ. ಆದರೆ ಆ ಎರಡುಪಕ್ಷಿಗಳಲ್ಲಿ ಒಂದು ಮಧುರವಾದ ಫಲವನ್ನು ತಿನ್ನುತ್ತಿದೆ ; ಇನ್ನೊಂದು ಕೇವಲ ಸಾಕ್ಷಿಭೂತವಾಗಿ ನೋಡುತ್ತಾ ಕುಳಿತಿದೆ ಎನ್ನುವಾಗ ಜೀವಾತ್ಮನನ್ನು ಫಲವನ್ನು ಭೋಗಿಸುವ ಪಕ್ಷಿಗೂ ಪರಮಾತ್ಮನನ್ನು ಫಲಸಂಪರ್ಕವಿಲ್ಲದೆ ಕೇವಲ ಸಾಕ್ಷಿಭೂತವಾಗಿ ಕುಳಿತಿರುವ ಪಕ್ಷಿಗೂ ಹೋಲಿಸಿದೆ.

**ಸುಪರ್ಣಾ — ಸುಪತನೌ ; ಶೋಭನಗಮನೌ.** ಚೆನ್ನಾಗಿ ಹಾರಾಡುವುದರಿಂದ ಇವು ಸುಪರ್ಣಗಳು ಜೀವನಿಗೆ ಸಂಸಾರಗಮನ ; ಈಶ್ವರನಿಗೆ ಶುದ್ಧಗಮನವೆಂದು ಹೇಳಬಹುದು.

**ಸಯುಜಾ — ಸಮಾನಯೋಗೌ ; ಸಹೈವ ಸರ್ವದಾ ಯುಕ್ತೌ ।** ಯಾವಾಗಲೂ ಜೊತೆಯಲ್ಲಿಯೇ ಕೂಡಿಕೊಂಡಿರುವುವು.

**ಸಖಾಯಾ — ಸಮಾನಖ್ಯಾನೌ ।** ತಮ್ಮನ್ನು ಒಂದೇ ರೀತಿಯಲ್ಲಿ ತೋರ್ಪಡಿಸಿಕೊಳ್ಳತಕ್ಕವು ಎಂದರ್ಥ, ಎಂದು ವಿವರಿಸಿ ಪುನಃ **ಸಯುಜಾ** ಎಂಬ ಪದದ ವಿಶೇಷಾರ್ಥವನ್ನು ಸಾಯಣರು ತಿಳಿಸಿದ್ದಾರೆ.

**ಸಯುಜಾ-ಸಮಾನಯೋಗೌ । ಯೋಗೋ ನಾಮ ಸಂಬಂಧಃ । ಸ ಚ ತಾದಾತ್ಮ್ಯಲಕ್ಷಣಃ, ಸ ಏವಾತ್ಮಾ ಜೀವಾತ್ಮನಃ ಸ್ವರೂಪಂ ಯಸ್ಯ ಪರಮಾತ್ಮನಂ ಸ ತದಾತ್ಮಾ ।** ಯೋಗವೆಂದರೆ ಸಂಬಂಧವೆಂದರ್ಥ. ಆದರೆ ಸಂಬಂಧಗಳಲ್ಲಿ ಅನೇಕವಿಧಗಳಿವೆ. ಆದರೆ ಇಲ್ಲಿ **ಸಮಾನಯೋಗವೆಂದರೆ** ತಾದಾತ್ಮ್ಯಸಂಬಂಧವೆಂದರ್ಥ. ಪರಮಾತ್ಮನೂ ಜೀವಾತ್ಮನ ಸ್ವರೂಪನಾಗಿದ್ದಾನೆಯೇ ಹೊರತು ಬೇರೆಯಲ್ಲ ಎಂದು ತಾತ್ಪರ್ಯ. ಈ ವಿಶೇಷಣದಿಂದ ಭಾಸ್ಕರಮತವನ್ನು ನಿರಾಕರಿಸಿದಂತಾಯಿತು. ಹೇಗೆಂದರೆ, ಆ ಮತದ ಪ್ರಕಾರ ಜೀವಾತ್ಮ ಮತ್ತು ಪರಮಾತ್ಮ ಇವರಿಬ್ಬರಿಗೂ ಭೇದವುಂಟು. ಅದು **ಅತಿರೇಕವಾದವಾಗುತ್ತದೆ.** ಇಂತಹ ಭೇದವಾದವು ನಿಜವಾದ ತತ್ತ್ವವನ್ನು ವರ್ಣಿಸತಕ್ಕದ್ದಲ್ಲ. ಆದುದರಿಂದ ಅದನ್ನು ನಿರಾಸಮಾಡ ವುದಕ್ಕಾಗಿ ಇಲ್ಲಿ **ಸಯುಜಾ** ಎಂಬ ವಿಶೇಷಣವನ್ನು ಹೇಳಿದೆ.

ಆದರೆ ಇಲ್ಲಿ ಇನ್ನೊಂದು ಆಶಂಕೆಗೆ ಅವಕಾಶವಿದೆಯೆಂದು ತೋರಿಸಿ ಸಾಯಣರು ಅದಕ್ಕೂ ಈರೀತಿ ಸಮಾಧಾನವನ್ನು ಹೇಳಿದ್ದಾರೆ.

**ನನು ಸಂಬಂಧೋ ದ್ವಿಷ್ಠಃ ಸ ಚ ಪಕ್ಷಿಣೋರಿವ ಭೇದಮಪೇಕ್ಷತೇ ಅತಃ ಕಥಂ ಐಕಾತ್ಮ್ಯಮಿತಿ। ನ । ಔಪಾಧಿಕಭೇದಂ ವಾಸ್ತವಾಭೇದಂ ಚ ಅಪೇಕ್ಷ್ಯ ಪ್ರವೃತ್ತೇಃ ।**

ಸಂಬಂಧವೆಂದರೆ ಎರಡು ಬೇರೆಬೇರೆ ವಸ್ತುಗಳಿಗಿರತಕ್ಕದ್ದೆಂದು ವಿಶದವಾಗಿದೆ. ಅದು ಎರಡು ಬೇರೆಬೇರೆ ಪಕ್ಷಿಗಳಿಗಿರುವಂತೆ ಸಂಬಂಧವಾಗಬೇಕೇ ಹೊರತು, ಒಂದೇ ವಸ್ತುವಿದ್ದರೆ ಆಗ ಯೋಗ ಅಥವಾ ಸಂಬಂಧ ಎಂಬ ವರ್ಣನೆಗೆ ಅವಕಾಶವೇ ಇರುವುದಿಲ್ಲ ಎಂಬ ಆಕ್ಷೇಪವಿದ್ದರೆ ಅದು ತಪ್ಪು. ಏಕೆಂದರೆ ಭೇದದಲ್ಲಿ ಎರಡು ವಿಧ. ಒಂದು **ಔಪಾಧಿಕಭೇದ;** ಇನ್ನೊಂದು **ವಾಸ್ತವಭೇದ** ಇಲ್ಲಿರುವುದು ಔಪಾಧಿಕವಾದ ಭೇದವೇ ಹೊರತು ವಾಸ್ತವವಾಗಿಯೂ ಇಲ್ಲಿ ಭೇದವೇ ಇರುವುದಿಲ್ಲ

**ಅಥವಾ ; ನನು ಏಕಸ್ಯ ಯಾದೃಶಂ ಸ್ಥಾನಂ ತಾದೃಶಮೇವ ಅನ್ಯಸ್ಯ ಇತಿ ವ್ಯುತ್ಪತ್ತ್ಯಾ ಭೇದಂ ಸ್ಫುಟಂ ಪ್ರತಿಭಾತಿ ಕಥಂ ತಾದಾತ್ಮ್ಯಮುಚ್ಯತೇ ಇತಿ ನ ವಕ್ತವ್ಯಂ ।** ಒಂದು ಪಕ್ಷಿಗೆ (ಜೀವಾತ್ಮನಿಗೆ) ಯಾವ ಸ್ಥಾನವೋ, ಇನ್ನೊಂದು ಪಕ್ಷಿಗೂ (ಪರಮಾತ್ಮನಿಗೆ) ಅದೇ ಸ್ಥಾನವೆಂದು ಮಾತನ್ನಾಡುವಾಗಲೂ ಸಹ ಇದು ಬೇರೆ, ಅದು ಬೇರೆ ಎಂದಂತಾಗುವುದಿಲ್ಲವೇ, ಎಂದರೆ ಅದೂ ಸರಿಯಲ್ಲ. ಏತಕ್ಕೆಂದರೆ ಇಲ್ಲಿ **ನಾತ್ರ ಪರಸ್ಪರಂ ದೃಷ್ಟಾಂತ-ದಾರ್ಷ್ಟಾಂತಿಕಭಾವಃ ।** ಇಲ್ಲಿ ಬೇರೆಯಾಗಿರುವ ಪರಮಾತ್ಮನಿಗೂ ಇದರಂತೆ ಅದು ಎಂದು ಒಂದಕ್ಕೊಂದಕ್ಕೆ ದೃಷ್ಟಾಂತವನ್ನಾಗಲಿ ಉಪಮಾನೋಪಮೇಯ ಭಾವವನ್ನಾಗಲಿ ಹೇಳಿಲ್ಲ. **ಸಖಾಯೌ** ಎಂಬ ವಿಶೇಷಣದಿಂದ ಈ ಅಭಿಪ್ರಾಯವು ಸ್ಪಷ್ಟವಾಗಿದೆ ಯಸ್ಯ ಯಾದೃಶಂ ಖ್ಯಾನಂ ಪರಮಾತ್ಮನಃ ತದೇವ ಖ್ಯಾನಂ ಇತರಸ್ಯಾಪಿ ಜೀವಾತ್ಮನಃ, **ತದೇವ ಖ್ಯಾನಮಿತರಸ್ಯಾಪಿ ಜೀವಾತ್ಮನಃ ಇತಿ ಸಖಾಯೌ ಇತ್ಯುಚ್ಯತೇ ।** ಪರಮಾತ್ಮನಿಗೆ ಯಾವ ಪ್ರಕಾಶವೂ, ತೋರಿಕೆಯೂ ಇದೆಯೋ ಅದೇ ರೀತಿಯಾದ ಪ್ರಕಾಶವೂ ತೋರಿಕೆಯೂ ಜೀವಾತ್ಮನಿಗೂ ಇದೆಯೆಂದು ತೋರಿಸಲು **ಸಖಾಯೌ** ಎಂಬ ವಿಶೇಷಣವಿದೆಯೆಂಬ ಸಮಾಧಾನವನ್ನು ಹೇಳಿದೆ. ಆದುದರಿಂದ ಇಲ್ಲಿ ಐಕಾತ್ಮ್ಯವು ಸಿದ್ಧವಾದಂತಾಯಿತು. ಇದರಿಂದ ವಾಸ್ತವಭೇದವೂ ಸಹ ನಿರಸ್ತವಾಯಿತು. ಇದನ್ನು ಮುಂಡಕೋಪನಿಷದ್ಭಾಷ್ಯದಲ್ಲಿ ಶಂಕರಾಚಾರ್ಯರು ವಿವರಿಸುತ್ತಾ,

**ಸಯುಜಾ ಸಯುಜೌ ಸಹೈವ ಸರ್ವದಾ ಯುಕ್ತೌ, ಸಖಾಯಾ ಸಖಾಯೌ ಸಮಾನಖ್ಯಾನೌ ಸಮಾನಾಭಿವ್ಯಕ್ತಿಕಾರಣಾವೇವಂಭೂತೌ ಸಂತೌ ।**

(ಮು. ಉ. ಶಂ. ಭಾ. ೩-೧-೧)

ಸಮಾನವಾದ ಖ್ಯಾತಿಯುಳ್ಳವು ತಮ್ಮನ್ನು ಬೆಳಗಿ ತೋರಿಸುವ ಒಂದೇ ಕಾರಣವುಳ್ಳವು ಎಂದರ್ಥ.

**ವೃಕ್ಷಂ—ವೃಕ್ಷೋ ವ್ರಶ್ಚನಾತ್ । ವೃತ್ವಾ ಕ್ಷಾಂ ತಿಷ್ಠತೀತಿ ವಾ । ಕ್ಷಾ ಕ್ಷಿಯತೇರ್ನಿವಾಸ-ಕರ್ಮಣಃ ।** ಛೇದಿಸಲ್ಪಡು ಎಂಬರ್ಥವನ್ನು ಕೊಡುವ **ವ್ರಶ್ಚ್** ಧಾತುವಿನಿಂದ ನಿಷ್ಪನ್ನವಾಗಿದೆ ಅಥವಾ ನಿವಾಸ ಸ್ಥಾನವಾದ ಪೃಥ್ವಿಯನ್ನು ಆವರಿಸಿ ನಿಂತಿದೆ ಎಂಬರ್ಥವನ್ನು ಕೊಡುವುದರಿಂದಲೂ ಈ ಹೆಸರು ಪ್ರಸಿದ್ಧವಾಗಿದೆ. (ನಿ. ೨-೬) ಪ್ರಕೃತವಾದ ಋಕ್ಕಿನಲ್ಲಿ ಒ ದೇ ವೃಕ್ಷವನ್ನು ಆಶ್ರಯಿಸಿದೆ ಎನ್ನುವಾಗ,

ಏಕಂ ವೃಕ್ಷಂ ವೃಕ್ಷಮಿವೋಚ್ಛೇದನಸಾಮಾನ್ಯಾಚ್ಛರೀರಂ ವೃಕ್ಷಂ ಪರಿಷಸ್ವಜಾತೇ ಪರಿಷ್ವಕ್ತವಂತೌ।
(ಮುಂ. ಉ. ಶಂ. ಭಾ. ೩-೧-೧)

ಸಮಾನವಾದ ಎಂದರೆ ಯಾವ ವಿಶೇಷವೂ ಇಲ್ಲದೆ ಅರಿಯುವುದಕ್ಕೆ ಆಶ್ರಯವಾಗಿ ಒಂದೇ ಆಗಿರುವ ವೃಕ್ಷವನ್ನು ಆಲಂಗಿಸಿಕೊಂಡಿವೆಯೆಂದರ್ಥ. ಇಲ್ಲಿ ವೃಕ್ಷದಂತೆ ನಾಶವಾಗುವುದೆಂಬ ಹೋಲಿಕೆಯಿರುವುದರಿಂದ ಶರೀರವನ್ನು ವೃಕ್ಷಕ್ಕೆ ಹೋಲಿಸಿದೆ. ಈ ನಶ್ವರವಾದ ವೃಕ್ಷವನ್ನು ಶಂಕರಭಾಷ್ಯದಲ್ಲಿ ಈರೀತಿ ವರ್ಣಿಸಿದೆ.

ಅಯಂ ಹಿ ವೃಕ್ಷಃ ಊರ್ಧ್ವಮೂಲೋಽವಾಕ್ಶಾಖೋಽಶ್ವತ್ಥೋಽವ್ಯಕ್ತಮೂಲಪ್ರಭವಃ ಕ್ಷೇತ್ರ-ಸಂಜ್ಞಕಃ ಸರ್ವಪ್ರಾಣಿಕರ್ಮಫಲಾಶ್ರಯಃ ।
(ಮು. ಉ. ಶಂ. ಭಾ. ೩-೧-೧)

ಈ ವೃಕ್ಷವೇ ಮೇಲೆ ಬೇರೂ ಕೆಳಗೆ ಕೊಂಬೆಗಳೂ ಇರುವ ಅಶ್ವತ್ಥವು. ಇದು ಅವ್ಯಕ್ತವೆಂಬ ಮೂಲದಿಂದ ಹುಟ್ಟಿ ಕ್ಷೇತ್ರವೆನ್ನಿಸಿಕೊಂಡು ಎಲ್ಲಾ ಪ್ರಾಣಿಗಳ ಕರ್ಮದ ಫಲಕ್ಕೂ ಆಶ್ರಯವಾಗಿರುತ್ತದೆ. ಮತ್ತು ಇದೇ ವೃಕ್ಷವನ್ನು,

ತಂ ಪರಿಷ್ವಕ್ತವಂತೌ ಸುಪರ್ಣಾವಿವಾವಿದ್ಯಾಕಾಮಕರ್ಮವಾಸನಾಶ್ರಯಲಿಂಗೋಪಾಧ್ಯಾತ್ಮೇ-ಶ್ವರೌ । ತಯೋಃ ಪರಿಷ್ವಕ್ತಯೋರನ್ಯ ಏಕಃ ಕ್ಷೇತ್ರಜ್ಞೋ ಲಿಂಗೋಪಾಧಿವೃಕ್ಷಮಾಶ್ರಿತಃ ಪಿಪ್ಪಲಂ ಕರ್ಮನಿಷ್ಪನ್ನಂ ಸುಖದುಃಖಲಕ್ಷಣಂ ಫಲಂ ಸ್ವಾದ್ವನೇಕವಿಚಿತ್ರವೇದನಾಸ್ವಾದ-ರೂಪಂ ಸ್ವಾದ್ವತ್ತಿ ಭಕ್ಷಯತ್ಯುಪಭುಂಕ್ತೇಽವಿವೇಕತಃ ॥
(ಮುಂ. ಉ. ಶಂ. ಭಾ ೩-೧-೧)

ಅವಿದ್ಯೆ, ಕಾಮ, ಕರ್ಮವಾಸನೆ ಇವುಗಳಿಗೆ ಆಶ್ರಯವಾಗಿರುವ ಲಿಂಗಶರೀರವೆಂಬ ಉಪಾಧಿಯುಳ್ಳ ಜೀವಾತ್ಮನೂ ಈಶ್ವರನೂ ಎರಡು ಹಕ್ಕಿಗಳಂತೆ ಆಶ್ರಯಿಸಿಕೊಂಡಿರುವುವು. ಹೀಗೆ ಆಶ್ರಯಿಸಿಕೊಂಡಿರುವ ಈ ಇಬ್ಬರಲ್ಲಿ ಒಬ್ಬನು ಎಂದರೆ ಲಿಂಗೋಪಾಧಿಯುಳ್ಳ ಕ್ಷೇತ್ರಜ್ಞನು ವೃಕ್ಷವನ್ನು ಆಶ್ರಯಿಸಿಕೊಂಡು ಸವಿಯಾದ ಎಂದರೆ ನಾನಾಬಗೆಯಾಗಿರುವ ಅನುಭವಗಳನ್ನು ಸವಿಯುವುದೆಂಬ ಪಿಪ್ಪಲವನ್ನು ತಿನ್ನುತ್ತಾನೆ. ಎಂದರೆ ಸುಖದುಃಖರೂಪವಾದ ತನ್ನ ಕರ್ಮದಿಂದಾಗಿರುವ ಫಲವನ್ನು ಅನುಭವಿಸುತ್ತಾನೆ.

ಅನಶ್ನನ್ನನ್ಯ ಇತರ ಈಶ್ವರೋ ನಿತ್ಯಶುದ್ಧಬುದ್ಧಮುಕ್ತಸ್ವಭಾವಃ ಸರ್ವಜ್ಞಃ ಸರ್ವಸತ್ತ್ವೋ-ಪಾಧಿರೀಶ್ವರೋ ನಾಶ್ನಾತಿ ॥
(ಮುಂ. ಉ ಶಂ. ಭಾ. ೩-೧-೧)

ಇನ್ನೊಬ್ಬನು ತಿನ್ನದೆ ನಿತ್ಯಶುದ್ಧಬುದ್ಧಮುಕ್ತಸ್ವಭಾವನಾಗಿಯೂ ಸರ್ವಜ್ಞನಾಗಿಯೂ ಸರ್ವಸತ್ತ್ವೋಪಾಧಿಯಾಗಿಯೂ ಇರುವ ಈಶ್ವರನಾಗಿರುವುದರಿಂದ ತಿನ್ನದೇ ಇರುತ್ತಾನೆ ಎಂದು ವರ್ಣಿತವಾಗಿರುವಾಗ ಸಾಯಣರು ಇನ್ನೊಂದು ಆಕ್ಷೇಪವನ್ನು ಆಶಂಕಿಸಿ ಅದಕ್ಕೂ ಸಮಾಧಾನವನ್ನು ಹೇಳಿದ್ದಾರೆ

ನ ಚ ಜೀವಸ್ಯ ವಸ್ತುತಃ ಈಶ್ವರತ್ವೇ ಕಥಂ ಜೀವಬುದ್ಧ್ಯಾ ಸಂಸಾರಶೋಕೌ ಇತಿ ವಾಚ್ಯಂ ತಯೋರ್ಮೋಹಕೃತತ್ವಾತ್ ॥

ಒಂದುವೇಳೆ ಜೀವನಿಗೇ ಈಶ್ವರತ್ವವಿದ್ದ ಪಕ್ಷದಲ್ಲಿ ಜೀವಬುದ್ಧಿಯಿಂದ ಸಂಸಾರಶೋಕಮಗ್ನವಾಗುವುದು ಹೇಗೆ ? ಎಂಬ ಪ್ರಶ್ನೆಗೆ ಅವಕಾಶವಿಲ್ಲ. ಏತಕ್ಕೆಂದರೆ ಸಂಸಾರವೂ ಶೋಕವೂ ಮೋಹದ ನಿಮಿತ್ತಕಗಳಾದುದರಿಂದ ಈ ಆಕ್ಷೇಪವು ಪರಿಹಾರ್ಯವಾಗುವುದು ಸುಲಭವೆಂದು ತೋರಿಸಿ ತಮ್ಮ ವಾದವನ್ನು ಸಮರ್ಥಿಸಲು ಮುಂಡಕೋಪನಿಷತ್ತಿನ ವಾಕ್ಯವನ್ನು ಉದಹರಿಸಿ ತೋರಿಸಿದ್ದಾರೆ.

**ಸಮಾನೇ ವೃಕ್ಷೇ ಪುರುಷೋ ನಿಮಗ್ನೋಽನೀಶಯಾ ಶೋಚತಿ ಮುಹ್ಯಮಾನಃ ।**
**ಜುಷ್ಟಂ ಯದಾ ಪಶ್ಯತ್ಯನ್ಯಮೀಶಮಸ್ಯ ಮಹಿಮಾನಮಿತಿ ವೀತಶೋಕಃ ॥**

(ಮು. ಉ. ೩-೧-೨)

ಒಂದೇ ವೃಕ್ಷದಲ್ಲಿ ಪುರುಷನು ನಿಮಗ್ನನಾಗಿ ಅನೀಶೆಯಿಂದ ಮೋಹಗೊಂಡು ಶೋಕಿಸುತ್ತಿರುವನು ಎಂಬ ಇದೇ ಭಾವವನ್ನು **ಏಕ ಏವ ಶರೀರೇ ಪೂರ್ಣಃ ಪುರುಷಃ** .... .... .... ಇತ್ಯಾದಿವಾಕ್ಯಗಳಿಂದ ವಿವರಿಸಿದ್ದಾರೆ. ಅದರ ಭಾವವು ಈ ರೀತಿಯಲ್ಲಿದೆ.

ಒಂದೇ ವೃಕ್ಷದಲ್ಲಿ ಎಂದರೆ ಮೇಲೆ ಹೇಳಿದಂತಹ ಶರೀರದಲ್ಲಿ ಪುರುಷನು ಎಂದರೆ ಭೋಕ್ತೃವಾಗಿರುವ ಜೀವನು ಅವಿದ್ಯೆ, ಕಾಮ, ಕರ್ಮ, ಫಲದ ಆಸೆ ಮುಂತಾದ ಭಾರವನ್ನು ಹೊತ್ತುಕೊಂಡು ಕಡಲಿನ ನೀರಿನಲ್ಲಿ ಸೋರೆ ಬುರುಡೆಯಂತೆ ನಿಮಗ್ನನಾಗಿಯೂ, ದೇಹವೇ ತಾನೆಂಬ ಭಾವವನ್ನು ಹೊಂದಿದವನಾಗಿಯೂ, (ಅಲಾಬುರಿವ ಸಾಮುದ್ರೇ ಜಲೇ ನಿಮಗ್ನಃ—ಶ. ಭಾ.) ನಾನೇ ಕರ್ತನು, ನಾನೇ ಸುಖಿಯು, ದುಃಖಿಯು, ಇತ್ಯಾದಿಯಾದ ಅನುಭವಗಳನ್ನು ಜನನ ಮರಣಾದಿರೂಪಗಳಲ್ಲಿ ಪಡೆಯುತ್ತಾನೆ.

**ಯದಾ ತು ಜುಷ್ಟಂ ನಿತ್ಯತೃಪ್ತಮನ್ಯಂ ಸಂಸಾರಶೋಕಾತೀತಂ ಪರಮೇಶ್ವರಂ ಪಶ್ಯತಿ** .... .... .... **ತದಾ ವೀತಶೋಕೋ ದೇಹಾದ್ಯತಿರಿಕ್ತಃ** ... .... .... .... **ಅಸ್ಯ ಪರಮೇಶ್ವರಸ್ಯ ಮಹಿಮಾನಂ ಪ್ರಾಪ್ನೋತಿ।** ಯಾವಾಗ ಸಂಸಾರಶೋಕದಿಂದ ಅತೀತನಾದ ಈಶ್ವರನನ್ನು ಸಾಕ್ಷಾತ್ಕಾರಮಾಡಿಕೊಳ್ಳುತ್ತಾನೆಯೋ ಆಗ ಶೋಕದಿಂದ ರಹಿತನಾಗಿಯೂ ದೇಹಾದಿಶೃಂಖಲೆಗಳಿಂದ ಬಿಡಲ್ಪಟ್ಟವನಾಗಿಯೂ ಈಶ್ವರನ ಮಹತ್ತ್ವವನ್ನೇ ಪಡೆಯುತ್ತಾನೆ. ಆ ಭಾವನೆಯುಂಟಾದ ಕೂಡಲೇ ಅದೇ ಈಶ್ವರರೂಪವನ್ನೇ ಪಡೆಯುತ್ತಾನೆಂದರ್ಥವು. **ತಸ್ಮಾದ್ವಸ್ತುತಃ ಏಕ ಏವ। ಭೇದಸ್ತು ಮೋಹಕೃತ ಇತಿ ಸಿದ್ಧಂ।** ಆದುದರಿಂದ ವಾಸ್ತವವಾಗಿಯೂ ಒಂದೇ ಆಗಿರುವ ತತ್ತ್ವವು ಮೋಹಾವರಣದ ದೆಸೆಯಿಂದ ಭೇದವುಳ್ಳದ್ದಾಗಿ ತೋರುತ್ತದೆ ಎಂಬುದು ಸಿದ್ಧವಾದ ವಿಷಯವು.

**ಅನಶ್ನನ್ನನ್ಯೋ ಅಭಿಚಾಕಶೀತಿ— ಅನ್ಯಃ ಪರಮಾತ್ಮಾ ತು ಅಪ್ತಕಾಮತ್ವೇನ ಸ್ಪೃಹಾಯಾ ಅಭಾವಾತ್ ಅಭುಂಜಾನಃ ।** ಈಶ್ವರನು ಪೂರ್ಣಕಾಮನಾದುದರಿಂದ ತಿನ್ನದೆ ಸುಮ್ಮನೇ ನೋಡುತ್ತಲೇ ಇರುತ್ತಾನೆ.

**ಅಪ್ತಕಾಮಸ್ಯ ಕಾ ಸ್ಪೃಹಾ ।**

(ಮಾ ಉ. ಕಾ. ೧-೯)

ಇತ್ಯಾದಿಯಾಗಿ ಈಶ್ವರನ ಅಪ್ತಕಾಮತ್ವವನ್ನು ವರ್ಣಿಸಿದೆ. ಅದೇ ಅಂಶವನ್ನು ಪ್ರಕೃತವಾದ ಋಕ್ಕಿನಲ್ಲಿಯೂ ವಿವರಿಸಿದೆ. ಇದೇ ಋಕ್ಕನ್ನು ನಿರುಕ್ತದಲ್ಲಿ ಈರೀತಿ ವಿವರಿಸಿದೆ—

ದ್ವೌ ದ್ವೌ ಪ್ರತಿಷ್ಠಿತೌ ಸುಕೃತೌ ಧರ್ಮಕರ್ತಾರೌ ದುಷ್ಕೃತಂ ಪಾಪಂ ಪರಿಸಾರಕಮಿತ್ಯಾಚಕ್ಷತೇ। ಸುಪರ್ಣಾ ಸಯುಜಾ ಸಖಾಯೇತ್ಯಾತ್ಮಾನಂ ದುರಾತ್ಮಾನಂ ಪರಮಾತ್ಮಾನಂ ಪ್ರತ್ಯುತ್ತಿಷ್ಠತಿ ಶರೀರ ಏವ ತಜ್ಜಾಯತೇ .... .... .... ಆತ್ಮಗತಿಮಾಚಷ್ಟೇ ॥

(ನಿ. ೧೪-೩೦)

ಇದರ ಅರ್ಥವೂ ಮೇಲೆ ವಿವರಿಸಿದಂತೆಯೇ ಇರುತ್ತದೆ.

ವ್ಯಾಕರಣಪ್ರಕ್ರಿಯಾ

**ಸುಪರ್ಣಾ**—ಶೋಭನೌ ಪರ್ಣೌ ಯಯೋಸ್ತೌ. ನಞ್ ಸುಭ್ಯಾಮ್ (ಪಾ. ಸೂ. ೬-೨-೧೭೨) ಎಂಬುದರಿಂದ ಉತ್ತರಪದಾಂತೋದಾತ್ತಸ್ವರ ಬರುತ್ತದೆ. **ಸುಪಾಂ ಸುಲುಕ್**–(ಪಾ. ಸೂ. ೭-೧-೩೯) ಎಂಬುದರಿಂದ ದ್ವಿವಚನಕ್ಕೆ ಆಕಾರಾದೇಶ ಬರುತ್ತದೆ. ಮುಂದಿನ ಎರಡು ಶಬ್ದಗಳಲ್ಲಿಯೂ ಹೀಗೆಯೇ ಆಕಾರಾದೇಶ ಬರುತ್ತದೆ.

**ಸಸ್ವಜಾತೇ**—ಷ್ವಂಜ ಪರಿಷ್ವಂಗೇ ಧಾತು. ಛಾಂದಸವಾಗಿ ಲಿಟ್ ಪ್ರಥಮಪುರುಷದ್ವಿವಚನದಲ್ಲಿ ಆತಾಂ ಪ್ರತ್ಯಯ. **ಟಿತ ಆತ್ಮನೇಪದಾನಾಂ**—(ಪಾ. ಸೂ. ೩-೪-೭೯) ಎಂಬುದರಿಂದ ಟಿಗೆ ಏತ್ವ. **ಶ್ರಂಥಿಗ್ರಂಥಿದಂಭಿಸ್ವಂಜೀನಾಂ ಲಿಟಃ ಕಿತ್ವಂವಾ** ಎಂಬ ವಚನದಿಂದ ಪ್ರತ್ಯಯಕ್ಕೆ ಕಿತ್ವವಿರುವುದರಿಂದ **ಅನಿದಿತಾಂಹಲಉಪ**-ಎಂಬುದರಿಂದ ಧಾತುವಿನ ಉಪಧಾನಕಾರಕ್ಕೆ ಲೋಪ. ಪ್ರತ್ಯಯನಿಮಿತ್ತವಾಗಿ ಧಾತುವಿಗೆ ದ್ವಿತ್ವಾದಿಕಾರ್ಯಗಳು ಬರುತ್ತವೆ. **ಸದೇಃಪರಸ್ಯ ಲಿಟಿ** (ಪಾ. ಸೂ. ೮-೩-೧೧೮) ಎಂಬಲ್ಲಿ ಸ್ವಂಜೇರುಪಸಂಖ್ಯಾನಮ್ ಎಂಬ ನಿಷೇಧ ವಚನವಿರುವುದರಿಂದ ಅಭ್ಯಾಸದ ಪರದ ಸಕಾರಕ್ಕೆ ಷತ್ವ ಬರುವುದಿಲ್ಲ. ಅತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

**ಅತ್ತಿ**—ಅದ ಭಕ್ಷಣೇ ಧಾತು. ಲಟ್ ಪ್ರಥಮಪುರುಷಏಕವಚನಾಂತರೂಪ. ಪಾದಾದಿಯಲ್ಲಿರುವುದರಿಂದ ನಿಘಾತಸ್ವರ ಬರುವುದಿಲ್ಲ. ತಿಪ್ ಪಿತ್ತಾದುದರಿಂದ ಧಾತುಸ್ವರ ಉಳಿಯುತ್ತದೆ.

**ಅನಶ್ನನ್**—ಅಶ ಭೋಜನೇ ಧಾತು. ಲಟಿಗೆ ಶತ್ರಾದೇಶ. ಶ್ನಾ ವಿಕರಣ. **ಶ್ನಾಭ್ಯಸ್ತಯೋರಾತಃ** (ಪಾ. ಸೂ. ೬-೪-೧೧೨) ಎಂಬುದರಿಂದ ಅದರ ಆಕಾರಕ್ಕೆ ಲೋಪ. ನಞ್ ತತ್ಪುರುಷಸಮಾಸವಾದಾಗ **ತತ್ಪುರುಷೇ ತುಲ್ಯಾರ್ಥ**—(ಪಾ. ಸೂ. ೬-೨-೨) ಎಂಬುದರಿಂದ ನಞ್ ಪೂರ್ವಪದಪ್ರಕೃತಿಸ್ವರ ಬರುತ್ತದೆ.

**ಚಾಕಶೀತಿ**— ಕಶ ಗತಿಶಾಸನಯೋಃ ಧಾತು. ಯಙ್ ಲುಙಂತದಮೇಲೆ ಲಟ್. ಯಙ್ ನಿಮಿತ್ತವಾಗಿ ದ್ವಿತ್ವ ಬಂದಾಗ **ದೀರ್ಘೋಽಕಿತಃ** (ಪಾ. ಸೂ. ೭-೪-೮೩) ಎಂಬುದರಿಂದ ಅಭ್ಯಾಸಕ್ಕೆ ದೀರ್ಘ. **ಯಙೋವಾ** (ಪಾ ಸೂ. ೭-೩-೯೪) ಎಂಬುದರಿಂದ ಪ್ರತ್ಯಯಕ್ಕೆ ಈಡಾಗಮ. ಅತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ. ॥ ೨೦ ॥

ಸಂಹಿತಾಪಾಠಃ

ಯತ್ರಾ ಸುಪರ್ಣಾ ಅಮೃತಸ್ಯ ಭಾಗಮನಿಮೇಷಂ ವಿದಥಾಭಿಸ್ವರಂತಿ ।
ಇನೋ ವಿಶ್ವಸ್ಯ ಭುವನಸ್ಯ ಗೋಪಾಃ ಸ ಮಾ ಧೀರಃ ಪಾಕಮತ್ರಾ
ವಿವೇಶ ॥ ೨೧ ॥

ಪದಪಾಠ

ಯತ್ರ । ಸುಽಪರ್ಣಾಃ । ಅಮೃತಸ್ಯ । ಭಾಗಂ । ಅನಿಽಮೇಷಂ । ವಿದಥಾ । ಅಭಿಽಸ್ವರಂತಿ ।
ಇನಃ । ವಿಶ್ವಸ್ಯ । ಭುವನಸ್ಯ । ಗೋಪಾಃ । ಸಃ । ಮಾ । ಧೀರಃ । ಪಾಕಂ । ಅತ್ರ । ಆ । ವಿವೇಶ ॥ ೨೧ ॥

ಸಾಯಣಭಾಷ್ಯಂ

ಯತ್ರಾದಿತ್ಯಮಂಡಲೇ ಸುಪರ್ಣಾಃ ಸುಪತನಾಃ ಶೋಭನಗಮನಾ ರಶ್ಮಯೋಽಮೃತಸ್ಯೋದಕಸ್ಯ ಭಾಗಂ ಭಜನೀಯಮಂಶಮಾದಾಯಾನಿಮೇಷಮನವರತಂ ವಿದಥಾ ವೇದನೇನ ಜ್ಞಾನೇನಾಸ್ಮಾಭಿರೇವಂ ಕರ್ತವ್ಯಮಿತಿ ಬುದ್ಧ್ಯಾಭಿಸ್ವರಂತಿ ಅಭಿಪ್ರಾಪಯಂತಿ । ಯಶ್ಚ ವಿಶ್ವಸ್ಯ ಭುವನಸ್ಯ ಭೂತಜಾತಸ್ಯೇನಃ ಸ್ವಾಮೀ ತಥಾ ತಸ್ಯೈವ ಗೋಪಾ ಗೋಪಾಯಿತಾ ರಕ್ಷಿತಾ। ಅಯಮಾದಿತ್ಯಃ ಸ ಪರಮೇಶ್ವರೋ ಧೀರೋ ಧೀಮಾನ್ ಪ್ರಾಣ್ಯನುಗ್ರಹಬುದ್ಧಿಯುಕ್ತಃ ಸನ್ ಮಾ ಮಾಂ ಪಾಕಂ ಪಕ್ತವ್ಯಮಪಕ್ವಪ್ರಜ್ಞಮತ್ರಾಸ್ಮಿನ್ಸ್ವಕೀಯಮಂಡಲ ಆ ವಿವೇಶ । ಪ್ರವೇಶಯತಿ । ಅತ್ರಾಸ್ಮದೀಯೇ ದೇಹೇ ವಾ ನಿಯಾಮಕತಯಾ ಪ್ರವಿಷ್ಟ ಇತ್ಯಧಿದೈವತಪಕ್ಷೇ ॥ ಅಥಾಧ್ಯಾತ್ಮಪಕ್ಷೇ ॥ ಯತ್ರ ಯಸ್ಮಿನ್ನಾತ್ಮನಿ ಸುಪರ್ಣಾಃ ಶೋಭನಪತನಾನಿ ಸ್ವಸ್ವವಿಷಯಗ್ರಹಣಾಯ ಗಮನಕುಶಲಾನೀಂದ್ರಿಯಾಣಿ ಚಕ್ಷುರಾದೀನ್ಯಮೃತಸ್ಯ ಭಾಗಂ । ಅತ್ರ ವಿಷಯಾವಚ್ಛಿನ್ನಚೈತನ್ಯಮಮೃತಮಿತ್ಯುಚ್ಯತೇ । ತಸ್ಯ ಭಾಗಂ ಭಜನೀಯಂ ಸ್ವಸ್ವಾಂಶಮನಿಮೇಷಂ ನಿಮೇಷರಹಿತಮನಾರತಂ ವಿದಥಾ ವೇದನೇನ ವೃತ್ತ್ಯವಚ್ಛಿನ್ನಚೈತನ್ಯೇನಾವರುದ್ಧಾನ್ಯಭಿಸ್ವರಂತಿ ಅಭಿಪ್ರಯಂತಿ ಆವರಣಾಪಗಮನೇನ ಸ್ಫೋರಯಂತಿ । ಕಿಂಚ ಯಸ್ತ್ವಿನಃ ಸ್ವಾಮ್ಯಸ್ಯ ದೇಹಸ್ಯ ವಿಶ್ವಸ್ಯ ಭುವನಸ್ಯ ಗೋಪಾ ಗೋಪಾಯಿತಾ ರಕ್ಷಿತಾ । ಯದ್ವಾ । ವಿಶ್ವಸ್ಯ ಭುವನಸ್ಯ ಭೂತಜಾತಸ್ಯ ಸ್ವಾಮ್ಯಸ್ಯ ದೇಹಸ್ಯ ಗೋಪಾಃ । ಅನೇನ ತತ್ತ್ವಂಪದಾರ್ಥಯೋರೇಕತ್ವಂ ಪ್ರತಿಪಾದಿತಂ ಭವತಿ । ಸ ಪರಮೇಶ್ವರೋ ಧೀರಃ ಸಮಾಧಿನಿಷ್ಠಃ ಸರ್ವದಾವಿಕ್ರಿಯೋ ಮಾ ಮಾಂ ಪಾಕಂ ಪರಿಪಕ್ವಮನಸ್ಕಂ ಯಾಗದಾನಾದಿನಾಪಗತರಜಸ್ತಮಸ್ಕತ್ವೇನ ದರ್ಪಣವದತಿನಿರ್ಮಲಸತ್ತ್ವೋದ್ರಿಕ್ತಮನಸ್ಕಂ ಮಾಮಾ ವಿವೇಶ । ಉಕ್ತರೂಪೇ ಚಿತ್ತೇ ತಾದೃಶಂ ವಸ್ತು ಸ್ಫುರತೀತ್ಯರ್ಥಃ । ಯದ್ವಾ । ಅಪರಿಪಕ್ವಮನಾ ಅಹಂ ಪೂರ್ವಮಜ್ಞಾನದಶಾಯಾಂ ಮದನ್ಯ ಈಶ್ವರೋಽಸ್ತೀತ್ಯವಿದ್ವಾನ್ ತತಃ ಪರಮಸ್ತಿ ಕಶ್ಚಿತ್ಸರ್ವಜ್ಞಃ ಸರ್ವೇಶ್ವರಃ ಸತ್ಯಜ್ಞಾನಾದಿಲಕ್ಷಣ ಇತಿ ನಿಶ್ಚಿತ್ಯ ಪಶ್ಚಾದ್ಗುರುಶಾಸ್ತ್ರಾಭ್ಯಾಂ ಸ ಏವಾಹಮಸ್ಮೀತಿ ಮತ್ವಾ ಏವಂ ಪಾರಂಪರ್ಯೇ-

ಣಾವಗತ್ಯಾಸಂಭಾವನಾವಿಪರೀತಭಾವನೇ ವ್ಯುದಸ್ಯ ಭಾವನಯಾ ಸಾಕ್ಷಾತ್ಕೃತ್ಯ ಪರಿಪೂರ್ಣಃ ಪರಮಾತ್ಮಾಭೂವಮಿತ್ಯರ್ಥಃ । ಅಯಮೇವ ಸ ಮಾ ಧೀರಃ ಪಾಕಮತ್ರಾ ವಿವೇಶೇತ್ಯನೇನೋಚ್ಯತೇ । ನನ್ವನವಚ್ಛಿನ್ನಸ್ಯ ಪರಮಾತ್ಮನಃ ಸರ್ವತ್ರವ್ಯಾಪ್ತತ್ವಾತ್ಪ್ರಾಪ್ತಿರೇವ ನೋಪಪದ್ಯತೇ ಸಂಪ್ರತ್ಯತ್ರ ಪ್ರಾಪ್ತಿರ್ದ್ವಿವಿಧಾ ಪ್ರಾಪ್ತಪ್ರಾಪ್ತಿರಪ್ರಾಪ್ತಪ್ರಾಪ್ತಿಶ್ಚೇತಿ । ಪ್ರಾಪ್ತಸ್ಯಾಪಿ ಕಂಠೇ ಚಾಮೀಕರನ್ಯಾಯೇನಾವರಣಾಜ್ಞಾನಹಾನದ್ವಾರೇಣ ಪ್ರಾಪ್ತಿರುಪಪದ್ಯತೇ । ಅಸ್ಯಮಂತ್ರಸ್ಯ ಯಾಸ್ಕನಿರುಕ್ತಂ ಯತ್ರ ಸುಪರ್ಣಾಃ ಸುಪತನಾ ಆದಿತ್ಯರಶ್ಮಯ ಇತ್ಯಾದಿಕಂ ತದತ್ರ ದ್ರಷ್ಟವ್ಯಂ । ನಿ. ೩-೧೨ ॥

### ಪ್ರತಿಪದಾರ್ಥ

**ಯತ್ರ**--ಯಾವ ಆದಿತ್ಯಮಂಡಲದಲ್ಲಿ । **ಸುಪರ್ಣಾಃ**—ಶ್ರೇಷ್ಠವಾದ ಪ್ರಸರವುಳ್ಳ ರಶ್ಮಿಗಳು । **ವಿದಥಾ**—ತಮ್ಮ ಕರ್ತವ್ಯಜ್ಞಾನದಿಂದ । **ಅಮೃತಸ್ಯ**—ಉದಕದ । **ಅಂಶಂ**—ಭಾಗವನ್ನು । **ಅನಿಮೇಷಂ**—ಸರ್ವದಾ । **ಅಭಿಸ್ವರಂತಿ**—ಸ್ರವಿಸುವಂತೆ ಮಾಡುತ್ತವೆಯೋ । (ಮತ್ತು) (**ಯಃ**—ಯಾವನು) । **ವಿಶ್ವಸ್ಯ**—ಸಮಸ್ತವಾದ । **ಭುವನಸ್ಯ**—ವಿಶ್ವಕ್ಕೂ । **ಇನಃ**—ಸ್ವಾಮಿಯೂ (ಹಾಗೆಯೇ) । **ಗೋಪಾಃ**—ರಕ್ಷಕನೂ ಆಗಿದ್ದಾನೆಯೋ । **ಸಃ**—ಅಂತಹ ಆದಿತ್ಯರೂಪನಾದ ಪರಮೇಶ್ವರನು । **ಧೀರಃ**—ಅನುಗ್ರಹಾತ್ಮಕವಾದ ಬುದ್ಧಿಯುಳ್ಳವನಾಗಿ । **ಮಾ**—ನನ್ನನ್ನು । **ಪಾಕಂ**—ಅಪರಿಪಕ್ವವಾದ ಬುದ್ಧಿಯಿಂದ ಕೂಡಿದ್ದರೂ ಸಹ । **ಅತ್ರ**—ಈ ತನ್ನ ಮಂಡಲದಲ್ಲಿ । **ಆ ವಿವೇಶ**—ಪ್ರವೇಶಿಸುವಂತೆ ಮಾಡುತ್ತಾನೆ ।

### ಭಾವಾರ್ಥ

ಯಾವ ಆದಿತ್ಯಮಂಡಲದಲ್ಲಿ ಶ್ರೇಷ್ಠವಾದ ಪ್ರಸರವುಳ್ಳ ರಶ್ಮಿಗಳು ತಮ್ಮ ಕರ್ತವ್ಯಜ್ಞಾನದಿಂದ ಉದಕದ ಭಾಗವನ್ನು ಸರ್ವದಾ ಸ್ರವಿಸುವಂತೆ ಮಾಡುತ್ತವೆಯೋ ಮತ್ತು ಯಾವನು ಸಮಸ್ತವಾದ ವಿಶ್ವಕ್ಕೂ ಸ್ವಾಮಿಯಾಗಿಯೂ ರಕ್ಷಕನಾಗಿಯೂ ಆಗಿದ್ದಾನೆಯೋ ಅಂತಹ ಆದಿತ್ಯರೂಪನಾದ ಪರಮೇಶ್ವರನು ಅನುಗ್ರಹಾತ್ಮಕವಾದ ಬುದ್ಧಿಯುಳ್ಳವನಾಗಿ ನಾನು ಅಪರಿಪಕ್ವವಾದ ಜ್ಞಾನದಿಂದ ಕೂಡಿದ್ದರೂ ಸಹ ನನ್ನನ್ನೂ ಈ ತನ್ನ ಮಂಡಲದಲ್ಲಿ ಪ್ರವೇಶಿಸುವಂತೆ ಮಾಡುತ್ತಾನೆ.

## English Translation

Where the smooth-gliding (rays), cognizant (of their duty), distil the prepetual portion of ambrosial (water); there has the lord and steadfast protector of all beings consigned me, (though) immature (in wisdom).

### ವಿಶೇಷವಿಷಯಗಳು

ಈ ಋಕ್ಕಿಗೆ ನಿರುಕ್ತದ ವಿವರಣೆಯು ಎರಡು ವಿಧವಾಗಿದೆ. ಮೊದಲನೆಯದಾಗಿ,

ಯತ್ರ ಸುಪರ್ಣಾಃ ಸುಪತನಾ ಆದಿತ್ಯರಶ್ಮಯಃ ಅಮೃತಸ್ಯ ಭಾಗಂ ಉದಕಸ್ಯ ಅನಿಮಿಷಂತೋ ವೇದನೇನಾಭಿಸ್ವರಂತೀತಿ ವಾಭಿಪ್ರಯಂತೀತಿ ವಾ । ಈಶ್ವರಃ ಸರ್ವೇಷಾಂ ಭೂತಾನಾಂ ಗೋಪಾಯಿತಾದಿತ್ಯಃ । 'ಸ ಮಾ ಧೀರಃ ಪಾಕಮತ್ರಾವಿವೇಶ' । ಧೀರೋ ಧೀಮಾನ್

**ಪಾಕಃ ಪಕ್ವಪ್ರ್ಯೋ ಭವತಿ " ವಿಪಕ್ವಪ್ರಜ್ಞ ಆದಿತ್ಯಃ " ಇತ್ಯುಪನಿಷದ್ವರ್ಣೋ ಭವತೀತ್ಯಧಿದೈವತಂ ।**

( ನಿ. ೩-೧೨ )

ಅತ್ಯಂತ ಆಕರ್ಷಕವಾದ ಪತನವುಳ್ಳ ಆದಿತ್ಯರಶ್ಮಿಗಳು ಪೂರ್ಣವಾದ ಜ್ಞಾನದಿಂದ ಉದಕದ ಕಡೆಗೆ ಪ್ರಸರಿಸಿ ಯಾವ ಆದಿತ್ಯನಲ್ಲಿ ತಮ್ಮ ಕರ್ತವ್ಯಗಳನ್ನು ನಿರ್ವಹಿಸುತ್ತವೆಯೋ ಅಂತಹ ಸಕಲಲೋಕಕ್ಕೂ ಪಾಲಕನಾದವನೂ, ಪೂರ್ಣವಾಗಿ ಪಕ್ವವಾದ ಪ್ರಜ್ಞೆಯುಳ್ಳವನೂ ಆದ ಆದಿತ್ಯನು ಅಪರಿಪಕ್ವವಾದ ಜ್ಞಾನವುಳ್ಳ ನನ್ನನ್ನು ಅನುಗ್ರಹಾತ್ಮಕವಾದ ಬುದ್ಧಿಯಿಂದ ಸಮೀಪಿಸಿದ್ದಾನೆ. ಇದು ಅಧಿದೈವತವಾದ ವಿವರಣೆಯು.

**ಅಥಾಧ್ಯಾತ್ಮಂ । ಯತ್ರ ಸುಪರ್ಣಾಃ ಸುಪತನಾನೀಂದ್ರಿಯಾಣ್ಯಮೃತಸ್ಯ ಭಾಗಂ ಜ್ಞಾನಸ್ಯಾನಿಮಿಷಂತೋ ವೇದನೇನಾಭಿಸ್ವರಂತೀತಿ ವಾಭಿಪ್ರಯಂತೀತಿ ವಾ । ಈಶ್ವರಃ ಸರ್ವೇಷಾಮಿಂದ್ರಿಯಾಣಾಂ ಗೋಪಾಯಿತಾತ್ಮಾ ಸ ಮಾ ಧೀರಃ ಪಾಕಮತ್ರಾವಿವೇಶೇತಿ ಧೀರೋ ಧೀಮಾನ್ ಪಾಕಃ ಪಕ್ತವ್ಯೋ ಭವತಿ ವಿಪಕ್ವಪ್ರಜ್ಞ ಆತ್ಮೇತ್ಯಾತ್ಮಗತಿಮಾಚಷ್ಟೇ ॥**

(ನಿ. ೩-೧೨)

ಆಧ್ಯಾತ್ಮಪರವಾದ ವಿವರಣೆಯು ಈ ರೀತಿಯಿದೆ. ಯಾವ ಶರೀರದಲ್ಲಿ (ತಮ್ಮನ್ನು ಆಕರ್ಷಿಸುವ ವಿಷಯಗಳ ಕಡೆಗೆ) ಸುಲಭವಾಗಿ ಪ್ರಸರಿಸುವ ಇಂದ್ರಿಯಗಳು ತಮ್ಮ ಸ್ವರೂಪವನ್ನು ತಿಳಿಸುಕೊಂಡು ಅಮೃತಸಾಧನವಾದ ಜ್ಞಾನದ ಕಡೆಗೆ ಸರಿಯುತ್ತವೆಯೋ, ಅಂತಹ ಶರೀರದಲಿ ಸಕಲೇಂದ್ರಿಯಗಳಿಗೂ ಪ್ರಭುವಾದವನೂ, ಪೂರ್ಣಪ್ರಜ್ಞನೂ ಆದ ಆತ್ಮನು (ಪರಮಾತ್ಮನು) ಅಪರಿಪಕ್ವವಾದ ಜ್ಞಾನವುಳ್ಳ ನನ್ನನ್ನು ಅನುಗ್ರಹಾತ್ಮಕವಾದ ಬುದ್ಧಿಯಿಂದ ಸಮೀಪಿಸಿದ್ದಾನೆ, ಎಂದು ಎರಡುವಿಧವಾಗಿ ವಿವರಿಸಿ ಆನುಷಂಗಿಕವಾಗಿ **ಸುಪರ್ಣ,** ಮತ್ತು **ಧೀರ** ಎಂಬ ಪದಗಳಿಗೆ ನಿರ್ವಚನವನ್ನೂ ಹೇಳಿದ್ದಾರೆ.

**ಧೀರೋ ಧೀಮಾನ್ ।** ಪ್ರಜ್ಞಾವಂತನೆಂದರ್ಥ. ಈ ಪದವು ಮೇಧಾವಿನಾಮಗಳಲ್ಲಿ ಪಠಿತವಾಗಿದೆ. (ನಿ. ೩-೯) ಈಗಿನ ರೂಢಿಯಲ್ಲಿ **ಧೀರ**ಶಬ್ದಕ್ಕೆ ಧೈರ್ಯವುಳ್ಳವನೆಂದರ್ಥವಾಗುತ್ತದೆ. ವೇದಗಳಲ್ಲಿಯೂ ಉಪನಿಷತ್ತುಗಳಲ್ಲಿಯೂ ಸಹ **ಪ್ರಾಜ್ಞ, ವಿವೇಕಿ** ಎಂಬರ್ಥದಲ್ಲಿಯೇ ಈ ಪದವು ಉಪಯೋಗಿಸಲ್ಪಟ್ಟಿದೆ. ಅಲ್ಲಿಯೂ ಸಹ **ಧೀರನು** ಪ್ರಾಜ್ಞನಾದುದರಿಂದಲೂ ಭಯವನ್ನು ಜಯಿಸಿ ನಿರ್ಭಯನಾಗಿರುವುದೂ ಆಪತ್ಕಾಲದಲ್ಲೂ ಪ್ರಶಾಂತಚಿತ್ತನಾಗಿರುವುದೂ ಇತ್ಯಾದಿ ಗುಣಗಳಿರುವುದರಿಂದಲೂ ಧೈರ್ಯವುಳ್ಳವನೆಂದೇ ತಾತ್ಪರ್ಯವಾಗುತ್ತದೆ.

**ಯುವಾ ಸುವಾಸಾಃ ಪರಿವೀತ ಆಗಾತ್ಸ ಉ ಶ್ರೇಯಾನ್ಭವತಿ ಜಾಯಮಾನಃ ।**
**ತಂ ಧೀರಾಸಃ ಕವಯಃ ಉನ್ನಯಂತಿ ಸ್ವಾಧ್ಯೋ೩ ಮನಸಾ ದೇವಯಂತಃ ।**

(ಋ. ಸಂ. ೩-೮-೪)

ಇತ್ಯಾದಿ ಋಕ್ಕುಗಳಲ್ಲೂ, ಮತ್ತು

**ಶ್ರೇಯಶ್ಚ ಪ್ರೇಯಶ್ಚ ಮನುಷ್ಯಮೇತಸ್ತೌ ಸಂಪರೀತ್ಯ ವಿವಿನಕ್ತಿ ಧೀರಃ ।**
**ಶ್ರೇಯೋ ಹಿ ಧೀರೋಽಭಿಪ್ರೇಯಸೋ ವೃಣೀತೇ ಪ್ರೇಯೋ ಮಂದೋ ಯೋಗಕ್ಷೇಮಾದ್ವೃಣೀತೇ ॥**

(ಕಠ. ೨-೨)

ಇತ್ಯಾದ್ಯುಪನಿಷದ್ವಾಕ್ಯಗಳಲ್ಲೂ ಸಹ ಧೀರಶಬ್ದಕ್ಕೆ ಧೀವಾನ್ ಪ್ರಾಜ್ಞಃ ಎಂದರ್ಥವಾಗುತ್ತದೆ.

**ಸುಪರ್ಣಾಃ**—ಸುಪರ್ಣಶಬ್ದವು ರಶ್ಮಿನಾಮಗಳಲ್ಲಿಯೂ (ನಿ. ೨-೧೫) ಅಶ್ವನಾಮಗಳಲ್ಲಿಯೂ (ನಿ. ೨-೨೭) ಪಠಿತವಾಗಿದೆಯಾದರೂ ಸಹ **ಪಕ್ಷಿ, ಬಾಣ** ಇತ್ಯಾದ್ಯರ್ಥಗಳಲ್ಲಿಯೂ ಸಹ ಉಪಯೋಗಿಸಲ್ಪಟ್ಟಿದೆ. ಯಾವ ಅರ್ಥವನ್ನು ಹೇಳಿದರೂ **ಶೋಭನಪತನ** ಎಂದರೆ ಮನೋಹರವಾಗಿ ಸಂಚರಿಸತಕ್ಕದ್ದು ಎಂಬ ಅಭಿಪ್ರಾಯವನ್ನೇ ಕೊಡುತ್ತದೆ. ಉದಾಹರಣೆಗೆ,

> **ವಿ ಸುಪರ್ಣೋ ಅಂತರಿಕ್ಷಾಣ್ಯಖ್ಯದ್ಗಭೀರವೇಪಾ ಅಸುರಃ ಸುನೀಥಃ ।**
> **ಕ್ವೇದಾನೀಂ ಸೂರ್ಯಃ ಕಶ್ಚಿಕೇತ ಕತಮಾಂ ದ್ಯಾಂ ರಶ್ಮಿರಸ್ಯಾ ತತಾನ ॥**
> (ಋ ಸಂ ೧-೩೫-೭)

ಎಂಬ ಋಕ್ಕಿನಲ್ಲಿ ಗಭೀರವಾದ ಕಂಪನವುಳ್ಳವೂ ಅಂತರಿಕ್ಷವನ್ನೆಲ್ಲಾ ವ್ಯಾಪಿಸುವುವೂ, ಚಿತ್ತಾಕರ್ಷಕವೂ ಆದ ರಶ್ಮಿಯ ವರ್ಣನೆಯಿದೆ. **ಸುಪರ್ಣಶಬ್ದವು** ಇಲ್ಲಿ ರಶ್ಮಿಪರವಾಗಿದೆ. **ಶೋಭನಪತನಾ ರಶ್ಮಯಃ** ಎಂದು ರಶ್ಮಿಯ ವಿಶೇಷ ಗುಣವನ್ನು ತೋರಿಸುತ್ತದೆ. ಇದರಂತೆಯೇ,

> **ಇಂದ್ರಂ ಮಿತ್ರಂ ವರುಣಮಗ್ನಿಮಾಹುರಥೋ ದಿವ್ಯಃ ಸ ಸುಪರ್ಣೋ ಗರುತ್ಮಾನ್ ।**
> **ಏಕಂ ಸದ್ವಿಪ್ರಾ ಬಹುಧಾ ವದಂತ್ಯಗ್ನಿಂ ಯಮಂ ಮಾತರಿಶ್ವಾನಮಾಹುಃ ॥**
> (ಋ. ಸಂ. ೧-೧೬೪-೪೬)

ಎಂಬ ಇದೇ ಸೂಕ್ತದ ೪೬ನೇ ಋಕ್ಕಿನಲ್ಲಿ **ಸುಪತನಃ ಗರುತ್ಮಾನ್** ಆಕರ್ಷಕವಾದ ಗಗನಸಂಚಾರವುಳ್ಳ ಗರುಡನೆಂದು ಪಕ್ಷಿಯಪರವಾಗಿದೆ. ಮತ್ತು ಹಿಂದೆ ವಿವರಿಸಿದ (೧೬೪-೨೦) ಋಕ್ಕಿನಲ್ಲಿಯೂ ಲೌಕಿಕವಾದ ಪಕ್ಷಿಯ ವಿಶೇಷ ಗುಣವನ್ನು ವರ್ಣಿಸುವುದಾಗಿ ತಿಳಿಸಿದೆ. ಹೀಗೆಯೇ,

> **ಉಕ್ಷಾ ಸಮುದ್ರೋ ಅರುಷಃ ಸುಪರ್ಣಃ ಪೂರ್ವಸ್ಯ ಯೋನಿಂ ಪಿತುರಾ ವಿವೇಶ ।**
> **ಮಧ್ಯೇ ದಿವೋ ನಿಹಿತಃ ಪೃಶ್ನಿರಶ್ಮಾ ವಿ ಚಕ್ರಮೇ ರಜಸಸ್ಪಾತ್ಯಂತೌ ॥**
> (ಋ. ಸಂ. ೫-೪೭-೩)

ಎಂಬಲ್ಲಿ ಸುಗಮನವುಳ್ಳ **ಸಮುದ್ರ** ( ಅಂತರಿಕ್ಷ )ವೆಂದೂ,

> **ಸುಪರ್ಣಂ ವಸ್ತೇ ಮೃಗೋ ಅಸ್ಯಾ ದಂತೋ ಗೋಭಿಃ ಸಂನದ್ಧಾ ಪತತಿ ಪ್ರಸೂತಾ ।**
> (ಋ. ಸಂ. ೬-೭೫-೧೧)

ಎಂಬ ನಿರುಕ್ತದಲ್ಲಿ ಉದಾಹೃತವಾಗಿರುವ (ನಿ ೯-೧೯) ಋಕ್ಕಿನಲ್ಲಿ ಸುಪತನವುಳ್ಳ ಬಾಣವೆಂದೂ ಅರ್ಥಮಾಡಿದೆ. ಪ್ರಕೃತವಾದ ಋಕ್ಕಿನಲ್ಲಿ ಅಧಿದೈವತಪಕ್ಷದಲ್ಲಿ ಶೋಭನಪತನಗಳಾದ **ರಶ್ಮಿಗಳೆಂದೂ**, ಅಧ್ಯಾತ್ಮಪಕ್ಷದಲ್ಲಿ ಶೋಭನಪತನಗಳಾದ ಇಂದ್ರಿಯಗಳೆಂದೂ ಅರ್ಥಮಾಡಿದೆ. **ಸುಪರ್ಣಾ ಅಭಿಸ್ವರಂತಿ** ಎನ್ನುವಾಗ ಅಧಿದೈವತಪಕ್ಷದಲ್ಲಿಯೂ ಮತ್ತು ಅಧ್ಯಾತ್ಮಪಕ್ಷದಲ್ಲಿಯೂ ಸೂಚಿತವಾಗುವ ಅಭಿಪ್ರಾಯಗಳೇನೆಂಬುದನ್ನು ಪರಿಶೀಲಿಸಬೇಕು.

**ಅಭಿಸ್ವರಂತಿ** ಎನ್ನುವ ಪದಕ್ಕೆ ನಿರುಕ್ತಕಾರರು **ಅಭಿಪ್ರಯಂತಿ** ಎಂದರ್ಥಮಾಡಿದ್ದಾರೆ. ದುರ್ಗಾಚಾರ್ಯರು ಇದನ್ನು ವಿವರಿಸುತ್ತಾ (**ಸ್ವೃ ಶಬ್ದೋಪತಾಪಯೋಃ**) ಉಪತಾಪಾರ್ಥಕವಾದ **ಸ್ವೃ** ಧಾತುವಿನಿಂದ ನಿಷ್ಪನ್ನವಾಗಿ ಸರ್ವಭೂತಗಳನ್ನೂ ತಪಿಸುವಂತೆ ಮಾಡುತ್ತವೆ ಎಂದು ತಾತ್ಪರ್ಯವೆಂದು ತಿಳಿಸಿದ್ದಾರೆ. ಎಂದರೆ ಪೃಥ್ವಿಯಲ್ಲಿರುವ ರಸವನ್ನು ಹೀರುವುದರಿಂದ ಪೃಥ್ವಿಯನ್ನು ತಪಿಸುವಂತೆ ಮಾಡುತ್ತವೆಂದು ಅರ್ಥವಾಗುತ್ತದೆ. ಇದು ಅಷ್ಟು ಸ್ವರಸವಾಗಿ ಕಾಣುವುದಿಲ್ಲ. ಆದುದರಿಂದ ಇನ್ನೊಂದು ವಿಧವಾಗಿಯೂ ಇದರ ನಿರ್ವಚನವನ್ನು ತೋರಿಸಿ, **ಅಥ ಅಭಿಮುಖ್ಯೇನ ರಸಾನ್ ಗೃಹೀತ್ವಾ ಆದಿತ್ಯಮಂಡಲಂ ಪ್ರಯಾಂತಿ ।** ರಸವನ್ನು ಹೀರಿ ಆದಿತ್ಯಮಂಡಲದ ಅಭಿಮುಖವಾಗಿ ಹೋಗುತ್ತವೆ ಎಂದು ಎರಡನೆಯ ಅರ್ಥವನ್ನು ಹೇಳಿದ್ದಾರೆ. ಈ ಎರಡು ಅರ್ಥಗಳಲ್ಲೂ ರಸಗ್ರಹಣವೇ ಮುಖ್ಯತಾತ್ಪರ್ಯವಾದರೂ, ಮೊದಲನೆಯ ವಿವರಣೆಯಂತೆ ಪೃಥ್ವಿಯನ್ನು ತಪಿಸುವುದರಲ್ಲಿ ಅನ್ವಯವಾಗುತ್ತದೆ. ಆದರೆ ಇಲ್ಲಿ **ರಶ್ಮಿಗಳ** ಲೋಕರಕ್ಷಣೆಯ ತತ್ಪರತೆಯನ್ನು ವರ್ಣಿಸಿರುವುದರಿಂದ ಆ ಕರ್ತವ್ಯನಿರ್ವಹಣಕ್ಕಾಗಿಯೂ ಕರ್ತವ್ಯಜ್ಞಾನದಿಂದಲೂ (**ವಿದಥಾ**) ಪುನಃ ವೃಷ್ಟಿಪತನಕ್ಕೆ ಅನುಕೂಲವಾಗುವಂತೆ ಆ ರಸವನ್ನು ಆದಿತ್ಯನಲ್ಲಿಗೆ ತೆಗೆದುಕೊಂಡು ಹೋಗಿ ಸೇರಿಸುತ್ತವೆಯೆಂಬುದೇ ಉಚಿತವಾಗಿರುತ್ತದೆ. ಋಕ್ಸಂಹಿತೆಯಲ್ಲಿ ಈ ಪದಕ್ಕೆ ಎರಡು ಅರ್ಥಗಳಲ್ಲಿ ಪ್ರಯೋಗವಿರುತ್ತದೆ. ಮೊದಲನೆಯದಾಗಿ,

**ರಥಾನಾಂ ನ ಯೇಽರಾಃ ಸನಾಭಯೋ ಜಿಗೀವಾಂಸೋ ನ ಶೂರಾ ಅಭಿದ್ಯವಃ ।**
**ವರೇಯವೋ ನ ಮರ್ಯಾ ಘೃತಪ್ರುಷೋಽಭಿಸ್ವರ್ತಾರೋ ಅರ್ಕಂ ನ ಸುಷ್ಟುಭಃ ॥**

(ಋ. ಸಂ. ೧೦-೭೮-೪)

ಎಂಬ ಋಕ್ಕಿನಲ್ಲಿ **ಅಭಿಸ್ವರ್ತಾರ ಅಭಿತಃ ಶಬ್ದಯಿತಾರಃ ।** ಸ್ತುತಿವಚನವನ್ನು ಪಠಿಸುವವರು ಎಂಬರ್ಥಮಾಡಿರುವುದರಿಂದ ಅಭಿಸ್ವರ ಪದಕ್ಕೆ ಸ್ತುತಿವಚನವೆಂದರ್ಥವಾಗುತ್ತದೆ. ಇದರಂತೆಯೇ,

**ನೇಮಿಂ ನಮಂತಿ ಚಕ್ಷಸಾ ಮೇಷಂ ವಿಪ್ರಾ ಅಭಿಸ್ವರಾ ।**
**ಸುದೀತಯೋ ವೋ ಅದ್ರುಹೋಽಪಿ ಕರ್ಣೇ ತರಸ್ವಿನಃ ಸಮೃಕ್ವಭಿಃ ॥**

(ಋ. ಸಂ. ೮-೯೭-೧೨)

ಎಂಬಲ್ಲಿಯೂ ಸಹ **ಅಭಿಸ್ವರಾ ಅಭಿಸ್ವರಣೇನ ಸ್ತೋತ್ರೇಣ ।** **ಸ್ತೋತ್ರದಿಂದ ಎಂದರ್ಥವಾಗುತ್ತದೆ.** ಇದಲ್ಲದೆ ಪರಸ್ಪರಾನುಸರಣವನ್ನು ಸೂಚಿಸುವ ಅರ್ಥದಲ್ಲಿಯೂ ಉಪಯೋಗಿಸಲ್ಪಟ್ಟಿದೆ.

**ಏಕಪಾದ್ಭೂಯೋ ದ್ವಿಪದೋ ವಿ ಚಕ್ರಮೇ ದ್ವಿಪಾತ್ತ್ರಿಪಾದಮಭ್ಯೇತಿ ಪಶ್ಚಾತ್ ।**
**ಚತುಷ್ಪಾದೇತಿ ದ್ವಿಪದಾಮಭಿಸ್ವರೇ ಸಂಪಶ್ಯನ್ ಪಂಕ್ತೀರುಪತಿಷ್ಠಮಾನಃ ॥**

(ಋ. ಸಂ. ೧೦-೧೧೭-೮)

ಎಂಬ ಋಕ್ಕಿನಲ್ಲಿ ಉತ್ತಮಾಧಮರು ಅನ್ಯೋನ್ಯಾಪೇಕ್ಷೆಯಿಂದಲೂ ಪರಸ್ಪರವಾದ ಅನುಸರಣೆಯಿಂದಲೂ ಇರುತ್ತಾರೆ ಎಂಬುದನ್ನು ವಿವರಿಸಲು **ಅಭಿಸ್ವರೇ ಸಂಪಶ್ಯನ್** ಎಂದು ವರ್ಣಿಸಿದೆ. ಇಲ್ಲಿ **ಅಭಿಸ್ವರ** ಶಬ್ದಕ್ಕೆ **ಅಭಿಗಮನ**ವೆಂದರ್ಥ. ಎದುರುಗೊಂಡು ಹೋಗು ಅಥವಾ ಅನುಸರಿಸಿ ಹೋಗು ಎಂದರ್ಥವಾಗುತ್ತದೆ. ಪ್ರಕೃತವಾದ ಋಕ್ಕಿನಲ್ಲಿ ಈ ಎರಡರ್ಥಗಳಲ್ಲಿಯೂ ಅನ್ವಯಿಸಬಹುದು. ಹೇಗೆಂದರೆ,

**ಶೀರ್ಷ್ಣಃ ಕ್ಷೀರಂ ದುಹ್ರತೇ ಗಾವೋ ಅಸ್ಯ ವವ್ರಿಂ ವಸಾನಾ ಉದಕಂ ಪದಾಪುಃ ।**
(ಋ. ಸಂ. ೧-೧೬೪-೭)

ಎಂಬ ಇದೇ ಸೂಕ್ತದ ಹಿಂದಿನ ಋಕ್ಕಿನಲ್ಲಿ ವಿವರಿಸಿರುವಂತೆ ಆದಿತ್ಯರಶ್ಮಿಗಳು ಆದಿತ್ಯನ ಕರ್ತವ್ಯವನ್ನು ನಿರ್ವಹಿಸುವಾಗ ಉದಕವನ್ನು ಸುರಿಸುತ್ತಲೂ ಪುನಃ ಉದಕವನ್ನು ಹೀರಿ ಸೂರ್ಯನಲ್ಲಿಗೆ ಸೇರಿಸುತ್ತಲೂ ಅವನನ್ನು ಸೇವಿಸುತ್ತವೆ. ಮತ್ತು ಅವನ ಮನೋಗತವನ್ನರಿತು ತಮ್ಮ ಕರ್ತವ್ಯಗಳನ್ನು ಮಾಡುತ್ತವೆ. ಉದಕವನ್ನು ಪೃಥ್ವಿಯಿಂದ ಹೀರಿ ಅವನ ಅಭಿಮುಖವಾಗಿ ಹೋಗಿ ಪುನಃ ವೃಷ್ಟಿಪತನಕ್ಕೆ ಅನುಕೂಲಮಾಡುತ್ತವೆ ಇತ್ಯಾದಿಯಾಗಿ ವರ್ಣಿಸಿರುವಂತೆ ಇಲ್ಲಿಯೂ ಸಹ **ಅಮೃತಸ್ಯ ಭಾಗಂ ಅಭಿಸ್ವರಂತಿ** ಉದಕದ ಅಂಶವನ್ನು ಹೀರಿಕೊಂಡು (ತಮ್ಮ ಕರ್ತವ್ಯ ಜ್ಞಾನವನ್ನರಿತು) ಅವನಲ್ಲಿಗೆ ಸೇರಿಸುತ್ತವೆ ಎಂದು ತಾತ್ಪರ್ಯವಾಗಬಹುದು ಅಥವಾ ತಮ್ಮ ಸೇವಾರೂಪವಾದ ಸ್ತೋತ್ರದಿಂದಲೂ, ಉದಕದೊಡನೆ ಅವನನ್ನು ಸಮೀಪಿಸುವುದರಿಂದಲೂ ಪುನಃ ವೃಷ್ಟಿಯನ್ನು ಸುರಿಸಲು ಅವನನ್ನು ಪ್ರೇರಿಸಿದವು ಎಂದಾಗಲಿ ಆಗಬಹುದು.

**ಅಮೃತಸ್ಯ**—ಅಧಿದೈವತಪಕ್ಷದಲ್ಲಿ ಅಮೃತಶಬ್ದಕ್ಕೆ ಉದಕವೆಂದು ಅರ್ಥಮಾಡಿದೆ. ನಿರುಕ್ತಕಾರರು ಈ ಪದವನ್ನು ಉದಕನಾಮಗಳಲ್ಲಿ ಪಠಿಸಿದ್ದಾರೆ. (ನಿ. ೨-೨೪) ಮತ್ತು ಈ ಋಕ್ಕಿನ ವಿವರಣೆಯನ್ನು ಹೇಳುವಾಗಲೂ ಸಹ **ಉದಕಸ್ಯ** ಎಂದೇ ಅರ್ಥಮಾಡಿದ್ದಾರೆ. (ನಿ ३-೧೨).

**ತಸ್ಯ ಯೇ ಪ್ರಾಂಚೋ ರಶ್ಮಯಃ .... .... .... .... .... .... ತಾ ಅಮೃತಾ ಆಪಃ ।**
(ಛಾ. ಉ. ೨-೧-೨)

ಎಂದು ಛಾಂದೋಗ್ಯೋಪನಿಷತ್ತಿನಲ್ಲಿ ಆದಿತ್ಯನಿಗೂ ಅಪ್ಪುಗಳಿಗೂ ಇರುವ ಸಂಬಂಧವನ್ನು ತಿಳಿಸುವಾಗ **ಆಪಃ** ಎಂಬ ಪದಕ್ಕೆ **ಅಮೃತಾಃ** ಎಂಬ ವಿಶೇಷಣವಿದೆ. ಇದನ್ನು ಶಂಕರಾಚಾರ್ಯರು **ಅಮೃತಾರ್ಥತ್ವಾದತ್ಯಂತರಸವತ್ಯ ಆಪೋ ಭವಂತಿ** ಎಂದು ವಿವರಿಸಿದ್ದಾರೆ. ಇದನ್ನು ಮುಂದುವರಿಸುತ್ತಾ,

ಅಧ್ಯಾತ್ಮಪಕ್ಷದಲ್ಲಿ ;—**ಅಮೃತಸ್ಯ** (ಅಮರಣಧರ್ಮಣಃ) **ಜ್ಞಾನಸ್ಯ** ಎಂದು ನಿರುಕ್ತಕಾರರು ಅರ್ಥ ಮಾಡಿರುವಂತೆಯೇ ಸಾಯಣರೂ ಅರ್ಥಮಾಡಿ ಒಂದು ವಿಶೇಷಣವನ್ನೂ ಹೇಳಿದ್ದಾರೆ. **ಅತ್ರ ವಿಷಯಾವಚ್ಛಿನ್ನ-ಚೈತನ್ಯಂ ಅಮೃತಮಿತ್ಯುಚ್ಯತೇ** ಎಂದು ವಿವರಿಸುತ್ತಾ **ವಿಷಯಾವಚ್ಛಿನ್ನವಾದ ಚೈತನ್ಯಕ್ಕೂ ವೃತ್ತ್ಯವಚ್ಛಿನ್ನ-ಚೈತನ್ಯಕ್ಕೂ** ವ್ಯತ್ಯಾಸವನ್ನು ತೋರಿಸಿದ್ದಾರೆ. ಈ ವಿವರಣೆಯು,

**ದ್ವೇ ಅಕ್ಷರೇ ಬ್ರಹ್ಮಪರೇ ತ್ವನಂತೇ ವಿದ್ಯಾವಿದ್ಯೇ ನಿಹಿತೇ ಯತ್ರ ಗೂಢೇ ।**
**ಕ್ಷರಂ ತ್ವವಿದ್ಯಾ ಹ್ಯಮೃತಂ ತು ವಿದ್ಯಾ ವಿದ್ಯಾವಿದ್ಯೇ ಈಶತೇ ಯಸ್ತು ಸೋಽನ್ಯಃ ।**
(ಶ್ವೇ. ಉ. ೫-೧)

ಅಕ್ಷರವೂ ಅನಂತವೂ ಆದ ಪರಬ್ರಹ್ಮನಲ್ಲಿ ವಿದ್ಯಾವಿದ್ಯೆಗಳು ನಿಹಿತವಾಗಿವೆ. ಅದರಲ್ಲಿ ಅವಿದ್ಯೆಯು ಕ್ಷರವು ; ವಿದ್ಯೆಯು ಅಮೃತವು, ಎಂಬ ವ್ಯತ್ಯಾಸವನ್ನು ತೋರಿಸುವಂತೆ ಇಲ್ಲಿಯೂ ಸಹ **ವಿಷಯಾವಚ್ಛಿನ್ನವಾದ ಚೈತನ್ಯಕ್ಕೂ, ವೃತ್ತ್ಯವಚ್ಛಿನ್ನವಾದ ಚೈತನ್ಯಕ್ಕೂ** ವ್ಯತ್ಯಾಸವನ್ನು ತೋರಿಸಿದೆ. ಎರಡಕ್ಕೂ ಆತ್ಮನೇ ಆಧಾರವು. ಆದುದರಿಂದಲೇ **ಯತ್ರ ಯಸ್ಮಿನ್ನಾತ್ಮನಿ ಅಭಿಸ್ವರಂತಿ** ಎಂದು ಎರಡಕ್ಕೂ ಒಂದೇ ಆಧಾರವಾದ ಆತ್ಮವು ವರ್ಣಿತವಾಗಿದೆ.

**ಅನಿಮೇಷಂ**—ಎಂಬ ಪದಕ್ಕೆ ಉದಕಪರವಾದ ಅರ್ಥದಲ್ಲಿ ಅನವರತವಾಗಿ ಎಂದೂ, ಜ್ಞಾನಪರವಾದ ಅರ್ಥದಲ್ಲಿ ನಿಮೇಷರಹಿತವಾದುದು ಎಂದೂ ಅರ್ಥವು.

**ಧೀರಃ ಪಾಕಮತ್ರಾ ವಿವೇಶ**—ಎಂಬುದಕ್ಕೆ ಸಾಯಣರು ಎರಡು ವಿಧವಾಗಿ ಅರ್ಥಮಾಡಿದ್ದಾರೆ. ಮೊದಲನೆಯದಾಗಿ; – **ಸ ಪರಮೇಶ್ವರಃ ಧೀರಃ ಸಮಾಧಿನಿಷ್ಠಃ ಸರ್ವದಾ ಅವಿಕ್ರಿಯೋ ಮಾಂ ಪಾಕಂ ಪರಿಪಕ್ವಮನಸ್ಕಂ ಯೋಗಾದಿನಾ ಅಪಗತರಜಸ್ತಮಸ್ಕತ್ವೇನ ದರ್ಪಣವದತಿನಿರ್ಮಲಸತ್ತ್ವೋದ್ರಿಕ್ತಮನಸ್ಕಂ ಮಾಂ ಆ ವಿವೇಶ ।** ಸಮಾಧಿನಿಷ್ಠನಾದ ಪರಮೇಶ್ವರನು ಯೋಗಾದಿಸತ್ಕಾರ್ಯಗಳಿಂದ ರಜಸ್ತಮೋಗುಣಗಳನ್ನು ನಾಶಮಾಡಿ ಪರಿಪಕ್ವವಾದುದೂ. ಸತ್ತ್ವಗುಣದಿಂದ ಪೂರಿತವಾದುದೂ, ಕನ್ನಡಿಯಂತೆ ಅತಿಶುದ್ಧವಾದುದೂ ಆದ ನನ್ನನ್ನು ಪ್ರವೇಶಿಸಿದನು ಎಂದೂ, ಎರಡನೆಯದಾಗಿ,

**ಯದ್ವಾ, ಅಪರಿಪಕ್ವಮನಾಃ ಅಹಂ ಪೂರ್ವಂ ಅಜ್ಞಾನದಶಾಯಾಂ ಮದನ್ಯಃ ಈಶ್ವರೋಽಸ್ತೀತಿ ಅವಿದ್ವಾನ್ ತತಃ ಪರಮಸ್ತಿ ಕಶ್ಚಿತ್ಸರ್ವಜ್ಞಃ .... .... .... ಪಶ್ಚಾದ್ಗುರುಶಾಸ್ತ್ರಾಭ್ಯಾಂ ಸ ಏವಾಹಮಸ್ಮೀತಿ ಮತ್ವಾ .... .... ಪರಿಪೂರ್ಣಃ ಪರಮಾತ್ಮಾಭವಂ ।** ಜ್ಞಾನಸಾಧನೆಯ ಪೂರ್ವಾವಸ್ಥೆಯಲ್ಲಿ ನಾನು ಬೇರೆ, ಈಶ್ವರನು ಬೇರೆ ಎಂಬ ಭೇದಬುದ್ಧಿಯನ್ನಿಟ್ಟುಕೊಂಡು ಅನಂತರ ಶಾಸ್ತ್ರಾಭ್ಯಾಸದಿಂದಲೂ, ಗುರುಗಳ ಉಪದೇಶದಿಂದಲೂ ಭೇದಭಾವವನ್ನು ತ್ಯಜಿಸಿ **ಅಹಮಸ್ಮಿ** ಎಂಬ ಭಾವನೆಯಿಂದ ಈಶ್ವರನಲ್ಲಿ ಐಕ್ಯವನ್ನು ಹೊಂದಿದೆನು ಎಂಬರ್ಥವೆಂದೂ ತಿಳಿಸಿದ್ದಾರೆ. ಎರಡನೆಯ ಅರ್ಥದ ಮೇರೆ, **ಪಾಕ**ಶಬ್ದಕ್ಕೆ ಅಪರಿಪಕ್ವಮನಸ್ಸುಳ್ಳವನೆಂಬುದು ಹೇಗೆಂಬುದನ್ನು ಇದೇ ಸೂಕ್ತದ ೫ ನೇ ಋಕ್ಕಿನಲ್ಲಿ **ಪಾಕಃ ಪೃಚ್ಛಾಮಿ ಮನಸಾ ವಿಜಾನನ್** ಎಂಬ ವಾಕ್ಯವನ್ನು ವಿವರಿಸುವಾಗ ತಿಳಿಸಿದೆ. ಇದನ್ನೇ ನಿರುಕ್ತಕಾರರೂ ವಿವರಿಸುತ್ತಾ **ಪಾಕಃ ಪಕ್ತವ್ಯೋ ಭವತಿ ವಿಪಕ್ವಪ್ರಜ್ಞ ಆತ್ಮೇತ್ಯಾತ್ಮಗತಿಮಾಚಷ್ಟೇ** ಎಂದು ತಿಳಿಸಿದ್ದಾರೆ.

### ವ್ಯಾಕರಣಪ್ರಕ್ರಿಯಾ

**ಯತ್ರ—ನಿಪಾತಸ್ಯ ಚ** (ಪಾ. ಸೂ. ೬-೩-೧೩೬) ಎಂಬುದರಿಂದ ಸಂಹಿತಾದಲ್ಲಿ ದೀರ್ಘ ಬರುತ್ತದೆ.

**ಅಮೃತಸ್ಯ—ನಞೋ ಜರಮರ**—(ಪಾ. ಸೂ. ೬-೨-೧೧೬) ಎಂಬುದರಿಂದ ಉತ್ತರಪದ ಆದ್ಯುದಾತ್ತ ಸ್ವರ ಬರುತ್ತದೆ

**ಅನಿಮೇಷಮ್—**ತತ್ಪುರುಷೇ ತುಲ್ಯಾರ್ಥ—**(ಪಾ.ಸೂ ೬-೨-೨)** ಎಂಬುದರಿಂದ ಪೂರ್ವಪದಪ್ರಕೃತಿಸ್ವರ ಬರುತ್ತದೆ.

**ವಿದಥಾ**—ವಿದಜ್ಞಾನೇ ಧಾತು. **ರುದಿವಿದಿಭ್ಯಾಂಙಿತ್** (ಉ ಸೂ. ೩-೩೫) ಎಂಬುದರಿಂದ ಅಥ ಪ್ರತ್ಯಯ. ಙಿತ್ವವಿಧಾನಮಾಡಿರುವುದರಿಂದ ಧಾತುವಿನ ಉಪಧೆಗೆ ಗುಣ ಬರುವುದಿಲ್ಲ. ಪ್ರತ್ಯಯದ ಆದ್ಯುದಾತ್ತ ಸ್ವರ ಬರುತ್ತದೆ. ತೃತೀಯಾವಿಭಕ್ತಿಪರವಾದಾಗ **ಸುಪಾಂ ಸುಲುಕ್** ಎಂಬುದರಿಂದ ಪೂರ್ವಸವರ್ಣದೀರ್ಘ.

**ಅಭಿಸ್ವರಂತಿ**—ಸ್ವೃ ಗತೌ ಧಾತು. ಭ್ವಾದಿ. ಲಟ್ ಪ್ರಥಮಪುರುಷಬಹುವಚನದಲ್ಲಿ ಝಿ ಪ್ರತ್ಯಯ. ಝೋಽಂತಃ ಎಂಬುದರಿಂದ ಅಂತಾದೇಶ. ಶಪ್ ವಿಕರಣ. **ಸಾರ್ವಧಾತುಕಾರ್ಧಧಾತುಕಯೋಃ** ಎಂಬುದರಿಂದ

ಋಕಾರಕ್ಕೆ ಗುಣ. ರ ಪರವಾಗಿ ಬರುತ್ತದೆ. ಯತ್ರ ಎಂಬುದರ ಸಂಬಂಧವಿರುವುದರಿಂದ ನಿಘಾತಸ್ವರ ಬರುವುದಿಲ್ಲ. **ತಾಸ್ಯನುದಾತ್ತೇತ್**—ಸೂತ್ರದಿಂದ ಲಸಾರ್ವಧಾತುಕವು ಅನುದಾತ್ತವಾಗುವುದರಿಂದ ಧಾತುಸ್ವರ ಉಳಿಯುತ್ತದೆ. **ತಿಙಿಚೋದಾತ್ತವತಿ** (ಪಾ. ಸೂ. ೭-೧-೭೧) ಎಂಬುದರಿಂದ ಗತಿಗೆ (ಅಭಿ) ನಿಘಾತಸ್ವರ ಬರುತ್ತದೆ.

**ಇನಃ**— ಇಣ್ ಗತೌ ಧಾತು. **ಇಣ್‌ಸಿಂಜಿದೀ** (ಉ ಸೂ. ೩–೨೮೨) ಎಂಬುದರಿಂದ ನಕ್ ಪ್ರತ್ಯಯ. ಕಿತ್ತಾದುದರಿಂದ ಗುಣ ಬರುವುದಿಲ್ಲ. ಪ್ರತ್ಯಯಸ್ವರದಿಂದ ಅಂತೋದಾತ್ತವಾಗುತ್ತದೆ.

**ವಿವೇಶ** - ವಿಶ ಪ್ರವೇಶನೇ ಧಾತು. ಛಾಂದಸವಾಗಿ ಲಿಟ್- ಪ್ರಥಮಪುರುಷಏಕವಚನಾಂತರೂಪ. ಅತಿ ಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ. || ೨೧ ||

ಸಂಹಿತಾಪಾಠಃ

**ಯಸ್ಮಿನ್ವೃಕ್ಷೇ ಮಧ್ವದಃ ಸುಪರ್ಣಾ ನಿವಿಶಂತೇ ಸುವತೇ ಚಾಧಿ ವಿಶ್ವೇ ।**
**ತಸ್ಯೇದಾಹುಃ ಪಿಪ್ಪಲಂ ಸ್ವಾದ್ವಗ್ರೇ ತನ್ನೋನ್ನಶದ್ಯಃ ಪಿತರಂ ನ ವೇದ ॥೨೨॥**

ಪದಪಾಠಃ

**ಯಸ್ಮಿನ್ । ವೃಕ್ಷೇ । ಮಧುಽಅದಃ । ಸುಽಪರ್ಣಾಃ । ನಿಽವಿಶಂತೇ । ಸುವತೇ । ಚ । ಅಧಿ । ವಿಶ್ವೇ ।**
**ತಸ್ಯ । ಇತ್ । ಆಹುಃ । ಪಿಪ್ಪಲಂ । ಸ್ವಾದು । ಅಗ್ರೇ । ತತ್ । ನ । ಉತ್ । ನಶತ್ । ಯಃ । ಪಿತರಂ ।**
**ನ । ವೇದ || ೨೨ ||**

ಸಾಯಣಭಾಷ್ಯಂ

**ಅತ್ರ ವೃಕ್ಷಸ್ವರೂಪಕಲ್ಪನಾ । ಅಧಿದೈವಮಾದಿತ್ಯಮಧ್ಯಾತ್ಮಮಾತ್ಮಾನಂ ಚ ಪ್ರಶಂಸತಿ । ಯಸ್ಮಿನ್ನಾದಿತ್ಯೇ ವೃಕ್ಷೇ ವೃಕ್ಷವತ್ಸರ್ವಫಲಾಶ್ರಯಭೂತೇ ಮಧ್ವದಃ । ಮಧ್ವಿತ್ಯುದಕನಾಮ । ತದದಂತೀತಿ ಮಧ್ವದ ಉದಕಸ್ಯಾತ್ತಾರಃ ಸುಪರ್ಣಾಃ ಸುಪತನಾ ರಶ್ಮಯೋ ನಿವಿಶಂತೇ ಪ್ರವಿಶಂತಿ ರಾತ್ರೌ ಸುವತೇ ಚ ಪುನರುದಯಕಾಲೇ ಪ್ರಕಾಶಂ ಜನಯಂತಿ ಚ ಯಸ್ಮಾದಾದಿತ್ಯಾತ್ । ಕುತ್ರ । ಅಧಿ ವಿಶ್ವೇ ವಿಶ್ವಸ್ಯೋಪರಿ। ತಸ್ಯಾದಿತ್ಯವೃಕ್ಷಸ್ಯ ಪಿಪ್ಪಲಂ ಪಾಲಕಂ ಫಲಂ ಸ್ವಾದು ರಸವದಗ್ರ ಉಪರ್ಯುಪಾಸನಾನಂತರಮಾಹುಃ । ಕಥಯಂತಿ ತತ್ತ್ವವಿದಃ । ಯದ್ವಾ । ಸರ್ವಸ್ಯಾಭ್ಯುಪರಿ ವರ್ತಮಾನಮಾಹುಃ । ಈದೃಶಂ ಪಿತರಂ ಜಗತಃ ಪಾಲಯಿತಾರಂ ಯೋ ನರೋ ನ ವೇದ ನೋಪಾಸ್ತೇ ಸ ತನ್ನೋನ್ನಶತ್ । ನಶತಿರ್ಗತಿಕರ್ಮಾ । ತತ್ಫಲಂ ನ ಪ್ರಾಪ್ನೋತಿ । ವೇದಿತುಸ್ತ್ವಗ್ರೇ ಪಿಪ್ಪಲಮಾಹುರಿತ್ಯರ್ಥಃ । ಇತ್ಯಧಿದೈವಪಕ್ಷೇ ॥ ಅಥಾಧ್ಯಾತ್ಮಪಕ್ಷೇ । ಯಸ್ಮಿನ್ಪರಮಾತ್ಮನಿ ವೃಕ್ಷೇ ವೃಕ್ಷವದ್ಧನಮನಾದಿರಹಿತೇಽವಿಕ್ರಿಯೇ ಸುಪರ್ಣಾಃ ಶೋಭನಗಮನಾನೀಂದ್ರಿ-**

ಯಾಣಿ ಮಧ್ವದೋ ಮಧುನೋ ಜ್ಞಾನಸ್ಯಾತ್ತ್ರಾಣಿ । ತಜ್ಜ್ಞಾನೇನ ಜ್ಞಾನಭಾಂಜೀತ್ಯರ್ಥಃ । ನಿವಿಶಂತೇ ಸ್ವಾಪಕಾಲೇ ಸ್ವಸ್ವವಿಷಯೇಭ್ಯಃ ಪ್ರತಿನಿವೃತ್ತಾನ್ಯಾತ್ಮನಿವೃತ್ತ್ಯಾ ಲೀಯಂತೇ ಪುನಃ ಪ್ರಬೋಧಕಾಲೇಽಧಿ ವಿಶ್ವೇ ವಿಶ್ವಸ್ಯೋಪರಿ ಸುವತೇ ಚ ಉದ್ಯಂತಿ । ಸ್ವಸ್ವವಿಷಯಾಲ್ಲಭಂತ ಇತ್ಯರ್ಥಃ । ತಸ್ಯ ಪರಮಾತ್ಮನಃ ಪಿಪ್ಪಲಂ ಪಾಲಕಂ ಸಂಸಾರತ ಉದ್ಧಾರಕಂ ಸ್ವಾದ್ವಾಸ್ವಾದನೀಯಮಮೃತತ್ವಲಕ್ಷಣಂ ಜ್ಞಾನಂ। ಯತ್ಫಲಾಸ್ವಾದನೇ ಪುನಃ ಕ್ಷುತ್ತೃಷ್ಣಾಶೋಕಮೋಹಜರಾಮರಣಾದಯೋ ನ ಭವಂತಿ ತದ್ಧಿ ಸ್ವಾದುತಮಂ । ಇತರಸ್ವರ್ಗಾದಿಫಲಾನಿ ಪುನರ್ಜನನಾದ್ಯಾಪಾದಕತ್ವಾದಾಪಾತಸ್ವಾದೂನಿ । ತತ್ಫಲಮಗ್ರೇ ಸ್ವರೂಪಜ್ಞಾನೋತ್ತರಕಾಲಮಾಹುಃ । ಯಃ ಪುಮಾನ್ ಪಿತರಂ ಪಾಲಕಂ ಜ್ಞಾನಫಲಂ ತತ್ಫಲಾಧಾರಮಾತ್ಮಾನಂ ವಾ ನ ವೇದ ನ ಜಾನಾತಿ ಗುರುಶಾಸ್ತ್ರಾತ್ ಸ ತತ್ಫಲಂ ನೋನ್ನಶತ್ । ನ ಪ್ರಾಪ್ನೋತಿ। ಅತ ಆತ್ಮಾನಂ ಯೋ ವೇದ ಸ ಏವ ತನ್ಮೋಕ್ಷಫಲಂ ಪ್ರಾಪ್ನೋತೀತ್ಯರ್ಥಃ । ಯದ್ವಾ । ಚರ್ಮವದಾಕಾಶಂ । ಶ್ವೇ. ಉ. ೬-೨೦ ಇತ್ಯಾದಿಶ್ರುತೇರ್ಜ್ಞಾನಾದನ್ಯೋಪಾಯಸ್ಯಾಮೃತತ್ವಪ್ರಾಪ್ತಿಂ ನಿವಾರಯತಿ ಬ್ರಹ್ಮ ವೇದ ಬ್ರಹ್ಮೈವ ಭವತೀತ್ಯಾಧಿಕಾನುಜ್ಞಾಪ್ರಾಪ್ತಿಮಾಹ । ತಸ್ಮಾದೀದೃಶಂ ಪರಮೇಶ್ವರಂ ವಿದಿತ್ವಾ ಮುಕ್ತೋ ಭೂಯಾಸಮಿತ್ಯರ್ಥಃ ॥

### ಪ್ರತಿಪದಾರ್ಥ

**ಯಸ್ಮಿನ್**—ಯಾವ ಆದಿತ್ಯರೂಪವಾದ । **ವೃಕ್ಷೇ**—ವೃಕ್ಷದಲ್ಲಿ । **ಮಧ್ವದಃ**—ಉದಕವನ್ನು ಸೇವಿಸತಕ್ಕ । **ಸುಪರ್ಣಾಃ**—ರಶ್ಮಿಗಳು । **ನಿವಿಶಂತೇ**—(ರಾತ್ರಿಯ ಕಾಲದಲ್ಲಿ) ಪ್ರವೇಶಿಸುತ್ತವೆಯೋ (ಮತ್ತು ಪುನಃ ಉದಯಕಾಲದಲ್ಲಿ) । **ಅಧಿ ವಿಶ್ವೇ**—ಲೋಕಗಳ ಮೇಲೆಲ್ಲಾ । **ಸುವತೇ ಚ** । (ಆದಿತ್ಯನ) ಪ್ರಕಾಶವನ್ನು ಹರಡುತ್ತವೆಯೋ । **ತಸ್ಯ ಇತ್**—ಅದೇ ಆದಿತ್ಯನ । **ಪಿಪ್ಪಲಂ**—ಪಾಲಕವಾದ ಫಲವನ್ನು । **ಸ್ವಾದು**—ರಸವತ್ತನ್ನಾಗಿಯೂ । **ಅಗ್ರೇ**—(ಉಳಿದ ಎಲ್ಲಾ ಫಲಗಳಿಗಿಂತಲೂ) ಉತ್ತಮವಾದದ್ದನ್ನಾಗಿಯೂ । **ಆಹುಃ**—ತತ್ತ್ವವಿತ್ತುಗಳು ಹೇಳುತ್ತಾರೆ । **ಯಃ**— ಯಾವ ಮನುಷ್ಯನು । **ಪಿತರಂ**— ಜಗತ್ಪಾಲಕನಾದ ಆದಿತ್ಯನನ್ನು । **ನ ವೇದ**—(ಉಪಾಸನಾದಿಗಳಿಂದ) ತಿಳಿಯುವುದಿಲ್ಲವೋ (ಅವನು) । **ತತ್**—ಆ ಫಲವನ್ನು । **ನ ಉನ್ನಶತ್**—ಪಡೆಯುವುದಿಲ್ಲ.

### ಭಾವಾರ್ಥ

ಯಾವ ಆದಿತ್ಯರೂಪವಾದ ವೃಕ್ಷದಲ್ಲಿ ಉದಕವನ್ನು ಸೇವಿಸತಕ್ಕ ರಶ್ಮಿಗಳು ರಾತ್ರಿಯ ಕಾಲದಲ್ಲಿ ಪ್ರವೇಶಿಸುತ್ತವೆಯೋ, ಮತ್ತು ಪುನಃ ಉದಯಕಾಲದಲ್ಲಿ ಲೋಕಗಳ ಮೇಲೆಲ್ಲಾ ಆದಿತ್ಯನ ಪ್ರಕಾಶವನ್ನು ಹರಡುತ್ತವೆಯೋ ಅದೇ ಆದಿತ್ಯನ ಪಾಲಕವಾದ ಫಲವನ್ನು ರಸವತ್ತನ್ನಾಗಿಯೂ ಉಳಿದ ಎಲ್ಲಾ ಫಲಗಳಿಗಿಂತಲೂ ಉತ್ತಮವಾದದ್ದನ್ನಾಗಿಯೂ ತತ್ತ್ವವಿತ್ತುಗಳು ಹೇಳುತ್ತಾರೆ. ಯಾವ ಮನುಷ್ಯನು ಜಗತ್ಪಾಲಕನಾದ ಆದಿತ್ಯನನ್ನು ಉಪಾಸನಾದಿಗಳಿಂದ ತಿಳಿಯುವುದಿಲ್ಲವೋ, ಅವನು ಆ ಫಲವನ್ನು ಪಡೆಯುವುದಿಲ್ಲ.

### English Translation

In the tree into which the smooth-gliding (rays), feeders on the sweet (produce), enter, and again bring forth (light) over all ; they have called the

fruit sweet, but he partakes not of it who knows not the protector (of the universe).

ವಿಶೇಷವಿಷಯಗಳು

ಇಲ್ಲಿ ಅಧಿದೈವತಪಕ್ಷದಲ್ಲಿ ಆದಿತ್ಯನನ್ನೂ ಅಧ್ಯಾತ್ಮಪಕ್ಷದಲ್ಲಿ ಆತ್ಮನನ್ನೂ ಸ್ತುತಿಸಿದೆ. ಯಾವ ಆದಿತ್ಯನಲ್ಲಿ ರಶ್ಮಿಗಳು ರಾತ್ರಿಯ ಕಾಲದಲ್ಲಿ ಪ್ರವೇಶಿಸಿ ಪುನಃ ಉದಯಕಾಲದಲ್ಲಿ ಅವನ ಪ್ರಕಾಶವನ್ನು ಜಗತ್ತಿಗೆ ಹರಡುತ್ತವೆಯೋ ಅಂತಹ ಆದಿತ್ಯನನ್ನು ಉಪಾಸನಾದಿಗಳಿಂದ ಪೂಜಿಸತಕ್ಕವರು ಆದಿತ್ಯರೂಪನಾದ ವೃಕ್ಷದಲ್ಲಿರುವುದೂ, ಅತ್ಯಂತ ಸ್ವಾದುವಾದುದೂ, ಉಳಿದ ಎಲ್ಲಾ ಫಲಗಳಿಗಿಂತಲೂ ಅತ್ಯುತ್ತಮವಾದುದೂ ಆದ ಫಲವನ್ನು ಭೋಗಿಸುವರೆಂದೂ ಉಳಿದವರಿಗೆ ಅದು ಲಭ್ಯವಿಲ್ಲವೆಂದೂ ಹೇಳಿದೆ. **ಪಿತರಃ ನ ವೇದ** ಎಂಬುದರಿಂದ ಜ್ಞಾನಕ್ಕೆ ಪ್ರಾಶಸ್ತ್ಯವನ್ನು ಕೊಟ್ಟಿದೆ. ಆ ಫಲಾಸ್ವಾದಕ್ಕೆ ಆದಿತ್ಯನ ಸ್ವರೂಪಜ್ಞಾನವು ಅತ್ಯವಶ್ಯವೆಂದು ತಿಳಿಸಿದೆ. ಇದು ಅಧಿದೈವತಪಕ್ಷ. ಅಧ್ಯಾತ್ಮಪಕ್ಷದಲ್ಲಿ,

> **ಯಸ್ಮಿನ್ಪರಮಾತ್ಮನಿ ವೃಕ್ಷೇ ಸುಪರ್ಣಾಃ ಶೋಭನಗಮನಾನೀಂದ್ರಿಯಾಣಿ ಮಧ್ವದಃ ಜ್ಞಾನಸ್ವಾತ್ತ್ರ್ಯಾಣಿ ನಿವಿಶಂತೇ ಸ್ವಾಪಕಾಲೇ ಸ್ವಸ್ವವಿಷಯೇಭ್ಯಃ ಪ್ರತಿನಿವೃತ್ತಾನಿ ಪುನಃ ಪ್ರಬೋಧಕಾಲೇ ವಿಶ್ವಸ್ಯೋಪರಿ ಸುವತೇ ಸ್ವಸ್ವವಿಷಯಾನ್ ಲಭಂತೇ । ತಸ್ಯ ಪರಮಾತ್ಮನಃ ಪಿಪ್ಪಲಂ ಪಾಲಕಂ .... .... .... .... .... ॥**

ಯಾವ ಪರಮಾತ್ಮರೂಪವಾದ ವೃಕ್ಷದಲ್ಲಿ ಸುಲಭಸಂಚಾರಿಗಳಾದವೂ, ಜ್ಞಾನದ ಆಸ್ವಾದನೆಯನ್ನು ಅನುಭವಿಸುವುವೂ ಆದ ಇಂದ್ರಿಯಗಳು ಸ್ವಾಪಕಾಲದಲ್ಲಿ ತಮ್ಮ ವಿಷಯಗಳಿಂದ ಹಿಂತಿರುಗಿ ಆತ್ಮನಲ್ಲೇ ಲೀನವಾಗಿ ಅನಂತರ ಜಾಗ್ರತ್ಕಾಲದಲ್ಲಿ ಪುನಃ ತಮ್ಮ ವಿಷಯಗಳೊಡನೆ ಸಂಪರ್ಕವನ್ನು ಹೊಂದುತ್ತವೆಯೋ ಅಂತಹ ಪರಮಾತ್ಮನ ಸ್ವರೂಪವು, ಅದರ ಅನುಭವದಿಂದ ಲಭಿಸತಕ್ಕವೂ, ಅತ್ಯಂತ ಸ್ವಾದುವಾದುದೂ, ಉಳಿದ ಎಲ್ಲಾ ಫಲಗಳಿಗಿಂತಲೂ ಅತ್ಯುತ್ತಮವಾದುದೂ ಆಗಿರುತ್ತದೆ ಆದರೆ, ಈ ಫಲದ ಭೋಗವು ಯಾರಿಗೆ ಸಾಧ್ಯ ಅಥವಾ ಯಾರಿಗೆ ಲಭಿಸತಕ್ಕದ್ದಲ್ಲವೆಂದರೆ, **ಯಃ ಪಿತರಂ ನ ವೇದ ನ ತನ್ನೋನ್ನಶತ್** । ಪಾಲಕನಾದ ಈ ಪರಮಾತ್ಮನ ಸ್ವರೂಪವನ್ನು ತಿಳಿದವನಿಗೆ ಲಭಿಸುತ್ತದೆ ತಿಳಿಯದ ಅಜ್ಞಾನಿಗೆ ಲಭಿಸುವುದಿಲ್ಲ ಎಂದರ್ಥವಾಗುತ್ತದೆ. ಇದೇ ವಿಧವಾಗಿ ಆದಿತ್ಯನಿಗೂ ಪರಮಾತ್ಮನಿಗೂ ತಾದಾತ್ಮ್ಯವನ್ನು ಹೇಳಿ ಏಕರೂಪವಾದ ವರ್ಣನೆಯೂ ಸ್ತುತಿಯೂ ಇರತಕ್ಕ ಸನ್ನಿವೇಶಗಳು ಸಂಹಿತೆಯಲ್ಲಿಯೂ ಆರಣ್ಯಕಾದಿಗಳಲ್ಲಿಯೂ ಅನೇಕವಿರುತ್ತವೆ. ಉದಾಹರಣೆಗೆ,

> **ಮರೀಚಯಃ ಸ್ವಾಯಂಭುವಾಃ । ಯೇ ಶರೀರಾಣ್ಯಕಲ್ಪಯನ್ । ತೇ ತೇ ದೇಹಂ ಕಲ್ಪಯಂತು ಮಾ ಚ ತೇ ಖ್ಯಾಸ್ಮ ತೀರಿಷತ್ । ಉತ್ತಿಷ್ಠತ ಮಾ ಸ್ವಪ್ತ । ಅಗ್ನಿಮಿಚ್ಛಧ್ವಂ ಭಾರತಾಃ । ರಾಜ್ಞಃ ಸೋಮಸ್ಯ ತೃಪ್ತಾಸಃ । ಸೂರ್ಯೇಣ ಸಯುಜೋಷಸಃ । ಯುವಾ ಸುವಾಸಾಃ । ಅಷ್ಟಾಚಕ್ರಾ ನವದ್ವಾರಾ । ದೇವಾನಾಂ ಪೂರಯೋಧ್ಯಾ । ತಸ್ಯಾಗ್ಂ ಹಿರಣ್ಮಯಃ ಕೋಶಃ । ಸ್ವರ್ಗೋ ಲೋಕೋ ಜ್ಯೋತಿಷಾವೃತಃ । ಯೋ ವೈ ತಾಂ ಬ್ರಹ್ಮಣೋ ವೇದ । ಅಮೃತೇನಾವೃತಾಂ ಪುರೀಂ । ತಸ್ಮೈ ಬ್ರಹ್ಮ ಚ ಬ್ರಹ್ಮಾ ಚ । ಆಯುಃ ಕೀರ್ತಿಂ ಪ್ರಜಾಂ ದದುಃ । ವಿಭ್ರಾಜಮಾನಾಗ್ಂ ಹರಿಣೀಂ । ಯಶಸಾ ಸಂಪರೀವೃತಾಂ । ಪುರಗ್ಂ ಹಿರಣ್ಮಯೀಂ ಬ್ರಹ್ಮಾ ॥**
>
> (ತೈ. ಆ. ೧-೨೭-೨, ೩)

ಎಂಬ ವಾಕ್ಯಗಳಲ್ಲಿ ಪ್ರಕೃತವಾದ ಋಕ್ಕಿನಲ್ಲಿರುವ ಅಂಶಗಳೆಲ್ಲವೂ ಇರುತ್ತವೆ. ಇಲ್ಲಿ **ಸುಪರ್ಣ**ಶಬ್ದದಿಂದ ಬೋಧಿತವಾಗುವ ಅರ್ಥವು **ಮರೀಚಯಃ** ಎಂಬ ಪದದಿಂದ ಸೂಚಿತವಾಗಿದೆ. **ರಶ್ಮಯಃ ಶರೀರಾಣ್ಯಾತ್ಮೋಪಾಸಕದೇಹಾನಕಲ್ಪಯನ್ನ್ಯತವಂತಸ್ತೇ ತವ ದೇಹಂ ಕಲ್ಪಯಂತು ।** ಸೂರ್ಯಶರೀರದ ಅವಯವಗಳಾದ ರಶ್ಮಿಗಳೆಂದೂ, ಆತ್ಮೋಪಾಸನೆಗೆ ಸಾಧನವಾದ ದೇಹದ ಇಂದ್ರಿಯಾದ್ಯವಯವಗಳೆಂದೂ ಅರ್ಥವಾಗುತ್ತದೆ. ಇಂತಹ ರಶ್ಮಿಗಳಾಗಲಿ ಇಂದ್ರಿಯಾದ್ಯವಯವಗಳಾಗಲಿ ಆದಿತ್ಯರೂಪನಾದ ಪರಮಾತ್ಮನಲ್ಲಿ ಸೇರಿ ಪುನಃ ಜಗತ್ಕಲ್ಯಾಣಕ್ಕೂ ಆತ್ಮಕಲ್ಯಾಣಕ್ಕೂ ಮಾರ್ಗವನ್ನು ಕಲ್ಪಿಸುತ್ತವೆ. ಆದರೆ ಇವು ಕಲ್ಯಾಣ ಸಾಧಕವಾಗಬೇಕಾದರೆ ಮುಖ್ಯವಾಗಿ ಆದಿತ್ಯನ ಅಥವಾ ಆದಿತ್ಯರೂಪನಾದ ಪರಮಾತ್ಮನ ಸ್ವರೂಪಜ್ಞಾನವು ಅತ್ಯವಶ್ಯವಾಗಿರಬೇಕು. ಆ ಮುಖ್ಯವಾದ ಅಂಶವನ್ನು ಪ್ರಕೃತವಾದ ಋಕ್ಕಿನಲ್ಲಿ **ಯಃ ಪಿತರಂ ನ ವೇದ ನೋನ್ನಶತ್** ಎಂದು ನಿಷೇಧರೂಪದಲ್ಲೂ ; ಆರಣ್ಯಕ ವಾಕ್ಯದಲ್ಲಿ **ಯೋ ವೈ ತಾಂ** ಬ್ರಹ್ಮಣೋ **ವೇದ** ಎಂಬ ವಿಧಿರೂಪದಲ್ಲೂ ಉಕ್ತವಾಗಿದೆ. **ಪಿಪ್ಪಲಂ ಫಲಂ ಸ್ವಾದು** ಎಂಬುದನ್ನು **ಅಮೃತೇನಾವೃತಾಂ ಪುರೀಂ** ಎಂಬ ವಾಕ್ಯದಿಂದ ವಿವರಿಸಿದೆ. ಪರಮಾನಂದರೂಪವಾದ ಈ ಫಲಾಸ್ವಾದದಿಂದ ಲಭಿಸತಕ್ಕ ತೃಪ್ತಿಯನ್ನು ಇನ್ನು ಯಾವ ಫಲವೂ ಕೊಡಲಾರದು. ಸ್ವರ್ಗಾದಿರೂಪವಾದ ಇತರ ಫಲಗಳಿಲ್ಲವೇ ಎಂಬ ಪ್ರಶ್ನೆಯು ಸಂಭವಿಸಿದರೆ ಅದಕ್ಕೆ ಉತ್ತರವಾಗಿ ಸಾಯಣರು **ಇತರಸ್ವರ್ಗಾದಿಫಲಾನಿ ಪುನರ್ಜನನಾದ್ಯಾಪಾದಕತ್ವಾತ್ ಅಪಾತಸ್ವಾದೂನಿ ।** ಇತರ ಸ್ವರ್ಗಾದಿಫಲಗಳು ಪುನಃಪುನಃ ಜನ್ಮಗಳನ್ನು ಲಭಿಸುವಂತೆ ಮಾಡುವುದರಿಂದ ಅವು ಈ ಅಮೃತರೂಪವಾದ ಆನಂದದಷ್ಟು ಉತ್ತಮವಾದ ಫಲವನ್ನು ಕೊಡತಕ್ಕವಲ್ಲ ಎಂದು ವಿಶದಮಾಡಿ ತಿಳಿಸಿದ್ದಾರೆ. ಉಪನಿಷದಾದಿಗಳಲ್ಲೂ ಸಹ ಆದಿತ್ಯನಿಗೂ ಪರಮಾತ್ಮನಿಗೂ ಈ ರೀತಿ ತಾದಾತ್ಮ್ಯವನ್ನು ತೋರಿಸಿ ಹೇಳಿರುವ ವರ್ಣನೆಗಳನ್ನು ತಿಳಿಯುವ ಮೊದಲು ಪ್ರಕೃತವಾದ ಋಕ್ಕಿನಲ್ಲಿ ಅಧಿದೈವತವಾದ ಆದಿತ್ಯನ ವರ್ಣನವನ್ನೂ, ಆತನ ಅವಯವಗಳಾದ ರಶ್ಮಿಗಳ ಸ್ವರೂಪವನ್ನೂ, ಅಧ್ಯಾತ್ಮಪಕ್ಷದಲ್ಲಿ ಆತ್ಮನ ವರ್ಣನವನ್ನೂ ಮತ್ತು ತದಾಧಾರವಾದ ದೇಹದ ಅವಯವಗಳಾದ ಇಂದ್ರಿಯಾದಿಗಳ ಸ್ವರೂಪವನ್ನೂ ವಿಷಯಾಸಕ್ತಗಳಾದ ಇಂದ್ರಿಯಗಳು ಆತ್ಮನಲ್ಲಿ ಪ್ರವೇಶಿಸಿ ಆತ್ಮಾನಂದಕ್ಕೆ ಯಾವ ರೀತಿ ಸಾಧಕಗಳಾಗುತ್ತವೆಂಬುದನ್ನೂ ವಿವರಿಸಿರುವ ವಾಕ್ಯಗಳಿಗೆ ಸರಿಯಾದ ಅರ್ಥವನ್ನು ಪರಿಶೀಲಿಸಬೇಕು.

ಅಧಿದೈವತಪಕ್ಷದಲ್ಲಿ:—**ವೃಕ್ಷೇ** ಎಂಬ ಪದಕ್ಕೆ **ವೃಕ್ಷವತ್ ಸರ್ವಫಲಾಶ್ರಯಭೂತೇ ।** ವೃಕ್ಷದಂತೆ ಸಕಲವಿಧವಾದ ಫಲಕ್ಕೂ ಆಶ್ರಯಭೂತವಾದ (ಆದಿತ್ಯನಲ್ಲಿ) ಎಂದರ್ಥಮಾಡಿದೆ. ಅಥವಾ ವೃಕ್ಷವು ಸಕಲವಿಧವಾದ ಪ್ರಾಣಿಗಳಿಗೂ ಆಧಾರವಾಗಿರುವಂತೆ ಆದಿತ್ಯನು ಸಕಲ ಲೋಕಗಳಿಗೂ ಆಧಾರಭೂತನೆಂದೂ ಸಹ ಅರ್ಥಮಾಡಿದರೆ ತಪ್ಪಾಗಲಾರದು.

**ಧರ್ತಾ ದಿವೋ ವಿಭಾತಿ ತಪಸಸ್ಪೃಥಿವ್ಯಾಮಿತಿ । ಧರ್ತಾ ಹ್ಯೇಷ ದಿವೋ ವಿಭಾತಿ ತಪಸಸ್ಪೃಥಿವ್ಯಾಂ ಧರ್ತಾ ದೇವೋ ದೇವಾನಾಮಮರ್ತ್ಯಸ್ತಪೋಜಾ ॥**

(ಶ. ಬ್ರಾ. ೧೪-೧-೪-೭)

ಇತ್ಯಾದಿ ವಾಕ್ಯಗಳಲ್ಲಿ ಈ ಎರಡರ್ಥಗಳೂ ಸೂಚಿತವಾಗಿ ಆದಿತ್ಯನು ಸಕಲ ಲೋಕಗಳ ಧಾರಕನೂ ಮತ್ತು ಸಕಲ ಲೋಕಗಳ ಫಲದಾಯಕನೂ ಆಗಿರುವನೆಂದು ವರ್ಣಿಸಿರುವುದರಿಂದ ಆದಿತ್ಯನು ಸಕಲಾಧಾರನು ಮತ್ತು ಸರ್ವ ಫಲದಾಯಕನು.

**ಸುಪರ್ಣ**ಶಬ್ದಕ್ಕೆ ರಶ್ಮಿಯೆಂದೂ, ಈ ರಶ್ಮಿಗಳೇ ಉದಕವನ್ನು ಪೃಥ್ವಿಯಿಂದ ಆಕರ್ಷಿಸಿ, ಆದಿತ್ಯನಲ್ಲಿ ಸೇರಿಸಿ ಪುನಃ ವೃಷ್ಟಿಪತನಕ್ಕೆ ಕಾರಣಗಳಾಗುವುವೆಂದೂ ಹಿಂದೆ ವಿವರಿಸಿದೆ. ಉದಕರೂಪವಾದ ರಸವನ್ನು ಹೀರುವುದ ರಿಂದಲೇ ಈ ರಶ್ಮಿಗಳಿಗೆ **ಮಧ್ವದಃ** ಎಂಬ ವಿಶೇಷಣವಿದೆ. **ಮಧ್ವಿತ್ಯುದಕನಾಮ | ತತ್ ಅದಂತೀತಿ ಮಧ್ವದಃ ಉದಕಸ್ಯ ಅತ್ತಾರಃ** | ಮಧುವೆಂದರೆ ಉದಕವು. ಅದನ್ನು ಭಕ್ಷಿಸುತ್ತದಾದುದರಿಂದ ರಶ್ಮಿಗಳಿಗೆ **ಮಧ್ವದಃ** ಎಂಬ ವಿಶೇಷಣವೆಂದು ಸಾಯಣರು ವಿವರಿಸಿದ್ದಾರೆ ಈ ರಶ್ಮಿಗಳು ರಾತ್ರಿಯ ಕಾಲದಲ್ಲಿ ಆದಿತ್ಯನಲ್ಲಿ ಸುಪ್ತವಾಗಿ ಉದಯ ಕಾಲದಲ್ಲಿ ಹೊರಗೆ ಅವಿರ್ಭವಿಸುತ್ತಾ ಆದಿತ್ಯನ ಪ್ರಕಾಶವನ್ನು ಲೋಕಕ್ಕೆಲ್ಲಾ ಹರಡುತ್ತವೆ.

ಈ ಆದಿತ್ಯರೂಪದ ವೃಕ್ಷದ ಫಲವನ್ನು ವರ್ಣಿಸುತ್ತಾ **ಪಿಪ್ಪಲಂ ಸ್ವಾದು**–ಇದು ಪಾಲಕವಾದುದೂ ರಸವತ್ತಾ ದುದೂ ಆದ ಫಲವೆಂದು ತಿಳಿಸಿದೆ. ಮತ್ತು ಎಲ್ಲಾ ಫಲಗಳಿಗಿಂತಲೂ ಉತ್ತಮವಾದುದೆಂದು **ಅಗ್ರೇ** ಎಂಬ ಪದದಿಂದ ಸೂಚಿಸಿದೆ. ಆದಿತ್ಯನಿಂದ ಆಭೃತವಾಗತಕ್ಕ ಈ ಫಲದ ವೈವಿಧ್ಯವನ್ನೂ ಮಹತ್ತ್ವವನ್ನೂ ತೈತ್ತಿರೀಯಾರಣ್ಯಕದಲ್ಲಿ ಈರೀತಿ ವರ್ಣಿಸಿ ಪ್ರಶಂಸಿಸಿದೆ. ಇಲ್ಲಿ ಹೃದಯಸ್ಥವಾದ ಪರಮಾತ್ಮನಿಗೂ ಆದಿತ್ಯನಿಗೂ ತಾದಾತ್ಮ್ಯವನ್ನು ತೋರಿ ಸುತ್ತಾ ಈ ಆದಿತ್ಯನನ್ನು ದೇವತೆಗಳೂ ಹುಡುಕಿ ಅವನಿಂದ ಲಭಿಸತಕ್ಕ ಫಲವನ್ನು ಹೊಂದಿದರು ಎಂದು ತಿಳಿಸಿದೆ. ಅಲ್ಲದೆ, ಕರ್ಮಕ್ಕೂ ಜ್ಞಾನಕ್ಕೂ ಇರತಕ್ಕ ಸಂಬಂಧವನ್ನು ತಿಳಿಸಿ ಎರಡೂ ಒಂದೇ ಫಲವನ್ನು ಕೊಡತಕ್ಕದ್ದೆಂದೂ ಪ್ರಶಂಸಿಸಿದೆ.

> **ಪರೇಣ ತಂತುಂ ಪರಿಷಿಚ್ಯಮಾನಂ | ಅಂತರಾದಿತ್ಯೇ ಮನಸಾ ಚರಂತಂ | ದೇವಾನಾಗ್ಂ ಹೃದಯಂ ಬ್ರಹ್ಮಾನ್ವವಿಂದತ್ | ಬ್ರಹ್ಮೈತದ್ಬ್ರಹ್ಮಣ ಉಜ್ಜಭಾರ| ಅರ್ಕಗ್ಂ ಶ್ಚೋತಂತಗ್ಂ ಸರಿರಸ್ಯ ಮಧ್ಯೇ | ಆ ಯಸ್ಮಿನ್ತ್ಸಪ್ತಪೇರವಃ | ಮೇಹಂತಿ ಬಹುಲಾಗ್ ಶ್ರಿಯಂ | ಬಹ್ವ-ಶ್ವಾಮಿಂದ್ರ ಗೋಮತೀಂ ||**
>
> (ತೈ. ಆ. ೩-೧೧-೬)

ಪ್ರಜಾಪತಿಯು ಇಂದ್ರಾದಿಗಳ ಹೃದಯದಲ್ಲಿರುವ ಪರಮಾತ್ಮನನ್ನು ಅನ್ವೇಷಣಮಾಡಿ ಕೊನೆಗೆ ಅವನ ದರ್ಶನವನ್ನು ಪಡೆದನು. ಈ ಪರಮಾತ್ಮನು ಯಜ್ಞಯಾಗಾದಿ ಕರ್ಮಗಳಿಗೆ ಫಲವನ್ನು ಕೊಡತಕ್ಕ ಕಾಲದಲ್ಲಿ ವೃಷ್ಟಿಯನ್ನು ಸುರಿಸುವುದಕ್ಕಾಗಿ ಆದಿತ್ಯಮಂಡಲದಲ್ಲಿ ಸಂಚರಿಸುತ್ತಿದ್ದಾನೆ. ಈ ಪರಮಾತ್ಮನು ಆದಿತ್ಯನ ರಶ್ಮಿರೂಪದಲ್ಲಿ ಮೇಘ ಸ್ಥವಾದ ಜಲದ ಮಧ್ಯದಲ್ಲಿ ಪ್ರವೇಶಿಸಿ ವೃಷ್ಟಿರೂಪವಾದ ಫಲವನ್ನು ಸುರಿಸುತ್ತಿದ್ದಾನೆ. ಈ ಆದಿತ್ಯನಲ್ಲಿ ಲೋಕ ಪಾಲಕಗಳಾದ ಏಳು ರಶ್ಮಿಗಳು ಸೇರಿ ಆಶ್ರಯವನ್ನು ಪಡೆದಿವೆ. (ಇದನ್ನು **ಸಾಕಂಜಾನಾಂ ಸಪ್ತಥಮಾಹು ರೇಕಜಂ** ಇತ್ಯಾದಿ ಋಕ್ಕುಗಳಲ್ಲಿ ವರ್ಣಿಸಿದೆ) ಈ ರಶ್ಮಿಗಳು ಸಸ್ಯಾದಿಸಂಪತ್ತುಗಳಿಗೆ ಕಾರಣವಾದ ವೃಷ್ಟಿಯನ್ನು ಸುರಿಸಿ ಲೋಕವನ್ನು ರಕ್ಷಿಸುತ್ತವೆ. ಗವಾದ್ಯೈಶ್ವರ್ಯಗಳನ್ನು ಒದಗಿಸುತ್ತವೆ.

> **ಅಚ್ಯುತಾಂ ಬಹುಲಾಗ್ ಶ್ರಿಯಂ | ಸ ಹರಿರ್ವಸುವಿತ್ತಮಃ | ಪೇರುರಿಂದ್ರಾಯ ಪಿನ್ವತೇ | .... .... .... .... ಶತಗ್ಂ ಶತಾ ಅಸ್ಯ ಯುಕ್ತಾ ಹರೀಣಾಂ | ಅರ್ವಾಜಾಯಾತು ವಸುಭೀ ರಶ್ಮಿರಿಂದ್ರಃ .... .... .... .... .... .... .... .... |**
>
> (ತೈ. ಆ. ೩-೧೧-೭)

**ಭದ್ರಂ ಪಶ್ಯಂತ ಉಪಸೇದುರಗ್ರೇ । ತಪೋ ದೀಕ್ಷಾಮೃಷಯಃ ಸುವರ್ವಿದಃ । ತತಃ ಕ್ಷತ್ರಂ ಬಲಮೋಜಶ್ಚ ಜಾತಂ । ತದಸ್ಮೈ ದೇವಾ ಅಭಿ ಸನ್ನಮಂತು । ಶ್ವೇತಗ್‍ಂ ರಶ್ಮಿಂ ಬೋಭುಜ್ಯಮಾನಂ । ಅಪಾಂ ನೇತಾರಂ ಭುವನಸ್ಯ ಗೋಪಾಂ ॥**

(ತೈ. ಆ. ೩-೧೧-೯)

ಈ ಆದಿತ್ಯರಶ್ಮಿಗಳು ಆದಿತ್ಯನಿಂದ ಲಭಿಸತಕ್ಕ ಫಲಗಳನ್ನು ಲೋಕಕ್ಕೆ ಹಂಚುತ್ತವೆ. ಅವು ಯಾವವೆಂದರೆ, ನಾಶರಹಿತವಾದವೂ ಪ್ರಭೂತವಾದವೂ ಆದ ಗವಾದಿಧನಸಂಪತ್ತುಗಳು. ಈ ಸಂಪತ್ತುಗಳನ್ನು ಪಡೆಯಲಿಚ್ಛೆಯಿಂದ ಸ್ವರ್ಗಮಾರ್ಗಗಾಮಿಗಳಾದ ಋಷಿಗಳು ಸಪ್ತಹೋತೃರೂಪನಾದ ಆದಿತ್ಯನನ್ನು ಸಮೀಪಿಸಿ ಅವನನ್ನು ಉಪಾಸನಾದಿ ಪೂಜೆಗಳಿಂದ ಅವನ ಅನುಗ್ರಹದಿಂದ, ಕ್ಷಾತ್ರರೂಪವಾದ ಬಲವನ್ನೂ, ಓಜಸ್ಸನ್ನೂ ಪಡೆದರು. ಅದೇ ಸಂಪತ್ತನ್ನು ಯಜಮಾನರೂ ಪಡೆಯಲಿ. ಎಂದರೆ ಆದಿತ್ಯನ ಉಪಾಸನೆಯಿಂದ ಅವೆಲ್ಲವೂ ಲಭಿಸುವುವೆಂದರ್ಥ. ಇವುಗಳಲ್ಲಿ ಜಗತ್ಪೋಷಕವಾದ ಅನ್ನಾದಿಸಂಪತ್ತುಗಳ ಸಮೂಹವೊಂದು ಬಗೆ. ಇದನ್ನು ರಕ್ಷಿಸಲು ಸಮರ್ಥವಾದ ಕ್ಷಾತ್ರಸಂಪತ್ತು ಇನ್ನೊಂದು ಬಗೆ. ಆದಿತ್ಯನಿಂದ ಲಭಿಸತಕ್ಕ ಈ ಸಂಪತ್ತುಗಳಿಗಿಂತಲೂ ಸ್ವಾದುತರವಾದವು ಮತ್ತೊಂದಿಲ್ಲ. ಇವು ಜಗತ್ತನ್ನು ಸಂರಕ್ಷಿಸತಕ್ಕ ಸಂಪತ್ತುಗಳು. ಈ ಆದಿತ್ಯನ ರಶ್ಮಿಗಳು ಹೇಗಿರುತ್ತವೆ, ಅವುಗಳ ಕ್ರಿಯೆಗಳೇನು ಎಂಬುದನ್ನು ವಿವರಿಸುತ್ತಾ,

**ರೋಹಿಣೀಃ ಪಿಂಗಲಾ ಏಕರೂಪಾಃ । ಕ್ಷರಂತೀಃ ಪಿಂಗಲಾ ಏಕರೂಪಾಃ । ಶತಗ್‍ಂ ಸಹಸ್ರಾಣಿ ಪ್ರಯುತಾನಿ ನಾವ್ಯಾನಾಂ ।**

(ತೈ. ಆ. ೩-೧೧-೧೦)

ರೋಹಿತವರ್ಣಾತ್ಮಕವೂ, ಪಿಂಗಳವರ್ಣಾತ್ಮಕವೂ ಆದ ಭೂಭಾಗಗಳಲ್ಲಿ ಪ್ರವಹಿಸತಕ್ಕ ಉದಕಗಳು ರಶ್ಮಿಗಳಿಂದ ಆಕರ್ಷಿತವಾಗಿ ಮೇಘಸ್ಥವಾದಾಗ ತಮ್ಮ ನಾನಾರೂಪಗಳನ್ನು ತ್ಯಜಿಸಿ ಏಕರೂಪತ್ವವನ್ನು ಪಡೆಯುತ್ತವೆ. ಪುನಃ ಶತಸಂಖ್ಯೆಯಲ್ಲಿಯೂ, ಸಹಸ್ರಸಂಖ್ಯೆಯಲ್ಲಿಯೂ ಪ್ರವಾಹರೂಪದಿಂದ ಭೂಮಿಯಮೇಲೆ ಹರಿಯುತ್ತವೆ. ಇವೆಲ್ಲವೂ ಸಪ್ತಹೋತೃರೂಪನಾದ ಆದಿತ್ಯನ ಅನುಗ್ರಹವು. ಇಂತಹ ಆದಿತ್ಯನ ಜ್ಞಾನವು ಅತ್ಯವಶ್ಯವಾದುದು. ಅವನ ಉಪಾಸನೆಯಿಂದಲೇ ಎಲ್ಲಾ ಸಂಪತ್ತೂ ಲಭಿಸತಕ್ಕದ್ದು. " **ತನ್ನೋನ್ನಶದ್ಯೈಃ ಪಿತರಂ ನ ವೇದ** " ।ಇಂತಹ ಆದಿತ್ಯನ ಸ್ವರೂಪವನ್ನೂ ಅವನ ಉಪಾಸನಾರೀತಿಯನ್ನೂ ತಿಳಿದು ವಿಧ್ಯುಕ್ತವಾದ ಕರ್ಮಗಳಿಂದ ಪೂಜಿಸದೆ ಅವನ ಅನುಗ್ರಹವು ಸಾಧ್ಯವಿಲ್ಲವಾದುದರಿಂದ ಕವಿಗಳು ಅವನನ್ನು ಅನ್ವೇಷಣಮಾಡುತ್ತಾರೆ. ಈ ಅನ್ವೇಷಣಪ್ರಕಾರವನ್ನು ಋಗ್ವೇದ ಸಂಹಿತೆಯಲ್ಲಿಯೇ ಈ ರೀತಿ ವರ್ಣಿಸಿದೆ. ಈ ವರ್ಣನೆಯಲ್ಲಿ ಉಪನಿಷತ್ತಿನಲ್ಲಿ ವರ್ಣಿತವಾಗಿರುವ ಧ್ಯಾನರೂಪವಾದ ಅನ್ವೇಷಣದ ರೀತಿಯಿದ್ದರೂ ಸಹ ಜ್ಞಾನವು ಕರ್ಮಕ್ಕೂ ತತ್ಫಲವನ್ನು ಪಡೆಯುವುದಕ್ಕೂ ಸಾಧನವಾಗಿಶುವಂತಿದೆ. ಉದಾಹರಣೆಗೆ—

**ಪತಂಗಮಕ್ತಮಸುರಸ್ಯ ಮಾಯಯಾ ಹೃದಾ ಪಶ್ಯಂತಿ ಮನಸಾ ಮನೀಷಿಣಃ ।**
**ಸಮುದ್ರೇ ಅಂತಃ ಕವಯೋ ವಿ ಚಕ್ಷತೇ ಮರೀಚೀನಾಂ ಪದಮಿಚ್ಛಂತಿ ವೇಧಸಃ ॥**
**ಪತಂಗೋ ವಾಚಂ ಮನಸಾ ಬಿಭರ್ತಿ ತಾಂ ಗಂಧರ್ವೋಽವದದ್ಗರ್ಭೇ ಅಂತಃ ।**
**ತಾಂ ದ್ಯೋತಮಾನಾಂ ಸ್ವರ್ಯಂ ಮನೀಷಾಮೃತಸ್ಯ ಪದೇ ಕವಯೋ ನಿಪಾಂತಿ ।**

(ಋ. ಸಂ. ೧೦-೧೭೭-೧, ೨)

ಪರಮಾತ್ಮನ ಅಚಿಂತ್ಯವಾದಶಕ್ತಿಯಿಂದ ವ್ಯಾಪ್ತವಾದ ಆದಿತ್ಯನನ್ನು ತಮ್ಮ ಹೃತ್ಪುಂಡರೀಕಗತವಾದುದೂ, ನಿಯಮಿತವಾದುದೂ ಆದ ಅಂತಃಕರಣದಿಂದ ವೇದಶಾಸ್ತ್ರಾಭಿಜ್ಞರಾದ ಮಹರ್ಷಿಗಳು ಧ್ಯಾನಮಾಡಿ ಸಾಕ್ಷಾತ್ಕಾರಮಾಡಿಕೊಳ್ಳುತ್ತಾರೆ. ಸಮುದ್ರಸಮಾನವಾದ ಅಂತರಿಕ್ಷಮಧ್ಯದಲ್ಲಿ ಪ್ರಕಾಶಿಸುವ ಈ ಆದಿತ್ಯನನ್ನು ವಿಶೇಷವಾಗಿ ಪ್ರಶಂಸಿಸುತ್ತಾರೆ. ಅನುಷ್ಠಾನಕುಶಲರಾದ ಯಜಮಾನರು ರಶ್ಮಿಗಳ ಆಧಾರಭೂತನಾದ ಆದಿತ್ಯನ ಸಾಯುಜ್ಯವನ್ನು ಪಡೆಯುವುದಕ್ಕಾಗಿ ಅನುಷ್ಠಾನಾದಿಗಳನ್ನು ನೆರವೇರಿಸುತ್ತಾರೆ. ಈ ಆದಿತ್ಯನು ಪ್ರಕಾಶಮಾನವಾದ ವೇದಾದಿವಾಕ್ಯಗಳನ್ನು ಪ್ರಾಣಿಗಳು ಉಚ್ಚರಿಸುವಂತೆ ಪ್ರೇರಿಸುತ್ತಾನೆ. ಶಾಸ್ತ್ರವಿತ್ತುಗಳು ಪರಬ್ರಹ್ಮವಿಷಯಕವಾದ ವೇದವಾಕ್ಯಗಳನ್ನು ಪಠಿಸಿ ಪುನಃ ಪರಮಾತ್ಮನನ್ನು ತೃಪ್ತಿಗೊಳಿಸುತ್ತಾರೆ. ಇವೆಲ್ಲವೂ ಆದಿತ್ಯನ ಮಹಿಮೆಯು. ಇತ್ಯಾದಿ ವರ್ಣನೆಗಳಲ್ಲಿ ನಿರಾಕಾರನೂ, ನಿರ್ವಿಕಾರನೂ ಆದ ಪರಮಾತ್ಮನಿಗೂ ಲೌಕಿಕವಾದ ಪ್ರತ್ಯಕ್ಷಕ್ಕೆ ಗೋಚರನಾದ ಆದಿತ್ಯನಿಗೂ ತಾದಾತ್ಮ್ಯವನ್ನು ಹೇಳಿದೆ. ಇದೇ ಅಲ್ಲದೆ ಕೇವಲ ಆಧ್ಯಾತ್ಮಿಕವಾದ ಸಂಪತ್ತನ್ನು ಮಾತ್ರ ಲಕ್ಷಿಸದೆ, ಐಹಿಕವಾದ ಸುಖಾದಿಗಳನ್ನೂ ಸಹ ಅಪೇಕ್ಷಿಸಿದೆ.

**ಪಂಚಾರಂ ಚಕ್ರಂ ಪರಿವರ್ತತೇ ಪೃಥು । ಹಿರಣ್ಯಜ್ಯೋತಿಃ ಸರಿರಸ್ಯ ಮಧ್ಯೇ । ಅಜಸ್ರಂ ಜ್ಯೋತಿರ್ನಭಸಾ ಸರ್ಪದೇತಿ । ಸ ನ ಇಂದ್ರಃ ಕಾಮವರಂ ದದಾತು ।**

(ತೈ. ಆ. ೩-೧೧-೮)

ಇತ್ಯಾದಿಯಾಗಿ ಹಿಂದೆ ವರ್ಣಿತವಾದ ಋತುರೂಪವಾದ ಪಂಚಾರಯುಕ್ತನೂ ಕಾಲಚಕ್ರರೂಪನೂ, ಪರಮೈಶ್ವರ್ಯಯುಕ್ತನೂ ಆದ ಆದಿತ್ಯನು ನಮ್ಮ ಸಮಸ್ತಕಾಮಗಳನ್ನು ನೆರವೇರುವಂತೆ ಮಾಡಲಿ ಎಂದು ಪ್ರಾರ್ಥಿಸಿದೆ ಈ ವಿಧವಾಗಿ ಕರ್ಮಫಲವನ್ನಪೇಕ್ಷಿಸಿ ಲೌಕಿಕಪ್ರತ್ಯಕ್ಷಕ್ಕೆ ಗೋಚರನಾದ ಆದಿತ್ಯಮಧ್ಯವರ್ತಿಯಾದ ಪರಮಾತ್ಮನನ್ನು ಉಪಾಸನೆಮಾಡಿ ತದ್ರಶ್ಮಿಗಳ ಸಹಾಯದಿಂದ ಲಭ್ಯವಾಗತಕ್ಕ ಫಲಗಳನ್ನು ನಿರೀಕ್ಷಿಸಿ ಆದಿತ್ಯನನ್ನು ಲೋಕಪಾಲಕನೆಂದು (ಪಿತೃ) ಸ್ತುತಿಸುವುದು ಅಧಿದೈವತಪಕ್ಷದ ಅರ್ಥವಾಯಿತು.

ಅನಭಿವ್ಯಕ್ತವಾದ ಅಧ್ಯಾತ್ಮಪಕ್ಷದ ಅರ್ಥವನ್ನು ಸೂಕ್ಷ್ಮವಾಗಿ ಮೇಲೆ ತಿಳಿಸಿದೆ. ಪರಬ್ರಹ್ಮನ ಅಭಿವ್ಯಕ್ತವಾದುದೂ, ಅನಭಿವ್ಯಕ್ತವಾದುದೂ ಆದ ಎರಡು ಸ್ವರೂಪಗಳೂ **ಆದಿತ್ಯಮಂಡಲಾಂತರ್ಗತವಾಗಿದೆಯೆಂದು** ಬೃಹದಾರಣ್ಯಕದಲ್ಲಿ ಈ ರೀತಿ ವರ್ಣಿಸಿದೆ.

**ದ್ವೇ ವಾವ ಬ್ರಹ್ಮಣೋ ರೂಪೇ ಮೂರ್ತಂ ಚೈವಾಮೂರ್ತಂ ಚ ಮರ್ತ್ಯಂ ಚಾಮೃತಂ ಚ ಸ್ಥಿತಂ ಚ ಯಚ್ಚ ಸಚ್ಚ ತ್ಯಚ್ಚ ।**

(ಬೃ. ಉ. ೨-೩-೧)

ಸಾಕಾರವಾದುದೂ, ನಿರಾಕಾರವಾದುದೂ ; ಮರ್ತ್ಯವಾದುದೂ ಅಮರ್ತ್ಯವಾದುದೂ ; ಸ್ಥಿರವಾದುದೂ, ಚಲನಾತ್ಮಕವಾದುದೂ ; ಸವಿಶೇಷವಾದುದೂ ಮತ್ತು ನಿರ್ವಿಶೇಷವಾದುದೂ ಆಗಿ ಪರಬ್ರಹ್ಮನಸ್ವರೂಪವು ಎರಡುವಿಧನಾಗಿವೆ.

**ತದೇತನ್ಮೂರ್ತಂ ಯದನ್ಯದ್ವಾಯೋಶ್ಚಾಂತರಿಕ್ಷಾಚ್ಚೈತನ್ಮರ್ತ್ಯಮೇತತ್ ಸ್ಥಿತಮೇತತ್ಸತ್ತಸ್ಯೈತಸ್ಯ ಮೂರ್ತಸ್ಯೈತಸ್ಯ ಮರ್ತ್ಯಸ್ಯೈತಸ್ಯ ಸ್ಥಿತಸ್ಯೈತಸ್ಯ ಸತ ಏಷ ರಸೋ ಯ ಏಷ ತಪತಿ ಸತೋ ಹ್ಯೇಷ ರಸಃ ॥**

(ಬೃ. ಉ. ೨-೩-೨)

ವಾಯುವಿಗಿಂತಲೂ ಅಂತರಿಕ್ಷಕ್ಕಿಂತಲೂ ಬೇರೆಯಾದ ಪ್ರತಿಯೊಂದು ವಸ್ತುವೂ ಸಹ ಮರ್ತ್ಯವೂ ಸ್ಥಿರಾತ್ಮಕವೂ ಸವಿಶೇಷವಾದುದೂ ಆಗಿದೆ ಭೂತಾತ್ಮಕವೂ, ಮರ್ತ್ಯವೂ, ಸ್ಥಿರವೂ, ಸತ್ತಾತ್ಮಕವೂ ಆದ ಸಕಲವಸ್ತುಗಳ ಸಾರವೂ ಈ ಪ್ರಕಾಶಮಾನನಾದ ಆದಿತ್ಯನೇ ಆಗಿದ್ದಾನೆ. ಭಾವಾತ್ಮಕವಾದ ಮೂರ್ತರೂಪದ ಸಾರವೇ ಆದಿತ್ಯನು. ಇದು ಪರಬ್ರಹ್ಮನ ಎರಡು ರೂಪಗಳಲ್ಲಿ ಒಂದಾಗಿದೆ. ಇದಲ್ಲದೆ,

> ಅಥಾಮೂರ್ತಂ ವಾಯುಶ್ಚಾಂತರಿಕ್ಷಂ ಚೈತದಮೃತಮೇತದ್ಯದೇತತ್ತ್ಯತ್ತಸ್ಯೈತಸ್ಯಾಮೂರ್ತ-ಸ್ಯೈತಸ್ಯಾಮೃತಸ್ಯೈತಸ್ಯ ಯತ ಏತಸ್ಯ ತ್ಯಸ್ಯೈಷ ರಸೋ ಯ ಏಷ ಏತಸ್ಮಿನ್ಮಂಡಲೇ ಪುರು-ಷಸ್ತ್ಯಸ್ಯ ಹ್ಯೇಷ ರಸ ಇತ್ಯಧಿದೈವತಂ ॥
>
> (ಬೃ. ಉ. ೨-೩-೩)

ಅಮೂರ್ತವಾದುದು ವಾಯು ಮತ್ತು ಅಂತರಿಕ್ಷ- ಅವು ಅಮರ್ತ್ಯವೂ, ನಿರ್ವಿಶೇಷವೂ ಆದವು. ಇವುಗಳ ಸಾರವೂ ಪ್ರಕಾಶಮಾನನಾದ ಆದಿತ್ಯನೇ ಆಗಿದ್ದಾನೆ. ನಿರ್ವಿಶೇಷವಸ್ತುಗಳ ಸಾರವೂ ಈ ಆದಿತ್ಯನೇ ಆಗಿದ್ದಾನೆ. ಇದು ಅಧಿದೈವತವು, ಎಂದು ಅಧಿದೈವತಪಕ್ಷದಲ್ಲಿಯೂ ಎರಡು ವಿಧವಾದ ವರ್ಣನೆಯನ್ನು ತೋರಿಸಿ, ಆದಿತ್ಯನೇ ಪರಬ್ರಹ್ಮನ ಈ ಎರಡು ವಿಧವಾದ ರೂಪಗಳಿಗೂ ಆಧಾರನೆಂದು ತೋರಿಸಿ. ಅನಂತರ ಪರಬ್ರಹ್ಮನ ಅಧ್ಯಾತ್ಮಪರವಾದ ಸ್ವರೂಪವನ್ನು ತಿಳಿಸುತ್ತಾ ಕೇವಲ ಸಮಾಧಿರೂಪವಾದ ಧ್ಯಾನದಿಂದ ಮಾತ್ರ ಸಾಕ್ಷಾತ್ಕರಿಸಲು ಸಾಧ್ಯನಾದ ಪರಮಾತ್ಮನೂ ಸಹ ಈ ಆದಿತ್ಯಮಂಡಲದ ಮಧ್ಯವರ್ತಿಯೇ ಆಗಿದ್ದಾನೆಂದೂ ಉಪನಿಷದಾದಿಗಳಲ್ಲಿ ವರ್ಣಿಸಿದೆ. ಉದಾಹರಣೆಗೆ—

> ಆದಿತ್ಯೋ ವಾ ಬ್ರಹ್ಮೇತ್ಯಾದೇಶಃ । ಸ ಯ ಏತಮೇವಂ ವಿದ್ವಾನಾದಿತ್ಯಂ ಬ್ರಹ್ಮೇತ್ಯುಪಾಸ್ತೇ ॥
>
> (ಛಾ. ಉ. ೩-೧೯-೧ ಮತ್ತು ೪)

ಇತ್ಯಾದಿವಾಕ್ಯಗಳಲ್ಲಿ ಆದಿತ್ಯನೇ ಬ್ರಹ್ಮನೆಂದು ಸ್ತುತಿಸಿದೆ. ಮತ್ತು ಆದಿತ್ಯನನ್ನೇ ಬ್ರಹ್ಮನೆಂದು ಉಪಾಸನೆಮಾಡಬೇಕೆಂದೂ ತಿಳಿಸಿದೆ. ಪ್ರಕೃತವಾದ ಋಕ್ಕಿನ ಆಧ್ಯಾತ್ಮಪಕ್ಷದ ವಿವರಣೆಯಲ್ಲಿ ಜಗದ್ವ್ಯಾಪಿಯಾದ ಈ ಪರಮಾತ್ಮನ ಸ್ವರೂಪವನ್ನು ವರ್ಣಿಸುವುದೂ, ಆ ಪರಮಾತ್ಮನ ಸ್ವರೂಪದ ಸಾಕ್ಷಾತ್ಕಾರದಿಂದ ಲಭಿಸತಕ್ಕ ಫಲದ ಸ್ವರೂಪವರ್ಣನೆಯೂ, ಈ ಫಲಾನುಭವಕ್ಕೆ ಸಾಧನವಾದ ಈಶ್ವರಜ್ಞಾನದ ಆವಶ್ಯಕತೆಯೂ ಅನುಕ್ರಮವಾಗಿ ಹೇಳಲ್ಪಟ್ಟಿದೆ.

ಇಲ್ಲಿ ಪರಮಾತ್ಮನನ್ನು ವೃಕ್ಷಕ್ಕೆ ಹೋಲಿಸಿದೆ. **ವೃಕ್ಷವತ್ ಗಮನಾದಿರಹಿತೇ ಅವಿಕ್ರಿಯೇ**—ವೃಕ್ಷದಂತೆ ಅಚಲವಾದುದೂ ಅವಿಕ್ರಿಯವಾದುದೂ ಆದ ಪರತತ್ತ್ವವೆಂದು ಸಾಯಣರು ವ್ಯಾಖ್ಯಾನವನ್ನು ಮಾಡಿದ್ದಾರೆ. ಇದೇ ವರ್ಣನೆಯು ತೈತ್ತಿರೀಯ ಉಪನಿಷತ್ತಿನಲ್ಲಿಯೂ ಸಹ ಈ ರೀತಿಯಿದೆ.

> ಯಸ್ಮಾತ್ಪರಂ ನಾಪರಮಸ್ತಿ ಕಿಂಚಿದ್ಯಸ್ಮಾನ್ನಾಣೀಯೋ ನ ಜ್ಯಾಯೋಽಸ್ತಿ ಕಶ್ಚಿತ್ ।
> ವೃಕ್ಷ ಇವ ಸ್ತಬ್ಧೋ ದಿವಿ ತಿಷ್ಠತ್ಯೇಕಸ್ತೇನೇದಂ ಪೂರ್ಣಂ ಪುರುಷೇಣ ಸರ್ವಂ ॥
>
> (ತೈ. ಉ. ೪-೧೦)

ಅದ್ವಿತೀಯನಾದ ಪರಮಾತ್ಮನು ವೃಕ್ಷದಂತೆ ಗಮನಾಗಮನರಹಿತನಾಗಿ ಸ್ತಬ್ಧನಾಗಿಯೂ, ನಿರ್ವಿಕಾರನಾಗಿಯೂ ತಾನೇ ವಿಶ್ವಜಗದಾತ್ಮನಾಗಿಯೂ ಇದ್ದಾನೆ. ಈ ಬ್ರಹ್ಮತತ್ತ್ವವು ಅದ್ವಿತೀಯವಾದುದರಿಂದ ಇದಕ್ಕಿಂತ ಉತ್ಕೃಷ್ಟವಾದುದಾಗಲಿ ಅಥವಾ ಅಪಕೃಷ್ಟವಾದುದಾಗಲಿ ಯಾವುದೂ ಇಲ್ಲ. ಆದರೆ ಈ ಪರಮಾತ್ಮನ ಸ್ಥಾನವಾವುದೆಂದರೆ—

**ಪರೇಣ ನಾಕಂ ನಿಹಿತಂ ಗುಹಾಯಾಂ ವಿಭ್ರಾಜತೇ ಯದ್ಯತಯೋ ವಿಶಂತಿ ॥**

(ತೈ. ಆ. ೧೦-೧೦-೫)

ಇಂದ್ರಿಯನಿಯಮನಶೀಲರಾದ ಯತಿಗಳು ಸ್ವರ್ಗಕ್ಕಿಂತಲೂ ಉತ್ಕೃಷ್ಟವಾದುದೂ ಏಕಾಗ್ರಚಿತ್ತವುಳ್ಳದ್ದೂ ಗುಹಾ ರೂಪವಾದದ್ದೂ ಆದ ತಮ್ಮ ಬುದ್ಧಿಯಲ್ಲಿ ಪ್ರಕಾಶಿಸುವಂತೆ ಮಾಡಿ ತಾವೂ ಸಹ ಅದರಲ್ಲಿ ಪ್ರವೇಶಿಸಿ ತಲ್ಲೀನರಾಗುತ್ತಾರೆ. ಅದು ಹೇಗೆಂಬುದನ್ನು ಪ್ರಕೃತವಾದ ಋಕ್ಕಿನ ವರ್ಣನೆಯಲ್ಲಿ ನೋಡಬಹುದು.

**ಯಸ್ಮಿನ್ಪರಮಾತ್ಮನಿ ಸುಪರ್ಣಾಃ ಶೋಭನಗಮನಾನೀಂದ್ರಿಯಾಣಿ ಮಧ್ವದೋ ಮಧುನೋ ಜ್ಞಾನಸ್ಯಾತ್ತ್ರಾಣಿ ತಜ್ಜ್ಞಾನೇನ ಜ್ಞಾನಭಾಂಜೀತ್ಯರ್ಥಃ ।**

ಪರಮಾತ್ಮನಲ್ಲಿ ಶೋಭನವಾದ ಗಮನಗಳುಳ್ಳ ಯಾವ ಇಂದ್ರಿಯಗಳು ಪ್ರವೇಶಿಸಿ ಅಲ್ಲಿ ಆತ್ಮಜ್ಞಾನದಲ್ಲಿ ತಾವೂ ಸಾಕ್ಷಾತ್ಕಾರದ ಭಾಗವನ್ನು ವಹಿಸುವುವೋ ಅಂತಹ ಇಂದ್ರಿಯಗಳಿಗೆ ಅವುಗಳ ಸ್ವರೂಪಾನುಗುಣವಾದ ಲಕ್ಷಣವನ್ನು ತೋರಿಸಲು **ಸುಪರ್ಣಾಃ** ಎಂಬ ವಿಶೇಷಣವನ್ನು ಹೇಳಿದೆ. ಆದರೆ, **ನಿವಿಶಂತೇ ; ಅಧಿ ವಿಶ್ವೇ ಸುವತೇ ಚ** ಅಂತಃ ಪ್ರವೇಶಿಸುವುದು ಮತ್ತು ಪುನಃ ಹೊರಕ್ಕೆ ಆವಿರ್ಭಾವವಾಗುವುದು ಇದರಿಂದ ಇಂದ್ರಿಯಗಳ ಕರ್ತವ್ಯವೇನು ? ಈ ರೀತಿಯ ಗಮನಾಗಮನಗಳುಳ್ಳ ಇಂದ್ರಿಯಗಳಿಗೂ ಆತ್ಮನಿಗೂ ಇರತಕ್ಕ ಸಂಬಂಧವೇನು ಎಂದು ತಿಳಿಸಲು ಸಾಯಣರು ಈರೀತಿ ವಿವರಿಸಿದ್ದಾರೆ.

**ನಿವಿಶಂತೇ ಸ್ವಾಪಕಾಲೇ ಸ್ವಸ್ವವಿಷಯೇಭ್ಯಃ ಪ್ರತಿನಿವೃತ್ತಾನಿ ಆತ್ಮನಿವೃತ್ತ್ಯಾ ಲೀಯಂತೇ ಪುನಃ ಪ್ರಬೋಧಕಾಲೇ ಅಧಿ ವಿಶ್ವೇ ವಿಶ್ವಸ್ಯೋಪರಿ ಸುವತೇ ಚ ಉದ್ಯಂತಿ । ಸ್ವಸ್ವವಿಷಯಾನ್ ಲಭಂತೇ ಇತ್ಯರ್ಥಃ ।**

ಸ್ವಾಪಕಾಲದಲ್ಲಿ (ಸುಷುಪ್ತಿಕಾಲದಲ್ಲಿ) ಇಂದ್ರಿಯಗಳು ತಮ್ಮ ವಿಷಯಗಳನ್ನು ಬಿಟ್ಟು, ವಿಷಯಸಂಪರ್ಕದಿಂದ ನಿವೃತ್ತಗಳಾಗಿ ಆತ್ಮನಲ್ಲಿ ಲೀನವಾಗುತ್ತವೆ. ಪುನಃ ಜಾಗ್ರತ್ಕಾಲದಲ್ಲಿ ವಿಶ್ವಾಭಿಮುಖವಾಗಿ ಆವಿರ್ಭೂತಗಳಾಗಿ ತಮ್ಮ ತಮ್ಮ ವಿಷಯಗಳ ಸಂಪರ್ಕವನ್ನು ಹೊಂದುತ್ತವೆ. ಇದು ಇಂದ್ರಿಯವೃತ್ತಿಗಳ ವರ್ಣನೆಯು. ಈ ಇಂದ್ರಿಯವೃತ್ತಿಗಳಿಗೂ, ಪರಮಾತ್ಮನಿಗೂ ಏನು ಸಂಬಂಧ ? ಮತ್ತು ಈ ಇಂದ್ರಿಯವೃತ್ತಿಗಳ ಯಾವ ಸ್ಥಿತಿಯಲ್ಲಿ ಆತ್ಮಸಾಕ್ಷಾತ್ಕಾರವಾಗುತ್ತದೆ ? ಆ ಸಾಕ್ಷಾತ್ಕಾರದಿಂದ ಲಭಿಸತಕ್ಕ ಫಲದ ಸ್ವರೂಪವೇನು ? ಅದರ ವೈಶಿಷ್ಟ್ಯವೇನು ? ಎಂಬುದನ್ನು ಮಾಂಡೂಕ್ಯೋಪನಿಷತ್ತಿನಲ್ಲಿ ಈರೀತಿ ತಿಳಿಸಿದೆ. ಮೊದಲು,

**" ಪರಾಂಚಿ ಖಾನಿ ವ್ಯತೃಣತ್ಸ್ವಯಂಭೂಸ್ತಸ್ಮಾತ್ ಪರಾಙ್ ಪಶ್ಯತಿ ನಾಂತರಾತ್ಮನ್ ॥**

(ಕಠ. ಉ. ೨-೧-೧)

ಶ್ರೋತ್ರಾದಿಇಂದ್ರಿಯಗಳನ್ನು ಯಾವಾಗಲೂ ಬಾಹ್ಯವಿಷಯಗಳಲ್ಲೇ ಆಸಕ್ತವಾಗಿರುವಂತೆ ಬಿಟ್ಟು ಹೊರಗಿರತಕ್ಕ ವಿಷಯಗಳಲ್ಲೇ ತೃಪ್ತಿಯನ್ನು ಪಡೆಯುವುದೂ, ಕಾಮಾದಿಗಳಿಂದ ಲಿಪ್ತವಾಗುವುದೂ ಆದ ಇಂದ್ರಿಯಸಂಬಂಧವಿರುವಾಗ ಆತ್ಮನಿಗೆ ಜಾಗ್ರದವಸ್ಥೆಯಿರುವುದು. ಆಗ **ಸುಪರ್ಣಗಳ** ಎಂದರೆ ಇಂದ್ರಿಯಗಳ ವ್ಯಾಪಾರಗಳೆಲ್ಲವೂ ಬಾಹ್ಯವಾಗಿಯೇ ಇರುವುವು. ಈ ಅವಸ್ಥೆಯನ್ನು ಮಾಂಡೂಕ್ಯದಲ್ಲಿ ಆತ್ಮನ ಮೊದಲನೆಯ ಪಾದವೆಂದು ವರ್ಣಿಸಿದೆ. ಅದು ಹೇಗೆಂದರೆ,

**ಜಾಗರಿತಸ್ಥಾನೋ ಬಹಿಷ್ಪ್ರಜ್ಞಃ ಸಪ್ತಾಂಗ ಏಕೋನವಿಂಶತಿಮುಖಃ ಸ್ಥೂಲಭುಗ್ವೈಶ್ವಾನರಃ ಪ್ರಥಮಃ ಪಾದಃ ||**

(ಮಾ. ಉ ೧-೩)

ಎಚ್ಚರವು ಆತ್ಮನಿಗೆ ಸ್ಥಾನವಾಗಿರುವುದರಿಂದ ಈ ಅವಸ್ಥೆಯಲ್ಲಿ ಜಾಗರಿತಸ್ಥಾನನೆನಿಸಿಕೊಂಡಿರುತ್ತಾನೆ. ಹೊರಗೆ, ಎಂದರೆ ತನಗಿಂತ ಬೇರೆಯಾಗಿರುವ ವಿಷಯದಲ್ಲಿ ಅರಿವು ಉಳ್ಳವನಾದುದರಿಂದ ಇವನು ಬಹಿಷ್ಪ್ರಜ್ಞನು. ಇವನು ಸಪ್ತಾಂಗನು. ಮತ್ತು ಹತ್ತೊಂಭತ್ತು ಮುಖಗಳು, (೫ ಬುದ್ಧೀಂದ್ರಿಯ- ೫ ಕರ್ಮೇಂದ್ರಿಯ, ೫ ವಾಯುಗಳು, ಮನಸ್ಸು, ಬುದ್ಧಿ, ಅಹಂಕಾರ ಮತ್ತು ಚಿತ್ತ). ಈ ದ್ವಾರಗಳಿಂದ ಬಾಹ್ಯದೃಷ್ಟಿಯುಳ್ಳ ಆತ್ಮನು ಶಬ್ದಾದಿಸ್ಥೂಲ ವಿಷಯಗಳನ್ನು ಭೋಗಿಸುತ್ತಿರುತ್ತಾನೆ. ಇದು ಆತ್ಮನಿಗೆ ಮೊದಲನೆಯ ಪಾದ ಅಥವಾ ಅವಸ್ಥೆ.

**ಸ್ವಪ್ನಃಸ್ಥಾನೋಽಂತಃಪ್ರಜ್ಞಃ ಸಪ್ತಾಂಗ ಏಕೋನವಿಂಶತಿಮುಖಃ ಪ್ರವಿವಿಕ್ತಭುಕ್ ತೈಜಸೋ ದ್ವಿತೀಯಃ ಪಾದಃ ||**

(ಮಾ. ಉ. ೧-೪)

ಈ ಅವಸ್ಥೆಯಲ್ಲಿರುವ ಆತ್ಮನಿಗೆ ತೈಜಸನೆಂದು ಹೆಸರು. ಇವನು ಸ್ವಪ್ನಸ್ಥಾನನು. ಎಚ್ಚರದ ಅರಿವು ಚಕ್ಷುರಾದೀಂದ್ರಿಯ ರೂಪವಾದ ಅನೇಕ ಸಾಧನಗಳಿಂದ ಆಗುವುದಾಗಿ ಹೊರಗೆ ವಿಷಯಗಳುಳ್ಳದ್ದಾಗಿರುವಂತೆ ತೋರುವ ಬರಿಯ ಮನಸ್ಸಿನ ಅಲುಗಾಟವು ಮಾತ್ರವಾಗಿದ್ದು ಅಂತಹ ಸಂಸ್ಕಾರವನ್ನೇ ಮನಸ್ಸಿನಲ್ಲಿ ಉಂಟುಮಾಡುತ್ತದೆ. ಆ ಮನಸ್ಸು ಹಾಗೆ ಸಂಸ್ಕಾರವನ್ನು ಹೊಂದಿ ಚಿತ್ರವನ್ನು ಬರೆದ ಬಟ್ಟೆಯಂತೆ ಹೊರಗಿನ ಸಾಧನವನ್ನು ಬಯಸದೆಯೇ ಅವಿದ್ಯಾಕಾಮ ಕರ್ಮಗಳಿಂದ ಪ್ರೇರಿಸಲ್ಪಟ್ಟು ಎಚ್ಚರದಂತೆಯೇ ತೋರುವುದು. ಆದುದರಿಂದಲೇ,

**ಅಸ್ಯ ಲೋಕಸ್ಯ ಸರ್ವಾವತೋ ಮಾತ್ರಾಮುಪಾದಾಯ |**

(ಬೃ. ಉ. ೪-೩-೯)

ಸರ್ವಸಾಧನಸಂಪತ್ತೂ ಇರತಕ್ಕ ಜಾಗ್ರತ್ತಿನ ವಾಸನೆಯನ್ನು ತೆಗೆದುಕೊಂಡು ಕನಸ್ಸನ್ನು ಅನುಭವಿಸುತ್ತಾನೆ. ಮನಸ್ಸು ಮಾತ್ರ ಇಂದ್ರಿಯಗಳಿಗಿಂತಲೂ ಒಳಗೆ ಇರುವುದರಿಂದಲೂ, ಅದರ ವಾಸನಾರೂಪದ ಪ್ರಜ್ಞೆಯು ಕನಸ್ಸಿನಲ್ಲಿ ಇವನಿಗೆ ಆಗುವುದೆಂಬ ಕಾರಣದಿಂದಲೂ, ಇವನು ಈ ಅವಸ್ಥೆಯಲ್ಲಿ ಅಂತಃಪ್ರಜ್ಞನೆನಿಸಿಕೊಳ್ಳುತ್ತಾನೆ. ಆದರೂ ಇಲ್ಲಿ ವಾಸನಾರೂಪವಾಗಿರುವ ಪ್ರಜ್ಞೆಯು ಭೋಜ್ಯವಾಗಿರುತ್ತದೆ. ಇದು ಎರಡನೆಯ ಪಾದವು. ಇದಲ್ಲದೇ,

**ಯತ್ರ ಸುಪ್ತೋ ನ ಕಂಚನ ಕಾಮಂ ಕಾಮಯತೇ ನ ಕಂಚನ ಸ್ವಪ್ನಂ ಪಶ್ಯತಿ ತತ್ ಸುಷುಪ್ತಂ | ಸುಷುಪ್ತಸ್ಥಾನ ಏಕೀಭೂತಃ ಪ್ರಜ್ಞಾನಘನ ಏವಾನಂದಮಯೋ ಹ್ಯಾನಂದಭುಕ್ಚೇತೋ-ಮುಖಃ ಪ್ರಾಜ್ಞಸ್ತೃತೀಯಃ ಪಾದಃ ||**

(ಮಾ. ಉ ೧-೫)

ಈ ಅವಸ್ಥೆಯಲ್ಲಿ ಆತ್ಮನು ನಿದ್ರಿಸುತ್ತಿರುವನು. ಯಾವ ಕಾಮವನ್ನೂ ಬಯಸುವುದಿಲ್ಲ. ಯಾವ ಕನಸ್ಸನ್ನೂ ಕಾಣುವುದಿಲ್ಲ. ಈ ಕಾಲದಲ್ಲಿ ಸುಷುಪ್ತಸ್ಥಾನನೂ, ಏಕೀಭೂತನೂ, ಪ್ರಜ್ಞಾನಘನನೂ, ಆನಂದಮಯನೂ, ಆನಂದ ಭೋಗಿಯೂ, ಚೇತೋಮುಖನೂ ಆಗಿರುತ್ತಾನೆ. ಇದು ಮೂರನೆಯ ಪಾದವು. ಮತ್ತು ಮನಸ್ಸು ವಿಷಯ

ವಿಷಯಿಗಳ ಆಕಾರವಾಗಿ ಅಲುಗಾಡುವ ಆಯಾಸದ ದುಃಖವು ಇಲ್ಲದಿರುವುದರಿಂದ ಆತ್ಮನು ಆನಂದಮಯನು. ಆನಂದ ಪ್ರಚುರನಾಗಿರುವನು. (ಆನಂದ ಸ್ವರೂಪನೆಂದರ್ಥವಲ್ಲ) ಆದರೆ ಈ ಆನಂದವು ಕೊನೆಯವರೆಗೂ ಇರುವುದಿಲ್ಲ.

**ಏಷ ಸರ್ವೇಶ್ವರ ಏಷ ಸರ್ವಜ್ಞ ಏಷೋಽಂತರ್ಯಾಮ್ಯೇಷ ಯೋನಿಃ ಸರ್ವಸ್ಯ ಪ್ರಭವಾಪ್ಯಯೌ ಹಿ ಭೂತಾನಾಂ ।**

(ಮಾ ಉ. ೧-೬).

ಈತನೇ ಸರ್ವೇಶ್ವರನು, ಈತನೇ ಸರ್ವಜ್ಞನು, ಈತನೇ ಅಂತರ್ಯಾಮಿಯು. ಈತನೇ ಎಲ್ಲಕ್ಕೂ ಕಾರಣನು. ಭೂತಗಳಿಗೆ ಉತ್ಪತ್ತಿಪ್ರಳಯಗಳೂ ಸಹ ಈತನೇ ಆಗಿರುವನು. ಹೀಗೆ ಸರದಿಯಪ್ರಕಾರ ಮೂರು ಪಾದಗಳನ್ನು ವರ್ಣಿಸಿ ನಾಲ್ಕನೆಯ ಪಾದವನ್ನು ವಿವರಿಸಬೇಕೆಂದು **ನಾಂತಃ ಪ್ರಜ್ಞಂ** ಎಂಬ ವಾಕ್ಯದಿಂದ ಮುಂದಿನ ಮಂತ್ರವು ಪ್ರಾರಂಭವಾಗಿ ಆತ್ಮನ **ತುರೀಯಾವಸ್ಥೆ**ಯನ್ನು (ನಾಲ್ಕನೆಯ ಅವಸ್ಥೆ) ಈರೀತಿ ವರ್ಣಿಸಿದೆ.

**ನಾಂತಃಪ್ರಜ್ಞಂ ನ ಬಹಿಷ್ಪ್ರಜ್ಞಂ ನೋಭಯತಃಪ್ರಜ್ಞಂ ನ ಪ್ರಜ್ಞಾನಘನಂ ನ ಪ್ರಜ್ಞಂ ನಾಪ್ರಜ್ಞಂ । ಅದೃಷ್ಟಮವ್ಯವಹಾರ್ಯಮಗ್ರಾಹ್ಯಮಲಕ್ಷಣಮಚಿಂತ್ಯಮವ್ಯಪದೇಶ್ಯಮೇಕಾತ್ಮಪ್ರತ್ಯಯಸಾರಂ ಪ್ರಪಂಚೋಪಶಮಂ ಶಾಂತಂ ಶಿವಮದ್ವೈತಂ ಚತುರ್ಥಂ ಮನ್ಯಂತೇ ಸ ಆತ್ಮಾ ಸ ವಿಜ್ಞೇಯಃ ॥**

(ಮಾ. ಉ ೧-೭)

ಆತ್ಮನು ಈ ಅವಸ್ಥೆಯಲ್ಲಿ ಅಂತಃಪ್ರಜ್ಞನೂ ಅಲ್ಲ, ಬಹಿಷ್ಪ್ರಜ್ಞನೂ ಅಲ್ಲ, ಪ್ರಜ್ಞಾನಘನನೂ ಅಲ್ಲ, ಪ್ರಜ್ಞನೂ, ಅಲ್ಲ. ವ್ಯವಹಾರಾತೀತನು, ಅಲಕ್ಷಣನು, ಅಚಿಂತ್ಯನು, ಏಕಾತ್ಮಪ್ರತ್ಯಯಸಾರನು, ಶಾಂತನೂ, ಶಿವನೂ, ಅದ್ವೈತನೂ ಆದ ಆತ್ಮನು. ಈ ಆತ್ಮಸಾಕ್ಷಾತ್ಕಾರವನ್ನು ಪಡೆಯಬೇಕು ಅದೇ ಆತ್ಮಸಾಕ್ಷಾತ್ಕಾರವನ್ನು ಪಡೆಯುವವನ ಗುರಿಯಾಗಿರುತ್ತದೆ. ಈ ಆತ್ಮಸಾಕ್ಷಾತ್ಕಾರದ ಫಲವನ್ನು ವರ್ಣಿಸುತ್ತಾ ಪ್ರಕೃತವಾದ ಋಕ್ಕಿನಲ್ಲಿ,

**ತಸ್ಯೇದಾಹುಃ ಪಿಪ್ಪಲಂ ಸ್ವಾದ್ವಗ್ರೇ—ತಸ್ಯ ಪರಮಾತ್ಮನಃ ಪಿಪ್ಪಲಂ ಫಾಲಕಂ ಸಂಸಾರತಃ ಉದ್ಧಾರಕಂ ಸ್ವಾದು ಆಸ್ವಾದನೀಯಂ ಅಮೃತತ್ವಲಕ್ಷಣಂ ಜ್ಞಾನಂ ।** ಸಂಸಾರದಿಂದ ಉದ್ಧಾರಮಾಡುವುದೂ, ಪುನಃ ಪುನಃ ಜನನಮರಣಾದಿಗಳಿಲ್ಲದಿರುವುದೂ, ಆದ ಅಮೃತರೂಪವಾದ ಜ್ಞಾನವೇ ಇದರ ಫಲವು. ಇದು ಸ್ವರ್ಗಾದಿರೂಪದ ಇತರ ಎಲ್ಲಾ ಫಲಗಳಿಗಿಂತಲೂ ಅತ್ಯುತ್ತಮವಾದುದು, ಅನಂತವು ಇತ್ಯಾದಿಯಾಗಿ ಪ್ರಶಂಸಿಸಲ್ಪಟ್ಟಿದೆ.

**ಸ ಯೋ ಹ ವೈ ತತ್ಪರಮಂ ಬ್ರಹ್ಮ ವೇದ ಬ್ರಹ್ಮೈವ ಭವತಿ ನಾಸ್ಯಾಬ್ರಹ್ಮವಿತ್ಕುಲೇ ಭವತಿ । ತರತಿ ಶೋಕಂ ತರತಿ ಪಾಪ್ಮಾನಂ ಗುಹಾಗ್ರಂಥಿಭ್ಯೋ ವಿಮುಕ್ತೋಽಮೃತೋ ಭವತಿ ॥ ತದೇತತ್ಸತ್ಯಂ.... ನಮಃ ಪರಮಋಷಿಭ್ಯಃ ॥**

(ಮು ಉ. ೩-೨-೯, ೧೧)

ಈ ಪರಮಾತ್ಮನ (ಪರಬ್ರಹ್ಮನ) ಸಾಕ್ಷಾತ್ಕಾರವಾದೊಡನೆಯೇ ಆತ್ಮನು ತಾನೂ ಬ್ರಹ್ಮನೇ ಆಗುತ್ತಾನೆ. ಅವನ ವಂಶದಲ್ಲಿ ಬ್ರಹ್ಮಜ್ಞಾನವಿಲ್ಲದವರು ಹುಟ್ಟುವುದೇ ಇಲ್ಲ. ಅವನು ದುಃಖವನ್ನೂ, ದುಃಖಕ್ಕೆ ಹೇತುವಾದ ಪಾಪ

ವನ್ನೂ ಪೂರ್ಣವಾಗಿ ದಾಟುತ್ತಾನೆ. ಹೃದಯಗ್ರಂಥಿಯಿಂದ ವಿಮುಕ್ತನಾಗಿ ಅಮೃತನಾಗುತ್ತಾನೆ. ಇದು ಸತ್ಯವು. ಇದು ಪರಮಋಷಿಗಳಿಂದ ಉಪದಿಷ್ಟವಾದ ಸತ್ಯವಾದುದರಿಂದ ಅವರಿಗೆ ವಂದನೆಯು ಎಂದು ಮುಂಡಕೋಪನಿಷತ್ತಿನಲ್ಲಿ ಈ ಸಾಕ್ಷಾತ್ಕಾರದಿಂದ ಲಭಿಸುವ ಫಲವನ್ನೂ ಅದರ ಉತ್ಕೃಷ್ಟತೆಯನ್ನೂ ಪ್ರಶಂಸಿಸಿದೆ. ಇದನ್ನೇ ಕಠೋಪನಿಷತ್ತಿನಲ್ಲಿಯೂ ಸ್ತುತಿಸುತ್ತಾ,

**ಏಕೋ ವಶೀ ಸರ್ವಭೂತಾಂತರಾತ್ಮಾ ಏಕಂ ರೂಪಂ ಬಹುಧಾ ಯಃ ಕರೋತಿ ।**
**ತಮಾತ್ಮಸ್ಥಂ ಯೇಽನುಪಶ್ಯಂತಿ ಧೀರಾಸ್ತೇಷಾಂ ಸುಖಂ ಶಾಶ್ವತಂ ನೇತರೇಷಾಂ ॥**
(ಕಠ. ಉ. ೨-೨-೧೨)

ಸಕಲ ಜಗತ್ತನ್ನೂ ತನ್ನ ವಶದಲ್ಲಿಟ್ಟಿರುವವನೂ, ಸರ್ವಭೂತಾಂತರಾತ್ಮನೂ ಆಗಿ ತನ್ನ ಒಂದೇ ರೂಪವನ್ನು ನಾನಾ ವಿಧವಾಗಿ ಪರಿವರ್ತಿಸಿಕೊಂಡಿರುವ ಪರಮಾತ್ಮನನ್ನು ತಮ್ಮ ಹೃದಯದಲ್ಲಿಯೇ ಯಾವ ಧೀಮಂತರು ಸಾಕ್ಷಾತ್ಕರಿಸಿಕೊಳ್ಳುವರೋ ಅವರಿಗೆ ಅನಂತವಾದ ಸುಖವು ದೊರೆಯುವುದೇ ವಿನಹ ಉಳಿದವರಿಗೆ ಖಂಡಿತವಾಗಿಯೂ ದೊರೆಯಲಾರದು ಎಂಬ ವಿಷಯವನ್ನು ನಿಷ್ಕೃಷ್ಟವಾಗಿ ತಿಳಿಸಿದೆ ಇದನ್ನೇ ಅಪುನರಾವೃತ್ತಿಯೆಂದು ಹೇಳುತ್ತಾ,

**ತಮಾತ್ಮಸ್ಥಂ ಯೇಽನುಪಶ್ಯಂತಿ ಧೀರಾಸ್ತೇಷಾಂ ಶಾಂತಿಃ ಶಾಶ್ವತೀ ನೇತರೇಷಾಂ ।**
(ಕಠ. ೨-೨-೧೩)

ಇಂತಹ ಧೀಮಂತರಿಗೆ ಶಾಶ್ವತವಾದ ಆತ್ಮಶಾಂತಿಯು ಲಭಿಸುವುದೇ ವಿನಹ ಉಳಿದ ಅಜ್ಞಾನಿಗಳಿಗೆ ಲಭಿಸಲಾರದು ಎಂದು ಹೇಳಿರುವ ಅಂಶವನ್ನು ಪ್ರಕೃತವಾದ ಋಕ್ಕಿನಲ್ಲಿ, **ತನ್ನೋನ್ನಶದ್ಯಃ ಪಿತರಂ ನ ವೇದ**—ಇಂತಹಪಾಲಕನಾದ ಆತ್ಮನನ್ನು ಅರಿಯದವನಿಗೆ ಈ ಫಲವು ಖಂಡಿತವಾಗಿಯೂ ಲಭಿಸುವುದಿಲ್ಲವೆಂದು ಹೇಳಿದೆ.

**ತನ್ನೋನ್ನಶತ್—ನಶತಿರ್ಗತಿಕರ್ಮಾ । ತತ್ಫಲಂ ನ ಪ್ರಾಪ್ನೋತಿ ।** ಆ ಫಲವನ್ನು ಹೊಂದುವುದಿಲ್ಲ. ಎಂದು ಆತ್ಮಜ್ಞಾನವಿಲ್ಲದವನಿಗೆ ಈ ಫಲದ ಅನುಭವವಿಲ್ಲವೆಂದು ತಿಳಿಸಿದೆ. ಇದನ್ನೇ ಮುಂಡಕದಲ್ಲಿ ತಿಳಿಸುತ್ತಾ ಇಂತಹ ಪರಮಾತ್ಮಜ್ಞಾನವಿಲ್ಲದವನಿಗೆ ಕೇವಲ ಆನಂದಾಭಾವಮಾತ್ರವಲ್ಲದೆ ಜನ್ಮರೂಪವಾದ ದುಃಖವೂ ಪ್ರಾಪ್ತವಾಗುತ್ತದೆಂದು ವಿವರಿಸುತ್ತಾ,

**ಅವಿದ್ಯಾಯಾಮಂತರೇ ವರ್ತಮಾನಾಃ ಸ್ವಯಂ ಧೀರಾಃ ಪಂಡಿತಂಮನ್ಯಮಾನಾಃ ॥**
**ಜಂಘನ್ಯಮಾನಾಃ ಪರಿಯಂತಿ ಮೂಢಾ ಅಂಧೇನೈವ ನೀಯಮಾನಾ ಯಥಾಂಧಾಃ ॥**
(ಮು. ಉ. ೧-೨-೮)

ಆತ್ಮಜ್ಞಾನವಿಲ್ಲದ ಮೂಢರು ಪುನಃಪುನಃ ಜನ್ಮವನ್ನು ಪಡೆಯುವುದರಿಂದ ಬಹಳವಾಗಿ ತಪಿಸುವರು ಇತ್ಯಾದಿಯಾಗಿ ತಿಳಿಸಿದೆ. ಆದುದರಿಂದ **ತಸ್ಮಾದೀದೃಶಂ ಪರಮೇಶ್ವರಂ ವಿದಿತ್ವಾ ಮುಕ್ತೋ ಭೂಯಾಸಮಿತ್ಯರ್ಥಃ ।** "ಆದುದರಿಂದ ಇಂತಹ ಲೋಕಪಾಲಕನಾದ ಪರಮಾತ್ಮನನ್ನು ಅರಿತು ಮುಕ್ತನಾಗುತ್ತೇನೆ" ಎಂದು ಋಷಿಯ ಉದ್ದೇಶವು ಸ್ಪಷ್ಟವಾಗಿದೆ ಎಂದು ಸಾಯಣರು ತಮ್ಮ ಭಾಷ್ಯವನ್ನು ಸಮಾಪ್ತಿಗೊಳಿಸಿದ್ದಾರೆ.

॥ ವ್ಯಾಕರಣಪ್ರಕ್ರಿಯಾ ॥

**ಮಧ್ವದಃ**—ಮಧು ಅದಂತಿ ಇತಿ ಮಧ್ವದಃ ಅದ ಭಕ್ಷಣೇ. ಧಾತು. **ಕ್ವಿಪ್ ಚ** (ಪಾ. ಸೂ. ೩-೨-೭೬) ಎಂಬುದರಿಂದ ಕ್ವಿಪ್ ಪ್ರತ್ಯಯ. **ಗತಿಕಾರಕೋಪಪದಾತ್ ಕೃತ್** (ಪಾ. ಸೂ. ೬-೨-೪೯) ಎಂಬುದರಿಂದ ಕೃದುತ್ತರ ಪದಪ್ರಕೃತಿಸ್ವರ ಬರುತ್ತದೆ. ಪ್ರಥಮಾ ಬಹುವಚನಾಂತರೂಪ.

**ನಿ ವಿಶಂತೇ**—ವಿಶ ಪ್ರವೇಶನೇ. ಧಾತು. **ನೇರ್ವಿಶಃ** (ಪಾ. ಸೂ. ೧-೩-೧೭) ಎಂಬುದರಿಂದ ಆತ್ಮನೇ ಪದಿಯಾಗುತ್ತದೆ. ಲಟ್ ಪ್ರಥಮಪುರುಷಬಹುವಚನಾಂತರೂಪ. **ಯದ್ವೃತ್ತಾನ್ನಿತ್ಯಮ್** ಎಂಬುದರಿಂದ ನಿಘಾತ ಸ್ವರಪ್ರತಿಷೇಧ ಬರುವುದರಿಂದ ವಿಕರಣಸ್ವರ ಉಳಿಯುತ್ತದೆ. **ತಿಙಿ ಚೋದಾತ್ತವತಿ** ಎಂಬುದರಿಂದ ಗತಿಗೆ (ನಿ) ನಿಘಾತಸ್ವರ ಬರುತ್ತದೆ.

**ಸುವತೇ**—ಷೂಙ್ ಪ್ರಾಣಿಗರ್ಭವಿಮೋಚನೇ ಧಾತು. ಲಟ್ ಪ್ರಥಮಪುರುಷಬಹುವಚನಾಂತರೂಪ. ತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುವುದಿಲ್ಲ. **ತಾಸ್ಯನುದಾತ್ತೇತ್** (ಪಾ. ಸೂ. ೬-೧-೧೮೬) ಎಂಬುದರಿಂದ ಲಸಾರ್ವಧಾತುಕವು ಅನುದಾತ್ತವಾಗುವುದರಿಂದ ಧಾತುಸ್ವರ ಉಳಿಯುತ್ತದೆ.

**ನಶತ್**—ಣಶ ಅದರ್ಶನೇ ಇಲ್ಲಿ ಗತ್ಯರ್ಥದಲ್ಲಿ ಪ್ರಯುಕ್ತವಾಗಿದೆ. ಲೇಟ್ ಪ್ರಥಮಪುರುಷಏಕವಚನದಲ್ಲಿ ತಿಪ್. **ಇತಶ್ಚ ಲೋಪಃ ಪ**—(ಪಾ.ಸೂ. ೩-೪-೯೭) ಎಂಬುದರಿಂದ ಇಕಾರಲೋಪ. **ಲೇಟೋಽಡಾಟೌ** (ಪಾ. ಸೂ. ೩-೪-೯೪) ಎಂಬುದರಿಂದ ಅದಕ್ಕೆ ಅಡಾಗಮ. ತಿಙಂತನಿಘಾತಸ್ವರ ಬರುತ್ತದೆ.

**ವೇದ**-ವಿದಜ್ಞಾನೇ ಧಾತು. ಲಡಂತರೂಪ. ಯದ್ಯೋಗವಿರುವುದರಿಂದ ನಿಘಾತಸ್ವರ ಬರುವುದಿಲ್ಲ. ಪ್ರತ್ಯಯ ಲಿತ್ತಾದುದರಿಂದ ಆದ್ಯುದಾತ್ತಸ್ವರ ಬರುತ್ತದೆ. ॥ ೨೨ ॥

—————:o:—————

ಸಂಹಿತಾಪಾಠಃ

ಯದ್ಗಾಯತ್ರೇ ಅಧಿ ಗಾಯತ್ರಮಾಹಿತಂ ತ್ರೈಷ್ಟುಭಾದ್ವಾ ತ್ರೈಷ್ಟುಭಂ ನಿರತಕ್ಷತ ।
ಯದ್ವಾ ಜಗಜ್ಜಗತ್ಯಾಹಿತಂ ಪದಂ ಯ ಇತ್ತದ್ವಿದುಸ್ತೇ ಅಮೃತತ್ವಮಾನಶುಃ ॥ ೨೩ ॥

ಪದಪಾಠಃ

ಯತ್ । ಗಾಯತ್ರೇ । ಅಧಿ । ಗಾಯತ್ರಂ । ಆऽಹಿತಂ । ತ್ರೈಸ್ತುಭಾತ್ । ವಾ । ತ್ರೈಸ್ತುಭಂ । ನಿಃऽಅತಕ್ಷತ ।

ಯತ್ । ವಾ । ಜಗ॑ತ್ । ಜಗ॑ತಿ । ಆऽಹಿ॑ತಂ । ಪದಂ । ಯೇ । ಇತ್ । ತತ್ । ವಿದುಃ ॥ । ತೇ ।
ಅಮೃತ॒ऽತ್ವಂ । ಆನಶುಃ ॥ ೨೩ ॥

ಸಾಯಣಭಾಷ್ಯಂ

ಗಾಯತ್ರೇ ಅಧಿ ಗಾಯತ್ರಮಾಹಿತಂ । ಪ್ರಾಥಮ್ಯಾತ್ಸರ್ವೈಃ ಸ್ತುತ್ಯತ್ವಾಚ್ಚ ಗಾಯತ್ರೀ ಭೂಃ । ತದೀಯಂ ಸ್ಥಾನಂ ಗಾಯತ್ರಂ । ಅಧ್ಯುಪರಿ ತತ್ರ ಗಾಯತ್ರಮಾಗ್ನೇಯಂ ಪದಮಾಹಿತಂ । ಪ್ರಥಮ-ಸೃಷ್ಟತ್ವಾತ್ ಗಾಯತಿ ತ್ರಾಯತೇ ಚೇತಿ ವ್ಯುತ್ಪತ್ತ್ಯಾ ಚ ಪ್ರಜಾಪತೇರ್ಮುಖಾದ್ಗಾಯತ್ರ್ಯಾ ಸಹೋತ್ಪನ್ನ-ತ್ವಾದ್ಧ್ವಕ್ತ್ರ್ಯಗ್ನಿರಪಿ ಗಾಯತ್ರಃ । ಗಾಯತ್ರೋಽಗ್ನಿಃ। ತೈ. ಸಂ ೨-೨-೫-೫। ಇತಿ ಶ್ರುತೇಃ। ಭೂಮ್ಯಾಮಗ್ನಿಃ ಸ್ಥಾಪಿತ ಇತಿ ಯದಸ್ತಿ । ತಥಾ ತ್ರೈಷ್ಟುಭಾದ್ದ್ವಿತೀಯತ್ವಾದ್ವೃಷ್ಟಿಪರ್ಜನ್ಯವಿದ್ಯುದ್ರೂಪತ್ರಿಸ್ತೋಭಯು-ಕ್ತಾದಂತರಿಕ್ಷಾತ್ ತ್ರೈಷ್ಟುಭಂ ಸ್ತೋಭಯುಕ್ತಮೂರ್ಧ್ವಾಧಸ್ತಿರ್ಯಗ್ಗಲಕ್ಷಣಸ್ತೋಭತ್ರಯೋಪೇತಂ ವಾಯುಂ ನಿರತಕ್ಷತ ಸಾಧು ಸಂಪಾದಿತವಂತೋ ದೇವಾ ಇತಿ ಯದಸ್ತಿ । ವಾಥವಾ ಜಗತಿ ಸರ್ವೈ-ರ್ಗಂತವ್ಯ ಉದ್ಗತತಮೇ ವಾ ತೃತೀಯಭೂತೇ ದ್ಯುಲೋಕೇ ಜಗದ್ಗಮನಶೀಲಮಾದಿತ್ಯಾಖ್ಯಂ ಪದಮಾ-ಹಿತಮಿತಿ ಯದಸ್ತಿ । ತದಿದಂ ತ್ರಿಷು ಸ್ಥಾನೇಷು ತ್ರಯಾಣಾಮಗ್ನ್ಯಾದೀನಾಂ ಪದಾಧಾನಂ ಯ ಇದ್ಯ ಏವ ನರಾ ವಿದುಃ ಜಾನಂತಿ ತ ಏವಾಮೃತತ್ವಮಾನಶುಃ । ಅಮರಣರೂಪಂ ಪದಮಾಪ್ನುವಂತಿ । ಇತ್ಯಧಿ-ಲೋಕಂ ॥ ಅಥಾಧಿಯಜ್ಞಂ । ಗಾಯತ್ರೇ ಪ್ರಾತಃಸವನೇಽಧ್ಯುಪರಿ ಗಾಯತ್ರಂ ಛಂದಃ ಪದಮಾಹಿತಮಿತಿ ಯತ್ । ತಥಾ ತ್ರೈಷ್ಟುಭಾನ್ಮಾಧ್ಯಂದಿನಾತ್ಸವನಾತ್ತ್ರೈಷ್ಟುಭಂ ಛಂದೋ ನಿರತಕ್ಷತ ತತ್ರ ಆಹಿತಮಿತಿ ಯತ್ । ವಾ ಕಿಂಚೇತ್ಯರ್ಥಃ । ಜಗತಿ ತೃತೀಯಸವನೇ ಜಗಜ್ಜಾಗತಂ ಪದಮಾಹಿತಮಿತಿ ಯತ್ । ತತ್ತಾದೃಶಂ ಸವನತ್ರಯೇಷು ಛಂದಸ್ತ್ರಯಸಂಸ್ಥಾನಂ ಯೇ ನರಾ ವಿದುಃ ಯಜಮಾನಾ ವಿದುಃ ಜಾನಂತಿ ತೇಽಮೃತತ್ವಂ ಜ್ಞಾನಾನುಷ್ಠಾನದ್ವಾರೇಣ ಮೋಕ್ಷಮಾನಶುಃ । ಪ್ರಾಪ್ನುವಂತಿ । ಅಥವಾ ಗಾಯತ್ರೇ ಪ್ರಾತಃ ಸವನೇ । ತ್ರಿಷು ಸವನೇಷು ಛಂದಸ್ತ್ರಯಪರಿಮಾಣಾತ್ ಸವನಾನ್ಯಪಿ ತತ್ತಚ್ಛಂದಃ ಶಬ್ದೇನೋಚ್ಯಂತೇ । ಗಾಯತ್ರಂ ಪ್ರಾತಃಸವನಂ ತ್ರೈಷ್ಟುಭಂ ಮಾಧ್ಯಂದಿನಂ ಸವನಂ ಜಾಗತಂ ತೃತೀಯಸವನಮಿತಿ ಶ್ರುತೇಃ । ತೈ. ಸಂ. ೨-೨-೯-೫, ೬ । ತಾದೃಶೇ ಪ್ರಾತಃಸವನೇಽಧ್ಯುಪರಿ ಗಾಯತ್ರಮಷ್ಟಾಕ್ಷರಾತ್ಮಕಮಾಹಾವಪ್ರತಿ-ಗರರೂಪಂ ಗಾಯತ್ರಂ ಪದಮಾಹಿತಂ । ತದ್ಯಥಾ ಹೋತಾ ಶೋಂಸಾವೋಮಿತಿ ತ್ರ್ಯಕ್ಷರೇಣ ತಥಾ ಶಂಸಾಮೋದೈವೋಮಿತಿ ಪಂಚಾಕ್ಷರೇಣಾಧ್ವರ್ಯುಃ ಪ್ರತಿಗೃಣಾತಿ । ತನ್ಮಿಲಿತ್ವಾಷ್ಟಾಕ್ಷರಂ ಸಂಪದ್ಯತೇ । ತಚ್ಚಾಷ್ಟಾಕ್ಷರಂ ಗಾಯತ್ರೀಸದೃಶಂ ತಸ್ಯಾ ಅಪಿ ಪಾದಸ್ಯಾಷ್ಟಾಕ್ಷರತ್ವಾತ್ । ಇದಮೇಕಂ ಪ್ರಾತಃಸವನ ರೂಪೇ ಗಾಯತ್ರಪದಪ್ರತಿಷ್ಠಾಪನಂ । ತಥಾ ಸವನಾಂತೇಽಪಿ ಶಂಸನಾನಂತರಮುಕ್ಥಂ ವಾಚೀತಿ ಚತುರ-ಕ್ಷರಮಾಹ । ಓಮುಕ್ಥಶಾ ಇತಿ ಚತುರಕ್ಷರಮಧ್ವರ್ಯುಃ । ತದಷ್ಟಾಕ್ಷರಂ ಸಂಪದ್ಯತೇ । ಏತದೇಕಂ ಪರಂ ಗಾಯತ್ರೇ ಗಾಯತ್ರಸ್ಥಾಪನಂ । ತಥಾ ತ್ರೈಷ್ಟುಭಾನ್ಮಾಧ್ಯಂದಿನಸವನಾತ್ತ್ರೈಷ್ಟುಭಮಾಹಾವ-ಪ್ರತಿಗರಣರೂಪಂ ಪದಂ ನಿರತಕ್ಷತ ಋತ್ವಿಜಃ । ತದ್ಯಥಾ ಮಾಧ್ಯಂದಿನಸವನೇ ಹೋತಾಧ್ವರ್ಯೋ ಶೋಂಸಾವೋಮಿತ್ಯಾಹೂಯತೇ ಷಡಕ್ಷರೇಣ ಅಧ್ವರ್ಯುಶ್ಚ ಶಂಸಾಮೋದೈವೋಮಿತಿ ಪಂಚಾಕ್ಷರೇಣ ಪ್ರತಿಗೃಣಾತಿ । ತನ್ಮಿಲಿತ್ವೈಕಾದಶಾಕ್ಷರಂ ಸಂಪದ್ಯತೇ । ಇದಮೇಕಂ ಮಾಧ್ಯಂದಿನಸವನಾದೌ ತ್ರೈಷ್ಟುಭೇ

ತ್ರೈಷ್ಟುಭಾಧಾನಂ । ತಥಾ ಸವನಾಂತೇಽಪಿ ಶಂಸನಾನಂತರಮುಕ್ಥಂ ವಾಚಿ ಇಂದ್ರಾಯೇತಿ ಸಪ್ತಾಕ್ಷರಮಾಹ । ಅಧ್ವರ್ಯುರ್ಓಮುಕ್ಥಶಾ ಇತಿ ಚತುರಕ್ಷರೇಣ ಪ್ರತಿಗೃಣಾತಿ । ತನ್ಮಿಲಿತ್ವೈಕಾದಶಾಕ್ಷರಂ ಸಂಪದ್ಯತೇ । ಇದಮಪರಂ ತ್ರೈಷ್ಟುಭೇ ತ್ರೈಷ್ಟುಭಸ್ಥಾಪನಂ । ತಥಾ ತೃತೀಯಸವನೇ ಹೋತಾಧ್ವರ್ಯೋ ಶೋಂಶೋಂಸಾವೋಮಿತಿ ಸಪ್ತಾಕ್ಷರೇಣಾಹೂಯತೇ ಶಂಸಾಮೋದೈವೋಮಿತಿ ಪಂಚಾಕ್ಷರೇಣಾಧ್ವರ್ಯುಃ ಪ್ರತಿಗೃಣಾತಿ । ದ್ವಾದಶಾಕ್ಷರಂ ಭವತಿ । ತದಿದಂ ಪ್ರಥಮಂ ಜಾಗತೇ ಜಾಗತೋತ್ಪಾದನಂ । ತಥಾ ಪಶ್ಚಾದಪಿ ಶಂಸನಾನಂತರಮಾಹ ಉಕ್ಥಂ ವಾಚಿ ಇಂದ್ರಾಯ ದೇವೇಭ್ಯ ಇತಿ । ಏತದೇವೈಕಾದಶಾಕ್ಷರಂ ಭವತಿ । ಅಧ್ವರ್ಯುರ್ಓಮಿತ್ಯೇಕಾಕ್ಷರೇಣ ಪ್ರತಿಗೃಣಾತಿ । ತದುಭಯಂ ಮಿಲಿತ್ವಾ ದ್ವಾದಶಾಕ್ಷರಂ ಭವತಿ । ತದಿದಮಪರಂ ಜಾಗತೇ ಜಾಗತಪದಸ್ಥಾಪನಂ । ಏವಂ ತ್ರಿಷು ಛಂದಃಸು ತ್ರಿಷು ಗಾಯತ್ರ್ಯಾದಿಸವನೇಷು ಗಾಯತ್ರಾದಿಛಂದಸ್ತ್ರಯಪದಪ್ರತಿಷ್ಠಾಪನಂ । ಏತತ್ಸರ್ವಮೈತರೇಯಬ್ರಾಹ್ಮಣೇ ದೇವವಿಶಃ ಕಲ್ಪಯಿತವ್ಯಾ ಇತಿ ಖಂಡೇ ವಿಸ್ಪಷ್ಟಮಾಮ್ನಾತಂ । ೧-೯ । ತತ್ತಾದೃಶಂ ಛಂದಸಿ ಛಂದಃಸ್ಥಾಪನಂ ಯೆ ಇತ್ತದ್ವಿದುಃ ಯ ಏವ ಜಾನಂತಿ ತ ಏವಾಮೃತತ್ವಮಾನಶುಃ । ಪ್ರಾಪ್ನುವಂತ್ಯನುಷ್ಠಾನದ್ವಾರಾ । ಏವಮಜಾನಂತೋಽನುಷ್ಠಾನೇನಾಪಿ ಫಲಂ ನ ಪ್ರಾಪ್ನುವಂತೀತ್ಯರ್ಥಃ । ತಸ್ಯ ಸಾಕಲ್ಯಾಭಾವಾದಿತಿ ಭಾವಃ ॥

। ಪ್ರತಿಪದಾರ್ಥ ।

**ಗಾಯತ್ರೇ ಅಧಿ**—ಪೃಥ್ವಿಯ ಮೇಲೆ । **ಗಾಯತ್ರಂ**—ಅಗ್ನಿಯ ಸ್ಥಾನವು । **ಆಹಿತಂ**—ಸ್ಥಾಪಿತವಾಗಿದೆ ಎಂಬ । **ಯತ್**—ಯಾವ ಸತ್ಯವುಂಟೋ ಅದನ್ನೂ । **ವಾ**—ಅಥವಾ । **ತ್ರೈಷ್ಟುಭಾತ್**—ಅಂತರಿಕ್ಷದಿಂದ । **ತ್ರೈಷ್ಟುಭಂ**—ವಾಯುವಿನ ಸ್ಥಾನವನ್ನು । **ನಿರತಕ್ಷತ**—(ದೇವತೆಗಳು) ನಿರ್ಮಿಸಿದರು (ಎಂಬ ಯಾವ ಸತ್ಯವುಂಟೋ ಅದನ್ನೂ) । **ವಾ**—ಅಥವಾ । **ಜಗತಿ**—ದ್ಯುಲೋಕದಲ್ಲಿ । **ಜಗತ್**—ಆದಿತ್ಯಾಖ್ಯವಾದ । **ಪದಂ**—ಸ್ಥಾನವು । **ಆಹಿತಂ**— ಸ್ಥಾಪಿತವಾಗಿದೆ ಎಂಬ । **ಯೇ**— ಯಾವ ಸತ್ಯವುಂಟೋ । **ತತ್**—ಅದನ್ನೂ । **ಯೆ ಇತ್**—ಯಾರು ತಾನೇ । **ವಿದುಃ**—ತಿಳಿಯುತ್ತಾರೆಯೋ । **ತೇ**—ಅವರು । **ಅಮೃತತ್ವಂ**—ಮರಣರಹಿತವಾದ ಸ್ಥಾನವನ್ನು । **ಆನಶುಃ**—ಪಡೆಯುತ್ತಾರೆ.

ಭಾವಾರ್ಥ

ಪೃಥ್ವಿಯ ಮೇಲೆ ಅಗ್ನಿಯ ಸ್ಥಾನವು ಸ್ಥಾಪಿತವಾಗಿರುವ ಯಾವ ಸತ್ಯವುಂಟೋ, ಅಂತರಿಕ್ಷದಿಂದ ವಾಯುವಿನ ಸ್ಥಾನವನ್ನು ದೇವತೆಗಳು ನಿರ್ಮಿಸಿರುವ ಯಾವ ಸತ್ಯವುಂಟೋ, ಅಥವಾ ದ್ಯುಲೋಕದಲ್ಲಿ ಆದಿತ್ಯನ ಸ್ಥಾನವು ಸ್ಥಾಪಿತವಾಗಿರುವ ಯಾವ ಸತ್ಯವುಂಟೋ, ಇದೆಲ್ಲವನ್ನೂ ತನ್ನ ಜ್ಞಾನದಿಂದ ತಿಳಿಯುವ ಪುರುಷನು ಮರಣರಹಿತವಾದ ಸ್ಥಾನವನ್ನು ಪಡೆಯುತ್ತಾನೆ.

## English Translation

They who know the station of Agni upon the earth ; the station of Vayu that was fabricated from the firmament; and that station of the Sun which is placed in heaven, obtain immortality.

**ವಿಶೇಷವಿಷಯಗಳು**

ಗಾಯತ್ರದ ಸ್ಥಾನವು ಗಾಯತ್ರದಲ್ಲಿ ಸ್ಥಾಪಿತವಾಗಿದೆ. ತ್ರೈಷ್ಟುಭದ ಸ್ಥಾನವನ್ನು ತ್ರೈಷ್ಟುಭದಿಂದಲೇ ನಿರ್ಮಿಸಿದ್ದಾರೆ. ಜಗತ್ತಿನ ಸ್ಥಾನವು ಜಗತಿಯಲ್ಲಿಯೇ ಸ್ಥಾಪಿತವಾಗಿದೆ. ಪುರುಷನು ಅಮೃತತ್ತ್ವವನ್ನು ಪಡೆಯಬೇಕಾದರೆ ಈ ಸತ್ಯಾಂಶಗಳ ಜ್ಞಾನವು ಅತ್ಯವಶ್ಯವಾದುದು ಎಂಬುದೇ ಈ ಋಕ್ಕಿನ ಅರ್ಥದ ಸಾರಾಂಶವಾಗಿದೆ. ಕೇವಲ ಕಾವ್ಯ ದೃಷ್ಟಿಯಿಂದ ನೋಡುವುದಾದರೆ ಶಬ್ದಾಲಂಕಾರದ ಸ್ವಾರಸ್ಯವಿದೆ. ಮಂತ್ರದೃಷ್ಟಿಯಿಂದ ಪರಿಶೀಲಿಸುವುದಾದರೆ ಇದರ ಅರ್ಥವು ಬಹಳ ಗಭೀರವಾದುದು. ಜಗದ್ವ್ಯಾಪಿಯಾದ ಪರಮಾತ್ಮನು ನಾನಾಸ್ಥಾನಗಳಲ್ಲಿ ಸ್ಥಾಪಿತನಾಗಿರುವುದೂ, ಆಯಾ ಸ್ಥಾನಗಳಲ್ಲಿ ಅವನು ತನ್ನ ಮೂರ್ತವಾದ ರೂಪದಿಂದ ಆವಿರ್ಭವಿಸಿರುವುದೂ ವರ್ಣಿತವಾಗಿ, ಈ ಆವಿರ್ಭಾವಗಳ ವಿಜ್ಞಾನದಿಂದ ಸಮ್ಯಗ್‌ಜ್ಞಾನವು ಲಭಿಸಿ ಅಮೃತತ್ವವು ಪ್ರಾಪ್ತವಾಗುವುದೆಂದು ಉಕ್ತವಾಗಿದೆ. ಈ ಶಬ್ದಾಲಂಕಾರದೊಳಗೆ ಅಂತರ್ಗತವಾಗಿರುವ ಗೂಢವಾದ ಅರ್ಥವೇನೆಂದು ಪರಿಶೀಲಿಸಿದರೆ ;—

**ಯದ್ಗಾಯತ್ರೇ ಅಧಿ ಗಾಯತ್ರಮಾಹಿತಂ**—ಗಾಯತ್ರದ ಮೇಲೆ ಗಾಯತ್ರವು ಆಹಿತವಾಗಿದೆ ಎನ್ನುವಾಗ ಮೊದಲನೆಯ ಗಾಯತ್ರಶಬ್ದಕ್ಕೆ ಪೃಥ್ವಿಯೆಂದೂ ; ಎರಡನೆಯ ಗಾಯತ್ರಶಬ್ದಕ್ಕೆ **ಆಗ್ನೇಯಂ ಪದಂ** ಎಂದು ಅರ್ಥಮಾಡಿದೆ. ಪೃಥ್ವಿಗೆ ಗಾಯತ್ರವೆಂಬ ಹೆಸರು ಹೇಗೆ ಪ್ರಸಿದ್ಧವಾಯಿತು ಎಂಬುದನ್ನು ವಿವರಿಸುತ್ತಾ, **ಪ್ರಾಥಮ್ಯಾತ್ ಸ್ತುತ್ಯತ್ವಾಚ್ಚ ಗಾಯತ್ರೀ ಭೂಃ** ; ಸೃಷ್ಟಿಯಲ್ಲಿ ಎಲ್ಲಕ್ಕಿಂತಲೂ ಪ್ರಥಮವಾದುದರಿಂದಲೂ ಮತ್ತು ಅತ್ಯಂತ ಸ್ತುತ್ಯರ್ಹವಾದುದರಿಂದಲೂ ಗಾಯತ್ರಿಗೂ ಭೂಮಿಗೂ ತಾದಾತ್ಮ್ಯವನ್ನು ಹೇಳಿದೆ ಯೆಂದು ಸಾಯಣರು ವಿವರಿಸಿದ್ದಾರೆ. ಇದಕ್ಕೆ ಶ್ರುತಿವಾಕ್ಯಗಳ ಆಧಾರವನ್ನೂ ತೋರಿಸಬಹುದು ಉದಾಹರಣೆಗೆ ;

> **ಸೋಽನ್ವಾಹ । ಅಗ್ನಿಂ ದೂತಂ ವೃಣೀಮಹ ಇತಿ ದೇವಾಶ್ಚ ವಾಸುರಾಶ್ಚೋಭಯೇ ಪ್ರಾಜಾಪತ್ಯಾಃ ಪಸ್ಪೃಧಿರೇ ತಾನ್ಸ್ಪರ್ಧಮಾನಾನ್ಗಾಯತ್ರ್ಯಂತರಾ ತಸ್ಥೌ ಯಾ ವೈ ಸಾ ಗಾಯತ್ರ್ಯಾಸೀದಿಯಂ ವೈ ಸಾ ಪೃಥಿವೀಯಗ್‌ಂ ಹೈವ ತದಂತರಾ ತಸ್ಥೌ ತಾ ಉಭಯ ಏವ ವಿದಾಂ ಚಕ್ರುಃ ॥**
>
> (ಶ. ಬ್ರಾ. ೧-೪-೧-೩೪)

ಸ್ಪರ್ಧಿಸುತ್ತಿದ್ದಾಗ ಗಾಯತ್ರಿಯು ಮಧ್ಯಸ್ಥಿಕೆಯನ್ನು ನಡೆಸಲು ಅವರ ನಡುವೆ ನಿಂತಳು. ಈ ಪೃಥ್ವಿಯೇ ಆ ಗಾಯತ್ರಿಯ ರೂಪದಲ್ಲಿ ಅವರ ನಡುವೆ ನಿಂತಳೆಂದರ್ಥವು. ಆಗ ಗಾಯತ್ರೀರೂಪದ ಪೃಥ್ವಿಯು ಯಾರಕಡೆ ಇರುವಳೋ ಅವರಿಗೆ ಜಯವೆಂದೂ ಉಳಿದ ಗುಂಪಿಗೆ ಅಪಜಯವೆಂದೂ ಅವರು ತಿಳಿದುಕೊಂಡರು ಎಂದು ಬ್ರಾಹ್ಮಣದ ವಾಕ್ಯವಿದೆ. ಇದಕ್ಕೆ ಸಾಯಣರು ವ್ಯಾಖ್ಯಾನವನ್ನು ಮಾಡುವಾಗ ತಮ್ಮ ಭಾಷ್ಯದಲ್ಲಿ ಈರೀತಿ ವಿವರಿಸಿದ್ದಾರೆ.

> **ಯೋತ್ಸ್ಯಮಾನಾಂಸ್ತಾನ್ನಿವಾರಯಿತುಂ ಗಾಯತ್ರೀ ಮಧ್ಯೇ ಪ್ರಾದುರ್ಭೂತಾ ಸೇಯಂ ಪೃಥಿವ್ಯೇವ । ಮೇರೋರಗ್ರಭಾಗೇ ಹಿ ಅಮರಾವತೀ ನಾಮ ನಗರೀ ತಸ್ಯಾಂ ಹಿ ದೇವಾಃ ತಥಾ ಮೇರೋರಧಸ್ತಾದ್ಭಾಗೇ ಚ ಯತ್ ಇರಾಮುಖಂ ನಾಮ ನಗರಂ ತಸ್ಮಿನ್ಹ್ಯಸುರಾ ನಿವಸಂತಿ ತಯೋರ್ಮಧ್ಯೇ ಪೃಥಿವೀ ವರ್ತತ ಇತಿ ಹ ಶಬ್ದದ್ಯೋತಿತ ಶಾಸ್ತ್ರಪ್ರಸಿದ್ಧಿಃ ।**
>
> (ಸಾ. ಭಾ. ೧-೪-೧-೩೪)

ದೇವತೆಗಳೂ ಅಸುರರೂ ಸ್ಪರ್ಧಿಸುತ್ತಿದ್ದಾಗ ಗಾಯತ್ರಿಯು ಮಧ್ಯಸ್ಥಳಾದಳು. ಪೃಥ್ವಿಯೇ ಈ ಗಾಯತ್ರಿಯು. ಇದರ ತಾತ್ಪರ್ಯವು ಈ ರೀತಿಯಿದೆ. ಮೇರುವಿನ ಅಗ್ರಭಾಗದಲ್ಲಿ ಅಮರಾವತಿಯೆಂಬ ನಗರವಿದೆ. ಅದರಲ್ಲಿ ದೇವತೆಗಳು ವಾಸವಾಗಿದ್ದಾರೆ. ಮೇರುವಿನ ಅಧೋಭಾಗದಲ್ಲಿ ಇರಾವತಿಯೆಂಬ ನಗರವಿದೆ. ಅದರಲ್ಲಿ ಅಸುರರು ವಾಸವಾಗಿದ್ದಾರೆ, ಈ ಎರಡು ಪುರಗಳ ನಡುವೆ ಪೃಥ್ವಿಯಿದೆಯೆಂಬುದು ಹಶಬ್ದದಿಂದ ಸೂಚಿತವಾಗುವುದೆಂದು ಶಾಸ್ತ್ರಪ್ರಸಿದ್ಧಿಯಿದೆ ಯೆಂದು ಸಾಯಣರ ಅಭಿಪ್ರಾಯವು. ಇವರಂತೆಯೇ **ಗಾಯತ್ರಿಗೂ ಪೃಥ್ವಿಗೂ** ತಾದಾತ್ಮ್ಯವು ಛಾಂದೋಗ್ಯೋಪನಿಷತ್ತಿನಲ್ಲಿಯೂ ಸಹ ಉಕ್ತವಾಗಿದೆ.

> **ಗಾಯತ್ರೀ ವಾ ಇದಂ ಸರ್ವಂ ಭೂತಂ ಯದಿದಂ ಕಿಂಚ ವಾಗ್ವೈ ಗಾಯತ್ರೀ ವಾಗ್ವಾ ಇದಂ ಸರ್ವಂ ಭೂತಂ ಗಾಯತಿ ಚ ತ್ರಾಯತೇ ಚ ಯಾ ವೈ ಸಾ ಗಾಯತ್ರೀಯಂ ವಾವ ಸಾ ಯೇಯಂ ಪೃಥಿವ್ಯಸ್ಯಾಂ ಹೀದಂ ಸರ್ವಂ ಭೂತಂ ಪ್ರತಿಷ್ಠಿತಮೇತಾಮೇವ ನಾತಿಶೀಯತೇ ॥ ಯಾ ವೈ ಸಾ ಪೃಥಿವೀಯಂ ವಾವ ಸಾ ಯದಿದಮಸ್ಮಿನ್ಪುರುಷೇ ಶರೀರಮಸ್ಮಿನ್ಹೀಮೇ ಪ್ರಾಣಾಃ ಪ್ರತಿಷ್ಠಿತಾ ಏತದೇವ ನಾತಿಶೀಯಂತೇ ॥**
>
> (ಛಾ. ಉ. ೩-೧೨-೧ ರಿಂದ ೩)

ಎಂಬ ತಾದಾತ್ಮ್ಯಬೋಧಕವಾದ ಉಪನಿಷದ್ವಾಕ್ಯದಲ್ಲಿ ಸಾಯಣರು ಪ್ರಕೃತವಾದ ಋಕ್ಕಿನಲ್ಲಿ ಹೇಳಿರುವ ಲಕ್ಷಣವು ಇರುತ್ತದೆ- **ಇದಂ ಸರ್ವಂ ಭೂತಂ ಪ್ರಾಣಿಜಾತಂ ಯತ್ಕಿಂಚ ಸ್ಥಾವರಂ ಜಂಗಮಂ ವಾ ತತ್ಸರ್ವಂ ಗಾಯತ್ರ್ಯೇವ**—(ಶಂ. ಭಾ). ಸ್ಥಾವರಾತ್ಮಕವಾದುದೂ, ಜಂಗಮಾತ್ಮಕವಾದುದೂ ಆದ ಸಕಲಭೂತಗಳೂ ಸಹ ಈ ಗಾಯತ್ರಿಯ ಸ್ವರೂಪಗಳೇ ಆಗಿವೆ. ವಾಕ್ಕೇ ಗಾಯತ್ರಿಯು. ಸಕಲ ಭೂತಗಳನ್ನೂ ಸ್ತುತಿಸುವುದರಿಂದಲೂ **(ಗಾಯತಿ)** ಮತ್ತು ರಕ್ಷಿಸುವುದರಿಂದಲೂ **(ತ್ರಾಯತೇ)** ಸಹ ಗಾಯತ್ರಿಯೆಂಬ ಹೆಸರು ಪ್ರಸಿದ್ಧವಾಯಿತು. ಅಲ್ಲದೆ, ಸಕಲಭೂತಗಳೂ ಈ ಪೃಥ್ವಿಯಲ್ಲಿಯೇ ಪ್ರತಿಷ್ಠಾಪಿತವಾಗಿರುವುದರಿಂದ ಈ ಪೃಥ್ವಿಯೇ ಗಾಯತ್ರಿಯು. ಇತ್ಯಾದಿಯಾಗಿ ಅನೇಕ ಕಡೆಗಳಲ್ಲಿ ಪೃಥ್ವಿಗೆ ಗಾಯತ್ರಿಯೆಂಬ ಹೆಸರು ಪ್ರಸಿದ್ಧವಾಗಿದೆಯೆಂದು ತಿಳಿಸಿದೆ. ಈ ಗಾಯತ್ರದ ಮೇಲೆ ಗಾಯತ್ರದ (ಅಗ್ನಿಯ) ಸ್ಥಾನವು ಸ್ಥಾಪಿತವಾಗಿದೆಯೆಂದು ಹೇಳುವಾಗ ಅಗ್ನಿಗೂ ಗಾಯತ್ರಿಗೂ ತಾದಾತ್ಮ್ಯವನ್ನು ಹೇಳಿದಂತಾಯಿತು. ಇದು ಹೇಗೆಂಬುದನ್ನು ಸಾಯಣರು ವಿವರಿಸುತ್ತಾ—**ಗಾಯತ್ರಂ ಆಗ್ನೇಯಂ ಪದಂ ಆಹಿತಂ । ಪ್ರಥಮಸೃಷ್ಟತ್ವಾತ್ । ಗಾಯತಿ ತ್ರಾಯತೇ ಚ ಇತಿ ವ್ಯುತ್ಪತ್ತ್ಯಾ ಚ ಪ್ರಜಾಪತೇರ್ಮುಖಾತ್ ಗಾಯತ್ರ್ಯಾ ಸಹ ಉತ್ಪನ್ನತ್ವಾತ್ ಭಕ್ತ್ಯಾ ಅಗ್ನಿರಪಿ ಗಾಯತ್ರಃ ।** ಹಿಂದೆ ಹೇಳಿದಂತೆಯೇ ಸ್ತುತಿಸುವುದು, ರಕ್ಷಿಸುವುದು ಈ ಎರಡು ಕ್ರಿಯಾತ್ಮಕವಾಗಿರುವುದರಿಂದಲಾಗಲಿ ಅಥವಾ ಪ್ರಜಾಪತಿಯ ಮುಖದಿಂದ ಗಾಯತ್ರಿಯೊಡನೆ ಅಗ್ನಿಯೂ ಆವಿರ್ಭವಿಸಿರುವುದರಿಂದಾಗಲೀ ಇಲ್ಲಿ ಗಾಯತ್ರವು ಅಗ್ನಿಪರ್ಯಾಯವಾದ ಪದವಾಗಿದೆ ಯೆಂದು ಹೇಳಬಹುದು ಎಂದು ತಿಳಿಸಿದ್ದಾರೆ. ಮತ್ತು ತಮ್ಮ ವಿವರಣೆಗೆ ಸಮರ್ಥನೆಯನ್ನು ತೋರಿಸುವುದಕ್ಕಾಗಿ ತೈತ್ತಿರೀಯಸಂಹಿತೆಯಿಂದ,

> **ಅಷ್ಟಾಕ್ಷರಾ ಗಾಯತ್ರೀ ಗಾಯತ್ರೋಽಗ್ನಿಃ ।**
>
> (ತೈ. ಸಂ ೨-೩-೫-೫)

ಎಂಬ ವಾಕ್ಯವನ್ನುದಹರಿಸಿ ಶ್ರುತಿವಾಕ್ಯದಲ್ಲಿಯೂ ಈ ತಾದಾತ್ಮ್ಯವಿದೆಯೆಂದು ಹೇಳಿದ್ದಾರೆ. ಇದಲ್ಲದೆ ಶತಪಥ ಬ್ರಾಹ್ಮಣದಲ್ಲಿಯೂ ಸಹ ಅಗ್ನಿಗೂ ಗಾಯತ್ರಿಗೂ ಇರುವ ಸಂಬಂಧವನ್ನು ತೋರಿಸಿ ಛಂದೋರೂಪವಾದ ಗಾಯತ್ರಿಯು ಅಗ್ನಿಸಂಬಂಧವಾದುದೆಂದೂ ಆ ಸಂಬಂಧವನ್ನು ತೋರಿಸುವಾಗ ತಾದಾತ್ಮ್ಯಬೋಧಕವಾದ ಪದವನ್ನೇ ಉಪಯೋಗಿಸಿದೆಯೆಂದೂ ತಿಳಿಸಿದೆ. ಉದಾಹರಣೆಗೆ—

**ಆಗ್ನೇಯೀರನ್ವಾಹ । ಸ್ವಯೈವೇನಮೇತದ್ದೇವತಯಾ ಸಮಿಂಧೇ । ಗಾಯತ್ರೀರನ್ವಾಹ । ಗಾಯತ್ರಂ ವಾ ಅಗ್ನೇಶ್ಛಂದಃ । ಸ್ವೇನೈವೈನಮೇತಚ್ಛಂದಸಾ ಸಮಿಂಧೇ ॥**

(ಶ. ಬ್ರಾ. ೧-೩-೫-೪)

ಇತ್ಯಾದಿವಾಕ್ಯಗಳಲ್ಲಿ ಈ ಸಂಬಂಧವನ್ನು ವಿವರಿಸಿದೆ.

**ತ್ರೈಷ್ಟುಭಾತ್ ತ್ರೈಷ್ಟುಭಂ ನಿರತಕ್ಷತ**—ಅಂತರಿಕ್ಷದಿಂದ ವಾಯುವಿನ ಸ್ಥಾನವನ್ನು ನಿರ್ಮಿಸಿದರು ಎಂದಿರುವಾಗ ಅಂತರಿಕ್ಷಕ್ಕೆ ತ್ರೈಷ್ಟುಭವೆಂಬ ಹೆಸರು ಹೇಗೆ ಬಂದಿತು ಎಂಬುದನ್ನು ವಿವರಿಸುತ್ತಾ **ವೃಷ್ಟಿಪರ್ಜನ್ಯ-ವಿದ್ಯುದ್ರೂಪತ್ರಿಸ್ತೋಭಯುಕ್ತಾತ್ ಅಂತರಿಕ್ಷಾತ್** ವೃಷ್ಟಿ, ಪರ್ಜನ್ಯ, ವಿದ್ಯುತ್ ಎಂಬ ಸ್ತೋಭತ್ರಯದಿಂದ ಕೂಡಿದ ಅಂತರಿಕ್ಷದಿಂದ ಎಂದು ಅರ್ಥಮಾಡಿದ್ದಾರೆ.

**ತ್ರಿಷ್ಟುಭೋಪದಧಾತಿ । ತ್ರೈಷ್ಟುಭೋ ಹಿ ವಾಯುಃ ।**

(ಶ. ಬ್ರಾ. ೮-೭-೩-೧೨)

ಇತ್ಯಾದಿವಾಕ್ಯಗಳಲ್ಲಿ ತ್ರಿಷ್ಟುಭಕ್ಕೂ ವಾಯುವಿಗೂ ತಾದಾತ್ಮ್ಯವನ್ನು ಹೇಳಿರುವಂತೆ ಇಲ್ಲಿಯೂ ಸಹ ಎರಡನೇ **ತ್ರೈಷ್ಟುಭಂ** ಎಂಬ ಪದಕ್ಕೆ ವಾಯುವಿನ ಸ್ಥಾನವನ್ನು ಎಂದರ್ಥ. ಸಾಯಣರು **ಊರ್ಧ್ವಾಧಸ್ತಿರ್ಯ ಗ್ಲಕ್ಷಣ ಸ್ತೋಭತ್ರಯೋಪೇತಂ ವಾಯುಂ** ಎಂದು ವಿವರಿಸಿದ್ದಾರೆ.

**ಜಗತಿ ಜಗತ್ಪದಮಾಹಿತಂ**—ದ್ಯುಲೋಕದಲ್ಲಿ ಆದಿತ್ಯನ ಸ್ಥಾನವು ಸ್ಥಾಪಿತವಾಯಿತು ಎಂಬುದನ್ನು ವಿವರಿಸುತ್ತಾ, ಮೊದಲನೆಯ **ಜಗತಿ** ಎಂಬ ಪದಕ್ಕೆ **ಸರ್ವೈರ್ಗಂತವ್ಯೇ ಉದ್ಗತತಮೇ ವಾ ತೃತೀಯ-ಭೂತೇ ದ್ಯುಲೋಕೇ** । ಸಕಲರೂ ಹೋಗಿ ಸೇರಬೇಕಾದುದೂ ಅತ್ಯುತ್ತಮವಾದುದೂ ತೃತೀಯಭೂತವಾದುದೂಆದ ದ್ಯುಲೋಕವೆಂದು ಅರ್ಥವು. ಆದಿತ್ಯನು ಗಮನಶೀಲನಾದುದರಿಂದ ಅವನಿಗೆ **ಜಗತ್** ಎಂದು ಹೆಸರು. ಈ ಮೂರು ಸ್ಥಾನಗಳ ಜ್ಞಾನವಿದ್ದರೆ ಮುಕ್ತಿಯೆಂದು ವಿಧಿವಾಕ್ಯವಿದೆ. ಇದು ಅಧಿಲೋಕಪಕ್ಷದ ಅರ್ಥವಾಯಿತು. ಇದಲ್ಲದೇ, ಅಧಿಯಜ್ಞಪರವಾದ ಅರ್ಥವೊಂದಿದೆ. ಆ ಅರ್ಥದಲ್ಲಿ ಸವನತ್ರಯಗಳಲ್ಲೂ ಉಪಯೋಗಿಸತಕ್ಕ ಛಂದಸ್ಸುಗಳೆಂದರ್ಥ ವಾಗುತ್ತದೆ.

**ಗಾಯತ್ರೇ ಪ್ರಾತಃಸವನೇ ಗಾಯತ್ರಂ ಛಂದಃ ಪದಂ ಆಹಿತಂ । ತ್ರೈಷ್ಟುಭಾತ್ ಮಾಧ್ಯಂ-ದಿನಾತ್ ಸವನಾತ್ ತ್ರೈಷ್ಟುಭಂ ಛಂದಃ ಜಗತೀ ತೃತೀಯಸವನೇ ಜಾಗತಂ ಪದಂ ॥**

ಗಾಯತ್ರವೆಂದರೆ ಪ್ರಾತಸ್ಸವನವೆಂದೂ, ತ್ರೈಷ್ಟುಭವೆಂದರೆ ಮಾಧ್ಯಂದಿನಸವನವೆಂದೂ, ಜಗತ್ತೆಂದರೆ ತೃತೀಯ ಸವನವೆಂದೂ ಅರ್ಥವಾಗುತ್ತದೆ. ಈ ಸವನಕಾಲಗಳಲ್ಲಿ ಈ ಛಂದಸ್ಸುಗಳನ್ನು ನಿರ್ಮಿಸಿ ಪಠಿಸಿದರೆಂದೂ ಅಥವಾ

ಪಠಿಸಬೇಕೆಂಬ ವಿಧಿಯಿದೆಯೆಂದೂ ಅರ್ಥವಾಗುತ್ತದೆ. ಸವನತ್ರಯಗಳಲ್ಲೂ ಈ ಛಂದಃಸ್ಥಾನಗಳನರಿತು ಕರ್ಮ ವನ್ನು ಮಾಡತಕ್ಕ ಯಜಮಾನನು ಅಮೃತತ್ತ್ವವನ್ನು ಪಡೆಯುತ್ತಾನೆ ಎಂಬುದು ಸಿದ್ಧವು. ಇದನ್ನೇ ತೈತ್ತಿರೀಯ ಸಂಹಿತೆಯಲ್ಲಿ ವಿವರಿಸುತ್ತಾ,

**ಗಾಯತ್ರಂ ಪ್ರಾತಃಸವನಂ, ತ್ರೈಷ್ಟುಭಂ ಮಾಧ್ಯಂದಿನಗ್ಂ ಸವನಂ, ಜಾಗತಂ ತೃತೀಯಸವನಂ ।**

(ತೈ. ಸಂ. ೨-೨-೯. ೫, ೬)

ಎಂಬ ವಾಕ್ಯದಲ್ಲಿ ವಿವರಿಸಿದೆ.

ಇಂತಹ ಪ್ರಾತಃಸವನಾಗಗಳಲ್ಲಿ ಅಷ್ಟಾಕ್ಷರಾತ್ಮಕವಾದ ಗಾಯತ್ರಿಯನ್ನೂ ಹೀಗೆಯೇ ಇತರ ಲಕ್ಷಣಗಳಿಂದ ಕೂಡಿದ ತ್ರೈಷ್ಟುಭಾದಿಗಳನ್ನು ಪಠಿಸುವ ಕ್ರಮವು ಐತರೇಯಬ್ರಾಹ್ಮಣದಲ್ಲಿ ವರ್ಣಿತವಾಗಿದೆ. ಇದೇ ಅಂಶವನ್ನು ಮುಂದಿನ ಋಕ್ಕಿನಲ್ಲಿಯೂ ಹೇಳಿರುವುದರಿಂದ ಅದರ ವಿವರಣೆಯನ್ನು ಮುಂದಿನ ಋಕ್ಕಿನ ವಿಶೇಷವಿಷಯಗಳಲ್ಲಿ ತಿಳಿಸಿದೆ.

### ವ್ಯಾಕರಣಪ್ರಕ್ರಿಯಾ

**ಗಾಯತ್ರೇ**—ಗಾಯತ್ರ್ಯಾಃ ಸಂಬಂಧಿ ಗಾಯತ್ರಮ್. **ತಸ್ಯೇದಮ್**—( ಪಾ. ಸೂ. ೪-೩-೧೨೦ ) ಎಂಬುದರಿಂದ ಅಣ್ ಪ್ರತ್ಯಯ. **ಯಸ್ಯೇತಿ ಚ** ಎಂಬುದರಿಂದ ಈಕಾರಲೋಪ. ಪ್ರತ್ಯಯಸ್ವರದಿಂದ ಅಂತೋದಾತ್ತ ವಾಗುತ್ತದೆ. ಸಪ್ತಮೀಏಕವಚನಾಂತರೂಪ.

**ಆಹಿತಮ್**—**ಗತಿರನಂತರಃ** ( ಪಾ. ಸೂ. ೬-೨-೪೯ ) ಎಂಬುದರಿಂದ ಗತಿಗೆ (ಆಙ್) ಉದಾತ್ತಸ್ವರ ಬರುತ್ತದೆ.

**ನಿರತಕ್ಷತ**—ತಕ್ಷೂ ತನೂಕರಣೇ. ಧಾತು. ಲಙ್ ಪ್ರಥಮಪುರುಷ ಬಹುವಚನಾಂತರೂಪ. ಯದ್ಯೋಗ ವಿರುವುದರಿಂದ ನಿಘಾತಸ್ವರ ಬರುವುದಿಲ್ಲ. ಅಡಾಗಮ ಉದಾತ್ತವಾದುದರಿಂದ ಅದ್ಯುದಾತ್ತವಾಗುತ್ತದೆ. **ತಿಙಿಚೋ-ದಾತ್ತವತಿ** (ಪಾ. ಸೂ. ೮-೧-೭೧) ಎಂಬುದರಿಂದ ಗತಿಗೆ (ನಿರ್) ನಿಘಾತಸ್ವರ ಬರುತ್ತದೆ.

**ಅಮೃತತ್ವಮ್**—ಅಮೃತಸ್ಯ ಭಾವಃ ಅಮೃತತ್ವಮ್. **ತಸ್ಯಭಾವಸ್ತ್ವತಲೌ** ಎಂಬುದರಿಂದ ಭಾವಾರ್ಥ ದಲ್ಲಿ ತ್ವ ಪ್ರತ್ಯಯ. ಪ್ರತ್ಯಯಸ್ವರದಿಂದ ಅಂತೋದಾತ್ತವಾಗುತ್ತದೆ.

**ಆನಶುಃ**—ಅಶೂ ವ್ಯಾಪ್ತೌ ಧಾತು. ಲಿಟ್. ಪ್ರಥಮಪುರುಷಬಹುವಚನದಲ್ಲಿ ವ್ಯತ್ಯಯದಿಂದ **ಪರಸ್ಮೈ ಪದಾನಾಂ**-(ಪಾ. ಸೂ. ೩-೪-೮೨) ಎಂಬುದರಿಂದ ಉಸಾದೇಶ. ಲಿಣ್ನಿಮಿತ್ತವಾಗಿ ದ್ವಿತ್ವ. **ಅಶ್ನೋತೇಶ್ಚ** (ಪಾ ಸೂ. ೭-೪-೭೨) ಎಂಬುದರಿಂದ ಅಭ್ಯಾಸದ ಪರಕ್ಕೆ ನುಡಾಗಮ. **ಅತಆದೇಃ** ಎಂಬುದರಿಂದ ಅಭ್ಯಾಸಕ್ಕೆ ದೀರ್ಘ ತಿಙಂತನಿಘಾತಸ್ವರ ಬರುತ್ತದೆ. ॥ ೨೩ ॥

। ಸಂಹಿತಾಪಾಠಃ ।

ಗಾಯತ್ರೇಣ ಪ್ರತಿ ಮಿಮೀತೇ ಅರ್ಕಮರ್ಕೇಣ ಸಾಮ ತ್ರೈಷ್ಟುಭೇನ ವಾಕಂ ।

ವಾಕೇನ ವಾಕಂ ದ್ವಿಪದಾ ಚತುಷ್ಪದಾಕ್ಷರೇಣ ಮಿಮತೇ ಸಪ್ತ ವಾಣೀಃ ॥ ॥ ೨೪ ॥

ಪದಪಾಠಃ

ಗಾಯತ್ರೇಣ । ಪ್ರತಿ । ಮಿಮೀತೇ । ಅರ್ಕಂ । ಅರ್ಕೇಣ । ಸಾಮ । ತ್ರೈಸ್ತುಭೇನ । ವಾಕಂ ।

ವಾಕೇನ । ವಾಕಂ । ದ್ವಿಽಪದಾ । ಚತುಃಽಪದಾ । ಅಕ್ಷರೇಣ । ಮಿಮತೇ । ಸಪ್ತ । ವಾಣೀಃ ॥ ೨೪ ॥

ಸಾಯಣಭಾಷ್ಯಂ

ಗಾಯತ್ರೇಣ ಗಾಯತ್ರಛಂದಸಾರ್ಕಮರ್ಚನಸಾಧನಂ ಮಂತ್ರಂ ಪ್ರತಿ ಮಿಮೀತೇ । ಪ್ರತ್ಯೇಕಂ ಪರಿಚ್ಛಿನತ್ತಿ । ಅರ್ಕೋ ಮಂತ್ರೋ ಭವತಿ ಯದೇನೇನಾರ್ಚಂತೀತಿ ನಿರುಕ್ತಂ । ೫-೪ । ಪ್ರತಿಮಂತ್ರಂ ಗಾಯತ್ರೇಣ ಛಂದಸೋಪನಿಬದ್ಧಂ ಕರೋತಿ । ಉಪಲಕ್ಷಣಮೇತದನ್ಯೇಷಾಂ ಛಂದಸಾಂ । ಯದ್ವಾ । ಇತರೇಷಾಂ ಛಂದಸಾಮಸ್ಯೈವ ಚತುಶ್ಚತುರಕ್ಷರಾಧಿಕ್ಯೇನ ತತ್ತಚ್ಛಂದೋಭಿಃ ಪ್ರತಿಮಿಮೀತ ಇತ್ಯರ್ಥಃ । ಯದ್ವಾ । ಪ್ರತಿಶಬ್ದಃ ಸಮಿತ್ಯೇತಸ್ಮಿನ್ನರ್ಥೇ । ಛಂದೋಭಿರ್ಮಂತ್ರಾನ್ ಸಂಮಿತಂ ಕರೋತೀತ್ಯರ್ಥಃ । ಅರ್ಕೇಣ ಸಾಮ । ಉಕ್ತಲಕ್ಷಣೇನ ಮಂತ್ರೇಣ ಸಾಮ ಗಾಯತ್ರರಥಂತರಸಂಜ್ಞಕಂ ಸಾಮ ಪ್ರತಿ ಮಿಮೀತೇ । ನನ್ವೇಕಂ ಸಾಮ ತೃಚೇ ಕ್ರಿಯತ ಇತಿ ತಿಸೃಷ್ವೇಕಂ ಸಾಮ ವಿಹಿತಂ ಅತೋಽರ್ಕೈಃ ಸಾಮೇತಿ ವಕ್ತವ್ಯಂ ಕಥಮುಚ್ಯತೇಽರ್ಕೇಣೇತಿ ನ । ವಸ್ತುತ ಏಕಂ ಸಾಮ್ಯೈಕಸ್ಯಾಮೃಚ್ಯಾರೂಢಂ । ಪಶ್ಚಾದನ್ಯೋನ್ಯಾಂ ತದುತ್ತರಯೋರ್ಗಾಯತೀತ್ಯತಿದೇಶತಃ ಪ್ರಾಪ್ತಂ ತಿಸೃಷು ಗಾನಂ । ಅತ ಏಕವಚನಮವಿರುದ್ಧಂ । ತ್ರೈಷ್ಟುಭೇನ ವಾಕಂ । ಅತ್ರ ತ್ರಿಷ್ಟುಬುಪಾದಾನಮಿತರಛಂದಃಪ್ರದರ್ಶನಾರ್ಥಂ । ಅಥವಾ ಅನಾದೇಶೇ ಸರ್ವತ್ರ ತ್ರಿಷ್ಟುಭೋ ಗ್ರಹಣಾತ್ಪ್ರಾಚುರ್ಯಾಭಿಪ್ರಾಯೇಣೇದಮುಕ್ತಂ । ತ್ರೈಷ್ಟುಭೇನ ದ್ವಿವಾರತ್ರಿವಾರಾವೃತ್ತೇನ ದ್ವ್ಯೃಚತೃಚರೂಪಂ ವಾಕಂ ವಕ್ತವ್ಯಮೇಕೈಕಂ ಛಂದಃ ಪ್ರತಿ ಮಿಮೀತೇ । ಅಥವಾ ವಾಕಂ ಸೂಕ್ತಮೇತಾವದ್ಭಿಸ್ತ್ರಿಷ್ಟುಬ್ಭಿರುಪನಿಬದ್ಧಮಿದಂ ಸೂಕ್ತಮಿತಿ । ತಾದೃಶೇನ ವಾಕೇನ ವಾಕಂ ವರ್ಗಮನುವಾಕಂ ವಾ ಮಿಮೀತೇ । ಕೀದೃಶೇನ ವಾಕೇನೇತಿ ಸ ವಿಶೇಷ್ಯತೇ । ದ್ವಿಪದಾ ಚತುಷ್ಪದಾ । ಪಾದದ್ವಯಬದ್ಧವಿರಾಡಾದಿಚ್ಛಂದೋನಿಬದ್ಧಮಂತ್ರರೂಪೇಣ ಚತುಷ್ಪದಾ ಪಾದಚತುಷ್ಟಯೋಪೇತೇನಾನುಷ್ಟುಬಾದಿ ಮಂತ್ರರೂಪೇಣೇತಿ । ಇಯತೀಭಿರ್ದ್ವಿಪದಾಭಿರ್ವರ್ಗಃ ಇಯತೀಭಿಶ್ಚತುಷ್ಪದಾಭಿರುಪೇತೋ ವರ್ಗಃ । ಇಯದ್ದ್ವಿಪದರೂಪೈರ್ವಾಕ್ಯೈಃ ಇಯಚ್ಚತುಷ್ಪದರೂಪೈರ್ವಾಕ್ಯೈಶ್ಚ ಪರಿಮಿತೋಽನುವಾಕ ಇತಿ । ಸೂಕ್ತಪಕ್ಷ ಏತಾವದ್ಭಿಃ ಸೂಕ್ತೈರಯಮನುವಾಕ ಇತಿ । ಕಿಂಚಾಕ್ಷರೇಣಾಕ್ಷರೇಣೈವ ಸಪ್ತ

ವಾಣೀರ್ವಾಗಧಿಷ್ಠಿತಾನಿ ಸಪ್ತ ಛಂದಾಂಸಿ ಮಿಮತೇ । ನಿರ್ಮಾಣಂ ಕುರ್ವಂತಿ । ಅಷ್ಟಾಕ್ಷರಾ ಗಾಯತ್ರೀ ಏಕಾದಶಾಕ್ಷರಾ ತ್ರಿಷ್ಟುಪ್ ದ್ವಾದಶಾಕ್ಷರಾ ಜಗತೀತಿ । ಅಕ್ಷರೈಃ ಪಾದಾಃ ಪರಿಮೀಯಂತೇ । ಪರಿಮಿತೈಃ ಪಾದೈಶ್ಛಂದಾಂಸಿ । ತತಃ ಪಾದಾನಾಂ ಛಂದಸಾಮಕ್ಷರಂ ಮೂಲಮಿತಿ । ತಥಾ ಋಗ್ವರ್ಗಸೂಕ್ತಾನುವಾಕಾದೀನಾಂ ಚಾಕ್ಷರಂ ಮೂಲಮಿತ್ಯಕ್ಷರಪ್ರಶಂಸಾ ॥

### ಪ್ರತಿಪದಾರ್ಥ

**ಗಾಯತ್ರೇಣ**— ಗಾಯತ್ರಛ್ಛಂದಸ್ಸಿನಿಂದ । **ಅರ್ಕಂ**— ಪೂಜಾಸಾಧನವಾದ ಮಂತ್ರವನ್ನು । **ಪ್ರತಿ ಮಿಮೀತೇ**— ಪ್ರತ್ಯೇಕವಾಗಿ ರಚಿಸುತ್ತಾರೆ । **ಅರ್ಕೇಣ**—ಪೂಜಾಸಾಧನವಾದ ಈ ಮಂತ್ರದಿಂದ । **ಸಾಮ**— (ಗಾಯತ್ರರಥಂತರ ಸಂಜ್ಞಾತ್ಮಕವಾದ) ಸಾಮವನ್ನು (ರಚಿಸುತ್ತಾರೆ) । **ತ್ರೈಷ್ಟುಭೇನ** — ತ್ರಿಷ್ಟುಪ್ಪಿನಿಂದ । **ವಾಕಂ**—ಸೂಕ್ತರೂಪವಾದ ಭಾಗವನ್ನು ಅಥವಾ ಪಠಿಸಬಹುದಾದ ಪ್ರತಿಯೊಂದು ಛಂದಸ್ಸನ್ನೂ (ರಚಿಸುತ್ತಾರೆ) । **ದ್ವಿಪದಾ**—ಪಾದದ್ವಯವುಳ್ಳದ್ದೂ । **ಚತುಷ್ಪದಾ**—ಪಾದಚತುಷ್ಟಯವುಳ್ಳದ್ದೂ ಆದ । **ವಾಕೇನ**—ಈ ಸೂಕ್ತಾತ್ಮಕವಾದ ಭಾಗದಿಂದ । **ವಾಕಂ**—ವರ್ಗಾನುವಾಕಾತ್ಮಕಗಳಾದ ಭಾಗಗಳನ್ನು ರಚಿಸುತ್ತಾರೆ । **ಅಕ್ಷರೇಣ** — ಅಕ್ಷರದಿಂದ । **ಸಪ್ತ ವಾಣೀಃ**—ಸಪ್ತಛ್ಛಂದಸ್ಸುಗಳನ್ನೂ । **ಮಿಮತೇ**—ನಿರ್ಮಿಸುತ್ತಾರೆ.

### ಭಾವಾರ್ಥ

ಗಾಯತ್ರಛ್ಛಂದಸ್ಸಿನಿಂದ ಕವಿಗಳು ಪೂಜಾಸಾಧನವಾದ ಮಂತ್ರವನ್ನು ಪ್ರತ್ಯೇಕವಾಗಿ ರಚಿಸುತ್ತಾರೆ. ಪೂಜಾಸಾಧನವಾದ ಈ ಮಂತ್ರದಿಂದ ಸಾಮವನ್ನು ರಚಿಸುತ್ತಾರೆ. ತ್ರಿಷ್ಟುಪ್ಪಿನಿಂದ ಸೂಕ್ತರೂಪವಾದ ಭಾಗವನ್ನೂ, ಪಾದದ್ವಯವುಳ್ಳದ್ದೂ. ಪಾದಚತುಷ್ಟಯವುಳ್ಳದ್ದೂ ಆದ ಈ ಸೂಕ್ತಾತ್ಮಕವಾದ ಭಾಗದಿಂದ ವರ್ಗಾನುವಾಕಾತ್ಮಕಗಳಾದ ಭಾಗಗಳನ್ನೂ ರಚಿಸುತ್ತಾರೆ. ಮತ್ತು ಅಕ್ಷರಗಳಿಂದ ಸಪ್ತಛ್ಛಂದಸ್ಸುಗಳನ್ನೂ ನಿರ್ಮಿಸುತ್ತಾರೆ.

### English Translation

He constructs the prayer with the Gayatri metre; with the prayer (he constructs) the Sama, and with the Trishtubh metre the couplet (or triplet): with the couplet (or triplet) he constructs the hymn with (verses of) two or four disrichs : and with the syllable they construct the seven metres.

### ವಿಶೇಷವಿಷಯಗಳು

ಅರ್ಕ, ಸಾಮ, ವಾಕ, ಸಪ್ತವಾಣೀಃ ಇವುಗಳ ರಚನೆಯೂ ಸ್ವರೂಪವೂ ವರ್ಣಿತವಾಗಿದೆ. ಅರ್ಕವೆಂದರೇನು? ಅರ್ಕದ ಸ್ವರೂಪವೇನು ಎಂಬುದನ್ನು ನಿರುಕ್ತಕಾರರು ಈ ರೀತಿ ತಿಳಿಸಿದ್ದಾರೆ. ನಿರುಕ್ತದಲ್ಲಿರುವ ವಿವರಣೆಯಂತೆ,

**ಅರ್ಕೋ ದೇವೋ ಭವತಿ ಯದೇನಮರ್ಚತಿ ।**
**ಅರ್ಕೋ ಮಂತ್ರೋ ಭವತಿ ಯದನೇನಾರ್ಚಂತಿ ।**
**ಅರ್ಕಮನ್ನಂ ಭವತ್ಯರ್ಚತಿ ಭೂತಾನಿ ।**
**ಅರ್ಕೋ ವೃಕ್ಷೋ ಭವತಿ ಸಂವೃತ್ತಃ ಕಟುಕಿಮ್ನಾ ।**

(ನಿ. ೫-೪)

ಪೂಜಾವಿಷಯವಾದುದರಿಂದ ಅರ್ಕವೇ **ದೇವತೆಯು**. ಪೂಜಾಸಾಧನವಾದುದರಿಂದ ಅರ್ಕವೇ **ಮಂತ್ರವು**. ಭೂತಗಳಿಗೆ ಚೈತನ್ಯದಾಯಿಯಾದುದರಿಂದ ಅರ್ಕವೇ **ಅನ್ನವು**. ಅರ್ಕವೆಂಬ ವೃಕ್ಷವಿಶೇಷವು ಕಟುವಾದ **ವೃಕ್ಷವು** ಎಂದು ಬೇರೆ ಬೇರೆ ಅರ್ಥಗಳನ್ನು ಹೇಳಿ,

> **ಗಾಯಂತಿ ತ್ವಾ ಗಾಯತ್ರಿಣೋಽರ್ಚಂತ್ಯರ್ಕಮರ್ಕಿಣಃ ।**
> **ಬ್ರಹ್ಮಾಣಸ್ತ್ವಾ ಶತಕ್ರತೋ ಉದ್ವಂಶಮಿವ ಯೇಮಿರೇ ॥**
>
> (ಋ. ಸಂ. ೧-೧೦-೧)

ಎಂಬ ಋಕ್ಕನ್ನುದಹರಿಸಿ ಅರ್ಕದ ಸ್ವರೂಪವನ್ನು ವಿವರಿಸಿದ್ದಾರೆ. ಅರ್ಕದ ಪ್ರಭಾವವು ಅತ್ಯಧಿಕವಾದುದೆಂದು ಅನೇಕ ಕಡೆಗಳಲ್ಲಿ ಅದರ ಮಹಿಮೆಯನ್ನು ಸ್ತುತಿಸಿದೆ.

> **ಅಥಾತಃ ಶಿರಃ । ತದ್ಗಾಯತ್ರೀಷು ಭವತ್ಯಗ್ರಂ ವೈ ಛಂದಸಾಂ ಗಾಯತ್ರ್ಯಗ್ರಮಂಗಾನಾಂ ಶಿರಃ । ತದರ್ಕವತೀಷು ಭವತ್ಯಗ್ನಿರ್ವಾ ಅರ್ಕಃ ।**
>
> (ಐ. ಆ. ೧-೪-೧)

ಎಂದು ಐತರೇಯಬ್ರಾಹ್ಮಣದಲ್ಲಿ ಪ್ರಶಂಸಿಸಿದೆ. ಈ ವಿವರಣೆಯಂತೆ **'ಇಂದ್ರಮಿದ್ಗಾಥಿನೋ ಬೃಹದಿಂದ್ರಮರ್ಕೇಭಿರರ್ಕಿಣಃ'** (ಋ. ಸಂ. ೧-೭-೧) ಎಂಬ ಋಕ್ಕಿನಿಂದ ಪ್ರಾರಂಭವಾದ ಒಂಭತ್ತುಋಕ್ಕುಗಳು ಅರ್ಕಮಂತ್ರಗಳೆಂದೂ, ಅವೇ ಎಲ್ಲಕ್ಕೂ ಶಿರಆತ್ಮಕವಾದ ಎಂದರೆ ಪ್ರಧಾನವಾದ ಮಂತ್ರಗಳೆಂದೂ, **ಗಾಯತ್ರವೇ** ಪ್ರಧಾನವಾದ ತತ್ತ್ವವಾಗಿ ಈ ಮಂತ್ರಗಳೂ ಆ ಗಾಯತ್ರರೂಪದಲ್ಲಿರುವುದರಿಂದ ಅರ್ಕಮಂತ್ರಗಳು ಉಳಿದ ಎಲ್ಲಾ ಮಂತ್ರಗಳಿಗಿಂತಲೂ ಪ್ರಧಾನವಾದ ಸ್ಥಾನವನ್ನು ಪಡೆದಿವೆಯೆಂದೂ ಸಹ ಹೇಳಿದೆ.

ಉದಾಹೃತವಾದ ಈ ಐತರೇಯಾರಣ್ಯಕದ ವಾಕ್ಯದಲ್ಲಿ **ಅಗ್ನಿ, ಗಾಯತ್ರೀ** ಮತ್ತು **ಅರ್ಕ** ಮೂರಕ್ಕೂ ಇರತಕ್ಕ ಸಹಜವಾದ ಸಂಬಂಧವನ್ನು ತೋರಿಸಿದೆ. "**ಗಾಯತ್ರೋಽಗ್ನಿಃ**" ಎಂದು ತೈತ್ತಿರೀಯಸಂಹಿತೆಯಲ್ಲಿ ಗಾಯತ್ರಿಗೂ ಅಗ್ನಿಗೂ ತಾದಾತ್ಮ್ಯವನ್ನು ಹೇಳಿರುವುದನ್ನು ಹಿಂದಿನ ಋಕ್ಕಿನ ವಿಶೇಷವಿಷಯಗಳಲ್ಲಿ ತಿಳಿಸಿದೆ. ಈ ವಾಕ್ಯದ ಆಧಾರದ ಮೇಲೆಯೇ ಸಾಯಣರು ಹಿಂದಿನ ಋಕ್ಕಿನಲ್ಲಿ **ಗಾಯತ್ರಮಾಹಿತಂ** ಎನ್ನುವುದಕ್ಕೆ **ಆಗ್ನೇಯಂ ಪದಮಾಹಿತಂ** ಎಂಬರ್ಥವನ್ನು ಮಾಡಿದ್ದಾರೆ. ಇಂತಹ ಗಾಯತ್ರರೂಪವಾದ ಅಗ್ನಿಗೂ ಅರ್ಕಕ್ಕೂ ತಾದಾತ್ಮ್ಯವನ್ನು ತೋರಿಸಿ "**ಅಗ್ನಿರ್ವಾ ಅರ್ಕಃ**" ಎಂದು ಆರಣ್ಯಕವಾಕ್ಯವಿದೆ. ಇದೇ ಅಂಶವನ್ನು ಶತಪಥಬ್ರಾಹ್ಮಣದಲ್ಲೂ ಸಹ ತಿಳಿಸುತ್ತಾ,

> **ಏಷೋಽಗ್ನಿರರ್ಕೋ ಯತ್ಪುರುಷಃ ಸ ಯೋ ಹೈತಮೇವಮಗ್ನಿಮರ್ಕಂ ಪುರುಷಮುಪಾಸ್ತೇಽಯಮಹಮಗ್ನಿರರ್ಕೋಽಸ್ಮೀತಿ ವಿದ್ಯಯಾ ಹೈವಾಸ್ಯೈಷ ಆತ್ಮನ್ನಗ್ನಿರರ್ಕಶ್ಚಿತೋ ಭವತಿ ॥**
>
> (ಶ. ಬ್ರಾ. ೧೦-೩-೪-೫)

ಇತ್ಯಾದಿವಾಕ್ಯಗಳಲ್ಲಿಯೂ ಅಗ್ನಿಗೂ ಅರ್ಕಕ್ಕೂ ಇರುವ ತಾದಾತ್ಮ್ಯವನ್ನು ತಿಳಿಸಿದೆ. ಅಗ್ನಿಪ್ರಿಯವಾದ ಗಾಯತ್ರದಿಂದ ಈ ಅರ್ಕಮಂತ್ರವನ್ನು ನಿರ್ಮಿಸುತ್ತಾರೆಂದು ಪ್ರಕೃತವಾದ ಋಕ್ಕಿನಲ್ಲಿ ವಿವರಿಸಿದೆ. ಮೇಲೆ ನಿರುಕ್ತಕಾರರ ವಾಕ್ಯಗಳಲ್ಲಿ ವಿವರಿಸಿರುವಂತೆ ಅರ್ಕವು ದೇವತಾಪರವಾದರೆ ಅಗ್ನಿಯೆಂದೂ, ಮಂತ್ರಪರವಾದರೆ ಗಾಯತ್ರಿಯೆಂದೂ, ಅರ್ಥವಾಗುತ್ತದೆಂದು ತಿಳಿಯಬೇಕು.

**ಗಾಯತ್ರೇಣ ಅರ್ಕಂ ಪ್ರತಿ ಮಿಮೀತೇ**—ಎನ್ನುವಾಗ **ಮಿಮೀತೇ** ಎಂಬ ಕ್ರಿಯಾಪದದೊಂದಿಗೆ ಪ್ರತಿ ಎಂಬ ಉಪಸರ್ಗವನ್ನು ಸೇರಿಸಿದರೆ, ಎರಡು ವಿಧವಾದ ಅರ್ಥವಾಗುವುದೆಂದು ತೋರಿಸಿದೆ. ಮೊದಲನೆಯದಾಗಿ **ಪ್ರತ್ಯೇಕಂ ಪರಿಚ್ಛಿನತ್ತಿ,** ಒಂದೊಂದು ಮಂತ್ರವನ್ನೂ ವಿಭಾಗಿಸುತ್ತಾನೆ ಎಂದರೆ ಪ್ರತಿಯೊಂದು ಮಂತ್ರವನ್ನೂ ಗಾಯತ್ರಚ್ಛಂದಸ್ಸಿನಿಂದ ಬೇರೆ ಬೇರೆಯಾಗಿ ರಚಿಸುತ್ತಾನೆ ಎಂದರ್ಥವಾಗಬಹುದು. ಅಥವಾ ಉಳಿದ ಇತರ ಛಂದಸ್ಸುಗಳೂ ಸಹ ಗಾಯತ್ರಚ್ಛಂದಸ್ಸಿನ ಆಧಾರದಮೇಲೆಯೇ ರಚಿತವಾಗುವುವು. ಹೇಗೆಂದರೆ, **ಇತರೇಷಾಂ ಛಂದಸಾ ಅಸ್ಯೈವ ಚತುಶ್ಚತುರಕ್ಷರಾಧಿಕ್ಯೇನ ತತ್ತಚ್ಛಂದೋಭಿಃ ಪ್ರತಿಮಿಮೀತೇ ಇತ್ಯರ್ಥಃ।** ಗಾಯತ್ರಚ್ಛಂದಸ್ಸಿಗೆ ಇಪ್ಪತ್ತುನಾಲ್ಕು ಅಕ್ಷರಗಳಾದರೆ :

| | |
|---|---|
| ಉಷ್ಣಿಕ್ | ೨೪ + ೪ (೨೮) |
| ಅನುಷ್ಟುಪ್ | ೨೪ + ೪ + ೪ ; (೩೨) |
| ಬೃಹತೀ | ೨೪ + ೪ + ೪ + ೪ ; (೩೬) |
| ಪಂಕ್ತಿಃ | ೨೪ + ೪ + ೪ + ೪ + ೪ (೪೦) |
| ತ್ರಿಷ್ಟುಪ್ | ೨೪ + ೪ + ೪ + ೪ + ೪ + ೪ (೪೪) |
| ಜಗತೀ | ೨೪ + ೪ + ೪ + ೪ + ೪ + ೪ + ೪ (೪೮) |

ಈ ರೀತಿಯಾಗಿ ನಾಲ್ಕು ನಾಲ್ಕು ಅಕ್ಷರಗಳು ಅಧಿಕವಾಗಿ ಉಷ್ಣಿಗಾದಿಗಳು ಗಾಯತ್ರದ ಆಧಾರದ ಮೇಲೆಯೇ ರಚಿತವಾಗುವುವು ಎಂದೂ ಆಗಬಹುದು, ಎರಡನೆಯದಾಗಿ **ಪ್ರತಿಶಬ್ದವು ಸಮ್** ಎಂಬ ಪದದ ಅರ್ಥದಲ್ಲಿದ್ದರೆ, ಆಗ ; ಯದ್ವಾ **ಪ್ರತಿಶಬ್ದಃ ಸಮ್ ಇತ್ಯೇತಸ್ಮಿನ್ನರ್ಥೇ। ಛಂದೋಭಿರ್ಮಂತ್ರಾನ್ ಸಂಮಿತಂ ಕರೋತೀತ್ಯರ್ಥಃ।** ಮೊದಲು ಮಂತ್ರಗಳನ್ನು ನಿರ್ಮಿಸಿ ಅನಂತರ ಅವನ್ನು ಛಂದಸ್ಸುಗಳಿಂದ ಯುಕ್ತವಾದವನ್ನಾಗಿ ಮಾಡುತ್ತಾನೆಂದರ್ಥವಾಗುತ್ತದೆ ಎಂದು ವಿವರಿಸಿದೆ. ಅನಂತರ,

**ಅರ್ಕೇಣ ಸಾಮಃ**—ಮಂತ್ರರೂಪವಾದ ಈ ಅರ್ಕದಿಂದ ಸಾಮವನ್ನು ಎಂದರೆ **ಗಾಯತ್ರ ರಥಂತರ**ವೆಂದು ಸಂಜ್ಞೆಯುಳ್ಳ ಸಾಮವನ್ನು ನಿರ್ಮಿಸುತ್ತಾರೆ ಎಂದರ್ಥ. ಗಾಯತ್ರದಿಂದ ಅರ್ಕವೂ, ಅರ್ಕದಿಂದ ಸಾಮವೂ ಸೃಷ್ಟವಾದರೆ ಅದಕ್ಕೆ **ಗಾಯತ್ರಸಾಮ**ವೆಂದೂ ಹೇಳಬಹುದು. ಅಥವಾ **ಗಾಯತ್ರಸಾಮ, ರಥಂತರಸಾಮ, ಬೃಹತ್‌ಸಾಮ** ಎಂಬ ಮೂರು ಬಗೆಯೂ ಆಗಬಹುದು. ಈ ಮೂರು ಸಾಮಗಳೂ **ಅಗ್ನಿ** ಪರವಾದವು ಎಂಬುದನ್ನು ಶತಪಥಬ್ರಾಹ್ಮಣದಲ್ಲಿ ತಿಳಿಸಿದೆ.

> **ವೀರ್ಯವತ್ತರೋ ಹಿಂಕೃತ್ಯ ಗಾಯತಿ ತತ್ರ ಹಿ ಸರ್ವಂ ಕೃತ್ಸ್ನಗ್ಂ ಸಾಮ ಭವತಿ। ಗಾಯತ್ರಂ ಪುರಸ್ತಾದ್ಗಾಯತಿ । ಅಗ್ನಿರ್ವೈ ಗಾಯತ್ರಮಗ್ನಿಮೇವಾಸ್ಯೈತಚ್ಛಿರಃ ಕರೋತ್ಯಥೋ ಶಿರ ಏವಾಸ್ಯೈತದನಸ್ಥಿಕಮಮೃತಂ ಕರೋತಿ ।**
>
> (ಶ. ಬ್ರಾ. ೯–೧–೨–೩೫)

ಯಜ್ಞಕರ್ತನಾದ ಯಜಮಾನನು ಪೂರ್ಣವಾದ ಸಾಮವನ್ನು ಗಾನಮಾಡುತ್ತಾನೆ. ಅದರಲ್ಲಿ ಮೊದಲು ಗಾಯತ್ರ ಸಾಮವು ಗಾನಮಾಡಲ್ಪಡುತ್ತದೆ. ಗಾಯತ್ರಚ್ಛಂದಸ್ಸೇ ಅಗ್ನಿಯಾದುದರಿಂದ ಅಗ್ನಿಯೇ ಈ ಯಜಮಾನನಿಗೆ ಶಿರೋರೂಪನಾಗಿರುತ್ತಾನೆ.

**ರಥಂತರಂ ದಕ್ಷಿಣೇ ಪಕ್ಷೇ । ಇಯಂ ವೈ ರಥಂತರಮಿಯಮು ವಾ ಏಷಾಂ ಲೋಕಾನಾಗ್ಂ ರಸತಮೋಽಸ್ಯಾಗ್ಂಹೀಮೇ ಸರ್ವೇ ರಸಾ ರಸತಮಗ್ಂಹ ವೈ ತದ್ರಥಂತರಮಿತ್ಯಾಚಕ್ಷತೇ ಪರೋಕ್ಷಂ ಪರೋಕ್ಷಕಾಮಾ ಹಿ ದೇವಾ ಇಮಾಮೇವಾಸ್ಯೈತದ್ದಕ್ಷಿಣಂ ಪಕ್ಷಂ ಕರೋ-ತ್ಯಥೋ ದಕ್ಷಿಣಮೇವಾಸ್ಯೈತತ್ಪಕ್ಷಮನಸ್ಥಿಕಮಮೃತಂ ಕರೋತಿ ॥**

(ಶ. ಬ್ರಾ ೯-೧-೨-೩೬)

ರಥಂತರಸಾಮವನ್ನು ಬಲಭಾಗದಲ್ಲಿ ಗಾನಮಾಡುತ್ತಾನೆ. ಲೋಕಗಳಲ್ಲೆಲ್ಲಾ ರಸವತ್ತಾದುದೂ ಅಗ್ನ್ಯಾವಾಸ ಸ್ಥಾನವಾದುದೂ ಆದ ಪೃಥ್ವಿಯೇ ರಥಂತರವು, '**ರಸಂತರ**' ವೆಂದಿರಬೇಕಾದುದನ್ನು ಪರೋಕ್ಷಕಾಮಿಗಳಾದ ದೇವತೆಗಳು '**ರಥಂತರ**' ವೆಂದು ಕರೆಯುತ್ತಾರೆ. ರಸತಮವಾದ ರಥಂತರದ ಗಾನದಿಂದ ಪೃಥ್ವಿಯು ಯಜಮಾನನ ಬಲಬಾಗದಲ್ಲಿದ್ದು ಅವನಿಗೆ ಅಮೃತತ್ವವು ಲಭಿಸುತ್ತದೆ.

**ಬೃಹದುತ್ತರೇ ಪಕ್ಷೇ । ದ್ಯೌರ್ವೈ ಬೃಹದ್ದ್ಯೌರ್ಹಿ ಬರ್ಹಿಷ್ಠಾ ದಿವಮೇವಾಸ್ಯೈತದುತ್ತರಂ ಪಕ್ಷಂ ಕರೋತ್ಯಥೋ ಉತ್ತರಮೇವಾಸ್ಯೈತತ್ಪಕ್ಷಮನಸ್ಥಿಕಮಮೃತಂ ಕರೋತಿ ॥**

(ಶ. ಬ್ರಾ. ೯-೧-೨-೩೭)

ಎಡಭಾಗದಲ್ಲಿ ಬೃಹತ್‌ಸಾಮವನ್ನು ಗಾನಮಾಡುತ್ತಾನೆ ಸಕಲಲೋಕಗಳಲ್ಲಿಯೂ ಅತ್ಯಂತ ಬೃಹತ್ತಾದ ದ್ಯುಲೋಕವೇ ಈ ಅಗ್ನಿಯು ಎಡಭಾಗದಲ್ಲಿದ್ದು ಯಜಮಾನನಿಗೆ ಅಮೃತತ್ತ್ವವು ಲಭಿಸುವುದು, ಎಂದು ಸಾಮಗಾನ ದಲ್ಲಿರುವ ಪ್ರಭೇದಗಳನ್ನು ಹೇಳಿದೆ. ಅಲ್ಲದೆ ಇದೇ ಸಾಮದ ಪ್ರಭಾವವನ್ನೂ ಸಾಮಗಾನದಿಂದ ಪ್ರಾಪ್ತವಾಗತಕ್ಕ ಪ್ರಯೋಜನವನ್ನೂ ತಿಳಿಸುತ್ತಾ ಶತಪಥಬ್ರಾಹ್ಮಣದ ಇದೇ ಭಾಗದಲ್ಲಿ,

**ಅಥೈನಂ ಸಾಮಭಿಃ ಪರಿಗಾಯತಿ । ಅತ್ರೈಷ ಸರ್ವೋಽಗ್ನಿಃ ಸಂಸ್ಕೃತಸ್ತಸ್ಮಿನ್ ದೇವಾ ಏತದ-ಮೃತಗ್ಂ ರೂಪಮುತ್ತಮಮದಧುಸ್ತಥೈವಾಸ್ಮಿನ್ನಯಮೇತದಮೃತಗ್ಂ ರೂಪಮುತ್ತಮಂ ದಧಾತಿ ಸಾಮಾನಿ ಭವಂತಿ ಪ್ರಾಣಾ ವೈ ಸಾಮಾನ್ಯಮೃತಮು ವೈ ಪ್ರಾಣಾ ಅಮೃತಮೇವಾಸ್ಮಿ-ನ್ನೇತದ್ರೂಪಮುತ್ತಮಂ ದಧಾತಿ ಸರ್ವತಃ ಪರಿಗಾಯತಿ ಸರ್ವತ ಏವಾಸ್ಮಿನ್ನೇತದಮೃತಗ್ಂ-ರೂಪಮುತ್ತಮಂ ದಧಾತಿ ।**

(ಶ. ಬ್ರಾ. ೯-೧-೨-೩೨)

ಅಗ್ನಿಯ ಸುತ್ತಲೂ ಈ ಸಾಮಗಾನವನ್ನು ಮಾಡತಕ್ಕದ್ದು. ಆದುದರಿಂದಲೇ ಋತ್ವಿಕ್ಕುಗಳು ತಮ್ಮ ಧ್ಯಾನ ಪೂರ್ವಕವಾದ ಮನಸ್ಸಿನಿಂದ ರಥಂತರಾದಿ ಸಾಮಗಳನ್ನು ಗಾನಮಾಡುತ್ತಾರೆ. ಈ ಗಾನದಿಂದ ಅಗ್ನಿಯೂ ಪೂರ್ಣಾ ಕಾರನಾಗುತ್ತಾನೆ. ದೇವತೆಗಳೂ ಅತ್ಯುತ್ತಮರೂಪಾತ್ಮಕವಾದ ಅಮೃತತ್ತ್ವವನ್ನು ಇರಿಸಿದರು. ಸಾಮವೇ ಮುಖ್ಯಪ್ರಾಣಗಳು. ಈ ಮುಖ್ಯಪ್ರಾಣಗಳು ಅಮೃತಗಳು. ಆದುದರಿಂದ ಸಾಮಗಾನವು ಅಮೃತತ್ತ್ವವನ್ನುಂಟು ಮಾಡುತ್ತವೆ

ಇಂತಹ ಪವಿತ್ರವಾದುದೂ ಅಮೃತದಾಯಕವಾದುದೂ ಆದ **ಸಾಮವನ್ನು ಅರ್ಕೇಣ** (ಪ್ರತಿ ಮಿಮಾತೇ) ಅರ್ಕದಿಂದ ನಿರ್ಮಿಸಿದರು ಎಂದಿರುವಾಗ ಇಲ್ಲಿ ಸಾಯಣರು ಒಂದು ಆಕ್ಷೇಪವನ್ನೂಹಿಸಿ ಅದಕ್ಕೆ ಸಮಾಧಾನವನ್ನೂ

ಹೇಳಿದ್ದಾರೆ ಶ್ರುತಿವಾಕ್ಯದ ಆಧಾರವೇಲೆಯೇ ಈ ಸಂದರ್ಭದಲ್ಲಿ ಒಂದು ಆಕ್ಷೇಪವು ಪ್ರಾಪ್ತವಾಗಲು ಅವಕಾಶವಿದೆ. ಅದು ಹೇಗೆಂದರೆ,

**' ಏಕಂ ಸಾಮ ತೃಚೇ ಕ್ರಿಯತೇ ' ಇತಿ ತಿಸೃಷು ಏಕಂ ಸಾಮ ವಿಹಿತಂ ಅತಃ ಅರ್ಕ್ಯೈಃ ಸಾಮ ಇತಿ ವಕ್ತವ್ಯಂ ಕಥಮುಚ್ಯತೇ ಅರ್ಕೇಣ ಇತಿ ||**

" ಮೂರು ಋಕ್ಕುಗಳಲ್ಲಿ ಒಂದು ಸಾಮವು ಸೇರಿದೆ. " ಎಂದು ಶ್ರುತಿವಾಕ್ಯವು ಹೇಳುತ್ತದೆ. ಆದುದರಿಂದ **ಅರ್ಕ್ಯೈಃ** ಅರ್ಕಗಳಿಂದ ಸಾಮವು ನಿರ್ಮಿತವಾಗುತ್ತದೆ ಎಂದು ಹೇಳಬೇಕೇ ಹೊರತು **ಅರ್ಕೇಣ** (ಅರ್ಕದಿಂದ) **ಪ್ರತಿಮಿಮೀತೇ** ಎಂದು ಏಕವಚನದ ಪ್ರಯೋಗವು ಸರಿಯಲ್ಲ ಎಂಬುದು ನ್ಯಾಯವಾದ ಆಕ್ಷೇಪವಾಗಿದೆ. ಇದಕ್ಕೆ ಶೃತಿವಾಕ್ಯದ ಪ್ರಮಾಣವೇನಿದೆಯೆಂದು ಕೇಳಿದರೆ ಐತರೇಯಬ್ರಾಹ್ಮಣಾದಿಗಳಲ್ಲಿ ಋಕ್ಕಿಗೂ ಸಾಮಕ್ಕೂ ಇರತಕ್ಕ ಸಂಬಂಧವನ್ನು ಈ ರೀತಿ ವರ್ಣಿಸಿದೆ. ಇದಕ್ಕೆ ಒಂದು ಪೂರ್ವಕಥಾಸಂದರ್ಭವೂ ಉಕ್ತವಾಗಿದೆ

**ಋಕ್ಚ ವಾ ಇದಮಗ್ರೇ ಸಾಮ ಚಾಸ್ತಾಂ ಸೈವ ನಾಮ ಋಗಾಸೀದಮೋ ನಾಮ ಸಾಮ ಸಾ ವಾ ಋಕ್ಸಾಮೋಪಾವದನ್ಮಿಥುನಂ ಸಂಭವಾವ ಪ್ರಜಾತ್ಯಾ ಇತಿ ನೇತ್ಯಬ್ರವೀತ್ಸಾಮ ಜ್ಯಾಯಾನ್ವಾ ಅತೋ ಮಮ ಮಹಿಮೇತಿ ತೇ ದ್ವೇ ಭೂತ್ವೋಪಾವದತಾಂ ತೇನ ಪ್ರತಿಚನ ಸಮವದತ ತಾಸ್ತಿಸ್ರೋ ಭೂತ್ವೋಪಾವದಂಸ್ತತ್ತಿಸೃಭಿಃ ಸಮಭವದ್ಯತ್ತಿಸೃಭಿಃ ಸಮಭವತ್ತಸ್ಮಾತ್ತಿಸೃಭಿಸ್ತುವಂತಿ ತಿಸೃಭಿರುದ್ಗಾಯಂತಿ ತಿಸೃಭಿರ್ಹಿ ಸಾಮ ಸಂಮಿತಂ ತಸ್ಮಾದೇಕಸ್ಯ ಬಹ್ವ್ಯೋ ಜಾಯಾ ಭವಂತಿ ನೈಕಸ್ಯೈ ಬಹವಃ ಸಹ ಪತಯೋ ಯದ್ವೈ ತತ್ಸಾ ಚಾಮಶ್ಚ ಸಮಭವತಾಂ ತತ್ಸಾಮಾಭವತ್ತತ್ಸಾಮ್ನಃ ಸಾಮತ್ವಂ ||**

(ಐ. ಬ್ರಾ. ೩-೨೩)

ಪ್ರಾರಂಭದಲ್ಲಿ **ಋಕ್ಕೂ ಸಾಮವೂ** ಜೊತೆಯಲ್ಲಿದ್ದವು. ಋಕ್ಕು ಸ್ತ್ರೀರೂಪದಲ್ಲಿಯೂ ಸಾಮವು ಪುಂರೂಪದಲ್ಲಿಯೂ ಇದ್ದವು. ಆಗ ಋಕ್ಕು ಸಾಮವನ್ನು ಸಮೀಪಿಸಿ ನಾವಿಬ್ಬರೂ ದಾಂಪತ್ಯಸಂಬಂಧವನ್ನು ಬೆಳೆಸಿ ಸಂತಾನವನ್ನು ಪಡೆಯೋಣ ಎಂದಾಗ ಸಾಮವು ಅದಾಗುವುದಿಲ್ಲ, ನನ್ನ ಮಹಿಮೆಯು ನಿನ್ನದಕ್ಕಿಂತಲೂ ಅಧಿಕವಾದುದು, ಎಂದು ತ್ತರವನ್ನು ಕೊಟ್ಟಿತು. ಆಗ ಋಕ್ಕು ಮೊದಲಿಗಿಂತ ಎರಡರಷ್ಟು ಬೆಳೆದು (ಎರಡು ರೂಪವಾಗಿ) **ಪುನಃ ಕೇಳಿತು.** ಆಗಲೂ ಸಾಮವು ಒಪ್ಪಲಿಲ್ಲ. ಮೂರಾಗಿ ಬೆಳೆದು ಸಾಮವನು **ಕೇಳಲಾಗಿ** ಆಗ ಸಾಮವು **ಒಪ್ಪಿಕೊಂಡಿತು.** ಮೂರು ಋಕ್ಕುಗಳೊಂದಿಗೆ ಸಾಮವು ಬೆರೆತದ್ದರಿಂದ ಮೂರು ಋಕ್ಕುಗಳಿಂದ ಸ್ತುತಿಸುತ್ತಾರೆ. ಮೂರು ಋಕ್ಕುಗಳಿಂದ ಗಾನಮಾಡುತ್ತಾರೆ. ಆದ:ದರಿಂದಲೇ ಲೋಕದಲ್ಲಿಯೂ ಪುರುಷನಿಗೆ ಬಹುಪತ್ನಿಯರಿರುವುದು ರೂಢಿಯಲ್ಲಿದೆ. ಸ್ತ್ರೀಯು ಬಹುಪತಿತ್ವವನ್ನು ಹೊಂದಲಾಗುವುದಿಲ್ಲ. ಈ ರೀತಿಯಲ್ಲಿ ಋಕ್ಕೂ ಸಾಮವೂ ಒಟ್ಟಿಗೆ ಸೇರಿದ್ದರಿಂದಲೇ (ಸಾ+ಅಮ) ಸಾಮವೆಂದು ಹೆಸರು ಪ್ರಸಿದ್ಧವಾಯಿತು

ಈ ರೀತಿಯಲ್ಲಿ ಮೂರುಋಕ್ಕುಗಳ ಜೊತೆಯಲ್ಲಿ ಒಂದು ಸಾಮವು ಸೇರಬೇಕಾದುದು ನ್ಯಾಯವಾಗಿರುವುದರಿಂದ ಮೇಲಿನ ಆಕ್ಷೇಪವು ನ್ಯಾಯವಾಗಿದೆಯಾದರೂ ಸಾಯಣರು ಇದಕ್ಕೆ ಸಮಾಧಾನವನ್ನು ಹೇಳುತ್ತಾ, **ಇತಿ ನ । ವಸ್ತುತಃ ಏಕಂ ಸಾಮ ಏಕಸ್ಯಾಂ ಋಚಿ ಆರೂಢಂ ಪಶ್ಚಾದನ್ಯೋನ್ಯಾಂ ತದುತ್ತರಯೋರ್ಗಾ-**

**ಯತಿ ಇತ್ಯೇತಿದೇಶತಃ ಪ್ರಾಪ್ತಂ ತಿಸೃಷು ಗಾನಂ । ಅತಃ ಏಕವಚನಮವಿರುದ್ಧಂ ॥** ವಾಸ್ತವವಾಗಿ ಒಂದು ಸಾಮವು ಒಂದೇ ಋಕ್ಕಿನಲ್ಲಿ ಗಾನಮಾಡಲ್ಪಡುತ್ತದೆ. ಅನಂತರ ಉಳಿದ ಋಕ್ಕುಗಳೊಡನೆ ಸಂಬಂಧವನ್ನು ಬೆಳೆಸುತ್ತದೆ. ಎಂದರೆ ಉಳಿದ ಋಕ್ಕುಗಳಲ್ಲಿ ಗಾನಮಾಡಲ್ಪಡುತ್ತದೆ. ಆದ್ದರಿಂದ ಇಲ್ಲಿ **ಅರ್ಕೇಣ** ಎಂದು ಏಕವಚನದಲ್ಲಿ ಹೇಳಿರುವುದು ಸಂಪ್ರದಾಯವಿರುದ್ಧವೂ ಅಲ್ಲ, ಶಾಸ್ತ್ರವಿರುದ್ಧವೂ ಅಲ್ಲ ಎಂದು ತಿಳಿಸಿದ್ದಾರೆ.

ಅರ್ಕರೂಪವಾದ ಋಕ್ಕಿಗೂ, ಸಾಮಕ್ಕೂ ಇರುವ ಸಂಬಂಧವು ದಾಂಪತ್ಯಸಂಬಂಧವೆಂದು ಅನೇಕಕಡೆಗಳಲ್ಲಿ ಸ್ತುತವಾಗಿದೆ. ಶತಪಥಾದಿಬ್ರಾಹ್ಮಣಗಳಲ್ಲೂ, ಛಾಂದೋಗ್ಯಾದ್ಯುಪನಿಷತ್ತುಗಳಲ್ಲೂ ಋಕ್ಕನ್ನು ಪತ್ನಿಯೆಂದೂ ಸಾಮವನ್ನು ಪತಿಯೆಂದೂ ನಿರ್ದೇಶಿಸಿದೆ.

> **ತದ್ಯಥಾ ಪಿತುಃ ಪುತ್ರಮೇವಂ ತ್ರೀಣಿ ಪ್ರಥಮಾನ್ಯಾಹಾಥ ಕಸ್ಮಾದೃಕ್ಸಾಮಯೋಃ ಸಂಕ್ರಾಮತೀತಿ ಸಾಮ ವಾ ಋಚಃ ಪತಿಸ್ತದ್ಯತ್ರೈತ್ರಾಪಿ ಯಥಾ ಪಿತುಃ ಪುತ್ರಮೇವಂ ಬ್ರೂಯಾದ್ಯಥಾ ಪತಿಗ್ಂ ಸಂತಂ ಪುತ್ರಂ ಬ್ರೂಯಾತ್ತಾದೃಕ್ತತ್ತಸ್ಮಾದೃಕ್ಸಾಮಯೋಃ ಸಂಕ್ರಾಮತಿ ತಸ್ಮಾದು ತ್ರಿಃ ಸಂತನೋತೀತಿ ಪಿತರಂ ಪುತ್ರಂ ಪೌತ್ರಂ ತಾಂಸ್ತತ್ಸಂತನೋತಿ ತಸ್ಮಾದು ತೇಭ್ಯ ಏಕ ಏವ ದಧಾತಿ ॥**

(ಶ. ಬ್ರಾ. ೮-೧-೩-೫)

ಪಿತೃವಿಗೂ ಪುತ್ರನಿಗೂ ಸಂಬಂಧವನ್ನು ಹೇಳುವಾಗ ಸಾಮಕ್ಕೂ ಋಕ್ಕಿಗೂ ಇರುವ ಸಂಬಂಧಕ್ಕೆ ಹೋಲಿಸುವುದರಲ್ಲಿ ಔಚಿತ್ಯವೇನು ಎಂದು ಪ್ರಶ್ನೆಬಂದರೆ, ಸಾಮವು ಋಕ್ಕಿಗೆ ಪತಿಯಾಗಿದೆ. ಅದರಂತೆಯೇ ಪತಿಯ ಸ್ಥಾನವನ್ನು ತೋರಿಸುತ್ತದೆ. ಪಿತೃ, ಪುತ್ರ, ಪೌತ್ರ ಎಂದು ಮೂರು ಪರ್ಯಾಯವಿದೆ ಎಂದು ಸಾಮಕ್ಕೂ ತ್ರಯಾತ್ಮಕವಾದ ಋಕ್ಕಿಗೂ ಇರುವ ಪತಿಪತ್ನಿಯರ ಸಂಬಂಧವನ್ನೂ, ತಿಳಿಸಿದೆ. ಇದರಂತೆಯೇ ಛಾಂದೋಗ್ಯೋಪನಿಷತ್ತಿನಲ್ಲಿಯೂ ಋಕ್ಕಿಗೂ ಸಾಮಕ್ಕೂ ಸಂಬಂಧವನ್ನು ತೋರಿಸುತ್ತಾ ಅಧಿದೈವತಪಕ್ಷದಲ್ಲಿ ಒಂದು ವಿಧವಾಗಿಯೂ ಅಧ್ಯಾತ್ಮಪಕ್ಷದಲ್ಲಿ ಇನ್ನೊಂದು ವಿಧವಾಗಿಯೂ ವರ್ಣಿಸಿದೆ. ಅಧಿದೈವತಪಕ್ಷದಲ್ಲಿರುವಂತೆ—(ಛಾ. ಉ. ೧-೬-೧-೮),

> **ಇಯಮೇವರ್ಗಗ್ನಿಃ ಸಾಮ ತದೇತದೇತಸ್ಯಾಮೃಚ್ಯಧ್ಯೂಢಂ ಸಾಮ ತಸ್ಮಾದೃಚ್ಯಧ್ಯೂಢಂ ಸಾಮ ಗೀಯತ ಇಯಮೇವ ಸಾಗ್ನಿರಮಸ್ತತ್ಸಾಮ ॥ ೧ ॥**
>
> **ಅಂತರಿಕ್ಷಮೇವರ್ಗ್ವಾಯುಃ ಸಾಮ ತದೇತದೇತಸ್ಯಾಮೃಚ್ಯಧ್ಯೂಢಂ ಸಾಮ ತಸ್ಮಾದೃಚ್ಯಧ್ಯೂಢಂ ಸಾಮ ಗೀಯತೇಽಂತರಿಕ್ಷಮೇವ ಸಾ ವಾಯುರಮಸ್ತತ್ಸಾಮ ॥ ೨ ॥**
>
> **ದ್ಯೌರೇವರ್ಗಾದಿತ್ಯಃ ಸಾಮ ತದೇತದೇತಸ್ಯಾಮೃಚ್ಯಧ್ಯೂಢಂ ಸಾಮ ತಸ್ಮಾದೃಚ್ಯಧ್ಯೂಢಂ ಸಾಮ ಗೀಯತೇ ದ್ಯೌರೇವ ಸಾದಿತ್ಯೋಽಮಸ್ತತ್ಸಾಮ ॥ ೩ ॥**
>
> **ನಕ್ಷತ್ರಾಣ್ಯೇವರ್ಕ್ಚಂದ್ರಮಾಃ ಸಾಮ ತದೇತದೇತಸ್ಯಾಮೃಚ್ಯಧ್ಯೂಢಂ ಸಾಮ ತಸ್ಮಾದೃಚ್ಯಧ್ಯೂಢಂ ಸಾಮ ಗೀಯತೇ ನಕ್ಷತ್ರಾಣ್ಯೇವ ಸಾ ಚಂದ್ರಮಾ ಅಮಸ್ತತ್ಸಾಮ ॥ ೪ ॥**

ಈ ವಿವರಣೆಯಲ್ಲಿ ಪೃಥ್ವೀ, ಅಂತರಿಕ್ಷ, ದ್ಯುಲೋಕ, ನಕ್ಷತ್ರಗಳು ಇವುಗಳಿಗೂ, ಅಗ್ನಿ, ವಾಯು, ಆದಿತ್ಯ, ಚಂದ್ರಮಾಃ ದೇವತೆಗಳಿಗೂ ಇರುವ ಸಂಬಂಧವನ್ನು ಋಕ್ಕಿಗೂ ಸಾಮಕ್ಕೂ ಇರುವ ಸಂಬಂಧವೆಂದು ತಿಳಿಸುವುದಲ್ಲದೆ

ಪೃಥ್ವ್ಯಾದಿಗಳಿಗೂ ಋಕ್ಕಿಗೂ ಮತ್ತು ಅಗ್ನ್ಯಾದಿದೇವತೆಗಳಿಗೂ ಸಾಮಕ್ಕೂ ತಾದಾತ್ಮ್ಯವನ್ನೇ ಹೇಳಿದೆ. ಸಾಮಕ್ಕೆ ಋಕ್ಕು ಯಾವ ರೀತಿಯಲ್ಲಿ ಅಧಿಷ್ಠಾನವಾಗಿದೆಯೋ ಅದರಂತೆಯೇ ಪೃಥಿವ್ಯಾದಿಗಳು ಅಗ್ನ್ಯಾದಿಗಳಿಗೆ ಅಧಿಷ್ಠಾನಗಳಾಗಿವೆ. ಪೃಥಿವ್ಯಾದಿಗಳೇ ಋಕ್ಕು. ಆದುದರಿಂದ ಇವೇ **ಸಾ** ಎಂದೂ ಅಗ್ನ್ಯಾದಿಗಳೇ **ಅಮ**ವೆಂದೂ ಎರಡೂ ಸೇರಿ **ಸಾಮ**ವೆಂದು ಪ್ರಸಿದ್ಧವಾದವೆಂದೂ ವರ್ಣಿಸಿದೆ. ಇದೇ ರೀತಿಯಲ್ಲಿ ಅಧ್ಯಾತ್ಮಪಕ್ಷದಲ್ಲೂ ವಿವರಿಸುತ್ತಾ, (ಛಾ. ಉ. ೧-೭-೧ ರಿಂದ ೪).

**ಅಥಾಧ್ಯಾತ್ಮಂ ವಾಗೇವರ್ಕ್ಪ್ರಾಣಃ ಸಾಮ ತದೇತದೇತಸ್ಯಾಮೃಚ್ಯಧ್ಯೂಢಂ ಸಾಮ ತಸ್ಮಾದೃಚ್ಯಧ್ಯೂಢಂ ಸಾಮ ಗೀಯತೇ । ವಾಗೇವ ಸಾ ಪ್ರಾಣೋಽಮಸ್ತತ್ಸಾಮ ॥ ೧ ॥**

**ಚಕ್ಷುರೇವರ್ಗಾತ್ಮಾ ಸಾಮ .... .... .... .... ಚಕ್ಷುರೇವ ಸಾತ್ಮಾಮಸ್ತತ್ಸಾಮ ॥ ೨ ॥**

**ಶ್ರೋತ್ರಮೇವರ್ಙ್ಮನಃ ಸಾಮ .... .... .... .... ಶ್ರೋತ್ರಮೇವ ಸಾ ಮನೋಽಮಸ್ತತ್ಸಾಮ ॥೩॥**

ಇತ್ಯಾದಿಯಾಗಿ ವಾಕ್, ಚಕ್ಷುಸ್, ಶ್ರೋತ್ರ ಇತ್ಯಾದಿಗಳು ಪ್ರಾಣ, ಆತ್ಮ ಮತ್ತು ಮನಸ್ಸು ಇತ್ಯಾದಿಗಳಿಗೆ ಅಧಿಷ್ಠಾನಗಳಾಗಿ ಋಕ್ಕಿಗೂ ಸಾಮಕ್ಕೂ ಇರುವ ಸಂಬಂಧವನ್ನು ತೋರಿಸುತ್ತವೆ. ವಾಗಾದಿಗಳೇ ಋಕ್ಕುಗಳು **(ಸಾ)** ಪ್ರಾಣಾದಿಗಳೇ **ಅಮವು** ಎರಡೂ ಸೇರಿ **ಸಾಮ**ವಾಗುತ್ತವೆ. ಇದು ಅಧ್ಯಾತ್ಮಪಕ್ಷದ ವಿವರಣೆಯಾಗಿದೆ.

ಈ ವಿಧವಾಗಿ ಋಕ್ಕಿಗೂ ಸಾಮಕ್ಕೂ ಇರುವ ಸಂಬಂಧವನ್ನು ಹೇಳುವಾಗ ಪೃಥಿವ್ಯಾದಿಮೂರುಲೋಕಗಳೂ, ಈ ಲೋಕದ ಅಧಿಪತಿಗಳಾದ ಅಗ್ನ್ಯಾದಿದೇವತೆಗಳೂ ಈ ರೂಪದಲ್ಲಿರುವರೆಂದೂ ಅಥವಾ ಋಕ್ಸಾಮಗಳೇ ಆ ರೂಪದಲ್ಲಿರುವುದೆಂದೂ ಅಧಿದೈವತರೂಪದಲ್ಲಿಯೂ ಅಧ್ಯಾತ್ಮರೂಪದಲ್ಲಿಯೂ ಋಕ್ಸಾಮಗಳ ವಿಶ್ವವ್ಯಾಪ್ತಿಯನ್ನು ವರ್ಣಿಸಿದೆ.

**ಸ ಏಷ ಯೋ ಚೈತಸ್ಮಾದರ್ವಾಂಚೋ ಲೋಕಾಸ್ತೇಷಾಂ ಚೇಷ್ಟೇ ಮನುಷ್ಯಕಾಮಾನಾಂ ಚೇತಿ ತದ್ಯ ಇಮೇ ವೀಣಾಯಾಂ ಗಾಯಂತ್ಯೇತಂ ತೇ ಗಾಯಂತಿ ತಸ್ಮಾತ್ತೇ ಧನಸನಯಃ ।**

(ಛಾ. ಉ. ೧-೭-೬)

ಅವನು ಇದರಡಿಯಲ್ಲಿರುವ (ಚಕ್ಷುಸ್ಸಿನೊಳಗಿರುವ ಆತ್ಮಸಂಬಂಧಿಯಾದ) ಸಮಸ್ತಲೋಕಗಳಿಗೂ, ಸಮಸ್ತ ಕಾಮಗಳಿಗೂ ಅಧಿಪತಿಯಾಗಿರುವನು. ಈ ಸಾಮವನ್ನು ವೀಣಾಗಾನರೂಪದಲ್ಲಿ ಹಾಡುವವರಿಗೆ ಸಮಸ್ತವಿಧವಾದ ಧನಸಂಪತ್ತೂ ಲಭಿಸುತ್ತವೆ. ಇಷ್ಟೇ ಅಲ್ಲದೆ

**ಅಥ ಯ ಏತದೇವಂ ವಿದ್ವಾನ್ಸಾಮ ಗಾಯತ್ಯುಭೌ ಸ ಗಾಯತಿ ಸೋಽಮುನೈವ ಸ ಏಷ ಯೇ ಚಾಮುಷ್ಮಾತ್ಪರಾಂಚೋ ಲೋಕಾಸ್ತಾಂಶ್ಚಾಪ್ನೋತಿ ದೇವಕಾಮಾಂಶ್ಚ ॥**

**ಕಿಂ ತೇ ಕಾಮಮಾಗಾಯಾನೀತ್ಯೇಷ ಹ್ಯೇವ ಕಾಮಾಗಾನಸ್ಯೇಷ್ಟೇ ಯ ಏವಂ ವಿದ್ವಾನ್ಸಾಮ ಗಾಯತಿ ಸಾಮ ಗಾಯತಿ ॥**

(ಛಾ. ಉ. ೧-೭-೭ ರಿಂದ ೯)

ಈ ಸಾಮಗಾನದಿಂದ ದೇವಮಾನವಾದಿಗಳಿಗೆ ಸಾಧಾರಣವಾದ ಸಮಸ್ತಕಾಮಗಳೂ ಲಭಿಸುವುವು. ಆದುದರಿಂದ **ಉದ್ಗಾತೃ**ವಾದವನು " **ಈ ಸಾಮಗಾನವನ್ನು ಮಾಡುವುದರಿಂದ** ನಿಮ್ಮ ಯಾವ ಇಷ್ಟಾರ್ಥವು ಸಿದ್ಧಿಸುವಂತೆ ಮಾಡಲಿ ? " ಎಂದು ಕೇಳಬಹುದು. ಏತಕ್ಕೆಂದರೆ ಈ ಪವಿತ್ರಾತ್ಮಕವಾದ ಸಾಮಗಾನವನ್ನು ಮಾಡುವವನೇ ಸಕಲವಿಧವಾದ ಐಹಿಕಾಮುಷ್ಮಿಕವಾದ ಕಾಮಗಳಿಗೂ ಪ್ರಭುವಾಗಿ ಅವನ್ನು ಸಂಪಾದಿಸಿಕೊಡಲು ಶಕ್ತನಾಗಿರುತ್ತಾನೆ.

> **ಸ ಯ ಏತದೇವಂ ವಿದ್ವಾನ್ಸಾಧು ಸಾಮೇತ್ಯುಪಾಸ್ತೇಽಭ್ಯಾಶೋ ಹ ಯದೇವಂ ಸಾಧವೋ ಧರ್ಮಾ ಆ ಚ ಗಚ್ಛೇಯುರುಪ ಚ ನಮೇಯುಃ ।**
>
> (ಛಾ. ಉ. ೨-೧-೪)

ಈ ತತ್ತ್ವವನ್ನು ತಿಳಿದ ಮಹಾತ್ಮನು ಸಾಮವನ್ನೇ ಸಾಧುವೆಂದು ತಿಳಿದು ಉಪಾಸನೆ ಮಾಡುವನು. ಅವನಿಗೆ ಯಾವಾಗಲೂ ಸಾಧುಧರ್ಮಗಳೇ ರಕ್ಷಕವಾಗಿ ಬರುವುವು. ಮತ್ತು ಅವನ ಆತ್ಮರಕ್ಷಣೆಗಾಗಿ ಅವನಲ್ಲಿದ್ದು ಅವನನ್ನು ಸೇವಿಸುತ್ತವೆ ಇತ್ಯಾದಿಯಾಗಿ ಸಾಮದ ಪ್ರಭಾವವನ್ನು ನಾನಾವಿಧವಾಗಿ ವರ್ಣಿಸಿದೆ. ಇದಲ್ಲದೆ " **ಪಂಚವಿಧಂ ಸಾಮೋಪಾಸೀತ** " ಇತ್ಯಾದಿಯಾಗಿ ಈ ಸಾಮದ ವಿಭಾಗಗಳ ವರ್ಣನೆಯೂ, ಇವರ ಮಹತ್ತ್ವದ ಪ್ರಶಂಸೆಯೂ ನಾನಾ ವಿಧವಾಗಿದ್ದು ಇದು ಆತ್ಮಕಲ್ಯಾಣಕ್ಕೆ ಸಾಕ್ಷಾತ್ಸಾಧನವೆಂದೂ ಅನೇಕ ರೀತಿಯಲ್ಲಿ ಪ್ರಶಂಸಿತವಾಗಿದೆ. ಅದರ ವಿವರಣೆಯು ಅತ್ಯಂತವಿಸ್ತೃತವಾಗುವುದರಿಂದ ಇಲ್ಲಿ ಆ ಪ್ರಶಂಸಾವಾಕ್ಯಗಳನ್ನು ಉದಹರಿಸಲಾಗಲಾರದು ಛಾಂದೋಗ್ಯಾದಿಗಳಲ್ಲಿ ಇದರ ಪ್ರಶಂಸೆಯನ್ನು ತಿಳಿಯಬಹುದು.

ಪ್ರಕೃತವಾದ **ಋಕ್ಕಿನಲ್ಲಿ ಉಕ್ತಲಕ್ಷಣೇನ ಮಂತ್ರೇಣ ಸಾಮ ಗಾಯತ್ರರಥಂತರಸಂಜ್ಞಕಂ ಸಾಮ ಪ್ರತಿಮಿಮೀತೇ ।** ಎಂದು ಸಾಯಣರು ವಿವರಿಸಿರುವುದನ್ನು ಮೇಲೆ ತಿಳಿಸಿದೆ.

**ತ್ರೈಷ್ಟುಭೇನ ವಾಕಂ**—ತ್ರಿಷ್ಟುಪ್‌ಛಂದಸ್ಸಿನಿಂದ ವಾಕವನ್ನು ನಿರ್ಮಿಸಿದನು ಎಂದು ಸ್ಥೂಲವಾದ ಅರ್ಥವನ್ನು ಹೇಳಬಹುದು. ಇಲ್ಲಿ ವಾಕಶಬ್ದಕ್ಕೆ ದ್ವ್ಯೃಚ ಮತ್ತು ತೃಚರೂಪಗಳಾದ ಸಮುದಾಯವಾಕ್ಯಗಳೆಂದು ಅರ್ಥವಾಗಬಹುದು. **ಅಥವಾ ವಾಕಂ ಸೂಕ್ತಂ ಏತಾವದ್ಭಿಸ್ತ್ರಿಷ್ಟುಬ್ಭಿಃ ಉಪನಿಬದ್ಧಮಿದಂ ಸೂಕ್ತಂ** ತ್ರಿಷ್ಟುಬಾದಿಗಳಿಂದ ರಚಿತವಾದ ಸೂಕ್ತವೆಂದೂ ಅರ್ಥವಾಗಬಹುದು ಎಂದು ವಿವರಿಸಿದ್ದಾರೆ. ಆದರೆ ಇತರ ಛಂದಸ್ಸುಗಳೂ ಇರುವಾಗ ತ್ರಿಷ್ಟುಪ್ಪೆಂದು ಮಾತ್ರ ಹೇಳಿರಲು ಕಾರಣವೇನೆಂದು ಪ್ರಶ್ನೆಯನ್ನು ಊಹಿಸಿ ಅದಕ್ಕೆ ಉತ್ತರವಾಗಿ ಹೀಗೆ ಹೇಳಿದೆ. **ಅಥವಾ ಅನಾದೇಶೇ ಸರ್ವತ್ರ ತ್ರಿಷ್ಟುಭೋ ಗ್ರಹಣಾತ್ ಪ್ರಾಚುರ್ಯಾಭಿಪ್ರಾಯೇಣ ಇದಮುಕ್ತಂ ।** ಋಕ್ಸಂಹಿತೆಯಲ್ಲೆಲ್ಲಾ ತ್ರಿಷ್ಟುಪ್‌ಛಂದಸ್ಸಿನಲ್ಲಿ ನಿರ್ಮಿತವಾದ ಸೂಕ್ತಗಳೇ ಅತ್ಯಧಿಕವಾಗಿರುವುದರಿಂದ ಇದೊಂದು ಛಂದಸ್ಸನ್ನೇ ಮುಖ್ಯವಾದುದನ್ನಾಗಿ ಮಾಡಿಕೊಂಡು ಹೇಳಿದೆಯೆಂದು ಸಾಯಣರು ವಿವರಿಸಿದ್ದಾರೆ.

ಇಷ್ಟೇ ಅಲ್ಲದೇ ತ್ರಿಷ್ಟುಪ್ಪಿನ ಮಹತ್ತ್ವವು ಅತ್ಯಧಿಕವಾದುದು. ಇದರ ನಿರ್ವಚನವನ್ನು ನಿರುಕ್ತದಲ್ಲಿ ಈ ರೀತಿ ಹೇಳಿದೆ.

> **ತ್ರಿಷ್ಟುಪ್ ಸ್ತೋಭತ್ಯುತ್ತರಪದಾ । ಕಾ ತು ತ್ರಿತಾ ಸ್ಯಾತ್ । ತೀರ್ಣತಮಂ ಛಂದಃ । ತ್ರಿವೃದ್ವಜ್ರಸ್ತಸ್ಯ ಸ್ತೋಭತೀತಿ ವಾ । ಯತ್ತ್ರಿರಸ್ತೋಭತ್ತತ್ತ್ರಿಷ್ಟುಭಸ್ತ್ರಿಷ್ಟುಪ್ತ್ವಮಿತಿ ವಿಜ್ಞಾಯತೇ ।**
>
> (ನಿ. ೭-೧೨)

ಸ್ತುತ್ಯರ್ಥಕವಾದ **ಸ್ತುಭ್** ಧಾತುವಿನಿಂದ ನಿಷ್ಪನ್ನವಾಗಿದೆ. ಆದರೆ ಪೂರ್ವಪದವಾದ ತ್ರಿ ಶಬ್ದಕ್ಕೆ' ಏನರ್ಥವೆಂದರೆ, ಅತ್ಯಂತ ಚುರುಕಾದುದು ಎಂದರೆ ಇದು ಅತ್ಯಂತ ತೀವ್ರವಾದ ಛಂದಸ್ಸೆಂದರ್ಥ. ಅಥವಾ ತ್ರಿವೃದಾತ್ಮಕವಾದ ವಜ್ರವನ್ನು ಸ್ತುತಿಸುವುದರಿಂದಲಾಗಲಿ ಅಥವಾ ಮೂರು ಸಲ ಸ್ತುತಿಸುವುದರಿಂದಾಗಲಿ ಈ ಹೆಸರು ಪ್ರಸಿದ್ಧವಾಗಿರಬಹುದು. ಇದು ವಜ್ರಾಯುಧವನ್ನು ಸ್ತುತಿಸುವುದೇ ಅಲ್ಲದೆ ವಜ್ರಾತ್ಮಕವಾಗಿಯೇ ಇದೆ ಎಂದು ತ್ರಿಷ್ಟುಪ್ಪಿನ ಆಕಾರವನ್ನು ಮತ್ತು ಶಕ್ತಿಯನ್ನೂ ಶತಪಥಬ್ರಾಹ್ಮಣದಲ್ಲಿ ಈ ರೀತಿ ಸೂತ್ರಿಸಿದೆ.

**ಏಕಾದಶಾಕ್ಷರಾ ತ್ರಿಷ್ಟುಬ್ವಜ್ರಸ್ತ್ರಿಷ್ಟುಬ್ವೀರ್ಯಂ ತ್ರಿಷ್ಟುಬ್ವಜ್ರೇಣೈವೈತದ್ವೀರ್ಯೇಣ ಯಜಮಾನಃ ಪುರಸ್ತಾದ್ಯಜ್ಞಮುಖಾದ್ರಕ್ಷಾಗ್ಂಸಿ ನಾಷ್ಟ್ರಾ ಅಪಹಂತಿ ।**

(ಶ. ಬ್ರಾ. ೧೦-೨-೩-೨)

ಏಕಾದಶಾಕ್ಷರಾತ್ಮಕವಾದ ತ್ರಿಷ್ಟುಪ್ಪೇ ವಜ್ರವು ; ಅದೇ ವೀರ್ಯವು. ಈ ಉತ್ತಮವಾದ ಶಕ್ತಿಯಿಂದಲೇ ಯಜಮಾನನು ಯಜ್ಞಮುಖದಿಂದ ಅಸುರಾದಿಗಳನ್ನೆಲ್ಲಾ ದೂರಕ್ಕೆ ಅಟ್ಟಲು ಸಮರ್ಥನಾಗುತ್ತಾನೆ. ಆದುದರಿಂದ ತ್ರಿಷ್ಟುಬಾತ್ಮಕವಾದ ಮಂತ್ರವೇ ವೀರ್ಯಯುತವಾದುದು. ಇದನ್ನೇ ಐತರೇಯ ಬ್ರಾಹ್ಮಣದಲ್ಲೂ ವರ್ಣಿಸುತ್ತಾ

**ತದೇಕಾದಶರ್ಚಂ ಭವತ್ಯೇಕಾದಶಾಕ್ಷರಾ ವೈ ತ್ರಿಷ್ಟುಸ್ತ್ರೈಷ್ಟುಭೋ ವೈ ರಾಜನ್ಯ ಓಜೋ ವಾ ಇಂದ್ರಿಯಂ ವೀರ್ಯಂ ತ್ರಿಷ್ಟುಬೋಜಃ .... ॥**

(ಐ. ಬ್ರಾ. ೮-೨)

ಏಕದಶರ್ಚವುಳ್ಳ ತ್ರಿಷ್ಟುಪ್ಪು ಹನ್ನೊಂದಕ್ಷರಗಳುಳ್ಳದ್ದು. ಇದು ರಾಜನ್ಯಾತ್ಮಕವಾದುದು. ಇದು ಓಜಸ್ಸನ್ನೂ ಇಂದ್ರಿಯವನ್ನೂ, ವಿರ್ಯವನ್ನೂ ಒಳಗೊಂಡು ಕ್ಷತ್ರಾತ್ಮಕವಾಗಿದೆ. ಇತ್ಯಾದಿಯಾಗಿ ತ್ರಿಷ್ಟುಪ್ಪನ್ನು ಸ್ತುತಿಸಿದೆ. ಆದುದರಿಂದ ವೀರ್ಯಪೂರಿತವಾದ ಈ ಛಂದಸ್ಸಿನಿಂದ ವಾಕವನ್ನು ನಿರ್ಮಿಸುವರೆಂದು ಪ್ರಕೃತವಾದ ಋಕ್ಕಿನಲ್ಲಿ ಅರ್ಥಮಾಡಿದೆ.

**ವಾಕೇನ ವಾಕಂ** ಎಂಬುದಕ್ಕೆ **ವರ್ಗಮನುವಾಕಂ ವಾ ಮಿಮೀತೇ** ವರ್ಗವನ್ನಾಗಲಿ ಅಥವಾ ಅನುವಾಕವನ್ನಾಗಲಿ ನಿರ್ಮಿಸುತ್ತಾರೆ ಎಂದರ್ಥ. ಇದಕ್ಕೆ ವಿಶೇಷಣವನ್ನು ತೋರಿಸುತ್ತಾ **ದ್ವಿಪದಾ ಚತುಷ್ಪದಾ । ಪಾದದ್ವಯಬದ್ಧವಿರಾಡಾದಿಚ್ಛಂದೋನಿಬದ್ಧಮಂತ್ರರೂಪೇಣ ; ಪಾದಚತುಷ್ಟಯೋಪೇತೇನ ಅನುಷ್ಟುಬಾದಿಮಂತ್ರರೂಪೇಣೇತಿ । ಇಯತೀಭಿರ್ದ್ವಿಪದಾಭಿರ್ವರ್ಗಃ । ಇಯತೀಭಿಶ್ಚತುಷ್ಪದಾಭಿರುಪೇತೋ ವರ್ಗಃ ॥**

**ದ್ವಿಪದಾ ವಿರಾಟ್** ಎಂಬ ಛಂದಸ್ಸಿನಲ್ಲಿ ಎರಡು ಪಾದಗಳು ಮಾತ್ರವಿದ್ದು ಒಂದು ಅರ್ಧಋಕ್ಕು ಮಾತ್ರವಿರುವುದು. ಇಂತಹ ಮಂತ್ರಗಳಿಂದ ಕೂಡಿದ ವರ್ಗವೆಂದಾಗಲಿ ಅಥವಾ ಅನುಷ್ಟುಬಾದಿಗಳಿಂದ ಕೂಡಿದ ವರ್ಗವೆಂದಾಗಲಿ ಅರ್ಥವಾಗುತ್ತದೆ. **ಸೂಕ್ತಪಕ್ಷೇ ಏತಾವದ್ಭಿಃ ಸೂಕ್ತೈಃ ಅಯಮನುವಾಕ ಇತಿ ।** ಸೂಕ್ತಪಕ್ಷದಲ್ಲಿ ಇಷ್ಟು ಸೂಕ್ತಗಳುಳ್ಳ ಅನುವಾಕವೆಂದರ್ಥವೆಂದು ಈ ವಾಕದ ಪರಿಗಣನೆಯನ್ನು ಹೇಳಿದೆ. ಈ ವಿಧವಾಗಿ **ವರ್ಗ** ಅಥವಾ **ಸೂಕ್ತ** ಎಂಬ ಎರಡು ವಿಧವಾದ ಪರಿಗಣನೆಗೂ ಇಲ್ಲಿ ಅವಕಾಶವಿರುವುದರಿಂದ ಈ ವಿಭಾಗಗಳನ್ನು **ಶೌನಕರ ಅನುಕ್ರಮಣಿಯಲ್ಲಿ** ತಿಳಿಸಿರುವಂತೆ ಇಲ್ಲಿ ಉದಹರಿಸಿದರೆ ತಪ್ಪಾಗಲಾರದು. ಶೌನಕರ ಮತದಂತೆ ಋಗ್ವೇದದ

**ಶಾಕಲ ಶಾಖೆಯ** ಪ್ರಕಾರ ೧೦ ಮಂಡಲಗಳೂ ೬೪ ಅಧ್ಯಾಯಗಳೂ ಇವೆ, ಇವುಗಳಲ್ಲಿ ಮೊದಲು ಮಂಡಲಗಳ ವಿಭಾಗಗಳೂ ಇವುಗಳ ಸಂಖ್ಯೆಯೂ ಈ ರೀತಿಯಿದೆ.

| | | | | | |
|---|---|---|---|---|---|
| ೧ನೆಯ | ಮಂಡಲದಲ್ಲಿ | ೨೪ | ಅನುವಾಕಗಳೂ | ೧೯೧ | ಸೂಕ್ತಗಳೂ ಇವೆ |
| ೨ ,, | ,, | ೪ | ,, | ೪೩ | ,, |
| ೩ ,, | ,, | ೫ | ,, | ೬೨ | ,, |
| ೪ ,, | ,, | ೫ | ,, | ೫೮ | ,, |
| ೫ ,, | ,, | ೬ | ,, | ೮೭ | ,, |
| ೬ ,, | ,, | ೬ | ,, | ೭೫ | ,, |
| ೭ ,, | ,, | ೬ | ,, | ೧೦೪ | ,, |
| ೮ ,, | ,, | ೧೦ | ,, | ೯೨ | ( ೧೧ ವಾಲಖಿಲ್ಯ ಸೂಕ್ತಗಳು ) |
| ೯ ,, | ,, | ೭ | ,, | ೧೧೪ | ,, |
| ೧೦ ,, | ,, | ೧೨ | ,, | ೧೯೧ | ,, |

ಒಟ್ಟು ೧೦ ಮಂಡಲಗಳಲ್ಲಿ ೮೫ ಅನುವಾಕಗಳೂ ೧೦೧೭ + ೧೧ = ೧೦೨೮ ಸೂಕ್ತಗಳೂ.

(ಬಾಷ್ಕಲ ಶಾಖೆಯ ಪ್ರಕಾರ ೧೦೨೫ ಸೂಕ್ತಗಳೂ) ಇವೆ. **ವರ್ಗರೂಪವಾದ ವಿಭಾಗಗಳು ಈರೀತಿಯಿವೆ.**

| | | | | |
|---|---|---|---|---|
| ೧ | ಮಂತ್ರವನ್ನುಳ್ಳ ವರ್ಗಗಳು | ೧ | ಒಟ್ಟು ಮಂತ್ರಗಳು | ೧ |
| ೨ | ,, | ೨ | ,, | ೪ |
| ೩ | ,, | ೯೭ | ,, | ೨೯೧ |
| ೪ | ,, | ೧೭೪ | ,, | ೬೯೬ |
| ೫ | ,, | ೧೨೦೭ | ,, | ೬೦೩೫ |
| ೬ | ,, | ೩೪೬ | ,, | ೨೦೭೬ |
| ೭ | ,, | ೧೧೯ | ,, | ೮೩೩ |
| ೮ | ,, | ೫೯ | ,, | ೪೭೨ |
| ೯ | ,, | ೧ | ,, | ೯ |

ಒಟ್ಟು ೬೪ ಅಧ್ಯಾಯಗಳಲ್ಲಿ ೨೦೦೬ ವರ್ಗಗಳೂ ೧೦೪೧೭ ಮಂತ್ರಗಳೂ ಇವೆ. **ಚರಣವ್ಯೂಹದ** ಪರಿಗಣನೆಯಂತೆ ಒಟ್ಟು ೨೦೪೨ ವರ್ಗಗಳೂ ೧೦೬೨೨ ಮಂತ್ರಗಳೂ ಆಗುತ್ತವೆ ಆದರೆ ಈ ವ್ಯತ್ಯಾಸಕ್ಕೆ ಸರಿಯಾದ ಆಧಾರವೇನೆಂಬುದನ್ನು ಹೇಳಲಾಗುವುದಿಲ್ಲ. ಈ ವಿಭಾಗಗಳನ್ನು ಪ್ರಕೃತವಾದ ಋಕ್ಕಿನಲ್ಲಿ **ವಾಕೇನ ವಾಕಂ ದ್ವಿಪದಾ ಚತುಷ್ಪದಾ** ಎಂದು ವರ್ಣಿಸಿದೆ

**ಅಕ್ಷರೇಣ ಮಿಮತೇ ಸಪ್ತ ವಾಣೀಃ-ಅಕ್ಷರೇಣೈವ ವಾಗಧಿಷ್ಠಿತಾನಿ ಸಪ್ತಚ್ಛಂದಾಂಸಿ ನಿರ್ಮಾಣಂ ಕುರ್ವಂತಿ |** ಅಕ್ಷರದಿಂದಲೇ ಗಾಯತ್ರ್ಯಾದಿಸಪ್ತಚ್ಛಂದಸ್ಸುಗಳನ್ನೂ ನಿರ್ಮಿಸುತ್ತಾರೆ ಎಂದರ್ಥ. **ಅಷ್ಟಾಕ್ಷರಾ ಗಾಯತ್ರೀ ; ಏಕಾದಶಾಕ್ಷರಾ ತ್ರಿಷ್ಟುಪ್ ; ದ್ವಾದಶಾಕ್ಷರಾ ಜಗತೀ |** ಗಾಯತ್ರಿಗೆ ಎಂಟಕ್ಷರಗಳು ; ತ್ರಿಷ್ಟು

ಷ್ಟಿಗೆ ಹನ್ನೊಂದಕ್ಷರಗಳು ; ಜಗತಿಗೆ ಹನ್ನೆರಡಕ್ಷರಗಳು. ಇವೆಲ್ಲಾ ಒಂದೊಂದು ಪಾದಕ್ಕೆ ಎಂದು ತಿಳಿಯಬೇಕು. ಈ ಛಂದಸ್ಸುಗಳ ಸೃಷ್ಟಿಯ ಕ್ರಮವನ್ನೂ, ಇವುಗಳಿಂದ ಲಭಿಸತಕ್ಕ ಪ್ರಯೋಜನವನ್ನೂ ಐತರೇಯಬ್ರಾಹ್ಮಣದಲ್ಲಿ ಈ ರೀತಿ ತಿಳಿಸಿದೆ.

**ದೇವವಿಶಃ ಕಲ್ಪಯಿತವ್ಯಾ ಇತ್ಯಾಹುಶ್ಛಂದಶ್ಛಂದಸಿ ಪ್ರತಿಷ್ಠಾಪ್ಯಮಿತಿ ಶೋಂಸಾವೋಮಿತ್ಯಾ-ಹ್ವಯತೇ ಪ್ರಾತಃಸವನೇ ತ್ರ್ಯಕ್ಷರೇಣ ಶಂಸಾಮೋ ದೈವೋಮಿತ್ಯಧ್ವರ್ಯುಃ ಪ್ರತಿಗೃಹ್ಣಾತಿ ಪಂಚಾಕ್ಷರೇಣ ತದಷ್ಟಾಕ್ಷರಂ ಸಂಪದ್ಯತೇಽಷ್ಟಾಕ್ಷರಾ ವೈ ಗಾಯತ್ರೀ ಗಾಯತ್ರೀಮೇವ ತತ್ಪು-ರಸ್ತಾತ್ಪ್ರಾತಃಸವನೇಽಚೀಕ್ಲೃಪತಾಂ ।**

(ಐ. ಬ್ರಾ. ೩-೧೨)

ಹಿಂದಿನ ಋಕ್ಕಿನಲ್ಲಿ ವರ್ಣಿತವಾಗಿರುವಂತೆ **ಗಾಯತ್ರ**ಪದವನ್ನು ಎಂದರೆ ಗಾಯತ್ರರೂಪವಾದ ಅಗ್ನಿಯ ಸ್ಥಾನವನ್ನು ಕಲ್ಪಿಸಲು ಅಗ್ನಿಪ್ರಿಯವಾದ ಗಾಯತ್ರೀಮಂತ್ರವನ್ನು ರಚಿಸಬೇಕು. ಅದು ಪ್ರಾತಃಸವನಕಾಲದಲ್ಲಿ ನೆರವೇರಿಸ ಬೇಕಾದ ವಿಧಿಯು. ಇದು ಆಹಾವಪ್ರತಿಗರರೂಪದಲ್ಲಿರುತ್ತದೆ. ಈ ಕಾಲದಲ್ಲಿ ಹೋತೃವು "**ಶೋಂಸಾವೋಂ**" (ನಾವಿಬ್ಬರೂ ಸ್ತುತಿಸೋಣ) ಎಂದು ಹೇಳುತ್ತಾನೆ. ಇದು ಮೂರಕ್ಷರವುಳ್ಳದ್ದು ಇದಕ್ಕೆ ಪ್ರತಿಯಾಗಿ ಅಧ್ವರ್ಯುವು "**ಶಂಸಾಮೋದೈವೋಂ**" (ನೀನು ಸ್ತುತಿವಾಕ್ಯವನ್ನು ಪಠಿಸು ನಾವು ಹರ್ಷಪಡುತ್ತೇವೆ.) ಎಂಬ ಪಂಚಾಕ್ಷರ ವುಳ್ಳ ಉತ್ತರರೂಪವಾದ ಮಂತ್ರವನ್ನು ಹೇಳುತ್ತಾನೆ. ಇವೆರಡೂ ಸೇರಿ ಎಂಟಕ್ಷರಗಳಾದವು. **ಅಷ್ಟಾಕ್ಷರಾ ವೈ ಗಾಯತ್ರೀ** ಎಂಬ ನಿಯಮಕ್ಕನುಸಾರವಾಗಿದೆ. ಇದರಂತೆಯೇ ಮಾಧ್ಯಂದಿನಸವನದ ಕಾಲದಲ್ಲಿ ತ್ರಿಷ್ಟುಪ್ಪಿನಿಂದ ನೆರವೇರಿಸಬೇಕಾದ ವಿಧಿಯನ್ನೂ ಹೇಳಿದೆ.

**ಅಧ್ವರ್ಯೋ ಶೋಂಸಾವೋಮಿತ್ಯಾಹ್ವಯತೇ ಮಧ್ಯಂದಿನೇ ಷಳಕ್ಷರೇಣ ಶಂಸಾಮೋದೈವೋ-ಮಿತ್ಯಧ್ವರ್ಯುಃ ಪ್ರತಿಗೃಹ್ಣಾತಿ ಪಂಚಾಕ್ಷರೇಣ ತದೇಕಾದಶಾಕ್ಷರಂ ಸಂಪದ್ಯತ ಏಕಾದಶಾ-ಕ್ಷರಾ ವೈ ತ್ರಿಷ್ಟುಪ್ ತ್ರಿಷ್ಟುಭಮೇವ ತತ್ಪುರಸ್ತಾನ್ಮಧ್ಯಂದಿನೇಽಚೀಕ್ಲೃಪತಾಂ ।**

(ಐ. ಬ್ರಾ. ೩-೧೨)

"**ಅಧ್ವರ್ಯೋ ಶಂಸಾವೋಂ**" ಎಂಬ ಅಕ್ಷರಗಳುಳ್ಳ ಹೋತೃವಿನ ಪಠನಕ್ಕೆ ಪ್ರತಿಯಾಗಿ ಅಧ್ವರ್ಯುವು "**ಶಂಸಾಮೋದೈವೋಂ**" ಎಂಬ ಪಂಚಾಕ್ಷರಾತ್ಮಕವಾದ ಉತ್ತರವನ್ನು ಹೇಳುತ್ತಾನೆ ಇವೆರಡೂ ಸೇರಿ ತ್ರಿಷ್ಟುಪ್ ರೂಪವಾದ ಹನ್ನೊಂದಕ್ಷರಗಳಾದವು. ಇದರಂತೆಯೇ ತೃತೀಯಸವನದಲ್ಲಿ "**ಅಧ್ವರ್ಯೋ ಶೋಶೋಂಸಾವೋ**" ಎಂದು ಹೋತೃವಿನ ಪಠನಕ್ಕೆ ಅಧ್ವರ್ಯುವು "**ಶಂಸಾಮೋದೈವೋಂ**" ಎಂದು ಪ್ರತಿಯನ್ನು ಹೇಳಿದಾಗ ಒಟ್ಟು ಹನ್ನೆರಡಕ್ಷರಗಳಾದವು. ಇದು ದ್ವಾದಶಾಕ್ಷರಾತ್ಮಕವಾದ **ಜಗತಿಯ** ಪಾದವಾಯಿತು. ಇದನ್ನೇ ಹಿಂದಿನ ಋಕ್ಕಿನಲ್ಲಿ "**ಯದ್ಗಾಯತ್ರೇ ಅಧಿಗಾಯತ್ರಮಾಹಿತಂ ತ್ರೈಷ್ಟುಭಾದ್ವಾ ತ್ರೈಷ್ಟುಭಂ ನಿರತಕ್ಷತ**" ಇತ್ಯಾದಿಯಾಗಿ ವರ್ಣಿಸಿದೆ. ಈ ರೀತಿಯಾದ ಛಂದಸ್ಸ್ಥಾಪನದ ಜ್ಞಾನವನ್ನು ಅರಿತವರಿಗೆ ಅಮೃತತ್ತ್ವವು ಪ್ರಾಪ್ತವಾಗುವು ದೆಂದು ಅಭಿಪ್ರಾಯವು.

ಪ್ರಕೃತವಾದ ಋಕ್ಕಿನ ವಿವರಣೆಯಲ್ಲಿ ಸಾಯಣರು ಗಾಯತ್ರ್ಯಾದಿಮೂರುಛಂದಸ್ಸುಗಳ ಪ್ರಭೇದಗಳನ್ನು ಮಾತ್ರ ತಿಳಿಸಿ ಆ ಮೂರು ಛಂದಸ್ಸುಗಳಲ್ಲೂ ಒಂದೊಂದು ಪಾದದ ಸಂಖ್ಯೆಯನ್ನು ಮಾತ್ರ ಕೊಟ್ಟಿರುತ್ತಾರೆ. ಎಲ್ಲಾ ಛಂದಸ್ಸುಗಳ ಪ್ರತ್ಯೇಕವಾದ ಅಕ್ಷರ ಸಂಖ್ಯೆಗಳನ್ನೂ ಅವುಗಳ ಮಹತ್ತ್ವವನ್ನೂ ತೈತ್ತಿರೀಯ ಸಂಹಿತೆಯಲ್ಲಿ

**ಚತುರ್ವಿಗ್ಂಶತಿಮನುಬ್ರೂಯಾದ್ಬ್ರಹ್ಮವರ್ಚಸಕಾಮಸ್ಯ ಚತುರ್ವಿಗ್ಂಶತ್ಯಕ್ಷರಾ ಗಾಯತ್ರೀ. .**
**ತ್ರಿಗ್ಂಶತಮನುಬ್ರೂಯಾದನ್ನಕಾಮಸ್ಯ ತ್ರಿಗ್ಂಶದಕ್ಷರಾ ವಿರಾಟ್ .... .... .... .... .... .... ....**
**ದ್ವಾತ್ರಿಗ್ಂಶತಮನುಬ್ರೂಯಾತ್ಪ್ರತಿಷ್ಠಾಕಾಮಸ್ಯ ದ್ವಾತ್ರಿಗ್ಂಶದಕ್ಷರಾನುಷ್ಟುಪ್ .... .... .... ....**
**ಷಟ್ತ್ರಿಗ್ಂಶತಮನುಬ್ರೂಯಾತ್ಪಶುಕಾಮಸ್ಯ ಷಟ್ತ್ರಿಗ್ಂಶದಕ್ಷರಾ ಬೃಹತೀ .... .... .... ....**
**ಚತುಶ್ಚತ್ವಾರಿಗ್ಂಶತಮನುಬ್ರೂಯಾದಿಂದ್ರಿಯಕಾಮಸ್ಯ ಚತುಶ್ಚತ್ವಾರಿಗ್ಂಶದಕ್ಷರಾ ತ್ರಿಷ್ಟುಕ್**
**ಅಷ್ಟಾಚತ್ವಾರಿಗ್ಂಶತಮನುಬ್ರೂಯಾತ್ಪಶುಕಾಮಸ್ಯಾಷ್ಟಾಚತ್ವಾರಿಗ್ಂಶದಕ್ಷರಾ ಜಗತೀ .... ....**
**ಸರ್ವಾಣಿ ಛಂದಾಗ್ಂಸ್ಯನು ಬ್ರೂಯಾದ್ಬಹುಯಾಜಿನಸ್ಸರ್ವಾಣಿ ವಾ ಏತಸ್ಯ ಛಂದಾಗ್ಸ್ಯವ-ರುದ್ಧಾನಿ ಯೋ ಬಹುಯಾಜ್ಯಪರಿಮಿತಮನು ಬ್ರೂಯಾದಪರಿಮಿತಸ್ಯಾವರುಧ್ಯೈ ॥**

(ತೈ. ಸಂ. ೨-೫-೧೦-೩, ೪)

ಇತ್ಯಾದಿ ವಾಕ್ಯಗಳಲ್ಲಿ ತಿಳಿಸಿದೆ.

| | | |
|---|---|---|
| ಗಾಯತ್ರಿಯ ಅಕ್ಷರಗಳು | | ೨೪ |
| ಅನುಷ್ಟುಪ್ಪಿನ | ,, | ೩೨ |
| ಬೃಹತಿಯ | ,, | ೩೬ |
| ತ್ರಿಷ್ಟುಪ್ಪಿನ | ,, | ೪೪ |
| ಜಗತಿಯ | ,, | ೪೮ |

ಎಂದು ಅವುಗಳ ಅಕ್ಷರ ಸಂಖ್ಯೆಯನ್ನು ತಿಳಿಸಿ ಗಾಯತ್ರಿಯು ಬ್ರಹ್ಮವರ್ಚಸ್ಸಿಗೂ, ಅನುಷ್ಟುಪ್ಪು ಪ್ರತಿಷ್ಠೆಗೂ ಬೃಹತಿಯೂ ಜಗತಿಯೂ ಪಶುಲಾಭಕ್ಕೂ, ತ್ರಿಷ್ಟುಪ್ಪು ಇಂದ್ರಿಯಬಲಕ್ಕೂ ಸಾಧಕಗಳಾಗುತ್ತವೆಂದು ತಿಳಿಸಿದೆ. ಇವರಲ್ಲಿ **ಉಷ್ಣಿಕ್** ಮತ್ತು **ಪಂಕ್ತಿ** ಎಂಬೆರಡುಛಂದಸ್ಸುಗಳನ್ನು ಸೇರಿಸಿಲ್ಲ. **ಉಷ್ಣಿಕ್ಕಿಗೆ** ೨೮ ಅಕ್ಷರಗಳೂ. **ಪಂಕ್ತಿಗೆ** ೪೦ ಅಕ್ಷರಗಳೂ ಇವೆ. ಈ ಏಳು ಮುಖ್ಯವಾದ ಛಂದಸ್ಸುಗಳಲ್ಲದೇ ಇವುಗಳ ಪ್ರಭೇದಗಳೂ ಸಹ ಅತಿ ಜಗತೀ (೫೨) ಶಕ್ವರೀ (೫೬) ; ಅತಿಶಕ್ವರೀ (೬೦) ; ಅಷ್ಟಿ (೬೪) ; ಅತ್ಯಷ್ಟಿ (೬೮) ; ಧೃತಿ (೭೨) ; ಅತಿ ಧೃತಿ (೭೬) ಎಂಬ ಹೆಸರುಗಳೊಂದಿವೆ. **ದ್ವಿಪದಾ ವಿರಾಟ್** ಇತ್ಯಾದಿಯಾಗಿ ಮಿಶ್ರವಾದ ಛಂದಸ್ಸುಗಳೂ ಇವೆ. [ಇವುಗಳ ವಿವರಣೆಯನ್ನು ಋಗ್ವೇದಸಂಹಿತೆಯ ಭಾಗ. ೧ ಪೇಜು ವಿಶದವಾಗಿ ತಿಳಿಸಿದೆ.]

**ತತಃ ಪದಾನಾಂ ಛಂದಸಾಂ ಅಕ್ಷರಂ ಮೂಲಮಿತಿ । ತಥಾ ಋಗ್ವರ್ಗಸೂಕ್ತಾನುವಾಕಾದೀನಾಂ ಚ ಅಕ್ಷರಂ ಮೂಲಮಿತ್ಯಕ್ಷರಪ್ರಶಂಸಾ** ॥ ಛಂದಸ್ಸುಗಳಿಗೂ, ಅವುಗಳ ಅವಯವಗಳಾದ ಪಾದಗಳಿಗೂ, ಋಕ್ಕು, ವರ್ಗ, ಸೂಕ್ತ ಅನುವಾಕ ಇವುಗಳೆಲ್ಲಕ್ಕೂ ಸಹ ಅಕ್ಷರವೇ ಮೂಲವು ಎಂದು ಅಕ್ಷರಪ್ರಶಂಸೆಯಿದೆಯೆಂದು ಸಾಯಣರು ವಿವರಿಸಿದ್ದಾರೆ.

ವ್ಯಾಕರಣಪ್ರಕ್ರಿಯಾ

**ಮಿಮೀತೇ**—ಮಾಙ್ ಮಾನೇ ಶಬ್ದೇ ಚ ಧಾತು. ಜುಹೋತ್ಯಾದಿ. ಲಟ್ ಪ್ರಥಮಪುರುಷಏಕವಚನದಲ್ಲಿ **ಟಿತ ಆತ್ಮನೇಪದಾನಾಂ** ಎಂಬುದರಿಂದ ಟಗೆ ಏತ್ವ. ಶ್ಲು ವಿಕರಣನಿಮಿತ್ತವಾಗಿ ಧಾತುವಿಗೆ ದ್ವಿತ್ವ. **ಭೃಞಾಮಿತ್** (ಪಾ. ಸೂ. ೭-೪-೭೬) ಎಂಬುದರಿಂದ ಅಭ್ಯಾಸಕ್ಕೆ ಇತ್ವ. **ಈಹಲ್ಯಘೋಃ** (ಪಾ. ಸೂ. ೬-೪-೧೧೩) ಎಂಬುದರಿಂದ ಧಾತುಆಕಾರಕ್ಕೆ ಈತ್ವ. ತಿಙಂತನಿಘಾತಸ್ವರ ಬರುತ್ತದೆ.

**ಅರ್ಕಮ್**—ಅರ್ಚ ಪೂಜಾಯಾಂ ಧಾತು. **ಕೃದಾಧಾರಾರ್ಚಿ**– (ಉ. ಸೂ. ೩-೩೨೦) ಎಂಬುದರಿಂದ ಕ ಪ್ರತ್ಯಯ. ಬಹುಲಗ್ರಹಣದಿಂದ ಕಕಾರಕ್ಕೆ ಇತ್‌ಸಂಜ್ಞಾ ಬರುವುದಿಲ್ಲ. ಪ್ರತ್ಯಯಸ್ವರದಿಂದ ಅಂತೋದಾತ್ತವಾಗುತ್ತದೆ.

**ವಾಕಮ್**—ವಚ ಪರಿಭಾಷಣೇ ಧಾತು. ಘಞ್ ಪ್ರತ್ಯಯ. **ಅತ ಉಪಧಾಯಾಃ**(ಪಾ. ಸೂ. ೭-೨-೧೧೬( ಎಂಬುದರಿಂದ ಉಪಧಾವೃದ್ಧಿ. **ಚ ಜೋಃಕುಘಿಣ್ಯತೋಃ** (ಪಾ. ಸೂ. ೭-೩-೫೨) ಎಂಬುದರಿಂದ ಕುತ್ವ. **ಕರ್ಷಾತ್ವತಃ** (ಪಾ. ಸೂ. ೬-೧-೧೫೯) ಎಂಬುದರಿಂದ ಅಂತೋದಾತ್ತವಾಗುತ್ತದೆ.

**ದ್ವಿಪದಾ**—ದ್ವೌ ಪಾದೌ ಯಸ್ಯ ತತ್. **ಸಂಖ್ಯಾಸಂಪೂರ್ವಸ್ಯ** ಎಂಬುದರಿಂದ ಪಾದಶಬ್ದದ ಅಂತ್ಯಲೋಪವು ಸಮಾಸಾಂತವಾಗಿ ಬರುತ್ತದೆ. ತೃತೀಯಾಏಕವಚನ ಪರವಾದಾಗ ಭಸಂಜ್ಞಾ ಇರುವುದರಿಂದ **ಪಾದಃಪತ್** ಎಂಬುದರಿಂದ ಪದ್‌ಭಾವ. **ಏಕದೇಶವಿಕೃತಮನನ್ಯವತ್** (ಪರಿ ೩೭) ಎಂಬ ವಚನದಿಂದ **ದ್ವಿತ್ರಿಭ್ಯಾಂಪಾದ್ವನ್‌ಮೂರ್ಧಸು ಬಹುವ್ರೀಹೌ** (ಪಾ. ಸೂ. ೬-೨-೧೯೭) ಎಂಬುದರಿಂದ ಉತ್ತರಪದಆದ್ಯುದಾತ್ತಸ್ವರ ಬರುತ್ತದೆ.

**ಚತುಷ್ಪದಾ**—ಚತ್ವಾರಃ ಪಾದಾಃ ಯಸ್ಯ. ತೇನ. ಹಿಂದಿನಂತೆಯೇ ಅಂತ್ಯಲೋಪಾದಿಗಳು ಬರುತ್ತವೆ. **ಬಹುವ್ರೀಹೌ ಪ್ರಕೃತ್ಯಾಪೂರ್ವಪದಮ್** ಎಂಬುದರಿಂದ ಪೂರ್ವಪದಪ್ರಕೃತಿಸ್ವರ ಬರುತ್ತದೆ.

**ಮಿಮತೇ**—ಮಾಙ್ ಮಾನೇ ಧಾತು. ಲಟ್ ಪ್ರಥಮಪುರುಷಬಹುವಚನದಲ್ಲಿ ಝ ಪ್ರತ್ಯಯ **ಆತ್ಮನೇಪದೇಷ್ವನತಃ** (ಪಾ. ಸೂ. ೭-೧-೫) ಎಂಬುದರಿಂದ ಅದಕ್ಕೆ ಅತಾದೇಶ. ಟಗೆ ಏತ್ವ. ಶ್ಲುವಿಕರಣನಿಮಿತ್ತವಾಗಿ ಧಾತುವಿಗೆ ದ್ವಿತ್ವ ಬಂದಾಗ **ಶ್ನಾಭ್ಯಸ್ತಯೋರಾತಃ** (ಪಾ. ಸೂ. ೬-೪-೧೧೨) ಎಂಬುದರಿಂದ ಆಕಾರ ಲೋಪ. ಅಭ್ಯಾಸಕ್ಕೆ ಇತ್ವ. ತಿಙಂತನಿಘಾತಸ್ವರ ಬರುತ್ತದೆ. ॥ ೨೪ ॥

———— :o: — ———

ಸಂಹಿತಾಪಾಠಃ

ಜಗತಾ ಸಿಂಧುಂ ದಿವ್ಯಸ್ತಭಾಯದ್ರಥಂತರೇ ಸೂರ್ಯಂ ಪರ್ಯಪಶ್ಯತ್ ।
ಗಾಯತ್ರಸ್ಯ ಸಮಿಧಸ್ತಿಸ್ರ ಆಹುಸ್ತತೋ ಮಹ್ನಾ ಪ್ರ ರಿರಿಚೇ ಮಹಿತ್ವಾ ॥
॥ ೨೫ ॥

ಪದಪಾಠ

ಜಗತಾ । ಸಿಂಧುಂ । ದಿವಿ । ಅಸ್ತಭಾಯತ್ । ರಥಂऽತರೇ । ಸೂರ್ಯಂ । ಪರಿ । ಅಪಶ್ಯತ್ ।
ಗಾಯತ್ರಸ್ಯ । ಸಂऽಇಧಃ । ತಿಸ್ರಃ । ಆಹುಃ । ತತಃ । ಮಹ್ನಾ । ಪ್ರ । ರಿರಿಚೇ । ಮಹಿऽತ್ವಾ ॥ ೨೫ ॥

ಸಾಯಣಭಾಷ್ಯಂ

ಜಗತೀಛಂದಸ್ಕಾಯಾಮೃಚ್ಯುತ್ಪನ್ನಂ ಸಾಮ ಜಗತ್ । ತೇನ ಬ್ರಹ್ಮಾ ಸೃಷ್ಟಿಕಾಲೇ ಸಿಂಧುಂ ಸ್ಯಂದನಶೀಲಮುದಕಸ್ಯ ಸ್ಯಂದಕಂ ವಾದಿತ್ಯಂ ದಿವಿ ದ್ಯುಲೋಕೇಽಸ್ತಭಾಯತ್ । ಸ್ತಂಭಿತವಾನ್ । ಜಾಗತೋ ವಾ ಏಷ ಯ ಏಷ ತಪತೀತಿ ಶ್ರುತಿಃ । ರಥಂತರ ಏತನ್ನಾಮಕೇ ಸಾಮ್ನಿ ಸ್ತಂಭಿತಂ ಸೂರ್ಯಂ ಪರ್ಯಪಶ್ಯತ್। ಪರಿದೃಷ್ಟವಾನ್ಪ್ರಜಾಪತಿಃ । ತದಾಧಾರಭೂತಾಯಾಮೃಚಿ । ಋ. ೭-೩೨-೨೨। ಸ್ವರ್ದೃಶಮಿತಿ ಸೂರ್ಯಪ್ರತಿಪಾದಕಶಬ್ದದರ್ಶನಾತ್ । ಅಸೌ ವಾವ ಸ್ವರ್ದೃಗಿತಿ ಹಿ ಶ್ರುತಿಃ। ಅತ ಏವ ತತ್ರ ಸೂರ್ಯದರ್ಶನಂ ವಿಧೀಯತೇ । ರಥಂತರೇ ಪ್ರಸ್ತೂಯಮಾನೇ ಸಂಮೀಲಯೇತ್ ಸ್ವರ್ದೃಶಂ ಪ್ರತಿ ವೀಕ್ಷೇತೇತಿ ಸಾಮಬ್ರಾಹ್ಮಣೇನ । ತಾಂ ೭-೭-೧೫ । ಗಾಯತ್ರಸ್ಯ ಗಾಯತ್ರ್ಯಾಮುತ್ಪನ್ನಸ್ಯ ಸಾಮ್ನಃ ಸಮಿಧಃ ಸಮಿಂಧನಾಸ್ತಿಸ್ರೋ ವಿಭಕ್ತೀರಾಹುಃ । ಪಾದತ್ರಯಮಾಹುರಿತ್ಯರ್ಥಃ । ಅಥವಾ ತಿಸ್ರ ಋಚ ಆಹುಃ । ತತೋ ಹೇತೋರ್ಮಹ್ನಾ ಬಲೇನ ಮಹಿತ್ವಾ ಮಹತ್ತ್ವೇನ ಪ್ರ ರಿರಿಚೇ । ಪ್ರರಿಚ್ಯತೇ । ಅನ್ಯಾನಿ ಸಾಮಾನಿ ಪೃಥಕ್ಪೃಥಗ್ನಿರ್ಮಿತವಾನ್ । ಯದ್ವಾ । ಗಾಯತ್ರಶಬ್ದಶ್ಛಂದೋವಾಚೀ । ತಸ್ಯ ತಿಸ್ರೋ ಮೂರ್ತೀರಾಹುಃ ಕ್ರಮೇಣಾಷ್ಟಾಕ್ಷರೈಕಾದಶಾಕ್ಷರದ್ವಾದಶಾಕ್ಷರೈರ್ಗಾಯತ್ರೀತ್ರಿಷ್ಟುಬ್ಜಗತ್ಯಾತ್ಮಿಕಾಃ । ಯಸ್ಮಾದೇವಂ ತತಸ್ತಸ್ಮಾದ್ಗಾಯತ್ರೀ ಛಂದಸಾಂ ಕನಿಷ್ಠಾ ಸತೀ ಮಹ್ನಾ ಬಲೇನ ಮಹತ್ತ್ವೇನ ಪ್ರ ರಿರಿಚೇ । ಸರ್ವಾಣಿ ಛಂದಾಂಸ್ಯತಿಕ್ರಾಮತಿ । ಯೇನೈವ ಬಲೇನ ಸೋಮಮಾಹೃತವತೀ ತಾದೃಶೇನೈವಂ ಭವತಿ ॥

ಪ್ರತಿಪದಾರ್ಥ

ಜಗತಾ—ಜಗತೀಚ್ಛಂದಸ್ಸಿನಿಂದ ಉತ್ಪನ್ನವಾದ ಸಾಮದಿಂದ । ( ಬ್ರಹ್ಮಾ— ಬ್ರಹ್ಮನು ) ಸಿಂಧುಂ—ಸ್ಯಂದನಶೀಲನಾದ ಆದಿತ್ಯನನ್ನು । ದಿವಿ— ದ್ಯುಲೋಕದಲ್ಲಿ । ಅಸ್ತಭಾಯತ್— ನಿಲ್ಲಿಸಿದನು. । ರಥಂತರೇ—ರಥಂತರವೆಂಬ ಸಂಜ್ಞೆಯುಳ್ಳ ಸಾಮದಲ್ಲಿ । ಸೂರ್ಯಂ—ಸೂರ್ಯನನ್ನು । ಪರ್ಯಪಶ್ಯತ್—ದೃಷ್ಟಿಸಿ ನೋಡಿ

ದನು । **ಗಾಯತ್ರಸ್ಯ**— ಗಾಯತ್ರೀಚ್ಛಂದಸ್ಸಿನಿಂದ ಉತ್ಪನ್ನವಾದ ಸಾಮುದ । **ಸಮಿಧಃ**— ವಿಭಾಗಗಳನ್ನು । **ತಿಸ್ರಃ**—ಮೂರು ಸಂಖ್ಯಾಕಗಳನ್ನಾಗಿ। **ಆಹುಃ**—(ಮೂರು ಪಾದಗಳುಳ್ಳವೆಂದು) ಹೇಳುತ್ತಾರೆ । **ತತಃ**—ಅವುಗಳಿಂದ ಉತ್ಪನ್ನವಾದ (ಉಳಿದಸಾಮುಗಳೂ) । **ಮಹ್ನಾ**—ಶಕ್ತಿಯಿಂದಲೂ, । **ಮಹಿತ್ವಾ**—ಮಹತ್ವದಿಂದಲೂ । **ಪ್ರ ರಿರಿಚೇ**— ವೃದ್ಧಿಯನ್ನು ಹೊಂದುತ್ತವೆ.

###### ಭಾವಾರ್ಥ

ಜಗತೀಚ್ಛಂದಸ್ಸಿನಿಂದ ಉತ್ಪನ್ನವಾದ ಸಾಮದಿಂದ ಬ್ರಹ್ಮನು ಸ್ಯಂದನಶೀಲನಾದ ಆದಿತ್ಯನನ್ನು ದ್ಯುಲೋಕದಲ್ಲಿ ನಿಲ್ಲಿಸಿದನು. ರಥಂತರವೆಂಬ ಸಂಜ್ಞೆಯುಳ್ಳ ಸಾಮದಲ್ಲಿ ಸೂರ್ಯನನ್ನು ದೃಷ್ಟಿಸಿ ನೋಡಿದನು. ಗಾಯತ್ರೀಚ್ಛಂದಸ್ಸಿನಿಂದ ಉತ್ಪನ್ನವಾದ ವಿಭಾಗಗಳನ್ನು ಮೂರು ಸಂಖ್ಯಾಕಗಳುಳ್ಳವೆಂದು ಹೇಳುತ್ತಾರೆ. ಅವುಗಳಿಂದ ಉತ್ಪನ್ನವಾದ, ಉಳಿದ ಸಾಮಗಳೂ ಸಹ ಶಕ್ತಿಯಿಂದಲೂ ಮಹತ್ತ್ವದಿಂದಲೂ ವೃದ್ಧಿಯನ್ನು ಹೊಂದುತ್ತವೆ.

## English Translation

With the stanzas in the Jagati metre he fixed the rain in heaven, and surveyed the Sun in the Rathantara. They have declared three divisions of the Gayatri metre, whence it surpasses (all the rest) in force and majesty.

###### ವಿಶೇಷವಿಷಯಗಳು

**ಜಗತಾ**— **ಜಗತೀಚ್ಛಂದಸ್ಯಾಯಾಂ ಋಚಿ ಉತ್ಪನ್ನಂ ಸಾಮ ಜಗತ್** । ಜಗತೀಚ್ಛಂದಸ್ಸುವಾದ ಋಕ್ಕಿನಿಂದ ಉತ್ಪನ್ನವಾದ ಸಾಮಕ್ಕೆ **ಜಗತ್** ಎಂದು ಹೆಸರು. **ಜಗತಾ** ಎಂದರೆ ಆ ಜಗದ್ರೂಪವಾದ ಸಾಮದಿಂದ ಎಂದರ್ಥ. ಈ ಸಾಮಕ್ಕೆ ಋಕ್ಸಾಮವೆಂದು ಹೆಸರು. ಶತಪಥಬ್ರಾಹ್ಮಣದಲ್ಲಿ ಇದರ ಸೃಷ್ಟಿಕ್ರಮವನ್ನು ವಿವರಿಸುತ್ತಾ

> **ತಸ್ಯ ಚಕ್ಷುರ್ವೈಶ್ವವ್ಯಚಸಮಿತಿ । ಚಕ್ಷುಸ್ತಸ್ಮಾದ್ರೂಪಾದಾದಿತ್ಯಾನ್ನಿರಮಿಮೀತ ವರ್ಷಾಶ್ಚಾಕ್ಷುಷ್ಯ ಇತಿ ವರ್ಷಾ ಋತುಂ ಚಕ್ಷುಷೋ ನಿರಮಿಮೀತೆ ಜಗತೀ ವಾರ್ಷೀತಿ ಜಗತೀಂ ಛಂದೋ ವರ್ಷಾಭ್ಯ ಋತೋರ್ನಿರಮಿಮೀತ ಜಗತ್ಯಾ ಋಕ್ಸಮಮಿತಿ ಜಗತ್ಯೈ ಛಂದಸ ಋಕ್ಸಮಗ್ಂಸಾಮ ನಿರಮಿಮೀತರ್ಕ್ಸಮಾಚ್ಛುಕ್ರ ಇತ್ಯೃಕ್ಸಮಾತ್ಸಾಮ್ನಃ ಶುಕ್ರಂ ಗ್ರಹಂ ನಿರಮಿಮೀತ ಶುಕ್ರಾತ್ಸಪ್ತದಶ ಇತಿ ಶುಕ್ರಾದ್ಗ್ರಹಾತ್ಸಪ್ತದಶಗ್ಂ ಸ್ತೋಮಂ ನಿರಮಿಮೀತ.... ॥**
>
> (ಶ. ಬ್ರಾ. ೮-೧-೨-೨)

ವಿಶ್ವವ್ಯಾಪಿಯಾದುದೂ, ಚಕ್ಷೂರೂಪಿಯಾದುದೂ ಆದ ಆದಿತ್ಯನಿಂದ ಪ್ರಜಾಪತಿಯು ವರ್ಷಾಕಾಲವನ್ನು, ನಿರ್ಮಿಸಿದನು. ಈ ವರ್ಷರ್ತುವಿನಿಂದ ಋಕ್ಸಮಸಾಮವನ್ನೂ, ಋಕ್ಸಮಸಾಮದಿಂದ ಶುಕ್ರಗ್ರಹವನ್ನೂ ನಿರ್ಮಿಸಿದನೆಂದು ತಿಳಿಸಿದೆ. ಇದನ್ನೇ ತೈತ್ತಿರೀಯ ಸಂಹಿತೆಯಲ್ಲಿಯೂ ಸಹ.

> **ಪ್ರಜಾಭ್ಯೋಽಯಂ ಪಶ್ಚಾದ್ವಿಶ್ವವ್ಯಚಾಸ್ತಸ್ಯ ಚಕ್ಷುರ್ವೈಶ್ವವ್ಯಚಸಂ ವರ್ಷಾಣಿ ಚಾಕ್ಷುಷಾಣಿ ಜಗತೀ ವಾರ್ಷೀ ಜಗತ್ಯಾ ಋಕ್ಸಮಂ .... ॥**
>
> (ತೈ. ಸಂ. ೪-೩-೨-೨)

ಎಂಬ ವಾಕ್ಯದಲ್ಲಿ ಮೇಲೆ ಹೇಳಿದಂತೆಯೇ ತಿಳಿಸಿದೆ. ಇಲ್ಲಿ ಸಾಯಣರು **ಋಕ್ಷಮಂ** ಎಂಬುದಕ್ಕೆ **ಸಾಮವಿಶೇಷಃ** ಎಂದರ್ಥಮಾಡಿದ್ದಾರೆ ಇಂತಹ ಸಾಮಕ್ಕೆ **ಜಗತ್** ಎಂಬ ಹೆಸರೆಂದು ಸಾಯಣರ ವಿವರಣೆಯಿಂದ ತಿಳಿಯುತ್ತದೆ. ಈ ಜಗದ್ರೂಪವಾದ ಸಾಮದಿಂದ ಬ್ರಹ್ಮನು ಸೃಷ್ಟಿಕಾಲದಲ್ಲಿ ಆದಿತ್ಯನನ್ನು ದ್ಯುಲೋಕದಲ್ಲಿ ನಿಲ್ಲಿಸಿದನು ಎಂದು ಋಕ್ಕಿನ ವರ್ಣನೆಯಿದೆ. ಇಂತಹ ಜಗದ್ರೂಪವಾದ ಸಾಮಕ್ಕೂ ಆದಿತ್ಯನಿಗೂ ತಾದಾತ್ಮ್ಯಸಂಬಧವನ್ನೆ ತೋರಿಸುತ್ತಾ, ಸಾಯಣರು,

**ಜಾಗತೋ ವಾ ಏಷ ಯ ಏಷ ತಪತಿ " ಇತಿ ಶ್ರುತಿಃ**

ಅಂತರಿಕ್ಷದಲ್ಲಿ ಪ್ರಕಾಶಿಸುತ್ತಿರುವ ಆದಿತ್ಯನು **ಜಗತ್** ಎಂಬ ಸಾಮಸಂಬಂಧಿಯು ಎಂಬರ್ಥವನ್ನು ಕೊಡುವ ಶ್ರುತಿವಾಕ್ಯವನ್ನುದಹರಿಸಿದ್ದಾರೆ. ಆದರೆ ಈ ವಾಕ್ಯಕ್ಕೆ ಆಧಾರವಾವುದೆಂಬುದನ್ನು ಮಾತ್ರ ಹೇಳಿಲ್ಲ.

**ಸಿಂಧುಂ ದಿವ್ಯಸ್ತಭಾಯುತ್**—ಸಿಂಧುವನ್ನು ಅಂತರಿಕ್ಷದಲ್ಲಿ ಸ್ಥಾಪಿಸಿದನು ಎಂದು ಉಕ್ತವಾಗಿದೆ. ಇಲ್ಲಿ **ಸಿಂಧು** ವೆಂಬ ಪದಕ್ಕೆ **ಸ್ಯಂದನಶೀಲಮುದಕಸ್ಯ ಸ್ಯಂದಕಂ ವಾ ಆದಿತ್ಯಂ ।** ಸ್ರವಿಸತಕ್ಕ ಉದಕದ ಪ್ರವಾಹವನ್ನು ಎಂದಾಗಲಿ ಅಥವಾ ಆದಿತ್ಯನನ್ನು ಎಂದಾಗಲಿ ಅರ್ಥವಾಗುವುದೆಂದು ತೋರಿಸಿದ್ದಾರೆ. ಸೃಷ್ಟಿಕಾಲದಲ್ಲಿ ಬ್ರಹ್ಮನು ಸೃಷ್ಟಿಗಿಂತ ಪೂರ್ವದಲ್ಲಿ ಅವ್ಯವಸ್ಥಿತವಾಗಿದ್ದ ಅಪ್ಪನ್ನು ವ್ಯವಸ್ಥಿತವಾದ ರೀತಿಯಲ್ಲಿ ಸ್ಥಾಪಿಸಿದನು ಎಂದೂ ಆದರಂತೆಯೇ ಅಪ್ಪಿನಿಂದ ಪೂರಿತವಾದ ಅಂತರಿಕ್ಷದಲ್ಲಿ ಪ್ರಥಮತಃಆದಿತ್ಯನನ್ನು ಸ್ಥಾಪಿಸಿದನು ಎಂದೂ ಸೃಷ್ಟಿಕಾಲದ ವರ್ಣನೆಯು ನಾನಾ ಶ್ರುತಿಗಳಲ್ಲಿ ಉಕ್ತವಾಗಿದೆ. ಆದುದರಿಂದ ಎರಡು ವಿಧವಾದ ಅರ್ಥಗಳನ್ನೂ ಮಾಡಬಹುದು.

**ಆಪೋ ವಾ ಇದಮಾಸನ್ತ್ಸಲಿಲಮೇವ । ಸ ಪ್ರಜಾಪತಿರೇಕಃ ಪುಷ್ಕರಪರ್ಣೇ ಸಮಭವತ್ । ತಸ್ಯಾಂತರ್ಮನಸಿ ಕಾಮಃ ಸಮವರ್ತತ । ಇದಗ್ಂ ಸೃಜೇಯಮಿತಿ ।** .... .... .... .... .... .... .... .... .... .... .... .... .... .... .... **ಸ ಇತ ಆದಾಯಾಪಃ । ಅಂಜಲಿನಾ ಪುರಸ್ತಾದುಪಾದಧಾತ್ । ಏವಾಹ್ಯೇವೇತಿ । ತತ ಆದಿತ್ಯ ಉದತಿಷ್ಠತ್ ॥**

(ತೈ. ಆ. ೧-೨೩-೧)

ಎಂಬ ವಾಕ್ಯಗಳಲ್ಲಿ ಪ್ರಜಾಪತಿಯು ಅಪ್ಪನ್ನು ಸ್ತಿಮಿತದಲ್ಲಿರಿಸಿದನಂತರ ಅದರಿಂದ ಆದಿತ್ಯನು ಉತ್ಪನ್ನನಾಗಿ ಅಂತರಿಕ್ಷಸ್ಥನಾಗಿರುವಂತೆ ಮಾಡಿದನು ಎಂದು ವರ್ಣಿಸಿದೆ. ಇದೇ ಅಭಿಪ್ರಾಯವು

**ಆಪೋ ವಾ ಇದಮಗ್ರೇ ಸಲಿಲಮಾಸೀತ್ । ತೇನ ಪ್ರಜಾಪತಿರಶ್ರಾಮ್ಯತ್ ।**

(ತೈ. ಬ್ರಾ. ೧-೧-೩-೫)

ಇತ್ಯಾದಿ ಬ್ರಾಹ್ಮಣವಾಕ್ಯದಲ್ಲೂ ವರ್ಣಿತವಾಗಿದೆ. ಪ್ರಜಾಪತಿಯ ಧಾರಣಶಕ್ತಿಯನ್ನು ಪ್ರಶಂಸಿಸುತ್ತಾ ಋಕ್ಸಂಹಿತೆಯಲ್ಲಿಯೂ ಸಹ ;—

**ದಿವೋ ಧರ್ತಾ ಭುವನಸ್ಯ ಪ್ರಜಾಪತಿಃ ಪಿಶಂಗಂ ದ್ರಾಪಿಂ ಪ್ರತಿ ಮುಂಚತೇ ಕವಿಃ ।**
**ವಿಚಕ್ಷಣಃ ಪ್ರಥಯನ್ನಾಪೃಣನ್ನುರ್ವಜೀಜನತ್ಸವಿತಾ ಸುಮ್ನಮುಕ್ಥ್ಯಂ ॥**

(ಋ. ಸಂ. ೪-೫೩-೨)

ದ್ಯುಲೋಕದಲ್ಲಿ ಸೂರ್ಯಾದಿಗಳನ್ನು ಸ್ಥಾಪಿಸಿದುದೇ ಅಲ್ಲದೇ, ಪ್ರಜಾಪತಿಯು ಸಕಲಲೋಕಗಳ ಧಾರಕನೂ ಆಗಿದ್ದಾನೆ, ಎಂದು ಹೇಳಿದೆ. ಇಲ್ಲಿ ಸಾಯಣರು **ಪ್ರಜಾಪತಿಃ** ಎಂಬ ಪದಕ್ಕೆ ಪ್ರಜಾನಾಂ **ಪ್ರಕಾಶವೃಷ್ಟ್ಯಾದಿನಾ ಪಾಲಯಿತಾ** ಎಂದರ್ಥವನ್ನು ಮಾಡಿದ್ದಾರೆ. ವೃಷ್ಟ್ಯುದಕಗಳನ್ನು ತನ್ನ ನಿಯಮದಲ್ಲಿಟ್ಟು ಹಂಚುವನೆಂದೂ ಮತ್ತು ಆದಿತ್ಯಾದಿ ತೇಜೋಮಂಡಲಗಳನ್ನು ಅಂತರಿಕ್ಷದಲ್ಲಿ ಸ್ಥಾಪಿಸಿ ಲೋಕಕ್ಕೆ ಪ್ರಕಾಶವನ್ನು ಹಂಚುವನೆಂದೂ ಅರ್ಥವಾಗುತ್ತದೆ. ಆದುದರಿಂದ ಪ್ರಕೃತವಾದ ಋಕ್ಕಿನಲ್ಲಿ **ಸಿಂಧುಂ ದಿವ್ಯಸ್ತಭಾಯತ್** ಎಂಬುದಕ್ಕೆ ಸೃಷ್ಟಿಕಾಲದಲ್ಲಿ ಅಪ್ಪನ್ನು ವ್ಯವಸ್ಥಿತವಾದ ರೀತಿಯಲ್ಲಿ ಸ್ಥಾಪಿಸಿದನು ಎಂದಾಗಲಿ ಅಥವಾ ಆದಿತ್ಯನನ್ನು ದ್ಯುಲೋಕದಲ್ಲಿ ಸ್ಥಾಪಿಸಿದನು ಎಂದಾಗಲಿ ಅರ್ಥಮಾಡಬಹುದು.

**ರಥಂತರೇ ಸೂರ್ಯಂ ಪರ್ಯಪಶ್ಯತ್**—ರಥಂತರವೆಂಬ ಸಾಮದಲ್ಲಿ ಸ್ತಂಭಿತನಾದ ಆದಿತ್ಯನನ್ನು ಪ್ರಜಾಪತಿಯು ನೋಡಿದನು, ಎಂದು ಅರ್ಥಮಾಡಿ,

**ಅಭಿ ತ್ವಾ ಶೂರ ನೋನುಮೋಽದುಗ್ಧಾ ಇವ ಧೇನವಃ ।**
**ಈಶಾನಮಸ್ಯ ಜಗತಃ ಸ್ವರ್ದೃಶಮೀಶಾನಮಿಂದ್ರ ತಸ್ಥುಷಃ ॥**

(ಋ- ಸಂ. ೭-೩೨-೨೨)

ಎಂಬ ಋಕ್ಕನ್ನುದಹರಿಸಿ ಅಲ್ಲಿರುವ " **ಸ್ವರ್ದೃಶಂ** " ಎಂಬ ಪದಕ್ಕೆ **ಸೂರ್ಯಪ್ರತಿಪಾದಕಶಬ್ದದರ್ಶನಾತ್** ಸೂರ್ಯಪ್ರತಿಪಾದಕವಾದ ಶಬ್ದದರ್ಶನದಿಂದ ಎಂದು ಅರ್ಥಮಾಡಿ ಇಲ್ಲಿ ತಾವು ಹೇಳಿರುವ ಅರ್ಥವನ್ನು ಸಮರ್ಥಿಸಿದ್ದಾರೆ. ಆದರೆ **ಸ್ವರ್ದೃಶಂ** ಎಂಬಪದವು ಇಂದ್ರನಿಗೆ ವಿಶೇಷಣವಾಗಿದೆ. ಇದಕ್ಕೆ ' **ಸರ್ವದೃಶಂ** ' ಎಲ್ಲವನ್ನೂ ನೋಡತಕ್ಕ ಇಂದ್ರನನ್ನು (ಸರ್ವಜ್ಞನಾದ ಇಂದ್ರನನ್ನು ಎಂದಾದರೂ ಹೇಳಬಹುದು.) ಎಂದರ್ಥವನ್ನು ಹೇಳಿದ್ದಾರೆ. ಪ್ರಕೃತವಾದ ಋಕ್ಕಿನ ಅರ್ಥಕ್ಕೂ ಈ ಉದಾಹರಣೆಗೂ ಯಾವ ರೀತಿಯ ಸಾದೃಶ್ಯವನ್ನು ಹೇಳಬಹುದೆಂಬುದು ಕೇವಲ ಸ್ಥೂಲವಾದ ದೃಷ್ಟಿಯಿಂದ ನೋಡಿದರೆ ಅರ್ಥವಾಗುವುದಿಲ್ಲ. ಆದರೆ ಇದೇ ವಿವರಣೆಯನು ಮುಂದುವರಿಸುತ್ತಾ,

**ಈಶಾನಮಸ್ಯ ಜಗತಃ ಸ್ವರ್ದೃಶಮಿತ್ಯಸೌ ವಾವ ಸ್ವರ್ದೃಕ್ ತೇನ ಸೂರ್ಯಂ ನಾತಿಶಂಸತಿ ।**

(ಐ. ಬ್ರಾ. ೪-೧೦)

ಎಂಬ ವಾಕ್ಯವನ್ನುದಹರಿಸಿ ಅಲ್ಲಿ ಸೂರ್ಯಪರವಾದ ಅರ್ಥವಾಗುವಂತೆಯೂ ರಥಂತರಸಾಮಕ್ಕೂ ಸೂರ್ಯನಿಗೂ ಸಂಬಂಧವಿರುವುದನ್ನು ತೋರಿಸುವಂತೆಯೂ ಸಹ ಪ್ರಕೃತವಾದ ಋಕ್ಕಿನಲ್ಲಿಯೂ ರಥಂತರಸಾಮಕ್ಕೂ ಆದಿತ್ಯನಿಗೂ ಸಂಬಂಧವನ್ನು ತೋರಿಸಿ ಪ್ರಜಾಪತಿಯಿಂದ ಕೃತವಾದ ಆದಿತ್ಯದರ್ಶನವನ್ನು ವಿವರಿಸಿದೆಯೆಂದು ತಿಳಿಸಿದ್ದಾರೆ. ಐತರೇಯಬ್ರಾಹ್ಮಣದ ಅದೇ ವಾಕ್ಯದಲ್ಲಿ,

**ಅಭಿ ತ್ವಾ ಶೂರ ನೋನುಮ ಇತಿ ರಾಥಂತರೀಂ ಯೋನಿಂ ಶಂಸತಿ ರಾಥಂತರೇಣ ವೈ ಸಂಧಿನಾಶ್ವಿನಾಯ ಸ್ತುವತೇ ತದ್ಯದ್ರಾಥಂತರೀಂ ಯೋನಿಂ ಶಂಸತಿ ರಥಂತರಸ್ಯೈವ ಸಯೋನಿತ್ವಾಯ।**

(ಐ. ಬ್ರಾ ೪-೧೦)

ಎಂದು ಮೇಲೆ ಋಕ್ಸಂಹಿತೆಯಲ್ಲಿ ಉದಾಹೃತವಾದ " **ಅಭಿ ತ್ವಾ ಶೂರ** " (೭-೩೨-೨೨) ಎಂಬ ಋಕ್ಕಿನ ಗೂಢಾರ್ಥವನ್ನು ವಿವರಿಸಿದೆ ಈ ಮಂತ್ರವು **ರಥಂತರಸಾಮದ** ಯೋನಿಯಾಗಿದೆ. ಈ ಯೋನಿಯು ಆದಿತ್ಯ

ದರ್ಶನದ ಸಾಧನವಾಗಿದೆ. ಅದೇ ಅರ್ಥವನ್ನು " **ರಥಂತರೇ ಸೂರ್ಯಂ ಪರ್ಯಪಶ್ಯತ್** " ಎಂಬ ಮಂತ್ರಭಾಗವೂ ತಿಳಿಸುತ್ತದೆ ಎಂದು ವಿವರಿಸಿದೆ.

**ರಥಂತರೇ ಪ್ರಸ್ತೂಯಮಾನೇ ಸಂಮೀಲಯೇತ್ ಸ್ವರ್ದೃಶಂ ಪ್ರತಿ ವೀಕ್ಷೇತ ।**

(ತಾ. ಬ್ರಾ. ೭-೭-೧೫)

ಇತ್ಯಾದಿವಾಕ್ಯಗಳಲ್ಲೂ ಸಹ ಈ ಅಂಶವು ಪ್ರತಿಪಾದಿತವಾಗಿದೆ.

**ಗಾಯತ್ರಸ್ಯ ಸಮಿಧಃ ತಿಸ್ರಃ—ಗಾಯತ್ರ್ಯಾಮುತ್ಪನ್ನಸ್ಯ ಸಾಮ್ನಃ ತಿಸ್ರಃ ವಿಭಕ್ತೀಃ । ಪಾದತ್ರಯಮಾಹುಃ ।** ಗಾಯತ್ರಿಯಿಂದ ಉತ್ಪನ್ನವಾದ ಸಾಮಕ್ಕೆ ಪಾದತ್ರಯವೆಂದು ತಿಳಿದ ವಿಷಯವಾಗಿದೆ. ಆದರೂ ಅಲ್ಲಿ ಇನ್ನೊಂದು ರಹಸ್ಯವಾದ ಅರ್ಥವೂ ಇದೆಯೆಂದು ತಿಳಿಯುತ್ತದೆ.

**ಗಾಯತ್ರೀಮನುವಾಕ್ಯಾಮನ್ವಾಹ । ತ್ರಿಪದಾ ವೈ ಗಾಯತ್ರೀ ತ್ರಯ ಇಮೇ ಲೋಕಾ ಇಮಾನೇವೈತಲ್ಲೋಕಾನ್ದೇವಾಃ ಪ್ರತ್ಯಷ್ಠಾಪಯನ್ ।**

(ಶ. ಬ್ರಾ ೧೧-೨-೨-೧)

ಗಾಯತ್ರಿಯ ಪಾದಗಳು ತ್ರಿಸಂಖ್ಯಾಕಗಳಾಗಿವೆ. ಪ್ರಸಿದ್ಧವಾದ ಲೋಕಗಳೂ ತ್ರಿಸಂಖ್ಯಾಕಗಳಾಗಿವೆ. ಇದರಿಂದ ದೇವತೆಗಳು ಈ ಮೂರು ಲೋಕಗಳನ್ನೂ ಪ್ರತಿಷ್ಠಾಪಿಸಿದರು.

**ಗಾಯತ್ರ್ಯೈ ಗಾಯತ್ರಮಿತಿ ಗಾಯತ್ರ್ಯೈ ಛಂದಸೋ ಗಾಯತ್ರಗ್ಂ ಸಾಮ ನಿರಮಿಮೀತ )**

(ಶ. ಬ್ರಾ. ೮-೧-೧-೫।

ತ್ರಿಪಾದಾತ್ಮಕವಾದ ಈ ಗಾಯತ್ರಿಯಿಂದ ಗಾಯತ್ರಸಾಮವನ್ನು ರಚಿಸಿದನು ಇತ್ಯಾದಿಯಾಗಿ ಇವರ ವರ್ಣನೆಯಿರುವುದರಿಂದ ಇಲ್ಲಿ **ಗಾಯತ್ರ್ಯಾಮುತ್ಪನ್ನಸ್ಯ ಸಾಮ್ನಃ ತಿಸ್ರಃ ವಿಭಕ್ತೀಃ** ಎಂಬ ಒಂದು ಅರ್ಥವನ್ನು ಹೇಳಬಹುದು ಅಥವಾ **ತಿಸ್ರಃ ಋಚಃ ಆಹುಃ** ಮೂರು ಋಕ್ಕುಗಳೆಂದು ಇನ್ನೊಂದರ್ಥವನ್ನೂ ಹೇಳಬಹುದೆಂದು ತಿಳಿಸಿದೆ.

**ತತಃ ಮಹ್ನಾ ಮಹಿಮ್ನಾ ಪ್ರ ರಿರಿಚೇ—ಬಲೇನ ಮಹತ್ತ್ವೇನ ಅನ್ಯಾನಿ ಸಾಮಾನಿ ಪೃಥಕ್ ನಿರ್ಮಿತವಾನ್ ।** ಇದರ ಶಕ್ತಿಯಿಂದಲೂ, ಮಹತ್ತ್ವದಿಂದಲೂ ಇತರ ಸಾಮಗಳನ್ನೂ ಬೇರೆ ಬೇರೆ ನಿರ್ಮಿಸಿದನು ಎಂದು ಒಂದು ವಿಧವಾದ ಅರ್ಥವು. ಅದು ಹೇಗೆಂದರೆ,

**ಗಾಯತ್ರೀ ವಾ ಇದಂ ಸರ್ವಂ ಭೂತಂ ಯದಿದಂ ಕಿಂಚ ವಾಗ್ವೈ ಗಾಯತ್ರೀ ।**

(ಛಾ. ಉ. ೩-೧೨-೧)

ಸಕಲ ಭೂತಗಳಿಗೂ ಗಾಯತ್ರಿಯೇ ಆಧಾರವು ಮತ್ತು ವಾಕ್ಕಿಗೂ ಗಾಯತ್ರಿಯೇ ಆಧಾರವು. ಆದುದರಿಂದಲೇ,

**ಗಾಯತ್ರೀ ಛಂದಸಾಂ ಮಾತಾ ।**

(ಮ ನಾ. ಉ. ೧೫-೧)

ಸಕಲಛಂದಸ್ಸುಗಳಿಗೂ ಗಾಯತ್ರಿಯೇ ಮಾತೆಯೆಂದೂ ಸ್ತುತಿಸಿದೆ. ಇದರಂತೆಯೇ,

**ಅಥಾತಃ ಶಿರಃ । ತದ್ಗಾಯತ್ರೀಷು ಭವತ್ಯಗ್ರಂ ವೈ ಛಂದಸಾಂ ಗಾಯತ್ರ್ಯಗ್ರಮಂಗಾನಾಂ ಶಿರಃ ।**
(ಐ. ಆ. ೧-೪-೧)

ಶರೀರದ ಅಂಗಗಳಿಗೆಲ್ಲಾ ಶಿರಸ್ಸೇ ಪ್ರಧಾನವಾಗಿರುವಂತೆ ಸಕಲಚ್ಛಂದಸ್ಸುಗಳಿಗೂ ಗಾಯತ್ರಿಯೇ ಪ್ರಧಾನವಾಗಿ ಅನಂತರ ಅದರ ಆಧಾರದ ಮೇಲೆ ಉಳಿದ ಛಂದಸ್ಸುಗಳ ನಿರ್ಮಾಣವಾಯಿತೆಂದು ತಿಳಿಸಿದೆ. ಗಾಯತ್ರೀಚ್ಛಂದಸ್ಸಿನಿಂದ ಗಾಯತ್ರಸಾಮವು ನಿರ್ಮಿತವಾದಂತೆ ಉಳಿದ ಛಂದಸ್ಸುಗಳಿಂದಲೂ ಬೇರೆಬೇರೆ ಸಾಮುಗಳು ನಿರ್ಮಿತವಾದವು ಎಂಬುದನ್ನು ತೈತ್ತಿರೀಯ ಸಂಹಿತೆಯಲ್ಲಿ ಈರೀತಿ ತಿಳಿಸಿದೆ

**ಅಯಂ ಪುರೋ ಭುವಸ್ತಸ್ಯ ಪ್ರಾಣೋ ಭೌವಾಯನೋ ವಸಂತಃ ಪ್ರಾಣಾಯನೋ ಗಾಯತ್ರೀ ವಾಸಂತೀ ಗಾಯತ್ರಿಯೈ ಗಾಯತ್ರಂ .... .... ।**

**ಅಯಂ ದಕ್ಷಿಣಾ ವಿಶ್ವಕರ್ಮಾ ತಸ್ಯ ಮನೋ ವೈಶ್ವಕರ್ಮಣಂ ಗ್ರೀಷ್ಮೋ ಮಾನಸಸ್ತ್ರಿಷ್ಟುಗ್-ಗ್ರೈಷ್ಮೀ ತ್ರಿಷ್ಟುಭ ಐಡಂ .... .... ।**

**ಅಯಂ ಪಶ್ಚಾದ್ವಿಶ್ವವ್ಯಚಾಸ್ತಸ್ಯ ಚಕ್ಷುರ್ವೈಶ್ವವ್ಯಚಸಂ ವರ್ಷಾಣಿ ಚಾಕ್ಷುಷಾಣಿ ಜಗತೀ ವಾರ್ಷೀ ಜಗತ್ಯಾ ಋಕ್ಷಮಂ .... .... ।**

**ಇದಮುತ್ತರಾತ್ಸುವಸ್ತಸ್ಯ ಶ್ರೋತ್ರಗ್ಂ ಸೌವಗ್ಂ ಶರಚ್ಛ್ರೌತ್ರ್ಯನುಷ್ಟುಪ್ ಶಾರದ್ಯನುಷ್ಟುಭಃ ಸ್ವಾರಂ .... .... ।**

(ತೈ ಸಂ ೪-೩ ೨-೧, ೨)

ಪ್ರಾಣದಿಂದ ವಸಂತವೂ, ವಸಂತದಿಂದ ಗಾಯತ್ರಿಯೂ **ಗಾಯತ್ರಸಾಮವೂ** ಉತ್ಪನ್ನವಾದವು. ಇದರಂತೆಯೇ ವಿಶ್ವಕರ್ಮನಿಂದ ಮನಸ್ಸೂ, ಮನಸ್ಸಿನಿಂದ ಗ್ರೀಷ್ಮವೂ ಗ್ರೀಷ್ಮದಿಂದ ತ್ರಿಷ್ಟುಪ್ಪೂ, ತ್ರಿಷ್ಟುಪ್ಪಿನಿಂದ **ಐಡಸಾಮವೂ** ಉತ್ಪನ್ನವಾದವು. ಸರ್ವವ್ಯಾಪಿಯಾದ ಪ್ರಜಾಪತಿಯಿಂದ ಚಕ್ಷುಸ್ಸೂ, ಚಕ್ಷುಸ್ಸಿನಿಂದ ಜಗತಿಯೂ, ಜಗತಿಯಿಂದ **ಋಕ್ಷಮವೂ** (ಋಕ್ಷಮಸಾಮ) ಉತ್ಪನ್ನವಾದವು. ತೇಜಸ್ಸಿನಿಂದ ಶ್ರೋತ್ರವೂ, ಶ್ರೋತ್ರದಿಂದ ಶರತ್ತೂ, ಶರತ್ಕಾಲದಿಂದ ಅನುಷ್ಟುಪ್ಪೂ, ಅನುಷ್ಟುಪ್ಪಿನಿಂದ **ಸ್ವಾರಸಾಮವೂ** ಉತ್ಪನ್ನವಾದವು ಎಂದು ಆಯಾ ಸಾಮುಗಳ ನಿಷ್ಪತ್ತಿಯನ್ನು ವಿವರಿಸಿದೆ. ಇದನ್ನೇ ಸಾಯಣರು ಪ್ರಕೃತವಾದ ಋಕ್ಕಿನಲ್ಲಿ **ಪ್ರ ರಿರಿಚೇ** ಎಂಬ ಪದಕ್ಕೆ ಅರ್ಥವನ್ನು ಹೇಳುವಾಗ **" ಅನ್ಯಾನಿ ಸಾಮಾನಿ ಪೃಥಕ್ ಪೃಥಕ್ ನಿರ್ಮಿತವಾನ್ "** ಉಳಿದ ಸಾಮುಗಳನ್ನೂ ಬೇರೆಬೇರೆ ನಿರ್ಮಿಸಿದನು ಎಂದು ಹೇಳಿದ್ದಾರೆ. ಇದರಲ್ಲಿಯೂ ಗಾಯತ್ರಿಯೇ ಅಧಿಕವಾದ ಮಹತ್ತ್ವವಾಗಿದೆಯಾದ್ದರಿಂದ ಅದಕ್ಕೆ ಪ್ರಥಮ ಸ್ಥಾನವಿದೆ. ಇದಲ್ಲದೆ, **ಮಹ್ನಾ ಮಹಿತ್ವಾ ಪ್ರ ರಿರಿಚೇ** ಎಂಬುದಕ್ಕೆ ಇನ್ನೊಂದರ್ಥವೂ ಸಾಧ್ಯವೆಂದು ಸಾಯಣರು ವಿವರಿಸಿದ್ದಾರೆ. ಅದು ಹೇಗೆಂದರೆ,

**ಯದ್ವಾ। ಗಾಯತ್ರಶಬ್ದಶ್ಛಂದೋವಾಚೀ। ತಸ್ಯ ತಿಸ್ರೋ ಮೂರ್ತಯಃ ಆಹುಃ ಕ್ರಮೇಣ ಅಷ್ಟಾದಕ್ಷರೈಕಾದಶಾಕ್ಷರದ್ವಾದಶಾಕ್ಷರೈಃ ಗಾಯತ್ರೀ ತ್ರಿಷ್ಟುಬ್‌ಜಗತ್ಯಾತ್ಮಿಕಾಃ। ಯಸ್ಮಾದೇವಂ ತತಸ್ತಸ್ಮಾದ್ಗಾಯತ್ರೀ ಛಂದಸಾಂ ಕನಿಷ್ಠಾ ಸತೀ ಮಹ್ನಾ ಬಲೇನ ಮಾಹತ್ತ್ವೇನ ಪ್ರ ರಿರಿಚೇ ಸರ್ವಾಣಿ ಛಂದಾಂಸ್ಯತಿಕ್ರಾಮತಿ ಯೇನೈವ ಬಲೇನ ಸೋಮಮಾಹೃತವತೀ ತಾದೃಶೇನೈವ ಭವತಿ।**

ಗಾಯತ್ರೀ, ತ್ರಿಷ್ಟುಪ್, ಜಗತೀ ಈ ಮೂರು ರೂಪಗಳೂ ಇಲ್ಲಿ ಗಾಯತ್ರಶಬ್ದದಿಂದ ಸೂಚಿತವಾಗುತ್ತವೆ. ಇವುಗಳಲ್ಲಿ ಗಾಯತ್ರಿಯು ಅಷ್ಟಾಕ್ಷರಗಳುಳ್ಳದ್ದು, ತ್ರಿಷ್ಟುಪ್ಪು ಏಕಾದಶಾಕ್ಷರಗಳುಳ್ಳದ್ದು (೧೧) ಮತ್ತು ಜಗತಿಯು ದ್ವಾದಶಾಕ್ಷರಗಳುಳ್ಳದ್ದು (೧೨). ಆದುದರಿಂದ ಎಲ್ಲಾ ಛಂದಸ್ಸುಗಳಿಗಿಂತಲೂ ಗಾಯತ್ರಿಯು ಅತ್ಯಂತ ಚಿಕ್ಕದು. ಆದರೂ ಸಹ ಇದಕ್ಕಿಂತಲೂ ದೊಡ್ಡವಾದ ತ್ರಿಷ್ಟುಪ್ ಮತ್ತು ಜಗತೀ ಛಂದಸ್ಸುಗಳಿಂದ ಆಗದ ಮಹತ್ಕಾರ್ಯವನ್ನು ಗಾಯತ್ರಿಯು ತನ್ನ ಶಕ್ತಿಯಿಂದಲೂ ಮಹತ್ತ್ವದಿಂದಲೂ ಸಾಧಿಸಿದೆ. ಆದುದರಿಂದಲೇ ಇತರಛಂದಸ್ಸುಗಳಿಂದ ಆಗದಿರುವ **ಸೋಮವನ್ನು** ತಂದಿತು ಎಂದು ಒಂದು ಕಥಾಸಂದರ್ಭವನ್ನು ಸೂಚಿಸುವ ವರ್ಣನೆಯಿದೆಯೆಂದು ಸಾಯಣರು ವಿವರಿಸಿದ್ದಾರೆ. ಈ ಕಥೆಯು ಐತರೇಯ ಬ್ರಾಹ್ಮಣದಲ್ಲಿ ಈರೀತಿ ವರ್ಣಿತವಾಗಿದೆ.

> **ಸೋಮೋ ವೈ ರಾಜಾಽಮುಷ್ಮಿಂಲ್ಲೋಕ ಆಸೀತ್ತಂ ದೇವಾಶ್ಚ ಋಷಯಶ್ಚಾಭ್ಯಧ್ಯಾಯನ್ಕಥಮಯಮಸ್ಮಾನ್ತ್ಸೋಮೋ ರಾಜಾಗಚ್ಛೇದಿತಿ ತೇಽಬ್ರುವಂಶ್ಛಂದಾಂಸಿ ಯೂಯಂ ನ ಇಮಂ ಸೋಮಂ ರಾಜಾನಮಾಹರತೇತಿ ತಥೇತಿ ತೇ ಸುಪರ್ಣಾ ಭೂತ್ವೋದಪತಂಸ್ತೇ ಯತ್ಸುಪರ್ಣಾ ಭೂತ್ವೋದಪತಂಸ್ತದೇತತ್ಸೌಪರ್ಣಮಿತ್ಯಾಖ್ಯಾನವಿದ ಆಚಕ್ಷತೇ ।** (ಐ. ಬ್ರಾ. ೩-೨೫)

ದ್ಯುಲೋಕದಲ್ಲಿದ್ದ ಸೋಮವನ್ನು ರಾಜನನ್ನಾಗಿ ಪಡೆಯಬೇಕೆಂದು ದೇವತೆಗಳೂ ಋಷಿಗಳೂ ಆಶಿಸಿ ಆ ಸೋಮರಾಜನನ್ನು ತಮ್ಮಲ್ಲಿಗೆ ಕರೆದುಕೊಂಡು ಬರಬೇಕೆಂದು ಛಂದಸ್ಸುಗಳನ್ನು ಪ್ರಾರ್ಥಿಸಿದರು ಆಗ ಅವು ಒಪ್ಪಿಕೊಂಡು ಈ ಕಾರ್ಯಸಾಧನೆಗೆ **ಸುಪರ್ಣ** (ಪಕ್ಷಿ)ರೂಪದಲ್ಲಿ ಪರಿವರ್ತನೆಯನ್ನು ಹೊಂದಿದುದರಿಂದ ಈ ಸಂದರ್ಭವು ಸೌಪರ್ಣಾಖ್ಯಾನವೆಂದು ಪ್ರಸಿದ್ಧವಾಗಿದೆ.

> **ಛಂದಾಂಸಿ ವೈ ತತ್ಸೋಮಂ ರಾಜಾನಮಚ್ಛಾಚರಂಸ್ತಾನಿ ಹ ತರ್ಹಿ ಚತುರಕ್ಷರಾಣಿ ಚತುರಕ್ಷರಾಣ್ಯೇವ ಚ್ಛಂದಾಂಸ್ಯಾಸನ್ತ್ಸಾ ಜಗತೀ ಚತುರಕ್ಷರಾ ಪ್ರಥಮೋದಪತತ್ಸಾ ಪತಿತ್ವಾರ್ಧಮಧ್ವನೋ ಗತ್ವಾಶ್ರಾಮ್ಯತ್ ।** (ಐ ಬ್ರಾ ೩-೨೫)

> **ಅಥ ತ್ರಿಷ್ಟುಬುದಪತತ್ಸಾ ಪತಿತ್ವಾ ಭೂಯೋಽರ್ಧಾದಧ್ವನೋ ಗತ್ವಾಶ್ರಾಮ್ಯತ್ ।** (ಐ. ಬ್ರಾ. ೩-೨೫)

ಅನಂತರ ಪಕ್ಷಿರೂಪದ ಛಂದಸ್ಸುಗಳು ಸೋಮಾಹರಣಕ್ಕಾಗಿ ಹಾರಿದಾಗ **ಜಗತಿಯು** ಅರ್ಧದಾರಿಯಲ್ಲಿಯೇ ಸೋತು ಹೋಯಿತು. **ತ್ರಿಷ್ಟುಪ್ಪು** ಅನಂತರ ಪ್ರಯತ್ನಿಸಿ ಅರ್ಧದಾರಿಗಿಂತಲೂ ಮೀರಿ ಹೋದರೂ ಸಹ ಪೂರ್ಣವಾದ ದಾರಿಯನ್ನು ದಾಟಲಾಗದೇ ಹಿಂತಿರುಗಬೇಕಾಯಿತು

> **ತೇ ದೇವಾ ಅಬ್ರುವನ್ಗಾಯತ್ರೀಂ ತ್ವಂ ನ ಇಮಂ ಸೋಮಂ ರಾಜಾನಮಾಹರೇತಿ ಸಾ ತಥೇತ್ಯಬ್ರವೀತ್ತಾಂ ವೈ ಮಾ ಸರ್ವೇಣ ಸ್ವಸ್ತ್ಯಯನೇನಾನುಮಂತ್ರಯಧ್ವಮಿತಿ .... .... .... .... ಸಾ ಪತಿತ್ವಾ ಸೋಮಪಾಲಾನ್ ಭೀಷಯಿತ್ವಾ ಪದ್ಭ್ಯಾಂ ಚ ಮುಖೇನ ಚ ಸೋಮಂ ರಾಜಾನಂ ಸಮಗೃಭ್ಣಾದ್ಯಾನಿ ಚೇತರೇ ಛಂದಸೀ ಅಕ್ಷರಾಣ್ಯಜಹಿತಾಂ ತಾನಿ ಚೋಪಸಮಗೃಭ್ಣಾತ್ ।** (ಐ. ಬ್ರಾ. ೩-೨೬)

ಆಗ ದೇವತೆಗಳೆಲ್ಲರೂ ಗಾಯತ್ರಿಯನ್ನು ಸಮೀಪಿಸಿ ಆ ಕೆಲಸವನ್ನು ನೆರವೇರಿಸಿಕೊಡಬೇಕೆಂದು ಪ್ರಾರ್ಥಿಸಿಕೊಂಡಾಗ ಅದು ಒಪ್ಪಿಕೊಂಡು ಅವರ ಆಶೀರ್ವಾದದ ಬೆಂಬಲದ ಮೇಲೆ ಮೇಲಕ್ಕೆ ಹಾರಿ ಸೋಮವನ್ನು ಸಮೀಪಿಸಿ ಅದರ

ಪಾಲಕರನ್ನು ಬೆದರಿಸಿ ತನ್ನ ಕಾಲುಗಳಿಂದಲೂ ಮುಖದಿಂದಲೂ ಸಹ ಸೋಮವನ್ನು ತಂದಿತು. ಮತ್ತು ಇತರ ಛಂದಸ್ಸುಗಳಿಂದ ಆಗದ ಕಾರ್ಯವನ್ನು ಗಾಯತ್ರಿಯು ಸಾಧಿಸಿತು ಆದುದರಿಂದ ಇದರ ಮಹಿಮೆಯು ಇದೇ ಆಗಿದೆ. ಇದೇ ಕಥೆಯನ್ನು ಶತಪಥಬ್ರಾಹ್ಮಣದಲ್ಲಿಯೂ

**ತದ್ವೈ ಕನಿಷ್ಠಂ ಛಂದಃ ಸದ್ಗಾಯತ್ರೀ ಪ್ರಥಮಾ ಛಂದಸಾಂ ಯುಜ್ಯತೇ ತದು ತದ್ವೀರ್ಯೇಣೈವ ಯಚ್ಛ್ಯೇನೋ ಭೂತ್ವಾ ದಿವಃ ಸೋಮಮಾಭರತ್ ।**

(ಶ. ಬಾ. ೧-೬-೨-೧೦)

ಛಂದಸ್ಸುಗಳಲ್ಲೆಲ್ಲಾ ಆಕಾರದಲ್ಲಿ ಅತ್ಯಂತಚಿಕ್ಕದಾದರೂ ಸಹ **ಗಾಯತ್ರಿಯು** ಎಲ್ಲಾ ಛಂದಸ್ಸುಗಳಿಗಿಂತಲೂ ಪ್ರಥಮಸ್ಥಾನವನ್ನು ಪಡೆಯುತ್ತದೆ. ಅದು ತನ್ನ ಸ್ವಶಕ್ತಿಯಿಂದ ಶ್ಯೇನರೂಪವಾಗಿ ಪರಿವರ್ತನವನ್ನು ಹೊಂದಿ ದೇವಲೋಕದಿಂದ ಸೋಮವನ್ನು ತಂದಿತು ಎಂದು ಪ್ರಶಂಸಿಸಿದೆ.

ಇದೇ ಆಖ್ಯಾನವು ಕೊಂಚ ಬದಲಾವಣೆಯನ್ನು ಹೊಂದಿ ತೈತ್ತಿರೀಯಸಂಹಿತೆಯಲ್ಲಿಯೂ ಸಹ ಕದ್ರು ಮತ್ತು ಸುಪರ್ಣಿಯ ವ್ಯಾಜ್ಯಸಂದರ್ಭದಲ್ಲಿ ತಿಳಿಸಿದೆ.

**ಸಾಷ್ಟಾಕ್ಷರಾ ಸಮಪದ್ಯತ ಬ್ರಹ್ಮವಾದಿನೋ ವದಂತಿ ಕಸ್ಮಾತ್ಸತ್ಯಾದ್ಗಾಯತ್ರೀ ಕನಿಷ್ಠಾ ಛಂದಸಾಗ್ಂ ಸತೀ ಯಜ್ಞಮುಖಂ ಪರೀಯಾಯೇತಿ ಯದೇವಾದಃ ಸೋಮಮಾಹರ-ತ್ತಸ್ಮಾದ್ಯಜ್ಞಮುಖಂ ಪರ್ಯೈತ್ತಸ್ಮಾತ್ತೇಜಸ್ವಿನೀತಮಾ ।**

(ತೈ. ಸಂ. ೬-೧-೬-೩, ೪)

ಹಿಂದೆ ಕದ್ರುವಿಗೂ ಸುಪರ್ಣಿಗೂ ವ್ಯಾಜ್ಯವಾದಾಗ ಕದ್ರುವು ಜಯಿಸಿದ್ದರಿಂದ ಸುಪರ್ಣಿಯು ಅವಳ ಅಧೀನಳಾಗ ಬೇಕಾಯಿತು. ಆಗ ಕದ್ರುವು ಸುಪರ್ಣಿಯನ್ನು ಕುರಿತು ಅಂತರಿಕ್ಷದಲ್ಲಿರುವ ಸೋಮನನ್ನು ತಸ್ಕರರೂಪದಿಂದ ತಂದು ಪ್ರತಿಫಲವಾಗಿ ಕೊಟ್ಟರೆ ಆಗ ಅವಳ ಬಿಡುಗಡೆಯಾಗಬಹುದೆಂದಳು. ಆಗ ಸುಪರ್ಣಿಯು ತನ್ನ ಮಕ್ಕಳಾದ ಛಂದಸ್ಸುಗಳ ಸಹಾಯವನ್ನು ಬೇಡಲಾಗಿ **ಜಗತೀ, ತ್ರಿಷ್ಟುಪ್** ಈ ಎರಡು ಛಂದಸ್ಸುಗಳ ಪ್ರಯತ್ನವೂ ವಿಫಲವಾಗಿ **ಗಾಯತ್ರಿಯು** ತನ್ನ ಮಹತ್ತ್ವದಿಂದ ಆ ಕಾರ್ಯವನ್ನು ಸಾಧಿಸಿತೆಂದು ತಿಳಿಸಿದೆ. ಆದುದರಿಂದ ಪ್ರಕೃತವಾದ ಋಕ್ಕಿನಲ್ಲಿ ರುವ **ಮಹ್ನಾ, ಮಹಿತ್ವಾ** ಎಂಬ ಪದಗಳು ಗಾಯತ್ರಿಯ ಆ ಮಹತ್ತ್ವವನ್ನು ತೋರಿಸುತ್ತವೆ ಎಂದು ಸಾಯಣರು **" ಯೇನೈವ ಬಲೇನ ಸೋಮಮಾಹೃತವತೀ ತಾದೃಶೇನೈವಂ ಭವತಿ "** ಎಂದು ವಿವರಿಸಿದ್ದಾರೆ.

### ವ್ಯಾಕರಣಪ್ರಕ್ರಿಯಾ

**ಸಿಂಧುಮ್**—ಸ್ಯಂದೂ ಪ್ರಸ್ರವಣೇ ಧಾತು. **ಸ್ಯಂದೇಃ ಸಂಪ್ರಸಾರಣಂ ಧಶ್ಚ** (ಉ ಸೂ. ೧- ೧೧) ಎಂಬುದರಿಂದ ಉನ್ ಪ್ರತ್ಯಯ. ಧಾತುವಿಗೆ ಸಂಪ್ರಸಾರಣ. ದಕಾರಕ್ಕೆ ಧಕಾರಾದೇಶ. ನಿತ್ತಾದುದರಿಂದ ಆದ್ಯು ದಾತ್ತಸ್ವರ ಬರುತ್ತದೆ.

**ದಿವಿ**–**ಊಡಿದಂ ಪದಾದಿ**—(ಪಾ. ಸೂ. ೬-೧-೧೭೧) ಎಂಬುದರಿಂದ ವಿಭಕ್ತಿಗೆ ಉದಾತ್ತಸ್ವರ ಬರುತ್ತದೆ.

**ಅಸ್ತಭಾಯತ್**—ಸ್ತಂಭು ಸ್ತಂಭೇ. ಧಾತು. ಇದು ಸೂತ್ರನಿರ್ದಿಷ್ಟವಾದುದು. ಲಙ್. ಪ್ರಥಮಪುರುಷ ಏಕವಚನದಲ್ಲಿ ತಿಪ್. ಇಕಾರಲೋಪ. **ಸ್ತಂಭುಸ್ತುಂಭು**—(ಪಾ. ಸೂ. ೩-೧-೮೨) ಎಂಬುದರಿಂದ ಶ್ನಾ ವಿಕರಣ.

ಛಂದಸಿ ಶಾಯಜಪಿ (ಪಾ. ಸೂ. ೩-೧-೮೪) ಎಂಬುದರಿಂದ ಹಿ ಪರದಲ್ಲಿ ಇಲ್ಲದಿದ್ದರೂ ವ್ಯತ್ಯಯದಿಂದ ಶ್ನಾ ಪ್ರತ್ಯಯಕ್ಕೆ ಶಾಯಜಾದೇಶ **ಅನಿದಿತಾಂ ಹಲಉ**–(ಪಾ. ಸೂ. ೬-೪-೨೪) ಎಂಬುದರಿಂದ ಧಾತುವಿನ ಉಪಧಾ ನಕಾರಕ್ಕೆ ಲೋಪ. ಅಂಗಕ್ಕೆ ಅಡಾಗಮ. ಅತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

**ರಿರಿಚೇ**—ರಿಚಿರ್ ವಿರೇಚನೇ ಧಾತು. ರುಧಾದಿ. ಲಿಟ್ ಪ್ರಥಮಪುರುಷ ಏಕವಚನಾಂತರೂಪ. ತಿಙಂತ ನಿಘಾತಸ್ವರ ಬರುತ್ತದೆ.

**ಮಹಿತ್ವಾ—ಸುಪಾಂ ಸುಲುಕ್**—(ಪಾ. ೭-೧-೩೯) ಎಂಬುದರಿಂದ ತೃತೀಯಾವಿಭಕ್ತಿಗೆ ಡಾದೇಶ. ಡಿತ್ತಾದುದರಿಂದ ಟಿಗೆಲೋಪ. ಉದಾತ್ತನಿವೃತ್ತಿಸ್ವರದಿಂದ ವಿಭಕ್ತಿಯು ಉದಾತ್ತವಾಗುತ್ತದೆ. ॥ ೨೫ ॥

———— :೦: ————

ಸಂಹಿತಾಪಾಠಃ

ಉಪ ಹ್ವಯೇ ಸುದುಘಾಂ ಧೇನುಮೇತಾಂ ಸುಹಸ್ತೋ ಗೋಧುಗುತ ದೋಹದೇನಾಂ ।
ಶ್ರೇಷ್ಠಂ ಸವಂ ಸವಿತಾ ಸಾವಿಷನ್ನೋಽಭೀದ್ಧೋ ಘರ್ಮಸ್ತದು ಷು ಪ್ರ ವೋಚಂ ॥ ೨೬ ॥

ಪದಪಾಠಃ

ಉಪ । ಹ್ವಯೇ । ಸುಽದುಘಾಂ । ಧೇನುಂ । ಏತಾಂ । ಸುಽಹಸ್ತಃ । ಗೋಽಧುಕ್ । ಉತ । ದೋಹತ್ । ಏನಾಂ ।
ಶ್ರೇಷ್ಠಂ । ಸವಂ । ಸವಿತಾ । ಸಾವಿಷತ್ । ನಃ । ಅಭಿಽಇದ್ಧಃ । ಘರ್ಮಃ । ತತ್ । ಊಂ ಇತಿ । ಸು । ಪ್ರ । ವೋಚಂ ॥ ೨೬ ॥

ಸಾಯಣಭಾಷ್ಯಂ

ಪ್ರವರ್ಗ್ಯೇ ಘರ್ಮಧುಗಾಹ್ವಾನಕಾಲ ಉಪ ಹ್ವಯ ಇತ್ಯಾದಿಕೇ ದ್ವೇ ಋಚೌ । ಉಪ ಹ್ವಯೇ ಸುದುಘಾಂ ಧೇನುಮೇತಾಮಿತಿ ದ್ವೇ । ಆ. ೪-೭ । ಇತಿ ಸೂತ್ರಿತತ್ವಾತ್ ॥

ಅಹಂ ಹೋತೋಪ ಹ್ವಯೇ । ಉಪೇತ್ಯಾಹ್ವಯಾಮಿ । ಕಿಂ । ಏತಾಂ ಧೇನುಮಾಗಚ್ಛಂತೀಂ ಕ್ಷೀರೇಣ ಪ್ರೀಣಯಿತ್ರೀಂ ಗಾಂ ಪ್ರವರ್ಗ್ಯಾರ್ಥಾಂ। ಪುನಃ ಕೀದೃಶೀಂ । ಸುದುಘಾಂ ಸುಷ್ಠು ದೋಗ್ಧ್ರೀಂ । ಉತಾಪಿ ಚೈನಾಮುಕ್ತಲಕ್ಷಣಾಂ ಗಾಂ ಸುಹಸ್ತಃ ಶೋಭನಹಸ್ತೋ ದೋಹನಕುಶಲೋ ಗೋಧುಗ್ಗೋ-

ದೋಗ್ಧಾಧ್ವರ್ಯುರ್ದೋಹತ್ । ದೋಗ್ಧಿ । ಯಸ್ಮಾದೇವಂ ತಸ್ಮಾದುಪ ಹ್ವಯ ಇತ್ಯರ್ಥಃ । ತದರ್ಥಂ ಸವಿತಾ ಸರ್ವಸ್ಯಾನುಜ್ಞಾತಾ ಪರಮೇಶ್ವರೋ ನೋಽಸ್ಮದೀಯಂ ಶ್ರೇಷ್ಠಂ ಪ್ರಶಸ್ಯ ಸವಂ ಸೋಮಯಾಗಂ ಕ್ಷೀರಂ ವಾ ಸಾವಿಷತ್ । ಅನುಜಾನಾತು । ಕಥಮೇವಂ । ತಚ್ಛಬ್ದಶ್ರುತೇರ್ಯಚ್ಛಬ್ದಾಧ್ಯಾಹಾರ್ಯಃ । ಯದ್ಯಸ್ಮಾದ್ಘರ್ಮಃ ಪ್ರವರ್ಗ್ಯಃ । ಯದ್ವಾ ಇತ್ಯುಪತತ್ತ್ವದ್ಘರ್ಮಸ್ಯ ಘರ್ಮತ್ವಮಿತಿ ತೈತ್ತಿರೀಯಕಂ । ತೈ. ಸಂ. ೫-೧-೫ । ತಸ್ಮಾದ್ಯತೋಽಭೀದ್ಧೋಽಭಿದೀಪ್ತಃ । ತದುಶಬ್ದ ಏವಕಾರಾರ್ಥಃ । ತಸ್ಮಾದೇವ ಕಾರಣಾತ್ಸು ಪ್ರ ವೋಚಂ । ಸುಷ್ಠು ಬ್ರವೀಮಿ । ಉಪಹ್ವಯ ಇತಿ । ಯದ್ವಾ । ಏತಾಂ ಪುರತೋ ದೃಶ್ಯಮಾನಾಂ ಧೇನುಂ ವೃಷ್ಟ್ಯಾ ಪ್ರೀಣಯಿತ್ರೀಂ ಮೇಘಲಕ್ಷಣಾಂ ಧೇನುಮುಪಹ್ವಯೇ । ಆಹ್ವಯಾಮಿ ವರ್ಷದೋಹಾಯ । ಕಿಂಚೈನಾಂ ಧೇನುಂ ಸುಹಸ್ತಃ ಶೋಭನದೋಹನಕುಶಲಹಸ್ತೋಪೇತೋ ಗೋಧುಗ್ಗೋದೋಗ್ಧಾದಿತ್ಯೋ ವಾ ವಾಯುರ್ವಾ ದೋಹತ್ । ದೋಗ್ಧಿ । ತದಧೀನತ್ವಾದ್ವರ್ಷಣಸ್ಯ । ಕಿಂಚ ತದರ್ಥಂ ಸವಿತಾ ಪ್ರೇರಕಃ ಪರಮೇಶ್ವರೋಽಸ್ಮದರ್ಥಮಸ್ಮದುಪಭೋಗಾದೃಷ್ಟಮಪೇಕ್ಷ್ಯ । ಸಾವಿಷತ್ ಅನುಜಾನಾತು । ಪ್ರತಿಬಂಧಂ ಮಾ ಕರೋತ್ವಿತ್ಯರ್ಥಃ । ಕಿಮಿತೀದಮುಚ್ಯತ ಇತಿ ಉಚ್ಯತೇ । ಘರ್ಮೋ ಗ್ರೀಷ್ಮೋಽವರ್ಷಣಜನಿತಃ ಸಸ್ಯಶೋಷೋಽಭೀದ್ಧಃ ಪ್ರವೃದ್ಧಃ । ತದು ಷು ಪ್ರ ವೋಚಂ । ತಸ್ಮಾದೇವ ಕಾರಣಾತ್ಪ್ರವೀಮಿ ॥ ಬ್ರವೀತೇರ್ಲುಙಿ ವಚ್ಯಾದೇಶೇಽಸ್ಯತಿವಕ್ತೀತ್ಯಾದಿನಾ ಚ್ಲೇರಙ್ । ಛಾಂದಸೋಽಡಭಾವಃ ॥

। ಪ್ರತಿಪದಾರ್ಥ ।

**ಸುದುಘಾಂ**—ಅತಿಶಯವಾಗಿ ಕರೆಯತಕ್ಕ । **ಏತಾಂ ಧೇನುಂ**—ಈ ಧೇನುವನ್ನು । **ಉಪ ಹ್ವಯೇ**—ಸಮೀಪಿಸಿ ಕರೆಯುತ್ತೇನೆ. (ಆಹ್ವಾನಿಸುತ್ತೇನೆ) । **ಉತ**—ಮತ್ತು । **ಏನಾಂ**— ಈ ಧೇನುವನ್ನು । **ಸುಹಸ್ತಃ**—ಶ್ರೇಷ್ಠವಾದ ಹಸ್ತವುಳ್ಳವನೂ । **ಗೋಧುಕ್**—ಗೋವನ್ನು ಕರೆಯತಕ್ಕವನೂ ಆದ ಅಧ್ವರ್ಯುವು । **ದೋಹತ್**—ಕರೆಯುತ್ತಾನೆ. (ಆದುದರಿಂದ) । **ಸವಿತಾ**—ಪರಮೇಶ್ವರನು । **ನಃ**—ನಮ್ಮ । **ಶ್ರೇಷ್ಠಂ**—ಪ್ರಶಸ್ಯವಾದ । **ಸವಂ**—ನಮ್ಮ ಸೋಮಯಾಗವನ್ನು [ಅಥವಾ ಕ್ಷೀರವನ್ನು] । **ಸಾವಿಷತ್**—ಅನುಗ್ರಹಿಸಲಿ. । **ಘರ್ಮಃ**—ಪ್ರವರ್ಗ್ಯವು । **ಅಭೀದ್ಧಃ**—ದೀಪ್ತವಾಗಿದೆ. । **ತದು**—ಆದ್ದರಿಂದಲೇ । **ಸು ಪ್ರವೋಚಂ**—ಅತಿಶಯವಾಗಿ ಪ್ರಾರ್ಥಿಸಿ ಕರೆಯುತ್ತೇನೆ. ।

ಭಾವಾರ್ಥ

ಶ್ರೇಷ್ಠವಾದ ಕ್ಷೀರವನ್ನು ಕೊಡತಕ್ಕ ಈ ಧೇನುವನ್ನು ನಾನು ಪ್ರಾರ್ಥಿಸಿ ಆಹ್ವಾನಿಸುತ್ತೇನೆ. ಅನಂತರ ಶ್ರೇಷ್ಠವಾದ ಹಸ್ತವುಳ್ಳವನೂ, ಗೋವನ್ನು ಕರೆಯತಕ್ಕವನೂ ಆದ ಅಧ್ವರ್ಯುವು ಈ ಧೇನುವಿನ ಕ್ಷೀರವನ್ನು ಕರೆಯುತ್ತಾನೆ. ಪ್ರಶಸ್ಯವೂ ನಮ್ಮಿಂದ ಕರೆಯಲ್ಪಟ್ಟುದೂ ಆದ ಈ ಕ್ಷೀರವನ್ನು ಪರಮೇಶ್ವರನು ಅನುಗ್ರಹಿಸಲಿ. ಈ ಸವಿತೃವಿನ ಪ್ರವರ್ಗ್ಯವು ದೀಪ್ತವಾಗಿದೆ ಆದುದರಿಂದಲೇ ನಾನು ಈ ಧೇನುವನ್ನು ವಿಶೇಷರೀತಿಯಿಂದ ಆಹ್ವಾನಿಸುತ್ತೇನೆ.

## English Translation

I invoke the milch cow that is easily milked, that the handy milker may milk her : may Savitri accept this our excellent libation, that his heat may (thereby) increase : it is for this, verily, that I earnestly invoke him

### ವಿಶೇಷವಿಷಯಗಳು

ಪ್ರವರ್ಗ್ಯದಲ್ಲಿ ಘರ್ಮಧುಗಾಹ್ವಾನಕಾಲದಲ್ಲಿ **ಉಪ ಹ್ವಯೇ** ಎಂದು ಮೊದಲಾಗುವ ಎರಡು ಋಕ್ಕುಗಳನ್ನು ಪಠಿಸಬೇಕೆಂದು ಆಶ್ವಲಾಯನ ಶ್ರೌತ ಸೂತ್ರದ **ಉಪ ಹ್ವಯೇ ಸುದುಘಾಂ ಧೇನುಮೇತಾಮಿತಿ ದ್ವೇ** ಎಂಬ ಸೂತ್ರದಿಂದ ವಿನ್ಯತವಾಗಿರುವುದು. (ಆ. ೪-೭)

ಈ ಋಕ್ಕಿನಲ್ಲಿ ಧೇನುಶಬ್ದಕ್ಕೆ ಎರಡು ವಿಧವಾದ ಅರ್ಥವನ್ನು ಮಾಡಬಹುದು. ಆಗ ಉಳಿದ ಪದಗಳಿಗೂ ಆದನ್ನನುಸರಿಸಿಯೇ ಎರಡು ವಿಧವಾದ ಅನ್ವಯಗಳನ್ನೂ ತಾತ್ಪರ್ಯಗಳನ್ನೂ ಹೇಳಬೇಕಾಗುತ್ತದೆ. ಮೇಲೆ ಪ್ರತಿಪದಾರ್ಥದಲ್ಲಿ ಹೇಳಿರುವ ಅರ್ಥವಲ್ಲದೆ ಬೇರೆ ಅರ್ಥವನ್ನು ಈರೀತಿ ಹೇಳಬಹುದೆಂದು ಸಾಯಣರು ವಿವರಿಸಿದ್ದಾರೆ, ಇದರಂತೆ,

**ಧೇನುಂ-ವೃಷ್ಟ್ಯಾ ಪ್ರೀಣಯಿತ್ರೀಂ ಮೇಘಲಕ್ಷಣಾಂ ಧೇನುಂ** / ಲೌಕಿಕವಾದ ಧೇನುವು ಕ್ಷೀರದಿಂದ ಯಜಮಾನನನ್ನು ತೃಪ್ತಿಗೊಳಿಸುವಂತೆ ಮೇಘವು ವೃಷ್ಟಿಯಿಂದ ಲೋಕವನ್ನು ತೃಪ್ತಿಗೊಳಿಸುವುದರಿಂದ ಆದಕ್ಕೂ ಧೇನುವೆಂಬ ಹೆಸರು ಪ್ರಸಿದ್ಧವಾಗಿದೆ, ಮೇಘರೂಪವಾದ ಈ ಧೇನುವನ್ನು ಕರೆಯುತಕ್ಕವನು ಆದಿತ್ಯನು. ಆದುದರಿಂದ **ಸುಹಸ್ತಃ** ಎಂಬ ವಿಶೇಷಣಕ್ಕೆ ವೃಷ್ಟಿಕಾರಕವೂ, ಪ್ರಕಾಶಮಾನವೂ ಆದ ಕಿರಣಗಳಿಂದ ಕೂಡಿದವನೆಂದರ್ಥ. ಘರ್ಮವೆಂದರೆ ಗ್ರೀಷ್ಮವೆಂದರ್ಥ.

**ಧೇನುಂ—ಧೇನುರ್ಧಯತೇರ್ವಾ, ಧಿನೋತೇರ್ವಾ ಧಯತೇಽಸೌ ವತ್ಸೇನೇತಿ । ತರ್ಪಯತ್ಯಸೌ ಪಯಸಾ ।** (ನಿ ೧೧-೪೨) ಕರುವಿನಿಂದ ಹಾಲು ಹೀರಲ್ಪಡುತ್ತದೆ ಎಂಬುದರಿಂದಾಗಲಿ, ಅಥವಾ ಕ್ಷೀರವನ್ನು ಕೊಟ್ಟು ತೃಪ್ತಿಯನ್ನುಂಟುಮಾಡುತ್ತದೆ ಎಂಬುದರಿಂದಾಗಲಿ ಗೋವುಗಳಿಗೆ ಧೇನುಗಳೆಂದು ಹೆಸರು. **ಗೋಧುಕ್** ಇಂತಹ ಗೋವನ್ನು ಕರೆಯುತಕ್ಕವನು ಯಜ್ಞಸಂಬಧವಾದ ಅರ್ಥದಲ್ಲಿ ಅಧ್ವರ್ಯುವೂ, ಮೇಘಸಂಬಂಧವಾದ ಅರ್ಥದಲ್ಲಿ ಆದಿತ್ಯನೂ ಆಗುತ್ತಾರೆ.

**ಘರ್ಮಃ**—ಈ ಪದಕ್ಕೆ ಪ್ರವರ್ಗ್ಯವೆಂಬ ಹೆಸರುಳ್ಳ ಯಾಗವೆಂದರ್ಥಮಾಡಿದ್ದಾರೆ. ಮತ್ತು ತಮ್ಮ ಅರ್ಥವನ್ನು ಸಮರ್ಥಿಸಲು, **ತತ್ಪ್ರವರ್ಗ್ಯಸ್ಯ ಪ್ರವರ್ಗ್ಯತ್ವಂ ಯದ್ಪ್ರಾಂ ಞ ಇತ್ಯಪತತ್। ತದ್ಘರ್ಮಸ್ಯ ಘರ್ಮತ್ವಂ।**
(ತೈ. ಆ. ೫-೧-೫)

ಎಂಬ ಆರಣ್ಯಕದ ವಾಕ್ಯವನ್ನುದಹರಿಸಿ ಇಲ್ಲಿ **ಘರ್ಮ**ಶಬ್ದಕ್ಕೆ ಪ್ರವರ್ಗ್ಯವೆಂಬರ್ಥವನ್ನೂ ಅಲ್ಲದೇ **ಸವಂ** ಎಂಬ ಪದಕ್ಕೆ ಸೋಮಯಾಗವೆಂದೂ ಅರ್ಥಮಾಡಿದ್ದಾರೆ.

ಪ್ರವರ್ಗ್ಯವು ಸೋಮಯಾಗಕ್ಕೆ ಪೂರ್ವಭಾವಿಯಾಗಿ ನೆರವೇರಿಸಲ್ಪಡಬೇಕಾದ ವಿಧಿಯು. ಇದರ ಕ್ರಮವನ್ನು ಐತರೇಯ ಬ್ರಾಹ್ಮಣಾದಿಗಳಲ್ಲಿ ವಿಶದವಾಗಿ ತಿಳಿಸಿದೆ. ಪ್ರಕೃತವಾದ ಋಕ್ಕಿನಂತೆಯೇ ಇದರ ಮುಂದಿನ ಎರಡು

ಋಕ್ಕುಗಳಲ್ಲಿಯೂ ಸಹ ಇದೇ ವಿಷಯವನ್ನು ಹೇಳಿರುವುದರಿಂದ ಅದರ ಕೊನೆಯಲ್ಲಿ ಎಂದರೆ ಇದೇ ಸೂಕ್ತದ ೨೯ನೇ ಋಕ್ಕಿನ ವಿಶೇಷ ವಿಷಯಗಳಲ್ಲಿ ತಿಳಿಸಲಾಗುತ್ತದೆ.

### ವ್ಯಾಕರಣಪ್ರಕ್ರಿಯಾ

**ಹ್ವಯೇ**—ಹ್ವೇಞ್ ಸ್ಪರ್ಧಾಯಾಂ ಶಬ್ದೇ ಚ. ಧಾತು. ಲಟ್ ಪ್ರಥಮಪುರುಷ ಏಕವಚನ ಪರವಾದಾಗ ಶಪ್‌ವಿಕರಣ. ಅಯಾದೇಶ. ತಿಙಂತ ನಿಘಾತಸ್ವರ ಬರುತ್ತದೆ.

**ಸುದುಘಾಮ್**—ಸುಷ್ಠು ದುಗ್ಧೇ ಇತಿ ಸುದುಘಾ. **ದುಹಃ ಕಪ್ ಘಶ್ಚ** (ಪಾ. ಸೂ. ೩-೨-೭೦) ಎಂಬ) ದರಿಂದ. ಕಪ್‌ಪ್ರತ್ಯಯ. ಧಾತು ಹಕಾರಕ್ಕೆ ಘಕಾರಾದೇಶ. ಪ್ರತ್ಯಯ ಕಿತ್ತಾದುದರಿಂದ ಧಾತು ಲಘೂಪಧೆಗೆ ಗುಣ ಬರುವುದಿಲ್ಲ. ಅದು ಪಿತ್ತಾದುದರಿಂದ ಧಾತುಸ್ವರ ಉಳಿಯುತ್ತದೆ. ಸು ಶಬ್ದದಿಂದ ಗತಿ ಸಮಾಸವಾದಾಗ **ಗತಿಕಾರಕೋಪಪದಾತ್ ಕೃತ್** ಎಂಬುದರಿಂದ ಕೃದುತ್ತರಪದಪ್ರಕೃತಿ ಸ್ವರ ಉಳಿಯುತ್ತದೆ.

**ಸುಹಸ್ತಃ**—ಶೋಭನೌ ಹಸ್ತೌ ಯಸ್ಯ ಸಃ. **ಆದ್ಯುದಾತ್ತಂದ್ವ್ಯಚ್ ಛಂದಸಿ** (ಪಾ. ಸೂ. ೬-೨-೧೧೯ ಎಂಬುದರಿಂದ ಉತ್ತರಪದಾದ್ಯುದಾತ್ತಸ್ವರ ಬರುತ್ತದೆ.

**ಗೋಧುಕ್**—ಗಾಂ ದೋಗ್ಧಿ ಇತಿ ಗೋಧುಕ್. ದುಹ ಪ್ರಪೂರಣೇ ಧಾತು. **ಸತ್ಸೂದ್ವಿಷದ್ರುಹ**—(ಪಾ. ಸೂ. ೩-೨-೬೧) ಎಂಬುದರಿಂದ ಕ್ವಿಪ್ ಪ್ರತ್ಯಯ. ಕೃದುತ್ತರಪದಪ್ರಕೃತಿಸ್ವರ ಬರುತ್ತದೆ.

**ದೋಹತ್**—ದುಹ ಪ್ರಪೂರಣೇ. ಧಾತು. ಲೇಟ್ ಪ್ರಥಮಪುರುಷ ಏಕವಚನದಲ್ಲಿ ತಿಪ್. **ಇತಶ್ಚ ಲೋಪಃ ಪ**—(ಪಾ. ಸೂ. ೩-೪-೯೭) ಎಂಬುದರಿಂದ ಇಕಾರಲೋಪ. **ಲೇಟೋಽಡಾಟೌ** (ಪಾ. ಸೂ. ೩-೪-೯೪) ಎಂಬುದರಿಂದ ಅದಕ್ಕೆ ಅಡಾಗಮ. ತನ್ನಿಮಿತ್ತವಾಗಿ ಧಾತುವಿನ ಲಘೂಪಧೆಗೆ ಗುಣ. ತಿಙಂತನಿಘಾತಸ್ವರ ಬರುತ್ತದೆ.

**ಶ್ರೇಷ್ಠಮ್**—ಅತಿಶಯೇನ ಪ್ರಶಸ್ಯಃ ಶ್ರೇಷ್ಠಃ ಅತಿಶಯಾರ್ಥದಲ್ಲಿ ಇಷ್ಠನ್ ಪ್ರತ್ಯಯ ಬಂದಾಗ **ಪ್ರಶಸ್ಯ ಶ್ರಃ** ಎಂಬುದರಿಂದ ಶ್ರಾದೇಶ. **ಪ್ರಕೃತ್ಯೈಕಾಚ್** ಸೂತ್ರದಿಂದ ಪ್ರಕೃತಿಭಾವ ಬರುವುದರಿಂದ ಗುಣ. ಪ್ರತ್ಯಯ ನಿತ್ತಾದುದರಿಂದ ಆದ್ಯುದ್ಯಾತ್ತಸ್ವರ ಬರುತ್ತದೆ.

**ಸವಮ್**—ಷುಞ್ ಅಭಿಷವೇ ಧಾತು. ಪಚಾದಿನಿಮಿತ್ತವಾಗಿ ಅಚ್ ಪ್ರತ್ಯಯ ಧಾತುವಿನ ಉಕಾರಕ್ಕೆ ಗುಣ ಅವಾದೇಶ. ಚಿತ್ತಾದುದರಿಂದ ಅಂತೋದಾತ್ತಸ್ವರ ಬರುತ್ತದೆ.

**ಸಾವಿಷತ್**—ಸೌತ್ರಧಾತು. ಲೇಟ್ ಪ್ರಥಮಪುರುಷಏಕವಚನದಲ್ಲಿ ತಿಪ್ ಬಂದಾಗ ಇಕಾರಲೋಪ. ಅಡಾಗಮ. **ಸಿಬ್ಬಹುಲಂ ಲೇಟಿ** (ಪಾ. ಸೂ ೩-೧-೩೪) ಎಂಬುದರಿಂದ ಸಿಪ್. ತಿಙಂತನಿಘಾತಸ್ವರ ಬರುತ್ತದೆ.

**ಅಭೀದ್ಧಃ**—ಞಿಇಂಧೀ ದೀಪ್ತೌ ಧಾತು ನಿಷ್ಠಾಪ್ರತ್ಯಯ ಬಂದಾಗ **ಅನಿದಿತಾಂ ಹಲ ಉ**—(ಪಾ. ಸೂ. ೬-೪-೨೪) ಎಂಬುದರಿಂದ ಉಪಧಾನಕಾರ ಲೋಪ **ಗತಿರನಂತರಃ** (ಪಾ. ಸೂ. ೬-೨-೪೯) ಎಂಬುದರಿಂದ ಗತಿಗೆ (ಅಭಿ) ಪ್ರಕೃತಿಸ್ವರ ಬರುತ್ತದೆ.

ವೋಚಮ್—ಬ್ರೂಞ್ ವ್ಯಕ್ತಾಯಾಂ ವಾಚಿ ಧಾತು. ಛಾಂದಸವಾಗಿ ಲುಙ್. **ಬ್ರುವೋವಚಿಃ** (ಪಾ. ಸೂ. ೨-೪-೫೩) ಎಂಬುದರಿಂದ ಧಾತುವಿಗೆ ವಚ್ಯಾದೇಶ. ಉತ್ತಮಪುರುಷಏಕವಚನದಲ್ಲಿ ಅಮಾದೇಶ. **ಅಸ್ಯತಿವಕ್ತಿಖ್ಯಾತಿಭ್ಯೋಽಙ್** (ಪಾ. ಸೂ. ೩-೧-೫೨) ಎಂಬುದರಿಂದ ಚ್ಲಿಗೆ ಅಙಾದೇಶ. **ವಚ ಉಮ್** (ಪಾ. ಸೂ. ೭-೪-೨೦) ಎಂಬುದರಿಂದ ಧಾತುವಿಗೆ ಉಮಾಗಮ. ಛಾಂದಸವಾಗಿ ಅಡಾಗಮ ಬರುವುದಿಲ್ಲ. ತಿಙಂತನಿಘಾತಸ್ವರ ಬರುತ್ತದೆ. ॥ ೨೬ ॥

॥ ಸಂಹಿತಾಪಾಠಃ ॥

ಹಿಂಕೃಣ್ವತೀ ವಸುಪತ್ನೀ ವಸೂನಾಂ ವತ್ಸಮಿಚ್ಛಂತೀ ಮನಸಾಭ್ಯಾಗಾತ್ ।
ದುಹಾಮಶ್ವಿಭ್ಯಾಂ ಪಯೋ ಅಘ್ನ್ಯೇಯಂ ಸಾ ವರ್ಧತಾಂ ಮಹತೇ
ಸೌಭಗಾಯ ॥ ೨೭ ॥

ಪದಪಾಠಃ

ಹಿಙ್ಽಕೃಣ್ವತೀ । ವಸುಽಪತ್ನೀ । ವಸೂನಾಂ । ವತ್ಸಂ । ಇಚ್ಛಂತೀ । ಮನಸಾ । ಅಭಿ । ಆ । ಅಗಾತ್ ।
ದುಹಾಂ । ಅಶ್ವಿಽಭ್ಯಾಂ । ಪಯಃ । ಅಘ್ನ್ಯಾ । ಇಯಂ । ಸಾ । ವರ್ಧತಾಂ । ಮಹತೇ । ಸೌಭಗಾಯ ॥೨೭॥

ಸಾಯಣಭಾಷ್ಯಂ

ಯಥಾಹೂತಾ ಗೌರ್ಹಿಂಕೃಣ್ವತೀ ವತ್ಸಂ ಪ್ರತಿ ಹಿಂಕಾರಂ ಕುರ್ವತೀ ವಸೂನಾಂ ವಸುಪತ್ನೀ ಕ್ಷೀರದಧ್ಯಾಜ್ಯಾದಿಬಹುಧನಾನಾಂ ಸರ್ವದಾ ಪಾಲಯಿತ್ರೀ । ವೃತ್ತ್ಯವೃತ್ತಿಭ್ಯಾಂ ವಸುನಃ ಪಾಲಯಿತೃತ್ವಂ । ತಸ್ಯೈವಾಧಿಕ್ಯಂ ಚ ಪ್ರತಿಪಾದ್ಯತೇ । ಪುನಃ ಕೀದೃಶೀ । ಮನಸಾ ವತ್ಸಮಿಚ್ಛಂತೀ । ಈದೃಶೀ ಸಾಭ್ಯಾಗಾತ್ । ಅಭ್ಯಾಗಮತ್ । ಇಯಮಾಗತಾಘ್ನ್ಯಾ । ಗೋನಾಮೈತತ್ । ಅಹನನೀಯಾ ಗೌರಶ್ವಿಭ್ಯಾಂ ತಾಭ್ಯಾಮರ್ಥಾಯ ಪಯಃ ಕ್ಷೀರಂ ದುಹಾಂ । ದುಗ್ಧಾಂ । ಸಾ ತಾದೃಶೀ ಮಹತೇ ಸೌಭಗಾಯ ಪ್ರವೃದ್ಧಾಯ ಸೌಭಾಗ್ಯಾಯ ವರ್ಧತಾಂ । ಪ್ರವೃದ್ಧಾ ಭವತು । ಯದ್ವಾ । ಅಸ್ಯೈ ಸೌಭಗಾಯ ಕ್ಷೀರಂ ವರ್ಧಯತಾಂ॥ ಅತ್ರಾಪಿ ವೃಷ್ಟಿಪರತ್ವೇನ ಯಥಾಯೋಗಂ ಯೋಜ್ಯಂ। ಹಿಂಕೃಣ್ವತೀ ವರ್ಷಣಾಯ ಶಬ್ದಯಂತೀ ವಸೂನಾಂ ಗೋಸಸ್ಯಾದಿಧನಾನಾಂ ಬಹೂನಾಂ ವಸುಪತ್ನೀ ತೇಷಾಮೇವ ಪಾಲಯಿತ್ರೀ ವತ್ಸಂ ಲೋಕಂ ವತ್ಸವತ್ಪೋಷಣೀಯಂ ಮನಸೇಚ್ಛಂತೀ ಪ್ರೀಣಯಿತುಮಭ್ಯಾಗಾತ್ । ಅಭಿಗಚ್ಛತಿ ಮೇಘರೂಪಾ । ಸಾ ಚಾಘ್ನ್ಯಾಹಂತವ್ಯಾ । ಪ್ರಶಸ್ತೇತ್ಯೇತ್ಯರ್ಥಃ । ಪಯ ಉದಕಮಶ್ವಿಭ್ಯಾಂ ವ್ಯಾಪ್ತಾಭ್ಯಾಂ ಸ್ಥಾವರಜಂಗಮಾಭ್ಯಾಮರ್ಥಾಯ । ಯದ್ವಾ । ಅಶ್ವಿನೌ ವಾಯ್ವಾದಿತ್ಯೌ । ತಾಭ್ಯಾಂ ಸಕಾಶಾತ್ । ದುಹಾಂ । ದುಗ್ಧಾಂ । ತೌ ಹಿ ವೃಷ್ಟೇರ್ಮೋಚಯಿತಾರೌ । ಶಿಷ್ಟಮುಕ್ತಂ ॥

**ಪ್ರತಿಪದಾರ್ಥ**

**ವಸೂನಾಂ**—ಕ್ಷೀರಾದಿಸಂಪತ್ತುಗಳಿಗೆ | **ವಸುಪತ್ನೀ**—ಸರ್ವದಾ ಪಾಲಕಳೂ, | **ಮನಸಾ**—ತನ್ನಲ್ಲಿಯೇ | **ವತ್ಸಂ**—(ತನ್ನ) ಕರುವನ್ನು | **ಇಚ್ಛಂತೀ**—ಲಾಲಿಸುವವಳೂ, | (ಆದುದರಿಂದಲೇ) **ಹಿಂಕೃಣ್ವತೀ**—(ಕರುವನ್ನುದ್ದೇಶಿಸಿ) ತನ್ನ ಸಹಜವಾದ ಶಬ್ದವನ್ನು ಮಾಡುವವಳೂ ಆದ ಧೇನುವು | **ಅಭ್ಯಾಗಾತ್**—ಬಂದಿದ್ದಾಳೆ | **ಅಘ್ನ್ಯಾ ಇಯಂ**—ಅಹಿಂಸಿತಳಾದ ಈ ಗೋವು | **ಅಶ್ವಿಭ್ಯಾಂ**—ಅಶ್ವಿನೀದೇವತೆಗಳಿಗೆ | **ಪಯಃ**—ಕ್ಷೀರವನ್ನು | **ದುಹಾಂ**—ಕರೆದುಕೊಡಲಿ | **ಸಾ** –ಅದೇ ಧೇನುವು | **ಮಹತೇ**—ಅತ್ಯಧಿಕವಾದ | **ಸೌಭಗಾಯ**—ಸೌಭಾಗ್ಯಕ್ಕಾಗಿ | **ವರ್ಧತಾಂ**—ಬೆಳೆಯಲಿ. |

**ಭಾವಾರ್ಥ**

ಕ್ಷೀರಾದಿಸಂಪತ್ತುಗಳಿಗೆ ಪಾಲಕಳೂ, ತನ್ನಲ್ಲಿಯೇ ತನ್ನ ಕರುವನ್ನು ಲಾಲಿಸುವವಳೂ, ಆದುದರಿಂದಲೇ ಕರುವನ್ನುದ್ದೇಶಿಸಿ ಶಬ್ದಮಾಡುತ್ತಾ ಕರುವನ್ನು ಸಮೀಪಿಸುವವಳೂ ಆದ ಧೇನುವು ಬಂದಿದ್ದಾಳೆ. ಅಹಿಂಸಿತಳಾದ ಈ ಧೇನುವು ಅಶ್ವಿನೀದೇವತೆಗಳಿಗೆ ಕ್ಷೀರವನ್ನು ಕರೆದುಕೊಡಲಿ. ಅದೇ ಧೇನುವು ಅತ್ಯಧಿಕವಾದ ಸೌಭಾಗ್ಯಕ್ಕಾಗಿ ಬೆಳೆಯಲಿ.

English Translation

She comes lowing, abounding in rich (products), desiring her calf in her mind : may this cow grant her milk to the Ashwins; may she thrive for our great advantage.

**ವಿಶೇಷವಿಷಯಗಳು**

ಈ ಋಕ್ಕಿನಲ್ಲಿಯೂ ಸಹ ಮೇಘಪರವಾದ ಅರ್ಥವನ್ನು ಮಾಡಬಹುದು. **ಹಿಂಕೃಣ್ವತೀ** ಎಂಬ ಪದಕ್ಕೆ ಮಳೆಯನ್ನು ಸುರಿಸುವ ಕಾಲದಲ್ಲಿ ಗರ್ಜನವನ್ನು ಮಾಡುತ್ತಾ ಎಂದೂ **ವಸೂನಾಂ ವಸುಪತ್ನೀ** ಎಂಬುದಕ್ಕೆ ಗೋಸಸ್ಯಾದಿ ಧನಗಳ ಪಾಲಕಳು ಎಂದೂ ಅರ್ಥಮಾಡಿದೆ. **ವತ್ಸ**ಶಬ್ದಕ್ಕೆ ವತ್ಸದಂತೆ ಪೋಷಣಾರ್ಹವಾದ ಲೋಕವೆಂದರ್ಥವು. ಅಶ್ವಿಭ್ಯಾಂ ಎನ್ನುವಾಗ ಸ್ಥಾವರಜಂಗಮರೂಪವಾದ ಲೋಕಗಳಿಗಾಗಿ ಎಂದಾಗಲಿ ಅಥವಾ ವಾಯ್ವಾದಿತ್ಯರಿಂದ ಎಂದಾಗಲಿ ತಾತ್ಪರ್ಯವಾಗುತ್ತದೆ. ಮೊದಲನೆಯ ಅರ್ಥದಂತೆ ಸಕಲ ಲೋಕಗಳಿಗಾಗಿಯೂ ವೃಷ್ಟಿಯನ್ನು ಸುರಿಸಲಿ ಎಂದೂ, ಎರಡನೆಯ ಅರ್ಥದಂತೆ ವಾಯ್ವಾದಿತ್ಯರ ಪ್ರೇರಣೆಯಿಂದ ವೃಷ್ಟಿಯನ್ನು ಸುರಿಸಲಿ ಎಂದೂ ಅರ್ಥವಾಗುತ್ತದೆ.

**ಅಘ್ನ್ಯಾ**—ಈ ಪದವು ಗೋನಾಮಗಳಲ್ಲಿ ಪಠಿತವಾಗಿದೆ. (ನಿ. ೩-೯) ನಿರುಕ್ತಕಾರರು ಈ ಪದದ ನಿರ್ವಚನವನ್ನು ತೋರಿಸುತ್ತಾ,

**ಅಘ್ನ್ಯಾ ಅಹಂತವ್ಯಾ ಭವತಿ । ಅಘಘ್ನೀ ಇತಿ ವಾ ।**

ಇದು ಕೊಲ್ಲಲ್ಪಡತಕ್ಕುದಲ್ಲ ಎಂಬುದರಿಂದಾಗಲಿ ಅಥವಾ ಪಾಪವನ್ನು ನಾಶಮಾಡತಕ್ಕದ್ದು ಎಂಬುದರಿಂದಾಗಲಿ **ಅಘ್ನ್ಯಾ** ಎಂಬ ಹೆಸರು ಬಂದಿದೆ ಎಂದು ವಿವರಿಸಿ,

**ಸೂಯವಸಾದ್ಭಗವತೀ ಹಿ ಭೂಯಾ ಅಥೋ ವಯಂ ಭಗವಂತಃ ಸ್ಯಾಮ ।**

**ಅದ್ಧಿ ತೃಣಮಘ್ನ್ಯೇ ವಿಶ್ವದಾನೀಂ ಪಿಬ ಶುದ್ಧಮುದಕಮಾಚರಂತೀ ॥**

(ಋ. ಸಂ ೧-೧೬೪-೪೦)

ಎಂಬ ಋಕ್ಕನ್ನುದಹರಿಸಿ ಈ ಪದದ ಅರ್ಥವನ್ನು ತಿಳಿಸಿದ್ದಾರೆ.

**ಅಶ್ವಿಭ್ಯಾಂ**—ಈ ಪದಕ್ಕೆ ಮೂರು ವಿಧವಾಗಿ ಅರ್ಥಮಾಡಿದೆ. ಮೊದಲನೆಯದಾಗಿ ಧೇನುಪರ್ಯಾಯವಾದ ಅರ್ಥದಲ್ಲಿ **ಅಶ್ವಿಭ್ಯಾಂ ಕ್ಷೀರಂ ದುಹಾಂ** ಎಂದರೆ ಅಶ್ವಿನೀದೇವತೆಗಳಿಗಾಗಿ ಕ್ಷೀರವನ್ನು ಕರೆಯಲಿ ಎಂದೂ ; ಎರಡನೆಯ ದಾಗಿ ಮೇಘಪರ್ಯಾಯವಾದ ಅರ್ಥದಲ್ಲಿ ವಿಶ್ವವ್ಯಾಪಕಗಳಾದ ಸ್ಥಾವರಜಂಗಮರೂಪಗಳಾದ ಲೋಕಗಳಿಗಾಗಿ ಅಥವಾ ವಾಯ್ವಾದಿತ್ಯರಿಂದ ಎಂದೂ ಅರ್ಥವಾಗುತ್ತದೆ. ಈ ಎಲ್ಲಾ ಅರ್ಥಗಳಿಗೂ ಅವಕಾಶವಿದೆಯೆಂದು ನಿರುಕ್ತಕಾರರ ನಿರ್ವಚನದಿಂದ ತಿಳಿಯುತ್ತದೆ. (ನಿ. ೧೨-೧).

**ಅಶ್ವಿನೌ—ಅಶ್ವಿನೌ ಯದ್ವ್ಯಶ್ನುವಾತೇ ಸರ್ವಂ ರಸೇನಾನ್ಯೋ ಜ್ಯೋತಿಷಾನ್ಯಃ।** ಒಬ್ಬ ದೇವತೆಯು ಉದಕದಿಂದಲೂ, ಇನ್ನೊಬ್ಬ ದೇವತೆಯು ತೇಜಸ್ಸಿನಿಂದಲೂ ಕೂಡಿಕೊಂಡು ವಿಶ್ವವನ್ನೆಲ್ಲಾ ವ್ಯಾಪಿಸಿರುವುದರಿಂದ ಇವರಿಗೆ ಅಶ್ವಿನೀದೇವತೆಗಳೆಂದು ಹೆಸರು. (೧)

**ಅಶ್ವೈರಶ್ವಿನಾವಿತ್ಯೌರ್ಣವಾಭಃ** - ಅಶ್ವಗಳನ್ನು ಹೊಂದಿರುವುದರಿಂದ ಅಶ್ವಿನೀದೇವತೆಗಳು ಎಂಬ ಹೆಸರು ಪ್ರಸಿದ್ಧವಾಗಿದೆಯೆಂದು ಔರ್ಣವಾಭರ ಮತವೆಂದು ತಿಳಿಯುತ್ತದೆ. (೨).

**ತತ್ಕಾವಶ್ವಿನೌ ದ್ಯಾವಾಪೃಥಿವ್ಯಾವಿತ್ಯೇಕೇ**—ಇಲ್ಲಿಯವರೆಗೆ ಅಶ್ವಿನೀದೇವತೆಗಳ ಸ್ವರೂಪವನ್ನು ವರ್ಣಿಸಿ ದಂತಾಯಿತು. ಈಗ ಅವರಾರು ? ಎಂಬ ಪ್ರಶ್ನೆಯನ್ನು ಕೇಳಿ ಮೊದಲು, **ದ್ಯಾವಾಪೃಥಿವ್ಯಾವಿತ್ಯೇಕೇ ।** ಅವರು ದ್ಯಾವಾಪೃಥಿವಿಗಳೆಂದು ಕೆಲವರ ಮತವಾಗಿದೆ. ಶತಪಥಬ್ರಾಹ್ಮಣದ ವಾಕ್ಯವನ್ನುದಹರಿಸಿ ಇದಕ್ಕೆ ಶ್ರುತಿ ವಾಕ್ಯದ ಆಧಾರವೂ ಇದೆಯೆಂದೂ ತೋರಿಸಬಹುದು.

**ಅಥ ಯದಶ್ವಿನಾವಿತೀಮೇ ಹ ವೈ ದ್ಯಾವಾಪೃಥಿವೀ ಪ್ರತ್ಯಕ್ಷಮಶ್ವಿನಾವಿಮೇ ಹೀದಂ ಸರ್ವ-ಮಶ್ನುವಾತಾಂ ।**

(ಶ. ಬ್ರಾ. ೪-೧-೫-೧೬)

ವಿಶ್ವವನ್ನೆಲ್ಲಾ ವ್ಯಾಪಿಸುವವರು ದ್ಯಾವಾಪೃಥಿವಿಗಳೇ ಆದ್ದರಿಂದ ದ್ಯಾವಾಪೃಥಿವಿಗಳೇ ಅಶ್ವಿನೀದೇವತೆಗಳೆಂದು ಪ್ರಸಿದ್ಧರಾಗಿದ್ದಾರೆ ಎಂದು ಮೇಲಿನ ವಾಕ್ಯವು ನಿಸ್ಪೃಷ್ಟವಾಗಿ ತಿಳಿಸುತ್ತದೆ. ಈ ಅಭಿಪ್ರಾಯಕ್ಕೆ ಋಕ್ಸಂಹಿತಾ ವಾಕ್ಯದಿಂದಲೂ ಸಹಾಯವು ದೊರಕುವುದೆಂದು ತೋರಿಸಬಹುದು. ಉದಾಹರಣೆಗೆ—

**ಮಧು ನೋ ದ್ಯಾವಾಪೃಥಿವೀ ಮಿಮಿಕ್ಷತಾಂ ಮಧುಶ್ಚುತಾ ಮಧುದುಘೇ ಮಧುವ್ರತೇ ।**

**ದಧಾನೇ ಯಜ್ಞಂ ದ್ರವಿಣಂ ಚ ದೇವತಾ ಮಹಿ ಶ್ರವೋ ವಾಜಮಸ್ಮೇ ಸುವೀರ್ಯಂ ।**

(ಋ ಸಂ. ೬-೭೦-೫)

ಎಂಬ ಋಕ್ಕಿನಲ್ಲಿ ವರ್ಣಿತವಾಗಿರುವ ದ್ಯಾವಾಪೃಥಿವಿಗಳ ಲಕ್ಷಣವೂ, ಮೇಲೆ ಉದಾಹೃತವಾದ ಶತಪಥಬ್ರಾಹ್ಮಣದ ವಾಕ್ಯದಲ್ಲಿ ವರ್ಣಿತವಾಗಿರುವ ಅಶ್ವಿನೀದೇವತೆಗಳ ಲಕ್ಷಣವೂ ಒಂದೇ ಆಗಿದೆ. ಅಲ್ಲದೇ, " ಪ್ರತ್ಯಕ್ಷವಾಗಿ ಕಾಣಿಸಿಕೊಳ್ಳುವ ದ್ಯಾವಾಪೃಥಿವಿಗಳೇ ಇವರು " ಎಂದು ನಿಷ್ಕೃಷ್ಟವಾಗಿ ತಾದಾತ್ಮ್ಯವನ್ನೇ ಹೇಳಿದೆ. (೩).

**ಅಹೋರಾತ್ರಾವಿತ್ಯೇಕೇ**—ಅಹೋರಾತ್ರಗಳೇ ಅಶ್ವಿನೀದೇವತೆಗಳೆಂದು ಇನ್ನು ಕೆಲವರ ಮತವಾಗಿದೆ (೪)

**ಸೂರ್ಯಾಚಂದ್ರಮಸಾವಿತ್ಯೇಕೇ**—ಇವರನ್ನೇ ಸೂರ್ಯಚಂದ್ರರೆಂದು ಇನ್ನು ಕೆಲವರು ಹೇಳುತ್ತಾರೆ (೫)

**ರಾಜಾನೌ ಪುಣ್ಯಕೃತಾವಿತ್ಯೈತಿಹಾಸಿಕಾಃ**—ಸುಕೃತಿಗಳಾದ ಇಬ್ಬರು ರಾಜರೆಂದು ಇತಿಹಾಸಕಾರರ ಮತವಾಗಿದೆ (೬). ಹೀಗೆ ಬೇರೆಬೇರೆ ನಿರ್ವಚನಗಳನ್ನು ತೋರಿಸಿರುವುದರಿಂದ ಪ್ರಕೃತವಾದ ಋಕ್ಕಿನಲ್ಲಿಯೂ ಸಹ ಮೂರುವಿಧವಾದ ಅರ್ಥಗಳನ್ನು ಹೇಳಿರುವುದಕ್ಕೆ ಅವಕಾಶವಿದೆ. **ಅಶ್ವಿನೌ ವಾಯ್ವಾದಿತ್ಯೌ** ಎಂಬ ಅರ್ಥವನ್ನು ಅನುಮೋದಿಸುವ ಋಕ್ಕುಗಳೂ ಋಕ್ಸಂಹಿತೆಯಲ್ಲಿ ಕೆಲವಿವೆ. ಉದಾಹರಣೆಗೆ—

**ಇಹೇಹ ಜಾತಾ ಸಮವಾವಶೀತಾಮರೇಪಸಾ ತನ್ವಾ೩ ನಾಮಭಿಃ ಸ್ವೈಃ ।**
**ಜಿಷ್ಣುರ್ವಾಮನ್ಯಃ ಸುಮಖಸ್ಯ ಸೂರಿರ್ದಿವೋ ಅನ್ಯಃ ಸುಭಗಃ ಪುತ್ರ ಊಹೇ ॥**

(ಋ. ಸಂ. ೧-೧೮೧-೪)

ಎಂಬಲ್ಲಿ ' **ಅನ್ಯಃ ಸುಮಹತೋ ಬಲಸ್ಯೇರಯಿತಾ ಮಧ್ಯಮೋ ದಿವೋ ಅನ್ಯಃ ಸುಭಗಃ ಪುತ್ರ ಊಹ್ಯತ ಆದಿತ್ಯಃ** ॥ ಮಧ್ಯಮಲೋಕವರ್ತಿಯಾದವನು ಒಬ್ಬನು, ದ್ಯುಲೋಕದ ಶ್ರೇಷ್ಠನಾದ ಪುತ್ರನು ಆದಿತ್ಯರೂಪದಲ್ಲಿ ಇನ್ನೊಬ್ಬನು ಎಂದು ಅರ್ಥಮಾಡಿದೆ. (ನಿ. ೧೨-೨). ಇಲ್ಲಿ ಮಧ್ಯಮಲೋಕವರ್ತಿಯಾದವನು ವಾಯುವೆಂದು ಕೆಲವರೂ, ಚಂದ್ರನೆಂದು ಇನ್ನು ಕೆಲವರೂ ಹೇಳುತ್ತಾರೆ. ಮೊದಲನೆಯ ಅಭಿಪ್ರಾಯದಂತೆ ವಾಯ್ವಾದಿತ್ಯರೇ ಆಯಿತು. ಪ್ರಕೃತವಾದ ಋಕ್ಕಿನಲ್ಲಿ ಸಾಯಣರ ಅರ್ಥವನ್ನು ಅನುಮೋದಿಸುತ್ತದೆ, ಇಂತಹ ವಾಯ್ವಾದಿತ್ಯರಿಂದ ಪ್ರೇರಿತವಾಗಿ ಮೇಘವು ವೃಷ್ಟಿಯನ್ನು ಸುರಿಸಲಿ ಎಂದರ್ಥ

### ವ್ಯಾಕರಣಪ್ರಕ್ರಿಯಾ

**ಹಿಂಕೃಣ್ವತೀ**—ಕೃವಿ ಹಿಂಸಾಕರಣಯೋಶ್ಚ ಧಾತು. ಲಟಿಗೆ ಶತ್ರಾದೇಶ ಶತ್ರಂತದ ಮೇಲೆ ಸ್ತ್ರೀತ್ವದಲ್ಲಿ ಙೀಪ್. ನುಮ್ ರಹಿತವಾದ ಶತೃವಿನ ಪರದಲ್ಲಿ ಙೀಪ್ ಬಂದುದರಿಂದ **ಶತುರನುಮೋ ನದ್ಯಜಾದೀ** (ಪಾ. ಸೂ. ೬-೧-೧೭೩) ಎಂಬುದರಿಂದ ಅದು ಉದಾತ್ತವಾಗುತ್ತದೆ.

**ವಸುಪತ್ನೀ**—ವಸೂನಾಂ ಪತ್ನೀ ವಸುಪತ್ನೀ **ಪರಾದಿಶ್ಛಂದಸಿ ಬಹುಲಮ್** (ಪಾ. ಸೂ ೬-೨-೧೯೯) ಎಂಬುದರಿಂದ ಉತ್ತರಪದ ಆದ್ಯುದಾತ್ತಸ್ವರ ಬರುತ್ತದೆ.

**ಇಚ್ಛಂತೀ**—ಇಷು ಇಚ್ಛಾಯಾಂ ಧಾತು. ಲಟಿಗೆ ಶತ್ರಾದೇಶ ಬಂದಾಗ ಸ್ತ್ರೀತ್ವದಲ್ಲಿ **ಉಗಿತಶ್ಚ** (ಪಾ. ಸೂ. ೪-೬-೬) ಎಂಬುದರಿಂದ ಙೀಪ್. ವಿಕರಣಸ್ವರದಿಂದ ಮಧ್ಯೋದಾತ್ತವಾಗುತ್ತದೆ.

**ಅಗಾತ್**—**ಇಣ್** ಗತೌ ಧಾತು. ಲುಙ್ ಪ್ರಥಮಪುರುಷಏಕವಚನಾಂತರೂಪ. ತಿಙಂತನಿಘಾತಸ್ವರ ಬರುತ್ತದೆ.

**ದುಹಾಮ್**—ದುಹ ಪ್ರಪೂರಣೇ ಧಾತು. **ಇಗುಪಧಜ್ಞಾಪ್ರೀಕಿರಃ ಕಃ** (ಪಾ. ಸೂ. ೩-೧-೧೩೫) ಎಂಬುದರಿಂದ ಕ ಪ್ರತ್ಯಯ. ಕಿತ್ತಾದುದರಿಂದ ಗುಣ ಬರುವುದಿಲ್ಲ. ಸ್ತ್ರೀತ್ವದಲ್ಲಿ ಅದಂತನಿಬಂಧನವಾಗಿ ಟಾಪ್.

**ಅಘ್ನ್ಯಾ**—ಅಹನನಮ್ **ಅಘ್ನಃ ಘಞರ್ಥೇ ಕವಿಧಾನಂ ಸ್ಥಾಸ್ನಾಪಾವ್ಯಧಿ ಹನಿ ಯುಧ್ಯರ್ಥಮ್** (ಪಾ. ಸೂ. ೩-೩-೫೮-೪) ಎಂಬುದರಿಂದ ಕ ಪ್ರತ್ಯಯ. **ಅಘ್ನಮರ್ಹತಿ ಅಘ್ನ್ಯಾ ಛಂದಸಿಚ** (ಪಾ: ಸೂ. ೫-೧-೯೭) ಎಂಬುದರಿಂದ ಯ ಪ್ರತ್ಯಯ. ಇದರ ಮೇಲೆ ಸ್ತ್ರೀತ್ವದಲ್ಲಿ ಟಾಪ್. ಪ್ರತ್ಯಯಸ್ವರದಿಂದ ಅಂತೋದಾತ್ತವಾಗುತ್ತದೆ.

**ವರ್ಧತಾಮ್**—ವೃಧು ವರ್ಧನೇ ಧಾತು. ಲೋಟ್ ಪ್ರಥಮಪುರುಷಏಕವಚನಾಂತರೂಪ. ತಿಙಂತ ನಿಘಾತಸ್ವರ ಬರುತ್ತದೆ.

**ಮಹತೇ-ಬೃಹನ್ಮಹತೋರುಪಸಂಖ್ಯಾನಮ್** ಎಂಬುದರಿಂದ ವಿಭಕ್ತಿಗೆ ಉದಾತ್ತಸ್ವರ ಬರುತ್ತದೆ. ||೨೭||

———:o:———

ಸಾಯಣಭಾಷ್ಯಂ

ಗೌರಮೀಮೇದನು ವತ್ಸಂ ಮಿಷಂತಂ ಮೂರ್ಧಾನಂ ಹಿಙ್ಙಕೃಣೋನ್ಮಾ-
ತವಾ ಉ ।
ಸೃಕ್ವಾಣಂ ಘರ್ಮಮಭಿ ವಾವಶಾನಾ ಮಿಮಾತಿ ಮಾಯುಂ ಪಯತೇ
ಪಯೋಭಿಃ ॥ ೨೮ ॥

। ಪದಪಾಠಃ ।

ಗೌಃ । ಅಮೀಮೇತ್ । ಅನು । ವತ್ಸಂ । ಮಿಷಂತಂ । ಮೂರ್ಧಾನಂ । ಹಿಙ್ । ಅಕೃಣೋತ್ । ಮಾತವೈ ।
ಊಂ ಇತಿ ।
ಸೃಕ್ವಾಣಂ । ಘರ್ಮಂ । ಅಭಿ । ವಾವಶಾನಾ । ಮಿಮಾತಿ । ಮಾಯುಂ । ಪಯತೇ । ಪಯಃऽಭಿಃ ॥ ೨೮ ॥

ಸಾಯಣಭಾಷ್ಯಂ

ಪ್ರವರ್ಗ್ಯೇऽಭಿಷ್ಟವೇ ದೋಹನಸಮಯೇ ವತ್ಸೇ ಮಾತುಃ ಸಕಾಶಾದಪನೀಯಮಾನೇ ಗೌರಮೀಮೇದಿತ್ಯೇಷಾ । ಸೂತ್ರಿತಂ ಚ । ಗೌರಮೀಮೇದನು ವತ್ಸಂ ಮಿಷಂತಂ ನಮಸೇದುಪ ಸೀದತ । ಆ. ೪-೭ । ಇತಿ ॥

ಗೌರ್ಧೇನುರ್ಮಿಷಂತಂ ನಿಮೀಲಿತಾಕ್ಷಂ ವತ್ಸಮನು ಪ್ರಾಪ್ಯಾಮೀಮೇತ್ । ಶಬ್ದಂ ಕರೋತಿ । ಮೀಮಯತಿಃ ಶಬ್ದಕರ್ಮಾ । ಯದ್ವಾ । ಉಕ್ತಂ ವತ್ಸಮನ್ವಾತ್ಮಾನಂ ಪ್ರಕ್ಷಿಪತಿ । ಕಿಂಚ ತಸ್ಯ ವತ್ಸಸ್ಯ ಮೂರ್ಧಾನಂ ಮಾತವೈ ಮಾತುಂ ನಿರ್ಮಾತುಂ ಲೇಹನೇನ ಶೋಧಯಿತುಂ । ಉಶಬ್ದೋಽವಧಾರಣೇ । ಹಿಙ್ಙಕೃಣೋತ್ । ಹಿಂಕಾರಮಕರೋತ್ । ಕರೋತಿ । ಕಿಂಚ ಸೃಕ್ವಾಣಂ ವತ್ಸಸ್ಯ ಶಬ್ದವದನಪ್ರಾಂತಂ ಫೇನಸ್ಯ ಸ್ರಷ್ಟಾರಂ ಘರ್ಮಂ ಕ್ಷೀರಸ್ಯ ಕ್ಷರಣಶೀಲಂ ವತ್ಸಮಭ್ಯಭಿಲಕ್ಷ್ಯ ವಾವಶಾನಾ ಭೃಶಂ ಕಾಮಯಮಾನಾ ಮಾಯುಂ ಶಬ್ದಂ ಮಿಮಾತಿ । ನಿರ್ಮಾತಿ । ಕರೋತಿ । ತಾದೃಶೀ ಸತೀ ಪಯೋಭಿಃ ಪ್ರಭೂತೈಃ ಕ್ಷೀರೈಃ ಪಯತೇ । ಪ್ಯಾಯತೇ । ಆಪ್ಯಾಯನಂ ಕರೋತಿ ವತ್ಸಂ ॥ ಅತ್ರಾಪಿ ಮೇಘಪರತಯಾ ಯೋಜನೀಯಂ । ಏವಮಾಹೂತಾ ಮೇಘರೂಪಾ ಗೌರ್ಧೇನುರ್ಮಿಷಂತಂ ವೃಷ್ಟಿರೂಪಕ್ಷೀರಾಭಾವೇನ ನಿಮೀಲಿತಾಕ್ಷಂ ಲೋಕಾಖ್ಯಂ ಪುತ್ರಮನ್ವನುಸೃತ್ಯಾಮೀಮೇತ್ । ಗರ್ಜನಶಬ್ದಂ ವರ್ಷಣಚಿಹ್ನರೂಪಂ ಕರೋತಿ । ಮೂರ್ಧಸ್ಥಾನೀಯಾಂ ಭೂಮಿಂ ಮಾತವಾ ಉ ನಿರ್ಮಾತುಮೇವ ಸಸ್ಯಾದಿಯುಕ್ತಾಂ ಕರ್ತುಂ ಹಿಙ್ಙಕೃಣೋತ್ । ಹಿಂಕಾರರೂಪಂ ಶಬ್ದಮಕರೋತ್ । ಪ್ರತಿಪಾದನಭೇದಾದಪುನರುಕ್ತಿಃ । ಕಿಂಚ ಸೃಕ್ವಾಣಂ ಫಲಸ್ಯ ಸ್ರಷ್ಟಾರಂ ಘರ್ಮಂ ದೀಪ್ತಂ ಪುತ್ರಮಭಿ ವಾವಶಾನಾಭಿಮುಖ್ಯೇನ ಕಾಮಯಮಾನಾ ಪಯೋಭಿರುದಕೈಃ ಪಯತೇ । ಪ್ಯಾಯತೇ । ಆಪ್ಯಾಯನಂ ಕರೋತಿ ॥

### ಪ್ರತಿಪದಾರ್ಥ

**ಗೌಃ**--ಧೇನುವು । **ಮಿಷಂತಂ**—ಕಣ್ಣುಮಿಟುಕಿಸುತ್ತಿರುವ । **ವತ್ಸಂ ಅನು**—ಕರುವನ್ನು ಸಮೀಪಿಸಿ । **ಅಮೀಮೇತ್**—ಶಬ್ದವನ್ನು ಮಾಡುತ್ತದೆ. । **ಮೂರ್ಧಾನಂ**—ಅದರ ತಲೆಯನ್ನು । **ಮಾತವೈ ಉ**—ನೆಕ್ಕಿ ಶುದ್ಧಿಮಾಡುವ ಸನ್ನಾಹದಿಂದಲೇ । **ಹಿಙ್ ಅಕೃಣೋತ್**—ಗುಟುರುಶಬ್ದವನ್ನು ಮಾಡುತ್ತದೆ ! **ಸೃಕ್ವಾಣಂ**—(ಕರುವಿನ) ಮುಖದ ಪ್ರಾಂತದಲ್ಲಿ । **ಘರ್ಮಂ**—ನೊರೆಯನ್ನು । **ಅಭಿ**—ನೋಡಿ । **ವಾವಶಾನಾ**—ಮಮತಾಪೂರ್ವಕವಾಗಿ । **ಮಾಯುಂ**—ಶಬ್ದವನ್ನು । **ಮಿಮಾತಿ**—ಮಾಡುತ್ತದೆ. (ಮತ್ತು) । **ಪಯೋಭಿಃ**—ಕ್ಷೀರಗಳಿಂದ । **ಪಯತೇ**—(ಕರುವನ್ನು) ತೃಪ್ತಿಗೊಳಿಸುತ್ತದೆ.

### ಭಾವಾರ್ಥ

ಧೇನುವು ಕಣ್ಣುಮಿಟುಕಿಸುತ್ತಿರುವ ತನ್ನ ಕರುವನ್ನು ಸಮೀಪಿಸಿ ಶಬ್ದವನ್ನು ಮಾಡುತ್ತದೆ. ಅದರ ತಲೆಯನ್ನು ನೆಕ್ಕಿ ಶುದ್ಧಿಮಾಡುವ ಸನ್ನಾಹದಿಂದಲೇ ಗುಟುರುಶಬ್ದವನ್ನು ಮಾಡುತ್ತದೆ. ಕರುವಿನ ಮುಖಪ್ರಾಂತದಲ್ಲಿ ನೊರೆಯನ್ನು ನೋಡಿ. ಮಮತಾಪೂರ್ವಕವಾಗಿ ಶಬ್ದವನ್ನು ಮಾಡುತ್ತದೆ. ಕ್ಷೀರಗಳಿಂದ ತನ್ನ ಕರುವನ್ನು ತೃಪ್ತಿಗೊಳಿಸುತ್ತದೆ.

## English Translation

The cow bellows for her calf, (who stands) with winking eyes, and lows as (she) proceeds to lick his forehead : she utters a cry, as, anxious, she sees the moisture in the corners of his mouth, and nourishes him with her milk.

**ವಿಶೇಷವಿಷಯಗಳು**

ಪ್ರವರ್ಗ್ಯದಲ್ಲಿ ಹಾಲುಕರೆಯುವ ಕಾಲದಲ್ಲಿ ಕರುವನ್ನು ಹಸುವಿನಿಂದ ಬೇರ್ಪಡಿಸಿ ಬೇರೆ ಕಡೆ ಕಟ್ಟಲು ಕರೆದುಕೊಂಡುಹೋಗುವಾಗ **ಗೌರಮೀಮೇತ್** ಎಂಬ ಈ ಋಕ್ಕನ್ನು ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ ಗೌರಮೀಮೇದನು **ವತ್ಸಂ ಮಿಷಂತಂ ನಮುಸೇದುಪ ಸೀದತೆ** ಎಂಬ ಸೂತ್ರದಿಂದ ವಿವೃತವಾಗಿರುವುದು (೪. ೪-೭)

ಈ ಋಕ್ಕಿನಲ್ಲಿಯೂ ಸಹ ಮೇಘಪರವಾದ ಅರ್ಥವನ್ನು ಹೇಳಬಹುದು. ಆಗ—**ಮಿಷಂತಂ ವತ್ಸಂ**-ವೃಷ್ಟಿರೂಪವಾದ ಕ್ಷೀರಾಭಾವದಿಂದ ಪರಿತಪಿಸುತ್ತಾ ಕಣ್ಣುಮಿಟುಕಿಸುತ್ತಿರುವ ಲೋಕರೂಪವಾದ ವತ್ಸವನ್ನು ನೋಡಿ **ಅಮೀಮೇತ್**-ವೃಷ್ಟಿಗೆ ಪೂರ್ವಭಾವಿಯಾದ ಗರ್ಜನಶಬ್ದವನ್ನು ಮಾಡಿತು ;

**ಮೂರ್ಧಾನಂ ಮಾತವೈ ಹಿಙ್ ಅಕೃಣೋತ್**—ಮೂರ್ಧಸ್ಥಾನೀಯವಾದ ಪೃಥ್ವಿಯನ್ನು ಸಸ್ಯಾದಿಗಳಿಂದ ಯುಕ್ತವನ್ನಾಗಿ ಮಾಡಲು ಸನ್ನಾಹಪೂರಿತವಾದ ಶಬ್ದವನ್ನು ಮಾಡುತ್ತದೆ. **ಸೃಕ್ವಾಣಂ ಘರ್ಮಂ ಅಭಿ ವಾವಶಾನಾ**-ಫಲದ ಸೃಷ್ಟಿಕರ್ತೃವಾದುದೂ ದೀಪ್ತವಾದುದೂ ಆದ ಪೃಥ್ವಿಯನ್ನು ಮನುತೆಯಿಂದ ಲಾಲಿಸುತ್ತಾ; **ಪಯೋಭಿಃ ಪಯತೇ** ಉದಕರೂಪವಾದ ಕ್ಷೀರಾದಿಗಳಿಂದ ತುಂಬುತ್ತದೆ ಎಂದರ್ಥವಾಗುವುದೆಂದು ಸಾಯಣರು ವಿವರಿಸಿದ್ದಾರೆ. ಈ ಮಂತ್ರಕ್ಕೆ ನಿರುಕ್ತಕಾರರ ವಿವರಣೆಯು ಈ ರೀತಿಯಿದೆ.

> **ಗೌರನ್ವಮೀಮೇದ್ವತ್ಸಂ ನಿಮಿಷಂತಮನಿಮಿಷಂತಮಾದಿತ್ಯಮಿತಿ ವಾ ಮೂರ್ಧಾನಮಸ್ಯಾಭಿಹಿಙ್ಙಕರೋನ್ಮನನಾಯ ಸೃಕ್ವಾಣಂ ಸರಣಂ ಘರ್ಮಂ ಹರಣಮಭಿವಾವಶಾನಾ ಮಿಮಾತಿ ಮಾಯುಂ ಪ್ರಪ್ಯಾಯತೇ ಪಯೋಭಿರ್ಮಾಯುಮಿವಾದಿತ್ಯಮಿತಿ ವಾ ।**
> (ನಿ. ೧೧-೪೨)

ಇಲ್ಲಿ ವತ್ಸಶಬ್ದಕ್ಕೆ ಆದಿತ್ಯನೆಂದರ್ಥಮಾಡಿದೆ. ಆದಿತ್ಯನ ಮೂರ್ಧದ ಮೇಲೆ ಗುರ್ತಿಸುವುದಕ್ಕಾಗಿ ಹಿಙ್ಕಾರಶಬ್ದ ಮಾಡುತ್ತದೆಂದೂ, ಪ್ರವಾಹರೂಪದಲ್ಲಿ ಸುರಿಯುವುದಕ್ಕಾಗಿ ಗರ್ಜನಶಬ್ದವನ್ನು ಮಾಡುತ್ತಾ ಉದಕದಿಂದ ಪೂರ್ಣವಾಗಿ ತುಂಬುತ್ತದೆಂದೂ ಮತ್ತು ಮಾಯುವಿನಂತೆ ಶಬ್ದಮಾಡುತ್ತದೆಂದೂ ತಾತ್ಪರ್ಯವಾಗುತ್ತದೆ. ಇಲ್ಲಿ **ಮಾಯು**ವೆಂಬ ಪದಕ್ಕೆ ಆದಿತ್ಯನೆಂದರ್ಥಮಾಡಿದೆ **ಗೌಃ** ಎಂಬುದಕ್ಕೆ ಇಲ್ಲಿ **ಮಾಧ್ಯಮಿಕಾ ವಾಕ್** ಎಂದು ನಿರುಕ್ತಕಾರರು ತಮ್ಮ ಮತವನ್ನು ತಿಳಿಸಿ ಅನಂತರ **ಘರ್ಮಧುಗಿತಿ ಯಾಜ್ಞಿಕಾಃ** ತಪ್ತವಾದುದೂ ಉದಕರೂಪವಾದುದೂ ಆದ ಪಯಸ್ಸನ್ನು ಕೊಡತಕ್ಕದ್ದೆಂದು ವೈದಿಕರೂ ಹೇಳುವರೆಂದು ಯಜ್ಞಿಕಮತವನ್ನೂ ತಿಳಿಸಿದ್ದಾರೆ. [**ಮಾಯು** ಶಬ್ದದ ಅರ್ಥವನ್ನು ಪುನಃ ೨೯ನೇ ಋಕ್ಕಿನಲ್ಲಿ ವಿವರಿಸಲಾಗುತ್ತದೆ.]

**ವಾವಶಾನಾ—ವಾವಶಾನೋ ವಷ್ಟೇರ್ವಾ ವಾಶ್ಯತೇರ್ವಾ** । (ನಿ. ೫-೧) . ಆದರದಿಂದ ಇಚ್ಛಿಸು ಎಂಬರ್ಥವನ್ನು ಕೊಡುವ **ವಶ್** ಧಾತುವಿನಿಂದಾಗಲೀ ಅಥವಾ ಗಟ್ಟಿಯಾಗಿ ಶಬ್ದವನ್ನು ಮಾಡು ಎಂಬರ್ಥವನ್ನು ಕೊಡುವ **ವಾಶ್** ಧಾತುವಿನಿಂದಾಗಲೀ ನಿಷ್ಪನ್ನವಾಗಿದೆಯೆಂದು ನಿರುಕ್ತಕಾರರು ಈ ಪದದ ನಿರ್ವಚನವನ್ನು ತೋರಿಸಿ ಅನಂತರ ಇವರ ಪ್ರಯೋಗವನ್ನು ತಿಳಿಸುವುದಕ್ಕಾಗಿ ಋಕ್ಸಂಹಿತೆಯಿಂದ,

> **ಸಪ್ತ ಸ್ವಸೄರರುಷೀರ್ವಾವಶಾನೋ ವಿದ್ವಾನ್ಮಧ್ವ ಉಜ್ಜಭಾರಾ ದೃಶೇ ಕಂ ।**
> **ಅಂತರ್ಯೇಮೇ ಅಂತರಿಕ್ಷೇ ಪುರಾಜಾ ಇಚ್ಛನ್ವವ್ರಿಮವಿದತ್ಪೂಷಣಸ್ಯ ॥**
> (ಋ ಸಂ ೧೦-೫-೫)

ಎಂಬ ಋಕ್ಕನ್ನುದಹರಿಸಿ ತೋರಿಸಿದ್ದಾರೆ. ಈ ಋಕ್ಕಿನಲ್ಲಿ **ವಾವಶಾನಃ** ಎಂದರೆ **ಕಾಮಯಮಾನಃ ವಾಶ್ಯಮಾನಃ ಸ್ತೋತೃಭಿಃ ಸ್ತೂಯಮಾನೋ ವಾ ಅಗ್ನಿಂ** ಎಂದು ಸಾಯಣರು ವಿವರಿಸುತ್ತಾ ಆದ್ಯತೆನಾದ ಎಂಬರ್ಥದಲ್ಲಿ ಒಂದು ವಿಧವಾಗಿಯೂ, ಸ್ತೋತೃಗಳಿಂದ ಮಾಡಲ್ಪಟ್ಟ (ಶಬ್ದರೂಪವಾದ) ಸ್ತೋತ್ರಗಳಿಂದ ಸ್ತುತರಾದ ಎಂಬರ್ಥದಲ್ಲಿ ಇನ್ನೊಂದು ವಿಧವಾಗಿಯೂ, ಅರ್ಥ ಮಾಡಿದ್ದಾರೆ. ಇದರಂತೆಯೇ ಪ್ರಕೃತವಾದ ಋಕ್ಕಿನಲ್ಲಿಯೂ ಅರ್ಥಮಾಡಬಹುದೆಂದು ನಿರುಕ್ತಕಾರರು ತಿಳಿಸಿದ್ದಾರೆ.

**ಪಯತೇ—ಪ್ಯಾಯತೇ ।** ಅತಿಶಯವಾಗಿ ವೃದ್ಧಿಯಾಗುವಂತೆಯೂ, ಸಂತೃಪ್ತಿಯನ್ನು ಪಡೆಯುವಂತೆಯೂ ಮಾಡುತ್ತದೆ ಎಂದರ್ಥವಾಗುತ್ತದೆ.

**ವ್ಯಾಕರಣಪ್ರಕ್ರಿಯಾ**

**ಅಮೀಮೇತ್**—ಮೀಮೀ ಎಂಬ ಧಾತುವು ಶಬ್ದಕರ್ಮಕವಾಗಿ ಛಾಂದಸವಾಗಿದೆ. ಛಾಂದಸವಾಗಿ ವರ್ತಮಾನಾರ್ಥದಲ್ಲಿ ಲಙ್. ಪ್ರಥಮಪುರುಷ ಏಕವಚನದಲ್ಲಿ ಅಮೀಮೇತ್ ಎಂದು ರೂಪವಾಗುತ್ತದೆ. ಅತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

**ಮಿಷಂತಮ್**—ಮಿಷ ಸ್ಪರ್ಧಾಯಾಂ ಧಾತು. ತುದಾದಿ. ಲಟಿಗೆ ಶತ್ರಾದೇಶ. ದ್ವಿತೀಯಾ ಏಕವಚನಾಂತರೂಪ. ವಿಕರಣ (ಶ) ಸ್ವರದಿಂದ ಮಧ್ಯೋದಾತ್ತವಾಗುತ್ತದೆ.

**ಅಕೃಣೋತ್**—ಕೃವಿ ಹಿಂಸಾಕರಣಯೋಶ್ಚ. ಧಾತು. **ಛಂದಸಿ ಲುಙ್‌ಲಙ್‌ಲಿಟಃ** ಎಂಬುದರಿಂದ ವರ್ತಮಾನಾರ್ಥದಲ್ಲಿ ಲಙ್. ಪ್ರಥಮಪುರುಷ ಏಕವಚನಾಂತರೂಪ. ತಿಙಂತನಿಘಾತಸ್ವರ ಬರುತ್ತದೆ.

**ಮಾತವೈ**—ಮಾಙ್ ಮಾನೇ. ಧಾತು. **ತುಮರ್ಥೇ ಸೇಸೇ**—(ಪಾ. ಸೂ. ೩-೪-೯) ಎಂಬುದರಿಂದ ತವೈ ಪ್ರತ್ಯಯ. ಏಜಂತವಾದುದರಿಂದ ಅವ್ಯಯವಾಗುತ್ತದೆ. ವ್ಯತ್ಯಯದಿಂದ ಆದ್ಯುದಾತ್ತಸ್ವರ ಬರುತ್ತದೆ.

**ವಾವಶಾನಾ**—ವಶ ಕಾಂತೌ. ಧಾತು. **ಧಾತೋರೇಕಾಚಃ**—(ಪಾ. ಸೂ. ೩-೧-೨೨) ಎಂಬುದರಿಂದ ಭೃಶಾರ್ಥದಲ್ಲಿ ಯಙ್ ಬಂದಾಗ ಅದರಮೇಲೆ ಶಾನಚ್ ಪ್ರತ್ಯಯ. **ಛಂದಸ್ಯುಭಯಥಾ** (ಪಾ. ಸೂ. ೩-೪-೧೧೭) ಎಂಬುದರಿಂದ ಅದಕ್ಕೆ ಆರ್ಧಧಾತುಕ ಸಂಜ್ಞೆ ಇರುವುದರಿಂದ ಯಙಿನ ಅಕಾರಯಕಾರಗಳಿಗೆ ಲೋಪ ಬರುತ್ತದೆ ಆದುದರಿಂದಲೇ **ತಾಸ್ಯನುದಾತ್ತೇತ್**—ಸೂತ್ರದಿಂದ ಶಾನಚ್ ಅನುದಾತ್ತವಾಗುವುದಿಲ್ಲ **ಚಿತಃ** (ಪಾ. ಸೂ. ೬-೧-೧೬೩) ಎಂಬುದರಿಂದ ಅಂತೋದಾತ್ತಸ್ವರ ಬರುತ್ತದೆ. ಸ್ತ್ರೀತ್ವವಿವಕ್ಷಾಮಾಡಿದಾಗ ಅದಂತವಾದುದರಿಂದ ಟಾಪ್. ಉದಾತ್ತನಿವೃತ್ತಿಸ್ವರದಿಂದ ಅದೂ ಉದಾತ್ತವಾಗುತ್ತದೆ.

**ಮಿಮಾತಿ**—ಮಾಙ್ ಮಾನೇ ಶಬ್ದೇ ಚ. ಧಾತು. ವ್ಯತ್ಯಯದಿಂದ ಪರಸ್ಮೈಪದಿಯಾಗುತ್ತದೆ. **ಲಟ್** ಪ್ರಥಮಪುರುಷಏಕವಚನಾಂತರೂಪ. ಪಾದಾದಿಯಲ್ಲಿರುವುದರಿಂದ ನಿಘಾತಸ್ವರ ಬರುವುದಿಲ್ಲ. **ಅಭ್ಯಸ್ತಾನಾಮಾದಿಃ** (ಪಾ. ಸೂ. ೬-೧-೧೮೯) ಎಂಬುದರಿಂದ ಆದ್ಯುದಾತ್ತಸ್ವರ ಬರುತ್ತದೆ.

**ಪಯತೇ**—ಓಪ್ಯಾಯೀ ವೃದ್ಧೌ ಧಾತು. ವ್ಯತ್ಯಯದಿಂದ ನಿಷ್ಠಾ ಪ್ರತ್ಯಯ ಪರದಲ್ಲಿಲ್ಲದಿದ್ದರೂ ಪೀ ಭಾವ. ಲಟಿನಲ್ಲಿ ಶಪ್ ನಿಮಿತ್ತವಾಗಿ ಗುಣ, ಅಯಾದೇಶ. ಛಾಂದಸವಾಗಿ ಆದ್ಯುದಾತ್ತಸ್ವರ ಬರುತ್ತದೆ. ॥ ೨೮ ॥

———:o:———

ಸಂಹಿತಾಪಾಠಃ

ಅಯಂ ಸ ಶಿಂಕ್ತೇ ಯೇನ ಗೌರಭೀವೃತಾ ಮಿಮಾತಿ ಮಾಯುಂ ಧ್ವಸನಾ-
ವಧಿ ಶ್ರಿತಾ ।
ಸಾ ಚಿತ್ತಿಭಿರ್ನಿ ಹಿ ಚಕಾರ ಮರ್ತ್ಯಂ ವಿದ್ಯುದ್ಭವಂತೀ ಪ್ರತಿ ವವ್ರಿಮೌಹತ॥
॥ ೨೯ ॥

ಪದಪಾಠಃ

ಅಯಂ । ಸಃ । ಶಿಂಕ್ತೇ । ಯೇನ । ಗೌಃ । ಅಭಿಽವೃತಾ । ಮಿಮಾತಿ । ಮಾಯುಂ । ಧ್ವಸನೌ । ಅಧಿ ।
ಶ್ರಿತಾ ।
ಸಾ । ಚಿತ್ತಿಽಭಿಃ । ನಿ । ಹಿ । ಚಕಾರ । ಮರ್ತ್ಯಂ । ವಿಽದ್ಯುತ್ । ಭವಂತೀ । ಪ್ರತಿ । ವವ್ರಿಂ । ಔಹತ ॥
॥ ೨೯ ॥

ಸಾಯಣಭಾಷ್ಯಂ

ಸೋಽಯಂ ವತ್ಸಃ ಶಿಂಕ್ತೇ । ಅವ್ಯಕ್ತಧ್ವನಿಂ ಕರೋತಿ । ಯೇನ ವತ್ಸೇನ ಗೌರ್ಮಾತಾಭೀವೃತಾ ಆಗತ್ಯಾಭಿತೋ ವೇಷ್ಟಿತಾ ಭವತಿ । ಕಿಂಚ ಸಾ ಗೌರ್ಮಾಯುಂ ಶಬ್ದಂ ಮಿಮಾತಿ । ನಿರ್ಮಿಮಾತಿ । ಕುತ್ರ ಸ್ಥಿತಾ । ಧ್ವಸನಾವಧಿ ಶ್ರಿತಾ ಧ್ವಸನಸ್ಥಾನೇ ಗವಾಂ ನಿವಾಸಾಶ್ರಯೇಽಧಿಷ್ಠಿತಾ । ಸಾ ತಾದೃಶೀ ಚಿತ್ತಿಭಿರ್ಜ್ಞಾನೈಸ್ತತ್ಪೂರ್ವಕೈಃ ಕರ್ಮಭಿರ್ವಾ ಮರ್ತ್ಯಂ ನಿ ಚಕಾರ ಹಿ । ನೀಚೈಃ ಕರೋತಿ । ಜ್ಞಾನವಿಶಿಷ್ಟಾ ಮನುಷ್ಯಾ ಯಥಾ ಬಾಲಕಸ್ಯಾದನಸ್ತನಪಾನಾದಿಸ್ನೇಹಂ ಕುರ್ವಂತಿ ತತೋಽಪ್ಯತಿಶಯಮಿಯಂ ಕರೋತೀತ್ಯರ್ಥಃ । ಕಿಂಚ ವಿದ್ಯುದ್ಭವಂತೀ ಬಹುಕ್ಷೀರತಯಾ ವಿದ್ಯೋತಮಾನಾ ವವ್ರಿಂ ಸ್ವಕೀಯಂ ರೂಪಂ । ವವ್ರಿರಿತಿ ರೂಪನಾಮ । ರೂಪಂ ಪ್ರತ್ಯೌಹತ । ಪ್ರಕಾಶಯತಿ । ಯದ್ವಾ । ವತ್ಸಸ್ನೇಹಾತಿಶಯಸ್ವರೂಪಂ ವಿದ್ಯುದ್ಭವಂತೀ ವಿದ್ಯುದಿವ ಶೀಘ್ರದರ್ಶನೌಹತ । ಅಯಮೇಕೋಽರ್ಥಃ ॥ ಅರ್ಥಾಂತರಂ ಚ । ಶಾಕಪೂಣಿರ್ನಾಮ ನಿರುಕ್ತಾಚಾರ್ಯಃ ಸಕಲಮಂತ್ರದೇವತಾ ಜಾನಾಮೀತ್ಯಭಿಮಾನಿತವಾನ್ । ದುರ್ಜ್ಞೇಯಸ್ಯ ತತ್ತ್ವಸ್ಯ ಸ್ವರೂಪಮಸೌ ಜಾನಾತಿ ಕಿಲ್ಪೈನಂ ವ್ಯಾಮೋಹಯಾಮೀತಿ ಮನಸಿ ಕೃತ್ವಾ ಸಂದಿಗ್ಧೋಭಯಲಿಂಗಾ ದೇವತಾ ಪ್ರಾದುರಾಸೀದಥ ತಸ್ಯ ಪುರತಃ । ಸ ಚ ತಾಂ ನ ಬಬುಧೇ । ಬುಭುತ್ಸಯಾ ಚ ತಾಂ ಸ್ವರೂಪಂ ಪ್ರದರ್ಶಯೇತಿ ಪಪ್ರಚ್ಛ । ಸಾ ಚಾಯಂ ಸ ಶಿಂಕ್ತ ಇತ್ಯೇಷಾ ಮದ್ದೇವತಾ ತತ್ರ ಪ್ರತೀಯಮಾನಂ ಮತ್ಸ್ವರೂಪಮಿತ್ಯುಪದಿದೇಶ । ನಿ. ೨-೮ । ಕಥಮತ್ರೋಭಯಲಿಂಗತ್ವಂ ವಸ್ತುತ ಉಭಯಲಿಂಗತ್ವೇ ಕಥಂ ದೈವತ್ಯೈಕ್ಯಮಿತಿ ಉಚ್ಯತೇ । ಅತ್ರೋಭಯಲಿಂಗತ್ವಮುಭಯಥಾ ಸಂಭವತಿ ಸ್ತ್ರೀಪುಲ್ಲಿಂಗದ್ವಯೇನ ಮಧ್ಯನೋತ್ತಮಲಿಂಗದ್ವಯೇನ ಚ । ತತ್ಕಥಂ । ಅಯಂ ಸ ಯೇನೇತಿ ಪುಲ್ಲಿಂಗವಾಚಿನಾ ಶಬ್ದ-

ತ್ರಯೇಣ ಮೇಘಃ ಪ್ರತೀಯತೇ । ಅಧಿ ಶ್ರಿತಾ ಸೇತ್ಯಾದಿನಾ ಸ್ತ್ರೀಲಿಂಗವಾಚಕೇನ ಮಾಧ್ಯಮಿಕಾ ವಾಕ್ । ಅತ ಉಭಯಲಿಂಗತ್ವಂ । ತಥಾ ವಿದ್ಯುದ್ಭವಂತೀತ್ಯಂತಂ ಮಧ್ಯಮಲಿಂಗಂ ತತ್ರ ಮೇಘಸ್ತನಿತಯೋ-ರ್ಮಾಧ್ಯಮಿಕಯೋಃ ಪ್ರತೀತೇಃ । ತಥಾ ಸತಿ ವವ್ರಿಮೌಹತೇತ್ಯತ್ರ ವರ್ಷೇಣ ಪೃಥಿವೀಂ ಪ್ರಚ್ಛಾದ್ಯ ತಸ್ಯಾ ರಸಂ ಪ್ರತ್ಯಾದತ್ತ ಇತ್ಯಯಮರ್ಥೋ ವಿವಕ್ಷಿತಃ । ಸ ಚಾದಿತ್ಯವ್ಯಾಪಾರ ಇತ್ಯುಕ್ತಮಲಿಂಗತ್ವಂ । ತರ್ಹಿ ವಸ್ತುತ ಉಭಯಲಿಂಗತ್ವಪ್ರತೀತೇರುಭೇ ಅಪಿ ದೇವತೇ ಯಲ್ಲಿಂಗಂ ಸಾ ದೇವತಾ । ಅನು. ಋ. ೧.೧೩೯ । ಇತಿ ನ್ಯಾಯಾತ್ ಅತಃ ಕಥಮೇಕದೇವತಾಸಿದ್ಧಿರಿತಿ ಅಯಂ ಸ ಯೇನೇತ್ಯೇಷಾಂ ವ್ಯತ್ಯಯಾ-ಶ್ರಯಣೇನ ಸರ್ವದೇವತಾನಾಮಧಿಷ್ಠಾತ್ರಿಕಾಯಾ ಏಕತ್ವಾಶ್ರಯಣೇನ ವಾ ಸರ್ವಫಲದಾತ್ರಾತ್ಮನ ಏಕತ್ವಾಶ್ರಯಣೇನ ವಾ ದೇವತೈಕ್ಯೋಪಪತ್ತೇಃ । ಅನೇನ ಮಧ್ಯಮೋಕ್ತಮಭೇದೇನೋಭಯಲಿಂಗತ್ವ-ಪೇಕ್ಷೇಽಪಿ ದೇವತೈಕ್ಯಮುಕ್ತಂ ಭವತಿ । ಅತ ಏಕೈವ ವಾ ಮಹಾನಾತ್ಮಾ ದೇವತೇತ್ಯುಕ್ತತ್ವಾದ್ವಸ್ತುತೋ ದೇವತೈಕ್ಯಂ ಅಧಿಷ್ಠಾತ್ರಧಿಷ್ಠಾನಭೇದೇನ ಭೇದಶ್ಚ ನ ವಿರುಧ್ಯತೇ ॥ ಅಯಂ ಸ ಶಿಂಕ್ತೇ । ಇಯಂ ಸಾ ಮಾಧ್ಯಮಿಕಾಯಾ ವಾಚೋಽಧಿಷ್ಠಾತ್ರೀ ದೇವತಾ ಶಿಂಕ್ತೇ । ಅವ್ಯಕ್ತಧ್ವನಿಂ ಕರೋತಿ । ಯೇನ ಗೌರಭೀ-ವೃತಾ । ಗೌರಿತಿ ವಾಙ್ನಾಮ । ಮಾಧ್ಯಮಿಕಾ ವಾಗ್ಯಯಾಭಿವೃತಾ ಅಭಿತೋ ವ್ಯಾಪ್ತಾ। ಅಧಿಷ್ಠಿತೇತ್ಯರ್ಥಃ । ಸೇಯಂ ಶಿಂಕ್ತೇ । ಅಥವಾ । ಅಯಂ ಸ ಶಿಂಕ್ತ ಇತಿ ನೈವ ಮಾಧ್ಯಮಿಕಾ ವಾಙ್ನಿರ್ದಿಶ್ಯತೇ ಅಪಿ ತು ಮೇಘಃ । ತಸ್ಯಾಂ ವಾಚಿ ಶಿಂಜಾನಾಯಾಂ ಸ ಏವ ಶಿಂಕ್ತ ಇತ್ಯುಪಚರ್ಯತೇ ಮಂಚಾಃ ಕ್ರೋಶಂತೀತಿ-ವತ್ । ಅಯಂ ಸ ಮೇಘಃ ಶಬ್ದಂ ಕರೋತಿ ಯೇನ ಮಾಧ್ಯಮಿಕಾ ವಾಗಭಿವ್ಯಾಪ್ತಾ । ಶಬ್ದನೇ ಪ್ರಕಾರ ಏವೋಚ್ಯತೇ । ಮಿಮಾತಿ ಮಾಯುಂ । ಸ್ತನಿತಲಕ್ಷಣಂ ಶಬ್ದಂ ಕರೋತಿ । ಅಥವಾಯಂ । ಲುಪ್ತೋ-ಪಮಾ । ಮಿನೋತಿ ಸ್ವತೇಜಃ ಸರ್ವತ್ರ ಪ್ರಕ್ಷಿಪತೀತಿ ಮಾಯುರಾದಿತ್ಯಃ । ತಮಿವಾತಿದೀಪ್ತಂ ಕರೋತೀ-ತ್ಯರ್ಥಃ । ಅಥವಾ ಸಾಮರ್ಥ್ಯಾದಾತ್ಮಾನಮಾದಿತ್ಯಸದೃಶಂ ನಿರ್ಮಿಮೀತೇ । ಕುತ್ರ ಸ್ಥಿತಾ । ಧ್ವಸನಾವಧಿ ಶ್ರಿತಾ । ಧ್ವಂಸನೇ ಮೇಘೇಽಧಿಶ್ರಿತಾ । ಸೇದೃಶೀ ಚಿತ್ತಿಭಿಃ । ಕರ್ಮನಾಮೈತತ್ । ಸ್ವಕರ್ಮಭಿರ್ವೃಷ್ಟಿ-ರೂಪೈರ್ಮರ್ತ್ಯಂ ಮರಣಧರ್ಮಾಣಂ ಸ್ಥಾವರಜಂಗಮರೂಪಂ ಕೃತ್ಸ್ನಂ ಜಗನ್ನಿ ಹಿ ಚಕಾರ । ನೀಚೈಃ ಕರೋತಿ ಮನುಷ್ಯಾನ್ಪ್ರಣತಾನ್ಕರೋತಿ । ಓಷಧ್ಯಾದಿಕಂ ಫಲೇನಾವನತಂ ಕರೋತಿ । ಅಥವಾ ಚಿತ್ತಿಭಿ-ರ್ದ್ಯೋತನಲಕ್ಷಣೈಃ ಕರ್ಮಭಿಃ । ವಿದ್ಯುತಿ ವಿದ್ಯೋತಮಾಪದ್ಯಮಾನಾ ಪ್ರತಿ ವವ್ರಿಮೌಹತ । ವವ್ರಿರಿತಿ ರೂಪನಾಮ । ಊಹತಿರತ್ರ ಸಾಮರ್ಥ್ಯಾದುಪಸಂಹಾರವಾಚೀ । ಪ್ರತ್ಯುಪಸಂಹರತಿ । ಉದಕಲಕ್ಷಣಂ ರೂಪಂ ಪುನರಾದತ್ತೇ । ರಶ್ಮಿದ್ವಾರಾ ವೃಷ್ಟಮುದಕಂ ಪುನರ್ಘರ್ಮಕಾಲ ಆದತ್ತೇ । ಏಕಸ್ಯೈವ ಜ್ಯೋತಿಷಸ್ತ್ರೇಧಾಕರಣಾದ್ವಿದ್ಯುತಃ ಸೂರ್ಯರಶ್ಮಿಭಾವ ಉಪಪದ್ಯತೇ ತಮೂ ಅಕೃಣ್ವನ್ತ್ರೇಧಾ ಭುವೇ ಕಂ । ಋ. ೧೦.೮೮.೧೦ । ಇತಿ ವಕ್ಷ್ಯಮಾಣತ್ವಾತ್ । ಸ್ತನಿತಸ್ಯ ವಿದ್ಯುದ್ಭಾವೋ ಮೇಘವಿದ್ಯುತ್ಸ್ತನಿ-ತಾನಾಮಭೇದಾಭಿಪ್ರಾಯೇಣ ॥

ಪ್ರತಿಪದಾರ್ಥ.

**ಯೇನ**—ಯಾವ ವತ್ಸದಿಂದ । **ಗೌಃ**—ತಾಯಿಯಾದ ಧೇನುವು । **ಅಭೀವೃತಾ**—ಸುತ್ತುವರಿಯಲ್ಪಟ್ಟಿದೆಯೋ ಅಂತಹ । **ಸಃ ಅಯಂ**—ಈ ವತ್ಸವೂ ಕೂಡ । **ಶಿಂಕ್ತೇ**— (ತೃಪ್ತಿಯನ್ನು ಸೂಚಿಸುವ) ಅವ್ಯಕ್ತವಾದ ಶಬ್ದವನ್ನು ಮಾಡುತ್ತದೆ । **ಧ್ವಸನಾವಧಿ**—ಕೊಟ್ಟಿಗೆಯಲ್ಲಿ ತನ್ನ ಸ್ಥಾನವನ್ನು । **ಶ್ರಿತಾ**—ಆಶ್ರಯಿಸಿ ನಿಂತುಕೊಂಡಿ

ರುವ ಈ ಧೇನುವು । **ಮಾಯುಂ**—(ಪ್ರತಿ) ಶಬ್ದವನ್ನು । **ಮಿಮಾತಿ**—ಮಾಡುತ್ತದೆ । **ಸಾ**—ಆ ಧೇನುವು । **ಚಿತ್ತಿಭಿಃ**—ತನ್ನ ಸಹಜವಾದ ವಾತ್ಸಲ್ಯಜ್ಞಾನದಿಂದ । **ಮರ್ತ್ಯಂ** – ಮಾನವನನ್ನು । **ನಿ ಚಕಾರ ಹಿ**—ಕೆಳಗೆ ಮಾಡುತ್ತದೆ (ಮಾನವನಿಗಿಂತಲೂ ಅತಿಶಯವಾದ ಪ್ರೇಮವನ್ನು ಪ್ರಕಟಿಸಿತು) । **ವಿದ್ಯುದ್ಭವಂತೀ**—ಅತಿಶಯವಾಗಿ ಪ್ರಕಾಶಿಸುತ್ತಾ । **ವವ್ರಿಂ**—ತನ್ನ ರೂಪವನ್ನು । **ಪ್ರತ್ಯೌಹತ**—ಪ್ರಕಟಿಸುತ್ತದೆ ।

॥ ಭಾವಾರ್ಥಃ ॥

ಮಾತೆಯು ಬಂದೊಡನೇ ಕರುವು ಅದನ್ನು ಸುತ್ತುಕಟ್ಟಿ ಕೊಂಡು ತನ್ನ ತೃಪ್ತಿಯನ್ನು ಸೂಚಿಸುವ ಶಬ್ದವನ್ನು ಮಾಡುತ್ತದೆ. ಕೊಟ್ಟಿಗೆಯಲ್ಲಿ ನಿಂತು ತನ್ನ ಸ್ಥಾನವನ್ನು ಆಕ್ರಮಿಸಿದ ಧೇನುವೂ ಸಹ ಇದಕ್ಕೆ ಪ್ರತಿಯಾಗಿ ಶಬ್ದವನ್ನು ಮಾಡುತ್ತದೆ. ಆ ಧೇನುವು ತನ್ನ ಸಹಜವಾದ ಪ್ರೇಮವನ್ನು ಪ್ರಕಟಿಸವಾಗ ಮಾನವನಿಗಿಂತಲೂ ಉತ್ಕೃಷ್ಟವಾದ ವಾತ್ಸಲ್ಯ ಜ್ಞಾನವನ್ನು ತೋರಿಸುತ್ತದೆ. ಮತ್ತು ಅತಿಶಯವಾಗಿ ಪ್ರಕಾಶಿಸುವ ತನ್ನ ರೂಪವನ್ನು ಪ್ರಕಟಿಸುತ್ತದೆ.

## English Translation

He, too, bellows, and the cow utters inarticulate sounds, as, encompassed by him, she repairs to her stall; (influenced) by her instincts, she acts like a human being, and, radiant, manifests her nature.

### ವಿಶೇಷವಿಷಯಗಳು

ಮಾನವರ ಪ್ರೇಮಕ್ಕಿಂತಲೂ ಅತಿಶಯವಾದ ಪ್ರೇಮವನ್ನು ಪ್ರಕಟಿಸತಕ್ಕ ಧೇನುವಿನ ಸಹಜವಾದ ವಾತ್ಸಲ್ಯದ ಸ್ವರೂಪವನ್ನೂ, ಅಂತಹ ವಾತ್ಸಲ್ಯಪೂರಿತವಾದ ಅದರ ಪ್ರಕಾಶಮಾನವಾದುದೂ ಆಕರ್ಷಕವಾದುದೂ ಆದ ರೂಪವನ್ನೂ ಈ ಋಕ್ಕಿನಲ್ಲಿ ವರ್ಣಿಸಿದೆ. ಅದನ್ನೇ **ವವ್ರಿಮೌಹತ ರೂಪಂ ಪ್ರಕಾಶಯತಿ** ಎಂಬ ವಿವರಣೆಯಿಂದ ತಿಳಿಸಿದೆ. ಆದರೆ ಇಲ್ಲಿ **ಗೌಃ** ಎಂಬ ಪದಕ್ಕೆ ಅರ್ಥಾಂತರಗಳನ್ನು ಹೇಳಿರುವುದರಿಂದ ವವ್ರಿಯೆಂದರೆ ಯಾವ ರೀತಿಯಾದ ವವ್ರಿಯೆಂದು ತಿಳಿಯಬೇಕು. ನಿರುಕ್ತಕಾರರು ಈ ಪದದ ನಿರ್ವಚನವನ್ನು ತಿಳಿಸುತ್ತಾ

**ವವ್ರಿರಿತಿ ರೂಪನಾಮ ; ವೃಣೋತೀತಿ ಸತಃ ।**

(ನಿ. ೨-೯)

ಆಚ್ಛಾದನೆ ಮಾಡು ಎಂಬರ್ಥವನ್ನು ಕೊಡುವ ವೃಧಾತುವಿನಿಂದ ಈ ಪದವು ನಿಷ್ಪನ್ನವಾಗಿದೆ. ಆದುದರಿಂದಲೇ ರೂಪನಾಮಗಳಲ್ಲಿಯೂ ಪಠಿತವಾಗಿದೆಯೆಂದು ಪ್ರಕೃತವಾದ ಋಕ್ಕನ್ನೇ ಉದಹರಿಸಿ ಈ ಪದದ ಅರ್ಥವನ್ನು ತಿಳಿಸಿದ್ದಾರೆ. ಇದೇ ಅಲ್ಲದೇ, ಪ್ರಕೃತವಾದ ಋಕ್ಕಿನ ಗಹನವಾದ ಅರ್ಥವನ್ನೂ ಚರ್ಚಿಸಿ ಇದರ ತಾತ್ಪರ್ಯವನ್ನು ಹೇಳುವಾಗ ಮತಾಂತರಗಳನ್ನೂ ತಿಳಿಸಿದ್ದಾರೆ.

ನಿರುಕ್ತಕಾರರು ಈ ಋಕ್ಕಿಗೆ ಅರ್ಥವನ್ನು ವಿವರಿಸುವಾಗ ಮೊದಲು ಒಂದು ಕಥಾಸನ್ನಿವೇಶವನ್ನು ತಿಳಿಸಿ ಅನಂತರ ಋಕ್ಕನ್ನು ವಿವರಿಸಿದ್ದಾರೆ. ಅದೇನೆಂದರೆ,

**ಶಾಕಪೂಣಿಃ ಸಂಕಲ್ಪಯಾಂ ಚಕ್ರೇ—" ಸರ್ವಾ ದೇವತಾ ಜಾನಾಮೀ"ತಿ । ತಸ್ಯೈ ದೇವತೋ-ಭಯಲಿಂಗಾ ಪ್ರಾದುರ್ಬಭೂವ । ತಾಂ ನ ಜಜ್ಞೇ; ತಾಂ ಪಪ್ರಚ್ಛ ವಿವಿದಿಷಾಣಿ ತ್ವೇತಿ । ಸಾಸ್ಮಾ ಏತಾಮೃಚಮಾದಿದೇಶೈಷಾ ಮದ್ದೇವತೇತಿ ।**

(ನಿ. ೨-೮)

ಶಾಕಪೂಣಿಯು " ನಾನು ಸಕಲ ದೇವತೆಗಳ ಸ್ವರೂಪವನ್ನೂ ತಿಳಿಯುವೆನು " ಎಂದು ಸಂಕಲ್ಪಮಾಡಿದನು. ಆಗ ಲಿಂಗದ್ವಯದಿಂದ ಯುಕ್ತವಾದ ಒಂದು ದೇವತೆಯು ಅವನ ಮುಂದೆ ಪ್ರಾದುರ್ಭೂತವಾಯಿತು. ಅವನಿಗೆ ಆ ದೇವತೆಯ ನಿಜವಾದ ಸ್ವರೂಪವು ತಿಳಿಯಲಿಲ್ಲ. " ನನಗೆ ನಿನ್ನ ಸ್ವರೂಪವನ್ನು ಸರಿಯಾಗಿ ತಿಳಿಸು " ಎಂದು ಪ್ರಾರ್ಥಿಸಿದಾಗ ಆ ದೇವತೆಯು ಪ್ರಕೃತವಾದ **" ಅಯಂ ಸ ಶಿಂಕ್ತೇ "** ಎಂಬ ಋಕ್ಕನ್ನು ನಿರ್ದೇಶಿಸಿ ಈ ಋಕ್ಕಿನಲ್ಲಿ ಯಾವ ದೇವತೆಯನ್ನು ಉದ್ದೇಶಿಸಿ ಸ್ತುತಿಸಿದೆಯೋ ಅದೇ ದೇವತೆಯೆಂದು ತಿಳಿಯಬೇಕೆಂದೂ, ಈ ಮಂತ್ರವು ತನ್ನನ್ನೇ ಉದ್ದೇಶಿಸಿರುವುದಾಗಿಯೂ ಅವನಿಗೆ ಹೇಳಿತು. ಆದರೆ ಋಕ್ಕಿನ ಅರ್ಥವನ್ನು ತಿಳಿಯುವುದು ಸುಲಭವಲ್ಲವಾದುದರಿಂದಲೂ ಆದುದರಿಂದಲೇ ಆ ದೇವತೆಯು ನಿಜವಾಗಿಯೂ ಯಾರು ಎಂದು ತಿಳಿಯುವುದು ಕಷ್ಟವಾದುದರಿಂದಲೂ ನಿರುಕ್ತಕಾರರು ಇದರ ಅರ್ಥವನ್ನು ವಿವರಿಸಿದ್ದಾರೆ.

**ಅಯಂ ಸ ಶಬ್ದಾಯತೇ ಯೇನ ಗೌರಭಿಪ್ರವೃತ್ತಾ ಮಿಮಾತಿ ಮಾಯುಂ ಶಬ್ದಂ ಕರೋತಿ ಮಾಯುಮಿವಾದಿತ್ಯಮಿತಿ ವಾ । ವಾಗೇಷಾ ಮಾಧ್ಯಮಿಕಾ ಧ್ವಸನೇ ಮೇಘೇಽಧಿಶ್ರಿತಾ । ಸಾ ಚಿತ್ತಿಭಿಃ ಕರ್ಮಭಿರ್ನೀಚೈರ್ನಿಕರೋತಿ ಮರ್ತ್ಯಂ ವಿದ್ಯುದ್ಭವಂತೀ ಪ್ರತ್ಯೂಹತೇ ವವ್ರಿಂ । ವವ್ರಿರಿತಿ ರೂಪನಾಮ ವೃಣೋತೀತಿ ಸತಃ । ವರ್ಷೇಣ ಪ್ರಚ್ಛಾದ್ಯ ಪೃಥಿವೀಂ ತತ್ಪುನರಾದತ್ತೇ ।**

(ನಿ. ೨-೯)

ಇಲ್ಲಿ ಗೌಃ ಎಂದರೆ **ಮಾಧ್ಯಮಿಕಾ ವಾಕ್ಕೆಂದೂ, ಮಾಯುವೆಂದರೆ** ಆದಿತ್ಯನೆಂದೂ ಅರ್ಥವಾಗುತ್ತದೆ. ಮೇಘದ ಸ್ತನಿತದಿಂದ ಶಬ್ದವಾದೊಡನೆಯೇ ಅದರಿಂದ ಆವೃತವಾದ ಮಾಧ್ಯಮಿಕಾ ವಾಕ್ಕು ತಾನೂ ಸಹ ಆ ಶಬ್ದವನ್ನು ಅನುಕರಿಸುತ್ತದೆ ಎಂದಾಗಲಿ ಅಥವಾ ತಾನೂ ಸಹ ಆದಿತ್ಯನಂತೆ ತನ್ನ ಶರೀರವನ್ನು ಪ್ರಕಾಶಮಾನವಾಗಿ ನಿರ್ಮಿಸಿಕೊಳ್ಳುತ್ತಾಳೆ ಎಂದಾಗಲಿ ಅರ್ಥವಾಗುತ್ತದೆ. **ಮಾಯುರಾದಿತ್ಯೋ ಭವತಿ ಸರ್ವ ಭೂತನಿ-ರ್ಮಾತಾ**—ಸಕಲ ಭೂತಗಳ ನಿರ್ಮಾತೃವಾದುದರಿಂದ ಆದಿತ್ಯನಿಗೆ **ಮಾಯುವೆಂದು** ಹೆಸರೆಂದು ದುರ್ಗಾಚಾರ್ಯರು ವಿವರಿಸಿದ್ದಾರೆ. ಗರ್ಜನೆ ಧ್ವನಿಯನ್ನುಂಟುಮಾಡುತ್ತಿರುವ ಮೇಘವನ್ನಾಶ್ರಯಿಸಿ ತನ್ನ ಶಬ್ದರೂಪವಾದ ಕರ್ಮಗಳಿಂದ ಮಾನವರನ್ನು ಗದರಿಸುತ್ತಲೂ ಅವರು ನಮ್ರರಾಗಿರುವಂತೆ ಮಾಡುತ್ತಲೂ ಸಹ ತಾನು ವಿದ್ಯುದ್ರೂಪವನ್ನು ಹೊಂದಿ ತನ್ನ ಸ್ವರೂಪವನ್ನು ಮರೆಸಿಕೊಳ್ಳುತ್ತಾಳೆ. **ವವ್ರಿಮೌಹತ**—ಎಂದರೆ ತನ್ನ ರೂಪವನ್ನು ಪುನಃ ಪಡೆದಳು ಎಂದರೆ ಪೃಥ್ವಿಯನ್ನು ಮೊದಲು ವೃಷ್ಟಿಯಿಂದ ಆಚ್ಛಾದಿತವಾಗುವಂತೆ ಮಾಡಿ ಅನಂತರ ಪುನಃ ಅದೇ ಉದಕವನ್ನು ರಶ್ಮ್ಯಾದಿಗಳಿಂದ ತನ್ನಲ್ಲಿಗೇ ಹಿಂದಕ್ಕೆ ಪಡೆಯುತ್ತಾಳೆ ಎಂದರ್ಥ

**ತತ್ಪುನರಾದತ್ತೇ**—ಎಂಬುದನ್ನು ದುರ್ಗಾಚಾರ್ಯರು ವಿವರಿಸುತ್ತಾ, **ವಿದ್ಯುದಾತ್ಮನಾ ಮೇಘಸ್ಥಾನೇ ಸ್ಥಿತ್ವಾ ವರ್ಷತಿ । ಆದಿತ್ಯಾತ್ಮನಾ ದ್ಯುಸ್ಥಾನೇ ಸ್ಥಿತ್ವಾ ಪುನರಾದತ್ತ ಇತ್ಯಭಿಪ್ರಾಯಃ** । ವಿದ್ಯುದ್ರೂಪದಲ್ಲಿ

ಮೇಘದ ಸ್ಥಾನದಲ್ಲಿದ್ದು ಮಳೆಯನ್ನು ಸುರಿಸಿ ಅನಂತರ ದ್ಯುಲೋಕದಲ್ಲಿ ಆದಿತ್ಯರೂಪದಲ್ಲಿದ್ದು ಅದೇ ಉದಕವನ್ನು ಪುನಃ ಹೀರಿಕೊಳ್ಳುತ್ತಾಳೆ ಎಂದರ್ಥವೆಂದು ತಿಳಿಸಿದ್ದಾರೆ.

ಸಾಯಣರು ಈ ಸಂದರ್ಭದಲ್ಲಿ ಆ ಶಂಕಾಸಮಾಧಾನಗಳನ್ನು ತೋರಿಸಿ ಬಹಳ ವಿಶದವಾಗಿ ವಿವರಿಸಿದ್ದಾರೆ. **ಶಾಕಪೂಣಿರ್ನಾಮ ನಿರುಕ್ತಾಚಾರ್ಯಃ ಸಕಲಮಂತ್ರದೇವತಾ ಜಾನಾಮೀತಿ ಅಭಿಮಾನಿತವಾನ್ ।** ಶಾಕಪೂಣಿಯೆಂಬ ನಿರುಕ್ತಾಚಾರ್ಯರು ಸಕಲಮಂತ್ರಗಳ ದೇವತೆಯ ಸ್ವರೂಪವನ್ನೂ ತಾನು ಪೂರ್ಣವಾಗಿ ತಿಳಿಯುವನೆಂಬ ಅಭಿಮಾನವನ್ನು ತೋರಿಸಿದರೆಂದೂ ಆಗ ಆ ದೇವತೆಯು ತನ್ನ ಉಭಯಲಿಂಗಾತ್ಮಕವಾದ ಸ್ವರೂಪವನ್ನು ಹೊಂದಿ ಪ್ರಾದುರ್ಭೂತವಾಯಿತೆಂದೂ, ಆಗ ಅವರಿಗೆ ಅದರ ಸ್ವರೂಪವು ತಿಳಿಯದೇ ತನಗೆ ಹೇಳಬೇಕೆಂದು ನಮ್ರತೆಯಿಂದ ಪ್ರಾರ್ಥಿಸಲಾಗಿ ಅವಳು ಪ್ರಕೃತವಾದ ಋಕ್ಕಿನಲ್ಲಿ ನಿರ್ದೇಶಿಸಿರುವ ದೇವತೆಯೆಂದೇ ತಿಳಿ ಎಂದು ಹೇಳಿದಳೆಂದು ಮೇಲೆ ನಿರುಕ್ತಕಾರರು ಹೇಳಿರುವಂತೆಯೇ ತಿಳಿಸಿ ಅನಂತರ ಪ್ರಕೃತವಾದ ಋಕ್ಕಿನ ಅರ್ಥವನ್ನು ವಿವರಿಸುವಾಗ ಸಂಭವಿಸ ತಕ್ಕ ಆಕ್ಷೇಪಗಳನ್ನು ಒಂದೊಂದಾಗಿ ತಿಳಿಸಿ. ತಮ್ಮ ಸಮಾಧಾನಗಳನ್ನೂ ಹೇಳಿದ್ದಾರೆ.

**ದುರ್ಜ್ಞೇಯಸ್ಯ ತತ್ತ್ವಸ್ಯ ಸ್ವರೂಪಮಸೌ ಜಾನಾತಿ ಕಿಲ ಏನಂ ವ್ಯಾಮೋಹಯಾಮೀತಿ ಮನಸಿ ಕೃತ್ವಾ ಸಂದಿಗ್ಧೋಭಯಲಿಂಗದೇವತಾ ಪ್ರಾದುರಾಸೀತ್ ॥** ಆತ್ಮಾಭಿಮಾನದಿಂದ ಕೂಡಿ ದುರ್ಜ್ಞೇಯವಾದ ತತ್ತ್ವವನ್ನು ತಿಳಿಯುವೆನೆಂದು ಪ್ರೌಢಿಮೆಯನ್ನು ತೋರಿದ ಶಾಕಪೂಣಿಯನ್ನು ವ್ಯಾಮೋಹಿತನಾಗುವಂತೆ ಮಾಡುತ್ತೇನೆಂದು ಉದ್ದೇಶಿಸಿ ಸಂದಿಗ್ಧವಾದುದೂ ಉಭಯಲಿಂಗಾತ್ಮಕವಾದುದೂ ಆದ ದೇವತೆಯು ಪ್ರಾದುರ್ಭೂತವಾಯಿತು ಎನ್ನುವಾಗ ಒಂದು ಆಕ್ಷೇಪವು ಬರುತ್ತದೆ.

**ಕಥಮತ್ರ ಉಭಯಲಿಂಗತ್ವಂ ; ವಸ್ತುತಃ ಉಭಯಲಿಂಗತ್ವೇ ಕಥಂ ದೈವತೈಕ್ಯಂ ।** ಇಲ್ಲಿ ಉಭಯಲಿಂಗತ್ವವು ಹೇಗೆ ? ಒಂದು ವೇಳೆ ಲಿಂಗದ್ವಯಾತ್ಮಕವಾದ ಆಕಾರವಿದ್ದರೆ ಆಗ ಒಂದೇದೇವತೆಯೆಂದು ಹೇಳುವುದು ಹೇಗೆ ? ಎಂಬ ಆಶಂಕೆಯು ಇಲ್ಲಿ ಸಹಜವಾಗಿರುತ್ತದೆ ಎಂದು ತಿಳಿಸಿ **ಉಚ್ಯತೇ** ಎಂದು ಅದಕ್ಕೆ ಸಮಾಧಾನವನ್ನು ಈ ರೀತಿ ಹೇಳಿದೆ. ಇಲ್ಲಿ ಉಭಯಲಿಂಗತ್ವವು ಹೇಗೆಂದರೆ ;—

**ಅತ್ರ ಉಭಯಲಿಂಗತ್ವಂ ಉಭಯಥಾ ಸಂಭವತಿ । ಸ್ತ್ರೀಪುಂಲಿಂಗದ್ವಯೇನ ಮಧ್ಯಮೋತ್ತಮಲಿಂಗದ್ವಯೇನ ಚ ।** ಇಲ್ಲಿ ಉಭಯಲಿಂಗತ್ವವು ಎರಡುವಿಧವಾಗಿರಬಹುದು. ಮೊದಲನೆಯದಾಗಿ ಸ್ತ್ರೀಲಿಂಗ ಮತ್ತು ಪುಲ್ಲಿಂಗ ಇವುಗಳ ಸಂಯೋಗವಿದ್ದಿರಬಹುದು ಅಥವಾ ಎರಡನೆಯದಾಗಿ ಮಧ್ಯಮೋತ್ತಮಲಿಂಗದ್ವಯವಿರಬಹುದು ಎಂದರೆ ಸ್ಥಾನವನ್ನು ಆಕ್ರಮಿಸುವುದರಲ್ಲಿ ಅಪಕರ್ಷ ಮತ್ತು ಉತ್ಕರ್ಷಗಳ ತಾರತಮ್ಯವಿರಬಹುದು. ಅವೂ ಲಿಂಗದ್ವಯವಾಯಿತು ಎಂದು ಹೇಳಿ ಈ ವಿವರಣೆಯೂ ಅಷ್ಟುವಿಶದವಾಗಿಲ್ಲವೆಂದು ತಿಳಿದು ಉದಾರಣೆಗಳನ್ನು ತೋರಿಸಿ ಈ ಅಂಶವನ್ನು ಇನ್ನೂ ಪರಿಷ್ಕರಿಸಿದೆ.

' **ಅಯಂ ಸ ಯೇನ** ' ಎಂಬ ಪುಲ್ಲಿಂಗವಾಚಕವಾದ ಶಬ್ದದಿಂದ **ಮೇಘವು ಪ್ರತೀತವಾಗುತ್ತದೆ.** ' **ಅಧಿಶ್ರಿತಾ ಸಾ** ' ಎಂಬ ವರ್ಣನೆಯಿಂದ ಸ್ತ್ರೀಲಿಂಗಸೂಚಕವಾದ **ಮಾಧ್ಯಮಿಕಾ ವಾಕ್** ಎಂಬ ದೇವತೆಯು ನಿರ್ದಿಷ್ಟವಾಗಿದೆ. ಆದುದರಿಂದ ಉಭಯಲಿಂಗಾತ್ಮಕವಾಯಿತು. ಎರಡನೆಯದಾಗಿ ;—**ತಥಾ ವಿದ್ಯುದ್ವಂಶೀತ್ಯೆಂತಂ ಮಧ್ಯಮಲಿಂಗಂ ತತ್ರ ಮೇಘಸ್ತನಿತಯೋರ್ಮಾಧ್ಯಮಿಕಯೋಃ ಪ್ರತೀತೇಃ ।** ಮಧ್ಯಸ್ಥಾನವಾದ ಅಂತರಿಕ್ಷ

ವನ್ನಾಶ್ರಯಿಸಿರುವ ಮೇಘಸ್ಥವಾದ ವಿದ್ಯುದ್ರೂಪದಿಂದ ಪ್ರಕಾಶಿಸುತ್ತಾ ಎಂದು ಹೇಳುವಾಗ ಮಧ್ಯಮಲಿಂಗವನ್ನು ಸೂಚಿಸುತ್ತದೆ. ಮೇಘದ ಶಬ್ದವೂ ಸಹ ಇದೇ ಅಂಶವನ್ನು ಸ್ಥಿರಪಡಿಸುತ್ತದೆ. ಹಾಗೆಯೇ **'ವವ್ರಿಮೌಹತ'** ಎಂಬುದರಿಂದ ವೃಷ್ಟಿಯಿಂದ ಪೃಥ್ವಿಯನ್ನು ಆಚ್ಛಾದಿತವಾಗುವಂತೆ ಮಾಡಿ ಅನಂತರ ಪುನಃ ಅದನ್ನು ಹಿಂದಕ್ಕೆ ಹೀರುತ್ತಾನೆ ಎನ್ನುವಾಗ ಇದು ಆದಿತ್ಯವ್ಯಾಪಾರವಾಯಿತು. **ಸ ಚ ಆದಿತ್ಯವ್ಯಾಪಾರ ಇತ್ಯುತ್ತಮಲಿಂಗತ್ವಂ ।** ಇದು ಆದಿತ್ಯವ್ಯಾಪಾರವಾದುದರಿಂದ ಉತ್ತಮಲಿಂಗವನ್ನು ಸೂಚಿಸುತ್ತದೆ. ಆದುದರಿಂದ ಸ್ತ್ರೀಪುಲ್ಲಿಂಗದ್ವಯದ ದೃಷ್ಟಿಯಿಂದ ನೋಡಿದರೂ ಉಭಯಲಿಂಗಾತ್ಮಕವಾಗಿದೆ ಅಥವಾ ಮಧ್ಯಮೋತ್ತಮರೂಪವಾದ ಲಿಂಗದ್ವಯದ ದೃಷ್ಟಿಯಿಂದ ನೋಡಿದರೂ ಸಹ ಇಲ್ಲಿನ ದೇವತೆಯು ಉಭಯಲಿಂಗಾತ್ಮಕವಾಗಿದೆ. ಯಾವಾಗ ಉಭಯಲಿಂಗತ್ವವು ಸಿದ್ಧವಾಯಿತೋ ಆಗ **ಉಭಯಲಿಂಗತ್ವಪ್ರತೀತೇಃ ಉಭೇ ಅಪಿ ದೇವತೇ 'ಯಲ್ಲಿಂಗಂ ಸಾ ದೇವತಾ'** ಯಾವ ಲಿಂಗವಿದೆಯೋ ಆ ಲಿಂಗದಿಂದ ಸೂಚಿತವಾಗುವ ದೇವತೆಯು ಇತರ ದೇವತೆಗಿಂತಲೂ ಬೇರೆಯಾದುದು ಎಂದು ನಿಯಮವಿರುವಂತೆ ಇಲ್ಲಿ ಲಿಂಗದ್ವಯವಿರುವುದರಿಂದ **ದೇವತಾದ್ವಯವಾಯಿತು. ಅತಃ ಕಥ ಏಕದೇವತಾಸಿದ್ಧಿಃ**—ಆದುದರಿಂದ ಇಲ್ಲಿ ಏಕದೇವತಾಸಿದ್ಧಿಯು ಹೇಗೆ? ಪ್ರಕೃತವಾದ ಋಕ್ಕಿನಲ್ಲಿ ನಿರ್ದಿಷ್ಟಗಿರುವುದು ಒಂದೇ ದೇವತೆಯೆಂದು ಹೇಳುವುದು ಹೇಗೆ? ಎಂಬ ಆಕ್ಷೇಪವು ನ್ಯಾಯವಾಗಿದೆ ಎಂದು ತಿಳಿಸಿ ಅನಂತರ ಆ ಆಕ್ಷೇಪಕ್ಕೂ ಸಮಾಧಾನವನ್ನು ಹೇಳಿ ಪ್ರಕೃತವಾದ ಋಕ್ಕಿನಲ್ಲಿ ಏಕದೇವತಾತ್ವವನ್ನೇ ನಿರ್ದೇಶಿಸಿದೆಯೆಂದು ಸಮರ್ಥಿಸುತ್ತಾರೆ ಅದು ಹೇಗೆಂದರೆ ;—

**'ಅಯಂ ಸ ಯೇನ' ಇತ್ಯೇತೇಷಾಂ ವ್ಯತ್ಯಯಾಶ್ರಯಣೇನ ಸರ್ವದೇವತಾನಾಂ ಅಧಿಷ್ಠಾತ್ರಿಕಾಯಾಃ ಏಕತ್ವಾಶ್ರಯಣೇನ ವಾ ಸರ್ವಫಲದಾತೃತ್ವೇನ ಏಕತ್ವಾಶ್ರಯಣೇನ ವಾ ದೇವತೈಕ್ಯೋಪಪತ್ತೇಃ ।** ಇಲ್ಲಿ ವಿದ್ಯುತ್, ಆದಿತ್ಯ, ಮೇಘ ಇತ್ಯಾದ್ಯಾಕಾರಗಳಿಂದ ಬೇರೆ ಬೇರೆಯಾದ ರೂಪಗಳಿದ್ದರೂ ಸಹ ಎಲ್ಲಾ ರೂಪಗಳಿಗೂ ಆಧಾರವು ಒಂದೇ ದೇವತೆಯು ಮತ್ತು ಎಲ್ಲಾ ರೂಪಗಳಿಂದಲೂ ಫಲವನ್ನು ಕೊಡತಕ್ಕದ್ದೂ ಸಹ ಒಂದೇ ದೇವತೆಯು. ಇಲ್ಲಿ ವ್ಯಾವಹಾರಿಕವಾದ ಸಂದರ್ಭಗಳಿಂದ ರೂಪಗಳನ್ನು ಬೇರೆ ಬೇರೆಯಾಗಿ ಹೊಂದಿ ಲಿಂಗವ್ಯತ್ಯಾಸವನ್ನು ಸೂಚಿಸುತ್ತಿದ್ದರೂ ಸಹ **"ಏಕೈವ ವಾ ಮಹಾನಾತ್ಮಾ ದೇವತಾ"** ಎಲ್ಲಕ್ಕೂ ಆತ್ಮಭೂತವಾದುದು ಒಂದೇ ದೇವತೆಯು ಎಂಬ ವಾಕ್ಯದಲ್ಲಿ ಹೇಳಿರುವಂತೆ ಇಲ್ಲಿಯೂ ಸಹ ಎಲ್ಲಾ ರೂಪಗಳಲ್ಲಿರುವ ದೇವತಾವಿಶೇಷಗಳಿಗೂ ಮೂಲದೇವತೆಯು ಒಂದೇ ಅಧಿಷ್ಠಾನವು. ಆದುದರಿಂದ ಇಲ್ಲಿ ಲಿಂಗಭೇದವು ದೇವತಾಭೇದವನ್ನು ತೋರಿಸುವುದಿಲ್ಲ ಎಂದು ಸಮಾಧಾನವನ್ನು ತಿಳಿಸಿದೆ. ಅದು ಹೇಗೆಂದರೆ ;—

**ಅಯಂ ಸ ಶಿಂಕ್ತೇ** ಎಂದರೆ, ಈ ಮಾಧ್ಯಮಿಕವಾಕ್ಕಿಗೆ ಅಧಿಷ್ಠಾತ್ರಿಯಾದ ದೇವತೆಯು ಅವ್ಯಕ್ತವಾದ ಧ್ವನಿಯನ್ನುಂಟುಮಾಡುತ್ತಾಳೆಂದರ್ಥ. **ಯೇನ ಗೌರಭೀವೃತಾ । ಗೌರಿತಿ ವಾಙ್ನಾಮ । ಮಾಧ್ಯಮಿಕಾ ವಾಕ್ ಯಯಾ ಅಭಿವೃತಾ ಅಭಿತೋ ವ್ಯಾಪ್ತಾ ಅಧಿಷ್ಠಿತಾ ।** ಇಲ್ಲಿ **ಯೇನ** ಎನ್ನುವುದಕ್ಕೆ ಲಿಂಗವ್ಯತ್ಯಯವಾಗಿ **ಯಯಾ** ಎಂದಾಗುತ್ತದೆ. ಎಂದರೆ ಯಾವ ಈ ಅಧಿಷ್ಠಾತ್ರೀರೂಪವಾದ ದೇವತೆಯಿಂದ ಮಾಧ್ಯಮಿಕ ವಾಕ್ಕು ಸುತ್ತುವರಿಯಲ್ಪಟ್ಟಿದೆಯೋ ಅಂತಹ **ಸಾ ಇಯಂ ಶಿಂಕ್ತೇ** ಎಂದರ್ಥ.

ಅಥವಾ,- **ಅಯಂ ಸ ಶಿಂಕ್ತೆ ಇತಿ ನೈವ ಮಾಧ್ಯಮಿಕಾ ವಾಕ್ ನಿರ್ದಿಶ್ಯತೇ ಅಪಿ ತು ಮೇಘಃ ।** ಇಲ್ಲಿ **ಅಯಂ** ಎಂದಿರುವುದರಿಂದ ಮಾಧ್ಯಮಿಕವಾಕ್ಕಲ್ಲ ; ಮೇಘವು ಧ್ವನಿಮಾಡುತ್ತದೆ ಎಂದೇ ಅರ್ಥವೆಂದು ಹೇಳಿವರೆ

ಅದೂ ಆಗಬಹುದು. ಅದು ಔಪಚಾರಿಕವಾದ ಮಾತಾಗುತ್ತದೆ. ಹೇಗೆಂದರೆ **ಮಂಚಾಃ ಕ್ರೋಶಂತಿ** ಎನ್ನುವಾಗ ಮಂಚಸ್ಥರಾದ ಪುರುಷರು ಕೂಗಿಕೊಳ್ಳುತ್ತಾರೆ ಎನ್ನುವುದರ ಬದಲು ಮಂಚಗಳೇ ಕೂಗಿಕೊಳ್ಳುತ್ತವೆ ಎಂದು ಹೇಳುವುದು ವಾಡಿಕೆಯಾಗಿದೆ. ಅದರಂತೆ ಇಲ್ಲಿಯೂ ಸಹ ಮೇಘಸ್ಥವಾದ ದೇವತೆಯು ಶಬ್ದವನ್ನು ಮಾಡುತ್ತದೆ ಎನ್ನುವುದಕ್ಕೆ ಬದಲಾಗಿ ಮೇಘವೇ ಶಬ್ದಮಾಡುತ್ತದೆ ಎಂದಿದೆ ಆದುದರಿಂದ ಇಲ್ಲಿ ತಾತ್ತ್ವಿಕವಾದ **ದೋಷವೇನೂ** ಇರುವುದಿಲ್ಲ ಎಂದು ರೂಪಭೇಧಗಳಿದ್ದರೂ ಆ ಎಲ್ಲಾ ರೂಪಗಳಲ್ಲಿಯೂ ಐಕಾತ್ಮ್ಯವನ್ನು ಪ್ರಕಾಶಪಡಿಸಿರುವ ಈ ದೇವತೆಯು ಉತ್ಪನ್ನಮಾಡುವ ಧ್ವನಿವಿಶೇಷವನ್ನು ಈ ರೀತಿ ವರ್ಣಿಸಿದೆ.

ಶಬ್ದನೇ **ಪ್ರಕಾರ ಏವೋಚ್ಯತೇ**-- ಈ ಶಬ್ದದ ಪ್ರಕಾರವು ಹೇಗೆಂದರೆ

**ಮಿಮಾತಿ ಮಾಯುಂ—ಸ್ತನಿತಲಕ್ಷಣಂ ಶಬ್ದಂ ಕರೋತಿ ।** ಗುಡುಗಿನ ರೂಪದ ಶಬ್ದವನ್ನು ಮಾಡುತ್ತದೆ. **ಅಥವಾ ಅಯಂ ಲುಪ್ತೋಪಮಾ । ಮಿನೋತಿ ಸ್ವತೇಜಃ ಸರ್ವತ್ರ ಪ್ರಕ್ಷಿಪತೀತಿ ಮಾಯುರಾದಿತ್ಯಃ । ತಮಿವ ಅತಿದೀಪ್ತಂ ಕರೋತೀತ್ಯರ್ಥಃ ।** ಅಥವಾ ಇಲ್ಲಿ ಲುಪ್ತೋಪಮೆಯನ್ನು ತೋರಿಸಿ ಅರ್ಥಮಾಡಬಹುದು ಹೇಗೆಂದರೆ ತನ್ನ ತೇಜಸ್ಸನ್ನು ಸರ್ವತ್ರ ಹರಡುವುದರಿಂದ ಆದಿತ್ಯನಿಗೆ **ಮಾಯುವೆಂದು** ಹೆಸರು. ಈ ದೇವತೆಯೂ ಸಹ **ಮಾಯುವಿನಂತೆ** ತನ್ನ ರೂಪವನ್ನು ಅತ್ಯಂತ ಪ್ರಕಾಶಮಾನವಾದುದನ್ನಾಗಿ ಮಾಡುತ್ತಾಳೆಂದರ್ಥ. ಅಥವಾ ತನ್ನ ರೂಪವನ್ನು ಆದಿತ್ಯಸದೃಶವಾದುದನ್ನಾಗಿಯೇ ಮಾಡುತ್ತಾಳೆಂದೂ ಅರ್ಥವಾಗಬಹುದು. **ಕುತ್ರ ಸ್ಥಿತಾ** ಎಂದು ಪ್ರಶ್ನಿಸಿ,

ಧ್ವಸನಾವಧಿ **ಶ್ರಿತಾ ।** ಧ್ವಂಸನೇ **ಮೇಘೇಽಧಿಶ್ರಿತಾ ।** ಮೇಘದಲ್ಲಿ ತನ್ನ ಸ್ಥಾನವನ್ನಾಕ್ರಮಿಸಿದವಳಾಗಿ ಎಂದು ಅಧಿಷ್ಠಾನವನ್ನು ತೋರಿಸಿದೆ. ಅಂತಹ ದೇವತೆಯು **ಚಿತ್ತಿಭಿಃ ಮರ್ತ್ಯಂ ನಿ ಚಕಾರ** ಎಂದಿದೆ. **ಚಿತ್ತಿಭಿಃ** ಕರ್ಮನಾಮೈತತ್ **ಸ್ವಕರ್ಮಭಿಃ ವೃಷ್ಟಿರೂಪೈಃ ಮರ್ತ್ಯಂ ಮರಣಧರ್ಮಾಣಂ ಸ್ಥಾವರಜಂಗಮರೂಪಂ ಕೃತ್ಸ್ನಂ ಜಗತ್ ನಿ ಹಿ ಚಕಾರ** ನೀಚೈಃ **ಕರೋತಿ । ಮನುಷ್ಯಾನ್ ಪ್ರಣತಾನ್ ಕರೋತಿ । ಓಷಧ್ಯಾದಿಕಂ ಫಲೇನ ಅವನತಂ ಕರೋತಿ ।** ವೃಷ್ಟಿರೂಪವಾದ ತನ್ನ ಕರ್ಮಗಳಿಂದ [**ಚಿತ್ತಿಭಿಃ** ಎಂದರೆ ಕರ್ಮಗಳಿಂದ ಎಂದರ್ಥ] ಸ್ಥಾವರಜಂಗಮಾತ್ಮಕವಾದ ಸಮಸ್ತಜಗತ್ತನ್ನೂ ಸಹ ಅವನತವಾಗುವಂತೆ ಮಾಡುತ್ತಾಳೆ. ಮಾನವರನ್ನು ಪ್ರಣತರನ್ನಾಗಿಯೂ, ಓಷಧ್ಯಾದಿಗಳನ್ನು ಫಲಸಮೃದ್ಧಿಯಿಂದ ಅವನತವಾಗುವಂತೆಯೂ ಮಾಡುತ್ತಾಳೆಂದರ್ಥ. ಅಥವಾ, **ಚಿತ್ತಿಭಿಃ ದ್ಯೋತನಲಕ್ಷಣೈಃಕರ್ಮಭಿಃ ।** ದ್ಯೋತನರೂಪವಾದ ಕರ್ಮಗಳಿಂದ ಎಂದರ್ಥ. ಮೊದಲು ತನ್ನ ವಿದ್ಯುದ್ರೂಪವಾದ ಪ್ರಕಾಶದಿಂದ ಪ್ರಾದುರ್ಭೂತವಾಗಿ ಅನಂತರ **ಪುನಃ** ತನ್ನ ರಶ್ಮಿಗಳ ದ್ವಾರಾ ಉದಕವನ್ನು ಹೀರಿ ಧರಿಸಿ ತನ್ನ ಸಹಜವಾದ ರೂಪವನ್ನು ಧರಿಸುತ್ತಾಳೆಂದರ್ಥ. ಆದುದರಿಂದ ಇಲ್ಲಿ ಜ್ಯೋತೀರೂಪವಾದ ಒಂದೇ ದೇವತೆಯು ಮೂರು ವಿಧವಾದ ರೂಪಗಳನ್ನು ಧರಿಸುತ್ತಾಳೆಂದರ್ಥ. ಅದು ಹೇಗೆಂದರೆ ;—

**ಸ್ತೋಮೇನ ಹಿ ದಿವಿ ದೇವಾಸೋ ಅಗ್ನಿಮಜೀಜನಞ್ಛಕ್ತಿಭೀ ರೋದಸಿಪ್ರಾಂ ।**
**ತಮೂ ಅಕೃಣ್ವನ್‌ತ್ರೇಧಾ ಭುವೇ ಕಂ ಸ ಓಷಧೀಃ ಪಚತಿ ವಿಶ್ವರೂಪಾಃ ॥**

(ಋ ಸಂ. ೧೦-೮೮-೧೦)

ದೇವತೆಗಳು ತಮ್ಮ ಸ್ತೋಮರೂಪವಾದ ಸ್ತೋತ್ರದ ಸಹಾಯದಿಂದ ದ್ಯಾವಾಪೃಥಿವಿಗಳಲ್ಲೆಲ್ಲಾ ವ್ಯಾಪಕನಾದ ಅಗ್ನಿಯನ್ನು ಮೂರು ರೂಪಗಳಿಂದ ಪ್ರಕಾಶಿಸುವಂತೆ ಮಾಡಿದರು. ಒಂದೇ ದೇವತೆಯು ಪೃಥಿವಿಯಲ್ಲಿಯೂ, ಅಂತರಿಕ್ಷದ

ಲ್ಲಿಯೂ, ದ್ಯುಲೋಕದಲ್ಲಿಯೂ ಸಹ **ಪಾರ್ಥಿವಾಗ್ನಿ**, **ವಿದ್ಯುತ್** ಮತ್ತು **ಆದಿತ್ಯ** ಎಂಬ ಈ ಮೂರು ರೂಪಗಳಿಂದ ಪ್ರಕಾಶಿಸುತ್ತಾನೆ ಎಂದು ಹೇಳಿರುವಂತೆ ಅದೇ ಅಂಶವನ್ನು ಪ್ರಕೃತವಾದ ಋಕ್ಕಿನಲ್ಲಿಯೂ ಹೇಳಿದೆಯೆಂದು ಸಾಯಣರು ವಿವರಿಸಿದ್ದಾರೆ.

ಒಟ್ಟಿನಲ್ಲಿ ಈ ಋಕ್ಕಿಗೆ ಎರಡು ವಿಧವಾದ ವಿವರಣೆಯನ್ನು ಮಾಡಿದಂತಾಗಿದೆ ಲೌಕಿಕವಾದ ಅರ್ಥವನ್ನು ಹೇಳುವಾಗ ಲೌಕಿಕವಾದ ಧೇನು ಮತ್ತು ಅದರ ವತ್ಸವನ್ನು ನಿರ್ದೇಶಿಸಿ ಅವುಗಳ ಪರಸ್ಪರವಾದ ವಾತ್ಸಲ್ಯವನ್ನು ವರ್ಣಿಸಿ, ಅವುಗಳ ಪರಸ್ಪರಸೂಚಕವಾದ ಧ್ವನಿಪ್ರತಿಧ್ವನಿಗಳಿಂದ ಮಾನವರ ಪ್ರೇಮಕ್ಕಿಂತಲೂ ಅತಿಶಯವಾದ ವಾತ್ಸಲ್ಯವನ್ನು ತೋರಿಸುತ್ತದೆಯೆಂದು ವಿವರಿಸಿದೆ. ಎರಡನೆಯದಾಗಿ, ಋಕ್ಕಿನ ರಹಸ್ಯಾರ್ಥವನ್ನು ಹೇಳುವಾಗ **"ಅಯಂ ಸ ಶಿಂಕ್ತೇ ಯೇನ ಗೌರಭೀವೃತಾ"** ಇತ್ಯಾದಿವರ್ಣನೆಗಳಿಂದ ವ್ಯಕ್ತಿದ್ವಯವು ಸೂಚಿತವಾಗುವುದಿಲ್ಲವೆಂದೂ ಇಲ್ಲಿರುವ ವರ್ಣನೆಗಳೆಲ್ಲವೂ ಏಕದೇವತಾಪರವೆಂದೂ, ಆ ಒಂದೇ ದೇವತೆಯ ರೂಪಭೇದಗಳನ್ನು ಮಾತ್ರ ಸೂಚಿಸುತ್ತಿವೆಯೆಂದೂ ಆ ದೇವತೆಯ ಲೋಕರಕ್ಷಕವಾದ ಕರ್ಮಗಳಿಂದ ಮಾನವಾದಿಸಕಲಭೂತಗಳೂ ಪ್ರಣತವಾಗುತ್ತವೆಯೆಂದೂ, ತಿಳಿಸಿದೆ. ಈ ಸಂದರ್ಭದಲ್ಲಿ ಶಾಕಪೂಣಿಯವರ ಅನುಭವವಿಶೇಷಗಳನ್ನು ಆನುಷಂಗಿಕವಾಗಿ ತಿಳಿಸುವಾಗ ವಿಷಯವು ಎಷ್ಟೇ ಕಠಿನವಾಗಿದ್ದರೂ, ಸಾಯಣರು ತಮ್ಮ ಸಹಜವಾದುದೂ ಉತ್ತಮವಾದುದೂ ಆದ ಶೈಲಿಯಿಂದ ಪಾರಿಭಾಷಾತ್ಮಕವಾದ ವಿಮರ್ಶೆಯನ್ನೂ ಸಹ ಬಹಳ ವಿಶದವಾಗಿ ತಿಳಿಯಪಡಿಸಿದ್ದಾರೆ. ಋಕ್ಸಂಹಿತೆಯಲ್ಲಿ ನಿರ್ದಿಷ್ಟವಾಗಿರುವ ದೇವತೆಗಳಲ್ಲಿ ಆಕಾರಭೇದವಿದ್ದರೂ ತಾತ್ವಿಕವಾದ ಐಕ್ಯವಿದೆಯೆಂದು ತೋರಿಸುವ ಅನೇಕ ಸನ್ನಿವೇಶಗಳಲ್ಲಿ ಪ್ರಕೃತವಾದ ಋಕ್ಕಿನ ವರ್ಣನವೂ ಒಂದಾಗಿದೆ. ಆಧ್ಯಾತ್ಮಿಕವಾದ ದೃಷ್ಟಿಯಿಂದ ಈ ದೇವತಾಸ್ವರೂಪವೇನು ? ಜ್ಞಾನಸಾಧನವಾದ ಕರ್ಮಕ್ಕೂ, ಕರ್ಮಸಾಧ್ಯವಾದ ಈ ದೇವತಾಜ್ಞಾನಕ್ಕೂ ಯಾವ ಸಂಬಂಧವಿದೆ ? ಇಲ್ಲಿ ಯಾವವಿಧವಾದ ಕರ್ಮವು ನಿರ್ದೇಶಿಸಲ್ಪಟ್ಟಿದೆ ? ಆ ಕರ್ಮದ ವೈಶಿಷ್ಟ್ಯವೇನು ? ಎಂಬುದನ್ನು ತಿಳಿಯಬೇಕಾದುದು ಅತ್ಯವಶ್ಯವಾಗಿರುತ್ತದೆ.

**ಪ್ರವರ್ಗ್ಯೇ ಘರ್ಮಧುಗಾಹ್ವಾನಕಾಲೇ 'ಉಪ ಹ್ವಯೇ' ಇತ್ಯಾದಿಕೇ ದ್ವೇ ಋಚೌ। 'ಉಪ ಹ್ವಯೇ ಸುದುಘಾಂ ಧೇನುಮೇತಾಮಿತಿ ದ್ವೇ' (ಆಶ್ವ. ಶ್ರೌ. ೪-೭) ಇತಿ ಸೂತ್ರಿತತ್ವಾತ್। ಪ್ರವರ್ಗ್ಯೇಽಭಿಷ್ಟವೇ ದೋಹನಸಮಯೇ ವತ್ಸೇ ಮಾತುಃ ಸಕಾಶಾದಪನೀಯಮಾನೇ "ಗೌರಮೀಮೇತ್" ಇತ್ಯೇಷಾ। ಸೂತ್ರಿತಂ ಚ "ಗೌರಮೀಮೇದನು ವತ್ಸಂ ಮಿಷಂತಂ ನಮಸೇದುಪ ಸೀದತ" (ಅಶ್ವ. ಶ್ರೌ. ೪-೭) ಇತಿ ಚ।** ಎಂದರೆ ಇದೇ ಸೂಕ್ತದಲ್ಲಿ **'ಉಪಹ್ವಯೇ ಸುದುಘಾಂ'**; (೨೬) **'ಹಿಙ್ಕೃಣ್ವತೀ'** (೨೭) 'ಗೌರಮೀಮೇತ್' (೨೮) ಎಂಬ ಋಕ್ಕುಗಳು ಸೋಮಯಾಗಾಂಗವಾದ ಪ್ರವರ್ಗ್ಯಯಾಗದ ಕಾಲದಲ್ಲಿ ಪಠಿಸಬೇಕಾದುದು ಎಂದು ಆಶ್ವಲಾಯನರು ಈ ಋಕ್ಕುಗಳ ವಿನಿಯೋಗವನ್ನು ತಿಳಿಸಿದ್ದಾರೆ. ಆ ಪ್ರವರ್ಗ್ಯಯಾಗದ ಮಹತ್ತ್ವವೇನು ? ಅಲ್ಲಿ ಉಪಯುಕ್ತವಾಗಿರುವ ಈ ಮಂತ್ರಗಳ ತಾತ್ತ್ವಿಕವಾದ ಅರ್ಥವೇನು ? ಎಂಬುದನ್ನು ಮುಖ್ಯವಾಗಿ ತಿಳಿಯಬೇಕು.

### ಪ್ರವರ್ಗ್ಯಯಾಗದ ಸ್ವರೂಪ ಮತ್ತು ಮಹತ್ತ್ವ

**ಉಪ ಹ್ವಯೇ ಸುದುಘಾಂ ಧೇನುಮೇತಾಂ ಸುಹಸ್ತೋ ಗೋಧುಗುತ ದೋಹದೇನಾಂ।**
**ಶ್ರೇಷ್ಠಂ ಸವಂ ಸವಿತಾ ಸಾವಿಷನ್ನೋಽಭೀದ್ಧೋ ಘರ್ಮಸ್ತದು ಷು ಪ್ರ ವೋಚಂ ॥**

(ಋ. ಸಂ. ೧-೧೬೪-೨೬)

ಒಂಬ **ಋಕ್ಕಿನಲ್ಲಿ ಶ್ರೇಷ್ಠಂ ಸವಂ** ಎಂದರೆ ಪ್ರಶಸ್ಯವಾದ ಸೋಮಯಾಗವನ್ನು ಎಂದೂ, **ಘರ್ಮಃ** ಎಂಬುದಕ್ಕೆ ಪ್ರವರ್ಗ್ಯವೆಂದೂ ಅರ್ಥಮಾಡಿದೆ. ಮತ್ತು ಶ್ರೇಷ್ಠವಾದ ಸೋಮಯಾಗಕ್ಕಾಗಿ ಪ್ರವರ್ಗ್ಯವು ದೀಪ್ತವಾಗಲಿ ಎಂದು ಪ್ರವರ್ಗ್ಯವು ಸೋಮಯಾಗದ ಅಂಗವು ಮತ್ತು ತದಂಗವಾಗಿ ಆದರ ಪೂರ್ವಭಾವಿಯಾದ ಕರ್ಮವು ಎಂದು ತಿಳಿಸಿದೆ. ಶ್ರೌತಸೂತ್ರಗಳ ವಿವರಣೆಯಿಂದಲೂ ಪ್ರವರ್ಗ್ಯವು ಪ್ರಧಾನವಾದ ಮತ್ತು ಸ್ವತಂತ್ರವಾದ ಕರ್ಮವಲ್ಲವೆಂದೂ ತಿಳಿಯುತ್ತದೆ. ಆದರೆ ತೈತ್ತಿರೀಯಾರಣ್ಯಕದಲ್ಲಿಯೂ, ಶತಪಥಾದಿ ಬ್ರಾಹ್ಮಣಗಳಲ್ಲೂ ಉಕ್ತವಾಗಿರುವ ಈ ಪ್ರವರ್ಗ್ಯ ಯಾಗದ ಪ್ರಶಂಸೆಯನ್ನು ಪರಿಶೀಲಿಸಿದರೆ ದೇಹಕ್ಕೆಲ್ಲಾ ಶಿರಸ್ಸೇ ಪ್ರಧಾನವಾದ ಅಂಗವಾಗಿರುವಂತೆ ಕರ್ಮಗಳಿಗೆಲ್ಲಾ ಪ್ರವರ್ಗ್ಯವೇ ಶಿರೋರೂಪವಾದ ಕರ್ಮವೆಂದು ಸ್ತುತಿಸಿರುವುದು ವೇದ್ಯವಾಗುತ್ತದೆ. ಯಜ್ಞಕ್ಕೆ ನಿಜವಾದ ಯಜ್ಞ ಫಲವು ಲಭಿಸಬೇಕಾದರೆ, ಶಿರೋರೂಪವಾದ ಈ ಕರ್ಮದ ಆಚರಣೆಯು ಅತ್ಯವಶ್ಯವಾದುದು. ಈ ಕರ್ಮದ ಆಚರಣೆ ಯಿಲ್ಲದಿದ್ದರೆ ಯಜ್ಞಫಲವೇ ಲಭಿಸುವುದಿಲ್ಲ ಎಂದು ಇದರ ಪ್ರಾಧಾನ್ಯವನ್ನು ಹೇಳತಕ್ಕ ಒಂದು ಕಥೆಯು ತೈತ್ತಿರೀಯಾ ರಣ್ಯಕದಲ್ಲಿ ಉಕ್ತವಾಗಿದೆ.

**ತಗ್ಂಸ್ತ್ರೃತಂ ದೇವತಾಸ್ತ್ರೇಧಾ ವ್ಯಗೃಹ್ಣತ । ಅಗ್ನಿಃ ಪ್ರಾತಃಸವನಂ । ಇಂದ್ರೋ ಮಾಧ್ಯಂದಿ-ನಗ್ಂ ಸವನಂ । ವಿಶ್ವೇ ದೇವಾಸ್ತೃತೀಯಸವನಂ । ತೇನಾಪಶೀರ್ಷ್ಣಾ ಯಜ್ಞೇನ ಯಜಮಾ-ನಾಃ । ನಾಶಿಷೋಽವಾರುಂಧತ । ನ ಸುವರ್ಗಂ ಲೋಕಮಭ್ಯಜಯನ್ ।**

**(ತೈ. ಆ. ೫-೧-೬)**

**' ಯಜ್ಞೋ ವೈ ದೇವೇಭ್ಯ ಉದಕ್ರಾಮತ್ '** ಇತ್ಯಾದಿಯಾಗಿ ಐತರೇಯ ಬ್ರಾಹ್ಮಣದಲ್ಲಿ ವರ್ಣಿತ ವಾಗಿರುವಂತೆ ಪ್ರವರ್ಗ್ಯರೂಪವಾದ ಯಜ್ಞವು ದೇವತೆಗಳಿಂದ ಹಿಂಸಿತವಾದಾಗ, ಅಗ್ನ್ಯಾದಿದೇವತೆಗಳು ಪ್ರವರ್ಗ್ಯಾ ಖ್ಯವಾದ ಶಿರೋರಹಿತವಾದ ಯಜ್ಞದಲ್ಲಿ ಅಗ್ನಿಯು ಪ್ರಾತಃಸವನವನ್ನೂ, ಇಂದ್ರನು ಮಾಧ್ಯಂದಿನಸವನವನ್ನೂ ಮತ್ತು ವಿಶ್ವೇದೇವತೆಗಳು ತೃತೀಯಸವನವನ್ನೂ ಗ್ರಹಣಮಾಡಿದರು. ಆದರೂ ಸಹ ಪ್ರವರ್ಗ್ಯಾಖ್ಯವಾದುದೂ, ಯಜ್ಞಗಳಿಗೆ ಶಿರೋರೂಪವಾದುದೂ ಆದ ಈ ಯಜ್ಞವು ಅಲ್ಲಿ ಅದೃಶ್ಯವಾಗಿದ್ದುದರಿಂದ ದೇವತೆಗಳು ತಮ್ಮ ಅಭೀಷ್ಟ ವಾದ ಯಜ್ಞಫಲವನ್ನು ಪಡೆಯಲಾಗಲಿಲ್ಲ. ಸ್ವರ್ಗಲೋಕವನ್ನು ಪಡೆಯಲೂ ಆಗಲಿಲ್ಲ. ಆಗ,

**ತೇ ದೇವಾ ಅಶ್ವಿನಾವಬ್ರುವನ್ । ಭಿಷಜೌ ವೈ ಸ್ಥಃ । ಇದಂ ಯಜ್ಞಸ್ಯ ಶಿರಃ ಪ್ರತಿಧತ್ತಮಿತಿ । ತಾವಬ್ರೂತಾಂ ವರಂ ವೃಣಾವಹೈ । ಗ್ರಹ ಏವ ನಾವತ್ರಾಪಿ ಗೃಹ್ಯತಾಮಿತಿ । ತಾಭ್ಯಾಮೇತ-ಮಾಶ್ವಿನಮಗೃಹ್ಣನ್ । ತಾವೇತದ್ಯಜ್ಞಸ್ಯ ಶಿರಃ ಪ್ರತ್ಯಧತ್ತಾಂ । ಯತ್ಪ್ರವರ್ಗ್ಯಃ । ತೇನ ಸಶೀರ್ಷ್ಣಾ ಯಜ್ಞೇನ ಯಜಮಾನಾಃ । ಅವಾಶಿಷೋಽರುಂಧತ । ಅಭಿ ಸುವರ್ಗಂ ಲೋಕ-ಮಜಯನ್ ॥**

**(ತೈ. ಆ. ೫-೧-೬, ೭)**

ಆ ದೇವತೆಗಳು ದೇವವೈದ್ಯರುಗಳಾದ ಅಶ್ವಿನೀದೇವತೆಗಳನ್ನು ಸಮೀಪಿಸಿ " ನೀವು ಭಿಷಕ್ಕುಗಳಾಗಿದ್ದೀರಿ. ಯಜ್ಞಶಿರಸ್ಸಾದ ಪ್ರವರ್ಗ್ಯವನ್ನು ಪುನಃ ಸವನತ್ರಯಾತ್ಮಕವಾದ ಯಜ್ಞದೇಹದೊಡನೆ ಸೇರಿಸಿರಿ " ಎಂದು ಪ್ರಾರ್ಥಿಸಿ ದಾಗ ಅವರು ತಮಗೂ ಯಜ್ಞಫಲದ ಭಾಗಾರ್ಹತ್ವವನ್ನು ಸಂಪಾದಿಸಿಕೊಂಡು ದೇವತೆಗಳ ಪ್ರಾರ್ಥನೆಯನ್ನು

ನೆರವೇರಿಸಿದರು. ಆಗ ಪುನಃ ಶಿರೋಯುಕ್ತವಾದ ಯಜ್ಞವನ್ನು ಸಂಪಾದಿಸಿ ದೇವತೆಗಳು ತಮ್ಮ ಅಭೀಷ್ಟವನ್ನು ಪಡೆದರು ಎಂದು ಪೂರ್ವಕಥೆಯನ್ನು ತಿಳಿಸಿ ಅನಂತರ,

> **ಯತ್ಪ್ರವರ್ಗ್ಯಂ ಪ್ರವೃಣಕ್ತಿ । ಯಜ್ಞಸ್ಯೈವ ತಚ್ಛಿರಃ ಪ್ರತಿದಧಾತಿ । ತೇನ ಸಶೀರ್ಷ್ಣಾ ಯಜ್ಞೇನ ಯಜಮಾನಃ । ಅವಾಶಿಷೋ ರುಂಧೇ । ಅಭಿ ಸುವರ್ಗಂ ಲೋಕಂ ಜಯತಿ । ತಸ್ಮಾದೇಷ ಆಶ್ವಿನಪ್ರವಯಾ ಇವ । ಯತ್ಪ್ರವರ್ಗ್ಯಃ ॥**
>
> (ತೈ. ಆ. ೫-೧-೭) .

ಹೀಗೆ ದೇವತೆಗಳೂ ಸಹ ಪ್ರಧಾನವೆಂದು ಪೂಜಿಸಿದ ಪ್ರವರ್ಗ್ಯಾಖ್ಯವಾದ ಕರ್ಮಾಚರಣೆಯಿಂದ ಯಜಮಾನನು ತನ್ನ ಅಭೀಷ್ಟವನ್ನು ಸಾಧಿಸುವನು ಮತ್ತು ಸ್ವರ್ಗಲೋಕವನ್ನು ಪಡೆಯುವನು ಎಂದು ಇದರ ಮಹತ್ತ್ವವನ್ನು ಪ್ರಶಂಸಿಸಿದೆ. ಆಶ್ವಿನಮಂತ್ರಗಳೂ, ಅಶ್ವಿನೀದೇವತೆಗಳ ಪ್ರಾಶಸ್ತ್ಯವೂ ಈ ಕರ್ಮಕಾಲದಲ್ಲಿ ಪ್ರಧಾನವಾಗಿರುತ್ತದೆಯಾದ್ದರಿಂದ ಇದಕ್ಕೆ " **ಆಶ್ವಿನಪ್ರವಯಾಃ** " ಎಂಬ ಪರ್ಯಾಯನಾಮವೂ ಇರುತ್ತದೆ. ಇದೇ ಅಂಶವನ್ನು

> **ದುಹಾಮಶ್ವಿಭ್ಯಾಂ ಪಯೋ ಅಘ್ನ್ಯೇಯಂ ಸಾ ವರ್ಧತಾಂ ಮಹತೇ ಸೌಭಗಾಯ ॥**
>
> (ಋ. ಸಂ. ೧-೧೬೪-೨೭)

ಎಂದು ಇದೇ ಸೂಕ್ತದ ೨೭ನೇ ಋಕ್ಕಿನಲ್ಲಿ ತಿಳಿಸಿದೆ. ಆದುದರಿಂದ ಪ್ರವರ್ಗ್ಯವು ಅಂಗಯಜ್ಞವೆಂದು ಪರಿಗಣಿತವಾಗಿದ್ದರೂ ಸಹ ಇದರ ಪ್ರಾಧಾನ್ಯವು ಅತ್ಯಧಿಕವಾಗಿರುತ್ತದೆ. ಇದಕ್ಕೆ **ಘರ್ಮ**ವೆಂಬ ಪರ್ಯಾಯನಾಮವು ಪ್ರಸಿದ್ಧವಾಗಿದೆ. ಆದುದರಿಂಲೇ ಪ್ರಕೃತವಾದ ಸೂಕ್ತದ ೨೬ ನೇ ಋಕ್ಕಿನಲ್ಲಿ **ಅಭೀದ್ಘೋ ಘರ್ಮಃ** ಎಂದು **ಘರ್ಮ** ವಾಚಕವಾಗಿಯೇ ಇದೆ. ಈ ಹೆಸರು ಬರಲು ಕಾರಣವೇನು? ಇಲ್ಲಿ **ಗೌಃ, ವತ್ಸ** ಎಂದರಾವುದು ? **ಅಪಶ್ಯಂ ಗೋಪಾಂ** (೧-೧೪-೩೧) ಇತ್ಯಾದಿಪ್ರವರ್ಗ್ಯಸಂಬಂಧವಾದ ಮಂತ್ರಗಳಲ್ಲಿ ಆದಿತ್ಯಸ್ತುತಿಯ ರಹಸ್ಯವೇನು ಇತ್ಯಾದಿಗಳನ್ನು ಪರಿಶೀಲಿಸಬೇಕು.

ತೈತ್ತಿರೀಯಾರಣ್ಯಕದಲ್ಲಿಯೂ ಶತಪಥಬ್ರಾಹ್ಮಣದಲ್ಲಿಯೂ ಈ ಪ್ರವರ್ಗ್ಯಯಾಗದ ವಿಧಿಯನ್ನು ವಿಶದವಾಗಿ ತಿಳಿಸಿರುವುದರಿಂದ ಇದರ ವಿಧಿಯ ಕ್ರಮವನ್ನು ಸೂಕ್ಷ್ಮವಾಗಿ ಪರಿಶೀಲಿಸಿ ಅನಂತರ ಈ ಯಜ್ಞದಲ್ಲಿ ಉದ್ದಿಷ್ಟವಾದ ನಿಜವಾದ ದೇವತೆಯಾವುದು ? ಕರ್ಮದ ದೃಷ್ಟಿಯಿಂದಲೂ ಆಧ್ಯಾತ್ಮಿಕವಾದ ದೃಷ್ಟಿಯಿಂದಲೂ ಇದರ ಪ್ರಾಶಸ್ತ್ಯವೇನು ಎಂಬುದನ್ನು ತಿಳಿಯಬಹುದು. ತೈತ್ತಿರೀಯಾಣ್ಯಕದಲ್ಲಿ (೪ನೇ ಪ್ರಪಾಠಕ) ಇದರ ಅನುಷ್ಠಾನಕ್ರಮವನ್ನು ಈ ರೀತಿ ತಿಳಿಸಿದೆ.

" **ನಮೋ ವಾಚೇ ಯಾಚೋದಿತಾ** " ಇತ್ಯಾದಿಮಂತ್ರಗಳಿಂದ ಇದರ ಶಾಂತಿಪಾಠವು ಪ್ರಾರಂಭವಾಗುತ್ತದೆ. (ಪ್ರ. ೪. ಅನು. ೧) ಅನಂತರ " **ಯುಂಜತೇ ಮನ ಉತ ಯುಂಜತೇ ಧಿಯಃ** " (೪-೨) **ಮಹಾವೀರ** ನಿರ್ಮಾಣಾರ್ಥವಾದ ಮಂತ್ರಗಳು ಪಠಿತವಾಗುತ್ತವೆ. ಇದರಲ್ಲಿ ಯಜ್ಞದಲ್ಲಿ ಭಾಗವಹಿಸತಕ್ಕ ಋತ್ವಿಗಾದಿಗಳು ವಿಷಯಗಳಿಂದ ನಿವೃತ್ತರಾಗಿ ಆತ್ಮಶುದ್ಧಿಯನ್ನು ಪಡೆಯಬೇಕೆಂದು ತಿಳಿಸಿದೆ. ಈ ಅನುವಾಕಕ್ಕೆ ವ್ಯಾಖ್ಯಾನವನ್ನು ಮಾಡುವಾಗ ಸಾಯಣರು **ಪ್ರವರ್ಗ್ಯ, ಘರ್ಮ, ಮಹಾವೀರ** ಮತ್ತು **ಸಮ್ರಾಟ್** ಎಂಬ ಶಬ್ದಗಳಿಗೆ ವಿವರಣೆಯನ್ನು ಹೇಳತಕ್ಕ ಐದನೇ ಪ್ರಪಾಠಕದ ವಾಕ್ಯಗಳನ್ನುದಹರಿಸಿ ಈ ಪದಗಳ ಅರ್ಥಗಳನ್ನು ವಿವರಿಸಿರುತ್ತಾರೆ.

ಸ ಧನುಃ ಪ್ರತಿಷ್ಕಭ್ಯಾತಿಷ್ಠತ್ । ತಾ ಉಪದೀಕಾ ಅಬ್ರುವನ್ವರಂ ವೃಣಾಮಹೈ । ಅಥ ವ ಇಮುಗ್ ರಂಧಯಾಮ । ಯತ್ರ ಕ್ವ ಚ ಖನಾಮ। ತದಪೋಽಭಿತೃಣದಾಮೇತಿ। ತಸ್ಮಾದುಪ-ದೀಕಾ ಯತ್ರ ಕ್ವ ಚ ಖನಂತಿ । ತದಪೋಽಭಿತೃಂದಂತಿ । ವಾರೇ ವೃತಗ್ಂಹ್ಯಾಸಾಂ । ತಸ್ಯ ಜ್ಯಾಮಪ್ಯಾದನ್। ತಸ್ಯ ಧನುರ್ವಿಪ್ರವಮಾಣಗ್ಂ ಶಿರ ಉದವರ್ತಯತ್। ತದ್ದ್ಯಾವಾಪೃಥಿವೀ ಅನುಪ್ರಾವರ್ತತ। ಯತ್ಪ್ರಾವರ್ತತ। ತತ್ಪ್ರವರ್ಗ್ಯಸ್ಯ ಪ್ರವರ್ಗ್ಯತ್ವಂ। ತದ್ ಘ್ರಾಂಳ ಇತ್ಯಪತತ್। ತದ್ಘರ್ಮಸ್ಯ ಘರ್ಮತ್ವಂ । ಮಹತೋ ವೀರ್ಯಮಪಪ್ತದಿತಿ। ತನ್ಮಹಾವೀರಸ್ಯ ಮಹಾವೀರತ್ವಂ । ಯದಸ್ಯಾಃ ಸಮಭರನ್ । ತತ್ಸಮ್ರಾಜ್ಞಃ ಸಮ್ರಾಟ್‌ತ್ವಂ ।

(ತೈ. ಆ. ೫-೧-೪, ೫, ೬)

ಎಂಬ ವಿವರಣೆಯಲ್ಲಿ ಒಂದು ಕಥಾಸಂದರ್ಭವು ಸೂಚಿತವಾಗಿ ಅನಂತರ **ಘರ್ಮಾದಿ** ಹೆಸರುಗಳ ಪ್ರಸಿದ್ಧವಾದ ವಿಷಯವು ತಿಳಿಸಲ್ಪಟ್ಟಿದೆ. ಶತಪಥಬ್ರಾಹ್ಮಣದಲ್ಲಿ ಉಕ್ತವಾಗಿರುವಂತೆ ಈ ಕಥಾಸಂದರ್ಭವು ಈ ರೀತಿಯಿದೆ. ಇಂದ್ರಾದಿಗಳು ಕುರುಕ್ಷೇತ್ರಾಖ್ಯವಾದ ದೇವಯಜನಪ್ರದೇಶದಲ್ಲಿ ಸತ್ರವನ್ನು ನೆರವೇರಿಸಿದರು. ಆಗ ಅವರಲ್ಲಿ ಶ್ರೇಷ್ಠನಾರು ಎಂಬುದನ್ನು ನಿಷ್ಕರ್ಷಿಸಬೇಕಾದ ಪ್ರಮೇಯವೊದಗಿದಾಗ ಯಾರು ತಪಸ್ಸಿನಿಂದಲೂ, ಶ್ರದ್ಧೆಯಿಂದಲೂ, ಯಜ್ಞಾಚರಣೆಯಿಂದಲೂ ಯಜ್ಞಾಂತವನ್ನು ಪ್ರಥಮತಃ ಪಡೆಯುವರೋ ಅವರೇ ಶ್ರೇಷ್ಠರೆಂದು ಪರಿಗಣಿತರಾಗ ಬೇಕೆಂದು ತೀರ್ಮಾನಿಸಿದಾಗ, ವಿಷ್ಣುವು ಆ ಸ್ಪರ್ಧೆಯಲ್ಲಿ ಗೆದ್ದನು. ಆಗ ವಿಷ್ಣುವು ಶ್ರೇಷ್ಠನೆಂದು ಪರಿಗಣಿತ ನಾದನು ಇಂತಹ ಜಯದಿಂದ ಸಹಜವಾಗಿ ಪ್ರಾಪ್ತವಾಗುವ ಅಭಿಮಾನವೂ ಸಹ ವಿಷ್ಣುವನ್ನು ಆಕ್ರಮಿಸಿತು. ಸ್ವಾಭಿಮಾನಪೂರಿತನಾಗಿ ವಿಷ್ಣುವು ತನ್ನ ಧನುಸ್ಸನ್ನು ಹಿಡಿದುಕೊಂಡು ಅದಕ್ಕೆ ಹೆದೆಯನ್ನು ಏರಿಸಿ ಬಾಣತ್ರಯವನ್ನು ಕೈಯಲ್ಲಿ ಹಿಡಿದುಕೊಂಡು, ತನ್ನ ಬಿಲ್ಲಿನ ತುದಿಯಲ್ಲಿ ತಲೆಯನ್ನಿರಿಸಿಕೊಂಡಿದ್ದಾಗ ದೇವತೆಗಳಲ್ಲಿ ಯಾರೂ ಸಹ ಇವನನ್ನು ಎದುರಿಸಲಾಗದೆ ಎಲ್ಲರೂ ಇವನ ಸುತ್ತಲೂ ಕುಳಿತುಕೊಂಡರು. ಆಗ ಇವನ ಅಭಿಮಾನವನ್ನು ಹೋಗ ಲಾಡಿಸುವುದಕ್ಕಾಗಿ **ವಮ್ರಿರೂಪವಾದ** ಕ್ರಿಮಿಗಳನ್ನು ದೇವತೆಗಳು ಸಮೀಪಿಸಿ ಅವನ ಧನುಸ್ಸಿನ ಹೆದೆಯನ್ನು ಕತ್ತರಿ ಸಬೇಕೆಂದು ಕೇಳಿದಾಗ ಅವು ವಿಷ್ಣುವಿನ ಧನುಸ್ಸಿನ ಹೆದೆಯನ್ನು ಕತ್ತರಿಸಿದವು. (ಇಂದ್ರನೇ ವಮ್ರಿರೂಪದಲ್ಲಿ ಕತ್ತರಿಸಿದನು. " **ತಸ್ಯೇಂದ್ರೋ ವಮ್ರಿರೂಪೇಣ । ಧನುರ್ಜ್ಯಾಮಭಿನತ್ಸ್ವಯಂ** " ಎಂದು ತೈತ್ತಿರಿಯಾರಣ್ಯ ಕದಲ್ಲಿದೆ) ಆಗ ಧನುಸ್ಸಿನ ತುದಿಯು ಮೇಲಕ್ಕೆ ಚಿಮ್ಮಿ ವಿಷ್ಣುವಿನ ಶಿರಸ್ಸುಕತ್ತರಿಸಲ್ಪಟ್ಟಿತು.

ಧನುಸ್ಸಿನ ಹೆದೆಯು ಕತ್ತರಿಸಲ್ಪಟ್ಟಾಗ " **ತದ್ ಘೃಙ್ಙಿತಿ ಪಪಾತ** " ಅದು **ಘೃಙ್** ಎಂದು ಶಬ್ದಮಾಡಿ ಕೊಂಡು ಬಿದ್ದಿತಾದುದರಿಂದ ಅದಕ್ಕೆ **ಘರ್ಮ**ವೆಂಬ ಹೆಸರು ಪ್ರಸಿದ್ಧವಾಯಿತು. ಸಂಕುಚಿತವಾದ ಧನುಸ್ಸು, ಹೆದೆಯು ಕತ್ತರಿಸಲ್ಪಟ್ಟೊಡನೆಯೇ ವಿಸ್ತೃತವಾಗಿ ಹರಡಿದುದರಿಂದ ಅದಕ್ಕೆ ಪ್ರವರ್ಗ್ಯವೆಂಬ ಹೆಸರು ಪ್ರಸಿದ್ಧವಾಯಿತು. ದೇವತೆಗಳು " **ನಮ್ಮ ಮಹಾವೀರನು ಬಿದ್ದನು** " ಎಂದು ಹೇಳಿಕೊಂಡುದುದರಿಂದ ಯಜ್ಞಪಾತ್ರೆಗೆ **ಮಹಾವೀರ** ಎಂಬ ಹೆಸರು ಬಂದಿತು ಇತ್ಯಾದಿಯಾಗಿ ಈ ಹೆಸರುಗಳು ಬಂದುದನ್ನು ತಿಳಿಸಿದೆ.

ಇದೇ ಭಾಗದಲ್ಲಿ, ಎಂದರೆ ' **ಯುಂಜತೇ ಮನ .... ....** ' ಇತ್ಯಾದಿಯಾಗಿ **ಮಹಾವೀರ**ನಿರ್ಮಾಣಾರ್ಥಕ ವಾದ ಮಂತ್ರಗಳನ್ನು ಪಠಿಸುವ ಕಥಾ ಪ್ರಕರಣದಲ್ಲಿ (ತೈ. ಆ. ೪-೨),

**ಮಖಸ್ಯ ಶಿರ ಇತ್ಯಾಹ । ಯಜ್ಞೋ ವೈ ಮಖಃ ।**

(ತೈ. ಆ. ೫-೩-೭)

ಎಂಬ ವಾಕ್ಯಗಳಲ್ಲಿ ಪ್ರವರ್ಗ್ಯವನ್ನು ಯಜ್ಞಗಳಿಗೆಲ್ಲಾ ಶಿರೋರೂಪವಾದುದು ಎಂದು ಪ್ರಶಂಸಿಸಿರುವ ಭಾಗವನ್ನು ದಹರಿಸಿ ಇದರ ಪ್ರಾಧಾನ್ಯವನ್ನು ಹೇಳಿದೆ. ಅನಂತರ,

**" ವೃಷ್ಣೋ ಅಶ್ವಸ್ಯ ನಿಷ್ಪದಸಿ । ವರುಣಸ್ತ್ವಾ ಧೃತವ್ರತ ಆಧೂಪಯತು " ।**

(ತೈ. ಆ. ೪-೩-೧)

ಎಂಬ ಮಂತ್ರದಿಂದ ಪ್ರಾರಂಭವಾಗುವ **ಮಹಾವೀರ**ಸಂಸ್ಕಾರಕ್ರಮವನ್ನು ತಿಳಿಸಿದೆ. ಇದೇ ಭಾಗದಲ್ಲಿ " **ಸೂರ್ಯಸ್ಯ ತ್ವಾ ಚಕ್ಷುಷಾನ್ವೀಕ್ಷೇ** " ಇತ್ಯಾದಿಮಂತ್ರಗಳಿಂದ ಪ್ರವರ್ಗ್ಯಕ್ಕೂ ಆದಿತ್ಯನಿಗೂ ಇರತಕ್ಕ ಸಂಬಂಧವನ್ನು ತಿಳಿಸಿದೆ.

**" ಬ್ರಹ್ಮನ್ ಪ್ರವರ್ಗ್ಯೇಣ ಪ್ರಚರಿಷ್ಯಾಮಃ । ಹೋತರ್ಘರ್ಮಮಭಿಷ್ಟುಹಿ "**

(ತೈ. ಆ. ೪-೪-೧)

ಎಂಬ ಪ್ರೈಷಾದಿಮಂತ್ರಗಳಿಂದಲೂ,

**ಬ್ರಹ್ಮನ್ ಪ್ರಚರಿಷ್ಯಾಮಃ । ಹೋತರ್ಘರ್ಮಮಭಿಷ್ಟುಹಿ ।**

(ತೈ. ಆ. ೪-೫-೧)

ಇತ್ಯಾದಿಮಹಾವೀರಸ್ಥಾಪನಾಮಂತ್ರಗಳಿಂದಲೂ ಪ್ರವರ್ಗ್ಯದ ಸ್ಥಾಪನವು ನೆರವೇರಿಸಲ್ಪಡುತ್ತದೆ. ಇದರ ಅಭಿಮಂತ್ರಣಪ್ರಕರಣದಲ್ಲಿ ಪ್ರಕೃತವಾದ ಸೂಕ್ತದ ೨೬ನೇ ಋಕ್ಕಿನಲ್ಲಿ " **ಅಭೀದ್ಧಃ** " ಎಂಬ ವರ್ಣನೆಯಿಂದ ಸೂಚಿತವಾದ ಪ್ರವರ್ಗ್ಯದ ತೇಜಸ್ಸು ವರ್ಣಿತವಾಗಿದೆ.

**ರೋಚಿತಸ್ತ್ವಂ ದೇವ ಘರ್ಮ ದೇವೇಷ್ವಸಿ । ರೋಚಿಷೀಯಾಹಂ ಮನುಷ್ಯೇಷು । ಸಮ್ರಾಟ್**
**ಘರ್ಮರುಚಿತಸ್ತ್ವಂ ದೇವೇಷ್ವಾಯುಷ್ಮಾಗ್ಸ್ತೇಜಸ್ವೀ ಬ್ರಹ್ಮವರ್ಚಸ್ಯಸಿ ।**

(ತೈ. ಆ. ೪-೬-೨)

ಎಲೈ **ಮಹಾವೀರನೇ**, ನೀನು ದೇವತೆಗಳ ನಡುವೆ ಪ್ರಕಾಶಿಸುತ್ತಾ ನಿನ್ನ ಮಹದ್ಗುಣಗಳನ್ನು ಪ್ರಕಟಿಸಿರುವೆ ನೀನೇ ಸಮ್ರಾಟಾಗಿದ್ದೀಯೆ ನೀನು ಅದೇ ಕಾಂತಿಯಿಂದ ಮಾನವರ ನಡುವೆಯೂ ಬೆಳಗು ಇತ್ಯಾದಿಯಾಗಿ ಸ್ತುತವಾಗಿದೆ. ಅನಂತರ ಇದೇ ಸೂಕ್ತದ ೩೧ನೇ ಋಕ್ಕಿನಲ್ಲಿ ಪ್ರಶಂಸಿತವಾಗಿರುವಂತೆ " **ಅಪಶ್ಯಂ ಗೋಪಾಮನಿಪದ್ಯಮಾನಂ** " ಇತ್ಯಾದಿಮಂತ್ರಗಳಿಂದ **ಮಹಾವೀರಾವೇಕ್ಷಣ**ಮಂತ್ರಗಳು ಪಠಿತವಾಗಿವೆ. ಹೀಗೆ ಪೂರ್ಣವಾಗಿ ವಿಧಿಯನ್ನು ನೆರವೇರಿಸಿದನಂತರ,

**ಏತತ್ತ್ವಂ ದೇವ ಘರ್ಮ ದೇವೋ ದೇವಾನುಪಾಗಾಃ । ಇದಮಹಂ ಮನುಷ್ಯೋ ಮನುಷ್ಯಾನ್ ।**
**ಸೋಮಪೀಥಾನು ಮೇಹಿ । ಸಹ ಪ್ರಜಯಾ ಸಹ ರಾಯಸ್ಪೋಷೇಣ । ಸುಮಿತ್ರಾ ನ ಆಪ**
**ಓಷಧಯಃ ಸಂತು ॥**

(ತೈ. ಆ ೪-೧೧-೮)

ಇತ್ಯಾದಿಯಾದ ಪ್ರಾರ್ಥನಾಮಂತ್ರಗಳಲ್ಲಿ ಸಂಪತ್ಸಮೃದ್ಧಿಯನ್ನು ಪ್ರಾರ್ಥಿಸಿದೆ. ಇಂತಹ ಪ್ರವರ್ಗ್ಯಯಾಗಕಾಲದಲ್ಲಿ,

**ಉಪಹ್ವಯೇ ಸುದುಘಾಂ ಧೇನುಮೇತಾಂ ಹಿಂಕೃಣ್ವತೀ ವಸುಪತ್ನೀ ವಸೂನಾಮಭಿತ್ವಾ ದೇವ ಸವಿತಃ .... ಇತ್ಯೇಕವಿಂಶತಿರಭಿರೂಪಾ ಯದ್ಯಜ್ಞೇಽಭಿರೂಪಂ ತತ್ಸಮೃದ್ಧಂ ॥**

(ಐ. ಬ್ರಾ. ೧-೨೨)

ಇತ್ಯಾದಿಮಂತ್ರಗಳಿಂದ ಉಪಸ್ತುತಿಯನ್ನು ಪಠಿಸಬೇಕೆಂದು ಐತರೇಯಬ್ರಾಹ್ಮಣದಲ್ಲಿ ತಿಳಿಸಿದೆ. ಇವು ಒಟ್ಟು ೨೧ ಋಕ್ಕುಗಳು. ಅವುಗಳಲ್ಲಿ ಪ್ರಕೃತವಾದ ಸೂಕ್ತಗಳಲ್ಲಿರುವ ೨೬, ೨೭ ೨೮ ಮತ್ತು ೩೧ನೇ ಋಕ್ಕುಗಳೂ ಸೇರಿವೆ.

ಈ ನಾಲ್ಕು ಋಕ್ಕುಗಳಲ್ಲಿಯೂ ಸಹ ಉದ್ದಿಷ್ಟವಾಗಿರುವ ಮುಖ್ಯದೇವತೆಯು ಆದಿತ್ಯನೆಂದೇ ಹೇಳಬಹುದು ಎಂದು ಆಯಾ ಋಕ್ಕಿನ ವಿವರಣೆಯಲ್ಲಿ ತಿಳಿಸಿದೆ. ಘರ್ಮಕ್ಕೂ ಆದಿತ್ಯನಿಗೂ ಇರತಕ್ಕ ಸಂಬಂಧವನ್ನೂ ಹಿಂದೆ ತಿಳಿಸಿದೆ. ಶತಪಥಾದಿಗಳಲ್ಲಿ ಈ ಮಹಾವೀರವು ಆದಿತ್ಯನ ಪ್ರತಿನಿಧಿಯೆಂದೂ ಇದರಲ್ಲಿ ಪೂರ್ಣವಾಗಿರುವ ಕ್ಷೀರವು ವಿಶ್ವಪ್ರಾಣದ ದಿವ್ಯಪ್ರವಾಹವೆಂದೂ, ಈ ಆದಿತ್ಯನ ತೇಜಸ್ಸಿನಿಂದ ಯಜ್ಞಕರ್ತನೂ ತನ್ನ ಸ್ವರೂಪವನ್ನೇ ಪ್ರಕಾಶ ಮಾನವಾದುದನ್ನಾಗಿ ಮಾಡಿಕೊಳ್ಳುವನೆಂದೂ ತಿಳಿಸಿದೆ. ಮತ್ತು,

**ಆಯುರೇತಜ್ಜ್ಯೋತಿಃ ಪ್ರವಿಶತಿ ಯ ಏತಮನು ವಾ ಬ್ರೂತೇ ಭಕ್ಷಯತಿ ವಾ ತಸ್ಯ ವ್ರತಚರ್ಯಾ ಯಾ ಸ್ಪಷ್ಟಾ "**

(ಶ. ಬ್ರಾ. ೧೪-೩-೨-೩೧)

ಯಾವ ಯಜಮಾನನು ಈ ಪ್ರವರ್ಗ್ಯಾಖ್ಯವಾದ ಯಜ್ಞವನ್ನು ನೆರವೇರಿಸುವನೋ, ಇತರರಿಗೆ ಇದರ ಮಹತ್ತ್ವವನ್ನು ಪದೇಶಿಸುವನೋ, ಮತ್ತು ಯಾವನು ಇದರಲ್ಲಿ ಪೂರ್ಣವಾದ ಭಾಗವನ್ನು ವಹಿಸುವನೋ, ಅವನು ಆದಿತ್ಯನ ಜ್ಯೋತಿ ಯೊಡನೆ ಸೇರಿ ತಾನೂ ಜ್ಯೋತೀರೂಪನಾಗುತ್ತಾನೆ. ಮತ್ತು ತನ್ನ ಪಾರ್ಥಿವವಾದ ಸ್ವರೂಪವನ್ನು ಬಿಟ್ಟು, ಹೊಸ ಸೃಷ್ಟಿಯನ್ನು ಸಂಪಾದಿಸಿ ತನ್ನ ಸತ್ಕರ್ಮದಿಂದ ಸಂಪಾದಿಸಿದ ಆ ಸೃಷ್ಟಿಯಿಂದ ದಿವ್ಯವಾದ ದೇಹವನ್ನು ಪಡೆದು ದೇವತ್ವವನ್ನು ಸಂಪಾದಿಸುವನು ಎಂದು ಪ್ರವರ್ಗ್ಯದ ಮಹತ್ತ್ವವನ್ನು ಪ್ರಶಂಸಿಸಿದೆ.

**॥ ವ್ಯಾಕರಣಪ್ರಕ್ರಿಯಾ ॥**

**ಶಿಂಕ್ತೇ**—ಶಿಜಿ ಅವ್ಯಕ್ತೇ ಶಬ್ದೇ ಧಾತು. ಅದಾದಿ. ಲಟ್ ಪ್ರಥಮಪುರುಷಏಕವಚನಾಂತರೂಪ. ಇದಿತ್ತಾ ದುದರಿಂದ ನುಮಾಗಮ. ತಿಙಂತನಿಘಾತಸ್ವರ ಬರುತ್ತದೆ.

**ಅಭಿವೃತಾ**—ವೃಞ್ ವರಣೇ ಧಾತು ಕರ್ಮಣಿಯಲ್ಲಿ **ನಿಷ್ಠಾ** ಎಂಬುದರಿಂದ ಕ್ತ ಪ್ರತ್ಯಯ. ಸ್ತ್ರೀತ್ವ ದಲ್ಲಿ ಅದಂತವಾದುದರಿಂದ ಟಾಪ್. **ಗತಿರನಂತರಃ** (ಪಾ. ಸೂ. ೬-೨-೪೯) ಎಂಬುದರಿಂದ ಗತಿಗೆ (ಅಭಿ) ಪ್ರಕೃತಿಸ್ವರ ಬರುತ್ತದೆ.

**ಮಾಯುಮ್**—ಮಾಙ್ ಮಾನೇ ಶಬ್ದೇಚ ಧಾತು ಬಹುಲಗ್ರಹಣದಿಂದ ಉಣ್ ಪ್ರತ್ಯಯ. **ಆತೋ ಯುಕ್ ಚಿಣ್ ಕೃತೋಃ** ಎಂಬುದರಿಂದ ಧಾತುವಿಗೆ ಯುಕಾಗಮ ಪ್ರತ್ಯಯಸ್ವರದಿಂದ ಅಂತೋದಾತ್ತವಾಗುತ್ತದೆ

**ಚಿತ್ತಿಭಿಃ**—ಚಿತೀ ಜ್ಞಾನೇ ಧಾತು. **ಕ್ತಿಚ್‌ಕ್ತೌ ಚ ಸಂಜ್ಞಾಯಾಮ್** (ಪಾ. ಸೂ. ೩-೩-೧೭೪) ಎಂಬುದರಿಂದ ಕ್ತಿಚ್‌ಪ್ರತ್ಯಯ. ಚಿತ್ತ್ಯಾದುದರಿಂದ ಅಂತೋದಾತ್ತಸ್ವರ ಬರುತ್ತದೆ. ತೃತೀಯಾ ಬಹುವಚನಾಂತರೂಪ

**ಚಕಾರ**—**ಹಿಚ** (ಪಾ. ಸೂ. ೮-೧-೩೪) ಎಂಬುದರಿಂದ ನಿಘಾತಸ್ವರ ಪ್ರತಿಷೇಧ ಬರುತ್ತದೆ. ಣಲ್ ಲಿತ್ತ್ವಾದುದರಿಂದ **ಲಿತಿ** (ಪಾ. ಸೂ. ೬-೧-೧೯೩) ಎಂಬುದರಿಂದ ಪ್ರತ್ಯಯದ ಪೂರ್ವಕ್ಕೆ ಉದಾತ್ತಸ್ವರ ಬರುತ್ತದೆ.

**ಭವಂತೀ**—ಭೂ ಸತ್ತಾಯಾಂ ಧಾತು. ಲಟಿಗೆ ಶತ್ರಾದೇಶ. **ಉಗಿತಶ್ಚ** ಎಂಬುದರಿಂದ ಙೀಪ್. **ಶಾಸ್ಯನುದಾತ್ತೇಶ್** (ಪಾ. ಸೂ. ೬-೧-೧೮೬) ಎಂಬುದರಿಂದ ಲಸಾರ್ವಧಾತುಕವು ಅನುದಾತ್ತವಾಗುವುದರಿಂದ ಧಾತುಸ್ವರ ಉಳಿಯುತ್ತದೆ.

**ಊಹತೆ**—ಊಹ ವಿತರ್ಕೇ ಧಾತು. ಛಾಂದಸವಾಗಿ ಲಙ್. ಪ್ರಥಮಪುರುಷ ಏಕವಚನಾಂತರೂಪ. ತಿಙಂತನಿಘಾತಸ್ವರ ಬರುತ್ತದೆ. ॥ ೨೯ ॥

—————:0:—————

ಸಂಹಿತಾಪಾಠಃ

## ಅನಚ್ಛಯೇ ತುರಗಾತು ಜೀವಮೇಜದ್ಧ್ರುವಂ ಮಧ್ಯ ಆ ಪಸ್ತ್ಯಾನಾಂ ।
## ಜೀವೋ ಮೃತಸ್ಯ ಚರತಿ ಸ್ವಧಾಭಿರಮರ್ತ್ಯೋ ಮರ್ತ್ಯೇನಾ ಸಯೋನಿಃ ॥

॥ ೩೦ ॥

ಪದಪಾಠಃ

ಅನತ್ । ಶಯೇ । ತುರಽಗಾತು । ಜೀವಂ । ಏಜತ್ । ಧ್ರುವಂ । ಮಧ್ಯೇ । ಆ । ಪಸ್ತ್ಯಾನಾಂ ।
ಜೀವಃ । ಮೃತಸ್ಯ । ಚರತಿ । ಸ್ವಧಾಭಿಃ । ಅಮರ್ತ್ಯಃ । ಮರ್ತ್ಯೇನ । ಸಽಯೋನಿಃ ॥ ೩೦ ॥

ಸಾಯಣಭಾಷ್ಯಂ

ಇದಂ ಶರೀರಂ ಜೀವಾವಸ್ಥಾಯಾಂ । ಅನೇನ ದೇಹಸ್ಯಾಸಾರತಾ ಜೀವಸ್ಯ ನಿತ್ಯತ್ವಂ ಚ ಪ್ರತಿಪಾದ್ಯತೇ ॥

ಅನತ್ ಪ್ರಾಣನಂ ಕುರ್ವಜ್ಜೀವಂ ಜೀವನವತ್ತುರಗಾತು ಸ್ವವ್ಯಾಪಾರಾಯ ತೂರ್ಣಗಮನಂ ಸದೇಜತ್ಶಯೇ । ಶೇತೇ । ವರ್ತತೇ । ಪಶ್ಚಾತ್ಪ್ರಾಣಾಪಗಮನಾನಂತರಮುಕ್ತವಿಲಕ್ಷಣಂ ಸದ್ಧ್ರುವಮವಿಚಲಿತಂ ಸತ್ ಪಸ್ತ್ಯಾನಾಂ ಗೃಹಾಣಾಂ ಮಧ್ಯ ಆಶೇತೇ ಚ । ಸ್ಥಾಣುವತ್ತಿಷ್ಠತಿ । ಆಕಾರಃ ಪೂರಣೋ ವಾ । ಜೀವಸ್ಯ ವೈಲಕ್ಷಣ್ಯಮಾಹ । ಮೃತಸ್ಯ ಶರೀರಸ್ಯ ಸಂಬಂಧೀ ಜೀವೋ ಮರ್ತ್ಯೇನ ಮರಣಧರ್ಮಕೇಣ ಶರೀರೇಣ ಸಯೋನಿಃ ಪೂರ್ವಂ ಸಮಾನೋತ್ಪತ್ತಿಸ್ಥಾನಃ । ಯದ್ಯಪಿ ಜೀವಸ್ಯ

ನ ಜನ್ಮಾಸ್ತಿ ತಥಾಪಿ ವಪುಷಸ್ತತ್ಸದ್ಭಾವಾತ್ತತ್ಸಂಬಂಧೇನೋಪಚರ್ಯತೇ । ತದೇವಾಹ । ಅಮರ್ತ್ಯೋಽ-ಮರಣಸ್ವಭಾವಃ । ಜೀವೋಪೇತಂ ವಾವ ಕಿಲೇದಂ ಮ್ರಿಯತೇ ನ ಜೀವೋ ಮ್ರಿಯತೇ । ಛಾಂ. ಉ. ೬-೧೧-೩. । ಇತಿ ಶ್ರುತೇಃ । ಉಕ್ತಸ್ವಭಾವೋ ಜೀವಃ ಸ್ವಧಾಭಿಶ್ಚರತಿ । ಪುತ್ರೈರ್ದತ್ತೈಃ ಸ್ವಧಾಕಾರ ಪೂರ್ವಕದತ್ತೈರನ್ನೈಶ್ಚರತಿ । ವರ್ತತ ಇತ್ಯರ್ಥಃ ॥

ಪ್ರತಿಪದಾರ್ಥ

**ಜೀವಂ**—(ಜೀವಾತ್ಮನು) ಪ್ರಾಣಯುಕ್ತನಾಗಿಯೂ । **ಅನತ್**—ಉಸಿರಾಡುತ್ತಲೂ । **ತುರಗಾತು**—(ತನ್ನ ಕರ್ತವ್ಯಗಳಿಗಾಗಿ) ವೇಗವಾದ ಗಮನಗಳಿಂದ । **ಏಜತ್**—ಚಲಿಸುತ್ತಲೂ । **ಪಸ್ತ್ಯಾನಾಂ**—ದೇಹರೂಪವಾದ ಗೃಹಗಳ । **ಮಧ್ಯೇ**—ನಡುವೆ । **ಧ್ರುವಂ**—ಅಚಲನಾಗಿ । **ಆ ಶಯೇ**—ನೆಲೆಸಿರುತ್ತಾನೆ । **ಜೀವಃ**—ಜೀವಾತ್ಮನು । **ಮೃತಸ್ಯ**—ಮರಣಧರ್ಮವುಳ್ಳ ದೇಹಸಂಬಂಧಿಯಾಗಿಯೂ । **ಮರ್ತ್ಯೇನ**—ಮರಣಾತ್ಮಕವಾದ ದೇಹದೊಡನೆ । **ಸಯೋನಿಃ**—(ದೇಹದ ಉತ್ಪತ್ತಿಕಾಲದಲ್ಲಿ) ಒಂದೇ ಉತ್ಪತ್ತಿ ಸ್ಥಾನವುಳ್ಳವನೂ ಆದರೂ । **ಅಮರ್ತ್ಯಃ**— ತಾನು ಮಾತ್ರ ಮರಣಧರ್ಮವಿಲ್ಲದೆ । **ಸ್ವಧಾಭಿಃ**— ( ಪುತ್ರಾದಿಗಳಿಂದ ದತ್ತವಾದ ) ಸ್ವಧೆಗಳಿಂದ (ಕವ್ಯಗಳಿಂದ) ತೃಪ್ತನಾಗಿ । **ಚರತಿ**—ಸಂಚರಿಸುತ್ತಾನೆ.

ಭಾವಾರ್ಥ

ದೇಹದೊಂದಿಗಿರುವಾಗ ಜೀವಾತ್ಮನು ಪ್ರಾಣಯುಕ್ತನಾಗಿಯೂ, ಉಸಿರಾಡುತ್ತಲೂ, ತನ್ನ ಐಹಿಕವಾದ ಕರ್ತವ್ಯಗಳಿಗಾಗಿ ತ್ವರಿತವಾದ ಚಲನವಲನಗಳಿಂದಲೂ ಸಂಚರಿಸುತ್ತಿದ್ದರೂ ಸಹ ದೇಹರೂಪವಾದ ಗೃಹಗಳ ನಡುವೆ ಅಚಲನಾಗಿ ನೆಲೆಸಿರುತ್ತಾನೆ. ಜೀವಾತ್ಮನು ಮರಣಧರ್ಮವುಳ್ಳ ದೇಹಸಂಬಂಧಿಯಾಗಿಯೂ ಮತ್ತು ಉತ್ಪತ್ತಿಕಾಲದಲ್ಲಿ ಮರಣಾತ್ಮಕವಾದ ದೇಹದೊಡನೆ ಒಂದೇ ಉತ್ಪತ್ತಿಸ್ಥಾನವುಳ್ಳವನೂ ಆದರೂ ಸಹ ತಾನು ಮಾತ್ರ ಮರಣಧರ್ಮವಿಲ್ಲದೇ ಪುತ್ರಾದಿಗಳಿಂದ ದತ್ತವಾದ ಸ್ವಧೆಗಳಿಂದ ತೃಪ್ತನಾಗಿ ಸಂಚರಿಸುತ್ತಾನೆ.

## English Translation

Life endowed with breath, eager (in discharge of its functions) reposes, steady, in the midst of its (proper) abodes : the life of the mortal body, cognate with the mortal frame, endures immortal, (sustained) by (obsequial) offerings.

ವಿಶೇಷವಿಷಯಗಳು

ಜೀವನಿಗೆ (ಆತ್ಮನಿಗೆ) ಈ ಶರೀರವು ಈ ಜನ್ಮದಲ್ಲಿ ಮಾತ್ರವಿರುವುದು. ಆದುದರಿಂದ ದೇಹವು ನಿಸ್ಸಾರವೂ ಅಶಾಶ್ವತವೂ ಆಗಿರುವುದೆಂದೂ ಜೀವನು (ಆತ್ಮನು) ನಿತ್ಯನಾಗಿರುವನೆಂದೂ ಈ ಋಕ್ಕಿನಲ್ಲಿ ಪ್ರತಿಪಾದಿಸಲ್ಪಟ್ಟಿದೆ

ಜೀವನು ದೇಹದೊಳಗಿದ್ದು ಐಹಿಕವಾದ ವ್ಯಾಪಾರಗಳಿಗೆ ಚೈತನ್ಯದಾಯಿಯಾಗಿರುವ ಕಾಲದಲ್ಲಿ ದೇಹಕ್ಕೆ ಸಜೀವಿಯೆಂಬ ವ್ಯವಹಾರವಿರುತ್ತದೆ. ಅದಿಲ್ಲದಿದ್ದರೆ ದೇಹವು ಮೃತವೆಂದು ಭಾವಿಸಲ್ಪಡುತ್ತದೆ. ಇದರಿಂದ ದೇಹವು ಮರ್ತ್ಯವು, ಜೀವವು ಅಮರ್ತ್ಯವು ಎಂದು ದೇಹಕ್ಕೂ ಜೀವಕ್ಕೂ ಇರತಕ್ಕ ವ್ಯತ್ಯಾಸವನ್ನು ಈ ಋಕ್ಕಿನಲ್ಲಿ ತಿಳಿಸಿದೆ.

**ಏಜದ್ಧ್ರುವಂ**—ಎಂಬ ವರ್ಣನೆಯಿಂದ ಜೀವಾತ್ಮನ ಚಲನಾತ್ಮಕವೂ ಮತ್ತು ಅಚಲನಾತ್ಮಕವೂ ಆದ ಎರಡುವಿಧವಾದ ಸ್ಥಿತಿಗಳೂ ವರ್ಣಿತವಾಗಿವೆ ಜೀವಾತ್ಮನು ತನ್ನ ಸಹಜವಾದ ಸ್ವರೂಪದಿಂದ ಧ್ರುವನು. ಅಚಲನು. ಆದರೆ ದೇಹದೊಡನೆ ಸೇರಿ ಉಪಾಧಿಗಳಿಂದ ಕೂಡಿರುವಾಗ ಚಲನಾತ್ಮಕನು. ಇದೇ ಅಂಶವನ್ನು ಈಶೋಪನಿಷತ್ತಿನಲ್ಲಿ ವರ್ಣಿಸುತ್ತಾ,

**ತದೇಜತಿ ತನ್ನೈಜತಿ ತದ್ದೂರೇ ತದ್ವಂತಿಕೇ ।**
**ತದಂತರಸ್ಯ ಸರ್ವಸ್ಯ ತದು ಸರ್ವಸ್ಯಾಸ್ಯ ಬಾಹ್ಯತಃ ॥**

**( ಈಶ. ೫ )**

ಈ ಆತ್ಮನು ಒಂದೇ ಕಾಲದಲ್ಲಿ ಚಲನಾತ್ಮಕವಾದುದೂ, ಅಚಲನಾತ್ಮಕವಾದುದೂ ಆಗಿದೆ. ಒಂದೇ ಕಾಲದಲ್ಲಿ ದೂರದಲ್ಲಿರುವುದೂ ಹತ್ತಿರದಲ್ಲಿರುವುದೂ ಆಗಿದೆ. ಎಂದರೆ ದೇಹದೊಡನೆ ಸಂಬಂಧವಿದ್ದರೂ ಸಹ ಸ್ವತಃ ಶುದ್ಧವಾದುದರಿಂದ ನಿರ್ಲಿಪ್ತವಾಗಿರುತ್ತದೆ. ಅದಲ್ಲದೇ,

**ಅನಕ್ ತುರಗಾತು**—ಈ ಜೀವಾತ್ಮನು ದೇಹದೊಳಗಿದ್ದು ದೇಹದ ಪ್ರಾಣರೂಪವಾಗಿದ್ದರೆ ಆಗ ಇಂದ್ರಿಯಾದಿಗಳು ತಮ್ಮ ತಮ್ಮ ವ್ಯಾಪಾರಗಳಲ್ಲಿ ತೊಡಗುವುವು. ಆಗ ಈ ಜೀವನೇ ವ್ಯವಹಾರಗಳಲ್ಲಿ ತೊಡಗಿರುವನು ಎಂದೀ ವ್ಯವಹಾರವಿದೆ. ಜೀವನಿರುವ ಕಾಲದಲ್ಲಿ ದೇಹವು ಅಥವಾ ದೇಹಾಂತರ್ಗತವಾದ ಪ್ರಾಣವು ತನ್ನ ನಿಯತವಾದ ಕಾರ್ಯಗಳಲ್ಲಿ ತೊಡಗಿರುವ ಅಂಶವನ್ನು ಕಠಾದಿಗಳಲ್ಲಿ ಈರೀತಿ ವರ್ಣಿಸಿದೆ.

**ಯದಿದಂ ಕಿಂ ಚ ಜಗತ್ಸರ್ವಂ ಪ್ರಾಣ ಏಜತಿ ನಿಸ್ಸೃತಂ ।**

( ಕಠ. ೨-೩-೨ )

**ಯದಿದಂ ಕಿಂ ಚ ಯತ್ಕಿಂಚೇದಂ ಜಗತ್ ಸರ್ವಂ ಪ್ರಾಣೇ ಪರಸ್ಮಿನ್ ಬ್ರಹ್ಮಣಿ ಸತಿ ಏಜತಿ ಕಂಪತೇ ತತ ಏವ ನಿಸ್ಸೃತಂ ನಿರ್ಗತಂ ಸತ್ ಪ್ರಚಲತಿ ನಿಯಮೇನ ಚೇಷ್ಟತೇ ।**

( ಶಂಕರ. ಭಾಷ್ಯ. )

ಈ ಜಗತ್ತೆಲ್ಲವೂ ಸಹ ಪ್ರಾಣನು (ಎಂದರೆ ಪರಬ್ರಹ್ಮನು) ಇದ್ದರೆ ಅವನ ಪ್ರೇರಣೆಯಿಂದಲೂ, ಆ ಪ್ರಭುವಿರುವ ಭೀತಿಯಿಂದಲೂ ಸಹ ನಡಗುತ್ತಾ ತನ್ನ ಪ್ರಾಪಂಚಿಕವಾದ ವ್ಯವಹಾರಗಳಲ್ಲಿ ತೊಡಗಿರುತ್ತದೆ ಮತ್ತು ನಿಯಮದಿಂದ ಕೆಲಸಗಳನ್ನು ಮಾಡುತ್ತಿರುತ್ತದೆ, ಎಂದು ಕಠೋಪನಿಷತ್ತಿನಲ್ಲಿ ವಿವರಿಸಿದೆ. ದೇಹೇಂದ್ರಿಯಗಳ ವ್ಯಾಪಾರಗಳಿಗೆ ಹೇತುಭೂತನಾದ ಈ ಆತ್ಮನು ದೇಹರೂಪವಾದ ಗೃಹದಲ್ಲಿ ವಾಸಮಾಡುವುದರಿಂದ **ಪಸ್ತ್ಯಾನಾಂ ಮಧ್ಯೇ ಆ ಶಯೇ ।** ಎಂದು ಆತ್ಮನ ದೇಹಾಂತರ್ಗತವಾದ ಸ್ಥಿತಿಯನ್ನು ತಿಳಿಸಿದೆ. ಈರೀತಿಯಾದ ಸ್ಥಿತಿಯಿರುವುದರಿಂದಲೇ ಆತ್ಮನಿಗೆ ಪುರುಷನೆಂದೂ ಹೆಸರು. ಉಪಾಧಿಯುಕ್ತವಾದುದೂ ಲೌಕಿಕವಾದುದೂ ಆದ ದೇಹದಲ್ಲಿ ಅಡಗಿರುವವನು ಎಂದರ್ಥವು. ಇದನ್ನೇ ವರ್ಣಿಸುತ್ತಾ

**ಪುರಃ ಸ ಪಕ್ಷೀ ಭೂತ್ವಾ ಪುರಃ ಪುರುಷ ಆವಿಶದಿತಿ । ಸ ವಾ ಅಯಂ ಪುರುಷಃ ಸರ್ವಾಸು ಪೂರ್ಷು ಪುರಿಶಯೋ ನೈನೇನ ಕಿಂಚನಾನಾವೃತಂ ನೈನೇನ ಕಿಂಚನಾಸಂವೃತಂ ।**

(ಬೃ. ಉ. ೨-೫-೧೮)

**ಪುರಃ ಪುರಸ್ತಾತ್ಸ ಈಶ್ವರಃ ಪಕ್ಷೀ ಲಿಂಗಶರೀರಂ ಭೂತ್ವಾ ಪುರಃ ಶರೀರಾಣಿ ಪುರುಷಃ ಆವಿಶ-ದಿತ್ಯಸ್ಯಾರ್ಥಮಾಚಷ್ಟೇ ಶ್ರುತಿಃ । ಸ ವಾ ಅಯಂ ಪುರುಷಃ ಸರ್ವಾಸು ಪೂರ್ಷು ಸರ್ವ ಶರೀರೇಷು ಪುರಿಶಯಃ [ಪುರಿ ಶೇತೆ ಇತಿ ಪುರಿಶಯಃ] ಸನ್ ಪುರುಷ ಇತ್ಯುಚ್ಯತೇ ॥**

(ಶಂಕರ ಭಾಷ್ಯ.)

ಪರಮಾತ್ಮನು ಲಿಂಗಶರೀರಾತ್ಮಕನಾಗಿ ಸಕಲ ವಿಧವಾದ ದೇಹಗಳಲ್ಲಿಯೂ ಪ್ರವೇಶಿಸಿರುವುದರಿಂದ ಇವನಿಗೆ **ಪುರುಷ** ನೆಂಬ ವ್ಯವಹಾರವಿದೆ. ಆದರೆ ಉಪಾಧಿಗಳಿಂದ ಕೂಡಿದ ದೇಹಗಳೊಳಗೆ ಅಂತರ್ಗತನಾಗಿದ್ದು, ಆಯಾ ದೈಹಿಕ ವಾದ ವ್ಯಾಪಾರಗಳಿಂದ ತಾನೂ ಸಹ ಲಿಪ್ತನಾಗುವುದಿಲ್ಲವೇ ಎಂಬ ಶಂಕೆಯನ್ನು ಪರಿಹರಿಸುವುದಕ್ಕಾಗಿ ತಾನು ಆಶ್ರಯಿಸಿರುವ ದೇಹಕ್ಕೂ ಆತ್ಮನಿಗೂ ವ್ಯತ್ಯಾಸವನ್ನು ತೋರಿಸಿದೆ. ಈ ಜೀವವು ದೇಹಾಂತರಗತವಾಗಿರುವವರೆಗೂ ದೇಹವು ಸಜೀವಿಯೆನಿಸಿಕೊಳ್ಳುತ್ತದೆ. ಇದು ನಿರ್ಗಮಿಸಿದನಂತರ ದೇಹವು ಮೃತವೆನಿಸಿಕೊಳ್ಳುತ್ತದೆ. ಆದುದರಿಂದ ಆತ್ಮನು ಅಮರ್ತ್ಯನು ; ದೇಹವು ಮರ್ತ್ಯವು. ಆದುದರಿಂದ **ಅಮರ್ತ್ಯಃ ಜೀವಃ ಮೃತಸ್ಯ ಚರತಿ** ಎಂದು ವ್ಯತ್ಯಾಸ ವನ್ನು ಹೇಳಿದೆ. ಇದನ್ನೇ ಛಾಂದೋಗ್ಯೋಪನಿಷತ್ತಿನಲ್ಲಿ—

**‘ ಜೀವಾಪೇತಂ ವಾವ ಕಿಲೇದಂ ಮ್ರಿಯತೇ ನ ಜೀವೋ ಮ್ರಿಯತೇ ’ ।**

(ಛಾ. ಉ. ೬-೧೧-೩)

ಜೀವವು ಶರೀರವನ್ನು ಬಿಟ್ಟಾಗ ಶರೀರವು ಮೃತವಾಗುತ್ತದೆ. ಆದರೆ ಜೀವವು ಅಮರ್ತ್ಯವಾದುದರಿಂದ ಅದು ಮೃತ ವಾಗುವುದಿಲ್ಲ ಎಂದು ತಿಳಿಸಿದೆ. ಆದರೂ ಸಹ ಶರೀರದೊಡನೆ ಉತ್ಪನ್ನವಾಗುವ ಕಾಲದಲ್ಲಿ ಶರೀರಕ್ಕೂ ಈ ಜೀವಕ್ಕೂ ಒಂದೇ ಉತ್ಪತ್ತಿಸ್ಥಾನವೆಂಬ ವ್ಯವಹಾರವಿದೆ.

**ಸ್ವಧಾಭಿಃ ಚರತಿ**—ದೇಹವನ್ನು ಈ ಜೀವವು ತ್ಯಾಗಮಾಡಿದೊಡನೆ ಇದಕ್ಕಿರುವ ಮಾರ್ಗಗಳು ಎರಡು ವಿಧವಾಗಿದೆ. ಒಂದು ದೇವಮಾರ್ಗವು. ಇನ್ನೊಂದು ಪಿತೃಮಾರ್ಗವು. ಪಿತೃಮಾರ್ಗವನ್ನನುಸರಿಸಿದರೆ ಆಗ ಪುತ್ರಾದಿ ಗಳಿಂದ ದತ್ತವಾದ ಸ್ವಧೆಗಳಿಂದ (ಕವ್ಯಗಳಿಂದ) ಈ ಜೀವಕ್ಕೆ ತೃಪ್ತಿಯು ಲಭಿಸುತ್ತದೆ. ಸ್ವಧಾರೂಪವಾದ ಅನ್ನ ಗಳಿಂದ ತೃಪ್ತಿಯನ್ನು ಪಡೆಯುತ್ತಾ ಪಿತೃಲೋಕದಲ್ಲಿ ಸಂಚರಿಸುತ್ತಾರೆಂದರ್ಥವು.

॥ ವ್ಯಾಕರಣಪ್ರಕ್ರಿಯಾ ॥

**ಅನತ್**—ಅನ ಪ್ರಾಣನೇ. ಧಾತು ಅದಾದಿ. ಲಟಿಗೆ ಶತ್ರಾದೇಶ. ಪ್ರತ್ಯಯದ ಆದ್ಯುದಾತ್ತಸ್ವರ ಬರುತ್ತದೆ.

**ಶಯೇ**—ಶೀಙ್ ಸ್ವಪ್ನೇ. ಧಾತು. ಲಟ್ ಪ್ರಥಮಪುರುಷ ಏಕವಚನದಲ್ಲಿ ತಪ್ರತ್ಯಯ. **ಟಿತ ಆತ್ಮನೇ-ಪದಾನಾಂ**—ಎಂಬುದರಿಂದ ಟಿಗೆ ಏತ್ವ **ಅದಿಪ್ರಭೃತಿಭ್ಯಃ ಶಪಃ** (ಪಾ. ಸೂ. ೨-೪-೭೨) ಎಂಬುದರಿಂದ ಶಪಿಗೆ ಲುಕ್. **ಶೀಙಃ ಸಾರ್ವಧಾತುಕೇ ಗುಣಃ** (ಪಾ. ಸೂ. ೭-೪-೨೧) ಸೂತ್ರದಿಂದ ಧಾತುವಿನ ಇಕಾರಕ್ಕೆ ಗುಣ. **ಲೋಪಸ್ತ ಆತ್ಮನೇಪದೇಷು** (ಪಾ ಸೂ ೭ ೧-೪) ಎಂಬುದರಿಂದ ಪ್ರತ್ಯಯದ ತಕಾರಕ್ಕೆ ಲೋಪ. ಅಯಾದೇಶ. ತಿಙಂತ ನಿಘಾತಸ್ವರ ಬರುತ್ತದೆ.

**ತುರಗಾತು**—**ಬಹುವ್ರೀಹೌ ಪ್ರಕೃತ್ಯಾ ಪೂರ್ವಪದಮ್** (ಪಾ. ಸೂ. ೬-೨-೧) ಎಂಬುದರಿಂದ ಪೂರ್ವಪದ ಪ್ರಕೃತಿಸ್ವರ ಬರುತ್ತದೆ.

**ಏಜತ್**—ಏಜೃ ಕಂಪನೇ ಧಾತು ಲಟಿಗೆ ಶತ್ರಾದೇಶ. ಲಸಾರ್ವಧಾತುಕವು **ತಾಸ್ಯನುದಾತ್ತೇತ್**—ಸೂತ್ರದಿಂದ ಅನುದಾತ್ತವಾಗುವುದರಿಂದ ಧಾತು ಸ್ವರ ಉಳಿಯುತ್ತದೆ.

**ಚರತಿ**—ಚರ ಗತಿಭಕ್ಷಣಯೋಃ ಧಾತು. ಲಟ್ ಪ್ರಥಮಪುರುಷ ಏಕವಚನಾಂತರೂಪ. ತಿಙಂತ ನಿಘಾತಸ್ವರ ಬರುತ್ತದೆ.

**ಅಮರ್ತ್ಯಃ**—ನಞ್‌ತತ್ಪುರುಷಸಮಾಸ. **ತತ್ಪುರುಷೇ ತುಲ್ಯಾರ್ಥ**—(ಪಾ. ಸೂ. ೬-೨-೨)ಎಂಬುದರಿಂದ ಅವ್ಯಯಪೂರ್ವಪದ ಪ್ರಕೃತಿಸ್ವರ ಬರುತ್ತದೆ.

**ಸಯೋನಿಃ**—ಸಮಾನಃ ಯೋನಿಃ ಯಸ್ಯ ಸಃ **ಸಮಾನಸ್ಯಛಂದಸ್ಯಮೂರ್ಧ**-(ಪಾ. ಸೂ. ೬-೩-೮೪) ಎಂಬುದರಿಂದ ಸಮಾನ ಎಂಬುದಕ್ಕೆ ಸಭಾವ. **ಬಹುವ್ರೀಹೌ ಪ್ರಕೃತ್ಯಾಪೂರ್ವಪದಮ್** (ಪಾ. ಸೂ. ೬-೨-೧) ಎಂಬುದರಿಂಗ ಪೂರ್ವಪದ ಪ್ರಕೃತಿಸ್ವರ ಬುರುತ್ತದೆ. ॥ ೩೦ ॥

ಸಂಹಿತಾಪಾಠಃ

**ಅಪಶ್ಯಂ ಗೋಪಾಮನಿಪದ್ಯಮಾನಮಾ ಚ ಪರಾ ಚ ಪಥಿಭಿಶ್ಚರಂತಂ ।**
**ಸ ಸಧ್ರೀಚೀಃ ಸ ವಿಷೂಚೀರ್ವಸಾನ ಆ ವರೀವರ್ತಿ ಭುವನೇಷ್ವಂತಃ ॥**

॥ ೩೧ ॥

ಪದಪಾಠ

ಅಪಶ್ಯಂ । ಗೋಪಾಂ । ಅನಿऽಪದ್ಯಮಾನಂ । ಆ । ಚ । ಪರಾ । ಚ । ಪಥಿऽಭಿಃ । ಚರಂತಂ ।

ಸಃ । ಸಧ್ರೀಚೀಃ । ಸಃ । ವಿಷೂಚೀಃ । ವಸಾನಃ । ಆ । ವರೀವರ್ತಿ । ಭುವನೇಷು । ಅಂತರಿತಿ ॥ ೩೧ ॥

ಸಾಯಣಭಾಷ್ಯಂ

ಪ್ರವರ್ಗ್ಯೇऽಭಿಷ್ಟವೇऽಪಶ್ಯಂ ಗೋಪಾಮಿತ್ಯೇಷಾ ವಿನಿಯುಕ್ತಾ । ಸೂತ್ರಿತಂ ಚ । ಅಪಶ್ಯಂ ಗೋಪಾಮನಿಪದ್ಯಮಾನಂ ಪ್ರತ್ನೇ ದ್ರಪ್ಸಸ್ಯ । ಆ ೪-೬ । ಇತಿ ॥

ಅಹಂ ಗೋಪಾಂ ಸರ್ವಸ್ಯ ಲೋಕಸ್ಯ ವೃಷ್ಟಿಪ್ರಕಾಶಾದಿನಾ ಗೋಪಾಯಿತಾರಮನಿಪದ್ಯಮಾನಂ ಕದಾಚಿದಪ್ಯವಿಪನ್ನಂ ತಥಾ ಪಥಿಭಿರ್ವಿಚಿತ್ರೈರ್ಮಾರ್ಗೈರಂತರಿಕ್ಷರೂಪೈರಾ ಚರಂತಂ ಚ ಪರಾ ಚರಂತಂ

ಚ ಉದಯಪ್ರಭೃತ್ಯಾ ಮಧ್ಯಾಹ್ನಮಾಗಚ್ಛಂತಂ ಮಧ್ಯಾಹ್ನಪ್ರಭೃತ್ಯಾ ಸಾಯಂ ಪರಾಙ್ಮುಖಂ ಗಚ್ಛಂತಂ ಏವಂ ಮಹಾನುಭಾವಮಾದಿತ್ಯಮಪಶ್ಯಂ । ಯಾಥಾತ್ಮ್ಯೇನ ಪಶ್ಯೇಯಂ । ಕಿಂಚ ಸ ಆದಿತ್ಯಃ ಸಧ್ರೀಚೀಃ ಸಹಾಂಚಂತೀರ್ವಿಷೂಚೀರ್ವಿಷ್ವಗಂಚಂತೀ ರಾತ್ರಾವಪಿ ಚಂದ್ರಭೌಮಾದಿತ್ಯಾನಾಂ ಪ್ರಕಾಶಯಿತ್ರೀಸ್ತ್ವಿಷೋ ವಸಾನ ಆಚ್ಛಾದಯನ್ ಭುವನೇಷು ಭುವನೈಕದೇಶೇಷು ಲಂಕಾದಿಪ್ರದೇಶೇಷ್ವಂತರ್ಮಧ್ಯ ಆ ವರೀವರ್ತಿ । ಉದಯಾಸ್ತಮಯಂ ಕುರ್ವನ್ ಪುನಃಪುನರಾವರ್ತತೇ । ತಮಪಶ್ಯಮಿತ್ಯರ್ಥಃ । ಏಷ ವೈ ಗೋಪಾ ಏಷ ಹೀದಂ ಸರ್ವಂ ಗೋಪಾಯತೀತ್ಯಾದ್ಯಸ್ಯ ಬ್ರಾಹ್ಮಣಂ । ಅಪಶ್ಯಂ ಗೋಪಮಿತ್ಯಾಹ ಅಸೌ ವಾ ಆದಿತ್ಯೋ ಗೋಪಾ ಸ ಹೀಮಾಃ ಪ್ರಜಾ ಗೋಪಾಯತೀತ್ಯಾದಿ ತೈತ್ತಿರೀಯಕಂ ಚ ದ್ರಷ್ಟವ್ಯಂ । ತೈ. ಆ ೫-೬-೪ ॥

ಪ್ರತಿಪದಾರ್ಥ

**ಗೋಪಾಂ**—ವಿಶ್ವರಕ್ಷಕನೂ । **ಅನಿಪದ್ಯಮಾನಂ**—ಯಾವಾಗಲೂ ಖಿನ್ನನಾಗದಿರುವವನೂ । **ಪಥಿಭಿಃ**—ಅಂತರಿಕ್ಷಾದಿಮಾರ್ಗಗಳಿಂದ । **ಆ ಚರಂತಂ**—ಸಂಚರಿಸುವವನೂ । **ಪರಾ ಚ**—ಗಮನಾಗಮನಾದಿ ರೂಪಗಳಿಂದ ಲೋಕಕ್ಕೆ ಅಭಿಮುಖವಾಗಿಯೂ ಮತ್ತು ಪರಾಙ್ಮುಖವಾಗಿಯೂ ಸಹ ಪರ್ಯಾಯರೂಪವಾದ ಸಂಚಾರವುಳ್ಳವನೂ ಆದ ಆದಿತ್ಯನನ್ನು । **ಅಪಶ್ಯಂ**—ತಿಳಿಯುವೆನು । **ಸಃ**—ಅದೇ ಆದಿತ್ಯನು । **ಸಧ್ರೀಚೀಃ**—ಒಟ್ಟಿಗೆ ಸೇರಿರುವುವೂ । **ವಿಷೂಚೀಃ**—ನಾನಾ ರೂಪಗಳಲ್ಲಿ ಹರಡಿ ವಿಶ್ವವನ್ನು ವ್ಯಾಪಿಸುವುವೂ ಆದ ಕಿರಣಗಳಿಂದ । **ವಸಾನಃ**—ಲೋಕಗಳನ್ನು ಆಚ್ಛಾದನೆ ಮಾಡುತ್ತಾ । **ಭುವನೇಷು**—ಲಿಂಗರೂಪವಾದ ಭುವನಗಳ । **ಅಂತಃ**—ಮಧ್ಯಭಾಗದಲ್ಲಿ । **ಆ ವರೀವರ್ತಿ**—ಉದಯಾಸ್ತಮಯರೂಪದಲ್ಲಿ ಪರಿಭ್ರಮಣವನ್ನು ಹೊಂದುತ್ತಾನೆ ।

ಭಾವಾರ್ಥ

ವಿಶ್ವರಕ್ಷಕನೂ, ಯಾವಾಗಲೂ ಖಿನ್ನನಾಗದಿರುವವನೂ, ಅಂತರಿಕ್ಷಾದಿ ಮಾರ್ಗಗಳಿಂದ ಸಂಚರಿಸುವವನೂ, ಗಮನಾಗಮನಾದಿ ರೂಪಗಳಿಂದ ಲೋಕಕ್ಕೆ ಅಭಿಮುಖವಾಗಿಯೂ ಮತ್ತು ಪರಾಙ್ಮುಖವಾಗಿಯೂ ಸಹ ಪರ್ಯಾಯರೂಪವಾದ ಸಂಚಾರವುಳ್ಳವನೂ ಆದ ಆದಿತ್ಯನನ್ನು ನಾನು ತಿಳಿಯುತ್ತೇನೆ. ಅದೇ ಆದಿತ್ಯನು ತನ್ನಲ್ಲಿ ಒಟ್ಟಿಗೆ ಸೇರಿರುವುವೂ ಮತ್ತು ನಾನಾ ರೂಪಗಳಲ್ಲಿ ಹರಡಿ ವಿಶ್ವವನ್ನು ವ್ಯಾಪಿಸುವುವೂ ಆದ ಕಿರಣಗಳಿಂದ ಲೋಕಗಳನ್ನು ಆಚ್ಛಾದನೆಮಾಡುತ್ತಾ ಲಿಂಗರೂಪವಾದ ಭುವನಗಳ ಮಧ್ಯಭಾಗದಲ್ಲಿ ಉದಯಾಸ್ತಮಯರೂಪದಲ್ಲಿ ಪರಿಭ್ರಮಣವನ್ನು ಹೊಂದುತ್ತಾನೆ.

English Translation

I have beheld the unwearied protector of the universe, the sun, travelling upwards and downwards by various paths: invested with aggregative and diffusive radiance, he revolves in the midst of the regions.

। ವಿಶೇಷವಿಷಯಗಳು ।

ಪ್ರವರ್ಗ್ಯದಲ್ಲಿ ಅಭಿಷ್ಟವಕಾಲದಲ್ಲಿ **ಅಪಶ್ಯಂ ಗೋಪಾಂ** ಎಂಬ ಈ ಋಕ್ಕಿನ ವಿನಿಯೋಗವಿರುವುದೆಂದು ಆಶ್ವಲಾಯನಶ್ರೌತಸೂತ್ರದ **ಅಪಶ್ಯಂ ಗೋಪಾಮನಿಪದ್ಯಮಾನಂ ಸ್ರಕ್ತ್ವೇ ದ್ರಪ್ಸಸ್ಯ** ಎಂಬ ಸೂತ್ರದಿಂದ ವಿವೃತವಾಗಿರುವುದು (ಆ. ೪-೬)

ಪ್ರವರ್ಗ್ಯೇ ಅಭಿಷ್ಟವೇ **'ಅಪಶ್ಯಂ ಗೋಪಾಂ' ಇತ್ಯೇಕಾ ವಿನಿಯುಕ್ತಾ** । ಎಂದು ಸಾಯಣರು **'ಅಪಶ್ಯಂ ಗೋಪಾಮನಿಪದ್ಯಮಾನಃ ಸ್ರಕ್ವೇ ದ್ರಪ್ಸಸ್ಯ'** (ಆಶ್ವ. ಶ್ರೌ. ೪-೬) ಎಂಬ ಆಶ್ವಲಾಯನಶ್ರೌತ ಸೂತ್ರವನ್ನು ಉದಹರಿಸಿ ಈ ಮಂತ್ರದ ವಿನಿಯೋಗವನ್ನು ತಿಳಿಸಿದ್ದಾರೆ. ಪ್ರವರ್ಗ್ಯಯಾಗಕಾಲದಲ್ಲಿ ಪಠಿಸಬೇಕಾದ ಮಂತ್ರವಿದು. ಆದರೆ ಅದರಲ್ಲೂ ನಿರ್ದಿಷ್ಟವಾದ ಕಾಲವಾವುದೆಂಬುದನ್ನು ತೈತ್ತಿರೀಯಾರಣ್ಯಕದ ಭಾಷ್ಯದಲ್ಲಿ ಸಾಯಣರು ತಿಳಿಸಿದ್ದಾರೆ. **ಅಥ ಸಪ್ತಮೋ ಮಹಾವೀರಾವೇಕ್ಷಣಮುಚ್ಯತೇ** । ಇದು ಮಹಾವೀರಾವೇಕ್ಷಣಕಾಲದಲ್ಲಿ ಪಠಿಸ ತಕ್ಕ ಮಂತ್ರವು ಎಂದು ಇದೇ ಮಂತ್ರವನ್ನು ಆರಣ್ಯಕದಲ್ಲಿ ವ್ಯಾಖ್ಯಾನಮಾಡುವ ಪೀಠಿಕಾಭಾಗದಲ್ಲಿ ಹೇಳಿದೆ. ಆದು ದರಿಂದ ಈ ಮಂತ್ರಕ್ಕೆ ಪ್ರವರ್ಗ್ಯರೂಪವಾದ ಕರ್ಮಪರವಾಗಿಯೂ ಮತ್ತು ಆಧ್ಯಾತ್ಮಿಕಜ್ಞಾನದ ಪರವಾಗಿಯೂ ಅರ್ಥವನ್ನು ಹೇಳಬೇಕು. ಮೊದಲು ಕರ್ಮಪರವಾಗಿ ಅರ್ಥವನ್ನು ಮಾಡಿದರೆ ಮಹಾವೀರವೆಂಬ ಕುಂಭವನ್ನು ಇಲ್ಲಿ ಲೋಕಸಂಚಾರಿಯಾದ ಆದಿತ್ಯನಿಗೆ ಹೋಲಿಸಿದೆ. ಅಥವಾ ಮಹಾವೀರಕ್ಕೂ ಆದಿತ್ಯನಿಗೂ ತಾದಾತ್ಮ್ಯವನ್ನೇ ಹೇಳಿದೆ.

ಲೌಕಿಕವಾದ ಪ್ರತ್ಯಕ್ಷಕ್ಕೆ ಗೋಚರವಾಗುವ ಆದಿತ್ಯನ ಉದಯಾಸ್ತಮಯರೂಪವಾದ ಸಂಚಾರವು ಲೋಕ ಕ್ಕೆಲ್ಲಾ ವಿದಿತವಾಗಿರುವ ಅಂಶವೇ ಆಗಿದೆ. ಆದರೂ ಸಹ, **ವಿಶ್ವಸ್ಯ ಗೋಪಾಂ ಅನಿಪದ್ಯಮಾನಂ** ಇತ್ಯಾದಿ ವಿಶೇಷಣಗಳು ಆದಿತ್ಯನ ಲೋಕರಕ್ಷಣಸ್ವರೂಪವನ್ನೂ, ಅದಕ್ಕಾಗಿ ಅವನು ನಿರಂತರವಾಗಿ ಸಂಚರಿಸುತ್ತಿದ್ದರೂ ಸಹ ಅಕುಂಠಿತವಾದ ಸ್ವರೂಪವನ್ನು ಹೊಂದಿರುವುದನ್ನೂ ವರ್ಣಿಸುತ್ತವೆ.

**ಅಸೌ ವಾ ಆದಿತ್ಯೋ ಲೋಕಂಪೃಣಾಯಾತಯಾಮಾ** ।

(ಶ. ಬ್ರಾ. ೮-೭-೨-೭)

ಇತ್ಯಾದಿವಾಕ್ಯಗಳಿಂದ ಶತಪಥಾದಿಗಳಲ್ಲಿ ಆದಿತ್ಯನ ಈ ಅಕುಂಠಿತವಾದ ಸ್ವರೂಪವನ್ನು ವರ್ಣಿಸಿರುವಂತೆ ಇಲ್ಲಿಯೂ ಸಹ **ಅನಿಪದ್ಯಮಾನಂ** ಅನುಸ್ಯೂತವಾದ ಸಂಚಾರವನ್ನಿಟ್ಟುಕೊಂಡಿದ್ದರೂ ಸಹ ಕೊಂಚವೂ ಖಿನ್ನವಾಗದ ಸ್ವರೂಪ ವುಳ್ಳ ಆದಿತ್ಯನನ್ನು ಎಂದು ತಿಳಿಸಿದೆ.

**ಗೋಪಾಂ—ಸರ್ವಸ್ಯ ಲೋಕಸ್ಯ ವೃಷ್ಟಿಪ್ರಕಾಶಾದಿನಾ ಗೋಪಾಯಿತಾರಂ** । ವೃಷ್ಟಿದಾನದಿಂದಲೂ, ಪ್ರಕಾಶವನ್ನು ಪ್ರಸರಿಸುವುದರಿಂದಲೂ ಸಹ ಸಕಲ ಲೋಕಗಳನ್ನೂ ಕಾಪಾಡತಕ್ಕವನೆಂದರ್ಥವು. ಇದನ್ನೇ ತೈತ್ತಿರೀಯಾರಣ್ಯಕದಲ್ಲಿ,

**ಅಪಶ್ಯಂ ಗೋಪಾಮಿತ್ಯಾಹ । ಅಸೌ ವಾ ಆದಿತ್ಯೋ ಗೋಪಾಃ । ಸ ಹೀಮಾಃ ಪ್ರಜಾ ಗೋಪಾ-ಯತಿ । ತಮೇವ ಪ್ರಜಾನಾಂ ಗೋಪ್ತಾರಂ ಕುರುತೇ** ।

(ತೈ. ಆ. ೫-೬-೪)

ಎಂಬ ವಾಕ್ಯಗಳಿಂದ ಸ್ತುತಿಸಿದೆ. **ಉದಯೇನ ಪ್ರಕಾಶಂ ಕೃತ್ವಾ ಸರ್ವಾಃ ಪ್ರಜಾ ಗೋಪಾಯತಿ** । ಎಂದು ಸಾಯಣರು ವಿವರಿಸಿದ್ದಾರೆ.

**ಅನಿಪದ್ಯಮಾನಂ—ಕದಾಚಿದಪಿ ಅವಿಷಣ್ಣಂ** । ಯಾವಾಗಲೂ ಖಿನ್ನನಾಗದಿರತಕ್ಕ ಎಂದು ಆದಿತ್ಯನ ಧ್ರುವಸ್ಥಿತಿಯನ್ನು ತಿಳಿಸಿದೆ.

**ಅನಿಪದ್ಯಮಾನಮಿತ್ಯಾಹ । ನ ಹ್ಯೇಷ ನಿಪದ್ಯತೇ ।**
( ತೈ. ಆ. ೫-೬-೪, ೫ )

ಇಲ್ಲಿ ಭೂಮೌ ಪತನಾಭಾವಃ । ಅಂತರಿಕ್ಷಸ್ಥನಾದ ಆದಿತ್ಯನಿಗೆ ಭೂಮಿಯಮೇಲೆ ಪತನವಾಗುವ ಸಂಭವವಿಲ್ಲವೆಂದು ಆರಣ್ಯಕದ ವಿವರಣೆಯಿದೆ ಎಂದು ಸಾಯಣರು ತಿಳಿಸಿದ್ದಾರೆ. (ಸಾ ಭಾ ).

**ಸಧ್ರೀಚೀಃ ವಿಷೂಚೀಃ**—ಎಂಬೆರಡುಪದಗಳೂ ಆದಿತ್ಯರಶ್ಮಿಗಳಿಗೆ ವಿಶೇಷಣಗಳಾಗಿವೆ. **ವಿಷೂಚೀಃ** ಎಂದರೆ ವಿವಿಧವಾಗಿ ನಾನಾ ಕಡೆಗಳಲ್ಲಿಯೂ ಹರಡಿ ಜಗತ್ತಿಗೆ ಕ್ಲೇಶವನ್ನುಂಟುಮೂಡುವುವು ಎಂದರ್ಥ. ಸಾಕ್ಷಾತ್ತಾಗಿ ಆದಿತ್ಯನ ಸನ್ನಿಧಿಯಿಂದಲೇ ಪ್ರಸರಿಸುವುದು ಮಾತ್ರವಲ್ಲದೇ ಚಂದ್ರಾದಿಗ್ರಹಗಳಲ್ಲಿಯೂ ಕೇಂದ್ರಿತವಾಗಿ ಅಲ್ಲಿಯೂ ಬೇರೆ ಬೇರೆ ರೀತಿಗಳಲ್ಲಿ ಜಗತ್ತನ್ನು ವ್ಯಾಪಿಸಿ ಪ್ರಕಾಶರೂಪವಾದ ಹೊದ್ದಿಕೆಯನ್ನು ಹೊದ್ದಿಸತಕ್ಕ ಕಿರಣಗಳು ಎಂಬುದನ್ನು ತಿಳಿಸಲು **ಚಂದ್ರಭೌಮಾದಿತ್ಯಾನಾಂ ರಾತ್ರಾವಪಿ ಪ್ರಕಾಶಯಿತ್ರೀಃ ತ್ವಿಷಃ** ಎಂದು ಸಾಯಣರು **ವಿಷೂಚೀಃ** ಎಂಬ ಪದಕ್ಕೆ ಅರ್ಥವನ್ನು ವಿವರಿಸಿದ್ದಾರೆ. ಇದನ್ನೇ ತೈತ್ತಿರೀಯಾರಣ್ಯಕದಲ್ಲಿ

**ಸ ಸಧ್ರೀಚೀಸ್ಸವಿಷೂಚೀರ್ವಸಾನ ಇತ್ಯಾಹ । ಸಧ್ರೀಚೀಶ್ಚ ಹ್ಯೇಷ ವಿಷೂಚೀಶ್ಚ ವಸಾನಃ ಪ್ರಜಾ ಅಭಿ ವಿಪಶ್ಯತಿ ॥**
(ತೈ. ಆ. ೫-೬-೫)

ಎಂದು ವಿವರಣರೂಪದಲ್ಲಿ ತಿಳಿಸಿದೆ. ಇದೆಲ್ಲಾ ಆದಿತ್ಯಪರವಾದರೆ—ಪ್ರವರ್ಗ್ಯಯಾಗದಲ್ಲಿ ಆದಿತ್ಯನೊಡನೆ ತಾದಾತ್ಮ್ಯವನ್ನು ತೋರಿಸಿ **ಮಹಾವೀರ** ಪರವಾದ ಅರ್ಥವನ್ನು ತೈತ್ತಿರೀಯಾಣ್ಯಕ್ಕದ ವ್ಯಾಖ್ಯಾನದಲ್ಲಿ ಸಾಯಣರು ಹೇಳಿದ್ದಾರೆ. **ಗೋಪಾಂ** ಎನ್ನುವುದಕ್ಕೆ **ಕರ್ಮನಿಷ್ಪಾದನೇನ ರಕ್ಷಕಂ** । ಕರ್ಮವು ನಿರ್ವಿಘ್ನವಾಗಿ ನೆರವೇರುವಂತೆ ಮಾಡುವುದರಿಂದ ಈ ವಿಶೇಷಣವು **ಮಹಾವೀರ**ಪರವಾಗಿದೆ. **ಅನಿಪದ್ಯಮಾನಂ** ಎಂಬ ಪದಕ್ಕೆ **ವಿನಾಶರಹಿತಂ ಅಥವಾ ಆದಿತ್ಯರೂಪೇಣ ಪತನರಹಿತಂ ।** ನಾಶರಹಿತವಾದುದು ಅಥವಾ ಆದಿತ್ಯರೂಪದಿಂದಿದ್ದು ಪತನವಿಲ್ಲದಿರತಕ್ಕದ್ದು ಎಂದರ್ಥ. ಇವೆಲ್ಲವು ಕರ್ಮಪರವಾದ ಅರ್ಥವಾಗಿದೆ ಆಧ್ಯಾತ್ಮಿಕವಾದ ದೃಷ್ಟಿಯಿಂದಲೂ ಈ ವಿಶೇಷಣಗಳ ಔಚಿತ್ಯವನ್ನು ತೋರಿಸಿ ಪರಬ್ರಹ್ಮನೇ ಆದಿತ್ಯಸ್ವರೂಪನು; ಆದುದರಿಂದ ಈ ವರ್ಣನಗಳೆಲ್ಲವೂ ಪರಬ್ರಹ್ಮನ ವರ್ಣನಗಳು ಎಂದೂ ಅರ್ಥಮಾಡಬಹುದು.

**ತದ್ಯಥಾ ಮಹಾಪಥ ಆತತ ಉಭೌ ಗ್ರಾಮೌ ಗಚ್ಛತೀಮಂ ಚಾಮುಂ ಚೈವಮೇವೈತಾ ಆದಿತ್ಯಸ್ಯ ರಶ್ಮಯ ಉಭೌ ಲೋಕೌ ಗಚ್ಛತೀಮಂ ಚಾಮುಂ ಚಾಮುಷ್ಮಾದಾದಿತ್ಯಾತ್ಪ್ರತಾಯಂತೇ ತಾ ಆಸು ನಾಡೀಷು ಸೃಪ್ತಾ ಆಭ್ಯೋ ನಾಡೀಭ್ಯಃ ಪ್ರತಾಯಂತೇ ತೇಽಮುಷ್ಮಿನ್ನಾದಿತ್ಯೇ ಸೃಪ್ತಾಃ ।**
(ಛಾ. ಉ. ೮-೬-೨)

ಎಂದು ಪ್ರಕೃತವಾದ ಋಕ್ಕಿನಲ್ಲಿ **ಸಧ್ರೀಚೀಃ ವಿಷೂಚೀಃ** ಎಂಬ ವಿಶೇಷಣಗಳಿಂದ ತಿಳಿಸುವ ಗುಣಗಳು ವರ್ಣಿತವಾಗಿವೆ. ಎರಡು ಮಹಾಗ್ರಾಮಗಳಿಗೆ ದಾರಿಯನ್ನು ತೋರಿಸುವ ಎರಡು ಮಹಾಪಥಗಳು ವಿಸ್ತೃತವಾಗಿ ಹರಡಿರುವಂತೆ, ಈ ಆದಿತ್ಯರಶ್ಮಿಗಳಿಗೂ ಸಹ ಎರಡು ಮಹಾಪಥಗಳಿದ್ದು ಆ ಪಥಗಳಲ್ಲಿ ಆ ರಶ್ಮಿಗಳ ಪ್ರಸರಣವು ಎರಡು ವಿಧಗಳಲ್ಲಿರುತ್ತದೆ. ಆದಿತ್ಯನಿಂದ ಉಳಿದೆಲ್ಲಾ ಲೋಕಗಳಿಗೂ ಹರಡುವುದೂ, ಪುನಃ ಅವೆಲ್ಲವೂ ಅಲ್ಲಿಂದ ಹೊರಟು

ಆದಿತ್ಯನಲ್ಲಿಗೇ ಸೇರಿ ಕೇಂದ್ರೀಕೃತವಾಗುವುದೂ ಸಹ ಇಲ್ಲಿ ವಿವರಿಸಲ್ಪಟ್ಟಿದೆ. ಇಲ್ಲಿ ನಾಡಿಗಳೆಂದರೆ ಕೇವಲ ಪುರುಷ ವ್ಯಕ್ತಿಯ ದೇಹದಲ್ಲಿರುವ ಸಕಲ ನಾಡಿಗಳೆಂದರ್ಥಮಾಡಬಹುದು. ಅಥವಾ ಇದನ್ನೇ ರೂಪಕವಾಗಿ ತೆಗೆದುಕೊಂಡರೆ ವಿಶ್ವವನ್ನೇ ಶರೀರವನ್ನಾಗಿ ತಿಳಿದು ಅಲ್ಲಿರುವ ಅವಯವಗಳನ್ನೇ ನಾಡಿಗಳಿಗೆ ಹೋಲಿಸಿ ಅರ್ಥಮಾಡಬಹುದು. ಅದು ದರಿಂದಲೇ **ಉಭೌ ಲೋಕೌ ಗಚ್ಛಂತಿ** ಎಂದು ಹೇಳಿದೆ. ಆದಿತ್ಯನಿಂದ ಪ್ರಸರಿಸಿ ವಿಷೂಚಿಗಳಾದ ಈ ರಶ್ಮಿಗಳ ರೂಪಗಳೂ ಕ್ರಿಯೆಗಳೂ ವಿವಿಧಾತ್ಮಕಗಳಾಗಿರುವುವು ಎಂಬುದನ್ನು ವರ್ಣಿಸುತ್ತಾ—

**ಅಸೌ ವಾ ಆದಿತ್ಯಃ ಪಿಂಗಲಃ ಏಷ ನೀಲ ಏಷ ಪೀತ ಏಷ ಲೋಹಿತಃ ।**

(ಛಾ. ಉ. ೮-೬-೧)

ಇತ್ಯಾದಿಯಾಗಿ ತಿಳಿಸಿದೆ. ಇಂತಹ ಜಗದ್ರಕ್ಷಕನೂ ಜಗದ್ವ್ಯಾಪಿಯೂ ಸಕಲಭುವನಾಂತರ್ವರ್ತಿಯೂ ಆದ ಆದಿತ್ಯನ ಸ್ವರೂಪವನ್ನು ತಿಳಿಯಬೇಕೆಂಬ ಉದ್ದಿಶ್ಯದಿಂದ **ಅಪಶ್ಯಂ** ಎಂದು ಹೇಳಿದೆ. ಇಲ್ಲಿ **ಅಪಶ್ಯಂ** ಎಂದರೆ ಕೇವಲ ಭೌತಿಕ ವಾದ ಚಕ್ಷುಸ್ಸಿಗೆ ಮಾತ್ರ ಗೋಚರವಾಗತಕ್ಕ ಆದಿತ್ಯನ ಸ್ವರೂಪವಲ್ಲ ಎಂಬುದನ್ನು ತಿಳಿಸಲು ಸಾಯಣರು "**ಅಪಶ್ಯಂ—ಯಾಥಾತ್ಮ್ಯೇನ ಪಶ್ಯೇಯಂ**" ಆದಿತ್ಯನ ಸತ್ಯಸ್ವರೂಪವನ್ನು ಅರಿಯುವೆನು ಎಂದು ವಿವರಿಸಿದ್ದಾರೆ. ಆದಿತ್ಯನ ಸತ್ಯಸ್ವರೂಪವು ಕೇವಲ ರಶ್ಮಿಗಳ ದ್ವಾರಾ ಪ್ರಸರಣವೂ, ಸಂಗ್ರಹವೂ ಆಗಿರುವುದು ಮಾತ್ರವಲ್ಲದೆ ಸಕಲ ವಾದ ವಿಶ್ವವೂ ಯಾರಲ್ಲಿ ಅಂತರ್ಗತವಾಗಿದೆಯೋ ಅಂತಹ ಪರಬ್ರಹ್ಮನೇ ಎಂದು ಅರಿಯಬೇಕು.

**ಸ ಹೋವಾಚ ಗಾರ್ಗ್ಯೋ ಯ ಏವಾಸಾವಾದಿತ್ಯೇ ಪುರುಷ ಏತಮೇವಾಹಂ ಬ್ರಹ್ಮೋಪಾಸ ಇತಿ।**

(ಬೃ. ಉ. ೩-೧-೨)

ಈ ಆದಿತ್ಯನಲ್ಲಿ ಮಧ್ಯವರ್ತಿಯಾಗಿರುವ ಮಹಾಪುರುಷನೇ ಪರಬ್ರಹ್ಮನು ಎಂದು ಉಪಾಸನೆಯನ್ನು ಮಾಡಬೇಕು. ಏತಕ್ಕೆಂದರೆ ;—

**ಅಯಮಾದಿತ್ಯಃ ಸರ್ವೇಷಾಂ ಭೂತಾನಾಂ ಮಧ್ವಸ್ಯಾದಿತ್ಯಸ್ಯ ಸರ್ವಾಣಿ ಭೂತಾನಿ ಮಧು ಯಶ್ಚಾಯಮಸ್ಮಿನ್ನಾದಿತ್ಯೇ ತೇಜೋಮಯೋಽಮೃತಮಯಃ ಪುರುಷೋ ಯಶ್ಚಾಯ-ಮಧ್ಯಾತ್ಮಂ ಚಾಕ್ಷುಷಸ್ತೇಜೋಮಯೋಽಮೃತಮಯಃ ಪುರುಷೋಽಯಮೇವ ಸ ಯೋಽ-ಯಮಾತ್ಮೇದಮಮೃತಮಿದಂ ಬ್ರಹ್ಮೇದಂ ಸರ್ವಂ ॥**

(ಬೃ. ಉ. ೨-೫-೫)

ಈ ಆದಿತ್ಯನು ಸಕಲಭೂತಗಳಿಗೂ ಮಧುವಾಗಿದ್ದಾನೆ. ಸಕಲ ಭೂತಗಳೂ ಈ ಆದಿತ್ಯನಿಗೆ ಮಧುವಾಗಿವೆ, ಈ ಆದಿತ್ಯಾಂತರ್ಗತನಾದವನೂ, ಅಮೃತಮಯನೂ ಆದ ಪುರುಷನೇ ಪರಬ್ರಹ್ಮನಾಗಿದ್ದಾನೆ. ಎಂಬ ತತ್ತ್ವವನ್ನು ತಿಳಿಯುತ್ತೇನೆ ಎಂಬುದೇ **ಅಪಶ್ಯಂ** ಎಂಬುದರ ಅರ್ಥವೆಂದು ತಿಳಿಸಿದೆ.

### ವ್ಯಾಕರಣಪ್ರಕ್ರಿಯಾ

**ಅಪಶ್ಯಮ್**—ದೃಶಿರ್ ಪ್ರೇಕ್ಷಣೇ ಧಾತು. ಛಾಂದಸವಾಗಿ **ಲಙ್** ಉತ್ತಮಪುರುಷ ಏಕವಚನಾಂತರೂಪ. ಪಾದಾದಿಯಲ್ಲಿರುವುದರಿಂದ ನಿಘಾತಸ್ವರ ಬರುವುದಿಲ್ಲ. ಅಡಾಗಮ ಉದಾತ್ತವಾದುದರಿಂದ ಆದ್ಯುದಾತ್ತವಾಗುತ್ತದೆ.

**ಅನಿಪದ್ಯಮಾನಮ್**—ಪದ ಗತೌ ಧಾತು. ಲಟಿಗೆ ಶಾನಚಾದೇಶ. ನ ನಿಪದ್ಯಮಾನಃ ಅನಿಪದ್ಯಮಾನಃ ತಂ | **ತತ್ಪುರುಷೇ ತುಲ್ಯಾ**—ಎಂಬುದರಿಂದ ನಞ್ಪೂರ್ವಪದ ಪ್ರಕೃತಿಸ್ವರ ಬರುತ್ತದೆ.

ಚರಂತಮ್—ಚರ ಗತಿಭಕ್ಷಣಯೋಃ ಧಾತು. ಲಟಿಗೆ ಶತ್ರಾದೇಶ. **ತಾಸ್ಯನುದಾತ್ತೇತ್**—(ಪಾ. ಸೂ. ೬=೧-೧೮೬) ಎಂಬದರಿಂದ ಲಸಾರ್ವಧಾತುಕವು ಅನುದಾತ್ತವಾಗುವುದರಿಂದ ಧಾತುಸ್ವರ ಉಳಿಯುತ್ತದೆ.

**ಸಧ್ರೀಚೀಃ**—ಸಹ ಅಂಚತೀಃ ಸಧ್ರೀಚೀಃ ಸಮಾಸದಲ್ಲಿ **ಸಹಸ್ಯ ಸಧ್ರಿಃ** (ಪಾ. ಸೂ. ೬-೩-೯೫) ಎಂಬುದರಿಂದ ಸಹ ಶಬ್ದಕ್ಕೆ ಸಧ್ರ್ಯಾದೇಶ. ದ್ವಿತೀಯಾ ಬಹುವಚನಾಂತರೂಪ

**ವಸಾನಃ**—ವಸ ಆಚ್ಛಾದನೇ ಧಾತು. ಅದಾದಿ ಲಟಿಗೆ ಶಾನಚಾದೇಶ. ಅನುದಾತ್ತೇತ್ತ್ವಾದುದರಿಂದ ಲಸಾರ್ವಧಾತುಕವು ಅನುದಾತ್ತವಾಗುವುದರಿಂದ ಧಾತುಸ್ವರ ಉಳಿಯುತ್ತದೆ

**ವರೀವರ್ತಿ**—ವೃತು ವರ್ತನೇ. ಧಾತು ಪೌನಃಪುನ್ಯಾರ್ಥದಲ್ಲಿ ಯಙ್ ಬಂದಾಗ **ಯಙೋಽಚಿಚ** ಎಂಬುದರಿಂದ ಅದಕ್ಕೆ ಲುಕ್. ಲಟ್ ಪ್ರಥಮ ಪುರುಷ ಏಕವಚನದಲ್ಲಿ **ರೀಕ್ಋದುಪಧಸ್ಯಚ** (ಪಾ. ಸೂ ೭-೪-೯೦) ಎಂಬುದರಿಂದ ಅಭ್ಯಾಸಕ್ಕೆ ರೀಕಾಗಮ. ತಿಙಂತನಿಘಾತಸ್ವರ ಬರುತ್ತದೆ. ॥ ೩೧ ॥

॥ ಸಂಹಿತಾಪಾಠಃ ॥

ಯ ಈಂ ಚಕಾರ ನ ಸೋ ಅಸ್ಯ ವೇದ ಯ ಈಂ ದದರ್ಶ ಹಿರುಗಿನ್ನು ತಸ್ಮಾತ್ ।
ಸ ಮಾತುರ್ಯೋನಾ ಪರಿವೀತೋ ಅಂತರ್ಬಹುಪ್ರಜಾ ನಿರ್ಋತಿಮಾ ವಿವೇಶ ॥ ೩೨ ॥

ಪದಪಾಠಃ

ಯಃ । ಈಂ । ಚಕಾರ । ನ । ಸಃ । ಅಸ್ಯ । ವೇದ । ಯಃ । ಈಂ । ದದರ್ಶ । ಹಿರುಕ್ । ಇತ್ । ನು । ತಸ್ಮಾತ್ ।
ಸಃ । ಮಾತುಃ । ಯೋನಾ । ಪರಿऽವೀತಃ । ಅಂತಃ । ಬಹುऽಪ್ರಜಾಃ । ನಿಃऽಋತಿಂ । ಆ । ವಿವೇಶ ॥೩೨॥

### ಸಾಯಣಭಾಷ್ಯಂ

ಅತ್ರ ಗರ್ಭವಾಸಕ್ಲೇಶಪೂರ್ವಕಜನನಪ್ರತಿಪಾದನೇನ ತತ್ಪರಿಹಾರಾಯಾತ್ಮಾ ಜ್ಞಾತವ್ಯ ಇತ್ಯರ್ಥಾತ್ಪ್ರತಿಪಾದ್ಯತೇ । ಯಃ ಪುಮಾನ್ ಪುತ್ರಾರ್ಥೀಮೇನಂ ಗರ್ಭಂ ಚಕಾರ ಕರೋತಿ ವಿಕ್ಷಿಪತಿ ವಾ ತತ್ಕಾರಣಭೂತಸ್ಯ ವಿಕ್ಷೇಪದ್ವಾರೇಣ ನ ಸ ಪುಮಾನಸ್ಯ ತತ್ತ್ವಂ ವೇದ ॥ ಕರ್ಮಣಿ ಷಷ್ಠೀ ವಾ ॥ ಏನಂ ಗರ್ಭಂ ನ ಜಾನಾತಿ । ಕಥಂಭೂತಃ ಕಥಂ ವಾ ಕೇನ ಪ್ರಯೋಜನೇನೇತಿ ಸರ್ವಾತ್ಮನಾ ನ ಜಾನಾತೀತ್ಯರ್ಥಃ । ಯಶ್ಚ ಮಾತುರುದರಸ್ಥಂ ದದರ್ಶ ಉದರವೃದ್ಧ್ಯನ್ಯಥಾನುತ್ಪತ್ತ್ಯನುಮಾನೇನ ವಾ ದರ್ಶಯತಿ ತಸ್ಮಾದ್ದ್ರಷ್ಟುಃ ಸಕಾಶಾತ್ಸ ಹಿರುಗಿನ್ನು । ಹಿರುಗಿತ್ಯಂತರ್ಹಿತನಾಮ । ಇಚ್ಛಬ್ದ ಏವಕಾರಾರ್ಥಃ । ನು ನಿಶ್ಚಯೇ । ಅತ್ಯಂತಮಂತರ್ಹಿತ ಏವ ಖಲು । ಯದ್ವಾ । ಯಃ ಸಂಸಾರಾವಸ್ಥಾಯಾಮೀಮೇನಂ ಕೃಷಿವಾಣಿಜ್ಯವೇದಾಧ್ಯಯನಾದಿಕಂ ಚಕಾರ ಸೋಽಸ್ಯೈ ತನ್ನ ವೇದ ಲೋಕಾಂತರೇ ಜನ್ಮಾಂತರೇ ವಾ । ತಥಾ ಯ ಈಮೇನಂ ದದರ್ಶ ಗಿರಿನದೀಸಮುದ್ರಬಂಧ್ವಾದಿಕಂ ದದರ್ಶ ಜೀವನಸಮಯೇ ತಸ್ಮಾದ್ದ್ರಷ್ಟುರ್ಹಿರುಗಿನ್ನು ಪೃಥಗೇವ । ಅತ್ರಾನುಭೂತಂ ಸರ್ವಂ ನ ಜನ್ಮಾಂತರೇ ಲೋಕಾಂತರೇ ವಾನುಭವತೀತ್ಯರ್ಥಃ । ಸ ತಾದೃಶೋ ಮಾತುರ್ಜನನ್ಯಾ ಯೋನಾ ಯೋನಾವಂತಃ ಪರಿವೀತ ಉಲ್ಬಜರಾಯುಭ್ಯಾಂ ಪರಿತೋ ವೇಷ್ಟಿತಃ ಸನ್ ಬಹುಪ್ರಜಾ ಬಹುಜನ್ಮಭಾಕ್ । ಅಥವಾ । ಉತ್ಪನ್ನಃ ಸನ್ ಸ್ವಯಮಪ್ಯಪತ್ಯೋತ್ಪಾದನೇನ ಬಹುಪ್ರಜಾಃ । ಏವಂ ಗರ್ಭದುಃಖಮನುಭವನ್ನಿರ್‌ಋತ್ಯಭಿಧಾನಂ ಪ್ರದುಃಖಮನುಭವತಿ ಯಾವತ್ ಸ್ವರೂಪಭೂತಾತ್ಮಜ್ಞಾನಂ । ಅತಸ್ತತ್ಪರಿಹಾರಾಯಾತ್ಮಾ ಜ್ಞಾತವ್ಯ ಇತ್ಯುಕ್ತಂ ಭವತಿ । ಏವ ಮಾತ್ಮವಿದಾಮಭಿಪ್ರೇತೋಽರ್ಥಃ ॥ ನೈರುಕ್ತಾನಾಂ ತು ಮತೇ ಯ ಈಂ ಚಕಾರ ಮಧ್ಯಸ್ಥಾನೋ ವಾಯುರ್ಮೇಘೋ ವೈತದ್ವೃಷ್ಟ್ಯುದಕಂ ಕರೋತಿ ಸೋಽಸ್ಯ । ತತ್ತ್ವಮಿತಿ ಶೇಷಃ । ಅಥವಾ ಏತತ್ಕರ್ಮ । ನ ಜಾನಾತಿ । ತಯೋರಚೇತನತ್ವಾದಿತಿ ಭಾವಃ । ಯಸ್ತ್ವೀಮೇತದ್ದದರ್ಶ ಪಶ್ಯತಿ ತಸ್ಮಾದಪಿ ಹಿರುಗಂತರ್ಹಿತಃ । ಪ್ರಾಣಿಕರ್ಮವಶೇನ ಕಾಲೇ ವರ್ಷಿತಾ ಪರಮೇಶ್ವರ ಆದಿತ್ಯಾತ್ಮನಿ ಗೂಢ ಇತ್ಯರ್ಥಃ । ಯ ಈಂ ಹಿರುಗಂತರ್ಹಿತಮಿಮಾಮೇತದ್ದದರ್ಶ ಪಶ್ಯತಿ ಸ ವೃಷ್ಟಿಲಕ್ಷಣಃ ಪುತ್ರೋ ಮಾತುರ್ನಿರ್ಮಾತುರಂತರಿಕ್ಷಸ್ಯ ಯೋನೌ ಯೋನಿವದುತ್ಪತ್ತ್ಯಧಾರಭೂತೇಽಂತರಿಕ್ಷೇ। ಉಭಯೋರಪ್ಯಂತರಿಕ್ಷನಾಮತ್ವಾತ್ಸಾಮಾನ್ಯವಿಶೇಷಭಾವೋ ದ್ರಷ್ಟವ್ಯಃ। ಅಂತರಿಕ್ಷೈಕದೇಶೇ ಯೋನ್ಯಾಮಂತರ್ಮಧ್ಯೇ ಬಹುಪ್ರಜಾ ಬಹುಪ್ರಜಾತಾನ್ನೋ ಬಹುಪ್ರಾಣ್ಯುಪಕಾರೀ । ಅಥವಾ । ಜನಿರತ್ರಾಂತರ್ಭಾವಿತಣ್ಯರ್ಥಃ । ಬಹೂನಾಂ ಧಾರಾಣಾಂ ಸಸ್ಯನಿಷ್ಪಾದನದ್ವಾರೇಣ ಪ್ರಾಣಿನಾಂ ವಾ ಪ್ರಜನಯಿತಾ ಸನ್ । ನಿರ್‌ಋತಿಂ ನಿರಮಣಸಾಧನಾಂ ಭೂಮಿಮಾ ವಿವೇಶ । ಪ್ರವಿಶತಿ । ಪ್ರಾಪ್ನೋತೀತ್ಯರ್ಥಃ ॥

### ಪ್ರತಿಪದಾರ್ಥ

**ಯಃ**—ಯಾವ ಪುರುಷನು । **ಈಂ**—ಸಂತಾನರೂಪವಾದ ಈ ಗರ್ಭವನ್ನು । **ಚಕಾರ**—ಸೃಷ್ಟಿಸಿದನೋ । **ಸಃ**—ಅವನು । **ಅಸ್ಯ**—ಈ ಗರ್ಭದ (ಮರ್ಮವನ್ನು) । **ನ ವೇದ**—ತಿಳಿಯಲಾರನು । **ಯಃ**—ಯಾವನು । **ಈಂ**—ಇದನ್ನು । **ದದರ್ಶ**—(ಗರ್ಭವನ್ನು ಧರಿಸಿರುವ ಉದರವು ವೃದ್ಧಿಯಾಗುವುದೇ ಮುಂತಾದ ಹೊರಗಿನ ಚಿಹ್ನೆಗಳಿಂದ) ನೋಡುವನೋ । **ತಸ್ಮಾತ್**--ಅವನಿಂದ । **ಹಿರುಗಿನ್ನು**—ಮರೆಸಿಕೊಂಡು ಅಂತರ್ಹಿತವಾಗಿಯೇ ಇದೆ ।

**ಸಃ**—ಅಂತಹ ಅಜ್ಞಾನಿಯು । **ಮಾತುಃ**—ಜನ್ಮಕ್ಕೆ ಕಾರಣಳಾದ ತಾಯಿಯ । **ಯೋನಾ**—ಯೋನಿಯ । **ಅಂತಃ**—ಒಳಗಡೆ । **ಪರಿವೀತಃ**—ಉಲ್ಬಾದಿಗಳಿಂದ ಸುತ್ತುವರಿಯಲ್ಪಟ್ಟು । **ಬಹುಪ್ರಜಾಃ**—ಅನೇಕವಾದ ಸಂತಾನ (ಅಥವಾ ಜನ್ಮ)ವುಳ್ಳವನಾಗಿ । **ನಿರ್‌ಋತಿಂ ಆ ವಿವೇಶ**—ದುಃಖವನ್ನು ಹೊಂದುತ್ತಾನೆ । ಅಥವಾ **ನಿರ್‌ಋತಿಂ ಆ ವಿವೇಶ**—ದುಃಖಸಾಧನವಾದ ಭೂಮಿಯನ್ನು ಪ್ರವೇಶಿಸುತ್ತಾನೆ ॥

**ಭಾವಾರ್ಥ**

ಯಾವ ಪುರುಷನು ಸಂತಾನರೂಪವಾದ ಈ ಗರ್ಭವನ್ನು ಸೃಷ್ಟಿಸಿದನೋ ಅವನು ಈ ಗರ್ಭದ ಮರ್ಮವನ್ನರಿಯಲಾರನು. ಉದರವೃದ್ಧಿಯೇ ಮುಂತಾದ ಹೊರಗಿನ ಸಂಜ್ಞೆಗಳಿಂದ ಇದನ್ನು ನೋಡಿದರೂ ಸಹ ಇದರ ತತ್ತ್ವವು ಅಂತರ್ಹಿತವಾಗಿಯೇ ಇದೆ. ಇದರ ಮರ್ಮವನ್ನರಿಯದ ಅಜ್ಞಾನಿಯು ತನ್ನ ಜನ್ಮಕ್ಕೆ ಕಾರಣಳಾದ ತಾಯಿಯ ಯೋನಿಯ ಒಳಗಡೆ ಉಲ್ಬಾದಿಗಳಿಂದ ಸುತ್ತುವರಿಯಲ್ಪಟ್ಟು ಪುನಃಪುನಃ ಜನ್ಮವುಳ್ಳವನಾಗಿ ದುಃಖಕ್ಕೆ ಭಾಗಿಯಾಗುತ್ತಾನೆ.

## English Translation

He who has made (this state of things) does not comprehend it: he who has beheld it, has it also verily hidden (from him): he, whilst yet enveloped in his mother's womb, is subject to many births, and has entered upon evil.

**ವಿಶೇಷವಿಷಯಗಳು**

ಈ ಋಕ್ಕಿಗೆ ನಿರುಕ್ತಕಾರರು ಎರಡುವಿಧವಾದ ಅರ್ಥವನ್ನು ತೋರಿಸಿದ್ದಾರೆ. ಮೊದಲನೆಯದು ಪರಿವ್ರಾಜಕರ ಆಧ್ಯಾತ್ಮಿಕವಾದ ಅರ್ಥ. ಎರಡನೆಯದು ನಿರುಕ್ತಕಾರರ ನಿರ್ವಚನರೂಪವಾದ ಅರ್ಥ.

**ಬಹುಪ್ರಜಾಃ ಕೃಚ್ಛ್ರಮಾಪದ್ಯತ ಇತಿ ಪರಿವ್ರಾಜಕಾಃ । ವರ್ಷಕರ್ಮೇತಿ ನೈರುಕ್ತಾಃ ।**

(ನಿ. ೨-೮)

ಅನೇಕ ಸಂತಾನವುಳ್ಳವನು (ಅಥವಾ ಜನ್ಮವುಳ್ಳವನು) ನಾನಾವಿಧವಾದ ಕಷ್ಟವನ್ನನುಭವಿಸುತ್ತಾನೆಂದು ತಾತ್ಪರ್ಯವೆಂದು ಆಧ್ಯಾತ್ಮಿಕತತ್ತ್ವವನ್ನರಿತಸಂನ್ಯಾಸಿಗಳು ಒಂದು ವಿಧವಾಗಿಯೂ, ವೃಷ್ಟಿತತ್ತ್ವವನ್ನು ವಿವರಿಸುವುದೇ ಈ ಋಕ್ಕಿನ ಮುಖ್ಯ ತಾತ್ಪರ್ಯವೆಂದು ನಿರುಕ್ತಕಾರರು ಇನ್ನೊಂದು ರೀತಿವಾಗಿಯೂ ಅರ್ಥಮಾಡಿದ್ದಾರೆಂದು ಯಾಸ್ಕರು ಮೊದಲು ಹೇಳಿ ಅನಂತರ ತಮ್ಮ ವಿವರಣೆಯನ್ನು ಈರೀತಿ ಹೇಳಿದ್ದಾರೆ.

> **ಯ ಈಂ ಚಕಾರೇತಿ ಕರೋತಿ ಕಿರತೀ ಸಂದಿಗ್ಧೌ ವರ್ಷಕರ್ಮಣಾ ' ನ ಸೋ ಅಸ್ಯವೇದ ' ಮಧ್ಯಮಃ ಸ ಏವಾಸ್ಯ ವೇದ ಮಧ್ಯಮೋ ಯೋ ದದರ್ಶಾದಿತ್ಯೋಽಪಹಿತಂ । ' ಸಮಾತು-ರ್ಯೋನೌ ' ಮಾತಾಂತರಿಕ್ಷಂ ನಿರ್ಮೀಯಂತೇಽಸ್ಮಿನ್ ಭೂತಾನಿ । ಯೋನಿ-ರಂತರಿಕ್ಷಂ ಮಹಾನವಯವಃ ಪರಿವೀತೋ ವಾಯುನಾ । ಅಯಮಪೀತರೋ ಯೋನಿರೇ-ತಸ್ಮಾದೇವ, ಪರಿಯುತೋ ಭವತಿ । ಬಹುಪ್ರಜಾ ಭೂಮಿಮಾಪದ್ಯತೇ ವರ್ಷಕರ್ಮಣಾ ।**

(ನಿ. ೨-೮)

ಇಲ್ಲಿ ಸೃಷ್ಟಿಸು, ಹರಡು ಎಂಬರ್ಥಗಳನ್ನು ಕೊಡತಕ್ಕ ಚಕಾರ ' ಎಂಬ ಪದವು ವೃಷ್ಟಿಕರ್ಮದ ವ್ಯಾಪಾರವನ್ನು ತೋರಿಸುತ್ತದೆ. **' ನ ಸೋ ಅಸ್ಯ ವೇದ '** ಎಂದರೆ ಮೇಘಕ್ಕೆ ಈ ವೃಷ್ಟಿತತ್ತ್ವದ ಮರ್ಮವನ್ನು ತಿಳಿಯಲಾಗುವುದಿಲ್ಲ. ಇದು ಕೇವಲ ವೃಷ್ಟಿರೂಪವಾದ ಉದಕವನ್ನು ಸುರಿಸುವುದೇ ವಿನಹ ಇದಕ್ಕೆ ಅದರ ಮರ್ಮವು ತಿಳಿಯುವುದಿಲ್ಲ. ಆದರೆ ಅದೇ ಮಧ್ಯಮ ಲೋಕವರ್ತಿಯಾದ ಇಂದ್ರನು ಇದರ ಮರ್ಮವನ್ನು ತಿಳಿಯುತ್ತಾನೆ. ಈ ಇಂದ್ರನು ಸೂರ್ಯ ರಶ್ಮಿಗಳಿಂದಲೂ ವಾಯುವಿನಿಂದಲೂ ಪರಿವೀತನಾಗಿದ್ದಾನೆ. ಮತ್ತು ವರ್ಷಾಕಾಲದಲ್ಲಿ ನಾನಾ ರೂಪದಿಂದ ಪ್ರವಹಿಸತಕ್ಕ ವೃಷ್ಟಿಯ ರೂಪದಲ್ಲಿ ಇಳಿದು ಭೂಮಿಯನ್ನು ಪ್ರವೇಶಿಸುತ್ತಾನೆ ಎಂದು ಯಾಸ್ಕರು ಈ ಋಕ್ಕಿನ ಒಟ್ಟಿನ ತಾತ್ಪರ್ಯವನ್ನು ಹೇಳಿದ್ದಾರೆ. ಯಾಸ್ಕರ ನಿರ್ವಚನದ ಪ್ರಕಾರ—

**ಚಕಾರ**—ಎಂಬ ಕ್ರಿಯಾಪದವು ' ಮಾಡು ' ಎಂಬರ್ಥವನ್ನು ಕೊಡುವ **ಕೃ** ಧಾತುವಿನಿಂದ ನಿಷ್ಪನ್ನವಾಗಿದೆಯೇ ಅಥವಾ, ' ಹರಡು ' ಎಂಬರ್ಥವನ್ನು ಕೊಡುವ ಕ್ಯಾ (ವಿಕ್ಷೇಪೇ) ಎಂಬ **ಧಾತು**ವಿನಿಂದ ನಿಷ್ಪನ್ನವಾಗಿದೆಯೇ ಎಂಬುದು ಸಂದಿಗ್ಧವಾಗಿದ್ದರೂ ಸಹ ವರ್ಷಕರ್ಮಕ್ಕೆ ಸಂಬಂಧಿಸಿದೆ. ವೃಷ್ಟಿಯನ್ನು ಸೃಷ್ಟಿಸುತ್ತಾನೆ ಅಥವಾ ವೃಷ್ಟಿ ರೂಪವಾದ ಉದಕವನ್ನು ಹರಡುತ್ತಾನೆಂದರ್ಥವು. **ಕಃ ಪುನರಸೌ** ಎಂದು ದುರ್ಗಾಚಾರ್ಯರು ನಿರುಕ್ತನಿರ್ವಚನವನ್ನು ವಿವರಿಸುವಾಗ ಪ್ರಶ್ನಿಸಿ, **ಮೇಘಃ । ಯಃ** ಎಂಬುದು ಮೇಘಪರವಾದ ಪದವೆಂದು ತೋರಿಸಿದ್ದಾರೆ. ಈ ಮೇಘಕ್ಕೆ ವೃಷ್ಟಿವಿಷಯಕವಾದ ತತ್ತ್ವಜ್ಞಾನವಿಲ್ಲವೆಂದರ್ಥ. ಅದೇ ಮಧ್ಯಲೋಕವರ್ತಿಯಾದ ಇಂದ್ರನಿಗಿದೆಯೆಂದರ್ಥ.

**ಸ ಮಾತುರ್ಯೋನಾ ಪರಿವೀತಃ**—ಎಂಬ ವರ್ಣನೆಯು ಅಂತರಿಕ್ಷಸ್ಥನಾದ ಇಂದ್ರನ ಪರವಾಗಿದೆ. ಇಲ್ಲಿ **ಮಾತುಃ** ಎಂದರೆ ಅಂತರಿಕ್ಷವೆಂದರ್ಥ. ಈ ಅರ್ಥವು ಹೇಗಾಯಿತೆಂದು ನಿರುಕ್ತಕಾರರು ಈ ಪದದ ನಿರ್ವಚನವನ್ನು ಹೇಳಿದ್ದಾರೆ.

**ಮಾತಾಂತರಿಕ್ಷಂ ನಿರ್ಮೀಯಂತೇಽಸ್ಮಿನ್ ಭೂತಾನಿ ।**

(ನಿ. ೨-೮)

ಇದರಲ್ಲಿ ಭೂತಗಳು ಸೃಷ್ಟಿಸಲ್ಪಡುವುವಾದ್ದರಿಂದ ಅಂತರಿಕ್ಷಕ್ಕೆ ಮಾತೃವೆಂದು ಹೆಸರು ಈ ಅಂತರಿಕ್ಷಕ್ಕೇ **ಯೋನಿ**ಯೆಂದೂ ಪರ್ಯಾಯನಾಮವಾಗಿದೆ. ಹೇಗೆಂದರೆ,

**ಯೋನಿರಂತರಿಕ್ಷಂ ಮಹಾನವಯವಃ ಪರಿವೀತೋ ವಾಯುನಾ ।**

(ನಿ. ೨-೮)

ವಾಯುವಿನಿಂದ ಪರಿವೀತವಾದುದೂ ಅತ್ಯಂತ ವಿಸ್ತೃತವಾದುದೂ ಆದ ಅವಯವವಾದುದರಿಂದ ಅಂತರಿಕ್ಷಕ್ಕೆ **ಯೋನಿ**ಯೆಂದು ಹೆಸರು.

**ಅಯಮಪೀತರೋ ಯೋನಿರೇತಸ್ಮಾದೇವ । ಪರಿಯುತೋ ಭವತಿ ।**

(ನಿ. ೨-೮)

ಸಂತಾನರೂಪವಾದ ಗರ್ಭವನ್ನು ಧರಿಸುವ ಅವಯವಕ್ಕೂ ಸಹ ಮಾಂಸಾದಿಗಳಿಂದ ಪರಿಯುತವಾಗಿರುವುದರಿಂದ ಯೋನಿಯೆಂಬ ಹೆಸರೆಂದು ಎರಡರ್ಥಗಳಲ್ಲೂ **ಯೋನಿ** ಶಬ್ದದ ನಿರ್ವಚನವನ್ನು ತಿಳಿಸಿದೆ

**ಬಹುಪ್ರಜಾ ನಿರ್ಋತಿಮಾವಿವೇಶ—ಬಹುಪ್ರಜಾ ಭೂಮಿಮಾಪದ್ಯತೇ ವರ್ಷಕರ್ಮಣಾ ।** ವೃಷ್ಟಿ ರೂಪದಿಂದ ಅತ್ಯಂತ ವಿಸ್ತೃತವಾಗಿಯೂ ವಿವಿಧವಾಗಿಯೂ ಪ್ರಸರಿಸಿ ಭೂಮಿಯನ್ನು ಸೇರುತ್ತಾನೆಂದರ್ಥವು. ಇಲ್ಲಿ **ನಿರ್ಋತಿ** ಶಬ್ದಕ್ಕೆ ಭೂಮಿಯೆಂದರ್ಥಮಾಡಿದೆ. ಅದು ಹೇಗೆಂದರೆ ;-

**ಇಮಾನ್ಯೇಕವಿಂಶತಿಃ ಪೃಥಿವೀನಾಮಧೇಯಾನ್ಯನುಕ್ರಾಂತಾನಿ । ತತ್ರ ನಿರ್ಋತಿರ್ನಿರಮಣಾ-ದೃಚ್ಛತೇಃ ಕೃಚ್ಛ್ರಾಪತ್ತಿರಿತರಾ ಸಾ ಪೃಥಿವ್ಯಾ ಸಂದಿಹ್ಯತೇ । ತಯೋರ್ವಿಭಾಗಃ ।**

(ನಿ. ೨-೭)

ಇಪ್ಪತ್ತೊಂದು ಪೃಥ್ವೀನಾಮಗಳಲ್ಲಿ **ನಿರ್ಋತಿ** ಶಬ್ದವೂ ಪಠಿತವಾಗಿದೆ. ಆನಂದದಾಯಿನಿಯಾದುದರಿಂದ ಪೃಥ್ವಿಗೆ **ನಿರ್ಋತಿ**ಯೆಂದು ಹೆಸರು. ಆದರೆ **ಆಪತ್ತು** ಎಂಬರ್ಥದಲ್ಲಿಯೂ ಸಹ ಈ ಪದವು ಪ್ರಯೋಗಿಸಲ್ಪಡುತ್ತದೆ. ಆಗ **ಋ** ಧಾತುವಿನಿಂದ ನಿಷ್ಪನ್ನವಾಗಿದೆಯೆಂದು ತಿಳಿಯಬೇಕು ಎಂದು ನಿರುಕ್ತಕಾರರು ಇದರ ನಿರ್ವಚನವನ್ನು ತೋರಿಸಿ ಅನಂತರ ಈ ಪದದ ನಿಷ್ಕೃಷ್ಟವಾದ ಪ್ರಯೋಗವನ್ನು ತಿಳಿಯಬೇಕೆಂದೂ, ಪೃಥ್ವಿಯೆಂದರ್ಥವಿರುವಾಗ ಆಪತ್ತೆಂದರ್ಥಮಾಡಬಾರದೆಂದೂ ಅದರಂತೆಯೇ ಎರಡನೆಯ ಅರ್ಥವನ್ನು ಹೇಳಬೇಕಾಗಿರುವಾಗ ಪೃಥ್ವಿಯೆಂದು ಅರ್ಥಮಾಡಬಾರದೆಂದೂ ಎಚ್ಚರಿಸಿದ್ದಾರೆ. ಈ ಎರಡರ್ಥಗಳನ್ನೂ ಕೊಡಬಹುದಾದ ಸಂದರ್ಭಗಳೂ ಇವೆಯೆಂದೂ ತಿಳಿಸಿ ಅದರ ಉದಾಹರಣೆಗಾಗಿ ನಿರುಕ್ತದಲ್ಲಿ ಪ್ರಕೃತವಾದ ಋಕ್ಕನ್ನು ಉದಹರಿಸಿ ಮೇಲ್ಕಂಡಂತೆ ಈ ಋಕ್ಕನ್ನು ವಿವರಿಸಿದ್ದಾರೆ. ಈ ಋಕ್ಕಿನಲ್ಲಿ ಆಧ್ಯಾತ್ಮಿಕವಾದ ಅರ್ಥವನ್ನು ಮಾಡುವಾಗ **ಆಪತ್ತೆಂ**ದೂ ಅಧಿದೈವತಪಕ್ಷದಲ್ಲಿ ಪೃಥಿವಿಯೆಂದೂ ಅರ್ಥವಾಗುತ್ತದೆ.

ದುರ್ಗಾಚಾರ್ಯರು ಈ ಸಂದರ್ಭವನ್ನು ವಿವರಿಸುತ್ತಾ, ಇದೇ ರೀತಿ ಎರಡು ವಿಧವಾದ ಅರ್ಥಗಳನ್ನು ಕೊಡತಕ್ಕ ಮಂತ್ರಗಳು ಇನ್ನೂ ಇವೆಯೆಂದು ತಿಳಿಸಿ

**ದಧಿಕ್ರಾವ್ಣೋ ಅಕಾರಿಷಂ ಜಿಷ್ಣೋರಶ್ವಸ್ಯ ವಾಜಿನಃ ।**
**ಸುಭಿರ ನೋ ಮುಖಾ ಕರತ್ಪ್ರಣ ಆಯೂಂಷಿ ತಾರಿಷತ್ ॥**

(ಋ. ಸಂ. ೪-೩೯-೬)

ಎಂಬ ಋಕ್ಕನುದಹರಿಸಿ, ಅಲ್ಲಿಯೂ ಸಹ ಸಂದಿಗ್ಧವಾದ ಸನ್ನಿವೇಶವಿದೆಯೆಂದೂ ಅರ್ಥದ್ವಯವು ಸಾಧ್ಯವೆಂದೂ ತಿಳಿಸಿದ್ದಾರೆ. ಹೇಗೆಂದರೆ, ಇದೇ ಮಂತ್ರವು ಅಗ್ನಿಷ್ಟೋಮದಲ್ಲಿ ದಧಿಭಕ್ಷಣಕಾಲದಲ್ಲಿ ಪಠಿತವಾಗುತ್ತದೆ. ಅಲ್ಲದೆ, ಅಶ್ವಮೇಧಯಾಗದಲ್ಲಿ ಸ್ತ್ರೀಯರು ಅಶ್ವದ ಮುಂದೆ ಈ ಮಂತ್ರವನ್ನು ಪಠಿಸುತ್ತಾರೆ. ಆಯಾ ಸಂದರ್ಭಕ್ಕನುಗುಣವಾಗಿ ಈ ಮಂತ್ರಕ್ಕೆ ಅರ್ಥಮಾಡಲು ಸಾಧ್ಯವಾದುದರಿಂದಲೇ ಬೇರೆ ಬೇರೆ ಸಂದರ್ಭಗಳಲ್ಲೂ ಇದರ ಪ್ರಯೋಗವಿದೆಯೆಂದೂ ಇದರಂತೆಯೇ, **ನಿರ್ಋತಿ** ಯೆಂಬ ಪದವು ಪ್ರಕೃತವಾದ ಋಕ್ಕಿನಲ್ಲಿ ಪ್ರಯೋಗಿಸಲ್ಪಟ್ಟು ಒಟ್ಟು ಋಕ್ಕಿಗೇ ಎರಡು ವಿಧವಾದ ಅರ್ಥವು ಸಾಧ್ಯವಾಗುವಂತೆ ಮಾಡುತ್ತದೆಯೆಂದೂ ತಿಳಿಸಿದ್ದಾರೆ.

ಅಧಿದೈವತಪಕ್ಷದಲ್ಲಿ **ಈಂ ದದರ್ಶ ಹಿರುಗಿನ್ನು ತಸ್ಮಾತ್** ಎನ್ನುವಾಗ ಈ ದರ್ಶನಕರ್ಮವು ಇಂದ್ರನಿಗೆ ಸಂಬಂಧಿಸಿದುದೆಂದು ನಿರುಕ್ತವಾಕ್ಯದಿಂದ ತಿಳಿಯುತ್ತದೆ. ಹೇಗೆಂದರೆ, **ಹಿರುಕ್** ಎಂದರೆ ಅಂತರ್ಹಿತನೆಂದರ್ಥ. ಈ ಪದವು **ನಿಣ್ಯಂ, ಸಸ್ವಃ** ಇತ್ಯಾದಿ ಅಂತರ್ಹಿತನಾಮಗಳಲ್ಲಿ ಪಠಿತವಾಗಿದೆ. (ನಿ. ೩-೧೯). **ಅವ್ಯಕ್ತ**ನಾದವನೆಂದರ್ಥ. ಇಲ್ಲಿ ಅವ್ಯಕ್ತನಾದವನು ಯಾರು ಎಂದರೆ, **ಆದಿತ್ಯೋಪಹಿತಂ** ಎಂದು ನಿರುಕ್ತಕಾರರು ತಿಳಿಸಿದ್ದಾರೆ, ಇದನ್ನು ವಿವರಿಸುತ್ತಾ ದುರ್ಗಾಚಾರ್ಯರು **ಆದಿತ್ಯಸ್ಯ ರಶ್ಮ್ಯಂತರ್ಗತಂ ವರ್ಷಮನಭಿವ್ಯಕ್ತಂ । ಕಶ್ಚಾಸೌ ಅಂತರ್ಗತಃ ಸ ಇಂದ್ರಃ । ಅಸಾವಪಿ ಮಧ್ಯಮ ಏವ ।** ಆದಿತ್ಯನ ರಶ್ಮಿಗಳ ನಡುವೆ ಅಂತರ್ಗತನಾದವನು ಯಾರೆಂದರೆ ಅವನು ಇಂದ್ರನೆಂದು ತಿಳಿಯಬೇಕು. ಮೇಘವೂ, ಇಂದ್ರನೂ ವಾಯುವೂ ಮಧ್ಯಮಲೋಕವರ್ತಿಗಳು. ಆದರೆ, ವಾಯುವು

ಮೇಘವೂ ವೃಷ್ಟಿಕಾರಕಗಳಾದರೂ ಅವು ಅಚೇತನಗಳಾದುದರಿಂದ ವೃಷ್ಟಿತತ್ತ್ವವನ್ನು ತಿಳಿಯಲಾರವು. " **ತಯೋರ ಚೇತನತ್ವಾದಿತಿ ಭಾವಃ** " ಎಂದು ಸಾಯಣರ ವಿವರಣೆಯಿದೆ. ಆದರೆ **ಯ ಈಂ ದದರ್ಶ, ಹಿರುಕ್**—ಎನ್ನುವುದಕ್ಕೆ ದುರ್ಗಾಚಾರ್ಯರು ನಿರುಕ್ತವಾಕ್ಯದ ಆಧಾರದ ಮೇಲೆ ಇಂದ್ರನೆಂದರ್ಥಮಾಡಿದ್ದಾರೆ ಸಾಯಣರು " **ಪ್ರಾಣಿಕರ್ಮವಶೇನ ಕಾಲೇ ವರ್ಷಿತಾ ಪರಮೇಶ್ವರಃ ಆದಿತ್ಯಾತ್ಮನಿ ಗೂಢ ಇತ್ಯರ್ಥಃ** " ಆಯಾ ಜೀವಿಗಳ ಕರ್ಮಾಯತ್ತವಾಗಿ ವೃಷ್ಟಿಯನ್ನು ಸುರಿಸತಕ್ಕ ಪರಮೇಶ್ವರನು ಆದಿತ್ಯನಲ್ಲಿ ಅಂತರ್ಗತನಾಗಿಯೂ ಗೂಢನಾಗಿಯೂ ಇದ್ದಾನೆ ಎಂದು ವಿವರಿಸಿದ್ದಾರೆ. ಇಲ್ಲಿ **ಹಿರುಗಿನ್ನು ತಸ್ಮಾತ್** ಎಂದು ವರ್ಣಿತವಾಗಿರುವುದನ್ನು ಉಪನಿಷತ್ತುಗಳಲ್ಲಿ ಈ ರೀತಿ ವರ್ಣಸಿದೆ.

> **ಹಿರಣ್ಮಯೇನ ಪಾತ್ರೇಣ ಸತ್ಯಸ್ಯಾಪಿಹಿತಂ ಮುಖಂ ।**
> **ತತ್ತ್ವಂ ಪೂಷನ್ನಪಾವೃಣು ಸತ್ಯಧರ್ಮಾಯ ದೃಷ್ಟಯೇ ॥**
>
> (ಈಶಾ. ಉ. ೧೫)

ಹಿರಣ್ಮಯವಾದ ಪಾತ್ರೆಯಿಂದ ಸತ್ಯದ ಮುಖವು ಮುಚ್ಚಿರುತ್ತದೆ, ಎಂದು ಈಶೋಪನಿಷತ್ತು ತಿಳಿಸುತ್ತದೆ.

> **ಹಿರಣ್ಮಯೇನ ಪಾತ್ರೇಣ । ಹಿರಣ್ಮಯಮಿವ ಹಿರಣ್ಮಯಂ । ಜ್ಯೋತಿರ್ಮಯಮಿತ್ಯೇತತ್ । ತೇನ ಪಾತ್ರೇಣೇವಾಪಿಧಾನಭೂತೇನ ಸತ್ಯಸ್ಯೈವಾದಿತ್ಯಮಂಡಲಸ್ಥಸ್ಯ ಬ್ರಹ್ಮಣೋಽಪಿಹಿತ-ಮಾಚ್ಛಾದಿತಂ ಮುಖಂ ದ್ವಾರಂ ।**
>
> (ಶಾಂಕರ ಭಾಷ್ಯ)

ಹಿರಣ್ಮಯವಾದ ಪಾತ್ರೆಯಿಂದ, ಎಂದರೆ ಪಾತ್ರೆಯಂತೆ ಮರೆಯಾಗಿರುವ ಪ್ರಕಾಶದಿಂದ ಆದಿತ್ಯಮಂಡಲದಲ್ಲಿರುವ ಸತ್ಯಬ್ರಹ್ಮದ ಮುಖವು ಎಂದರೆ ದ್ವಾರವು ಮುಚ್ಚಿರುತ್ತದೆ, ಹೊದಿಸಲ್ಪಟ್ಟಿರುತ್ತದೆ. ಎಂದರೆ, ಸೂರ್ಯಮಂಡಲದ ಕಿರಣಗಳು ಅದರಲ್ಲಿರುವ ಸತ್ಯಬ್ರಹ್ಮವನ್ನು ಕಾಣದಂತೆ ಮುಚ್ಚಿರುತ್ತವೆ. ಇಲ್ಲಿ ಮಂಡಲವೇ ಮುಚ್ಚಳದ ಪಾತ್ರೆ. ಸತ್ಯಬ್ರಹ್ಮವೇ ಅದರೊಳಗೆ ಪರಮಾತ್ಮತತ್ತ್ವವು. ಇದನ್ನೇ ಬೃಹದಾರಣ್ಯಕದಲ್ಲಿ,

> **ತದ್ಯತ್ತತ್ಸತ್ಯಮಸೌ ಸ ಆದಿತ್ಯೋ ಯ ಏಷ ಏತಸ್ಮಿನ್ಮಂಡಲೇ ಪುರುಷಃ ।**
>
> (ಬೃ ಉ. ೫-೭-೨)

ಈ ಆದಿತ್ಯಮಂಡಲಾಂತರ್ವರ್ತಿಯಾದ ಈ ಪುರುಷನೇ ಪರವಸ್ತುವು ಇತ್ಯಾದಿಯಾಗಿ ವರ್ಣಸಿದೆ. ಈ ಪರವಸ್ತುವು ಲೌಕಿಕವಾದ ಪ್ರತ್ಯಕ್ಷಕ್ಕೆ ಗೋಚರವಾಗುವುದಿಲ್ಲವಾದುದರಿಂದ ಇದನ್ನೇ ಪ್ರಕೃತವಾದ ಋಕ್ಕಿನಲ್ಲಿ **ಹಿರುಗಿನ್ನು ತಸ್ಮಾತ್** ಕೇವಲ ಭೌತಿಕವಾದ ದೃಷ್ಟಿಯಿಂದ ನೋಡುವವನಿಗೆ ಈ ಆದಿತ್ಯನು ಪ್ರತ್ಯಕ್ಷದಲ್ಲಿದ್ದರೂ ಸಹ ಈ ಪರವಸ್ತುವು ಮಾತ್ರ ಅಂತರ್ಹಿತವಾಗಿಯೇ ಇದೆ ಎಂಬುದಾಗಿ ವರ್ಣಸಿದೆ. ಇಂತಹ ಪರಮಾತ್ಮನ ಸ್ವರೂಪವನ್ನು ಪೂರ್ಣವಾಗಿ ಅರಿಯದಿದ್ದರೆ ಆಗ ನಾನಾವಿಧವಾದ ದುಃಖಗಳಿಗೆ ಹೇತುವಾದ ಜನ್ಮಜರಾದಿಗಳು ಪುನಃಪುನಃ ಸಂಭವಿಸುವುವು ಎಂಬುದನ್ನು ಪ್ರಕೃತವಾದ ಋಕ್ಕಿನಲ್ಲಿ ತಿಳಿಸಿದೆಯೆಂದು " **ಬಹುಪ್ರಜಾಃ ಕೃಚ್ಛ್ರಮಾಪದ್ಯತ ಇತಿ ಪರಿವ್ರಾಜಕಾಃ** " ಎಂಬ ವಾಕ್ಯದಿಂದ ನಿರುಕ್ತಕಾರರು ತಿಳಿಸಿದ್ದಾರೆ. (ನಿ. ೨-೮)

> **ಅತ್ರ ಗರ್ಭವಾಸಕ್ಲೇಶಪೂರ್ವಕಜನನಪ್ರತಿಪಾದನೇನ ತತ್ಪರಿಹಾರಾಯ ಆತ್ಮಾ ಜ್ಞಾತವ್ಯಃ ಇತ್ಯರ್ಥಾತ್ಪ್ರತಿಪದ್ಯತೇ ॥**

ಗರ್ಭದಲ್ಲಿ ವಾಸ, ಕ್ಲೇಶಪೂರ್ವಕವಾದ ಜನನ, ಕ್ಲೇಶಭರಿತವಾದ ಜೀವನ, ದುಃಖಾತ್ಮಕವಾದ ಜರಾಮರಣಾದಿಗಳು, ಪುನಃ ಇವೆಲ್ಲದರ ಆವೃತ್ತಿಗಳು. ಇವೆಲ್ಲವೂ ಆ ಪರಮಾತ್ಮನನ್ನು ತಿಳಿಯದೇ ಇರುವ ಅಜ್ಞಾನದಿಂದ ಸಂಭವಿಸುವ ದುಃಖಗಳಾದುವರಿಂದ ಇವುಗಳಿಂದ ಮುಕ್ತನಾಗಲು ಆತ್ಮವು ಅರಿಯಲ್ಪಡಬೇಕು ಎಂಬುದೇ ಈ ಋಕ್ಕಿನ ಮುಖ್ಯತಾತ್ಪರ್ಯವೆಂದು ಸಾಯಣರು ತಮ್ಮ ಭಾಷ್ಯದ ಪ್ರಾರಂಭದಲ್ಲೇ ತಿಳಿಸಿದ್ದಾರೆ. ಈ ಅರ್ಥವನ್ನು ಹೇಳುವಾಗ ಇಲ್ಲಿ **ನಿರ್‌ಋತಿ** ಎಂಬ ಪದಕ್ಕೆ ದುಃಖ ; ಆಪತ್ತು ಎಂದರ್ಥಮಾಡಬೇಕು. [ಅಧಿದೈವತಪಕ್ಷದಲ್ಲಿ ಭೂಮಿಯೆಂದರ್ಥವೆಂದು ಮೇಲೆ ತಿಳಿಸಿದೆ.] ಆತ್ಮಜ್ಞಾನವಿಲ್ಲದವನು ಬಹುಪ್ರಜೆಯುಳ್ಳವನಾಗಿ ನಿರಂತರವಾದ ದುಃಖಕ್ಕೆ ಭಾಗಿಯಾಗುತ್ತಾನೆ ಎಂದರ್ಥವು. ಇಲ್ಲಿ ಬಹುಪ್ರಜೆಯೆಂದರೆ ಮಿತಿಮೀರಿದ ಪ್ರಜಾಸಂತಾನವೆಂದಾಗಲಿ ಅಥವಾ ತಾನೇ ಜನ್ಮಾಂತರಗಳನ್ನು ಹೊಂದಿ ಅನೇಕ ಗರ್ಭಗಳಲ್ಲಿ ಪ್ರಜಾರೂಪವನ್ನು ಪಡೆಯುತ್ತಾನೆ ಎಂದಾಗಲಿ ಅರ್ಥವಾಗಬಹುದೆಂದು ತಿಳಿಸಿದೆ. ಇದನ್ನೇ ಕಠೋಪನಿಷತ್ತಿನಲ್ಲಿ ವರ್ಣಿಸುತ್ತಾ,

**ಅವಿದ್ಯಾಯಾಮಂತರೇ ವರ್ತಮಾನಾಃ ಸ್ವಯಂ ಧೀರಾಃ ಪಂಡಿತಂಮನ್ಯಮಾನಾಃ ।**
**ದಂದ್ರಮ್ಯಮಾಣಾಃ ಪರಿಯಂತಿ ಮೂಢಾ ಅಂಧೇನೈವ ನೀಯಮಾನಾ ಯಥಾಂಧಾಃ ॥**
**ನ ಸಾಂಪರಾಯಃ ಪ್ರತಿಭಾತಿ ಬಾಲಂ ಪ್ರಮಾದ್ಯಂತಂ ವಿತ್ತಮೋಹೇನ ಮೂಢಂ ।**
**ಅಯಂ ಲೋಕೋ ನಾಸ್ತಿ ಪರ ಇತಿ ಮಾನೀ ಪುನಃಪುನರ್ವಶಮಾಪದ್ಯತೇ ಮೇ ॥**

(ಕಠ ೧-೨-೫, ೬)

ಯಾರು ಸಂಸಾರಚಕ್ರದಲ್ಲಿ ಸಿಕ್ಕಿ ಅವಿದ್ಯಾಪೂರಿತರಾಗಿವರೋ ಅವರು "**ದಂದ್ರಮ್ಯಮಾಣಾಃ**" ಡೊಂಕುಡೊಂಕಾಗಿರುವ ಕರ್ಮಗತಿಯಲ್ಲಿ ನಡೆಯುತ್ತಾ ಮುಪ್ಪು, ಸಾವು, ಬೇನೆ ಮುಂತಾದ ದುಃಖಗಳಿಂದ ತೊಳಲುತ್ತಿರುವರು. ಇಂತಹ ಜ್ಞಾನರಹಿತರಾದ ಅಂಧರು ಪುನಃ ಪುನಃ ಜನ್ಮವನ್ನು ಸಂಪಾದಿಸಿ ಮೃತ್ಯುವಾದ ನನ್ನ ವಶವನ್ನು ಹೊಂದುವರು. ಹುಟ್ಟುವುದು ಸಾಯುವುದು ಮುಂತಾದ ದುಃಖದ ಸಾಲನ್ನೇರಿಕೊಂಡೇ ಇರುವರು ಎಂದು ನಚಿಕೇತನಿಗೆ ಯಮನು ವಿವರಿಸಿರುವನು. ಇದನ್ನೇ ಮುಂಡಕದಲ್ಲಿ

**ಅವಿದ್ಯಾಯಾಂ ಬಹುಧಾ ವರ್ತಮಾನಾ ವಯಂ ಕೃತಾರ್ಥಾ ಇತ್ಯಭಿಮನ್ಯಂತಿ ಬಾಲಾಃ ।**
**ಯತ್ಕರ್ಮಿಣೋ ನ ಪ್ರವೇದಯಂತಿ ರಾಗಾತ್ತೇನಾತುರಾಃ ಕ್ಷೀಣಲೋಕಾಶ್ಚ್ಯವಂತೇ ॥**

ಮು. ೧-೨-೯)

ಅವಿದ್ಯಾಸಮೂಹದಲ್ಲಿ ಇರುವವರು ರಾಗದಿಂದ ಎಂದರೆ ಕರ್ಮಫಲದ ಆಸೆಯಿಂದ ಆತುರರಾಗಿ, ದುಃಖದಿಂದ ನರಳುತ್ತಾ ಕ್ಷೀಣಲೋಕರಾಗಿ ಪುನರ್ಜನ್ಮವನ್ನು ಪಡೆಯುವರು ಇತ್ಯಾದಿಯಾಗಿ ವರ್ಣಿತವಾಗಿದೆ. ಆದುದರಿಂದ ಭೌತಿಕವಾದ ಚಕ್ಷುಸ್ಸಿಗೂ ನಿಲುಕದ ಈ ಪರವಸ್ತುವನ್ನು ಧ್ಯಾನಾದಿಗಳಿಂದ ಸಾಕ್ಷಾತ್ಕರಿಸಬೇಕೆಂದು ತಿಳಿಸಿದೆ. ಈ ಸಾಕ್ಷಾತ್ಕಾರಕ್ಕೆ **ಕರಣವಾವುದು; ದರ್ಶನವಾವುದು ?** ಎಂಬುದನ್ನು ವಿವರಿಸುತ್ತಾ ಸಾಧಾರಣವಾದ ಲೌಕಿಕವಾದ ಕರಣವು ಈ ದರ್ಶನದ ಹೇತುವಾಗಲಾರದು. ಆದುದರಿಂದ '**ಯ ಈಂ ಚಕಾರ ನ ಸೋ ಅಸ್ಯ ವೇದ**' **ಯಃ ಸಂಸಾರಾವಸ್ಥಾಯಾಂ ಈಂ ಏನಂ ಕೃಷಿವಾಣಿಜ್ಯವೇದಾಧ್ಯಯನಾದಿಕಂ ಚಕಾರ ಸೋऽಸ್ಯ ಏತನ್ನವೇದ ।** ಕೇವಲ ಬಾಹ್ಯವಾದ ಕೃಷ್ಯಾದಿಕರ್ಮಗಳನ್ನೂ ಅಧ್ಯಯನಾದಿಕರ್ಮಗಳನ್ನೂ ಮಾಡಿದವನು ತಿಳಿಯಲಾರನು. ಅಥವಾ **ಯೋ ದದರ್ಶ ಹಿರಗಿನ್ನು ತಸ್ಮಾತ್ । ಯಃ ಗಿರಿನದೀಸಮುದ್ರಬಂಧ್ವಾದಿಕಂ ದದರ್ಶ**

ಜೀವನಸಮಯೇ ತಸ್ಮಾದ್ದೃಷ್ಟಾತ್ ಹಿರಗಿನ್ನು ಪೃಥಗೇವ । ಯಾವ ಗಿರಿನದ್ಯಾದಿಗಳನ್ನು ಸಂಸಾರಾವಸ್ಥೆಯಲ್ಲಿ ಮಾನವನು ನೋಡುತ್ತಾನೆಯೋ ಅವೆಲ್ಲಕ್ಕಿಂತಲೂ ಈ ಆತ್ಮತತ್ತ್ವವು ಬೇರೆ. ಇದರ ಸಾಕ್ಷಾತ್ಕಾರಕ್ಕೆ ಧ್ಯಾನಾದಿಕರಣವೂ, ಮನನನಿದಿಧ್ಯಾಸನಾದಿದರ್ಶನಸಾಧನವೂ ಅತ್ಯಗತ್ಯವಾದುದು. ಎಂದು ತಿಳಿಸಿದೆ. ಈ ಸಾಕ್ಷಾತ್ಕಾರವಾದರೆ ಆಗ ಬ್ರಹ್ಮಜ್ಞಾನವುಂಟಾಗಿ ಜನ್ಮಾಂತರಗಳ ಬಾಧೆಗಳಿಲ್ಲದೆ ನಿತ್ಯಸುಖವು ಲಭಿಸುವುದೆಂದು ಅಧ್ಯಾತ್ಮಪಕ್ಷದ ಅಭಿಪ್ರಾಯವೆಂದು ಸಾಯಣರು ವಿವರಿಸಿದ್ದಾರೆ.

### ವ್ಯಾಕರಣಪ್ರಕ್ರಿಯಾ

**ಚಕಾರ**—ಡುಕೃಞ್ ಕರಣೇ ಧಾತು. ಲಿಡಂತರೂಪ. ಯದ್ಯೋಗವಿರುವುದರಿಂದ ನಿಘಾತಸ್ವರ ಬರುವುದಿಲ್ಲ. **ಲಿತಿ** ಎಂಬುದರಿಂದ ಪ್ರತ್ಯಯದ ಪೂರ್ವಕ್ಕೆ ಉದಾತ್ತಸ್ವರ ಬರುತ್ತದೆ.

**ದದರ್ಶ**—ದೃಶಿರ್ ಪ್ರೇಕ್ಷಣೇ ಧಾತು. ಛಾಂದಸವಾಗಿ ಲಿಟ್. ಪ್ರಥಮಪುರುಷಏಕವಚನಾಂತರೂಪ. **ಯದ್ವೃತ್ತಾನ್ನಿತ್ಯಮ್** ಎಂಬುದರಿಂದ ನಿಘಾತಸ್ವರಪ್ರತಿಷೇಧ ಬರುವುದರಿಂದ ಹಿಂದಿನಂತೆ ಪ್ರತ್ಯಯದ ಪೂರ್ವಕ್ಕೆ ಉದಾತ್ತಸ್ವರ ಬರುತ್ತದೆ.

**ಯೋನಾ**—ಯು ಮಿಶ್ರಣೇ. ಧಾತು **ವಹಿಶ್ರಿಶ್ರುಯು**—(ಉ. ಸೂ ೪-೪-೯೧) ಎಂಬುದರಿಂದ ನಿಪ್ರತ್ಯಯ. **ಸಾರ್ವಧಾತುಕಾರ್ಧಧಾತುಕಯೋಃ** ಎಂಬುದರಿಂದ ಧಾತುವಿನ ಇಕಿಗೆ ಗುಣ. ನಿತ್ವ ವಿಧಾನ ಮಾಡಿರುವುದರಿಂದ **ಞ್ನಿತ್ಯಾದಿರ್ನಿತ್ಯಮ್** (ಪಾ. ಸೂ. ೬-೧-೧೯೭) ಎಂಬುದರಿಂದ ಆದ್ಯುದಾತ್ತಸ್ವರ ಬರುತ್ತದೆ. **ಸುಪಾಂ ಸುಲುಕ್**—(ಪಾ. ಸೂ. ೭-೧-೩೯) ಎಂಬುದರಿಂದ ಸಪ್ತಮೀವಿಭಕ್ತಿಗೆ ಡಾದೇಶ. ಡಿತ್ತಾದುದರಿಂದ ಇಕಾರಕ್ಕೆ ಲೋಪ.

**ಪರಿವೀತಃ**—ವೀ ಗತ್ಯಾದಿಷು. ಧಾತು. ಕರ್ಮಣಿಯಲ್ಲಿ ಕ್ತ ಪ್ರತ್ಯಯ. **ಗತಿರನಂತರಃ** (ಪಾ. ಸೂ. ೬-೨-೪೯) ಎಂಬುದರಿಂದ ಗತಿಗೆ (ಪರಿ) ಪ್ರಕೃತಿಸ್ವರ ಬರುತ್ತದೆ.

**ಬಹುಪ್ರಜಾಃ**—ಪ್ರಜಾಯಂತೇ ಇತಿ ಪ್ರಜಾಃ ಜನೀ ಪ್ರಾದುರ್ಭಾವೇ. ಧಾತು. **ಉಪಸರ್ಗೇಚ ಸಂಜ್ಞಾಯಾಮ್** (ಪಾ. ಸೂ. ೩-೨-೯೯) ಎಂಬುದರಿಂದ ಡ ಪ್ರತ್ಯಯ. ಡಿತ್ವ ಸಾಮರ್ಥ್ಯದಿಂದ ಧಾತುವಿನ ಟಗೆ (ಅನ್) ಲೋಪ. **ಗತಿಕಾರಕೋಪಪದಾತ್ಕೃತ್** ಎಂಬುದರಿಂದ ಕೃದುತ್ತರಪದಪ್ರಕೃತಿಸ್ವರ ಬರುತ್ತದೆ.

**ನಿರ್ಋತಿಮ್**—**ತಾದೌ ಚ ನಿತಿ** (ಪಾ. ಸೂ. ೬-೨-೫೦) ಎಂಬುದರಿಂದ ಗತಿಗೆ (ನಿರ್) ಉದಾತ್ತಸ್ವರ ಬರುತ್ತದೆ.

**ವಿವೇಶ**—ವಿಶ ಪ್ರವೇಶನೇ. ಧಾತು. ಲಿಡಂತರೂಪ. ತಿಙಂತ ನಿಘಾತಸ್ವರ ಬರುತ್ತದೆ. ॥ ೩೨ ॥

ಸಂಹಿತಾಪಾಠಃ

ದ್ಯೌರ್ಮೇ ಪಿತಾ ಜನಿತಾ ನಾಭಿರತ್ರ ಬಂಧುರ್ಮೇ ಮಾತಾ ಪೃಥಿವೀ ಮಹೀಯಂ ।

ಉತ್ತಾನಯೋಶ್ಚಮ್ವೋ೩ರ್ಯೋನಿರಂತರತ್ರಾ ಪಿತಾ ದುಹಿತುರ್ಗರ್ಭಮಾಧಾತ್ ॥ ೩೩ ॥

ಪದಪಾಠಃ

ದ್ಯೌಃ । ಮೇ । ಪಿತಾ । ಜನಿತಾ । ನಾಭಿಃ । ಅತ್ರ । ಬಂಧುಃ । ಮೇ । ಮಾತಾ । ಪೃಥಿವೀ । ಮಹೀ । ಇಯಂ ।

ಉತ್ತಾನಯೋಃ । ಚಮ್ವೋಃ । ಯೋನಿಃ । ಅಂತಃ । ಅತ್ರ । ಪಿತಾ । ದುಹಿತುಃ । ಗರ್ಭಂ । ಆ । ಅಧಾತ್ ॥ ೩೩ ॥

ಸಾಯಣಭಾಷ್ಯಂ

ದೀರ್ಘತಮಾ ಬ್ರವೀತಿ । ಮೇ ಮಮ ದ್ಯೌರ್ದ್ಯುಲೋಕಃ ಪಿತಾ ಪಾಲಕಃ । ನ ಕೇವಲಂ ಪಾಲಕತ್ವಮಾತ್ರಂ ಅಪಿ ತು ಜನಿತಾ ಜನಯಿತೋತ್ಪಾದಯಿತಾ । ತತ್ರೋಪಪತ್ತಿಮಾಹ । ನಾಭಿರತ್ರ ನಾಭಿಭೂತೋ ಭೌಮೋ ರಸೋಽತ್ರ ತಿಷ್ಠತೀತಿ ಶೇಷಃ । ತತಶ್ಚಾನ್ನಂ ಜಾಯತೇ ಅನ್ನಾದ್ರೇತಃ ರೇತಸೋ ಮನುಷ್ಯ ಇತ್ಯೇವಂ ಪಾರಂಪರ್ಯೇಣ ಜನನಸಂಬಂಧಿನೋ ಹೇತೋ ರಸಸ್ಯಾತ್ರ ಸದ್ಭಾವಾತ್ । ಅನೇನೈವಾಭಿಪ್ರಾಯೇಣ ಜನಿತೇತ್ಯುಚ್ಯತೇ । ಅತ ಏವ ಬಂಧುರ್ಬಂಧಿಕಾ ತಥೇಯಂ ಮಹೀ ಮಹತೀ ಪೃಥಿವೀ ಮೇ ಮಾತಾ ಮಾತೃಸ್ಥಾನೀಯಾ ಸೋದ್ಭೂತೌಷಧ್ಯಾದಿನಿರ್ಮಾತ್ರೀತ್ಯರ್ಥಃ । ಕಿಂಚೋತ್ತಾನಯೋರೂರ್ಧ್ವಮುಖಯೋರ್ವಿತತಯೋಶ್ಚಮ್ವೋಃ ಸರ್ವಸ್ಯಾತ್ತೃಭಿರ್ಭೋಗಸಾಧನಯೋರ್ದ್ಯಾವಾಪೃಥಿವ್ಯೋರಂತರ್ಮಧ್ಯೇ ಯೋನಿಃ ಸರ್ವಭೂತನಿರ್ಮಾಣಾಶ್ರಯಮಂತರಿಕ್ಷಂ ವರ್ತತ ಇತಿ ಶೇಷಃ । ಅತ್ರಾಸ್ಮಿನ್ನಂತರಿಕ್ಷೇ ಪಿತಾ ದ್ಯುಲೋಕಃ । ಅಧಿಷ್ಠಾತ್ರಧಿಷ್ಠಾನಯೋರಭೇದೇನಾದಿತ್ಯೋ ದ್ಯೌರುಚ್ಯತೇ । ಸ್ವರಶ್ಮಿಭಿಃ । ಅಥವಾ ಇಂದ್ರಃ ಪರ್ಜನ್ಯೋ ವಾ । ದುಹಿತುರ್ದೂರೇ ನಿಹಿತಾಯಾ ಭೂಮ್ಯಾ ಗರ್ಭಂ ಸರ್ವೋತ್ಪಾದನಸಮರ್ಥಂ ವೃಷ್ಟ್ಯುದಕಲಕ್ಷಣಮಾಧಾತ್ । ಸರ್ವತಃ ಕರೋತಿ ॥

ಪ್ರತಿಪದಾರ್ಥ

**ಮೇ**—ನನಗೆ । **ದ್ಯೌಃ**—ದ್ಯುಲೋಕವು । **ಪಿತಾ**—ಪಾಲಕವೂ (ಮತ್ತು) । **ಜನಿತಾ**—ಉತ್ಪತ್ತಿ ಹೇತುವೂ ಆಗಿದೆ. । **ನಾಭಿಃ**—ನಾಭಿಭೂತವಾದ ಭೌಮರಸವು । **ಅತ್ರ**—ಇಲ್ಲಿದೆ. (ಆದುದರಿಂದಲೇ) । **ಬಂಧುಃ**—ಬಂಧುಭೂತವಾದ । **ಇಯಂ**— ಈ । **ಮಹೀ**—ವಿಸ್ತೃತವಾದ । **ಪೃಥಿವೀ**—ಪೃಥಿವಿಯು ।

**ಮೇ**—ನನಗೆ | **ಮಾತಾ**—ಮಾತೃರೂಪಳಾಗಿದ್ದಾಳೆ. | **ಉತ್ತಾನಯೋಃ**—ಊರ್ಧ್ವಮುಖವಾಗಿವಿಸ್ತೃತವಾದವೂ **ಚಮ್ವೋಃ**—ಚಮೂಪಾತ್ರೆಯಂತೆ ಭೋಗಸಾಧನಗಳಾದವೂ ಆದ ಈ ದ್ಯಾವಾಪೃಥಿವಿಗಳ | **ಅಂತಃ**—ಮಧ್ಯಭಾಗದಲ್ಲಿ | **ಯೋನಿಃ**—ಸಕಲಭೂತಗಳಿಗೂ ನಿರ್ಮಾತೃಸ್ಥಾನವಾದ | **ಅತ್ರ**—ಅಂತರಿಕ್ಷದಲ್ಲಿ | **ಪಿತಾ**—ಆದಿತ್ಯನು | **ದುಹಿತುಃ**—ತನ್ನ ದುಹಿತೃವಾದ ಪೃಥ್ವಿಯ | **ಗರ್ಭಂ**—ಗರ್ಭರೂಪವಾದ ಉದಕವನ್ನು | **ಆಧಾತ್**—ಧರಿಸಿದ್ದಾನೆ |

**ಭಾವಾರ್ಥ**

ದ್ಯುಲೋಕವು ನನಗೆ ಪಾಲಕವೂ ನನ್ನ ಉತ್ಪತ್ತಿಹೇತುವೂ ಆಗಿದೆ. ಸಕಲರಿಗೂ ಬಂಧುಭೂತವಾದುದೂ ವಿಸ್ತೃತವಾದುದೂ ಆದ ಈ ಪೃಥ್ವಿಯು ನನಗೆ ಮಾತೃರೂಪಳಾಗಿದ್ದಾಳೆ. ಊರ್ಧ್ವಮುಖವಾಗಿ ವಿಸ್ತೃತವಾದವೂ, ಚಮೂಪಾತ್ರೆಯಂತೆ ಭೋಗಸಾಧನಗಳಾದವೂ ಆದ ಈ ದ್ಯವಾಪೃಥಿವಿಗಳ ಮಧ್ಯಭಾಗದಲ್ಲಿ ಸಕಲಭೂತಗಳಿಗೂ ನಿರ್ಮಾತೃಸ್ಥಾನವಾದ ಅಂತರಿಕ್ಷದಲ್ಲಿ ಆದಿತ್ಯನು ತನ್ನ ದುಹಿತೃವಾದ ಪೃಥ್ವಿಯ ಗರ್ಭರೂಪವಾಧ ಉದಕವನ್ನು ಧರಿಸಿದ್ದಾನೆ.

English Translation

The heaven is my parent and progenitor : the navel (of the earth) is my kinsman : the spacious earth is my mother. The womb (of all being) lies between the two uplifted ladles, and in it the parent has deposited the germ (of the fruitifulness) of the daughter.

**ವಿಶೇಷವಿಷಯಗಳು**

ಆದಿತ್ಯನ ಸ್ಥಾನವನ್ನೂ, ವಿಶ್ವಕ್ಕೂ ಅವನಿಗೂ ಇರತಕ್ಕ ರಕ್ಷಕರಕ್ಷ್ಯಸಂಬಂಧವನ್ನೂ ತಿಳಿಸುವುದೇ ಈ ಋಕ್ಕಿನ ತಾತ್ಪರ್ಯವಾದೆ. ಆನುಷಂಗಿಕವಾಗಿ ಆದಿತ್ಯನ ನಿವಾಸಸ್ಥಾನವಾದ ಅಂತರಿಕ್ಷವನ್ನೂ ಅದಕ್ಕೆ ಸಂಬಂಧಿಸಿದ ದ್ಯಾವಾಪೃಥಿವಿಗಳನ್ನೂ ಸ್ತುತಿಸಿದೆ. ದ್ಯುಲೋಕವನ್ನು ಪಿತೃವೆಂದೂ, ಪೃಥ್ವಿಯನ್ನು ಮಾತೃವೆಂದೂ ಸಹ ಋಷಿಯು ನಿರ್ದೇಶಿಸಿದ್ದಾನೆ. ಮತ್ತು ಅವುಗಳ ಸ್ವರೂಪವನ್ನು ವರ್ಣಿಸಲು ನಾಭಿಃ ಯೋನಿಃ ಇತ್ಯಾದಿ ವಿಶೇಷಣಗಳನ್ನೂ ಉಪಯೋಗಿಸಿದ್ದಾನೆ. ಈ ಪದಗಳು ಅನೇಕಾರ್ಥಗಳಲ್ಲಿ ಋಕ್ಸಂಹಿತೆಯಲ್ಲಿ ಉಪಯೋಗಿಸಲ್ಪಡುವುವಾದುರಿಂದ ಅವುಗಳ ನಾನಾರ್ಥಗಳ ಪ್ರಯೋಗಗಳನ್ನು ತಿಳಿದು ಅನಂತರ ಇಲ್ಲಿ ಅವು ದ್ಯಾವಾಪೃಥಿವಿಗಳ ಯಾವ ನಿರ್ದಿಷ್ಟವಾದ ಸ್ವರೂಪಗಳನ್ನು ವರ್ಣಿಸುವುವು ಎಂಬುದನ್ನು ತಿಳಿಯಬಹುದು.

ನಾಭಿಃ—ನಾಭಿಶಬ್ದಕ್ಕೆ ಸಂಬಂಧ, ರಕ್ಷಣ, ಅನುರಾಗ, ಉತ್ಪತ್ತಿಸ್ಥಾನ ಇತ್ಯಾದ್ಯರ್ಥಗಳು ಋಕ್ಸಂಹಿತಾ ಪ್ರಯೋಗಗಳಲ್ಲಿ ಪ್ರಸಿದ್ಧವಾಗಿವೆ.

**ವೈಶ್ವಾನರ ನಾಭಿರಸಿ ಕ್ಷಿತೀನಾಂ ಸ್ಥೂಣೇವ ಜನಾँ ಉಪಮಿದ್ಯಯಂಥ |**

(ಋ ಸಂ. ೧-೫೯-೧)

ಎಂಬಲ್ಲಿ ವೈಶ್ವಾನರನು ಕ್ಷಿತಿಗಳ **ನಾಭಿಯೆಂದು** ವರ್ಣಿತನಾಗಿದ್ದಾನೆ. ಸಕಲ ಮಾನವರಿಗೂ **ಸಂನದ್ಧನು** ಎಂದರೆ ಅವಸ್ಥಾಪಕನು ಎಂದು ಅರ್ಥವು. ಎಂದರೆ ವೈಶ್ವಾನರನು ಸಕಲ **ಲೋಕಗಳೊಂದಿಗೂ** ವ್ಯಾಪಕವಾದ ಸಂಬಂಧವನ್ನಿಟ್ಟುಕೊಂಡಿರುವುದರಿಂದ ಈ ವಿಶೇಷಣವು ಪ್ರಯೋಗಿಸಲ್ಪಟ್ಟಿದೆ.

**ಮೂರ್ಧಾ ದಿವೋ ನಾಭಿರಗ್ನಿಃ ಪೃಥಿವ್ಯಾ ಅಥಾಭವದರತೀ ರೋದಸ್ಯೋಃ ।**
**ತಂ ತ್ವಾ ದೇವಾಸೋಽಜನಯಂತ ದೇವಂ ವೈಶ್ವಾನರ ಜ್ಯೋತಿರಿದಾರ್ಯಾಯ ॥**
(ಋ. ಸಂ. ೧-೫೯-೨)

ಎಂಬಲ್ಲಿಯೂ ಅದೇ ವೈಶ್ವಾನರಾಗ್ನಿಯ ಸ್ತುತಿಯಿದೆ. ಇಲ್ಲಿ **ಪೃಥಿವ್ಯಾ ನಾಭಿಃ** ಎಂದರೆ ಪೃಥ್ವಿಯ ಸಂನಾಹಕನು ಎಂದರೆ ರಕ್ಷಕನು ಎಂದರ್ಥವಾಗುತ್ತದೆ.

**ಅಜಃ ಪುರೋ ನೀಯತೇ ನಾಭಿರಸ್ಯಾನು ಪಶ್ಚಾತ್ಕವಯೋ ಯಂತಿ ರೇಭಾಃ ।**
ಋ. ಸಂ. ೧-೧೬೩-೧೨)

**ಪೃಚ್ಛಾಮಿ ತ್ವಾ ಪರಮಂತಂ ಪೃಥಿವ್ಯಾಃ ಪೃಚ್ಛಾಮಿ ಯತ್ರ ಭುವನಸ್ಯ ನಾಭಿಃ ।**
(ಋ. ಸಂ. ೧-೧೬೪-೩೪)

ಇತ್ಯಾದಿ ವಾಕ್ಯಗಳಲ್ಲಿ **ಬಂಧನಹೇತು** ಎಂದರೆ ಸರ್ವಭೂತಗಳಿಗೂ ಸಂಬಂಧವನ್ನು ತೋರಿಸುವ ಒಂದು ನಿಯಮನ ರೂಪವಾದ ಬಂಧಕವೆಂದೂ

**ಗಂಧರ್ವೋ ಅಪ್ಸ್ವಪ್ಯಾ ಚ ಯೋಷಾ ಸಾ ನೋ ನಾಭಿಃ ಪರಮಂ ಜಾಮಿ ತನ್ನೌ ।**
(ಋ. ಸಂ. ೧೦-೧೦-೪)

ಇತ್ಯಾದಿ ವಾಕ್ಯಗಳಲ್ಲಿ ಉತ್ಪತ್ತಿಸ್ಥಾನವೆಂದೂ,

**ಮಾತಾ ರುದ್ರಾಣಾಂ ದುಹಿತಾ ವಸೂನಾಂ ಸ್ವಸಾದಿತ್ಯಾನಾಮಮೃತಸ್ಯ ನಾಭಿಃ ।**
(ಋ. ಸಂ. ೮-೧೦೧-೧೫)

ಇತ್ಯಾದಿಋಕ್ಕುಗಳಲ್ಲಿ ಆವಾಸಸ್ಥಾನವೆಂದೂ ಅರ್ಥವಾಗುತ್ತದೆ. ಇದರಂತೆಯೇ, **ಯೋನಿಶಬ್ದವೂ** ಸಹ ಕೇವಲ ಉತ್ಪತ್ತಿಸ್ಥಾನವೆಂಬರ್ಥದಲ್ಲಿ ಮಾತ್ರವಲ್ಲದೆ, ನಿವಾಸಸ್ಥಾನ, ಗೃಹ ಇತ್ಯಾದ್ಯರ್ಥಗಳಲ್ಲಿಯೂ ಪ್ರಯುಕ್ತವಾಗಿದೆ. ನಿಘಂಟುವಿನಲ್ಲಿ ಈ ಪದವನ್ನು **ಅರ್ಣಃ ಕ್ಷೋದಃ** ಇತ್ಯಾದಿ ೧೦೧ ಉದಕನಾಮಗಳಲ್ಲಿ ಪಠಿಸಿದ್ದಾರೆ. (ನಿ. ೨-೨೪).

**ವರ್ಧಂತೀಮಾಪಃ ಪನ್ವಾ ಸುಶಿಶ್ವಿಮೃತಸ್ಯ ಯೋನಾ ಗರ್ಭೇ ಸುಜಾತಂ ।**
(ಋ. ಸಂ. ೧-೬೫-೪)

ಎಂಬಲ್ಲಿ **ಯಜ್ಞಸ್ಯ ಅನ್ನಸ್ಯ ವಾ ಕಾರಣಭೂತೇ ಜಲೇ** ಎಂದು ಯೋನಿಶಬ್ದಕ್ಕೆ ಉತ್ಪತ್ತಿಹೇತುವೆಂಬರ್ಥದಲ್ಲಿ ಪ್ರಯೋಗವಿದೆ.

**ಸಮಿದ್ಧಃ ಶುಕ್ರ ದೀದಿಹ್ಯೃತಸ್ಯ ಯೋನಿಮಾಸದಃ ಸಸಸ್ಯ ಯೋನಿಮಾಸದಃ ।**
(ಋ. ಸಂ ೫-೨೧-೪)

ಎಂಬಲ್ಲಿ **ಯೋನಿಂ ಕಾರಣಂ । ಸ್ವರ್ಗಸಾಧನಂ ।** ಕಾರಣ, ಅಥವಾ ಸಾಧನವೆಂದರ್ಥವಾಗುತ್ತದೆ.

**ದುರೋಕಶೋಚಿಃ ಕ್ರತುರ್ನ ನಿತ್ಯೋ ಜಾಯೇವ ಯೋನಾವರಂ ವಿಶ್ವಸ್ಮೈ ।**

(ಋ. ಸಂ. ೧-೬೬-೫)

ಎಂಬಲ್ಲಿ ಗೃಹವೆಂದೂ, ಹೀಗೆಯೇ ಅನೇಕಾರ್ಥಗಳಲ್ಲಿ ಉಪಯೋಗಿಸಲ್ಪಟ್ಟಿದೆ. ಪ್ರಕೃತವಾದ ಋಕ್ಕಿನಲ್ಲಿ ನಾಭಿ ಶಬ್ದವು ಭೌಮವಾದ ರಸದ ಪರ್ಯಾಯನಾಮವಾಗಿದೆಯೆಂದು ವ್ಯಾಖ್ಯಾನದಿಂದ ತಿಳಿಯುತ್ತದೆ. ಎಂದರೆ ಉತ್ಪಾದಕ ಹೇತುವೆಂದರ್ಥವಾಗುತ್ತದೆ. ಸಾಯಣರು ಇದನ್ನು ವಿವರಿಸುತ್ತಾ **ನಾಭಿಭೂತೋ ಭೌಮೋ ರಸೋಽತ್ರ ತಿಷ್ಠತೀತಿ ಶೇಷಃ ।ತತಶ್ಚಾನ್ನಂ ಜಾಯತೇ ಅನ್ನಾದ್ರೇತಃ ರೇತಸೋ ಮನುಷ್ಯ ಇತ್ಯೇವಂ ಪಾರಂಪರ್ಯೇಣ ಜನನ-ಸಂಬಂಧಿನೋ ಹೇತೋಃ ರಸಸ್ಯಾತ್ರ ಸದ್ಭಾವಾತ್ ।** ಈ ರಸದಿಂದ ಅನ್ನವೂ, ಅನ್ನದಿಂದ ರೇತಸ್ಸೂ, ರೇತಸ್ಸಿನಿಂದ ಮಾನವನೂ ಉತ್ಪನ್ನವಾಗಿ ಈ ನಾಭಿರೂಪವಾದ ರಸವು ಎಲ್ಲಕ್ಕೂ ಪರಂಪರೆಯಾಗಿ ಉತ್ಪತ್ತಿಸ್ಥಾನ ವೆಂದು ತಿಳಿಸಲು ಈ ಪದವನ್ನು ಪ್ರಯೋಗಿಸಿದೆಯೆಂದು ತಿಳಿಸಿದ್ದಾರೆ.

**ಯೋನಿ**ಶಬ್ದವು ಅಂತರಿಕ್ಷಪರವಾಗಿದೆ. ಸರ್ವಭೂತಗಳಿಗೂ ನಿರ್ಮಾತೃಯೆಂದು ಹಿಂದೆ ಅಂತರಿಕ್ಷಪರ ವಾದ ಈ ಶಬ್ದವನ್ನು ವಿವರಿಸಿದೆ. ಹೀಗೆ ವರ್ಣಿತವಾದ ದ್ಯಾವಾಪೃಥಿವಿಗಳ ನಡುವೆ ಇರುವ ಅಂತರಿಕ್ಷಸ್ಥನಾದ ಆದಿತ್ಯನು ತನ್ನ ದುಹಿತೃವಾದ ಪೃಥ್ವಿಯ ರಸರೂಪವಾದ ಗರ್ಭವನ್ನು ಧರಿಸಿದ್ದಾನೆಂದು ತಾತ್ಪರ್ಯವು.

**ಮಹೀ—ಮಹತೀ ಪೃಥಿವೀ** ಎಂದು ಈ ಪದವು ಪೃಥಿವಿಗೆ ವಿಶೇಷಣವಾಗಿದೆ. ಇಲ್ಲಿ **ಮಹೀ** ಎಂಬ ಪದಕ್ಕೆ ಪೂಜ್ಯವಾದ ಎಂಬರ್ಥವನ್ನು ಹೇಳಬೇಕು. ಪೃಥಿವೀಶಬ್ದದಿಂದಲೇ ಅದರ ವ್ಯಾಪಕವಾದ ವಿಸ್ತೃತಿಯು ತೋರುತ್ತದೆ.

**ಪ್ರಥನಾತ್ಪೃಥಿವೀತ್ಯಾಹುಃ ಕ ಏನಾಮಪ್ರಥಯಿಷ್ಯತ್ ಕಿಮಾಧಾರಶ್ಚೇತ್ಯಥ ವೈ ದರ್ಶನೇನ ಪೃಥುರಪ್ರಥಿತಾ ಚೇದಪ್ಯನ್ಯೈಃ ।**

(ನಿ. ೧-೧೪)

ವಿಸ್ತೃತವಾಗಿ ಹರಡಿರುವುದರಿಂದಲೇ ಪೃಥಿವಿಗೆ ಈ ಹೆಸರು ಪ್ರಸಿದ್ಧವಾಗಿದೆ. ಅದನ್ನು ವಿಸ್ತೃತವಾಗಿ ಹರಡಿದವರು ಯಾರೆಂದರೆ ಅದಕ್ಕೆ ಉತ್ತರವನ್ನು ಹೇಳುವುದು ಶ್ರಮ. ಒಂದುವೇಳೆ ಯಾರೂ ಅದನ್ನು ಹರಡದೇ ಇದ್ದಿದ್ದರೂ ಸಹ ಅದು ತಾನಾಗಿಯೇ ಹರಡಿರುವುದು. ಅದು ಹೇಗೆ ಸಾಧ್ಯವೆಂಬುದನ್ನು ತೈತ್ತಿರೀಯಸಂಹಿತೆಯಲ್ಲಿ ವರ್ಣಿಸುತ್ತಾ ಪೃಥ್ವಿಯ ವಿಸ್ತೃತಿಯು ಸ್ವಾಭಾವಿಕವಾದುದು ಎಂದು ತಿಳಿಸಿದೆ.

**ಆಪೋ ವಾ ಇದಮಗ್ರೇ ಸಲಲಮಾಸೀತ್ತಸ್ಮಿನ್ಪ್ರಜಾಪತಿರ್ವಾಯುರ್ಭೂತ್ವಾಚರತ್ಸ ಇಮಾಮಪ-ಶ್ಯತ್ತಾಂ ವರಾಹೋ ಭೂತ್ವಾಹರತ್ತಾಂ ವಿಶ್ವಕರ್ಮಾ ಭೂತ್ವಾ ವ್ಯಮಾರ್ಟ್ಸಾ ಪ್ರಥತೆ ಸಾ ಪೃಥಿವ್ಯಭವತ್ತತ್ಪೃಥಿವ್ಯೈ ಪೃಥಿವಿತ್ವಂ ।**

(ತೈ. ಸಂ. ೭-೧-೫-೧)

ಇತ್ಯಾದಿ ವಾಕ್ಯಗಳಿಂದ ಪೃಥ್ವಿಯ ಸಹಜವಾದ ವಿಸ್ತೃತಿಯು ವರ್ಣಿತವಾಗಿರುವುದರಿಂದ ಈ ಗುಣವನ್ನು ತಿಳಿಸಲು ಪುನಃ **ಮಹೀ** ಎಂಬ ವಿಶೇಷಣವು ಬೇಕಿಲ್ಲ. ಆದುದರಿಂದ ಇಲ್ಲಿ ಪೂಜ್ಯವೆಂಬರ್ಥವೆಂದು ತಿಳಿಸಿದೆ. ಇಲ್ಲಿ ಋಷಿಯು

ದ್ಯಾವಾಪೃಥಿವಿಗಳನ್ನು ಜನಿತಾ, ಪಿತಾ, ಮಾತಾ ಇತ್ಯಾದಿವಿಶೇಷಣಗಳಿಂದ ಸ್ತುತಿಸಿದ್ದಾನೆ. ದ್ಯಾವಾಪೃಥಿವಿಗಳು, ತಮ್ಮ ದಾಂಪತ್ಯಸಂಬಂಧದಿಂದ ಸಕಲಲೋಕಗಳಿಗೂ ಆಧಾರಭೂತರಾಗಿರುವರೆಂದು ವರ್ಣಿತವಾಗಿರುವ ಅಂಶವನ್ನು ಹಿಂದೆಯೇ ವಿವರಿಸಿದೆ. ಅದೂ ಅಲ್ಲದೆ,

**ಯ ಇಮೇ ದ್ಯಾವಾಪೃಥಿವೀ ಜನಿತ್ರೀ ರೂಪೈರಪಿಂಶದ್ಭುವನಾನಿ ವಿಶ್ವಾ ।**
**ತಮದ್ಯ ಹೋತರಿಷಿತೋ ಯಜೀಯಾನ್ ದೇವಂ ತ್ವಷ್ಟಾರಮಿಹ ಯಕ್ಷಿ ವಿದ್ವಾನ್ ॥**

(ಋ. ಸಂ. ೧೦-೧೧೦-೯)

ಇತ್ಯಾದಿಋಕ್ಕುಗಳಲ್ಲಿ ಜನಿತ್ರೀ ಎಂಬ ಪದಕ್ಕೆ ವಿಶ್ವಸ್ಯ ಜನಯಿತ್ರ್ಯೌ ಎಂಬರ್ಥವಾಗುವುದರಿಂದ ದ್ಯಾವಾಪೃಥಿವಿಗಳನ್ನು ದೇವಮಾನವಾದಿ ಸಕಲಭೂತಗಳಿಗೂ ಜನಯಿತ್ರಿಯರೆಂದು ಹೇಳಿದೆ. ವಿಶ್ವಪಿತೃಗಳಾದ ಇವರು ತನಗೂ ಪಿತೃಗಳೆಂದೂ ಪೂಜ್ಯರೆಂದೂ ಋಷಿಯು ಪೂಜಿಸಿದ್ದಾನೆಂದು ಸಾಯಣರು ' **ಪಾರಂಪರ್ಯೇಣ** ಜನನಸಂಬಂಧಿನೋ ಹೇತೋಃ ' ಎಂದು ವಿವರಿಸಿದ್ದಾರೆ.

ಅನೇಕ ಸಂದರ್ಭಗಳಲ್ಲಿ ದ್ಯಾವಾಪೃಥಿವಿಗಳನ್ನು **ಪಿತರಾ** ಎಂಬ ಪದದಿಂದಲೇ ನಿರ್ದೇಶಿಸಿದೆ. ಆದರೆ **ಪಿತೃ** ಯಾರು, **ಮಾತೃವು** ಯಾರು ಎಂಬುದನ್ನು ನಿಸ್ಸಂದಿಗ್ಧವಾಗಿ ಹೇಳಿರುವುದಿಲ್ಲ. ಇಂತಹ ಸಂದರ್ಭಗಳಲ್ಲಿ ಸಾಯಣರು ಎರಡುವಿಧವಾಗಿಯೂ ಅರ್ಥಮಾಡಿದ್ದಾರೆ. ನಿರುಕ್ತದಲ್ಲಿಯೂ ಸಹ,

(ಪಿತುಃ ಪಿತೃಸ್ಥಾನೀಯಾಯಾಃ ಪೃಥಿವ್ಯಾಃ); **ಮಾತುಃ ಮಾತಾಂತರಿಕ್ಷಂ ನಿರ್ಮೀಯಂತೇಽಸ್ಮಿನ್ ಭೂತಾನಿ ।**

(ನಿ. ೨-೮)

ಪಾಲನಾರ್ಥಕವಾದ **ಪಾ** ಧಾತುವಿನಿಂದ ನಿಷ್ಪನ್ನವಾಗಿ ಸಕಲ ಭೂತಗಳನ್ನೂ ಪಾಲಿಸತಕ್ಕ ಪೃಥಿವಿಗೆ ಪಿತೃವೆಂದೂ, ಅಂತರಿಕ್ಷದಲ್ಲೇ ಸಕಲ ಭೂತಗಳೂ ನಿರ್ಮಿತವಾಗುವುದರಿಂದ ಅಂತರಿಕ್ಷಕ್ಕೆ ಮಾತೃವೆಂದೂ ವಿಶೇಷಣಗಳು ಪ್ರಸಿದ್ಧವಾಗಿವೆಯೆಂದು ನಿರುಕ್ತಕಾರರ ವಾಕ್ಯವಿದೆ. ಅಲ್ಲದೇ,

**ದ್ಯೌ ಷ್ಪಿತಃ ಪೃಥಿವಿ ಮಾತರಧ್ರುಗಗ್ನೇ ಭ್ರಾತರ್ವಸೋ ಮೃಳತಾ ನಃ ।**
**ವಿಶ್ವ ಆದಿತ್ಯಾ ಅದಿತೇ ಸಜೋಷಾ ಅಸ್ಮಭ್ಯಂ ಶರ್ಮ ಬಹುಲಂ ವಿ ಯಂತ ॥**

(ಋ. ಸಂ. ೬-೫೧-೫)

ಇತ್ಯಾದಿಋಕ್ಕುಗಳಲ್ಲೂ,

**ದ್ಯೌಃ ಪಿತಾ । ಪೃಥಿವೀ ಮಾತಾ** (ತೈ. ಬ್ರಾ. ೩-೭-೫-೪, ೫)

**ಉಪಹೂತಾ ಪೃಥಿವೀ ಮಾತೋಪ ಮಾಂ ಪೃಥಿವೀ ಮಾತಾ ಹ್ವಯತಾಮಗ್ನಿರಾಗ್ನೀಧ್ರಾತ್ಸ್ವಾಹೋಪಹೂತಾ ದ್ಯೌಷ್ಪಿತೋಪ ಮಾಂ ದ್ಯೌಷ್ಪಿತಾ ॥**

(ಶ. ಬ್ರಾ. ೧-೮-೧-೪೧)

ಇತ್ಯಾದಿ ಬ್ರಾಹ್ಮಣವಾಕ್ಯಗಳಲ್ಲಿಯೂ,

**ಮಧು ದ್ಯೌರಸ್ತು ನಃ ಪಿತಾ** (ಋ. ಸಂ. ೧-೯೦-೭) ಇತ್ಯಾದಿ ಋಕ್ಕುಗಳಲ್ಲಿಯೂ ಸಹ ದ್ಯುಲೋಕಾಧಿ ದೇವತೆಗೆ ಪಿತೃವೆಂಬ ವಿಶೇಷಣವು ರೂಢವಾಗಿದೆ. ಅದರಂತೆ ಪ್ರಕೃತವಾದ ಋಕ್ಕಿನಲ್ಲಿಯೂ ಸಹ **ದ್ಯೌರ್ಮೇ ಪಿತಾ : ಮಾತಾ** ಪೃಥಿವೀ ಎಂದು ಸ್ತುತಿಸಿದೆ.

**ಉತ್ತಾನಯೋಃ— ಊರ್ಧ್ವತಾನಯೋಃ—** ಊರ್ಧ್ವಮುಖವಾಗಿ ಪ್ರಸರಿಸಿದ ಎಂದರ್ಥಮಾಡಿದೆ. ಮತ್ತು ಇದು **ಚಮ್ವೋಃ** ಎಂಬ ಪದಕ್ಕೆ ವಿಶೇಷಣವಾಗಿದೆ. **ಸರ್ವಸ್ಯ ಅತ್ತ್ರ್ಯೋಃ ಭೋಗಸಾಧನಯೋಃ ದ್ಯಾವಾಪೃಥಿವ್ಯೋಃ ।** ಸಕಲ ಲೋಕಗಳನ್ನೂ ತಮ್ಮಲ್ಲಿ ಅಂತರ್ಗತವಾಗುವಂತೆ ಮಾಡುವುವೂ ಮತ್ತು ಎಲ್ಲಕ್ಕೂ ಭೋಗಸಾಧನಗಳಾಗಿರುವುವೂ ಆದ ದ್ಯಾವಾ ಪೃಥಿವಿಗಳೆಂದರ್ಥ.

> **ದ್ಯಾವಾಪೃಥಿವೀಭ್ಯಾಮಿತಿ ತೆದಾಭ್ಯಾಂ ದ್ಯಾವಾಪೃಥಿವೀಭ್ಯಾಮಾರಭತೇ ಯಯೋರಿದಂ ಸರ್ವಮಧಿ ।**
>
> (ಶ. ಬ್ರಾ. ೩-೧-೩-೨೬)

ಎಂದಿರುವಂತೆ ಸಮಸ್ತವಿಶ್ವವೂ ಸಹ ಭರಣಕ್ಕೂ ಧಾರಣೆಗೂ ದ್ಯಾವಾಪೃಥಿಗಳನ್ನೇ ನಂಬಿವೆಯೆಂಬಂಶವನ್ನು ಇಲ್ಲಿಯೂ ತಿಳಿಸಿದೆ.

**ದುಹಿತುಃ ಗರ್ಭಮಾಧಾತ್**—ಎಂಬಲ್ಲಿ **ದುಹಿತುಃ** ಎಂಬ ಪದಕ್ಕೆ ಪೃಥ್ವಿಯು ಆದಿತ್ಯನಿಗೆ ಪುತ್ರಿಯೆಂಬ ರ್ಥವನ್ನು ಹೇಳುವುದು ಸಹಜವಾದರೂ ಸಹ ಸಾಯಣರು **ದೂರೇ ನಿಹಿತಾಯಾಃ ಭೂಮ್ಯಾಃ ।** ದೂರದಲ್ಲಿ ಸ್ಥಿತ ವಾಗಿರುವ ಭೂಮಿಯ ಗರ್ಭರೂಪವಾದ ಉದಕವನ್ನು ಧರಿಸಿದನು ಎಂದು ವಿವರಿಸಿದ್ದಾರೆ. ಉತ್ತರಾರ್ಧದಲ್ಲಿರುವ **ಪಿತಾ** ಎಂಬ ಪದಕ್ಕೆ ಮೊದಲು **ದ್ಯುಲೋಕಃ** ಎಂದರ್ಥಮಾಡಿ, ಅನಂತರ **ಅಧಿಷ್ಠಾತೃಧಿಷ್ಠಾನಯೋಃ ಅಭೇದೇನ ಆದಿತ್ಯೋ ದ್ಯೌರುಚ್ಯತೇ**—ದ್ಯುಲೋಕರೂಪವಾದ ಅಧಿಷ್ಠಾನಕ್ಕೂ ಆದಿತ್ಯರೂಪನಾದ ಅಧಿಷ್ಠಾತೃವಿಗೂ ಅಭೇದವಿರುವುದರಿಂದ ಇಲ್ಲಿ ಆದಿತ್ಯನೆಂದೇ ಅರ್ಥವೆಂದು ತಿಳಿಸಿದ್ದಾರೆ. **ಅಥವಾ ಇಂದ್ರಃ ಪರ್ಜನ್ಯೋ ವಾ** ಎಂಬ ವಿಕಲ್ಪಾರ್ಥವನ್ನೂ ಹೇಳಿದ್ದಾರೆ.

**ಆಧಾತ್— ಸರ್ವತಃ ಕರೋತಿ ।** ತಾನು ತನ್ನ ರಶ್ಮಿಗಳಿಂದ ಮೊದಲು ಹೀರಿ ಅನಂತರ ಉದಕವನ್ನು ವಿಶ್ವಕ್ಕೆಲ್ಲಾ ಹರಡುವನು ಎಂದರ್ಥ.

॥ ವ್ಯಾಕರಣಪ್ರಕ್ರಿಯಾ ॥

**ಜನಿತಾ**— ಜನೀ ಪ್ರಾದುರ್ಭಾವೇ. ಧಾತು. ಅಂತರ್ಭಾವಿತಣ್ಯರ್ಥಕವಾಗಿದೆ. **ಕರ್ತರಿಯಲ್ಲಿ** ತೃಚ್ ಪ್ರತ್ಯಯ. **ಆರ್ಧಧಾತುಕಸ್ಯೇಡ್ವಲಾದೇಃ** ಎಂಬುದರಿಂದ ಇಡಾಗಮ. **ಚಿತಃ** ಎಂಬುದರಿಂದ **ಅಂತೋದಾತ್ತ**ಸ್ವರ ಬರುತ್ತದೆ.

**ಚಮ್ವೋಃ**— ಚಮು ಅದನೇ. ಧಾತು. **ಕೃಷಿಚಮಿತನಿಧನಿ**—(ಪಾ. ಸೂ. ೧-೮೧) ಎಂಬುದರಿಂದ ಊಃ ಪ್ರತ್ಯಯ. ಪ್ರತ್ಯಯ ಸ್ವರದಿಂದ ಅಂತೋದಾತ್ತವಾಗುತ್ತದೆ. ಷಷ್ಠೀದ್ವಿವಚನ ಓಸ್ ಪರವಾದಾಗ ಯಣಾದೇಶ. **ಉದಾತ್ತಸ್ವರಿತಯೋರ್ಯಣಃ ಸ್ವರಿತೋನುದಾತ್ತಸ್ಯ** (ಪಾ. ಸೂ. ೮-೨-೪) ಎಂಬುದರಿಂದ ವಿಭಕ್ತಿಗೆ ಉದಾತ್ತ ಸ್ವರ ಬರುತ್ತದೆ

ಅತ್ರಾ—**ಋಚಿತುನುಘ**—(ಪಾ ಸೂ. ೬-೩-೧೩೩) ಎಂಬುದರಿಂದ ಸಂಹಿತಾದಲ್ಲಿ ದೀರ್ಘ ಬರುತ್ತದೆ.

ಅಧಾತ್ ಡುಧಾಞ್ ಧಾರಣಪೋಷಣಯೋಃ ಧಾತು. ಛಾಂದಸವಾಗಿ ಲುಙ್. **ಗಾತಿಸ್ಥಾಸಿಚಾಘು**—( ಪಾ. ಸೂ. ೨-೪-೭೭ ) ಎಂಬುದರಿಂದ ಸಿಚಿಗೆ ಲುಕ್. ಅತಿಙಂತವ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ. ॥ ೩೩ ॥

ಸಂಹಿತಾಪಾಠಃ

ಪೃಚ್ಛಾಮಿ ತ್ವಾ ಪರಮಂತಂ ಪೃಥಿವ್ಯಾಃ ಪೃಚ್ಛಾಮಿ ಯತ್ರ ಭುವನಸ್ಯ
ನಾಭಿಃ ।
ಪೃಚ್ಛಾಮಿ ತ್ವಾ ವೃಷ್ಣೋ ಅಶ್ವಸ್ಯ ರೇತಃ ಪೃಚ್ಛಾಮಿ ವಾಚಃ ಪರಮಂ
ವ್ಯೋಮ ॥ ೩೪ ॥

ಪದಪಾಠಃ

ಪೃಚ್ಛಾಮಿ । ತ್ವಾ । ಪರಂ । ಅಂತಂ । ಪೃಥಿವ್ಯಾಃ । ಪೃಚ್ಛಾಮಿ । ಯತ್ರ । ಭುವನಸ್ಯ । ನಾಭಿಃ ।
ಪೃಚ್ಛಾಮಿ । ತ್ವಾ । ವೃಷ್ಣಃ । ಅಶ್ವಸ್ಯ । ರೇತಃ । ಪೃಚ್ಛಾಮಿ । ವಾಚಃ । ಪರಮಂ । ವಿಽಓಮ ॥ ೩೪ ॥

ಸಾಯಣಭಾಷ್ಯಂ

ಅಶ್ವಮೇಧಿಕೇ ಮಧ್ಯಮೇಽಹನಿ ಬ್ರಹ್ಮೋದ್ಯೇ ಹೋತ್ರಾದಯಃ ಪೃಚ್ಛಾಮಿ ತ್ವೇತ್ಯನಯಾ ಯಜಮಾನಂ ಪೃಚ್ಛೇಯುಃ । ತಥಾ ಚ ಸೂತ್ರಿತಂ । ಏಕೈಕಶೋ ಯಜಮಾನಂ ಪೃಚ್ಛಂತಿ ಪೃಚ್ಛಾಮಿ ತ್ವಾ ಪರಮಂತಂ ಪೃಥಿವ್ಯಾಃ । ಆ. ೧೦-೯ । ಇತಿ ॥

ಹೇ ಯಜಮಾನ ತ್ವಾ ತ್ವಾಂ ಪೃಚ್ಛಾಮಿ । ಪ್ರಶ್ನಂ ಕರೋಮಿ । ಕಿಂ । ಪೃಥಿವ್ಯಾಃ ಪರಮಂತಮುತ್ಕೃಷ್ಟಾಂ ಕಾಷ್ಠಾಂ । ಯತ್ರ ಸರ್ವಾ ಪೃಥಿವೀ ಸಮಾಪ್ಯತೇ ತತ್ಪೃಚ್ಛಾಮಿ । ತಥಾ ತ್ವಾಮನ್ಯತ್ಪೃಚ್ಛಾಮಿ । ಕಿಂ ತದಿತಿ ಉಚ್ಯತೇ । ಯತ್ರ ಭುವನಸ್ಯ ಭೂತಜಾತಸ್ಯ ನಾಭಿಃ ಸಂನಾಹೋ ಬಂಧನಂ । ಯತ್ರ ಸರ್ವಂ ಸಂನದ್ಧಂ ಭವತಿ ತಮಿತ್ಯರ್ಥಃ । ಕಿಂಚ ತ್ವಾ ತ್ವಾಂ ವೃಷ್ಣೋ ವರ್ಷಕಸ್ಯಾಶ್ವಸ್ಯ ವ್ಯಾಪ್ತಸ್ಯಾದಿತ್ಯಸ್ಯ । ಅಸೌ ವಾ ಆದಿತ್ಯೋ ವೃಷಾಶ್ವ ಇತಿ ತೈತ್ತಿರೀಯಕಂ । ತಸ್ಯ ರೇತೋ ರೇತೋವತ್ಕಾರಣಂ ತತ್ಕಿಮಿತಿ ಪೃಚ್ಛಾಮಿ । ತಥಾ ವಾಚಃ ಸರ್ವಸ್ಯ ವಾಗ್ಜಾತಸ್ಯ ಪರಮಂ ನಿರತಿಶಯಂ ವ್ಯೋಮ ಸ್ಥಾನಂ ಸರ್ವಸ್ಯ ವಚಸಃ ಕಾರಣಂ । ಏತತ್ಪ್ರಶ್ನಚತುಷ್ಟಯಂ ಪೃಚ್ಛಾಮಿ ॥

ಪ್ರತಿಪದಾರ್ಥ

**(ಯಜಮಾನ**—ಎಲೈ ಯಜಮಾನನೇ) | **ಪೃಥಿವ್ಯಾಃ**—ಪೃಥಿವಿಯ | **ಪರಂ ಅಂತಂ**—ತುತ್ತತುದಿಯು ( ಯಾವುದೆಂಬುದನ್ನಾಗಿ ) | **ತ್ವಾ**—ನಿನ್ನನ್ನು | **ಪೃಚ್ಛಾಮಿ**—ಕೇಳುತ್ತೇನೆ | **ಭುವನಸ್ಯ** ಪ್ರಪಂಚದ | **ನಾಭಿಃ**—ಬಂಧಕವು | **ಯತ್ರ**—ಎಲ್ಲಿದೆಯೆಂದು | **ಪೃಚ್ಛಾಮಿ**—ಕೇಳುತ್ತೇನೆ | **ವೃಷ್ಣಃ**—ವೃಷ್ಟಿರೂಪದ ಉದಕವನ್ನು ಸೇಚನೆಮಾಡುವ | **ಅಶ್ವಸ್ಯ**—ವ್ಯಾಪಕನಾದ ಆದಿತ್ಯನ | **ರೇತಃ**—ವೀರ್ಯವಾವುವೆಂದು | **ಪೃಚ್ಛಾಮಿ**—ಕೇಳುತ್ತೇನೆ | **ವಾಚಃ**—ದಿವ್ಯವಾಕ್ಕಿನ | ಪರಮಂ **ವ್ಯೋಮ**—ಅತಿಶಯವಾದ ಸ್ಥಾನವು (ಉತ್ಪತ್ತಿಸ್ಥಾನವು) ಯಾವುದೆಂದು | **ಪೃಚ್ಛಾಮಿ**—ಕೇಳುತ್ತೇನೆ ||

ಭಾವಾರ್ಥ

ಎಲೈ ಯಜಮಾನನೇ, ಪೃಥಿವಿಯ ತುತ್ತತುದಿಯಾವುದೆಂಬುದನ್ನಾಗಿಯೂ, ವಿಶ್ವದ ಎಲ್ಲಾ ಭಾಗಗಳನ್ನು ಒಟ್ಟಿಗೆ ಸೇರಿಸತಕ್ಕ ಬಂಧಕವು ಎಲ್ಲಿದೆಯೆಂದೂ, ವೃಷ್ಟಿಯನ್ನು ಸುರಿಸತಕ್ಕ ಆದಿತ್ಯನ ವೀರ್ಯವಾವುದೆಂದೂ, ಮತ್ತು ಸಕಲವ್ಯವಹಾರಗಳಿಗೂ ಕಾರಣವಾದ ವಾಕ್ಕಿನ ಪರಮಸ್ಥಾನವಾವುದು ಎಂಬುದನ್ನೂ ತಿಳಿದುಕೊಳ್ಳಲು ನಿನ್ನನ್ನು ಪ್ರಶ್ನಿಸುತ್ತೇನೆ (ಇವುಗಳ ಸ್ವರೂಪಗಳನ್ನು ನನಗೆ ತಿಳಿಸು).

English Translation

I ask you, (Institutor of the rite), what is the utter-most end of the earth : I ask you, where is the navel of the world. I ask you what is the fecundating power of the rain-shedding steed : I ask you, what is the supreme heaven of (holy) speech.

ವಿಶೇಷವಿಷಯಗಳು

ಅಶ್ವಮೇಧಯಜ್ಞದ ಮಧ್ಯದ ದಿವಸದಲ್ಲಿ ಬ್ರಹ್ಮೋದ್ಯವು (ಬ್ರಹ್ಮವಿಷಯವಾದ **ತತ್ತ್ವವಿಮರ್ಶೆಯು**) ನಡೆಯುತ್ತಿರುವಾಗ ಹೋತೃವೇ ಮೊದಲಾದ ಋತ್ವಿಕ್ಕುಗಳು **ಪೃಚ್ಛಾಮಿ ತ್ವಾ** ಎಂಬ ಈ ಋಕ್ಕಿನಿಂದ ಯಜಮಾನನನ್ನು ಪ್ರಶ್ನೆಮಾಡುವರು. ಈ ವಿಷಯವು ಆಶ್ವಲಾಯನಶ್ರೌತಸೂತ್ರದ **ಏಕೈಕಶೋ ಯಜಮಾನಂ ಪೃಚ್ಛಂತಿ ಪೃಚ್ಛಾಮಿ ತ್ವಾ** ಪರಮಂತಂ ಪೃಥಿವ್ಯಾಃ ಎಂಬ ಸೂತ್ರದಿಂದ ವಿವೃತವಾಗಿರುವುದು. (ಆ. ೧೦-೯)

**ಅಶ್ವಮೇಧಿಕೇ ಮಧ್ಯಮೇಽಹನಿ ಬ್ರಹ್ಮೋದ್ಯೇ ಹೋತ್ರಾದಯಃ " ಪೃಚ್ಛಾಮಿ ತ್ವಾ ಇತ್ಯನಯಾ ಯಜಮಾನಂ ಪೃಚ್ಛೇಯುಃ "** ಇದು ಬ್ರಹ್ಮೋದ್ಯಕಾಲದಲ್ಲಿ ಪಠಿಸತಕ್ಕ ಮಂತ್ರವು. **ಹೋತ್ರಾದಿಗಳು** ಯಜಮಾನನನ್ನು ಕೇಳತಕ್ಕ ಪ್ರಶ್ನೆಗಳು ಈ ಮಂತ್ರದಲ್ಲಡಗಿವೆ ಇದು ಬ್ರಹ್ಮವಿಷಯಕವಾದ ಪ್ರಶ್ನೆ. " **ಏಕೈಕಶೋ ಯಜಮಾನಂ ಪೃಚ್ಛಾಮಿ ತ್ವಾ ಪರಮಂತಂ ಪೃಥಿವ್ಯಾಃ** " ಎಂದು ಆಶ್ವಲಾಯನಶ್ರೌತಸೂತ್ರದಲ್ಲಿಯೂ ಸಹ ಈ ಮಂತ್ರದ ವಿನಿಯೋಗವನ್ನು ತಿಳಿಸಿದ್ದಾರೆ. ಈ ಬ್ರಹ್ಮೋದ್ಯವು ಅಶ್ವಮೇಧದ ಮಧ್ಯಕಾಲದಲ್ಲಿ ನಿಯತವಾಗಿ ಆಚರಿಸಲ್ಪಡಬೇಕಾದ ವಿಧಿಯು. ಇದು ಕರ್ಮಾಂಗವಾಗಿದ್ದರೂ ಸಹ ಇದರಲ್ಲಿ ವಿಶ್ವತತ್ತ್ವದ ವಿಷಯಕವಾದ ಜ್ಞಾನಾನ್ವೇಷಣವಿರುತ್ತದೆ ವಿಶ್ವತತ್ತ್ವಕ್ಕೆ ಸಂಬಂಧಿಸಿದ ರಹಸ್ಯವಾದ ಅಂಶಗಳನ್ನು ತಿಳಿಯಬೇಕೆಂಬ ಕುತೂಹಲವೂ.

ಆ ವಿಷಯದಲ್ಲಿ ಆಯಾ ಋಷಿಗಳಿಗೆ ತಿಳಿದ ಉತ್ತರವೂ ಬ್ರಹ್ಮಸ್ವರೂಪವನ್ನು ಕುರಿತ ಪ್ರಶ್ನೋತ್ತರಗಳಾಗಿವೆ. ತೈತ್ತಿರೀಯಸಂಹಿತೆ, ಐತರೇಯಬ್ರಾಹ್ಮಣ, ಶತಪಥಬ್ರಾಹ್ಮಣ, ಬೃಹದಾರಣ್ಯಕೋಪನಿಷತ್ ಇತ್ಯಾದಿ ಶ್ರುತಿಗಳಲ್ಲೆಲ್ಲಾ ಈ ಬ್ರಹ್ಮೋದ್ಯವು ಒಂದೇ ರೂಪವಾಗಿಲ್ಲ. ಬ್ರಹ್ಮಾನ್ವೇಷಣವು ಇದರಲ್ಲಿ ಮುಖ್ಯವಾದ ಅಂಶವಾಗಿದ್ದರೂ ಸಹ ಪ್ರಶ್ನೋತ್ತರಗಳಲ್ಲಿ ಕ್ರಮಭೇದಗಳಿರುತ್ತವೆ. ಉದಾಹರಣೆಗೆ ಪ್ರಕೃತವಾದ ಸೂಕ್ತದಲ್ಲಿ ಇದು ಹೋತ್ರಾದಿಗಳು ಯಜಮಾನನಿಗೆ ಹಾಕತಕ್ಕ ಪ್ರಶ್ನೆಯೆಂದು ಸಾಯಣರು ಆಶ್ವಲಾಯನಶ್ರೌತಸೂತ್ರದ ವಾಕ್ಯವನ್ನು ದಹರಿಸಿ ಹೇಳಿದ್ದಾರೆ. ತೈತ್ತಿರೀಯಸಂಹಿತೆಯಲ್ಲಿ ಹೋತೃವು ಈ ಪ್ರಶ್ನೆಯನ್ನು ಯಜ್ಞಕಾಲದಲ್ಲಿ ಬ್ರಹ್ಮನಿಗೆ ಹಾಕುತ್ತಾನೆ. ಉತ್ತರವನ್ನು ಬ್ರಹ್ಮನು ಹೇಳುತ್ತಾನೆ.

" **ಕಿಗ್ಂಸ್ವಿದಾಸೀತ್ ಪೂರ್ವಚಿತ್ತಿಃ ....** " ಇತ್ಯಾದಿವಾಕ್ಯದಿಂದ ಈ ಪ್ರಶ್ನೋತ್ತರವು ತೈತ್ತಿರೀಯಸಂಹಿತೆಯಲ್ಲಿ ಉಕ್ತವಾಗಿದೆ. ಅಲ್ಲಿ " **ಅಥ ಹೋತುಃ ಪ್ರಶ್ನಾಃ ಬ್ರಹ್ಮಣಃ ಪ್ರತಿವಚನಾನಿ** " ಹೋತೃವಿಗೂ ಬ್ರಹ್ಮನಿಗೂ ನಡೆಯತಕ್ಕ ಪ್ರಶೋತ್ತರರೂಪವಾದ ಸಂಭಾಷಣೆಯು ಎಂದು ವ್ಯಾಖ್ಯಾನದಿಂದ ತಿಳಿಯುತ್ತದೆ.

ತೈತ್ತಿರೀಯಾದಿಸಂಹಿತೆಗಳಲ್ಲಿ ಈ ಬ್ರಹ್ಮೋದ್ಯದ ಕ್ರಮವು ಯಾವ ರೀತಿಯಲ್ಲಿ ವಿವರಿಸಲ್ಪಟ್ಟಿದೆಯೆಂದು ಮುಂದಿನ ಋಕ್ಕಿನ (೧-೧೬೪-೩೫) ವಿಶೇಷವಿಷಯಗಳಲ್ಲಿ ತಿಳಿಸಲಾಗುತ್ತದೆ.

**ಪೃಚ್ಛಾಮಿ ಯತ್ರ ಭುವನಸ್ಯ ನಾಭಿಃ**—ಎಂಬಲ್ಲಿ **ನಾಭಿಶಬ್ದಕ್ಕೆ ಸಂನಾಹಃ** ಎಂದರೆ ಸಕಲಭೂತಜಾತಗಳಿಗೂ ಒಂದು ಸಂಬಂಧವನ್ನು ತೋರಿಸತಕ್ಕ ಬಂಧಕರೂಪವಾದ ತಂತುವಾವುದು ಎಂದು ಪ್ರಶ್ನಿಸಿದೆ. [**ನಾಭಿಶಬ್ದಕ್ಕೆ** ಇರತಕ್ಕ ನಾನಾರ್ಥಗಳನ್ನು ಹಿಂದಿನ ಋಕ್ಕಿನ ವಿಶೇಷ ವಿಷಯಗಳಲ್ಲಿ ತಿಳಿಸಿದೆ].

**ವೃಷ್ಣೋ ಅಶ್ವಸ್ಯ**— ಎಂಬುದಕ್ಕೆ **ವರ್ಷಕಸ್ಯ ; ವ್ಯಾಪ್ತಸ್ಯಾದಿತ್ಯಸ್ಯ ।** ವರ್ಷಕನೂ, ಜಗದ್ವ್ಯಾಪಕನೂ ಆದ ಆದಿತ್ಯನ ಎಂಬರ್ಥವೆಂದು ತಿಳಿಸಿದೆ. **ವೃಷನ್‌ಶಬ್ದಕ್ಕೆ ವೃಷು-ಸೇಚನೇ ; ವೃಷ-ಶಕ್ತಿಬಂಧನೇ** ಎಂಬ ಎರಡು ಧಾತುಗಳಿಂದಲೂ ನಿಷ್ಪತ್ತಿಯನ್ನು ತೋರಿಸಬಹುದು. ಮೊದಲನೆಯ ಧಾತುವಿನಿಂದ ನಿಷ್ಪನ್ನವಾದರೆ ಸೇಚಿಸು ಎಂಬರ್ಥವೂ, ಎರಡನೆಯ ಧಾತುವಿನಿಂದ ನಿಷ್ಪನ್ನವಾದರೆ ಶಕ್ತಿಯುತನು ಎಂದೂ ಅರ್ಥವಾಗುತ್ತದೆ. [ಈ ಪದದ ನಿಷ್ಪತ್ತಿಯನ್ನೂ ಇದಕ್ಕಿರುವ ನಾನಾರ್ಥಗಳನ್ನೂ ಸಹ ಋಗ್ವೇದ ಸಂಹಿತೆಯ ೮ನೇ ಭಾಗದಲ್ಲಿ ೧೬೮-೧೭೦ನೆ ಪುಟಗಳಲ್ಲಿ ವಿಶದವಾಗಿ ತಿಳಿಸಿದೆ]. ಈ ಎರಡು ಗುಣಗಳೂ ಇರುವುದರಿಂದ ಇಲ್ಲಿ ಆದಿತ್ಯನಿಗೆ **ವೃಷ್ಣಃ** ಎಂಬ ವಿಶೇಷಣವಿದೆ. **ಅಶ್ವಸ್ಯ** ಎಂಬ ವಿಶೇಷಣವು ಇವನ ಜಗದ್ವ್ಯಾಪಕತ್ವವನ್ನು ತೋರಿಸುತ್ತದೆ. ಇದೇ ಅಂಶವನ್ನು ತೈತ್ತಿರೀಯಾರಣ್ಯಕದಲ್ಲಿ,

> **ವೃಷ್ಣೋ ಅಶ್ವಸ್ಯ ನಿಷ್ಪದಸೀತ್ಯಾಹ । ಅಸೌ ವಾ ಆದಿತ್ಯೋ ವೃಷಾಶ್ವಃ । ತಸ್ಯ ಛಂದಾಗ್ಂಸಿ ನಿಷ್ಪತ್ । ಛಂದೋಭಿರೇವೈನಂ ಧೂಪಯತಿ ।**

(ತೈ ಆ. ೫-೩-೫, ೬)

ಇತ್ಯಾದಿ ವಾಕ್ಯಗಳಲ್ಲಿ ತಿಳಿಸಿದೆ. ವೃಷ್ಟಿರೂಪವಾದ ಉದಕವನ್ನು ಸೇಚನ ಮಾಡತಕ್ಕವನೆಂದೂ ಜಗದ್ವ್ಯಾಪಕನೆಂದೂ ಆದಿತ್ಯನ ವಿಶೇಷಗುಣಗಳನ್ನು ತಿಳಿಸುತ್ತದೆ

॥ ವ್ಯಾಕರಣಪ್ರಕ್ರಿಯಾ ॥

**ಪೃಚ್ಛಾಮಿ**—ಪ್ರಚ್ಛ ಜ್ಞೀಪ್ಸಾಯಾಂ ವಾಚಿ. ಲಟ್ ಉತ್ತಮಪುರುಷ ಏಕವಚನಾಂತರೂಪ. ಪಾದಾದಿಯಲ್ಲಿರುವುದರಿಂದ ನಿಘಾತಸ್ವರ ಬರುವುದಿಲ್ಲ. ವಿಕರಣಸ್ವರದಿಂದ (ಶ) ಮಧ್ಯೋದಾತ್ತವಾಗುತ್ತದೆ.

**ಪೃಥಿವ್ಯಾಃ**—ಪೃಥಿವೀಶಬ್ದ ಙೀಷಂತವಾದುದರಿಂದ ಅಂತೋದಾತ್ತವಾಗುತ್ತದೆ. ಷಷ್ಠೀಏಕವಚನ ಪರವಾದಾಗ ಯಣಾದೇಶ. **ಉದಾತ್ತಯಣೋ ಹಲ್ಪೂರ್ವಾತ್** (ಪಾ. ಸೂ. ೬-೧-೧೭೪) ಎಂಬುದರಿಂದ ವಿಭಕ್ತಿಗೆ ಉದಾತ್ತಸ್ವರ ಬರುತ್ತದೆ.

**ವೃಷ್ಣಃ**—ವೃಷು ಸೇಚನೇ. ಧಾತು. **ಕನಿನ್ಯುವೃಷಿ**—(ಉ. ಸೂ. ೧-೧೫೪) ಎಂಬುದರಿಂದ ಕನಿನ್ ಪ್ರತ್ಯಯ. ನಿತ್ತಾದುದರಿಂದ ಆದ್ಯುದಾತ್ತಸ್ವರ ಬರುತ್ತದೆ. ಷಷ್ಠೀಪರವಾದಾಗ **ಅಲ್ಲೋಪೋಽನಃ** ಎಂಬುದರಿಂದ ಅನಿನ ಅಕಾರಕ್ಕೆ ಲೋಪ. ॥ ೩೪ ॥

—:o:—

ಸಂಹಿತಾಪಾಠಃ

ಇಯಂ ವೇದಿಃ ಪರೋ ಅಂತಃ ಪೃಥಿವ್ಯಾ ಅಯಂ ಯಜ್ಞೋ ಭುವನಸ್ಯ ನಾಭಿಃ ।
ಅಯಂ ಸೋಮೋ ವೃಷ್ಣೋ ಅಶ್ವಸ್ಯ ರೇತೋ ಬ್ರಹ್ಮಾಯಂ ವಾಚಃ ಪರಮಂ ವ್ಯೋಮ ॥ ೩೫ ॥

ಪದಪಾಠಃ

ಇಯಂ । ವೇದಿಃ । ಪರಃ । ಅಂತಃ । ಪೃಥಿವ್ಯಾಃ । ಅಯಂ । ಯಜ್ಞಃ । ಭುವನಸ್ಯ । ನಾಭಿಃ ।
ಅಯಂ । ಸೋಮಃ । ವೃಷ್ಣಃ । ಅಶ್ವಸ್ಯ । ರೇತಃ । ಬ್ರಹ್ಮಾ । ಅಯಂ । ವಾಚಃ । ಪರಮಂ । ವಿಽಓಮ ॥ ॥ ೩೫ ॥

ಸಾಯಣಭಾಷ್ಯ

ಅಥೈವಂ ಪೃಷ್ಟೋ ಯಜಮಾನ ಇಯಂ ವೇದಿರಿತ್ಯನಯಾ ಪ್ರತಿಬ್ರೂಯಾತ್ । ಇಯಂ ವೇದಿಃ ಪರೋ ಅಂತಃ ಪೃಥಿವ್ಯಾ ಇತಿ ಪ್ರತ್ಯಾಹ । ಆ. ೧೦-೯. । ಇತಿ ಸೂತ್ರಿತತ್ವಾತ್ ॥

ಪೃಥಿವ್ಯಾಃ ಪ್ರಥನವತ್ಯಾ ಭೂಮ್ಯಾಃ ಪರೋ ಅಂತಃ ಪರಮಂತಂ ಪರ್ಯವಸಾನಮಿಯಂ ವೇದಿಃ । ನ ಹಿ ವೇದ್ಯತಿರಿಕ್ತಾ ಭೂಮಿರಸ್ತಿ । ಏತಾವತೀ ವೈ ಪೃಥಿವೀ ಯಾವತೀ ವೇದಿರಿತಿ ಶ್ರುತೇಃ ।

ತಥಾಯಂ ಯಜ್ಞೋ ಭುವನಸ್ಯ ಭೂತಜಾತಸ್ಯ ನಾಭಿಃ ಸಂನಹನಂ । ತತ್ರೈವ ವೃಷ್ಟ್ಯಾದಿಸರ್ವಫಲೋತ್ಪತ್ತೇಃ ಸರ್ವಪ್ರಾಣಿನಾಂ ಬಂಧಕತ್ವಾತ್ । ಅಥ ವೃಷ್ಣೋ ವರ್ಷಕಸ್ಯಾದಿತ್ಯಸ್ಯ ರೇತೋಽಯಂ ಸೋಮೋ ರಸಾತ್ಮಕಃ । ಅಗ್ನೌ ಹುತಃ ಸೋಮರಸ ಆದಿತ್ಯಂ ಪ್ರಾಪ್ಯ ವೃಷ್ಟ್ಯಾದಿಫಲಂ ಜನಯತಿ। ಅಯಂ ಬ್ರಹ್ಮಾ ಪ್ರಜಾಪತಿರೇವ ವಾಚೋ ಮಂತ್ರಾದಿರೂಪಾಯಾಃ ಪರಮಂ ವ್ಯೋಮ । ಉತ್ಕೃಷ್ಟಂ ರಕ್ಷಕಂ ಸ್ಥಾನಂ । ತತ್ರೈವೋತ್ಪತ್ತೇಸ್ತತ್ರೈವ ಪರ್ಯವಸಾನಾಚ್ಚ ॥

### ಪ್ರತಿಪದಾರ್ಥ

**ಇಯಂ ವೇದಿಃ**— ಈ ಯಜ್ಞವೇದಿಯು । **ಪೃಥಿವ್ಯಾಃ**—ಪೃಥ್ವಿಯ । **ಪರಃ**—ಅತ್ಯಂತ ಅತಿಶಯವಾದ । **ಅಂತಃ**—ಪರ್ಯವಸಾನವಾಗಿ (ಇದೆ) । **ಅಯಂ ಯಜ್ಞಃ**— ಈ ಯಜ್ಞವು । **ಭುವನಸ್ಯ**—ಪ್ರಪಂಚಕ್ಕೆ । **ನಾಭಿಃ**—ನಾಭಿರೂಪವಾಗಿ (ಇದೆ) । **ಅಯಂ ಸೋಮಃ**— ಈ ಸೋಮರಸವು । **ವೃಷ್ಣಃ**—ಸೇಚನಸಮರ್ಥನಾದವನೂ । **ಅಶ್ವಸ್ಯ**—ವ್ಯಾಪಕನಾದವನೂ ಆದ ಆದಿತ್ಯನ । **ರೇತಃ**—ರೇತಸ್ಸಾಗಿ (ಇದೆ) । **ಅಯಂ ಬ್ರಹ್ಮಾ**—ಪ್ರಜಾಪತಿಯೇ । **ವಾಚಃ**—ವಾಕ್ಕಿಗೆ । **ಪರಮಂ**—ಶ್ರೇಷ್ಠವಾದ । **ವ್ಯೋಮ**—ರಕ್ಷಕಸ್ಥಾನವಾಗಿದ್ದಾನೆ ।

### ಭಾವಾರ್ಥ

ಯಜ್ಞವೇದಿಯೇ ಪೃಥ್ವಿಯ ಅತ್ಯಂತಅತಿಶಯವಾದ ಪರ್ಯವಸಾನವು. ಯಜ್ಞವೇ ವಿಶ್ವದ ನಾಭಿರೂಪವಾಗಿದೆ. ಸೇಚನಸಮರ್ಥನಾದವನೂ ವ್ಯಾಪಕನೂ ಆದ ಆದಿತ್ಯನಿಗೆ ಸೋಮರಸವೇ ರೇತಸ್ಸಾಗಿದೆ. ಪ್ರಜಾಪತಿಯೇ ವಾಕ್ಕಿಗೆ ಶ್ರೇಷ್ಠವಾದ ರಕ್ಷಕಸ್ಥಾನವಾಗಿದ್ದಾನೆ.

## English Translation

This altar is the uttermost end of the earth : this sacrifice is the navel of the world : this Soma juice is the fecundating power of the rain-shedding steed : this Brahma is the supreme heaven of (holy) speech.

### ವಿಶೇಷವಿಷಯಗಳು

ಹಿಂದಿನ ಋಕ್ಕಿನಲ್ಲಿ ಹೋತ್ರಾದಿಋತ್ವಿಕ್ಕುಗಳು ಯಜಮಾನನನ್ನು ಪ್ರಶ್ನೆಮಾಡಲಾದ ವಿಷಯಗಳಿಗೆ ಪ್ರತ್ಯುತ್ತರವಾಗಿ ಯಜಮಾನನು **ಇಯಂ ವೇದಿಃ** : ಎಂಬ ಈ ಋಕ್ಕನ್ನು ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ **ಇಯಂ ವೇದಿಃ ಪರೋ ಅಂತಃ ಪೃಥಿವ್ಯಾ ಇತಿ ಪ್ರತ್ಯಾಹ** ಎಂಬ ಸೂತ್ರದಿಂದ ವಿವೃತವಾಗಿರುವುದು(ಆ. ೧೦-೯)

ಬ್ರಹೋದ್ಯರೂಪವಾದ ಹಿಂದಿನ ಮಂತ್ರದಲ್ಲಿ (೩೪ನೆಯ ಋಕ್ಕಿನಲ್ಲಿ) ನಾಲ್ಕುಪ್ರಶ್ನೆಗಳನ್ನು ಕೇಳಿದೆ. ಅವುಗಳಲ್ಲಿ ಮೊದಲನೆಯದು " **ಪೃಚ್ಛಾಮಿ ತ್ವಾ ಪರಮಂತಂ ಪೃಥಿವ್ಯಾಃ** " ॥ ಪೃಥಿವಿಗು ತುತ್ತತುದಿಯಾವುದು ಎಂಬ ಪ್ರಶ್ನೆಯಾಗಿದೆ. ಆದಕ್ಕೆ ಉತ್ತರವಾಗಿ ಪ್ರಕೃತವಾದ ಋಕ್ಕಿನಲ್ಲಿ " **ಇಯಂ ವೇದಿಃ ಪರೋ ಅಂತಃ ಪೃಥಿವ್ಯಾಃ** " ಈ ವೇದಿಯೇ ಪೃಥಿವಿಯ ತುತ್ತತುದಿಯೆಂದು ಉತ್ತರರೂಪವಾಗಿ ಹೇಳಿದೆ. ಎಂದರೆ ಯಜ್ಞಾಧಾರವಾದ ವೇದಿಯೆಂದಾಯಿತು. ಯಜ್ಞವೇ ಪರಬ್ರಹ್ಮಸ್ವರೂಪವಾದುದರಿಂದಲೂ, ಪೃಥಿವ್ಯಾದಿಲೋಕಗಳೆಲ್ಲವೂ ಬ್ರಹ್ಮನ ಆಧಾರವೇ

ಆದುದರಿಂದಲೂ ಸಹ ಯಜ್ಞಾಧಾರವಾದ ವೇದಿಗೂ ಪೃಥಿವಿಗೂ ತಾದಾತ್ಮ್ಯವನ್ನು ಹೇಳಿದೆ (ಪೃಥಿವಿಯೆಂಬ ಪದವು ಅಂತರಿಕ್ಷಪರ್ಯಾಯವೂ ಆಗಿರುವುದರಿಂದ ಇಲ್ಲಿ ಕೇವಲ ಭೂಮಿಯೆಂದೇ ಅರ್ಥವಿರಲಾರದು).

**ಸ ವೈ ತ್ರಿಃ ಪೂರ್ವಂ ಪರಿಗ್ರಹಂ ಪ್ರತಿಗೃಹ್ಣಾತಿ । ತ್ರಿರುತ್ತರಂ ತಚ್ಛಟ್ಕೃತ್ವಃ ಷಡ್ವಾ ಋತವಃ ಸಂವತ್ಸರಸ್ಯ ಸಂವತ್ಸರೋ ಯಜ್ಞಃ ಪ್ರಜಾಪತಿಃ ಸ ಯಾವಾನೇವ ಯಜ್ಞೋ ಯಾವತ್ಯಸ್ಯ ಮಾತ್ರಾ ತಾವಂತಮೇವೈತತ್ಪರಿಗೃಹ್ಣಾತಿ ॥**

(ಶ. ಬ್ರಾ. ೧-೨-೫-೧೨)

ಇತ್ಯಾದಿವಾಕ್ಯಗಳಲ್ಲಿ ಪ್ರಜಾಪತಿಗೂ ಕಾಲಾತ್ಮಕವಾದ ಸಂವತ್ಸರಕ್ಕೂ, ವತ್ಸರರೂಪವಾದ ಯಜ್ಞಕ್ಕೂ ಪ್ರಜಾಪತಿಗೂ ತಾದಾತ್ಮ್ಯವನ್ನು ಹೇಳಿದೆ. ಹೀಗೆ ದೇಶಕಾಲಾದಿರೂಪಿಯಾದ ಪ್ರಜಾಪತಿಗೂ ಆಧಾರವು ಎಷ್ಟು ವಿಸ್ತೃತವೋ ಯಜ್ಞಾಧಾರವೂ ಅಷ್ಟೇ ವಿಸ್ತೃತಿಯುಳ್ಳದ್ದು ಎಂದು "**ಯಾವತ್ಯಸ್ಯ ಮಾತ್ರಾ ತಾವಂತಮ್ಯೆವೈತತ್ಪರಿಗೃಹ್ಣಾತಿ**" ಎಂಬ ವಾಕ್ಯದಿಂದ ತಿಳಿಸಿದೆ. ಮತ್ತು ಯಜ್ಞಾಧಾರವಾದ **ವೇದಿಯ** ಶಬ್ದನಿಷ್ಪತ್ತಿಯನ್ನು ತಿಳಿಸುತ್ತಾ,

**ತಂ ಛಂದೋಭಿರಭಿತಃ ಪರಿಗೃಹ್ಯ । ಅಗ್ನಿಂ ಪುರಸ್ತಾತ್ಸಮಾಧಾಯ ತೇನಾರ್ಚಂತಃ ಶ್ರಾಮ್ಯಂತಶ್ಚೇರುಸ್ತೇನೇಮಾಗ್ಂ ಸರ್ವಾಂ ಪೃಥಿವೀಂ ಸಮವಿಂದಂತ ತದ್ಯದೇನೇನೇಮಾಗ್ಂ ಸರ್ವಾಗ್ಂ ಸಮವಿಂದಂತ ತಸ್ಮಾದ್ವೇದಿರ್ನಾಮ ತಸ್ಮಾದಾಹುರ್ಯಾವತೀ ವೇದಿಸ್ತಾವತೀ ಪೃಥಿವೀತ್ಯೇತಯಾ ಹೀಮಾಗ್ಂ ಸರ್ವಾಗ್ಂ ಸಮವಿಂದಂತ್ಯೆವಗ್ಂ ಹ ವಾ ಇಮಾಗ್ಂ ಸರ್ವಾಗ್ಂ ಸಪತ್ನಾನಾಂ ಸಂವೃಂಕ್ತೇ ನಿರ್ಭಜತ್ಯಸ್ಯೈ ಸಪತ್ನಾನ್ಯ ಏವಮೇತದ್ವೇದ ॥**

(ಶ. ಬ್ರಾ. ೧-೨-೫-೭)

ಛಂದಸ್ಸುಗಳಿಂದ ಯಜ್ಞವೇದಿಯನ್ನು ಪರಿಗ್ರಹಿಸಿದನಂತರ ಅದರಲ್ಲಿ ಅಗ್ನಿಯನ್ನು ಸ್ಥಾಪಿಸಿ ಅನುಸ್ಯೂತವಾದ ತಪೋರೂಪವಾದ ನಿಯಮಗಳಿಂದಲೂ ವ್ರತಗಳಿಂದಲೂ ಪೂಜಿಸತೊಡಗಿದರು. ಇದರ ಫಲವಾಗಿ ಅವರು ಪೂರ್ಣವಾದ ಪೃಥ್ವಿಯನ್ನು ಪಡೆದರು (ಸಮವಿಂದಂತ). ಅವರು ಈ ಪೃಥ್ವಿಯನ್ನು ಪೂರ್ಣವಾಗಿ ಪಡೆದುದರಿಂದಲೇ (ಸಂವಿದ್) ಯಜ್ಞಭೂಮಿಗೆ **ವೇದಿ** ಯೆಂಬ ಹೆಸರು ಪ್ರಸಿದ್ಧವಾಯಿತು. ಆದುದರಿಂದಲೇ " ಪೃಥ್ವಿಯು ಎಷ್ಟು ವಿಸ್ತೃತವಾಗಿದೆಯೋ ಯಜ್ಞವೇದಿಯೂ ಅಷ್ಟೇ ವಿಸ್ತೃತವಾಗಿದೆ " ಎಂದು ತಿಳಿದವರು ಹೇಳುತ್ತಾರೆ. ಈ ತತ್ತ್ವವನ್ನು ತಿಳಿದವನು ತಾನೇ ಈ ಸಮಸ್ತವಾದ ಪೃಥ್ವಿಗೂ ಒಡೆಯನಾಗುತ್ತಾನೆ, ಎಂದು ಶತಪಥಬ್ರಾಹ್ಮಣದಲ್ಲಿ ತಿಳಿಸಿದೆ. ಇದೇ ಅಂಶವನ್ನು ಐತರೆಯಬ್ರಾಹ್ಮಣದಲ್ಲೂ ವಿವರಿಸುತ್ತಾ,

**ತಂ ವೇದ್ಯಾಮುಮನ್ವವಿಂದನ್ಯದ್ವೇದ್ಯಾಮನ್ವವಿಂದಂಸ್ತದ್ವೇದೇರ್ವೇದಿತ್ವಂ ॥**

(ಐ. ಬ್ರಾ. ೩-೯)

ಈ ಯಜ್ಞವನ್ನು ವೇದಿಕೆಯ ಮೇಲೆ ಕಂಡು ಅದನ್ನೂ ಪಡೆದುದರಿಂದ ಅದಕ್ಕೆ ವೇದಿಯೆಂದು ಹೆಸರು ಬಂದಿತು ಎಂದು ಈ ಪದದ ನಿರ್ವಚನರೂಪವಾದ ಮಹತ್ತ್ವವನ್ನು ಸ್ತುತಿಸಿದೆ. ಮತ್ತು " ಇದೇ ವೇದಿಯು ಪೃಥಿವಿಯ ಪರವಾದ ಅಂತವು " ಎಂದು ತಿಳಿಸಿರುವಾಗ ಪೃಥಿವಿಯೆಂದರೆ ಕೇವಲಭೂಮಿಯೆಂದೇ ಅರ್ಥಮಾಡಬಾರದೆಂಬು **ಮೇಲೆ ತಿಳಿಸಿದೆ. ಪೃಥಿವೀ** ಶಬ್ದವು **ಅಂತರಿಕ್ಷ** ನಾಮಗಳಲ್ಲಿಯೂ ಪಠಿತವಾಗಿದೆ. (೨-೧೦) **ಪ್ರಥನಾತ್ಪೃಥಿವೀತ್ಯಾಹುಃ** (ನಿ. ೧-೧೪) ಎಂಬ ನಿರುಕ್ತಕಾರರ ನಿರ್ವಚನದ ಆಧಾರದ ಮೇಲೆ ಅತ್ಯಂತವಾಗಿ ವಿಸ್ತೃತಿಯನ್ನು ಹೊಂದಿದ ಭೂಗಸ್ಯಾಕಾಶಗಳೆಲ್ಲವೂ

ಪೃಥಿವೀವಾಚ್ಯಗಳೇ ಆಗಿವೆ ಈ ಅರ್ಥವನ್ನು ತೆಗೆದುಕೊಂಡರೆ ಈ ವೇದಿಯು ಭೂವ್ಯಂತರಿಕ್ಷಗಳಿಗೂ ಪರವಾದ ಅಂತವು ಎಂದರ್ಥಮಾಡಬಹುದು. ಇದಕ್ಕೆ ಈ ಮಹತ್ತ್ವವಿರುವುದರಿಂದಲೇ ಶತಪಥಬ್ರಾಹ್ಮಣದಲ್ಲಿ ಈ ಯಜ್ಞವೇದಿಕೆಯನ್ನು ಈ ರೀತಿ ಸ್ತುತಿಸಿದೆ.

**ಅಯಂ ವಾವ ಲೋಕ ಏಷೋಽಗ್ನಿಶ್ಚಿತಃ । ತಸ್ಯಾಪ ಏವ ಪರಿಶ್ರಿತೋ ಮನುಷ್ಯಾ ಯಜುಷ್ಮತ್ಯ ಇಷ್ಟಕಾಃ ಸೂದದೋಹಾ ಓಷಧಯಶ್ಚ ವನಸ್ಪತಯಶ್ಚ ಪುರೀಷಮಾಹುತಯಃ ಸಮಿದೋಽಗ್ನಿ .... .... .... ಸಯೋ ಹೈತದೇವಂ ವೇದ ಲೋಕಂಪೃಣಾಮೇನಂ ಭೂತಮೇತತ್ಸರ್ವಮಭಿ ಸಂಪದ್ಯತೇ ।**

(ಶ. ಬ್ರಾ. ೧೦-೫-೪-೧)

ಇಷ್ಟಕೆಗಳಿಂದ (ಇಟ್ಟಿಗೆಗಳಿಂದ) ನಿರ್ಮಿತವಾದ ಈ ಯಜ್ಞವೇದಿಯೇ ಈ ಪಾರ್ಥಿವಲೋಕವು. ಇದನ್ನು ಸುತ್ತುವರಿದಿರುವ ಇಷ್ಟಕೆಗಳೇ (ಪೃಥ್ವಿಯನ್ನು ಸುತ್ತುವರಿದಿರುವ) ಉದಧಿಗಳು, ಯಜುಷ್ಮತಿಗಳೇ ಮಾನವರು. ಸೂದದೋಹಗಳೇ ಪಶುಗಳು, ಇಷ್ಟಕೆಗಳ ಮಧ್ಯವರ್ತಿಯಾದ ಮೃತ್ತಿಕೆಗಳೇ ಓಷಧಿವನಸ್ಪತಿಗಳು ಲೋಕಂಪೃಣವೇ ಅಗ್ನಿಯು. ಈ ತತ್ತ್ವವನ್ನು ತಿಳಿದವನು ಲೋಕಾಧಿಷ್ಠಾತೃತ್ವವನ್ನು ಪಡೆಯುತ್ತಾನೆ. ಅಲ್ಲದೇ,

**ಅಂತರಿಕ್ಷಗ್ಂ ಹ ತ್ವೇವೈಷೋಽಗ್ನಿಶ್ಚಿತಃ ! ತಸ್ಯ ದ್ಯಾವಾಪೃಥಿವ್ಯೋರೇವ ಸಂಧಿಃ । ಪರಿಶ್ರಿತಃ ಪರೇಣ ಹಾಂತರಿಕ್ಷಂ ದ್ಯಾವಾಪೃಥಿವೀ ಸಂಧತ್ತಸ್ತಾಃ ಪರಿಶ್ರಿತೋ ವಯಾಗ್ಂಸಿ ಯಜುಷ್ಮತ್ಯ ಇಷ್ಟಕಾ ವರ್ಷಗ್ಂಸೂದದೋಹಾ ಮರೀಚಯಃ ಪುರೀಷಮಾಹುತಯಃ ಸಮಿಧೋ ಲೋಕಂಪೃಣಾ ತದ್ವಾ ಏತತ್ಸರ್ವಂ .... .... ...., .... .... ॥**

(ಶ. ಬ್ರಾ. ೧೦-೫-೪-೨)

ಈ ಯಜ್ಞವೇದಿಕೆಯೇ ಅಂತರಿಕ್ಷವು. ದ್ಯಾವಾಪೃಥಿವಿಗಳ ಸಂಧಿಯು ಅಂತರಿಕ್ಷಕ್ಕೂ ಮೀರಿದ ಪ್ರದೇಶದಲ್ಲಾಗುವುದರಿಂದ ಈ ವೇದಿಕೆಯ ಪರಿಶ್ರಿತಗಳೇ ದ್ಯಾವಾಪೃಥಿವಿಗಳ ಸಂಧಿಯು. ಯಜುಷ್ಮತಿಯೆಂಬ ಇಷ್ಟಕಗಳೇ ಪಕ್ಷಿಗಳು ಸೂದದೋಹಗಳೇ ವೃಷ್ಟಿಯು. ಇಷ್ಟಕೆಗಳ ಮಧ್ಯವರ್ತಿಯಾದ ಮೃತ್ತಿಕೆಗಳೇ ರಶ್ಮಿಗಳು. ಆಹುತಿಗಳೇ ಸಮಿತ್ತುಗಳು. ಲೋಕಂಪೃಣವೇ ವಾಯುವು. ಈ ತತ್ತ್ವವನ್ನು ತಿಳಿದವನು ಅಗ್ನಿಯಲ್ಲಿ ತಾದಾತ್ಮ್ಯವನ್ನು ಹೊಂದುತ್ತಾನೆ.

**ದ್ಯೌರ್ಹ ತ್ವೇವೈಷೋಽಗ್ನಿಶ್ಚಿತಃ । ತಸ್ಯಾಪ ಏವ ಪರಿಶ್ರಿತೋ ಯಥಾ ಹ ವಾ ಇದಂ ಕೋಶಃ ಸಮುಬ್ಜಿತ ಏವಮಿಮೇ ಲೋಕಾ ಅಪ್ಸ್ವಂತಸ್ತದ್ಯಾ ಇಮಾನ್ ಲೋಕಾನ್ ಪರೇಣಾಪಸ್ತಾಃ ಪರಿಶ್ರಿತೋ ದೇವಾಃ ಯಜುಷ್ಮತ್ಯ ಇಷ್ಟಕಾ ಯದೇವೈತಸ್ಮಿನ್ ಲೋಕೇಽನ್ನಂ ತತ್ಸೂದ- ದೋಹಾ ನಕ್ಷತ್ರಾಣಿ ಪುರೀಷಮಾಹುತಯಃ ಸಮಿಧ ಆದಿತ್ಯೋ ಲೋಕಂಪೃಣಾ ತದ್ವಾ ಏತತ್ಸರ್ವಮಾದಿತ್ಯಮೇತಾಭಿಸಂಪದ್ಯತೇ ತತ್ಸರ್ವೋಽಗ್ನಿಃ .... .... .... .... .... ॥**

(ಶ. ಬ್ರಾ. ೧೦-೫-೪-೩)

ಈ ಯಜ್ಞವೇದಿಕೆಯೇ ದ್ಯುಲೋಕವು. ಸುತ್ತುವರಿದಿರುವ ಇಷ್ಟಕೆಗಳೇ ಈ ಲೋಕವನ್ನಾವರಿಸಿರುವ ಉದಧಿಗಳು. ಯಜುಷ್ಮತಿಯೆಂಬ ಇಷ್ಟಕಗಳೇ ದೇವತೆಗಳು. ಸೂದದೋಹಗಳೇ ಈ ಲೋಕದ ಅನ್ನವು. ಇಷ್ಟಕೆಗಳ ಮಧ್ಯವರ್ತಿಯಾದ ವೃತ್ತಿಕೆಗಳೇ ನಕ್ಷತ್ರಗಳು. ಲೋಕಂಪೃಣವೇ ಆದಿತ್ಯನು.

ಆದಿತ್ಯೋ ಹ ತ್ವೇವೈಷೋಽಗ್ನಿಶ್ಚಿತಃ । ತಸ್ಯ ದಿಶ ಏವ ಪರಿಶ್ರಿತಸ್ತಾಃ ಷಷ್ಟಿಶ್ಚ ತ್ರೀಣಿ ಚ ಶತಾನಿ ಭವಂತಿ ಷಷ್ಟಿಶ್ಚ ಹ ವೈ ತ್ರೀಣಿ ಚ ಶತಾನ್ಯಾದಿತ್ಯಂ ದಿಶಃ ಸಮಂತಂ ಪರಿಯಂತಿ ರಶ್ಮಯೋ ಯಜುಷ್ಮತ್ಯ ಇಷ್ಟಕಾಸ್ತಾಃ ಷಷ್ಟಿಶ್ಚೈವ ತ್ರೀಣಿ ಚ ಶತಾನಿ ಭವಂತಿ ಷಷ್ಟಿಶ್ಚ ಹ ವೈ ತ್ರೀಣಿ ಚ ಶತಾನ್ಯಾದಿತ್ಯಸ್ಯ ರಶ್ಮಯಸ್ತದ್ಯತ್ಪರಿಶ್ರಿತ್ಸು ಯಜುಷ್ಮತೀಃ ಪ್ರತ್ಯರ್ಪಯತಿ ರಶ್ಮೀಂಸ್ತದ್ದಿಕ್ಷು ಪ್ರತ್ಯರ್ಪಯತ್ಯಥ ಯದಂತರಾ ದಿಶಶ್ಚ ರಶ್ಮೀಂಶ್ಚ ತತ್ಸೂದದೋಹಾ ಅಥ ಯದ್ದಿಕ್ಷು ಚ ರಶ್ಮಿಷು ಚಾನ್ನಂ ತತ್ಪುರೀಷಂ ತಾ ಆಹುತಯಸ್ತಾಃ ಸಮಿಧಃ .... .... .... .... ॥

(ಶ. ಬ್ರಾ. ೧೦-೫-೪-೪)

ಈ ಯಜ್ಞವೇದಿಕೆಯೇ ಆದಿತ್ಯನು. ಆದಿತ್ಯನನ್ನು ಮುನ್ನೂರ ಅರವತ್ತು ದಿಕ್ಕುಗಳೂ ಅವಾಂತರದಿಕ್ಕುಗಳೂ ಸುತ್ತು ವರಿದಿವೆ. ಮುನ್ನೂರ ಅರವತ್ತು ಸಂಖ್ಯಾಕಗಳಾದ ಯಜುಷ್ಮತಿಗಳೇ ಆದಿತ್ಯನ ಮನ್ನೂರ ಅರವತ್ತು ರಶ್ಮಿಗಳಾಗಿವೆ. ಸೂದದೋಹಗಳೇ ಆದಿತ್ಯರಶ್ಮಿಗಳಿಗೂ ದಿಕ್ಕುಗಳಿಗೂ ಮಧ್ಯದಲ್ಲಿರುವ ತತ್ತ್ವವಿಶೇಷಗಳು. ಇಷ್ಟಕೆಗಳ ಮಧ್ಯವರ್ತಿಗಳಾದ ಮೃತ್ತಿಕೆಗಳೇ ರಶ್ಮಿಗಳಿಗೂ ದಿಕ್ಕುಗಳಿಗೂ ನಡುವೆ ಇರುವ ಅನ್ನವು.

ನಕ್ಷತ್ರಾಣಿ ಹ ತ್ವೇವೈಷೋಽಗ್ನಿಶ್ಚಿತಃ । ತಾನಿ ವಾ ಏತಾನಿ ಸಪ್ತವಿಗ್ಂಶತಿರ್ನಕ್ಷತ್ರಾಣಿ .......... ॥

ಛಂದಾಗ್ಂಸಿ ಹ ತ್ವೇವೈಷೋಽಗ್ನಿಶ್ಚಿತಃ । ತಾನಿ ವಾ ಏತಾನಿ ಸಪ್ತಚ್ಛಂದಾಗ್ಂಸಿ .... .... ....॥

ಸರ್ವಾಣಿ ಹ ತ್ವೇವ ಭೂತಾನಿ । ಸರ್ವೇ ದೇವಾ ಏಷೋಽಗ್ನಿಶ್ಚಿತ ಆಪೋ ವೈ ಸರ್ವೇ ದೇವಾಃ ಸರ್ವಾಣಿ ಭೂತಾನಿ ತಾ ಹೈತಾ ಆಪ ಏವೈಷೋಽಗ್ನಿಶ್ಚಿತಸ್ತಸ್ಯ ನಾವ್ಯಾ ಏವ ಪರಿಶ್ರಿತಸ್ತಾಃ ಷಷ್ಟಿಶ್ಚ ತ್ರೀಣಿ ಚ ಶತಾನಿ ಭವಂತಿ ಷಷ್ಟಿಶ್ಚ ಹ ವೈ ತ್ರೀಣಿ ಚ ಶತಾನ್ಯಾದಿತ್ಯಂ ನಾವ್ಯಾಃ ಸಮಂತಂ ಪರಿಯಂತಿ .... .... ಅಶ್ಮಾಯನೇವ ಸ ಯೋಽಯಂ ಹಿರಣ್ಮಯಃ ಪುರುಷಃ ॥—

(ಶ. ಬ್ರಾ. ೧೦-೫-೪, ೬ರಿಂದ ೧೪)

ಈ ಯಜ್ಞವೇದಿಯೇ ಸಮಸ್ತ ನಕ್ಷತ್ರಗಳು ; ಸಪ್ತಚ್ಛಂದಸ್ಸುಗಳು ; ಇದೇ ಸಂವತ್ಸರವು ; ಇದೇ ಸಕಲ ಭೂತಗಳೂ ಆಗಿದೆ. ಆದಿತ್ಯನ ಸುತ್ತಲೂ ಮುನ್ನೂರ ಅರವತ್ತು ರಶ್ಮಿರೂಪಗಳಾದ ನಾವೆಗಳು ಸುತ್ತುವರಿದಿರುವಂತೆ ಈ ವೇದಿಯ ಸುತ್ತಲೂ ಯಜುಷ್ಮತೀರೂಪದ ದೇವಮಾನವಾದಿಗಳು ಸುತ್ತುವರಿದಿದ್ದಾರೆ. ಈ ವೇದಿಕೆಯ ದೇಹವೇ ಈ ಆದಿತ್ಯಾಂತರ್ಗತನಾದ ಹಿರಣ್ಮಯಪುರುಷನು. ಈ ಹಿರಣ್ಮಯಪುರುಷನ ಸ್ವರೂಪವು ಎಷ್ಟು ಆಕರ್ಷಕವಾದದ್ದು ಮತ್ತು ಎಷ್ಟು ಮಹತ್ತ್ವವುಳ್ಳದ್ದು ಎಂದರೆ—

ತಸ್ಯೈತೇ ಪ್ರತಿಷ್ಠೇ । ರುಕ್ಮಶ್ಚ ಪುಷ್ಕರಪರ್ಣಂ ಚಾಪಶ್ಚಾದಿತ್ಯಮಂಡಲಂ ಚ ಸ್ರುಚೌ ಬಾಹೂ ತಾವಿಂದ್ರಾಗ್ನೀ ದ್ವೇ ಸ್ವಯಮಾತೃಣ್ಣೇ ಇಯಂ ಚಾಂತರಿಕ್ಷಂ ಚ ತಿಸ್ರೋ ವಿಶ್ವಜ್ಯೋತಿಷ ಏತಾ ದೇವತಾ ಅಗ್ನಿರ್ವಾಯುರಾದಿತ್ಯ ಏತಾ ಹ್ಯೇವ ದೇವತಾ ವಿಶ್ವಂ ಜ್ಯೋತಿರ್ದ್ವಾದಶರ್ತವ್ಯಾಃ ಸಂವತ್ಸರಃ ಸ ಆತ್ಮಾ ಪಂಚ ನಾಕಸದಃ ಪಂಚ ಪಂಚಚೂಡಾಃ ಸ ಯಜ್ಞಸ್ತೇ ದೇವಾ ಅಥ ಯದ್ವಿಕರ್ಣೀ ಚ ಸ್ವಯಮಾತೃಣ್ಣಾ ಚಾಶ್ಮಾ.... .... .... .... .... .... .... .... ಆತ್ಮಾ ಸ ಏಷ ಸರ್ವಾಸಾಮಪಾಂ ಮಧ್ಯೇ ಸ ಏಷ ಸರ್ವೈಃ ಕಾಮೈಃ ಸಂಪನ್ನ ಆಪೋ ವೈ ಸರ್ವೇ ಕಾಮಾಃ

**ಸ ಏಷೋಽಕಾಮಃ ಸರ್ವಕಾಮೋ ನ ಹ್ಯೇತಂ ಕಸ್ಯ ಚನ ಕಾಮಃ ||**

(ಶ. ಬ್ರಾ. ೧೦-೫-೪-೧೫)

ಸ್ವರ್ಣಪಾತ್ರವೂ, ಪುಷ್ಕರಪರ್ಣವೂ ಈ ಆದಿತ್ಯಾಂತರ್ಗತನಾದ ಹಿರಣ್ಮಯಪುರುಷನ ಎರಡು ಪಾದಗಳು. ಯಜ್ಞ ವೇದಿಕೆಯಲ್ಲಿರುವ ಎರಡು ಸ್ರುಚ (ಪಾತ್ರೆ)ಗಳೂ ಇವನ ಬಾಹುಗಳು. ಇವರೇ ಇಂದ್ರಾಗ್ನಿಗಳು. ಸಹಜವಾಗಿಯೇ ಆತೃಣವಾಗಿರುವ ಈ ಎರಡು ಇಷ್ಟಕೆಗಳೇ ಪೃಥಿವ್ಯಂತರಿಕ್ಷಗಳು. ವಿಶ್ವಜ್ಯೋತೀರೂಪವಾದ ಇಷ್ಟಕಗಳೇ ಸಕಲ ದೇವತೆಗಳು. ಇವುಗಳ ಸಂಖ್ಯೆಗಳು ಮೂರು. ಈ ಮೂರೂ ಸಹ ಅಗ್ನಿ, ವಾಯು ಮತ್ತು ಆದಿತ್ಯರನ್ನು ಪ್ರತಿ ಬಿಂಬಿಸುತ್ತವೆ. ಈ ವೇದಿಯ ದೇಹವೇ ಸಕಲಕ್ಕೂ ಅಂತವಾಗಿದೆ. ಈ ವೇದಿರೂಪವಾದ ಆದಿತ್ಯಾಂತರ್ಗತನಾದ ಹಿರಣ್ಮಯಪುರುಷನು ಸರ್ವಕಾಮಗಳನ್ನೂ ಪಡೆದಿರುವುದರಿಂದ ಕಾಮರಹಿತನಾಗಿಯೂ ಪೂರ್ಣತೃಪ್ತನಾಗಿಯೂ ಇದ್ದಾನೆ. ಇತ್ಯಾದಿಯಾಗಿ ವೇದಿಯ ಮಹತ್ತ್ವವನ್ನೂ ವಿಸ್ತೃತಿಯನ್ನೂ ನಾನಾವಿಧವಾಗಿ ಸ್ತುತಿಸಿದೆ. ಕೇವಲ ಆಧಿದೈವತ ಪಕ್ಷದಲ್ಲಿಯೇ ಅಲ್ಲದೇ, ಅಧ್ಯಾತ್ಮಪಕ್ಷದಲ್ಲಿಯೂ ಇದರ ಮಹಿಮೆಯು ಸ್ತುತವಾಗಿದೆ. ಇದೇ ಅಂಶವನ್ನು ಪ್ರಕೃತವಾದ ಋಕ್ಕಿನಲ್ಲಿ **"ಇಯಂ ವೇದಿಃ ಪೃಥಿವ್ಯಾ ಅಂತಃ"** ಎಂದು ವರ್ಣಿತವಾಗಿದೆ. ಪೃಥಿವಿಯ ಉತ್ಕೃಷ್ಟವಾದ ಸ್ಥಾನ ಅಥವಾ ಸ್ವಭಾವವೆಂದು ತಾತ್ಪರ್ಯ. ಸಾಯಣರು ಇದೇ ಅರ್ಥವನ್ನು ತಿಳಿಸತಕ್ಕ,

**ಏತಾವತೀ ವೈ ಪೃಥಿವೀ ಯಾವತೀ ವೇದಿಃ |**

(ತೈ. ಸಂ. ೨-೬-೪-೧)

ಎಂಬ ತೈತ್ತರೀಯಸಂಹಿತೆಯವಾಕ್ಯವನ್ನುದಹರಿಸಿ ' **ನ ಹಿ ವೇದ್ಯತಿರಿಕ್ತಾ ಭೂಮಿರಸ್ತಿ** ' ಈ ಯಜ್ಞವೇದಿಗಿಂತಲೂ ಮೀರಿದ ಪೃಥ್ವಿಯೇ ಇಲ್ಲ ಎಂಬ ತಾತ್ಪರ್ಯವನ್ನು ಕೊಡುತ್ತದೆಂದು ವಿವರಿಸಿದ್ದಾರೆ.

**ಅಯಂ ಯಜ್ಞೋ ಭುವನಸ್ಯ ನಾಭಿಃ—ಅಯಂ ಯಜ್ಞಃ ಭೂತಜಾತಸ್ಯ ಸಂನಹನಂ | ತತ್ರೈವ ವೃಷ್ಟ್ಯಾದಿಸರ್ವಫಲೋತ್ಪತ್ತೇಃ ಸರ್ವಪ್ರಾಣಿನಾಂ ಬಂಧಕತ್ವಾತ್ |** ಈ ಯಜ್ಞದಿಂದಲೇ ವೃಷ್ಟಿಯುಂಟಾಗಿ ತದ್ದ್ವಾರಾ ಸರ್ವಪ್ರಾಣಿಗಳಿಗೂ ಇದು ಬಂಧಕವಾಗಿರುವುದರಿಂದಲೂ ಸಹ ಇದು **ನಾಭಿ**ರೂಪದಲ್ಲಿದೆಯೆಂದು ವರ್ಣಿತವಾಗಿದೆ.

**ನಾಭಿ**ಶಬ್ದಕ್ಕೆ, ವಾಸಸ್ಥಾನ, ವ್ಯಾಪಕಸಂಬಂಧ, ಸಂನಾಹಕ ಎಂದರೆ ರಕ್ಷಕ, ಬಂಧಕ, ಉತ್ಪತ್ತಿಸ್ಥಾನ ಇತ್ಯಾದಿಯಾಗಿ ಬೇರೆ ಬೇರೆ ಅರ್ಥಗಳಿರುವುದನ್ನು ಹಿಂದೆ ತಿಳಿಸಿದೆ. ಪ್ರಕೃತವಾದ ಋಕ್ಕಿನಲ್ಲಿ **ಯಜ್ಞವೇ** ನಾಭಿಯೆಂದು ಹೇಳಿದರೆ ಈ ಎಲ್ಲಾ ಅರ್ಥಗಳಲ್ಲೂ ಈ ಪದದ ಪ್ರಯೋಗವನ್ನು ತೋರಿಸಬಹುದು. **ಪೃಚ್ಛಾಮಿ ಯತ್ರ ಭುವನಸ್ಯ ನಾಭಿಃ** ಎಂದು ಹಿಂದಿನ ಋಕ್ಕಿನಲ್ಲಿ ಕೇಳಿರುವ ಪ್ರಶ್ನೆಗೆ ಉತ್ತರರೂಪವಾಗಿ ಈ ವಾಕ್ಯವಿದೆ. ಯಜ್ಞವೇ ಸಕಲ ವಿಶ್ವಗಳ ಉತ್ಪತ್ತಿಗೂ, ಸ್ಥಿತಿಗೂ ಕಾರಣವಾಗಿ ದೇವಮಾನವಾದಿಸಕಲ ಭೂತಗಳಿಗೂ ಪರಸ್ಪರ ಸಂಬಂಧವನ್ನು ಬೆಳೆಸುವ ಬಂಧಕಸಾಧನವಾಗಿರುವುದರಿಂದ ಇದು ನಾಭಿರೂಪದಲ್ಲಿದೆಯೆಂದು ತಾತ್ಪರ್ಯ.

**ದೇವಾನ್ ಭಾವಯತಾನೇನ ತೇ ದೇವಾ ಭಾವಯಂತು ವಃ |**
**ಪರಸ್ಪರಂ ಭಾವಯಂತಃ ಶ್ರೇಯಃ ಪರಮವಾಪ್ಸ್ಯಥ ||**

(ಭ. ಗೀ. ೩-೧೧)

ದೇವಾನ್ ಇಂದ್ರಾದೀನ್ ಭಾವಯತ ವರ್ಧಯತ ಅನೇನ ಯಜ್ಞೇನ । ತೇ ದೇವಾ ಭಾವ-
ಯಂತು ವೃಷ್ಟ್ಯಾದಿನಾ ಆಪ್ಯಾಯಯಂತು ವಃ ಯುಷ್ಮಾನ್ । ಏವಂ ಪರಸ್ಪರಂ ಅನ್ಯೋನ್ಯಂ
ಭಾವಯಂತಃ ಶ್ರೇಯಃ ಪರಂ ಬ್ರಹ್ಮವಿಜ್ಞಾನಪ್ರಾಪ್ತಿಂ ಕ್ರಮೇಣ ಅವಾಪ್ಸ್ಯಥ । ಸ್ವರ್ಗಂ ವಾ
ಪರಂ ಶ್ರೇಯಃ ಅವಾಪ್ಸ್ಯಥ । (ಶಂ. ಭಾ.)

ಯಜ್ಞವೇ ದೇವತೆಗಳಿಗೆ ಅನ್ನರೂಪವೆಂದೂ, ಈ ಅನ್ನವನ್ನು ಮಾನವರು ಯಜ್ಞರೂಪದಿಂದ ಅರ್ಪಿಸಬೇಕೆಂದೂ, ಇದರಿಂದ ತೃಪ್ತರಾದ ದೇವತೆಗಳು ವೃಷ್ಟ್ಯಾದಿಗಳಿಂದ ಮಾನವರ ಸ್ಥಿತಿಗೂ, ವೃದ್ಧಿಗೂ ಕಾರಣರಾಗಬೇಕೆಂದೂ ಭಗವದ್ಗೀತೆಯಲ್ಲಿ ಉಪದೇಶವಿದೆ. ಇದರಿಂದ ಸಮಸ್ತವಾದ ಶ್ರೇಯಸ್ಸಿಗೂ ಯಜ್ಞವೇ ಸಾಧನವೆಂದಾಯಿತು. ಈ ಯಜ್ಞವು ಲೋಕಕ್ಕೆಲ್ಲಾ ಶ್ರೇಯಃಸಾಧನವು ಎಂಬ ತತ್ತ್ವವನ್ನರಿತು ಇದನ್ನು ಸೇವಾದೃಷ್ಟಿಯಿಂದಾಚರಿಸಿದರೆ ಇದು ಬ್ರಹ್ಮಜ್ಞಾನಕ್ಕೂ ಸಾಧನವಾಗುವುದೆಂದು ಶಂಕರಾದಿಗಳು ವಿವರಿಸಿದ್ದಾರೆ.

ಈ ಯಜ್ಞತತ್ತ್ವವು ವಿಶ್ವದ ಐಕ್ಯವನ್ನೂ ಈ ಐಕ್ಯದ ನೆಲೆಯು ಪರಬ್ರಹ್ಮನೆಂಬ ತತ್ತ್ವವನ್ನೂ ತಿಳಿಸುತ್ತದೆ. ಉಪನಿಷದಾದಿಗಳಲ್ಲಿ ಯಾವ ಮೂಲತತ್ತ್ವವನ್ನು ಪರಬ್ರಹ್ಮನೆಂದು ಕರೆದಿದೆಯೋ ಅದನ್ನು ಸಂಹಿತಾ ಮತ್ತು ಬ್ರಾಹ್ಮಣಗಳಲ್ಲಿ ಪ್ರಜಾಪತಿಯೆಂದು ಕರೆದಿದೆ. ಮತ್ತು ಯಜ್ಞಕ್ಕೂ ಪ್ರಜಾಪತಿಗೂ ತಾದಾತ್ಮ್ಯವನ್ನು ಹೇಳಿದೆ. ವಿಶ್ವಸೃಷ್ಟಿಯು ಪ್ರಜಾಪತಿಯ ಯಜ್ಞದ ಮತ್ತು ತಪಸ್ಸಿನ ಫಲವು. ಜಗತ್ಕಾರಣನೂ, ಜಗತ್ಸೃಷ್ಟಿಗೆ ಪೂರ್ವಭಾವಿಯಾಗಿ ಅದ್ವಿತೀಯನಾಗಿಯೂ ಇದ್ದ ಪ್ರಜಾಪತಿಯು ಸೃಷ್ಟಿಸಾಧನವಾದ ಯಜ್ಞವನ್ನು ನಿರ್ವಹಿಸಬೇಕಾದರೆ ಅದಕ್ಕೆ ಆಹುತಿಯಾಗಿ ತನ್ನನ್ನೇ ಅರ್ಪಿಸಬೇಕಾಯಿತು.

ಯ ಆತ್ಮದಾ ಬಲದಾ ಯಸ್ಯ ವಿಶ್ವ ಉಪಾಸತೇ ಪ್ರಶಿಷಂ ಯಸ್ಯ ದೇವಾಃ ।
ಯಸ್ಯ ಛಾಯಾಮೃತಂ ಯಸ್ಯ ಮೃತ್ಯುಃ ಕಸ್ಮೈ ದೇವಾಯ ಹವಿಷಾ ವಿಧೇಮ ॥
(ಋ. ಸಂ. ೧೦-೧೨೧-೨)

ಇತ್ಯಾದಿಯಾಗಿ ವರ್ಣಿತವಾಗಿರುವಂತೆ ತನ್ನ ವಿಶ್ವಯಜ್ಞದಲ್ಲಿ ತನ್ನನ್ನೇ ಅರ್ಪಿಸಿ ಪ್ರಜಾಪತಿಯು ಸೃಷ್ಟಿಕಾರ್ಯವನ್ನು ನಿರ್ವಹಿಸಿದನು. ಅವನ ಆಜ್ಞೆಯನ್ನೇ ದೇವಾದಿಗಳೆಲ್ಲರೂ ನಿರ್ವಹಿಸುತ್ತಾರೆ. ಮೃತ್ಯುವೂ, ಅಮೃತತ್ವವೂ ಅವನ ಛಾಯೆಗಳು. ಅಂತಹ ವಿಶ್ವಹೇತುವಾದ ಪ್ರಜಾಪತಿಗೆ ನಾವೂ ಸಹ ಯಜ್ಞಾದಿಕರ್ಮಗಳನ್ನಾಚರಿಸಿ ಪುರೋಡಾಶಾದಿಗಳಿಂದ ಆರಾಧಿಸೋಣ ಎಂದು ಯಜ್ಞದ ಪ್ರಾಶಸ್ತ್ಯವನ್ನು ಸ್ತುತಿಸಿದೆ. ಯಜ್ಞವು ಸೃಷ್ಟಿಯ ಮೂಲವು; ಸ್ಥಿತಿಗೆ ಹೇತುವು ಮತ್ತು ಶ್ರೇಯಸ್ಸಿಗೆ ಸಾಧಕವು. ಈ ವಿಷಯವನ್ನೇ ಶತಪಥಬ್ರಾಹ್ಮಣದಲ್ಲಿ ಈ ರೀತಿ ವರ್ಣಿಸಿದೆ.

ಅಥ ದೇವಾಃ । ಅನ್ಯೋನ್ಯಸ್ಮಿನ್ನೇವ ಜುಹ್ವತಶ್ಚೇರುಸ್ತೇಭ್ಯಃ ಪ್ರಜಾಪತಿರಾತ್ಮಾನಂ ಪ್ರದದೌ
ಯಜ್ಞೋ ಹೈಷಾಮಾಸ ಯಜ್ಞೋ ಹಿ ದೇವಾನಾಮನ್ನಂ ।
(ಶ. ಬ್ರಾ. ೧೧-೧-೮-೨)

ದೇವತೆಗಳು ಯಜ್ಞವನ್ನಾಚರಿಸಿ ಪರಸ್ಪರಾನುಕೂಲಿಕವಾದ ಆಹುತಿಗಳನ್ನರ್ಪಿಸಿದರು. ಆಗ ಪ್ರಜಾಪತಿಯು ಅವರಿಗೆ ತನ್ನನ್ನೇ ಅರ್ಪಿಸಿದನು. ಆಗ ಯಜ್ಞವೇ ದೇವತೆಗಳ ಸ್ವತ್ತಾಯಿತು. ಆದುದರಿಂದಲೇ ಯಜ್ಞವನ್ನು ದೇವತೆಗಳ ಅನ್ನವೆಂದು [ಎಂದರೆ ಅನ್ನಸಾಧನವೆಂದು] ಕರೆಯುತ್ತಾರೆ. ಇದಲ್ಲದೇ,

ಸ ಏತೇನ ಯಜ್ಞೇನ । ದೇವೇಭ್ಯ ಆತ್ಮಾನಂ ನಿರಕ್ರೀಣೀತ ಸ ಯದ್ವ್ರತಮುಪೈತಿ ಯಥೈವ ತತ್ಪ್ರಜಾಪತಿರ್ದೇವೇಭ್ಯ ಆತ್ಮಾನಂ ಪ್ರಾಯಚ್ಛದೇವಮೇವೈಷ ಏತದ್ದೇವೇಭ್ಯ ಆತ್ಮಾನಂ ಪ್ರಯಚ್ಛತಿ ತಸ್ಮಾದು ಸಂಯತ ಏವೈತಾಗ್ಂ ರಾತ್ರಿಂ ಚಿಚರಿಷೇದ್ಯಥಾ ಹವಿಷಾ ಚರೇ-ದೇವಗ್ಂ ಹವಿರ್ಹ್ಯೇಷ ದೇವಾನಾಂ ಭವತಿ ॥

(ಶ ಬ್ರಾ ೧೧-೧-೮-೩)

ದೇವತೆಗಳ ಯಜ್ಞದಿಂದ ತೃಪ್ತನಾದ ಪ್ರಜಾಪತಿಯು ಅವರಿಗೆ ತನ್ನನ್ನೇ ಅರ್ಪಿಸಿದನಂತರ ಪುನಃ ಯಜ್ಞಪ್ರತಿನಿಧಿಯಾದ ತನ್ನ ಪ್ರತಿರೂಪವನ್ನು ಸೃಷ್ಟಿಸಿದನು. ಈ ರೀತಿ ಯಜ್ಞಾರ್ಥವಾಗಿ ತನ್ನ ಪ್ರತಿರೂಪವನ್ನು ಸೃಷ್ಟಿಸಿ ಯಜ್ಞವನ್ನು ಪ್ರತಿಬಿಂಬಿಸಿದುದರಿಂದ ತಿಳಿದವರು ಪ್ರಜಾಪತಿಯನ್ನೇ ಯಜ್ಞವೆಂಬ ಪರ್ಯಾಯನಾಮದಿಂದ ಕರೆಯುತ್ತಾರೆ.

ಅಥ ಯದ್ಯಜ್ಞಂ ತನುತೇ । ಯಜ್ಞೇನೈವೈತದ್ದೇವೇಭ್ಯ ಆತ್ಮಾನಂ ನಿಷ್ಕ್ರೀಣೀತೇ ಯಥೈವ ತತ್ಪ್ರಜಾಪತಿರ್ನಿರಕ್ರೀಣೀತೈವಂ ಅಥ ಯದ್ಧವಿರ್ನಿರ್ವಪತಿ ಹವಿಷೈವೈತದ್ಯಜ್ಞಂ ನಿಷ್ಕ್ರೀಣಾತಿ ಹವಿರನುವಾಕ್ಯಾನುವಾಕ್ಯಾಮವದಾನೇನಾವದಾನಂ ಯಾಜ್ಯಯಾ ಯಾಜ್ಯಾಂ ವಷಟ್ಕಾರೇಣ ವಷಟ್ಕಾರಂ .... .... .... .... .... ॥

(ಶ. ಬ್ರಾ. ೧೧-೧-೮-೪)

ಪ್ರಜಾಪತಿಯ ಮಾರ್ಗವನ್ನೇ ಅನುಸರಿಸಿ ಯಾವನು ಯಜ್ಞಕರ್ಮವನ್ನಾಚರಿಸುತ್ತಾನೆಯೋ ಮತ್ತು ತನ್ನ ಋಣವನ್ನು ತೀರಿಸಿ ಆ ದೇವಋಣದಿಂದ ಮುಕ್ತನಾಗುತ್ತಾನೆಯೋ ಅವನು ಪ್ರಜಾಪತಿಯ ಸೃಷ್ಟಿಕಾರ್ಯದಲ್ಲಿ ನೆರವಾಗುತ್ತಾನೆ, ಎಂದು ಶತಪಥದಲ್ಲಿ ಹೇಳಿರುವ ಅಂಶವನ್ನೇ ಭಗವದ್ಗೀತೆಯಲ್ಲೂ ಸಹ,

ಇಷ್ಟಾನ್ ಭೋಗಾನ್ ಹಿ ವೋ ದೇವಾ ದಾಸ್ಯಂತೇ ಯಜ್ಞಭಾವಿತಾಃ ।
ತೈರ್ದತ್ತಾನಪ್ರದಾಯೈಭ್ಯೋ ಯೋ ಭುಂಕ್ತೇ ಸ್ತೇನ ಏವ ಸಃ ॥
ಯಜ್ಞಶಿಷ್ಟಾಶಿನಸ್ಸಂತೋ ಮುಚ್ಯಂತೇ ಸರ್ವಕಿಲ್ಬಿಷೈಃ ।
ತೇ ತ್ವಘಂ ಭುಂಜತೇ ಪಾಪಾ ಯೇ ಪಚಂತ್ಯಾತ್ಮಕಾರಣಾತ್ ॥

(ಭ. ಗೀ. ೩-೧೨, ೧೩)

ಯಜ್ಞದಿಂದ ತೃಪ್ತರಾದ ದೇವತೆಗಳು ಮಾನವರಿಗೆ ಅದಕ್ಕೆ ಪ್ರತಿಯಾಗಿ ಅವರವರ ಇಷ್ಟಾರ್ಥಗಳನ್ನು ಕೊಡುತ್ತಾರೆ. ದೇವತೆಗಳಿಂದ ಅನ್ನಾದಿಸಂಪತ್ತುಗಳನ್ನು ಪಡೆದು ಪುನಃ ಅದಕ್ಕೆ ಪ್ರತಿಯಾಗಿ ದೇವತೆಗಳಿಗೆ ತೃಪ್ತಿಕರವಾದ ಯಜ್ಞಾಹುತಿಯನ್ನರ್ಪಿಸದಿದ್ದರೆ ಅವನು ಚೋರನಾಗುತ್ತಾನೆ. ಯಜ್ಞಕರ್ಮವನ್ನು ನೆರವೇರಿಸುವ ಸತ್ಪುರುಷರು ಕಿಲ್ಬಿಷದಿಂದ ಮುಕ್ತರಾಗುತ್ತಾರೆ. ಅದಿಲ್ಲದವರು ಪಾಪಿಗಳಾಗಿ ಪಾಪಫಲವನ್ನನುಭವಿಸುತ್ತಾರೆ. ಏಕೆಂದರೆ ಈ ಯಜ್ಞವು ವಿಶ್ವಕ್ಕೆಲ್ಲಾ ಏಕಸಂಬಂಧವನ್ನು ತೋರಿಸತಕ್ಕ ತಂತುವಾಗಿದೆ. ಇದನ್ನೇ ವಿಶ್ವಚಕ್ರವೆಂದೂ ಕರೆದಿದೆ. ಉದಾಹರಣೆಗೆ—

ಅನ್ನಾದ್ಭವಂತಿ ಭೂತಾನಿ ಪರ್ಜನ್ಯಾದನ್ನಸಂಭವಃ ।
ಯಜ್ಞಾದ್ಭವತಿ ಪರ್ಜನ್ಯೋ ಯಜ್ಞಃ ಕರ್ಮಸಮುದ್ಭವಃ ॥
ಕರ್ಮ ಬ್ರಹ್ಮೋದ್ಭವಂ ವಿದ್ಧಿ ಬ್ರಹ್ಮಾಕ್ಷರಸಮುದ್ಭವಂ ।
ತಸ್ಮಾತ್ಸರ್ವಗತಂ ಬ್ರಹ್ಮ ನಿತ್ಯಂ ಯಜ್ಞೇ ಪ್ರತಿಷ್ಠಿತಂ ॥

**ಏವಂ ಪ್ರವರ್ತಿತಂ ಚಕ್ರಂ ನಾನುವರ್ತಯತೀಹ ಯಃ ।**
**ಅಘಾಯುರಿಂದ್ರಿಯಾರಾಮೋ ಮೋಘಂ ಪಾರ್ಥ ಸ ಜೀವತಿ ॥**
(ಭ. ಗೀ. ೩-೧೩ ರಿಂದ ೧೬)

ಕರ್ಮರೂಪವಾದ ಯಜ್ಞದಿಂದ ಪರ್ಜನ್ಯವೂ ( ವೃಷ್ಟಿಯೂ ) ಪರ್ಜನ್ಯದಿಂದ ಅನ್ನವೂ ಅನ್ನದಿಂದ ಭೂತಗಳೂ ಉತ್ಪನ್ನವಾಗುವುವು. ಈ ಯಜ್ಞರೂಪವಾದ ಕರ್ಮವು ಬ್ರಹ್ಮನಿಂದ ಉತ್ಪನ್ನವಾಯಿತು ಆದುದರಿಂದ ವಿಶ್ವದ ಸೃಷ್ಟಿಯಿಂದ ಪ್ರಾರಂಭಿಸಿ ಸಕಲವಿಧವಾದ ವ್ಯವಹಾರಗಳಿಗೂ, ಪುನರಾವೃತ್ತಿರೂಪವಾದ ವಿಶ್ವಚಕ್ರಕ್ಕೂ ಸಹ ಮೂಲನಾದ ಪರಬ್ರಹ್ಮನೇ ಯಜ್ಞದಲ್ಲಿ ನಿತ್ಯವಾಗಿ ಪ್ರತಿಷ್ಠಿತನಾಗಿದ್ದಾನೆ. ಯಾವ ವ್ಯಕ್ತಿಯು ಯಜ್ಞರೂಪವಾದ ಈ ವಿಶ್ವತತ್ತ್ವವನ್ನರಿಯದೆ, ನಿಯತವಾದ ಈ ವಿಶ್ವಚಕ್ರದ ಹಾದಿಯನ್ನನುಸರಿಸದೆ, ಸ್ವೇಚ್ಛೆಯಾಗಿರುವನೋ ಅವನು ಪಾಪಿಷ್ಠನು ಇತ್ಯಾದಿಯಾಗಿ ಗೀತಾದಿಗಳಲ್ಲಿ ಶ್ರುತಿವಾಕ್ಯಪ್ರತಿಪಾದಿತವಾದ ಯಜ್ಞತತ್ತ್ವವು ವಿವರಿಸಲ್ಪಟ್ಟಿದೆ ' ಭುವನಸ್ಯ ನಾಭಿಃ ' ಎಂದು ಪ್ರಕೃತವಾದ ಋಕ್ಕಿನಲ್ಲಿ ವರ್ಣಿತವಾಗಿರುವ ಈ ಯಜ್ಞತತ್ತ್ವವನ್ನು ಋಕ್ಸಂಹಿತೆಯು ಬೇರೆ ಭಾಗಗಳಲ್ಲಿಯೂ ಇದೇ ರೀತಿ ಪ್ರಶಂಸಿಸಿದೆ. ಉದಾಹರಣೆಗೆ

**ಯಜ್ಞೇನ ಯಜ್ಞಮಯಜಂತ ದೇವಾಸ್ತಾನಿ ಧರ್ಮಾಣಿ ಪ್ರಥಮಾನ್ಯಾಸನ್ ।**
**ತೇ ಹ ನಾಕಂ ಮಹಿಮಾನಃ ಸಚಂತ ಯತ್ರ ಪೂರ್ವೇ ಸಾಧ್ಯಾಃ ಸಂತಿ ದೇವಾಃ ॥**
(ಋ. ಸಂ. ೧-೧೬೪-೫೦ ಮತ್ತು ೧೦-೯೦-೧೬)

ದೇವತೆಗಳು ತಮ್ಮ ಸಂಕಲ್ಪರೂಪವಾದುದೂ, ಧ್ಯಾನಾತ್ಮಕವಾದುದೂ ಆದ ಯಜ್ಞದಿಂದ ಯಜ್ಞಸ್ವರೂಪಿಯಾದ ಪ್ರಜಾಪತಿಯನ್ನು ಪೂಜಿಸಿದರು. ಪ್ರಾಪಂಚಿಕವಾದ ಧರ್ಮಗಳಿಗೆಲ್ಲಾ ಈ ವಿಧವಾದ ಯಜ್ಞವೇ ಮೂಲವಾಯಿತು. ಈ ಯಜ್ಞದ ಧರ್ಮಗಳೇ ಅಂತರಿಕ್ಷದಲ್ಲಿ ಸ್ಥಾಪಿತವಾಗಿ ದ್ಯುಲೋಕಸ್ಥರಾದ ದೇವತೆಗಳನ್ನು ಅವರವರ ಸ್ಥಾನಗಳಲ್ಲಿರಿಸುತ್ತದೆ. ಯಜ್ಞದಿಂದಲೇ ಪ್ರಜಾಪತಿಯಿಂದ ಸೃಷ್ಟವಾದ ಸಕಲ ಭೂತಗಳೂ ತಮ್ಮ ಸ್ಥಿತಿಹೇತುವಾದ ಅನ್ನವನ್ನೂ, ಶಕ್ತಿಯನ್ನೂ ಪಡೆಯತ್ತವೆ. ಆದುದರಿಂದ ಯಜ್ಞದ ಆವಶ್ಯಕತೆಯನ್ನು ತಿಳಿಸುತ್ತಾ ತೈತ್ತಿರೀಯಸಂಹಿತೆಯಲ್ಲಿ,

**ಪ್ರಜಾಪತಿಃ ಪ್ರಜಾ ಅಸೃಜತ ತಾಸ್ಸೃಷ್ಟಾಃ ಕ್ಷುಧಂ ನ್ಯಾಯಂಸ್ಸ ಏತಂ ನವರಾತ್ರಮಪಶ್ಯತ್ತಮಾ-ಹರತ್ತೇನಾಯಜತ ತತೋ ವೈ ಪ್ರಜಾಭ್ಯೋಽಕಲ್ಪತ ಯರ್ಹಿ ಪ್ರಜಾಃ ಕ್ಷುಧಂ ನಿಗಚ್ಛೇಯು-ಸ್ತರ್ಹಿ ನವರಾತ್ರೇಣ ಯಜೇತೇಮೇ ಹಿ ವಾ ಏತಾಸಾಂ ಲೋಕಾ ಅಕ್ಲೃಪ್ತಾ.... .... .... ....॥**
(ತೈ. ಸಂ. ೭-೨-೪-೧)

ಪ್ರಜಾಪತಿಯು ಪ್ರಜೆಗಳನ್ನು ಸೃಷ್ಟಿಸಿದನಂತರ ಅವು ಕ್ಷುತ್ತಿನಿಂದ ಭರಿತವಾದವು. ಅವುಗಳ ಕ್ಷುತ್ತಿನ ಶಮನಕ್ಕಾಗಿ ನವರಾತ್ರಾತ್ಮಕವಾದ ಯಜ್ಞವನ್ನು ವೀಕ್ಷಿಸಿ ಅದರಿಂದ ಯಜ್ಞವನ್ನು ನಿರ್ವಹಿಸಿದನು. ಅದರಿಂದ ಆ ಪ್ರಜೆಗಳ ಕ್ಷುತ್ತಿನ ಶಮನವಾಯಿತು. ಆದುದರಿಂದ ಕ್ಷುತ್ತಿನ ಶಮನಕ್ಕಾಗಿ ಯಜ್ಞವು ಆಚರಿಸಲ್ಪಡತಕ್ಕದ್ದು ನಿಯತವಾಗಿದೆ. ಆ ಯಜ್ಞವೇ ಮೂರು ಲೋಕಗಳನ್ನೂ ಒಂದು ಸ್ಥಿತಿಯಲ್ಲಿಯೂ ನಿಯಮನದಲ್ಲಿಯೂ ಇಡುತ್ತದೆ. ಹೇಗೆಂದರೆ,

**ಕಲ್ಪಂತೇಽಸ್ಮಾ ಇಮೇ ಲೋಕಾ ಊರ್ಜಂ ಪ್ರಜಾಸು ದಧಾತಿ ತ್ರಿರಾತ್ರೇಣೈವೇಮಂ ಲೋಕಂ ಕಲ್ಪಯತಿ ತ್ರಿರಾತ್ರೇಣಾಂತರಿಕ್ಷಂ ತ್ರಿರಾತ್ರೇಣಾಮುಂ ಲೋಕಂ ಯಥಾ ಗುಣೇ ಗುಣಮನ್ವಸ್ಯ-**

**ತ್ಯೇವನೇವ ತಲ್ಲೋಕೇ ಲೋಕಮನ್ವಸ್ಯತಿ ಧೃತ್ಯಾ ಅಶಿಥಿಲಂ ಭಾವಾಯ .... .... .... ||**

(ತೈ. ಸಂ. ೭-೨-೪-೨)

ನವರಾತ್ರರೂಪವಾದ ಈ ಯಜ್ಞದಿಂದ ಲೋಕತ್ರಯಕ್ಕೂ ಚೈತನ್ಯವು ದೊರೆಯಿತು. ತ್ರಿರಾತ್ರದಿಂದ ಪೃಥ್ವಿಗೂ, ತ್ರಿರಾತ್ರದಿಂದ ಅಂತರಿಕ್ಷಕ್ಕೂ, ಉಳಿದ ತ್ರಿರಾತ್ರದಿಂದ ದ್ಯುಲೋಕಕ್ಕೂ ಪ್ರಜಾಪತಿಯು ಸ್ಥಿತಿಶಕ್ತಿಯನ್ನು ಈ ಯಜ್ಞದ ಶಕ್ತಿಯಿಂದ ಕಲ್ಪಿಸಿದನು. ಓತಪ್ರೋತರೂಪದಿಂದ ತಂತುವಿನೊಡನೆ ತಂತುವನ್ನು ಸೇರಿಸಿ ಪಟವನ್ನು (ಬಟ್ಟೆಯನ್ನು) ನಿರ್ಮಿಸುವಂತೆ, ಶೈಥಿಲ್ಯವನ್ನು ತಪ್ಪಿಸುವುದಕ್ಕೂ ಮತ್ತು ವಿಶ್ವಕ್ಕೆಲ್ಲಾ ಒಂದೇ ಸಂಬಂಧರೂಪವಾದ ಶಕ್ತಿಯನ್ನು ಉತ್ಪಾದನೆ ಮಾಡಿ ಮೂರು ಲೋಕಗಳೂ ಅವುಗಳ ನಿಯತವಾದ ಸ್ಥಿತಿಯಲ್ಲಿರುವುದಕ್ಕೂ ಈ ಯಜ್ಞದಿಂದ ಲೋಕ ತ್ರಯಕ್ಕೂ ಓತಪ್ರೋತರೂಪವಾದ ಸಂಬಂಧವನ್ನು ಕಲ್ಪಿಸಿದನು. ಈ ಯಜ್ಞವು ವಿಶ್ವಜೀವದ ನಾಡಿಯಾಗಿದೆ. ಅದನ್ನು ಶತಪಥದಲ್ಲಿ ವರ್ಣಿಸುತ್ತಾ,

**ಸರ್ವೇಷಾಂ ವಾ ಏಷ ಭೂತಾನಾಗ್ಂ ಸರ್ವೇಷಾಂ ದೇವಾನಾಮಾತ್ಮಾ ಯದ್ಯಜ್ಞಸ್ತಸ್ಯ ಸಮೃದ್ಧಿ ಮನು ಯಜಮಾನಃ ಪ್ರಜಯಾ ಪಶುಭಿರ್ಋಧ್ಯತೇ ।**

(ಶ. ಬ್ರಾ. ೧೪-೩-೨-೧)

ಈ ಯಜ್ಞವು ಸಕಲ ಮಾನವರ ಮತ್ತು ಸಕಲ ದೇವತೆಗಳ ಆತ್ಮವೇ ಆಗಿದೆ. ಯಾವನು ಈ ಯಜ್ಞವನ್ನು ನಿರ್ವಹಿಸುತ್ತಾನೋ ಅವನು ಸತ್ಸಂತಾನವನ್ನೂ, ಪಶುಸಂಪತ್ತನ್ನೂ ಪಡೆಯುತ್ತಾನೆ. ಮತ್ತು,

**ಸ ಯದಗ್ನೌ ಜುಹೋತಿ । ತದ್ದೇವೇಷು ಜುಹೋತಿ ತಸ್ಮಾದ್ದೇವಾಃ ಸಂತ್ಯಥ ಯತ್ಸದಸಿ ಭಕ್ಷ-ಯಂತಿ ತನ್ಮನುಷ್ಯೇಷು ಜುಹೋತಿ ತಸ್ಮಾನ್ಮನುಷ್ಯಾಃ ಸಂತ್ಯಥ ಯದ್ವಿಧಾರ್ನಯೋರ್ನಾ-ರಾಶಗ್ಂಸಾಃ ಸೀದಂತಿ ತತ್ಪಿತೃಷು ಜುಹೋತಿ ತಸ್ಮಾತ್ಪಿತರಃ ಸಂತಿ||**

(ಶ. ಬ್ರಾ. ೨-೬-೨-೨೫)

ಅಗ್ನಿಯಲ್ಲಿ ಹುತವಾದುದು ದೇವತೆಗಳಿಗೆ ಅರ್ಪಿತವಾಗುತ್ತದೆ. ಆದುದರಿಂದಲೇ ದೇವತೆಗಳು ತಮ್ಮ ಸ್ಥಿತಿಯನ್ನು ಕಾಪಾಡಿಕೊಂಡಿದ್ದಾರೆ. ಸದಸ್ಸಿನಲ್ಲಿ ಹಂಚಲ್ಪಟ್ಟ (ಸೋಮ) ರಸದಿಂದ ಮಾನವರ ಸ್ಥಿತಿಯಿದೆ. ನಾರಾಶಂಸಪಾತ್ರೆಯಿಂದ ಅರ್ಪಿತವಾದ ಆಹುತಿಯು ಪಿತೃಗಳನ್ನು ತೃಪ್ತಿಪಡಿಸುತ್ತದೆ. ಆದುದರಿಂದ ಮಾನವನು ತನ್ನ ದೇವ ಋಣವನ್ನೂ ಪಿತೃ ಋಣವನ್ನು ಸಹ ಯಜ್ಞಕರ್ಮದಿಂದಲೇ ತೀರಿಸಬೇಕು. ಇದಿಲ್ಲದೇ ಇವನಿಗೆ ಋಣದಿಂದ ವಿಮೋಚನೆಯಿಲ್ಲ. ತೈತ್ತಿರೀಯಸಂಹಿತೆಯಿಂದ ಹಿಂದೆ ಉದಹರಿಸಿದ

**" ತಲ್ಲೋಕೇ ಲೋಕಮನ್ವಸ್ಯತಿ ಧೃತ್ಯಾ ಅಶಿಥಿಲಂ ಭಾವಾಯ " ।**

(ತೈ. ಸಂ ೭-೨-೪-೨)

ಎಂಬ ವಾಕ್ಯದಲ್ಲಿ ವಿಶ್ವದ ಅಸ್ತಿತ್ವವು ಶಿಥಿಲವಾಗದೇ ಭದ್ರವಾಗಿರುವುದಕ್ಕಾಗಿಯೂ ಮತ್ತು ಮು... ...ೀಕಗಳ ಸಂಬಂಧವೂ ಓತಪ್ರೋತಗಳಂತೆ ಹೆಣೆದುಕೊಂಡಿರುವುದಕ್ಕಾಗಿಯೂ ಸಹ ಯಜ್ಞಕರ್ಮದ ಆವಶ್ಯಕತೆಯಿದೆಯೆಂದು ತಿಳಿಸಿದೆ. ಋಣತ್ರಯದ ವಿಷಯವನ್ನು ಹೇಳುವಾಗಲೂ ಸಹ ಈ ಪರಸ್ಪರವಾದ ಬಂಧನವು ವರ್ಣಿತವಾಗುತ್ತದೆ ಉದಾಹರಣೆಗೆ ಶತಪಥ ಬ್ರಾಹ್ಮಣದಲ್ಲಿ,

**ಋಣಗ್ಂ ಹ ವೈ ಜಾಯತೇ ಯೋಽಸ್ತಿ ಸ ಜಾಯಮಾನ ಏವ ದೇವೇಭ್ಯ ಋಷಿಭ್ಯಃ ಪಿತೃಭ್ಯೋ ಮನುಷ್ಯೇಭ್ಯಃ ||**

(ಶ. ಬ್ರಾ. ೧-೭-೨-೧)

ಪ್ರತಿಯೊಬ್ಬ ವ್ಯಕ್ತಿಯ ಸ್ಥಿತಿಯಕಾಲದಲ್ಲೂ ಸಹ ಅವನ ಜನ್ಮದಿಂದಲೇ ಪ್ರಾಪ್ತವಾದ ದೇವಋಣವೂ, ಋಷಿಋಣವೂ, ಪಿತೃಋಣವೂ ಅವನ ಮೇಲಿನ ಹೊರೆಯಾಗಿದ್ದೇ ಇರುತ್ತದೆ.

**ಸ ಯದೇವ ಋಜೇತ | ತೇನ ದೇವೇಭ್ಯ ಋಣಂ ಜಾಯತೇ ತದ್ಭ್ಯೈಭ್ಯ ಏತತ್ಕರೋತಿ ಯದೇಭ್ಯೋ ಜುಹೋತಿ ||**

(ಶ. ಬ್ರಾ. ೧-೭-೨-೨)

ಈ ಋಣದಿಂದ ಮುಕ್ತನಾಗಿ ವಿಶ್ವದ ಸ್ಥಿತಿಯಲ್ಲಿ ತಾನು ಸಹ ಭಾಗವಹಿಸುವಂತೆ ತನ್ನ ಅಸ್ತಿತ್ವವನ್ನು ಕಾಪಾಡಿಕೊಳ್ಳಬೇಕಾದರೆ ಪ್ರತಿಯೊಂದು ವ್ಯಕ್ತಿಯೂ ಯಜ್ಞಮಾಡಿ ದೇವಋಣವನ್ನು ತೀರಿಸಿ ಆ ಋಣದಿಂದ ಮುಕ್ತನಾಗಲೇ ಬೇಕು

**ಜಾಯಮಾನೋ ವೈ ಬ್ರಾಹ್ಮಣಸ್ತ್ರಿಭಿರ್ಋಣವಾ ಜಾಯತೇ ಬ್ರಹ್ಮಚರ್ಯೇಣರ್ಷಿಭ್ಯೋ ಯಜ್ಞೇನ ದೇವೇಭ್ಯಃ ಪ್ರಜಯಾ ಪಿತೃಭ್ಯ ಏಷ ವಾ ಅನೃಣೋ ಯಃ ಪುತ್ರೀ ಯಜ್ವಾ ಬ್ರಹ್ಮಚಾರಿವಾಸೀ ||**

(ತೈ. ಸಂ. ೬-೩-೧೧-೫)

ಇದಲ್ಲದೆ ಬ್ರಾಹ್ಮಣನಾದವನು ಹುಟ್ಟುವಾಗಲೇ ಋಷಿಋಣ, ದೇವಋಣ, ಪಿತೃಋಣಗಳೆಂಬ ಮೂರು ವಿಧವಾದ ಋಣಗಳನ್ನು ಹೊತ್ತುಕೊಂಡೇ ಹುಟ್ಟುವನು. ಬ್ರಹ್ಮಚರ್ಯವ್ರತದಿಂದ ಗುರುಕುಲವಲ್ಲಿ ವಾಸಿಸುತ್ತಾ ನಿಯಮವಾಗಿ ಗುರುವಿನಿಂದ ಉಪದೇಶಪೂರ್ವಕವಾಗಿ ವೇದಾಧ್ಯಯನಮಾಡುವುದರಿಂದ ಋಷಿಋಣವು ತೀರುವುದು ಯಜ್ಞಾದಿಗಳಿಂದ ದೇವತೆಗಳನ್ನು ಆರಾಧಿಸುವುದರಿಂದ ದೇವಋಣವು ತೀರುವುದು. ವಿವಾಹವಾದ ಪತ್ನಿಯಲ್ಲಿ ಧರ್ಮಪ್ರಜೋತ್ಪಾದನೆಮಾಡುವುದರಿಂದ ಪಿತೃಋಣವು ತೀರುವುದು ಎಂದು ತೈತ್ತರೀಯಸಂಹಿತೆ (ಯಜುರ್ವೇದ) ಯಲ್ಲಿಯೂ ಹೇಳಿದೆ.

ಇತ್ಯಾದಿಯಾಗಿ ವಿಶ್ವತತ್ತ್ವದಲ್ಲಿ ಪ್ರತಿವ್ಯಕ್ತಿಯೂ ಸಹ ತನ್ನ ಪ್ರಭಾವಪೂರಿತವಾದ ಅಸ್ತಿತ್ವವನ್ನು ಹೊಂದಬೇಕಾದರೆ ಯಜ್ಞವು ಈ ಸಾಮಾನ್ಯವಿಶೇಷಗಳಿಗೆ ಸಂಬಂಧವನ್ನು ಕಲ್ಪಿಸುವ ಸೂತ್ರವಾಗಿರುತ್ತದೆ. ಸೂತ್ರರೂಪವಾದ ಈ ಯಜ್ಞವು ಸಹ ವಿಶ್ವದ ವಿಕಾಸ ಮತ್ತು ಸಂಕೋಚಗಳೊಡನೆ ತಾನೂ ಸಹ ಒಂದು ಸಲ ಬೆಳೆಯುತ್ತದೆ. ಇನ್ನೊಂದು ಸಲ ಸಂಕುಚಿತವಾಗುತ್ತದೆ. ವಿಶ್ವಗತಿಯೊಡನೆ ತನ್ನ ಗತಿಯನ್ನು ಹೊಂದಿಸಿಕೊಳ್ಳುತ್ತದೆ. ಈ ಅಂಶವನ್ನು ವಿವರಿಸುತ್ತಾ ಶತಪಥಬ್ರಾಹ್ಮಣದಲ್ಲಿ ಯಜ್ಞಶಬ್ದದ ನಿರ್ವಚನವನ್ನು ತಿಳಿಸಿದೆ.

**ಅಥ ಯಸ್ಮಾದ್ಯಜ್ಞೋ ನಾಮ | ಘ್ನಂತಿ ವಾ ಏನಮೇತದ್ಯದಭಿಷುಣ್ವಂತಿ ತದ್ಯದೇನಂ ತನ್ವತೇ ತದೇನಂ ಜನಯಂತಿ ಸ ತಾಯಮಾನೋ ಜಾಯತೇ ಸ ಯನ್ ಜಾಯತೇ ತಸ್ಮಾದ್ಯಜ್ಞೋ ಯಂಜ್ಞೋ ಹ ವೈ ನಾಮೈತದ್ಯಜ್ಞ ಇತಿ |**

(ಶ ಬ್ರಾ. ೩-೯-೪-೨೩)

ಅಭಿನವಕಾಲದಲ್ಲಿ ಹನನಮಾಡುತ್ತಾರೆ. ಪುನಃ ಉತ್ಪನ್ನವಾಗುವಂತೆ ಮಾಡುತ್ತಾರೆ. ಪ್ರಸಾರರೂಪವಾದ ಗತಿಯೊಂದಿಗೆ ಉತ್ಪನ್ನವಾಗುವುದರಿಂದ **ಯಜ್ಞ** ವೆಂಬ ಹೆಸರು ಪ್ರಸಿದ್ಧವಾಯಿತು ಎಂದು ಆವಶ್ಯಕತೆಗಳಿಗೆ ತಕ್ಕಂತೆ ಸಂಕೋಚವಿಕಾಸಗಳೂ ಇವೆಯೆಂದು ತಿಳಿಸಿದೆ. ಮತ್ತು ವಿಶ್ವದ ಸ್ಥಿತಿಗತಿಗಳಿಗನುಗುಣವಾಗಿಯೇ ಇರುವುದರಿಂದ ವಿಶ್ವಕ್ಕೆ ಉಪಕಾರಕವಾಗಿದೆ. ಅದು ಹೇಗೆಂದರೆ,

> **ಭುಜ್ಯುಃ ಸುಪರ್ಣ ಇತಿ । ಯಜ್ಞೋ ವೈ ಭುಜ್ಯುಃ ಯಜ್ಞೋ ಹಿ ಸರ್ವಾಣಿ ಭುನಕ್ತಿ ಯಜ್ಞೋ ಗಂಧರ್ವಃ.... ........ .... .... ॥**
>
> (ಶ. ಬ್ರಾ. ೯-೪-೧-೧೧)

ಯಜ್ಞವು ಸಕಲ ಭೂತಗಳನ್ನೂ ತನ್ನ ಆಹುತಿಗಾಗಿ ಅಪೇಕ್ಷಿಸುತ್ತದೆ. ಪುನಃ ಸಕಲಭೂತಗಳ ಉಪಕಾರಕ್ಕಾಗಿ ಪ್ರಸರಿಸುತ್ತದೆ. ಇತ್ಯಾದಿಯಾಗಿ ವಿಶ್ವತತ್ತ್ವಕ್ಕೂ ಯಜ್ಞಕ್ಕೂ ಇರತಕ್ಕ ತಾದಾತ್ಮ್ಯಸಂಬಂಧವನ್ನು ತಿಳಿಸಿ ವ್ಯಾವಹಾರಿಕವಾದ ಸಮಸ್ತ ವಿಶ್ವವ್ಯವಹಾರಗಳಿಗೂ ಸಹ ಯಜ್ಞವು ಕಾರಣವು. ಅದೇ ರಕ್ಷಕವು ಮತ್ತು ಅದೇ ಸೂತ್ರರೂಪವಾದ ಸಂಬಂಧವು, ಇತ್ಯಾದಿಯಾಗಿ ನಾನಾಶ್ರುತಿವಾಕ್ಯಗಳಲ್ಲಿ ವರ್ಣಿಸಿರುವ ಅಂಶವನ್ನು ಪ್ರಕೃತವಾದ ಋಕಿನಲ್ಲಿ **ಯಜ್ಞೋ ವಿಶ್ವಸ್ಯ ನಾಭಿಃ** " ಎಂಬ ವಾಕ್ಯದಿಂದ ವರ್ಣಿತವಾಗಿದೆ. ಆದುದರಿಂದಲೇ ವಿಶ್ವನಾಭಿಯಾದ ಈ ಯಜ್ಞವನ್ನು ನಿರ್ವಹಿಸಬೇಕಾದರೆ ದೇವಮಾನವಾದಿಗಳೆಲ್ಲರಿಗೂ ಸಮಾನವಾದ ಶ್ರದ್ಧೆಯು ಅತ್ಯವಶ್ಯವೆಂದು ತೋರಿಸಿದೆ.

> **ಯೋ ವೈ ಶ್ರದ್ಧಾಮನಾರಭ್ಯ ಯಜ್ಞೇನ ಯಜತೇ ನಾಸ್ಯೇಷ್ಟಾಯ ಶ್ರದ್ದಧತೇಽಪಃ ಪ್ರಣಯತಿ ಶ್ರದ್ಧಾ ವಾ ಆಪಃ ಶ್ರದ್ಧಾಮೇವಾರಭ್ಯ ಯಜ್ಞೇನ ಯಜತ ಉಭಯೇಽಸ್ಯ ದೇವಮನುಷ್ಯಾ ಇಷ್ಟಾಯ ಶ್ರದ್ದಧತೇ ।**
>
> (ತೈ. ಸಂ. ೧-೬-೮-೧)

ಶ್ರದ್ಧಾರಹಿತನಾಗಿ ಯಜ್ಞಮಾಡಿದವನ ಯಜ್ಞವು ಸಿದ್ಧಿಸುವುದಿಲ್ಲ. ಶ್ರದ್ಧಾರೂಪವಾದ ಅಪ್ಪನ್ನು (ನೀರನ್ನು) ಮುಂದಿಟ್ಟುಕೊಂಡು ಯಜ್ಞವನ್ನು ನೆರವೇರಿಸತಕ್ಕದ್ದು. ದೇವಮಾನವಾದಿ ಸಕಲರೂ ಸಹ ಶ್ರದ್ಧೆಯಿಂದಲೇ ಯಜ್ಞದಲ್ಲಿ ಭಾಗವಹಿಸುವರು ಎಂದು ಶ್ರದ್ಧೆಯ ಅವಶ್ಯಕತೆಯನ್ನೂ ತಿಳಿಸಿದೆ.

ಯಜ್ಞತತ್ತ್ವದಲ್ಲಿಡಬೇಕಾದ ಈ ಶ್ರದ್ಧೆಯು ಕೇವಲ ಅಂಧಶ್ರದ್ಧೆಯಲ್ಲ. ಈ ಶ್ರದ್ಧೆಯು ಆಧ್ಯಾತ್ಮಿಕವಾದ ತತ್ತ್ವವನ್ನು ಗ್ರಹಣಮಾಡುವ ಶಕ್ತಿಯುಳ್ಳದ್ದಾಗಿರಬೇಕು. ಇದು ಭುವನನಾಭಿಯಾದ ಯಜ್ಞಕ್ಕೂ ಬ್ರಹ್ಮತತ್ತ್ವಕ್ಕೂ ಇರುವ ಸಂಬಂಧವನ್ನರಿಯತಕ್ಕದ್ದು. ಆಧ್ಯಾತ್ಮಿಕಜ್ಞಾನದ ಆಧಾರದಮೇಲೆ ನಿಂತಿರುವ ಈ ಶ್ರದ್ಧೆಯುಳ್ಳ ಯಜಮಾನನು ತನಗೂ ಯಜ್ಞಕ್ಕೂ ತಾದಾತ್ಮ್ಯವನ್ನು ಕಲ್ಪಿಸಿಕೊಳ್ಳುತ್ತಾನೆ. ಅನಂತರ ಯಜ್ಞಕ್ಕೂ ಪ್ರಜಾಪತಿಗೂ ಇರುವ ತಾದಾತ್ಮ್ಯವನ್ನರಿಯುತ್ತಾನೆ. ಪ್ರಜಾಪತಿರೂಪಿಯಾದ ಪರಬ್ರಹ್ಮನ ವಿಶ್ವವ್ಯವಹಾರಗಳೆಲ್ಲವೂ ಈ ಯಜ್ಞತತ್ತ್ವದಲ್ಲಡಗಿರುತ್ತದೆಂದರಿಯುತ್ತಾನೆ. ಮತ್ತು ಆ ವಿಶ್ವಚಕ್ರದಲ್ಲಿ ತಾನೂ ಸಹ ಭಾಗವನ್ನು ವಹಿಸುತ್ತಾನೆ.

**ಅಯಂ ಸೋಮೋ ವೃಷ್ಣೋ ಅಶ್ವಸ್ಯ ರೇತಃ**—ವೃಷ್ಟ್ಯಾದಿಗಳನ್ನು ಸೇಚನಮಾಡುವವನೂ, ಜಗದ್ವ್ಯಾಪಕನೂ ಆದ ಆದಿತ್ಯನ ರೇತಸ್ಸು ಸೋಮರೂಪವಾಗಿದೆಯೆಂದು " **ಪೃಚ್ಛಾಮಿ ತ್ವಾ ವೃಷ್ಣೋ ಅಶ್ವಸ್ಯ ರೇತಃ** "

ಎಂಬ ಪ್ರಶ್ನೆಗೆ ಉತ್ತರರೂಪವಾಗಿ ಹೇಳಿದೆ. ಇಲ್ಲಿ ಅಶ್ವವೆಂಬ ಪರ್ಯಾಯಪದವು ಆದಿತ್ಯನ ಯಾವ ಗುಣವನ್ನು ತೋರಿಸುತ್ತದೆ ಎಂಬುದನ್ನು ತಿಳಿದು ಅನಂತರ ಸೋಮವು ಅವನ ರೇತಸ್ಸು ಎಂಬುದರ ಅರ್ಥವೇನು ಎಂಬ ವಿಷಯವನ್ನು ಪರಿಶೀಲಿಸಬೇಕು. ಶತಪಥಬ್ರಾಹ್ಮಣದಲ್ಲಿ ಅಶ್ವಶಬ್ದದ ನಿರ್ವಚನವನ್ನು ತಿಳಿಸುತ್ತಾ—

ಪ್ರಜಾಪತೇರಕ್ಷ್ಯಶ್ವಯತ್ ತತ್ಪರಾಪತತ್ತತೋಽಶ್ವಃ ಸಮಭವದ್ಯದಶ್ವಯತ್ತದಶ್ವಸ್ಯಾಶ್ವತ್ವಂ ।
(ಶ. ಬ್ರಾ. ೧೩-೩-೧-೧)

ಪ್ರಜಾಪತಿಯ ಅಕ್ಷಿಯು (ಕಣ್ಣು) ಉಬ್ಬಿಕೊಂಡು ಕೆಳಕ್ಕೆ ಬಿದ್ದುಹೋಯಿತು. ಅದರಿಂದ ಅಶ್ವವು ಉತ್ಪನ್ನವಾಯಿತು. ಅದು ವೃದ್ಧವಾದುದರಿಂದ ಅದಕ್ಕೆ ಅಶ್ವವೆಂಬ ಹೆಸರು ಪ್ರಸಿದ್ಧವಾಯಿತು ಎಂದು ತಿಳಿಸಿ ಅನಂತರ ಈ ಅಶ್ವಕ್ಕೂ ಆದಿತ್ಯನಿಗೂ ಇರುವ ತಾದಾತ್ಮ್ಯವು ಹೇಗೆ ಎಂಬುದನ್ನು ವಿವರಿಸಿದೆ.

ಪ್ರಜಾಪತಿರ್ವಾ ಇದಮಗ್ರ ಆಸೀತ್ .... .... .... .... .... .... ....ನಿರಮಿಮೀತ ಮನಸಃ ಪುರುಷಂ ಚಕ್ಷುಷೋಽಶ್ವಂ ।
ಬ್ರಾ. ೭-೫-೨-೬)

ಈ ಅಶ್ವವು ಪ್ರಜಾಪತಿಯ ಚಕ್ಷುಸ್ಸಿನಿಂದ ಸೃಷ್ಟವಾಯಿತು ಎಂದು ಹೇಳಿ ಅನಂತರ ವರುಣನಿಗೂ ಈ ಅಶ್ವಕ್ಕೂ ಇರತಕ್ಕ ನಿಕಟವಾದ ಸಂಬಂಧವನ್ನು ಅನೇಕ ಕಡೆಗಳಲ್ಲಿ ತಿಳಿಸಿದೆ.

ವಾರುಣೋ ವಾ ಅಶ್ವಃ । ತಂ ದೇವತಯಾ ವ್ಯರ್ಧಯತಿ । ಯತ್ಪ್ರಾಜಾಪತ್ಯಂ ಕರೋತಿ । ನಮೋ ರಾಜ್ಞೇ ನಮೋ ವರುಣಾಯೇತ್ಯಾಹ । ವಾರುಣೋ ವಾ ಅಶ್ವಃ ।
(ತೈ. ಬ್ರಾ. ೩-೯-೧೬-೧)

ಎಂದು ವರುಣನಿಗೂ ಅಶ್ವಕ್ಕೂ ಇರುವ ಸಂಬಂಧವನ್ನು ತಿಳಿಸುವಾಗ ಸಾಯಣರು **ಅಶ್ವಸ್ಯಾಬ್ಯೋನಿತ್ವಾದ್ವರುಣಸ್ಯ ಚಾಪಾಂ ಪತಿತ್ವಾದಯಮಶ್ವೋ ವಾರುಣಃ ।** ಅಶ್ವವು ವಿಶ್ವವ್ಯಾಪಕವಾದ ನೀರಿನಿಂದ ಜನಿಸಿದುದರಿಂದಲೂ, ವರುಣನು ನೀರಿಗೆ ಒಡೆಯನಾದುದರಿಂದಲೂ ಯಜ್ಞಾಶ್ವವು ವರುಣದೇವತೆಗೆ ಸಂಬಂಧಿಸಿದುದು ಎಂದು ವಿವರಣೆಯನ್ನು ಹೇಳಿದ್ದಾರೆ. ಈ ವಾರುಣಾಶ್ವದ ರಹಸ್ಯಾರ್ಥವೇನು ಎಂಬ ವಿಷಯವನ್ನು ವಿಮರ್ಶಿಸುತ್ತಾ Eggelling ಎಂಬ ಪಂಡಿತನು ಶತಪಥಬ್ರಾಹ್ಮಣವನ್ನು ಪರಿವರ್ತಿಸುವ ಕಾಲದಲ್ಲಿ ಈರೀತಿ ಹೇಳಿದ್ದಾನೆ.

Varuna's horse is none other than the fiery races who pursue his diurnal course across the all-encompassing arch of heaven, the sphere of Varuna, the all-ruler. It is in the form of the horse that the Sun is thus lauded in the hymn in praise of Aswamedha."

( Sacred Books of the East. Vol. XLIV ; P. XIX-XX )

ದ್ಯಾವಾಪೃಥಿವಿಗಳಿಗೆಲ್ಲಾ ಪ್ರಭುವಾದ ವರುಣನ ಈ ಅಶ್ವವು ಯಾವುದೆಂದರೆ ತನ್ನ ದೈನಂದಿನದ ಪರಿಭ್ರಮಣವನ್ನು ಹೊಂದುತ್ತಿರುವ ಸೂರ್ಯನಲ್ಲದೆ ಬೇರೆಯಲ್ಲ. ವರುಣನಿಗೂ ಈ ಅಶ್ವದೊಡನೆ ಒಟ್ಟಿಗೆ ಇರತಕ್ಕ ಸಂಬಂಧವು ತೈತ್ತಿರೀಯ ಸಂಹಿತೆಯಲ್ಲಿ ಈ ರೀತಿ ವರ್ಣಿತವಾಗಿದೆ.

ಪ್ರಜಾಪತಿರ್ವರುಣಾಯಾಶ್ವಮನಯತ್ಸ ಸ್ವಾಂ ದೇವತಾಮಾರ್ಛತ್ಸ ಪರ್ಯದೀರ್ಯತ ಸ ಏತಂ ವಾರುಣಂ ಚತುಷ್ಕಪಾಲಮಪಶ್ಯತ್ತಂ ನಿರವಪತ್ತತೋ ವೈ ಸ ವರುಣಪಾಶಾದಮುಚ್ಯತ ವರುಣೋ ವಾ ಏತಂ ಗೃಹ್ಣಾತಿ ಯೋಽಶ್ವಂ ಪ್ರತಿಗೃಹ್ಣಾತಿ .... .... .... ||
(ತೈ. ಸಂ. ೨-೩-೧೨-೧)

ಪ್ರಜಾಪತಿಯು ಈ ಅಶ್ವವನ್ನು ವರುಣನಲ್ಲಿಗೆ ಕರೆದುಕೊಂಡು ಹೋದನು, ಆದರೆ ಆ ಅಶ್ವವು ತನ್ನ ಸ್ವಂತ ದೇವತೆಯಲ್ಲಿಗೇ (ಪ್ರಜಾಪತಿಯಲ್ಲಿಗೇ) ಹೋಯಿತು. ಆಗ ವರುಣನಿಗೆ ಖೇದವುಂಟಾದುದರಿಂದ ಪ್ರಜಾಪತಿಯು ವರುಣನನ್ನು ಉದ್ದೇಶಿಸಿ ಚತುಷ್ಕಪಾಲವನ್ನರ್ಪಿಸಿದನು. ಆಗ ಪ್ರಜಾಪತಿಯು ವರುಣನ ಪಾಶದಿಂದ ಮುಕ್ತನಾದನು ಎಬುದಾಗಿ ವಿವರಿಸಿದೆ ಈ ಅಂಶವನ್ನು ವಿಶದವಾಗಿ ತಿಳಿಯಲು ಇನ್ನೂ ಕೆಲವು ಮಂತ್ರಗಳು ಸಹಾಯಕಗಳಾಗಿರುವುವು. ಆದರೆ ಗ್ರಂಥವು ಬಹಳ ವಿಸ್ತಾರವಾಗುವುದೆಂದು ಅವುಗಳನ್ನು ವಿವರಿಸಲಾಗುವುದಿಲ್ಲ. ಅವುಗಳ ಆಧಾರಗಳನ್ನು ಮಾತ್ರ ಕೊಡಲಾಗುತ್ತದೆ. ಇವು ಅಶ್ವಪದವು ಸೂರ್ಯನಿಗೆ ಪರ್ಯಾಯಪದವಾಗಿರುವುದನ್ನು ಸೂಚಿಸುತ್ತವೆ.

ಋ. ಸಂ. ೧-೫೦-೧ ; ತೈ. ಸಂ. ೨-೨-೧೨-೧ ;
,, ೧-೧೧೫-೧ ; ,, ೨-೫-೧೨-೧ ಇತ್ಯಾದಿ.

ವಿಶ್ವವ್ಯಾಪಿಯಾದ (ಅಶ್ವಸ್ಯ) ಈ ಆದಿತ್ಯನಿಗೆ ಸೋಮವು ರೇತೋರೂಪವಾಗಿರುವುದು, ಎಂದರೆ ಆದಿತ್ಯ ರೂಪದಲ್ಲಿರುವ ಪರಬ್ರಹ್ಮನಿಗೆ ಸೋಮವೇ ರೇತಸ್ಸಾಗಿರುವುದೆಂದು ಹೇಳಬಹುದು. ಹೇಗೆಂದರೆ ಸಕಲಭೂತಗಳ ಸೃಷ್ಟಿಗೆ ಸೋಮವೇ ಉತ್ಪಾದಕವಾದ ಬೀಜವೆಂಬುದನ್ನು ಬೃಹದಾರಣ್ಯಕೋಪನಿಷತ್ತಿನಲ್ಲಿ ಈರೀತಿ ಹೇಳಿದೆ.

ಅಥ ಯತ್ಕಿಂಚೇದಮಾರ್ದ್ರಂ ತದ್ರೇತಸೋಽಸೃಜತ ತದು ಸೋಮ ಏತಾವದ್ವಾ ಇದಂ ಸರ್ವಮನ್ನಂ ಚೈವಾನ್ನಾದಶ್ಚ ಸೋಮ ಏವಾನ್ನಮಗ್ನಿರನ್ನಾದಃ ।
(ಬೃ. ಉ. ೧-೪-೬)

ಅದ್ವಿತೀಯನಾದ ಪರಬ್ರಹ್ಮನು ತನ್ನ ರೇತಸ್ಸಿನಿಂದ ವಿಶ್ವದಲ್ಲಿ ಆರ್ದ್ರವಾಗಿರುವ ಸಕಲ ವಸ್ತುಗಳನ್ನೂ ಸೃಷ್ಟಿಸಿದನು. ಆ ರೇತಸ್ಸೇ ಸೋಮವು. ಈ ಸೋಮವು ಅಗ್ನಿಯಲ್ಲಿ ಅರ್ಪಿತವಾಗಿ ಎರಡೂ ಪರಸ್ಪರವಾದ ಭಕ್ಷ್ಯ ಭಕ್ಷಕಗಳಾಗುತ್ತವೆ. ಇದನ್ನೇ ಮೈತ್ರ್ಯುಪನಿಷತ್ತಿನಲ್ಲಿ ವಿವರಿಸುತ್ತಾ,

ರವಿಮಧ್ಯೇ ಸ್ಥಿತಃ ಸೋಮಃ ಸೋಮಮಧ್ಯೇ ಹುತಾಶನಃ ।
(ಮೈ. ಉ. ೬-೩೮)

ಸೋಮನು ಆದಿತ್ಯಮಂಡಲದ ಮಧ್ಯವರ್ತಿಯಾಗಿಯೂ ಅಗ್ನಿಯು ಸೋಮನ ಮಧ್ಯವರ್ತಿಯಾಗಿಯೂ ಇದ್ದಾರೆಂದು ತಿಳಿಸಿದೆ. ಸಾಧಾರಣವಾಗಿ ಆದಿತ್ಯನಿಗೂ ಸೋಮನಿಗೂ ಇರುವ ಸಂಬಂಧವನ್ನು ಋಕ್ಸಂಹಿತೆಯಲ್ಲಿ ಅನೇಕಕಡೆಗಳಲ್ಲಿ ವರ್ಣಿಸಿದೆ. ಉದಾಹರಣೆಗೆ—

ಮಹತ್ತತ್ಸೋಮೋ ಮಹಿಷಶ್ಚಕಾರಾಪಾಂ ಯದ್ಗರ್ಭೋಽವೃಣೀತ ದೇವಾನ್ ।
ಅದಧಾದಿಂದ್ರೇ ಪವಮಾನ ಓಜೋಽಜನಯತ್ಸೂರ್ಯೇ ಜ್ಯೋತಿರಿಂದುಃ ॥
(ಋ. ಸಂ. ೯-೯೭-೪೧)

ಆದಿತ್ಯಸ್ಥವಾದ ಉದಕಗಳ ಗರ್ಭಭೂತವಾದ ಸೋಮವು ದೇವತೆಗಳಿಗೂ ತೃಪ್ತಿಯನ್ನುಂಟುಮಾಡಿತು. ವೀರ್ಯ ರೂಪದಲ್ಲಿದ್ದು ಆದಿತ್ಯನಲ್ಲಿ ವಿಶ್ವಜ್ಯೋತಿಯನ್ನು ಸೃಷ್ಟಿಸಿತು, ಎಂದಿದೆ. ಮತ್ತು,

**ತಂ ಸಮುದ್ರೋ ಅಸಿ ವಿಶ್ವವಿತ್ಕವೇ ತವೇಮಾಃ ಪಂಚ ಪ್ರದಿಶೋ ವಿಧರ್ಮಣಿ ।**
**ತ್ವಂ ದ್ಯಾಂ ಚ ಪೃಥಿವೀಂ ಚಾತಿ ಜಭ್ರಿಷೇ ತವ ಜ್ಯೋತೀಂಷಿ ಪವಮಾನ ಸೂರ್ಯಃ ॥**
(ಋ. ಸಂ. ೯-೮೬-೨೯)

ಎಂಬಲ್ಲಿ ಸೋಮನೇ ಅಂತರಿಕ್ಷಸ್ಥವಾದ ಸಮುದ್ರವೆಂದೂ, ಸಕಲ ಜ್ಯೋತಿಗೂ ಆಧಾರವೆಂದೂ, ಆದಿತ್ಯನೇ ಸೋಮನ ಪ್ರಭಾವದಿಂದ ಬೆಳಗುತ್ತಿರುವನೆಂದೂ ತಿಳಿಸಿದೆ ಇಲ್ಲಿ **ಸೋಮವು** ಯಾವ ತತ್ತ್ವವನ್ನು ಪ್ರತಿಬಿಂಬಿಸುತ್ತದೆ ಎಂಬುದನ್ನು ವಿವರಿಸುತ್ತಾ Eggeling ಎಂಬ ಪಂಡಿತನು ಈ ರೀತಿ ತಿಳಿಸಿದ್ದಾನೆ.

The poet of IX. 86. 29; while saying " Thou art the heavenly ocean (Samudra), thine are the lights (ಜ್ಯೋತೀಂಷಿ) O pavamana, thine the Sun, seems to conceive Soma as the bright ether, the azure 'sea of light generally.

(Sacred Books of the East. Vol. XXVI. P. XV.)

ಪ್ರಕೃತವಾದ ಋಕ್ಕಿನಲ್ಲಿ ಸಾಯಣರು ಈ ಅಂಶವನ್ನು ವಿವರಿಸುತ್ತಾ, **ಅಗ್ನೌ ಹುತಃ ಸೋಮರಸಃ ಆದಿತ್ಯಂ ಪ್ರಾಪ್ಯ ವೃಷ್ಟ್ಯಾದಿಫಲಂ ಜನಯತಿ ।** ಅಗ್ನಿಯಲ್ಲಿ ಅರ್ಪಿಸಿದ ಸೋಮವು ಆದಿತ್ಯನನ್ನು ಸೇರಿ ವೃಷ್ಟ್ಯಾದಿಫಲ ವನ್ನು ಉತ್ಪನ್ನವಾಗುವಂತೆ ಮಾಡುತ್ತದೆ ಆದುದರಿಂದ ಆದಿತ್ಯನ ರೇತಸ್ಸೆಂದು ವರ್ಣಿತವಾಗಿವೆಯೆಂದು ತಿಳಿಸಿದ್ದಾರೆ ಇಲ್ಲಿ ಕೇವಲ ಅಧಿದೈವತ ಪಕ್ಷದಲ್ಲಿಯೇ ಅರ್ಥಮಾಡದೆ ಅಧ್ಯಾತ್ಮಪಕ್ಷದಲ್ಲಿಯೂ ಅರ್ಥಮಾಡಬೇಕು ಅಧ್ಯಾತ್ಮಪಕ್ಷ ದಲ್ಲಿ ಮೇಲೆ ಉದಹರಿಸಿರುವ ಉಪನಿಷದ್ವಾಕ್ಯಗಳಲ್ಲಿ ರೇತಸ್ಸಿನ ರೂಪದಲ್ಲಿರುವ ಸೋಮನಿಗಿರುವ ವಿಶ್ವೋತ್ಪಾದನ ಶಕ್ತಿಯನ್ನೂ, ಸೋಮನಿಗೂ ಆದಿತ್ಯನಿಗೂ ಇರುವ ಸಂಬಂಧವನ್ನೂ ತಿಳಿಸಿದೆ.

ಬ್ರಹ್ಮಾಯಂ ವಾಚಃ ಪರಮಂ ವ್ಯೋಮ—ಮಂತ್ರಾದಿರೂಪಾಯಾಃ ವಾಚಃ **ಪ್ರಜಾಪತಿರೇವ ಉತ್ಕೃಷ್ಟಂ ರಕ್ಷಕಂ ಸ್ಥಾನಂ । ತತ್ರೈವ ಉತ್ಪತ್ತೇಸ್ತತ್ರೈವ ಪರ್ಯವಸಾನಾಚ್ಚ ।** ಮಂತ್ರಾದಿರೂಪವಾದ ವಾಕ್ಕಿಗೆ ಪ್ರಜಾಪತಿಯೇ ಉತ್ಪತ್ತಿಸ್ಥಾನವೂ, ಅವನೇ ಪರ್ಯವಸಾನವೂ ಆಗಿರುವುದರಿಂದ ಅವನೇ **ವ್ಯೋಮವು** ಎಂದು ತಿಳಿಸಿದೆ. ಇಲ್ಲಿ ವ್ಯೋಮ ಶಬ್ದಕ್ಕೆ **ಉತ್ಕೃಷ್ಟಂ** ರಕ್ಷಕಂ **ಸ್ಥಾನಂ** ಅತಿಶಯವಾದುದೂ ರಕ್ಷಕವೂ ಆದ ಆಧಾರ ಸ್ಥಾನವೆಂದೂ ಅರ್ಥಮಾಡಿದ್ದಾರೆ.

**ವ್ಯೋಮ**ಶಬ್ದವು ನಿರುಕ್ತದಲ್ಲಿ **ಅಂತರಿಕ್ಷ**ನಾಮಗಳಲ್ಲಿ ಪಠಿತವಾಗಿದೆ ( ನಿ. ೨-೧೦ ). **ವ್ಯಾಪಿಸು, ಆಚ್ಛಾದಿಸು** ಎಂದರ್ಥವುಳ್ಳ **ವ್ಯೇಞ್** ಧಾತುವಿನಿಂದ ನಿಷ್ಪನ್ನವಾಗಿದೆ. ಸರ್ವವ್ಯಾಪಕವಾದ ಅಂತರಿಕ್ಷವೆಂದರ್ಥ. ಇದಲ್ಲದೆ ರಕ್ಷಣಾರ್ಥಕವಾದ **ಅವ** ಧಾತುವಿಗೆ ವಿ ಎಂಬ ಉಪಸರ್ಗವು ಸೇರಿ **ವ್ಯೋಮ**ಪದವು ನಿಷ್ಪನ್ನವಾಗ ಬಹುದು. ನಾನಾವಿಧವಾದ ರಕ್ಷಣೆಗಳಿಂದ ಕೂಡಿದ ಸ್ಥಾನವೆಂದು ಅರ್ಥವಾಗುತ್ತದೆ, ಇದೇ ಅರ್ಥದಲ್ಲಿ,

**ಋತೇನ ಋತಂ ಧರುಣಂ ಧಾರಯಂತ ಯಜ್ಞಸ್ಯ ಶಾಕೇ ಪರಮೇ ವ್ಯೋಮನ್ ।**
**ದಿವೋ ಧರ್ಮನ್ ಧರುಣೇ ಸೇದುಷೋ ನ್ನೃಂಜಾತೈರಜಾತಾಁ ಅಭಿ ಯೇ ನನಕ್ಷುಃ ॥**
(ಋ. ಸಂ. ೫-೧೫-೨)

ಎಂಬಲ್ಲಿಯೂ ಸಹ ಉತ್ತರವೇದಿಗೆ ಈ ಪದವು ವಿಶೇಷಣವಾಗಿ ಉಪಯೋಗಿಸಲ್ಪಟ್ಟಿದೆ.

**ವ್ಯೋಮಸದಿತ್ಯೇಷ ವೈ ವ್ಯೋಮಸದ್ವ್ಯೋಮ ವಾ ಏತತ್ಸದ್ಮಾನಾಂ ಯಸ್ಮಿನ್ನೇಷ ಆಸನ್ನಸ್ತಪತಿ॥**
(ಐ. ಬ್ರಾ. ೪-೨೦)

ಎಂಬ ಐತರೇಯಬ್ರಾಹ್ಮಣದ ವಾಕ್ಯದಲ್ಲೂ ರಕ್ಷಣಾಸ್ಥಾನ ಅಥವಾ ಆಧಾರಸ್ಥಾನ ಎಂಬರ್ಥದಲ್ಲಿ ಈ ಪದದ ಪ್ರಯೋಗ ವಿರುವುದು.

ಪ್ರಜಾಪತಿಯು ವಾಕ್ಕಿಗೆ ಆಧಾರ ಅಥವಾ ರಕ್ಷಕಸ್ಥಾನವಾಗಿರುವುದು ಹೇಗೆಂದರೆ ಅವನೇ ಅದರ ಉತ್ಪತ್ತಿಗೂ ಕಾರಣನು ಮತ್ತು ಅದರ ಪರ್ಯವಸಾನವು ಎಂದು ಸಾಯಣರು ಅಧ್ಯಾತ್ಮಪರವಾದ ಅರ್ಥವನ್ನು ಹೇಳಿದ್ದಾರೆ. ಪರಬ್ರಹ್ಮನಿಗೂ ವಾಕ್ಕಿಗೂ ತಾದಾತ್ಮ್ಯವನ್ನೇ ಹೇಳಿ ಲೋಕದ ಸಕಲವ್ಯವಹಾರಗಳೂ ವಾಕ್ಕಿನ ಆಧಾರದ ಮೇಲೆಯೇ ನಡೆಯುತ್ತವೆ ಮತ್ತು ಈ ವಾಕ್ಕಿಗೆ ಪರಬ್ರಹ್ಮನೇ ಆಧಾರನು, ಅವನ ತತ್ತ್ವವನ್ನೇ ಇದು ಬಾಹ್ಯವಾಗಿ ಪ್ರಕಾಶಗೊಳಿಸುತ್ತದೆ ಎಂಬ ವಿಷಯವನ್ನು ಬೃಹದಾರಣ್ಯಕೋಪನಿಷತ್ತಿನಲ್ಲಿ ಈರೀತಿ ತಿಳಿಸಿದೆ.

**ಜನಕೋ ಹ ವೈದೇಹ ಆಸಾಂಚಕ್ರೇಽಥ ಹ ಯಾಜ್ಞವಲ್ಕ್ಯ ಆವವ್ರಾಜ ತಂ ಹೋವಾಚ ಯಾಜ್ಞವಲ್ಕ್ಯ ಕಿಮರ್ಥಮಚಾರೀಃ ಪಶೂನಿಚ್ಛನ್ನಣ್ವಂತಾನೀತಿ । ಉಭಯಮೇವ ಸಮ್ರಾಡಿತಿ ಹೋವಾಚ ।**
(ಬೃ. ಉ. ೪-೧)

ಜನಕವೈದೇಹನು ತನ್ನ ಆಸ್ಥಾನದಲ್ಲಿ ಕುಳಿತಿರುವಾಗ ಅವನಲ್ಲಿಗೆ ಯಾಜ್ಞವಲ್ಕ್ಯನೆಂಬ ಋಷಿಯು ಬಂದನು. ಆಗ ಜನಕನು ಅವನನ್ನು ಕುರಿತು " ನೀನು ಬಂದ ಉದ್ದಿಶ್ಯವೇನು ? ಪಶುವನ್ನು ಪಡೆಯಲು ಬಂದೆಯಾ ? ಅಥವಾ ತಾತ್ತ್ವಿಕವಾದ ಚರ್ಚೆಯನ್ನು ನಡೆಸಲು ಬಂದೆಯಾ ? " ಎಂದು ಕೇಳಲು ಯಾಜ್ಞವಲ್ಕ್ಯನು " ಎಲೈ ಪ್ರಭುವೇ, ಎರಡನ್ನೂ ಉದ್ದೇಶಿಸಿ ಬಂದಿರುವೆನು " ಎಂದು ಹೇಳಿದನು.

**ಯತ್ತೇ ಕಶ್ಚಿದಬ್ರವೀತ್ತಚ್ಛೃಣವಾಮೇತ್ಯಬ್ರವೀನ್ಮೇ ಜಿತ್ವಾ ಶೈಲಿನಿರ್ವಾಗ್ವೈ ಬ್ರಹ್ಮೇತಿ ಯಥಾ ಮಾತೃಮಾನ್ ಪಿತೃಮಾನಾಚಾರ್ಯವಾನ್ ಬ್ರೂಯಾತ್ತಥಾ ತಚ್ಛೈಲಿನಿರಬ್ರವೀದ್ವಾಗ್ವೈ ಬ್ರಹ್ಮೇತ್ಯವದತೋ ಹಿ ಕಿಂ ಸ್ಯಾದಿತ್ಯಬ್ರವೀತ್ತು ತೇ ತಸ್ಯಾಯತನಂ ಪ್ರತಿಷ್ಠಾಂ ನ ಮೇಽಬ್ರವೀದಿತ್ಯೇಕಪಾದ್ವಾ ಏತತ್ಸಮ್ರಾಡಿತಿ ಸ ವೈ ನೋ ಬ್ರೂಹಿ ಯಾಜ್ಞವಲ್ಕ್ಯ ।**
(ಬೃ. ಉ. ೪-೧)

ಈ ತತ್ತ್ವದ ವಿಷಯದಲ್ಲಿ ನಿನಗೆ ತಿಳಿದುದನ್ನು ಅಥವಾ ನೀನು ಇತರರಿಂದ ತಿಳಿದುದನ್ನು ವಿವರಿಸು ಎಂದು ಜನಕನನ್ನು ಯಾಜ್ಞವಲ್ಕ್ಯನು ಪ್ರಶ್ನಿಸಿದನು. ಅದಕ್ಕೆ ಉತ್ತರವಾಗಿ ಜನಕನು " ವಾಕ್ಕೇ ಬ್ರಹ್ಮವೆಂದು ಶೈಲಿನಿಯು ಹೇಳಿದನು" ಎಂದು ತಿಳಿಸಿದನು. ಯಾಜ್ಞವಲ್ಕ್ಯನು ಅದನ್ನು ಒಪ್ಪಿ ಅದರಲ್ಲಿ ಸತ್ಯದ ಒಂದಂಶವನ್ನು ಮಾತ್ರ ಹೇಳಿದಂತಾಯಿತು. ಆದರೆ ಆ ವಾಗ್ರೂಪವಾದ ಬ್ರಹ್ಮನಿಗೆ ಆಯತನವಾವುದು ಮತ್ತು ಪ್ರತಿಷ್ಠೆಯಾವುದು (ಆಧಾರಸ್ಥಾನ) ಎಂಬುದನ್ನು ಹೇಳಿದನೇ ಎಂದು ಕೇಳಲು, ಜನಕನು ಅವನು ಅದನ್ನು ಹೇಳಲಿಲ್ಲವೆಂದನು. ಆಗ ಯಾಜ್ಞವಲ್ಕ್ಯನು ಈ ಬ್ರಹ್ಮನಿಗೆ ಏಕಪಾದವುಮಾತ್ರವಿರುತ್ತದೆ ಎಂದನು. ಆಗ ಜನಕನು ಅದು ಹೇಗೆಂದು ವಿವರಿಸಬೇಕೆಂದು ಕೇಳಿದಾಗ ಯಾಜ್ಞವಲ್ಕ್ಯನು ಈರೀತಿ ವಿವರಿಸಿದ್ದಾನೆ.

**ವಾಗೇವಾಯತನಮಾಕಾಶಃ ಪ್ರತಿಷ್ಠಾ ಪ್ರಜ್ಞೇತ್ಯೇತದುಪಾಸೀತ ।**

ವಾಗ್ರೂಪಿಯಾದ ಈ ಬ್ರಹ್ಮನಿಗೆ ಜಿಹ್ವೆಯೇ ಆಯತನವು, ಆಕಾಶವೇ ಪ್ರತಿಷ್ಠಾಸ್ಥಾನವು. ಇದನ್ನೇ ಪ್ರಜ್ಞೆಯೆಂದು ತಿಳಿದು ಉಪಾಸನೆಯನ್ನು ಮಾಡಬೇಕು ಎಂದಾಗ,

**ಕಾ ಪ್ರಜ್ಞತಾ ಯಾಜ್ಞವಲ್ಕ್ಯ ?** ಆ ಪ್ರಜ್ಞೆಯ ಸ್ವರೂಪವೇನೆಂದನು. ಆಗ ಯಾಜ್ಞವಲ್ಕ್ಯನು,

**ವಾಗೇವ ಸಮ್ರಾಡಿತಿ ಹೋವಾಚ । ವಾಚಾ ವೈ ಸಮ್ರಾಡ್ ಬಂಧುಃ ಪ್ರಜ್ಞಾಯತ ಋಗ್ವೇದೋ ಯಜುರ್ವೇದಃ ಸಾಮವೇದೋಽಥರ್ವಾಂಗಿರಸ ಇತಿಹಾಸಃ ಪುರಾಣಂ ವಿದ್ಯಾ ಉಪನಿಷದಃ ಶ್ಲೋಕಾಃ ಸೂತ್ರಾಣ್ಯನುವ್ಯಾಖ್ಯಾನಾನಿ ವ್ಯಾಖ್ಯಾನಾನೀಷ್ಟಂ ಹುತಮಾಶಿತಂ ಪಾಯಿತಮಯಂ ಚ ಲೋಕಃ ಪರಶ್ಚ ಲೋಕಃ ಸರ್ವಾಣಿ ಚ ಭೂತಾನಿ ವಾಚೈವ ಸಮ್ರಾಟ್ ಪ್ರಜ್ಞಾಯಂತೇ ವಾಗ್ವೈ ಸಮ್ರಾಟ್ ಪರಮಂ ಬ್ರಹ್ಮ ನೈನಂ ವಾಗ್ಜಹಾತಿ ಸರ್ವಾಣ್ಯೇನಂ ಭೂತಾನ್ಯಭಿಕ್ಷರಂತಿ ದೇವೋ ಭೂತ್ವಾ ದೇವಾನಪ್ಯೇತಿ ಯ ಏವಂ ವಿದ್ವಾನೇತದುಪಾಸ್ತೇ ॥**

(ಬೃ. ಉ. ೪-೧)

ವಾಕ್ಕೇ ಈ ಜ್ಞಾನವು. ಬಂಧುವೂ, ಋಗ್ವೇದವೂ, ಯಜುರ್ವೇದವೂ ಸಾಮವೇದವೂ, ಅಥರ್ವವೇದವೂ, ಇತಿಹಾಸ ಪುರಾಣಾದಿಗಳೂ, ಅವುಗಳ ವ್ಯಾಖ್ಯಾನಾನುವ್ಯಾಖ್ಯಾನಗಳೂ, ಯಜ್ಞಾಹುತಿಗಳೂ, ಈ ಲೋಕತತ್ತ್ವವೂ ಅದರಂತೆಯೇ ಪರಲೋಕತತ್ತ್ವವೂ ಸಮಸ್ತವೂ ಸಹ ಈ ವಾಕ್ಕಿನ ಸಹಾಯದಿಂದಲೇ ತಿಳಿಯಲ್ಪಡುತ್ತವೆ ವಾಕಿ ನಿಂದಲೇ ಬ್ರಹ್ಮವೂ ತಿಳಿಯಲ್ಪಡುತ್ತದೆ. ವಾಕ್ಕೇ ಪರಬ್ರಹ್ಮವು. ಈ ತಾತ್ತ್ವಿಕಜ್ಞಾನದಿಂದ ಯಾರು ವಾಗ್ರೂಪಿಯಾದ ಬ್ರಹ್ಮವನ್ನು ಆರಾಧಿಸುತ್ತಾರೋ ಅವರನ್ನು ವಾಕ್ಕು ತ್ಯಜಿಸುವುದಿಲ್ಲ. ಅವನೂ ಸಹ ದೇವತ್ವವನ್ನು ಪಡೆಯುತ್ತಾನೆ. ಇತ್ಯಾದಿಯಾಗಿ **ಬ್ರಹ್ಮಾಯಂ ವಾಚಃ ಪರಮಂ ವ್ಯೋಮ** ಎಂಬ ವಾಕ್ಯದಲ್ಲಿ ಹೇಳಿರುವ ಅಂಶವನ್ನು ವಿವರಿಸಿದ್ದಾನೆ. ವಾಕ್ಕಿಗೂ ಪರಬ್ರಹ್ಮಕ್ಕೂ ತಾದಾತ್ಮ್ಯವನ್ನೇ ಹೇಳಿದ್ದಾನೆ. ಇದನ್ನೇ ಶತಪಥಬ್ರಾಹ್ಮಣದಲ್ಲಿಯೂ ಸಹ,

**ವಾಚಸ್ಪತಿರ್ವಾಚಂ ನಃ ಸ್ವದತು ಸ್ವಾಹೇತಿ ಪ್ರಜಾಪತಿರ್ವೈ ವಾಚಸ್ಪತಿಃ ।**

(ಶ. ಬ್ರಾ. ೫-೧-೧-೧೬)

ಇತ್ಯಾದಿವಾಕ್ಯಗಳಿಂದ ತಿಳಿಸಿದೆ ಮತ್ತು ಸೃಷ್ಟಿಯ ಕ್ರಮವನ್ನು ವಿವರಿಸುವಾಗ ಪರಬ್ರಹ್ಮವು ವಾಗ್ರೂಪದಲ್ಲಿ ತನ್ನನ್ನು ಪ್ರಕಾಶಪಡಿಸಿದನು ಎಂಬ ವಿವರಣೆಯಲ್ಲಿಯೂ ಸಹ ಬ್ರಹ್ಮಕ್ಕೂ ವಾಕ್ಕಿಗೂ ಇರುವ ಆಧಾರಾಧೇಯಭಾವವನ್ನು ತಿಳಿಯಬಹುದು. ಅದು ಹೇಗೆಂದರೆ ; —

**ಪ್ರಜಾಪತಿಃ ಪ್ರಜಾ ಅಸೃಜತ । ತಾಃ ಸೃಷ್ಟ್ವಾಃ ಸಮಶ್ಲಿಷ್ಯನ್ । ತಾ ರೂಪೇಣಾನುಪ್ರಾವಿಶತ್ । ತಸ್ಮಾದಾಹುಃ । ರೂಪಂ ವೈ ಪ್ರಜಾಪತಿರಿತಿ । ತಾ ನಾಮ್ನಾನುಪ್ರಾವಿಶತ್ । ತಸ್ಮಾದಾಹುಃ । ನಾಮ ವೈ ಪ್ರಜಾಪತಿರಿತಿ ।**

(ತೈ. ಬ್ರಾ, ೨-೨-೭-೧)

ಪ್ರಜಾಪತಿಯು ಪ್ರಜೆಗಳನ್ನು ಸೃಷ್ಟಿಸಿದನಂತರ ಅವೆಲ್ಲವೂ ಪರಸ್ಪರವಾದ ವ್ಯಕ್ತಿತ್ವವನ್ನು ತೋರಿಸದೆ ಸಂಶ್ಲಿಷ್ಟವಾದವು. ಆಗ ಅವುಗಳ ವಿಶೇಷಧರ್ಮಗಳನ್ನು ತೋರಿಸುವುದಕ್ಕಾಗಿ ನಾಮ ಮತ್ತು ರೂಪ ಇವೆರಡನ್ನೂ ಸೃಷ್ಟಿಸಿದನು

ರೂಪವು ಮಾನಸಿಕವಾದ ವಿಭಜನೆಗೂ, ನಾಮವು ವಾಗ್ರೂಪವಾದ ವಿಭಜನೆಗೂ ಸಹಾಯವಾಯಿತೆಂದು ತಿಳಿಸುತ್ತಾ ಶತಪಥಬ್ರಾಹ್ಮಣದಲ್ಲಿ ಈ ರೀತಿ ತಿಳಿಸಿದೆ.

> **ಮರ್ತ್ಯಾ ಹ ವಾ ದೇವಾ ಆಸುಃ । ಸ ಯದೈವ ತೇ ಬ್ರಹ್ಮಣಾಪುರಥಾಮೃತಾ ಆಸುಃ ಸ ಯಂ ಮನಸ ಆಘಾರಯತಿ ಮನೋ ವೈ ರೂಪಂ ಮನಸಾ ಹಿ ವೇದೇದಗ್ಂರೂಪಮಿತಿ ತೇನ ರೂಪಮಾಪ್ನೋತ್ಯಥ ಯಂ ವಾಚ ಆಘಾರಯತಿ ವಾಗ್ವೈ ನಾಮ ವಾಚಾ ಹಿ ನಾಮ ಗೃಹ್ಣಾತಿ ತೇನ ನಾಮಾಪ್ನೋತ್ಯೇತಾವದ್ವಾ ಇದಗ್ಂ ಸರ್ವಂ ಯಾವದ್ರೂಪಂ ಚೈವ ನಾಮ ಚ ತತ್ಸರ್ವಮಾಪ್ನೋತಿ ॥**
>
> (ಶ. ಬ್ರಾ. ೧೧-೨-೩-೬)

ಪ್ರಾರಂಭದಲ್ಲಿ ದೇವತೆಗಳು ಮರ್ತ್ಯರಾಗಿದ್ದರು. ಅವರು ಬ್ರಹ್ಮನನ್ನು ಸಾಕ್ಷಾತ್ಕರಿಸಿದನಂತರವೇ ಅಮೃತತ್ವವನ್ನು ಪಡೆದರು. ಆ ಬ್ರಹ್ಮನಿಗೆ ನಾಮ ಮತ್ತು ರೂಪಗಳೆಂಬ ಎರಡುರೂಪಗಳು. ರೂಪವು ಮನೋಗತವಾದ ತತ್ತ್ವವು. ಆದುದರಿಂದ ಮಾನಸಿಕವಾದ ಆಘಾರದಿಂದ **ರೂಪಾತ್ಮಕ**ವಾದ ಬ್ರಹ್ಮತತ್ತ್ವವನ್ನರಿಯುತ್ತಾನೆ. ವಾಗ್ರೂಪವಾದ ಆಘಾರದಿಂದ **ವಾಗಾತ್ಮಕ**ವಾದ ಬ್ರಹ್ಮನನ್ನರಿಯುತ್ತಾನೆ. ಮನೋರೂಪವಾದುದೂ ವಾಗ್ರೂಪವಾದುದೂ ಆದ ಈ ಬ್ರಹ್ಮತತ್ತ್ವವನ್ನರಿಯುವುದರಿಂದ ಮಾನವನೂ ಸಹ ಬ್ರಹ್ಮತ್ತ್ವವನ್ನು ಎಂದರೆ ಅಮೃತತ್ತ್ವವನ್ನು ಪಡೆಯುತ್ತಾನೆ ಎಂದು ವಾಕ್ಕಿಗೂ ಬ್ರಹ್ಮನಿಗೂ ಇರುವ ಸಂಬಂಧವನ್ನು ತಿಳಿಸಿದೆ.

### ವ್ಯಾಕರಣಪ್ರಕ್ರಿಯಾ

**ವೇದಿಃ**—ವಿದ ಜ್ಞಾನೇ ಧಾತು. **ಹೃಪಿಷಿರುಹಿ**—(ಉ ಸೂ. ೪-೫೫೪) ಎಂಬುದರಿಂದ ಇನ್ ಪ್ರತ್ಯಯ. **ಪುಗಂತಲಘೂಪಧಸ್ಯಚ** (ಪಾ. ಸೂ. ೭-೩-೮೬) ಎಂಬುದರಿಂದ ಧಾತುವಿನ ಲಘೂಪಧೆಗೆ ಗುಣ. ಪ್ರತ್ಯಯ ನಿತ್ತಾದುದರಿಂದ **ಞ್ನಿತ್ಯಾದಿರ್ನಿತ್ಯಮ್** (ಪಾ. ಸೂ. ೬-೧-೧೯೭) ಎಂಬುದರಿಂದ ಆದ್ಯುದಾತ್ತ ಸ್ವರ ಬರುತ್ತದೆ.

**ನಾಭಿಃ**—ಣಹ ಬಂಧನೇ. ಧಾತು. **ನಹೋಭಶ್ಚ** (ಉ. ಸೂ. ೪-೫೬೫) ಎಂಬುದರಿಂದ ಇಞ್ ಪ್ರತ್ಯಯ. ಧಾತುಹಕಾರಕ್ಕೆ ಭಕಾರಾದೇಶ. **ಅತ ಉಪಧಾಯಾಃ** (ಪಾ. ಸೂ. ೭-೨-೧೧೬) ಎಂಬುದರಿಂದ ಉಪಧಾ ಅಕಾರಕ್ಕೆ ವೃದ್ಧಿ. ಪ್ರತ್ಯಯ ಞಿತ್ತಾದುದರಿಂದ **ಹಿಂದಿನಂತೆ** ಆದ್ಯುದಾತ್ತಸ್ವರ ಬರುತ್ತದೆ.

**ರೇತಃ**—ರೀಙ್ ಶ್ಲೇಷಣೇ. ಧಾತು. **ಸ್ರುರೀಭ್ಯಾಂತುಟ್‌ಚ** (ಉ. ಸೂ. ೪-೬೪೧) ಎಂಬುದರಿಂದ ಅಸುನ್ ಪ್ರತ್ಯಯ. ಅದಕ್ಕೆ ತುಟಾಗಮ. ಪ್ರತ್ಯಯ ನಿಮಿತ್ತವಾಗಿ ಧಾತುವಿನ ಇಕಿಗೆ ಗುಣ. ಪ್ರತ್ಯಯ ನಿತ್ತಾದುದರಿಂದ ಆದ್ಯುದಾತ್ತಸ್ವರ ಬರುತ್ತದೆ.

**ವ್ಯೋಮ**—**ನಾಮನ್ ಸೀಮನ್ ವ್ಯೋಮನ್**—(ಉ. ಸೂ. ೪-೫೯೦) ಎಂಬುದರಿಂದ ಮನಿನಂತವಾಗಿ ನಿಪಾತಿತವಾಗಿದೆ ಹಿಂದಿನಂತೆ ಆದ್ಯುದಾತ್ತಸ್ವರ ಬರುತ್ತದೆ. ॥ ೩೫ ॥

। ಸಂಹಿತಾಪಾಠಃ ।

ಸಪ್ತಾರ್ಧಗರ್ಭಾ ಭುವನಸ್ಯ ರೇತೋ ವಿಷ್ಣೋಸ್ತಿಷ್ಠಂತಿ ಪ್ರದಿಶಾ ವಿಧರ್ಮಣಿ ।
ತೇ ಧೀತಿಭಿರ್ಮನಸಾ ತೇ ವಿಪಶ್ಚಿತಃ ಪರಿಭುವಃ ಪರಿ ಭವಂತಿ ವಿಶ್ವತಃ ॥ ॥ ೩೬ ॥

। ಪದಪಾಠಃ ।

ಸಪ್ತ । ಅರ್ಧಽಗರ್ಭಾಃ । ಭುವನಸ್ಯ । ರೇತಃ । ವಿಷ್ಣೋಃ । ತಿಷ್ಠಂತಿ । ಪ್ರಽದಿಶಾ । ವಿಽಧರ್ಮಣಿ

ತೇ । ಧೀತಿಽಭಿಃ । ಮನಸಾ । ತೇ । ವಿಪಃಽಚಿತಃ । ಪರಿಽಭುವಃ । ಪರಿ । ಭವಂತಿ । ವಿಶ್ವತಃ ॥ ೩೬ ॥

ಸಾಯಣಭಾಷ್ಯಂ

ಸಪ್ತ ಸರ್ಪಣಸ್ವಭಾವಾಃ ಸಪ್ತಸಂಖ್ಯಾ ವಾ ರಶ್ಮಯೋಽರ್ಧಗರ್ಭಾಃ ಸಂವತ್ಸರಸ್ಯಾರ್ಧೇ ಗರ್ಭಂ ಗರ್ಭಸ್ಥಾನೀಯಮುದಕಂ ಧಾರಯಮಾಣಾಃ । ಯದ್ವಾ । ಬ್ರಹ್ಮಾಂಡಸ್ಯಾರ್ಧೇ ಮಧ್ಯೇಽಂತರಿಕ್ಷೇ ಗರ್ಭವದ್ವರ್ತಮಾನಾಃ । ಭುವನಸ್ಯ ಲೋಕಸ್ಯ ರೇತಃ ಸಾರಂ ವೃಷ್ಟಿಪ್ರದತ್ವೇನ ರೇತೋಭೂತಾಃ ತಾದೃಶಾ ರಶ್ಮಯೋ ವಿಷ್ಣೋರ್ವ್ಯಾಪಕಸ್ಯಾದಿತ್ಯಸ್ಯ ವಿಧರ್ಮಣಿ ಜಗದ್ಧಾರಣವ್ಯಾಪಾರೇ ಪ್ರದಿಶಾ ಪ್ರದೇಶೇನ ತಿಷ್ಠಂತಿ । ವರ್ತಂತೇ । ಕಿಂಚ ತೇ ಧೀತಿಭಿಃ ಪ್ರಜ್ಞಾಭಿರ್ಮನಸಾ ಜಗದುಪಕಾರಃ ಕರ್ತವ್ಯ ಇತಿ ಬುದ್ಧ್ಯಾ ಚ ವಿಶ್ವತಃ ಸರ್ವತಃ ॥ ದ್ವಿತೀಯಾರ್ಥೇ ತಸಿಃ ॥ ವಿಶ್ವಂ ಪರಿ ಭವಂತಿ । ಪರಿತೋ ಭಾವಯಂತಿ । ಕೃತ್ಸ್ನಂ ಜಗದ್ವ್ಯಾಪ್ನುವಂತೀತ್ಯರ್ಥಃ । ಯಸ್ಮಾದೇವಂ ತಸ್ಮಾತ್ತೇ ತ ಏವ ವಿಪಶ್ಚಿತೋ ಬುದ್ಧಿಯುಕ್ತಾಃ ಪರಿಭುವಃ ಸರ್ವತ್ರ ವ್ಯಾಪ್ತಾಶ್ಚ ॥ ಯದ್ವಾ । ಸಪ್ತಾರ್ಧಗರ್ಭಾಃ । ಸಪ್ತ ಮಹದಹಂಕಾರೌ ಪಂಚ ತನ್ಮಾತ್ರಾಣೀತಿ ಮಿಲಿತ್ವಾ ಸಪ್ತಸಂಖ್ಯಾನಿ ತತ್ತ್ವಾನಿ। ಅರ್ಧಗರ್ಭಾ ಅವಿಕೃತಿರೂಪಾಃ। ವಿಕಾರಾಶ್ರಯಾಯಾ ಮೂಲಪ್ರಕೃತೇಃ ಪ್ರಕೃತಿವಿಕೃತೇರುದಾಸೀನಸ್ಯಾತ್ಮನಶ್ಚೋತ್ಪನ್ನತ್ವಾದರ್ಧಾಂಶೇನ ಪ್ರಪಂಚಾಕಾರೇಣ ಪರಿಣಾಮಾದರ್ಧಗರ್ಭಾಃ । ಪುರುಷಾಂಶಸ್ಯಾವಿಕ್ರಿಯತ್ವಾದಿತ್ಯಭಿಪ್ರಾಯಃ । ಅತ ಏವ ತೇಷಾಂ ಪ್ರಕೃತಿವಿಕೃತಿತ್ವಂ । ಯಸ್ಮಾದೇವಂ ತಸ್ಮಾದ್ಭುವನಸ್ಯ ರೇತಃ ಕಾರಣಂ । ಕಾರಣಭೂತಾನಿ ತಾನ್ಯೇಪ ವಿಷ್ಣೋರ್ವ್ಯಾಪ್ತಸ್ಯ ಪುರುಷಸ್ಯ ವಿಧರ್ಮಣಿ ಪ್ರದಿಶಾ ಪ್ರದೇಶೇನ ತಿಷ್ಠಂತಿ । ಇತರತ್ಸಮಾನಂ ॥

ಪ್ರತಿಪದಾರ್ಥ

ಅರ್ಧಗರ್ಭಾಃ—ಬ್ರಹ್ಮಾಂಡದ ಮಧ್ಯಭಾಗವಾದ ಅಂತರಿಕ್ಷದಲ್ಲಿ ಗರ್ಭರೂಪದಲ್ಲಿ ಉದಕಗಳನ್ನು ವಹಿಸಿರುವುವೂ । ಭುವನಸ್ಯ—ಲೋಕಕ್ಕೆಲ್ಲಾ । ರೇತಃ—ಸಾರಭೂತವಾದವೂ ಆದ । ಸಪ್ತ— ಸಪ್ತಸಂಖ್ಯಾತವಾದ ರಶ್ಮಿಗಳು । ವಿಷ್ಣೋಃ— ವ್ಯಾಪಕನಾದ ಆದಿತ್ಯನ । ವಿಧರ್ಮಣಿ—ಜಗದ್ಧಾರಣರೂಪವಾದ ವ್ಯಾಪಾರದಲ್ಲಿ ।

**ಪ್ರದಿಶಾ**—(ಸಹಾಯಕ್ಕಾಗಿ) ತಮ್ಮತಮ್ಮ ನಿಯತವಾದ ಸ್ಥಾನಗಳಲ್ಲಿ । **ತಿಷ್ಠಂತಿ**—ಇರುತ್ತವೆ । **ತೇ**—ಆ ರಶ್ಮಿಗಳು । **ಧೀತಿಭಿಃ**—ತಮ್ಮ ಪ್ರಜ್ಞೆಗಳಿಂದಲೂ । **ಮನಸಾ**—ತಮ್ಮ ಕರ್ತವ್ಯಜ್ಞಾನದಿಂದಲೂ । **ವಿಶ್ವತಃ**—ಸುತ್ತಲೂ । ಪರಿ **ಭವಂತಿ**—ಜಗತ್ತನ್ನು ವ್ಯಾಪಿಸಿವೆ (ಆದುದರಿಂದಲೇ) । **ತೇ**—ಅವು । **ವಿಪಶ್ಚಿತಃ**—ಪ್ರಜ್ಞಾಯುಕ್ತಗಳಾಗಿ । **ಪರಿಭುವಃ**—ಸುತ್ತಲೂ ವ್ಯಾಪಿಸಿವೆ.

### ಭಾವಾರ್ಥ

ಬ್ರಹ್ಮಾಂಡದ ಮಧ್ಯಭಾಗವಾದ ಅಂತರಿಕ್ಷದಲ್ಲಿ ಗರ್ಭರೂಪದಲ್ಲಿ ಉದಕಗಳನ್ನು ವಹಿಸಿರುವುವೂ, ಲೋಕಕ್ಕೆಲ್ಲಾ ಸಾರಭೂತವೂ ಆದ ಸಪ್ತಸಂಖ್ಯಾಕವಾದ ರಶ್ಮಿಗಳು ವ್ಯಾಪಕನಾದ ಆದಿತ್ಯನ ಜಗದ್ಧಾರಣರೂಪವಾದ ವ್ಯಾಪಾರದಲ್ಲಿ ಅವನ ಸಹಾಯಕ್ಕಾಗಿ ತಮ್ಮ ತಮ್ಮ ನಿಯತವಾದ ಸ್ಥಾನಗಳಲ್ಲಿರುತ್ತವೆ. ಆ ರಶ್ಮಿಗಳು ತಮ್ಮ ಪ್ರಜ್ಞೆಗಳಿಂದಲೂ, ತಮ್ಮ ಕರ್ತವ್ಯಜ್ಞಾನದಿಂದಲೂ ಸಹ ಜಗತ್ತನ್ನು ಸುತ್ತಲೂ ವ್ಯಾಪಿಸಿವೆ.

### English Translation

The seven (sustaining), the embryo (rain) for half a year, the fecundating (element) of the world, abide, by appointment, in the various functions of Vishnu. By their intelligence they prevade in thought all around (them), for they are intelligent and diffusive.

### ವಿಶೇಷವಿಷಯಗಳು

ಇಲ್ಲಿ ಅಧಿದೈವತಪಕ್ಷವಾದ ಒಂದರ್ಥವನ್ನು ಮೊದಲು ತೋರಿಸಿ ಅನಂತರ ಅಧ್ಯಾತ್ಮಪರವಾದ ಅರ್ಥವನ್ನು ಹೇಳಿದೆ. ಅಧಿದೈವತಪಕ್ಷದಲ್ಲಿ ಸಪ್ತಶಬ್ದಕ್ಕೆ ಸಪ್ತರಶ್ಮಿಗಳೆಂದು ಹೇಳಿದೆ. ಈ ರಶ್ಮಿಗಳಿಗೆ **ಅರ್ಧಗರ್ಭಾಃ, ವಿಪಶ್ಚಿತಃ** ಎಂಬ ವಿಶೇಷಣಗಳಿವೆ. ಮತ್ತು **ವಿಧರ್ಮಣಿ ಪ್ರದಿಶಾ ತಿಷ್ಠಂತಿ, ಧೀತಿಭಿರ್ಮನಸಾ ಪರಿ ಭವಂತಿ** ಇತ್ಯಾದಿ ವಾಕ್ಯಗಳಿಂದ ಇವುಗಳ ಕರ್ತವ್ಯಜ್ಞಾನವನ್ನೂ ಮತ್ತು ಈ ಕರ್ತವ್ಯಜ್ಞಾನದಿಂದ ವಿಶ್ವವನ್ನೆಲ್ಲಾ ವ್ಯಾಪಿಸಿ ಲೋಕರಕ್ಷಣಕಾರ್ಯದಲ್ಲಿ ಆದಿತ್ಯನಿಗೆ ಸಹಾಯಮಾಡುವುದೂ ವರ್ಣಿತವಾಗಿದೆ.

**ಸಪ್ತ—ಸರ್ಪಣಸ್ವಭಾವಾಃ, ಸಪ್ತ ಸಂಖ್ಯಾ ವಾ ರಶ್ಮಯಃ ।** ಪ್ರಸರಿಸುವ ಸ್ವಭಾವವುಳ್ಳ ರಶ್ಮಿಗಳು ಅಥವಾ ಸಪ್ತಸಂಖ್ಯಾಕಗಳಾದ ರಶ್ಮಿಗಳು ಎಂದು ಎರಡು ವಿಧವಾಗಿ ಅರ್ಥಮಾಡಿದೆ. ಈ **ಸಪ್ತ** ವೆಂಬ ಪದಕ್ಕೆ, ರಶ್ಮಿಪರವಾಗಿಯೂ, ಋತುಪರವಾಗಿಯೂ, ಸಪ್ತರ್ಷಿಗಳ ಪರವಾಗಿಯೂ, ಸಪ್ತಾಕ್ಷರಪರವಾಗಿಯೂ ಸಹ ಹಿಂದೆ ಇದರ ಪ್ರಯೋಗಗಳನ್ನು ವಿಶದವಾಗಿ ತಿಳಿಸಿದೆ [ಇದೇ ಭಾಗದಲ್ಲಿ 295; 302-303; 310-311; 365-366 ಇತ್ಯಾದಿ ಪುಟಗಳಲ್ಲಿ ಆಯಾ ಸಂದರ್ಭಕ್ಕನುಸಾರವಾಗಿ ವಿವರಿಸಿದೆ]. ಪ್ರಕೃತವಾದ ಋಕ್ಕಿನಲ್ಲಿ ರಶ್ಮಿಪರವಾಗಿಯೇ (ಅಧಿದೈವತಪಕ್ಷದಲ್ಲಿ) ಅರ್ಥಮಾಡಬೇಕು.

**ಅರ್ಧಗರ್ಭಾಃ**—ಎಂಬ ವಿಶೇಷಣಕ್ಕೆ **ಸಂವತ್ಸರಸ್ಯಾರ್ಧೇ ಗರ್ಭಂ ಗರ್ಭಸ್ಥಾನೀಯಮುದಕಂ ಧಾರಯಮಾಣಾಃ** । ಸಂವತ್ಸರದ ಅರ್ಧಭಾಗದಲ್ಲಿ ಎಂದರೆ ವರ್ಷಾಕಾಲದಲ್ಲಿ ಗರ್ಭಸ್ಥಾನೀಯವಾದ ಉದಕಗಳನ್ನು ಧರಿಸಿರುವ ರಶ್ಮಿಗಳೆಂದು ಒಂದು ವಿಧವಾಗಿಯೂ, ಅಥವಾ **ಬ್ರಹ್ಮಾಂಡಸ್ಯಾರ್ಧೇ ಮಧ್ಯೇಽಂತರಿಕ್ಷೇ ಗರ್ಭ-**

**ವದ್ವರ್ತಮಾನಾಃ** । ಬ್ರಹ್ಮಾಂಡದ ಅರ್ಧಭಾಗವಾದ ಎಂದರೆ ಮಧ್ಯಭಾಗದಲ್ಲಿರುವ ಅಂತರಿಕ್ಷದಲ್ಲಿ ಗರ್ಭರೂಪದಲ್ಲಿರುವ ರಶ್ಮಿಗಳೆಂದು ಇನ್ನೊಂದು ವಿಧವಾಗಿಯೂ ಅರ್ಥಮಾಡಿದೆ. ರಶ್ಮಿಗಳಿಂದ ಜನ್ಯವಾದ ಋತುಗಳು ತಮ್ಮ ನಿಯತವಾದ ಸ್ಥಾನಗಳಲ್ಲಿ ಆವಿರ್ಭವಿಸಿ ತಮ್ಮ ಅಧಿಷ್ಠಾತೃವಾದ ಆದಿತ್ಯನ ಅನುಶಾಸನದಂತೆ ಜಗದ್ವ್ಯವಹಾರಗಳಿಗೆ ಸಹಾಯಕಗಳಾಗುತ್ತವೆಯೆಂದು **ಪ್ರದಿಶಾ ತಿಷ್ಠಂತಿ** ಎಂಬುದರಿಂದ ತಿಳಿಸಿದೆ. ನಿರುಕ್ತಕಾರರು, "**ಯತ್ರಾ ಸುಪರ್ಣಾ ಅಮೃತಸ್ಯ ಭಾಗಮನಿಮೇಷಂ ವಿದಥಾಭಿಸ್ವರಂತಿ**" (ಋ. ಸಂ. ೧-೧೬೪-೨೧) ಎಂಬ ಋಕ್ಕಿಗೆ ವಿವರಣೆಯನ್ನು ಹೇಳುತ್ತಾ ಅತ್ಯಂತ ಆಕರ್ಷಕವಾದ ಪತನ ಅಥವಾ ಪ್ರಸರವುಳ್ಳ ಆದಿತ್ಯರಶ್ಮಿಗಳು ತಮ್ಮ ಪೂರ್ಣವಾದ ಜ್ಞಾನದಿಂದ ಉದಕದ ಕಡೆ ಪ್ರಸರಿಸಿ ಆದಿತ್ಯನಲ್ಲಿ ಪುನಃ ಸೇರಿ ತಮ್ಮ ಕರ್ತವ್ಯಗಳನ್ನು ನಿರ್ವಹಿಸುತ್ತವೆಯೆಂದು ರಶ್ಮಿಗಳ ಕರ್ತವ್ಯಜ್ಞಾನವನ್ನೂ ಮತ್ತು ಕರ್ತವ್ಯನಿಷ್ಠೆಯನ್ನೂ ತಿಳಿಸಿರುವಂತೆ ಪ್ರಕೃತವಾದ ಋಕ್ಕಿನಲ್ಲಿಯೂ **ವಿಪಶ್ಚಿತಃ** ಎಂಬ ವಿಶೇಷಣಕ್ಕೂ, **ಮನಸಾ ಪರಿಭವಂತಿ** ಇತ್ಯಾದಿ ವರ್ಣನೆಗಳಿಗೂ ಅರ್ಥಮಾಡಬೇಕು.

ಈ ರಶ್ಮಿಗಳನ್ನು ಭುವನದ **ರೇತಸ್ಸು**ಗಳೆಂಬ ಪದದಿಂದ ವರ್ಣಿಸಿದೆ. **ರೇತಃ** ಎಂಬುದಕ್ಕೆ ಹಿಂದಿನ ಋಕ್ಕಿನಲ್ಲಿ ವಿವರಿಸಿದಂತೆ ಜಗದುತ್ಪಾದಕವಾದ ವೀರ್ಯವೆಂದಾದರೂ ಅರ್ಥವಾಗಬಹುದು. ಅಥವಾ ಭೂತಗಳ ಉತ್ಪತ್ತಿಗೂ, ರಕ್ಷಣೆಗೂ ಹೇತುವಾದ ಉದಕವೆಂದಾದರೂ ಆಗಬಹುದು.

ನಿರುಕ್ತಕಾರರು ಈ ಪದವನ್ನು **ಅರ್ಣಃ, ಕ್ಷೋದಃ,** ಇತ್ಯಾದ್ಯುದಕ ನಾಮಗಳಲ್ಲಿ ಸೇರಿಸಿದ್ದಾರೆ. (ನಿ. ೨-೨೬). ಮತ್ತು,

> **ದಿವೋ ನ ಯಸ್ಯ ರೇತಸೋ ದುಘಾನಾಃ ಪಂಥಾಸೋ ಯಂತಿ ಶವಸಾಪರೀತಾಃ ।**
> **ತರದ್ದ್ವೇಷಾಃ ಸಾಸಹಿಃ ಪೌಂಸ್ಯೇಭಿರ್ಮರುತ್ವಾನ್ನೋ ಭವತ್ವಿಂದ್ರ ಊತೀ ॥**
> (ಋ. ಸಂ. ೧-೧೦೦-೩)

ಇತ್ಯಾದಿಋಕ್ಕುಗಳಲ್ಲಿ ವೃಷ್ಟ್ಯುದಕವೆಂಬದರ್ಥದಲ್ಲಿ ಈ ಪದದ ಪ್ರಯೋಗವಿದೆ. [ಸಂತಾನಜನಕವಾದ ವೀರ್ಯವೆಂಬರ್ಥದಲ್ಲಿ ಈ ಪದದ ಪ್ರಯೋಗವನ್ನೂ, ರೇತಸ್ಸಿಗಿರತಕ್ಕ ಅತಿಶಯವಾದ ಶಕ್ತಿಯ ವಿವರಣೆಯನ್ನೂ ತೈತ್ತಿರೀಯಸಂಹಿತೆಯಲ್ಲಿ(೫-೬-೮)ವಿಶದವಾಗಿ ತಿಳಿಸಿದೆ.] ಪ್ರಕೃತವಾದ ಋಕ್ಕಿನಲ್ಲಿ **ರೇತಃ ಸಾರಂ ವೃಷ್ಟಿಪ್ರದಾನೇನ ರೇತೋಭೂತಾಃ ತಾದೃಶಾ ರಶ್ಮಯಃ** ವೃಷ್ಟಿಪ್ರದಾನದಿಂದ ವೃಷ್ಟ್ಯುದಕರೂಪವಾದ ರಶ್ಮಿಗಳೆಂದರ್ಥವೆಂದು ಸಾಯಣರು ವ್ಯಾಖ್ಯಾನ ಮಾಡಿದ್ದಾರೆ. ರಶ್ಮಿಗಳಿಗೂ ಉದಕಗಳಿಗೂ ತಾದಾತ್ಮ್ಯವನ್ನು ಅನೇಕ ಕಡೆಗಳಲ್ಲಿ ಹೇಳಿದೆ. ಉದಾಹರಣೆಗೆ ಇದೇ ಸೂಕ್ತದ ೧೨ನೇ ಋಕ್ಕನ್ನು ವಿವರಿಸುವಾಗ ಅದರ ವಿಶೇಷವಿಷಯಗಳಲ್ಲಿ ಶತಪಥಬ್ರಾಹ್ಮಣದ (೧೦-೫-೪-೧೪) ವಾಕ್ಯವನ್ನುದಹರಿಸಿ ಆ ವಾಕ್ಯಕ್ಕೆ ಸಾಯಣಭಾಷ್ಯದಲ್ಲಿ **ಅರ್ಚಿಷೋ ಹ್ಯಾಪಸ್ಸೂರ್ಯಕಿರಣಾನಾಮೇವ ವೃಷ್ಟಿಕರ್ತೃಕತ್ವಾತ್ ಕಾರ್ಯಕಾರಣಯೋರಭೇದೇನ ಅರ್ಚಿರ್ವಾ ಆಪ ಇತ್ಯುಕ್ತಂ ।** ಸೂರ್ಯರಶ್ಮಿಗಳು ಉದಕಪ್ರವಾಹಗಳಿಗೆ ಹೇತುಗಳಾದುದರಿಂದ ರಶ್ಮಿಗಳನ್ನೇ ಪ್ರವಾಹಗಳೆಂದು ರೂಪಕಮಾಡಿ ಹೇಳಿದೆಯೆಂಬ ವಿವರಣೆಯನ್ನು ತಿಳಿಸಿದೆ. (ಪುಟ 363).

**ವಿಷ್ಣೋಃ—ವ್ಯಾಪಕಸ್ಯ ಆದಿತ್ಯಸ್ಯ** । ವ್ಯಾಪಕವಾದ ಆದಿತ್ಯನೆಂದರ್ಥ. ನಿರುಕ್ತಕಾರರು ಈ ಪದದ ನಿರ್ವಚನವನ್ನು ತೋರಿಸುತ್ತಾ,

**ಅಥ ಯದ್ವಿಷಿತೋ ಭವತಿ ತದ್ವಿಷ್ಣುರ್ಭವತಿ ವಿಷ್ಣುರ್ವಿಶತೇರ್ವಾ ವ್ಯಶ್ನೋತೇರ್ವಾ ।**

(ನಿ. ೧೨-೧೮)

ವ್ಯಾಪಿಸು ಅಥವಾ ಎಲ್ಲದರಲ್ಲಿಯೂ ಸೇರಿಕೊಂಡು ಐಕ್ಯವಾಗುವಂತೆ ಪ್ರವೇಶಿಸು ಎಂಬರ್ಥವನ್ನು ಕೊಡುವ **ವಿಶ್** ಧಾತುವಿನಿಂದಾಗಲೀ ಅಥವಾ **ವ್ಯಶ್** (ವಿ+ಅಶೂ) ಧಾತುವಿನಿಂದಾಗಲಿ ನಿಷ್ಪನ್ನವಾಗಿದೆಯೆಂದು ತಿಳಿಸಿದ್ದಾರೆ ಮತ್ತು,

**ಇದಂ ವಿಷ್ಣುರ್ವಿಚಕ್ರಮೇ ತ್ರೇಧಾ ನಿ ದಧೇ ಪದಂ ।**
**ಸಮೂಳ್ಹಮಸ್ಯ ಪಾಂಸುರೇ ॥**

(ಋ. ಸಂ. ೧-೨೨-೧೭)

ಎಂಬ ಋಕ್ಕನ್ನುದಹರಿಸಿ ಅಲ್ಲಿ ವರ್ಣಿತವಾಗಿರುವ ವಿಷ್ಣುವಿನ ವ್ಯಾಪಕತ್ವವನ್ನು ಸೂಚಿಸಿದ್ದಾರೆ. ಆದರೆಪ್ರಕೃತವಾದ ಋಕ್ಕಿನಲ್ಲಿ ಇದೇ ಪದವು ಆದಿತ್ಯನಿಗೆ ವಿಶೇಷಣವಾಗಿದ್ದು ಆದಿತ್ಯನ ವ್ಯಾಪಕತ್ವವನ್ನು ವರ್ಣಿಸುತ್ತದೆ. ವಿಷ್ಣುಸೂಕ್ತದಲ್ಲೂ ಸಹ ಕೆಲವೆಡೆಗಳಲ್ಲಿ ವಿಷ್ಣುವಿನ ಪಾದಪ್ರಕ್ಷೇಪವನ್ನು ವರ್ಣಿಸುವಾಗ ಆದಿತ್ಯನ ಪರವಾದ ಅರ್ಥವನ್ನೇ ಹೇಳಿದ್ದಾರೆ. ಉದಾಹರಣೆಗೆ ಮೇಲೆ (ನಿರುಕ್ತಕಾರರಿಂದ) ಉದಾಹೃತವಾದ ೧-೨೨-೧೭ನೇ ಋಕ್ಕಿನಲ್ಲಿ **ತ್ರೇಧಾ ನಿದಧೇ ಪದಂ** ಎನ್ನುವಾಗ ಈ ಮೂರು ವಿಧವಾದ ಪಾದಪ್ರಕ್ಷೇಪಗಳು ಯಾವುವು, ಎಲ್ಲೆಲ್ಲಿ ಎಂಬ ವಿಷಯದಲ್ಲಿ ವಿಪ್ರತಿಪತ್ತಿಯಿದ್ದು ಪಾಶ್ಚಾತ್ಯಪಂಡಿತರು ಇದಕ್ಕೆ ಸೂರ್ಯನ ಉದಯ, ಸೂರ್ಯನು ಉಚ್ಚಸ್ಥನಾಗಿರುವುದು, ಮತ್ತು ಅಸ್ತ ಈ ಮೂರು ಅವಸ್ಥೆಗಳೆಂದು ತಿಳಿಸಿದ್ದಾರೆ. Max Muller ಪಂಡಿತನು ಈ ವಿಚಾರದಲ್ಲಿ ತನ್ನ ಅಭಿಪ್ರಾಯವನ್ನು ತಿಳಿಸುತ್ತಾ.

This stepping of Vishnu is emblamatic of the rising, the culminating and setting of the Sun.

(Sacred Books of the East. Vol. XXXII—P. 133).

ಎಂದು ಹೇಳಿದ್ದಾನೆ. **ಔರ್ಣವಾಭಾದಿ** ಪ್ರಾಚೀನಪಂಡಿತರೂ ಸಹ ಈ ಅರ್ಥವನ್ನು ಸಮರ್ಥಿಸಿದ್ದಾರೆಂದು ನಿರುಕ್ತವಾಕ್ಯದಿಂದ ತಿಳಿಯುತ್ತದೆ.

**ಸಮಾರೋಹಣೇ ವಿಷ್ಣುಪದೇ ಗಯಶಿರಸೀತ್ಯೌರ್ಣವಾಭಃ ।**

(ನಿ. ೧೨-೧೧)

ಎಂದು **ಔರ್ಣವಾಭರ** ಮತವನ್ನು ತಿಳಿಸಿದ್ದಾರೆ. ಈ ವಾಕ್ಯಕ್ಕೆ ದುರ್ಗಾಚಾರ್ಯರು **ಸಮಾರೋಹಣೇ—ಉದಯಗಿರಾವುದ್ಯನ್ ಪದಮೇಕಂ ನಿಧತ್ತೇ । ವಿಷ್ಣುಪದೇ ಮಾಧ್ಯಂದಿನೇಽಂತರಿಕ್ಷೇ । ಗಯಶಿರಸಿ ಅಸ್ತಂಗಿರೌ ।** ಉದಯಾಚಲದಲ್ಲಿ ಸೂರ್ಯೋದಯಕಾಲದಲ್ಲಿ ಉದಯರೂಪದಲ್ಲಿರತಕ್ಕ ಒಂದು ಪಾದವೂ, ಮಧ್ಯಾಹ್ನಕಾಲದಲ್ಲಿ ಅಂತರಿಕ್ಷದಲ್ಲಿ ಉಚ್ಚಸ್ಥವಾಗಿರತಕ್ಕ ಇನ್ನೊಂದು ಪಾದವೂ, ಅಸ್ತಕಾಲದಲ್ಲಿ ಅಸ್ತಾಚಲದಲ್ಲಿಡತಕ್ಕ ಮೂರನೆಯ ಪಾದವೂ, ಸಹ **ವಿಷ್ಣುರ್ವಿಚಕ್ರಮೇ ತ್ರೇಧಾ ನಿದಧೇ ಪದಂ** ಎಂಬ ವಾಕ್ಯದಿಂದ ಸೂಚಿತವಾಗುತ್ತದೆಂದು ವಿವರಿಸಿದ್ದಾರೆ. ಇದರಂತೆಯೇ,

**ವಿಷ್ಣುಸ್ತ್ರಿಧಾ ವಿಧತ್ತೇ ಪದಂ ತ್ರೇಧಾ ಭಾವಾಯ ಪೃಥಿವ್ಯಾಮಂತರಿಕ್ಷೇ ದಿವೀತಿ ಶಾಕಪೂಣಿಃ ।**

(ನಿ. ೧೨-೧೯)

ಪೃಥಿವೀ, ಅಂತರಿಕ್ಷ ಮತ್ತು ದ್ಯುಲೋಕ ಎಂಬ ಮೂರು ಲೋಕಗಳಲ್ಲೂ ಸಂಚರಿಸುವ ಸೂರ್ಯನ ಮೂರು ಅವಸ್ಥೆಗಳೆಂದು ಶಾಕಪೂರ್ಣಿಗಳ ಮತವೆಂದೂ ಸೂಚಿಸಿದ್ದಾರೆ. ಆದುದರಿಂದ ಈ ಋಕ್ಕಿನಲ್ಲಿ ಮಾತ್ರವಲ್ಲದೆ ಉಳಿದ ಅನೇಕ ಇತರ ಸ್ಥಳಗಳಲ್ಲೂ ಸಹ ಸೂರ್ಯನಿಗೆ-ವಿಷ್ಣುವೆಂಬ ವಿಶೇಷಣವು ಪರ್ಯಾಯನಾಮವಾಗಿದೆಯೆಂದು ಇದರಿಂದ ತಿಳಿಯುತ್ತದೆ. ಇದು ಅಧಿದೈವತಪಕ್ಷದ ಅರ್ಥವೆಂದು ಸೂಚಿಸಿ ಅಧ್ಯಾತ್ಮಪಕ್ಷದ ಅರ್ಥವನ್ನೂ ಸಹ ಸಾಯಣರು ಹೇಳಿದ್ದಾರೆ.

ಅಧ್ಯಾತ್ಮಪಕ್ಷದ ಅರ್ಥವನ್ನು ಹೇಳುವಾಗ ಸಾಯಣರು ಸಾಂಖ್ಯಮತದ ಪ್ರಕ್ರಿಯೆಗಳನ್ನುಪಯೋಗಿಸಿದ್ದಾರೆ. ಪ್ರಕೃತವಾದ ಋಕ್ಕಿನಲ್ಲಿರುವ ಪದಗಳಿಗೆ ಸಾಂಖ್ಯಮತಾನುಸಾರವಾದ ಅರ್ಥವನ್ನು ಹೇಳುವಾಗ ಅವರ ಪ್ರಯತ್ನದಲ್ಲಿ ಕೊಂಚ ಪ್ರಯಾಸವೂ ಕಾಣುತ್ತದೆ. ಷಡ್ದರ್ಶನಗಳಲ್ಲಿ ಒಂದಾದ ಸಾಂಖ್ಯದರ್ಶನದ ಪಾರಿಭಾಷಿಕವಾದ ವಿವರಣೆಗಳಿಗೂ ಪ್ರಕೃತವಾದ ಋಕ್ಕಿನಲ್ಲಿರುವ ವರ್ಣನೆಗೂ ವ್ಯತ್ಯಾಸವಿದೆ. ಅವೆರಡನ್ನೂ ಹೊಂದಿಸಿಕೊಂಡು ಅರ್ಥವನ್ನು ಹೇಳುವುದು ಒಂದು ವಿಧವಾದ ಪ್ರಯಾಸ. ಅದಲ್ಲದೆ ವೇದಾಂತ ಮತದ ಪ್ರಕ್ರಿಯೆಗೂ ಸಾಂಖ್ಯಮತದ ಪ್ರಕ್ರಿಯೆಗೂ ಹೊಂದಿಕೊಳ್ಳುವುದಿಲ್ಲ. ವೇದಾಂತಮತಕ್ಕೆ *ಅದ್ವೈತವೇ ತಳಹದಿಯಾಗಿರುತ್ತದೆ. ಸಾಂಖ್ಯಮತಕ್ಕೆ ಮೊದಲನೆಯದಾಗಿ ಪ್ರಕೃತಿಪುರುಷರ ಸಹಜವಾದ ಭೇದವೊಂದುಕಡೆಯಾದರೆ, ಪುರುಷಸಂಖ್ಯೆಯ ಅನಂತರತ್ವವಿನ್ನೊಂದು ಕಡೆ, ಈರೀತಿ ಇವೆರಡು ಮತಗಳಿಗೂ ಸಾಮಂಜಸ್ಯವನ್ನು ಕಲ್ಪಿಸುವುದು ಇನ್ನೊಂದು ವಿಧವಾದ ಪ್ರಯಾಸ. ಈ ಪ್ರಯತ್ನದ ಶ್ರಮವು ಸಾಯಣರ ವಿವರಣೆಯಲ್ಲಿ ಕಂಡುಬರುತ್ತದೆ. ಆದರೆ ಅವರ ವಿವರಣೆಯಲ್ಲಿ ಅಶಾಸ್ತ್ರೀಯವಾದ ಪ್ರತಿಪಾದನೆಯಿದೆಯೆಂದು ತಿಳಿಯಬಾರದು. ಸಾಂಖ್ಯಮತಕ್ಕೆ ಆಧಾರವಾಗಿರುವ ಉಪನಿಷದ್ವಾಕ್ಯಗಳಲ್ಲಿ ಪ್ರತಿಪಾದಿತವಾಗಿರುವ ಅಂಶಗಳಿಗೂ ಸಾಯಣರ ವಿವರಣೆಯಲ್ಲಿರುವ ಅಂಶಗಳಿಗೂ ಸಾಮೀಪ್ಯವಿದೆಯೆಂದು ಹೇಳಬಹುದು.

ಪ್ರಕೃತವಾದ ಋಕ್ಕಿನಲ್ಲಿ ಸಾಯಣರು **ಸಪ್ತಾರ್ಧಗರ್ಭಾಃ** ಎಂಬ ಪದಕ್ಕೆ ಅರ್ಥವನ್ನು ಹೇಳುತ್ತಾ, **ಸಪ್ತಮಹದಹಂಕಾರಾ ಪಂಚ ತನ್ಮಾತ್ರಾಣಿ ಮಿಳಿತ್ವಾ ಸಪ್ತಸಂಖ್ಯಾನಿ ತತ್ತ್ವಾನಿ । ಮಹತ್, ಅಹಂಕಾರ,** ಐದು **ತನ್ಮಾತ್ರಗಳು** ಇವೆಲ್ಲವೂ ಸೇರಿ ಸಪ್ತಸಂಖ್ಯಾಕವಾದ ತತ್ತ್ವಗಳಾದವು, ಎಂದು ವಿವರಿಸಿದ್ದಾರೆ. ಈ ಸಪ್ತ ತತ್ತ್ವಗಳೂ ಅರ್ಧಗರ್ಭಗಳೆಂದೂ, ವರ್ಣಿಸಲ್ಪಟ್ಟಿವೆ. ಅದು ಹೇಗೆಂದರೆ, **ವಿಕಾರಾಶ್ರಯಾಯಾಃ ಮೂಲಪ್ರಕೃತೇಃ ಪ್ರಕೃತಿವಿಕೃತೇರುದಾಸೀನಸ್ಯಾತ್ಮನಶ್ಚೋತ್ಪನ್ನತ್ವಾದರ್ಧಾಂಶೇನ ಪ್ರಪಂಚಾಕಾರೇಣ ಪರಿಣಾಮಾದರ್ಧ- ಗರ್ಭಾಃ ।** ಸಹಜವಾಗಿ ಅವಿಕೃತವಾದ ಪ್ರಕೃತಿಯೂ, ಪ್ರಕೃತಿ ಮತ್ತು ವಿಕೃತಿಗಳಿಂದ ದೂರವಾಗಿ ಉದಾಸೀನನಾಗಿರುವ ಪುರುಷನೂ ಸೇರಿ ಪ್ರಪಂಚರೂಪದಿಂದ ಉತ್ಪನ್ನವಾಗುವುದರಿಂದ ಮೂಲಪ್ರಕೃತಿಯಲ್ಲಿ ಅರ್ಧಭಾಗವು ವಿಕಾರವಿಲ್ಲದೆಯೂ ಇನ್ನರ್ಧಭಾಗವು ವಿಕೃತವಾಗಿಯೂ ಪರಿಣಾಮವನ್ನು ಹೊಂದುತ್ತದೆ. ಪುರುಷನಲ್ಲಿಯೂ ಸಹ ನಿತ್ಯಾಂಶವು ವಿಕೃತವಾಗದೇ ಪ್ರಕೃತಿಸಂಸರ್ಗವು ಇರುವ ಕೇವಲ ಒಂದಂಶವು ಮಾತ್ರ ಪ್ರಪಂಚರೂಪದ ಸುಖದುಃಖಾದಿಗಳಿಗೆ ಆಶ್ರಯವಾಗಿರುವುದರಿಂದ ಅಲ್ಲಿಯೂ ಸಹ ಅರ್ಧಗರ್ಭವೆಂಬ ವಿಶೇಷಣವು ಉಚಿತವಾಗಿದೆಯೆಂದು ವಿವರಿಸಿದೆ. ಈ ವಿಧವಾದ ಪಾರಿಭಾಷಿಕವಾದ ಪದಗಳನ್ನು ಅರ್ಥಮಾಡಿಕೊಳ್ಳಬೇಕಾದರೆ ರೂಢವಾಗಿರುವ ಸಾಂಖ್ಯಪ್ರಕ್ರಿಯೆಗಳ ಪರಿಚಯವು ಅವಶ್ಯವಾದುದರಿಂದ ಸೂಕ್ಷ್ಮವಾಗಿ ಸಾಂಖ್ಯಮತದ ತತ್ತ್ವಗಳನ್ನು ಇಲ್ಲಿ ವಿವರಿಸಿ ಅನಂತರ ಪ್ರಕೃತವಾದ ಋಕ್ಕಿನಲ್ಲಿ ಉಳಿದ ಭಾಗಗಳಿಗೆ ಈ ಮತಾನುಸಾರವಾದ ಅರ್ಥವನ್ನು ವಿವರಿಸಲಾಗುತ್ತದೆ.

---

* ಇಲ್ಲಿ ಸಾಯಣಭಾಷ್ಯವನ್ನು ವಿವರಿಸುತ್ತಿರುವುದರಿಂದ ' ಅದ್ವೈತ 'ವೆಂಬ ಅವರ ಸಾಂಪ್ರದಾಯಿಕವಾದ ಪದವನ್ನುಪಯೋಗಿಸಿದೆ.

**ಸಾಂಖ್ಯತತ್ತ್ವಗಳು** :—ಪ್ರಕೃತಿ (1), ಮಹತ್ (1), ಅಹಂಕಾರ (1) ಕಣ್ಣುಮೊದಲಾದ ಜ್ಞಾನೇಂದ್ರಿಯಗಳು (5), ವಾಕ್ಕು ಮೊದಲಾದ ಕರ್ಮೇಂದ್ರಿಯಗಳು (5), ಉಭಯಸ್ವರೂಪವಾದ ಮನಸ್ಸು (1), ತನ್ಮಾತ್ರಗಳು (5), ಆಕಾಶಾದಿಭೂತಗಳು (5), ಜೀವಾತ್ಮ (1) ಇವೆಲ್ಲವೂ ಸೇರಿ ಒಟ್ಟು ಇಪ್ಪತ್ತೈದು ತತ್ತ್ವಗಳು. ಇವನ್ನು ಭೂತಪಂಚಕ, ತನ್ಮಾತ್ರಪಂಚಕ, ಜ್ಞಾನೇಂದ್ರಿಯಪಂಚಕ, ಕರ್ಮೇಂದ್ರಿಯಪಂಚಕ, ಅವಶಿಷ್ಟಪಂಚಕವೆಂದು ಐದು ಪಂಚಕಗಳಾಗಿ ವಿಭಜಿಸುವರು. ಈ ಮೂಲಪ್ರಕೃತಿಯೆಂಬುದು ಮೊದಲನೆಯ ತತ್ತ್ವವು. ತತ್ತ್ವವೆಂದರೆ ಒಂದೊಂದು ಹೊಸ ಸ್ವಭಾವವುಳ್ಳ ವಸ್ತು. ಎಂದರೆ ವೃಕ್ಷಾದಿ ಕಾರ್ಯವಸ್ತುವಿನಲ್ಲಿ ತೋರಿಬರುವ ಸ್ವಭಾವವು ಬೀಜಾದಿಕಾರಣವಸ್ತುವಿನಲ್ಲಿ ಸೂಕ್ಷ್ಮದಿಂದಿರಬೇಕು ಎಂದರ್ಥ. ಪ್ರಕೃತಿಗೂ, ಮಹತ್ತಿಗೂ ತಾತ್ತ್ವಿಕವಾದ ವ್ಯತ್ಯಾಸವೇನೆಂದರೆ, ಪ್ರಕೃತಿಯಲ್ಲಿಲ್ಲದೇ ಇರುವ ಅಧ್ಯವಸಾಯವೆಂಬ ಕ್ರಿಯಾಶಕ್ತಿಯು ಮಹತ್ತಿನಲ್ಲಿ ಅಭಿವ್ಯಕ್ತವಾಗುವುದು. ಹೀಗೆ, ಅಭಿಮಾನ, ಸಂಕಲ್ಪ, ಆಲೋಚನೆ, ಶಬ್ದಾದಿಸ್ವಭಾವಗಳು ಹೊಸಹೊಸದು ಬರುವುವು ಈ ಪ್ರಕೃತಿಗೆ ಪ್ರಧಾನವೆಂದು ಹೆಸರು. ಇದರಲ್ಲಿ ಸತ್ತ್ವ, ರಜಸ್ಸು, ತಮಸ್ಸು ಎಂಬ ಮೂರು ಗುಣಗಳಿರುವುದರಿಂದ ಇದನ್ನು ತ್ರಿಗುಣವೆಂದು ಹೇಳುತ್ತಾರೆ. ಇದನ್ನೇ ಛಾಂದೋಗ್ಯೋಪನಿಷತ್ತಿನಲ್ಲಿ,

> **ಯದಗ್ನೇ ರೋಹಿತಂ ರೂಪಂ ತೇಜಸ್ತದ್ರೂಪಂ ಯಚ್ಛುಕ್ಲಂ ತದಪಾಂ ಯತ್ಕೃಷ್ಣಂ ತದನ್ನ-ಸ್ಯಾಪಾಗಾದಗ್ನೇರಗ್ನಿತ್ವಂ ವಾಚಾರಂಭಣಂ ವಿಕಾರೋ ನಾಮಧೇಯಂ ತ್ರೀಣಿ ರೂಪಾಣೀ-ತ್ಯೇವ ಸತ್ಯಂ ॥**
>
> (ಛಾ. ಉ. ೬-೪-೧)

ರೋಹಿತ, ಶುಕ್ಲ, ಕೃಷ್ಣರೂಪಗಳೆಂದು ಕರೆದಿದೆ. ಈ ಮೂರು ರೂಪಗಳೂ ಮೂರುಗುಣಗಳನ್ನು ಪ್ರತಿಬಿಂಬಿಸುತ್ತವೆಯೆಂದು ಪಂಡಿತರು ಅಭಿಪ್ರಾಯಪಟ್ಟಿದ್ದಾರೆ.

ಈ ಮೂರುಗುಣಗಳನ್ನುಳ್ಳ ಪ್ರಕೃತಿಯು ಮಹಾಸಮುದ್ರದಂತೆ ಸರ್ವದೇಶ, ಸರ್ವಕಾಲ, ಸರ್ವವಸ್ತುಗಳನ್ನೂ ವ್ಯಾಪಿಸಿಕೊಂಡಿರುವುದರಿಂದ ಇವೇ ಬ್ರಹ್ಮಪದಕ್ಕೆ ಅರ್ಥ. ಬ್ರಹ್ಮವೆಂದರೆ ಸರ್ವಪ್ರಕಾರದಲ್ಲೂ ದೊಡ್ಡದಾಗಿರುವುದೆಂದರ್ಥ. ಈ ಪ್ರಕೃತಿಯಲ್ಲಿ ಅನಂತಕೋಟಿಬ್ರಹ್ಮಾಂಡಗಳು ಸಮುದ್ರದಲ್ಲಿ ಗುಳ್ಳೆಗಳ ಹಾಗೆ ಹುಟ್ಟಿ ನಾಶವಾಗುವುವು. ಈ ಮೂರು ಗುಣಗಳು ಆಯಾ ಸಮಾವಸ್ಥೆಯಲ್ಲಿದ್ದರೆ ಪ್ರಳಯ ; ವಿಷಮಾವಸ್ಥೆಯಲ್ಲಿದ್ದರೆ ಸೃಷ್ಟಿಯೆಂದು ವ್ಯವಹರಿಸಲ್ಪಡುವುದು.

ಇಂತಹ ಪ್ರಕೃತಿಯಲ್ಲಿ **ಬುದ್ಧಿ** ಎಂಬ ಮಹತತ್ತ್ವವು ಹುಟ್ಟುವುದು. ಇಲ್ಲಿ **ಪರಿಣಾಮವೇ** ಉತ್ಪತ್ತಿ ಎಂದು ವ್ಯವಹಾರ. ಆ **ಬುದ್ಧಿ** ಎಂಬ ಸಮುದ್ರದಲ್ಲಿ ಗುಳ್ಳೆಗಳಂತೆ **ಅಹಂಕಾರವೆಂಬ** ಮೂರನೆಯ ತತ್ತ್ವವು ಹೊರಬೀಳುವುದು. ಅದು ಸಾತ್ತ್ವಿಕ, ರಾಜಸ ಮತ್ತು ತಾಮಸ ಎಂದು ಮೂರು ವಿಧ. ಸಾತ್ತ್ವಿಕವಾದ ಅಹಂಕಾರದಿಂದ (ಮನಸ್ಸೂ ಸೇರಿ) ಹನ್ನೊಂದು ಇಂದ್ರಿಯಗಳು ಹುಟ್ಟುವುವು ತಾಮಸಾಹಂಕಾರದಿಂದ ಪಂಚಭೂತಗಳಿಗೆ ಸೂಕ್ಷ್ಮಾವಸ್ಥೆಗಳೆಂಬ ಪಂಚತನ್ಮಾತ್ರಗಳು ಹುಟ್ಟುವುವು. ರಾಜಸಾಹಂಕಾರವು ಸಾತ್ತ್ವಿಕ ಮತ್ತು ತಾಮಸಾಹಂಕಾರಗಳಿಗೆ ಸಹಾಯಕವಾಗಿರುವುದು. ಪಂಚತನ್ಮಾತ್ರಗಳಿಂದ ಆಕಾಶ, ವಾಯು, ತೇಜಸ್ಸು, ಜಲ ಮತ್ತು ಪೃಥ್ವಿ ಎಂಬ ಪಂಚಮಹಾಭೂತಗಳು ಹುಟ್ಟುವುವು. ಬುದ್ಧಿಮೊದಲಾಗಿ ತನ್ಮಾತ್ರಗಳ ಪರ್ಯಂತ ಹದಿನೆಂಟು ತತ್ತ್ವಗಳು ಪ್ರತಿಪ್ರಾಣಿಗೂ ಲಿಂಗಶರೀರವಾಗಬೇಕಾಗಿರುವುದು.

ಪುರುಷ (ಆತ್ಮ) ನೆಂಬುದು ಈ ಪ್ರಕೃತಿಗಿಂತಲೂ ಬೇರೆಯಾದ ವಸ್ತುವು. ಅದರಲ್ಲಿ ಯಾವ ವಿಧವಾದ ಗುಣವೂ ಇಲ್ಲ, ದೋಷವೂ ಇಲ್ಲ. ಶಕ್ತಿಯೂ ಇಲ್ಲ, ಸಾಮರ್ಥ್ಯವೂ ಇಲ್ಲ. ಶುದ್ಧವಾದ ಕನ್ನಡಿಯಂತಿರುವುದು. ನಿರ್ವಿಕಾರ. ಅವನು ಕೂಟಸ್ಥನು. ಇದಕ್ಕೆ ನಿರತಿಶಯವಾದ ವಸ್ತುವೆಂದೂ ಹೆಸರು. ಇಂತಹ ಚಿತಿಶಕ್ತಿಗಳೆಂಬ ಜೀವಾತ್ಮರು ಅಸಂಖ್ಯಾತಗಳಾಗಿರುವರು. ಇದು ಸಾಂಖ್ಯತತ್ತ್ವಗಳ ಸೂಕ್ಷ್ಮವಾದ ವಿವರಣೆಯಾಗಿರುತ್ತದೆ.

ಪ್ರಕೃತವಾದ ಋಕ್ಕಿನಲ್ಲಿ **ಪ್ರಪಂಚರೂಪೇಣ ಪರಿಣಾಮಾದರ್ಧಗರ್ಭಾಃ** ಎಂದಿರುವ ಸಾಯಣರ ವಿವರಣೆಗೆ ಅರ್ಥವಾಗುವುದು ಕಷ್ಟ. ಈ ಅರ್ಥವಿವರಣೆಯಲ್ಲಿ ಸಾಂಖ್ಯಮತದಲ್ಲಿ ಹೇಳಿರುವ ಸೃಷ್ಟಿಕ್ರಮವೂ ಅಡಗಿದೆ. ಅದನ್ನು **ಪರಿಣಾಮ**ವೆಂಬ ಪದದಿಂದ ವ್ಯವಹರಿಸಬೇಕೆಂದು ಸಾಯಣರು ಸೂಚಿಸಿದ್ದಾರೆ. ಮೇಲೆಯೂ ಸಹ ಆ ಅಂಶವನ್ನು ತಿಳಿಸಿದೆ. ಪ್ರಕೃತದಲ್ಲಿ ವ್ಯವಹಾರಕ್ಕಾಗಿ ನಾವು **ಸೃಷ್ಟಿ**ಯೆಂಬ ಪದವನ್ನೇ ಉಪಯೋಗಿಸುತ್ತಿದ್ದರೂ ಈ ಸಂಕೇತವನ್ನು ಮಾತ್ರ ಮರೆಯಬಾರದು. ಸಾಂಖ್ಯಮತದಲ್ಲಿ ಸೃಷ್ಟಿಯ ಸ್ವರೂಪವನ್ನು ಈ ರೀತಿ ವಿವರಿಸಿದೆ.

ಪ್ರಕೃತಿಯು ಅಚೇತನವಾದುದರಿಂದ ಇಚ್ಛಾಶಕ್ತಿಯಿಲ್ಲದೆ ಅಂಧಸ್ಥಾನದಲ್ಲೂ, ಪುರುಷನು ಕ್ರಿಯಾಶಕ್ತಿಯಿಲ್ಲದೇ ಪಂಗು (ಕುಂಟ) ಸ್ಥಾನದಲ್ಲೂ ಇದ್ದು ಅಂಧಪಂಗು (ಕುರುಡ ಮತ್ತು ಕುಂಟ) ನ್ಯಾಯದಿಂದ ಸೃಷ್ಟ್ಯಾದಿ ಸಕಲವ್ಯಾಪಾರಗಳೂ ನಡೆಯುವುವು. ಅಂಧಪಂಗುನ್ಯಾಯವೆಂದರೆ ಒಂದು ಮಹಾರಣ್ಯದಲ್ಲಿ ಕುಂಟನೂ ಕುರುಡನೂ ಸೇರಿ ಕುರುಡನ ಮೇಲೆ ಕುಂಟನು ಕೂತು ದಾರಿತೋರಿಸುತ್ತಾ ಕುರುಡನು ನಡೆಯುತ್ತಾ ಗ್ರಾಮಕ್ಕೆ ಬಂದು ಸೇರಿದಂತೆ ಈ ಪ್ರಕೃತಿಪುರುಷರ ಸ್ವಭಾವವನ್ನು ತಿಳಿದು ಇವುಗಳಿಗೆ ಪ್ರೇರಕನಾಗಿ ಮತ್ತೊಬ್ಬ ಪುರುಷೋತ್ತಮನು ಬೇಕಾಗಿಲ್ಲ. ಈ ಸಂದರ್ಭದಲ್ಲಿ **ಪುರುಷಾರ್ಥ** ಮತ್ತು ಪರಾರ್ಥ ಎಂಬ ವಿಷಯದಲ್ಲಿ ದಾರ್ಶನಿಕವಾದ ಚರ್ಚೆಗೆ ಅವಕಾಶವಿದೆ. ಪ್ರಕೃತವಾದ ಋಕ್ಕನ್ನು ವಿವರಿಸುವಾಗ ನಮಗೆ ಆ ಚರ್ಚೆಯು ನೇರವಾಗಿ ಸಂಬಂಧಿಸಿರುವುದಿಲ್ಲವಾದುದರಿಂದ ಅದು ಮುಖ್ಯವಾದ ವಿಷಯವನ್ನು ಅಧಿಕರಿಸುವುದಾದರೂ ಸಹ ಇಲ್ಲಿ ಅದರ ವಿವರಣೆಯನ್ನು ಹೇಳಿಲ್ಲ.

ಮೇಲೆ ಹೇಳಿದ ಒಟ್ಟು ಇಪ್ಪತ್ತೈದು ತತ್ತ್ವಗಳಲ್ಲಿ ಸಾಯಣರು **ಮಹತ್, ಅಹಂಕಾರ, ಪಂಚತನ್ಮಾತ್ರ**ಗಳು ಈ ಏಳನ್ನು ಮಾತ್ರ ನಿರ್ದೇಶಿಸಿದ್ದಾರೆ. ಮತ್ತು **ವಿಷ್ಣೋಃ** ಎಂಬ ಪದಕ್ಕೆ **ವ್ಯಾಪ್ತಸ್ಯ ಪುರುಷಸ್ಯ ವ್ಯಾಪಕ** ಪುರುಷನೆಂದೂ, **ವಿಧರ್ಮಣಿ** ಎಂಬುದಕ್ಕೆ ಜಗದ್ಧಾರಣರೂಪವಾದ್ವ್ಯಾಪಾರವೆಂದೂ ಅರ್ಥಮಾಡಿದಾರೆ. ಇದು ಸೇಶ್ವರವಾದಿಗಳಾದ ವೇದಾಂತಮತದವರ ಅಭಿಪ್ರಾಯವಾಗುತ್ತದೆಯೇ ಹೊರತು **ನಿರೀಶ್ವರ**ವಾದಿಗಳಾದ ಸಾಂಖ್ಯಮತದವರ ಅಭಿಪ್ರಾಯವಾಗುವುದಿಲ್ಲ. ಆದರೆ ಸಾಯಣರ ವಿವರಣೆಯು ಅಶಾಸ್ತ್ರೀಯವೇ ಎಂದರೆ ಅದೆಂದಿಗೂ ಆಗುವುದಿಲ್ಲ. ಇದಕ್ಕೆ ಶ್ರುತಿಯ ಆಧಾರವಿದೆಯೇ ಎಂದರೆ ಧಾರಾಳವಾಗಿದೆಯೆಂದು ಅವುಗಳನ್ನುದಹರಿಸಬಹುದು. ಉಪನಿಷತ್ತುಗಳಲ್ಲಿ ನಿರೀಶ್ವರವಾದಿಯಾದ ಸಾಂಖ್ಯಮತದ ಪ್ರಕ್ರಿಯೆಗಳಿಂದಲೇ ವಿಶ್ವದ ಸೃಷ್ಟಿಕ್ರಮವನ್ನು ವಿವರಿಸಿ, ಸ್ವೇಶ್ವರವಾದಿಯಾದ ವೇದಾಂತದಲ್ಲಿ ಪ್ರತಿಪಾದಿಸುವ ಪುರುಷೋತ್ತಮನ ಲೀಲಾವ್ಯಾಪಾರವನ್ನೂ ತಿಳಿಸಿದೆಯಾದುದರಿಂದ ಆ ಶ್ರುತಿವಾಕ್ಯಗಳ ಆಧಾರದಮೇಲೆ ಸಾಯಣಭಾಷ್ಯದ ಔಚಿತ್ಯವನ್ನು ಹೇಳಬಹುದು. ಸಾಂಖ್ಯತತ್ತ್ವದ ಪ್ರತಿಪಾದನೆಗೆ ಆಧಾರವಾಗಿರುವ ಉಪನಿಷದ್ವಾಕ್ಯಗಳಲ್ಲಿ ಪ್ರಕೃತಿಪುರುಷರ ಸ್ವರೂಪವಿವರಣೆಯು ಈರೀತಿಯಿದೆ. ಕಠೋಪನಿಷತ್ತಿನಲ್ಲಿ,

**ಇಂದ್ರಿಯೇಭ್ಯಃ ಪರಾ ಹ್ಯರ್ಥಾ ಅರ್ಥೇಭ್ಯಶ್ಚ ಪರಂ ಮನಃ ।**
**ಮನಸಸ್ತು ಪರಾ ಬುದ್ಧಿರ್ಬುದ್ಧೇರಾತ್ಮಾ ಮಹಾನ್ ಪರಃ ॥**

**ಮಹತಃ ಪರಮವ್ಯಕ್ತಮವ್ಯಕ್ತಾತ್ಪುರುಷಃ ಪರಃ ।**
**ಪುರುಷಾನ್ನ ಪರಂ ಕಿಂಚಿತ್ಸಾ ಕಾಷ್ಠಾ ಸಾ ಪರಾ ಗತಿಃ ॥**

(ಕಠ. ಉ. ೧-೩-೧೦, ೧೧)

ಇಂದ್ರಿಯಗಳಿಗಿಂತ ಅರ್ಥಗಳು ಹೆಚ್ಚಿನವು. ಅರ್ಥಗಳಿಂದ ಮನಸ್ಸು ಹೆಚ್ಚಿನದು. ಮನಸ್ಸಿಗಿಂತ ಬುದ್ಧಿ ಹೆಚ್ಚು. ಬುದ್ಧಿಗಿಂತ ಮಹಾನ್ ಎಂಬ ಆತ್ಮನು ಹೆಚ್ಚು. ಮಹತ್ತಿಗಿಂತ ಅವ್ಯಕ್ತವು ಹೆಚ್ಚು. ಅವ್ಯಕ್ತಕ್ಕಿಂತ ಪುರುಷನು ಹೆಚ್ಚು. ಪುರುಷನಿಗಿಂತ ಹೆಚ್ಚಿನದು ಯಾವುದೂ ಇಲ್ಲ. ಇದೇ ಕೊನೆ. ಇದೇ ಅತ್ಯಂತ ಶ್ರೇಷ್ಠವಾದ ಗತಿಯು. ಎಂದಿದೆ. ಇದನ್ನೇ ಮುಂಡಕೋಪನಿಷತ್ತಿನಲ್ಲಿ,

**ತಪಸಾ ಚೀಯತೇ ಬ್ರಹ್ಮ ತತೋಽನ್ನಮಭಿಜಾಯತೇ ।**
**ಅನ್ನಾತ್ಪ್ರಾಣೋ ಮನಃ ಸತ್ಯಂ ಲೋಕಾಃ ಕರ್ಮಸು ಚಾಮೃತಂ ॥**

(ಮು. ಉ. ೧-೮)

ಇಲ್ಲಿ ಅನ್ನವೆಂಬ ಪದಕ್ಕೆ ಶಂಕರಾಚಾರ್ಯರು ಅವ್ಯಾಕೃತವೆಂದರ್ಥಮಾಡಿದ್ದಾರೆ. ಸಾಯಣರು ಪ್ರಕೃತವಾದ ಋಕ್ಕಿನಲ್ಲಿ ಪಂಚತನ್ಮಾತ್ರವೆಂದಿರುವ ತತ್ತ್ವವನ್ನು ಪ್ರಶ್ನೋಪನಿಷತ್ತಿನಲ್ಲಿ " **ಪೃಥಿವೀಂ ಚ ಪೃಥಿವೀಮಾತ್ರಾ ಚ** .... .... .... .... " ಎಂಬ ಮಂತ್ರದಲ್ಲಿ ವಿವರಿಸಿದೆ.

ಆದರೆ, ಉಪನಿಷತ್ತಿನಲ್ಲಿಯೂ ಸಹ ಪ್ರಕೃತಿ, ಅವ್ಯಕ್ತ, ಮಹತ್ ಇತ್ಯಾದಿಸಾಂಖ್ಯಪ್ರಕ್ರಿಯೆಯು ಇದ್ದರೂ ಸಹ ಇಲ್ಲಿ ಪ್ರಕೃತಿಯು ಸ್ವತಂತ್ರವಾದುದೂ, ಭಿನ್ನವಾದುದೂ ಆದ ತತ್ತ್ವವೆಂಬುದಾಗಿ ಪರಿಗಣಿತವಾಗಿಲ್ಲ. ಪ್ರಕೃತಿಯ ವ್ಯವಹಾರಗಳೆಲ್ಲವೂ ಈಶ್ವರಾಧೀನವು ಈ ಈಶ್ವರನನ್ನೇ ಪರಮಪುರುಷನೆಂಬುದಾಗಿ ಕರೆದಿದೆ. ಅಚೇತನವಾದ ಪ್ರಕೃತಿಗೆ ಕ್ರಿಯಾಶಕ್ತಿಯೇ ಇಲ್ಲವೆಂಬುದು ಉಪನಿಷತ್ತಿನ ಮತವು.

" The Upanishads protest against the transfer of creative functions to mere matter divorced from God. Their main tendency is to support the hypothesis of an absolute spirit on the background of which subject and object arise."

(S. Radhakrishnan's Indian philosophy. Vol. I. p. 260).

ಪ್ರಕೃತಿಗೆ ಈ ವಿಧವಾದ ಈಶ್ವರಾಧೀನತ್ವವು ಶ್ವೇತಾಶ್ವತರೋಪನಿಷತ್ತಿನಲ್ಲಿ ವಿಶದವಾಗಿ ವರ್ಣಿತವಾಗಿದೆ.

**ಪ್ರಧಾನಕ್ಷೇತ್ರಜ್ಞಪತಿರ್ಗುಣೇಶಃ ।**

(ಶ್ವೇ. ಉ. ೬-೧೬)

**ಯಸ್ತೂರ್ಣನಾಭ ಇವ ತಂತುಭಿಃ ಪ್ರಧಾನಜೈಃ ಸ್ವಭಾವತೋ ದೇವ ಏಕಃ ಸಮಾವೃಣೋತ್ ।**

(ಶ್ವೇ. ಉ ೬-೧೦)

ಊರ್ಣನಾಭವು (ಜೇಡರಹುಳುವು) ತನ್ನ ಉದರದಲ್ಲಿರತಕ್ಕ ತಂತುವಿನಿಂದಲೇ ಬಲೆಯನ್ನು ನಿರ್ಮಿಸುವಂತೆ ಪ್ರಧಾನವೆಂಬ ಹೆಸರುಳ್ಳ ಪ್ರಕೃತಿಗೆ ಪ್ರಭುವಾದ ಈಶ್ವರನು ಪ್ರಕೃತಿಜವಾದ ಗುಣತ್ರಯದದ್ವಾರಾ ವಿಶ್ವವನ್ನು ಸೃಷ್ಟಿಸಿ ತನ್ನನ್ನು ಕಾರ್ಯರೂಪವಾದ ವಿಶ್ವದ ಮೂಲಕ ಪ್ರಕಾಶಪಡಿಸಿಕೊಳ್ಳುತ್ತಾನೆ.

**ಮಾಯಾಂ ತು ಪ್ರಕೃತಿಂ ವಿದ್ಧಿ ಮಾಯಿನಂ ತು ಮಹೇಶ್ವರಂ ।**
**(ಶ್ವೇ. ಉ. ೬-೧೦)**

**ಅಸ್ಮಾನ್ಮಾಯೀ ಸೃಜತೇ ವಿಶ್ವಮೇತತ್ತಸ್ಮಿಂಶ್ಚಾನ್ಯೋ ಮಾಯಯಾ ಸಂನಿರುದ್ಧಃ ।**
**(ಶ್ವೇ. ಉ. ೬-೯)**

ಇತ್ಯಾದಿವಾಕ್ಯಗಳಲ್ಲಿ ಪ್ರಕೃತಿಯು ಈಶ್ವರನ ಕೇವಲ ಮಾಯಾಶಕ್ತಿಯೆಂದೂ ಈ ಶಕ್ತಿಯುಳ್ಳ ಈಶ್ವರನು ವಿಶ್ವವನ್ನು ಸೃಷ್ಟಿಸಿದನೆಂದೂ ವರ್ಣಿಸಿದೆ. ಈ ಈಶ್ವರನಿಗೂ ಪ್ರಕೃತಿಗೂ ಇರುವ ಸಂಬಂಧವು ಪ್ರಕೃತವಾದ ಋಕ್ಕಿನಲ್ಲಿ ಸೇವ್ಯ ಸೇವಕ ಸಂಬಂಧವೆಂದು ತಿಳಿಸಿದೆ. **' ತಿಷ್ಠಂತಿ ಪ್ರದಿಶಾ ವಿಧರ್ಮಣಿ ', ' ಧೀತಿಭಿಃ ಮನಸಾ ಪರಿ ಭವಂತಿ '** ಇತ್ಯಾದಿ ವಾಕ್ಯಗಳಲ್ಲಿ ಸರ್ವವ್ಯಾಪಕನೂ, ಸರ್ವಪ್ರಭುವೂ ಆದ ಈ ಪರಮಪುರುಷನು ನಿರ್ದೇಶಿಸಿದ ಪ್ರದೇಶಗಳಲ್ಲಿ ಪ್ರಕೃತಿಯ ಅವಯವಗಳು ತಮ್ಮ ತಮ್ಮ ನಿಯತವಾದ ಕರ್ತವ್ಯಗಳನ್ನು ಮಾಡುತ್ತಾ ಅವನನ್ನು ಸುತ್ತುವರಿದು ನಿಂತಿವೆಯೆಂದು ವರ್ಣಿಸಿದೆ. ಇಲ್ಲಿ ಸೂಚಿತವಾಗಿರುವ ಸಂಬಂಧವನ್ನು ಸಾಂಖ್ಯಕಾರಿಕೆಯಲ್ಲಿ ಈ ರೀತಿ ಚಿತ್ರಿಸಿದೆ.

**ರಂಗಸ್ಯ ದರ್ಶಯಿತ್ವಾ ನಿವರ್ತತೇ ನರ್ತಕೀ ಯಥಾ ನೃತ್ಯಾತ್ ।**
**ಪುರುಷಸ್ಯ ತಥಾತ್ಮಾನಂ ಪ್ರಕಾಶ್ಯ ವಿನಿವರ್ತತೇ ಪ್ರಕೃತಿಃ ॥**
**(ಸಾಂಖ್ಯಕಾರಿಕಾ ೫೯)**

ಇಲ್ಲಿ ಪುರುಷನು ಪುಲ್ಲಿಂಗ. ಬುದ್ಧಿ ಸ್ತ್ರೀಲಿಂಗ. ಈ ಬುದ್ಧಿಪುರುಷಸಂಬಂಧವನ್ನು ದಂಪತಿದೃಷ್ಟಿಯಿಂದ ನೋಡಿದರೆ ಬುದ್ಧಿಯು ಸರ್ವಾಧಿಕಾರವನ್ನು ವಹಿಸಿ ತನ್ನ ಕೈಕೆಳಗಿರುವ ಸಕಲಪರಿವಾರಗಳಿಂದ ಸಕಲವ್ಯಾಪಾರಗಳನ್ನು ನಡೆಸುತ್ತಾ ಸದಾ ಪುರುಷನ ಸಂತೋಷವನ್ನು ನಿರೀಕ್ಷಿಸುತ್ತಾ ಅವನ ಭೋಗಕ್ಕೆ ದುಡಿಯುತ್ತಿರುವುದು. ರಂಗಸ್ಥಲದಲ್ಲಿ ನರ್ತಕಿಯು ವಿಚಿತ್ರವೇಷಗಳಿಂದ ತನ್ನ ಸಾಮರ್ಥ್ಯವನ್ನು ತೋರಿಸುವ ಹಾಗೆ ಬುದ್ಧಿಯ ನರ್ತನವೆಲ್ಲವೂ ಪುರುಷಾರ್ಥವಾಗಿರುವುದು.

ಅಥವಾ ಸಾಂಖ್ಯದರ್ಶನವನ್ನು ಲೋಕವೃಷ್ಟಿಯಿಂದ ನೋಡಿ ಒಬ್ಬ ರಾಜನ ರಾಜ್ಯಭಾರವನ್ನು ಅದಕ್ಕೆ ನಿದರ್ಶನವಾಗಿ ತಿಳಿಯಬಹುದು. ಹೇಗೆಂದರೆ, ಪುರುಷಪದಕ್ಕೆ ಪುರಿಶಯನ ಎಂಬರ್ಥದಿಂದ ಒಬ್ಬ ನಗರಾಧಿಪತಿ ತೋರುತ್ತಾನೆ. ಅವನು ಮಂತ್ರಿಸ್ಥಾನದಲ್ಲಿರುವ ಬುದ್ಧಿಗೆ ಸರ್ವಾಧಿಕಾರವನ್ನು ಒಪ್ಪಿಸಿ ಉದಾಸೀನನಾಗಿ ಸರ್ವಸಾಕ್ಷಿಯಾಗಿ ಸರ್ವಭೋಗಕ್ಕೂ ಸ್ವಾಮಿಯಾಗಿ ತಾನು ಯಾವ ಕೆಲಸವನ್ನೂ ಮಾಡದಿರುವುದರಿಂದ ಅಕರ್ತನಾಗಿ ಯಾರೊಡನೆಯೂ ಸೇರದಿರುವುದರಿಂದ ಕೇವಲನಾಗಿಯೂ ಇರುವನು.

ಸರ್ವಾಧಿಕಾರಿಯಾದ ಬುದ್ಧಿ ಎಂಬ ಮಂತ್ರಿಯು ಸಾಕ್ಷಾತ್ ಸರ್ವಕಾರ್ಯಕರ್ತನಾಗಿ ಸರ್ವವಿಧವಾದ ಭಾವವನ್ನೂ ಸಿದ್ಧಿಯನ್ನೂ ತುಷ್ಟಿಯನ್ನೂ ಹೊಂದಿ ಇವುಗಳನ್ನೆಲ್ಲಾ ಪುರುಷನೆಂಬ ರಾಜನಿಗೆ ಅರಿಕೆಮಾಡುವನು. ಕೈಕೆಳಗೆ ಇರುವ ಇಪ್ಪತ್ತೆರಡು ಅಧಿಕಾರಿಗಳು ಅವರವರ ವ್ಯಾಪಾರಗಳು ಒಟ್ಟುಗೂಡಿ, ಮಾಡತಕ್ಕ ವ್ಯಾಪಾರಗಳು ಅನಂತಗಳಾಗಿದ್ದರೂ ಮಂತ್ರಿಯ ಶಕ್ತಿಯಿಂದಲೇ ನಡೆಯುವುದರಿಂದ ಅವನೇ ಪ್ರಧಾನನಾಗಿರುವನು.

ಈ ವಿಧವಾದ ಸೇವ್ಯಸೇವಕಭಾವವನ್ನು ಹೇಳಿದ್ದರೂ ಸಹ ಸಾಂಖ್ಯದರ್ಶನದ ರೀತ್ಯಾ ಪುರುಷನಿಗೂ ಪ್ರಕೃತಿಗೂ ಪ್ರಾಪಂಚಿಕವ್ಯವಹಾರ ಸಂಬಂಧವೇ ಹೊರತು, ಸಹಜವಾದ ಸಂಬಂಧವಿಲ್ಲ. ಪುರುಷನು ನಿರ್ಲಿಪ್ತನು.

ಅವನಲ್ಲಿ ಕ್ರಿಯೆಯೇ ಇಲ್ಲ. ಕ್ರಿಯೆಯೆಲ್ಲವೂ ಪ್ರಕೃತಿಯದು. ಆದರೆ ಪ್ರಕೃತವಾದ ಋಕ್ಕಿನ ವಿವರಣೆಯಂತೆ, ಪ್ರಕೃತಿಯೇ ಪರಮಪುರುಷನ ಅಂಶವಾದುದರಿಂದ ಪ್ರಕೃತಿಯ ಪರಿಣಾಮಗಳೆಲ್ಲವೂ ಈಶ್ವರನ ಸಂಕಲ್ಪ ಕ್ರಿಯೆಯೆಂದೇ ಅರ್ಥವಾಗುವುದು. ಈ ಪರಿಣಾಮರೂಪವಾದ ಕ್ರಿಯೆಗಳಿಂದ ಈಶ್ವರನು ಸುಖದುಃಖಾದಿಗಳ ಅನುಭವಗಳಿಂದ ದೂರ ನಾಗಿರಬಹುದು. ಆದರೆ ಅವನು ಕ್ರಿಯಾವಂತನೆಂದೂ ಪ್ರಕೃತಿಯು ಅವನ ಅಂಶವೆಂದೂ ಮೂಲತತ್ತ್ವವು ಈಶ್ವರ ನೊಬ್ಬನೇ ಎಂದೂ ಅರ್ಥವಾಗುತ್ತದೆ **"ಕಾರಣಭೂತಾನಿ ತಾನ್ಯೇವ ವಿಷ್ಣೋರ್ವ್ಯಾಪ್ತಸ್ಯ ಪುರುಷಸ್ಯ ಪ್ರದೇಶೇನ ತಿಷ್ಠಂತಿ"** ಪ್ರಾಪಂಚಿಕ ವ್ಯವಹಾರಗಳಿಗೆ ಕಾರಣಭೂತಗಳಾದರೂ ಸಹ ಮಹದಹಂಕಾರಗಳೂ, ತನ್ಮಾತ್ರಗಳೂ ಇವುಗಳಿಗೆಲ್ಲಾ ಮೂಲವಾದ ಪ್ರಧಾನವೂ ಎಲ್ಲವೂ ಸಹ ಈಶ್ವರನ ಅಧೀನಗಳಾಗಿದ್ದು ತಮ್ಮ ತಮ್ಮ ನಿಯತವಾದ ಪ್ರದೇಶಗಳಲ್ಲಿ ತಮ್ಮ ಕರ್ತವ್ಯವನ್ನು ನೆರವೇರಿಸುತ್ತವೆ.

## ವ್ಯಾಕರಣಪ್ರಕ್ರಿಯಾ

**ಅರ್ಧಗರ್ಭಾಃ—ಸಮಾಸಸ್ಯ** (ಪಾ. ಸೂ. ೬-೧-೨೨೩) ಎಂಬುದರಿಂದ ಅಂತೋದಾತ್ತಸ್ವರ ಬರುತ್ತದೆ.

**ವಿಷ್ಣೋಃ**—ವಿಷಲ್ಯ ವ್ಯಾಪ್ತೌ ಧಾತು. **ವಿಷೇಃ ಕಿಚ್ಚ** (ಪಾ. ಸೂ. ೩-೩೯) ಎಂಬುದರಿಂದ ಣಿ ಪ್ರತ್ಯಯ. ಕಿತ್ವ ವಿಧಾನಮಾಡಿರುವುದರಿಂದ **ಲಘೂಪಧಗುಣ** ಬರುವುದಿಲ್ಲ. ಚಕಾರದಿಂದ ನಿತ್ವವೂ ಅನುವೃತ್ತ ವಾಗುವುದರಿಂದ ಆದ್ಯುದಾತ್ತಸ್ವರ ಬರುತ್ತವೆ.

**ತಿಷ್ಠಂತಿ**—ಷ್ಠಾ ಗತಿನಿವೃತ್ತೌ ಧಾತು. ಲಟ್ ಪ್ರಥಮಪುರುಷ ಬಹುವಚನಾಂತರೂಪ. ತಿಙಂತನಿಘಾತ ಸ್ವರ ಬರುತ್ತದೆ.

**ಪ್ರದಿಶಾ**—ದಿಶ ಅತಿಸರ್ಜನೇ. ಧಾತು. ಕ್ವಿಪ್ ಪ್ರತ್ಯಯ. **ಗತಿಕಾರಕೋಪಪದಾತ್ ಕೃತ್** ಎಂಬುದ ರಿಂದ ಕೃದುತ್ತರ ಪದ ಪ್ರಕೃತಿಸ್ವರ ಬರುತ್ತದೆ. ತೃತೀಯಾ ಏಕವಚನಾಂತರೂಪ.

**ಧೀತಿಭಿಃ**—ಡುಧಾಞ್ ಧಾರಣಪೋಷಣಯೋಃ ಧಾತು **ಕ್ತಿಚ್ ಕ್ತೌ ಚ ಸಂಜ್ಞಾಯಾಮ್** (ಪಾ. ಸೂ. ೩-೩-೧೭೪) ಎಂಬುದರಿಂದ ಕ್ತಿಚ್ ಪ್ರತ್ಯಯ. **ಘುಮಾಸ್ಥಾಗಾ**—(ಪಾ. ಸೂ. ೬-೪-೬೬) ಎಂಬುದರಿಂದ ಧಾತುವಿಗೆ ಈತ್ವ. **ಚಿತಃ** ಎಂಬುದರಿಂದ ಅಂತೋದಾತ್ತಸ್ವರ ಬರುತ್ತದೆ.

**ಪರಿಭುವಃ**—ಭೂ ಸತ್ತಾಯಾಂ ಧಾತು. ಕ್ವಿಪ್ ಪ್ರತ್ಯಯ. ಪ್ರಾದಿಸಮಾಸವಾದಾಗ ಕೃದುತ್ತರಪದ ಪ್ರಕೃತಿಸ್ವರ ಬರತ್ತದೆ.

**ವಿಶ್ವತಃ**—ವಿಶ್ವ ಶಬ್ದದಮೇಲೆ ದ್ವಿತೀಯಾರ್ಥದಲ್ಲಿ ವ್ಯತ್ಯಯದಿಂದ ತಸಿಲ್ ಪ್ರತ್ಯಯ. **ಲಿತಿ** (ಪಾ. ಸೂ. ೬-೧-೧೯೩) ಎಂಬದರಿಂದ ಪ್ರತ್ಯಯದ ಪೂರ್ವಕ್ಕೆ ಉದಾತ್ತಸ್ವರ ಬರುತ್ತದೆ. ‖ ೩೬ ‖

———— :೦: ————

ಸಂಹಿತಾಪಾಠಃ

ನ ವಿ ಜಾನಾಮಿ ಯದಿವೇದಮಸ್ಮಿ ನಿಣ್ಯಃ ಸಂನದ್ಧೋ ಮನಸಾ ಚರಾಮಿ ।
ಯದಾ ಮಾಗನ್ಪ್ರಥಮಜಾ ಋತಸ್ಯಾದಿದ್ವಾಚೋ ಅಶ್ನುವೇ ಭಾಗ-
ಮಸ್ಯಾಃ ॥ ೩೭ ॥

। ಪದಪಾಠಃ ।

ನ । ವಿ । ಜಾನಾಮಿ । ಯತ್ಽಇವ । ಇದಂ । ಅಸ್ಮಿ । ನಿಣ್ಯಃ । ಸಂಽನದ್ಧಃ । ಮನಸಾ । ಚರಾಮಿ ।
ಯದಾ । ಮಾ । ಆ । ಅಗನ್ । ಪ್ರಥಮಽಜಾಃ । ಋತಸ್ಯ । ಆತ್ । ಇತ್ । ವಾಚಃ । ಅಶ್ನುವೇ ।
ಭಾಗಂ । ಅಸ್ಯಾಃ ॥ ೩೭ ॥

ಸಾಯಣಭಾಷ್ಯಂ

ಅಹಂ ಯದಿವೇದಂ ಯದಪೀದಂ ವಿಶ್ವಮಸ್ಮಿ । ಕೃತ್ಸ್ನಃ ಪ್ರಪಂಚೋಽಪ್ಯಹಮೇವಾಸ್ಮಿ। ನಾಮರೂಪಾಂಶಂ ಪರಮಾರ್ಥಂ ತ್ಯಕ್ತ್ವಾ ಸರ್ವತ್ರಾನುಗತೋಽಸ್ಮಿ । ಯೋಽಯಂ ಸಚ್ಚಿದಾನಂದಾಕಾರೋಽಸ್ತಿ ಸೋಽಹಮಸ್ಮೀತಿ ನ ವಿ ಜಾನಾಮಿ । ವಿವಿಚ್ಯ ನಾಜ್ಞಾಸಿಷಂ । ಪರಂ ಶಾಸ್ತ್ರಜನಿತಮಿದಮಹಮಸ್ಮೀತಿ ಜ್ಞಾನಂ ಜಾತಂ । ಅವಿವೇಕ್ಯಹಮಿತ್ಯರ್ಥಃ । ಕಾರ್ಯಕಾರಣಯೋರಭೇದಾತ್ । ಕೃತ್ಸ್ನಪ್ರಪಂಚಸ್ಯಾಪಿ ಬ್ರಹ್ಮಾನನ್ಯತ್ವೇನ ಬ್ರಹ್ಮೈಕತ್ವಾವಗಮೇ ಪ್ರಪಂಚಜಾತಮಪಿ ಸ್ವಸ್ವರೂಪಮೇವ ಭವತಿ । ಇದಂ ಸರ್ವಂ ಯದಯಮಾತ್ಮಾ ಬ್ರಹ್ಮೈವೇದಂ ಸರ್ವಂ ಆತ್ಮೈವೇದಂ ಸರ್ವಂ ಸ ಈಕ್ಷತ ಬಹು ಸ್ಯಾಂ ಪ್ರಜಾಯೇಯೇತ್ಯಾದಿಶ್ರುತಿಭ್ಯ ಏಕವಿಜ್ಞಾನೇನ ಸರ್ವವಿಜ್ಞಾನಪ್ರತಿಜ್ಞಾನಾತ್ । ತದನನ್ಯತ್ವಮಾರಂಭಣಶಬ್ದಾದಿಭ್ಯಃ । ವೇದಾಂ ೨. ೧. ೧೪. । ಇತ್ಯಾದ್ಯುಪಪತ್ತಿಭಿಶ್ಚ ಪ್ರಪಂಚಸ್ಯ ಬ್ರಹ್ಮಾನನ್ಯತ್ವಂ ಸಿದ್ಧಂ । ಯದ್ವಾ। ಇವಶಬ್ದ ಉಪಮಾರ್ಥಃ। ಯದಿವ ಯತ್ಪರೋಕ್ಷಜ್ಞಾನಂ ಸರ್ವೈಕಾತ್ಮ್ಯರೂಪಮಾನುಭಾವಿಕಮಸ್ತಿ ತದಿವ ತದ್ವದೇವಾಹಮಸ್ಮಿ। ಇದಂ ಸರ್ವಮಹಮಸ್ಮೀತಿ ಜ್ಞಾನಂ ಮೇ ಜಾತಂ। ಅಪಿ ತ್ವೇತದ್ವಾಷ್ಪಾಂತಿಕಭೂತಂ । ಆನುಭವಿಕಂ ಸಾರ್ವಾತ್ಮ್ಯಂ ಯದಸ್ತಿ ತನ್ನ ವಿ ಜಾನಾಮಿ । ನ ಪ್ರಾಪ್ತೋಽಸ್ಮಿ । ಶಾಸ್ತ್ರಜನಿತಂ ಸಾರ್ವಾತ್ಮ್ಯಂ ಜಾತಂ ನ ತ್ವಾನುಭಾವಿಕಮಿತ್ಯರ್ಥಃ । ತತ್ರ ಕಾರಣಮಾಹ । ಯತೋಽಹಂ ನಿಣ್ಯಃ । ಅಂತರ್ಹಿತನಾಮೈತತ್ । ಅಂತರ್ಹಿತೋ ಮೂಢಚಿತ್ತಃ । ಚಿತ್ತಪ್ರತ್ಯಕ್ಪ್ರವಣತಾಭಾವೇನ ಪರಿಛಿನ್ನ ಇತ್ಯರ್ಥಃ । ತತ್ರೋಪಪತ್ತಿಮಾಹ । ಸಂನದ್ಧೋಽವಿದ್ಯಾಕಾಮಕರ್ಮಭಿಃ ಸಮ್ಯಗ್ಬದ್ಧೋ ವೇಷ್ಟಿತಃ ಅತ ಏವ ಮನಸಾ ಯುಕ್ತೋ ಭಾವಿನಾಸಹಿಷ್ಣುನಾ ಬಹಿರ್ಮುಖೇನ ವಿಕ್ಷಿಪ್ತೇನ ಚೇತಸಾ ಯುಕ್ತಃ ಸಂಚರಾಮಿ ಸಂಸಾರೇ । ಅಥವಾ ಮನಸಾ ಸಂನದ್ಧಶ್ಚರಾಮಿ । ಇಂದ್ರಿಯಪರವಶ ಏವ ಸನ್ ಸಂಸಾರೇ ದುಃಖಮನುಭವಾಮಿ । ನ ಸಾರ್ವಾತ್ಮ್ಯಂ ಜಾನಾಮೀತಿ ಪರಿದೇವತೇ । ಯೋಸ್ಕೋಽಪೀಮಂ ಪರಿದೇವನಾರ್ಥತ್ವೇನೋದಾಜಹಾರ । ಅಥಾಪಿ ಪರಿದೇವನಾ ಕಸ್ಮಾಚ್ಚಿದ್ಭಾವಾತ್ ನ ವಿ ಜಾನಾಮಿ ಯದಿವೇದ-

ಮಸ್ಮಿ । ನಿ. ೭-೩. । ಇತಿ । ಬಹಿರ್ಮುಖಚೇತಸಃ ಸ್ವರೂಪಾಪರಿಜ್ಞಾನಜನಿತಂ ದುಃಖಮನ್ಯತ್ರ ಶ್ರೂಯತೇ । ಪರಾಂಚಿ ಖಾನಿ ವ್ಯತೃಣತ್ಸ್ವಯಂಭೂಸ್ತಸ್ಮಾತ್ಪರಾಙ್ ಪಶ್ಯತಿ ನಾಂತರಾತ್ಮನ್ । ಕ. ಉ. ೪-೧. । ಇತಿ । ತರ್ಹಿ ಕದೈತದ್ಭವತೀತಿ ಆಹ । ಯದಾ ಮಾಗನ್ ಆಗಮಿಷ್ಯತಿ ತದಾ । ಕಿಂ ತದಿತಿ ಉಚ್ಯತೇ । ಋತಸ್ಯ ಪರಮಾರ್ಥಸ್ಯ ಪರಸ್ಯ ಬ್ರಹ್ಮಣಃ ಪ್ರಥಮಜಾಃ ಪ್ರಥಮೋನ್ಮೇಷಃ ಪ್ರಥಮೋತ್ಪನ್ನ-ಶ್ಚಿತ್ತಪ್ರತ್ಯಕ್ಪ್ರವಣಜನಿತೋಽನುಭಾವಃ । ಸ ಯದಾ ಮಾ ಮಾಂ ಪ್ರಾಪ್ನೋತಿ ಆದಿದನಂತರಮೇವಾವ್ಯ-ವಧಾನೇನಾಸ್ಯಾ ವಾಚ ಐಕಾತ್ಮ್ಯಪ್ರತಿಪಾದಿಕಾಯಾ ಉಪನಿಷದ್ವಾಚೋ ಯದಿವೇದಮಸ್ಮೀತ್ಯುಕ್ತಾಯಾ ವಾ ಭಾಗಂ ಭಜನೀಯಂ ಶಬ್ದಬ್ರಹ್ಮಣಾ ವ್ಯಾಪ್ತವ್ಯಂ ಪರಂ ಬ್ರಹ್ಮಪದಮಶ್ನುವೇ । ಪ್ರಾಪ್ನೋಮಿ । ಚಿತ್ತಸ್ಯ ಬಹಿರ್ಮುಖತಾಂ ಪರಿತ್ಯಜ್ಯಾಂತರ್ಮುಖತ್ವೈವಾದುಃಸಂಪಾದಾ । ಸಾ ಯದಾ ಸ್ಯಾತ್ ತದಾನೀ-ಮೇವ ಸ್ವರೂಪಂ ದ್ರಷ್ಟುಂ ಸುಶಕಂ ಭವತಿ । ಪಶ್ಚಾದ್ವಿಲಂಬಾಭಾವಾತ್ ಯಥಾ ಗಿರಿಶಿಖರಾತ್ಪತನ್ ಪಾಷಾಣೋಽವಿಲಂಬೇನ ಪತತಿ ತದ್ವತ್ । ಚಿತ್ತಪ್ರತ್ಯಙ್ಮುಖತ್ವಸ್ಯ ದುಃಶಕತ್ವಮಪಿ ತತ್ರೈವ ಶ್ರೂಯತೇ। ಕಶ್ಚಿದ್ಧೀರಃ ಪ್ರತ್ಯಗಾತ್ಮಾನಮೈಚ್ಛದಾವೃತ್ತಚಕ್ಷುರಮೃತತ್ವಮಿಚ್ಛನ್ನಿತಿ ॥

### ಪ್ರತಿಪದಾರ್ಥ

**ಯದಿ ವಾ ಇದಂ ಅಸ್ಮಿ**—ನಾನೇ ಈ ಸಕಲ ಪ್ರಪಂಚವ್ಯಾಪಿಯಾದ ಬ್ರಹ್ಮನಾಗಿರಬಹುದೇ ಎಂಬ ತತ್ತ್ವವನ್ನು । **ನ ವಿಜಾನಾಮಿ**—ನಾನು ವಿಚಾರಮಾಡಿ ಅರಿತಿಲ್ಲ । **ನಿಣ್ಯಃ**—ಅವಿದ್ಯೆಯಿಂದ ಮುಚ್ಚಲ್ಪಟ್ಟವನಾಗಿಯೂ । **ಸಂನದ್ಧಃ**—ವಿಷಯಾದಿಗಳಿಂದ ಬಂಧಿತನಾಗಿಯೂ । **ಮನಸಾ**—ಬಹಿರ್ಮುಖವಾದ ಮನಸ್ಸುಳ್ಳವನಾಗಿಯೂ । **ಚರಾಮಿ**—ವ್ಯವಹರಿಸುತ್ತಿದ್ದೇನೆ । **ಋತಸ್ಯ**—ಸತ್ಯಾತ್ಮನಾದ ಪರಬ್ರಹ್ಮನ । **ಪ್ರಥಮಜಾ**—ಯಥಾರ್ಥಜ್ಞಾನವು। **ಯದಾ**—ಯಾವಾಗ । **ಮಾಗನ್**—ಲಭಿಸುತ್ತದೆಯೋ । **ಆದಿತ್**—ಆ ಒಡನೆಯೇ । **ಅಸ್ಯಾ ವಾಚಃ**—'ಅಹಂ ಬ್ರಹ್ಮಾಸ್ಮಿ' ಎಂಬ ತತ್ತ್ವವನ್ನುಪದೇಶಿಸುವ ಉಪನಿಷದ್ವಾಕ್ಯಗಳ । **ಭಾಗಂ**—ಅಂಶವನ್ನು । **ಅಶ್ನುವೇ**—ಅನುಭವಿಸುತ್ತೇನೆ. (ಸಾಕ್ಷಾತ್ಕಾರಮಾಡಿಕೊಳ್ಳುತ್ತೇನೆ).

### ಭಾವಾರ್ಥ

ನಾನೇ ಈ ಸಕಲಪ್ರಪಂಚವ್ಯಾಪಿಯಾದ ಬ್ರಹ್ಮನಾಗಿರಬಹುದೇ ಎಂಬ ತತ್ತ್ವವನ್ನು ನಾನು ವಿಚಾರಮಾಡಿ ಅರಿತಿಲ್ಲ. ಆದುದರಿಂದಲೇ ಅವಿದ್ಯೆಯಿಂದ ಆವರಿಸಲ್ಪಟ್ಟವನಾಗಿಯೂ, ವಿಷಯಾದಿಗಳಿಂದ ಬಂಧಿತನಾಗಿಯೂ, ಬಹಿರ್ಮುಖವಾದ ಮನಸ್ಸುಳ್ಳವನಾಗಿಯೂ ವ್ಯವಹರಿಸುತ್ತಿದ್ದೇನೆ. ಸತ್ಯಾತ್ಮಕನಾದ ಪರಬ್ರಹ್ಮನ ಯಥಾರ್ಥ ಜ್ಞಾನವು ಯಾವಾಗ ಲಭಿಸುತ್ತದೆಯೋ ಆ ಒಡನೆಯೇ 'ಅಹಂ ಬ್ರಹ್ಮಾಸ್ಮಿ' ಎಂಬ ತತ್ತ್ವವನ್ನುಪದೇಶಿಸುವ ಉಪನಿಷದ್ವಾಕ್ಯಗಳ ಅಂಶವನ್ನು ಸಾಕ್ಷಾತ್ಕಾರಮಾಡಿಕೊಳ್ಳುತ್ತೇನೆ.

## English Translation

I distinguish not if I am this all; for I go perplexed, and bound in mind; when the first-born (perceptions) of the truth reach me, then immediately shall I obtain a portion (of the meaning) of that (sacred) word.

**ವಿಶೇಷವಿಷಯಗಳು**

**" ಅಹಂ ಬ್ರಹ್ಮಾಸ್ಮಿ "** ಎಂಬ ಪರಮಾರ್ಥಜ್ಞಾನದ ಆವಶ್ಯಕತೆಯನ್ನೂ, ಈ ಜ್ಞಾನಾಭಾವದಿಂದ ಉಂಟಾಗತಕ್ಕ ಪಶ್ಚಾತ್ತಾಪದ ಸ್ವರೂಪವನ್ನೂ ಈ ಋಕ್ಕಿನಲ್ಲಿ ತಿಳಿಸಿದೆ. ಇದನ್ನೇ ನಿರುಕ್ತಕಾರರು ಪರಿದೇವನಾ ವಾಕ್ಯಗಳಲ್ಲಿ ಸೇರಿಸಿರುತ್ತಾರೆ.

**" ಅಥಾಪಿ ಪರಿದೇವನಾ ಕಸ್ಮಾಚ್ಚಿದ್ಭಾವಾತ್ "**

(ನಿ. ೭-೩)

ಮಾನಸಿಕವಾದ ಭಾವವನ್ನು ಪ್ರಕಾಶಪಡಿಸತಕ್ಕ ಪಶ್ಚಾತ್ತಾಪಸೂಚಕವಾದ ವಾಕ್ಯವಿದು ಎಂದು ವಿವರಿಸಿದೆ. **" ಆತ್ಮ-ನಿಂದಾಪೂರ್ವಕೋ ವಿಲಾಪಃ ಪರಿದೇವನಾ "** ತನ್ನ ಅಜ್ಞಾನಾದಿಗಳಿಗಾಗಿ ಆತ್ಮನಿಂದಾಪೂರ್ವಕವಾದ ಭಾವ ಪ್ರಕಾಶನಕ್ಕೆ ಪರಿದೇವನೆಯೆಂದು ದುರ್ಗಾಚಾರ್ಯರು ನಿರುಕ್ತವಾಕ್ಯವನ್ನು ವಿವರಿಸಿದ್ದಾರೆ

ಸಾಯಣರು ಈ ಬ್ರಹ್ಮಜ್ಞಾನವು ಯಾವ ಸಾಧನದಿಂದ ಲಭ್ಯವು ಎಂಬುದನ್ನು ತಿಳಿಸುತ್ತಾ ಮೊದಲು **' ಪರಂ ಶಾಸ್ತ್ರಜನಿತಮಿದಮಹಮಸ್ಮೀತಿ ಜ್ಞಾನಂ '** ಅತ್ಯುತ್ತಮವಾದ ವೇದಾಂತಶಾಸ್ತ್ರದಿಂದ ಲಭಿಸತಕ್ಕ ಜ್ಞಾನವಿದು. ಆ ಶಾಸ್ತ್ರಜ್ಞಾನವಿಲ್ಲದ ಅವಿವೇಕಿಯು ನಾನು ಎಂಬ ಪಶ್ಚಾತ್ತಾಪಪೂರ್ವಕವಾದ ಅಜ್ಞಾನಪ್ರಕಾಶನವಿದೆ ಯೆಂದು ಮೊದಲನೆಯ ಅರ್ಥವನ್ನು ತಿಳಿಸಿ ಅನಂತರ " ಯದಿವೇದಂ " ಎಂಬುದಕ್ಕೆ ಇವ ಶಬ್ದಕ್ಕೆ ಉಪಮಾರ್ಥ ವನ್ನು ತೋರಿಸಿ ಎರಡನೆಯ ಅರ್ಥವನ್ನೂ ಹೇಳಿದ್ದಾರೆ. ಮೊದಲನೆಯದು ಶಾಸ್ತ್ರಜನಿತವಾದ ಜ್ಞಾನವನ್ನೂ, ಎರಡನೆಯದು ಆತ್ಮಸಾಕ್ಷಾತ್ಕಾರರೂಪವಾದ ಜ್ಞಾನವನ್ನೂ ಸೂಚಿಸುತ್ತದೆ. ಕೇವಲ ಶಾಸ್ತ್ರಜನಿತವಾದ ಜ್ಞಾನವನ್ನು ಮಾತ್ರ ಸಂಪಾದಿಸಿದರೆ ಅದು ಸಾಲದು,

**" .... .... .... .... ಏಹ್ಯಾಸ್ವ ವ್ಯಾಖ್ಯಾಸ್ಯಾಮಿ ತೇ ವ್ಯಾಚಕ್ಷಾಣಸ್ಯ ತು। ಮೇ ನಿದಿಧ್ಯಾಸಸ್ವ "**
**ಆತ್ಮಾ ವಾ ಅರೇ ದ್ರಷ್ಟವ್ಯಃ ಶ್ರೋತವ್ಯೋ ಮಂತವ್ಯೋ ನಿದಿಧ್ಯಾಸಿತವ್ಯೋ ಮೈತ್ರೇಯ್ಯಾತ್ಮನೋ**
**ವಾ ಅರೇ ದರ್ಶನೇನ ಶ್ರವಣೇನ ಮತ್ಯಾ ವಿಜ್ಞಾನೇನೇದಂ ಸರ್ವಂ ವಿದಿತಂ ।**

(ಬೃ. ಉ ೨-೪-೪, ೫)

ಶಾಸ್ತ್ರೋಪದೇಶದ ಶ್ರವಣವಾದೊಡನೆಯೇ ಅಲ್ಲಿಗೆ ಪೂರ್ಣಜ್ಞಾನವು ಲಭಿಸಿತೆಂದು ತಿಳಿಯಕೂಡದು. ಶ್ರವಣಾನಂತರ ಮನನವೂ, ಮನನಾನಂತರ ನಿದಿಧ್ಯಾಸನವೂ ಅತ್ಯವಶ್ಯವಾದ ಸಾಧನಗಳು. ಆ ನಿದಿಧ್ಯಾಸನವನ್ನೇ ಬೃಹದಾರಣ್ಯಕದಲ್ಲಿ ವಿಜ್ಞಾನವೆಂದಿದೆ. ಶ್ರವಣದಿಂದಲೂ, ಮತಿಯಿಂದಲೂ ವಿಜ್ಞಾನದಿಂದಲೂ ಈ ಆತ್ಮನ ಸ್ವರೂಪವನ್ನರಿಯಬೇಕೆಂದು ಯಾಜ್ಞವಲ್ಕ್ಯರು ಮೈತ್ರೇಯಿಗೆ ಉಪದೇಶವನ್ನು ಮಾಡುವಾಗ ಈ ಮೂರು ಸಾಧನಗಳ ಆವಶ್ಯಕತೆಯನ್ನು ತಿಳಿಸಿ ದ್ದಾರೆ. ಪ್ರಕೃತವಾದ ಋಕ್ಕಿನಲ್ಲಿಯೂ ಸಹ ಸಾಯಣರು **" ಶಾಸ್ತ್ರಜನಿತಂ ಸಾರ್ವಾತ್ಮ್ಯಂ ಜಾತಂ ನ ತು ಅನುಭಾವಿಕಂ "** " ಅಹಂ ಬ್ರಹ್ಮಾಸ್ಮಿ " ಎಂಬ ಶಾಸ್ತ್ರಜನಿತಜ್ಞಾನವು ಬೋಧವಾಯಿತೇ ಹೊರತು, ಈ ವಿಷಯ ದಲ್ಲಿ ಮನನಪೂರ್ವಕವಾದ ಸಾಕ್ಷಾತ್ಕಾರವುಂಟಾಗಲಿಲ್ಲ ಎಂಬ ನಿರ್ವೇದವು ಸೂಚಿತವಾಗಿದೆಯೆಂದು ತಿಳಿಸಿದ್ದಾರೆ. ಆದರೆ ಶಾಸ್ತ್ರಜನಿತವಾದ ಬ್ರಹ್ಮಜ್ಞಾನವು ಮನನನಿದಿಧ್ಯಾಸನಗಳಿಗೆ ಆಧಾರವಾಗಿರುವುದರಿಂದ ಶಾಸ್ತ್ರೋಪದೇಶವು ಅತ್ಯವಶ್ಯವಾಗಿರುತ್ತದೆ. ಆದುದರಿಂದ ಮೊದಲು ಸಾಯಣರು ಶಾಸ್ತ್ರೋಪದಿಷ್ಟವಾದ ಜ್ಞಾನವಾವುದೆಂಬುದನ್ನು ನಿರ್ದೇಶಿಸಲು ಶ್ರುತಿವಾಕ್ಯಗಳನ್ನುದಹರಿಸಿದ್ದಾರೆ. ಆ ಜ್ಞಾನದ ಸ್ವರೂಪವೇನೆಂದರೆ,

**ಯದಿವೇದಂ ಅಸ್ಮಿ—ಯದಸೀದಂ ಕೃತ್ಸ್ನಃ ಪ್ರಪಂಚೋಽಪ್ಯಹಮೇವಾಸ್ಮಿ । ನಾಮರೂಪಾಂಶಂ ಪರಮಾರ್ಥಂ ತ್ಯಕ್ತ್ವಾ ಸರ್ವತ್ರ ಅನುಗತೋಽಸ್ಮಿ .... .... .... .... ॥**

ನಾನೇ ಪರಬ್ರಹ್ಮನು. ಸಕಲವಿಶ್ವವೂ ನನ್ನ ರೂಪವೇ. ನನ್ನ ಈ ವೈಯಕ್ತಿಕವಾದ ನಾಮವೂ, ರೂಪವೂ ಮಿಥ್ಯೆಯು. ಈ ಮಿಥ್ಯಾಜ್ಞಾನವನ್ನು ದಾಟಿ ಪರಮಾರ್ಥಜ್ಞಾನವನ್ನು ಸಂಪಾದಿಸಿದರೆ ಆಗ ಭೇದಜ್ಞಾನವು ಹೋಗಿ ಸಕಲವೂ ಬ್ರಹ್ಮಮಯವೆಂಬ ಜ್ಞಾನವು ಲಭಿಸುತ್ತದೆ ಎಂಬ ಐಕ್ಯಜ್ಞಾನವು. ಇದಕ್ಕೆ ಆಧಾರವೇನು ಎಂದು ಕೇಳಿದರೆ, ಉಪನಿಷದಾದಿ ಸಕಲ ಶ್ರುತಿವಾಕ್ಯಗಳೂ ಇದನ್ನು ಬೋಧಿಸುವುದೇ ಇದರ ಆಧಾರವು.

**ಸರ್ವಂ ಖಲ್ವಿದಂ ಬ್ರಹ್ಮ ತಜ್ಜಲಾನಿತಿ ಶಾಂತ ಉಪಾಸೀತ ।**

(ಛಾ. ಉ. ೩-೧೪-೧)

**ಸ ಯ ಏಷೋಽಣಿಮೈತದಾತ್ಮ್ಯಮಿದಂ ಸರ್ವಂ ತತ್ಸತ್ಯಂ ಸ ಆತ್ಮಾ ತತ್ತ್ವಮಸಿ ಶ್ವೇತಕೇತೋ ।**

(ಛಾ. ಉ. ೬-೮-೭)

**ಅಥಾತೋಽಹಂಕಾರಾದೇಶ ಏವಾಹಮೇವಾಧಸ್ತಾದಹಮುಪರಿಷ್ಟಾದಹಂ ಪಶ್ಚಾದಹಂ ಪುರಸ್ತಾದಹಂ ದಕ್ಷಿಣತೋಽಹಮುತ್ತರತೋಽಹಮೇವೇದಂ ಸರ್ವಮಿತಿ ॥**

(ಛಾ. ಉ. ೭-೨೫-೧)

'ಅಹಂ' ಎಂಬ ಪ್ರತೀತಿಯಿಂದ ಪ್ರಸಿದ್ಧವಾದ ತತ್ತ್ವವೇ ಪರಬ್ರಹ್ಮವು. 'ಅಹಂ' ಎಂಬುದು ಬ್ರಹ್ಮನಿಂದ ಬೇರೆಯಾದ ವಸ್ತುವಲ್ಲ. ಸರ್ವವೂ ಬ್ರಹ್ಮಮಯವಾದುದರಿಂದ ವ್ಯವಹಾರಕಾಲದಲ್ಲಿ 'ಅಹಂ' ಎಂಬ ಶಬ್ದದಿಂದ ವ್ಯವಹರಿಸಲ್ಪಡತಕ್ಕ ವಸ್ತುವೂ ಆ ಬ್ರಹ್ಮವೇ ಆಗಿದೆ. ಸರ್ವವೂ ಬ್ರಹ್ಮ, ಸರ್ವವೂ ಆತ್ಮ. 'ಇದಂ ಸರ್ವಂ ಯದಯಮಾತ್ಮಾ' ಎಂದಿರುವಂತೆ ಅಧಃಪ್ರದೇಶದಲ್ಲಿರತಕ್ಕದ್ದೂ, ಮೇಲುಭಾಗದಲ್ಲಿ ಯಾವುದಿರುವುದೋ ಅದೂ, ಮುಂಭಾಗದಲ್ಲಿರುವುದೂ, ದಕ್ಷಿಣದಲ್ಲಿರುವುದೂ, ಉತ್ತರಭಾಗದಲ್ಲಿರುವುದೂ, ಸಕಲವೂ ಸಹ ಆತ್ಮರೂಪದಲ್ಲಿರುವ ಬ್ರಹ್ಮವೇ ಆಗಿದೆ ಎಂದು ಛಾಂದೋಗ್ಯದಲ್ಲಿ ತಿಳಿಸಿದೆ. ಇದೇ ತತ್ತ್ವವನ್ನು ಬೃಹದಾರಣ್ಯಕೋಪನಿಷತ್ತಿನಲ್ಲಿ ಪ್ರತಿಪಾದಿಸುತ್ತಾ,

**ಬ್ರಹ್ಮ ವಾ ಇದಮಗ್ರ ಆಸೀತ್ತದಾತ್ಮಾನಮೇವಾವೇತ್ । ಅಹಂ ಬ್ರಹ್ಮಾಸ್ಮೀತಿ । ತಸ್ಮಾತ್ತತ್ಸರ್ವಮಭವತ್ತದ್ಯೋ ಯೋ ದೇವಾನಾಂ ಪ್ರತ್ಯಬುಧ್ಯತ ಸ ಏವ ತದಭವತ್ತಥರ್ಷೀಣಾಂ ತಥಾ ಮನುಷ್ಯಾಣಾಂ ತದ್ಧೈತತ್ಪಶ್ಯನ್ನೃಷಿರ್ವಾಮದೇವಃ ಪ್ರತಿಪೇದೇಽಹಂ ಮನುರಭವಂ ಸೂರ್ಯಶ್ಚೇತಿ । ತದಿದಮಪ್ಯೇತರ್ಹಿ ಯ ಏವಂ ವೇದಾಹಂ ಬ್ರಹ್ಮಾಸ್ಮೀತಿ ಸ ಇದಂ ಸರ್ವಂ ಭವತಿ ತಸ್ಯ ಹ ನ ದೇವಾಶ್ಚ ನಾಭೂತ್ಯಾ ಈಶತೇ । ಆತ್ಮಾ ಹ್ಯೇಷಾಂ ಸ ಭವತಿ ಅಥ ಯೋಽನ್ಯಾಂ ದೇವತಾಮುಪಾಸ್ತೇಽನ್ಯೋಽಸಾವನ್ಯೋಽಹಮಸ್ಮೀತಿ ನ ಸ ವೇದ ಯಥಾ ಪಶುರೇವಂ ಸ ದೇವಾನಾಂ ॥**

(ಬೃ. ಉ. ೧-೪-೧೦)

ಆದಿಯಲ್ಲಿ ಬ್ರಹ್ಮವು ಮಾತ್ರವಿದ್ದು " ನಾನೇ ಸಮಸ್ತವು " ಎಂಬ ಜ್ಞಾನದಿಂದ ಅದೇ ಸಮಸ್ತವಿಶ್ವವಾಗಿ ಪರಿಣಮಿಸಿತು. ದೇವತೆಗಳಲ್ಲಿಯೂ ಯಾರು ಈ ಜ್ಞಾನವನ್ನು ಎಂದರೆ " **ಅಹಂ ಬ್ರಹ್ಮಾಸ್ಮಿ** " ಎಂಬ ಜ್ಞಾನವನ್ನು ಹೊಂದುವರೋ ಅವರೂ ಸಹ ವಿಶ್ವಾತ್ಮರಾಗಿಯೇ ಆಗುವರು. ಈ ಪರಮಾತ್ಮಜ್ಞಾನವನ್ನು ಪಡೆದ ಋಷಿಗಳೂ ಸಹ ವಿಶ್ವವ್ಯಾಪಕವಾದ ಬ್ರಹ್ಮದ ಸ್ವರೂಪವನ್ನೇ ಪಡೆಯುವರು. ಈ ತತ್ತ್ವವನ್ನು ತಿಳಿದ ವಾಮದೇವಋಷಿಯು ' ನಾನೇ ಮನುವು, ನಾನೇ ಸೂರ್ಯನು ' ಎಂದು ಅರಿತನು. ಇದನ್ನೇ ಋಗ್ವೇದದಲ್ಲೂ ಸಹ,

**ಅಹಂ ಮನುರಭವಂ ಸೂರ್ಯಶ್ಚಾಹಂ ಕಕ್ಷೀವಾँ ಋಷಿರಸ್ಮಿ ವಿಪ್ರಃ ।**
**ಅಹಂ ಕುತ್ಸಮಾರ್ಜುನೇಯಂ ನ್ಯೃಂಜೇಽಹಂ ಕವಿರುಶನಾ ಪಶ್ಯತಾ ಮಾ ॥**

(ಋ. ಸಂ. ೪-೨೬-೧)

ಎಂಬ ವಾಕ್ಯಗಳಿಂದ ಹೇಳಿದೆಯೆಂದು ಉದಹರಿಸಿ ವಾಮದೇವಾದಿಜ್ಞಾನಿಗಳು ಬ್ರಹ್ಮತ್ವವನ್ನು ಪಡೆದ ವಿಷಯವನ್ನು ತಿಳಿಸಿದೆ. ಆದರೆ ಯಾರು— " ಬ್ರಹ್ಮವು ಬೇರೆ, ನಾನೇ ಬೇರೆ " ಎಂಬ ಭೇದಜ್ಞಾನವನ್ನು ಇಟ್ಟುಕೊಂಡಿರುವರೋ ಅವರು ದೇವತೆಗಳನ್ನುದ್ದೇಶಿಸಿದ ಯಜ್ಞಪಶುಗಳಾಗುವರು ಎಂದೂ ಸಹ ಎಚ್ಚರಿಸಿದೆ. ಇದೇ ತತ್ತ್ವವನ್ನು ಈಶಾವಾಸ್ಯೋಪನಿಷತ್ತಿನಲ್ಲಿ ಪ್ರತಿಪಾದಿಸುತ್ತಾ,

**ಈಶಾವಾಸ್ಯಮಿದಗ್ಂ ಸರ್ವಂ ಯತ್ಕಿಂಚ ಜಗತ್ಯಾಂ ಜಗತ್ ।**

(ಈಶ. ಉ. ೧)

ಜಗದೀಶ್ವರನಾದ ಪರಮಾತ್ಮನೇ ಪ್ರತ್ಯಗಾತ್ಮರೂಪದಿಂದ ಎಲ್ಲಾ ಪ್ರಾಣಿಗಳಿಗೂ ಆತ್ಮನಾಗಿದ್ದುಕೊಂಡು ಎಲ್ಲವನ್ನೂ ಆಳುತ್ತಿರುವನು. ಜಗತ್ತಿನಲ್ಲಿ ಜಂಗಮಾತ್ಮಕವಾಗಿರತಕ್ಕದ್ದನ್ನೆಲ್ಲಾ ಪ್ರತ್ಯಗಾತ್ಮರೂಪದಿಂದ ಈಶನಾಗಿರುವ ತನ್ನ ಆತ್ಮದಿಂದ " ಇದೆಲ್ಲವೂ ನಾನೇ " ಎಂದು ಪರಮಾರ್ಥಸತ್ಯವಾಗಿರುವ ರೂಪದಿಂದ ಹೊದ್ದಿಸಬೇಕು ಎಂದು ತಿಳಿಸಿದೆ ಈ ಬ್ರಹ್ಮಜ್ಞಾನವು ಅತ್ಯವಶ್ಯವಾದುದು. ಆದರೆ ಇದರ ತಿಳುವಳಿಕೆಯು ಅತಿಕಠಿಣವಾದುದು. ಇದನ್ನು ಶ್ರುತಿವಾಕ್ಯದಿಂದ ಅರಿತು ಅನಂತರ ಇದರ ಸಾಕ್ಷಾತ್ಕಾರಕ್ಕೆ ಪ್ರಯತ್ನಿಸಬೇಕು ಎಂಬುದಾಗಿ ಶ್ರವಣಮನನಗಳ ಆವಶ್ಯಕತೆಯನ್ನು ತಿಳಿಸುತ್ತಾ ಕಠೋಪನಿಷತ್ತಿನಲ್ಲಿ,

**ಅಂಗುಷ್ಠಮಾತ್ರಃ ಪುರುಷೋಽಂತರಾತ್ಮಾ ಸದಾ ಜನಾನಾಂ ಹೃದಯೇ ಸನ್ನಿವಿಷ್ಟಃ ।**
**ತಂ ಸ್ವಾಚ್ಛರೀರಾತ್ಪ್ರವೃಹೇನ್ಮುಂಜಾದಿವೇಷೀಕಾಂ ಧೈರ್ಯೇಣ ॥**
**ತಂ ವಿದ್ಯಾಚ್ಛುಕ್ರಮಮೃತಂ ತಂ ವಿದ್ಯಾಚ್ಛುಕ್ರಮಮೃತಮಿತಿ ॥**

(ಕಠ. ಉ. ೨-೩-೧೭)

ಕೇವಲ ಅಂಗುಷ್ಠಪ್ರಮಾಣದ ಈ ಮಹಾಪುರುಷನು ಎಲ್ಲರಿಗೂ ಅಂತರಾತ್ಮನಾಗಿದ್ದಾನೆ. ಭೌತಿಕವಾದ ಶರೀರಾಂತರ್ಗತನಾದ ಈ ಆತ್ಮನನ್ನು ಬಂಧನದಿಂದ ಬಿಡಿಸಿ ಮುಕ್ತನನ್ನಾಗಿ ಮಾಡತಕ್ಕದ್ದು. ಆದರೆ ಇದು ಸಾಧಾರಣವಾದ ಪ್ರಯತ್ನದಿಂದ ಸಾಧ್ಯವಿಲ್ಲ. ಇದಕ್ಕೆ ಅಸಾಧಾರಣವಾದ ಧೈರ್ಯವು ಬೇಕು. ಈ ಆತ್ಮನು ಶುದ್ಧನು. ಅಮೃತನು. ಇವನನ್ನು ಅರಿಯಬೇಕಾದರೆ ಆತ್ಮಸಾಕ್ಷಾತ್ಕಾರವು ಅತ್ಯವಶ್ಯವಾದುದು. ಶ್ರುತಿಯ ಉಪದೇಶದಿಂದ ತಿಳಿದ ಬ್ರಹ್ಮ

ಜ್ಞಾನವು ಸಾಕ್ಷಾತ್ಕಾರಕ್ಕೆ ಸಾಧನವಾಗುವುದೇ ಹೊರತು ಸಾಕ್ಷಾತ್ಕಾರವೇ ಆಗುವುದಿಲ್ಲ. ಅದೇ ಅಂಶವನ್ನು ಸಾಯಣರು ವಿವರಿಸುತ್ತಾ,

**"ಇದಂ ಸರ್ವಮಹಮಸ್ಮೀತಿ ಜ್ಞಾನಂ ಮೇ ಜಾತಂ । ಅಪಿ ತ್ವೇತದ್ದಾರ್ಷ್ಟಾಂತಿಕಭೂತಂ । ಆನುಭವಿಕಂ ಸಾರ್ವಾತ್ಮ್ಯಂ ಯದಸ್ತಿ ತನ್ನ ವಿ ಜಾನಾಮಿ । ನ ಪ್ರಾಪ್ತೋಽಸ್ಮಿ । ಶಾಸ್ತ್ರಜನಿತಂ ಸಾರ್ವಾತ್ಮ್ಯಂ ಜಾತಂ ನ ತ್ವಾನುಭವಿಕಮಿತ್ಯರ್ಥಃ ॥**

ಶಾಸ್ತ್ರೋಪದೇಶದಿಂದ 'ಅಹಂ ಬ್ರಹ್ಮಾಸ್ಮಿ' ಎಂಬ ಜ್ಞಾನವನ್ನೇನೋ ಪಡೆದುದು ನಿಜ, ಆದರೆ ಇದು ದೃಷ್ಟಾಂತ ರೂಪದ ಜ್ಞಾನವಾದುದೇ ಹೊರತು ನಾನು ಈ ಜ್ಞಾನವನ್ನು ಅನುಭವರೂಪದಲ್ಲಿ ಪಡೆಯಲಿಲ್ಲ. ಶಾಸ್ತ್ರಜನಿತಜ್ಞಾನವು ಸ್ವಂತವಾದ ಅನುಭವರೂಪದ ಜ್ಞಾನವಾಗುವುದೇ ಇಲ್ಲ. ಆದರಿಂದ ಬ್ರಹ್ಮಸಾಕ್ಷಾತ್ಕಾರವು ಪೂರ್ಣವಾಗುವುದಿಲ್ಲ. ಚಕ್ಷುರಾದೀಂದ್ರಿಯಗಳಾಗಲಿ, ವೇದಾದಿ ಶ್ರುತಿಗಳಾಗಲಿ, ಪೂರ್ಣವಾದ ಸಾಕ್ಷಾತ್ಕಾರವಾಗಲಾರವು ಎಂಬುದನ್ನು ಶ್ರುತಿವಾಕ್ಯಗಳು ಸಾರಿವೆ. ಉದಾಹರಣೆಗೆ ಮುಂಡಕೋಪನಿಷತ್ತಿನಲ್ಲಿ,

**ನ ಚಕ್ಷುಷಾ ಗೃಹ್ಯತೇ ನಾಪಿ ವಾಚಾ ನಾನ್ಯೈರ್ದೇವೈಸ್ತಪಸಾ ಕರ್ಮಣಾ ವಾ ।**
**ಜ್ಞಾನಪ್ರಸಾದೇನ ವಿಶುದ್ಧಸತ್ತ್ವಸ್ತತಸ್ತು ತಂ ಪಶ್ಯತೇ ನಿಷ್ಕಳಂ ಧ್ಯಾಯಮಾನಃ ॥**

(ಮು. ಉ. ೩-೧-೮)

**ನಾಯಮಾತ್ಮಾ ಪ್ರವಚನೇನ ಲಭ್ಯಸ್ತ ನ ಮೇಧಯಾ ನ ಬಹುನಾ ಶ್ರುತೇನ ।**
**ಯಮೇವೈಷ ವೃಣುತೇ ತೇನ ಲಭ್ಯಃ ತಸ್ಯೈಷ ಆತ್ಮಾ ವಿವೃಣುತೇ ತನೂಂ ಸ್ವಾಂ ॥**

(ಮು. ೩-೨-೩-)

ಈ ಆತ್ಮನನ್ನು ಕಣ್ಣಿನಿಂದ ಗ್ರಹಿಸಲಾಗುವುದಿಲ್ಲ. ಮಾತಿನಿಂದಲೂ ಆಗುವುದಿಲ್ಲ. ಬಾಹ್ಯವಾದ ಆಡಂಬರದ ಕರ್ಮಗಳಿಂದಾಲಿ ಆಗುವುದಿಲ್ಲ. ಜ್ಞಾನಪ್ರಸಾದದಿಂದ ಸತ್ತ್ವಶುದ್ಧಿಯನ್ನು ಮಾಡಿಕೊಂಡು ಧ್ಯಾನಮಾಡುವವನಿಗೆ ಮಾತ್ರ ನಿಷ್ಕಲನಾದ ಈ ಪರಮಾತ್ಮನು ಗೋಚರನಾಗುತ್ತಾನೆ. ಈ ಆತ್ಮನು ವೇದಶಾಸ್ತ್ರವನ್ನು ಹೆಚ್ಚಾಗಿ ಅಧ್ಯಯನ ಮಾಡಿ ಕೇವಲ ಪ್ರವಚನವನ್ನು ಮಾಡುವುರಿಂದ ಸಿಕ್ಕುವನನಲ್ಲ. ಮೇಧೆಯಿಂದ (ಬುದ್ಧಿವಂತಿಕೆ) ಸಿಕ್ಕುವವನೂ ಅಲ್ಲ. ಆದರೆ, ಬಲ,ಅಪ್ರಮಾದ, ಸನ್ಯಾಸ, ಜ್ಞಾನ ಇವುಗಳಿಂದ ತತ್ಪರನಾಗಿ ಯಾವ ವಿದ್ವಾಂಸನು ಧ್ಯಾನರೂಪವಾದ ಪ್ರಯತ್ನವನ್ನು ಮಾಡುವನೋ ಅವನಿಗೆ ಮಾತ್ರ ಲಭ್ಯನು ಎಂದು ಖಚಿತವಾಗಿ ತಿಳಿಸಿದೆ.

ಈ ವಿಧವಾದ ಬ್ರಹ್ಮಸಾಕ್ಷಾತ್ಕಾರದ ನಿಜವಾದ ಸಾಧನಗಳಾವುವೆಂದರೆ,

**ಸತ್ಯೇನ ಲಭ್ಯಸ್ತಪಸಾ ಹ್ಯೇಷ ಆತ್ಮಾ ಸಮ್ಯಗ್ ಜ್ಞಾನೇನ ಬ್ರಹ್ಮಚರ್ಯೇಣ ನಿತ್ಯಂ ।**
**ಅಂತಃಶರೀರೇ ಜ್ಯೋತಿರ್ಮಯೋ ಹಿ ಶುಭ್ರೋ ಯಂ ಪಶ್ಯಂತಿ ಯತಯಃ ಕ್ಷೀಣದೋಷಾಃ ॥**

(ಮು ೩-೧-೫)

ಈ ಆತ್ಮನು ನಿತ್ಯವಾಗಿ ಸತ್ಯದಿಂದಲೂ ತಪಸ್ಸಿನಿಂದಲೂ ಸರಿಯಾದ ಜ್ಞಾನದಿಂದಲೂ ಬ್ರಹ್ಮಚರ್ಯೆಯಿಂದಲೂ ಲಭ್ಯನಾಗುವನು. ಅಂತಶ್ಶರೀರದಲ್ಲಿ ಇವನು ಜ್ಯೋತಿರ್ಮಯನಾಗಿಯೂ ಶುಭ್ರನಾಗಿಯೂ ಇರುವನು. ನಿದಿಧ್ಯಾಸನ

ಪೂರ್ವಕವಾದ ತಪಸ್ಸಿನಿಂದ ಕ್ಷೀಣದೋಷರಾದ ಯತಿಗಳು ಮಾತ್ರ ಈ ಅಂತರಾತ್ಮನ ಸಾಕ್ಷಾತ್ಕಾರವನ್ನು ಪಡೆಯಲರ್ಹರಾಗಿರುವರು. ಈರೀತಿ ಮನನವೂ ನಿದಿಧ್ಯಾಸನವೂ ಇಲ್ಲದೆ ಕೇವಲಶ್ರುತಿವಾಕ್ಯದ ಶ್ರವಣದಿಂದಲೇ ತೃಪ್ತರಾಗುವವರು ಪೂರ್ಣವಾದ ಬ್ರಹ್ಮಜ್ಞಾನವಿಲ್ಲದೆ ಸಂದಿಗ್ಧಾವಸ್ಥೆಯಲ್ಲಿರುತ್ತಾರೆಂಬುದೇ **'ನ ವಿಜಾನಾಮಿ'** ಎಂದು ಪ್ರಕೃತವಾದ ಋಕ್ಕಿನ ಪರಿದೇವನಾವಾಕ್ಯದ ಅರ್ಥವೆಂದು ಸಾಯಣರು ತಿಳಿಸಿದ್ದಾರೆ. ಸಕಲಶಾಸ್ತ್ರಪಾರಂಗತನಾದರೂ ಸಹ ಆತ್ಮತತ್ತ್ವವನ್ನರಿಯದ ವಿದ್ಯೆಯು ಪೂರ್ಣವಾದ ವಿದ್ಯೆಯಾಗಲಾರದೆಂದು ಛಾಂದೋಗ್ಯೋಪನಿಷತ್ತಿನಲ್ಲಿ ನಾರದನಿಗೂ ಸನತ್ಕುಮಾರನಿಗೂ ನಡೆದ ಸಂಭಾಷಣೆಯಲ್ಲಿ ನಾರದನು,

> **"ಸೋಽಹಂ ಭಗವೋ ಮಂತ್ರವಿದೇವಾಸ್ಮಿ ನಾತ್ಮವಿಚ್ಛ್ರುತಂ ಹ್ಯೇವ ಮೇ ಭಗವದ್ದೃಶೇಭ್ಯಃ ತರತಿ ಶೋಕಮಾತ್ಮವಿತ್ ಸೋಽಹಂ ಭಗವಃ ಶೋಚಾಮಿ ತಂ ಮಾ ಭಗವಾಞ್ಛೋಕಸ್ಯ ಪಾರಂ ತಾರಯತ್ವಿತಿ" ||**
>
> (ಛಾ. ಉ ೭-೧-೩)

"ನಾನು ಆಯಾ ಶಾಸ್ತ್ರಗಳ ಮಂತ್ರೋಚ್ಚಾರಣೆಯನ್ನು ಮಾತ್ರ ತಿಳಿದಿದ್ದೇನೆ. ಆತ್ಮತತ್ತ್ವಜ್ಞಾನವಿಲ್ಲದೇ ಸಂಸಾರದುಃಖದಿಂದ ಮುಕ್ತಿಯಿಲ್ಲ" ಎಂದು ಪರಿತಪಿಸುವುದನ್ನು ಹಿಂದೆ ಇದೇ ಸೂಕ್ತದ ೫ನೇ ಋಕ್ಕಿನ ವಿಶೇಷ ವಿಷಯಗಳಲ್ಲಿ ಉದಹರಿಸಿದೆ. (ಪುಟ. 230) ಈ ವಿಧವಾದ ಸಂದಿಗ್ಧಾವಸ್ಥೆಯನ್ನೂ ಪರಿತಾಪವನ್ನೂ **"ನಿಣ್ಯಃ ಸಂನದ್ಧೋ ಮನಸಾ ಚರಾಮಿ"**। ಎಂದಿದೆ. ಇದನ್ನು ಸಾಯಣರು ವಿವರಿಸುತ್ತಾ **"ಅವಿದ್ಯಾಕಾಮಕರ್ಮಭಿಃ ಸಮ್ಯಗ್-ಬದ್ಧೋ ವೇಷ್ಟಿತಃ । ಅತ ಏವ ಭಾವನಾಸಹಿಷ್ಣುನಾ ಬಹಿರ್ಮುಖೇನ ವಿಕ್ಷಿಪ್ತೇನ ಚೇತಸಾ ಯುಕ್ತಃ ಸಂಚರಾಮಿ ಸಂಸಾರೇ । ಇಂದ್ರಿಯಪರವಶ ಏವ ಸನ್ ಸಂಸಾರೇ ದುಃಖಮನುಭವಾಮಿ"** ಅವಿದ್ಯೆಯಿಂದಲೂ ಅದರಿಂದ ಉತ್ಪನ್ನವಾದ ಕಾಮ, ರಾಗ, ದ್ವೇಷ ಇತ್ಯಾದಿಗಳಿಂದ ಕೂಡಿದ ಕರ್ಮಗಳಿಂದಲೂ, ಬಂಧಿತನಾಗಿಯೂ, ಅಂತರ್ಧ್ಯಾನವಿಲ್ಲದೇ, ಬಾಹ್ಯಪ್ರವೃತ್ತಿಗಳಿಂದ ಕೂಡಿದ ಚೇತಸ್ಸಿನಿಂದ ಕೂಡಿಯೂ ಸಂಸಾರದ ದುಃಖವನ್ನನುಭವಿಸುತ್ತಿದ್ದೇನೆ ಎಂದು ತಾತ್ಪರ್ಯವೆಂದು ತಿಳಿಸಿದ್ದಾರೆ. ಇಲ್ಲಿ,

**ನಿಣ್ಯಃ**—ಎಂಬ ಪದಕ್ಕೆ ಅವಿದ್ಯೆಯಿಂದ ಆವೃತನಾಗಿ ಎಂದರ್ಥ. **ನಿಣ್ಯಂ, ಸಸ್ವಃ, ಸನುತಃ** ಇತ್ಯಾದಿ ೬ ಅಂತರ್ಹಿತನಾಮಗಳಲ್ಲಿ ಪಠಿತವಾಗಿರುವುದರಿಂದ (ನಿ. ೩-೧೯) ಈ ಪದಕ್ಕೆ ಗೂಢವಾಗಿರುವುದು ಎಂಬರ್ಥವನ್ನು ಕೊಡುವ ಸಂದರ್ಭಗಳಲ್ಲಿ ನಿಣ್ಯಶಬ್ದದ ಪ್ರಯೋಗವನ್ನು ಋಕ್ಸಂಹಿತೆಯಲ್ಲಿ ಅನೇಕ ಕಡೆಗಳಲ್ಲಿ ನೋಡಬಹುದು. ಉದಾಹರಣೆಗೆ—

> **ಕವಿರ್ನ ನಿಣ್ಯಂ ವಿದಥಾನಿ ಸಾಧನ್‌ವೃಷಾ ಯತ್ಸೇಕಂ ವಿಪಿಪಾನೋ ಅರ್ಚಾತ್ ।**
> **ದಿವ ಇತ್ಥಾ ಜೀಜನತ್ಸಪ್ತ ಕಾರೂನಹ್ನಾ ಚಿಚ್ಚಕ್ರುರ್ವಯುನಾ ಗೃಣಂತಃ ॥**
>
> (ಋ. ಸಂ. ೪-೧೬-೩)

ಎಂಬಲ್ಲಿ ಕವಿಯ ದೃಷ್ಟಿಗೆ ಮಾತ್ರ ಗೋಚರವಾಗುವುದು; ಸಾಧಾರಣವಾದ ಮತಿಗೆ ಗೋಚರವಾಗದೇ ರಹಸ್ಯವಾಗಿರುವುದು ಎಂದರ್ಥವಾಗಿರುತ್ತದೆ. ಇನ್ನು ಕೆಲವು ಸಂದರ್ಭಗಳಲ್ಲಿ ತತ್ತ್ವಾನ್ವೇಷಣವನ್ನು ಮಾಡುವಾಗ ತತ್ತ್ವವು ಅತಿ ನಿಗೂಢವಾಗಿದ್ದು ಸಮಸ್ಯೆಯು ಬಹಳ ಜಟಿಲವಾದದ್ದೂ ತೊಡಕಾದುದೂ ಆದಾಗ ಮನಸ್ಸಿನ ಕ್ಷೋಭೆಯನ್ನು ಸೂಚಿಸುವಾಗ ಈ ಶಬ್ದದ ಪ್ರಯೋಗವಿದೆ. ಪ್ರಕೃತವಾದ ಋಕ್ಕಿನಲ್ಲಿ ಅದಕ್ಕೆ ನಿದರ್ಶನವಿದೆ. ಅವಿದ್ಯೆಯಿಂದ

ಚೇತಸ್ಸು ಆವೃತವಾಗಿ, ಅಧ್ಯಾತ್ಮಜ್ಞಾನವಿಲ್ಲದೆ, ಆತ್ಮನ ವ್ಯವಹಾರಗಳೆಲ್ಲವೂ ಬಾಹ್ಯವಾದ ವಿಷಯಗಳಿಂದಲೇ ಆಕರ್ಷಿಸಲ್ಪಟ್ಟರೆ ಆಗ ಕೇವಲ ಬಾಹ್ಯವಿಷಯಗಳಿಂದಲೇ ಬಂಧಿತವಾಗಿ ಆತ್ಮನು ಚಲಿಸುತ್ತಿರುತ್ತದೆ ಎಂದು "**ಸಂನದ್ಧೋ ಮನಸಾ ಚರಾಮಿ**" ಎಂಬ ವಾಕ್ಯದಿಂದ ತಿಳಿಸಿದೆ. ಅಜ್ಞಾನಾವೃತವಾದ ಚೇತಸ್ಸು ಪರಿತಪಿಸುವುದನ್ನು ಈಶಾದ್ಯುಪನಿಷತ್ತುಗಳಲ್ಲಿ ವಿಶದವಾಗಿ ವಿವರಿಸಿದೆ.

**ಅಂಧಂ ತಮಃ ಪ್ರವಿಶಂತಿ ಯೇಽವಿದ್ಯಾಮುಪಾಸತೇ ।**
**ತತೋ ಭೂಯ ಇವ ತೇ ತಮೋ ಯ ಉ ವಿದ್ಯಾಯಾಗ್ಂ ರತಾಃ ॥**
(ಈಶ ಉ ೯.)

ಯಾರು ಆತ್ಮಜ್ಞಾನವಿಲ್ಲದೆ ಕೇವಲ ಕರ್ಮರತರಾಗಿ ಅವಿದ್ಯಾರೂಪವಾದ ಕರ್ಮವನ್ನು ಮಾತ್ರ ಆಚರಿಸುತ್ತಾರೆಯೋ ಅವರೂ, ತಪೋರೂಪವಾದ ಕರ್ಮವನ್ನು ತ್ಯಜಿಸಿ ಕೇವಲ ಶಾಸ್ತ್ರಜನ್ಯವಾದ ಜ್ಞಾನದಲ್ಲಿ ಮಾತ್ರ ಆಸಕ್ತರಾಗಿರುತ್ತಾರೋ ಅವರಿಬ್ಬರೂ ಸಹ ಕಗ್ಗತ್ತಲೆಯನ್ನು ಪ್ರವೇಶಿಸುತ್ತಾರೆ.

**ಅವಿದ್ಯಾಯಾಮಂತರೇ ವರ್ತಮಾನಾಃ ಸ್ವಯಂಧೀರಾಃ ಪಂಡಿತಂಮನ್ಯಮಾನಾಃ ।**
**ದಂದ್ರಮ್ಯಮಾಣಾಃ ಪರಿಯಂತಿ ಮೂಢಾ ಅಂಧೇನೈವ ನೀಯಮಾನಾ ಯಥಾಂಧಾಃ ॥**
(ಕಠ ೧-೨-೫)

**ಅವಿದ್ಯಾಯಾಂ ಬಹುಧಾ ವರ್ತಮಾನಾ ವಯಂ ಕೃತಾರ್ಥಾ ಇತ್ಯಭಿಮನ್ಯಂತಿ ಬಾಲಾಃ ।**
**ಯತ್ಕರ್ಮಿಣೋ ನ ಪ್ರವೇದಯಂತಿ ರಾಗಾತ್ತೇನಾತುರಾಃ ಕ್ಷೀಣಲೋಕಾಶ್ಚ್ಯವಂತೇ ॥**
(ಮುಂ. ಉ. ೧-೨-೯)

ಇತ್ಯಾದಿ ಕಠ ಮತ್ತು ಮುಂಡಕೋಪನಿಷತ್ತುಗಳಲ್ಲಿ ವರ್ಣಿತವಾಗಿರುವ ಅವಿದ್ಯಾದೋಷದ ಫಲವನ್ನೂ, ಜೀವನು ಬ್ರಹ್ಮಜ್ಞಾನವಿಲ್ಲದೆ ಪುನರ್ಜನ್ಮಮರಣಾದಿಗಳಿಗೆ ಭಾಜನವಾಗಿ ಪದೇ ಪದೇ ಸಂಸಾರದಲ್ಲಿ ತೊಳಲುತ್ತಿರುವುದನ್ನೂ ಸೂಚಿಸುತ್ತಾ ಈ ಅವಸ್ಥೆಯನ್ನು ಪ್ರಕೃತವಾದ ಋಕ್ಕಿನಲ್ಲಿ ವರ್ಣಿಸಿದೆ. ಋಕ್ಕಿನ ಪೂರ್ವಾರ್ಧದಲ್ಲಿ ಎರಡು ವಿಧವಾದ ಅಭಿಪ್ರಾಯವು ಹೇಳಲ್ಪಟ್ಟಿದೆ. ಮೊದಲನೆಯದಾಗಿ, ಮನನನಿದಿಧ್ಯಾಸನಗಳಿಲ್ಲದ ಕೇವಲ ಶಾಸ್ತ್ರಜನ್ಯಜ್ಞಾನವು "ಅಹಂ ಬ್ರಹ್ಮಾಸ್ಮಿ" ಎಂಬ ತತ್ತ್ವಜ್ಞಾನದ ಸಾಕ್ಷಾತ್ಕಾರಕ್ಕೆ ಸಹಾಯಕವಾಗುವುದಿಲ್ಲ. ಎರಡನೆಯದಾಗಿ ತತ್ತ್ವಜ್ಞಾನದ ನಿಜವಾದ ಸಾಕ್ಷಾತ್ಕಾರವಿಲ್ಲದೆ ಸಂಸಾರದಿಂದ ಮುಕ್ತಿಯಿಲ್ಲ ಆಗ ವಿಷಯನಿಬಂಧನಗಳಿಗೆ ಸಿಕ್ಕಿ ಆತ್ಮನು ಅಲೆಯುತ್ತಿರಬೇಕು. ಆದುದರಿಂದ ಧ್ಯಾನಾದಿಗಳಿಂದ ಆತ್ಮಸಾಕ್ಷಾತ್ಕಾರವನ್ನು ಪಡೆಯಬೇಕೆಂಬುದೇ ಮುಖ್ಯವಾದ ಗುರಿಯಾಗಿರಬೇಕು. ಈ ಸಾಕ್ಷಾತ್ಕಾರಕ್ಕೆ ಮುಖ್ಯವಾದ ಮಾರ್ಗವೇನೆಂದರೆ ಅದನ್ನು ಕಠೋಪನಿಷತ್ತಿನಲ್ಲಿ ಈರೀತಿ ತಿಳಿಸಿದೆ.

**ಶ್ರವಣಾಯಾಪಿ ಬಹುಭಿರ್ಯೋ ನ ಲಭ್ಯಃ ಶೃಣ್ವಂತೋಽಪಿ ಬಹವೋ ಯಂ ನ ವಿದ್ಯುಃ ।**
**ಆಶ್ಚರ್ಯೋ ವಕ್ತಾ ಕುಶಲೋಽಸ್ಯ ಲಬ್ಧಾಽಶ್ಚರ್ಯೋ ಜ್ಞಾತಾ ಕುಶಲಾನುಶಿಷ್ಟಃ ॥**
**ನ ನರೇಣಾವರೇಣ ಪ್ರೋಕ್ತ ಏಷ ಸುವಿಜ್ಞೇಯೋ ಬಹುಧಾ ಚಿಂತ್ಯಮಾನಃ ।**
**ಅನನ್ಯಪ್ರೋಕ್ತೇ ಗತಿರತ್ರ ನಾಸ್ತ್ಯಣೀಯಾನ್ ಹ್ಯತರ್ಕ್ಯಮಣುಪ್ರಮಾಣಾತ್ ॥**

**ನೈಷಾ ತರ್ಕೇಣ ಮತಿರಾಪನೇಯಾ ಪ್ರೋಕ್ತಾನ್ಯೇನೈವ ಸುಜ್ಞಾನಾಯ ಪ್ರೇಷ್ಠ ।**
**ಯಾಂ ತ್ವಮಾಪಃ ಸತ್ಯಧೃತಿರ್ಬತಾಸಿ ತ್ವಾದೃಙ್ ನೋ ಭೂಯಾನ್ನಚಿಕೇತಃ ಪ್ರಷ್ಟಾ ॥**

(ಕಠ. ೧-೨-೭ ರಿಂದ ೯)

ಯಾವ ಈ ಅಂತರಾತ್ಮರೂಪದಲ್ಲಿ ಬ್ರಹ್ಮವು ಬಹುಜನರ ಶ್ರವಣಕ್ಕೂ ಸಿಕ್ಕುವುದಿಲ್ಲವೋ, ಶ್ರುತಿಶ್ರವಣಾನಂತರವೂ ಅನೇಕರ ಅರಿವಿಗೆ ನಿಲುಕದೇ ಇರುತ್ತದೆಯೋ, ಅಂತಹ ಈ ಪರಬ್ರಹ್ಮದ ಸ್ವರೂಪವನ್ನು ಸಾಕ್ಷಾತ್ಕಾರ ಮಾಡಿಕೊಂಡು ವಿವರಿಸುವವನು ಬಹಳ ವಿರಳ. ಅವನ್ನು ಪಡೆಯತಕ್ಕವನು ಬಹುಕುಶಲನು. ಸಾಧಾರಣವಾದ ಬುದ್ಧಿಯುಳ್ಳ ಮಾನವನಿಂದ ಈ ಆತ್ಮನ ಸ್ವರೂಪವು ವರ್ಣಿತವಾಗತಕ್ಕದ್ದಲ್ಲ. ಪೂರ್ಣವಾಗಿ ಸಾಕ್ಷಾತ್ಕಾರವನ್ನು ಪಡೆದಿರುವವನಿಗೆ ಮಾತ್ರ ಇದರ ಅನುಭವವು ಸಾಧ್ಯ. ಅವನು ಮಾತ್ರ ಇತರರಿಗೆ ಗುರುವಾಗಬಲ್ಲನು ತರ್ಕಾದಿಗಳಿಂದ ನಿಲುಕದೇ ಇರುವ ಈ ಬ್ರಹ್ಮಜ್ಞಾನವನ್ನು ಪಡೆಯಲು **ಸತ್ಯಧೃತಿಯಾದ** ನಚಿಕೇತಸ್ಸೇ ಮುಂತಾದವರಿಂದ ಸಾಧ್ಯವೇ ಹೊರತು ಉಳಿದವರಿಂದ ಸಾಧ್ಯವಿಲ್ಲವೆಂದು ಖಂಡಿತವಾಗಿಯೂ ತಿಳಿಸಿದೆ. ಆದನ್ನೇ ಸಾಯಣರು " **ಸರ್ವೈಕಾತ್ಮ್ಯರೂಪಮಾನುಭವಿಕಮಸ್ತಿ ತದ್ವದೇವ** " ಸ್ವಾನುಭವರೂಪವಾದ ಪೂರ್ಣಜ್ಞಾನವೆಂದು ತಿಳಿಸಿದ್ದಾರೆ.

" **ಯದಾ ಮಾಗನ್ ಪ್ರಥಮಜಾ ಋತಸ್ಯಾದಿದ್ವಾಚೋ ಅಶ್ನುವೇ ಭಾಗಮಸ್ಯಾಃ ॥**

ಎಂಬ ಇದೇ ಋಕ್ಕಿನ ಉತ್ತರಾರ್ಧದಲ್ಲಿ ಸಾಕ್ಷಾತ್ಕಾರಪೂರ್ವಕವಾದುದೂ ಪೂರ್ಣವಾದುದೂ ಆದ ಬ್ರಹ್ಮಜ್ಞಾನವು ಲಭಿಸಿದಕೂಡಲೇ ಅದರ ರಸವನ್ನು ಅನುಭವಿಸುತ್ತೇನೆ ಎಂದು ಅನುಭವದ ಸ್ವರೂಪವನ್ನು ತಿಳಿಸಿದೆ. ಆ ಅನುಭವದ ಸ್ವರೂಪವೇನೆಂದರೆ,

**ಸಂಪ್ರಾಪ್ಯೈನಮೃಷಯೋ ಜ್ಞಾನತೃಪ್ತಾಃ ಕೃತಾತ್ಮಾನೋ ವೀತರಾಗಾಃ ಪ್ರಶಾಂತಾಃ ।**
**ತೇ ಸರ್ವಗಂ ಸರ್ವತಃ ಪ್ರಾಪ್ಯ ಧೀರಾ ಯುಕ್ತಾತ್ಮಾನಃ ಸರ್ವಮೇವಾವಿಶಂತಿ ॥**

(ಮು. ಉ. ೩-೨-೫)

ಈ ಪರಮಾತ್ಮನನ್ನು ಅರಿತ ಋಷಿಗಳು ಅದೇ ಜ್ಞಾನದಿಂದಲೇ ತೃಪ್ತರಾಗಿಯೂ ಕೃತಾತ್ಮರಾಗಿಯೂ, ಪರಬ್ರಹ್ಮ. ಸ್ವರೂಪದಿಂದಲೇ ಏರ್ಪಟ್ಟಿರುವ ಆತ್ಮವುಳ್ಳವರಾಗಿಯೂ, ವೀತರಾಗರಾಗಿಯೂ, ಪ್ರಶಾಂತಚಿತ್ತರಾಗಿಯೂ ಇರುವರು.

**ತಂ ದುರ್ದರ್ಶಂ ಗೂಢಮನುಪ್ರವಿಷ್ಟಂ ಗುಹಾಹಿತಂ ಗಹ್ವರೇಷ್ಠಂ ಪುರಾಣಂ ।**
**ಅಧ್ಯಾತ್ಮಯೋಗಾಧಿಗಮೇನ ದೇವಂ ಮತ್ವಾ ಧೀರೋ ಹರ್ಷಶೋಕೌ ಜಹಾತಿ ॥**

(ಕಠ. ೧-೨-೧೨)

ಬಹುಶ್ರಮದಿಂದ ಮಾತ್ರ ಅರಿಯಲು ಸಾಧ್ಯವಿರುವವನೂ- ಅತ್ಯಂತ ಗೂಢನೂ, ಹೃದಯರೂಪವಾದ ಗುಹೆಯಲ್ಲಿರುವವನೂ, ಗಹ್ವರದಲ್ಲಿರುವವನೂ, ಪುರಾಣನೂ ಆದ ಬ್ರಹ್ಮನನ್ನು ಅಧ್ಯಾತ್ಮಯೋಗದಿಂದ ಸಾಕ್ಷಾತ್ಕಾರಮಾಡಿಕೊಂಡ ಧೀರನು ಹರ್ಷಶೋಕಗಳನ್ನು ಬಿಡುತ್ತಾನೆ. " **ಸಂನದ್ಧೋ ಮನಸಾ ಚರಾಮಿ** " ಎಂಬ ಪರಾಙ್ಮುಖವಾದ ಪ್ರವೃತ್ತಿಯೂ, ಅದರ ಫಲವಾದ ರಾಗದ್ವೇಷಗಳೂ ಇಲ್ಲದೇ ಪ್ರಶಾಂತಚಿತ್ತನಾಗಿರುತ್ತಾನೆ.

**ಯಸ್ತು ಸರ್ವಾಣಿ ಭೂತಾನ್ಯಾತ್ಮನ್ಯೇವಾನುಪಶ್ಯತಿ ।**
**ಸರ್ವಭೂತೇಷು ಚಾತ್ಮಾನಂ ತತೋ ನ ವಿಜುಗುಪ್ಸತೇ ॥**
**ಯಸ್ಮಿನ್ಸರ್ವಾಣಿ ಭೂತಾನ್ಯಾತ್ಮೈವಾಭೂದ್ವಿಜಾನತಃ ।**
**ತತ್ರ ಕೋ ಮೋಹಃ ಕಃ ಶೋಕ ಏಕತ್ವಮನುಪಶ್ಯತಃ ॥**

(ಈಶ. ಉ. ೬, ೭)

ಯಾವ ಮಹಾಜ್ಞಾನಿಯು ' **ಅಹಂ ಬ್ರಹ್ಮಾಸ್ಮಿ** ' ಎಂಬ ಅನುಭವರೂಪವಾದ ಜ್ಞಾನದಿಂದ ಸಕಲ ಭೂತಗಳನ್ನೂ ತನ್ನ ಆತ್ಮನಲ್ಲಿಯೇ ಕಾಣುವನೋ, ಮತ್ತು ಎಲ್ಲಾ ಭೂತಗಳಲ್ಲಿಯೂ ತನ್ನ ಆತ್ಮನನ್ನು ಕಾಣುವನೋ ಅವನಿಗೆ ಜುಗುಪ್ಸೆಯೆಂಬುದೇ ಇಲ್ಲ. ತಾನೇ ಬ್ರಹ್ಮರೂಪನು, ಸಕಲ ವಿಶ್ವವೂ ತನ್ನ ರೂಪವೇ ಆಗಿದೆ ಎಂಬ ಅದ್ವೈತಾನುಭವವು ಲಭಿಸಿದವನಿಗೆ ಮೋಹವೂ ಇಲ್ಲ, ಶೋಕವೂ ಇಲ್ಲ. ಅಂತಹ ಪ್ರಶಾಂತಚಿತ್ತನಿಗೆ ಬ್ರಹ್ಮಾನಂದಾನುಭವವು ಲಭಿಸುತ್ತದೆ ಎಂಬುದೇ " **ಅಶ್ನುವೇ ಭಾಗಮಸ್ಯಾಃ** " ಎಂಬ ಸಂಹಿತಾವಾಕ್ಯದ ಅಭಿಪ್ರಾಯವಾಗಿರುತ್ತದೆ.

॥ ವ್ಯಾಕರಣಪ್ರಕ್ರಿಯಾ ॥

**ಜಾನಾಮಿ**--ಜ್ಞಾ ಅವಬೋಧನೇ. ಧಾತು. ಕ್ರ್ಯಾದಿ ಲಟ್ ಉತ್ತಮಪುರುಷ ಏಕವಚನಾಂತರೂಪ. ತಿಙಂತನಿಘಾತಸ್ವರ ಬರುತ್ತದೆ.

**ಅಸ್ಮಿ**—ಅಸ ಭುವಿ ಧಾತು. ಲಡಂತರೂಪ. ಯದ್ಯೋಗವಿರುವುದರಿಂದ ನಿಘಾತಸ್ವರ ಬರುವುದಿಲ್ಲ. ಪ್ರತ್ಯಯ ಪಿತ್ತಾದುದರಿಂದ ಧಾತುಸ್ವರ ಉಳಿಯುತ್ತದೆ.

**ಸಂನದ್ಧಃ**—ಣಹ ಬಂಧನೇ ಧಾತು. **ಣೋನಃ** ಎಂಬುದರಿಂದ ಆದಿಗೆ ನತ್ವ. ಕರ್ಮಣಿಯಲ್ಲಿ **ನಿಷ್ಠಾ** ಎಂಬುದರಿಂದ ಕ್ತಪ್ರತ್ಯಯ. **ನಹೋಧಃ** (ಪಾ.ಸೂ. ೮-೨-೩೪) ಎಂಬುದರಿಂದ ಹಕಾರಕ್ಕೆ ಧಕಾರಾದೇಶ. **ಝಷಸ್ತಥೋರ್ಧೋಽಧಃ** (ಪಾ. ಸೂ. ೮-೨-೪೦) ಎಂಬುದರಿಂದ ಪ್ರತ್ಯಯಕ್ಕೆ ಧತ್ವ. **ಝಲಾಂ ಜಶ್‌ಝಶಿ** ಎಂಬುದರಿಂದ ಪೂರ್ವಕ್ಕೆ ಜಸ್ತ್ವ. **ಗತಿರನಂತರಃ** (ಪಾ. ಸೂ. ೬-೨-೪೯) ಎಂಬುದರಿಂದ ಗತಿಗೆ (ಸಮ್) ಉದಾತ್ತಸ್ವರ ಬರುತ್ತದೆ.

**ಅಗನ್**—ಗಮ್ಲೃ ಗತೌ. ಧಾತು. ಛಾಂದಸವಾಗಿ ಲುಙ್. ತಿಪ್ ಬಂದಾಗ ಇಕಾರಲೋಪ. **ಮಂತ್ರೇಘಸಹ್ವ**--(ಪಾ. ಸೂ ೨-೪-೮೦) ಎಂಬುದರಿಂದ ಚ್ಲಿಗೆ ಲುಕ್. **ಹಲ್‌ಙ್ಯಾಭ್ಯೋದೀರ್ಘಾತ್**—ಸೂತ್ರದಿಂದ ತಿಪಿಗೆ ಲೋಪ. **ಮೋನೋಧಾತೋಃ** (ಪಾ. ಸೂ. ೮-೨-೬೪) ಎಂಬುದರಿಂದ ಮಕಾರಕ್ಕೆ ನಕಾರಾದೇಶ. ಅಂಗಕ್ಕೆ ಅಡಾಗಮ. **ನಿಪಾತೈರ್ಯದ್ಯದಿ**—(ಪಾ. ಸೂ. ೮-೧-೩೦) ಎಂಬುದರಿಂದ ನಿಘಾತಸ್ವರ ಪ್ರತಿಷೇಧ ಬರುವುದರಿಂದ ಅಟಾಗಮಸ್ವರದಿಂದ ಆದ್ಯುದಾತ್ತವಾಗುತ್ತದೆ.

**ಅಶ್ನುವೇ**—ಅಶೂ ವ್ಯಾಪ್ತೌ. ಧಾತು. ಸ್ವಾದಿ. ಶ್ನುವಿಕರಣ. ಲಟ್ ಉತ್ತಮಪುರುಷ ಏಕವಚನಾಂತ ರೂಪ. ಅತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ. ॥ ೩೭ ॥

:o:

**ಸಂಹಿತಾಪಾಠಃ**

ಅಪಾಙ್ ಪ್ರಾಙೇತಿ ಸ್ವಧಯಾ ಗೃಭೀತೋಽಮರ್ತ್ಯೋ ಮರ್ತ್ಯೇನಾ ಸಯೋನಿಃ ।
ತಾ ಶಶ್ವಂತಾ ವಿಷೂಚೀನಾ ವಿಯಂತಾ ನ್ಯ೧ನ್ಯಂ ಚಿಕ್ಯುರ್ನ ನಿ ಚಿಕ್ಯುರನ್ಯಂ ॥ ೩೮ ॥

**ಪದಪಾಠಃ**

ಅಪಾಙ್ । ಪ್ರಾಙ್ । ಏತಿ । ಸ್ವಧಯಾ । ಗೃಭೀತಃ । ಅಮರ್ತ್ಯಃ । ಮರ್ತ್ಯೇನ । ಸಽಯೋನಿಃ ।
ತಾ । ಶಶ್ವಂತಾ । ವಿಷೂಚೀನಾ । ವಿಽಯಂತಾ । ನಿ । ಅನ್ಯಂ । ಚಿಕ್ಯುಃ । ನ । ನಿ । ಚಿಕ್ಯುಃ । ಅನ್ಯಂ ॥ ॥ ೩೮ ॥

**ಸಾಯಣಭಾಷ್ಯಂ**

ಅಮರ್ತ್ಯೋಽಮರಣಧರ್ಮಾಯಮಾತ್ಮಾ ಮರ್ತ್ಯೇನ ಮರಣಧರ್ಮಣಾ ಭೂತಾತ್ಮನಾ ದೇಹೇನ ಸಯೋನಿಃ ಸಮಾನಸ್ಥಾನಃ । ಯತ್ರ ಪರಿಚ್ಛೇದಕೋ ದೇಹೋಽಸ್ತಿ ತತ್ರ ಸರ್ವತ್ರ ಸೋಽಯಮಪಿ ತಿಷ್ಠನ್ನಿತ್ಯರ್ಥಃ । ಯದ್ವಾ । ಸಮಾನೋತ್ಪತ್ತಿಃ । ಸಹವಾಸೇನ ಸ್ವಸ್ಮಿನ್ನಪ್ಯುತ್ಪತ್ತಿರುಪಚರ್ಯತೇ । ಏವಂಭೂತಃ ಸನ್ ಸ್ವಧಯಾನ್ನೋಪಲಕ್ಷಿತತದ್ಭೋಗೇನ ಗೃಭೀತಃ । ಯದ್ವಾ । ಸ್ವಧಾಶಬ್ದೇನಾನ್ನಮಯಂ ಶರೀರಂ ಲಕ್ಷ್ಯತೇ । ತೇನ ಗೃಹೀತಃ ಸನ್ನಪಾಙೇತಿ । ಅಶುಕ್ಲಂ ಕರ್ಮ ಕೃತ್ವಾಧೋ ಗಚ್ಛತಿ । ಪ್ರಾಙೇತಿ ಊರ್ಧ್ವಂ ಸ್ವರ್ಗಾದಿಲೋಕಂ ಪ್ರಾಪ್ನೋತಿ । ಪರಮಾತ್ಮೈವ ಸೂಕ್ಷ್ಮಶರೀರೋಪಾಧಿಕಃ ಸನ್ನಾನಾವಿಧಕರ್ಮ ಕೃತ್ವಾ ತದ್ಭೋಗಾಯ ಜೀವಸಂಜ್ಞಾಂ ಲಬ್ಧ್ವಾ ಶರೀರತ್ರಯೇಣ ಸಂಬದ್ಧೋ ಲೋಕಾಂತರೇಷು ಸಂಚರತಿ । ಸ್ಥೂಲಸೂಕ್ಷ್ಮೋಭಯಶರೀರಪರಿಗ್ರಹೇಣ ಲೋಕೇ ಗುಣತ್ರಯಾನ್ವಿತಃ ಸನ್ ಪರಿಭ್ರಮತಿ । ತಥಾ ಚ ಶ್ರೂಯತೇ । ಗುಣಾನ್ವಯೋ ಯಃ ಫಲಕರ್ಮಕರ್ತಾ ಕೃತಸ್ಯ ತಸ್ಯೈವ ಸ ಚೋಪಭೋಕ್ತಾ । ಸ ವಿಶ್ವರೂಪಸ್ತ್ರಿಗುಣಸ್ತ್ರಿವರ್ತ್ಮಾ ಪ್ರಾಣಾಧಿಪಃ ಸಂಚರತಿ ಸ್ವಕರ್ಮಭಿಃ । ಶ್ವೇ. ಉ. ೫-೭ । ಇತಿ । ಇದಾನೀಮುಭಯಪ್ರಾಧಾನ್ಯೇನಾಹ । ತಾ ತೌ ಭೂತಾತ್ಮಕರ್ತ್ರಾತ್ಮಾನೌ ಶಶ್ವಂತಾ ವಿಭಾಗೇನ ಸರ್ವದಾ ವರ್ತಮಾನೌ । ಯದ್ವಾ । ಸೂಕ್ಷ್ಮಶರೀರಪಕ್ಷೇ ಸರ್ವದಾ ಸಹವಾಸ ಉಪಪದ್ಯತೇ । ಸ್ಥೂಲಶರೀರಪಕ್ಷೇಽಪಿ ಸಾತ್ತ್ವಿಕಜಾತೇಃ । ತತ್ಕಾರಣಾನಾಂ ಭೂತಸೂಕ್ಷ್ಮಾಣಾಂ ಸದ್ಭಾವಾತ್ತತ್ರ ಶರೀರಸಂಬಂಧ ಉಪಪದ್ಯತೇ । ವಿಷೂಚೀನೇಹ ಲೋಕೇ ಸರ್ವತ್ರಗಮನೌ ವಿಯಂತಾ ತತ್ತತ್ಫಲೋಪಭೋಗಾಯ ಸರ್ವತ್ರ ಲೋಕಾಂತರೇಷು ಗಚ್ಛಂತೌ ವರ್ತೇತೇ । ತತ್ರ ನರಾ ಅನ್ಯಂ ಭೂತಾತ್ಮಾನಂ ನಿ ಚಿಕ್ಯುಃ । ನಿತರಾಂ ವಿಶೇಷೇಣ ಪಶ್ಯಂತಿ ಜಾನಂತಿ । ಅನ್ಯಮಪರಂ ದೇಹವಚ್ಛಾಯಾತಿರಿಕ್ತಂ ನ ನಿ ಚಿಕ್ಯುಃ । ನ ಜಾನಂತಿ । ಕೇಚನ ಪಾಮರಾ ದೇಹವ್ಯತಿರಿಕ್ತಂ ನ ಜಾನಂತಿ । ಕೇಚನ ವಿವೇಕಿನಃ ಕರ್ತೃತ್ವಭೋಕ್ತೃ-

**ತ್ಯೋಪೇತೋ ದೇಹಾತಿರಿಕ್ತಃ ಕಶ್ಚಿದಸ್ತೀತ್ಯನುಮಿಮತೇ । ನ ಕೇsಪಿ ದೇಹತ್ರಯವ್ಯತಿರಿಕ್ತಮಾತ್ಮಾನಂ ಜಾನಂತಿ । ಅತೋ ದುರ್ಲಭಮಾತ್ಮಜ್ಞಾನಮಿತ್ಯರ್ಥಃ ॥**

**ಪ್ರತಿಪದಾರ್ಥ**

**ಅಮರ್ತ್ಯಃ**—ಮರಣರಹಿತನಾದ ಆತ್ಮನು । **ಮರ್ತ್ಯೇನ**—ಮರಣಧರ್ಮವುಳ್ಳ ದೇಹದೊಡನೆ । **ಸಯೋನಿಃ**—ಸಮಾನಸ್ಥಾನವುಳ್ಳವನಾಗಿಯೂ । **ಸ್ವಧಯಾ**—ವಿಷಯಸುಖೇಚ್ಛೆಯಿಂದ । **ಗೃಭೀತಃ**—ಆವರಿಸಲ್ಪಟ್ಟವನಾಗಿಯೂ । **ಅಪ್ರಾಙ್**—ಅಧೋಮುಖನಾಗಿಯೂ । **ಪ್ರಾಙ್**—(ಸತ್ಕರ್ಮಗಳ ಫಲವಾಗಿ) ಸ್ವರ್ಗಾಭಿಮುಖನಾಗಿಯೂ । **ಏತಿ**—ಹೋಗುತ್ತಾನೆ । **ತಾ**—ಆ ದೇಹಾತ್ಮಗಳೆರಡೂ । **ಶಶ್ವಂತಾ**—ಯಾವಾಗಲೂ । **ವಿಷೂಚೀನಾ**—(ಈ ಲೋಕದಲ್ಲಿ) ಒಟ್ಟಿಗೆ ಓಡಾಡುವವರಾಗಿಯೂ । **ವಿಯಂತಾ**—(ಅವರವರ ಕರ್ಮಫಲಾನುಭವಗಳಿಗಾಗಿ) ಲೋಕಾಂತರಗಳಲ್ಲೂ ಸಂಚರಿಸುವವರಾಗಿಯೂ ಇದ್ದಾರೆ । **ಅನ್ಯಂ**—(ಅವರಲ್ಲಿ) ದೇಹಸಂಬಂಧಿಯಾದವನನ್ನು । **ನಿ ಚಿಕ್ಯುಃ**—(ಜನರು) ಅರಿಯುತ್ತಾರೆ । **ಅನ್ಯಂ**—ದೇಹಾತಿರಿಕ್ತನಾದವನನ್ನು । **ನ ನಿಚಿಕ್ಯುಃ**—ಅರಿಯುವುದಿಲ್ಲ ।

**ಭಾವಾರ್ಥ**

ಮರಣಹಿತನಾದ ಆತ್ಮನು ಮರಣಧರ್ಮವುಳ್ಳ ದೇಹದೊಡನೆ ಸಮಾನಸ್ಥಾನವುಳ್ಳವನಾಗಿಯೂ ವಿಷಯಸುಖೇಚ್ಛೆಯಿಂದ ಆವರಿಸಲ್ಪಟ್ಟವನಾಗಿಯೂ, ಅಧೋಮುಖನಾಗಿಯೂ, ಸತ್ಕರ್ಮಗಳ ಫಲವಾಗಿ ಸ್ವರ್ಗಾಭಿಮುಖನಾಗಿಯೂ ಹೋಗುತ್ತಾನೆ. ಆ ದೇಹಾತ್ಮಗಳೆರಡೂ ಯಾವಾಗಲೂ ಈ ಲೋಕದಲ್ಲಿ ಒಟ್ಟಿಗೆ ಓಡಾಡುವವರಾಗಿಯೂ ಅವರವರ ಕರ್ಮಾನುಭವಗಳಿಗಾಗಿ ಲೋಕಾಂತರಗಳಲ್ಲೂ ಸಂಚರಿಸುವವರಾಗಿಯೂ ಇದ್ದಾರೆ. ದೇಹಸಂಬಂಧಿಯಾದವನನ್ನು ಜನರು ಅರಿಯಬಲ್ಲರು. ದೇಹಾತಿರಿಕ್ತನಾದವನನ್ನು (ಆತ್ಮನನ್ನು) ಅರಿಯಲಾರರು.

## English Translation

The immortal, cognate with the mortal, affected by (desire of) enjoyment, goes to the lower or the upper (sphere): but (men beholding them) associated, going everywhere (in this world together); going everywhere (in other worlds together); have comprehended the one, but have not comprehended the other.

**ವಿಶೇಷವಿಷಯಗಳು**

ಅಮರ್ತ್ಯನಾದ ಆತ್ಮವು ಮರ್ತ್ಯವಾದ ದೇಹದೊಡನೆ ಸಂಬಂಧವನ್ನಿಟ್ಟುಕೊಂಡಿರುತ್ತದೆ. ದೇಹಕೃತವಾದ ಕರ್ಮಫಲಗಳನ್ನನುಭವಿಸುವುದಕ್ಕಾಗಿ ಪುನಃಪುನಃ ಜನ್ಮಾಂತರಗಳನ್ನು ಹೊಂದುವುದು. ಮತ್ತು ಈ ಕರ್ಮಾನುಭವಗಳ ಕಾಲಗಳಲ್ಲೆಲ್ಲಾ ದೇಹದೊಡನೆ ಸಂಬಂಧವಿದ್ದೇ ಇರಬೇಕಾದುದರಿಂದ ದೇಹಕ್ಕೆ ಹುಟ್ಟುತ್ತದೆ, ಸಾಯುತ್ತದೆ ಎಂಬ ವ್ಯವಹಾರವಿರುವಂತೆ ಆತ್ಮನಿಗೂ ಇರುತ್ತದೆ. ಆದುದರಿಂದಲೇ "**ಸಯೋನಿಃ**" **ಸಮಾನೋತ್ಪತ್ತಿಃ । ಸಹವಾಸೇನ ಸ್ವಸ್ಮಿನ್ನಪಿ ಉತ್ಪತ್ತಿರುಪಚರ್ಯತೇ ।** ನಿಜವಾಗಿಯೂ ಶುದ್ಧನಾದ ಆತ್ಮನಿಗೆ ಜನ್ಮಮರಣಗಳಿಲ್ಲದಿದ್ದರೂ ದೇಹಾಂತರ್ಗತನಾಗಿ ದೈಹಿಕವಾದ ಸಂಬಂಧವಿರುವುದರಿಂದ ಈ ಪ್ರತೀತಿಯಿದೆಯೆಂದು ಸಾಯಣರು ವಿವರಿಸಿದ್ದಾರೆ.

ಈ ಋಕ್ಕಿನಲ್ಲಿ ಅಮರ್ತ್ಯನೆಂದು ವರ್ಣಿತವಾಗಿರುವುದು ಜೀವಾತ್ಮನೇ ಅಥವಾ ಪರಮಾತ್ಮನೇ ? ಪರಮಾತ್ಮನಾದರೆ ದೇಹಸಂಬಂಧವೂ, ದೇಹದೊಡನೆ ಜರಾಮರಣಾದಿಗಳೂ ಹೇಗೆ ಸಂಬಂಧಿಸುತ್ತವೆ ? ಜೀವಾತ್ಮನಾದರೆ ಜೀವನಿಗೂ ಈಶ್ವರನಿಗೂ ಭೇದವುಂಟೇ ಇತ್ಯಾದಿ ಪ್ರಶ್ನೆಗಳು ಸಂಭವಿಸುತ್ತವೆ. ನಿರ್ಲಿಪ್ತನಾದ ಈಶ್ವರನು ಕರ್ಮಬಂಧಿತನಾಗುತ್ತಾನೆಂಬುದರಲ್ಲಿಯೂ ಶ್ರುತಿವಾಕ್ಯಗಳಲ್ಲೇ ವಿರೋಧವು ಕಾಣುತ್ತದೆ. ಆದುದರಿಂದ ಇಲ್ಲಿ ವಿಷಯವನ್ನು ಕೂಲಂಕಷವಾಗಿ ವಿಮರ್ಶಿಸಬೇಕು. ಈ ಋಕ್ಕಿನಲ್ಲಿ ಹೇಳಿರುವ ವಿಷಯಗಳನ್ನು ನಾಲ್ಕು ಭಾಗಗಳನ್ನಾಗಿ ವಿಂಗಡಿಸಬಹುದು.

(೧) ಅಮರ್ತ್ಯನು ಮರ್ತ್ಯದೊಂದಿಗೆ ಸಯೋನಿಯಾಗಿರುವುದು,

(೨) ಮರ್ತ್ಯವಾದ ದೇಹದೊಂದಿಗೆ ಸೇರಿಕೊಂಡು ಅದರ ಕರ್ಮಾನುಗುಣವಾದ ಫಲಗಳನ್ನನುಭವಿಸಲು ಜನ್ಮಾಂತರಗಳನ್ನು ಹೊಂದುವುದು.

(೩) ದೇಹಸಂಬಂಧಿಯಾದ ಆತ್ಮನು ಮಾತ್ರ ಅನುಭವಗೋಚರನಾಗುವುದು ಮತ್ತು,

(೪) ದೇಹಾತಿರಿಕ್ತನಾದ ಆತ್ಮನು ಅನುಭವಾತೀತನಾಗಿರುವುದು.

ಈರೀತಿ ಆತ್ಮನ ಲೌಕಿಕಾಲೌಕಿಕವಾದ ಸ್ಥಿತಿಗಳನ್ನು ಸೂಕ್ಷ್ಮವಾಗಿ ತಿಳಿಸಿ, ದೇಹಾತಿರಿಕ್ತನಾದ ಆತ್ಮನ ಜ್ಞಾನವನ್ನೂ ಅನುಭವವನ್ನೂ ಧ್ಯಾನಾದಿಗಳಿಂದ ಪಡೆಯಬೇಕೆಂದು ಸೂಚಿಸಿದೆ. ಹಿಂದಿನ ಋಕ್ಕಿನಲ್ಲಿ ಹೇಳಿರುವಂತೆಯೇ ಇಲ್ಲಿಯೂ ಸಹ " **ದುರ್ಲಭಮಾತ್ಮಜ್ಞಾನಂ** " ಸಾಧಾರಣವಾದ ಪ್ರಯತ್ನಗಳಿಂದ ಆತ್ಮಜ್ಞಾನವು ದುರ್ಲಭವೆಂದು ತಿಳಿಸುವುದೇ ಉದ್ದಿಶ್ಯವಾಗಿದೆಯೆಂದು ಸಾಯಣರ ವಿವರಣೆಯಿದೆ.

ಅಮರ್ತ್ಯನಾದ ಆತ್ಮನು ಮರ್ತ್ಯವಾದ ದೇಹದೊಂದಿಗೆ ಸಯೋನಿಯಾಗಿರುವುದು ಎಂಬುದರ ಅರ್ಥವೇನು ? ಇದು ಜೀವಾತ್ಮನೇ ! ಪರಮಾತ್ಮನೇ ? ಎಂಬ ಪ್ರಶ್ನೆಯು ಸಾಧ್ಯವಾದರೆ, ಇಲ್ಲಿ ಪರಮಾತ್ಮನೆಂದರ್ಥಮಾಡಿದರೂ ಅವರಲ್ಲಿ ವಿರೋಧವಿರುವುದಿಲ್ಲ. ಯಾವುದನ್ನು ವ್ಯವಹಾರದಲ್ಲಿ ವೈಯಕ್ತಿಕವಾದ ದೇಹ ಅಥವಾ ವೈಯಕ್ತಿಕವಾದ ಆತ್ಮ ಎನ್ನುತ್ತೇವೆಯೋ ಅವೆಲ್ಲವೂ ಈಶ್ವರನ ಆವಿರ್ಭಾವಗಳೇ ಆಗಿರುವುದರಿಂದ ಇಲ್ಲಿ ಅಮರ್ತ್ಯನಾದ ಪರಮಾತ್ಮನು ಮರ್ತ್ಯವಾದ ದೇಹಾದಿಗಳೊಡನೆ ಸಂಬಂಧವನ್ನು ಬೆಳೆಸುತ್ತಾನೆ ಎಂದು ಅರ್ಥಮಾಡಬಹುದು. ಅಮರ್ತ್ಯನಾದ ಈಶ್ವರನು ಮರ್ತ್ಯವಾದ ದೇಹಾದಿಗಳೊಡನೆ ಸೇರದಿದ್ದರೆ ಪ್ರಾಪಂಚಿಕವಾದ ವ್ಯವಹಾರವೇ ಇರುವುದಿಲ್ಲ. ಆದರೆ ಅನಾದ್ಯಂತವಾದ ಪ್ರಾಪಂಚಿಕವ್ಯವಹಾರದಲ್ಲಿ ಮಗ್ನನಾದ ಈಶ್ವರನೂ ಸಹ ಇದರಲ್ಲಿಯೇ ಮುಳುಗಿರುತ್ತಾನೆಯೇ ಎಂದರೆ ಅದಲ್ಲ. ಈಶ್ವರನು ಅನಾದ್ಯನಂತನು ಪ್ರಾಪಂಚಿಕವ್ಯವಹಾರವು ಸಾದಿಯಾದುದು ಮತ್ತು ಸಾಂತವಾದುದು. ಅನಾದ್ಯನಂತನಾದ ಈಶ್ವರನ ಅಧೀನದಲ್ಲಿಯೂ ಅವನಲ್ಲಿ ವ್ಯಾಪ್ತವಾಗಿಯೂ ಇರುವ ಜಗತ್ತು ಆದಿಯಲ್ಲಿಯೂ ಅಂತ್ಯದಲ್ಲಿಯೂ ಅವಧಿಯೊಂದಿಗೆ ಕೂಡಿದೆ. ಈ ವಿಷಯವು ಸತ್ಯ ಎಂಬ ಶಬ್ದದ ನಿರ್ವಚನದಿಂದ ತಿಳಿಯುತ್ತದೆ.

**ತದೇತತ್ತ್ರ್ಯಕ್ಷರಂ ಸತ್ಯಮಿತಿ । ಸ ಇತ್ಯೇಕಮಕ್ಷರಂ । ತೀತ್ಯೇಕಮಕ್ಷರಂ । ಯಮಿತ್ಯೇಕಮಕ್ಷರಂ । ಪ್ರಥಮೋತ್ತಮೇ ಅಕ್ಷರೇ ಸತ್ಯಂ । ಮಧ್ಯತೋಽನೃತಂ । ತದೇತದನೃತಮುಭಯತಃ ಸತ್ಯೇನ ಪರಿಗೃಹೀತಂ ಸತ್ಯಭೂಯಮೇವ ಭವತಿ ।**

(ಬೃ. ಉ. ೫-೫-೧)

**ಸ, ತಿ, ಯಂ** ಎಂಬ ಮೂರು ಅಕ್ಷರಗಳಿಂದ ಕೂಡಿದ **ಸತ್ಯಂ** ಎಂಬ ಪದದಲ್ಲಿ **ಸ** ಮತ್ತು **ಯಂ** ಎಂಬ ಎರಡಕ್ಷರಗಳೂ ಸತ್ಯಾತ್ಮಕವು. (Real) ಮಧ್ಯದ **ತಿ** ಎಂಬಕ್ಷರವು ಅಸತ್ಯಾತ್ಮಕವಾದುದು. (Unreal). ಆದುದರಿಂದ ಅಸತ್ಯಾತ್ಮಕವಾದ ತತ್ತ್ವವು ಎರಡು ಕಡೆಗಳಲ್ಲಿಯೂ ಸತ್ಯಾತ್ಮಕವಾದ ತತ್ತ್ವದಿಂದ ಆವೃತವಾಗಿದೆ. ಆದುದರಿಂದ ಅದೂ ಸಹ ಸತ್ಯದ ಸ್ವರೂಪವನ್ನೇ ತೋರಿಸುತ್ತದೆ. ಈ ಸತ್ಯಾಂಶವನ್ನು ತಿಳಿದವನಿಗೆ ಭಯವಿಲ್ಲ ಎಂದು ಸತ್ಯರೂಪನಾದ ಈಶ್ವರನ ಸ್ವರೂಪವನ್ನು ತಿಳಿಸಿದೆ ಆದ್ಯಂತಗಳುಳ್ಳ ಈ ಜಗತ್ತು ಅನಾದ್ಯನಂತನಾದ ಈಶ್ವರನಿಂದ ಆವೃತವಾಗಿದೆಯೆಂದಾಯಿತು. ಆದರೆ ಆದ್ಯಂತಗಳಿದ್ದರೂ ಸಹ ಈ ಜಗತ್ತು ಸ್ವಂತತ್ರವೇ, ಈಶ್ವರಾಧೀನದಲ್ಲಿಲ್ಲವೇ ಎಂದರೆ ಜಗತ್ತು ಈಶ್ವರಸಂಕಲ್ಪದಿಂದಲೇ ಉತ್ಪನ್ನವಾದುದು. ಮತ್ತು ಈಶ್ವರ ಸಂಕಲ್ಪದಿಂದಲೇ ಮಾಯವಾಗುತ್ತದೆ ಎಂಬುದೂ ಜೊತೆಯಲ್ಲಿಯೇ ಅಧ್ಯಾಹಾರ್ಯವಾಗುತ್ತದೆ. ಎಂದರೆ, ಅನಾದ್ಯನಂತನಾದ ಈಶ್ವರನು ತಾನೇ ಜಗತ್ತನ್ನು ಸೃಷ್ಟಿಸಿ, ಮರ್ತ್ಯವಾದ ಜಗತ್ತಿನೊಂದಿಗೆ ತಾನೂ ಸಹ ವ್ಯವಹರಿಸುವನು ಎಂದರ್ಥ. ಆದರೆ, ಪೂರ್ಣಜ್ಞಾನವಿಲ್ಲದಿರುವವನು ಜಗದ್ವ್ಯವಹಾರದೊಡನೆ ಸೇರಿಕೊಂಡಿರುವ ಪರಮಾತ್ಮನೇ ತಾತ್ತ್ವಿಕವಾದ ಪರಮಾತ್ಮನೆಂದು ತಿಳಿಯುವನು. ಅದು ತಪ್ಪು. ಪರಮಾತ್ಮನ ಸ್ವರೂಪವೇನು? ಮರ್ತ್ಯರೂಪವಾದ ಜಗತ್ಸೃಷ್ಟಿಯು ಹೇಗೆ? ನಾಮರೂಪಾದಿಗಳಿಂದ ಕೂಡಿದ ಜಗತ್ತಿನಲ್ಲಿ ವ್ಯವಹಾರಗಳಲ್ಲಿ ತೊಡಗಿರುವ ಆತ್ಮನ ಚಲನವಲನಗಳೇನು? ಇವನ್ನೆಲ್ಲಾ ಸೂಕ್ಷ್ಮವಾಗಿ ಅರಿಯಬೇಕು. ಮೊದಲು ಅಮರ್ತ್ಯನಾದ ಪರಮಾತ್ಮನು ಮರ್ತ್ಯವಾದ ಜಗತ್ತಿನೊಡನೆ ಸಂಬಂಧವನ್ನು ಹೊಂದಿರುವುದು ಹೇಗೆಂದು ತಿಳಿಯಬೇಕು.

> **ಸೋಽಕಾಮಯತ । ಬಹು ಸ್ಯಾಂ ಪ್ರಜಾಯೇಯೇತಿ । ಸ ತಪೋಽತಪ್ಯತ । ಸ ತಪಸ್ತಪ್ತ್ವಾ । ಇದಗ್ಂ ಸರ್ವಮಸೃಜತ । ಯದಿದಂ ಕಿಂಚ । ತತ್ಸೃಷ್ಟ್ವಾ । ತದೇವಾನುಪ್ರಾವಿಶತ್ । ತದನುಪ್ರವಿಶ್ಯ । ಸಚ್ಚ ತ್ಯಚ್ಚಾಭವತ್ । ನಿರುಕ್ತಂ ಚಾನಿರುಕ್ತಂ ಚ । ನಿಲಯನಂ ಚಾನಿಲಯನಂ ಚ । ವಿಜ್ಞಾನಂ ಚಾವಿಜ್ಞಾನಂ ಚ । ಸತ್ಯಂ ಚಾನೃತಂ ಚ ಸತ್ಯಮಭವತ್ ॥**
>
> (ತೈ. ಉ. ೨-೬)

ಪರಬ್ರಹ್ಮವು ತಾನು ವೃದ್ಧಿಯಾಗಿ ನಾನಾರೂಪಗಳಲ್ಲಿ ಬೆಳೆಯಬೇಕೆಂದು ಇಚ್ಛಿಸಿತು. ಅನಂತರ ತನ್ನ ತಪಶ್ಶಕ್ತಿಯಿಂದ ಸಕಲ ಭೂತಗಳನ್ನೂ ಸೃಷ್ಟಿಸಿತು. ಅನಂತರ ತನ್ನಿಂದ ಸೃಷ್ಟವಾದ ಜಗತ್ತನ್ನೇ ಪ್ರವೇಶಿಸಿತು. ಅದರಿಂದ ಸತ್, ತ್ಯತ್ ಎಂದರೆ ಮೂರ್ತ ಮತ್ತು ಅಮೂರ್ತ ಎಂಬ ವಿಭಾಗವೂ, ನಿಲಯನ, ಅನಿಲಯನ ಎಂದರೆ ಗೂಡಿನ ರೂಪದ ಆಶ್ರಯ ಮತ್ತು ಅದನ್ನು ಆಶ್ರಯಿಸತಕ್ಕದ್ದು ಎಂಬ ವಿಭಾಗವೂ, ಚೇತನ ಮತ್ತು ಅಚೇತನ ಎಂಬ ವಿಭಾಗವೂ ಉಂಟಾದವು.

> **ಸ ಯಥೋರ್ಣನಾಭಿಸ್ತಂತುನೋಚ್ಚರೇದ್ಯಥಾಗ್ನೇಃ ಕ್ಷುದ್ರಾ ವಿಸ್ಫುಲಿಂಗಾ ವ್ಯುಚ್ಚರಂತ್ಯೇವಮೇವಾಸ್ಮಾದಾತ್ಮನಃ ಸರ್ವೇ ಪ್ರಾಣಾಃ ಸರ್ವೇ ಲೋಕಾಃ ಸರ್ವೇ ದೇವಾಃ ಸರ್ವಾಣಿ ಭೂತಾನಿ ವ್ಯುಚ್ಚರಂತಿ ತಸ್ಯೋಪನಿಷತ್ಸತ್ಯಸ್ಯ ಸತ್ಯಮಿತಿ ಪ್ರಾಣಾ ವೈ ಸತ್ಯಂ ತೇಷಾಮೇಷ ಸತ್ಯಂ ।**
>
> (ಬೃ. ಉ. ೨-೧-೨೦)

ತಂತುವಾಯುವಿನಿಂದ (ಜೇಡರ ಹುಳು) ತಂತುಗಳು ಸ್ವಾಭಾವಿಕವಾಗಿಯೇ ಹೊರಬಂದು ಬಲೆಯು ನಿರ್ಮಿತವಾಗುವಂತೆಯೂ, ಅಗ್ನಿಯಿಂದ ಕಣಗಳು ಹೊರಗೆ ಬಂದು ತೇಜೋರಾಶಿಗಳಾಗುವಂತೆಯೂ, ಸಹ ಈ ಮೂಲಾತ್ಮನಿಂದ

ಸಕಲ ಪ್ರಾಣಗಳೂ, ಸಕಲ ಲೋಕಗಳೂ, ಸಕಲ ದೇವತೆಗಳೂ ನಿಷ್ಪನ್ನರಾಗಿರುತ್ತಾರೆ. ಇವನೇ ಸತ್ಯಕ್ಕೂ ಮೂಲವಾದ ಸತ್ಯವು. ಪ್ರಾಣಗಳೇ ಸತ್ಯರೂಪವಾಗಿದ್ದರೆ, ಆ ಪ್ರಾಣಗಳಿಗೂ ಇವನೇ ಸತ್ಯನು. ಆದುದರಿಂದ ಮರ್ತ್ಯನೂ ಇವನೇ, ಅಮರ್ತ್ಯನೂ ಇವನೇ. ದೇಹವೂ ಇವನೇ, ಆತ್ಮನೂ ಇವನೇ. ಇದನ್ನೇ ಬೃಹದಾರಣ್ಯಕದಲ್ಲಿ ವರ್ಣಿಸುತ್ತಾ,

**ದ್ವೇ ವಾವ ಬ್ರಹ್ಮಣೋ ರೂಪೇ ಮೂರ್ತಂ ಚೈವಾಮೂರ್ತಂ ಚ ಮರ್ತ್ಯಂ ಚಾಮೃತಂ ಚ ಸ್ಥಿತಂ ಚ ಯಚ್ಚ ಸಚ್ಚ ತ್ಯಚ್ಚ ॥**

(ಬೃ. ಉ. ೨-೩-೧)

ಮೂರ್ತಾಮೂರ್ತರೂಪಗಳೂ, ಮರ್ತ್ಯಾಮರ್ತ್ಯರೂಪಗಳೂ, ಸ್ಥಾವರಜಂಗಮಾತ್ಮಕರೂಪಗಳೂ, ಎಲ್ಲವೂ ಸಹ ಬ್ರಹ್ಮನ ರೂಪಗಳೇ ಆಗಿವೆ. ಆದುದರಿಂದ “ **ಅಮರ್ತ್ಯೋ ಮರ್ತ್ಯೇನ ಸಯೋನಿಃ** ” ಎಂಬ ಪ್ರಕೃತವಾದ ಋಕ್ಕಿನ ವರ್ಣನೆಯಲ್ಲಿ ಮರ್ತ್ಯವೂ ಮತ್ತು ಅಮರ್ತ್ಯವೂ ಸಹ ಪರಬ್ರಹ್ಮರೂಪವಾದ ಒಂದೇ ಯೋನಿಯುಳ್ಳವು ಎಂದರ್ಥವಾಗಬಹುದು. ಅಥವಾ ವ್ಯಾವಹಾರಿಕವಾದ ಪ್ರಪಂಚದಲ್ಲಿ ಚೇತನ ಮತ್ತು ಅಚೇತನ ಎಂದರೆ ಜೀವಾತ್ಮ ಮತ್ತು ದೇಹ ಎಂಬ ಭಾಗಗಳಲ್ಲಿ ಈಶ್ವರನ ಅಂಶಗಳು ವಿಭಕ್ತಗಳಾಗಿ ಲೌಕಿಕವಾದ ವ್ಯವಹಾರಗಳಲ್ಲಿರುವಾಗ ಜೀವಾತ್ಮ ಮತ್ತು ದೇಹ ಈ ಎರಡರ ನಿರಂತರವಾದ ಸಾಹಚರ್ಯವು ಇದ್ದೇ ಇರಬೇಕಾಗುತ್ತದೆ. ದೇಹದ ಉತ್ಪತ್ತಿಯೊಡನೆ ತಾನೂ ಸೇರಿಕೊಂಡಿರುವುದರಿಂದ ಇಲ್ಲಿ ಆತ್ಮನಿಗೂ ಉತ್ಪತ್ತಿಯೆಂಬ ಪ್ರತೀತಿಯಿದೆ. ದೇಹದ ಉತ್ಪತ್ತಿಕಾಲದಲ್ಲಿ ಆತ್ಮನೂ ಹುಟ್ಟಿದನು ಎನ್ನುತ್ತಾರೆ. ದೇಹವು ಅದರ ಕರ್ಮಾನುಸಾರವಾದ ಯಾವ ಯೋನಿಯಿಂದ ಉತ್ಪನ್ನವಾಗುತ್ತದೆಯೋ ಆಯಾ ಕರ್ಮಾನುಗುಣವಾದ ಫಲವನ್ನು ಅನುಭವಿಸುವುದಕ್ಕೆ ಆತ್ಮನೂ ಅದೇ ಯೋನಿಯಿಂದಲೇ ಅದೇ ದೇಹದೊಡನೆ ಉತ್ಪನ್ನನಾಗುತ್ತಾನೆ. ಆದುದರಿಂದ **ಸಯೋನಿಃ** ಎಂಬುದು ಅಮರ್ತ್ಯವಾದ ಆತ್ಮನಿಗೆ ವಿಶೇಷಣವಾಗಿದೆ. ಅದರೆ ದೇಹದೊಡನೆ ಸಂಸರ್ಗವಾದೊಡನೆಯೇ ದೇಹದ ಉಪಾಧಿಗಳೆಲ್ಲವೂ ಆತ್ಮನಿಗೂ ಉಪಾಧಿಗಳಾಗಿರುತ್ತವೆ. ದೇಹವು ಅನ್ನಾದಿಗಳಿಂದ ಬೆಳೆದರೆ ಆತ್ಮನೂ ಬೆಳೆದನು ಎನ್ನುತ್ತಾರೆ. ರಾಗದ್ವೇಷಾದಿಗಳಿಂದ ದೇಹವು ಕಲುಷಿತವಾದರೆ ಆತ್ಮನೂ ಕಲುಷಿತನಾದನೆಂದರ್ಥವು. ಆದುದರಿಂದ ದೇಹವು ಯಾವ ರೀತಿ ಸ್ವಧೆಯಿಂದ ಗೃಭೀತವಾಗುವುದೋ ಅಮರ್ತ್ಯನಾದ ಆತ್ಮನೂ ಸಹ ಅದೇ ಸ್ವಧೆಯಿಂದ ಗೃಭೀತನಾಗುತ್ತಾನೆ. ಈ **ಭೋಗೇಚ್ಛೆಯು** ಆತ್ಮನನ್ನು ಸಂಸಾರದಲ್ಲಿ ಬದ್ಧನಾಗುವಂತೆ ಮಾಡುತ್ತದೆ.

ಇಲ್ಲಿ ಇನ್ನೊಂದು ಆಕ್ಷೇಪಕ್ಕೆ ಅವಕಾಶವಿದೆ. ಈ ಆಕ್ಷೇಪವನ್ನು Dr. ರಾಧಾಕೃಷ್ಣನ್ ಎಂಬುವರು ಉದಹರಿಸಿ ಅದಕ್ಕೆ ತಕ್ಕ ಸಮಾಧಾನವನ್ನು ಹೇಳಿದ್ದಾರೆ. “ The problem of evil is a stumbling-block to all monistic systems ” (Indian Philosophy. Vol I. P. 242) ಅದ್ವೈತವನ್ನು ಪ್ರತಿಪಾದಿಸುವ ಸಕಲಮತಗಳೂ ಸಹ ಈ ಸಮಸ್ಯೆಯನ್ನು ಪರಹರಿಸಲು ದುಸ್ತರವಾಗುತ್ತದೆ. ಸಕಲವಿಶ್ವವೂ ಈಶ್ವರನ ಆವಿರ್ಭಾವವೇ ಆಗಿರುವಾಗ ಈಶ್ವರಾಂಶವಾದ ಆತ್ಮನಿಗೆ ಬಂಧನವೆಂದರೇನು, ಆ ಬಂಧನದ ಸ್ವರೂಪವೇನು ಇತ್ಯಾದಿಪ್ರಶ್ನೆಗಳು ಸಹಜವಾಗಿರುತ್ತವೆ. ಆದರೆ ಪ್ರಕೃತದಲ್ಲಿ ಈ ಚರ್ಚೆಗೆ ಅವಕಾಶವಿಲ್ಲದಿರುವುದರಿಂದ ಈ ಆಕ್ಷೇಪವನ್ನು ಅದಕ್ಕೆ ತಕ್ಕ ಉತ್ತರವನ್ನು ಮುಂದೆ ತಿಳಿಸಲಾಗುತ್ತದೆ. ದೇಹದ ಉಪಾಧಿಗಳಿಗೆ ಸಿಕ್ಕಿ ಬದ್ಧಾವಸ್ಥೆಯಲ್ಲಿರತಕ್ಕ ಜೀವಾತ್ಮನಿಗೆ ದೇಹದ ಕರ್ಮಗಳಿಗನುಗುಣವಾದ ಫಲಗಳ ಅನುಭವವೂ ಆಗತಕ್ಕದ್ದು, ಅದೂ ಸಹ ಈಶ್ವರನ ಲೀಲೆಯೇ ಆಗಿದೆ. ಅದು ಹೇಗೆಂದರೆ,—

**ಗುಣಾನ್ವಯೋ ಯಃ ಫಲಕರ್ಮಕರ್ತಾ ಕೃತಸ್ಯ ತಸ್ಯೈವ ಸ ಚೋಪಭೋಕ್ತಾ ।**
**ಸ ವಿಶ್ವರೂಪಸ್ತ್ರಿಗುಣಸ್ತ್ರಿವರ್ತ್ಮಾ ಪ್ರಾಣಾಧಿಪಃ ಸಂಚರತಿ ಸ್ವಕರ್ಮಭಿಃ ॥**

(ಶ್ವೇ. ಉ. ೫-೭)

**ಪರಮಾತ್ಮೈವ ಸೂಕ್ಷ್ಮಶರೀರೋಪಾಧಿಕಸ್ಸನ್ ನಾನಾವಿಧಕರ್ಮ ಕೃತ್ವಾ ತದ್ಭೋಗಾಯ ಜೀವಸಂಜ್ಞಾಂ ಲಬ್ಧ್ವಾ ಶರೀರತ್ರಯೇಣ ಸಂಬದ್ಧಃ ಲೋಕಾಂತರೇಷು ಸಂಚರತಿ ॥** ಪರಮಾತ್ಮನು ಸೂಕ್ಷ್ಮಶರೀರದ ಉಪಾಧಿಯಿಂದ ಕೂಡಿ ನಾನಾವಿಧವಾದ ಕರ್ಮವನ್ನು ಮಾಡಿ ಆ ಕರ್ಮಫಲವನನ್ನನುಭವಿಸಲು ಜೀವಸಂಜ್ಞೆಯನ್ನು ಹೊಂದಿ ತ್ರಿಗುಣಾತ್ಮಕವಾದ ಶರೀರವನ್ನು ಪಡೆದು ಲೋಕಾಂತರಗಳಲ್ಲಿ ಸಂಚರಿಸುತ್ತಾನೆ, ಎಂದು ಜೀವನ ಚಲನವಲನಗಳಿಗೂ ಈಶ್ವರನ ಸಂಕಲ್ಪವೇ ಮೂಲವೆಂದಿರುತ್ತದೆ.

**ಸ್ವಧಯಾ ಗೃಭೀತಃ** ಎಂಬುದಕ್ಕೆ **ಅನ್ನೋಪಲಕ್ಷಿತತದ್ಭೋಗೇನ**-ಅನ್ನದಿಂದ ಉಪಲಕ್ಷಿತವಾದ ಅದರ ಭೋಗದಿಂದ ಎಂದು ಒಂದರ್ಥವನ್ನೂ, **ಯದ್ವಾ ಸ್ವಧಾಶಬ್ದೇನ ಅನ್ನಮಯಂ ಶರೀರಂ । ಸ್ವಧಾ** ಶಬ್ದದಿಂದ ಅನ್ನಮಯವಾದ ಶರೀರವೆಂದೂ ಅದರಿಂದ ಗೃಹೀತವಾದ ಎಂದೂ ಎರಡನೆಯ ಅರ್ಥವನ್ನೂ ಹೇಳಿದೆ. ಅನ್ನರೂಪವಾದ ಸ್ವಧೆಯನ್ನು ಸೃಷ್ಟಿಸಿದವನೂ ಈಶ್ವರನೇ ಮತ್ತು ಇದನ್ನು ಭೋಗಿಸುವವನೂ ಅವನೇ.

**ಸ ಐಕ್ಷತ ಯದಿ ವಾ ಇಮಮಭಿಮಂಸ್ಯೇ ಕನೀಯೋಽನ್ನಂ ಕರಿಷ್ಯ ಇತಿ ಸ ತಯಾ ವಾಚಾ ತೇನಾತ್ಮನೇದಂ ಸರ್ವಮಸೃಜತ ಯದಿದಂ ಕಿಂಚರ್ಚೋ ಯಜೂಂಷಿ ಸಾಮಾನಿ ಛಂದಾಂಸಿ ಯಜ್ಞಾನ್ ಪ್ರಜಾಃ ಪಶೂನ್। ಸ ಯದ್ಯದೇವಾಸೃಜತ ತತ್ತದತ್ತುಮಧ್ರಿಯತ ಸರ್ವಂ ವಾ ಅತ್ತೀತಿ ತದದಿತೇರದಿತಿತ್ವಂ ಸರ್ವಸ್ಯೈತಸ್ಯಾತ್ತಾ ಭವತಿ ಸರ್ವಮಸ್ಯಾನ್ನಂ ಭವತಿ ಯ ಏವ ಮೇತದದಿತೇರದಿತಿತ್ವಂ ವೇದ ।**

(ಬೃ. ಉ. ೧-೨-೫)

ಆ ವಾಕ್ಕಿನಿಂದಲೂ, ಆ ಸ್ವರೂಪದಿಂದಲೂ ಈ ಜಗತ್ತನ್ನೆಲ್ಲಾ ಸೃಷ್ಟಿಸಿದನು. ಸಕಲ ವೇದಗಳನ್ನೂ, ಯಜ್ಞಾದಿಗಳನ್ನೂ, ಪಶುಮಾನವಾದಿಗಳನ್ನೂ, ವಿಶ್ವದಲ್ಲಿರುವ ಸಮಸ್ತಭೂತಗಳನ್ನೂ ಸೃಷ್ಟಿಸಿದನು. ಯಾವ ಯಾವ ಪದಾರ್ಥಗಳನ್ನು ಸೃಷ್ಟಿಸಿದನೋ ಅವೆಲ್ಲವೂ ಅವನಿಗೆ ಅನ್ನರೂಪವಾದವು. ಸೃಷ್ಟಿಸಿದೊಡನೆಯೇ ಅವನ್ನೆಲ್ಲಾ ಭಕ್ಷಿಸತೊಡಗಿದನು. ಸಕಲವೂ ಅವನಿಗೆ ಅನ್ನವಾಗಿ ಅವನು ಅತ್ತೃವಾದುದರಿಂದ ಅವನು ಅದಿತಿಯೆಂದು ವರ್ಣಿಸಲ್ಪಟ್ಟನು. ಆದುದರಿಂದ ಅನ್ನವೂ ಅವನ ಸೃಷ್ಟಿಯು. ಆ ಅನ್ನದ ಭೋಕ್ತೃವೂ ಅವನೇ ಆಯಿತು. ಪ್ರಕೃತವಾದ ಋಕ್ಕಿನಲ್ಲಿ **ಸ್ವಧಯಾ ಗೃಭೀತಃ** ಎಂಬ ವಾಕ್ಯಕ್ಕೆ ಅವನು ಸೃಷ್ಟಿಸಿದ ಸ್ವಧೆಯಿಂದ ಅವನೇ ಗೃಹೀತನಾದವನು ಎಂದರ್ಥಮಾಡಬಹುದು. ಈ ಭೋಗದ ಸಲುವಾಗಿ **ಪ್ರಾಙ್** ಏತಿ ; **ಅಪ್ರಾಙ್** ಏತಿ ಎಂದು ಅವನ ಸೋಪಾಧಿಕವಾದ ಸಂಚಾರವನ್ನು ತಿಳಿಸಿದೆ. ಅದನ್ನೇ ಪ್ರಶ್ನೋಪನಿಷತ್ತಿನಲ್ಲಿ ವರ್ಣಿಸುತ್ತಾ,

**ಪ್ರಜಾಪತಿಶ್ಚರಸಿ ಗರ್ಭೇ ತ್ವಮೇವ ಪ್ರತಿಜಾಯಸೇ । ತುಭ್ಯಂ ಪ್ರಾಣ ಪ್ರಜಾಸ್ತ್ವಿಮಾ ಬಲಿಂ ಹರಂತಿ ಯಃ ಪ್ರಾಣೈಃ ಪ್ರತಿತಿಷ್ಠಸಿ ॥**

(ಪ್ರಶ್ನ. ಉ. ೨-೭)

ಸೃಷ್ಟಿಗೆ ಒಡೆಯನಾದ ನೀನೇ ಗರ್ಭಗಳಲ್ಲಿ ಸಂಚರಿಸುತ್ತೀಯೆ, ಪುನಃ ಪುನಃ ಉತ್ಪನ್ನನಾಗುವವನೂ ನೀನೇ. ನೀನು ಪ್ರಾಣಿಗಳ ಪ್ರಾಣರೂಪದಲ್ಲಿರುವುದರಿಂದ ನಿನಗೇ ಬಲಿಯು ಅರ್ಪಿತವಾಗುತ್ತದೆ, ಎಂದು ಪುನಃ ಪುನಃ ನಾಮರೂಪ ಗಳಲ್ಲಿ ಉತ್ಪನ್ನನಾಗುವ ಸಕಲ ಜೀವರಾಶಿಗಳೂ ನೀನೇ ಎಂದಿದೆ. ಆದುದರಿಂದ **ಅಮರ್ತ್ಯೋ ಮರ್ತ್ಯೇನ ಸಯೋನಿಃ** ಎಂಬುದಕ್ಕೆ ಅಮರ್ತ್ಯನಾದ ಆತ್ಮನು ಮರ್ತ್ಯವಾದ ದೇಹದೊಂದಿಗೆ ಸಮಾನವಾದ ಯೋನಿಯಿಂದ ಉತ್ಪನ್ನವಾಗುತ್ತಾನೆಂದು ವರ್ಣಿಸಿದೆ.

ಸ್ವಧಾರೂಪವಾದ ಉಪಾಧಿಯು ಭೋಗಸಾಧನವಾದುದರಿಂದ ಈ ಭೋಗವನ್ನನುಭವಿಸಲು ಮರ್ತ್ಯವಾದ ದೇಹದೊಡನೆ ಲೋಕಾಂತರಗಳಲ್ಲಿ ಸಂಚರಿಸಬೇಕಾಗಿ ಈಶ್ವರನಿಗೆ ತನ್ನ ಸಂಕಲ್ಪದ ಫಲವೇ ಆಗಿದೆ. ಈ ಉಪಾಧಿಯು ಒಂದೇ ರೂಪವಾಗಿಲ್ಲ. ಸ್ವಧೆಯ ಸ್ವರೂಪಗಳು ನಾನಾವಿಧವಾದುವು. ಆದುದರಿಂದ ಅದರ ಭೋಗಗಳೂ ನಾನಾವಿಧವಾಗಿರಬೇಕು. ಆ ಭೋಗಕ್ಕೆ ತಕ್ಕಂತೆ ಲೋಕಗಳೂ, ಆ ಲೋಕಗಳಿಗೆ ತಕ್ಕಂತೆ ದೇಹಗಳೂ ಇರಬೇಕು. ಆಯಾ ಅನುಭವಕ್ಕೆ ತಕ್ಕಂತೆಯೂ, ಆಯಾ ಕರ್ಮಗಳಿಗೆ ತಕ್ಕಂತೆಯೂ ದೇಹಗಳನ್ನಾಶ್ರಯಿಸಿದ ಆತ್ಮನ ಸಂಚಾರ ಕ್ರಮವನ್ನು **ಪ್ರಾಙ್ ಏತಿ, ಅಪ್ರಾಙ್** ಏತಿ ಎಂದು ಪ್ರಕೃತವಾದ ಋಕ್ಕಿನಲ್ಲಿ ವರ್ಣಿಸಿದೆ.

ಸಾಯಣರು **ಪ್ರಾಙ್ ಏತಿ** ಎಂಬುದಕ್ಕೆ **ಊರ್ಧ್ವಂ ಸ್ವರ್ಗಾದಿಲೋಕಂ ಪ್ರಾಪ್ನೋತಿ ।** ಸ್ವರ್ಗಾದಿ ಲೋಕದ ಅಭಿಮುಖವಾಗಿ ಊರ್ಧ್ವಲೋಕಕ್ಕೆ ಹೋಗುವವನೆಂದೂ, **ಅಪ್ರಾಙ್ ಏತಿ** ಎಂಬುದಕ್ಕೆ **ಅಶುಕ್ಲಂ ಕರ್ಮ ಕೃತ್ವಾ ಅಧೋ ಗಚ್ಛತಿ ।** ಅಶುಭವಾದ ಕರ್ಮಾಚರಣೆಯ ಫಲವಾಗಿ ಅಧೋಲೋಕದಲ್ಲಿ ಸಂಚರಿಸುವವನು ಎಂದರ್ಥವೆಂದೂ ತಿಳಿಸಿದ್ದಾರೆ. ಪ್ರತಿಯೊಂದು ಜೀವಾತ್ಮನಿಗೂ ಅವನವನ ಕರ್ಮಾನುಗುಣವಾದ ದೇಹಸಂಬಂಧವೂ, ಲೋಕಸಂಚಾರವೂ, ಫಲಾನುಭವವೂ ಲಭಿಸುತ್ತದೆ ಪುನಃ ಪುನಃ ಈ ವಿಧವಾದ ಜನ್ಮಮರಣಗಳಿರುವುದರಿಂದ ಪ್ರತಿಜನ್ಮಕ್ಕೂ ಬೇರೆ ಬೇರೆ ದೇಹವನ್ನಾಕ್ರಮಿಸಬೇಕಾಗುತ್ತದೆ. ಇದನ್ನೇ ಬೃಹದಾರಣ್ಯಕೋಪನಿಷತ್ತಿನಲ್ಲಿ ವರ್ಣಿಸುತ್ತಾ,

> **ತದ್ಯಥಾ ತೃಣಜಲಾಯುಕಾ ತೃಣಸ್ಯಾಂತಂ ಗತ್ವಾ ಅನ್ಯಮಾಕ್ರಮಮಾಕ್ರಮ್ಯಾತ್ಮಾನಮುಪ-**
> **ಸಂಹರತ್ಯೇವಮೇವಾಯಮಾತ್ಮೇದಂ ಶರೀರಂ ವಿಹತ್ಯಾವಿದ್ಯಾಂ ಗಮಯಿತ್ವಾನ್ಯಮಾಕ್ರಮಮಾ-**
> **ಕ್ರಮ್ಯಾತ್ಮಾನಮುಪಸಂಹರತಿ ।**
>
> (ಬೃ. ಉ. ೪-೪-೩)

ಜಿಟ್ಟೆಯು ಗರಿಕೆಯ ಒಂದು ಪಟಲದ ಅಗ್ರಭಾಗವನ್ನು ಸೇರಿದನಂತರ ಅದನ್ನು ಬಿಟ್ಟು ಬೇರೊಂದು ಪಟಲವನ್ನು ಸೇರಿಕೊಳ್ಳುವಂತೆ, ಜೀವನೂ ಸಹ ತನ್ನ ಪ್ರಕೃತವಾದ ದೇಹವನ್ನು ತ್ಯಜಿಸಿ ಬೇರೊಂದು ದೇಹವನ್ನು ಸೇರುತ್ತಾನೆ. ಈ ವಿಧವಾದ ಸಂಕ್ರಮಣಕಾಲದಲ್ಲಿ ಜೀವಾತ್ಮನು ಸತ್ಕರ್ಮಗಳನ್ನು ಮಾಡಿದ್ದ ಪಕ್ಷದಲ್ಲಿ ಆಗ ಮೊದಲಿನ ದೇಹಕ್ಕಿಂತ ಉತ್ತಮವಾದ ದೇಹವನ್ನು ಪಡೆಯುತ್ತಾನೆ. ಅದು ಹೇಗೆಂದರೆ,

> **ತದ್ಯಥಾ ಪೇಶಸ್ಕಾರೀ ಪೇಶಸೋ ಮಾತ್ರಾಮಪಾದಾಯಾನ್ಯನ್ನವತರಂ ಕಲ್ಯಾಣತರಂ ರೂಪಂ**
> **ತನುತ ಏವಮೇವಾಯಮಾತ್ಮೇದಂ ಶರೀರಂ ನಿಹತ್ಯಾವಿದ್ಯಾಂ ಗಮಯಿತ್ವಾನ್ಯನ್ನವತರಂ**
> **ಕಲ್ಯಾಣತರಂ ರೂಪಂ ಕುರುತೇ ಪಿತ್ರ್ಯಂ ವಾ ಗಾಂಧರ್ವಂ ವಾ ದೈವಂ ವಾ ಪ್ರಾಜಾಪತ್ಯಂ**
> **ವಾ ಬ್ರಾಹ್ಮಂ ವಾನ್ಯೇಷಾಂ ವಾ ಭೂತಾನಾಂ ॥**
>
> (ಬೃ. ಉ. ೪-೪-೪)

ಅಕ್ಕಸಾಲೆಯು ಚಿನ್ನದ ಚೂರನ್ನು ತೆಗೆದುಕೊಂಡು ಒರಟಾಗಿರುವ ಆ ಚೂರನ್ನು ಕುಟ್ಟಿ ರೂಪಾಂತರಕ್ಕೆ ತಿರುಗಿಸಿ ಆಕರ್ಷಕವಾದ ಆಭರಣಾದಿಗಳನ್ನು ಮಾಡುವಂತೆ, ಸುಕೃತಿಯಾದ ಈ ಆತ್ಮನೂ ಸಹ ತನ್ನ ಪೂರ್ವದೇಹವನ್ನು ತ್ಯಜಿಸಿ ಅದಕ್ಕಿಂತ ಉತ್ತಮವಾದ ಗಾಂಧರ್ವವಾದುದೋ, ದೈವವಾದುದೋ ಆದ ಕಲ್ಯಾಣರೂಪವನ್ನು ಪಡೆಯುತ್ತಾನೆ. ಆದರೆ ಪೂರ್ವದೇಹವನ್ನು ತ್ಯಜಿಸಿದನಂತರ ಪುನಃ ದೇಹಾಂತರವನ್ನಾಶ್ರಯಿಸುವಾಗ ಅದಕ್ಕಿಂತಲೂ ಉತ್ತಮವಾದ ದೇಹವನ್ನು ಪಡೆಯಬೇಕೆಂಬ ನಿಯಮವಿಲ್ಲ. ಏತಕ್ಕೆಂದರೆ,

**ಸ ವಾ ಅಯಮಾತ್ಮಾ ಬ್ರಹ್ಮ ವಿಜ್ಞಾನಮಯೋ ಮನೋಮಯಃ ಪ್ರಾಣಮಯಶ್ಚಕ್ಷುರ್ಮಯಃ ಶ್ರೋತ್ರಮಯಃ ಪೃಥ್ವೀಮಯ ಆಪೋಮಯೋ ವಾಯುಮಯ ಆಕಾಶಮಯಸ್ತೇಜೋಮಯೋಽತೇಜೋಮಯಃ ಕಾಮಮಯೋಽಕಾಮಮಯಃ ಕ್ರೋಧಮಯೋಽಕ್ರೋಧಮಯೋ ಧರ್ಮಮಯೋಽಧರ್ಮಮಯಃ ಸರ್ವಮಯಸ್ತದ್ಯದೇತದಿದಂ ಮಯೋಽದೋಮಯ ಇತಿ ಯಥಾಕಾರೀ ಯಥಾಚಾರೀ ತಥಾ ಭವತಿ ಸಾಧುಕಾರೀ ಸಾಧುರ್ಭವತಿ ಪಾಪಕಾರೀ ಪಾಪೋ ಭವತಿ ಪುಣ್ಯಃ ಪುಣ್ಯೇನ ಕರ್ಮಣಾ ಭವತಿ ಪಾಪಃ ಪಾಪೇನ। ಅಥೋ ಖಲ್ವಾಹುಃ ಕಾಮಮಯ ಏವಾಯಂ ಪುರುಷ ಇತಿ ಸ ಯಥಾಕಾಮೋ ಭವತಿ ತತ್ಕ್ರತುರ್ಭವತಿ ತತ್ಕರ್ಮ ಕುರುತೇ ಯತ್ಕರ್ಮ ಕುರುತೇ ತದಭಿಸಂಪದ್ಯತೇ ॥**

(ಬೃ. ಉ. ೪-೪-೫)

ಈ ಜೀವನೇ ವಿಜ್ಞಾನಮಯನೂ, ಮನೋಮಯನೂ, ಪ್ರಾಣಮಯನೂ, ಚಕ್ಷುರ್ಮಯನೂ, ಶ್ರೋತ್ರಮಯನೂ, ಪೃಥಿವೀಮಯನೂ, ಆಪೋಮಯನೂ, ವಾಯುಮಯನೂ, ಆಕಾಶಮಯನೂ, ತೇಜೋಮಯನೂ, ಅತೇಜೋಮಯನೂ, ಕಾಮಮಯನೂ, ಅಕಾಮಮಯನೂ, ಕ್ರೋಧಮಯನೂ, ಅಕ್ರೋಧಮಯನೂ, ಧರ್ಮಮಯನೂ, ಅಧರ್ಮಮಯನೂ ಆದ ಬ್ರಹ್ಮನಾಗಿದ್ದಾನೆ. ಇವನು ಸರ್ವಮಯನು. ಆದುದರಿಂದಲೇ ಈ ಆತ್ಮನನ್ನು "**ಇದಂಮಯಃ ; ಅದೋಮಯಃ**" ಇದರಿಂದ ಪೂರ್ಣನಾದವನು ಅಥವಾ ಅದರಿಂದ ಪೂರ್ಣನಾದವನು ಎಂದು ವರ್ಣಿಸಿದೆ.

ಈ ಆತ್ಮನು ತಾನು ಯಾವ ಬಗೆಯ ಕರ್ಮವನ್ನು ಮಾಡುವನೋ ಮತ್ತು ಯಾವ ರೀತಿಯಲ್ಲಿ ವ್ಯವಹರಿಸುವನೋ ಅದರಂತೆ ಪರಿಣಮಿಸುವನು. ಸತ್ಕರ್ಮವನ್ನು ಮಾಡಿದರೆ ಸದ್ರೂಪವನ್ನು ಪಡೆಯುತ್ತಾನೆ. ಅಸತ್ಕರ್ಮಕಾರಿಯಾದರೆ ಅಸದ್ರೂಪವನ್ನು ಪಡೆಯುತ್ತಾನೆ. ಸುಕೃತಿಯು ಸದ್ಗತಿಯನ್ನೂ, ದುಷ್ಕೃತಿಯು ಅಸದ್ಗತಿಯನ್ನೂ ಪಡೆಯುತ್ತಾನೆ.

"ಪುರುಷನ ರೂಪಾಂತರಗಳೆಲ್ಲಾ ಅವನ ಇಚ್ಛಾಧೀನವಾದವೇ ಹೊರತು ಕರ್ಮಾಧೀನವಲ್ಲ" ಎಂದು ಕೆಲವರು ಹೇಳುತ್ತಾರೆ. ಆದರೆ ಅವನವನ ಇಚ್ಛೆಯು ಯಾವ ವಿಧವಾಗಿರುವುದೋ ಅವನ ಸಂಕಲ್ಪವೂ ಅದೇ ವಿಧವಾಗಿರುತ್ತದೆ ಅವನ ಸಂಕಲ್ಪದಂತೆಯೇ ಅವನ ಕ್ರಿಯೆಯೂ ಇರುತ್ತದೆ. ಅವನವನ ಕ್ರಿಯೆಗೆ ತಕ್ಕಂತೆ ರೂಪಾಂತರವನ್ನು ಪಡೆಯುತ್ತಾನೆ.

**ತದೇಷ ಶ್ಲೋಕೋ ಭವತಿ ।**

**ತದೇವ ಸಕ್ತಃ ಸಹ ಕರ್ಮಣೈತಿ ಲಿಂಗಂ ಮನೋ ಯತ್ರ ನಿಷಕ್ತಮಸ್ಯ ।**
**ಪ್ರಾಪ್ಯಾಂತಂ ಕರ್ಮಣಸ್ತಸ್ಯ ಯತ್ಕಿಂಚೇಹ ಕರೋತ್ಯಯಂ ॥**

**ತಸ್ಮಾಲ್ಲೋಕಾತ್ಪುನರೈತ್ಯಸ್ಮೈ ಲೋಕಾಯ ಕರ್ಮಣ ಇತಿ ನು ಕಾಮಯಮಾನೋಽಥಾಕಾಮ-ಯಮಾನೋ ಯೋಽಕಾಮೋ ನಿಷ್ಕಾಮ ಆಪ್ತಕಾಮ ಆತ್ಮಕಾಮೋ ನ ತಸ್ಯ ಪ್ರಾಣಾ ಉತ್ಕ್ರಾಮಂತಿ ಬ್ರಹ್ಮೈವ ಸನ್‌ ಬ್ರಹ್ಮಾಪ್ಯೇತಿ ।**

(ಬೃ. ಉ. ೪-೪-೬)

ಆದುದರಿಂದಲೇ " ಮನಸ್ಸಿಗೆ ಯಾವ ವಿಧವಾದ ಸಂಗವಿರುತ್ತದೆಯೋ, ಅದನ್ನನುಸರಿಸಿಯೇ ಅಂತರಾತ್ಮನೂ ಅದೇ ಪ್ರವೃತ್ತಿಯನ್ನು ಹೊಂದುತ್ತದೆ. ಆ ಪ್ರವೃತ್ತಿಯಲ್ಲಿಯೇ ಸಕ್ತವಾಗಿ ತದನುಗುಣವಾದ ಕರ್ಮವನ್ನೇ ಮಾಡುತ್ತದೆ. ವಿಶ್ವದಲ್ಲಿ ಎಲ್ಲಿ ಯಾವ ಕರ್ಮವನ್ನು ಮಾಡಿದರೂ ಸಹ ಅದರ ಫಲವಾದ ಅನುಭವವನ್ನು ಹೊಂದುವುದಕ್ಕೆ ಲೋಕಾಂತರವನ್ನು ಸೇರಿ ಅದರ ಅಂತ್ಯವು ಸಮಾಪಿಸಿದೊಡನೆಯೇ ಪುನಃ ಪೂರ್ವಲೋಕವನ್ನು ಸೇರುತ್ತಾನೆ " ಎಂಬ ಶ್ರುತಿವಾಕ್ಯವಿರುತ್ತದೆ. ಆದುದರಿಂದ ನಿಷ್ಕಾಮಿಯಾದವನೂ, ಪೂರ್ಣಕಾಮನಾದವನೂ ಲೋಕಾಂತರದ ಅನುಭವಕ್ಕಾಗಿ ಹೋಗದೆ ನೇರವಾಗಿ ಬ್ರಹ್ಮನನ್ನೇ ಸೇರುತ್ತಾನೆ.

ಜೀವಾತ್ಮನ ಕರ್ಮಾನುರೋಧವಾದ ಗತಿಯು ಎರಡು ವಿಧವಾಗಿರುತ್ತದೆ. ಉತ್ತಮವಾದ ಕರ್ಮವನ್ನು ಆಚರಿಸಿ ಸ್ವರ್ಗಾದಿಲೋಕವನ್ನು ಪಡೆಯುವಾಗ ಆ ಜೀವನು ಹೋಗುವ ಮಾರ್ಗಕ್ಕೆ **ದೇವಯಾನ**ವೆಂದೂ, ಉತ್ತಮವಾದ ಕರ್ಮವನ್ನಾಚರಿಸದೆ ಸ್ವಾರ್ಥಾದಿವ್ಯಾಪಾರಗಳಲ್ಲಿ ಉದ್ಯುಕ್ತನಾದವನು ಹೋಗತಕ್ಕ ಮಾರ್ಗಕ್ಕೆ **ಪಿತೃಯಾನ**ವೆಂದೂ ಕರೆದಿದೆ. ಋಕ್ಸಂಹಿತೆಯಲ್ಲಿಯೂ ಸಹ ದೇವಯಾನವೆಂಬ ಪದವು ಪ್ರಸಿದ್ಧವಾಗಿದೆ. ಉದಾಹರಣೆಗೆ—

**ಪರಂ ಮೃತ್ಯೋ ಅನು ಪರೇಹಿ ಪಂಥಾಂ ಯಸ್ತೇ ಸ್ವ ಇತರೋ ದೇವಯಾನಾತ್‌ ।**
**ಚಕ್ಷುಷ್ಮತೇ ಶೃಣ್ವತೇ ತೇ ಬ್ರವೀಮಿ ಮಾ ನಃ ಪ್ರಜಾಂ ರೀರಿಷೋ ಮೋತ ವೀರಾನ್‌ ।**

(ಋ. ಸಂ. ೧೦-೧೮-೧)

ಇತ್ಯಾದಿಋಕ್ಕುಗಳಲ್ಲಿ ದೇವಯಾನವು ಮೃತ್ಯುರಹಿತವಾದ ಮಾರ್ಗವೆಂದು ಹೇಳಿದೆ. ಈ ಮಾರ್ಗದಲ್ಲಿ ಸವಿತೃವು ಸುಕೃತಿಗಳನ್ನು ಮರಣರಹಿತವಾದ ಪುಣ್ಯಲೋಕಕ್ಕೆ ಕರೆದುಕೊಂಡು ಹೋಗುವನು ಎಂದು ಪ್ರಸಿದ್ಧವಾಗಿದೆ.

**ಯೇ ತೇ ಪಂಥಾಃ ಸವಿತಃ ಪೂರ್ವ್ಯಾಸೋಽರೇಣವಃ ಸುಕೃತಾ ಅಂತರಿಕ್ಷೇ ।**
**ತೇಭಿರ್ನೋ ಅದ್ಯ ಪಥಿಭಿಃ ಸುಗೇಭೀ ರಕ್ಷಾ ಚ ನೋ ಅಧಿ ಚ ಬ್ರೂಹಿ ದೇವ ॥**

(ಋ ಸಂ. ೧-೩೫-೧೧)

**ಯತ್ರಾಸತೇ ಸುಕೃತೋ ಯತ್ರ ತೇ ಯಯುಸ್ತತ್ರ ತ್ವಾ ದೇವಃ ಸವಿತಾ ದಧಾತು ।**

(ಋ ಸಂ. ೧೦-೧೭-೪)

ಇತ್ಯಾದಿಋಕ್ಕುಗಳಲ್ಲಿ ಸವಿತೃವು ಸತ್ಪಥದಲ್ಲಿ ಸುಕೃತಿಗಳನ್ನು ಕರೆದುಕೊಂಡುಹೋಗುವ ದೇವನಾದುದರಿಂದ ಯಜ್ಞಕರ್ತರಾದ ಸುಕೃತಿಗಳನ್ನು ಅದೇ ಶುದ್ಧವಾದುದೂ, ರಜೋರಹಿತವಾದುದೂ, ಮೃತ್ಯುರಹಿತವಾದುದೂ ಆದ ಮಾರ್ಗದಲ್ಲಿ ಕರೆದುಕೊಂಡುಹೋಗಬೇಕೆಂದು ಪ್ರಾರ್ಥಿತನಾಗಿದ್ದಾನೆ. ಈ ಮಾರ್ಗವನ್ನು ಉಪನಿಷತ್ತುಗಳಲ್ಲಿ ಅರ್ಚಿರಾದಿ

ಮಾರ್ಗವೆಂದು ಹೇಳಿದೆ. ಮರಣಾನಂತರ ಈ ಮಾರ್ಗದಲ್ಲಿ ಬ್ರಹ್ಮಲೋಕವನ್ನು ಸೇರಿದ ಸುಕೃತಿಗಳಿಗೆ ಪುನರಾವರ್ತಿಯಿಲ್ಲವೆಂದು ಈ ಮಾರ್ಗವನ್ನು ವರ್ಣಿಸಿದೆ.

**ತತ್ಪುರುಷೋಽಮಾನವಃ ಸ ಏನಾನ್ಬ್ರಹ್ಮ ಗಮಯತ್ಯೇಷ ದೇವಪಥೋ ಬ್ರಹ್ಮಪಥ ಏತೇನ ಪ್ರತಿಪದ್ಯಮಾನಾ ಇಮಂ ಮಾನವಮಾವರ್ತಂ ನಾವರ್ತಂತೇ ನಾವರ್ತಂತೇ ।**

(ಛಾ. ಉ. ೪-೧೫-೫)

ವಿದ್ಯುದ್ರೂಪದ ಪುರುಷನು (ಅಮಾನವನು) ಈ ಸುಕೃತಿಯನ್ನು ಬ್ರಹ್ಮಲೋಕಕ್ಕೆ ಒಯ್ಯುತ್ತಾನೆ. ಇದೇ ಬ್ರಹ್ಮಲೋಕದ ಮಾರ್ಗವು. ಈ ಮಾರ್ಗದಿಂದ ಬ್ರಹ್ಮಲೋಕಕ್ಕೆ ಸೇರಿದವರು ಹಿಂತಿರುಗುವುದಿಲ್ಲ. ಇದು ಖಂಡಿತ, ಎಂದು ಹೇಳಿದೆ. ಇದೇ ಅಭಿಪ್ರಾಯವನ್ನು ಇದೇ ರೀತಿಯಲ್ಲಿ ಮುಂಡಕೋಪನಿಷತ್ತಿನಲ್ಲಿಯೂ ವರ್ಣಿಸುತ್ತಾ ಪ್ರಕೃತವಾದ ಋಕ್ಕಿನಲ್ಲಿ ಹೇಳಿರುವಂತೆಯೇ ತಿಳಿಸಿದೆ. ಅದರಲ್ಲಿ,

**ಸೂರ್ಯದ್ವಾರೇಣ ತೇ ವಿರಜಾಃ ಪ್ರಯಾಂತಿ ಯತ್ರಾಮೃತಃ ಸ ಪುರುಷೋ ಹ್ಯವ್ಯಯಾತ್ಮಾ ।**

(ಮು. ಉ. ೧-೧೧)

ಎಂಬ ಸೂರ್ಯದ್ವಾರವನ್ನು ವರ್ಣಿಸುವ ವಾಕ್ಯಗಳಲ್ಲಿ ಉಕ್ತವಾಗಿರುವುದು. ದೇವಯಾನದಿಂದ ಬ್ರಹ್ಮಲೋಕವನ್ನು ಸೇರುವವರಿಗೆ ಪುನರಾಗಮನವಿಲ್ಲ. ಆದರೆ, ಧೂಮಮಾರ್ಗದಿಂದ (ಪಿತೃಯಾನ) ಚಂದ್ರಲೋಕವನ್ನು ಸೇರುವವರೂ ಸಹ ಸುಕೃತಿಗಳಾದರೂ ಅವರು ಅಲ್ಲಿ ತಮ್ಮ ಸತ್ಕರ್ಮಗಳನ್ನನುಭವಿಸಿ ಅನಂತರ ಅದರ ಅಂತವಾದ ಮೇಲೆ ಪುನಃ ಪೃಥ್ವಿಗೆ ಬರುತ್ತಾರೆ. ದೇವಯಾನ ಮತ್ತು ಪಿತೃಯಾಣಗಳ ವರ್ಣನೆಗಳಲ್ಲಿ ಅನೇಕ ವ್ಯತ್ಯಸ್ತವಾದ ಅಭಿಪ್ರಾಯಗಳಿವೆ. ಪ್ರಕೃತದಲ್ಲಿ ಅವು ಅಷ್ಟು ಅವಶ್ಯವಲ್ಲ. ಪ್ರಕೃತವಾದ ಋಕ್ಕಿನಲ್ಲಿ ದೇಹದೊಡನೆ ಸೇರಿ ತನ್ನ ಸಂಸ್ಕಾರಾನುಗುಣವಾದ ಕರ್ಮಗಳನ್ನು ಮಾಡುವವನಿಗೆ ಎರಡು ವಿಧವಾದ ಸಂಚಾರಗಳಿವೆಯೆಂದು ತಿಳಿಸಿದೆ. ಅದನ್ನು ಬೃಹದಾರಣ್ಯಕದಲ್ಲಿ,

.... .... .... **ವೇತ್ಥೋ ದೇವಯಾನಸ್ಯ ವಾ ಪಥಃ ಪ್ರತಿಪದಂ ಪಿತೃಯಾಣಸ್ಯ ವಾ ಯತ್ಕೃತಾ ದೇವಯಾನಂ ವಾ ಪಂಥಾನಂ ಪ್ರತಿಪದ್ಯಂತೇ ಪಿತೃಯಾಣಂ ವಾಪಿ ಹಿ ಋಷೇರ್ವಚಃ ಶ್ರುತಂ ದ್ವೇ ಸೃತೀ ಅಶೃಣವಂ ಪಿತೄಣಾಮಹಂ ದೇವಾನಾ ಮುತ ಮರ್ತ್ಯಾನಾಂ ತಾಭ್ಯಾಮಿದಂ ವಿಶ್ವಮೇಜತ್ಸಮೇತಿ ಯದಂತರಾ ಪಿತರಂ ಮಾತರಂ ಚ ಇತಿ ॥**

(ಬೃ ಉ. ೬-೨-೨)

ದೇವತೆಗಳ ಲೋಕಕ್ಕೆ ಕರೆದು ಕೊಂಡುಹೋಗುವ ಮಾರ್ಗವು ನಿನಗೆ ಗೊತ್ತೇ ಅಥವಾ ಪಿತೃಗಳ ಲೋಕಕ್ಕೆ ಕರೆದು ಕೊಂಡುಹೋಗುವ ಮಾರ್ಗವನ್ನು ನೀನು ಅರಿತಿರುವೆಯಾ ಎಂದು ಪ್ರವಾಹಣ ಜೈಬಲಿಯು ಶ್ವೇತಕೇತುವನ್ನು ಕೇಳಿದಾಗ ಅವನು ಇಲ್ಲವೆಂದನು. ಆಗ ಜೈಬಲಿಯು "ಪಿತೃಲೋಕಕ್ಕೆ ಒಯ್ಯುವ ಮಾರ್ಗವೊಂದಿದೆ ; ದೇವಲೋಕಕ್ಕೆ ಒಯ್ಯುವ ಮಾರ್ಗವೊಂದಿದೆ. ಇವೆರಡೂ ಮರ್ತ್ಯರು ಮರಣಾನಂತರ ಸಂಚರಿಸತಕ್ಕ ಮಾರ್ಗಗಳು ದ್ಯಾವಾಪೃಥಿವಿಗಳ ಅಂತರದಲ್ಲಿರತಕ್ಕ ಈ ಮಾರ್ಗಗಳಲ್ಲಿ ಜಂಗಮಾತ್ಮಕವಾದ ಸಕಲ ಭೂತಗಳೂ ಸಂಚರಿಸುತ್ತವೆ" ಎಂದು ಋಷಿವಾಕ್ಯವನ್ನು ಉಪದೇಶಿಸಿದನು.

ಶಶ್ವಂತಾ, ವಿಷೂಚೀನಾ, ವಿಯಂತಾ—ಈ ಪದಗಳು ಭೂತಾತ್ಮ ಕರ್ತ್ರಾತ್ಮರಿಗೆ ವಿಶೇಷಣಗಳು. **ಶಶ್ವಂತಾ—ಅವಿಭಾಗೇನ ಸರ್ವದಾ ವರ್ತಮಾನೌ ।** ಅವಿನಾಭಾವಸಂಬಂಧದಿಂದ ಯಾವಾಗಲೂ ಕೂಡಿಕೊಂಡಿರುವ ; **ವಿಷೂಚೀನಾ—ಇಹ ಲೋಕೇ ಸರ್ವತ್ರಗಮನೌ।** ಈ ಲೋಕದಲ್ಲಿ ಎಲ್ಲೆಲ್ಲೂ ಸಂಚರಿಸತಕ್ಕ ; **ವಿಯಂತಾ—ತತ್ತತ್ಫಲೋಪಭೋಗಾಯ ಸರ್ವತ್ರ ಲೋಕಾಂತರೇಷು ಗಚ್ಛಂತೌ ।** ಆಯಾ ಕರ್ಮಗಳ ಫಲಗಳನ್ನನುಭವಿಸಲು ಲೋಕಾಂತರಗಳ ಸಂಚಾರವನ್ನಿಟ್ಟುಕೊಂಡಿರುವ ಎಂದರ್ಥಮಾಡಿದೆ.

**ಅನ್ಯಂ ನಿ ಚಿಕ್ಯುಃ ; ಅನ್ಯಂ ನ ನಿ ಚಿಕ್ಯುಃ—**ಭೂತಾತ್ಮನನ್ನು ಜನರು ಅರಿಯುತ್ತಾರೆ ದೇಹಾತಿರಿಕ್ತನಾದ ಆತ್ಮನನ್ನು ಅರಿಯಲಾರರು. ಅದೇ ಅಲ್ಲದೇ ದೇಹಸಂಬಂಧಿಯಾದ ಆತ್ಮನಿಗೂ ದೇಹಕ್ಕೂ ತಾದಾತ್ಮ್ಯವನ್ನೇ ಕಲ್ಪಿಸಿ ದೇಹಾತ್ಮನ್ಯಾಯದಿಂದಲೇ ವ್ಯವಹರಿಸುತ್ತಾರೆ. ಆದುದರಿಂದಲೇ ಭಗವದ್ಗೀತೆಯಲ್ಲಿ ಅರ್ಜುನನ ವ್ಯಾಮೋಹವನ್ನು ಕುರಿತು ಕೃಷ್ಣನು

**ಅವಿನಾಶಿ ತು ತದ್ವಿದ್ಧಿ ಯೇನ ಸರ್ವಮಿದಂ ತತಂ ।**
**ವಿನಾಶಮವ್ಯಯಸ್ಯಾಸ್ಯ ನ ಕಶ್ಚಿತ್ಕರ್ತುಮರ್ಹತಿ ॥**

(ಭ. ಗೀ. ೨-೧೭)

ದೇಹಾಂತರ್ಗತನಾದ ಆತ್ಮನು ಬೇರೆ ; ದೇಹವು ಬೇರೆ ; ದೇಹವು ನಶ್ವವಾದುದು, ಆತ್ಮನು ಅವಿನಶ್ವನು, ಅವ್ಯಯನು ಆದುದರಿಂದ ದೇಹಾತ್ಮನ್ಯಾಯದಿಂದ ತಾದಾತ್ಮ್ಯವನ್ನು ಹೇಳಲು ಸಾಧ್ಯವಿಲ್ಲವೆಂದು ಹೇಳಿದ್ದಾನೆ. ಒಂದು ವೇಳೆ, ದೇಹಾತಿರಿಕ್ತನಾದ ಆತ್ಮನ ಅರಿವಿದ್ದರೂ ಸಹ ದೈಹಿಕಸಂಬಧವಿಲ್ಲದ ಆತ್ಮನ ಸಾಕ್ಷಾತ್ಕಾರವು ಕೆಲವರಿಗಿರುವುದೇ ಇಲ್ಲ. ಅದರ ಅರಿವನ್ನು ಕೇವಲ ಅನುಮಾನದಿಂದ ಊಹಿಸುತ್ತಾರೆಯೇ ಹೊರತು ಅನುಭವರೂಪದಲ್ಲಿ ಸಾಕ್ಷಾತ್ಕಾರಮಾಡಿಕೊಳ್ಳಲಾರರು. ದೇಹಾತಿರಿಕ್ತನಾದ ಆತ್ಮನ ಸ್ವರೂಪವನ್ನು ಬೃಹದಾರಣ್ಯಕಾದಿಗಳಲ್ಲಿ ಈರೀತಿ ವರ್ಣಿಸಿದೆ.

**ತಸ್ಯ ಹೈತಸ್ಯ ಪುರುಷಸ್ಯ ರೂಪಂ । ಯಥಾ ಮಹಾರಜನಂ ವಾಸೋ ಯಥಾ ಪ್ರಾಂಡ್ವಾವಿಕಂ ಯಥೇಂದ್ರಗೋಪೋ ಯಥಾಗ್ನ್ಯರ್ಚಿರ್ಯಥಾ ಪುಂಡರೀಕಂ ಯಥಾ ಸಕೃದ್ವಿದ್ಯುತ್ತಂ ಸಕೃದ್ವಿದ್ಯುತ್ತೇವ ಹ ವಾ ಅಸ್ಯ ಶ್ರೀರ್ಭವತಿ ಯ ಏವಂ ವೇದಾಥಾತ ಆದೇಶೋ ನೇತಿ ನೇತಿ ನ ಹ್ಯೇತಸ್ಮಾದಿತಿ ನೇತ್ಯನ್ಯತ್ಪರಮಸ್ತ್ಯಥ ನಾಮಧೇಯಂ ಸತ್ಯಸ್ಯ ಸತ್ಯ ಇತಿ ಪ್ರಾಣಾ ವೈ ಸತ್ಯಂ ತೇಷಾಮೇಷ ಸತ್ಯಂ ॥** (ಬೃ. ಉ. ೨-೩-೬)

ಲಿಂಗಾತ್ಮನಾದ ಈ ಪುರುಷನ ರೂಪವು ಕೇಸರವರ್ಣದ ವಸ್ತ್ರದಂತೆಯೂ, ಶುಭ್ರವಾದ ಉಣ್ಣೆಯಂತೆಯೂ, ಇಂದ್ರಗೋಪದಂತೆಯೂ, ಅಗ್ನಿಜ್ವಾಲೆಯಂತೆಯೂ, ಶುಭ್ರವಾದ ಕಮಲಪುಷ್ಪದಂತೆಯೂ, ವಿದ್ಯುತ್ಪ್ರಕಾಶದಂತೆಯೂ ಇರುತ್ತದೆ, ದೇಹಾತಿರಿಕ್ತನಾದ ಈ ಪರಮಾತ್ಮನ ಸ್ವರೂಪವನ್ನು ಹೀಗೆಂದು ವರ್ಣಿಸುವುದಕ್ಕಾಗುವುದಿಲ್ಲ. ಪ್ರಪಂಚದ ಎಲ್ಲಾ ವಸ್ತುಗಳನ್ನೂ ತೆಗೆದುಕೊಂಡು ' ಇದು ಆ ಪರಮಾತ್ಮನಲ್ಲ ' ' ಅದೂ ಅಲ್ಲ ' ಇತ್ಯಾದಿ ನಿಷೇಧವಾಕ್ಯಗಳಿಂದಲೇ ಅವನ ಸ್ವರೂಪವನ್ನು ವರ್ಣಿಸಬೇಕಾಗಿದೆ. ಆದುದರಿಂದಲೇ " **ನೇತಿ ; ನೇತಿ** " ಎಂಬ ಶ್ರುತಿವಾಕ್ಯದಿಂದ ಆ ಪರಬ್ರಹ್ಮನ ಸ್ವರೂಪವು ವರ್ಣಿತವಾಗಿದೆ. ಒಂದು ದೃಷ್ಟಿಯಿಂದ ನಿಷೇಧಾರ್ಥಕವಾದ ವಾಕ್ಯಗಳಿಂದಲೇ ವರ್ಣಿಸಬೇಕಾಗಿದೆ. ಆದರೆ ಅದು ಕೇವಲ ನಿಷೇಧರೂಪವಾದ ತತ್ತ್ವಮಾತ್ರವಲ್ಲ. ಅಸ್ತಿತ್ವಪ್ರತಿಪಾದನೆಯೂ ಅವರ ಮಹಾಮಹಿಮೆಯನ್ನು ಪ್ರಶಂಸಿಸುತ್ತದೆ.

**ಹಿರಣ್ಮಯೇ ಪರೇ ಕೋಶೇ ವಿರಜಂ ಬ್ರಹ್ಮ ನಿಷ್ಕಲಂ ।**
**ತಚ್ಛುಭ್ರಂ ಜ್ಯೋತಿಷಾಂ ಜ್ಯೋತಿಸ್ತದ್ಯದಾತ್ಮವಿದೋ ವಿದುಃ ॥**

(ಮು. ಉ. ೨-೨-೯)

ಹಿರಣ್ಮಯವಾದ ಎಂದರೆ ವಿಜ್ಞಾನರೂಪವಾದ ತೇಜಸ್ಸಿನಿಂದ ತುಂಬಿದ ಕೋಶದಲ್ಲಿ ಅವಿದ್ಯಾದಿರಜೋರಹಿತವಾದುದೂ ನಿರವಯವವುಳ್ಳದ್ದೂ, ಸೂರ್ಯಾದಿಸಕಲ ಜ್ಯೋತಿಗಳಿಗಿಂತಲೂ ಅಧಿಕವಾದ ಜ್ಯೋತಿಯುಳ್ಳದ್ದೂ ಆದ ಈ ಪರ ತತ್ತ್ವವು ಪ್ರಕಾಶಿಸುತ್ತಿದೆ. ಆದರೆ ಇದನ್ನು ಆತ್ಮವಿತ್ತುಗಳು ಮಾತ್ರ ಅರಿಯಬಲ್ಲರು. ಇತರರಿಂದ ಸಾಧ್ಯವಿಲ್ಲ.

"**ನ ನಿ ಚಿಕ್ಯುಃ**" ಯಾರೂ ಅರಿಯಲಾರರು ಎಂದು ಪ್ರಕೃತವಾದ ಋಕ್ಕಿನಲ್ಲಿ ಹೇಳಿರುವುದು ಈ ಆತ್ಮ ವಿತ್ತುಗಳಿಗೆ ಅನ್ವಯಿಸುವುದಿಲ್ಲ. ಕೇವಲ ಕರ್ಮಪರರಾಗಿ, ಶ್ರವಣರೂಪವಾದ ಜ್ಞಾನದಿಂದಲೇ ತೃಪ್ತರಾಗಿರುವವರಿಗೆ ಈ ನಿಷೇಧವು ಅನ್ವಯಿಸುವುದು. ಈ ನಿಷೇಧದಲ್ಲಿ ಆತ್ಮಜ್ಞಾನವು ಎಷ್ಟು ಕಠಿಣವಾದ ಸಾಧನೆಯಿಂದ ಲಭ್ಯವಾಗ ತಕ್ಕದ್ದೆಂಬ ವಿಷಯವನ್ನು ಮಾತ್ರ ತಿಳಿಸುತ್ತದೆ. ಆ ಸಾಧನೆಯ ಕ್ಲೇಶವನ್ನು ವರ್ಣಿಸುತ್ತಲೂ, ಕೇವಲ ಆ ಸಾಧನೆ ಯಿಂದ ಮಾತ್ರ ಬ್ರಹ್ಮತತ್ತ್ವವನ್ನು ತಿಳಿಯಬಹುದೇ ವಿನಾ ಉಳಿದ ಮಾರ್ಗದಿಂದ ಸಾಧ್ಯವೇ ಇಲ್ಲವೆಂದೂ ಕಠೋಪ ನಿಷತ್ತಿನಲ್ಲಿ ಈ ರೀತಿ ತಿಳಿಸಿದೆ.

**ಉತ್ತಿಷ್ಠತ ಜಾಗ್ರತ ಪ್ರಾಪ್ಯ ವರಾನ್ನಿಬೋಧತ ।**
**ಕ್ಷುರಸ್ಯ ಧಾರಾ ನಿಶಿತಾ ದುರತ್ಯಯಾ ದುರ್ಗಂ ಪಥಸ್ತತ್ಕವಯೋ ವದಂತಿ ॥**

(ಕಠ. ೧-೩-೧೪)

ಎಲ್ಲರೂ ಏಳಿರಿ, ಎಚ್ಚರವಾಗಿರಿ, ಬ್ರಹ್ಮಜ್ಞರನ್ನು ಆಶ್ರಯಿಸಿ ನೀವೂ ಆ ಬ್ರಹ್ಮತತ್ತ್ವವನ್ನು ತಿಳಿಯಿರಿ. ಆ ಆತ್ಮನು ಕೇವಲ ಸೂಕ್ಷ್ಮವಾದ ಬುದ್ಧಿಗೆ ಮಾತ್ರ ಗೋಚರನಾಗತಕ್ಕವನು. ಸಾಣೆಹಿಡಿದು ಹರಿತವಾಗಿರುದ ಕ್ಷೌರದ ಕತ್ತಿಯ ಅಲಗಿನ ಮೇಲೆ ಕಾಲನ್ನಿಟ್ಟುಕೊಂಡು ನಡೆಯುವುದು ಎಷ್ಟು ಕಠಿಣವಾದುದೋ, ಬ್ರಹ್ಮವನ್ನು ತಿಳಿಯುವ ಮಾರ್ಗವೂ ಕೂಡ ಅಷ್ಟೇ ಕಷ್ಟವೆಂದು ತಿಳಿದವರು ಹೇಳುತ್ತಾರೆ. ಅದೇತಕ್ಕೆಂದರೆ, ಆ ಪರಬ್ರಹ್ಮನು,

**ಅಶಬ್ದಮಸ್ಪರ್ಶಮರೂಪಮವ್ಯಯಂ ತಥಾರಸಂ ನಿತ್ಯಮಗಂಧವಚ್ಚ ಯತ್ ।**
**ಅನಾದ್ಯನಂತಂ ಮಹತಃ ಪರಂ ಧ್ರುವಂ ನಿಚಾಯ್ಯ ತನ್ಮೃತ್ಯುಮುಖಾತ್ಪ್ರಮುಚ್ಯತೇ ॥**

(ಕಠ. ೧-೩-೧೫)

ಅದು ಶಬ್ದವಿಲ್ಲದುದು, ಸ್ಪರ್ಶವಿಲ್ಲದುದು, ರೂಪವಿಲ್ಲದುದು. ಅವ್ಯಯವು ರೂಪರಹಿತವಾದುದು. ಗಂಧರಹಿತ ವಾದುದು. ಆದರೂ ಅದು ಅನಾದ್ಯನಂತವು ಧ್ರುವವಾದದ್ದು. ಇಂತಹ ಪರತತ್ತ್ವವನ್ನು ಅರಿಯಬೇಕಾದರೆ ಸಾಧನೆಯು ಅತ್ಯಂತ ಕಠಿಣವಾದುದಾಗಿರಬೇಕು. ಈ ಸಾಧನೆಯಿಂದ ಅರಿತರೆ ಮೃತ್ಯುಮುಖದಿಂದ ಪಾರಾಗಬಹುದು.

ಈ ವಿಧವಾಗಿ ಲೌಕಿಕದೃಷ್ಟಾಂತಗಳಿಂದ ನಿಷೇಧರೂಪದಲ್ಲಿಯೂ ದೃಷ್ಟಾಂತರಹಿತವಾಗಿ ಅಲೌಕಿಕವಾದ ಸ್ವರೂಪವರ್ಣನದಿಂದ ಅಸ್ತಿತ್ವರೂಪದಲ್ಲಿಯೂ ವರ್ಣಿತವಾಗಿರುವ ಪರಬ್ರಹ್ಮತತ್ತ್ವವನ್ನು ಅರಿಯುವ ಆವಶ್ಯಕತೆ ಯನ್ನು ಸೂಚಿಸುತ್ತಾ ಪ್ರಕೃತವಾದ ಋಕ್ಕಿನಲ್ಲಿ ಅಂತಹ ತತ್ತ್ವಜ್ಞರು ವಿರಳವೆಂದು ತೋರಿಸುವುದಕ್ಕಾಗಿ "**ನ ನಿ ಚಿಕ್ಯುರನ್ಯಂ**" ಎಂದು ತಿಳಿಸಿದೆ.

### ವ್ಯಾಕರಣಪ್ರಕ್ರಿಯಾ

**ಅಪಾಙ್**—ಅಪ ಅಂಚತಿ ಇತಿ ಅಪಾಙ್. ಅಂಚು ಗತಿಪೂಜನಯೋಃ ಧಾತು. **ಋತ್ವಿಕ್‍ದಧೃಕ್**—ಎಂಬುದರಿಂದ ಕ್ವಿನ್ ಪ್ರತ್ಯಯ.

**ಗೃಭೀತಃ**—ಗ್ರಹ ಉಪಾದಾನೇ. ಧಾತು. ಕರ್ಮಣಿಯಲ್ಲಿ ಕ್ತಪ್ರತ್ಯಯ. **ಆರ್ಧಧಾತುಕಸ್ಯೇಡ್ವಲಾದೇಃ** ಎಂಬುದರಿಂದ ಇಡಾಗಮ. **ಗ್ರಹೋ ಲಿಟಿ ದೀರ್ಘಃ** (ಪಾ. ಸೂ. ೭-೨-೩೭) ಎಂಬುದರಿಂದ ಅದಕ್ಕೆ ದೀರ್ಘ. **ಗ್ರಹಿಜ್ಯಾವಯಿವ್ಯಧಿ**—(ಪಾ. ಸೂ. ೬-೧-೧೬) ಸೂತ್ರದಿಂದ ಸಂಪ್ರಸಾರಣ. **ಹೃಗ್ರಹೋರ್ಭಶ್ಛಂದಸಿ** ಎಂಬ ವಚನದಿಂದ ಹಕಾರಕ್ಕೆ ಭತ್ವ. ಪ್ರತ್ಯಯಸ್ವರದಿಂದ ಅಂತೋದಾತ್ತವಾಗುತ್ತದೆ.

**ಶಶ್ವಂತಾ**—**ಸುಪಾಂ ಸುಲುಕ್**—ಎಂಬುದರಿಂದ ದ್ವಿವಚನಕ್ಕೆ (ಔ) ಆಕಾರಾದೇಶ.

**ವಿಯಂತಾ**—ಇಣ್ ಗತೌ. ಧಾತು. ಲಟಿಗೆ ಶತ್ರಾದೇಶ. **ಇಣೋ ಯಣ್** (ಪಾ. ಸೂ ೬-೪-೮೧) ಎಂಬುದರಿಂದ ಧಾತುವಿಗೆ ಯಣಾದೇಶ. ದ್ವಿವಚನಕ್ಕೆ ಹಿಂದಿನಂತೆ ಆಕಾರಾದೇಶ. ಉಗಿತ್ತಾದುದರಿಂದ ನುಮಾಗಮ. ಕೃದುತ್ತರಪದ ಪ್ರಕೃತಿಸ್ವರ ಬರುತ್ತದೆ.

**ಚಿಕಿತ್ಯುಃ**—ಕಿ ಜ್ಞಾನೇ. ಧಾತು. ಛಾಂದಸವಾಗಿ ವರ್ತಮಾನಾರ್ಥದಲ್ಲಿ ಲಿಟ್. ಪ್ರಥಮಪುರುಷಬಹುವಚನಕ್ಕೆ **ಪರಸ್ಮೈಪದಾನಾಂ**—ಎಂಬುದರಿಂದ ಉಸಾದೇಶ. ಲಿಣ್ನಿಮಿತ್ತವಾಗಿ ದ್ವಿತ್ವಾದಿಗಳು ಬಂದಾಗ ಯಣಾದೇಶ. ತಿಙಂತನಿಘಾತಸ್ವರ ಬರುತ್ತದೆ. || ೩೮ ||

। ಸಂಹಿತಾಪಾಠಃ ।

ಋಚೋ ಅಕ್ಷರೇ ಪರಮೇ ವ್ಯೋಮನ್ಯಸ್ಮಿನ್ದೇವಾ ಅಧಿ ವಿಶ್ವೇ ನಿಷೇದುಃ ।
ಯಸ್ತನ್ನ ವೇದ ಕಿಮೃಚಾ ಕರಿಷ್ಯತಿ ಯ ಇತ್ತದ್ವಿದುಸ್ತ ಇಮೇ ಸಮಾಸತೇ || ೩೯ ||

। ಪದಪಾಠಃ ।

ಋಚಃ । ಅಕ್ಷರೇ । ಪರಮೇ । ವಿಽಓಮನ್ । ಯಸ್ಮಿನ್ । ದೇವಾಃ । ಅಧಿ । ವಿಶ್ವೇ । ನಿಽಸೇದುಃ ।
ಯಃ । ತತ್ । ನ । ವೇದ । ಕಿಂ । ಋಚಾ । ಕರಿಷ್ಯತಿ । ಯೇ । ಇತ್ । ತತ್ । ವಿದುಃ । ತೇ । ಇಮೇ । ಸಂ । ಆಸತೇ || ೩೯ ||

## ಸಾಯಣಭಾಷ್ಯಂ

ಪೂರ್ವಮಂತ್ರೇ ದೇಹಾತ್ಮಜೀವಾತ್ಮಾನಾವುಕ್ತೌ । ತಯೋರನ್ಯಸ್ಯ ಜೀವಾತ್ಮನಃ ಪಾರಮಾರ್ಥಿಕಂ ರೂಪಮಸ್ತಿ ತದತ್ರೋಚ್ಯತೇ । ಋಚೋ ಅಕ್ಷರೇ । ಅತ್ರ ಋಕ್ಛಬ್ದೇನ ಋಕ್ಪ್ರಧಾನಭೂತಾಃ ಸಾಂಗಾಪರವಿದ್ಯಾತ್ಮಕಾಶ್ಚತ್ವಾರೋ ವೇದಾ ಉಚ್ಯಂತೇ । ಋಗಾದೀನಾಮಪರವಿದ್ಯಾತ್ವಂ ಮುಂಡಕೇ ಶ್ರೂಯತೇ । ದ್ವೇ ವಿದ್ಯೇ ವೇದಿತವ್ಯೇ ಇತಿ ಪ್ರತಿಜ್ಞಾಯ ತತ್ರಾಪರಾ ಋಗ್ವೇದೋ ಯಜುರ್ವೇದಃ ಸಾಮವೇದಃ । ಮುಂ ೧. ೧. ೫. । ಇತ್ಯಾದಿನಾ । ತಸ್ಯಾಃ ಸಂಬಂಧಿನ್ಯಕ್ಷರೇಽದೃಶ್ಯಾದಿಗುಣಕೇಽಕ್ಷರಣರಹಿತೇಽನಶ್ವರೇ ನಿತ್ಯೇ ಸರ್ವತ್ರ ವ್ಯಾಪ್ತೇ ಬ್ರಹ್ಮಣಿ । ಅಕ್ಷರಶಬ್ದಸ್ಯ ಬ್ರಹ್ಮವಾಚಕತ್ವಂ ಏತದ್ವೈ ತದಕ್ಷರಸ್ಯ ಪ್ರಶಾಸನೇ ಗಾರ್ಗಿ । ಬೃ. ಉ. ೩-೮. । ಯಯಾ ತದಕ್ಷರಮಧಿಗಮ್ಯತೇ । ಮುಂ. ಉ. ೧-೧-೫ । ಯೇನಾಕ್ಷರಂ ಪುರುಷಂ ವೇದ ಸತ್ಯಂ । ಮುಂ. ಉ. ೧-೨-೧೩ । ಇತ್ಯಾದಿಶ್ರುತಿಷು ಪ್ರಸಿದ್ಧಂ । ಋಗಕ್ಷರಯೋಃ ಪ್ರತಿಪಾದ್ಯಪ್ರತಿಪಾದಕಭಾವಃ ಸಂಬಂಧಃ । ಸರ್ವೈರ್ವೇದೈಃ ಖಲು ಬ್ರಹ್ಮಾಧಿಗಮ್ಯತೇ ತಂ ತ್ವೌಪನಿಷದಂ ಪುರುಷಂ ಪೃಚ್ಛಾಮಿ । ಶತ. ೧೪-೬-೯-೨೮. । ಇತ್ಯಾದಿಶ್ರುತೇಃ । ನನೂಪನಿಷದ್ಭಾಗಾನಾಂ ತಥಾಸ್ತು । ಇತರೇಷಾಂ ತು ಕಥಂ ಬ್ರಹ್ಮವಿಷಯತ್ವಮಿತಿ ಉಚ್ಯತೇ । ಯದ್ಯಪೀತರಭಾಗಾನಾಂ ಯಾಗಾದಿವಿಷಯತ್ವಂ ತಥಾಪಿ ಬುದ್ಧಿಃ ಶುದ್ಧ್ಯುತ್ಪಾದನದ್ವಾರಾ ವೇದನಸಾಧನತ್ವೇನ ಬ್ರಹ್ಮವಿಷಯಾ ಭವಿಷ್ಯತಿ ವೇದಾನುವಚನೇನ ಬ್ರಾಹ್ಮಣಾ ವಿವಿದಿಷಂತಿ । ಬೃ. ಉ. ೪. ೪. ೨೨. । ಇತ್ಯಾದಿಶ್ರುತೇಃ । ತದೇವ ವಿಶೇಷ್ಯತೇ । ಪರಮ ಉತ್ಕೃಷ್ಟೇ ನಿರತಿಶಯೇ ವ್ಯೋಮನ್ ವ್ಯೋಮನಿ ವ್ಯೋಮಸದೃಶೇ । ಅಲೇಪತ್ವನೀರೂಪತ್ವವ್ಯಾಪಿತ್ವಾದಿಸಾದೃಶ್ಯೇನ ವ್ಯೋಮೇತ್ಯುಕ್ತಂ । ಯದ್ವಾ । ವಿಶೇಷೇಣ ಸರ್ವಸ್ಯ ರಕ್ಷಕೇ । ನಿರಧಿಷ್ಠಾನ ಕಸ್ಯಚಿದಸ್ತಿ ಸ್ಥಾಧ್ಯಸ್ತಸ್ಯ ಸರ್ವಸ್ಯಾಧಿಷ್ಠಾನತ್ವೇನ ರಕ್ಷಕತ್ವಾತ್ । ತಾದೃಶೇ ತಸ್ಮಿನ್ ಸರ್ವಮಧ್ಯಸ್ತಮಿತ್ಯರ್ಥಃ । ಪುನಸ್ತದೇವ ವಿಶೇಷ್ಯತೇ । ಯಸ್ಮಿನ್ಪರಮಾತ್ಮನಿ ವಿಶ್ವೇ ಸರ್ವೇ ದೇವಾ ಅಧಿ ನಿಷೇದುಃ ನಿಷೀದಂತಿ ಆಶ್ರಿತ್ಯ ತಿಷ್ಠಂತಿ ತಸ್ಮಿನ್ । ಯದ್ವಾ । ಉಕ್ತಲಕ್ಷಣೇ ವಸ್ತುನ್ಯೃಗುಪಲಕ್ಷಿತಾಃ ಸರ್ವೇ ಸಾಂಗಾ ವೇದಾಃ ಪರ್ಯವಸಿತಾ ಇತ್ಯರ್ಥಃ । ಯಃ ಯೋ ಮರ್ತ್ಯಸ್ತತ್ತಾದೃಶಂ ದೇವಾದೀನಾಂ ಸ್ವರೂಪಲಾಭಾಸ್ಪದಂ ಕೃತ್ಸ್ನವೇದೈಸ್ತಾತ್ಪರ್ಯೇಣ ಪ್ರತಿಪಾದ್ಯಂ ಯದ್ವಸ್ತು ನ ವೇದ ನ ಜಾನಾತಿ ಸ ಮರ್ತ್ಯ ಋಚಾ ಪೂರ್ವೋಕ್ತೇನರ್ಗಾದಿಶಬ್ದಜಾಲೇನ ಕಿಂ ಕರಿಷ್ಯತಿ । ವೇದನಸಾಧನೇನ ವೇದೇನ ವೇದ್ಯಮವಿದಿತ್ವಾ ಕಿಂ ಸಾಧಯತೀತ್ಯರ್ಥಃ । ಪ್ರಯೋಜನಾಭಾವಾತ್ಸರ್ವಸ್ಯಾಪಿ ವೇದಸ್ಯ ನೈಷ್ಫಲ್ಯಾದಿತಿ ಭಾವಃ । ಅಥವಾ ಯೋಽಕ್ಷರಮವಿದಿತ್ವಾ ಕರ್ಮಣಾಂ ಕರ್ತಾ ಭವತಿ ಯಾಗಾದೀನನುತಿಷ್ಠತಿ ತೇನ ಕಿಂಚಿದಪಿ ಕರ್ಮ ಕೃತಂ ನ ಭವತೀತ್ಯರ್ಥಃ । ಯ ಇದ್ಯ ಏವ ತತ್ತತ್ತ್ವಂ ವಿದುಃ ಜಾನಂತಿ ತ ಇಮೇ ಸಮಾಸತೇ । ತ ಏವೇಮೇ ಜ್ಞಾತಾರಃ ಸಮಾಸತೇ । ಸಮ್ಯಕ್ತಿಷ್ಠಂತಿ । ಅಪುನರಾವೃತ್ತ್ಯಾ ಸ್ವರೂಪೇಽವಸ್ಥಾನಂ ಸಮಾಸನಂ । ಯದ್ವಾ । ಯೇ ವಿದುರಿದ್ಯೇ ಜಾನಂತ್ಯೇವ ನಾನುತಿಷ್ಠಂತಿ । ಇಚ್ಛಬ್ದೋಽವಧಾರಣೇ । ತ ಇಮೇ ತ ಏವ ಸಮಾಸತೇ । ಗವಾಮಯನಾದಿಸಹಸ್ರಸಂವತ್ಸರಸತ್ರಪರ್ಯಂತಾನಿ ಸಹೋಪಯಂತಿ । ಸಹಾರ್ಥೇ ಸಂಶಬ್ದಃ । ಸತ್ರಾದಧಿಕಾನಾಂ ಯಾಗಾನಾಮಭಾವಾತ್ ತೇಷಾಮಪಿ ಫಲಮೇತದ್ಜ್ಞಾನೇನೈವ ಪ್ರಾಪ್ತಂ ಭವತೀತ್ಯರ್ಥಃ । ಕರ್ತೄಣಾಂ ಬಹುತ್ವಾದ್ಬಹುವಚನನಿರ್ದೇಶಃ ॥ ಅನ್ಯೇ ತ್ವನ್ಯಥಾ ವರ್ಣಯಂತಿ । ಋಚಃ । ಋಗರ್ಚನೀಯಮಾದಿತ್ಯ-

ಮಂಡಲಮೃಗಾದಿಮಯಂ ವಾ । ಋಗ್ಭಿಃ ಪೂರ್ವಾಹ್ಣೇ ದಿವಿ ದೇವ ಆದಿತ್ಯೋ ವಾ ಏಷ ಏತನ್ಮಂಡಲಂ ತಪತಿ ತತ್ರ ತಾ ಋಚ ಇತ್ಯಾದಿಶ್ರುತೇಃ । ತಸ್ಯ ಸಂಬಂಧಿನ್ಯಕ್ಷರೇ ಪರಮೇ ವ್ಯೋಮನ್ನಿತ್ಯುಕ್ತಲಕ್ಷಣೇ ಬ್ರಹ್ಮಣಿ ಯ ಏಷೋಽಂತರಾದಿತ್ಯೇ ಹಿರಣ್ಮಯಃ ಪುರುಷೋ ದೃಶ್ಯತ ಇತ್ಯಾದಿಶ್ರುತ್ಯುಕ್ತಸ್ವರೂಪೇ ಯಸ್ಮಿನ್ ಸರ್ವೇ ದೇವಾ ದ್ಯೋತಮಾನಾ ರಶ್ಮಯೋ ನಿಷೇದುಃ ವರ್ತಂತೇ । ಯ ಏತನ್ನ ವೇದ ಸ ಕೇವಲಯರ್ಚಾ ಕಿಂ ಕರಿಷ್ಯತಿ । ಯೇ ಜಾನಂತಿ ಭಾವಯಂತಿ ತ ಏವ ವಿದ್ವಾಂಸಃ ಸಮಾಸತೇ । ಭೂಮ್ಯಾಂ ಸುಖೇನ ರೋಗಾದಿರಹಿತಾ ಭೋಗಿನಃ ಸಂತಶ್ಚಿರಕಾಲಂ ಜೀವಂತಿ ॥ ಅಪರೇ ಪ್ರಕಾರಾಂತರೇಣ ಪ್ರತಿಪಾದಯಂತಿ । ಋಚೋಽಕ್ಷರ ಋಗುಪಲಕ್ಷಿತಸರ್ವವೇದಸಂಬಂಧಿನ್ಯಕ್ಷರೇ ಪ್ರಣವರೂಪ ಓಂಕಾರೇಽವಿನಾಶಿನಿ ಸರ್ವವೇದೇಷು ವ್ಯಾಪ್ತೇ ವಾ । ಪ್ರಣವಸ್ಯ ಸರ್ವವೇದಸಾರತ್ವಂ ಬ್ರಾಹ್ಮಣೇ ಶ್ರೂಯತೇ । ತಾನ್ವೇದಾನಭ್ಯತಪತ್ತೇಭ್ಯೋಽಭಿತಪ್ತೇಭ್ಯಸ್ತ್ರಯೋ ವರ್ಣಾ ಅಜಾಯಂತಾಕಾರ ಉಕಾರೋ ಮಕಾರ ಇತಿ ತಾನೇಕಧಾ ಸಮಭರತ್ ತದೇತದೋಮಿತಿ । ಐ. ಬ್ರಾ. ೫–೩೨. । ಇತಿ । ಪರಮೇ ನಿರತಿಶಯೇ । ನ ಹಿ ಪ್ರಣವಾದಧಿಕಂ ಕಿಂಚಿನ್ಮಂತ್ರಜಾತಮಸ್ತಿ ತ್ರಿಕಾಲಾತೀತಸ್ಯ ಬ್ರಹ್ಮಣಃ ಪ್ರತಿಪಾದಕತ್ವಾತ್ । ಯಚ್ಚಾನ್ಯತ್ತ್ರಿಕಾಲಾತೀತಂ ತದಪ್ಯೋಂಕಾರ ಏವ ಓಮಿತಿ ಬ್ರಹ್ಮ । ತೈ. ಆ. ೭. ೮. । ಇತ್ಯಾದಿಶ್ರುತೇಃ । ವೇದಾನಾಂ ಪ್ರಣವಸ್ಯ ಸ್ಥಾನಪ್ರತಿನಿಧಿಭಾವಃ ಸಂಬಂಧೋ ಯ ಋಚೋಽಧೀತ ಇತ್ಯಾದ್ಯುಪಕ್ರಮ್ಯ ಯಃ ಪ್ರಣವಮಧೀತೇ ಸ ಸರ್ವಮಧೀತೇ ಓಮಿತಿ ಪ್ರತಿಪದ್ಯತ ಏತದ್ವೈ ಯಜುಸ್ತ್ರಯೀಂ ವಿದ್ಯಾಂ ಪ್ರತ್ಯೇಷಾ ವಾಗೇತತ್ಪರಮಮಕ್ಷರಂ । ತೈ ಆ. ೨. ೧೧. ೪. । ಇತ್ಯಾದಿಶ್ರುತೇಃ । ಯಸ್ಮಿನ್ವಿಶ್ವೇ ಸರ್ವೇ ದೇವಾ ಅಧಿ ನಿಷೇದುಃ । ಪ್ರಣವಸ್ಯ ಸರ್ವಮಂತ್ರಾತ್ಮಕತ್ವಾತ್ ಮಂತ್ರೇಷು ಸರ್ವದೇವತಾನಾಂ ನಿವಾಸಾತ್ ಸರ್ವದೇವನಿವಾಸತ್ವಂ । ಬ್ರಹ್ಮಾಧಿಷ್ಠಾನತ್ವಾದ್ವಾ ಬ್ರಹ್ಮಣಿ ಸರ್ವದೇವಾನಾಂ ನಿವಾಸಾತ್ । ಶಿಷ್ಟಮುಪಶಿಷ್ಟಂ ॥ ಅಯಂ ಮಂತ್ರೋ ನಿರುಕ್ತೇ ವ್ಯಾಖ್ಯಾತಃ । ನಿ. ೧೩. ೧೦. ॥ ಅಪರೇ ತ್ವಪರಥಾ ವರ್ಣಯಂತಿ । ಋಚಃ । ಋಗರ್ಚನೀಯೋ ಜೀವಃ । ತಸ್ಯ ಸಂಬಂಧಿನ್ಯಕ್ಷರೇಽವಿನಾಶೇ ವ್ಯಾಪ್ತೇ ವಾ ಪರಮಾತ್ಮನೀತ್ಯರ್ಥಃ । ಅತ ಏವ ಜೀವಾಪೇಕ್ಷಯಾ ಪರಮ ಉತ್ಕೃಷ್ಟೇ ನಿರುಪಾಧಿಕೇ ವ್ಯೋಮನ್ ವಿಶೇಷೇಣ ಸರ್ವಾಧಿಷ್ಠಾನತ್ವೇನ ರಕ್ಷಕೇ ವ್ಯೋಮಸದೃಶೇ ವಾ । ಯಸ್ಮಿನ್ಪರಮಾತ್ಮನಿ ದೇವಾ ಗಮನವಂತೋ ವ್ಯವಹರಂತೋ ವೇಂದ್ರಿಯಸಂಜ್ಞಕಾ ವಿಶ್ವೇ ಸರ್ವೇಽಪ್ಯಧಿ ನಿಷೇದುಃ ನಿಷೀದಂತಿ ಆಶ್ರಿತ್ಯ ವರ್ತಂತೇ । ಯಸ್ತನ್ನ ವೇದ ನ ಜಾನಾತಿ ಉಪಾಧ್ಯಂಶಪರಿತ್ಯಾಗೇ ತದೇವ ಸ್ವರೂಪಮಿತಿ ನ ಪಶ್ಯತಿ ಸ್ಥೂಲೋ ಜನಃ ಕಿಮೃಚಾ ಕರಿಷ್ಯತಿ । ಕೇವಲೇನ ಜೀವೇನ ಜೀವಭಾವೇನ ಕಿಂ ಫಲಂ ಪ್ರಾಪ್ಸ್ಯತಿ । ಜನನಮರಣಾದಿಕ್ಲೇಶಸ್ಯಾತ್ಯಾಗಾದಿತಿ ಭಾವಃ । ಯೇ ತತ್ತತ್ತ್ವಂ ವಿದುಸ್ತ ಇತ್ಯಾದಿ ಸಿದ್ಧಂ ॥

### ಪ್ರತಿಪದಾರ್ಥ

**ಋಚಃ**—ಋಕ್ಪ್ರಧಾನವಾದ ವೇದಗಳಿಂದ ಪ್ರತಿಪಾದಿತನಾದವನೂ । **ಅಕ್ಷರೇ**—ನಾಶರಹಿತನಾದವನೂ । **ಪರಮೇ** ಉತ್ಕೃಷ್ಟವಾದ । **ವ್ಯೋಮನಿ**—(ಸರ್ವ)ರಕ್ಷಕನಾದವನೂ ಆದ । **ಯಸ್ಮಿನ್**—ಯಾವ ಈ ಪರಮಾತ್ಮನಲ್ಲಿ । **ವಿಶ್ವೇ ದೇವಾಃ**—ಸಕಲ ದೇವತೆಗಳೂ । **ಅಧಿ ನಿಷೇದುಃ**—ಆಶ್ರಯವನ್ನು ಪಡೆದಿರುತ್ತಾರೆ । **ಯಃ**—ಯಾವನು । **ತತ್**—ವೇದಾಧ್ಯಯನವು ಇಂತಹ ಪರತತ್ತ್ವವನ್ನು ತಿಳಿಯುವುದಕ್ಕಾಗಿಯೇ ಎಂಬುದಾಗಿ । **ನ**

**ವೇದ**—ಅರಿಯುವುದಿಲ್ಲವೋ । ( ಸಃ—ಆ ಮಾನವನು) । **ಋಚಾ**—(ಲಕ್ಷ್ಯವನ್ನೇ ಮುಟ್ಟದ) ಕೇವಲ ಋಗಾದಿಗಳ ಪಠನದಿಂದ । **ಕಿಂ ಕರಿಷ್ಯತಿ**—ಯಾವ ಪ್ರಯೋಜನವನ್ನು ಪಡೆಯಬಲ್ಲನು ? । **ಯ ಇತ್**—ಯಾರೇ ಆದರೂ । **ತತ್**—ಈ ತತ್ತ್ವವನ್ನು । **ವಿದುಃ**—ತಿಳಿಯುತ್ತಾರೆಯೋ । **ತೇ ಇಮೇ**—ಆ ಜ್ಞಾನಿಗಳು ಮಾತ್ರ । **ಸಮಾಸತೇ**—ಬ್ರಹ್ಮೈಕ್ಯವನ್ನು ಪಡೆಯುತ್ತಾರೆ ।

ಭಾವಾರ್ಥ

ಋಕ್ಪ್ರಧಾನವಾದ ವೇದಗಳಿಂದ ಪ್ರತಿಪಾದಿತನಾದವನೂ, ನಾಶರಹಿತನೂ, ಉತ್ಕೃಷ್ಟವಾದ ರಕ್ಷಕನಾದವನೂ ಆದ ಈ ಪರಮಾತ್ಮನಲ್ಲಿ ಸಕಲದೇವತೆಗಳೂ ಆಶ್ರಯವನ್ನು ಪಡೆದಿರುತ್ತಾರೆ. ಯಾವ ಮಾನವನು ವೇದಾಧ್ಯಯನದ ಗುರಿಯು ಪರತತ್ತ್ವವನ್ನರಿಯುವುದರಲ್ಲಿದೆಯೆಂದು ತಿಳಿಯುವುದಿಲ್ಲವೋ ಅವನು ಕೇವಲ ಋಗಾದಿಗಳ ಪಠನದಿಂದ ಯಾವ ಪ್ರಯೋಜನವನ್ನೂ ಹೊಂದುವುದಿಲ್ಲ. ಈ ತತ್ತ್ವವನ್ನು ತಿಳಿಯುವ ಜ್ಞಾನಿಗಳು ಮಾತ್ರ ಬಹ್ಮೈಕ್ಯವನ್ನು ಪಡೆಯುತ್ತಾರೆ.

## English Translation

All the gods have taken their seats upon this supreme heaven, the imperishable (text) of the veda : what will he, who knows not this, do with the Veda ? but they who do know it, they are perfect.

### । ವಿಶೇಷವಿಷಯಗಳು ।

ಈ ಋಕ್ಕಿಗೆ ಮೂರು ವಿಧವಾದ ಅರ್ಥಗಳನ್ನು ಹೇಳಬಹುದು. ಎಲ್ಲಾ ಅರ್ಥಗಳೂ **ಋಚಃ** ಎಂಬ ಪದದ ನಿರ್ವಚನವನ್ನನುಸರಿಸುತ್ತವೆ **ಋಚಃ** ಎಂಬ ಪದಕ್ಕೆ ;

೧) ಋಗಾದಿವೇದಗಳೆಂದೂ,

೨) ಅರ್ಚನೀಯವಾದ ಆದಿತ್ಯಮಂಡಲವೆಂದೂ,

೩) ಅರ್ಚನೀಯವಾದ ಜೀವವೆಂದೂ

ಮೂರು ವಿಧವಾದ ಅರ್ಥವನ್ನು ಹೇಳುವುದು ಸಾಧ್ಯವೆಂದು ಸಾಯಣರು ತೋರಿಸಿದ್ದಾರೆ. ಇವುಗಳಲ್ಲಿ ಋಗಾದಿವೇದಗಳೆಂದು ಮೊದಲನೆಯ ಅರ್ಥವನ್ನು ತೆಗೆದುಕೊಂಡರೆ ;

೧) **ಋಚಃ—ಋಕ್‌ಶಬ್ದೇನ ಋಕ್ಪ್ರಧಾನಭೂತಾಃ ಸಾಂಗಾಪರವಿದ್ಯಾತ್ಮಕಾಶ್ಚತ್ವಾರೋ ವೇದಾಃ ಉಚ್ಯಂತೇ ।** ಋಕ್‌ಶಬ್ದದಿಂದ ಋಕ್ಕೇ ಪ್ರಧಾನವಾಗಿರತಕ್ಕವೂ, ವೇದಾಂಗಗಳಿಂದ ಕೂಡಿದವೂ ಆದ ನಾಲ್ಕು ವೇದಗಳೆಂದರ್ಥ. ಇವುಗಳಿಗೆ ಅಪರವಿದ್ಯೆಗಳೆಂದು ಹೆಸರು. ವಿದ್ಯೆಯ ವಿಭಾಗಗಳನ್ನು ತೋರಿಸುತ್ತಾ ಮುಂಡಕೋಪನಿಷತ್ತಿನಲ್ಲಿ **ಪರವಿದ್ಯಾ** ಮತ್ತು **ಅಪರವಿದ್ಯಾ** ಎಂಬ ಎರಡು ಪಂಗಡಗಳನ್ನಾಗಿ ವಿಭಾಗಿಸಿ ಅವುಗಳಲ್ಲಿ,

> **ದ್ವೇ ವಿದ್ಯೇ ವೇದಿತವ್ಯೇ ಇತಿ ಹ ಸ್ಮ ಯದ್ಬ್ರಹ್ಮವಿದೋ ವದಂತಿ ಪರಾ ಚೈವಾಪರಾ ಚ ।**
> **ತತ್ರಾಪರಾ ಋಗ್ವೇದೋ ಯಜುರ್ವೇದಃ ಸಾಮವೇದೋಽಥರ್ವವೇದಃ ಶಿಕ್ಷಾ ಕಲ್ಪೋ ವ್ಯಾಕರಣಂ ನಿರುಕ್ತಂ ಛಂದೋ ಜ್ಯೋತಿಷಮಿತಿ । ಅಥ ಪರಾ ಯಯಾ ತದಕ್ಷರಮಧಿಗಮ್ಯತೇ ।**
> (ಮು. ಉ. ೧-೧-೪, ೫)

**" ಕಸ್ಮಿನ್ನು ಭಗವೋ ವಿಜ್ಞಾತೇ ಸರ್ವಮಿದಂ ವಿಜ್ಞಾತಂ ಭವತೀತಿ "** " ಯಾವ ತತ್ತ್ವವನ್ನು ಅರಿತರೆ ಸಕಲ ತತ್ತ್ವಗಳ ಜ್ಞಾನವೂ ಬರುತ್ತದೆಯೋ ಆ ತತ್ತ್ವವನ್ನು ನನಗೆ ಉಪದೇಶಿಸು " ಎಂದು ಶೌನಕನು ಅಂಗಿರಸ್ಸನ್ನು ಪ್ರಾರ್ಥಿಸಿದಾಗ ಅಂಗಿರಸ್ಸು ಶೌನಕನಿಗೆ ಬ್ರಹ್ಮವಿದ್ಯೆಯನ್ನುಪದೇಶಿಸುತ್ತಾನೆ. ಆಗ ಆ ವಿದ್ಯೆಯಲ್ಲಿ ಎರಡು ವಿಭಾಗ ವಿದೆಯೆಂದು ತಿಳಿಸುತ್ತಾ ಪುರುಷನು ತಿಳಿಯಬೇಕಾದುದು ಎರಡು ವಿದ್ಯೆಗಳು. ಒಂದು ಪರವಿದ್ಯೆ ; ಇನ್ನೊಂದು ಅಪರವಿದ್ಯೆ. ಇವುಗಳಲ್ಲಿ ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವವೇದ, ಶಿಕ್ಷೆ, ಕಲ್ಪ, ವ್ಯಾಕರಣ, ನಿರುಕ್ತ, ಛಂದಸ್ಸು, ಮತ್ತು ಜ್ಯೋತಿಷ ಇವು ಅಪರವಿದ್ಯೆ. ಮತ್ತು ಯಾವುದರಿಂದ ಅಕ್ಷರವು (ನಾಶರಹಿತವಾದ ಬ್ರಹ್ಮ ಜ್ಞಾನವು) ಪ್ರಾಪ್ತವಾಗುತ್ತದೆಯೋ ಅದು ಪರವಿದ್ಯೆ ಎಂದು ಎರಡು ಭಾಗಗಳನ್ನು ಮಾಡಿ ತೋರಿಸಿದೆ. **ತಸ್ಯಾಃ ಸಂಬಂಧಿನಿ ಅಕ್ಷರೇ** ಆ ಅಪರವಿದ್ಯಾ ರೂಪವಾದ ಋಗಾದಿಗಳು ಪ್ರತಿಪಾದಿಸುವ ಅಕ್ಷರರೂಪವಾದ ಬ್ರಹ್ಮವು ಎಂದು ಸಾಯಣರು ಅರ್ಥಮಾಡಿ * ತತ್ರಾಪರಾ ಋಗ್ವೇದಃ .... .... .... " ಎಂಬ ಮಂತ್ರವನ್ನೂ ತಮ್ಮ ಭಾಷ್ಯಕ್ಕೆ ಆಧಾರ ವನ್ನಾಗಿ ಉದಹರಿಸಿದ್ದಾರೆ ಇಲ್ಲಿ ಇನ್ನೊಂದಂಶವನ್ನು ಗಮನಿಸಬೇಕು.

" **ತತ್ರಾಪರಾ ಋಗ್ವೇದಃ.... ....** " ಎಂಬ ವಾಕ್ಯಕ್ಕೆ ಶಂಕರಾಚಾರ್ಯರು ಭಾಷ್ಯವನ್ನು ಬರೆಯುವಾಗ ಅಲ್ಲಿ ಒಂದಾಕ್ಷೇಪವನ್ನೂಹಿಸಿಕೊಂಡು ಅದಕ್ಕೆ ಸಮಾಧಾನವನ್ನು ಹೇಳಿದ್ದಾರೆ. **" ನನು ಕಸ್ಮಿನ್ವಿದಿತೇ ಸರ್ವವಿದ್ಭ-ವತೀತಿ ಶೌನಕೇನ ಪೃಷ್ಟಂ । ತಸ್ಮಿನ್ ವಕ್ತವ್ಯೇಽಪೃಷ್ಟಮಾಹಾಂಗಿರಾ ದ್ವೇ ವಿದ್ಯೇ ಇತ್ಯಾದಿ "** ಯಾವ ಒಂದು ವಿದ್ಯೆಯನ್ನು ತಿಳಿದರೆ ಬ್ರಹ್ಮತತ್ತ್ವವು ತಿಳಿಯುತ್ತದೆಯೋ ಅಂತಹ ಒಂದು ವಿದ್ಯೆಯನ್ನು ಮಾತ್ರ ಉಪದೇಶಿಸು ಎಂದರೆ ಅಪೃಷ್ಟವಾದ ಎರಡು ವಿದ್ಯೆಗಳನ್ನು ಅಂಗಿರಸ್ಸು ಹೇಳಿದನಲ್ಲಾ ಎಂಬ ಆಕ್ಷೇಪವು ಬಂದರೆ ಅದಕ್ಕೆ ಸಮಾಧಾನ ವಾಗಿ **ಈ ರೀತಿ ಅರಿಯಬೇಕು. " ನೈಷ ದೋಷಃ । ಕ್ರಮಾಪೇಕ್ಷತ್ವಾತ್ಪ್ರತಿವಚನಸ್ಯ । ಅಪರಾ ಹಿ ವಿದ್ಯಾ ಅವಿದ್ಯಾ ಸಾ ನಿರಾಕರ್ತವ್ಯಾ । ತದ್ವಿಷಯೇ ಹಿ ವಿದಿತೇ ನ ಕಿಞ್ಚಿತ್ತತ್ತ್ವತಃ ವಿದಿತಂ ಸ್ಯಾದಿತಿ । ನಿರಾಕೃತ್ಯ ಹಿ ಪೂರ್ವಪಕ್ಷಂ ಪಶ್ಚಾತ್ ಸಿದ್ಧಾಂತೋ ವಕ್ತವ್ಯೋ ಭವತೀತಿ ನ್ಯಾಯಾತ್ "** ॥

ಇದರಲ್ಲಿ ಯಾವ ದೋಷವೂ ಇಲ್ಲ. ಉತ್ತರವನ್ನು ಕೊಡುವುದರಲ್ಲಿ ಒಂದು ಕ್ರಮವಿರುತ್ತದೆ. ಮೊದಲು **ವಿದ್ಯಾ** ವಿಭಾಗವನ್ನು ತೋರಿಸಿ ಅದರಲ್ಲಿ ಅಪರವಿದ್ಯೆಯು ನಿಜವಾಗಿಯೂ ಅವಿದ್ಯೆಯೇ ಹೊರತು ತತ್ತ್ವವನ್ನುಪದೇಶಿಸತಕ್ಕ ವಿದ್ಯೆಯಲ್ಲ. ಅದರ ವಿಷಯವನ್ನರಿತರೆ ಬ್ರಹ್ಮತತ್ತ್ವವನ್ನರಿತಂತಾಗುವುದಿಲ್ಲ ಆದುದರಿಂದ **ತತ್ತ್ವಜ್ಞಾನಕ್ಕೆ** ಸಾಧಕವಲ್ಲದ ಅಪರವಿದ್ಯಾರೂಪವಾದ ಅವಿದ್ಯೆಯನ್ನು ನಿರಾಕರಿಸಿ ತತ್ತ್ವಜ್ಞಾನಕ್ಕೆ ನಿಜವಾದ ಸಾಧನವಾದ ಪರವಿದ್ಯೆ ಯನ್ನುಪದೇಶಿಸಿದೆ ಎಂದು ಉತ್ತರವನ್ನು ಹೇಳಿದ್ದಾರೆ. ಆದರೆ ಇಲ್ಲಿ ಋಗಾದ್ಯಪರವಿದ್ಯೆಯು ನಿರಾಕೃತವಾಗತಕ್ಕದ್ದೇ ಎಂಬ ಪ್ರಶ್ನೆಯು ಸಹಜವಾಗಿದೆ. ಇದರಲ್ಲಿ ಮತಭೇದವಿದೆ. ಅಪರವಿದ್ಯೆಯು ಕೇವಲ ಕರ್ಮಪರವಾದುದರಿಂದಲೂ, ಕರ್ಮಫಲವನ್ನುದ್ದೇಶಿ ಅಶಾಶ್ವತವಾದ ಫಲಸಾಧಕವಾದುದರಿಂದಲೂ ಅದು ತತ್ತ್ವಜ್ಞಾನಕ್ಕೆ ಸಹಾಯಕವಲ್ಲವೆಂದೂ ಒಂದು ಮತ. [ಅಥವಾ ಒಂದೇ ಋಷಿಯ ಬೇರೆ ಬೇರೆ ಮತಗಳಲ್ಲಿ ಒಂದು] ಆದರೆ **ಜ್ಞಾನಕ್ಕೆ ಪೂರ್ವಭಾವಿ** ಯಾದುದು **ಕರ್ಮವೆಂದೂ**, ಅದೂ ಸಹ ಜ್ಞಾನಸಾಧನವಾಗುತ್ತದೆಂದೂ, ಆದುದರಿಂದ ಕರ್ಮಪ್ರಧಾನವಾದ ಅಪರ ವಿದ್ಯಾಜ್ಞಾನವು ಅತ್ಯವಶ್ಯವೆಂದೂ ಇನ್ನೊಂದು ಮತ. ಅಪರವಿದ್ಯೆಯು **ಅವಿದ್ಯಾ** ಎಂದು ಶಂಕರಾಚಾರ್ಯರು ಹೇಳಿರುವುದಕ್ಕೆ ಶ್ರುತಿವಾಕ್ಯದ ಆಧಾರವೂ ಇರುತ್ತದೆ. ಉದಾಹರಣೆಗೆ ಈಶಾವಾಸ್ಯೋಪನಿಷತ್ತಿನಲ್ಲಿ **ವಿದ್ಯಾ** ಮತ್ತು **ಅವಿದ್ಯಾ** ಎಂಬೆರಡು ವಿಭಾಗಗಳನ್ನು ಈ ರೀತಿ ವಿವರಿಸಿದೆ.—

ಅನ್ಯದೇವಾಹುರ್ವಿದ್ಯಯಾ ಅನ್ಯದಾಹುರವಿದ್ಯಯಾ ।
ಇತಿ ಶುಶ್ರುಮ ಧೀರಾಣಾಂ ಯೇ ನಸ್ತದ್ವಿಚಚಕ್ಷಿರೇ ॥

(ಈಶ. ಉ. ೧೦)

ವಿದ್ಯೆಯಿಂದ ಒಂದು ಫಲವೂ, ಅವಿದ್ಯೆಯಿಂದ ಇನ್ನೊಂದು ಫಲವೂ ಸಾಧ್ಯವೆಂದು ತಿಳಿದವರು ಹೇಳುತ್ತಾರೆ. ಇದರಲ್ಲಿ ವಿದ್ಯಾಫಲವಾವುದು ; ಅವಿದ್ಯಾಫಲವಾವುದು ಎಂದರೆ,

ಕರ್ಮಣಾ ಪಿತೃಲೋಕೋ ವಿದ್ಯಯಾ ದೇವಲೋಕಃ ॥

(ಬೃ. ಉ. ೧-೫-೧೬)

ವಿದ್ಯೆಯಿಂದ ದೇವಲೋಕವೂ, ಅವಿದ್ಯೆಯಿಂದ ಎಂದರೆ ಕರ್ಮದಿಂದ ಪಿತೃಲೋಕವೂ ಪ್ರಾಪ್ತವಾಗುವುದು ಎಂದು ಬೃಹದಾರಣ್ಯಕೋಪನಿಷತ್ತಿನಲ್ಲಿ ಹೇಳಿರುವಂತೆ ಇಲ್ಲಿಯೂ ತಿಳಿಸಿದೆಯೆಂದು ಶಂಕರಾಚಾರ್ಯರು ಉದಹರಿಸಿರುವ ಈಶೋಪನಿಷದ್ವಾಕ್ಯಕ್ಕೆ ಭಾಷ್ಯವನ್ನು ಬರೆಯುತ್ತಾ ತಿಳಿಸಿರುವರು.

ವಿದ್ಯಾಂ ಚಾವಿದ್ಯಾಂ ಚ ಯಸ್ತದ್ವೇದೋಭಯಗ್ಂ ಸಹ ।
ಅವಿದ್ಯಯಾ ಮೃತ್ಯುಂ ತೀರ್ತ್ವಾ ವಿದ್ಯಯಾಮೃತಮಶ್ನುತೇ ॥

(ಈಶ ಉ. ೧೧)

ವಿದ್ಯೆಯನ್ನೂ ಅವಿದ್ಯೆಯನ್ನೂ ಎಂದರೆ ದೇವತಾಜ್ಞಾನವನ್ನೂ, ಕರ್ಮಾನುಷ್ಠಾನವನ್ನೂ ಒಟ್ಟಿಗೆ ಸೇರಿಸಿ ಅವೆರಡರ ಜ್ಞಾನವನ್ನೂ ಯಾವನು ತಿಳಿಯುತ್ತಾನೆಯೋ ಅವನಿಗೆ ಒಂದೇ ಪುರುಷಾರ್ಥದ ಸಂಬಂಧವು ಕ್ರಮವಾಗಿ ಆಗುತ್ತದೆ. ಕರ್ಮಾಚರಣೆಯಿಂದ ಕರ್ಮರೂಪವಾದ ಮೃತ್ಯುವನ್ನು ದಾಟಿ ಅನಂತರ ದೇವತಾಜ್ಞಾನದಿಂದ ಅಮೃತತ್ವವನ್ನು ಪಡೆಯುವನು ಎಂದಿದೆ.

ಈ ರೀತಿ ಯಾವ ಈ ಅಪರವಿದ್ಯೆಯನ್ನು ಅವಿದ್ಯೆಯೆಂದೂ, ಅದು ನಿರಾಕೃತವಾಗತಕ್ಕದ್ದೆಂದೂ, ಬ್ರಹ್ಮಜ್ಞಾನಕ್ಕೆ ಸಾಧಕವಾಗತಕ್ಕದ್ದಲ್ಲವೆಂದೂ ಹೇಳಿರುವರೋ ಅದೇ ಅಪರವಿದ್ಯೆಯಿಂದ ಪುರುಷಾರ್ಥದ ಸಾಧಕವಾದ ಕರ್ಮಜ್ಞಾನವು ಲಭಿಸಿ ಆ ಕರ್ಮಾನುಷ್ಠಾನದಿಂದಲೇ ದೇವತಾಜ್ಞಾನಕ್ಕೂ ಮಾರ್ಗವನ್ನು ಕಲ್ಪಿಸಿಕೊಳ್ಳಬೇಕೆಂದೂ ಕೆಲವು ಕಡೆಗಳಲ್ಲಿ ಹೇಳಿದೆ. ಅಲ್ಲದೆ ಋಕ್ಕುಗಳು ಕೇವಲ ಕರ್ಮವನ್ನು ಮಾತ್ರ ಪ್ರಶಂಸಿಸಿಲ್ಲ. ಪುರುಷೋತ್ತಮನ ಸ್ವರೂಪವನ್ನೂ ಅವು ಪ್ರಶಂಸಿಸಿವೆ. ಉದಾಹರಣೆಗೆ—

ತಾವಾನಸ್ಯ ಮಹಿಮಾ ತತೋ ಜ್ಯಾಯಾಗ್ಂಶ್ಚ ಪೂರುಷಃ ।
ಪಾದೋಽಸ್ಯ ಸರ್ವಾ ಭೂತಾನಿ ತ್ರಿಪಾದಸ್ಯಾಮೃತಂ ದಿವೀತಿ ॥

(ಛಾ. ಉ. ೩-೧೨-೫)

ಎಂಬ ಋಕ್ಕನ್ನು ಛಾಂದೋಗ್ಯೋಪನಿಷತ್ತಿನಲ್ಲಿ ಉದಹರಿಸಿ " ತದೇತದೃಚಾಭ್ಯುಕ್ತಂ " ಈ ಪರಮಪುರುಷನ ಮಹಿಮೆಯು ಋಕ್ಕಿನಲ್ಲಿ ಪ್ರಶಂಸಿದೆಯೆಂದು ತಿಳಿಸಿದೆ. (ಛಾ. ಉ. ೩-೧೨-೫) ಆದರೆ ಋಕ್ಸಂಹಿತೆಯಲ್ಲಿ ಈ ಋಕ್ಕಿನ ಆನುಪೂರ್ವಿಯು ಕೊಂಚ ವ್ಯತ್ಯಸ್ತವಾಗಿದೆ.

**ಏತಾವಾನಸ್ಯ ಮಹಿಮಾತೋ ಜ್ಯಾಯಾಂಶ್ಚ ಪೂರುಷಃ ।**
**ಪಾದೋಽಸ್ಯ ವಿಶ್ವಾ ಭೂತಾನಿ ತ್ರಿಪಾದಸ್ಯಾಮೃತಂ ದಿವಿ ॥**
(ಋ. ಸಂ. ೧೦-೯೦-೩)

ಗಾಯತ್ರ್ಯಾಖ್ಯನಾದ ಬ್ರಹ್ಮನ ಸ್ವರೂಪವನ್ನು ಈ ಋಕ್ಕಿನಲ್ಲಿ ವರ್ಣಿಸಿದೆ. ಸಮಸ್ತಭೂತಗಳೂ ಇದರ ನಾಲ್ಕನೆಯ ಒಂದು ಭಾಗದಲ್ಲಿ ವ್ಯಾವಹಾರಿಕಪ್ರಪಂಚದಲ್ಲಿರುವುವು. ಉಳಿದ ನಾಲ್ಕನೇ ಮೂರು ಭಾಗವು ದ್ಯುಲೋಕದಲ್ಲಿ ಅಮೃತವಾಗಿರುತ್ತದೆ. ಇದೇ ವಿಧದಲ್ಲಿ ಎಂದು ಬೃಹದಾರಣ್ಯಕಾದಿಗಳಲ್ಲೂ ಸಹ ಋಗ್ವಾಕ್ಯಗಳನ್ನೇ ಉದಹರಿಸಿ ಪರಮಪುರುಷನನ್ನು ವರ್ಣಿಸುವ ಸನ್ನಿವೇಶಗಳು ಅನೇಕವಾಗಿವೆ.

**ತದೇತದೃಚಾಭ್ಯುಕ್ತಂ । ಏಷ ಸ ನಿತ್ಯೋ ಮಹಿಮಾ ಬ್ರಾಹ್ಮಣಸ್ಯ ನ ವರ್ಧತೇ ಕರ್ಮಣಾ ನೋ ಕನೀಯಾನ್ । ತಸ್ಯೈವ ಸ್ಯಾತ್ಪದವಿತ್ತಂ ವಿದಿತ್ವಾ ನ ಲಿಪ್ಯತೇ ಕರ್ಮಣಾ ಪಾಪಕೇನ ॥**
(ಬೃ. ಉ. ೪-೪-೨೩)

ಬ್ರಹ್ಮನ ನಿತ್ಯವಾದ ಮಹಿಮೆಯು ಕರ್ಮದಿಂದ ಅಧಿಕವೂ ಆಗುವುದಿಲ್ಲ ; ಕಡಿಮೆಯೂ ಆಗುವುದಿಲ್ಲ. ಯಾವನು ಈ ಬ್ರಹ್ಮತತ್ತ್ವವನ್ನರಿಯುತ್ತಾನೆಯೋ ಅವನಿಗೆ ಕರ್ಮದಲ್ಲಿ ಸಂಗವಿಲ್ಲದೆ ಅದರ ದೋಷದಿಂದ ಬಾಹ್ಯನಾಗಿರುತ್ತಾನೆ. ಇತ್ಯಾದಿಯಾದ ಮಂತ್ರಗಳನ್ನು ಬ್ರಹ್ಮತತ್ತ್ವಪ್ರತಿಪಾದನೆಗೆ ಆಧಾರಗಳನ್ನಾಗಿ ತೋರಿಸಿದೆ. ಆದರೆ ಕೆಲವು ಸಂದರ್ಭಗಳಲ್ಲಿ **ಋಚಾಭ್ಯುಕ್ತಂ** ಎಂದು ಮಂತ್ರಗಳನ್ನು ಪಠಿಸಿದ್ದರೂ ಸಹ ಅವು ಸಾಕ್ಷಾತ್ತಾಗಿ ಋಗ್ವೇದಮಂತ್ರಗಳೇ ಆಗಿರಬಹುದು. ಅಥವಾ ಆನುಪೂರ್ವಿಯಲ್ಲಿ ಅಲ್ಪಸ್ವಲ್ಪ ಬದಲಾವಣೆಯಿರಬಹುದು. ಇದಕ್ಕೆ ಒಂದು ಉದಾಹರಣೆಯನ್ನು ಮೇಲೆ ತಿಳಿಸಿದೆ. (ಛಾ. ಉ ೩-೧೨-೫ ; ಋ. ಸಂ. ೧೦-೯೦-೩) ಇದರಂತೆಯೇ ಮುಂಡಕಾದಿಗಳಲ್ಲಿಯೂ ನೋಡಬಹುದು. (ಮು. ಉ. ೩-೨-೧೦ ; ಪ್ರ. ೧-೭)

ಆದುದರಿಂದ **ಋಚಃ** ಎಂಬ ಪದಕ್ಕೆ ಪ್ರಕೃತವಾದ ಋಕ್ಕಿನಲ್ಲಿ ಸಾಯಣರು ಹೇಳಿರುವಂತೆ, ಅಪರವಿದ್ಯೆಯೆಂದರ್ಥಮಾಡಿದರೆ, ಆ ಅಪರವಿದ್ಯೆಗೆ ಅವಿದ್ಯೆ (ಕರ್ಮ) ಎಂದೂ ಅರ್ಥವಾಗುತ್ತದೆ. ಕರ್ಮಪ್ರಧಾನವಾದ ಈ ಅಪರವಿದ್ಯೆಯು ಜ್ಞಾನಕ್ಕೆ ಸಂಬಂಧಿಸದೇ ಇದ್ದರೆ ಆಗ ಶಂಕರಾಚಾರ್ಯರು ಹೇಳಿರುವಂತೆ ಅದು ನಿರಸ್ತವಾಗಬೇಕಾಗುತ್ತದೆ. ಆದರೆ ಇಲ್ಲಿ **ಋಚಃ ಸಂಬಂಧಿನಿ ಅಕ್ಷರೇ** ಎಂದರ್ಥವಾಗುವುದರಿಂದ ಮೇಲೆ ಉದಹರಿಸಿರುವ ಛಾಂದೋಗ್ಯಾದಿಗಳಲ್ಲಿರುವ ಮಂತ್ರಗಳಿಂದ ಪ್ರತಿಪಾದಿತವಾದ ಅಕ್ಷರವೆಂದರ್ಥವನ್ನು ಹೇಳಬಹುದು. ಬ್ರಹ್ಮತತ್ತ್ವವನ್ನು ವಿವರಿಸುವಾಗ ಮುಖ್ಯವಾದ ಅಂಶವನ್ನು ಪ್ರತಿಪಾದಿಸುವ ಸಮಯಗಳಲ್ಲೆಲ್ಲಾ **ತದೇತದೃಚಾಭ್ಯುಕ್ತಂ** ಎಂದು ಋಙ್ಮಂತ್ರಗಳನ್ನುದಹರಿಸಿಯೇ ಉಪನಿಷತ್ತುಗಳು ತಮ್ಮ ವಿವರಣೆಗಳನ್ನು ಮುಂದುವರಿಸುತ್ತವೆ.

**ಅಕ್ಷರೇ—ಅದೃಶ್ಯಾದಿಗುಣಕೇ—ಕ್ಷರಣರಹಿತೇ ಅನಶ್ವರೇ ನಿತ್ಯೇ ಸರ್ವತ್ರ ವ್ಯಾಪ್ತೇ ಬ್ರಹ್ಮಣಿ । ಅಕ್ಷರಶಬ್ದಸ್ಯ ಬ್ರಹ್ಮವಾಚಕತ್ವಂ ।** ಅಕ್ಷರಶಬ್ದಕ್ಕೆ ನಶ್ವರವಲ್ಲದ್ದೂ, ನಿತ್ಯವಾದುದೂ, ಸರ್ವತ್ರ ವ್ಯಾಪ್ತವಾದದ್ದೂ ಆದ ಪರಬ್ರಹ್ಮವೆಂದರ್ಥ. **ಅಕ್ಷರಶಬ್ದಸ್ಯ ಬ್ರಹ್ಮವಾಚಕತ್ವಂ ।** ಬ್ರಹ್ಮಶಬ್ದಪರ್ಯಾಯವಾಗಿಯೇ ಉಪನಿಷತ್ತುಗಳಲ್ಲಿ ಅಕ್ಷರಶಬ್ದದ ಪ್ರಯೋಗವಿದೆಯೆಂದು ಸಾಯಣರು ಇದನ್ನು ನಿರೂಪಿಸಲು ಅನೇಕ ಉಪನಿಷದ್ವಾಕ್ಯಗಳನ್ನುದಹರಿಸಿದ್ದಾರೆ.

**ಅಥ ಪರಾ ಯಯಾ ತದಕ್ಷರಮಧಿಗಮ್ಯತೇ ।**

( ಮು. ೧-೧-೫)

ಬ್ರಹ್ಮತತ್ತ್ವವನ್ನುಪದೇಶಿಸತಕ್ಕ ಪರವಿದ್ಯೆಯಿಂದ ಈ ಅಕ್ಷರದ ಸ್ವರೂಪವು ತಿಳಿಯುತ್ತದೆ. ಇದರ ಸ್ವರೂಪವೇನೆಂದರೆ,

**ಯತ್ತದದ್ರೇಶ್ಯಮಗ್ರಾಹ್ಯಮಗೋತ್ರಮವರ್ಣಮಚಕ್ಷುಃಶ್ರೋತ್ರಂ ತದಪಾಣಿಪಾದಂ ।**
**ನಿತ್ಯಂ ವಿಭುಂ ಸರ್ವಗತಂ ಸುಸೂಕ್ಷ್ಮಂ ತದವ್ಯಯಂ ಯದ್ಭೂತಯೋನಿಂ ಪರಿಪಶ್ಯಂತಿ ಧೀರಾಃ ।**

(ಮು. ೧-೧-೬)

ಅದು ಗೋಚರಾತೀತವಾದುದು, ಗ್ರಾಹ್ಯಾತೀತವಾದುದು, ಅನ್ವಯರಹಿತವಾದುದು, ಅವರ್ಣಾತ್ಮಕವಾದುದು, ಚಕ್ಷುಃಶ್ರೋತ್ರರಹಿತವಾದುದು, ಪಾಣಿಪಾದರಹಿತವಾದುದು ; ಮತ್ತು ನಿತ್ಯವೂ, ಸರ್ವವ್ಯಾಪಿಯೂ, ಸರ್ವಗತವೂ, ಅವ್ಯಯವೂ ಆಗಿದೆ. ಧೀಮಂತರು ಇದನ್ನು ಸಕಲಭೂತಗಳಿಗೂ ಉತ್ಪತ್ತಿಸ್ಥಾನವೆಂದು ಅರಿಯುತ್ತಾರೆ.

**ಪರಮೇವಾಕ್ಷರಂ ಪ್ರತಿಪದ್ಯತೇ ಸ ಯೋ ಹ ವೈ ತದಚ್ಛಾಯಮಶರೀರಮಲೋಹಿತಂ ಶುಭ್ರಮಕ್ಷರಂ ವೇದಯತೇ ಯಸ್ತು ಸೋಮ್ಯ ।**

(ಪ್ರಶ್ನ. ೪-೧೦)

**ಸ ಹೋವಾಚೈತದ್ವೈ ತದಕ್ಷರಂ ಗಾರ್ಗಿ ಬ್ರಾಹ್ಮಣಾ ಅಭಿವದಂತ್ಯಸ್ಥೂಲಮನಣ್ವಹ್ರಸ್ವಮದೀರ್ಘಮಲೋಹಿತಮಸ್ನೇಹಂ .... .... .... .... ನ ತದಶ್ನಾತಿ ಕಿಂಚನ ನ ತದಶ್ನಾತಿ ಕಶ್ಚನ ॥**

(ಬೃ. ಉ ೩-೮-೮)

ಪರತತ್ತ್ವವಾದ ಈ ಅಕ್ಷರವು ಸ್ಥೂಲವೂ ಅಲ್ಲ, ಅಲ್ಪವೂ ಅಲ್ಲ, ಹ್ರಸ್ವವೂ ಅಲ್ಲ, ದೀರ್ಘವೂ ಅಲ್ಲ, (ಅಗ್ನಿಯಂತೆ) ಲೋಹಿತವರ್ಣದ್ದೂ ಅಲ್ಲ, (ಉದಕದಂತೆ) ಸ್ನಿಗ್ಧವಾದದ್ದೂ ಅಲ್ಲ, ಅದು ಜರಾಮರಣರಹಿತವಾದದ್ದು. ಇತ್ಯಾದಿಯಾಗಿ ಪ್ರಶ್ನ, ಬೃಹದಾರಣ್ಯಕ ಇತ್ಯಾದ್ಯುಪನಿಷತ್ತುಗಳಲ್ಲಿ ವರ್ಣಿತವಾಗಿದೆ.

**ಅಕ್ಷರಂ ನ ಕ್ಷರತಿ ನ ಕ್ಷೀಯತೇ ವಾಕ್ಷಯಾ ಭವತಿ ವಾ .... .... .... .... ।**

(ನಿ. ೧೩-೧೨)

ಇದು ನಾಶರಹಿತವಾದುದು, ಶಾಶ್ವತವಾದ ಸ್ಥಿತಿಯುಳ್ಳದ್ದು ಇತ್ಯಾದಿಯಾಗಿ ನಿರುಕ್ತಕಾರರೂ ಸಹ ಇದರ ನಿರ್ವಚನವನ್ನು ತಿಳಿಸಿದ್ದಾರೆ.

**ಅಕ್ಷರಂ ಬ್ರಹ್ಮ ಪರಮಂ ಸ್ವಭಾವೋಽಧ್ಯಾತ್ಮಮುಚ್ಯತೇ ।**

(ಭ. ಗೀ. ೮. ೧)

ನಾಶರಹಿತವಾದ ಈ ಅಕ್ಷರವೇ ಪರಬ್ರಹ್ಮವೆಂದು ಭಗವದ್ಗೀತೆಯಲ್ಲಿಯೂ ಪ್ರತಿಪಾದಿತವಾಗಿದೆ ಋಙ್ಮಂತ್ರದಿಂದ ಸ್ತುತವಾಗಿರತಕ್ಕದ್ದು ಬ್ರಹ್ಮತತ್ತ್ವವಾದ ಈ ಅಕ್ಷರವು ; " **ಋಚಃ ಸಂಬಂಧಿನಿ ಅಕ್ಷರೇ ಬ್ರಹ್ಮಣಿ** ಎಂದು ಪ್ರಕೃತವಾದ ಋಕ್ಕಿನಲ್ಲಿ ಸಾಯಣರು ವಿವರಿಸಿದ್ದಾರೆ.

**ಋಚಃ ಅಕ್ಷರೇ** ಎಂದಿರುವಾಗ **ಋಗಕ್ಷರಯೋಃ ಪ್ರತಿಪಾದ್ಯಪ್ರತಿಪಾದಕಭಾವಃ ಸಂಬಂಧಃ । ಸರ್ವೈರ್ವೇದೈಃ ಖಲು ಬ್ರಹ್ಮ ಅಧಿಗಮ್ಯತೇ** ಋಕ್ಕಿಗೂ ಮತ್ತು ಬ್ರಹ್ಮತತ್ತ್ವವಾದ ಅಕ್ಷರಕ್ಕೂ ಪ್ರತಿಪಾದ್ಯಪ್ರತಿ

ಪಾದಕಭಾವವಾದ ಸಂಬಂಧವಿರುತ್ತದೆ. ಎಂದರೆ ಅಕ್ಷರವು ಪ್ರತಿಪಾದ್ಯವಾದ ವಿಷಯ. ಮಂತ್ರವು ಪ್ರತಿಪಾದನೆಯನ್ನು ಮಾಡತಕ್ಕದ್ದು. ಬ್ರಹ್ಮತತ್ತ್ವವು ತಿಳಿಯಬೇಕಾದರೆ ವೇದದಿಂದ ಮಾತ್ರ ಸಾಧ್ಯವು. ಅದು ಹೇಗೆಂದರೆ,

**ತಂ ತ್ವೌಪನಿಷದಂ ಪುರುಷಂ ಪೃಚ್ಛಾಮಿ ।**

(ಬೃ. ಉ. ೩-೯-೨೬)

ಉಪನಿಷತ್ತುಗಳಲ್ಲಿ ಪ್ರತಿಪಾದಿತನಾದ ಪುರುಷನ ಸ್ವರೂಪವನ್ನು ವರ್ಣಿಸಿ ತಿಳಿಸು ಎಂದು ಕೇಳಿಕೊಳ್ಳುತ್ತೇನೆಂದು ಶಾಕಲ್ಯನು ಯಾಜ್ಞವಲ್ಕ್ಯನನ್ನು ಕೇಳುತ್ತಾನೆ. ಇದರಿಂದ ಮಂತ್ರಕ್ಕೂ ಬ್ರಹ್ಮನಿಗೂ ಪ್ರತಿಪಾದ್ಯಪ್ರತಿಪಾದಕಭಾವವಾದ ಸಂಬಂಧವುಂಟಾಯಿತೆಂದು ಹೇಳಿದರೆ ಇಲ್ಲಿ ಒಂದು ಆಕ್ಷೇಪವು ; ಅದನ್ನು ಆಶಂಕಿಸಿ ಸಾಯಣರು **ನನು ಉಪನಿಷದ್ಭಾಗಾನಾಂ ತಥಾಸ್ತು। ಇತರೇಷಾಂ ತು ಕಥಂ ಬ್ರಹ್ಮವಿಷಯತ್ವಮಿತಿ ಉಚ್ಯತೇ।** ಉಪನಿಷನ್ಮಂತ್ರಗಳಿಗೂ ಬ್ರಹ್ಮಕ್ಕೂ ಪ್ರತಿಪಾದ್ಯಪ್ರತಿಪಾದಕಭಾವಸಂಬಂಧವಿರಲಿ, ಆದರೆ ಉಳಿದ ಋಗಾದಿ ಮಂತ್ರಗಳು ಕೇವಲ ಕರ್ಮಪರವಾದುದರಿಂದ ಅವಕ್ಕೂ ಬ್ರಹ್ಮತತ್ತ್ವಪ್ರತಿಪಾದನೆಗೂ ಏನು ಸಂಬಂಧ ಎಂಬ ಪ್ರಶ್ನೆಯು ಬಂದರೆ ಅದಕ್ಕೆ ಸಮಾಧಾನವನ್ನು ಹೇಳಬಹುದೆಂದು ತಿಳಿಸಿದೆ. (ಈ ವಿಷಯವನ್ನು ಮೇಲೆ ಸೂಕ್ಷ್ಮವಾಗಿ ಚರ್ಚಿಸಿದೆ). **ಯದ್ಯಪಿ ಇತರಭಾಗಾನಾಂ ಯೋಗಾದಿವಿಷಯತ್ವಂ ತಥಾಪಿ ಬುದ್ಧಿಶುದ್ಧ್ಯುತ್ಪಾದನದ್ವಾರಾ ವೇದನಸಾಧನತ್ವೇನ ಬ್ರಹ್ಮವಿಷಯತ್ವಂ ಭವಿಷ್ಯತಿ ।** ಇತರ ವೇದಭಾಗಗಳು ಕೇವಲ ಯಾಗಾದಿಕರ್ಮಗಳನ್ನು ನಿರ್ದೇಶಿಸಿದರೂ, ಸಹ ಅವುಗಳನ್ನು ತಿಳಿಯುವುದರಿಂದಾಗಲಿ ಅಥವಾ ಆಯಾ ಕರ್ಮಗಳನ್ನು ನಿರ್ವಹಿಸುವುದರಿಂದಾಗಲಿ ಬುದ್ಧಿಯು ನಿಷ್ಕಲ್ಮಷವಾಗಿ ಬ್ರಹ್ಮಜ್ಞಾನಕ್ಕೆ ಶುದ್ಧವಾದ ಸಾಧನವಾಗುತ್ತದೆ. ಇದನ್ನೇ ಉಪನಿಷತ್ತಿನಲ್ಲಿಯೂ ತಿಳಿಸಿದೆ.

**ಸ ವಾ ಏಷ ಮಹಾನಜ ಆತ್ಮಾ ಯೋಽಯಂ ವಿಜ್ಞಾನಮಯಃ....... ...............................**
**ತಮೇತಂ ವೇದಾನುವಚನೇನ ಬ್ರಾಹ್ಮಣಾ ವಿವಿದಿಷಂತಿ ಯಜ್ಞೇನ ದಾನೇನ ತಪಸಾಽನಾಶಕೇನೈತಮೇವ ವಿದಿತ್ವಾ ಮುನಿರ್ಭವತಿ ।**

(ಬೃ. ಉ. ೪-೪-೨೬)

ವಿಜ್ಞಾನಮಯನೂ, ಅಜನೂ ಆದ ಆತ್ಮನನ್ನು ವೇದಾನುವಚನದಿಂದ ಬ್ರಹ್ಮವಿತ್ತುಗಳು ಅರಿತಿದ್ದಾರೆ. ಇದರಿಂದಲೇ ಅರಿಯುತ್ತಾರೆ. ವೇದೋಕ್ತವಾದ ಯಜ್ಞದಿಂದಲೂ, ದಾನದಿಂದಲೂ, ತಪಸ್ಸಿನಿಂದಲೂ ಬ್ರಹ್ಮಜ್ಞಾನವನ್ನು ಪಡೆದ ಪ್ರಶಾಂತಚಿತ್ತನು ಮುನಿಯಾಗುತ್ತಾನೆ, ಎಂದಿದೆ. ಶಂಕರಾಚಾರ್ಯರೂ ಸಹ ತಮ್ಮ ಭಾಷ್ಯದಲ್ಲಿ ಈ ವಾಕ್ಯವನ್ನು ವಿವರಿಸುವಾಗ ಇದೇ ಆಕ್ಷೇಪವನ್ನೂಹಿಸಿ,

**ನೈಷ ದೋಷಃ । ಕರ್ಮಣಾಂ ವಿಶುದ್ಧಿಹೇತುತ್ವಾತ್ । ಕರ್ಮಭಿಃ ಸಂಸ್ಕೃತಾ ಹಿ ವಿಶುದ್ಧಾತ್ಮಾನಃ ಶಕ್ನುವಂತ್ಯಾತ್ಮಾನಮುಪನಿಷತ್ಪ್ರಕಾಶಿತಮಪ್ರತಿಬಂಧೇನ ವೇದಿತುಂ ।**

(ಶಾಂಕರಭಾಷ್ಯ)

ಇದರಲ್ಲಿ ಯಾವ ದೋಷವೂ ಇಲ್ಲ. ಕರ್ಮಾಚರಣೆಯಿಂದ ಆತ್ಮಸಂಸ್ಕಾರವೂ, ಆತ್ಮಶುದ್ಧಿಯೂ ಉಂಟಾಗಿ ಉಪನಿಷತ್ತುಗಳಲ್ಲಿ ಪ್ರತಿಪಾದಿತವಾದ ಪರಮಾತ್ಮನನ್ನು ಯಾವ ಮಾನಸಿಕವಾದ ಪ್ರತಿಬಂಧಕವೂ ಇಲ್ಲದೇ ಸಾಕ್ಷಾತ್ಕರಿಸಲು ಅನುಕೂಲವಾಗುತ್ತದೆ. " **ಜ್ಞಾನಮುತ್ಪದ್ಯತೇ ಪುಂಸಾಂ ಕ್ಷಯಾತ್ಪಾಪಸ್ಯ ಕರ್ಮಣಃ** " ಎಂಬ ಸ್ಮೃತಿವಾಕ್ಯವೂ

ಸಹ ಇದೇ ವಿಷಯವನ್ನು ತಿಳಿಸುತ್ತದೆ. ಆದುದರಿಂದ ಉಪನಿಷತ್ತುಗಳಲ್ಲದ ಶ್ರುತಿವಾಕ್ಯಗಳಿಗೂ ಬ್ರಹ್ಮಜ್ಞಾನಕ್ಕೂ ಸಂಬಂಧವಿಲ್ಲವೆಂಬುದು ಸರಿಯಲ್ಲವೆಂದು ತಿಳಿಸಿದ್ದಾರೆ.

**ಪರಮೇ ವ್ಯೋಮನಿ—ಉತ್ಕೃಷ್ಟೇ ನಿರತಿಶಯೇ ವ್ಯೋಮನಿ । ಅಲೇಪತ್ವನೀರೂಪತ್ವವ್ಯಾಪಿತ್ವಾದಿ ಸಾದೃಶ್ಯೇನ ವ್ಯೋಮ ಇತ್ಯುಕ್ತಂ ।** ಲಿಪ್ತವಾಗದಿರುವುದೂ, ರೂಪರಹಿತವಾದುದೂ, ವ್ಯಾಪಕವಾದುದೂ ಆದ ಗುಣಗಳಿರುವುದರಿಂದ ಇದೇ ಗುಣಗಳುಳ್ಳ ಅಂತರಿಕ್ಷಕ್ಕೆ ಸಾದೃಶ್ಯವನ್ನು ತೋರಿಸಿ ಬ್ರಹ್ಮನನ್ನು ವರ್ಣಿಸಿದೆ. ಇದೊಂದರ್ಥ. ಅಥವಾ **ವಿಶೇಷೇಣ ಸರ್ವಸ್ಯ ರಕ್ಷಕೇ । ನಿರಧಿಷ್ಠಾ ನ ಕಸ್ಯಚಿದಸ್ತಿ ಸ್ವಾಧ್ಯಕ್ಷಸ್ತಸ್ಯ ಸರ್ವಸ್ಯಾಧಿಷ್ಠಾನತ್ವೇನ ರಕ್ಷಕತ್ವಾತ್ ।** ಸಕಲ ಭೂತಗಳಿಗೂ, ಅಧಿಷ್ಠಾನರೂಪದಲ್ಲಿ ರಕ್ಷಕನಾಗಿರುವುದರಿಂದ **ವ್ಯೋಮ**ವೆಂಬ ವಿಶೇಷಣವಿದೆಯೆಂದೂ ಹೇಳಬಹುದು. ಇಲ್ಲಿ ಎರಡು ಅರ್ಥಗಳಿಗೂ ಅವಕಾಶವಿದೆ. ಮೊದಲನೆಯದಾಗಿ;-

**ಅಶಬ್ದಮಸ್ಪರ್ಶಮರೂಪಮವ್ಯಯಂ ತಥಾರಸಂ ನಿತ್ಯಮಗಂಧವಚ್ಚ ಯತ್ ।**
**ಅನಾದ್ಯನಂತಂ ಮಹತಃ ಪರಂ ಧ್ರುವಂ ನಿಚಾಯ್ಯ ತನ್ಮೃತ್ಯುಮುಖಾತ್ ಪ್ರಮುಚ್ಯತೇ ॥**

(ಕಠ. ೧-೩-೧೫)

ಬ್ರಹ್ಮನು ಶಬ್ದರಹಿತನು, ಸ್ಪರ್ಶವಿಲ್ಲದವನು, ರೂಪರಹಿತನು, ಅವ್ಯಯನು, ನಿತ್ಯನು, ಅನಾದ್ಯನಂತನು, ಮಹತ್ತಿಗಿಂತಲೂ ಪರನಾದವನು, ಧ್ರುವನು. ಇತ್ಯಾದಿಗುಣಗಳಿಂದ ಕೂಡಿದ ಈ ಪರಮಾತ್ಮನನ್ನು ಅರಿತವನು ಮುಕ್ತನಾಗುತ್ತಾನೆ, ಎಂದು ಅನೇಕ ವಾಕ್ಯಗಳಲ್ಲಿ ಬ್ರಹ್ಮದ ವ್ಯಾಪ್ಯತ್ವವನ್ನೂ ಮಹತ್ತ್ವವನ್ನು ಸ್ತುತಿಸಿರುವುದು. ಆದುದರಿಂದ ಇದೇ ಗುಣಗಳುಳ್ಳ ಅಂತರಿಕ್ಷಕ್ಕೆ ಹೋಲಿಸಿ **ವ್ಯೋಮ**ವೆಂಬ ವಿಶೇಷಣವನ್ನು ಹೇಳಿದೆ. ಎರಡನೆಯದಾಗಿ, ವ್ಯೋಮ ಶಬ್ದಕ್ಕೆ ಅಕ್ಷರವೆಂದರ್ಥ ಮಾಡಿದೆ. ಕ್ಷರಣಾರ್ಥಕವಾದ ಧಾತುವಿಗೆ ವಿ ಎಂಬ ಉಪಸರ್ಗವು ಸೇರಿ ಈ ರೂಪವು ನಿಷ್ಪನ್ನವಾಗಿದೆ. ರಕ್ಷಣೆಯೆಂಬರ್ಥದಲ್ಲೂ ವ್ಯಾಪಕವೆಂಬರ್ಥದಲ್ಲೂ ಈ ಪದದ ಪ್ರಯೋಗವನ್ನು **ಋಗ್ವೇದಸಂಹಿತೆಯ** ೧೧ನೇ ಭಾಗದಲ್ಲಿ 298-299 ನೇಪುಟಗಳಲ್ಲಿ ತಿಳಿಸಿದೆ ಮತ್ತು

**ಪ್ರಾಣೋ ಬಹ್ಮ ಕಂ ಬ್ರಹ್ಮ ಖಂ ಬ್ರಹ್ಮೇತಿ । ಸ ಹೋವಾಚ ವಿಜಾನಾಮ್ಯಹಂ ಯತ್ಪ್ರಾಣೋ ಬ್ರಹ್ಮ ಕಂ ಚ ತು ಖಂ ಚ ನ ವಿಜಾನಾಮೀತಿ ತೇ ಹೋಚುರ್ಯದ್ವಾವ ಕಂ ತದೇವ ಖಂ ಯದೇವ ಖಂ ತದೇವ ಕಮಿತಿ ಪ್ರಾಣಂ ಚ ಹಾಸ್ಮೈ ತದಾಕಾಶಂ ಚೋಚುಃ ।**

(ಛಾ. ಉ ೪-೧೦-೫)

(ಇದು ಸತ್ಯಕಾಮಜಾಬಾಲನ ಯಜ್ಞಾಗ್ನಿಗಳು ಉಪಕೋಸಲ ಕಾಮಲಾಯನನಿಗೆ ಮಾಡಿದ ಬ್ರಹ್ಮೋಪದೇಶವು.) ಪ್ರಾಣವೇ ಬ್ರಹ್ಮವು, ಬ್ರಹ್ಮನೇ ಆನಂದವು, ಬ್ರಹ್ಮನೇ ಆಕಾಶವು. ಆಗ ಉಪಕೋಸಲನು" ಪ್ರಾಣವೇ ಬ್ರಹ್ಮವೆಂಬುದು ನನಗೆ ಅರ್ಥವಾಗುತ್ತದೆ. ಆದರೆ ಬ್ರಹ್ಮವೇ ಆನಂದವು, ಆಕಾಶವು ಎಂಬ ತತ್ತ್ವವು ನನಗೆ ಅರ್ಥವಾಗುವುದಿಲ್ಲ ಎಂದಾಗ ಅಗ್ನಿಗಳು—" ಆನಂದವೆಂಬುದೇ (ಕ) ಆಕಾಶವು (ಖ).ಆಕಾಶವೇ ಆನಂದವು." ಎಂದು ಹೇಳಿ ಅನಂತರ ಪ್ರಾಣದ ಸ್ವರೂಪವನ್ನೂ ಆಕಾಶದ ಸ್ವರೂಪವನ್ನೂ ಉಪದೇಶಿಸಿದವು, ಇತ್ಯಾದಿಉಪನಿಷದ್ವಾಕ್ಯಗಳಲ್ಲಿ ಬ್ರಹ್ಮನಿಗೂ ಆಕಾಶಕ್ಕೂ ತಾದಾತ್ಮ್ಯವನ್ನೇ ಹೇಳಿದೆ.

**ಯಸ್ಮಿನ್ ದೇವಾ ಅಧಿ ವಿಶ್ವೇ ನಿಷೇದುಃ—ಯಸ್ಮಿನ್ ಪರಮಾತ್ಮನಿ ಸರ್ವೇ ದೇವಾಃ ನಿಷೀದಂತಿ ಆಶ್ರಿತ್ಯ ತಿಷ್ಠಂತಿ ।** ಯಾವ ಈ ಪರಮಾತ್ಮನಲ್ಲಿ ಸಕಲದೇವತೆಗಳೂ ಆಶ್ರಯವನ್ನು ಪಡೆದು ನೆಲೆಸಿರುವರೋ ಅಂತಹ ಅಕ್ಷರರೂಪನಾದ ಪರಮಾತ್ಮನೆಂದು ಒಂದು ವಿಧವಾದ ಅರ್ಥವನ್ನೂ, **ಅಥವಾ ಯಸ್ಮಿನ್ ಋಗುಪಲಕ್ಷಿತಾಃ ಸರ್ವೇ ಸಾಂಗಾ ವೇದಾಃ ಪರ್ಯವಸಿತಾಃ ।** ಯಾವ ಈ ಪರಮಾತ್ಮನಲ್ಲಿ ಋಗಾದಿವೇದಗಳೂ ಸಕಲವೇದಾಂಗಗಳೂ ಪರ್ಯವಸಿತಗಳಾಗುವುವೋ ಅಂತಹ ಅಕ್ಷರರೂಪನಾದ ಪರಮಪುರುಷನೆಂದು ಇನ್ನೊಂದು ವಿಧವಾಗಿಯೂ ಸಾಯಣರು ಅರ್ಥಮಾಡಿದ್ದಾರೆ. ಸಕಲವಿಶ್ವವೂ ಅಕ್ಷರದಲ್ಲಡಗಿದೆ. ಇದರ ಆಶ್ರಯವನ್ನು ಪಡೆದಿದೆ. ಮತ್ತು ಇದರ ಅನುಶಾಸನದಲ್ಲಿ ತಮ್ಮ ತಮ್ಮ ವ್ಯವಹಾರಗಳನ್ನು ನಡೆಸುತ್ತಿವೆಯೆಂದರ್ಥ. ಉಪನಿಷತ್ತುಗಳಲ್ಲಿ ಈ ಅಂಶವನ್ನು ವರ್ಣಿಸುತ್ತಾ,

> **ಏತಸ್ಯ ವಾ ಅಕ್ಷರಸ್ಯ ಪ್ರಶಾಸನೇ ಗಾರ್ಗಿ ಸೂರ್ಯಾಚಂದ್ರಮಸೌ ವಿಧೃತೌ ತಿಷ್ಠತ ಏತಸ್ಯ ವಾ ಅಕ್ಷರಸ್ಯ ಪ್ರಶಾಸನೇ ಗಾರ್ಗಿ ದ್ಯಾವಾಪೃಥಿವ್ಯೌ ವಿಧೃತೇ ತಿಷ್ಠತ ಏತಸ್ಯ ವಾ ಅಕ್ಷರಸ್ಯ ಪ್ರಶಾಸನೇ ಗಾರ್ಗಿ ನಿಮೇಷಾಮುಹೂರ್ತಾ ಅಹೋರಾತ್ರಾಣ್ಯರ್ಧಮಾಸಾ ಮಾಸಾ ಋತವಃ ಸಂವತ್ಸರಾ ಇತಿ ವಿಧೃತಾಸ್ತಿಷ್ಠಂತ್ಯೇತಸ್ಯ ವಾ ಅಕ್ಷರಸ್ಯ ಪ್ರಶಾಸನೇ ಗಾರ್ಗಿ ಪ್ರಾಚ್ಯೋಽನ್ಯಾ ನದ್ಯಃ ಸ್ಯಂದಂತೇ ಶ್ವೇತೇಭ್ಯಃ ಪರ್ವತೇಭ್ಯಃ ಪ್ರತೀಚ್ಯೋಽನ್ಯಾ ಯಾಂ ಯಾಂ ಚ ದಿಶಮನ್ವೇತಸ್ಯ ವಾ ಅಕ್ಷರಸ್ಯ ಪ್ರಶಾಸನೇ ಗಾರ್ಗಿ ದದತೋ ಮನುಷ್ಯಾಃ ಪ್ರಶಂಸಂತಿ ಯಜಮಾನಂ ದೇವಾ ದರ್ವೀಂ ಪಿತರೋಽನ್ವಾಯತ್ತಾಃ ॥**
>
> (ಬೃ. ಉ. ೩-೮-೯)

ಎಂಬ ವಾಕ್ಯಗಳಲ್ಲಿ ಯಾಜ್ಞವಲ್ಕ್ಯನು ಗಾರ್ಗಿಗೆ ಅಕ್ಷರದ ಸ್ವರೂಪವನ್ನು ವರ್ಣಿಸಿ ತಿಳಿಸಿದ್ದಾನೆ. ಈ ಅಕ್ಷರದ ಪ್ರಶಾಸನದಿಂದಲೇ ಸೂರ್ಯನೂ ಚಂದ್ರನೂ ಅವರವರ ನಿಯಮಿತವಾದ ಸ್ಥಾನಗಳಲ್ಲಿ ಬೇರ್ಪಟ್ಟು ತಮ್ಮ ಸ್ಥಿರವಾದ ಚಲನವನ್ನಿಟ್ಟುಕೊಂಡಿದ್ದಾರೆ ಈ ಅಕ್ಷರದ ಪ್ರಶಾಸನದಿಂದಲೇ ದ್ಯಾವಾಪೃಥಿವಿಗಳು ತಮ್ಮ ತಮ್ಮ ನಿಯತವಾದ ಸ್ಥಾನಗಳಲ್ಲಿ ಸ್ಥಿರವಾಗಿವೆ. ಇದರ ಪ್ರಶಾಸನದಿಂದಲೇ ನಿಮೇಷಗಳೂ, ಅಹೋರಾತ್ರಾದಿಕಾಲಾವಯವಗಳೂ ತಮ್ಮ ಆವೃತ್ತಿರೂಪವಾದ ಗಮನಾಗಮನಗಳನ್ನು ಇಟ್ಟುಕೊಂಡಿರುತ್ತವೆ. ಇದರ ಪ್ರಶಾಸನದಿಂದಲೇ ಸಕಲ ನದಿಗಳೂ ಪ್ರವಹಿಸುತ್ತವೆ. ಮಾನವರು ಹವಿರ್ದಾತರಾಗಿಯೂ, ಹವಿರ್ದಾತನಾದ ಯಜಮಾನನು ಪ್ರಶಸ್ಯನಾಗಿಯೂ ದೇವತೆಗಳೂ ಪಿತೃಗಳೂ ತೃಪ್ತರಾಗಿಯೂ ಇರುತ್ತಾರೆ.

> **ತಸ್ಮಾದೃಚಃ ಸಾಮ ಯಜೂಂಷಿ ದೀಕ್ಷಾ ಯಜ್ಞಾಶ್ಚ ಸರ್ವೇ ಕ್ರತವೋ ದಕ್ಷಿಣಾಶ್ಚ ।**
> **ಸಂವತ್ಸರಶ್ಚ ಯಜಮಾನಶ್ಚ ಲೋಕಾಃ ಸೋಮೋ ಯತ್ರ ಪವತೇ ಯತ್ರ ಸೂರ್ಯಃ ॥**
>
> (ಮುಂಡಕ. ೨-೧-೬)

ಈ ಪರಮಪುರುಷನಿಂದಲೇ ಋಕ್ಕುಗಳೂ, ಸಾಮವೂ, ಯಜುಸ್ಸುಗಳೂ, ದೀಕ್ಷೆಗಳೂ, ಸಕಲ ಯಜ್ಞಗಳೂ, ಸಂವತ್ಸರವೂ, ಯಜಮಾನನೂ, ಚಂದ್ರಸೂರ್ಯಾದಿಗಳಿರುವ ಲೋಕಗಳೂ ಸಮಸ್ತವೂ ಉದ್ಭವಿಸುತ್ತವೆ.

> **ತಸ್ಮಾಚ್ಚ ದೇವಾ ಬಹುಧಾ ಸಂಪ್ರಸೂತಾಃ ಸಾಧ್ಯಾ ಮನುಷ್ಯಾಃ ಪಶವೋ ವಯಾಂಸಿ ।**
> **ಪ್ರಾಣಾಪಾನೌ ವ್ರೀಹಿಯವೌ ತಪಶ್ಚ ಶ್ರದ್ಧಾ ಸತ್ಯಂ ಬ್ರಹ್ಮಚರ್ಯಂ ವಿಧಿಶ್ಚ ॥**
>
> (ಮು. ಉ. ೨-೧-೭)

ಈ ಪರಮಪುರುಷನಿಂದಲೇ ದೇವತೆಗಳೂ, ಸಾಧ್ಯರೂ, ಮನುಷ್ಯರೂ, ಪಶುಪಕ್ಷ್ಯಾದಿಗಳೂ, ತಪಸ್ಸು, ಶ್ರದ್ಧೆ, ಸತ್ಯ, ಬ್ರಹ್ಮಚರ್ಯ ಇತ್ಯಾದಿಗಳೂ ಹುಟ್ಟಿರುವುವು.

**ಆವಿಃಸನ್ನಿಹಿತಂ ಗುಹಾಚರಂ ನಾಮ ಮಹತ್ಪದಮತ್ರೈತತ್ಸಮರ್ಪಿತಂ ।**
**ಏಜತ್ಪ್ರಾಣನ್ನಿಮಿಷಚ್ಚ ಯದೇತಜ್ಜಾನಥ ಸದಸದ್ವರೇಣ್ಯಂ ಪರಂ ವಿಜ್ಞಾನಾದ್ಯದ್ವರಿಷ್ಠಂ ಪ್ರಜಾನಾಂ ॥**

(ಮು. ೨-೨-೧)

**ತದೇತದಕ್ಷರಂ ಬ್ರಹ್ಮ ಸ ಪ್ರಾಣಸ್ತದು ವಾಙ್ಮನಃ ।**
**ತದೇತತ್ಸತ್ಯಂ ತದಮೃತಂ ತದ್ವೇದ್ಧವ್ಯಂ ಸೋಮ್ಯ ವಿದ್ಧಿ ।**

(ಮು. ೨-೨-೨)

ಎಲ್ಲಾ ಪ್ರಾಣಿಗಳ ಹೃದಯದಲ್ಲಿದ್ದುಕೊಂಡು ಗುಹಾಚರವೆನ್ನಿಸಿಕೊಳ್ಳುವುದೂ, ಸಕಲಶ್ರುತಿಗಳಿಗೂ ಆಧಾರವಾಗಿರುವುದೂ, ಪ್ರಾಣನಾದಿ ಸಕಲಪ್ರಾಪಂಚಿಕವ್ಯಾವಹಾರಗಳಿಗೂ ಹೇತುವಾಗಿರುವುದೂ ಆದ ಈ ಅಕ್ಷರವೆಂಬ ಬ್ರಹ್ಮವೇ ಸಕಲಭೂತಗಳ ಪ್ರಾಣವು. ಇದೇ ವಾಙ್ಮನಸ್ಸು, ಇದೇ ಸತ್ಯವು, ಇದೇ ಅಮೃತವಾದದ್ದು. ಇದರ ಸಾಕ್ಷಾತ್ಕಾರವನ್ನು ಹೊಂದಬೇಕು. [**ಧನುರ್ಗೃಹೀತ್ವೌಪನಿಷದಂ ಮಹಾಸ್ತ್ರಂ** ಎಂದು ಈ ಲಕ್ಷ್ಯವನ್ನು ಮುಟ್ಟುವ ಕ್ರಮವನ್ನು ಮುಂದಿನ ಮಂತ್ರಗಳಲ್ಲಿ ತಿಳಿಸಿದೆ.]

ಋಗಾದಿವೇದಾಧ್ಯಯನವೂ, ವೇದೋಕ್ತವಾದ ಕರ್ಮಾಚರಣೆಯೂ ಸಹ ಈ ಅಕ್ಷರವೆಂಬ ಬ್ರಹ್ಮವನ್ನು ಸಾಕ್ಷಾತ್ಕರಿಸುವ ಸಾಧನಗಳಾಗಬೇಕು. ಈ ಗುರಿಯನ್ನು ಬಿಟ್ಟು ಕೇವಲ ಸಾಧನವನ್ನೇ ನಂಬಿ, ಅದರಲ್ಲೇ ನಿಂತು ಮುಖ್ಯವಾದ ಲಕ್ಷ್ಯವನ್ನು ಮರೆತರೆ ಆಗ ವೇದಾಧ್ಯಯನವಾಗಲಿ, ವೇದೋಕ್ತವಾದ **ಕರ್ಮಾಚರಣೆಯಾಗಲಿ**, ನಿಷ್ಪ್ರಯೋಜಕವಾಗುತ್ತದೆ ಎಂಬಭಿಪ್ರಾಯದಿಂದ '**ಯಸ್ತನ್ನವೇದ ಕಿಮೃಚಾ ಕರಿಷ್ಯತಿ**' ಈ ಪರಬ್ರಹ್ಮವನ್ನು ಅರಿಯದಿದ್ದರೆ ಆಗ ಆ ಋಕ್ಕುಗಳನ್ನು ಪಠಿಸಿ ಏನನ್ನು ತಾನೇ ಪಡೆಯಬಲ್ಲನು ? ಎಂದು ಪ್ರಶ್ನಿಸಿದೆ. ಸಾಧ್ಯವನ್ನು ಮರೆತು ಕೇವಲ ಸಾಧನದಲ್ಲಿ ಮಾತ್ರ ಮಗ್ನನಾಗಿರುವ ಪುರುಷನು ಇದ್ದರೆ ಅವನ ಸ್ವರೂಪವನ್ನು ನಿರುಕ್ತಕಾರರು ಈರೀತಿ ತಿಳಿಸಿದ್ದಾರೆ.

**ಸ್ಥಾಣುರಯಂ ಭಾರಹಾರಃ ಕಿಲಾಭೂದಧೀತ್ಯ ವೇದಂ ನ ವಿಜಾನಾತಿ ಯೋಽರ್ಥಂ ।**
**ಯೋಽರ್ಥಜ್ಞ ಇತ್ಸಕಲಂ ಭದ್ರಮಶ್ನುತೇ ನಾಕಮೇತಿ ಜ್ಞಾನವಿಧೂತಪಾಪ್ಮಾ ॥**

(ನಿ. ೧-೧೮)

ವೇದಾಧ್ಯಯನವನ್ನು ಮಾತ್ರ ಮಾಡಿ ಅದರ ಅರ್ಥವನ್ನು ತಿಳಿಯದಿದ್ದರೆ ಅಂತಹ ಪುರುಷನಿಗೆ ಈ ಅಧ್ಯಯನವು ಕೇವಲ ಭಾರವಾಗಿರುತ್ತದೆ. ಅವನು ಭಾರವನ್ನು ವಹಿಸಿರುವ ದಡ್ಡನಾಗಿರುತ್ತಾನೆ ಆದರೆ ವೇದಾರ್ಥವನ್ನು ಪೂರ್ಣವಾಗಿ ಅರಿತು ವೇದಾಧ್ಯಯನವನ್ನು ಮಾಡತಕ್ಕವನು. ಸಕಲವಿಧವಾದ ಶ್ರೇಯಸ್ಸುಗಳನ್ನೂ ಪಡೆಯುತ್ತಾನೆ. ಪೂರ್ಣವಾದ ಜ್ಞಾನವು ಅವನ ಎಲ್ಲಾ ದೋಷಗಳನ್ನೂ ನಾಶಮಾಡುತ್ತದೆ.

ಯದ್ಗೃಹೀತಮವಿಜ್ಞಾತಂ ನಿಗದೇನೈವ ಶಬ್ದ್ಯತೇ ।
ಅನಗ್ನಾವಿವ ಶುಷ್ಕೈಧೋ ನ ತಜ್ಜ್ವಲತಿ ಕರ್ಹಿಚಿತ್ ॥

(ನಿ. ೧-೧೮)

ಅರ್ಥಮಾಡಿಕೊಳ್ಳದೆ ಯಾವ ವಾಕ್ಯವನ್ನು ಪಠಿಸಿದರೂ ಅದು ಕೇವಲ ಶಬ್ದಜಾಲವಾಗುತ್ತದೆ. ಆರಿದ ಬೆಂಕಿಯಲ್ಲಿ ಹಾಕಿದ ಶುಷ್ಕವಾದ ಕಟ್ಟಿಗೆಯು ಯಾವ ರೀತಿ ಪ್ರಜ್ವಲಿಸುವುದಿಲ್ಲವೋ ಅದೇ ರೀತಿ ಅರ್ಥಜ್ಞಾನವಿಲ್ಲದ ಚೇತಸ್ಸೂ ಪ್ರಕಾಶಿಸಲಸಮರ್ಥವಾಗುತ್ತದೆ. ಈ ಭಾವವನ್ನು ಋಕ್ಸಂಹಿತೆಯ ಇತರ ಭಾಗಗಳಲ್ಲೂ ಹೇಳಿರುತ್ತದೆ. ಅರ್ಥವನ್ನರಿಯದೇ ಅಧ್ಯಯನ ಮಾಡುವವನು,

ಉತ ತ್ವಃ ಪಶ್ಯನ್ನ ದದರ್ಶ ವಾಚಮುತ ತ್ವಃ ಶೃಣ್ವನ್ನ ಶೃಣೋತ್ಯೇನಾಂ ।
ಉತೋ ತ್ವಸ್ಮೈ ತನ್ವಂ೧ ವಿ ಸಸ್ರೇ ಜಾಯೇವ ಪತ್ಯ ಉಶತೀ ಸುವಾಸಾಃ ॥

(ಋ. ಸಂ. ೧೦-೭೧-೪)

ಋಙ್ಮಂತ್ರಗಳನ್ನು ನೋಡುತ್ತಿದ್ದರೂ ಸಹ ಅದರ ಫಲಾಭಾವವಿರುವುದರಿಂದ ನೋಡದಿರುವಂತೆಯೇ ಆಗುತ್ತದೆ. ಎಂದರೆ ಅಂಧನಂತಾಯಿತು. ವೇದವಾಕ್ಯವನ್ನು ಕಿವಿಯಲ್ಲಿ ಕೇಳುತ್ತಿದ್ದರೂ ಸಹ ಶ್ರವಣಫಲದ ಅಭಾವದಿಂದ ಕಿವುಡನಂತೆಯೇ ಆಯಿತು. ಆದರೆ ವೇದಾರ್ಥವನ್ನು ಪೂರ್ಣವಾಗಿ ಅರಿತವನಿಗಾದರೋ ಎಂದರೆ ಸುಂದರಳಾದ ಸ್ತ್ರೀಯು ವಸ್ತ್ರಾಲಂಕಾರಾದಿಗಳಿಂದ ಶೋಭಿತಳಾಗಿ ಪತಿಯ ಎದುರಿಗೆ ನಿಂತರೆ ಮನಸ್ಸಿಗೆ ಯಾವ ಹರ್ಷವಾಗುತ್ತದೆಯೋ ಅದರಂತಾಗುತ್ತದೆ. ಅಲ್ಲದೇ,

ಉತ ತ್ವಂ ಸಖ್ಯೇ ಸ್ಥಿರಪೀತಮಾಹುರ್ನೈನಂ ಹಿನ್ವಂತ್ಯಪಿ ವಾಜಿನೇಷು ।
ಅಧೇನ್ವಾ ಚರತಿ ಮಾಯಯೈಷ ವಾಚಂ ಶುಶ್ರುವಾँ ಅಫಲಾಮಪುಷ್ಪಾಂ ॥

(ಋ. ಸಂ. ೧೦-೭೧-೫)

ವೇದಾರ್ಥವನ್ನು ಪೂರ್ಣವಾಗಿ ಅರಿತವನಿಗೆ ವಿದ್ವತ್ಸಭೆಗಳಲ್ಲಿಯೂ ದೇವತೆಗಳ ನಡುವೆಯೂ ಸಹ ಸಖನಿಗೆ ಸಿಕ್ಕತಕ್ಕ ಪ್ರೇಮವೂ ಮರ್ಯಾದೆಯೂ ಸಿಕ್ಕುತ್ತದೆ. ಚರ್ಚೆಗಳು ನಡೆಯುವ ಸಂದರ್ಭದಲ್ಲಿ ಇವನನ್ನು ಸೋಲಿಸುವವರೂ ಸಹ ಯಾರೂ ಇರುವುದಿಲ್ಲ. ಆದರೆ ಅರ್ಥಜ್ಞಾನವಿಲ್ಲದವನು ಫಲಪುಷ್ಪಾದಿಗಳಿಂದ ರಹಿತವಾದ ಕೇವಲ ಶಬ್ದಜಾಲದಲ್ಲಿ ಮುಳುಗುತ್ತಾ ನಿಷ್ಪ್ರಯೋಜಕವಾದ ಭಾರವನ್ನು ವಹಿಸುತ್ತಾ ವಿದ್ವಾಂಸರುಗಳ ನಡುವೆ ಅಲೆಯುತ್ತಿರುವನು. ಬೃಹದಾರಣ್ಯಕಾದ್ಯುಪನಿಷತ್ತುಗಳಲ್ಲಿಯೂ ಸಹ ಈ ಅಭಿಪ್ರಾಯವನ್ನು ಸ್ಪಷ್ಟವಾಗಿ ತಿಳಿಸಿದೆ.

ತಮೇವ ಧೀರೋ ವಿಜ್ಞಾಯ ಪ್ರಜ್ಞಾಂ ಕುರ್ವೀತ ಬ್ರಾಹ್ಮಣಃ ।
ನಾನುಧ್ಯಾಯಾದ್ಬಹೂಞ್ಛಬ್ದಾನ್ ವಾಚೋ ವಿಗ್ಲಾಪನಂ ಹಿ ತತ್ । ಇತಿ॥

(ಬೃ. ಉ. ೪-೪-೨೧)

ಅಕ್ಷರಾತ್ಮಕವಾದ ಈ ಪರಬ್ರಹ್ಮತತ್ತ್ವವನ್ನು ಧೀಮಂತನಾದವನು ತನ್ನ ವಿಮರ್ಶಾತ್ಮಕವೂ, ಸಾಕ್ಷಾತ್ಕಾರಸಾಧಕವೂ ಆದ ಪ್ರಜ್ಞೆಯನ್ನು ಸಫಲಗೊಳಿಸಬೇಕು. ಅರ್ಥವನ್ನು ಒಳಹೊಕ್ಕು ಪ್ರವೇಶಮಾಡದೆ ಕೇವಲ ಶಬ್ದಾಡಂಬರದಲ್ಲಿಯೇ ತೇಲುತ್ತಿರಬಾರದು. ಬರೀ ಶಬ್ದವು ಆಯಾಸಕಾರಿಯಾಗುತ್ತದೆ. ಮತ್ತು,

**ಯತೋ ವಾಚೋ ನಿವರ್ತಂತೇ । ಅಪ್ರಾಪ್ಯ ಮನಸಾ ಸಹ । ಆನಂದಂ ಬ್ರಹ್ಮಣೋ ವಿದ್ವಾನ್ ನ ಬಿಭೇತಿ ಕುತಶ್ಚನೇತಿ ॥**

(ತೈ. ಉ. ೨-೯)

ಅರ್ಥಾನುಸಂಧಾನವಿಲ್ಲದ ಕೇವಲ ವಾಕ್ಕಾದರೆ ಅದು ಪರಬ್ರಹ್ಮವನ್ನು ಸಮೀಪಿಸುವುದೇ ಇಲ್ಲ. ಅಂತಹ ಮನಸ್ಸೂ ಸಹ ಬ್ರಹ್ಮನನ್ನು ಸಮೀಪಿಸಲಾರದು. ಆದರೆ ಬ್ರಹ್ಮಜ್ಞನು ಬ್ರಹ್ಮಸಾಕ್ಷಾತ್ಕಾರವನ್ನು ಪಡೆದಬಳಿಕ ಯಾರಿಗೂ ಹೆದರದೆ ತಾನು ನಿರ್ಭಯನಾಗಿಯೂ, ಪ್ರಶಾಂತಚಿತ್ತನಾಗಿಯೂ ಇರುತ್ತಾನೆ. ಆದುದರಿಂದ ವೇದಾಧ್ಯಯನದ ಫಲವು ಬ್ರಹ್ಮಸಾಕ್ಷಾತ್ಕಾರರೂಪದಲ್ಲಿಯೇ ಇರಬೇಕು. ಇಲ್ಲದಿದ್ದರೆ ಅದು ವ್ಯರ್ಥ, ಎಂದು ಸಾಯಣರು ಪ್ರಕೃತವಾದ ಋಕ್ಕಿನ "**ಕಿಮೃಚಾ ಕರಿಷ್ಯತಿ**" ಎಂಬ ಭಾಗವನ್ನು ವಿವರಿಸುತ್ತಾ "**ಪ್ರಯೋಜನಾಭಾವಾತ್ ಸರ್ವಸ್ಯಾಪಿ ವೇದಸ್ಯ ನೈಷ್ಫಲ್ಯಾತ್ ಇತಿ ಭಾವಃ**" ಎಂಬ ಆ ವಾಕ್ಯದ ತಾತ್ಪರ್ಯವನ್ನು ತಿಳಿಸಿದ್ದಾರೆ.

**ಯ ಇತ್ತದ್ವಿದುಸ್ತ ಇಮೇ ಸಮಾಸತೇ**—**ಯೇ ಏವ ತತ್ತತ್ತ್ವಂ ಜಾನಂತಿ ತೇ ಏವ ಜ್ಞಾತಾರಃ ಸಮ್ಯಕ್ ತಿಷ್ಠಂತಿ** । ಯಾರು ಈ ಪರತತ್ತ್ವವನ್ನರಿಯುತ್ತಾರೆಯೋ ಅವರು ಮಾತ್ರ ಆತ್ಮಸಾಮರಸ್ಯವನ್ನು ಹೊಂದಿ ಪ್ರಶಾಂತಚಿತ್ತರಾಗುತ್ತಾರೆ.

**ಏಕೋ ವಶೀ ಸರ್ವಭೂತಾಂತರಾತ್ಮಾ ಏಕಂ ರೂಪಂ ಬಹುಧಾ ಯಃ ಕರೋತಿ ।**
**ತಮಾತ್ಮಸ್ಥಂ ಯೇಽನುಪಶ್ಯಂತಿ ಧೀರಾಸ್ತೇಷಾಂ ಸುಖಂ ಶಾಶ್ವತಂ ನೇತರೇಷಾಂ ।**

(ಕಠ ೨-೨-೧೨)

ಈ ಪರಮಾತ್ಮನು ಸರ್ವವ್ಯಾಪಿಯು. ಜಗತ್ತೆಲ್ಲವೂ ಇವನ ವಶದಲ್ಲಿರುತ್ತದೆ. ಆತ್ಮಸ್ಥನಾದ ಈ ಪರಮಾತ್ಮನನ್ನು ಯಾವ ವಿವೇಕಿಗಳು ಅಂತಶ್ಚಕ್ಷುಸ್ಸಿನಿಂದ ವೀಕ್ಷಿಸಿ ಸಾಕ್ಷಾತ್ಕಾರ ಮಾಡಿಕೊಳ್ಳುವರೋ ಅವರಿಗೆ ಮಾತ್ರ ನಿತ್ಯವೂ ಆತ್ಮಾನಂದ ರೂಪವೂ ಆದ ಸುಖವೂ ಲಭಿಸುತ್ತದೆ. ಇದಿಲ್ಲದವರಿಗೆ ಖಂಡಿತ ಈ ಸುಖಾನುಭವವಿಲ್ಲ.

**ಪ್ರಾಣೋ ಹ್ಯೇಷ ಯಃ ಸರ್ವಭೂತೈರ್ವಿಭಾತಿ ವಿಜಾನನ್ವಿದ್ವಾನ್ ಭವತೇ ನಾತಿವಾದೀ ।**
**ಆತ್ಮಕ್ರೀಡ ಆತ್ಮರತಿಃ ಕ್ರಿಯಾವಾನೇಷ ಬ್ರಹ್ಮವಿದಾಂ ವರಿಷ್ಠಃ ॥**

(ಮು ಉ. ೩-೧-೪)

ವಿಶ್ವಪ್ರಾಣರೂಪನಾದ ಈ ಅಕ್ಷರಬ್ರಹ್ಮನೇ ಸಕಲ ಭೂತಗಳ ರೂಪದಲ್ಲಿಯೂ ತನ್ನನ್ನು ಪ್ರಕಾಶಪಡಿಸುತ್ತಿರುವನು ಇವನ ತತ್ತ್ವವನ್ನರಿತ ವಿದ್ವಾಂಸನು ಅತಿವಾದಿಯಾಗುವುದಿಲ್ಲ. ಆತ್ಮಕ್ರೀಡನಾಗಿಯೂ ಆತ್ಮರತಿಯುಳ್ಳವನಾಗಿಯೂ ಆಗುತ್ತಾನೆ. ಬ್ರಹ್ಮವಿತ್ತುಗಳಲ್ಲೆಲ್ಲಾ ಇವನೇ ಅತ್ಯಂತ ಶ್ರೇಷ್ಠನು, ಎಂದು ಬ್ರಹ್ಮವಿತ್ತಿನ ಸ್ವರೂಪವನ್ನು ವರ್ಣಿಸುತ್ತಲೂ ಪ್ರಕೃತವಾದ ಋಕ್ಕಿನಲ್ಲಿ "**ತ ಇಮೇ ಸಮಾಸತೇ**" ಎಂಬ ವಾಕ್ಯದ ಭಾವವನ್ನು ವಿವರಿಸುತ್ತಲೂ, ಮುಂಡಕೋಪನಿಷತ್ತಿನಲ್ಲಿ ಬ್ರಹ್ಮಜ್ಞಾನಿಗಳಾದ ಋಷಿಗಳ ಪ್ರಶಾಂತಚಿತ್ತತೆಯನ್ನು ಈ ರೀತಿ ವರ್ಣಿಸಿದೆ

**ಸಂಪ್ರಾಪ್ಯೈನಮೃಷಯೋ ಜ್ಞಾನತೃಪ್ತಾಃ ಕೃತಾತ್ಮಾನೋ ವೀತರಾಗಾಃ ಪ್ರಶಾಂತಾಃ ॥**
**ತೇ ಸರ್ವಗಂ ಸರ್ವತಃ ಪ್ರಾಪ್ಯ ಧೀರಾ ಯುಕ್ತಾತ್ಮಾನಃ ಸರ್ವಮೇವಾವಿಶಂತಿ ॥**

(ಮು ಉ, ೩-೨-೫)

ಪರತತ್ತ್ವವಾದ ಈ ಆತ್ಮನನ್ನು ಪಡೆದ ಋಷಿಗಳು ಜ್ಞಾನತೃಪ್ತರಾಗಿಯೂ, ಕೃತಾತ್ಮರಾಗಿಯೂ, ರಾಗರಹಿತರಾಗಿಯೂ, ಪ್ರಶಾಂತಚಿತ್ತರಾಗಿಯೂ ಇರುವರು. ಆ ಧೀರರು ಸರ್ವವ್ಯಾಪಿಯಾದ ಆತ್ಮನನ್ನು ಸರ್ವತ್ರ ಸಾಕ್ಷಾತ್ಕರಿಸಕೊಂಡವರಾಗಿಯೂ, ಯುಕ್ತಾತ್ಮರಾಗಿಯೂ ಆ ಪರಮಾತ್ಮನಂತೆಯೇ ತಾವೂ ಸರ್ವವ್ಯಾಪಿಗಳಾಗಿಯೂಆಗುವರು. ಬ್ರಹ್ಮೈಕಾದಾತ್ಮ್ಯವನ್ನು ಪಡೆದ ಈ ಪರಮಋಷಿಯ ಸ್ವರೂಪವನ್ನು ಬೃಹದಾರಣ್ಯಕೋಪನಿಷತ್ತಿನಲ್ಲಿ ವರ್ಣಿಸುತ್ತಾ,

**ಯಸ್ಯಾನುವಿತ್ತಃ ಪ್ರತಿಬುದ್ಧ ಆತ್ಮಾಽಸ್ಮಿನ್ ಸಂದೇಹ್ಯೇ ಗಹನೇ ಪ್ರವಿಷ್ಟಃ |**
**ಸ ವಿಶ್ವಕೃತ್ ಸ ಹಿ ಸರ್ವಸ್ಯ ಕರ್ತಾ ತಸ್ಯ ಲೋಕಃ ಸ ಉ ಲೋಕ ಏವ ||**

(ಬೃ. ಉ. ೪-೪-೧೩)

ಯಾವನು ಪ್ರಬುದ್ಧನಾಗಿರುತ್ತಾನೆಯೋ ಮತ್ತು ದುಃಖಹೇತುವಾದುದೂ ಪಿಂಡೀಭೂತವಾದುದೂ ಆದ ಈ ದೇಹವನ್ನು ಪ್ರವೇಶಿಸಿರುವ ಆತ್ಮನನ್ನು ಸಾಕ್ಷಾತ್ಕರಿಸಿಕೊಳ್ಳುತ್ತಾನೆಯೋ ಅವನು ಸಕಲವನ್ನೂ ನಿರ್ಮಿಸುವ ಶಕ್ತಿಯುಳ್ಳವನಾಗುತ್ತಾನೆ. ಪ್ರಪಂಚವೇ ಅವನಿಗೆ ಸೇರಿದುದು. ಅಥವಾ ಅವನೇ ಪ್ರಪಂಚವಾಗಿರುತ್ತಾನೆಂದೂ ಹೇಳಬಹುದು. ಆದುದರಿಂದ,

**ಏಕಧೈವಾನುದ್ರಷ್ಟವ್ಯಮೇತದಪ್ರಮಯಂ ಧ್ರುವಂ |**
**ವಿರಜಃ ಪರ ಆಕಾಶಾದಜ ಆತ್ಮಾ ಮಹಾನ್ ಧ್ರುವಃ ||**

(ಬೃ. ಉ. ೪-೪-೨೦)

ನಿರಂತರವೂ ಸರ್ವವ್ಯಾಪಿಯೂ ಆದ ಆಕಾಶದಲ್ಲಿ ಐಕ್ಯವನ್ನು ಕಾಣುವಂತೆ ಸರ್ವಾಂತರ್ಯಾಮಿಯಾದ ಈ ಆತ್ಮನಲ್ಲಿ ವಿಶ್ವದ ಐಕ್ಯವನ್ನು ಕಂಡುಕೊಳ್ಳಬೇಕು. [ವಿಜ್ಞಾನಘನೈಕರಸಪ್ರಕಾರೇಣ ಆಕಾಶವನ್ನಿರಂತರೇಣಾನುದ್ರಷ್ಟವ್ಯಂ | (ಶ. ಭಾ.)] ರಜೋರಹಿತನೂ, ಆಕಾಶಕ್ಕಿಂತಲೂ ಮಹತ್ತಾದವನೂ, ಜನ್ಮರಹಿತನೂ, ಧ್ರುವನೂ ಆದ ಪರಮಾತ್ಮನ ಸಾಕ್ಷಾತ್ಕಾರವೇ ಸಕಲಶ್ರುತಿವಾಕ್ಯಗಳ ಲಕ್ಷ್ಯವು ಎಂಬುದನ್ನು ಪ್ರಕೃತವಾದ ಋಕ್ಕಿನಲ್ಲಿ ತಿಳಿಸಿದೆಯೆಂಬುದು ಒಂದು ವಿಧವಾದ ವಿವರಣೆ.

(೨) ಮೇಲೆ ವಿಭಾಗಿಸಿರುವಂತೆ ಈ ಋಕ್ಕಿಗೆ ಹೇಳಿರುವ ನಾಲ್ಕು ಅರ್ಥಗಳಲ್ಲಿ **ಋಚಃ** ಎಂಬ ಪದಕ್ಕೆ **ಋಕ್‌ಪ್ರಧಾನಭೂತಾಃ ಸಾಂಗಾಃಪರವಿದ್ಯಾತ್ಮಕಾಶ್ಚತ್ವಾರೋ ವೇದಾಃ |** ವೇದಾಂಗಗಳಿಂದ ಕೂಡಿದ ನಾಲ್ಕು ವೇದಗಳು ಎಂದೂ, ಇವುಗಳ ಅಧ್ಯಯನವು ಆತ್ಮಸಾಕ್ಷಾತ್ಕಾರಕ್ಕೆ ಸಾಧಕವೆಂದೂ ವಿವರಿಸುವುದು ಒಂದು ಪಕ್ಷ. ಎರಡನೆಯದಾಗಿ **ಋಕ್** ಶಬ್ದಕ್ಕೆ ಅರ್ಚನೀಯವಾದ ಆದಿತ್ಯನುಂಡಲವೆಂದೂ ಅರ್ಥಮಾಡಬಹುದು. ಈ ಪಕ್ಷದ ಅರ್ಥವನ್ನು ನಿರುಕ್ತದಲ್ಲಿ ಈರೀತಿ ವಿವರಿಸಿದೆ.

**ಆದಿತ್ಯ ಇತಿ ಪುತ್ರಃ ಶಾಕಪೂಣೇರೇಷರ್ಗ್ಭವತಿ ಯದೇನಮರ್ಚಂತಿ ಪ್ರತ್ಯೃಚಃ ಸರ್ವಾಣಿ ಭೂತಾನಿ ತಸ್ಯ ಯದನ್ಯನ್ಮಂತ್ರೇಭ್ಯಸ್ತದಕ್ಷರಂ ಭವತಿ ರಶ್ಮಯೋಽತ್ರ ದೇವಾ ಉಚ್ಯಂತೇ ಯ ಏತಸ್ಮಿನ್ನಧಿನಿಷಣ್ಣಾ ಇತ್ಯಧಿದೈವತಂ ||**

(ನಿ. ೧೩-೧೧)

**ಋಚಃ** ಎಂಬ ಶಬ್ದಕ್ಕೆ ಅರ್ಚನೀಯನಾದ ಆದಿತ್ಯನೆಂದರ್ಥವೆಂದೂ, ಯಾವುದರಿಂದ ಈ ಆದಿತ್ಯನನ್ನು ಪೂಜಿಸು

ತ್ತಾರೋ ಅದಕ್ಕೆ **ಋಕ್** ಎಂಬ ಹೆಸರೆಂದೂ, **ದೇವಾಃ** ಎಂಬ ಪದಕ್ಕೆ ರಶ್ಮಿಗಳೆಂದೂ, ಎಲ್ಲಾ ರಶ್ಮಿಗಳಿಗೂ ಆಧಾರವಾಗಿರುವ ಆದಿತ್ಯನು ಉಪಾಸ್ಯನು ಎಂದು ತಿಳಿಸುವುದೇ ಪ್ರಕೃತವಾದ ಋಕ್ಕಿನ ಉದ್ದಿಶ್ಯವೆಂದೂ ಶಾಕಪೂಣಿಪುತ್ರಮತ

**ಯ ಏಷೋಽಂತರಾದಿತ್ಯೇ ಹಿರಣ್ಮಯಃ ಪುರುಷಃ ।**

(ತೈ. ಉ. ೪-೧೩)

ಎಂಬ ಮಂತ್ರವನ್ನು ಸಾಯಣರು ಉದಹರಿಸಿ ಆದಿತ್ಯಮಂಡಲಾಂತವರ್ತಿಯಾದ ಪುರುಷನನ್ನು ಆರಾಧಿಸುವುದೇ ಲಕ್ಷ್ಯವೆಂದು ಹೇಳುವ ಮತವನ್ನೂ ವಿವರಿಸಿದ್ದಾರೆ. ಆದಿತ್ಯಾಂತರ್ಗತನಾದ ಪರಮಪುರುಷನು ಉಪನಿಷದಾದಿಗಳಲ್ಲಿ ವರ್ಣಿತನಾಗಿರುವುದನ್ನು ಇದೇ ಸೂಕ್ತದಲ್ಲಿ ಹಿಂದೆ ಅನೇಕಕಡೆಗಳಲ್ಲಿ ತಿಳಿಸಿವೆ.

**ಅಥ್ಯಾಧ್ಯಾತ್ಮಂ** ಎಂದು ನಿರುಕ್ತಕಾರರು ಅಧ್ಯಾತ್ಮಪಕ್ಷವಾದ ಮೂರನೆಯ ಮತವನ್ನು ತಿಳಿಸುತ್ತಾ,

**ಶರೀರಮತ್ರ ಋಗುಚ್ಯತೇ ಯದೇನೇನಾರ್ಚಂತಿ ಪ್ರತ್ಯೃಚಃ ಸರ್ವಾಣೀಂದ್ರಿಯಾಣಿ ತಸ್ಯ ಯದವಿನಾಶಿಧರ್ಮ ತದಕ್ಷರಂ ಭವತೀಂದ್ರಿಯಾಣ್ಯತ್ರ ದೇವಾ ಉಚ್ಯಂತೇ ಯಾನ್ಯಸ್ಮಿನ್ನಧಿನಿಷಣ್ಣಾನೀತ್ಯಾತ್ಮಪ್ರವಾದಾಃ ॥**

(ನಿ. ೧೩-೧೧)

ಇವರಂತೆ **ಋಕ್** ಶಬ್ದಕ್ಕೆ ಶರೀರವೆಂದರ್ಥ. ನಶ್ವವಾದ ಶರೀರದಲ್ಲಿ ಯಾವತತ್ತ್ವವು ಅವಿನಾಶಿಯಾಗಿದೆಯೋ ಅದು ಅಕ್ಷರ. ಆತ್ಮನೆಂದರ್ಥ. **ದೇವಾಃ** ಎಂಬುದು ಇಂದ್ರಿಯಗಳಿಗೆ ಪರ್ಯಾಯಶಬ್ದವಾಗಿದೆ. ಆ ಇಂದ್ರಿಯಗಳೆಲ್ಲವೂ ದೇಹವಲ್ಲಿ ಅಧಿಷ್ಠಿತಗಳಾಗಿವೆಯೆಂದರ್ಥ.

ಸಾಯಣರು ಇದನ್ನು ಕೊಂಚ ಬದಲಾಯಿಸಿ, (**ಋಕ್** ಎಂಬುದಕ್ಕೆ ಶರೀರವೆಂದರ್ಥಮಾಡುವುದಲ್ಲದೆ) **ಋಕ್ ಅರ್ಚನೀಯೋ ಜೀವಃ ತಸ್ಯ ಸಂಬಂಧಿನ್ಯಕ್ಷರೇಽವಿನಾಶೇ ವ್ಯಾಪ್ತೇ ವಾ ಪರಮಾತ್ಮನೀತ್ಯರ್ಥಃ । ಋಕ್** ಶಬ್ದಕ್ಕೆ ಪೂಜ್ಯನಾದ ಜೀವನೆಂದರ್ಥ. ಅದಕ್ಕೆ ಸಂಬಧಿಸಿದವನೂ, ನಾಶರಹಿತನಾದವನೂ ಆದ ಪರಮಾತ್ಮನು ಅಕ್ಷರಶಬ್ದದಿಂದ ವ್ಯವಹೃತನಾಗಿದ್ದಾನೆ. ಜೀವನಿಗಿಂತಲೂ ಅತಿಶಯವಾದ ಸ್ಥಾನದಲ್ಲಿರುವುದರಿಂದ ಈ ಪರಮಾತ್ಮನನ್ನು **ಅಕ್ಷರೇ ಪರಮೇ ವ್ಯೋಮನ್** ಎಂದು ವರ್ಣಿಸಿದೆ. **ಯಸ್ಮಿನ್ ಪರಮಾತ್ಮನಿ ದೇವಾ ಗಮನವಂತೋ ವಾ ಇಂದ್ರಿಯಸಂಜ್ಞಕಾ ವಿಶ್ವೇ ಸರ್ವೇಽಪಿ ಅಧಿ ನಿಷೇದುಃ ।** ಸಕಲಜೀವಗಳೂ ಈ ಪರಮಾತ್ಮನ ಆಶ್ರಯವನ್ನು ಪಡೆದಿವೆ. ಆದ್ದರಿಂದ ಅವನೊಂದಿಗೆ ಐಕ್ಯವಾಗದಿರತಕ್ಕ ಜೀವರಾಶಿಗಳೆಲ್ಲರೂ ಜರಾಮರಣಾದ್ಯುಪಾಧಿಗಳಿಂದ ಕೂಡಿದ ಶರೀರಸಂಬಂಧಿಗಳಾಗಿರುವುದರಿಂದ ಜೀವನಿಗೆ ದುಃಖವೇ ಹೊರತು ಸುಖವಿಲ್ಲ. ಆದುದರಿಂದ ಪರಮಾತ್ಮನ ಸಾಕ್ಷಾತ್ಕಾರವು ಅತ್ಯವಶ್ಯವೆಂಬುದು ತಾತ್ಪರ್ಯ.

**ಋಚಃ** ಎಂಬ ಪದಕ್ಕೆ ಪ್ರಣವಪರವಾಗಿಯೂ ಅರ್ಥವನ್ನು ಹೇಳಬಹುದೆಂದು ಸಾಯಣರು ತೋರಿಸಿದ್ದಾರೆ.

**ಋಚೋಽಕ್ಷರೇ—ಋಗುಪಲಕ್ಷಿತಸರ್ವವೇದಸಂಬಂಧಿನಿ ಅಕ್ಷರೇ ಪ್ರಣವರೂಪೇ ಓಂಕಾರೇ ಅವಿನಾಶಿನಿ ಸರ್ವವೇದೇಷು ವ್ಯಾಪ್ತೇ ವಾ ।**

ಋಗಾದಿಸರ್ವವೇದಗಳ ಸಾರವಾದುದೂ, ಅವಿನಾಶಿಯಾದುವೂ, ಸರ್ವವೇದಗಳಲ್ಲೂ ವ್ಯಾಪಿಸಿರುವುದೂ ಆದ **ಓಂಕಾರ**ದಲ್ಲಿ. **ಓಂಕಾರವು** ಸರ್ವವೇದಗಳ ಸಾರವೆಂಬುನು ಹೇಗೆಂದರೆ, ಅದಕ್ಕೆ ಶ್ರುತಿವಾಕ್ಯವೇ ಆಧಾರವೆಂದು ಐತರೇಯ

ಬ್ರಾಹ್ಮಣದ ವಾಕ್ಯವನ್ನು ಉದಹರಿಸಿದ್ದಾರೆ. ಐತರೇಯಬ್ರಾಹ್ಮಣದಲ್ಲಿ ವೇದಗಳ ಸಾರವಾದ ಪ್ರಣವದ ಆವಿರ್ಭಾವವನ್ನು ಈ ರೀತಿ ತಿಳಿಸಿದೆ.

> **ಪ್ರಜಾಪತಿರಕಾಮಯತ ಪ್ರಜಾಯೇಯ ಭೂಯಾನ್ಸ್ಯಾಮಿತಿ ಸ ತಪೋಽತಪ್ಯತ ಸ ತಪಸ್ತಪ್ತ್ವೇಮಾಲ್ಲೋಕಾನಸೃಜತ ಪೃಥಿವೀಮಂತರಿಕ್ಷಂ ದಿವಂ ತಾಲ್ಲೋಕಾನಭ್ಯತಪತ್ತೇಭ್ಯೋಽಭಿತಪ್ತೇಭ್ಯಸ್ತ್ರೀಣಿ ಜ್ಯೋತೀಂಷ್ಯಜಾಯಂತಾಗ್ನಿರೇವ ಪೃಥಿವ್ಯಾ ಅಜಾಯತ ವಾಯುರಂತರಿಕ್ಷಾದಾದಿತ್ಯೋ ದಿವಸ್ತಾನಿ ಜ್ಯೋತೀಂಷ್ಯಭ್ಯತಪತ್ತೇಭ್ಯೋಽಭಿತಪ್ತೇಭ್ಯಸ್ತ್ರಯೋ ವೇದಾ ಅಜಾಯಂತ ಋಗ್ವೇದ ಏವಾಗ್ನೇರಜಾಯತ ಯಜುರ್ವೇದೋ ವಾಯೋಃ ಸಾಮವೇದ ಆದಿತ್ಯಾತ್ತಾನ್ವೇದಾನಭ್ಯತಪತ್ತೇಭ್ಯೋಽಭಿತಪ್ತೇಭ್ಯಸ್ತ್ರೀಣಿ ಶುಕ್ರಾಣ್ಯಜಾಯಂತ ಭೂರಿತ್ಯೇವ ಋಗ್ವೇದಾದಜಾಯತ ಭುವ ಇತಿ ಯಜುರ್ವೇದಾತ್ಸ್ವರಿತಿ ಸಾಮವೇದಾತ್ । ತಾನಿ ಶುಕ್ರಾಣ್ಯಭ್ಯತಪತ್ತೇಭ್ಯೋಽಭಿತಪ್ತೇಭ್ಯಸ್ತ್ರಯೋ ವರ್ಣಾ ಅಜಾಯಂತಾಕಾರ ಉಕಾರೋ ಮಕಾರ ಇತಿ ತಾನೇಕಧಾಸಮಭರತ್ತದೇತದೋಮಿತಿ ತಸ್ಮಾದೋಮೋಮಿತಿ ಪ್ರಣೌತ್ಯೋಮಿತಿ ವೈ ಸ್ವರ್ಗೋ ಲೋಕ ಓಮಿತ್ಯಸೌ ಯೋಽಸೌ ತಪತಿ ॥**
>
> (ಐ. ಬ್ರಾ. ೫-೩೨)

ಪ್ರಜಾಪತಿಯು ತಾನು ವೃದ್ಧಿಯನ್ನು ಹೊಂದಲಿಚ್ಛಿಸಿ ತಪಸ್ಸನ್ನಾಚರಿಸಿದನು. ಆ ತಪಃಪ್ರಭಾವದಿಂದ ಪೃಥಿವೀ, ಅಂತರಿಕ್ಷ ಮತ್ತು ದ್ಯುಲೋಕಗಳನ್ನು ಸೃಷ್ಟಿಸಿ ಅವುಗಳನ್ನು ಪಕ್ವವಾಗುವಂತೆ ಮಾಡಿದನು. ಅವುಗಳಲ್ಲಿ ಪೃಥ್ವಿಯಿಂದ ಅಗ್ನಿಯೂ, ಅಂತರಿಕ್ಷದಿಂದ ವಾಯುವೂ, ದ್ಯುಲೋಕದಿಂದ ಆದಿತ್ಯನೂ ಉತ್ಪನ್ನರಾದರು. ಇವರನ್ನೂ ಪಕ್ವವಾಗುವಂತೆ ಮಾಡಲು ಅಗ್ನಿಯಿಂದ ಋಗ್ವೇದವೂ, ವಾಯುವಿನಿಂದ ಯಜುರ್ವೇದವೂ, ಆದಿತ್ಯನಿಂದ ಸಾಮವೇದವೂ ಉತ್ಪನ್ನವಾದವು. ಇವುಗಳಲ್ಲಿ ಶುಭ್ರವಾದ ಮೂರು ಧ್ವನಿಗಳು ಹೊರಟವು. **ಋಗ್ವೇದದಿಂದ ಭೂಃ** ಎಂಬ ಸ್ವರವೂ, ಯಜುರ್ವೇದದಿಂದ **ಭುವಃ** ಎಂಬ ಸ್ವರವೂ, **ಸಾಮವೇದದಿಂದ ಸ್ವರ್** ಎಂಬ ಸ್ವರವೂ ನಿಷ್ಪನ್ನವಾದವು, ಶುಭ್ರವಾದ ಆ ಸ್ವರಗಳನ್ನೂ ಪಕ್ವವಾಗುವಂತೆ ಮಾಡಿದಾಗ **ಅ, ಉ, ಮ** ಎಂಬ ಮೂರು ಅಕ್ಷರಗಳು ಆವಿರ್ಭೂತವಾದುವು. ಅವುಗಳನ್ನೆಲ್ಲಾ ಒಟ್ಟಿಗೆ ಸೇರಿಸಿದಾಗ **ಓಂ** ಎಂಬ **ಪ್ರಣವವು** ರಚಿತವಾಯಿತು. **ಓಂ ಎಂಬುದೇ ಸ್ವರ್ಗ** ಲೋಕವು. ಅದೇ ಆದಿತ್ಯನು, ಎಂದು ವಿವರಿಸಿ **ಓಂಕಾರರೂಪವಾದ** ಪ್ರಣವವು ವೇದಗಳ ಸಾರವೆಂದು ತಿಳಿಸಿದೆ.

ಈ ಪ್ರಣವವನ್ನು **ಪರಮೇ ವ್ಯೋಮನ್** ಎಂಬ ವಿಶೇಷಣಗಳಿಂದ ವರ್ಣಿಸಿದೆ. **ನ ಹಿ ಪ್ರಣವಾದಧಿಕಂ ಕಿಂಚಿನ್ಮಂತ್ರಜಾತಮಸ್ತಿ ತ್ರಿಕಾಲಾತೀತಸ್ಯ ಬ್ರಹ್ಮಣಃ ಪ್ರತಿಪಾದಕತ್ವಾತ್ । ತ್ರಿಕಾಲಾತೀತವಾದ ಬ್ರಹ್ಮತತ್ತ್ವ**ವನ್ನು ಪ್ರತಿಪಾದಿಸುವುದರಿಂದ ಪ್ರಣವಕ್ಕಿಂತಲೂ ಉತ್ಕೃಷ್ಟತರವಾದ ಮಂತ್ರವೇ ಇಲ್ಲವೆಂದಭಿಪ್ರಾಯ. ಅದರ ಮಹಿಮೆಯು ಉಪನಿಷತ್ತುಗಳಲ್ಲಿ ಈ ರೀತಿ ವರ್ಣಿಸಲ್ಪಟ್ಟಿದೆ.

> **ಓಮಿತ್ಯೇತದಕ್ಷರಮಿದಗ್ಂ ಸರ್ವಂ ತಸ್ಯೋಪವ್ಯಾಖ್ಯಾನಂ ಭೂತಂ ಭವದ್ಭವಿಷ್ಯದಿತಿ ಸರ್ವಮೋಂಕಾರ ಏವ । ಯಚ್ಚಾನ್ಯತ್ತ್ರಿಕಾಲಾತೀತಂ ತದಪ್ಯೋಂಕಾರ ಏವ ।**
>
> (ಮಾ. ಉ ೧.)

ವಿಶ್ವವೆಲ್ಲವೂ **ಓಂಕಾರ**ಮಯವೇ ಆಗಿದೆ. ಆದುದರಿಂದ **ಓಂಕಾರ** ರೂಪವಾದ ಪ್ರಣವವೇ ಪರಬ್ರಹ್ಮನು. ಅದು ಹೇಗೆಂದು ಶಂಕರಾಚಾರ್ಯರು ವಿವರಿಸುತ್ತಾ,

> **ಯದಿದಂ ಅರ್ಥಜಾತಂ ಅಭಿಧೇಯಭೂತಂ ತಸ್ಯ ಅಭಿಧಾನಾವ್ಯತಿರೇಕಾತ್ ಅಭಿಧಾನಸ್ಯ ಚ ಓಂಕಾರಾವ್ಯತಿರೇಕಾತ್ ಓಂಕಾರ ಏವೇದಂ ಸರ್ವಂ, ಪರಂ ಚ ಬಹ್ಮ ಅಭಿಧಾನಾಭಿಧೇಯೋಪಾಯಪೂರ್ವಕಮೇವ ಗಮ್ಯತೇ ಇತಿ ಓಂಕಾರ ಏವ । ತಸ್ಯ ಏತಸ್ಯ ಪರಾಪರಬ್ರಹ್ಮರೂಪಸ್ಯ ಅಕ್ಷರಸ್ಯ ಓಂ ಇತ್ಯೇತಸ್ಯ ಉಪವ್ಯಾಖ್ಯಾನಂ**
>
> (ಮಾ. ಉ. ಶಂಕರ ಭಾಷ್ಯ. ೧)

ನಾಮರೂಪಗಳಿಂದ ನಿರ್ದೇಶಿಸಲ್ಪಟ್ಟ ಯಾವ ಯಾವ ವಸ್ತುಗಳು ಲೋಕದಲ್ಲಿ ಅಭಿಧೇಯವಾಗಿರುವುವೋ (ಹೆಸರಿನಿಂದ ಕರೆಯಲ್ಪಡುವುವೋ) ಅವೆಲ್ಲವೂ ಓಂಕಾರಮಯವೇ ಆಗಿವೆ. ಅಭಿಧಾನವೂ ಸಹ (ನಿರ್ದೇಶಮಾಡುವಕ್ರಮ) **ಓಂಕಾರವೇ** ಆಗಿದೆ. ಪರಬ್ರಹ್ಮವೂ ಸಹ ಅಭಿಧಾನ ಮತ್ತು ಅಭಿಧೇಯ ಎಂಬ ಸಾಧನದ ಮೂಲಕವಾಗಿಯೇ ತಿಳಿಯಬರುತ್ತಾದ್ದರಿಂದ ಅದೂ **ಓಂಕಾರವೇ.** ಅಂತಹ ಪರಾಪರಬ್ರಹ್ಮರೂಪವಾದ **ಓಂ** ಎಂಬೀ ಅಕ್ಷರದ ಉಪಾಖ್ಯಾನವು ಬ್ರಹ್ಮನನ್ನು ಅರಿತುಕೊಳ್ಳುವುದಕ್ಕೆ ಸಾಧನವಾಗಿರುವುದರಿಂದ ಬ್ರಹ್ಮಕ್ಕೆ ಸಮೀಪವಾಗಿದೆ. ಎಂದು ಪ್ರಣವದ ಸ್ತುತಿಯನ್ನು ಮಾಡುವಾಗ ಪ್ರಣವಕ್ಕೂ ಪರಬ್ರಹ್ಮಕ್ಕೂ ತಾದಾತ್ಮ್ಯವನ್ನು ಹೇಳಿದೆ ತೈತ್ತಿರೀಯೋಪನಿಷತ್ತಿನಲ್ಲಿಯೂ ಸಹ,

> **ಓಮಿತಿ ಬ್ರಹ್ಮ । ಓಮಿತೀದಗ್ಂ ಸರ್ವಂ। ಓಮಿತ್ಯೇತದನುಕೃತಿ ಹ ಸ್ಮ ವಾ ಅಪ್ಯೋ ಶ್ರಾವಯೇ-ತ್ಯಾಶ್ರಾವಯಂತಿ । ಓಮಿತಿ ಸಾಮಾನಿ ಗಾಯಂತಿ । ಓಗ್ಂಶೋಮಿತಿ ಶಸ್ತ್ರಾಣಿ ಶಗ್ಂಸಂತಿ । ಓಮಿತ್ಯಧ್ವರ್ಯುಃ ಪ್ರತಿಗರಂ ಪ್ರತಿಗೃಣಾತಿ । ಓಮಿತಿ ಬ್ರಹ್ಮಾ ಪ್ರಸೌತಿ । ಓಮಿತ್ಯಗ್ನಿಹೋತ್ರ-ಮನುಜಾನಾತಿ । ಓಮಿತಿ ಬ್ರಾಹ್ಮಣಃ ಪ್ರವಕ್ಷ್ಯನ್ನಾಹ ಬ್ರಹ್ಮೋಪಾಪ್ನವಾನೀತಿ । ಬ್ರಹ್ಮೈ-ವೋಪಾಪ್ನೋತಿ ।**
>
> (ತೈ. ಉ. ೧-೮)

ಓಂ ಎಂಬುದೇ (ಪ್ರಣವವೇ) ಬ್ರಹ್ಮವು. ವಿಶ್ವವೆಲ್ಲವೂ ಓಂ ಎಂಬುದೇ ಆಗಿದೆ. ಅದೇ ಅನುಕರಣವು. ಸಾಮಗಾನ ಮಾಡುವವರೂ ಅಧ್ವರ್ಯ್ವಾದಿಗಳಿಗೂ ಸಹ ಇದರಿಂದಲೇ ಪ್ರತಿಗರವನ್ನು ಹೇಳುತ್ತಾರೆ. ಅಧ್ಯಯನವನ್ನು ಮಾಡುವುದಕ್ಕೆ ಮೊದಲು ಬ್ರಹ್ಮನನ್ನು ಪಡೆಯೋಣ ಎಂದು ವೇದಾಧ್ಯಯನವದ್ನು ಮಾಡತಕ್ಕವನು ಓಂಕಾರೋಚ್ಚಾರಣದಿಂದ ಬ್ರಹ್ಮನನ್ನೇ ಪಡೆಯುತ್ತಾನೆ. ಓಂ ಎಂದರೆ ಪರಮಾತ್ಮನು. ಇದರ ಉಚ್ಚಾರಣೆಯಿಂದ ಪರಮಾತ್ಮನ ಪ್ರಾಪ್ತಿಯಾಗುತ್ತದೆಯೆಂದು ತಿಳಿಸಿದೆ.

> **ಓಂಕಾರಪೂರ್ವಂ ಪ್ರವೃತ್ತಾನಾಂ ಕ್ರಿಯಾಣಾಂ ಫಲವತ್ತ್ವಂ ಯಸ್ಮಾತ್, ತಸ್ಮಾತ್ ಓಂಕಾರಂ ಬ್ರಹ್ಮೇತ್ಯುಪಾಸೀತ ಇತ್ಯರ್ಥಃ ।**
>
> (ಶಂಕರ ಭಾಷ್ಯ)

ಪ್ರಣವೋಚ್ಚಾರಣೆಗೆ ಬ್ರಹ್ಮಸಾಕ್ಷಾತ್ಕಾರವೇ ಫಲವೆಂದು ಶಂಕರಾಚಾರ್ಯರು ಮೇಲಿನ ವಾಕ್ಯಕ್ಕೆ ಭಾಷ್ಯವನ್ನು ಹೇಳುವಾಗ ತಿಳಿಸಿರುತ್ತಾರೆ.

ಓಂಕಾರರೂಪವಾದ ಪ್ರಣವವು ಅಮೃತತ್ತ್ವಸಾಧಕವೆಂದು ತಿಳಿಸಲು ಛಾಂದೋಗ್ಯೋಪನಿಷತ್ತಿನಲ್ಲಿ ಒಂದು ಕಥೆಯನ್ನು ಹೇಳಿದೆ. (ಛಾ. ೧-೪)

**ದೇವಾ ವೈ ಮೃತ್ಯೋರ್ಬಿಭ್ಯತಸ್ತ್ರಯೀಂ ವಿದ್ಯಾಂ ಪ್ರಾವಿಶಂಸ್ತೇ ಛಂದೋಭಿರಚ್ಛಾದಯನ್ಯದೇಭಿರಚ್ಛಾದಯಂಸ್ತಚ್ಛಂದಸಾಂ ಛಂದಸ್ತ್ವಂ ॥ ೨ ॥**

**ತಾನು ತತ್ರ ಮೃತ್ಯುರ್ಯಥಾ ಮತ್ಸ್ಯಮುದಕೇ ಪರಿಪಶ್ಯೇದೇವಂ ಪರ್ಯಪಶ್ಯದೃಚಿ ಸಾಮ್ನಿ ಯಜುಷಿ । ತೇ ನು ವಿದಿತ್ವೋರ್ಧ್ವಾ ಋಚಃ ಸಾಮ್ನೋ ಯಜುಷಃ ಸ್ವರಮೇವ ಪ್ರಾವಿಶನ್ ॥ ೩ ॥**

**ಯದಾ ವಾ ಋಚಮಾಪ್ನೋತ್ಯೋಮಿತ್ಯೇವಾತಿಸ್ವರತ್ಯೇವಂ ಸಾಮೈವಂ ಯಜುರೇಷ ಉ ಸ್ವರೋ ಯದೇತದಕ್ಷರಮೇತದಮೃತಮಭಯಂ ತತ್ಪ್ರವಿಶ್ಯ ದೇವಾ ಅಮೃತಾ ಅಭಯಾ ಅಭವನ್ ॥ ೪ ॥**

**ಸ ಯ ಏತದೇವಂ ವಿದ್ವಾನಕ್ಷರಂ ಪ್ರಣೌತ್ಯೇತದೇವಾಕ್ಷರಂ ಸ್ವರಮಮೃತಮಭಯಂ ಪ್ರವಿಶತಿ ತತ್ಪ್ರವಿಶ್ಯ ಯದಮೃತಾ ದೇವಾಸ್ತದಮೃತೋ ಭವತಿ ॥ ೫ ॥**

ದೇವತೆಗಳು ಮೃತ್ಯುವಿಗೆ ಹೆದರಿ ತ್ರಯೀರೂಪವಾದ ವಿದ್ಯೆಯಲ್ಲಿ ಆಶ್ರಯವನ್ನು ಪಡೆದು ಅದನ್ನು ಛಂದಸ್ಸುಗಳಿಂದ ಮರೆಸಿದರು. (ಆದುದರಿಂದಲೇ ಅದಕ್ಕೆ ಛಂದಸ್ಸೆಂದು ಹೆಸರು) ಆದರೆ ನೀರಿನೊಳಗೆ ಮೀನುಗಳನ್ನು ಸುಲಭವಾಗಿ ಕಂಡುಹಿಡಿಯುವಂತೆ ಮೃತ್ಯುವು ಋಗಾದಿಗಳಲ್ಲಿ ಅಡಗಿದ್ದ ದೇವತೆಗಳನ್ನು ಕಂಡುಕೊಂಡಿತು ಆಗ ಅವರು ಋಕ್ಕಿನಿಂದಲೂ' ಯಜುಸ್ಸಿನಿಂದಲೂ, ಸಾಮದಿಂದಲೂ ಹೊರಕ್ಕೆದ್ದು ಸ್ವರದಲ್ಲಿ ಅಡಗಿಕೊಂಡು ಅದರ ಆಶ್ರಯವನ್ನು ಪಡೆದರು. [ಆದುದರಿಂದಲೇ ಋಗಾದಿಗಳ ಸಮಾಪ್ತಿಕಾಲದಲ್ಲಿ **ಓಂಕಾರ**ವನ್ನು ಪಠಿಸುತ್ತಾರೆ]. **ಈ ಓಂಕಾರರೂಪವಾದ** ಸ್ವರವು ಅಮೃತವೂ ಅಭಯರೂಪದ್ದೂ ಆಗಿದೆ. ದೇವತೆಗಳೂ ಸಹ ಇದರ ಆಶ್ರಯವನ್ನು ಪಡೆದು ಅಮೃತತ್ವವನ್ನೂ ಅಭಯವನ್ನೂ ಹೊಂದಿದರು. ಯಾರು ಈ ತತ್ತ್ವವನ್ನರಿತು ಈ ಓಂಕಾರರೂಪವಾದ ಸ್ವರದ ಆಶ್ರಯವನ್ನು ಪಡೆಯುತ್ತಾರೆಯೋ ಅವರು ಅಮೃತರಾಗುತ್ತಾರೆ. ಅಭಯವನ್ನು ಪಡೆಯುತ್ತಾರೆ.

**ಯಸ್ಮಿನ್ ವಿಶ್ವೇ ಸರ್ವೇ ದೇವಾ ಅಧಿ ನಿಷೇದುಃ । ಪ್ರಣವಸ್ಯ ಸರ್ವಮಂತ್ರಾತ್ಮಕತ್ವಾತ್ ಮಂತ್ರೇಷು ಸರ್ವದೇವತಾನಾಂ ನಿವಾಸಾತ್ ಸರ್ವದೇವನಿವಾಸತ್ವಂ । ಬ್ರಹ್ಮಾಧಿಷ್ಠಾನತ್ವಾದ್ವಾ ಬ್ರಹ್ಮಣಿ ಸರ್ವದೇವಾನಾಂ ನಿವಾಸಾತ್ ॥** ಪ್ರಣವದಲ್ಲಿ ಸಕಲವಾದ ದೇವತೆಗಳೂ ಅಧಿಷ್ಠಿತರಾಗಿದ್ದಾರೆ. ಹೇಗೆಂದರೆ, ಇದನ್ನು ಎರಡು ವಿಧದಲ್ಲಿ ಹೇಳಬಹುದು. ಮಂತ್ರಗಳು ದೇವತೆಗಳ ನಿವಾಸಸ್ಥಾನವು. ಪ್ರಣವವು ಸರ್ವಮಂತ್ರಾತ್ಮಕವಾಗಿದೆ. ಆದುದರಿಂದ ಪ್ರಣವವು ದೇವತೆಗಳ ನಿವಾಸಸ್ಥಾನವು ಎಂದು ಒಂದು ವಿಧವಾಗಿ ಹೇಳಬಹುದು. ಅಥವಾ, ಪ್ರಣವವು ಬ್ರಹ್ಮನ ಅಧಿಷ್ಠಾನವು. ಬ್ರಹ್ಮನು ಸಕಲ ದೇವತೆಗಳ ಅಧಿಷ್ಠಾನವು. ಆದುದರಿಂದ ಪ್ರಣವವು ದೇವತೆಗಳಿಗೆಲ್ಲಾ ಅಧಿಷ್ಠಾನವು.

ಆದುದರಿಂದ ಪ್ರಣವದ ಉಪಾಸನೆಯಿಲ್ಲದೆ ಬ್ರಹ್ಮಸಾಕ್ಷಾತ್ಕಾರವಿಲ್ಲವೆಂದು ತಿಳಿಸುವುದಕ್ಕಾಗಿ **"ಕಿಮೃಚಾ ಕರಿಷ್ಯತಿ"** ಎಂದು ಪ್ರಕೃತವಾದ ಋಕ್ಕಿನಲ್ಲಿ ವಿವರಿಸಿ, **ಯ ಇತ್ತದ್ವಿದುಸ್ತ ಇಮೇ ಸಮಾಸತೇ ।** ಯಾರು ಇದನ್ನು

ಅರಿಯುವರೋ ಅವರು ಆತ್ಮಸಾಮರಸ್ಯವನ್ನು ಪಡೆಯುವರೆಂದಿದೆ. ಪ್ರಕೃತವಾದ ಋಕ್ಕಿನಲ್ಲಿ ಅಕ್ಷರಶಬ್ದಕ್ಕೆ ಪ್ರಣವ ವೆಂದರ್ಥಮಾಡಿದರೆ ಆಗ ಪ್ರಣವರೂಪವಾದ ಬ್ರಹ್ಮವನ್ನು ಸಾಕ್ಷಾತ್ಕರಿಸಲು ಪ್ರಣವರೂಪವಾದ ಸಾಧನದಿಂದಲೇ ಸಾಧ್ಯವೆಂಬುದನ್ನು ಮುಂಡಕೋಪನಿಷತ್ತಿನಲ್ಲಿ ಈ ರೀತಿ ತಿಳಿಸಿದೆ.

**ತದೇತದಕ್ಷರಂ ಬ್ರಹ್ಮ ಸ ಪ್ರಾಣಸ್ತದು ವಾಙ್ಮನಃ ।**
**ತದೇತತ್ಸತ್ಯಂ ತದಮೃತಂ ತದ್ವೇದ್ಧವ್ಯಂ ಸೋಮ್ಯ ವಿದ್ಧಿ ॥**

(ಮು. ಉ. ೨-೨-೨)

ಯಾವ ಪರತತ್ತ್ವದಲ್ಲಿ ಸಕಲ ಲೋಕಗಳೂ ಅಡಗಿರುವುವೋ ಅದೇ ಅಕ್ಷರವೆಂಬ ಬ್ರಹ್ಮವು. ಅದೇ ಪ್ರಾಣವು. ಅದೇ ವಾಙ್ಮನಸ್ಸು. ಅದೇ ಸತ್ಯವು. ಅದೇ ಅಮೃತವು. ಅದನ್ನೇ ಲಕ್ಷ್ಯವನ್ನಾಗಿ ಮಾಡಿಕೊಂಡು ಅದನ್ನು (ಗುರಿಯನ್ನು) ಸಾಧಿಸಬೇಕು. ಅದು ಹೇಗೆಂದರೆ

**ಧನುರ್ಗೃಹೀತ್ವೌಪನಿಷದಂ ಮಹಾಸ್ತ್ರಂ ಶರಂ ಹ್ಯುಪಾಸಾನಿಶಿತಂ ಸಂಧಯೀತ ।**
**ಆಯಮ್ಯ ತದ್ಭಾವಗತೇನ ಚೇತಸಾ ಲಕ್ಷ್ಯಂ ತದೇವಾಕ್ಷರಂ ಸೋಮ್ಯ ವಿದ್ಧಿ ॥**

(ಮು. ಉ ೨-೨-೩)

ಔಪನಿಷದ ಮಹಾಸ್ತ್ರವಾದ ಧನುಸ್ಸನ್ನು ತೆಗೆದುಕೊಂಡು ಉಪಾಸನೆಯೆಂಬ ಹರಿತವಾಗಿರುವ ಬಾಣವನ್ನು ಜೋಡಿಸಬೇಕು. ಅದನ್ನು ಎಳೆದುಕೊಂಡು ಅದರ ಭಾವನೆಯಲ್ಲಿಯೇ ಇರುವ ಚಿತ್ತದಿಂದ ಲಕ್ಷ್ಯವಾದ ಅಕ್ಷರವನ್ನು ಹೊಡೆಯಬೇಕು.

**ಪ್ರಣವೋ ಧನುಃ ಶರೋ ಹ್ಯಾತ್ಮಾ ಬ್ರಹ್ಮ ತಲ್ಲಕ್ಷ್ಯಮುಚ್ಯತೇ ।**
**ಅಪ್ರಮತ್ತೇನ ವೇದ್ಧವ್ಯಂ ಶರವತ್ತನ್ಮಯೋ ಭವೇತ್ ॥**

(ಮು. ಉ. ೨-೨-೪)

ಪ್ರಣವವೇ ಧನುಸ್ಸು. ಆತ್ಮನೇ ಬಾಣ. ಬ್ರಹ್ಮವೇ ಲಕ್ಷ್ಯ. ಅದನ್ನು ಎಚ್ಚರತಪ್ಪದೆ ಹೊಡೆಯಬೇಕು. ಬಾಣದಂತೆ ತನ್ಮಯನಾಗಬೇಕು. ಹೇಗೆ ಧನುಸ್ಸು ಗುರಿಯಲ್ಲಿ ಬಾಣವು ಹೋಗಿ ಸೇರುವುದಕ್ಕೆ ಕಾರಣವಾಗಿರುವುದೋ ಅದರಂತೆ ಆತ್ಮನೆಂಬ ಬಾಣವು ಅಕ್ಷರವೆಂಬ ಗುರಿಯಲ್ಲಿ ಸೇರುವುದಕ್ಕೆ ಓಂಕಾರರೂಪವಾದ ಪ್ರಣವವು ಕಾರಣವು. ಜೀವನು ಪ್ರಣವವನ್ನು ಅಭ್ಯಾಸ ಮಾಡಿದರೆ ಎಂದರೆ ಉಪಾಸನೆಮಾಡಿದರೆ ಅದರಿಂದ ಸಂಸ್ಕಾರವುಂಟಾಗಿ ಅದನ್ನು ಆಶ್ರಯಿಸಿಕೊಂಡು ಯಾವ ಅಡ್ಡಿಯೂ ಇಲ್ಲದೆ ಅಕ್ಷರವನ್ನು ಸೇರಿ ಅಲ್ಲಿ ನೆಲೆಸುತ್ತಾನೆಂದರ್ಥ.

ಈ ರೀತಿಯಾಗಿ ಸಾಯಣರು ಪ್ರಕೃತವಾದ ಋಕ್ಕಿಗೆ ನಾಲ್ಕು ವಿಧವಾದ ಅರ್ಥವನ್ನು ತೋರಿಸಿ ಅವೆಲ್ಲಕ್ಕೂ ನಿರುಕ್ತದಿಂದಲೂ ಉಪನಿಷತ್ತುಗಳಿಂದಲೂ ಆಧಾರಗಳನ್ನು ಕೊಟ್ಟಿರುತ್ತಾರೆ

॥ ವ್ಯಾಕರಣಪ್ರಕ್ರಿಯಾ ॥

**ಅಕ್ಷರೇ**—ಅಶೂ ವ್ಯಾಪ್ತೌ ಧಾತು **ಅಶೇಃ ಸರಃ** ( ಉ. ಸೂ. ೪-೩-೫೦ ) ಎಂಬುದರಿಂದ ಸರ ಪ್ರತ್ಯಯ. **ವ್ರಶ್ಚಭ್ರಸ್ಜ**—ಎಂಬುದರಿಂದ ಧಾತುಶಕಾರಕ್ಕೆ ಷತ್ವ. **ಷಢೋಃಕಃ ಸಿ** (ಪಾ. ಸೂ. ೮-೨-೪೧)

ಎಂಬುದರಿಂದ ಅದಕ್ಕೆ ಕಕಾರಾದೇಶ. **ಆದೇಶಪ್ರತ್ಯಯಯೋಃ** (ಪಾ. ಸೂ. ೮-೩-೫೯) ಎಂಬುದರಿಂದ ಪ್ರತ್ಯಯ ಸಕಾರಕ್ಕೆ ಷತ್ವ. ಅಕ್ಷರ ಎಂದು ರೂಪವಾಗುತ್ತದೆ. ಪ್ರತ್ಯಯದ ಆದ್ಯುದಾತ್ತಸ್ವರವಾದ ಮಧ್ಯೋದಾತ್ತಪದವಾಗುತ್ತದೆ.

**ವ್ಯೋಮನ್—ನಾಮನ್ ಸೀಮನ್**—(ಉ. ಸೂ. ೪-೫-೯೦) ಎಂಬುದರಿಂದ ವ್ಯೇಞ್ ಧಾತುವಿಗೆ ಮನಿನ್ ಪ್ರತ್ಯಯ ಬಂದು ನಿಪಾತಿತವಾಗಿದೆ. **ಸುಪಾಂ ಸುಲುಕ್**—(ಪಾ. ಸೂ. ೭-೧-೩೯) ಎಂಬುದರಿಂದ ಸಪ್ತಮೀಏಕವಚನ ಪರವಾದಾಗ ಅದಕ್ಕೆ ಲುಕ್.

**ನಿಷೇದುಃ**—ಷದ್ಲೃ ವಿಶರಣಗತ್ಯವಸಾದನೇಷು. ಧಾತು. ಛಾಂದಸವಾಗಿ ಲಿಟ್. ಪ್ರಥಮಪುರುಷ ಬಹುವಚನ ಪರವಾದಾಗ **ಅತಏಕಹಲ್ಮಧ್ಯೇ**—(ಪಾ. ಸೂ. ೬-೪-೧೨೦) ಎಂಬುದರಿಂದ ಧಾತುವಿಗೆ ಏತ್ವ, ಅಭ್ಯಾಸಲೋಪ ಬರುತ್ತದೆ. **ಯದ್ವೃತ್ತಾನ್ನಿತ್ಯಮ್** ( ಪಾ. ಸೂ. ೮-೧-೬೬ ) ಎಂಬುದರಿಂದ ನಿಘಾತಸ್ವರ ಪ್ರತಿಷೇಧ ಬರುವುದರಿಂದ ಪ್ರತ್ಯಯಸ್ವರ ಉಳಿಯುತ್ತದೆ. **ತಿಙಿಚೋದಾತ್ತವತಿ** (ಪಾ. ಸೂ. ೮-೧-೭೧) ಎಂಬುದರಿಂದ ಗತಿಗೆ (ನಿ) ಅನುದಾತ್ತಸ್ವರ ಬರುತ್ತದೆ.

**ವೇದ**—ವಿದ ಜ್ಞಾನೇ ಧಾತು. ಲಡಂತರೂಪ. ಯದ್ಯೋಗವಿರುವುದರಿಂದ ನಿಘಾತಸ್ವರ ಬರುವುದಿಲ್ಲ. ಣಲ್ ಲಿತ್ತಾದುದರಿಂದ ಪ್ರತ್ಯಯದ ಪೂರ್ವಕ್ಕೆ ಉದಾತ್ತಸ್ವರ ಬರುತ್ತದೆ.

**ಕರಿಷ್ಯತಿ**—ಡುಕೃಞ್ ಕರಣೇ ಧಾತು. ಲೃಟ್ ಪ್ರಥಮಪುರುಷಏಕವಚನಾಂತರೂಪ. ಅತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

**ಆಸತೇ**—ಆಸ ಉಪವೇಶನೇ ಧಾತು. ಅದಾದಿ. **ಆತ್ಮನೇಪದೇಷ್ವನತಃ** (ಪಾ. ಸೂ. ೭-೧-೫) ಎಂಬುದರಿಂದ ಝ ಪ್ರತ್ಯಯಕ್ಕೆ ಅತಾದೇಶ. ವಿಕರಣಕ್ಕೆ ಲುಕ್. ತಿಙಂತನಿಘಾತಸ್ವರ ಬರುತ್ತದೆ. ‖ ೩೯ ‖

———:o:———

**ಸಂಹಿತಾಪಾಠಃ**

ಸೂಯವಸಾದ್ಭಗವತೀ ಹಿ ಭೂಯಾ ಅಥೋ ವಯಂ ಭಗವಂತಃ ಸ್ಯಾಮ।
ಅದ್ಧಿ ತೃಣಮಘ್ನ್ಯೇ ವಿಶ್ವದಾನೀಂ ಪಿಬ ಶುದ್ಧಮುದಕಮಾಚರಂತೀ ‖೪೦‖

**ಪದಪಾಠಃ**

ಸು ಯವಸ ಅತ್ । ಭಗಽವತೀ । ಹಿ । ಭೂಯಾಃ । ಅಥೋ ಇತಿ । ವಯಂ । ಭಗಽವಂತಃ । ಸ್ಯಾಮ ।
ಅದ್ಧಿ । ತೃಣಂ । ಅಘ್ನ್ಯೇ । ವಿಶ್ವಽದಾನೀಂ । ಪಿಬ । ಶುದ್ಧಂ । ಉದಕಂ । ಆಽಚರಂತೀ ‖ ೪೦ ‖

ಅಗ್ನಿಹೋತ್ರಾರ್ಥಾ ಧೇನುರ್ಯದಿ ಕುತ್ಸಿತಂ ಶಬ್ದಂ ಕುರ್ಯಾತ್ತದಾನೀಂ ಸೂಯವಸಾದಿತ್ಯ-ನಯಾ ಯವಸಾದಿಕಂ ಪ್ರಯಚ್ಛೇತ್ | ತಥಾ ಚ ಸೂತ್ರಿತಂ | ವಾಶ್ಯಮಾನಾಯೈ ಯವಸಂ ಪ್ರಯ-ಚ್ಛೇತ್ ಸೂಯವಸಾದ್ಭಗವತೀ ಹಿ ಭೂಯಾಃ | ಆ. ೩-೧೧ | ಇತಿ || ಪ್ರವರ್ಗ್ಯೇಽಭಿಷ್ಟವ ಏಷೈವ ಪರಿ-ಧಾನೀಯಾ | ಸೂತ್ರಿತಂ ಚ | ಸೂಯವಸಾದ್ಭಗವತೀ ಹಿ ಭೂಯಾ ಇತಿ ಪರಿದಧ್ಯಾತ್ | ಆ. ೪-೭ | ಇತಿ ||

ಹೇ ಅಘ್ನ್ಯೇ ಗೋನಾಮೈತತ್ | ಅಹನನೀಯೇ ಹೇ ಗೌಃ ತ್ವಂ ಸೂಯವಸಾಚ್ಛೋಭನಯವ-ಸ್ಯಸ್ಯ ತೃಣಾದಿಕಸ್ಯಾತ್ತ್ರೀ ಭಗವತೀ | ಭಗ ಇತಿ ಧನನಾಮ | ಸರ್ವೈರ್ಭಜನೀಯಪ್ರಭೂತಕ್ಷೀರಾದಿಧನವತೀ ಭೂಯಾಃ | ಭವ | ಹಿಃ ಪೂರಣಃ ಪ್ರಸಿದ್ಧೌ ವಾ | ಲೋಕೇ ಯವಸಾದಿಭಕ್ಷಣೇನ ಕ್ಷೀರಾದಿಸಮೃದ್ಧಿಃ ಪ್ರಸಿದ್ಧಾ| ಅಥೋ ಅನಂತರಮೇವ ವಯಂ ಯಜಮಾನಾ ಅಪಿ ಭಗವಂತಃ ಪ್ರಭೂತೇನ ಧನೇನ ತದ್ವಂತಃ ಸ್ಯಾಮ | ಅಥೈಕವಾರಂ ಪೂರ್ವಮುಕ್ತಮಿದಾನೀಂ ಸರ್ವದಾ ಕರ್ತವ್ಯಮಿತಿ ಪ್ರಾರ್ಥ್ಯತೇ | ವಿಶ್ವದಾನೀಂ ವಿಶ್ವಕಾಲಂ ಸರ್ವದಾ ತೃಣಮದ್ಧಿ | ಭಕ್ಷಯ | ಆಚರಂತೀ ಸರ್ವತೋ ನಿರ್ಗಚ್ಛಂತೀ ಶುದ್ಧಂ ನಿರ್ಮಲ-ಮುದಕಂ ಪಿಬ | ಅಯಂ ಮಂತ್ರೋ ಯಾಸ್ಕೇನೈವಂ ವ್ಯಾಖ್ಯಾತಃ | ಸುಯವಸಾದಿನೀ ಭಗವತೀಹಿ ಭವಾಥೇದಾನೀಂ ವಯಂ ಭಗವಂತಃ ಸ್ಯಾಮಾದ್ಧಿ ತೃಣಮಘ್ನ್ಯೇ ಸರ್ವದಾ ಪಿಬ ಚ ಶುದ್ಧಮುದಕಮಾ-ಚರಂತೀ | ನಿ. ೧೧-೪೪ | ಇತಿ ||

### ಪ್ರತಿಪದಾರ್ಥ

**ಅಘ್ನ್ಯೇ**—ಅಹಿಂಸಿತಳಾದ ಎಲೈ ಗೋವೇ, | **ಸೂಯವಸಾತ್**-- ಶ್ರೇಷ್ಠವಾದ ತೃಣಾದಿಗಳನ್ನು ಭಕ್ಷಿಸು ವವಳಾಗಿ | **ಭಗವತೀ** -- ಪೂಜ್ಯವಾದ ಕ್ಷೀರಸಂಪತ್ತಿನಿಂದ ಕೂಡಿಕೊಂಡು| **ಭೂಯಾಃ**- ಇರುವವಳಾಗು | **ಅಥೋ**—ಅನಂತರವೇ | **ವಯಂ**—ನಾವೂ ಸಹ | **ಭಗವಂತಃ**—ಪ್ರಭೂತವಾದ ಧನವಂತರಾಗಿ | **ಸ್ಯಾಮ**—ಆಗುವೆವು | **ವಿಶ್ವದಾನೀಂ**—ಸರ್ವದಾ | **ತೃಣಂ**—ತೃಣವನ್ನು | **ಅದ್ಧಿ**— ಭಕ್ಷಿಸು | **ಆಚರಂತೀ**—ಎಲ್ಲಾ ಕಡೆಯೂ ಸಂಚರಿಸುತ್ತಾ, | **ಶುದ್ಧಂ**—ಪವಿತ್ರವಾದ | **ಉದಕಂ**—ಉದಕವನ್ನು | **ಪಿಬ**—ಕುಡಿ. |

### ಭಾವಾರ್ಥ

ಅಹಿಂಸಿತಳಾದ ಎಲೈ ಗೋವೇ, ಶ್ರೇಷ್ಠವಾದ ತೃಣಾದಿಗಳನ್ನು ಭಕ್ಷಿಸುತ್ತಾ ಪೂಜ್ಯವಾದ ಕ್ಷೀರಸಂಪತ್ತಿನಿಂದ ಕೂಡಿಕೊಂಡು ಇರು. ಅನಂತರ ನಾವೂ ಸಹ ಪ್ರಭೂತವಾದ ಧನವಂತರಾಗಿ ಆಗುವೆವು. ನೀನು ಸರ್ವದಾ ತೃಣವನ್ನು ಭಕ್ಷಿಸು. ಎಲ್ಲಾ ಕಡೆಯೂ ಸಂಚರಿಸುತ್ತಾ ಪವಿತ್ರವಾದ ಉದಕವನ್ನು ಕುಡಿ.

## English Translation

Cow, may you be rich in milk through abundant fodder; that we also may be rich (in abundance); eat grass at all seasons, and, roaming (at will), drink pure water.

### ವಿಶೇಷವಿಷಯಗಳು

ಅಗ್ನಿಹೋತ್ರಾದಿಗಳಿಗಾಗಿ ಹಾಲುಕರೆಯುವಾಗ ಹಸುವು ಕೆಟ್ಟ ಧ್ವನಿಯಿಂದ ಕೂಗಿದರೆ ಆಗ **ಸೂಯವಸಾತ್** ಎಂಬ ಈ ಋಕ್ಕನ್ನು ಪಠಿಸಿ ಹಸುವಿಗೆ ತೃಣಾದಿ ಆಹಾರವನ್ನು ಕೊಡಬೇಕೆಂದು ಆಶ್ವಲಾಯನಶ್ರೌತಸೂತ್ರದ **ವಾಶ್ಯಮಾನಾಯೈ ಯವಸಂ ಪ್ರಯಚ್ಛೇತ್ ಸೂಯವಸಾದ್ಭಗವತೀ ಹಿ ಭೂಯಾಃ** ಎಂಬ ಸೂತ್ರದಿಂದ ವಿವೃತವಾಗಿರುವುದು. (ಆ. ೩-೧೧) ಮತ್ತು ಪ್ರವರ್ಗ್ಯವೆಂಬ ಯಾಗವಿಶೇಷದಲ್ಲಿ ಅಭಿಷ್ಟವಕಾಲದಲ್ಲಿ ಈ ಋಕ್ಕನ್ನು ಪರಿಧಾನಮಂತ್ರವನ್ನಾಗಿ ಉಪಯೋಗಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ **ಸೂಯವಸಾದ್ಭಗವತೀ ಹಿ ಭೂಯಾ ಇತಿ ಪರಿದಧ್ಯಾತ್** ಎಂಬ ಸೂತ್ರದಿಂದ ವಿವೃತವಾಗಿರುವುದು. (ಆ. ೪-೭).

ಅಗ್ನಿಹೋತ್ರಾರ್ಥವಾಗಿ ಉದ್ದೇಶಿಸಿದ ಗೋವು ಕುತ್ಸಿತವಾದ ಶಬ್ದವನ್ನು ಮಾಡಿದ ಪಕ್ಷದಲ್ಲಿ ಆಗ ಈ ಮಂತ್ರವನ್ನು ಪಠಿಸಿ ಯವಸಾದಿಗಳನ್ನು ಕೊಡಬೇಕೆಂಬ ವಿಧಿಯಿದೆ.

**“ ವಾಶ್ಯಮಾನಾಯೈ ಯವಸಂ ಪ್ರಯಚ್ಛೇತ್ ಸೂಯವಸಾದ್ಭಗವತೀ ಹಿ ಭೂಯಾಃ ”**

(ಆಶ್ವ. ಶ್ರೌ. ೩-೧೧)

ಎಂದು ಆಶ್ವಲಾಯನಶ್ರೌತಸೂತ್ರವು ಈ ಮಂತ್ರದ ವಿನಿಯೋಗವನ್ನು ತಿಳಿಸುತ್ತದೆ.

**ಅಘ್ನ್ಯೇ**—ಈ ಪದವು ಗೋನಾಮಗಳಲ್ಲಿ ಪಠಿತವಾಗಿದೆ. (ನಿ. ೨-೯) ನಿರುಕ್ತಕಾರರು ಈ ಪದದ ನಿರ್ವಚನವನ್ನು ತೋರಿಸುತ್ತಾ,

**ಅಘ್ನ್ಯಾ ಅಹಂತವ್ಯಾ ಭವತಿ । ಅಘಘ್ನೀ ಇತಿ ವಾ ।**

(ನಿ. ೧೧-೪೩)

ಇದು ಕೊಲ್ಲಲ್ಪಡತಕ್ಕದ್ದಲ್ಲ ಎಂಬುದರಿಂದಾಗಲೀ, ಅಥವಾ ಪಾಪವನ್ನು ನಾಶಮಾಡತಕ್ಕದ್ದು ಎಂಬುದರಿಂದಾಗಲಿ **ಅಘ್ನ್ಯಾ** ಎಂಬ ಹೆಸರು ಬಂದಿದೆ ಎಂದು ವಿವರಿಸಿ, ಪ್ರಕೃತವಾದ ಋಕ್ಕನ್ನೇ ಉದಹರಿಸಿ ಈ ಋಕ್ಕಿಗೆ ಪೂರ್ಣವಾದ ವ್ಯಾಖ್ಯಾನವನ್ನು ಬರೆದಿದ್ದಾರೆ. ಕೇವಲ ಗೋವಿನ ಪರವಾದರೆ ಈ ಮಂತ್ರದ ತಾತ್ಪರ್ಯವು ಸುಲಭವಾಗಿ ಅರ್ಥವಾಗುತ್ತದೆ. ದುರ್ಗಾಚಾರ್ಯರು ನಿರುಕ್ತವಾಕ್ಯಕ್ಕೆ ವ್ಯಾಖ್ಯಾನವನ್ನು ಬರೆಯುತ್ತಾ ಗೋವಿನ ಪರವಾಗಿ ಒಂದರ್ಥವನ್ನೂ, ಮಾಧ್ಯಮಿಕಾವಾಕ್ಕಿನ ಪರವಾಗಿ ಇನ್ನೊಂದರ್ಥವನ್ನೂ ತಿಳಿಸಿದ್ದಾರೆ. ಇದಕ್ಕೆ ನಿರುಕ್ತವು ಈ ರೀತಿಯಿದೆ—

**ಸುಯವಸಾದಿನೀ ಭಗವತೀ ಹಿ ಭವಾಥೇದಾನೀಂ ವಯಂ ಭಗವಂತಃ ಸ್ಯಾಮಾದ್ಧಿ ತೃಣಮಘ್ನ್ಯೇ ಸರ್ವದಾ ಪಿಬ ಚ ಶುದ್ಧಮುದಕಮಾಚರಂತೀ ।**

(ನಿ. ೧೧-೪೩)

ಇಲ್ಲಿ ಗೋವಿನ ಪರವಾದ ಅರ್ಥವು ಮೇಲೆ ಭಾವಾರ್ಥದಲ್ಲಿ ತಿಳಿಸಿದಂತೆಯೇ ಆಗುತ್ತದೆ. ಮಾಧ್ಯಮಿಕಾವಾಕ್ಕಿನ ಪರವಾದರೆ—**ಶೋಭನಂ ಯವಸಮುದಕಮಧ್ಯಾತ್ಮೀಕೃತ್ಯ ಸೂರ್ಯಾತ್ ತೇನ ‘ ಭಗವತೀ ’ ಧನವತೀ ಉದಕೇನ ಉದಕವತೀ ಭವ ।** ಸೂಯವಸವೆಂದರೆ ಶ್ರೇಷ್ಠವಾದ ಉದಕವೆಂದೂ, ಇದಕ್ಕೆ ಆಧಾರವಾದ ಆದಿತ್ಯನಿಂದ ದಉಕವನ್ನು ಪಡೆದು ಪೂರ್ಣವಾದ ಉದಕವುಳ್ಳವಳಾಗು ಎಂಬ ಮೊದಲನೆಯ ಪ್ರಾರ್ಥನೆಯೂ, ಅನಂತರ,

“ **ಅಘೋ ವಯಂ ಭಗವಂತಃ ಸ್ಯಾಮ** ” ಅನಂತರ ನಿನ್ನಿಂದ ಉತ್ಸೃಷ್ಟವಾದ ಉದಕದಿಂದ ನಾವೂ ಉದಕವುಳ್ಳವರಾಗುತ್ತೇವೆ. ತತ್ಪರಿಣಾಮವಾಗಿ ಅನ್ನಾದಿಸಂಪತ್ತನ್ನು ಪಡೆಯುತ್ತೇವೆ ಎಂಬ ಹಾರೈಕೆಯೂ ಪೂರ್ವಾರ್ಧದ ತಾತ್ಪರ್ಯವು.

**ಅದ್ಧಿ ತೃಣಂ** ಎಂಬ ವಾಕ್ಯದಲ್ಲಿ **ತೃಣಶಬ್ದಕ್ಕೆ ಮೇಘವೆಂದರ್ಥ.** ಘನೀಭೂತವಾದ ಮೇಘವು ಘರ್ಷಿತವಾಗಿ ಸೀಳಲ್ಪಟ್ಟು ಅನಂತರ ವೃಷ್ಟಿಪತನವಾಗುತ್ತದೆ. **ತೃದ್ಯತೇಽಸೌ ಇತಿ ತೃಣಃ** ಸೀಳು ಎಂದರ್ಥವನ್ನು ಕೊಡುವ **ತೃದ್** ಧಾತುವಿನಿಂದ ನಿಷ್ಪನ್ನವಾಗಿ ಘರ್ಷಣವಾಗಿ ಸೀಳಲ್ಪಡುವುದರಿಂದ ಮೇಘಕ್ಕೆ ತೃಣವೆಂಬ ಹೆಸರೆಂದು ದುರ್ಗಾಚಾರ್ಯರ ವಿವರಣೆಯಿದೆ. [**ತೃನ್ನಾದ್ಯತ್ ತೃಣಂ** ಎಂದು ನಿರುಕ್ತಕಾರರು ಬೇರೆ ಸಂದರ್ಭದಲ್ಲಿ ಈ ಪದದ ನಿರ್ವಚನವನ್ನು ತಿಳಿಸಿದ್ದಾರೆ. (ನಿ. ೧-೨೨)] ಇಂತಹ ಮೇಘವನ್ನು **ಅದ್ಧಿ** ಎಂದರೆ ಘನೀಭೂತವಾದ ಮೇಘವು ಕರಗುವಂತೆ ಮಾಡಿ ನೀರನ್ನು ಸುರಿಸು ಎಂದರ್ಥ.

**ಶುದ್ಧಮಾಚರಂತೀ**—ಯಾವಾಗಲೂ ಅಂತರಿಕ್ಷದಲ್ಲೇ ಸಂಚರಿಸುವುದರಿಂದ ಯಾವ ಅಶುದ್ಧಿಯೂ ಇಲ್ಲದ **ಉದಕಂ**—ಸೂರ್ಯರಶ್ಮಿಯಿಂದ ಅಪಹೃತವಾದ ಉದಕವನ್ನು, **ಆಚರಂತೀ**—ಸೇವಿಸುತ್ತಾ, **ವಿಶ್ವದಾನೀಂ** ವೃಷ್ಟಿಕಾಲವು ಪ್ರಾಪ್ತವಾದಾಗಲೆಲ್ಲಾ, **ಪಿಬ**—ಕುಡಿ. ಎಂದು ಪುನಃ ಪ್ರಾರ್ಥಿಸಿದೆ.

**॥ ವ್ಯಾಕರಣಪ್ರಕ್ರಿಯಾ ॥**

**ಸೂಯವಸಾತ್**—ಶೋಭನಂ ಯವಸಂ ಅತ್ತಿ ಇತಿ. ಅದ ಭಕ್ಷಣೇ ಧಾತು. **ಕ್ವಿಪ್ ಚ** ಎಂಬುದರಿಂದ ಕ್ವಿಪ್ ಪ್ರತ್ಯಯ. **ಗತಿಕಾರಕೋಪಪದಾತ್ ಕೃತ್** (ಪಾ. ಸೂ. ೬-೨-೧೩೯) ಎಂಬುದರಿಂದ ಕೃದುತ್ತರಪದಪ್ರಕೃತಿಸ್ವರ ಬರುತ್ತದೆ. ಛಾಂದಸವಾಗಿ ಸಂಹಿತಾದಲ್ಲಿ ಸು ಎಂಬುದಕ್ಕೆ ದೀರ್ಘ.

**ಭೂಯಾಃ**—ಭೂ ಸತ್ತಾಯಾಂ ಧಾತು. ಆಶೀರ್ಲಿಙ್ ಮಧ್ಯಮಪುರುಷಏಕವಚನಾಂತರೂಪ. **ಹಿ ಚ** (ಪಾ. ಸೂ. ೮-೧-೩೪) ಎಂಬುದರಿಂದ ನಿಘಾತಪ್ರತಿಷೇಧ ಬರುತ್ತದೆ. ಯಾಸುಟ್ ಉದಾತ್ತವಾದುದರಿಂದ ಅಂತೋದಾತ್ತವಾಗುತ್ತದೆ.

**ಸ್ಯಾಮ**—ಅಸ ಭುವಿ ಧಾತು. ಲಿಙ್ ಉತ್ತಮಪುರುಷಬಹುವಚನದಲ್ಲಿ ಮಸ್. **ನಿತ್ಯಂ ಙಿತಃ** ಎಂಬುದರಿಂದ ಸಕಾರಲೋಪ. ಯಾಸುಟಾಗಮ. **ಶ್ನಸೋರಲ್ಲೋಪಃ** (ಪಾ. ಸೂ. ೬-೪-೧೧೧) ಎಂಬುದರಿಂದ ಧಾತುವಿನ ಅಕಾರಕ್ಕೆ ಲೋಪ. ತಿಙಂತನಿಘಾತಸ್ವರ ಬರುತ್ತದೆ.

**ಅದ್ಧಿ**—ಅದ ಭಕ್ಷಣೇ ಧಾತು. ಲೋಟ್ ಮಧ್ಯಮಪುರುಷಏಕವಚನದಲ್ಲಿ ಸಿಪಿಗೆ ಹಿ ಆದೇಶ. ವಿಕರಣಕ್ಕೆ ಲುಕ್. **ಹುಝಲ್ಭ್ಯೋಹೇರ್ಧಿಃ** ಎಂಬುದರಿಂದ ಹಿಗೆ ಧಿ ಭಾವ. ಪಾದಾದಿಯಲ್ಲಿರುವುದರಿಂದ ನಿಘಾತಸ್ವರ ಬರುವುದಿಲ್ಲ. ಪ್ರತ್ಯಯಸ್ವರದಿಂದ ಅಂತೋದಾತ್ತವಾಗುತ್ತದೆ.

**ಅಘ್ನ್ಯೇ**—**ಆಮಂತ್ರಿತಸ್ಯ ಚ** (ಪಾ. ಸೂ. ೮-೧-೧೯) ಎಂಬುದರಿಂದ ನಿಘಾತಸ್ವರ ಬರುತ್ತದೆ. **ಅಘ್ನಂ** ಆಹನನಂ ಅರ್ಹತಿ ಇತಿ ಅಘ್ನ್ಯಾ.

**ವಿಶ್ವದಾನೀಮ್**—**ದಾನೀಂ ಚ** (ಪಾ. ಸೂ. ೫-೩-೧೮) ಎಂಬುದರಿಂದ ವಿಶ್ವಶಬ್ದಕ್ಕೆ ದಾನೀಮ್ ಪ್ರತ್ಯಯ ಪ್ರತ್ಯಯದ ಆದ್ಯುದಾತ್ತಸ್ವರ ಬರುತ್ತದೆ.

**ಪಿಬ**—ಪಾ ಪಾನೇ ಧಾತು. ಲೋಟ್ ಮಧ್ಯಮಪುರುಷಏಕವಚನಾಂತರೂಪ. ಪಾದಾದಿಯಲ್ಲಿರುವುದರಿಂದ ನಿಘಾತಸ್ವರ ಬರುವುದಿಲ್ಲ. ಶಪ್ ಅನುದಾತ್ತವಾದುದರಿಂದ ಧಾತುಸ್ವರ ಉಳಿಯುತ್ತದೆ.

**ಆಚರಂತೀ**—ಚರ ಗತಿಭಕ್ಷಣಯೋಃ ಧಾತು. ಲಟಿಗೆ ಶತ್ರಾದೇಶ ಬಂದಾಗ ಸ್ತ್ರೀತ್ವದಲ್ಲಿ ಙೀಪ್. **ತಾಸ್ಯನು-ದಾತ್ತೇತ್**-ಸೂತ್ರದಿಂದ ಲಸಾರ್ವಧಾತುಕವು ಅನುದಾತ್ತವಾಗುವುದರಿಂದ ಧಾತುಸ್ವರ ಉಳಿಯುತ್ತದೆ. ಸಮಾಸದಲ್ಲಿ ಕೃದುತ್ತರಪದಪ್ರಕೃತಿಸ್ವರ ಬರುತ್ತದೆ. ॥ ೪೦ ॥

ಸಂಹಿತಾಪಾಠಃ

ಗೌರೀರ್ಮಿಮಾಯ ಸಲಿಲಾನಿ ತಕ್ಷತ್ಯೇಕಪದೀ ದ್ವಿಪದೀ ಸಾ ಚತುಷ್ಪದೀ ।
ಅಷ್ಟಾಪದೀ ನವಪದೀ ಬಭೂವುಷೀ ಸಹಸ್ರಾಕ್ಷರಾ ಪರಮೇ ವ್ಯೋಮನ್ ॥
॥ ೪೧ ॥

ಪದಪಾಠಃ

ಗೌರೀಃ । ಮಿಮಾಯ । ಸಲಿಲಾನಿ । ತಕ್ಷತೀ । ಏಕಽಪದೀ । ದ್ವಿಽಪದೀ । ಸಾ । ಚತುಃಽಪದೀ ।
ಅಷ್ಟಾಽಪದೀ । ನವಽಪದೀ । ಬಭೂವುಷೀ । ಸಹಸ್ರಽಅಕ್ಷರಾ । ಪರಮೇ । ವಿಽಓಮನ್ ॥ ೪೧ ॥

ಸಾಯಣಭಾಷ್ಯಂ

ಗೌರೀರ್ಗರಣಶೀಲಾ ಮಾಧ್ಯಮಿಕಾ ವಾಕ್ ॥ ಸುಲೋಪಾಭಾವಶ್ಛಾಂದಸಃ ॥ ಮಿಮಾಯ । ಶಬ್ದಯತಿ । ಕಿಂ ಕುರ್ವತೀ । ಸಲಿಲಾನಿ ವೃಷ್ಟ್ಯುದಕಾನಿ ತಕ್ಷತೀ ಸಮ್ಯಕ್ಸಂಪಾದಯಿತ್ರೀ । ಏಕಪದ್ಯೇಕಪಾದೋಪೇತೈಕಾಧಿಷ್ಠಾನಾ ಮೇಘೇ ವರ್ತಮಾನಾ ಗಮನಸಾಧನೇನ ವಾಯುನೈಕಪದೀ ವಾ ದ್ವಿಪದೀ ಮೇಘಾಂತರಿಕ್ಷಾಖ್ಯದ್ವ್ಯಧಿಷ್ಠಾನಾ । ಆದಿತ್ಯೋ ವಾ ದ್ವಿತೀಯಃ। ತಥಾ ಸಾ ಚತುಷ್ಪದೀ ಪಾದಚತುಷ್ಟಯೋಪೇತಾ ದಿಕ್ಚತುಷ್ಟಯಾಧಿಷ್ಠಾನಾ। ಅಥಾಷ್ಟಾಪದೀ ವಿದಿಗಪೇಕ್ಷಯಾಷ್ಟಪಾದೋಪೇತಾಷ್ಟಾಧಿಷ್ಠಾನಾ ನವಪದ್ಯುಪರಿದಿಗಪೇಕ್ಷಯಾ ಸೂರ್ಯೇಣ ವಾ ನವದಿಗಧಿಷ್ಠಾನಾ ಬಭೂವುಷ್ಯೇವಂಭೂತಾ॥ ಭವೇಶ್ಛಾಂದಸಃ ಕ್ವಸುಃ। ತತೋ ಙೀಪಿ ವಸೋಃ ಸಂಪ್ರಸಾರಣಂ॥ ಕಿಮನಯಾ ಪರಿಗಣನಯಾ। ಸಹಸ್ರಾಕ್ಷರಾ। ಅಪರಿಮಿತವಚನೋಽಯಂ । ಅಪರಿಮಿತವ್ಯಾಪ್ತಿಯುಕ್ತಾ । ಬಹುವ್ಯಾಪನಶೀಲೋದಕವತೀತ್ಯರ್ಥಃ । ಕುತ್ರೇತಿ ತದುಚ್ಯತೇ । ಪರಮೇ ವ್ಯೋಮನ್ನುದಕಾಶ್ರಯತ್ವೇನೋತ್ಕೃಷ್ಟೇಽಂತರಿಕ್ಷೇ ॥ ಕೇಚಿದೇವಮಾಹುಃ । ಗೌರೀರ್ಗರಣಶೀಲಾ ಶಬ್ದಬ್ರಹ್ಮಾತ್ಮಿಕಾ ವಾಙ್ಮಿಮಾಯ । ಮಾತಿ ॥ ಪ್ರಸಿದ್ಧಾರ್ಥೇ ಧಾತುಃ ॥ ಪ್ರತಿಷ್ಠಿತಾನಿ ಘಟಾದಿದ್ರವ್ಯಾಣಿ ತಕ್ಷತೀ ತತ್ತದ್ವಾಚಕತ್ವೇನ ನಿಷ್ಪಾದಯಂತೀ ಏಕಪದ್ಯವ್ಯಾಕೃತತ್ವೇನೈಕಪ್ರತಿಷ್ಠಾನೈಕ-ರೂಪಾ ವಾತ್ಮನಾ ದ್ವಿಪದೀ ಸುಪ್ತಿಙ್ಭೇದೇನ ಪಾದದ್ವಯವತೀ ಚತುಷ್ಪದೀ ನಾಮಾಖ್ಯಾತೋಪಸರ್ಗನಿ-

ಪಾತಭೇದೇನ ಅಷ್ಟಪದ್ಯಾಮಂತ್ರಿತಸಹಿತಾಷ್ಟಭೇದೇನಾಷ್ಟಪದೀ ನವಪದೀ ಬಭೂವುಷೀ ಸಾವ್ಯಯೈರುಕ್ತೈರಷ್ಟಭಿರ್ನವಪದೀ । ಅಥವಾ ಸನಾಭಿಕೇಷೂರಃಕಂಠಾದಿಷು ನವಸು ಪದೇಷು ಭವಂತೀ ಪಶ್ಚಾದ್ಬಹುವಿಧಾಭಿವ್ಯಕ್ತಿಮುಪೇಯುಷೀ ಪರಮೇ ವ್ಯೋಮನ್ಯುತ್ಕೃಷ್ಟೇ ಹೃದಯಾಕಾಶೇ ಮೂಲಾಧಾರೇ ಸಹಸ್ರಾಕ್ಷರಾನೇಕಾಕಾರೇಣ ವ್ಯಾಪ್ತಾನೇಕಧ್ವನಿಪ್ರಕಾರಾ ಭವತೀತ್ಯರ್ಥಃ ॥ ಅಯಂ ಮಂತ್ರ ಆಚಾರ್ಯೇಣೈವಂ ವ್ಯಾಖ್ಯಾತಃ । ಗೌರೀರ್ಮಿಮಾಯ ಸಲಿಲಾನಿ ತಕ್ಷತೀ ಕುರ್ವತ್ಯೇಕಪದೀ ಮಧ್ಯಮೇನ ದ್ವಿಪದೀ ಮಧ್ಯಮೇನ ಚಾದಿತ್ಯೇನ ಚ ಚತುಷ್ಪದೀ ದಿಗ್ಭಿರಷ್ಟಾಪದೀ ದಿಗ್ಭಿಶ್ಚಾವಾಂತರದಿಗ್ಭಿಶ್ಚ ನವಪದೀ ದಿಗ್ಭಿಶ್ಚಾವಾಂತರದಿಗ್ಭಿಶ್ಚಾದಿತ್ಯೇನ ಚ ಸಹಸ್ರಾಕ್ಷರಾ ಬಹೂದಕಾ ಪರಮೇ ವ್ಯವನೇ । ನಿ. ೧೧-೪೦ । ಇತಿ ॥

ಪ್ರತಿಪದಾರ್ಥ

**ಗೌರೀಃ**—ಮಾಧ್ಯಮಿಕಾವಾಕ್ಕು । **ಮಿಮಾಯ**—ಶಬ್ದಮಾಡುತ್ತಾಳೆ । **ಸಾ**—ಅವಳು । **ಸಲಿಲಾನಿ**—ಉದಕಗಳನ್ನು । **ತಕ್ಷತೀ**—ಸಂಪಾದಿಸುವವಳಾಗಿಯೂ । **ಏಕಪದೀ**—ಒಂದಧಿಷ್ಠಾನವುಳ್ಳವಳಾಗಿಯೂ । **ದ್ವಿಪದೀ**—ಎರಡಧಿಷ್ಠಾನವುಳ್ಳವಳಾಗಿಯೂ । **ಚತುಷ್ಪದೀ**—ನಾಲ್ಕಧಿಷ್ಠಾನವುಳ್ಳವಳಾಗಿಯೂ । **ಅಷ್ಟಾಪದೀ**—ಎಂಟಧಿಷ್ಠಾನವುಳ್ಳವಳಾಗಿಯೂ । **ನವಪದೀ**—ಒಂಭತ್ತು ಅಧಿಷ್ಠಾನಗಳುಳ್ಳವಳಾಗಿಯೂ । **ಬಭೂವುಷೀ**—ಇರುತ್ತಾ । **ಪರಮೇ ವ್ಯೋಮನ್**—ಉತ್ಕೃಷ್ಟವಾದ ಅಂತರಿಕ್ಷದಲ್ಲಿ । **ಸಹಸ್ರಾಕ್ಷರಾ**—ಅಪರಿಮಿತವಾದ ವ್ಯಾಪಿಯುಳ್ಳವಳಾಗುತ್ತಾಳೆ.

ಭಾವಾರ್ಥ

ಅಂತರಿಕ್ಷಸ್ಥಳಾದ ಮಾಧ್ಯಮಿಕಾ ವಾಕ್ಕು ಶಬ್ದಮಾಡುತ್ತಾಳೆ. ಉದಕಗಳನ್ನು ಸಂಪಾದಿಸವವಳಾಗಿಯೂ, ಒಂದು, ಎರಡು, ನಾಲ್ಕು, ಎಂಟು ಮತ್ತು ಒಂಭತ್ತು ಅಧಿಷ್ಠಾನಗಳುಳ್ಳವಳಾಗಿಯೂ ಇರುತ್ತಾ ಉತ್ಕೃಷ್ಟವಾದ ಅಂತರಿಕ್ಷದಲ್ಲಿ ಅಪರಿಮಿತವಾದ ವ್ಯಾಪ್ತಿಯುಳ್ಳವಳಾಗುತ್ತಾಳೆ.

## English Translation

The sound (of the clouds) has been uttered, fabricating the waters, and being one-footed, two-footed, four-footed, eight-footed, nine-footed, or infinite in the highest heaven.

ವಿಶೇಷವಿಷಯಗಳು

ಈ ಋಕ್ಕಿಗೆ ಮಾಧ್ಯಮಿಕವಾದ ವಾಕ್ಕಿನ ಪರವಾಗಿ ಒಂದು ವಿಧವಾಗಿಯೂ, ಶಬ್ದಬ್ರಹ್ಮಾತ್ಮಕವಾದ ವಾಕ್ಕಿನ ಪರವಾಗಿ ಇನ್ನೊಂದು ವಿಧವಾಗಿಯೂ ಅರ್ಥಮಾಡಿದೆ.

**ಗೌರೀಃ**—**ಗೌರೀ ರೋಚತೇರ್ಜ್ವಲತಿಕರ್ಮಣಃ** । ದೀಪ್ತ್ಯರ್ಥಕವಾದ **ರುಚ್** ಧಾತುವಿನಿಂದ ನಿಷ್ಪನ್ನವಾಗಿದೆ. [**ಅಯಮಪೀತರೋ ಗೌರೋ ವರ್ಣ ಏತಸ್ಮಾದೇವ ಪ್ರಶಸ್ಯೋ ಭವತಿ**। ವರ್ಣವಾಚಕವಾದ ಗೌರ ಶಬ್ದವೂ ಸಹ ಈ ಧಾತುವಿನಿಂದಲೇ ನಿಷ್ಪನ್ನವಾಗಿ ಅತ್ಯಂತ ಪ್ರಶಸ್ಯವಾಗಿರುತ್ತದೆ] ಎಂದು ತಿಳಿಸಿ ನಿರುಕ್ತಕಾರರು ಪ್ರಕೃತವಾದ ಋಕ್ಕನ್ನೂ ಉದಹರಿಸಿ ವಿಶದವಾಗಿ ವಿವರಿಸಿದ್ದಾರೆ. ಇದರ ನಿರುಕ್ತವು ಈ ರೀತಿಯಿದೆ—

**ಗೌರೀರ್ಮಿಮಾಯ ಸಲಿಲಾನಿ ತಕ್ಷತೀ ಕುರ್ವತ್ಯೇಕಪದೀ ಮಧ್ಯಮೇನ, ದ್ವಿಪದೀ ಮಧ್ಯಮೇನ ಚಾದಿತ್ಯೇನ ಚ, ಚತುಷ್ಪದೀ ದಿಗ್ಭಿಃ, ಅಷ್ಟಾಪದೀ ದಿಗ್ಭಿಶ್ಚಾವಾಂತರದಿಗ್ಭಿಶ್ಚ, ನವಪದೀ ದಿಗ್ಭಿಶ್ಚಾವಾಂತರದಿಗ್ಭಿಶ್ಚಾದಿತ್ಯೇನ ಚ ಸಹಸ್ರಾಕ್ಷರಾ ಬಹೂದಕಾ ಪರಮೇ ವ್ಯವನೇ ॥**

(ನಿ. ೧೧-೪೦).

ಉದಕಗಳನ್ನು ಸೃಷ್ಟಿಸುತ್ತಾ ಅಂತರಿಕ್ಷಸ್ಥಳದ ಮಾಧ್ಯಮಿಕಾ ವಾಕ್ಕು ಶಬ್ದಮಾಡುತ್ತಾಳೆ. ಏಕಪದಿಯೆಂದರೆ ಮಧ್ಯಮರೂಪವಾದ ಒಂದಧಿಷ್ಠಾನವುಳ್ಳವಳೆಂದರ್ಥ. ಇದನ್ನು ಸಾಯಣರು ವಿವರಿಸುತ್ತಾ **ಮೇಘೇ ವರ್ತಮಾನಾ ಗಮನಸಾಧನೇನ ವಾಯುನಾ ಏಕಪದೀ ವಾ ।** ಮೇಘಸ್ಥಳಾದುದರಿಂದಾಗಲಿ ಅಥವಾ ತನ್ನ ಸಂಚಾರಕ್ಕೆ ಸಾಧನ ಭೂತವಾದ ವಾಯುರೂಪವಾದ ಅಧಿಷ್ಠಾನವನ್ನು ಹೊಂದಿರುವುದರಿಂದಾಗಲಿ ಏಕಪದಿಯೆಂಬ ವಿಶೇಷಣವಿದೆಯೆಂದು ತಿಳಿಸಿದ್ದಾರೆ.

**ದ್ವಿಪದೀ ಮಧ್ಯಮೇನ ಚಾದಿತ್ಯೇನ ಚ**—ಅಂತರಿಕ್ಷ, ಆದಿತ್ಯ ಈ ಎರಡು ಅಧಿಷ್ಠಾನವುಳ್ಳವಳು ಅಥವಾ **ಮೇಘಾಂತರಿಕ್ಷಾಖ್ಯದ್ವ್ಯಧಿಷ್ಠಾನಾ ।** ಮೇಘ ಮತ್ತು ಅಂತರಿಕ್ಷರೂಪವಾದ ಎರಡು ಅಧಿಷ್ಠಾನಗಳುಳ್ಳವಳು.

**ಚತುಷ್ಪದೀ—ದಿಗ್ಭಿಃ ದಿಕ್ಚತುಷ್ಟಯಾಧಿಷ್ಠಾನಾ ।** ನಾಲ್ಕುದಿಕ್ಕುಗಳನ್ನು ಆಶ್ರಯಿಸಿ ನಾಲ್ಕುಕಾಲುಗಳುಳ್ಳವಳಂತೆ ಇರುವವಳು. (**ಪಾದಚತುಷ್ಟಯೋಪೇತಾ**).

**ಅಷ್ಟಾಪದೀ, ನವಪದೀ—ದಿಗ್ಭಿಶ್ಚಾವಾಂತರದಿಗ್ಭಿಶ್ಚಾದಿತ್ಯೇನ ಚ ।** ನಾಲ್ಕುದಿಕ್ಕುಗಳು, ನಾಲ್ಕು ಅವಾಂತರ ದಿಕ್ಕುಗಳು (ವಿದಿಕ್ಕುಗಳು) ಮತ್ತು ಆದಿತ್ಯ ಈ ಒಂಭತ್ತು ಅಧಿಷ್ಠಾನಗಳು.

ಈ ರೀತಿ ಸಮಸ್ತದಿಗ್ವಿದಿಕ್ಕುಗಳಲ್ಲಿಯೂ ವ್ಯಾಪಿಸಿ ಅಪರಿಮಿತವಾದ ಪ್ರಸರವುಳ್ಳವಳೂ, ಅಪರಿಮಿತವಾದ ಉದಕಗಳನ್ನು ಸೃಷ್ಟಿಸುವವಳೂ ಆಗಿ ಈ ವಾಗ್ದೇವತೆಯು ಉತ್ಕೃಷ್ಟವಾದ ಅಂತರಿಕ್ಷದಲ್ಲಿ ಪ್ರಕಾಶಿಸುತ್ತಲೂ, ಲೋಕೋಪಕಾರಕಳಾಗಿಯೂ ಇರುತ್ತಾಳೆಂದು ಸ್ತುತಿಸಿದೆ.

ನಿರುಕ್ತಕಾರರು ವ್ಯೋಮಶಬ್ದಕ್ಕೆ ಪರ್ಯಾಯವಾಗಿ **ವ್ಯವನ**ವೆಂಬ ಪದವನ್ನುಪಯೋಗಿಸಿದ್ದಾರೆ. ಇದಕ್ಕೆ ದುರ್ಗಾಚಾರ್ಯರು ವ್ಯಾಖ್ಯಾನಮಾಡುತ್ತಾ **ವಿಭಕ್ತಾನಾಂ ಭೂತಾನಾಂ ಯತ್ಪರಮಂ ಅವನಂ ।** ವಿಭಕ್ತವಾಗಿರತಕ್ಕ ಭೂತಗಳಿಗೆಲ್ಲಾ ಒಂದೇ ವಿಧವಾದ ಸಂಬಂಧವನ್ನು ಕಲ್ಪಿಸಿ ಎಲ್ಲಕ್ಕೂ ಉತ್ಕೃಷ್ಟವಾದ ರಕ್ಷಣಸ್ಥಾನವಾದ ಅಂತರಿಕ್ಷವೆಂದು ವಿವರಿಸಿದ್ದಾರೆ. ಓತಪ್ರೋತರೂಪದಲ್ಲಿ ಸಕಲಭೂತಗಳಿಗೂ ಸಂಬಂಧವನ್ನು ಕಲ್ಪಿಸುವುದೆಂದರ್ಥ.

**ಕಸ್ಮಿನ್ನು ಖಲ್ವಾಪ ಓತಾಶ್ಚ ಪ್ರೋತಾಶ್ಚೇತಿ ವಾಯೌ ಗಾರ್ಗೀತಿ ಕಸ್ಮಿನ್ನು ಖಲು ವಾಯುರೋತಶ್ಚ ಪ್ರೋತಶ್ಚೇತ್ಯಂತರಿಕ್ಷಲೋಕೇಷು ಗಾರ್ಗಿ ।**

(ಬೃ. ಉ. ೩-೬-೧)

ಸಕಲವಿಶ್ವವೂ ಉದಕದಲ್ಲಿ ಓತಪ್ರೋತರೂಪದಲ್ಲಿ ಸೇರಿವೆ. ಉದಕವು ವಾಯುವಿನಲ್ಲಿಯೂ, ವಾಯುವು ಅಂತರಿಕ್ಷದಲ್ಲಿಯೂ ಸಂಬಂಧಿಸಿದೆ. ಇತ್ಯಾದಿಯಾಗಿ ವರ್ಣಿತವಾಗಿದೆ.

ಈ ಋಕ್ಕಿಗೆ ಇನ್ನೊಂದು ವಿಧವಾದ ಅರ್ಥವೂ ಸಾಧ್ಯವಾಗುತ್ತದೆ. **ಗೌರೀಃ—ಗರಣಶೀಲಾ ಶಬ್ದಬ್ರಹ್ಮಾತ್ಮಿಕಾ ವಾಕ್ ।** ವಿಸ್ತೃತವಾಗಿ ಮಾಹಾತ್ಮ್ಯವನ್ನು ಪಡೆಯತಕ್ಕ ಶಬ್ದಬ್ರಹ್ಮಾತ್ಮಿಕವಾದ ವಾಕ್ಕೆಂದು ಗೌರೀ

ಶಬ್ದಕ್ಕೆ ಅರ್ಥ. ಈ ಗೌರಿಯು ಘಟಾದಿದ್ರವ್ಯಗಳನ್ನು ವೈಯಕ್ತಿಕವಾದ ನಾಮದ ವ್ಯವಹಾರದಿಂದ ವಿಭಾಗಿಸಿ ಅವರ ವ್ಯಕ್ತಿತ್ವವನ್ನು ಸಂಪಾದಿಸಿಕೊಡುವುದರಿಂದ **ತಕ್ಷತೀ** ಎಂದು ವರ್ಣಿತವಾಗಿದೆ.

**ವಾಗ್ವೈ ಗ್ರಹಃ ಸ ನಾಮ್ನಾತಿಗ್ರಾಹೇಣ ಗೃಹೀತೋ ವಾಚಾ ಹಿ ನಾಮಾನ್ಯಭಿವದತಿ ।**

(ಬೃ. ಉ. ೩-೨-೩)

ಸಕಲವನ್ನೂ ಗ್ರಹಿಸತಕ್ಕದ್ದು ವಾಕ್ಕು. ಅದು ನಾಮಾತ್ಮಕವಾಗಿದೆ. ನಾಮದಿಂದಲೇ ಸಕಲ ಪದಾರ್ಥಗಳೂ ವ್ಯವಹೃತಗಳಾಗುತ್ತವೆ. ಸಕಲವೂ ನಾಮಾತ್ಮಕಗಳಾಗಿ ಉತ್ಪನ್ನವಾದವೆಂದರ್ಥ.

**ವಾಗ್ವೈ ಬ್ರಹ್ಮೇತಿ ಯಥಾ ಮಾತೃಮಾನ್ ಪಿತೃಮಾನಾಚಾರ್ಯವಾನ್ ಬ್ರೂಯಾತ್ತಥಾ ತಚ್ಛೈಲಿನಿರಬ್ರವೀದ್ವಾಗ್ವೈ ಬ್ರಹ್ಮೇತ್ಯವದತೋ ಹಿ ಕಿಂ ಸ್ಯಾದಿತ್ಯಬ್ರವೀತ್ತು ತೇ ತಸ್ಯಾಯತನಂ ಪ್ರತಿಷ್ಠಾಂ ನ ಮೇಽಬ್ರವೀದಿತ್ಯೇಕಪಾದ್ವಾ ಏತತ್ಸಮ್ರಾಡಿತಿ ಸ ವೈ ನೋ ಬ್ರೂಹಿ ಯಾಜ್ಞವಲ್ಕ್ಯ ।**

(ಬೃ. ಉ. ೪-೧-೨)

ಇದು ಜನಕನಿಗೂ ಯಾಜ್ಞ್ಯವಲ್ಕ್ಯನಿಗೂ ನಡೆದ ಸಂಭಾಷಣೆಯು. ಇವರಲ್ಲಿ ವಾಕ್ಕಿಗೂ ಬ್ರಹ್ಮನಿಗೂ ತಾದಾತ್ಮ್ಯವನ್ನು ತೋರಿಸಿ ವಾಕ್ಕಿನ ಮಹತ್ತನ್ನು ಪ್ರಶಂಸಿಸಿದೆ. ಶೈವಲಿನಿಯು ಜನಕನಿಗೆ ವಾಕ್ಕೇ ಬ್ರಹ್ಮನೆಂದು ಹೇಳಿದನೇ ಹೊರತು ಅದರ ಆಯತನವನ್ನೂ ಆಧಾರವನ್ನೂ ಹೇಳಲಿಲ್ಲ. ಯಾಜ್ಞವಲ್ಕ್ಯನು ಇದನ್ನು ತಿಳಿದು ಶೈವಲಿನಿಯು ಜನಕನಿಗೆ ವಾಕ್ಕಿನ ವಿಷಯದಲ್ಲಿ ಹೇಳದೇ ಬಿಟ್ಟ ವಿಷಯವನ್ನು ತಾನು ತಿಳಿಸುತ್ತಾನೆ.

**ವಾಗೇವಾಯತನಮಾಕಾಶಃ ಪ್ರತಿಷ್ಠಾ ಪ್ರಜ್ಞೇತ್ಯೇನದುಪಾಸೀತ । ಕಾ ಪ್ರಜ್ಞತಾ ಯಾಜ್ಞವಲ್ಕ್ಯ । ವಾಗೇವ ಸಮ್ರಾಡಿತಿ ಹೋವಾಚ । ವಾಚಾ ವೈ ಸಮ್ರಾಡ್ಬಂಧುಃ ಪ್ರಜ್ಞಾಯತ ಋಗ್ವೇದೋ ಯಜುರ್ವೇದಃ ಸಾಮವೇದೋಽಥರ್ವಾಂಗಿರಸಃ .... .... .... .... .... ಅಯಂ ಚ ಲೋಕಃ ಪರಶ್ಚ ಲೋಕಃ ಸರ್ವಾಣಿ ಚ ಭೂತಾನಿ ವಾಚೈವ ಸಮ್ರಾಟ್ ಪ್ರಜ್ಞಾಯಂತೇ ವಾಗ್ವೈ ಸಮ್ರಾಟ್ ಪರಮಂ ಬ್ರಹ್ಮ ।**

(ಬೃ. ಉ. ೪-೧-೨)

ವಾಕ್ಕೇ ಇದರ ಆಯತನವು. ಆಕಾಶವೇ ಪ್ರತಿಷ್ಠೆಯು. (ಅವಲಂಬನವು.) ಸುಹೃತ್ತಾಗಲಿ ಇತರ ಬಂಧುವಾಗಲಿ ವಾಕ್ಕಿನಿಂದಲೇ ವ್ಯವಹೃತನಾಗುತ್ತಾನೆ. ವಾಕ್ಕಿನಿಂದಲೇ ಋಗಾದಿವೇದಗಳೂ, ಇತಿಹಾಸಾದಿಗಳೂ, ಸಕಲ ಶಾಸ್ತ್ರಸ್ಮೃತಿಗಳೂ, ಯಜ್ಞಯಾಗಾದಿಗಳೂ ಸಮಸ್ತಲೋಕಗಳೂ ತಿಳಿಯಲ್ಪಡುತ್ತವೆ. ವಿಶ್ವವೆಲ್ಲವೂ ವಾಕ್ಕಿನ ವ್ಯವಹಾರವನ್ನೇ ಆಶ್ರಯಿಸಿದೆ. ವಾಕ್ಕೇ ಪರಬ್ರಹ್ಮವು, ಇತ್ಯಾದಿಯಾಗಿ ವಾಕ್ಕಿನ ಮಹತ್ವವು ವರ್ಣಿತವಾಗಿದೆ. ಅದನ್ನೇ ಇಲ್ಲಿ ಸಾಯಣರು '**ಘಟಾದಿದ್ರವ್ಯಾಣಿ ತತ್ತದ್ವಾಚಕತ್ವೇನ ನಿಷ್ಪಾದಯಂತಿ**' ಎಂದು ವಿವರಿಸಿದ್ದಾರೆ. ಶಬ್ದಬ್ರಹ್ಮಾತ್ಮಕವಾದ ಈ ವಾಕ್ಕನ್ನು 'ಏಕಪದೀ' ಇತ್ಯಾದಿ ವಿಶೇಷಣಗಳಿಂದ ವರ್ಣಿಸಿದೆ.

**ಏಕಪದೀ—ಅವ್ಯಾಕೃತತ್ವೇನ ಏಕಪ್ರತಿಷ್ಠಾನಾ ಏಕರೂಪಾ ವಾ ಆತ್ಮನಾ ।** ಈ ಶಬ್ದಬ್ರಹ್ಮವು ವ್ಯಾಕೃತಾವಸ್ಥೆಯಲ್ಲಿ ನಾನಾ ರೂಪದಲ್ಲಿರುತ್ತದೆ. ಅವ್ಯಾಕೃತವಾದ ಅವಸ್ಥೆಯಲ್ಲಿ ಅದ್ವಿತೀಯವೂ, ಅವಿಭಕ್ತವೂ ಆಗಿರುತ್ತದೆ. ಒಂದೇ ರೂಪವು ಮತ್ತು ಒಂದೇ ಅಧಿಷ್ಠಾನವು. ಆದುದರಿಂದ **ಏಕಪದೀ** ಎಂಬ ವಿಶೇಷಣವು.

**ದ್ವಿಪದೀ—ಸುಪ್ತಿಙ್‌ಭೇದೇನ ಪಾದದ್ವಯವತೀ ।** ಸುಬಂತ ಮತ್ತು ತಿಙಂತ ಎಂದರೆ ನಾಮಪದ ಮತ್ತು ಕ್ರಿಯಾಪದ ಎಂಬ ಭೇದಗಳಿಂದ ಎರಡು ಪಾದಗಳುಳ್ಳದ್ದು

**ಚತುಷ್ಪದೀ—ನಾಮಾಖ್ಯಾತೋಪಸರ್ಗನಿಪಾತಭೇದೇನ ।** ನಾಮ, ಆಖ್ಯಾತ, ಉಪಸರ್ಗ ಮತ್ತು ನಿಪಾತ ಈ ನಾಲ್ಕು ವಿಭಾಗಗಳುಳ್ಳದ್ದು.

> **ತದ್ಯಾನ್ಯೇತಾನಿ ಚತ್ವಾರಿ ಪದಜಾತಾನಿ ನಾಮಾಖ್ಯಾತೇ ಚೋಪಸರ್ಗನಿಪಾತಾಶ್ಚ ತಾನೀಮಾನಿ ಭವಂತಿ ।**
>
> (ನಿ. ೧-೧)

ಎಂಬುದಾಗಿ ನಿರುಕ್ತಕಾರರು ನಾಮಾದಿಗಳ ಸ್ವರೂಪಗಳನ್ನು ವಿವರಿಸಿದ್ದಾರೆ.

**ಅಷ್ಟಾಪದೀ-ಆಮಂತ್ರಿತಸಹಿತಾಷ್ಟಭೇದೇನ**-ಸಂಬೋಧನೆಯೊಂದಿಗೆ ಸೇರಿ ಎಂಟು ವಿಭಕ್ತಿಗಳುಳ್ಳದ್ದು.

**ನವಪದೀ**—ಅವ್ಯಯದೊಂದಿಗೆ ಸೇರಿದುದೂ ಅಷ್ಟವಿಭಕ್ತ್ಯಾತ್ಮಕವಾದದ್ದೂ ಆದ ವಾಕ್ಕು ; ಎಂದು ಒಂದರ್ಥ. ಅಥವಾ ನಾಭಿ, ಉರಸ್ಸು, ಕಂಠ ಇತ್ಯಾದಿ ಒಂಭತ್ತು ಪ್ರದೇಶಗಳಲ್ಲಿ ಉತ್ಪನ್ನವಾಗಿ ಅನಂತರ ಅನಂತ ವಾಗಿ ಹರಡತಕ್ಕ (ಸಹಸ್ರಾಕ್ಷರಾ) ವಾಕ್ಕು ಎಂದು ಇನ್ನೊಂದರ್ಥ.

ಶಬ್ದಬ್ರಹ್ಮರೂಪವಾದ ಈ ವಾಕ್ಕಿಗೆ ಹೃದಯಾಕಾಶವೇ ಮೂಲವು. ಈ ಮೂಲದಿಂದ ಉತ್ಪನ್ನವಾಗಿ ಅಥವಾ ಆವಿರ್ಭೂತವಾಗಿ ವಿಶ್ವವ್ಯಾಪಿಯಾಗುತ್ತದೆಂದು ತಾತ್ಪರ್ಯ. **ಪರಮೇ ವ್ಯೋಮನ್** ಎಂಬುದಕ್ಕೆ **ಉತ್ಕೃಷ್ಟೇ ಹೃದಯಾಕಾಶೇ** ಎಂದರ್ಥಮಾಡಿದೆ. ಶಬ್ದಬ್ರಹ್ಮಕ್ಕೆ ಮೂಲವಾದ ಹೃದಯಾಕಾಶವನ್ನು ಉಪನಿಷತ್ತುಗಳಲ್ಲಿ ಈ ರೀತಿ ವರ್ಣಿಸಿದೆ.

> **ಯಾವಾನ್ ವಾ ಅಯಮಾಕಾಶಸ್ತಾವಾನೇಷೋಽಂತರ್ಹೃದಯ ಆಕಾಶ ಉಭೇ ಅಸ್ಮಿನ್ ದ್ಯಾವಾಪೃಥಿವೀ ಅಂತರೇವ ಸಮಾಹಿತೇ ಉಭಾವಗ್ನಿಶ್ಚ ವಾಯುಶ್ಚ ಸೂರ್ಯಾಚಂದ್ರಮಸಾವುಭೌ ವಿದ್ಯುನ್ನಕ್ಷತ್ರಾಣಿ ಯಚ್ಚಾಸ್ಯೇಹಾಸ್ತಿ ಯಚ್ಚ ನಾಸ್ತಿ ಸರ್ವಂ ತದಸ್ಮಿನ್ ಸಮಾಹಿತಮಿತಿ ।**
>
> (ಛಾ. ಉ. ೮-೧-೩)

ದೇಹರೂಪವಾದ ಈ ಬ್ರಹ್ಮಪುರದಲ್ಲಿ ಸೂಕ್ಷ್ಮವೂ ಪುಂಡರೀಕರೂಪವೂ ಆದ ಗೃಹವಿದೆ. ಅದು ಹೃದಯಾಕಾಶವು. ಅದು ಬ್ರಹ್ಮನ ಆವಾಸಸ್ಥಾನವು. ಅದರ ಅನ್ವೇಷಣವನ್ನು ಮಾಡಿ ಅಲ್ಲಿ ಬ್ರಹ್ಮತತ್ತ್ವವನ್ನು ಕಾಣಬೇಕು. (ಛಾ ಉ. ೮-೧-೧). ಬ್ರಹ್ಮಾಂಡಕ್ಕಿಂತಲೂ ಮಹತ್ತಾದ ಈ ಬ್ರಹ್ಮತತ್ತ್ವವನ್ನು ಅಡಗಿಸಿಕೊಂಡಿರುವ ಸೂಕ್ಷ್ಮವಾದ ಈ ಅಂತರಾಕಾಶದ ಸ್ವರೂಪವೇನೆಂದರೆ, ಬಾಹ್ಯಾಕಾಶವು ಎಷ್ಟು ವಿಸ್ತೃತವಾಗಿ ಹರಡಿರುವುದೋ ಅಷ್ಟೇ ವಿಸ್ತಾರವಾಗಿ ಈ ಹೃದಯಾಕಾಶವು ಹರಡಿರುವುದು. ಇದರಲ್ಲೇ ದ್ಯಾವಾಪೃಥಿವಿಗಳೆರಡೂ ಹರಡಿರುವುವು. ಅಲ್ಲದೆ ವಾಯ್ವಗ್ನಿಗಳೂ, ಚಂದ್ರಸೂರ್ಯರೂ, ವಿದ್ಯುತ್ತೂ, ನಕ್ಷತ್ರಗಳೂ, ದೇಶಾಂತರ್ಗತವಾದುದೂ ಆಗಿಲ್ಲದಿರುವುದೂ ಆದ ಸಮಸ್ತವೂ ಸಹ ಈ ದಹರಾಕಾಶದಲ್ಲಿ ಅಡಕವಾಗಿವೆ. (ಛಾ ೮-೧-೩) ಇದನ್ನೇ ತೈತ್ತಿರೀಯೋಪನಿಷತ್ತಿನಲ್ಲಿ,

**ದಹ್ರಂ ವಿಪಾಪಂ ಪರಮೇಶ್ಮಭೂತಂ ಯತ್ಪುಂಡರೀಕಂ ಪುರಮಧ್ಯಸಗ್ಸ್ಥಂ ।**
**ತತ್ರಾಪಿ ದಹ್ರಂ ಗಗನಂ ವಿಶೋಕಸ್ತಸ್ಮಿನ್ ಯದಂತಸ್ತದುಪಾಸಿತವ್ಯಂ ॥**

(ತೈ ಉ. ೪-೧೨-೩)

ಈ ಹೃದಯಾಕಾಶವು ಅತಿಸೂಕ್ಷ್ಮವಾದುದು. ಪಾಪರಹಿತವಾದುದು. ಇದು ಉತ್ತಮವಾದ ಆವಾಸಸ್ಥಾನವು. ಇದು ಪುಂಡರೀಕರೂಪದಲ್ಲಿ ದೇಹರೂಪವಾದ ಪುರದ ಮಧ್ಯಭಾಗದಲ್ಲಿ ಈ ಸೂಕ್ಷ್ಮವಾದ ಹೃದಯದಲ್ಲಿ ಅವಕ್ಕಿಂತಲೂ ಸೂಕ್ಷ್ಮವಾದ ಆಕಾಶವಿದ್ದು ಆ ಆಕಾಶದಲ್ಲಿ ಯಾವ ಬ್ರಹ್ಮತತ್ತ್ವವಡಗಿದೆಯೋ ಅದನ್ನು ಉಪಾಸನೆಮಾಡಬೇಕು, ಎಂದು ಹೃದಯಾಕಾಶವನ್ನು ವರ್ಣಿಸಿದೆ.

ಪ್ರಕೃತವಾದ ಋಕ್ಕಿನಲ್ಲಿ ಈ ಹೃದಯಾಕಾಶಕ್ಕೂ ಶಬ್ದಬ್ರಹ್ಮಾತ್ಮಕವಾದ ವಾಕ್ಕಿಗೂ ಆಧಾರಾಧೇಯಭಾವವನ್ನು ತಿಳಿಸಿದೆಯೆಂದು ಸಾಯಣಭಾಷ್ಯವು ಹೇಳುತ್ತದೆ. ಇದೇ ಸಂಬಂಧವನ್ನು ಛಾಂದೋಗ್ಯದಲ್ಲಿಯೂ ತಿಳಿಸುತ್ತಾ ನಾಮರೂಪಗಳ ವಿಭಾಗಕ್ಕೆ ಮೂಲವಾದ ವಾಕ್ಕಿಗೆ ಆಕಾಶವೇ ಮೂಲವೆಂದು ತಿಳಿಸಿದೆ.

**ಆಕಾಶೋ ವೈ ನಾಮ ನಾಮರೂಪಯೋರ್ನಿರ್ವಹಿತಾ ತೇ ಯದಂತರಾ ತದ್ಬ್ರಹ್ಮ ತದಮೃತಂ ಸ ಆತ್ಮಾ ।**

(ಛಾ. ಉ. ೮-೧೪-೧)

ನಾಮರೂಪಗಳೆಂದು ವೈಯಕ್ತಿಕವಾದ ವಿಭಾಗವನ್ನು ಮಾಡಲು ಆಕಾಶವೇ ಕಾರಣವು. ಇದರಲ್ಲಿ ಅಂತರ್ಗತನಾಗಿರುವವನೇ ಪರಬ್ರಹ್ಮನು. ಪರಮಾತ್ಮನು. ಈ ವಾಕ್ಯವನ್ನು ಶಂಕರಾಚಾರ್ಯರು ಬ್ರಹ್ಮಸೂತ್ರಭಾಷ್ಯದ ದಹರಾಧಿಕರಣದ ಪ್ರಕರಣದಲ್ಲಿ ಉದಹರಿಸಿ ಪರಬ್ರಹ್ಮನಿಗೂ ಈ ದಹರಾಕಾಶಕ್ಕೂ ತಾದಾತ್ಮ್ಯವನ್ನು ಹೇಳಿದ್ದಾರೆ.

**ಪ್ರಸಿದ್ಧೇಶ್ಚ—ಇತಶ್ಚ ಪರಮೇಶ್ವರ ಏವ "ದಹರೋऽಸ್ಮಿನ್ನಂತರಾಕಾಶಃ" ಇತ್ಯುಚ್ಯತೇ । ಯತ್ಕಾರಣಮಾಕಾಶಶಬ್ದಃ ಪರಮೇಶ್ವರೇ ಪ್ರಸಿದ್ಧಃ । "ಆಕಾಶೋ ವೈ ನಾಮ .... .... .... ಸ ಆತ್ಮಾ" "ಸರ್ವಾಣಿ ಹ ವಾ ಇಮಾನಿ ಭೂತಾನ್ಯಾಕಾಶಾದೇವ ಸಮುತ್ಪದ್ಯಂತೇ" (ಛಾ. ಉ. ೧-೯-೧) ಇತ್ಯಾದಿ ಪ್ರಯೋಗದರ್ಶನಾತ್ ।**

(ಬ್ರಹ್ಮಸೂತ್ರಭಾಷ್ಯ ೧-೩-೧೭)

ಈ ಅಂತರ್ಹೃದಯಾಕಾಶವೇ ಪರಮೇಶ್ವರನೆಂಬ ಹೆಸರಿನಿಂದ ಪ್ರಸಿದ್ಧವಾಗಿದೆ. ಪರಬ್ರಹ್ಮನ ಬಾಹ್ಯಾವಿರ್ಭಾವಗಳಾದ ನಾಮರೂಪಗಳ ವಿಭಾಗಕ್ಕೆ ಆಕಾಶವೇ ಕಾರಣವಾಗಿರುವುದರಿಂದಲೂ, ಈ ಸಕಲಭೂತಗಳೂ ಆಕಾಶದಿಂದಲೇ ಉತ್ಪನ್ನವಾಗುತ್ತವೆ, ಇತ್ಯಾದಿ ಶ್ರುತಿವಾಕ್ಯಗಳಿದ್ದು ಆಕಾಶಕ್ಕೆ ಬ್ರಹ್ಮತಾದಾತ್ಮ್ಯವನ್ನು ಹೇಳಿರುವುದರಿಂದಲೂ ಸಹ ದಹರಾಕಾಶವು ಕೆಲವು ಕಡೆಗಳಲ್ಲಿ ಬ್ರಹ್ಮಾವಾಸಸ್ಥಾನವೆಂದೂ ಇನ್ನು ಕೆಲವು ಕಡೆಗಳಲ್ಲಿ ಬ್ರಹ್ಮರೂಪಿಯೇ ಎಂದೂ ಸಹ ಪ್ರಸಿದ್ಧವಾಗಿದೆ.

**ಸಾ ಇಯಂ ಶಬ್ದಬ್ರಹ್ಮಾತ್ಮಿಕಾ ವಾಕ್ ಉತ್ಕೃಷ್ಟೇ ಹೃದಯಾಕಾಶೇ ಮೂಲಾಧಾರೇ ಸಹಸ್ರಾಕ್ಷರಾ ಅನೇಕಾಕಾರೇಣ ವ್ಯಾಪ್ತಾ ಭವತೀತ್ಯರ್ಥಃ** (ಸಾ. ಭಾ )

ಶಬ್ದಬ್ರಹ್ಮರೂಪವಾದ ಈ ವಾಕ್ಕು ಅತಿಶಯವಾದುದೂ ಹೃದಯಾಕಾಶರೂಪವಾದುದೂ ಆದ ಮೂಲಾಧಾರದಲ್ಲಿದ್ದು ಅಪರಿಮಿತವಾದ ಆಕಾರಗಳನ್ನು ಪಡೆದು ವಿಶ್ವವನ್ನು ವ್ಯಾಪಿಸುತ್ತದೆ ಎಂದು ತಾತ್ಪರ್ಯವೆಂದು ಸಾಯಣರು ವಿವರಿಸಿದ್ದಾರೆ.

॥ ಸಂಹಿತಾಪಾಠಃ ॥

**ಗೌರೀಃ**—ಗುಙ್ ಅವ್ಯಕ್ತೇ ಶಬ್ದೇ ಧಾತು. **ಋಜ್ರೇಂದ್ರ** (ಉ. ಸೂ. ೨-೧-೧೮೬) ಎಂಬುದರಿಂದ ರಕ್‌ಪ್ರತ್ಯಯಾಂತವಾಗಿ ನಿಪಾತಿತವಾಗಿದೆ. ಸ್ತ್ರೀತ್ವದಲ್ಲಿ **ಗೌರಾದಿಭ್ಯಶ್ಚ**—ಎಂಬುದರಿಂದ ಙೀಷ್. ಪ್ರತ್ಯಯ ಸ್ವರದಿಂದ ಅಂತೋದಾತ್ತವಾಗುತ್ತದೆ. ಸುಪರವಾದಾಗ ಛಾಂದಸವಾಗಿ ಲೋಪ ಬರುವುದಿಲ್ಲ. ರುತ್ವವಿಸರ್ಗ.

**ಮಿಮಾಯ**— ಮಾಙ್ ಮಾನೇ ಶಬ್ದೇ ಚ ಧಾತು. ಜುಹೋತ್ಯಾದಿ ಛಾಂದಸವಾಗಿ ಲಿಟ್. ಪ್ರಥಮಪುರುಷ ಏಕವಚನಾಂತರೂಪ. ತಿಙಂತನಿಘಾತಸ್ವರ ಬರುತ್ತದೆ.

**ಸಲಿಲಾನಿ**—ಷಲಗತೌ ಧಾತು. ಸಲತಿ ಗಚ್ಛತಿ ನಿಮ್ನಮಿತಿ ಸಲಿಲಮ್. **ಸಲಿಕಲ್ಯನಿಮಹಿ**—(ಉ. ಸೂ. ೧-೫೪) ಎಂಬುದರಿಂದ ಇಲಚ್ ಪ್ರತ್ಯಯ. **ಚಿತಃ** (ಪಾ. ಸೂ. ೬-೧-೧೬೩) ಎಂಬುದರಿಂದ ಅಂತೋದಾತ್ತ ಸ್ವರ ಬರುತ್ತದೆ. ದ್ವಿತೀಯಾ ಬಹುವಚನಾಂತರೂಪ.

**ಏಕಪದೀ**— ಇದೇ ಮುಂತಾದ ನಾಲ್ಕು ಪದಗಳಲ್ಲಿ ಬಹುವ್ರೀಹಿ ಸಮಾಸವಾದುದರಿಂದ ಪೂರ್ವಪದ ಪ್ರಕೃತಿಸ್ವರ ಬರುತ್ತದೆ.

**ದ್ವಿಪದೀ—ದ್ವಿತ್ರಿಭ್ಯಾಂ ಪಾದ್ದನ್ಮೂರ್ಧಸು** (ಪಾ. ಸೂ. ೬-೨-೧೯೭) ಎಂಬುದರಿಂದ ಉತ್ತರಪದ ಆದ್ಯುದಾತ್ತಸ್ವರ ಬರುತ್ತದೆ.

**ಬಭೂವುಷೀ**—ಭೂ ಸತ್ತಾಯಾಂ ಧಾತು. ಇದಕ್ಕೆ ಛಾಂದಸವಾಗಿ ಲಿಟಿಗೆ ಕ್ವಸು ಆದೇಶ. ಸ್ತ್ರೀತ್ವದಲ್ಲಿ **ಉಗಿತಶ್ಚ** (ಪಾ. ಸೂ. ೪-೧-೬) ಎಂಬುದರಿಂದ ಙೀಪ್. ಭಸಂಜ್ಞಾ ಇರುವುದರಿಂದ **ವಸೋಃ ಸಂಪ್ರಸಾರಣಮ್** ಎಂಬುದರಿಂದ ಸಂಪ್ರಸಾರಣ, ಪರಕ್ಕೆ ಪೂರ್ವರೂಪ. **ಶಾಸಿವಸಿಘಸೀನಾಂ ಚ** (ಪಾ. ಸೂ. ೮-೩-೬೦) ಎಂಬುದರಿಂದ ಸಕಾರಕ್ಕೆ ಷತ್ವ. **ಭುವೋವುಕಲುಙ್‌ಲಿಟೋಃ** (ಪಾ. ಸೂ. ೬-೪-೮೮) ಎಂಬುದರಿಂದ ವುಕಾಗಮ. ವಸುವಿನ ಸ್ವರದಿಂದ ಉಕಾರ ಉದಾತ್ತವಾಗುತ್ತದೆ.

**ವ್ಯೋಮನ್—ಸುಪಾಂಸುಲುಕ್**—(ಪಾ. ಸೂ. ೭-೧-೩೯) ಎಂಬುದರಿಂದ ಸಪ್ತಮಿಗೆ ಲುಕ್. ॥೪೧॥

ಸಂಹಿತಾಪಾಠಃ

ತಸ್ಯಾಃ ಸಮುದ್ರಾ ಅಧಿ ವಿ ಕ್ಷರಂತಿ ತೇನ ಜೀವಂತಿ ಪ್ರದಿಶಶ್ಚತಸ್ರಃ ।
ತತಃ ಕ್ಷರತ್ಯಕ್ಷರಂ ತದ್ವಿಶ್ವಮುಪ ಜೀವತಿ ॥ ೪೨ ॥

ಪದಪಾಠಃ

ತಸ್ಯಾಃ । ಸಮುದ್ರಾಃ । ಅಧಿ । ವಿ । ಕ್ಷರಂತಿ । ತೇನ । ಜೀವಂತಿ । ಪ್ರದಿಶಃ । ಚತಸ್ರಃ ।
ತತಃ । ಕ್ಷರತಿ । ಅಕ್ಷರಂ । ತತ್ । ವಿಶ್ವಂ । ಉಪ । ಜೀವತಿ ॥ ೪೨ ॥

ಸಾಯಣಭಾಷ್ಯಂ

ತಸ್ಯಾ ಉಕ್ತಾಯಾ ಗೋಃ ಸಕಾಶಾತ್ಸಮುದ್ರಾ ವೃಷ್ಟ್ಯುದಕಸಮುಂದನಾಧಿಕರಣಭೂತಾ ಮೇಘಾ ಅಧ್ಯಧಿಕಂ ಪ್ರಭೂತಮುದಕಂ ವಿ ಕ್ಷರಂತಿ । ವಿವಿಧಂ ಕ್ಷರಂತಿ । ತೇನೋದಕೇನ ಪ್ರದಿಶಶ್ಚತಸ್ರಃ । ಪ್ರಕೃಷ್ಟಾ ವೀತ್ಯರ್ಥಃ । ವಿದಿಶಶ್ಚತಸ್ರೋ ದಿಶಶ್ಚ । ಅಥವಾ ಪ್ರಕೃಷ್ಟಾ ದಿಶೋ ಮುಖ್ಯಾಶ್ಚತಸ್ರಃ । ತತ್ಸ್ಥೇಷು ಲಾಕ್ಷಣಿಕಃ ಶಬ್ದಃ । ತತ್ಸ್ಥಾಃ ಪುರುಷಾ ಜೀವಂತಿ । ತತಃ ಪಶ್ಚಾತ್ತದಕ್ಷರಮುದಕಂ ಕ್ಷರತಿ । ಸಸ್ಯಾದಿಕಮುತ್ಪಾದಯತೀತ್ಯರ್ಥಃ । ತತ್ ಸಸ್ಯಾದಿಕಂ ವಿಶ್ವಂ ಜಗದುಪ ಜೀವತಿ । ಅಯಮಪಿ ಯಾಸ್ಕೇನ ವ್ಯಾಖ್ಯಾತಃ । ತಸ್ಯಾಃ ಸಮುದ್ರಾ ಅಧಿವಿಕ್ಷರಂತಿ ವರ್ಷಂತಿ ಮೇಘಾಸ್ತೇನ ಜೀವಂತಿ ದಿಗಾಶ್ರಯಾಣಿ ಭೂತಾನಿ ತತಃ ಕ್ಷರತ್ಯಕ್ಷರಮುದಕಂ ತತ್ಸರ್ವಾಣಿ ಭೂತಾನ್ಯುಪಜೀವಂತಿ । ನಿ. ೧೧-೪೧ । ಇತಿ ॥

ಪ್ರತಿಪದಾರ್ಥ

**ತಸ್ಯಾಃ**—ಮೇಲೆ ವರ್ಣಿತವಾದ ಮಾಧ್ಯಮಿಕವಾದ ವಾಕ್ಕಿನಿಂದ । **ಸಮುದ್ರಾಃ**—ಮೇಘಗಳು । **ಅಧಿ**—ಪ್ರಭೂತವಾಗಿ । **ವಿ ಕ್ಷರಂತಿ**—(ವೃಷ್ಟಿಯನ್ನು) ಸುರಿಸುತ್ತವೆ । **ತೇನ**—ಅದರಿಂದ । **ಪ್ರದಿಶಶ್ಚತಸ್ರಃ**—ನಾಲ್ಕುದಿಕ್ಕುಗಳಲ್ಲೂ ಇರತಕ್ಕ ಪ್ರಜೆಗಳು । **ಜೀವಂತಿ**—ಜೀವಿಸುತ್ತಾರೆ । **ತತಃ**—ಅನಂತರ । **ಅಕ್ಷರಂ**—ಉದಕವು । **ಕ್ಷರತಿ**—(ಸಸ್ಯಾದಿಗಳಿಗೆ) ಪ್ರಸರಿಸುತ್ತದೆ । **ತತ್**—ಸಸ್ಯವೇ ಮುಂತಾದ । **ವಿಶ್ವಂ**—ಸಮಸ್ತಜಗತ್ತೂ ಸಹ । **ಉಪ ಜೀವತಿ**—ಅದರ ಆಶ್ರಯದಿಂದ ಬದುಕುತ್ತದೆ ।

ಭಾವಾರ್ಥ

ಮಾಧ್ಯಮಿಕವಾದ ವಾಕ್ಕಿನಿಂದ ಮೇಘಗಳು ಪ್ರಭೂತವಾಗಿ ವೃಷ್ಟಿಯನ್ನು ಸುರಿಸುತ್ತವೆ. ಅದರಿಂದ ನಾಲ್ಕು ದಿಕ್ಕುಗಳಲ್ಲೂ ಇರತಕ್ಕ ಪ್ರಜೆಗಳು ಜೀವಿಸುತ್ತಾರೆ. ಅನಂತರ ಉದಕವು ಸಸ್ಯಾದಿಗಳಿಗೆ ಪ್ರಸರಿಸುತ್ತದೆ. ಸಸ್ಯವೇ ಮುಂತಾದ ಸಮಸ್ತ ಜಗತ್ತೂ ಸಹ ಅದರ ಆಶ್ರಯದಿಂದ ಬದುಕುತ್ತದೆ.

## English Translation

From her the clouds shed abundant rain, and thence (the pople of) the four quarters live: thence the moisture spreads (to the grain), and the universe exists.

**ವಿಶೇಷವಿಷಯಗಳು**

**ಸಮುದ್ರಾಃ—ವೃಷ್ಟ್ಯುದಕಸಮುಂದನಾಧಿಕರಣಭೂತಾ ಮೇಘಾಃ ।** ವೃಷ್ಟ್ಯುದಕಪ್ರವಾಹಕ್ಕೆ ಆಧಾರಭೂತವಾದ ಮೇಘಗಳೆಂದರ್ಥ. ನಿರುಕ್ತಕಾರರು ಇದರ ನಿರ್ವಚನವನ್ನು ತಿಳಿಸುತ್ತಾ,

**ಸಮುದ್ರಃ ಕಸ್ಮಾತ್ಸಮುದ್ದ್ರವಂತ್ಯಸ್ಮಾದಾಪಃ ಸಮಭಿದ್ರವಂತ್ಯೇನಮಾಪಃ ಸಂಮೋದಂತೇಽಸ್ಮಿನ್ ಭೂತಾನಿ ಸಮುದಕೋ ಭವತಿ ಸಮುನತ್ತೀತಿ ವಾ ।**

(ನಿ. ೨-೧೦).

ಚಲಿಸು ಎಂಬರ್ಥವನ್ನು ಕೊಡುವ **ದ್ರು** ಧಾತುವಿನೊಡನೆ **ಸಂ, ಉದ್** ಎಂಬ ಎರಡು ಉಪಸರ್ಗಗಳೂ ಸೇರಿಕೊಂಡು ಮೇಲಕ್ಕೆ ಉಕ್ಕಿ ಹರಿಯುತ್ತವೆ ಎಂದು ತಾತ್ಪರ್ಯವನ್ನು ಕೊಡುತ್ತಾದ್ದರಿಂದಲೂ, ಅಥವಾ, ಅದೇ **ದ್ರು** ಧಾತುವಿನೊಡನೆ **ಸಮ್ ಅಭಿ** ಎಂಬ ಉಪಸರ್ಗಗಳು ಸೇರಿಕೊಂಡು (ನದಿಯ) ನೀರುಗಳು ಇದರ ಕಡೆಗೆ ಹರಿದು ಬರುತ್ತವೆಯೆಂಬ ಅರ್ಥವನ್ನು ಕೊಡುವುದರಿಂದಾಗಲಿ, ಅಥವಾ ಸಂತೋಷಪಡು ಎಂಬರ್ಥವನ್ನು ಕೊಡುವ **ಮುದ್** ಧಾತುವಿನೊಡನೆ **ಸಮ್** ಎಂಬ ಉಪಸರ್ಗವು ಸೇರಿ ಜಲಚರಪ್ರಾಣಿಗಳು ಇದರಲ್ಲಿ ಹರ್ಷವನ್ನನುಭವಿಸುತ್ತವೆ ಎಂಬರ್ಥವನ್ನು ಕೊಡುವುದರಿಂದಾಗಲಿ, ಅಥವಾ ಉದಕಕ್ಕೆ ನಿಧಿಯಾಗಿರುವುದರಿಂದಾಗಲಿ, ಅಥವಾ ತೇವಮಾಡು ಎಂಬರ್ಥವನ್ನು ಕೊಡುವ **ಉದ್** ಧಾತುವಿನೊಡನೆ **ಸಮ್** ಉಪಸರ್ಗವು ಸೇರಿ ನೆನೆಯಿಸು ಎಂದು ತಾತ್ಪರ್ಯವನ್ನು ಕೊಡುವುದರಿಂದಾಗಲಿ **ಸಮುದ್ರ**ವೆಂಬ ಪದವು ನಿಷ್ಪನ್ನವಾಗಿದೆಯೆಂದು ಹೇಳಿದ್ದಾರೆ.

ಅನಂತರ ಪಾರ್ಥಿವವಾದ ಸಮುದ್ರಕ್ಕೂ, ಅಂತರಿಕ್ಷಪರ್ಯಾಯವಾದ ಸಮುದ್ರಕ್ಕೂ ವ್ಯತ್ಯಾಸವನ್ನು ತೋರಿಸುತ್ತಾ ಇವೆರಡಕ್ಕೂ ವ್ಯತ್ಯಾಸವನ್ನು ತಿಳಿಯದೇ ಸಂದೇಹಕ್ಕವಕಾಶವನ್ನು ಕೊಡುವಂತೆ ಅರ್ಥಮಾಡುವವರನ್ನು ಕುರಿತು ನಿರುಕ್ತಕಾರರು,

**ತತ್ರ ಸಮುದ್ರ ಇತ್ಯೇತತ್ಪಾರ್ಥಿವೇನ ಸಮುದ್ರೇಣ ಸಂದಿಹ್ಯತೇ ।** ಅಂತರಿಕ್ಷಪರ್ಯಾಯವಾದ ಸಮುದ್ರವನ್ನು ಅನೇಕರು ಪಾರ್ಥಿವಸಮುದ್ರನೆಂದು ಭ್ರಮಿಸಿ ಅರ್ಥಮಾಡುತ್ತಾರೆ. ಅದು ಸರಿಯಲ್ಲ. ಎಂದು ತಿಳಿಸಿ ಈ ಸಂದರ್ಭದಲ್ಲಿ ಅಂತರಿಕ್ಷಪರ್ಯಾಯವಾದ ಸಮುದ್ರಕ್ಕೂ ಪಾರ್ಥಿವವಾದ ಸಮುದ್ರಕ್ಕೂ ವ್ಯತ್ಯಾಸವನ್ನು ತೋರಿಸಲು ಒಂದು ಇತಿಹಾಸವನ್ನು ಉದಹರಿಸಿದ್ದಾರೆ. ಈ ಇತಿಹಾಸವನ್ನು ಇದೇ ಭಾಗದ 54-55 ನೇ ಪುಟಗಳಲ್ಲಿ ತಿಳಿಸಿದೆ.

**ಅದ್ಭಿರ್ಯಾತಿ ವರುಣಃ ಸಮುದ್ರೈರ್ಯುಷ್ಮಾಁ ಇಚ್ಛಂತಃ ಶವಸೋ ನಪಾತಃ ।**

(ಋ. ಸಂ. ೧-೧೬೧-೧೪)

ಎಂಬಲ್ಲಿ **ಸಮುದ್ರೈಃ** ಎಂಬ ಪದವು **ಅದ್ಭಿಃ** ಎಂಬುದಕ್ಕೆ ವಿಶೇಷಣವಾಗಿದೆ. ಪ್ರವಹಿಸತಕ್ಕ ಉದಕಗಳಿಂದ ಎಂದರ್ಥ. ಪ್ರಕೃತವಾದ ಋಕ್ಕಿನಲ್ಲಿ ಪ್ರವಿಸತಕ್ಕ ವೃಷ್ಟ್ಯುದಕಗಳಿಗೆ ಆಧಾರಭೂತವಾಗಿರುವ **ಮೇಘ**ಗಳು ಎಂದರ್ಥ. **ತಸ್ಯಾಃ ಸಮುದ್ರಾ ಅಧಿ ವಿ ಕ್ಷರಂತಿ—ವರ್ಷಂತಿ ಮೇಘಾಃ ।** ಮೇಘಗಳು ಮಳೆಯನ್ನು ಸುರಿಸುತ್ತವೆಯೆಂದು ನಿರುಕ್ತಕಾರರು ಅರ್ಥಮಾಡಿದ್ದಾರೆ. (ನಿ. ೧೧-೪೧)

**ಪ್ರದಿಶಶ್ಚತಸ್ರಃ—ದಿಗಾಶ್ರಯಾಣಿ ಭೂತಾನಿ** (ನಿ). ಸಕಲದಿಕ್ಕುಗಳನ್ನೂ ಆಶ್ರಯಿಸಿರುವ ಭೂತಗಳು (ತೇನ ಜೀವಂತಿ) ಎಂದು ತಾತ್ಪರ್ಯ.

**ಅಕ್ಷರಂ-ಅಕ್ಷರಮುದಕಂ** । ಉದಕಪರ್ಯಾಯವಾಗಿ ಈ ಪದವನ್ನುಪಯೋಗಿಸಿದೆ. ಈ ಪದದ ಪ್ರಯೋಗದಲ್ಲಿ ಒಂದು ವಿಶೇಷವಿಷಯವನ್ನು ಗಮನಿಸಬೇಕು.

**ಅಕ್ಷರಂ ನ ಕ್ಷರತಿ ನ ಕ್ಷೀಯತೇ ವಾಕ್ಷಯೋ ಭವತಿ ವಾಚೋಽಕ್ಷ ಇತಿ ವಾ ॥**

(ನಿ. ೧೩-೧೨)

ಕ್ಷರವಲ್ಲದ್ದು, ಕ್ಷರರಹಿತವಾದದ್ದು **ಅಕ್ಷರಂ** ಆದುದರಿಂದ ಈ ಪದವನ್ನು (೧-೧೬೪-೩೯) ಇತ್ಯಾದಿಋಕ್ಕುಗಳಲ್ಲಿ ಕ್ಷಯರಹಿತವಾದ **ಆತ್ಮನ** ಪರವಾಗಿ ಉಪಯೋಗಿಸಿದೆ. ಕ್ಷರ **ಸಂಚಲನೇ, ಸ್ರವಣೇಚ**, ಸಂಚರಿಸತಕ್ಕದ್ದು, ಸ್ರವಿಸತಕ್ಕದ್ದು ಎಂಬರ್ಥದಲ್ಲಿ ಕ್ಷರಧಾತುವು ಉಪಯೋಗಿಸಲ್ಪಡುತ್ತದೆ. ಪ್ರಕೃತವಾದ ಋಕ್ಕಿನಲ್ಲಿ **ಅಕ್ಷರ**ಶಬ್ದವು ಸ್ರವಿಸುವ ಉದಕಕ್ಕೆ ವಿಶೇಷಣವಾಗಿದೆ. ಇದೇ ರೀತಿಯಲ್ಲಿ,

**ತ್ರಿರ್ವರ್ತಿರ್ಯಾತಂ ತ್ರಿರನುವ್ರತೇ ಜನೇ ತ್ರಿಃ ಸುಪ್ರಾವ್ಯೇ ತ್ರೇಧೇವ ಶಿಕ್ಷತಂ ।**
**ತ್ರಿರ್ನಾಂದ್ಯಂ ವಹತಮಶ್ವಿನಾ ಯುವಂ ತ್ರಿಃ ಪೃಕ್ಷೋ ಅಸ್ಮೇ ಅಕ್ಷರೇವ ಪಿನ್ವತಂ ॥**

(ಋ. ಸಂ. ೧-೩೪-೪)

ಎಂಬಲ್ಲಿಯೂ ಸಹ ಇದೇ ರೀತಿ ಅಕ್ಷರವೆಂದರೆ ಉದಕವೆಂದರ್ಥವಾಗುತ್ತದೆ. **ಅಕ್ಷರಾ, ಸ್ರೋತಃ, ತೃಪ್ತಿಃ** (ನಿ. ೨-೨೪) ಇತ್ಯಾದ್ಯುದಕನಾಮಗಳಲ್ಲಿ ನಿರುಕ್ತಕಾರರೂ ಈ ಪದವನ್ನು ಪಠಿಸಿರುತ್ತಾರೆ. ಕ್ಷರವಲ್ಲದ ಸತ್ತ್ವವುಳ್ಳದ್ದು : ಚೈತನ್ಯದಾಯಿಯಾದುದು ಎಂದರ್ಥ.

**ವ್ಯಾಕರಣಪ್ರಕ್ರಿಯಾ**

**ಕ್ಷರಂತಿ**—ಕ್ಷರ ಸಂಚಲನೇ ಧಾತು. ಲಟ್ ಪ್ರಥಮಪುರುಷ ಬಹುವಚನಾಂತರೂಪ. ಅತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

**ಜೀವಂತಿ**—ಜೀವ ಪ್ರಾಣಧಾರಣೇ. ಧಾತು. ಲಟ್ ಪ್ರಥಮಪುರುಷ ಬಹುವಚನಾಂತರೂಪ ತಿಙಂತ ನಿಘಾತಸ್ವರ ಬರುತ್ತದೆ. ॥ ೪೨ ॥

:o:

**ಸಂಹಿತಾಪಾಠಃ**

ಶಕಮಯಂ ಧೂಮಮಾರಾದಪಶ್ಯಂ ವಿಷೂವತಾ ಪರ ಏನಾವರೇಣ ।
ಉಕ್ಷಾಣಂ ಪೃಶ್ನಿಮಪಚಂತ ವೀರಾಸ್ತಾನಿ ಧರ್ಮಾಣಿ ಪ್ರಥಮಾನ್ಯಾಸನ್ ॥

॥ ೪೩ ॥

। ಪದಪಾಠಃ ।

ಶ॒ಕ॒ಮ॒ಯಂ । ಧೂ॒ಮಂ । ಆ॒ರಾತ್ । ಅ॒ಪ॒ಶ್ಯಂ॒ । ವಿ॒ಷು॒ವತಾ । ಪ॒ರಃ । ಏ॒ನಾ । ಅ॒ವರೇಣ ।
ಉ॒ಕ್ಷಾಣಂ । ಪೃಶ್ನಿಂ । ಅ॒ಪ॒ಚ॒ಂ॒ತ॒ । ವೀ॒ರಾಃ । ತಾನಿ । ಧರ್ಮಾಣಿ । ಪ್ರ॒ಥ॒ಮಾನಿ । ಅ॒ಸ॒ನ್ ॥ ೪೩ ॥

ಸಾಯಣಭಾಷ್ಯಂ

ಶಕಮಯಂ ಶಕೃನ್ಮಯಂ ಶುಷ್ಕಗೋಮಯಸಂಭೂತಂ ಧೂಮಮಾರಾನ್ನಾತಿದೂರ ಅಪಶ್ಯಂ । ದೃಷ್ಟವಾನಸ್ಮಿ । ದಿವಾ ಧೂಮಸ್ಯ ದೂರೇ ದೃಶ್ಯಮಾನತ್ವಾತ್ಸ ಏವ ದರ್ಶನವಿಷಯತಯೋಕ್ತಃ । ವಿಷುವತಾ ವ್ಯಾಪ್ತಿಮತೈನಾನೇನಾವರೇಣ ನಿಕೃಷ್ಟೇನ ಧೂಮೇನ ಪರಃ ಪರಸ್ತಾತ್ತತ್ಕಾರಣಭೂತಮಗ್ನಿಮಪಶ್ಯಂ। ಅಹಂ ಯಜಮಾನ ಇತ್ಯರ್ಥಃ । ಕಿಂಚೋಕ್ಷಾಣಂ ಫಲಸ್ಯ ಸೇಕ್ತಾರಂ ಪೃಶ್ನಿಂ ಶುಕ್ಲವರ್ಣಂ । ಪ್ರಾಶ್ನುತೇ ತೇನ ಫಲಮಿತಿ ಸ್ವಯಂ ಪ್ರಾಶ್ನುತ ಇತಿ ವಾ ಪೃಶ್ನಿರ್ವಲ್ಲೀರೂಪಃ ಸೋಮಃ । ತಂ ವೀರಾ ವಿವಿಧೇರಣಕುಶಲಾ ಋತ್ವಿಜೋಽಪಚಂತ । ಅತ್ರ ಧಾತ್ವರ್ಥಾನಾದರೇಣ ತಿಙ್ಪ್ರತ್ಯಯಃ ಕರೋತ್ಯರ್ಥಃ । ಸ ಚ ಕ್ರಿಯಾಸಾಮಾನ್ಯವಚನೋಽತ್ರೌಚಿತ್ಯಾದಭಿಷವೇಣ ಸಂಪಾದಿತವಂತ ಇತ್ಯರ್ಥಃ । ತಾನಿ ತತ್ಸಾಧನಾನಿ ಧರ್ಮಾಣ್ಯನುಷ್ಠಾನಾನಿ ಪ್ರಥಮಾನಿ ಪ್ರತಮಾನಿ ಪ್ರಕೃಷ್ಟಾನಿ ಫಲಪರ್ಯವಸಾನೀಯಾನ್ಯಾಸನ್। ಸಂಪಾದಿತಾನ್ಯಭವನ್ । ಯದ್ವಾ । ಸೋಮ ಉಕ್ಷಾಭವತ್ ಪೂರ್ವಂ ತಂ ದೇವಾಃ ಶಕ್ರೃತಾಪಚನ್ಯಜ್ಞಾರ್ಥೇ ತದ್ಭವೋ ಧೂಮೋ ಮೇಘ ಆಸೀತ್ ತದುಚ್ಯತೇ । ತತ್ಪರತ್ವೇನ ವಾ ಮಂತ್ರೋ ವ್ಯಾಖ್ಯೇಯೋ ವಿಚಕ್ಷಣೈಃ ॥

ಪ್ರತಿಪದಾರ್ಥ

ಆರಾತ್—ಸಮೀಪದಲ್ಲಿಯೇ । **ಶಕಮಯಂ ಧೂಮಂ**-ಒಣಗಿದ ಬೆರಣಿಯಿಂದ ಉತ್ಪನ್ನವಾದ ಧೂಮವನ್ನು (ಹೊಗೆಯನ್ನು) । **ಅಪಶ್ಯಂ**—ನೋಡಿದ್ದೇನೆ । **ವಿಷುವತಾ**—ವ್ಯಾಪಿಸಿರುವುದೂ । **ಅವರೇಣ**—ಸಮೀಪದಲ್ಲಿರುವುದೂ ಆದ । ಏನ—ಈ ಧೂಮದಿಂದ । **ಪರಃ**—ಧೂಮಕ್ಕೆ ಕಾರಣವಾದ ಅಗ್ನಿಯನ್ನೂ (ನೋಡಿದ್ದೇನೆ.) । **ಉಕ್ಷಾಣಂ**-ಫಲವನ್ನು ಸುರಿಸಿಕೊಡತಕ್ಕದ್ದೂ । **ಪೃಶ್ನಿಂ**—ಶುಕ್ಲರೂಪವುಳ್ಳದ್ದೂ ಆದ ಸೋಮವನ್ನು । **ವೀರಾಃ**—ಋತ್ವಿಕ್ಕುಗಳು । **ಅಪಚಂತ**—ಸಂಪಾದಿಸಿದ್ದಾರೆ. । **ತಾನಿ**—ಅದಕ್ಕೆ ಸಾಧನಗಳಾದ । **ಧರ್ಮಾಣಿ**—ಅನುಷ್ಠಾನಾದಿಗಳು । **ಪ್ರಥಮಾನಿ**—ಅತಿಶಯವಾದವುಗಳಾಗಿ । **ಅಸನ್**—ಸಂಪಾದಿತವಾದವು ।

ಭಾವಾರ್ಥ

ಯಜ್ಞಾಗ್ನಿಯಿಂದ ಸುಡಲ್ಪಟ್ಟ ಒಣಗಿದ ಬೆರಣಿಯಿಂದ ಉತ್ಪನ್ನವಾದ ಧೂಮವನ್ನು ಸಮೀಪದಲ್ಲಿಯೇ ನೋಡಿದ್ದೇನೆ. ವ್ಯಾಪಿಸಿರುವುದೂ, ಸಮೀಪದಲ್ಲಿರುವುದೂ ಆದ ಈ ಧೂಮದಿಂದ ಧೂಮಕ್ಕೆ ಕಾರಣವಾದ ಅಗ್ನಿಯನ್ನೂ ನೋಡಿದ್ದೇನೆ. ಫಲವನ್ನು ಸುರಿಸತಕ್ಕದ್ದೂ, ಶುಕ್ಲರೂಪವುಳ್ಳದ್ದೂ ಆದ ಸೋಮವನ್ನು ಋತ್ವಿಕ್ಕುಗಳು ಸಂಪಾದಿಸಿದ್ದಾರೆ. ಅದಕ್ಕೆ ಸಾಧನಗಳಾದ ಅನುಷ್ಠಾನಾದಿಗಳು ಅತಿಶಯವಾಗಿ ಸಂಪಾದಿತವಾದವು.

English Translation

I behold near (me) the smoke of burning cow-dung; and by that all-pervading mean (effect), discovered the cause (fire) : the priests have dressed the Soma ox, for such are their first duties.

॥ ವಿಶೇಷವಿಷಯಗಳು ॥

ಈ ಋಕ್ಕಿಗೆ ಮೇಲೆ ಭಾವಾರ್ಥದಲ್ಲಿ ಹೇಳಿರುವುದಲ್ಲದೆ ಇನ್ನೊಂದರ್ಥವನ್ನೂ ಹೇಳಬಹುದೆಂದು ಸಾಯಣರು ತಿಳಿಸಿದ್ದಾರೆ.

**ಸೋಮ ಉಕ್ಷಾಭವತ್ಪೂರ್ವಂ ತಂ ದೇವಾಃ ಶಕೃತಾಪಚನ್ ।**
**ಯಜ್ಞಾರ್ಥೇ ತದ್ಭವೋ ಧೂಮೋ ಮೇಘ ಆಸೀತ್ ತದುಚ್ಯತೇ ।**
**ತತ್ಪರತ್ವೇನ ವಾ ಮಂತ್ರೋ ವ್ಯಾಖ್ಯೇಯೋಽಯಂ ವಿಚಕ್ಷಣೈಃ ।**

ಫಲಗಳ ಸೇಕ್ತೃವಾದ ಸೋಮನನ್ನು ಪೂರ್ವದಲ್ಲಿ ದೇವತೆಗಳು ಶಕೃತ್ತಿನಿಂದ ಪಾಕಮಾಡಿದರು. ಯಜ್ಞಾರ್ಥವಾಗಿ ಉತ್ಪನ್ನವಾದ ಆ ಧೂಮವು ಮೇಘವಾಗಿ ಪರಿಣಮಿಸಿತು. ಆ ವಿಷಯವನ್ನು ಇಲ್ಲಿ ತಿಳಿಸಿದೆ. ಈ ಮಂತ್ರಕ್ಕೆ ಆ ಸಂದರ್ಭವನ್ನೂ ಸೂಚಿಸಿ ತಿಳಿದವರು ಅರ್ಥಮಾಡಬಹುದು, ಎಂದು ಹೇಳಿದೆ.

ಪ್ರಕೃತವಾದ ಋಕ್ಕಿನ ವಿವರಣೆಯು **ಶಕಮಯಂ ಧೂಮಂ** ಎಂಬುದರ ಅರ್ಥವನ್ನನುಸರಿಸುತ್ತದೆ. **ಶಕೃನ್ಮಯಂ ಶುಷ್ಕಗೋಮಯಸಂಭೂತಂ ಧೂಮಂ** ಒಣಗಿದ ಬೆರಣಿಯಿಂದ ಉತ್ಪನ್ನವಾದ ಧೂಮವೆಂದು ಸಾಯಣರ ಅರ್ಥ. ಅವರು ಹೇಳಿರುವ ಕಥಾಸಂದರ್ಭವೂ ಸಹ ಇದೇ ಅರ್ಥವನ್ನು ಸೂಚಿಸುತ್ತದೆ. ಆದರೆ **ಶಕಧೂಮ**ವೆಂಬ ಹೆಸರು ಇತರ ಕಡೆಗಳಲ್ಲಿ ಅಂಕಿತನಾಮವಾಗಿಯೂ ಅನ್ವರ್ಥನಾಮವಾಗಿಯೂ ಉಪಯೋಗಿಸಲ್ಪಟ್ಟಿರುವುದರಿಂದ ಈ ಪದದಿಂದ ಶ್ರುತ್ಯಂತರಗಳಲ್ಲಿ ನಿರ್ದಿಷ್ಟವಾಗಿರುವ ಬೇರೆ ಬೇರೆ ಅರ್ಥಗಳೇನೆಂಬುದನ್ನು ಪರಿಶೀಲಿಸಬೇಕಾಗಿದೆ.

Monier-Williams ಎಂಬ ಪಂಡಿತನು ತನ್ನ Sanskrit—English Dictionary ಯಲ್ಲಿ ಈ ಪದಕ್ಕೆ ಮೂರು ಅರ್ಥಗಳನ್ನು ಹೇಳಿ ಎಲ್ಲಾ ಅರ್ಥಗಳಿಗೂ ಆಧಾರಗಳನ್ನೂ ತೋರಿಸಿದ್ದಾನೆ.

೧) The smoke of burnt or burning cow-dung. ಗೋಮಯ (ಬೆರಣಿ) ದಿಂದ ಉತ್ಪನ್ನವಾದ ಧೂಮ. Atharva-Veda.

೨) Name of a Nakshatra. ಒಂದು ನಕ್ಷತ್ರದ ಹೆಸರು. } Atharva-Veda.

೩) A Priest who argues by means of cow-dung. ಗೋಮಯವನ್ನು ಸಾಕ್ಷಿಯಾಗಿಟ್ಟುಕೊಂಡು ವಾದಿಸುವ ಬ್ರಾಹ್ಮಣ.

(ಕೌಶಿಕಪರಿಭಾಷಾಸೂತ್ರ.)

ಬೃಹದ್ದೇವತೆಯಲ್ಲಿ ಪ್ರಕೃತವಾದ ಋಕ್ಕನ್ನು ನಿರ್ದೇಶಿಸಿ ಶಕಕ್ಕೆ ಮೇಘವೆಂದರ್ಥಮಾದಿದೆ.

**ಮೇಘೋ ಶಕಸ್ತಸ್ಯ ಧೂಮಃ ಸಲಿಲಂ ವಾಸ ಏವ ವಾ ।**

**ಸೋಮ ಉಕ್ಷಾ ಭವಂತಸ್ಯ ಪಾವಕಾಶ್ಚ ತ್ರಯೋಽಧಿಪಾಃ ॥**

(ಬೃ. ದೇ. ೪-೪೧)

**ಶಕ**ವೆಂಬ ಪದವು ಮೇಘವೆಂಬರ್ಥದಲ್ಲಿ ಉಪಯೋಗಿಸಲ್ಪಟ್ಟಿದೆ. ಉದಕವೇ ಅದರ ಧೂಮವು. ಅಥವಾ ಮೇಘದ ಆಚ್ಛಾದಕರೂಪವಾದ ವಸ್ತ್ರವಾಗಬಹುದು. ಸೋಮವು ವೃಷಭವು. (ಸೇಕ್ತೃವು) ಎಂದು **ಶಕ, ಧೂಮ, ಸೋಮ** ಎಂಬ ಪದಗಳ ಅರ್ಥಗಳನ್ನು ತಿಳಿಸಿದೆ. Mocdonell ಎಂಬ ಪಂಡಿತನು ಬೃಹದ್ದೇವತೆಯ ಈ ವಾಕ್ಯವನ್ನು ಪರಿವರ್ತಿಸುವಾಗ ತನ್ನ ಟಿಪ್ಪಣಿಯನ್ನು **ಮೇಘದೂತದ** ವಾಕ್ಯವನ್ನು ಉದಹರಿಸಿ,

" **ಧೂಮಜ್ಯೋತಿಸ್ಸಲಿಲಮರುತಾಂ ಸನ್ನಿಪಾತಃ ಕ್ವ ಮೇಘಃ** .... .... .... .... " ॥

(ಮೇಘದೂತ. ೫)

ಎಂಬ ವರ್ಣನೆಯಲ್ಲಿಯೂ ಸಹ **ಶಕಧೂಮ**ದಿಂದ ಸೂಚಿತವಾಗಿರುವ ಭಾವವು ಅಭಿವ್ಯಕ್ತವಾಗಿದೆಯೆಂದು ತಿಳಿಸಿದ್ದಾನೆ. ಆದರೆ ಬೃಹದ್ದೇವತೆಯಲ್ಲಿ **ಧೂಮವೇ ಸಲಿಲ**ವೆಂದು ಹೇಳಿದೆ. ಅಥರ್ವವೇದದಲ್ಲಿ **ಶಕಧೂಮನು** ನಕ್ಷತ್ರ ರಾಜನೆಂದು ವರ್ಣಿತನಾಗಿದ್ದಾನೆ.

**ಯದ್ರಾಜಾನಂ ಶಕಧೂಮಂ ನಕ್ಷತ್ರಾಣ್ಯಕೃಣ್ವತ ।**

**ಭದ್ರಾಹಮಸ್ಮೈ ಪ್ರಾಯಚ್ಛನ್ನಿತೋ ರಾಷ್ಟ್ರಮಜಾಯತ ॥**

ನಕ್ಷತ್ರಗಳೆಲ್ಲವೂ ಶಕಧೂಮನನ್ನು ತಮ್ಮ ರಾಜನನ್ನಾಗಿ ಮಾಡಿ ಅವನಿಗೆ ಮಂಗಳಾತ್ಮಕವಾದ ಅಹಸ್ಸನ್ನುಂಟುಮಾಡಿ " ಇದು ನಿನ್ನ ಸಾರ್ವಭೌಮತ್ವವು " ಎಂದು ಹೇಳಿದವು.

**ಭದ್ರಾಹಮಸ್ತು ನಃ ಸಾಯಂ ಭದ್ರಾಹಂ ಪ್ರಾತರಸ್ತು ನಃ ।**

**ಭದ್ರಾಹಮಸ್ಮಭ್ಯಂ ತ್ವಂ ಶಕಧೂಮ ಸದಾ ಕೃಣು ॥**

ನಮಗೂ ಸಹ ಮಧ್ಯಾಹ್ನಕಾಲದಲ್ಲೂ, ಸಾಯಂಕಾಲದಲ್ಲೂ, ಪ್ರಾತಃಕಾಲದಲ್ಲೂ ನಮ್ಮ ಅಹಸ್ಸು ಮಂಗಳಾತ್ಮಕವಾದ ವಾತಾವರಣದೊಂದಿಗಿರುವಂತೆ ಮಾಡು.

**ಯೋ ನೋ ಭದ್ರಾಹಮಕರಸ್ಸಾಯಂಪ್ರಾತರಥೋ ದಿವಾ ।**

**ತಸ್ಮೈ ತೇ ನಕ್ಷತ್ರರಾಜ ಶಕಧೂಮ ಸದಾ ನಮಃ ॥**

(ಅಥರ್ವವೇದ. ೬-೧೨೮-೧ ರಿಂದ ೩)

ಸಾಯಂಕಾಲದಲ್ಲೂ, ಪ್ರಾತಃಕಾಲದಲ್ಲೂ, ಮಧ್ಯಾಹ್ನಕಾಲದಲ್ಲೂ ನಮಗೆಲ್ಲಾ ಮಂಗಳವನ್ನುಂಟುಮಾಡತಕ್ಕವನೂ, ನಕ್ಷತ್ರರಾಜನೂ ಆದ ಶಕಧೂಮನೇ, ನಿನಗೆ ಸರ್ವದಾ ನಮಸ್ಕರಿಸುವೆವು.

[ಇಲ್ಲಿ ಉದಾಹೃತವಾಗಿರುವ ವಾಕ್ಯಗಳಲ್ಲಿ ಪಾಠಾಂತರಗಳೂ ಇವೆ ]

ಅಥರ್ವವೇದದ ಈ ವಾಕ್ಯಗಳಲ್ಲಿ ನಿರ್ದಿಷ್ಟವಾಗಿರುವ **ಶಕಧೂಮನ** ವಿಷಯವನ್ನು ವಿಮರ್ಶಿಸುವಾಗ Bloomfield ಎಂಬ ಪಂಡಿತನು ಇತರ ಕೆಲವು ಪಾಶ್ಚಾತ್ಯಪಂಡಿತರ ಅಭಿಪ್ರಾಯಗಳನ್ನೂ ಚರ್ಚಿಸಿ ತನ್ನ ವಿವರಣೆಯನ್ನು ಕೊಟ್ಟಿರುತ್ತಾನೆ. ಅವುಗಳಲ್ಲಿ Weber ಎಂಬುವನ ಅಭಿಪ್ರಾಯವನ್ನು ತಿಳಿಸುತ್ತಾ,

" Weber, recognising ಶಕಧೂಮ, as the word on which the interpretation depends, takes it as equivalent to the ಶಕಮಯಧೂಮ of R. V. I- 164-43, 'the smoke that rises from burning cow-dung' a well-known fuel and surmises that it may be the first morning fire, kindled while the stars are still shining, and indicating by its rising or falling smoke the weather of the breaking day."

(American journal of Philology. Vol. VII. P. 486)

**ವೀಬರ್** ಎಂಬ ಪಂಡಿತನ ಮತದಂತೆ, ಅಥರ್ವವೇದೋಕ್ತವಾಗಿರುವ **ಶಕಧೂಮವೂ** ಋಕ್ಸಂಹಿತೆಯಲ್ಲಿ ಹೇಳಿರುವ **ಶಕಮಯಧೂಮವೂ** ಒಂದೇ ಅರ್ಥವುಳ್ಳ ಪದಗಳು. ಪ್ರಾತಃಕಾಲದಲ್ಲಿ ಇನ್ನೂ ನಕ್ಷತ್ರಗಳು ಪ್ರಕಾಶಿಸುತ್ತಿರುವಾಗಲೇ ಬೆರಣಿಯಿಂದ ಉತ್ಪನ್ನವಾದ ಹೊಗೆಯು ಅಂತರಿಕ್ಷಕ್ಕೆ ಹೆತ್ತುವುದನ್ನು ಇಲ್ಲಿ ವರ್ಣಿಸಿದೆ. ಈ ಧೂಮವು ಮೇಲಕ್ಕೆ ಹೋಗುವ ಕ್ರಮದಿಂದ ಆಯಾ ದಿನದ ಹವದ ಸ್ವರೂಪವು ತಿಳಿಯುತ್ತದೆ. ಆದುದರಿಂದ **ಶಕಧೂಮವು** ಪ್ರತಿದಿನದ ಹವವನ್ನು ತಿಳಿಸುವ ಸಾಧನವು. ಮೇಲೆ ಉದಾಹೃತವಾಗಿರುವ ಅಥರ್ವವೇದ ೬-೧೨೮-೩ನೇ ಮಂತ್ರದ ಅರ್ಥವನ್ನು ವಿವರಿಸುತ್ತಾ ಅಥರ್ವವೇದವನ್ನು ಆಂಗ್ಲಭಾಷೆಗೆ ಪರಿವರ್ತಿಸಿರುವ Whitney ಎಂಬ ಪಂಡಿತನು ತನ್ನ ಅಭಿಪ್ರಾಯವನ್ನು ಈ ರೀತಿ ತಿಳಿಸಿದ್ದಾನೆ.

One may conjecture that it is the Milky-way, which is not unlike a thin line of smoke drawn across the sky, that is the real king of asterisms, and that its imitation by a column of the heavy smoke of burning dung is what was relied on to counteract any evil influences from the asterisms; or the behaviour of such smoke, as rising upward or hanging low, may have been really a weather-sign.

(Harvard Oriental Series. Vol. 7. P. 378.)

ಗೋಮಯದಿಂದ ಉತ್ಪನ್ನವಾದ ಧೂಮವು ಯಾವ ಆಕಾರದಲ್ಲಿರುವುದೋ ಅದೇ ಆಕಾರವನ್ನು ಹೋಲುತ್ತಿರುವ ನಕ್ಷತ್ರಪುಂಜವು (Milky-way) ಇಲ್ಲಿ ಶಕಧೂಮವೆಂದು ನಿರ್ದಿಷ್ಟವಾಗಿದೆ. ನಕ್ಷತ್ರಗಳಿಂದ ಉಂಟಾಗತಕ್ಕ ದುಷ್ಪರಿಣಾಮಗಳು ಇದನ್ನು ಆರಾಧಿಸುವುದರಿಂದ ತಪ್ಪುತ್ತವೆ. ಆದುದರಿಂದಲೇ " **ಭದ್ರಾಹಮಸ್ತು ನಃ ಸಾಯಂ** " ಎಂದು ಪ್ರಾರ್ಥಿತವಾಗಿದೆ. ಅಥವಾ Weber ಎಂಬುವನು ಹೇಳುವಂತೆಯೇ ಧೂಮದ ಆರೋಹಣಾವರೋಹಣಗಳು ಇಲ್ಲಿ ವರ್ಣಿತವಾಗಿರಬಹುದು. ಆಯಾ ದಿನದ ಹವದ ಸ್ವರೂಪವನ್ನು ಅಂತರಿಕ್ಷದಲ್ಲಿ ಊರ್ಧ್ವಮುಖವಾಗಿ ಪ್ರಸರಿಸುವ ಧೂಮರೇಖೆಯು ತನ್ನ ನೇರವಾದ ಆರೋಹಣದಿಂದಲೂ, ಹವಾಗುಣಕ್ಕನುಗುಣವಾದ ವಕ್ರವಾದ ಪ್ರಸರಣದಿಂದಲೂ ತಿಳಿಸುತ್ತದೆ. ಆ ಶಕಧೂಮವು ಪ್ರಕೃತವಾದ ಋಕ್ಕಿನಲ್ಲಿಯೂ ವರ್ಣಿತವಾಗಿರುವುದೆಂದರ್ಥವು.

ಕೌಶಿಕಪರಿಭಾಷಾಸೂತ್ರದಲ್ಲಿ (VIII. 17) **ಶಕಧೂಮವೆಂಬ** ಪದವನ್ನು ಯಜ್ಞದಲ್ಲಿ ಮುಖ್ಯಪಾತ್ರವನ್ನು ವಹಿಸುವ ಬ್ರಹ್ಮನಿಗೆ ಪರ್ಯಾಯಪದವಾಗಿ ಉಪಯೋಗಿಸಿದೆ.

" **ಪ್ರಮಂದೋ ಶೀರಶಲಲ್ಯುಪಧಾನಶಕಧೂಮ ಜರಂತಃ .... .... ....**"

ಎಂಬ ಈ ವಾಕ್ಯಕ್ಕೆ **ದಾರಿಲನು** ವ್ಯಾಖ್ಯಾನಮಾಡುತ್ತಾ ಶಕಧೂಮ (?) ಬ್ರಾಹ್ಮಣಃ .... .... .... .... **ಏತಾನಿ ಜೀರ್ಣಾನಿ ಪ್ರತ್ಯೇತವ್ಯಾನಿ** ಎಂದರ್ಥಮಾಡಿದ್ದಾನೆ. ಅಲ್ಲದೆ ಇದೇ ಕೌಶಿಕಸೂತ್ರದಲ್ಲಿ, ಶಕಧೂಮದ ಸ್ತುತಿಯಿರುವ ಅ. ವೇ. ೬-೧೨೮ ನೇ ಅಧ್ಯಾಯವನ್ನು ಪರಸ್ಥಳಕ್ಕೆ ಪ್ರಯಾಣಮಾಡುವ ವ್ಯಾಪಾರಿಯು ತನ್ನ ಪೂಜಾ ಕಾಲಗಳಲ್ಲಿ ಪಠಿಸಿ **ಶಕಧೂಮ**ನನ್ನು ಪ್ರಾರ್ಥಿಸಬೇಕೆಂದೂ ತಿಳಿಸಿದೆ. (ಕೌ. ಸೂ. ೫೦-೧೩)

ಈ ರೀತಿ **ಶಕಧೂಮ**ವೆಂಬ ಪದಕ್ಕೆ ಒಂದೊಂದು ಕಡೆ ಒಂದೊಂದರ್ಥವನ್ನು ಹೇಳಿದೆ. ಆದರೆ ಪ್ರಕೃತವಾದ ಋಕ್ಕಿನ ವರ್ಣನೆಯಲ್ಲಿ ಯಾವ ಅರ್ಥವೆಂದು ನಿಷ್ಕೃಷ್ಟವಾಗಿ ಹೇಳಲು ಕಷ್ಟವಾದರೂ ಸಹ ನಮಗೆ ಬೃಹದ್ದೇವತೆಯೇ ಈ ಸಂದರ್ಭದಲ್ಲಿ ಪ್ರಮಾಣವಾಗಿರುತ್ತದೆ. ಆ ಪ್ರಮಾಣದಂತೆ, **ಶಕಶಬ್ದಕ್ಕೆ ಮೇಘವೆಂದೂ, ಧೂಮಶಬ್ದಕ್ಕೆ ಸಲಿಲ**ವೆಂದೂ ಅಥವಾ ಅದರ **ವಾಸ**ವೆಂದೂ ಅರ್ಥಮಾಡಿದರೆ ಈ ಸಂದರ್ಭದಲ್ಲಿ ಅರ್ಥವು ಹೊಂದಿಕೊಳ್ಳುತ್ತದೆ. ಅದೂ ಅಲ್ಲದೆ ಹಿಂದಿನ ಮಂತ್ರಗಳಲ್ಲೂ ಸಹ ವೃಷ್ಟಿಪತನದ ವರ್ಣನೆಯಿರುತ್ತದೆ. ಅಥವಾ ಸಾಯಣರು ವಿವರಿಸಿರುವಂತೆ ಮೇಘದ ಉತ್ಪತ್ತಿಗೆ ಕಾರಣವಾದುದೂ, ಗೋಮಯದ ಜ್ವಾಲೆಯಿಂದ ಉತ್ಪನ್ನವಾದ ದೂಮರೇಖೆಯೆಂದೂ ಹೇಳಬಹುದು.

**ವಿಷೂವತಾ–ವ್ಯಾಪ್ತಿಮತಾ ।** ವ್ಯಾಪಿಸಿರುವ ಧೂಮರೇಖೆಯಿಂದ ಎಂದರ್ಥ.

**ಉಕ್ಷಾಣಂ—ಫಲಸ್ಯ ಸೇಕ್ತಾರಂ**–ಇಷ್ಟಾರ್ಥಗಳನ್ನು ಸುರಿಸಿಕೊಡುವವನು ಎಂದರ್ಥ. **ಸೇಚನ** ಎಂದರೆ ಸುರಿಸು ಎಂಬರ್ಥವನ್ನು ಕೊಡುವ **ಉಕ್ಷ್** ಧಾತುವಿನಿಂದ ಈ ಪದವು ನಿಷ್ಪನ್ನವಾಗಿದೆ. ಭಕ್ತರಿಗೆ ಇಷ್ಟಾರ್ಥವನ್ನು ಕೊಡುವ ದೇವತೆಯೆಂದರ್ಥ. **ಉಕ್ಷನ್** ಶಬ್ದವನ್ನು ನಿರುಕ್ತಕಾರರು **ಮಹನ್ನಾಮ**ಗಳಲ್ಲಿ ಪಠಿಸಿದ್ದಾರೆ. (ನಿ. ೩-೩) ಅಲ್ಲದೇ ಋಕ್ಸಂಹಿತೆಯು,

**ವೃಷಾಕಪಾಯಿ ರೇವತಿ ಸುಪುತ್ರ ಆದು ಸುಸ್ನುಷೇ ।**

**ಘಸತ್ತ ಇಂದ್ರ ಉಕ್ಷಣಃ ಪ್ರಿಯಂ ಕಾಚಿತ್ಕರಂ ಹವಿರ್ವಿಶ್ವಸ್ಮಾದಿಂದ್ರ ಉತ್ತರಃ ।**

(ಋ. ಸಂ. ೧೦-೮೬-೧೩)

ಎಂಬ ಋಕ್ಕನ್ನುದಹರಿಸಿ ಅವಲ್ಲಿರುವ **ಉಕ್ಷಣ**ಶಬ್ದಕ್ಕೆ ಅರ್ಥವನ್ನು ಹೇಳುವಾಗ **ಉಕ್ಷಾ ಉಕ್ಷತೇರ್ವೃದ್ಧಿಕರ್ಮಣಃ ಉಕ್ಷಂತ್ಯುದಕೇನೇತಿ ವಾ** (ನಿ. ೧೨-೯) ವೃದ್ಧಿಯಾಗು ಎಂಬರ್ಥವನ್ನು ಕೊಡುವ **ಉಕ್ಷ್** ಧಾತುವಿನಿಂದ ನಿಷ್ಪನ್ನವಾಗಿರುವುದರಿಂದ ಉದಕದೊಂದಿಗೆ ವೃದ್ಧಿಯಾಗ ತಕ್ಕ ಎಂಬರ್ಥವನ್ನು ಆ ಸಂದರ್ಭದಲ್ಲಿ ಹೇಳಿರುತ್ತಾರೆ. ಸಾಧಾರಣವಾಗಿ **ಉಕ್ಷಶಬ್ದವು ಶಕ್ತಿ, ಸಾಮರ್ಥ್ಯ** ಎಂಬರ್ಥಗಳಲ್ಲಿಯೂ ಉಪಯೋಗಿಸಲ್ಪಟ್ಟಿದೆ. ಎಂದರೆ, 'ಸೇಚನದ ಸಾಮರ್ಥ್ಯದಲ್ಲಿ ತಾತ್ಪರ್ಯವುಳ್ಳದ್ದಾಗುತ್ತದೆ.

**ತೇ ಜಜ್ಞಿರೇ ದಿವ ಋಷ್ವಾಸ ಉಕ್ಷಣೋ ರುದ್ರಸ್ಯ ಮರ್ಯಾ ಅಸುರಾ ಅರೇಪಸಃ ।**
**ಪಾವಕಾಸಃ ಶುಚಯಃ ಸೂರ್ಯಾ ಇವ ಸತ್ವಾನೋ ನ ದ್ರಪ್ಸಿನೋ ಘೋರವರ್ಪಸಃ ॥**

(ಋ. ಸಂ. ೧-೬೪-೨)

**ಯಜ್ಞಸ್ಯ ಕೇತುಂ ಪ್ರಥಮಂ ಪುರೋಹಿತಂ ಹವಿಷ್ಮಂತ ಈಳತೇ ಸಪ್ತ ವಾಜಿನಂ ।**
**ಶೃಣ್ವಂತಮಗ್ನಿಂ ಘೃತಪೃಷ್ಠಮುಕ್ಷಣಂ ಪೃಣಂತಂ ದೇವಂ ಪೃಣತೇ ಸುವೀರ್ಯಂ ॥**
(ಋ. ಸಂ. ೧೦-೧೨೨-೪)

ಇತ್ಯಾದಿ ಋಕ್ಕುಗಳಲ್ಲೆಲ್ಲಾ **ಉಕ್ಷಶಬ್ದಕ್ಕೆ ಸೇಚನ** ಅಥವಾ **ಸೇಚನಸಾಮರ್ಥ್ಯ** ಎಂದು ಅದರ ಶಕ್ತಿಯನ್ನು ಸೂಚಿಸುತ್ತದೆ. ಪ್ರಕೃತವಾದ ಋಕ್ಕಿನಲ್ಲಿಯೂ ಸಹ ಸೇಚನ ಸಾಮರ್ಥ್ಯವುಳ್ಳ, ಎಂದರೆ ಇಷ್ಟಾರ್ಥಗಳನ್ನು ಒದಗಿಸಿ ಕೊಡುವ ಸಾಮರ್ಥ್ಯವುಳ್ಳ ಸೋಮವೆಂದು ತಾತ್ಪರ್ಯ.

**ಪೃಶ್ನಿಂ—ಪೃಶ್ನಿಃ ವಲ್ಲೀರೂಪಃ ಸೋಮಃ ।** ಸೋಮಕ್ಕೆ ವಿಶೇಷಣವಾಗಿದೆ. ಸಾಧಾರಣವಾಗಿ **ಪೃಶ್ನಿ** ಶಬ್ದವು ಆದಿತ್ಯನಿಗೆ ಪರ್ಯಾಯವಾಗಿ ಉಪಯೋಗಿಸಲ್ಪಡುತ್ತದೆ. ನಿರುಕ್ತಕಾರರು ಈ ಪದವನ್ನು **ದ್ಯುನಾಮ**ಗಳಲ್ಲಿಯೂ ಆದಿತ್ಯನಾಮಗಳಲ್ಲಿಯೂ ಪಠಿಸಿದ್ದಾರೆ. (ನಿ. ೧-೧೩) ಅನಂತರ, ಆದಿತ್ಯಪರವಾಗಿ ಈ ಪದದ ನಿರ್ವಚನವನ್ನು ತಿಳಿಸುತ್ತಾ ಈ ರೀತಿ ವಿವರಿಸಿದ್ದಾರೆ.

**ಪೃಶ್ನಿರಾದಿತ್ಯೋ ಭವತಿ । ಪ್ರಾಶ್ನುತ ಏನಂ ವರ್ಣ ಇತಿ ನೈರುಕ್ತಾಃ ಸಂಸ್ಪ್ರಷ್ಟಾ ರಸಾನ್ ।**
**ಸಂಸ್ಪ್ರಷ್ಟಾ ಭಾಸಂ ಜ್ಯೋತಿಷಾಂ । ಸಂಸ್ಪೃಷ್ಟೋ ಭಾಸೇತಿ ವಾ ।**
(ನಿ. ೨-೧೪)

ಪ್ರಭೆಯಿಂದ ವ್ಯಾಪ್ತವಾಗಿರುವುದರಿಂದ ಆದಿತ್ಯನಿಗೆ **ಪೃಶ್ನಿ**ಯೆಂಬ ಹೆಸರೆಂದು ಪ್ರಾಚೀನ ನಿರುಕ್ತಕಾರರ ಮತ। ಸ್ರವಿಸುವ ರಸಗಳನ್ನು ಒಂದುಗೂಡಿಸುತ್ತದಾದ್ದರಿಂದಲೂ, ತೇಜೋಮಂಡಲಗಳ ಪ್ರಭೆಗಳನ್ನೆಲ್ಲಾ ಒಟ್ಟುಗೂಡಿಸುತ್ತದಾದ್ದರಿಂದಲೂ ಈ ವಿಶೇಷಣವು ಆದಿತ್ಯನ ಸ್ವರೂಪವನ್ನು ವರ್ಣಿಸುತ್ತದೆಯೆಂದು ಯಾಸ್ಕರ ವಿವರಣೆಯಿದೆ.

**ಅಥ ದ್ಯೌರಾವಿಷ್ಟಾ ಜ್ಯೋತಿರ್ಭಿಃ ಪುಣ್ಯಕೃದ್ಭಿಶ್ಚ ।**
(ನಿ. ೨-೧೪)

ತೇಜಸ್ಸುಗಳಿಂದಲೂ, ಸುಕೃತಿಗಳಿಂದಲೂ ಕೂಡಿರುವುದರಿಂದ ದ್ಯುಲೋಕಕ್ಕೂ ಪೃಶ್ನಿಯೆಂಬ ವಿಶೇಷಣವಿದೆಯೆಂದು ನಿರುಕ್ತಕಾರರು ಈ ಪದದ ಅರ್ಥವನ್ನು ತಿಳಿಸಿದ್ದಾರೆ. ಪ್ರಕೃತವಾದ ಋಕ್ಕಿನಲ್ಲಿಯೂ ಸಹ **ಪ್ರಾಶ್ನುತೇ ತೇನ ಫಲಂ** ಇತ್ಯಾದಿಯಾಗಿ ಇದೇ ಅರ್ಥವು ಸೋಮನ ಸ್ವರೂಪವನ್ನು ತಿಳಿಸಿ ಅವನಿಗೆ ವಿಶೇಷಣವಾಗಿದೆ.

**ವೀರಾಃ—ವಿವಿಧೇರಣಕುಶಲಾ ಋತ್ವಿಜಃ ।** ನಾನಾವಿಧವಾದ ಯಜ್ಞಾದಿಕಾರ್ಯಗಳಲ್ಲಿ ಪ್ರವೃತ್ತಿಯುಳ್ಳ ಋತ್ವಿಕ್ಕುಗಳಿಗೆ ವಿಶೇಷಣವಾಗಿದೆ. ನಿರುಕ್ತಕಾರರು ಈ ಪದದ ನಿರ್ವಚನವನ್ನು ತೋರಿಸುತ್ತಾ,

**ವೀರವಂತಃ । ಕಲ್ಯಾಣವೀರಾ ವಾ । ವೀರೋ ವೀರಯತ್ಯಮಿತ್ರಾನ್ । ವೇತೇರ್ವಾಸ್ಯಾದ್ಗತಿ-**
**ಕರ್ಮಣೋ ವೀರಯತೇರ್ವಾ ॥**
(ನಿ. ೧-೭)

ಶತ್ರುಗಳನ್ನು ಚದುರಿಸಿ ಅಟ್ಟುತ್ತಾರಾದ್ದರಿಂದ ಈ ವಿಶೇಷಣವಿದೆ. ಅಥವಾ ಚಲನಾರ್ಥಕವಾದ **ವೀ** ಧಾತುವಿನಿಂದಾಗಲಿ ಅಥವಾ ಶಕ್ತ್ಯರ್ಥಕವಾದ **ವಿರ್** ಧಾತುವಿನಿಂದಾಗಲಿ ಈ ಪದವು ನಿಷ್ಪನ್ನವಾಗಿರಬಹುದು ಎಂದು ತಿಳಿಸಿದ್ದಾರೆ ಋತ್ವಿಕ್ಕುಗಳಿಗೂ ಈ ಸಾಮರ್ಥ್ಯವಿರುವುದರಿಂದ ಪ್ರಕೃತವಾದ ಋಕ್ಕಿನಲ್ಲಿ ಅವರಿಗೆ ವಿಶೇಷಣವಾಗಿದೆ.

ವ್ಯಾಕರಣಪ್ರಕ್ರಿಯಾ

**ಶಕಮಯಮ್**—ವಿಕಾರಾರ್ಥದಲ್ಲಿ ಮಯಟ್ ಪ್ರತ್ಯಯ. ಪ್ರತ್ಯಯದ ಆದ್ಯುದಾತ್ತಸ್ವರ ಬರುತ್ತದೆ. ದ್ವಿತೀಯಾ ಏಕವಚನಾಂತರೂಪ.

**ಧೂಮಮ್**—ಧೂಞ್ ಕಂಪನೇ. ಧಾತು ; **ಇಷಿಯುಧೀಂಧಿ**—(ಉ. ಸೂ. ೧-೧೪೨) ಎಂಬುದರಿಂದ ಮಕ್ ಪ್ರತ್ಯಯ. ಪ್ರತ್ಯಯಸ್ವರದಿಂದ ಅಂತೋದಾತ್ತವಾಗುತ್ತದೆ.

**ಅಪಶ್ಯಮ್**—ದೃಶಿರ್ ಪ್ರೇಕ್ಷಣೇ. ಧಾತು ಲಙ್ ಉತ್ತಮಪುರುಷ ಏಕವಚನಾಂತರೂಪ ತಿಙಂತನಿಘಾತ ಸ್ವರ ಬರುತ್ತದೆ.

**ವಿಷೂವತಾ**—ವಿಷ್‌ಲೃ ವ್ಯಾಪ್ತೌ ಧಾತು. ಇದಕ್ಕೆ ಔಣಾದಿಕ ಕುಪ್ರತ್ಯಯ. ವಿಷುಃ ಅಸ್ಯ ಅಸ್ತಿ ಇತಿ ವಿಷೂವಾನ್. ಮತುಪ್ ಪ್ರತ್ಯಯ. **ಹ್ರಸ್ವನುಡ್ಭ್ಯಾಂಮತುಪ್** (ಪಾ. ಸೂ. ೬-೧-೧೭೬) ಎಂಬುದರಿಂದ ಮತುಪ್ ಉದಾತ್ತವಾಗುತ್ತದೆ. **ಅನ್ಯೇಷಾಮಪಿ ದೃಶ್ಯತೇ** (ಪಾ. ಸೂ. ೬-೩-೧೩೭) ಎಂಬುದರಿಂದ ಪೂರ್ವಪದಕ್ಕೆ ದೀರ್ಘ. ವ್ಯತ್ಯಯದಿಂದ ಮತುಪಿನ ಮಕಾರಕ್ಕೆ ವತ್ವ. ತೃತೀಯಾ ಏಕವಚನಾಂತರೂಪ.

**ಏನಾ**—**ಸುಪಾಂ ಸುಲುಕ್**-(ಪಾ ಸೂ ೭-೧-೩೯) ಎಂಬುದರಿಂದ ತೃತೀಯೈಕವಚನ ಪರವಾದಾಗ ಪೂರ್ವಸವರ್ಣದೀರ್ಘ.

**ಪೃಶ್ನಿಮ್**—ಸ್ಪೃಶ ಸಂಸ್ಪರ್ಶನೇ. ಧಾತು. **ಘೃಣಿ ಪೃಶ್ನಿ ಪಾರ್ಷ್ಣಿ**—(ಪಾ. ಸೂ. ೪-೫೨) ಎಂಬುದರಿಂದ ನಿಪಾತಿತವಾಗಿದೆ.

**ಅಪಚಂತ**—ಡುಪಚಿಷ್ ಪಾಕೇ. ಧಾತು. ಇಲ್ಲಿ ಕ್ರಿಯಾಸಾಮಾನ್ಯದಲ್ಲಿ ಪ್ರಯುಕ್ತವಾಗಿದೆ. ಲಙ್ ಪ್ರಥಮಪುರುಷ ಬಹುವಚನಾಂತರೂಪ ತಿಙಂತ ನಿಘಾತಸ್ವರ ಬರುತ್ತದೆ.

**ಆಸನ್**—ಅಸ ಭುವಿ. ಧಾತು. ಲಙ್ ಪ್ರಥಮಪುರುಷ **ಬಹುವಚನಾಂತರೂಪ. ಅತಿಙಂತದ ಪರದಲ್ಲಿ** ರುವುದರಿಂದ ನಿಘಾತಸ್ವರ ಬರುತ್ತದೆ. ॥ ೪೩ ॥

ಸಂಹಿತಾಪಾಠಃ

ತ್ರಯಃ ಕೇಶಿನ ಋತುಥಾ ವಿ ಚಕ್ಷತೇ ಸಂವತ್ಸರೇ ವಪತ ಏಕ ಏಷಾಂ ।
ವಿಶ್ವಮೇಕೋ ಅಭಿ ಚಷ್ಟೇ ಶಚೀಭಿರ್ಧ್ರಾಜಿರೇಕಸ್ಯ ದದೃಶೇ ನ ರೂಪಂ ॥
॥ ೪೪ ॥

ಪದಪಾಠಃ

ತ್ರಯಃ । ಕೇಶಿನಃ । ಋತುऽಥಾ । ವಿ । ಚಕ್ಷತೇ । ಸಂವತ್ಸರೇ । ವಪತೇ । ಏಕಃ । ಏಷಾಂ । ವಿಶ್ವಂ । ಏಕಃ । ಅಭಿ । ಚಷ್ಟೇ । ಶಚೀಭಿಃ । ಧ್ರಾಜಿಃ । ಏಕಸ್ಯ । ದದೃಶೇ । ನ । ರೂಪಂ ॥ ೪೪ ॥

ಸಾಯಣಭಾಷ್ಯಂ

ಕೇಶಸ್ಥಾನೀಯಪ್ರಕೃಷ್ಟರಶ್ಮಿಯುಕ್ತಾಸ್ತ್ರಯೋಽಗ್ನ್ಯಾದಿತ್ಯವಾಯವಃ । ತೇ ಚತುರ್ಥಾ ಕಾಲೇ ಕಾಲೇ ವಿ ಚಕ್ಷತೇ । ವಿವಿಧಲಕ್ಷಣಾಂ ಭೂಮಿಂ ಪಶ್ಯಂತಿ । ತೇಷಾಂ ಪೃಥಕ್ಪೃಥಕ್ಕಾರ್ಯಮಾಹ । ಏಷಾಂ ಮಧ್ಯ ಏಕೋಽಗ್ನಿಃ ಸಂವತ್ಸರೇಽತೀತೇ ಸತಿ ಸಂವತ್ಸರಂ ವಪತೇ । ದಾಹೇನ ಕೇಶಸ್ಥಾನೀಯೌಷಧಿವನಸ್ಪತ್ಯಾದಿಕೇ ಛೇದನಂ ನಾಪಿತಕಾರ್ಯಂ ಕರೋತಿ । ಏಕ ಆಸ್ಯ ಆದಿತ್ಯೋ ವಿಶ್ವಂ ಸರ್ವಂ ಜಗಚ್ಛಚೀಭಿಃ ಸ್ವಕೀಯೈಃ ಪ್ರಕಾಶವೃಷ್ಟ್ಯಾದಿಕರ್ಮಭಿರಭಿ ಚಷ್ಟೇ । ಸರ್ವತಃ ಪಶ್ಯತಿ । ಏಕಸ್ಯ ವಾಯೋರ್ಧ್ರಾಜಿರ್ಗತಿರ್ದದೃಶೇ । ದೃಶ್ಯತೇ ಸರ್ವೈಃ । ನ ರೂಪಂ । ಅಪ್ರತ್ಯಕ್ಷತ್ವಾತ್ ಸ್ಪರ್ಶಶಬ್ದಧೃತಿಕಂಪಲಿಂಗೈರ್ಗಮ್ಯತ ಇತಿ ಹಿ ನ್ಯಾಯವಿದೋ ವದಂತಿ । ಅಯಮಪಿ ಮಂತ್ರೋ ಯಾಸ್ಕೇನೈವ ವ್ಯಾಖ್ಯಾತಃ । ತ್ರಯಃ ಕೇಶಿನ ಋತುಥಾ ವಿಚಕ್ಷತೇ ಕಾಲೇ ಕಾಲೇಽಭಿವಿಪಶ್ಯಂತಿ ಸಂವತ್ಸರೇ ವಪತ ಏಕ ಏಷಾಮಿತ್ಯಗ್ನಿಃ ಪೃಥಿವೀಂ ದಹತಿ ಸರ್ವಮೇಕೋಽಭಿಪಶ್ಯತಿ ಕರ್ಮಭಿರಾದಿತ್ಯೋ ಗತಿರೇಕಸ್ಯ ದೃಶ್ಯತೇ ನ ರೂಪಂ ಮಧ್ಯಮಸ್ಯ । ನಿ. ೧೨-೨೭ । ಇತಿ ॥

ಪ್ರತಿಪದಾರ್ಥ

**ಕೇಶಿನಃ**—ಕೇಶದಂತಿರತಕ್ಕ ರಶ್ಮಿಗಳೊಡಗೂಡಿದ । **ತ್ರಯಃ**—ಅಗ್ನಿ, ಆದಿತ್ಯ ಮತ್ತು ವಾಯುಗಳು । **ಋತುಥಾ**—ಆಯಾಕಾಲಕ್ಕೆ ಸರಿಯಾಗಿ । **ವಿ ಚಕ್ಷತೇ**—ವಿಶೇಷರೀತಿಯಲ್ಲಿ (ಭೂಮಿಯನ್ನು) ನೋಡುತ್ತಿರುತ್ತಾರೆ। **ಏಷಾಂ**—ಇವರ ನಡುವೆ । **ಏಕಃ**—ಅಗ್ನಿಯು । **ಸಂವತ್ಸರೇ**—ಸಂವತ್ಸರವು ಕಳೆಯಲು । **ವಪತೇ**—(ಓಷಧ್ಯಾದಿಗಳನ್ನು) ಛೇದಿಸುತ್ತಾನೆ. **ಏಕಃ**—ಇನ್ನೊಬ್ಬನಾದ ಆದಿತ್ಯನು । **ವಿಶ್ವಂ**—ಸಕಲಜಗತ್ತನ್ನೂ । **ಶಚೀಭಿಃ**—ಪ್ರಕಾಶನಾದಿಕರ್ಮಗಳಿಂದ । **ಅಭಿ ಚಷ್ಟೇ**—ಸರ್ವತ್ರ ನೋಡುತ್ತಾನೆ । **ಏಕಸ್ಯ**—ಇನ್ನೊಬ್ಬನಾದ ವಾಯುವಿನ । **ಧ್ರಾಜಿಃ**—ಗತಿಯು । **ದದೃಶೇ**—ಎಲ್ಲರಿಂದಲೂ ನೋಡಲ್ಪಡುತ್ತದೆ (ತಿಳಿಯಲ್ಪಡುತ್ತದೆ) । **ರೂಪಂ**—(ಅವನ) ರೂಪವಾದರೋ । **ನ**—ಗೋಚರಕ್ಕೆ ಸಿಕ್ಕುವುದಿಲ್ಲ.

॥ ಭಾವಾರ್ಥ ॥

ಕೇಶದಂತಿರತಕ್ಕ ರಶ್ಮಿಗಳೊಡಗೂಡಿದ ಅಗ್ನಿ, ಆದಿತ್ಯ ಮತ್ತು ವಾಯುಗಳು ಆಯಾ ಕಾಲಕ್ಕೆ ಸರಿಯಾಗಿ ವಿಶೇಷರೀತಿಯಲ್ಲಿ ಭೂಮಿಯನ್ನು ನೋಡುತ್ತಿರುತ್ತಾರೆ. ಇವರಲ್ಲಿ ಅಗ್ನಿಯು ಸಂವತ್ಸರಾತೀತವಾದನಂತರ ಓಷಧ್ಯಾದಿಗಳನ್ನು ಛೇದಿಸುತ್ತಾನೆ. ಇನ್ನೊಬ್ಬನಾದ ಆದಿತ್ಯನು ಸಕಲ ಜಗತ್ತನ್ನೂ ತನ್ನ ಪ್ರಕಾಶನಾದಿ ಕರ್ಮಗಳಿಂದ ಸರ್ವತ್ರ ನೋಡುತ್ತಾನೆ. ಇನ್ನೊಬ್ಬನಾದ ವಾಯುವಿನ ಚಲನವಲನಾದಿಗಳು ಮಾತ್ರ ಕಾಣುತ್ತವೆ. ಅವನ ರೂಪವು ಕಾಣಿಸುವುದಿಲ್ಲ.

## English Translation

The three, with beautiful tresses, look down in their several seasons upon the earth ; one of them, when the year is eneed, shears (the ground); one, by his acts, overlooks the universe ; the course of one is visible, though not his form.

### ವಿಶೇಷವಿಷಯಗಳು

**ತ್ರಯಃ ಕೇಶಿನಃ—ಕೇಶಸ್ಥಾನೀಯಪ್ರಕೃಷ್ಟರಶ್ಮಿಯುಕ್ತಾಃ ।** ಕೇಶಸ್ಥಾನಗಳಲ್ಲಿ ಅತಿಶಯವಾದ ರಶ್ಮಿಗಳುಳ್ಳ ವರೆಂದು ಅಗ್ನಿ, ವಾಯು ಮತ್ತು ಆದಿತ್ಯ ಈ ಮೂವರಿಗೂ ಸಮಾನವಾದ ವಿಶೇಷಣವಾಗಿದೆ. ಇದೇ ವರ್ಣನೆಯನ್ನು ಬೃಹದ್ದೇವತೆಯಲ್ಲಿಯೂ ತಿಳಿಸುತ್ತಾ ಅಗ್ನಿವಾಯ್ವಾದಿತ್ಯರ ವಿಶೇಷಸ್ವರೂಪವನ್ನು ತಿಳಿಸಿದೆ.

**ಅರ್ಚಿಭಿಃ ಕೇಶ್ಯಯಂ ತ್ವಗ್ನಿರ್ವಿದ್ಯುದ್ಭಿಶ್ಚೈವ ಮಧ್ಯಮಃ ।**
**ನಿಪಾತಮಾತ್ರೇ ಕಥ್ಯಂತೇ ತಥಾಗ್ನೇಯಾನಿ ಕಾನಿಚಿತ್ ।**

(ಬೃ ದೇ ೧-೯೪)

ಪಾರ್ಥಿವಾಗ್ನಿಯ ಜ್ವಾಲೆಯು ಕೇಶಗಳಂತಿರುವುದರಿಂದ ಅಗ್ನಿಗೆ **ಕೇಶಿಯೆಂದು** ಹೆಸರು. ಅಂತರಿಕ್ಷಸ್ಥನಾದ ವಾಯುವು ವಿದ್ಯುದ್ರೂಪವಾದ ಪ್ರಭೆಗಳಿಂದಲೂ, ದ್ಯುಲೋಕಸ್ಥನಾದ ಆದಿತ್ಯನು ತನ್ನ ರಶ್ಮಿಗಳಿಂದ ಪ್ರಕಾಶಿಸುತ್ತಿರುವುದರಿಂದಲೂ, ಇವೆಲ್ಲವೂ ಅವರವರ ಕೇಶಸ್ಥಾನಗಳಲ್ಲಿದ್ದು ಅವರ ಪ್ರಭಾವವನ್ನು ವೃದ್ಧಿಮಾಡುತ್ತಿರುವುದರಿಂದಲೂ ಅಗ್ನಿವಾಯ್ವಾದಿತ್ಯರಿಗೆ **ಕೇಶಿಗಳೆಂದು** ಹೆಸರು.

**ಏತೇಷಾಂ ತು ಪೃಥಕ್ತ್ವೇನ ತ್ರಯಾಣಾಂ ಕೇಶಿನಾಮಿಹ ।**
**ಸಂಲಕ್ಷ್ಯಂತೇ ಪ್ರಕ್ರಿಯಾಸು ತ್ರಯಃ ಕೇಶಿನ ಇತ್ಯೃಚಿ ॥**

(ಬೃ. ದೇ. ೧-೯೫)

ಈ ಮೂರು ವಿಧವಾದ ಕೇಶಿಗಳ ಸ್ವರೂಪಗಳು ಬೇರೆಬೇರೆಯಾಗಿರುವುದರಿಂದ ಅವರವರ ಪ್ರಕ್ರಿಯಾ ಭೇದಗಳನ್ನೂ ಸಹ "ತ್ರಯಃ ಕೇಶಿನಃ" ಎಂಬ ಋಕ್ಕಿನಲ್ಲಿ (೧-೧೬೪-೪೪) ಹೇಳಿದೆ. ಆದರೆ, ಅವರ ಉತ್ಪತ್ತಿ, ಅವರ ಕ್ರಿಯಾವ್ಯಾಪ್ತಿ ಇವುಗಳನ್ನು ವಿಭಾಗಿಸಿ ಇದಮಿತ್ಥಂ (ಇದು ಹೀಗೆಯೇ ಸರಿ) ಎಂದು ನಿಷ್ಕೃಷ್ಟವಾಗಿ ಹೇಳಲು ಸಾಧ್ಯವಿಲ್ಲ. ಎಲ್ಲರೂ ಸರ್ವವ್ಯಾಪ್ತಿಗಳಾದುದರಿಂದ ಸ್ಥಾನವಿಭಾಗವೂ ಸಾಧ್ಯವಿಲ್ಲ ಎಂಬಂಶವನ್ನು ತಿಳಿಸುತ್ತಾ ಬೃಹದ್ದೇವತೆಯಲ್ಲಿ,

**ನ ಚೈವೈಷಾಂ ಪ್ರಸೂತಿರ್ವಾ ವಿಭೂತಿಸ್ಥಾನಜನ್ಮ ವಾ ।**
**ನಿರ್ವಕ್ತುಂ ಶಕ್ಯಮೇತೈರ್ಹಿ ಕೃತ್ಸ್ನಂ ವ್ಯಾಪ್ತಮಿದಂ ಜಗತ್ ॥**

(ಬೃ. ದೇ. ೧-೯೬)

ಇವರ ಪ್ರಸೂತಿಯಾಗಲಿ, ಪ್ರಭಾವವಾಗಲಿ, ಸ್ಥಾನಭೇದಗಳಾಗಲಿ ನಿಷ್ಕೃಷ್ಟವಾಗಿ ಹೇಳಲ್ಪಡತಕ್ಕವಲ್ಲ. ಸಮಸ್ತ ಜಗತ್ತೂ ಸಹ ಇವರಿಂದ ವ್ಯಾಪ್ತವಾಗಿದೆ. ಇವರ ಸರ್ವವ್ಯಾಪಕತೆಯನ್ನು ಋಕ್ಸಂಹಿತಾವಾಕ್ಯಗಳಲ್ಲೂ ವರ್ಣಿಸಿ ಇವರ ಪ್ರಭಾವವೂ, ಕ್ರಿಯೆಗಳೂ ಸ್ಥಾನದ ದೃಷ್ಟಿಯಿಂದಾಗಲಿ, ಕಾಲದೃಷ್ಟಿಯಿಂದಾಗಲಿ ಪರಿಮಿತವಾದುದಲ್ಲವೆಂದು

ತಿಳಿಸಿದೆ. (ಇದಕ್ಕೆ ಆಧಾರಗಳನ್ನು ಮುಂದೆ ಕೊಡಲಾಗುತ್ತದೆ.) ಮೊದಲು ಇವರಿಗೆ **ಕೇಶಿ** ಎಂಬ ವಿಶೇಷಣವು ಪ್ರಸಿದ್ಧವಾಗಿರಲು ಕಾರಣವೇನೆಂದು ತಿಳಿಯಲು ನಿರುಕ್ತದ ನಿರ್ವಚನವನ್ನು ನೋಡಬೇಕಾಗುತ್ತದೆ. ನಿರುಕ್ತ ಕಾರರು ಈ ಪದದ ನಿರ್ವಚನವನ್ನೂ, ಈ ವಿಶೇಷಣವು ಅಗ್ನ್ಯಾದಿಗಳ ಯಾವ ವಿಶೇಷಗುಣಗಳನ್ನೂ ತಿಳಿಸುತ್ತದೆ ಎಂಬುದನ್ನೂ ಈ ರೀತಿ ವಿವರಿಸಿದ್ದಾರೆ.

**ಕೇಶೀ—ಕೇಶೀ ಕೇಶಾ ರಶ್ಮಯಸ್ತೈಸ್ತದ್ವಾನ್, ಕಾಶನಾದ್ವಾ, ಪ್ರಕಾಶನಾದ್ವಾ ।**

(ನಿ. ೧೨-೨೫)

**ಕೇಶವುಳ್ಳವನು ಕೇಶಿ.** ಕೇಶವೆಂದರೆ ರಶ್ಮಿಗಳೆಂದರ್ಥ ರಶ್ಮಿಯುಕ್ತನಾದವನಿಗೆ **ಕೇಶಿಯೆಂಬ** ಪರ್ಯಾಯನಾಮವಿದೆ. ಪ್ರಕಾಶವನ್ನುಂಟುಮಾಡು ಎಂಬರ್ಥವನ್ನು ಕೊಡುವ **ಕಾಶ್** ಧಾತುವಿನಿಂದಾಗಲಿ ಅಥವಾ ತಾನೇ ಅತ್ಯಂತ ಪ್ರಕಾಶ ಮಾನವಾಗಿದೆ ಎಂದು ತೋರಿಸುವ **ಪ್ರ+ಕಾಶ್** ಎಂಬುದರಿಂದಾಗಲಿ ಈ ಪದವು ನಿಷ್ಪನ್ನವಾಗಬಹುದು, ಎಂದು ಈ ಪದದ ನಿರ್ವಚನವನ್ನು ತೋರಿಸಿ ಅನಂತರ ಆದಿತ್ಯಪರವಾದ ಈ ಪದದ ಪ್ರಯೋಗಕ್ಕೆ ಋಕ್ಸಂಹಿತಾವಾಕ್ಯವನ್ನುದಹ ರಿಸಿದ್ದಾರೆ.

**ಕೇಶ್ಯಗ್ನಿಂ ಕೇಶೀ ವಿಷಂ ಕೇಶೀ ಬಿಭರ್ತಿ ರೋದಸೀ ।**
**ಕೇಶೀ ವಿಶ್ವಂ ಸ್ವರ್ದೃಶೇ ಕೇಶೀದಂ ಜ್ಯೋತಿರುಚ್ಯತೇ ॥**

(ಋ. ಸಂ. ೧೦-೧೩೬-೧)

ಕೇಶಿಯು, ಎಂದರೆ ಪ್ರಕಾಶಮಾನನಾದ ಆದಿತ್ಯನು ಅಗ್ನಿಯನ್ನೂ, ಉದಕವನ್ನೂ ಧರಿಸಿದ್ದಾನೆ. (ವಿಷವು ಇಲ್ಲಿ ಉದಕಪರ್ಯಾಯವಾದ ಪದವು). ಅವನೇ ದ್ಯಾವಾಪೃಥಿವಿಗಳನ್ನೂ ಧರಿಸಿದ್ದಾನೆ. ಸಕಲಜಗತ್ತೂ ಅವನ ಪ್ರಭಾಮಯ ವಾದ ಸ್ವರೂಪವನ್ನು ನೋಡುತ್ತದೆ. ಇಂತಹ ಜ್ಯೋತೀರೂಪವಾದ ಮೂರ್ತಿಗೆ ಕೇಶಿಯೆಂಬ ಹೆಸರು ಎಂದು ಆದಿತ್ಯನ ಸ್ವರೂಪವರ್ಣನೆಗೆ ಋಕ್ಕನ್ನುದಹರಿಸಿ ಅನಂತರ ಪ್ರಕೃತವಾದ ಋಕ್ಕಿನಲ್ಲಿ ಸಹ ಅಗ್ನ್ಯಾದಿಗಳ ಸ್ವರೂಪವು ಈ ವಿಶೇಷಣದಿಂದ ಹೇಗೆ ವರ್ಣಿತವಾಗಿದೆಯೆಂದೂ ತಿಳಿಸಿದ್ದಾರೆ. ಪ್ರಕೃತವಾದ ಋಕ್ಕಿಗೆ ನಿರುಕ್ತಕಾರರ ನಿರ್ವ ಚನವು ಈ ರೀತಿ ಇದೆ.

**ತ್ರಯಃ ಕೇಶಿನಃ ಋತುಥಾ ವಿಚಕ್ಷತೇ ಕಾಲೇಕಾಲೇಽಭಿವಿಪಶ್ಯಂತಿ ಸಂವತ್ಸರೇ ವಪತ ಏಕ ಏಷಾಮಿತ್ಯಗ್ನಿಃ ಪೃಥಿವೀಂ ದಹತಿ ಸರ್ವಮೇಕೋಽಭಿವಿಪಶ್ಯತಿ ಕರ್ಮಭಿರಾದಿತ್ಯೋ ಗತಿ-ರೇಕಸ್ಯ ದೃಶ್ಯತೇ ನ ರೂಪಂ ಮಧ್ಯಮಸ್ಯ ।**

(ನಿ. ೧೨-೨೭)

ಇದರ ಅರ್ಥವು ಮೇಲೆ ಭಾವಾರ್ಥದಲ್ಲಿ ವಿವರಿಸಿದಂತೆಯೇ ಇರುತ್ತದೆ. ಈ ಋಕ್ಕಿನಲ್ಲಿ ಅಗ್ನಿ, ವಾಯು, ಆದಿತ್ಯ ಎಂಬ ಮೂರು ದೇವತೆಗಳನ್ನು ನಿರ್ದೇಶಿಸಿದ್ದರೂ ಸಹ ಇವರ ಕ್ರಿಯೆಗಳು ಆಯಾ ಲೋಕಕ್ಕೆ ಮಾತ್ರ ಪರಿಮಿತವಾದುವಲ್ಲ. ಇವರ ಸ್ಥಾನವಿಭಾಗವನ್ನು ತೋರಿಸುವಾಗ ಹಿಂದೆ ನಿರುಕ್ತಕಾರರು ಇವರ ವ್ಯಾಪ್ತಿಯ ಪರಿಮಿತಿಯನ್ನು ತೋರಿಸಿದ್ದಾರೆ.

**ಅಗ್ನಿಃ ಪೃಥಿವೀಸ್ಥಾನೋ ವಾಯುರ್ವೇಂದ್ರೋ ವಾಂತರಿಕ್ಷಸ್ಥಾನಃ ಸೂರ್ಯೋ ದ್ಯುಸ್ಥಾನಃ ।**

(ನಿ. ೭-೫)

ಅಗ್ನಿಯಸ್ಥಾನವು ಪೃಥ್ವಿಯೆಂದೂ, ವಾಯು (ಅಥವಾ ಇಂದ್ರನ) ವಿನ ಸ್ಥಾನವು ಅಂತರಿಕ್ಷವೆಂದೂ, ಆದಿತ್ಯನ ಸ್ಥಾನವು ದ್ಯುಲೋಕವೆಂದೂ ತಿಳಿಸಿದ್ದಾರೆ. ಈ ಸ್ಥಾನದ ಪರಿಮಿತಿಯಿಲ್ಲ. **ವಿಶ್ವಮೇಕೋ ಅಭಿ ಚಷ್ಟೇ। ಸರ್ವಮೇಕೋಽಭಿವಿಪಶ್ಯತಿ** ಆದಿತ್ಯನು ಸಕಲಲೋಕವನ್ನೂ ವೀಕ್ಷಿಸುತ್ತಾನೆ ಇತ್ಯಾದಿಯಾಗಿ ವರ್ಣಿಸಿದೆ.

ಇವರಲ್ಲಿ ಅಗ್ನಿ ಮತ್ತು ಆದಿತ್ಯನ ರೂಪವು ಜಗತ್ತಿಗೆ ಗೋಚರವಾಗುತ್ತದೆ. ಆದರೆ ವಾಯುವಿನ ರೂಪವು ಗೋಚರವಾಗುವುದಿಲ್ಲ. ಅವನ **ಗತಿಯಿಂದ** ಮಾತ್ರ ಅವನ ವ್ಯಾಪಾರವನ್ನು ಊಹಿಸಬೇಕಾಗುತ್ತದೆ. ಇದನ್ನು **ಧ್ರಾಜಿರೇಕಸ್ಯ ದದೃಶೇ ನ ರೂಪಂ** ಎಂದು ತಿಳಿಸಿದೆ.

**ಧ್ರಾಜಿಃ**— ಈ ಪದವು **ಗತಿಕರ್ಮ**ನಾಮಗಳಲ್ಲಿ ಪಠಿತವಾಗಿದೆ. (ನಿ. ೩-೯೯). ಸಾಧಾರಣವಾಗಿ ಇದು ವಾಯುವಿನ ಗತಿಯನ್ನು ತಿಳಿಸುವ ಪದವಾಗಿದೆ. ಉದಾಹರಣೆಗೆ—

**ಮುನಯೋ ವಾತರಶನಾಃ ಪಿಶಂಗಾ ವಸತೇ ಮಲಾ ।**

**ವಾತಸ್ಯಾನು ಧ್ರಾಜಿಂ ಯಂತಿ ಯದ್ದೇವಾಸೋ ಅವಿಕ್ಷತ ॥**

(ಋ. ಸಂ. ೧೦-೧೩೬-೨)

ಎಂಬಲ್ಲಿ **ವಾತಸ್ಯ ಧ್ರಾಜಿಂ** ಎಂದು ವಾಯುವಿನ ವೇಗದ ಗತಿಯನ್ನು ವರ್ಣಿಸಿ ಅಲೌಕಿಕವಾದ ಶಕ್ತಿಯನ್ನು ಸಂಪಾದಿಸಿದ ಋಷಿಗಳು ವಾಯುವಿನ ಸಂಚಾರಕ್ರಮವನ್ನರಿತರೆಂದಿದೆ. ಅಥವಾ ಈ ಪದವು ಇತರ ಸನ್ನಿವೇಶಗಳಲ್ಲಿ ಉಪಯೋಗಿಸಿದ್ದರೂ ಸಹ ಆಗಲೂ, ವಾಯುವಿನ ಗತಿಗೇ ಹೋಲಿಸಿದೆ. ಉದಾಹರಣೆಗೆ—

**ಹಿರಣ್ಯಕೇಶೋ ರಜಸೋ ವಿಸಾರೇಽಹಿರ್ಧುನಿರ್ವಾತ ಇವ ಧ್ರಜೀಮಾನ್ ।**

**ಶುಚಿಭ್ರಾಜಾ ಉಷಸೋ ನವೇದಾ ಯಶಸ್ವತೀರಪಸ್ಯುವೋ ನ ಸತ್ಯಾಃ ॥**

(ಋ. ಸಂ. ೧-೭೯-೧)

ಎಂಬಲ್ಲಿ ಅಗ್ನಿಯ ಗಮನದ ವೇಗವನ್ನು ವರ್ಣಿಸುವುದೇ ಉದ್ದೇಶವಾದರೂ ಸಹ, ಅದನ್ನು **ವಾತ ಇವ ಧ್ರಜೀಮಾನ್** ಎಂದು ವಾಯುವಿನ ಗತಿಗೆ ಹೋಲಿಸಿದೆ.

ಅಗ್ನಿ, ವಾಯು, ಆದಿತ್ಯ ಎಂಬ ಹೆಸರುಗಳಿಂದ ಮೂರು ಲೋಕಗಳಲ್ಲಿಯೂ ಮೂರು ವಿಧವಾಗಿ ತಮ್ಮ ಕರ್ತವ್ಯಗಳನ್ನು ಋತುಕಾಲಗಳಿಗನುಸಾರವಾಗಿ ನಡೆಸುತ್ತಿರುವ ಈ ಮೂರು ದೇವತೆಗಳೂ ಭಿನ್ನಾತ್ಮಕರೇ ಅಥವಾ ಒಂದೇ ತತ್ತ್ವದ ಮೂರು ಬೇರೆ ಸ್ವರೂಪಗಳೇ ಎಂದು ಪರಿಶೀಲಿಸಬೇಕು. ಈ ಸೂಕ್ತದಲ್ಲಿ ಮೊದಲಿನಿಂದಲೂ ಸಹ ಸಕಲವಿಶ್ವವ್ಯಾಪಿಯಾದ ಏಕತತ್ತ್ವದ ಪ್ರತಿಪಾದನೆಯೇ ಮುಖ್ಯವಾದ ಗುರಿಯೆಂದು ತಿಳಿದುಬರುತ್ತದೆ. ಕೆಲವು ಋಕ್ಕುಗಳಲ್ಲಿ ಅದನ್ನು ಪರಬ್ರಹ್ಮವೆಂದೂ, ಇನ್ನು ಕೆಲವೆಡೆಗಳಲ್ಲಿ ಆದಿತ್ಯಾಂತರ್ಗತನೂ, ಹಿರಣ್ಮಯರೂಪನೂ ಆದ ಪರಮ ಪುರುಷನೆಂದೂ ವರ್ಣಿಸಿದೆ ಪ್ರಕೃತವಾದ ಋಕ್ಕಿನಲ್ಲಿ ಭಿನ್ನಾತ್ಮಕರಾದ ದೇವತೆಗಳ ವರ್ಣನೆಯಿರುವಂತೆ ಕಂಡರೂ ಸಹ ಇವರೆಲ್ಲರಿಗೂ ಮೂಲತತ್ತ್ವವು ಒಂದೇ ಎಂದೂ, ಇವರೆಲ್ಲರೂ ಆ ಮೂಲತತ್ತ್ವದ ಬೇರೆ ಬೇರೆ ಸ್ವರೂಪಗಳೆಂದೂ ಅನೇಕಕಡೆಗಳಲ್ಲಿ ವರ್ಣಿತವಾಗಿರುವುದನ್ನು ತಿಳಿಯಬಹುದು. ಆ ಮೂಲತತ್ತ್ವವನ್ನು ಕೆಲವೆಡೆಗಳಲ್ಲಿ ಆದಿತ್ಯನೆಂದೂ ಇನ್ನು ಕೆಲವೆಡೆಗಳಲ್ಲಿ ಅಗ್ನಿಯೆಂದೂ ಹೇಳಿದೆ.

**ಭವದ್ಭೂತಸ್ಯ ಭವ್ಯಸ್ಯ ಜಂಗಮಸ್ಥಾವರಸ್ಯ ಚ ।**
**ಅಸ್ಯೈಕೇ ಸೂರ್ಯಮೇವೈಕಂ ಪ್ರಭವಂ ಪ್ರಲಯಂ ವಿದುಃ ॥**
**ಅಸತಶ್ಚ ಸತಶ್ಚೈವ ಯೋನಿರೇಷಾ ಪ್ರಜಾಪತಿಃ ।**
**ಯದಕ್ಷರಂ ಚ ವಾಚ್ಯಂ ಚ ಯಥೈತತ್ಬ್ರಹ್ಮ ಶಾಶ್ವತಂ ॥**
**ಕೃತ್ವೈಷ ಹಿ ತ್ರಿಧಾತ್ಮಾನಂ ಏಷ ಲೋಕೇಷು ತಿಷ್ಠತಿ ॥**
**ದೇವಾನ್ಯಥಾಯಥಂ ಸರ್ವಾನ್ ನಿವೇಶ್ಯ ಸ್ವೇಷು ರಶ್ಮಿಷು ॥**
**ಏತದ್ಭೂತೇಷು ಲೋಕೇಷು ಅಗ್ನಿಭೂತಂ ಸ್ಥಿತಂ ತ್ರಿಧಾ ।**
**ಋಷಯೋ ಗೀರ್ಭಿರರ್ಚಂತಿ ಹೋತ್ರಾಯಾಂ ವೃಕ್ತಬರ್ಹಿಷಃ ॥**

(ಬೃಹದ್ದೇವತಾ. ೧-೬೧-೬೪)

ವರ್ತಮಾನಕಾಲದಲ್ಲಿರುವುದಕ್ಕೂ, ಹಿಂದೆ ಇದ್ದುದಕ್ಕೂ, ಮುಂದೆ ಉತ್ಪನ್ನವಾಗುವುದಕ್ಕೂ ಜಂಗಮಾತ್ಮಕವಾಗಿರುವುದಕ್ಕೂ, ಸ್ಥಿರವಾಗಿರುವುದಕ್ಕೂ, ವಿಶ್ವದ ಸಕಲ ಕಾಲದ ಮತ್ತು ಸಕಲ ಪ್ರದೇಶದ ಭೂತಗಳಿಗೂ ಸಹ ಆದಿತ್ಯನೇ ಉತ್ಪತ್ತಿಸ್ಥಾನವು. ಇವನೇ ಸೃಷ್ಟಿಕರ್ತನು ಮತ್ತು ಇವನೇ ಪ್ರಲಯಕರ್ತನು. ಈ ಆದಿತ್ಯನೇ ವಿಶ್ವಕರ್ತನಾದ ಪ್ರಜಾಪತಿಯು. ಸತ್ತಿಗೂ ಅಸತ್ತಿಗೂ ಇವನೇ ಆಶ್ರಯನು. ಇವನೇ ಶಾಶ್ವತನಾದ ಪರಬ್ರಹ್ಮನು. ಇವನೇ ಅನಿರ್ವಾಚ್ಯನಾದ ಅಕ್ಷರನು. (ಅಕ್ಷರನ ಸ್ವರೂಪವನ್ನು ಹಿಂದೆ ವಿವರಿಸಿದೆ). ವಾಚ್ಯನಾದ ದೈವವೂ ಇವನೇ.

ಆದಿತ್ಯರೂಪನಾದ ಈ ಪ್ರಜಾಪತಿಯೇ ಮೂರು ರೂಪಗಳಲ್ಲಿ ವಿಭಕ್ತನಾಗಿ ಮೂರು ಲೋಕಗಳಲ್ಲೂ ಪ್ರಕಾಶಿಸುತ್ತಿದ್ದಾನೆ. ವಿಶ್ವವ್ಯಾಪಕವಾದ ತನ್ನ ರಶ್ಮಿಗಳಲ್ಲಿ ದೇವಾದಿಸಕಲಭೂತಗಳನ್ನೂ ಸ್ಥಾಪಿಸಿ ನೆಲೆಸುವಂತೆ ಮಾಡಿದ್ದಾನೆ. ಇದೇ ಆದಿತ್ಯರೂಪನಾದ ಪ್ರಜಾಪತಿಯು **ಅಗ್ನಿಯ** ರೂಪದಲ್ಲೂ ಸಹ ಮೂರು ಲೋಕಗಳಲ್ಲೂ ಮೂರು ರೂಪಗಳಲ್ಲಿರುತ್ತಾನೆ. ಈ ಅಗ್ನಿಯೇ ಆದಿತ್ಯನು, ಇವನೇ ಪಾರ್ಥಿವಾಗ್ನಿಯು. ಇವನೇ ವಾಯುವು. ಪ್ರಕೃತವಾದ ಋಕ್ಕಿನಲ್ಲಿ ಮೂರು ರೂಪಗಳಲ್ಲಿ ವರ್ಣಿತವಾಗಿರುವ ಮೂರು ದೇವತೆಗಳಿಗೂ **ಇವನೇ ಮೂಲತತ್ತ್ವವು.** ಅವರೆಲ್ಲರೂ ಇವನ ಬೇರೆ ಬೇರೆ ರೂಪಗಳು. ಅಗ್ನಿರೂಪವಾದ ಈ ಮೂಲತತ್ತ್ವವನ್ನೂ, ಅಗ್ನಿ, ವಾಯು, ಆದಿತ್ಯ ಈ ಮೂವರೂ ಈ ಮೂಲತತ್ತ್ವದ ಬೇರೆ ಬೇರೆ ರೂಪಗಳೆಂಬುದನ್ನೂ ಅನೇಕಶ್ರುತಿಗಳಲ್ಲಿ ವರ್ಣಿತವಾಗಿರುವುದನ್ನೂ ನೋಡಬಹುದು, **ವಿಶ್ವಾಪ್ಸುವಾದ** ಅಗ್ನಿಯೇ **ರುದ್ರನೆಂದೂ,** ಪಶುಪತಿಯೆಂದೂ, **ವಾಯುವೆಂದೂ, ಪ್ರಜಾಪತಿಯೆಂದೂ,** ಸಕಲ ದೇವತೆಗಳೂ ಅಗ್ನಿಯೇ ಎಂದೂ ಶತಪಥಾದಿಗಳಲ್ಲಿ ವರ್ಣಿತವಾಗಿರುವುದನ್ನು ಹಿಂದೆ ತಿಳಿಸಿವೆ. [ಋಗ್ವೇದಸಂಹಿತಾ. ಭಾಗ. ೧೧, ಪುಟ 426-428.]

**ತ್ರಿಸ್ಥಾನಂ ಚೈನಮರ್ಚಂತಿ ಹೋತ್ರಾಯಾಂ ವೃಕ್ತಬರ್ಹಿಷಃ ।**
.... .... .... .... .... .... .... .... .... ....
.... .... .... .... .... .... .... .... .... ....
**ತಾಸಾಮಿಯಂ ವಿಭೂತಿರ್ಹಿ ನಾಮಾನಿ ಯದನೇಕಶಃ ।**
**ಆಹುಸ್ತಾಸಾಂ ತು ಮಂತ್ರೇಷು ಕವಯೋಽನ್ಯೋನ್ಯಯೋನಿತಾಂ ॥**

(ಬೃ. ದೇ. ೧-೭-೧)

ಬೇರೆ ಬೇರೆ ರೂಪಗಳಲ್ಲಿ ಆವಿರ್ಭೂತರಾಗಿ ಅಗ್ನಿ, ವಾಯು ಮತ್ತು ಆದಿತ್ಯರು ತಮ್ಮ ತಮ್ಮ ವಿಭೂತಿಗಳನ್ನು ನಾನಾ ವಿಧವಾಗಿ ಪ್ರಕಾಶಪಡಿಸುತ್ತಾರೆ. ಆದರೆ ಇವರೆಲ್ಲರಿಗೂ ಸಹ ಒಂದೇ ಉತ್ಪತ್ತಿಸ್ಥಾನವು ; ಎಲ್ಲರಿಗೂ ಮೂಲತತ್ತ್ವವು ಒಂದೇ ಆಗಿದೆಯೆಂದು ಕವಿಗಳು ಈ ಮೂಲತತ್ತ್ವವನ್ನು ಸ್ತುತಿಸಿದ್ದಾರೆ. ಈ ವಿಷಯವನ್ನು ಇದೇ ಸೂಕ್ತದ ೪೬ನೇ ಋಕ್ಕಿನ ವಿಶೇಷವಿಷಯಗಳಲ್ಲಿ ವಿವರಿಸಲಾಗುತ್ತದೆ.

**ಧ್ರಾಜಿಃ ಏಕಸ್ಯ ದದೃಶೇ ನ ರೂಪಂ—ವಾಯೋಃ ಗತಿಃ ಸರ್ವೈಃ ದೃಶ್ಯತೇ ನ ರೂಪಂ ಅಪ್ರತ್ಯಕ್ಷತ್ವಾತ್ ।** ವಾಯುವು ಪ್ರತ್ಯಕ್ಷಗೋಚರನಲ್ಲದಿರುವುದರಿಂದ ಇವನ ರೂಪವು ಕಣ್ಣಿಗೆ ಕಾಣಿಸುವುದಿಲ್ಲ. ಇವನ ಚಲನವಲನಗಳು ಮಾತ್ರ ದೃಷ್ಟಿಗೋಚರವಾಗುತ್ತದೆ ಎಂಬ ಈ ವರ್ಣನೆಯಲ್ಲಿ ರಹಸ್ಯವಾದ ಅರ್ಥವಿರಬೇಕು. ಉಳಿದೆಡೆಗಳಲ್ಲಿ ವಾಯುವಿನ ರೂಪವರ್ಣನೆಗಳು ವಾಯುವಿನ ಸೌಂದರ್ಯಾದಿಗಳನ್ನು ತಿಳಿಸುತ್ತವೆ. ಉದಾಹರಣೆಗೆ—

**ತ್ವಾಂ ಹಿ ಸುಪ್ಸರಸ್ತಮಂ ನೃಷದನೇಷು ಹೂಮಹೇ । ಗ್ರಾವಾಣಂ ನಾಶ್ವಪೃಷ್ಠಂ ಮಂಹನಾ ।**
(ಋ. ಸಂ. ೮-೨೬-೨೪)

ಎಂಬಲ್ಲಿ ವಾಯುವಿನ ಅತಿಶಯವಾದುದೂ ಶೋಭನಾತ್ಮಕವಾದುದೂ ಆದ ರೂಪದ ವರ್ಣನೆಯಿದೆ. ಇದು **ದದೃಶೇ ನ ರೂಪಂ** ಎಂಬುದಕ್ಕೆ ವಿರುದ್ಧವಾಗಿದೆ. ಮತ್ತು,

**ವಾಯವಾ ಯಾಹಿ ದರ್ಶತೇಮೇ ಸೋಮಾ ಅರಂಕೃತಾಃ । ತೇಷಾಂ ಪಾಹಿ ಶ್ರುಧೀ ಹವಂ ॥**
ಋ. ಸಂ- ೧-೨-೧)

ಇತ್ಯಾದಿ ಕಡೆಗಳಲ್ಲಿ **ದರ್ಶತ-ದರ್ಶನೀಯ** ಇತ್ಯಾದಿವಿಶೇಷಣಗಳನ್ನೇ ಉಪಯೋಗಿಸಿದೆ. ಪ್ರಕೃತವಾದ ಋಕ್ಕಿನ ವಿವರಣೆಯಲ್ಲಿ ಸಾಯಣರಾಗಲಿ, ನಿರುಕ್ತಕಾರರಾಗಲಿ ಈ ವಿಷಯದಲ್ಲಿ ಏನನ್ನೂ ಹೇಳಿಲ್ಲವಾದ್ದರಿಂದ ಶ್ರುತಿವಾಕ್ಯಗಳಲ್ಲಿ ವಿರೋಧವಿದೆಯೆಂದು ನಾವು ತೋರಿಸುವುದು ಸಾಹಸದ ಕಾರ್ಯವಾಗಬಹುದು.

॥ ವ್ಯಾಕರಣಪ್ರಕ್ರಿಯಾ ॥

**ಕೇಶಿನಃ**—ಕೇಶಾಃ ಏಷಾಂ ಸಂತಿ ಇತಿ ಕೇಶಿನಃ **ಅತಇನಿಠನೌ** (ಪಾ. ಸೂ. ೫-೨-೧೧೫) ಎಂಬುದರಿಂದ ಮತ್ವರ್ಥದಲ್ಲಿ ಇನಿ ಪ್ರತ್ಯಯ. ಪ್ರತ್ಯಯದ ಆದ್ಯುದಾತ್ತಸ್ವರ ಬರುತ್ತದೆ.

**ಋತುಥಾ—ಥಾ ಹೇತೌ ಚ ಛಂದಸಿ** (ಪಾ. ಸೂ. ೫-೩-೨೬) ಎಂಬುದರಿಂದ ವಿಹಿತವಾದ ಥಾ ಪ್ರತ್ಯಯವು ವ್ಯತ್ಯಯದಿಂದ ಇದಕ್ಕೂ ಬರುತ್ತದೆ. ಪ್ರತ್ಯಯಸ್ವರದಿಂದ ಅಂತೋದಾತ್ತವಾಗುತ್ತದೆ.

**ಚಕ್ಷತೇ**—ಚಕ್ಷಿಙ್ ವ್ಯಕ್ತಾಯಾಂ ವಾಚಿ ಧಾತು. ಇಲ್ಲಿ ಪ್ರಕಾಶಾರ್ಥದಲ್ಲಿ ಪ್ರಯುಕ್ತವಾಗಿದೆ. **ಲಟ್** ಪ್ರಥಮಪುರುಷಬಹುವಚನಾಂತರೂಪ ತಿಙಂತನಿಘಾತಸ್ವರ ಬರುತ್ತದೆ.

**ಸಂವತ್ಸರೇ**—ವಸ ನಿವಾಸೇ ಧಾತು. **ಸಪೂರ್ವಾಚ್ಚಿತ್** (ಉ. ಸೂ. ೩-೩೫-೨) ಎಂಬುದರಿಂದ ಸಮ್ ಪೂರ್ವದಲ್ಲಿರುವಾಗ ಸರ ಪ್ರತ್ಯಯ. ಅದು ಚಿತ್ತಾಗುತ್ತದೆ. **ಸಃ ಸ್ಯಾರ್ಧ**-(ಪಾ. ಸೂ. ೭-೪-೪೯) ಎಂಬುದರಿಂದ ಪೂರ್ವಸಕಾರಕ್ಕೆ ತಕಾರಾದೇಶ **ಚಿತಃ** (ಪಾ. ಸೂ. ೬-೧-೧೬೩) ಎಂಬುದರಿಂದ ಅಂತೋದಾತ್ತಸ್ವರ ಬರುತ್ತದೆ.

**ವಪತೇ**—ಟುವಪ್ ಬೀಜಸಂತಾನೇ ಧಾತು. ಉಭಯಪದೀ. ಲಿಟ್ ಪ್ರಥಮಪುರುಷಏಕವಚನಾಂತರೂಪ. ತಿಙಂತನಿಘಾತಸ್ವರ ಬರುತ್ತದೆ.

**ಚಷ್ಟೇ**—ಚಕ್ಷಿಙ್ ಪೂರ್ವೋಕ್ತವಾದ ಧಾತು. ತ ಪ್ರತ್ಯಯ. ಟಿಗೆ ಏತ್ವ. **ಸ್ಕೋಸ್ಸಂಯೋಗಾದ್ಯೋರಂತೇಚ** (ಪಾ. ಸೂ. ೮-೨-೨೯) ಎಂಬುದರಿಂದ ಕಕಾರ ಲೋಪ. ಪ್ರತ್ಯಯಕ್ಕೆ ಷ್ಟುತ್ವ. ನಿಘಾತಸ್ವರ ಬರುತ್ತದೆ.

**ಧ್ರಾಜಿಃ**—ಧ್ರಜ ಗತೌ ಧಾತು. ಔಣಾದಿಕ ಇಞ್ ಪ್ರತ್ಯಯ. **ಅತ ಉಪಧಾಯಾಃ** (ಪಾ. ಸೂ. ೭-೨-೧೧೬) ಎಂಬುದರಿಂದ ಉಪಧಾವೃದ್ಧಿ. ಞಿತ್ತ್ವಾದುದರಿಂದ ಆದ್ಯುದಾತ್ತಸ್ವರ ಬರುತ್ತದೆ

**ದದೃಶೇ**—ದೃಶಿರ್ ಪ್ರೇಕ್ಷಣೇ ಧಾತು. ಕರ್ಮಣಿಯಲ್ಲಿ ಛಾಂದಸವಾಗಿ ವರ್ತಮಾನಾರ್ಥದಲ್ಲಿ ಲಿಟ್. ಪ್ರಥಮಪುರುಷಏಕವಚನಾಂತರೂಪ. ತಿಙಂತನಿಘಾತಸ್ವರ ಬರುತ್ತದೆ. || ೪೪ ||

———:o:———

ಸಂಹಿತಾಪಾಠಃ

ಚತ್ವಾರಿ ವಾಕ್ಪರಿಮಿತಾ ಪದಾನಿ ತಾನಿ ವಿದುರ್ಬ್ರಾಹ್ಮಣಾ ಯೇ ಮನೀಷಿಣಃ ।
ಗುಹಾ ತ್ರೀಣಿ ನಿಹಿತಾ ನೇಂಗಯಂತಿ ತುರೀಯಂ ವಾಚೋ ಮನುಷ್ಯಾ ವದಂತಿ ॥ ೪೫ ॥

। ಪದಪಾಠಃ ।

ಚತ್ವಾರಿ । ವಾಕ್ । ಪರಿऽಮಿತಾ । ಪದಾನಿ । ತಾನಿ । ವಿದುಃ । ಬ್ರಾಹ್ಮಣಾಃ । ಯೇ । ಮನೀಷಿಣಃ ।
ಗುಹಾ । ತ್ರೀಣಿ । ನಿऽಹಿತಾ । ನ । ಇಂಗಯಂತಿ । ತುರೀಯಂ । ವಾಚಃ । ಮನುಷ್ಯಾಃ । ವದಂತಿ ॥೪೫॥

ಸಾಯಣಭಾಷ್ಯಂ

ವಾಗ್ದೇವತ್ಯೇ ಪಶೌ ಚತ್ವಾರಿ ವಾಗಿತಿ ಹವಿಷೋऽನುವಾಕ್ಯಾ । ಚತ್ವಾರಿ ವಾಕ್ಪರಿಮಿತಾ ಪದಾನಿ ಯಜ್ಞೇನ ವಾಚಃ ಪದವೀಯಮಾಯನ್ । ಆ. ೩-೮ । ಇತಿ ಸೂತ್ರಿತತ್ವಾತ್ ॥

ವಾಗ್ವಾಚಃ ಕೃತ್ಸ್ನಾಯಾಃ ಪದಾನಿ ಚತ್ವಾರಿ ಪರಿಮಿತಾ ಪರಿಮಿತಾನಿ । ಲೋಕೇ ಯಾ ವಾಗಸ್ತಿ ಸಾ ಚತುರ್ವಿಧಾ ವಿಭಕ್ತೇತ್ಯರ್ಥಃ । ತಾನಿ ಪದಾನಿ ಬ್ರಾಹ್ಮಣಾ ವೇದವಿದೋ ಮನೀಷಿಣೋ ಮನಸ ಈಷಿಣೋ ಮೇಧಾವಿನೋ ವಿದುಃ । ಜಾನಂತಿ । ತೇಷಾಂ ಮಧ್ಯೇ ತ್ರೀಣಿ ಗುಹಾ ಗುಹಾಯಾಂ ನಿಹಿತಾ ಸ್ಥಾಪಿತಾನಿ ನೇಂಗಯಂತಿ । ನ ಚೇಷ್ಟಂತೇ । ನ ಪ್ರಕಾಶಂತ ಇತ್ಯರ್ಥಃ । ವಾಚಸ್ತುರೀಯಂ ಪದಂ

ಮನುಷ್ಯಾ ಅಜ್ಞಾಸ್ತಜ್ಜ್ಞಾಶ್ಚ ವದಂತಿ । ವ್ಯಕ್ತಮುಚ್ಚಾರಯಂತಿ । ವ್ಯವಹರಂತಿ । ಕಾನಿ ತಾನಿ ಚತ್ವಾರೀತ್ಯತ್ರ ಬಹವಃ ಸ್ವಸ್ವಮತಾನುರೋಧೇನ ಬಹುಧಾ ವರ್ಣಯಂತಿ । ಸರ್ವವೈದಿಕವಾಗ್ಜಾಲಸ್ಯ ಸಂಗ್ರಹರೂಪಾ ಭೂರಾದಯಸ್ತಿಸ್ರೋ ವ್ಯಾಹೃತಯಃ ಪ್ರಣವ ಏಕ ಇತಿ ವೇದತ್ರಯಸಾರತ್ವಾತ್ತಾಸಾಂ ವ್ಯಾಹೃತೀನಾಮೇವ ಸಾರಸಂಗ್ರಹಭೂತತ್ವಾದಕಾರಾದ್ಯಾತ್ಮಕಸ್ಯ ಪ್ರಣವಸ್ಯೇತಿ ಸಪ್ರಣವಾಸು ವ್ಯಾಹೃತಿಷು ಸರ್ವಾ ವಾಕ್ ಪರಿಮಿತೇತಿ ಕೇಚನ ವೇದವಾದಿನೋ ವದಂತಿ ॥ ಅಪರೇ ವ್ಯಾಕರಣಮತಾನುಸಾರಿಣೋ ನಾಮಾಖ್ಯಾತೋಪಸರ್ಗನಿಪಾತಭೇದೇನ । ಕ್ರಿಯಾಪ್ರಧಾನಮಾಖ್ಯಾತಂ । ದ್ರವ್ಯಪ್ರಧಾನಂ ನಾಮ । ಪ್ರಾಗುಪಸೃಜ್ಯತ ಆಖ್ಯಾತಪದಸ್ಯೇತ್ಯುಪಸರ್ಗಃ ಪ್ರಾದಿಃ । ಉಚ್ಚಾವಚೇಷ್ವರ್ಥೇಷು ನಿಪತನಾನ್ನಿಪಾತೋಽಪಿತುಚೇತ್ಯಾದಿಃ । ಏತೇಷ್ವೇವ ಸರ್ವಾ ವಾಕ್ ಪರಿಮಿತೇತ್ಯಖಂಡಾಯಾಃ ಕೃತ್ಸ್ನಾಯಾ ವಾಚಶ್ಚತುರ್ಧಾ ವ್ಯಾಕೃತಿತ್ವಾತ್ । ವಾಗ್ವೈ ಪರಾಚ್ಯವ್ಯಾಕೃತಾವದತ್ ತಾಮಿಂದ್ರೋ ಮಧ್ಯತೋಽವಕ್ರಮ್ಯ ವ್ಯಾಕರೋತ್ತಸ್ಮಾದಿಯಂ ವ್ಯಾಕೃತಾ ವಾಗುದ್ಯತೇ । ತೈ. ಸಂ. ೬-೪-೭-೩ । ಇತಿ ಶ್ರುತೇಃ ॥ ಅನ್ಯೇ ತು ಯಾಜ್ಞಿಕಾ ಮಂತ್ರಾಃ ಕಲ್ಪೋ ಬ್ರಾಹ್ಮಣಂ ಚತುರ್ಥೀ ಲೌಕಿಕೀತಿ । ಯಾಜ್ಞಿಕೈಃ ಸಮಾಖ್ಯಾತೋಽನುಷ್ಠೇಯಾರ್ಥಪ್ರಕಾಶಕೋ ವೇದಭಾಗೋ ಮಂತ್ರಃ । ಮಂತ್ರವಿಧಾನಪ್ರತಿಪಾದಕೋ ವೇದಭಾಗ ಇತಿ ಮಂತ್ರಾಃ ಕಲ್ಪೋಽತ ಊರ್ಧ್ವಂ । ತೈ. ಆ. ೧-೩೧-೨ । ಇತ್ಯಾದಿನೋಕ್ತಃ ಕಲ್ಪಃ । ಮಂತ್ರತಾತ್ಪರ್ಯಾರ್ಥಪ್ರಕಾಶಕೋ ವೇದಭಾಗೋ ಬ್ರಾಹ್ಮಣಂ । ಭೋಗವಿಷಯಾ ಗಾಮಾನಯೇತ್ಯಾದಿರೂಪಾ ವ್ಯಾವಹಾರಿಕೀ । ಏಷ್ವೇವ ಸರ್ವಾ ವಾಙ್ಮಯಮಿತೇತಿ ಯಾಜ್ಞಿಕಾಃ । ಋಗ್ಯಜುಃ ಸಾಮಾನಿ ಚತುರ್ಥೀ ವ್ಯಾವಹಾರಿಕೀತಿ ನೈರುಕ್ತಾಃ ॥ ಸರ್ಪಾಣಾಂ ವಾಗ್ವಯಸಾಂ ಕ್ಷುದ್ರಸರೀಸೃಪಸ್ಯ ಚ ಚತುರ್ಥೀ ವ್ಯಾವಹಾರಿಕೀತ್ಯೈತಿಹಾಸಿಕಾಃ ॥ ಪಶುಷು ತೂಣವೇಷು ಮೃಗೇಷ್ವಾತ್ಮನಿ ಚೇತ್ಯಾತ್ಮವಾದಿನಃ ॥ ಅಪರೇ ಯಾತೃಕಾಃ ಪ್ರಕಾರಾಂತರೇಣ ಪ್ರತಿಪಾದಯಂತಿ । ಪರಾ ಪಶ್ಯಂತೀ ಮಧ್ಯಮಾ ವೈಖರೀತಿ ಚತ್ವಾರೀತಿ । ಏಕೈವ ನಾದಾತ್ಮಿಕಾ ವಾಙ್ಮೂಲಾಧಾರಾದುದಿತಾ ಸತೀ ಪರೇತ್ಯುಚ್ಯತೇ । ನಾದಸ್ಯ ಚ ಸೂಕ್ಷ್ಮತ್ವೇನ ದುರ್ನಿರೂಪತ್ವಾತ್ ಸೈವ ಹೃದಯಗಾಮಿನೀ ಪಶ್ಯಂತೀತ್ಯುಚ್ಯತೇ ಯೋಗಿಭಿರ್ದ್ರಷ್ಟುಂ ಶಕ್ಯತ್ವಾತ್ । ಸೈವ ಬುದ್ಧಿಂ ಗತಾ ವಿವಕ್ಷಾಂ ಪ್ರಾಪ್ತಾ ಮಧ್ಯಮೇತ್ಯುಚ್ಯತೇ ಮಧ್ಯೇ ಹೃದಯಾಖ್ಯ ಉದೀಯಮಾನತ್ವಾನ್ಮಧ್ಯಮಾಯಾಃ । ಅಥ ಯದಾ ಸೈವ ವಕ್ತ್ರೇ ಸ್ಥಿತಾ ತಾಲ್ವೋಷ್ಠಾದಿವ್ಯಾಪಾರೇಣ ಬಹಿರ್ನಿರ್ಗಚ್ಛತಿ ತದಾ ವೈಖರೀತ್ಯುಚ್ಯತೇ । ಏವಂ ಚತ್ವಾರಿ ವಾಚಃ ಪದಾನಿ ಪರಿಮಿತಾನಿ । ಮನೀಷಿಣೋ ಮನಸಃ ಸ್ವಾಮಿನಃ ಸ್ವಾಧೀನಮನಸ್ಕಾ ಬ್ರಾಹ್ಮಣಾ ರವಾಖ್ಯಸ್ಯ ಶಬ್ದಬ್ರಹ್ಮಣೋಽಧಿಗಂತಾರೋ ಯೋಗಿನಃ ಪರಾದಿಚತ್ವಾರಿ ಪದಾನಿ ವಿದುಃ । ಜಾನಂತಿ । ತೇಷು ಮಧ್ಯೇ ತ್ರೀಣಿ ಪರಾದೀನಿ ಗುಹಾ ನಿಹಿತಾನಿ ಹೃದಯಾಂತರ್ವರ್ತಿತ್ವಾತ್ । ತುರೀಯಂ ತು ಪದಂ ವೈಖರೀಸಂಜ್ಞಕಂ ಮನುಷ್ಯಾಃ ಸರ್ವೇ ವದಂತಿ ॥ ವ್ಯಾಕರಣಪ್ರಸಿದ್ಧಾನಾಮಾಖ್ಯಾತಾದಿಪಕ್ಷೇ ಮನೀಷಿಣೋ ಬ್ರಾಹ್ಮಣಾಃ ಪ್ರಕೃತಿಪ್ರತ್ಯಯಾದಿವಿಭಾಗಜ್ಞಾ ವಾಗ್ಯೋಗವಿದಸ್ತಾನಿ ಪದಾನಿ ಜಾನಂತಿ । ಅವಾಗ್ಯೋಗವಿದಃ ಪಾಮರಾ ವಾಚೋ ವಾಙ್ಮಯಸ್ಯ ತುರೀಯಂ ಚತುರ್ಥಂ ಭಾಗಂ ವದಂತಿ । ವ್ಯವಹರಂತಿ । ಅರ್ಥಪ್ರಕಾಶನಾಯ ಪ್ರಯುಂಜತೇ ॥ ಅಯಂ ಮಂತ್ರೋ ನಿರುಕ್ತೇ ವ್ಯಾಖ್ಯಾತಃ । ಸೋಽತ್ರಾಪ್ಯನುಸಂಧೇಯಃ । ನಿ. ೧೩-೯ ॥ ಅಥಾಪಿ ಬ್ರಾಹ್ಮಣಂ ಭವತಿ । ಸಾ ವೈ ವಾಕ್ ಸೃಷ್ಟಾ ಚತುರ್ಧಾ ವ್ಯಭವದೇಷ್ವೇವ ಲೋಕೇಷು ತ್ರೀಣಿ ಪಶುಷು

**ತುರೀಯಂ । ಯಾ ಪೃಥಿವ್ಯಾಂ ಸಾಗ್ನೌ ಸಾ ರಥಂತರೇ। ಯಾಽಂತರಿಕ್ಷೇ ಸಾ ವಾಯೌ ಸಾ ವಾಮದೇವ್ಯೇ। ಯಾ ದಿವಿ ಸಾಽಽದಿತ್ಯೇ ಸಾ ಬೃಹತಿ ಸಾ ಸ್ತನಯಿತ್ನಾವಥ ಪಶುಷು ತತೋ ಯಾ ವಾಗತ್ಯರಿಚ್ಯತ ತಾಂ ಬ್ರಾಹ್ಮಣೇಷ್ವದಧುಃ । ತಸ್ಮಾದ್ಬ್ರಾಹ್ಮಣಾ ಉಭಯೀಂ ವಾಚಂ ವದಂತಿ ಯಾ ಚ ದೇವಾನಾಂ ಯಾ ಚ ಮನುಷ್ಯಾಣಾಮಿತಿ ॥**

### ಪ್ರತಿಪದಾರ್ಥ

**ವಾಕ್**—ವಾಕ್ಕಿನ । **ಪದಾನಿ**—ವರ್ಗಗಳು । **ಚತ್ವಾರಿ**—ನಾಲ್ಕು ಭಾಗಗಳಾಗಿ । **ಪರಿಮಿತಾ**—ನಿಯಮಿತವಾಗಿವೆ । **ತಾನಿ**—ಆ ವರ್ಗಗಳನ್ನು । **ಯೇ**—ಯಾರು । **ಮನೀಷಿಣಃ**—ಮೇಧಾವಿಗಳಾಗಿರುವರೋ ಅಂತಹ । **ಬ್ರಾಹ್ಮಣಾಃ**—ವೇದವಿತ್ತುಗಳು । **ವಿದುಃ**—ತಿಳಿಯುತ್ತಾರೆ । (**ತೇಷಾಂ**—ಆ ವರ್ಗಗಳಲ್ಲಿ) । **ತ್ರೀಣಿ** ಮೂರು । **ಗುಹಾ**—ರಹಸ್ಯದಲ್ಲಿ । **ನಿಹಿತಾ**--ಇಡಲ್ಪಟ್ಟು । **ನೇಂಗಯಂತಿ**—ಸ್ಪಷ್ಟವಾಗಿ ತಿಳಿಯುವುದಿಲ್ಲ । **ಮನುಷ್ಯಾಃ**—ಮಾನವರೆಲ್ಲರೂ । **ವಾಚಃ ತುರೀಯಂ**—ವಾಕ್ಕಿನ ನಾಲ್ಕನೆಯ ಪದವನ್ನು । **ವದಂತಿ**—ಉಚ್ಚರಿಸಿ ವ್ಯವಹರಿಸುತ್ತಾರೆ ।

### ಭಾವಾರ್ಥ

ವಾಕ್ಕಿನ ವರ್ಗಗಳು ನಾಲ್ಕು ಭಾಗಗಳಾಗಿ ನಿಯಮಿತವಾಗಿವೆ. ಆ ವರ್ಗಗಳನ್ನು ಮೇಧಾವಿಗಳಾದ ವೇದವಿತ್ತುಗಳು ಮಾತ್ರ ಅರಿಯುತ್ತಾರೆ. ಅವುಗಳಲ್ಲಿ ಮೂರು ವರ್ಗಗಳು ರಹಸ್ಯದಲ್ಲಿಡಲ್ಪಟ್ಟು ಸ್ಪಷ್ಟವಾಗಿ ತಿಳಿಯುವುದಿಲ್ಲ. ಮಾನವರೆಲ್ಲರೂ ವಾಕ್ಕಿನ ನಾಲ್ಕನೆಯ ಪದವನ್ನು ಮಾತ್ರ ಉಚ್ಚರಿಸಿ ವ್ಯವಹರಿಸುತ್ತಾರೆ.

## English Translation

Four are the definite grades of speech : those Brahmana who are wise know them : three, deposited in secret, indicate no meaning : men speak the fourth grade of speech.

### ವಿಶೇಷವಿಷಯಗಳು

ವಾಗ್ದೇವತೆಯನ್ನುದ್ದೇಶಿಸಿ ಮಾಡುವ ಪಶುಹೋಮದಲ್ಲಿ **ಚತ್ವಾರಿ ವಾಕ್** ಎಂಬ ಈ ಋಕ್ಕನ್ನು ಹವಿರ್ನಿರ್ವಪಣಕಾಲದಲ್ಲಿ ಪುರೋನುವಾಕ್ಯಾಮಂತ್ರವನ್ನಾಗಿ ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ **ಚತ್ವಾರಿ ವಾಕ್ಪರಿಮಿತಾ ಪದಾನಿ ಯಜ್ಞೇನ ವಾಚಃ ಪದವೀಯಮಾಯನ್** ಎಂಬ ಸೂತ್ರದಿಂದ ವಿವೃತವಾಗಿರುವುದು. (ಆ. ೩-೮)

**ಚತ್ವಾರಿ ವಾಕ್ಪರಿಮಿತಾ ಪದಾನಿ :—ಕಾನಿ ಕಾನಿ ಚತ್ವಾರಿ ಇತ್ಯತ್ರ ಬಹವಃ ಸ್ವಸ್ವಮತಾನುರೋಧೇನ ಬಹುಧಾ ವರ್ಣಯಂತಿ ।** ವಾಕ್ಕಿನ ನಾಲ್ಕು ಪದಗಳು ಯಾವುವೆಂದರೆ ಈ ವಿಷಯದಲ್ಲಿ ಅನೇಕ ಮತಗಳಿವೆ. ಎಲ್ಲರೂ ಅವರವರ ಸಂಪ್ರದಾಯಗಳಿಗನುಸಾರವಾಗ **ಚತ್ವಾರಿ ಪದಾನಿ** ಎಂಬುದರ ವಿವರಣೆಯನ್ನು ಹೇಳಿದ್ದಾರೆ. ಈ ಮತಗಳ ಪಟ್ಟಿಯನ್ನು ನಿರುಕ್ತಕಾರರು ವಿಶದವಾಗಿ ತಿಳಿಸಿದ್ದಾರೆ. (ನಿ. ೧೩-೯)

**ಕತಮಾನಿ ತಾನಿ ಚತ್ವಾರಿ ಪದಾನಿ ?** ಆ ನಾಲ್ಕು ಪದಗಳು ಯಾವುವು ? ಎಂದು ಪ್ರಶ್ನಿಸಿ ಅನಂತರ ಒಂದೊಂದಾಗಿ ಅಭಿಪ್ರಾಯಭೇದಗಳನ್ನು ಹೇಳಿದೆ.

೧. **ಓಂಕಾರೋ ಮಹಾವ್ಯಾಹೃತಯಶ್ಚೇತ್ಯಾರ್ಷಂ:—ಸರ್ವವೈದಿಕವಾಗ್ಜಾಲಸ್ಯ ಸಂಗ್ರಹರೂಪಾಃ ಭೂರಾದಯಸ್ತಿಸ್ರೋ ವ್ಯಾಹೃತಯಃ ಪ್ರಣವ ಏಕ ಇತಿ ವೇದತ್ರಯಸಾರತ್ವಾತ್ .... .... .... .... ಸಪ್ರಣವಾಸು ವ್ಯಾಹೃತಿಷು ಸರ್ವಾ ವಾಕ್ ಪರಿಮಿತೇತಿ ಕೇಚನ ವೇದವಾದಿನೋ ವದಂತಿ ।** ಸಕಲವೈದಿಕ ವಾಙ್ಮಯದ ಸಾರವೂ ಸಂಗ್ರಹರೂಪವಾದುದೂ ಆದ, **ಭೂಃ, ಭುವಃ, ಸುವಃ** ಎಂಬ ವ್ಯಾಹೃತಿತ್ರಯವೂ, ಓಂಕಾರ ರೂಪವಾದ ಪ್ರಣವವೂ ಸೇರಿ ಒಟ್ಟು ನಾಲ್ಕು ಪಾದಗಳಾಗುತ್ತವೆ. ಇದು ವೈದಿಕಮತಾನುಸಾರವಾದ ವಿಭಜನೆ.

ವ್ಯಾಹೃತಿಗಳು ಬ್ರಹ್ಮೋಪಾಸನೆಗೆ ಸಾಧನಗಳು. ಸಕಲಲೋಕಗಳ ತತ್ತ್ವವನ್ನೂ ಸಕಲದೇವತೆಗಳ ತತ್ತ್ವಗಳನ್ನೂ ಪ್ರತಿಬಿಂಬಿಸತಕ್ಕವು. ಅಲ್ಲದೆ, ಪರಬ್ರಹ್ಮತತ್ತ್ವವೇ ಈ ರೂಪಗಳಲ್ಲಿ ಪ್ರಕಾಶಿತವಾಗಿದೆ. ಆದುದರಿಂದ ವ್ಯಾಹೃತಿಗಳ ಉಪಾಸನೆಯು ಪರಬ್ರಹ್ಮಜ್ಞಾನಕ್ಕೆ ಸಾಧನವು ಎಂದು ತೈತ್ತಿರೀಯೋಪನಿಷತ್ತಿನಲ್ಲಿ ವ್ಯಾಹೃತಿಗಳ ಸ್ವರೂಪವನ್ನೂ, ವ್ಯಾಹೃತ್ಯಾತ್ಮಕಬ್ರಹ್ಮದ ಉಪಾಸನೆಯ ಕ್ರಮವನ್ನೂ ವರ್ಣಿಸಿದೆ. ಆದರೆ ಪ್ರಕೃತದಲ್ಲಿ ನಿರುಕ್ತ ಕಾರರು ಹೇಳಿರುವಂತೆ ಪ್ರಣವಕ್ಕೆ ಬದಲಾದ **ಮಹಃ** ಎಂಬ ತತ್ತ್ವವು ನಾಲ್ಕನೆಯದಾಗಿರುವುದೆಂದು ತಿಳಿಸಿದೆ. ಆದರೆ ಆ **ಮಹತಃ** ಎಂಬುದೇ ಬ್ರಹ್ಮತತ್ತ್ವವೆಂದೂ, ಅದೇ ಬ್ರಹ್ಮಪ್ರತಿಬಿಂಬಕವಾದ ಪ್ರಣವವೆಂದೂ ಮುಂದಿನ ವರ್ಣನೆ ಗಳಿಂದ ತಿಳಿಯುತ್ತದೆ. ತೈತ್ತಿರೀಯೋಪನಿಷತ್ತಿನಲ್ಲಿ ಸ್ವಾರಾಜ್ಯವೆಂಬ ಫಲವನ್ನು ಕೊಡುವ ವ್ಯಾಹೃತಿರೂಪವಾದ ಬ್ರಹ್ಮನ ಉಪಾಸನಾಕ್ರಮವು ಈ ರೀತಿಯಿದೆ.

> **ಭೂರ್ಭುವಃ ಸುವರಿತಿ ವಾ ಏತಾಸ್ತಿಸ್ರೋ ವ್ಯಾಹೃತಯಃ । ತಾಸಾಮುಹಸ್ಮೈತಾಂ ಚತುರ್ಥೀಂ । ಮಾಹಾಚಮಸ್ಯಃ ಪ್ರವೇದಯತೇ । ಮಹ ಇತಿ । ತದ್ಬ್ರಹ್ಮ । ಸ ಆತ್ಮಾ । ಅಂಗಾನ್ಯನ್ಯಾ ದೇವತಾಃ । ಭೂರಿತಿ ವಾ ಅಯಂ ಲೋಕಃ । ಭುವ ಇತ್ಯಂತರಿಕ್ಷಂ । ಸುವರಿತ್ಯಸೌ ಲೋಕಃ । ಮಹ ಇತ್ಯಾದಿತ್ಯಃ । ಆದಿತ್ಯೇನ ವಾವ ಸರ್ವೇ ಲೋಕಾ ಮಹೀಯಂತೇ । ಭೂರಿತಿ ವಾ ಅಗ್ನಿಃ । ಭುವ ಇತಿ ವಾಯುಃ । ಸುವರಿತ್ಯಾದಿತ್ಯಃ । ಮಹ ಇತಿ ಚಂದ್ರಮಾಃ । ಚಂದ್ರಮಸಾ ವಾವ ಸರ್ವಾಣಿ ಜ್ಯೋತೀಗ್ಂಷಿ ಮಹೀಯಂತೇ। ಭೂರಿತಿ ವಾ ಋಚಃ । ಭುವ ಇತಿ ಸಾಮಾನಿ । ಸುವರಿತಿ ಯಜೂಗ್ಂಷಿ । ಮಹ ಇತಿ ಬ್ರಹ್ಮ । ಬ್ರಹ್ಮಣಾ ವಾವ ಸರ್ವೇ-ವೇದಾ ಮಹೀಯಂತೇ । ಭೂರಿತಿ ವೈ ಪ್ರಾಣಃ। ಭುವ ಇತ್ಯಪಾನಃ। ಸುವರಿತಿ ವ್ಯಾನಃ । ಮಹ ಇತ್ಯನ್ನಂ। ಅನ್ನೇನ ವಾವ ಸರ್ವೇ ಪ್ರಾಣಾ ಮಹೀಯಂತೇ। ತಾ ವಾ ಏತಾಶ್ಚತಸ್ರಶ್ಚತುರ್ಧಾ । ಚತಸ್ರಶ್ಚತಸ್ರೋ ವ್ಯಾಹೃತಯಃ । ತಾ ಯೋ ವೇದ । ಸ ವೇದ ಬ್ರಹ್ಮ । ಸರ್ವೇಽಸ್ಮೈ ದೇವಾ ಬಲಿಮಾವಹಂತಿ ॥**
>
> (ತೈ. ಉ. ೧-೫)

**ಭೂಃ, ಭುವಃ, ಸುವಃ,** ಎಂಬ ಮೂರು ವ್ಯಾಹೃತಿಗಳು. ಅವುಗಳಲ್ಲಿ ನಾಲ್ಕನೆಯದಾದ **ಮಹಃ** ಎಂಬ ಮಹಾವ್ಯಾಹೃತಿಯನ್ನು ಮಾಹಾಚಮಸ್ಯನು ತಿಳಿದುಕೊಂಡನು. **ಮಹಃ** ಎಂಬುದೇ ಬ್ರಹ್ಮವು. ಅದೇ ಆತ್ಮನು. ಉಳಿದ **ದೇವತೆ**ಗಳು ಅಂಗಗಳು. ಈ ವ್ಯಾಹೃತಿಗಳಲ್ಲಿ **ಭೂಃ** ಎಂಬುದೇ **ಈ ಲೋಕ**ವು ; **ಭುವಃ** ಎಂಬುದು ಅಂತರಿಕ್ಷವು ; **ಸುವಃ** ಎಂಬುದು ದ್ಯುಲೋಕವು. **ಮಹಃ** ಎಂಬುದೇ ಆದಿತ್ಯನು. ಆದಿತ್ಯನಿಂದಲೇ ಸಕಲಲೋಕಗಳೂ ಮಹತ್ತಾಗುವುವು. (ಇಲ್ಲಿ ವ್ಯಾಹೃತಿಗಳನ್ನು ಸಕಲಲೋಕಗಳ ಸಾರವೆಂದು ತಿಳಿಸಿದೆ).

**ಭೂಃ** ಎಂಬುದೇ ಅಗ್ನಿಯು ; **ಭುವಃ** ಎಂಬುದು ವಾಯುವು ; **ಸುವಃ** ಎಂಬುದು ಆದಿತ್ಯನು ; **ಮಹಃ** ಎಂಬುದು ಚಂದ್ರನು ; ಚಂದ್ರನಿಂದಲೇ ಜ್ಯೋತಿಗಳೆಲ್ಲವೂ ವಿಸ್ತಾರವಾಗುವುವು. (ಇಲ್ಲಿವ್ಯಾಹೃತಿಗಳು ಲೋಕತ್ರಯದ ದೇವತೆಗಳಾದ ಅಗ್ನಿ, ವಾಯು ಮತ್ತು ಆದಿತ್ಯ, ಇವರ ತತ್ತ್ವವನ್ನು ಪ್ರತಿಬಿಂಬಿಸುತ್ತವೆ).

ಭೂಃ ಎಂಬುದೇ ಋಕ್ಕುಗಳು ; ಭುವಃ ಎಂಬುದೇ ಸಾಮಗಳು ; ಸುವಃ ಎಂಬುದು ಯಜುಸ್ಸುಗಳು ; ಮಹಃ ಎಂಬುದು ಬ್ರಹ್ಮ ; ಬ್ರಹ್ಮನಿಂದಲೇ ಸಕಲವೂ ಮಹತ್ತಾಗುವುವು. (ಎಂದು ಇಲ್ಲಿ ವ್ಯಾಹೃತಿಗಳು ಸಕಲ ವೇದಗಳ ಸಾರವೆಂದು ತಿಳಿಸಿದೆ).

ಭೂಃ ಎಂಬುದೇ ಪ್ರಾಣವು ; ಭುವಃ ಎಂಬುದು ಅಪಾನವು ; ಸುವಃ ಎಂಬುದೇ ವ್ಯಾನವು. ಮಹಃ ಎಂಬುದು ಅನ್ನವು ; ಅನ್ನದಿಂದಲೇ ಪ್ರಾಣಗಳೆಲ್ಲವೂ ಮಹತ್ತಾಗುತ್ತವೆ. (ಎಂದು ಪ್ರಾಣತತ್ತ್ವವನ್ನು ಪ್ರತಿಬಿಂಬಿಸುವ ವ್ಯಾಹೃತಿಗಳನ್ನು ಈ ವಾಕ್ಯಗಳಿಂದ ಸ್ತುತಿಸಿದೆ).

ವ್ಯಾಹೃತಿಗಳು ಈ ರೀತಿ ಪ್ರಸಿದ್ಧವಾದ ನಾಲ್ಕುಬಗೆಯುಳ್ಳವಾಗಿರುತ್ತವೆ. (**ಚತಸ್ರಶ್ಚತಸ್ರೋ ವ್ಯಾಹೃತಯಃ**) ಈ ನಾಲ್ಕರ ಪರಸ್ಪರ ಸಂಬಂಧವು ಅಂಗಾಂಗಿಭಾವರೂಪವಾದ ಸಂಬಂಧವುಳ್ಳದ್ದಾಗಿದೆ.

> **ಭೂರ್ಭುವಃಸುವಃಸ್ವರೂಪಾ ಮಹಃ ಇತ್ಯೇತಸ್ಯ ವ್ಯಾಹೃತ್ಯಾತ್ಮನೋ ಬ್ರಹ್ಮಣಃ ಅಂಗಾನ್ಯನ್ಯಾ ದೇವತಾ ಇತ್ಯುಕ್ತಂ । ಯಸ್ಯ ತಾಃ ಅಂಗಭೂತಾಃ ತಸ್ಯ ಏತಸ್ಯ ಬ್ರಹ್ಮಣಃ ಸಾಕ್ಷಾತ್ ಉಪಲಬ್ಧ್ಯರ್ಥಂ ಉಪಾಸನಾರ್ಥಂ ಚ ಹೃದಯಾಕಾಶಃ ಸ್ಥಾನಮುಚ್ಯತೇ .... .... .... .... .... .... ॥**
>
> (ಶಂಕರಭಾಷ್ಯ)

**ಭೂಃ ; ಭುವಃ ; ಸುವಃ** ಎಂಬ ವ್ಯಾಹೃತಿತ್ರಯದಿಂದ ನಿರ್ದಿಷ್ಟರಾದ ದೇವತೆಗಳೆಲ್ಲರೂ ಸಹ **ಮಹಃ** ಎಂಬ ವ್ಯಾಹೃತಿರೂಪವಾದ ಬ್ರಹ್ಮಕ್ಕೆ ಅಂಗಗಳಾಗಿರುತ್ತಾರೆ. ಹೃದಯಾಕಾಶವೇ ಈ ಬ್ರಹ್ಮನ ಸ್ಥಾನವು.

> **ಸ ಯ ಏಷೋಽಂತರ್ಹೃದಯ ಆಕಾಶಃ । ತಸ್ಮಿನ್ನಯಂ ಪುರುಷೋ ಮನೋಮಯಃ । .... ........ ಯತ್ರಾಸೌ ಕೇಶಾಂತೋ ವಿವರ್ತತೇ। ವ್ಯಪೋಹ್ಯ ಶೀರ್ಷಕಪಾಲೇ। ಭೂರಿತ್ಯಗ್ನೌ ಪ್ರತಿತಿಷ್ಠತಿ । ಭುವ ಇತಿ ವಾಯೌ । ಸುವರಿತ್ಯಾದಿತ್ಯೇ । ಮಹ ಇತಿ ಬ್ರಹ್ಮಣಿ । ಆಪ್ನೋತಿ ಸ್ವಾರಾಜ್ಯಂ ॥**
>
> (ತೈ. ಉ. ೧-೬)

ಈ ವರ್ಣನೆಯಲ್ಲಿ ಹೃದಯಾಕಾಶದಲ್ಲಿ ಸಾಕ್ಷಾತ್ಕೃತನಾಗಿ ಉಪಾಸಕನ ಸ್ವರೂಪವೇ ಆಗಿರುವ ಇಂದ್ರನ ಈಶ್ವರರೂಪವನ್ನು ಹೊಂದುವುದಕ್ಕೆ ಮಾರ್ಗವನ್ನು ಹೇಳಲಾಗಿದೆ. ಸುಷುಮ್ನಾನಾಡಿಯಿಂದ ಉಪಾಸನೆ ಮಾಡಿದ ಮನೋಮಯಾತ್ಮನ ಉಪಾಸಕನು ಮೂರ್ಧಭಾಗದಿಂದ ಹೊರಟು ಈ ಲೋಕಕ್ಕೆ ಅಧಿಷ್ಠಾತೃವಾಗಿ **ಭೂಃ** ಎಂಬ ವ್ಯಾಹೃತಿರೂಪನೂ ಮಹತ್ತಾದ ಬ್ರಹ್ಮಕ್ಕೆ ಅಂಗವಾಗಿರುವವನೂ ಆದ ಅಗ್ನಿಯಲ್ಲಿ ನಿಲ್ಲುವನು ಹೀಗೆಯೇ **ಭುವಃ** ಎಂಬ ಎರಡನೆಯ ವ್ಯಾಹೃತಿರೂಪನಾದ ವಾಯುವಿನಲ್ಲಿಯೂ, ಅನಂತರ **ಸುವಃ** ಎಂಬ ಮೂರನೆಯ ವ್ಯಾಹೃತಿರೂಪನಾದ ಆದಿತ್ಯನಲ್ಲಿಯೂ ನಿಲ್ಲುವನು. ಅನಂತರ **ಮಹಃ** ಎಂದು ಎಲ್ಲಕ್ಕೂ **ಅಂಗಿಯಾಗಿರುವ** ಪರಬ್ರಹ್ಮನಲ್ಲಿ ನಿಲ್ಲುವನು. ಎಂದರೆ ಅವುಗಳಲ್ಲೆಲ್ಲಾ ಆತ್ಮಭಾವದಿಂದ ಇದ್ದುಕೊಂಡು ಬ್ರಹ್ಮನೇ ಆಗಿ ಸ್ವಾರಾಜ್ಯವನ್ನು ಎಂದರೆ ಸ್ವರಾಡ್ರೂಪವನ್ನು ಪಡೆಯುವನು ಎಂದರ್ಥ. ಇದನ್ನೇ " **ಸತ್ಯಾತ್ಮ ಪ್ರಾಣಾರಾಮಂ ಮನ ಆನಂದಂ । ಶಾಂತಿಸಮೃದ್ಧಮಮೃತಂ** " ಇತ್ಯಾದಿಯಾಗಿ ವರ್ಣಿಸಿದೆ.

ಛಾಂದೋಗ್ಯೋಪನಿಷತ್ತಿನಲ್ಲಿ-ಪ್ರಣವವು ವ್ಯಾಹೃತಿಗಳಿಂದ ಉತ್ಪನ್ನವಾಗಿ ಸಕಲಲೋಕಗಳೂ ಪ್ರಣವದಿಂದ ಉತ್ಪನ್ನವಾದವೆಂದೂ, ಪ್ರಣವವೇ ಸಕಲಲೋಕವೆಂದೂ ಹೇಳಿದೆ.

**ಪ್ರಜಾಪತಿರ್ಲೋಕಾನಭ್ಯತಪತ್ತೇಭ್ಯೋಽಭಿತಪ್ತೇಭ್ಯಸ್ತ್ರಯೀ ವಿದ್ಯಾ ಸಂಪ್ರಾಸ್ರವತ್ತಾಮಭ್ಯತ-ಪತ್ತಸ್ಯಾ ಅಭಿತಪ್ತಾಯಾ ಏತಾನ್ಯಕ್ಷರಾಣಿ ಸಂಪ್ರಾಸ್ರವಂತ ಭೂರ್ಭುವಃಸ್ವರಿತಿ ॥**

(ಛಾ. ಉ. ೨-೨೩-೧)

ಪ್ರಜಾಪತಿಯು ಸಕಲಲೋಕಗಳನ್ನೂ ಅಭಿತಪ್ತವಾಗುವಂತೆ ಮಾಡಿದನು. ಪಕ್ವವಾಗಿ ಮಾಡಲ್ಪಟ್ಟ ಆ ಲೋಕಗಳಿಂದ ತ್ರಯ್ಯಾತ್ಮಕವಾದ ವೇದವು ಉತ್ಪನ್ನವಾಯಿತು. ವೇದತ್ರಯವನ್ನೂ ಅಭಿತಪ್ತವಾಗುವಂತೆ ಮಾಡಲು ಪಕ್ವವಾದ ಅವುಗಳಿಂದ ಭೂಃ, ಭುವಃ, ಸ್ವಃ ಎಂಬ ವ್ಯಾಹೃತಿಗಳು ಉತ್ಪನ್ನವಾದವು.

**ತಾನ್ಯಭ್ಯತಪತ್ತೇಭ್ಯೋಽಭಿತಪ್ತೇಭ್ಯ ಓಂಕಾರಃ ಸಂಪ್ರಾಸ್ರವತ್ತದ್ಯಥಾ ಶಂಕುನಾ ಸರ್ವಾಣಿ ಪರ್ಣಾನಿ ಸಂತೃಣ್ಣಾನ್ಯೇವಮೋಂಕಾರೇಣ ಸರ್ವಾ ವಾಕ್ಸಂತೃಣ್ಣೋಂಕಾರ ಏವೇದಂ ಸರ್ವ-ಮೋಂಕಾರ ಏವೇದಂ ಸರ್ವಂ ॥**

(ಛಾ. ಉ. ೨-೨೩-೨)

ವ್ಯಾಹೃತಿಗಳನ್ನೂ ಅಭಿತಪ್ತವಾಗುವಂತೆ ಮಾಡಿದಾಗ ಅವುಗಳಿಂದ ಓಂಕಾರರೂಪವಾದ ಪ್ರಣವವು ಉತ್ಪನ್ನವಾಯಿತು. ಯಾವ ರೀತಿ ಪರ್ಣಗಳೆಲ್ಲವೂ ಒಂದೇ ಶಂಕುವಿನ ಆಧಾರದ ಮೇಲೆ ಒಟ್ಟಿಗೆ ಸೇರಿಕೊಂಡಿವೆಯೋ ಅದರಂತೆಯೇ ಸಕಲವಿಧವಾದ ವಾಕ್ಕುಗಳೂ ಸಹ ಈ ಪ್ರಣವದ ಆಧಾರದಮೇಲೆ ಒಟ್ಟಿಗೆ ಸೇರಿಕೊಂಡಿವೆ. ಓಂ ಎಂಬುದೇ ಸಕಲಲೋಕಗಳೂ ಆಗಿದೆ. ಈ ವ್ಯಾಹೃತಿಗಳೇ ಪೃಥಿವ್ಯಾದಿಲೋಕಗಳು ಮತ್ತು ಅಗ್ನ್ಯಾದಿದೇವತೆಗಳು. ಇವೇ ಲೋಕರಕ್ಷಕಗಳು.

**ಅಥ ಯದವೋಚಂ ಭೂಃ ಪ್ರಪದ್ಯ ಇತಿ ಪೃಥಿವೀಂ ಪ್ರಪದ್ಯೇಽಂತರಿಕ್ಷಂ ಪ್ರಪದ್ಯೇ ದಿವಂ ಪ್ರಪದ್ಯ ಇತ್ಯೇವ ತದವೋಚಂ ।**

ಭೂಃ ಎಂಬ ವ್ಯಾಹೃತಿಯ ರಕ್ಷಣೆಯನ್ನು ಪಡೆದೆವು ಎಂದರೆ, ಪೃಥಿವೀ, ಅಂತರಿಕ್ಷ, ಸ್ವರ್ಗ ಈ ಲೋಕತ್ರಯದ ರಕ್ಷಣೆಯೂ ಲಭಿಸಿತೆಂದು ಹೇಳಬೇಕು.

**ಅಥ ಯದವೋಚಂ ಭುವಃ ಪ್ರಪದ್ಯ ಇತ್ಯಗ್ನಿಂ ಪ್ರಪದ್ಯೇ ವಾಯುಂ ಪ್ರಪದ್ಯ ಆದಿತ್ಯಂ ಪ್ರಪದ್ಯ ಇತ್ಯೇವ ತದವೋಚಂ ॥**

ಭುವಃ ಎಂಬ ವ್ಯಾಹೃತಿಯ ರಕ್ಷಣೆಯನ್ನು ಪಡೆದೆವು ಎಂದರೆ, ಅಗ್ನಿ, ವಾಯು, ಆದಿತ್ಯ ಈ ದೇವತೆಗಳೆಲ್ಲರ ರಕ್ಷಣೆಯೂ ಲಭಿಸಿತೆಂದರ್ಥ.

**ಅಥ ಯದವೋಚಂ ಸ್ವಃ ಪ್ರಪದ್ಯ ಇತ್ಯೃಗ್ವೇದಂ ಪ್ರಪದ್ಯೇ ಯಜುರ್ವೇದಂ ಪ್ರಪದ್ಯೇ ಸಾಮ-ವೇದಂ ಪ್ರಪದ್ಯ ಇತ್ಯೇವ ತದವೋಚಂ ತದವೋಚಂ ।**

ಸ್ವಃ ಎಂಬ ವ್ಯಾಹೃತಿಯ ರಕ್ಷಣೆಯನ್ನು ಪಡೆದೆವೆಂದರೆ ಋಗ್ವೇದ, ಯಜುರ್ವೇದ ಮತ್ತು ಸಾಮವೇದ ಎಂಬ ಸಕಲ ಶ್ರುತಿಗಳ ರಕ್ಷಣೆಯೂ ಲಭಿಸಿತೆಂದರ್ಥ.

ಇತ್ಯಾದಿಯಾಗಿ ವ್ಯಾಹೃತಿತ್ರಯದ ಮತ್ತು ಪ್ರಣವದ ಮಹತ್ತ್ವವು ನಾನಾಶ್ರುತಿವಾಕ್ಯಗಳಲ್ಲಿ ವರ್ಣಿತ ವಾಗಿರುವುದರಿಂದ ಸಾಯಣರು **ಸಪ್ರಣವಾಸು ವ್ಯಾಹೃತಿಷು ಸರ್ವಾ ವಾಕ್ ಪರಿಮಿತೇತಿ ಕೇಚನ ವೇದ-ವಾದಿನೋ ವದಂತಿ** ಎಂದು ವಿವರಿಸಿದ್ದಾರೆ. **ಚತ್ವಾರಿ ಪದಾನಿ** ಎಂಬುದಕ್ಕೆ ಇರತಕ್ಕ ಅನೇಕ ವಿವರಣೆಗಳಲ್ಲಿ **ಇದೊಂದು** ಎಂದು ನಿರುಕ್ತಕಾರರು ತಿಳಿಸಿದ್ದಾರೆ. ಎರಡನೆಯದಾಗಿ,—

(೨) **ನಾಮಾಖ್ಯಾತೇ ಚೋಪಸರ್ಗನಿಪಾತಾಶ್ಚೇತಿ ವೈಯಾಕರಣಾಃ** । ನಾಮ, ಆಖ್ಯಾತ, ಉಪ-ಸರ್ಗ, ನಿಪಾತ ಎಂಬ ನಾಲ್ಕು ಪ್ರಭೇದಗಳು **ಚತ್ವಾರಿ ಪದಾನಿ** ಎಂಬುದರಿಂದ ನಿರ್ದಿಷ್ಟವಾಗಿವೆಯೆಂದು ವೈಯಾ ಕರಣರ ಮತ. [ಪತಂಜಲಿ ಮೊದಲಾದವರು ಜಾತಿಶಬ್ದ, ಗುಣಶಬ್ದ, ಕ್ರಿಯಾಶಬ್ದ, ದ್ರವ್ಯಶಬ್ದ ಎಂಬ ವಿಭಾಗಮಾಡಿ ರುವರು ] ಇಂತಹ ಪ್ರಮಾಣದಿಂದಲೇ ಸಕಲ ಲೌಕಿಕವೈದಿಕವ್ಯವಹಾರವೆಲ್ಲವೂ ನಡೆಯುತ್ತಿರುವುದು. ಈ ನಾಲ್ಕು ಪ್ರಭೇದಗಳನ್ನೂ ನಿರುಕ್ತದಲ್ಲಿ ವಿವರಿಸಿದೆ—

> **ತದ್ಯಾನ್ಯೇತಾನಿ ಚತ್ವಾರಿ ಪದಜಾತಾನಿ ನಾಮಾಖ್ಯಾತೇ ಚೋಪಸರ್ಗನಿಪಾತಾಶ್ಚ ತಾನೀಮಾನಿ ಭವಂತಿ । ತತ್ರೈತನ್ನಾಮಾಖ್ಯಾತಯೋರ್ಲಕ್ಷಣಂ ಪ್ರದಿಶಂತಿ ಭಾವಪ್ರಧಾನಮಾಖ್ಯಾತಂ ಸತ್ತ್ವ-ಪ್ರಧಾನಾನಿ ನಾಮಾನಿ ।**
>
> (ನಿ. ೧-೧)

ಈ ನಾಲ್ಕುಬಗೆಗಳಲ್ಲಿ ಭಾವಪ್ರಧಾನವಾದುದೇ ಆಖ್ಯಾತವು ಮತ್ತು ಸತ್ತ್ವಪ್ರಧಾನವಾದುದೇ ನಾಮವು, ಎಂದು ನಿರುಕ್ತದಲ್ಲಿ ಇವುಗಳ ಲಕ್ಷಣವನ್ನು ಹೇಳಿದೆ. ಬೃಹದ್ದೇವತೆಯಲ್ಲಿಯೂ ಸಹ,

> **ಶಬ್ದೇನೋಚ್ಚರಿತೇನೇಹ ಯೇನ ದ್ರವ್ಯಂ ಪ್ರತೀಯತೇ ।**
> **ತದಕ್ಷರವಿಧೌ ಯುಕ್ತಂ ನಾಮೇತ್ಯಾಹುರ್ಮನೀಷಿಣಃ ॥**
> **ಅಷ್ಟೌ ಯತ್ರ ಪ್ರಯುಜ್ಯಂತೇ ನಾನಾರ್ಥೇಷು ವಿಭಕ್ತಯಃ ।**
> **ತನ್ನಾಮ ಕವಯಃ ಪ್ರಾಹುರ್ಭೇದೇ ವಚನಲಿಂಗಯೋಃ ॥**
>
> (ಬೃ. ದೇ. ೧-೪೨, ೪೩)

ಯಾವ ಶಬ್ದದ ಉಚ್ಚಾರಣೆಯಿಂದ ಒಂದು ದ್ರವ್ಯವು ಗೋಚರಕ್ಕೆ ಬರುತ್ತದೆಯೋ ಆ ಶಬ್ದವನ್ನು **ನಾಮ**ವೆಂಬ ಹೆಸರಿನಿಂದ ಪ್ರಾಜ್ಞರು ವ್ಯವಹರಿಸುತ್ತಾರೆ. ಅರ್ಥವ್ಯತ್ಯಾಸಗಳನ್ನು ತೋರಿಸುವ ಪ್ರತ್ಯಯವುಳ್ಳದ್ದೂ, ಲಿಂಗ ಮತ್ತು ವಚನಭೇದಗಳನ್ನು ತೋರಿಸತಕ್ಕದ್ದೂ ಆದ ಪದಕ್ಕೆ ಕವಿಗಳು **ನಾಮ**ವೆಂಬ ಹೆಸರಿನಿಂದ ವ್ಯವಹರಿಸಿದ್ದಾರೆಂದು ' ನಾಮ ' ದ ಲಕ್ಷಣವು ಉಕ್ತವಾಗಿದೆ. ಅನಂತರ ಆಖ್ಯಾತದ ಸ್ವರೂಪವನ್ನು ತಿಳಿಸುತ್ತಾ,

> **ಕ್ರಿಯಾಸು ಬಹ್ವೀಷ್ವಭಿಸಂಶ್ರಿತೋ ಯಃ ಪೂರ್ವಾಪರೀಭೂತ ಇಹೈಕ ಏವ ।**
> **ಕ್ರಿಯಾಭಿನಿರ್ವೃತ್ತಿವಶೇನ ಸಿದ್ಧ ಆಖ್ಯಾತಶಬ್ದೇನ ತಮರ್ಥಮಾಹುಃ ॥**
>
> (ಬೃ. ದೇ. ೧-೪೪)

ಬೇರೆಬೇರೆ ಕ್ರಿಯೆಗಳಲ್ಲಿ ಅನ್ವಿತವಾಗಿರುವುದೂ, ಪೂರ್ವಾವಸ್ಥೆಗೆ ಪರ್ಯವಸಾನ ಮಾಡತಕ್ಕದ್ದೂ ಮತ್ತು ಕಾರ್ಯವೃದ್ಧಿಯನ್ನು ಸೂಚಿಸತಕ್ಕದ್ದೂ ಆದ ಭಾವಕ್ಕೆ ಆಖ್ಯಾತವೆಂದು ವ್ಯವಹಾರವಿದೆಯೆಂದು ಆಖ್ಯಾತದ ಲಕ್ಷಣವನ್ನು ಹೇಳಿದೆ. ಆಖ್ಯಾ ತದಭೇದಗಳೆಷ್ಟು ಎಂಬುದನ್ನೂ ಸಹ ಮುಂದೆ ಈ ರೀತಿ ವಿವರಿಸಿದೆ.

**ಭಾವಪ್ರಧಾನಮಾಖ್ಯಾತಂ ಷಡ್ವಿಕಾರಾ ಭವಂತಿ ತೇ ।**
**ಜನ್ಮಾಸ್ತಿತ್ವಂ ಪರೀಣಾಮೋ ವೃದ್ಧಿರ್ಹಾನಂ ವಿನಾಶನಂ ॥**
**ಏತೇಷಾಮೇವ ಷಣ್ಣಾಂ ತು ಯೇಽನ್ಯೇ ಭಾವವಿಕಾರಜಾಃ ॥**

(ಬೃ. ದೇ. ೨-೧೨೧, ೧೨೨)

ಭಾವಪ್ರಧಾನವಾದ (Becoming) ಆಖ್ಯಾತದಲ್ಲಿ ಉತ್ಪತ್ತಿ, ಸ್ಥಿತಿ, ಪರಿಣಾಮ, ವೃದ್ಧಿ, ಹಾನಿ, (decline) ಮತ್ತು ನಾಶ ಎಂಬ ಆರುವಿಧವಾದ ಭಾವಗಳಿರುತ್ತವೆ. ಉಳಿದ ಭಾವಗಳ ವಿಕಾರಗಳೂ ಸಹ ಈ ಮೂಲಗಳಿಂದಲೇ ಉತ್ಪನ್ನವಾಗುತ್ತವೆ. ಬೃಹದ್ದೇವತೆಯಲ್ಲಿ ಮಾಡಿರುವ ಈ ವಿಭಾಗಕ್ಕೆ ನಿರುಕ್ತವಾಕ್ಯವೇ ಆಧಾರವಾಗಿರುತ್ತದೆ. ನಿರುಕ್ತದಲ್ಲಿ ಸತ್ತ್ವಪ್ರಧಾನವಾದುದು ನಾಮವೆಂದೂ, ಭಾವಪ್ರಧಾನವಾದುದು ಆಖ್ಯಾತವೆಂದೂ ಮೊದಲು ತಿಳಿಸಿ ಅನಂತರ ಸತ್ತ್ವನಿರೂಪಣ, ಭಾವನಿರೂಪಣವೆಂದು ಸತ್ತ್ವ ಮತ್ತು ಭಾವಗಳ ಸ್ವರೂಪವನ್ನು ವಿವರಿಸಿದ್ದಾರೆ.

**ಅದ ಇತಿ ಸತ್ತ್ವಾನಾಮುಪದೇಶಃ । ಗೌರಶ್ವಃ ಪುರುಷೋ ಹಸ್ತೀತಿ ।**

(ನಿ. ೧-೨)

ಅದಶ್ಶಬ್ದದಿಂದ ಸೂಚಿತವಾಗುವ ಪದಾರ್ಥವೆಲ್ಲವೂ ಸತ್ತ್ವವು. 'ಗೌಃ,' 'ಅಶ್ವಃ,' 'ಪುರುಷಃ,' ಇತ್ಯಾದಿ.

**ಭವತೀತಿ ಭಾವಸ್ಯ । ಆಸ್ತೇ, ಶೇತೇ, ವ್ರಜತಿ, ತಿಷ್ಠತೀತಿ ।**

(ನಿ. ೧-೧)

'ಅವನು ಕುಳಿತುಕೊಳ್ಳುತ್ತಾನೆ', 'ಮಲಗುತ್ತಾನೆ', 'ಹೋಗುತ್ತಾನೆ', 'ನಿಲ್ಲುತ್ತಾನೆ' ಇತ್ಯಾದಿ ಭಾವರೂಪವಾದ ಕಾರ್ಯಗಳನ್ನು ತಿಳಿಸುವುದು ಭಾವವು. (Becoming) ಎಂದು ನಾಮಾಖ್ಯಾತಗಳ ಲಕ್ಷಣವನ್ನು ಹೇಳುತ್ತಾ ಈ ರೀತಿಯಾದ ಪದವಿಭಾಗದಲ್ಲಿ ಮತಾಂತರಗಳನ್ನೂ ತಿಳಿಸಿದೆ

**ಇಂದ್ರಿಯನಿತ್ಯಂ ವಚನಮೌದುಂಬರಾಯಣಃ । ತತ್ರ ಚತುಷ್ಟ್ವಂ ನೋಪಪದ್ಯತೇ ।**

(ನಿ. ೧-೨)

ವಚನಕ್ಕೆ ಇಂದ್ರಿಯನಿತ್ಯತ್ವಮಾತ್ರವಿರುವುದರಿಂದ ಮೇಲೆ ಹೇಳಿದ ನಾಲ್ಕುವಿಭಾಗಗಳು ಸರಿಯಾಗಿರುವುದಿಲ್ಲವೆಂದು ಔದಂಬರಾಯಣರ ಮತ, ಎಂದು **ಚತ್ವಾರಿ ಪದಾನಿ** ಎಂಬ ವಿಭಜನೆಗೆ ಒಪ್ಪದಿರಲು ಅವರು ಹೇಳಿರುವ ಕಾರಣವನ್ನೂ "**ಯುಗಪದುತ್ಪನ್ನಾನಾಂ**" ಇತ್ಯಾದಿವಾಕ್ಯಗಳಿಂದ ಚರ್ಚಿಸಿದೆ. [ಪ್ರಕೃತದಲ್ಲಿ ಆ ವಿವರಣೆಯು ಬಹಳ ದೀರ್ಘವಾಗುವುದರಿಂದ ಅದನ್ನು ವಿವರಿಸಿಲ್ಲ.] ಸತ್ತ್ವದ ಸ್ವರೂಪವನ್ನು ತಿಳಿಸಿದನಂತರ ಭಾವದ ವಿವರಣೆಯನ್ನು ತೋರಿಸುತ್ತಾ ಅದರ ಸ್ವರೂಪ ಮತ್ತು ವಿಭಾಗಗಳನ್ನು ಹೇಳಿದೆ. (ನಿ. ೧-೨).

**ಷಡ್ಭಾವವಿಕಾರಾ ಭವಂತೀತಿ ವಾರ್ಷ್ಯಾಯಣಿರ್ಜಾಯತೇಽಸ್ತಿ ವಿಪರಿಣಮತೇ ವರ್ಧತೇಽಪಕ್ಷೀ-**
**ಯತೇ ವಿನಶ್ಯತೀತಿ ।**

ವಾರ್ಷ್ಯಾಯಣಿಯ ಮತದಂತೆ ಜನ್ಮ, ಅಸ್ತಿತ್ವ, ವಿಪರಿಣಾಮ, ವೃದ್ಧಿ, ಅಪಕ್ಷಯ, ವಿನಾಶ, ಎಂಬುದಾಗಿ ಭಾವಗಳನ್ನು ಆರು ಬಗೆಯಾಗಿ ವಿಂಗಡಿಸಬಹುದು. ಅವುಗಳಲ್ಲಿ,

(೧) ಜಾಯತ ಇತಿ ಪೂರ್ವಭಾವಸ್ಯಾದಿಮಾಚಷ್ಟೇ, ನಾಪರಭಾವಮಾಚಷ್ಟೇ, ನ ಪ್ರತಿಷೇಧತಿ ।
ಉತ್ಪತ್ತಿ (Generis) ರೂಪವಾದ ಭಾವವು ಪೂರ್ವಭಾವದ ಆದಿಯನ್ನು ಮಾತ್ರ ತೋರಿಸುತ್ತದೆ. ಆದರೆ ಪರಭಾವದ ಸ್ಥಿತಿಯನ್ನು ಅಸ್ತ್ಯರ್ಥದಲ್ಲಾಗಲಿ ಅಥವಾ ನಿಷೇಧಾರ್ಥದಲ್ಲಾಗಲಿ ಹೇಳುವುದಿಲ್ಲ.

(೨) ಅಸ್ತೀತ್ಯುತ್ಪನ್ನಸ್ಯ ಸತ್ತ್ವಸ್ಯಾವಧಾರಣಂ ।
ಉತ್ಪನ್ನವಾದ ಸತ್ತ್ವದ ಸ್ಥಿತಿಯನ್ನು ' ಅಸ್ತಿ ' ಎಂಬ ಕ್ರಿಯೆಯು ಹೇಳುತ್ತದೆ.

(೩) ವಿಪರಿಣಮತ ಇತ್ಯಪ್ರಚ್ಯವಮಾನಸ್ಯ ತತ್ತ್ವಾದ್ವಿಕಾರಂ ।
ಕ್ಷಯರಹಿತವಾದ ತತ್ತ್ವದ ಪರಿಣಾಮವನ್ನು ಮಾತ್ರ ' ವಿಪರಿಣಮತೇ ' ಎಂಬ ಕ್ರಿಯೆಯು ಸೂಚಿಸುತ್ತದೆ.

(೪) ವರ್ಧತ ಇತಿ ಸ್ವಾಂಗಾಭ್ಯುಚ್ಚಯಂ ಸಾಂಯೋಗಿಕಾನಾಂ ವಾರ್ಥಾನಾಂ ವರ್ಧತೇ ವಿಜಯೇನೇತಿ ವಾ ವರ್ಧತೇ ಶರೀರೇಣೇತಿ ವಾ ।

ಶರೀರಾವಯವಗಳ ವೃದ್ಧಿಯನ್ನಾಗಲಿ ಅಥವಾ ಆಯಾ ವಸ್ತುವಿಗೆ ಸಂಬಂಧಿಸಿದ ಅರ್ಥಗಳ ವೃದ್ಧಿಯನ್ನಾಗಲಿ ' ವರ್ಧತೇ ' ಎಂಬ ಕ್ರಿಯೆಯು ಸೂಚಿಸುತ್ತದೆ. ಉದಾಹರಣೆಗೆ—ಅವನು ಜಯದಿಂದ ವೃದ್ಧಿಯನ್ನು ಹೊಂದುತ್ತಾನೆ. ಅಥವಾ ಅವನು ಶರೀರದಿಂದ ವೃದ್ಧಿಯನ್ನು ಹೊಂದುತ್ತಾನೆ ಇತ್ಯಾದಿ.

(೫) ಅಪಕ್ಷೀಯತ ಇತ್ಯೇತೇನೈವ ವ್ಯಾಖ್ಯಾತಃ ಪ್ರತಿಲೋಮಂ ।
ಕ್ಷಯವೆಂಬ ಪದವೇ ವೃದ್ಧಿಯ ವಿರುದ್ಧವಾದ ಭಾವವನ್ನು ಸೂಚಿಸುತ್ತದೆ.

(೬) ವಿನಶ್ಯತೀತ್ಯಪರಭಾವಸ್ಯಾದಿಮಾಚಷ್ಟೇ ನ ಪೂರ್ವಭಾವಮಾಚಷ್ಟೇ ನ ಪ್ರತಿಷೇಧತಿ ।
ನಾಶವು ಪರಭಾವದ ಪ್ರಾರಂಭವನ್ನು ಸೂಚಿಸುವುದೇ ಹೊರತು ಪೂರ್ವಭಾವದ ಸ್ಥಿತಿಯನ್ನು ಅಸ್ತಿತ್ವರೂಪದಲ್ಲಾಗಲಿ ಅಥವಾ ನಿಷೇಧರೂಪದಲ್ಲಾಗಲಿ ತಿಳಿಸುವುದಿಲ್ಲ

ಅತೋಽನ್ಯೇ ಭಾವವಿಕಾರಾ ಏತೇಷಾಮೇವ ವಿಕಾರಾ ಭವಂತೀತಿ ಹ ಸ್ಮಾಹ । ತೇ ಯಥಾವಚನಮಭ್ಯೂಹಿತವ್ಯಾಃ ಉಳಿದ ಭಾವವಿಕಾರಗಳೂ ಈ ಮೂಲಗಳಿಂದಲೇ ಉತ್ಪನ್ನವಾಗುತ್ತವೆ. ಅವುಗಳನ್ನು ಸಂದರ್ಭಾನುಸಾರವಾಗಿ ಊಹಿಸಿಕೊಳ್ಳಬೇಕು. ಹೀಗೆ ನಾಮ ಮತ್ತು ಆಖ್ಯಾತಗಳ ಲಕ್ಷಣವನ್ನು ತಿಳಿಸಿ ಕ್ರಮಪ್ರಾಪ್ತವಾದ ಉಪಸರ್ಗದ ಸ್ವರೂಪವನ್ನು ಚರ್ಚಿಸಿದೆ. (ನಿ. ೧-೨)

ನ ನಿರ್ಬದ್ಧಾ ಉಪಸರ್ಗಾ ಅರ್ಥಾನ್ನಿರಾಹುರಿತಿ ಶಾಕಟಾಯನಃ । ನಾಮಾಖ್ಯಾತಯೋಸ್ತು ಕರ್ಮೋಪಸಂಯೋಗದ್ಯೋತಕಾ ಭವಂತಿ । ನಾಮದೊಂದಿಗಾಗಲಿ, ಆಖ್ಯಾತದೊಂದಿಗಾಗಲಿ ಸೇರದಿರುವ ಉಪಸರ್ಗಕ್ಕೆ ಅರ್ಥವಿಲ್ಲವೆಂದೂ, ಉಪಸರ್ಗಗಳು ನಾಮದ ಮತ್ತು ಆಖ್ಯಾತದ ಗೌಣವಾದ ಅರ್ಥವನ್ನು ಮಾತ್ರ ಹೇಳುತ್ತದೆಂದೂ ಶಾಕಟಾಯನರ ಮತವಾಗಿದೆ.

ಉಚ್ಚಾವಚಾಃ ಪದಾರ್ಥಾ ಭವಂತೀತಿ ಗಾರ್ಗ್ಯಃ । ತದ್ಯ ಏಷು ಪದಾರ್ಥಃ ಪ್ರಾಹುರಿಮೇ ತಂ ನಾಮಾಖ್ಯಾತಯೋರರ್ಥವಿಕರಣಂ ।

ಉಪಸರ್ಗಗಳು ಭಿನ್ನಾರ್ಥಕವಾಗಿವೆಯೆಂದೂ, ನಾಮಾಖ್ಯಾತಗಳ ಅರ್ಥವು ವ್ಯತ್ಯಸ್ತವಾಗುವಂತೆ ಮಾಡುವುದೆಂದೂ ಗಾರ್ಗ್ಯರ ಮತ. ಉದಾಹರಣೆಗೆ—

**ಆ ಇತ್ಯರ್ವಾಗರ್ಥೇ । ಪ್ರಪರೇತ್ಯೇತಸ್ಯ ಪ್ರಾತಿಲೋಮ್ಯಂ । ಅಭೀತ್ಯಾಭಿಮುಖ್ಯಂ ।** ಇತ್ಯಾದಿಯಾಗಿ ಆ, ಪ್ರ, ಪರ ಮುಂತಾದ ಉಪಸರ್ಗಗಳ ಅರ್ಥಗಳನ್ನು ತೋರಿಸಿದೆ. (ನಿ. ೧-೩) ಅನಂತರ,

**ಅಥ ನಿಪಾತಾಃ । ಉಚ್ಚಾವಚೇಷ್ವರ್ಥೇಷು ನಿಪತಂತಿ । ಅಪ್ಯುಪಮಾರ್ಥೇಽಪಿ ಕರ್ಮೋಪಸಂಗ್ರಹಾರ್ಥೇಽಪಿ ಪದಪೂರಣಾಃ ।**

(ನಿ. ೧-೪)

ನಿಪಾತಗಳು ಅನೇಕಾರ್ಥಗಳಾಗಿರುತ್ತವೆ. ಉಪಮಾರ್ಥದಲ್ಲಿಯೂ, ಸಂಯುಕ್ತಾರ್ಥದಲ್ಲಿಯೂ, ಆಧಿಕ್ಯಾರ್ಥದಲ್ಲಿಯೂ, ನಿಷೇಧಾರ್ಥದಲ್ಲಿಯೂ ಹೀಗೆಯೇ ಇನ್ನೂ ಬೇರೆ ಬೇರೆ ಅರ್ಥಗಳಲ್ಲಿಯೂ ನಿಪಾತಗಳ ಪ್ರಯೋಗಗಳಿರುತ್ತವೆ. **ನೇತಿ ಪ್ರತಿಷೇಧಾರ್ಥೀಯೋ ಭಾಷಾಯಾಂ, ನು ಇತ್ಯೇಷೋಽನೇಕಕರ್ಮಾ ।** ನ ಎಂಬ ನಿಪಾತವು ಪ್ರತಿಷೇಧಾರ್ಥಕವು ಇತ್ಯಾದಿಯಾಗಿ ನಿಪಾತಗಳ ಅರ್ಥಗಳನ್ನೂ ಪ್ರಯೋಗಗಳನ್ನೂ ವಿಶದವಾಗಿ ತಿಳಿಸಿದೆ. (ನಿ. ೨.೪) ಇದನ್ನೇ ಬೃಹದ್ದೇವತೆಯಲ್ಲಿ

**ಉಚ್ಚಾವಚೇಷು ಚಾರ್ಥೇಷು ನಿಪಾತಾಃ ಸಮುದಾಹೃತಾಃ।**
**ಕರ್ಮೋಪಸಂಗ್ರಹಾರ್ಥೇ ಚ ಕ್ವಚಿಚ್ಚೌಪಮ್ಯಕಾರಣಾತ್ ॥**
**ಊನಾನಾಂ ಪೂರಣಾರ್ಥಾ ವಾ ಪಾದಾನಾಮುತರೇ ಕ್ವಚಿತ್ ।**
**ಮಿತಾಕ್ಷರೇಷು ಗ್ರಂಥೇಷು ಪೂರಣಾರ್ಥಾಸ್ತ್ವನರ್ಥಕಾಃ ॥**

(ಬೃ. ದೇ. ೨-೮೯ ರಿಂದ್೯೦)

ಇತ್ಯಾದಿವಾಕ್ಯಗಳಲ್ಲಿ ತಿಳಿಸಿದೆ. ಈ ವಾಕ್ಯಗಳಲ್ಲಿಯೂ ಮೇಲೆ ಹೇಳಿದ ಅರ್ಥವನ್ನೇ ಸೂಚಿಸಿವೆ. ಹೀಗೆ ಪ್ರಕೃತವಾದ ಋಕ್ಕಿನಲ್ಲಿ **ಚತ್ವಾರಿ ಪದಾನಿ** ಎಂಬುದಕ್ಕೆ, ನಾಮ, ಆಖ್ಯಾತ, **ಉಪಸರ್ಗ, ನಿಪಾತ** ಎಂಬ ನಾಲ್ಕುಭಾಗಗಳೆಂದು ವೈಯಾಕರಣರ ಮತ್ತು ನಿರುಕ್ತಕಾರರ ಮತವಾಗಿದೆ. ಹೀಗೆಯೇ ನಿರುಕ್ತದಲ್ಲಿ ಇತರರು ಹೇಳಿರುವ ಅರ್ಥಗಳನ್ನೂ ತಿಳಿಸುತ್ತಾ ;

೩) **ಮಂತ್ರಾಃ, ಕಲ್ಪೋ, ಬ್ರಾಹ್ಮಣಂ, ಚತುರ್ಥೀ ವ್ಯಾವಹಾರಿಕೀತಿ ಯಾಜ್ಞಿಕಾಃ ।** ಮಂತ್ರ, ಕಲ್ಪ, ಬ್ರಾಹ್ಮಣ, ಎಂಬ ವೈದಿಕವಾದ ಮೂರು ವಿಭಾಗಗಳೂ ಮತ್ತು ವ್ಯಾವಹಾರಿಕವಾದ ನಾಲ್ಕನೆಯದೂ ಸೇರಿ ಒಟ್ಟು ನಾಲ್ಕು ಭಾಗಗಳೆಂದು ಯಾಜ್ಞಿಕರ ಅಭಿಪ್ರಾಯವಾಗಿದೆ.

೪) **ಋಚೋ, ಯಜೂಂಷಿ ಸಾಮಾನಿ ಚತುರ್ಥೀ ವ್ಯಾವಹಾರಿಕೀತಿ ನೈರುಕ್ತಾಃ ।** ಋಗ್ವೇದ, ಯಜುರ್ವೇದ, ಸಾಮ ಮತ್ತು ವ್ಯಾವಹಾರಿಕವಾದ ನಾಲ್ಕನೆಯದು ಎಂದು ನೈರುಕ್ತಮತ.

೫) **ಸರ್ಪಾಣಾಂ ವಾಗ್ವಯಸಾಂ ಕ್ಷುದ್ರಸ್ಯ ಸರೀಸೃಪಸ್ಯ ಚತುರ್ಥೀ ವ್ಯಾವಹಾರಿಕೀತ್ಯೇಕೇ ।** ಸರ್ಪಗಳು, ಪಕ್ಷಿಗಳು, ಕ್ರಿಮಿಕೀಟಗಳು ಇವುಗಳ ಮೂರುವಿಧವಾದ ಭಾಷೆಯೂ, ಮಾನವರ ವ್ಯಾವಹಾರಿಕವಾದ ಭಾಷೆಯೂ ಸೇರಿ ನಾಲ್ಕೆಂದು ಇನ್ನು ಕೆಲವರಅಭಿಪ್ರಾಯ. ಇತ್ಯಾದಿಯಾಗಿ ಈ ವಾಕ್ಯಕ್ಕೆ ಸಾಧ್ಯವಾಗಬಹುದಾದ ಅರ್ಥಾಂತರಗಳನ್ನು ನಿರುಕ್ತಕಾರರು ತಿಳಿಸಿದ್ದಾರೆ (ನಿ. ೧೩-೯).

**ಗುಹಾ ತ್ರೀಣಿ ನಿಹಿತಾ ನೇಂಗಯಂತಿ ತುರೀಯಂ ವಾಚೋ ಮನುಷ್ಯಾ ವದಂತಿ ।** ಈ ನಾಲ್ಕು ವಿಧವಾದ ಭಾಷೆಗಳಲ್ಲಿ ಮೂರುಬಗೆಯ ಭಾಷೆಗಳು ನಮ್ಮ ವ್ಯಾವಹಾರಿಕವಾದ **ಗೋಚರಕ್ಕೆ ಅತೀತವಾದುವು ; ಎಂದರೆ**

ಅವುಗಳ ಅರ್ಥವು ನಮಗಾಗುವುದಿಲ್ಲ. ಇವುಗಳಲ್ಲಿ ನಾಲ್ಕನೆಯದನ್ನು ಮಾತ್ರ ನಾವು ಅರ್ಥಮಾಡಿಕೊಳ್ಳಬಲ್ಲೆವು, ಎಂದು ಸ್ಥೂಲವಾದ ಅರ್ಥವಾಗುತ್ತದೆ. ಈ ವಾಕ್ಯದ ವಿವರಣೆಯಲ್ಲಿಯೂ ಮತಾಂತರಗಳಿವೆ. ಶತಪಥಬ್ರಾಹ್ಮಣದಲ್ಲಿ ಈ ಋಕ್ಕನ್ನುದಹರಿಸಿ ಇದರ ವಿವರಣೆಯನ್ನು ಈ ರೀತಿ ಹೇಳಿದೆ.

> **ಸ ಹೋವಾಚ । ತುರೀಯಂ ತುರೀಯಂ ಚೇನ್ಮಾಮಬೀಭಜುಸ್ತುರೀಯಮೇವ ತರ್ಹಿ ವಾಙ್ನಿರುಕ್ತಂ ವದಿಷ್ಯತೀತಿ ತದೇತತ್ತುರೀಯಂ ವಾಚೋ ನಿರುಕ್ತಂ ಯನ್ಮನುಷ್ಯಾ ವದಂತ್ಯಥೈತತ್ತುರೀಯಂ ವಾಚೋಽನಿರುಕ್ತಂ ಯತ್ಪಶವೋ ವದಂತ್ಯಥೈತತ್ತುರೀಯಂ ವಾಚೋಽನಿರುಕ್ತಂ ಯದ್ವಯಾಗ್ಂಸಿ ವದಂತ್ಯಥೈತತ್ತುರೀಯಂ ವಾಚೋಽನಿರುಕ್ತಂ ಯದಿದಂ ಕ್ಷುದ್ರಗ್ಂಸರೀಸೃಪಂ ವದಂತಿ । ತಸ್ಮಾದೇತದೃಷಿಣಾಭ್ಯನೂಕ್ತಂ । "ಚತ್ವಾರಿ ವಾಕ್ಪರಿಮಿತಾ ಪದಾನಿ .... .... .... .... .... ಮನುಷ್ಯಾ ವದಂತೀತಿ " ॥**
>
> (ಶ. ಬ್ರಾ. ೪-೧-೩-೧೪)

ಈ ವಾಕ್ಯವು ಇಂದ್ರನಿಂದ ಉಕ್ತವಾದುದು. ತನಗೆ ಯಾಜ್ಯಭಾಗವು, ಕೇವಲ ನಾಲ್ಕನೇ ಒಂದು ಭಾಗವು ಅರ್ಪಿತವಾಗಿರುವುದಕ್ಕೆ ಕಾರಣವನ್ನು ಇಲ್ಲಿ ತಿಳಿಸಿದೆ. ವಾಕ್ಕಿನಲ್ಲಿ ಮೂರುಭಾಗಗಳನ್ನು ಕ್ರಿಮಿಕೀಟಾದಿಗಳೂ ಪಕ್ಷ್ಯಾದಿ ಪ್ರಾಣಿಗಳೂ ವ್ಯವಹರಿಸಿರುವುದರಿಂದ ಅದು ಅರ್ಥವಾಗತಕ್ಕದ್ದಲ್ಲ. ಉಳಿದ ನಾಲ್ಕನೇ ಭಾಗವನ್ನು ಮಾತ್ರ ಮಾನವರು ವ್ಯವಹರಿಸತಕ್ಕದ್ದಾದ್ದರಿಂದ ನಾಲ್ಕನೇ ಒಂದು ಭಾಗದಲ್ಲಿ ಅರ್ಥವಾಗತಕ್ಕ ಮಂತ್ರದಿಂದ ಯುಕ್ತವಾದ ಯಾಜ್ಯವು ಮಾತ್ರ ತನಗೆ ಅರ್ಪಿತವಾಗತಕ್ಕದ್ದೆಂದು ಇದರಲ್ಲಿ ಹೇಳಿದೆ.

ಆದರೆ ಸಾಯಣರ ಅರ್ಥವು ಇದಕ್ಕೆ ಕೊಂಚ ವ್ಯತ್ಯಸ್ತವಾಗಿದೆ

### ವ್ಯಾಕರಣಪ್ರಕ್ರಿಯಾ

**ಪರಿಮಿತಾ**--ಮಾಙ್ ಮಾನೇ. ಧಾತು. ಕರ್ಮಣಿಯಲ್ಲಿ ಕ್ತ ಪ್ರತ್ಯಯ. **ದ್ಯತಿಸ್ಯತಿಮಾಸ್ಥಾಮಿತ್ತಿಕಿತಿ** (ಪಾ. ಸೂ. ೭-೪-೪೦) ಎಂಬುದರಿಂದ ಧಾತುವಿನ ಆಕಾರಕ್ಕೆ ಇತ್ವ. **ಗತಿರನಂತರಃ** (ಪಾ. ಸೂ. ೬-೨-೪೯) ಎಂಬುದರಿಂದ ಗತಿಗೆ (ಪರಿ) ಪ್ರಕೃತಿಸ್ವರ ಬರುತ್ತದೆ ಸ್ತ್ರೀತ್ವದಲ್ಲಿ ಟಾಪ್.

**ವಿದುಃ**— ವಿದ ಜ್ಞಾನೇ. ಧಾತು. ಲಟ್ ಪ್ರಥಮಪುರುಷಬಹುವಚನಾಂತರೂಪ. ತಿಙಂತನಿಘಾತಸ್ವರ ಬರುತ್ತದೆ.

**ಗುಹಾ— ಸುಪಾಂ ಸುಲುಕ್**—(ಪಾ. ಸೂ. ೭-೧-೩೯) ಎಂಬುದರಿಂದ ಸಪ್ತಮಿಗೆ ಲುಕ್.

**ನಿಹಿತ**—ಡುಧಾಞ್ ಧಾರಣಪೋಷಣಯೋಃ ಧಾತು. ನಿಷ್ಠಾಪ್ರತ್ಯಯ ಪರವಾದಾಗ **ದಧಾತೇರ್ಹಿಃ** (ಪಾ. ಸೂ ೭-೪-೪೨) ಎಂಬುದರಿಂದ ಧಾತುವಿಗೆ ಆ ಆದೇಶ. **ಗತಿರನಂತರಃ** (ಪಾ. ಸೂ. ೬-೨-೪೯) ಎಂಬುದರಿಂದ ಗತಿಗೆ (ನಿ) ಉದಾತ್ತಸ್ವರ ಬರುತ್ತದೆ. ನಪುಂಸಕಬಹುವಚನವಲ್ಲಿ **ಶೇಶ್ಛಂದಸಿ ಬಹುಲಮ್** (ಪಾ. ಸೂ. ೬-೧-೭೦) ಎಂಬುದರಿಂದ ಶಿಗೆ ಲೋಪ.

**ಇಂಗಯಂತಿ**—ಇಗಿ ಗತೌ. ಧಾತು. **ಇದಿತೋನುಮ್ ಧಾತೋಃ** (ಪಾ. ಸೂ. ೭-೧-೫೮) ಎಂಬುದರಿಂದ ನುಮಾಗಮ. **ಣಿಜಂತದಮೇಲೆ ಲಟ್.** ಪ್ರಥಮಪುರುಷ ಬಹುವಚನಾಂತರೂಪ ತಿಙಂತನಿಘಾತಸ್ವರ ಬರುತ್ತದೆ.

**ತುರೀಯಮ್**—ಚತುರ್ ಶಬ್ದ. **ಚತುರಶ್ಛಯತಾವಾದ್ಯಕ್ಷರಲೋಪಶ್ಚ** ಎಂಬುವರಿಂದ್ಛ ಪ್ರತ್ಯಯ. **ಆಯನೇಯೀನೀ**—(ಪಾ. ಸೂ. ೭-೧-೨) ಎಂಬುದರಿಂದ ಅದಕ್ಕೆ ಈಯಾದೇಶ. ಚಕಾರಕ್ಕೆ ಲೋಪ. ಪ್ರತ್ಯಯದ ಆದ್ಯುದಾತ್ತಸ್ವರ ಬರುತ್ತದೆ.

**ವದಂತಿ**—ವದ ವ್ಯಕ್ತಾಯಾಂ ವಾಚಿ ಧಾತು. ಲಟ್ ಪ್ರಥಮಪುರುಷ ಬಹುವಚನಾಂತರೂಪ. ತಿಙಂತನಿಘಾತಸ್ವರ ಬರುತ್ತದೆ. ॥ ೪೫ ॥

ಸಂಹಿತಾಪಾಠಃ

ಇಂದ್ರಂ ಮಿತ್ರಂ ವರುಣಮಗ್ನಿಮಾಹುರಥೋ ದಿವ್ಯಃ ಸ ಸುಪರ್ಣೋ ಗರುತ್ಮಾನ್ ।
ಏಕಂ ಸದ್ವಿಪ್ರಾ ಬಹುಧಾ ವದಂತ್ಯಗ್ನಿಂ ಯಮಂ ಮಾತರಿಶ್ವಾನಮಾಹುಃ ॥
॥ ೪೬ ॥

ಪದಪಾಠಃ

ಇಂದ್ರಂ । ಮಿತ್ರಂ । ವರುಣಂ । ಅಗ್ನಿಂ । ಆಹುಃ । ಅಥೋ ಇತಿ । ದಿವ್ಯಃ । ಸಃ । ಸುಽಪರ್ಣಃ । ಗರುತ್ಮಾನ್ ।
ಏಕಂ । ಸತ್ । ವಿಪ್ರಾಃ । ಬಹುಧಾ । ವದಂತಿ । ಅಗ್ನಿಂ । ಯಮಂ । ಮಾತರಿಶ್ವಾನಂ । ಆಹುಃ ॥ ೪೬ ॥

ಸಾಯಣಭಾಷ್ಯಂ

ಅಮುಮಾದಿತ್ಯಮೈಶ್ವರ್ಯವಿಶಿಷ್ಟಮಿಂದ್ರಮಾಹುಃ । ತಥಾ ಮಿತ್ರಂ ಪ್ರಮೀತೇರ್ಮರಣಾತ್ತ್ರಾತಾರಮಹರಭಿಮಾನಿನಮೇತನ್ನಾಮಕಂ ದೇವಂ ತಮಾಹುಃ । ವರುಣಂ ಪಾಪಸ್ಯ ನಿವಾರಕಂ ರಾತ್ರ್ಯಭಿಮಾನಿನಂ ದೇವಮಾಹುಃ । ತಥಾಗ್ನಿಮಂಗನಾದಿಗುಣವಿಶಿಷ್ಟಮೇತನ್ನಾಮಕಮಾಹುಃ । ಅಥೋ ಅಪಿ ಚಾಯಮೇವ ದಿವ್ಯೋ ದಿವಿ ಭವಃ ಸುಪರ್ಣಃ ಸುಪತನೋ ಗರುತ್ಮಾನ್ ಗರಣವಾನ್ ಪಕ್ಷವಾನ್ವಾ ।

ಏತನ್ನಾಮಕೋ ಯಃ ಪಕ್ಷ್ಯಸ್ತಿ ಸೋಽಪ್ಯಯಮೇವ । ಕಥಮೇಕಸ್ಯ ನಾನಾತ್ವಮಿತಿ ಉಚ್ಯತೇ । ಅಮುಮೇವಾದಿತ್ಯಮೇಕಮೇವ ವಸ್ತುತಃ ಸಂತಂ ವಿಪ್ರಾ ಮೇಧಾವಿನೋ ದೇವತಾತತ್ತ್ವವಿದೋ ಬಹುಧಾ ವದಂತಿ । ತತ್ತತ್ಕಾರ್ಯಕಾರಣೇನೇಂದ್ರಾದ್ಯಾತ್ಮಾನಂ ವದಂತಿ । ಏಕೈವ ವಾ ಮಹಾನಾತ್ಮಾ ದೇವತಾ ಸ ಸೂರ್ಯ ಇತ್ಯಾಚಕ್ಷತೇ ಇತ್ಯುಕ್ತತ್ವಾತ್ । ಕಿಂಚ ತಮೇವ ವೃಷ್ಟ್ಯಾದಿಕಾರಣಂ ವೈದ್ಯುತಾಗ್ನಿಂ ಯಮಂ ನಿಯಂತಾರಂ ಮಾತರಿಶ್ವಾನಮಂತರಿಕ್ಷೇ ಶ್ವಸಂತಂ ವಾಯುಮಾಹುಃ । ಸೂರ್ಯಸ್ಯ ಬ್ರಹ್ಮಣೋಽನನ್ಯತ್ವೇನ ಸಾರ್ವಾತ್ಮ್ಯಮುಕ್ತಂ ಭವತಿ । ಅತ್ರ ಯೇ ಕೇಚದಗ್ನಿಃ ಸರ್ವಾ ದೇವತಾಃ । ಐ. ಬ್ರಾ. ೨-೩. । ಇತ್ಯಾದಿಶ್ರುತಿತೋಽಯಮೇವಾಗ್ನಿರುತ್ತರೇ ಅಪಿ ಜ್ಯೋತಿಷೀ ಇತಿ ಮತ್ವಾಗ್ನೇರೇವ ಸಾರ್ವಾತ್ಮ್ಯಪ್ರತಿಪಾದಕೋಽಯಂ ಮಂತ್ರ ಇತಿ ವದಂತಿ। ತತ್ಪಕ್ಷೇ ಪ್ರಥಮೋಽಗ್ನಿಶಬ್ದ ಉದ್ದೇಶ್ಯಃ। ತಮಗ್ನಿಮುದ್ದಿಶ್ಯೇಂದ್ರಾದ್ಯಾತ್ಮಕತ್ವಕಥನಂ । ಅಯಂ ಮಂತ್ರೋ ನಿರುಕ್ತ ಏವಂ ವ್ಯಾಖ್ಯಾತಃ । ಇಮಮೇವಾಗ್ನಿಂ ಮಹಾಂತಮಾತ್ಮಾನಮೇಕಮಾತ್ಮಾನಂ ಬಹುಧಾ ಮೇಧಾವಿನೋ ವದಂತಿ ಇಂದ್ರಂ ಮಿತ್ರಂ ವರುಣಮಗ್ನಿಂ ದಿವ್ಯಂಚ ಗರುತ್ಮಂತಂ । ದಿವ್ಯೋ ದಿವಿಜೋ ಗರುತ್ಮಾನ್ ಗರಣವಾನ್ ಗುರ್ವಾತ್ಮಾ ಮಹಾತ್ಮೇತಿ ವಾ । ನಿ. ೭.೧೮. । ಇತಿ ॥

**ಪ್ರತಿಪದಾರ್ಥ**

(ಅಮುಂ—ಈ ಆದಿತ್ಯನನ್ನು) । **ಇಂದ್ರಂ**—ಇಂದ್ರನೆಂದೂ, । **ಮಿತ್ರಂ**—ಮಿತ್ರನೆಂದೂ, । **ವರುಣಂ**—ವರುಣನೆಂದೂ, । **ಅಗ್ನಿಂ**—ಅಗ್ನಿಯೆಂದೂ, । **ಆಹುಃ**—ಕರೆಯುತ್ತಾರೆ. । **ಅಥೋ**—ಅಲ್ಲದೇ (ಇವನೇ) । **ದಿವ್ಯಃ**—ದಿವ್ಯಾತ್ಮನೂ, । **ಸುಪರ್ಣಃ**—ಶ್ರೇಷ್ಠವಾದ ಪತನವುಳ್ಳವನೂ ಆದ । **ಗರುತ್ಮಾನ್**—ಗರುತ್ಮಂತನಾಗಿದ್ದಾನೆ. । **ಸದ್ವಿಪ್ರಾಃ**—ಮೇಧಾವಿಗಳಾದ ವಿಪ್ರರು । **ಏಕಂ**—ಏಕಾತ್ಮನಾದ ಈ ಒಬ್ಬ ಪರಮಾತ್ಮನನ್ನೇ । **ಅಗ್ನಿಂ**—ಅಗ್ನಿಯೆಂದೂ, । **ಯಮಂ**—ಯಮನೆಂದೂ । **ಮಾತರಿಶ್ವಾನಂ**—ಮಾತರಿಶ್ವನೆಂದೂ, । **ಬಹುಧಾ**—ನಾನಾವಿಧವಾಗಿ । **ಆಹುಃ**—ಕರೆಯುತ್ತಾರೆ. ।

**ಭಾವಾರ್ಥ**

ಒಬ್ಬನೇ ಆದ ಆದಿತ್ಯನನ್ನು ಇಂದ್ರನೆಂದೂ, ಮಿತ್ರನೆಂದೂ, ವರುಣನೆಂದೂ, ಅಗ್ನಿಯೆಂದೂ ಕರೆಯುತ್ತಾರೆ. ಅಲ್ಲದೆ, ಇವನೇ ದಿವ್ಯಾತ್ಮನೂ, ಶ್ರೇಷ್ಠವಾದ ಪತನವುಳ್ಳವನೂ, ಆದ ಗರುತ್ಮಂತನಾಗಿದ್ದಾನೆ. ಮೇಧಾವಿಗಳಾದ ವಿಪ್ರರು ಏಕಾತ್ಮನಾದ ಒಬ್ಬಪರಮಾತ್ಮನನ್ನೇ ಅಗ್ನಿಯೆಂದೂ, ಯಮನೆಂದೂ, ಮಾತರಿಶ್ವನೆಂದೂ ನಾನಾವಿಧವಾಗಿ ಕರೆಯುತ್ತಾರೆ.

## English Translation

They have styled (him, the Sun), Indra, Mitra, Varuna, Agni, and he is the celestial, well winged Garutmat, for learned priests call one by many names as they speak of Agni, Yama, Matarishwan.

### ವಿಶೇಷವಿಷಯಗಳು

ಈ ಋಕ್ಕಿನಲ್ಲಿ ತಾತ್ತ್ವಿಕವಾದ ಐಕ್ಯವನ್ನು ಹೇಳಿದೆ. ಇಂದ್ರಾದಿದೇವತೆಗಳೆಲ್ಲರೂ ಈ ಒಂದೇ ಮೂಲ ತತ್ತ್ವದ ಬೇರೆ ಬೇರೆ ಸ್ವರೂಪಗಳೆಂದೂ ಅವರಲ್ಲಿ ತಾತ್ತ್ವಿಕವಾದ ವೈವಿಧ್ಯವಿಲ್ಲವೆಂದೂ ಸ್ಪಷ್ಟವಾಗಿ ತಿಳಿಸಿದೆ. ಇಂದ್ರಾದಿದೇವತೆಗಳನ್ನುದ್ದೇಶಿಸಿ ನೆರವೇರಿಸತಕ್ಕ ಸಕಲ ಪೂಜೆಗಳೂ ಈ ಪರದೇವತೆಗೇ ಅರ್ಪಿತಗಳಾಗುವುವೆಂದ ಭಿಪ್ರಾಯವು. “**ಅಮುಮೇವಾದಿತ್ಯಂ**” ಆದಿತ್ಯನೇ ಈ ಮೂಲತತ್ತ್ವವೆಂದು ಸಾಯಣರ ವಿವರಣೆ ಇದೆ. ಆದರೆ ನಿರುಕ್ತಕಾರರು ಏಕಂ ಎಂಬುದಕ್ಕೆ ಇಲ್ಲಿ ಅಗ್ನಿಯೆಂದರ್ಥಮಾಡಿದ್ದಾರೆ.

> **ಇಮಮೇವಾಗ್ನಿಂ ಮಹಾಂತಮಾತ್ಮಾನಮೇಕಮಾತ್ಮಾನಂ ಬಹುಧಾ ಮೇಧಾವಿನೋ ವದಂ-**
> **ತೀಂದ್ರಂ ಮಿತ್ರಂ ವರುಣಮಗ್ನಿಂ ದಿವ್ಯಂ ಚ ಗರುತ್ಮಂತಂ ದಿವ್ಯೋ ದಿವಿಜೋ ಗರುತ್ಮಾನ್**
> **ಗರಣವಾನ್ ಗುರ್ವಾತ್ಮಾ ಮಹಾತ್ಮೇಽತಿ ವಾ । ಯಸ್ತು ಸೂಕ್ತಂ ಭಜತೇ ಯಸ್ಮೈ ಹವಿರ್ನಿ-**
> **ರೂಪ್ಯತೇಽಯಮೇವ ಸೋಽಗ್ನಿಃ ।**
>
> (ನಿ. ೭-೧೮)

ಮಹಾತ್ಮನಾದ ಈ ಅಗ್ನಿಯನ್ನೇ ತತ್ತ್ವವಿತ್ತುಗಳು ಇಂದ್ರ, ಮಿತ್ರ, ವರುಣ, ಗರುತ್ಮಾನ್ ಇತ್ಯಾದಿ ನಾನಾ ನಾಮಗಳಿಂದ ಕರೆಯುತ್ತಾರೆ. ಮಾನವರಿಂದ ಅರ್ಪಿತವಾಗತಕ್ಕ ಪ್ರಾರ್ಥನೆಯಾಗಲಿ, ಹವಿರಾದಿಗಳಾಗಲಿ ಈ ಅಗ್ನಿಯನ್ನೇ ಉದ್ದೇಶಿಸಿ ಮಾಡತಕ್ಕವು ಮತ್ತು ಈ ಅಗ್ನಿಯನ್ನೇ ಸೇರತಕ್ಕವು. ಈ ವಿಷಯವನ್ನೇ ಋಕ್ಸಂಹಿತಾವಾಕ್ಯಗಳಲ್ಲಿಯೇ ಸ್ಪಷ್ಟವಾಗಿ ತಿಳಿಸಿದೆ. ಉದಾಹರಣೆಗೆ—

> **ತ್ವಮಗ್ನ ಇಂದ್ರೋ ವೃಷಭಃ ಸತಾಮಸಿ ತ್ವಂ ವಿಷ್ಣುರುರುಗಾಯೋ ನಮಸ್ಯಃ ।**
> **ತ್ವಂ ಬ್ರಹ್ಮಾ ರಯಿವಿದ್ಬ್ರಹ್ಮಣಸ್ಪತೇ ತ್ವಂ ವಿಧರ್ತಃ ಸಚಸೇ ಪುರಂಧ್ಯಾ ।**
>
> (ಋ. ಸಂ. ೨-೧-೩)

ಎಲೈ ಅಗ್ನಿಯೇ, ಇಷ್ಟಾರ್ಥಗಳನ್ನು ಸುರಿಸುವವನಾದುದರಿಂದ ನೀನೇ ಇಂದ್ರನಾಗಿದ್ದೀಯೆ. ಎಲ್ಲರಿಂದಲೂ ಸ್ತುತಿಸಲ್ಪಡುವ ವಿಷ್ಣುವೂ ನೀನೇ. ಧನದ ಸ್ವರೂಪವನ್ನು ತಿಳಿದ ಬ್ರಹ್ಮನೂ ನೀನೇ ನೀನು ಅನೇಕ ವಿಧವಾದ ಪ್ರಶಂಸೆಗಳಿಂದ ಸ್ತುತನಾಗಿದ್ದೀಯೆ.

> **ತ್ವಮಗ್ನೇ ರಾಜಾ ವರುಣೋ ಧೃತವ್ರತಸ್ತ್ವಂ ಮಿತ್ರೋ ಭವಸಿ ದಸ್ಮ ಈಡ್ಯಃ ।**
> **ತ್ವಮರ್ಯಮಾ ಸತ್ಪತಿರ್ಯಸ್ಯ ಸಂಭುಜಂ ತ್ವಮಂಶೋ ವಿದಥೇ ದೇವ ಭಾಜಯುಃ ॥**
>
> (ಋ. ಸಂ. ೨-೧-೪)

ಎಲೈ ಅಗ್ನಿಯೇ, ನೀನು ಧೃತವ್ರತನಾದ ವರುಣನೂ, ಶತ್ರುನಾಶಕನೂ, ಸ್ತುತ್ಯನೂ ಆದ ಮಿತ್ರನೂ, ಅಭಿಮತಪ್ರದಾತನಾದ ಅರ್ಯಮನೂ ಆಗಿದ್ದೀಯೆ ಮತ್ತು ಸೂರ್ಯನ ಮೂರ್ತ್ಯಂತರವಾದ **ಅಂಶನೂ** ನೀನಲ್ಲದೆ ಬೇರೆಯಲ್ಲ ಎಲ್ಲಾ ದೇವತೆಗಳ ಪ್ರಭಾವವನ್ನೂ ಪಡೆದಿರುವ ನೀನು ಫಲದಾತನಾಗು.

> **ತ್ವಮಗ್ನೇ ರುದ್ರೋ ಅಸುರೋ ಮಹೋ ದಿವಸ್ತ್ವಂ ಶರ್ಧೋ ಮಾರುತಂ ಪೃಕ್ಷ ಈಶಿಷೇ ।**
> **ತ್ವಂ ವಾತೈರರುಣೈರ್ಯಾಸಿ ಶಂಗಯಸ್ತ್ವಂ ಪೂಷಾ ವಿಧತಃ ಪಾಸಿ ನು ತ್ಮನಾ ॥**
>
> (ಋ. ಸಂ. ೨-೧-೬)

ಎಲೈ ಅಗ್ನಿಯೇ, ಲೋಕತ್ರಯದಿಂದಲೂ ಅಸುರರನ್ನು ಓಡಿಸತಕ್ಕ ರುದ್ರನೇ ನೀನು. ಮರುತ್ಸಮೂಹವೇ ನೀನು. ಎಲ್ಲರ ಪೋಷಕನೂ, ಸುಖದಾತನೂ ಆಗಿ ಯಜ್ಞಗೃಹವನ್ನು ಪ್ರವೇಶಿಸು. ಇತ್ಯಾದಿಯಾಗಿ **ಅಗ್ನಿಯೇ** ಸಕಲ ದೇವತೆಗಳ ಮೂಲತತ್ತ್ವವಾಗಿರುವನೆಂದು ಸ್ಪಷ್ಟವಾಗಿ ತಿಳಿಸಿದೆ. ಅಷ್ಟೇ ಅಲ್ಲದೆ,

**ಅಗ್ನೇ ನೇಮಿರರಾँ ಇವ ದೇವಾँಸ್ತ್ವಂ ಪರಿಭೂರಸಿ । ಆ ರಾಧಶ್ಚಿತ್ರಮೃಂಜಸೇ ॥**

(ಋ. ಸಂ. ೫-೧೩-೬).

ಎಂಬ ಋಕ್ಕಿನಲ್ಲಿ, ಅಗ್ನಿಯನ್ನು ರಥಚಕ್ರದ ನೇಮಿಗೂ ಇತರ ದೇವತೆಗಳನ್ನೆಲ್ಲಾ ರಥಚಕ್ರದ ಅರಗಳಿಗೂ ಹೋಲಿಸಿ ಯಾವ ರೀತಿ ರಥಚಕ್ರದ ನೇಮಿಯು ಅರಗಳನ್ನೆಲ್ಲಾ ಒಟ್ಟುಗೂಡಿಸಿ ಒಂದು ಐಕ್ಯವನ್ನು ಸಂಪಾದಿಸಿದೆಯೋ ಆದರಂತೆ ಅಗ್ನಿಯೂ ಸಹ ವೈವಿಧ್ಯವನ್ನು ತೋರಿಸುವ ಬೇರೆಬೇರೆ ದೇವತೆಗಳನ್ನು ವ್ಯಾಪಿಸಿ ಎಲ್ಲರಲ್ಲಿಯೂ ಸಹ ಏಕತತ್ತ್ವವನ್ನು ಪ್ರಕಾಶಪಡಿಸಿದ್ದಾನೆ.

**ವಿಭೂಃ, ಪರಿಭೂಃ** ಇತ್ಯಾದಿ ವಿಶೇಷಣಗಳಿಂದ ಅಗ್ನಿಯ ಸರ್ವವ್ಯಾಪಕತ್ವವು ಸೂಚಿತವಾಗಿದೆ. ಯಜ್ಞಕರ್ಮಗಳನ್ನೂ, ಅಗ್ನಿಯನ್ನೂ, ರಥದ ಶಂಕು ಮತ್ತು ವಲಯಗಳಿಗೆ ಹೋಲಿಸಿದೆ. ಯಜ್ಞವು ವಿಶ್ವತತ್ತ್ವವನ್ನು ಪ್ರತಿಬಿಂಬಿಸುತ್ತದೆ. ಯಜ್ಞವೇದಿಯು ಯಜ್ಞದ ನಾಭಿಯಾದುದರಿಂದ ವಿಶ್ವಕ್ಕೇ ನಾಭಿಯಾಗಿರುತ್ತದೆ. ಈ ನಾಭಿಯಲ್ಲಿ ಪ್ರತಿಷ್ಠಿತನಾದ ಅಗ್ನಿಯು ವಿಶ್ವದ ಸಕಲ ತತ್ತ್ವಕ್ಕೂ ಕೇಂದ್ರನಾಗಿಯೂ ಮತ್ತು ಸರ್ವವ್ಯಾಪಕನಾಗಿಯೂ ಇರುತ್ತಾನೆ. ಸೂರ್ಯಚಂದ್ರಾದಿ ಸಕಲಗ್ರಹಗಳೂ ಈ ಕೇಂದ್ರವನ್ನೇ ತಮ್ಮ ಚಲನವಲನಗಳಿಗೆ ಆಶ್ರಯವನ್ನಾಗಿಟ್ಟುಕೊಂಡಿರುತ್ತಾರೆ.

**ಸರ್ವಾಣಿ ಹ ತ್ವೇವ ಭೂತಾನಿ । ಸರ್ವೇ ದೇವಾ ಏಷೋಽಗ್ನಿಶ್ಚಿತ ಆಪ್ಸೋ ನ್ವೈ ಸರ್ವೇ ದೇವಾಸ್ಸರ್ವಾಣಿ ಭೂತಾನಿ ತಾ ಹ್ಯೇತಾ ಏನ್ವೈಷೋಽಗ್ನಿಶ್ಚಿತಸ್ತಸ್ಯ ನಾವ್ಯಾ ಏವ ಪರಿಶ್ರಿತಸ್ತಾಃ ಷಷ್ಟಿಶ್ಚ ತ್ರೀಣಿ ಚ ಶತಾನಿ ಭವಂತಿ .... .... .... .... ಯೋಽಯಂ ಹಿರಣ್ಮಯಃ ಪುರುಷಃ ।**

(ಶ. ಬ್ರಾ. ೧೦-೫-೪-೧೪)

ಎಂಬ ವಾಕ್ಯಗಳಲ್ಲಿ ಅಗ್ನಿವೇದಿಕೆಯಲ್ಲಿ ಇದ್ದನಾದ ಅಗ್ನಿಯು ಸಕಲಲೋಕಗಳನ್ನೂ ವ್ಯಾಪಿಸುವವನಾಗಿಯೂ, ಸಕಲ ಕರ್ಮಗಳಿಗೂ ಅಧ್ಯಕ್ಷನಾಗಿಯೂ, ಈ ಕೇಂದ್ರವನ್ನಾಶ್ರಯಿಸಿಯೇ ವಿಶ್ವವ್ಯವಹಾರವೆಲ್ಲವೂ ನಡೆಯುವುದಾಗಿಯೂ ವರ್ಣಿಸಿ, ಈ ವಿಶ್ವಾತ್ಮನಾದ ಅಗ್ನಿಯೇ ಹಿರಣ್ಮಯಾಕಾರನಾದ ಪರಮಪುರುಷನೆಂದು ತಿಳಿಸಿದೆ ಹಿರಣ್ಮಯಃ ಪುರುಷಃ ಎಂಬ ವಿಶೇಷಣವು ಅಗ್ನಿಪರವಾಗಿರುವಂತೆ ಅನೇಕಕಡೆ ಆದಿತ್ಯನ ಪರವಾಗಿಯೂ ಇದೆ. ಆದಿತ್ಯನಿಗೂ ಅಗ್ನಿಗೂ ತಾತ್ತ್ವಿಕವಾದ ವೈವಿಧ್ಯವಿಲ್ಲದಿರುವುದರಿಂದ ಪ್ರಕೃತವಾದ ಋಕ್ಕಿನಲ್ಲಿ ಸಾಯಣರು **ಅಮುಮೇವಾದಿತ್ಯಂ** ಎಂದಿರುವುದಕ್ಕೂ, ನಿರುಕ್ತಕಾರರು **ಇಮಮೇವಾಗ್ನಿಂ** ಎಂದಿರುವುದಕ್ಕೂ ವಿರೋಧವಿರುವುದಿಲ್ಲ.

**ಸುಪರ್ಣೋ ಗರುತ್ಮಾನ್** ಈ ವಿಶೇಷಣವು ಇಲ್ಲಿ ಗಮನಾರ್ಹವಾದದು. ಗರುತ್ಮಾನ್ ಎಂಬ ಪದಕ್ಕೆ ನಿರುಕ್ತಕಾರರು **ಗುರ್ವಾತ್ಮಾ, ಮಹಾತ್ಮಾ** ಎಂಬರ್ಥಮಾಡಿದ್ದಾರೆ. ವಿಶ್ವಾತ್ಮನಾದ ಪರಮಾತ್ಮನೆಂದರ್ಥ. ಪರಮಾತ್ಮನಿಗೆ **ಸುಪರ್ಣ**ವೆಂಬ ವಿಶೇಷಣವು ಋಕ್ಸಂಹಿತೆಯಲ್ಲಿ ಬಹಳವಾಗಿ ಪ್ರಯುಕ್ತವಾಗಿದೆ.

**ಸುಪರ್ಣಂ ವಿಪ್ರಾಃ ಕವಯೋ ವಚೋಭಿರೇಕಂ ಸಂತಂ ಬಹುಧಾ ಕಲ್ಪಯಂತಿ ।**
**ಛಂದಾಂಸಿ ಚ ದಧತೋ ಅಧ್ವರೇಷು ಗ್ರಹಾನ್ತ್ಸೋಮಸ್ಯ ಮಿಮತೇ ದ್ವಾದಶ ॥**
(ಋ. ಸಂ. ೧೦-೧೧೪-೫)

ಸುಪತನನಾದವನೂ, ಅದ್ವಿತೀಯನೂ ಆದ ಪರಮಾತ್ಮನನ್ನು ಕ್ರಾಂತಪ್ರಜ್ಞರಾದ ಮಾನವರು ನಾನಾವಿಧವಾದ ಕಲ್ಪನೆಗಳಿಂದ ಭಾವಿಸಿ ಅವನನ್ನು ಸ್ತುತಿಸುತ್ತಾರೆ. ಅಧ್ವರಗಳಲ್ಲಿ ಛಂದೋರೂಪವಾದ ಸ್ತುತಿವಾಕ್ಯಗಳಿಂದ ಅವನ ಮಹಿಮೆಯನ್ನು ಪ್ರಶಂಸಿಸುತ್ತಾರೆ ಇತ್ಯಾದಿಯಾಗಿ **ಸುಪರ್ಣವೆಂಬ** ವಿಶೇಷಣದಿಂದ ಪರಮಾತ್ಮನ ಸ್ತುತಿಯಿದೆ.

ಆಧ್ಯಾತ್ಮಿಕವಾದ ತತ್ತ್ವಪ್ರತಿಪಾದನೆಯನ್ನು ವಿವರಿಸಿ ವಿಮರ್ಶಿಸುವಾಗ ಪಾಶ್ಚಾತ್ಯಪಂಡಿತರು ಋಕ್ಸಂಹಿತೆಯಲ್ಲಿ ಮೂರು ವಿಧವಾದ ಬೆಳವಣಿಗೆಯಿದೆಯೆಂದು ಅಭಿಪ್ರಾಯಪಡುತ್ತಾರೆ. Dr. ರಾಧಾಕೃಷ್ಣನ್‌ರವರು ಈ ವಿಷಯದಲ್ಲಿ ತಮ್ಮ ಅಭಿಪ್ರಾಯವನ್ನು ಈ ರೀತಿ ತಿಳಿಸಿದ್ದಾರೆ.

A religious growth of many centuries can not be a simple and transparent creed admitting of easy definition and classification· A striking aspect of the hymns is rheir Polytheistic character· A great many gods are named and worshipped· Yet some of the hymns shock us by their highly abstract philosophising and from primitive polytheism to systematic Philosophy, it is a long long way· Three strata of thought can be discerned in the religion of the hymns of the Rig-Veda, which are naturalistic polytheism, monotheism and monism·

(Indian Philosophy· Vol· I·p· 72)

ಅನೇಕಶತಮಾನಗಳ ಕಾಲದಿಂದ ಬೆಳೆದುಬಂದ ತಾತ್ತ್ವಿಕವಾದ ಅನ್ವೇಷವನ್ನು ಸುಲಭವಾಗಿ ವಿವರಿಸುವುದು ಸಾಧ್ಯವಲ್ಲ. ಅದರ ಲಕ್ಷಣವು ಹೀಗೆಯೇ ಎಂದು ನಿಷ್ಕೃಷ್ಟವಾಗಿ ಹೇಳಲು ಸಾಧ್ಯವಿಲ್ಲ. ಋಕ್ಸಂಹಿತಾವಾಕ್ಯಗಳಲ್ಲಿ ಬಹುದೇವತಾತತ್ತ್ವವು ಪ್ರತಿಪಾದಿತವಾಗಿರುವುದು ಮೊದಲನೆಯ ಮತ್ತು ಮುಖ್ಯವಾದ ಅಂಶವಾಗಿದೆ. ಆದರೂ ಸಹ ಕೆಲವು ಮಂತ್ರಗಳಲ್ಲಿ ಏಕದೇವತಾತತ್ತ್ವವು ಪ್ರತಿಪಾದಿತವಾಗಿರುವುದೂ, ಅದ್ವೈತವಾದಕ್ಕೆ ತಳಹದಿಯಾದ ಈ ಪ್ರತಿಪಾದನೆಯು ಋಕ್ಸಂಹಿತೆಯಲ್ಲಿಯೂ ಸಹ ಕೆಲವೆಡೆಗಳಲ್ಲಿ ಪ್ರಧಾನವಾದ ಅಂಶವಾಗಿರುವುದೂ, ಸಹ ತತ್ತ್ವಾನ್ವೇಷಿಗಳಿಗೆ ಸೋಜಿಗವನ್ನುಂಟುಮಾಡುವುದಾಗಿದೆ. ಋಕ್ಸಂಹಿತಾವಾಕ್ಯಗಳಿಂದ ಸೂಚಿತವಾಗುವ ತತ್ತ್ವಭಾವನೆಯ ಶ್ರೇಣಿಯಲ್ಲಿ ಮುಖ್ಯವಾದ ಮೂರು ಮೆಟ್ಟಿಲುಗಳನ್ನು ನೋಡಬಹುದು. ಅವು—

೧) ಪ್ರಕೃತಿತತ್ತ್ವವನ್ನು ಪ್ರತಿಬಿಂಬಿಸುವ ಬಹುದೇವತಾಭಾವ ;

೨) ನಾನಾದೇವತೆಗಳಲ್ಲೂ ಐಕ್ಯವನ್ನು ತೋರಿಸುವ ಏಕದೇವತಾಭಾವ

೩) ಏಕತತ್ತ್ವಪ್ರತಿಪಾದಕವಾದ ಅದ್ವೈತ

ಎಂಬ ಈ ಮೂರು ವಿಭಾಗಗಳನ್ನು ತೋರಿಸಿ ಈ ಮೂರು ಅಂಶಗಳನ್ನೂ ವಿಶದವಾಗಿ ವಿಮರ್ಶಿಸಿದ್ದಾರೆ (p. 72-98) ಪ್ರಕೃತವಾದ ಋಕ್ಕಿನಲ್ಲಿ ವರ್ಣಿತವಾಗಿರುವ ಭಾವವನ್ನು Monotheism ಎಂಬ ವರ್ಗಕ್ಕಾಗಲಿ ಅಥವಾ Monism (ಅದ್ವೈತ) ಎಂಬ ವರ್ಗಕ್ಕಾಗಲಿ ಸೇರಿಸಬಹುದು. ಅಗ್ನಿ ಅಥವಾ ಆದಿತ್ಯನೊಬ್ಬನೇ ಇಂದ್ರಾದಿದೇವತೆಗಳ ರೂಪದಲ್ಲಿ

ಪೂಜಿತನಾಗಿರುವನು ಎಂದರೆ ಇಂದ್ರಾದಿದೇವತೆಗಳ ತತ್ತ್ವವನ್ನು ಅಂಗೀಕರಿಸಿ ಅವರಲ್ಲಿ ಐಕ್ಯವನ್ನು ಅಗ್ನಿರೂಪನಾದ ಏಕದೇವತೆಯು ಸಂಪಾದಿಸಿರುವನು ಎಂದು ಅರ್ಥಮಾಡಿದೆ. ಅಥವಾ ಪ್ರಕೃತವಾದ ಋಕ್ಕಿನ ಉತ್ತರಾರ್ಧದಲ್ಲಿ **" ಏಕಂ ಸದ್ವಿಪ್ರಾ ಬಹುಧಾ ವದಂತಿ "** ಎಂಬ ವರ್ಣನೆಯು ಅದ್ವೈತವನ್ನು ಪ್ರತಿಪಾದಿಸುತ್ತದೆ. ಸದ್ವಿಪ್ರರು ಬಹುಪ್ರಕಾರವಾಗಿ ವರ್ಣಿಸುವ ಈ ಏಕತತ್ತ್ವವು ಋಕ್ಸಂಹಿತೆಯಲ್ಲಿ ನಾನಾಕಡೆಗಳಲ್ಲಿ ನಿರ್ದಿಷ್ಟವಾಗಿದೆ.

**ನ ಮೃತ್ಯುರಾಸೀದಮೃತಂ ನ ತರ್ಹಿ ನ ರಾತ್ರ್ಯಾ ಅಹ್ನ ಆಸೀತ್ಪ್ರಕೇತಃ ।**
**ಆನೀದವಾತಂ ಸ್ವಧಯಾ ತದೇಕಂ ತಸ್ಮಾದ್ಧಾನ್ಯನ್ನ ಪರಃ ಕಿಂ ಚನಾಸ ॥**

(ಋ. ಸಂ. ೧೦-೧೨೯-೨)

ಈ ಏಕತತ್ತ್ವವು ವಿಶ್ವಕ್ಕೆ ಆದಿಯಾಗಿಯೂ ವಿಶ್ವಕ್ಕೆ ಆಧಾರವಾಗಿಯೂ ಇದೆ. ಈ ಅದ್ವೈತಭಾವದ ಮಹತ್ತ್ವವನ್ನೂ ಸೌಂದರ್ಯವನ್ನೂ Radakrishnan ಅವರು ತಮ್ಮ ಉತ್ತಮವಾದ ಶೈಲಿಯಲ್ಲಿ ಈ ರೀತಿ ವರ್ಣಿಸಿದ್ದಾರೆ.

This One is the soul of the world, the reason immanent in the Universe, the source of all nature, the eternal energy. It is neither heaven, nor the earth, neither sunshine nor storm, but another essence, perhaps the Rita substantiated. the Aditi spiritualised the ONE breathing breathless. It is the supreme reality which lives in all things and moves them all, the real one that blushes in the rose, breaks into beauty in the clouds, shows its strength in the storms and sets the stars in the sky.

(Indian Philosophy. p. 95.)

ಈ ಏಕನೇ ವಿಶ್ವಾತ್ಮ, ವಿಶ್ವಾಂತರ್ಗತವಾದ ಚಿಚ್ಛಕ್ತಿ ಮತ್ತು ವಿಶ್ವಶಕ್ತಿಯ ಆಧಾರ. ಇದು, ಇತರ ಅನೇಕ ಋಕ್ಕುಗಳಲ್ಲಿ ವರ್ಣಿತವಾಗಿರುವ ಕೇವಲ ಪೃಥ್ವಿಯೂ ಅಲ್ಲ, ಅಂತರಿಕ್ಷವೂ ಅಲ್ಲ, ಸೂರ್ಯನ ಪ್ರಕಾಶವೂ ಅಲ್ಲ, ಭೌತಿಕವಾದ ಪ್ರಕೃತಿಶಕ್ತಿಯೂ ಅಲ್ಲ. ಬೃಹದಾರಣ್ಯಕದಲ್ಲಿ **'ನೇತಿ ನೇತಿ'** ಎಂಬ. ನಿಷೇಧವಾಕ್ಯಗಳಂವಲೇ **ಯಾವ** ಪರಬ್ರಹ್ಮದ ಅಸ್ತಿತ್ವವನ್ನು ಪ್ರತಿಪಾದಿಸಿವೆಯೋ ಅದೇ ಬ್ರಹ್ಮತತ್ತ್ವವು ವಿಶ್ವಚೇತನವಾಗಿದೆ. **ಋತ, ಅದಿತಿ** ಎಂದು ಇತರ ಕಡೆಗಳಲ್ಲಿ ವರ್ಣಿತವಾಗಿರುವ ವಿಶ್ವತತ್ತ್ವವು ಇಲ್ಲಿ ಸ್ತುತವಾಗಿದೆ. ವಿಶ್ವದ ನಾನಾ ಜೀವಗಳಲ್ಲೂ ಜೀವತತ್ತ್ವವನ್ನು ತುಂಬುವ ಈ ಶಕ್ತಿಯು ಸರ್ವವ್ಯಾಪಕವಾಗಿದೆ. ಇದೇ ಅಂಶವನ್ನು Prof. MaxMuller ಪಂಡಿತನು ವಿವರಿಸುತ್ತಾ ತನ್ನ ಅಭಿಪ್ರಾಯವನ್ನು ಈ ರೀತಿ ಹೇಳಿದ್ದಾನೆ.

" Whatever is the age when the collection of our Rig-Veda Samhita was finished it was before that age that the conviction had been formed that there is but ONE, ONE being, neither male nor female, a Being raised high above all the conditions and limitations of personality and of hyman nature, and nevertheless the being that was really meant by al sucn names as Indra, Agni, Matariswan, nay even by the name of Prajapati, Lord of creatures. In fact, the Vedic poets had arrived at a conception of the god-head which was reached once more by some of the christian Philosophers at Alexandria, but which even at present is beyond the reach of many who call themselves Christians "

(Six Systems of Indian Phylosophy. p. 51-52)

ಋಕ್ಸಂಹಿತಾಕಾಲವು ಯಾವ ಶತಮಾನದಲ್ಲಾಗಿದ್ದರೂ ಸಹ, ಸಂಹಿತಾಕಾಲಕ್ಕಿಂತಲೂ ಪೂರ್ವಭಾವಿಯಾದ ಮಂತ್ರಗಳ ಕಾಲದಲ್ಲಿಯೇ ಈ ಅದ್ವೈತತತ್ತ್ವದ ಪ್ರತಿಪಾದನೆಯು ಸ್ಪಷ್ಟವಾಗಿದ್ದಿತು. ಈ ಮಹಾಮೂಲತತ್ತ್ವವು ಲಿಂಗಾತೀತವೂ, ಮಾನವನ ಗೋಚರಾತೀತವೂ ಆದ ಏಕವೆಂದು ವರ್ಣಿತವಾಗಿದೆ. ಇದನ್ನು ಕೆಲವೆಡೆಗಳಲ್ಲಿ ಹಿರಣ್ಯಗರ್ಭನೆಂದೂ ವರ್ಣಿಸಿದೆ. ಈ ವಿಧವಾದ ಅದ್ವೈತತತ್ತ್ವಪ್ರತಿಪಾದನೆಯಲ್ಲಿರುವ ಮಹತ್ತ್ವವು ಈ ವಿಷಯದಲ್ಲಿ ಪರಿಶ್ರಮವನ್ನು ತೋರಿಸಿರುವ ಕ್ರಿಶ್ಚಿಯನ್‌ಮತದಲ್ಲಿ ಕೂಡ ಕಾಣುವುದಿಲ್ಲ.

**ಇಂದ್ರಂ, ಮಿತ್ರಂ** ಇತ್ಯಾದಿಪದಗಳು ಇಂದ್ರಾದಿನಾನಾದೇವತೆಗಳಲ್ಲಿರುವ ಮಹಚ್ಛಕ್ತಿಯೆಲ್ಲವೂ ಈ ಏಕದೇವನಲ್ಲಿಯೇ ಇದೆ ಎಂದು ಸೂಚಿಸುತ್ತವೆಯೆಂದು " **ಐಶ್ವರ್ಯವಿಶಿಷ್ಟಂ** " ಇತ್ಯಾದಿ ವಿವರಣೆಗಳಿಂದ ಸಾಯಣರು ತಿಳಿಸಿದ್ದಾರೆ. ಇಂದ್ರಾದಿಶಬ್ದಗಳ ನಿರ್ವಚನವನ್ನೂ ಅವುಗಳ ವಿಶೇಷಾರ್ಥವನ್ನೂ ಆಯಾ ದೇವತಾಪರವಾದ ಸೂಕ್ತಗಳನ್ನೂ ವಿವರಿಸುವಾಗ ತಿಳಿಸಿದೆ.

॥ ವ್ಯಾಕರಣಪ್ರಕ್ರಿಯಾ ॥

**ಮಿತ್ರಮ್**—ಞಿಮಿದಾ ಸ್ನೇಹನೇ. ಧಾತು **ಅಮಿಚಿಮಿದಿ**—(ಉ ಸೂ, ೪-೬೦೩) ಎಬುದರಿಂದ ಕ್ತ್ರಪ್ರತ್ಯಯ. ಕಿತ್ತಾದುದರಿಂದ ಲಘೂಪಧಗುಣ ಬರುವುದಿಲ್ಲ. ಪ್ರತ್ಯಯಸ್ವರದಿಂದ ಅಂತೋದಾತ್ತವಾಗುತ್ತದೆ.

**ದಿವ್ಯಃ**—ದಿವಿ ಭವಃ ದಿವ್ಯಃ **ದಂಡಾದಿಭ್ಯೋಯಃ** (ಪಾ. ಸೂ. ೫-೧-೬೬)ಎಂಬುದರಿಂದ ಯ ಪ್ರತ್ಯಯ ಪ್ರತ್ಯಯಸ್ವರದಿಂದ ಅಂತೋದಾತ್ತವಾಗುತ್ತದೆ.

**ಸುಪರ್ಣಃ**—ಶೋಭನೌ ಪರ್ಣೌ ಯಸ್ಯ ಸಃ **ನಞ್‌ಸುಭ್ಯಾಮ್** (ಪಾ. ಸೂ. ೬-೨-೧೭೨) ಎಂಬುದರಿಂದ ಉತ್ತರಪದಾಂತೋದಾತ್ತಸ್ವರ ಬರುತ್ತದೆ.

ಬಹುಧಾ—**ಸಂಖ್ಯಾಯಾ ವಿಧಾರ್ಥೇಧಾ** (ಪಾ. ಸೂ. ೫-೩-೪೨) ಎಂಬುದರಿಂದ ಪ್ರಕಾರಾರ್ಥದಲ್ಲಿ ಧಾ ಪ್ರತ್ಯಯ. ತಸಿಲಾದಿಯಲ್ಲಿ ಸೇರಿರುವುದರಿಂದ ಅವ್ಯಯವಾಗುತ್ತದೆ. ಪ್ರತ್ಯಯಸ್ವರದಿಂದ ಅಂತೋದಾತ್ತವಾಗುತ್ತದೆ. ॥ ೪೬ ॥

ಸಂಹಿತಾಪಾಠಃ

**ಕೃಷ್ಣಂ ನಿಯಾನಂ ಹರಯಃ ಸುಪರ್ಣಾ ಅಪೋ ವಸಾನಾ ದಿವಮುತ್ಪತಂತಿ।**
**ತ ಆವವೃತ್ರನ್ತ್ಸದನಾದೃತಸ್ಯಾದಿದ್ಘೃತೇನ ಪೃಥಿವೀ ವ್ಯುದ್ಯತೇ ॥ ೪೭ ॥**

ಪದಪಾಠಃ

ಕೃಷ್ಣಂ । ನಿಽಯಾನಂ । ಹರಯಃ । ಸುಽಪರ್ಣಾಃ । ಅಪಃ । ವಸಾನಾಃ । ದಿವಂ । ಉತ್ । ಪತಂತಿ । ತೇ । ಆ । ಅವವೃತ್ರನ್ । ಸದನಾತ್ । ಋತಸ್ಯ । ಆತ್ । ಇತ್ । ಘೃತೇನ । ಪೃಥಿವೀ । ವಿ । ಉದ್ಯತೇ ॥ ೪೭ ॥

ಸಾಯಣಭಾಷ್ಯಂ

ವರ್ಷಕಾಮೇಷ್ಟ್ಯಾಂ ತಿಸ್ರಃ ಪಿಂಡ್ಯೋ ಹೋತವ್ಯಾಃ । ತತ್ರ ಕೃಷ್ಣಂ ನಿಯಾನಮಿತಿ ತೃತೀಯ-ಸ್ಯಾನುವಾಕ್ಯಾ । ಕೃಷ್ಣಂ ನಿಯಾನಂ ಹರಯಃ ಸುಪರ್ಣಾ ನಿಯುತ್ವಂತೋ ಗ್ರಾಮಜಿತೋ ಯಥಾ ನರಃ । ಆ ೨-೧೩. ಇತಿ ॥

ಕೃಷ್ಣಂ ಕೃಷ್ಣವರ್ಣಂ ನಿಯಾನಂ ನಿಯಮೇನ ಗಚ್ಛಂತಂ ಮೇಘಂ ಹರಯ ಉದಕಸ್ಯ ಹರ್ತಾರಃ ಸುಪರ್ಣಾಃ ಶೋಭನಪತನಾ ರಶ್ಮಯೋಽಪೋ ವಸಾನಾ ಉದಕಾನಿ ವಾಸಯಂತೋ ಮೇಘೇಷು । ಅದ್ಭಿರ್ಮೇಘಾನ್ಪೂರಯಂತ ಇತ್ಯರ್ಥಃ । ಅಂತರ್ಭಾವಿತಣ್ಯರ್ಥಾದ್ದ್ವಿಕರ್ಮಕತ್ವಂ ॥ ಯದ್ವಾ । ಕೃಷ್ಣಂ ನಿಯಾನಂ ನಿಯಮನಂ ರಾತ್ರಿಃ । ದೇವಾನಾಂ ಹ ರಾತ್ರಿರ್ದಕ್ಷಿಣಾಯನಂ । ತತ್ಪ್ರತಿ । ತಸ್ಮಿನ್ವರ್ಷಕಾಲ ಇತ್ಯರ್ಥಃ । ಏವಂ ಕುರ್ವಂತೋ ದಿವಂ ದ್ಯುಲೋಕಂ ತದಾಶ್ರಿತಮಾದಿತ್ಯಂ ವೋದ್ದಿಶ್ಯೋತ್ಪತಂತಿ । ಊರ್ಧ್ವಂ ಗಚ್ಛಂತಿ । ತೇ ರಶ್ಮಯ ಋತಸ್ಯ ಸದನಾದುದಕಸ್ಯ ಸ್ಥಾನಾದಾದಿತ್ಯ-ಮಂಡಲಾದಾವವೃತ್ರನ್ । ಆವರ್ತಂತೇ । ಅರ್ವಾಂಚ ಆಗಚ್ಛಂತಿ । ಆದಿದನಂತರಮೇವ ಯದಾ-ರ್ವಾಗ್ಗಚ್ಛಂತಿ ತದಾನೀಮೇವ ಘೃತೇನೋದಕೇನ ಪೃಥಿವೀ ವ್ಯುದ್ಯತೇ । ವಿವಿಧಂ ಕ್ಲಿದ್ಯತೇ । ಕೃಷ್ಣಂ ನಿರಯಣಂ ರಾತ್ರಿರಾದಿತ್ಯಸ್ಯ ಹರಯಃ ಸುಪರ್ಣಾ ಹರಣಾ ಆದಿತ್ಯರಶ್ಮಯ ಇತ್ಯಾದಿನಿರುಕ್ತಂ ದ್ರಷ್ಟವ್ಯಂ । ನಿ. ೭-೨೪ ॥

ಪ್ರತಿಪದಾರ್ಥ

**ಹರಯಃ** – ಉದಕವನ್ನು ವಹಿಸತಕ್ಕವೂ । **ಸುಪರ್ಣಾಃ**—ಶ್ರೇಷ್ಠವಾದ ಸಂಚಾರವುಳ್ಳವೂ ಆದ ರಶ್ಮಿಗಳು । **ಕೃಷ್ಣಂ**—ಕಪ್ಪುಬಣ್ಣವುಳ್ಳದ್ದೂ ನಿಯತವಾದ ಗತಿಯುಳ್ಳದ್ದೂ ಆದ ಮೇಘವನ್ನು । **ಅಪಃ**—ಉದಕದಿಂದ । **ವಸಾನಾ**—ಆಚ್ಛಾದಿತವಾಗುವಂತೆ ಮಾಡಿ ; (ಉದಕದಿಂದ ತುಂಬಿ) । **ದಿವಂ**—ದ್ಯುಲೋಕಾಭಿಮುಖವಾಗಿ । **ಉತ್ಪತಂತಿ**—ಮೇಲಕ್ಕೆ ಪ್ರಸರಿಸಿ ಹರಡುತ್ತವೆ । **ತೇ**—ಅವು । **ಋತಸ್ಯ**—ಉದಕದ । **ಸದನಾತ್**— ಸ್ಥಾನವಾದ ಆದಿತ್ಯನಿಂದ । **ಆ ಅವವೃತ್ರನ್**—ಹಿಂತಿರುಗುತ್ತವೆ । **ಆದಿತ್**—ಒಡನೆಯೇ । **ಪೃಥಿವೀ**—ಪೃಥ್ವಿಯು । **ಘೃತೇನ**—ಉದಕದಿಂದ । **ವ್ಯುದ್ಯತೇ**—ತೋಯಲ್ಪಡುತ್ತದೆ ।

। ಭಾವಾರ್ಥ ।

ಉದಕವನ್ನು ವಹಿಸಿರತಕ್ಕವೂ, ಶ್ರೇಷ್ಠವಾದ ಸಂಚಾರವುಳ್ಳವೂ ಆದ ರಶ್ಮಿಗಳು ಕಪ್ಪುಬಣ್ಣವುಳ್ಳದ್ದೂ ನಿಯತವಾದ ಗತಿಯುಳ್ಳದ್ದೂ ಆದ ಮೇಘವನ್ನು ಉದಕದಿಂದ ಆಚ್ಛಾದಿತವಾಗುವಂತೆ ಮಾಡಿ ಎಂದರೆ ಉದಕದಿಂದ ತುಂಬಿ ದ್ಯುಲೋಕಾಭಿಮುಖವಾಗಿ ಮೇಲಕ್ಕೆ ಪ್ರಸರಿಸುತ್ತವೆ. ಪುನಃ ಅವು ಉದಕದ ಸ್ಥಾನವಾದ ಆದಿತ್ಯನಿಂದ ಹಿಂತಿರುಗುತ್ತವೆ. ಒಡನೆಯೇ ಪೃಥ್ವಿಯು ಉದಕದಿಂದ ತೋಯಲ್ಪಡುತ್ತದೆ.

## English Translation

The smooth-gliding wafters (of the rain, the solar rays), clothing the the waters with a dark cloud, ascend to heaven : they come down again from the dwelling of the rain, and immediately the earth is moistened with water.

**ವಿಶೇಷವಿಷಯಗಳು**

ವರ್ಷಕಾಮೇಷ್ಟಿಯೆಂಬ ಯಾಗದಲ್ಲಿ ಮೂರು ಪಿಂಡಿಗಳನ್ನು ಹೋಮಮಾಡಬೇಕಾಗಿರುವುದು. ಅವುಗಳಲ್ಲಿ ಮೂರನೆಯದನ್ನು ಹೋಮಮಾಡುವಾಗ **ಕೃಷ್ಣಂ ನಿಯಾನಂ** ಎಂಬ ಈ ಋಕ್ಕನ್ನು ಪುರೋನುವಾಕ್ಯಾಮಂತ್ರವನ್ನಾಗಿ ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ **ಕೃಷ್ಣಂ ನಿಯಾನಂ ಹರಯಃ ಸುಪರ್ಣಾ ನಿಯುತ್ವಂತೋ ಗ್ರಾಮಜಿತೋ ಯಥಾ ನರಃ** ಎಂಬ ಸೂತ್ರದಿಂದ ವಿವೃತವಾಗಿರುವುದು. (ಆ. ೨-೧೩)

ಈ ಋಕ್ಕಿಗೆ ಸಾಯಣರು ಹೇಳಿರುವ ಅರ್ಥವು ನಿರುಕ್ತಕಾರರ ವಿವರಣೆಗಿಂತ ಕೊಂಚ ವ್ಯತ್ಯಸ್ತವಾಗಿದೆ. ಸಾಯಣರು **ಕೃಷ್ಣಂ ನಿಯಾನಂ** ಎಂಬುದಕ್ಕೆ **ಕೃಷ್ಣವರ್ಣಂ ಮೇಘಂ ।** ಕೃಷ್ಣವರ್ಣದ ಮೇಘವೆಂದರ್ಥಮಾಡಿದ್ದಾರೆ. ನಿರುಕ್ತದಲ್ಲಿ **ಕೃಷ್ಣಂ ನಿರಯಣಂ ರಾತ್ರಿಂ** ಎಂದರ್ಥಮಾಡಿದೆ. ಈ ಋಕ್ಕಿಗೆ ನಿರುಕ್ತವು ಈ ರೀತಿಯಿದೆ.–

> **ಕೃಷ್ಣಂ ನಿರಯಣಂ ರಾತ್ರಿರಾದಿತ್ಯಸ್ಯ ಹರಯಃ ಸುಪರ್ಣಾ ಹರಣಾ ಆದಿತ್ಯರಶ್ಮಯಸ್ತೇ ಯದಾಮುತೋಽರ್ವಾಂಚಃ ಪರ್ಯಾವರ್ತಂತೇ ಸಹಸ್ಥಾನಾದುದಕಸ್ಯಾದಿತ್ಯಾದಥ ಘೃತೇನೋದಕೇನ ಪೃಥಿವೀ ವ್ಯುದ್ಯತೇ ।**
>
> (ನಿ ೭-೨೪)

ನಿರಯಣವೆಂದರೆ ಇಲ್ಲಿ ಸಂಚಾರಮಾರ್ಗವೆಂದು ಹೇಳಬಹುದು. (ನಿರ್ಗಮನ ಮಾರ್ಗವೆಂದು ಈ ಪದಕ್ಕೆ ಸಾಧಾರಣವಾದ ಅರ್ಥವಿರುತ್ತದೆ.) ಆದಿತ್ಯನ ಸಂಚಾರಮಾರ್ಗಗಳೆರಡು. ಒಂದು ಕೃಷ್ಣವರ್ಣದ್ದು ಇನ್ನೊಂದು ಶುಕ್ಲವರ್ಣದ್ದು. ಕೃಷ್ಣವರ್ಣದ ಸಂಚಾರಮಾರ್ಗಕ್ಕೆ ರಾತ್ರಿಯೆಂದಾಗಲಿ ಅಥವಾ ದಕ್ಷಿಣಾಯನವೆಂದಾಗಲಿ ಅರ್ಥಮಾಡಬಹುದು. ಅಥವಾ ದಕ್ಷಿಣಾಯನದ ಸಂಚಾರವನ್ನೇ ಆದಿತ್ಯನ ರಾತ್ರಿಸಂಚಾರವೆಂದಾಗಲಿ ಹೇಳಬಹುದು. ದುರ್ಗಾಚಾರ್ಯರು ನಿರುಕ್ತವಾಕ್ಯಕ್ಕೆ ವ್ಯಾಖ್ಯಾನವನ್ನು ಈ ರೀತಿ ಬರೆದಿರುತ್ತಾರೆ.

> **ನಿಯಾನಂ ನಿರಯಣಂ ನಿರ್ಗತಿಃ [ನಿರ್ಯಾತಿ] ನಿರ್ಗಚ್ಛಂತ್ಯೇತದಿತಿ ನಿಯಾನಂ ವರ್ತ್ಮ ಪಂಥಾಃ । ತಚ್ಚ ಪುನರೇತತ್ । ರಾತ್ರಿಃ ಆದಿತ್ಯಸ್ಯ । ದ್ವೇಹ್ಯಸ್ಯಾಯನೇ ಶುಕ್ಲಂ ಚೋತ್ತರಂ ಕೃಷ್ಣಂ ಚ ದಕ್ಷಿಣಂ । ಸಾ ಹಿ ದೈವೀರಾತ್ರಿರಭಿಪ್ರೇತಾ । ತತೋ ಬ್ರವೀತಿ ರಾತ್ರಿರಾದಿತ್ಯಸ್ಯ ಜ್ಯೋತಿಷಃ । ಸ ಏಷ ಭಗವಾನಾದಿತ್ಯೋ ಯದಾ ಜಗದನುಗ್ರಹಾಯ ಗರ್ಭಮುದಕಮಾತ್ಮನ್ಯಾಧಿತ್ಸುರುತ್ತಸ್ಮಾದಸ್ಮಾರಾಯಣಂ ಪ್ರತಿಪದ್ಯತೇ ತದೈತೇ ಹರಯಃ ರಸ ಹರಣಾಃ ಸುಪರ್ಣಾಃ ತಸ್ಯ ರಶ್ಮಯಃ ಸರ್ವಸ್ಮಾದಸ್ಮಾಲ್ಲೋಕಾತ್ ಅಪೋವಸಾನಾಃ ಆತ್ಮನ್ಯಾಚ್ಛಾದಯಂತಃ ಆದದಾನಾಃ ದಿವಂ ದ್ಯೋತನವಂತಮೇತಮಾದಿತ್ಯಂ ಪ್ರತಿಉತ್ಪತಂತಿ ॥**
>
> (ನಿರುಕ್ತವ್ಯಾಖ್ಯಾ. ೭-೪)

ಆದಿತ್ಯನ ಗತಿಯು ಎರಡು ವಿಧವಾಗಿರುತ್ತದೆ. ಒಂದು ಉತ್ತರಾಯಣಕ್ಕೂ ಇನ್ನೊಂದು ದಕ್ಷಿಣಾಯನಕ್ಕೂ ಸಂಬಂಧಿಸಿದುದು. ಒಂದನ್ನು ಶುಕ್ಲವೆಂದೂ ಇನ್ನೊಂದನ್ನು ಕೃಷ್ಣವೆಂದೂ ಕರೆದಿದೆ ಇಲ್ಲಿ ರಾತ್ರಿಯೆಂಬುದು ಕೃಷ್ಣಾಯನಕ್ಕೆ ಪರ್ಯಾಯವಾದ ಪದವಾಗಿದೆ, ಎಂದು ವಿವರಿಸಿರುವುದನ್ನೇ ಸಾಯಣರೂ ಸಹ ತಮ್ಮ ಎರಡನೇ ಅರ್ಥದಲ್ಲಿ ತಿಳಿಸಿದ್ದಾರೆ. **ಯದ್ವಾ । ಕೃಷ್ಣಂ ನಿಯಾನಂ ನಿಯಮನಂ ರಾತ್ರಿಃ । ದೇವಾನಾಂ ಹಿ ರಾತ್ರಿರ್ದಕ್ಷಿಣಾಯನಂ । ತತ್ಪ್ರತಿ ತಸ್ಮಿನ್ವರ್ಷಾಕಾಲೇ ಇತ್ಯರ್ಥಃ ।** ದೇವತೆಗಳ ರಾತ್ರಿಕಾಲಕ್ಕೆ ದಕ್ಷಿಣಾಯನವೆಂದು ಹೆಸರು. ಆದಿತ್ಯನು ಉತ್ತರಾಯಣದ ಗತಿಯನ್ನನುಸರಿಸುತ್ತಿದ್ದಾಗ ಅವನ ರಶ್ಮಿಗಳೆಲ್ಲವೂ ಪ್ರಪಂಚದಲ್ಲಿ ಪ್ರಸರಿಸಿ ಎಲ್ಲಾ ಪ್ರದೇಶಗಳಿಂದಲೂ ಉದಕವನ್ನು

ಸಂಗ್ರಹಿಸಿ ಈ ರಾತ್ರಿಕಾಲಕ್ಕೆ ಸರಿಯಾಗಿ ಪುನಃ ಆದಿತ್ಯನನ್ನು ಸೇರುವುವು. ಇದೇ ವರ್ಷಾಕಾಲವು. ಈ ಕಾಲದಲ್ಲಿ ವೃಷ್ಟಿಯು ಪ್ರಭೂತವಾಗಿ ಸುರಿಯುವುದೆಂದರ್ಥವು. ಈ ಶುಕ್ಲಕೃಷ್ಣಗಳನ್ನು ಭಗವದ್ಗೀತೆಯಲ್ಲಿ ವಿವರಿಸುತ್ತಾ,

**ಅಗ್ನಿರ್ಜ್ಯೋತಿರಹಶ್ಶುಕ್ಲಃ ಷಣ್ಮಾಸಾ ಉತ್ತರಾಯಣಂ ।**
**ತತ್ರ ಪ್ರಯಾತಾ ಗಚ್ಛಂತಿ ಬ್ರಹ್ಮ ಬ್ರಹ್ಮವಿದೋ ಜನಾಃ ॥**
**ಧೂಮೋ ರಾತ್ರಿಸ್ತಥಾ ಕೃಷ್ಣಃ ಷಣ್ಮಾಸಾ ದಕ್ಷಿಣಾಯನಂ ।**
**ತತ್ರ ಚಾಂದ್ರಮಸಂ ಜ್ಯೋತಿರ್ಯೋಗೀ ಪ್ರಾಪ್ಯ ನಿವರ್ತತೇ ॥**
**ಶುಕ್ಲಕೃಷ್ಣೇ ಗತೀ ಹ್ಯೇತೇ ಜಗತಶ್ಶಾಶ್ವತೇ ಮತೇ ।**
**ಏಕಯಾ ಯಾತ್ಯನಾವೃತ್ತಿಮನ್ಯಯಾವರ್ತತೇ ಪುನಃ ॥**
(ಭಗವದ್ಗೀತಾ. ೮-೨೪-೨೬)

ಎಂಬ ವಾಕ್ಯಗಳಿಂದ ವರ್ಣಿಸಿದೆ ಇಲ್ಲಿ ಕೇವಲ ಭೌತಿಕವಾದ ವರ್ಣನೆಯು ಮಾತ್ರವಲ್ಲದೇ, ನೈತಿಕವ್ಯವಹಾರಕ್ಕೆ ಸಂಬಂಧಿಸಿದ ಫಲಾಫಲಗಳನ್ನೂ ತಿಳಿಸಿದೆ. ಇವಕ್ಕೆ ಅರ್ಚಿರಾದಿ ಮಾರ್ಗವೆಂದೂ ಧೂಮಮಾರ್ಗವೆಂದೂ ವ್ಯವಹಾರ ವಿರುವುದಾಗಿ ಹಿಂದೆ ದೇವಯಾನ ಮತ್ತು ಪಿತೃಯಾನಗಳ ವಿಷಯವನ್ನು ವಿವರಿಸುವಾಗ ಹೇಳಿದೆ. [cf ಛಾ. ಉ. ೫-೧೦-೩ ; ಬೃ. ಉ. ೬-೨-೧೫]. ಈ ವಿಧವಾದ ಆಧಾರಗಳಿಂದ ಕೃಷ್ಣಂ ನಿರಯಣಂ ಎಂಬುದಕ್ಕೆ ನಿರುಕ್ತ ಕಾರರು ಕೇವಲ ರಾತ್ರಿಯೆಂದು ಅರ್ಥಮಾಡಿದ್ದರೂ ಸಹ ಸಾಯಣರು "ದೇವಾನಾಂ ರಾತ್ರಿರ್ದಕ್ಷಿಣಾಯನಂ" ಎಂದು ಅರ್ಥಮಾಡಿದ್ದಾರೆ.

**ಋತಸ್ಯ ಸದನಾತ್—ಉದಕಸ್ಯ ಸ್ಥಾನಾದಾದಿತ್ಯಮಂಡಲಾತ್** । ಉದಕಕ್ಕೆ ಉತ್ಪತ್ತಿಸ್ಥಾನವಾದ ಆದಿತ್ಯಮಂಡಲದಿಂದ ಎಂದರ್ಥಮಾಡಿದೆ. ಋತಶಬ್ದಕ್ಕೆ ಇಲ್ಲಿ ಉದಕನೆಂದರ್ಥ. [ಋತಶಬ್ದಕ್ಕೆ ಸತ್ಯ, ಆದಿತ್ಯನ ಪಥ ಇತ್ಯಾದ್ಯನೇಕವಾದ ಅರ್ಥಗಳಿರುವುದನ್ನು ಹಿಂದೆ ಆಯಾ ಸಂದರ್ಭಗಳಲ್ಲಿ ತಿಳಿಸಿದೆ.] ನಿರುಕ್ತಕಾರರು **ಋತ** ಶಬ್ದವನ್ನು **ಉದಕ**ನಾಮಗಳಲ್ಲಿ ಪಠಿಸಿದ್ದಾರೆ. (ನಿ. ೨-೨೪). ಋಕ್ಸಂಹಿತೆಯಲ್ಲಿ ಸುಮಾರು ಎಪ್ಪತ್ತು ಋಕ್ಕುಗಳಲ್ಲಿ ಋತಶಬ್ದಕ್ಕೆ ಉದಕವೆಂದೇ ಅರ್ಥವಾಗಿದೆ. ನಿರುಕ್ತದಲ್ಲಿ **ಋತಂ ಯೋನಿಃ । ಋತಸ್ಯ ಯೋನಿಃ । ಸತ್ಯಂ । ನೀರಂ ।** ಎಂಬ ಪದಗಳನ್ನೆಲ್ಲಾ ಒಟ್ಟಿಗೆ ಸೇರಿಸಿದೆ. **ಋತ**ಶಬ್ದಕ್ಕೆ ಸತ್ಯವೆಂಬರ್ಥವನ್ನು ಮಾಡಿದರೂ ಸಹ ಆಗ ಉದಕವೇ ವಿಶ್ವದ ಮೂಲತತ್ತ್ವ ಎಂಬ ಕೆಲವು ತಾತ್ತ್ವಿಕರ ಮತದಂತೆ ಸತ್ಯಾತ್ಮಕವಾಗಿರುವ ಉದಕವೆಂದು ಅರ್ಥ ವಾಗುತ್ತದೆ. ಆದರೆ,

**ಯದ್ಧ ತ್ಯನ್ಮಿತ್ರಾವರುಣಾವೃತಾದಧ್ಯಾದದಾಥೇ ಅನೃತಂ ಸ್ವೇನ ಮನ್ಯುನಾ ದಕ್ಷಸ್ಯ ಸ್ವೇನ ಮನ್ಯುನಾ ।**
**ಯುವೋರಿತ್ಥಾಧಿ ಸದ್ಮಸ್ವಪಶ್ಯಾಮ ಹಿರಣ್ಯಯಂ** ... .... .... .... ।
**ಧೀಭಿಶ್ಚನ ಮನಸಾ ಸ್ವೇಭಿರಕ್ಷಭಿಃ ಸೋಮಸ್ಯ ಸ್ವೇಭಿರಕ್ಷಭಿಃ ॥**
(ಋ. ಸಂ. ೧-೧೩೯-೨)

ಎಂಬ ಋಕ್ಕಿನಲ್ಲಿ **ಋತಾದನೃತಮಾದದಾಥೇ** ಎಂಬುದಕ್ಕೆ **ಋತಾತ್—ಆದಿತ್ಯಾತ್ । ಅನೃತಂ ಶೋಷಣ-ಸ್ವಭಾವಂ** (ಉದಕಂ) ಎಂದು ಋತಶಬ್ದಕ್ಕೆ ಆದಿತ್ಯನೆಂದೂ, ಅನೃತಶಬ್ದಕ್ಕೆ ಉದಕವೆಂದೂ, ಅರ್ಥವಾಗುತ್ತದೆ. ಮತ್ತು ಉದಕಕ್ಕೆ ಅನೃತವೆಂಬ ವಿಶೇಷಣವು ನೀರಿನ ಅಶಾಶ್ವತವಾದ ಸ್ಥಿತಿಯನ್ನು ತೋರಿಸುತ್ತದೆಯೆಂದು ಸಾಯಣರು

ವಿವರಿಸಿದ್ದಾರೆ. ಉಪನಿಷದಾದಿಗಳಲ್ಲಿ ಹೇಳುವಂತೆ ಶಾಶ್ವತವಾದುದೇ ಸತ್ಯವೆಂದೂ, ಅಶಾಶ್ವತವಾದುದೇ ಅಸತ್ಯವೆಂದೂ ಸಹ ಅರ್ಥವಾಗಬಹುದು. ಈ ಅಭಿಪ್ರಾಯವು ಉದಾಹೃತವಾದ ಋಕ್ಕಿನ ಅರ್ಥಕ್ಕೆ ಮಾತ್ರ ಹೊಂದಿಕೊಂಡರೂ ಸಹ ಅನೃತಶಬ್ದವನ್ನು ಉದಕಪರ್ಯಾಯವಾಗಿ ಉಪಯೋಗಿಸಿರುವುದು ಅಪರೂಪ.

**ಘೃತೇನ—ಘೃತಮಿತ್ಯುದಕನಾಮ** (ನಿ. ೭-೨೩) ಘೃತವೆಂಬುದು ಉದಕಪರ್ಯಾಯವಾದ ನಾಮವಾಗಿದೆ. ಸೇಚನಾರ್ಥಕವಾದ ಘೃ ಧಾತುವಿನಿಂದ ನಿಷ್ಪನ್ನವಾಗಿದೆ. **" ಜಿಘರ್ತೇಃ ಸಿಂಚತಿಕರ್ಮಣಃ "**

**ಆವವೃತ್ರನ್ತ್ಸದನಾದೃತಸ್ಯಾದಿದ್ ಘೃತೇನ ಪೃಥಿವೀ ವ್ಯುದ್ಯತೇ**—ಎಂಬ ಉತ್ತರಾರ್ಧಕ್ಕೆ ನಿರುಕ್ತಕಾರರು ಬೇರೊಂದು ಅರ್ಥವೂ ಸಾಧ್ಯವೆಂದು ತಿಳಿಸಿದ್ದಾರೆ.

> **ಅಥಾ ಪಿ ಬ್ರಾಹ್ಮಣಂ ಭವತ್ಯಗ್ನಿರ್ವಾ ಇತೋ ವೃಷ್ಟಿಂ ಸಮೀರಯತಿ ಧಾಮಚ್ಛದ್ದಿವಿ ಖಲು ಭೂತ್ವಾ ವರ್ಷತಿ ಮರುತಃ ಸೃಷ್ಟಾಂ ವೃಷ್ಟಿಂ ನಯಂತಿ । ಯದಾ ಖಲು ವಾಸಾವಾದಿತ್ಯೋಽಗ್ನಿಂ ರಶ್ಮಿಭಿಃ ಪರ್ಯಾವರ್ತತೇಽಥ ವರ್ಷತೀತಿ ।**
>
> (ನಿ ೭-೨೪)

'ಅಗ್ನಿಯು ಈ ಲೋಕದಿಂದ ಮಳೆಯನ್ನು ಸುರಿಸುತ್ತಾನೆ' ಎಂಬ ಬ್ರಾಹ್ಮಣವಾಕ್ಯವಿದೆ. ಅದು ಹೇಗೆಂದರೆ ಅಗ್ನಿಯು ಧೂಮರೂಪದಿಂದ ಅಂತರಿಕ್ಷವನ್ನು ಸೇರಿ ಮೇಘವಾಗಿ ಪರಣಮಿಸಿ ವೃಷ್ಟಿಯನ್ನು ಸುರಿಸುತ್ತದೆ. 'ಆದಿತ್ಯನು ತನ್ನ ರಶ್ಮಿಗಳಿಂದ ಅಗ್ನಿಯನ್ನು ಪ್ರತಿನಿವೃತ್ತನಾಗುವಂತೆ ಮಾಡಿದಾಗ ವೃಷ್ಟಿಪತನವಾಗುತ್ತದೆ' ಎಂಬುದೂ ಸಹ ಇನ್ನೊಂದು ಬ್ರಾಹ್ಮಣವಾಕ್ಯವಿದೆಯೆಂದು ಅಗ್ನಿಪರವಾದ ಅರ್ಥವನ್ನೂ ಮಾಡಿದೆ.

**ಆ ಅವವೃತ್ರನ್:—ಅರ್ವಾಙ್ ಆಗಚ್ಛತಿ ।** ಅಭಿಮುಖವಾಗಿ ಎಂದಾಗಲಿ ಅಥವಾ ಅಧೋಮುಖವಾಗಿ ಬಂದಾಗ ಎಂದಾಗಲಿ ಅರ್ಥವಾಗುತ್ತದೆ.

**ಸುಪರ್ಣಾಃ—ಶೋಭನಪತನಾ ರಶ್ಮಯಃ ।** ಆಕರ್ಷಕವಾಗಿ ಸಂಚರಿಸತಕ್ಕವು ಎಂದು ರಶ್ಮಿಗಳಿಗೆ ಪರ್ಯಾಯನಾಮವಾಗಿದೆ. ಸುಪರ್ಣಶಬ್ದವು **ರಶ್ಮಿನಾಮಗಳಲ್ಲಿಯೂ** (ನಿ. ೨-೧೫), **ಅಶ್ವನಾಮಗಳಲ್ಲಿಯೂ** (ನಿ. ೨-೨೭) ಪಠಿತವಾಗಿದೆ. **ಪಕ್ಷಿ, ಬಾಣ** ಇತ್ಯಾದ್ಯರ್ಥಗಳಲ್ಲಿಯೂ ಸಹ ಉಪಯೋಗಿಸಲ್ಪಟ್ಟಿದೆ. ಯಾವ ಅರ್ಥವನ್ನು ಹೇಳಿದರೂ, ಗರ್ಭವಾದ ಕಂಪುನವುಳ್ಳವು ಎಂದರ್ಥ, ಈ ಪದಕ್ಕೆ ಇರುವ ನಾನಾರ್ಥಗಳನ್ನೂ ಈ ವಿಶೇಷಣದ ವೈಶಿಷ್ಟ್ಯವನ್ನೂ ಸಹ ಇದೇ ಭಾಗದ 421 ನೇ ಪುಟದಲ್ಲಿ ವಿಶದವಾಗಿ ತಿಳಿಸಿದೆ.

### ವ್ಯಾಕರಣಪ್ರಕ್ರಿಯಾ

ನಿಯಾನಮ್—ಯಾ ಪ್ರಾಪಣೇ. ಧಾತು. ಬಹುಲಗ್ರಹಣದಿಂದ ಕರ್ತರಿಯಲ್ಲಿ ಲ್ಯುಟ್ ಪ್ರತ್ಯಯ. **ಯುವೋರನಾಕೌ** (ಪಾ. ಸೂ. ೭-೧-೧) ಎಂಬುದರಿಂದ ಅದಕ್ಕೆ ಅನಾದೇಶ. ಕೃದುತ್ತರಪದಪ್ರಕೃತಿಸ್ವರ ಬರುತ್ತದೆ.

ಹರಯಃ—ಹೃಞ್ ಹರಣೇ. ಧಾತು. **ಹೃಪಿಷಿರುಹಿ**—(ಉ. ಸೂ. ೪-೫೫೮) ಎಂಬುದರಿಂದ ಇನ್ ಪ್ರತ್ಯಯ ಅದನ್ನು ನಿಮಿತ್ತೀಕರಿಸಿ ಋಕಾರಕ್ಕೆ ಗುಣ. ರಪರವಾಗಿ ಬರುತ್ತದೆ. **ಞ್ನಿತ್ಯಾದಿರ್ನಿತ್ಯಮ್** (ಪಾ. ಸೂ. ೬-೧-೧೯೭) ಎಂಬುದರಿಂದ ಆದ್ಯುದಾತ್ತಸ್ವರ ಬರುತ್ತದೆ ಪ್ರಥಮಾ ಬಹುವಚನಾಂತರೂಪ.

**ಅಪಃ**—ದ್ವಿತೀಯಾ ಬಹುವಚನಾಂತರೂಪ. **ಊಡಿದಂಪದಾದಿ**—(ಪಾ. ಸೂ. ೬-೧-೧೭೧) ಎಂಬುದರಿಂದ ವಿಭಕ್ತಿಗೆ ಉದಾತ್ತಸ್ವರ ಬರುತ್ತದೆ.

**ವಸಾನಾಃ**—ವಸ ಆಚ್ಛಾದನೇ. ಅಂತರ್ಭಾವಿತಣ್ಯರ್ಥಕವಾದ ಧಾತು ಲಟಿಗೆ ಶಾನಚಾದೇಶ. ಅನುದಾತ್ತೇತ್ತ್ವಾದುದರಿಂದ **ತಾಸ್ಯನುದಾತ್ತೇತ್**—(ಪಾ. ಸೂ. ೬-೧-೧೮೬) ಎಂಬುದರಿಂದ ಶಾನಚ್ ಅನುದಾತ್ತವಾಗುವುದರಿಂದ ಧಾತುಸ್ವರ ಉಳಿಯುತ್ತದೆ

**ಪತಂತಿ** ಪತ್ಲೃ ಗತೌ ಧಾತು. ಲಟ್ ಪ್ರಥಮಪುರುಷಬಹುವಚನಾಂತರೂಪ. ।ತಿಙಂತ ನಿಘಾತಸ್ವರ ಬರುತ್ತದೆ.

**ಅವವೃತ್ರನ್**—ವೃತು ವರ್ತನೇ ಧಾತು. ವ್ಯತ್ಯಯದಿಂದ ಪರಸ್ಮೈಪದಿಯಾಗುತ್ತದೆ. ಛಾಂದಸವಾಗಿ ಲಙ್ ಪ್ರಥಮಪುರುಷಬಹುವಚನದಲ್ಲಿ ಝಿಗೆ ಅಂತಾದೇಶ. ಇಕಾರಲೋಪ. **ಬಹುಲಂ ಛಂದಸಿ** ಎಂಬುದರಿಂದ ಶಪಿಗೆ ಶ್ಲು ಆದೇಶ. **ಶ್ಲೌ** ಎಂಬುದರಿಂದ ಧಾತುವಿಗೆ ದ್ವಿತ್ವಾದಿ. **ಬಹುಲಂ ಛಂದಸಿ** ಎಂಬುದರಿಂದ ಪ್ರತ್ಯಯಕ್ಕೆ ರುಟಾಗಮ. ಅಂಗಕ್ಕೆ ಅಡಾಗಮ ಅತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

**ಸದನಾತ್**—ಷದ್ಲೃ ವಿಶರಣಗತ್ಯವಸಾದನೇಷು. ಧಾತು. ಅಧಿಕರಣಾರ್ಥದಲ್ಲಿ ಲ್ಯುಟ್ ಪ್ರತ್ಯಯ. ಅನಾದೇಶ. **ಲಿತಿ** (ಪಾ. ಸೂ. ೬-೧-೧೯೩) ಎಂಬುದರಿಂದ ಪ್ರತ್ಯಯದ ಪೂರ್ವಕ್ಕೆ ಉದಾತ್ತಸ್ವರ ಬರುತ್ತದೆ. ಪಂಚಮೀಏಕವಚನಾಂತರೂಪ.

**ಉದ್ಯತೇ**—ಉಂದೀ ಕ್ಲೇದನೇ ಧಾತು ಕರ್ಮಣಿಯಲ್ಲಿ ಲಟ್. **ಸಾರ್ವಧಾತುಕೇಯಕ್** (ಪಾ. ಸೂ. ೩-೧-೬೭) ಎಂಬುದರಿಂದ ಯಕ್. ಇದು ಕಿತ್ತ್ವಾದುದರಿಂದ **ಅನಿದಿತಾಂಹಲಉ**—ಎಂಬುದರಿಂದ ಉಪಧಾನಕಾರಕ್ಕೆ ಲೋಪ ತಿಙಂತ ನಿಘಾತಸ್ವರ ಬರುತ್ತದೆ. ॥ ೪೭ ॥

———— :೦: ————

ಸಂಹಿತಾಪಾಠಃ

**ದ್ವಾದಶ ಪ್ರಧಯಶ್ಚಕ್ರಮೇಕಂ ತ್ರೀಣಿ ನಭ್ಯಾನಿ ಕ ಉ ತಚ್ಚಿಕೇತ ।**

**ತಸ್ಮಿನ್ತ್ಸಾಕಂ ತ್ರಿಶತಾ ನ ಶಂಕವೋಽರ್ಪಿತಾಃ ಷಷ್ಟಿರ್ನ ಚಲಾಚಲಾಸಃ ॥**

॥ ೪೮ ॥

। ಪದಪಾಠಃ ।

ದ್ವಾದಶ । ಪ್ರಧಯಃ । ಚಕ್ರಂ । ಏಕಂ । ತ್ರೀಣಿ । ನಭ್ಯಾನಿ । ಕಃ । ಊಂ ಇತಿ । ತತ್ । ಚಿಕೇತ ।

ತಸ್ಮಿನ್ । ಸಾಕಂ । ತ್ರಿಶತಾಃ । ನ । ಶಂಕವಃ । ಅರ್ಪಿತಾಃ । ಷಷ್ಟಿಃ । ನ । ಚಲಾಚಲಾಸಃ ॥ ೪೮ ॥

ಸಾಯಣಭಾಷ್ಯಂ

ದ್ವಾದಶೈತತ್ಸಂಖ್ಯಾಕಾಃ ಪ್ರಧಯಃ ಪರಿಧಯಃ ಪ್ರಹಿತಾ ವರ್ತಂತೇ । ತತ್ಸ್ಥಾನೀಯಾ ದ್ವಾದಶ ಮಾಸಾ ಏಕಮದ್ವಿತೀಯಂ ಚಕ್ರಂ ಕ್ರಮಣಸ್ವಭಾವಂ ಸಂವತ್ಸರಾಖ್ಯಂ ಚಕ್ರಮಾಶ್ರಿತಾಃ । ತಥಾ ತ್ರೀಣಿ ತ್ರಿಸಂಖ್ಯಾಕಾನಿ ನಭ್ಯಾನಿ ನಾಭ್ಯಾಶ್ರಯಾಣಿ ಫಲಕಾನಿ ತತ್ಸ್ಥಾನೀಯಾನಿ ಗ್ರೀಷ್ಮವರ್ಷಾಹೇಮಂತಾಖ್ಯಾನ್ಯಾಶ್ರಿತಾನಿ । ಯಥಾ ಸೂರ್ಯರಥಚಕ್ರಸ್ಯ ದ್ವಾದಶ ಪರಿಧಯೋ ನಾಭ್ಯಾರ್ಹಾಣಿ ತ್ರೀಣಿ ಫಲಕಾನಿ ಸಂತಿ ತದ್ವತ್ಕಾಲಚಕ್ರಸ್ಯಾಪಿ । ಕ ಉಕ್ರೋಽಪಿ ಮಹಾಂಸ್ತಚ್ಚಕ್ರಂ ಚಿಕೇತ । ಜಾನಾತಿ । ತಸ್ಮಿಂಶ್ಚಕ್ರೇ ಸಾಕಂ ಸಹ ಶಂಕವೋ ನ ಶಂಕವ ಇವ । ಅತ್ರ ಪುರಸ್ತಾದುಪಚಾರೋಽಪಿ ನಶಬ್ದಃ ಸಾಮರ್ಥ್ಯಾದುಪಮಾರ್ಥೀಯಃ । ತಸ್ಮಿನ್ನಪಿ ಸಂವತ್ಸರಚಕ್ರೇ ತ್ರಿಶತಾ ಏತತ್ಸಂಖ್ಯಾಕಾಃ ಷಷ್ಟಿರ್ನ । ನಶಬ್ದಶ್ಚಾರ್ಥೇ । ಷಷ್ಟಿಶ್ಚಾರಾ ಅರಸ್ಥಾನೀಯಾನ್ಯಹಾನ್ಯರ್ಪಿತಾಃ । ಅರ್ಪಿತಾನಿ । ಕೀದೃಶಾನಿ ತಾನಿ । ಚಲಾಚಲಾಸಃ । ಏಕಶ್ಚಲಶಬ್ದೋ ದ್ವಿರ್ಭಾವಪ್ರಾಪ್ತಃ । ಚಲಾಃ । ಚಲನಸ್ವಭಾವಾನೀತ್ಯರ್ಥಃ ॥ ಚರಿಚಲಿಪತಿವದೀನಾಮುಚ್ಯಾಕ್ವಾಭ್ಯಾಸಸ್ಯ । ಪಾ. ೬-೧-೧೨-೬ । ಇತಿ ದ್ವಿರ್ವಚನಮಾಗಾಗಮಶ್ಚ । ತತೋಽಸುಕ್ ॥ ಷಷ್ಟಿಶ್ಚ ಹ ವೈ ತ್ರೀಣಿ ಚ ಶತಾನಿ ಸಂವತ್ಸರಸ್ಯಾಹಾನೀತಿ ಬ್ರಾಹ್ಮಣಂ । ಶತ. ೯-೧-೧-೪೩. । ದ್ವಾದಶ ಪ್ರಧಯಶ್ಚಕ್ರಮೇಕಮಿತಿ ಮಾಸಾನಾಂ ಮಾಸಾ ಮಾನಾದಿತ್ಯಾದಿ ನಿರುಕ್ತಂ । ೪-೨೭. ॥

ಪ್ರತಿಪದಾರ್ಥ

ಪ್ರಧಯಃ—ಪರಿಧಿಗಳು (ನೇಮಿಗಳು) । ದ್ವಾದಶ—ಹನ್ನೆರಡು ಸಂಖ್ಯಾಕಗಳಾಗಿವೆ । ಚಕ್ರಂ—ಚಕ್ರವು । ಏಕಂ—ಒಂದು । ನಭ್ಯಾನಿ—ಮಧ್ಯಭಾಗದ ಅಚ್ಚುಗಳು । ತ್ರೀಣಿ—ಮೂರು ಸಂಖ್ಯಾಕಗಳಾಗಿವೆ ! ತತ್—ಈ ರಹಸ್ಯವನ್ನು । ಕ ಉ ಚಿಕೇತ—ಯಾವ ಮಹಾತ್ಮನು ಅರಿತಿದ್ದಾನೆ ? । ತಸ್ಮಿನ್—ಈ ಚಕ್ರದಲ್ಲಿ । ಚಲಾಚಲಾಸಃ—ಪರಿಭ್ರಮಣ ಮಾಡತಕ್ಕ । ತ್ರಿಶತಾ ಷಷ್ಟಿರ್ನ—ಮುನ್ನೂರ ಅರವತ್ತು ಸಂಖ್ಯಾಕಗಳಾದ ಅವಯವಗಳು । ಸಾಕಂ—ಒಟ್ಟಿಗೆ । ಶಂಕವೋ ನ—ಶಂಕುಗಳಂತೆ । ಅರ್ಪಿತಾಃ—ಅರ್ಪಿತಗಳಾಗಿವೆ (ಸೇರಿವೆ) ।

॥ ಭಾವಾರ್ಥ ॥

ಸಂವತ್ಸರರೂಪವಾದ ಚಕ್ರಕ್ಕೆ ಪರಿಧಿಗಳು ಹನ್ನೆರಡು. ಮಧ್ಯಭಾಗದ ಅಚ್ಚುಗಳು ಮೂರು. ಈ ಚಕ್ರದಲ್ಲಿ ಪರಿಭ್ರಮಣವನ್ನು ಮಾಡತಕ್ಕ ಮುನ್ನೂರ ಅರವತ್ತು ಅವಯವಗಳು ಶಂಕುಗಳಂತೆ ಒಟ್ಟಿಗೆ ಅರ್ಪಿತಗಳಾಗಿವೆ. ಈ ರಹಸ್ಯವನ್ನು ತಿಳಿದ ಮಹಾತ್ಮನು ಅಪರೂಪ.

English Translation

The fellies are twelve; the wheel is one; three are the axles; but who knows it? within it are collected 360 (spokes), which are, as it were, moveable and immoveable.

। ವಿಶೇಷವಿಷಯಗಳು ।

ಈ ಋಕ್ಕಿನಲ್ಲಿ ವರ್ಣಿತವಾಗಿರುವುದು ಆದಿತ್ಯಚಕ್ರವಾಗಬಹುದು. ಅಥವಾ ಕಾಲಚಕ್ರವಾಗಬಹುದು. ಆವೃತ್ತಿರೂಪವಾದ ಪರಿಭ್ರಮಣವನ್ನು ಹೊಂದುತ್ತಿರುವುದರಿಂದ ಆದಿತ್ಯ. ಸಂವತ್ಸರ ಎಂಬ ಎರಡು ತತ್ತ್ವಗಳಿಗೂ

ಚಕ್ರವೆಂಬ ಪರ್ಯಾಯನಾಮವನ್ನು ಹೇಳಬಹುದು ಎರಡಕ್ಕೂ ದ್ವಾದಶ ಪರಿಧಿಗಳಿವೆ, ನಾಭಿತ್ರಯಗಳಿಗೆ ಮುನ್ನೂರ ಅರವತ್ತು ಶಂಕುಗಳಿವೆ. ಎರಡಕ್ಕೂ ತಾದಾತ್ಮ್ಯವನ್ನು ಹೇಳಿದರೂ ಸರಿಯಾಗುತ್ತದೆ.

**ದ್ವಾದಶ ಪ್ರಧಯಃ—ಪರಿಧಯಃ ; ತತ್ಸ್ಥಾನೀಯಾ ದ್ವಾದಶಮಾಸಾಃ ।** ಪರಿಧಿರೂಪಗಳಾದ ಹನ್ನೆರಡು ಮಾಸಗಳೆಂದರ್ಥ. ಆದಿತ್ಯಮಂಡಲವನ್ನು ರಥದ ಚಕ್ರಕ್ಕೂ ದ್ವಾದಶಮಾಸಗಳನ್ನು ಪರಿಧಿಗಳಿಗೂ ಹೋಲಿಸಿದೆ. ಮೇಷ, ವೃಷಭ ಇತ್ಯಾದಿ ಹನ್ನೆರಡು ರಾಶಿಗಳುಳ್ಳ ಸೂರ್ಯಮಂಡಲವಾಗುತ್ತದೆ. ಮುನ್ನೂರಅರವತ್ತು ಅಹೋರಾತ್ರಗಳ ಪರಿಗಣನೆಯಿರುವುದರಿಂದ ಇಲ್ಲಿ ಮಾಸಪರ್ಯಾಯವಾಗಿ ಅರ್ಥಮಾಡಿದರೆ ಹೆಚ್ಚು ಹೊಂದಿಕೊಳ್ಳುತ್ತದೆ. **ದ್ವಾದಶ** ಎಂಬ ಪದವನ್ನು ದ್ವಾದಶಮಾಸಗಳನ್ನು ಹೊಂದಿರುವ ಸಂವತ್ಸರದ ಪರ್ಯಾಯವಾಗಿಯೇ ಉಪಯೋಗಿಸಿರುವುದೂ ಉಂಟು. ಉದಾಹರಣೆಗೆ—

**ದೇವಹಿತಿಂ ಜುಗುಪುರ್ದ್ವಾದಶಸ್ಯ ಋತುಂ ನರೋ ನ ಪ್ರ ಮಿನಂತ್ಯೇತೇ ।**
**ಸಂವತ್ಸರೇ ಪ್ರಾವೃಷ್ಯಾಗತಾಯಾಂ ತಪ್ತಾ ಘರ್ಮಾ ಅಶ್ನುವತೇ ವಿಸರ್ಗಂ ॥**
(ಋ. ಸಂ. ೭-೧೦೩-೯)

ಎಂಬಲ್ಲಿ **ದ್ವಾದಶಮಾಸಾತ್ಮಕಸ್ಯ ಸಂವತ್ಸರಸ್ಯ** ಎಂದರ್ಥವಾಗುತ್ತದೆ. ಪ್ರಕೃತವಾದ ಋಕ್ಕಿನಲ್ಲಿಯೂ ಅದೇ ಅರ್ಥವಾಗಬಹುದು. ನಿರುಕ್ತಕಾರರು **ದ್ವಾದಶ ಪ್ರಧಯಶ್ಚಕ್ರಮೇಕಂ** ಎಂಬ ಪಾದವನ್ನು ಉದಹರಿಸಿ "**ಇತಿ ಮಾಸಾನಾಂ**" ಈ ದ್ವಾದಶಮಾಸಗಳು **ಮಾಸ**ಪರ್ಯಾಯವಾದವು ಎಂದು ವಿವರಿಸಿದ್ದಾರೆ. (ನಿ. ೪-೨೭) ಇಂತಹ ಮಾಸಾತ್ಮಕವಾದ ಚಕ್ರವೆಂದರ್ಥ.

**ತ್ರೀಣಿ ನಭ್ಯಾನಿ—ನಾಭ್ಯಾಶ್ರಯಾಣಿ ಫಲಕಾನಿ ತತ್ಸ್ಥಾನೀಯಾನಿ ಗ್ರೀಷ್ಮವರ್ಷಾಹೇಮಂತಾಖ್ಯಾನ್ಯೃತೂನಿ ।** ನಾಭಿತ್ರಯವು ಇಲ್ಲಿ ಗ್ರೀಷ್ಮ, ವರ್ಷ ಮತ್ತು ಹೇಮಂತಋತುಗಳನ್ನು ತಿಳಿಸುತ್ತದೆ. ಅಥವಾ ನಾಭಿಸ್ಥಾನೀಯಗಳಾದ ಸಂಧ್ಯಾತ್ರಯಗಳಾಗಬಹುದು, ಅಥವಾ ಭೂತಭವಿಷ್ಯದ್ವರ್ತಮಾನಕಾಲಗಳಾಗಬಹುದು.

**ಕ ಉ ತಚ್ಚಿಕೇತ—ಕೋಽಪಿ ಮಹಾನ್ ಜಾನಾತಿ ।** ಯಾವ ಮಹಾತ್ಮನು ತಿಳಿಯುತ್ತಾನೆ. ಎಂಬುದರಲ್ಲಿ ಈ ರಹಸ್ಯವನ್ನು ತಿಳಿಯುವವನು ಯಾರು ? ಎಂದು ಪ್ರಶ್ನಾರ್ಥಕವಾಗಿರಬಹುದು, ಅಥವಾ ಇದನ್ನು ತಿಳಿಯುವ ಮಹಾತ್ಮನು ಅಪರೂಪ. ಎಂದರ್ಥವಾಗಬಹುದು. ಕಾಲತತ್ತ್ವದ ರಹಸ್ಯವು ಸಾಧಾರಣವಾದ ಬುದ್ಧಿಗೆ ಗೋಚರವಾಗತಕ್ಕದ್ದಲ್ಲವೆಂದರ್ಥ. ಈ ಭಾವದ ಅರ್ಥವನ್ನು **ಕೋ ದದರ್ಶ ಪ್ರಥಮಂ ಜಾಯಮಾನಂ** ಇತ್ಯಾದಿ ಭಾವಗಳನ್ನು ವಿವರಿಸುವಾಗ ಹಿಂದೆ ತಿಳಿಸಿದೆ. (cf. ೧-೧೬೪-೪)

**ಶಂಕವೋ ನ; ಷಷ್ಟಿರ್ನ**—ಈ ಎರಡು ಕಡೆಗಳಲ್ಲಿಯೂ **ನ** ಎಂಬ ನಿಪಾತವು ಉಪಯೋಗಿಸಲ್ಪಟ್ಟಿದೆ. **ಶಂಕವೋ ನ** ಎಂಬಲ್ಲಿ, '**ದುರ್ಮದಾಸೋ ನ ಸುರಾಯಾಂ**' ಎಂಬ ಉದಾಹರಣೆಯನ್ನು ತೋರಿಸಿ ನಿರುಕ್ತಕಾರರು ವಿವರಿಸಿರುವಂತೆ ಉಪಮಾರ್ಥೀಯವಾಗುತ್ತದೆ. ಶಂಕುಗಳಂತೆ ಎಂದರ್ಥ. (ನಿ. ೧-೪) **ಷಷ್ಟಿರ್ನ** ಎಂಬಲ್ಲಿ **ನ ಶಬ್ದಃ ಚಾರ್ಥೇ ತ್ರಿಶತಾಃ ಷಷ್ಟಿಶ್ಚ ।** ನಶಬ್ದವು ಸಮುಚ್ಚಯಾರ್ಥದಲ್ಲಿ ಉಪಯೋಗಿಸಲ್ಪಟ್ಟಿದೆ. ಮುನ್ನೂರು ಮತ್ತು ಅರವತ್ತು ಎಂದರೆ ಮುನ್ನೂರರವತ್ತು ಎಂದರ್ಥವೆಂದು ವಿವರಿಸಿದೆ. ಇಲ್ಲಿ ನಿರುಕ್ತಕಾರರು **ನ** ಎಂಬ ನಿಪಾತಕ್ಕೆ ಕೇವಲ ಪ್ರತಿಷೇಧಾರ್ಥದಲ್ಲಿಯೂ ಮತ್ತು ಉಪಮಾರ್ಥದಲ್ಲಿಯೂ ಉದಾಹರಣೆಗಳನ್ನು ಕೊಟ್ಟು ವಿವರಿಸಿದ್ದಾರೆ. ಸಮುಚ್ಚಯಾರ್ಥವು ಇಲ್ಲಿ ಹೇಗೆ ಸಾಧ್ಯ ಎಂಬ ಪ್ರಶ್ನೆಯು ಬಂದರೆ ಆಗ ಅದಕ್ಕೆ ಸಮರ್ಥನಮಾಡಿ ಸಾಯಣರು,—

**ಷಷ್ಟಿಶ್ಚ ಹ ವೈ ತ್ರೀಣಿ ಚ ಶತಾನಿ ಸಂವತ್ಸರಸ್ಯಾಹಾನಿ ।**
(ಶ. ಬ್ರಾ. ೯-೧-೧-೪೩)

ಎಂಬ ಶತಪಥಬ್ರಾಹ್ಮಣದ ವಾಕ್ಯವನ್ನುದಹರಿಸಿ ತಮ್ಮ ಅರ್ಥವನ್ನು ಸಮರ್ಥಿಸಿದ್ದಾರೆ.

**ಚಕ್ರಂ—ಚಕತೇರ್ವಾ ಚರತೇರ್ವಾ ಕ್ರಾಮತೇರ್ವಾ ।** ಪ್ರತಿಘಾತಾರ್ಥಕವಾದ **ಚರ್** ಅಥವಾ **ಕ್ರಮು** ಧಾತುವಿನಿಂದ **ಚಕ್ರ**ಶಬ್ದವು ನಿಷ್ಪನ್ನವಾಗಿದೆ.

**ಚಲಾಚಲಾಸಃ—ಏಕಶ್ಚಲಶಬ್ದೋ ದ್ವಿರ್ಭಾವಪ್ರಾಪ್ತಃ । ಚಲಾಃ । ಚಲನಸ್ವಭಾವಾನೀತ್ಯರ್ಥಃ** ಇಲ್ಲಿ ಚಲನಾರ್ಥಕವಾದ **ಚಲ**ಶಬ್ದಕ್ಕೆ ದ್ವಿರ್ಭಾವವು ಪ್ರಾಪ್ತವಾಗಿದೆ. ಪರಿಭ್ರಮಣಾತ್ಮಕವಾದವು ಎಂದರ್ಥವೆಂದು ಸಾಯಣರು ವಿವರಿಸಿದ್ದಾರೆ. ಆದರೆ Wilson ಎಂಬ ಪಂಡಿತನು ಈ ಪದಕ್ಕೆ ಅರ್ಥಮಾಡುವಾಗ **ಚಲ, ಅಚಲ** ಎಂಬ ಎರಡು ಭಾಗಮಾಡಿ,

Within it are collected 360 spokes, which are, as it were, moveable and immoveable.

(Rig-veda Translation. Vol. II. p. 78)

ಚಲಿಸತಕ್ಕದ್ದೂ ಮತ್ತು ಚಲಿಸದಿರುವುವು ಎಂದು ಅರ್ಥ ಮಾಡಿದ್ದಾನೆ. ಸಾಯಣರು

**ಚರಿಚಲಿಪತಿವದೀನಾಮಚ್ಯಾಕ್ಚಾಭ್ಯಾಸಸ್ಯ ।**
(ಪಾ. ಸೂ. ೬-೧-೧೨-೬)

ಎಂಬ ಪಾಣಿನಿಯ ಸೂತ್ರವನ್ನುದಹರಿಸಿ **ಚಲ**ಶಬ್ದವೇ ದ್ವಿರ್ಭಾವವನ್ನು ಪಡೆಯುತ್ತದೆಂದೂ, ಇಲ್ಲಿ **ಚಲಾಚಲಾಸಃ** ಎಂಬ ಪದಕ್ಕೆ ಕೇವಲ **ಚಲನಾತ್ಮಕವಾದ** ಎಂದೂ ಅರ್ಥಮಾಡಿದ್ದಾರೆ. ಸಂವತ್ಸರರೂಪವಾದ ಏಕಚಕ್ರದಲ್ಲಿರುವ ಮುನ್ನೂರ ಅರವತ್ತು ಅವಯವಗಳಲ್ಲಿ ಕೆಲವು ಚಲಿಸುತ್ತಲೂ ಕೆಲವು ಚಲನವಿಲ್ಲದೆಯೂ ಇರಲು ಸಾಧ್ಯವಿಲ್ಲ. ಆದುದರಿಂದ ಸಾಯಣರು ಹೇಳಿರುವ ಅರ್ಥವು ಈ ಸಂದರ್ಭದಲ್ಲಿ ಉಚಿತವಾಗಿರುತ್ತದೆ. Wilson **ಹೇಳಿರುವ ಅರ್ಥವು** ತಪ್ಪೆಂದು ಹೇಳಬಹುದು.

### ವ್ಯಾಕರಣಪ್ರಕ್ರಿಯಾ

ಪ್ರಧಯಃ—ಡುಧಾಞ್ ಧಾರಣಪೋಷಯೋಃ. ಧಾತು. **ಉಪಸರ್ಗೇ ಘೋಃ ಕಿಃ (ಪಾ. ಸೂ.** ಎಂಬುದರಿಂದ ಕಿ ಪ್ರತ್ಯಯ. ಕಿತ್ತಾದುದರಿಂದ **ಆತೋಲೋಪ ಇಟಿಚ** (ಪಾ. ಸೂ. **೬-೪-೬೨)** ಎಂಬುದರಿಂದ ಧಾತುವಿನ ಆಕಾರಕ್ಕೆ ಲೋಪ. ಕೃದುತ್ತರಪದ ಪ್ರಕೃತಿಸ್ವರ ಬರುತ್ತದೆ.

**ನಭ್ಯಾನಿ**—ನಾಭಯೇ ಹಿತಾನಿ **ನಾಭಿನಭಂಚ** (**ಪಾ. ಸೂ.** ೫-೧-೨-೧) ಎಂಬುದರಿಂದ ಯತ್ ಪ್ರತ್ಯಯ. ಪ್ರಕೃತಿಗೆ ನಭಾದೇಶ. **ಯಸ್ಯೇತಿಚ** ಎಂಬುದರಿಂದ ಅಕಾರಲೋಪ **ಯತೋಽನಾವಃ** (ಪಾ. ಸೂ. ೬-೧-೨೧೩) ಎಂಬುದರಿಂದ ಆದ್ಯುದಾತ್ತಸ್ವರ ಬರುತ್ತದೆ.

**ಚಿಕೇತ**—ಕಿತ ಜ್ಞಾನೇ. ಧಾತು. ಛಾಂದಸವಾಗಿ ವರ್ತಮಾನಾರ್ಥದಲ್ಲಿ ಲಿಟ್. ಪ್ರಥಮಪುರುಷ ಏಕವಚನಾಂತರೂಪ. ತಿಙಂತನಿಘಾತಸ್ವರ ಬರುತ್ತದೆ.

**ಶಂಕವಃ**—**ಖರು ಶಂಕು ಪೀಯು ನೀಲಂಗಲಿಗು** (ಉ. ಸೂ. ೧-೩೬) ಎಂಬುದರಿಂದ ಕು ಪ್ರತ್ಯ-ಯಾಂತವಾಗಿ ನಿಪಾತಿತವಾಗಿದೆ.

**ಚಲಾಚಲಾಸಃ**—ಚಲ ಕಂಪನೇ. ಧಾತು. **ಚರಿಚಲಿಪತಿವದೀನಾಮಚ್ಯಾಕ್ಚಾಭ್ಯಾಸಸ್ಯ** (ಪಾ. ಸೂ. ೬-೧-೧೨-೬) ಎಂಬುದರಿಂದ ಅಚ್ ಪ್ರತ್ಯಯ ಬಂದಾಗ ಧಾತುವಿಗೆ ದ್ವಿತ್ವ. ಅಭ್ಯಾಸಕ್ಕೆ ಆಕಾಗಮ. ಕಿತ್ತಾದುದರಿಂದ ಅಂತಾವಯವವಾಗಿ ಬರುತ್ತದೆ. **ಚಿತಃ** (ಪಾ. ಸೂ. ೬-೧-೧೬೩) ಎಂಬುದರಿಂದ ಅಂತೋದಾತ್ತ ಸ್ವರ ಬರುತ್ತದೆ. ಜಸ್ ಪರವಾದಾಗ **ಆಜ್ಜಸೇರಸುಕ್** (ಪಾ. ಸೂ. ೭-೧-೫೦)ಎಂಬುದರಿಂದ ಅದಕ್ಕೆ ಅಸುಕಾಗಮ. ॥ ೪೮ ॥

---

ಸಂಹಿತಾಪಾಠಃ

**ಯಸ್ತೇ ಸ್ತನಃ ಶಶಯೋ ಯೋ ಮಯೋಭೂರ್ಯೇನ ವಿಶ್ವಾ ಪುಷ್ಯಸಿ ವಾರ್ಯಾಣಿ ।**
**ಯೋ ರತ್ನಧಾ ವಸುವಿದ್ಯಃ ಸುದತ್ರಃ ಸರಸ್ವತಿ ತಮಿಹ ಧಾತವೇ ಕಃ ॥೪೯॥**

ಪದಪಾಠಃ

**ಯಃ । ತೇ । ಸ್ತನಃ । ಶಶಯಃ । ಯಃ । ಮಯಃಽಭೂಃ । ಯೇನ । ವಿಶ್ವಾ । ಪುಷ್ಯಸಿ । ವಾರ್ಯಾಣಿ ।**
**ಯಃ । ರತ್ನಽಧಾಃ । ವಸುಽವಿತ್ । ಯಃ । ಸುಽದತ್ರಃ । ಸರಸ್ವತಿ । ತಂ । ಇಹ । ಧಾತವೇ । ಕರಿತಿ ಕಃ ॥**
॥ ೪೯ ॥

ಸಾಯಣಭಾಷ್ಯಂ

**ಪ್ರವರ್ಗ್ಯೇಽಭಿಷ್ಟವೇ ಯಸ್ತೇ ಸ್ತನ ಇತ್ಯೇಕಾ । ಸೂತ್ರಿತಂ ಚ । ಯಸ್ತೇ ಸ್ತನಃ ಶಶಯೋ ಯೋ ಮಯೋಭೂರ್ಗೌರಮೀಮೇದನು ವತ್ಸಂ ಮಿಷಂತಂ । ಆ. ೪-೭. । ಇತಿ ॥ ಏಷೈವ ಸಾರಸ್ವತೇ ಪಶೌ ಹವಿಷೋ ಯಾಜ್ಯಾ । ಸೂತ್ರಿತಂ ಚ । ಯಸ್ತೇ ಸ್ತನಃ ಶಶಯೋ ಯೋ ಮಯೋಭೂಸ್ತ್ವಂ ಸೋಮ ಪ್ರ ಚಿಕಿತೋ ಮನೀಷೇತಿ ದ್ವೇ । ಆ. ೩-೭. । ಇತಿ ॥**

**ಹೇ ಸರಸ್ವತಿ ತೇ ತವ ಸಂಬಂಧೀ ಯಃ ಸ್ತನಃ ಸ್ತನವಚ್ಛಿಶುಸ್ಥಾನೀಯಾನಾಂ ಪ್ರಾಣಿನಾಮಾ-ಪ್ಯಾಯನಕಾರೀ ಲೌಕಿಕವೈದಿಕಸುಶಬ್ದರೂಪಃ ಸ್ತನಃ ಶಶಯಃ ಶಯಾನಸ್ತವ ದೇಹೇ ವರ್ತಮಾನಃ ।**

**ಯಶ್ಚ ಸ್ತನೋ ಮಯೋಭೂ ರಸಾಸ್ವಾದಿನಾಂ ಸುಖಸ್ಯ ಭಾವಯಿತಾ । ಯೇನ ಸ್ತನೇನ ವಿಶ್ವಾ ಸರ್ವಾಣಿ ವಾರ್ಯಾಣಿ ವರಣೀಯಾನ್ಯಭಿಮತರೂಪಾಣಿ ಧನಾನಿ ಪುಷ್ಯಸಿ ಭೋಕ್ತೃಭ್ಯಃ । ಯಶ್ಚ ಸ್ತನೋ ರತ್ನಧಾ ಬಹುವಿಧರಮಣೀಯರಸಾನಾಂ ಧಾರಯಿತಾ ವಸುವಿದ್ವಸೂನಾಂ ವಾಸಯಿತೄಣಾಂ ಧನಾನಾಂ ವೇತ್ತಾ ಲಬ್ಧಾ ವೇದಯಿತಾ ವಾ । ಕಿಂಚ ಯಃ ಸ್ತನಃ ಸುದತ್ರಃ ಶೋಭನದಾನಃ । ಸುದತ್ರಃ ಕಲ್ಯಾಣದಾನ ಇತಿ ನಿರುಕ್ತಂ । ೬-೧೪. । ಅತ್ರಾಸಕೃದ್ಯಚ್ಛಬ್ದಶ್ರವಣಂ ಸ್ತನಸ್ಯಾತಿಪ್ರಶಸ್ತತ್ವಜ್ಞಾಪನಾರ್ಥಂ । ಹೇ ದೇವಿ ತಂ ತಾದೃಶಂ ಸರ್ವಪ್ರಾಣ್ಯುಪಕಾರಕಂ ಸೂಕ್ತಮಯಂ ಸ್ತನಮಿಹಾಸ್ಮಿನ್ಕರ್ಮಣೀದಾನೀಂ ವಾ ಧಾತವೇಽಸ್ಮಾಭಿರ್ಧಾತುಂ ಪಾತುಂ ಪಾನಾಯ ಕಃ । ಕುರು ॥**

### ಪ್ರತಿಪದಾರ್ಥ

**ಸರಸ್ವತಿ**—ಎಲೈ ಸರಸ್ವತಿಯೇ । **ತೇ**—ನಿನ್ನ । **ಯಃ**—ಯಾವ । **ಸ್ತನಃ**—ಮೇಧಾವಿಗಳಾದ ಋತ್ವಿಕ್ಕುಗಳಿಗೆ ತೃಪ್ತಿದಾಯಕವಾದುದೂ, ಸುಶಬ್ದರೂಪವಾದುದೂ ಆದ ನಿನ್ನ ಸ್ತನವು । **ಶಶಯಃ**—ವಿಶ್ರಾಂತಿಯನ್ನು ಪಡೆಯುತ್ತಾ ನಿನ್ನ ದೇಹದಲ್ಲಿರುವುದೋ । **ಯಃ**—ಯಾವ ಶಬ್ದರೂಪವಾದ ಸ್ತನವು । **ಮಯೋಭೂಃ**—ಸುಖದಾಯಕವಾದುದೋ । **ಯೇನ**—ಯಾವುದರಿಂದ । **ವಿಶ್ವಾ**—ಸಮಸ್ತವಾದ । **ವಾರ್ಯಾಣಿ**—ಇಷ್ಟಾರ್ಥಗಳನ್ನೂ । **ಪುಷ್ಯಸಿ**—ಅಧಿಕವಾಗಿ ಕೊಡುತ್ತೀಯೋ । **ಯಃ**—ಯಾವುದು । **ರತ್ನಧಾಃ**—ರಮಣೀಯವಾದ ರಸವನ್ನು ಒದಗಿಸುವುದೋ ಮತ್ತು । **ವಸುವಿತ್**—ಧನವೇತ್ತೃವಾದುದೋ । **ಯಃ**—ಯಾವುದು । **ಸುದತ್ರಃ**—ಶ್ರೇಷ್ಠವಾದ ದಾತೃವಾಗಿರುವುದೋ । **ತಂ**—ಆ ಸ್ತನವನ್ನು । **ಇಹ**—ಈ ಯಜ್ಞಕರ್ಮದಲ್ಲಿ । **ಧಾತವೇ**—ನಮ್ಮ ಪಾನಕ್ಕೆ ಯೋಗ್ಯವಾದುದನ್ನಾಗಿ । **ಕಃ**—ಮಾಡು ।

### ಭಾವಾರ್ಥ

ಎಲೈ ಸರಸ್ವತಿಯೇ, ಮೇಧಾವಿಗಳಾದ ಋತ್ವಿಕ್ಕುಗಳಿಗೆ ತೃಪ್ತಿದಾಯಕವಾದುದೂ, ಸುಶಬ್ದರೂಪವಾದುದೂ ಆದ ಯಾವ ನಿನ್ನ ಸ್ತನವು ವಿಶ್ರಾಂತಿಯನ್ನು ಪಡೆಯುತ್ತಾ ನಿನ್ನ ದೇಹದಲ್ಲಿರುವುದೋ, ಯಾವ ಶಬ್ದರೂಪವಾದ ನಿನ್ನ ಸ್ತನವು ಸುಖದಾಯಕವಾದುದೋ, ಯಾವುದರಿಂದ ಸಮಸ್ತವಾದ ಇಷ್ಟಾರ್ಥಗಳನ್ನೂ ನೀನು ಅಧಿಕವಾಗಿ ಕೊಡುತ್ತೀಯೋ, ಯಾವುದು ರಮಣೀಯವಾದ ರಸವನ್ನು ಒದಗಿಸುವುದೋ ಮತ್ತು ಯಾವುದು ಧನವೇತ್ತೃವೂ ಮತ್ತು ದಾತೃವೂ ಆಗಿರುವುದೋ ಆ ಸ್ತನವನ್ನು ಈ ಯಜ್ಞಕರ್ಮದಲ್ಲಿ ನಮ್ಮ ಪಾನಕ್ಕೆ ಯೋಗ್ಯವಾದುದನ್ನಾಗಿ ಮಾಡು.

### English Translation

Saraswathi, that retiring breast, which is the source of delight with which you bestow all good things, which is the container of wealth, the distributor of riches, the giver of food (fortune); that (bosom) do you lay open at this season for our nourishment.

### ವಿಶೇಷವಿಷಯಗಳು

ಪ್ರವರ್ಗ್ಯವೆಂಬ ಯಾಗವಿಶೇಷದಲ್ಲಿ ಅಭಿಷ್ಟವಕಾಲದಲ್ಲಿ **ಯಸ್ತೇ ಸ್ತನ** ಎಂಬ ಈ ಋಕ್ಕನ್ನು ಯಾಜ್ಯಾಮಂತ್ರವನ್ನಾಗಿ ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ **ಯಸ್ತೇ ಸ್ತನಃ ಶಶಯೋ ಯೋ ಮಯೋಭೂ-**

**ಗೌರವಮಿಮೋದನು ವತ್ಸಂ ಮಿಷಂತಂ** ಎಂಬ ಸೂತ್ರದಿಂದಲೂ (ಆ. ೪-೭) ಸಾರಸ್ವತಸಂಬಂಧವಾದ ಪಶು ಹೋಮದಲ್ಲಿ ಹವಿಸ್ಸನ್ನು ಹೋಮಮಾಡುವಾಗ ಈ ಋಕ್ಕನ್ನು ಯಾಜ್ಯಾಮಂತ್ರವನ್ನಾಗಿ ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ **ಯಸ್ತೇ ಸ್ತನಃ ಶಶಯೋ ಯೋ ಮಯೋಭೂಸ್ತ್ವಂ ಸೋಮ ಪ್ರ ಚಿಕಿತೋ ಮನೀಷೇತಿ ದ್ವೇ** ಎಂಬ ಸೂತ್ರದಿಂದಲೂ (ಆ. ೩-೭) ವಿವೃತವಾಗಿರುವುದು.

ಸರಸ್ವತಿಯೆಂಬ ಹೆಸರು ಋಗ್ವೇದದಲ್ಲಿ ಪ್ರಾಯಃ ನದೀನಾಮವಾಗಿಯೇ ಅನೇಕ ಕಡೆಗಳಲ್ಲಿ ಪ್ರಸಿದ್ಧವಾಗಿದೆ ವಾಗ್ದೇವತಾವಾಗಿರುವುದು ಬಹಳ ಅಪರೂಪ.

Though there is nothing to show distinctly that Saraswathi is ever anything more in the Rig-Veda than a river goddess, we find her identified in the Brahmanas, with ವಾಕ್ speech. and in post Vedic mythology she has become goddess of eloquence and wisdom, invoked as a muse and regarded as the wife of Brahma.

(Macdonell : Vedic Mythology p. 87.)

ಋಕ್ಸಂಹಿತೆಯಲ್ಲಿ ಸರಸ್ವತಿಯೆಂಬ ಹೆಸರು ನದೀನಾಮಕವಾಗಿದೆ. ಬ್ರಾಹ್ಮಣಾದಿಗಳಲ್ಲಿ ಸರಸ್ವತಿಯನ್ನು ವಾಗ್ದೇವತೆ ಯೆಂದೂ, ಬ್ರಹ್ಮಪತ್ನಿಯೆಂದೂ, ಪ್ರಜ್ಞಾದಾತ್ರಿಯೆಂದೂ ಕರೆದಿದೆ ; ಎಂಬುದಾಗಿ Mac-Donell ಮುಂತಾದ ಪಾಶ್ಚಾತ್ಯಪಂಡಿತರ ಅಭಿಪ್ರಾಯವಾಗಿದೆ. ಆದರೆ,

**ಶಂ ನೋ ದೇವಾ ವಿಶ್ವದೇವಾ ಭವಂತು ಶಂ ಸರಸ್ವತೀ ಸಹ ಧೀಭಿರಸ್ತು ।**
**ಶಮಭಿಷಾಚಃ ಶಮು ರಾತಿಷಾಚಃ ಶಂ ನೋ ದಿವ್ಯಾಃ ಪಾರ್ಥಿವಾಃ ಶಂ ನೋ ಅಪ್ಯಾಃ ॥**

(ಋ. ಸಂ. ೭-೩೫-೧೧)

ಎಂಬಲ್ಲಿ ಪೃಥಿವ್ಯಾದಿಲೋಕತ್ರಯದಲ್ಲೂ ಇರತಕ್ಕ ದೇವತೆಗಳನ್ನು ಪ್ರಾರ್ಥಿಸಿ ಅವರಿಂದ ಶಾಂತಿಯನ್ನೂ ಸೌಖ್ಯವನ್ನೂ ಅಪೇಕ್ಷಿಸಿದೆ. **ದಿವ್ಯಾಃ, ಪಾರ್ಥಿವಾಃ, ಅಪ್ಯಾಃ** ಎಂದು ಲೋಕತ್ರಯದ ದೇವತೆಗಳನ್ನೂ ಉದ್ದೇಶಿಸಿ ಪುನಃ **ಸರಸ್ವತೀ ಸಹ ಧೀಭಿರಸ್ತು** ಎಂದು ಸರಸ್ವತಿಯನ್ನೂ ಪ್ರತ್ಯೇಕವಾಗಿ ಪ್ರಾರ್ಥಿಸಿದೆ. ಉದಹರಿಸಿರುವ ಈ ಋಕ್ಕಿನಲ್ಲಿ ನದೀನಾಮ ವಾಗಿರಲು ಕಾರಣವಿಲ್ಲ. ವಾಗ್ದೇವತೆಯೇ ಇಲ್ಲಿ ಉದ್ದಿಷ್ಟವಾದ ದೇವತೆ. ಅದರಂತೆಯೇ ಪ್ರಕೃತವಾದ ಋಕ್ಕಿನಲ್ಲೂ ಸಹ ವಾಗ್ದೇವತೆಯನ್ನೇ ನಿರ್ದೇಶಿಸಿ ಪ್ರಾರ್ಥಿಸಿದೆಯೆಂದು ಋಕ್ಕಿನಲ್ಲಿರುವ ವರ್ಣನೆಯಿಂದಲೂ, ಸಾಯಣರ ಭಾಷ್ಯ ದಿಂದಲೂ ಸ್ಪಷ್ಟವಾಗಿ ತಿಳಿಯುತ್ತದೆ.

ನಿರುಕ್ತದಲ್ಲಿ **ಸರಸ್ವತೀ**ಶಬ್ದವನ್ನು **ವಾಕ್**ನಾಮಗಳಲ್ಲಿಯೂ, ನದೀನಾಮಗಳಲ್ಲಿಯೂ ಪಠಿಸಿದೆ. (ನಿ ೨-೨೩ : ೨-೨೪) ವಾಗಧಿದೇವತೆಯಾದ ಸರಸ್ವತಿಯ ಸ್ವರೂಪವನ್ನು ಯಾವ ರೀತಿ ವರ್ಣಿಸಿದೆಯೆಂಬುದನ್ನು ತಿಳಿಯು ವುದೇ ಪ್ರಕೃತದಲ್ಲಿ ನಮಗೆ ಬೇಕಾದುದು. ಮೇಲೆ ಉದಹರಿಸಿದ ಋಙ್ಮಂತ್ರದಲ್ಲಿ ಮಾತ್ರವಲ್ಲದೆ ಋಕ್ಸಂಹಿತೆಯಲ್ಲಿ ಇನ್ನೂ ಅನೇಕ ಸಂದರ್ಭಗಳಲ್ಲಿ ವಾಗ್ದೇವತೆಯಾದ ಸರಸ್ವತಿಯ ಪ್ರಶಂಸೆಯಿದೆ. ಉದಾಹರಣೆಗೆ—

**ಪಾವಕಾ ನಃ ಸರಸ್ವತೀ ವಾಜೇಭಿರ್ವಾಜಿನೀವತೀ । ಯಜ್ಞಂ ವಷ್ಟು ಧಿಯಾವಸುಃ ॥**

(ಋ. ಸಂ. ೧-೩-೧೦)

ಇತ್ಯಾದಿಋಕ್ಕುಗಳಲ್ಲಿ ವಾಕ್ಕಿಗೂ ಸರಸ್ವತಿಗೂ ತಾದಾತ್ಮ್ಯವನ್ನು ಹೇಳಿ ವಾಗ್ದೇವಿಯನ್ನು ಸ್ತುತಿಸಿದೆ. ನಿರುಕ್ತ ಕಾರರು **ಶ್ಯೇನಃ ಸೋಮಃ** ಇತ್ಯಾದಿಮೂವತ್ತೈದು ದೇವತೆಗಳಲ್ಲಿ **ಸರಮಾ, ಸರಸ್ವತೀ** ಎಂಬ ದೇವತೆಗಳನ್ನು ಸೇರಿಸಿ ಉದಾಹರಣೆಗಾಗಿ ಮೇಲಿನ (ಋ.ಸಂ. ೧-೩-೧೦) ಋಕ್ಕನ್ನು ಪಠಿಸಿ ವಿವರಿಸಿದ್ದಾರೆ. ಈ ಋಕ್ಕಿನಲ್ಲಿ ಪ್ರಕೃತ ವಾದ (೧-೧೬೪-೪೯) ಋಕ್ಕಿನಲ್ಲಿ ವರ್ಣಿತವಾಗಿರುವ ಸರಸ್ವತಿಯ ಗುಣಗಳೆಲ್ಲವೂ ಸ್ತುತಿಸಲ್ಪಟ್ಟಿವೆ. **ಪಾವಕಾ, ವಾಜಿನೀವತೀ, ಧಿಯಾವಸುಃ** ಇತ್ಯಾದಿವಿಶೇಷಣಗಳು ವಾಗ್ದೇವಿಯಾದ ಸರಸ್ವತಿಯ ಸ್ವರೂಪವನ್ನು ತಿಳಿಸುತ್ತವೆ. ಅವಳು ಶುದ್ಧಿಕಾರಕಳು, ಅವಳೇ ಧಿಯಾವಸುವು.

ಐತರೇಯಾರಣ್ಯಕದಲ್ಲಿ ಈ ಋಕ್ಕಿನ ತಾತ್ಪರ್ಯವನ್ನು ವಿಶದವಾಗಿ ವಿವರಿಸಿರುವುದನ್ನು ತಿಳಿಸುತ್ತಾ ಸಾಯಣರು ತಮ್ಮ ಅರ್ಥದ ಸಮರ್ಥನೆಗೆ ಆ ವಾಕ್ಯವನ್ನುದಹರಿಸಿದ್ದಾರೆ. ಅಲ್ಲಿರುವ ಅರ್ಥವಿವರಣೆಯು ಹೀಗಿದೆ.

**ಪಾವಕಾ ನಃ ಸರಸ್ವತೀ ಯಜ್ಞಂ ವಷ್ಟು ಧಿಯಾವಸುರಿತಿ ವಾಗ್ವೈ ಧಿಯಾವಸುಃ । ವಾಚ-**
**ಮೇವಾಸ್ಮಿಂಸ್ತದ್ದಧಾತಿ ಯ ಏವಂ ವೇದ ಯೇಷಾಂ ಚೈವಂ ವಿದ್ವಾನೇತದ್ಧೋತಾ ಶಂಸತಿ ।**
**ಯಜ್ಞಂ ವಷ್ಟ್ವಿತಿ ಯದಾಹ ಯಜ್ಞಂ ವಹತ್ವಿತ್ಯೇವ ತದಾಹ ।**

(ಐ. ಆ. ೧-೧-೪)

ಇಲ್ಲಿ ಧೀಶಬ್ದಕ್ಕೆ ಸ್ತುತಿಮಾತ್ರನೆಂದರ್ಥಮಾಡಿದೆ. ವಾಗ್ದೇವಿಯು ಈ ಸ್ತುತಿಮಂತ್ರಗಳ ನಿಧಿಯಾಗಿದ್ದಾಳೆ. ಈ ತತ್ತ್ವವನ್ನು ತಿಳಿದವನು ಅಥವಾ ಇದನ್ನು ಅರಿತ ಹೋತೃವು ಯಾವ ಯಜಮಾನನಿಗಾಗಿ ಇದನ್ನು ಪಠಿಸುತ್ತಾನೋ ಅವನೂ ವಾಗ್ದೇವಿಯ ಅನುಗ್ರಹವನ್ನು ಪಡೆಯುತ್ತಾನೆ. ಅಷ್ಟೇ ಅಲ್ಲದೇ ಈ ದೇವಿಯು ಸಕಲಪಾಪಗಳನ್ನೂ ನಾಶಮಾಡಿ ಯಜ್ಞಕರ್ತನಿಗೆ ಆತ್ಮಶುದ್ಧಿಯನ್ನುಂಟುಮಾಡತಕ್ಕವಳು. ಪವಿತ್ರಾತ್ಮಳೂ ಪವಿತ್ರಕಾರಕಳೂ ಆದ ಈ ದೇವತೆಯು " **ಯಜ್ಞಂ ವಷ್ಟು** " ನಮ್ಮ ಯಜ್ಞವನ್ನು ವಹಿಸಿ ದೇವತೆಗಳಿಗೆ ಸೇರಿಸಲಿ ಎಂದು ಪ್ರಾರ್ಥಿಸಿದೆ ಯೆಂದು ತಿಳಿಸಿದೆ. ಇವರಂತೆಯೇ ನಿರುಕ್ತಕಾರರು,

**ಮಹೋ ಅರ್ಣಃ ಸರಸ್ವತೀ ಪ್ರ ಚೇತಯತಿ ಕೇತುನಾ । ಧಿಯೋ ವಿಶ್ವಾ ವಿ ರಾಜತಿ ॥**

(ಋ. ಸಂ. ೧-೩-೧೨)

ಎಂಬ ಋಕ್ಕನ್ನೂ ಉದಹರಿಸಿ ವಿವರಿಸಿದ್ದಾರೆ. ಈ ಋಕ್ಕಿನಲ್ಲಿ ಸರಸ್ವತಿಯು ನದ್ಯಾತ್ಮಕವಾದ ದೇವತೆಯೆಂದು ತಿಳಿಸಿದೆ. ಆದರೂ ಸಹ ವಾಗ್ದೇವತೆಗೆ ಯಾವ ಗುಣಗಳಿವೆಯೋ, ಅದೇ ಗುಣಗಳು ಇಲ್ಲಿಯೂ ವರ್ಣಿಸಲ್ಪಟ್ಟಿವೆ. **ಸರಸ್ವತೀ** ಶಬ್ದದ ಲಕ್ಷಣವನ್ನು ಹೇಳುವಾಗಲೂ ಸಹ ನಿರುಕ್ತಕಾರರು ಎರಡುಸನ್ನಿವೇಶಗಳಲ್ಲೂ ಒಂದೇ **ಲಕ್ಷಣವು ಹೊಂದಿ** ಕೊಳ್ಳುವುದೆಂದು ತಿಳಿಸಿದ್ದಾರೆ.

**ತತ್ರ ಸರಸ್ವತೀತ್ಯೇತಸ್ಯ ನದೀವದ್ದೇವತಾವಚ್ಚ ನಿಗಮಾ ಭವಂತಿ ।**

(ನಿ. ೨-೨೩)

**ಸರಸ್ವತೀ । ಸರ ಇತ್ಯುದಕನಾಮ ಸರ್ತೇಸ್ತದ್ವತೀ ।**

(ನಿ. ೯-೨೬)

ಪ್ರವಹಿಸು ಎಂಬರ್ಥವನ್ನು ಕೊಡತಕ್ಕ **ಸೃ** ಧಾತುವಿನಿಂದ ಸರಶಬ್ದವು ನಿಷ್ಪನ್ನವಾಗಿದೆ. ಉದಕವೆಂದರ್ಥ. ಈ ಸರವುಳ್ಳದ್ದು ಸರಸ್ವತೀ. ಇದು ನದೀರೂಪವಾದ ಸರಸ್ವತಿಯ ಲಕ್ಷಣವಾಗಿದೆ ಇದೇ ಲಕ್ಷಣವು ವಾಗ್ದೇವೀರೂಪವಾದ ಸರಸ್ವತೀ ಪದದ ಸ್ವರೂಪವನ್ನೂ ತಿಳಿಸುವುದೆಂದು "**ಸರಸ್ವತೀ ವ್ಯಾಖ್ಯಾತಾ**" ಎಂದು (ನಿ. ೧೧-೧೫)ತಿಳಿಸಿದೆ.

ಸರಸ್ವತಿಗೆ ವಿಶೇಷಣವಾಗಿರುವ **ಧಿಯಾವಸುಃ** ಎಂಬ ಪದದಲ್ಲಿ **ಧೀ** ಶಬ್ದಕ್ಕೆ ಸ್ತುತಿಯೆಂದು ಐತರೇಯಾರಣ್ಯಕದಲ್ಲಿ ಅರ್ಥಮಾಡಿರುವುದನ್ನು ಮೇಲೆ ತಿಳಿಸಿದೆ. ನಿರುಕ್ತಕಾರರು **ಧಿಯಾವಸುಃ-ಕರ್ಮವಸುಃ**ಎಂದು **ಧೀ** ಶಬ್ದಕ್ಕೆ ಕರ್ಮವೆಂದರ್ಥಮಾಡಿದ್ದಾರೆ. **ಧೀ** ಎಂಬ ಪದವನ್ನು ನಿರುಕ್ತದಲ್ಲಿ **ಕರ್ಮ**ನಾಮಗಳಲ್ಲಿಯೂ **ಪ್ರಜ್ಞಾ**ನಾಮಗಳಲ್ಲಿಯೂ ಪಠಿಸಿದೆ. (ನಿ. ೩-೧ ; ನಿ. ೩-೧೩) ನಿರುಕ್ತಕಾರರು "ಮಹೋ ಅರ್ಣಃ ಸರಸ್ವತೀ" ಎಂಬ ಋಕ್ಕಿನಲ್ಲಿರುವ ಪದಕ್ಕೆ **ಸರ್ವಾಣಿ ಪ್ರಜ್ಞಾನಾನಿ** (ನಿ. ೧೧-೨೬) ಎಂದು ಅರ್ಥಮಾಡಿರುವಾಗ ನಮ್ಮ ಸಕಲವಾದ ಪ್ರಜ್ಞಾಯುತವಾದ ಧ್ಯಾನವೆಂಬರ್ಥವನ್ನು ಹೇಳಿದ್ದಾರೆ. ಮತ್ತು

**ಪಥಸ್ಪಥಃ ಪರಿಗತಿಂ ವಚಸ್ಯಾ ಕಾಮೇನ ಕೃತೋ ಅಭ್ಯಾನಳರ್ಕಂ ।**
**ಸ ನೋ ರಾಸಚ್ಛುರುಧಶ್ಚಂದ್ರಾಗ್ರಾ ಧಿಯಂಧಿಯಂ ಸೀಷಧಾತಿ ಪ್ರ ಪೂಷಾ ॥**
(ಋ. ಸಂ. ೬-೪೯-೮)

**ಪಾವೀರವೀ ತನ್ಯತುರೇಕಪಾದಜೋ ದಿವೋ ಧರ್ತಾ ಸಿಂಧುರಾಪಃ ಸಮುದ್ರಿಯಃ ।**
**ವಿಶ್ವೇ ದೇವಾಸಃ ಶೃಣವನ್ ವಚಾಂಸಿ ಮೇ ಸರಸ್ವತೀ ಸಹ ಧೀಭಿಃ ಪುರಂಧ್ಯಾ ॥**
(ಋ. ಸಂ. ೧೦-೬೫-೧೩)

ಎಂಬ ಋಕ್ಕುಗಳಲ್ಲಿ **ಧೀ** ಶಬ್ದಕ್ಕೆ ಯಜ್ಞಯಾಗಾದಿಕರ್ಮಗಳೆಂದರ್ಥಮಾಡಿದೆ. ಪ್ರಕೃತವಾದ ಋಕ್ಕಿನಲ್ಲಿ ಯಾವ ಅರ್ಥವನ್ನು ಹೇಳಿದರೂ ಸಹ ಸಂದರ್ಭಕ್ಕೆ ಹೊಂದಿಕೊಳ್ಳುತ್ತದೆ.

**ಸ್ತನಃ-ಸ್ತನವಚ್ಛಿಶುಸ್ಥಾನೀಯಾನಾಂ ಪ್ರಾಣಿನಾಮಾಪ್ಯಾಯನಕಾರೀ ಲೌಕಿಕವೈದಿಕಸುಶಬ್ದರೂಪಃ ಸ್ತನಃ ।** ಶಿಶುರೂಪರಾದ ಪ್ರಜೆಗಳಿಗೆ ಸ್ತನವು ಕ್ಷೀರವನ್ನು ಕೊಟ್ಟು ಯಾವರೀತಿ ತೃಪ್ತಿಯನ್ನುಂಟುಮಾಡುತ್ತದೆಯೋ ಅದೇ ರೀತಿಯಾಗಿ ಲೌಕಿಕರೂಪವಾದುದೂ ವೈದಿಕರೂಪವಾದುದೂ ಆದ ವಾಙ್ಮಯವಾದ ಶಬ್ದವು ಮೇಧಾವಿಗಳಾದ ಋತ್ವಿಕ್ಕುಗಳಿಗೆ ತೃಪ್ತಿಯನ್ನುಂಟುಮಾಡತಕ್ಕವೆಂದು ಸಾಯಣರು ವಿವರಿಸಿದ್ದಾರೆ. ಮತ್ತು **ಸರ್ವಪ್ರಾಣ್ಯುಪಕಾರಕಂ ಸೂಕ್ತಮಯಂ ಸ್ತನಂ ।** ಸಕಲಪ್ರಾಣಿಗಳಿಗೂ ಉಪಕಾರಕವಾದುದೂ, ಸೂಕ್ತಮಯವಾದುದೂ ಆದ ಸ್ತನವೆಂದು ಅರ್ಥ. ಬೃಹದಾರಣ್ಯಕೋಪನಿಷತ್ತಿನಲ್ಲಿ ಇದೇ ಮಂತ್ರವನ್ನು ಪಠಿಸಿ ಅಲ್ಲಿ ಎರಡುವಿಧವಾದ ಅರ್ಥಗಳಿಗೂ ಅವಕಾಶವಿದೆಯೆಂದು ತಿಳಿಸಿದೆ.

"**ಅಥೈನಂ ಮಾತ್ರೇ ಪ್ರದಾಯ ಸ್ತನಂ ಪ್ರಯಚ್ಛತಿ " ಯಸ್ತೇ ಸ್ತನಃ "**......................" ಎಂದು ಮಾತೃವು ತನ್ನ ಮಗುವಿಗೆ ಸ್ತನ್ಯಪಾನವನ್ನು ಮಾಡಿಸುವಾಗ ಈ ಮಂತ್ರವನ್ನು ಪಠಿಸಬೇಕೆಂಬ ವಿಧಿಯನ್ನು ತಿಳಿಸಿದೆ. "**ಅಥೈನಂ ಮಾತ್ರೇ ಪ್ರದಾಯ ಸಾಙ್ಕಕಸ್ಥಂ ಸ್ತನಂ ಪ್ರಯಚ್ಛತಿ ಯಸ್ತೇ ಸ್ತನಇತ್ಯಾದಿಮಂತ್ರೇಣ**" ಎಂದು ಶಂಕರಾಚಾರ್ಯರು ತಿಳಿಸಿದ್ದಾರೆ. (ಬೃ. ಉ. **ಶಾಂಕರಭಾಷ್ಯ. ೬-೪-೨೬**).

**ಮಯೋಭೂಃ—ರಸಾಸ್ವಾದಿನಾಂ ಸುಖಸ್ಯ ಭಾವಯಿತಾ ।** ವಾಗ್ರಸದ ಸುಖವನ್ನು ಅನುಭವಿಸುವಂತೆ ಮಾಡತಕ್ಕವಳು ಎಂದರ್ಥ. ಅಥವಾ ವಾಗ್ರೂಪವಾದ ಸ್ತನದಿಂದ ರಸವೆಂಬ ಕ್ಷೀರವನ್ನು ಸುರಿಸುವವಳು ಮತ್ತು ಆನಂದದಾಯಕಳು ಎಂದರ್ಥ. ಬೃಹದಾರಣ್ಯಕದಲ್ಲಿ ವಾಕ್ಕನ್ನು ಧೇನುವಿಗೆ ಹೋಲಿಸಿ ಈ ತಾತ್ಪರ್ಯವನ್ನು ಸೂಚಿಸಿದೆ.

**ವಾಚಂ ಧೇನುಮುಪಾಸೀತ ತಸ್ಯಾಶ್ಚತ್ವಾರಃ ಸ್ತನಾಃ ಸ್ವಾಹಾಕಾರೋ ವಷಟ್ಕಾರೋ ಹಂತಕಾರೋ ಸ್ವಧಾಕಾರಸ್ತಸ್ಯೈ ದ್ವೌ ಸ್ತನೌ ದೇವಾ ಉಪಜೀವಂತಿ ಸ್ವಾಹಾಕಾರಂ ಚ ವಷಟ್ಕಾರಂ ಚ ಹಂತಕಾರಂ ಮನುಷ್ಯಾಃ ಸ್ವಧಾಕಾರಂ ಪಿತರಸ್ತಸ್ಯಾಃ ಪ್ರಾಣ ಋಷಭೋ ಮನೋ ವತ್ಸಃ ||**

(ಬೃ. ಉ. ೫-೮)

ವಾಕ್ಕನ್ನು ಧೇನುವೆಂದು ಉಪಾಸನೆಮಾಡತಕ್ಕದ್ದು. ಈ ಧೇನುವಿಗೆ ನಾಲ್ಕು ಸ್ತನಗಳಿವೆ ಸ್ವಾಹಾಕಾರ, ವಷಟ್ಕಾರ, ಹಂತಕಾರ, ಸ್ವಧಾಕಾರ ಎಂಬಿವೇ ನಾಲ್ಕುಸ್ತನಗಳು. ಸ್ವಾಹಾಕಾರವೂ, ವಷಟ್ಕಾರವೂ ದೇವತೆಗಳಿಗೆ ಹವಿಸ್ಸಿನರೂಪವಾದ ಅನ್ನವನ್ನೊದಗಿಸಿ ಅವರಿಗೆ ತೃಪ್ತಿಯನ್ನುಂಟುಮಾಡುತ್ತವೆ. ಹಂತಕಾರವು ಮಾನವರಿಗೂ ಸ್ವಧೆಯು ಪಿತೃಗಳಿಗೂ ತೃಪ್ತಿಯನ್ನು ಕೊಡುತ್ತದೆ. ಪ್ರಾಣವೇ ಈ ವಾಗ್ರೂಪವಾದ ಧೇನುವಿಗೆ ವೃಷಭದಂತಿರುವುದು.

**ಪ್ರಾಣೇನ ಹಿ ವಾಕ್ಪ್ರಸೂಯತೇ । ಮನೋ ವತ್ಸಃ । ಮನಸಾ ಹಿ ಪ್ರಸ್ರಾವ್ಯತೇ । ಮನಸಾ ಹ್ಯಾಲೋಚಿತೇ ವಿಷಯೇ ವಾಕ್ಪ್ರವರ್ತತೇ । ತಸ್ಮಾನ್ಮನೋ ವತ್ಸಸ್ಥಾನೀಯಂ ||**

(ಶಾಂಕರಭಾಷ್ಯ)

ಪ್ರಾಣದಿಂದಲೇ ವಾಕ್ಕಿನ ಪ್ರಸವವಾಗುವುದರಿಂದ ಪ್ರಾಣವು ವೃಷಭವು. ಮನಸ್ಸು ಆಲೋಚಿಸಿದನಂತರವೇ ವಾಕ್ಕಿನ ಪ್ರವೃತ್ತಿಯಿರುವುದರಿಂದ ಮನಸ್ಸು ವತ್ಸಸ್ಥಾನೀಯವಾಯಿತು. ಎಂಬುದಾಗಿ ವಾಗ್ಧೇನುವಿನ ಸ್ತನ್ಯದಿಂದ ಲಭಿಸತಕ್ಕ ಫಲವನ್ನು ವರ್ಣಿಸಿದೆ. ಅದರಿಂದ ಲಭಿಸುವ ತೃಪ್ತಿಯು ಸ್ವರೂಪವನ್ನೂ ಸೂಚಿಸಿದೆ.

**ಯೇನ ವಿಶ್ವಾ ಪುಷ್ಯಸಿ ವಾರ್ಯಾಣಿ** ಎಂಬ ಪಾದದಲ್ಲಿ ವರ್ಣಿತವಾಗಿರುವುದನ್ನೂ **ರತ್ನಧಾಃ, ವಸುವಿತ್** ಇತ್ಯಾದಿವಿಶೇಷಣಗಳಿಂದ ಸೂಚಿತವಾಗಿರುವ ಅಂಶಗಳನ್ನೂ ಛಾಂದೋಗ್ಯದಲ್ಲಿ ವರ್ಣಿಸಿ ವಾಕ್ಕೇ ಸಕಲ ಲೋಕಗಳಿಗೂ, ಸಕಲಭೂತಗಳಿಗೂ, ಸಕಲವಿಧವಾದ ವ್ಯವಹಾರಗಳಿಗೂ ಆಧಾರವೆಂದು ತಿಳಿಸಿದೆ.

**ವಾಗ್ವಾವ ನಾಮ್ನೋ ಭೂಯಸೀ ವಾಗ್ವಾ ಋಗ್ವೇದಂ ವಿಜ್ಞಾಪಯತಿ ಯಜುರ್ವೇದಂ ಸಾಮವೇದಮಾಥರ್ವಣಂ ಚತುರ್ಥಮಿತಿಹಾಸಪುರಾಣಂ ಪಂಚಮಂ ವೇದಾನಾಂ ವೇದಂ ಪಿತ್ರ್ಯಂ ರಾಶಿಂ ದೈವಂ ನಿಧಿಂ ವಾಕೋವಾಕ್ಯಮೇಕಾಯನಂ ದೇವವಿದ್ಯಾಂ ಬ್ರಹ್ಮವಿದ್ಯಾಂ ಭೂತವಿದ್ಯಾಂ ಕ್ಷತ್ರವಿದ್ಯಾಂ ನಕ್ಷತ್ರವಿದ್ಯಾಂ ಸರ್ಪದೇವಜನವಿದ್ಯಾಂ ದಿವಂ ಚ ಪೃಥಿವೀಂ ಚ ವಾಯುಂ ಚಾಕಾಶಂ ಚಾಪಶ್ಚ ತೇಜಶ್ಚ ದೇವಾಂಶ್ಚ ಮನುಷ್ಯಾಂಶ್ಚ ಪಶೂಂಶ್ಚ ವಯಾಂಸಿ ಚ .... .... .... .... .... ಧರ್ಮಂ ಚಾಧರ್ಮಂ ಚ ಸತ್ಯಂ ಚಾನೃತಂ ಚ ಸಾಧು ಚಾಸಾಧು ಚ ಹೃದಯಜ್ಞಂ ಚಾಹೃದಯಜ್ಞಂ ಚ ಯದ್ವೈ ವಾಙ್ನಾಭವಿಷ್ಯನ್ನ ಧರ್ಮೋ ನಾಧರ್ಮೋ ವ್ಯಜ್ಞಾಪಯಿಷ್ಯನ್ನ ಸತ್ಯಂ ನಾನೃತಂ .... .... .... .... ವಾಚಮುಪಾಸ್ಸ್ವೇತಿ ||**

(ಛಾ. ಉ. ೭-೨-೧)

**ವಾಕ್ತತ್ತ್ವವು** ಕೇವಲ ನಾಮಕ್ಕಿಂತಲೂ ಅಧಿಕವಾದುದು. ವಾಕ್ಕಿನಿಂದಲೇ ಋಗ್ವೇದವೂ, ಯಜುರ್ವೇದವೂ, ಸಾಮವೇದವೂ, ಅಥರ್ವವೇದವೂ, ಸಕಲವಾದ ಇತಿಹಾಸಪುರಾಣಾದಿಗಳೂ ತಿಳಿಯಲ್ಪಡುತ್ತವೆ. ದ್ಯಾವಾಪೃಥಿವಿಗಳೂ, ವಾಯುವೂ, ಆಕಾಶವೂ, ಸಕಲ ದೇವಮನುಷ್ಯಾದಿಗಳೂ, ಪಶುಪಕ್ಷ್ಯಾದಿಗಳೂ ವಾಕ್ಕಿನಿಂದಲೇ ಅರಿಯಲ್ಪಡುತ್ತಾರೆ.

ಸತ್ಯಾಸತ್ಯಗಳೂ, ಸದಸತ್ತುಗಳೂ, ಪ್ರಿಯಾಪ್ರಿಯಗಳೂ ವಾಕ್ಕಿನಿಂದಲೇ ಜ್ಞಾತವಾಗುತ್ತವೆ. ವಾಕ್ಕಿಲ್ಲದಿದ್ದರೆ ಪ್ರಿಯಾಪ್ರಿಯಗಳಾಗಲಿ, ಸದಸತ್ತುಗಳಾಗಲಿ ಯಾವುವೂ ಇಲ್ಲ. ಆದುದರಿಂದಲೇ,

**ಸ ಯೋ ವಾಚಂ ಬ್ರಹ್ಮೇತ್ಯುಪಾಸ್ತೇ । ಯಾವದ್ವಾಚೋ ಗತಂ ತತ್ರಾಸ್ಯ ಯಥಾ ಕಾಮಚಾರೋ ಭವತಿ ಯೋ ವಾಚಂ ಬ್ರಹ್ಮೇತ್ಯುಪಾಸ್ತೇ ।**

(ಛಾ. ಉ. ೭-೨-೨)

ಯಾವನು ವಾಗ್ರೂಪವಾದ ಬ್ರಹ್ಮವನ್ನು ಉಪಾಸನೆಮಾಡುತ್ತಾನೋ ಅವನು ಸಕಲವಿಧವಾದ ಸ್ವಾತಂತ್ರ್ಯವನ್ನೂ, ಇಷ್ಟಾರ್ಥಗಳನ್ನೂ ಪಡೆಯುತ್ತಾನೆ. ಅಲ್ಲದೇ,

**ವಾಗ್ವೈ ಗಾಯತ್ರೀ ವಾಗ್ವಾ ಇದಂ ಸರ್ವಂ ಭೂತಂ ಗಾಯತಿ ಚ ತ್ರಾಯತೇ ಚ ।**

(ಛಾ. ಉ. ೩-೧೨-೧)

ವಾಕ್ಕಿನಿಂದಲೇ ಸಕಲತತ್ತ್ವಗಳ ಸ್ವರೂಪವನ್ನೂ ವರ್ಣಿಸಿ ಪಠಿಸುವುದರಿಂದಲೂ, ಸಕಲಕ್ಕೂ ವಾಕ್ಕು ರಕ್ಷಕವಾದುದರಿಂದಲೂ, ವಾಕ್ಕೇ ಗಾಯತ್ರಿಯು ಇತ್ಯಾದಿಯಾಗಿ ವಾಕ್ಕಿನ ಮಹತ್ತ್ವವನ್ನು ಸ್ತುತಿಸಿದೆ.

**ಅಥ ಸಾರಸ್ವತಂ । ವಾಗ್ವೈ ಸರಸ್ವತೀ ವಾಚೈವ ತತ್ಪ್ರಜಾಪತಿಃ ಪುನರಾತ್ಮಾನಮಾಪ್ಯಾಯಯತ ವಾಗೇನಮುಪಸಮಾವರ್ತತೇ ವಾಚಮನು ಕಾಮಾತ್ಮಾನಃ ಕುರುತೇ ।**

(ಶ. ಬ್ರಾ. ೩-೯.೧.೭)

ವಾಕ್ಕೇ ಸರಸ್ವತಿಯು. ವಾಕ್ಕಿನಿಂದಲೇ ಪ್ರಜಾಪತಿಯು ತನ್ನ ಶಕ್ತಿಯನ್ನು ವೃದ್ಧಿಮಾಡಿಕೊಂಡು ತೃಪ್ತಿಯನ್ನು ಪಡೆದನು. ವಾಕ್ಕು ಪ್ರಜಾಪತಿಯನ್ನು ಸೇರಿ ಅವನ ಸಂತೋಷವನ್ನು ವೃದ್ಧಿಪಡಿಸುತ್ತದೆ. ಅದರಂತೆಯೇ ಯಜಮಾನನೂ ಸಹ ವಾಕ್ಕಿನ ಅನುಗ್ರಹದಿಂದ ತೃಪ್ತಿಯನ್ನು ಹೊಂದುತ್ತಾನೆ.

**ತದ್ಯತ್ಸಾರಸ್ವತಮನುಭವತಿ । ವಾಗ್ವೈ ಸರಸ್ವತ್ಯನ್ನಗ್ಂ ಸೋಮಸ್ತಸ್ಮಾದ್ಯೋ ವಾಚಾ ಪ್ರಸಾಮ್ಯನ್ನಾದೋ ಹೈವ ಭವತಿ ।**

(ಶ. ಬ್ರಾ. ೩-೯-೧-೯)

ಸರಸ್ವತಿಯೇ ವಾಗ್ದೇವತೆಯು. ಸೋಮನೇ ಅನ್ನವು ಇವೆರಡನ್ನೂ ಒಟ್ಟಿಗೆ ಪಡೆದವನು ಅನ್ನಸಂಪದ್ಯುಕ್ತನಾಗುತ್ತಾನೆ. ಇತ್ಯಾದಿಯಾಗಿ ಶತಪಥಾದಿಗಳಲ್ಲಿ ವಾಗ್ದೇವತೆಯಾದ ಸರಸ್ವತಿಯ ಪ್ರಶಂಸೆ ಇದೆ.

**ರತ್ನಧಾ—ಬಹುವಿಧರಮಣೀಯರಸಾನಾಂ ಧಾರಯಿತ್ರೀ ।** ರಮಣೀಯವಾದ ರಸವನ್ನು ಹೊಂದಿರುವುದು ಎಂದು ವಾಕ್ಕಿಗೆ (ಸರಸ್ವತಿಗೆ) ವಿಶೇಷಣವಾಗಿದೆ. ರತ್ನ ಶಬ್ದಕ್ಕೆ ರಮಣೀಯವೆಂಬ ಅರ್ಥವನ್ನು ಅನೇಕ ಕಡೆಗಳಲ್ಲಿ ಹೇಳಬಹುದು ನಿರುಕ್ತಕಾರರು "**ಹೋತಾರಂ ರತ್ನಧಾತಮಂ**" ಎಂಬ ವಾಕ್ಯದಲ್ಲಿ ರತ್ನ ಶಬ್ದಕ್ಕೆ ಈ ಅರ್ಥವನ್ನೇ ಹೇಳಿದ್ದಾರೆ. (ನಿ. ೭-೧೫) ಪ್ರಕೃತವಾದ ಋಕ್ಕಿನಲ್ಲಿ ಅನಂತರೂಪವಾದ ರಸವನ್ನು ಹೊಂದಿರುವವಳು ಎಂದರ್ಥ.

**ಸುದತ್ರಃ**—**ಸುದತ್ರಃ ಕಲ್ಯಾಣದಾನಃ । ಸುವಿದತ್ರಃ ಕಲ್ಯಾಣವಿದ್ಯಃ ಸುದತ್ರ** ಶಬ್ದಕ್ಕೆ ಶೋಭನಾತ್ಮಕವಾದ ದಾನವುಳ್ಳವನೆಂದೂ, **ಸುವಿದತ್ರ**ಶಬ್ದಕ್ಕೆ ಕಲ್ಯಾಣಾತ್ಮಕವಾದ ವಿದ್ಯವುಳ್ಳವನೆಂದೂ ನಿರುಕ್ತಕಾರರು ಈ ಎರಡು ಶಬ್ದಗಳಿಗೂ ವ್ಯತ್ಯಾಸವನ್ನು ತೋರಿಸಿದ್ದಾರೆ. (ನಿ. ೬-೧೪) ಸಾಯಣರೂ ಸಹ ಇದೇ ಅರ್ಥವನ್ನು ಹೇಳಿ ಸಮರ್ಥನೆಗಾಗಿ ನಿರುಕ್ತದ ನಿರ್ವಚನವನ್ನು ತೋರಿಸಿದ್ದಾರೆ. ನಿರುಕ್ತಕಾರರು **ಸುದತ್ರ** ಶಬ್ದದ ಪ್ರಯೋಗವನ್ನು ತೋರಿಸಲು,

**ತಾ ನೋ ರಾಸನ್ರಾತಿಷಾಚೋ ವಸೂನ್ಯಾ ರೋದಸೀ ವರುಣಾನೀ ಶೃಣೋತು ।**
**ವರೂತ್ರೀಭಿಃ ಸುಶರಣೋ ನೋ ಅಸ್ತು ತ್ವಷ್ಟಾ ಸುದತ್ರೋ ವಿ ದಧಾತು ರಾಯಃ ॥**

(ಋ. ಸಂ. ೭-೩೪-೨೨)

ಎಂಬ ಋಕ್ಕನ್ನುದಹರಿಸಿದ್ದಾರೆ. ಇಲ್ಲಿ **ಸುದತ್ರ**ಶಬ್ದವು ತ್ವಷ್ಟೃವಿಗೆ ವಿಶೇಷಣವಾಗಿದೆ. ಕಲ್ಯಾಣಾತ್ಮಕವಾದ ದಾನವುಳ್ಳವನೆಂದರ್ಥ. ಅದರಂತೆಯೇ ಪ್ರಕೃತವಾದ ಋಕ್ಕಿನಲ್ಲಿಯೂ ಸಹ ಸರಸ್ವತಿಯ ಸ್ತನಕ್ಕೆ ವಿಶೇಷಣವಾಗಿ ಕಲ್ಯಾಣಾತ್ಮಕವಾದ ಫಲವನ್ನು ಕೊಡತಕ್ಕದ್ದು ಎಂದು ವರ್ಣಿತವಾಗಿದೆ.

**ತಮಿಹ ಧಾತವೇ ಕಃ**—ಎನ್ನುವಾಗ **ತಂ** ಎಂದರೆ ಸಕಲ ಪ್ರಾಣಿಗಳಿಗೂ ಉಪಕಾರಕವಾದುದೂ ಸೂಕ್ತ ರೂಪವಾದುದೂ ಆದ ಸ್ತನವೆಂದೂ, ಇದನ್ನು ಪಾನಮಾಡಲು ಅನುಗ್ರಹಿಸಬೇಕೆಂದೂ ಸರಸ್ವತಿಯನ್ನು ಪ್ರಾರ್ಥಿಸಿದೆಯೆಂದು ಸಾಯಣರು ವಿವರಿಸಿದ್ದಾರೆ. " **ಪ್ರವರ್ಗ್ಯೇ ಅಭಿಷ್ಟವೇ ಯಸ್ತೇ ಸ್ತನಃ ಇತ್ಯೇಕಾ** " ಈ ಮಂತ್ರವು ಪ್ರವರ್ಗ್ಯಯಾಗದ ಕಾಲದಲ್ಲಿ ಸ್ತುತಿರೂಪವಾಗಿ ಪಠಿಸತಕ್ಕದ್ದೆಂದು ತಿಳಿಸಿದೆ.

॥ ವ್ಯಾಕರಣಪ್ರಕ್ರಿಯಾ ॥

**ಶಶಯಃ**—ಶೀಙ್ ಸ್ವಪ್ನೇ ಧಾತು. ಪಚಾದಿನಿಮಿತ್ತವಾಗಿ ಅಚ್‌ಪ್ರತ್ಯಯ. ಪ್ರತ್ಯಯನಿಮಿತ್ತವಾಗಿ ಧಾತು ಇಕಾರಕ್ಕೆ ಗುಣ, ಅಯಾದೇಶ. ಛಾಂದಸವಾಗಿ ದ್ವಿತ್ವ. ಚಿತ್ತ್ವಾದುದರಿಂದ ಅಂತೋದಾತ್ತಸ್ವರ ಬರುತ್ತದೆ.

**ಮಯೋಭೂಃ**—ಮಯಃ ಸುಖಂ ಭಾವಯತಿ ಇತಿ ಮಯೋಭೂಃ ಅಂತರ್ಭಾವಿತಣ್ಯರ್ಥಕವಾದ ಭೂ ಧಾತುವಿನ ಮೇಲೆ ಕ್ವಿಪ್ ಪ್ರತ್ಯಯ. ಕೃದುತ್ತರಪದ ಪ್ರಕೃತಿಸ್ವರ ಬರುತ್ತದೆ.

**ವಿಶ್ವಾ**—ನಪುಂಸಕಬಹುವಚನದಲ್ಲಿ **ಶೇಶ್ಛಂದಸಿ ಬಹುಲಂ** (ಪಾ. ಸೂ. ೬-೧-೭೦) ಎಂಬುದರಿಂದ ಶಿಗೆ ಲೋಪ.

**ಪುಷ್ಯಸಿ**—ಪುಷ ಪುಷ್ಟೌ ಧಾತು. ದಿವಾದಿ. ಲಟ್ ಮಧ್ಯಮಪುರುಷ ಏಕವಚನಾಂತರೂಪ. **ಯದ್ವೃತ್ತಾನ್ನಿತ್ಯಂ** (ಪಾ. ಸೂ ೮-೧-೬೬) ಎಂಬುದರಿಂದ ನಿಘಾತಸ್ವರ ಪ್ರತಿಷೇಧ ಬರುತ್ತದೆ. ಶ್ಯನ್ ವಿಕರಣ ನಿತ್ತ್ವಾದುದರಿಂದ ಆದ್ಯುದಾತ್ತಸ್ವರ ಬರುತ್ತದೆ.

**ರತ್ನಧಾಃ**—ಡುಧಾಞ್ ಧಾರಣಪೋಷಣಯೋಃ ಧಾತು. **ಆತೋಮನಿನ್‌ಕ್ವನಿಪ್‌ವನಿಪಶ್ಚ** (ಪಾ. ಸೂ. ೩-೨-೭೪) ಎಂಬುದರಿಂದ ವಿಚ್ ಪ್ರತ್ಯಯ. ಸರ್ವಲೋಪವಾಗುತ್ತದೆ. ಕೃದುತ್ತರಪದ ಪ್ರಕೃತಿಸ್ವರ ಬರುತ್ತದೆ.

**ವಸುವಿತ್**—ವಸೂನಾಂ ವೇತ್ತಾ ವಸುವಿತ್. ವಿದ ಜ್ಞಾನೇ ಧಾತು. ಕ್ವಿಪ್‌ಪ್ರತ್ಯಯ. ಕೃದುತ್ತರಪದ ಪ್ರಕೃತಿಸ್ವರ ಬರುತ್ತದೆ.

**ಸರಸ್ವತಿ**—ಪಾದಾದಿಯಲ್ಲಿರುವುದರಿಂದ ಆಷ್ಟಮಿಕಆಮಂತ್ರಿತನಿಘಾತಸ್ವರ ಬರುವುದಿಲ್ಲ. **ಆಮಂತ್ರಿತಸ್ಯ** (ಪಾ ಸೂ. ೬-೧-೧೯೮) ಎಂಬುದರಿಂದ ಆದ್ಯುದಾತ್ತಸ್ವರ ಬರುತ್ತದೆ.

**ಧಾತವೇ**—ಧೇಟ್ ಪಾನೇ. ಧಾತು. ತುಮುನರ್ಥತೋರುವಾಗ **ತುಮರ್ಥೇಸೇಸೇನಸೇ**—(ಪಾ. ಸೂ. ೩-೪-೯) ಎಂಬುದರಿಂದ ತವೇನ್ ಪ್ರತ್ಯಯ. **ಆದೇಚಉಪದೇಶೇಶಿತಿ** (ಪಾ. ಸೂ. ೬-೧-೪೫) ಎಂಬುದರಿಂದ ಧಾತುವಿಗೆ ಆತ್ವ. **ಞ್ನಿತ್ಯಾದಿರ್ನಿತ್ಯಂ** (ಪಾ. ಸೂ. ೬-೧-೧೯೭) ಎಂಬುದರಿಂದ ಆದ್ಯುದಾತ್ತಸ್ವರ ಬರುತ್ತದೆ.

**ಕಃ**—ಡುಕೃಞ್ ಕರಣೇ. ಧಾತು **ಛಂದಸಿಲುಙ್‌ಲಙ್‌ಲಿಟಃ** (ಪಾ. ಸೂ. ೩-೪-೬) ಎಂಬುದರಿಂದ ಲೋಡರ್ಥದಲ್ಲಿ ಲುಙ್. ಮಧ್ಯಮಪುರುಷಏಕವಚನದಲ್ಲಿ ಸಿಪ್. **ಇತಶ್ಚ** ಎಂಬುದರಿಂದ ಇಕಾರಲೋಪ. **ಮಂತ್ರೇಘಸಹ್ವ**—(ಪಾ. ಸೂ ೨-೪-೮೦) ಎಂಬುದರಿಂದ ಚ್ಲಿಗೆ ಲುಕ್. ಸಿಪ್ ನಿಮಿತ್ತವಾಗಿ ಧಾತುವಿನ ಇಕಿಗೆ ಗುಣ. ರಪರವಾಗಿ ಬರುತ್ತದೆ. **ಹಲ್‌ಙ್ಯಾಭ್ಯೋ**—ಸೂತ್ರದಿಂದ ಸಿಪಿಗೆ ಲುಕ್. **ಬಹುಲಂಛಂದಸ್ಯ**—(ಪಾ ಸೂ. ೬-೪-೭೫) ಎಂಬುದರಿಂದ ಅಡಾಗಮ ಬರುವುದಿಲ್ಲ. ರೇಫಕ್ಕೆ ವಿಸರ್ಗ. ಅನುದಾತ್ತಸ್ವರ ಬರುತ್ತದೆ. ||೪೯||

———:o:———

। ಸಂಹಿತಾಪಾಠಃ ॥

ಯಜ್ಞೇನ ಯಜ್ಞಮಯಜಂತ ದೇವಾಸ್ತಾನಿ ಧರ್ಮಾಣಿ ಪ್ರಥಮಾನ್ಯಾಸನ್।
ತೇ ಹ ನಾಕಂ ಮಹಿಮಾನಃ ಸಚಂತ ಯತ್ರ ಪೂರ್ವೇ ಸಾಧ್ಯಾಃ ಸಂತಿ ದೇವಾಃ ॥ ೫೦ ॥

ಪದಪಾಠಃ

ಯಜ್ಞೇನ । ಯಜ್ಞಂ । ಅಯಜಂತ । ದೇವಾಃ । ತಾನಿ । ಧರ್ಮಾಣಿ । ಪ್ರಥಮಾನಿ । ಆಸನ್ ।
ತೇ । ಹ । ನಾಕಂ । ಮಹಿಮಾನಃ । ಸಚಂತ । ಯತ್ರ । ಪೂರ್ವೇ । ಸಾಧ್ಯಾಃ । ಸಂತಿ । ದೇವಾಃ ॥ ೫೦ ॥

ಸಾಯಣಭಾಷ್ಯಂ

ಅಗ್ನಿಮಂಥನೇ ಯಜ್ಞೇನ ಯಜ್ಞಮಿತ್ಯೇಷಾ ಪರಿಧಾನೀಯಾ । ಯಜ್ಞೇನ ಯಜ್ಞಮಯಜಂತ ದೇವಾ ಇತಿ ಪರಿದಧ್ಯಾತ್ । ಆ. ೨-೧೬. । ಇತಿ ಸೂತ್ರಿತತ್ವಾತ್ ॥

ದೇವಾ ವ್ಯವಹರ್ತಾರೋ ಯಜಮಾನಾ ಯಜ್ಞೇನ ನಿರ್ಮಥ್ಯಾಗ್ನಿನಾ ಯಜ್ಞಂ ಹೋಮಸಾಧನಮಾಹವನೀಯಮಯಜಂತ । ಪೂಜಿತವಂತಃ । ಅನುಷ್ಠಾನಾಯ ಸಂಯೋಜಿತವಂತ ಇತ್ಯರ್ಥಃ । ಅಗ್ನಿಂ ಮಥಿತ್ವಾ ಪ್ರಹರತಿ ತೇನೈವಾಗ್ನಯ ಆತಿಥ್ಯಂ ಕ್ರಿಯತ ಇತಿ ಹಿ ತೈತ್ತಿರೀಯಕಂ । ತಾನಿ ಧರ್ಮಾಣ್ಯಗ್ನಿಸಾಧನಾನಿ ಕರ್ಮಾಣಿ ಪ್ರಥಮಾನಿ । ಪ್ರಥಮ ಇತಿ ಮುಖ್ಯನಾಮ । ಪ್ರತಮಾನಿ ಪ್ರಕೃಷ್ಟತಮಾನ್ಯಾ-

ಸನ್ । ಫಲಪ್ರಸವಸಮರ್ಥಾನ್ಯಭವನ್ನಿತ್ಯರ್ಥಃ । ತೇ ಹ ತೇ ಚ ಯಜಮಾನಾ ನಾಕಂ । ನಾಸ್ಮಿನ್ನಕ-ಮಸ್ತೀತಿ ನಾಕಃ ಸ್ವರ್ಗಃ । ತಂ ಮಹಿಮಾನೋ ಮಾಹಾತ್ಮ್ಯಯುಕ್ತಾಃ ಸಚಂತೆ । ಸಂಗತಾಃ । ಕೀದೃಶಂ ನಾಕಂ । ಯತ್ರ ಯಸ್ಮಿನ್ನಾಕೇ ಪೂರ್ವೇ ಪೂರ್ವತನಾಃ ಸಾಧ್ಯಾಃ ಸಾಧನಾ ಯಜ್ಞಾದಿಸಾಧನವಂತಃ । ಕರ್ಮದೇವಾ ಇತ್ಯರ್ಥಃ । ತೇ ಸಂತಿ ನಿವಸಂತಿ ತಂ ಸಚಂತೆ । ತಸ್ಮಾದಿದಾನೀಮಪಿ ಮನುಷ್ಯೈರೇವಂ ಕರ್ತವ್ಯಮಿತ್ಯರ್ಥಃ । ಯದ್ವಾ । ದೇವಾ ಇದಾನೀಂ ದೇವಭಾಗಮಾಪನ್ನಾಃ ಪೂರ್ವಂ ಯಜ್ಞೇನಾಗ್ನಿನಾ ಪಶುಭೂತೇನ ಯಜ್ಞಂ ಯಷ್ಟವ್ಯಮಗ್ನಿಮಯಜಂತ । ಪೂಜಿತವಂತಃ । ಅಗ್ನೇರೇವ ಮೂರ್ತಿಭೇದೇನ ದೇವತ್ವಂ ಚ ಪಶುತ್ವಂ ಚ ದ್ರಷ್ಟವ್ಯಂ । ಅಗ್ನಿಃ ಪಶುರಾಸೀತ್ತಮಾಲಭಂತ ತೇನಾಯಜಂತೇತಿ ಶ್ರುತೇಃ । ಶಿಷ್ಟಂ ಪೂರ್ವವತ್ । ಯತ್ರ ಯಸ್ಮಿನ್ ಸ್ವರ್ಗೇ ನಿಮಿತ್ತಭೂತೇ ಸತಿ ಪೂರ್ವೇ ಪೂರ್ವತನಾಃ ಸಾಧ್ಯಾ ದೇವಾಃ ಸಾಧನಾತ್ಛಂದೋಽಭಿಮಾನಿನಃ । ಆದಿತ್ಯಾ ಅಂಗಿರಸಶ್ಚ ಸಾಧ್ಯಾ ದೇವಾ ಉಚ್ಯಂತೇ । ಛಂದಾಂಸಿ ವೈ ಸಾಧ್ಯಾ ದೇವಾಸ್ತೇಽಗ್ರೇಽಗ್ನಿನಾಗ್ನಿಮಯಜಂತ ತೇ ಸ್ವರ್ಗಂ ಲೋಕಮಾಯನ್ನಾದಿತ್ಯಾಶ್ಚೈವೇಹಾ-ಸನ್ನಂಗಿರಸಶ್ಚ ತೇಽಗ್ರೇಽಗ್ನಿನಾಗ್ನಿಮಯಜಂತ ತೇ ಸ್ವರ್ಗಂ ಲೋಕಮಾಯನ್ । ಐ. ಬ್ರಾ. ೧-೧೬ । ಇತಿ ಬ್ರಾಹ್ಮಣಂ । ಏತೇ ದೇವಾಃ ಸ್ವರ್ಗೇ ಸಂತಿ । ಭವಂತಿ । ಸ್ವರ್ಗಪ್ರಾಪ್ತಾ ಇತ್ಯರ್ಥಃ । ಯದ್ವಾ । ಯಜ್ಞೇನ ಜ್ಞಾನಾದಿಯಜ್ಞೇನ ಯಜ್ಞಂ ವಿಷ್ಣುಮಯಜಂತ । ಪೂಜಯಂತಿ । ತೇ ನಾಕಂ । ವಿಷ್ಣುಲೋಕಂ ಮಹಾನುಭಾವಾಃ ಸಚಂತೆ । ಸಂಗಚ್ಛಂತೇ । ಯತ್ರ ಪೂರ್ವೇ ಸಾಧ್ಯಾದಯೋ ದೇವಾಃ ಸಂತಿ ತತ್ಸ್ಥಾನಂ। ಅಗ್ನಿನಾಗ್ನಿಮಯಜಂತ ದೇವಾ ಇತ್ಯಾದಿ ನಿರುಕ್ತಮನುಸಂಧೇಯಂ । ನಿ. ೧೨-೪೧ ॥

ಪ್ರತಿಪದಾರ್ಥ

**ದೇವಾಃ**—ದೇವತೆಗಳು ಅಥವಾ ಪ್ರಕಾಶಮಾನರಾದ ಯಜಮಾನರು । **ಯಜ್ಞೇನ**—ಯಜ್ಞದಿಂದ । **ಯಜ್ಞಂ**—ಯಜ್ಞವನ್ನು । **ಅಯಜಂತ**—ನಿರ್ವಹಿಸಿದರು । **ತಾನಿ**—ಆ ವಿಧವಾಗಿ ನೆರವೇರಿಸಿದ । **ಧರ್ಮಾಣಿ**—ಯಜ್ಞಕರ್ಮಗಳು । **ಪ್ರಥಮಾನಿ**—ಅತ್ಯಂತ ಶ್ರೇಷ್ಠವಾದವಾಗಿ । **ಆಸನ್**—ಆದವು । (ಅನಂತರ)**ಯತ್ರ**—ಯಾವ ಸ್ವರ್ಗದಲ್ಲಿ । **ಪೂರ್ವೇ**—ಪ್ರಾಚೀನರೂ । **ಸಾಧ್ಯಾಃ**—ಹಿಂದೆ ನೆರವೇರಿಸಿದ ಯಜ್ಞಾದಿಸಾಧನಗಳಿಂದ ಕೂಡಿದವರೂ ಆದ। **ದೇವಾಃ**—ದೇವತ್ವವನ್ನು ಪಡೆದ ಯಜಮಾನರು। **ಸಂತಿ**—ಇರುತ್ತಾರೋ ಅಂತಹ। **ನಾಕಂ**—ಸ್ವರ್ಗವನ್ನು । **ತೇ ಹ**—ಪ್ರಕೃತದಲ್ಲಿ ಯಜ್ಞವನ್ನು ಮಾಡಿದವರೂ ಸಹ । **ಮಹಿಮಾನಃ**—ಅತ್ಯಂತ ಪ್ರಭಾವಶಾಲಿಯಾದ ಮಹಿಮೆಯಿಂದ ಕೂಡಿದವರಾಗಿ । **ಸಚಂತೇ**—(ಸೇರಿ) ಸೇವಿಸುತ್ತಾರೆ ।

ಭಾವಾರ್ಥ

ಯಜ್ಞಕರ್ತರು ಯಜ್ಞದಿಂದ ಯಜ್ಞವನ್ನು ನಿರ್ವಹಿಸಿದರು. ಆ ವಿಧವಾಗಿ ನೆರವೇರಿಸಿದ ಯಜ್ಞಕರ್ಮಗಳು ಅತ್ಯಂತ ಶ್ರೇಷ್ಠವಾಗಿ ಆದವು. ಅನಂತರ, ಪ್ರಾಚೀನರೂ, ಹಿಂದೆ ನೆರವೇರಿಸಿದ ಯಜ್ಞಾದಿಸಾಧನಗಳಿಂದ ಕೂಡಿದವರೂ ಮತ್ತು ದೇವತ್ವವನ್ನು ಪಡೆದವರೂ ಸಹ ಸೇರಿ ಸೇವಿಸುತ್ತಿರುವ ಸ್ವರ್ಗವನ್ನು ಈ ಯಜಮಾನರೂ ಪಡೆದು ತಮ್ಮ ಅತ್ಯಂತ ಪ್ರಭಾವಶಾಲಿಯಾದ ಮಹಿಮೆಯಿಂದ ಕೂಡಿಕೊಂಡು ಸ್ವರ್ಗಸುಖವನ್ನನುಭವಿಸುತ್ತಾರೆ.

## English Translation

The gods sacrifice with sacrifice, for such are their fiirst duties : those mighty ones assemble in heaven, where the divinities who are to be propitiated (by sacred rites) abide.

### ವಿಶೇಷವಿಷಯಗಳು

ಅಗ್ನಿಮಂಥನಕಾಲದಲ್ಲಿ ಯಜ್ಞೇನ ಯಜ್ಞಂ ಎಂಬ ಈ ಋಕ್ಕನ್ನು ಪರಿಧಾನಮಂತ್ರವನ್ನಾಗಿ ಉಪಯೋಗಿಸ ಬೇಕೆಂದು ಆಶ್ವಲಾಯನಶ್ರೌತಸೂತ್ರದ **ಯಜ್ಞೇನ ಯಜ್ಞಮಯಜಂತ ದೇವಾ ಇತಿ ಪರಿದಧ್ಯಾತ್** ಎಂಬ ಸೂತ್ರದಿಂದ ವಿವೃತವಾಗಿರುವುದು. (ಆ- ೨-೧೬).

ಇದು ಯಜ್ಞಫಲವನ್ನು ಸ್ತುತಿಸತಕ್ಕ ಮಂತ್ರವಾಗಿದೆ. ಶ್ರೇಷ್ಠವಾದ ಯಜ್ಞಕ್ಕೆ ಉತ್ತಮವಾದ ಸ್ವರ್ಗ ಪ್ರಾಪ್ತಿಯೇ ಫಲವೆಂದು **ತೇ ಹ ನಾಕಂ ಮಹಿಮಾನಃ ಸಚಂತೇ** ಎಂದು ಪ್ರಶಂಸಿಸಿದೆ.

**ನಾಕಂ – ನಾಕಂ** ಸ್ವರ್ಗಲೋಕವನ್ನು **ನಾಸ್ಮಿನ್ನಕಮಸ್ತೀತಿ ನಾಕಃ ಸ್ವರ್ಗಃ** ದುಃಖವಿಲ್ಲದಿರುವುದರಿಂದ ಸ್ವರ್ಗಕ್ಕೆ ನಾಕವೆಂಬ ಹೆಸರು ಪ್ರಸಿದ್ಧವಾಗಿದೆ. **ನಾಕ**ಶಬ್ದವನ್ನು ಋಕ್ಸಂಹಿತೆಯಲ್ಲಿ ಬೇರೆಬೇರೆ ಅರ್ಥಗಳಲ್ಲಿ ಉಪಯೋಗಿಸಿದೆ. ಯಜ್ಞ, ಸ್ವರ್ಗ, ಆದಿತ್ಯ ಇತ್ಯಾದ್ಯರ್ಥಗಳಲ್ಲಿ ಈ ಶಬ್ದದ ಪ್ರಯೋಗವಿದೆ. ನಿರುಕ್ತಕಾರರು ಈ ಪದವನ್ನು ಆರುಸಾಧಾರಣನಾಮಗಳಲ್ಲಿ ಸೇರಿಸಿ ಅವುಗಳ ಅರ್ಥವನ್ನು ಸಾಧಾರಣವೆಂದು ವಿವರಿಸುತ್ತಾ **ಸಾಧಾರಣಾ-ನ್ಯುತ್ತರಾಣಿ ಷಟ್ ದಿವಶ್ಚಾದಿತ್ಯಸ್ಯ ಚ** । ದ್ಯುಲೋಕಕ್ಕೂ ಆದಿತ್ಯನಿಗೂ ಸಾಧಾರಣವಾದ ಪರ್ಯಾಯಪದಗಳೆಂದೂ ತಿಳಿಸಿದ್ದಾರೆ. (ನಿ. ೨-೧೩). ಅನಂತರ ಈ ಶಬ್ದದ ನಿರ್ವಚನವನ್ನು ತಿಳಿಸುತ್ತಾ,

**ನಾಕ ಆದಿತ್ಯೋ ಭವತಿ ; ನೇತಾ ರಸಾನಾಂ । ನೇತಾ ಭಾಸಾಂ ಜ್ಯೋತಿಷಾಂ ಪ್ರಣಯಃ ।**

(ನಿ. ೨-೧೪)

ರಸದ ವಾಹಕನೂ ಮತ್ತು ತೇಜೋವಾಹಕನೂ ಆದ ಆದಿತ್ಯನಿಗೆ ನಾಕವೆಂದು ಹೆಸರು ಎಂದು ಆದಿತ್ಯನ ಪರ್ಯಾಯವಾಗಿ ಈ ಪದವಿರುವುದನ್ನು ತಿಳಿಸಿ ಅನಂತರ,

**ಅಥ ದ್ಯೌಃ ; ಕಮಿತಿ ಸುಖನಾಮ, ತತ್ಪ್ರತಿಷಿದ್ಧಂ ಪ್ರತಿಷಿಧ್ಯೇತ ।**

(ನಿ. ೨-೧೪)

**ಕಂ** ಎಂಬುದು ಸುಖದ ಪರ್ಯಾಯನಾಮವಾಗಿದೆ ; ಸುಖವಿಲ್ಲದಿರುವುದು **ಅಕಂ**, ಅದರ ಅಭಾವವಿಲ್ಲದಿರುವುದು ಎಂದರೆ ಸುಖಾಭಾವಾಭಾವ (ಸುಖಾಭಾವವಿಲ್ಲದಿರುವುದು), ದುಃಖರಹಿತವಾದುದು ಎಂದು ವಿವರಿಸಿ,

**ನ ವಾ ಅಮುಂ ಲೋಕಂ ಜಗ್ಮುಷೇ ಕಿಂಚ ನಾಕಂ ।**

(ಕಾಠಕ. ಸಂ. ೨೧-೨)

ಎಂಬ ವಾಕ್ಯವನ್ನುದಹರಿಸಿ **ನ ವಾ ಅಮುಂ ಲೋಕಂ ಗತವತೇ ಕಿಂಚ ನಾಸುಖಂ ಪುಣ್ಯಕೃತೋ ಹ್ಯೇವ ತತ್ರ ಗಚ್ಛಂತಿ ।** ಈ ಲೋಕಕ್ಕೆ ಹೋದವರಿಗೆ ದುಃಖವೇ ಇಲ್ಲ. ಸುಕೃತಿಗಳಿಗೆ ಮಾತ್ರ ಈ ಲೋಕಕ್ಕೆ ಪ್ರವೇಶ ವುಂಟು ಎಂದು **ನಾಕ**ಶಬ್ದದ ಅರ್ಥವನ್ನು ತಿಳಿಸುತ್ತಾರೆ. ಋಕ್ಸಂಹಿತೆಯಲ್ಲಿ ಈ ಪದವು ಆದಿತ್ಯನ ಪರ್ಯಾಯವಾಗಿ ಕೆಲವು ಕಡೆಯೂ, ಸ್ವರ್ಗದ ಪರ್ಯಾಯವಾಗಿ ಕೆಲವು ಕಡೆಯೂ ಉಪಯೋಗಿಸಲ್ಪಟ್ಟಿವೆ.

**ತಿಸ್ರಃ ಪೃಥಿವೀರುಪರಿ ಪ್ರವಾ ದಿವೋ ನಾಕಂ ರಕ್ಷೇಥೇ ದ್ಯುಭಿರಕ್ತುಭಿರ್ಹಿತಂ ।**

(ಋ. ಸಂ. ೧-೩೪-೮)

**ಯೇ ನಾಕಸ್ಯಾಧಿ ರೋಚನೇ ದಿವಿ ದೇವಾಸ ಆಸತೇ । ಮರುದ್ಭಿರಗ್ನ ಆ ಗಹಿ ॥**

(ಋ. ಸಂ. ೧-೧೯-೬)

ಇತ್ಯಾದಿಋಕ್ಕುಗಳಲ್ಲಿ ನಾಕಶಬ್ದಕ್ಕೆ ಸೂರ್ಯನೆಂದರ್ಥವಾಡಿದೆ.

**ತೇಽವರ್ಧಂತ ಸ್ವತವಸೋ ಮಹಿತ್ವನಾ ನಾಕಂ ತಸ್ಥುರುರು ಚಕ್ರಿರೇ ಸದಃ ।**

**ವಿಷ್ಣುರ್ಯದ್ಧಾವದ್ವೃಷಣಂ ಮದಚ್ಯುತಂ ವಯೋ ನ ಸೀದನ್ನಧಿ ಬರ್ಹಿಷಿ ಪ್ರಿಯೇ ।**

(ಋ. ಸಂ. ೧-೮೫-೭)

ಇತ್ಯಾದಿಋಕ್ಕುಗಳಲ್ಲಿ ನಾಕಶಬ್ದಕ್ಕೆ ಸ್ವರ್ಗವೆಂದರ್ಥವಾಡಿದೆ.

**ವೃಷ್ಯೈವ ಕಪಿಲೋ ಭೂತ್ವಾ ಯನ್ನಾಕಮಧಿರೋಹತಿ ।**

(ಬೃ. ದೇ. ೨-೬೬)

ಎಂಬ ಬೃಹದ್ದೇವತಾವಾಕ್ಯದಲ್ಲಿ ಅಂತರಿಕ್ಷವೆಂದಿದೆ.

**ಇತೋಽಸಾವಾದಿತ್ಯೋ ದ್ವಾವಿಂಶೇನ ಪರಮಾದಿತ್ಯಾಜ್ಜಯತಿ ತನ್ನಾಕಂ ತದ್ವಿಶೋಕಂ ।**

(ಛಾ. ಉ. ೨-೧೦-೫)

ಎಂಬ ಛಾಂದೋಗ್ಯೋಪನಿಷತ್ತಿನ ವಾಕ್ಯದಲ್ಲಿ ಶೋಕರಹಿತವಾದ ಸ್ವರ್ಗಲೋಕವು ಆದಿತ್ಯನ ಲೋಕಕ್ಕಿಂತ ಪರವಾದುದೆಂದು ಹೇಳಿದೆ.

ಶತಪಥಬ್ರಾಹ್ಮಣದಲ್ಲಿಯೂ ತೈತ್ತಿರೀಯ ಉಪನಿಷತ್ತಿನಲ್ಲಿಯೂ ಬ್ರಹ್ಮವಿತ್ತಾದ ಮುದ್ಗಲಪುತ್ರನಿಗೆ **ನಾಕ** ಎಂಬ ಹೆಸರು ಪ್ರಸಿದ್ಧವಾಗಿದೆ. ದುಃಖರಹಿತನೆಂದರ್ಥ.

**ಯಜ್ಞೇನ ಯಜ್ಞಮಯಜಂತ** ಎನ್ನುವಾಗ ಯಜ್ಞಶಬ್ದಕ್ಕೆ ಎರಡು ಮೂರು ಅರ್ಥಗಳು ಸಾಧ್ಯವೆಂದು ಸಾಯಣರು ತೋರಿಸಿದ್ದಾರೆ. ಮೊದಲನೆಯದಾಗಿ,

೧) **ಯಜ್ಞೇನ ನಿರ್ಮಥ್ಯಾಗ್ನಿನಾ ; ಯಜ್ಞಂ-ಹೋಮಸಾಧನಮಾಹವನೀಯಂ ಆಯಜಂತ-ಪೂಜಿತವಂತಃ**। ನಿರ್ಮಂಥ್ಯಾಗ್ನಿಯಿಂದ ಹೋಮಸಾಧನವಾದ ಆಹವನೀಯಾಗ್ನಿಯನ್ನು **ಸಂಯೋಜಿಸಿ** ಪೂಜಿಸಿದರು ಎಂದರ್ಥ. ಎರಡನೆಯದಾಗಿ,

೨) **ಯಜ್ಞೇನಾಗ್ನಿನಾ ಪಶುಭೂತೇನ ಯಜ್ಞಂ ಯಷ್ಟವ್ಯಮಗ್ನಿಮಯಜಂತ ಪೂಜಿತ-ವಂತಃ** । ಪಶುರೂಪವಾದ ಅಗ್ನಿಯಿಂದ ಯಜ್ಞಾಗ್ನಿ ಪೂಜಿಸಿದರು ಎಂದೂ, ಮೂರನೆಯದಾಗಿ,

೩) **ಯಜ್ಞೇನ ಜ್ಞಾನಾದಿಯಜ್ಞೇನ ಯಜ್ಞಂ ವಿಷ್ಣುಮಯಜಂತ** । ಜ್ಞಾನರೂಪವಾದ ಯಜ್ಞದಿಂದ ವಿಷ್ಣುರೂಪವಾದ ಯಜ್ಞವನ್ನು ಪೂಜಿಸಿದರು ಎಂದೂ ಅರ್ಥ. ಸಾಯಣರು ಈ ಮೂರು ಅರ್ಥಗಳಿಗೂ ಶ್ರುತಿವಾಕ್ಯಗಳನ್ನುದಹರಿಸಿ ತಮ್ಮ ಅರ್ಥಗಳನ್ನು ಸಮರ್ಥಿಸಿದ್ದಾರೆ.

ಈ ಮೂರರಲ್ಲಿ ಮೊದಲನೆಯ ಅರ್ಥದ ಸಮರ್ಥನೆಗೆ ಸಾಯಣರು ಕೆಳಗಿನ ತೈತ್ತಿರೀಯಸಂಹಿತಾವಾಕ್ಯವನ್ನುದಹರಿಸಿ ವಿವರಿಸಿದ್ದಾರೆ.

**ಅಗ್ನಿಶ್ಚ ವಾ ಏತೌ ಸೋಮಶ್ಚ ಕಥಾ ಸೋಮಾಯಾತಿಥ್ಯಂ ಕ್ರಿಯತೇ ನಾಗ್ನಯ ಇತಿ ಯದ-ಗ್ನಾವಗ್ನಿಂ ಮಥಿತ್ವಾ ಪ್ರಹರತಿ ತೇನೈವಾಗ್ನಯ ಆತಿಥ್ಯಂ ಕ್ರಿಯತೇಽಥೋ ಖಲ್ವಾಹು-ರಗ್ನಿಸ್ಸರ್ವಾ ದೇವತಾ ಇತಿ ಯದ್ಧವಿರಾಸಾದ್ಯಾಗ್ನಿಂ ಮಂಥತಿ ಹವ್ಯಾಯೈವಾಸನ್ನಾಯ ಸರ್ವಾ ದೇವತಾ ಜನಯತಿ ॥**

(ತೈ ಸಂ. ೬-೨-೧-೭)

ದೇವತೆಗಳಿಗೂ ಅಸುರರಿಗೂ ವೈಷಮ್ಯವು ಪ್ರಾಪ್ತವಾದಾಗ ಅಸುರರನ್ನು ಓಡಿಸಲು ಮಾಡಿದ ಪ್ರಯತ್ನದಲ್ಲಿ ನೆರವೇರಿಸಿದ ಯಜ್ಞವಿಧಾನವನ್ನು ಈ ಪ್ರಕರಣದಲ್ಲಿ ಹೇಳಿದೆ. ಆ ಸಂದರ್ಭದಲ್ಲಿ, ಯಜ್ಞಕ್ಕೆ ಪಾದಗಳಂತಿರುವ **ಅಗ್ನಿ, ಸೋಮ** ಎಂಬ ದೇವತೆಗಳು ಪಡೆಯುವ ಆತಿಥ್ಯದ ಸ್ವರೂಪವನ್ನು ಮೇಲಿನ ಸಂಹಿತಾವಾಕ್ಯಗಳಲ್ಲಿ ವರ್ಣಿಸಿದೆ. ಅದರಲ್ಲಿ ಪ್ರಥಮತಃ ಒಂದು ಶಂಕೆಯು ಸೂಚಿತವಾಗಿದೆ. ಸ್ಥೂಲವಾಗಿ ನೋಡುವುದಕ್ಕೆ ಈ ಸಂದರ್ಭದಲ್ಲಿ ಸೋಮನಿಗೆ ಮಾತ್ರ ಆತಿಥ್ಯವನ್ನರ್ಪಿಸುವಂತೆಯೂ, ಅಗ್ನಿಗೆ ಆ ಆತಿಥ್ಯಲಾಭವಿಲ್ಲದಿರುವಂತೆಯೂ ತಿಳಿಯುತ್ತದೆ. ಇಬ್ಬರೂ ಒಂದೇ ವಿಧವಾದ ಪೂಜೆಗೆ ಅರ್ಹರಾಗಿರುವಾಗ ಸೋಮನಿಗೆ ಲಭಿಸಿದ ಆತಿಥ್ಯವು ಅಗ್ನಿಗೆ ಏತಕ್ಕಾಗಿ ಲಭಿಸಲಿಲ್ಲ ಎಂಬ ಪ್ರಶ್ನೆಯು ಸಂಭವಿಸಿದಾಗ ಅದಕ್ಕೆ ಉತ್ತರವಾಗಿ **" ಅಗ್ನಿಂ ಮಥಿತ್ವಾ ಪ್ರಹರತಿ ತೇನೈ-ವಾಗ್ನಯ ಆತಿಥ್ಯಂ "** ಅಗ್ನಿಮಂಥನವನ್ನು ಮಾಡಿ ಅಗ್ನಿಯನ್ನು ಅದರ ಮೇಲೆ ಸ್ಥಾಪಿಸುವುದರಿಂದಲೇ ಅಗ್ನಿಗೆ ಪೂರ್ಣವಾಗಿ ಆತಿಥ್ಯವನ್ನು ಅರ್ಪಿಸಿದಂತಾಯಿತು, ಅದೂ ಅಲ್ಲದೇ ಅಗ್ನಿಯೇ ಸಕಲದೇವತೆಗಳೂ ಆದುದರಿಂದ ಅಗ್ನಿಯನ್ನು ಮಂಥನಮಾಡಿ ಅಗ್ನಿಯಲ್ಲಿ ಆಹುತ್ಯರ್ಪಣವನ್ನು ಮಾಡುವುದರಿಂದ ಸಕಲ ದೇವತೆಗಳಿಗೂ ಸಹ ಪೂಜೆಯನ್ನು ಸಲ್ಲಿಸಿದಂತೆ ಎಂದು ಸಮಾಧಾನವನ್ನು ಹೇಳಿದೆ. " **ಯಜ್ಞೇನ ಯಜ್ಞಮಯಜಂತ** " ಎಂಬುವರಲ್ಲಿ ಈ ಭಾವವು ಸೂಚಿತವಾಗಿದೆಯೆಂದು ಅರ್ಥ. ಅಗ್ನಿಮಂಥನವನ್ನು ಮಾಡಿ ಅಗ್ನಿಯಲ್ಲಿ ಆಹುತಿಯನ್ನರ್ಪಿಸುವುದರಿಂದ ಸಕಲದೇವತಾಪೂಜೆಯೂ ನೆರವೇರಿದಂತಾಗುವುದರಿಂದ ಈ ಯಜನವನ್ನು '' **ತಾನಿ ಧರ್ಮಾಣಿ ಪ್ರಥಮಾ-ನ್ಯಾಸನ್** " ಈ ಕರ್ಮಗಳು ಅತ್ಯಂತಶ್ರೇಷ್ಠವಾದುದೂ, ಫಲಗಳನ್ನು ಕೊಡತಕ್ಕದ್ದೂ ಆದವೆಂದು ಪ್ರಶಂಸಿಸಿದೆ.

**ಪ್ರಥಮಾನಿ—ಪ್ರಥಮ ಇತಿ ಮುಖ್ಯನಾಮ । ಪ್ರತಮಾನಿ ಪ್ರಕೃಷ್ಟತಮಾನಿ ।** ಅತ್ಯಂತ ಶ್ರೇಷ್ಠವಾದ ಧರ್ಮಗಳು ಎಂದರ್ಥ. ನಿರುಕ್ತಕಾರರು,

**ದೇವಾನಾಂ ಮಾನೇ ಪ್ರಥಮಾ ಅತಿಷ್ಠನ್ ಕೃಂತತ್ರಾದೇಷಾಮುಪರಾ ಉದಾಯನ್ ।**
**ತ್ರಯಸ್ತಪಂತಿ ಪೃಥಿವೀಮನೂಪಾ ದ್ವಾ ಬೃಬೂಕಂ ವಹತಃ ಪುರೀಷಂ ॥**

(ಋ. ಸಂ. ೧೦-೨೭-೨೩)

ಅಲ್ಲಿ **ಪ್ರಥಮ**ಶಬ್ದಕ್ಕೆ **ಪ್ರಥಮ ಇತಿ ಮುಖ್ಯನಾಮ । ಪ್ರತಮೋ** ಭವತಿ (ನಿ. ೨-೨೪) ಎಂದು ವಿವರಿಸಿರುವುದನ್ನು ಉದಹರಿಸಿ ಪ್ರಕೃತವಾದ ಋಕ್ಕಿನಲ್ಲಿಯೂ ಅದೇ ಅರ್ಥವೆಂದು ಸಾಯಣರು ತಿಳಿಸಿದ್ದಾರೆ.

೨.) ಎರಡನೆಯದಾಗಿ, **ಯಜ್ಞೇನಾಗ್ನಿನಾ ಪಶುಭೂತೇನ ಯಜ್ಞಂ ಯಷ್ಟವ್ಯಮಗ್ನಿಮ ಯಜಂತ ।** ಪಶುಭೂತವಾದ ಅಗ್ನಿಯಿಂದ ಅಗ್ನಿರೂಪವಾದ ಯಜ್ಞವನ್ನು ಪೂಜಿಸಿದರು ಎಂದಿದೆ. ನಿರುಕ್ತ ಕಾರರ ವಿವರಣೆಯು ಈ ಎರಡನೆಯ ಅರ್ಥವನ್ನು ಸಮರ್ಥಿಸುತ್ತದೆ.

**ಯಜ್ಞೇನ ಯಜ್ಞಮಯಜಂತ ದೇವಾಃ । ಅಗ್ನಿನಾಗ್ನಿಮಯಜಂತ ದೇವಾಃ । ' ಅಗ್ನಿಃ ಪಶುರಾಸೀತ್ತಮಾಲಭಂತ ತೇನಾಯಜಂತ ' ಇತಿ ಚ ಬ್ರಾಹ್ಮಣಂ ।**

(ನಿ. ೧೨-೪೧)

ದೇವತೆಗಳು ಯಜ್ಞಾದಿಕರ್ಮಗಳಿಂದ ಯಜ್ಞವನ್ನು ಸೇವಿಸಿದರು. ಎಂದರೆ, ದೇವತೆಗಳು ಅಗ್ನಿಮಂಥನದಿಂದ ಅಗ್ನಿಯನ್ನು ಪೂಜಿಸಿದರು ಎಂಬುದು ಒಂದು ವಿಧ, ಅಥವಾ ಪಶುವಾಗಿದ್ದ ಅಗ್ನಿಯನ್ನು ಕರೆತಂದು ಆ ಪಶುವನ್ನು ಅರ್ಪಿಸಿ ಯಜ್ಞವನ್ನು ಸೇವಿಸಿದರು ಎಂದೂ ಆಗಬಹುದು ಅಗ್ನಿಯು ಪಶುರೂಪನಾಗಿದ್ದನು ಎಂಬುದರ ಅರ್ಥವೇನು ? ಇದಕ್ಕೆ ಆಧಾರವೇನು ಎಂದರೆ, ನಿರುಕ್ತಕಾರರು ಐತರೇಯಬ್ರಾಹ್ಮಣದ ವಾಕ್ಯವನ್ನುದಹರಿಸಿ ಈ ಅರ್ಥವನ್ನು ವನ್ನು ಹೇಳಿದ್ದಾರೆ. ಐತರೇಯಬ್ರಾಹ್ಮಣದಲ್ಲಿ ಈ ವಿಷಯವನ್ನು ಕೆಳಗೆ ಉದಹರಿಸಿರುವ ವಾಕ್ಯಗಳಲ್ಲಿ ತಿಳಿಸಿದೆ.

**ಅಗ್ನಿಂ ಮಂಥಂತಿ ಸೋಮೇ ರಾಜನ್ಯಾಗತೇ ತದ್ಯಥೈವಾದೋ ಮನುಷ್ಯರಾಜ ಆಗತೇಽನ್ಯಸ್ಮಿನ್ ವಾರ್ಹತ್ಯುಕ್ಷಾಣಂ ವಾ ವೇಹತಂ ವಾ ಕ್ಷದಂತ ಏವಮೇವಾಸ್ಮಾ ಏತತ್ ಕ್ಷದಂತೇ ಯದಗ್ನಿಂ ಮಂಥಂತ್ಯಗ್ನಿರ್ಹಿ ದೇವಾನಾಂ ಪಶುಃ ॥**

(ಐ. ಬ್ರಾ. ೧-೧೫)

ಸೋಮರಾಜನು ಅತಿಥಿಯಾಗಿ ಬಂದಾಗ ಅಗ್ನಿಯನ್ನು ಮಥನಮಾಡಿದರು. ಇದು ಸಹಜವಾದುದು. ಯಾವ ರೀತಿ ಮಾನವರು ತಮ್ಮ ರಾಜನು ತಮ್ಮ ಮನೆಗೆ ಅತಿಥಿಯಾಗಿ ಬಂದಾಗ ವೃಷಭಾದಿಗಳನ್ನು ಅರ್ಪಿಸಿ ಅತಿಥಿಸತ್ಕಾರವನ್ನು ಮಾಡುವರೋ ಅದರಂತೆಯೇ ದೇವತೆಗಳೂ ಸಹ ಅಗ್ನಿರೂಪವಾದ ಪಶುವನ್ನು ಅರ್ಪಿಸಿ ಸೋಮರಾಜನನ್ನು ಸತ್ಕರಿಸಿದರು. ಅಗ್ನಿಯು ದೇವತೆಗಳ ಪಶುವೆಂಬುದು ಪ್ರಸಿದ್ಧವಾದ ವಿಷಯವಾಗಿದೆ. ಅಗ್ನಿಗೆ ಯಜ್ಞಪಶುವೆಂಬ ಹೆಸರು ಏತಕ್ಕೆ ಬಂದಿತು, ಹೇಗೆ ಪ್ರಸಿದ್ಧವಾಯಿತು ಎಂದು ತಿಳಿಸುವ ಸನ್ನಿವೇಶವನ್ನು ಶತಪಥಬ್ರಾಹ್ಮಣದಲ್ಲಿ ಈ ರೀತಿ ತಿಳಿಸಿದೆ.

**ಪ್ರಜಾಪತಿರಗ್ನಿರೂಪಾಣ್ಯಭ್ಯಧ್ಯಾಯತ್ । ಸ ಯೋಽಯಂ ಕುಮಾರೋ ರೂಪಾಣ್ಯನುಪ್ರವಿಷ್ಟ ಆಸೀತ್ತಮನ್ವೈಚ್ಛತ್ಸೋಽಗ್ನಿರವೇದನು ವೈ ಮಾ ಪಿತಾ ಪ್ರಜಾಪತಿರಿಚ್ಛತಿ ಹಂತ ತದ್ರೂಪಮಸಾನಿ ಯನ್ಮ ಏಷ ನ ವೇದೇತಿ ॥**

(ಶ. ಬ್ರಾ. ೬-೨-೧-೧)

ಪ್ರಜಾಪತಿಯು ಅಗ್ನಿಯ ರೂಪಗಳನ್ನು ಕುರಿತು ಧ್ಯಾನಮಾಡಿದನು. ಬೇರೆಬೇರೆ ರೂಪಗಳಲ್ಲಿ ಪ್ರವೇಶಿಸಿರುವ ಕುಮಾರನನ್ನು ಹುಡುಕಿದನು. ಆಗ ಅಗ್ನಿಗೆ ಈ ಅನ್ವೇಷಣವು ತಿಳಿಯಿತು. ಆಗ ಅವನು " ಪ್ರಜಾಪತಿಯು ನನ್ನನ್ನೇ ಹುಡುಕುತ್ತಿದ್ದಾನೆ. ನಾನು ಅವನಿಗೆ ತಿಳಿಯದಂತಾಗುತ್ತೇನೆ " ಎಂದುಕೊಂಡನು.

**ಸ ಏತಾನ್ಪಞ್ಚ ಪಶೂನಪಶ್ಯತ್ । ಪುರುಷಮಶ್ವಂ ಗಾಮವಿಮಜಂ ಯದಪಶ್ಯತ್ತಸ್ಮಾದೇತೇ ಪಶವಃ ॥**

(ಶ ಬ್ರಾ. ೬-೨-೧-೨)

ಆಗ ಪುರುಷನನ್ನೂ, ಅಶ್ವವನ್ನೂ, ಗೋವನ್ನೂ, ಮೇಷವನ್ನೂ, ಅಜವನ್ನೂ ನೋಡಿದನು. ಅಗ್ನಿಯು ಆವುಗಳನ್ನು ನೋಡಿದುದರಿಂದ (ಅಪಶ್ಯತ್—ಪಶ್) ಅವುಗಳಿಗೆ ಪಶುಗಳೆಂಬ ಪರ್ಯಾಯನಾಮವು ಪ್ರಸಿದ್ಧವಾಯಿತು.

**ಸ ಏತಾನ್ಪಂಚ ಪಶೂನ್ಪ್ರಾವಿಶತ್ । ಸ ಏತೇ ಪಂಚ ಪಶವೋಽಭವತ್ತಮು ವೈ ಪ್ರಜಾಪತಿ-ರನ್ವೇವೈಚ್ಛತ್ ॥**

(ಶ. ಬ್ರಾ. ೬-೨-೧-೩)

ಅಗ್ನಿಯು ಆ ಐದು ಪಶುಗಳಲ್ಲಿಯೂ ಪ್ರವೇಶಿಸಿದನು. ಅವುಗಳ ತಾದಾತ್ಮ್ಯವನ್ನೇ ಪಡೆದನು. ಆದರೂ ಸಹ ಪ್ರಜಾಪತಿಯು ಅಗ್ನಿಯನ್ನು ಹುಡುಕುತ್ತಲೇ ಇದ್ದನು.

**ಸ ಏತಾನ್ಪಂಚ ಪಶೂನಪಶ್ಯತ್ । ಯದಪಶ್ಯತ್ತಸ್ಮಾದೇತೇ ಪಶವಸ್ತೇಷ್ವೇತಮಪಶ್ಯತ್ತಸ್ಮಾ-ದ್ವೇವೈತೇ ಪಶವಃ ॥**

(ಶ. ಬ್ರಾ. ೬-೨-೧-೪)

ಪ್ರಜಾಪತಿಯೂ ಸಹ ಆ ಐದು ಪಶುಗಳನ್ನೂ ನೋಡಿದನು. ಅವನು ದರ್ಶನಮಾಡಿದ್ದರಿಂದಾಗಲಿ (ಪಶ್) ಅಥವಾ ಅವುಗಳಲ್ಲಿ ಅಗ್ನಿಯನ್ನು ದರ್ಶನಮಾಡಿದ್ದರಿಂದಾಗಲಿ (ಪಶ್) ಅವುಗಳಿಗೆ ಪಶುಗಳೆಂಬ ಹೆಸರು ಪ್ರಸಿದ್ಧವಾಯಿತು. ಆಗ ಪ್ರಜಾಪತಿಯು ಈ ರೀತಿಯಾಗಿ ಆಲೋಚಿಸಿದನು.

**ಸ ಐಕ್ಷತ । ಇಮೇ ವಾ ಅಗ್ನಿರಿಮಾನೇವಾತ್ಮಾನಮಭಿಸಂಸ್ಕರವೈ ಯಥಾ ವಾ ಅಗ್ನಿಃ ಸಮಿದ್ಧೋ ದೀಪ್ಯತ ಏವಮೇಷಾಂ ಚಕ್ಷುರ್ದೀಪ್ಯತೇ ಯಥಾಗ್ನೇರ್ಧೂಮ ಉದಯತ ಏವಮೇಷಾ-ಮೂಷ್ಮೋದಯತೇ ಯಥಾಗ್ನಿರಭ್ಯಾಹಿತಂ ದಹತ್ಯೇವಂ ಬಪ್ಸತಿ ಯಥಾಗ್ನೇರ್ಭಸ್ಮ ಸೀದ-ತ್ಯೇವಮೇಷಾಂ ಪುರೀಷಗ್ಂ ಸೀದತೀಮೇ ವಾ ಅಗ್ನಿರಿಮಾನೇವಾತ್ಮಾನಭಿಸಂಸ್ಕರವಾ ಇತಿ ತಾನ್ನಾನಾ ದೇವತಾಭ್ಯ ಆಲಿಪ್ಸತ ವೈಶ್ವಕರ್ಮಣಂ ಪುರುಷಂ ವಾರುಣಮಶ್ವಮೈಂದ್ರ-ಮೃಷಭಂ ತ್ವಾಷ್ಟ್ರಮವಿಮಾಗ್ನೇಯಮಜಂ ॥**

ಶ. ಬ್ರಾ. (೬-೨-೧-೫)

" ಇವೇ ಅಗ್ನಿಗಳು. ಇವನ್ನು ನನ್ನ ಆತ್ಮದಲ್ಲಿ ಐಕ್ಯಮಾಡುತ್ತೇನೆ. ಪ್ರಜ್ವಲಿತನಾದ ಅಗ್ನಿಯು ಯಾವ ರೀತಿ ಪ್ರಕಾಶಿಸುತ್ತಾನೆಯೋ, ಈ ಪಶುಗಳ ಕಣ್ಣುಗಳೂ ಅದೇ ರೀತಿ ಪ್ರಕಾಸುತ್ತವೆ. ಅಗ್ನಿಯಿಂದ ಧೂಮವು ಹೇಗೆ ಊರ್ಧ್ವಮುಖವಾಗಿ ಹೊರಡುವುದೋ ಅದೇ ರೀತಿ ಇವುಗಳ ಮುಖಗಳಿಂದಲೂ ಧೂಮವು (ಉಸಿರು) ಊರ್ಧ್ವ-ಮುಖವಾಗಿ ಹೊರಡುತ್ತಿದೆ. ಅಗ್ನಿಯೊಳಕ್ಕೆ ಅರ್ಪಿಸಿದ ಆಹುತಿಗಳನ್ನು ಅಗ್ನಿಯು ಯಾವ ರೀತಿ ಭಕ್ಷಿಸುತ್ತಾನೋ ಆದರಂತೆ ಈ ಪಶುಗಳೂ ಸಹ ತಮ್ಮ ಬಾಯಲ್ಲಿ ಹಾಕಿದ ಸಕಲ ವಸ್ತುಗಳನ್ನೂ ನುಂಗುತ್ತವೆ. ಅಗ್ನಿಯ ಭಸ್ಮವು ಕೆಳಕ್ಕೆ ಬೀಳುವಂತೆ ಈ ಪಶುಗಳ ಪುರೀಷವೂ ಕೆಳಕ್ಕೆ ಬೀಳುತ್ತದೆ ಆದುದರಿಂದ ಇವುಗಳೇ ಅಗ್ನಿಯ ರೂಪಾಂತರಗಳು. ಆದುದರಿಂದ ಇವನ್ನು ನನ್ನಲ್ಲೇ ಐಕ್ಯಮಾಡಿಕೊಳ್ಳುತ್ತೇನೆ " ಎಂದು ಯೋಚಿಸಿ ಅವುಗಳನ್ನು ಬೇರೆ ಬೇರೆ ದೇವತೆಗಳಿಗೆ ಆಹುತಿಗಳನ್ನಾಗಿ ಅರ್ಪಿಸಲು ಮನಸ್ಸು ಮಾಡಿದನು. ಪುರುಷನನ್ನು ವಿಶ್ವಕರ್ಮನಿಗೂ,

ಅಶ್ವವನ್ನು ವರುಣನಿಗೂ, ವೃಷಭವನ್ನು ಇಂದ್ರನಿಗೂ, ಮೇಷವನ್ನು ತ್ವಷ್ಟೃವಿಗೂ, ಅಜವನ್ನು ಅಗ್ನಿಗೂ ವಿಭಾಗ ಮಾಡಿದನು. ಆಮೇಲೆ ಪುನಃ ಹೀಗೆ ಯೋಚಿಸಿದನು.

**ಸ ಐಕ್ಷತ । ನಾನಾ ವಾ ಇದಂ ದೇವತಾಭ್ಯ ಆಲಿಪ್ಸೇಽಗ್ನೇರ್ವಹಗ್ಂ ರೂಪಾಣಿ ಕಾಮಯೇ ಹಂತೈನಾನಗ್ನಿಭ್ಯಃ ಕಾಮಾಯಾಲಭಾ ಇತಿ ತಾನಗ್ನಿಭ್ಯಃ ಕಾಮಾಯಾಲಭತ ತದ್ಯದಗ್ನಿಭ್ಯ ಇತಿ ಬಹೂನಿ ಹ್ಯಗ್ನಿರೂಪಾಣ್ಯಭ್ಯಧ್ಯಾಯದಥ ಯತ್ಕಾಮಾಯೇತಿ ಕಾಮೇನ ಹ್ಯಾಲಭತ ತಾನಾ-ಪ್ರೀತಾನ್ಪರ್ಯಗ್ನಿಕೃತಾನುದೀಚೋ ನೀತ್ವಾ ಸಮಜ್ಞಪಯತ್ ।**

(ಶ. ಬ್ರಾ. ೬-೨-೧-೬)

" ಇವುಗಳನ್ನು ಪ್ರತ್ಯೇಕವಾಗಿ ಬೇರೆಬೇರೆ ದೇವತೆಗಳಿಗೆ ಅರ್ಪಿಸಲು ಮನಸ್ಸು ಮಾಡಿದೆನು. ಆದರೆ ನಾನೇ ಸ್ವತಃ ಅಗ್ನಿಯ ರೂಪವನ್ನು ಇಚ್ಛಿಸುತ್ತೇನೆ. ಆ ಇಚ್ಛೆಯು ನೆರವೇರುವಂತೆ ಇವುಗಳನ್ನು ಅಗ್ನಿಯ ರೂಪಾಂತರಗಳಿಗಾಗಿ ಆಹುತಿರೂಪದಿಂದ ಅರ್ಪಿಸುತ್ತೇನೆ " ಎಂದು ಸಂಕಲ್ಪಿಸಿ ಹಾಗೆಯೇ ಮಾಡಿದನು. ಅಗ್ನಿಯ ರೂಪಗಳು ಬಹಳ ವಾಗಿದ್ದವು. ಆವನ ಇಚ್ಛೆಗನುಗುಣವಾಗಿ ಅವುಗಳನ್ನು ಉತ್ತರದಿಕ್ಕಿಗೆ ಕರೆದುಕೊಂಡು ಹೋಗಿ ಅವುಗಳನ್ನು ಆಹುತಿಯಾಗರ್ಪಿಸಿದನು.

**ತ ಏತೇ ಸರ್ವೇ ಪಶವೋ ಯದಗ್ನಿಃ । ತಸ್ಮಾದಗ್ನೌ ಪಶವೋ ರಮಂತೇ ಪಶುಭಿರೇವ ತತ್ಪಶವೋ ರಮಂತೇ ತಸ್ಮಾದ್ಯಸ್ಯ ಪಶವೋ ಭವಂತಿ ತಸ್ಮಿನ್ನಗ್ನಿರಾಧೀಯತೇಽಗ್ನಿರ್ಹ್ಯೇಷ ಯತ್ಪಶ-ವಸ್ತತೋ ವೈ ಪ್ರಜಾಪತಿರಗ್ನಿರಭವತ್ ।**

(ಶ. ಬ್ರಾ. ೬-೨-೧-೧೨)

ಅಗ್ನಿಯೇ ಈ ಆಹುತಿಪಶುಗಳಾಗಿರುವುದರಿಂದ ಪಶುಗಳೆಲ್ಲವೂ ಅಗ್ನಿಯ ಹತ್ತಿರವಿರಲು ಸಂತೋಷಪಡುತ್ತವೆ. ಒಂದುಪಶುವು ಇನ್ನೊಂದು ಪಶುವಿನೊಂದಿಗೆ ಕ್ರೀಡಿಸುತ್ತದೆ. ಆದುದರಿಂದಲೇ ಪಶುಸಂಪತ್ತಿನಿಂದ ಕೂಡಿದವನ ಹತ್ತಿರ ಅಗ್ನಿಯು ಆಧೀನವಾಗಿರುತ್ತದೆ. ಅಗ್ನಿಯೇ ಆ ಪಶುವಾದುದರಿಂದ ಪ್ರಜಾಪತಿಯೂ ಅಗ್ನಿರೂಪವನ್ನು ಪಡೆದನು.

ಯಜ್ಞಮಯಜಂತ ದೇವಾಃ—ಎಂಬುದಕ್ಕೆ ಸಾಯಣರು **ಅಗ್ನೇರೇವ ಮೂರ್ತಿಭೇದೇನ ದೇವತ್ವಂ ಚ ಪಶುತ್ವಂ ಚ ದ್ರಷ್ಟವ್ಯಂ ।** ಮೂರ್ತಿಭೇದದಿಂದ ಅಗ್ನಿಗೇ ದೇವತ್ವವೂ, ಪಶುತ್ವವೂ ಇರುವುದೆಂದೂ ತಿಳಿಸಿದ್ದಾರೆ. ದೇವಾಃ ಎಂದರೆ ಯಜಮಾನರೆಂದೂ ಆಗಬಹುದು. ಅಥವಾ ದೇವತೆಗಳೆಂದಾದರೂ ಆಗಬಹುದು.

೩) ಮೂರನೆಯದಾಗಿ, **ಯಜ್ಞೇನ ಯಜ್ಞಮಯಜಂತ** ಎನ್ನುವುದಕ್ಕೆ **ಯಜ್ಞೇನ ಜ್ಞಾನಾದಿ ಯಜ್ಞೇನ ಯಜ್ಞಂ ವಿಷ್ಣುಮಯಜಂತ ।** ಯಜ್ಞರೂಪನಾದ ವಿಷ್ಣುವನ್ನು ಪೂಜಿಸಿದರು ಎಂದರ್ಥಮಾಡಿದೆ.

**ದ್ರವ್ಯಯಜ್ಞಾಸ್ತಪೋಯಜ್ಞಾ ಯೋಗಯಜ್ಞಾಸ್ತಥಾಪರೇ ।**
**ಸ್ವಾಧ್ಯಾಯಜ್ಞಾನಯಜ್ಞಾಶ್ಚ ಯತಯಃ ಸಂಶಿತವ್ರತಾಃ ॥**

(ಭಗವದ್ಗೀತಾ. ೪-೨೮)

ಎಂದು ಯಜ್ಞದಲ್ಲಿ ಅನೇಕ ಬಗೆಗಳನ್ನು ಹೇಳಿದೆ. ಅದರಲ್ಲಿ ಜ್ಞಾನಯಜ್ಞವೂ ಒಂದಾಗಿದೆ. **ಜ್ಞಾನಂ ಶಾಸ್ತ್ರಾರ್ಥ-ಪರಿಜ್ಞಾನಂ ಯಜ್ಞಃ ಯೇಷಾಂ ತೇ ಜ್ಞಾನಯಜ್ಞಾಃ** (ಶಾಂಕರಭಾಷ್ಯ) ಶಾಸ್ತ್ರಾರ್ಥಪರಿಜ್ಞಾನರೂಪವಾದ ಯಜ್ಞವುಳ್ಳವರು ಯಾರೋ ಅವರನ್ನು ಜ್ಞಾನಯಜ್ಞರೆಂದು ಕರೆದಿದೆ.

**ಸರ್ವೇऽಪ್ಯೇತೇ ಯಜ್ಞವಿದೋ ಯಜ್ಞಕ್ಷಪಿತಕಲ್ಮಷಾಃ ॥**
**ಯಜ್ಞಶಿಷ್ಟಾಮೃತಭುಜೋ ಯಾಂತಿ ಬ್ರಹ್ಮ ಸನಾತನಂ ।**
**ನಾಯಂ ಲೋಕೋऽಸ್ತ್ಯಯಜ್ಞಸ್ಯ ಕುತೋऽನ್ಯಃ ಕುರುಸತ್ತಮ ॥**

(ಭಗವದ್ಗೀತಾ. ೪. ೩೦-೩೧)

ಎಲ್ಲಾವಿಧವಾದ ಯಜ್ಞಗಳನ್ನೂ ತಿಳಿದವರು ಯಜ್ಞದಿಂದಲೇ ಅವರ ದೋಷಗಳನ್ನು ನಾಶಮಾಡಿಕೊಂಡು ಶಾಶ್ವತವಾದ ಬ್ರಹ್ಮಲೋಕವನ್ನು ಪಡೆಯುತ್ತಾರೆ. ಯಜ್ಞರಹಿತನಾದವನಿಗೆ ಇಹದಲ್ಲಿಯೇ ಉತ್ತಮವಾದ ಸ್ಥಾನವಿರುವುದಿಲ್ಲ. ಇನ್ನು ಬ್ರಹ್ಮಲೋಕದ ಪ್ರಾಪ್ತಿಯೆಲ್ಲಿ ಎಂದು ಯಜ್ಞದ ಮಹತ್ತ್ವವನ್ನು ಸ್ತುತಿಸಿದೆ.

**ಏವಂ ಬಹುವಿಧಾ ಯಜ್ಞಾ ವಿತತಾ ಬ್ರಹ್ಮಣೋ ಮುಖೇ ।**
**ಕರ್ಮಜಾನ್ವಿದ್ಧಿ ತಾನ್ಸರ್ವಾನೇವಂ ಜ್ಞಾತ್ವಾ ವಿಮೋಕ್ಷ್ಯಸೇ ॥**

(ಭಗವದ್ಗೀತಾ. ೪-೩೨)

ಈ ರೀತಿ ನಾನಾವಿಧವಾದ ಯಜ್ಞಗಳು ಬ್ರಹ್ಮನ ಮುಖದಿಂದ ವಿಸ್ತೃತವಾಗಿವೆ. [ಇಲ್ಲಿ ಬ್ರಹ್ಮಶಬ್ದಕ್ಕೆ ಪರಬ್ರಹ್ಮನೆಂದಾದರೂ ಅರ್ಥವಾಗಬಹುದು; ಅಥವಾ ಪರಬ್ರಹ್ಮತತ್ತ್ವವನ್ನು ಪ್ರತಿಪಾದಿಸುವ ವೇದವೆಂದಾದರೂ ಅರ್ಥವಾಗಬಹುದು.] ಇವುಗಳೆಲ್ಲವೂ ಕಾಯಿಕ, ವಾಚಿಕ, ಮಾನಸಿಕಕರ್ಮೋದ್ಭವಗಳೆಂದು ತಿಳಿಯಬೇಕು. ಇವುಗಳ ಸ್ವರೂಪವನ್ನು ಅರಿತವನಿಗೆ ಮೋಕ್ಷವು ಲಭಿಸುತ್ತದೆ. ಈ ವಿಧವಾಗಿ ಯಜ್ಞದಲ್ಲಿ ಪ್ರಭೇದಗಳಿದ್ದರೂ ಸಹ,

**ಶ್ರೇಯಾನ್ ದ್ರವ್ಯಮಯಾದ್ಯಜ್ಞಾತ್ ಜ್ಞಾನಯಜ್ಞಃ ಪರಂತಪ ।**
**ಸರ್ವಂ ಕರ್ಮಾಖಿಲಂ ಪಾರ್ಥ ಜ್ಞಾನೇ ಪರಿಸಮಾಪ್ಯತೇ ॥**

(೪. ೩೩)

ದ್ರವ್ಯಮಯವಾದ ಯಜ್ಞಕ್ಕಿಂತಲೂ ಜ್ಞಾನಯಜ್ಞವು ಅತ್ಯುತ್ತಮವಾದದ್ದು. ಸಕಲ ಕರ್ಮಗಳೂ ಜ್ಞಾನದಲ್ಲಿಯೇ ಪರಿಸಮಾಪ್ತಿಯನ್ನು ಪಡೆಯುತ್ತವೆ ಇತ್ಯಾದಿಯಾಗಿ ಜ್ಞಾನಯಜ್ಞದ ವೈಶಿಷ್ಟ್ಯವನ್ನು ನಾನಾಕಡೆಗಳಲ್ಲಿ ಪ್ರಶಂಸಿಸಿದೆ. ಇಂತಹ ಜ್ಞಾನಾತ್ಮಕವಾದ ಯಜ್ಞದಿಂದ **ಯಜ್ಞಂ** ಅಯಜಂತ ಎನ್ನುವಾಗ, ಎರಡನೆಯ ಯಜ್ಞಶಬ್ದಕ್ಕೆ ವಿಷ್ಣುವೆಂದಾಗಲಿ ಅಥವಾ ಪ್ರಜಾಪತಿಯೆಂದಾಗಲಿ ಅರ್ಥವನ್ನು ಹೇಳಬಹುದು. "**ಯಜ್ಞೋ ವಿಷ್ಣುಃ ಪ್ರಜಾಪತಿಃ**" (ಮೈತ್ರ್ಯುಪನಿಷತ್. ೬. ೧೬) ಇತ್ಯಾದಿವಾಕ್ಯಗಳಿಂದ ಯಜ್ಞಕ್ಕೂ ವಿಷ್ಣುವಿಗೂ, ಮತ್ತು ಯಜ್ಞಕ್ಕೂ ಪ್ರಜಾಪತಿಗೂ ತಾದಾತ್ಮ್ಯವನ್ನೇ ಹೇಳಿದೆ. ಆದುದರಿಂದ ಜ್ಞಾನಯಜ್ಞದಿಂದ ವಿಷ್ಣುವನ್ನು ಪೂಜಿಸಿ ಸಾಧ್ಯರು ವಿಷ್ಣುಲೋಕವನ್ನು ಹೊಂದಿದರು ಎಂದು ತಾತ್ಪರ್ಯ. ಪವಿತ್ರವಾದ ಈ ನಾಕದಲ್ಲಿ ಹಿಂದೆ ಯಜ್ಞದಿಂದ ಯಜ್ಞವನ್ನು ಆರಾಧಿಸಿದ ಸಾಧ್ಯಾದಿಗಳೆಲ್ಲರೂ ತಮ್ಮ ತಮ್ಮ ಸ್ಥಾನಗಳನ್ನು ಪಡೆದಿರುತ್ತಾರೆಂದರ್ಥ.

**ಸಾಧ್ಯಾಃ**— ಈ ಪದವನ್ನು ರಶ್ಮಿನಾಮಗಳಲ್ಲಿ ಪಠಿಸಿದೆ. (ನಿ. ೨-೧೫) ಮತ್ತು ಇದೇ ಋಕ್ಕನ್ನು ವಿವರಿಸುವಾಗ ಮುಂದೆ **ದ್ಯುಸ್ಥಾನೋ ದೇವಗಣ ಇತಿ ನೈರುಕ್ತಾಃ । ಪೂರ್ವಂ ದೇವಯುಗಮಿತ್ಯಾಖ್ಯಾನಂ ।** ನಿರುಕ್ತಕಾರರ ಮತದಂತೆ ದ್ಯುಲೋಕದ ದೇವತೆಗಳೆಂದರ್ಥ. ಅಥವಾ ದೇವತೆಗಳಲ್ಲಿ ಪ್ರಥಮರು ಎಂಬುದು ಸಾಂಪ್ರದಾಯಿಕವಾದ ಮತವೆಂದು ಯಾಸ್ಕರು ತಿಳಿಸಿದ್ದಾರೆ. (ನಿ. ೧೨-೪೧) **ಸಾಧ್ಯರ** ಸ್ವರೂಪವನ್ನು ಒಂದೊಂದು ಕಡೆ ಒಂದೊಂದು ವಿಧವಾಗಿ ತಿಳಿಸಿದೆ. ಉದಾಹರಣೆಗೆ, ಐತರೇಯಬ್ರಾಹ್ಮಣದಲ್ಲಿ ಇದೇ ಭಾಗವನ್ನು ವಿವರಿಸುತ್ತಾ ;

> **ಛಂದಾಂಸಿ ವೈ ಸಾಧ್ಯಾ ದೇವಾಸ್ತೇಽಗ್ರೇಽಗ್ನಿನಾಗ್ನಿಮಯಜಂತ ತೇ ಸ್ವರ್ಗಂ ಲೋಕಮಾಯನ್ ॥ ಆದಿತ್ಯಾಶ್ಚೈವೇಹಾಸನ್ನಂಗಿರಸಶ್ಚ ತೇಽಗ್ರೇಽಗ್ನಿನಾಗ್ನಿಮಯಜಂತ ತೇ ಸ್ವರ್ಗಂ ಲೋಕಮಾಯನ್ ।**
>
> (ಐ. ಬ್ರಾ. ೧-೧೬)

ಛಂದಸ್ಸುಗಳೇ ಸಾಧ್ಯರು ಅವರು ಪೂರ್ವದಲ್ಲಿ ಅಗ್ನಿಯಿಂದ (ಅಗ್ನಿಮಥನದಿಂದ) ಅಗ್ನಿಯನ್ನು ಪೂಜಿಸಿದರು. ಅದರ ಫಲವಾಗಿ ಸ್ವರ್ಗಲೋಕವನ್ನು ಪಡೆದರು. ಹಾಗೆಯೇ ಆದಿತ್ಯರೂ ಅಂಗಿರಸ್ಸುಗಳೂ ಸಹ ಅಗ್ನಿಯಿಂದ ಅಗ್ನಿ ಪೂಜೆಯನ್ನು ನೆರವೇರಿಸಿ ಸ್ವರ್ಗಲೋಕವನ್ನು ಪಡೆದರು, ಎಂದಿದೆ. ಇದನ್ನೇ, **ಆದಿತ್ಯಾ ಅಂಗಿರಸಶ್ಚ ಸಾಧ್ಯಾ ದೇವಾ ಉಚ್ಯಂತೇ ।** ಆದಿತ್ಯರೂ, ಅಂಗಿರಸ್ಸುಗಳೂ ಸಾಧ್ಯದೇವತೆಗಳೆಂದು ಪ್ರಸಿದ್ಧರಾಗಿದ್ದಾರೆಂದು ಸಾಯಣರು ತಿಳಿಸಿದ್ದಾರೆ. ಅಂಗಿರಸ್ಸುಗಳು ಅಗ್ನಿಯನ್ನು ಹುಡುಕಿ ತಂದುದೂ, ಅಗ್ನಿಪೂಜೆಯನ್ನು ಮಾಡಿದುದೂ ಅನೇಕಕಡೆಗಳಲ್ಲಿ ವರ್ಣಿತವಾಗಿದೆ. ಋಕ್ಸಂಹಿತೆಯಲ್ಲಿಯೂ ಇತರಕಡೆಗಳಲ್ಲಿಯೂ ಈ ಪದಕ್ಕೆ ಅಂಕಿತನಾಮವಾಗಿಯೂ, ಒಂದು ಋಷಿಸಂತತಿಯ ನಾಮಧೇಯವಾಗಿಯೂ ಮತ್ತು ದೇವತೆಗಳ ಗುಂಪಿಗೆ ಸೇರಿದ ಹೆಸರಾಗಿಯೂ ಮೂರು ವಿಧವಾದ ಅನ್ವಯವಿದೆ. ಈ ಮೂರು ಸನ್ನಿವೇಗಳಶಲ್ಲಿಯೂ ಸಹ ಅಂಗಿರಸ್ಸುಗಳಿಗೂ ಯಜ್ಞರೂಪಿಯಾದ ಅಗ್ನಿಗೂ ಸಾಕ್ಷಾತ್ಸಂಬಂಧವನ್ನು ಹೇಳಿದೆ. ಮೊದಲನೆಯದಾಗಿ,

> **ಶೌನಕೋ ಹ ವೈ ಮಹಾಶಾಲೋಽಂಗಿರಸಂ ವಿಧಿವದುಪಸನ್ನಃ ಪಪ್ರಚ್ಛ । ಕಸ್ಮಿನ್ನು ಭಗವೋ ವಿಜ್ಞಾತೇ ಸರ್ವಮಿದಂ ವಿಜ್ಞಾತಂ ಭವತೀತಿ ॥**
>
> (ಮುಂಡಕೋಪನಿಷತ್. ೧-೧-೩)

ಎಂಬಲ್ಲಿ ಅಂಗಿರಸ್ಸು ತತ್ತ್ವಜ್ಞಾನಿಯಾದ ಒಬ್ಬ ಋಷಿಯೆಂದೂ ಅವನು ಶೌನಕನಿಗೆ **ಯಜ್ಞಾಗ್ನಿವಿದ್ಯೆಯನ್ನು** ಉಪದೇಶಿಸಿದನೆಂದೂ ತಿಳಿಸಿದೆ. ಎರಡನೆಯದಾಗಿ,

ಇದು ಒಂದು ಋಷಿಸಂತತಿಯ ಹೆಸರು. ಆ ಸಂತತಿಗೆ ಮೂಲಪುರುಷನು ಯಜ್ಞಾಗ್ನಿಯು. ಆ ಯಜ್ಞಾಗ್ನಿಯಿಂದಲೇ ಅಂಗಿರಸ್ಸೆಂಬ ಋಷಿಯು ಉತ್ಪನ್ನನಾಗಿ ಆ ಸಂತತಿಯು ಪ್ರವರ್ಧಮಾನವಾಗಿ ಬೆಳೆಯಿತು. ಇದೇ ವಿಷಯವನ್ನು ಋಕ್ಸಂಹಿತೆಯಲ್ಲಿಯೂ ಸಹ ತಿಳಿಸಿದೆ.

> **ತ್ವಮಗ್ನೇ ಪ್ರಥಮೋ ಅಂಗಿರಾ ಋಷಿರ್ದೇವೋ ದೇವಾನಾಮಭವಃ ಶಿವಃ ಸಖಾ ।**
>
> (ಋ. ಸಂ. ೧-೩೧-೧)

ಇತ್ಯಾದಿ ಋಕ್ಕುಗಳಲ್ಲಿ ಈ ವಿಷಯವನ್ನು ಸೂಚಿಸಿರುವಂತೆ ಐತರೇಯಬ್ರಾಹ್ಮಣದಲ್ಲೂ ಸಹ, **ಯೇಽಂಗಿರಾ ಆಸಂಸ್ತೇಽಂಗಿರಸೋಽಭವನ್** (ಐ. ಬ್ರಾ. ೩ ೩೪) ಇತ್ಯಾದಿವಾಕ್ಯಗಳಲ್ಲಿ ತಿಳಿಸಿದೆ. ಹೀಗೆಯೇ ಅಂಗಿರಸ್ಸೆಂಬ ಋಷಿಗಳು ಗುಹೆಯಲ್ಲಿ ಅಡಗಿದ್ದ ಯಜ್ಞಾಗ್ನಿಯನ್ನು ಹುಡುಕಿ ಅವನನ್ನು ಸಂಪಾದಿಸಿಕೊಂಡರು ಎಂಬ ಕಥೆಯನ್ನು,

**ತ್ವಾಮಗ್ನೇ ಅಂಗಿರಸೋ ಗುಹಾ ಹಿತಮನ್ವವಿಂದಞ್ಛಿಶ್ರಿಯಾಣಂ ವನೇವನೇ ।**
**ಸ ಜಾಯಸೇ ಮಥ್ಯಮಾನಃ ಸಹೋ ಮಹತ್ತ್ವಾಮಾಹುಃ ಸಹಸಸ್ಪುತ್ರಮಂಗಿರಃ ॥**

(ಋ. ಸಂ. ೫-೧೧-೬)

ಇತ್ಯಾದಿಋಕ್ಸಂಹಿತಾವಾಕ್ಯಗಳಲ್ಲೂ ಮತ್ತು

**ಸಮಿದ್ಭಿರ್ಹ್ಯೇತಮಂಗಿರಸ ಐಂಧತ ।**

(ಶ. ಬ್ರಾ. ೧-೪-೧-೨೫)

ಇತ್ಯಾದಿ ಬ್ರಾಹ್ಮಣವಾಕ್ಯಗಳಲ್ಲೂ ವಿವರಿಸಿದೆ. ಯಜ್ಞಾಗ್ನಿಯನ್ನು ಪಡೆದು, ಆ ಯಜ್ಞಾಗ್ನಿಯನ್ನು ಅಗ್ನಿಯಿಂದಲೇ ಪೂಜಿಸಿದ ಅಂಗಿರಸ್ಸುಗಳನ್ನು ಕೃತಜ್ಞತೆಯಿಂದಲೂ, ಭಕ್ತಿಯಿಂದಲೂ,

**ಅಂಗಿರಸೋ ನಃ ಪಿತರೋ ನವಗ್ವಾ ಅಥರ್ವಾಣೋ ಭೃಗವಃ ಸೋಮ್ಯಾಸಃ ।**
**ತೇಷಾಂ ವಯಂ ಸುಮತೌ ಯಜ್ಞಿಯಾನಾಮಪಿ ಭದ್ರೇ ಸೌಮನಸೇ ಸ್ಯಾಮ ॥**

(ಋ ಸಂ. ೧೦-೧೪-೬)

ಎಂದು ಪ್ರಶಂಸಿಸಿದೆ. ಆ ಅಂಗಿರಸ್ಸುಗಳನ್ನೇ ಸಾಧ್ಯರೆಂದು ಪ್ರಕೃತವಾದ ಋಕ್ಕಿನಲ್ಲಿ ನಿರ್ದೇಶಿಸಿದೆಯೆಂದು ಒಂದು ಮತ. ಅದನ್ನು ಐತರೇಯಬ್ರಾಹ್ಮಣದ ವಿವರಣೆಯಿಂದಲೂ, ಸಾಯಣಭಾಷ್ಯದ ವಿವರಣೆಯಿಂದಲೂ ತಿಳಿಯಬಹುದು. ಇದಲ್ಲದೆ ಸಾಧ್ಯರೆಂಬುವರು ದೇವತಾವಿಶೇಷಗಳಲ್ಲಿ ಸೇರಿದವರೆಂದೂ, ಯಜ್ಞಾದಿಗಳಿಗೆ ಮಾರ್ಗದರ್ಶಕರೆಂದೂ, ಯಜ್ಞಾದಿಕರ್ಮಾಚರಣೆಯಿಂದ ಉತ್ತಮವಾದ ಲೋಕವನ್ನು ಪಡೆದರೆಂದೂ ಅವರನ್ನು ಬಹಳವಾಗಿ ಪ್ರಶಂಸಿಸಿದೆ.

**ಅಥ ಯತ್ಪಂಚಮಮಮೃತಂ ತತ್ಸಾಧ್ಯಾ ಉಪಜೀವಂತಿ ಬ್ರಹ್ಮಣಾ ಮುಖೇನ ನ ವೈ ದೇವಾ ಅಶ್ನಂತಿ ನ ಪಿಬಂತ್ಯೇತದೇವಾಮೃತಂ ದೃಷ್ಟ್ವಾ ತೃಪ್ಯಂತಿ ॥**

(ಛಾ. ಉ ೩-೧೦-೧)

ಬ್ರಹ್ಮಮುಖದ ಸಹಾಯದಿಂದ **ಸಾಧ್ಯರು** ಐದನೆಯ ಅಮೃತವನ್ನು ಸೇವಿಸುತ್ತಾರೆ. [ಐದನೆಯ ಅಮೃತವೆಂದರೆ ಉಪನಿಷತ್ತೆಂದರ್ಥ. ಬ್ರಹ್ಮಸಾಕ್ಷಾತ್ಕಾರವನ್ನು ಪಡೆದು ಆನಂದವನ್ನನುಭವಿಸುತ್ತಾರೆಂದು ತಾತ್ಪರ್ಯ.] ಸೇವಿಸುವುದೆಂದರೆ ಭುಜಿಸುವುದೆಂದಾಗಲಿ, ಪಾನಮಾಡುವುದೆಂದಾಗಲಿ ಅರ್ಥವಲ್ಲ. ದೇವತೆಗಳಾದ ಸಾಧ್ಯರು ಭುಜಿಸುವುದೂ ಇಲ್ಲ, ಪಾನಮಾಡುವುದೂ ಇಲ್ಲ. ಉಪನಿಷದ್ರೂಪವಾದ ಅಮೃತವನ್ನು ಕೇವಲ ವೀಕ್ಷಿಸುತ್ತಾ ಆನಂದವನ್ನನುಭವಿಸುವರೆಂದು ತಾತ್ಪರ್ಯ.

**ತ ಏತದೇವ ರೂಪಮಭಿಸಂವಿಶಂತ್ಯೇತಸ್ಮಾದ್ರೂಪಾದುದ್ಯಂತಿ । ಸ ಯ ಏತದೇವಮಮೃತಂ ವೇದ ಸಾಧ್ಯಾನಾಮೇವೈಕೋ ಭೂತ್ವಾ ಬ್ರಹ್ಮಣೈವ ಮುಖೇನೈತದೇವಾಮೃತಂ ದೃಷ್ಟ್ವಾ**

**ತೃಪ್ಯತಿ ಸ ಏತದೇವ ರೂಪಮಭಿಸಂವಿಶತ್ಯೇತಸ್ಮಾದ್ರೂಪಾದುದೇತಿ ॥**

(ಛಾ. ಉ. ೩-೧೦-೨, ೩)

ಈ ಸಾಧ್ಯರು ಆದಿತ್ಯಾಂತರ್ಗತವಾದ ರೂಪವನ್ನು ಪಡೆಯುತ್ತಾರೆ. ಪುನಃ ಅದೇ ರೂಪದಿಂದ ತಮ್ಮ ಅಸ್ತಿತ್ವವನ್ನು ಪಡೆಯುತ್ತಾರೆ. ಈ ತತ್ತ್ವವನ್ನು ತಿಳಿದ ಜ್ಞಾನಿಯೂ ಸಹ ತಾನೂ ಸಾಧ್ಯರಲ್ಲೊಬ್ಬನಾಗುತ್ತಾನೆ. ಉಪನಿಷದ್ರೂಪವಾದ ಅಮೃತವನ್ನು ಸೇವಿಸುತ್ತಾ ಆತ್ಮತೃಪ್ತಿಯನ್ನು ಪಡೆಯುತ್ತಾನೆ. ಅವನೂ ಸಹ ಆದಿತ್ಯನ ಮಧ್ಯವರ್ತಿಯಾದ ರೂಪವನ್ನೇ ಪಡೆಯುತ್ತಾನೆ.

**ಸ ಯಾವದಾದಿತ್ಯ ಉತ್ತರತ ಉದೇತಾ ದಕ್ಷಿಣತೋಽಸ್ತಮೇತಾ ದ್ವಿಸ್ತಾವದೂರ್ಧ್ವ ಉದೇತಾ-ಽರ್ವಾಗಸ್ತಮೇತಾ ಸಾಧ್ಯಾನಾಮೇವ ತಾವದಾಧಿಪತ್ಯಂ ಸ್ವಾರಾಜ್ಯಂ ಪರ್ಯೇತಾ ॥**

(ಛಾ. ಉ. ೩-೧೦-೪)

ಸಾಧ್ಯರೂಪವನ್ನು ಹೊಂದಿದ ಈ ಯಜ್ಞಕರ್ತನೂ, ಯಜ್ಞತತ್ತ್ವವನ್ನು ತಿಳಿದ ಜ್ಞಾನಿಯೂ ಸಾಧ್ಯರು ಅನುಭವಿಸುವ ಸ್ವಾರಾಜ್ಯವನ್ನು ಪಡೆದು ಆದಿತ್ಯನ ದಕ್ಷಿಣೋತ್ತರಮಾರ್ಗವಾದುದೂ, ಊರ್ಧ್ವಾರ್ವಾಗ್ರೂಪವಾದುದೂ ಆದ ಸಂಚಾರವು ಇರುವ ವರೆಗೆ ಅದನ್ನು ಅನುಭವಿಸುತ್ತಿರುವನು ಎಂದು ಯಜ್ಞಕ್ರಿಯೆಯ ಪ್ರಾಶಸ್ತ್ಯವನ್ನು ಸ್ತುತಿಸಿದೆ. ಪ್ರಕೃತವಾದ ಋಕ್ಕನ್ನೇ ಶತಪಥಬ್ರಾಹ್ಮಣದಲ್ಲಿ ಉದಹರಿಸಿ ಈರೀತಿ ವಿವರಿಸಿದೆ.

**ಯಾನ್ವೈ ತಾನ್ತ್ಸಪ್ತಪುರುಷಾನ್ । ಏಕಂ ಪುರುಷಮಕುರ್ವನ್ತ್ಸ ಪ್ರಜಾಪತಿರಭವತ್ಸ ಪ್ರಜಾ ಅಸೃಜತ ಸ ಪ್ರಜಾಃ ಸೃಷ್ಟ್ವೋರ್ಧ್ವ ಉದಕ್ರಾಮತ್ಸ ಏತಂ ಲೋಕಮಗಚ್ಛದ್ಯತ್ರೈಷ ಏತತ್ತ-ಪತಿ ನೋ ಹ ತರ್ಹ್ಯನ್ಯ ಏತಸ್ಮಾದತ್ರ ಯಜ್ಞಿಯ ಆಸ ತಂ ದೇವಾ ಯಜ್ಞೇನೈವ ಯಷ್ಟು-ಮಧ್ರಿಯಂತ ।**

(ಶ. ಬ್ರಾ. ೧೦-೨-೨-೧)

**‘ ಸಪ್ತ ಪುರುಷಾನೇಕಂ ಪುರುಷಮಕುರ್ವನ್ ’** ಸಪ್ತಪುರುಷರನ್ನೂ ಒಂದೇ ಪುರುಷನನ್ನಾಗಿ ಪರಿವರ್ತಿಸಿದರು ಎಂದು ಹಿಂದೆ ತಿಳಿಸಿದೆ. (ಶ. ಬ್ರಾ. ೬-೧-೧-೩) ಅದ್ವಿತೀಯನಾದ ಈ ಪುರುಷನೇ ಪ್ರಜಾಪತಿಯು. ಈ ಪ್ರಜಾಪತಿಯು ಪ್ರಜೆಗಳನ್ನು ಸೃಷ್ಟಿಸಿ ಊರ್ಧ್ವಮುಖವಾಗಿ ಆದಿತ್ಯಲೋಕಕ್ಕೆ ಹೋದನು. ಆಗ ಯಜ್ಞಕ್ಕೆ ಬೇರೆ ಪಶುಗಳಿಲ್ಲದಿದ್ದರಿಂದ ದೇವತೆಗಳು ಈ ಪ್ರಜಾಪತಿಯನ್ನೇ ಯಜ್ಞಪಶುವನ್ನಾಗಿ ಮಾಡಿದರು. ಆದುದರಿಂದಲೇ-

**ತಸ್ಮಾದೇತದೃಷಿಣಾಭ್ಯನೂಕ್ತಂ । ಯಜ್ಞೇನ ಯಜ್ಞಮಯಜಂತ ದೇವಾ ಇತಿ ಯಜ್ಞೇನ ಹಿ ತಂ ಯಜ್ಞಮಯಜಂತ ದೇವಾಸ್ತಾನಿ ಧರ್ಮಾಣಿ ಪ್ರಥಮಾನ್ಯಾಸನ್ನಿತಿ ತೇ ಹಿ ಧರ್ಮಾಃ ಪ್ರಥಮೋಽಕ್ರಿಯಂತ ತೇ ಹ ನಾಕಂ ಮಹಿಮಾನಃ ಸಚಂತೇತಿ ಸ್ವರ್ಗೋ ವೈ ಲೋಕೋ ನಾಕೋ ದೇವಾ ಮಹಿಮಾನಸ್ತೇ ದೇವಾಃ ಲೋಕಗ್ಂಸಚಂತ ಯೇ ತಂ ಯಜ್ಞಮಯಜನ್ನಿತ್ಯೇತತ್ ।**

(ಶ. ಬ್ರಾ. ೧೦-೨.೨-೨)

ಯಜ್ಞದಿಂದ ಪ್ರಜಾಪತಿರೂಪಿಯಾದ ಯಜ್ಞವನ್ನರ್ಚಿಸಿದರು ; ಈ ನಿಯಮವೇ ಪ್ರಥಮತಃ ಸ್ಥಾಪಿತವಾದುದರಿಂದ ‘ಇದನ್ನೇ **ತಾನಿ ಧರ್ಮಾಣಿ ಪ್ರಥಮಾನ್ಯಾಸನ್** ಎಂದು ಋಷಿಗಳು ಹೇಳಿದ್ದಾರೆ. ಈ ನಿಯಮಗಳು ಅಂತರಿಕ್ಷಕ್ಕೆ

ವ್ಯಾಪ್ತವಾದವು. ಆದುದರಿಂದಲೇ ಈ ಯಜ್ಞದಿಂದ ಪ್ರಜಾಪತಿರೂಪವಾದ ಯಜ್ಞವನ್ನು ನೆರವೇರಿಸುವವರು ಸ್ವರ್ಗಕ್ಕೆ ಸೇರುವರು ಎಂದು ತಿಳಿಸಿದೆ. ಅದೇ ಪ್ರಕಾರವಾಗಿ ಯಜ್ಞಕರ್ತರಾದ ದೇವತೆಗಳೆಲ್ಲರೂ ಸ್ವರ್ಗವಾಸಿಗಳಾಗಿದ್ದಾರೆ.

**ಯತ್ರ ಪೂರ್ವೇ ಸಾಧ್ಯಾಸ್ಸಂತಿ ದೇವಾಃ ಇತಿ। ಪ್ರಾಣಾ ವೈ ಸಾಧ್ಯಾ ದೇವಾಸ್ತ ಏತಮಗ್ರ ಏವಮಸಾಧಯನ್ನೇತದೇವ ಬುಭೂಷಂತಸ್ತ ಉ ಏವಾಪ್ಯೇತರ್ಹಿ ಸಾಧಯಂತಿ ಪಶ್ಚೇದ-ಮನ್ಯದಭವದ್ಯಜತ್ರಮಮರ್ತ್ಯಸ್ಯ ಭುವನಸ್ಯ ಭೂನೇತಿ ಪಶ್ಚಾ ಹ್ಯೈವೇದಮನ್ಯದ್ಯಜ್ಞಿಯ-ಮಾಸ ಯತ್ಕಿಂಚಾಮೃತಂ ॥**

(ಶ. ಬ್ರಾ. ೧೦-೨-೨-೩)

ಸಾಧ್ಯರು ಪೂರ್ವದಿಂದಲೇ ಈ ಸ್ವರ್ಗನಿವಾಸಿಗಳಾಗಿದ್ದಾರೆ. ಸಪ್ತಪ್ರಾಣಗಳೇ ಈ ಸಾಧ್ಯರು. ಪ್ರಜಾಪತಿಯು ದೇಹರೂಪಿಗಳಾಗಲು ಪ್ರಾರಂಭದಲ್ಲಿ ಸಪ್ತಪ್ರಾಣಗಳೇ ಅವನನ್ನು ಸಾಧ್ಯನನ್ನಾಗಿ ಮಾಡಿದವು. ಆದುದರಿಂದಲೇ ಇದೇ ವಿಷಯವನ್ನು ಋಕ್ಸಂಹಿತಾವಾಕ್ಯದಲ್ಲಿಯೂ ಈ ರೀತಿ ವರ್ಣಿಸಿದೆ.

**ಪಶ್ಚೇದಮನ್ಯದಭವದ್ಯಜತ್ರಮಮರ್ತ್ಯಸ್ಯ ಭುವನಸ್ಯ ಭೂನಾ।**
**ಸುಪರ್ಣೋ ಅಂಗ ಸವಿತುರ್ಗರುತ್ಮಾನ್ಪೂರ್ವೋ ಜಾತಃ ಸ ಉ ಅಸ್ಯಾನು ಧರ್ಮ॥**

(ಋ. ಸಂ- ೧೦ ೧೪೯-೩)

ಅನಂತರವೇ ಪೂಜ್ಯವಾದ ಈ ದೇವತೆಯು ಅಮರ್ತ್ಯವಾದ ಲೋಕದೊಡನೆ ಉತ್ಪನ್ನವಾಯಿತು. ಈ ಪರವಸ್ತುವನ್ನೇ ಸುಪರ್ಣನಾದ ಗರುತ್ಮಂತನೆಂದು ಕರೆಯುತ್ತಾರೆ. ಈ ಮೂಲವಸ್ತುವಿನ ಸಹಾಯದಿಂದಲೇ ಉಳಿದ ಅಮರ್ತ್ಯವಾದ ವಸ್ತುಗಳೆಲ್ಲವೂ ಪೂಜಾರ್ಹವಾದವು, ಎಂಬುದಾಗಿ ಸಾಧ್ಯಶಬ್ದಕ್ಕೂ, ಯಜ್ಞಶಬ್ದಕ್ಕೂ ಅರ್ಥವನ್ನು ಹೇಳಿ ಅವೆರಡರ ಸಂಬಂಧವನ್ನು ತಿಳಿಸಿದೆ. ಇದೇ ಮಂತ್ರವು ಪುರುಷಸೂಕ್ತದಲ್ಲಿ ಪಠಿತವಾದಾಗ ಸಾಯಣರು ಕೊಂಚ ವ್ಯತ್ಯಸ್ತವಾದ ಅರ್ಥವನ್ನು ಹೇಳಿದ್ದಾರೆ. (ಋ. ಸಂ. ೧೦-೯೦-೧೬)

**ದೇವಾಃ— ಪ್ರಜಾಪತಿಪ್ರಾಣರೂಪಾಃ ; ಯಜ್ಞೇನ ಯಥೋಕ್ತೇನ ಮಾನಸೇನ ಸಂಕಲ್ಪೇನ ; ಯಜ್ಞಂ— ಯಥೋಕ್ತಯಜ್ಞಸ್ವರೂಪಂ ಪ್ರಜಾಪತಿಂ ; ಅಯಜಂತ— ಪೂಜಿತವಂತಃ ।** ಪ್ರಜಾಪತಿಯ ಪ್ರಾಣರೂಪವಾದ ದೇವತೆಗಳನ್ನು ತಮ್ಮ ಮಾನಸಸಂಕಲ್ಪದಿಂದ ಪ್ರಜಾಪತಿರೂಪಿಯಾದ ಯಜ್ಞವನ್ನು ನೆರವೇರಿಸಿದರು. ಆ ಪೂಜಾವಿಶೇಷವು ಜಗತ್ತಿನ ಧಾರಣೆಗೆ ಸಹಾಯಕವಾಯಿತು.

**ಯತ್ರ— ಯಸ್ಮಿನ್ವಿರಾಟ್‌ಪ್ರಾಪ್ತಿರೂಪೇ ನಾಕೇ ; ಪೂರ್ವೇ ಸಾಧ್ಯಾಃ ಪುರಾತನಾ ವಿರಾಡುಪಾಸ್ತಿ-ಸಾಧಕಾಃ ಸಂತಿ । ತೇ ವಿರಾಟ್‌ಪ್ರಾಪ್ತಿರೂಪಂ ಸ್ವರ್ಗಂ ಪ್ರಾಪ್ನುವಂತಿ ।** ವಿರಾಟ್ಪುರುಷನನ್ನು ಆರಾಧಿಸತಕ್ಕ ಈ ಪ್ರಜಾಪತಿಪ್ರಾಣರೂಪರಾದ ಸಾಧ್ಯರೆಲ್ಲರೂ, ವಿರಾಟ್‌ಪುರುಷನ ಪ್ರಾಪ್ತಿಗೆ ಯೋಗ್ಯವಾದ ಸ್ವರ್ಗವನ್ನು ಪಡೆಯುತ್ತಾರೆ ಎಂದು ಪುರುಷಸೂಕ್ತದಲ್ಲಿರುವ ಈ ಋಕ್ಕಿಗೆ ಅರ್ಥವಾಡಿದೆ ಐತರೇಯಬ್ರಾಹ್ಮಣದಲ್ಲಿ ಈ ಯಜ್ಞಸೇವನೆಯನ್ನು ಸ್ತುತಿಸುತ್ತಾ,

ಸೈಷಾ ಸ್ವರ್ಗ್ಯಾಹುತಿರ್ಯದಗ್ನ್ಯಾಹುತಿರ್ಯದಿ ಹ ವಾ ಅಪ್ಯಬ್ರಾಹ್ಮಣೋಕ್ತೋ ಯದಿ ದುರು-
ಕ್ತೋಕ್ತೋ ಯಜತೇಽಥ ಹೈಷಾಹುತಿರ್ಗಚ್ಛತ್ಯೇವ ದೇವಾನ್ನ ಪಾಪ್ಮನಾ ಸಂಸೃಜ್ಯತೇ ॥
(ಐ. ಬ್ರಾ. ೧-೧೬)

"ಯಜ್ಞೇನ ಯಜ್ಞಮಯಜಂತ" ಎಂಬ ಮಂತ್ರದಲ್ಲಿ ವರ್ಣಿತವಾಗಿರುವ ನಿಯಮದಂತೆಯೂ ಸಾಧ್ಯಾದಿ ದೇವತೆಗಳು ಅನುಸರಿಸಿದಂತೆಯೂ ಯಜ್ಞಾಗ್ನಿಯಿಂದ ಯಜ್ಞವನ್ನು ಸೇವಿಸುವವರು ಸ್ವರ್ಗಲೋಕವನ್ನು ಪಡೆಯುತ್ತಾರೆ. ಈ ತತ್ತ್ವವನ್ನರಿತು ಯಜ್ಞವನ್ನು ನಿರ್ವಹಿಸುವವನ ಆಹುತಿಗಳು ಸ್ವರ್ಗವಾಸಿಗಳಾದ ದೇವತೆಗಳನ್ನು ಸೇರುತ್ತವೆ. ಅವನು ಅಬ್ರಾಹ್ಮಣನಾದರೂ ಸರಿ ಅಥವಾ ಇತರ ವಿಧದಲ್ಲಿ ದೂಷ್ಯನಾಗಿದ್ದರೂ ಸರಿ ಅವನಿಗೆ ಸ್ವರ್ಗ ಲಾಭವು ಸಿದ್ಧವು. ಅವನು ಪಾಪರಹಿತನಾಗುತ್ತಾನೆ, ಎಂದು ತಿಳಿಸಿದೆ. ಈ ರೀತಿ ಪ್ರಕೃತವಾದ ಋಕ್ಕಿಗೆ ಅಧಿದೈವತಪಕ್ಷದಲ್ಲಿಯೂ, ಅಧ್ಯಾತ್ಮಪಕ್ಷದಲ್ಲಿಯೂ ಸಹ ಶತಪಥಾದಿಬ್ರಾಹ್ಮಣಗಳಲ್ಲಿಯೂ, ಛಾಂದೋಗ್ಯಾದ್ಯುಪನಿಷತ್ತುಗಳಲ್ಲಿಯೂ ತಾತ್ಪರ್ಯವನ್ನು ವಿವರಿಸಿದೆ.

॥ ವ್ಯಾಕರಣಪ್ರಕ್ರಿಯಾ ॥

**ಯಜ್ಞೇನ**— ಯಜ ದೇವಪೂಜಾಸಂಗತಿಕರಣದಾನೇಷು. ಧಾತು. **ಯಜಯಾಚಯತ**—(ಪಾ. ಸೂ. ೩-೩-೯೦) ಎಂಬುದರಿಂದ ನಙ್ ಪ್ರತ್ಯಯ. ಪ್ರತ್ಯಯಸ್ವರದಿಂದ ಅಂತೋದಾತ್ತವಾಗುತ್ತದೆ.

**ಅಯಜಂತ**—ಪೂರ್ವೋಕ್ತವಾದ ಧಾತುವಿನ ಲಙ್ ಪ್ರಥಮಪುರುಷ ಬಹುವಚನಾಂತರೂಪ. ತಿಙಂತ ನಿಘಾತಸ್ವರ ಬರುತ್ತದೆ.

**ಧರ್ಮಾಣಿ**—ಧೃಞ್ ಧಾರಣೇ. ಧಾತು. **ಅರ್ತಿಸ್ತುಸುಹು**—(ಉ. ಸೂ. ೧-೧೩೭) ಎಂಬುದರಿಂದ ಮನ್ ಪ್ರತ್ಯಯ. ತನ್ನಿಮಿತ್ತವಾಗಿ ಧಾತುವಿನ ಇಕಿಗೆ ಗುಣ. ರಪರವಾಗಿ ಬರುತ್ತದೆ. ನಿತ್ತಾದುದರಿಂದ ಆದ್ಯುದಾತ್ತಸ್ವರ ಬರುತ್ತದೆ.

**ಆಸನ್**—ಅಸ ಭುವಿ ಧಾತು. ಲಙ್ ಪ್ರಥಮಪುರುಷಬಹುವಚನಾಂತರೂಪ. ತಿಙಂತನಿಘಾತಸ್ವರ ಬರುತ್ತದೆ

**ನಾಕಮ್**—ನ ಅಕಮಸ್ಮಿನ್ ಇತಿ ನಾಕಃ ತಮ್. **ನಭ್ರಾಣ್ನಪಾನ್ನವೇ**—(ಪಾ. ಸೂ. ೬-೩-೭೫) ಎಂಬುದರಿಂದ ನಲೋಪಾಭಾವದಿಂದ ನಿಪಾತಿತವಾಗಿದೆ.

**ಮಹಿಮಾನಃ**—**ಪೃಥ್ವಾದಿಭ್ಯ ಇಮನಿಜ್ವಾ** (ಪಾ. ಸೂ. ೫-೧-೧೨೨) ಎಂಬುದರಿಂದ ಮಹ ಶಬ್ದದ ಮೇಲೆ ಇಮನಿಚ್ ಪ್ರತ್ಯಯ. **ಯಸ್ಯೇತಿಚ** ಸೂತ್ರದಿಂದ ಅಕಾರಲೋಪ. ಚಿತ್ತಾದುದರಿಂದ ಅಂತೋದಾತ್ತ ಸ್ವರ ಬರುತ್ತದೆ.

**ಸಚಂತ**—ಷಚ ಸಮವಾಯೇ ಧಾತು. ಛಾಂದಸವಾಗಿ ಲಙ್ ಪ್ರಥಮಪುರುಷಬಹುವಚನಾಂತರೂಪ. ಛಾಂದಸವಾಗಿ ಅಡಾಗಮ—ಬರುವುದಿಲ್ಲ. ತಿಙಂತನಿಘಾತಸ್ವರ ಬರುತ್ತದೆ

**ಸಂತಿ**—ಯದ್ಯೋಗವಿರುವುದರಿಂದ ನಿಘಾತಸ್ವರ ಬರುವುದಿಲ್ಲ. ತಿಪ್ ಪಿತ್ತಾದುದರಿಂದ ಧಾತುಸ್ವರ ಉಳಿಯುತ್ತದೆ. ॥ ೫೦ ॥

ಸಂಹಿತಾಪಾಠಃ

ಸಮಾನಮೇತದುದಕಮುಚ್ಚೈತ್ಯವ ಚಾಹಭಿಃ ।
ಭೂಮಿಂ ಪರ್ಜನ್ಯಾ ಜಿನ್ವಂತಿ ದಿವಂ ಜಿನ್ವಂತ್ಯಗ್ನಯಃ ॥ ೫೧ ॥

। ಪದಪಾಠಃ ।

ಸಮಾನಂ । ಏತತ್ । ಉದಕಂ । ಉತ್ । ಚ । ಏತಿ । ಅವ । ಚ । ಅಹಽಭಿಃ ।
ಭೂಮಿಂ । ಪರ್ಜನ್ಯಾಃ । ಜಿನ್ವಂತಿ । ದಿವಂ । ಜಿನ್ವಂತಿ । ಅಗ್ನಯಃ ॥ ೫೧ ॥

ಸಾಯಣಭಾಷ್ಯಂ

ಏತತ್ಪ್ರಸಿದ್ಧಮುದಕಂ ಸಮಾನಂ । ಏಕರೂಪಮಿತ್ಯರ್ಥಃ । ಅಹಭಿಃ ಕೈಶ್ಚಿದಹೋಭಿರ್ಗ್ರೀಷ್ಮಕಾಲೀನೈರುಚ್ಚೈತಿ । ಊರ್ಧ್ವಂ ಗಚ್ಛತಿ । ತಥಾಹಭಿರ್ವರ್ಷಕಾಲೀನೈರೇವ ತದುದಕಮವ ಚೈತಿ । ಅವಾಙ್ಮುಖಂ ಚ ಗಚ್ಛತಿ ॥ ಚವಾಯೋಗೇ ಪ್ರಥಮೇತಿ ಪ್ರಥಮಾವಿಭಕ್ತಿರ್ನ ನಿಹನ್ಯತೇ ॥ ರಶ್ಮಿನಾಡ್ಯೈವ ಭೂಮಿಂ ಪ್ರಾಪ್ನೋತಿ । ತದೇವೋಚ್ಯತೇ । ಪರ್ಜನ್ಯಾಃ ಪ್ರೀಣಯಿತಾರೋ ಮೇಘಾ ಭೂಮಿಂ ಜಿನ್ವಂತಿ । ಉದಕಸಂಸ್ಥಾಯೋನ ಸಸ್ಯಾದ್ಯುತ್ಪಾದನದ್ವಾರಾ ಭೂಮಿಷ್ಠಾನ್ಪ್ರೀಣಯಂತಿ । ತಥಾಗ್ನಯ ಆಹವನೀಯಾದ್ಯಾಃ ಸ್ವೇ ಹುತ ಆಹುತ್ಯಾ ದಿವಂ ದ್ಯುಲೋಕಸ್ಥಾನ್ದೇವಾನ್ಜಿನ್ವಂತಿ । ಪ್ರೀಣಯಂತಿ ॥

। ಪ್ರತಿಪದಾರ್ಥ ।

**ಸಮಾನಂ**--ಒಂದೇರೂಪವಾದುದೂ । **ಏತತ್ ಉದಕಂ**—ಪ್ರಸಿದ್ಧವಾದುದೂ ಆದ ಈ ಉದಕವು । **ಅಹಭಿಃ**–(ಗ್ರೀಷ್ಮಕಾಲದಲ್ಲಿ) ಕೆಲವು ದಿನಗಳಲ್ಲಿ । **ಉಚ್ಚೈತಿ**—ಊರ್ಧ್ವಮುಖವಾಗಿ (ಅಂತರಿಕ್ಷಕ್ಕೆ) ಹತ್ತುತ್ತದೆ । (**ಅಹಭಿಃ**—ಮಳೆಗಾಲದ ಕೆಲವು ದಿನಗಳಲ್ಲಿ) । **ಅವ ಚ**—(ಅಂತರಿಕ್ಷದಿಂದ) ಅಧೋಮುಖವಾಗಿ ಸುರಿಯುತ್ತದೆ । **ಪರ್ಜನ್ಯಾಃ**—ಪ್ರೀತಿಕಾರಕಗಳಾದ ಮೇಘಗಳು । **ಭೂಮಿಂ** ಭೂಮಿಯನ್ನು । **ಜಿನ್ವಂತಿ**—ತೃಪ್ತಿಗೊಳಿಸುತ್ತವೆ । **ಅಗ್ನಯಃ**—ಆಹವನೀಯಾದ್ಯಗ್ನಿಗಳು । **ದಿವಂ**—ದ್ಯುಲೋಕವನ್ನು । **ಜಿನ್ವಂತಿ**—ತೃಪ್ತಿಗೊಳಿಸುತ್ತವೆ ।

॥ ಭಾವಾರ್ಥ ॥

ಏಕರೂಪವಾದ ಉದಕವು ಗ್ರೀಷ್ಮಕಾಲದ ದಿನಗಳಲ್ಲಿ ಊರ್ಧ್ವಮುಖವಾಗಿ ಅಂತರಿಕ್ಷಕ್ಕೆ ಹತ್ತುತ್ತದೆ. ಮಳೆಗಾಲದ ದಿನಗಳಲ್ಲಿ ಅಂತರಿಕ್ಷದಿಂದ ಅಧೋಮುಖವಾಗಿ ಸುರಿಯುತ್ತದೆ ಪ್ರಪಂಚಕ್ಕೆ ಸಂತೃಪ್ತಿಯನ್ನುಂಟು ಮಾಡುವ ಮೇಘಗಳು ಭೂಮಿಯನ್ನು ತೃಪ್ತಿಗೊಳಿಸುತ್ತವೆ. ಆಹವನೀಯಾದ್ಯಗ್ನಿಗಳು ದ್ಯುಲೋಕವನ್ನು ಅಥವಾ ದ್ಯುಲೋಕದಲ್ಲಿರುವ ದೇವತೆಗಳನ್ನು ತೃಪ್ತಿಗೊಳಿಸುತ್ತವೆ

English Translation

The uniform water passes upwards and downwards in the course of days: clouds give joy to the earth; fires rejoice the heaven

ವಿಶೇಷವಿಷಯಗಳು

**ಭೂಮಿಂ ಪರ್ಜನ್ಯಾ ಜಿನ್ವಂತಿ । ದಿವಂ ಜಿನ್ವಂತ್ಯಗ್ನಯಃ ।** ಸಸ್ಯಾದಿಗಳ ಬೆಳೆವಣಿಗೆಗೆ ಕಾರಣವಾಗಿ ಭೂಮಿಗೆ ಅನ್ನಸಂಪತ್ತನ್ನೊದಗಿಸುವುದರಿಂದ ಪರ್ಜನ್ಯಗಳು ಭೂಲೋಕದ ಪ್ರಜೆಗಳಿಗೆ ತೃಪ್ತಿಯನ್ನುಂಟುಮಾಡುತ್ತವೆ. ಯಜ್ಞಾಹುತಿಗಳನ್ನು ಹೊತ್ತುಕೊಂಡುಹೋಗಿ ದ್ಯುಲೋಕದಲ್ಲಿ ದೇವತೆಗಳಿಗೆ ಹಂಚಿ ಅಗ್ನಿಗಳು ದೇವಲೋಕನಿವಾಸಿಗಳನ್ನು ತೃಪ್ತಿಪಡಿಸುತ್ತವೆ. ಕೇವಲ ತೃಪ್ತಿಪಡಿಸುವುದೇ ಅಲ್ಲದೆ ಪರ್ಜನ್ಯಾಗ್ನಿಗಳು ಉಭಯಲೋಕನಿವಾಸಿಗಳ ಸ್ಥಿತಿಗತಿಗಳಿಗೆಲ್ಲಾ ಕಾರಣಗಳಾಗಿವೆ.

**ಜಿನ್ವಂತಿ—ಪ್ರೀಣಯಂತಿ ।** ತೃಪ್ತಿಯನ್ನುಂಟುಮಾಡುತ್ತವೆ. **ಜಿನ್ವತಿಃ ಪ್ರೀತಿಕರ್ಮಾ** (ನಿ. ೬-೨೨) ಎಂದು ಈ ಪದದ ವಿಶೇಷಾರ್ಥವನ್ನು ಹೇಳಿ ನಿರುಕ್ತಕಾರರು ಪ್ರಕೃತವಾದ ಋಕ್ಕನ್ನೇ ಉದಹರಿಸಿದ್ದಾರೆ. ಚೈತನ್ಯದಾಯಿಯೆಂದೂ ಅರ್ಥವಾಗುತ್ತದೆ ಉಭಯಲೋಕಗಳಿಗೂ ಸಹ ತಮ್ಮ ಆವೃತ್ತಿರೂಪದಿಂದ ಪ್ರಾಣದಾಯಕಗಳಾಗಿರುತ್ತವೆ.

ಪರ್ಜನ್ಯಾಗ್ನಿಗಳ ಸಂಬಂಧವು ಬೀಜಾಂಕುರಗಳ ಸಂಬಂಧದಂತಿದೆ. ಯಜ್ಞಾದಿಗಳಿಂದ ಪರ್ಜನ್ಯವೂ ಪರ್ಜನ್ಯದಿಂದ ಯಜ್ಞವೂ ವೃದ್ಧಿಯಾಗುತ್ತವೆ. ಇವು ಪರಸ್ಪರವಾಗಿ ಅನ್ಯೋನ್ಯಾಶ್ರಯವನ್ನು ಪಡೆದಿವೆ. ಒಂದಕ್ಕೊಂದು ಹೇತುವಾಗಿದೆ. ಪೃಥಿವ್ಯಂತರಿಕ್ಷಾದಿಲೋಕಗಳ ಸ್ಥಿತಿಗಳೆಲ್ಲವೂ ಈ ಅನ್ಯೋನ್ಯಾಶ್ರಯವನ್ನೇ ನಂಬಿವೆ.

> **ಅನ್ನಾದ್ಭವಂತಿ ಭೂತಾನಿ ಪರ್ಜನ್ಯಾದನ್ನಸಂಭವಃ ।**
> **ಯಜ್ಞಾದ್ಭವತಿ ಪರ್ಜನ್ಯೋ ಯಜ್ಞಃ ಕರ್ಮಸಮುದ್ಭವಃ ॥**
>
> (ಭಗವದ್ಗೀತಾ. ೩. ೧೪)

ಯಜ್ಞಾದಿಕರ್ಮಗಳು ನೆರವೇರಬೇಕಾದರೆ ಅನ್ನಸಂಪತ್ತಿನಿಂದ ಮಾತ್ರ ಸಾಧ್ಯ. ಯಜ್ಞಕ್ಕೆ ಮೂಲವಾದ ಅನ್ನವು ಪರ್ಜನ್ಯದಿಂದಲೇ ಉತ್ಪನ್ನವಾಗುತ್ತದೆ. ಪರ್ಜನ್ಯವು ಯಜ್ಞದಿಂದ ಮಾತ್ರ ಸಾಧ್ಯವಾಗುತ್ತವೆ ಈ ವಿಧವಾಗಿ ಪರ್ಜನ್ಯಕ್ಕೂ ಯಜ್ಞಕ್ಕೂ ಅನ್ಯೋನ್ಯಾಶ್ರಯವಿರುತ್ತದೆ. **ಅಗ್ನಯಃ** ಎಂದರೆ ಆಹವನೀಯಾದಿಯಜ್ಞಾಗ್ನಿಗಳೆಂದರ್ಥ. **ಅಗ್ನಯಃ ಆಹವನೀಯಾದ್ಯಾಃ** ಎಂದು ಸಾಯಣರು ತಿಳಿಸಿದ್ದಾರೆ. ಆದುದರಿಂದ ಪರ್ಜನ್ಯಕ್ಕೂ ಯಜ್ಞಕ್ಕೂ ಇರುವ ಸಂಬಂಧವೇ ಪರ್ಜನ್ಯಕ್ಕೂ ಆಹವನೀಯಾಗ್ನಿಗಳಿಗೂ ಇರುವುದೆಂದರ್ಥ. ಇವೇ ಸಂಬಂಧವನ್ನು ಛಾಂದೋಗ್ಯೋಪನಿಷತ್ತಿನಲ್ಲಿ ಈ ರೀತಿ ತಿಳಿಸಿದೆ.

> **ಪರ್ಜನ್ಯೋ ವಾವ ಗೌತಮಾಗ್ನಿಸ್ತಸ್ಯ ವಾಯುರೇವ ಸಮಿದಭ್ರಂ ಧೂಮೋ ವಿದ್ಯುದರ್ಚಿರಶನಿರಂಗಾರಾ ಹ್ರಾದನಯೋ ವಿಸ್ಫುಲಿಂಗಾಃ ।**
>
> (ಛಾ. ಉ. ೫-೫-೧)

ಪರ್ಜನ್ಯವೇ ಯಜ್ಞಾಗ್ನಿಯು. ವಾಯುವೇ ಅದರ ಸಮಿತ್ತು. ಮೇಘವೇ ಅದರ ಧೂಮವು. ವಿದ್ಯುತ್ತೇ ಅದರ ಜ್ವಾಲೆಯು. ಸಿಡಿಲೇ ಅಂಗಾರಗಳು. ಗುಡುಗುಗಳೇ ಶಬ್ದಗಳು.

**ತಸ್ಮಿನ್ನೇತಸ್ಮಿನ್ನಗ್ನೌ ದೇವಾಃ ಸೋಮಂ ರಾಜಾನಂ ಜುಹ್ವತಿ ತಸ್ಯಾ ಆಹುತೇರ್ವರ್ಷಂ ಸಂಭವಂತಿ ||**

(ಛಾ. ಉ. ೫-೫-೨)

ಈ ಪರ್ಜನ್ಯರೂಪವಾದ ಅಗ್ನಿಯಲ್ಲಿ ದೇವತೆಗಳು ಸೋಮವನ್ನರ್ಪಿಸುತ್ತಾರೆ. ಇದರ ಫಲವಾಗಿ ವೃಷ್ಟಿಪತನ ವಾಗುತ್ತದೆ, ಎಂದು ಪರ್ಜನ್ಯಕ್ಕೂ ಯಜ್ಞಾಗ್ನಿಗೂ ತಾದಾತ್ಮ್ಯವನ್ನೇ ಹೇಳಿದೆ. ಪೃಥಿವ್ಯಂತರಿಕ್ಷಗಳ ಮತ್ತು ಪ್ರಜೆಗಳ ಜೀವನಾಧಾರವಾಗಿರುವುದಲ್ಲದೆ, ಪರ್ಜನ್ಯವು ಎರಡು ಲೋಕಗಳ ಸಂಬಂಧವನ್ನೂ ನಿಕಟವಾಗಿ ಬೆಳೆಸುವುದರಲ್ಲಿಯೂ ನಿರತವಾಗಿದೆ.

**ಪೃಥಿವೀ ಪೂರ್ವರೂಪಂ ದ್ಯೌರುತ್ತರರೂಪಂ ವೃಷ್ಟಿಃಸಂಧಿಃ ಪರ್ಜನ್ಯಃ ಸಂಧಾತಾ | ತದುತಾಪಿ ಯತ್ರೈತದ್ಬಲವದನುದ್ಯೃಷ್ಟ್ಯಸ್ತ್ರಂದಧದಹೋರಾತ್ರೇ ವರ್ಷತಿ ದ್ಯಾವಾಪೃಥಿವ್ಯೌ ಸಮಧಾ-ತಾಮಿತ್ಯುತಾಪ್ಯಾಹುಃ | ಇತೀನ್ವಧಿದೈವತಂ | ಅಥಾಧ್ಯಾತ್ಮಂ |**

(ಐ. ಆರಣ್ಯಕಂ. ೨-೨-೧ ರಿಂದ ೩)

ಪೃಥ್ವಿಯು ಪೂರ್ವಾರ್ಧವು. ದ್ಯುಲೋಕವು ಉತ್ತರಾರ್ಧವು ವೃಷ್ಟಿಯಿಂದ ಇವೆರಡರ ಸಂಬಂಧವುಂಟಾಗುತ್ತದೆ. ಪರ್ಜನ್ಯನೇ ಸಂಬಂಧಕಾರಕನು. ಅಹೋರಾತ್ರವೂ ಎಡಬಿಡದೇ ಪರ್ಜನ್ಯನು ವೃಷ್ಟಿಯನ್ನು ಸುರಿಸಿದ ಪಕ್ಷದಲ್ಲಿ ಆಗ ದ್ಯಾವಾಪೃಥಿವಿಗಳೆರಡೂ ಒಟ್ಟಿಗೆ ಸೇರಿರುವುವು ಎಂದು ತಿಳಿದವರು ಹೇಳುತ್ತಾರೆ. ಈ ರೀತಿ ಉಭಯಲೋಕ ಗಳಿಗೂ ಉಪಕಾರಕನಾದ ಪರ್ಜನ್ಯನ ಸ್ತುತಿಯು ಋಕ್ಸಂಹಿತೆಯಲ್ಲಿ ಬಹಳ ಮಹತ್ತ್ವದಿಂದ ಕೂಡಿದೆ.

**ಅಚ್ಛಾ ವದ ತವಸಂ ಗೀರ್ಭಿರಾಭಿಃ ಸ್ತುಹಿ ಪರ್ಜನ್ಯಂ ನಮಸಾ ವಿವಾಸ |**
**ಕನಿಕ್ರದದ್ವೃಷಭೋ ಜೀರದಾನೂ ರೇತೋ ದಧಾತ್ಯೋಷಧೀಷು ಗರ್ಭಂ ||**

(ಋ. ಸಂ. ೫-೮೩ ರಿಂದ ೧)

ವೃಷ್ಟಿಕಾರಕನೂ, ಸಸ್ಯೌಷಧ್ಯಾದಿಗಳಲ್ಲಿ ರಸವನ್ನು ತುಂಬತಕ್ಕವನೂ ಆದ ಪರ್ಜನ್ಯನಿಗೆ ಎಲ್ಲರೂ ಕೃತಜ್ಞತೆ ಯನ್ನರ್ಪಿಸಿ ಅವನನ್ನು ಉತ್ತಮವಾದ ಸ್ತುತಿವಾಕ್ಯಗಳಿಂದ ಪ್ರಶಂಸಿಸಿ, ಎಂದು ಸ್ತುತಿಕಾರನನ್ನುದ್ದೇಶಿಸಿ ಹೇಳಿದೆ.

**ಯತ್ಪರ್ಜನ್ಯ ಕನಿಕ್ರದತ್ಸ್ತನಯನ್ ಹಂಸಿ ದುಷ್ಕೃತಃ |**
**ಪ್ರತೀದಂ ವಿಶ್ವಂ ಮೋದತೇ ಯತ್ಕಿಂ ಚ ಪೃಥಿವ್ಯಾಮಧಿ ||**

(ಋ. ಸಂ. ೫-೮೩-೯)

ಎಲೈ ಪರ್ಜನ್ಯನೇ, ನೀನು ಶಬ್ದಮಾಡುತ್ತಲೂ, ಶತ್ರುಗಳನ್ನು ದೂರಕ್ಕೆ ಅಟ್ಟುತ್ತಲೂ ಲೋಕೋಪಕಾರವನ್ನು ಮಾಡುವಾಗ ಚರಾಚರಾತ್ಮಕವಾದ ಲೋಕವೆಲ್ಲವೂ ತನ್ನ ಹರ್ಷವನ್ನು ವ್ಯಕ್ತಪಡಿಸುತ್ತದೆ, ಇತ್ಯಾದಿಯಾಗಿ ಪರ್ಜನ ಸ್ತುತಿಯಿದೆ.

**ಪರ್ಜನ್ಯಾಃ ಪ್ರೀಣಯಿತಾರೋ ಮೇಘಾಃ |** ತೃಪ್ತಿಯನ್ನುಂಟುಮಾಡತಕ್ಕ ಮೇಘಗಳೆಂದು ಸಾಯಣರು ಅರ್ಥಮಾಡಿದ್ದಾರೆ. ನಿರುಕ್ತಕಾರರು ಈ ಪದದ ನಿರ್ವಚನವನ್ನು ತಿಳಿಸುತ್ತಾ,

**ಪರ್ಜನ್ಯಸ್ತೃಪೇರಾದ್ಯಂತವಿಪರೀತಸ್ಯ ತರ್ಪಯಿತಾ ಜನ್ಯಃ ।**

(ನಿ. ೧೦-೧೦)

ತೃಪ್ತಿಯನ್ನುಂಟುಮಾಡು ಎಂಬರ್ಥವನ್ನು ಕೊಡುವ ತೃಪ್‌ಧಾತುವಿನ ಅಕ್ಷರಗಳು ವ್ಯತ್ಯಸ್ತವಾಗಿ ಈ ಪದವು ನಿಷ್ಪನ್ನವಾಗಿದೆ. ಮಾನವರಿಗೆ ಅನುಕೂಲಕಾರಕನಾಗಿ ಅವರಿಗೆ ತೃಪ್ತಿದಾಯಕನಾಗಿರುವನೆಂದರ್ಥ.

**ತೃಪ್+ಜನ್ಯಃ=ಪೃತ್+ಜನ್ಯಃ= ಪರ್ಜ್+ಜನ್ಯಃ=ಪರ್ಜನ್ಯಃ ।** ಅಥವಾ ;

**ಪರೋ ಜೇತಾ ವಾ**—ಉತ್ತಮವಾದ ಜೇತೃವೆಂದಾಗಲಿ, **(ಪರಃ+ಜೀ)** ಅಥವಾ ; **ಪರೋ ಜನಯಿತಾ ವಾ**—ಉತ್ತಮವಾದ ಉತ್ಪಾದಕನೆಂದಾಗಲಿ, ಅಥವಾ **ಪ್ರಾರ್ಜಯಿತಾ ವಾ ರಸಾನಾಂ**—ರಸರೂಪವಾದ ಉದಕವನ್ನು ಕೊಡತಕ್ಕವನೆಂದಾಗಲೀ **(ಪ್ರ+ಋಜ್)** ಪರ್ಜನ್ಯಶಬ್ದಕ್ಕೆ ಅರ್ಥವನ್ನು ಹೇಳಬಹುದು. (ನಿ. ೧೦-೧೦) ಎಂದು ತಿಳಿಸಿ ನಿರುಕ್ತಕಾರರು,

**ವಿ ವೃಕ್ಷಾನ್ ಹಂತ್ಯುತ ಹಂತಿ ರಕ್ಷಸೋ ವಿಶ್ವಂ ಬಿಭಾಯ ಭುವನಂ ಮಹಾವಧಾತ್ ।**
**ಉತಾನಾಗಾ ಈಷತೇ ವೃಷ್ಣ್ಯಾವತೋ ಯತ್ಪರ್ಜನ್ಯಃ ಸ್ತನಯನ್ ಹಂತಿ ದುಷ್ಕೃತಃ ॥**

(ಋ. ಸಂ. ೫-೮೩-೨)

ಎಂಬ ಋಕ್ಕನ್ನುದಹರಿಸಿ **ಪರ್ಜನ್ಯನ** ನಾನಾಗುಣಗಳನ್ನು ತಿಳಿಸಿದ್ದಾರೆ. ಪರ್ಜನ್ಯನ ಸ್ವರೂಪವನ್ನು ಬೃಹದ್ದೇವತಾಕಾರರು ಬೃಹದ್ದೇವತೆಯಲ್ಲಿ ಈ ರೀತಿ ತಿಳಿಸಿದ್ದಾನೆ.

**ಯದಿಮಾಂ ಪ್ರಾರ್ಜಯತ್ಯೇಕೋ ರಸೇನಾಂಬರಜೇನ ಗಾಂ ।**
**ಕಾಲೇSತ್ರಿಸ್ತಾರ್ವಶಶ್ಚರ್ಷಿಃ ತೇನ ಪರ್ಜನ್ಯಮಾಹತುಃ ॥**

(ಬೃ. ದೇ. ೨-೩೭)

ತಾನೊಬ್ಬನೇ ಪೃಥ್ವಿಯನ್ನು ಅಂತರಿಕ್ಷೋತ್ಪನ್ನವಾದ ಉದಕದಿಂದ ತುಂಬುತ್ತಾನಾದ್ದರಿಂದ **ಉರ್ವಶೀಪುತ್ರನಾದ ಅತ್ರಿ**ಋಷಿಯು ಈ ದೇವತೆಯನ್ನು ಪರ್ಜನ್ಯನೆಂದು ಕರೆದು ಸ್ತುತಿಸಿದ್ದಾರೆ.

**ತರ್ಪಯತ್ಯೇಷ ಯಲ್ಲೋಕಾನ್ ಜನ್ಯೋ ಜನಹಿತಶ್ಚ ಯತ್ ।**
**ಪರೋ ಜೇತಾ ಜನಯಿತಾ ಯದ್ವಾಗ್ನೇಯಸ್ತತೋ ಜಗೌ ॥**

(ಬೃ. ದೇ. ೨-೩೮)

ಪ್ರಜೆಗಳಿಗೆ ತೃಪ್ತಿಕಾರಕನಾದುದರಿಂದಲೂ, ಪ್ರಸನ್ನನಾಗಿರುವುದರಿಂದಲೂ, ಪ್ರಜಾಸಖನಾಗಿರುವುದರಿಂದಲೂ ಅಥವಾ ಉತ್ತಮವಾದ ಜೈತೃವಾಗಿರುವುದರಿಂದಲೂ, ಅಥವಾ ಉತ್ಪಾದಕನಾಗಿರುವುದರಿಂದಲೂ ಅಗ್ನಿಪುತ್ರನು ಈ ದೇವತೆಯನ್ನು ಪರ್ಜನ್ಯನೆಂದು ಕರೆದಿದ್ದಾನೆ, ಎಂದು ಪರ್ಜನ್ಯನ ನಾನಾಗುಣಗಳನ್ನು ವಿವರಿಸಿದೆ.

ಪರ್ಜನ್ಯನು ಭೂಲೋಕಕ್ಕೆ ಚೈತನ್ಯವನ್ನೂ, ಹರ್ಷವನ್ನೂ ಉಂಟುಮಾಡುವಂತೆ ಅಗ್ನಿಗಳೂ ಸಹ ದ್ಯುಲೋಕಕ್ಕೆ ಚೈತನ್ಯದಾಯಕವಾಗಿಯೂ, ಹರ್ಷದಾಯಕವಾಗಿಯೂ ಇದ್ದಾರೆ. ಅಗ್ನಯಃ-**ಆವಹನೀಯಾದ್ಯಾಃ ಸ್ವೇ ಹುತೇ ಆಹುತ್ಯಾ । ದಿವಂ-ದ್ಯುಲೋಕಸ್ಥಾನ್ ದೇವಾನ್ ಜಿನ್ವಂತಿ-ಪ್ರೀಣಯಂತಿ ।** ತಮ್ಮಲ್ಲಿ ಅರ್ಪಿಸಿದ ಆಹುತಿಗಳಿಂದ ಆಹವನೀಯಾದ್ಯಗ್ನಿಗಳು ದ್ಯುಲೋಕಸ್ಥರಾದ ದೇವತೆಗಳನ್ನು ತೃಪ್ತಿಪಡಿಸುತ್ತಾರೆಂದು ತಾತ್ಪರ್ಯ. ಅಗ್ನಿಯ ಸ್ವರೂಪವು ನಾನಾವಿಧವಾಗಿದೆ **ಜಾತವೇದಸ್, ದ್ರವಿಣೋದಾಃ, ವೈಶ್ವಾನರ** ಇತ್ಯಾದಿರೂಪಗಳಿಂದ

ಅಗ್ನಿಯು ವಿಶ್ವವ್ಯಾಪಕನಾಗಿ ತನ್ನ ಮಹತ್ತ್ವವನ್ನು ಪ್ರಕಾಶಪಡಿಸುವುದನ್ನೂ, ನಾನಾಶ್ರುತಿಗಳಲ್ಲಿ ಈ ಅಗ್ನಿಯ ವೈಶ್ವಾನರಾದಿರೂಪಗಳನ್ನು ಸ್ತುತಿಸಿರುವುದನ್ನೂ ಹಿಂದೆ ಎಂದರೆ ಋಗ್ವೇದಸಂಹಿತೆಯ ೧೧ನೇ ಭಾಗದಲ್ಲಿ ವಿಶದವಾಗಿ ತಿಳಿಸಿದೆ. ಪ್ರಕೃತವಾದ ಋಕ್ಕಿನಲ್ಲಿ ಅಗ್ನಿಯ ಗಾರ್ಹಪತ್ಯಾದಿಸ್ವರೂಪಗಳನ್ನು ನಿರ್ದೇಶಿಸಿದೆ. **ದಕ್ಷಿಣಾಗ್ನಿ ಗಾರ್ಹಪತ್ಯ, ಆಹವನೀಯ** ಎಂದು ಯಜ್ಞಾಗ್ನಿಯ ಮೂರು ಪ್ರಭೇದಗಳು ಪ್ರಸಿದ್ಧವಾದವು. ಇವುಗಳ ಸ್ವರೂಪವನ್ನು ತಿಳಿಸುತ್ತಾ ತೈತ್ತಿರೀಯಸಂಹಿತೆಯಲ್ಲಿ,

> **ಯಥಾ ವೈ ಸಮೃತಸೋಮಾ ಏವಂ ವಾ ಏತೇ ಸಮೃತಯಜ್ಞಾ ಯದ್ದರ್ಶಪೂರ್ಣಮಾಸೌ ಕಸ್ಯ ವಾಹ ದೇವಾ ಯಜ್ಞಮಾಗಚ್ಛಂತಿ ಕಸ್ಯ ವಾ ಬಹೂನಾಂ ಯಜಮಾನಾನಾಂ ಯೋ ವೈ ದೇವತಾಃ ಪೂರ್ವಃ ಪರಿಗೃಹ್ಣಾತಿ ಸ ಏನಾಃ ಶ್ವೋ ಭೂತೇ ಯಜತೇ ಏತದ್ವೈ ದೇವಾನಾಮಾಯತನಂ ಯದಾಹವನೀಯೋಂತರಾಗ್ನೀ ಪಶೂನಾಂ ಗಾರ್ಹಪತ್ಯೋ ಮನುಷ್ಯಾಣಾಮನ್ವಾಹಾರ್ಯಪಚನಃ ಪಿತೃಣಾಮಗ್ನಿಂ ಗೃಹ್ಣಾತಿ ಸ್ವ ಏವಾಯತನೇ ದೇವತಾಃ ಪರಿ ಗೃಹ್ಣಾತಿ ।**
>
> (ತೈ. ಸಂ. ೧-೬-೭)

ಸೋಮಯಜ್ಞಗಳಲ್ಲಿ ಸ್ಪರ್ಧೆಯಿರುವಂತೆಯೇ, ದಶಪೂರ್ಣಮಾಸಾದಿಗಳಲ್ಲಿಯೂ ಸ್ಪರ್ಧೆಯಿರುತ್ತದೆ. ಯಾವ ಯಜಮಾನನು ತನ್ನ ಯಜ್ಞವನ್ನು ದೇವತಾತೃಪ್ತ್ಯರ್ಥವಾಗಿಯೇ ನೆರವೇರಿಸುತ್ತಾನೆಯೋ ಆ ಯಜ್ಞವನ್ನೇ ದೇವತೆಗಳು ಸಮೀಪಿಸುವರು, ಈ ಯಜ್ಞಾಗ್ನಿಗಳಲ್ಲಿ, ಪಶ್ವಂತರಗಳಲ್ಲಿರುವ **ಆಹವನೀಯಾಗ್ನಿಯು** ದೇವತೆಗಳಿಗೆ ಆಯತನವು. **ಗಾರ್ಹಪತ್ಯವು** ಮಾನವರಿಗೂ, **ಅನ್ವಾಹಾರ್ಯಪಚನವು** ಪಿತೃಗಳಿಗೂ ಆಯತನವಾಗಿದೆಯೆಂದು ತಿಳಿಸಿ ಅನಂತರ, ಆಹವನೀಯವು ದೇವಲೋಕಗಾಮಿಗೆ ಸಹಾಯಕವಾದುದು ಎಂದು ತಿಳಿಸಿದೆ.

> **"…. …. …. ಬ್ರಹ್ಮವಾದಿನೋ ವದಂತಿ ಕಿಂ ಯಜ್ಞಸ್ಯ ಯಜಮಾನ ಇತಿ ಪ್ರಸ್ತರ ಇತಿ ತಸ್ಯ ಕ್ವ ಸುವರ್ಗೋ ಲೋಕ ಇತ್ಯಾಹವನೀಯ ಇತಿ ಬ್ರೂಯಾದ್ಯತ್ಪ್ರಸ್ತರ ಮಾಹವನೀಯೇ ಪ್ರಹರತಿ ಯಜಮಾನಮೇವ ಸುವರ್ಗಂ ಲೋಕಂ ಗಮಯತಿ ॥**
>
> (ತೈ. ಸಂ. ೨-೬-೫)

ಯಜ್ಞಕರ್ತನಿಗೂ ಯಜ್ಞಕ್ಕೂ ಇರುವ ಉಪಕಾರ್ಯೋಪಕಾರಕಸಂಬಂಧವನ್ನು ಈ ವಾಕ್ಯದಲ್ಲಿ ತಿಳಿಸಿ ಆಹವನೀಯಾಗ್ನಿಯನ್ನು ಉಪಾಸನೆಮಾಡಿ ಯಜ್ಞವನ್ನಾಚರಿಸುವವನಿಗೆ ದೇವಲೋಕವು ಸಿದ್ಧವೆಂದು ಹೇಳಿದೆ, ಈ ಆಹವನೀಯಾಗ್ನಿಯು ದೇವಲೋಕಕ್ಕೆ ಸಂಬಂಧಿಸಿದುದು ಮತ್ತು ದೇವತೆಗಳಿಗೆ ತೃಪ್ತಿದಾಯಕವಾದುದು.

> **ಆಹವನೀಯಂ ಪರೀತ್ಯ ವಾಚಂ ವಿಸೃಜೇರನ್ಯಜ್ಞೋ ವಾ ಆಹವನೀಯಃ ಸ್ವರ್ಗೋ ಲೋಕ ಆಹವನೀಯೋ ಯಜ್ಞೇನೈವ ತತ್ಸ್ವರ್ಗೇಣ ಲೋಕೇನ ಸ್ವರ್ಗಂ ಲೋಕಂ ಯಂತಿ ।**
>
> (ಐ. ಬ್ರಾ. ೫-೨೪)

ಆಹವನೀಯಾಗ್ನಿಯ ಪ್ರದಕ್ಷಿಣವನ್ನು ಮಾಡುತ್ತಾ "ಆಹವನೀಯವೇ ಯಜ್ಞವು ; ಆಹವನೀಯವೇ ಸ್ವರ್ಗವು ; ಈ ಆಹವನೀಯಾಗ್ನಿಯ ಉಪಾಸನೆಯಿಂದ ಮಾಡಿದ ಯಜ್ಞದಿಂದಲೇ ಸ್ವರ್ಗಪ್ರಾಪ್ತಿಯಾಗುತ್ತದೆ" ಎಂದು ಪಠಿಸಬೇಕು ಎಂಬ ನಿಯಮವನ್ನು ಐತರೇಯಬ್ರಾಹ್ಮಣದಲ್ಲಿ ತಿಳಿಸಿದೆ.

**ಏಷ ವೈ ಸ ಯಜ್ಞಃ । ಯೇನ ತದ್ದೇವಾ ದಿವಮುಪೋದಕ್ರಾಮನ್ನೇಷ ಆಹವನೀಯೋಽಥ ಯ ಇಹಾಹೀಯತ ಸ ಗಾರ್ಹಪತ್ಯಃ ॥**

(ಶ. ಬ್ರಾ ೧.-೨-೩-೨೨)

ಆಹವನೀಯುವೇ ಯಜ್ಞವು. ಇದರಿಂದಲೇ ದೇವತೆಗಳಿಗೆ ಸ್ವರ್ಗವಾಸವು ಲಬ್ಧವಾಯಿತು.

**ದೇವಯೋನಿರ್ವಾ ಏಷ ಯದಾಹವನೀಯಃ। ತಸ್ಯೈತಾವಮೃತಪಕ್ಷೌ ಯಾವೇತಾವಭಿತೋಽಗ್ನೀ ತದ್ಯದಾಹವನೀಯೇ ಯಜ್ಞಂ ತನ್ವತೇ ದೇವಯೋನಾವೇವೈತದ್ದೇವೇಭ್ಯೋ ಯಜ್ಞಂ ತನ್ವತ ಉಪ ಹೈನಂ ಪುನರ್ಯಜ್ಞೋ ನಮತಿ ನಾಸ್ಮಾದ್ಯಜ್ಞೋ ವ್ಯವಚ್ಛಿದ್ಯತೇ ಯ ಏವಮೇತದ್ವೇದ ಯಸ್ಯ ವೈವಂ ವಿದುಷ ಏತತ್ಕರ್ಮ ಕ್ರಿಯತೇ ॥**

(ಶ. ಬ್ರಾ. ೧೨-೯-೩-೧೦)

ಆಹವನೀಯವು ದೇವತೆಗಳ ಯೋನಿಯು. ಆದರ ಎಡಬಲಭಾಗದಲ್ಲಿರುವ ಅಗ್ನಿಗಳು ಆದರ ಅಮರ್ತ್ಯವಾದ ಪಕ್ಷಗಳು ಆಹವನೀಯಾಗ್ನಿಯಲ್ಲಿ ಯಜ್ಞಮಾಡತಕ್ಕವರು ದೇವಯೋನಿಯಲ್ಲಿ ಯಜ್ಞಮಾಡಿದಂತೆಯೇ ಆಗುತ್ತದೆ. ಈ ತತ್ತ್ವವನ್ನು ತಿಳಿದವನು ದೇವತೆಗಳ ತೃಪ್ತಿಗೆ ಕಾರಣನಾಗುತ್ತಾನೆ.

ಹೀಗೆ ಆಹವನೀಯಾದ್ಯಗ್ನಿಗಳ ವೈಯಕ್ತಿಕವಾದ ಸ್ವರೂಪವನ್ನು ಅಧಿದೈವತಪಕ್ಷದಲ್ಲಿ ತಿಳಿಸಿದೆ. ಆಹವನೀಯಾದ್ಯಗ್ನಿಗಳ ಸ್ವರೂಪವನ್ನು ಅಧ್ಯಾತ್ಮಪಕ್ಷದಲ್ಲಿ ವಿವರಿಸುತ್ತಾ ಅವುಗಳೆಲ್ಲವೂ ಪರಬ್ರಹ್ಮತತ್ತ್ವವನ್ನು ಪ್ರತಿಬಿಂಬಿಸುವುವೆಂದು ಛಾಂದೋಗ್ಯೋಪನಿಷತ್ತಿನಲ್ಲಿ ವಿಶದವಾಗಿ ವರ್ಣಿತವಾಗಿದೆ. (ಛಾ. ಉ. ೪-೧೦-೧೪)

ಪ್ರಕೃತವಾದ ಋಕ್ಕಿನಲ್ಲಿ **ದಿವಃ ಜಿನ್ವಂತ್ಯಗ್ನಯಃ** ಎಂದು ದೇವತಾತೃಪ್ತಿಗೆ ಕಾರಣವಾದ ಅಗ್ನಿಯ ದೇವದೂತತ್ವವನ್ನು ಋಕ್ಸಂಹಿತೆಯ ಅನೇಕಕಡೆಗಳಲ್ಲಿ ಸ್ತುತಿಸಿದೆ.

**ಅಗ್ನೇ ಯಂ ಯಜ್ಞಮಧ್ವರಂ ವಿಶ್ವತಃ ಪರಿಭೂರಸಿ । ಸ ಇದ್ದೇವೇಷು ಗಚ್ಛತಿ ।**

(ಋ. ಸಂ. ೧-೧-೪)

ಎಲೈ ಅಗ್ನಿಯೇ. ನೀನು ಯಾವಯಾವ ಯಜ್ಞದ ಸುತ್ತಲೂ ವ್ಯಾಪಿಸಿದ್ದೀಯೋ ಆ ಯಜ್ಞವೆಲ್ಲವೂ ದೇವತೆಗಳನ್ನು ಸಮೀಪಿಸಿ ಅವರಿಗೆ ತೃಪ್ತಿಯನ್ನುಂಟುಮಾಡುತ್ತದೆ.

**ಮಹಾँ ಅಸ್ಯಧ್ವರಸ್ಯ ಪ್ರಕೇತೋ ನ ಋತೇ ತ್ವದಮೃತಾ ಮಾದಯಂತೇ ।**
**ಆ ವಿಶ್ವೇಭಿಃ ಸರಥಂ ಯಾಹಿ ದೇವೈರ್ನ್ಯಗ್ನೇ ಹೋತಾ ಪ್ರಥಮಃ ಸದೇಹ ॥**

(ಋ. ಸಂ ೭-೧೧-೧)

ಇತ್ಯಾದಿ ಋಕ್ಕುಗಳಲ್ಲಿ ಅಗ್ನಿಯಿಲ್ಲದೇ ದೇವತೆಗಳಿಗೆ ಹರ್ಷವೂ ತೃಪ್ತಿಯೂ ಸಾಧ್ಯವಿಲ್ಲವೆಂದೂ, ಮತ್ತು ಅವರು ತೃಪ್ತಿಯನ್ನು ಪಡೆಯಬೇಕಾದರೆ ಅಗ್ನಿಯ ಸಹಾಯದ ಅವಶ್ಯಕತೆಯನ್ನು ತಿಳಿಸುತ್ತಾ

**ತ್ವೇ ಅಗ್ನೇ ವಿಶ್ವೇ ಅಮೃತಾಸೋ ಅದ್ರುಹ ಆಸಾ ದೇವಾ ಹವಿರದಂತ್ಯಾಹುತಂ ।**
**ತ್ವಯಾ ಮರ್ತಾಸಃ ಸ್ವದಂತ ಆಸುತಿಂ ತ್ವಂ ಗರ್ಭೋ ವೀರುಧಾಂ ಜಜ್ಞಿಷೇ ಶುಚಿಃ ॥**

(ಋ. ಸಂ. ೨-೧-೧೪)

ಅಮರ್ತ್ಯರ ತೃಪ್ತಿಗೆ ಅಗ್ನಿಮುಖವೇ ಅತ್ಯಗತ್ಯವೆಂದೂ, ಅಗ್ನಿಮುಖದಿಂದಲೇ ದೇವತೆಗಳು ಆಹುತಿಗಳನ್ನು ಭಕ್ಷಿಸಿ ಹರ್ಷವನ್ನು ಪಡೆಯುವರೆಂದೂ, ಅವನೇ ದೇವತೆಗಳಿಗೆ ಅನ್ನರೂಪನೆಂದೂ ವರ್ಣಿಸಿರುವುದನ್ನು ಪ್ರಕೃತವಾದ ಋಕ್ಕಿನಲ್ಲಿ ತಿಳಿಸಿದೆ.

ವ್ಯಾಕರಣಪ್ರಕ್ರಿಯಾ

**ಉದಕಮ್**—ಉಂದೀಕ್ಲೇದನೇ. ಧಾತು. **ಉದಕಂಚ** (ಉ. ಸೂ. ೨-೧೪೭) ಎಂಬುದರಿಂದ ಕ್ವುನ್ ಪ್ರತ್ಯಯ. **ಅನಿದಿತಾಂಹಲ**—ಎಂಬುದರಿಂದ ಉಪಧಾ ನಕಾರಲೋಪ. **ಯುವೋರನಾಕೌ** (ಪಾ. ಸೂ. ೭-೧-೧) ಎಂಬುದರಿಂದ ಪ್ರತ್ಯಯಕ್ಕೆ ಅಕಾದೇಶ.

**ಏತಿ**—ಇಣ್ ಗತೌ. ಧಾತು. ಅದಾದಿ ಲಟ್ ಪ್ರಥಮಪುರುಷ ಏಕವಚನಾಂತರೂಪ. ಚ ಎಂಬುದರ ಸಂಬಂಧವಿರುವುರಿಂದ **ಚವಾಯೋಗೇ ಪ್ರಥಮಾ** (ಪಾ. ಸೂ. ೮-೧-೫೯) ಎಂಬುದರಿಂದ ನಿಘಾತಪ್ರತಿಷೇಧ ಬರುತ್ತದೆ. ತಿಪ್ ಅನುದಾತ್ತವಾಗುವುದರಿಂದ ಧಾತುಸ್ವರ ಉಳಿಯುತ್ತದೆ

**ಪರ್ಜನ್ಯಾಃ**—ಪೃಷು ಸೇಚನೇ. ಧಾತು. ಪರ್ಜನ್ಯಃ (ಉ. ಸೂ. ೩-೩೮೬) ಎಂಬುದರಿಂದ ನಿಪಾತಿತವಾಗಿದೆ. ಷಕಾರಕ್ಕೆ ಜಕಾರ, ಅನ್ಯ ಪ್ರತ್ಯಯಲಘೂಪಧ ಗುಣ ಕಾರ್ಯಗಳು ನಿಪಾತದಿಂದ ಸಿದ್ಧವಾಗುತ್ತವೆ. ಪ್ರತ್ಯಯದ ಆದ್ಯುದಾತ್ತಸ್ವರ ಬರುತ್ತದೆ.

**ಜಿನ್ವಂತಿ**—ಜಿವಿ ಪ್ರೀಣನೇ ಧಾತು. ಭ್ವಾದಿ. **ಇದಿತೋನುಮ್‌ಧಾತೋಃ** ಎಂಬುದರಿಂದ ನುಮಾಗಮ. ಶಪ್ ವಿಕರಣ. ಲಟ್ ಪ್ರಥಮಪುರುಷ ಬಹುವಚನಾಂತರೂಪ. **ಚಾದಿಲೋಪೇ ವಿಭಾಷಾ** (ಪಾ. ಸೂ. ೮-೧-೬೩) ಎಂಬುದರಿಂದ ನಿಘಾತಸ್ವರ ಬರುವುದಿಲ್ಲ. **ತಾಸ್ಯನುದಾತ್ತೇತ್**—(ಪಾ. ಸೂ. ೬-೧-೧೮೬) ಎಂಬುದರಿಂದ ಲಸಾರ್ವಧಾತುಕವು ಅನುದಾತ್ತವಾಗುವುರಿಂದ ಧಾತುಸ್ವರ ಉಳಿಯುತ್ತದೆ. ಎರಡನೇರೂಪದಲ್ಲಿ ನಿಷೇಧವಿಲ್ಲದಿರುವುದರಿಂದ ನಿಘಾತಸ್ವರ ಬರುತ್ತದೆ. || ೫೧ ||

ಸಂಹಿತಾಪಾಠಃ

ದಿವ್ಯಂ ಸುಪರ್ಣಂ ವಾಯಸಂ ಬೃಹಂತಮಪಾಂ ಗರ್ಭಂ ದರ್ಶತಮೋಷಧೀನಾಂ ।
ಅಭೀಪತೋ ವೃಷ್ಟಿಭಿಸ್ತರ್ಪಯಂತಂ ಸರಸ್ವಂತಮವಸೇ ಜೋಹವೀಮಿ ॥

|| ೫೨ ||

ಪದಪಾಠಃ

ದಿವ್ಯಂ । ಸುऽಪರ್ಣಂ । ವಾಯಸಂ । ಬೃಹಂತಂ । ಅಪಾಂ । ಗರ್ಭಂ । ದರ್ಶತಂ । ಓಷಧೀನಾಂ ।
ಅಭೀಪತಃ । ವೃಷ್ಟಿऽಭಿಃ । ತರ್ಪಯಂತಂ । ಸರಸ್ವಂತಂ । ಅವಸೇ । ಜೋಹವೀಮಿ ॥ ೫೨ ॥

ಸಾಯಣಭಾಷ್ಯಂ

ಸರಸ್ವದ್ದೇವತಾಕೇ ಪಶೌ ದಿವ್ಯಂ ಸುಪರ್ಣಮಿತಿ ವಪಾಯಾಜ್ಯಾ । ದಿವ್ಯಂ ಸುಪರ್ಣಂ ವಾಯಸಂ ಬೃಹಂತಂ ಸ ವಾವೃಧೇ ನರ್ಯೋ ಯೋಷಣಾಸು । ಆ. ೩-೮. । ಇತಿ ಸೂತ್ರಿತ್ವಾತ್ ॥ ಅನ್ವಾರಂಭಣೀಯಾಯಾಂ ಸರಸ್ವದ್ಯಾಗ ಏಷೈವ ಯಾಜ್ಯಾ । ಸೂತ್ರಿತಂ ಚ । ದಿವ್ಯಂ ಸುಪರ್ಣಂ ವಾಯಸಂ ಬೃಹಂತಮಾ ಸವಂ ಸವಿತುರ್ಯಥಾ । ಆ ೨. ೮. । ಇತಿ ॥

ದಿವ್ಯಂ ದಿವಿ ಭವಂ ಸುಪರ್ಣಂ ಶೋಭನಗಮನಂ ವಾಯಸಂ ಗಮನಶೀಲಂ ಬೃಹಂತಂ ಮಹಾಂತಮಪಾಂ ಗರ್ಭಂ ವೃಷ್ಟ್ಯುದಕಾನಾಂ ಗರ್ಭವದುತ್ಪಾದಕಂ । ಓಷಧೀನಾಮೋಷಧೀರ್ದರ್ಶತಂ ದರ್ಶನಾಯ । ದರ್ಶಯಂತಮಿತ್ಯರ್ಥಃ । ಯದ್ವಾ । ಓಷಧೀನಾಂ ಗರ್ಭಂ ದರ್ಶತಮಿತಿ ಪೃಥಗ್ವಿಶೇಷಣಂ ಕಿಂಚಾಭೀಪತ ಆನುಕೂಲ್ಯೇನ ವೃಷ್ಟಿಭಿಸ್ತರ್ಪಯಂತಂ ಜಗತ್ಪ್ರೀಣಯಂತಂ । ಯದ್ವಾ । ಅಭೀಪತೋऽಭಿಗಮನವತಃ ಸಲಿಲಾಧಾರಾಂಸ್ತಟಾಕಾದೀಂಸ್ತರ್ಪಯಂತಂ । ಅಥವಾವಭಿಗಂತಾರಂ । ಸರಸ್ವಂತಮುದಕವಂತಂ । ಸರ ಇತ್ಯುದಕನಾಮ । ದೇವಂ ಸೂರ್ಯಂ ವಾವಸೇ ರಕ್ಷಣಾಯ ಜೋಹವೀಮಿ । ಪುನಃ ಪುನರಾಹ್ವಯಾಮಿ ॥

ಪ್ರತಿಪದಾರ್ಥ

ದಿವ್ಯಂ—ದ್ಯುಲೋಕೋತ್ಪನ್ನನೂ, । **ಸುಪರ್ಣಂ**—ಶ್ರೇಷ್ಠವಾದ ಪರ್ಣವುಳ್ಳವನೂ । **ವಾಯಸಂ**—ಗಮನಶೀಲನೂ, । ಬೃ**ಹಂತಂ**—ಮಹತ್ತಿನಿಂದ ಕೂಡಿದವನೂ, । **ಅಪಾಂ ಗರ್ಭಂ**— ಉದಕಗಳ ಉತ್ಪಾದಕನೂ । **ಓಷಧೀನಾಂ** —ಓಷಧಿಗಳ । **ದರ್ಶತಂ**—ಪ್ರಕಾಶಕನೂ, । **ಅಭೀಪತಃ**—ಅನುಕೂಲಾತ್ಮನಾಗಿ । **ವೃಷ್ಟಿಭಿಃ**—ವೃಷ್ಟಿಗಳಿಂದ । **ತರ್ಪಯಂತಂ**—(ಜಗತ್ತನ್ನು) ತೃಪ್ತಿಗೊಳಿಸುವವನೂ, । **ಸರಸ್ವಂತಂ**—ಉದಕದಿಂದ ಪೂರ್ಣನಾದವನೂ ಆದ ದೇವನನ್ನು । **ಅವಸೇ**—ರಕ್ಷಣೆಗಾಗಿ । **ಜೋಹವೀಮಿ**—ಪುನಃ ಪುನಃ ಕರೆಯುತ್ತೇನೆ ।

ಭಾವಾರ್ಥ

ದ್ಯುಲೋಕೋತ್ಪನ್ನನೂ, ಶ್ರೇಷ್ಠವಾದ ಪತನಸಾಧನವುಳ್ಳವನೂ, ಗಮನಶೀಲನೂ, ಮಹತ್ತಿನಿಂದ ಕೂಡಿದವನೂ, ಉದಕಗಳ ಉತ್ಪಾದಕನೂ, ಓಷಧಿಗಳ ಪ್ರಕಾಶಕನೂ, ಅನುಕೂಲಾತ್ಮನಾಗಿ ವೃಷ್ಟಿಗಳಿಂದ ಜಗತ್ತನ್ನು ತೃಪ್ತಿಗೊಳಿಸುವವನೂ, ಉದಕದಿಂದ ಪೂರ್ಣನಾದವನೂ ಆದ ದೇವನನ್ನು ರಕ್ಷಣೆಗಾಗಿ ಪುನಃ ಪುನಃ ಕರೆಯುತ್ತೇನೆ.

English Translation

I invoke for our protection the celestial, well-winged, swift-moving majestic (sun); who is the germ of the waters; the displayer of herbs; the cherisher of lakes; replenishing the ponds with rain.

ವಿಶೇಷವಿಷಯಗಳು

ಸರಸ್ವದ್ದೇವತಾಸಂಬಂಧವಾದ ಯಾಗದಲ್ಲಿ ಪಶುಹೋಮಕಾಲದಲ್ಲಿ ವಪಾಹೋಮಕ್ಕಾಗಿ **ದಿವ್ಯಂ ಸುಪರ್ಣಂ** ಎಂಬ ಈ ಋಕ್ಕನ್ನು ಯಾಜ್ಯಾಮಂತ್ರವನ್ನಾಗಿ ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ **ದಿವ್ಯಂ ಸುಪರ್ಣಂ ವಾಯಸಂ ಬೃಹಂತಂ ಸ ವಾವೃಧೇ ನರ್ಯೋ ಯೋಷಣಾಸು** ಎಂಬ ಸೂತ್ರದಿಂದಲೂ (ಆ. ೩-೮) ಅನ್ವಾರಂಭಣೀಯಸಂಬಂಧವಾದ ಸರಸ್ವದ್ಯಾಗದಲ್ಲಿ ಈ ಋಕ್ಕನ್ನೇ ಯಾಜ್ಯಾಮಂತ್ರವನ್ನಾಗಿ ಉಪಯೋಗಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ **ದಿವ್ಯಂ ಸುಪರ್ಣಂ ವಾಯಸಂ ಬೃಹಂತಮಾ ಸವಂ ಸವಿತುರ್ಯಥಾ** ಎಂಬ ಸೂತ್ರದಿಂದಲೂ (ಆ. ೨-೮) ವಿಸ್ತೃತವಾಗಿರುವುದು.

ಈ ಮಂತ್ರವು **ಸರಸ್ವದ್ದೇವತಾಕವಾಗಿದೆ.** " **ಸರಸ್ವದ್ದೇವತಾಕೇ ಪಶೌ ದಿವ್ಯಂ ಸುಪರ್ಣಂ ಇತಿ ವಪಾಯಾಜ್ಯಾ** " ಎಂದು ವಿಧಿವಾಕ್ಯವು ಈ ಮಂತ್ರದ ವಿನಿಯೋಗವನ್ನು ತಿಳಿಸುತ್ತದೆ. (ಆಶ್ವ. ಶ್ರೌ. ೩-೮) ಸಾಯಣರು **ಸರಸ್ವಂತಂ** ಎಂಬ ಪದಕ್ಕೆ **ದೇವಂ ಸೂರ್ಯಂ ವಾ** ಸರಸ್ವತ್ತೆಂಬ ದೇವತೆಯೆಂದಾಗಲಿ ಅಥವಾ **ಸರಸ್** ಶಬ್ದಕ್ಕೆ ಉದಕವೆಂದರ್ಥವಾಗಿ ಸರಸ್ವತ್ತೆಂದರೆ ಉದಕಯುಕ್ತನಾದ ಸೂರ್ಯನೆಂದಾಗಲಿ ಅರ್ಥವಾಗಬಹುದೆಂದು ವಿಕಲ್ಪಾರ್ಥದಲ್ಲಿ ಹೇಳಿದ್ದಾರೆ. ಈ ಋಕ್ಕಿನಲ್ಲಿ ದಿವ್ಯಂ **ಸುಪರ್ಣಂ** ಇತ್ಯಾದಿವಿಶೇಷಣಗಳು ಈ ಎರಡರ್ಥಗಳನ್ನೂ ಸಮರ್ಥಿಸುತ್ತವೆ.

ನಿರುಕ್ತಕಾರರು **ಸರಸ್ವತೀ**ಶಬ್ದದ ನಿರ್ವಚನವನ್ನು ಹೇಳುವುದರಿಂದಲೇ **ಸರಸ್ವತ್**ಶಬ್ದದ ಅರ್ಥವನ್ನೂ ಹೇಳಿದಂತಾಯಿತು ಎಂದು ಸೂಚಿಸಿ **ಸರಸ್ವಾನ್ ವ್ಯಾಖ್ಯಾತಃ** ಎಂದು ಹೇಳಿದ್ದಾರೆ. (ನಿ. ೧೦-೨೭) **ಸರಸ್ವತೀ** ಶಬ್ದದ ನಿರ್ವಚನವನ್ನು ತಿಳಿಸುತ್ತಾ,

**ಸರಸ್ವತೀ ಸರ ಇತ್ಯುದಕನಾಮ ಸರ್ತೇಸ್ತದ್ವತೀ ॥**

(ನಿ. ೯-೨೬)

**ಸರ**ವೆಂದರೆ ಉದಕವೆಂದರ್ಥ ಇದನ್ನುಳ್ಳವಳು **ಸರಸ್ವತೀ** (ಇದೇ ನದ್ಯಾತ್ಮಕವಾದ ದೇವತೆಯ ಹೆಸರಾಗಬಹುದು) ಇದೇ ವಿವರಣೆಯು **ಸರಸ್ವತ್** ಶಬ್ದದ ಅರ್ಥವನ್ನೂ ಹೇಳುತ್ತದೆಂದು ತಿಳಿಸಿ ಅನಂತರ ಋಕ್ಸಂಹಿತೆಯಿಂದ,

**ಯೇ ತೇ ಸರಸ್ವ ಊರ್ಮಯೋ ಮಧುಮಂತೋ ಘೃತಶ್ಚುತಃ । ತೇಭಿರ್ನೋಽವಿತಾ ಭವ ॥**

(ಋ. ಸಂ. ೭-೯೬-೫)

ಎಂಬ ಋಕ್ಕನ್ನುದಹರಿಸಿ ಕೇವಲ ಪಠನದಿಂದಲೇ ಈ ಋಕ್ಕಿನ ಅರ್ಥವು ಸುಲಭವಾಗಿ ಆಗುತ್ತದೆಂದು ತಿಳಿಸಿದ್ದಾರೆ. ಆದರೂ ಸಹ, **ಊರ್ಮಯಃ, ಘೃತಶ್ಚುತಃ** ಇತ್ಯಾದಿಪದಗಳು ಇಲ್ಲಿ ಗಮನಾರ್ಹವಾನವಾಗಿವೆ. ಈ ದೇವತೆಯು ಮಧ್ಯಲೋಕವರ್ತಿಯಾದ ದೇವತೆಯೆಂದು ಬೃಹದ್ದೇವತಾವಾಕ್ಯದಿಂದ ತಿಳಿಯುತ್ತದೆ.

**ಮನ್ಯುಶ್ಚ ವಿಶ್ವಕರ್ಮಾ ಚ ಮಿತ್ರಃ ಕ್ಷೇತ್ರಪತಿರ್ಯಮಃ ।**

**ತಾರ್ಕ್ಷ್ಯೋ ವಾಸ್ತೋಷ್ಪತಿಶ್ಚೈವ ಸರಸ್ವಾಂಶ್ಚೈವಮತ್ರ ಹ ॥**

(ಬೃ. ದೇ. ೧–೧೨೩)

ಇಂದ್ರನ ವಾಸಸ್ಥಾನವಾದ ಮಧ್ಯಮಲೋಕದಲ್ಲಿ ಮನ್ಯು, ವಿಶ್ವಕರ್ಮ, ಸರಸ್ವಾನ್ ಇತ್ಯಾದಿ ದೇವತೆಗಳೆಲ್ಲರೂ ಸಹ ಇಂದ್ರನೊಡನೆ ಸೇರಿಕೊಂಡಿರುತ್ತಾರೆ.

**ಸರಾಂಸಿ ಘೃತವಂತ್ಯಸ್ಯ ಸಂತಿ ಲೋಕೇಷು ಯತ್ತ್ರಿಷು ।**
**ಸರಸ್ವಂತಮಿತಿ ಪ್ರಾಹ ವಾಚಂ ಪ್ರಾಹುಃ ಸರಸ್ವತೀಂ ॥**

(ಬೃ. ದೆ. ೨-೫೧)

ಮೂರು ಲೋಕಗಳಲ್ಲೂ ಘೃತಪೂರ್ಣವಾದ ಸರಸ್ಸುಳ್ಳವನಾದುದರಿಂದ ಈ ದೇವತೆಗೆ **ಸರಸ್ವತ್**ಎಂಬ ಹೆಸರು ಪ್ರಸಿದ್ಧ ವಾಯಿತು. ಹೀಗೆಯೇ ವಾಗ್ದೇವತೆಯು ಸರಸ್ವತಿಯಾದಳು.

**ಮಾತಾಪುತ್ರೌ ತು ವಾಕ್ಪ್ರಾಣೌ ಮಾತಾ ವಾಗಿತರಃ ಸುತಃ ।**
**ಸರಸ್ವಂತಮಿತಿ ಪ್ರಾಣೋ ವಾಚಂ ಪ್ರಾಹುಃ ಸರಸ್ವತೀಂ ॥**

(ಬೃ. ದೇ. ೪–೩೯)

ವಾಕ್ಕೇ ಮಾತೃವು; ಪ್ರಾಣವೇ ಪುತ್ರನು. **ಸರಸ್ವತ್** ಶಬ್ದದಿಂದ ಪ್ರಾಣವೂ, ಸರಸ್ವತೀಶಬ್ದದಿಂದ ವಾಕ್ಕೂ ನಿರ್ದಿಷ್ಟವಾಗಿವೆ. ಅವರಿಬ್ಬರಿಗೂ ಮಾತೃಪುತ್ರಸಂಬಂಧವಾಯಿತು.

**ಇಂದ್ರಂ ಮಿತ್ರಮಿಮೇ ಸೌಕ್ತ್ಯಾ ಸೌರೀ ವಾಂತ್ಯಾ ಸರಸ್ವತೇ ।**

(ಬೃ. ದೇ. ೪–೪೨)

೨-೧-೬೪ ನೇ ಸೂಕ್ತದಲ್ಲಿ ಅಂತ್ಯಮಂತ್ರವಾದ '**ದಿವ್ಯಂ ಸುಪರ್ಣಂ**' ಎಂಬುದು ಮೇಲೆ ತಿಳಿಸಿದ ಸರಸ್ವದ್ದೇವತಾಕ ವಾಗಿದೆ ಎಂದು ಬೃಹದ್ದೇವತೆಯಿಂದ ಸ್ಪಷ್ಟವಾಗಿ ತಿಳಿಯುತ್ತದೆ. ಶತಪಥಬ್ರಾಹ್ಮಣದಲ್ಲಿ ಸರಸ್ವತ್ ಮತ್ತು ಸರಸ್ವತೀ ಎಂಬ ಎರಡು ದೇವತೆಗಳ ಸಂಬಂಧವನ್ನು ತಿಳಿಸುತ್ತಾ ಅವರನ್ನು ಉದ್ದೇಶಿಸಿ ಅರ್ಪಿತವಾಗುವ ಆಹುತಿಯ ವಿಭಾಗ ವನ್ನು ಈ ರೀತಿ ಹೇಳಿದೆ.

**ತದ್ಧೈಕೇ । ಚತೂ ನಿರ್ವಪಂತಿ ಪೌರ್ಣಮಾಸ್ಯಾಂ ಸರಸ್ವತೇಽಮಾವಾಸ್ಯಾಯಾಂ ಸರಸ್ವತ್ಯಾ ಏತತ್ಪ್ರತ್ಯಕ್ಷಂ ದರ್ಶಪೂರ್ಣಮಾಸೌ ಯಜಾಮಹ ಇತಿ ವದಂತಸ್ತದು ತಥಾ ನ ಕುರ್ಯಾ-ನ್ಮನೋ ವೈ ಸರಸ್ವಾನ್ವಾಕ್ಸರಸ್ವತೀ ಸ ಯದೇವೈತಾವಾಘಾರಯತಿ ತದೇವಾಸ್ಯ ದರ್ಶಪೂರ್ಣ-ಮಾಸಾವಿಷ್ಟೌ ಭವತಸ್ತಸ್ಮಾದೇತೌ ಚತೂ ನ ನಿರ್ವಪೇತ್ ।**

(ಶ. ಬ್ರಾ. ೧೧-೨-೪-೯)

ಸರಸ್ವತ್ತೇ ಮನಸ್ಸು, ಸರಸ್ವತಿಯೇ ವಾಕ್ಕು; ದರ್ಶಪೂರ್ಣಮಾಸಾದಿಗಳಲ್ಲಿ ಆಘಾರಗಳ ಅರ್ಪಣೆಯೇ ಸಾಕಾಗಿರುವುದ ರಿಂದ ಚತೂನಿರ್ವಪನವು ಅವಶ್ಯವಲ್ಲವೆಂದು ತಿಳಿಸುವಾಗ ಸರಸ್ವತ್ತಿಗೂ ಸರಸ್ವತಿಗೂ ಇರುವ ಸಂಬಂಧವನ್ನೂ ಹೇಳಿದೆ

ಸಾಯಣರು ಅರ್ಥಮಾಡಿರುವಂತೆ ಪ್ರಕೃತವಾದ ಋಕ್ಕಿನಲ್ಲಿ **ಸರಸ್ವಂತಂ–ಉದಕವಂತಂ । ಸರ ಇತ್ಯುದಕನಾಮ । ದೇವಂ ಸೂರ್ಯಂ ವಾ ।** ಸರಸ್ವದ್ದೇವತೆಯೆಂದಾಗಲಿ ಅಥವಾ ಉದಕವಂತನಾದ

ಸೂರ್ಯನೆಂದಾಗಲಿ ಅರ್ಥವಾಗುತ್ತದೆ. ಒಂದು ವೇಳೆ ಸೂರ್ಯನೆಂದರ್ಥಮಾಡಿದರೂ ಸಹ **ಸರಸ್ವಾನ್** ಎಂಬ ವಿಶೇಷಣವು ಈ ಸಂದರ್ಭದಲ್ಲಿ ಹೊಂದಿಕೊಳ್ಳುತ್ತದೆ. ಉದಕವು ಸೂರ್ಯನ ಅಂತರ್ಗತವಾಗಿಲ್ಲದಿದ್ದರೂ ಸಹ ಸೂರ್ಯನು ಉದಕದ ಮಧ್ಯದಲ್ಲಿ ಪರಿಭ್ರಮಣವನ್ನು ಮಾಡುತ್ತಿರುವುದರಿಂದಲೂ, ಅಥವಾ ಉದಕದ ಉತ್ಪಾದಕನಾಗಿರುವುದರಿಂದಲೂ ಈ ವಿಶೇಷಣವು ಉಚಿತವಾಗಿರುವುದೆಂದು ಶತಪಥಾದಿವಾಕ್ಯಗಳ ವರ್ಣನೆಯಿಂದ ತಿಳಿಯುತ್ತದೆ.

**ಅಪಾಂ ಗಂಭನ್ತ್ಸೀದೇತಿ । ಏತದ್ವಾಅಪಾಂ ಗಂಭಿಷ್ಠಂ ಯತ್ರೈಷ ಏತತ್ತಪತಿ ।**

(ಶ. ಬ್ರಾ. ೭-೫-೧-೮)

ಸೂರ್ಯನು ಅಂತರಿಕ್ಷದಲ್ಲಿ ಗಭೀರವಾದ ಉದಕದ ಮಧ್ಯದಲ್ಲಿ ಪ್ರಕಾಶಿಸುತ್ತಿದ್ದಾನೆ.

**ಅಗ್ನೇ ದಿವೋಽರ್ಣಮಚ್ಛಾ ಜಿಗಾಸೀತಿ । ಆಪೋ ವಾ ಅಸ್ಯ ದಿವೋಽರ್ಣಸ್ತಾ ............... ಯಾ ರೋಚನೇ ಪರಸ್ತಾತ್ಸೂರ್ಯಸ್ಯ ॥**

(ಶ. ಬ್ರಾ. ೭-೧-೧-೨೪)

ಎಲೈ ಅಗ್ನಿಯೇ, [ಸರಸ್ವತ್ತೆಂಬ ದೇವತೆಯೂ ಸಹ ಮಧ್ಯಲೋಕವರ್ತಿಯಾದ ಅಗ್ನಿಯ ರೂಪಾಂತರವೆಂದೂ ಹೇಳಬಹುದು]. ದ್ಯುಲೋಕದಲ್ಲಿ ನಿನ್ನ ತೇಜಸ್ಸೆಲ್ಲವೂ ಆದಿತ್ಯರೂಪದಲ್ಲಿ ಪ್ರಕಾಶಿಸುತ್ತಿದೆ. ಅಂತರಿಕ್ಷಸ್ಥವಾದ ಪ್ರವಾಹದಲ್ಲಿ ನೀನು ಬೆಳಗುತ್ತಿದ್ದೀಯೆ. ಆ ಪ್ರವಾಹವು ಅಂತರಿಕ್ಷಸ್ಥವಾದ ಉದಕದಿಂದ ವ್ಯಾಪ್ತವಾಗಿದೆ. ಆ ಉದಕದ ಪ್ರವಾಹವು ಆದಿತ್ಯನ ತೇಜೋಮಂಡಲವನ್ನೂ ಮೀರಿದೆ. ಕೆಳಗೂ, ಮೇಲೂ, ಸುತ್ತಲೂ ವ್ಯಾಪಿಸಿರುವ ಪ್ರವಾಹದ ನಡವೆ ಆದಿತ್ಯರೂಪದ ಅಗ್ನಿಯು ಪ್ರಕಾಶಿಸುತ್ತಿದ್ದಾನೆ, ಇತ್ಯಾದಿಯಾಗಿ ವರ್ಣಿತವಾಗಿದೆ. **ಸರಸ್ವಾನ್** ಎಂಬ ವಿಶೇಷಣವಿರುವುದರಿಂದ **ಸರಸ್ವತೀ** ನಾಮಕವಾದ ನದಿಗೂ ಸಂಬಂಧವಿರಬಹುದೆಂದು ಊಹಿಸಬಹುದು. Macdonell ಎಂಬ ಪಂಡಿತನು ಬೃಹದ್ದೇವತೆಯಲ್ಲಿರುವ ಈ ದೇವತಾಪರವಾದ ವಾಕ್ಯಗಳನ್ನು ಪರಿವರ್ತಿಸುವಾಗ ತನ್ನ ಅಭಿಪ್ರಾಯವನ್ನು ಈ ರೀತಿ ತಿಳಿಸಿದ್ದಾನೆ.

Yaska does not explain this word Saraswati (Nirukta· X· 24) he merely remarks ಸರಸ್ವಾನ್ ವ್ಯಾಖ್ಯಾತಃ This must refer to Nir· II. 23· where ಸರಸ್ವತೀ is stated to be a name of ವಾಕ್ (R. V. VI· 61-2) being quoted as an example of ಸರಸ್ವತೀ as a river, while examples of her as a goddess (ಮಧ್ಯಸ್ಥಾನಾ ಸ್ತ್ರೀ) were deffered to Nir. XI· 25-27.

(Brihaddevata. II· 51· Translation and notes, by Macdonell. p. 44.)

**ಸುಪರ್ಣಂ ವಾಯಸಂ** ಎಂಬ ಎರಡು ವಿಶೇಷಣಗಳಿವೆ. ಸಾಯಣರು **ಸುಪರ್ಣಶಬ್ದಕ್ಕೆ ಶೋಭನಗಮನಂ** ಎಂದೂ, **ವಾಯಸಂ** ಎಂಬ ಶಬ್ದಕ್ಕೆ **ಗಮನಶೀಲಂ** ಎಂದೂ ಅರ್ಥಮಾಡಿದ್ದಾರೆ. Wilson ಎಂಬುವನು ಸುಪರ್ಣಶಬ್ದಕ್ಕೆ Well-Winged ಎಂದು ಅರ್ಥಹೇಳಿರುವುದು ಉಚಿತವಾಗಿರುವಂತೆ ಕಾಣುತ್ತದೆ.

ಸುಪರ್ಣಶಬ್ದವು ರಶ್ಮಿ ನಾಮಗಳಲ್ಲಿಯೂ (ನಿ. ೨-೧೫) ಅಶ್ವನಾಮಗಳಲ್ಲಿಯೂ (ನಿ. ೨-೨೭) ಪಠಿತವಾಗಿದೆಯಾದರೂ, ಪಕ್ಷಿ, ಬಾಣ ಇತ್ಯಾದ್ಯರ್ಥಗಳಲ್ಲಿಯೂ ಸಹ ಉಪಯೋಗಿಸಲ್ಪಟ್ಟಿದೆ. ಯಾವ ಅರ್ಥವನ್ನು ಹೇಳಿದರೂ ಸಹ ಶೋಭನಪತನ, ಎಂದರೆ ಮನೋಹರವಾಗಿ ಸಂಚರಿಸತಕ್ಕದ್ದು ಎಂಬರ್ಥವನ್ನೇ ತಿಳಿಸಿದೆ. ಈ ಪದದ ನಿರ್ವಚನವನ್ನೂ, ಬೇರೆ ಬೇರೆ ಅರ್ಥಗಳಲ್ಲಿ ಇದರ ಪ್ರಯೋಗಗಳನ್ನೂ ಸಹ ಇದೇ ಭಾಗದ 42 ನೇ ಪೇಜಿನಲ್ಲಿ ತಿಳಿ

ಸಿದೆ. ಪ್ರಕೃತವಾದ ಋಕ್ಕಿನಲ್ಲಿ ಗಮನಸಾಧನವೆಂಬರ್ಥವನ್ನು ಹೇಳಬಹುದು. ಉಳಿದ ವಿಶೇಷಣಗಳು ಸ್ಪಷ್ಟಾರ್ಥಗಳುಳ್ಳವಾಗಿಯೇ ಇವೆ. ಸಂತಾನೇಚ್ಛೆಯುಳ್ಳವರು ಸರಸ್ವದ್ದೇವತೆಯನ್ನು ಆರಾಧಿಸುವ ವಾಡಿಕೆಯಿರುವುದಾಗಿ ಕೆಲವು ಸನ್ನಿವೇಶಗಳಿಂದ ತಿಳಿಯುತ್ತದೆ. Muir ಎಂಬುವನು ಈ ಅಂಶವನ್ನು ವಿವರಿಸುತ್ತಾ ತನ್ನ ಅಭಿಪ್ರಾಯವನ್ನು ಕೆಳಗಿನ ವಾಕ್ಯಗಳಲ್ಲಿ ತಿಳಿಸಿದ್ದಾನೆ. ಅವನು ಹೇಳುವಂತೆ,

" In VII, 96. 4-6, a river God called ಸರಸ್ವತ್, is assigned as a consort to ಸರಸ್ವತೀ, who rolls along his fertilizing waters and is invoked by the worshippers who are seeking for wives and offspring, as well as for plenty and protection "

( Muir. original Sanskrit Texts. Vol. V. p. 340 )

ಸರಸ್ವತೀನದಿಯ ಪತಿಯೂ, ನದ್ಯಾತ್ಮಕವಾದ ದೇವತೆಯೂ ಆದ ಸರಸ್ವದ್ದೇವತೆಯನ್ನು ಪತ್ನೀಕಾಮರೂ, ಪುತ್ರಕಾಮರೂ, ಸಂಪತ್ತನ್ನು ಪಡೆಯಲಿಚ್ಛೆಯುಳ್ಳವರೂ ಸಹ ಪ್ರಾರ್ಥಿಸುತ್ತಾರೆ. ಋಕ್ಸಂಹಿತೆಯಲ್ಲಿ ಈ ಪ್ರಾರ್ಥನಾ ವಿಶೇಷವು ಈ ದೇವತೆಯ ಮಹತ್ತ್ವವನ್ನು ಸೂಚಿಸುತ್ತದೆ. ಇದನ್ನು ಸಂಕ್ಷೇಪವಾಗಿ ಇಲ್ಲಿ ಉದಹರಿಸಲಾಗುತ್ತದೆ.

**ಜನೀಯಂತೋ ನಗ್ರವಃ ಪುತ್ರೀಯಂತಃ ಸುದಾನವಃ । ಸರಸ್ವಂತಂ ಹವಾಮಹೇ ।**

(ಋ. ಸಂ. ೭-೯೬-೪)

ಪತ್ನಿಯರನ್ನು ಅಪೇಕ್ಷಿಸುವವರೂ, ಪುತ್ರೇಚ್ಛೆಯುಳ್ಳವರೂ, ಶ್ರೇಷ್ಠವಾದ ದಾತೃಗಳೂ ಆದ ನಾವು ನಮ್ಮ ಇಷ್ಟಾರ್ಥಗಳನ್ನು ನೆರವೇರಿಸಿಕೊಡಬೇಕೆಂದು ಸರಸ್ವಂತನನ್ನು ಪ್ರಾರ್ಥಿಸುತ್ತೇವೆ.

**ಯೇ ತೇ ಸರಸ್ವ ಊರ್ಮಯೋ ಮಧುಮಂತೋ ಘೃತಶ್ಚುತಃ । ತೇಭಿರ್ನೋಽವಿತಾ ಭವ ।**

(ಋ. ಸಂ. ೭-೯೬-೫)

ಎಲೈ ಸರಸ್ವದ್ದೇವತೆಯೇ, ನಿನ್ನ ಜಲಸಂಘಗಳು ರಸವತ್ತಾಗಿವೆ. ವೃಷ್ಟ್ಯುದಕವನ್ನು ಸುರಿಸುವವಾಗಿವೆ. ನಿನ್ನ ಜಲಸಂಘಗಳಿಂದ ನಮ್ಮೆಲ್ಲರನ್ನೂ ರಕ್ಷಿಸು.

**ಪೀಪಿವಾಂಸಂ ಸರಸ್ವತಃ ಸ್ತನಂ ಯೋ ವಿಶ್ವದರ್ಶತಃ । ಭಕ್ಷೀಮಹಿ ಪ್ರಜಾಮಿಷಂ ॥**

(ಋ. ಸಂ ೭-೯೬-೬)

ಸರಸ್ವದ್ದೇವತೆಯ ಪ್ರವೃದ್ಧವಾದುದೂ, ಸ್ತನದಂತೆ ರಸಾಧಾರವಾದುದೂ ಆದ ಮೇಘವನ್ನು ನಾವು ಭಜಿಸುತ್ತೇವೆ. ಆ ದೇವತೆಯು ನಮಗೆ ಪ್ರತ್ಯಕ್ಷನಾಗುತ್ತಾನೆ. ಅವನ ಅನುಗ್ರಹದಿಂದ ನಾವೆಲ್ಲರೂ ಪುತ್ರಾದಿಗಳನ್ನೂ ಅನ್ನಸಂಪತ್ತನ್ನೂ ಪಡೆದು ಸುಖವನ್ನನುಭವಿಸುತ್ತೇವೆ. ಇತ್ಯಾದಿಯಾಗಿ ಈ ದೇವತೆಯನ್ನು ಪ್ರಾರ್ಥಿಸಿದೆ.

ತೈತ್ತಿರೀಯಸಂಹಿತೆಯಲ್ಲಿ ಈ ದೇವತೆಯು ಪಶುಗಳಿಗೂ, ಉದಕಗಳಿಗೂ ಪ್ರಭುವೆಂದು ಪ್ರಶಂಸಿಸುತ್ತಾ,

**ಯಸ್ಯ ವ್ರತಂ ಪಶವೋ ಯಂತಿ ಸರ್ವೇ ಯಸ್ಯ ವ್ರತಮುಪತಿಷ್ಠಂತ ಆಪಃ ॥**
**ಯಸ್ಯ ವ್ರತೇ ಪುಷ್ಟಿಪತಿರ್ನಿವಿಷ್ಟಸ್ತಗ್ಂ ಸರಸ್ವಂತಮವಸೇ ಹುವೇಮ ॥**

(ತೈ. ಸಂ ೩-೧-೧೦-೩)

ಯಾವ ದೇವತೆಯ ಅನುಶಾಸನವನ್ನು ಪಶುಗಳೆಲ್ಲವೂ ಪಾಲಿಸುತ್ತವೆಯೋ, ಯಾವ ದೇವತೆಯ ನಿಯಮವನ್ನು ಉದಕಗಳೆಲ್ಲವೂ ಪರಿಪಾಲಿಸುತ್ತವೆಯೋ ಅಂತಹ ಸರಸ್ವದ್ದೇವತೆಯನ್ನು ನಾವು ರಕ್ಷಣೆಗಾಗಿ ಪ್ರಾರ್ಥಿಸಿ ಕರೆಯುತ್ತೇವೆ ಆ ದೇವತೆಯ ಅಧೀನದಲ್ಲಿಯೇ ಪುಷ್ಟಿಪತಿಯೂ ಸಹ ಆಶ್ರಯವನ್ನು ಪಡೆದಿರುತ್ತಾನೆ- ಇತ್ಯಾದಿಯಾಗಿ ಪ್ರಾರ್ಥಿಸಿದೆ. ಇದೇ ಸಂದರ್ಭದಲ್ಲಿ ಮೇಲೆ ಉದಹರಿಸಿರುವ "ಯೇ ತೇ ಸರಸ್ವ .... .... .... .... ...." (ಋ. ಸಂ. ೭-೯೫-೫) ಎಂಬ ಋಕ್ಕನ್ನೂ ಪ್ರಕೃತವಾದ "ದಿವ್ಯಂ ಸುಪರ್ಣಂ .... .... .... ...." (ಋ. ೧-೧೬೪-೫೨) ಎಂಬ ಋಕ್ಕನ್ನೂ ಸಹ ಪಠಿಸಿ ಈ ದೇವತೆಯ ರಕ್ಷಣೆಯನ್ನು ಕೋರಿದೆ-

॥ ವ್ಯಾಕರಣಪ್ರಕ್ರಿಯಾ ॥

**ದಿವ್ಯಮ್**—ದಿವಿ ಭವಃ ತಮ್. **ದಂಡಾದಿಭ್ಯೋಯಃ** ಎಂಬುದರಿಂದ ಯ ಪ್ರತ್ಯಯ. ಪ್ರತ್ಯಯಸ್ವರ ದಿಂದ ಅಂತೋದಾತ್ತವಾಗುತ್ತದೆ.

**ವಾಯಸಮ್**—ವಯ ಗತೌ ಧಾತು. **ವಯಶ್ಚ** (ಉ. ಸೂ. ೪-೪೦೦) ಎಂಬುದರಿಂದ ಅಸಚ್ ಪ್ರತ್ಯಯ. ಣಿತ್ ಎಂದು ಹಿಂದಿನ ಸೂತ್ರದಿಂದ ಅನುವೃತ್ತವಾಗುವುದರಿಂದ **ಅತಉಪಧಾಯಾಃ** (ಪಾ. ಸೂ. ೭-೨-೧೧೬) ಎಂಬುದರಿಂದ ಆದಿವೃದ್ಧಿ ಬರುತ್ತದೆ **ಚಿತಃ** (ಪಾ. ಸೂ. ೬-೧-೧೬೩) ಎಂಬುದರಿಂದ ಅಂತೋದಾತ್ತಸ್ವರ ಬರುತ್ತದೆ.

**ಅಪಾಂ**—**ಊಡಿದಂ ಪದಾದಿ**-(ಪಾ ಸೂ. ೬-೧-೧೭೧) ಎಂಬುದರಿಂದ ವಿಭಕ್ತಿಗೆ ಉದಾತ್ತಸ್ವರ ಬರುತ್ತದೆ

**ದರ್ಶತಮ್**—ದೃಶಿರ್ ಪ್ರೇಕ್ಷಣೇ ಧಾತು. **ಭೃಮೃದೃಶಿಯಜಿ**-(ಉ. ಸೂ ೩-೩೯೦) ಎಂಬುದರಿಂದ ಅತಚ್ ಪ್ರತ್ಯಯ. ಅದನ್ನು ನಿಮಿತ್ತೀಕರಿಸಿ ಧಾತುವಿನ ಉಪಧೆಗೆ ಗುಣ. ಚಿತ್ತಾದುದರಿಂದ **ಚಿತಃ** ಎಂಬುದರಿಂದ ಅಂತೋದಾತ್ತಸ್ವರ ಬರುತ್ತದೆ

**ಅಭೀಪತಃ**—ಪತ್ಲೃ ಗತೌ ಧಾತು. ಅಚ್ ಪ್ರತ್ಯಯ. I **ಅನ್ಯೇಷಾಮಪಿ ದೃಶ್ಯತೇ** ಎಂಬುದರಿಂದ ಪೂರ್ವಕ್ಕೆ ದೀರ್ಘ. **ಗತಿಕಾರಕೋಪಪದಾತ್ ಕೃತ್** ಎಂಬುದರಿಂದ ಕೃದುತ್ತರಪದಪ್ರಕೃತಿಸ್ವರ ಬರುತ್ತದೆ

**ವೃಷ್ಟಿಭಿಃ**—ವೃಷು ಸೇಚನೇ ಧಾತು. ಕ್ತಿನ್ ಪ್ರತ್ಯಯ. **ಮಂತ್ರೇವೃಷೇಷಪಚ**—(ಪಾ. ಸೂ. ೩-೩-೯೬) ಎಂಬುದರಿಂದ ಅದು ಉದಾತ್ತವಾಗುತ್ತದೆ. ತೃತೀಯಾಬಹುವಚನಾಂತರೂಪ.

**ತರ್ಪಯಂತಮ್**—ತೃಪ ತೃಪ್ತೌ ಧಾತು. **ಹೇತುಮತಿ ಚ** (ಪಾ ಸೂ. ೩-೧-೨೬) ಎಂಬುದರಿಂದ ಣಿಚ್ ಪ್ರತ್ಯಯ. **ಪುಂಗತಲಘೂಪಧಸ್ಯಚ** (ಪಾ. ಸೂ ೭-೩-೮೬) ಎಂಬುದರಿಂದ ಲಘೂಪಧಗುಣ. ಣಿಜಂತದ ಮೇಲೆ ಲಟಿಗೆ ಶತ್ರಾದೇಶ ಶಪ್ ವಿಕರಣ. ಅದನ್ನು ನಿಮಿತ್ತೀಕರಿಸಿ ಣಿಚಿಗೆ ಗುಣ. ಅಯಾದೇಶ. ಣಿಚ್‌ಸ್ವರ ಉಳಿಯುತ್ತದೆ **ತಾಸ್ಯನುದಾತ್ತೇತ್**-ಸೂತ್ರದಿಂದ ಲಸಾರ್ವಧಾತುಕವು ಅನುದಾತ್ತವಾಗುತ್ತದೆ. ದ್ವಿತೀಯಾಏಕ ವಚನದಲ್ಲಿ ಉಗಿತ್ತಾದುದರಿಂದ ನುಮಾಗಮ.

**ಅವಸೇ**—ಅವ ರಕ್ಷಣೇ ಧಾತು. **ಸರ್ವಧಾತುಭ್ಯಅಸುನ್** ಎಂಬುದರಿಂದ ಅಸುನ್ ಪ್ರತ್ಯಯ. ನಿತ್ತಾದುದರಿಂದ ಆದ್ಯುದಾತ್ತಸ್ವರ ಬರುತ್ತದೆ.

**ಜೋಹವೀಮಿ**—ಹು ದಾನಾದನಯೋಃ ಧಾತು. **ಪೌನಃಪುನ್ಯಾರ್ಥ** ತೋರುವಾಗ **ಧಾತೋರೇಕಾಚಃ ಕ್ರಿ**—(ಪಾ. ಸೂ. ೩-೧-೨೨) ಎಂಬುದರಿಂದ ಯಙ್ ಬಂದಾಗ **ಯಙೋಽಚಿಚ** (ಪಾ. ಸೂ. ೨-೪-೭೪) ಎಂಬುದರಿಂದ ಅದಕ್ಕೆ ಲುಕ್. ಯಙ್‌ನಿಮಿತ್ತವಾಗಿ ದ್ವಿತ್ವಾದಿಗಳು ಬಂದಾಗ **ಗುಣೋಯಙ್‌ಲುಕೋಃ** (ಪಾ. ಸೂ. ೭-೪-೮೨) ಎಂಬುದರಿಂದ ಅಭ್ಯಾಸದ ಉಕಾರಕ್ಕೆ ಗುಣ. **ಯಙೋವಾ** (ಪಾ. ಸೂ. ೭-೩-೯೪) ಎಂಬುದರಿಂದ ಮಿಪಿಗೆ ಈಡಾಡವು. ಪ್ರತ್ಯಯನಿಮಿತ್ತವಾಗಿ ಧಾತು ಉಕಾರಕ್ಕೆ ಗುಣ- ಅವಾದೇಶ. ಅತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ. ॥ ೫೨ ॥

ಇಲ್ಲಿಗೆ ೧೬೪ನೇ ಸೂಕ್ತವು ಮುಗಿದುದು.

———೪೦೪———

# ನೂರ ಅರವತ್ತೈದನೆಯ ಸೂಕ್ತವು

— —

ತ್ರಯೋವಿಂಶೇಽನುವಾಕೇ ಪಂಚದಶ ಸೂಕ್ತಾನಿ । ತತ್ರ ಕಯಾ ಶುಭೇತಿ ಪಂಚದಶರ್ಚಂ ಪ್ರಥಮಂ ಸೂಕ್ತಂ ತ್ರೈಷ್ಟುಭಂ । ಅತ್ರಾನುಕ್ರಮಣಿಕಾ । ಕಯಾ ಪಂಚೋನಾ ಸಂವಾದಸ್ತೃತೀಯಾದ್ಯಯುಜೋ ಮರುತಾಂ ವಾಕ್ಯಮಂತ್ಯಸ್ತ್ರ್ಯಚೋಽಗಸ್ತ್ಯಸ್ಯ ಶಿಷ್ಟಾ ಇಂದ್ರಸ್ಯೈಕಾದಶೀ ಚ ಮರುತ್ವಾಂಸ್ತ್ವಿಂದ್ರೋ ದೇವತೇತಿ । ಅತ್ರೇಂದ್ರಾಗಸ್ತ್ಯಮರುತಾಂ ಸಂವಾದಃ ಪ್ರತಿಪಾದ್ಯತೇ । ತತ್ರ ತೃತೀಯಾಪಂಚಮೀಸಪ್ತಮೀನವಮೀನಾಂ ಮರುದ್ವಾಕ್ಯರೂಪತ್ವಾತ್ತ ಏವರ್ಷಯಃ । ಯಸ್ಯ ವಾಕ್ಯಂ ಸ ಋಷಿಃ । ಅನು ೨-೪ । ಇತಿ ನ್ಯಾಯಾತ್ । ಅಂತ್ಯತೃಚಸ್ಯಾಗಸ್ತ್ಯವಾಕ್ಯತ್ವಾತ್ಸ ಏವರ್ಷಿಃ । ಶಿಷ್ಟಾ ಯುಜ ಆದ್ಯಾ ಚೈಕಾದಶೀ ಚೇಂದ್ರಸ್ಯ ವಾಕ್ಯಂ । ಅತಃ ಸ ಏವರ್ಷಿಃ । ಅತ್ರ ಯಾ ತೇನೋಚ್ಯತೇ ಸಾ ದೇವತಾ । ಅನು ೨.೫ । ಇತಿ ಸಾಮಾನ್ಯಾಪವಾದೇನ ಕೃತ್ಸ್ನಸ್ಯ ಮರುತ್ವದ್ಗುಣಕ ಇಂದ್ರೋ ದೇವತಾ ॥ ಸಂಸವಜಾತುರ್ವಿಂಶಕಯೋರ್ಮರುತ್ವತೀಯಶಸ್ತ್ರೇ ನಿವಿದ್ಧಾನೀಯಾತ್ಪೂರ್ವಮೇತತ್ಸೂಕ್ತಂ । ಯದಿ ಪರ್ಯಾಯಾನ್ಮರುತ್ವತೀಯ ಇತಿ ಖಂಡಯೋಃ ಸೂತ್ರಿತಂ । ಕಯಾ ಶುಭೇತಿ ಚ ಮರುತ್ವತೀಯೇ ಪುರಸ್ತಾತ್ಸೂಕ್ತಸ್ಯ ಶಂಸೇತ್ । ಆ. ೬-೬-೭-೩ । ಇತಿ ॥ ಆಭಿಪ್ಲವಿಕೇ ಪಂಚಮೇಽಹನಿ ಮರುತ್ವತೀಯ ಏತದೇವ ಸೂಕ್ತಂ । ಪಂಚಮಸ್ಯ ಕಯಾ ಶುಭಾ ಯತ್ತಿಗ್ಮಶೃಂಗ ಇತಿ ಮಧ್ಯಂದಿನಃ । ಆ ೭ ೭ । ಇತಿ ಸೂತ್ರಿತತ್ವಾತ್ ॥ ಮಹಾವ್ರತೇ ಮರುತ್ವತೀಯಶಸ್ತ್ರ ಏತತ್ಸೂಕ್ತಂ । ಪಂಚಮಾರಣ್ಯಕೇ ಕಯಾ ಶುಭಾ ಸವಯಸಃ ಸನೀಳಾ ಮರುತ್ವಾँ ಇಂದ್ರ ವೃಷಭೋ ರಣಾಯ । ಐ. ಆ. ೫ ೧-೧ । ಇತ್ಯುಕ್ತತ್ವಾತ್ ॥ ವಿಷುವತಿ ಮರುತ್ವತೀಯ ಏತದೇವ ನಿವಿದ್ಧಾನೀಯಂ । ತ್ಯಂ ಸು ಮೇಷಂ ಕಯಾ ಶುಭೇತಿ ಚ ಮರುತ್ವತೀಯಂ । ಆ. ೮-೬ । ಇತಿ ಸೂತ್ರಿತತ್ವಾತ್ ॥ ಅಸ್ಯ ವಿನಿಯೋಗಂ ಶೌನಕ ಆಹ । ಜ್ಞಾತಿಪುತ್ರಸುಹೃನ್ಮಿತ್ರೈರ್ಯಶ್ಚ ರಾಜ್ಯಂ ಚಿಕೀರ್ಷತಿ ನಿತ್ಯಂ ಸ ನಿಯತೋ ಭೂತ್ವಾ ಸೂಕ್ತಂ ತು ಮನಸಾ ಜಪೇತ್ । ಕಯಾ ಶುಭೇತಿ ಪೈಶುನ್ಯಂ ಕೃತ್ವಾಚಾರ್ಯನೃಪದ್ವಿಜೈಃ । ಶ್ರುತ್ವಾ ಪರರಹಸ್ಯಂ ತು ಗುರೋರಪ್ಯಾಹ ಶೌನಕಃ । ಋಗ್ವಿ. ೧-೨೬ । ಇತಿ ॥

ಅನುವಾದವು— ಈ ಸೂಕ್ತದಿಂದ ಪ್ರಥಮಮಂಡಲದ ಇಪ್ಪತ್ತಮೂರನೆಯ ಅನುವಾಕವು ಪ್ರಾರಂಭವಾಗುವುದು. ಈ ಅನುವಾಕದಲ್ಲಿ ಹದಿನೈದು ಸೂಕ್ತಗಳಿರುವುವು. ಅವುಗಳಲ್ಲಿ **ಕಯಾ ಶುಭಾ** ಎಂಬ ಮೊದಲನೆಯ ಸೂಕ್ತದಲ್ಲಿ ಹದಿನೈದು ಋಕ್ಕುಗಳಿರುವುವು. ತ್ರಿಷ್ಟುಪ್ ಛಂದಸ್ಸು. ಅನುಕ್ರಮಣಿಕೆಯಲ್ಲಿ—**ಕಯಾ ಪಂಚೋನಾ ಸಂವಾದಸ್ತೃತೀಯಾದ್ಯಯುಜೋ ಮರುತಾಂ ವಾಕ್ಯಮಂತ್ಯಸ್ತ್ರ್ಯೃಚೋಽಗಸ್ತ್ಯಸ್ಯ ಶಿಷ್ಟಾ ಇಂದ್ರಸ್ಯೈಕಾದಶೀ ಚ ಮರುತ್ವಾಂಸ್ತ್ವೈಂದ್ರೋ ದೇವತೇತಿ** ಎಂದು ಹೇಳಿರುವುದು. ಈ ಸೂಕ್ತದಲ್ಲಿ ಇಂದ್ರ, ಅಗಸ್ತ್ಯ, ಮರುದ್ದೇವತೆಗಳು ಇವರುಗಳಿಗೆ ನಡೆದ ಸಂವಾದವು ಪ್ರತಿಪಾದಿತವಾಗಿದೆ. ಆದುದರಿಂದ ಈ ಸೂಕ್ತದಲ್ಲಿ ಮೂರು ಐದು, ಏಳು, ಒಂಭತ್ತನೆಯ ಋಕ್ಕುಗಳು ಮರುದ್ವಾಕ್ಯಗಳಾದುದರಿಂದ ಆ ಋಕ್ಕುಗಳಿಗೆ ಮರುತ್ತುಗಳೇ ಋಷಿಗಳು. **ಯಸ್ಯ ವಾಕ್ಯಂ ಸ ಋಷಿಃ**-ಋಕ್ಕಿನಲ್ಲಿ ವಾಕ್ಯವನ್ನು ಯಾರು ಹೇಳುವರೋ ಅವರೇ ಆ ಋಕ್ಕಿಗೆ ಋಷಿಯು ಎಂದು, ಅನುಕ್ರಮಣಿಕೆಯಲ್ಲಿ (ಅನು ೨-೪) ಹೇಳಿರುವುದು. ಕೊನೆಯ ಮೂರು ಋಕ್ಕುಗಳು ಅಗಸ್ತ್ಯವಾಕ್ಯಗಳಾದುದರಿಂದ ಆ ಋಕ್ಕುಗಳಿಗೆ ಅಗಸ್ತ್ಯನೇ ಋಷಿಯು. ಉಳಿದ ಋಕ್ಕುಗಳು, ಮೊದಲನೆಯ ಋಕ್ಕು ಹನ್ನೊಂದನೆಯ ಋಕು ಇವೆಲ್ಲವೂ ಇಂದ್ರನ ವಾಕ್ಯಗಳು. ಆದ್ದರಿಂದ ಆ ಋಕ್ಕುಗಳಿಗೆ ಇಂದ್ರನೇ ಋಷಿಯು. ಮತ್ತು ದೇವತೆಯ ವಿಷಯ್ಕದಲ್ಲಿ—**ಯಾ ತೆನೋಚ್ಯತೇ ಸಾ ದೇವತಾ**— ಋಕ್ಕಿನಲ್ಲಿ ಹೇಳಿರುವ ವಿಷಯವೇ ಆ ಋಕ್ಕಿಗೆ ದೇವತೆಯು ಎಂದು ಅನುಕ್ರಮಣಿಕೆಯಲ್ಲಿ (ಅನು ೨-೫) ಹೇಳಿರುವುದರಿಂದಲೂ ಮುಖ್ಯವಾಗಿ ಈ ಸೂಕ್ತದಲ್ಲಿ ಇಂದ್ರಮರುತ್ತುಗಳು ಪ್ರತಿಪಾದಿತವಾಗಿರುವುದರಿಂದಲೂ, ಒಟ್ಟು ಸೂಕ್ತಕ್ಕೆ ಮರುದ್ದೇವತೆಗಳಿಂದ ಯುಕ್ತವಾದ ಇಂದ್ರನೇ ದೇವತೆಯು. ಈ ಸೂಕ್ತದ ವಿನಿಯೋಗವು, ಈ ಪ್ರಕಾರವಾಗಿರುವುದು-(1) ಸಂಸವ ಮತ್ತು ಚಾತುರ್ವಿಂಶಕಸಂಬಂಧವಾದ ಮರುತ್ವತೀಯಶಸ್ತ್ರಮಂತ್ರ ಪಠನಕಾಲದಲ್ಲಿ ನಿವಿನ್ಮಂತ್ರಕ್ಕೆ ಪೂರ್ವಭಾವಿಯಾಗಿ ಈಸೂಕ್ತವನ್ನು ಪಠಿಸಬೇಕೆಂದು ಆಶ್ವಲಾಯನ ಶ್ರೌತಸೂತ್ರದ **ಯದಿ ಪರ್ಯಾಯಾನ್ಮರುತ್ವತೀಯ** ಎಂಬ ಖಂಡಗಳ **ಕಯಾ ಶುಭೇತಿ ಚ ಮರುತ್ವತೀಯೋ ಪುರಸ್ತಾತ್ಸೂಕ್ತಸ್ಯಶಂಸೇತ್** ಎಂಬ ಸೂತ್ರದಿಂದ ವಿವೃತವಾಗಿರುವುದು. (ಆ. ೬-೬; ೭-೩) ಮತ್ತು (2) ಅಭಿಪ್ಲವವೆಂಬ ಯಾಗದ ಐದನೆಯ ದಿವಸದಲ್ಲಿ ಮರುತ್ವತೀಯಶಸ್ತ್ರಮಂತ್ರಗಳಿಗಾಗಿ ಈ ಸೂಕ್ತವನ್ನು ಪಠಿಸಬೇಕೆಂದು **ಪಂಚಮಸ್ಯ ಕಯಾ ಶುಭಾ ಯಸ್ತಿಗ್ಮಶೃಂಗ ಇತಿ ಮಧ್ಯಂದಿನಃ** ಎಂಬ ಸೂತ್ರದಿಂದ ವಿವೃತವಾಗಿರುವುದು. (ಆ. ೭-೭) (3) ಮಹಾವ್ರತದಲ್ಲಿ ಮರುತ್ವತೀಯಶಸ್ತ್ರಮಂತ್ರಗಳ ಪಠನಕ್ಕಾಗಿ ಈ ಸೂಕ್ತದ ವಿನಿಯೋಗವಿರುವುದೆಂದು ಐತರೇಯಾರಣ್ಯಕದ ಪಂಚಮಾರಣ್ಯಕದಲ್ಲಿ **ಕಯಾ ಶುಭಾ ಸವಯಸಃ ಸನೀಳಾ ಮರುತ್ವಾँ ಇಂದ್ರ ವೃಷಭೋ ರಣಾಯ** ಎಂಬ ವಾಕ್ಯದಿಂದ ನಿರ್ದಿಷ್ಟವಾಗಿರುವುದು. (ಐ. ಆ ೫-೧-೧) (4) ವಿಷುವದ್ಯಾಗದಲ್ಲಿ ಮರುತ್ವತೀಯ ಸಂಬಂಧವಾದ ನಿವಿನ್ಮಂತ್ರಗಳಿಗಾಗಿ ಈ ಸೂಕ್ತದ ವಿನಿಯೋಗವಿರುವುದೆಂದು ಆಶ್ವಲಾಯನಶ್ರೌತಸೂತ್ರದ **ತ್ಯಂ ಸುಮೇಷಂ ಕಯಾ ಶುಭೇತಿ ಚ ಮರುತ್ವತೀಯಂ** ಎಂಬ ಸೂತ್ರದಿಂದ ವಿವೃತವಾಗಿರುವುದು. (ಆ. ೮-೬) ಮತ್ತು ಈ ಸೂಕ್ತದ ವಿನಿಯೋಗದಲ್ಲಿ ಶೌನಕಮಹರ್ಷಿಯು ತಮ್ಮ ಋಗ್ವಿಧಾನವೆಂಬ ಗ್ರಂಥದಲ್ಲಿ—

**ಜ್ಞಾತಿಪುತ್ರಸುಹೃನ್ಮಿತ್ರೈರ್ಯಶ್ಚ ರಾಜ್ಯಂ ಚಿಕೀರ್ಷತಿ ।**
**ನಿತ್ಯಂ ಸ ನಿಯತೋ ಭೂತ್ವಾ ಸೂಕ್ತಂ ತು ಮನಸಾ ಜಪೇತ್ ॥**
**ಕಯಾ ಶುಭೇತಿ ಪೈಶುನ್ಯಂ ಕೃತ್ವಾಚಾರ್ಯಾನ್ನೃಪದ್ವಿಜೈಃ ।**
**ಶ್ರುತ್ವಾ ಪರರಹಸ್ಯಂ ತು ಗುರೋರಸ್ಯಾಹ ಶೌನಕಃ ॥**

( ಋಗ್ವಿ. ೧-೨೬ )

ಎಂದು ಹೇಳಿರುವರು ಎಂದರೆ ಯಾವ ರಾಜನು ತನ್ನ ಪುತ್ರಮಿತ್ರಸುಹೃದ್ಬಾಂಧವಾದಿಗಳಿಂದ ಕೂಡಿ ಶತ್ರುಗಳ ಬಾಧೆಯಿಲ್ಲದಂತೆ ರಾಜ್ಯಭಾರವನ್ನು ಮಾಡಬೇಕೆಂದು ಅಪೇಕ್ಷಿಸುವನೋ ಅವನು ಕಯಾ ಶುಭಾ ಎಂಬ ಈ ಸೂಕ್ತವನ್ನು ಪ್ರತಿದಿವಸವೂ ಮನಸ್ಸಿನಲ್ಲಿ ಭಕ್ತಿಯಿಂದ ಜಪಮಾಡಬೇಕು. ಹೀಗೆ ಮಾಡುವುದರಿಂದ ಪರರಾಜರ ರಹಸ್ಯಾದಿಗಳು ಗೊತ್ತಾಗಿ ಅವುಗಳಿಂದ ತಾನು ಪಾರಾಗಿ ವಿಜಯಿಯಾಗುವನು ಎಂದು ಹೇಳಿದೆ.

———

॥ ಓಂ ॥

## ಸೂಕ್ತ—೧೬೫

——

॥ ಮಂಡಲ—೧ ॥ ಅನುವಾಕ—೨೩ ॥ ಸೂಕ್ತ—೧೬೫ ॥

॥ ಅಷ್ಟಕ— ೨ ॥ ಅಧ್ಯಾಯ— ೩ ॥ ವರ್ಗ— ೨೪, ೨೫, ೨೬, ॥

॥ ಸೂಕ್ತದಲ್ಲಿರುವ ಋಕ್ಸಂಖ್ಯೆ—೧೫ ॥

॥ ಋಷಿಃ—೧, ೨, ೪, ೬, ೮, ೧೦-೧೨. ಇಂದ್ರಃ ।

೩, ೫, ೭, ೯. ಮರುತಃ । ೧೩-೧೫. ಅಗಸ್ತ್ಯಃ ॥

॥ ದೇವತಾ—ಮರುತ್ವಾನಿಂದ್ರಃ ॥

॥ ಛಂದಃ—ತ್ರಿಷ್ಟುಪ್ ॥

———

ಸಂಹಿತಾಪಾಠಃ

ಕಯಾ ಶುಭಾ ಸವಯಸಃ ಸನೀಳಾಃ ಸಮಾನ್ಯಾ ಮರುತಃ ಸಂ ಮಿಮಿಕ್ಷುಃ।
ಕಯಾ ಮತೀ ಕುತ ಏತಾಸ ಏತೇಽರ್ಚಂತಿ ಶುಷ್ಮಂ ವೃಷಣೋ
ವಸೂಯಾ ॥ ೧ ॥

ಪದಪಾಠಃ

ಕಯಾ । ಶುಭಾ । ಸಽವಯಸಃ । ಸಽನೀಳಾಃ । ಸಮಾನ್ಯಾ । ಮರುತಃ । ಸಂ । ಮಿಮಿಕ್ಷುಃ ।
ಕಯಾ । ಮತೀ । ಕುತಃ । ಆಽಇತಾಸಃ । ಏತೇ । ಅರ್ಚಂತಿ । ಶುಷ್ಮಂ । ವೃಷಣಃ । ವಸುಽಯಾ ॥ ೧ ॥

### ಸಾಯಣಭಾಷ್ಯಂ

ಇಂದ್ರವಾಕ್ಯಂ । ಸವಯಸಃ ಸಮಾನವಯಸ್ಕಾಃ ಸನೀಳಾಃ ಸಮಾನಸ್ಥಾನಾ ಏತೇ ಮರುತಃ ಕಯಾ ಶುಭಾ ಕೈರಪಿ ದುರ್ಜ್ಞೇಯಯಾ ಶೋಭಯಾ ಸಮಾನ್ಯಾ ಸರ್ವೇಷಾಮೇಕರೂಪಯಾ ಮಹತ್ಯಾ ಯುಕ್ತಾಃ । ಯದ್ವಾ । ಶುಬಿತ್ಯುದಕನಾಮ । ಉಕ್ತರೂಪಯಾ ಶುಭೋದಕೇನ । ಸಂ ಮಿಮಿಕ್ಷುಃ । ಲೋಕಂ ಸಮ್ಯಕ್ ಸಿಂಚಂತಿ ॥ ಮಿಹಸಮಾನಾರ್ಥೋ ಮಿಮಿಕ್ಷತಿಧಾತುಃ ॥ ಯದ್ವಾ ಮಾಂ ಯುದ್ಧಾದಿಷು ಪ್ರವರ್ತಮಾನಂ ಸಂ ಮಿಮಿಕ್ಷುಃ । ತದರ್ಥಮೇತೇ ಮರುತಃ ಕಯಾನಿಶ್ಚೇಯಯಾ ಮತೀ ಮತ್ಯಾ ಕುತೋ ದೇಶಾದೇತಾಸಃ । ಆಗತಾಃ । ಆಗತ್ಯ ಚೈತೇ ವೃಷಣೋ ವರ್ಷಿತಾರೋ ವಸೂಯಾ ವಸೂಯಯಾ ॥ ಸುಪಾಂ ಸುಲುಗಿತಿ ಪೂರ್ವಸವರ್ಣದೀರ್ಘಃ ॥ ಧನೇಚ್ಛಯಾ । ಯದ್ವಾ । ವಸವೋ ವಾಸಯಿತಾರೋ ವಾ॥ ತೇನೈವ ಜಸೋ ಯಾಜಾದೇಶಃ ॥ ಶುಷ್ಮಂ ಬಲಂ ವೃಷ್ಟಿಪ್ರದಾನಜನಿತಂ ಲೋಕೇಽರ್ಚಂತಿ । ಪೂಜಯಂತಿ । ಜಗತಿ ಕುರ್ವಂತಿ । ಯದ್ವಾ । ಮಮ ಬಲಂ ವರ್ಧಯಂತೀತ್ಯರ್ಥಃ । ಮರುತೋ ಹ್ಯೇನಂ ನಾಜಹುಃ । ಐ. ಬ್ರಾ. ೩-೨೦ । ಇತಿ ಶ್ರುತೇಃ । ಅತ್ರೇಂದ್ರಮರುತ್ಸಂವಾದರೂಪೇ ಸರ್ವತ್ರ ಪ್ರಾಣ-ಜೀವಾತ್ಮಪರತಯಾಪಿ ಯೋಜನೀಯಂ । ಅತ್ರಾಪೀಂದ್ರೋ ಬ್ರೂತೇ ॥

### ಪ್ರತಿಪದಾರ್ಥ

**ಸವಯಸಃ**—ಒಂದೇ ವಯಸ್ಸುಳ್ಳವರೂ, । **ಸನೀಳಾಃ**—ಒಂದೇ ವಾಸಸ್ಥಾನವುಳ್ಳವರೂ, ಆದ । **ಮರುತಃ**—ಈ ಮರುತ್ತುಗಳು । **ಕಯಾ ಶುಭಾ**—( ಸ್ಥೂಲವಾದ ದೃಷ್ಟಿಗೆ ಗೋಚರವಲ್ಲದ ) ಯಾವ ಪ್ರಭೆಯಿಂದಲೂ । **ಸಮಾನ್ಯಾ**—ಒಂದೇ ರೀತಿಯಾದ ಮಹತ್ತಿನಿಂದಲೂ ಕೂಡಿದವರಾಗಿ । **ಸಂ ಮಿಮಿಕ್ಷುಃ**—ಉದಕದಿಂದ (ಲೋಕವನ್ನು) ಸಿಂಚಿಸುತ್ತಾರೆ ? । **ಕಯಾ ಮತೀ**—ಯಾವ ಉದ್ದಿಶ್ಯವುಳ್ಳವರಾಗಿದ್ದಾರೆ ? । **ಕುತಃ**—ಯಾವ ಪ್ರದೇಶದಿಂದ । **ಏತಾಸಃ**—ಈ ಮರುತ್ತುಗಳು ಬಂದಿದ್ದಾರೆ ? । **ವೃಷಣಃ**—ವೃಷ್ಟಿಯನ್ನು ಸುರಿಸುವವರಾದ । **ಏತೇ**—ಈ ಮರುತ್ತುಗಳು । **ವಸೂಯಾ**—ಧನೇಚ್ಛೆಯಿಂದ । **ಶುಷ್ಮಂ**—ಬಲವನ್ನು । **ಅರ್ಚಂತಿ**—ಪೂಜಿಸುತ್ತಾರೆ.

### ಭಾವಾರ್ಥ

ಒಂದೇ ವಯಸ್ಸುಳ್ಳವರೂ, ಒಂದೇ ವಾಸಸ್ಥಾನವುಳ್ಳವರೂ ಆದ ಈ ಮರುತ್ತುಗಳು ಸ್ಥೂಲವಾದ ದೃಷ್ಟಿಗೆ ಗೋಚರವಲ್ಲದ ಯಾವ ಪ್ರಭೆಯಿಂದಲೂ, ಒಂದೇ ರೀತಿಯಾದ ಮಹತ್ತಿನಿಂದಲೂ, ಕೂಡಿದವರಾಗಿ ಲೋಕಕ್ಕೆಲ್ಲಾ ಉದಕವನ್ನು ಸಿಂಚಿಸುತ್ತಾರೆ ? ಇವರ ಉದ್ದಿಶ್ಯವೇನು ? ಇವರು ಎಲ್ಲಿಂದ ಬಂದಿದ್ದಾರೆ ? ವೃಷ್ಟಿಯನ್ನು ಸುರಿಸುವವರಾದ ಈ ಮರುತ್ತುಗಳು ಧನೇಚ್ಛೆಯಿಂದ ಶಕ್ತಿಪೂಜಕರಾಗಿದ್ದಾರೆ

### English Translation

(Indra speaks),—With what auspicious fortune have the Maruts, who are of one age, one residence, one dignity, watered (the earth) together ? with what intention ? whence have they come ? Showerers of rain, they venerate, through desire of wealth, the energy (theat is granted in the world by rain).

**ವಿಶೇಷವಿಷಯಗಳು**

ಇಲ್ಲಿಂದ ಪ್ರಥಮಮಂಡಲದ ಕೊನೆಯವರೆಗೂ ಅಗಸ್ತ್ಯಋಷಿಯಿಂದ ನಿರ್ಮಿತವಾದ ಒಟ್ಟು ೨೭ ಸೂಕ್ತಗಳಿವೆ. ಇವು ಇಂದ್ರ, ಮರುತ್ತುಗಳು, ಅಶ್ವಿನೀದೇವತೆಗಳು, ದ್ಯಾವಾಪೃಥಿವಿಗಳು, ಅನ್ನ, ಬೃಹಸ್ಪತಿ ಇತ್ಯಾದಿ ದೇವತೆಗಳನ್ನು ಉದ್ದೇಶಿಸಿ ಪಠಿಸಿದ ಸೂಕ್ತಗಳಾಗಿವೆ. ಈ ೨೭ ಸೂಕ್ತಗಳನ್ನೂ ಬೃಹದ್ದೇವತೆಯಲ್ಲಿ ಎರಡು ಪಂಗಡಗಳಾಗಿ ವಿಭಾಗಿಸಿದೆ. ೧೬೫ ರಿಂದ ೧೭೦ ನೇ ಸೂಕ್ತದವರೆಗೆ ಇಂದ್ರನಿಗೂ ಮರುತ್ತುಗಳಿಗೂ ನಡೆದ ಸಂಭಾಷಣೆಯನ್ನೂ ಮತ್ತು ಇವರ ನಡುವೆ ಅಗಸ್ತ್ಯಋಷಿಯು ಪ್ರವೇಶಿಸಿ ಮರುತ್ತುಗಳನ್ನೂ ಇಂದ್ರನನ್ನೂ ಸ್ತುತಿಸಿ ಅವರಿಗೆ ಸಮಾಧಾನವನ್ನುಂಟುಮಾಡಿದುದನ್ನೂ ಕಥಾರೂಪವಾಗಿ ತಿಳಿಸಿದೆ. ೧೭೧ ರಿಂದ ೧೯೧ ರವರೆಗೆ ಅಗಸ್ತ್ಯನಿಗೂ ಲೋಪಾಮುದ್ರೆಗೂ ಇರುವ ಸಂಬಂಧವನ್ನೂ ಪ್ರೇಮವನ್ನೂ ತಿಳಿಸುವ ಸಂದರ್ಭದಲ್ಲಿ ನಿರ್ಮಿತವಾದ ಸೂಕ್ತಗಳಾಗಿವೆ.

ಪ್ರಕೃತವಾದ ಸೂಕ್ತದಲ್ಲಿ (೧-೧೫) ಇಂದ್ರನಿಗೂ ಮರುತ್ತುಗಳಿಗೂ ನಡೆದ ಸಂಭಾಷಣೆಯನ್ನೂ, ಆ ಮಧ್ಯದಲ್ಲಿ ಅಗಸ್ತ್ಯಋಷಿಯ ಸಮಾಧಾನಕರವಾದ ಸ್ತುತಿಯನ್ನೂ ವರ್ಣಿಸಿರುವುದರಿಂದ, ಈ ಸಂಭಾಷಣೆಯ ಸ್ವರೂಪ, ಇದಕ್ಕೆ ಕಾರಣ, ಈ ನಡುವೆ ಅಗಸ್ತ್ಯಋಷಿಯು ಪ್ರವೇಶಿಸುವುದರ ಔಚಿತ್ಯ, ಅಗಸ್ತ್ಯಋಷಿಯ ಪೂರ್ವಕಥೆ ಇತ್ಯಾದಿಗಳನ್ನು ತಿಳಿಯಬೇಕಾದುದು ಅಗತ್ಯವಾಗಿರುತ್ತದೆ. ಇವುಗಳಲ್ಲಿ ಇಂದ್ರನಿಗೂ, ಮರುತ್ತುಗಳಿಗೂ ನಡೆದ ಸಂಭಾಷಣೆಯ ಸ್ವರೂಪವನ್ನು ಬೃಹದ್ದೇವತೆಯಲ್ಲಿ ಸಂಕ್ಷೇಪವಾಗಿ ತಿಳಿಸಿದೆ-

**ಮಾರುತ್ಯೈಂದ್ರ್ಯಸ್ತು ಸಂವಾದಃ ಕಯೇತಿ ಪರಮಃ ಸ್ಮೃತಃ ।**
**ಮರುತಾಮಯುಜಸ್ತ್ವೈಂದ್ರ್ಯೋ ಯುಗ್ಮಾಃ ಸರ್ವಾಃ ಸಹಾಂತ್ಯಯಾ ॥**
**ಏಕಾದಶೀ ಪ್ರಥಮಾ ಚ ಮಾರುತೆಸ್ತ್ವೃಚ ಉತ್ತರಃ ।**
**ತೃಚಸ್ತ್ವೇವ ತು ತತ್ಪ್ರೋಕ್ತಂ ಕರ್ತೃತ್ವಮಿತರಸ್ಯ ತು ॥**

( ಬೃ. ದೇ. ೪-೪೪, ೪೫ )

' **ಕಯಾ ಶುಭಾ** ' ಎಂಬ ಋಕ್ಕಿನಿಂದ ಪ್ರಾರಂಭವಾಗುವ ಸೂಕ್ತವು ಇಂದ್ರನಿಗೂ ಮರುತ್ತುಗಳಿಗೂ ನಡೆದ ಸಂಭಾಷಣೆಯ ಮುಖ್ಯಾಂಶವನ್ನು ತಿಳಿಸುವುದಾಗಿ ಹಿಂದಿನಿಂದಲೂ ಪ್ರಶಂಸಿತವಾಗಿದೆ. ಇವುಗಳಲ್ಲಿ ವಿಷಮಸಂಖ್ಯೆಯುಳ್ಳ ಋಕ್ಕುಗಳೆಲ್ಲವೂ ಮರುದ್ವಾಕ್ಯಗಳು. ಸಮ ಸಂಖ್ಯೆಯುಳ್ಳವೂ, ಮೊದಲನೆಯದೂ, ಹನ್ನೊಂದನೆಯದೂ ಮತ್ತು ಕೊನೆಯದೂ ಸಹ ಇಂದ್ರವಾಕ್ಯಗಳು. ೧೩ರಿಂದ ೧೫ರವರೆಗಿನ ಋಕ್ಕುಗಳು ಮರುತ್ತುಗಳನ್ನುದ್ದೇಶಿಸಿ ಪಠಿತವಾಗಿವೆ. ಅವುಗಳ ನಿರ್ಮಾತೃತ್ವವು ಬೇರೆಯವರಿಗೆ ಸೇರಿದುದಾಗಿದೆ.

**ಇತಿಹಾಸಃ ಪುರಾವೃತ್ತ ಋಷಿಭಿಃ ಪರಿಕೀರ್ತ್ಯತೇ ।**
**ಸಮಾಗಚ್ಛನ್ಮರುದ್ಭಿಸ್ತು ಚರನ್ವ್ಯೋಮ್ನಿ ಶತಕ್ರತುಃ ॥**
**ದೃಷ್ಟ್ವಾ ತುಷ್ಟಾವ ತಾನಿಂದ್ರಸ್ತೇ ಚೇಂದ್ರಮೃಷಯೋಽಬ್ರುವನ್ ।**
**ತೇಷಾಮಗಸ್ತ್ಯಃ ಸಂವಾದಂ ತಪಸಾ ವೇದ ತತ್ತ್ವತಃ ॥**

( ಬೃ. ದೇ. ೪-೪೬, ೪೭ )

ಇಂದ್ರನು ಅಂತರಿಕ್ಷದಲ್ಲಿ ಸಂಚರಿಸುತ್ತಿದ್ದಾಗ ಒಂದು ಸಲ ಮರುತ್ತುಗಳನ್ನು ಸಂದರ್ಶಿಸಿದನು. ಅವರನ್ನು ನೋಡಿದೊಡನೆಯೇ ಇಂದ್ರನು ಅವರನ್ನು ಸ್ತುತಿಸಿದನು ಅವರೂ ಸಹ ಇಂದ್ರನನ್ನು ಸ್ತುತಿಸಿದರು. ಅಗಸ್ತ್ಯನು ತನ್ನ

ತಪೋಮಹಿಮೆಯಿಂದ ಅವರವರ ಸಂಭಾಷಣೆಯನ್ನು ಗ್ರಹಿಸಿದನು, ಎಂದು ಹಿಂದೆ ನಡೆದ ಒಂದು ವೃತ್ತಾಂತವನ್ನು ಇಲ್ಲಿ ಕಥಾರೂಪದಲ್ಲಿ ತಿಳಿಸಿದೆ. ಮತ್ತು,

**ಸ ತಾನಭಿಜಗಾಮಾಶು ನಿರೂಪ್ಯೈಂದ್ರಂ ಹವಿಸ್ತದಾ ।**
**ಮರುತಶ್ಚಾಭಿತುಷ್ಟಾವ ಸೂಕ್ತೈಸ್ತನ್ನಿ್ವತಿ ಚ ತ್ರಿಭಿಃ ॥**

( ಬೃ. ದೇ. ೪–೪೮ )

ಅಗಸ್ತ್ಯನು ಅವರ ಸಂಭಾಷಣೆಯನ್ನು ಗ್ರಹಿಸಿದೊಡನೆಯೇ ತಾನೂ ಅವರಿಗಭಿಮುಖವಾಗಿ ಹೋಗಿ ಇಂದ್ರನಿಗಾಗಿ ಹವಿಸ್ಸನ್ನು ಸಿದ್ಧಪಡಿಸಿದನು. ಜೊತೆಯಲ್ಲಿಯೇ **ತೆನ್ನುವೋಚಾಮ** ಇತ್ಯಾದಿ ಮಂತ್ರಗಳಿಂದ ಕೂಡಿದ ಮೂರು ಸೂಕ್ತಗಳನ್ನು ( ೧–೧೬೬ ರಿಂದ ೧೬೮ ) ರಚಿಸಿ ಮರುತ್ತುಗಳನ್ನೂ ಸ್ತುತಿಸಿದನು ಎಂಬ ವಿವರಣೆಯಿದೆ.

ಇಂದ್ರನಿಗೂ ಮರುತ್ತುಗಳಿಗೂ ಇರುವ ಶಾಶ್ವತವಾದ ಸಾಹಚರ್ಯವು ಶ್ರುತಿಪ್ರಸಿದ್ಧವಾದುದು. ಅವರವರಿಗೆ ಇರುವ ರಾಜಪ್ರಜಾಸಂಬಂಧವೂ, ಮರುತ್ತುಗಳೊಡಗೂಡಿದ ಇಂದ್ರನಿಗೆ ಮುಖ್ಯವಾದ ಯಜ್ಞಕ್ರಿಯೆಗಳಲ್ಲಿ ಹವಿಸ್ಸಿನ ಅರ್ಪಣೆಯೂ, ಮತ್ತು ವೃತ್ರಾಸುರನೊಡನೆ ಯುದ್ಧವನ್ನು ನಡೆಸುವಾಗ ಇಂದ್ರನಿಗೆ ಮರುತ್ತುಗಳು ಸಹಾಯಮಾಡಿರುವುದೂ, ಸಂಹಿತೆಗಳಲ್ಲಿಯೂ ಬ್ರಾಹ್ಮಣಗಳಲ್ಲಿಯೂ ಅನೇಕಕಡೆ ಸ್ತುತಿಸಲ್ಪಟ್ಟಿದೆ. ಇಂದ್ರನು ಮರುತ್ತುಗಳೊಡನೆ ಸೇರಿಕೊಂಡು ಉಳಿದ ದೇವತೆಗಳಿಂದ ಪ್ರತ್ಯೇಕವಾಗಿ ಇದ್ದುದನ್ನು ಹೇಳುವ ಪೂರ್ವ ಕಥೆಯೊಂದನ್ನು ಶತಪಥಬ್ರಾಹ್ಮಣದಲ್ಲಿ ಹೇಳಿದೆ.

**ಆತಿಥ್ಯೇನ ವೈ ದೇವಾ ಇಷ್ಟ್ವಾ । ತಾನ್ತ್ಸಮದವಿದಂತ್ತೇ ಚತುರ್ಧಾವ್ಯದ್ರವನ್ನನ್ಯೋನ್ಯಸ್ಯ ಶ್ರಿಯೊ ತಿಷ್ಠಮಾನಾ ಅಗ್ನಿರ್ವಸುಭಿಃ, ಸೋಮೋ ರುದ್ರೈರ್ವರುಣ ಆದಿತ್ಯೈರಿಂದ್ರೋ ಮರುದ್ಭಿರ್ಬೃಹಸ್ಪತಿರ್ವಿಶ್ವೇದೇವೈಃ ॥**

( ಶ ಬ್ರಾ. ೩–೪–೨–೧ )

ಹಿಂದೆ ದೇವತೆಗಳು ಆತಿಥ್ಯಕ್ರಿಯೆಯನ್ನು ನೆರವೇರಿಸಿದಾಗ ಅವರವರಲ್ಲೇ ವೈಮನಸ್ಯವುಂಟಾಗಿ ಒಬ್ಬರಿಗೊಬ್ಬರು ಸೋಲಲಿಷ್ಟಪಡದೇ ನಾಲ್ಕು ಗುಂಪುಮಾಡಿಕೊಂಡು ಬೇರೆ ಬೇರೆ ಯಾದರು. ಅಗ್ನಿಯು ವಸುಗಳೊಂದಿಗೂ. ಸೋಮನು ರುದ್ರರೊಂದಿಗೂ ವರುಣನು ಆದಿತ್ಯರೊಂದಿಗೂ, ಇಂದ್ರನು ಮರುತ್ತುಗಳೊಂದಿಗೂ, ಮತ್ತು ಬೃಹಸ್ಪತಿಯು ವಿಶ್ವೇದೇವತೆಗಳೊಂದಿಗೂ ಕೂಡಿಕೊಂಡು ಪ್ರತ್ಯೇಕವಾದ ಗುಂಪುಮಾಡಿಕೊಂಡರು, ಎಂಬ ಕಥೆಯಲ್ಲಿ ಇಂದ್ರನು ಮರುತ್ತುಗಳೊಡನೆ ಸಾಹಚರ್ಯವನ್ನು ಬೆಳೆಸಿ ಅವರೊಡನೆ ಇಟ್ಟುಕೊಂಡಿರುವ ನಿಕಟವಾದ ಸಂಬಂಧವನ್ನು ಹೇಳಿರುವುದು. ಇದೂ ಅಲ್ಲದೆ, ಇಂದ್ರನೇ ದೊರೆಯೆಂದೂ, ಮರುತ್ತುಗಳೇ ಪ್ರಜೆಗಳೆಂದೂ ಅನೇಕಕಡೆ ಹೇಳಿದೆ. ಉದಾಹರಣೆಗೆ—

**ಕ್ಷತ್ರಂ ವಾ ಇಂದ್ರೋ ವಿಶೋ ಮರುತೋ ವಿಶಾ ವೈ ಕ್ಷತ್ರಿಯೋ ಬಲವಾನ್ ಭವತಿ ।**

( ಶ ಬ್ರಾ. ೪–೩–೩–೬ )

ಇಂದ್ರನು ಕ್ಷಾತ್ರತೇಜಸ್ಸುಳ್ಳ ರಾಜನು. ಮರುತ್ತುಗಳೇ ಪ್ರಜೆಗಳು. ಪ್ರಜೆಗಳ ಸಹಕಾರದಿಂದಲೇ ರಾಜನು ಶಕ್ತಿಯುಳ್ಳವನಾಗಿ ಆಗುತ್ತಾನೆಂದೂ ಮರುತ್ತುಗಳ ಸಹಾಯದಿಂದ ಇಂದ್ರನ ಪರಾಕ್ರಮವು ವೃದ್ಧಿಯನ್ನು ಪಡೆಯಿತೆಂದೂ ಸೂಚಿಸಿದೆ. ಈ ರೀತಿಯಾದ ನಿಕಟವಾದ ಸಂಬಂಧವೂ ಸಾಹಚರ್ಯವೂ ಇರುವುದರಿಂದಲೇ ಇಂದ್ರನನ್ನೂ ಮರುತ್ತುಗಳನ್ನೂ ಒಟ್ಟಿಗೆ ಉದ್ದೇಶಿಸಿ ಹವಿಸ್ಸುಗಳನ್ನೂ ಅರ್ಪಿಸುವ ಕ್ರಮವೂ ಶ್ರುತಿಗಳಲ್ಲಿ ಕಂಡುಬರುತ್ತದೆ. ಮತ್ತು

**ಸ ನೋ ಮರುದ್ಭಿರ್ವೃಷಭ ಶ್ರವೋ ಧಾ ಉಗ್ರ ಉಗ್ರೇಭಿಃ ಸ್ಥವಿರಃ ಸಹೋದಾಃ ।**
( ಋ. ಸಂ. ೧-೧೭೧-೫ )

ಎಂಬಿವೇ ಮುಂತಾದ ಋಕ್ಕುಗಳಿಂದ ಇಂದ್ರನಿಗೂ ಮರುತ್ತುಗಳಿಗೂ ಒಟ್ಟಿಗೆ ಸೇರಿಸಿ ಆಹ್ವಾನವೂ ಹವಿಸ್ಸಿನ ಅರ್ಪಣೆಯೂ ಇದೆ. ಈ ರೀತಿಯ ಸಾಹಚರ್ಯವನ್ನು ವರ್ಣಿಸಿ ಬೃಹದ್ದೇವತೆಯಲ್ಲಿ—

**ಮರುದ್ಭಿಃ ಸಹ ಯತ್ರೇಂದ್ರೋ ಮರುತ್ವಾಂಸ್ತತ್ರ ಸೋಽಭವತ್ ।**
( ಬೃ. ದೇ. ೪-೫೬ )

ಇತ್ಯಾದಿ ವಾಕ್ಯಗಳಿಂದ ಈ ದೇವತೆಗಳ ಸಂಬಂಧಸೂಚಕವಾದ ವಿಶೇಷಣವನ್ನು ವಿವರಿಸಿದೆ. ಆದರೆ ಪ್ರಕೃತವಾದ ಸೂಕ್ತದಲ್ಲಿ ಇಂದ್ರನಿಗೂ ಮರುತ್ತುಗಳಿಗೂ ನಡೆದ ವಾಗ್ವಾದವನ್ನೂ ಅವರವರ ವೈಷಮ್ಯವನ್ನೂ ವರ್ಣಿಸಿ ಆ ಕಾಲದಲ್ಲಿ ಅಗಸ್ತ್ಯಋಷಿಯು ಅವರಿಗೆ ಸಮಾಧಾನವನ್ನುಂಟುಮಾಡಿದುದಾಗಿ ತಿಳಿಸಿದೆ

**ಮಹಾವ್ರತೇ ಮರುತ್ವತೀಯಶಸ್ತ್ರೇ ಏತತ್ಸೂಕ್ತಂ । 'ಕಯಾ ಶುಭಾ ಸವಯಸಃ.... .... ....' ( ಐ. ಆ. ೫-೧-೧ ) ಇತ್ಯುಕ್ತತ್ವಾತ್ । ವಿಷುವತಿ ಮರುತ್ವತೀಯೇ ಏತದೇವ ನಿವಿದ್ಧಾನೀಯಂ ।**
ಮರುತ್ವತೀಯಶಸ್ತ್ರದಲ್ಲಿ ಈ ಸೂಕ್ತವು ಪಠಿತವಾಗಿದೆ. ಮತ್ತು ಮರುತ್ವತೀಯಶಸ್ತ್ರದ ವಿಧಿಯಿರುವಾಗಲೆಲ್ಲಾ ಈ ಸೂಕ್ತವು ಪಠಿತವಾಗಬೇಕು ಎಂಬ ವಿಧಿಯನ್ನು ಸಾಯಣರು ಉದಹರಿಸಿದ್ದಾರೆ. ಮರುತ್ವತೀಯಶಸ್ತ್ರದ ಪ್ರಕರಣ ವನ್ನು ಪರಿಶೀಲಿಸಿದರೆ ಅಲ್ಲಿ ಇಂದ್ರನು ಮರುತ್ತುಗಳು ತನ್ನಲ್ಲಿ ತೋರಿಸಿದ ವಿಶ್ವಾಸದ ಗುರುತಾಗಿ ತನಗೆ ಅರ್ಪಿತವಾದ ಹವಿಸ್ಸಿನಲ್ಲಿ ಅವರಿಗೂ ಸಹ ಭಾಗವು ದೊರೆಯಬೇಕೆಂದಪೇಕ್ಷಿಸುವುದು ಸ್ಪಷ್ಟವಾಗಿದೆ.

**ಇಂದ್ರೋ ವೈ ವೃತ್ರಂ ಹನಿಷ್ಯನ್ಸರ್ವಾ ದೇವತಾ ಅಬ್ರವೀದನು ಮೋಪತಿಷ್ಠಧ್ವಮುಪ ಮಾ ಹ್ವಯಧ್ವಮಿತಿ ತಥೇತಿ ತಂ ಹನಿಷ್ಯಂತ ಆದ್ರವನ್ಸೋಽವೇನ್ಮಾಂ ವೈ ಹನಿಷ್ಯಂತ ಆದ್ರವಂತಿ ಹಂತೇಮಾನ್ ಭೀಷಯಾ ಇತಿ ತಾನಭಿಪ್ರಾಶ್ವಸೀತ್ತಸ್ಯ ಶ್ವಸಥಾದೀಷಮಾಣಾ ವಿಶ್ವೇ ದೇವಾ ಅದ್ರವನ್ಮರುತೋ ಹೈನಂ ನಾಜಹುಃ ಪ್ರಹರ ಭಗವೋ ಜಹಿ ವೀರಯಸ್ವೇತ್ಯೇವೈನಮೇತಾಂ ವಾಚಂ ವದಂತ ಉಪಾತಿಷ್ಠಂತ ।**

( ಐ. ಬ್ರಾ. ೩-೨೦ )

ವೃತ್ರನನ್ನು ಹನನಮಾಡುವ ಕಾಲದಲ್ಲಿ ಇಂದ್ರನು ಎಲ್ಲಾ ದೇವತೆಗಳನ್ನೂ ಉದ್ದೇಶಿಸಿ "ನೀವು ನನಗೆ ಈ ವೃತ್ರಾ ಸುರನನ್ನು ಕೊಲ್ಲುವ ಕೆಲಸದಲ್ಲಿ ಸಹಾಯವನ್ನು ಮಾಡಿ" ಎಂದು ಹೇಳಿಕೊಂಡಾಗ ಅವರು ಹಾಗೆಯೇ ಆಗಲೆಂದು ಒಪ್ಪಿ ಅದಕ್ಕಾಗಿ ಓಡಿಬಂದರು. ಆಗ ವೃತ್ರಾಸುರನು "ಇವರು ನನ್ನನ್ನು ಕೊಲ್ಲಲು ಬರುತ್ತಿದ್ದಾರೆ. ಇವರನ್ನು ಭಯಗೊಳಿಸುತ್ತೇನೆ'' ಎಂದು ಬಿರುಸಾದ ಉಸಿರನ್ನು ಬಿಟ್ಟನು. ಕೂಡಲೇ ಎಲ್ಲಾ ದೇವತೆಗಳೂ ಭಯಪಟ್ಟು ಕೊಂಡು ಓಡಿಬಿಟ್ಟರು. ಆದರೆ ಮರುತ್ತುಗಳು ಮಾತ್ರ ಇಂದ್ರನನ್ನು ಬಿಟ್ಟುಕೊಡಲಿಲ್ಲ. "ಈತನನ್ನು ಹೊಡಿ. ಇವನ ಮೇಲೆ ನಿನ್ನ ಪೂರ್ಣವಾದ ಬಲವನ್ನು ಪ್ರಯೋಗಿಸು'' ಎಂದು ಇಂದ್ರನನ್ನು ಹುರಿದುಂಬಿಸುತ್ತಿದ್ದರು. ಇದೇ ವಿಷಯವನ್ನು,

**ವೃತ್ರಸ್ಯ ತ್ವಾ ಶ್ವಸಥಾದೀಷಮಾಣಾ ವಿಶ್ವೇ ದೇವಾ ಅಜಹುರ್ಯೇ ಸಖಾಯಃ ।**
**ಮರುದ್ಭಿರಿಂದ್ರ ಸಖ್ಯಂ ತೇ ಅಸ್ತ್ವಥೇಮಾ ವಿಶ್ವಾಃ ಪೃತನಾ ಜಯಾಸಿ ॥**

( ಋ. ಸಂ. ೮-೯೬-೭ )

ಎಂಬ ಋಕ್ಕಿನಲ್ಲಿ ಸ್ತುತಿಸಿದೆ. ಆದುದರಿಂದಲೇ ಇಂದ್ರನು ಮರುತ್ತುಗಳು ತನಗೆ ಮಾಡಿದ ಉಪಕಾರವನ್ನು ಸ್ಮರಿಸುತ್ತಾ,

**ಸೋಽವೇದಿಮೇ ವೈ ಕಿಲ ಮೇ ಸಚಿವಾ ಇಮೇ ಮಾಕಾಮಯಂತ ಹಂತೇಮಾನಸ್ಮಿನ್ನುಕ್ಥ ಆಭಜಾ ಇತಿ ತಾನೇತಸ್ಮಿನ್ನುಕ್ಥ ಆಭಜದಥಹೈತೇ ತರ್ಹ್ಯುಭೇ ಏವ ನಿಷ್ಕೇವಲ್ಯೇ ಉಕ್ಥೇ ಆಸತುಃ । ಮರುತ್ವತೀಯಂ ಗ್ರಹಂ ಗೃಹ್ಣಾತಿ ಮರುತ್ವತೀಯಂ ಪ್ರಗಾಥಂ ಶಂಸತಿ ಮರುತ್ವತೀಯಂ ಸೂಕ್ತಂ ಶಂಸತಿ ಮರುತ್ವತೀಯಾಂ ನಿವಿದಂ ದಧಾತಿ ಮರುತಾಂ ಸಾ ಭಕ್ತಿಃ ॥**

( ಐ ಬ್ರಾ. ೩-೨೦ )

" ಈ ಮರುತ್ತುಗಳೇ ನನ್ನ ನಿಜವಾದ ಸಖರು. ಅವರು ನನ್ನನ್ನು ಪ್ರೀತಿಸಿದರು. ಆದುದರಿಂದ ನಾನು ನನ್ನನ್ನುದ್ದೇಶಿಸಿದ ಉಕ್ಥದಲ್ಲಿ ಅವರಿಗೂ ಭಾಗವನ್ನು ಕೊಡುತ್ತೇನೆ" ಎಂದು ಸಂಕಲ್ಪಿಸಿ ಅವರಿಗೂ ಸಹ ಭಾಗವನ್ನು ಕಲ್ಪಿಸಿದನು. ಮರುತ್ತುಗಳಿಗಾಗಿ ಗ್ರಹವನ್ನು (ಪಾನಪಾತ್ರೆ) ಹಿಡಿದನು, ಪ್ರಗಾಥವನ್ನು ಪಠಿಸಿದನು, ಹೀಗೆಯೇ ನಾನಾ ವಿಧವಾಗಿ ಅವರನ್ನು ಉಪಚರಿಸಿದನು ಎಂದು ಮರುತ್ವತೀಯಶಸ್ತ್ರವನ್ನು ವರ್ಣಿಸುವ ಸಂದರ್ಭದಲ್ಲಿ ಉಕ್ತವಾಗಿದೆ. ಆದರೆ ಪ್ರಕೃತವಾದ ಋಕ್ಕಿನಲ್ಲಿರುವಂತೆ ಇಂದ್ರನಿಗೂ ಮರುತ್ತುಗಳಿಗೂ ವೈಷಮ್ಯವು ಪ್ರಾಪ್ತವಾಯಿತು ಎಂಬ ವರ್ಣನೆಗೆ ನಿಜವಾದ ಅರ್ಥವೇನು ಎಂಬುದನ್ನು ಮುಂದೆ ತಿಳಿಸಲಾಗುತ್ತದೆ.

**ಸನೀಳಾಃ—ಗಯಃ, ಕೃದರಃ, ಗರ್ತಃ** ಇತ್ಯಾದಿ ೨೨ ಗೃಹನಾಮಗಳಲ್ಲಿ ಪಠಿತವಾಗಿರುವುದರಿಂದ ( ನಿ. ೩-೧೩ ) ನೀಳ ಶಬ್ದಕ್ಕೆ ಗೃಹವೆಂದರ್ಥ. ಮರುತ್ತುಗಳು ಯಾವಾಗಲೂ ಒಟ್ಟಿಗೆ ವಾಸಮಾಡುವುದರಿಂದ ಒಂದೇ ನಿಲಯವುಳ್ಳವರೆಂದಭಿಪ್ರಾಯ. ಮರುತ್ತುಗಳನ್ನುದ್ದೇಶಿಸುವಾಗ ಈ ವಿಶೇಷಣವು ಉಪಯೋಗಿಸಲ್ಪಟ್ಟಿದೆ.

**ಕ ಈಂ ವ್ಯಕ್ತಾ ನರಃ ಸನೀಳಾ ರುದ್ರಸ್ಯ ಮರ್ಯಾ ಅಧಾ ಸ್ವಶ್ವಾಃ ॥**

(ಋ. ಸಂ. ೭-೫೬-೧)

ಇತ್ಯಾದಿಋಕ್ಕುಗಳಲ್ಲೆಲ್ಲಾ **ಸನೀಳಾಃ** ಎಂಬ ವಿಶೇಷಣವು ಏಕನಿಲಯದ ವಾಸವನ್ನು ವರ್ಣಿಸುತ್ತದೆ.

**ಶುಭಾ—**ಈ ಪದಕ್ಕೆ **ಶೋಭಯಾ,** ಪ್ರಕಾಶದಿಂದ, ಸೌಂದರ್ಯದಿಂದ ಕೂಡಿದವರಾಗಿ ಎಂದು ಒಂದರ್ಥವೂ ಅಥವಾ, **ಶುಭ್** ಎಂಬ ಪದವು ಉದಕನಾಮಗಳಲ್ಲಿ ಪಠಿತವಾಗಿರುವುದರಿಂದ (ನಿ. ೨-೨೪) ಉದಕದಿಂದ ಕೂಡಿದವರಾಗಿ ಎಂದು ಇನ್ನೊಂದರ್ಥವೂ ಸಾಧ್ಯವಾಗುತ್ತದೆ.

ಈ ಸೂಕ್ತದಲ್ಲಿ ಇಂದ್ರಮರುತ್ತಗಳ ಸಂವಾದವನ್ನು ಪ್ರಾಣಕ್ಕೂ ಜೀವಾತ್ಮನಿಗೂ ನಡೆದ ಸಂಭಾಷಣೆಯೆಂದೂ ಅನ್ವಯಮಾಡಿ ಅಧ್ಯಾತ್ಮಪರವಾದ ಅರ್ಥವನ್ನು ಮಾಡಬಹುದೆಂದೂ ಸಾಯಣರು ತಿಳಿಸಿದ್ದಾರೆ.

ವ್ಯಾಕರಣಪ್ರಕ್ರಿಯಾ

**ಶುಭಾ**—ಶುಭ ದೀಪ್ತೌ ಧಾತು. ಕ್ವಿಪ್ ಪ್ರತ್ಯಯ ಕಿತ್ತಾದುದರಿಂದ ಲಘೂಪದಗುಣ ಬರುವುದಿಲ್ಲ. **ಸಾವೇಕಾಚಸ್ತೃತೀಯಾದಿಃ** (ಪಾ. ಸೂ. ೬-೧-೧೬೮) ಎಂಬುದರಿಂದ ತೃತೀಯಾಏಕವಚನಕ್ಕೆ ಉದಾತ್ತಸ್ವರ ಬರುತ್ತದೆ.

**ಸವಯಸಃ**—ಸಮಾನಂ ವಯಃ ಯೇಷಾಂ ತೇ. ಸವಯಸಃ **ಸಮಾನಸ್ಯ ಛಂದಸಿ**–(ಪಾ. ಸೂ. ೬-೩ ೮೪) ಎಂಬುದರಿಂದ ಸಮಾನಶಬ್ದಕ್ಕೆ ಸಭಾವ. ಬಹುವ್ರೀಹಿಯಲ್ಲಿ ಪೂರ್ವಪದಪ್ರಕೃತಿಸ್ವರ ಬರುತ್ತದೆ. ಸನೀಳಾಃ ಎಂಬಲ್ಲಿಯೂ ಹೀಗೆ ಸಮಾನಸ್ವರಗಳು ಬರುತ್ತವೆ.

**ಸಮಾನ್ಯಾ**—**ಕೇವಲಮಾಮಕಭಾಗಧೇಯಪಾಪಾಪರಸಮಾನ**–(ಪಾ. ಸೂ. ೪-೧-೩೦) ಎಂಬುದರಿಂದ ಙೀಪ್. ತೃತೀಯಾ ಏಕವಚನಾಂತರೂಪ.

**ಮಿಮಿಕ್ಷುಃ**- ಮಿಕ್ಷ ಸೇಚನೇ ಧಾತು, ಛಾಂದಸವಾಗಿ ವರ್ತಮಾನಾರ್ಥದಲ್ಲಿ ಲಿಟ್. ಪ್ರಥಮಪುರುಷ ಬಹುವಚನಾಂತರೂಪ ತಿಙಂತನಿಘಾತಸ್ವರ ಬರುತ್ತದೆ.

**ಮತೀ**—**ಮಂತ್ರೇವೃಷೇಷಪಚ**–(ಪಾ. ಸೂ. ೩-೩-೯೬) ಎಂಬುದರಿಂದ ಕ್ತಿನ್ ಉದಾತ್ತವಾಗುತ್ತದೆ. ತೃತೀಯಾಏಕವಚನ ಪರವಾದಾಗ **ಸುಪಾಂ ಸುಲುಕ್**–(ಪಾ. ಸೂ. ೭-೧-೩೯) ಎಂಬುದರಿಂದ ಪೂರ್ವಸವರ್ಣ ದೀರ್ಘ. ಏಕಾದೇಶವಾಗಿ ಬರುತ್ತದೆ.

**ಏತಾಸಃ**—ಆಙ್ ಉಪಸರ್ಗ. ಇಣ್ ಗತೌ ಧಾತು. ಕ್ತಪ್ರತ್ಯಯ. ಉಪಸರ್ಗದೊಡನೆ ಗುಣ. ಜಸ್ ಪರ ವಾದಾಗ **ಆಜ್ಜಸೇರಸುಕ್** (ಪಾ ಸೂ. ೭-೧-೫೦) ಎಂಬುದರಿಂದ ಅದಕ್ಕೆ ಅಸುಕಾಗಮ.

**ಅರ್ಚಂತಿ**—ಅರ್ಚ ಪೂಜಾಯಾಂ ಧಾತು. **ಲಟ್** ಪ್ರಥಮಪುರುಷಬಹುವಚನಾಂತರೂಪ. ಪಾದಾದಿಯಲ್ಲಿ ರುವುದರಿಂದ ನಿಘಾತಸ್ವರ ಬರುವುದಿಲ್ಲ. ಲಸಾರ್ವಧಾತುಕವು ಅನುದಾತ್ತವಾಗುವುದರಿಂದ ಧಾತುಸ್ವರ ಉಳಿಯುತ್ತದೆ

**ಶುಷ್ಮಮ್**—ಶುಷ ಶೋಷಣೇ ಧಾತು. **ಇಷಿಯುಧೀಂಧಿದಸಿಶ್ಯಾಧೂಸೂಭ್ಯೋ ಮಕ್** (ಉ ಸೂ ೧-೧೪೪) ಎಂಬುದರಿಂದ ಮನ್ ಪ್ರತ್ಯಯ. ಕಿತ್ವವಿಧಾನಮಾಡಿರುವುದರಿಂದ ಲಘೂಪಧಗುಣ ಬರುವುದಿಲ್ಲ ನಿತ್ತಾದುದರಿಂದ **ಞ್ನಿತ್ಯಾದಿ— ರ್ನಿತ್ಯಮ್** ಎಂಬುದರಿಂದ ಆದ್ಯುದಾತ್ತಸ್ವರ ಬರುತ್ತದೆ-

**ವಸೂಯಾ**—ವಸೂನಿ ಆತ್ಮನಃ ಇಚ್ಛತಿ ಇತಿ। **ಸುಪ ಆತ್ಮನಃ ಕ್ಯಚ್** (ಪಾ. ಸೂ. ೩-೧-೮) ಎಂಬುದ ರಿಂದ ಕ್ಯಚ್ ಬಂದಾಗ ಅದರ ಮೇಲೆ **ಅಪ್ರತ್ಯಯಾತ್** (ಪಾ. ಸೂ. ೩-೩-೧೦೨) ಎಂಬುದರಿಂದ ಅಪ್ರತ್ಯಯ. ಛಾಂದಸವಾಗಿ ಪೂರ್ವಕ್ಕೆ ದೀರ್ಘ. ತೃತೀಯಾಏಕವಚನ ಪರವಾದಾಗ **ಸುಪಾಂ ಸುಲುಕ್** ಎಂಬುದರಿಂದ ಪೂರ್ವಸವರ್ಣದೀರ್ಘ. ದ್ವಿತೀಯಾರ್ಥದಲ್ಲಿ ಜಸ್ ಪರವಾದಾಗ ಪೂರ್ವಸೂತ್ರದಿಂದ ಯಾಜಾದೇಶ. ಪ್ರತ್ಯಯ ಸ್ವರದಿಂದ ಅಂತೋದಾತ್ತವಾಗುತ್ತದೆ. ॥ ೧ ॥

ಸಂಹಿತಾಪಾಠಃ

ಕಸ್ಯ ಬ್ರಹ್ಮಾಣಿ ಜುಜುಷುರ್ಯುವಾನಃ ಕೋ ಅಧ್ವರೇ ಮರುತ ಆ ವವರ್ತ ।
ಶ್ಯೇನಾಁಇವ ಧ್ರಜತೋ ಅಂತರಿಕ್ಷೇ ಕೇನ ಮಹಾ ಮನಸಾ ರೀರಮಾಮ ॥ ॥ ೨ ॥

। ಪದಪಾಠಃ ।

ಕಸ್ಯ । ಬ್ರಹ್ಮಾಣಿ । ಜುಜುಷುಃ । ಯುವಾನಃ । ಕಃ । ಅಧ್ವರೇ । ಮರುತಃ । ಆ । ವವರ್ತ ।
ಶ್ಯೇನಾನ್ಽಇವ । ಧ್ರಜತಃ । ಅಂತರಿಕ್ಷೇ । ಕೇನ । ಮಹಾ । ಮನಸಾ । ರೀರಮಾಮ ॥ ೨ ॥

ಸಾಯಣಭಾಷ್ಯಂ

**ಯುವಾನೋ ನಿತ್ಯತರುಣಾ ಮಹಾನುಭಾವಾ ಮರುತಃ ಕಸ್ಯ ಮಹಾಭಾಗಸ್ಯ ಬ್ರಹ್ಮಾಣಿ ಪರಿವೃಢಾನಿ ಹವೀಂಷಿ ಜುಜುಷುಃ । ಸೇವಂತೇ । ಕಶ್ಚ ಮಹಾನಧ್ವರೇ ಸ್ವಕೀಯೇ ಯಾ ಮರುತ ಏತಾನಾವವರ್ತ । ಯಾಗಾಂತರೇಭ್ಯೋ ನಿವರ್ತಯತಿ । ದುರ್ನಿಗ್ರಹತ್ವೇ ದೃಷ್ಟಾಂತಮಾಹ । ಅಂತರಿಕ್ಷೇ ಧ್ರಜತೋ ಗಚ್ಛತಃ ಶ್ಯೇನಾಞ್ಛಂಸನೀಯಗಮನಾನೇತನ್ನಾಮಕಾನ್ಪಕ್ಷಿಣ ಇವ । ಕೇನ ತತ್ಪ್ರೀತಿಸಾಧನೇನ ಮಹಾ ಮಹತಾ ಮನಸಾ ಮನನವತಾ ಸ್ತೋತ್ರೇಣ ರೀರಮಾಮ । ರಮಯೇಮಹಿ ॥**

। ಪ್ರತಿಪದಾರ್ಥ ।

**ಯುವಾನಃ**—ನಿತ್ಯಯುವಕರಾದ ಮರುತ್ತುಗಳು । **ಕಸ್ಯ**—ಯಾವ ಮಹಾತ್ಮನ । **ಬ್ರಹ್ಮಾಣಿ**—ಹವಿಸ್ಸುಗಳನ್ನು । **ಜುಜುಷುಃ**—ಸೇವಿಸುತ್ತಾರೆ ? । **ಕಃ**—ಯಾವ ಮಹಾತ್ಮನು । **ಅಧ್ವರೇ**—ಯಾಗದಲ್ಲಿ । **ಮರುತಃ**—ಮರುತ್ತುಗಳನ್ನು । **ಆ ವವರ್ತ**—(ಇತರ ಯಾಗಗಳಿಂದ)ಹಿಂತಿರುಗುವಂತೆ ಮಾಡಿ ತನ್ನ ಯಾಗಕ್ಕೆ ಬರಮಾಡಿ ಕೊಳ್ಳುತ್ತಾನೆ ? । **ಅಂತರಿಕ್ಷೇ**—ಅಂತರಿಕ್ಷದಲ್ಲಿ । **ಧ್ರಜತಃ**—ಸಂಚರಿಸುವ । **ಶ್ಯೇನಾನಿವ**—ಶ್ಯೇನಪಕ್ಷಿಗಳಂತೆ (ಸಂಚರಿಸುವ ಮರುತ್ತುಗಳನ್ನು) । **ಮಹಾ**—ಮಹತ್ತಾದುದೂ । **ಕೇನ ಮನಸಾ**—ಧ್ಯಾನಾತ್ಮಕವಾದುದೂ ಆದ ಯಾವ ಸ್ತೋತ್ರದಿಂದ । **ರೀರಮಾಮ**—ಆರಾಧಿಸೋಣ ? ।

ಭಾವಾರ್ಥ

ನಿತ್ಯಯುವಕರಾದ ಮರುತ್ತುಗಳು ಯಾವ ಮಹಾತ್ಮನ ಹವಿಸ್ಸುಗಳನ್ನು ಸೇವಿಸುತ್ತಾರೆ ? ಯಾವ ಮಹಾತ್ಮನು ಯಾಗದಲ್ಲಿ ಮರುತ್ತುಗಳನ್ನು ಇತರ ಯಾಗಗಳಿಂದ ಹಿಂತಿರುಗುವಂತೆ ಮಾಡಿ ತನ್ನ ಯಾಗಕ್ಕೆ ಆಕರ್ಷಿಸುತ್ತಾನೆ ? ಅಂತರಿಕ್ಷದಲ್ಲಿ ಸಂಚರಿಸುವ ಶ್ಯೇನಪಕ್ಷಿಗಳಂತೆ ಸಂಚರಿಸುವ ಮರುತ್ತುಗಳನ್ನು ಮಹತ್ತಾದುದೂ ಧ್ಯಾನಾತ್ಮಕವಾದುದೂ ಆದ ಯಾವ ಸ್ತೋತ್ರದಿಂದ ಆರಾಧಿಸೋಣ ?

## English Translation

Of whose oblations do the youthful (Maruts) approve? who attracts them to his (own) sacrifice (from the rites of others)? with what powerful praise may we propitiate (them), wandering like kites in the mid-air?

### ವಿಶೇಷವಿಷಯಗಳು

**ಬ್ರಹ್ಮಾಣಿ**—ಬ್ರಹ್ಮಶಬ್ದವನ್ನು ಅನ್ನನಾಮಗಳಲ್ಲಿಯೂ, (ನಿ. ೩-೯) ಧನನಾಮಗಳಲ್ಲಿಯೂ (ನಿ ೩-೯) ಪಠಿಸಿದೆ. ಅನ್ನ, ಕರ್ಮ, ಸ್ತುತಿ ಎಂಬರ್ಥಗಳಲ್ಲಿ ಈ ಪದದ ಪ್ರಯೋಗವಿದೆ. ವೃದ್ಧಿಯನ್ನು ಹೊಂದು ಎಂಬರ್ಥವುಳ್ಳ ಬೃಹಿ ಧಾತುವಿನಿಂದ ಪ್ರಕೃತವಾದ ಬ್ರಹ್ಮಶಬ್ದವು ನಿಷ್ಪನ್ನವಾಗಿ ವೃದ್ಧಿಯನ್ನು ಹೊಂದಿದ ಕರ್ಮ ಅಥವಾ ಅನ್ನವೆಂದರ್ಥವಾಗುತ್ತದೆ. ಹಿಂದೆ,

**ಯಾಮಥರ್ವಾ ಮನುಷ್ಪಿತಾ ದಧ್ಯಙ್ ಧಿಯಮತ್ನತ।**
**ತಸ್ಮಿನ್ ಬ್ರಹ್ಮಾಣಿ ಪೂರ್ವಥೇಂದ್ರ ಉಕ್ಥಾ ಸಮಗ್ಮತಾರ್ಚನ್ನನು ಸ್ವರಾಜ್ಯಂ।**
(ಋ ಸಂ. ೧-೮೦-೧೬)

ಎಂಬ ಋಕ್ಕಿನಲ್ಲಿ ಬ್ರಹ್ಮಶಬ್ದಕ್ಕೆ ಸಾಯಣರು ಹವೀರೂಪವಾದ ಅನ್ನವೆಂದರ್ಥಮಾಡಿರುವಂತೆ ಪ್ರಕೃತವಾದ ಋಕ್ಕಿನಲ್ಲಿಯೂ ಅದೇ ಅರ್ಥವನ್ನು ಹೇಳಬಹುದು. (ನಿ. ೧೨-೩೪)

**ಅಧ್ವರೇ—ಧ್ವರತಿಃ ಹಿಂಸಾಕರ್ಮ ತತ್ಪ್ರತಿಷೇಧಃ।** ಕೊಲ್ಲು ಎಂಬರ್ಥವನ್ನು ಕೊಡುವ **ಧ್ವೃ** ಧಾತುವಿನ ನಿಷೇದಾರ್ಥವನ್ನು ಸೂಚಿಸುತ್ತದೆ (ನಿ. ೧-೮) ಅಹಿಂಸಾತ್ಮಕವಾದ ಯಜ್ಞದಲ್ಲಿ ಎಂದರ್ಥ.

**ಧ್ರಜತಃ**—ಧ್ರಜತಿ ಎಂಬ ಪದವು ಗತಿ ಕರ್ಮನಾಮಗಳಲ್ಲಿ ಪಠಿತವಾಗಿದೆ. (ನಿ. ೨-೯). ಮರುತ್ತುಗಳ ಸಂಚಾರ ಕ್ರಮವನ್ನು ಸೂಚಿಸುವ ಪದವಾಗಿದೆ.

**ಅಂತರಿಕ್ಷೇ—ಅಂತರಿಕ್ಷಂ ಕಸ್ಮಾದಂತರಾ ಕ್ಷಾಂತಂ ಭವತ್ಯಂತರೇಮೇ ಇತಿ ವಾ ಶರೀರೇಷ್ವಂತ-ರಕ್ಷಯಮಿತಿ ವಾ।** (ನಿ. ೨-೧೦) ಪೃಥಿವಿಗೂ ದ್ಯುಲೋಕಕ್ಕೂ ನಡುವೆ ಇರುವುದರಿಂದಾಗಲಿ, ಅಥವಾ ಪೃಥಿವಿಯ ಅಂಚಿನಲ್ಲಿರುವುದು ಎಂಬುದರಿಂದಾಗಲಿ ಈ ಹೆಸರು ಪ್ರಸಿದ್ಧವಾಗಿದೆಯೆಂದು ನಿರುಕ್ತಕಾರರು ನಿರ್ವಚನವನ್ನು ಹೇಳಿದ್ದಾರೆ.

**ಮನಸಾ—ಮನೋ ಮನೋತೇಃ** (ನಿ ೪-೪) **ಚಿಂತಿಸು, ಧ್ಯಾನಮಾಡು,** ಎಂಬರ್ಥವನ್ನು ಕೊಡುವ **ಮನ್** ಧಾತುವಿನಿಂದ ನಿಷ್ಪನ್ನವಾಗಿ ಧ್ಯಾನಪೂರ್ವಕವಾದ ಅಥವಾ ಶ್ರದ್ಧಾಪೂರ್ವಕವಾದ ಎಂಬರ್ಥವನ್ನು ಕೊಡುತ್ತದೆ. ಇಲ್ಲಿ ಸಾಯಣರು **ಮನನವತಾ ಸ್ತೋತ್ರೇಣ।** ಧ್ಯಾನಾತ್ಮಕವಾದ ಸ್ತುತಿಯಿಂದ ಎಂದರ್ಥಮಾಡಿದ್ದಾರೆ.

**ಆ ವಿಶ್ವತಃ ಪ್ರತ್ಯಂಚಂ ಜಿಘರ್ಮ್ಯರಕ್ಷಸಾ ಮನಸಾ ತಜ್ಜುಷೇತ।**
**ಮರ್ಯಶ್ರೀಃ ಸ್ಪೃಹಯದ್ವರ್ಣೋ ಅಗ್ನಿರ್ನಾಭಿಮೃಶೇ ತನ್ವಾ ಜರ್ಭುರಾಣಃ॥**
(ಋ. ಸಂ. ೨-೧೦-೫)

ಇತ್ಯಾದಿ ಋಕ್ಕುಗಳಲ್ಲಿ ಶ್ರದ್ಧಾಪೂರ್ವಕವೂ, ಧ್ಯಾನಾತ್ಮಕವೂ ಆದ ಸ್ತೋತ್ರ ಎಂದರ್ಥವಾಗುವಂತೆ ಪ್ರಕೃತವಾದ ಋಕ್ಕಿನಲ್ಲಿಯೂ ಸ್ತುತಿಯಿಂದ ಎಂದು ತಾತ್ಪರ್ಯವಾಗುತ್ತದೆ.

॥ ವ್ಯಾಕರಣಪ್ರಕ್ರಿಯಾ ॥

**ಜುಜುಷುಃ**—ಜುಷೀ ಪ್ರೀತಿಸೇವನಯೋಃ ಧಾತು. ಛಾಂದಸವಾಗಿ ವರ್ತಮಾನಾರ್ಥದಲ್ಲಿ ಲಿಟ್ ಪ್ರಥಮಪುರುಷಬಹುವಚನಾಂತರೂಪ. ಅತಿಜಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

**ಅಧ್ವರೇ—ನಞ್ ಸುಭ್ಯಾಮ್** (ಪಾ. ಸೂ. ೬-೨-೧೭೨) ಎಂಬುದರಿಂದ ಉತ್ತರಪದ ಅಂತೋದಾತ್ತಸ್ವರ ಬರುತ್ತದೆ.

**ವವರ್ತಿ**—ವೃತು ವರ್ತನೆ. ಧಾತು. **ವ್ಯತ್ಯಯೋ ಬಹುಲಮ್** ಎಂಬುದರಿಂದ ಪರಸ್ಮೈಪದಿಯಾಗುತ್ತದೆ ಛಾಂದಸವಾಗಿ ಲಿಟ್. ಪ್ರಥಮಪುರುಷ ಏಕವಚನಾಂತರೂಪ. ತಿಜಂತನಿಘಾತಸ್ವರ ಬರುತ್ತದೆ.

**ಶ್ಯೇನಾನ್**—ಶ್ಯೈಙ್. ಗತೌ. ಧಾತು. **ಶ್ಯಾಸ್ತ್ಯಾಹೃಞ್ವಿಭ್ಯ ಇನಚ್** (ಉ. ಸೂ. ೨-೨೦೪) ಎಂಬುದರಿಂದ ಇನಚ್ ಪ್ರತ್ಯಯ. **ಆದೇಚಉಪದೇಶೇಽಶಿತಿ** (ಪಾ. ಸೂ. ೬-೧-೪೫) ಎಂಬುದರಿಂದ ಧಾತುವಿಗೆ ಆತ್ವ ಬಂದಾಗ ಗುಣ. ಚಿತ್ತ್ವಾದುದರಿಂದ ಅಂತೋದಾತ್ತಸ್ವರ ಬರುತ್ತದೆ.

**ಧ್ರಜತಃ**—ಧ್ರಜ ಗತೌ. ಧಾತು. ಲಟ್ ಬಂದಾಗ ಅದಕ್ಕೆ ಶತ್ರಾದೇಶ ಶಪ್ ವಿಕರಣ. ದ್ವಿತೀಯಾ ಬಹುವಚನಾಂತರೂಪ. **ತಾಸ್ಯನುದಾತ್ತೇತ್**—(ಪಾ. ಸೂ. ೬-೧-೧೮೬) ಎಂಬುದರಿಂದ ಲಸಾರ್ವಧಾತುಕವು ಅನುದಾತ್ತವಾಗುವುದರಿಂದ ಧಾತುಸ್ವರ ಉಳಿಯುತ್ತದೆ.

**ಮಹಾ**—ಮಹ ಪೂಜಾಯಾಂ ಧಾತು. **ಕ್ವಿಪ್ ಚ** ಎಂಬುದರಿಂದ ಕ್ವಿಪ್‌ಪ್ರತ್ಯಯ. ತೃತೀಯಾ ಏಕವಚನಾಂತರೂಪ. **ಸಾವೇಕಾಚಸ್ತೃತೀಯಾದಿಃ** (ಪಾ ಸೂ ೬-೧-೧೬೮) ಎಂಬುದರಿಂದ ವಿಭಕ್ತಿ ಉದಾತ್ತವಾಗುತ್ತದೆ.

**ರೀರಮಾಮ**—ರಮು ಕ್ರೀಡಾಯಾಂ ಧಾತು. ಛಾಂದಸವಾಗಿ ವರ್ತಮಾನಾರ್ಥದಲ್ಲಿ ಣಿಜಂತದ ಮೇಲೆ ಲುಙ್. ಉತ್ತಮಪುರುಷಬಹುವಚನದಲ್ಲಿ ಮಸ್. **ನಿತ್ಯಂಙಿತಃ** ಎಂಬುದರಿಂದ ಸಕಾರಲೋಪ **ಣಿಶ್ರಿದ್ರುಸ್ರು**-(ಪಾ. ಸೂ. ೩-೧-೪೮) ಎಂಬುದರಿಂದ ಚ್ಲಿಗೆ ಚಙ್. **ಚಙಿ** ಎಂಬುದರಿಂದ ದ್ವಿತ್ವ **ಣೌಚಙ್ಯುಪಧಾಯಾಃಹ್ರಸ್ವಃ** (ಪಾ. ಸೂ. ೭-೪-೧) ಎಂಬುದರಿಂದ ಧಾತುವಿನ ಉಪಧೆಗೆ ಹ್ರಸ್ವ. **ಸನ್ವಲ್ಲಘುನಿ ಚಙ್**-(ಪಾ. ಸೂ. ೭-೪-೯೩) ಎಂಬುದರಿಂದ ಸನ್ವದ್ಭಾವ ಬರುವುದರಿಂದ **ಸನ್ಯತಃ** (ಪಾ. ಸೂ. ೭-೪-೭೯) ಎಂಬುದರಿಂದ ಅಭ್ಯಾಸಕ್ಕೆ ಇತ್ವ. **ದೀರ್ಘೋಲಘೋಃ** (ಪಾ. ಸೂ. ೭-೪-೯೪) ಎಂಬುದರಿಂದ ಅದಕ್ಕೆ ದೀರ್ಘ. **ಬಹುಲಂ ಛಂದಸ್ಯ**—(ಪಾ. ಸೂ. ೬-೪-೭೫) ಎಂಬುದರಿಂದ ಅಡಾಗನು ಬರುವುದಿಲ್ಲ. ತಿಜಂತನಿಘಾತಸ್ವರ ಬರುತ್ತದೆ. ॥ ೨ ॥

———೩೦೩———

ಸಂಹಿತಾಪಾಠಃ

ಕುತಸ್ತ್ವಮಿಂದ್ರ ಮಾಹಿನಃ ಸನ್ನೇಕೋ ಯಾಸಿ ಸತ್ಪತೇ ಕಿಂ ತ ಇತ್ಥಾ ।
ಸಂ ಪೃಚ್ಛಸೇ ಸಮರಾಣಃ ಶುಭಾನೈರ್ವೋಚೇಸ್ತನ್ನೋ ಹರಿವೋ ಯತ್ತೇ
ಅಸ್ಮೇ ॥ ೩ ॥

ಪದಪಾಠಃ

ಕುತಃ । ತ್ವಂ । ಇಂದ್ರ । ಮಾಹಿನಃ । ಸನ್ । ಏಕಃ । ಯಾಸಿ । ಸತ್ಽಪತೇ । ಕಿಂ । ತೇ । ಇತ್ಥಾ ।
ಸಂ । ಪೃಚ್ಛಸೇ । ಸಂಽಅರಾಣಃ । ಶುಭಾನೈಃ । ವೋಚೇಃ । ತತ್ । ನಃ । ಹರಿಽವಃ । ಯತ್ । ತೇ । ಅಸ್ಮೇ
ಇತಿ ॥ ೩ ॥

ಸಾಯಣಭಾಷ್ಯಂ

ಅಥ ಮರುತ ಇಂದ್ರೇಣೋಕ್ತಾಸ್ತೃತೀಯಯಾನಯಾ ಪತಿಬ್ರುವತೇ ॥

ಹೇ ಇಂದ್ರ ಸತ್ಪತೇ ಸತಾಂ ಪಾಲಕ ತ್ವಂ ಮಾಹಿನೋ ಮಹನೀಯಃ ಪೂಜನೀಯಃ। ಅನುಚರೈರನುಗಂತವ್ಯ ಇಶ್ವರ್ಥಃ। ತಥಾಭೂತಃ ಸನ್ನಪ್ಯೇಕೋಽಸಹಾಯಃ ಸನ್ ಕುತೋ ಯಾಸಿ । ಕುತಃ ಕಾರಣಾದ್ಯಾಸಿ । ಯದ್ವಾ । ಕುತ್ರ ಯಾಸಿ । ತೇ ತವೇತ್ಥೇತ್ಥಂ ಕಿಂ । ಕಿಂ ತ್ವಮೇವಮೇವ । ಕಿಂ ನ ಕೋಽಪ್ಯನುಚರೋಽಸ್ತಿ । ಕಿಂಚ ತ್ವಂ ಸಮರಾಣೋಽಸ್ಮಾಭಿಃ ಸಂಗಚ್ಛಮಾನಃ ಸಂ ಪೃಚ್ಛಸೇ । ಸಮೀಚೀನಂ ಪೃಚ್ಛಸಿ । ಹೇ ಹರಿವೋ ಹರಿಭ್ಯಾಂ ತದ್ವನ್ನಿಂದ್ರ ತೇ ತವಾಸ್ಮೇ ಅಸ್ಮಾಸು ಯಃದ್ವಕ್ತುಮಿಷ್ಟತಮಮಸ್ತಿ ತನ್ನೋಽಸ್ಮಭ್ಯಂ ಶುಭಾನೈಃ ಶೋಭಮಾನೈರ್ವಚನೈರ್ವೋಚೇಃ । ಬ್ರೂಹಿ ॥

ಪ್ರತಿಪದಾರ್ಥ

**ಸತ್ಪತೇ**—ಸಜ್ಜನರ ಪಾಲಕನಾದ । **ಇಂದ್ರ**—ಎಲೈ ಇಂದ್ರನೇ । **ತ್ವಂ**—ನೀನು । **ಮಾಹಿನಃ ಸನ್**—ಪೂಜ್ಯನಾಗಿಯೂ ಅನುಚರರಿಂದ ಹಿಂಬಾಲಿಸಲ್ಪಡುವವನಾಗಿಯೂ ಇದ್ದರೂ ಸಹ । **ಏಕಃ**—ಒಬ್ಬಂಟಿಗನಾಗಿ **ಕುತಃ**—ಏತಕ್ಕೆ (ಅಥವಾ ಎಲ್ಲಿಗೆ) । **ಯಾಸಿ**—ಹೊರಟದ್ದೀಯೆ ? । **ತೇ**—ನಿನ್ನ । **ಇತ್ಥಾ**—ಅನುಚರರಹಿತನಾಗಿರುವ ಈ ವ್ಯವಹಾರವು । **ಕಿಂ**—ಏತಕ್ಕಾಗಿ ? । **ಸಮರಾಣಃ**—ನಮ್ಮಿಂದ ಹಿಂಬಾಲಿಸಲ್ಪಡುವ ನೀನು । **ಸಂಪೃಚ್ಛಸೇ**—ಸೂಕ್ತವಾಗಿ ಕೇಳಲ್ಪಟ್ಟವನಾಗಿದ್ದೀಯೆ । **ಹರಿವಃ**—ಹರಿನಾಮುಕವಾದ ಅಶ್ವಗಳಿಂದ ಕೂಡಿದ ಎಲೈ ಇಂದ್ರನೇ, । **ತೇ**—ನಿನ್ನ ಸಂಬಂಧಿಗಳಾದ । **ಅಸ್ಮೇ**—ನಮ್ಮಲ್ಲಿ । **ಯತ್**—ನೀನು ಹೇಳಬೇಕಾದುದು ಯಾವುದಿದೆಯೋ । **ತತ್**—ಅದನ್ನು । **ನಃ**—ನಮಗೆ । **ಶುಭಾನೈಃ**—ಶೋಭನಾತ್ಮಕಗಳಾದ ಮಾತುಗಳಿಂದ । **ವೋಚೇಃ**—ಹೇಳು ।

ಭಾವಾರ್ಥ

ಸಜ್ಜನರ ಪಾಲಕನಾದ ಎಲೈ ಇಂದ್ರನೇ, ನೀನು ಪೂಜ್ಯನಾಗಿಯೂ, ಅನುಚರರಿಂದ ಹಿಂಬಾಲಿಸಲ್ಪಡುವವನಾಗಿಯೂ ಇದ್ದರೂ ಸಹ ಒಬ್ಬಂಟಿಗನಾಗಿ ಎಲ್ಲಿಗೆ ಹೊರಟಿದ್ದೀಯೆ ? ಅನುಚರರಹಿತನಾಗಿರುವ ನಿನ್ನ ಈ ವ್ಯವಹಾರವು ಏತಕ್ಕಾಗಿ ? ನಮ್ಮಿಂದ ಹಿಂಬಾಲಿಸಲ್ಪಡುವ ನೀನು ಸೂಕ್ತವಾಗಿ ಪೃಷ್ಟನಾಗಿದ್ದೀಯೆ. ಹರಿನಾಮಕವಾದ ಅಶ್ವಗಳಿಂದ ಕೂಡಿದ ಎಲೈ ಇಂದ್ರನೇ, ನಿನ್ನ ಸಂಬಂಧಿಗಳಾದ ನಮ್ಮಲ್ಲಿ ನೀನು ಹೇಳಬೇಕಾದುದು ಏನಿದೆಯೋ ಅದನ್ನು ನಮಗೆ ಶೋಭನಾತ್ಮಕಗಳಾದ (ಒಳ್ಳೆಯ) ಮಾತುಗಳಿಂದ ಹೇಳು

English Translation

( The Maruts ),—Indra, lord of the good, whither do you, who are entitled to honour, proceed alone? what means this (absence of attendence): when followed (by us), you require (what is right)? Lord of fleet horses, say to us, with pleasant words, that which you (have to say) to us.

ವಿಶೇಷವಿಷಯಗಳು

**ಸತ್ಪತೇ—ಸತಾಂ ಪಾಲಕ** ; ಎಂದು ಸಾಯಣರು ವಿವರಿಸಿದ್ದಾರೆ. **ಸತಾಂ** ಎಂದರೆ, ಸತ್ತುಗಳಿಗೆ ಎಂದರೆ ಸತ್ತಾತ್ಮಕವಾದ ಸಕಲ ಭೂತಗಳಿಗೂ ಎಂದಾಗಬಹುದು. ಅಥವಾ ಸಕಲ ಸಜ್ಜನರಿಗೂ ಎಂದಾಗಬಹುದು. ಈ ಪದಕ್ಕೆ ಇಲ್ಲಿ ವಿಶೇಷಾರ್ಥವಿದೆಯೆಂದು ತಿಳಿಸುತ್ತಾ Max Muller ಎಂಬ ಪಂಡಿತನು ಈ ರೀತಿ ತಿಳಿಸಿದ್ದಾನೆ.

Sat-pati, Lord of men means Lord of real men, of heroes, and should not be translated as good lord. Sat (ಸತ್) by itself is frequently used in the sense of heroes, of men physically rather than morally good.

ಕೇವಲ ಪ್ರಜೆಗಳ ಪಾಲಕನೆಂದು ಮಾತ್ರವಲ್ಲ : ಶಕ್ತಿಯುತರಾಗಿಯೂ, ಯುದ್ಧಾದಿಗಳಲ್ಲಿ ತಮ್ಮ ಪರಾಕ್ರಮವನ್ನು ತೋರುವವರಾಗಿಯೂ ಇರತಕ್ಕ ಪ್ರಜೆಗಳ ಪಾಲಕನೆಂದರ್ಥವೆಂದು ವಿವರಿಸಿ ಉದಾಹರಣೆಗಾಗಿ ಈ ಪದಪ್ರಯೋಗವಿರುವ ಎರಡು ಋಕ್ಕುಗಳನ್ನು ಉದಹರಿಸಿದ್ದಾನೆ. ಮೊದಲನೆಯದಾಗಿ—

**ತ್ವಮಗ್ನ ಇಂದ್ರೋ ವೃಷಭಃ ಸತಾಮಸಿ ತ್ವಂ ವಿಷ್ಣುರುರುಗಾಯೋ ನಮಸ್ಯಃ ।**
**ತ್ವಂ ಬ್ರಹ್ಮಾ ರಯಿವಿದ್ಬ್ರಹ್ಮಣಸ್ಪತೇ ತ್ವಂ ವಿಧರ್ತಃ ಸಚಸೇ ಪುರಂಧ್ಯಾ ॥**

( ಋ. ಸಂ. ೨-೨-೩ )

ಎಂಬ ಋಕ್ಕಿನಲ್ಲಿ **ಸತಾಂ ವೃಷಭಃ ಅಸಿ** ಎನ್ನುವುದಕ್ಕೆ ವೀರರಲ್ಲಿ ವೀರನು ಎಂದರ್ಥವೆಂದೂ, ಹೀಗೆಯೇ

**ಸಮತ್ಸು ತ್ವಾ ಶೂರ ಸತಾಮುರಾಣಂ ಪ್ರಪಥಿಂತಮಂ ಪರಿಸಂಶಯಧ್ಯೈ ।**
**ಸಜೋಷಸ ಇಂದ್ರಂ ಮದೇ ಕ್ಷೋಣೀಃ ಸೂರಿಂ ಚಿದ್ಯೇ ಅನುಮದಂತಿ ವಾಜೈಃ ॥**

(ಋ. ಸಂ. ೧-೧೭೩-೭)

ಎಂಬಲ್ಲಿ, **ಸಮತ್ಸು ಶೂರ ಸತಾಮುರಾಣಂ** ಎಂಬುದಕ್ಕೆ ಯುದ್ಧದಲ್ಲಿ ವೀರರನ್ನು ರಕ್ಷಿಸುವವನು ಎಂಬಂತೆಯೇ ಪ್ರಕೃತವಾದ ಋಕ್ಕಿನಲ್ಲಿಯೂ **ಸತ್**ಶಬ್ದಕ್ಕೆ ವೀರರೆಂದರ್ಥವೆಂದು ಹೇಳಬೇಕೆಂದು ತಿಳಿಸುತ್ತಾನೆ.

**ಶುಭಾನೈಃ— ಶೋಭಮಾನೈಃ ವಚನೈಃ ।** ಶೋಭನಾತ್ಮಕಗಳಾದ ವಾಕ್ಯಗಳಿಂದ ಎಂದು ಸಾಯಣರು ಅರ್ಥಮಾಡಿದ್ದಾರೆ. ಆದರೆ ಈ ಪದವು ಮರುತ್ತುಗಳಿಗೆ ಪರ್ಯಾಯಪದವಾಗಿ ಉಪಯೋಗಿಸಲ್ಪಟ್ಟಿದೆಯೆರಡೂ ಕೆಲವರ ಮತವಾಗಿದೆ.

**ಶುಭಾನ** is evidently meant as a name for the Maruts, who thus speak of themselves in the third person which is by no means unusual in the Rig-Veda.

(Max Muller's Sacred Books of the east. Vol. XXII. p. 190)

**ವ್ಯಾಕರಣಪ್ರಕ್ರಿಯಾ**

**ಮಾಹಿನಃ—** ಮಹ ಪೂಜಾಯಾಂ ಧಾತು **ಮಹೇರಿನಣ್ ಚ** (ಉ ಸೂ ೨-೨೧೪) ಎಂಬುದರಿಂದ ಇನಣ್ ಪ್ರತ್ಯಯ. **ಅತಉಪಧಾಯಾಃ** (ಪಾ. ಸೂ. ೭-೨-೧೧೬) ಎಂಬುದರಿಂದ ಧಾತುವಿನ ಉಪಧೆಗೆ ವೃದ್ಧಿ.

**ಸತ್ಪತೇ—** ಸತಾಂ ಪತಿಃ ಸತ್ಪತಿಃ ಸಂಬುದ್ಧ್ಯಂತರೂಪ. **ಆಮಂತ್ರಿತಸ್ಯಚ** (ಪಾ. ಸೂ ೮-೧-೧೯) ಎಂಬುದದರಿಂದ ನಿಘಾತಸ್ವರ ಬರುತ್ತದೆ.

**ಪೃಚ್ಛಸೇ—** ಪ್ರಚ್ಛ ಜ್ಞೀಪ್ಸಾಯಾಂ ವಾಚಿ ಧಾತು **ವಿದಿಪ್ರಚ್ಛಿಸ್ವರತೀನಾಮುಪಸಂಖ್ಯಾನಮ್** (ಪಾ ಸೂ ೧-೩-೨೯-೧) ಎಂಬುದರಿಂದ ಸಮ್‌ಸಂಬಂಧವಿರುವುದರಿಂದ ಆತ್ಮನೇಪದಿಯಾಗುತ್ತದೆ. **ಲಟ್** ಮಧ್ಯಮಪುರುಷ ಏಕವಚನಾಂತರೂಪ. ತಿಙಂತಸ್ವರ ಬರುತ್ತದೆ.

**ಸಮರಾಣಃ—** ಋ ಗತೌ. ಧಾತು. **ಅರ್ತಿಶ್ರುದೃಶಿಭ್ಯಶ್ಚೇತಿ ವಕ್ತವ್ಯಮ್** (ಪಾ. ಸೂ. ೧-೩-೨೯-೨) ಎಂಬುದರಿಂದ ಸಮ್ ಸಂಬಂಧವಿರುವುದರಿಂದ ಲಟಿಗೆ ಆತ್ಮನೇಪದ ಶಾನಚ್ ಬರುತ್ತದೆ. **ಅಟ್ ಕುಪ್ವಾಙ್—** ಎಂಬುದರಿಂದ ಪ್ರತ್ಯಯ ನಕಾರಕ್ಕೆ ಣತ್ವ. ಚಿತ್ತಾದುದರಿಂದ ಅಂತೋದಾತ್ತಸ್ವರ ಬರುತ್ತದೆ. **ಪ್ರಾದಿಸಮಾಸದಲ್ಲಿ** ಕೃದುತ್ತರಪದ ಪ್ರಕೃತಿಸ್ವರ ಬರುತ್ತದೆ.

**ಶುಭಾನೈಃ—** ಶುಭ ದೀಪ್ತೌ ಧಾತು. ಲಟಿಗೆ ಶಾನಚಾದೇಶ. **ಬಹುಲಂ ಛಂದಸಿ** ಎಂಬುದರಿಂದ ಶಪಿಗೆ ಲುಕ್, **ಸಾರ್ವಧಾತುಕಮಪಿತ್** ಎಂಬುದರಿಂದ ಶಾನಚ್ ಙಿತ್ತಾದುದರಿಂದ ಅದನ್ನು ನಿಮಿತ್ತೀಕರಿಸಿ ಧಾತುವಿನ ಲಘೂಪಧೆಗೆ ಗುಣ ಬರುವುದಿಲ್ಲ. **ಚಿತಃ** ಎಂಬುದರಿಂದ ಅಂತೋದಾತ್ತಸ್ವರ ಬರುತ್ತದೆ.

**ವೋಚೇಃ—** ವಚ ಪರಿಭಾಷಣೇ. ಧಾತು. ಲಿಙ್. ಮಧ್ಯಮಪುರುಷ ಏಕವಚನದಲ್ಲಿ ಸಿಪ್. **ಇತಶ್ಚ** ಎಂಬುದರಿಂದ ಇಕಾರಲೋಪ. **ಲಿಙ್ಯಾಶಿಷ್ಯಙ್** (ಪಾ. ಸೂ ೩-೧-೮೬) ಎಂಬುದರಿಂದ ಅಙ್. ಇದು ಪರವಾದಾಗ

**ವಚಿಲುಮ್** (ಪಾ. ಸೂ. ೭-೪-೨೦) ಎಂಬುದರಿಂದ ಧಾತುವಿಗೆ ಉಮಾಗಮ. **ಛಂದಸ್ಯುಭಯಥಾ** (ಪಾ. ಸೂ. ೩-೪-೧೧೭) ಎಂಬುದರಿಂದ ಯಾಸುಟಿಗೆ ಸಾರ್ವಧಾತುಕಸಂಜ್ಞೆ ಇರುವುದರಿಂದ **ಲಿಙಃ ಸಲೋಪೋನಂತ್ಯಸ್ಯ** (ಪಾ. ಸೂ. ೭-೨-೭೯) ಎಂಬುದರಿಂದ ಸಕಾರಕ್ಕೆ ಲೋಪ. **ಅತೋಯೇಯಃ** (ಪಾ. ಸೂ. ೭-೨-೮೦) ಎಂಬುದರಿಂದ ಇಯಾದೇಶ. ಗುಣ. ಯಲೋಪ. ಸಕಾರಕ್ಕೆ ರುತ್ವವಿಸರ್ಗ. ವೋಚೇಃ ಎಂದು ರೂಪವಾಗುತ್ತದೆ.

ಅಸ್ಮೇ—**ಸುಪಾಂಸುಲುಕ್**—(ಪಾ ಸೂ. ೭-೧-೩೯) ಎಂಬುದರಿಂದ ಸಪ್ತಮಿಗೆ ಶೇ ಆದೇಶ- ॥ ೩ ॥

———:o:———

ಸಂಹಿತಾಪಾಠಃ

ಬ್ರಹ್ಮಾಣಿ ಮೇ ಮತಯಃ ಶಂ ಸುತಾಸಃ ಶುಷ್ಮ ಇಯರ್ತಿ ಪ್ರಭೃತೋ
ಮೇ ಅದ್ರಿಃ ।
ಆ ಶಾಸತೇ ಪ್ರತಿ ಹರ್ಯಂತ್ಯುಕ್ಥೇಮಾ ಹರೀ ವಹತಸ್ತಾ ನೋ ಅಚ್ಛ ॥
॥ ೪ ॥

॥ ಪದಪಾಠಃ ॥

ಬ್ರಹ್ಮಾಣಿ । ಮೇ । ಮತಯಃ । ಶಂ । ಸುತಾಸಃ । ಶುಷ್ಮಃ । ಇಯರ್ತಿ । ಪ್ರऽಭೃತಃ । ಮೇ । ಅದ್ರಿಃ ।
ಆ । ಶಾಸತೇ । ಪ್ರತಿ । ಹರ್ಯಂತಿ । ಉಕ್ಥಾ । ಇಮಾ । ಹರೀ ಇತಿ । ವಹತಃ । ತಾ । ನಃ । ಅಚ್ಛ ॥೪॥

ಸಾಯಣಭಾಷ್ಯಂ

ಅಥೈವಂ ತ್ರೈಃ ಪೃಷ್ಟೋಽನಯಾ ಚತುರ್ಥ್ಯೇಂದ್ರಃ ಪ್ರತ್ಯಾಹ। ಹೇ ಮರುತಃ ಬ್ರಹ್ಮಾಣಿ ಸರ್ವಾಣಿ ಕರ್ಮಾಣಿ ಹವೀಂಷಿ ವಾ ಮೇ ಮಮ ಸ್ವಭೂತಾನಿ । ತಥಾ ಮತಯಶ್ಚ ಮನನಯುಕ್ತಾಃ ಸ್ತುತಯಶ್ಚ ಮೇ ಮಮ ಶಂ ಸುಖಕಾರ್ಯಃ । ಯದ್ವಾ । ಮೇ ಮತಯೋ ಬುದ್ಧಯಸ್ತೇಷ್ವೇವ ವರ್ತಂತ ಇತಿ ಶೇಷಃ । ತಥಾ ಸುತಾಸೋಽಭಿಷುತಾಃ ಸೋಮಾ ಮೇ ಮದೀಯಾ ಮದರ್ಥಾ ಏವ । ಅತೋ ಯಜ್ಞಂ ಪ್ರತಿ ಗಂತವ್ಯಮಿತ್ಯರ್ಥಃ । ಕಿಂಚ ಮಧ್ಯೇ ರಾಕ್ಷಸಾದಿಬಾಧಪರಿಹಾರಾಯ ಶುಷ್ಮೋ ಬಲವಾನ್ಮೇ ಮದೀಯೋಽದ್ರಿಃ ಶತ್ರೂಣಾಂ ಭಕ್ಷಕೋ ವಜ್ರಃ ಪ್ರಭೃತಃ ಸನ್ನಿಯರ್ತಿ । ಗಚ್ಛತ್ಯೇವ ಲಕ್ಷ್ಯಂ ಪ್ರತಿ ನ ಚ ನಿವರ್ತತೇ । ನ ಕೇವಲಂ ಹವಿರಾದೀನಾಂ ಮದೀಯತ್ವಮೇವ ಅಪಿ ತು ಯಜಮಾನಾ ಆ ಶಾಸತೇ । ಮಾಮೇವ ಪ್ರಾರ್ಥಯಂತೇ । ಕಿಂಚೋಕ್ಥೋಕ್ಥಾನಿ ಶಸ್ತ್ರಾಣಿ ಮಾಂ ಪ್ರತಿ ಹರ್ಯಂತಿ । ಕಾಮಯಂತೇ । ಮಾಮೇವ ಶಂಸಂತೀತ್ಯರ್ಥಃ । ಕಿಂಚ ನೋಽಸ್ಮದೀಯಾವಿಮಾ ಹರೀ ಇಮಾವಶ್ವೌ ತಾ ತಾನಿ ಗಂತವ್ಯಾನಿ ಹವಿರಾದೀನ್ಯಚ್ಛಾಭಿಪ್ರಾಪ್ತುಂ ಮಾಂ ವಹತಃ । ಅಭಿಮತದೇಶಂ ಪ್ರಾಪಯತಃ । ಅತ ಏವ ಶೀಘ್ರಂ

**ಗಚ್ಛಾಮಿ । ಯುಷ್ಮಾಭಿರಪಿ ತತ್ಪ್ರಾಪ್ತುಂ ಗಂತವ್ಯಮಿತ್ಯರ್ಥಃ । ಅತೋಽಸಹಾಯ ಇತಿ ಮಂತವ್ಯಮಿತಿ ಭಾವಃ ॥**

॥ ಪ್ರತಿಪದಾರ್ಥ ॥

**ಮರುತಃ**—ಎಲೈ ಮರುತ್ತುಗಳೇ । **ಬ್ರಹ್ಮಾಣಿ**—ಸಕಲ ಕರ್ಮಗಳೂ । **ಮೇ**—ನನ್ನನ್ನು ಉದ್ದೇಶ ಮಾಡಿದವೇ ಆಗಿವೆ । **ಮತಯಃ**—ಸ್ತುತಿಗಳೂ ಸಹ । **ಶಂ**—ನನಗೆ ಸುಖವನ್ನುಂಟುಮಾಡುವವಾಗಿವೆ । **ಸುತಾಸಃ**—ಹಿಂಡಿರುವ ಸೋಮರಸಗಳೂ ನನ್ನವೇ ಆಗಿವೆ । **ಶುಷ್ಮ**—(ನನ್ನ) ಶಕ್ತಿಯು ಅಧಿಕವಾದುದು. **ಮೇ**—ನನ್ನ । **ಅದ್ರಿಃ**—ವಜ್ರಾಯುಧವು । **ಪ್ರಭೃತಃ**—ಪ್ರಯುಕ್ತವಾದುದಾಗಿ । **ಇಯರ್ತಿ**—ತನ್ನ ಲಕ್ಷ್ಯದ ಕಡೆಗೆ ಓಡುತ್ತದೆ । **ಆ ಶಾಸತೇ**—(ಯಜ್ಞಕರ್ತರೆಲ್ಲರೂ) ನನ್ನನ್ನೇ ಹಂಬಲಿಸುತ್ತಾರೆ । **ಉಕ್ಥಾ**—ಶಸ್ತ್ರರೂಪವಾದ ಸ್ತುತಿಗಳೂ ಸಹ । **ಪ್ರತಿ ಹರ್ಯಂತಿ**—ನನ್ನನ್ನೇ ಪ್ರಶಂಸಿಸುತ್ತವೆ । **ನಃ**—ನನ್ನ । **ಇಮಾ ಹರೀ**—ಈ ಅಶ್ವಗಳು **ತಾ**—ಹೋಗಿಸೇರಬೇಕಾದ ಯಜ್ಞಾದಿಗಳನ್ನೂ । **ಅಚ್ಛ**--ಹೋಗಿಸೇರಲು । **ವಹತಃ**—ನನ್ನನ್ನು ವಹಿಸುತ್ತವೆ ।

ಭಾವಾರ್ಥ

ಎಲೈ ಮರುತ್ತುಗಳೇ, ಸಕಲಕರ್ಮಗಳೂ ನನ್ನನ್ನು ಉದ್ದೇಶಿಸಿ ಮಾಡಿದವೇ ಆಗಿವೆ. ಸ್ತುತಿಗಳೂ ನನಗೇ ಸುಖಕಾರಕಗಳಾಗಿವೆ. ಹಿಂಡಿರುವ ಸೋಮರಸಗಳೂ ನನ್ನವೇ ಆಗಿವೆ. ನನ್ನ ಶಕ್ತಿಯು ಅತ್ಯಧಿಕವಾಗಿದೆ. ನನ್ನ ವಜ್ರಾಯುಧವನ್ನು ಪ್ರಯೋಗಿಸಿದಾಗ ಅದು ತನ್ನ ಶತ್ರುವಿನ ಕಡೆಗೆ ಓಡುತ್ತದೆ. ಯಜ್ಞಕರ್ತರೆಲ್ಲರೂ ನನ್ನನ್ನೇ ಹಂಬಲಿಸುತ್ತಾರೆ ಶಸ್ತ್ರರೂಪವಾದ ಸ್ತುತಿಗಳೂ ಸಹ ನನ್ನನ್ನೇ ಪ್ರಶಂಸಿಸುತ್ತವೆ. ನನ್ನ ಈ ಅಶ್ವಗಳು ನಾನು ಹೋಗಿ ಸೇರಬೇಕಾದ ಯಜ್ಞಾದಿಗಳನ್ನು ಹೋಗಿ ಸೇರಲು ನನ್ನನ್ನು ವಹಿಸುತ್ತವೆ

English Translation

(Indra),—Sacred rites are mine : (holy) praises give me pleasure : libations are for me : my vigorous thunder-bolt, hurled (against my foes), goes (to its mark) : me, do (pious worshippers) propitiate : hymns are addressed to me : these horses bear us to the presence (of those worshippers and worship).

ವಿಶೇಷವಿಷಯಗಳು

ಬ್ರಹ್ಮಾಣಿ—ಪರಿವೃಢವಾದ ಕರ್ಮವೆಂದಾಗಲಿ ಅಥವಾ ಹವೀರೂಪವಾದ ಅನ್ನವೆಂದಾಗಲಿ ಅರ್ಥ. ಈ ಪದದ ನಿರ್ವಚನವನ್ನೂ, ನಾನಾರ್ಥಗಳನ್ನೂ ಹಿಂದೆ ತಿಳಿಸಿದೆ.

**ಶುಷ್ಮಃ**—**ಓಜಃ ಪಾಜಃ** ಇತ್ಯಾದಿ ಬಲನಾಮಗಳಲ್ಲಿ ಪಠಿತವಾಗಿರುವುದರಿಂದ ಶುಷ್ಮವೆಂದರೆ ಬಲವೆಂದರ್ಥ. (ನಿ. ೩-೯)

**ಶುಷ್ಮಮಿತಿ ಬಲನಾಮ ಶೋಷಯತೀತಿ ಸತಃ ।**

(ನಿ. ೨-೨೩)

ಸಕಲಶತ್ರುಗಳನ್ನೂ ಕ್ಷಯಿಸುವಂತೆ ಮಾಡುವುದರಿಂದ ಈ ಹೆಸರು ಪ್ರಸಿದ್ಧವಾಗಿವೆ. ಅದರಲ್ಲೂ ಬಲಶಾಲಿಗಳಲ್ಲೆಲ್ಲಾ ಅತ್ಯಂತ ಬಲಶಾಲಿಯಾದ ಇಂದ್ರನಿಗೆ ಈ ಪದವು ವಿಶೇಷಣವಾಗಿ ಬಹಳ ಕಡೆಗಳಲ್ಲಿ ಪ್ರಯೋಗಿಸಲ್ಪಟ್ಟಿರುತ್ತದೆ. ಉದಾಹರಣೆಗೆ—

**ಯಸ್ಯಾನಾಪ್ತಃ ಸೂರ್ಯಸ್ಯೇವ ಯಾಮೋ ಭರೇಭರೇ ವೃತ್ರಹಾ ಶುಷ್ಮೋ ಅಸ್ತಿ ।**
**ವೃಷಂತಮಃ ಸಖಿಭಿಃ ಸ್ವೇಭಿರೇವೈರ್ಮರುತ್ವಾನ್ನೋ ಭವತ್ವಿಂದ್ರ ಊತೀ ॥**

(ಋ. ಸಂ. ೧-೧೦೦-೨)

ಇತ್ಯಾದಿ ಋಕ್ಕುಗಳಲ್ಲಿ **ಶುಷ್ಮ**ಪದವು ಇಂದ್ರವಿಶೇಷಣವಾಗಿದೆ.

**ಅದ್ರಿಃ—ಅದ್ರಿ**ಶಬ್ದಕ್ಕೆ ವಜ್ರಾಯುಧ, ರಾಕ್ಷಸ ಸೋಮರಸವನ್ನು ಹಿಂಡುವ ಕಲ್ಲು, ಪರ್ವತ, ಮೇಘ ಇತ್ಯಾದ್ಯರ್ಥಗಳಲ್ಲಿ ಪ್ರಯೋಗವಿದೆ. ನಿರುಕ್ತಕಾರರು ಈ ಪದದ ನಿರ್ವಚನನವನ್ನು ತಿಳಿಸುತ್ತಾ,

**ಅದ್ರಿರಾದೃಣಾತ್ಯೇತೇನ । ಅಪಿ ವಾ ಅತ್ತೇಃ ಸ್ಯಾತ್ ॥**

(ನಿ. ೪-೪)

**ಸೀಳು** ಎಂಬರ್ಥವನ್ನು ಕೊಡತಕ್ಕ **ದೃ**ಧಾತುವಿನಿಂದಾಗಲಿ, **ತಿನ್ನು** ಎಂಬರ್ಥವನ್ನು ಕೊಡುವ **ಅದ್** ಧಾತುವಿನಿಂದಾಗಲಿ ಅದ್ರಿಶಬ್ದವು ನಿಷ್ಪನ್ನವಾಗಿದೆಯೆಂದು ತೋರಿಸಿದ್ದಾರೆ. ಪರ್ವತಾದಿಗಳನ್ನು ಸೀಳುವುದರಿಂದ ವಜ್ರಾಯುಧಕ್ಕೆ ಅದ್ರಿಯೆಂದು ಹೆಸರು. ಮತ್ತು **ಅತ್ತಾರಂ, ಅಸುರಂ, ಭಕ್ಷಕಂ, ಪಣಿಂ** ಎಂದೂ ಸಹ ಅರ್ಥ ಮಾಡಿದೆ. ಈ ವಿವರಣೆಯನು ಕೊಡುವಾಗ ನಿರುಕ್ತಕಾರರು,

**ಯದಿಂದ್ರ ಚಿತ್ರ ಮೇಹನಾಸ್ತಿ ತ್ವಾದಾತಮದ್ರಿವಃ ।**
**ರಾಧಸ್ತನ್ನೋ ವಿದದ್ವಸ ಉಭಯಾಹಸ್ತ್ಯಾ ಭರ ॥**

(ಋ. ಸಂ. ೫-೩೯-೧)

ಎಂಬ ಋಕ್ಕನ್ನುದಹರಿಸಿ **ಅದ್ರಿವಃ** ಎಂಬ ಪದಕ್ಕೆ **ವಜ್ರವನ್ ಇಂಧ್ರ** ಎಂಬ ಅರ್ಥವು ಹೇಗೆ ಸಾಧ್ಯವಾಗುವುದೆಂದು ತೋರಿಸಿದ್ದಾರೆ. **ಅದ್ರಿ**ಶಬ್ದದ ಮೂಲ ಧಾತುವು ಅಥವಾ ಧಾತುಗಳು ಸಂದರ್ಭಾನುಸಾರವಾದ ನಿವೃತ್ತಿಗಳಿಂದ ಬೇರೆ ಬೇರೆ ಅರ್ಥಗಳನ್ನು ಕೊಡುವುದರಿಂದ ಆಯಾ ಸನ್ನಿವೇಶಕ್ಕನುಗುಣವಾಗಿ **ಅರ್ಥ**ಮಾಡಬೇಕು.

**ಮಹಃ ಸ ರಾಯ ಏಷತೇ ಪತಿರ್ದನ್ನಿನ ಇನಸ್ಯ ವಸುನಃ ಪದ ಆ ।**
**ಉಪ ಧ್ರಜಂತಮದ್ರಯೋ ವಿಧನ್ನಿತ್ ।**

(ಋ. ಸಂ. ೧-೧೪೯-೧)

ಇತ್ಯಾದಿಋಕ್ಕುಗಳಲ್ಲಿ **ಅದ್ರಿ**ಗಳುಳ್ಳ ಎಂದರೆ ಹಿಂಡುವಕಲ್ಲುಗಳುಳ್ಳ ಯಜಮಾನರೆಂದರ್ಥ. ಹೀಗೆಯೇ, **ಮೇಘ, ಅಸುರ, ಪರ್ವತ** ಇತ್ಯಾದ್ಯರ್ಥಗಳಲ್ಲೂ ಇರುವ ಪ್ರಯೋಗಗಳನ್ನು ಹಿಂದೆ ತಿಳಿಸಿದೆ.

**ಉಕ್ಥಾ—ಉಕ್ಥಾನಿ ಶಸ್ತ್ರಾಣಿ** । ಉಕ್ಥರೂಪವಾದ ಶಸ್ತ್ರನೆಂದರ್ಥ.

ವ್ಯಾಕರಣಪ್ರಕ್ರಿಯಾ

**ಬೃಹ್ಮಾಣಿ**—ಬೃಹಿ ವೃದ್ಧೌ. ಧಾತು. **ಬೃಂಹೇರ್ನೋಽಚ್ಚ** (ಉ ಸೂ. ೪-೧೪೫) ಎಂಬುದರಿಂದ ಮನಿನ್ ಪ್ರತ್ಯಯ. ಇದಿತ್ ನಿಮಿತ್ತವಾಗಿ ಬಂದ ನುಮಿನ ನಕಾರಕ್ಕೆ ಅಕಾರಾದೇಶ. ಅದನ್ನು ನಿಮಿತ್ತೀಕರಿಸಿ ಋಕಾರಕ್ಕೆ ಯಣಾದೇಶ **ಞ್ನಿತ್ಯಾದಿರ್ನಿತ್ಯಮ್** ಎಂಬುದರಿಂದ ಆದ್ಯುದಾತ್ತಸ್ವರ ಬರುತ್ತದೆ.

**ಸುತಾಸಃ**—ಷುಞ್ ಅಭಿಷವೇ ಧಾತು. ಕರ್ಮಣಿಯಲ್ಲಿ ಕ್ತ ಪ್ರತ್ಯಯ. ಪ್ರತ್ಯಯಸ್ವರದಿಂದ ಅಂತೋದಾತ್ತವಾಗುತ್ತದೆ. **ಆಜ್ಜಸೇರಸುಕ್** (ಪಾ. ಸೂ. ೭-೧-೫೦) ಎಂಬುದರಿಂದ ಜಸಿಗೆ ಅಸುಕಾಗಮ.

**ಶುಷ್ಮಃ**—ಶುಷ ಶೋಷಣೇ. ಧಾತು **ಅವಿಸಿವಿಸಿಶುಷಿಭ್ಯಃ ಕಿತ್** (ಉ ಸೂ, ೧-೧೪೧) ಎಂಬುದರಿಂದ ಮನ್ ಪ್ರತ್ಯಯ. ಕಿತ್ವಾತಿದೇಶದಿಂದ ಲಘೂಪಧಗುಣ ಬರುವುದಿಲ್ಲ. ನಿತ್ತಾದುದರಿಂದ ಆದ್ಯುದಾತ್ತಸ್ವರ ಬರುತ್ತದೆ.

**ಇಯರ್ತಿ**—ಋ ಗತೌ ಧಾತು. ಜುಹೋತ್ಯಾದಿ. ಲಟ್ ಪ್ರಥಮಪುರುಷ ಏಕವಚನದಲ್ಲಿ ತಿಪ್. ಶ್ಲು ವಿಕರಣನಿಮಿತ್ತವಾಗಿ ದ್ವಿತ್ವ. **ಅಭ್ಯಾಸಸ್ಯಾಸವರ್ಣೇ** (ಪಾ. ಸೂ. ೬-೪-೭೮) ಎಂಬುದರಿಂದ ಅಭ್ಯಾಸಕ್ಕೆ ಇಯಙಾದೇಶ. ತಿಙಂತನಿಘಾತಸ್ವರ ಬರುತ್ತದೆ.

**ಪ್ರಭೃತಃ**—**ಗತಿರನಂತರಃ** (ಪಾ. ಸೂ. ೬-೨-೪೯) ಎಂಬುದರಿಂದ ಗತಿಗೆ ಉದಾತ್ತಸ್ವರ ಬರುತ್ತದೆ.

**ಶಾಸತೇ**—ಶಾಸು ಅನುಶಿಷ್ಟೌ. ಧಾತು. ಅದಾದಿ. ಆಙ್ ಸಂಬಂಧವಿರುವುದರಿಂದ ಆತ್ಮನೇಪದಿಯಾಗುತ್ತದೆ. **ಆತ್ಮನೇಪದೇಷ್ವನತಃ** (ಪಾ ಸೂ. ೭-೧-೫) ಎಂಬುದರಿಂದ ಝ ಪ್ರತ್ಯಯಕ್ಕೆ ಅತಾದೇಶ. ಅತಿಙಂತದ ಪದದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

**ಉಕ್ಥಾ**—ವಚ ಪರಿಭಾಷಣೇ. ಧಾತು. **ಪಾತೃತುದಿವ**— (ಉ. ಸೂ. ೨-೧೬೪) ಎಂಬುದರಿಂದ ಥಕ್ ಪ್ರತ್ರಯ. ಕಿತ್ತಾದುದರಿಂದ **ವಚಿಸ್ವಪಿಯಜಾದೀನಾಂ ಕಿತಿ** । (ಪಾ. ಸೂ. ೬-೧-೧೫) ಎಂಬುದರಿಂದ ಸಂಪ್ರಸಾರಣ, ಪೂರ್ವರೂಪ. ಪ್ರತ್ಯಯ ಸ್ವರದಿಂದ ಅಂತೋದಾತ್ತವಾಗುತ್ತದೆ. ನಪುಂಸಕ ಬಹುವಚನದಲ್ಲಿ **ಶೇಶ್ಛಂದಸಿ ಬಹುಲಮ್** (ಪಾ. ಸೂ. ೬-೧-೭೦) ಎಂಬುದರಿಂದ ಶಿಗೆ ಲುಕ್. ॥ ೪ ॥

ಸಂಹಿತಾಪಾಠಃ

ಅತೋ ವಯಮಂತಮೇಭಿರ್ಯುಜಾನಾಃ ಸ್ವಕ್ಷತ್ರೇಭಿಸ್ತನ್ವ೧ಃ ಶುಂಭ-
ಮಾನಾಃ ।
ಮಹೋಭಿರೇತಾಁ ಉಪ ಯುಜ್ಮಹೇ ನ್ವಿಂದ್ರ ಸ್ವಧಾಮನು ಹಿ ನೋ
ಬಭೂಥ ॥ ೫ ॥

। ಪದಪಾಠಃ ।

ಅತಃ । ವಯಂ । ಅಂತಮೇಭಿಃ । ಯುಜಾನಾಃ । ಸ್ವಽಕ್ಷತ್ರೇಭಿಃ । ತನ್ವಃ । ಶುಂಭಮಾನಾಃ ।

ಮಹಃಽಭಿಃ । ಏತಾನ್ । ಉಪ । ಯುಜ್ಮಹೇ । ನು । ಇಂದ್ರ । ಸ್ವಧಾಂ । ಅನು । ಹಿ । ನಃ । ಬಭೂಥ ॥೫॥

ಸಾಯಣಭಾಷ್ಯಂ

ಏವಮುಕ್ತಾ ಮರುತಸ್ತಮೇವ ಬ್ರುವತೇ । ಹೇ ಇಂದ್ರ ತ್ವಂ ಯಸ್ಮಾದೇವಂ ಕರೋಷಿ ಅತಃ ಕಾರಣಾದ್ವಯಮಪ್ಯಂತಮೇಭಿರಂತಿಕತಮೈರಶ್ವೈರ್ಯುಜಾನಾ ಯುಕ್ತಾಃ ಸಂತಃ । ಕೀದೃಶೈಃ ಸ್ವಕ್ಷತ್ರೇಭಿಃ ಸ್ವಾಯತ್ತಬಲೈಃ ಕಿಂಚ ಮಹೋಭಿಸ್ತೇಜೋಭಿಸ್ತನ್ವ ಆತ್ಮಶರೀರಾಣಿ ಶುಂಭಮಾನಾ ದೀಪಯಂತಃ । ಹರ್ಷಂ ಪ್ರಾಪ್ನುವಾನಾ ಇತ್ಯರ್ಥಃ । ಯದ್ವಾ । ಮಹೋಭಿಃ ಸ್ವಮಹತ್ತ್ವೇನ ಯುಕ್ತಾ ವಯಮೇತಾನ್ಗಂತೂನ್ನು ಕ್ಷಿಪ್ರಮುಪ ಯುಜ್ಮಹೇ । ತವ ಸಾಕಂ ಹವಿರಾದಿ ಸ್ವೀಕುರ್ಮಹ ಇತ್ಯರ್ಥಃ । ಹೇ ಇಂದ್ರ ತ್ವಮಪಿ ನೋಽಸ್ಮತ್ಸಂಬಂಧಿ ಸ್ವಧಾಮುದಕಂ ಬಲಂ ವಾನು ಬಭೂಥ ಹಿ । ಅಸ್ಮತ್ಸ್ವಪ್ನೋದಕಜನ್ಯಂ ಹವಿರನುಭವಸಿ ಖಲು । ಹಿಶಬ್ದಃ ಪರಸ್ಪರೋಪಕಾರ್ಯೋಪಕಾರಿಭಾವಪ್ರಸಿದ್ಧಿದ್ಯೋತನಾರ್ಥಃ ॥

ಪ್ರತಿಪದಾರ್ಥ

**ಅತಃ**—ಸ್ತುತ್ಯಾದಿಗಳನ್ನು ಸ್ವೀಕರಿಸಲು ನೀನು ಸಿದ್ಧವಾಗಿರುವುದರಿಂದಲೇ । **ವಯಂ**—ನಾವೂ ಕೂಡ । **ಅಂತಮೇಭಿಃ**—ನಮ್ಮ ಸಮೀಪದಲ್ಲಿರುವ ಅಶ್ವಗಳಿಂದ । **ಯುಜಾನಾಃ**—ಕೂಡಿದವರಾಗಿಯೂ । **ಸ್ವಕ್ಷತ್ರೇಭಿಃ**—ನಮ್ಮ ನಮ್ಮ ಬಲಗಳಿಂದಲೂ । **ಮಹೋಭಿಃ**—ತೇಜಸ್ಸುಗಳಿಂದಲೂ । **ತನ್ವಃ**—ನಮ್ಮ ಶರೀರಗಳನ್ನು । **ಶುಂಭಮಾನಾಃ**—ಪ್ರಕಾಶಿಸುವಂತೆ ಮಾಡಿಕೊಂಡು । **ಏತಾನ್**—ಯಜ್ಞಕರ್ಮಗಳನ್ನು ಲಕ್ಷಿಸಿ । **ನು**—ಶೀಘ್ರವಾಗಿ । **ಉಪ ಯುಜ್ಮಹೇ**—ನಿನ್ನೊಡನೆ ಹವಿರಾದಿಗಳನ್ನು ಸ್ವೀಕರಿಸುತ್ತೇವೆ । **ಇಂದ್ರ**—ಇಂದ್ರನೇ । **ನಃ**—ನಮ್ಮಿಂದ ದತ್ತವಾದ । **ಸ್ವಧಾಂ**—ಉದಕವನ್ನು ಅಥವಾ ಬಲವನ್ನು । **ಅನು ಬಭೂಥ ಹಿ**—ಅನುಭವಿಸುತ್ತೀಯಲ್ಲವೇ ? ।

ಪದಪಾಠಃ

ಎಲೈ ಇಂದ್ರನೇ, ಸ್ತುತ್ಯಾದಿಗಳನ್ನು ಸ್ವೀಕರಿಸಲು ನೀನು ಸಿದ್ಧನಾಗಿರುವುದರಿಂದಲೇ ನಾವೂ ಕೂಡ ನಮ್ಮ ಸಮೀಪದಲ್ಲಿರುವ ಅಶ್ವಗಳಿಂದ ಕೂಡಿದವರಾಗಿಯೂ, ನಮ್ಮ ನಮ್ಮ ಬಲಗಳಿಂದಲೂ, ತೇಜಸ್ಸುಗಳಿಂದಲೂ, ನಮ್ಮ ಶರೀರಗಳನ್ನು ಪ್ರಕಾಶಿಸುವಂತೆ ಮಾಡಿಕೊಂಡು ಯಜ್ಞಕರ್ಮಗಳನ್ನು ಲಕ್ಷಿಸಿ ಶೀಘ್ರವಾಗಿ ಬಂದು ನಿನ್ನೊಡನೆ ಹವಿರಾದಿಗಳನ್ನು ಸ್ವೀಕರಿಸುತ್ತೇವೆ. ಇಂದ್ರನೇ, ನಮ್ಮಿಂದ ದತ್ತವಾದ ಬಲವನ್ನು ನೀನು ಅನುಭವಿಸುತ್ತೀಯಲ್ಲವೇ ? (ಅದರಂತೆಯೇ ನಮಗೂ ನಿನ್ನ ಹವಿಸ್ಸಿನಲ್ಲಿ ಭಾಗವನ್ನು ಕೊಡು)

## English Translation

(The Maruts),—Therefore we also, decorating our persons, are ready, with our docile and nigh-standing steeds, (to attend you), with all our splendour, to those rites : verily, Indra, you appropriate our sacrificial food.

### ವಿಶೇಷವಿಷಯಗಳು

ವೃತ್ರಾಸುರನ ವಧಕಾಲದಲ್ಲಿ ಮರುತ್ತುಗಳು ಇಂದ್ರನಿಗೆ ಸಹಾಯಮಾಡಿದುದನ್ನು ಜ್ಞಾಪಿಸಿ, ಇಂದ್ರನು ಭಾಗವಹಿಸತಕ್ಕ ಯಜ್ಞಗಳಲ್ಲಿ ಅವನೊಂದಿಗೆ ಭಾಗವನ್ನು ವಹಿಸುವ ಅಧಿಕಾರವು ತಮಗೂ ಇದೆಯೆಂದೂ, ಅವನು ತಮ್ಮನ್ನು ಮರೆಯುವಂತಿಲ್ಲವೆಂದೂ ಈ ಋಕ್ಕಿನಲ್ಲಿ ತಿಳಿಸಿರುತ್ತಾರೆ.

**ಸ್ವಧಾಂ—ಉದಕಂ ಬಲಂ ವಾ** । ತಮ್ಮಿಂದ ಎಂದರೆ ಮರುತ್ತುಗಳಿಂದ ದತ್ತವಾದ ಉದಕ ಅಥವಾ ತಮ್ಮ ಸ್ವಶಕ್ತಿ ಎಂದು ಇಲ್ಲಿ **ಸ್ವಧಾ** ಶಬ್ದಕ್ಕೆ ಅರ್ಥಮಾಡಿದೆ. ನಿರುಕ್ತಕಾರರು ಈ ಪದವನ್ನು ಉದಕನಾಮಗಳಲ್ಲಿಯೂ (ನಿ. ೨-೨೩), **ಅನ್ನ** ನಾಮಗಳಲ್ಲಿಯೂ (೩-೯) ಪಠಿಸಿದ್ದಾರೆ. ಆದರೆ ಅನೇಕ ಸಂದರ್ಭಗಳಲ್ಲಿ ಸ್ವಧಾಶಬ್ದಕ್ಕೆ ಸ್ವಮಹಿಮೆ, ತೇಜಸ್ಸು, ಅಥವಾ ಸ್ವಾಶ್ರಯ ಎಂದೂ ಅರ್ಥವಾಗುತ್ತದೆ. ಉದಾಹರಣೆಗೆ,

**ಶಶ್ವತ್ಪುರೋಷಾ ವ್ಯುವಾಸ ದೇವ್ಯಥೋ ಅದ್ಯೇದಂ ವ್ಯಾವೋ ಮಘೋನೀ ।**
**ಅಥೋ ವ್ಯುಚ್ಛಾದುತ್ತರಾ ಅನು ದ್ಯೂನಜರಾಮೃತಾ ಚರತಿ ಸ್ವಧಾಭಿಃ ॥**

(ಋ. ಸಂ. ೧-೧೧೩-೧೩)

ಎಂಬ ಋಕ್ಕಿನಲ್ಲಿ ಉಷಸ್ಸಿನ ಪರವಾಗಿ ಉಪಯೋಗಿಸಲ್ಪಟ್ಟ ಈ ಪದಕ್ಕೆ **ಆತ್ಮೀಯೈಸ್ತೇಜೋಭಿಃ**, ತನ್ನ ತೇಜಸ್ಸುಗಳಿಂದ ಎಂದರ್ಥಮಾಡಿದೆ. ಇದರಂತೆಯೇ,

**ಯದಂತರಿಕ್ಷೇ ಪತಥಃ ಪುರುಭುಜಾ ಯದ್ವೇಮೇ ರೋದಸೀ ಅನು ।**
**ಯದ್ವಾ ಸ್ವಧಾಭಿರಧಿತಿಷ್ಠಥೋ ರಥಮತ ಆ ಯಾತಮಶ್ವಿನಾ ॥**

(ಋ. ಸಂ. ೮-೧೦-೬)

ಎಂಬಲ್ಲಿಯೂ ಸಹ **ಆತ್ಮೀಯೈಸ್ತೇಜೋಭಿರ್ಬಲೈರ್ವಾ ಸಾರ್ಧಂ** । ನಿಮ್ಮ ತೇಜಸ್ಸುಗಳಿಂದ ಅಥವಾ ಸ್ವಶಕ್ತಿಗಳೊಡನೆ ಎಂದರ್ಥವಾಗುತ್ತದೆ.

ನ ಮೃತ್ಯುರಾಸೀದಮೃತಂ ನ ತರ್ಹಿ ನ ರಾತ್ರ್ಯಾ ಅಹ್ನ ಆಸೀತ್ಪ್ರಕೇತಃ ।
ಆನೀದವಾತಂ ಸ್ವಧಯಾ ತದೇಕಂ ತಸ್ಮಾದ್ಧಾನ್ಯನ್ನ ಪರಃ ಕಿಂ ಚನಾಸ ॥

(ಋ. ಸಂ ೧೦-೧೨೯-೨)

ಎಂಬ ಋಕ್ಕಿನಲ್ಲಿ ಸಾಯಣರು, **ಸ್ವಸ್ಮಿನ್ ಧೀಯತೇ ಧ್ರಿಯತೇ ಆಶ್ರಿತ್ಯ ವರ್ತತೇ ಇತಿ ಸ್ವಧಾ, ಸ್ವಾಶ್ರಯಾವ**ಲಂಬಿಯಾಗಿರುವುದರಿಂದ **ಸ್ವಧಾ** ಎಂದು ಈಶ್ವರನ (ಪರಬ್ರಹ್ಮನ) ವಿಚಿತ್ರವಾದ ಶಕ್ತಿಯಾದ **ಮಾಯೆಗೆ ವಿಶೇಷಣ**ವಾಗಿದೆಯೆಂದು ವಿವರಿಸಿದ್ದಾರೆ. ಅದರಂತೆ ಪ್ರಕೃತವಾದ ಋಕ್ಕಿನಲ್ಲಿಯೂ ಸಹ ಮರುತ್ತುಗಳ ಅಸಾಧಾರಣವಾದ **ಶಕ್ತಿ**ಯೆಂದರ್ಥಮಾಡಬಹುದೆಂದು ಸಾಯಣರ ಅಭಿಪ್ರಾಯ.

**ಶುಂಭಮಾನಾಃ—ದೀಪ್ತ್ಯಯಂತಃ । ಹರ್ಷಂ ಪ್ರಾಪ್ನುವಾನಾ ಇತ್ಯರ್ಥಃ** । ಪ್ರಕಾಶಿಸುತ್ತಾ ಎಂದರೆ ಹರ್ಷವನ್ನು ಪ್ರಕಟಿಸುತ್ತಾ ಎಂದರ್ಥ. **ಶುಂಭ ದೀಪ್ತೌ** । ಪ್ರಕಾಶಿಸು, ಶೋಭಿಸು ಎನ್ನುವ ಅರ್ಥವನ್ನು ಕೊಡುವ **ಶುಂಭ** ಧಾತುವಿನಿಂದ ನಿಷ್ಪನ್ನವಾಗಿ **ಶುಂಭಮಾನಾ** ಎಂದಾಗಿದೆ. **ಶುಂಭಮಾನಾಃ ಶುಶೋಭಿಷ-**

ಮಾಣಾಃ (ನಿ. ೮-೧೧) ಎಂದು ನಿರುಕ್ತಕಾರರು ಈ ಶಬ್ದಕ್ಕೆ ಅತಿಶಯವಾಗಿ ಶೋಭಿಸತಕ್ಕ ಎಂದರ್ಥಮಾಡಿದ್ದಾರೆ. ಅದರಂತೆ ಪ್ರಕೃತವಾದ ಋಕ್ಕಿನಲ್ಲಿಯೂ ಸಹ ಮರುತ್ತುಗಳ ಆಕರ್ಷಕವಾದ ಶೋಭೆಯನ್ನು ತಿಳಿಸುವ ಪದವಾಗಿದೆ.

॥ ವ್ಯಾಕರಣಪ್ರಕ್ರಿಯಾ ॥

**ಅಂತಮೇಭಿಃ**—ಅತಿಶಯೇನ ಅಂತಿಕಾ. **ಅತಿಶಾಯನೇತಮಪ್** (ಪಾ. ಸೂ. ೫-೩-೫೫) ಎಂಬುದರಿಂದ ತಮಪ್. **ತಸೋಃತಾದೇಶ್ಚ** (ಪಾ. ಸೂ. ೬-೪-೧೪೯-೯) ಎಂಬುದರಿಂದ ಅಂತಿಕ ಎಂಬಲ್ಲಿ ತಾದಿಗೆ ಲೋಪ ಅಂತಮ ಶಬ್ದವಾಗುತ್ತದೆ. ತಮಪ್ ಪಿತ್ತಾದುದರಿಂದ ಅನುದಾತ್ತವಾಗುತ್ತದೆ. ಪೂರ್ವದ ಅಂತಿಕ ಶಬ್ದವು ಕನ್ನಂತವಾದುದರಿಂದ ಆದ್ಯುದಾತ್ತವಾಗುತ್ತದೆ. ಭಿಸ್‌ಪರವಾದಾಗ **ಬಹುಲಂ ಛಂದಸಿ** ಎಂಬುದರಿಂದ ಭಿಸಿಗೆ ಐಸ್ ವಿಕಲ್ಪವಾದುದರಿಂದ ಬರುವುದಿಲ್ಲ. **ಬಹುವಚನೇಝಲ್ಯೇತ್** ಎಂಬುದರಿಂದ ಏತ್ವ.

**ಯುಜಾನಾಃ**—ಯುಜಿರ್ ಯೋಗೇ ಧಾತು. ಲಟಿಗೆ ಶಾನಚಾದೇಶ. **ಬಹುಲಂ ಛಂದಸಿ** ಎಂಬುದರಿಂದ ವಿಕರಣಕ್ಕೆ ಲುಕ್. **ಚಿತಃ** ಎಂಬುದರಿಂದ ಅಂತೋದಾತ್ತಸ್ವರ ಬರುತ್ತದೆ.

**ಸ್ವಕ್ಷತ್ರೇಭಿಃ**—ಸ್ವಂ ಕ್ಷತ್ರಂ ಯೇಷಾಂ ತೇ. ಸ್ವಕ್ಷತ್ರಾಃ ತೈಃ । **ಬಹುವ್ರಿಹೌ ಪ್ರಕೃತ್ಯಾಪೂರ್ವಪದಂ** ಪಾ. ಸೂ. ೬-೨-೧) ಎಂಬುದರಿಂದ ಪೂರ್ವದಪದ ಪ್ರಕೃತಿಸ್ವರ ಬರುತ್ತದೆ. ಭಿಸಿಗೆ ಐಸ್‌ಭಾವವಿಕಲ್ಪವಾದುದರಿಂದ ಏತ್ವ.

**ತನ್ವಃ**—**ತನ್ವಾದೀನಾಂ ಛಂದಸ್ಯುಪಸಂಖ್ಯಾನಮ್** ಎಂಬುದರಿಂದ ಶಸ್ ಪರವಾದಾಗ ಯಣಾದೇಶ. **ಉದಾತ್ತಸ್ವರಿತಯೋರ್ಯಣಃ**—(ಪಾ ಸೂ. ೯-೨-೪) ಎಂಬುದರಿಂದ ಸ್ವರಿತಸ್ವರ ಬರುತ್ತದೆ.

**ಶುಂಭಮಾನಾಃ**—ಶುಂಭ। ದೀಪ್ತೌ. ಲಟಿಗೆ ಶಾನಚಾದೇಶ. ಶಪ್ ವಿಕರಣ. **ತಾಸ್ಯನುದಾತ್ತೇತ್**—ಸೂತ್ರದಿಂದ ಲಸಾರ್ವಧಾತುಕವು ಅನುದಾತ್ತವಾಗುವುದರಿಂದ ಧಾತುಸ್ವರ ಉಳಿಯುತ್ತದೆ.

**ಮಹೋಭಿಃ**—ಮಹ ಪೂಜಾಯಾಂ ಧಾತು. ಔಣಾದಿಕ ಅಸುನ್ ಪ್ರತ್ಯಯ. ನಿತ್ತಾದುದರಿಂದ ಆದ್ಯುದಾತ್ತಸ್ವರ ಬರುತ್ತದೆ ತೃತೀಯಾಬಹುವಚನಾಂತರೂಪ.

**ಯುಜ್ಮಹೇ**—ಯುಜಿರ್ ಯೋಗೇ ಧಾತು. ಲಟ್ ಉತ್ತಮಪುರುಷಬಹುವಚನದಲ್ಲಿ ಮಹಿಙ್ ಪ್ರತ್ಯಯ. **ಟಿತಆತ್ಮನೇಪದಾ**—ಎಂಬುದರಿಂದ ಟಿಗೆ ಏತ್ವ. **ಬಹುಲಂ ಛಂದಸಿ** ಎಂಬುದರಿಂದ ವಿಕರಣಕ್ಕೆ ಲುಕ್. ತಿಙಂತ ನಿಘಾತಸ್ವರ ಬರುತ್ತದೆ.

**ಬಭೂಥ**—**ಬಭೂಥಾತತಂಥಜಗೃಂಭವವರ್ಥೇತಿ ನಿಗಮೇ** (ಪಾ. ಸೂ. ೭-೨-೬೪) ಎಂಬುದರಿಂದ ಲಿಟಿನಲ್ಲಿ ಇಡಭಾವದಿಂದ ನಿಪಾತವಾಗಿದೆ. **ಹಿಚ** (ಪಾ. ಸೂ. ೮-೧-೩೪) ಎಂಬುದರಿಂದ ನಿಘಾತಪ್ರತಿಷೇಧ ಬರುತ್ತದೆ. **ಥಲ್** ಲಿತ್ತಾದುದರಿಂದ **ಲಿತಿ** ( ಪಾ. ಸೂ. ೬-೧-೧೬೪) ಎಂಬುದರಿಂದ ಪ್ರತ್ಯಯದ ಪೂರ್ವಕ್ಕೆ ಉದಾತ್ತಸ್ವರ ಬರುತ್ತದೆ ॥ ೫ ॥

ಸಂಹಿತಾಪಾಠಃ

ಕ್ವ१ ಸ್ಯಾ ವೋ ಮರುತಃ ಸ್ವಧಾಸೀದ್ಯನ್ಮಾಮೇಕಂ ಸಮಧತ್ತಾಹಿಹತ್ಯೇ ।
ಅಹಂ ಹ್ಯು१ಗ್ರಸ್ತವಿಷಸ್ತುವಿಷ್ಮಾನ್ವಿಶ್ವಸ್ಯ ಶತ್ರೋರನಮಂ ವಧಸ್ನೈಃ ॥೬॥

ಪದಪಾಠಃ

ಕ್ವ । ಸ್ಯಾ । ವಃ । ಮರುತಃ । ಸ್ವಧಾ । ಅಸೀತ್ । ಯತ್ । ಮಾಂ । ಏಕಂ । ಸಂऽಅಧತ್ತ । ಅಹಿऽಹತ್ಯೇ ।
ಅಹಂ । ಹಿ । ಉಗ್ರಃ । ತವಿಷಃ । ತುವಿಷ್ಮಾನ್ । ವಿಶ್ವಸ್ಯ । ಶತ್ರೋಃ । ಅನಮಂ । ವಧಸ್ನೈಃ ॥ ೬ ॥

ಸಾಯಣಭಾಷ್ಯಂ

ಸ್ಯಾ ಸಾ ಸ್ವಧಾ ತೇದುದಕಂ ಬಲಂ ವಾ ವೋ ಯುಷ್ಮಾಕಂ ಸಂಬಂಧಿ ಕ್ವಾಸೀತ್ । ನೈವಾಸೀದಿತ್ಯರ್ಥಃ । ಅಸ್ಮಾಕಮುದಕಂ ತ್ವಮನುಭವಸೀತಿ ಬ್ರೂಥ । ಯದ್ಯಾ ಸ್ವಧ್ಯೈಕಮಸಹಾಯಂ ಮಾಮಹಿಹತ್ಯೇ ವೃಷ್ಟ್ಯರ್ಥಂ ಮೇಘಹನನಕರ್ಮಣಿ ವೃತ್ರವಧೇ ವಾ ಸಮಧತ್ತ ಸಹಿತಮಭೂತ್ । ಸಮಾಸೀದಿತಿ ಸಂಬಂಧಃ । ಅಸಹಾಯಸ್ಯ ಕಥಮಿತಿ ಮತಂ ಸೇತ್ಸ್ಯತೀತಿ ಅತ ಆಹ । ಅಹಂ ಹ್ಯಹಂ ಖಲೂಗ್ರ ಉದ್ಗೂರ್ಣಬಲಸ್ತವಿಷೋ ಬಲವಾಂಸ್ತುವಿಷ್ಮಾನ್ಮಹತ್ತ್ವೋಪೇತೋಽಸ್ಮಿ । ಯಸ್ಮಾದತಿಬಲೋಽಹಂ ತಸ್ಮಾದ್ವಿಶ್ವಸ್ಯ ಕೃತ್ಸ್ನಸ್ಯ ಶತ್ರೋರ್ಮೇಘಸ್ಯ । ಶತ್ರುರೇವಾಯಂ ॥ ಕರ್ಮಣಿ ಷಷ್ಠೀ ॥ ಸರ್ವಂ ಶತ್ರುಸಂಘಂ ವಧಸ್ನೈರ್ವಧರೂಪೈಃ ಶೋಧನೈಃ । ವಧಕೌಶಲೈರಿತ್ಯರ್ಥಃ । ಯದ್ವಾ । ವಧ ಇತಿ ವಜ್ರನಾಮ । ವಧಸ್ನೈರ್ವಜ್ರಸ್ಯಾಸನೈಃ ಕ್ಷೇಪಣಪ್ರಕಾರೈಃ । ಅನಮಂ। ಅನಮಯಂ ॥ ಅಂತರ್ಭಾವಿತಣ್ಯರ್ಥೋಽಯಂ॥ ವಶೀಕರೋಮೀತ್ಯರ್ಥಃ ॥

ಪ್ರತಿಪದಾರ್ಥ

ಸ್ಯಾ—ನೀವು ವರ್ಣಿಸಿದ । ಸ್ವಧಾ—ಶಕ್ತಿಯು । ವಃ—ನಿಮ್ಮ ಮಾಹಾತ್ಮ್ಯವನ್ನು ಪ್ರಕಟಿಸುವುದಾಗಿ । ಕ್ವ ಅಸೀತ್—ಎಲ್ಲಿದ್ದಿತು ? (ನಿಮಗೆ ಆ ಶಕ್ತಿಯೇ ಇರಲಿಲ್ಲ) । ಯತ್—ಯಾವ ಅದೇ ಶಕ್ತಿಯು । ಏಕಂ—ಇತರ ಶಕ್ತಿಯ ಸಹಾಯವನ್ನಪೇಕ್ಷಿಸದೆ । ಮಾಂ—ನನ್ನನ್ನು । ಅಹಿಹತ್ಯೇ—ವೃತ್ರಹನನಕಾಲದಲ್ಲಿ । ಸಮಧತ್ತ ಸೇರಿಕೊಂಡಿತು । ಅಹಂ ಹಿ—ಕೇವಲ ನಾನು ಮಾತ್ರ । ಉಗ್ರಃ—ಭಯಂಕರನೂ । ತವಿಷಃ—ಶಕ್ತಿಯುಳ್ಳವನೂ । ತುವಿಷ್ಮಾನ್—ಮಹತ್ತ್ವದಿಂದ ಕೂಡಿದವನೂ ಆಗಿದ್ದೇನೆ । ವಧಸ್ನೈಃ—ವಧಸಾಧನವಾದ ವಜ್ರಾಯುಧದಿಂದ । ವಿಶ್ವಸ್ಯ—ಸಮಸ್ತವಾದ । ಶತ್ರೋಃ—ಶತ್ರುಗಳನ್ನೂ । ಅನಮಂ—ವಶವಾಗುವಂತೆ ಮಾಡಿದೆನು ।

ಭಾವಾರ್ಥ

ಎಲೈ ಮರುತ್ತುಗಳೇ, ನಿಮ್ಮ ಸಹಾಯದಿಂದ ನಾನು ಅಹಿಹನನವನ್ನು ಮಾಡಿದೆನು ಎಂದು ನೀವು ಹೇಳುವುದು ಸುಳ್ಳು. ನಿಮಗೆ ಆ ಶಕ್ತಿಯು ತಾನೇ ಎಲ್ಲಿದ್ದಿತು ? ನನ್ನ ಶಕ್ತಿಯೇ ಅಸಾಧಾರಣವಾದುದರಿಂದ ಇತರ

ಶಕ್ತಿಯ ಸಹಾಯವನ್ನು ಅಪೇಕ್ಷಿಸದೆ ಅದು ವೃತ್ರಹನನಕಾಲದಲ್ಲಿ ನನಗೆ ಸಹಾಯಮಾಡಿತು. ಕೇವಲ ನಾನು ಮಾತ್ರ ಭಯಂಕರನೂ, ಅದ್ಭುತವಾದ ಶಕ್ತಿಯುಳ್ಳವನೂ ಮಹತ್ತ್ವದಿಂದ ಕೂಡಿದವನೂ ಆಗಿದ್ದೇನೆ. ವಧ ಸಾಧನ ವಾದ ವಜ್ರಾಯುಧದಿಂದ ನಾನು ಸಮಸ್ತವಾದ ಶತ್ರುಗಳನ್ನೂ ನನ್ನ ವಶಮಾಡಿಕೊಂಡೆನು.

## English Translation

(Indra)—Where Maruts, has that (sacrifical) food been assigned to you, which, for the destruction of Ahi, was appropriated to me alone? for I indeed am fierce, and strong, and mighty, and have bowed down all mine enemies with death-dealing shafts.

### ವಿಶೇಷವಿಷಯಗಳು

ವೃತ್ರಾಸುರನ ವಧಕಾಲದಲ್ಲಿ ಮರುತ್ತುಗಳ ಸಹಾಯವನ್ನು ಇಂದ್ರನು ಪಡೆದನೆಂಬುದು ಪ್ರಸಿದ್ಧವಾಗಿದೆ. ಆದರೂ ಸಹ ಮರುತ್ತುಗಳು ಆ ವಿಷಯವನ್ನು ತಿಳಿಸಿ ಆ ಸಹಾಯದ ಜ್ಞಾಪಕಾರ್ಥವಾಗಿ ಇಂದ್ರನಿಗೆ ಸೇರಬೇಕಾದ ಹವಿಸ್ಸಿನಲ್ಲಿ ತಮಗೂ ಭಾಗವನ್ನು ಕೊಡಬೇಕೆಂದು ಕೇಳಿದಾಗ ಇಂದ್ರನು ಮರುತ್ತುಗಳಿಂದ ತನಗೆ ಯಾವ ಸಹಾಯವೂ ಆಗಿಯೇ ಇಲ್ಲವೆಂದೂ, ತಾನು ತನ್ನ ಸ್ವಶಕ್ತಿಯಿಂದಲೇ ಸಕಲಶತ್ರುಗಳನ್ನೂ ಕೊಂದೆನೆಂದೂ ಹೇಳಿ ಕೊಳ್ಳುತ್ತಾನೆ

**ಅಹಿಹತ್ಯೇ—ವೃಷ್ಟ್ಯರ್ಥಂ ಮೇಘಹನನಕರ್ಮಣಿ· ವೃತ್ರವಧೇ ವಾ ।** ವೃಷ್ಟಿಯನ್ನು ಸುರಿಸುವುದಕ್ಕಾಗಿ ಮೇಘಹನನವೆಂದಾಗಲಿ ಅಥವಾ ವೃತ್ರವಧವೆಂದಾಗಲಿ ಅರ್ಥ.

**ಅಹಿ** ಶಬ್ದವು **ಮೇಘ**ನಾಮಗಳಲ್ಲಿಯೂ (ನಿ. ೨-೨೧) ಉದಕನಾಮಗಳಲ್ಲಿಯೂ (ನಿ. ೨-೨೩) ಪಠಿತವಾಗಿದ್ದರೂ ಇಲ್ಲಿ ಶತ್ರುಪರ್ಯಾಯವಾಗಿಯೂ ಅರ್ಥಮಾಡಬಹುದು ನಿರುಕ್ತಕಾರರು,

**ದಾಸಪತ್ನೀರಹಿಗೋಪಾ ಅತಿಷ್ಠನ್ನಿರುದ್ಧಾ ಆಪಃ ಪಣಿನೇವ ಗಾವಃ ।**

(ಋ. ಸಂ. ೧-೩೨-೧೧)

ಎಂಬ ಋಕ್ಕನ್ನುದಹರಿಸಿ **ಅಹಿ** ಶಬ್ದದ ನಿರ್ವಚನವನ್ನು ಮಾಡುವಾಗ ಮೇಘವೆಂದರ್ಥಮಾಡಿ, **ಅಹಿರಯನಾದೇತ್ಯಂತರಿಕ್ಷೇ** (ನಿ. ೨-೧೭) ಅಂತರಿಕ್ಷದಲ್ಲಿ ಸಂಚರಿಸುವುದರಿಂದ ಮೇಘಕ್ಕೆ ಅಹಿಯೆಂದು ಹೆಸರು ಎಂದು ತೋರಿಸಿದ್ದಾರೆ. ಇಲ್ಲಿಯೂ ಸಹ ಸಾಯಣರು **ವೃಷ್ಟ್ಯರ್ಥಂ ಮೇಘಹನನಂ** ಎಂದರ್ಥಮಾಡಿದ್ದಾರೆ ಇದಲ್ಲದೆ,

**ಅಯಮಪೀತರೋಽಹಿರೇತಸ್ಮಾದೇವ ನಿರ್ಹ್ರಸಿತೋಪಸರ್ಗ ಆಹಂತೀತಿ ।**

(ನಿ. ೨-೧೭)

ಮೇಲೆ ಬೀಳು ಎಂಬರ್ಥವನ್ನು ಕೊಡುವ **ಹನ್** ಧಾತುವಿನೊಂದಿಗೆ **ಆ** ಎಂಬ ಉಪಸರ್ಗವು ಸೇರಿ ಅನಂತರ ಅದು ಹ್ರಸ್ವವಾಗಿ **ಅಹಿ** ಎಂಬ ವ್ಯುತ್ಪತ್ತಿಯನ್ನು ಪಡೆದು **ಸರ್ಪ**ವೆಂಬರ್ಥವನ್ನು ಕೊಡುತ್ತದೆ. ಇದಲ್ಲದೇ,

**ಯೋಽಹಿಃ ಸ ಬುಧ್ನ್ಯೋ ಬುಧ್ನಮಂತರಿಕ್ಷಂ ತನ್ನಿವಾಸಾತ್ ।**

(ನಿ. ೧೦-೪೪)

ಅಂತರಿಕ್ಷಕ್ಕೆ ಬುಧ್ನವೆಂದೂ, ಇಂತಹ ಅಂತರಿಕ್ಷದಲ್ಲಿ ವಾಸಮಾಡುವುದರಿಂದ ಅಹಿಗೆ ಬುಧ್ನ್ಯವೆಂದೂ ಹೆಸರಿರುವುದಾಗಿಯೂ ತಿಳಿಸಿರುತ್ತಾರೆ. ಇದೇ ಅರ್ಥವನ್ನು ವಿಶದಪಡಿಸುತ್ತಾ ಬೃಹದ್ದೇವತಾಕಾರರೂ ಸಹ,

**ಅಹಿರಾಹಂತಿ ಮೇಘಾನ್ಸ ಏತಿ ವಾ ತೇಷು ಮಧ್ಯಮಃ ।**
**ಯೋಽಹಿಃ ಸ ಬುಧ್ನ್ಯೋ ಬುಧ್ನೇ ಹಿ ಸೋಽಂತರಿಕ್ಷೇಽಭಿಜಾಯತೇ ॥**

(ಬೃ. ದೇ. ೫-೧೬೬)

ಅಹಿಯು ಮೇಘಗಳನ್ನು ಆಶ್ರಯಿಸಿ ಮುನ್ನುಗ್ಗಿ ಹೋಗುತ್ತಾನೆ. ಅಥವಾ ಅವುಗಳ ನಡುವೆ ಸಂಚರಿಸುತ್ತಾನೆ. ಗಭೀರವಾದ ಅಂತರಿಕ್ಷದಲ್ಲಿ ಉತ್ಪನ್ನನಾದುದರಿಂದ ಅವನಿಗೂ ಸಹ ಬುಧ್ನ್ಯವೆಂದೂ ಹೆಸರು ಎಂದು ಅಹಿಶಬ್ದದ ನಿರ್ವಚನವನ್ನು ತೋರಿಸಿದ್ದಾರೆ. ಈ ಅರ್ಥದಲ್ಲಿ ಅಹಿಯೆಂದರೆ **ಸರ್ಪ**ವಾದರೂ ಆಗಬಹುದು ಅಥವಾ ಅಸುರನೆಂದಾದರೂ ಆಗಬಹುದು. ಈ ರೀತಿ ಮೇಘ, ಗಭೀರವಾದ ಅಂತರಿಕ್ಷದಲ್ಲಿ ಸಂಚರಿಸತಕ್ಕ ಅಸುರ, ಅಥವಾ ಸರ್ಪ ಎಂಬ ಈ ಅರ್ಥಗಳಲ್ಲದೆ ವೃತ್ರಾಸುರನಿಗೆ ವಿಶೇಷಣವಾಗಿಯೂ ಅಥವಾ ಪರ್ಯಾಯರೂಪದಲ್ಲಿಯೂ ಈ ಶಬ್ದವು ಉಪಯೋಗಿಸಲ್ಪಟ್ಟಿದೆ.

**ತ್ವಂ ಪ್ರತಿ ಪ್ರವತ ಆಶಯಾನಮಹಿಂ ವಜ್ರೇಣ ಮಘವನ್ವಿ ವೃಶ್ಚಃ ॥**

(ಋ. ಸಂ. ೪-೧೭-೭)

ಇತ್ಯಾದಿಋಕ್ಕುಗಳಲ್ಲಿ **ಅಹಿಂ ವೃತ್ರನಾಮಾನಮಸುರಂ** ಎಂದು ವೃತ್ರಪರ್ಯಾಯವಾಗಿಯೇ ಅರ್ಥಮಾಡಿದೆ ಒಂದನೇ ಮಂಡಲದ ೩೨ನೇ ಸೂಕ್ತದಲ್ಲೆಲ್ಲಾ ಅಹಿಯೆಂದರೆ ಸುತ್ತಲೂ ನೀರನ್ನು ತಡೆದು ವ್ಯಾಪಿಸಿರುವ ಮೇಘವೆಂದರ್ಥ. ಪ್ರಕೃತವಾದ ಋಕ್ಕಿನಲ್ಲಿಯೂ ಮೇಘವೆಂದಾಗಲಿ ಅಥವಾ ವೃತ್ರಾಸುರನೆಂದಾಗಲಿ ಅರ್ಥವಾಗಬಹುದೆಂದು ಸಾಯಣರ ವಿವರಣೆಯಿದೆ.

॥ ವ್ಯಾಕರಣಪ್ರಕ್ರಿಯಾ ॥

**ಸ್ಯಾ**—ತ್ಯದ್ ಶಬ್ದ. ಸುಪರವಾದಾಗ **ತ್ಯದಾದೀನಾಮಃ** ಎಂಬುದರಿಂದ ಅತ್ವ. ಪರರೂಪ. ಸ್ತ್ರೀತ್ವದಲ್ಲಿ ಅದಂತನಿಬಂಧನವಾಗಿ ಟಾಪ್. **ತದೋಃಸಃಸಾವನಂತ್ಯಯೋಃ** ಎಂಬುದರಿಂದ ಆದಿಯ ತಕಾರಕ್ಕೆ ಸತ್ವ.

**ಸಮುಧತ್ತೆ**—ಡುಧಾಞ್ ಧಾರಣಪೋಷಣಯೋಃ ಧಾತು. ಲಟ್ ಪ್ರಥಮಪುರುಷ ಏಕವಚನಾಂತರೂಪ. ಯದ್ಯೋಗವಿರುವುದರಿಂದ ನಿಘಾತಸ್ವರ ಬರುವುದಿಲ್ಲ. ಅಡಾಗಮ ಉದಾತ್ತವಾಗುವುದರಿಂದ ಆದ್ಯುದಾತ್ತವಾಗುತ್ತದೆ **ತಿಙಿಚೋದಾತ್ತವತಿ** (ಪಾ. ಸೂ. ೮-೧-೭೧) ಎಂಬುದರಿಂದ ಗತಿಗೆ (ಸಮ್) ಅನುದಾತ್ತಸ್ವರ ಬರುತ್ತದೆ

**ಅಹಿಹತ್ಯೇ**—ಹನ ಹಿಂಸಾಗತ್ಯೋಃ ಧಾತು. **ಹನಸ್ತ ಚ** (ಪಾ ಸೂ. ೩-೧-೧೦೮) ಎಂಬುದರಿಂದ ಸುಬಂತ ಉಪಪದವಾಗಿರುವಾಗ ಇದಕ್ಕೆ ಕ್ಯಪ್ ಪ್ರತ್ಯಯ. ಧಾತುವಿನ ಅಂತ್ಯ ನಕಾರಕ್ಕೆ ತಕಾರಾದೇಶ. ಪ್ರತ್ಯಯ ಪಿತ್ತಾದುದರಿಂದ ಅನುದಾತ್ತವಾಗುವುದರಿಂದ ಧಾತುಸ್ವರ ಉಳಿಯುತ್ತದೆ. ಸಮಾಸದಲ್ಲಿ ಕೃದುತ್ತರಪದ **ಪ್ರಕೃತಿಸ್ವರ** ಬರುತ್ತದೆ. ಸಪ್ತಮೀ ಏಕವಚನಾಂತರೂಪ.

**ತವಿಷಃ**— ತವಿ ಎಂಬುದು ಸೌತ್ರ ಧಾತು. **ತವೇರ್ಣಿದ್ವಾ** (ಉ. ಸೂ. ೧-೫೮) ಎಂಬುದರಿಂದ ಟಿಷಚ್ ಪ್ರತ್ಯಯ. ಇದರಲ್ಲಿ ಇಷ ಎಂಬುದು ಉಳಿಯುತ್ತದೆ. **ಚಿತಃ** (ಪಾ. ಸೂ. ೬-೧-೧೬೩) ಎಂಬುದರಿಂದ ಅಂತೋದಾತ್ತಸ್ವರ ಬರುತ್ತದೆ.

**ಅನುಮಮ್**— ಣಮು ಪ್ರಹ್ವತ್ವೇ ಶಬ್ದೇ ಚ ಧಾತು. ಪ್ರಯೋಜಕವ್ಯಾಪಾರ ತೋರುವುದರಿಂದ ಅಂತರ್ಭಾವಿತಣ್ಯರ್ಥಕವಾಗಿದೆ ಲುಙ್ ಉತ್ತಮಪುರುಷ ಏಕವಚನಾಂತರೂಪ. **ಹಿಚ** (ಪಾ. ಸೂ ೮-೧-೩೪) ಎಂಬುದರಿಂದ ನಿಘಾತಸ್ವರ ಪ್ರತಿಷೇಧ ಬರುವುದರಿಂದ ಅಟ್ ಸ್ವರದಿಂದ ಆದ್ಯುದಾತ್ತವಾಗುತ್ತದೆ.

**ಶತ್ರೋಃ**— ಕರ್ಮಾರ್ಥದಲ್ಲಿ ಷಷ್ಠೀ ಬಂದಿದೆ. ॥ ೬ ॥

———— :o: ————

**ಸಂಹಿತಾಪಾಠಃ**

**ಭೂರಿ ಚಕರ್ಥ ಯುಜ್ಯೇಭಿರಸ್ಮೇ ಸಮಾನೇಭಿರ್ವೃಷಭ ಪೌಂಸ್ಯೇಭಿಃ ।**
**ಭೂರೀಣಿ ಹಿ ಕೃಣವಾಮಾ ಶವಿಷ್ಠೇಂದ್ರ ಕ್ರತ್ವಾ ಮರುತೋ ಯದ್ವಶಾಮ ॥**

॥ ೭ ॥

**ಪದಪಾಠಃ**

**ಭೂರಿ । ಚಕರ್ಥ । ಯುಜ್ಯೇಭಿಃ । ಅಸ್ಮೇ ಇತಿ । ಸಮಾನೇಭಿಃ । ವೃಷಭ । ಪೌಂಸ್ಯೇಭಿಃ ।**
**ಭೂರೀಣಿ । ಹಿ । ಕೃಣವಾಮ । ಶವಿಷ್ಠ । ಇಂದ್ರ । ಕ್ರತ್ವಾ । ಮರುತಃ । ಯತ್ । ವಶಾಮ ॥ ೭ ॥**

**ಸಾಯಣಭಾಷ್ಯಂ**

**ಅಥೈವಮುಕ್ತ್ವಾ ಇಂದ್ರಂ ಪುನರಾಹುಃ । ಹೇ ಇಂದ್ರ ವೃಷಭ ವರ್ಷಿತಃ ತ್ವಂ ಭೂರಿ ಚಕರ್ಥ ಪ್ರಭೂತಂ ಕೃವಾನಸಿ । ಸತ್ಯಮೇವ । ತಥಾಪ್ಯಸ್ಮೇ ಅಸ್ಮಾಕಂ ಸಮಾನೇಭಿಃ ಸಮಾನೈರ್ಯುಜ್ಯೇಭಿರಸ್ಮಾಭಿರ್ಯುಕ್ತೈಃ ಪೌಂಸ್ಯೇಭಿಃ ಪುಂಸಃ ಕರ್ಮಭಿಃ ಸಾಮರ್ಥ್ಯೈರೇವ ಚಕರ್ಥ । ನತ್ವೇಕ ಏವೇತ್ಯರ್ಥಃ । ಹೇ ಶವಿಷ್ಠ । ಶವ ಇತಿ ಬಲನಾಮ । ಹೇ ಇಂದ್ರ ಬಲವತ್ತಮ ವಯಂ ಭೂರೀಣಿ ಹಿ ತ್ವತ್ತಃ ತಾದಪಿ ಪ್ರಭೂತಾನಿ ಕರ್ಮಾಣಿ ಕೃಣವಾಮ । ಕೃತವಂತಃ ಸ್ಮ । ಹೇ ಇಂದ್ರ ಕ್ರತ್ವಾ ಕ್ರತುನಾ ಕರ್ಮಣಾ ಯದ್ಯದ್ವೃಷ್ಟ್ಯಾದಿಕಂ ವಶಾಮ ಕಾಮಯಾಮಹೇ । ತಾನಿ ತ್ವತ್ತೋಽಪ್ಯಧಿಕಾನೀತ್ಯರ್ಥಃ । ಯತೋ ವಯಂ ಮರುತಃ ॥ ಛಾಂದಸಮನುದಾತ್ತತ್ವಂ ॥ ಏತೇನ ಸ್ವಮಹತ್ತ್ವಂ ಸ್ಥಾಪಿತಂ ಭವತಿ । ಸ್ವರೋ ವ್ಯಸ್ತಃ । ಅಥವಾ ಇಂದ್ರಸ್ಯೇದಂ ವಾಕ್ಯಂ । ಹೇ ಮರುತಃ ಯದ್ಯಸ್ಯೈವ ತತ್ತಸ್ಯೈವ ಭವತು । ತರ್ಹ್ಯಹಂ ಚ ಯೂಯಂ ಚ ಸಹೈವ ಕ್ರತ್ವಾ ಕರ್ಮಣಾ ಯದ್ವಶಾಮ ಯದ್ವೃಷ್ಟಿಕರ್ಮ ಕಾಮಯಾಮಹೇ । ತಸ್ಮಾದುದಕಂ ಸಮಾನಮೇವೇತ್ಯರ್ಥಃ । ಏವಂ ಮರುತ ಇತಿ ನಿಘಾತಸ್ವರಸ್ಯ ವ್ಯಾಖ್ಯಾನಂ ॥**

॥ ಪ್ರತಿಪದಾರ್ಥ ॥

**ವೃಷಭ**—ಇಷ್ಟಾರ್ಥಗಳನ್ನು ಸುರಿಸತಕ್ಕ ಎಲೈ ಇಂದ್ರನೇ, | (**ತ್ವಂ**—ನೀನು) | **ಭೂರಿ**—ಅತ್ಯಧಿಕವಾದ ಕಾರ್ಯಗಳನ್ನು | **ಚಕರ್ಥ**—ಮಾಡಿದ್ದೀಯೆ (ಆದರೂ ಸಹ) | **ಸಮಾನೇಭಿಃ**—ಒಟ್ಟಿಗೆ ಸಮವಾಗಿರುವುದೂ, | **ಯುಜ್ಯೇಭಿಃ**—ಸಂಯುಕ್ತವಾಗಿರುವುದೂ ಆದ | **ಅಸ್ಮೇ**—ನಮ್ಮ | **ಪೌಂಸ್ಯೇಭಿಃ**—ಪರಾಕ್ರಮಕಾರ್ಯಗಳ (ಸಹಾಯದಿಂದಲೇ ಮಾಡಿದ್ದೀಯೆ) | **ಶವಿಷ್ಠ**—ಬಲಶಾಲಿಯಾದ | **ಇಂದ್ರ**—ಎಲೈ ಇಂದ್ರನೇ | **ಕ್ರತ್ವಾ**—ಯಾವ ಕರ್ಮಗಳಿಂದ | **ಯತ್**—ವೃಷ್ಟ್ಯಾದಿಗಳನ್ನು | **ವಶಾಮ**—ಅಪೇಕ್ಷಿಸುವೆವೋ ಅಂತಹ | **ಭೂರೀಣಿ ಹಿ**—ಅತ್ಯತಿಶಯವಾದ ಕರ್ಮಗಳನ್ನೇ | **ಕೃಣವಾಮ**—ಮಾಡಿದ್ದೇವೆ | (ಆದುದರಿಂದಲೇ) | **ಮರುತಃ**—ನಾವು ಮರುತ್ತುಗಳಾಗಿದ್ದೇವೆ.

ಭಾವಾರ್ಥ

ಇಷ್ಟಾರ್ಥಗಳನ್ನು ಸುರಿಸತಕ್ಕ ಎಲೈ ಇಂದ್ರನೇ, ನೀನು ಅತ್ಯಧಿಕವಾದ ಕಾರ್ಯಗಳನ್ನು ಮಾಡಿರುವುದು ನಿಜ. ಆದರೂ ಸಹ ನಮ್ಮೆಲ್ಲರಲ್ಲಾ ಒಟ್ಟಿಗೆ ಸಮವಾಗಿರುವುದೂ, ಸಂಯುಕ್ತವಾಗಿರುವುದೂ ಆದ ಪರಾಕ್ರಮಕಾರ್ಯಗಳ ಸಹಾಯದಿಂದಲೇ ನೀನು ಅವೆಲ್ಲವನ್ನೂ ಮಾಡಿದ್ದೀಯೆ. ಬಲಶಾಲಿಯಾದ ಎಲೈ ಇಂದ್ರನೇ, ಯಾವ ಕರ್ಮಗಳಿಂದ ವೃಷ್ಟ್ಯಾದಿಗಳನ್ನು ಅಪೇಕ್ಷಿಸುವೆವೋ ಅಂತಹ ಅತ್ಯತಿಶಯವಾದ ಕರ್ಮಗಳನ್ನೇ ನಾವೂ ಮಾಡಿದ್ದೇವೆ. ಆದುದರಿಂದಲೇ ನಾವು ಮರುತ್ತುಗಳಾಗಿದ್ದೇವೆ.

English Translation

(Maruts),-Showerer (of benefits), you have done much ; but it has been with our united equal energies ; for we, too, most powerful Indra, have done many things, and by our deeds (we are, as) we desire to be, Maruts.

ವಿಶೇಷವಿಷಯಗಳು

**ಸಮಾನೇಭಿಃ ಯುಜ್ಯೇಭಿಃ ಪೌಂಸ್ಯೇಭಿಃ**—ಮರುತ್ತುಗಳ ಸ್ವಾಭಾವಿಕವಾದುದೂ ಸಂಘಾತ್ಮಕವಾದುದೂ ಆದ ಶಕ್ತಿಯೂ, ಆ ಶಕ್ತಿಯಿಂದ ನೆರವೇರಿಸಿದ ವೀರ್ಯಕರ್ಮಗಳೂ ಇದರಿಂದ ಸೂಚಿತವಾಗಿವೆ. ಮರುತ್ತುಗಳ ಸಂಘಾತ್ಮಕವಾದ ಶಕ್ತಿಯನ್ನು ಅನೇಕ ಕಡೆಗಳಲ್ಲಿ ಪ್ರಶಂಸಿಸಿದೆ.

**ಸಪ್ತ ಸಪ್ತ ಹಿ ಮಾರುತೋ ಗಣಸ್ತಸ್ಮಾನ್ಮಾರುತಃ ಸಪ್ತಕಪಾಲಃ ।**

(ಶ. ಬ್ರಾ. ೨-೫-೧-೧೩)

**ಸಪ್ತ ಸಪ್ತ ಹಿ ಮಾರುತೋ ಗಣಃ ಸರ್ವಮೇವೈತೇನ ರಥಂ ಪ್ರೀಣಾತಿ ।**

(ಶ. ಬ್ರಾ. ೫-೪-೩-೧೮)

ಇತ್ಯಾದಿವಾಕ್ಯಗಳಿಂದ ಮರುತ್ತುಗಳು ಯಾವಾಗಲೂ ಗುಂಪುಕಟ್ಟಿಕೊಂಡೇ ಇರುವರೆಂದು ತಿಳಿಯುತ್ತದೆ. ಆ ವಿಧವಾದ ಗುಂಪಿನಲ್ಲಿ ಒಂದು ವಿಧವಾದ ಚೈತನ್ಯವೂ ಶಕ್ತಿಯೂ ಸಹ ಸಹಜವಾಗಿರುತ್ತದೆ.

**ಪೌಂಸ್ಯೇಭಿಃ—ಪುಂಸಃ ಕರ್ಮ ಪೌಂಸ್ಯಂ** । ಪುರುಷಶಕ್ತಿಯೆಂದು ತಾತ್ಪರ್ಯ. ಈ ಪದವು ಬಲನಾಮಗಳಲ್ಲಿಯೂ (ನಿ. ૨-೯), **ಸಂಗ್ರಾಮನಾಮ**ಗಳಲ್ಲಿಯೂ (ನಿ. ૨-೯) ಪಠಿತವಾಗಿದೆ ಪ್ರಕೃತವಾದ ಋಕ್ಕಿನಲ್ಲಿ ಶಕ್ತಿಯೆಂದೇ ಅರ್ಥಮಾಡಬೇಕಾಗುತ್ತದೆ.

**ಅಥ ಮರುದ್ಭ್ಯಃ ಕ್ರೀಡಿಭ್ಯಃ ಸಪ್ತಕಪಾಲಂ ಪುರೋಡಾಶಂ ನಿರ್ವಪತಿ ಮರುತೋ ಹ ವೈ ಕ್ರೀಡಿನೋ ವೃತ್ರಗ್ಂ ಹನಿಷ್ಯಂತಮಿಂದ್ರಮಾಗತಂ ತಮಭಿತಃ ಪರಿಚಿಕ್ರೀಡುಃ .... .... ....** ।

(ಶ. ಬ್ರಾ. ೨-೫-೩-೨೦)

ಇತ್ಯಾದಿ ವಾಕ್ಯಗಳಲ್ಲೆಲ್ಲಾ ಇಂದ್ರನು ವೃತ್ರಾಸುರನ ಕಾಲದಲ್ಲಿ ಮರುತ್ತುಗಳಿಂದ ಪಡೆದ ಸಹಾಯವೂ, ಆದುದರಿಂದಲೇ ಇಂದ್ರನು ಸ್ವೀಕರಿಸುವ ಹವಿಸ್ಸುಗಳಲ್ಲಿ ಮರುತ್ತುಗಳಿಗೂ ಭಾಗವು ನಿರ್ದಿಷ್ಟವಾಗಿದೆ. ಪ್ರಕೃತವಾದ ಋಕ್ಕಿನಲ್ಲಿ ಮರುತ್ತುಗಳು ತಾವು ಹಿಂದೆ ಮಾಡಿದ ಸಹಾಯವನ್ನು ಜ್ಞಾಪಿಸುತ್ತಾರೆ.

**ಕೃತ್ವಾ ಮರುತೋ ಯದ್ವಶಾಮ—**ಈ ಭಾಗಕ್ಕೆ ಅರ್ಥವನ್ನು ಹೇಳುವುದು ಕೊಂಚ ಶ್ರಮವೆಂದು ಸಾಯಣರೇ ತಿಳಿಸಿದ್ದಾರೆ. ಮೊದಲು **ಯತೋ ವಯಂ ಮರುತಃ** ಎಂಬ ವಿವರಣೆಯಿಂದ ಇದು ಮರುತ್ತುಗಳ ವಾಕ್ಯಗಳೆಂದು ತಿಳಿಯುತ್ತದೆ. ಅನಂತರ,

**ಅಥವಾ ಇಂದ್ರಸ್ಯೇದಂ ವಾಕ್ಯಂ ; ಹೇ ಮರುತಃ ಯತ್ ಯಸ್ಯೈವ ತತ್ತಸ್ಯೈವ ಭವತು........**॥ ಇತ್ಯಾದಿ ವಿವರಣೆಗಳಿಂದ ಇದು ಇಂದ್ರನ ವಾಕ್ಯವೆಂದೂ ಹೇಳಬಹುದೆಂದು ತಿಳಿಸಿದ್ದಾರೆ. Max Muller ಎಂಬ ಪಂಡಿತನು ಈ ವಿಷಯದಲ್ಲಿ ತನ್ನ ಅಭಿಪ್ರಾಯವನ್ನು ಈ ರೀತಿ ತಿಳಿಸಿದ್ದಾನೆ.

The last words leave no doubt as to their meaning, for the phrase is one of frequent occurance· The only difficulty is the vocative ಮರುತಃ where we should expect the nominative. It is quite possible, however, that the Maruts Should here address themselves, though, no doubt, it would be easy to alter the accent.

(Sacred Books of the East· Voi. XXXII. The Vedic Hymns· p· 198)

ಕೊನೆಯ ಪದಗಳಿಗೆ ಅರ್ಥವು ವಿಶದವಾಗಿದ್ದರೂ ಸಹ ಪ್ರಥಮಾವಿಭಕ್ತಿಯಲ್ಲಿರಬೇಕಾದ ಮರುತಃ ಎಂಬ ಪದವು ಸಂಬೋಧನಾಪ್ರಥಮಾವಿಭಕ್ತಿಯಲ್ಲಿರುವುದು ಕೊಂಚ ತಡವನ್ನುಂಟುಮಾಡುತ್ತದೆ ಅಥವಾ ಮರುತ್ತುಗಳು ತನ್ನನ್ನೇ ಸಂಬೋಧಿಸಿದ್ದರೂ ಇರಬಹುದೆಂದು ಹೇಳಬಹುದು.

**ಅಪ್ರಾಮಿಸತ್ಯ ಮಘವನ್ನಥೇದಸದಿಂದ್ರ ಕೃತ್ವಾ ಯಥಾ ವಶಃ** ॥

(ಋ. ಸಂ. ೮-೬೧-೪)

ಇತ್ಯಾದಿ ಕೆಲವು ವಾಕ್ಯಗಳಲ್ಲಿಯೂ ಸಹ **ಕೃತ್ವಾ ಯಥಾ ವಶಃ** ಎಂಬ ಶೈಲಿಯು ಪ್ರಕೃತವಾದ ಋಕ್ಕಿನಲ್ಲಿರುವಂತೆಯೇ ಇರುತ್ತದೆ.

॥ ವ್ಯಾಕರಣಪ್ರಕ್ರಿಯಾ ॥

**ಚಕರ್ಥ**—ಡುಕೃಞ್ ಕರಣೇ ಧಾತು. ಲಿಟ್ ಮಧ್ಯಮಪುರುಷ ಏಕವಚನಾಂತರೂಪ. ತಿಙಂತನಿಘಾತ ಸ್ವರ ಬರುತ್ತದೆ.

**ಯುಜ್ಯೇಭಿಃ**—ಯುಜಿರ್ ಯೋಗೇ. ಧಾತು. ಬಹುಲಗ್ರಹಣಸಾಮರ್ಥ್ಯದಿಂದ ಕ್ಯಪ್ ಪ್ರತ್ಯಯ. ಕಿತ್ತಾದುದರಿಂದ ಲಘೂಪಧಗುಣ ಬರುವುದಿಲ್ಲ. ಪಿತ್ತಾದುದರಿಂದ ಅನುದಾತ್ತವಾಗುತ್ತದೆ. ಛಂದಸ್ಸಿನಲ್ಲಿ ಭಿಸಿಗೆ ಐಸ್ ಭಾವ ವಿಕಲ್ಪವಾದುದರಿಂದ ಏತ್ವ.

**ಅಸ್ಮೇ**—**ಸುಪಾಂ ಸುಲುಕ್**—(ಪಾ. ಸೂ. ೭-೧-೩೯) ಎಂಬುದರಿಂದ ಷಷ್ಠೀ ಬಹುವಚನಕ್ಕೆ ಶೇ ಆದೇಶ.

**ಸಮಾಸೇಭಿಃ**—ಭಿಸಿಗೆ ಐಸ್ ಭಾವವಿಕಲ್ಪವಾದುದರಿಂದ **ಬಹುವಚನೇ ಝಲ್ಯೇತ್** ಎಂಬುದರಿಂದ ಏತ್ವ.

**ಪೌಂಸ್ಯೇಭಿಃ**—ಪುಂಸಃ. ಕರ್ಮಾಣಿ ಪೌಂಸ್ಯಾನಿ. ಷ್ಯಞ್‌ಪ್ರತ್ಯಯ. **ತದ್ಧಿತೇಷ್ವಚಾಮಾದೇಃ** ಎಂಬುದರಿಂದ ಆದಿ ವೃದ್ಧಿ. ಞಿತ್ತಾದುದರಿಂದ ಆದ್ಯುದಾತ್ತಸ್ವರ ಬರುತ್ತದೆ. ಭಿಸಿಗೆ ಐಸ್ ಭಾವ ವಿಕಲ್ಪವಾದುದರಿಂದ ಏತ್ವ.

**ಕೃಣವಾಮ**—ಕೃವಿ ಹಿಂಸಾಕರಣಯೋಶ್ಚ ಧಾತು ಲೋಟ್ ಉತ್ತಮಪುರುಷ ಬಹುವಚನಾಂತರೂಪ. **ಹಿಚ** (ಪಾ. ಸೂ. ೮-೧-೩೪) ಎಂಬುದರಿಂದ ನಿಘಾತಸ್ವರ ಪ್ರತಿಷೇಧ ಬರುತ್ತದೆ. ವಿಕರಣ ಸ್ವರ ಉಳಿಯುತ್ತದೆ.

**ಶವಿಷ್ಠ**—ಶವಃ ಎಂಬುದು ಬಲದ ಹೆಸರು. ಮತ್ವರ್ಥದಲ್ಲಿ ವಿನಿಪ್ರತ್ಯಯ ಬಂದಾಗ ಶವಸ್ವೀ ಎಂದು ರೂಪವಾಗುತ್ತದೆ. ಇದರಮೇಲೆ ಅತಿಶಯಾರ್ಥದಲ್ಲಿ ಇಷ್ಠನ್ ಪ್ರತ್ಯಯ. **ವಿನ್ಮತೋರ್ಲುಕ್** (ಪಾ. ಸೂ. ೫-೩-೬೫) ಎಂಬುದರಿಂದ ವಿನಿಗೆ ಲುಕ್ **ಟೇಃ** ಎಂಬುದರಿಂದ ಟಿಗೆ (ಅಸ್) ಲೋಪ. ಸಂಬುದ್ಧಿಯಲ್ಲಿ ಆಮಂತ್ರಿತನಿಘಾತಸ್ವರ ಬರುತ್ತದೆ.

**ಕ್ರತ್ವಾ**—ತೃತೀಯಾ ಏಕವಚನ ಪರವಾದಾಗ **ಜಸಾದಿಷು ಛಂದಸಿ ವಾ ವಚನಮ್** (ಪಾ. ಸೂ. ೭-೩-೧೦೯-೧) ಎಂಬುದರಿಂದ ನಾಭಾವ ವಿಕಲ್ಪವಾದುದರಿಂದ ಬರುವುದಿಲ್ಲ. ಯಣಾದೇಶ.

**ಮರುತಃ**—ಮೊದಲನೇ ವ್ಯಾಖ್ಯಾನದಲ್ಲಿ ಛಾಂದಸವಾಗಿ ಸರ್ವಾನುದಾತ್ತಸ್ವರ ಬರುತ್ತದೆ. ದ್ವಿತೀಯ ವ್ಯಾಖ್ಯಾನದಲ್ಲಿ **ಆಮಂತ್ರಿತಸ್ಯ ಚ** ಎಂಬುದರಿಂದ ನಿಘಾತಸ್ವರ ಬರುತ್ತದೆ.

**ವಶ್ಮ**—ವಶ ಕಾಂತೌ. ಧಾತು. ಕಾಂತಿಯೆಂದರೆ ಇಚ್ಛಾ. ಲೋಟ್ ಉತ್ತಮಪುರುಷ ಏಕವಚನಾಂತ ರೂಪ ಯದ್ಯೋಗವಿರುವುದರಿಂದ ನಿಘಾತಸ್ವರ ಬರುವುದಿಲ್ಲ. **ತಾಸ್ಯನುದಾತ್ತೇತ್**—(ಪಾ. ಸೂ. ೬-೧-೧೮೬) ಎಂಬುದರಿಂದ ಲಸಾರ್ವಧಾತುಕವು ಅನುದಾತ್ತವಾಗುವುದರಿಂದ ಧಾತುಸ್ವರ ಉಳಿಯುತ್ತದೆ. ॥ ೭ ॥

—— :0: ——

ಸಂಹಿತಾಪಾಠಃ

ವಧೀಂ ವೃತ್ರಂ ಮರುತ ಇಂದ್ರಿಯೇಣ ಸ್ವೇನ ಭಾಮೇನ ತವಿಷೋ ಬಭೂವಾನ್ ।

ಅಹಮೇತಾ ಮನವೇ ವಿಶ್ವಶ್ಚಂದ್ರಾಃ ಸುಗಾ ಅಪಶ್ಚಕರ ವಜ್ರಬಾಹುಃ॥೮॥

। ಪದಪಾಠಃ ।

ವಧೀಂ । ವೃತ್ರಂ । ಮರುತಃ । ಇಂದ್ರಿಯೇಣ । ಸ್ವೇನ । ಭಾಮೇನ । ತವಿಷಃ । ಬಭೂವಾನ್ ।

ಅಹಂ । ಏತಾಃ । ಮನವೇ । ವಿಶ್ವಽಚಂದ್ರಾಃ । ಸುಗಾಃ । ಅಪಃ । ಚ ಕ ರ । ವಜ್ರಽಬಾಹುಃ ॥ ೮ ॥

ಸಾಯಣಭಾಷ್ಯಂ

ಇದಾನೀಮಿಂದ್ರ ಆಹ । ಹೇ ಮರುತಃ ಅಹಮಿಂದ್ರ ಇಂದ್ರಿಯೇಣ ಸ್ವೇನ ಭಾಮೇನ ಕೋಪೇನ ತವಿಷೋ ಬಲವಾನ್ ಬಭೂವಾನ್ । ಭೂತಃ । ಸಂಪನ್ನಃ । ಕಸ್ಮೈ ಕಮಿತಿ ತದುಚ್ಯತೇ । ಮನವೇ ಮನೋರರ್ಥಾಯೈತಾ ವಿಶ್ವಶ್ಚಂದ್ರಾ: ಸರ್ವಾಹ್ಲಾದಕಾಃ ಸುಗಾಃ ಸುಗಮನಾಃ ಸರ್ವತ್ರ ನದ್ಯಾದಿಷು ಗಮನಶೀಲಾ ಅಪೋ ವೃಷ್ಟ್ಯುದಕಾನಿ ಚಕರ । ಚಕಾರ । ಕೃತವಾನಸ್ಮಿ । ಯತೋಽಹಂ ವಜ್ರಬಾಹುಃ । ಅನೇನ ಸಹಾಯನೈರಪೇಕ್ಷ್ಯಮುಕ್ತಂ ಭವತಿ ॥

ಪ್ರತಿಪದಾರ್ಥ

**ಮರುತಃ**—ಎಲೈ ಮರುತ್ತುಗಳೇ, । **ಅಹಂ**—ನಾನು । **ಇಂದ್ರಿಯೇಣ**—ನನ್ನ ಪರಾಕ್ರಮದಿಂದಲೂ, । **ಸ್ವೇನ**—ನನ್ನದೇ ಆದ । **ಭಾಮೇನ**—ಕ್ರೋಧದ ಪ್ರಕಟಣೆಯಿಂದಲೂ । **ವೃತ್ರಂ**—ವೃತ್ರನನ್ನು । **ವಧೀಂ**—ಕೊಂದೆನು । **ತವಿಷಃ**—ನನ್ನ ಶಕ್ತ್ಯಾಯುಧದೊಡನೆ । **ಬಭೂವಾನ್**— ಸೇರಿಕೊಂಡೆನು ಮತ್ತು । **ವಜ್ರಬಾಹುಃ**—ವಜ್ರಾಯುಧವನ್ನು ಕೈಯಲ್ಲಿ ಹಿಡಿದು । **ಅಹಂ**—ನಾನು । **ಮನವೇ**—ಮಾನವನಿಗಾಗಿ । **ಏತಾಃ**—ಪ್ರಸಿದ್ಧವಾಗಿರುವ । **ವಿಶ್ವಚಂದ್ರಾಃ**—ಸರ್ವರಿಗೂ ಆಹ್ಲಾದವನ್ನುಂಟುಮಾಡುವುವೂ, । **ಸುಗಾಃ**—ಶ್ರೇಷ್ಠವಾದ ಪ್ರವಾಹವುಳ್ಳವೂ, ಆದ । **ಅಪಃ**—ವೃಷ್ಟ್ಯುದಕಾದಿಗಳನ್ನು । **ಚಕರ**—ನಿರ್ಮಿಸಿದ್ದೇನೆ.

ಭಾವಾರ್ಥ

ಎಲೈ ಮರುತ್ತುಗಳೇ, ನಾನು ನನ್ನದೇ ಆದ ಪರಾಕ್ರಮದಿಂದಲೂ, ಕ್ರೋಧದ ಪ್ರಕಟಣೆಯಿಂದಲೂ. ವೃತ್ರನನ್ನು ಕೊಂದೆನು ಅತ್ಯಂತ ಶಕ್ತಿಯುತನಾದೆನು. ಮತ್ತು ವಜ್ರಾಯುಧವನ್ನು ಕೈಯಲ್ಲಿ ಹಿಡಿದುಕೊಂಡು ಸರ್ವರಿಗೂ ಆಹ್ಲಾದವನ್ನುಂಟುಮಾಡುವುವೂ, ಶ್ರೇಷ್ಠವಾದ ಪ್ರವಾಹವುಳ್ಳವೂ ಆದ ವೃಷ್ಟ್ಯುದಕಾದಿಗಳನ್ನು ಮಾನವನ ಹಿತಕ್ಕಾಗಿ ನಿರ್ಮಿಸಿದ್ದೇನೆ.

## English Translation

(Indra),—by my own prowess, Maruts, I, mighty in my wrath, slew Vritra : armed with my thunderbolt, I created all these pellucid gently-flowing waters for (the good of) man.

### ವಿಶೇಷವಿಷಯಗಳು

ಯಾರ ಸಹಾಯವೂ ಇಲ್ಲದೇ ತಾನೊಬ್ಬನೇ ಶತ್ರುಹನನಮಾಡಿದನೆಂದೂ, ತನ್ನ ಸ್ವಶಕ್ತಿಯಿಂವಲೇ ವೃಷ್ಟ್ಯಾದಿಗಳ ಪ್ರವಾಹವನ್ನು ಹರಿಸಿ ಜನಗಳಿಗೆ ಉಪಕಾರಮಾಡಿದನೆಂದೂ, ಈ ಕೆಲಸಗಳಲ್ಲಿ ಮರುತ್ತುಗಳ ಸಹಾಯವಾವುದೂ ಇಲ್ಲವೆಂದೂ ಇಂದ್ರನು ಈ ಋಕ್ಕಿನಲ್ಲಿ ಹೇಳುತ್ತಾನೆ.

**ಇಂದ್ರಿಯೇಣ ಸ್ವೇನ**—ತನ್ನ ಸ್ವಬಲದಿಂದಲೇ ಎಂದರ್ಥ. ನಿರುಕ್ತಕಾರರು ಇಂದ್ರಿಯಶಬ್ದವನ್ನು **ಮಘಂ, ರೇಕ್ಣಃ,** ಇತ್ಯಾದಿ ೨೮ ಧನನಾಮಗಳಲ್ಲಿ ಸೇರಿಸಿದ್ದಾರೆ. (ನಿ. ೩-೯) ಬಲವಾಗಲಿ, ಧನವಾಗಲಿ, ಅಥವಾ ಇನ್ನಾವ ಬೇರೆ ಅರ್ಥವಾಗಲಿ, ಇಂದ್ರನಿಗೆ ಸಂಬಂಧಿಸಿದುದರಿಂದ ಇಂದ್ರಿಯವೆಂಬ ಶಬ್ದದ ನಿಷ್ಪತ್ತಿಯಾಗಿದೆಯೆಂದು ಋಕ್ಸಂಹಿತೆಯ ಅನೇಕ ವಾಕ್ಯಗಳಿಂದ ತಿಳಿಯುತ್ತದೆ. ಈ ಎರಡು ಅರ್ಥಗಳಲ್ಲದೆ, ಇಂದ್ರನಿಗೆ ಅರ್ಪಿಸಲು ಯೋಗ್ಯವಾದುದು ಎಂದೂ, ಇಂದ್ರನಿಗೆ ತೃಪ್ತಿಯನ್ನುಂಟುಮಾಡತಕ್ಕದ್ದೆಂದೂ ಅರ್ಥವಾಗುತ್ತದೆ.

**ನ ಕ್ಷೋಣೀಭ್ಯಾಂ ಪರಿಭ್ವೇ ತ ಇಂದ್ರಿಯಂ ನ ಸಮುದ್ರೈಃ ಪರ್ವತೈರಿಂದ್ರ ತೇ ರಥಃ ।**

(ಋ. ಸಂ. ೨-೧೬-೩)

ಇತ್ಯಾದಿ ಋಕ್ಕುಗಳಲ್ಲಿ **ಇಂದ್ರಿಯಂ-ಬಲಂ; ಇಂದ್ರಿಯಾಯ-ವೀರ್ಯಾಯ** ಎಂದು ಇಂದ್ರನ ವೀರ್ಯವನ್ನೂ ಸಾಮರ್ಥ್ಯವನ್ನೂ ವರ್ಣಿಸಿದೆ.

**ನಿರಗ್ನಯೋ ರುರುಚುರ್ನಿರು ಸೂರ್ಯೋ ನಿಃ ಸೋಮ ಇಂದ್ರಿಯೋರಸಃ ।**

(ಋ. ಸಂ. ೮-೩-೨೦)

ಎಂಬಲ್ಲಿ **ಇಂದ್ರೇಣ ಸೇವ್ಯಃ ಇಂದ್ರಿಯಃ ರಸಃ ।** ಇಂದ್ರನು ಸೇವಿಸಲು ಯೋಗ್ಯವಾದ ಸೋಮರಸವೆಂದೂ,

**ನಹೀ ನ್ವಸ್ಯ ಮಹಿಮಾನಮಿಂದ್ರಿಯಂ ಸ್ವರ್ಗೃಣಂತ ಆನಶುಃ ।**

(ಋ. ಸಂ. ೮-೩-೧೩)

ಎಂಬ ಋಕ್ಕಿನಲ್ಲಿ **ಇಂದ್ರಿಯಮಿಂದ್ರಸ್ಯ ಲಿಂಗಮಿಂದ್ರಸ್ಯೈವಾಸಾಧಾರಣಂ ।** ಇಂದ್ರನ ಅಸಾಧಾರಣವಾದ ಮಹತ್ತ್ವವೆಂದೂ.

**ಅಪಚ್ಛ್ಬ್ಲೇಕಮಿಂದ್ರಿಯಂ ಪೂಯಮಾನಃ ಪ್ರತಿ ದೇವಾ ಅಜುಷತ ಪಯೋಭಿಃ ।**

(ಋ. ಸಂ ೯-೯೨-೧)

ಇತ್ಯಾದಿ ಋಕ್ಕುಗಳಲ್ಲಿ **ಇಂದ್ರಸ್ಯ ಪರ್ಯಾಪ್ತಂ ।** ಇಂದ್ರನಿಗೆ ತೃಪ್ತಿಯನ್ನುಂಟುಮಾಡಲು ಸಾಕಾಗುವಷ್ಟು ಎಂತಲೂ,

**ಯಥಾ ಕ್ಷಯಾಮ ಸರ್ವವೀರಯಾ ವಿಶಾ ತನ್ನಃ ಶರ್ಧಾಯ ಧಾಸಥಾ ಸ್ವಿಂದ್ರಿಯಂ ।**
(ಋ. ಸಂ. ೧-೧೧೧-೨)

**ಉದ್ಯತ್ಸಹಃ ಸಹಸ ಆಜನಿಷ್ಟ ದೇದಿಷ್ಟ ಇಂದ್ರ ಇಂದ್ರಿಯಾಣಿ ವಿಶ್ವಾ ।**
(ಋ. ಸಂ. ೫-೩೧-೩)

ಇತ್ಯಾದಿ ಸನ್ನಿವೇಶಗಳಲ್ಲಿ ಧನ, ಐಶ್ವರ್ಯ ಎಂದೂ ಅರ್ಥವಾಗುತ್ತದೆ. ಪ್ರಕೃತವಾದ ಋಕ್ಕಿನಲ್ಲಿ ಇಂದ್ರನ ಸ್ವಬಲ ವೆಂದರ್ಥ.

**ಭಾಮೇನ—ಭಾಮ** ಶಬ್ದವು ಕ್ರೋಧನಾಮಗಳಲ್ಲಿ ಪಠಿತವಾಗಿದೆ.
(ನಿ. ೩-೯)

**ತ್ವಂ ಹಿ ಮನ್ಯೋ ಅಭಿಭೂತ್ಯೋಜಾಃ ಸ್ವಯಂಭೂರ್ಭಾಮೋ ಅಭಿಮಾತಿಷಾಹಃ ।**
**ವಿಶ್ವಚರ್ಷಣಿಃ ಸಹುರಿಃ ಸಹಾವಾನಸ್ಮಾಸ್ವೋಜಃ ಪೃತನಾಸು ಧೇಹಿ ॥**
(ಋ. ಸಂ ೧೦-೮೩-೪)

ಇತ್ಯಾದಿ ಋಕ್ಕುಗಳಲ್ಲಿ ಕ್ರೋಧವೆಂದರ್ಥವಾಗುವಂತೆ ಪ್ರಕೃತವಾದ ಋಕ್ಕಿನಲ್ಲಿಯೂ ಶತ್ರುವಿನ ವಿಷಯದಲ್ಲಿ ಇಂದ್ರನು ಪ್ರಕಟಿಸತಕ್ಕ ಕ್ರೋಧವೆಂದರ್ಥವಾಗುತ್ತದೆ.

ವ್ಯಾಕರಣಪ್ರಕ್ರಿಯಾ

**ವಧೀಮ್**—ಹನ ಹಿಂಸಾಗತ್ಯೋಃ ಧಾತು ಲುಙಿನಲ್ಲಿ **ಲುಙಿಚ** (ಪಾ. ಸಾ. ೨-೪-೪೩) ಎಂಬುದರಿಂದ ವಧಾದೇಶ. ವ್ಯತ್ಯಯದಿಂದ ಮಿಪಿಗೆ ಅಮಾದೇಶ ಬರುವುದಿಲ್ಲ. ಇಕಾರಲೋಪ **ಅಸ್ತಿಸಿಚೋಽಪೃಕ್ತೇ** (ಪಾ. ಸೂ. ೭-೩-೭೬) ಎಂಬುದರಿಂದ ಪ್ರತ್ಯಯಕ್ಕೆ ಈಡಾಗಮ. ಸಿಚಿಗೆ ಆರ್ಧಧಾತುಕ ನಿಮಿತ್ತವಾಗಿ ಇಡಾಗಮ **ಇಟ ಈಟಿ** (ಪಾ. ಸೂ. ೮-೨-೨೮) ಎಂಬುದರಿಂದ **ಸಿಚಿಗೆ ಲೋಪ** ವಧಾದೇಶ ಅದಂತವಾದುದರಿಂದ ಅಕಾರ ಲೋಪವಾದಾಗ ಅದಕ್ಕೆ ಸ್ಥಾನಿವದ್ಭಾವ ಬರುವುದರಿಂದ **ಅತೋಹಲಾದೇರ್ಲಘೋಃ** ( ಪಾ. ಸೂ. ೭-೨-೭ ) ಎಂಬುದರಿಂದ ವೃದ್ಧಿ ಬರುವುದಿಲ್ಲ. ಛಾಂದಸವಾಗಿ ಅಡಾಗಮ ಬರುವುದಿಲ್ಲ. ಆಗಮ ಅನುದಾತ್ತವಾದುದರಿಂದ ಧಾತುಸ್ವರ ಉಳಿಯುತ್ತದೆ.

**ಇಂದ್ರಿಯೇಣ—ಇಂದ್ರಿಯಮಿಂದ್ರಲಿಂಗ**—( ಪಾ. ಸೂ. ೫-೨-೯೩ ) ಎಂಬುದರಿಂದ **ಘಚ್** ಪ್ರತ್ಯಯಾಂತವಾಗಿ ನಿಪಾತಿತವಾಗಿದೆ ಚಿತ್ತಾದುದರಿಂದ ಅಂತೋದಾತ್ತಸ್ವರ ಬರುತ್ತದೆ

**ಭಾಮೇನ**—ಭಾ ದೀಪ್ತೌ ಧಾತು. **ಅರ್ತಿಸ್ತುಸುಹು**—(ಉ. ಸೂ. ೧-೧೩೭) ಎಂಬುದರಿಂದ ಮನ್ ಪ್ರತ್ಯಯ. ನಿತ್ತಾದುದರಿಂದ ಆದ್ಯುದಾತ್ತಸ್ವರ ಬರುತ್ತದೆ.

**ಬಭೂವನ್**—ಭೂ ಧಾತು- ಛಾಂದಸವಾಗಿ ಕ್ವಸುಪ್ರತ್ಯಯ. ಪ್ರತ್ಯಯಸ್ವರ ಬರುತ್ತದೆ. ಸು ಪರವಾದಾಗ ಉಗಿತ್ತಾದುದರಿಂದ ನುಮಾಗಮ. **ಅತ್ವ ಸಂತಸ್ಯ**—ಎಂಬುದರಿಂದ ಉಪಧಾದೀರ್ಘ. ಸುಲೋಪ.

ವಿಶ್ವಶ್ಚಂದ್ರಾಃ—ಪರಾದಿಶ್ಛಂದಸಿ ಬಹುಲಮ್ (ಪಾ. ಸೂ. ೬-೨-೧೯೯) ಎಂಬುದರಿಂದ ಪೂರ್ವ-ಪದಾಂತೋದಾತ್ತ ಸ್ವರ ಬರುತ್ತದೆ.

ಸುಗಾಃ—ಗಮ್ಲೃ ಗತೌ. ಧಾತು. ಸುದುರೋರಧಿಕರಣೇ ಎಂಬ ವಚನದಿಂದ ಸು ಉಪಪದವಾಗಿರುವಾಗ ಡಪ್ರತ್ಯಯ. ಡಿತ್ವ ಸಾಮರ್ಥ್ಯದಿಂದ ಧಾತುವಿನ ಟಿಗೆ (ಅಮ್) ಲೋಪ. ಕೃದುತ್ತರಪದಪ್ರಕೃತಿಸ್ವರ ಬರುತ್ತದೆ.

ಚಕರ—ಡುಕೃಞ್ ಕರಣೇ. ಧಾತು. ಲಿಟ್ ಉತ್ತಮಪುರುಷ ಏಕವಚನದಲ್ಲಿ ಮಿಪಿಗೆ ಣಲಾದೇಶ. ಣಲುತ್ತಮೋ ವಾ (ಪಾ. ಸೂ. ೭-೧-೯೧) ಎಂಬುದರಿಂದ ವಿಕಲ್ಪ ಣಿತ್ವವಿಧಾನಮಾಡಿರುವುದರಿಂದ ವೃದ್ಧಿ ಬರುವುದಿಲ್ಲ. ಗುಣ. ತಿಙಂತನಿಘಾತಸ್ವರ ಬರುತ್ತದೆ.

ವಜ್ರಬಾಹುಃ—ವಜ್ರಃ ಬಾಹೌ ಯಸ್ಯ ಸಃ ಬಹುವ್ರೀಹೌ ಪ್ರಕೃತ್ಯಾ ಪೂರ್ವಪದಮ್ (ಪಾ. ಸೂ. ೬-೨-೧) ಎಂಬುದರಿಂದ ಪೂರ್ವಪದ ಪ್ರಕೃತಿಸ್ವರ ಬರುತ್ತದೆ. ॥ ೮ ॥

———:o:———

ಸಂಹಿತಾಪಾಠಃ

ಅನುತ್ತಮಾ ತೇ ಮಘವನ್ನಕಿರ್ನು ನ ತ್ವಾವಾँ ಅಸ್ತಿ ದೇವತಾ ವಿದಾನಃ ।
ನ ಜಾಯಮಾನೋ ನಶತೇ ನ ಜಾತೋ ಯಾನಿ ಕರಿಷ್ಯಾ ಕೃಣುಹಿ ಪ್ರವೃದ್ಧ ॥ ೯ ॥

ಪದಪಾಠಃ

ಅನುತ್ತಂ । ಆ । ತೇ । ಮಘಽವನ್ । ನಕಿಃ । ನು । ನ । ತ್ವಾಽವಾನ್ । ಅಸ್ತಿ । ದೇವತಾ । ವಿದಾನಃ ।
ನ । ಜಾಯಮಾನಃ । ನಶತೇ । ನ । ಜಾತಃ । ಯಾನಿ । ಕರಿಷ್ಯಾ । ಕೃಣುಹಿ । ಪ್ರಽವೃದ್ಧ ॥ ೯ ॥

ಸಾಯಣಭಾಷ್ಯಂ

ಇದಾನೀಂ ತೇ ಮರುತೋ ಹರ್ಷೇಣ ಪ್ರತ್ಯಾಹುಃ । ಆ ಇತಿ ಸ್ಮರಣೇ । ಸ್ಮೃತವಂತೋ ವಯ-ಮಿದಾನೀಂ ಹೇ ಮಘವನ್ ತೇ ತ್ವಯಾನುತ್ತಮಪ್ರೇರಿತಂ ನಕಿರ್ನು । ನೈವಾಸ್ತಿ । ನು ನಿಶ್ಚಯೇ । ತ್ವಯಾ ಯದುಕ್ತಂ ತತ್ಸತ್ಯಮಿತ್ಯರ್ಥಃ । ಹೇ ದೇವ ತ್ವಾವಾಂಸ್ತ್ವತ್ಸದೃಶೋ ವಿದಾನೋ ವಿದ್ವಾನ್ ॥ ವ್ಯತ್ಯಯೇನ ಶಾನಚ್ ॥ ಜಯೋಪಾಯವೇದಿತಾ ದೇವತಾ ದೇವೋ ನಾಸ್ತಿ । ಕಿಂಚ ಹೇ ಪ್ರವೃದ್ಧಾತಿಬಲ ಜಾಯ-ಮಾನೋ ಜಾತೋ ವಾ ಕಶ್ಚಿದ್ದೇವೋ ಮರ್ತ್ಯೋ ವಾ ತ್ವಂ ಯಾನಿ ವೃತ್ರವಧಾದೀನಿ ಕರಿಷ್ಯಾ ಕರ್ತ-ವ್ಯಾನಿ ಕೃಣುಹಿ ಕುರುಷೇ ತಾನಿ ನ ನಶತೇ । ನ ವ್ಯಾಪ್ನೋತಿ । ನಶತಿರ್ವ್ಯಾಪ್ತಿಕರ್ಮಾ । ನಾನ್ಯಸ್ತ್ವ-ಚ್ಚೇಷ್ಟಿತಾನುಕಾರ್ಯೇವೇತ್ಯರ್ಥಃ ॥

ಪ್ರತಿಪದಾರ್ಥ

**ಮಘವನ್**—ಎಲೈ ಇಂದ್ರನೇ | **ಅ**—ಖಂಡಿತವಾಗಿಯೂ | **ತೇ**—ನಿನ್ನಿಂದ | **ಅನುತ್ತಂ**—ನಡೆಸಲ್ಪಡದಿರುವ ಕಾರ್ಯವು | **ನುಕಿರ್ನು**—ಇಲ್ಲವೇ ಇಲ್ಲ | **ತ್ವಾವಾನ್**—ನಿನಗೆ ಸದೃಶನಾಗಿ | **ವಿದಾನಃ**—ಪ್ರಾಜ್ಞನಾಗಿರುವ | **ದೇವತಾ**—ದೇವತೆಯು | **ನ ಅಸ್ತಿ**—ಇಲ್ಲವೇ ಇಲ್ಲ | **ಪ್ರವೃದ್ಧ**—ಅತ್ಯಂತ ಬಲಶಾಲಿಯಾದ ಎಲೈ ಇಂದ್ರನೇ | **ಯಾನಿ**—ವೃತ್ರವಧಾದಿರೂಪವಾದುದೂ | **ಕರಿಷ್ಯಾ**—(ಲೋಕಹಿತಕ್ಕಾಗಿ) ನೆರವೇರಿಸಲ್ಪಡಬೇಕಾದುದೂ ಆದ ಕಾರ್ಯಗಳನ್ನು | **ಕೃಣುಹಿ**—ನೀನು ಮಾಡುತ್ತೀಯೋ ಅವುಗಳನ್ನು | **ಜಾಯಮಾನಃ**—ಮುಂದೆ ಹುಟ್ಟುವವನೂ | **ಜಾತಃ**—ಹಿಂದೆ ಹುಟ್ಟಿರುವವನೂ ಆದ ಯಾವ ದೇವತೆಯಾಗಲಿ ಅಥವಾ ಮಾನವನಾಗಲಿ | **ನ ನಶತೇ**—ನಿನಗಿಂತಲೂ ಅಧಿಕವಾಗಿ ಮಾಡಲಾರನು |

ಭಾವಾರ್ಥ

ಎಲೈ ಇಂದ್ರನೇ, ನಿನ್ನಿಂದ ನಡೆಸಲ್ಪಡದಿರುವ ಕಾರ್ಯವು ಯಾವುದೂ ಇಲ್ಲ. ದೇವತೆಗಳಲ್ಲಿ ನಿನಗೆ ಸಮಾನನಾದ ಪ್ರಾಜ್ಞನೂ ಯಾರೂ ಇಲ್ಲ. ಅತ್ಯಂತ ಬಲಶಾಲಿಯಾದ ಇಂದ್ರನೇ, ವೃತ್ರವಧಾದಿರೂಪವಾದುದೂ, ಲೋಕಹಿತಕ್ಕಾಗಿ ನೆರವೇರಿಸಲ್ಪಡಬೇಕಾದುದೂ ಆದ ಯಾವ ಕಾರ್ಯಗಳನ್ನು ನೀನು ಮಾಡುತ್ತೀಯೋ, ಅವುಗಳನ್ನು ಮುಂದೆ ಹುಟ್ಟುವವನಾಗಲಿ, ಅಥವಾ ಈಗ ಹುಟ್ಟಿರುವವನಾಗಲಿ ಯಾವದೇವತೆಯೂ ಅಥವಾ ಯಾವ ಮಾನವನೂ ಮಾಡಿ ನಿನ್ನನ್ನು ಮೀರಿಸಲೂ ಸಾಧ್ಯವಿಲ್ಲ.

English Translation

(Maruts),—Verily, Maghavat, nothing (done) by you is unavailing there is no divinty as wise as you : no one being born, or that has been born, ever surpasses the glorious deeds which you, mighty (Indra) have achieved.

ವಿಶೇಷವಿಷಯಗಳು

ಮರುತ್ತುಗಳಿಂದ ಕಷ್ಟಕಾಲದಲ್ಲಿ ಸಹಾಯವನ್ನು ಪಡೆದು ಹವಿಸ್ಸನ್ನು ಸ್ವೀಕರಿಸುವ ವೇಳೆಯಲ್ಲಿ ಮಾತ್ರ ಆ ಸಹಾಯವನ್ನು ಮರೆತರೂ ಸಹ ಮರುತ್ತುಗಳು ಇಂದ್ರನಿಗೆ ಕೊಡಬೇಕಾದ ಗೌರವವನ್ನು ಸಲ್ಲಿಸಿ ಅವನ ಪರಾಕ್ರಮವನ್ನು ಪ್ರಶಂಸಿಸುತ್ತಾರೆ. ಕಾರ್ಯದಲ್ಲಾಗಲಿ, ಪ್ರಜ್ಞೆಯಲ್ಲಾಗಲಿ, ಲೋಕೋಪಕಾರದಲ್ಲಾಗಲಿ, ಇಂದ್ರನಿಗೆ ಸಮಾನವಾದ ದೇವತೆಯು ಹಿಂದೆಯೂ ಹುಟ್ಟಿಲ್ಲ, ಮುಂದೆಯೂ ಹುಟ್ಟುವುದಿಲ್ಲವೆಂದರ್ಥ.

**ನಶತೇ—ನಶತಿರ್ವ್ಯಾಪ್ತಿಕರ್ಮಾ** | ಈ ಪದವನ್ನು ವ್ಯಾಪ್ತಿಕರ್ಮ ನಾಮಗಳಲ್ಲಿ ಪಠಿಸಿದೆ. (ನಿ. ೩-೧೦) ದೇವತೆಯಾಗಲಿ ಮಾನವನಾಗಲಿ ನಿನ್ನನ್ನು ವ್ಯಾಪಿಸುವುದಿಲ್ಲ ಎಂದರೆ ನಿನ್ನ ಕಾರ್ಯವನ್ನು ಮರೆಸಿ ಅದಕ್ಕಿಂತಲೂ ಅಧಿಕವಾದ ಕಾರ್ಯವನ್ನು ಮಾಡಲಾರನು ಎಂದರ್ಥ.

॥ ವ್ಯಾಕರಣಪ್ರಕ್ರಿಯಾ ॥

**ಅನುತ್ತಮ್**—ಣುದ ಪ್ರೇರಣೇ. ಧಾತು. ಕ್ತ ಪ್ರತ್ಯಯ. **ನಸತ್ತನಿಷತ್ತ**—(ಪಾ. ಸೂ ೮-೨-೬೧) ಎಂಬುದರಿಂದ ನಿಪಾತಮಾಡಿರುವುದರಿಂದ ನಿಷ್ಠಾನತ್ವ ಬರುವುದಿಲ್ಲ. **ತತ್ಪುರುಷೇತುಲ್ಯಾರ್ಥ**—(ಪಾ. ಸೂ.

೬-೨-೨) ಎಂಬುದರಿಂದ ನಞ್‌ಪೂರ್ವಪದ ಪ್ರಕೃತಿಸ್ವರ ಬರುತ್ತದೆ.

**ತ್ವಾವಾನ್**—**ವತುಪ್ ಪ್ರಕರಣೇ ಯುಷ್ಮದಸ್ಮಭ್ಯಾಂ ಛಂದಸಿ ಸಾದೃಶ್ಯೇ ಉಪಸಂಖ್ಯಾನಮ್** (ಪಾ. ಸೂ. ೫-೨-೩೯-೧) ಎಂಬುದರಿಂದ ಸಾದೃಶ್ಯಾರ್ಥದಲ್ಲಿ ವತುಪ್ ಪ್ರತ್ಯಯ **ಪ್ರತ್ಯಯೋತ್ತರಪದಯೋಶ್ಚ** ಸೂತ್ರದಿಂದ ಮಪರ್ಯಂತಕ್ಕೆ ತ್ವಾದೇಶ. **ಆ ಸರ್ವನಾಮ್ನಃ**(ಪಾ. ಸೂ. ೬-೩-೯೧) ಎಂಬುದರಿಂದ ದಕಾರಕ್ಕೆ ಆತ್ವ. ಪ್ರತ್ಯಯ ಪಿತ್ತಾದುದರಿಂದ ಪ್ರಾತಿಪದಿಕಸ್ವರ ಬರುತ್ತದೆ.

**ದೇವತಾ**—ದೇವ ಏವ ದೇವತಾ. ಸ್ವಾರ್ಥದಲ್ಲಿ ತಲ್‌ಪ್ರತ್ಯಯ. **ತಲಂತಂ ಸ್ತ್ರಿಯಾಮ್** ಎಂಬ ವಚನದಿಂದ ಟಾಪ್ ಬರುತ್ತದೆ. ಪ್ರತ್ಯಯ ಲಿತ್ತಾದುದರಿಂದ ಪ್ರತ್ಯಯದ ಪೂರ್ವಕ್ಕೆ ಉದಾತ್ತಸ್ವರ ಬರುತ್ತದೆ.

**ವಿದಾನಃ**—ವಿದ ಜ್ಞಾನೇ. ಧಾತು. **ವ್ಯತ್ಯಯೋ ಬಹುಲಮ್** ಎಂಬುದರಿಂದ ಲಟಿಗೆ ಶಾನಚಾದೇಶ. ವಿಕರಣಕ್ಕೆ ಲುಕ್. **ಸಾರ್ವಧಾತುಕಮಪಿತ್** ಎಂಬುದರಿಂದ ಪ್ರತ್ಯಯ ಙಿತ್ತಾಗುವುದರಿಂದ ಧಾತುವಿನ ಇಕಿಗೆ ಅದನ್ನು ನಿಮಿತ್ತೀಕರಿಸಿ ಗುಣ ಬರುವುದಿಲ್ಲ. ವ್ಯತ್ಯಯದಿಂದ ಆದ್ಯುದಾತ್ತಸ್ವರ ಬರುತ್ತದೆ.

**ನಶತೇ**—ಣಶ ವ್ಯಾಪ್ತೌ. ಧಾತು. ಲಟ್ ಪ್ರಥಮಪುರುಷ ಏಕವಚನಾಂತರೂಪ. **ಚಾದಿಲೋಪೇ ವಿಭಾಷಾ** (ಪಾ. ಸೂ. ೮-೧-೬೩) ಎಂಬುದರಿಂದ ನಿಘಾತಸ್ವರ ಪ್ರತಿಷೇಧ ಬರುವುದರಿಂದ ಧಾತುಸ್ವರ ಉಳಿಯುತ್ತದೆ.

**ಕರಿಷ್ಯಾ**—ಛಾಂದಸ ಪ್ರತ್ಯಯ. ನಪುಂಸಕದಲ್ಲಿ **ಶೇಶ್ಛಂದಸಿ ಬಹುಲಮ್** (ಪಾ. ಸೂ. ೬-೧-೭೦) ಎಂಬುದರಿಂದ ಶಿಗೆ ಲೋಪ.

**ಕೃಣುಹಿ**—ಕೃವಿ ಹಿಂಸಾಕರಣಯೋಶ್ಚ ಧಾತು. ಲೋಟ್ ಮಧ್ಯಮಪುರುಷ ಏಕವಚನಾಂತರೂಪ. **ಉತಶ್ಚ ಪ್ರತ್ಯಯಾಚ್ಛಂದೋವಾವಚನಮ್** (ಪಾ. ಸೂ. ೯-೪-೧೦೬-೧) ಎಂಬುದರಿಂದ ಹಿಗೆ ಲುಕ್ ಬರುವುದಿಲ್ಲ. ಯದ್ಯೋಗವಿರುವುದರಿಂದ ನಿಘಾತಸ್ವರ ಬರುವುದಿಲ್ಲ. ಹಿಗೆ ಅಪಿತ್ವವಿಧಾನಮಾಡಿರುವುದರಿಂದ ಉದಾತ್ತಸ್ವರ ಬರುತ್ತದೆ.

**ಪ್ರವೃದ್ಧ**—ವೃಧು ವೃದ್ಧೌ. ಕ್ತ ಪ್ರತ್ಯಯ. **ಝಷಸ್ತಥೋರ್ಧೋಽಧಃ**—ಎಂಬುದರಿಂದ ಅದಕ್ಕೆ ಧತ್ವ. ಸಂಬುದ್ಧಿಯಲ್ಲಿ ಆಮಂತ್ರಿತ ನಿಘಾತಸ್ವರ ಬರುತ್ತದೆ. ॥ ೯ ॥

———— :o: ————

ಸಂಹಿತಾಪಾಠಃ

ಏಕಸ್ಯ ಚಿನ್ಮೇ ವಿಭ್ವ೧ಸ್ತ್ವೋಜೋ ಯಾ ನು ದಧೃಷ್ವಾನ್ಕೃಣವೈ ಮನೀಷಾ ।
ಅಹಂ ಹ್ಯು೧ಗ್ರೋ ಮರುತೋ ವಿದಾನೋ ಯಾನಿ ಚ್ಯವಮಿಂದ್ರ ಇದೀಶ ಏಷಾಂ ॥ ೧೦ ॥

॥ ಪದಪಾಠಃ ॥

ಏಕಸ್ಯ । ಚಿತ್ । ಮೇ । ವಿऽಭು । ಅಸ್ತು । ಓಜಃ । ಯಾ । ನು । ದಧೃಷ್ವಾನ್ । ಕೃಣವೈ । ಮನೀಷಾ ।

ಅಹಂ । ಹಿ । ಉಗ್ರಃ । ಮರುತಃ । ವಿದಾನಃ । ಯಾನಿ । ಚ್ಯವಂ । ಇಂದ್ರಃ । ಇತ್ । ಈಶೇ । ಏಷಾಂ ॥

॥ ೧೦ ।

ಸಾಯಣಭಾಷ್ಯಂ

ಇದಾನೀಮಿಂದ್ರ ಆಹ । ಮೇ ಮಮೈಕಸ್ಯ ಚಿದೇಕಸ್ಯೈವ ವಿಭು ಸರ್ವತ್ರಗಮನಶೀಲಮೋಜೋ ಬಲಮಸ್ತು । ಯದ್ವಾ । ಬಲಮೇಕಸ್ಯೈವಾಸ್ತು । ಕಿಮರ್ಥಮಿತಿ ಚೇತ್ ಉಚ್ಯತೇ । ಯಾ ಯಾನಿ ಕರ್ಮಾಣಿ ಮನೀಷಾ ಮನೀಷಯಾ ಮನಸ ಈಷಯಾ ದಧೃಷ್ವಾನ್ ಧರ್ಷಿತವಾನಹಂ ನು ಕ್ಷಿಪ್ರಂ ಕೃಣವೈ ಕರ್ತುಂ ಶಕ್ನುವಾನಿ । ಹೇ ಮರುತಃ ಅಹಂ ಹ್ಯಹಂ ಖಲೂಗ್ರ ಉದ್ಗೂರ್ಣಬಲೋ ವಿದಾನೋ ವೇದನಾವಾನ್ । ಯಾನಿ ಯಾನಿ ವಸೂನಿ ಚ್ಯವಂ ಅವಗಚ್ಛಾಮಿ ಏಷಾಮಹಮೇವೇಂದ್ರ ಇದೀಶ್ವರ ಏವ ಸನ್ನೀಶೇ । ಈಶ್ವರೋ ಭವಾಮಿ । ಅಥವಾ ವಿದಾನೋऽಹಂ ಯಾನಿ ಚ್ಯವಂ ಯಾನ್ಯುದ್ದಿಶ್ಯ ಗಚ್ಛೇಯಂ ಏಷಾಮೀಶೇ । ಯತೋऽಹಮಿಂದ್ರಃ ಅತಃ ಶಕ್ತ ಇತ್ಯರ್ಥಃ ॥

ಪ್ರತಿಪದಾರ್ಥ

ಯಾ—ಯಾವ ಸಾಹಸಕಾರ್ಯಗಳನ್ನು । **ಮನೀಷಾ**—ನನ್ನ ಸ್ವಬುದ್ಧಿಪ್ರೇರಣೆಯಿಂದಲೇ । **ದಧೃಷ್ವಾನ್**—ಸಂಕಲ್ಪಿಸಿ । **ನು**—ಕ್ಷಿಪ್ರವಾಗಿಯೇ । **ಕೃಣವೈ**—ಮಾಡಲು ಶಕ್ತನಾಗಿದ್ದೇನೆಯೋ (ಆದ್ದರಿಂದಲೇ) । **ಮೇ ಏಕಸ್ಯ ಚಿತ್**—ಕೇವಲ ನನ್ನ ಸಂಬಂಧಿಯಾದುದೂ । **ವಿಭು**—ಸರ್ವತ್ರ ಸಂಚರಿಸತಕ್ಕದ್ದೂ ಆದ । **ಓಜಃ**—ಬಲವು । **ಅಸ್ತು**—ಸ್ಥಿರವಾಗಿರಲಿ । **ಮರುತಃ**—ಎಲೈ ಮರುತ್ತುಗಳೇ । **ಅಹಂ ಹಿ**—ನಾನಾದರೋ । **ಉಗ್ರಃ**—ಭಯಂಕರನು । **ವಿದಾನಃ**—ಪ್ರಾಜ್ಞನು (ಮತ್ತು) । **ಯಾನಿ**—ಯಾವ ವಿಷಯದಲ್ಲಿ । **ಚ್ಯವಂ**—ಮನಸ್ಸನ್ನಿಡುತ್ತೇನೆಯೋ । **ಏಷಾಂ**—ಆ ಸಕಲ ವಸ್ತುಗಳಿಗೂ । **ಇಂದ್ರ ಇತ್**—ನಾನೇ ಒಡೆಯನಾಗಿ । **ಈಶೇ**—ಪ್ರಭುತ್ವವನ್ನು ಮಾಡುತ್ತೇನೆ.

ಭಾವಾರ್ಥ

ಎಲೈ ಮರುತ್ತುಗಳೇ, ಎಲ್ಲಾ ಸಾಹಸಕಾರ್ಯಗಳನ್ನೂ ಸಹ ನಾನು ನನ್ನ ಸ್ವಬುದ್ಧಿಪ್ರೇರಣೆಯಿಂದಲೇ ಸಂಕಲ್ಪಿಸಿ ಕ್ಷಿಪ್ರವಾಗಿ ನಡೆಸಲು ಶಕ್ತನಾಗಿದ್ದೇನೆ. ಆದ್ದರಿಂದಲೇ, ಸರ್ವತ್ರಸಂಚರಿಸಲು ಯೋಗ್ಯವಾದ ಕೇವಲ ನನ್ನ ಬಲವು ಮಾತ್ರ ಸ್ಥಿರವಾಗಿರಲಿ. ನಾನಾದರೋ, ಅತ್ಯಂತ ಭಯಂಕರನು, ಮತ್ತು ಪ್ರಾಜ್ಞನು, ಯಾವ ವಸ್ತುವಿನಲ್ಲಿ ನಾನು ಮನಸ್ಸು ಕೊಡುತ್ತೇನೆಯೋ, ಆ ಸಕಲವಸ್ತುಗಳನ್ನೂ ಪಡೆದು ಅವುಗಳಿಗೆ ಪ್ರಭುವಾಗಿರಬಲ್ಲೆನು

## English Translation

(Indra),—May the prowess of me alone be irresistible : may I quickly accomplish whatever I contemplate in my mind : for verily, Maruts, I am

fierce and sagacious, and to whatever (objects) I direct (my thoughts), of them I am the lord, and rule (over them).

**ವಿಶೇಷವಿಷಯಗಳು**

ಇಂದ್ರನು ಈ ಋಕ್ಕಿನಲ್ಲಿ ಸರ್ವವ್ಯಾಪಕವಾದ ತನ್ನ ಬಲವನ್ನೂ, ಬುದ್ಧಿಯನ್ನೂ, ತನ್ನ ಭಯಂಕರ ಸ್ವರೂಪವನ್ನೂ, ಪ್ರಾಜ್ಞತೆಯನ್ನೂ ಪ್ರಶಂಸಿಸಿ ಈ ಎಲ್ಲಾ ಗುಣಗಳೂ ಇರುವುದರಿಂದಲೇ, ತಾನು ಸಕಲಕ್ಕೂ ಪ್ರಭುವಾಗಿರಲು ಯೋಗ್ಯನೆಂದು ಹೇಳಿಕೊಳ್ಳುತ್ತಾನೆ. ಈ ರೀತಿ ನಾನಾವಿಧವಾದ ಮಹದ್ಗುಣಗಳಿರುವುದರಿಂದಲೇ **ಯಾನಿ ಚ್ಯೈವಮಿಂದ್ರ ಇದೀಶ ಏಷಾಂ** ನಾನೇ ಇಂದ್ರನಾಗಿದ್ದೇನೆ ಎಂದು ಹೇಳಿಕೊಳ್ಳುತ್ತಾನೆ. ಇಲ್ಲಿ **ಇಂದ್ರ** ಶಬ್ದಕ್ಕೆ ಮೇಲೆ ಹೇಳಿದ ನಾನಾ ಮಹದ್ಗುಣಗಳಿಂದ ಕೂಡಿದ ಪ್ರಭುತ್ವವೆಂದರ್ಥ. ನಿರುಕ್ತಕಾರರು **ಇಂದ್ರ** ಶಬ್ದದ ನಿರ್ವಚನವನ್ನು ತೋರಿಸಿ ಇಂದ್ರನ ವಿಶೇಷಗುಣಗಳೆಲ್ಲವೂ ಈ ಪದದಿಂದಲೇ ಸೂಚಿತವಾಗುವುದೆಂದು ತಿಳಿಸಿದ್ದಾರೆ

**ಇಂದ್ರ ಇರಾಂ ದೃಣಾತೀತಿ ವಾ** । ವಿಭಾಗಮಾಡು ಎಂಬರ್ಥವನ್ನು ಕೊಡುವ **ದೃ** ಧಾತುವಿನಿಂದ ನಿಷ್ಪನ್ನವಾಗಿ, **ಇರಾಂ ಅನ್ನಂ ವ್ರೀಹ್ಯಾದಿ ದೃಣಾತಿ ವಿದಾರಯತಿ । ವರ್ಷಕ್ಲೇದಿತಮಂಕುರಂ ಬೀಜಂ ಭಿನತ್ತಿ** ವ್ರೀಹ್ಯಾದಿರೂಪವಾದ ಅನ್ನವನ್ನು ವಿಭಾಗಮಾಡುತ್ತಾನೆ ಎಂದರೆ ಮಳೆಯಿಂದ ತೋಯಲ್ಪಟ್ಟ ಬೀಜಾದ್ಯಂಕುರಗಳನ್ನು ಬಿಡಿಸಿ ವೃಕ್ಷವಾಗುವಂತೆ ಮಾಡುತ್ತಾನೆ ಎಂಬುದರಿಂದಾಗಲಿ, ಅಥವಾ,

**ಇರಾಂ ದದಾತೀತಿ ವಾ**—ಕೊಡು ಎಂಬರ್ಥವುಳ್ಳ **ದಾ** ಧಾತುವಿನಿಂದ ನಿಷ್ಪನ್ನವಾಗಿ **ವರ್ಷದ್ವಾರೇಣಾಸೌ ಇರಾಂ ದದಾತಿ** । ವೃಷ್ಟ್ಯುತ್ಪಾದನಮೂಲಕವಾಗಿ ಅನ್ನವನ್ನು ಕೊಡುತ್ತಾನೆಂಬುದರಿಂದಾಗಲಿ,

**ಇರಾಂ ದಧಾತೀತಿ ವಾ**—ಪೋಷಣಾರ್ಥಕವಾದ **ಧಾ** ಧಾತುವಿನಿಂದ ನಿಷ್ಪನ್ನವಾಗಿ ಅನ್ನಾದಿಗಳನ್ನು ವೃಷ್ಟಿದ್ವಾರಾ ಕೊಟ್ಟು ಪೋಷಿಸುವುದರಿಂದಾಗಲಿ,

**ಇರಾಂ ದಾರಯತ ಇತಿ ವಾ**—ಸೀಳುವಂತೆ ಮಾಡು ಎಂಬರ್ಥವನ್ನು ಕೊಡುವ **ದೃ** ಧಾತುವಿನಿಂದ ನಿಷ್ಪನ್ನವಾಗಿ ಸಸ್ಯಾದಿಗಳಿಗಾಗಿ ಭೂಮಿಯನ್ನು ಉಳುವರೂಪದಲ್ಲಿ ಹದಮಾಡುವುದರಿಂದಾಗಲಿ,

**ಇಂದವೇ ದ್ರವತೀತಿ ವಾ**—ಓಡು ಎಂಬರ್ಥವನ್ನು ಕೊಡುವ **ದ್ರು**-ಧಾತುವಿನಿಂದ ನಿಷ್ಪನ್ನವಾಗಿ ಸೋಮರಸಕ್ಕಾಗಿ ಆತುರದಿಂದ ಓಡಿಬರುವನು ಎಂಬುದರಿಂದಾಗಲಿ,

**ಇಂದೌ ರಮತ ಇತಿ ವಾ** । ಸಂತೋಷಪಡು ಎಂಬರ್ಥವನ್ನು ಕೊಡುವ **ರಮ್** ಧಾತುವಿನಿಂದ ನಿಷ್ಪನ್ನವಾಗಿ ಸೋಮರಸದ ಪಾನದಿಂದ ತೃಪ್ತನಾಗು ಎಂಬುದರಿಂದಾಗಲಿ,

**ಇಂಧೇ ಭೂತಾನೀತಿ ವಾ**—ಪ್ರಕಾಶಿಸು ಎಂಬರ್ಥವನ್ನು ಕೊಡುವ **ಇಂಧ್** ಧಾತುವಿನಿಂದ ನಿಷ್ಪನ್ನವಾಗಿ ಭೂತಗಳನ್ನು ಪ್ರಕಾಶಿಸುವಂತೆ ಮಾಡುವವನು ಎಂಬುದರಿಂದಾಗಲಿ, ಇಂದ್ರನೆಂಬ ಹೆಸರು ಪ್ರಸಿದ್ಧವಾಗಿದೆಯೆಂದು ತಮ್ಮ ವೈಯಕ್ತಿಕವಾದ ಅಭಿಪ್ರಾಯವನ್ನು ತಿಳಿಸಿ ಅನಂತರ ಇತರ ಆಚಾರ್ಯರ ಅಭಿಪ್ರಾಯಗಳನ್ನೂ ತಿಳಿಸಿದ್ದಾರೆ:—

**ಇದಂ ಕರಣಾದಿತ್ಯಾಗ್ರಯಣಃ**—ವಿಶ್ವಸೃಷ್ಟಿಯಲ್ಲಿ ಎಲ್ಲವನ್ನೂ ಇವನೇ ಮಾಡಿದನು. ಎಂಬುದರಿಂದ (ಇದಮಸೌ ಸರ್ವಮಕರೋತ್) ಇಂದ್ರಶಬ್ದವಾಚ್ಯನೆಂದು ಆಗ್ರಯಣಮುನಿಗಳ ಮತವಾಗಿದೆ.

**ಇದಂ ದರ್ಶನಾದಿತ್ಯೌಪಮನ್ಯವಃ**—ಸಕಲವನ್ನೂ ದರ್ಶನಮಾಡತಕ್ಕ ಶಕ್ತಿಯಿರುವುದರಿಂದ ಇಂದ್ರಶಬ್ದ ವಾಚನ್ಯೆಂದು **ಔಪಮನ್ಯವಋಷಿ**ಗಳ ಮತ.

**ಇಂದತೇರ್ವೈಶ್ವರ್ಯಕರ್ಮಣಃ**—ವಿಶ್ವಕ್ಕೆಲ್ಲಾ ಪ್ರಭುವಾಗಿರುವುದರಿಂದಲೂ ಸಹ ಈ ಹೆಸರಿರಬಹುದು.

**ಇಂದಞ್ಛತ್ರೂಣಾಂ ದಾರಯಿತಾ ವಾ ದ್ರಾವಯಿತಾ ವಾ ।** ಸರ್ವಶಕ್ತಿಯಿಂದ ಕೂಡಿ ಶತ್ರುಗಳನ್ನು ಸೀಳುವವನು ಅಥವಾ ಓಡಿಸುವವನು ಎಂಬುದರಿಂದಾಗಲಿ ಈ ಪ್ರಸಿದ್ಧವಾದ ಹೆಸರಿದೆ

ಪ್ರಕೃತವಾದ ಋಕ್ಕಿನಲ್ಲಿಯೂ ಸಹ ಮೇಲೆ ಹೇಳಿದ ಗುಣಗಳು ಇಂದ್ರಶಬ್ದದಿಂದ ಸೂಚಿತವಾಗುತ್ತದೆಂದು **ಇಂದ್ರ ಇದೀಶ ವಿಷಾಂ** ಎಂಬುದರಿಂದ ತಿಳಿಯುತ್ತದೆ.

॥ ವ್ಯಾಕರಣಪ್ರಕ್ರಿಯಾ ॥

**ವಿಭು**—ವಿಭವತೀತಿ ವಿಭು. ಭೂ ಸತ್ತಾಯಾಂ ಧಾತು **ಭುವಃ** (ಪಾ. ಸೂ. ೩-೨-೧೭೯) ಎಂಬ ಸೂತ್ರವು ಅನುವೃತ್ತವಾಗುವಾಗ **ವಿಪ್ರಸಂಭ್ಯೋಡ್ವಸಂಜ್ಞಾಯಾಮ್** (ಪಾ ಸೂ. ೩-೨-೧೮೦) ಎಂಬುದರಿಂದ ಡು ಪ್ರತ್ಯಯ. **ಡಿತ್ತಾ**ದುದರಿಂದ ಟಿಗೆ ಲೋಪ. ಕೃದುತ್ತರಪದಪ್ರಕೃತಿಸ್ವರ ಬರುತ್ತದೆ.

**ದಧೃಷ್ವಾನ್**—ಞಿಧೃಷಾ ಪ್ರಾಗಲ್ಭ್ಯೇ ಧಾತು. **ಕ್ವಸುಶ್ಚ** ಎಂಬುದರಿಂದ ಲಿಟಿಗೆ ಕ್ವಸುರಾದೇಶ. ಅದನ್ನು ನಿಮಿತ್ತೀಕರಿಸಿ ಧಾತುವಿಗೆ ದ್ವಿತ್ವಾದಿ. ಪ್ರಥಮಾ ಏಕವಚನಾಂತರೂಪ.

**ಕೃಣವೈ**-- ಕೃವಿ ಹಿಂಸಾಕರಣಯೋಶ್ಚ ಧಾತು. **ಇದಿತೋನುಮ್ ಧಾತೋಃ** ಎಂಬುದರಿಂದ ನುಮಾಗಮ. ತುಮನರ್ಥದಲ್ಲಿ **ತುಮರ್ಥೇಸೇಸೇನಸೇ**—(ಪಾ. ಸೂ. ೩-೪-೯) ಪ್ರತ್ಯಯ ಬಂದಾಗ ಛಾಂದಸವಾಗಿ ಅಭಿಮತರೂಪವಾಗುತ್ತದೆ.

**ಉಗ್ರಃ**—ಉಚ ಸಮವಾಯೇ. ಧಾತು. **ಋಜ್ರೇಂದ್ರ**—(ಉ. ಸೂ. ೨-೧೮೬) ಎಂಬುದರಿಂದ ರಗಂತವಾಗಿ ನಿಪಾತಿತವಾಗಿದೆ.

**ಚ್ಯವಮ್**—ಚ್ಯುಙ್ ಗತೌ. ಧಾತು. ಭ್ವಾದಿ. **ವ್ಯತ್ಯಯೋ ಬಹುಲಮ್** (ಪಾ ಸೂ. ೩-೧-೮೫) ಎಂಬುದರಿಂದ ಪರಸ್ಮೈಪದಿಯಾಗುತ್ತದೆ. ಲಿಙ್ ಉತ್ತಮಪುರುಷಏಕವಚನದಲ್ಲಿ ಮಿಪ್. **ತಸ್ಥಸ್ಥಮಿ**—(ಪಾ. ಸೂ. ೩-೪-೧೦೧) ಎಂಬುದರಿಂದ ಅದಕ್ಕೆ ಅಮಾದೇಶ. **ಬಹುಲಂ ಛಂದಸಿ** ಎಂಬುದರಿಂದ ವಿಕರಣಕ್ಕೆ ಲುಕ್. ಪ್ರತ್ಯಯನಿಮಿತ್ತವಾಗಿ ಧಾತು ಉಕಾರಕ್ಕೆ ಗುಣ. ಅವಾದೇಶ. ಯದ್ಯೋಗವಿರುವುದರಿಂದ ನಿಘಾತಸ್ವರ ಬರುವುದಿಲ್ಲ. ಮಿಪ್ ಪಿತ್ತಾದುದರಿಂದ ಧಾತುಸ್ವರ ಉಳಿಯುತ್ತದೆ.

**ಈಶೇ**—ಈಶ ಐಶ್ವರ್ಯೇ ಧಾತು. ಲಟ್ ಉತ್ತಮಪುರುಷಏಕವಚನಾಂತರೂಪ. ತಿಙಂತನಿಘಾತಸ್ವರ ಬರುತ್ತದೆ. ॥ ೧೦ ॥

—— :0: ——

ಸಂಹಿತಾಪಾಠಃ

ಅಮನ್ದನ್ಮಾ ಮರುತಃ ಸ್ತೋಮೋ ಅತ್ರ ಯನ್ಮೇ ನರಃ ಶ್ರುತ್ಯಂ ಬ್ರಹ್ಮ ಚಕ್ರ ।

ಇಂದ್ರಾಯ ವೃಷ್ಣೇ ಸುಮಖಾಯ ಮಹ್ಯಂ ಸಖ್ಯೇ ಸಖಾಯಸ್ತನ್ವೇ ತನೂಭಿಃ ॥ ೧೧ ॥

ಪದಪಾಠಃ

ಅಮಂದತ್ । ಮಾ । ಮರುತಃ । ಸ್ತೋಮಃ । ಅತ್ರ । ಯತ್ । ಮೇ । ನರಃ । ಶ್ರುತ್ಯಂ । ಬ್ರಹ್ಮ । ಚಕ್ರ ।

ಇಂದ್ರಾಯ । ವೃಷ್ಣೇ । ಸುಽಮಖಾಯ । ಮಹ್ಯಂ । ಸಖ್ಯೇ । ಸಖಾಯಃ । ತನ್ವೇ । ತನೂಭಿಃ ॥ ೧೧ ॥

ಸಾಯಣಭಾಷ್ಯಂ

ಇದಮಪೀಂದ್ರವಾಕ್ಯಂ । ಹೇ ಮರುತಃ ಮಾ ಮಾಮತ್ರಾಸ್ಮಿನ್ನುದಕೋತ್ಪಾದನವಿಷಯೇ ಸ್ತೋಮಃ ಸ್ತೋತ್ರಮಮಂದತ್ । ಮಾದಯತಿ ಮೋದಯತೇ ವಾ । ಹೇ ನರಃ ಸಖಾಯಃ ಯೂಯಂ ಮೇ ಮಮ ಯಚ್ಛ್ರುತ್ಯಂ ಸರ್ವೈಃ ಶ್ರೋತವ್ಯಂ ಬ್ರಹ್ಮ ಪರಿವೃಢಮೇಘಧಾರಣಾದಿರೂಪಂ ಚಕ್ರ ಕೃತವಂತಃ । ಸ್ವಪ್ರಭೂತಂ ಸ್ತೋತ್ರಂ ವಾನುತ್ತಮಾ ತ ಇತ್ಯಾದಿಕಂ । ಇಂದ್ರಾಯ ಪರಮೈಶ್ವರ್ಯಗುಣಕಾಯ ವೃಷ್ಣೇಽಭಿಮತವರ್ಷಿತ್ರೇ ಸುಮಖಾಯ ಶೋಭನಯಾಗಾಯ ಸಖ್ಯೇ ಯುಷ್ಮಾಭಿಃ ಸಮಾನಖ್ಯಾನಾಯ ತನೂಭಿರನೇಕಶರೀರೈರುಪೇತಾಯ ಮಹ್ಯಂ ಮಮ ತನ್ವೇ ಮದೀಯಶರೀರಪೋಷಾಯ ಭವತು । ಯದ್ವಾ । ತನೂಭಿರಸ್ಮಚ್ಛರೀರಭೂತೈರ್ಯುಷ್ಮಾಭಿಃ ಕೃತಂ ಮಹ್ಯಮೇವಾಸ್ತ್ವಿತ್ಯರ್ಥಃ ॥

। ಪ್ರತಿಪದಾರ್ಥ ।

ಮರುತಃ—ಎಲೈ ಮರುತ್ತುಗಳೇ, । ಮಾ—ನನ್ನನ್ನು । ಅತ್ರ—ಈ ಸನ್ನಿವೇಶದಲ್ಲಿ । ಸ್ತೋಮಃ—ಸ್ತೋತ್ರವು । ಅಮಂದತ್—ಸಂತೋಷಪಡಿಸುತ್ತದೆ । ನರಃ—ನೇತೃಗಳೂ । ಸಖಾಯಃ—ಸುಹೃತ್ತುಗಳೂ ಆದ ನೀವು । ಮೇ—ನನಗೆ ಸಂಬಂಧಿಸಿದುದೂ ಮತ್ತು । ಯತ್—ಯಾವುದು । ಶ್ರುತ್ಯಂ—ಸರ್ವರಿಂದಲೂ ಕೇಳಲ್ಪಡುವುದೂ, । ಬ್ರಹ್ಮ—ಬೃಹತ್ತಾದ ಮೇಘವನ್ನು ಧರಿಸತಕ್ಕದ್ದೂ ಆದ ಸ್ತೋತ್ರವನ್ನು । ಚಕ್ರ—ಮಾಡಿದ್ದೀರೋ (ಅವೆಲ್ಲವೂ ಸಹ) । ಇಂದ್ರಾಯ – ಈಶ್ವರಗುಣವುಳ್ಳವನೂ, । ವೃಷ್ಣೇ—ಇಷ್ಟಾರ್ಥಗಳನ್ನು ಸುರಿಸುವವನೂ, । ಸುಮಖಾಯ—ಶ್ರೇಷ್ಠವಾದ ಯಾಗವುಳ್ಳವನೂ, । ಸಖ್ಯೇ—ನಿಮ್ಮಗಳ ಸಖನೂ, । ತನೂಭಿಃ—ಅನೇಕ ಶರೀರಗಳಿಂದ ಕೂಡಿದವನೂ ಆದ । ಮಹ್ಯಂ—ನನ್ನ । ತನ್ವೇ—ಶರೀರದ ಪೋಷಣೆಗಾಗಿ ಉದ್ದಿಷ್ಟವಾಗಿರಲಿ.

ಭಾವಾರ್ಥ

ಎಲೈ ಮರುತ್ತುಗಳೇ, ಈ ಸನ್ನಿವೇಶದಲ್ಲಿ ನನ್ನನ್ನು ನಿಮ್ಮ ಸ್ತೋತ್ರವು ಸಂತೋಷಪಡಿಸುತ್ತದೆ. ನೇತೃಗಳೂ ಸುಹೃತ್ತುಗಳೂ ಆದ ನೀವು ನನಗೆ ಸಂಬಂಧಿಸಿದುದೂ, ಸರ್ವರಿಂದಲೂ ಕೇಳಲ್ಪಡುವುದೂ, ಬೃಹತ್ತಾದ ಮೇಘವನ್ನು ಧರಿಸತಕ್ಕದೂ ಆದ ಸ್ತೋತ್ರವನ್ನು ಪಠಿಸಿದ್ದೀರಿ. ಆ ಸ್ತುತಿಗಳೆಲ್ಲವೂ ಸಹ ಈಶ್ವರಗುಣವುಳ್ಳವನೂ, ಇಷ್ಟಾರ್ಥಗಳನ್ನು ಸುರಿಸುವವನೂ, ಶ್ರೇಷ್ಠವಾದ ಯಾಗವುಳ್ಳವನೂ, ನಿಮ್ಮಗಳ ಸಖನೂ, ಅನೇಕ ಶರೀರಗಳಿಂದ ಕೂಡಿದವನೂ ಆದ ನನ್ನ ಶರೀರದ ಪೋಷಣೆಗಾಗಿ ಆಗಿರಲಿ.

## English Translation

Maruts, on this occasion praise delights me ; that praise which is to be heard (by all), which men have offered me· To Indra, the showerer (o benefits), the object of pious sacrifce : to me, (endowed) with many forms (do you) my friends (offer sacrifices) for (the nourishment of my) person·

ವಿಶೇಷವಿಷಯಗಳು

ಇಂದ್ರನು ಮರುತ್ತುಗಳ ಮನಸ್ಸು ನೋಯುವಂತೆ ಹಿಂದಿನ ಋಕ್ಕುಗಳಲ್ಲಿ ಉತ್ತರ ಕೊಟ್ಟಂತೆ ಈ ಋಕ್ಕಿನಲ್ಲಿಲ್ಲ. ಮರುತ್ತುಗಳ ಸಖ್ಯವನ್ನು ಸ್ಮರಿಸಿ ಅವರಿಗೆ ಸಮಾಧಾನವಾಗುವಂತೆ ಉಪಚಾರದ ಮಾತುಗಳನ್ನಾಡುತ್ತಾನೆ. ಹಿಂದಿನ ಋಕ್ಕುಗಳಲ್ಲಿ ವರ್ಣಿತವಾಗಿರುವಂತೆ ಇಂದ್ರನು ಮರುತ್ತುಗಳ ವಿಷಯದಲ್ಲಿ ಬಹಳ ಕಠಿಣವಾಗಿ ವರ್ತಿಸಿದ್ದರೂ ಸಹ, ಒಂಭತ್ತನೇ ಋಕ್ಕಿನಲ್ಲಿ " **ಅನುತ್ತಮಾ ತೇ ಮಘವನ್ನಕಿರ್ನು** " ಇತ್ಯಾದಿಯಾಗಿ ಮರುತ್ತುಗಳು ಇಂದ್ರನ ಮಹತ್ತ್ವವನ್ನು ಪ್ರಶಂಸಿಸುತ್ತಾರೆ ಅನಂತರ ಇಂದ್ರನ ಉತ್ತರವು ಮೃದುವಾಗಿಯೂ, ಉಪಕಾರವನ್ನು ಸ್ಮರಿಸುವುದಾಗಿಯೂ ಇರುತ್ತದೆ. ಈ ಋಕ್ಕಿನ ಅರ್ಥವು ಸ್ಪಷ್ಟವಾಗಿದ್ದರೂ **ಸಖ್ಯೇ ಸಖಾಯಸ್ತನ್ವೇ ತನೂಭಿಃ** ಎಂಬ ಪಾದವು ಮಾತ್ರ ಕೊಂಚ ಕ್ಲಿಷ್ಟವಾಗಿರುತ್ತದೆ. ಸಾಯಣರು ಇದಕ್ಕೆ ಎರಡು ವಿಧವಾದ ಅರ್ಥವನ್ನು ಹೇಳಿರುತ್ತಾರೆ. ಮೊದಲನೆಯದಾಗಿ ; **ತನೂಭಿಃ—ಅನೇಕಶರೀರೈರುಪೇತಾಯ ; ಮಹ್ಯಂ—ಮಮ ; ತನ್ವೇ—ಮದೀಯಶರೀರಪೋಷಾಯ**–ಅನೇಕ ಶರೀರಗಳಿಂದ ಕೂಡಿದ ನನ್ನ ದೇಹಪೋಷಣೆಗಾಗಿ ಎಂದು ಒಂದರ್ಥವೂ, ಅಲ್ಲದೇ, **ತನೂಭಿರಸ್ಮಚ್ಛರೀರಭೂತೈರ್ಯುಷ್ಮಾಭಿಃ**—ನನ್ನ ದೇಹಾನತಿರಿಕ್ತರಾದ ನಿಮ್ಮಿಂದ ಕೃತವಾದದ್ದು ಎಂದು ಇನ್ನೊಂದರ್ಥವೂ ಸಾಧ್ಯವೆಂದು ತಿಳಿಸಿದ್ದಾರೆ.

ವ್ಯಾಕರಣಪ್ರಕ್ರಿಯಾ

**ಅಮಂದತ್**— ಮದಿ ಸ್ತುತ್ಯಾದಿಷು. ಧಾತು. ಛಾಂದಸವಾಗಿ ವರ್ತಮಾನಾರ್ಥದಲ್ಲಿ ಲಙ್. ಪ್ರಯೋಜಕ ವ್ಯಾಪಾರ ತೋರುವುದರಿಂದ ಅಂತರ್ಭಾವಿತಣ್ಯರ್ಥಕವಾಗಿದೆ. ಪ್ರಥಮಪುರುಷ ಏಕವಚನಾಂತರೂಪ. ಪಾದಾದಿಯಲ್ಲಿರುವುದರಿಂದ ನಿಘಾತಸ್ವರ ಬರುವುದಿಲ್ಲ· ಅಡಾಗಮ ಉದಾತ್ತವಾದುದರಿಂದ ಆದ್ಯುದಾತ್ತವಾಗುತ್ತದೆ.

**ಶ್ರುತ್ಯಮ್**—ಶ್ರು ಶ್ರವಣೇ. ಧಾತು. **ಅಚೋಯತ್** (ಪಾ. ಸೂ ೩-೧-೯೭) ಎಂಬುದರಿಂದ ಯತಿಗೆ ಅಪವಾದವಾಗಿ ಔಣಾದಿಕ **ಕ್ಯಪ್** ಪ್ರತ್ಯಯ. **ಹ್ರಸ್ವಸ್ಯಪಿತಿಕೃತಿ ತುಕ್** (ಪಾ ಸೂ. ೬-೧-೭೧) ಎಂಬು

ದರಿಂದ ತುಕಾಗಮು. ಪ್ರತ್ಯಯ ಪಿತ್ತಾದುದರಿಂದ ಧಾತುಸ್ವರ ಉಳಿಯುತ್ತದೆ ಅಥವಾ ಶ್ರುತಿಶಬ್ದ. **ಛವೇಛಂದಸಿ** (ಪಾ. ಸೂ. ೪-೪-೧೧೦) ಎಂಬುದರಿಂದ ಯತ್ ಪ್ರತ್ಯಯ. **ಯತೋೀನಾವಃ** ( ಪಾ. ಸೂ. ೬-೧-೨೧೩ ) ಎಂಬುದರಿಂದ ಆದ್ಯುದಾತ್ತಸ್ವರ ಬರುತ್ತದೆ.

**ಚಕ್ರೆ**—ಡುಕೃಇ್ ಕರಣೇ. ಧಾತು. ಲಿಟ್ ಮಧ್ಯಮಪುರುಷ ಬಹುವಚನಾಂತರೂಪ. ಯದ್ಯೋಗ ವಿರುವುದರಿಂದ ನಿಘಾತಸ್ವರ ಬರುವುದಿಲ್ಲ. ಪ್ರತ್ಯಯಸ್ವರದಿಂದ ಅಂತೋದಾತ್ತವಾಗುತ್ತದೆ.

**ಸುಮುಖಾಯ**—ಶೋಭನಂ ಮುಖಃ ಯಸ್ಯ ಸಃ. ತಸ್ಮೈ. ಸುಸ್ವರಕ್ಕೆ ಅಪವಾದವಾಗಿ ಆದ್ಯುದಾತ್ತಸ್ವರ ಬರುತ್ತದೆ. ಚತುರ್ಥೀಏಕವಚನಾಂತರೂಪ.

**ಸಖ್ಯೇ—ಶೇಷೋಘ್ಯಸಖಿ** (ಪಾ ಸೂ. ೧-೪-೭) ಎಂಬುದರಿಂದ ಘಿಸಂಜ್ಞಾ ಇಲ್ಲದಿರುವುದರಿಂದ ಗುಣಾದಿಗಳು ಬರುವುದಿಲ್ಲ. ಚತುರ್ಥೀಏಕವಚನದಲ್ಲಿ ಯಣಾದೇಶ.

**ತನ್ವೇ**—ತನು ಶಬ್ದಕ್ಕೆ ಚತುರ್ಥೀ ಏಕವಚನಪರವಾದಾಗ **ಜಸಾದಿಷು ಛಂದಸಿ ವಾ ವಚನಮ್** ಎಂಬುದರಿಂದ ಗುಣಾದಿಗಳು ಬರುವುದಿಲ್ಲ. ಯಣಾದೇಶ. **ಉದಾತ್ತಸ್ವರಿತಯೋರ್ಯಣಃ**—(ಪಾ. ಸೂ. ೮-೨-೪) ಎಂಬುದರಿಂದ ವಿಭಕ್ತಿಗೆ ಸ್ವರಿತಸ್ವರ ಬರುತ್ತದೆ. ॥ ೧೧ ॥

---

ಸಂಹಿತಾಪಾಠಃ

ಏವೇದೇತೇ ಪ್ರತಿ ಮಾ ರೋಚಮಾನಾ ಅನೇದ್ಯಃ ಶ್ರವ ಏಷೋ ದಧಾನಾಃ।
ಸಂಚಕ್ಷ್ಯಾ ಮರುತಶ್ಚಂದ್ರವರ್ಣಾ ಅಚ್ಛಾಂತ ಮೇ ಛದಯಾಥಾ ಚ
ನೂನಂ ॥ ೧೨ ॥

। ಪದಪಾಠಃ ।

ಏವ । ಇತ್ । ಏತೇ । ಪ್ರತಿ । ಮಾ । ರೋಚಮಾನಾಃ । ಅನೇದ್ಯಃ । ಶ್ರವಃ । ಆ । ಇಷಃ । ದಧಾನಾಃ ।
ಸಂ ಚಕ್ಷ್ಯ । ಮರುತಃ । ಚಂದ್ರ ವರ್ಣಾಃ । ಅಚ್ಛಾಂತ । ಮೇ । ಛದಯಾಥ । ಚ । ನೂನಂ ॥ ೧೨ ॥

ಸಾಯಣಭಾಷ್ಯಂ

ಹೇ ಮರುತಃ ಏವೇದೇವಮೇವೈತೇ ಯೂಯಂ ಮಾ ಮಾಂ ಪ್ರತಿ ರೋಚಮಾನಾ ಮದ್ವಿಷಯೇ ಸಂಪ್ರೀಯಮಾಣಾ ಮಾಂ ಖ್ಯಾಪಯಂತೋ ವಾನೇದ್ಯೋಽನಂತಿಕಸ್ಥಂ ಶ್ರವಃ ಕೀರ್ತಿಮಿಷಚ್ಚ ದಧಾನಾಃ । ಆ ಇತಿ ಚಾರ್ಥೇ । ಯದ್ವಾ । ಅನೇದ್ಯ ಇತಿ ಪ್ರಶಸ್ಯನಾಮ । ಪ್ರಶಸ್ಯಂ ಯಶೋಽಸ್ಮತ್ತೋ ದಧಾನಾ

**ಅಸ್ಮಾಭಿರ್ವಾ ಧಾರಯಮಾಣಾಃ । ಚಂದ್ರವರ್ಣಾಃ । ಚಂದ್ರಮಿತಿ ಹಿರಣ್ಯನಾಮ । ಸುವರ್ಣವರ್ಣಾ ಯೂಯಂ ಮೇ ಮಾಂ ಸಂಚಕ್ಷ್ಯ ಸಮ್ಯಕ್ಪ್ರಕಾಶ್ಯ ನೂನಂ ನಿಶ್ಚಯಮಚ್ಛಾಂತ ಯಶೋಭಿರಾಚ್ಛಾದಿತವಂತಶ್ಛದಯಾಥ । ಆಚ್ಛಾದಯಥ ಚ । ಮಾಂ ಪ್ರತಿ ಸರ್ವದಾ ರೋಚಮಾನಾ ಮಯ್ಯೇವ ಕೀರ್ತಿಮನ್ನಂ ಚ ದಧಾನಾ ಮತ್ಕೃತೈಃ ಕರ್ಮಭಿರ್ಮಾಮೇವ ಸ್ತುತೇತ್ಯರ್ಥಃ ॥**

**ಪ್ರತಿಪದಾರ್ಥ**

**ಮರುತಃ**—ಎಲೈ ಮರುತ್ತುಗಳೇ. । **ಏವೇತ್**—ಇದೇ ರೀತಿಯಲ್ಲಿ । ಏತೇ—ನೀವುಗಳು । **ಮಾಂ**—ನನ್ನನ್ನು । **ಪ್ರತಿರೋಚಮಾನಾಃ**—ಪ್ರಶಂಸಾವಾಕ್ಯಗಳಿಂದ ಹರ್ಷಗೊಳಿಸುತ್ತಲೂ, । **ಅನೇದ್ಯಃ**—ಅತಿವಿಸ್ತೃತವಾದ । **ಶ್ರವಃ**—ಕೀರ್ತಿಯನ್ನೂ । **ಇಷಃ**—ಅನ್ನವನ್ನೂ । **ದಧಾನಾಃ**—ಹೊಂದುತ್ತಲೂ, । **ಚಂದ್ರವರ್ಣಾಃ**—ಆಹ್ಲಾದಕರವಾದ ವರ್ಣವುಳ್ಳವರಾಗಿಯೂ । **ಮೇ**—ನನ್ನನ್ನು । **ಸಂಚಕ್ಷ್ಯ**—ಪ್ರಕಾಶಗೊಳಿಸಿ **ನೂನಂ**—ನಿಶ್ಚಯವಾಗಿಯೂ । **ಅಚ್ಛಾಂತ**—ಯಶಸ್ಸಿನಿಂದ ಯುಕ್ತರಾಗಿಯೂ ಆಗಿ । **ಛದಯಾಥ ಚ**—(ನನ್ನನ್ನೂ) ಯಶಸ್ಸಿನಿಂದ ಯುಕ್ತನಾಗುವಂತೆ ಮಾಡಿರಿ ।

**ಭಾವಾರ್ಥ**

ಎಲೈ ಮರುತ್ತುಗಳೇ, ಇದೇ ರೀತಿಯಲ್ಲಿ ನೀವುಗಳು ನನ್ನನ್ನು ಪ್ರಶಂಸಾವಾಕ್ಯಗಳಿಂದ ಹರ್ಷಗೊಳಿಸುತ್ತಲೂ, ಅತಿವಿಸ್ತೃತವಾದ ಕೀರ್ತಿಯನ್ನೂ ಅನ್ನವನ್ನೂ ಹೊಂದುತ್ತಲೂ, ಆಹ್ಲಾದಕರವಾದ ವರ್ಣವುಳ್ಳವರಾಗಿಯೂ, ನನ್ನನ್ನು ಪ್ರಕಾಶಗೊಳಿಸಿ ನೀವೂ ಯಶಸ್ಸಿನಿಂದ ಯುಕ್ತರಾಗಿಯೂ ನನ್ನನ್ನೂ ಸಹ ಯಶಸ್ಸಿನಿಂದ ಯುಕ್ತನಾಗುವಂತೆ ಮಾಡಿರಿ.

## English Translation

Maruts, verily, glorifying me and enjoying boundless fame and food (through my favour), do you, of golden colour, and invested with glory, cover me in requital, verily, (with renown).

**। ವಿಶೇಷವಿಷಯಗಳು ।**

**ಅನೇದ್ಯಃ**—ಎಂಬ ಪದಕ್ಕೆ ಎರಡು ವಿಧವಾದ ಅರ್ಥವನ್ನು ಹೇಳಬಹುದು. ಮೊದಲನೆಯದಾಗಿ **ಅನಂತಿಕಸ್ಥಂ** ಎಂದರೆ, ಅತಿದೂರವಾಗಿ ವಿಸ್ತೃತವಾದ (ಪ್ರಭೂತವಾದ) ಯಶಸ್ಸೆಂದೂ, ಎರಡನೆಯದಾಗಿ **ಅನೇದ್ಯ** ಶಬ್ದವು **ಪ್ರಶಸ್ಯನಾಮ**ಗಳಲ್ಲಿ ಪಠಿತವಾಗಿರುವುದರಿಂದ (ನಿ. ೩-೧೩) **ಅನೇದ್ಯಃ ಶ್ರವಃ** ಎಂಬುದಕ್ಕೆ ಅತ್ಯಂತಪ್ರಶಸ್ಯವಾದ ಯಶಸ್ಸೆಂದೂ ಅರ್ಥವಾಗುತ್ತದೆ.

**ಚಂದ್ರವರ್ಣಾಃ**—**ಚಂದ್ರಮಿತಿ ಹಿರಣ್ಯನಾಮ । ಸುವರ್ಣವರ್ಣಾಃ । ಚಂದ್ರಶಬ್ದವು ಹಿರಣ್ಯ**ನಾಮಗಳಲ್ಲಿ ಪಠಿತವಾಗಿದೆ. (ನಿ. ೨-೧೦) ಆದುದರಿಂದ ಪ್ರಕೃತದಲ್ಲಿ ಸುವರ್ಣದಂತೆ ರಮ್ಯವಾದ ವರ್ಣವುಳ್ಳವರೆಂದಾಗಲಿ; ಅಥವಾ,

**ಚಂದ್ರಶ್ಚಂದತೇಃಕಾಂತಿಕರ್ಮಣಃ ।** (ನಿ ೧೧-೫) ಕಾಂತಿಯುಕ್ತವಾದುದೂ, ರಮ್ಯವಾದುದೂ ಆದ ಎಂಬರ್ಥವನ್ನು ಕೊಡುವ **ಚಂದ್** ಧಾತುವಿನಿಂದ ಚಂದ್ರವೆಂಬ ಪದವು ನಿಷ್ಪನ್ನವಾಗಿದೆಯಾದ್ದರಿಂದ ಅಹ್ಲಾದ ಕರವಾದ ರೂಪವನ್ನು ಪಡೆದಿರುವವರು ಎಂದಾಗಲಿ ಮರುತ್ತುಗಳ ವರ್ಣವನ್ನು ಪ್ರಶಂಸಿಸಿದೆ.

**ಯೇ ಅಗ್ನಯೋ ನ ಶೋಶುಚನ್ನಿಧಾನಾ ದ್ವಿರ್‍ಯತ್ತ್ರಿರ್ಮರುತೋ ವಾವೃಧಂತೆ ।**
**ಅರೇಣವೋ ಹಿರಣ್ಯಯಾಸ ಏಷಾಂ ಸಾಕಂ ನೃಮ್ಣೈಃ ಪೌಂಸ್ಯೇಭಿಶ್ಚ ಭೂವನ್ ॥**
(ಋ. ಸಂ. ೬-೬೬-೨)

ಇತ್ಯಾದಿ ಋಕ್ಕುಗಳಲ್ಲಿ ವರ್ಣಿತವಾಗಿರುವಂತೆ ಇಲ್ಲಿಯೂ ಮರುತ್ತುಗಳ ಆಹ್ಲಾದಕರವಾದ ರೂಪವನ್ನು ವರ್ಣಿಸಿದೆ.

॥ ವ್ಯಾಕರಣಪ್ರಕ್ರಿಯಾ ॥

**ರೋಚಮಾನಾಃ**—ರುಚ ದೀಪ್ತೌ. ಧಾತು. ಲಟಿಗೆ ಶಾನಚಾದೇಶ. ಶಪ್ ವಿಕರಣನಿಮಿತ್ತವಾಗಿ ಧಾತು ವಿನ ಲಘೂಪಧೆಗೆ ಗುಣ. **ಆನೇಮುಕ್** (ಪಾ. ಸೂ ೭-೨-೮೨) ಎಂಬುದರಿಂದ ಮುಕಾಗಮ. **ತಾಸ್ಯನು-ದಾತ್ತೇತ್**—(ಪಾ. ಸೂ. ೬-೧-೧೮೬) ಎಂಬುದರಿಂದ ಲಸಾರ್ವಧಾತುಕವು ಅನುದಾತ್ತವಾಗುವುದರಿಂದ ಧಾತುಸ್ವರ ಉಳಿಯುತ್ತದೆ.

**ಅನೇದ್ಯಃ**—ಣಿದಿ ಕುತ್ಸಾಯಾಂ ಧಾತು. **ಣೋನಃ** ಎಂಬುದರಿಂದ ಆದಿಗೆ ನತ್ವ. **ಋಹಲೋರ್ಣ್ಯತ್** (ಪಾ. ಸೂ. ೩-೧-೧೨೪) ಎಂಬುದರಿಂದ ಣ್ಯತ್ ಪ್ರತ್ಯಯ. **ಆಗಮಶಾಸ್ತ್ರಮನಿತ್ಯಮ್** ಎಂಬ ವಚನದಿಂದ ನುಮಾಗನು ಬರುವುದಿಲ್ಲ. ನಞ್‌ತತ್ಪುರುಷಸಮಾಸವಾದಾಗ ನಞ್‌ಪೂರ್ವಪದ ಪ್ರಕೃತಿಸ್ವರ ಬರುತ್ತದೆ.

**ಸಂಚಕ್ಷ್ಯಾ**—ಚಕ್ಷಿಙ್ ವ್ಯಕ್ತಾಯಾಂ ವಾಚಿ ಧಾತು. ಇಲ್ಲಿ ಪ್ರಕಾಶಾರ್ಥದಲ್ಲಿ ಪ್ರಯುಕ್ತವಾಗಿದೆ. **ಸಮಾಸೇನಞ್‌ಪೂರ್ವೇ**—(ಪಾ. ಸೂ. ೭-೧-೩೭) ಎಂಬುದರಿಂದ ಕ್ತ್ವಾ ಪ್ರತ್ಯಯಕ್ಕೆ ಲ್ಯಬಾದೇಶ. ಪಿತ್ತ್ವಾದುದ ರಿಂದ ಅನುದಾತ್ತವಾಗುತ್ತದೆ. **ನಿಪಾತಸ್ಯ ಚ** (ಪಾ. ಸೂ. ೬-೩-೧೩೬) ಎಂಬುದರಿಂದ ಸಂಹಿತಾದಲ್ಲಿ ದೀರ್ಘ ಬರುತ್ತದೆ.

ಚಂದ್ರವರ್ಣಾಃ—ಬಹುವ್ರೀಹಿಯಲ್ಲಿ ಪೂರ್ವಪದ ಪ್ರಕೃತಿಸ್ವರ ಬರುತ್ತದೆ.

**ಛದಯಾಥ**—ಛದ ಅಪವಾರಣೇ. ಧಾತು. ಚುರಾದಿ. ಲೇಟ್ ಮಧ್ಯಮಪುರುಷ ಬಹುವಚನದಲ್ಲಿ ಥ ಪ್ರತ್ಯಯ. **ಲೇಟೋಽಡಾಟೌ** (ಪಾ. ಸೂ. ೩-೪-೯೪) ಎಂಬುದರಿಂದ ಅದಕ್ಕೆ ಆಡಾಗಮ. ಣಿಚಿಗೆ ಗುಣ, ಅಯಾದೇಶ. **ಸಂಜ್ಞಾಪೂರ್ವಕೋವಿಧಿರನಿತ್ಯಃ** ಎಂಬ ವಚನದಿಂದ ಣಿಚ್ ನಿಮಿತ್ತವಾಗಿ ಧಾತುವಿನ ಉಪಧೆಗೆ ವೃದ್ಧಿ ಬರುವುದಿಲ್ಲ. ಛಾಂದಸವಾಗಿ ನಿಘಾತಸ್ವರ ಬರುವುದಿಲ್ಲ. ಣಿಚ್‌ಸ್ವರದಿಂದ ದಕಾರೋತ್ತರಾಕಾರ ಉದಾತ್ತ ವಾಗುತ್ತದೆ. ॥ ೧೨ ॥

**ಸಂಹಿತಾಪಾಠಃ।**

**ಕೋ ನ್ವತ್ರ ಮರುತೋ ಮಾಮಹೇ ವಃ ಪ್ರ ಯಾತನ ಸಖೀಁರಚ್ಛಾ ಸಖಾಯಃ ।**
**ಮನ್ಮಾನಿ ಚಿತ್ರಾ ಅಪಿವಾತಯಂತ ಏಷಾಂ ಭೂತ ನವೇದಾ ಮ ಋತಾನಾಂ ॥ ೧೩ ॥**

**। ಪದಪಾಠಃ ।**

**ಕಃ । ನು । ಅತ್ರ । ಮರುತಃ । ಮಮಹೇ । ವಃ । ಪ್ರ । ಯಾತನ । ಸಖೀನ್ । ಅಚ್ಛ । ಸಖಾಯಃ । ಮನ್ಮಾನಿ । ಚಿತ್ರಾಃ । ಅಪಿಽವಾತಯಂತಃ । ಏಷಾಂ । ಭೂತ । ನವೇದಾಃ । ಮೇ । ಋತಾನಾಂ ॥ ೧೩ ॥**

**ಸಾಯಣಭಾಷ್ಯಂ**

**ಹೇ ಮರುತಃ ಯುಷ್ಮಾನತ್ರ ಲೋಕೇ ಕೋ ನು ಖಲು ಮರ್ತ್ಯೋ ಮಮಹೇ । ಪೂಜಯತಿ । ಹೇ ಸಖಾಯಃ ಸರ್ವಸ್ಯ ಸಖಿವತ್ಪ್ರಿಯಕಾರಿಣಃ ಸಂತಃ ಸಖೀನ್ ಹವಿಷ್ಪ್ರದಾನೇನ ಸಖಿಭೂತಾನ್ಯಜಮಾನಾನಚ್ಛಾಭಿಮುಖ್ಯೇನ ಪ್ರಾಪ್ತುಂ ಪ್ರ ಯಾತನ । ಗಚ್ಛತ । ಹೇ ಚಿತ್ರಾಶ್ಚಾಯನೀಯಾಃ ಯೂಯಂ ಮನ್ಮಾನಿ ಮನನೀಯಾನಿ ಧನಾನ್ಯಪಿವಾತಯಂತಃ ಸಂಪೂರ್ಣಂ ಪ್ರಾಪಯಂತೋ ಭೂತ । ಭವತ । ಕಿಂಚ ಮೇ ಮದೀಯಾನಾಮೇಷಾಮೃತಾನಾಮವಿತಥಾನಾಂ ನವೇದಾ ಭೂತ । ಜ್ಞಾತಾರೋ ಭವತ ॥**

**ಪ್ರತಿಪದಾರ್ಥ**

**ಮರುತಃ**—ಎಲೈ ಮರುತ್ತುಗಳೇ, । **ಅತ್ರ**—ಈ ಲೋಕದಲ್ಲಿ । **ಕೋ ನು**—ಯಾವ ಮರ್ತ್ಯನು ತಾನೇ (ನನ್ನಂತೆ) । **ಮಮಹೇ**—ಪೂಜಿಸುತ್ತಾನೆ. । **ಸಖಾಯಃ**—ಸಕಲರಿಗೂ ಸಖರಾಗಿದ್ದುಕೊಂಡು । **ಸಖೀನ್**—ನಿಮಗೆ ಸಖರಾದ ಯಜಮಾನರನ್ನು । **ಅಚ್ಛ**—ಅಭಿಮುಖವಾಗಿ ಹೋಗಿ ಸೇರಲು । **ಪ್ರ ಯಾತನ**—ನಡೆಯಿರಿ ! **ಚಿತ್ರಾಃ**—ಆಕರ್ಷಕರಾದ ಮರುತ್ತುಗಳೇ । **ಮನ್ಮಾನಿ**—ಧ್ಯಾನಕ್ಕೆ ವಿಷಯಗಳಾದ ಧನಗಳನ್ನು । **ಅಪಿವಾತಯಂತಃ**—(ಅವರಿಗೆ) ಒದಗಿಸಿ ಕೊಡುತ್ತಾ । **ಭೂತ**—ಇರಿ । **ಮೇ**—ನನ್ನ । **ಏಷಾ ಋತಾನಾಂ**—ಈ ಸತ್ಯವಾದ ಭಕ್ತಿಯನ್ನು । **ನವೇದಾಃ**—ತಿಳಿಯಿರಿ. ।

**ಭಾವಾರ್ಥ**

ಎಲೈ ಮರುತ್ತುಗಳೇ, ಈ ಲೋಕದಲ್ಲಿ ಯಾವ ಮರ್ತ್ಯನು ತಾನೇ ನಿಮ್ಮನ್ನು ನನ್ನಂತೆ ಪೂಜಿಸುತ್ತಾನೆ. ನೀವು ಸಕಲರಿಗೂ ಸಖರಾಗಿದ್ದುಕೊಂಡು ನಿಮಗೆ ಸಖರಾದ ಯಜಮಾನರನ್ನು ಅಭಿಮುಖವಾಗಿ ಹೋಗಿ ಸೇರಲು ನಡೆಯಿರಿ. ಆಕರ್ಷಕರಾದ ಎಲೈ ಮರುತ್ತುಗಳೇ, ಧ್ಯಾನಕ್ಕೆ ವಿಷಯಗಳಾದ (ಅವರು ಬಯಸುತ್ತಿರುವ)ಧನಗಳನ್ನು ಅವರಿಗೆ ಒದಗಿಸಿಕೊಡುತ್ತಾ ಇರಿ. ನನ್ನ ಈ ಸತ್ಯವಾದ ಭಕ್ತಿಯನ್ನು ತಿಳಿಯಿರಿ.

## English Translation

(Agastya),—What mortal, Maruts, worships you in this world; hasten friends, to the presence of your friends: wonderful (divinities), be to them the means of acquiring riches, and be not uncognizant of my merits.

### ವಿಶೇಷವಿಷಯಗಳು

ಇಂದ್ರನಿಗೂ ಮರುತ್ತುಗಳಿಗೂ ಸಂಭಾಷಣೆಯು ನಡೆದನಂತರ ಅಗಸ್ತ್ಯನು ಈ ಮಂತ್ರದಲ್ಲಿ ಮರುತ್ತುಗಳನ್ನುದ್ದೇಶಿಸಿ ಪ್ರಾರ್ಥಿಸುತ್ತಾನೆ.

**ಮನ್ಮಾನಿ**—ಮನ್ಮಶಬ್ದಕ್ಕೆ **ಮನನೀಯಾನಿ ಧನಾನಿ** ಧ್ಯಾನಾರ್ಹವಾದ ಧನಗಳೆಂದರ್ಥಮಾಡಿದೆ. ಸ್ತುತ್ಯವಾದ, ಪೂಜ್ಯವಾದ ಎಂಬರ್ಥಗಳಲ್ಲಿ ಈ ಪದದ ಪ್ರಯೋಗವಿದೆ (ಋ. ಸಂ. ೧-೨೬-೨; ೧-೧೫೧-೮). ಇತ್ಯಾದ್ಯನೇಕ ಋಕ್ಕುಗಳಲ್ಲಿ **ಮನ್ಮನಾ**, **ಮನ್ಮಭಿಃ** ಎಂಬ ಪದಗಳಿಗೆ ಶ್ರೇಷ್ಠವಾದ, ಮತ್ತು ಸ್ತುತ್ಯರ್ಹವಾದ ಮನಃಪ್ರವೃತ್ತಿಯೆಂದರ್ಥವಾಗುತ್ತದೆ. ನಿರುಕ್ತಕಾರರು,

**ಉಪ ಪ್ರಾಗಾತ್ಸುಮನ್ಮೇಽಧಾಯಿ ಮನ್ಮ ದೇವಾನಾಮಾಶಾ ಉಪ ವೀತಪೃಷ್ಠಃ ।**
**ಅನ್ವೇನಂ ವಿಪ್ರಾ ಋಷಯೋ ಮದಂತಿ ದೇವಾನಾಂ ಪುಷ್ಟೇ ಚಕೃಮಾ ಸುಬಂಧುಂ ॥**
(ಋ. ಸಂ ೧-೧೬೨-೭)

ಎಂಬ ಋಕ್ಕಿನಲ್ಲಿ ಮನ್ಮಶಬ್ದಕ್ಕೆ ಮಂತ್ರವೆಂದರ್ಥಮಾಡಿದ್ದಾರೆ. (ನಿ. ೬-೨೨) ಮನನೀಯವಾದ ಎಂದರೆ ಧ್ಯಾನಾರ್ಹವಾದ ಮಂತ್ರವೆಂದರ್ಥ. ಸಾಂಯಣರು ಉದಾಹೃತವಾದ ಈ ಋಕ್ಕಿನಲ್ಲಿ ಮನನೀಯವಾದ ಫಲವೆಂದರ್ಥಮಾಡಿದ್ದಾರೆ. ಎರಡನೆಯದಾಗಿ,

**ತನೂನಪಾತ್ಪಥ ಋತಸ್ಯ ಯಾನಾನ್ಮಧ್ವಾ ಸಮಂಜನ್ತ್ಸ್ವದಯಾ ಸುಜಿಹ್ವ ।**
**ಮನ್ಮಾನಿ ಧೀಭಿರುತ ಯಜ್ಞಮೃಂಧನ್ ದೇವತ್ರಾ ಚ ಕೃಣುಹ್ಯಧ್ವರಂ ನಃ ।**
(ಋ. ಸಂ. ೧೦-೧೧೦-೨)

ಎಂಬಲ್ಲಿ **ಅಸ್ಮದಭಿಪ್ರೇತಾನಿ ಸ್ತೋತ್ರಾಣಿ** ಎಂದರ್ಥಮಾಡಿದೆ. ಹೀಗೆಯೇ ೧-೧೨೯-೯. ನೇ, ಋಕ್ಕನ್ನುದಚರಿಸಿ (ನಿ. ೧೦-೪೨) ಅಲ್ಲಿಯೂ ಸಹ ಅದೇ ಅರ್ಥವನ್ನು ತೋರಿಸಿದೆ. ಪ್ರಕೃತವಾದ ಋಕ್ಕಿನಲ್ಲಿ ಮನನೀಯವಾದ ಫಲವೆಂದರ್ಥಮಾಡಬಹುದು

**ನವೇದಾಃ**—**ಜ್ಞಾತಾರೋ ಭವತ** । ಅರಿಯುವವರಾಗಿ ಎಂದು ಪ್ರಾರ್ಥಿಸಿದೆ. ಜ್ಞಾನದಲ್ಲಿಯೂ ಒಂದು ಅತಿಶಯವಾದ ಆಸಕ್ತಿಯನ್ನು ತೋರಿಸುತ್ತದೆ.

**ಕಥಾ ಸಬಾಧಃ ಶಶಮಾನೋ ಅಸ್ಯ ನಶದಭಿ ದ್ರವಿಣಂ ದೀಧ್ಯಾನಃ ।**
**ದೇವೋ ಭುವನ್ನವೇದಾ ಮ ಋತಾನಾಂ ನಮೋ ಜಗೃಭ್ವಾ ಅಭಿ ಯಜ್ಜುಜೋಷತ್ ।**
(ಋ. ಸಂ. ೪-೨೩-೪)

ಎಂಬ ಋಕ್ಕಿನಲ್ಲಿಯೂ ಪ್ರಯೋಗಿಸಲ್ಪಟ್ಟಿದೆ. ಅಲ್ಲಿ ಸಾಯಣರು **ಅತಿಶಯೇನ ಜ್ಞಾತ್ವಾ** ಎಂದರ್ಥಮಾಡಿದ್ದಾರೆ. ಪ್ರಕೃತವಾದ ಋಕ್ಕಿನಲ್ಲಿಯೂ ಸಹ ಜ್ಞಾನದಲ್ಲಿರುವ ಆಸಕ್ತಿಯನ್ನೂ ಅಭಿಮಾನವನ್ನೂ ತಿಳಿಸುತ್ತದೆ. ಅಗಸ್ತ್ಯನು ತನ್ನ ನಿಜವಾದ ಶ್ರದ್ಧೆಯನ್ನು ಪೂರ್ಣವಾಗಿ ಅರಿತು ತನ್ನಲ್ಲಿ ಅಭಿಮಾನವನ್ನು ತೋರಿಸಬೇಕೆಂದು ಪ್ರಾರ್ಥಿಸುತ್ತಾನೆ.

### ವ್ಯಾಕರಣಪ್ರಕ್ರಿಯಾ

**ಮಮಹೇ**—ಮಹ ಪೂಜಾಯಾಂ ಧಾತು . ಪ್ರಯೋಜಕವ್ಯಾಪಾರ ತೋರುವುದರಿಂದ ಅಂತರ್ಭಾವಿತಣ್ಯರ್ಥಕವಾಗಿದೆ. **ಛಂದಸಿಲುಙ್‌ಲಙ್**—ಎಂಬುದರಿಂದ ವರ್ತಮಾನಾರ್ಥದಲ್ಲಿ **ಲಿಟ್.** ಪ್ರಥಮಪುರುಷಏಕವಚನಾಂತರೂಪ. ಅತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

**ಯಾತನ**—ಯಾ ಪ್ರಾಪಣೇ ಧಾತು. ಲೋಟ್ ಮಧ್ಯಮಪುರುಷ ಬಹುವಚನದಲ್ಲಿ **ತಪ್ತನಪ್ತನಥನಾಶ್ಚ** (ಪಾ ಸೂ ೬-೩-೧೩೬) ಎಂಬುದರಿಂದ ಸಂಹಿತಾದಲ್ಲಿ ದೀರ್ಘ ಬರುತ್ತದೆ.

**ಸಖಾಯಃ**—ಸಮಾನಂ ಖ್ಯಾಯತೇ ಜನೈರಿತಿ ಸಖಾ. **ಸಮಾನೇ ಖ್ಯಃ ಸ ಚೋದಾತ್ತಃ** (ಉ. ಸೂ. ೪-೫೭೬) ಎಂಬುದರಿಂದ ಸಮಾನಶಬ್ದ ಉಪಪದವಾಗಿರುವಾಗ, ಖ್ಯಾ ಪ್ರಕಥನೇ. ಈ ಧಾತುವಿಗೆ ಇಣ್ ಪ್ರತ್ಯಯ. ಅದು ಡಿತ್ತಾಗುತ್ತದೆ ಯಕಾರ ಲೋಪ. ಸಮಾನ ಎಂಬುದಕ್ಕೆ ಉದಾತ್ತವಾದ ಸ ಎಂಬಾದೇಶ. ಸಂಬುದ್ಧಿಯಲ್ಲಿ ಆಮಂತ್ರಿತ ನಿಘಾತಸ್ವರ ಬರುತ್ತದೆ.

**ಮನ್ಮಾನಿ**—ಮನ ಜ್ಞಾನೇ. ಇದಕ್ಕೆ ಔಣಾದಿಕಮನಿನ್ ಪ್ರತ್ಯಯ. ನಿತ್ತಾದುದರಿಂದ ಆದ್ಯುದಾತ್ತಸ್ವರ ಬರುತ್ತದೆ.

**ಅಪಿವಾತಯಂತಃ**—ವಾತ ಗತಿಸುಖಸೇವನಯೋಃ ಧಾತು. ಚುರಾದಿ. **ಸತ್ಯಾಪಪಾಶ**—(ಪಾ. ಸೂ. ೩-೧-೨೫) ಎಂಬುದರಿಂದ ಸ್ವಾರ್ಥದಲ್ಲಿ ಣಿಚ್. ಣಿಜಂತದ ಮೇಲೆ ಲಟ್ ಬಂದಾಗ ಅದಕ್ಕೆ ಶತ್ರಾದೇಶ. ಶಪ್ ವಿಕರಣ. ಅದನ್ನು ನಿಮಿತ್ತೀಕರಿಸಿ ಣಿಚಿಗೆ ಗುಣ. ಅಯಾದೇಶ. ಲಸಾರ್ವಧಾತುಕವು ಅನುದಾತ್ತವಾಗುವುದರಿಂದ ಣಿಚ್ ಸ್ವರ ಬರುತ್ತದೆ. ಪ್ರಾದಿಸಮಾಸದಲ್ಲಿ ಕೃದುತ್ತರಪದ ಪ್ರಕೃತಿಸ್ವರ ಬರುತ್ತದೆ.

**ಭೂತ**—ಭೂ ಸತ್ತಾಯಾಂ ಧಾತು. ಲೋಟ್ ಮಧ್ಯಮಪುರುಷ ಬಹುವಚನದಲ್ಲಿ ಲಙ್ವದ್ಭಾವವಿರುವುದರಿಂದ ತಾದೇಶ- **ಬಹುಲಂ ಛಂದಸಿ** ಎಂಬುದರಿಂದ ವಿಕರಣಕ್ಕೆ ಲುಕ್. **ಭೂಸುವೋಸ್ತಿಙಿ** (ಪಾ. ಸೂ. ೭-೩-೮೮) ಎಂಬುದರಿಂದ ಗುಣ ನಿಷೇಧ ಬರುತ್ತದೆ ತಿಙಂತನಿಘಾತಸ್ವರ ಬರುತ್ತದೆ.

**ನವೇದಾಃ**—ವಿದ ಜ್ಞಾನೇ ಧಾತು. ಪಚಾದಿಯಲ್ಲಿ ಸೇರಿರುವುದರಿಂದ ಅಚ್ ಪ್ರತ್ಯಯ. **ಪುಗಂತಲಘೂಪಧಸ್ಯಚ** (ಪಾ. ಸೂ. ೭-೩-೮೬) ಎಂಬುದರಿಂದ ಲಘೂಪಧಗುಣ. **ನಭ್ರಾಣ್‌ನಪಾತ್**—(ಪಾ. ಸೂ. ೬-೩-೭೫) ಎಂಬುದರಿಂದ ಸಮಾಸದಲ್ಲಿ ನಞ್‌ಗೆ ಪ್ರಕೃತಿಭಾವ. ನಞ್‌ಪೂರ್ವಪದಪ್ರಕೃತಿಸ್ವರ ಬರುತ್ತದೆ || ೧೩ ||

———— —:o:————

ಸಂಹಿತಾಪಾಠಃ

ಆ ಯದ್ದು ವಸ್ಯಾದ್ದು ವಸೇ ನ ಕಾರುರಸ್ಮಾಞ್ಚಕ್ರೇ ಮಾನ್ಯಸ್ಯ ಮೇಧಾ ।
ಓ ಷು ವರ್ತ್ತ ಮರುತೋ ವಿಪ್ರಮಚ್ಛೇಮಾ ಬ್ರಹ್ಮಾಣಿ ಜರಿತಾ ವೋ
ಅರ್ಚತ್ ॥ ೧೪ ॥

ಪದಪಾಠಃ

ಆ । ಯತ್ । ದುವಸ್ಯಾತ್ । ದುವಸೇ । ನ । ಕಾರುಃ । ಅಸ್ಮಾನ್ । ಚಕ್ರೇ । ಮಾನ್ಯಸ್ಯ । ಮೇಧಾ ।
ಓ ಇತಿ । ಸು । ವರ್ತ್ತ । ಮರುತಃ । ವಿಪ್ರಂ । ಅಚ್ಛ । ಇಮಾ । ಬ್ರಹ್ಮಾಣಿ । ಜರಿತಾ । ವಃ । ಅರ್ಚತ್ ॥ ॥೧೪॥

ಸಾಯಣಭಾಷ್ಯಂ

ಹೇ ಮರುತಃ ದುವಸ್ಯಾದ್ದುಷ್ಮತ್ಪರಿಚರಣಾರ್ಹಾತ್ಸ್ತೋತ್ರಾತ್ ತೇನ ಸ್ತೋತ್ರೇಣ ದುವಸೇ ಪರಿಚರಣಾಯ ಪರ್ಯಾಪ್ತಾ ಕಾರುಃ ಕರ್ತ್ರೀ ಸ್ತುತಿಕುಶಲಾ ಮಾನ್ಯಸ್ಯ ಮಾನನೀಯಸ್ಯ ವಿದುಷೋ ಮೇಧಾ ಬುದ್ಧಿರಸ್ಮಾನ್ । ನೇತಿ ಸಂಪ್ರತ್ಯರ್ಥೇ । ಇದಾನೀಂತನಾನಾ ಚಕ್ರೇ । ಆಭಿಮುಖ್ಯೇನ ಕರೋತಿ । ಪ್ರಾಪ್ನೋತೀತ್ಯರ್ಥಃ । ಯದ್ವಾ । ಷಷ್ಠೀಬಹುವಚನ ಇದಂ ರೂಪಂ । ದುವಸ್ಯಾನಾಂ ಪರಿಚರಣಾರ್ಹಾಣಾಂ ದುವಸೇ ಪರಿಚರಣಾಯೇತ್ಯರ್ಥಃ । ಅತೋ ಹೇ ಮರುತಃ ಯೂಯಂ ವಿಪ್ರಂ ಮೇಧಾವಿನಂ ಯಜಮಾನಂ ಮಾಮಗಸ್ತ್ಯಮಚ್ಛಾಭಿಮುಖ್ಯೇನ ಪ್ರಾಪ್ಯಂ ಸು ಸುಷ್ಠ್ವಾವರ್ತ್ತ । ಓ ಇತಿ ನಿಪಾತದ್ವಯಸಮುದಾಯರೂಪ ಏಕೋ ನಿಪಾತಃ । ಆಙಾಭಿಮುಖ್ಯೇನ । ಉಕಾರೋಽವಧಾರಣೇ । ಆವರ್ತಧ್ವಮೇವ । ಕಿಮರ್ಥಮೇವಮಿತಿ ಉಚ್ಯತೇ । ಇಮಾ ಬ್ರಹ್ಮಾಣೀಮಾನಿ ಪರಿವೃಢಾನಿ ಕರ್ಮಾಣ್ಯುದ್ದಿಶ್ಯ ಜರಿತಾ ಸ್ತೋತಾ ವೋ ಯುಷ್ಮಾನರ್ಚತ್ । ಅರ್ಚತಿ । ಯಸ್ಮಾದೇವಂ ತಸ್ಮಾದಾವರ್ತಧ್ವಮಿತ್ಯರ್ಥಃ ॥

ಪ್ರತಿಪದಾರ್ಥ

(ಮರುತಃ—ಎಲೈ ಮರುತ್ತುಗಳೇ) । **ದುವಸ್ಯಾತ್**—(ನಿಮ್ಮನ್ನು) ಉಪಚರಿಸಲು ಯೋಗ್ಯವಾದ ಸ್ತೋತ್ರಗಳಿಂದ, । **ದುವಸೇ**—ಆರಾಧಿಸುವುದಕ್ಕಾಗಿ । **ಕಾರುಃ**—ಸ್ತುತಿಕುಶಲವಾದುದೂ । **ಮಾನ್ಯಸ್ಯ**—ಪೂಜ್ಯನಾದ ಋಷಿಸಂಬಂಧವಾದುದೂ ಆದ । **ಮೇಧಾ**—ಬುದ್ಧಿಯು । **ಅಸ್ಮಾನ್**—ನಮ್ಮನ್ನು । **ನ**—ಈಗ । **ಆ ಚಕ್ರೇ**—ಸೇರಿದೆ. । **ಮರುತಃ**—ಎಲೈ ಮರುತ್ತುಗಳೇ, । **ವಿಪ್ರಂ**—ಮೇಧಾವಿಯಾದ ನನ್ನನ್ನು । **ಅಚ್ಛ**—ಅಭಿಮುಖವಾಗಿ ಬಂದು ಸೇರಲು । **ಸು ಓ ವರ್ತ್ತ**—ಪೂರ್ಣವಾದ ಮನಸ್ಸು ಮಾಡಿರಿ । **ಇಮಾ ಬ್ರಹ್ಮಾಣಿ**—ಈ ಕರ್ಮಗಳ ದ್ವಾರಾ । **ಜರಿತಾ**—ಸ್ತೋತೃವು । **ವಃ**—ನಿಮ್ಮನ್ನು । **ಅರ್ಚತ್**—ಪೂಜಿಸುತ್ತಾನೆ. ।

ಭಾವಾರ್ಥ

ಎಲೈ ಮರುತ್ತುಗಳೇ, ನಿಮ್ಮನ್ನು ಉಪಚರಿಸಲು ಯೋಗ್ಯವಾದ ಸ್ತೋತ್ರಗಳಿಂದ ಆರಾಧಿಸುವುದಕ್ಕಾಗಿ ಸ್ತುತಿಕುಶಲವಾದುದೂ ಪೂಜ್ಯನಾದ ಋಷಿಸಂಬಂಧವಾದುದೂ ಆದ ಬುದ್ಧಿಯು ಈಗ ನಮ್ಮನ್ನು ಸೇರಿದೆ. ಮೇಧಾವಿ

ಯೊದ ನನ್ನನ್ನು ಅಭಿಮುಖವಾಗಿಬಂದು ಸೇರಲು ನೀವು ಪೂರ್ಣವಾದ ಮನಸ್ಸು ಮಾಡಿರಿ. ಸ್ತೋತೃವು ಪ್ರಸಿದ್ಧವಾದ ಈ ಕರ್ಮಗಳ ದ್ವಾರಾ ನಿಮ್ಮನ್ನು ಪೂಜಿಸುತ್ತಾನೆ.

## Englib Translation

Since the experienced intellect of a venerable (sage), competent to bestow praise upon (you), who deserve praise, has been exerted for us; do you, Maruts, come to the presence of the devout (worshipper), who, glorifying (you), worships you with these holy rites.

### ವಿಶೇಷವಿಷಯಗಳು

**ದುವಸ್ಯಾತ್ ದುವಸೇ**— ಎಂಬುದಕ್ಕೆ ಎರಡು ವಿಧವಾದ ಅರ್ಥವು ಸಾಧ್ಯವಾಗುತ್ತದೆ. ಮೊದಲನೆಯದಾಗಿ, **ಯುಷ್ಮತ್ಪರಿಚರಣಾರ್ಹಾತ್ ಸ್ತೋತ್ರಾತ್, ಪರಿಚರಣಾಯ ।** ನಿಮ್ಮ ಆರಾಧನೆಗೆ ಯೋಗ್ಯವಾದುದೂ ಮತ್ತು ಪರ್ಯಾಪ್ತವಾದುದೂ ಎಂಬುದಾಗಿಯೂ, ಎರಡನೆಯದಾಗಿ **ದುವಸ್ಯಾತ್— ದುವಸ್ಯಾನಾಂ ಪರಿಚರಣಾರ್ಹಾಣಾಂ ದುವಸೇ ಪರಿಚರಣಾಯ ।** ಆರಾಧನೆಗೆ ಯೋಗ್ಯರಾದ ನಿಮ್ಮ ಪೂಜೆಗಾಗಿ ಎಂಬುದಾಗಿಯೂ ಅರ್ಥವನ್ನು ಹೇಳ ಬಹುದೆಂದು ತಿಳಿಸಿದೆ

**ದುವಸ್ಯತಿ**ಶಬ್ದವು ನಿರುಕ್ತದಲ್ಲಿ **ಪರಿಚರಣಕರ್ಮ**ನಾಮಗಳಲ್ಲಿ ಪಠಿತವಾಗಿದೆ. (ನಿ. ೩-೧೩). ನಿರುಕ್ತ ಕಾರರು,

**ಪರೇಯಿವಾಂಸಂ ಪ್ರವತೋ ಮಹೀರನು ಬಹುಭ್ಯಃ ಪಂಥಾಮನುಪಸ್ಪಶಾನಂ ।**
**ವೈವಸ್ವತಂ ಸಂಗಮನಂ ಜನಾನಾಂ ಯಮಂ ರಾಜಾನಂ ಹವಿಷಾ ದುವಸ್ಯ ॥**

(ಋ. ಸಂ. ೧೦-೧೪-೧)

ಎಂಬ ಋಕ್ಕನ್ನುದಹರಿಸಿ ಅಲ್ಲಿರುವ **ದುವಸ್ಯ** ಶಬ್ದಕ್ಕೆ **ದುವಸ್ಯತಿಃ ರಾಧ್ನೋತಿಕರ್ಮಾ**- ಪೂಜಾಕರ್ಮವೆಂದರ್ಥ ಮಾಡಿದ್ದಾರೆ. (ನಿ. ೧೦-೨೦) ರಕ್ಷಣಾರ್ಥದಲ್ಲಿ ಈ ಪದದ ಪ್ರಯೋಗವಿದೆ. ಉದಾಹರಣೆಗೆ—

**ಯಾಭಿರ್ವಮ್ರಂ ವಿಪಿಪಾನಮುಪಸ್ತುತಂ ಕಲಿಂ ಯಾಭಿರ್ವಿತ್ತಜಾನಿಂ ದುವಸ್ಯಥಃ ।**
**ಯಾಭಿರ್ವ್ಯಶ್ವಮುತ ಪೃಥಿಮಾವತಂ ತಾಭಿರೂ ಷು ಊತಿಭಿರಶ್ವಿನಾ ಗತಂ ।**

(ಋ. ಸಂ. ೧-೧೧೨-೧೫)

ಇತ್ಯಾದಿಋಕ್ಕುಗಳಲ್ಲಿ ರಕ್ಷಿಸಿದರು ಎಂಬರ್ಥವು ಸಹಜವಾಗಿದೆ.

**ಕಾರುಃ**— ಇಲ್ಲಿ ಕಾರುಪದವು **ಮೇಧಾ** ಎಂಬ ಪದಕ್ಕೆ ವಿಶೇಷಣವಾಗಿದೆ. **ಕರ್ತ್ರೀ ಸ್ತುತಿಕುಶಲಾ** ಸ್ತುತಿಕಾರಕವೂ ಮತ್ತು ಕುಶಲಾತ್ಮಕವೂ ಆದ ಎಂದರ್ಥಮಾಡಿದೆ. ಸಾಧಾರಣವಾಗಿ ಸ್ತುತಿಕರ್ತ್ರರ್ಥಕವಾಗಿಯೇ ಈ ಪದದ ಪ್ರಯೋಗವು ಅಧಿಕವಾಗಿರುವುದು.

ರೇಭಃ, ಜರಿತಾ ಇತ್ಯಾದಿಸ್ತೋತೃನಾಮಗಳ ನಡುವೆ ಈ ಪದವು ಪಠಿತವಾಗಿದೆ. (ನಿ ೩-೯) ಮತ್ತು ನಿರುಕ್ತಕಾರರು,

ದೈವ್ಯಾ ಹೋತಾರಾ ಪ್ರಥಮಾ ಸುವಾಚಾ ಮಿಮಾನಾ ಯಜ್ಞಂ ಮನುಷೋ ಯಜಧ್ಯೈ ।
ಪ್ರಚೋದಯಂತಾ ವಿದಥೇಷು ಕಾರೂ ಪ್ರಾಚೀನಂ ಜ್ಯೋತಿಃ ಪ್ರದಿಶಾ ದಿಶಂತಾ ॥

(ಋ. ಸಂ. ೧೦-೧೧೦-೭)

ಎಂಬ ಋಕ್ಕಿನಲ್ಲಿ ಕರ್ತಾರೌ ಋತ್ವಿಜೌ ಯಜ್ಞಕ್ರಿಯೆಗೆ ಕರ್ತೃಗಳಾದ ಇಬ್ಬರು ಋತ್ವಿಕ್ಕುಗಳೆಂದರ್ಥಮಾಡಿದ್ದಾರೆ ಬೃಹದ್ದೇವತಾಕಾರರು ಈ ಪದವನ್ನು ಕವಿಗಳು, ಸೂಕ್ತದ್ರಷ್ಟೃಗಳಾದ ಋಷಿಗಳು ಎಂಬರ್ಥದಲ್ಲಿ ಉಪಯೋಗಿಸಿದ್ದಾರೆ

ಅಗ್ನೇಸ್ತು ಯಾನಿ ಸೂಕ್ತಾನಿ ಪಂಚನಾಮಾನಿ ಕಾರವಃ ।
ಷಡ್ವಿಂಶತಿಸ್ತಥೇಂದ್ರಸ್ಯ ಪ್ರಾಹುಃ ಸೂರ್ಯಸ್ಯ ಸಪ್ತ ಚ ॥

(ಬೃ. ದೇ. ೨-೨೨)

ಪೃಥಕ್ತ್ವೇನ ಸಮಾಸೈಸ್ತು ಯಜ್ಞೇ ಯಚ್ಛಸ್ಯತೇ ನೃಭಿಃ ।
ಸ್ತುವಂತ್ಯಾಪ್ರೀಷು ತೇನೇಮಂ ನರಾಶಂಸಂ ತು ಕಾರವಃ ॥

(ಬೃ. ದೇ. ೨-೨೮)

ಇತ್ಯಾದಿವಾಕ್ಯಗಳಲ್ಲಿ ಕಾರುಗಳು ಸ್ತುತಿಸಿದ್ದಾರೆ ಎಂದು ಕವಿಪರ್ಯಾಯಪದವೆಂದು ತೋರಿಸಿದ್ದಾರೆ. ಋಕ್ಸಂಹಿತೆಯಲ್ಲಿಯೂ ಸಹ,

ಪ್ರದಕ್ಷಿಣಿದಭಿ ಗೃಣಂತಿ ಕಾರವೋ ವಯೋ ವದಂತ ಋತುಥಾ ಶಕುಂತಯಃ ।
ಉಭೇ ವಾಚೌ ವದತಿ ಸಾಮಗಾ ಇವ ಗಾಯತ್ರಂ ಚ ತ್ರೈಷ್ಟುಭಂ ಚಾನು ರಾಜತಿ ॥
(ಋ. ಸಂ. ೨-೪೩-೧)

ಇತ್ಯಾದಿಋಕ್ಕುಗಳಲ್ಲಿ **ಸ್ತೋತಾರಃ** ಎಂದರ್ಥವಾಗುತ್ತದೆ. ಪ್ರಕೃತವಾದ ಋಕ್ಕಿನಲ್ಲಿಯೂ ಸಹ ಸ್ತುತಿಕರ್ತರಾದ ಕವಿಗಳು ಎಂದರ್ಥ.

### ವ್ಯಾಕರಣಪ್ರಕ್ರಿಯಾ

**ದುವಸ್ಯಾತ್**—ದುವಸ್ ಪರಿಚರಣಕ್ರಿಯಾಯಾಮ್ ಧಾತು. **ಕಂಡ್ವಾದಿಭ್ಯೋ ಯಕ್** (ಪಾ. ಸೂ. ೩-೧-೨೭) ಎಂಬುದರಿಂದ ಸ್ವಾರ್ಥದಲ್ಲಿ ಯಕ್ ಪ್ರತ್ಯಯ. ಇದರ ಮೇಲೆ ಅಚ್ ಪ್ರತ್ಯಯ. ಪ್ರತ್ಯಯಸ್ವರದಿಂದ ಅಂತೋದಾತ್ತವಾಗುತ್ತದೆ.

ಕಾರುಃ—ಡುಕೃಞ್ ಕರಣೇ. ಧಾತು. **ಕೃವಾಪಾ**—(ಉ. ಸೂ. ೧-೧) ಎಂಬುದರಿಂದ ಉಣ್ ಪ್ರತ್ಯಯ. ಅಚೋಞ್ಣಿತಿ ಎಂಬುದರಿಂದ ಧಾತು ಋಕಾರಕ್ಕೆ ವೃದ್ಧಿ. ರಪರವಾಗಿ ಬರುತ್ತದೆ. ಪ್ರತ್ಯಯಸ್ವರದಿಂದ ಅಂತೋದಾತ್ತವಾಗುತ್ತದೆ.

ಚಕ್ರೇ—ಪೂರ್ವೋಕ್ತವಾದ ಧಾತುವಿನ ಲಿಟ್ ಪ್ರಥಮಪುರುಷ ಏಕವಚನಾಂತರೂಪ. **ಯದ್ಯೋಗವಿರು**ವುದರಿಂದ ನಿಘಾತಸ್ವರ ಬರುವುದಿಲ್ಲ. ಪ್ರತ್ಯಯಸ್ವರದಿಂದ ಅಂತೋದಾತ್ತವಾಗುತ್ತದೆ.

ವರ್ತ—ವೃತು ವರ್ತನೇ. ಧಾತು **ವ್ಯತ್ಯಯೋ ಬಹುಲಮ್** ಎಂಬುದರಿಂದ ಪರಸ್ಮೈಪದಿಯಾಗುತ್ತದೆ. ಲಙ್ಸದ್ಭಾವವಿರುವುದರಿಂದ ಮಧ್ಯಮಪುರುಷ ಬಹುವಚನಕ್ಕೆ ತಾದೇಶ ಬಂದಾಗ **ತಪ್ತನಪ್ತನ** (ಪಾ. ಸೂ.

೭-೧-೪೫) ಎಂಬುದರಿಂದ ಅದಕ್ಕೆ ತಬಾದೇಶ. **ಬಹುಲಂ ಛಂದಸಿ** ಎಂಬುದರಿಂದ ವಿಕರಣಕ್ಕೆ ಲುಕ್. ಪ್ರತ್ಯಯ ಪಿತ್ತಾದುದರಿಂದ ಅದನ್ನು ನಿಮಿತ್ತೀಕರಿಸಿ ಧಾತುವಿನ ಲಘೂಪಧೆಗೆ ಗುಣ. ರಪರವಾಗಿ ಬರುತ್ತದೆ. ಅತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

**ಇಮಾ—ಶೇಶ್ಛಂದಸಿ ಬಹುಲಮ್** (ಪಾ. ಸೂ. ೬-೧೯೭೦) ಎಂಬುದರಿಂದ ನಪುಂಸಕದಲ್ಲಿ ಶಿಗೆ ಲೋಪ.

**ಜರಿತಾ** ಜೄಷ್ ವಯೋಹಾನೌ. ಧಾತು ಇಲ್ಲಿ ಸ್ತುತ್ಯರ್ಥದಲ್ಲಿ ಪ್ರಯುಕ್ತವಾಗಿದೆ. ಕರ್ತರಿಯಲ್ಲಿ ತೃಚ್ ಪ್ರತ್ಯಯ **ಆರ್ಧಧಾತುಕಸ್ಯೇಡ್ವಲಾದೇಃ** ಎಂಬುದರಿಂದ ಇಡಾಗಮ. ಪ್ರತ್ಯಯ ನಿಮಿತ್ತವಾಗಿ ಧಾತುವಿನ ಇಕಿಗೆ ಗುಣ. **ಚಿತಃ** (ಪಾ. ಸೂ. ೯-೧-೧೬೩) ಎಂಬುದರಿಂದ ಅಂತೋದಾತ್ತಸ್ವರ ಬರುತ್ತದೆ.

**ಅರ್ಚತ್**—ಅರ್ಚ ಪೂಜಾಯಾಂ ಧಾತು. ಛಾಂದಸವಾಗಿ ಲಙ್ ಪ್ರಥಮಪುರುಷ ಏಕವಚನಾಂತರೂಪ. **ಬಹುಲಂಛಂದಸ್ಯಮಾಙ್‌ಯೋಗೇಪಿ** (ಪಾ. ಸೂ. ೬-೪-೭೫) ಎಂಬುದರಿಂದ ಅಡಾಗಮ ಬರುವುದಿಲ್ಲ. ನಿಘಾತಸ್ವರ ಬರುವುದಿಲ್ಲ. || ೧೪ ||

———— :O: ————

**ಸಂಹಿತಾಪಾಠಃ**

## ಏಷ ವಃ ಸ್ತೋಮೋ ಮರುತ ಇಯಂ ಗೀರ್ಮಾಂದಾರ್ಯಸ್ಯ ಮಾನ್ಯಸ್ಯ ಕಾರೋಃ ।
## ಏಷಾ ಯಾಸೀಷ್ಟ ತನ್ವೇ ವಯಾಂ ವಿದ್ಯಾಮೇಷಂ ವೃಜನಂ ಜೀರದಾನುಂ॥

|| ೧೫ ||

**ಪದಪಾಠಃ**

ಏಷಃ । ವಃ । ಸ್ತೋಮಃ । ಮರುತಃ । ಇಯಂ । ಗೀಃ । ಮಾಂದಾರ್ಯಸ್ಯ । ಮಾನ್ಯಸ್ಯ । ಕಾರೋಃ ।
ಆ । ಇಷಾ । ಯಾಸೀಷ್ಟ । ತನ್ವೇ । ವಯಾಂ । ವಿದ್ಯಾಮ । ಇಷಂ । ವೃಜನಂ । ಜೀರಽದಾನುಂ ॥ ೧೫ ॥

**ಸಾಯಣಭಾಷ್ಯಂ**

**ಅಥ ಪಂಚದಶ್ಯಾಂ ಸೂಕ್ತೋಪಕ್ರಮಮಾರಭ್ಯ ಕೃತಾಂ ಸ್ತುತಿಂ ಮರುದ್ಭ್ಯೋ ನಿವೇದ್ಯಾಭಿಮತಮಾಶಾಸ್ತೇ ॥**

**ಹೇ ಮರುತಃ ಏಷ ಸ್ತೋಮ ಇದಾನೀಂಕ್ರಿಯಮಾಣಪ್ರಕಾರಂ ಸ್ತೋತ್ರಂ ವೋ ಯುಷ್ಮದರ್ಥಂ। ಯುಷ್ಮತ್ಪ್ರೀಣನಾಯ ಭವತ್ವಿತ್ಯರ್ಥಃ। ತಥೇಯಂ ಗೀಃ ಸ್ತುತಿರೂಪಾ ವಾಗಪಿ ವೋ ಯುಷ್ಮದರ್ಥಾಯ। ಯಸ್ಮಾದೇವಂ ತಸ್ಮಾನ್ಮಾಂದಾರ್ಯಸ್ಯ ಸ್ತುತಿವಿಶೇಷೈರ್ಮಂದಯಿತುಃ ಸ್ತುತಿಭಿರ್ಮದಸ್ಯ ಪ್ರೇರಯಿ-**

ತುರ್ವಾ ಮಾನ್ಯಸ್ಯ ವರಪ್ರದಾನಾದಿನಾ ಮಾನನೀಯಸ್ಯ ಕಾರೋಃ ಸ್ತೋತುರಿಷೇಚ್ಛಯಾ ಯಾಸೀಷ್ಟ । ಆಗಚ್ಛತ । ಕಿಮರ್ಥಂ ।ತನ್ವೇ ಶರೀರಾಯ । ತತ್ಪೋಷಾಯೇತ್ಯರ್ಥಃ । ವಯಾಂ ವಯಮಪೀಷಮನ್ನಂ ವೃಜನಂ ಬಲಂ ಜೀರದಾನುಂ ಜಯಶೀಲದಾನಮೇತತ್ಸರ್ವಂ ವಿದ್ಯಾಮ । ಯುಷ್ಮಾಸ್ವಾಗತೇಷು ಯಜ್ಞ-ಸಂಪೂರ್ತ್ಯೇಷ್ಟ್ಯಾದಿದ್ವಾರಾ ಲಭೇಮಹಿ ॥

### ಪ್ರತಿಪದಾರ್ಥ

**ಮರುತಃ**--ಎಲೈ ಮರುತ್ತುಗಳೇ । **ಮಾಂದಾರ್ಯಸ್ಯ**—ನಿಮಗೆ ಸಂತೋಷಕಾರಕನೂ । **ಮಾನ್ಯಸ್ಯ**—ಪೂಜನೀಯನೂ ಆದ । **ಕಾರೋಃ**—ಸ್ತುತಿಕರ್ತನ । **ಏಷಃ ಸ್ತೋಮಃ**—ಈ ಸ್ತೋತ್ರವು । **ವಃ**—ನಿಮ್ಮನ್ನುದ್ದೇಶಿಸಿದೆ । **ಇಯಂ ಗೀಃ**—ಈ ಸ್ತುತಿವಾಕ್ಯೂ ಸಹ (ನಿಮ್ಮನ್ನೇ ಉದ್ದೇಶಿಸಿದೆ) । **ತನ್ವೇ**—ಶರೀರದ ಪೋಷಣೆಗಾಗಿ **ಇಷಾ**—ಅನ್ನದೊಡನೆ । **ಆ ಯಾಸೀಷ್ಟ**—ಬನ್ನಿರಿ । **ವಯಾಂ**—ನಾವೂ ಸಹ । **ಇಷಂ**—ಅನ್ನವನ್ನೂ **ವೃಜನಂ**—ಬಲವನ್ನೂ । **ಜೀರದಾನುಂ**—ಜಯಸಾಧನವಾದ ದಾನವನ್ನೂ । **ವಿದ್ಯಾಮ**—ಹೊಂದುವಂತಾಗಲಿ ।

### ಭಾವಾರ್ಥ

ಎಲೈ ಮರುತ್ತುಗಳೇ, ನಿಮಗೆ ಸಂತೋಷಕಾರಕನೂ, ಪೂಜನೀಯನೂ ಆದ ಸ್ತುತಿಕರ್ತನ ಈ ಸ್ತೋಮವೂ ಸ್ತುತಿವಾಕ್ಯೂ ನಿಮ್ಮನ್ನೇ ಉದ್ದೇಶಿಸಿದೆ. ನೀವು ಅನ್ನದೊಂದಿಗೆ ಬನ್ನಿರಿ. ನಾವೂ ಸಹ ಅನ್ನವನ್ನೂ, ಬಲವನ್ನೂ, ಜಯಸಾಧನವಾದ ದಾನವನ್ನೂ ಹೊಂದುವಂತೆ ಅನುಗ್ರಹಿಸಿರಿ.

### Englih Translation

This praise, Maruts, is for you : this hymn is for you, (the work) of a venerable author, capable of conferring delight (by his laudations). May the praise reach you, for (the good of your) persons, so that we may (thence) obtain food, strength, and long life.

### ವಿಶೇಷವಿಷಯಗಳು

**ಮಾಂದಾರ್ಯಸ್ಯ ಮಾನ್ಯಸ್ಯ**-ಎಂಬುದಕ್ಕೆ ಸಾಯಣರು ಆ ಪದಗಳಿಗೆ ಅವಯವಾರ್ಥಗಳನ್ನು ಹೇಳುವಾಗ ಮಾಂದಾರ್ಯಸ್ಯ ಎಂದರೆ ಹರ್ಷವನ್ನುಂಟುಮಾಡುವವನೆಂದೂ, ಮಾನ್ಯನೆಂದರೆ ಪೂಜ್ಯನೆಂದೂ ಅರ್ಥಮಾಡಿದ್ದಾರೆ. ಇವೆರಡೂ ಅಗಸ್ತ್ಯನಿಗೆ ವಿಶೇಷಣಗಳು. ಇವೆರಡೂ ಅಂಕಿತನಾಮಗಳಾಗಿಯೂ ಉಪಯೋಗಿಸಲ್ಪಟ್ಟಿವೆ. ಬೃಹದ್ದೇವತೆಯಲ್ಲಿ ಅಗಸ್ತ್ಯನ ಉತ್ಪತ್ತಿಯ ವಿಷಯವನ್ನು ತಿಳಿಸುವಾಗ,

**ಮಾನೇನ ಸಂಮಿತೋ ಯಸ್ಮಾತ್ ತಸ್ಮಾನ್ಮಾನ್ಯ ಇಹೋಚ್ಯತೇ ।**
**ಯದ್ವಾ ಕುಂಭಾದೃಷಿರ್ಜಾತಃ ಕುಂಭೇನಾಪಿ ಹಿ ಮೀಯತೇ ॥**

ಬೃ. ದೇ. ೫.೧೫೩)

ಪೂಜಾರ್ಹನಾಗಿರುವುದರಿಂದಲೂ ಅಥವಾ, ಮಾನ (ಅಳತೆ)ದ ಪ್ರಕಾರವನ್ನು ತಿಳಿಸುವ ಕುಂಭದಲ್ಲಿ ಉತ್ಪನ್ನನಾದ

ದರಿಂದ ಎಂದರೆ ಕುಂಭರೂಪವಾದ ಮಾನದಿಂದ ಉತ್ಪನ್ನನಾದುದರಿಂದಲಾಗಲಿ ಆಗಸ್ತ್ಯನಿಗೆ ಮಾನ್ಯನೆಂಬ ಹೆಸರು ಪ್ರಸಿದ್ಧವಾಗಿದೆಯೆಂದು ತಿಳಿಸಿದೆ.

ಇದೇ ಅನುಪೂರ್ವಿಯಲ್ಲಿ **ಮಾಂದಾರ್ಯಸ್ಯ ಮಾನ್ಯಸ್ಯ ಕಾರೋಃ** ಎಂಬ ಪದಗಳು ಮುಂದಿನ ಎಂದರೆ ೧೬೬ ೧೬೭ ಮತ್ತು ೧೬೮ನೇ ಸೂಕ್ತಗಳ ಕೊನೆಯ ಋಕ್ಕುಗಳಲ್ಲಿಯೂ ಇರುತ್ತವೆ.

**ಸ್ತೋಮಃ, ಗೀಃ** ಎಂದು ಸ್ತುತಿಪರ್ಯಾಯವಾದ ಎರಡು ಪದಗಳಿವೆ. ಇವು ಸ್ತುತಿಯ ಪ್ರಕಾರಾಂತರಗಳನ್ನು ಸೂಚಿಸುತ್ತವೆ. **ಸ್ತೋಮದ** ಮಹತ್ತ್ವದ ವಿಷಯವನ್ನೂ ಋಗ್ವೇದ ಸಂಹಿತೆಯ ೧೧ನೇ ಭಾಗದ 50–52 ನೇ ಪುಟಗಳಲ್ಲಿ ವಿಶದವಾಗಿ ತಿಳಸಿದೆ.

### ವ್ಯಾಕರಣಪ್ರಕ್ರಿಯಾ

ಇಷಾ–**ಸಾವೇಕಾಚಸ್ತೃತೀಯಾದಿಃ** (ಪಾ. ಸೂ. ೬-೧-೧೬೮) ಎಂಬುದರಿಂದ ತೃತೀಯಾವಿಭಕ್ತಿಗೆ ಉದಾತ್ತಸ್ವರ ಬರುತ್ತದೆ.

**ಯಾಸೀಷ್ಟ**–ಯಾ ಪ್ರಾಪಣೇ. ಧಾತು **ವ್ಯತ್ಯಯೋ ಬಹುಲಮ್**(ಪಾ. ಸೂ. ೩-೧-೮೫) ಎಂಬುದರಿಂದ ಆತ್ಮನೇಪದಿಯಾಗುತ್ತದೆ. ಲಿಙ್ ಪ್ರಥಮಪುರುಷ ಏಕವಚನದಲ್ಲಿ ತಪ್ರತ್ಯಯ. **ಲಿಙಃ ಸೀಯುಟ್** (ಪಾ. ಸೂ. ೩-೪-೧೦೨) ಎಂಬುದರಿಂದ ಸೀಯುಟಾಗಮ **ಸುಟ್ತಿಥೋಃ** (ಪಾ. ಸೂ. ೩-೪-೧೦೭) ಎಂಬುದರಿಂದ ಸುಟಾಗಮ, ಯಲೋಪ. ವ್ಯತ್ಯಯದಿಂದಲೇ ಏಕವಚನ ಬಂದಿದೆ. ತಿಙಂತನಿಘಾತಸ್ವರ ಬರುತ್ತದೆ.

**ವಿದ್ಯಾಮ**—ವಿದ್ಲೃ ಲಾಭೇ. ಧಾತು. ಲಿಙ್ ಉತ್ತಮಪುರುಷ ಬಹುವಚನಾಂತರೂಪ ಪಾದಾದಿಯಲ್ಲಿರುವುದರಿಂದ ನಿಘಾತಸ್ವರ ಬರುವುದಿಲ್ಲ. ಯಾಸುಟ್ ಉದಾತ್ತವೆಂಬುದರಿಂದ ಆಕಾರ ಉದಾತ್ತವಾಗುತ್ತದೆ.

**ವೃಜನಮ್**—ವೃಜೀ ವರ್ಜನೇ. ಧಾತು. **ಕೃಪೃವೃಜಿ–**(ಉ. ಸೂ. ೨-೩೯) ಎಂಬುದರಿಂದ ಕ್ಯು ಪ್ರತ್ಯಯ. ಕಿತ್ತಾದುದರಿಂದ ಗುಣ ಬರುವುದಿಲ್ಲ. **ಯುವೋರನಾಕೌ** (ಪಾ. ಸೂ. ೭-೧-೧) ಎಂಬುದರಿಂದ ಅನಾದೇಶ. ಪ್ರತ್ಯಯದ ಆದ್ಯುದಾತ್ತಸ್ವರ ಬರುತ್ತದೆ.

**ಜೀರದಾನುಮ್**—ಬಹುವ್ರೀಹಿಯಲ್ಲಿ ಪೂರ್ವಪದ ಪ್ರಕೃತಿಸ್ವರ ಬರುತ್ತದೆ. ॥ ೧೫ ॥

ಇಲ್ಲಿಗೆ ೧೬೫ನೇ ಸೂಕ್ತ ಸಮಾಪ್ತವಾದುದು.

**ವೇದಾರ್ಥಸ್ಯ ಪ್ರಕಾಶೇನ ತಮೋ ಹಾರ್ದಂ ನಿವಾರಯನ್ ।**
**ಪುಮರ್ಥಾಂಶ್ಚತುರೋ ದೇಯಾದ್ವಿದ್ಯಾತೀರ್ಥಮಹೇಶ್ವರಃ ॥**

ಇತಿ ಶ್ರೀಮದ್ರಾಜಾಧಿರಾಜಪರಮೇಶ್ವರವೈದಿಕಮಾರ್ಗಪ್ರವರ್ತಕಶ್ರೀವೀರಬುಕ್ಕಭೂಪಾಲ-

ಸಾಮ್ರಾಜ್ಯಧುರಂಧರೇಣ ಸಾಯಣಾಚಾರ್ಯೇಣ ವಿರಚಿತೇ ಮಾಧವೀಯೇ ವೇದಾರ್ಥ-

ಪ್ರಕಾಶೇ ಋಕ್ಸಂಹಿತಾಭಾಷ್ಯೇ ದ್ವಿತೀಯಾಷ್ಟಕೇ ತೃತೀಯೋಽಧ್ಯಾಯಃ

॥ ಸಮಾಪ್ತಃ ॥

ಶ್ರೀಃ

॥ ಓಂ ತತ್ಸತ್ ॥

ಇಲ್ಲಿಗೆ ಶ್ರೀಸಾಯಣಭಾಷ್ಯಸಹಿತವೂ ಕರ್ನಾಟಕಭಾಷಾನುವಾದಯುತವೂ ಆದ

ಋಗ್ವೇದಸಂಹಿತೆಯ ದ್ವಿತೀಯಾಷ್ಟಕದಲ್ಲಿ

ಮೂರನೆಯ ಅಧ್ಯಾಯವು ಸಮಾಪ್ತವಾದುದು.

———:o:———

ಯದಕ್ಷರಪದಭ್ರಷ್ಟಂ ಮಾತ್ರಾಹೀನಂ ತು ಯದ್ಭವೇತ್ ।

ತತ್ಸರ್ವಂ ಕ್ಷಮ್ಯತಾಂ ದೇವ ವಾಗೀಶ್ವರ ನಮೋಽಸ್ತು ತೇ ॥

॥ ಶುಭಂ ಭೂಯಾತ್ ॥

॥ ಮಂಗಳಂ ॥

ಕರ್ನಾಟಕ ಸರ್ಕಾರ

**ಕನ್ನಡ ಮತ್ತು ಸಂಸ್ಕೃತಿ ಇಲಾಖೆ**

ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು.